ಶಿರ್ಶಿಯಿಂದ ಕುಮಟೆಗೆ ಹೊರಡುವದು—	ಮಧ್ಯಾನ್ಹ ೨ „
ಕುಮಟೆ ಸೇರುವದು—	ಸಾಯಂಕಾಲ ೫ „

N B — ಈ ಮೇಲಿನ ಲೈನುಗಳ ವಿನಹ ಶಿರಶಿಯಿಂದ ಹುಬ್ಬಳ್ಳಿಗೆ ಪ್ರತ್ಯೇಕ ಒಂದು ಸರ್ವಿಸ ಪ್ರಾರಂಭಿಸುವ ಯೋಚನೆ ಸಹಾ ಇರುತ್ತದೆ. ಸರ್ವರೂ ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ

SHIMOGA,
22—11—1924.

M. MANJAPPA.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀಯಾಗಿಯೂ, ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು ೬೦,೭೦ ವರ್ಷದ ಮುದುಕರ ಕಾಮವಿಕಾರವು ಕೂಡ ತರುಣರಂತೆ ಪ್ರವರ್ಧಮಾನವಾಗುವದು. (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಪ್ರಾಪ್ತವಾದ ನಪುಂಸಕತ್ವವು ಇಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಸಿಂದಾಗುವದು — ಪರಮಾ ಹಾಗೂ ಗಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೆ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ನೋಡಬೇಕು ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು ದಿವಸದಲ್ಲಿ ನಾಲ್ಕಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವು ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಜ್ವರ ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧॥ ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೩—೪—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವದು ಅಂದರೆ ಟಪಾಲಖರ್ಚು ಹೆಚ್ಚು ಬೀಳುವದಿಲ್ಲ. ಆರು ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧—೪—೦, ೩ ಬಾಟ್ಲಿಗೆ ೩—೦—೦, ಆರಕ್ಕೆ ೧೩—೦—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸು **ಪೋ ನಿಪ್ಪಾಣಿ, ಜಿ. ಬೆಳಗಾಂವ**

ಕರ್ನಾಟಕ ಕುರುಬ ಸಂಘದ ಪ್ರಗತಿಯು

ಸವಣೂರ ಮತ್ತು ಬಂಕಾಪೂರ ಪರ್ಯಟನಗಳಿಂದೀಚೆಗೆ ನಮ್ಮ ಸಂಘದ ಪ್ರಗತಿಯು ಈ ಕೆಳಗೆ ಪ್ರಕಟಿಸಿದ ಮೇರೆಗೆ ಆಗಿರುವದೆಂದು ಹೇಳುವದಕ್ಕೆ ನಮ್ಮ ಕುರುಬ ಸಮಾಜದ ಬಂಧುಗಳಿಗೆ ಸಂಕ್ಷೇಪವಾಗಿ ತಿಳಿಸಬ ಇಚ್ಛಿಸುತ್ತೇವೆ.

ನಮ್ಮ ಸಂಘದ ವಿದ್ಯಾವರ್ಧಕ ಫಂಡಿಗೆ ಕೆಳಗಿನ ಮಹಾ, ಕುರುಬರ ಸದ್ಗೃಹಸ್ಥರು ತಮ್ಮ ಹೆಸರಿನ ಮುಂದೆ ತೋರಿಸಿದಷ್ಟು ರೂಪಾಯಿಗಳನ್ನು ಉದಾರ ದೇಣಿಗೆಯಾಗಿ ಕೊಟ್ಟದ್ದಕ್ಕೆ ಸಂತೋಷಿಸಿ ಅವರನ್ನು ಅಭಿನಂದಿಸುತ್ತೇವೆ.

ಸೋಮನಗೌಡಾ ಪಾಟೀಲ ಕಲ್ಲಾಪೂರ ರೂ ೫೧೦ ನಿಂಗಪ್ಪ ಬಿಜ್ಜೂರ ಹುಲಿಕಟ್ಟಿ ರೂ ೩೦೦, ಶಿವಪ್ಪ ಮಂಟೂರ ಅಗಡಿ ರೂ. ೩೦೦, ಹುಚ್ಚಪ್ಪ ಬಿಜ್ಜೂರ ಹುಲಿಕಟ್ಟಿ ರೂ. ೧೨೫, ಬೀರಪ್ಪ ಚಂದ್ರಣ್ಣವರ ನಾವಳ್ಳಿ ರೂ ೧೨೫, ಬಿಳ್ಳಪ್ಪ ಬಿಜ್ಜೂರ ಹುಲಿಕಟ್ಟಿ ರೂ. ೭೫, ದ್ಯಾಮಣ್ಣ ಶಿರೂರ ರೂ ೫೦ ಫಕೀರಪ್ಪ ಹಂಡಿಯವರ ರೂ ೫೦, ಯಲ್ಲಪ್ಪ ಕೊಪ್ಪದ ಬೆಳ್ಳು ಕುರುಬರ ರೂ ೫೦, ಯಲ್ಲಪ್ಪ ಬೆಣ್ಣೂರ ಮಿಶ್ರಿಕೋಟಿ ಅಗಡಿ ರೂ. ೨೫, ದೊಡ್ಡಬಸಪ್ಪ ಡೊಳ್ಳಿನ ಮುಲವಿಗಿ ರೂ. ೩೦, ಹುಚ್ಚಪ್ಪ ಸಗ್ಗಣ್ಣವರ ಹಳೇರಿತ್ತಿ ರೂ ೧೦೦, ಕರೆಪ್ಪ ಒಣಕಾರ ರೂ ೫೦ ಹುಚ್ಚಪ್ಪ ಬಿಜ್ಜೂರ ಹುಲಿಕಟ್ಟಿ ರೂ ೧೦೦, ಶಿವನಗೌಡ ಪಾಟೀಲ ಗೋನಾಳ ರೂ. ೧೦೦, ಚನಬಸಪ್ಪ ಹಿತ್ತಲಮನಿ ಬಂಕಾಪೂರ ರೂ ೧೦೦, ಸಂಕಪ್ಪ ಕುರುಬರ ರೂ ೨೫, ಭುಜಂಗಪ್ಪ ಬ್ಯಾಡಗಿ ರೂ. ೪೦, ಮಲ್ಲಪ್ಪ ಭಂಡಾರಿ ರೂ ೧೦೦ ಹಾಲಪ್ಪಗೌಡ ಪಾಟೀಲ ರೂ ೨೫, ಮುದಿಯಪ್ಪ ದೇವರಗುಡ್ಡ ರೂ ೨೫. ಕರಿಯಪ್ಪ ದೇವರಗುಡ್ಡ ರೂ. ೨೫, ಹುಚ್ಚಪ್ಪ ಮೋತ್ರಂಡಿ ರೂ ೫೦, ಕರೆಪ್ಪ ಮೋತ್ರಂಡಿ ರೂ. ೨೫, ಹೊಳೆಪ್ಪ ಕೊಣಗಾರ ರೂ ೪೦, ಮಲ್ಲಪ್ಪ ಗೌಡ್ರ ಕಗರಾ ರೂ ೨೫, ಗೋವಿಂದಪ್ಪ ಕಳ್ಳಿಹಾಳ ರೂ. ೨೫ ಮಲ್ಲಪ್ಪ ಕಡಮನಳ್ಳಿ ರೂ ೨೫, ನಿಂಬನಗೌಡ ಪಾಟೀಲ ರೂ ೨೫, ದೊ. ನಿಂಗನಗೌಡ ಪಾಟೀಲ ರೂ ೨೫ ಚನಬಸಪ್ಪ ಅಲದಕಟ್ಟಿ ಬಂಕಾಪೂರ ರೂ ೨೫, ನಿಂಬಣ್ಣ ನೀರಲಗಿ ರೂ. ೨೫ ಹನಿ ಸ್ವಾಮಣ್ಣ ಅಲದಕಟ್ಟಿ ರೂ. ೨೫, ಬಸಪ್ಪ ಕೊಟಬಾಗಿಕರ ರೂ. ೨೫, ಪರಮಗೌಡಾ ಗೌಂಡಿ ರೂ ೨೫ ಮಲಿಂಗಪ್ಪ ಕರಿಸಿದ್ದಿ ಮುಲವಿಗಿ ರೂ ೩೦ ಹೆಗ್ಗಪ್ಪ ಹಿತ್ತಲಮನಿ ರೂ ೧೫ ಮಲ್ಲಪ್ಪ ಜಲ್ಲಿ ಹಾವೇರಿ ರೂ ೨೫ ನಿಂಗಪ್ಪ ಪಾಲಿಕಾರ ರೂ. ೨೫

ಈ ಪ್ರಕಾರ ದೊಡ್ಡ ರಕಮ ಗಳಲ್ಲದೆ ೧-೨-೩-೪-೫-೧೦ ಇತ್ಯಾದಿ ರಕಮು ಸಹ ದೇಣಿಗೆಯಾಗಿ ಕೊಟ್ಟವರ ಹೆಸರುಗಳನ್ನು ಸ್ಥಳಸಂಕೋಚದ ಮೂಲಕ ಪ್ರಸಿದ್ಧ ಮಾಡಿಲ್ಲ. ನಮ್ಮ ಸಂಘದ ವಾರ್ಷಿಕ ರಿಪೋರ್ಟ ಹೊರ ಬೀಳುವದು ಆಗ ಸವಿಸ್ತರ ಮಾಹಿತಿಯು ತಿಳಿಯುವದು. ಒಂಟಿ. ಅಜಮಾಸು ೫೦೦೦ ರೂ ವಿದ್ಯಾವರ್ಧಕ ಫಂಡು ಕೂಡಿದ್ದು ಅದನ್ನು ಮುಂಬಯಿ ಕರ್ನಾಟಕ ಹಾಲುಮತ ಸೊಸಾಯಿಟಿ ಗದಗ" ಅಲ್ಲಿ ೧೦೦ ಕ್ಕೆ ೬॥ ಯಂತೆ ಬಡ್ಡಿ ಗೊತ್ತುಮಾಡಿ ಠೇವಾಗಿ ಇಟ್ಟಿದೆ. ಸದರ ಸೊಸಾಯಿಟಿಯು ೧೫೦೦೦ ಸಾವಿರ ರೂ ಭಾಂಡವಲವುಳ್ಳದ್ದಾಗಿದೆ. ಇದಲ್ಲದೆ ಹಳೇರಿತ್ತಿ, ಮೊಟ್ಟೆಬೆನ್ನೂರ, ಕೋಡಿಹಳ್ಳಿ, ಇತ್ಯಾದಿ ಗ್ರಾಮಗಳಲ್ಲಿ ಧಾನ್ಯದ ವಾರ್ಷಿಕ ಫಂಡಿನ ಚೀಲಗಳನ್ನು ಪ್ರತಿಯೊಂದು ಕುರುಬರ ಮನೆಗೆ ಹಾಕಿದ್ದು ಅವುಗಳಿಂದ ಪ್ರತಿಯೊಂದು ಊರಿಗೆ ೨—೩—೫ ಹೇರು ಕಾಳು ಬರುವಂತೆ ವ್ಯವಸ್ಥೆ ಮಾಡಿದೆ. ಇದರ ಯಾವತ್ತೂ ದೇಖರೇಖಿಯು ಕಮಿಟಿ ಮೆಂಬರ ಮಿ. ಹುಚ್ಚಪ್ಪ ಸಗ್ಗಣ್ಣವರ ಹಳೇರಿತ್ತಿ ಇವರದು ಇರುತ್ತದೆ.

ಆಯಾ ಭಾಗದಲ್ಲಿ ಅಂದರೆ ಕಜಗಿ ರಾಣೇಬೆನ್ನೂರ ಬಂಕಾಪೂರ ಕೋಣನತಲೆಗಳಲ್ಲಿ ಈ ತಾಲೂಕುಗಳಲ್ಲಿ ದಸರೆಯ ತಿಂಗಳೊಳಗೆ ಅಜಮಾಸು ೩೫೦೦ ರೂ ಫಂಡು ಕೂಡಿದೆ ಈ ಕಾರ್ಯಕ್ಕೆ ಮಿ॥ ಧಾರವಾಡ ಡಿಸ್ಟ್ರಿಕ್ಟ ಡೆಪ್ಯುಟಿ ಕಲೆಕ್ಟರ ಬಿ. ಸಾಹೇಬರು ಸಾಹೇಬರವರು ನಮ್ಮ ಜನರಿಗೆ ಒಳ್ಳೇ ಉಪದೇಶದ ಭಾಷಣ ಮಾಡಿದ್ದು ಮುಖ್ಯ ಕಾರಣವಾಗಿದೆ. ಮತ್ತು ಈ ಫಂಡಿನ ಕಾರ್ಯಕ್ಕೆ ಮಿಸರ್ಸ ಹುಚ್ಚಪ್ಪ ಸಗ್ಗಣ್ಣವರ ಭೀಮಪ್ಪ ಅಗಡಿ ಗೋವಿಂದಗೌಡ ಹುಲ್ಲಾಳ ಹಾಲಪ್ಪಗೌಡ ಪಾಟೀಲ ಇವರು ಅಲ್ಲಲ್ಲಿ ಪ್ರಯತ್ನ ನಡೆಯಿಸಿರುವರು. ಇನ್ನುಳಿದ ಅಂದರೆ ನವಲಗುಂದ ರೋಣ ಗದಗ ತಾಲೂಕುಗಳಲ್ಲಿ ಶ್ರೀಮಂತ ಸೋಮನಗೌಡ ಕಲ್ಲಾಪೂರ ಇವರು ವಿದ್ಯಾವರ್ಧಕ ಫಂಡು ಕೂಡಿಸಲಿಕ್ಕೆ ಆಸ್ಥೆವಹಿಸಿರುವರು. ಸಂಘದ ಕಡೆಯಿಂದ ಕಾಲಕಾಲಕ್ಕೆ ಕಲಾಲ ಡಿಪಾರ್ಟಮೆಂಟಿನ ಮಾಹಿತಿಗಾಗಿ ಕೋರ ಮೂಲಕ ಲಿಂಗಾಪೂರ

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಯಿಂದ 'ನಿಬಿಡವಾದ ಕೇಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು?' ಅಂತಹ ಕೇಶರಾಶಿಯು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ.

ಕಾಮಿನಿಯಾ ಆಯಿಲ್ ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿರುವದೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅತ್ಯಂತ ಆವಶ್ಯಕವಾದ ಸಹಕಾರಿಯಾಗಿರುತ್ತದೆ ಈ ಆಯಿಲ್ ತೊಡೆದುಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ, ಕೂದಲುಗಳು ಇದನ್ನು ತೊಡೆಯತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಅದಲ್ಲದೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಕಳೆಯುವದು ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ ಈ « ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ « ಸರ್ಟಿಫಿಕೇಟ ಒಫ್ ಮೆರಿಟ " ಅಥವಾ ಯೋಗ್ಯತಾಪತ್ರವೂ, ಇತರ ಹಲವು ಸ್ವರ್ಣಪದಕ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ.— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10-0, ವಿ.ಪಿ. ಖರ್ಚ 0 14-0.

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಆಕರ್ಷಕವೂ ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡಿದೆ ಅದರಲ್ಲಿ ಮದಿರೆಯ (ಅಲ್ಕೊಹೋಲ್) ಸಂಪರ್ಕವಿಲ್ಲವು ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಹಾಕಿದರೆ ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನುಷ್ಯನನ್ನು ತನ್ನ ಶಕ್ತಿಯಿಂದ ಸೆಳೆದುಕೊಳ್ಳುವದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8-0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0; ¼ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0-12-0.

Address:- **The Anglo Indian Drug & Chemical Co,**
16, Market, **BOMBAY. 2.**

ವಲ್ಲಿ ಜೂನದಿಂದ ಟ್ರೇನಿಂಗ ಕ್ಲಾಸು ನುರುಉಗುವದಿದ್ದು ಅದರ ತಯಾರಿಯು ಈಗಿನಿಂದಲೇ ಒಳ್ಳೇ ಭರಭರಾಟಿಯಿಂದ ಸಾಗಿರುವದು. ಈ ವರ್ಷ ಸಮ್ಮತಿಯೊಳ್ಳಿಂದ ಬಿ. ಎ. ಪರೀಕ್ಷೆಗೆ, ೬-೮ ವಿದ್ಯಾರ್ಥಿಗಳು ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಗೆ ಕೂತಿರುವರಲ್ಲದೆ, ೩೦ ವಿದ್ಯಾರ್ಥಿಗಳು ಇಂಗ್ರೇಜಿ ಐಯೂ ಕ್ಲಾಸಿನಲ್ಲಿರುವರು. ಸ್ಥಾನ ವತಿಯಿಂದ ಕೆಲವು ಬಡ ವಿದ್ಯಾರ್ಥಿಗಳಿಗೆ ಊಟದ ಪ್ರತ್ಯೇಕ ವ್ಯವಸ್ಥೆ ಮಾಡಿದೆ. ಆದರೂ ಈ ವರ್ಷ [illegible] ಕೆಲಸವು ಅಕ್ಷಯವರೆಗೆ ಒಳ್ಳೇ [illegible] ದಿಂದ ಸಾಗಿದ್ದು, ಅನ್ನುಮುಂದೆ [illegible] ಕಾಂಕ್ಷೆಯುಳ್ಳವರು [illegible] ೧೫೦೦೦ ರೂ [illegible] ಸಂಪ ದಣಿಸೇವಕ್ಕೆ [illegible] ಈ ಕಾರ್ಯವನ್ನು [illegible]

[illegible]

* * *

ಅಪೋಲಿಂ [illegible]

ಎಂಬ್ರೋಸಿಯಾ.

ಸ್ತ್ರೀರೋಗಪರಿಹಾರಕ್ಕಾಗಿ.

ಎಂಬ್ರೋಸಿಯಾವು ಸಮಸ್ತ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು. ಇದು ಸ್ತ್ರೀಸೌಂದರ್ಯವನ್ನುಂಟುಮಾಡುತ್ತದೆ ಸಹ. ಮುಖ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರುತ್ತದೆ ಹಳಸೀ ಆಹಾರ ದೊರೆಯದೆ, ವಿಶೇಷ ಆಯಾಸ ಕೊಳ್ಳುವದರಿಂದ ಸ್ತ್ರೀಯರ ಪ್ರಕೃತಿಯು ಕೆಡುತ್ತದೆ. ಮುಟ್ಟಾಗುವಾಗ ಕಷ್ಟ ಪಡುವದು, ಮುಟ್ಟಾಗದಿರುವದು, ಅಪಸ್ಮಾರ, ಒಂಟೆತನ ಗುಲ್ಮಕಾರದ ಗರ್ಭಾಶಯದ ಬೇನೆಗಳು, ಅಜೀರ್ಣ, ತಲೆತಿರುಗು ಭ್ರಮಿಷ್ಟತನ ಇವೆಲ್ಲ ಸ್ತ್ರೀರೋಗಗಳಿಗೆ ರಾಮಬಾಣ ಮದ್ದು. ಎಂಬ್ರೋಸಿಯಾವು ಸಮಸ್ತ ಸ್ತ್ರೀರೋಗಗಳನ್ನು ದೂರಮಾಡಿ, ಸ್ತ್ರೀಯರನ್ನು ಸಶಕ್ತ ಹಾಗು ಸೌಂದರ್ಯವಂತರನ್ನಾಗಿ ಮಾಡುತ್ತದೆ.

ಒಮ್ಮೆ ಪರೀಕ್ಷೆ ನೋಡಿ.

ಬೆಲೆ ಬಾಟ್ಲಿ ೧ ಕ್ಕೆ ರೂಪಾಯಿ ೨-೮-೦

ವಿಕಂಟರು:— ವೀರಿಂಚಲು ವಿಜನ್ನಿ,

ಪ್ರಿನ್ಸೆಸ ಸ್ಟ್ರೀಟು, ಮುಂಬಯಿ ನಂಬರ ೨.

ಶ್ರವಣಬೆಳಗುಳದಲ್ಲಿ ಸೇರಿದ ದಿಗಂಬರ ಜೈನ ಸಮ್ಮೇಳನದಲ್ಲಿ ಮೈಸೂರ ಮಹಾರಾಜರು ಮಾಡಿದ ಉಪದೇಶ.

ನಿಮ್ಮ ಪೂರ್ವಿಕರಂತೆಯೂ, ಮತ್ತು ವಿಶ್ವಮಾನ್ಯರಾದ ಇತರ ಮಹಾಮತಾನುಯಾಯಿಗಳಾದ ನಿಮ್ಮ ಭ್ರಾತೃವರ್ಗದವರಂತೆಯೂ, ನೀವುಗಳೆಲ್ಲರೂ ಯಾತ್ರಾರ್ಥಿಗಳಾಗಿ ಮತವಿಷಯಕವಾದ ಮುಖ್ಯೋದ್ದೇಶದಿಂದ ಇಲ್ಲಿಗೆ ಬಂದಿರುತ್ತೀರಿ. ಆದರೂ, ಮತಾಚಾರವೂ, ಜೀವನಪಥವೂ ಸಮ್ಮಿಳಿತವಾಗಿ ಸೇರಿದ್ದ ಪ್ರಾಚೀನ ಪದ್ಧತಿಯನ್ನು ಉಪೇಕ್ಷೆಯಿಂದ ಕೈಬಿಡದೆ, ಈ ಪವಿತ್ರ ಸಮಯವನ್ನು ಜೈನ ಪಂಗಡದವರ ಸಮ್ಮೇಳನವನ್ನು ನಡೆಸುವುದಕ್ಕೂ ಕೂಡ ಉಪಯೋಗಿಸಿಕೊಂಡಿರುತ್ತೀರಿ. ಈ ಸಮ್ಮೇಳನವು ಕೇವಲ ಮತ [illegible] ಮತ್ತು ಸಮಾಜ ಸಂಬಂಧವಾದ [illegible] ಮಾತ್ರವೇ ನಡೆಸಲ್ಪಟ್ಟಿರುವುದು [illegible] ಬಂದಿರುತ್ತದೆ. ರಾಜಕೀಯ [illegible] ವಿಷಯವನ್ನು ಸೂಚಿಸುವದೊಂದು [illegible]. ಈ ಸಮ್ಮೇಳನದ ಕಾರಣ [illegible] ರಾಜಕೀಯ ವಿಚಾರಗಳು [illegible] ಆಗಿರುವುದರಿಂ [illegible] ಅವುಗಳನ್ನು ಪರ್ಯಾಲೋಚನೆಗೆ [illegible] ದೂರವಾಗಿಟ್ಟಿರಬೇಕೆಂಬುದೂ [illegible] ಯಾರೊಬ್ಬರೂ ಈ [illegible]. ಇದಕ್ಕೆ ಪ್ರತಿಯಾಗಿ ಪ್ರತಿಯೊಬ್ಬ ವಿದ್ಯಾವಂತನೂ ತನ್ನ [illegible] ರಾಜಕೀಯ ವಿಚಾರಗಳಲ್ಲಿ ಅತ್ಯಾದರದಿಂದಲೂ, ವಿವೇಕದಿಂದಲೂ ಆಸಕ್ತಿಯನ್ನು ವಹಿಸಬೇಕೆಂಬುದೇ ನಮ್ಮ ಅಭಿಪ್ರಾಯವಾಗಿದೆ; ಅಲ್ಲದೆ, ಜನರ ಮನೋವಿಕಾಸವು ಹೆಚ್ಚುತ್ತಾ ಬಂದ ಹಾಗೆಲ್ಲ, ಅವಶ್ಯವಾಗಿ ಹೊಂದಿಕೆಯಿಂದ [illegible] ಸ್ಪಷ್ಟಗೊಳಿಸುವ ಅವಶ್ಯಕತೆಯುಂಟಾಗುತ್ತದೆ; ಈ ಅವಶ್ಯಕತೆಯ ದೆಸೆಯಿಂದ ಅನೇಕ ತೊಡಕಿನ ಸಂಗತಿಗಳು ತಪ್ಪದೆ ಸಂಭವಿಸುತ್ತವೆ, ಅವುಗಳನ್ನು ಬಗೆಹರಿಸುವದರಲ್ಲಿ ಪ್ರತಿಯೊಬ್ಬ ವಿದ್ಯಾವಂತನೂ, (ವ್ಯಕ್ತಿಯೊಬ್ಬ ವಿದ್ಯಾವಂತಳೂ ಎಂದೂ ಸಹ ನಾವು ಸೇರಿಸಬೇಕೆಂದು ತೋರುತ್ತದೆ) ತನ್ನ ಭಾಗದ ಹೊಣೆಯನ್ನು ಸಮರ್ಪಿಸಬೇಕೆಂಬುದೂ ಕೂಡ ನಮ್ಮ ಅಭಿಪ್ರಾಯವಾಗಿರುತ್ತದೆ ಮಹನೀಯರೇ. ಒಂದು ಪ್ರತ್ಯೇಕವಾದ ಮತಕ್ಕೆ ಸೇರಿದವರಾಗಿರುವ ನೀವೆಲ್ಲರೂ ಇಲ್ಲಿ ಸಭೆಸೇರಿರುತ್ತೀರಿ; ನಿಮ್ಮ ಮತಕ್ಕೂ, ನಿಮ್ಮ ಪಂಗಡಕ್ಕೂ ಮಾತ್ರವೇ ಅನ್ವಯಿಸುವ ವಿಶೇಷ ಸ್ವಭಾವದ ಹಲವು ತೊಡಕಿನ ಸಂಗತಿಗಳನ್ನು ನೀವು ಸ್ಪಷ್ಟಗೊಳಿಸಬೇಕಾಗಿರುತ್ತದೆ. ನೀವು ಅವುಗಳನ್ನೆಲ್ಲಾ ಚರ್ಚಿಸಿ ನಿಮ್ಮ ಪಂಗಡದ ಪುರೋಭಿವೃದ್ಧಿಗೆ ತಕ್ಕ ಸಾಧನಗಳನ್ನು ಕಲ್ಪಿಸಬೇಕೆಂಬುದೇ ನಿಮ್ಮ ಉದ್ದೇಶವಾಗಿರುತ್ತದೆ. ಈ ಸಮಯದಲ್ಲಿ ನೀವುಗಳು ಪ್ರಥಮತಃ ಜೈನರೆಂಬುದನ್ನು ಗಮನಿಸಿ ಜೈನ ಪಂಗಡದ ಶ್ರೇಯೋಭಿವೃದ್ಧಿಯನ್ನು ಚಿಂತಿಸಿ, ಆ ಬಳಿಕ ಒಟ್ಟಿನಲ್ಲಿ ನೀವು ಭಾರತೀಯರೆಂಬುವದನ್ನು ನೆನಪಿಗೆ ತಂದುಕೊಂಡು ಸಮಗ್ರ ಭರತಖಂಡದ ಹಿತಸಾಧನೆಯ ವಿಚಾರಕ್ಕೆ ಮನಸ್ಸು ಕೊಡಬೇಕಾಗಿದೆ. ಅದಕಾರಣ, ಸ್ವವಿಷಯದೃಷ್ಟಿಯಿಂದ ಎಲ್ಲಾ ಅಂಶಗಳನ್ನೂ ನಿರ್ಧರಿಸಲು ನಿಮಗೆ ಪೂರ್ಣಾಧಿಕಾರವುಂಟು; ನಿಮ್ಮ ಸ್ವಂತ ಆವಶ್ಯಕತೆಗಳ ವಿಚಾರದಲ್ಲಿಯೂ ನೀವು ಚರ್ಚೆ ಮಾಡತಕ್ಕದ್ದೇ ಯುಕ್ತವಾಗಿರುತ್ತದೆ. ಆದರೆ, ರಾಜಕೀಯ ವಿಚಾರಗಳಲ್ಲಿ ಮಾತ್ರ ಅವು ಒಟ್ಟು ಇಂಡಿಯಾ ದೇಶಕ್ಕೆ ಸಂಬಂಧಪಟ್ಟದ್ದರೂ ಸರಿ, ಅಥವಾ ಅದರ ಒಳಗಿನ ಯಾವುದೊಂದು ಪ್ರದೇಶಕ್ಕೆ ಸಂಬಂಧಪಟ್ಟದ್ದರೂ ಸರಿ; ನೀವು ಮೊಟ್ಟಮೊದಲು ಭಾರತೀಯರೆಂಬುದನ್ನು ನೆನಪಿನಲ್ಲಿಟ್ಟು ಕರ್ತವ್ಯವನ್ನು ನೆರವೇರಿಸಿ, ಆ ಬಳಿಕ ಜೈನರೆಂಬ ಭಾವನೆಯಿಂದ ಸ್ವಂತ ವಿಚಾರಕ್ಕೆ ಗಮನಕೊಡಬೇಕು. ನೀವು ಜೈನ ಪಂಗಡದವರೆಂಬ ದೃಷ್ಟಿಯಿಂದ ನಿಮ್ಮ ಸ್ವಂತ ಶ್ರೇಯಸ್ಸು ಲಭಿಸಲು ಕೋರಿಸುವಂತೆ ನಿಮ್ಮ ಪಂಗಡಕ್ಕೆ ಸಂಬಂಧಪಟ್ಟ ಸಂಗತಿಗಳನ್ನು ಇತ್ಯರ್ಥಪಡಿಸಿಕೊಳ್ಳುವ ಪ್ರಯತ್ನದಲ್ಲಿ ಪ್ರತಿಯೊಬ್ಬರೂ ನಿಮ್ಮಲ್ಲಿ ಸಹಾನುಭೂತಿ (sympathy) ಯನ್ನು ತೋರಿಸುತ್ತಾರೆ. ನೀವು ಭಾರತೀಯರೆಂಬ ದೃಷ್ಟಿಯಿಂದ ರಾಜಕೀಯ ವಿಚಾರಗಳಲ್ಲಿ ನಿಮ್ಮ ಮನೋವೃತ್ತಿಗಳೂ, ಮತ್ತು ಇಂಡಿಯಾ ದೇಶದಲ್ಲಿನ ಇತರ ಮತಸ್ಥರ ಮನೋವೃತ್ತಿಗಳೂ ಸೇರಿ ಒಟ್ಟು ಇಂಡಿಯಾ ದೇಶದ ಹಿತಚಿಂತನೆಗೆ ಸಾಧಕವಾಗಿರಬೇಕೆಂಬುದೇ ನಮ್ಮ ಅಭಿಮತವಾಗಿರುತ್ತದೆ.

ನಮ್ಮ ದೇಶದಲ್ಲಿರುವ ಸಾವಿರಾರು ಪಂಗಡಗಳವರೂ ಕೂಡ ಈ ಸಾರತತ್ವವನ್ನು ಮನಸ್ಸಿನಲ್ಲಿಟ್ಟುಕೊಂಡು ಪರಸ್ಪರವಾಗಿ ನಿಜವಾದ ಭ್ರಾತೃವಾತ್ಸಲ್ಯದಿಂದ ಕೂಡಿ ನಡೆಸುತ್ತಾ ಬರುವುದಾದರೆ ನಮ್ಮ ದೇಶಕ್ಕೆ ಮುಂದೆ ವಿಪುಲವಾದ ಶ್ರೇಯಸ್ಸುಂಟಾಗುವ ವಿಚಾರದಲ್ಲಿ ಯಾವ ಶಂಕೆಯನ್ನೂ ಇಟ್ಟುಕೊಳ್ಳಬೇಕಾಗಿಲ್ಲ. ಆದರೆ, ರಾಜಕೀಯ ವಿಚಾರಗಳಲ್ಲಿ ಕೇವಲ ಮತಸಂಬಂಧವಾದ ಮತ್ತು ಸಮಾಜಸಂಬಂಧವಾದ ವಿಚಾರಗಳು ಪ್ರವೇಶಿಸಿದ್ದಲ್ಲಿ ಮಾತ್ರ ಅತೀ ಗಹನವಾದ ತೊಂದರೆಗಳುಂಟಾಗುತ್ತವೆ; ಈ ತೊಂದರೆಗಳು ದೇಶದ ಪುರೋಭಿವೃದ್ಧಿಗೆ ತಪ್ಪದೆ ಕಾಲವಿಳಂಬವನ್ನುಂಟು ಮಾಡುವವು. ಪ್ರತಿಯೊಂದು ಪಂಗಡದಲ್ಲಿಯೂ ಕೂಡ, ಮತಸಂಬಂಧವಾಗಿಯೂ ಮತ್ತು ಸಮಾಜಸಂಬಂಧವಾಗಿಯೂ ವಾಸ್ತವಿಕವಾಗಿ ಯಾವ ಅಭಿವೃದ್ಧಿಯುಂಟಾದರೂ ಕೂಡಾ ಅದು ಒಟ್ಟು ದೇಶದ ಪುರೋಭಿವೃದ್ಧಿಗೆ ಸಾಧಕವಾಗುವುದೆಂದು ಗೂ ತಪ್ಪದು. ಅದಕಾರಣ ಮತ ವಿಚಾರಗಳಲ್ಲಿಯೂ, ಸಾಮಾಜಿಕ ವಿಚಾರಗಳಲ್ಲಿಯೂ ಮತ್ತು ವಿದ್ಯಾಭ್ಯಾಸ ವಿಚಾರದಲ್ಲಿಯೂ ಮುಂದುವರಿಯುವ ಪ್ರಯತ್ನದಲ್ಲಿ ಪ್ರತಿಯೊಂದು ಪಂಗಡದವರಿಗೂ ಸಾಧ್ಯವೆನಿಸುವಷ್ಟು ಸಹಾಯವು ದೊರಕಬೇಕೆಂದು ಹಾರೈಸುವದು ನಮ್ಮ ಕರ್ತವ್ಯವಾಗಿದೆ. ಅದರೊಡನೆ ನಾವು ಮತ್ತೊಂದು ವಿಚಾರವನ್ನು ಗಮನಿಸಬೇಕಾಗಿದೆ. ಒಟ್ಟಿನಲ್ಲಿ ದೇಶವೇ ವಾಸ್ತವಿಕವಾಗಿ ಮುಂದುವರಿಯಬೇಕಾದರೆ ಸರ್ವತೋಮುಖವಾಗಿ ಅಭಿವೃದ್ಧಿಯುಂಟಾಗಬೇಕೆಂಬುದನ್ನೂ, ಮತ್ತು ಅದು ಪ್ರತಿಯೊಂದು ಪಂಗಡದವರಿಗೂ ಲಭಿಸಬೇಕೆಂಬುದನ್ನೂ ನಾವು ಮನಸ್ಸಿನಲ್ಲಿಡಬೇಕು. ಈಗ

ಅಭಿವೃದ್ಧಿ ಸ್ಥಿತಿಯಲ್ಲಿರುವ ಪಂಗಡಗಳವರು, ತಾವು ಇನ್ನೂ ಮುಂದುವರಿಯುವವರಲ್ಲಿ ಆಸಕ್ತಿಯನ್ನು ವಹಿಸುವುದು ಮಾತ್ರವೇ ಅಲ್ಲದೆ, ಸಮಾಜ ಪರಿಣಾಮ ಕ್ರಮದಲ್ಲಿ ಯಾವುದೋ ಒಂದು ಪರಿಸ್ಥಾಯೀವಾದ ಕಾರಣದ ದೆಸೆಯಿಂದ ಹಿಂದುಳಿದಿರುವ, ಅಷ್ಟೊಂದು ಭಾಗ್ಯಶಾಲಿಗಳಲ್ಲದ ಇತರ ಪಂಗಡಗಳವರಿಗೆ, ಕರಾವಲಂಬನವನ್ನು ಕೊಟ್ಟು ಸಹಾಯಮಾಡುವುದೂ ಸಹ ಅವರ ಮುಖ್ಯ ಕರ್ತವ್ಯವಾಗಿರುವುದೆಂಬುದೇ ನಮ್ಮ ಸ್ವಂತ ಅಭಿಪ್ರಾಯವಾಗಿರುತ್ತದೆ. —ಕಂಠೀರವ.

ವಿವಿಧ ಸಂಗ್ರಹ.

ವರಪಕ್ಷದ ಸುಲಿಗೆ!

ಸನಾತನ ಸಮಾಜದಲ್ಲಿ ವರದಕ್ಷಿಣೆಯ ಪದ್ಧತಿಯು ವಿಶೇಷ ವಿಕೋಪಕ್ಕೆ ಮುಟ್ಟಿದೆ. ವರದಕ್ಷಿಣೆಯ ನೆವದಿಂದ ವಧೂಪಕ್ಷವನ್ನು ವರಪಕ್ಷವು ಸುಲಿಯುವ ಅನೇಕ ಉದಾಹರಣೆಗಳು ಇತ್ತಿತ್ತ ವಿಶೇಷವಾಗಿ ಕಂಡುಬಂದಿವೆ. ಕಾಕಿನಾಡಿನಲ್ಲಿ ಒಬ್ಬ ವರನಿಗೆ ೪೦ ಸಾವಿರ ರೂಪಾಯಿ ವರದಕ್ಷಿಣೆ ಕೊಡಬೇಕೆಂದು ವರನ ಬೇಡಿಕೆ. ತ್ರಿಚನಾಪಳ್ಳಿಯಲ್ಲಿ ವರಪಕ್ಷದ ಸುಲಿಗೆಯ ಕಥೆಯು ಸರಕಾರಿ ನ್ಯಾಯಾಸನದಲ್ಲಿ ಹೇಳಲ್ಪಟ್ಟಿತು. ವರನ ತಂದೆಯವರು ರಾಜಗೋಪಾಲಯ್ಯರರವರು. ವರನ ತಾಯಿ ಶೇಷಮ್ಮ. ವಧು ತಂದೆಯ ಹೆಸರು ಸ್ವಾಮಿನಾಥ. ವರನಿಗೆ ವಧುವನ್ನು ಕೊಡಮಾಡಿದಾಗ ರಾಜಗೋಪಾಲಯ್ಯರರವರು ೧ ಸಾವಿರ ರೂಪಾಯಿ ನಗದಿ ಹಾಗು ೬ ಸಾವಿರ ರೂಪಾಯಿ ಬೆಲೆಯ ೪ ಎಕ್ರೆ ಸ್ಥಳ ಕೊಡಬೇಕೆಂದು ಮಾತಾಗಿತ್ತು. ಬಡತನದ ಮೂಲಕ ಸ್ವಾಮಿನಾಥರಿಂದ ದಕ್ಷಿಣೆಯು ಕೊಡಲಾಗಲಿಲ್ಲ. ವಧುವು ಪ್ರಾಯಕ್ಕೆ ಬಂದಳು. ಧರ್ಮಶಾಸ್ತ್ರದಂತೆ ನಿಶೇಕ ಪ್ರಸ್ತ ವಿಧಿ ಯಾಗಬೇಕಾಗಿತ್ತು. ವರದಕ್ಷಿಣೆಯು ನಿಬಾಕಿಯಾದ ಹೊರತು ನಿಶೇಕ ಪ್ರಸ್ತವಾಗಲು ರಾಜಗೋಪಾಲಯ್ಯರರು ಒಪ್ಪಲಿಲ್ಲ. ಸ್ವಾಮಿನಾಥರು ಬಡವರು. ಶೋಭನವಂತೂ ಆಗಬೇಕು. ಹಣವು ಒದಗಲಾರದು. ಅದರಿಂದ ಶೇಷಮ್ಮನ ಹೆಸರಿನಲ್ಲಿ ೫೦೦೦ ರೂಪಾಯಿಗಳ ಒಂದು ಪ್ರಾಮಿಸರಿ ನೋಟನ್ನು ಬರೆಕೊಟ್ಟರು; ನಿರುಪಾಯದಿಂದ ಬರೆಕೊಟ್ಟರು. ನೋಟಿನ ಹಣ ಕೊಡಲಿಕ್ಕೆ ಸ್ವಾಮಿನಾಥರಲ್ಲಿ ಹಣವೆಲ್ಲಿದೆ? ಶೇಷಮ್ಮಳು ತ್ರಿಚನಾಪಳ್ಳಿಯ ಕೋರ್ಟಿನಲ್ಲಿ ದಾವೆ ಮಾಡಿದಳು. ನ್ಯಾಯಮೂರ್ತಿಗಳು ವಿಚಾರಮಾಡಿ ಶೇಷಮ್ಮಳ ದಾವೆಯನ್ನು ಕಿತ್ತು ಹಾಕಿಬಿಟ್ಟರು. ಹೈಕೋರ್ಟಿನವರೆಗೆ ಶೇಷಮ್ಮಳು ಬಡಿದಾಡಿದರೂ ಸ್ವಾಮಿನಾಥರ ನೋಟಿನ ಹಣವು ಅವಳ ಕೈಸೇರಲಿಲ್ಲ. ಮದ್ರಾಸ ಹೈಕೋರ್ಟಿನವರೂ ಶೇಷಮ್ಮಳ ದಾವೆ ಕಿತ್ತುಹಾಕಿದರು. ಈ ವ್ಯವಹರಣೆಯ ಸೇಡನ್ನು ಶೇಷಮ್ಮಳು ಸೊಸೆಯಮೇಲೆ ತೆಗೆಯದಿದ್ದರೆ ಸಾಕು.

⁂

೮೦೦ ನಂಬರಿನ ಕೈ ನೂಲು.

ಆಂಧ್ರ ದೇಶದಲ್ಲಿ ಕೈ ನೂಲಿಗೆ ವಿಶೇಷ ಪ್ರೋತ್ಸಾಹ ದೊರಕಿದೆ. ಅತಿ ಸೂಕ್ಷ್ಮ ಪ್ರಕಾರದ ನೂಲು ತಯಾರಾಗುತ್ತಲಿದೆ. ಗೋದಾವರಿಯಲ್ಲಿ ಪೇಡಾವಡನವಲ್ ಎಂಬುದೊಂದು ಗ್ರಾಮವಿದೆ. ಅಲ್ಲಿ ಶ್ರೀ ಸೋಮಯಾಜುಲು ಎಂಬವರಿರುವರು. ಇವರು ಬಡಬ್ರಾಹ್ಮಣರು ಪ್ರತಿದಿನ ಹೊಟ್ಟೆಯ ಗೋಳನ್ನು ಪರಿಹರಿಸಲು ಇವರು ಯತ್ನ ಮಾಡುತ್ತಾರೆ ಅವುಗಳ ಲೋಳೆ ಮಾಡುವವರೂ ಅವರೇ. ರಾತ್ರಿ ನೂಲುತ್ತಾರೆ. ಹತ್ತಿ ಹಿಂಜುವವರೂ ಅವರೇ. ಅವರು ೮೦೦ ನಂಬರಿನ ನೂಲು ನೂತು, ಆಂಧ್ರ ಪ್ರಾಂತಿಕ ಖಾದಿ ಮಂಡಳದ ಕಾರ್ಯದರ್ಶಿಗಳಿಗೆ ಕಳಿಸಿರುವರು. ಕೈಗಾರಿಕೆಯು ಸಾಮಾನ್ಯ ಪ್ರತಿಯು [illegible] ಹೀಗೇ [illegible] ರೀತಿಯಿಂದ ಸುರಿ ಮಾಡಲ್ಪಟ್ಟಿದೆ. ಸೋಮಯಾಜುಲುರವರು ಒಂದು ಸಾವಿರ ನಂಬರಿನ ನೂಲು ನೂಲಲು ಪ್ರಾರಂಭಿಸಿರುವರು. ಕೈಗಾರಿಕೆಯು ಸಾಧಿಸಿದ ಶ್ರೇಯಸ್ಸು ನೋಡಿರಿ.

⁂

ಕಠೋರ ಉಪವಾಸವ್ರತ.

ವಿಜಾಪುರ ಜಿಲ್ಲೆಯ ಇಳಕಲ್ಲಿನಲ್ಲಿ ಶ್ರೀ ಗಿರಿಯಪ್ಪ ಕುಂಬಾರ ಎಂಬುವರಿರುವರು. ಪ್ರಾಯ ಸುಮಾರು ೫೦ ವರುಷ. ಇವರು ಪ್ರಾಪಂಚಿಕರು. ಹೆಂಡರು-ಮಕ್ಕಳಿರುವರು. ಭೂತದಯೆ, ಪರೋಪಕಾರಬುದ್ಧಿ ಮೊದಲಾದ ಸಾತ್ವಿಕ ಗುಣಗಳಿಂದ ಇವರು ಯುಕ್ತರಾಗಿರುವರು. ಕಳೆದ ೩-೪ ವರ್ಷಗಳಿಂದ ಇವರು ಉಪವಾಸ ವ್ರತವನ್ನು ಕೈಕೊಂಡಿರುವರು. ಮೊದಲನೇ ವರುಷ ಒಂದು ವಾರದ ವರೆಗೆ ಅನ್ನ ನೀರು ಕೊಳ್ಳದೆ, ಇವರು ಉಪೋಷಣ ಮಾಡಿದರು. ೨ ನೇ ವರುಷ ೨ ವಾರ ಮಾಡಿದರು. ೩ ನೇ ವರುಷ ೩ ವಾರ, ೪ ನೇ ವರುಷ ಅಂದರೆ, ಕಳೆದ ಶ್ರಾವಣ ಮಾಸದಲ್ಲಿ ೪ ವಾರಗಳ ವರೆಗೆ ಉಪೋಷಣ ಮಾಡಿದರು. ಕಳೆದ ಮಾಘ ಮಾಸದಲ್ಲಿಯೂ ಅನ್ನ ನೀರು ಕೊಳ್ಳದೆ ಕಠಿಣ ಉಪೋಷಣವನ್ನಾಚರಿಸಿದರು. ಉಪೋಷಣದಲ್ಲಿ ಶ್ರೀ ಗಿರಿಯಪ್ಪನವರು ನಿತ್ಯ ಪ್ರಾತಃಕಾಲಕ್ಕೆ ಒಂದು ತಾಸು ಹಗ್ಗಲಿನ ಮೇಲೆ ನಿಂತು ಜಗದೊಡೆಯನ ಧ್ಯಾನಮಾಡಿ, ತೀರ್ಥಪ್ರಾಶನ ಮಾಡುತ್ತಿದ್ದರು. ಶ್ರೀ ಗಿರಿಯಪ್ಪನವರ ಧ್ಯೇಯವೇನೆಂದು ಇನ್ನೂ ತಿಳಿಯಲಿಲ್ಲ.

⁂

ಸುಧಾರಿಸಿದ ಅತ್ಯಾಚಾರಗಳು.

ಅಮೇರಿಕೆಯವರು ಪಾಶ್ಚಾತ್ಯ ಸುಧಾರಣೆಯ ಶಿಖರವನ್ನೇರಿದ ರಾಷ್ಟ್ರದವರು. ಅಲ್ಲಿ ಗೌರಕಾಯೇತರ ಮಾನವರನ್ನು ಎಷ್ಟು ಕ್ರೂರತನದಿಂದ ದುಷ್ಟತನದಿಂದ ಪಶುತುಲ್ಯ ಬುದ್ಧಿಯಿಂದ ನಡೆಸಿಕೊಳ್ಳುತ್ತಾರೆ ಕೇಳಿರಿ. ನಿಗ್ರೋ ಜನರಿಗೆ ಅಲ್ಲಿ ಸಾರ್ವಜನಿಕ ದರ್ಜೆ ಇರುವದಿಲ್ಲ; ಶಿಕ್ಷಣಾಲಯದಲ್ಲಿ ಅವರ ಪ್ರವೇಶವಿಲ್ಲ. ಉಗಿಬಂಡಿಯಲ್ಲಿ ಅವರು ತಿರುಗಾಡಬೇಕಾದ ದಬ್ಬೆಗಳೇ ಬೇರೆ; ಊಟಕೊಳ್ಳುವ ಸ್ಥಳಗಳು ಬೇರೆ. ಟಿಕೀಟು ಕೊಳ್ಳುವ ಸ್ಥಳಗಳೂ ಬೇರೆ. ಇವುಗಳಿಂದ ಅಲ್ಲಿಯ ಪೀಡನೆಯು ಕಲ್ಪನೆಯಾಗದು. ನಿಗ್ರೋ ಜನರಿಗೆ ಲಿಂಚಿಂಗ ಎಂಬುದೊಂದು ಗೌರಕಾಯದವರು ಶಿಕ್ಷೆ ಕೊಡುವ ಪದ್ಧತಿಯಿದೆ. "ಲಿಂಚಿಂಗ" ಅಂದರೇನು? ಯಾರಾದರೊಬ್ಬ ನಿಗ್ರೋನು ಗೌರಕಾಯದವನ ಮೇಲೆ ಏನಾದರೊಂದು ಅನಾಚಾರ ಆಚರಿಸಿದನೆಂದು ಕಲ್ಪಿಸಿದರೆ, ಆತನಿಗೆ ಈ ಗೌರಕಾಯದವರು, ಲಿಂಚಿಂಗ ಎಂಬ ಶಿಕ್ಷೆ ಕೊಡುತ್ತಾರೆ. ೧೦-೧೫೦ ಗೌರಕಾಯದವರು ಒತ್ತಟ್ಟಿಗೆ ಕೂಡುತ್ತಾರೆ; ಒಬ್ಬೊಬ್ಬ ನಿಗ್ರೋ ಮಂದಿಗಳಿಗೆ ಹಿಡಿಯುತ್ತಾರೆ; ಅವರ ಹೆಡಮುರಿಗೆ ಕಟ್ಟಿ ಒಂದು ಗಿಡಕ್ಕೆ ತೂಗಹಾಕುತ್ತಾರೆ; ಬಳಿಕ ಕೈಗೆ ಸಿಕ್ಕ ಉರುವಲಕಟ್ಟಿಗೆ, ಹಾಳು ಪೆಟ್ಟಿಗೆ ಮೊದಲಾದವುಗಳನ್ನು ಒಟ್ಟುಮಾಡಿ ಅದಕ್ಕೆ ಬೆಂಕಿಹಚ್ಚುತ್ತಾರೆ; ಅವರ ಮೇಲೆ ಹೆಡಮುರಿಗೆ ಕಟ್ಟಿದ ನಿಗ್ರೋನನ್ನು ಬೀಸಾಡುತ್ತಾರೆ; ನಿಗ್ರೋನು ಪಾರಾಗಬಾರದೆಂದು. ಆತನು ಸಾಯುವವರೆಗೆ ಆತನಿಗೆ ಉಕ್ಕ ಸೂಜಿಗಳಿಂದ ಚುಚ್ಚುತ್ತಾರೆ. ಹೀಗೆ ಯಾತನೆಗಳನ್ನು ಅನುಭವಿಸುವಾಗ್ಗೆ ಆತನು ಮಾಡುವ ಆಕ್ರೋಶಗಳ ಸುಖವನ್ನನುಭವಿಸಲು ಸಾವಿರಾರು ಸ್ತ್ರೀ-ಪುರುಷರೂ, ಬಾಲಕರೂ, ಮುದುಕರೂ ಒಟ್ಟಾಗುತ್ತಾರೆ. ಇದೇ "ಲಿಂಚಿಂಗು." ಇಷ್ಟಾಗಿಯೂ, ಗೌರಕಾಯದವರಮೇಲೆ ಅನಾಚಾರ ಮಾಡಿದ ನಿಗ್ರೋರನ್ನೇ ಲಿಂಚಿಂಗಕ್ಕೆ ಗುರಿಮಾಡದೆ ಅನ್ಯರನ್ನೇ ಹಿಡಿದು ಕೊಲೆಮಾಡುವದೂ ಉಂಟು. ಏನಿದು ಪಾಶ್ಚಾತ್ಯ ಸಂಸ್ಕೃತಿ! ಸಮತೆ, ಬಂಧುಭಾವ ಮುಂತಾದ ವೇದಾಂತಗಳನ್ನು ಜಗತ್ತಿನಲ್ಲಿ ಪ್ರಸಾರ ಮಾಡುವ ಪಾಶ್ಚಾತ್ಯ ಸುಧಾರಣೆಯ ರಾಷ್ಟ್ರದಲ್ಲಿ ಸುಧಾರಿಸಿದ ಪಾಶ್ಚಾತ್ಯರು ಆಚರಿಸುವ ಪಶುತುಲ್ಯ ಕೃತ್ಯಗಳಿವು. ಈ ಬಗ್ಗೆ ಅಲ್ಲಿಯ ಸರಕಾರವು ಕೊಲೆಪಾತಕಿಗಳನ್ನು ದಂಡಿಸುವದಿಲ್ಲ.

⁂

ಪಾದ್ರಿಗಳ ಸ್ವಾರ್ಥಪರ ಶಾಂತಿಪಾಠ.

ಕ್ರೈಸ್ತಮತದ ಪಾದ್ರಿಗಳು ಅಖಿಲ ಭೂಮಂಡಲದಲ್ಲಿ ಮಾನವನ ಹಿತಕ್ಕಾಗಿ ಕ್ರಿಸ್ತನ ಸಂದೇಶದ ಗಂಟು ಕಟ್ಟಿಕೊಂಡು ಅಡ್ಡಾಡುತ್ತಿರುವರೆಂದು ಹೇಳುತ್ತಾರೆ. ಕಳೆದ ಜನವರಿಯಲ್ಲಿ ಪಾದ್ರಿಗಳ ಪರಿಷತ್ತೊಂದು ಅಮೇರಿಕಾ ಖಂಡದ ವಾಶಿಂಗಟನ್ ಪಟ್ಟಣದಲ್ಲಿ ಸೇರಿತು. ಅಮೇರಿಕಾ ದೇಶದ ಅಧ್ಯಕ್ಷರೇ ಈ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಅಮೇರಿಕೆಯೊಳಗಿಂದ ಪರರಾಷ್ಟ್ರಗಳಿಗೆ ಹೋದ ಪಾದ್ರಿ ಸಾಹೇಬರ ಕೂಟವಿದು. ೮ ಸಾವಿರ ಪಾದ್ರಿಗಳಲ್ಲಿ ೩ ಸಾವಿರ ಪಾದ್ರಿಗಳು ಒಟ್ಟಾಗಿದ್ದರು. ೮ ಸಾವಿರ ಪಾದ್ರಿಗಳಿಗಾಗಿ ಅಮೇರಿಕೆಯ ರಾಷ್ಟ್ರವು ಸಾಲಿಯಾನ ೧೨ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುತ್ತದೆ. ಈ ಪರಿಷತ್ತಿಗೆ ಪ್ರೊ॥ ಕಾರ್ನೀಲಿಯಸ್ ಎಂಬ ಪಾದ್ರಿ ಸಾಹೇಬರು ಹಿಂದುಸ್ಥಾನದಿಂದ ಹೋಗಿದ್ದರು. ಅವರು ಪರಿಷತ್ತಿನಲ್ಲಿ ನಿಸ್ಪೃಹ ಭಾಷಣ ಮಾಡಿ ಪಾದ್ರಿಗಳ ಕಾರ್ಯದ ಒಳಗುಟ್ಟನ್ನೂ, ಪ್ರಜೆಗಳ ಅವಿಶ್ವಾಸವನ್ನೂ ಸ್ಫುಟಮಾಡಿದರು. ಅವರು ಹೇಳಿದ್ದೇನಂದರೆ;— "ಹಿಂದುಸ್ಥಾನದ ಪಾದ್ರಿಗಳು ಅಷ್ಟು ಧರ್ಮೋಪದೇಶಕರಲ್ಲ; ಆಳರಸರ ಸಹಾಯಕರಾಗಿಯೇ ಅವರು ಮೆರೆಯುತ್ತಾರೆ. ಜಿಲ್ಲಾಧಿಪತಿಗಳಾದ ಗೌರಕಾಯದ ಕಲೆಕ್ಟರರು ಪಾದ್ರಿಗಳಿಗೆ ಹೇಳುವದೇನಂದರೆ:— "ನೀವು ಕ್ರಿಸ್ತರು; ನಾವೂ ಕ್ರಿಸ್ತರು; ಉಳಿದವರೆಲ್ಲರು ಧರ್ಮಭ್ರಷ್ಟರು. ನಮ್ಮ ರಾಜ್ಯವಿದ್ದರೆ ನಿಮ್ಮ ಧರ್ಮವು ಬದುಕಿ ಉಳಿಯುವದು. ಆದರಿಂದ ಇಂಗ್ಲಿಷ ರಾಜ್ಯವನ್ನು ಸ್ಥಿರ ಮಾಡುವದಾದರೂ ಕ್ರಿಸ್ತದೇವರ ಸೇವೆಯೇ." ತುರ್ಕಸ್ಥಾನದಲ್ಲಿಯೂ ಇದೇ ಅನುಭವ ಬಂತು; ಹಿಂದುಸ್ಥಾನದಲ್ಲಿಯೂ ಇದೇ ಅನುಭವ ಬರುತ್ತಿದೆ. ರಾಷ್ಟ್ರೀಯ ಧೋರಣವನ್ನು ನಾವು ಹಿಂದುಸ್ಥಾನದಲ್ಲಿಟ್ಟಿರುವೆವೋ? ಪಾದ್ರಿಗಳು ಕಲಿಸುವ ಶಾಲೆಗಳಲ್ಲಿ [illegible] ಕಲೆಕ್ಟರರ ಚಿತ್ರಗಳಿವೆ; ವಿಲಾಯಿತಿ ಮೊಳಗಿನ ಹಳೇ ಅರಸರ ಚಿತ್ರಗಳಿವೆ; ಹಿಂದುಸ್ಥಾನದ ಲೋಕನಾಯಕರ ಚಿತ್ರಗಳಿಗೆ ಈ ಶಾಲೆಗಳಲ್ಲಿ ಇಂಬಿರುವದಿಲ್ಲ. ಇದರಿಂದ ನಾವು ಪಾದ್ರಿಗಳೂ, ನಮ್ಮ ಪರಿವಾರವೂ ಹಿಂದುಸ್ಥಾನದಲ್ಲಿ ಅಸ್ಪೃಶ್ಯರಾಗಿರುವೆವು. ಪ್ರೊ॥ ಕಾರ್ನೀಲಿಯಸ್‌ರವರು ಹಿಂದುಸ್ಥಾನದಲ್ಲಿ ಧರ್ಮೋಪದೇಶದ ವೇಷದಿಂದ ಪಾದ್ರಿಗಳು ನಡೆಸುವ ಆಳರಸರ ಪ್ರತಿಷ್ಠೆಯನ್ನು ದಿಟ್ಟತನದಿಂದ ಕೆಡಿಸಿ ಭಾರತೀಯರಿಗೆ ಉಪಕೃತಿ ಮಾಡಿರುವರಲ್ಲವೇ?

ಕಾನಡಾವೃತ್ತ.

ಮಿತಿ ಕ್ರೋಧನ ಸಂ। ಚೈತ್ರ ಶು। ಷಷ್ಟಿ ಸೋಮವಾರ

ಲೋಕಶಾಹಿಯ ಚೇಷ್ಟೆ!

ಹಿಂದುಸ್ಥಾನದ ಸದ್ಯದ ರಾಜ್ಯಕಾರಭಾರದಲ್ಲಿ ಏನು ನಡೆದದೆಂದು ಯಾರಾದರೂ ಸವಾಲು ಕೇಳಿದರೆ, ಅದಕ್ಕೆ ಅಡ್ಡ ತಿಡ್ಡ ಉತ್ತರಗಳನ್ನು ಕೊಡುವದಕ್ಕಿಂತ ಎರಡೇ ಶಬ್ದಗಳಿಂದ ಉತ್ತರ ಕೊಡುವದು ಸಮರ್ಪಕವಾಗಿರುವದು. ರಾಜ್ಯಕಾರಭಾರದಲ್ಲಿ ಸದ್ಯಕ್ಕೆ ನಡೆದದೆಂಬುದು ಲೋಕಶಾಹಿಯ ವಿಡಂಬನೆಯು. ಮೊಂಟೆಗ್ಯೂ ಸಾಹೇಬರು ಪಾರ್ಲಿಮೆಂಟಿನಲ್ಲಿ ಕಾಯಿದೆಯನ್ನು ಪಾಸುಮಾಡಿಸಿ ಮೊದಲಿನ ರಾಜ್ಯಪದ್ಧತಿಯು ಬೇಜವಾಬದಾರವೆಂದು ಹಳಿದು, ಜವಾಬದಾರ ರಾಜ್ಯಪದ್ಧತಿಯನ್ನು ಉಂಟುಮಾಡಲಿಕ್ಕೆಂದು ಸಂಕ್ರಮಣ ಸ್ವರಾಜ್ಯದ ಯೋಜನೆಯನ್ನು ನಿರ್ಮಿಸಿ, ಅದನ್ನು ಅಮಲಿನಲ್ಲಿ ತಂದು ಲೋಕಶಾಹಿಯ ಪ್ರಾಣಪ್ರತಿಷ್ಠೆಯನ್ನು ಮಾಡಿದ್ದೇವೆಂದು ತುತೂರಿಗಳಿಂದ ಊದಿದರು. ಈ ಯೋಜನೆಯಂತೆ ಹೊಸ ಪ್ರತಿನಿಧಿಕ ಸಂಸ್ಥೆಗಳನ್ನು ನಿರ್ಮಿಸಿ, ಅವುಗಳ ಗಣೇಶ ಪೂಜೆಯನ್ನು ಬಾದಶಹರ ಕಕ್ಕನವರಿಂದ ಮಾಡಿಸಿ, "ನಿರಂಕುಶ ಪ್ರಭುತ್ವವು ಅಸ್ತವಾಯಿತು; ಮತ್ತು ಲೋಕಶಾಹಿಯ ಯುಗವು ಉದಯ ಹೊಂದಿತು." ಎಂದು ಘೋಷಿಸಿದರು. ಆದರೆ, ಈ ಹೊಸ ರಾಜ್ಯಪದ್ಧತಿಯ ಕಾರಭಾರವನ್ನು ಈಗ ಐದು ವರ್ಷಗಳ ಅವಧಿಯಲ್ಲಿ ಪರ್ಯಾಲೋಚಿಸಿದರೆ, ಮೊದಲಿನ ಬೇಜವಾಬದಾರ ಪದ್ಧತಿಯೂ, ಅದರ ಏಕತಂತ್ರಿ ಕಾರಭಾರವೂ ಬೇಕು - ಈಗಿನ ಲೋಕಶಾಹಿಯ ವಿಡಂಬನೆಯು ಬೇಡ - ಎಂದು ಹೇಳುವಷ್ಟರ ಮಟ್ಟಿಗೆ ಸದ್ಯಸ್ಥಿತಿಯು ನಿರಾಶಾಜನಕವಾಗಿದೆ.

ಸರಕಾರಿ ವರದಿಗಳ ಭಾಷೆಯಿಂದ ಹೇಳಬೇಕಾದರೆ, ನಮ್ಮ ದೇಶದಲ್ಲಿ ಈ ಹೊಸ ಯುಗದೊಳಗೆ ಸಣ್ಣ ದೊಡ್ಡ ಅನೇಕ ಪಾರ್ಲಿಮೆಂಟುಗಳು ನಿರ್ಮಿಸಲ್ಪಟ್ಟವೆ. ಹಿಂದುಸ್ಥಾನ ಸರಕಾರದ ಉಭಯ ಕೌನ್ಸಿಲ ಸಭೆಗಳೂ, ಪ್ರಾಂತಿಕ ಕೌನ್ಸಿಲುಗಳೂ ನಮ್ಮ ಪಾರ್ಲಿಮೆಂಟುಗಳೆಂಬ ದೊಡ್ಡ ಅಭಿಧಾನವನ್ನು ಧರಿಸಿರುವವು. ಈ ಪಾರ್ಲಿಮೆಂಟುಗಳ ಪಾಡು ಮರಾಠಿ ಗಾದೆಯ ಮಾತಿನಿಂದ ಹೇಳುವಂತೆ, "नांव सोनूबाई हातास कथिलाचा वाळा" ಹೆಸರಿಗೆ ಹೊನ್ನಮ್ಮ, ಕೈಗೆ ಕಂಚಿನ ಬಳೆ ಎಂಬಂತಾಗಿದೆ. ಇವುಗಳಿಗೆ ಯಥಾರ್ಥವಾಗಿ ಹೇಳಬೇಕಾದರೆ, ಪಾರ್ಲಿಮೆಂಟಿನ ಹೊಗಳೆಂದು ಹೇಳಬಹುದು. ವಿಲಾಯತಿಯ ಪಾರ್ಲಿಮೆಂಟಿನಲ್ಲಿರುವ ಸ್ವರಾಜ್ಯದ ಪ್ರಾಣವು ಮಾತ್ರ ಇವುಗಳಲ್ಲಿಲ್ಲ. ಪಾರ್ಲಿಮೆಂಟಿನ ಗೊಂಬೆಯ ಕೃತ್ರಿಮ ಆಡಂಬರವು ಬೇಕಾದಷ್ಟು ಇದೆ. ವಿಲಾಯತಿಯೊಳಗೆ, ಪಾರ್ಲಿಮೆಂಟಿನೊಳಗೆ ಪ್ರತಿಬಿಂಬಿತವಾದ ಅದರ ಮುಖದಿಂದ ಜಾಹೀರಾದ ಲೋಕಮತಕ್ಕೆ ಅಲ್ಲಿಯ ಸರಕಾರವು ತಲೆಬಗ್ಗಿಸಲೇಬೇಕು. ಅಲ್ಲಿಯ ಲೋಕಮತವು ಕಳೆದ ೫ ವರ್ಷಗಳಲ್ಲಿ ಎಷ್ಟು ಪ್ರಧಾನರನ್ನು ಕಿತ್ತೊಗೆಯಿತು ನೋಡಿರಿ; ಲಾಯಿಡ್ ಜಾರ್ಜ ಸಾಹೇಬರು ದಿನ ಬೆಳಗಾಗುವದರೊಳಗೆ ಮುಖ್ಯ ಪ್ರಧಾನರಂಥ ಉಚ್ಚ ಪದವಿಯನ್ನು ತ್ಯಜಿಸಬೇಕಾಯಿತಲ್ಲವೇ! ಬಾಲ್ಡವಿನ್ ಸಾಹೇಬರ ಪಾಡೇನಾಯಿತು? ಅನಂತರ ಕೂಲಿಕಾರ ಪಕ್ಷದ ಮುಖಂಡರಾದ ಮೆಕಡೊನಲ್ಡ ಸಾಹೇಬರು, ಫಕ್ಕನೆ ಸ್ವಪ್ನಸೃಷ್ಟಿಯಲ್ಲಿ ಆಗುವಂತೆ ಹ್ಯಾಗೆ ಮಂತ್ರಿಪದವನ್ನೇರಿದರು, ಎಂಟು ತಿಂಗಳೊಳಗೆ ಲೋಕಪಕ್ಷದ ಬಹುಮತವು ಅವರನ್ನು ಹ್ಯಾಗೆ ಕಳಿಸಿಬಿಟ್ಟಿತು, ಇದೆಲ್ಲ ವಿಲಾಯತಿಯೊಳಗಿನ ಸಜೀವ ಸ್ವರಾಜ್ಯದ ಪ್ರಭಾವವು. ನಮ್ಮಲ್ಲಿಯ ಸ್ವರಾಜ್ಯ ಪಾರ್ಲಿಮೆಂಟುಗಳಿಗೂ, ವಿಲಾಯತಿಯ ಪಾರ್ಲಿಮೆಂಟಿಗೂ ಅಜಗಜಾಂತರವಿದೆಂದು ಸಾಧಾರ ಪುರಾವೆಯನ್ನು ಇಲ್ಲಿಯ ಸತ್ತಾಧಾರಿ ಆಳರಸರು ಈಗ ೫ ವರ್ಷಗಳಿಂದ ಜನತೆಯ ಮುಂದಿಟ್ಟು ಸಿದ್ಧಪಡಿಸುತ್ತಲಿರುವರು. ನಮ್ಮ ವರಿಷ್ಠ ಮತ್ತು ಕನಿಷ್ಠ ಪಾರ್ಲಿಮೆಂಟುಗಳು ನಿರ್ಧರಿಸಿದ ಎಷ್ಟು ನಿರ್ಣಯಗಳನ್ನು ಈ ಆಳರಸರು ಧಿಕ್ಕರಿಸಿದ್ದಾರೆ, ಎಸೆಂಬ್ಲಿಯೊಳಗೂ, ಕೌನ್ಸಿಲುಗಳೊಳಗೂ ಸರಕಾರದ ಧೋರಣಕ್ಕೆ ಸೇರದಂಥ ಯಾವದೇ ಠರಾವುಗಳನ್ನು ಲೋಕಪ್ರತಿನಿಧಿಗಳು ಎಷ್ಟು ಬಹುಮತದಿಂದ ಪಾಸುಮಾಡಿದರೂ, ಸತ್ತಾಧಿಕಾರಿಗಳು ಅವುಗಳನ್ನು ಆದರಿಸಿಲ್ಲ; ಆದರಿಸುವಂತೆ ತೋರುವದೂ ಇಲ್ಲ. ಕರ್ತವ್ಯಪರಾಙ್ಮುಖತೆಯ ಮಾತು ಹಿತ್ತಟ್ಟಿಗೆ ಬಿಡುವ; ಆ ಕರ್ತವ್ಯದ ಉತ್ಸಾಹ ಸಂಗತಿಗಳನ್ನು ನೋಡಿರಿ. ಇಡೀ ಹಿಂದುಸ್ಥಾನವೆಲ್ಲ ನಿಷೇಧವಾಗುತ್ತಿರುವಾಗ ನೇಮಸ್ತರೂ, ಸ್ವತಂತ್ರರೂ, ಸ್ವರಾಜ್ಯ ಪಕ್ಷದವರೂ ಬಂಗಾಲದ ದಬ್ಬಾಳಿಕೆಯ ಕಾನೂನನ್ನು ರದ್ದುಪಡಿಸಲು ಆಗ್ರಹಮಾಡುತ್ತಿರುವಾಗ, ಬಂಗಾಲದ ಆಳರಸರು ಈ ಅತ್ಯಾಚಾರಿ ಕಾನೂನುಗಳನ್ನು ಕೇವಲ ತಮ್ಮ ಅಧಿಕಾರ ಬಲದಿಂದಲೇ ಮಂಜೂರು ಮಾಡಿದರಲ್ಲವೇ! ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಈ ಕಾಯಿದೆಯನ್ನು ರದ್ದು ಮಾಡುವ ಠರಾವು ಮಂಜೂರಾದದ್ದನ್ನು ಸರಕಾರವು ಬದಿಗಿಟ್ಟು ಭಾರತ ಮಂತ್ರಿಗಳಿಂದ ಪರಸ್ಪರ ಮಂಜೂರಿ ತಂದು ಬಂಗಾಲ ಕಾನೂನಿನ ಪ್ರಕಟಣೆ ದಬ್ಬಾಳಿಕೆ ಕಾನೂನನ್ನು ಕಳೆದ ವಾರದಲ್ಲಿ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಪ್ರವೇಶಿಸಿದರು. ಪಂಡಿತ ಮೋತಿಲಾಲರು ಈ ಕಾನೂನನ್ನು ರದ್ದುಪಡಿಸುವ ಕಾನೂನನ್ನೇ ನಿರ್ಮಿಸಲು ಸೂಚಿಸಲು, ಸರ್ವಾಧಿಪತಿಗಳು ತಮ್ಮ ಅಪ್ಪಣೆಯನ್ನೀಯದೆ ಪಂಡಿತ ಮೋತಿಲಾಲರವರಿಗೆ ದಬ್ಬಿದರಲ್ಲವೇ! ವರಿಷ್ಠ ಕಾಯಿದೆ ಕೌನ್ಸಿಲು ಆಳರಸರಿಗೆ ವಿಶೇಷ ಅಧಿಕಾರ ಕೊಡುವ ಪ್ರಜಾಸ್ವಾತಂತ್ರ್ಯಹಾರಕ ಹಾಗು ಸರಕಾರಿ ನ್ಯಾಯಸ್ಥಾನಗಳ ನ್ಯಾಯವಿಚಾರಣೆಯ ಅಧಿಕಾರಗಳನ್ನು ಅಪಹರಿಸುವ ಕಲಮುಗಳನ್ನು ಕಿತ್ತೊಗೆಯಲು ಸರ್ವಾಧಿಪತಿಗಳು ಅವನ್ನೇ ಪುನಃ ಪ್ರಸ್ಥಾಪಿಸಿ, ಪುನರಾಲೋಚನೆಗಾಗಿ ವರಿಷ್ಠ ಕಾಯಿದೆ ಕೌನ್ಸಿಲಿಗೇ ಪುನಃ ಕಳುಹಿದರಲ್ಲವೇ! ಕಾಯಿದೆ ಕೌನ್ಸಿಲು ಈ ಕಲಮುಗಳನ್ನು ಪುನಃ ನಿರಾಕರಿಸಿದೆ. ಈ ಕಾಯಿದೆಯು ಈಗ ಹಿರಿಯರ ಸಭೆಗೆ ಬಿಜಯಂಗೈದು ಸರ್ವಾಧಿಪತಿಗಳ ಸಮ್ಮತಿಮುದ್ರೆಯಿಂದ ದೇಶದಲ್ಲಿ ಹಾವಳಿಯನ್ನೆಬ್ಬಿಸುವದು. ಇದು ಪ್ರಜಾಪ್ರತಿನಿಧಿ ಸಂಸ್ಥೆಗಳ, (ಸರಕಾರಿ ಭಾಷೆಯಲ್ಲಿ ಹೇಳಬೇಕಾದರೆ ಹಿಂದೀ ಪಾರ್ಲಿಮೆಂಟಿನ) ಚೇಷ್ಟೆಯೋ? ಪ್ರತಿಷ್ಠೆಯೋ! ವಿಡಂಬನೆಯೋ! ಸಂಭಾವನೆಯೋ? ೧೯೨೩ನೇ ಇಸವಿಯಲ್ಲಿ ವರಿಷ್ಠ ಕಾಯಿದೆ ಕೌನ್ಸಿಲು, ಇಷ್ಟಾಗಿ ನೇಮಸ್ತರಿಂದ ತುಂಬಿ ತುಳುಕುವ ಕಾಯಿದೆ ಕೌನ್ಸಿಲು, ಉಪ್ಪಿನ ತೆರಿಗೆಯನ್ನು ಆಮೂಲಾಗ್ರ ಕಿತ್ತೊಗೆಯಲು, ಸರ್ವಾಧಿಪತಿಗಳು ಅದನ್ನು ಸಾರ್ವಭೌಮ ಅಧಿಕಾರ ಬಲದಿಂದ ಪ್ರಸ್ಥಾಪಿಸಿ, ವರಿಷ್ಠ ಕಾಯಿದೆ ಕೌನ್ಸಿಲಿನ ಸತ್ಕಾರಮಾಡಿದರು! ಕಳೆದ ವರುಷ ಸ್ವರಾಜ್ಯ-ಸ್ವತಂತ್ರರು ಒಟ್ಟಾಗಿ, ಕಸ್ಟಮ ಮೊದಲಾದ ಖಾತೆಗಳ ಖರ್ಚಿನ ರಕಮುಗಳನ್ನು ಕಿತ್ತೊಗೆದಾಗಲೂ, ಪುನಃ ಲೋಕಶಾಹಿಯೊಳಗಿನ ನಿರಂಕುಶ ಪ್ರಭುತ್ವವು ಪುನಃ ಪ್ರಾದುರ್ಭೂತವಾಯಿತು; ಫಿನೆನ್ಸ ಬಿಲು ಯಾನೆ ವಾರ್ಷಿಕ ಕರಹೇರಿಕೆಯ ಕಾನೂನು ಕಿತ್ತೊಗೆದಾಗಲೂ ಪುನಃ ಇದೇ ಅನುಭವವು ಬಂತು; ಬಂಗಾಲದ ಕಾನೂನಿನ ವಿಷಯವೂ ನಮಗೆ ಇದೇ ಅನುಭವವು ಬಂದಿದೆ. ಇದಕ್ಕೆ ಲೋಕಶಾಹಿಯೆಂದು, ಲೋಕಶಾಹಿಯ ಹತ್ಯೆಯೆಂದು ಹೇಳುವವರಾರು? ಹೇಳುವ ಬಗೆಹೇಗೆ? ನಿತ್ಯವೂ ಪ್ರಜಾಪ್ರತಿನಿಧಿ ಸಂಸ್ಥೆಗಳು ನಿರ್ಧರಿಸಿದ ಪ್ರಜಾಹಿತವರ್ಧಕ ಠರಾವುಗಳು ಮೂಲೆಗುಂಪಾಗಿ ಬೀಳುತ್ತಿರುವಾಗ, ಅವುಗಳಿಗೆ ವಿರೋಧವಾಗಿ ಅವುಗಳ ಬೆನ್ನಹಿಂದೆ ಪ್ರಜಾಸ್ವಾತಂತ್ರ್ಯಹಾರಕ ಕಾನೂನುಗಳು ಮಂಜೂರು ಆಗುತ್ತಿರುವಾಗ, ಕ್ರಿಸ್ತವಾಸಿ ಮೊಂಟೆಗ್ಯೂರವರು ಸ್ವರಾಜ್ಯದಾನ ಮಾಡಿದರೆಂದು ಯಾವ ಬಾಯಿಯಿಂದ ಹೇಳುವದು!

ದೇಶಬಂಧುಗಳು ಹೇಳಿದಂತೆ ಬ್ರಿಟಿಶ ರಾಜ್ಯ ಪದ್ಧತಿಯು ಹಾಳುಬಿದ್ದ ಮನೆಯಾಗಿದೆ. ಲೋಕಶಾಹಿಯು ಮನೋಹರ ಮಂದಿರವನ್ನು ಕಟ್ಟಬೇಕಾದರೆ, ಹಾಳು ಮನೆಯನ್ನು ಬುಡ ಬೇರು ಸಹಿತ ಕಿತ್ತೊಗೆಯಬೇಕು. ಅದರ ನೆಲಗಟ್ಟು ಸಹ ಕಿತ್ತು ಹೊಸ ನೆಲಗಟ್ಟನ್ನು ಸ್ಥಾಪಿಸಬೇಕು. ಅದನ್ನು ತಿದ್ದುಪಡಿ ಮಾಡುವದು ಅಶಕ್ಯವು. ಲೋಕಶಾಹಿಯ ವೇಷವನ್ನು ನಿರಂಕುಶ ಪ್ರಭುತ್ವವು ಧರಿಸಿ, ಪ್ರಜೆಗಳನ್ನು ವಂಚಿಸುತ್ತಿರುವ ನಾಟಕವು ಭರತಭೂ ರಂಗಮಂಟಪದಲ್ಲಿ ಅಭಿನಯಿಸಲ್ಪಡುತ್ತದೆ. ಈ ವೇಷವನ್ನಳಿಸಿ, ಅಳಿದುಳಿದ ನಿಜ ರೂಪವನ್ನು ಜಗತ್ತಿಗೆ ಜಾಹೀರು ಮಾಡಲು ಸ್ವರಾಜ್ಯಪಕ್ಷವು ಟೊಂಕಕಟ್ಟಿದೆ. ಸ್ವರಾಜ್ಯ ಪಕ್ಷವು ವಿನಾಶಕವೆಂಬುದು ಹೀಗೆ; ಅಸಹಯೋಗಿಯೆಂಬುದು ಹೀಗೆ; ಪ್ರಜಾಪ್ರತಿನಿಧಿ ಸಂಸ್ಥೆಗಳಲ್ಲಿ ವಿಧಾಯಕ-ಕಾರ್ಯಕ್ರಮವನ್ನು ನಡಿಸಲು ಮನಮುಟ್ಟಿ ಸಹಕಾರ ಮಾಡಲು ಸ್ವರಾಜ್ಯ ಪಕ್ಷವು ಬಗ್ಗಾಲಿನ ಮೇಲೆ ನಿಂತಿದೆ. ಮೊಂಟೆಗ್ಯೂ ಸ್ವರಾಜ್ಯದಲ್ಲಿ ನಿರಂಕುಶ ಪ್ರಭುತ್ವವೇ ಪ್ರಮುಖವಾಗಿ - ಏಕೆ. ಸಂಪೂರ್ಣವಾಗಿರುವದರಿಂದ ಸ್ವರಾಜ್ಯ ಪಕ್ಷವು ವಿನಾಶಕ ಕಾರ್ಯವನ್ನು ಕೈಕೊಳ್ಳಬೇಕಾಗಿದೆ. ದೇಶಬಂಧುಗಳು ನುಡಿದಂತೆ, ನಿರಂಕುಶ ರಾಜ್ಯಕ್ಕೆ ನಾವು ಹೊಣೆಗಾರರಲ್ಲ; ಹೊಣೆಯಾಗಲಾರೆವು. "ನಿಮ್ಮ ರಾಜ್ಯವನ್ನು ನಿಮ್ಮ ಸ್ವೇಚ್ಛೆಯಂತೆ ನಡಿಸುವದಿದ್ದಲ್ಲಿ ನಡಿಸಿರಿ; ನಮ್ಮ ಅಡ್ಡಿ ಇಲ್ಲ. ನಮ್ಮ ಮತ ಕೇಳುತ್ತೀರೋ, ನಾವು ಇಲ್ಲೆಂದು ಹೇಳುವೆವು ನಿಮ್ಮ ಕಾರಭಾರಕ್ಕೆ ನಮ್ಮ ಅನುಮತಿ ಇಲ್ಲ. ಹಿಂದೆಯೂ ಇದ್ದಿಲ್ಲ; ಮುಂದೆಯೂ ಇರಲಿಕ್ಕಿಲ್ಲ. ನಿಮ್ಮ ಯೋಜನೆಯ ಪುಣ್ಯ-ಪಾಪಗಳಿಗೆ ನೀವೇ ಜವಾಬದಾರರಾಗುತ್ತೀರಿ," ಎಂಬರ್ಥದ ನುಡಿಗಳನ್ನು ದೇಶಬಂಧುಗಳು ಬಂಗಾಲದ ಕಾಯಿದೆ ಕೌನ್ಸಿಲಿನಲ್ಲಿ ನುಡಿದರು. ಲೋಕಶಾಹಿಯ ಚೇಷ್ಟೆಗೆ ದೇಶಬಂಧುಗಳು ಕೊಟ್ಟ ಉತ್ತರವಿದು. ಇದು ಅಯೋಗ್ಯವೆಂದು ಯಾರು ಹೇಳುವರು !

ಸ್ಫುಟ ಸೂಚನೆಗಳು.

೧. ಇಜಿಪ್ತದಲ್ಲಿ ಬ್ರಿಟಿಶರ ಸ್ವರಾಜ್ಯಗೊಂದಲವು ಫಲಿಸಹತ್ತಿದೆ. ಇಜಿಪ್ತದಲ್ಲಿ ಝಗಲೂಲ ಪಾಶಾರವರ ನೇತೃತ್ವದೊಳಗೆ ರಾಷ್ಟ್ರೀಯ ಪಕ್ಷವು ಇನ್ನು ಮತ್ತೆ ಇಜಿಪ್ತದ ಅಧಿಕಾರ ಸೂತ್ರಗಳನ್ನು ವಶಕೊಳ್ಳಲು ತಯಾರಾಗಿದೆ. ಝಗಲೂಲ ಪಾಶಾರವರು ಅಧಿಕಾರಾರೂಢರಾದರೆ ಬ್ರಿಟಿಶರ ಆಟ ಸಾಗುವದಿಲ್ಲ. ಆದರಿಂದ ಅವರನ್ನು ಪದಭ್ರಷ್ಟ ಮಾಡಲು ಬ್ರಿಟಿಶರ ರಾಯಭಾರಿ ರೂಪದಿಂದ ಇಲ್ಲಿರುವ ಎಲೆನ್ಬೀ ದೊರೆಗಳು ಒಂದು ಕುಯುಕ್ತಿ ಮಾಡಿದರು. ಫ್ಯೂದರವರು ಅಲ್ಲಿಯ ಅರಸರು; ಎಲೆನ್ಬಿ ದೊರೆಗಳ ಸೂತ್ರಗೊಂಬೆಗಳವರು. ದೊರೆಗಳು ಝಗಲೂಲ ಪಾಶಾರವರ ಪ್ರತಿಷ್ಠೆಯನ್ನು ಕುಗ್ಗಿಸಬೇಕೆಂಬ ದುರಾಲೋಚನೆಯಿಂದ ಇಜಿಪ್ತ ಪಾರ್ಲಿಮೆಂಟನ್ನೇ ವಿಸರ್ಜಿಸಿ, ಹೊಸ ಇಲೆಕ್ಶನುಗಳನ್ನು ಹೂಡಿದರೆ. ಹೊಸ ಇಲೆಕ್ಶನಿನಲ್ಲಿಯೂ ಪಾಶಾರವರು ಲೋಕನಾಯಕರಾಗಿ ವಿಶೇಷ ಬಲದಿಂದ ಆರಿಸಿಬಂದರು. ಪಾರ್ಲಿಮೆಂಟು ಸಭೆ ಸೇರಲು ಝಗಲೂಲ ಪಾಶಾರವರು ಪ್ರಚಂಡ ಬಹುಮತದಿಂದ ಸಭಾಪತಿಗಳಾಗಿ ನೇಮಕಹೊಂದಿದರು. ಪಾಶಾರವರಿಗೆ ಅನುಕೂಲವಾಗಿ ೧೨೫ ಮತಗಳು, ಪ್ರತಿಕೂಲವಾಗಿ ೮೫ ಮತಗಳು ಬಿದ್ದವು. ಪಾಶಾರವರೇ ಇಜಿಪ್ತದ ಸೂತ್ರಧಾರಕರೆಂದು ರಾಷ್ಟ್ರವು ಸಿದ್ಧಪಡಿಸಿದರು. ಮಂತ್ರಿಪದದಲ್ಲಿ ಆರೂಢರಾದ ಬ್ರಿಟಿಶರ ಕೈಗೊಂಬೆಯಾದ ಝಿವಾರಪಾಶಾರವರ ಎದೆ ಹಾರಿತು. ಅವರು ಫ್ಯೂದರವರಿಗೆ ಪತ್ರ ಬರೆದು ಪುನಃ ಪಾರ್ಲಿಮೆಂಟನ್ನು ವಿಸರ್ಜಿಸಿದರು. ಬೆಳಿಗ್ಗೆ ೧೦ ಘಂಟೆಗೆ ಸೇರಿದ ಪಾರ್ಲಿಮೆಂಟು ಸಾಯಂಕಾಲ ೭॥ ಘಂಟೆಗೆ ವಿಸರ್ಜನವಾಯಿತು. ಯಾವನೇ ರಾಷ್ಟ್ರದ ಪಾರ್ಲಿಮೆಂಟು ಇಷ್ಟು ಬೇಗ ಜನನವಾಗಿ ಮೃತಿಯನ್ನೈದಿಲ್ಲ, ಅಷ್ಟು ಇಜಿಪ್ತದ ಅನಪೇಕ್ಷಿತವಾಗಿ ಪಾರ್ಲಿಮೆಂಟು ಅಂತ್ಯವಾಗಿದೆ.

---

೨. ಫ್ಯೂದರವರು ಪಾರ್ಲಿಮೆಂಟು ವಿಸರ್ಜಿಸುವ ಕಾರಣಗಳನ್ನು ನಿವೇದಿಸಿರುವರು. ಝಗಲೂಲ ಪಾಶಾರವರ ಬಹುಮತವು ಪಾರ್ಲಿಮೆಂಟಿನಲ್ಲಿ ಪ್ರಮುಖಭೂತವಾದ್ದರಿಂದ ಝಿವರ ಪಾಶಾರವರು ಮಂತ್ರಿಪದವನ್ನು ತ್ಯಜಿಸಬೇಕಾಗಿದೆ. ಅವರು ರಾಜೀನಾಮೆಯನ್ನೂ ಕಳುಹಿದರು. ರಾಜೀನಾಮೆಯನ್ನು ಸ್ವೀಕರಿಸುವದು ಕಠಿಣವಾದ್ದರಿಂದ ಫ್ಯೂದರವರು ಪಾರ್ಲಿಮೆಂಟನ್ನು ವಿಸರ್ಜಿಸಿದರಂತೆ ! ಝಿವರ ಪಾಶಾರವರೂ, ಝಗಲೂಲರ ಧೋರಣವು ರಾಷ್ಟ್ರಕ್ಕೆ ಅಪಾಯಕರವಿರುವದೆಂದು ಶರಾ ಹೊಡೆದು ಮತದಾನದ ಕಾಯಿದೆಯನ್ನು ತಿದ್ದುಪಡಿಸಿ, ತಮ್ಮ ಧೋರಣಕ್ಕೆ ಅನುಕೂಲವಾದ ಪಾರ್ಲಿಮೆಂಟನ್ನು ನಿರ್ಮಿಸಬಯಸಿರುವರು. ಝಗಲೂಲರವರ ಧೋರಣವು ಅಪಾಯಕರವಿರಲಿ, ಉಪಾಯಕರವಿರಲಿ, ಅದರ ಸುಖ-ದುಃಖಗಳನ್ನು ಅನುಭೋಗಿಸಲು ರಾಷ್ಟ್ರವು ಸಿದ್ಧವಾಗಿರುವಾಗ, ಅದರ ಚಿಂತೆ ಝಿವರ ಪಾಶಾರವರಿಗೇಕೆ ! ಅಪಾಯಕರ ಉಪಾಯಕರ ಧೋರಣದ ಹಿತಕವು ರಾಷ್ಟ್ರದಷ್ಟು ದೊಡ್ಡ ದೊಡ್ಡ ರಾಷ್ಟ್ರಹಿತದ ಶಬ್ದಪ್ರಯೋಗ ಮಾಡಿ, ರಾಷ್ಟ್ರೀಯ ಆಕಾಂಕ್ಷೆಗಳನ್ನು ಬಡಿದು ಹಾಕುವಾಗ, ಝಿವರ ಪಾಶಾರವರಾಗಲಿ, ಫ್ಯೂದರಾಗಲೀ ಇಜಿಪ್ತದ ಹಿತಬುದ್ಧಿಯಿಂದ ಪ್ರೇರಿತರಾಗಿದ್ದಾರೆಂದು ಯಾರೂ ಹೇಳರು. ಝಗಲೂಲ ಪಾಶಾರವರು ಇಂಥ ಕುಯುಕ್ತಿಗಳಿಗೆ ಸೊಪ್ಪು ಹಾಕುವವರಲ್ಲ. ಈ ವಿಷಯ ಮುಂದೆ ವಿಚಾರ ಮಾಡಲು ಅವರು ತಮ್ಮ ಅನುಯಾಯಿಗಳೊಡನೆ ಆಲೋಚಿಸುತ್ತಿರುವರು. ನೋಡುವ ಬ್ರಿಟಿಶರ ಕುಯುಕ್ತಿಯು ಎಷ್ಟರವರೆಗೆ ನಡೆಯುತ್ತದೆಂದು.

---

೩. ಸ್ವತಂತ್ರ ಪಕ್ಷದ ಸ್ವಾತಂತ್ರ್ಯದಿಂದ ಉಪ್ಪಿನ ಕರದ ಕಲಹವು ಬರಿ ಗುಲ್ಲಾಗಿ ಪರಿಣಮಿಸಿತೆಂದು ತಿಳಿಸಲು ತೀರ ವ್ಯಸನವಾಗುತ್ತದೆ. ರಾಜಶ್ರೀಗಳ ಪಕ್ಷದ ತರ್ಫೆನಿಂದ ೧—೪ ರೂಪಾಯಿ ಕರಿಗೆಯ ಸೂಚನೆಯನ್ನೇ ಸ್ವರಾಜ್ಯ ಪಕ್ಷವು ಮಂಜೂರ ಮಾಡಿದರೂ, ಅದನ್ನೇ ಎತ್ತಿಹಿಡಿಯುವಷ್ಟು ಸ್ಥಿರಬುದ್ಧಿಯು ಸ್ವತಂತ್ರರಲ್ಲಿರಲಿಲ್ಲವೆಂದು ನೋಡಿ, ದೂರದರ್ಶಿಗಳೆಲ್ಲ ವ್ಯಸನವಾಗುವದು. ಕೌನ್ಸಿಲ ಆಫ್ ಸ್ಟೇಟ ಎಂಬ ಹಿರಿಯರ ಸಭೆಯು ಆಳರಸರ ಕೈಗೊಂಬೆಯು. ಅದರಲ್ಲಿ ಸರಕಾರವು ೧॥ ರೂಪಾಯಿಯ ಸೂಚನೆಯನ್ನು ಮಂಜೂರ ಮಾಡಿಕೊಂಡದ್ದೇನು ಆಶ್ಚರ್ಯಕರವಲ್ಲ; ಆದರೆ ಅದೇ ಸೂಚನೆಯು ಪುನಃ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಚರ್ಚೆಗೆ ಬಂದಾಗ ಸ್ವತಂತ್ರರು ದೇಶದ್ರೋಹಮಾಡಿ, ಸರಕಾರದ ಸೂಚನೆಯನ್ನೇ ಎತ್ತಿಹಿಡಿದು, ೧॥ ರೂಪಾಯಿಯನ್ನೇ ಮಂಜೂರ ಮಾಡಿದರು; ಬಡವರಿಗೆ ಸಿಗಬಹುದಾದ ಮಣ ಒಂದರ ೪ ಆಣೆಯ ಸೂಟಿಯು ದೊರಕದೆ ಹೋಯಿತು. ಸ್ವತಂತ್ರರು ಬಡವರ ಮೇಲೆ ಮಾಡಿದ ಅಪಕಾರವಿದು. ಉಪ್ಪಿನ ಕರಿಗೆಯು ಅನ್ಯಾಯಕರವೆಂದು ಎಲ್ಲರೂ ಅಭಿಪ್ರಾಯ ಪಡುತ್ತಿದ್ದಾಗ, ಅದನ್ನು ತಗ್ಗಿಸಲೊಪ್ಪದೆ ಸ್ವತಂತ್ರರು ಮಹದನ್ಯಾಯ ಮಾಡಿದರೆಂದು ನಾವಾಗಿ ಹೇಳಬೇಕೇನು ? ಈ ವಿಷಯ ನಿಷೇಧ ಮಾಡಿದಷ್ಟು ಕಡಿಮೆ. ಆದರೆ ಈಗ ಏನು ಪ್ರಯೋಜನ. "ಹಬ್ಬ ಆಡಿ ಕೋಳಿ ಬೀರಿ ಹೋಯಿತು." ನಮ್ಮ ದುರ್ದೈವ ಇಲ್ಲದಿದ್ದರೆ ಮಿ| ಜಿನ್ನಾ, ಸರ್ ಪುರುಷೋತ್ತಮದಾಸ, ಶ್ರೀ। ಬಿಪಿನ ಚಂದ್ರಪಾಲರವರಂಥ ರಾಷ್ಟ್ರೀಯರೇ ನಮ್ಮ ಕೇಡು ಬಗೆಯುತ್ತಿದ್ದರೇ !

---

೪. ಶ್ರೀ। ಕರ್ಕಿಯವರು ಸರಕಾರದ ತೀರ್ವೆ ವಸೂಲಿಯ ಕಠೋರತನವನ್ನು ಕಳೆದ ಕಾಯಿದೆ ಕೌನ್ಸಿಲಿನಲ್ಲಿ ಬೈಲಿಗೆಳೆದರು. ೧೯೨೪ನೇ ಇಸ್ವಿಯ ಫೇಬ್ರುವರಿ ತಿಂಗಳಲ್ಲಿ ಜಿಲ್ಲಾಧಿಪರಾಗಿದ್ದ ಮಿ| ಕೋಲಿನ್ಸರವರು ಒಂದು ಹುಕುಮನ್ನು ಹೊರಡಿಸಿ, ಬೇಸಾಯಗಾರರಿಗೆ ಮಹದುಪಕಾರ ಮಾಡಿದರು. ಈ ಹುಕುಮು ಬೇರೆ ಕಡೆಯಲ್ಲಿ ಕೊಟ್ಟಿದೆ. ಅದರ ಮೇಲಿಂದ ಕೋಲಿನ್ಸರವರ ತೀರ್ವೆ ಎತ್ತುವಳಿಯ ಉತ್ಸಾಹವು ಪ್ರಕಟವಾಗುತ್ತದೆ. ಅದೇ ವರುಷ ತೀರ್ವೆಯನ್ನು ಕ್ಲಪ್ತಕಾಲದಲ್ಲಿ ಎತ್ತುವಳಿ ಮಾಡಲೇಬೇಕೆಂದೂ, ಎತ್ತುವಳಿ ಮಾಡದಿದ್ದರೆ, ಚೌಥಾಯಿ ದಂಡವನ್ನು ಎತ್ತಲೇಬೇಕೆಂದೂ ಸಾಹೇಬರು ಕಠಿಣ ಹುಕುಮುಗಳನ್ನು ಹೊರಡಿಸಿದ್ದರು. ಆ ವರುಷ ಮಿ॥ ಕೋಲಿನ್ಸರವರು ಇಷ್ಟು ಯಾಕೆ ಗಾಬರಿಗೊಂಡರೆಂದು ತಿಳಿಯುವದಿಲ್ಲ. ನಮ್ಮ ದಕ್ಷಿಣಭಾಗದಲ್ಲಿ ಈ ಪ್ರಕಾರದ ಹುಕುಮುಗಳು ಇನ್ನಾವ ಜಿಲ್ಲೆಯೂ ಹೊರಡಿಸಿಲ್ಲವೆಂದೂ ಶ್ರೀ। ಕರ್ಕಿಯವರಿಗೆ ಉತ್ತರ ದೊರಕಿದೆ. ಹೀಗಿರುವಾಗ, ಮಿ। ಕೋಲಿನ್ಸರವರೇ ಇಷ್ಟು ಕಠೋರರಾದರೇಕೆ ? ಅದೇ ವರುಷ ಕ್ಲಪ್ತಕಾಲದಲ್ಲಿ ತೀರ್ವೆ ಎತ್ತುವಳಿ ಮಾಡಿದರೆ, ಸಾಹೇಬರು ಕಲೆಕ್ಟರ ಹುದ್ದೆಗೆ ಪಾತ್ರರೆಂಬ ಶಿಫಾರಸು ದೊರಕುವದಿತ್ತೇನು ! ಬೇಸಾಯಗಾರರ ಕಲ್ಯಾಣಕ್ಕಾಗಿ ಆರು ಸಾವಿರ ಮೈಲುಗಳಿಂದ ಇಲ್ಲಿ ಬಂದ ಸಾಹೇಬರ ಪ್ರಜಾಕಲ್ಯಾಣದ ಉತ್ಸಾಹವಿದು!

---

೫. ಈ ಹುಕುಮು ಹೊರಡಿಸಿದ ವರುಷ ಬೆಳೆಯೂ ವಿಶೇಷ ಚೆಲೋದಾಗಿದ್ದಿಲ್ಲ. ಮೊದಲು ಬಿತ್ತಿಗೆಯ ಸಮಯದಲ್ಲಿ ಮಳೆಯು ವಿಪರೀತ ಸುರಿದು ಬೆಳೆಗೆ ತಲೆ ಎತ್ತಗೊಡಲಿಲ್ಲ. ಪೈರು ಕೊಯ್ಯುವ ಕಾಲದಲ್ಲಿ ಮಳೆಬಿದ್ದು ಬೆಳೆಯು ಅನೇಕ ಕಡೆಗಳಲ್ಲಿ ಮುಗ್ಗುಪಾಲಾದದ್ದೂ ಉಂಟು. ಸರಕಾರಿ

ಟಾಕುಲಿಗಳಲ್ಲಿ ಮಾತ್ರ ಸ್ವೈರು ವಿಶೇಷವಾಗಿದೆ; ಎಂಟು ತರಾ ೧೯೨೪ನೇ ಇಸ್ವಿಯ ಡಿಶಂಬರ ೭ನೇ ತಾರೀಖಿನ ಸರಕಾರಿ ಗಾಝೇಟಿನಲ್ಲಿ ಪ್ರಕಟವಾಗಿತ್ತು. ಇದನ್ನು ನೋಡಿ ನಾವು ತಾ। ೧೪ನೇ ಡಿಶಂಬರದ "ವೃತ್ತ"ದ ಸಂಚಿಕೆಯಲ್ಲಿ ಟೀಕಿಸಿ ತೀರ್ವೆ ಮಾಫಿಯು ಪೂರ್ವಕಾರ್ಯಕಾರಿ ಇದೆಂದು ಧ್ವನಿಸಿದ್ದೆವು. ೧೪ನೇ ಡಿಶಂಬರದ ಸಂಚಿಕೆಯೊಳಗಿನ ಅನುಮಾನವು ನಿಜವಾದಬಗ್ಗೆ ನಮಗೆ ಆನಂದವಾಗುತ್ತದಾದರೂ, ರೈತರ ಹಿತಕ್ಕಾಗಿ, ರೈತರ ಸಂಕಷ್ಟನಿವಾರಣೆಗಾಗಿ ಇಲ್ಲಿ ಬಂದ ಬ್ರಿಟಿಶರು ನಮಗೆ ದುರ್ದಿನ ವಿಷಯದಲ್ಲಿ ಸಹಾನುಭೂತಿಯನ್ನು ತೋರಿಸುವದು ಅಪರೂಪವೆಂದೇ ಹೇಳಬಹುದು. ಬ್ರಿಟಿಶರು ಅಂಗಡಿಕಾರರಲ್ಲವೇ!

---

೬. ನಮ್ಮಿತ್ತ ಕಡೆಗೆ ಬರುವ ಟಪಾಲಿನಲ್ಲಿ ಮತ್ತೂ ಸುಧಾರಣೆಗಳನ್ನು ಏರ್ಪಡಿಸಬಹುದಾಗಿದೆ. ಹುಬ್ಬಳ್ಳಿಯಿಂದ ಟಪಾಲು ಅಂಕೋಲೆಗೆ ರಾತ್ರಿ ೧೨ ಗಂಟೆಯೊಳಗೆ ಬಂದು ಸೇರುತ್ತದೆ. ನಮ್ಮಿತ್ತ ಕಡೆಯ ಟಪಾಲು ಅಲ್ಲಿಂದ ಬರಲಿಕ್ಕೆ ೧೦ ಘಂಟೆ ಹಿಡಿಯುತ್ತವೆ. ಕಾರವಾರಕ್ಕೆ ಟಪಾಲು ಬೆಳಿಗ್ಗೆ ೮ ಘಂಟೆಯೊಳಗೆ ಮುಟ್ಟುತ್ತದೆ. ಅಂಕೋಲೆಯು ಕಾರವಾರ-ಕುಮಟೆಗಳ ನಡುಮಧ್ಯದಲ್ಲಿರುವಾಗ ನಮಗೆ ಮಾತ್ರ ೧ ಘಂಟೆಯು ತಡವಾಗಲು ಅವಶ್ಯಕತೆಯಿಲ್ಲ. ಯಾಕಂದರೆ, ಅಂಕೋಲೆಯಿಂದ ರಾತ್ರಿ ೪-೪॥ ಘಂಟೆಗೆ ಟಪಾಲು ಹೊರಡಿಸಿದರೆ ಇಲ್ಲಿ ಕುಂಜಾವಿನೊಳಗೆ ಟಪಾಲು ಸಿಗಬಹುದು. ಕಾರವಾರದಲ್ಲಿಯೂ ಅಷ್ಟೇಹೊತ್ತಿಗೆ ಸಿಗಬಹುದು. ಇದರಿಂದ ನಮ್ಮಲ್ಲಿಯ ಟಪಾಲು ಬಟವಡೆಯ ಶಿಪಾಯಿಗಳಿಗೂ ಅನುಕೂಲವಾಗುವದಾಗಿದೆ. ೧೦ ಘಂಟೆಗೆ ಟಪಾಲು ಬರುವದರಿಂದ ಟಪಾಲನ್ನು ಮಧ್ಯಾಹ್ನದ ಬಿಸಿಲು ತಾಪದಲ್ಲಿ ಅವರು ಬಟವಡೆ ಮಾಡಬೇಕಾಗುತ್ತದೆ. ಈ ಸಮಯವು ಅವೇಳೆ. ಇಷ್ಟು ಅನಾನುಕೂಲ ಮಾಡುವ ಕಾರಣವೇನು? ಟಪಾಲಿನವರು ಚೌಕಶಿ ಮಾಡಿ ಈ ವಿಷಯ ತಿದ್ದುಪಡಿಮಾಡಬೇಕಾಗಿ ನಮ್ಮ ಸೂಚನೆಯಿದೆ. ಅಂಕೋಲೆಯಲ್ಲಿ ಟಪಾಲು ಹೊರಡಿಸುವ ಹೊತ್ತನ್ನು ೭-೮ ಗಂಟೆಯವರೆಗೆ ಮುಂದರಿಸಿದ್ದರಿಂದ ಟಪಾಲು ಮೋಟಾರದವರಿಗೆ ಪ್ರಯಾಣಿಕರನ್ನು ಸಂಪಾದಿಸಲು ಅನುಕೂಲವಾಗುತ್ತದೆ, ಮೋಟಾರದವರ ಅನುಕೂಲತೆಗಾಗಿ ಟಪಾಲ ಶಿಪಾಯಿಯು ಜನರಿಗೂ ತೊಂದರೆ ಕೊಡುವದು ಇಷ್ಟವೇನು?

ಸ್ಥಾನಿಕ ವೃತ್ತಾಂತ.

ಕುಮಟಾ—ಕಾಲ ವಿಪರೀತ. ಮೋಡಗಳ ಆಚ್ಛಾದನದಿಂದ ಸೆಕೆ ಮಿಗಿಲಾಗಿದೆ. ಜ್ವರ ಮೈಲಿ ಬೇನೆಗಳು ಇನ್ನೂ ಹೋಗಲಿಲ್ಲವು. ಘಟ್ಟದಮೇಲಿನ ಭತ್ತ, ಅಕ್ಕಿ ವಗೈರೆ ಇಳಿಯುತ್ತಿವೆ

ಕಳೆದ ತಾ. ೨೭—೩—೧೯೨೫ ನೇಗೆ ಇಲ್ಲಿಯ ಕನ್ನಡ ೧ ನೇ ನಂಬರ ಶಾಲೆಯ ಉಪ್ಪರಿಗೆಯಮೇಲೆ ಪ್ರಚಂಡ ಜಾಹೀರ ಸಭೆಯಾಯಿತು. ಉದ್ದೇಶವು ಪ್ರಚಂಡವೇ; ಸಾಮ್ರಾಜ್ಯದೊಳಗಿನ ಕುಷ್ಠರೋಗಿಗಳ ದುಃಖನಿವಾರಣೆಯು. ಮಾಮಲೇದಾರರು ನಿಮಂತ್ರಣ ಪತ್ರಿಕೆಗಳನ್ನೂ ಹಂಚಿಸಿದ್ದರು. ಮೊಟ್ಟ ಮೊದಲು ರಾವಬಹಾದ್ದೂರ ಕಲ್ಯಾಣಪೂರಕರರು ಸಭಾಪತಿಗಳಾಗಬೇಕೆಂದು ರಾವಸಾಹೇಬ ಕುಲಕರ್ಣಿಯವರು ಸೂಚಿಸಿದ್ದಕ್ಕೆ ಅನುಮೋದನ ದೊರಕಿ, ಸೂಚನೆಯು ಸರ್ವಾನುಮತದಿಂದ ಮಂಜೂರಾಯಿತು. ರಾವಬಹಾದ್ದೂರರು ಕುಷ್ಠರ ಕಷ್ಟಗಳನ್ನು ನಿವೇದಿಸಿದರು. ಅವರಿಗೆ ಸಹಾಯಮಾಡುವ ನಮ್ಮ ಕರ್ತವ್ಯವನ್ನು ತಿಳಿಸಿ ಹೇಳಿದರು. ಬಳಿಕ ರಾ। ಅಣ್ಣಪ್ಪಾ ರಾಮಚಂದ್ರ ಪೈ ಇವರ ಅಧ್ಯಕ್ಷತೆಯಲ್ಲಿ ಫಂಡು ಕೂಡಿಸುವ ೧೧ ಮಂದಿಗಳ ಮಂಡಳವೊಂದು ಸ್ಥಾಪನೆಯಾಯಿತು. ಅಧ್ಯಕ್ಷರಾದ ರಾವಬಹಾದ್ದೂರ ಕಲ್ಯಾಣಪೂರಕರರು ಈ ಕಮಿಟಿಯಲ್ಲಿರುವದಿಲ್ಲ. ಸಬ ಜಡ್ಜ ರಾ ದ ವಿ। ಚಿನ್ಮುಳಗುಂದರವರು ಅಧ್ಯಕ್ಷರ ಉಪಕಾರ ಮನ್ನಿಸಿದ ಬಳಿಕ ಸಭೆ ವಿಸರ್ಜನವಾಯಿತು. ಪ್ರಚಂಡ ಸಭೆಯಲ್ಲಿ ಮಾಮಲೇದಾರ, ಸಬಜಡ್ಜ, ಶಿರಸ್ತೇದಾರ ಇವರೆಲ್ಲ ಹಿಡಿದು ೧೦—೧೫ ಮಂದಿ ಜನಸಮೂಹವು ಕೂಡಿತ್ತು.

ಶ್ರೀ ಗೋಕರ್ಣ ಕ್ಷೇತ್ರದಲ್ಲಿ ಶಿವರಾತ್ರಿಯ ಸಮಯ ಸೇರಿದ ಜಾಹೀರು ಪ್ರದರ್ಶನದಲ್ಲಿ ಸುಮಾರು ೧೫ ರೂಪಾಯಿಗಳ ಬೆಲೆಯ ಸಾಮಗ್ರಿಗಳು ಕಳುವಾದವು. ಕಳುವಾದ ಜಿನಸು ಜಾಕಿಟು ಹಾಗು ಸೀರೆಗಳಂತೆ! ಪ್ರದರ್ಶನದ ಕಾವಲುಗಾರ ಸ್ವಯಂಸೇವಕರು ಎಲ್ಲಿ ಹೋಗಿದ್ದರು?

ಸಾಭಾರ ಸ್ವೀಕಾರ

ಆರೋಗ್ಯ ಚಂದ್ರಿಕೆ—೧೯೨೫ ನೇ ಇಸ್ವಿಯ ಫೇಬ್ರುವರಿಯ ಸಂಚಿಕೆ ಸಂಪಾದಕ ಮತ್ತು ಪ್ರಕಾಶಕ:— ಡಾ॥ ಯು. ರಾಮರಾವ, ಎಮ್. ಎಲ್. ಸಿ. ೩೨೩ ತಂಬುಚೆಟ್ಟಿ ಬೀದಿ, ಮದ್ರಾಸ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂ. ೧ ೮-೦ 'ಆರೋಗ್ಯಚಂದ್ರಿಕೆ' ಹಾಗು 'ಶರೀರ ವ್ಯಾಯಾಮ' ಇವೆರಡೂ ಪತ್ರಿಕೆಗಳು ಆರೋಗ್ಯಪಾಲನದ ವಿಷಯ ಬಹು ಉಪಯುಕ್ತ ಮಾಹಿತಿಗಳನ್ನು ಕೊಡುತ್ತವೆ. ಕನ್ನಡದಲ್ಲಿ ಇಂಥ ಪತ್ರಿಕೆಗಳು ಹುಟ್ಟುವದೇ ವಿರಳ. ಇವೆರಡನ್ನೂ ಆಬಾಲವೃದ್ಧರೂ ಓದಿ, ಆತ್ಮಕಲ್ಯಾಣಮಾಡಿಕೊಳ್ಳಬಹುದು.

ಅವರ್ಸೆ—ಇಲ್ಲಿ ಒಂದು ದೊಡ್ಡ ಗಡಿಬಿಡಿ. ಪಟೇಲ ಪಟೆಲ್ಕಿಯ ಪ್ರಮಾಣದ ಕುರಿತು ಮೇಲಧಿಕಾರಿಗಳಿಗೆ ಅರ್ಜಿ ಮಾಡಿಕೊಂಡು ಪ್ರಜೆಗಳು ಮೂರಿಕೊಂಡು ಈಗ ಬಹಳ ದಿವಸಗಳಾದವು. ಮಾಮಲೇದಾರರ ಚೌಕಶಿಯಾಯಿತು. ಪ್ರಾಂತ ಆಫೀಸರ ಮಿ॥ ದಿವೇಕರರ ಚೌಕಶಿಯಾಯಿತು. ಅಷ್ಟರಲ್ಲಿ ಮಿ॥ ದಿವೇಕರರು ತಮ್ಮ ಸ್ವಸ್ಥಾನವಾದ ಹುಜೂರ ಡೈಪುಟಿಯಾಗಿ ಮಿ॥ ಪಿಂಡ ಜಂದಾನಿಯವರು ಪ್ರಾಂತ ಆಫೀಸರರಾದರು. ಸಾಹೇಬರು ಇಲ್ಲಿ ಬಂದು ಕೆಲವರ ಜಬಾನಿಗಳನ್ನು ಕೊಂಡರು. ಜಬಾನಿ ಕೊಟ್ಟವರು ಪಟೇಲರ ತರ್ಫಿನವರಂತೆ. ಸಾಹೇಬರಿಗೆ ಈ ಜಬಾನಿಗಳಿಂದ ಸತ್ಯಸ್ಥಿತಿ ತಿಳಿಯುವ ಹಾಗಿಲ್ಲ. ಹಿಂದಿನ ಪ್ರಕರಣ ನೋಡಬೇಕು; ಅರ್ಜಿ ಮಾಡಿದವರನ್ನು ಕರೆಯಬೇಕು; ಅರ್ಜಿಯ ಮಜಕೂರು ಸಿದ್ಧಮಾಡಿಕೊಡಲು ಅವರಿಗೆ ಹೇಳಬೇಕು; ಪಟೇಲರ ಅಂದೋಲನ ಕೇಳಿಕೊಳ್ಳಬೇಕು; ಅಮೇಲೆ ತಮ್ಮ ಅಭಿಪ್ರಾಯದಂತೆ ಪಟೇಲರ ಕಾರಭಾರದಿಂದ ಪ್ರಜೆಗಳಿಗೆ ಸುಖವಾಗುತ್ತಿದ್ದರೆ, ಅವರನ್ನಿಡಬೇಕು; ಇಲ್ಲದಿದ್ದರೆ, ಅವರಿಗೆ ಇಷ್ಟಕ್ಕೇ ಸಾಕು ಮಾಡಹೇಳಬೇಕು; ಇತ್ಯಾದಿ ಒಬ್ಬರು ತಿಳಿಸುತ್ತಾರೆ.

ಮುಂಡಗೋಡ— ಈ ಪೇಟೆ ಪೈಕಿ ಬೆಗಳ್ಳಿ ಹಾಗು ಕಾತೂರು ಗ್ರಾಮಗಳಲ್ಲಿ ಸಹಕಾರಿ ಸಂಘಗಳಿವೆ ಚಿಕ್ಕ ಗ್ರಾಮಗಳು. ಈ ಸಂಘಗಳ ವಾರ್ಷಿಕ ಸಾಧಾರಣ ಸಭೆಗಳಾಗದೆ ೨-೩ ವರ್ಷಗಳಾದವಂತೆ! ಇದರಿಂದ ಜನರಲ್ಲಿ ಸಂಘಗಳ ಕಾರಭಾರವು ಚೊಕ್ಕವಿಲ್ಲ; ಮುಂತಾದ ಅಪವಾದಗಳು ಹಬ್ಬಿವೆ. ಸಹಕಾರಿ ಸಂಘದ ಅಧಿಕಾರಿಗಳು ಇತ್ತ ಲಕ್ಷವನ್ನಿಟ್ಟು ಅಲ್ಲಿಯ ಆಡಳಿತೆಯೊಳಗಿನ ಕಲಂಕಗಳನ್ನು ಅಚ್ಚ ತೊಳೆಯಬೇಕಾಗಿ ಹಟ್ಟಿ ರೈತರು ಸೂಚಿಸುತ್ತಾರೆ.

ಮಿ॥ ಕೋಲಿನ್ಸರ ಸರ್ಕ್ಯೂಲರು.

ನಂ. ಮಜಲ್ಕೀ ಖಾತೆಯ ಸರ್ಕ್ಯೂಲರು ೩.
ಕಾನಡಾ ಜಿಲ್ಹೆಯ ಕಲೆಕ್ಟರರ ಆಫೀಸು
ಅಂಕೋಲ ಮುಕ್ಕಾಮಿನಿಂದ
ತಾ. ೨—೩—೧೯೨೫

ಜ್ಞಾಪಕ ಪತ್ರ.

ಈ ವರ್ಷ ತೀರ್ವೆಯನ್ನು ಕ್ಲಪ್ತಕಾಲದಲ್ಲಿ ವಸೂಲ ಮಾಡುವದು ಅತ್ಯಾವಶ್ಯವಿದೆ. ಈ ಕುರಿತು ಗ್ರಾಮಸ್ಥರಿಗೆ ಅವಶ್ಯವುಳ್ಳ ಹುಕುಮುಗಳನ್ನು ಹೊರಡಿಸಲು ಮಾಮಲೇದಾರರಿಗೂ ಮಹಾಲ್ಕರಿಗಳಿಗೂ ಈ ಮೂಲಕ ಹುಕುಮು ಕೊಟ್ಟಿದೆ. ಮೊದಲನೇ ಹಪ್ತೆಗೆ ಕೊಡಬೇಕಾದ ತೀರ್ವೆಯನ್ನು ಫೇಬ್ರುವರಿ ೧೫ನೇದರೊಳಗೆ, ಎರಡನೇ ಹಪ್ತೆಯ ತೀರ್ವೆಯನ್ನು ಏಪ್ರಿಲ ೧೫ನೇದರೊಳಗೆ ಕೊಡದೆ ಬಾಕಿ ಇಡಗೊಟ್ಟಲ್ಲಿ ಬಾಕಿ ಬಿದ್ದ ಎಲ್ಲ ಹಣದ ಮೇಲೆ ಚತುರ್ಥಾಂಶ ದಂಡ ಹಣ ಲಾಗು ಮಾಡಲ್ಪಡುವದೆಂದು ಪ್ರಜೆಗಳಿಗೆ ಎಚ್ಚರಿಕೆ ಕೊಡಲಾಗಬೇಕು. ಮೂರು ದಿನದ ಮ್ಯಾದೆ ಕೊಡಬಹುದು. ಈ ಮ್ಯಾದೆಯೊಳಗೆ ಕೊಡದ ತೀರ್ವೆಯ ರಕಮಿನ ಮೇಲೆಲ್ಲ ಚತುರ್ಥಾಂಶದಂತೆ ದಂಡವನ್ನು ಎತ್ತಲೇಬೇಕು.

೧೯೨೫ನೇ ಇಸ್ವಿಯ ಫೇಬ್ರುವರಿ ತಿಂಗಳಿನಲ್ಲಿ ತ್ರಿಜೋರಿ ಬಂದು ಮಾಡುವ ದಿನ ಈ ಕೆಳಗೆ ತೋರಿಸಿದಂತೆ ತಪಶೀಲುಗಳನ್ನು ಕಲೆಕ್ಟರರಿಗೆ ಪೂರೈಸಬೇಕು

ಮೊದಲನೇ ಹಪ್ತೆಗೆ ವಸೂಲಾಗಬೇಕಾದ ತೀರ್ವೆಯ ರಕಮು.	ವಸೂಲ ಮಾಡಿದ ರಕಮು.
(೧)	(೨)
೧೯-೨-೧೯೨೫ನೇಗೆ ಶಿಲ್ಕು ರಕಮು	ತಿಂಗಳಾಂತ್ಯಕ್ಕೆ ಶಿಲ್ಕು ರಕಮು.
(೩)	(೪)
ಶಿಲ್ಕು ಉಳಿದ ಕಾರಣ.	ಚತುರ್ಥಾಂಶ ಲಾಗು ಆದ ತೀರ್ವೆಯ ರಕಂ
(೫)	(೬)

(ಸಹಿ) ಜಿ. ಎಫ್ ಎಸ್ ಕೋಲಿನ್ಸ
ಕಲೆಕ್ಟರ

ಎಲ್ಲ ಮಾಮಲೇದಾರರಿಗೂ ಮಹಾಲ್ಕರಿಗಳಿಗೂ (ಎಕ್ಸ ಆಫಿಶಿಯೋ ಮಹಾಲ್ಕರಿಗಳ ಸಹಿತ) ಕಳಿಸಿದೆ.

೧-೨ ನೇ ಪ್ರಾಂತ ಆಫೀಸರರಿಗೂ, ಎಲ್ಲ ಆಫಿಶಿಯೋ ಅಸಿಸ್ಟಂಟ ಕಲೆಕ್ಟರರಿಗೂ ನಕಲ ಕಳಿಸಲಾಗಿದೆ.

(ಸಹಿ) ಕೆ ವ್ಹಿ ಕಾಂಡೀಕ್
ಕಲೆಕ್ಟರರ ಬಗ್ಗೆ.

ನಮ್ಮ ಸ್ಪುಟ ಸೂಚನೆ ನಂ. ೫.

(ತಾರೀಖು ೧೪—೧೨ ೧೯೨೪ ನೇ ಕಾನಡಾ ವೃತ್ತದೊಳಗಿಂದ)

ಮುಂಬಯಿ ಸರಕಾರದ ಗ್ಯಾಝೆಟಿನಲ್ಲಿ ಜಿಲ್ಹಾ ನಿಹಾಯ ಮಳೆ ಬೆಳೆಗಳ ಅಂದಾಜು ಪ್ರಕಟವಾಗುತ್ತದೆ. ಕಳೆದ ಗುರುವಾರದ ಗ್ಯಾಝೆಟಿನಲ್ಲಿ ಈ ಜಿಲ್ಹೆಯ ಭತ್ತದ ಪೈರಿನ ಅಂದಾಜು ವರ್ಷಕ್ಕಿಂತ ಹೆಚ್ಚು *(above normal)* ಎಂದು ಬರೆದಿದೆ. ಅಡಿಕೆ-ಯಾಲಕ್ಕಿಗಳ ಅಂದಾಜು ಎಷ್ಟೆಂದಿದ್ದರೆ ಪ್ರತೀಯಮಾನಗುತ್ತಿತ್ತು. ಭತ್ತದ ಪೈರು ಮಳೆಯಿಂದ ತಲೆಯನ್ನೆತ್ತಲಿಲ್ಲೆಂಬಲೂ ಎತ್ತಿದ್ದ ಅಂಶದಲ್ಲಿ ಸುರಿದ ಮಳೆಯಿಂದ ಬಹಳೇ ಲುಕ್ಸಾನಾಯಿತೆಂಬಲೂ ರೈತರ ದೂರವಿದೆ. ಅಧಿಕಾರಿಗಳು ಬೆಳೆಯ ದರ್ಜೆಯನ್ನು ವರ್ಷಕ್ಕಿಂತ ಹೆಚ್ಚೆಂದು ಹೇಗೆ ನಮೂದಿಸುತ್ತಾರೆಂಬುದು ಗೂಢವು. ವಸ್ತುಸ್ಥಿತಿಯನ್ನು ನಮೂದಿಸಿದರೆ ತೀರ್ವೆ ಎತ್ತುವ ಕಾಲಕ್ಕೆ ಸೂಟು ಕೊಡಬೇಕಾಗುವ ಉಪದ್ರವವಾಗಬಹುದೆಂದು ಅಧಿಕಾರಿಗಳು ಬೆದರುತ್ತಾರೇನು ?

ತ್ರಾವಣಕೋರ.

ಮಹಾತ್ಮರು ತಾ. ೨೬-೩-೧೯೨೫ನೇ 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ತ್ರಾವಣಕೋರಿನ ವಿಷಯ ಬರೆಯುವದೇನೆಂದರೆ:--

ತ್ರಾವಣಕೋರಿಗೂ ಹಾಗೆಯೇ ಕೊಚ್ಚಿಗೂ ಹೋಗುವದು ನಿಜವಾಗಿ ಸಂತೋಷಪ್ರದವು. ಸೌಂದರ್ಯದ ತವರುಮನೆಯು. ತ್ರಾವಣಕೋರದಲ್ಲಿ ನಾನು ಸ್ವಲ್ಪ ಕಾಲವೇ ಉಳಿದಿದ್ದೆ. ಆದರೆ ಸತತವಾಗಿ ತಿರುಗಾಡುತ್ತಿದ್ದೆ. ಪ್ರಚಂಡ ಸ್ತೋಮಗಳನ್ನು ಎದುರಾಗುತ್ತಿದ್ದೆ. ಗಂಭೀರ ಕಾಲುವೆಗಳಿಂದಲೂ, ರಾಜಮಾರ್ಗಗಳಿಂದಲೂ ತ್ರಾವಣಕೋರು ಸಂಸ್ಥಾನವು ಕಂಗೊಳಿಸುತ್ತದೆ. ಪರಮಾವಧಿಯ ಉದ್ದಳತೆಯೂ ೧೭೪ ಮೈಲು; ಅಗಲಳತೆಯು ೭೫ ಮೈಲು, ಕ್ಷೇತ್ರ ಫಲವು ೭೬೨೫ ಚದರು ಮೈಲು; ಅರ್ಧಕ್ಕೆ ಮಿಕ್ಕಿ ಬೆಟ್ಟ-ಕಾಡಿದೆ. ನಾನು ಉತ್ತರ ದಿಕ್ಕಿನಿಂದ ತ್ರಾವಣಕೋರವನ್ನು ಪ್ರವೇಶಿಸಿದೆ, ವ್ಯಾಕಮು ಉತ್ತರದಿಕ್ಕಿನ ಬಾಗಿಲಲ್ಲಿದೆ ಹಾದಿಯಮೇಲೆ ಎರಡೂ ಬದಿಗೆ ಮನೋಹರವಾದ ಕಾಲುವೆಗಳಿದ್ದವು. ಪ್ರದೇಶವೆಲ್ಲ ವನಶ್ರೀಯಿಂದ ಶೋಭಿಸುತ್ತಿತ್ತು; ತಾಳೆ ಮರಗಳು ಪ್ರಾಮುಖ್ಯವಾಗಿ ಕಂಗೊಳಿಸುತ್ತಿದ್ದವು. ನನಗೆ ದಕ್ಷಿಣ ಮೂಲೆಯಾದ ಕನ್ಯಾಕುಮಾರಿಯವರೆಗೆ ಒಯ್ದರು; ಭಾರತ ಮಾತೆಯ ಪಾದಪಂಕಜವನ್ನು ಸಾಗರವು ಭಕ್ತಿಭಾವದಿಂದ ಇಲ್ಲಿಯೇ ತೊಳೆಯುತ್ತಿರುವನು. ನಾನು ಒಂದೂರಿನಿಂದ ಮತ್ತೊಂದೂರಿಗೆ ಹೋಗುತ್ತಿದ್ದೆ; ಆದರೆ ಉಪವನದೊಳಗಿಂದಲೇ ನಾನು ಮಾರ್ಗಕ್ರಮಣ ಮಾಡುತ್ತಿದ್ದೇನೆಂದು ನನಗನಿಸಿತು. ತ್ರಾವಣಕೋರ ಸಂಸ್ಥಾನವೆಂದರೆ ಕೆಲ ಪಟ್ಟಣ, ಬಹಳ ಗ್ರಾಮಗಳಿರುವ ಪ್ರದೇಶವಲ್ಲ. ತ್ರಾವಣಕೋರ ಸಂಸ್ಥಾನವು ಒಂದೇ ಒಂದು ವಿಸ್ತೀರ್ಣ ಪಟ್ಟಣವೆಂಬಂತೆ ಭಾಸವಾಗುತ್ತದೆ. ೪ ಲಕ್ಷ ಲೋಕವಸ್ತಿಯಿದೆ. ಸರಾಸರಿ ಅರ್ಧ ಗಂಡಸರು, ಅರ್ಧ ಹೆಂಗಸರು. ಅಲ್ಲಲ್ಲಿ ನಯನ ಮನೋಹರ ಮುದ್ರೆಗಳಿಂದ ಶೋಭಿಸುವ ಪ್ರತ್ಯೇಕ ಗುಡಿಸಲುಗಳಿವೆ. ಹೊಲಮನೆಗಳಿವೆ. ಹಿಂದುಸ್ಥಾನದ ಇತರ ಗ್ರಾಮಗಳನ್ನೂ ನಾನು ನೋಡಿದ್ದೇನೆ, ನದಿದೊರೆಯಲ್ಲಿ ಬೇಕಾದಷ್ಟು ಸ್ಥಳವಿದೆ. ಗಾಳಿಯಿದೆ. ಆದರೂ ಜನರು ದಟ್ಟಾಗಿ ವಾಸಿಸುತ್ತಾರೆ. ಈ ನೋಟವು ಅಸಹ್ಯವು. ಇಂಥ ನನಗೆ ಇಲ್ಲಿ ಕಂಡು ಬರಲಿಲ್ಲ. ಕುಲಬಾರಿಗಳು ಬೇರೆ ಬೇರೆಯಾಗಿ ದೂರ ದೂರ ಗುಡಿಸಲುಗಳನ್ನು ಕಟ್ಟಿಕೊಂಡು ಉಳಿಯುವ ಬಗೆ ಹೇಗೆ? ಕಳ್ಳರಿಗೆ ಭಯಪಡದೆ ಇರುವ ಬಗೆ ಹೇಗೆ? ಎಂದು ನನಗೆ ತಿಳಿಯಲಿಲ್ಲ, ನಾನು ಅನೇಕರಿಗೆ ಕಾರಣ ಕೇಳಿದೆ ನನ್ನ ತರ್ಕವನ್ನೇ ಎಲ್ಲರೂ ಎತ್ತಿಹಿಡಿದರು, ಗಂಡಸರೂ, ಹೆಂಗಸರೂ ಶೂರ ವೃತ್ತಿಯವರಿರಬೇಕೆಂದರು.

ತಾ. ೨೯-೩-೨೫ ನೇ ದಿವಸ ಕೂಡಿದ ಕ. ಕೊಂ. ಕ. ಯ ಕಾರ್ಯಕಾರಿ ಮಂಡಳದ ಸಭೆಯಲ್ಲಿ ಪಾಸಾದ ನಿರ್ಣಯಗಳು:—

೧ ಬೆಳಗಾಂವ ಕಾಂಗ್ರೆಸದಲ್ಲಾದ ಕಾಂಗ್ರೆಸ ಮೆಂಬರಿಕೆಯ ಹೊಸ ನಿಯಮದಂತೆ, ಕರ್ನಾಟಕದ ಪ್ರತಿ ಒಂದು ಜಿಲ್ಹೆಯಲ್ಲಿ ಒಂದು ಸಾವಿರ ಕಾಂಗ್ರೆಸ ಮೆಂಬರರನ್ನು ದಾಖಲಿಸಬೇಕೆಂದು, ಕರ್ನಾಟಕ ಪ್ರಾಂ. ಕಾಂ. ಕ. ಯ ನಿರ್ಣಯದ ಮೇರೆಗೆ ಈ ಜಿಲ್ಹೆಯಲ್ಲಿ ಜಿಲ್ಹಾ ಕಮೀಟಿಯ ಅಧ್ಯಕ್ಷರು ಮತ್ತು ಅವರಿಂದ ಅಧಿಕಾರಪಟ್ಟವರು ತಿರುಗಾಡಿ ಕಾಂಗ್ರೆಸ ಮೆಂಬರರನ್ನು ಕೂಡಿಸಬೇಕೆಂದು ಈ ಕಮೀಟಿಯು ನಿರ್ಣಯಿಸುತ್ತದೆ.

೨. ಹೊಸ್ಪೇಟ ತಾಲೂಕ ಜೇಬಳ್ಳಿ ಕಟ್ಟ ಸರಿ ಹಾವಳಿಯಿಂದ ನಾದುರುಸ್ತ ಆಗಿ ರೈತರಿಗೆ ಬಹಳ ಹಾನಿ ಆಗುತ್ತಿದ್ದು, ತತ್ಕಾಲ ಅದರ ದುರುಸ್ತಿ ಮಾಡುವ ಬಗ್ಗೆ ಸರಕಾರವು ಸಹಾಯ ಮಾಡದೆ ಇದ್ದದರಿಂದ ಆ ಬಗ್ಗೆ ಬೇಕಾದ ೨೦೦ ರೂಪಾಯಿಗಳನ್ನು ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯು ಮಂಜೂರ ಮಾಡುವಾಗ ಈ ಕಮೀಟಿಯು ವಿನಂತಿ ಮಾಡಿಕೊಳ್ಳಬೇಕೆಂದು ಶ್ರೀ॥ ಶಾಸ್ತ್ರಿ ಮತ್ತು ಬಸ್ರೂರ ಇವರು ಮಾಡಿಕೊಂಡ ವಿನಂತಿ ಮೇರೆಗೆ ಸದ್ರ ಕಮೀಟಿಗೆ ವಿಜ್ಞಾಪನೆ ಮಾಡಿ ೨೦೦ ರೂಪಾಯಿ ತರಿಸಿಕೊಳ್ಳಬೇಕೆಂದು ಈ ಕಮೀಟಿಯು ಠರಾಯಿಸುತ್ತದೆ. ಮತ್ತು ತತ್ಕಾಲ ಸಹಾಯ ಮಾಡುವ ಅವಶ್ಯಕತೆ ಇದ್ದದರಿಂದ ಅಧ್ಯಕ್ಷರು ಮಂಜೂರಿ ನಿರೀಕ್ಷಣೆಯಿಂದ ಜಿಲ್ಹಾ ಕಮೀಟಿಯ ಫಂಡಿನಿಂದ ಮುಂಗಡವಾಗಿ ಕೊಟ್ಟ ೨೦೦ ರೂಪಾಯಿಗಳಿಗೆ ಈ ಕಮೀಟಿಯು ಮಂಜೂರಿ ಕೊಟ್ಟಿರುತ್ತದೆ.

ಜಾಹಿರಾತು.

ಕೆ. ಸಿ. ನಾರಾಯಣಶಾಸ್ತ್ರಿ.

ಇವರ ಸವಿನಯ ಸೂಚನೆ

ಕೊಚ್ಚಿ, ತಿರುವಾಂಕೂರ, ಮದ್ರಾಸ, ಈ ಸಂಸ್ಥಾನದ ಕೇರಳೀಯ ಅರಸರಿಂದಲೂ, ಮತ್ತು ಅನೇಕ ಮಹನೀಯರಿಂದಲೂ ಬಹುಮಾನ, ಸರ್ಟಿಫಿಕಿಟ ವಗೈರೆ ಲಭಿಸಲ್ಪಟ್ಟಿರುವ ಸಾಮುದ್ರಿಕಾ ಸುಪ್ರಸಿದ್ಧ ಪಂಡಿತಜ್ಯೋತಿಷಿ, ಕೆ. ಸಿ. ನಾರಾಯಣಶಾಸ್ತ್ರಿ ಎಂಬವರು ಕೆಲವು ದಿವಸಗಳಿಂದ ಈ ಕುಮಟೆಯಲ್ಲಿ ಇದ್ದು ಉತ್ತರ ಕರ್ನಾಟಕ ಪ್ರದೇಶಗಳಲ್ಲಿಯೂ ಸಹ ಜ್ಯೋತಿಷ, ವೈದ್ಯ, ಮಾಂತ್ರಿಕ, ಈ ವಿಷಯಗಳಿಂದ ಪ್ರಸಿದ್ಧರಿದ್ದು ಅನೇಕ ದೂರ ಸ್ಥಳಗಳ ಜನರಿಗೂ ಸಹಾ ತಿಳಿದು ಬಂದುದು ಅದೆ. ಸದರಿಯವರು ಹಾಲಿ ತಾ. ೭-೪-೧೯೨೫ ನೇ ದಿವಸ ತಮ್ಮ ಮುಕ್ಕಾಮದ ಸ್ಥಳವನ್ನು [illegible] ಶಿರ್ಸಿಯಲ್ಲಿ ಮಾಡುವರು. ಮುಕ್ಕಾಮದ ಪತ್ತೆಯು ಮುಂದಿನ ಪತ್ರದಲ್ಲಿ ತಿಳಿದೀತು. ದೂರದೇಶಸ್ಥರಾದ ತಮ್ಮ ಆಪ್ತ ಇಷ್ಟ ಜನರಿಗೆ ತಮ್ಮ ಮುಕ್ಕಾಮದ ಪತ್ತೆಯನ್ನು ತಿಳಿಸಿಕೊಳ್ಳುವ ಬಗ್ಗೆ ಪೂರ್ವ ಈ ಜಾಹಿರಾತು ಕೊಟ್ಟಿರುತ್ತದೆ. ಮುಂದಿನ ಸಂಚಿಕೆಯಲ್ಲಿ ಮುಕ್ಕಾಮದ ಪತ್ತೆಯು ಸ್ಪಷ್ಟವಾಗಿ ತಿಳಿಯುವದು.

ಇತಿ,

ಕೆ. ಸಿ. ನಾರಾಯಣಶಾಸ್ತ್ರಿ

ವೃತ್ತಸಾರ.

— ಉಪ್ಪಿನ ತೆರಿಗೆಯನ್ನು ದೇಶಕ್ಕೆಲ್ಲ ಕೌನ್ಸಿಲು ತಳ್ಳಿಹಾಕಿದಾಗ ಮದ್ರಾಸ ಕಾಯಿದೆ ಕೌನ್ಸಿಲಿನಲ್ಲಿ ದೊಡ್ಡ ಗಲಭೆಯುಂಟಾಗಿ, [illegible] ವಿರೋಧಪಕ್ಷ ಕಡಾವು ಮಾಡಿದ್ದಾಗಿತ್ತು; 'ಉಪ್ಪಿನ ತೆರಿಗೆ ಇಳಿದರೆ, ಪ್ರಾಂತಿಕ ಖಜಿನೆಯ ಕೊರತೆಯಾಗುವದು, ಈ ಪ್ರಾಂತದ ಜನರ ಹೊರೆ ಹೆಚ್ಚಾಗುವದೆಂಬ ವೃಥಾ ಭೀತಿ! ಪ್ರಾಂತಿಕ ಖಜಿನೆಯಲ್ಲಿ ಸಾಲ ಕೊಡಬೇಕೆಂದು ಸರಕಾರದ ಅಧಿಕಾರಿಗಳು ಸ್ವಸ್ಥ ಮೊದಲಾದ ದೊಡ್ಡ ದೊಡ್ಡ ಖರ್ಚಿನ ಬಾಬುಗಳಲ್ಲಿ ಕೈ ಬಿಗಿ ಹಿಡಿದು ನೋಡಿ! ಕೊರತೆಯಾಗುವದಿಲ್ಲವೇ! ಮದ್ರಾಸ ಕಾಯಿದೆ ಕೌನ್ಸಿಲು ಅಂಥ ಠರಾವನ್ನು ವಿರೋಧಿಸಿ, ಹಿಂದುಸ್ಥಾನ ಸರಕಾರವು ಮಾಡುವ ಈ ವರ್ಷದ ಖರ್ಚನ್ನೆಲ್ಲ ಅತ್ಯಾವಶ್ಯಕವೆಂದು ಅಪ್ರತ್ಯಕ್ಷವಾಗಿ ಹೇಳಿದಂತಾಗುವದಲ್ಲವೇ! ಏನು ಗ್ರಹಚಾರ!

— ಹಾವೇರಿಯಲ್ಲಿ ಸಹಕಾರಿ ಸಂಘದ ಪರಿಷತ್ತು ಇದೇ ಬರುವ ಎಪ್ರಿಲ ತಿಂಗಳಲ್ಲಿ ಸೇರುವದಿದೆ. ಶಿಕ್ಷಣ ಮಂತ್ರಿಗಳಾದ ಸಾ. ಭಾಸ್ಕರ ಜಾಧವರವರು ಅಧ್ಯಕ್ಷಸ್ಥಾನಕ್ಕೆ ಆರಿಸಲ್ಪಟ್ಟಿರುವರು.

— ಬೆಂಗಳೂರಿನೊಳಗಿನ ಮೋಹನ ವಸ್ತ್ರ ಫ್ಯಾಕ್ಟರಿಯ [illegible] ಕಂಪನಿಯಲ್ಲಿ ೧೨೦೦ ಮಂದಿಗಳಿಗೆ ಕಂಪನಿಯವರು ಹೊರದೂಡಿದರು. ಎಲ್ಲ ಕೂಲಿಕಾರರು ಸಂಪು ಮಾಡುವ ತಯಾರಿಯಲ್ಲಿರುವರು.

— ಮಹಾತ್ಮರು ಕಳೆದ ಗುರುವಾರಕ್ಕೆ ಮುಂಬಯಿಯಲ್ಲಿ ಪ್ರಾಂತಿಕ ಕಾಂಗ್ರೆಸ ಕಮೀಟಿಯವರು ಕಟ್ಟಿಸಿದ ಕಾಂಗ್ರೆಸ ಹೌಸ ಯಾನೆ "ರಾಷ್ಟ್ರ ಮಂದಿರ" ವನ್ನು ತೆರೆದರು. ಮಹಾತ್ಮರು ರಾಷ್ಟ್ರ ಧ್ವಜವನ್ನು ಏರಿಸುವ ನೋಟ ನೋಡಿದವನು ಧನ್ಯನು.

— ಸಂವತ್ಸರ ಪ್ರತಿಪದೆಯ ಶುಭ ಮುಹೂರ್ತದಲ್ಲಿ ಬಿಲಾಸ ಬೈಲಿನಲ್ಲಿ ಸ್ವಯಂಸೇವಕರು ರಾಷ್ಟ್ರ ಧ್ವಜವನ್ನು ಅರ್ಚಿಸಿದರು. ಶ್ರೀ॥ ದತ್ತಾತ್ರೇಯ ಕೃಷ್ಣ ಭಾರದ್ವಾಜರವರು ಸಮಯೋಚಿತ ಉಪನ್ಯಾಸ ಮಾಡಿದರು.

— ಈ ವರೆಗೆ ಇಡೀ ಹಿಂದುಸ್ಥಾನದಲ್ಲಿ ೧೦೫೦೨ ಮಂದಿಗಳು ರಾಷ್ಟ್ರೀಯ ಸಭೆಯ ಸದಸ್ಯರಾಗಿರುವರಾಗಿ ಮಹಾತ್ಮರ "ಯಂಗ ಇಂಡಿಯಾ" ಪತ್ರಿಕೆಯಲ್ಲಿ ಪ್ರಕಟವಾಗಿದೆ. ಕರ್ನಾಟಕದಲ್ಲಿ ೫೩೪ ಮಂದಿಗಳು ಸಭಾಸದರಾಗಿರುವರು. ಗುಜರಾಥದಲ್ಲಿ ಎಲ್ಲಕ್ಕೂ ಹೆಚ್ಚು, ಅಂದರೆ, ೨೧೯೬. ಅವರಲ್ಲಿ ೨೧೯೫ ಮಂದಿಗಳು ಸ್ವತಃ ನೂಲುವವರು

— ಕಲಕತ್ತೆಯಲ್ಲಿ ಲಾಲಾಜಿಯವರ ಅಧ್ಯಕ್ಷತೆಯಲ್ಲಿ ಮುಂದಿನ ತಿಂಗಳಲ್ಲಿ ನೆರೆಯಲಿಕ್ಕಿದ್ದ ಹಿಂದೂ ಮಹಾಸಭೆಯನ್ನು, ಕೆಲವು ಹಿಂದೂ ಸಭೆಗಳೂ, ವಿಶೇಷವಾಗಿ ಪಾರಮಾರ್ಥಿಕ ಬ್ರಾಹ್ಮಣ ಸಭೆಯೂ ಬಹಿಷ್ಕರಿಸಿರುತ್ತವೆ. ಈ ಸಭೆಗಳು ತಾವು ಸುಧಾರಿಸಿದ ಹಿಂದೂ ಸ[illegible]ಧರ್ಮದವರು ಶ್ರೇಷ್ಠರೆಂದು ಹೇಳಿಸಿಕೊಳ್ಳುತ್ತವೆ. ಹಿಂದೂ ಮಹಾಸಭೆಯ ನಿಜವಾದ ಶುದ್ಧ ಭಾವವನ್ನು ಮತ್ತು ಅದರ ಮೇಲಿನ ತಪ್ಪು ತಿಳುವಳಿಕೆಗಳನ್ನು ಹೋಗಲಾಡಿಸುವದಕ್ಕಾಗಿ ಹಿಂದೂ ಮಹಾಸಭೆಯ ಜನರಲ್ ಸೆಕ್ರೆಟರಿಗಳಾದ ಪಂಡಿತ ದೇವರತ್ನ ಶರ್ಮಾರವರು ಈ ಪ್ರಕಾರ ಉದ್ಗರಿಸಿದರು. "ಹಿಂದೂ ಮಹಾ ಸಭೆಯು ಇಂದಿನ ತನಕ ಜಾತಿಭೇದ ನಾಶಕ್ಕೆ, ವಿಧವಾ ಪುನರ್ವಿವಾಹಕ್ಕೆ ಮತ್ತು ಸಹಭೋಜನಕ್ಕೆ ಅಪ್ಪಣೆಯನ್ನೀಯಲಿಲ್ಲ. ಯಾಕೆಂದರೆ, ಅವು ಕರ್ಮನಿಷ್ಠ ಹಿಂದೂ ಬಂಧುಗಳಿಂದ ಅತಿಶಯವಾಗಿ ನಿಷೇಧಿಸಲ್ಪಟ್ಟಿರುತ್ತವೆ." ಇಂಥಾ ವಿಚಾರಗಳಿಂದ ಪವಿತ್ರವಾದ ಸನಾತನಿಗಳು ಮೇಲಿನ ಕಾರಣ ಅರಿತು, ಹಿಂದೂ ಮಹಾ ಸಭೆಯ ವಿಷಯ ಕಲ್ಪಿತ ಕುಶಂಕೆಯನ್ನು ನಿವಾರಣ ಮಾಡಿಕೊಳ್ಳಲಿ.

— ವಿಜಾಪುರದಲ್ಲಿ ವೇ॥ ಮೂ॥ ನಾಗಸಂಪಿಗೆ ರಾಮಾಚಾರ್ಯರು ಕೈಕೊಂಡ ಸೋಮಯಾಗವು ಕಳೆದ ಫಾಲ್ಗುನ ವದ್ಯ ೫ ಮಿಗೆ ಬಹು ಉತ್ಸಾಹದಿಂದ ಪರಿಸಮಾಪ್ತಿಯಂಗೈದಿತು. ನಿತ್ಯ ೫-೬ ಸಾವಿರ ಮಂದಿಗಳಿಗೆ ಅನ್ನದಾನವಾಗುತ್ತಿತ್ತು.

— ಮಹಾತ್ಮರು ಕನ್ಯಾಕುಮಾರಿಗೆ ಹೋಗಿಬಂದರು. ದಂಡೆಗೆಹೋಗಿ ಮಹಾತ್ಮರು ಮೂರೂ ಬದಿಗಳ ಸಾಗರವನ್ನು ನಿರೀಕ್ಷಿಸಿ ನೇತ್ರಾನಂದವನ್ನು ಪಡೆಯುತ್ತಿದ್ದರು. ಥಕ್ಕನೆ ಒಂದು ತೆರೆಯು ಬಂದು ಮಹಾತ್ಮರ ಮೈಮೇಲೆ ಸಿಂಚನವಾಯಿತು. ಇದು ಸಾಗರನ ಸ್ವಾಗತವೆಂದು ನುಡಿದು ಮಹಾತ್ಮರು ಹಿಂದಿರುಗಿದರು. ಅಲ್ಲಿ ದೇವಾಲಯದಲ್ಲಿ ದೇವದರ್ಶನ ಪಡೆಯಹೋಗಿದ್ದರು. ಆದರೆ, ವಿಲಾಯತಿಗೆ ಹೋಗಿಬಂದವರಿಗೆ ಒಳಪ್ರವೇಶವಿಲ್ಲೆಂದು ತಿಳಿದ ಕೂಡಲೆ ಮಹಾತ್ಮರು ಹೊರಗಿನಿಂದಲೇ ಶ್ರೀದೇವರಿಗೆ ವಂದನೆಗಳನ್ನು ಸಮರ್ಪಿಸಿ ಮರಳಿದರು.

— ಇಂಗ್ಲಂಡ ಹಾಗು ಹಿಂದುಸ್ತಾನಗಳೊಳಗೆ ೧೯೨೬ನೇ ಇಸ್ವಿಯಿಂದ ಹಾರಾಡಲು ಸೌಕರ್ಯವಾಗುವದೆಂದು ವೈಮಾನಿಕ ದಳದ ಅಧಿಪತಿಗಳಾದ ಸರ್ ಬ್ರ್ಯಾಂಕರರವರು ಜಾಹೀರು ಮಾಡಿರುವರು.

— ರಶಿಯಾ ದೇಶದಲ್ಲಿ ಬರ ಬಿದ್ದಿರುತ್ತದೆ. ಲೇನಿನ್ ಗ್ರಾಡ ಎಂಬಲ್ಲಿ ಬರಗಾಲದ ಮೂಲಕ ಪ್ರಜೆಗಳು ಸಂಕಷ್ಟಬಾಗಿ ತೊಂದರೆಗೀಡಾದರು.

ಬಾದಶಹರು ಪ್ರಕೃತಿ ಸುಧಾರಣೆಗಾಗಿ ಇಟಾಲಿ ಆಫ್ರಿಕಕ್ಕೆ ಪ್ರಯಾಣಬೆಳೆಸಿರುವರು

— ಜರ್ಮನಿ ದೇಶದೊಳಗಿನ ಹಾಂಬೂರ್ಗ ಬಂದರದಲ್ಲಿ ಎಣ್ಣೆಯ ಉಗ್ರಾಣಕ್ಕೆ ಬೆಂಕಿ ಹತ್ತಿ ಸ್ಫೋಟವಾಯಿತು. ೧೧ ಮಂದಿಗಳು ಕೂಡಲೆ ಸತ್ತುಹೋದರು. ಇಬ್ಬರು ಘಾಯಹೊಂದಿರುವರು

— ಮುಂಬಯಿ ನಗರದ ಮಾಟುಂಗದ ಹತ್ತಿರ ತೆಂಗಿನ ಎಣ್ಣೆ ಕಾರಖಾನೆ ಹಾಗು ಹತ್ತಿಯ ಕಾರಖಾನೆಗಳಿಗೆ ಕಳೆದ ಗುರುವಾರ ಬೆಂಕಿ ಹತ್ತಿ ೩೦೦೦೦ ರೂಪಾಯಿಗಳ ಹಾನಿಯಾಯಿತು.

— ಈ ವರುಷ ವರಿಷ್ಠ ಕಾಯಿದೆ ಕೌನ್ಸಿಲಿನ ಅಧ್ಯಕ್ಷರನ್ನು ಆರಿಸುವ ಹಕ್ಕು ಕೌನ್ಸಿಲಿಗೆ ಪ್ರಾಪ್ತವಾಗಿದೆ. ಸ್ವರಾಜ್ಯ ಪಕ್ಷದವರು ಶ್ರೀ ಪಟೇಲರವರನ್ನು ಸೂಚಿಸಬೇಕೆಂದು ನಿರ್ಧರಿಸಿರುವರು.

— ಕಳೆದ ೨ನೇ ತಾರೀಖಿಗೆ ಕಲಬುರ್ಗೆಯೊಳಗಿನ ಕೆಲವು ಮುಸಲ್ಮಾನರು ರಜಪೂತರ ಈಶ್ವರ ದೇವಾಲಯವನ್ನು ನುಗ್ಗಿ, ಶ್ರೀದೇವರ ಮೂರ್ತಿಯನ್ನು ಒಡೆಯಲೆತ್ನಿಸಿದರು. ಕ್ಷಾತ್ರ ತೇಜಸ್ಸಿನ ರಜಪೂತರು ಬಾಹುಬಲದಿಂದ ಶ್ರೀದೇವರ ರಕ್ಷಣೆಮಾಡಿದರು. ಮುಹಮ್ಮದೀಯರಿಗೂ ರಜಪೂತರಿಗೂ ಕದನವಾಯಿತು. ನಿಜಾಮರಾಜ್ಯದೊಳಗಿನ ಪೋಲೀಸರು ೫೬ ಮಂದಿ ರಜಪೂತರನ್ನು ಸೆರೆಹಿಡಿದಿರುವರು. ಕಳ್ಳನನ್ನು ಬಿಟ್ಟು ಕೊತವಾಲನಿಗೆ ಸೆರೆಹಿಡಿಯುವ ಪರಂಪರೆಯಿದು

— ಬಿಹಾರ ಎಂಬಲ್ಲಿ ಮೋಟಾರಗಾಡಿಯು ಭರಭರನೇ ಸಾಗಿಹೋಗುತ್ತಿತ್ತು. ದಾರಿಯಲ್ಲಿ ಇಳಿಪ್ರಾಯದ ಮುದುಕರೊಬ್ಬರು ಸಾವಕಾಶವಾಗಿ ನಡೆಯುತ್ತಿದ್ದರು; ಇವರಿಗೆ ಮೋಟಾರು ತಗಲಿತು. ಕೂಡಲೆ ಅವರು ನೆಲಕ್ಕುರುಳಿದರು. ಅವರು ಸತ್ತರೆಂದು ಅನೇಕರು ಗ್ರಹಿಸಿದರು. ಮೋಟಾರ ಗಾಡಿಯವನೂ ಹೆದರಿ ಮೋಟಾರು ನಿಲ್ಲಿಸಿದನು. ಕೆಲ ಹೊತ್ತಿನ ಮೇಲೆ ಮುದುಕನೆದ್ದು ಮೋಟಾರ ಗಾಡಿಗೆ ಅಡ್ಡಾಯ ಮಾಡಿದ ಬಗ್ಗೆ ಕ್ಷಮೆ ಬೇಡಿದನು. ಇದು ಶಿಷ್ಟಾಚಾರವೋ? ನಿಂದೆಯೋ?

— ಕೊಲ್ಹಾಪುರದಲ್ಲಿ ಒಂದು ಶೋಚನೀಯ ಸಂಗತಿ. ಡಾ| ಬಂಡಾಳೆಯವರು ೧ ಬೆಕ್ಕನ್ನು ಅಕ್ಕರತೆಯಿಂದ ಸಾಕಿದ್ದರು. ಬೆಕ್ಕು ಹುಚ್ಚಾಗಿದ್ದಿತ್ತು. ಕಾಣಲಿಕ್ಕೆ ಮನೋಹರವಿತ್ತು. ಮಲಗಿದಾಗ ಆ ಬೆಕ್ಕು ಡಾ| ಬಂಡಾಳೆಯವರ ಕಾಲು ಕಡಿಯಿತು. ಬಂಡಾಳೆಯವರು ಪರಲೋಕವಾಸಿಗಳಾದರು. ಯಮನಿಗೊಂದು ನೆವ!

— ಬಂಗಾಲವು ದೇಶಬಂಧುಗಳ ನಾಯಕತ್ವವನ್ನು ಮನ್ನಿಸಿ, ದಿವಾಣರ ಸಂಬಳದ ಕಾಯಿದೆಯನ್ನು ನಿರಾಕರಿಸಿದೆ. ದಿವಾಣ ಪದಾಧಿಕಾರವಾಗಿ ಸರಕಾರದ ಸಮರ್ಥನೆ ಮಾಡುತ್ತಿದ್ದ ಮಿ| ಚಕ್ರವರ್ತಿ ದೇಶಬಂಧುಗಳೊಡನೆ ಮತಕೊಟ್ಟರು. ಇದೊಂದು ದೇಶಬಂಧುಗಳ ವಿಜಯ.

— ಇಂಗ್ಲಂಡದ ಅಬರ್ಡೀನಶಾಯರದಲ್ಲಿ ಒಬ್ಬ ಘೋರ ಕದನ ಐಝಾಕ್ ಕೇಲಿ ಎಂಬೊಬ್ಬ ಬೇಸಾಯಗಾರನಿರುವನು. ಆತನೊಡನೆ ಒಂದು ನಾಯಿಯಿತ್ತು. ಅದನ್ನು ಆತನು ಚಕ್ಕಡಿಗೆ ಕಟ್ಟಿ ಸಾಗಿಹೋಗುತ್ತಿದ್ದನು. ಒಂದು ಗರುಡ ಪಕ್ಷಿಯು ಇದನ್ನು ನೋಡಿತು, ಹಾರಿಬಂದು ನಾಯಿಯನ್ನು ಹಿಡಕೊಂಡು ಹಾರಿಬಿಟ್ಟಿತು. ಐಝಾಕ ಕೇಲಿಯು ಕೋಲಿನಿಂದ ಬಡಿದು ನಾಯಿಯನ್ನು ಬಿಡಿಸಿದನು. ಗರುಡ ದೇವನು ಪ್ರಕ್ಷುಬ್ಧನಾದನು. ಉಗುರುಗಳಿಂದಲೂ ರೆಕ್ಕೆಗಳಿಂದಲೂ ಕೇಲಿಯ ಮೇಲೆ ಪ್ರಹಾರ ಮಾಡಲಾರಂಭಿಸಿದನು. ಬಹು ಕಾಲದ ವರೆಗೆ ಕೇಲಿಗೂ, ಗರುಡನಿಗೂ ಹೋರಾಟವಾಯಿತು ಕೊನೆಗೆ ಪ್ರಾಣಿಶ್ರೇಷ್ಠನಾದ ಮಾನವನಿಗೇ ಜಯ ಸಿಕ್ಕಿತು. ಗರುಡನ ರೆಕ್ಕೆಗಳು ಸುಮಾರು ೪| ಅಡಿ ಉದ್ದವಿದ್ದವು.

— ಮಾನವ ಪ್ರಾಣಿಯ ದೇಹದಲ್ಲಿ ಏನಿದೆ? ಅಮೇರಿಕೆಯೊಳಗಿನ ವೈದ್ಯಕೀ ಕಾಲೇಜಿನ ಅಧ್ಯಕ್ಷರಾದ ಡಾಕ್ಟರ ಮೇಯೋರವರು ನಮ್ಮ ದೇಹದ ಪೃಥಕ್ಕರಣ ಮಾಡಿ, ಮೂಲ ದ್ರವ್ಯಗಳನ್ನು ನಮೂದಿಸಿರುವರು. ೭ ಬಾರಸೋಪ ಬಿಲ್ಲೆಗಳಾಗುವಷ್ಟು ಕ್ಷಾರವಿದೆ! ಏಳು ಪೆನಿ ಮೊಳೆಗಳಾಗುವಷ್ಟು ಲೋಹವಿದೆ! ಮೆಗ್ನೇಸಿಯಾ ಎಂಬ ಧಾತುವಿದೆ. ಪ್ರಮಾಣವು ಮಾತ್ರ ತೀರ ಅಲ್ಪ. ಒಮ್ಮೆ ಮಾಡ್ಡಿಗೆ ಉಪಯೋಗಿಸಬಹುದು! ಪೊಟೆಸಿಯಮ್ ಎಂಬ ಸ್ಫೋಟಕ ಪದಾರ್ಥವಿದೆ. ಒಂದು ಗೊಂಬೆಯ ತೊಪ್ಪಿಗೆಯನ್ನು ಹಾರಿಸುವಷ್ಟು! ಸುಣ್ಣವಿದೆ. ಒಂದು ಕೋಳಿಯ ಗೂಡಿಗೆ ಅದನ್ನು ಬಡಿಯಬಹುದು! ಫೋಸ್ಫರಸ ಎಂಬ ಬೆಳಕು ಕೊಡುವ ಪದಾರ್ಥವಿದೆ. ಅದರಿಂದ ೨೨೦೦ ಬೆಂಕಿಕಡ್ಡಿಗಳನ್ನು ಮಾಡಬಹುದು!

— ಮುಂಬಯಿಯ ನೆರೆಹೊರೆಯಲ್ಲಿ ಅಮೇರಿಕೆಯವರು ಒಂದು ದೊಡ್ಡ ಬೆಂಕಿಪೆಟ್ಟಿಗೆಯ ಕಾರಖಾನೆಯನ್ನು ತೆಗೆಯಲಿರುವರು. ಬಂಡವಲು ೩ ಕೋಟಿ ರೂ. ಮುಂಬೈ ಇಲಾಖೆಯೊಳಗಿನ ಬಾಲ್ಯಾವಸ್ಥೆಯೊಳಗಿರುವ ದೇಶಿ ಕಾರಖಾನೆಗಳ ಸಾವು ಸಮೀಪಿಸಿತು

— ಸಿಂಹಲ ದ್ವೀಪದಿಂದ ಮುಂಬಯಿಗೆ ೩ ಆನೆಯ ದಂತಗಳು ಬಂದಿವೆ. ಅವು ೭ ಫೂಟು ೮ ಇಂಚು ಉದ್ದವಿದ್ದು, ೧|| ಫೂಟ ಸುತ್ತಳತೆಯುಳ್ಳದ್ದಿರುತ್ತವೆ.

— ಮುಂಬಯಿಯಲ್ಲಿ ಒಂದು ಸಭ್ಯ ದರೋಡೆ ಇಬ್ಬರು ಒಂದು ಮೋಟರನ್ನು ಬಾಡಿಗೆಗೆ ಕೊಂಡರು. ಅದರೊಳಗೆ ವಿರಾಜಮಾನರಾಗಿ ಮೋಟರು ಡ್ರ್ಯಾವ್ಹರನನ್ನು ಸುಲಿದು ಆತನನ್ನು ಹೊರಹಾಕಿ, ಮೋಟಾರನ್ನು ಕೊಂಡು ಹಾರಿದರಂತೆ!

— ಆಚಾರ್ಯ ಗಿಡ್ವಾನಿಯವರಿಗೆ ಕಾರಾಗೃಹದಲ್ಲಿ ಪುತ್ರ ಸಮರ್ಪಣವಾಯಿತು!

— ಬಂಗಾಲದ ಗವರ್ನರರು ವಿಂಗಡಿಸಿಕೊಟ್ಟ ಖಾತೆಗಳನ್ನು ನಡೆಸಲು ನೇಮಿಸಿದ ದಿವಾಣರನ್ನು ತ್ಯಜಿಸಿ, ಆ ಖಾತೆಗಳ ಕಾರಭಾರವನ್ನು ಈಗ ಸ್ವತಃ ನಡೆಸುವ ನಿರ್ಣಯಮಾಡಿರುವರು. ಬಂಗಾಲದ ಕಾಯಿದೆ ಕೌನ್ಸಿಲು ದಿವಾಣರ ಸಂಬಳವನ್ನು ಕಿತ್ತೊಗೆದ ಫಲವಿದು.

— ಮುಂಬಯಿ ಇಲಾಖೆಯೊಳಗೆ ೧೫೦ ಮುನಿಸಿಪಾಲಿಟಿಗಳಿರುವವು. ಈ ಮುನಿಸಿಪಾಲಿಟಿ ಹದ್ದಿನಲ್ಲಿ ೩೦ ಲಕ್ಷ ಜನರಿರುವರು

— ಈ ವರುಷ ಇಂಗ್ಲಂಡ ದೇಶದಿಂದ ಕರಾಚಿ ಬಂದರದಲ್ಲಿ ೩೪೭೩ ಮಣ ಹುಲ್ಲು ಬಂದಿಳಿಯಿತು. ಮುಂಬಯಿಯಲ್ಲಿ ೧೦೮೧೯೨ ಮಣ ಹುಲ್ಲು ಬಂದಿಳಿಯಿತು. ಗೋಪ್ರತಿಪಾಲಕರಿಂದ ಮೆರೆಸಲ್ಪಟ್ಟ ಭರತಭೂಮಿಯಲ್ಲಿ ಹೈನಿನ ಅಭಾವಾಗಬೇಕಾಯಿತಲ್ಲವೇ!

— ಬಳ್ಳಾರಿಯ ಕೈದುಖಾನೆಯಲ್ಲಿ ನಿಷ್ಕರುಣ ಪಹಾರೆಯವನ ಬೀಡನೆ ಅಲ್ಲಿ ೫ ಸಾವಿರ ಮಾಪಿಳೆ ಕೈದಿಗಳಿರುವರು. ರಾತ್ರಿ ಮಲಗಿಸುವಾಗ ಹತ್ತತ್ತು ಜನರನ್ನು ಸಾಲಾಗಿ ಮಲಗಿಸಿ, ಅವರ ಬೇಡಿಗಳನ್ನು ಒಂದು ಸರಪಳಿಗೆ ಹಾಕಿಯುತ್ತಾರೆ. ರಾತ್ರಿ ಒಮ್ಮೆ ಯಾರಿಗಾದರೊಬ್ಬನಿಗೆ ಮೂತ್ರವಿಸರ್ಜನ ಮಾಡಬೇಕಾದರೆ, ೧೦ ಮಂದಿಗಳೂ ಏಳಬೇಕಾಗುತ್ತದೆ. ಇದೊಂದು ಯಮಬಂಧನ; ಸಾಧಾರಣ ಬಂಧನ.

— ಹೈದರಾಬಾದದ ಮುಸಲ್ಮಾನನು ಶ್ರೀರಂಗ ಪಟ್ಟಣದಲ್ಲಿ ಸೆರೆ ಬಿದ್ದಿರುವನು. ಈತನು ಚಿಕ್ಕ ಬಾಲಕರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹಿಡಿದೊಯ್ದು ಮಾರುತ್ತಿರುವನಂತೆ! ಸೆರೆಹಿಡಿದಾಗ ಈತನೊಡನೆ ಒಬ್ಬ ಹುಡುಗನೂ, ಒಬ್ಬ ಹುಡುಗಿಯೂ ಇದ್ದಳು. ಇದೆಂಥ ಉದ್ಯೋಗ?

— ಮೈಸೂರ ಸರಕಾರವು ಕೈಗಾರಿಕೆಗಳನ್ನು ಕಲಿಸುವ ವರ್ಗಗಳನ್ನು ವಿಸ್ತರಿಸಲು ಕೆಲವು ಹಣವನ್ನು ಮಂಜೂರು ಮಾಡಿದೆ. ಚಿತ್ರದ ಕೆಲಸ, ಹೊಲಿಗೆ, ಬುಟ್ಟಿ, ಬಿತ್ತಿ, ಚಾಪಿ, ಕೈ ವಸ್ತ್ರಗಳ ನೇಯಿಗೆ, ಕೈ ನೂಲು ಇತ್ಯಾದಿಗಳು ಕಲಿಸಲ್ಪಡುವವು. ಮೈಸೂರ ಕುಮಾರಿಯರ ಕಲ್ಯಾಣವಾಗಲಿ!

— ಬ್ರಹ್ಮದೇಶದಲ್ಲಿ ಹೇಜೊ ಪಟ್ಟಣದೊಳಗಿನ ಒಂದು ದೊಡ್ಡ ಹೊಟೆಲಿಗೆ ಬೆಂಕಿ ಹತ್ತಿತು. ಬೆಂಕಿ ನಂದಿಸಲು ಆ ಊರಲ್ಲಿ ನೀರಿಲ್ಲದ್ದರಿಂದ ಇಡೀ ಪಟ್ಟಣವು ಸುಟ್ಟು ಬೂದಿಯಾಯಿತು.

— ಮದ್ರಾಸಿನಲ್ಲಿಯೂ, ಮೈಸೂರಿನಲ್ಲಿಯೂ ಮಳೆಸುರಿಯಲಾರಂಭಿಸಿದೆ. ಮಳೆಗಾಲವು ಕರ್ನಾಟಕದಲ್ಲಿ ಬೇಗನೆ ಪ್ರಾರಂಭವಾಗುವದೇನು!

— ಮೈಸೂರ ಯುವರಾಜರವರು ಕಳೆದ ತಾ| ೨೧ನೇ ಶನಿವಾರಕ್ಕೆ ಬೆಂಗಳೂರಿನಿಂದ ಮುಂಬಯಿಗೆ ಹೊರಟು ಅಲ್ಲಿಂದ ವಿಲಾಯತಿಗೆ ಪ್ರಯಾಣ ಬೆಳೆಸಿದರು.

— ಧಾರವಾಡದ ಡಿ| ಲೋಕಲ್‌ಬೋರ್ಡಿನ ಸಾಧಾರಣ ಸಭೆಯು ತಾ. ೨೪ನೇಗೆ ಜರುಗಿ ಲೋಕಲ್ಫಂಡಿನ ಬಂದಾಜಯನ್ನು ೧|| ಆಣೆಗೆ ಏರಿಸಬೇಕಾಗಿ ಬಹುಮತದಿಂದ ಠರಾವು ಮಂಜೂರಾಗಿದೆ. ಆ ದಿನ ಸಭೆಯ ಮೆಂಬರರಲ್ಲಿ ಅರ್ಧ ಮೆಂಬರರು ಅಂದರೆ ೧೨ ಮಂದಿಗಳು ಹಾಜರಿದ್ದರು. ಅವರಲ್ಲಿ ೮ ಮಂದಿಗಳು ಅನುಕೂಲ ಮತ, ೪ ಮಂದಿಗಳು ಪ್ರತಿಕೂಲ ಮತಕೊಟ್ಟರು. ಅಧ್ಯಕ್ಷರಾದ ದಿವಾನ ಬಹಾದ್ದೂರ ರೊದ್ದ ರವರು ಡಾ| ಕಂಬಳಿ, ಡಾ| ಹುಲಕೋಟಿ, ರಾ| ಹೊಸಮನಿ ಮೊದಲಾದ ಲೋಕಪಕ್ಷದ ಮೆಂಬರರಿಲ್ಲದ ಸಮಯ ಸಾಧಿಸಿ ಮಹತ್ವದ ಠರಾವನ್ನು ಮಂಜೂರು ಮಾಡಿಕೊಂಡರೆಂದು 'ಕರ್ನಾಟಕ ಬ್ರಾಹ್ಮಣ' ಕಾರರು ದೂರುತ್ತಾರೆ. ಅಂತು ಧಾರವಾಡದ ಪ್ರಜೆಗಳ ಮೇಲಿನ ಕರದ ಹೊರೆಯು ಹಿಗ್ಗಲಾಯಿತು. ಡಾ| ಕಂಬಳಿಯವರು ಇದನ್ನು ನೀಗಿಸಲು ತಕ್ಕ ಉಪಾಯಯೋಜನೆ ಮಾಡಬೇಕು

— ೧೯೨೩-೨೪ನೇ ಇಸ್ವಿಯಲ್ಲಿ ಉಗಿಬಂಡಿಯ ಖಾತೆಗೆ ಪ್ರವಾಸಿಕರಿಂದ ೩೬ ಕೋಟಿ ೧೫ ಲಕ್ಷ ರೂಪಾಯಿಗಳು ಉತ್ಪನ್ನವಾದವು ೧ನೇ ವರ್ಗದ ಪ್ರವಾಸಿಕರಿಂದ ೧ ಕೋಟಿ ೨೯ ಲಕ್ಷ ರೂಪಾಯಿಗಳ ಉತ್ಪನ್ನವಾಯಿತು ೨ನೇ ವರ್ಗದ ಪ್ರವಾಸಿಕರಿಂದ ೧ ಕೋಟಿ ೯೫ ಲಕ್ಷ ರೂಪಾಯಿಗಳು ಉತ್ಪನ್ನವಾದವು. ೩ನೇ ವರ್ಗದ ಪ್ರವಾಸಿಕರಿಂದ ೩೨ ಕೋಟಿ ೯೧ ಲಕ್ಷ ರೂಪಾಯಿಗಳ ಉತ್ಪನ್ನವಾಯಿತು. ಮಹಾಯುದ್ಧ ಕಾಲದಲ್ಲಿ ಮೂರು ವರ್ಗ ಪ್ರಯಾಣದ ದರಗಳು ಏರಿಸಲ್ಪಟ್ಟಿದ್ದವು ಆಗ ೧, ೨, ವರ್ಗದವರ ಟಿಕೀಟಿನ ದರಗಳು ಇಳಿದವು. ೩ನೇ ವರ್ಗದವರ ದರಗಳು ಮಾತ್ರ ಇಳಿಯುವದಿಲ್ಲ. ೧-೨ನೇ ವರ್ಗಗಳಲ್ಲಿ ಪ್ರಯಾಣ ಮಾಡುವವರು ಶ್ರೀಮಂತರು. ೩ನೇ ವರ್ಗದಲ್ಲಿ ಪ್ರಯಾಣ ಮಾಡುವವರು ಸಾಧಾರಣ ಪ್ರಜೆಗಳು. ಶ್ರೀಮಂತರ ಮೇಲಿನ ಹೊರೆಯನ್ನು ಸರಕಾರವು ಕಡಿಮೆ ಮಾಡಿತು. ಬಡವರ ಮೇಲಿನ ಹೊರೆಯನ್ನು ಮಾತ್ರ ಕಡಿಮೆ ಮಾಡುವದಿಲ್ಲ. ಪಂಡಿತ ನೆಹರುರವರು ಈ ಬಗ್ಗೆ ಒತ್ತಾಯ ಮಾಡಿದರೂ [illegible] [illegible] ಅವರ ಸೂಚನೆಯನ್ನು ಮಾನ್ಯಮಾಡಲಿಲ್ಲ. ಬಡ ಪ್ರಜೆಗಳ ಹಿತಕ್ಕಾಗಿ ಗೋಳಿಡುವ ಸರಕಾರದ ಸ್ವರೂಪವಿದು.

— ಮುಂಬೈ ಇಲಾಖೆಯೊಳಗಿನ ಜೈಲುಗಳಲ್ಲಿ ಕಳೆದ ವರುಷ ೨೧೫೩ ರತ್ತಲು ಚರಖೇ ನೂಲು ನೆಯ್ದರು ೩೩೮೨೩ ರತ್ತಲು ದೇಶಿ ಗಿರಣಿಗಳೊಳಗೆ ನೂಲನ್ನು ನೆಯ್ದರು.

— ಅಖಿಲ ಭಾರತೀಯ ಹಿಂದು ಮಹಾಸಭೆಯ ೮ ನೇ ಅಧಿವೇಶನವು ಕಲಕತ್ತೆಯಲ್ಲಿ ಎಪ್ರಿಲ್ ತಾ. ೧೧-೧೨ನೇ ಗೆ ಜರಗುವದಿದೆ. ಲಾಲಾ ಲಜಪತರಾಯರು ಅಧ್ಯಕ್ಷರಿರುತ್ತಾರೆ.

ಧಾರವಾಡ ಕರ್ನಾಟಕಮಹಾವಿದ್ಯಾಲಯದಿಂದ ಹೊರಡುವ

ತಿಳಿಗನ್ನಡದ ಸ್ವಧರ್ಮ ಮಾಸಪತ್ರಿಕೆ.

ಸಂಪಾದಕ—ಸುರೇಂದ್ರ ಶಿವರಾವ ದೇಸಾಯಿ

ಚೈತ್ರ ಮಾಸದಿಂದ ದ್ವಿತೀಯ ವರ್ಷ ಪ್ರಾರಂಭ.

ಪ್ರಾಪಂಚಿಕ ಸಂಪತ್ತು ಪಾರಮಾರ್ಥಿಕ ಸಂಪತ್ತು ಕೂಡಿ ಬೆಳೆಯುವಂತೆ ಸ್ವಸಂಸ್ಕೃತಿ ಪ್ರೇಮ ಸ್ವದೇಶಪ್ರೀತಿ ಸ್ವಭಾಷಾಭಿಮಾನ ಸ್ವಧರ್ಮನಿಷ್ಠೆ ಸ್ವಾರ್ಥತ್ಯಾಗ ಮೊದಲಾದ ಗುಣಗಳನ್ನು ಉಜ್ವಲಗೊಳಿಸುವಂಥ ಕೀರ್ತನ ಪುರಾಣ ಪ್ರವಚನ ನಿಬಂಧ ಜೀವನಚರಿತ್ರೆ ಇತಿಹಾಸ ನಾಟಕ ಕಥೆ ಮತ್ತು ಕಾದಂಬರಿ ಮೊದಲಾದ ರೂಪದಲ್ಲಿ ಜನಮಂಡಲಿಯ ಉನ್ನತಿಗೆ ಅವಶ್ಯವಾದ ಸರ್ವ ವ್ಯವಸಾಯಗಳನ್ನು ಸ್ವಧರ್ಮ ದೃಷ್ಟಿಯಿಂದ ವಿಚಾರ ಮಾಡಿ ವಿವರಿಸುವದು. ಚಂದಾ ವರ್ಷಕ್ಕೆ ೩ ರೂಪಾಯಿ. ಕಳೆದ ವರ್ಷದ ಸಂಚಿಕೆಗಳನ್ನೆಲ್ಲ ಸೇರಿಸಿ ಕಟ್ಟಿದ ಪುಸ್ತಕದ ಬೆಲೆ ರೂ. ೩-೮-೦.

ವ್ಯವಸ್ಥಾಪಕ, "ಸ್ವಧರ್ಮ", ಧಾರವಾಡ.

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ ಬೀ ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಕಾಣತಕ್ಕ ಸರ್ವ ವ್ಯಾಧಿಗಳು, [illegible] ಮೊದಲಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ದುಡ್ಡಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಕಿಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾದೀತು.

(Registered Trade Mark.)

ಡಬ್ಬಿ ಒಂದಕ್ಕೆ ಕ್ರಯ ರೂ ೦-೪-೦, ವ್ಹಿ. ಪಿ. ೪ ಆಣೆ

ಡಜನ್ ೧ ಕ್ಕೆ ರೂ. ೩-೮-೦ ವ್ಹಿ. ಪಿ. ೦-೮-೦

ದಯವಿಟ್ಟು ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ:- ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

ಬಾ. ೫೧೧, ಮದರಾಸು

ಉತ್ತಮ ವಸ್ತುಗಳು! ಉತ್ತಮ ವಸ್ತುಗಳು!!

ಮಂಗಳೂರ ಹಂಚು!

ನಮ್ಮ ಊರಾದ ಮಂಗಳೂರ ಮಿಶನ್ ಹಂಚುಗಳು ನಮ್ಮಲ್ಲಿ ಮಾರಾಟಕ್ಕೆ ಸಿಗುವವು. ಬೇಕಾದವರು ವಸ್ತುಗಳು ನೋಡಿ ದರವಾರ ತಿಳಕೊಳ್ಳಬಹುದು. ದರವಾರ ಸವಲತ್ತಿಯದಿರುವವು.

ಪತ್ತೆ:— **ಕಾಝೀ ಅಬ್ದುಲ್ ಖಾದರ,**

ಮುನಸಿಫ್ ಕೋರ್ಟ ಸಮೀಪ, ಕುಮಠಾ

ತಾಮ್ರ ಹಿತ್ತಾಳಿ ಭಾಂಡೆ

ವ ತರತರದ ಇತರ ಭಾಂಡೆಗಳು.

ಮಹಾಶಯರೇ, ನಮ್ಮ ಕಂಪನಿಯು ಸದ್ಯದಲ್ಲಿ ಸ್ಥಾಪನೆಯಾಗಿ ತಾಮ್ರ-ಹಿತ್ತಾಳಿ ಭಾಂಡೆಗಳನ್ನು ಇಲ್ಲಿಯೇ ತಯಾರಿಸಿ ಗ್ರಾಹಕರಿಗೆ ಸೋವಿ ಧಾರಣೆಯಿಂದ ಖಾತ್ರಿ ಭಾಂಡೆಗಳು ಸಿಗುವಂತೆ ಮಾಡುತ್ತ ಇರಲು, ಬಹುತರ ಗಿರಾಕಿಗಳು ತರತರದ ಭಾಂಡೆಗಳನ್ನು ಇಚ್ಛಿಸುತ್ತಿದ್ದರಿಂದ ಆಯಾಯ ನಮೂನೆಯ ಸಂದಿನ ವ ಬಿನ್ ಸಂದಿನ ಭಾಂಡೆಗಳನ್ನು ಪೂರ್ತ ಮಾಡುವದಕ್ಕಾಗಿ ಹಿಂದುಸ್ಥಾನದಲ್ಲೆಲ್ಲ ಸಂಚರಿಸಿ, ನೋಟಕ್ಕೆ ಅಂದವಾಗಿ ಕಂಡು ಬಂದ ತಾಮ್ರ ಹಿತ್ತಾಳಿ ಕಂಚು ಇವೇ ಮೊದಲಾದ ಧಾತುಗಳ ಭಾಂಡೆಗಳನ್ನು ಕುಂಭಕೋಣ, ತ್ರಿನಾವೇಲಿ, ತಿರಪೂರ, ಬೆಂಗಳೂರ, ಕಾಳಹಸ್ತಿ, ಹುಬ್ಬಳ್ಳಿ, ನಾಶಿಕ, ಪುಣೆ, ಮುರಾದಬಾದ, ಮುಂಬಯಿ ಮೊದಲಾದ ಪ್ರಸಿದ್ಧ ಪಟ್ಟಣಗಳಿಂದ ಖರೀದಿಸಿ ತಂದಿಟ್ಟು, ಗಿರಾಕಿಗಳು ಕೇಳಿದ ಭಾಂಡೆಗಳನ್ನು ಕೊಡುವಂತೆ ಅನುಕೂಲತೆಯನ್ನೂ, ಇದಕ್ಕೂ ಹೊಸ ನಮೂನೆಯ ಭಾಂಡೆಗಳನ್ನು ಗ್ರಾಹಕರು ಅಪೇಕ್ಷಿಸಿದಲ್ಲಿ ಆಗಿಂದಾಗಲೇ ತಯಾರಿಸಿ ಕೊಡುವರೆ ಉತ್ತಮ ಕಾರಾಗಿರಿಯ ಮೇಸ್ತ್ರಿಯರನ್ನೂ ಇಟ್ಟಿರುತ್ತೇವೆ. ಇದಲ್ಲದೆ, ನಮ್ಮ ಕಂಪನಿ ಶಾಖೆಗಳು ಅಂಕೋಲಾ—ಶಿರ್ಶಿಯಲ್ಲಿ ಇರುವಂತೆ, ಅಲ್ಲಿಯೂ ಎಲ್ಲಾ ತರದ ಭಾಂಡೆಗಳು ತಯಾರಿರುವವು. ಬೇಕಾದವರು ಅಲ್ಲಲ್ಲಿ ಖರೀದಿಸಬಹುದು. ಈ ಹೊರತು, ದಕ್ಷಿಣ ಕಾನಡಾ ಮಂಗಳೂರಿನಲ್ಲಿಯೂ ಒಂದು ದುಕಾನವಿರುವದು. ಅಲ್ಲಿಯೂ ತರತರದ ಭಾಂಡೆಗಳು ವಿಕ್ರಿ ಬಗ್ಗೆ ತಯಾರಿರುವವು. ಹೊಸ ಹೊಸ ನಮೂನೆಯ ಭಾಂಡೆಗಳನ್ನೂ, ಕೊಪ್ಪರಿಗೆಗಳನ್ನೂ ಕೂಡಲೇ ಅಪೇಕ್ಷಿತರ ಕಣ್ಮುಂದೆಯೇ ಅಲ್ಪಾವಧಿಯಲ್ಲಿ ತಯಾರಿಸಿ ಕೊಡುವ ಅನುಕೂಲತೆಯೂ ಇಟ್ಟಿರುತ್ತದೆ. ಇಷ್ಟು ಸೋವಿಯಿಂದಾ ಮಾದರಿಯ ಭಾಂಡೆಗಳು ಇಷ್ಟು ತ್ವರಿತ ವೇಳೆಗೆ ಮತ್ತೆಲ್ಲಿಯೂ ದೊರೆಯಲಾರವು. ಬೇಕಾದವರು ಈ ಕೆಳಗಿನ ಪತ್ತೆಯ ಮೇಲೆ ಟಪಾಲದ್ವಾರ ಪತ್ರವ್ಯವಹಾರ ಮಾಡಿ ಬೇಕಾದ ಮಾಹಿತಿ ಪಡಕೊಳ್ಳಬಹುದು. ಗ್ರಾಹಕರಿಗೂ, ವ್ಯಾಪಾರಿಗಳಿಗೂ ೨೫ ರೂಪಾಯಿಗಳ ಮೇಲೆ ಕಮೀಶನ್ ಕೊಡಲಾದೀತು.

ಪತ್ತೆ:—

ಅಲ್ಲೀ ಸಾಹೇಬ ಆದಮ ಸಾಹೇಬ

ಬಸ್ತಿ ಹಿತ್ತಳ ಕಂಪನಿ, ಕುಮಠಾ.

ಪೋಸ್ಟ—ಕುಮಠಾ. ಜಿಲ್ಲಾ ಉ. ಕಾನಡಾ.

ಜಾಹೀರ ನೋಟಿಸು.

ನಾನು, ದೇವಿ ಯಾನೆ ಬಾಯಿ ತಾಯಿ ದುರ್ಗಾ ನಾಯ್ಕಿಣ ಅಂಕೋಲಾ ಪೈಕಿ ಕುಂಬಾರಕೇರಿ ನಿವಾಸಿ ಹಾಲಿ ಮುಂಬಯಿಯಲ್ಲಿ ಇರುವ ನಾನು ಇದರ ಮೂಲಕ ತಿಳಿಯಪಡಿಸುವದೇನಂದರೆ:—

ನನ್ನ ಎರಡನೇ ಮಗನಾದ ರಾಮಚಂದ್ರನು ದುರ್ವ್ಯಸನಗಳನ್ನು ಮಾಡಿ ಊರಲ್ಲಿ ಸಾಲ ವಗೈರೆ ಮಾಡಿ ನನ್ನ ಅನುಮತಿಯನ್ನು ಮೀರಿ ನಡೆಯುತ್ತಾನೆ. ಆದ್ದರಿಂದ ಸದ್ರಿಯವನು ಮಾಡಿರುವ ಯಾವದೊಂದು ಸಾಲಕ್ಕೂ ನಾನು ಜವಾಬ್ದಾರಳಾಗಿ ಇರುವದಿಲ್ಲ. ಯಾವತ್ತೂ ಸ್ಥಿರ ಚರ ಸೊತ್ತುಗಳು ನನ್ನ ಸ್ವಂತ ಸಂಪಾದನೆಯಿಂದ ಮಾಡಿದ್ದಿದ್ದು ನನ್ನ ಸದ್ರೀ ಮಗನಿಗೆ ಯಾವದೂ ಹಕ್ಕು ಪ್ರಾಪ್ತಿಯಾಗುವದಿಲ್ಲ. ಇವನ್ನು ಮುದ್ದಾಂ ತಿಳಿದು ಯಾರಾದರೂ ನನ್ನ ಸ್ಥಿರ ಚರ ಸೊತ್ತಿನ ಮೇಲೆ ಇಲಾಜು ನಡೆಸಿದ್ರೆ ಅದರಿಂದಾಗುವ ಲಾಭ ಲುಕ್ಸಾನಿಗೆಲ್ಲಾ ಅವರವರೇ ಜವಾಬ್ದಾರರಾಗಿರಬೇಕಾದೀತು. ತಿಳಿಯುವದು ಎಂತ ಕೊಟ್ಟ ನೋಟೀಸು.

ಮುಂಬಯಿ, ತಾ. ೧೫-೩-೧೯೨೫.

देवी याने बायु आई दुर्गी हिचि सही.

ತ್ವರೆಮಾಡಿರಿ ! ತ್ವರೆಮಾಡಿರಿ !!

ಪ್ರತಿಗಳು ಸ್ವಲ್ಪವೇ ಉಳಿದಿರುತ್ತವೆ.

ಬಗ್ಗೋಣ ರಾಮಾ ತಿಮ್ಮಣ್ಣ ಪಂಡಿತರ

ಕ್ರೋಧನ ಸಂವತ್ಸರದ ಪಂಚಾಂಗಗಳು.

ಪ್ರತಿ ೧ ಕ್ಕೆ ೨ ಆಣೆ; ೨೫ ಕ್ಕೆ ೩॥ ರೂಪಾಯಿ; ೫೦ ಕ್ಕೆ ೬॥ ರೂಪಾಯಿ; ೧೦೦ ಕ್ಕೆ ೧೨ ರೂಪಾಯಿ.

ಅಂಚೆ ವೆಚ್ಚ ಬೇರೆ.

ಮೆನೆಜರ, "ಸ್ಟಾರ ಆಫ್ ಕೆನರಾ ಪ್ರೆಸ್"

ಕುಮಠಾ.

ವಿಕ್ರಯಕ್ಕೆ ತಯಾರು!

ಕುಂಭಾರವಾಡೆಯ ಸುಪ್ರಸಿದ್ಧ

ಸಾಧು

ಶಾಂಡಿಲ್ಯ ಮಹಾರಾಜ

ಇವರ ಚಿತ್ತಾಕರ್ಷಕ

ಫೋಟೋಗ್ರಾಫಗಳು.

ಫುಲಸ್ಕ್ಯಾಪ ೧ ಕ್ಕೆ	ರೂ. ೧-೪-೦.
ಕೆಬಿನೆಟ ಸೈಜ ,,	ರೂ. ೦-೧೦-೦.
ಕಾರ್ಡಸೈಜ ,,	ರೂ. ೦-೩-೦.

ಈ ಸುಸಂಧಿಯನ್ನು ಹೋಗಗೊಡಿಸ ಬೇಡಿರಿ !

ಕುಮಠಾ, } **ಎಸ್. ಟಿ. ನಾಡಕರ್ಣಿ,**
ಶಿರ್ಶಿ, } ಫೋಟೋಗ್ರಾಫರ.

ಡೇಲಿ ಮೋಟಾರ.

ಹುಬ್ಬಳ್ಳಿಗೆ:— ಪ್ರತಿ ದಿವಸ ಬೆಳಿಗ್ಗೆ ೭ ಘಂಟೆಗೆ ಹೊರಟು ಮುಂಚೆ ಮೇಲಿಗೆ ಸರಿಯಾಗಿ ಮುಟ್ಟಿ ಪರತ ಮೇಲು ಬಂದ ಕೂಡಲೆ ಹೊರಡುವದು.

ಹಾವೇರಿಗೆ:— ಸೋಮವಾರ, ಬುಧವಾರ, ಶನಿವಾರ ಬೆಳಿಗ್ಗೆ ೭ ಘಂಟೆಗೆ ಹೊರಟು ಪರತ ೧೨ ಘಂಟೆಗೆ ತಿರುಗುವದು.

ಕುಮಟಾ:— ಕಡೆಗೆ ಬೆಳಿಗ್ಗೆ ೭ ಘಂಟೆಗೆ ಪ್ರತಿ ದಿವಸ ಹೊರಡುವದು. ಏಜಂಟ- ಬಿ. ದಾಸ.

ಟಿಕೇಟು:— **ಹುಬ್ಬಳ್ಳಿಯಲ್ಲಿ:—** [illegible] ಅಂಗಡೀ ಸಮೀಪ, ಹರ್ಡೇಕರ [illegible] ಪ್ರೆಸ್

ಸಿರ್ಸಿಯಲ್ಲಿ:— ಎಸ್. ಎಲ್. ಫಾಟಕ್. ಮತ್ತು **ಹಾವೇರಿಯಲ್ಲಿ** [illegible] ಸಿಗುವವು.

ಸ್ಪೇಶಲ್ ಗಾಡಿಗಳು ಬಾಡಿಗೆಗೆ ಸಿಗುವವು

B. V. Pusalkar, SIRSI

ವಿಶೇಷ] ಅನುಭವಸಿದ್ಧ [ಪ್ರತ್ಯಕ್ಷ.

ವನೌಷಧಿಮೂಲಿಕೆಗಳು

ವಾಯುಉದುವಸ್ಥನ (ನಿಮೋನಿಯಾ) ವಾಂತಿ ಭ್ರಾಂತಿ (ಕಾಲರಾ) ಅರ್ಧಾಂಗವಾಯು (ಪರಾಲಿಸಿಸ್) ಹುಚ್ಚು ನಾಯಿ ಕಡಿತ ಸರ್ಪಸುತ್ತು, ಹೊಟ್ಟೆಯಲ್ಲಿ ಕೃತ್ರಿಮ ವಿಷ ಹಾಕಿದ್ದು (ಕೈಮದ್ದು) ವಗೈರೆ ರೋಗಗಳಿಗೆ ಒಂದೇ ಒಂದು ಮೂಲಿಕೆಯಿಂದ ಖಾತ್ರಿಯಾಗಿ ತೀವ್ರ ಗುಣಬರುವದು. ಇವು ಬಹುಕಾಲದಿಂದ ಅನುಭವ ತಕ್ಕೊಂಡಿದೆ. ನಾವು ಪ್ರತಿನಿತ್ಯ ಕಾಡಿಗೆ ಹೋಗುತ್ತಿದ್ದು ಬೇಕಾದ ಗುಣ ಔಷಧಿಗಳ ತಾಜಾ ಮೂಲಿಕೆಗಳು ಒಮ್ಮೆ ತರಿಸಿ ಅನುಭವ ತಕ್ಕೊಂಡರೆ ಖಾತ್ರಿಯಾದೀತು. ಕಾಲರಾ ಔಷದಿಗಳ ದ್ರಾವಕ (Tincture) ಕೂಡ ಬೇಕಾದ್ದು ಸೂಚಿಸಿದರೆ ಕಳಿಸುವೆವು.

ವಾಯುಉದುವಸ್ಥನದ ಒಟ್ಟು ಔಷಧಿ ಮೂಲಿಕೆ ತೊಲೆ ೧ ಕ್ಕೆ	೦-೩-೦.
ಕಾಲರಾದ ಒಗ್ಗೆ .. ,,	೦-೩-೦.
ಅರ್ಧಾಂಗ ವಾಯುವಿನ ಒಗ್ಗೆ	೦-೪-೦
ನಾಯಿ ಕಡಿತದ ಒಗ್ಗೆ	೦-೪-೦.
ಸರ್ಪಸುತ್ತಿನ ಒಗ್ಗೆ	೦-೩-೦
ಹೊಟ್ಟೆಯಲ್ಲಿ ಕೃತ್ರಿಮ ಔಷಧ ವಿದ ಒಗ್ಗೆ ತೊಲೆ ೧೦ ಕ್ಕೆ	೦-೮-೦
ರಕ್ತಶುದ್ಧಿ ವ ಮಲಶೋಧನೆ ಒಗ್ಗೆ ಮೂಲಿಕೆ ರಾತ್ತಲ ಕ್ಕೆ	೧-೦-೦.
ನೇತ್ರಾವಳಿ (ನೆಲ್ಲಿಕಾಯಿ ಗುಳುಂಬ) ರಾತ್ತಲ ೧ ಕ್ಕೆ	೧-೦-೦

ರಾತ್ತಲಗಟ್ಟಲೆ ಯಾ ಅದಕ್ಕೂ ಹೆಚ್ಚು ತರಿಸಿಕೊಳ್ಳುವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು. ಟಪಾಲ ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿ ಪತ್ರದ್ವಾರಾ. ಅನುಪಾನಪತ್ರ ಔಷಧಿ ಸಂಗಡ.

ಎನ್. ಜಿ. ಹೆಗಡೆ, ಮಾಸ್ತೇರಿ.

ಪೋ — [illegible]. ಜಿ. ಉತ್ತರ ಕಾನಡಾ

ವೈದ್ಯರು ಬಡದಾಡಿದರೆ ಏನು ಮಾಡುವದು?

ಇಂಥ ಜ್ವರದ ಪ್ರಕರಣಗಳಲ್ಲಿ ಬಾಟ್ಲಿವಾಲಾರವರ ಎಗ್ಯೂಮಿಕ್ಶ್ಚರವನ್ನು ಯಥೇಷ್ಟ ಉಪಯೋಗಿಸಿರಿ. ಡೆಂಗ್ಯೂ ಮೊದಲಾದ ಎಲ್ಲ ಜಾತಿಯ ಜ್ವರಗಳಿಗಾಗಿಯೇ ಇದು ತಯಾರಿಸಲ್ಪಟ್ಟಿದೆ. ಹಾಗು ಬಾಟ್ಲಿವಾಲಾರವರ ಎಗ್ಯೂ ಪಿಲ್ಸ ಇವು ಜ್ವರಗಳನ್ನು ಖಚಿತವಾಗಿ ಗುಣ ಮಾಡುವದಲ್ಲದೆ, ಸಮಸ್ತ ಪ್ರಕಾರದ ತಲೆ ನೋವುಗಳನ್ನೂ ಪರಿಹರಿಸುತ್ತದೆ. ಆಯ್. ಎಮ್. ಎಸ್. ವೈದ್ಯರು ಇದಕ್ಕೆ ಶಿಫಾರಸುಪತ್ರವನ್ನು ಕೊಟ್ಟಿರುವರು. ಇದರಿಂದ ಹೃದಯದಮೇಲೆ ಯಾವ ದುಷ್ಪರಿಣಾಮಗಳೂ ಸಂಭವಿಸುವದಿಲ್ಲ. ಹಿಂದುಸ್ಥಾನ, ಬ್ರಹ್ಮದೇಶ, ಸಿಂಹಲದ್ವೀಪ, ಆಫ್ರಿಕಾಗಳಲ್ಲೆಲ್ಲ ೩೦ ವರ್ಷಗಳಿಂದ ಖ್ಯಾತಿ. ಅನೇಕ ಭಾರತೀಯ ಪ್ರದರ್ಶನಗಳಲ್ಲಿ ಚಿನ್ನ, ಬೆಳ್ಳಿಯ ಪದಕಗಳು ದೊರಕಿವೆ. ಇದೊಂದು ಈಗ ಚಾಲತಿ ನಾಣ್ಯವಾಗಿದೆ. ಮಾರವಾಡಿಯರು ಸಹ ಇವುಗಳ ಮೇಲೆ ಹಣ ಕೊಡುತ್ತಿರುವರು. ಬಡವರಿಗೆ, ಮಧ್ಯಮ ವರ್ಗದವರಿಗೆ ಇದು ಬಹಳೇ ಉಪಕಾರಿಯು. ಇಷ್ಟೇ ಅಲ್ಲ, ಪ್ರವಾಸಿಕರಿಗೆ, ಪ್ರಯಾಣಿಕರಿಗೆ, ಜಲಪರ್ಯಟನದವರಿಗೆ ಅತ್ಯವಶ್ಯವು.

ಏಜಂಟರು ಬೇಕು! ಅರ್ಜಿ ಮಾಡಿದ್ದಲ್ಲಿ ಶರ್ತುಗಳು ತಿಳಿಸಲಾದಾವು.

Dr. H L. BATLIWALA Sons & Co. Ltd.
P. WARLI, BOMBAY No. 18.
Telegraphic Address:— "*Cawashapur*" Bombay.

ಬೇಸಿಗೆಯು ಪ್ರಾರಂಭವಾಯಿತು!

ದನಗಳ ಆಹಾರವಾದ ಕಣಿಕೆಯನ್ನು ಕಾದಿಡಿರಿ !!

ಕಿರ್ಲೋಸ್ಕರ ಕಣಿಕೆ ಯಂತ್ರವನ್ನು ಉಪಯೋಗಿಸಿರಿ !!!



ನಮ್ಮ ಕಾರ್ಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕೊರೆಯುವ ಯಂತ್ರಗಳು ತಯಾರಾಗುತ್ತವೆ. ಒಂದು ಕೈಯಂತ್ರ ಬೆಲೆ ೩೦ರೂ. ಇನ್ನೊಂದು ಗಾಲೀ ಯಂತ್ರ ಬೆಲೆ ೮೫ರೂ. ಸಣ್ಣ ಕಮತದವರು ಕೈಯಂತ್ರವನ್ನೂ, ದೊಡ್ಡ ಕಮತದವರು ಗಾಲೀ ಯಂತ್ರವನ್ನೂ ಉಪಯೋಗಿಸಬಹುದು. ಕಣಿಕೆಯು ೪ ಇಂಚುಗಳಿಂದ ಒಂದು ಇಂಚಿನವರೆಗೆ ಕೊರೆಯಲ್ಪಡುತ್ತದೆ. ಸವಿಸ್ತರ ಸಂಗತಿ ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ;
ಜಿಲ್ಲಾ ಸಾತಾರಾ.

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೩ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಅದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಪ್ರೊ, ಫೋರ್ಟ, ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta.

Reg No B. 1170.

Mondy April 6th 1925.

ವರ್ಷ ೯.

ಕಾನಡಾವೃತ್ತ.

THE KANARA NEWS

ಸಂಚಿಕೆ ೨೫.

ಪತ್ರದ ದರಗಳು.
ಟ್ಟಿದಲ್ಲಿ ಅಗಾವು
ರೂಪಾಯಿ 2-4-0.
ಾರ್ಡರಿಯಿಂದ
ರೂ. 3-0-0.
ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ-ಸ್ಮಾಲ ಪೈಕಾ (೧೧ ಎಮ್ ಅಗಲ) [illegible] ಸಾಲುಗಳವರೆಗೆ ರೂ. 1-0-0 ಆ ಮೇಲೆ ಪ್ರತಿಸಾಲಿಗೆ 0-2-0.
ತಿಂಗಳ ಸಾಲು ಎಷ್ಟು ಕೊಡತಕ್ಕದ್ದಿರುವದೋ ಆ ವಿಷಯ [illegible] ಹುಡುಕಬೇಕು.
[illegible] ಜಾಹಿರಾತುಗಳ [illegible] ಮಾಡಿ ತಿಳಿಸಲ್ಪಡುವದು.

(ಕುಮಟಾ— ಕಾನಡಾವೃತ್ತ ಸೋಮವಾರ, ತಾರೀಖು ೬ ಮಾಹೆ ಮಾರ್ಚ ಸನ್ ೧೯೨೫ನೇ ಇಸವಿ.)

हिंदुस्थानांतील रहिवाशांस ज्याप्रमाणें हिंदुस्थानची हवा त्याप्रमाणेंच हें औषध हिंदुस्थानांतील लोकांस ज्यास्त फायदेशीर आहे.

द्राक्षासव- पौंड रतलची किंमत १ रुपये;

रामबाण औषधें
सर्दी घालविणारें,
भूक वाढविणारें,
श्वोच्छ्वास साफ करणारें,
झोंप आणणारें,
शक्ति देणारें,
तेजस्वीपणा आणणारें.

स्वादास रुचिकर.

क्याटलाग मागवा,

झंडु फार्मास्युटिकल वर्क्स लिमिटेड,
मुंबई नं. १३

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, B. A.
Jewellers, KUMTA.
ಆರ್. ಎಸ್. ಕಾಸರಗೋಡ,
ರತ್ನಾಭರಣ ವ್ಯಾಪಾರಿ, ಕುಮಟಾ.

ಕ್ಷಯ ರೋಗ?
ವೈದ್ಯ ಫರ್ನಾಂಡಿಸರ ಬರೇ ನಾಲು ಔಷಧಗಳು

ಪ್ರಕೃತಿಮಾನ ತಿಳಿಸಿರಿ. ಅಂದರೆ ಯೋಗ್ಯ ಔಷಧಗಳನ್ನು ತಯಾರಿಸಿ ಕಳುಹಿಸುವೆವು. ಸವಿಸ್ತರ ಭೆಟ್ಟಿಯಾದಲ್ಲಿ ಹೆಚ್ಚಿನ [illegible] ದೊರಕುವದು. ತಡಮಾಡದೇ[illegible]. ಬೇಗನೇ ಕೆಳಗಿನ ವಿಳಾಸಕ್ಕೆ ಬರೆಯಿರಿ. (ರೂ. ೩೬-೧೦-೦.)

ವೈದ್ಯ ಫರ್ನಾಂಡಿಸ,
ರೋಗಾಂತಕ ಡಿಪೋ,
ಕಾರವಾರ.

ಗ್ಯಾಸ ದೀಪಗಳು
ಬಾಡಿಗೆಗೆ ಇಟ್ಟಿರುತ್ತವೆ.

ವರವಾರವು ಎಲ್ಲ ಕಾರ್ಯಕ್ಕೆ [illegible] ಇಟ್ಟಿರುತ್ತವೆ. ಬೇಕಾದವರು ಕೆಳಗಿನ ಪತ್ತೆಯ ಮೇಲೆ ಬರೆಯಲು [illegible]. ಪತ್ತೆ:— ವೈಕುಂಠ ಜನಾರ್ದನ ನಾಯ್ಕ, [illegible] ತಾ. ಕುಮಟಾ.

ಆಯುರ್ವೇದೀಕ) ಧಾತುಪೌಷ್ಟಿಕ, ಶಕ್ತಿವರ್ಧಕ, ರಕ್ತಶೋಧಕ (ಮಲಬಾರಿಕೃತಿ

ಮದನಕಾಮೇಶ್ವರೀಲೇಹ.

ಆಬಾಲ ವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಇದರಲ್ಲಿ ಕೇಸರ ಕಸ್ತೂರಿ, ಪ್ರವಾಲ, [illegible] ಅನೇಕ ವನೌಷಧಯುಕ್ತ [illegible] ಧಾತುಕ್ಷೀಣತೆ, [illegible] (ಗರ್ಮಿ) [illegible] ರಕ್ತ-ಧಾತು [illegible] ತಿಂಗಳು [illegible]

ಅತ್ಯುತ್ತಮ) ಜಂತವಿನ ಔಷಧ (ದರಸುಲಭ.

[illegible] ಅನುಭವ [illegible] ಎಲ್ಲಾರೋಗಗಳ [illegible] ಅನುಭವ ಸಿದ್ಧೌಷಧಗಳು [illegible] ಬೇಕಾದವರು [illegible]

ಮನೇಜರ ಆಯುರ್ವೇದ ಚಿಕಿತ್ಸಾ ಮಂದಿರ, ತಾ. ಕಾರವಾರ, ಪೋ. ಚೆಂಡಿಯೆ.

ಮುಂಬೈ ಏಜಂಟ:— R. C. KAMAT, Teashop Store Lane, Fort, BOMBAY.

ಹುಟ್ಟಿದ ವೇಳೆ [illegible]) ಸುಖಸಾಧನಕ್ಕೆ ಯೋಗ್ಯ ಉಪಾಯವು. (ಜನ್ಮಟಿಪ್ಪಣಿ [illegible]

ಮಲಬಾರಿ) ಕೇರಳ ಜ್ಯೋತಿಷ. (ಭವಿಷ್ಯ

[illegible] ಜನ್ಮಟಿಪ್ಪಣಿ [illegible] ಫಲಗಳನ್ನು [illegible] ಉಪಾಯಗಳನ್ನು [illegible] ಭವಿಷ್ಯ [illegible] ಮಲಬಾರದಲ್ಲಿ ಪ್ರಸಿದ್ಧ [illegible] "ಕೇರಳ" [illegible]

ಮನೇಜರ, "ಜ್ಯೋತಿಷ ಶಾಸ್ತ್ರ-ಭುವನ," ಚೆಂಡಿಯೆ, ತಾ. ಕಾರವಾರ.

ಕಡಿಸುವದು ಪುಣ್ಯ, ಬಿಡಿಸುವದು ಪಾಪ!

(ಲೇಖಕ - ವಿಠ್ಠಲ ಅನಂತ ಹೊದ್ಕೆ)

ಅನಾರ್ಯರ ಸಂಸರ್ಗದಿಂದ ಆರ್ಯರಾದ ನಮ್ಮಲ್ಲಿ ನೆಲಗೊಂಡಿರುವ ಅನೇಕ ಅವಿಚಾರದ ಆಚಾರಗಳಲ್ಲಿ ಪಶುಬಲಿಯು ಒಂದಾಗಿದೆ. ಈ ಪಶುವಧೆಯ ಕಾರಣವೇ ಗ್ರಾಮ ಜಾತ್ರೆಗಳು. ಇಂಥ ಜಾತ್ರೆಗಳಲ್ಲಿ ನಮ್ಮ ಶಿರಸಿ ಶ್ರೀ ಮಾರೆಮ್ಮನ ಜಾತ್ರೆಯೇ ಮಿಗಿಲಾಗಿದ್ದು ಅದು ಬರೇ ಕಾನಡಾ ಜಿಲ್ಲೆಗಷ್ಟೇ ಅಲ್ಲ ಇಡೀ ಕರ್ನಾಟಕಕ್ಕೇ ಕಲಂಕವಾಗಿದೆ ಎಂತ ಹೇಳಲಿಕ್ಕೇನೂ ಅಡ್ಡಿ ಇಲ್ಲ. ಹಿಂದಕ್ಕೆ ಈ ಜಾತ್ರೆಯ ಕಾಲಕ್ಕೆ ೧೫—೨೦ ಸಾವಿರ ಕುರಿ ಕೋಣಗಳ ಆಹುತಿಯೂ [illegible] ೫೦ ೬೦ ಕೋಣಗಳ ಸಂಹಾರವೂ ಆಗುತ್ತಿತ್ತೆಂತ ವಯೋವೃದ್ಧರು ಈ ರಣಜಾತ್ರೆಯ ಗತವೈಭವದ ವರ್ಣನೆಯನ್ನು ಅಭಿಮಾನಪೂರ್ವಕವಾಗಿಯೂ ಆವೇಶಪೂರ್ವಕವಾಗಿಯೂ ಮಾಡುತ್ತಿರುವರು. ಆದರೆ ಆ ಭಯಂಕರ ಸರಣಿಯು ಕ್ರಮೇಣ ಕುಂದುತ್ತ ಬಂದಿರುವದಲ್ಲದೆ ಕಡಿಸುವ ಕುರಿಕೋಣಗಳ ಸಂಖ್ಯೆಯು ಬಹಳೇ ಇಳಿದಿದೆ. ಕೆಲವು ವರ್ಷಗಳ ಹಿಂದೆ ೨ ಕೋಣಗಳ ಕೊಲೆಯನ್ನು ೧ ರ ಮೇಲೆಯೇ [illegible]ಸುವಂತೆ ಮಾಡಿಸಿದ ಪುಣ್ಯವನ್ನು ಪಾಸ್ನೆಯವರೇ ಪಡೆದಿರುವರು ಮತ್ತು ಹಿಂಸೆಯನ್ನು ಪೂರ್ಣವಾಗಿ ನಿಲ್ಲಿಸುವ ಪ್ರಯತ್ನವು ಎಡೆಬಿಡದೆ ನಡೆದಿರುವದು.

ಈ ನವ್ಯ ಅಹಿಂಸಾದ ಚಳವಳಿಯು ಪ್ರಾರಂಭವಾದಂದಿನಿಂದ ಇದು ೩ ನೇ ಜಾತ್ರೆಯು. ವಾಡಿಕೆಯಂತೆ ಹೋದ ವರ್ಷವೇ ಜಾತ್ರೆಯಾಗುವದಿತ್ತು. ಇದರ [illegible] ಮೂಲಕ ಅದನ್ನು ಮುಂದೆ ಹಾಕಬೇಕಾಗಿ ದೇವಸ್ಥಾನದ ಮೊಕ್ತೇಸರರಿಗೆ ವಿನಂತಿ ಮಾಡಿಕೊಂಡ ಮೇರೆಗೆ ಅವರು ಅದಕ್ಕೆ ಒಪ್ಪಿದ್ದರಿಂದ ಮೂಕ ಪ್ರಾಣಿಗಳಿಗೆ ವರ್ಷದ ಆಯುಷ್ಯವು ಹೆಚ್ಚಿದಂತಾಯಿತು. ಮತ್ತು ಕೋಣವು ಬೆಳೆದು ಹೋಗಿ ಸಿದ್ದರಿಂದ ಈ ಸಾರೆ ಜಾತ್ರೆಯನ್ನು ಮಾಡದಿದ್ದರೆ ನಿರ್ವಾಹವೇ ಇಲ್ಲವೆಂತ [illegible] ದೇವಸ್ಥಾನಕ್ಕೆ ಬಹಿಷ್ಕಾರವೆಂತ ಎಷ್ಟೋ ಜನರು ಹೇಳುತ್ತಿದ್ದರಿಂದ ಎಲ್ಲಿ ನೋಡಿದರೂ ಜಾತ್ರೆಯ ಬಗ್ಗೆ ಉತ್ಸುಕತೆಯೇ ಕಂಡುಬರಹತ್ತಿತು. ಮತ್ತು ಊರೊಳಗೂ ಸ್ವಲ್ಪ ದಿನಗಳ ಉಪದ್ರವವು ಇದ್ದ ಮೂಲಕ ಲೋಕಕಲ್ಯಾಣಾರ್ಥವಾಗಿಯೂ [illegible] ಈ ಸಾರೆ ಜಾತ್ರೆಯು ನಿಶ್ಚಯಿಸಲ್ಪಟ್ಟಿತು. [illegible] ಕುರಿಕೋಣಗಳ ಕೊಲೆಯು ಕಡಿಮೆ ಮಾಡದ ಹೊರತು ಕಾಣಿಕೆಯ ದರಗಳಲ್ಲಿ ಹೆಚ್ಚು ಕಡಿಮೆ ಮಾಡಿರೆಂತ ಮೊಕ್ತೇಸರರಿಗೆ ವಿನಂತಿ ಮಾಡಿಕೊಂಡೆವು. ಮತ್ತು ಅವರಾದರೂ ಒಪ್ಪಿ ಬಹಳ ಪರಿಸುವದ [illegible] ಕುರಿ ಕೋಣಗಳನ್ನು ಕಡಿಸುವವರಿಗೆ ಅನುಕೂಲವಾಗಿ ೮ ಆಣೆ ೪ ಆಣೆಯ ದರದಲ್ಲಿ ಅವುಗಳನ್ನು ಭಂಡಾರ ಹಾಕಿಸಿ ಸಜೀವ ಬಿಟ್ಟು ಬಿಡಬೇಕೆಂತ ೮ ಆಣೆ ೨ ಆಣೆಯಾಗಿ ಯೂ ದರವಾರಿಯನ್ನು ನಿರ್ಣಯಿಸಿದ್ದಲ್ಲದೆ ಪ್ರತಿ ಜಾತ್ರೆಗೂ ಅದನ್ನು ಹಿಂಸೆಯು ಪೂರ್ಣವಾಗಿ ನಿಲ್ಲುವವರೆಗೆ ಹೆಚ್ಚಿಸುತ್ತ ಹೋಗುವದಾಗಿ ಆಶ್ವಾಸನವನ್ನಿತ್ತರು. ಈ ಮೊದಲು ಕಡಿಸುವ ಮತ್ತು ಸಜೀವ ಬಿಡುವ ದರ ವಾರಿಯಲ್ಲಿ ಏನೂ ಹೆಚ್ಚು ಕಡಿಮೆ ಇದ್ದಿಲ್ಲ. ಇದಲ್ಲದೆ ಊರೊಳಗಿನ ದೊಡ್ಡ ದೊಡ್ಡ ಮನೆತನಸ್ಥರು ಎಷ್ಟೋ ವರ್ಷಗಳಿಂದ ಕೋಣದ ಕೊಲೆಯನ್ನು ನೋಡುವದಕ್ಕಾಗಿ ತಮ್ಮ ಹೆಂಡರು ಮಕ್ಕಳೊಂದಿಗೆ ಕೂತುಕೊಳ್ಳಲು ಹಾಕಿಸುತ್ತ ಬಂದಿದ್ದ ಚಪ್ಪರಗಳೂ ಲೋಪವಾಗಲ್ಪಟ್ಟವು.

ದುಡ್ಡೇ ದೇವರಾಗಿರುವ ಈಗಿನ ಕಾಲದಲ್ಲಿ ಹಣದ ಆಶೆಗಾಗಿ ಮನುಷ್ಯನು ಎಂಥ ಹೀನ ಕೆಲಸವನ್ನಾದರೂ ಮಾಡಲು ಹಿಂಜರಿಯಲಿಕ್ಕಿಲ್ಲವೆಂತ ಹೇಳಲಿಕ್ಕೇನೂ ಅಡ್ಡಿಯಿಲ್ಲ. ಯಾಕಂದರೆ ಮೂಢ ಭಕ್ತಿಯುವರ ಮೂಕ ಪ್ರಾಣಿಗಳನ್ನು ಕಡಿಸಿಕೊಟ್ಟು ಅದರಿಂದ ಸಿಗಬಹುದಾದ ಲಾಭವನ್ನು ತಿಂದು ತೀರಬೇಕೆಂತ ದೊಡ್ಡ ದೊಡ್ಡ ನಾಮಧಾರೀ ಬ್ರಾಹ್ಮಣರೂ, ದೇವಭಕ್ತರೂ, ದೇಶಭಕ್ತರೂ ಹೋರಾಡುತ್ತಿರುವರು. ಹೀಗಾಗಿ ಹಿಂದಿನ ಜಾತ್ರೆಯಲ್ಲಿ ೧೧೫೧ ರೂಪಾಯಿಗಳಿಗಾದ ಕುರಿ-ಕೋಳಿಗಳ ಕೊಲೆಯ ಕಂತ್ರಾಟು ಈ ಸಾರಿ ರೂ ೧[illegible]ಕ್ಕೆ ಮುಟ್ಟಿತು. ಆದರೆ ದರವಾರಿಯು ಏರಿಕೆಯ ಮಾನದಿಂದ ಇದೇನು ಹೆಚ್ಚಾಗಲಿಲ್ಲ. ಇದಲ್ಲದೆ ಹೋದ ವರ್ಷ ಜಾತ್ರೆಯಾಗದ್ದರಿಂದ ೧ ವರ್ಷದ ಹರಕೆಗಳು ಹೆಚ್ಚುವದೂ ಸಹಜವೇ.

ಮೊದಮೊದಲು ನಮಗೆ ಅಹಿಂಸಾಪ್ರಸಾರದ ಕಾರ್ಯಕ್ಕೆ ಈ ಸಾರೆ ಸಾಕಷ್ಟು ಸ್ವಯಂಸೇವಕರು ಸಿಗುವ ಸಂಭವವು ಬಹಳ ಕಡಿಮೆ ಎನಿಸಹತ್ತಿತು. ಯಾಕಂದರೆ ಹಿಂದಿನ ಜಾತ್ರೆಯಲ್ಲಿ ಈಗ ನಾಮಶೇಷವಾಗಿರುವ ರಾಷ್ಟ್ರೀಯ ಶಾಲೆಯ ಶಿಕ್ಷಕರೂ ವಿದ್ಯಾರ್ಥಿಗಳೂ ಬಹಳೇ ಸಹಾಯ ಮಾಡಿದ್ದರು. ಆದರೆ ಕಾರ್ಯವನ್ನು ಕೈಕೊಂಡ ಕೂಡಲೇ ಕನ್ನಡ ಶಾಲೆಯ ಕೆಲವು ಶಿಕ್ಷಕರೂ [illegible] ಸದ್ಗೃಹಸ್ಥರೂ, ವಿದ್ಯಾರ್ಥಿಗಳೂ ಸ್ವಸಂತೋಷದಿಂದ ಸ್ವಯಂಸೇವಕರಾಗಿ ಮುಂದೆ ಬಂದರು. ದಾವಣಗೆರೆಯ "ಪ್ರಾಣಿದಯಾ ಜ್ಞಾನಪ್ರಸಾರಕ ಸಂಘ"ದ ಪ್ರಚಾರಕರೂ ಬಂದಿದ್ದರು. ಇದಲ್ಲದೆ ಕುಮಟೆಯ "ಸ್ಟಾರ ಆಫ್ ಕೆನರಾ" ಪ್ರೆಸ್ಸಿನ ಮಾಲಕರು ೧೦೦೦ ಹಸ್ತಪತ್ರಿಕೆಗಳನ್ನು ಉತ್ತಮವಾಗಿ ತಯಾರಿಸಿ ತಕ್ಕ ಸಮಯಕ್ಕೆ ಮುಟ್ಟಿಸಿದ್ದಲ್ಲದೆ, ಅವುಗಳಿಗಾಗಿ ಯಾವ ವಿಧದ ಚಾರ್ಜು ಮಾಡುವದಿಲ್ಲವೆಂತ ತಿಳಿಸಿ ತಮ್ಮ ಔದಾರ್ಯವನ್ನು ವ್ಯಕ್ತಗೊಳಿಸಿದರು.

ಇಷ್ಟಾದಮೇಲೆ ಕುರಿ-ಕೋಳಿಗಳನ್ನು ಕಡಿಸಿದವರಿಗೆ ಯಮಲೋಕದಲ್ಲಾಗುವ ಭಯಂಕರ ಶಿಕ್ಷೆಯನ್ನು ತೋರಿಸುವ ದೊಡ್ಡ ದೊಡ್ಡ ಚಿತ್ರಗಳನ್ನು ತೆಗೆದು ಅವುಗಳನ್ನು [illegible] ಹಲಿಗೆಯ ಮೇಲೆ ಊರಲ್ಲೆಲ್ಲ ಮೆರಸಿದವು. ಹಸ್ತಪತ್ರಿಕೆಗಳು ಹಂಚಲ್ಪಟ್ಟವಲ್ಲದೆ ಮುಖ್ಯ ಮುಖ್ಯ ಸ್ಥಳಗಳಲ್ಲಿಯೂ ಅಂಟಿಸಲ್ಪಟ್ಟವು. ಮತ್ತು ಕುರಿಗಳನ್ನು ಕೊಲ್ಲಲು ಒಯ್ಯುವ ದಾರಿಯಮೇಲೆ ನಿಂತು [illegible] ಉಪದೇಶಮಾಡಿ ಅವರ ಮನವೊಲಿಸಲು [illegible].

ಇದರ ಪರಿಣಾಮದಿಂದ ಈ ಸಾರೆ ಬಹು ಪ್ರಾಣಿಗಳ ಕೊಲೆಯು [illegible] ಜನರು ಬೆಳ್ಳಿ ಬಂಗಾರದ ತಗಡಿನಮೇಲೆ ಹರಕೆಯ ಪ್ರಾಣಿಗಳ ಚಿತ್ರಗಳನ್ನು ತೆಗೆದು ಅವುಗಳನ್ನು ದೇವರಿಗೆ ಅರ್ಪಿಸಿದರೆ, ಎಷ್ಟೋ ಜನರು ಯಥಾಶಕ್ತಿ ಕಾಣಿಕೆಯನ್ನೇ ಹಾಕಿ ನಡೆದರು. ಮತ್ತು ಬಹಳೇ ಜನರು [illegible] ಕಡಿಮೆ [illegible] ಸಿಗುವದೆಂತ ಪ್ರಾಣಿಗಳನ್ನು ಕಡಿಸುವದರ ಬದಲಾಗಿ ಭಂಡಾರವನ್ನು ಹಾಕಿಸಿಕೊಂಡು ಹೋದರು. ಇನ್ನು ಸ್ವಯಂಸೇವಕರು ಜನಸಮುದಾಯದಲ್ಲಿ ಶ್ರೀ ಮಾರೆಮ್ಮನ ಎದುರಿಗೆ ನಿಂತು ಮಾಡುವ ಪ್ರಾರ್ಥನೆಯ ವಿಷಯವು ಬಹಳೇ ಮನೋರಂಜಕವಾಗಿತ್ತು. ಯಾಕಂದರೆ ಕುರಿಗಳನ್ನು ಕೊಲ್ಲಲು ಹೋಗುತ್ತಿದ್ದವರಲ್ಲಿ ಹಲವರು ನಮ್ಮ ಹೇಳಿಕೆಯನ್ನು ಕೇಳಿ ಸಮಾಧಾನಪಟ್ಟು ಹಿಂತಿರುಗಿ ಯಥಾಶಕ್ತಿ ಕಾಣಿಕೆಯನ್ನು ಹಾಕಿ ನಡೆಯುತ್ತಿದ್ದರು. ಆದರೆ ಒಳ್ಳೆಯ [illegible] ಭಕ್ತರು "ನಿಮ್ಮ ಹೇಳೋದು ಖರೆ. ಆದರೆ ದೇವರಿಗೆ [illegible]"? ಎಂತ ಕೇಳಲು, ಅಂಥ ಒಬ್ಬೊಬ್ಬರನ್ನು ಒಬ್ಬೊಬ್ಬ ಸ್ವಯಂಸೇವಕನು ಕರಕೊಂಡು ಚಪ್ಪರಕ್ಕೆ ಹೋಗಿ ಶ್ರೀ ದೇವಿಯ ಎದುರಿಗೆ ನಿಂತು ಕೈಯಲ್ಲಿ ಭಂಡಾರ ಹಿಡಿದು ಜನಸಮುದಾಯದಲ್ಲಿ ಗಟ್ಟಿಯಾಗಿ "ಮಹಾತಾಯೀ, ಈ ನಿನ್ನ ಭಕ್ತನಾದ (ಗೌಡನು ಅಥವಾ ಶೆಟ್ಟಿಗಾರನು) ನಿನ್ನ ಎದುರಿಗೆ ನಿನ್ನ ಮಕ್ಕಳಾದ ಕುರಿ-ಕೋಳಿಗಳನ್ನು ಕಡಿಸಿ ಪುಣ್ಯ ಪಡೆಯಬೇಕೆಂತ ಹೊರಟಿದ್ದನು. ಆದರೆ ನಾನು ಅದಕ್ಕೆ ಆತಂಕವಾಗಿ ಅವನಿಂದ ನಗದಿ ಕಾಣಿಕೆಯನ್ನೇ ಹಾಕಿಸುತ್ತೇನೆ. ಮತ್ತು ಕಡಿಸಿದರೆ ಪುಣ್ಯವೂ ಬಿಡಿಸಿದರೆ ಪಾಪವೂ ಇರುವಂತಿದ್ದರೆ ಆ ದೋಷಕ್ಕೆ ನಾನೇ ಪಾತ್ರನು. ಅವರನ್ನು ನೀನು ಕಾಪಾಡು" ಎಂತ ಪ್ರಾರ್ಥಿಸುತ್ತಿದ್ದನು. ಇದನ್ನು ಕೇಳಿ ಪಕ್ಕದ ಕೆಲವರು "ನಮ್ಮ ಪಾಲಿಂದಲೂ ಹೇಳಿಕೊಂಡು ಬಿಡು, ನಮ್ಮ ಕಾಣಿಕೆಯನ್ನೇ ಹಾಕುತ್ತೇವೆ" ಎಂದು ಸ್ವಯಂಸೇವಕರ ಪ್ರಾರ್ಥನೆಗೆ [illegible] ಹಾಕಿ ಕಾಣಿಕೆ ಹಾಕಿ ಹೋಗುತ್ತಿದ್ದರು. ಎಷ್ಟೋ ಜನರು ಹುಡುಕುತ್ತ ಬಂದು ನಮ್ಮನ್ನು ಪ್ರಾರ್ಥನೆಗಾಗಿ [illegible] ಕೊಂಡು ಹೋಗುತ್ತಿದ್ದರು. ಇದನ್ನೆಲ್ಲ ಕಂಡು [illegible] ಜನರು ವಿಸ್ಮಿತರಾಗುವದು ಸಹಜವೇ.

ಈ ರೀತಿಯಲ್ಲಿ ೨ ವರ್ಷದ ನಂತರವಾದ [illegible] ಜಾತ್ರೆಯು ಅರ್ಧದಷ್ಟು ಪ್ರಾಣಿವಧೆಯು ೩ ವರ್ಷದ ನಂತರ ಈ ಜಾತ್ರೆಯಲ್ಲಿ ಆಯಿತೆಂತ ಹೇಳಲಿಕ್ಕೇನೂ ಅಡ್ಡಿ ಇಲ್ಲ. ಆದರೆ ಇದು ಕೇವಲ ಕಾಲ್ಪನಿಕ ಲೆಕ್ಕವಾಗಿರಬಹುದೆಂತ ಯಾರೂ ಊಹಿಸಬಾರದು. ಯಾಕಂದರೆ ಅದು ಸ್ವಕಪೋಲಕಲ್ಪಿತವಾಗಿರದೆ, ಅದಕ್ಕೆ ಸಂಬಂಧಪಟ್ಟವರಿಂದ ತಾಜೇ ಮಾಹಿತಿಯನ್ನು ಪಡೆದು ತಯಾರಿಸಿದ್ದಾಗಿದೆ. ಅದೇನಂದರೆ (೧) ಪ್ರತಿ ಜಾತ್ರೆಯಲ್ಲಿ ಒಬ್ಬರು [illegible] ಕಡಿಸಿದ ಕುರಿಗಳ ಚರ್ಮಗಳನ್ನು ಒಂದೂ ಬಿಡದಂತೆ ಕೊಂಡು ಅವುಗಳನ್ನು [illegible] ಕಂಪನಿಗೆ ಮಾರುತ್ತಿರುವರು. ಅದರಂತೆ ಅವರು ಹೋದ ಜಾತ್ರೆಯಲ್ಲಿ ೩೧೬೨ ಚರ್ಮಗಳನ್ನು ಒಟ್ಟುಗೂಡಿಸಿ ರಾಣೀಬೆನ್ನೂರ [illegible] ಕಂಪನಿಗೆ ಮಾರಿದ್ದರು. ಆದರೆ ಈ ಜಾತ್ರೆಯಲ್ಲಿ ಒರೇ ೧೫೮೦ ಚರ್ಮಗಳು ಒಟ್ಟುಗೂಡಿದ್ದು ಅವುಗಳನ್ನು ಅವರು ಹಾವೇರಿಯ ಅಬ್ದುಲ ಕರೀಮ ಇವರ ಕಂಪನಿಗೆ ಮಾರಿದ್ದು "ಏ ಜತ್ರೇಕ ಬಹೋತ್ ಕಮ್ ಹುವಾ" ಎಂಬ ಉದ್ಗಾರವನ್ನಾದರೂ ತೆಗೆಯುವರು. (೨) ಮುನಿಸಿಪಾಲಿಟಿಯವರ ಲೆಕ್ಕದ ಮೇಲಿಂದಲೂ, ಕುರಿ ವ್ಯಾಪಾರಿಗಳ ಲೆಕ್ಕದಮೇಲಿಂದಲೂ, ಹಿಂದಿನ ಜಾತ್ರೆಯಲ್ಲಿ ಬಂದ ಕುರಿಗಳ ಸಂಖ್ಯೆ ೪೦೦೦ ಆಗಿದ್ದು ಅದರಲ್ಲಿ ೩೫೦೦ ಖರ್ಚಾಗಿದ್ದವು. ಈ ಜಾತ್ರೆಯಲ್ಲಿ ಒರೇ ೨೮೧೦ ಕುರಿಗಳು ಬಂದು ೨೫೦೦ ಖರ್ಚಾದವು. ಮತ್ತು ಕುರುಬರಿಂದಲೂ ಹೋದ ಜಾತ್ರೆಯಲ್ಲಿ ಬ್ರಾಹ್ಮಣ ಗಿರಾಕಿಗಳು ೧೦ ಇದ್ದರೆ, ಈ ಸಾರೆ ೧ ಎಂತಲೂ ಹೀಗೆಯೇ ಕಡಿಮೆಯಾಗುತ್ತ ಹೋಗುವದೆಂತಲೂ ಚಿಂತಿಸಹತ್ತಿದರು. (೩) ಇನ್ನು ದರವಾರಿಯನ್ನು ಏರಿಸಿದ್ದರಿಂದ ಮೂಲಕ ಕಡಿಸಿದ ಸಂಖ್ಯೆಯು ಕಡಿಮೆಯಾದರೂ ಅದರಿಂದ ಕೂಡಿದ ರಕಮು ಸ್ವಲ್ಪ ಹೆಚ್ಚು ಕಡಿಮೆ ರೂ ೧೫೦೦ ಆಗಿರುತ್ತದೆ. ಅದರಲ್ಲಿ ಕುರಿ ೧ ಕ್ಕೆ ೮ ಆಣೆಯಂತೆ ಕಡಿಸಿದ ೧೬೦೦ ಕುರಿಗಳ ಬಾಬ್ತು ರೂ ೮೦೦, ಕುರಿ ೧ ಕ್ಕೆ ೨ ಆಣೆ ೪ ರಂತೆ ಭಂಡಾರ ಹಾಕಿಸಿಕೊಂಡು ಸಜೀವ ಬಿಟ್ಟ ಕುರಿ [illegible] ಬಾಬ್ತು ರೂ ೨೦೦, ಕೋಳಿ ೧ ಕ್ಕೆ ೪ ಆಣೆಯಂತೆ ಕಡಿಸಿದ ೩೨೦೦ ಕೋಳಿಗಳ ಬಾಬ್ತು ರೂ ೮೦೦ ಹೀಗೆ ಸಮಾವೇಶವಾಗಿರುವದು. ಮತ್ತು ಈ ಕಸಾಯಿ [illegible] ಕಂಟ್ರ್ಯಾಕ್ಟರನಿಗೆ ಖರ್ಚು ಹೋಗಿ ಸುಮಾರು ೩೦೦ ರೂ ಫಾಯದೆಯಾಗಿರುತ್ತದೆ. (೪) ಇದಲ್ಲದೆ ಹೋದ ಜಾತ್ರೆಯ ಉತ್ಪನ್ನವು ೧೨ ಸಾವಿರ ರೂ ಇದ್ದದ್ದು ಈ ಸಾರೆ ೧೮ ಸಾವಿರಕ್ಕೆ ಮುಟ್ಟಿದ್ದರ ಮೇಲಿಂದಾದರೂ ಕುರಿ-ಕೋಳಿಗಳ ಬದಲಾಗಿ ನಗದಿ ಕಾಣಿಕೆಯು ಎಷ್ಟು ಬಿದ್ದಿರಬೇಕೆಂಬ ಕಲ್ಪನೆಯು ಸಹಜವಾಗಿ [illegible]ವಂತದೆ.

ಇನ್ನು ಇದರ ಶ್ರೇಯಸ್ಸು ಮೊಕ್ತೇಸರರಿಗೂ ವಿಶೇಷವಾಗಿ [illegible] ವರಿಗೂ ಸ್ವಯಂಸೇವಕರಿಗೂ, ದಾವಣಗೇರಿಯ ಪ್ರಾಣಿದಯಾ ಜ್ಞಾನಪ್ರಸಾರಕ ಸಂಘದ ಚಾಲಕರಿಗೂ, ಕುಮಟೆಯ "ಸ್ಟಾರ ಆಫ್ ಕೆನರಾ" ಪ್ರೆಸ್ಸಿನ ಮಾಲಕರಿಗೂ ಸಲ್ಲತಕ್ಕದ್ದು ಉಚಿತವಾಗಿದೆ. ಆದ್ದರಿಂದ ಈ ಎಲ್ಲ ಮಹನೀಯರ ಮತ್ತು ಈ ಕಾರ್ಯಕ್ಕೆ ಪ್ರತ್ಯಕ್ಷಾಪ್ರತ್ಯಕ್ಷ ರೀತಿಯಿಂದ ನೆರವಾದ ಇತರರ ಆಭಾರವನ್ನು ಮನ್ನಿಸುವದಲ್ಲದೆ, [illegible] ಲೋಪವಾಗಿ ಜಾತ್ರೆಯು ಶಾಂತ [illegible] ನಡೆಯುವ ಸುದಿನವನ್ನು ಬೇಗನೆ ದಯಪಾಲಿಸುವಂತೆ ಶ್ರೀ ದೇವಿಯನ್ನು ಪ್ರಾರ್ಥಿಸಿ ಈ ಲೇಖವನ್ನು ಮುಗಿಸುತ್ತೇನೆ.

ಸಾಣಿಕಟ್ಟೆಯೊಳಗಿನ ಕಾರಸ್ಥಾನ.

(ಚಿತ್ರಗುಪ್ತರಿಂದ)

ಸಾಣಿಕಟ್ಟೆಯೊಳಗಿನ ಉಪ್ಪಿನ ಸಾವ್ಕಾರರಲ್ಲಿ ಯಾದವಿ ಪ್ರಾರಂಭ ಕಲಹವಿದ್ದಿದೆ ಈ ವರುಷ ಸಾವ್ಕಾರರು ಒಂದು ಚೋದ್ಯ ಮಾಡಿರುವರು ಈ ವರೆಗೆ ಅಲ್ಲಿ ಉಪ್ಪು ಬೆಳಸುವ ಪ್ರಕಾರವು ತ್ಯಾಗಿತ್ತೆಂದು ಹೇಳಿದ ಹಾಗಾಯಿತು, ಈ ಯಾದವಿಯ ಸ್ವರೂಪವು ನಿಮ್ಮ ವಾಚಕರಿಗೆ ತೋರುವುದು. ಅಲ್ಲಿ ಉಪ್ಪಿನ ಅಗರುಗಳಲ್ಲಿ ಉಪ್ಪು ಬೆಳಸುವ ಹಂಗಾಮು ಜೋ ತಿಂಗಳು ಒಂದೇ ಒಂದು ತಿಂಗಳ. ಈ ಮುಂಚೆ ೩-೪ ತಿಂಗಳುಗಳ ವರೆಗೆ ಅಗರುಗಳಲ್ಲಿ ಸಾಗುವಳಿ ಮಾಡಬೇಕಾಗುತ್ತದೆ ಸಾಗವಳಿ ಮಾಡುವದೆಂದರೆ ಅಗರುಗಳಲ್ಲಿ ಬಿದ್ದಿರುವ ಕಸಕಡ್ಡಿ ಬೆಳೆದಿರುವ ಗಿಡಗಂಟಿ ಮುಂತಾದವುಗಳನ್ನೆಲ್ಲ ತೆಗೆದು ಚೊಕ್ಕವಾಗಿ ಅವನ್ನು ಉಪ್ಪಿನ ಬೆಳವಣಿಗೆಗೆ ತಯಾರು ಮಾಡಬೇಕು. ೧ ವರ್ಷ ಬಿಟ್ಟರೆ ಮುಂದೆ ಈ ಕೆಲಸಕ್ಕೆ ವಿಶೇಷ ಖರ್ಚು ತಗಲುತ್ತದೆ, ಉಪ್ಪು ಚೆನ್ನಾಗಿ ಬೆಳಯುವದಿಲ್ಲ

ಈ ವರೆಗೆ ಅಗರುಗಳ ಆಯಾ ಮಾಲೀಕರು ಉಪ್ಪನ್ನು ತಾವೇ ಬೆಳಸುತ್ತಿದ್ದರು ಬೆಳಸಿದಂಥ ಉಪ್ಪನ್ನು ಸಂಘದ ಕಾರಭಾರಿ ಮಂಡಳದ ಸ್ವಾಧೀನಪಡಿಸುತ್ತಿದ್ದರು ಸಂಘವು ತನ್ನ ಮರ್ಜಿಯಂತೆ ಬೇಕಾದರೆ ಉಪ್ಪನ್ನು ಬೇಕಾದಷ್ಟು ದರದಿಂದ ಬೇಕಾದವರಿಗೆ ಮಾರುತ್ತಿತ್ತು ಮತ್ತು ಸಾಣಿಕಟ್ಟೆಯ ಪಗಾರ ಖರ್ಚು, ಆಫೀಸಿನ ಖರ್ಚು, ಕಾರಭಾರಿ ಮಂಡಳದ ಇತರೇ ಖರ್ಚು ಮುಂತಾದ ಎಲ್ಲ ಖರ್ಚನ್ನು ತೆಗೆದು ಮಾಲೀಕರಿಗೆ ಹಂಚುತ್ತಿತ್ತು. ಆದರೆ ಗಾಸಿಗೆ ಒಂದಕ್ಕೆ ೧೨೦ ರ ದರ ಸಿಕ್ಕಿದರೂ ಸಂಘದ ಆಫೀಸಿನ ಖರ್ಚು ಅನೆಯ ಖರ್ಚಿನಿಂದ ಮಾಲೀಕರಿಗೆ, ಅಂದರೆ, ಸಂಘದ ಆಡಳಿತದಲ್ಲಿ ಸಂಬಂಧವಿಲ್ಲದವರಿಗೆ ಗಾಸಿಗೆ ೫೦-೬೦ ರ ದರ ಸಿಗುತ್ತಿತ್ತು ಗುಸಿಗಾ ವ್ಯಾಪಾರದ ದರ ನೋಡಿದರೆ, ಈ ದರ ತೀರ ಕಡಿಮೆ ಗಾಸಿಗೆ ಒಕ್ಕೆ ಹುಟ್ಟುವಳಿಯ ಖರ್ಚು ೧೫-೨೦ ರೂಪಾಯಿ ಈ ಮಾನದಿಂದ ಮುನಾಫೆಯು ತೀರಾ

ಒಹೋ! ಮಾಲೀಕರೊಳಗಿನ ಯಾದವಿಯ ಕಥೆಯನ್ನು ಹೇಳಮರೆತೆ ಹೇಳುತ್ತೇನೆ ಕೇಳಿರಿ ಈ ವರುಷ ಉಪ್ಪಿನ ಸಂಘದ ಕಾರಭಾರಿ ಮಂಡಳವು ಒಂದು ಠರಾವು ಮಾಡಿದೆ ಅದೇನಂದರೆ —

ಈ ವರುಷ ಮಾಲೀಕರು ಅಗರುಗಳನ್ನು ವ್ಯಕ್ತಿಶಃ ಸಾಗುವಳಿ ಮಾಡಬಾರದು ಉಪ್ಪನ್ನು ಬೆಳೆಸಬಾರದು ಎಲ್ಲ ಅಗರುಗಳನ್ನು ಸಂಘಕ್ಕೆ ವಹಿಸಬೇಕು ಸಂಘದವರು ೩೦೦ ಚಿಟ್ಟಿ ಅಗರುಗಳನ್ನು ತಮ್ಮ ಮರ್ಜಿಯಂತೆ ಹಕ್ಕಿ ತಗದು ಸಾಗುವಳಿ ಮಾಡುವರು" ಕೆಲವರು ವಿರೋಧಿಸಿದರಂತೆ! ಆದರೂ ಬಹುಮತದಿಂದ ಠರಾವು ಪಾಸಾಗಿದೆ ೩೦೦ ಚಿಟ್ಟಿ-ಅಗರುಗಳಲ್ಲಿ ತಯಾರಾದ ಉಪ್ಪನ್ನು ಸಂಘವು ಎಲ್ಲ ಮಾಲೀಕರಿಗೆ ಅವರವರ ಚಿಟ್ಟಿಗಳಂತೆ ಅವರವರಿಗೆ ಹಂಚುವದಂತೆ ೩೦೦ ಚಿಟ್ಟಿ ಹಕ್ಕಿತಗೆದ ಅಗರುಗಳನ್ನು ೧೦೦ಕ್ಕೆ ೯೦ ರಷ್ಟು ಕಾರಭಾರಿ ಮಂಡಳದ ಸಭಾಸದರ ಮಾಲ್ಕಿಯ ವಂತೆ ಇದರಿಂದ ಕಾರಭಾರಿ ಮಂಡಳದ ಅನುಗ್ರಹಕ್ಕೆ ಅಪಾತ್ರವಾದ ಅಗರುಗಳ ಮಾಲೀಕರು ರೇಗಿಗೆದ್ದಿರುವರು ಹೀಗೆ ಬಂಜರು ಹಾಕಿದ್ದಲ್ಲಿ ಮುಂದೆ ಉಪ್ಪಾಗಬೇಕೆಂ ಮು ಅವರ ಹೇಳಿಕೆ ಆದರೆ ಸಂಘದ ಬಲದ ಮುಂದೆ ಅವರ ಆಟ ನಡೆಯದು ಆದರೂ ಒಬ್ಬ ಮಾಲೀಕರು ಧೈರ್ಯಮಾಡಿ ಈ ಠರಾವು ತಮಗೆ ಮಾನ್ಯವಿಲ್ಲೆಂದು ಹೇಳಿ ತಮ್ಮ ಅಗರುಗಳನ್ನು ಸಾಗವಳಿ ಮಾಡಹತ್ತಿರುವರು ಅವರಿಗೆ ಸಾಲ್ಯಾ ಕಡೆಯಿಂದ ಉಪ್ಪಾಗುವದೇ ಮು ಬಲ್ಲವರ ಹೇಳಿಕೆ ಅಗರುಗಳು ಬಂಜರು ಬಿದ್ದರೆ ಉಪ್ಪು ವಳಿ ಮಾಡಲು ಬೇರೆ ಖರ್ಚು ತಗಲುತ್ತದೆ. ಈ ಖರ್ಚಿಗೆ ಹೊಣೆಗಾರರ್ಯಾರು ?

ದಂಗೆಯ ಸ್ವಸ್ತ್ರಿದ ಮಾಲೀಕರಿಗೆ ಸಂಘದವರು ಯಾವ ದರದ ಕಡೆಯಿಂದ ಪಡಿಸುತ್ತಾರೆಂದು ಈ ಮುಂದೆ ಯಥಾವಕಾಶ ಹೇಳುವೆನು ಸದ್ಯಕ್ಕಂತು ಸಂಶಯ ಬಂದಿದೆ. ಅದೇನಂದರೆ, ಈ ಬೊಂಬಡಿಯನ್ನೆಬ್ಬಿಸಿದ ಈ ಮಾಲೀಕರು ಬೆಳಸಿದ ಉಪ್ಪನ್ನು ಮಾರುವದು ಸಂಘವು ಈ ಉಪ್ಪನ್ನು ಅವರ ವಶಿಡಾಟ ವ್ಯಾಪಾರ ಕೆಲವರಿಗೆ ಈ ಮಾಲೀಕರು ಉಪ್ಪು ಬೆಳಸಿ ಫಲವೇನು? ಎಂದು ಅನೇಕರ ಪ್ರಶ್ನೆ ಅಂತು ಸಂಘವು ಉಪ್ಪಿನ ಬೆಳೆಯನ್ನು, ವ್ಯಾಪಾರವನ್ನು ಸ್ವತಃ ಮಾಡಿಕೊಂಡು ಏಕ್ಕೆಯಾಗುತ್ತಿದೆ ಸಂಘದ ಅಂತಃ ಸ್ವರೂಪವಿದು ಇದನ್ನಿಷ್ಟು ನಿಮಗೆ ಹೇಳಿಬಿಟ್ಟು ಮುಂದ ಉತ್ತರ ಕಥೆಯನ್ನು ಯಥಾವಕಾಶ ಬರೆಯುವೆನು

ವಿವಿಧ ಸಂಗ್ರಹ.

ಕೇರವಳಿಯೊಳಗಿನ
ಪೋರ್ತುಗೀಜರ ಕಷ್ಟಗಳು

ದಮನ ಪ್ರಾಂತದಲ್ಲಿ [illegible] ಎಂಬ ಸಣ್ಣ ಸಂಸ್ಥಾನವಿದೆ ಇದರ ಒಡೆಯರು ಯಾದವ ವಂಶದರು [illegible] ದೆ ಆಡಳಿತ ಮಾಡುವ [illegible] ಅನುಕೂಲವಾಗಬೇಕೆಂದು [illegible] ವರು, ಕಾಡು ಈಗ ದೇಶದ ಸ್ವಾತಂತ್ರ್ಯ [illegible] ಬಂದ. ಮುಟ್ಟಿದ [illegible] ಗಳು [illegible] ಭಯ [illegible] ಕೊಡುತ್ತದೆ, ಕಾಡು ಹಂದಿಗಳು ಬೆಳೆಯನ್ನು ಹಾಳುಗೆಡಹುತ್ತವೆ ಕಾಡು ಹಂದಿಗಳಿಗೆ [illegible] ಕಾಯಿದೆಗಳಾಗಿ ಈಗ ೫ ವರ್ಷ [illegible] ಈ ಹುದ್ದಿ ಹಂದಿಗಳಿಗೆ ತಿಳಿದೋ ಏನೋ, ಇವೀಗ ಮತ್ತು ದಿಟ್ಟತನದಿಂದ ಹೊಲಗಳನ್ನು ಸೇರುತ್ತಿವೆ ಬೇಸಾಯಗಾರರ ದೈನ್ಯ ಹೇಳಲಾರದೆ, ಅಲ್ಲಿಯ ಮಾಜಿ ದಿವಾಣರ ಪರ ಪುತ್ರರಾದ ಕುನವಾರ ವಸನಸಿಂಗ ದವರು ಕಾಡು ಹಂದಿಯನ್ನು ಕಾಯಿದೆ ಉಲ್ಲಂಘಿಸಿ ಕೊಂದ [illegible], ಮತ್ತು ಈ ಕಾಯಿದೆಯನ್ನು ರದ್ದುಪಡಿಸಬೇಕೆಂದು ಉಪೋಷಣ ವ್ರತವನ್ನು ಕೈಕೊಂಡಿದ್ದರು ಸರಕಾರದ [illegible] ದೊರಕಿ ಅವರು ಉಪೋಷಣ ವ್ರತವನ್ನು ಅಷ್ಟಕ್ಕೇ ನಿಲ್ಲಿಸಿದರು ಆದರೆ ಈ ಕಾಯಿದೆಯಿಂದ ಕಳೆದ ತಿಂಗಳಲ್ಲಿ ೩೨ ಮಂದಿ ಬೇಸಾಯಗಾರರಿಗೆ ಕಠಿಣ ಶಿಕ್ಷೆಗಳನ್ನು ವಿಧಿಸಿದರು ಈ ಆರೋಪಿಗಳು ಒಂದು ಕಾಡು ಹಂದಿಯನ್ನು ಕೊಂದರು ಅವರಲ್ಲಿ ಒಬ್ಬರಿಗೆ ೮೦೦ ರೂಪಾಯಿ ದಂಡ, ಒಬ್ಬರಿಗೆ ೪೦೦ ರೂಪಾಯಿಯಂತೆ ದಂಡ, ೧೮ ಮಂದಿಗಳಿಗೆ ೩೦ ರೂಪಾಯಿಯಂತೆ, ಉಳಿದ ಒಬ್ಬರಿಗೆ ೧೦ ರೂಪಾಯಿ ದಂಡ, ಹೀಗೆ ಒಟ್ಟು ರೂಪಾಯಿ [illegible] ದಂಡ ಇದಲ್ಲದೆ ೩ ವರ್ಷಗಳಿಂದ ೬ ತಿಂಗಳುಗಳ ವರೆಗೆ ಕಾರಾಗೃಹವಾಸವು ಬೇಸಾಯಗಾರರಿಗೆ ಪ್ರಾಪ್ತವಾಗಿದೆ. ಅಪೀಲು ಮಾಡಲಿಕ್ಕೆ ಸಹ ಅವಕಾಶವಿಲ್ಲ ಯಾಕಂದರೆ ಈ ಖಟ್ಲೆಯನ್ನು ಸ್ವತಃ ಕುಮಾರಸಾಹೇಬರೇ ವಿಚಾರ ಮಾಡಿದ್ದು ಮೆಜಿಸ್ಟ್ರೇಟರು ವಿಚಾರ ಮಾಡಿದ್ದರೆ ಮಹಾರಾಜರಲ್ಲಿ ಅಪೀಲು ಮಾಡಬಹುದಿತ್ತು. ಅರಸನೇ ಪ್ರಜೆಗಳಿಗೆ ಹುಲಿಯಾಗಿದ್ದರೆ ಪ್ರಜೆಗಳು ಎಲ್ಲಿ ಶರಣು ಹೋಗುವದು? ಕಾಡು ಹಂದಿಯ ಪ್ರತಿಷ್ಠೆ ನೋಡಿರಿ, ಪ್ರಾಣಿಶ್ರೇಷ್ಠನಾದ ಮಾನವನ ಅವನತಿ ನೋಡಿರಿ! ನಮ್ಮ ಕಾನಡಾ ಜಿಲ್ಲೆಯ ಬಾಂಧವರಿಗೆ ಈ ಕಥೆಯಿಂದ ತಮ್ಮ ದುಃಖಗಳ ನೆನಪಾಗುವದು ಸಹಜವಿದೆ

⁂

ಎಂಥ ಹೊಟ್ಟೆಯ ಗೋಳಿದು !

ಕಲ್ಕತ್ತಾನಗರ ಪಟ್ಟಣದ ನೆರೆಹೊರೆಯಲ್ಲಿ ಕಕ್ಕಡ ಎಂಬದೊಂದು ಗ್ರಾಮವಿದೆ. ಅಲ್ಲಿ ಸ್ವಲ್ಪ ದಿವಸಗಳ ಹಿಂದೆ ಅತ್ಯಂತ ಭಯಂಕರ ಹಾಗು ಹೃದಯದ್ರಾವಕ ಘಟನೆಯು ಸಂಭವಿಸಿತು ಕಕ್ಕಡದಲ್ಲಿ ಒಂದು ಮನೆಯಿದೆ ಅಲ್ಲಿ ಮೂವರಿದ್ದರು ಒಬ್ಬಳು ಮುದುಕಿ ತಾಯಿ ಅವಳಿಗೊಬ್ಬ ಮಗನಿದ್ದನು. ಒಂದು ಸೊಸೆ ಮಗನಿಗೆ ಒಂದು ಚಿಕ್ಕ ಮಗುವು ಜನಿಸಿತ್ತು ಎಲ್ಲರೂ ಸಾಲಿಕೇರ ಜಾತಿಯವರು. ಮಗನು ದುಡಿದು ಹೆಂಡರು ಮಕ್ಕಳ ಹಾಗು ತಾಯಿಯ ಪೋಷಣೆ ಮಾಡುತ್ತಿದ್ದನು ದೈವಗತಿ, ಮಗನು ತೀರಿಕೊಂಡನು ಮನೆಯ ಸಂಸಾರವು ಅವನೊಡನೆ ಸಮಾಪ್ತವಾಯಿತು. ಹೆಂಡರು-ಮಕ್ಕಳು, ಮುದುಕಿ ತಾಯಿ, ಎಲ್ಲರೂ ಅನಾಥರಾದರು ಹೊಸತಾಗಿಯೇ ಏರಿದ ೨೩ ವರ್ಷ ಪ್ರಾಯದವಳು. ಊರೊಳಗೆ ಭಿಕ್ಷೆ ಬೇಡಿ ಕಾಲಹರಣಮಾಡುತ್ತಿದ್ದರು ಭಿಕ್ಷೆಯಾದರೂ ಆಗಿನ ಕಾಲದಲ್ಲಿ ಸಿಗುವದು ಕಠಿಣವಲ್ಲವೇ! ಸಿಕ್ಕಿದ ಬಿಕ್ಷೆಯಿಂದ ಅವರು ಹ್ಯಾಗಾದರೂ ಕಾಲಹರಣ ಮಾಡಿದರು ಒಂದಾನೊಂದು ದಿನ ಮುದುಕಿಯು ಸಾಯಂಕಾಲಕ್ಕೆ ಕಲ್ಕತ್ತಾನಗರಿಗೆ ಹೋದಳು ಪುಣ್ಯಾತ್ಮರೊಬ್ಬರು ಮುದುಕಿಗೆ ಅನ್ನ ಹಾಕುವ ವಚನ ಕೊಟ್ಟಿದ್ದರಂತೆ! ಮುದುಕಿಯು ಮಾರನೇದಿನ ಮುಂಜಾವಿಗೆ ತನ್ನಮನೆಗೆ ಬಂದಳು. ಮಗುವನ್ನು ಮುದ್ದಿಡಲು ಹುಡುಕಿದಳು ಎಲ್ಲಿಯೂ ಕಾಣಲಿಲ್ಲ ಮಗುವಿಗೆ ಕರೆದಳು. ಆದರೂ ಎಲ್ಲಿಯೂ ಕಾಣಲಿಲ್ಲ ಮಗುವೆಲ್ಲಿ ಹೋಯಿತೆಂದು ಸೊಸೆಗೆ ಕೇಳಿದಳು "ನರಿಯು ನಿನ್ನೆ ರಾತ್ರಿ ಎತ್ತಿಕೊಂಡು ನಡೆಯಿತು" ಎಂದು ಸೊಸೆಯು ಉದ್ಗರಿಸಿ, ಪಾಪಾವಳು ಮುದುಕಿಗೆ ಮನಸ್ಸಿನಲ್ಲಿ ಸಮಾಧಾನವಾಗಲಿಲ್ಲ. ಒಳಗೆಹೋಗಿ ಶೋಧಿಸಿದಳು ಅಲ್ಲಿ ಅವಳೇನು ನೋಡಿದಳು. ಮಗುವಿನ ಕಾಲುಗಳೆರಡು ಕಾವಲಿಗೆಯಲ್ಲಿ ಹುರಿದು ಬಿದ್ದಿದ್ದವು. ಉಳಿದ ಅವಯವಗಳಲ್ಲಿ ಒಲೆಯ ಬಿದಿಗೆ ಸುಟ್ಟು ಬಿದ್ದಿದ್ದವು. ಕೂಡಲೆ ಪೋಲೀಸರಿಗೆ ವರದಿ ಸಿಕ್ಕಿತು. ಪೋಲೀಸರು ಸೊಸೆಯನ್ನು ಸೆರೆ ಹಿಡಿದರು ಸೊಸೆಯು ವಿಚಾರಣೆಯಲ್ಲಿ ಹೇಳಿದ್ದೇನಂದರೆ — "ಬಹು ದಿವಸಗಳಿಂದ ನನಗೆ ಹೊಟ್ಟೆಗಿದ್ದಿಲ್ಲ; ಹೊಟ್ಟೆಯ ಗೋಳು ತಡೆಯಲಿಕ್ಕಾಗಲಿಲ್ಲ, ಹುಡುಗಿಯನ್ನು ತಿಂದು ಹಸಿವು ಅಡಗಿಸಬೇಕೆಂದು ಮುದ್ದು ಮಗುವನ್ನು ಕೊಂದೆ, ತಿನ್ನಹತ್ತಲು ಮನಸ್ಸು ಹೇಸಿತು. ಅದರಿಂದ ಅಷ್ಟಕ್ಕೇ ನಾನು ಬಿಟ್ಟೆ." ಇನಿದು! ಭಾರತ ಮಾತೆಯೇ, ನಿನ್ನ ಕರುಣ ಕಥೆ! ಭರತಪುತ್ರರೇ, ದೇಶಬಾಂಧವರ ದೈನ್ಯವನ್ನು ನೆನಿಸಿ, ದೇಶೋನ್ನತಿಯ ಕಾರ್ಯಕ್ಕೆ ಟೊಂಕ ಕಟ್ಟಿರಿ

— ಹತ್ತಿ ಉತ್ಪತ್ತಿಯಾಗಿ ದಾವ ಅಗ್ಗಮದ್ದರಿಂದ ಮುಂಬಯಿಯೊಳಗಿನ ಸರ್ ದಿನಶಾ ಪೆಟಿಟ್ ಮಿಲ್ಲ ಹಾಗು ಪ್ಯಾಂಗಕಾಂಗ ಮಿಲ್ಲ ಈ ಎರಡು ಗಿರಣಿಗಳು ಮುಚ್ಚಲ್ಪಟ್ಟಿವೆ.

— ಹಿಂದುಸ್ಥಾನ ಸೇವಾದಳದ [illegible] ಶಿಕ್ಷಣವಾರದಲ್ಲಿ ದಿಲ್ಲಿನಗರಿಯಲ್ಲಿ ಪರಲೋಕವಾಸಿಗಳಾದರು. ಅವರ ಶವವನ್ನು ದಿಲ್ಲಿಯಿಂದ ಮುಂಬಯಿಗೆ ತಂದು [illegible] ಕಳುಹಿದರು.

ಕಾನಡಾವೃತ್ತ.

ಮಿತಿ ಕ್ರೋಧನ ಸಂ। ಚೈತ್ರ ಶು। ೧೩ ಸೋಮವಾರ.

ಬ್ರಿಟಿಶ ರಾಜ್ಯ.

ಅದರಿಂದಾಗುವ ಅಪ್ರತ್ಯಕ್ಷ ಹಾನಿ.

ಬ್ರಿಟಿಶ ರಾಜ್ಯದಿಂದ ನಮ್ಮ ದೃಷ್ಟಿಕೋನವು ಬದಲಿದೆ. ಸ್ವ-ಪರ ಶಬ್ದಗಳಷ್ಟೇ ಈ ಭೇದವು ತಲೆದೋರುತ್ತಿದೆ. ಬ್ರಿಟಿಶರು, ಅವರ ಪರಿವಾರವು, ಅವರಿಗೆ ಸಂಬಂಧಿಸಿದ ಯಾವತ್ತು ಕಾರ್ಯಗಳ ಗೌರವವು ನಮ್ಮಲ್ಲಿ ವಿಶೇಷವಾಗಿ ಬೆಳೆದಿದೆ. ಬ್ರಿಟಿಶರ ಸಂಬಂಧವಿದ್ದ ವ್ಯಕ್ತಿಯೊಂದು ಕಾರ್ಯದ ಪ್ರತಿಷ್ಠೆಯು ವಿಶೇಷ. ಅವರ ಉಡುಪು ಕೊಳ್ಳಿರಿ; ಭಾಷೆ ಕೊಳ್ಳಿರಿ; ಆಚಾರ ವಿಚಾರ ಕೊಳ್ಳಿರಿ, ಎಲ್ಲವೂ ಅನುಕರಣೀಯವೇ, ಅವು ಬೇಕಾದರೆ ನೀತಿಸಮ್ಮತವಿರಲಿ ವಿರದಿರಲಿ, ಸ್ವದೇಶ ಸ್ವಭಾಷೆ, ಸ್ವಧರ್ಮಾಚಾರ ವಿಚಾರಗಳು ತ್ಯಜಿಸಲ್ಪಟ್ಟರೆ, ಅದೊಂದು ಸುಧಾರಣೆ. ಸ್ವತ್ವದಿಂದ ದೂರವಾಗಿ ಪರತ್ವಕ್ಕೆ ಸೇರಿದಷ್ಟು ನಾವು ಉನ್ನತಿ ಹೊಂದುತ್ತೇವೆ, ನಿಜವಾಗಿ ಬೇಕಾದರೆ ನಾವು ಅವನತಿಯನ್ನು ಹೊಂದುತ್ತಿರಲಿ. ಈ ದೃಷ್ಟಿಭೇದದಿಂದ ನಮ್ಮ ಸಮಾಜದಲ್ಲಿ ವಿಶೇಷವಾಗಿ, ಸುಶಿಕ್ಷಿತರೆಂದು ಮೆರೆಯುವ ಸಮಾಜದಲ್ಲಿ ಚಹ, ಬೀಡಿ, ಸಿಗರೇಟು ಮುಂತಾದ ದುರ್ವ್ಯಸನಗಳು ಹಬ್ಬಿಕೊಂಡಿವೆ. ಸುಶಿಕ್ಷಿತ ಸಮಾಜವು ಅಶಿಕ್ಷಿತ ಸಮಾಜದ ಆದರ್ಶಭೂತವಾಗಿದ್ದರಿಂದ ಸಹಜವಾಗಿ ಈ ದುರ್ವ್ಯಸನಗಳು ಅದರಲ್ಲಿಯೂ ಹಬ್ಬಿಕೊಂಡವು.

ಇದೆಲ್ಲ ಪುರಾಣ ಈ ಹೊತ್ತು ಯಾಕೆ? ಯಾವ ಪ್ರಸಂಗಕ್ಕೆ ಇದು ಉಚಿತವಾಗಿದೆ? ಎಂದು ವಾಚಕರು ನಮಗೆ ಥಟ್ಟನೆ ಪ್ರಶ್ನಿಸದಿರರು. ಬ್ರಿಟಿಶ ರಾಜ್ಯದಿಂದ ಒದಗುವ ಅಪ್ರತ್ಯಕ್ಷ ಹಾನಿಯ ಕಥಾನಿರೂಪಣದ ಉದ್ದೇಶವೇನೆಂದೂ ಅವರು ನಮಗೆ ಪ್ರಶ್ನಿಸುವರು. ಈ ಪುರಾಣವನ್ನೇ ಮತ್ತೂ ಬೆಳೆಸುತ್ತೇವೆ, ಕೇಳಿರಿ; ಅಂದರೆ ಈ ನಿರೂಪಣವು ಸಮಯೋಚಿತವೆಂದು ನೀವೇ ಹೇಳುವಿರಿ. ಈ ದೃಷ್ಟಿಭೇದದಿಂದ ನಮಗೆ ಬ್ರಿಟಿಶ ಸಾಮ್ರಾಜ್ಯವು ನೆರೆಹೊರೆಯದಾಗಿದೆ; ಭೂತಲದ ಶಾಂತಿಸ್ಥಾಪನೆಯು ನಮ್ಮ ಕರ್ತವ್ಯವಾಗಿದೆ; ಹಿಂದುಸ್ಥಾನವು ನಮಗೆ ದೂರವಾಗಿದೆ; ಅಲ್ಲಿಯ ಶಾಂತಿಸ್ಥಾಪನೆಯು ನಮ್ಮ ಕರ್ತವ್ಯವಲ್ಲ; ಅದು ಬ್ರಿಟಿಶರದಾಗಿದೆ. ಯಾಕೆಂದರೆ, ಬ್ರಿಟಿಶ ಪಾರ್ಲಿಮೆಂಟು ಹಿಂದುಸ್ಥಾನದ ಸುವ್ಯವಸ್ಥೆಯ ಪಾಲಕವಲ್ಲೇನು! ಹಿಂದುಸ್ಥಾನವು ಸಾಮ್ರಾಜ್ಯದ ಹಿತಕ್ಕಾಗಿ ಸಾಮ್ರಾಜ್ಯ ಪರಿಷತ್ತಿನಲ್ಲಿ ಸೇರಿಕೊಂಡು ಸಾಮ್ರಾಜ್ಯದ ಉತ್ಕರ್ಷದ ಪ್ರಶ್ನೆಗಳ ಆಲೋಚನೆ ನಡಿಸುತ್ತಿದೆ. ಲೀಗ ಆಫ್ ನೇಶನ್ಸ ಯಾನೆ ರಾಷ್ಟ್ರಸಂಘದಲ್ಲಿ ಬ್ರಿಟಿಶರೊಡನೆ ಸೇರಿಕೊಂಡು ಭೂತಲದ ಮೇಲಿನ ದೊಡ್ಡ ದೊಡ್ಡ ಕಾರ್ಯಗಳಲ್ಲಿ ಪ್ರವೇಶಗೊಳ್ಳುತ್ತದೆ. ಹಿಂದುಸ್ಥಾನದಲ್ಲಿ ಮಾತ್ರ ಪ್ರಾಮುಖ್ಯವಾಗಿ ಜವಾಬದಾರರು ಬ್ರಿಟಿಶರೆ. ಊರಲ್ಲಿ ಮಂಗ, ಪರ ಊರಲ್ಲಿ ರಂಗನಾಗಿ ನಮ್ಮ ಹಿಂದುಸ್ಥಾನವು ಮೆರೆಯುತ್ತದೆ. ಇದರ ಪರಿಣಾಮವೇನೆಂದು ಬಲ್ಲಿರಾ

ಸಾಮ್ರಾಜ್ಯವು ನಮ್ಮ ಬಂಧು ಬಳಗದಲ್ಲಿ ಸೇರಿದ್ದರಿಂದ ಸಾಮ್ರಾಜ್ಯದ ಸುಖದುಃಖಗಳಿಂದ, ಪರರಾಷ್ಟ್ರಗಳ ಆಪತ್ತುಗಳಿಂದ ನಮ್ಮ ಕರಳು ಕರಗಿ ನೀರಾಗುತ್ತಿದೆ. ಯಾಕೆಂದರೆ ಬ್ರಿಟಿಶರು ಮರುಗುತ್ತಾರೆ; ಅವರೊಡನೆ ನಾವೂ ಮರುಗುತ್ತೇವೆ; ಕಣ್ಣೀರು ಸುರಿಯಲಿ; ಸುರಿಯದಿರಲಿ. ಸಾಮ್ರಾಜ್ಯದಮೇಲೆ ಮಹಾಯುದ್ಧದ ಆಪತ್ತು ಬಂತು. ಹಿಂದುಸ್ಥಾನದಲ್ಲಿ "ಮಹಾಯುದ್ಧ ಸಾಲ," "ಯುದ್ಧ ಫಂಡ," "ರಿಕ್ರೂಟ ಫಂಡು" ಮೊದಲಾದ ಫಂಡುಗಳು ಸಾಮ್ರಾಜ್ಯದ ಕಲ್ಯಾಣಕ್ಕಾಗಿ, ಜಗದುದ್ಧಾರಕ್ಕಾಗಿ ಕೈಕೊಳ್ಳಲ್ಪಟ್ಟವು. ಬೆಲ್ಜಮದಲ್ಲಿ ಅನಾಥರಾದ ಹುಡುಗರ ಜೋಪಾನಕ್ಕಾಗಿ. ಹಿಂದುಸ್ಥಾನವು "ಬೆಲ್ಜಮ್ ಚಿಲ್ಡ್ರನ್ಸ ಫಂಡ" ನಿಧಿಗೆ ಜೋಳಿಗೆಯನ್ನು ಗ್ರಾಮ-ಗ್ರಾಮಗಳಲ್ಲಿ ಪಸರಿಸಿತು. ಜಪಾನದಲ್ಲಿ ಭೂಕಂಪವಾಯಿತು ವಿಪರೀತ ಅನರ್ಥವಾಯಿತು. ಅದಕ್ಕೆ ನಾವು ಹಣ ಕೊಟ್ಟೆವು. ಯಾಕೆಂದರೆ ಹಿಂದುಸ್ಥಾನವು ರಾಷ್ಟ್ರಸಂಘದೊಳಗಿನ ರಾಷ್ಟ್ರ. ಜಪಾನವು ಅದೇ ಸಂಘದೊಳಗಿನ ರಾಷ್ಟ್ರ, ಬಂಧುಭಾವದ ಸಹಾಯವಿದು. ಈಗ ಸಾಮ್ರಾಜ್ಯದಲ್ಲಿ ಕುಷ್ಠರೋಗವು ಹಬ್ಬಿದೆ. ಆ ಕುಷ್ಠರೋಗನಿವಾರಣಕ್ಕಾಗಿ ನಮ್ಮಲ್ಲಿಯ ಸರಕಾರದ ಆಶ್ರಯದಿಂದ ಎತ್ತುವಳಿಯಾಗುತ್ತದೆ. ನಮ್ಮಲ್ಲಿಯ ಶಿಕಾಬುಧಾರಿಗಳೂ, ಶೇಟ-ಸಾವುಕಾರರೂ ಕುಷ್ಠರ ಕಷ್ಟಗಳನ್ನು ಸರಕಾರಿ ಅಧಿಕಾರಿಗಳ ಪ್ರಕಟಣೆಯ ದ್ವಾರಾ ಕೇಳಿ, ಮರಮರನೆ ಮರುಗಿ [illegible] ಸಹಾಯ ಮಾಡುತ್ತಿರುವರು.

ಇತ್ತ ಹಿಂದುಸ್ಥಾನದ ಪಾಡೇನು ಕೇಳುವಿರಾ? ಮಲಬಾರದಲ್ಲಿ ನಮ್ಮ ದುರ್ದೈವದಿಂದ ದಂಗೆಯಾಯಿತು. ಅದಕ್ಕೆ ನಾವೇ ಸಹಾಯ ಮಾಡಬೇಕು. ಪಂಜಾಬದಲ್ಲಿ ಅತ್ಯಾಚಾರಗಳಾದವು. ಅದಕ್ಕೂ ನಾವೇ ಸಹಾಯ ಮಾಡಬೇಕು. ನೆರೆ ಹಾವಳಿಯಾಯಿತು. ಅದಕ್ಕೂ ನಾವೇ. ರಾಷ್ಟ್ರೋದ್ಧಾರಕ ಅಸಹಯೋಗ ಚಳವಳಿಯಲ್ಲಿ ರಾಷ್ಟ್ರೀಯ ಶಾಲೆ, ಸ್ವಯಂಸೇವಕ ದಳ, ಖಿಲಾಫತ ಫಂಡು, ರಾಷ್ಟ್ರೀಯ ಸಭೆಯ ನಿಧಿ, ಮೊದಲಾದ ಅನೇಕ ರಾಷ್ಟ್ರೋದ್ಧಾರಕ ಚಳವಳಿಗಳನ್ನು ನಾವೇ ಪೋಷಿಸಬೇಕು. ನಮ್ಮ ಸುಖಕ್ಕೂ ನಾವು ಹಣ ಕೊಡಬೇಕು; ನಮ್ಮ ದುಃಖನಿವಾರಣೆಗೂ ನಾವೇ ತೆರಬೇಕು. ಸಾಮ್ರಾಜ್ಯದ ಪರರಾಷ್ಟ್ರಗಳ ಉಪಾಧಿಗಳಿಗೂ, ಬ್ರಿಟಿಶ ರಾಜ್ಯದ ಸಂಬಂಧದಿಂದ ನಾವು ಹೊಣೆಗಾರರಾಗಿದ್ದೇವೆ. ನಮ್ಮ ರಾಷ್ಟ್ರೋದ್ಧಾರಕ ಚಳವಳಿಗೆ, ನಮ್ಮಲ್ಲಿಯ ದುಃಖನಿವಾರಣೆಯ ಯೋಜನೆಗಳಿಗೆ ಅಲ್ಲಿಯ ಸರಕಾರವು ಎಂದೂ ಯತ್ನಮಾಡುವದಿಲ್ಲ. ಸಾಮ್ರಾಜ್ಯದಿಂದ ನಮ್ಮ ಉನ್ನತಿಗೆ ಸಹಾಯವಾಗುತ್ತಿದ್ದರೆ ಬ್ರಿಟಿಶ ಸಾಮ್ರಾಜ್ಯವು ನಮಗೆ ಅಪಕಾರಕವಾಗುವ ಬದಲು ಉಪಕಾರಕವಾಗುತ್ತಿತ್ತು. ಅಷ್ಟೇಕೆ, ನಮ್ಮಲ್ಲಿಯ ರಾಷ್ಟ್ರೋದ್ಧಾರಕ ಚಳವಳಿಗಳಿಗೆ ನಾವೇ ಹಣ ಕೊಡಬೇಕಾದರೆ ಸರಕಾರೀ ಅಧಿಕಾರಿಗಳ ಬೆದರಿಕೆ! ಬ್ರಿಟಿಶ ರಾಜ್ಯದಿಂದ ನಮಗೊದಗಿದ ಅಪ್ರತ್ಯಕ್ಷ ಹಾನಿಯಿದು.

ಸಾಮ್ರಾಜ್ಯದ ಉಪಕಾರ ಮಾಡಲಿಕ್ಕೆ ನಮಗೆ ಯಾವಾಗಲೂ ಇಂಬು ದೊರಕುತ್ತದೆ. ಸಾಮ್ರಾಜ್ಯದ ಯಾವದೇ ಫಂಡು ನಮಗೆ ಬಿಟ್ಟುಹೋಗುವದಿಲ್ಲ. ಸಾಮ್ರಾಜ್ಯದ ಉಪಕಾರ ಮಾಡುವ ಸುಸಂಧಿಯು ನಮಗೆ ಸದಾ ದೊರಕುತ್ತದೆ. ಇದೊಂದು ಬ್ರಿಟಿಶ ರಾಜ್ಯದ ಮೂಲಕ ನಮಗೊದಗುವ ಅಪ್ರತ್ಯಕ್ಷ ಸುಲಿಗೆಯು. ಅಧಿಕಾರಿಗಳು, ದೊಡ್ಡ ದೊಡ್ಡವರೆಂದು ಹೇಳಿಸಿಕೊಳ್ಳುವವರು ಈ ಸಾಮ್ರಾಜ್ಯದ ಚಳವಳಿಯಲ್ಲಿ ಉತ್ಸಾಹದಿಂದ ದುಡಿಯುವದರಿಂದ ಸಕ್ತಿಯ ಖುಶಿ, ಖುಶಿಯ ಸಕ್ತಿ ಮೊದಲಾದ ಪ್ರಕಾರಗಳೂ ಕಂಡುಬರುತ್ತವೆ; ಕಂಡುಬರುವದೂ ಸಹಜವು. ಯಾಕೆಂದರೆ ಸಾಮ್ರಾಜ್ಯಕ್ಕೂ ಹಿಂದುಸ್ಥಾನಕ್ಕೂ ಸಂಬಂಧವೇನಿದೆ! ಸಾಮ್ರಾಜ್ಯದಲ್ಲಿ ಸತತವೂ ನಮಗೆ ಅಪಮಾನವಾಗುತ್ತಿರುವಾಗ, ಸಾಮ್ರಾಜ್ಯದೊಳಗಿನ ಆಪತ್ತಿನಿಂದ ನಮ್ಮ ಕರಳು ಎಂದಾದರೂ ಕರಗಬಲ್ಲದೇನು! ಕರಗುವದು ಸಹಜವೇನು! ನಾವಾದರೂ ಐಶ್ವರ್ಯವಂತರಿದ್ದರೆ ಆ ಮಾತು ಬೇರೆ. ಅನೇಕ ಆಪತ್ತುಗಳಿಂದ ಬಳಲುತ್ತಿರುವಾಗ, ಅವನ್ನು ನೀಗಿಸಲು ದ್ರವ್ಯರಾಶಿಯು ಇಲ್ಲದಾಗ, ಸಾಮ್ರಾಜ್ಯದಮೇಲಿನ ಆಪತ್ತುಗಳ ಕಲ್ಪನಾಚಿತ್ರಗಳನ್ನು ಅಧಿಕಾರಿಗಳ ಬಾಯಿಂದ ಕೇಳಿದೊಡನೆ ಹಣವು ಔದಾರ್ಯದಿಂದ, ಆತ್ಮಸಂತೋಷದಿಂದ ಸೋರಗಬಲ್ಲದೇನು! ಸತ್ಯಸ್ಥಿತಿಯು ಹೀಗಿರುವಾಗ, ಬ್ರಿಟಿಶ ರಾಜ್ಯದ ಮೂಲಕ ನಮ್ಮೊಳಗಿನ ದೊಡ್ಡವರಲ್ಲಿಂಥಾದ ವಿಪರೀತ ಕಲ್ಪನೆಗಳ ಮೂಲಕ ಇಲ್ಲಿ ಸಾಮ್ರಾಜ್ಯದ ಕುಷ್ಠರೋಗ ನಿವಾರಣ, ಯುದ್ಧ ಫಂಡು, ರಿಕ್ರೂಟ ಫಂಡು, ಕೆಂಪು ಕ್ರೂಸಿನ ಫಂಡು ಮೊದ

ಲಾದ ಫಂಡುಗಳಿಗೆ ಮಿತಿಮೀರಿ ಅಕಲ್ಪಿತವಾಗಿ ದ್ರವ್ಯಸಂಚಯವಾಗುತ್ತದೆಂದರೆ, ಅಯಥಾರ್ಥವಾಗುವದೇನು !

ಈ ನಿರೂಪಣದಿಂದ ಯಾರೂ ವಿಕಲ್ಪ ಎಣಿಸಕೂಡದು. ಸಾಮ್ರಾಜ್ಯದ ನಿಧಿಗಳಿಗೆ ಹಣ ಕೊಡಬಾರದೆಂದು ನಮ್ಮ ಹೇಳಿಕೆ ಇಲ್ಲ. ನಾವು ಬಡವರು; ನಮ್ಮಲ್ಲಿಯ ಆಪತ್ತುಗಳೇ ಮಿಗಿಲಾಗಿವೆ; ಅರಹೊಟ್ಟೆ ಉಂಡು ಕಾಲ ಕಳೆಯುವವರು ಹೇರಳರಿರುವರು; ಅವರಿಗೆ ಉಣ್ಣ ಹಚ್ಚಲು ನಮ್ಮಲ್ಲಿ ಹಣವಿಲ್ಲ; ಅಸಂಖ್ಯ ಅಶಿಕ್ಷಿತ ಪ್ರಜೆಗಳಿಗೆ ಜ್ಞಾನದಾನ ಮಾಡಲು ನಮ್ಮಲ್ಲಿ ಸಾಮರ್ಥ್ಯವಿಲ್ಲ; ಸ್ವಪ್ರಜೆಗಳ ರೋಗನಿವಾರಣೆಗಾಗಿ ಚಿಕಿತ್ಸಕರನ್ನು ನೇಮಿಸುವಷ್ಟು ಶಕ್ತಿ ಇಲ್ಲದೆ ಸಾವಿರಾರು ಮಂದಿಗಳು ನಮ್ಮಲ್ಲಿ ಸಾಯುತ್ತಿರುವರು. ಕುಷ್ಠ ರೋಗವು ಮಹಾ ರೋಗವು. ಅದರಿಂದ ಬಾಧೆಯಾಗುವದು ವಿರಳವು. ಅವರ ರೋಗನಿವಾರಣೆಗೆ ಸಾವಿರಾರು ರೂಪಾಯಿ ಒಟ್ಟುಗೂಡಿಸುವದಕ್ಕಿಂತ ನಮ್ಮ ದೇಶಬಾಂಧವರ ಆಪತ್ತು ನಿವಾರಣಕ್ಕಾಗಿ ಶಕ್ತಿಮೀರಿ ದ್ರವ್ಯ ಸಂಚಯ ಮಾಡುವದು ನಮ್ಮ ಕರ್ತವ್ಯವಲ್ಲವೇ? ಸಾಮ್ರಾಜ್ಯದ ಹಿತ ಬಯಸುವವರು, ಸಾಮ್ರಾಜ್ಯದ ಕಷ್ಟನಿವಾರಣೆ ಮಾಡುವವರು ಅನೇಕರಿರುವರು; ನಮ್ಮ ಕಷ್ಟಗಳನ್ನು ನಾವೇ ನಿವಾರಣೆ ಮಾಡಿಕೊಳ್ಳಬೇಕು. ಇದನ್ನೆಲ್ಲ ವಿಚಾರಿಸಿ, ಭರತಖಂಡದ ಹೊರಗಿನ ಉದ್ದೇಶಗಳಿಗೆ ಸಹಾಯ ಮಾಡುವದು ನಮ್ಮ ಕರ್ತವ್ಯವೆಂದು ದೇಶಬಾಂಧವರಿಗೆ ಹೊಳೆದರೆ, ಸಹಾಯ ಮಾಡಲಿಕ್ಕೆ ಅವರು ಬದ್ಧರಿರುವರು. ಬ್ರಿಟಿಶ ರಾಜ್ಯದಿಂದ ನಮ್ಮ ಮನೋಭೂಮಿಯ ಮೇಲೆ ಉಂಟಾದ ವಿಪರೀತ ಕಲ್ಪನೆಗಳನ್ನಷ್ಟು ಹೋಗಲಾಡಿಸಿ, ಅಧಿಕಾರಿಗಳ ಆಶ್ರಯದಲ್ಲಿ ಎತ್ತುವಳಿಯಾಗುವ ನಿಧಿಗಳ ಪಾತ್ರಾಪಾತ್ರತೆಯನ್ನಷ್ಟು ವಿಚಾರಿಸಿರಿ; ಮತ್ತು ಇಂಥ ಫಂಡುಗಳಿಗೆ ಸಹಾಯ ಮಾಡಿರಿ; ಇಷ್ಟೇ ನಮ್ಮ ಹೇಳಿಕೆ ಇದೆ.

ಸ್ಫುಟ ಸೂಚನೆಗಳು.

೧. ಭರತಭೂಮಿಯಲ್ಲಿ ಯುವರಾಜರ ಆಗಮನವಾದಾಗ ಮಹಾತ್ಮರು ಅದನ್ನು ಬಹಿಷ್ಕರಿಸಿದ್ದರಷ್ಟೇ. ಯುವರಾಜರ ಪ್ರಯಾಣವು, ಮೆರವಣಿಗೆಯು ಆಳರಸರ ರಾಜಕಾರಣಕ್ಕೆ ಸಂಬಂಧಪಟ್ಟಿರುವದಾಗಿಯೂ ಯುವರಾಜರನ್ನು ಸತ್ಕರಿಸಿದ್ದರಿಂದ ಆಳರಸರ ರಾಜ್ಯಪದ್ಧತಿಗೆ ಪ್ರತ್ಯಕ್ಷವಾಗಿ ಪ್ರಜೆಗಳ ಅನುಮತಿ ದೊರೆಯುತ್ತದೆಂದೂ ಮಹಾತ್ಮರ ಅಂಬೋಣವಿತ್ತು. ವಿಚಾರಶೀಲರ ಅಂಬೋಣವಾದರೂ ಹೀಗೆಯೇ ಇತ್ತು. ಆದರೂ ಆ ಸಮಯ ಸರ್ವಾಧಿಪತಿ ರೀಡಿಂಗ ದೊರೆಗಳೂ, ರಾಜನಿಷ್ಠ ಪ್ರತಿಷ್ಠಾವಂತರೂ, ಯುವರಾಜರ ಸತ್ಕಾರಕ್ಕೂ ಆಳರಸರ ರಾಜ್ಯಪದ್ಧತಿಗೂ, ಸಂಬಂಧವೇನಿಲ್ಲೆಂದು ಒತ್ತೊತ್ತಿ ಹೇಳುತ್ತಿದ್ದರು. ಇದೊಂದು ಪ್ರಜಾವಂಚನೆಯ ವೇಷವೆಂದು ಆ ಕಾಲಕ್ಕೂ ಅನೇಕರು ತಿಳಿದಿದ್ದರು. ಬ್ರಿಟಿಶ ಪ್ರಧಾನ ಮಂಡಳದೊಳಗಿನ ಮಂತ್ರಿಗಳಲ್ಲಿದ್ದ ನೇಕ ನಾಮದಾರ ಮಿ॥ ವಿನ್ಸ್ಟನ್ ಚರ್ಚಿಲ್‌ರವರು ಕಳೆದ ಫೆಬ್ರುವರಿ ತಿಂಗಳಲ್ಲಿ ತೆಗೆದ ಉದ್ಗಾರವನ್ನೇ ಅಧಿಕಾರಿಗಳಿಗೆ ಅರ್ಪಿಸಲಿಚ್ಛಿಸುವೆವು. ಅವರು ಹೇಳುವದೇನೆಂದರೆ:– "ಯುವರಾಜರ ಸರಕಾರಿ ಪ್ರವಾಸಗಳು ಕಾಲ ಕಾಲದ ರಾಜನೀತಿಯ ಉಪಾಯಗಳು. ಅವು ಅಧಿಕಾರಾರೂಢ ಸರಕಾರದ ಮರ್ಜಿಯಂತೆ ಅವರ ಜವಾಬದಾರಿಯಿಂದ ಕೈಕೊಳ್ಳಲ್ಪಡುತ್ತವೆ." ಅಸಹಯೋಗದ ಬಿರುಗಾಳಿ ಎದ್ದಾಗ ಹಿಂದುಸ್ಥಾನದಲ್ಲಿ ಯುವರಾಜರನ್ನು ಮೆರೆಸಿದ್ದು ಕೇವಲ ವಿಲಾಸಕ್ಕೆಂದು ಯಾರಾದರೂ ಹೇಳಿದರೆ ನಂಬುವವರ್ಯಾರು? ಮಿ॥ ಚರ್ಚಿಲ್‌ರು ಅಸಹಯೋಗಿಗಳಲ್ಲ; ಪ್ರಧಾನ ಮಂಡಳದಲ್ಲಿ ಕೆಲಸ ಮಾಡಿದವರು; ಬ್ರಿಟಿಶ ರಾಜನೀತಿಯ ಅಂತರಂಗವನ್ನರಿತವರು. ಅವರೇ ಹೀಗೆ ನುಡಿದ ಬಳಿಕ ಇಲ್ಲಿಯ ಅಧಿಕಾರಿಗಳು ಈ ಹೇಳಿಕೆಯನ್ನು ಹೇಗೆ ಉದ್ಧುತ್ತಾರೆಂದು ನಮಗೆ ತಿಳಿಯದ ಮಾತು. ಸದ್ಯಕ್ಕೆ ಬಾದಶಹರು ಭರತ ಭೂಮಿಗೆ ಚಿತ್ತೈಸುವವರಿದ್ದಾರಾಗಿ ಒಂದು ಸುದ್ದಿ ಹಬ್ಬಿದೆ. ಈ ವಿಷಯ ಲೋಕನಾಯಕರು ರಾಷ್ಟ್ರದ ಸ್ವಾಭಿಮಾನಕ್ಕುಚಿತವಾದ ಧೋರಣವನ್ನು ಅಂಗೀಕರಿಸುವರೆಂದು ನಾವು ನೆರೆ ನಂಬಿರುವೆವು.

೨. ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದ ಮಿ॥ ಕೊಲಿನ್ಸರವರ ಸರ್ಕ್ಯುಲರದ ಮೇಲಿಂದ ಇನ್ನೂ ಕೆಲವು ವಿಚಾರಗಳು ಸೂಚಿಸುತ್ತಿವೆ. ನಮ್ಮ ಸರಕಾರವು ದೇಸಾಯಿಗಾರರ ಕಲ್ಯಾಣಕ್ಕಾಗಿ ಬಡದಾಡುತ್ತದೆಂದು ಹೇಳುತ್ತಿದೆ. ಮಿ॥ ಕೊಲಿನ್ಸರ ಸರ್ಕ್ಯುಲರದ ಮೇಲಿಂದ ದೇಸಾಯಿಗಾರರ ಹಿತಕ್ಕಾಗಿ ಆಳರಸರು ಯಾವ ಪರಿಯಿಂದ ಮಡಿಯುತ್ತಾರೆಂಬುದು ಸ್ಫುಟವಾಗುವದು. ೧೯೨೧ನೇ ಇಸ್ವಿಯ ಮಳೆಗಾಲದಲ್ಲಿ ಮಳೆಯು ಶ್ರಾಯಕ್ಕೆ ಸರಿಯಾಗಿ ಬೀಳದೆ, ಬೆಳೆಯು ಕೆಟ್ಟು ಹೋದದ್ದೂ ನಾಶವಾದದ್ದೂ ದೇಸಾಯಿಗಾರರು ಸ್ವಾನುಭವದಿಂದ ಅರಿತ ಮಾತು; ಜಿಲ್ಲಾಧಿಪತಿ ಮಿ॥ ಕೊಲಿನ್ಸರವರೂ ತಿಳಿದಿರಬೇಕು. ಹೀಗಿದ್ದು, ಈ ಸರ್ಕ್ಯುಲರವನ್ನು ಹೊರಡಿಸುವ ಕಾರಣವೇನು? ಬೆಳೆ ನಷ್ಟವಾಗಿದೆಂದು ಪ್ರಜೆಗಳು ದೂರಿಕೊಂಡು, ತೀರ್ವೆ ಬಾಕಿ ಹಾಕುವರೆಂದು ಮಿ॥ ಕೊಲಿನ್ಸರು ಭೀತಿಗೊಂಡರೇನು? ಬೆಳೆ ನಷ್ಟವಾದಾಗ ರೈತರ ಹಿತಾಹಿತಗಳನ್ನು ವರಿಷ್ಠರಿಗೆ ತಿಳಿಸಿಹೇಳಿ, ಅವರಿಗೆ ತಕ್ಕ ಅನುಕೂಲ್ಯಗಳನ್ನು ಒದಗಿಸಿಕೊಡುವದು ಒತ್ತಟ್ಟಿಗುಳಿಯಿತು; ಮಿ॥ ಕೊಲಿನ್ಸರು, ದೇಸಾಯಿಗಾರರ ಜೋಪಾನಕ್ಕಾಗಿ ಸಾರ್ವಭೌಮರ ಪ್ರತಿನಿಧಿಗಳಾದ, ಜಿಲ್ಲಾಧಿಪರಾದ ಮಿ॥ ಕೊಲಿನ್ಸರು ಚತುರ್ಥಾಂಶ ದಂಡದ ಖಡ್ಗವನ್ನು ಬಡ ದೇಸಾಯಿಗಾರರ ಮೇಲೆ ಎಸೆದು ತೀರ್ವೆಯನ್ನು ವಸೂಲ ಮಾಡಿದರು. ದೇಸಾಯಿಗಾರರ ಹಿತ ಬಯಸುವ ಜಿಲ್ಲಾಧಿಪರ ಲಕ್ಷಣವೇನಿದು! ಬೆಳೆಯು ನಷ್ಟವಾಗಿದೆಂದು ದೇಸಾಯಿಗಾರರ ದೂರಿದೆ. ಸರಕಾರಿ ರಿಪೋರ್ಟಿಂತೂ ಈ ವರುಷ ವಿಶೇಷ ಬೆಳೆ ಬಂದಿದೆಂದು ಹೇಳುತ್ತಿದೆ. ಆದರಿಂದ ತೀರ್ವೆ ವಸೂಲಿಯು ಕ್ಲಪ್ತ ಕಾಲದಲ್ಲಿ ಒದಗಿ ತಂದು ಸರಕಾರಕ್ಕೆ ತಿಳಿಸಿದರಾಯಿತು. "ಈ ವರುಷ ವಿಶೇಷ ಬೆಳೆ ಬಂದುದರಿಂದ ಕ್ಲಪ್ತ ಕಾಲದಲ್ಲಿ ತೀರ್ವೆಯನ್ನು ಸ್ವಸಂತೋಷದಿಂದ ದೇಸಾಯಿಗಾರರು ತೆತ್ತರು. ಬೆಳೆ ಬರಲಿಲ್ಲವೆಂಬ ಹಕೀಕತು ನಿಷ್ಕಾರಣ ಚಳವಳಿಯನ್ನೆಬ್ಬಿಸುವ ದುರಾತ್ಮರದು." ಎಂದು ಶರಾ ಹೊಡೆದು ತಮ್ಮ ರಿಪೋರ್ಟನ್ನೇ ತೀರ್ವೆ ವಸೂಲಿಯ ಅಂಕೆಗಳಿಂದ ಸಿದ್ಧಪಡಿಸಲು ಮಿ॥ ಕೊಲಿನ್ಸರು ಪ್ರವೃತ್ತರಾಗಿದ್ದರೆಂದು ನಾವು ಅನುಮಾನಿಸಬಹುದೇನು? ಅನುಮಾನಿಸುವದು ಸಾಧಾರವಲ್ಲೇನು!

೩. ಈ ಸರ್ಕ್ಯುಲರದ ಮೇಲಿಂದ ಮತ್ತೊಂದು ವಿಚಾರವು ನಮಗೆ ಸೂಚಿಸುತ್ತಿದೆ. 'ಆಳರಸರ ಪ್ರಜಾವಾತ್ಸಲ್ಯದ ಗುಟ್ಟು ಹೊಳೆಯುತ್ತದೆ. ಅದೇನು? ನಮ್ಮ ಸರಕಾರವು ದೇಸಾಯಿಗಾರರನ್ನು ಸಾವುಕಾರರ ಬಾಯೊಳಗಿಂದ ತಪ್ಪಿಸಲು ದಕ್ಷವಿದೆ. ಅದಕ್ಕಾಗಿ ಕಾಯಿದೆಗಳನ್ನು ನಿರ್ಮಿಸಿದೆ. ಆದರೆ ಮಿ॥ ಕೊಲಿನ್ಸರ ಸರ್ಕ್ಯುಲರವನ್ನು ಸೂಕ್ಷ್ಮ ರೀತಿಯಿಂದ ಪರ್ಯಾಲೋಚಿಸಿರಿ. ಬೆಳೆ ಇಲ್ಲದಾಗ, ತೀರ್ವೆ ತೆರಬೇಕಾದಾಗ ಬಡ ದೇಸಾಯಿಗಾರರು ಏನು ಮಾಡುವರು? ಹಣವನ್ನೆಲ್ಲಿಂದ ತರುವರು? ಸಾವುಕಾರರಕಡೆಗೆ ಅವರು ಹೋಗಬೇಕಲ್ಲವೇ? ಅಂದರೆ ಆಳರಸರು ದೇಸಾಯಿಗಾರರನ್ನು ಸಾವುಕಾರರ ಬಾಯಿಯೊಳಗೆ ಒಟ್ಟುತ್ತಾರಲ್ಲವೇ? ಇದರೊಳಗೆ ದೇಸಾಯಿಗಾರರ ಹಿತವೇನಾಯಿತು? ಹಿತವಿದೆ. ಅದು ಹೇಗೆಂದು ನಾವು ಹೇಳುತ್ತೇವೆ. ಇಂಥ ಅಡಚಣೆಗಳಿಗಾಗಿ ಸಾವುಕಾರರು ಹಣ ಕೊಟ್ಟ ಬಳಿಕ, ಆ ಬಗ್ಗೆ ಕಾಯಿದೆಯಂತೆ ಇಲಾಜು ನಡೆದಾಗ, ನಮ್ಮ ಸರಕಾರವು ಕಂತು, ಬಡ್ಡಿಯ ದರದ ಇಳಿತ, ಮುಂತಾದ ಪ್ರಕಾರಗಳಿಂದ ಅವರನ್ನು ಬದುಕಿಸಲಿಚ್ಛಿಸುತ್ತಿದೆ. ಇದೆಲ್ಲ ಪರೋಪಕಾರವನ್ನು ಪರಸ್ಪರ ಸಾವುಕಾರರ ಖರ್ಚಿನಿಂದ ಸರಕಾರವು ಒದಗಿಸುತ್ತಿದೆ. ಹಾವಿಗೆ ಕೊಂದು ಹದ್ದಿಗೆ ಹಾಕಿ, ಮಿಷ್ಟಾನ್ನದಾನದ ಪುಣ್ಯ ಪಡೆಯುವ ಆಳರಸರ ರಾಜ್ಯಧೋರಣದ ಒಂದು ಮಾದರಿಯಿದೆಂದು ಸಿದ್ಧಾಂತ ಮಾಡಿದರೆ, ಅದೇನಾದರೂ ವಿಪರ್ಯಾಸವಾಗಲಿಕ್ಕಿಲ್ಲ. ರಾಜ್ಯಧೋರಣದ ಬುಡವೇ ಸದೋಷವಿರಲು, ಫಲವು ಹಿತಪ್ರದವಾಗುವ ಬಗೆ ಹೇಗೆ? ಮಿ॥ ಕೊಲಿನ್ಸರಾಗಲಿ, ಇತರ ಜಿಲ್ಲಾಧಿಪರಾಗಲಿ, ವ್ಯಕ್ತಿಶಃ ಸತ್ಪ್ರವೃತ್ತಿಯವರೆಂದು ಯಾರೂ ಹೇಳಬಹುದು. ಅಧಿಕಾರದ ಆಸನದೋಷದ ಮೂಲಕ ಇಂಥ ಪ್ರಕಾರಗಳು ಸಂಭವಿಸುತ್ತಿವೆ. ವ್ಯಕ್ತಿಗಳಿಗೆ ದೂರಿ ಫಲವಿಲ್ಲ; ದೂರುವದೂ ನಮ್ಮ ಉದ್ದೇಶವಿಲ್ಲ. ಮಹಾತ್ಮರು ನುಡಿದಂತೆ ಇಡೀ ರಾಜ್ಯಪದ್ಧತಿಯ ರಚನಾಂಗವು ತಿದ್ದುಪಡಿಯಾದ ಹೊರತು ಪ್ರಜೆಗಳ ಹಿತವಾಗದು, ಎಂಬದೊಂದೇ ಸಿದ್ಧಾಂತವು ಪುನಃ ಪುನಃ ಹೊರಡುತ್ತಿದೆ.

೪. ಇಲ್ಲಿಯ ಗಿಬ್ಬ ಹೈಸ್ಕೂಲಿನ ತರ್ಫೆನಿಂದ ಕಾನಡಾ ಶಿಕ್ಷಣ ಸಂಘದ ಅಧ್ಯಕ್ಷರಾದ ರಾವಬಹಾದ್ದೂರ ಪಂಡಿತರು ಸ್ಥಳೀಕ ಮುನಿಸಿಪಾಲಿಟಿಗೆ ಒಂದು ಸಾವಿರ ರೂಪಾಯಿಗಳ ಗ್ರಾಂಟನ್ನು ಕೊಡಬೇಕಾಗಿ ಅರ್ಜಿ ಮಾಡಿಕೊಂಡಿರುವರು. ಗಿಬ್ಬ ಹೈಸ್ಕೂಲಿನ ಆಡಳಿತೆಯ ವಿಷಯ ಇಂದಿಗೆ ನಾವು ಬರೆಯಲಿಚ್ಛಿಸುವದಿಲ್ಲ. ಸ್ಥಳೀಕ ಮುನಿಸಿಪಾಲಿಟಿಯ ದೃಷ್ಟಿಯಿಂದ ಈ ಪ್ರಶ್ನೆಯನ್ನು ನಾವು ವಿಚಾರಮಾಡಬೇಕಾಗಿದೆ. ಗಿಬ್ಬ ಹೈಸ್ಕೂಲಿನ ಅಸಿ. ಶಿಕ್ಷಕರೊಬ್ಬರು ಮುನಿಸಿಪಾಲಿಟಿಯ ಅಧ್ಯಕ್ಷರಿದ್ದಾಗ ರಾವಬಹಾದ್ದೂರರು ಅರ್ಜಿ ಮಾಡುವದೂ, ಅದನ್ನು

ಮುನಸಿಪಾಲಿಟಿಯವರು ವಿಚಾರ ಮಾಡುವದು ನಯನಮನೋಹರವಲ್ಲೆಂದು ನಮ್ಮ ಮತವು. ಮೇಲಾಗಿ ಮುನಿಸಿಪಾಲಿಟಿಯ ಆರ್ಥಿಕ ಸ್ಥಿತಿಯು ಸಮಾಧಾನಕರವಿಲ್ಲ. ಆಸ್ಪತ್ರಿಯ ಬೀಲುಗಳು ಸರಕಾರಕ್ಕೆ ಸಲ್ಲಬೇಕಂತೆ! ಪ್ರಾಥಮಿಕ ಶಿಕ್ಷಕರಿಗೆ ಸರಿಯಾಗಿ ಸಂಬಳ ಕೊಡಲಿಕ್ಕೆ ಇರದೆ, ನಮ್ಮ ಮುನಸಿಪಾಲಿಟಿಯವರು ಮರಾಠಿ ಶಾಲೆಗೆ ಕನ್ನಡ ಟ್ರೇಂಡ ಶಿಕ್ಷಕರನ್ನು ಕರೆತಂದ ಹಕೀಕತನ್ನು ಯಾರೂ ಮರೆಯಲಾರರು. ಇಂಥ ಪರಿಸ್ಥಿತಿಯಲ್ಲಿ ಗಿಬ್ಬ ಹ್ಯಾಸ್ಕೂಲಿಗೆ ಹಣ ಕೊಡಮಾಡುವದು ಕೇವಲ ಅನುಚಿತವು. ಪ್ರಜೆಗಳ ಮೇಲೆ ಕರ ಹೇರಲಿಕ್ಕೂ ಮಾರ್ಗವಿಲ್ಲ. ಈ ಮುನಸಿಪಾಲಿಟಿಯ ಅಧಿಪತ್ಯದಲ್ಲಿ ಪರಮಾವಧಿ ಮನೆಪಟ್ಟಿಯು ಏರಿಕೆಯಾಯಿತು. ಭಂಗಿ ಕರವೂ ಏರಿತು. ರೂಪಾಯಿ, ಪಾವಲಿಯಂತೆ ಬಡ ಪ್ರಜೆಗಳಿಂದ ಎತ್ತಿದ ಹಣದಿಂದ ನಿತ್ಯ ಖರ್ಚ ನಡೆಯದಾಗ್ಯೂ ಗ್ರೇಟಿನ ಹೊಸ ಕಟ್ಟಡವನ್ನು ಕಟ್ಟಿಗೊಳ್ಳುವದು ಅಪಾಯಕರವು. ಗಿಬ್ಬ ಹಾಯಸ್ಕೂಲಿನ ನಾಲ್ವ ನೌಕರರು ಮುನಸಿಪಾಲಿಟಿಯಲ್ಲಿ ಮೆಂಬರರಿರುವದರಿಂದ ಅವರು ಈ ಚರ್ಚೆಯ ಕಾಲಕ್ಕೆ ಹಾಜರಿರುವದು ಯುಕ್ತವೋ ಹೇಗೆ? ಎಂಬ ಇನ್ನೊಂದು ಪ್ರಶ್ನೆ. ನೌಕರರು ಯಜಮಾನರಾದ ರಾವ ಪಂಡಿತರ ಬಿನ್ನಹದ ವಿಚಾರ ಕಾಲಕ್ಕೆ ಗೈರ ಹಾಜರಿರುವದು ಪ್ರಶಸ್ತವೆಂದು ಪರರಿಗೆ ಬುದ್ಧಿ ಹೇಳುವ ಶಿಕ್ಷಕರೇನು ಅರಿಯದ ಮಾತಲ್ಲ. ಮುನಸಿಪಾಲಿಟಿಯವರು ರಾವಬಹಾದ್ದೂರರ ಈ ಬಿನ್ನಹೆಯನ್ನು ವಿಚಾರಮಾಡಿ, ಆರ್ಥಿಕ ಸ್ಥಿತಿಯ ಮೂಲಕ ದೃಢತಾಪೂರ್ವಕ ತಿರಸ್ಕರಿಸುವರಾಗಿ ನಾವು ನಂಬಿರುವೆವು.

ಸ್ಥಾನಿಕ ವೃತ್ತಾಂತ.

ಕುಮಟಾ— ಸೆಕೆ ವಿಪರೀತ. ಮೋಡಗಳಿಂದ ದಣಿವು ವಿಶೇಷ. ಮೈಲಿ ಬೇನೆಯು ಇನ್ನೂ ಚಾಲು ಇದೆ.

ಕುಷ್ಟರೋಗನಿವಾರಣ ಫಂಡಿಗೆ ರೂಪಾಯಿ ೩೦೦ ದೊರಕಿರುವದಾಗಿ ತಾ. ೩೦-೩-೧೯೩೬ನೇಗೆ ಪತ್ರ ಬರೆದು ತಿಳಿಸುತ್ತಾರೆ.

ಇಲ್ಲಿಯ ಮುನಿಸಿಪಾಲಿಟಿಯ ಇಬ್ಬ ಮೆಂಬರರಾದ ಮಿ|| ರಾಮಕೃಷ್ಣ ಮಂಜನಾಥ ಕಾಮತ, ಮಿ|| ಗಣಪತ ತಿಮ್ಮಣ್ಣ ಹೆಗಡೆ ಇವರು ಸತತ ನಾಲ್ಕು ತಿಂಗಳು ರಜೆ ಪಡೆಯದೆ ಗೈರಹಾಜರಿದ್ದದರಿಂದ ಅವರ ಸಭಾಸದತ್ವವನ್ನು ಕಲೆಕ್ಟರರು ರದ್ದುಮಾಡಿರುವರು.

ಮುನಿಸಿಪಲ ಜನರಲ ಕಮಿಟಿಯು ಈ ವಾರದಲ್ಲಿ ಕೂಡುವದಿದೆ. ಗಿಬ್ಬ ಹ್ಯಾಸ್ಕೂಲಿನ ಗ್ರೇಟಿನ ವಿಷಯವು ಈ ಕಮಿಟಿಯಲ್ಲಿ ವಿಚಾರವಾಗತಕ್ಕದು.

ಸಾಭಾರ ಸ್ವೀಕಾರ

ಕಿರ್ಲೋಸ್ಕರ ವಾರ್ತೆ— ದ್ವೈಮಾಸಿಕ ಪತ್ರಿಕೆ. ಮಾರ್ಚ ತಿಂಗಳ ಸಂಚಿಕೆ. ಸಂಪಾದಕ ಮತ್ತು ಪ್ರಕಾಶಕ— ಶ್ರೀ|| ಲ. ಕೃ. ಬಾಗಲ. ಕಿರ್ಲೋಸ್ಕರವಾಡಿ, ಸಾತಾರಾ.

ಹೊನ್ನಾವರ— ಕುಂಭಾರವಾಡೆಯ ಶಾಂಡಿಲ್ಯ ಸಾಧುಗಳು ಅರೆಓಳ್ಳಿ ಎಂಬ ಗ್ರಾಮದಲ್ಲಿ ಒಂದು ಪರಾಶ್ರಯವಿದ್ದಲ್ಲಿ ಬಂದು ಅವರ ಶಿಷ್ಯಗಣಸಮೇತ ವಾಸಿಸಿರುವರು. ಅವರ ದರ್ಶನಕ್ಕೆ ಭಾವಿಕ ಜನರು ತಂಡತಂಡವಾಗಿ ಪ್ರತಿ ನಿತ್ಯ ಅಲ್ಲಿ ಹೋಗಿ ಅವರ ದರ್ಶನ ಪಡೆದು ಬರುತ್ತಾರೆ. ಅಲ್ಲಿಯೇ ಒಂದು ದತ್ತಾತ್ರೇಯ ದೇವಸ್ಥಾನವನ್ನು ಕಟ್ಟಿಸುವ ಆಲೋಚನೆ ನಡೆದು, ೪೦೦-೫೦೦ ರೂಪಾಯಿಗಳ [illegible] ಬಿದ್ದಿರುತ್ತದೆಂಬ ವಾರ್ತೆಯಿದೆ. ಅವರ ಕಮಂಡಲದ ಉದಕದಿಂದ ದೈವ ಬಿಡಿಸುವದು, ರೋಗಪೀಡಿತ ಜನರಿಗೆ ರೋಗದಿಂದ ಮುಕ್ತ ಮಾಡುವದು ವಗೈರೆ ಕೆಲಸಗಳು ನಡೆದಿವೆ. ಒಟ್ಟಿನ ಮೇಲೆ ಭಾವಿಕ ಜನರಿಗೆ ಇದೊಂದು ಅಪೂರ್ವ ಯೋಗವು ಪ್ರಾಪ್ತವಾಯಿತು. ಹವಾಮಾನ- ಸೆಕೆ ವಿಪರೀತ. ಮಳೆ ಬರುವ ಲಕ್ಷಣಗಳು ತೋರುತ್ತಿವೆ.

ಕಾರವಾರ— ಇಲ್ಲಿಯ ೧ನೇ ವರ್ಗದ ಸಬಜಡ್ಜರಾದ ಮಿ|| ಪಾಟಸಕರರವರಿಗೆ ವಿಜಾಪುರಕ್ಕೆ ವರ್ಗವಾಗಿ ಅವರ ಸ್ಥಳದಲ್ಲಿ ಮಿ|| ಸಬನೀಸರವರು ಬಂದಿರುವರು. ಮಿ|| ಪಾಟಸಕರರು ತಮ್ಮ ಸದ್ಗುಣಗಳಿಂದ ವಕೀಲ ಹಾಗು ಪಕ್ಷಗಾರ ವರ್ಗದ ಪ್ರೀತಿಯನ್ನು ಸಂಪಾದಿಸಿದ್ದರು. ಕಳೆದ ೩೧ ನೇ ಮಂಗಳವಾರಕ್ಕೆ ವಕೀಲರು ಅವರಿಗೆ ಸತ್ಕಾರದಿಂದ ಅಪ್ಪಣೆಯನ್ನಿತ್ತರು.

ಇಲ್ಲಿಯ ಮುನಿಸಿಪಾಲಿಟಿಯ ಸಾಧಾರಣ ಸಭೆಯು ಕಳೆದ ತಾರೀಖು ೧ನೇ ಬುಧವಾರಕ್ಕೆ ಸೇರಿತು. ಮಿ|| ಕಟಿನೋರವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಮಿ|| ಕಟಿನೋರವರನ್ನು ಆರಿಸಿ, ಅಲ್ಪಸಂಖ್ಯಾಕ ಸಮಾಜದಲ್ಲಿ ಪಾತ್ರ ಗೃಹಸ್ಥರಿದ್ದಲ್ಲಿ ಅವರಿಗೆ ಪ್ರಜಾಪ್ರಾತಿನಿಧಿಕ ಸಂಸ್ಥೆಗಳಲ್ಲಿ ಸೇರಿಸಿಕೊಳ್ಳಲಿಕ್ಕೆ ಬಹುಸಂಖ್ಯಾಕರು ಹಿಂಜರಿಯಲಾರರೆಂದು ಕಾರವಾರಸ್ಥರು ಕೃತಿಯಿಂದ ಸಿದ್ಧಪಡಿಸಿರುವರು.

ಸಂಕೇರಿ— ಪ್ರಸಿದ್ಧ "ಮಹಾರಾಷ್ಟ್ರೀಯ ಜ್ಞಾನಕೋಶದ" ಸಂಪಾದಕರಾದ ಡಾ. ಶ್ರೀಧರ ಕೇತಕರರು ಸಪತ್ನೀಕರಾಗಿ ಇಲ್ಲಿಯ "ಬಾಲಬಂಧು ಸಮಾಜ"ದ ವಾಚನಮಂದಿರಕ್ಕೆ ಇದೇ ತಾ. ೧ ನೇ ದಿವಸ ಭೆಟ್ಟಿಯನ್ನಿತ್ತರು. ತಮ್ಮ ಭೆಟ್ಟಿಯ ನಿದರ್ಶನದೊಂದಿಗೆ ತಮ್ಮ ಸ್ವಂತ ಮಾಸಿಕ ಪುಸ್ತಕವಾದ "ವಿದ್ಯಾಸೇವಕ"ವನ್ನೂ, ಇನ್ನೂ ಕೆಲವು [illegible] ಪುಸ್ತಕಗಳನ್ನು ವಾಚನ ಮಂದಿರಕ್ಕೆ ಉಚಿತವಾಗಿ ಕೊಡುವ ಅಭಿವಚನವನ್ನಿತ್ತು ಕಾರವಾರಕ್ಕೆ ಮರಳಿದರು.

ಸಮಾಜವು ಜ್ಞಾನಕೋಶವನ್ನು ಕೊಳ್ಳಲೊಪ್ಪಿ ಮುಂಗಡ ಹಣವನ್ನೂ ಕೊಟ್ಟಿರುವದು. ಇದು ಯೋಗ್ಯವೂ, ಸ್ತುತ್ಯವೂ ಆಯಿತು.

ಕೊಂಗ್ರೆಸಿನ ಹೊಸ ನಿಯಮದಂತೆ, ಇಲ್ಲಿ ೪ ಮಂದಿ ಸ್ತ್ರೀ ಸಭಾಸದರೂ, ೯ ಮಂದಿ ನೂಲು ತೆಗೆದು ಕೊಡಲೂ ಒಪ್ಪಿರುವರು. ಇತರೇ ದೇಶಾಭಿಮಾನಿಗಳು ಇವರನ್ನು ಅನುಕರಿಸಲು ಮುಂದೆ ಬರದಿರುವರೇ?

ಇಲ್ಲಿಯ ಒಂದು ಲಗ್ನದ ಸಮಯದಲ್ಲಿ ಇಡೀ ಮಂಟಪವು ಖಾದಿಮಯವಾಗಿತ್ತು. ಇದೇ ಮೇರೆಗೆ ಸರ್ವತ್ರ ಖಾದಿಯು ತಲೆದೋರಲಿ!

ಶಿರಸಿ— ಒಮ್ಮೆ ಸರಕಾರಿ ಪಕ್ಷವಾದರೆ ಇನ್ನೊಮ್ಮೆ ಪ್ರಜಾಪಕ್ಷ ಹೀಗೆ ಮಳೆ ಬಂದತ್ತ ಕೊಡೆ ಹಿಡಿಯುವ ಮುನಿಸಿಪಾಲಿಟಿ ಮೆಂಬರರಾದ ಮಿ|| ನೋರೊನ್ಹಾ ಎಂಬ ಕರಿ ಕೌನ್ಸಿಲರ ಸಾಹೇಬರು "ಅತೋ ಭ್ರಷ್ಟಸ್ತತೋ ಭ್ರಷ್ಟ"ರಾಗಿ ಹೊಸ ಚುನಾವಣೆಯಲ್ಲಿ ಬೀಳದ್ದರಿಂದ ಉಪಾಯವಿಲ್ಲದೆ, ಮುನಿಸಿಪಾಲಿಟಿಯಲ್ಲಿ ಮ|| ಗಾಂಧಿಯವರ ಫೋಟೋ ಇಟ್ಟ ನೆವದಿಂದ ರಾಜೀನಾಮೆಯನ್ನಿತ್ತರು!

ಜಾತ್ರೆಯಾದಮೇಲೆ ದನಕರುಗಳಿಗೆ ರೋಗವು ಕಡಿಮೆಯಾದೀತೆಂದು ತಿಳಿದಿದ್ದರು. ಆದರೆ ವಿಶೇಷವಾಗಿ ರಾಯನಗಲ್ಲಿ ದನಗಳು ಸಾಯುತ್ತಿರುವವು. ಜನರ ರೋಗವಾದರೂ ಕಡಿಮೆ ಇಲ್ಲ. ಎಷ್ಟೋ ಮಂದಿ ತೀರಿಕೊಂಡರು. ಇಷ್ಟೇ ಅಲ್ಲ, ಹೊಸದಾಗಿ ಬಿಟ್ಟ ಪಟ್ಟದ ಮಾರಿ ಕೋಣವೇ [illegible]! ಹೀಗಾಗಿ ಹಬ್ಬದ ಮೊದಲಿನ ದಿವಸ ರೋಗವಾಗಿ ಬಿದ್ದಿತೆ ಇನ್ನೊಂದು ಕೋಣವನ್ನು ಬಿಟ್ಟರು. ಇದರ ಕಾರಣವನ್ನು ಹಿಂಸಾವಾದಿಗಳೇ ಹೇಳಲಿ. ಎಷ್ಟೋ ಗಾಡಿಕಾರರು ಒಂಟೆತ್ತಿನ ಕೋಣ ಸಹಕಾರವಾಗುವದು ಕಂಡುಬರುತ್ತದೆ.

ಅತ್ತಿತ್ತಲಾಗಿ ವೃತ್ತಪತ್ರಗಳೂ ಮಾಸಿಕಗಳೂ ಮುಟ್ಟುವದಿಲ್ಲೆಂಬ ಬಹು ಜನರ ತಕರಾರು. ಪೋಸ್ಟ ಖಾತೆಯವರು ಇದರ ಕಡೆಗೆ ಲಕ್ಷಕೊಡುವರೇನು?

ಜಾತ್ರೆಯ ಪೂರ್ವದಲ್ಲಿ ನೀಲೇಕಣಿ ಗಿರಣಿಗೆ ಒಂದು ನರಬಲಿ ಆಯಿತು! ಯಾಕಂದರೆ ಅದರಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಹುಡುಗನು ಆಕಸ್ಮಾತ್ತಾಗಿ ಇಂಜಿನದಲ್ಲಿ ಸಿಕ್ಕು ಚೂರು ಚೂರಾದನು.

ಹ್ಯಾಸ್ಕೂಲ ೬ನೇ ಇಯತ್ತೆಯು ಪ್ರಾರಂಭವಾಗಿದ್ದು ಹೊಸ ಶಿಕ್ಷಕರ ನೇಮಣೂಕಿಯಾಗಿದೆ.

ಜಾತ್ರೆಯಲ್ಲಿ ಸರಾಯಿ ಅಂಗಡಿಗಳು ೫ ದಿವಸ ಬಂದು ಇದ್ದದರಿಂದ ಕುಡುಕರ ಹಾವಳಿಯು ಕಡಿಮೆ ಇತ್ತು.

ಸಿದ್ದಾಪುರ— ಊರಲ್ಲಿ ರೋಗರುಜುಗಳು ಅಷ್ಟೇನು ಕಾಣಿಸುವದಿಲ್ಲ. ಆದರೆ ನೆರೆಹೊರೆಯ ಹಳ್ಳಿಯಲ್ಲಿ ದನಕರುಗಳ ಉಪದ್ರವು ತಲೆದೋರಿರುವದಾಗಿ ತಿಳಿಯುತ್ತದೆ.

ಮಿ|| ಕಲೆಕ್ಟರ ಸ್ವಾರಿಯು ಇಲ್ಲಿಗೆ ಚಿತ್ತೈಸಿ ನಾಲ್ಕೆಂಟು ದಿವಸವಾದವು. ಅವರಿಗೆ ತಾ. ೩೧ನೇ ಸಾಯಂಕಾಲ ಶ್ರೀ ಬಸವಣ್ಣನ ಗುಡಿಯಲ್ಲಿ ನಮ್ಮ ವೀರಶೈವ ಬಾಂಧವರು ಪಾನ-ಸುಪಾರಿ ಕೊಟ್ಟರಾಗಿ ತಿಳಿಯುತ್ತದೆ. ಆ ವೇಳ್ಯದಲ್ಲಿ ಹಾಳಕಟ್ಟ ಟೋಲನಾಕೆಯವನು ಸಿದ್ದಾಪುರದಿಂದ ಹೊರಗೆ ಹೋಗುತ್ತಾ, [illegible]ದೇ ಗಾಡಿ ೧೨ ತಾಸಿನ ಮಧ್ಯಾಹ್ನದಲ್ಲಿ ತಿರುಗಿ ಬಂದರೆ ಹೀಗೆ ಎರಡು ಸಾರೆ ಸುಂಕ ವಸೂಲ ಮಾಡುತ್ತಾನೆ. ಅದರಿಂದ ರ್ಯತರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಮಿ|| ಕಲೆಕ್ಟರರು ಇತ್ತ ಲಕ್ಷ ಕೊಡಬೇಕಾಗಿ ಒಬ್ಬರು ಬೇಡಿಕೊಂಡರಾಗಿ ಹೇಳಿಕೆ. ಅದರ ಪರಿಣಾಮ?

ಇದೇ ಜಿಲ್ಲೆಯ ಟೋಲ ನಾಕೆಯ ಗುತ್ತೆಯು ತಾ. ೩೦ನೇ ಮಾರ್ಚ ದಿವಸ ನಡೆಯಿತು. ಹೋದ ವರ್ಷಕ್ಕಿಂತ ಈ ವರ್ಷ ಪ್ರತಿ ಟೋಲ ನಾಕೆಗೆ ಹೆಚ್ಚಿಗೆ ಸವಾಲು ಬಂದಿರುತ್ತದೆ.

ಆಸನ, ಪ್ರಾಣಾಯಾಮಗಳನ್ನು ಕಲಿಯಲಿಚ್ಛಿಸುವವರು ಶ್ರೀ|| ಹರಿಯಪ್ಪ ಚಿತ್ರಘಟ್ಟಿ ಇವರಿಗೆ ತಿಳಿಸಬೇಕಾಗಿ ತಿಳಿಸುತ್ತಾರೆ.

ಕೆಲವು ತಿಂಗಳ ಹಿಂದೆ ಇಲ್ಲಿಯ ಪೋಸ್ಟಮನ್ನ ಜಾಗದಕ್ಕೆ ಬಂದ ಇವನು [illegible] ಕಡಿಮೆ ಮಾಡಿದ್ದರಿಂದ ಜನರಿಗೆ ಬಹಳೇ ತೊಂದರೆಯಾಗಿತ್ತು. ಆದರೆ ಈಗ ೬ ತಿಂಗಳವರೆಗೆ ನೋಡಿ, ಕೆಲಸ ಬಹಳ [illegible] ಕಂಡಲ್ಲಿ, ಈಗ ಇದ್ದ ಇನ್ನೊಬ್ಬ ವ್ಹಿಲೇಜ ಪೋಸ್ಟಮನ್ನನನ್ನು ಕಾಯಂ ಮಾಡುವದಾಗಿ ತಿಳಿಯುತ್ತದೆ.

ಈಗ ಇಲ್ಲಿ ಸಿದ್ದಾಪುರದಿಂದ ಸಿರ್ಸಿಗೆ ಟಿ. ಎಸ್. ಮೋಟಾರು ಸರ್ವಿಸ ಒಂದು, ಹಾಗೂ ಜೋಗಳೇಕರ ಮೋಟಾರ ಸರ್ವಿಸ ಒಂದು, ಹೀಗೆ ಎರಡು ಪ್ರತಿನಿತ್ಯ ತಿರುಗಾಡುತ್ತಿರುವವು. ಪೆಸಂಜರರಂತೂ ಒಂದೂ ದಿನ ಬಿಡದೇ ಕಾದು ನಿಂತಿರುವದನ್ನು ನೋಡಿದರೆ ಸಣ್ಣ ರೇಲ್ವೆ ಸ್ಟೇಶನ್ನಿನ ನೆನಪಾಗಲಿಕ್ಕೆ ಅಡ್ಡಿ ಇಲ್ಲ.

ತೀರ್ವೆ ಮುಂದಿನ ವರ್ಷಕ್ಕೆ ಹೆಚ್ಚಿಸುವದರ ಸಂಬಂಧ ಶ್ಯಾನಭೋಗ ಜನರ ಹತ್ತರ ಮಾಹಿತಿ ಕೇಳಿ ಇಲ್ಲಿಯೇ ದುಡಿಸುತ್ತಿರುವರು. ಸರಕಾರಕ್ಕೊಂದು ಲಾಭದವಿಷಯ. ಬಡ ರೈತರಿಗೊಂದು ಹಾನಿಯ ವಿಷಯ.

ಬಡ ಶ್ಯಾನಭೋಗ ಜನರಿಗೆ [illegible] ಮಳಗಾಲದಲ್ಲಿ ಕೊಡಲಿಲ್ಲಂತೆ. ಈಗಿನ ಮಿ|| ಕಲೆಕ್ಟರ

ಸಾಹೇಬರು ಅನುಗ್ರಹ ಮಾಡುವರೋ?

ಈ ತಾಲೂಕಿನಲ್ಲಿ ನೂಲುವ ಸದಸ್ಯರು ೨೫ ಇದ್ದಿರುವರು. ಅವರೆಲ್ಲ ಮಾರ್ಚ ತಿಂಗಳ ನೂಲು ಕೊಟ್ಟಿರುವದಾಗಿ ತಿಳಿಯುತ್ತದೆ. ನೂಲುವವರಿಗೆ ಬೇಕಾಗುವ ಎಲ್ಲ ಸಾಧನಗಳು (ರಾಟಿ, ಟಕ್ಳಿ, ಹಂಜಿ ವಗೈರೆ) ರಾಷ್ಟ್ರೀಯ ಶಾಲೆಯಲ್ಲಿ ಸಿಗುವದಾಗಿ ಕಾರ್ಯದರ್ಶಿಯವರು ತಿಳಿಸುತ್ತಾರೆ.

ರಾಷ್ಟ್ರೀಯ ಶಾಲೆಯ ವಾರ್ಷಿಕ ಪರೀಕ್ಷೆಯು ಮುಗಿದು ಪ್ರತಿ ವರ್ಗದ ಪ್ರಥಮರಿಗೆ ಬಹುಮಾನಗಳನ್ನು ಒದಗಿಸಿದರು. ರಾಷ್ಟ್ರೀಯ ಶಾಲೆಗೆ ಹಳೆಯಾಳದ ಶ್ರೀ|| ದತ್ತಾತ್ರೇಯ ರಾಮಚಂದ್ರ ಕೇಳಕರ, ಚಿದಂಬರ ಗೋವಿಂದಪ್ಪ ಆನೆಗುಂದಿ ಮೊದಲಾದವರು ಭೆಟ್ಟಿಯನ್ನಿತ್ತು, ಉದಾರ ಹಸ್ತದಿಂದ ಧನಸಹಾಯ ಮಾಡಿರುವರು. ಇದರಂತೆ ಧನಿಕರು ತನು ಮನ ಧನದಿಂದ ಸಹಾಯ ಮಾಡಬೇಕಾಗಿ ರಾಷ್ಟ್ರೀಯ ಶಾಲಾಧ್ಯಕ್ಷರು ವಿನಂತಿ ಮಾಡಿಕೊಳ್ಳುತ್ತಾರೆ.

ಲೋಕಲ್ ಬೋರ್ಡಿನ ಹೊಸ ಚುನಾವಣೆಯು ನವಂಬರ ತಿಂಗಳಿನಲ್ಲಿ ಜರಗುವದಿದೆ

ಶಿರ್ಸಿಯಿಂದ ಇಲ್ಲಿಗೆ ತಂತಿ ಹಚ್ಚುವ ತಯಾರಿ ನಡೆದದೆ. ಶಿರ್ಸಿಯಿಂದ ಒಂದೆರಡು ಮೈಲು ಈಗ ತಂತಿ ಹಚ್ಚಾಯಿತು.

ತಾ|| ಕಾಂಗ್ರೆಸ ಕಮೀಟಿಯು ಸಾಧಾರಣ ಸಭೆಯು ಕಳೆದ ತಾ. ೧೯-೩-೩೧ನೇಗೆ ಸೇರಿ ಈ ಕೆಳಗಿನ ಠರಾವು ಪಾಸು ಮಾಡಿದೆ.

ಖಾದಿ ಬೋರ್ಡಿನ ಬಗ್ಗೆ ರೂ. ೧೦ ರ ಒಂದು ಶೇರಿನಂತೆ, ಒಟ್ಟು ೧೦೦೦ ರೂಪಾಯಿ ನಿರ್ಬಡ್ಡಿಯಿಂದ ೩ ವರ್ಷ ಮುದ್ದತ್ತಿನಿಂದ ಭಾಂಡವಲ ಕೂಡಿಸಲಿಕ್ಕೆ ಖಾದಿ ಬೋರ್ಡಿಗೆ ಈ ಕಮೀಟಿಯು ಅಧಿಕಾರ ಕೊಟ್ಟಿದೆ

ಈ ವರುಷದ ಕಾಂಗ್ರೆಸ ಠರಾವಿನಂತೆ, ಖಾದಿ ಪ್ರಚಾರವು ಬಹಳ ಮಹತ್ವದ್ದಿರುವದರಿಂದ ಸಿದ್ದಾಪುರ ತಾಲೂಕಿನೊಳಗಿನ ಎಲ್ಲ ಗ್ರಾಮ ಕಮೀಟಿಗಳಿಗೆ ಅವರ ಹತ್ತಿರವಿದ್ದ ಎಲ್ಲ ಹಣವನ್ನು ಖಾದಿ ಪ್ರಚಾರದ ಬಗ್ಗೆ ತಾಲೂಕಾ ಕಾಂಗ್ರೆಸ ಕಮಿಟಿಗೆ ಜಮಾಮಾಡಲಿಕ್ಕೆ ಈ ಕಮಿಟಿಯು ವಿನಂತಿ ಮಾಡುತ್ತದೆ.

ವೃತ್ತಸಾರ.

— ಮದ್ರಾಸ ಇಲಾಖೆಯಲ್ಲಿ ಕೃಷ್ಣ ಜಿಲ್ಲೆಯೊಂದಿತ್ತು, ಅದನ್ನು ಈಗ ಒಡೆದು ಇಬ್ಭಾಗ ಮಾಡಬೇಕೆಂದು ಮದ್ರಾಸ ಸರಕಾರವು ನಿರ್ಣಯಿಸಿದೆ. ಒಬ್ಬ ಆಳರಸರು ಹೆಚ್ಚಿದರು!

— ಬೆಳಗಾವಿಯ ಶ್ರೀ ಮಾರುತಿ ದೇವಸ್ಥಾನದಲ್ಲಿ ಅಸ್ಪೃಶ್ಯರನ್ನು ಪ್ರವೇಶಿಸುವದಕ್ಕಾಗಿ ಒಬ್ಬ ಪುಣ್ಯಾತ್ಮರು ಸತ್ಯಾಗ್ರಹವನ್ನು ಕೈಕೊಳ್ಳುವವರಿದ್ದಾರೆ.

— ಪ್ರಬುದ್ಧ ಪ್ರಜೆಗಳಿಗೆ ಮತದಾನದ ಅಧಿಕಾರ ಕೊಡುವ ಕಾಯ್ದೆಯನ್ನು ಜಪಾನ ರಾಷ್ಟ್ರವು ಮಂಜೂರು ಮಾಡಿದೆ. ಇದು ಲೋಕಶಾಹಿ!

— ಕುರುಂದವಾಡದ ಯುವರಾಜರು ಮ್ಹೈಸದರಗಿ ತಾಲೂಕಿನಲ್ಲಿ ಪ್ರವಾಸ ಮಾಡಿದಾಗ ಅಸ್ಪೃಶ್ಯರ ಮಾನಪತ್ರವನ್ನೊಂದು ಸ್ವೀಕರಿಸಿದರು. ಅಸ್ಪೃಶ್ಯರಿಗೆ ಕುಡಿಯುವ ನೀರಿನ ಭಾವಿ, ಸಾರ್ವಜನಿಕ ಧರ್ಮಶಾಲೆ, ಶಿಕ್ಷಣಾಲಯ ಮೊದಲಾದವುಗಳಲ್ಲಿ ಉಚ್ಚ ವರ್ಗದವರೊಡನೆ ಉಪಯೋಗ ಮಾಡಗೊಡುವ ಯೋಜನೆ ಮಾಡಿದರು.

— ಕಳೆದ ೫ ವರ್ಷದಲ್ಲಿ ಬ್ರಿಟಿಶರ ಸೈನ್ಯಖರ್ಚು ೩ ಕೋಟಿ ೭೦ ಲಕ್ಷ ಪವನುಗಳಿಂದ ಕುಗ್ಗಿತು! ನಮ್ಮ ಸೈನ್ಯಖರ್ಚು ಕುಗ್ಗಲಾರದು. ಕಾರಣವೇನು? ನಮ್ಮ ಪಾರತಂತ್ರ್ಯ.

— ಲೀಡಿಂಗ ದೊರೆಗಳು ರಜೆಯಮೇಲೆ ಹೋಗ್ತಾರೆ. ಈ ಬಗ್ಗೆ ತಗಲುವ ಖರ್ಚು ಜಮಾ ಖರ್ಚಿನ ಪತ್ರಿಕೆಯಲ್ಲಿ ತೋರಿಸಲಿಲ್ಲ. ಈ ಬಗ್ಗೆ ಶ್ರೀ|| ರಂಗಸ್ವಾಮಿ ಅಯ್ಯಂಗಾರರು ಪ್ರಶ್ನಿಸಲು ಸಾಕಷ್ಟು ಅವಧಿ ಸಿಗಲಿಲ್ಲೆಂದು ಸರಕಾರವು ಉತ್ತರವನ್ನಿತ್ತರಾಯಿತು. ಬಜೆಟದಬಳಿಕ ಮಂಜೂರಿ ಕೇಳಿದರಾಯಿತು! ಬಜೆಟಿಗೆ ಹೋದದ್ದರಿಂದ ಈಗ ಚರ್ಚೆ ಮಾಡಿ ಫಲವೇನಿಲ್ಲೆಂದು ಮನಸ್ಸು ಸಮಾಧಾನ ಮಾಡಿಕೊಂಡು ಕಾಯ್ದೆ ಕೌನ್ಸಿಲು ಮಂಜೂರಿಯನ್ನಿತ್ತರಾಯಿತು.

— ಹುಬ್ಬಳ್ಳಿಯಲ್ಲಿ ವಿದ್ಯುದ್ದೀಪಗಳನ್ನು ಹಚ್ಚುವ ಯೋಜನೆಯಾಗಿದೆ. ವಿದ್ಯುತ್ತನ್ನು ಹುಟ್ಟಿಸುವ ಕಾರಖಾನೆಯ ನೆಲಗಟ್ಟಿನ ಕಲ್ಲು ಯುಗಾದಿಯ ಶುಭ ಮುಹೂರ್ತದಲ್ಲಿ ಶ್ರೀ ಸಿದ್ಧಾರೂಢ ಸ್ವಾಮಿಗಳ ಯಜಮಾನತ್ವದಲ್ಲಿ ನೆರವೇರಿತು.

— ಕಲಕತ್ತೆಯ ಮುನಿಸಿಪಾಲಿಟಿಯವರು ತಮ್ಮ ಹದ್ದಿನೊಳಗಿಂದ ಮದ್ಯಪಾನ, ಅಫು ಗಾಂಜಾ ಮುಂತಾದ ಮಾದಕ ದ್ರವ್ಯಗಳ ಅಂಗಡಿಗಳನ್ನು ಕಿತ್ತೊಗೆಯಬೇಕಾಗಿ ಬಂಗಾಲ ಸರಕಾರಕ್ಕೆ ಸಮ್ಮತಿಯಿಂದ ಠರಾವು ಮಾಡಿ ತಿಳಿಸಿರುವರು. ಔಷಧಿಗೆ ಈ ಪದಾರ್ಥಗಳು ಅವಶ್ಯವಿದ್ದರೆ, ಅವನ್ನು ಪಡೆಯುವಂತೆ ವ್ಯವಸ್ಥೆಯಾಗಬಹುದೆಂದೂ ಮುನಿಸಿಪಾಲಿಟಿಯವರ ಹೇಳಿಕೆಯಿದೆ

— ಅಮೇರಿಕಾ ಖಂಡದಲ್ಲಿ ಮೆಕ್ಸಿಕೋ ಎಂಬ ಪ್ರದೇಶವಿದೆ. ಇಲ್ಲಿ ಒಬ್ಬ ಹೆಂಗಸು ಬರೇ ೧೩ ಅಂಗುಲ ಎತ್ತರವಿರುವಳು. ಕಾಲು ಹೋದ ಕಾಗೆ ಬಿಡನೆ ಕಾಯಿಯು ಗಿತ್ತಕ್ಕೆ ಸಿಕ್ಕಿದ ಪಟ್ಟದ ಪ್ರಸಂಗ ಬರುವದೇನು?

— ತುರ್ಕಸ್ಥಾನದಲ್ಲಿ ಒಬ್ಬ ಎಳೆ ತುರ್ಕನಿರುವನು. ಆತನ ಪ್ರಾಯ ಬರೇ ೧೫೦ ವರುಷ. ೬ ಮದುವೆಗಳಾದವು. ಐದು ಹೆಂಡರು ಮೃತಪಟ್ಟರು. ಆರನೆಯವಳು ಮುದುಕಿಯಾಗಿರುವಳು. ಮತ್ತೊಂದು ಮದುವೆ ಮಾಡಿಕೊಳ್ಳಬೇಕೆಂದು ಆತನ ಬಯಕೆ.

— ಸಿಂಹಳದ್ವೀಪಕ್ಕೂ ಹಿಂದುಸ್ಥಾನಕ್ಕೂ ಉಗಿ ಬಂಡಿಯ ಏರ್ಪಾಟಾಗುವ ಯೋಜನೆಯಿದೆ. ಇದಕ್ಕೆ ೬ ಕೋಟಿ ೫೦ ಲಕ್ಷ ರೂಪಾಯಿ ಖರ್ಚು. ಈ ಖರ್ಚು ಯಾರ ಕೈಯಲ್ಲಿ? ಉಗಿಹಡಗದ ಪ್ರವಾಸವೇನು ಕೆಡಕೇನು? ಬ್ರಿಟಿಶ ಕಾರಖಾನೆಯವರ ಮಾಲು ಖರೀದಿ ಮಾಡುವವರ ಮನೆಯಿಂದ ಈ ಯೋಜನೆಯಾಗುತ್ತದೇನು?

— ಭಾರತ ಮಂತ್ರಿಗಳಾದ ವೆಜ್ವುಡ ಬೆನ್ ದೊರೆಗಳು ವಿಲಾಯತಿಯ ಪಾರ್ಲಿಮೆಂಟಿನಲ್ಲಿ ಮಾತಾಡುವಾಗ ದೇಶಬಂಧುಗಳಿಗೆ ಮತ್ತೊಮ್ಮೆ ಸಹಕಾರ ಮಾಡಲು ನಿಮಂತ್ರಿಸಿದರು. ಬಹಳದಿಂದ ದೇಶಬಂಧುಗಳು ಉತ್ತರ ಕೊಟ್ಟಿದ್ದೇನೆಂದರೆ— ದಬ್ಬಾಳಿಕೆಯನ್ನು ತಪ್ಪಿಸಿ ರಾಜದ್ರೋಹದ ಕಾರಣಗಳನ್ನು ಪರಿಶೋಧಿಸಿ ಅವನ್ನು ದೂರಗೊಳಿಸಲು ಭಾರತ ಮಂತ್ರಿಗಳಿಗೆ ಆಹ್ವಾನವಮಾಡಿರುವರು.

— ಮಾರ್ಚ ತಿಂಗಳ ೩ ನೇ ತಾರೀಖಿನ ವರೆಗೆ ಅಖಿಲ ಹಿಂದುಸ್ಥಾನದಲ್ಲಿ ರಾಷ್ಟ್ರೀಯ ಸಭೆಗೆ ೧೧೫೦೩ ಮಂದಿ ಸಭಾಸದರಾಗಿರುವರೆಂದು ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯವರು ಪ್ರಕಟಿಸಿರುವರು. ಗುಜರಾತದಲ್ಲಿ ಎಲ್ಲಕ್ಕೂ ಹೆಚ್ಚು ಮಂದಿಗಳು ೩೧೯೬.

— ಕರ್ನಾಟಕದಲ್ಲಿ ೫೩೪ ಮಂದಿಗಳು ಸಭಾಸದರಾಗಿರುವರು. ಸ್ವತಃ ನೂಲುವವರು ೨೮೩ ಮಂದಿ.

— ಸುರತ ಪಟ್ಟಣದಲ್ಲಿ ಕಳೆದ ೩೦ ನೇ ತಾರೀಖಿಗೆ ಗಿರಣಿಗಳಿಗೆ ಬೆಂಕಿ ತಗಲಿ ೩ ಲಕ್ಷ ರೂಪಾಯಿ ಹಾನಿಯಾಯಿತು.

— ಮದ್ರಾಸಿನ ಲೋಕನಾಯಕರಾದ ಶ್ರೀ|| ಶ್ರೀನಿವಾಸ ಅಯ್ಯಂಗಾರರವರು ಕಳೆದ ವಾರದಲ್ಲಿ ಮಂಗಳೂರಿಗೆ ದಯಮಾಡಿಸಿದರು. ಶ್ರೀ|| ಅಯ್ಯಂಗಾರರು ಶ್ರೀ|| ಮನೋರಮಾ ಬಾಯಿಯವರ ನೇತೃತ್ವದಲ್ಲಿ ನಡೆಯುವ ರಾಷ್ಟ್ರೀಯ ಶಿಕ್ಷಣಾಲಯವನ್ನು ನೋಡಿ ಆನಂದಪಟ್ಟರು. ವಿದ್ಯಾರ್ಥಿಗಳು ಸ್ವಂತ ಅಡಿಗೆ ಮಾಡಿ ಉಣ್ಣುವ ಯೋಜನೆಯಿಂದ ಸಂಸ್ಥೆಯು ಸ್ವಾವಲಂಬಿಯಾಗುವದೆಂದು ಅವರು ಅಭಿಪ್ರಾಯಪಟ್ಟರು.

— ಫ್ರಾನ್ಸ ದೇಶದ ಸರಕಾರಕ್ಕೆ ಈಗ ಬಹಳ ಹಣದ ಅಡಚಣೆಯಾಗಿದೆ. ಸದ್ಯಕ್ಕೆ ಸರಕಾರವು ಲೋಕದ ಸಾಲಗಳನ್ನು ತೆರಬೇಕಾಗಿದೆ. ಏನು ಮಾಡಬೇಕೆಂದು ಸರಕಾರಕ್ಕೇ ತಿಳಿಯದು.

— ಪುದುಕೋಟೆಯಲ್ಲಿ ಅನಾಥ ಬಾಲಕರ ಸಲುವಾಗಿ ಒಂದು ಮಂದಿರವು ಸ್ಥಾಪಿತವಾಗಿದೆ

— ಇಂಪೀರಿಯಲ್ ಬೇಂಕಿನ ಲಖನೌ ಶಾಖೆಯಲ್ಲಿ ರಾಯಸಾಹೇಬ ವಿಶ್ವಂಭರನಾಥ ಟಂಡನ ಮೊದಲಾದವರ ಮಂದಿಗಳು ಒಂದು ಗುಪ್ತ ಕೂಟವನ್ನು ರಚಿಸಿಕೊಂಡು ಬೇಂಕಿನಲ್ಲಿ ೧೦|| ಲಕ್ಷ ರೂಪಾಯಿಗಳನ್ನು ೬ ವರುಷಗಳಲ್ಲಿ ಅಪಹರಿಸಿದರು. ಈ ಬಗ್ಗೆ ಅಲಹಾಬಾದಿನಲ್ಲಿ ಚೌಕಶಿಯಾಗಿ ರಾಯಸಾಹೇಬ ಮೊದಲಾದವರಿಗೆ ೭ ವರುಷಗಳವರೆಗೆ ಕಠಿಣ ಸಜೆ, ೬ ಲಕ್ಷ ರೂಪಾಯಿಗಳ ದಂಡ ವಿಧಿಸಲಾಗಿದೆ.

— ಮುಂಬಯಿಯಲ್ಲಿ ಮುಮತಾಜಳ ಖಟ್ಲೆ ಯಾನೆ ಬಾವಲಾರ ಕೊಲೆಯ ಪ್ರಕರಣ ಚೌಕಶಿಯಾಗುತ್ತಿದೆ. ಅನೇಕ ಸಾಕ್ಷಿಗಳಾದವು. ಬಾವಲಾರ ಮೋಟಾರ ಡ್ರೈವರನು ಆರೋಪಿ ಇದ್ದನು. ಆತನಿಗೆ ಸತ್ಯಸ್ಥಿತಿ ಹೇಳಬೇಕೆಂದು ಮೆಜಿಸ್ಟ್ರೇಟರು ಮಾಫಿ ಸಾಕ್ಷಿದಾರನಾಗಿ ಇಟ್ಟಿದ್ದರು. ಆದರೆ ಆತನು ಪೋಲೀಸರ ಕಡೆಗೆ ಒಂದು, ಮತ್ತು ಮೇಜಿಸ್ಟ್ರೇಟರ ಕಡೆಗೆ ಮತ್ತೊಂದು ಹೀಗೆ ಭಿನ್ನವಾಗಿ ಹೇಳಿದ್ದರಿಂದ ಆತನ ಸಾಕ್ಷಿಯನ್ನು ಅತ್ತಕ್ಕೇ ಇಟ್ಟು, ಆತನನ್ನು ಪೋಲೀಸರ ಸ್ವಾಧೀನ ಮಾಡಿರುವರು.

— ಕಳೆದ ವಾರದಲ್ಲಿ ಲೀಕಮೋಣಿನ ಠರಾವುಗಳಂತೆ ಇಲ್ಲಿಯ ಆಳರಸರ ಹಕ್ಕನ್ನು ಏರಿಸಿ ಭದ್ರಪಡಿಸುವ ಕಾಯ್ದೆಯ ವಾಚನವು ವಿಲಾಯತಿಯೊಳಗಿನ ದೊರೆಗಳ ಸಭೆಯಲ್ಲಿ ಮಂಜೂರಾಯಿತು. ಕೇವಲ ಇಷ್ಟು ಅಧಿಕಾರ ಜಾಗಗಳನ್ನಾದರೂ ಬ್ರಿಟಿಶರು ವಹಿಸಿಕೊಳ್ಳುವಷ್ಟು ಭದ್ರತೆಯನ್ನು ಹಿಂದುಸ್ಥಾನದಲ್ಲಿ ಜನಿಸುವದಕ್ಕಾಗಿ ಈ ಕಾಯ್ದೆಯು ಏರ್ಪಾಟಾಗುತ್ತದೆಂದು ಬರ್ಕನಹೆಡ ದೊರೆಗಳು ನುಡಿದರು. ಬ್ರಿಟಿಶ ಅಧಿಕಾರಿಗಳ ಚಿಂತೆ! ಬ್ರಿಟಿಶರ ಸ್ವರಾಜ್ಯ ದಾನದ ಸಿದ್ಧತೆ.

— ಆಂಧ್ರ ದೇಶದೊಳಗಿನ ಕಡಪೆಯ ಮುನಿಸಿಪಾಲಿಟಿಯವರು ಆಯುರ್ವೇದ ಹಾಗು ಯುನಾನಿ ಪದ್ಧತಿಯ ಚಿಕಿತ್ಸಾಲಯಗಳನ್ನು ಸ್ಥಾಪಿಸಿದ್ದಾರೆ.

— ಮದ್ರಾಸದಲ್ಲಿ ಒಬ್ಬ ದೇಶಿ ಕೂಲಿಯಾಳಿನ ಕೊಲೆಯಾಯಿತು. ಕೊಲೆಗಡುಕನು ಫ್ರೆಂಚ ದೇಶದ ಒಬ್ಬ ಇಂಜಿನಿಯರ ಸಾಹೇಬರು. ಈತನ ವಿಚಾರಣೆಯಾಗಿ ೧೫ ವರ್ಷದ ಶಿಕ್ಷೆಯಾಯಿತು. ಆರು ತಿಂಗಳು ಕಾರಾಗೃಹವಾಸವನ್ನನುಭವಿಸಿದ ಕೂಡಲೆ ಆತನ ಬಿಡುಗಡೆಯಾಯಿತು. ಕಾರಣವೇನೆಂದರೆ ಆತನು ಪಶ್ಚಾತ್ತಾಪವನ್ನು ಪ್ರಕಟಿಸಿದನಂತೆ! ಕೊಲೆಗಡುಕನು ಹಿಂದವಾಸಿಯವನಿದ್ದು ಫ್ರೆಂಚರ ಕೊಲೆಯಾಗಿದ್ದರೆ ಆತನಿಗೆ ಶಿಕ್ಷೆಯಾವುದಾಗುತ್ತಿತ್ತು! ದಂಡನೆಯಾವುದಾಗುತ್ತಿತ್ತು? ಪಾರತಂತ್ರ್ಯದ ಆಟವಿದು!

— ಕೊಡಗಿನ ವೀರರಾಜೇಂದ್ರ ಪಟ್ಟಣದಲ್ಲಿ ಖಾದಿ ಅಂಗಡಿಯ ಸ್ಥಾಪನೆಯಾಗಿದೆ. ಅಂಗಡಿ ತೆರೆದ ದಿನವೇ ರೂಪಾಯಿ ೩೦೦ರ ಖಾದಿಯ ಮಾರಾಟವಾಯಿತು.

— ಈ ಹೊತ್ತಿನಿಂದ ಪ್ರಾರಂಭವಾಗುವ ರಾಷ್ಟ್ರೀಯವಾರದಲ್ಲಿ ಒಪ್ಪತ್ತಂತೆ ಹಸ್ತಕಾರ್ಯವನ್ನಾಚರಿಸಬೇಕಾಗಿ ಮಹಾತ್ಮರು ಬೋಧಿಸಿರುವರು. ಹರತಾಳವನ್ನಾಚರಿಸಬಾರದಾಗಿ ಮಹಾತ್ಮರ ಹೇಳಿಕೆಯಿದೆ.

— ಅಖಿಲ ಭಾರತೀಯ ವೈದ್ಯಸಮ್ಮೇಲನವು ಹರಿದ್ವಾರದಲ್ಲಿ ನಾಳೆ ಎಪ್ರಿಲ್ ತಾರೀಖು ೩ನೇಗೆ ಸೇರುವದಿದೆ. ಆಯುರ್ವೇದ ಮಾರ್ತಾಂಡ ಪಂಡಿತ ಯಾದವಜಿ ತ್ರಿಕಮಜಿ ಆಚಾರ್ಯರವರು ಸಭೆಯ ಅಧ್ಯಕ್ಷರು.

— ಶ್ರೀ ಕ್ಷೇತ್ರ ಕಾಶಿಯಲ್ಲಿ ಕಳೆದ ತಾ|೨-೩-೪ ನೇಗೆ ಅಖಿಲ ಭಾರತೀಯ ಸಾಧುಮಂಡಳದ ಅಧಿವೇಶನವಾಯಿತು. ಅಧ್ಯಕ್ಷಸ್ಥಾನವನ್ನು ಶಾರದಾ ಪೀಠದ ಶ್ರೀ ಶಂಕರಾಚಾರ್ಯರಾದ ಸ್ವಾಮಿ ಶ್ರೀಭಾರತೀ ಕೃಷ್ಣ ತೀರ್ಥರವರು ಅಲಂಕರಿಸಿದ್ದರು. ಸಾವಿರಾರು ಸನ್ಯಾಸಿಗಳು ಸಭೆ ಸೇರಿದ್ದರು. ಸಾಧುಗಳು ದೇಶೋದ್ಧಾರವ್ರತನಿರತರಾದರೆ ಭಾರತ ಭೂಮಿಯು ಶೀಘ್ರವೇ ಉದ್ಧಾರ ಹೊಂದುವದು.

— ಧರ್ಮಪುರದ ಮಹಾರಾಜರವರು ಕಳೆದ ೫ ತಿಂಗಳಲ್ಲಿ ೧೧ ಚಿರ್ತೆ ಹಾಗು ೨ ಹುಲಿಗಳನ್ನು ಸಂಹಾರ ಮಾಡಿದರು. ಬೇಸಾಯಗಾರರು ಮಹಾರಾಜರಿಗೆ ಹರಸುತ್ತಿರುವರು. ಚಿರ್ತೆ ಹುಲಿಗಳು ನೂರಾರು ದನಗಳನ್ನು ಸಂಹಾರ ಮಾಡುತ್ತಿದ್ದವಂತೆ !

— ಪಂಜಾಬದೊಳಗಿನ ಟಿಕ್ಸಿಲಾ ಪಟ್ಟಣದಲ್ಲಿ ನಯನಮನೋಹರವಾದ ಚಿನ್ನ ಬೆಳ್ಳಿಯ ಭೂಷಣಗಳು ಒಂದು ಮಡಕಿಯಲ್ಲಿ ದೊರಕಿದ್ದವು. ಅವನ್ನು ನಮ್ಮ ಸರಕಾರವು ವಿಲಾಯತಿಗೆ ಒಯ್ದು ಬಿಟ್ಟಿತು. ಇದು ನಮ್ಮ ಕಳೆದ ಸುಲಿಗೆಯೆಂದು ಮುಂಬಯಿಯ ಶ್ರೀ ಚೊವ್ವನಜೀವರು ನುಡಿಯುತ್ತಾರೆ.

— ಇಂದೋರದ ಮಹಾರಾಜರವರು ಸದ್ಯಕ್ಕೆ ವಿಲಾಯತಿಗೆ ಹೋಗುವವರಿದ್ದಾರಂತೆ ! ಐದು ವರ್ಷಗಳ ವರೆಗೆ ಅಲ್ಲಿ ಉಳಿಯುವರಂತೆ ಈ ಪ್ರವಾಸವು ಹಿಂದುಸ್ಥಾನ ಸರಕಾರದ ರಾಜಕಾರಣ ಖಾತೆಯ ಸೂಚನೆ ಮೇರೆಗೆ ಕೈಕೊಳ್ಳಲ್ಪಟ್ಟಿರುವದಂತೆ ! ಮಹಾರಾಜರ ಖಿಲ್ಲೆಯ ಮನಾವತಿಯು ಬೆಳಕಿಗೆ ಬೆದರಿ ಈ ಪ್ರಯಾಣವು ಒದಗಿ ಬಂದಿರುವದೇನು ?

— ಮುಂಬಯಿಯ ಹಿರಿಯ ಹಿತಚಿಂತಕರಾದ ವಿ. ಝಾಬವಾಲಾರವರು ಬಡವರಿಗೆ ವಸ್ತ್ರದಾನ ಮಾಡುತ್ತಿರುವರು. ಅದಕ್ಕೆ ಮುನಸ್ಪಾಲ ಗೃಹಕ್ಷರ್ತರು ೧೫೦ ಖಾದಿಯ ಜೋಡಗಳನ್ನು ಕೊಟ್ಟರು. ಮಾಸ್ತರ ಸ್ವರೂಪ ಸಿಂಗ ಕೆಲವು ಅರಿವೆಗಳನ್ನು ಕೊಟ್ಟಿರುವರು.

— ಕಳೆದ ಮಾರ್ಚ ತಿಂಗಳ ೩೧ನೇ ತಾರೀಖಿಗೆ ಸ್ವರಾಜ್ಯ ಪಕ್ಷದ ಸಭಾಸದರು ಹಾಜರಿದ್ದಿಲ್ಲ. ಕಾಯಿದೆ ಕೌನ್ಸಿಲು ತಿರಸ್ಕರಿಸಿದ ಬಜೆಟ ರಕಮುಗಳನ್ನು ವ್ಹಾಯಿಸರಾಯರು ಸಾರ್ವಭೌಮ ಅಧಿಕಾರಬಲದಿಂದ ಮಂಜೂರ ಮಾಡಿದರೆಂದು ಅವರು ರೇಗಿದ್ದರು. ಈ ಸಿಟ್ಟನ್ನು ಕೇಳುವವರಾರು ?

— ಬಾವಲಾರವರು ಸಾಯುವ ಪೂರ್ವದಲ್ಲಿ ಮರಣಶಾಸನ ಹೇಳಿದ್ದರು. ಅದರೊಳಗೆ ಮಹಾರಾಜರಿಗೆ ಒಂದು ಲಕ್ಷ ರೂಪಾಯಿ ಕೊಡಬೇಕೆಂದು ಇರುವದು. ಮಹಾರಾಜರು ೧೦ ಲಕ್ಷ ರೂಪಾಯಿ ತಮಗೆ ಕೊಡಬೇಕೆಂದು ಹೇಳಿದ್ದರಿಂದಲೂ, ಅದರಂತೆ ಬರೆಯಲ್ಪಟ್ಟಿತ್ತೆಂದೂ, ಸೊನ್ನೆಯನ್ನು ಯಾರೋ ಹೊಡೆದು ಒಂದು ಲಕ್ಷ ಮಾಡಿದರೆಂದೂ ಅವರ ಹೇಳಿಕೆ. ಒಂದು ಸೊನ್ನೆಯಿಂದ ೯ ಲಕ್ಷ ರೂಪಾಯಿಗಳ ಘೋಟಾಳೆ. ಅಂತೂ ಬಾವಲಾರ ಕೊಲೆಯು ಹನುಮಂತನ ಬಾಲದಂತೆ ಬೆಳೆಯುತ್ತ ನಡೆದದೆ.

— ಮುಂಬಯಿಯಲ್ಲಿ ಕೀರ್ತಿಶೇಷರಾದ ಎನ್. ಎಮ್. ವಾಡಿಯಾ ಎಂಬ ಪಾರ್ಸಿ ಗೃಹಸ್ಥರು ಧರ್ಮಕಾರ್ಯಗಳಿಗಾಗಿ ಸಹಾಯ ಮಾಡುವದಕ್ಕೆ ಒಂದು ನಿಧಿಯನ್ನು ನಿರ್ಮಿಸಿರುವರು. ಈ ನಿಧಿಯಿಂದ ಕಳೆದ ೨ ವರ್ಷಗಳಲ್ಲಿ ಅನೇಕ ಸಂಸ್ಥೆಗಳಿಗೆ ೯ ಲಕ್ಷ ರೂಪಾಯಿಗಳು ದಾನ ಮಾಡಲ್ಪಟ್ಟವು.

— ಬಾರ್ಸಿಯ ಮುನಿಸಿಪಾಲಿಟಿಯಿಂದ ನಿರ್ಮಿತವಾದ ಸಕ್ತಿಯ ಶಿಕ್ಷಣ ಮಂಡಳದಲ್ಲಿ ಸ್ತ್ರೀ ಸಮಾಜದ ಕಡೆಯಿಂದ ಪ್ರತಿನಿಧಿಗಳಾಗಲು ಇಬ್ಬರು ವೇಶ್ಯಾ ಸ್ತ್ರೀಯರು ಉಮೇದ್ವಾರರಿದ್ದರು. ಅವರಲ್ಲಿ ಒಬ್ಬಳು ಯಶಸ್ವಿಯಾಗಿ ಸಭಾಸದಳಾದಳು. ಕೊನೆಗೆ ಶಿಕ್ಷಣ ಕಾರ್ಯಕ್ಕೆ ಅಪಾತ್ರಳೆಂದು ತಿಳಿದೋ ಏನೋ ರಾಜೀನಾಮೆಯನ್ನಿತ್ತು ಅದೃಶ್ಯಳಾದಳು.

— ಗುಜರಾಥ ಪ್ರಾಂತದಲ್ಲಿ ಕೆಲ ಅಧಮರು ಬೆಂಕಿ ಹಚ್ಚುವ ಕೃತ್ಯಕ್ಕೆ ಈಡಾಗಿರುವರು. ಅನೇಕ ಕಡೆಗಳಲ್ಲಿ ಬೆಂಕಿಬಿದ್ದು, ೨-೩ ಲಕ್ಷ ರೂಪಾಯಿಗಳ ಹಾನಿಯಾಯಿತು. ಪೋಲೀಸರು ಎಲ್ಲಿರುವರು ?

— ಲೋಕಮಾನ್ಯರ ಮುಂಬಯಿಯೊಳಗಿನ ದಹನ ಭೂಮಿಯ ಸುತ್ತಲು ಬೇಲಿ ಕಟ್ಟುವದಕ್ಕಾಗಿ ಮುಂಬಯಿ ಮುನಸಿಪಾಲಿಟಿಯವರು ೬೦೬ ರೂಪಾಯಿಗಳನ್ನು ಕೊಟ್ಟಿರುವರು.

— ಸರ್ವಾಧಿಪತಿಗಳು ಎಪ್ರಿಲ್ ೧೧ನೇಗೆ ರಜೆ ಕೊಂಡು ವಿಲಾಯತಿಗೆ ತೆರಳುತ್ತಾರೆ. ಅವರು ಪುನಃ ಹಿಂದುಸ್ಥಾನಕ್ಕೆ ಬರಲಾರರೆಂದು ಅನೇಕರ ಹೇಳಿಕೆ; ವಿಂಟರಟನ್ ದೊರೆಗಳು ಆಗಸ್ಟ ೧೧ನೇ ದರೊಳಗೆ ಅವರು ಹಿಂದುಸ್ಥಾನಕ್ಕೆ ಮರಳಿ ಬರುವರೆಂದು ಹೇಳಿದರು. ರೀಡಿಂಗರು ಬರಲಿ, ಹೋಗಲಿ, ನಮ್ಮ ರಾಜ್ಯ ಪದ್ಧತಿಯು ಬದಲಿದ ಹೊರತು ನಮ್ಮ ಕಲ್ಯಾಣವಾಗದು.

ಜಾಹೀರ ನೋಟೀಸು.

ದರಖಾಸ್ತ ನಂಬರು ೭೩-೧೯೨೫.

ಧಂದೆ ನೋಟೀಸು ವ ಅಮಲ ಬಜಾವಣಿಯ ಹುಕುಮು ಯಾಕೆ ಕೊಡಬಾರದೆಂಬುದರ ಕಾರಣವನ್ನು ತೋರಿಸುವ ಬಗ್ಗೆ ನೋಟೀಸು (ಆ ೨೧ ಕಾ. ೨೨.)

(ಫಾರ್ಮ ನಂಬರು ೬, ಪರಿಶಿಷ್ಟ ಇ. ಶೆಡ್ಯೂಲ ೧.)

ಕುಮಟಾ ಇಲ್ಲಿಯ ಸಬಜಜ್ಜ ಕೋರ್ಟಿನಲ್ಲಿ.

[illegible] ಕುಮಟಾ ಇಲ್ಲಿ ನಿ||

ದಿವಾಣಿ ಮುಕದ್ದಮೆ ನಂಬರು ೧೪೭ ಸನ್ ೧೯೨೨ ನೇ ಸ್ಪೆಶಲ್

ಮ್ಹಾಕ್ರಿಬಾದ ದೇವರಾವ ನಾಡಕರ್ಣಿ }
ರಕ್ಷಕ ತಾಯಿ ರೆಖ್ಮಾಬಾಯಿ
ದೇವರಾವ ನಾಡಕರ್ಣಿ ಸಾ|| ಕುಮಟಾ }
ವಾ| ರಾ| ಕುಲಕರ್ಣಿ

ವಿರುದ್ಧ

ಮಂಗೇಶ ದೇವರಾವ ನಾಡಕರ್ಣಿ
ಮೈ.ತ ನಾರಾಯಣರ
(A) ಸಂಜೀವ ಮಂಗೇಶ ನಾಡಕರ್ಣಿ } ಪ್ರತಿವಾದಿ

ಇವರಿಗೆ—

ವಾದಿ ಇವರು ಸನ್ ೧೯೧೭ ನೇ ಇಸವಿಯ ೧೪೫ ನಂಬರಿನ ದಾವೆಯಲ್ಲಿ ಆದ ಹುಕುಮುನಾಮೆಯ ಅಮಲಬಜಾವಣೆಗಾಗಿ ಈ ಕೋರ್ಟಿಗೆ ಅರ್ಜಿಯನ್ನು ಮಾಡಿರುವ ಕಾರಣ ಈ ಲೇಖದಿಂದ ನಿಮಗೆ ನೋಟೀಸು ಕೊಡುವದೇನಂದರೆ:— ಸನ್ ೧೯೨೫ ನೇ ಜೂನ ತಿಂಗಳಿನ ೮ ತಾರೀಖಿನ ದಿವಸ ನೀವು ಈ ಕೋರ್ಟಿನ ಮುಂದೆ ಬೆಳಿಗ್ಗೆ ೧೧ ಘಂಟೆಗೆ ಹಾಜರಾಗಿ, ಅಮಲಬಜಾವಣೆಯ ಹುಕುಮು ಯಾಕೆ ಕೊಡಬಾರದೆಂಬುದರ ಕಾರಣವನ್ನು ತೋರಿಸಬೇಕು, ಮತ್ತು ಆ ದಿವಸ ನಿಮ್ಮ ಧಂದೆ ಯಾವದಿರುವದು ತಿಳಿಸತಕ್ಕದ್ದು.

ಈ ಹೊತ್ತು ಸನ್ ೧೯೨೫ ನೇ ಇಸವಿಯ ಮಾರ್ಚ ತಿಂಗಳಿನ ೩೦ ನೇ ತಾರೀಖಿನಲ್ಲಿ ನಮ್ಮ ಸಹಿ ಮಾಡಿ ಮತ್ತು ಕೋರ್ಟಿನ ಮೋಹರು ಮಾಡಿ ಕೊಡಲ್ಪಟ್ಟಿತು.

ಕೋರ್ಟಿನ ಮೊಹರು.

A. G. Balvalli,
ಜಡ್ಜ.

ಜಾಹೀರ ನೋಟೀಸು.

ಇದೇ ಬರುವ ಎಪ್ರಿಲ ತಿಂಗಳ ತಾರೀಖು ೧೯ ನೇ ರವಿವಾರ ದಿವಸ ಮಧ್ಯಾಹ್ನದ ಘಂಟೆ ೪ರ ಸಮಯ ಶ್ರೀ ಮ್ಹಾಳಸಾ ದೇವಸ್ಥಾನದಲ್ಲಿ ಜನರಲ್ ಕಮಿಟಿ ಕೂಡಿ ಕೆಳಗೆ ಬರೆದ ವಿಷಯಗಳ ಕುರಿತು ವಿಚಾರವಾಗೋದು ನಿಶ್ಚಯಿಸಿರುವದರಿಂದ ಸದ್ರಿ ಹೊತ್ತಿಗೆ ತಾವೆಲ್ಲರೂ ದಯಮಾಡಿ ಬಂದು ಸಭೆಗೆ ಸೇರಬೇಕಾಗಿ ಅಪೇಕ್ಷೆಯಿದೆ.

ವಿಷಯಗಳು.

೧. ಸನ ೧೯೨೪—೨೫ ನೇ ಸಾಲಿನಲ್ಲಿ ನಡೆದ ಕೆಲ್ಸ ಪರಾಂಬರಿಸುವದು.

೨. ಕಳೆದ ೧೯೨೪-೨೫ ನೇ ಸಾಲಿನ ಬಾಬ್ತು ಶೇರ ಭಾಂಡವಲಿನಮೇಲೆ ಕೊಡಬೇಕಾದ ಡಿವ್ಹಿಡೆಂಡ ಯಾನೆ ಮುನಾಫೆ ರಕಮ್ಮು ಯಾವ ದರದಿಂದ ಕೊಡಬೇಕೆಂಬದು ನಿಶ್ಚಯಿಸುವದು.

೩. ಚಾಲು ೧೯೨೫-೨೬ ನೇ ಸಾಲಿನಬಗ್ಗೆ ಮೇನೇಜಿಂಗ ಕಮೀಟಿಯು ಮೆಂಬರರ ನೇಮಣೂಕಿ ಮಾಡುವದು

೪. ಶೇರುಗಳ ಮೇಲಿನ ಎರಡನೇ ಕಂತಿನ ಹಣವನ್ನು ಬರಮಾಡಿಕೊಳ್ಳುವ ವಿಚಾರಮಾಡುವದು.

೫. ಬುಡಾವ ಖಾತೆಯ ಬಗ್ಗೆ (Bad and doubtful debts) ಬಾಕಿಲೇಣಿಗಳಲ್ಲಿ ಪ್ರೊವಿಜನ ಮಾಡುವದು.

೬. ಸದ್ರಿ ಬೇಂಕಿನ ಸೆಕ್ರೆಟರಿಯವರು ಬಡತಿ ಬಗ್ಗೆ ಕೊಟ್ಟ ಅರ್ಜಿ ಮೇನೇಜಿಂಗ ಕಮಿಟಿಯವರು ಮಹಾಸಭೆಗೆ ಪುನರ್ವಿಚಾರದ ಬಗ್ಗೆ ಶಿಫಾರಸ ಮಾಡಿದ್ದರ ವಿಚಾರ ಮಾಡುವದು.

೭. ಸದರ ಬ್ಯಾಂಕಿನ ಕಾಯಮು ನೌಕರ ಜನರ ಪಗಾರ ಸ್ಕೇಲು ಹಾಗೂ ಪ್ರೊವಿಡೆಂಟ ಫಂಡ ಚಾಲು ಮಾಡುವ ವಿಷಯ.

೮. ನೌಕರ ಜನರಿಗೆ ಕೊಟ್ಟ ಬಡತಿ ಬಗ್ಗೆ ವಿಚಾರ ಮಾಡಿ ಅದನ್ನು ಮಂಜೂರ ಮಾಡುವ ವಿಷಯ ಹಾಗೂ ಅವರಿಗೆ ವಾರ್ಷಿಕ ಬೋನಸ ಕೊಡುವ ಬಗ್ಗೆ ಬಂದ ಅರ್ಜಿಗಳ ವಿಚಾರ ಮಾಡುವದು.

೯ ಕಮೀಟಿಯು ಮುಂದೆ ಬರುವ ಇತರ ವಿಷಯಗಳು.

ಕುಮಟಾ, }
೫-೪-೨೫ }
Annapa R. Pai.
Chairman.
Kumta Urban Co-operative
Credit Bank Ltd.

◆

ಉತ್ತಮ ಮಾಲು! ಉತ್ತಮ ಮಾಲು!

ಮಂಗಳೂರ ಹಂಚು!

ನಮ್ಮ ಊರಾವೃ ಮಂಗಳೂರ ಮಿಶನ್ ಹಂಚುಗಳು ನಮ್ಮಲ್ಲಿ ಮಾರಾಟಕ್ಕೆ ಸಿಗುವವು. ಬೇಕಾದವರು ಮಾಲು ನೋಡಿ ದರವಾರ ತಿಳಕೊಳ್ಳಬಹುದು. ದರವಾರ ಸವಲತ್ತಿಯಿರುವವು

ಪತ್ತೆ:— ಕಾಜೀ ಅಬ್ದುಲ್ ಖಾದರ,

ಮುನಸಿಫ್ ಕೋರ್ಟ ಸಮೀಪ, ಕುಮಟಾ

OYALTY STRUCK!

Mr. Noronha's plight.

(*Continued from 3rd page.*)

s a candidate for the Legislative Council. But considering it to be a hopeless task, he all of a sudden disappeared from the stage! So if my memory does not fail me it is this hero of ours who with the nominal excuse of "forest grievances" st non-co-operated with the Government to gain the good will of the public in the early stage of the Non-Co-operation movement. And it is mainly for this reason and not for anything else that the public granted him his last seat in the Municipality. Secondly, he conceived of retaining his membership for a further period of 3 years and strained every nerve in the last election but in vain. So he made up his mind to gain his end by other means. And thirdly he conceived he could be nominated by non-co-operating with the public. With this intention it seems he opposed the "Gandhi photo resolution," which was supported by the rest that were present. Taking advantage of this opportunity he reported the matter to higher authorities to prejudice them against Rao Bahadur Pandit and Mr S S. Patil the Government leader (Mr Patil was not present in the meeting) and waited for the result. But unfortunately N. Noronha Esq. L. C. E. could not be seen in the nomination list! So he failed and miserably failed. This led him to a perplexed situation and he had to resign. Such being the case, I think there is no necessity of discussing the question of keeping the photo of Mahatmaji, the greatest man, who is considered to be the symbol of self-sacrifice, justice, peace and unity, honoured by all castes and communities, respected by mets and; princes and addressed Municipalities and Corporations Calcutta and Alahabad, nay, en by that of Bombay which is the head of our Sirsi Municipality.

m, 30-3-1925.

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ ಬೀ ಯುವರ

ಸುಗಂಧ ನಶ್ಯದ ಪುಡಿ.

(Registered Trade Mark.)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರು ಗಳಿಗೆ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ- ಪಿನಸಿ, ಒಂದೆತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇರಿಲ್ಪಟ್ಟ ನರ ವ್ಯಾಪಾರವು ಸ್ವಸ್ಥವಾಗಿ ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡುತ್ತದೆ. ಸುವರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವು ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ [illegible] ದಿನಸದಾಗಿ ಉಪಯೋಗಿಸುತ್ತಾರೆ. ನಮೂದಿಸಿ ಟಪಾಲ ಕಳಿಸಲಾಗುವದು.

ಒಂದು ಡಬ್ಬಿಗೆ ಕ್ರಯ ರೂ ೦-೪-೦ ಪ್ಯಾ. ಪಿ ೪ ಆಣೆ

ಡಜನ್ ೧ ಕ್ಕೆ ರೂ. ೨-೮-೦ ಪ್ಯಾ ಪಿ ೦ ೮ ೦

ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ - ಗುರುಬಸವ ಅಂಡ್ ಕಂಪನಿ ಲಿಮಿಟೆಡ್

ಪೋ ಬಾ. ೫೧೦, ಮದರಾಸು

* * *

ಅಮೇರಿಕನ್ ಉಪಾಯ.

ಎಂಬ್ರೋಸಿಯಾ.

ಸ್ತ್ರೀರೋಗಪರಿಹಾರಕ್ಕಾಗಿ.

ಎಂಬ್ರೋಸಿಯಾವು ಸಮಸ್ತ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು. ಇದು ಸ್ತ್ರೀಸೌಂದರ್ಯವನ್ನುಂಟುಮಾಡುತ್ತದೆ ಸಾಮಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರುತ್ತದೆ ಚಲೋ ಆಹಾರ ದೊರೆಯದೆ, ವಿಶೇಷ ಆಯಾಸ ತೊಕ್ಕುವದರಿಂದ ಸ್ತ್ರೀಯರ ಪ್ರಕೃತಿಯು ಕೆಡುತ್ತದೆ. ಮುಟ್ಟಾಗುವಾಗ ಶೂಲಿ ಏಳುವದು, ಮುಟ್ಟಾಗದಿರುವದು, ಅಪಸ್ಮಾರ, ಬಂಜೆತನ ಮುಂತಾದ ಗರ್ಭಾಶಯದ ರೋಗಗಳು, ಅಜೀರ್ಣ, ತಲೆಶೂಲಿ ಭ್ರಮಿಷ್ಟತನ ಇವೆಲ್ಲ ಸ್ತ್ರೀರೋಗಗಳಮೇಲೆ ರಾಮಬಾಣ ಮದ್ದು. ಎಂಬ್ರೋಸಿಯಾವು ಸಮಸ್ತ ಸ್ತ್ರೀರೋಗಗಳನ್ನು ದೂರಮಾಡಿ, ಸ್ತ್ರೀಯರನ್ನು ಸಶಕ್ತ ಹಾಗು ಸೌಂದರ್ಯವಂತರನ್ನಾಗಿ ಮಾಡುತ್ತದೆ.

ಒಮ್ಮೆ ಪರೀಕ್ಷೆ ನೋಡಿ

ಬೆಲೆ ಬಾಟ್ಲಿ ೧ ಕ್ಕೆ ರೂಪಾಯಿ ೩-೦-೦

ಏಜಂಟರು:— **ವೀರಿಯಲ ಏಜನ್ಸಿ,**

ಪ್ರಿನ್ಸೆಸ ಸ್ಟ್ರೀಟು, ಮುಂಬಯಿ ನಂಬರ ೨.

* * *

ತಾಮ್ರ ಹಿತ್ತಾಳಿ ಭಾಂಡೆ

ವ ತರತರದ ಇತರ ಭಾಂಡೆಗಳು.

ಮಹಾಶಯರಿಗೆ, ನಮ್ಮ ಕಂಪನಿಯು ಸದ್ಯದಲ್ಲಿ ಸ್ಥಾಪನೆಯಾಗಿ ತಾಮ್ರ ಹಿತ್ತಾಳೆ ಭಾಂಡೆಗಳನ್ನು ಇಲ್ಲಿಯೇ ತಯಾರಿಸಿ ಗ್ರಾಹಕರಿಗೆ ಸೋವಿಯ ಧಾರಣೆಯಿಂದ ಮಾತ್ರ ಭಾಂಡೆಗಳು ಸಿಗುವಂತೆ ಮಾಡುತ್ತಿರಲು, ಬರಬರುತ್ತ ಗಿರಾಕಿಗಳು ತರತರದ ಭಾಂಡೆಗಳನ್ನು ಇಚ್ಛಿಸಹತ್ತಿದ್ದರಿಂದ ಆಯಾಯ ನಮೂನೆಯ, ಸಂದಿನ ವ ಬಿನ್ ಸಂದಿನ ಭಾಂಡೆಗಳನ್ನು ಶೋಧ ಮಾಡುವದಕ್ಕಾಗಿ ಹಿಂದುಸ್ಥಾನದಲ್ಲೆಲ್ಲ ಸಂಚರಿಸಿ, ನೋಟಕ್ಕೆ ಅಂದವಾಗಿ ಕಂಡು ಬಂದ ತಾಮ್ರ ಹಿತ್ತಾಳೆ ಕಂಚು ಇವೇ ಮೊದಲಾದ ಧಾತುಗಳ ಭಾಂಡೆಗಳನ್ನು ಕುಂಭಕೋಣ, ತ್ರಿನಾವೇಲಿ, ತಿರಪೂರ, ಬೆಂಗಳೂರ, ಕಾರಸ್ಥಿ, ಹುಬ್ಬಳ್ಳಿ, ನಾಶಿಕ, ಪುಣೆ, ಮುರಾದಬಾದ, ಮುಂಬಯಿ ಮುಂತಾದ ಪ್ರಸಿದ್ಧ ಪಟ್ಟಣಗಳಿಂದ ಖರೇದಿಸಿ ತಂದಿಟ್ಟು, ಗಿರಾಕಿಗಳು ಕೇಳಿದ ಭಾಂಡೆಗಳನ್ನು ಕೊಡುವಂತೆ ಅನುಕೂಲತೆಯನ್ನೂ, ಇದಕ್ಕೂ ಹೆಚ್ಚಿನ ನಮೂನೆಯ ಭಾಂಡೆಗಳನ್ನು ಗ್ರಾಹಕರು ಅಪೇಕ್ಷಿಸಿದಲ್ಲಿ ಆಗಿಂದಾಗಲೇ ತಯಾರಿಸಿ ಕೊಡುವದರ ಉತ್ತಮ ತರಗತಿಯ ಮೇಸ್ತ್ರಿಯರನ್ನೂ ಇಟ್ಟಿರುತ್ತೇವೆ. ಇದಲ್ಲದೆ, ನಮ್ಮ ಕಂಪನಿ ಶಾಖೆಗಳು ಅಂಕೋಲಾ—ಶಿರ್ಸಿಯಲ್ಲಿ ಇರುವಂತೆ, ಅಲ್ಲಿಯೂ ಎಲ್ಲಾ ತರದ ಭಾಂಡೆಗಳು ತಯಾರಿರುವವು. ಬೇಕಾದವರು ಅಲ್ಲಲ್ಲಿ ಖರೇದಿಸಬಹುದು. ಈ ಹೊರತು, ದಕ್ಷಿಣ ಕಾನಡಾ ಮಂಗಳೂರಿನಲ್ಲೂ ಮುಖ್ಯ ದುಕಾನವಿರುವದು. ಅಲ್ಲಿಯೂ ತರತರದ ಭಾಂಡೆಗಳು ವಿಕ್ರಿ ಬಗ್ಗೆ ತಯಾರಿರುವವು. ಹೊಸ ಹೊಸ ನಮೂನೆಯ ಭಾಂಡೆಗಳನ್ನೂ, ಕೊಪ್ಪರಿಗೆಗಳನ್ನೂ ಕೂಡಲೇ ಅಪೇಕ್ಷಿತರ ಕಣ್ಮುಂದೆಯೇ ಅಲ್ಪಾವಧಿಯಲ್ಲಿ ತಯಾರಿಸಿ ಕೊಡುವ ಸಾಧನಗಳ ಅನುಕೂಲತೆಯೂ ಇಟ್ಟಿರುತ್ತದೆ. ಇಷ್ಟು ಸೋಯಿಯಿಂದಾದರಿಯ ಭಾಂಡೆಗಳು ಇಚ್ಛಿತ ವೇಳೆಗೆ ಮತ್ತೆಲ್ಲಿಯೂ ದೊರೆಯಲಾರವು. ಬೇಕಾದವರು ಈ ಕೆಳಗಿನ ಪತ್ತೆಯ ಮೇಲೆ ಟಪಾಲದ್ವಾರ ಪತ್ರವ್ಯವಹಾರ ಮಾಡಿ ಬೇಕಾದ ಮಾಹಿತಿ ಪಡೆಯಬಹುದು. ಗ್ರಾಹಕರಿಗೂ, ವ್ಯಾಪಾರಿಗಳಿಗೂ ೨೫ ರೂಪಾಯಿಗಳ ಮೇಲೆ ಕಮೀಶನ್ ಕೊಡಲಾಗುವದು.

ಪತ್ತೆ:—

ಅಲ್ಲೀ ಸಾಹೇಬ ಆದಮ ಸಾಹೇಬ
ಬಸ್ತಿ ಹಿತ್ತಲ ಕಂಪನಿ, ಕುಮಟಾ.
ಪೋಸ್ಟ—ಕುಮಟಾ. ಜಿಲ್ಲಾ ಉ. ಕಾನಡಾ.

ಕರ್ನಾಟಕ ಮಹಾವಿದ್ಯಾಲಯದಿಂದ ಹೊರಡುವ

ತಿಳಿಗನ್ನಡದ **ಸ್ವಧರ್ಮ** ಮಾಸಪತ್ರಿಕೆ

ಸಂಪಾದಕ— ಸುರೇಂದ್ರ ಶಿವರಾವ ದೇಸಾಯಿ

ಚೈತ್ರ ಮಾಸದಿಂದ ದ್ವಿತೀಯ ವರ್ಷ ಪ್ರಾರಂಭ

ಪ್ರಪಂಚದ ಸಂಪತ್ತು, ಪಾರಮಾರ್ಥಿಕ ಸಂಪತ್ತು ಇವನ್ನು ಬೆಳೆಯುವಂತೆ ಸ್ವಸಂಸ್ಕೃತಿ ಪ್ರೇಮ ಸ್ವದೇಶ ಪ್ರೀತಿ ಸ್ವಭಾಷಾಭಿಮಾನ ಸ್ವಧರ್ಮಾನುರಾಗ ಸ್ವಾರ್ಥ ತ್ಯಾಗ ಮುಂತಾದ ಗುಣಗಳನ್ನು ಉಜ್ವಲಗೊಳಿಸುವಂಥ ಕೀರ್ತನ ಪುರಾಣ ಪ್ರವಚನ ನಿಬಂಧ ಜೀವನಚರಿತ್ರೆ ಇತಿಹಾಸ ನಾಟಕ ಕಥೆ ಮತ್ತು ಕಾದಂಬರಿ ಮುಂತಾದ ರೂಪದಲ್ಲಿ ಜನಮಂಡಲಿಯ ಉನ್ನತಿಗೆ ಅಗತ್ಯವಾದ ಸರ್ವ ವ್ಯವಹಾರಗಳನ್ನು ಸ್ವಧರ್ಮ ದೃಷ್ಟಿಯಿಂದ ವಿಚಾರ ಮಾಡಿ ವಿವರಿಸುವದು. ಚಂದಾ ವರ್ಷಕ್ಕೆ ೩ ರೂಪಾಯಿ. ಕಳೆದ ವರ್ಷದ ಸಂಚಿಕೆಗಳನ್ನೆಲ್ಲ ಸೇರಿಸಿ ಕಟ್ಟಿದ ಪುಸ್ತಕದ ಬೆಲೆ ರೂ ೩-೮-೦

ವ್ಯವಸ್ಥಾಪಕ, "ಸ್ವಧರ್ಮ", ಧಾರವಾಡ

ವಿಶೇಷ] ಅನುಭವಸಿದ್ಧ ಪಥ್ಯವಿಲ್ಲ

ವನೌಷಧಿಮೂಲಿಕೆಗಳು

ವಾಯುದುಮ್ಮಾನ (ನ್ಯುಮೋನಿಯಾ) ವಾಂತಿ ಭ್ರಾಂತಿ (ಕಾಲರಾ) ಅರ್ಧಾಂಗವಾಯು (ಪೆರಾಲಿಸಿಸ್) ಹುಚ್ಚು ನಾಯಿ ಕಡಿತ, ಸರ್ಪಸುತ್ತು, ಹೊಟ್ಟೆಯಲ್ಲಿ ಕೃತ್ರಿಮ ವಿಷಹಾಕಿದ್ದು (ಕೈಮದ್ದು) ವಗೈರೆ ರೋಗಗಳಿಗೆ ಒಂದೇ ಒಂದು ಮೂಲಿಕೆಯಿಂದ ಖಾತ್ರಿಯಾಗಿ ತೀವ್ರ ಗುಣಬರುವದು. ಇಷ್ಟು ಬಹುಕಾಲದಿಂದ ಅನುಭವ ತಕ್ಕೊಂಡು, ಹಾಗು ಪ್ರತಿನಿತ್ಯ ಈಕಡೆಗೆ ಒಳಕೆಯಲ್ಲಿದ್ದು ಖರ್ಚಾಗುವ ಔಷಧಿಗಳ ತಾಜಾ ಮೂಲಿಕೆಗಳು ! ಒಮ್ಮೆ ತರಿಸಿ ಅನುಭವ ತಕ್ಕೊಂಡರೆ ಖಾತ್ರಿಯಾದೀತು. ಕಾಲರಾ ಔಷಧಿಗಳ ದ್ರಾವಕ (Tincture) ಸಹ ಆರ್ಡರ ಸೂಚಿಸಿದರೆ ಕಳುಹುವೆವು.

ವಾಯುದುಮ್ಮಾನದ ಬಗ್ಗೆ ಔಷಧಿ ಮೂಲಿಕೆ ತೊಲೆ ೧ಕ್ಕೆ	೦-೨-೦
ಕಾಲರಾದ ಬಗ್ಗೆ ,, ,,	೦-೨-೦
ಅರ್ಧಾಂಗ ವಾಯುವಿನಬಗ್ಗೆ	೦-೪-೦
ನಾಯಿ ಕಡಿತದಬಗ್ಗೆ	೦-೪-೦
ಸರ್ಪಸುತ್ತಿನ ಬಗ್ಗೆ	೦-೨-೦
ಹೊಟ್ಟೆಯಲ್ಲಿ ಕೃತ್ರಿಮ ಔಷಧಿ ಬಿದ್ದಬಗ್ಗೆ ತೊಲೆ ೧೦ಕ್ಕೆ	೦-೮-೦
ರಕ್ತಶುದ್ಧಿ ಮ ಮಲಶೋಧನೆ ಬಗ್ಗೆ ಮೂಲಿಕೆ ರಾತ್ಲ ೧ಕ್ಕೆ	೧-೦-೦
ಮೋರಾವಳಾ (ನೆಲ್ಲಿಕಾಯಿ ಗುಳಂಬ) ರಾತ್ಲ ೧ಕ್ಕೆ	೧-೦-೦

ರಾತ್ಲಗಟ್ಲೆ ಯಾ ಅದಕ್ಕೂ ಹೆಚ್ಚು ತರಿಸಿಕೊಳ್ಳುವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು. ಟಪಾಲ ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿ ಪತ್ರ ದ್ವಾರಾ. ಅನುಪಾನಪತ್ರ ಔಷಧಿ ಸಂಗಡ

ಎನ್. ಜಿ ಹೆಗಡೆ, ಮಾಸ್ಕೇರಿ.

ಪೋಸ್ಟ—ಬಂಕಿಕೋಡ್ಲ ಜಿ. ಉತ್ತರ ಕಾನಡಾ

ವೈದ್ಯರು ಬಡದಾಡಿದರೆ ಏನು ಮಾಡುವದು?

ಇಂಥ ಜ್ವರದ ಪ್ರಕರಣಗಳಲ್ಲಿ ಬಾಟ್ಲಿವಾಲಾ ಅವರ ಎಗ್ಯೂಮಿಕ್ಸ್ಚರವನ್ನು ಯಥೇ ಉಪಯೋಗಿಸಿರಿ ಡೆಂಗ್ಯೂ ಮೊದಲಾದ ಎಲ್ಲ ಜಾತಿಯ ಜ್ವರಗಳಿಗಾಗಿಯೇ ಇದು ತಯಾರಿಸಲ್ಪಟ್ಟ ಹಾಗು ಬಾಟ್ಲಿವಾಲಾರವರ ಎಗ್ಯೂ ಪಿಲ್ಸ ಇವು ಜ್ವರಗಳನ್ನು ಖಚಿತವಾಗಿ ಗುಣ ಮಾಡು ವದಲ್ಲದೆ, ಸಮಸ್ತ ಪ್ರಕಾರದ ತಲೆ ನೋವುಗಳನ್ನೂ ಪರಿಹರಿಸುತ್ತದೆ ಆಯ್ ಎಮ್ ಎಸ್ ವೈದ್ಯ ಇದಕ್ಕೆ ಶಿಫಾರಸುಪತ್ರವನ್ನು ಕೊಟ್ಟಿರುವರು ಇದರಿಂದ ಹೃದಯದಮೇಲೆ ಯಾವ ದುಷ್ಪರಿಣಾಮಗಳ ಸಂಭವಿಸುವದಿಲ್ಲ ಹಿಂದುಸ್ಥಾನ, ಬ್ರಹ್ಮದೇಶ, ಸಿಂಹಲದ್ವೀಪ, ಆಫ್ರಿಕಾಗಳಲ್ಲೆಲ್ಲ ೫೦ ವರ್ಷಗಳಿಂ ಖ್ಯಾತಿ ಅನೇಕ ಭಾರತೀಯ ಪ್ರದರ್ಶನಗಳಲ್ಲಿ ಚಿನ್ನ, ಬೆಳ್ಳಿಯ ಪದಕಗಳು ದೊರಕಿವೆ ಇದೊಂ ಈಗ ಚಾಲತಿ ನಾಣ್ಯವಾಗಿದೆ ವ್ಯಾಪಾರಿಯರು ಸಹ ಇವುಗಳ ಮೇಲೆ ಹಣ ಕೊಡುತ್ತಿರುವ ಬಡವರಿಗೆ ಮಧ್ಯಮ ವರ್ಗದವರಿಗೆ ಇದು ಬಹಳೇ ಉಪಕಾರಿಯು ಇಷ್ಟೇ ಅಲ್ಲ ಪ್ರವಾಸಿಕ ಪ್ರಯಾಣಿಕರಿಗೆ, ಜಲಪರ್ಯಟನದಸಂಗ ಅವಶ್ಯವು

ಏಜಂಟರು ಬೇಕು! ಅರ್ಜಿ ಮಾಡಿದ್ದಲ್ಲಿ ಶರ್ತುಗಳು ತಿಳಿಸಲಾಗುವದು

Dr H L BATLIWALA Sons & Co Ltd
P Warli, Bombay No 18
Telegraphic Address — " *Cuvashapur* Bombay

ಬೇಸಿಗೆಯು ಪ್ರಾರಂಭವಾಯಿತು !

ದನಗಳ ಆಹಾರವಾದ ಕಣಿಕೆಯನ್ನು ಕಾದಿಡಿರಿ

ಕಿರ್ಲೋಸ್ಕರರ ಕಣಿಕೆ ಯಂತ್ರವನ್ನು ಉಪಯೋಗಿಸಿರಿ !!!



ನಮ್ಮ ಕಾರಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕೊರೆಯುವ ಯಂತ್ರಗಳು ತಯಾರಾಗುತ್ತವೆ ಒಂದು ಕೈಯಂತ್ರ ಬೆಲೆ ೩೦ರೂ ಇನ್ನೊಂದು ಗಾಲೀ ಯಂತ್ರ ಬೆಲೆ ೮೫ರೂ ಸಣ್ಣ ಕಮತವುಳ್ಳವರು ಕೈಯಂತ್ರವನ್ನೂ, ದೊಡ್ಡ ಕಮತವುಳ್ಳವರು ಗಾಲೀ ಯಂತ್ರವನ್ನೂ ಉಪಯೋಗಿಸಬಹುದು ಕಣಿಕೆಯು ೪ ಇಂಚುಗಳಿಂದ ಒಂದು ಇಂಚಿನವರೆಗೆ ಕೊರೆಯಲ್ಪಡುತ್ತದೆ ಸವಿಸ್ತರ ಸಂಗತಿ ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಿರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ,
ಜಿಲ್ಲಾ ಸಾತಾರಾ

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ಗಳಮೇಲೆ, ರಾಮಬಾಣದಂತಾಗುವದು, ಕಳೆದ ೪೫ ವರ್ಷಗ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಲೆ ಕು ಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು ಆದದರಿಂ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ನೆಗಡಿ, ಸಂಧಿವಾತ ಮೊದಲಾ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅಂಯುದವರು ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು ಕಿಮ್ಮತ್ತು ೧೦ ಆ ೨, ೬ ಖರ್ಚ ಬೇರೆ.

ಅಮೃತಾಂಜನ ಡಿಪೊ, ಫೋರ್ಟ, ಮುಂಬಯಿ

Printed and Published by Krishnarao Keshav Shenvi (Editor) at his Star of Kanara Press Kumta

Reg NO B. 1. 70.

Mondy April 13rd 1925

ವರ್ಷ ೯.

ಕಾನಡಾವೃತ್ತ

THE KANARA NEWS

ಸಂಚಿಕೆ ೨೭

ಕ್ರಯದ ವರ್ಗಣಿ

ಊರಲ್ಲಿ ಆಗಾವು
ರೂಪಾಯಿ 2-4-0
ಪರಸ್ಥರಿಯಿಂದ
ರೂ 3-0-0
ಅ ಚಿವೆಟ್ಟಿ ಸೇರಿ
ರೂಪಾಯಿ 3-2-0
ಸಂಚಿಕೆಗೆ 0-1-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ಸ್ಮಾಲ್
ಪೈಕಾ (೧೫ ಎಮ್ ಅಗಲ)
ಆ ಸಾಲುಗಳವರೆಗೆ ರೂ 1-0
ಆ ನಂತರ, ಪ್ರತಿಸಾಲಿಗೆ 0-1-0
ಹೆಚ್ಚಿಂಗದ ಸಾಲು ಎಷ್ಟು
ಬೇಕಾದರಿರುವದೋ ಆ ಪ್ರಮಾಣ
ದಿಂದ ಅಷ್ಟು ಸಾಲುಗಳು ಹಿಡಿ
ಯಲ್ಪಡುವವು
ಬೇರೆ ಜಾಹಿರಾತುಗಳ ಬಗ್ಗೆ
ಪತ್ರವ್ಯವಹಾರ ಯಾ ಸಮಕ್ಷ ತೀರ್
ಸಲ್ಪಡುವದು

ಕುಮಟಾ— ಕಾನಡಾವೃತ್ತ ಸೋಮವಾರ, ತಾರೀಖು ೧೩ ಮಾಹೆ ಎಪ್ರಿಲ್ ಸನ್ ೧೯೨೫ನೇ ಇಸವಿ)

हिंदुस्थानांतील रहिवाशास ज्याप्रमाण स्थानची हवा त्याप्रमाणेच हे औषध हिं थान तील लोकास ज्यास्त फायदेशीर आहे

द्राक्षासव- दीड रतलची किंमत २ रुपये,

रामबाण औषधें

सर्दी घालविणारे,
भूक वाढविणारे
शौच्यास साफ करणारें,
झोंप आणणार,
शक्ति देणारें,
तरतरीतपणा आणणारें

पिण्यास रुचकर

कॅटलॉग मागवा,

फार्मास्युटिकलवर्क्स लिमिटेड,
मुंबई नं. १२

ಕ್ಷಯ ರೋಗ?

ವೈದ್ಯ ಫರ್ನಾಂಡಿಸರ
ಬರೇ ಸಾಲು ಔಷಧಗಳು

[illegible] ವರ್ತಮಾನ ತಿಳಿಸಿರಿ ಅಂದರೆ ಯೋಗ್ಯ [illegible]ಗಳನ್ನು ತಯಾರಿಸಿ ಕಳುಹಿಸುವೆವು ಸರ್ಟಿ[illegible] ಹೆಚ್ಚಿನ ಮಾಹಿತಿ ದೊರಕುವ[illegible] ಬೇಗನೇ ಕೆಳಗಿನ ವಿಳಾಸಕ್ಕೆ ಬರೆಯಿರಿ (ರೂ [illegible])

ವೈದ್ಯ ಫರ್ನಾಂಡಿಸ,
ರೋಗಾಂತಕ ಡಿಪೋ,
ಕಾರವಾರ

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುತ್ತವೆ

ದರವು ಎಲ್ಲಕ್ಕಿಂತ ಕಡಿಮೆ ಇಟ್ಟಿರುತ್ತದೆ. [illegible] ಕೆಳಗಿನ ಪತ್ತೆಯ ಮೇಲೆ ಬರೆಯಿರಿ

ಪತ್ತೆ —ವೈಕುಂಠ [illegible]
ಕೊಪ್ಪ - ಉಪ್ಪಿನಪಟ್ಟಣ ತಾ ಕುಮಟಾ

ಬೇಕಾದ ಚಿನ್ನಾಭರಣಗಳ್ನು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, *B A*
Jewellers, KUMTA.

ಆರ್. ಎಸ್. ಕಾಸರಗೋಡ,
ರತ್ನಾಭರಣ ವ್ಯಾಪಾರಿ, ಕುಮಟಾ.

[illegible]) ಧಾತುಪೌಷ್ಟಿಕ, ಶಕ್ತಿವರ್ಧಕ, ರಕ್ತಶೋಧಕ (ಮಲಬಾರಿಕೃತಿ

ಮದನಕಾಮೇಶ್ವರೀಲೇಹ.

ಅಖಿಲ [illegible] ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು [illegible] ಅನೇಕ ವನೌಷಧಿಯುಕ್ತ ಇರುವದರಿಂದ [illegible] ಸ್ವಪ್ನಾವಸ್ಥೆ [illegible] ರಕ್ತ ಧಾತು [illegible] ತಿಂಗಳು ಸಾಲುವ [illegible] ವಿವಿಧದ ಸಂಗತಿ

ಅತ್ಯುತ್ತಮ) **ಜಂತಪಿನ ಔಷಧ** (ದರಸುಲಭ.

[illegible] ಎಲ್ಲಾ ರೋಗಗಳಮೇ[illegible] ಅನುಭವ [illegible] ಸಿಗುವವು [illegible] ಬೇಕಾದವರು [illegible] ಪತ್ರವ್ಯವಹಾರದಲ್ಲಿ ನಮ್ಮ [illegible] ಗುಣರತ್ನಮಾಲಾ [illegible] ಪುಕ್ಕಟೆಯಾಗಿ ಕಳಿಸುವೆವು

ಮೆನೇಜರ ಆರ್ಯಚಿಕಿತ್ಸಾಮಂದಿರ, ತಾ ಕಾರವಾರ ಪ್ರೋ ಚೆಂಡಿಯೆ

[illegible] R C KAMAT Teashop Store Lane Fort BOMBAY

ಹುಟ್ಟಿದ [illegible]) **ಸುಖಸಾಧನಕ್ಕೆ ಯೋಗ್ಯ ಉಪಾಯವು** ([illegible] ಜನ್ಮಪತ್ರಿಕೆ [illegible]

ಮಲಬಾರಿ) **ಕೇರಳ ಜ್ಯೋತಿಷ.** (ಭವಿಷ್ಯ

[illegible] ಜನ್ಮಪತ್ರಿಕೆ [illegible] ಫಲಾಫಲ [illegible] ಫಲಗಳನ್ನೂ ಅನಿಷ್ಟಫಲ ನಿವಾರಣಾರ್ಥ [illegible] ಸಂಕಟಗಳನ್ನು ಪರಿಹರಿಸುವ ಉಪಾಯಗಳನ್ನೂ ತಿಳಕೊಂಡು ಮುಂದಿನ ಭವಿಷ್ಯ [illegible] ಲಾಭದಾಯಕವಾಗುವಂತೆ ಸರಿ ಫಲವನ್ನು ಮಲಬಾರದಲ್ಲಿ ಪ್ರಸಿದ್ಧವಾದ [illegible] ಕೇರಳ [illegible] ಗ್ರಂಥಗಳ [illegible] ಬರೆದು ಕಳಿಸುವ [illegible] ಬೇ[illegible]

ಮೆನೇಜರ, "ಜ್ಯೋತಿಷ ಶಾಸ್ತ್ರ ಭುವನ" ಚೆಂಡಿಯೆ ತಾ ಕಾರವಾರ

ವಾಚಕರಿಗೆ ವಿನಂತಿ.

ಅನಿವಾರ್ಯ ಅಡಚಣೆಯ ಮೂಲಕ ಈ ಹೊತ್ತಿನ "ವೃತ್ತ"ವನ್ನು ಎರಡು ಪುಟಗಳಿಂದಲೇ ಹೊರಡಿಸಿರುವೆವು. ವಾಚಕರು ದಯವಮಾಡಿ ಕ್ಷಮಿಸಬೇಕಾಗಿ ಪ್ರಾರ್ಥನೆ.

ಇತಿ ಮೆನೇಜರ.]

ಕಾನಡಾವೃತ್ತ.

ಮಿತಿ ಚೈತ್ರ ವದ್ಯ ೫ ಂ ಶಕೆ ... ಸೋಮವಾರ

ಮರ್ಮ ತಿಳಿಯಿರಿ!

* * *

ಮೊಂಟೆಗ್ಯೂ ಸ್ವರಾಜ್ಯದಿಂದ ಭಾರತೀಯ ಪ್ರಜೆಗಳಿಗೆ ಸಮಾಧಾನವಾಗಿರುವದೆಂದು ಆಳರಸರು ಸಮಗ್ರ ಬೋಧಿಸುತ್ತಿದ್ದರು. ಮಹಾತ್ಮರ ಪಕ್ಷವನ್ನನುಸರಿಸಿದ ಪ್ರಜೆಗಳ್ಯಾರೂ ಮೋಸಹೋಗಲಿಲ್ಲವಾದರೂ ಇತರರಿಗೆ ಮೊಂಟೆಗ್ಯೂ ಸ್ವರಾಜ್ಯದಿಂದ ಏನಾದರೂ ಹಿತವಾದ ಬದಲಾವಣೆ ಆಗಬಹುದೆಂಬ ಮೂಢ ಭಾವನೆಯಿತ್ತು. ಬ್ರಿಟಿಶ ದೊರೆಗಳ ನುಡಿಗಳಿಗೆ ಅವರ ಪ್ರಾಮಾಣ್ಯ ವಿಶೇಷ. ಬ್ರಿಟಿಶರು ಔದಾರ್ಯವಂತ ಪ್ರಾಣಿಗಳು, ಕೇವಲ ಭರತ ಭೂಮಿಯ ಉದ್ಧಾರಕ್ಕಾಗಿಯೇ ಮನೆ ಮಾರು ಹೆಂಡರು ಮಕ್ಕಳನ್ನು ತ್ಯಜಿಸಿ ಅವರು ಇಲ್ಲಿ ನಮ್ಮನ್ನಾಳುತ್ತಿರುವರು ಮುಂತಾದ ತಿಳುವಳಿಕೆಯು ಅನೇಕರಲ್ಲಿ ಹಬ್ಬಿಕೊಂಡಿದೆ. ಈ ತಪ್ಪು ತಿಳುವಳಿಕೆಯನ್ನು ಸಾಹೇಬರ ಮುಖದಿಂದಲೇ ನಾವು ತೋರಿಸಲಿಚ್ಛಿಸುವೆವು.

"ವಿವಿಧ ಸಂಗ್ರಹ"ದಲ್ಲಿ ಕೊಟ್ಟ ಮೆಸ್ಟನ ದೊರೆಗಳ ಉದ್ಗಾರಗಳನ್ನು ವಿಚಾರಿಸಿದರೆ, ನಮಗೇನು ಕಾಣುವದು? ಮೊಂಟೆಗ್ಯೂ ಸ್ವರಾಜ್ಯದಿಂದ ಜಿಲ್ಹಾಧಿಪರ ಏಕಚಕ್ರಾಧಿಪತಿತ್ವವು ಅಬಾಧಿತವಾಗಿರುವದೆಂದು ಹೇಳಿದ ಬಳಿಕ, ಮೊಂಟೆಗ್ಯೂ ಸ್ವರಾಜ್ಯವು ಮೇಲಿಂದ ಮೇಲೆ ಹಾರಿ ಹೋಯಿತಲ್ಲವೆ! ಬ್ರಿಟಿಶ ಆಳರಸರು ಭರತಖಂಡದೊಳಗ ಸಾಧಿಸಿದ ಕಾರ್ಯವು ಬ್ರಿಟಿಶ ದೃಷ್ಟಿಯಿಂದ ಪರಿಶೀಲಿಸಬೇಕೆಂಬುದರ ಅರ್ಥವೇನು? ಭರತಖಂಡದ ಕಲ್ಯಾಣವಾಗಲಿ, ಅಕಲ್ಯಾಣವಾಗಲಿ, ಅದನ್ನು ಬ್ರಿಟಿಶರು ವಿಚಾರಿಸುವದಿಲ್ಲ, ಅದಕ್ಕಾಗಿ **ಹಿಂದುಸ್ಥಾನದ ಆಡಳಿತೆಯು ನಡೆಯುವದಿಲ್ಲ. ಕೇವಲ ಬ್ರಿಟಿಶರ ಹಿತಾಹಿತದ ದೃಷ್ಟಿಯಿಂದಲೇ ಈ ವಿಷಯವು ವಿಚಾರಿಸಲ್ಪಡಬೇಕು.** ಅಂದರೆ ಬ್ರಿಟಿಶರ ಹಿತವಾದರೆ, ಆಳರಸರ ಕೆಲಸವಾಯಿತು. ಹಿಂದುಸ್ಥಾನವು ಹಾಗೆ ಆಳಲ್ಪಟ್ಟರೆ, ತಮ್ಮಲ್ಲಿಯ ಸತ್ಪುತ್ರರಿಗೆ ತಕ್ಕ ಅಭಿವಚನಗಳನ್ನಿತ್ತು ಸತ್ಕರಿಸಬೇಕು. ಬ್ರಿಟಿಶರ ಔದಾರ್ಯವಿದು. ಇದಕ್ಕಾಗಿಯೇ ಮೆಸ್ಟನ ದೊರೆಗಳು ಬ್ರಿಟಿಶರಿಗೆ ಆಳರಸರಾಗಿ ಭರತಭೂಮಿಗೆ ಬಿಜಯಂಗೈಯಲು ದಣಿಯುತ್ತಿರುವರು. ಅವರಿಗೆ ಸುಖವಾಗುವಂತೆ ಅವರ ಕಾರ್ಯಕ್ಷೇತ್ರವನ್ನೂ ಸಂಕುಚಿತ ಮಾಡಿ, ಬರೇ ಐಷಆರಾಮುಗಳನ್ನು ಅವರಿಗೆ ಒದಗಿಸಿಕೊಟ್ಟಿರುವರು. ಹಿಂದೀ ದಿವಾಣರ ಕೈಯೊಳಗೆ ಅವರನ್ನು ಸ್ವಾಧೀನಪಡಿಸಿದರೆ, ಹಿಂದವಾಕೆಯು ದ್ರೋಹಮಾಡಲು ಅವರಿಗೆ ಇಂಬು ದೊರಕದೆ, ಭರತಖಂಡಕ್ಕೆ ಅಕಲ್ಯಾಣವಾಗುವದೆಂದು ದೊರೆಗಳು ಭೀತಿಗೊಂಡು ತಮ್ಮ ಸಜಾತೀಯ ಭಾರತ ಮಂತ್ರಿಗಳ ವಶಕ್ಕೆ ಒಪ್ಪಿಸಬೇಕೆಂದೂ ಸೂಚಿಸಿದ್ದಾರೆ. ಭಾರತೀಯ ರಾಷ್ಟ್ರಪುರುಷನು ಲೋಕನಾಯಕರ ಚಿಕಿತ್ಸೆಯಿಂದ ಸಜೀವನಾದರೆ ಮುಂದೆ ಪರೋಪಕಾರಕ್ಕಾಗಿ ಬಂದ ಆಳರಸರಿಗೆ ತೊಂದರೆಯಾಗಬಾರದೆಂದು, ದೊರೆಗಳು ಮುಂದಿನ ವ್ಯವಸ್ಥೆಯನ್ನೂ ಸೂಚಿಸುವರು. ಉತ್ತಮ ಭರಪಾಯಿ ಕೊಡಬೇಕಂತೆ! ಅಥವಾ ಅವರಿಗೆ ಮುಂದೆ ಯೋಗ್ಯ ಉದ್ಯೋಗ (Career) ತೋರಿಸಿಕೊಡಬೇಕಂತೆ!!

ಬ್ರಿಟಿಶರ ಪರೋಪಕಾರದ ಕಥೆಯಿದು. ಬ್ರಿಟಿಶ ರಾಜ್ಯವು ಬ್ರಿಟಿಶರ ಹಿತಕ್ಕಾಗಿಯೇ ನಡೆದದೆಂದು ಸ್ಪಷ್ಟವಾಗಿ ನಾವು ಹೇಳುವದೇನಗೆ? ಭಾರತೀಯ ಪ್ರಜೆಗಳ ಕಲ್ಯಾಣದ ಬಾಯ್ಬಡಿಕೆ ಮಾಡಿ, ಭಾರತೀಯರಿಗಾಗಿ ತಾವು ಹೀಗೆ ಮಾಡಿದೆವು ಹಾಗೆ ಮಾಡಿದೆವು ಎಂದು ಹಂಬು ಬಡಿಯುವವರೂ, ಅವರ ಜಂಬದ ನುಡಿಗಳನ್ನು ವೇದತುಲ್ಯ ಎಣಿಸಿ, ಅವುಗಳಿಗೆ ಹೋಲೆಬಸವಣ್ಣನಂತೆ ತಲೆದೂಗುವವರೂ ಮುಂದಾಗಿ ಮೆಸ್ಟನ ದೊರೆಗಳ ನುಡಿಗಳ ಅರ್ಥ ಹೇಳಲಿ. ದೊರೆಗಳಿಗೆ ಭಾರತೀಯ ರಾಜ್ಯಭಾರದ ಅರಿವಿಲ್ಲೆಂದು ಹೇಳಲು ಸಹ ಬಾಯಿ ಬರದು, ಯಾಕಂದರೆ, ಹಿಂದುಸ್ಥಾನದಲ್ಲಿ ಕಲೆಕ್ಟರ ಹುದ್ದೆಯಿಂದ ಸಂಯುಕ್ತಪ್ರಾಂತದ ಗವ್ಹರ್ನರವರೆಗಿನ ಅಧಿಕಾರಗಳನ್ನು ವಹಿಸಿಕೊಂಡು ದೊರೆಗಳು ಆಳರಸರ ಸೇವೆ ಮಾಡಿರುವರು. ಇಂದವರು ಭಾರತೀಯ ರಾಜ್ಯದಾಡಳಿತೆಯ ಸ್ವರೂಪವನ್ನೂ, ಮೊಂಟೆಗ್ಯೂ ಸ್ವರಾಜ್ಯದಾನದಿಂದ ಪ್ರಾಪ್ತವಾದ ಅಧಿಕಾರಗಳನ್ನೂ ನಿವೇದಿಸಿ ಸತ್ಯಸ್ಥಿತಿಯನ್ನು ಅರಿತುಕೊಳ್ಳಲು ಬಲು ಸಹಾಯ ಮಾಡಿರುವರು. ಬ್ರಿಟಿಶ ರಾಜ್ಯದ ಮರ್ಮವನ್ನು ಇನ್ನಾದರೂ ಪ್ರಜೆಗಳು ತಿಳಿಯಲಿ; ಮತ್ತು ಬ್ರಿಟಿಶರಿಂದ ನಮ್ಮ ಕಲ್ಯಾಣವಾಗದೆಂದು ಖಂಡಿತ ತಿಳಕೊಳ್ಳಲಿ. ಆದರೆ, ಹಿಂದುಸ್ಥಾನದ ಅನ್ನ ತಿಂದು, ಹಿಂದುಸ್ಥಾನದ ದ್ರೋಹ ಮಾಡುವ ಈ ಪುಣ್ಯಾತ್ಮರಿಗೆ ಗತಿ ಯಾವುದು?

* * *

ಸ್ಫುಟ ಸೂಚನೆಗಳು.

೧. ಜೇಲದಲ್ಲಿ ಹಾಕಿ ಬಾಯಿ ಕಟ್ಟಿ ಗುದ್ದುವದು ಅತ್ಯಾಚಾರವೆಂದು ಹೇಳಲ್ಪಡುತ್ತದೆ. ಬಂಗಾಲದ ಆಳರಸರು ಈ ಅತ್ಯಾಚಾರವನ್ನು ಆಚರಿಸಿರುವರು. ಪ್ರಾಂತಿಕ ಕಾಯಿದೆ ಕೌನ್ಸಿಲಿನ ಇಬ್ಬ ಸಭಾಸದರಾದ ಶ್ರೀ|| ಅನಿಲವರ್ಣ ರೊಯ ಹಾಗು ಸತ್ಯೇಂದ್ರ ಚಂದ್ರ ಮಿತ್ರರವರನ್ನು ಸರಕಾರವು ದಬ್ಬಾಳಿಕೆಯನ್ನಾಶ್ರಯಿಸಿ ಸೆರೆಮನೆಗೆ ಅಟ್ಟಿತ್ತಲ್ಲೇ! ಅವರ ಮೇಲಿನ ಆರೋಪವೇನು? ಪ್ರತಿಬಂಧ ಮಾಡುವ ಕಾರಣವೇನು? ವಿಚಾರ ನಡಿಸಿ ತಕ್ಕ ಶಾಸನವನ್ನೀಯಿರಿ, ಎಂದು ಪ್ರಜೆಗಳು ಅತ್ಯಾಗ್ರಹ ಮಾಡಿದರೂ, ಅದಕ್ಕೆ ಕಿವಿಗೊಡದೆ ಸರಕಾರವು ಅವರನ್ನು ಬಂಧನದಲ್ಲಿಟ್ಟಿತು. ಕೌನ್ಸಿಲು ಸಭಾಸದರನ್ನು ಕೌನ್ಸಿಲು ಕಾರ್ಯಕಕ್ಕಾಗಿ ಕೌನ್ಸಿಲಿನ ಅಧಿವೇಶನಕ್ಕೆ ಹಾಜರಿರುವರೆ ಸರಕಾರಕ್ಕೆ ಆಜ್ಞಾಪಿಸಲು, ಕೌನ್ಸಿಲು ಸಭಾಸದರು ಕೌನ್ಸಿಲಿನ ಅಧ್ಯಕ್ಷರಿಗೆ ಬಿನ್ನಹ ಮಾಡಿಕೊಳ್ಳಲು ಅಲ್ಲಿಯೂ ದುರ್ಲಕ್ಷವಾಯಿತು. ಈಗ ಬಂಗಾಲದ ಸರಕಾರವು ಸರಕಾರಿ ಗಾಜೀಟಿನ ವಿಶೇಷ ಪುರವಣಿಯನ್ನು ಪ್ರಕಟಿಸಿ ಎರಡು ತಿಂಗಳುಗಳ ಮೇಲೆ ಮೇಲ್ಕಂಡ ಇಬ್ಬ ಸಭಾಸದರು ಕಾಯಿದೆಕೌನ್ಸಿಲಿಗೆ ಹಾಜರಿರಲಿಲ್ಲೆಂದು ಅವರ ಸದಸ್ಯತ್ವವನ್ನು ರದ್ದುಪಡಿಸಿ, ಹೊಸ ಚುನಾವಣೆಯನ್ನು ಜಾಹೀರುಪಡಿಸಿರುವದು. ಮೊದಲು ಸೆರೆಮನೆಗಟ್ಟಿ ಪ್ರತಿಬಂಧಿಸಿಟ್ಟು, ಅವರು ಕೌನ್ಸಿಲು ಕಾರ್ಯ ನಡಿಸಲು ಅಲಕ್ಷ ಮಾಡಿದರೆಂದು ಬಂಧವಿಟ್ಟ ಸರಕಾರವೇ ದೂರುವದೂ, ಆ ಬಗ್ಗೆ ಅವರಿಗೆ ಶಾಸನ ಮಾಡುವದೂ ಕೇವಲ ಹಗಲು ಲೂಟಿಯಲ್ಲೇನು? ಶ್ರೀ|| ಅನಿಲ ವರ್ಣ ರೊಯರಾಗಲಿ, ಸತ್ಯೇಂದ್ರ ಚಂದ್ರ ಮಿತ್ರರಾಗಲಿ ಕೌನ್ಸಿಲು ಅಧಿವೇಶನದ ಕಾಲದಲ್ಲಿ ಕೌನ್ಸಿಲಿಗೆ ಹೋಗಲು ಸ್ವತಂತ್ರರಿದ್ದರೇನು? ಸ್ವತಂತ್ರರಿದ್ದು ಅಲ್ಲಿಗೆ ಹೋಗದವರು ಮಾತ್ರ ಈ ಶಿಕ್ಷೆಗೆ ಪಾತ್ರರಲ್ಲವೆ? ಬಂಗಾಲದ ಪ್ರಾಂತಾಧಿಪರು ಈ ಜಾಹೀರನಾಮೆಯನ್ನು ಹೊರಡಿಸಿ, ಬ್ರಿಟಿಶರ ಸಭ್ಯತನವನ್ನು ಪ್ರದರ್ಶಿಸಿರುವರೆಂದು ನಾವು ತಿಳಿಯಬಹುದೇನು?

---

೨. ಮಿ|| ನೊರೋನಾರವರ ವೈರಾಗ್ಯ ನೋಡಿ ನಮಗೆ ನಗೆ ಬರುತ್ತಿದೆ. ಯಾರಿಗೂ ನಗೆ ಬರುವದು. ಸವಿ ಸವಿ ದ್ರಾಕ್ಷೆ ಹಣ್ಣುಗಳು ಕೈಗೆ ನಿಲುಕಲಿಲ್ಲೆಂದು ಅವುಗಳಿಗೆ ಹುಳಿ, ಹುಳಿ, ಎಂದು ಹಳಿದ ಕೋಲ್ಹ ನರಿಯ ನೆನಪು ಓದುಗರಿಗೆ ಆಗದಿರದು. ಮುದಿ ಪ್ರಾಯದಲ್ಲಿ ಸಾಹೇಬರಿಗೆ ಚಂಚಲವೃತ್ತಿಯು ಪ್ರಾಪ್ತವಾಗಿದೆಯೋ ಎಂಬ ಸಂಶಯವು ಅನೇಕರಿಗುಂಟಾಗದಿರದು. ಮಿ|| ನೊರೋನಾರವರ ರಾಜನಿಷ್ಠೆಯು ಸರಕಾರಕ್ಕೆ ಸಹ ಮಾನ್ಯವಾಗಲಿಲ್ಲೆಂದ. ಮಿ|| ನೊರೋನಾರವರ ಉದ್ಗಾರಿಸುವಾಗ, ರಾಜನಿಷ್ಠೆಯ ಕಲ್ಪನೆಯೇ ಅವರಿಗಿಲ್ಲೆಂದು ಸ್ಪಷ್ಟವಾಗುತ್ತದೆ. ರಾ|| ಬ|| ಪಂಡಿತ ಹಾಗು ಶ್ರೀ|| ಪಾಟೀಲ ಇವರ ಅಪರಾಧ ನೋಡಿ ಮಿ|| ನೊರೋನಾರವರು ಬೆಟ್ಟು ಮುರಿದರು. ಸರಕಾರವು ಮ್ಯುನಿಸಿಪಾಲಿಟಿಯಿಂದ ಇವರಿಗೆ ಪದಚ್ಯುತಮಾಡಿ, ಪ್ರಾಯಶ್ಚಿತ್ತ ಕೊಡುವದಲ್ಲದೆ, ತಮಗೇನಾದರೂ ಅನುಗ್ರಹಿಸುವರೆಂದು ಮಿ|| ನೊರೋನಾರವರು ಭಾವಿಸಿದ್ದರು. ಅವರ ಪಾಪ! ಸರಕಾರವು ಅವರಿಗೂ, ಅವರ ರಾಜನಿಷ್ಠೆಗೂ ಮ್ಯುನಿ

ಪಾಲಿಟಿಯಿಂದ ನೂಕಿಹಾಕಿಬಿಟ್ಟಿದೆ. ಮಿ। ನೊರೋನ್ಹಾರವರು ಗೊಂದಲದಲ್ಲಿ ಬಿದ್ದಿರುವರಂತೆ! ಆದರೆ ಈಗ ಗೊಂದಲವಿರುವದೆಂದು ನಮಗೆ ತೋರುವದಿಲ್ಲ. ಮ್ಯುನಿಸಿಪಾಲಿಟಿಯಲ್ಲಿರುವದಾದರೆ, ಸಭೆಯು ಎಲ್ಲಕ್ಕೆ ಮಹಾತ್ಮರ ಭಾವಚಿತ್ರದಮೇಲೆ ಕಣ್ಣು ಬಿದ್ದು, ತಲೆತೂಗಲಿದ್ದ, ಗೊಂದಲವಾಗಬಹುದು. ವಿಷ್ಟು ಈಗ ಸರಕಾರವೇ ಪುನರ್ನೇಮಣೂಕಿ ಮಾಡದೆ, ಜನರೂ ಆರಿಸಿಕೊಡದೆ, ಮಿ। ನೊರೋನ್ಹಾರವರಿಗೆ ಗೊಂದಲದಿಂದ ವಿಮೋಚನ ಮಾಡಿರುವದು. ಈಗ ಸಾಹೇಬರು ಮುಂದಿನ ಆಲೋಚನೆ ಮಾಡತಕ್ಕ. ರಾಜನಿಷ್ಠೆಯಿಂದ ಕಾಲ ಕಳೆದರಾಯಿತು. ತಮ್ಮ ವ್ಯಕ್ತಿಗತ ರಾಜನಿಷ್ಠೆಯನ್ನು ಗಂಡಾಂತರದಲ್ಲಿ ಸಿಲುಕಿಸಲು ಯಾರೂ ಮುಂದಾಗರು

---

೨. ಇಲ್ಲಿ ಶಿರಸ್ತೇದಾರರಾಗಿ ಬಂದ ಮಿ। ಶೇಷಗಿರಿ ನಾಯ್ಕರವರಿಗೆ ಕಳೆದ ೯ನೇ ತಾರೀಖಿಗೆ ವರ್ಗವಾದ ಶಬ್ದವು ಕೇಳಿ, ಅನೇಕರು ಆಶ್ಚರ್ಯ ಪಡದೆ ಇರಲಾರರು. ಮಾರ್ಚ ೧೭ನೇ ತಾರೀಖಿಗೆ ಇಲ್ಲಿ ವರ್ಗವಾಗಿ ಬಂದವರಿಗೆ ೨೦-೨೨ ದಿವಸಗಳಲ್ಲಿ ವರ್ಗವಾಗುವದು ಹುಡುಗಾಟಿಕೆಯೆಂದು ಅನೇಕರು ಉದ್ಗರಿಸುವರು. ಈಗಿನ ಕಾಲದಲ್ಲಿ ಏನೇನು ಚೇಷ್ಟೆಗಳಾಗುತ್ತವೆಂದು ಯಾರು ಹೇಳಬೇಕು? ಮಿ। ಶೇಷಗಿರಿ ನಾಯ್ಕರಿಗೆ ವರ್ಗಾವರ್ಗಿಯ ಸುದ್ದಿ ಸಹ ಇದ್ದಿಲ್ಲ. ತಮ್ಮ ಸ್ಥಳದಲ್ಲಿ ಇಲ್ಲಿ ಬಂದ ಮಿ। ಹೆಗಡೆಯವರಿಗೂ ಈ ಸುದ್ದಿ ಇದ್ದಿಲ್ಲ. ಮಿ। ಹೆಗಡೆಯವರು ಭಟಕಳದ ಬಿಸ್ತ್ರ ಮಡಗಿಸಿ, ತಮ್ಮ ಸ್ವಸ್ಥಳವಾದ ಮುರ್ಡೇಶ್ವರಕ್ಕೆ ಹೋಗುತ್ತಿದ್ದರು. ಅಂಕೋಲೆ ವರೆಗೆ ಮುಟ್ಟಿದ್ದರು. ಅಲ್ಲಿ ಈ ತುರ್ತು ವರ್ಗಾವರ್ಗಿಯ ತಂತಿಯು ಅವರ ಕೈಸೇರಿತು. ಇಲ್ಲಿ ಬಂದು ಅವರು ಮಿ। ನಾಯ್ಕರ ಹತ್ತರ ಚಾರ್ಜ ಕೊಡಬೇಕೆನ್ನಲು, ಮಿ। ನಾಯ್ಕರಿಗೆ ಆಶ್ಚರ್ಯವಾಯಿತು. ತಂತಿಯಿಂದ ಚೌಕಶಿ ಮಾಡಲು, ಕಾರವಾರ ಪ್ರಾಂತ ಆಫೀಸಿಗೆ ವರ್ಗವಾಗಿರುವದಾಗಿ ತಂತಿಯ ಉತ್ತರ ಬಂತು. ಮಿ। ನಾಯ್ಕರು ಬಿಡಾರ ಹುಡುಕಿ, ಕೊಲ್ಟಾನ ತಯಾರಿ ಮಾಡುವಷ್ಟರಲ್ಲಿ ಎಲ್ಲಿಗೆ ಓಡಬೇಕಾಗಿದೆ. ಕಲೆಕ್ಟರ ಆಫೀಸಿನಲ್ಲಿ ಇಷ್ಟು ದೊಡ್ಡ ತಪ್ಪುಗಳು ಹೇಗಾಗುತ್ತವೆಂದು ನಮಗೆ ತಿಳಿಯದ ಮಾತು. ನಿಜವಾಗಿ ನೋಡಿದರೆ, ಅಧಿಕಾರಿ ರಾಜ್ಯಭಾರದ ತವಶೀಲಿನ ವಿಷಯ ನಮ್ಮ ಬರೆಯಲೇ ಬಾರದು. ಆದರೆ ಬಡ ಕೆಳ ನೌಕರರ ಪೀಡೆಯಾಗುತ್ತಿರುವಾಗ ಬಾಯಿ ಮುಚ್ಚಿಕೊಂಡು, ಸುಮ್ಮಗುಳಿಯುವದಾದರೂ ಸಾಧ್ಯವೇ?

ಸ್ಥಾನಿಕ ವೃತ್ತಾಂತ.

ಕುಮಟಾ— ವಿಪರೀತ ಸೆಕೆ. ಮುಂಜಾವಿಗೆ ಸೋನೆ ಬಿದ್ದು ವಿಪರೀತ ಆಯಾಸವುಂಟಾಗುತ್ತದೆ

ಸಿರೇಗುತ್ತಿಯಲ್ಲಿ ಜನಗಳ ರೋಗವು ವಿಶೇಷವಾಗಿದೆ ಬಹು ಕೈತರ ಸೀಳಿಳು.

ಮೊನ್ನೆ ಇಲ್ಲಿಯ ಮ್ಯುನಿಸಿಪಾಲಿಟಿಯ ಸಭೆಗೆ ರಾ। ಬ। ಪಂಡಿತರ ಬಿನ್ನಹದ ವಿಚಾರವಾಯಿತು ಅಧ್ಯಕ್ಷಸ್ಥಾನವನ್ನು ಗಿಬ್ಬ ಹೈಸ್ಕೂಲ ಶಿಕ್ಷಕರಾದ ರಾ। ಗಾವಸ್ಕರರು ಅಲಂಕರಿಸಿದ್ದರು. ಮ್ಯುನಿಸಿಪಾಲಿಟಿಯು ಶಾಲೆಯನ್ನು ಗಿಬ್ಬ ಹೈಸ್ಕೂಲಿಗೆ ಒಪ್ಪಿಸಿಕೊಡುವಾಗ ಗಿಬ್ಬ ಹೈಸ್ಕೂಲಿಗೆ ಸಹಾಯ ಮಾಡುವ ಅಭಿವಚನ (?) ಕೊಡಲಾಗಿತ್ತೆಂದೂ, ಆ ಬಗ್ಗೆ ಭರಪೂರ (substantial) ಸಹಾಯ ಮಾಡಬೇಕೆಂದೂ ರಾ। ಬ। ಪಂಡಿತರು ನಮೂದಿಸಿದ್ದರು. ೧ ಸಾವಿರ ರೂಪಾಯಿ ಬೇಡಿದ್ದಿಲ್ಲ ರಾಜೇಶ್ರೀ ಉಪೇಂದ್ರಪೈಗೋಳಿ ಅಣ್ಣಪ್ಪನಾಯಕ, ಶೇಷಗಿರಿ ಕಾಮತ ಆತ್ಮಾರಾಮ ಭಟ್ಕಳಕರ ಇವರು ಗಿಬ್ಬ ಹೈಸ್ಕೂಲಿಗೆ ೧೦೦೦ ರೂಪಾಯಿಗಳ ಮದತ ಕೊಡಬೇಕೆಂದರು. ರಾಜೇಶ್ರೀ ಗಂಗಾಧರ ಶ್ಯಾನಭಾಗ ಕಲಬಾಗಕರ, ಗೋವಿಂದಪೈ ಶಿರಾಲಿ, ಸೀತಾರಾಮ ಭಾಗ್ವತ, ಹಾಗೂ ಮಿ। ಬಸ್ತ್ಯಾಂವರವರು ವಿರೋಧಿಸಿದರು. ಮಿ। ಎಸ್. ವ್ಹಿ. ಕಾಮತ. ಪಿ. ಕೇ ಪೈ ಇವರು ತಟಸ್ಥನಿಂತರು ಹೀಗೆ ಎರಡೂ ಬದಿಗೆ ಸರಿಮಾತ ಬೀಳಲು, ಅಧ್ಯಕ್ಷರು ಯಾವದೇ ಮತ ಕೊಡದೆ ಈ ಸೂಚನೆಯನ್ನು ಮುಂದೆ ಯಾವ ಕಾಲ ಆಲೋಚಿಸಬೇಕೆಂದರು. ಮತ್ತು ಇಷ್ಟಕ್ಕೇ ರಾ। ಬ। ಪಂಡಿತರ ಬಿನ್ನಹದ ಚರ್ಚೆ ನಿಂತಿತು. ಸಭೆಯೊಳಗೆ ಹಾಜರಿದ್ದ ಗಿಬ್ಬ ಹೈಸ್ಕೂಲ ಶಿಕ್ಷಕರಲ್ಲಿ ಒಬ್ಬ ಶಿಕ್ಷಕರಾದ ಮಿ। ಆತ್ಮಾರಾಮ ಭಟ್ಕಳಕರರವರು ಗಿಬ್ಬ ಹೈಸ್ಕೂಲ ಬದಿಗೆ ಮತಕೊಟ್ಟಂತೆ ಎಲ್ಲರೂ ಕೊಟ್ಟಿದ್ದರೆ, ಸೂಚನೆ ಮಂಜೂರಾಗಿ ಹೋಗುತ್ತಿತ್ತು. ಹೀಗೆ ಅವರು ಯಾಕೆ ಮಾಡಲಿಲ್ಲ ಮಿ। ಎಸ್. ವ್ಹಿ. ಕಾಮತ, ಪಿ. ಕೇ ಪೈ, ಜೀ. ವ್ಹಿ. ಗಾವಸ್ಕರ, ಈ ಮೂವರೂ ಗಿಬ್ಬ ಹೈಸ್ಕೂಲಿನ ಕಾರಭಾರಿ ಮಂಡಳದವರೊಳಗಿನವರು ಮಿ। ಭಟ್ಕಳಕರರವರು ನೌಕರ ಮಂಡಳದೊಳಗಿನವರು. ಆದರಿಂದ ಮಿ। ಭಟ್ಕಳಕರರವರು ಮತ ಕೊಟ್ಟಿರಬೇಕೆಂಬುದೊಂದು ತರ್ಕ.

ನಿನ್ನೆ ಬಗಬೋಟಿಯು ತೂಫಾನಿನ ಮೂಲಕ ಇಲ್ಲಿ ಮಾಲು ಇಳಿಸದೆ ಮಂಗಳೂರ ಕಡೆಗೆ ಹೊರಟಿತು. ಇದರಿಂದ ಬಾಡ ಹೊನ್ನಾವರದ ಪ್ರವಾಸಿಕರನ್ನು ಇಲ್ಲಿಯೇ ಇಳಿಸಿತು

ಶ್ರೀ ದತ್ತಮಂಡಳಿಯವರು ಶ್ರೀ ಉಪ್ಪಿನ ಗಣಪತಿ ದೇವರ ಜೀರ್ಣೋದ್ಧಾರದಬಗೆ ಮಹಾಸಾಧು "ಕಬೀರದಾಸ" ನಾಟಕವನ್ನು ಕಳೆದ ಶನಿವಾರ ರಾತ್ರಿ ಆಡಿತೋರಿಸಿದರು.

ಉಡುಪಿ 'ಸತ್ಯಾಗ್ರಹಿ' ಪತ್ರಿಕೆಯ ವ್ಯವಸ್ಥಾಪಕರು ತಿಳಿಯಪಡಿಸುವದೇನಂದರೆ,—

ಉಡುಪಿ ಶ್ರೀ ಕೃಷ್ಣಸ್ವಾಮಿ ಮೂರ್ತಿಯ ಚಿತ್ರವಿರುವ ಕ್ರೋಧನಸಂವತ್ಸರದ ಕೆಲೆಂಡರಗಳು ನಿಮ್ಮ 'ವೃತ್ತ' ಪತ್ರದ ಚಂದಾದಾರರಿಗೆ ಉಚಿತವಾಗಿ ಕಳುಹಿಸುವವು ಅವರು ಏಪ್ರಿಲ ಅಂತ್ಯದೊಳಗೆ ನಿಮ್ಮ ಪತ್ರಿಕೆಯ ಚಂದಾದಾರರಿರುವರೆಂದು ನಮೂದಿಸಿ ನಮಗೆ ಬರೆಕೊಳ್ಳಬೇಕು. ಕೆಲೆಂಡರಿನಲ್ಲಿ ಹಿಂದೂ ಸಂವತ್ಸರದ ತಿಂಗಳುಗಳಿದ್ದು, ಇಂಗ್ಲಿಷ ತಾರೀಖುಗಳು ಕೊಡಲ್ಪಟ್ಟಿವೆ

ಸಾಭಾರ ಸ್ವೀಕಾರ.

ಲೋಕರಹಸ್ಯ— ೧೯೨೫ನೇ ಇಸ್ವಿಯ ಎಪ್ರಿಲ ತಿಂಗಳ ಸಂಚಿಕೆ ಸಂಪಾದಕ ಮತ್ತು ಪ್ರಕಾಶಕ — ಶ್ರೀ। ಕೇ. ನಾರಾಯಣರಾವ, ವೀರರಾಜೇಂದ್ರ ಪೇಟೆ, ಕೊಡಗು. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂ. ೩-೮-೦.

Volunteer—April issue Edited and published by Dr N S Hardikar at "VOLUNTEER" Office, Hubli. Annual subscription Rs 3-0-0 only.

ಬಿಣಗೆ— ಇಲ್ಲಿ ಟಪಾಲ ಆಫೀಸು ಕಳೆದ ತಾರೀಖು ೧ನೆಯಿಂದ ಪುನಃ ಸ್ಥಾಪಿತವಾಗಿದೆ. ಆರು ತಿಂಗಳ ಮ್ಯಾದಮೇಲೆ ಸ್ಥಾಪನೆ ಕಾಯಮವಾಗಲಿ!

ಇಲ್ಲಿಯ ಲೋಕಪ್ರಿಯ ಶಿಕ್ಷಕರಾದ ಶ್ರೀ। ವಾಸು ಮಾರ್ಕ ಗುನಗಿಯವರು ಕಳೆದ ತಾ। ೩೧ನೇಗೆ ಕೆಲಸದಿಂದ ನಿವೃತ್ತರಾದರು ಇವರು ಇಲ್ಲಿಯ ನಿವಾಸಿಕರು. ೧೬ ವರ್ಷ ಹೆಡ್ ಮಾಸ್ತರಿಯನ್ನು ನಡಿಸಿದರು ೩ವರ್ಷ ಅಸಿಸ್ಟಂಟ ಮಾಸ್ತರರಿದ್ದರು. ವಯೋವೃದ್ಧರಿಗೆ ಊರವರು ಶ್ರೀ। ಬೋಂಡು ರಾಘೋಬಾ ಕಾಮತ ಇವರ ಅಧ್ಯಕ್ಷತೆಯಲ್ಲಿ ಆದಿವಿನ ಸಭೆಸೇರಿ ಜರಿ ಅಂಗವಸ್ತ್ರವನ್ನು ಉಡುಗರೆ ಮಾಡಿದರು ವಿದಾಯಿ ಹಂಚಲಾಯಿತು. ಇವರ ಗುರುಗಳು ಅಣ್ಣ ಮಾಸ್ತರರೆಂಬುವರಿದ್ದರು ಇವರು ೧೩ ವರ್ಷ ಹಿಂದೆ ನವಣೆ ಇದೇ ಶಾಲೆಯಲ್ಲಿ ಕೆಲಸ ಮಾಡಿದ್ದರು. ಈಗಿನ ಹೆಡ ಮಾಸ್ತರರೂ ಈ ಊರ ನಿವಾಸಿಕರೇ. ಇವರೂ ನಿಷ್ಠೆಯಿಂದ ಸರಸ್ವತೀ ಸೇವೆನಡಿಸಿ ಲೋಕಾದರಕ್ಕೆ ಪಾತ್ರರಾಗಲಿ.

ವೃತ್ತಸಾರ.

— ಹೊಸ ದಿಲ್ಲಿ ನಗರದ ರಚನೆಯ ಕೆಲಸವನ್ನು ಬ್ರಿಟಿಶ ಶಿಲ್ಪಿಗಳಿಗೆ ವಹಿಸಿರುವರು. ಭಾರತೀಯ ಶಿಲ್ಪಿಗಳನ್ನು ಮೂಲೆಗಿಡುವ ಯೋಜನೆಯಿದೆಂದು ಮುಂಬಾಪುರದವರು ಸಭೆ ಸೇರಿ ನಿಷೇಧ ಮಾಡಿದರು

— ಮೇ ತಿಂಗಳ ೨ನೇ ತಾರೀಖಿಗೆ ಬಂಗಾಲ ಪ್ರಾಂತಿಕ ಪರಿಷತ್ತಿನ ಅಧಿವೇಶನವು ಜರಗುವದಿದೆ. ಅಧ್ಯಕ್ಷರು ದೇಶಬಂಧುಗಳು. ಸ್ಥಳವು ಫರೀದಪೂರ ನಗರವು. ಪರಿಷತ್ತಿನ ಸಮಯ ಬೇಸಾಯ ಹಾಗು ಉದ್ಯೋಗಿಕ ಪ್ರದರ್ಶನಗಳು ಜರಗುವವಿವೆ. ಮಹಾತ್ಮರು ಸಭೆಗೆ ಚಿತ್ತೈಸುವರು.

— ಬಿಹಾರ, ಓರಿಸಾ ಪ್ರಾಂತ ಸರಕಾರದವರು ದನಗಳ ಜೋಪಾನವನ್ನು ತಕ್ಕ ರೀತಿಯಿಂದ ಮಾಡುವ ಯೋಜನೆಯನ್ನು ಪರಿಶೋಧಿಸುವದಕ್ಕೆ ಒಂದು ಮಂಡಳವನ್ನು ನೇಮಿಸಿರುವರು

— ದ್ವಿಜೇಂದ್ರನಾಥ ದಾಸ ಎಂಬೊಬ್ಬ ವಿದ್ಯಾರ್ಥಿಗಳ ಮೇಲೆ ಶಸ್ತ್ರಗಳನ್ನು ಅಪ್ಪಣೆ ಇಲ್ಲದೆ ಉಪಯೋಗಿಸಿದನೆಂಬ ಆರೋಪ ಹೊರಿಸಿ ಖಟ್ಲೆ ಮಾಡಿಯಾಯಿತು ದ್ವಿಜೇಂದ್ರನಾಥರು ದೋಷಮುಕ್ತರಾದರು. ಕೂಡಲೆ ಅವರನ್ನು ದಬ್ಬಾಳಿಕೆಯ ಕಾನೂನಿನನ್ವಯ ಸೆರೆಹಿಡಿಯಲಾಯಿತು!

— ಕಳೆದ ೫ನೇ ರವಿವಾರಕ್ಕೆ ಹುಬ್ಬಳ್ಳಿಯಲ್ಲಿ ಅಬ್ಬರದ ಮಳೆ ಸುರಿಯಿತು. ಗೋಲಿ ಗುಂಡಿನಷ್ಟು ಆಣೆಕಲ್ಲುಗಳು ಬಿದ್ದವು.

— ಕೊಯಿಮತ್ತೂರ ಜಿಲ್ಲೆಯ ಪೋಲಾಚಿ ಗ್ರಾಮದ ಶ್ರೀ। ಶಂಕರ ಅಯ್ಯರರವರನ್ನು ಅಲ್ಲಿಯ ಮೆಜಿಸ್ಟ್ರೇಟರು ನಿಷ್ಕಾರಣವಾಗಿ ಸೆರೆಹಾಕಿದರು. ಜಾಮೀನು ಮೇಲೆ ಸಹ ಬಿಡಲಿಲ್ಲ ಇದರಿಂದ ಶ್ರೀ। ಅಯ್ಯರರು ೫ ಸಾವಿರ ರೂಪಾಯಿ ಮಾನನಷ್ಟದ ದಾವೆ ಹೂಡಿದರು. ಮೆಜಿಸ್ಟ್ರೇಟರು ತಪ್ಪು ಮಾಡಿರೆಂದು ನ್ಯಾಯಮೂರ್ತಿಗಳು, ಅಭಿಪ್ರಾಯಪಟ್ಟು ೫ ಸಾವಿರ ರೂಪಾಯಿಗಳನ್ನು ತೆರಬೇಕೆಂದು ತೀರ್ಮಾನಿಸಿದರು.

— ಪಾಟಣಾ ವಿಶ್ವವಿದ್ಯಾಲಯದವರು ವಿದ್ಯಾರ್ಥಿಗಳಿಗೆ ಲಷ್ಕರೀ ಶಿಕ್ಷಣವನ್ನು ಒತ್ತಾಯದಿಂದ ಕೊಡಬೇಕೆಂದು ನಿರ್ಧರಿಸಿರುವರು,

— ಲಾಹೋರದಲ್ಲಿ ಅರ್ಧಕೋಟಿ ರೂಪಾಯಿ ಬಂಡವಲಿನ ಬೇಂಕು ಹೊಸ್ತೆ ತಾ। ೧೧ನೇಯಿಂದ ಪ್ರಾರಂಭವಾಗಿದೆ. ಬೇಂಕಿನ ಹೆಸರು "ಪೀಪಲ್ಸ ಬೇಂಕ ಒಫ್ ನೊರ್ದರ್ನ ಇಂಡಿಯಾ." ದೇಶೀ ಸಂಸ್ಥೆ!

— ೧೯೨೨ನೇ ಇಸ್ವಿ ಅಂತ್ಯವಾಗುವ ೫ ವರ್ಷಗಳಲ್ಲಿ ೧ಕೋಟಿ ೧೧ಲಕ್ಷ, ೫ ಕೋಟಿ ೪೪ ಲಕ್ಷ ೪೯ ಲಕ್ಷ ೪೭ ಲಕ್ಷ ಹೀಗೆ ಮಂದಿಗಳು ಜ್ವರದಿಂದ ಹಿಂದುಸ್ಥಾನದಲ್ಲಿ ಮಡಿದರೆಂದು ಭಾರತ ಮಂತ್ರಿಗಳು ಪಾರ್ಲಿಮೆಂಟನಲ್ಲಿ ಜಾಹೀರಪಡಿಸಿದರು.

— ಹಾನಗಲ್ಲದೊಳಗಿನ ಶ್ರೀ। ಕುಸನೂರು ಪಾಟೀಲ ವೀರಭದ್ರಪ್ಪ ಗೌಡರವರು ಅನಾಥ ಬಾಲಕರಿಗೆ ಧರ್ಮಾರ್ಥ ಅನ್ನ, ಅರಿವೆ, ಅಂಚುಡಿ ಕೊಟ್ಟು, ವಿದ್ಯೆ ಕಲಿಸುವ ಒಂದು ಶಾಲೆಯನ್ನು ಸ್ಥಾಪಿಸತಕ್ಕವರಿರುವರು.

— ಕಳೆದ ಚೈತ್ರ ಶುದ್ಧ ತೃತೀಯೆಗೆ ಬಳ್ಳಾರಿ ಜಿಲ್ಲೆಯ ಹೂಳ ಎಂಬ ಗ್ರಾಮದ ವೀರಶೈವರು ಶ್ರೀ ಜಗದ್ಗುರು ಪಂಚಾಚಾರ್ಯ ವಾಚನಾಲಯ ಒಂದನ್ನು ಸ್ಥಾಪಿಸಿರುವರು.

— ದಾವಣಗೇರಿ ತಾಲೂಕಿನೊಳಗಿನ ಮಳಲಕೆರೆ ಗ್ರಾಮನಿವಾಸಿಕರು ಈ ವರುಷ ಶ್ರೀ ದೇವಿಯರ ಜಾತ್ರೆಯನ್ನು ಹಿಂಸೆ ಕೃತ್ಯಕ್ಕೀಡಾಗದೆ ನೆರವೇರಿಸಿದರು. ಒಂದು ಹನಿ ರಕ್ತವು ಕೂಡ ನೆಲಕ್ಕೆ ಬೀಳಲಿಲ್ಲ. ಕುರಿಗೆ ಬದಲು ತೆಂಗಿನಕಾಯಿಗಳು ಸಮರ್ಪಣೆಯಾದವು. ವರುಷಕ್ಕೆ ಇಲ್ಲಿ ೮-೧೦ ಕೋಣ ೩೦-೮೦ ಕುರಿಗಳು ಬಲಿಬೀಳುತ್ತಿದ್ದವು.

ವಿವಿಧ ಸಂಗ್ರಹ.

ಬ್ರಿಟಿಶರ ಸ್ವಾರ್ಥಪರಾಯಣತೆ !

ಹಿಂದುಸ್ಥಾನದೊಳಗಿನ ರಾಷ್ಟ್ರೀಯ ಜಾಗೃತಿಯಿಂದ ವಿಲಾಯತಿಯಲ್ಲಿ ಭೀತಿಯುಂಟಾಗಿದೆ. ಆಳರಸರಾಗಲಿಕ್ಕೆ ಅಲ್ಲಿಂದ ಉಮೇದ್ವಾರರೇ ಮುಂದಾಗಿ ಬರುವದಿಲ್ಲ. ಅಲ್ಲಿಯವರು ಇಲ್ಲಿ ನೌಕರರಾಗಿರದಿದ್ದರೆ ಬ್ರಿಟಿಶರ ಅಂಕೆಯು ಕುಗ್ಗಿ ಸ್ವಾರ್ಥಪರಾಯಣತೆಗೆ ಬಾಧೆ ತಟ್ಟುವದೇನೆಂದು ಭೀತಿಗೊಂಡು ಅಲ್ಲಿ ಉಮೇದ್ವಾರರನ್ನು ತಯಾರಿಸಲಾಗುತ್ತಿದೆ. ಬ್ರಿಟಿಶರು ಯತ್ನಪಡುತ್ತಿರುವರು. ಇಲ್ಲಿ ಪ್ರಾಂತಾಧಿಕಾರಿಗಳನ್ನೂ ಕೂಡ. ಮರಳಿದ ವೈಸರಾಯ್ ದೊರೆಗಳೂ ಆಯ್. ಸಿ. ಎಸ್. ಪರೀಕ್ಷೆಗೆ ಕುಳಿತುಕೊಳ್ಳಲು ಎಳೆ ಬ್ರಿಟಿಶರಿಗೆ ಹುರಿದುಂಬಿಸುತ್ತಿರುವರು. [illegible] ದೊರೆಗಳು ಅಬರ್ಡೀನ ವಿದ್ಯಾಲಯದಲ್ಲಿ ಇದೇ ವಿಷಯ ಕುರಿತು ಭಾಷಣ ಮಾಡಿದರು. ಮೊಂಟೆಗ್ಯೂ ಸ್ವರಾಜ್ಯದಾನದಿಂದ ಜಿಲ್ಹಾಧಿಪತಿ ಮೊದಲಾದ ಆಳರಸರ ಅಧಿಕಾರವು ಕುಗ್ಗಿಲ್ಲ; ಮುಂಚಿನಂತೆಯೇ ಕಲೆಕ್ಟರರು ತಮ್ಮ ತಮ್ಮ ಜಿಲ್ಲೆಗಳಲ್ಲಿ ಏಕಚಕ್ರಾಧಿಪತಿಗಳು. [illegible] ಅಧಿಕಾರವು [illegible] ವಿಶೇಷವಿಲ್ಲ. ಇತ್ತೀಚಿನ [illegible] ದೊರೆಗಳು ಸೂಚಿಸಿದ್ದೇನಂದರೆ—

ಹಿಂದುಸ್ಥಾನದಲ್ಲಿ ದೇಶೀಯ ಸಮಾಜ ಸಂಸ್ಥಾಪಿಸಿದ ಕಳೆ ಬೆಳೆಯುತ್ತಿದೆ. [illegible] ಸ್ನಾತಕ [illegible] ಮಾಡಿ, ಎಲ್ಲಿಯಾದರೂ ಶಿಕ್ಷಕವೃತ್ತಿಯನ್ನು ಕಟ್ಟುವ [illegible] ಇಲ್ಲಿದೆ [illegible] ನೋಡಹೋಗುತ್ತಾರೆ. [illegible] ತಿಂಗಳಿಂದ ಮೇಲೆ ದೊರೆಗಳ ಉಪಕಾರವನ್ನು [illegible] ಯಲ್ಲಿ ಬಂದು ಕೂಡುತ್ತಾರೆ. ಅಲ್ಲಿ ತಮ್ಮ ಕೊಂಡ ರಾಜ್ಯದ [illegible] ವಿವಿಧ ವಿಷಯಗಳ [illegible] ಅವರ ಕಾಲ ಕಳೆಯುತ್ತಿರುತ್ತದೆ. ಈ ಹೊಸ [illegible] ಮಾಡುತ್ತಿರವಾಗಲೇ ಪೊಲೀಸ ಸುಪರಿಂಟೆಂಡೆಂಟರು, [illegible] ಆಗಲೇ ಸೂಚಿಸುತ್ತಾರೆ. [illegible] ಹೊತ್ತಾಗುತ್ತದೆ [illegible] ಬಾಗಿಲು ತೆರೆಯಲ್ಪಡುತ್ತದೆ. ಅನೇಕ ಜಾತಿಯ ಅರ್ಜಿದಾರರ ತಂಡ ಒಳಹೊಕ್ಕುತ್ತದೆ. ಅರ್ಜಿಗಳಲ್ಲಿ ಧಾರ್ಮಿಕ ಕಲಹ, ಮಸೀದೆ ಮುಂದಿನ ವಾದ್ಯ ಮತ್ತು [illegible] ತಕರಾರು ಕಂಡುಬರುತ್ತವೆ. ವಕೀಲರು ಶಿಕ್ಷಕರ ವಿರುದ್ಧ ತಕ್ರಾರು ಮಾಡುತ್ತಾರೆ. ೧೦ ರೂಪಾಯಿ ಬೆಲೆಯ ಬೆಳ್ಳಿಯ ಬಾಗಿನೆಗಳು ಕಳವಾದ ಬಗ್ಗೆ ಒಬ್ಬ ವಿಧವೆಯ [illegible] ದೂರಿಕೊಳ್ಳುವ ಸಂಗತಿಗಳ ವಿಚಾರಣೆಯಾಗದೆ [illegible]. ಪ್ರವಾಸ ಕೈಕೊಳ್ಳುವಾಗ ಹೊಸ ಪ್ರಕರಣವೇ ಉಪಸ್ಥಿತವಾಗುತ್ತದೆ. ಫಿರ್ಯಾದಿ ತರುಣನ ಹೆಂಡತಿಯನ್ನೇ ಆರೋಪಿಯು ಓಡಿಸಿಕೊಂಡು ಹೋದನು. ಅವಳೊಡನೆ ಅವನ [illegible] ಡಾಗಿನೆಗಳೂ ಕಳವಾದವೆಂದು ತಿಳಿದುಬರುತ್ತದೆ. ಇಂಥ ಅಧಿಪತ್ಯವು ಆಳರಸರದು.

⁂

ಸಾರ್ವಭೌಮ ಸರಕಾರದ ಚಿಂತೆ !

ಮೆಕ್ಷನ ದೊರೆಗಳು "ಸಂಡೇ ಟೈಮ್ಸ್" ಪತ್ರಿಕೆಯಲ್ಲಿ ಒಂದು ಲೇಖವನ್ನು ಬರೆದಿರುವರು. ಆಯ್. ಸಿ. ಎಸ್. ಯಾನೆ ಆಳರಸರ ಪರೀಕ್ಷೆಗೆ ಸಾಕಷ್ಟು ಉಮೇದ್ವಾರರು ಕೂತುಕೊಳ್ಳುವದಿಲ್ಲ. ಇದನ್ನು ನೋಡಿ ಸಾರ್ವಭೌಮ ಸರಕಾರವು ಚಿಂತಾವಿಷ್ಟವಾಗಿದೆ. ಸಾಮರ್ಥ್ಯವಂತ ಆಳರಸರಿದ್ದ ಹೊರತು ಹಿಂದುಸ್ಥಾನದ ಸಂಬಂಧವು ಬಹುಕಾಲ ಬಾಳಲಾರದು. ಇದು ಯೋಗ್ಯವೂ ಅಲ್ಲ; ಇಷ್ಟವೂ ಅಲ್ಲ. ಸಾಹಸಿಗ ಆಂಗ್ಲರಿಗೆ ಹಿಂದುಸ್ಥಾನದಲ್ಲಿ ಚಿತ್ತಾಕರ್ಷಕ ಸಂಗತಿಗಳು ಇನ್ನೂ ಅನೇಕವಿವೆ. ಸಂಬಳವು ಅಷ್ಟು ಉತ್ತೇಜಕವಿರುವದಿಲ್ಲ. ಆದಾಗ್ಯೂ ಸಾಮ್ರಾಜ್ಯದ ಇತರ ಘಟಕಗಳೊಳಗಿನ ಸರಕಾರಿ ಸೇವಕರ ತಲಬಿನೊಡನೆ ತುಲನೆ ಮಾಡಿದರೆ, ಇಲ್ಲಿಯ ತಲಬು ವಿಶೇಷವಿದೆ. ಆದರೆ ಒಂದು ಮಾತನ್ನು ಈ ಲೇಖದಲ್ಲಿ ದೊರೆಗಳು ಒತ್ತಿ ಹೇಳಿರುವರು. ಉಚ್ಚತರಗತಿಯ ಬ್ರಿಟಿಶರು ಹಿಂದುಸ್ಥಾನಕ್ಕೆ ಹೊರಡಬೇಕಾದರೆ, ಅವರ ಕಾರ್ಯವನ್ನು ಬ್ರಿಟಿಶ ದೃಷ್ಟಿಯಿಂದ ವಿಚಾರ ಮಾಡಬೇಕು; ಹೊಸ ರಾಜಕೀಯ ಪರಿಸ್ಥಿತಿಯ ಮೂಲಕ ಅವರ ಸೇವೆಯು ಮಧ್ಯದಲ್ಲಿ ಮುಗಿಸಿದರೆ, ಅವರಿಗೆ ಮುಂದೆ ಕೆಲಸ ಕೊಡಬೇಕು; ಉತ್ಸಾಹ ಭರವಸೆಯು ಮಾಡಿಕೊಡಬೇಕು; ಭಾರತ ಮಂತ್ರಿಗಳು ಆಳರಸರ ಅಧಿಪತಿಗಳಾಗಿರಬೇಕು; ಹೊರತು ಹಿಂದೀ ಮಂತ್ರಿಗಳಿಗೆ ಅವರನ್ನು ಸ್ವಾಧೀನ ಪಡಿಸಬಾರದು; ಇಷ್ಟು ಆಶ್ವಾಸನಗಳು ದೊರೆತರೆ, ಬ್ರಿಟಿಶರು ಆಯ್. ಸಿ. ಎಸ್. ಪರೀಕ್ಷೆಗೆ ಕೂತುಕೊಂಡು ಹಿಂದುಸ್ಥಾನದ ರಾಜ್ಯಭಾರವನ್ನು ವಹಿಸಿಕೊಳ್ಳುವರೆಂದು ಮೆಕ್ಷನ ದೊರೆಗಳು ಬರೆಯುತ್ತಾರೆ. ಭಾರತೀಯರಿಗೆ ಸ್ವರಾಜ್ಯದಾನ ಮಾಡಲು ಟೊಂಕ ಕಟ್ಟಿದ ಬ್ರಿಟಿಶರ ಅಂತರಂಗವಿದು.

⁂

ಒಂದು ಕಾರಕೂನಿಗೆ ೫೦೦ ಅರ್ಜಿಗಳು

ಮುಂಬಯಿಯ ಒಂದು ಕಂಪನಿಯು ಒಬ್ಬ ಕಾರಕೂನನು ಬೇಕೆಂದು ವರ್ತಮಾನಪತ್ರಿಕೆಯಲ್ಲಿ ಜಾಹೀರು ಮಾಡಿತು. ಆಗ ಆ ಜಾಗಕ್ಕೆ ೫೦೦ ಅರ್ಜಿಗಳು ಬಂದವಂತೆ. ಅನೇಕರು ಮೆಟ್ರಿಕ್ಯೂಲೇಶನ ಪಾಸಾದವರಂತೆ! ನಮ್ಮ ಸರಕಾರವು ಕೊಟ್ಟ ಶಿಕ್ಷಣದಿಂದ ಬರುವ ಸುಶಿಕ್ಷಿತರ ಗತಿಯಿದು. ಇಂಗ್ಲಿಷ ಕಲಿಯಲಿಕ್ಕೆ ಖರ್ಚು ಎಷ್ಟು! ಕಲಿತ ಮೇಲೆ ಕಾರಕೂನಿಗಾಗಿ ದೇಶಾಂತರದಲ್ಲಿ ಬಿದ್ದಾಡುವ ಕಷ್ಟವೆಷ್ಟು !!

⁂

ಬೆಕ್ಕಿಗೆ ಇಲಿಯ ಕ್ಷೇಮ ಚಿಂತೆ!

ಮೆಂಚೆಸ್ಟರ ಪಟ್ಟಣವಿದು ವಿಲಾಯತಿಯೊಳಗಿನ ಅರಿವೆ ವ್ಯಾಪಾರದ ಪ್ರಮುಖ ಸ್ಥಳ. ಅಲ್ಲಿ ಅರಿವೆ ಖಪಾಗದೆ ಅನೇಕ ಗಿರಣಿಗಳು ಬಂದಾಗಿವೆ. ಕೂಲಿಯಾಳುಗಳು ನಿರುದ್ಯೋಗಿಗಳಾಗಿರುವರು. ಇದರ ವಿಚಾರ ಮಾಡಲು ಅಲ್ಲಿಯ ಗಿರಣಿ ಸಾವುಕಾರರು ಒಂದು ಆಲೋಚನೆ ಮಂಡಳವನ್ನು ನೇಮಿಸಿದರು. ನೂಲುಗಾರರೂ, ನೇಕಾರರೂ ಹೇಗೆ ನಷ್ಟಕ್ಕೊಳಗಾಗಿರುವರೆಂದೂ, ಅದರಿಂದ ಅರಿವೆಯ ಗಿರಣಿಗಳಲ್ಲಿ ಹಾಳಾಗುವ ಸಾಮಗ್ರಿಗಳಿಂದ ಹೊಸ ಜೀನಸುಗಳನ್ನು ತಯಾರಿಸಿ ಅವನ್ನು ವಿಕ್ರಯಿಸಿದರೆ ಅರಿವೆಯ ಖರ್ಚು ತಗ್ಗಿ ಉಷ್ಣ ಪ್ರದೇಶಗಳಲ್ಲಿಯ ಬಡ ಜನರಿಗೆ ತಮ್ಮಲ್ಲಿಯ ನೂಲು ಹಾಗು ಅರಿವೆಗಳನ್ನು ಖರೀದಿ ಮಾಡಲಿಕ್ಕೆ ಅನುಕೂಲವಾಗುವದು ! ಕೇವಲ ಪರೋಪಕಾರಕ್ಕಾಗಿ ವಿಲಾಯತಿಯೊಳಗಿನ ಸಾವುಕಾರರು ದಣಿಯುತ್ತಿರುವರು.

ಅಮೇರಿಕನ್ ಉಪಾಯ.

ಎಂಬ್ರೋಸಿಯಾ.

AMBROSIA

ಸ್ತ್ರೀರೋಗಪರಿಹಾರಕ್ಕಾಗಿ.

ಎಂಬ್ರೋಸಿಯಾವು ಸಮಸ್ತ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು. ಇದು ಸ್ತ್ರೀಸೌಂದರ್ಯವನ್ನುಂಟುಮಾಡುತ್ತದೆ. ಸಾಮಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರುತ್ತದೆ. ಚಲೋ ಆಹಾರ ದೊರಕದೆ, ವಿಶೇಷ ಆಯಾಸ ಕೊಳ್ಳುವದರಿಂದ ಸ್ತ್ರೀಯರ ಪ್ರಕೃತಿಯು ಕೆಡುತ್ತದೆ. ಮುಟ್ಟಾಗುವಾಗ ಶೂಲಿ ಏಳುವದು, ಮುಟ್ಟಾಗದಿರುವದು, ಅಪಸ್ಮಾರ, ಬಂಜೆತನ ಮುಂತಾದ ಗರ್ಭಾಶಯದ ಬೇನೆಗಳು, ಅಜೀರ್ಣ, ತಲೆಶೂಲಿ, ಭ್ರಮಿಷ್ಟತನ ಇವೆಲ್ಲ ಸ್ತ್ರೀರೋಗಗಳಮೇಲೆ ರಾಮಬಾಣ ಮದ್ದು. ಎಂಬ್ರೋಸಿಯಾವು ಸಮಸ್ತ ಸ್ತ್ರೀರೋಗಗಳನ್ನು ದೂರಮಾಡಿ, ಸ್ತ್ರೀಯರನ್ನು ಸಶಕ್ತರನ್ನಾಗಿಯೂ ಸೌಂದರ್ಯವಂತರನ್ನಾಗಿ ಮಾಡುತ್ತದೆ.

ಒಮ್ಮೆ ಪರೀಕ್ಷೆ ನೋಡಿ.

ಬೆಲೆ ಬಾಟ್ಲಿ ೧ ಕ್ಕೆ ರೂಪಾಯಿ ೨-೦-೦

ಏಜಂಟರು:— ಪೀರಿಯಲ ಏಜನ್ಸಿ,
ಪ್ರಿನ್ಸೆಸ ಸ್ಟ್ರೀಟ, ಮುಂಬಯಿ ನಂಬರ ೨

DAVAR'S
COLLEGE OF COMMERCE.
(Established 25 years)
CELEBRATES ITS SILVER JUBILEE
THIS YEAR UNDER THE DISTINGUISHED
PATRONAGE OF MERCHANT-PRINCES,
LEADERS OF
THOUGHT AND EDUCATION.

The Institution under the sole direction of its Founder and Principal has done pioneer work in introducing for the First Time in India Courses in SPECIALISED BANKING, SPECIALISED SECRETARIAL WORK and SPECIALISED ACCOUNTANCY as the result of his numerous journeys to Europe and to the Colleges and Universities there.

The fact that a Scholar has successfully trained in DAVAR'S COLLEGE has always been accepted by businessmen all over India, Burma and Ceylon as a hallmark of perfection.

Prospectus on application to the Principal,

Great Western Bldg.,
Apollo Street, BOMBAY.

ಅಂಕೋಲಾ ಇಂಗ್ಲಿಷ ಸ್ಕೂಲ ಕಮೀಟಿಯವರ ಶಿಕ್ಷಕದ್ರೋಹ.

ಇಲ್ಲಿಯ ಇಂಗ್ಲಿಷ ಸ್ಕೂಲ ಕಮೀಟಿಯವರು ತಮ್ಮ ಶಾಲೆಯ ಸಲುವಾಗಿ ಒಬ್ಬ ಸುಪರಿಂಟೆಂಡೆಂಟರ ನೇಮಣೂಕಿಯನ್ನು ಮಾಡಿರುವರು. ಶಾಲೆಯ ಹೆಡ್ ಮಾಸ್ತರು ಶಾಲೆಯಲ್ಲಿ ಯೋಗ್ಯ ವ್ಯವಸ್ಥೆ ಇಡಲಿಲ್ಲೆಂಬುದೇ ಈ ನೇಮಣೂಕಿಯ ಒಂದು ಕಾರಣವಿರುವದಂತೆ. ಇಲ್ಲಿಯ ಹೆಡ್ ಮಾಸ್ತರರು ಕುರಿಮರಿಯಷ್ಟು ಶಾಂತಸ್ವಭಾವದವರಿದ್ದು, ಯಾರು ಏನೂ ಹೇಳಿದರೂ ಅದು ಹೌದೆಂದು ಹೇಳಿ ಇಷ್ಟು ವರುಷ ವಿಶ್ವಾಸದಿಂದಲೂ, ಭಕ್ತಿಯಿಂದಲೂ ಕಮೀಟಿಯವರ ನೌಕರಿಯನ್ನು ಮಾಡಿದರು. ಆದರೆ, ಕಮೀಟಿಯವರು ಇಂಥ ಸ್ವಾಮಿನಿಷ್ಠ ಹೆಡ್ ಮಾಸ್ತರರಮೇಲೆ ಈ ತರದ ಆರೋಪವನ್ನು ಹೊರಿಸುವದು ಮಹಾ ದೊಡ್ಡ ಅನ್ಯಾಯವು. ಇದೇ ಪ್ರಕಾರ ಶಾಲಾ ಖಾತೆಯ ಇನ್ಸಪೆಕ್ಟರರು ತಮ್ಮ ಇನ್ಸಪೆಕ್ಷನ್ ರಿಪೋರ್ಟನಲ್ಲಿ ಹ್ಯಾಸ್ಕೂಲಿಗೆ ಅವಶ್ಯವಿದ್ದ ಸಾಮಗ್ರಿಯು ಏನೂ ಇಲ್ಲದ್ದರಿಂದಲೂ ಮತ್ತು ಮಾಸ್ತರ ಜನರ ಸಂಖ್ಯೆಯು ಸಹಾ ಸಾಕಷ್ಟು ಇಲ್ಲದ್ದರಿಂದಲೂ ಹ್ಯಾಸ್ಕೂಲ ಇಡಲಿಕ್ಕೆ ಪರವಾನಗಿ ಕೊಡಲಿಕ್ಕಾಗದೆಂದು ಬರೆದುಕೊಟ್ಟಿರುವರಂತೆ. ಆದರೆ, 'The staff is inadequate' ಎಂಬ ಅರ್ಥವನ್ನು ಮಾಸ್ತರರು ಯಾವ ಕೆಲಸಕ್ಕೂ ಉಪಯೋಗವಿಲ್ಲವೆಂದು ಗ್ರಹಿಸಿ ಹಿಡಿದು ಊರ ಜನರಿಗೆಲ್ಲಾ ತಮ್ಮ ಹ್ಯಾಸ್ಕೂಲ ಯೋಜನೆಯು ಮಾಸ್ತರರ ನಿಮಿತ್ಯದಿಂದಲೇ ನಿಷ್ಫಲವಾಗಿ ಹೋಯಿತೆಂದು ಹೇಳಹತ್ತಿದರು. ಮತ್ತು ಈ ಮಾಸ್ತರರಮೇಲೆ ಕಾವಲು ಇಡುವದರ ಸಲುವಾಗಿ ಒಬ್ಬ ಮುಕಾದಮನನ್ನು ನೇಮಿಸುವದು ಅವಶ್ಯವಿರುವದೆಂದು ಠರಾಯಿಸಿ, ನೂರಾರು ಮೈಲು ಆಚೆಯಿಂದ ಒಬ್ಬ ಮದ್ರಾಸ ಗ್ರ್ಯಾಜ್ಯುಏಟರನ್ನು ತರುವದನ್ನು ನಿಶ್ಚಯಿಸಿದರು. ಈ ಠರಾವಿನ ಸುದ್ದಿಯು ತಡವಿಲ್ಲದೆ ಊರೊಳಗೆ ಹಬ್ಬಿತು. ಮನೆ ಮನೆಗಳಲ್ಲೆಲ್ಲಾ ಹೆಂಗಸರೂ, ಹುಡುಗರೂ ಮಾಸ್ತರರಮೇಲೆ ನಿಂದಾವ್ಯಂಜಕ ಠಟ್ಟೆ ಮಾಡುವದಕ್ಕೆ ಹತ್ತಿದರು. ಬಾಜಾರದೊಳಗಿನ ಟೀಕಾಕಾರರು ಮಾಸ್ತರರ ಕಡೆಗೆ ಬೊಟ್ಟು ತೋರಿಸಿ ಖುದು ಖುದು ನಗಹತ್ತಿದರು. ಶಿಕ್ಷಣದ ಗಂಧ ಸಹಾ ಇಲ್ಲದ ಜನರು ವಿದ್ಯಾಧರರಾದ ಮಾಸ್ತರರ ಮೇಲೆ ಮನಸ್ಸಿಗೆ ಬಂದ ಹಾಗೆ ಟೀಕೆಯನ್ನು ಮಾಡಹತ್ತಿದರು. ಈ ಪ್ರಕಾರದ ದುಸ್ಥಿತಿಯು ಮಾಸ್ತರರಿಗೆ ಪ್ರಾಪ್ತವಾಗಲು, ಮಾಸ್ತರರೆಲ್ಲಾ ಒಟ್ಟಿಗೆ ಕೂಡಿಕೊಂಡು ತಮಗೆ ಯಾವ ಆಧಾರದ ಮೇಲೆ ನಿರುಪಯೋಗಿಯೆಂದು ಕಮೀಟಿಯವರು ಠರಾಯಿಸಿದರು, ಎಂಬ ಬಗ್ಗೆ ಸಮಾಧಾನಕಾರಕ ಜವಾಬು ಕೊಡದಿದ್ದರೆ, ತಮಗೆಲ್ಲರಿಗೂ ಒಟ್ಟಿಗೆ ರಾಜೀನಾಮೆ ಕೊಡುವ ಪ್ರಸಂಗ ಬರುವದೆಂದು ಒಂದು ನಿರ್ವಾಣಿಯ ಚಿಟಿಯನ್ನು ಕಳುಹಿಸಿಕೊಟ್ಟರು. ಈ ಚಿಟಿಯಿಂದ ಕಮೀಟಿಯವರು ದೊಡ್ಡ ಪೇಚಾಟದಲ್ಲಿ ಸಿಕ್ಕುಬಿದ್ದು, ಮುಂದೆ ಏನು ಮಾಡಬೇಕೆಂಬುದನ್ನು ಅರಿಯದೆ, ಮಾಸ್ತರರಿಗೆ ಕಮೀಟಿಯಲ್ಲಿ ಕರೆತಂದು ಅವರ ಸಮಜಾವಣಿ ಮಾಡಹತ್ತಿದರು. ಈ ಸಮಜಾವಣೆಯಿಂದ ಕೆಲವು ಮಾಸ್ತರರಾದರೂ ಸಂತುಷ್ಟರಾದಂತೆ ತೋರುತ್ತದೆ. ನಾವು ರಾಜೀನಾಮೆ ಬರೆದು ಕೊಟ್ಟರೂ, ರಾ। ಶಂಕರರಾಯರ ಅಜ್ಞಾನವನ್ನೂ, ಕಾರಸ್ಥಾನವನ್ನೂ ಬೈಲಿಗೆ ತರದೇ ಬಿಡಲಿಲ್ಲವೆಂದು ಮಾಸ್ತರರು ಜಂಬು ಹೊಡೆಯುತ್ತಾ ತಿರುಗುತ್ತಾರೆ. ಇದರ ಮೇಲಿಂದ ಕಮೀಟಿಯಲ್ಲಿ ಶಂಕರರಾಯರ ಜೋರೋ ಧಣಿ ಆಯಿತೆಂದು ತೋರುತ್ತದೆ. ಕಮೀಟಿಯ ಉಳಿದ ಮೆಂಬರರು ಸಹಾ ತಮಗೆ ಏನೂ ಹೇಳದ ಕೇಳದ ದೊಡ್ಡ ಬಾಜಾರದ ಅಂಗಡಿಯಲ್ಲಿ ಎರಡು ಮೂರು ಮೆಂಬರರು ಕೂಡಲೇ ತಮ್ಮ ಮನಸ್ಸಿಗೆ ಬಂದಂತೆ ಠರಾವು ತಯಾರ ಮಾಡಿ ತಮಗೆ ಫಕ್ತ ಆ ಠರಾವಿಗೆ ಅನುಮತಿ ಕೊಡಲಿಕ್ಕೆ ಹೇಳುತ್ತಾರೆಂದು ರಾ। ಶಂಕರರಾಯರ ಮೇಲೆ ಬಹಳ ಸಿಟ್ಟಾಗಿರುತ್ತಾರೆಂತಲೂ ಹೇಳುವರು.

ಕಮೀಟಿಯವರಿಗೆ ಒಬ್ಬ ಅನುಭವಿಕ ಮಾಸ್ತರರು ಬೇಕಾಗಿದ್ದರೆ, ಇಲ್ಲಿಯ ಶ್ರೀಯುತ ವಿಶ್ವನಾಥ ಪ್ರಭು ಅವರಿಗೆ ವಿಜ್ಞಾಪಿಸಬಹುದಾಗಿತ್ತು. ಇಂಥ ಪ್ರಸಂಗಗಳಿಗೆ ಹಿಂದೆ ಮಾಡಿದ ಅನ್ಯಾಯದ ಸಲುವಾಗಿ ಅವರ ಕಡೆಗೆ ಯೋಗ್ಯ ಕ್ಷಮೆ ಬೇಡಿದರೆ ಅಥವಾ ದುಃಖಪ್ರದರ್ಶನವನ್ನು ಮಾಡಿದರೆ ಅವರು ಒಂದಾನು ವೇಳೆ ಏನೂ ಪಗಾರ ಸಹಾ ತೆಗೆದುಕೊಳ್ಳದ ಶಾಲೆಯಲ್ಲಿ ಬೋಧದ ಕೆಲಸ ಮಾಡುವ ಹಾಗಿದ್ದರು. ಆದರೆ, ಶಾಲೆಯ ಆರ್ಥಿಕ ಸ್ಥಿತಿಯ ಕಡೆಗೆ ಅಥವಾ ಊರೊಳಗಿನ ಲೋಕಮತದ ಕಡೆಗೆ ಏನೂ ಲಕ್ಷಕೊಡದೆ ಹೊರಗಿನಿಂದ ಭಾರೀ ಪಗಾರದ ಒಂದು ಪ್ರಚಂಡ ಆನೆಯನ್ನು (White elephant ಎಂದು) ಶಾಲೆಯನ್ನು ಅಧೋಗತಿಗೆ ಮುಟ್ಟಿಸುವ ಹುಚ್ಚತನದ ಮತ್ತು ಆತ್ಮಘಾತಕಿ ಧೋರಣವನ್ನು ಸ್ವೀಕರಿಸಿರುವರು. ಕಮೀಟಿಯವರು ನೇಮಿಸಿದ ಸುಪರಿಂಟೆಂಡೆಂಟ ಸಾಹೇಬರು ಇಲ್ಲಿ ನಿನ್ನೆ ಬಂದು ಮುಟ್ಟಿದರು. ಸುಪರಿಂಟೆಂಡೆಂಟ ಸಾಹೇಬರೇ, ನೀವು ನಮ್ಮ ಊರಲ್ಲಿ ಬಂದದ್ದಕ್ಕೆ ನಮಗೆಲ್ಲರಿಗೂ ಆನಂದವೇ ಸರಿ. ಪರ ಊರಿಂದ ಬಂದವರಿಗೆ ಯೋಗ್ಯ ಸ್ವಾಗತವನ್ನು ಮತ್ತು ಸಂಭಾವನೆಯನ್ನು ಮಾಡುವದು ನಮ್ಮ ಅಂಕೋಲೆ ಜನರ ಬ್ರೀದವು. ಅದರಲ್ಲಿ ನೀವು ದೊಡ್ಡ ಪ್ರೊಫೆಸರರಾಗಿರುವಿರೆಂದು ಕೇಳುತ್ತೇವೆ. ಈ ಪ್ರೊಫೆಸರ ಪದವಿಯು ನಿಮಗೆ ಹ್ಯಾಗೆ ದೊರಕಿತೆಂಬುವದನ್ನು ಕೇಳುವದು ನಮ್ಮದೇನು ಕೆಲಸವಲ್ಲ. ನಿಮ್ಮ ಸಾಂನಿಧ್ಯದಿಂದ ನಮ್ಮ ಹುಡುಗರ ಶಿಕ್ಷಣಕ್ಕೆ ಮಹತ್ವದ ಅನುಕೂಲವಾಗಲೆಂಬುವದೇ ನಮ್ಮ ಆಕಾಂಕ್ಷೆಯು; ಆದರೆ, ನೀವು ನೂರಾರು ಮೈಲು ಆಚೆಯಿಂದ ಬಂದುದರಿಂದ ಇಲ್ಲಿಯ ಸ್ಥಿತಿಯು ಹ್ಯಾಗಿರುವದೆಂಬುವದು ನಿಮಗೆ ಗೊತ್ತಿರಲಿಕ್ಕಿಲ್ಲವೆಂಬುವದು ಸಹಜವು. ನಿಮಗೆ ನೂರು ಗಟ್ಟಲೆ ರೂಪಾಯಿ ಸಂಬಳ ಕೊಡುವ ಈ ಶಾಲೆಯು ಒಂದು ಉಚ್ಚ ಪ್ರತಿಯ ಹ್ಯಾಸ್ಕೂಲು ಇರಬೇಕೆಂದು ನಿಮ್ಮ ಸಮಜೂತಿ ಆಗಿರಬೇಕು. ಆದರೆ, ಈ ಶಾಲೆಯು ಮೂಲತಃ ಇಲ್ಲಿಯ ಊರಿನ ಜನರು ಸ್ಥಾಪಿಸಿದ ಒಂದು ಸ್ವಲ್ಪ ಸಾರ್ವಜನಿಕ ಸಂಸ್ಥೆಯಾಗಿದ್ದು, ಇಲ್ಲಿಯ ಮಾಸ್ತರರು ಸಾರ್ವಜನಿಕ ಸೇವೆಯ ದೃಷ್ಟಿಯಿಂದಲೇ ಕಿರಿ ಕಡಿಮೆ ಪಗಾರದಮೇಲೆ ನೌಕರಿಯನ್ನು ಮಾಡಿ ತಮ್ಮ ಶ್ರಮದಿಂದಲೂ, ಬೆವರಿನಿಂದಲೂ ಶಾಲೆಯನ್ನು ಸಧ್ಯದ ಸ್ಥಿತಿಗೆ ತಂದರು. ಆದರೆ, ನಿಮಗೆ ಏಕದಂ ನೂರು ಗಟ್ಟಲೆ ರೂಪಾಯಿಕೊಟ್ಟು ಇಲ್ಲಿ ತಂದದ್ದರಿಂದ ಶಾಲೆಯು ಇನ್ನುಮುಂದೆ ಹೀಗೇ ನಡೆಯುವದೋ ಅಥವಾ ದಿವಾಳಿ ತೆಗೆದು ಹೋಗುವದೋ ಎಂಬ ಭೀತಿಯು ಮಾಸ್ತರರಲ್ಲಿಯೂ, ಶಾಲೆಯ ಹುಡುಗರ ಪಾಲಕರಲ್ಲಿಯೂ ಉಂಟಾಗಿರುವದು ಸಹಜವು. ಅದೇ ಪ್ರಕಾರ ನೀವು ಇಲ್ಲಿ ಬಂದದರಿಂದ ಶಾಲೆಯ ಹೆಡ್ ಮಾಸ್ತರರು ತಮ್ಮ ಹೆಡ್ ಮಾಸ್ತರ ಜಾಗೆಯನ್ನು ಬಿಟ್ಟುಕೊಡಲಿಕ್ಕೆ ತಯಾರ ಆಗಿರುವರು. ಅದೇ ಪ್ರಕಾರ ಕೆಲವು ಮಾಸ್ತರರು ಸಹಾ ಈ ಶಾಲೆಯನ್ನು ಬಿಟ್ಟುಹೋಗುವ ವಿಚಾರದಲ್ಲಿ ತೊಡಗಿರುವರು. ಆದ್ದರಿಂದ ನೀವು ಶಾಲೆಯಲ್ಲಿ ಕಾಲಿಟ್ಟ ಕೂಡಲೆ ಈ ಪ್ರಕಾರದ ಸ್ಥಿತಿಯು ಆಗಲಿಕ್ಕೆ ಕಾರಣವೇನು ಎಂಬುವದರ ಬಗ್ಗೆಯೂ ಮತ್ತು ಶಾಲೆಯ ಸಧ್ಯದ ಆರ್ಥಿಕ ಸ್ಥಿತಿಯ ಬಗ್ಗೆಯೂ ಯೋಗ್ಯ ಚವಕಶಿ ಮಾಡಿ ನೋಡಬೇಕೆಂದು ನಮ್ಮೆಲ್ಲರ ಆಗ್ರಹದ ಸೂಚನೆ ಇರುವದು. ನೀವು ಇಲ್ಲಿಂದ ಅಧೈರ್ಯಗೊಂಡು ಬಿಟ್ಟು ಹೋಗಬೇಕೆಂಬುವದು ನಮ್ಮ ಮನಸ್ಸಿನಲ್ಲಿ ಸರ್ವಥಾ ಇಲ್ಲ. ಆದರೆ, ನೀವು ಈ ಊರಲ್ಲಿಯೇ ಇದ್ದು ಊರ ಜನರ ಮುಖಂಡತ್ವವನ್ನು ಸ್ವೀಕರಿಸಿ ಕಮೀಟಿಯವರಿಗೆ ಸನ್ಮಾರ್ಗಕ್ಕೆ ಹಚ್ಚುವ ಪ್ರಯತ್ನದಲ್ಲಿ ನಮಗೆಲ್ಲರಿಗೂ ಸಹಾಯ ಮಾಡಬೇಕೆಂದು ನಮ್ಮ ಪ್ರಾರ್ಥನೆ ಇರುವದು.

Ankola,
10th April, 1925. } M. M. P.

ಜಾಹೀರಾತು.

ಚಲೋ ಬಾಗಾಯತ ವ ಮನೆ ಕ್ರಯಕ್ಕೆ ಕೊಡುವದುಂಟು.

ಕಾನಡಾ ಜಿಲ್ಲಾ ಹೊನ್ನಾವರ ಶಹರ ಹತ್ತು ಜನರ ಮಠದ ಸಮೀಪ ಮಧ್ಯ ಸ್ಥಳದಲ್ಲಿರುವ ಹೊನ್ನಾವರ ಕಸಬಾ ಸರ್ವೇ ನಂಬರ ೩೧೫ ವ ೩೧೬ ಪೋಟ ೧ ಗಳಲ್ಲಿರುವ ಮಹಾಲ್ಕಿ ಹಕ್ಕಿನ ಎಕ್ರ ೦-೧೨-೮ ಸರಕಾರ ಶೀರ್ವೆ! ಆಕಾರ ರೂಪಾಯಿ ೬-೫-೦ ರ ಬಾಗಾಯತ ಸ್ಥಳ ವ ಸರ್ವೇ ನಂಬರ ೩೧೬ ಪೋಟ ೧ನೇ ದಲ್ಲಿರುವ ಆಡಮಾಹತ ೬೪ ಅಂಕಣಗಳ ಮಾಳಿಗೆ ವ ಮೇಲಂತಸ್ತಿಗೆ ಪಕ್ಕಾ ಪೋಳಿ ಹಂಚಿನ ಛಾವಣಿ ಮನೆ ಮ್ಯುನಿಸಿಪಲ್ ಕರಿಗೆ ರೂಪಾಯಿ ೩-೧೨-೦ರದು ಕೂಡಾ ಕ್ರಯಕ್ಕೆ ಕೊಡುವದುಂಟು. ಕ್ರಯಕ್ಕೆ ಅಪೇಕ್ಷಿಸುವವರು ಇದೇ ಎಪ್ರಿಲ್ ತಿಂಗಳ ಆಖೈರ ಒಳಗೆ ಕೆಳಗೆ ಸಹಿ ಮಾಡುವವರಿಗೆ ಸಮಕ್ಷಮ ಭೆಟ್ಟಿಯಾಗಿ ಯಾ ಪತ್ರದ್ವಾರಾ ಕ್ರಯದ ಶರ್ತುಗಳನ್ನು ನಿರ್ಣಯಿಸಿ ಕ್ರಯಕ್ಕೆ ಪಡಕೊಳ್ಳಬಹುದು.

ಹೊನ್ನಾವರ,
ತಾ. ೬-೪-೨೫ } **ಶಿವರಾವ ರಾಮರಾವ ಮುರ್ಡೇಶ್ವರ,**
ವಕೀಲ ಹೊನ್ನಾವರ.

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ ಬೀ ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಕಾಂಟಾಗ ಶಕ್ಯ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇರಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳಗಳಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾದೀತು.

(Registered Trade Mark.)

ಬುದ್ದಿ ಒಂದಕ್ಕೆ ಕ್ರಯ ರೂ. ೦-೧-೦, ವ್ಹಿ. ಪಿ ೪ ಆಣೆ
ಡಜನ್ ೧ ಕ್ಕೆ ರೂ. ೨-೮-೦ ವ್ಹಿ. ಪಿ. ೦-೮-೦.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ:. ಗುರುಬಸವ ಅಂಡ್ ಕಂಪನಿ ಲಿಮಿಟೆಡ್
ಪೋ। ಬಾ. ೫೧೦, ಮದರಾಸು

ಧಾರವಾಡ ಕರ್ನಾಟಕ ಮಹಾವಿದ್ಯಾಲಯದಿಂದ ಹೊರಡುವ

ತಿಳಿಗನ್ನಡದ ಸ್ವಧರ್ಮ ಮಾಸಪತ್ರಿಕೆ

ಸಂಪಾದಕ—ಸುರೇಂದ್ರ ಶಿವರಾವ ದೇಸಾಯಿ

ಚೈತ್ರ ಮಾಸದಿಂದ ದ್ವಿತೀಯ ವರ್ಷ ಪ್ರಾರಂಭ

ಪ್ರಾಪಂಚಿಕ ಸಂಪತ್ತೂ ಪಾರಮಾರ್ಥಿಕ ಸಂಪತ್ತೂ ಕೂಡಿ ಬೆಳೆಯುವಂತೆ ಸ್ವಸಂಸ್ಕೃತಿ ಪ್ರೇಮ ಸ್ವದೇಶ ಪ್ರೀತಿ ಸ್ವಾಭಿಮಾನ ಸ್ವಾವಲಂಬನ [illegible] ಗುಣಗಳನ್ನು ಉದ್ಬೋಧಿಸುವ ವಂಥ ಕೀರ್ತನ ಪುರಾಣ ಪ್ರವಚನ ಸಹಿತ ಜೀವನಚರಿತ್ರೆ [illegible] ನಾಟಕ ಕಥೆ [illegible] ರೂಪದಲ್ಲಿ ಜೀವನದ [illegible] ಉಗಮ್ಯವಾದ [illegible] ಗಳನ್ನು ಸ್ವಧರ್ಮ ದೃಷ್ಟಿಯಿಂದ [illegible] ವಿವರಿಸುವದ [illegible] ಕೊಡಿಸಿ ಕಟ್ಟಿದ ಪುಸ್ತಕದ ಬೆಲೆ [illegible]

ವ್ಯವಸ್ಥಾಪಕ "ಸ್ವಧರ್ಮ" [illegible]

ವಿಶೇಷ] ಅನುಭವಸಿದ್ಧ [ವನ್ಯ-

ವನೌಷಧಿಮೂಲಿಕೆಗಳು

[illegible] (ಸೆಪೋನಿಯಾ) [illegible] (ಕೊಡಚಾದ್ರಿ) [illegible] ಹಾವು ಕಡಿತ ಸರ್ಪಸುತ್ತು ಹೊಟ್ಟೆಯಲ್ಲಿ ಕೃಮಿ [illegible] ವಗೈರೆ ರೋಗಗಳಿಗೆ ಒಂದೇ [illegible] ಒಂದ [illegible] ಅನುಭವ [illegible] ಔಷಧಿಗಳ [illegible] ಅನುಭವ [illegible] ಔಷಧಿಗಳ [illegible] Tincture [illegible]

[illegible] ಬಗ್ಗೆ ಔಷಧಿ ಮೂಲಿಕೆ [illegible]	೧ ಕ್ಕೆ ೦ ೨ ೦
ಕೊಲೆರಾದ ಬಗ್ಗೆ	೦-೨-೬
ಕಫ [illegible] ಬಗ್ಗೆ	೦ ೪ ೦
ಹಾವು ಕಡಿತದ ಬಗ್ಗೆ	೦ ೪ ೦
ಸರ್ಪಸುತ್ತಿನ ಬಗ್ಗೆ	೦ ೨ ೦
ಹೊಟ್ಟೆಯಲ್ಲಿ ಕೃಮಿಯ ಔಷಧಿ ಬಡ ಬಗ್ಗೆ	ತೊಲೆ ೧೦ ಕ್ಕೆ ೦ ೨ ೦
ರಕ್ತಪಿತ್ತ [illegible] ಬಗ್ಗೆ ಮೂಲಿಕೆ	ರಾತ್ತಲ ಕ್ಕೆ ೧ ೦ ೦
ಮೋರಾ [illegible] (ಸಲ್ಲದಾಗಿ [illegible])	ರಾತ್ತಲ ೧ ಕ್ಕೆ ೧ ೦ ೦

[illegible] ಹೆಚ್ಚು [illegible] ಕಡಿಮೆ ದರದಿಂದ [illegible] ಪ್ರತ್ಯೇಕ [illegible] ದ್ವಾರಾ ಅನುಪಾನಪತ್ರ ಔಷಧಿ ಸಂಗಡ

ಎಸ್. ಜಿ. ಹೆಗಡೆ, ಮಾಸ್ಕೇರಿ

ಪೋಸ್ಟ ಬಂಕಿಕೊಡ್ಲ

ತಾಮ್ರ ಹಿತ್ತಾಳಿ ಭಾಂಡೆ

ವ ತರತರದ ಇತರ ಭಾಂಡೆಗಳು.

ಮಹಾಶಯರೇ ನಮ್ಮ ಕಂಪನಿಯು ಸದ್ಯದಲ್ಲಿ ಸ್ಥಾಪನೆಯಾಗಿ ತಾಮ್ರ ಹಿತ್ತಾಳಿ ಭಾಂಡೆಗಳನ್ನು ಇಲ್ಲಿಯೇ ತಯಾರಿಸಿ [illegible] ಭಾಂಡಗಳು ಸಿಗುವಂತೆ [illegible] ತರತರದ [illegible] ಇಚ್ಛಿಸುತ್ತಿದ್ದೇವೆ [illegible] ಹಿಂದುಸ್ಥಾನದಲ್ಲೆಲ್ಲ [illegible] ತಾಮ್ರ ಹಿತ್ತಾಳಿ [illegible] ಮೊದಲಾದ [illegible] ಭಾಂಡೆಗಳನ್ನು ಕುಂಭಕೋಣ [illegible] ಬೆಂಗಳೂರ, ಕಾರ್ಕಳ, ಹುಬ್ಬಳ್ಳಿ, ನಾಸಿಕ ಪುಣೆ ಮುಂಬಯಿ [illegible] ಮುಂತಾದ ಪ್ರಸಿದ್ಧ ಪಟ್ಟಣಗಳಿಂದ ಖರೇದಿ ತಂದಿದ್ದು, ಗಿರಾಕಿಗಳ [illegible] ಕೊಡುವಂತೆ [illegible] ಇದಕ್ಕೆ ಹೆಚ್ಚಿನ ನಮೂನೆಯ ಭಾಂಡೆಗಳನ್ನು [illegible] ಉತ್ತಮ ತರಗತಿಯ [illegible] ಭಾಂಡೆಗಳನ್ನು [illegible] ಭಾಂಡೆಗಳು ಇಚ್ಛಿತ ವೇಳೆಗೆ [illegible] ವ್ಯಾಪಾರಿಗಳಿಗೂ [illegible]

ಲಕ್ಷ್ಮೀ ನಾರಾಯಣ [illegible] ಹಿತ್ತಾಳಿ ಕಂಪನಿ, ಕುಮಟಾ

ಪೋಸ್ಟ—ಕುಮಟಾ ಜಿಲ್ಲಾ ಉ ಕಾನಡಾ

ಸುಗ್ಗಿಯು ಪ್ರಾರಂಭವಾಯಿತು !

ದನಗಳ ಆಹಾರವಾದ ಕಣಿಕೆಯನ್ನು ಕಾದಿಡಿರಿ !!
ಕಿರ್ಲೋಸ್ಕರ ಕಣಿಕೆ ಯಂತ್ರವನ್ನು ಉಪಯೋಗಿಸಿರಿ !!!



ನಮ್ಮ ಕಾರಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕೊರೆಯುವ ಯಂತ್ರಗಳು ತಯಾರಾಗುತ್ತವೆ ಒಂದು ಕೈಯಂತ್ರ ಬೆಲೆ ೩೦ರೂ ಇನ್ನೊಂದು ಗಾಲಿ ಯಂತ್ರ ಬೆಲೆ ೮೫ರೂ ಸಣ್ಣ ಕಮತದವರು ಕೈಯಂತ್ರವನ್ನೂ, ದೊಡ್ಡ ಕಮತದವರು ಗಾಲಿ ಯಂತ್ರವನ್ನೂ ಉಪಯೋಗಿಸಬಹುದು ಕಣಿಕೆಯು ೪ ಇಂಚುಗಳಿಂದ ಒಂದು ಇಂಚಿನವರೆಗೆ ಕೊರೆಯಲ್ಪಡುತ್ತದೆ ಸವಿಸ್ತರ ಸಂಗತಿ ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಿರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್;
ಕಿರ್ಲೋಸ್ಕರವಾಡಿ
ಜಿಲ್ಲಾ ಸಾತಾರಾ

ಅಮೃತಾಂಜನ.

[illegible] ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ ರಾಮಬಾಣದಂತಾಗಿರುವದು ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು ಅದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಶೀತ, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳನ್ನು [illegible] ಇದು ಗುಣಕಾರಿಯೆಂದು ಅರಿಯುವದನ್ನು ನೀವು ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು ಕಿಮ್ಮತ್ತು ೧೦ [illegible] ಬಾಟಲಿ [illegible]

ಅಮೃತಾಂಜನ ಡಿಪೋ, ಫೋರ್ಟ, ಮುಂಬಯಿ

Printed and Published by Krishnarao Keshav Shenvi (Editor) at his Star of Kanara Press Kumta

Reg No B. 1270.

Monday, April 20th, 1925.

ವರ್ಷ ೯.

ಕಾನಡಾವೃತ್ತ.

THE KANARA NEWS

ಸಂಚಿಕೆ ೨೨.

ತ್ರದ ವರ್ಗಣಿ,
ಯಲ್ಲಿ ಆಗಾವು
ರೂಪಾಯಿ 2-4-0
ದಾರ್ದರಿಯಿಂದ
ರೂ. 3-0-0
ಬಂಚಿವಸ್ತು ಸೇರಿ
ರೂಪಾಯಿ 3-2-0.
ಸಂಚಿಕೆಗೆ 0-1-0.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ [illegible]
[illegible] (೧೫ ಎಮ್ ಅಗಲ)
೫ ಸಾಲುಗಳವರೆಗೆ ರೂ. 1-0-
ಆ ಮೇಲ್ಪಟ್ಟ ಪ್ರತಿಸಾಲಿಗೆ 0-2-0.
ಹೆಚ್ಚಿಗೆ ಸಾಲು ಎಷ್ಟು [illegible] ಇರುವದೋ ಆ ದಾಸ [illegible] ಅಷ್ಟು ಸಾಲುಗಳು [illegible]
ಜಾಹಿರಾತುಗಳ ಬಗ್ಗೆ [illegible] ಯಾ ಪತ್ರವ್ಯವಹಾರ [illegible] ಸಲ್ಪಡುವದು.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಕುಮಟಾ— ಕಾನಡಾವೃತ್ತ ಸೋಮವಾರ, ತಾರೀಖು ೨೦ ಮಾಹೆ ಎಪ್ರಿಲ್ ಸನ್ ೧೯೨೫ನೇ ಇಸವಿ.

हिंदुस्थानातील रहिवाशांस | ज्याप्रमाणे
स्थानची हवा त्याप्रमाणेच हे औषध हिं-
न,तील लोकांस ज्यास्त फायदेशीर आहे

दीड रत्तलची
द्राक्षासव- किंमत २ रुपये.

रामबाण औषध —
सर्दि घालविणारें,
भूक वाढविणारें,
शौच्यास साफ करणारें,
झोंप आणणार,
शक्ति देणारें,
तेजस्वीपणा आणणारें.

[illegible] .

क्याटलाग मागवा,
डु फार्मास्युटिकल वर्क्स लिमिटेड,
मुंबई नं. १२

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ
ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, *B. A.*
Jewellers, KUMTA.
ಆರ್. ಎಸ್. ಕಾಸರಗೋಡ,
ರತ್ನಾಭರಣ ವ್ಯಾಪಾರಿ, ಕುಮಟಾ.

ಆಯುರ್ವೇದಿಕ) ಧಾತುಪೌಷ್ಟಿಕ, ಶಕ್ತಿವರ್ಧಕ, ರಕ್ತಶೋಧಕ (ಮಲಬಾರಿಕೃತ

ಮದನಕಾಮೇಶ್ವರೀಲೇಹ.

[illegible]

ಅತ್ಯುತ್ತಮ) ಜಂತವಿನ ಔಷಧ (ಪರಸುಲಭ.

[illegible]

ಮನೇಜರ ಆಯುರ್ವೇದಚಿಕಿತ್ಸಾಮಂದಿರ, ತಾ. ಕಾರವಾರ, ಪೋ. ಚೆಂಡಿಯೆ.

ಮುಂಬಯಿ ಏಜಂಟ — R. C. KAMAT, Teashop Store Lane, Fort, BOMBAY

ಹುಟ್ಟಿದ ಪಕ್ಕಾವೇಳೆ ತಿಳಿಸಿರಿ) ಸುಖಸಾಧನಕ್ಕೆ ಯೋಗ್ಯ ಉಪಾಯವು (ಯಾ ಜನ್ಮಟಿಪ್ಪಣ ಕಳಿಸಿರಿ

ಮಲಬಾರಿ) ಕೇರಳ ಜ್ಯೋತಿಷ. (ಭವಿಷ್ಯ.

[illegible]

ಮನೇಜರ, "ಜ್ಯೋತಿಷ ಶಾಸ್ತ್ರ-ಭುವನ" ಚೆಂಡಿಯೆ, ತಾ. ಕಾರವಾರ.

ಕ್ಷಯ ರೋಗ?
ವೈದ್ಯ ಫರ್ನಾಂಡಿಸರ
ಬರೇ ನಾಲ್ಕು ಔಷಧಗಳು.
[illegible]
(ರೂ. [illegible])
ವೈದ್ಯ ಫರ್ನಾಂಡಿಸ,
ರೋಗನಿವಾರಕ ಡಿಪೋ,
ಕಾರವಾರ

ಗ್ಯಾಸ ದೀಪಗಳು
ಭಾಡಿಗೆಗೆ ಇಟ್ಟಿರುತ್ತವೆ
ದರವು ಎಲ್ಲಕ್ಕಿಂತ ಕಡಿಮೆ ಇಟ್ಟಿರುತ್ತದೆ
ದವರು ಕೆಳಗಿನ ವಿಳಾಸಕ್ಕೆ ಬರೆಯಬೇಕು
ದು ವಿಳಾಸ:— ವೈಕುಂಠ ವಿನಾಯಕ ನಾಯಕ,
ಪೋಸ್ಟ— ಉಪ್ಪಿನಪಟ್ಟಣ ತಾ. ಕುಮಟಾ.

ನಮ್ಮ ಪ್ರೆಸ್ಸಿನಲಿ

ನೇಟ ಬಾಕಿ ದಾವೆಯ ಫಾರ್ಮುಗಳು ತಯಾರಿವೆ.

ವಕಾಲತ, ಅಮುಲದಾರಿ ಮೊದಲಾದ ಕೋರ್ಟ ವ್ಯವಹರಣೆಯ ಹಾಗೂ ಕಸ್ಟಮ್ ಖಾತೆಯ ಫಾರ್ಮುಗಳು ಅಗ್ಗವಾಗಿ ಸಿಗುತ್ತವೆ.

ಮೆನೇಜರ,

ಸ್ವಾರ್ಥಹಿತ್ ಕೆನರಾ ಪ್ರೆಸ್, ಕುಮಟಾ

ಪ್ರಯಾಣಿಕರ ಅನುಕೂಲತೆ ಬಗ್ಗೆ ಡೇಲಿ ಮೋಟರ ಸರ್ವ್ಹಿಸ.



ಕುಮಟೆಯಿಂದ— ಹೊನ್ನಾವರಕ್ಕೆ, ಭಟ್ಕಳಕ್ಕೆ, ಬೈಂದೂರಕ್ಕೆ.

ಕುಮಟೆಯಿಂದ— ಸಿರ್ಸಿಗೆ, ಹುಬ್ಬಳ್ಳಿಗೆ, ಹಾವೇರಿಗೆ.

ಕುಮಟೆಯಿಂದ— ಅಂಕೋಲೆಗೆ, ಕಾರವಾರಕ್ಕೆ, ಮಡಗಾಂವಕ್ಕೆ, ಹೋಗುವ ಮೋಟಾರಿನ ಟಿಕೀಟುಗಳು ನಮ್ಮಲ್ಲಿ ಪ್ರತಿ ನಿತ್ಯವೂ ಸಿಗುವವು.

ಬಿ. ದಾಸ,
ಏಜಂಟ ಕುಮಟಾ

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



೧ ರಾಗದ ಕೈಪೆಟ್ಟಿಗೆ ರಂ. ೩೦, ೪೦, ೬೦, ೭೫, ೧೦೦
೨. „ ಕಾಲು ಪೆಟ್ಟಿಗೆ ರಂ. ೬೫, ೭೫, ೧೨೮, ೧೪೮
೩. ತಬಲೆ ಜೋಡಿ ರಂ. ೧೬, ೧೮, ೨೦, ೨೫.
೪. ಹಾರ್ಮೋನಿಯಮ ಗ್ಯಾತ (ಮರಾಠಿ) ರಂ. ೧॥
ತಬಲೆ ಗ್ಯಾತ ರಂ, ೧೨ ೮.

ವಿಶೇಷ ಮಾಹಿತಿಬಗ್ಗೆ ನಮ್ಮ ಮರಾಠಿ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ :- **ಗೋಪಾಳ ಸಖಾರಾಮ** ಮತ್ತು
ಕಂಪನಿ, ವಿಠ್ಠಲವಾಡಿ ಎದುರಿಗೆ,
೨೬೨ ಕಾಳಬಾದೇವಿ, ಮುಂಬಯಿ

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ



ಕಳೆದ ೪-೫ ವರ್ಷಗಳಿಂದ ನಾವು ಶಿವಮೊಗ್ಗಾ-ತೀರ್ಥಹಳ್ಳಿ-ಆಗುಂಬೆ, ಶಿವಮೊಗ್ಗಾ-ಸಾಗರ-ತಾಳಗುಪ್ಪೆ, ಶಿವಮೊಗ್ಗಾ-ಹರಿಹರ-ಹಗ್ಗಾವತಿ, ಶಿವಮೊಗ್ಗಾ-ಕಳೂರಕಟ್ಟೆ, ಸಾಗರ-ಸೊರಬ-ಶಿರಾಳಕೊಪ್ಪ, ಸಾಗರ-ತೀರ್ಥಹಳ್ಳಿ, ಸಾಗರ-ಕಳೂರಕಟ್ಟೆ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ ಸರ್ವೀಸನ್ನು ನಡೆಸುತ್ತಿದ್ದುದಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ, ಉಡುಪಿ, ಕುಂದಾಪುರ, ಮಂಗಳೂರ ಹಾಗು ಬೆಳ್ತಂಗಡಿ ಈ ಕಡೆಗೆ " ಕಾರ್ಕಳ ಮೋಟರ ಸರ್ವೀಸಿನ " ವಿದ್ಯಮಾನವೂ, ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಗೆ " ಲಕ್ಷ್ಮೀ ಮೋಟರ ಸರ್ವೀಸಿನ " ವಿದ್ಯಮಾನವೂ ಪ್ರಯಾಣಿಕರ ಎಲ್ಲ ಸೌಕರ್ಯಗಳ ವ್ಯವಸ್ಥೆ ಮಾಡಿಸುತ್ತೇವೆ

ಉತ್ತರ ಕನ್ನಡ ಜಿಲ್ಲೆಯ ಪ್ರಖ್ಯಾತಕರ ಜೋಗ (Gersoppa Falls), ಶಿವಮೊಗ್ಗಾ ಸಾಗರ, ಹರಿಹರ ಸುತ್ತ ನೋಡತಕ್ಕಂಥ ಸ್ಥಳಗಳಿಗೆ ಪ್ರಯಾಣ ಬೆಳೆಸಲು ಅನುಕೂಲವಾಗಬೇಕೆಂದು ಶಿವಮೊಗ್ಗಾ, ಸಾಗರ, ಜೋಗ, ಸಿದ್ದಾಪುರ, ಸಿರ್ಸಿ, ಕುಮಟಾ ಈ ಲೈನಿನಲ್ಲಿ ಮೋಟರ ಸರ್ವೀಸ ಪ್ರಾರಂಭ ಮಾಡಿಸುತ್ತೇವೆ

ಕಾಲಕ್ರಮಗಳು.

ಕುಮಟೆಯಿಂದ ಹೊರಡುವದು—	ಬೆಳಿಗ್ಗಿನ ೭ ಘಂಟೆಗೆ.
ಸಿರ್ಸಿಗೆ ಸೇರುವದು—	„ ೧೦ „
ಸಿರ್ಸಿಯಿಂದ ಬಿಡುವದು ಶಿವಮೊಗ್ಗ ಕಡೆಗೆ—	ಮಧ್ಯಾಹ್ನ ೧ „
ಸಾಗರಕ್ಕೆ ಸೇರುವದು (ಸಿದ್ದಾಪುರ ಮಾರ್ಗವಾಗಿ)—	ಸಾಯಂಕಾಲ ೬ „
ಸಾಗರದಿಂದ ಸಿರ್ಸಿ ಕಡೆಗೆ ಹೊರಡುವದು—	ಬೆಳಿಗ್ಗಿನ ೬ „
ಸಿದ್ದಾಪುರ ಮಾರ್ಗವಾಗಿ ಸಿರ್ಸಿಗೆ ಸೇರುವದು—	„ ೧೧ „
ಸಿರ್ಸಿಯಿಂದ ಕುಮಟೆ ಕಡೆ ಹೊರಡುವದು—	ಮಧ್ಯಾಹ್ನ ೨ „
ಕುಮಟೆ ಸೇರುವದು—	ಸಾಯಂಕಾಲ ೫ „

N. B — ಈ ಮೇಲಿನ ಲೈನುಗಳ ವಿನಹ ಶಿರಸಿಯಿಂದ ಹುಬ್ಬಳ್ಳಿಗೆ ಪ್ರತ್ಯೇಕ ಒಂದು ಸರ್ವೀಸ ಪ್ರಾರಂಭಿಸುವ ಯೋಜನೆ ನಡೆದಿರುತ್ತದೆ. ಸರ್ವರೂ ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

SHIMOGA,
22—11—1924.

M. MANJAPPA.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕಿಟಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ, ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು. ೬೦,೭೦ ವರ್ಷದ ಮುದುಕರ ಕಾಮವಿಕಾರವು ಕೂಡ ತರುಣರಂತೆ ಪ್ರವರ್ಧಮಾನವಾಗುವದು. (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಪ್ರಾಪ್ತವಾದ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಶಡೆಗೆ ಹೋಗುವ ವೀರ್ಯವು ಬಂದಾಗುವದು.— ಜರದಾ ಹಾಗೂ ಕಾವಿನಿಂದ ಶೋಷಿತವಾದ ಶರೀರವು ನಿರೋಗವಾಗುವದು. ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ಮತ್ತು ಅವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವು ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಸ್ವಪ್ನದಲ್ಲಿ ಎಷ್ಟೇ ದಿವಸದ ಧಾತು ಹೋಗುತ್ತಿದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ ಮೂರು ಬಾಟಲಿಯ ಕಿಮ್ಮತು ೩—೪—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚು ಹೆಚ್ಚು ಬೀಳುವದಿಲ್ಲ. ಹತ್ತು ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಡಿಯಿಂದ ೧ ಬಾಟ್ಲಿಗೆ ೧—೪—೦ ೩ ಬಾಟ್ಲಿಗೆ ೩—೦—೦, ಹತ್ತಕ್ಕೆ ೧೨—೦—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸು. ಪೋ. ನಿಪ್ಪಾಣಿ, ಜಿ. ಬೆಳಗಾಂವ

ಬಿಳಗಿ ಸಂಸ್ಥಾನದ ಶ್ರೀಮತಿ ರಾಣೀ ಸಾಹೇಬ ಸೌಭದ್ರಮ್ಮಾಜೀಯವರ ನಿಧನ.

ಬಿಳಗಿ ಪುರಸ್ಥರು ಬರೆಯುವದೇನಂದರೆ:—

ಬಿಳಗಿ ಸಂಸ್ಥಾನದ ರಾಣಿಯವರಾದ ಸೌಭದ್ರಮ್ಮಾಜಿಯವರು ತಾರೀಖು ೨೩ನೇ ಜನವರಿ ೧೯೩೫ನೇ ಬುಧವಾರ ದಿವಸ ಸಿದ್ದಾಪುರ ತಾಲೂಕ ಬಿಳಗಿಯಲ್ಲಿ ತಮ್ಮ ಅರಮನೆಯಲ್ಲಿ ಮೃತಪಟ್ಟರೆಂದು ನಮಗೆ ತಿಳಿಸಲು ಬಹು ಖೇದವಾಗುತ್ತದೆ. ಇವರು ಒಂದು ಒಳ್ಳೆ ಪ್ರಾಚೀನ ವೀರಶೈವ ರಾಜಮನೆತನದವರಿದ್ದು, ಈ ಸಂಸ್ಥಾನವು ಶಕೆ ೧೪೫೧ನೇ ವರ್ಷ ಬಿಳಗಿ ರಾಜಪುತ್ರನಿಂದ ಸ್ಥಾಪಿಸಲ್ಪಟ್ಟಿತು. ಇದು ಕಾನಡಾ ಜಿಲ್ಲಾ ಸಿದ್ದಾಪುರ ತಾಲೂಕದಲ್ಲಿ ಸಿದ್ದಾಪುರದಿಂದ ೮ ಮೈಲು ಅಂತರ ಮೇಲೆ ಅದೆ. ಇದಕ್ಕೆ ಶ್ವೇತಪುರವೆಂದು ಹೆಸರು ಇತ್ತು. ಮತ್ತು ಸುಧಾಪುರವೆಂತಲೂ ಕರೆಯಲ್ಪಡುತ್ತಿತ್ತೆಂದು ಕೆಳದೀ ನೃಪವಿಜಯವೆಂಬ ಗ್ರಂಥದ ೧೧೦ ಮತ್ತು ಮತ್ತು ೧೩೪ನೇ ಪಾನುಗಳಲ್ಲಿ ಉಲ್ಲೇಖವುಂಟು.

ಹಳೇ ಕಾನಡಾ ಗ್ಯಾಝಿಟಿಯರದಿಂದ ತಿಳಿದು ಬರುವದೇನಂದರೆ— ಬಿಳಗಿ ಸಂಸ್ಥಾನದ ಅರಸರು ಮೊಟ್ಟ ಮೊದಲು ಅಂದರೆ ೧೬ನೇ ಶತಮಾನಗಳಲ್ಲಿ ಬಿದನೂರ ಅಥವಾ ನಗರ ಅರಸರ ಮಾಂಡಲೀಕರಾಗಿದ್ದರು. ನಂತರ ಅವರು ಸ್ವತಂತ್ರರಾಗಿ ಎಷ್ಟೋ ವರ್ಷ ರಾಜ್ಯವಾಳಿದರು. ಕೊಡಗದ ಮತ್ತು ಸೋಂದೆಯ (ಬಾಂದೇವಾಡಿ) ಅರಸರಿಗೂ ಇವರಿಗೂ ಸಮೀಪದ ಸಂಬಂಧವುಂಟು. ಕಾರವಾರ ಜಿಲ್ಲೆಯಲ್ಲಿರುವ ಜಗತ್ಪ್ರಸಿದ್ಧವಾಗಿರುವ ಗೆರಸೊಪ್ಪೆಯ (ಜೋಗ) ಕಡಸಲದಲ್ಲಿ ಮುಖ್ಯ ಕಡಸಲವಾಗಿರುವ ರಾಜಾಕಡಸಲಕ್ಕೆ ಈ ಬಿಳಗೀ ರಾಜರಿಂದಲೇ "ರಾಜಾಕಡಸಲ" ವೆಂಬ ಹೆಸರು ಬಂದಿದೆ.

ಈ ಅರಸುಮನೆತನದವರಲ್ಲಿ ಅನೇಕರು ಶೂರರೂ, ರಾಜಕಾರಭಾರದಲ್ಲಿ ನಿಪುಣರೂ, ಧುರೀಣರೂ ಇದ್ದದ್ದಲ್ಲದೆ, ವ್ಯಾಪಾರಕ್ಕೆ ಬಹಳ ಉತ್ತೇಜನ ಕೊಡುತ್ತಿದ್ದರು. ಇವರಲ್ಲಿ ಅನೇಕ ರಾಜರು ಆಳಿದ ತರುವಾಯ ಹಿಂದುಸ್ಥಾನದ ಗವರ್ನರ ಜನರಲ್‌ರಾದ ಲಾರ್ಡ ವೆಲ್ಲೆಸ್ಲಿ ದೊರೆಗಳವರು ಸನ್ ೧೭೯೯ನೇ ಇಸ್ವಿಯಲ್ಲಿ ಇವರ ರಾಜ್ಯವನ್ನು ಖಾಲಸಾ ಮಾಡಿ ಕಡೆಯ ಅರಸರಾದ ಕಾಂತವೀರ ರಾಜರಿಗೆ ಸನ್ ೧೮೦೩ನೇ ಇಸ್ವಿಯಲ್ಲಿ ಪೆನ್ಶನ್ ಕೊಟ್ಟು ಬಿಳಗಿ, ಸೋಂದಾ ಮತ್ತು ಸಾಗರ ಆಗಿನ ಈ ಮೂರು ತಾಲೂಕುಗಳಲ್ಲಿ ಅವರಿಗೆ ಬೇಕಾದ ತಾಲೂಕಿನಲ್ಲಿ ಇರಬಹುದಾಗಿ ಹುಕುಂ ಮಾಡಿದ್ದರೆಂದು ತಿಳಿಯುತ್ತದೆ. ಈ ಕಾಂತವೀರ ರಾಜರು ೧೮೦೫ರಲ್ಲಿ ಮರಣ ಹೊಂದಲು, ದಯಾಳು ಸರಕಾರದವರು ಅವರ ದತ್ತಕ ಮಗ ಸೋಮಶೇಖರ ರಾಜರಿಗೂ ಅವರ ತಂದೆ ಕಾಂತವೀರ ರಾಜರಿಗೆ ಸಿಕ್ಕುತ್ತಿದ್ದ ಪೆನ್ಶನ್ ನಡೆಸಿದ್ದಲ್ಲದೆ ಲಗ್ನ ಖರ್ಚಿಗೆ ಸಹಾ ಕೊಟ್ಟರು. ಇವರಿಗೆ ಚೆನ್ನಮ್ಮಾಜಿ, ರಾಜಮ್ಮಾಜಿ ಮತ್ತು ವೀರಮ್ಮಾಜಿ ಅಂತ ಮೂವರು ಹೆಂಡಿರಿದ್ದರು. ಇವರ ಪೈಕಿ ಚೆನ್ನಮ್ಮಾಜಿಯವರು ಮತ್ತು ರಾಜಮ್ಮಾಜಿಯವರು ಕೊಡಗು ಮತ್ತು ಸೋಂದಾ (ಬಾಂದೇವಾಡಿ) ಅರಸುಮನೆತನದವರಿದ್ದರು.

ಈ ಸೋಮಶೇಖರ ರಾಜರು ಸನ್ ೧೮೫೫ನೇ ಇಸ್ವಿಯಲ್ಲಿ ಮೃತಪಡಲು ಅವರ ಎರಡನೇ ಹೆಂಡತಿ ರಾಣಿ ರಾಜಮ್ಮಾಜಿಯವರ ಜನಕಪುತ್ರ ಬಸವಲಿಂಗ ರಾಜನಿಗೆ ಪೆನ್‌ಶನ್‌ದ ಹೊರತು ಅವರಿಗೆ ಆಗಿದ್ದ ಆಸ್ತಿಯು ಮೇಲಿನ ಪೇರ್ ಸಹಿತ ಕೊಡಲ್ಪಟ್ಟಿದ್ದಲ್ಲದೆ ಲಿಗ್ನದ ಖರ್ಚಿಗೂ ಕೊಡುಗ್ರ್ಯಾಂಟು (ದೇಣಿಗೆಯು) ಕೊಡಲ್ಪಟ್ಟಿತು. ಆದರೆ ಅವರು ತಮ್ಮ ಚಿಕ್ಕ ವಯಸ್ಸಿನಲ್ಲಿ ಅಂದರೆ ೧೮೬೬ರಲ್ಲಿ ಮೃತಪಟ್ಟದ್ದರಿಂದ ಅವರು ಅದನ್ನು ಬಹು ದಿವಸ ಉಪಭೋಗ ಪಡೆಯಲಿಕ್ಕೆ ಆಗಲಿಲ್ಲ.

ಇವರ ಮರಣದ ನಂತರ ಇವರ ಮಲತಾಯಂದಿರಾದ ರಾಣಿ ಚೆನ್ನಮ್ಮಾಜಿಯವರಿಗೂ ಮತ್ತು ಇವರ ಇಬ್ಬರು ಹೆಂಡಂದಿರಾದ ರಾಣೀ ವೀರಮ್ಮಾಜಿ ಮತ್ತು ಈಗ ಮೃತಪಟ್ಟ ಸೌಭದ್ರಮ್ಮಾಜಿಯವರಿಗೂ ಸರಕಾರೀ ಪೆನ್ಶನ್ ನಡೆಯಿತು. ರಾಣಿ ಚೆನ್ನಮ್ಮಾಜಿಯವರು ಮತ್ತು ರಾಣಿ ವೀರಮ್ಮಾಜಿಯವರು ಈ ಮೊದಲೇ ಮೃತಪಟ್ಟಿದ್ದರು. ಹೀಗೆ ಸೌಭದ್ರಮ್ಮಾಜಿಯವರು ತಮ್ಮ ಆಸ್ತಿಯನ್ನು ಉಪಭೋಗಿಸಿ, ತಮ್ಮ ವಯಸ್ಸಿನ ೭೦ನೇ ವರ್ಷದಲ್ಲಿ ಮೃತಪಟ್ಟರೆಂದು ತಿಳಿಸಲು ನಮಗೆ ಬಹಳ ದುಃಖವಾಗುತ್ತದೆ. ದೇವರು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ,

ಈಗ ಶ್ರೀಮತಿ ರಾಣಿಸಾಹೇಬ ಸೌಭದ್ರಮ್ಮಾಜಿಯವರಿಗೆ ಸೋಮಶೇಖರ ರಾಜರೆಂಬ ಒಬ್ಬ ದತ್ತಕ ಮಗನಿದ್ದು ಅವರು ಕೊಲ್ಹಾಪೂರ ರಾಜಾರಾಮ ಕಾಲೇಜದಲ್ಲಿ ಅಭ್ಯಾಸಮಾಡುತ್ತಿದ್ದಾರೆ. ತಮ್ಮ ವೃದ್ಧ ಮಾತೋಶ್ರೀಯರ ಮರಣದಿಂದ ಅವರು ದುಃಖಸಾಗರದಲ್ಲಿ ಮುಳುಗಿರುವದು ಸಹಜವದೆ. ಆದರೆ ಜಗತ್ತಿನ ವ್ಯವಹಾರದ ಕಡೆಗೆ ಲಕ್ಷಕೊಟ್ಟು ತಮ್ಮ ಅಭ್ಯಾಸದ ಕ್ರಮವನ್ನು ತೀವ್ರ ಮುಗಿಸಿ ಉಚ್ಚ ಪದವಿಯನ್ನು ಪಡೆದು ತಮ್ಮ ಸಂಸ್ಥಾನವನ್ನು ಊರ್ಜಿತಸ್ಥಿತಿಗೆ ತರಲಿಕ್ಕೆ ದೀರ್ಘಾಯುರಾರೋಗ್ಯವನ್ನು ಕೊಡಲೆಂದು ಆ ದಯಾಘನನಾದ ಪರಮೇಶ್ವರನನ್ನು ನಾವು ನಿರಂತರ ಪ್ರಾರ್ಥಿಸುತ್ತೇವೆ. —ಲೇಖಕನು.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. ರಿಜಿಸ್ಟರ್ಡ

ಸ್ವಾಭಾವಿಕವಾದ, ಗುಂಗುರು ಗುಂಗುರಾಗಿರುವ, ನೀಲಿಯಿಂದ ನಿಬಿಡವಾದ ಕೇಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವದೋ.

ಕಾಮಿನಿಯಾ ಆಯಿಲ್ ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿರುವದೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಆವಶ್ಯಕ ಸಹಕಾರಿಯಾಗಿರುತ್ತದೆ. ಈ ಆಯಿಲ್ ತೊಡೆದುಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ಶಾಂತವಾಗಿ, ಮನಸ್ಸು ಉಲ್ಹಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹಚ್ಚಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ, ಅವು ದಟ್ಟವಾಗಿ ಬೆಳೆದು ನುಣ್ಣಗಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುತ್ತದೆ.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯು ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ "ಸರ್ಟಿಫಿಕೇಟ ಒಫ್ ಮೆರಿಟ" ಅಥವಾ ಯೋಗ್ಯತಾಪತ್ರವೂ, ಇತರ ನೂರಾರು ಗ್ರಾಹಕರ ಉತ್ತಮೋತ್ತಮವಾದ ದಾನಪತ್ರಗಳೂ ದೊರಕಿವೆ.

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10-0, ವಿ.ಪಿ. ಖರ್ಚ 0-14-0.

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವೂ ಆದ್ದಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡಲಾದ ಇದರಲ್ಲಿ ಮದಿರೆಯ (ಅಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರದ ಗಂಧವು ಅವೆಲ್ಲವುಗಳನ್ನು ಮೀರಿ ಮನುಷ್ಯನನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8-0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0-12-0

Address:- **The Anglo Indian Drug & Chemical Co,**
16, Market, **BOMBAY, 2.**

ಸನಾತನಿಗಳೇ, ಮಿಥ್ಯಾವಾದವನ್ನು ಬಿಟ್ಟುಬಿಡಿ!

ಪರಾಕ್ರಮಿಗಳಾಗಿ ದೇಶೋನ್ನತಿಯನ್ನೂ ಸಮಾಜೋನ್ನತಿಯನ್ನೂ ಸಾಧಿಸಿರಿ!

ದೇಶಭಕ್ತ ಲಾಲಾ ಲಜಪತರಾಯರ ಉಪದೇಶ.

ಕಲಕತ್ತೆಯಲ್ಲಿ ಜರುಗಿದ ಅಖಿಲ ಭಾರತೀಯ ಹಿಂದೂ ಮಹಾ ಸಭೆಯ
ಎಂಟನೇ ಅಧಿವೇಶನದ ಹಕೀಕತು.

ಅಖಿಲ ಭಾರತೀಯ ಹಿಂದೂ ಮಹಾ ಸಭೆಯ ೮ನೇ ಅಧಿವೇಶನವು ಲಾಲಾ ಲಜಪತರಾಯರ ನೇತೃತ್ವದಲ್ಲಿ ಕಲಕತ್ತೆಯೊಳಗೆ ಕಳೆದ ತಾ ೧೧ ನೇ ಶನಿವಾರಕ್ಕೆ ಪ್ರಾರಂಭವಾಯಿತು. ಅಖಿಲ ಭರತಖಂಡದೊಳಗಿನ ಪ್ರಮುಖ ಸನಾತನಿಗಳು ಅಧಿವೇಶನಕ್ಕೆ ಚಿತ್ತೈಸಿದ್ದರು. ಸ್ವಾಗತಕರ ಪಕ್ಷದ ಪರವಾಗಿ ಸ್ವಾಗತ ಮಂಡಳದ ಅಧ್ಯಕ್ಷರಾದ ಸರ್ ಪಿ. ಸಿ. ರೊಯರವರು ಸಭಿಕರನ್ನು ಆನಂದದಿಂದ, ಆದರದಿಂದ ಸ್ವಾಗತೀಕರಿಸಿ, ಹಿಂದೂ ಮಹಾಸಭೆಯು ಯಾವದೇ ಪ್ರಕಾರದಿಂದ ಅನ್ಯ ಸಮಾಜಗಳನ್ನು ದ್ವೇಷಿಸುವಂಥಾದ್ದಲ್ಲೆಂದು ಉದ್ಗರಿಸಿದರು. ಮಹಾಸಭೆಯು ಸನಾತನ ಸಮಾಜದೊಳಗಿನ ನ್ಯೂನತೆಗಳನ್ನು ಹೋಗಲಾಡಿಸಿ, ಸಮಾಜದ ಸಕಲ ಪಂಥಗಳನ್ನೂ ಸಮಸ್ತ ಸಂಪ್ರದಾಯಗಳನ್ನೂ ಒಟ್ಟಿಗೆ ಸೇರಿಸಿ, ಹಿಂದೂ ಸಮಾಜವನ್ನು ಭದ್ರಪಡಿಸುವದೆಂದರು. ಮಹಮ್ಮದೀಯರೂ, ಕ್ರೈಸ್ತರೂ, ಸಿಖರೂ ಇಂಥ ಉದ್ದೇಶಗಳನ್ನೇ ಧ್ಯೇಯಗಳನ್ನಾಗಿಟ್ಟುಕೊಂಡು, ಸಮಾಜಸೇವೆ ಮಾಡಿ, ಸ್ವಸಮಾಜದ ಸಂವರ್ಧನವನ್ನು ಬೆಳಸಿಕೊಳ್ಳಬೇಕೆಂದರು. ಸರ್ ರೊಯರ ಉಪನ್ಯಾಸವು ಸಂಕ್ಷಿಪ್ತವಿದ್ದು ಸುವಿಚಾರಪರಿಪ್ಲುತವಿತ್ತು. ಅವರ ಭಾಷಣವಾದ ಬಳಿಕ, ಲಾಲಾಜಿಯವರು ಅಧ್ಯಕ್ಷರಾಗಿ ನೇಮಿಸಲ್ಪಟ್ಟರು. ದೇಶಭಕ್ತರು ಹಿಂದೀ ಭಾಷೆಯಲ್ಲಿ ಹಿಂದೂ ಮಹಾಸಭೆಯ ಧ್ಯೇಯವನ್ನೂ, ಕಾರ್ಯಕ್ಷೇತ್ರವನ್ನೂ ತಿಳಿಸಿಕೊಡುತ್ತ, ಸನಾತನ ಸಮಾಜದ ವಿಪನ್ನಾವಸ್ಥೆಯನ್ನು ಬಣ್ಣಿಸಿ, ಧರ್ಮಬಾಂಧವರು ಆತ್ಮಸಂರಕ್ಷಣೆಗಾಗಿ ಕೈಕೊಳ್ಳಬೇಕಾದ ಉಪಾಯವನ್ನು ಸೂಚಿಸಿದರು. ಹಿಂದೂ ಮಹಾಸಭೆಯ ಕಾರ್ಯಕ್ಷೇತ್ರದ ಕುರಿತು ಸನಾತನಿಗಳಲ್ಲಿಯೂ, ಇತರ ಧರ್ಮದವರಲ್ಲಿಯೂ ನಿರಾಧಾರ ಕಲ್ಪನೆಗಳು ತಲೆದೋರಿರುವದರಿಂದ ಸನ್ಮಾನ್ಯ ಅಧ್ಯಕ್ಷರ ಭಾಷಣದ ಸಾರಾಂಶವನ್ನರುಹುವದು ನಮ್ಮ ಕರ್ತವ್ಯವು. ದೇಶಭಕ್ತರ ಭಾಷಣದ ಸಾರಾಂಶವೇನೆಂದರೆ:—

ಹಿಂದೂ ಮಹಾಸಭೆಯ ಧ್ಯೇಯ.

ಸ್ನೇಹಭಾವವನ್ನು ಬೆಳಿಸುವದು ನಮ್ಮ ಕರ್ತವ್ಯವು ದ್ವೇಷಭಾವಕ್ಕೆ ನಮ್ಮಲ್ಲಿ ಇಂಬಿಲ್ಲ. ಹಿಂದೂ ಸಮಾಜವು ಧಾರ್ಮಿಕ ಸಮಾಜವು. ವೇದಾದಿ ಧರ್ಮಶಾಸ್ತ್ರಗಳು ಇದೇ ಭೂತಲವನ್ನು ಪ್ರೇಮಭಾವದಿಂದ ನಡಿಸಿಕೊಳ್ಳಲು ಸಮಾಜಕ್ಕೆ ಆಜ್ಞಾಪಿಸುತ್ತಿವೆ. ಪರರು ನಮ್ಮ ಮೇಲೆ ಅನ್ಯಾಯದಿಂದ ಸಾಗಿಬಂದಾಗಲೂ ನಾವು ಪ್ರೇಮಪರರಾಗಿ ನಮ್ಮ ಪ್ರಾಣವನ್ನು ಬಲಿದಾನ ಮಾಡಿಕೊಳ್ಳದೆ ಹಕ್ಕುಗಳನ್ನು ಸಹ ಕಳಕೊಳ್ಳಬೇಕೆಂದು ಅರ್ಥವಾಗುವದಿಲ್ಲ. ನಾವು ಯಾರಿಗೂ ಕೇಡು ಬಗೆಯುವವರಲ್ಲ. ಸಮಸ್ತರೂ ನಮ್ಮ ಮಿತ್ರರೇ. ಬೇಕಾದರೆ ಅವರು ಅನ್ಯ ಧರ್ಮದವರಿರಲಿ, ಅನ್ಯ ಪಂಥದವರಿರಲಿ; ಅವರವರ ಧರ್ಮದಂತೆ ಅವರವರು ನಡಕೊಂಡು, ಅವರವರ ಧರ್ಮಶಾಸ್ತ್ರಗಳಂತೆ ಅವರವರು ಪರಮಾತ್ಮನ ಪೂಜೆ ಮಾಡಿದರೆ, ಅವರವರಿಗೆ ಮುಕ್ತಿ ದೊರೆಯುತ್ತದೆ ಎಂದು ನಮ್ಮ ನಂಬಿಗೆ ಇದೆ. ಹೀಗೆ ನಡಕೊಳ್ಳುವವರಿಗೆ ಯಾರಿಗೂ ಯಾರಿಂದಲೂ ಅಡ್ಡಿಯಾಗಲಾರದು. ಈ ಮತವು ಎಲ್ಲರಿಗೂ ಮಾನ್ಯವಿಲ್ಲ. ಮಾನ್ಯವಿದ್ದರೂ ಅದರಂತೆ ನಡಕೊಳ್ಳಲು ಬುದ್ಧಿ ಇಲ್ಲ. ವ್ಯಕ್ತಿಗಳಾಗಲೀ, ಇತರ ಸಮಾಜಗಳಾಗಲೀ, ಸ್ವಾರ್ಥಾಂಧರಾಗಿ ನಮ್ಮ ಮೇಲೆ ಕೈಮಾಡುತ್ತಾರೆ. ಇಂಥ ಪ್ರಹಾರಗಳನ್ನು ಹೋಗಲಾಡಿಸಿ, ಆತ್ಮರಕ್ಷಣ ಮಾಡಿಕೊಳ್ಳಲು, ಒಬ್ಬೊಬ್ಬರಾಗಿ ವ್ಯಕ್ತಿಶಃ ಹಾಗು ಸಂಘಶಃ ನಾವೆಲ್ಲರೂ ಕರ್ತವ್ಯಬದ್ಧರಾಗಿದ್ದೇವೆ. ಈ ಕುರಿತು ಭಗವದ್ಗೀತೆಯ ವಚನಗಳೇ ನಮಗೆ ಮಾರ್ಗದರ್ಶಕವಾಗಿವೆ. ಪರರಿಗೆ ದುರುತ್ತೇಜನ ಕೊಟ್ಟು ನಮ್ಮ ನಾಶವಾದಲು, ನಮ್ಮ ಮೇಲೆ ಸಾಗಿಬರುವಷ್ಟು ನಾವು ಬಲಹೀನರಾಗಲಾರೆವು. ಅಹಿಂಸೆಯ ಜಪ ಮಾಡಿ ಗಂಡಾಂತರದಲ್ಲಿ ಸಿಲುಕಿ ಬೀಳಲಾರೆವು. ಅಹಿಂಸೆಯು ಪರಮ ಶ್ರೇಷ್ಠ ಧರ್ಮತತ್ವವು. ಆದರೆ, ಸತ್ಯವು ಅದಕ್ಕೂ ಶ್ರೇಷ್ಠವಾದದ್ದು. ಅಹಿಂಸೆಯನ್ನೂ, ಸತ್ಯವನ್ನೂ ಒಂದಕ್ಕೊಂದು ವಿರೋಧವಾಗದಂತೆ ನಾವು ಒತ್ತಟ್ಟಿಗೆ ಎಣಿಸತಕ್ಕದ್ದು. ತತ್ವತಃ ಎರಡೂ ಒಂದೇ. ವ್ಯಕ್ತಿಗಳು ಅಹಿಂಸೆಯ ತತ್ವದಂತೆ ನಡೆಯುಲು ಶಕ್ಯವಿದೆ. ಆದರೆ ಸಮಾಜವು ದೇಶಕಾಲಗಳಿಗನುರೋಧವಾದ ಧರ್ಮದಂತೆ ಅಹಿಂಸಾಚರಣವನ್ನಿಡಬೇಕು. ನಮ್ಮ ಪುರಾತನ ಧರ್ಮಶಾಸ್ತ್ರಗಳೂ ಇದೇ ತತ್ವವನ್ನು ನಮಗೆ ಕಲಿಸುತ್ತಿವೆ. ವರ್ಣಾಶ್ರಮಗಳೂ ಇದೇ ತತ್ವದ ಆಧಾರದಿಂದಲೇ ಸ್ಥಾಪಿತವಾದವು. ಸನ್ಯಾಸಿಯ ಪರಮ ಶ್ರೇಷ್ಠ ಧರ್ಮಾಚಾರವನ್ನು ಗೃಹಸ್ಥನು ಕೈಕೊಂಡರೆ ಆತನು ಪರಮ ಪಾಪಕರ್ಮಾಚರಣೆಯಾಗುವನು. ಭಿನ್ನ ಭಿನ್ನ ಆಶ್ರಮಗಳ ಧರ್ಮಾಚಾರವನ್ನು ಒಟ್ಟುಮಾಡಿ, ಅವನ್ನು ಕಾಲ ಸಂದರ್ಭಗಳನ್ನು ನೋಡದೆ, ಆಚರಿಸಹತ್ತಿದರೆ, ಎಲ್ಲವೂ ಗೊಂದಲವಾಗುವದು. ವರ್ಣಾಶ್ರಮ ಧರ್ಮದ ತತ್ವಗಳನ್ನು ನಾವು ಅಲ್ಲಗಳೆದು ಸನಾತನಿಗಳ ಆಚಾರ ಪದ್ಧತಿಯನ್ನೇ ವಿಕೃತ ಮಾಡಿ, ಸಮಾಜವನ್ನು ಅಧೋಗತಿಗಿಳಿಯ ಮಾಡಿದ್ದೇವೆ. ಉತ್ಪಾದಕರ ಕಲ್ಪನೆಯಂತೆ ವರ್ಣಗಳೂ ಇರುವದಿಲ್ಲ, ಆಶ್ರಮಗಳೂ ಇರುವದಿಲ್ಲ. ಕಲ್ಪನೆಯ ನೆರೆಯಲ್ಲಿ ಸತ ವರ್ಣಾಶ್ರಮಗಳು ಕಂಡು ಬರುವದಿಲ್ಲ. ಪುರಾತನ ತತ್ವದಂತೆ ಅವನ್ನು ನಾವು ಉದ್ಧರಿಸಬಲ್ಲೆವೇನು? ಎಂದು ನನಗೆ ಕೇಳಿದರೆ, ಅದಕ್ಕೆ ನಾನು ಉತ್ತರ ಕೊಡಲಾರೆ. ಆದರೂ ಒಂದು ಮಾತು ಮಾತ್ರ ಖಂಡಿತವಿದೆ. ಸನ್ಯಾಸಿಗಳ ಧರ್ಮಾಚಾರಗಳನ್ನು ಎಳೆ ಪ್ರಾಯದ ಗೃಹಸ್ಥರ ಮೇಲೆ ಹೇರಿಸುವದು ಸನಾತನ ಧರ್ಮಶಾಸ್ತ್ರಗಳಿಗೂ, ಸನಾತನ ಸಂಸ್ಕೃತಿಗೂ, ಸಂಪೂರ್ಣವಾಗಿ ವಿರೋಧಕವಿದೆ. ಇಂಥ ಪ್ರಕಾರದಿಂದ ಸಮಾಜವು ನಾಶವಾಗುವದೆಂದು ನನ್ನ ಮತವಿದೆ.

ಅಹಿಂಸೆಯ ಮೀಮಾಂಸೆ.

ಅಹಿಂಸೆಯು ಅನೇಕ ಪ್ರಕಾರದ್ದಿದೆ. ಅಹಿಂಸೆಯಲ್ಲಿ ಅನೇಕ ಸಂಗತಿಗಳಿವೆ. ಸನ್ಯಾಸಿಯ ಅಹಿಂಸೆಯು ಗೃಹಸ್ಥನಿಗೆ ಅಹಿಂಸೆಯಾಗಲಿಕ್ಕಿಲ್ಲ. ಗೃಹಸ್ಥಾಶ್ರಮದೊಳಗಿಂದ ಪಾರಾಗದ ಹೊರತು ಯಾರೂ ಸನ್ಯಾಸಿಯಾಗಲಾರರು. ಅನೇಕ ಹಿಂದೂ ವಿದ್ವಾಂಸರೂ, ಲೋಕನಾಯಕರೂ, ಎಳೆ ಪ್ರಾಯದವರಿಗೆ ವೈರಾಗ್ಯವನ್ನೂ ಸನ್ಯಾಸಧರ್ಮವನ್ನೂ ಉಪದೇಶಿಸುತ್ತಿರುವರು. ಇದನ್ನು ನೋಡಿ ನನಗೆ ಅತ್ಯಂತ ವಿಷಾದವಾಗಿದೆ. ಹುಡುಗರೂ, ಯುವಕರೂ ವೈರಾಗ್ಯೋಪದೇಶವು ಸನಾತನ ಸಂಸ್ಕೃತಿಗೆ ವಿರೋಧಕವಾದದ್ದು. ಜಗತ್ತಿನಲ್ಲಿ ಪಾಪಮಯವೆಂದು ನಮ್ಮ ಸಮಾಜವು ಗ್ರಹಿಸುತ್ತಿದೆ. ಈ ಗ್ರಹಿಕೆಯು ತೀರ ವಿಷಾದಕರವು. ರಾಜಕೀಯ ಹಾಗು ಆರ್ಥಿಕ ದಾರಿದ್ರ್ಯದಿಂದ ನಮ್ಮ ಗ್ರಹಿಕೆಯು ಸ್ಥಿರವಾಗಿದೆ. ಹಿಂದೂ ಲೋಕನಾಯಕರಾದವರೇ, ರಾಷ್ಟ್ರದ ಚೈತನ್ಯವನ್ನೂ, ಆನಂದವನ್ನೂ ಕಳೆಗುಂದಿಸಲು ಪರಮಾವಧಿಯ ಯತ್ನಮಾಡುತ್ತಿರುವರು. ಎಳೆ ಪ್ರಾಯದ ಸ್ತ್ರೀಪುರುಷರಲ್ಲಿಯೂ, ಚಿಕ್ಕ ಬಾಲಕರಲ್ಲಿಯೂ ಆನಂದವನ್ನುಂಟು ಮಾಡುವರೆ ನಾವು ಪರಮಾವಧಿಯ ಯತ್ನಮಾಡಬೇಕೆಂದು ನನ್ನ ಅಂಬೋಣವಿದೆ. ಸ್ವಪರಾಕ್ರಮದಿಂದ ಭೂತಲದಲ್ಲಿ ಖ್ಯಾತಿಗೆ ಹೊಂದಲು ನಾವು ಅವರಿಗೆ ಪ್ರೇರಿಸಬೇಕು. ಅವರು ಸಾಹಸಿಗರಾಗುವಂತೆ ಮಹತ್ವಾಕಾಂಕ್ಷಿಗಳಾಗುವಂತೆ ನಾವು ಯತ್ನ ಪಡಬೇಕು. ಮಿಥ್ಯಾವಾದಿಗಳಾಗಿ ನಿರಾಶಾವಂತರಾಗಿ, ಎಳೆ ಪ್ರಾಯದವರು ನಡೆಯಹತ್ತಿದರೆ ಯಾವದೇ ರಾಷ್ಟ್ರವು ಸ್ವತಂತ್ರವಾಗಲಾರದು; ಉದ್ಧಾರ ಹೊಂದಲಾರದು; ಈ ಪ್ರವೃತ್ತಿಯಿಂದ ಪ್ರಜೆಗಳು ವ್ಯಗ್ರರಾಗುತ್ತಾರೆ; ತೃಪ್ತರಿರುವರೆಂದು ತೋರಿಸುತ್ತಾರೆ; ಹೇಡಿಗಳಾಗುತ್ತಾರೆ; ಧೈರ್ಯಹೀನರಾಗುತ್ತಾರೆ; ಪೌರುಷಹೀನರಾಗುತ್ತಾರೆ; ಇದರಿಂದ ಎಂಥ ಕಷ್ಟಗಳೊದಗಿದರೂ, ಅವಕ್ಕೆ ಪ್ರಜೆಗಳು ಇದಿರಾಗುವದಿಲ್ಲ. ದಾಸ್ಯಬುದ್ಧಿಯು ಮಿಗಿಲಾಗುತ್ತ ನಡೆದದೆ. ಇದೇನು ಮೋಕ್ಷದ ಮಾರ್ಗವಲ್ಲ; ವಿನಾಶದ ದಾರಿಯಿದು !

ಸನಾತನಿಗಳ ಹಿತಚಿಂತಕರೆಲ್ಲರೂ ಈ ಉಪದೇಶವನ್ನು ನಿಷೇಧಿಸಲು ಬದ್ಧ ಕಂಕಣರಿರುವರು. ನಾವು ಗರಡಿಮನೆಗಳನ್ನು ಸ್ಥಾಪಿಸಬೇಕು. ವ್ಯಾಯಾಮಶಾಲೆಗಳನ್ನೂ, ವಿಹಾರೋಪವನಗಳನ್ನೂ ಏರ್ಪಡಿಸಬೇಕು. ಅಲ್ಲಿ ಧರ್ಮಬಾಂಧವರು ಶಾರೀರಿಕ—ಮಾನ

ಬಿಕ ವ್ಯಾಯಾಮಗಳನ್ನು ಪಡೆದು ಪ್ರಮುದಿತರಾಗಿ ತಮ್ಮನ್ನು ಸುಧಾರಿಸಿಕೊಳ್ಳತಕ್ಕದ್ದು. ನನ್ನ ಧರ್ಮಬಾಂಧವರು ಸಾಮರ್ಥ್ಯವಂತರಾಗಿ, ಆರೋಗ್ಯವಂತರಾಗಿ, ಮಹತ್ವಾಕಾಂಕ್ಷೆಪ್ರೇರಿತರಾಗಿ ಆತ್ಮವಿಶ್ವಾಸ ಹಿಡಿದು ಪ್ರಗತಿ ಪಥದಲ್ಲಿ ಸಾಗಬಯಸಬೇಕೆಂದು ನನ್ನ ಅಭಿಲಾಷೆಯಿದೆ. ಪ್ರಾಪಂಚಿಕ ಅಭ್ಯುದಯವನ್ನು ಧಿಕ್ಕರಿಸಿ, ಪ್ರಜೆಗಳನ್ನು ಮೇಲಕ್ಕೆತ್ತಲು ಸ್ವಾರ್ಥತ್ಯಾಗವನ್ನು ಸಹಿಸಿದ ಹರೆಯದವರಿಗೆಲ್ಲ ನಾನು ಮನಮುಟ್ಟಿ ಪ್ರಶಂಸಿಸುವೆನು. ಇಂಥ ವ್ಯಕ್ತಿಗಳು ಸಹಜವಾಗಿ ಅಲ್ಪರಿರುವರು. ಆದರೆ ಇಡೀ ಜನಾಂಗಕ್ಕೇ ಆತ್ಮತ್ಯಾಗವನ್ನೂ, ತೃಪ್ತಿಯನ್ನೂ ಬೋಧಿಸುವದರಿಂದ ಭೌತಿಕದ ತಿರಸ್ಕಾರವಾಗಿ ದೇಶದಲ್ಲಿ ದೈನ್ಯವಾದವು ಬೆಳೆಯುತ್ತಿದೆ ಇಂಥ ಉಪದೇಶವು ಪಾಪಕರವು

ನಮ್ಮ ರಾಜಕಾರಣ

ಹಿಂದೂಗಳ ರಾಜಕೀಯ ಧ್ಯೇಯವು ಇತರ ಧರ್ಮಬಾಂಧವರಿಗಿಂತ ಭಿನ್ನವಿರಲಾರದು. ಹಿಂದೂಗಳು ರಾಷ್ಟ್ರೀಯ ಚಳವಳಿಯನ್ನು ಕೈಕೊಂಡು ಸರಕಾರಕ್ಕೆ ಇದಿರಾಗಿ ಸ್ವಸಮಾಜದ ಹಾನಿ ಮಾಡಿರುವರೆಂಬ ಆರೋಪವು ನಿರಾಧಾರವಾದದ್ದು. ಅವರು ರಾಷ್ಟ್ರಚಳವಳಿಯನ್ನು ದಿಟ್ಟತನದಿಂದ ಕೈಕೊಂಡು ದೇಶಸೇವೆಯನ್ನು ಜರುಗಿಸಿದಬಗ್ಗೆ ನನಗೆ ಸಂತೋಷವಾಗುತ್ತಿದೆ. ಹಿಂದೂಗಳು ರಾಜಕಾರಣದಿಂದ ಅಲಿಪ್ತರಾಗಲಾರರು. ಈ ವರೆಗೆ ನಡಿಸಿದಂತೆ ರಾಷ್ಟ್ರಸೇವೆಯನ್ನು, ವಿಶಾಲ ದೃಷ್ಟಿಯ ರಾಷ್ಟ್ರಧೋರಣದಿಂದಲೇ ಅವರು ನಡಿಸುತ್ತಿರಬೇಕು. ನಮ್ಮ ರಾಷ್ಟ್ರೀಯತ್ವದ ದುರುಪಯೋಗಮಾಡಿಕೊಳ್ಳುವ ಅನೇಕ ಜಾತಿಗಳಿರುವವು. ತಮ್ಮ ಜಾತಿಕಲ್ಯಾಣದ ಕುದುರೆಯನ್ನೇ ಅವು ಮುಂದೊತ್ತುತ್ತಿವೆ. ಇವನ್ನು ಅಡ್ಡಗಟ್ಟಲು ನಾವು ಸಿದ್ಧರಾಗಿರಬೇಕು. ಯಾಕೆಂದರೆ ಇದರಿಂದ ನಮ್ಮ ಸ್ವಾತಂತ್ರ್ಯವು ಶಾಶ್ವತವಾಗಿ ಜಾರುವದು. ಹಿಡಿತ ಚಿರಕಾಲವಿರುವದು; ನಿರಂತರವಾಗಿಯೂ ನಾವು ಪರಾವಲಂಬಿಗಳಾಗುವೆವು.

ನಮಗೆ ಹಿಂದೂ ರಾಜ್ಯವೇ ಬೇಡ

ನಾವು ಹಿಂದೂ ರಾಜ್ಯಕ್ಕಾಗಿ ಆಯಾಸಪಡುತ್ತೇವೆಂದು ಮುಹಮ್ಮದೀಯರ ಆರೋಪ. ಕೆಲ ಮಹಮ್ಮದೀಯರು ಇಸ್ಲಾಮ ರಾಜ್ಯಕ್ಕಾಗಿ ಬಡಿದಾಡುವಂತೆ ಕೆಲ ಅದೂರದೃಷ್ಟಿಯ ಸನಾತನಿಗಳು ಹಿಂದೂ ರಾಜ್ಯದ ಕಡೆಗೆ ಓಡಿಹೋಗುವದು ವ್ಯಸನಕರವು. ಅಖಿಲ ಮುಹಮ್ಮದೀಯರೂ ಮುಸಲ್ಮಾನ ರಾಜ್ಯವನ್ನು ಬಯಸುವದಿಲ್ಲ. ಸನಾತನಿಗಳಿಗೂ ಹಿಂದೂ ರಾಜ್ಯವು ಬೇಕಾಗಿಲ್ಲ. ಸಮಸ್ತ ಸಮಾಜದವರಿಗೆ ಸಕಲ ವರ್ಗದವರಿಗೆ ನ್ಯಾಯವಾಗುವಂತೆ ರಾಷ್ಟ್ರೀಯ ಸರಕಾರವನ್ನು ನಿರ್ಮಾಡಿಸಲಿಕ್ಕೆ ಹಿಂದೂಗಳು ಯತ್ನಿಸುತ್ತಾರೆ. ಹಿಂದೂ ರಾಜ್ಯ ಅಥವಾ ಮುಸಲ್ಮಾನ ರಾಜ್ಯವೆಂಬ ಘೋಷಗಳು ಕಿಡಿಗೇಡಿಯವಿದ್ದು ಅವಕ್ಕೆ ಯಾರೂ ಬೆಂಬಲ ಕೊಡಬಾರದು.

ಹಿಂದೂ ಮಹಾಸಭೆಯ ರಾಜಕಾರಣವೇನು ಭಿನ್ನವಿಲ್ಲ. ಭಿನ್ನಭಿನ್ನ ಸಮಾಜಗಳೊಡನೆ ನಮ್ಮ ಸಂಬಂಧಗಳು ಹೇಗಿರಬೇಕೆಂದು ಹೇಳುವದು ಹಿಂದೂ ಮಹಾಸಭೆಯ ಕಾರ್ಯವು. ಜಾತಿವಾರ ಪ್ರತಿನಿಧಿತ್ವಕ್ಕೆ ಹಿಂದೂ ಸಮಾಜವು ಒಪ್ಪುವದಿಲ್ಲ. ಜಾತಿವಾರ ಪ್ರತಿನಿಧಿತ್ವವನ್ನು ಹಿಂದೂ ಸಮಾಜವು ವಿರೋಧಿಸುತ್ತಿದೆ.

ಬಳಿಕ, ಬಜಾಜರಾಯರು ಕೆಲ ಸಂಕುಚಿತ ಬುದ್ಧಿಯ ಮುಹಮ್ಮದೀಯರ ಅರಾಷ್ಟ್ರೀಯ ಕಲ್ಪನೆಗಳ ಕುರಿತು ವಾಯವ್ಯ ಸರಹದ್ದಿನಲ್ಲಿ ಹಿಂದೂಗಳು ಮುಹಮ್ಮದೀಯರ ಮೇಲೆ ಪ್ರಾಬಲ್ಯ ಬೆಳಿಸಲು ಯತ್ನಿಸುವದಿಲ್ಲೆಂದೂ, ಕೇವಲ ಸ್ವಸಂರಕ್ಷಣಕ್ಕಾಗಿಯೇ ಅವರು ಉಪಾಯಯೋಜನೆ ಮಾಡಹೇಳುತ್ತಾರೆಂದು ಪ್ರತಿಪಾದಿಸಿ, ದಿಲ್ಲಿಯ ಐಕ್ಯ ಪರಿಷತ್ತಿನಲ್ಲಿ ಹಿಂದೂ—ಮುಹಮ್ಮದೀಯ ಸಮಾಜಗಳ ಪರಸ್ಪರ ನಡತೆಯ ವಿಷಯ ತೀರ್ಮಾನವಾದಂತೆ ಇತ್ತಟ್ಟವರೂ ಪ್ರಾಮಾಣಿಕ ಬುದ್ಧಿಯಿಂದ ನಡಕೊಳ್ಳಬೇಕೆಂದೂ ಬೋಧಿಸಿದರು. ಹಿಂದೂ ಮಹಾ ಸಭೆಯು ಹಿಂದೂ ಸಮಾಜದೊಳಗಿನ ಭಿನ್ನ ಭಿನ್ನ ಪಂಥಗಳೊಡನೆ ಜಗಳಾಡದೆಂದು ಹೇಳಿ, ಹಿಂದೂ ಐಕ್ಯಕ್ಕಾಗಿ ಶ್ರಯಷ್ಟಬುದ್ಧಿಯಿಂದಲೇ ಮತ ಮತಾಂತರಗಳೊಳಗಿನ ಭೇದಗಳನ್ನು ಅಳಿಯಲಿಕ್ಕಿಸುವದೆಂದರು.

ಶುದ್ಧಿ ಚಳವಳಿ.

ಕ್ರೈಸ್ತರೂ, ಮುಹಮ್ಮದೀಯರೂ ಹಿಂದೂಗಳನ್ನು ತಮ್ಮ ಧರ್ಮಗಳಲ್ಲಿ ಎಳಕೊಳ್ಳಬಯಸುವದು ಅವಾಸ್ತವವೆಂದು ಹೇಳಲಾಗದು, ಆದರೆ, ಹಿಂದೂ ಮಹಾಸಭೆಯೂ, ಹಿಂದೂ ಸಮಾಜವೂ ತಮ್ಮ ಕಕ್ಷೆಯೊಳಗಿಂದ ಸಮಾಜದವರು ಪರಧರ್ಮಕ್ಕೆ ಹೋಗದಂತೆ ಸ್ವಸಂರಕ್ಷಣಾರ್ಥವಾಗಿ ಉಪಾಯಯೋಜನೆ ಮಾಡಬೇಕು. ಈ ಪ್ರಕಾರ ಯೋಜಿಸುವದು ಹಿಂದೂ ಸಮಾಜದೃಷ್ಟಿಯಿಂದ ವಾಸ್ತವವೇ. ಶುದ್ಧಿಯು ಸಂರಕ್ಷಕ ಚಳವಳಿಯು. ಕ್ರೈಸ್ತ ಹಾಗು ಮುಹಮ್ಮದೀಯರ ಧರ್ಮಾಂತರ ಚಳವಳಿಗಳಂತೆ ಶುದ್ಧಿಯು ಪರಧರ್ಮದವರ ಮನ ಒಲಿಸಿ, ಸ್ವಧರ್ಮದಲ್ಲಿ ಸೇರಿಸಿಕೊಂಡರೂ, ಆ ಕುರಿತು ಯಾರೂ ಆಕ್ಷೇಪಿಸಲಾರರು. ಧರ್ಮಾಂತರಗಳು ನಡೆಯುವ ವರೆಗೆ, ಇತರ ಧರ್ಮದವರು ಹಿಂದೂಗಳನ್ನು ತಮ್ಮ ಧರ್ಮದಲ್ಲಿ ಸೇರಿಸಿಕೊಳ್ಳುವವರೆಗೆ ಹಿಂದೂಗಳಿಗೂ ಅವರಂತೆ ವರ್ತಿಸಲು ಅಧಿಕಾರವಿದೆ. ಶುದ್ಧಿಯು ಧಾರ್ಮಿಕ ಚಳವಳಿಯು. ಸಮಸ್ತ ಸಂಪ್ರದಾಯದವರೂ ಇದಕ್ಕೆ ಬೆಂಬಲವನ್ನೀಯಬೇಕು.

ಸಂಘಟನೆ.

ಸಂಘಟನೆಯ ಚಳವಳಿಯನ್ನು ಕೈಕೊಂಡಬಗ್ಗೆ ಹಿಂದೂ ಸಮಾಜವು ನಾಲ್ಕೂ ಬದಿಯಿಂದ ನಿಷೇಧಿಸಲ್ಪಡುತ್ತದೆ. ಇದು ಸಯುಕ್ತಿಕವಲ್ಲ. ಧಾರ್ಮಿಕ ಸಮಾಜವು ಐಕ್ಯವಾಗಿ ಬೇರೆಬೇರೆ ಪ್ರಕಾರಗಳಿಂದ ಸಂಘಟಿಸಲು ಯತ್ನಿಸುತ್ತದೆ. ಆತ್ಮಸಂಘಟನೆಯನ್ನು ಹಿಂದೂಗಳು ಈ ವರೆಗೆ ಅಲಕ್ಷಮಾಡಿದ್ದರು. ಆದರೆ ಇತರ ಸಮಾಜಗಳ ನಡಾವಳಿಯ ಮೇಲಿಂದ ಬೋಧ ಪಡೆದು ತಕ್ಕ ಕಾರ್ಯಕ್ಕೆ ಕೈಹಾಕಿದರೆ, ಆ ಕುರಿತು ಯಾರೂ ಆಕ್ಷೇಪಿಸಬಾರದು. ಹಿಂದೂ ಸಂಘಟನೆಯೇನು ಹೊಸ ಚಳವಳಿಯಲ್ಲ. ಸುಸಂಘಟಿತರಾಗಿ ಪರರಿಗೂ, ಸರಕಾರಕ್ಕೂ ಇದಿರಾಗುವದು ಹಿಂದೂಗಳ ಕರ್ತವ್ಯವು. ಹಿಂದೂ ಮಹಾಸಭೆಯು ಹಿಂದೂಗಳ ಚಳವಳಿಗೆ ಏಕರೂಪ ಕೊಡುವ ಸಂಸ್ಥೆಯಿದೆ. ಸನಾತನ ಸಂಪ್ರದಾಯಗಳೂ, ಪಂಥಗಳೂ ಹಿಂದೂ ಮಹಾ ಸಭೆಯ ನೇತೃತ್ವವನ್ನು ಕೈಕೊಂಡು ಒಕ್ಕಟ್ಟಾಗಬೇಕು. ನಮ್ಮ ಸಮಾಜದಮೇಲೆ ಬಂದೊದಗಿದ ಗಂಡಾಂತರಗಳನ್ನು ನಾವು ಎಣಿಸಬೇಕು. ನಮ್ಮ ಸಮಾಜದವರನ್ನು ನಾವು ಹೊರದೂಡಲಾರೆವು. ಚಿಕ್ಕ ಪುಟ್ಟ ನೆಪಮಾಡಿ, ಸ್ವಕೀಯರನ್ನು ಹೊರದೂಡುವದನ್ನು ಬಿಟ್ಟು, ನಮ್ಮ ಸಮಾಜದಲ್ಲಿ ಇತರೇ ಜನರನ್ನು ತರಲು (ಯಾರಿಗೂ ಬಾಧೆಯಾಗದಂತೆ ತರಲು) ನಾವು ಯತ್ನಿಸಬೇಕು.

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮುಂತಾದ ಉಚ್ಚ ತರಗತಿಯವರು ಬೇಸಾಯಗಾರ, ಉದ್ಯೋಗಿಕ, ಅಸ್ಪೃಶ್ಯ ಮೊದಲಾದ ನೀಚ ಜಾತಿಯವರನ್ನು ದುರ್ಲಕ್ಷಿಸಬಾರದು. ಅವರು ಸನಾತನ ಸಮಾಜದ ಮೂಲಾಧಾರರೆಂದು ತಿಳಕೊಳ್ಳತಕ್ಕದ್ದು.

ಅಸ್ಪೃಶ್ಯೋದ್ಧಾರ.

ಅಸ್ಪೃಶ್ಯರು ಆರೇಳು ಕೋಟಿಗಳಿರುವರೆಂದು ಹೇಳುತ್ತಾರೆ. ಆದರೆ ಇದೇನು ನಿಜವಾಗಿರುವದಿಲ್ಲ. ಒಂದು ಪ್ರಾಂತದಲ್ಲಿ ಅಸ್ಪೃಶ್ಯರಿದ್ದವರು ಇನ್ನೊಂದು ಪ್ರಾಂತದಲ್ಲಿ ಸ್ಪೃಶ್ಯರಿರುವರು. ಇಂಥವರೂ ಈ ಲೆಕ್ಕದಲ್ಲಿ ಸಮಾವೇಶರಾಗಿರುವರು. ಎಲ್ಲ ಪ್ರಾಂತಗಳಲ್ಲಿ ಅಸ್ಪೃಶ್ಯರಿದ್ದವರ ಎಣಿಕೆ ಮಾಡಿದರೆ, ಅಸ್ಪೃಶ್ಯರ ಸಂಖ್ಯೆಯು ಬಹುಮಟ್ಟಿಗೆ ಕುಗ್ಗಬಹುದು. ನನ್ನ ಸ್ವಂತ ಮತ ಕೇಳಿದರೆ, ಮಾನವ ಪ್ರಾಣಿಯನ್ನು ಅಸ್ಪೃಶ್ಯವೆಂದೆಣಿಸುವದು ಪಾಪವು. ಆದರೆ ಅಷ್ಟು ದೂರ ಹಿಂದೂ ಮಹಾ ಸಭೆಯು ಹೋಗಬೇಕೆಂದು ನಾನು ಹೇಳುವದಿಲ್ಲ. ಒಂದು ಪ್ರಾಂತದಲ್ಲಿ ಸ್ಪೃಶ್ಯರಿದ್ದವರನ್ನು ಇನ್ನೊಂದು ಪ್ರಾಂತದಲ್ಲಿ ಅಸ್ಪೃಶ್ಯರಾಗಿ ಎಣಿಸುವ ಪ್ರಘಾತವನ್ನಾದರೂ ತ್ಯಜಿಸಬೇಕು. ಪ್ರಾಂತಿಕ ಹಿಂದೂ ಮಹಾ ಸಭೆಗಳು ಸ್ಥಳಿಕ ಹಿಂದೂ ಲೋಕಮತ ನೋಡಿ, ಅಸ್ಪೃಶ್ಯರ ಉದ್ಧಾರಕ್ಕಾಗಿ ತಕ್ಕ ಉಪಾಯಯೋಜನೆ ಮಾಡಬೇಕು. ಇವರನ್ನು ತಿರಸ್ಕರಿಸಬಾರದು. ಅವರನ್ನು ತಮ್ಮ ಸಮಾಜದಲ್ಲಿ ಸೇರಿಸಿಕೊಳ್ಳಲು, ಇತರ ಧರ್ಮದವರು ಬಾಯಿತೆರೆದು ಕೂತುಕೊಂಡಿರುವರು. ಅವರ ಧರ್ಮದ ಪ್ರತಿಷ್ಠೆಯು ವಿಶೇಷ; ಅವರ ಕೈಯಲ್ಲಿ ದುಡ್ಡು ಬಹಳವಿದೆ: ಇಂಥ ಪ್ರಸಕ್ತಿಯಲ್ಲಿ ಅಸ್ಪೃಶ್ಯರನ್ನು ತಿರಸ್ಕರಿಸುವದು ಆತ್ಮಘಾತಕವಾಗುವದು. ಧರ್ಮದ ನೆವ ಹೇಳದೆ, ವಿಶಾಲ ದೃಷ್ಟಿಯನ್ನಿಟ್ಟು ವರ್ತಿಸಬೇಕು. ದೇಶಕಾಲಗಳಿಗನುರೋಧವಾಗಿ ವರ್ತಿಸುವದು ಹಿಂದೂಧರ್ಮದ ವಿಶೇಷವು. ಇಲ್ಲದಿದ್ದರೆ, ಹಿಂದೂ ಸಮಾಜವು ಇಷ್ಟೊತ್ತಿಗೆ ನಾಮಶೇಷವಾಗುತ್ತಿತ್ತು. ಅಸ್ಪೃಶ್ಯರಿಗೆ ಶಿಕ್ಷಣ ಹಾಗು ಆರ್ಥಿಕ ಅನುಕೂಲ್ಯಗಳನ್ನು ನಾವೆಲ್ಲರೂ ಪೂರೈಸಬಹುದು.

ಬಳಿಕ ಬಜಾಜರಾಯರು ಹಿಂದೂ ಸ್ತ್ರೀ ಸಮಾಜ, ಬಾಲವಿವಾಹ, ಶಿಕ್ಷಣ ಮುಂತಾದವುಗಳ ವಿಷಯ ಸಮಯೋಚಿತ ನಾಲ್ಕು ಮಾತುಗಳನ್ನಾಡಿ, ತಮ್ಮ ಮತದಂತೆ ಹಿಂದೂ ಮಹಾಸಭೆಯ ಕಾರ್ಯಕ್ರಮವನ್ನು ನಮೂದಿಸಿದರು. ಹಿಂದಿನವು ಬಾಬುಗಳನ್ನು ಮಹಾಸಭೆಯು ಪ್ರತಿವರ್ಷ ಕೈಕೊಂಡು ಪುರಸ್ಕರಿಸಬೇಕೆಂದೂ ಬೋಧಿಸಿದರು.

ಮಹಾಸಭೆಯ ಕಾರ್ಯಕ್ರಮ.

(೧) ಇಡೀ ದೇಶದಲ್ಲಿ ಹಿಂದೂ ಸಭೆಗಳನ್ನು ಏರ್ಪಡಿಸುವದು;

(೨) ಸಾಮಾಜಿಕ ದೊಂಬಿಗಳ ಮೂಲಕ ನಿರಾಶ್ರಿತರಾದ ಹಿಂದೂಗಳಿಗೆ ಆಶ್ರಯ ಕೊಡುವದು;

(ಮುಂದೆ ೧೦ನೇ ಪಾನು ನೋಡಿರಿ.)

ಕಾನಡಾವೃತ್ತ.

ಮಿತಿ ಕ್ರೋಧನ ಸಂ। ಚೈತ್ರ ವ। ೧೨ಕ ಸೋಮವಾರ.

ಇಕ್ಕಟ್ಟಿನ ಸ್ಥಿತಿ.

ರಣರಂಗದ ದುಶ್ಚಿನ್ಹೆಗಳು.

ಏನಿದು ! ಮಹಾಯುದ್ಧದಿಂದ ರಾಷ್ಟ್ರಗಳು ಸೋತುಹೋದವು. ಫ್ರಾನ್ಸದಂಥ ದೇಶಗಳಲ್ಲಿ ಜೀವನಸ್ಥರೇ ಲೋಪಹೊಂದಿದರು. ಜರ್ಮನಿಯಲ್ಲಿ ಉದ್ಯೋಗ ಧಂದೆ ಇಲ್ಲದೆ ಪ್ರಜೆಗಳು ಕಂಗೆಟ್ಟು ಹೋದರು. ಇಂಗ್ಲಂಡದಲ್ಲಿ ನಿರುದ್ಯೋಗಿಗಳ ಸಂಖ್ಯೆಯು ಬೆಳೆಯಿತು. ರಶಿಯಾ ದೇಶದಲ್ಲಿ ಗೊಂದಲವೆದ್ದಿತು. ಅನೇಕ ರಾಷ್ಟ್ರಗಳಲ್ಲಿ ಯುದ್ಧ ಮುಗಿಯಿತು; ಬರಬಿತ್ತು. ಹೀಗೆಲ್ಲ ದುರವಸ್ಥೆಯಾಯಿತು. ಯುರೋಪ ಖಂಡದೊಳಗಿನ ರಾಷ್ಟ್ರಗಳಿಗೆಲ್ಲ ಯುದ್ಧ ಸಾಕು· ಶಾಂತತೆಯಿಂದ ಮುಂದಿನ ಆಯುಷ್ಯವನ್ನು ಬಂಧು ಭಾವದಿಂದ, ಸ್ನೇಹಭಾವದಿಂದ ಕಳೆಯಬೇಕು ಅಂತು ಈ ಯುದ್ಧ ಬೇಡ ರಣದೇವಿಯ ಭೀಕರ ಪ್ರಸಾದವು ಇನ್ನು ಸಾಕು, ಆದಕಾರಣವೇ ರಾಷ್ಟ್ರಸಂಘದ ಸ್ಥಾಪನೆಯಾಯಿತು. ಯುದ್ಧ ವೈರಾಗ್ಯವು ಸ್ಮಶಾನ ವೈರಾಗ್ಯದಂತೆ ಇತ್ತಿತ್ತ ದೂರ ದೂರ ಹಾರಿಹೋಗಹತ್ತಿದೆ. ಅನೇಕ ರಾಷ್ಟ್ರಗಳಿಗೆ ಬಾಹುಸ್ಫುರಣವಾಗಹತ್ತಿದೆ. ಬಾಹುಸ್ಫುರಣದಿಂದ ರಣದೇವಿಯು ಪುನಃ ಅವತೀರ್ಣವಾಗುತ್ತಾಳೆಂದು ಬಲ್ಲವರು ಭಯಪಡುತ್ತಿರುವರು. ಯುರೋಪ ಖಂಡದೊಳಗಿನ ಪರಿಸ್ಥಿತಿಯನ್ನು ಸ್ವಲ್ಪ ಸಮಾಲೋಚಿಸಿದರೆ ಬಲ್ಲವರ ಭೀತಿಯು ಕಲ್ಪನೆಯಾಗಬಹುದು.

ಮಹಾ ಯುದ್ಧದ ಮೂಲ ಕ್ಷೇತ್ರವಾದ ಬಾಲ್ಕನ ಪ್ರದೇಶದ ಕಡೆಗೆ ಸೂಕ್ಷ್ಮ ರೀತಿಯಿಂದ ನೋಡುವ. ರುಮಾನಿಯಾ ದೇಶದಲ್ಲಿ ಕಲಹಬೀಜಗಳು ಅಂಕುರಿಸಹತ್ತಿವೆ ಬೆಸರೇಬಿಯಾ ಪ್ರದೇಶವನ್ನು ಜೇಬಿನಲ್ಲಿ ಸೇರಿಸಲು ರುಮಾನಿಯಾ ದೇಶವು ಹವಣಿಸಹತ್ತಿದೆ. ರಶಿಯಾ ದೇಶಕ್ಕೂ ಬೆಸರೇಬಿಯಾದ ಮೇಲೆ ಕಣ್ಣಿದೆ. ರುಮಾನಿಯಾ ದೇಶವು ಹಟಹಿಡಿದು ಬೆಸರೆಬಿಯಾ ಪ್ರದೇಶವನು ನುಂಗಹತ್ತಿದರೆ ನಾವು ಶರಸಂಧಾನ ಮಾಡುವೆವೆಂದು ರಶಿಯಾ ದೇಶದ ರಾಜ್ಯಾಧಿಕಾರಿಗಳು ರೋಮ ಪಟ್ಟಣದಲ್ಲಿ ಉದ್ಗರಿಸಿದರು. ಜಗೋಸ್ಲಾವಿಯಾ ಪ್ರಾಂತದಲ್ಲಿ ಕ್ರೊಶಿಯನ್ ಪ್ರಜೆಗಳು ಲೋಕಸತ್ತಾತ್ಮಕ ರಾಜ್ಯಕ್ಕಾಗಿ ಬಡಿದಾಡುತ್ತಿರುವರು. ರಾಜಸತ್ತೆಯನ್ನು ನಾಶಪಡಿಸುವದು ಇವರ ಧ್ಯೇಯವಿದೆ.

ಇತ್ತ ತುರ್ಕರಿಗೂ, ಗ್ರೀಕರಿಗೂ ಕೈ ಕೈಯಾಗುವ ಲಕ್ಷಣಗಳು ತೋರುತ್ತಿವೆ ಎರಡು ವರ್ಷಗಳ ಪೂರ್ವದಲ್ಲಿ ಏಶಿಯಾ ಮೈನರದಲ್ಲಿ ತುರ್ಕರು ಗ್ರೀಕರ ಸೊಂಟ ಮುರಿದ್ದರು. ಅವರ ಸೇಡು ತೀರಿಸಲು ಗ್ರೀಕರು ಒತ್ತೊತ್ತಿ ಬರುತ್ತಿರುವರು ಗ್ರೀಕ ಧರ್ಮಗುರುಗಳು ಇಸ್ತಂಬೂಲದಲ್ಲಿ ಇದ್ದರು ತುರ್ಕರು ಅವರನ್ನು ಹೊರಹಾಕಿದರು. ಇಷ್ಟಕ್ಕೆ ಸೋಫಿಯಾದಲ್ಲಿ ಸೇನಾಪತಿ ಥೊಫಿಲೋಫರವರ ಕೊಲೆಯಾಗಿದೆ ಇವರು ಇಸ್ತಂಬೂಲ ಸರಕಾರದ ವಿನಾಶ ಬಯಸುವವರಿದ್ದರಂತೆ ! ಬೋರಿಸ ರಾಜರ ಮೇಲೆಯೂ ಗುಂಡು ಹೊಡೆಯಲಾಗಿತ್ತು ಆದರೆ ಸುದೈವದಿಂದ ಅದು ತಪ್ಪಿತು

ರಶಿಯಾ ಹಾಗು ಜಪಾನ ದೇಶಗಳಲ್ಲಿ ಸಖ್ಯಕ್ಕೆ ಸಂಧಿಯಾಗಿರುತ್ತದೆ ಅದರಿಂದ ಇಂಗ್ಲಂಡ ಅಮೇರಿಕಾ ರಾಷ್ಟ್ರಗಳಲ್ಲಿ ವಿಲಕ್ಷಣ ಗೊಂದಲವೆದ್ದಿದೆ ಇಂಗ್ಲಂಡ-ಅಮೇರಿಕೆಗಳೊಡನೆ ಯುದ್ಧವಾಗಬಹುದೆಂದು ಕೇಳುತ್ತಾರೆ ಚೀನ ದೇಶದವರನ್ನ ರಶಿಯಾ ಜಪಾನಗಳು ತಮ್ಮಲ್ಲಿ ಸೇರಿಸಿಕೊಳ್ಳಲು ಹವಣಿಸುತ್ತಿವೆ ಇಂಗ್ಲಂಡ ಅಮೇರಿಕಾ ದೇಶಗಳು ಚೀನದವರಿಗೆ ದೊಡ್ಡ ದೊಡ್ಡ ಸಾಲಗಳನ್ನಿತ್ತು ಪ್ರಾಬಲ್ಯ ಬೆಳೆಸಲು ಹವಣಿಸುತ್ತಿರುವವು ಸಿಂಗಾಪುರದಲ್ಲಿ ಬ್ರಿಟಿಶರು ಸೈನ್ಯ ಕೇಂದ್ರವನ್ನು ಸ್ಥಾಪಿಸುತ್ತಿರುವರು. ಅತ್ತ ರಶಿಯಾದವರೂ ವ್ಲಾಡಿ ವೊಸ್ತೊಕ್ ರೇವನ್ನು ಭದ್ರಪಡಿಸಹತ್ತಿರುವರು

ಇಂಗ್ಲಂಡ-ಫ್ರಾನ್ಸದ ಮಿತ್ರತ್ವವು ನಷ್ಟವಾಗುತ್ತ ಬಂದಿದೆ ಎರಡೂ ರಾಷ್ಟ್ರಗಳೊಳಗೆ ಯುದ್ಧವು ಪ್ರಾರಂಭವಾಗಬಹುದು. ಫ್ರಾನ್ಸ ಇಂಗ್ಲಂಡ ದೇಶಗಳಲ್ಲಿ ಯುದ್ಧವಾದರೆ, ಜರ್ಮನಿಯು ಇಂಗ್ಲಂಡಕ್ಕೆ ನೆರವಾಗುವದು. ಶತ್ರುವು ಮಿತ್ರನಾಗುವನು. ವ್ಹರ್ಸೇಲಿಸದ ತಹನಾಮೆಯು ಕಾಗದದ ಚೂರಾಗಿ ಅದರೊಳಗಿನ ಮಿತ್ರ ರಾಷ್ಟ್ರಗಳೆಲ್ಲ ಶತ್ರು ರಾಷ್ಟ್ರಗಳಾಗಿ ಇಂಗ್ಲಂಡಕ್ಕೆ ಕಷ್ಟವಾಗಬಹುದಂತೆ.

ಆಸ್ಟ್ರಿಯಾ ಇಟಲಿ ದೇಶಗಳಲ್ಲಿ ಜರ್ಮನ ಪಕ್ಷವು ತಲೆದೋರುತ್ತಿದೆ. ಆಸ್ಟ್ರಿಯಾ ಹಾಗು ಇಟಲಿ ದೇಶಗಳಲ್ಲಿ ಜರ್ಮನರ ವಾಸ್ತವ್ಯವಿದೆ. ಈ ಜರ್ಮನರೆಲ್ಲರೂ ಜರ್ಮನರ ಪ್ರಭುತ್ವಕ್ಕಾಗಿ ಪೂರ್ವತಯಾರಿ ನಡಿಸಿರುವರು. ಜರ್ಮನರ ವಾಸ್ತವ್ಯವಿದ್ದ ಪ್ರದೇಶದಲ್ಲಿ ಜರ್ಮನ ಅಧಿಕಾರಸ್ಥರನ್ನೇ ನೇಮಿಸಿಕೊಳ್ಳುವ ಯುಕ್ತಿಗಳು ಈಗಿನಿಂದಲೇ ನಡೆಯಹತ್ತಿವೆ. ಆಸ್ಟ್ರಿಯಾದಲ್ಲಿ ಜರ್ಮನ ಪಕ್ಷಕ್ಕೆ ವಿಶೇಷ ವಿರೋಧ ಉಂಟಾಗದಿದ್ದರೂ. ಇಟಾಲಿಯಲ್ಲಿ ಮಾತ್ರ ಜರ್ಮನರಿಗೆ ವಿರೋಧ ಉಂಟಾಗುವದು. ಮುಸೊಲಿನಿಯವರ ಪಕ್ಷವು ಇಟಾಲಿಯಲ್ಲಿ ಪ್ರಬಲವಿದ್ದು ಜರ್ಮನ ಪ್ರದೇಶದಲ್ಲಿ ಇಟಾಲಿಯ ಪ್ರತಿಷ್ಠೆ ಬೆಳೆಯುವಂತೆ ಕಾಯಿದೆಗಳನ್ನು ಪ್ರವರ್ತಿಸಿರುವರು. ಅಲ್ಲಿಯ ಭಾಷೆ-ಶಿಕ್ಷಣಗಳನ್ನು ಇಟಾಲಿಯನ್ನಲ್ಲಿಯೇ ನಡಿಸುವಂತೆ ನಿರ್ಬಂಧವಾಗಿದೆ. ಜರ್ಮನಿಗೆ ಇದಿರಾಗಲು ಯಾವಾಗಲೂ ತಯಾರಿ ಇರಬೇಕೆಂದು ಮುಸೊಲಿನಿಯವರು ಸೈನ್ಯವನ್ನೂ ಅಲ್ಲಿ ಇಟ್ಟು ಮಾಡಿರುವರು. ಜರ್ಮನ ಪ್ರದೇಶವು ಇಟಾಲಿಗೆ ಮಹಾಯುದ್ಧದಿಂದ ಪ್ರಾಪ್ತವಾದದ್ದು. ಅದನ್ನು ಸೈನ್ಯ ಬಲದಿಂದಲೇ ಸ್ವಾಧೀನದಲ್ಲಿಡಬೇಕಾಗಿದೆ.

ಇಟಲಿಗೂ, ಫ್ರಾನ್ಸ ದೇಶಕ್ಕೂ ಹೊರಿಕೆಗೆ ಗೆಳೆತನವಿದ್ದರೂ, ಅಂತರಂಗದಲ್ಲಿ ಇಬ್ಬರೂ ಸಂಶಯಗ್ರಸ್ತರಾಗಿಯೇ ಇರುವರು. ಕಾರ್ಸಿಕಾ ದ್ವೀಪವು ಮುಂಚೆ ಇಟಾಲಿಯದಿತ್ತು. ಅದನ್ನು ಸ್ವಂತ ಮಾಡಿಕೊಳ್ಳಲು ಇಟಾಲಿಯಲ್ಲಿ ಈಗ ಒಳ ಚಳವಳಿ ನಡೆಯುತ್ತಿದೆ ಫ್ರಾನ್ಸ ದೇಶದ ವಿರುದ್ಧ ಚಳವಳಿಯು ಕೊರ್ಸಿಕಾ ಸಂಘಗಳ ವಿದ್ಯಮಾನ ಅವ್ಯಾಹತ ನಡೆದಿದೆ ಮಾತೂ ಒಂದು ಕಾರಣವಿದೆ ಉತ್ತರ ಆಫ್ರಿಕೆಯಲ್ಲಿ ಟ್ಯೂನಿಸ ಪ್ರದೇಶವಿದೆ· ಅಲ್ಲಿಯ ಪ್ರಜೆಗಳು ಇಟಾಲಿಯನರು. ರಾಜ್ಯಭಾರವು ಫ್ರೆಂಚರದು. ಅಲ್ಲಿ ಫ್ರೆಂಚರ ಪ್ರಾಬಲ್ಯ ಬೆಳೆಸಲು ಫ್ರಾನ್ಸ ದೇಶವು ಪರಮಾವಧಿಯ ಯತ್ನ ನಡಿಸುತ್ತಿರುತ್ತದೆ. ಇದನ್ನು ಇಟಾಲಿಯವರು ಸೈರಿಸಲಾರರು

ಹೀಗೆಲ್ಲ ಯುರೋಪಿಯನ ರಾಜಕಾರಣದ ತಂತುಗಳು ರಣದೇವಿಯ ಮಂದಿರದ ಕಡೆಗೆ ಸ್ಥಿರವಾಗಿ ಕೂಡು ಮಾಡಹತ್ತಿವೆ ಮಿತ್ರರು ಶತ್ರುಗಳಾಗುತಿರುವರು; ಶತ್ರುಗಳು ಮಿತ್ರರಾಗುತ್ತಿರುವರು ಕಾಲಚಕ್ರದ ಗತಿಯನ್ನು ಹೇಳುವವರಾರು ! ರಾಷ್ಟ್ರಗಳು ತಮ್ಮ ತಮ್ಮ ಸ್ವಾರ್ಥಕ್ಕಾಗಿ ದೇಶ ಕಾಲಕ್ಕನುರೋಧವಾಗಿ ಶತ್ರು ಮಿತ್ರ ಸಂಪಾದನ ಮಾಡಿಕೊಳ್ಳುತ್ತಿರುವವು ನಮಗೇನು! ನಾವೇನು ಸ್ವತಂತ್ರ ರಾಷ್ಟ್ರದವರಲ್ಲ. ಈ ಗೊಂದಲದಿಂದ ನಮಗೇನಾದರೂ ಲಾಭವುಂಟೇ ? ಎಂದು ಪ್ರಶ್ನಿಸಬಹುದು. ಯುರೋಪದ ಗರಬಡಿಯ ಸಮಯ ನಾವು ಸ್ವಾಮಿನಿಷ್ಠೆಯ ಗಾಳಿಪಟದ ಮೇಲೆ ಹಾರಿಹೋಗದೆ, ವ್ಯವಹಾರ ಚತುರರಾದರೆ, ಈ ಗದಬಡಿಯಲ್ಲಿ ನಮಗೆ ಲಾಭವಿದೆ. ಇಬ್ಬರ ನ್ಯಾಯದಲ್ಲಿ ಮೂರನೆಯವನಿಗೆ ಆಯವಾಗುವ ಸಾಮಾನ್ಯ ತತ್ವವು ನಮಗೆ ಲಾಭಪ್ರದವಾಗದೇನು ! ಇಂಗ್ಲಂಡ ದೇಶವು ಜಪಾನ, ರಶಿಯಾ ರಾಷ್ಟ್ರಗಳಿಗೆ ಇದಿರಾಗ ಬಯಸಿದರೆ, ನಮ್ಮ ಸಹಕಾರ್ಯದ ಹೊರತು ಇಂಗ್ಲಂಡಕ್ಕೆ ನಿರ್ವಾಹವಿರುವದೇನು ? ಭಾರತೀಯರು ಸ್ವಸಂತೋಷದಿಂದ ಇಂಗ್ಲಂಡಕ್ಕೆ ಸಹಾಯ ಮಾಡದಿದ್ದರೆ, ರಶಿಯಾ ದೇಶವನ್ನು ಜಯಿಸುವದು ವಿಶೇಷ ಕಠಿಣ ಕೆಲಸವೆಂದು ರಾಜಧುರಂಧರರ ಹೇಳಿಕೆ. ಯಾವದೇ ಬಗೆಯಿಂದ

ಹಿಂದುಸ್ಥಾನವನ್ನು ಸಮಾಧಾನಪಡಿಸುವದು ಬ್ರಿಟಿಶರ ಸ್ವಾರ್ಥವು. ಅದಕ್ಕಾದರೂ ಬ್ರಿಟಿಶರು ಭಾರತೀಯರ ಮನಒಲಿಕೆ ಕೊಡಬೇಕಾಗುವದಂತೆ! ಅಂತರ್ರಾಷ್ಟ್ರೀಯ ಕಾರಣಗಳ ಮೂಲಕ ಬ್ರಿಟಿಶರ ಹಿಂದುಸ್ಥಾನದೊಳಗಿನ ನಿರಂಕುಶ ಪ್ರಭುತ್ವವು ಸಂಕುಚಿತವಾದರೂ ನಮಗೆ ಇಷ್ಟವೇ.

ಸ್ಫುಟ ಸೂಚನೆಗಳು.

೧. ಅಫಗಾಣಿಸ್ಥಾನ ಸರಕಾರದವರು ಸಮ್ಮಕ್ಕೆ ಒಂದು ಮಹತ್ವದ ಫರ್ಮಾನವನ್ನು ಹೊರಡಿಸಿರುವರು. ಅದರಿಂದ ಅಫಗಾಣಿಸ್ಥಾನದೊಳಗಿನ ಭಿಕ್ಷೆ ಬೇಡುವದು ನಿಷಿದ್ಧವು. ಚಿಕ್ಕ ಹುಡುಗರು ಭಿಕ್ಷೆ ಬೇಡುತ್ತಿದ್ದಲ್ಲಿ ಅವರನ್ನು ತಾಯಿತಂದೆಗಳ ವಶಕ್ಕೆ ಒಪ್ಪಿಸಿ, ಶಾಲೆಗಳಿಗೆ ಕಳಿಸಲು ಆಜ್ಞೆಯಾಗುವದು. ಅನಾಥರಿದ್ದಲ್ಲಿ ಅನಾಥಾಲಯಗಳಲ್ಲಿ ಅವರ ವ್ಯವಸ್ಥೆಯಾಗುವದು. ಸಶಕ್ತರಿಗೆ ಕೆಲಸ ಪೂರೈಸಿ, ಸರಕಾರವು ಅವರ ಭಿಕ್ಷಾವೃತ್ತಿಯನ್ನು ತಪ್ಪಿಸುವದು. ಕೆಲಸಮಾಡಿ ಹೊಟ್ಟೆ ಹೊರಕೊಳ್ಳಲು ಶಕ್ತಿಯಿಲ್ಲದವರ ಜೀವನಾರ್ಥವನ್ನು ಸರಕಾರವೇ ಕೈಕೊಂಡು ಸರಕಾರಿ ಬೊಕ್ಕಸದೊಳಗಿಂದ ಅವರಿಗೆ ಅನ್ನ, ವಸನಗಳನ್ನು ಪೂರೈಸುವದು. ಅಫಗಾಣಿಸ್ಥಾನದ ಅಮೀರರು ರಾಜಧರ್ಮವನ್ನು ಅನುಸರಿಸಿ, ಪ್ರಜೆಗಳ ಭಿಕ್ಷಾವೃತ್ತಿಯನ್ನು ನೀಗಿಸಿದ ಬಗ್ಗೆ ನಾವು ಅವರನ್ನು ಮನಃಪೂರ್ವಕ ಅಭಿನಂದಿಸುವೆವು. ಪ್ರಜೆಗಳಿಂದ ಕರದ ಎತ್ತುವಳಿ ಮಾಡುವದು ಮಾತ್ರ ರಾಜಧರ್ಮವಲ್ಲ; ಪ್ರಜಾಪರಿಪಾಲನೆಯು ರಾಜಧರ್ಮವು. ಪ್ರಜಾಪರಿಪಾಲನೆಗಾಗಿಯೇ ಸರಕಾರಕ್ಕೆ ಕರಗಳನ್ನೆತ್ತುವ ಅಧಿಕಾರ ಪ್ರಾಪ್ತವಾಗುತ್ತದೆ. ಇದನ್ನು ನೆನಿಸಿ, ನಮ್ಮ ಬ್ರಿಟಿಶ ಸರಕಾರವೂ ಪ್ರಜೆಗಳ ಭಿಕ್ಷಾವೃತ್ತಿಯನ್ನು ನೀಗಿಸಲು, ಉಪಾಯ ಯೋಜನೆ ಮಾಡಲಿ. ಅಮೀರರು ಪಾಶ್ಚಾತ್ಯ ಸುಧಾರಿಸಿದ ರಾಷ್ಟ್ರದವರಲ್ಲ. ಆದರೂ ಸುಭಾಷಿತವನ್ನು ಚಿಕ್ಕ ಬಾಲಕರಿಂದ ಸಹ ಅನುಕರಿಸಬೇಕೆಂದಿರುವಾಗ, ಈ ಸುಧಾರಣೆಯನ್ನು ಅಮೀರರಿಂದ ಕಲಿಯಲಿಕ್ಕೆ ಅಡ್ಡಿ ಏನಿದೆ?

೨. ಕಳೆದ ವರುಷ ನಮ್ಮಲ್ಲಿ ರಾ। ಬ। ಕೊಯಿಮತ್ತೂರರವರ ಪ್ರೇರಣೆಯಿಂದ ಪೈರಿನ ಆಣೆವಾರಿ ಮಂಡಳಗಳು ನೀರಿನ ಗುಳ್ಳೆಗಳಂತೆ ಸ್ಥಾಪನೆಯಾಗಿದ್ದವು. ಈ ಕಮೀಟಿಗಳು ಪ್ರಜಾವಂಚನೆಯ ವೇಷವೆಂದು ನಾವು ಆಗಲೇ ಅನುಮಾನಿಸಿದ್ದೆವು; ಇವುಗಳಿಂದ ಪ್ರಜೆಗಳಿಗೆ ಲಾಭವಾಗಲಾರದೆಂದೂ ನಾವು ನಮೂದಿಸಿದ್ದೆವು. ಹೊನ್ನಾವರ ತಾಲೂಕಿನ ಗುಂಡಬಾಳೆಯ ದೇರೊಳ್ಳಿ ಕಟ್ಟಿನ ಗತಿಯಿಂದ ನಮ್ಮ ಅನುಮಾನವು ಸಿದ್ಧಾಂತವಾಗಿ ಪರಿಣಮಿಸಿದೆ. ರಾವಬಹಾದ್ದೂರರು ನೆರೆಯ ಮೂಲಕ ಒದಗಿದ ವಿಪನ್ನಾವಸ್ಥೆಯ ಸಮಯದಲ್ಲಿ ಆಣೆವಾರಿಯ ಕಮಿಟಿಯನ್ನು ರಚಿಸಲು ಹೊನ್ನಾವರಕ್ಕೆ ಹೋದಾಗ ಬೇಸಾಯಗಾರರು ಸಭೆಯಲ್ಲಿ ಒಂದು ದೇರೊಳ್ಳಿಯ ಕಟ್ಟು ನೆರೆಯಲ್ಲಿ ಒಡೆದು ಹೋಗಿ ಕಷ್ಟಕ್ಕೀಡಾದೆವೆಂದು ಹೇಳಿಕೊಂಡರು. ದುರ್ದೈವದಿಂದ ಇವರ ಕಡೆಗೆ ಲಕ್ಷ್ಯ ಸೆಳೆಯಲಿಲ್ಲ. ಸುಮಾರು ೧೭೪ ಎಕ್ರೆ ಹೊಲವು ಈ ಕಟ್ಟಿನ ಮೂಲಕ ಬಂಜರು ಬೀಳುವ ಪ್ರಸಂಗ ಬಂದೊದಗಿದೆ. ಕಟ್ಟನ್ನು ಕಟ್ಟಿಸುವ ಸಾಮರ್ಥ್ಯವು ಅಲ್ಲಿಯ ರೈತರಲ್ಲಿರುವದಿಲ್ಲ. ತಮಗೆ ಸಹಾಯ ಮಾಡಲು ಪ್ರಜಾಪಕ್ಷದ ಜಿಲ್ಹಾಧಿಕಾರಿಗಳ ಹತ್ತರ ಬೇಡಿಕೊಂಡರೆ ಅವರಿಗೆ ನೆರೆಯ ಮೂಲಕ ಒದಗಿದ ವಿಪನ್ನಾವಸ್ಥೆಯ ಮಾಹಿತಿ ಇರುವದಿಲ್ಲವಾಗಿ ತಿಳಿದು ಬರುತ್ತದೆ. ಪ್ರಜೆಗಳ ಸುಖ-ದುಃಖಗಳನ್ನು ಅರಿತುಕೊಂಡು ಅವುಗಳ ವಿಷಯ ಕಾಲಕಾಲಕ್ಕೆ ತಕ್ಕ ಉಪಾಯಯೋಜನೆ ಮಾಡಲು ಅವರು ಕಟಿಬದ್ಧರಿರುವಾಗ, ರೈತರು ತಾವಾಗಿ ಬಿನ್ನಹ ಮಾಡಿಕೊಂಡಾಗ ನೆರೆಯಿಂದ ಹಾನಿಯಾಗಿಲ್ಲವೆಂದು ತಮ್ಮ ಪಕ್ಷಕ್ಕೆ ಠರಾವು ಮಾಡಿಕೊಂಡು, ಹಡಿನಬಾಳ, ದೇರೊಳ್ಳಿ ರೈತರನ್ನು ನಿರಾಶೆಪಡಿಸುವದು ಕೇವಲ ಅನ್ಯಾಯವು. ದೇರೊಳ್ಳಿಯ ಕಟ್ಟು ನೆರೆಯಿಂದ ನಷ್ಟವಾಗದಿದ್ದರಲಿ, ಅಥವಾ ಬೇರೊಂದು ಕಾರಣದಿಂದ ಒಡೆದು ಹೋಗಿದ್ದರಲಿ, ನಷ್ಟವಾದ ಕಟ್ಟನ್ನು ಮರಳಿ ಕಟ್ಟಲು ರೈತರ ಹತ್ತರ ಹಣ ಇಲ್ಲದಿರುವಾಗ, ಸರಕಾರವು ನಿಬ್ಬಡ್ಡಿಯಿಂದ ಕೊಡಮಾಡಿದ ತಗಾಯಿ ಸಾಲವನ್ನಾದರೂ ಜಿಲ್ಹಾಧಿಕಾರಿಗಳು ರೈತರಿಗೆ ಕೊಟ್ಟು ಉಪಕಾರ ಮಾಡಬಹುದಲ್ಲವೇ? ಸರಕಾರವು ನಮ್ಮ ಜಿಲ್ಹೆಗೆ ಕೊಟ್ಟ ನಿಬ್ಬಡ್ಡಿ ತಗಾಯಿ ಸಾಲದ ರಕಮಿನ ಪೈಕಿ ೭೫ ಸಾವಿರ ರೂಪಾಯಿಗಳಿಗೆ ಗಿರಾಕಿ ಇಲ್ಲವೆಂದು, ಜಿಲ್ಹಾಧಿಕಾರಿಗಳು ಕಳೆದ ಮಾರ್ಚ ಅಂತ್ಯಕ್ಕೆ ಸರಕಾರಜಮೆ ಮಾಡಿದರೆಂದು ತಿಳಿದು ಬರುತ್ತದೆ. ಇದೇನು ಪ್ರಜಾವತ್ಸಲವೆಂದು ಮೆರೆಯುವ ಅಧಿಕಾರಿಗಳ ಕರ್ತವ್ಯವಲ್ಲ. ಪ್ರಾಂತ ಆಫೀಸರಾದ ರಾ। ಬ। ಕೊಯಿಮತ್ತೂರರವರು ಹಡಿನಬಾಳ-ದೇರೊಳ್ಳಿ ಕಟ್ಟಿನ ಪರಿಸ್ಥಿತಿಯನ್ನು ಕಣ್ಣಾರೆ ಕಂಡಿದ್ದರೆ, ನೆರೆಯ ಒದೆತೇ ಆ ಕಟ್ಟು ನಷ್ಟವಾಗಿರವದೆಂದು ಅವರಿಗೆ ತಿಳಿಯಬಹುದಾಗಿತ್ತು. ಸ್ವತಃ ಕರ್ತವ್ಯಪರಾಙ್ಮುಖರಾಗಿ ಸರಕಾರವು ಕೊಡಮಾಡಿದ ನಿಬ್ಬಡ್ಡಿಯ ತಗಾವಿ ಸಾಲಗಳನ್ನು ತಮ್ಮ ಪ್ರಾಂತದ ಪ್ರಜೆಗಳಿಗೆ ಸಂಪಾದಿಸಿಕೊಡದೆ, ರಾವಬಹಾದ್ದೂರರು ದೇವರು ಕೊಟ್ಟರೂ ಪೂಜಾರಿ ಕೊಡದ ಪರಿಯಲ್ಲಿ ವರ್ತಿಸಿರುವರು. ಹೊಸದಾಗಿ ಬಂದ ಜಿಲ್ಹಾಧಿಕಾರಿಗಳು ಅಲ್ಲಿಯ ರೈತರ ಗೋಳನ್ನು, ಅವಶ್ಯವಿದ್ದರೆ ಸ್ವತಃ ಸಂದರ್ಶಿಸಿ, ಯುಕ್ತ ಕಂಡ ಸಹಾಯವನ್ನೀಯಬೇಕಾಗಿ ನಮ್ಮ ಬಿನ್ನಹವಿದೆ. ಬೇಸಾಯಗಾರರ ಹಿತರಕ್ಷಣಕ್ಕಾಗಿ ಹಗಲಿರುಳು ದಣಿಯದೆ ದುಡಿಯುವ ಅಧಿಕಾರಿಗಳು ತಮ್ಮ ವಚನಗಳನ್ನು ಸಾರ್ಥಕಗೊಳಿಸುವ ಸುಸಂಧಿಯು ದೊರಕಿದೆ. ಅವನ್ನಷ್ಟು ಅವರು ನೆರವೇರಿಸಿದರಾಯಿತು.

೩ ನಮ್ಮ ಉತ್ತರ ಕನ್ನಡ ಜಿಲ್ಹೆಯಲ್ಲಿ ವ್ಯಾಘ್ರಾಧಿಪರ ಅನುಗ್ರಹವಾಗಿದೆ. ವ್ಯಾಘ್ರಾಧಿಪರು ಇಲ್ಲಿ ಯಾಕೆ ಬರುತ್ತಾರೆಂದು ಯಾರಿಗೂ ಹೇಳುವ ಕಾರಣವಿಲ್ಲ. ನಮ್ಮ ಜಿಲ್ಹೆಯೇ ಅವರಿಗೆಲ್ಲ ಚಿತ್ತಾಕರ್ಷಕವಿದೆ. ಅದೇನು? ಸುತ್ತಲೂ ನೋಡಿರಿ; ದಟ್ಟ ದಪ್ಪ ಬೆಳೆದ ವನದೇವತೆಯು ಇಲ್ಲಿ ಸ್ವಾಭಾವಿಕ ಶೃಂಗಾರದಿಂದ ಮೆರೆಯುತ್ತಿದೆ. ವ್ಯಾಘ್ರ ಮುಂತಾದ ಹಿಂಸ್ರ ಪಶುಗಳು ಕೊಬ್ಬಿಕೊಂಡಿವೆ. ಅವರು ಯಾವಾಗಲೂ ಮೃಗಯಾಸಕ್ತರು. ನಮ್ಮ ಬ್ರಿಟಿಶ ಅಧಿಕಾರಿಗಳಾದರೂ ಅದಕ್ಕೆ ಹೇಗೆ ಅಪವಾದಗಳಾದಾರು? ದೊರೆಗಳು ಯಲ್ಲಾಪುರದಲ್ಲಿ ಉಳಿದು ಬೇಟೆಯಾಡಿ, ಅಲ್ಲಿಂದಲೇ ಮರಳುವರು. ಕಾರವಾರಕ್ಕೆ ಬರಬಹುದೆಂದು ಸುದ್ದಿಯಿದೆ. ಬಂದರೆ ನಾಲ್ಕಾರು ತಾಸುಗಳಿಗಿಂತ ಹೆಚ್ಚು ಇರಲಾರರೆಂದು ಹೇಳಿಕೆ. ಬೇಟೆಯ ಕಾಲ ಕಳೆದು ಪ್ರಜೆಗಳ ದೂರು ಕೇಳಿಕೊಳ್ಳಲಿಕ್ಕೆ ದೊರೆಗಳಿಗೆ ಅವಕಾಶ ಸಿಗದು. ಸಿಗುವದಾದರೂ ಹೇಗೆ? ಆದರೆ, ಇಂಥ ಪ್ರಯಾಣಗಳೆಲ್ಲ ಪ್ರಜಾನುರಂಜನಕ್ಕಾಗಿಯೇ ಕೈಕೊಳ್ಳಲ್ಪಡುತ್ತವೆಂದು ಗ್ರಹಿಸಿ, ಸರಕಾರದ ಲೆಕ್ಕಕ್ಕೆ ಪ್ರಯಾಣ ಖರ್ಚು ಬೀಳುತ್ತದೆ. ಈ ಪ್ರಯಾಣಗಳಿಂದ ಸಾಮಾನ್ಯ ಪ್ರಜೆಗಳಿಗೆ ಲಾಭವೇನಾಗದಿದ್ದರೂ ಆದರದ ಮುಖಸ್ತುತಿ ಮಾಡುವವರಿಗೆ ಸ್ವಾಮಿನಿಷ್ಠೆಯ ಕೀರ್ತಿಗಳಿಸಲಿಕ್ಕೇನು ಅಡ್ಡಿ ಇಲ್ಲ.

೪. ನಮ್ಮ ಪೋಲೀಸ ಬಹಾದ್ದೂರರ ಅಘಟಿತ ಘಟನೆಯೊಂದು ಬೈಲಿಗೆ ಬಂದಿದೆ. ಖಾನದೇಶ ಜಿಲ್ಹೆಯಲ್ಲಿ ಗುಲಾಬ ದೇವಸಿಂಗ ಎಂಬ ಒಬ್ಬ ಭಿಲ್ಲ ಜಾತಿಯ ದರೋಡೆಖೋರನಿದ್ದನು. ಆತನು ಸೆರೆಮನೆಯೊಳಗಿಂದ ಪಾರಾಗಿ ಅಲ್ಲಲ್ಲಿ ಹಗಲುಗಳ್ಳತನವನ್ನಾಚರಿಸ ಹತ್ತಿ ಈಗ ನಾಲ್ಕು ವರುಷಗಳಾದವು. ಪೋಲೀಸರು ವಿಶ್ವಪ್ರಯತ್ನ ಮಾಡಿದರೂ ಆತನು ಕೈಗೆ ಹತ್ತಲಿಲ್ಲ. ಅಲ್ಲಿಯ ಜಿಲ್ಹಾ ಮೆಜಿಸ್ಟ್ರೇಟರು ಹಿಡಕೊಟ್ಟವರಿಗೆ ಇನಾಮನ್ನು ಜಾಹೀರಪಡಿಸಿದರು. ಸರಕಾರವು ನೇರದ ದೇಶಮುಖರಿಗೆ ಈ ಕಳ್ಳನನ್ನು ಹಿಡಕೊಡಲು ಯಾಚಿಸಿದರು. ದೇಶಮುಖರು ಮರಾಠೆ ವೀರರ ವಂಶಜರು. ಅವರು ಕಾವಲಿಟ್ಟು ಆತನ ಸುಳಿವು ಗೊತ್ತುಹಚ್ಚಿದರು. ಆತನ ಮೇಲೆ ಸಾಗಿಹೋಗಹೇಳಲು ಪೋಲೀಸರಿಗೆ ಧೈರ್ಯ ಸಾಲಲಿಲ್ಲ. ದೇಶಮುಖರು ತಮ್ಮ ಪರಿವಾರದ ದಗಡು ಗೋಪಾಳರಾಯರನ್ನು ಬೆಂಬಲಕ್ಕೆ ಕೊಟ್ಟರು. ಪೋಲೀಸರು ಉತ್ತರಕುಮಾರರು. ದಗಡು ಗೋಪಾಳರಾಯರಿಗೇ ಮುಂದೆ ಮಾಡಿ, ಗುಲಾಬದೇವಸಿಂಗನ ಬೆನ್ನಟ್ಟಿದರು. ದೇವಸಿಂಗನು ಒಂದು ಭಿಲ್ಲರ ಮನೆಯನ್ನು ಸೇರಿದನು. ಒಳಸೇರಲು ಪೋಲೀಸ ಬಹಾದ್ದೂರರಿಗೆ ಧೈರ್ಯವಿಲ್ಲ. ಗೋಪಾಳರಾಯನು ಒಳಕ್ಕೆ ಸೇರಿ, ದೇವಸಿಂಗನನ್ನು ಕೊಂದುಬಿಟ್ಟನು. ಪೋಲೀಸರು ಎದೆಗಟ್ಟಿಮಾಡಿ, ದೇವಸಿಂಗನ ಶವವನ್ನು ಹೊರತಂದು ಪಂಚನಾಮೆ ಮಾಡಿದರು. ಪೋಲೀಸ ಬಹಾದ್ದೂರರ ಹೇಡಿತನದ ಪ್ರಥಮಾಧ್ಯಾಯವಿದು.

೫. ಪೋಲೀಸರ ಮುಂದಿನ ಬಹಾದ್ದೂರಿಯು ಮತ್ತೂ ಚಿತ್ತವೇಧಕವಿದೆ. ಗೋಪಾಳರಾಯರಿಗೆ ದೇವಸಿಂಗನ ಹತ್ಯೆ ಮಾಡಿದ ಬಗ್ಗೆ ಇನಾಮು ಕೊಡುವದು ಒತ್ತಟ್ಟಿಗೇ ಉಳಿದು, ಪಂಚನಾಮೆಯಿಂದ ಹೊಸ ಭೂತದ ಪ್ರಾಣಪ್ರತಿಷ್ಠೆಯಾಯಿತು. ದೇಶಮುಖರು ಗುಲಾಬನ ಕೊಲೆ ಮಾಡಿದರೆಂದು ಅಪವಾದವೇ ಹುಟ್ಟಿಯಾಯಿತು. ದಗಡು ಗೋಪಾಳರಾಯರು ಗುಲಾಬನಿಗೆ ಒಳಸಂಚಿಗೆ ಕೂಡಿಕೊಂಡು ಹಗಲುಗಳ್ಳತನವನ್ನಾಚರಿಸುತ್ತಿದ್ದರೆಂದೂ, ಅದನ್ನು ತಿಳಿಯಗೊಡಬಾರದೆಂದು ಅವರು ಕೊಲೆ ಮಾಡಿದರೆಂದೂ ಪೋಲೀಸರು ಹುಟ್ಟಿಯನ್ನುಂಟುಮಾಡಿದರು. ಸೆಶನ್ಸ ಜಡ್ಜರು ನಿಪಕ್ಷಪಾತ ಹಕೀಕತನ್ನು ನಮೂದಿಸಿ, ಪೋಲೀಸರಿಗೆ ದಗಡು ಗೋಪಾಳರಾಯರನ್ನು ಮುಂದೆ ಮಾಡಿದಬಗ್ಗೆ ಕಾರಣಗಳನ್ನು ಕೊಡತಕ್ಕೆ;

ಕಿರುವರು. ನಮಗೆ ಸಂರಕ್ಷಿಸುವ ಬ್ರಿಟಿಶ ರಾಜ್ಯದೊಳಗಿನ ಪೋಲೀಸರ ಕಥೆಯಿದು. ಭಾರತೀಯ ಕಾರ್ಯದ ಪ್ರಶಂಸೆಯ ಕಥೆಯಿದು. ಇದರಿಂದಲೇ ರಾಷ್ಟ್ರದೊಳಗಿನ ಶೌರ್ಯವೂ, ಧೈರ್ಯವೂ ಸ್ಥೈರ್ಯವೂ ಕ್ರಮವಾಗಿ ಕ್ಷೀಣಹೊಂದುತ್ತದೆಂಬದ ಅಯಥಾರ್ಥವಾಗುವದೇನು ?

---

೩. ಅಸ್ಸಾಮದ ಚಹದ ತೋಟಗಳಲ್ಲಿ ಕೆಲಸ ಮಾಡಲು ಕೂಲಿಯಾಳುಗಳನ್ನು ಸಂಗ್ರಹಿಸುವದಕ್ಕಾಗಿ ಏಜಂಟರೊಬ್ಬರು ನಮ್ಮ ಜಿಲ್ಹೆಯಲ್ಲಿ ಅವತೀರ್ಣರಾಗಿರುವರೆಂದು ತಿಳಿದು ಬರುತ್ತದೆ. ಚಹದ ತೋಟಗಳಲ್ಲಿ ಕೂಲಿಕಾರರ ಗತಿಯು ಕರುಣಾಸ್ಪದವಿದ್ದು, ಅಲ್ಲಿ ಅವರಿಗೆ ಪರಿಪರಿಯಿಂದ ದಣಿಸುತ್ತಾರೆ. ಈ ವಿಷಯ ಸ್ವಲ್ಪ ಸಂಭವಿಸಿದ ಒಂದು ಹಕೀಕತನ್ನು ವಾಚಕರಿಗೆ ಅರುಹುವೆವು. ಕಲ್ಕತ್ತೆಯ ಹೈಕೋರ್ಟಿನಲ್ಲಿ ಕಳೆದ ವಾರದಲ್ಲಿ ಅಸ್ಸಾಮದೊಳಗಿನ ಚಹದ ತೋಟದೊಳಗಿನ ಕೂಲಿಯಾಳು, ತೋಟದ ಸಾವುಕಾರರ ಕೊಲೆಮಾಡಿದನೆಂತ ಆ ಬಗ್ಗೆ ಅವಿಗೆ ಫಾಶೀ ಶಿಕ್ಷೆಯಾಗಿದೆ. ಕೂಲಿಯಾಳನ್ನು ಕೆಟ್ಟ ರೀತಿಯಿಂದ ನಡಿಸಿಕೊಂಡ ಬಗ್ಗೆ ಈ ಕೊಲೆಯಾಗಿರುವದೆಂದು ಹುಟ್ಟಿಯ ಹಕೀಕತಿನ ಮೇಲಿಂದ ತೋರುತ್ತಿದೆ. ಆದಕಾರಣ ಇಲ್ಲಿಯ ಕೂಲಿಯಾಳುಗಳು ಏಜಂಟರ ಸವಿ ಸವಿ ನುಡಿಗಳಿಗೆ ಮೋಸಹೋಗದೆ ಸ್ವಸ್ಥಿತಿಯನ್ನು ಅರಿತುಕೊಂಡು ಕೂಲಿಗಾಗಿ ಅಸ್ಸಾಮಕ್ಕೆ ಹೋಗುವದು ಇಷ್ಟವೆನಿಸಿದರೆ, ಅಲ್ಲಿ ಹೋಗಬಹುದು.

ಸ್ಥಾನಿಕ ವೃತ್ತಾಂತ.

ಕುಮಟಾ— ಈಗ ವಿಪರೀತ ಮೈಲಿ ಜ್ವರಾದಿ ರೋಗಗಳು ಹೊಡಿಕೊಂಡಿವೆ [illegible] ಭಜನ ಮಂಡಳಿಗಳು ರಾತ್ರಿ ಭಜನೆ ಮಾಡುತ್ತಿರುವವು

ಉಡುಪಿಯ ಶ್ರೀ ಸ್ವಾದಿ ಮಠದ ಸ್ವಾಮಿಗಳು ಇಲ್ಲಿ ಕಳೆದ ಸೋಮವಾರ ಊರವರಿಗೆ ಇಲ್ಲಿ ಆಗಮಿಸಿದರು. ಊರ ತುಂಬ ಮೆರವಣಿಗೆಯಾಯಿತು. ಶ್ರೀಗಳು ಇಲ್ಲಿ ಎರಡು ಮುಕ್ಕಾಮು ಮಾಡಿ ಶ್ರೀ ಗೋಕರ್ಣ ಕ್ಷೇತ್ರಕ್ಕೆ ತೆರಳಿದರು

ಇಲ್ಲಿಯ ಶ್ರೀ ದತ್ತಮಂದಿರದವರು ಶ್ರೀ ಉಪ್ಪಿನ ಗಣಪತಿ ದೇವರ ಜೀರ್ಣೋದ್ಧಾರದ ಬಗ್ಗೆ ಕಳೆದ ವಾರದಲ್ಲಿ "ಮಹಾಸಾಧು ಕಬೀರದಾಸ" "ಸ್ತ್ರೀ ಧರ್ಮರಹಸ್ಯ" ಈ ಎರಡು ಆಟಗಳನ್ನು ಆಡಿತೋರಿಸಿದರು. ನಾಟಕಗಳ ಎಲ್ಲ ಉತ್ಪನ್ನವು ಶ್ರೀ ದೇವರ ಜೀರ್ಣೋದ್ಧಾರಕ್ಕಾಗಿಯೇ ವಿನಿಯೋಗಿಸಲ್ಪಡುವದು. ಊರವರು, ನಾಟಕಗಳನ್ನು ನೋಡಿ, ಶ್ರೀದತ್ತಮಂದಿರದವರಿಗೆ ಪ್ರೋತ್ಸಾಹಿಸಿದರು. ಕೆಲವೊಂದು ಅನಾನುಕೂಲತೆಯ ಮೂಲಕ ಸದ್ಯಕ್ಕೆ ಪ್ರಯೋಗ ಸಾಗಲಾರವೆಂದು ತಿಳಿಯುತ್ತಿದೆ

ಕಳೆದ ಬುಧವಾರಕ್ಕೆ ನಾಟಕವಾದ ಕಿರಿಕ ಸುಮಾರು ೩ ಘಂಟೆ ರಾತ್ರಿ, ಅಲ್ಲಿಂದ ಮೋಟಾರದ ಮೂಲಕ ಕೆಲವರು ಸ್ವಗೃಹಕ್ಕೆ ತೆರಳಿದರು. ಅಪರಾತ್ರಿಗೆ ಮೋಟಾರು ಹೊಡೆಯುವರೆ ಕಾಯಿದೆಯ ಪ್ರತಿಬಂಧವಿದೆ. ಇಲ್ಲಿಯ ಪೋಲೀಸ ಸಬ್ ಇನ್ಸಪೆಕ್ಟರರು ಮೋಟಾರು ಹೊಡೆದವರಿಗೆ ಯಾಕೆ ದಂಡಿಸಲಿಲ್ಲ ? ಇನ್ನ್ಯಾರದೂ ಮೋಟಾರು ಯಾಕೆ ? ಅದನ್ನು ಹಿಡಿದುಕೊಂಡವರ್ಯಾರು ? ಎಂಬ ಪತ್ತೆ ಹಚ್ಚಿ ಅವರಿಗೆ ಕಾಯಿದೆಯಂತೆ ಶಾಸನ ಮಾಡಬೇಕಾಗಿ ಕುಂಭಾಪುರಸ್ಥರೊಬ್ಬರ ಸೂಚನೆ.

ಶ್ರೀ ಗೋಕರ್ಣ ಕ್ಷೇತ್ರದಲ್ಲಿ ಈ ವರುಷ ಪುನಃ ಎರಡು ಪಕ್ಷಗಳು ಅವತಾರ ಹೊಂದಿದವೆ. ಶ್ರೀ ಮಹಾಬಲೇಶ್ವರ ದೇವಸ್ಥಾನದ ಪ್ರಭಾವಳಿಯ ವಿಚ್ಛಿದ್ರ—ಹುಳಸೇಕೇರಿ ಪಕ್ಷಗಳಲ್ಲಿ ಪ್ರತಿಬಂಧಕ ಹುಕುಮು, ಪಲ್ಲಕ್ಕಿ ಮೆರವಣಿಗೆ ಪ್ರತಿಬಂಧ ಮುಂತಾದ ಅನಿಷ್ಟ ಪ್ರಕಾರಗಳು ಶ್ರೀ ದೇವರ ಸೇವೆಯ ಹೆಸರಿನಿಂದ ನಡೆದವು. ಸದ್ಯಕ್ಕೊಂದು ಫಯಸಲದು ದುಃಖಕರವಾಗಿದೆ.

ಶಿರಸ್ತೇದಾರ ಮಿ। ಶೇಷಗಿರಿ ಪ್ರಭುಕರ ವರ್ಗವು ರದ್ದಾಗಿ, ಅವರು ಇಲ್ಲಿಯೇ ಶಿರಸ್ತೇದಾರರಾಗಿರಬೇಕೆಂದು ಮರಹುಕುಮಾದಂತೆ ಅವರು ಇಲ್ಲಿ ಚಾರ್ಜು ಕೊಂಡರು.

ಇಲ್ಲಿಯ ಸಹಕಾರಿ ಬೇಂಕಿನ ಸಾಧಾರಣ ಸಭೆಯು ಶ್ರೀ ಮಾಳಸಾ ದೇವಸ್ಥಾನದಲ್ಲಿ ನಿನ್ನೆ ಸಾಯಂಕಾಲಕ್ಕೆ ಸೇರಿತು. ಕಾರವಾರ ಬಾಸೆಲ ಮಿ ಎನ್. ಎಸ್. ಕಾಮತ, ಗಿಬ್ ಹ್ಯಾಸ್ಕೂಲ ಸುಪರಿಂಟೆಂಡೆಂಟರು ಅಧ್ಯಕ್ಷಸ್ಥಾನವನ್ನು ಆಕ್ರಮಿಸಿದ್ದರು. ಬೇಂಕಿನ ಚೆಯರಮನರು ದ।। ರಾ। ಅಣ್ಣಪ್ಪಾ ರಾಮಚಂದ್ರ ಪೈಯವರು ಅಧ್ಯಕ್ಷರಿದ್ದಿಲ್ಲ. ಮೊಟ್ಟಮೊದಲು ರಿಪೋರ್ಟಿನ ವಾಚನವಾಯಿತು. ಈ ವರುಷ ೧೧। ಸಾವಿರ ಉಳಿತಾಯ ವಸೂಲಾಯಿತು. ಸಭಾಸದರಿಗೆ ೩। ರಂತೆ ಮುನಾಫೆ ಹಂಚೋಣಾಯಿತು. ಬಳಿಕ ಅಂಕೋಲೆಯ ರಾ। ಕೇಶವ ನಾರಾಯಣ ಪೈರವರು ಮೇನೇಜಿಂಗ ಕಮಿಟಿಯನ್ನು ಸೂಚಿಸಿದರು. ಕಮಿಟಿಯ ಮೆಂಬರರು ಯಾರೆಂದರೆ— ಮಿ। ಜೆ. ಎಚ್. ಪಂಡಿತ, ಜೆ. ಜೆ ಶಾಸ್ತ್ರಿ. ರಾವಸಾಹೇಬ ಕುಲಕರ್ಣಿ ಮಿ। ಎನ್. ಎಸ್. ಕಾಮತ, ಎಚ್. ಎಚ್. ಪೈ, ಅಣ್ಣಪ್ಪಾ ರಾಮಚಂದ್ರಪೈ, ಬಸಪ್ಪ ಶೆಟ್ಟಿ, ಕೇಟ ಲಕ್ಷ್ಮೀದಾಸ, ಹನುಮಂತರಾಜ, ಮುಕುಂದ ಶೇಷಗಿರಿ ಕಾಮತ. ಈ ಕಮಿಟಿಯಲ್ಲಿ ಇವರು ಗೌಡಸಾರಸ್ವತರಿದ್ದು ನಂತರ ಸಭಾಸದರು [illegible] ಇರುವದರಿಂದ [illegible], ಆ ಜಾತಿಯವರೊಬ್ಬರಿರಬೇಕೆಂದು ಹೊನ್ನಾವರದ ರಾ। ಶ್ರೀನಿವಾಸ ಕಾಮತರು ಪ್ರತಿಪಾದಿಸಿದರು. ಮಿ। ಕೇಶವ ಪೈರು ವಿರೋಧಿಸಿದರು. ಉಪಸೂಚನೆಯು ಬಿದ್ದುಹೋಗಿ, ಮೂಲ ಸೂಚನೆಯು ಮಂಜೂರಾಯಿತು. ಬಳಿಕ ಬೇಂಕಿನ ನೌಕರರ ಪಗಾರುವಾರಿಯನ್ನು ಅಂಕೋಲೆಯ ಮಿ। ಕೇಶವಪೈಯು ಸೂಚಿಸಿದರು. ಈ ಬಗ್ಗೆ ರಾವಸಾಹೇಬರಿಗೂ, ಮಿ। ಪೈರಿಗೂ ತೀವ್ರ ಸಂವಾದವಾಗಿ ರಾವಸಾಹೇಬರು ರೇಗಿನಿಂದ ಸಭಾಸ್ಥಾನದಿಂದ ಎದ್ದು ನಡೆದರು. ಕಾದಿಟ್ಟ ಫಂಡನ್ನು ೬ ಖಾತೆಗಳಲ್ಲಿ ವಿಂಗಡಿಸಿ [illegible] ಬೇಕೆಂದು ಸೂಚನೆ ಬಂತು. ೫ ಖಾತೆಗಳು ಬೇಂಕಿನ ವಿಷಯವಾದ್ದು. ಆರನೇದು ಶಿಕ್ಷಣ ಧರ್ಮ ಖಾತೆಯು. ಗಿಬ್ಬ ಹೈಸ್ಕೂಲಿಗೆ ಬೇಂಕಿನಿಂದ ಹಣ ದೊರಕಿಸಿಕೊಳ್ಳಲು ಇದೊಂದು ಯುಕ್ತಿ ಪ್ರಯೋಗವೆಂದು ಒಬ್ಬರ ಟೀಕೆ. ಆಡಿಟ ರಿಪೋರ್ಟಿನೊಳಗಿನ ಒಂದು ಸಂಗತಿ [illegible] ಕೇಳಿದವರು [illegible] ಮಾಡಬೇಕೆಂತ [illegible]. ಕೊನೆಗೆ ರಾಜಶ್ರೀ ಕಾಮತ [illegible] ಮುಕ್ತಮನಸ್ಸಿನಿಂದ [illegible] ದೇಶ ಮಾಡಿದರ [illegible] ಗೋಮಾತೆಯು, ನಿಯಮಿತವಾಗಿ ಸಾಲಗಳನ್ನು [illegible] ಗೋಮಾತೆಯ [illegible] ಇದರಿಂದ [illegible] ಸಾಲು. ಮುಂತಾದ ಗೊತ್ತುವಳಿ ಮಾತುಗಳನ್ನಷ್ಟು ಹೇಳಿ ಬೇಸರ ಹುಟ್ಟಿಸಿದರು.

ಸಾಭಾರ ಸ್ವೀಕಾರ.

ಜಯಕರ್ನಾಟಕ— ಫಾಲ್ಗುಣ ಹಾಗು ಚೈತ್ರ ಮಾಸಗಳ ಸಂಯುಕ್ತ ಸಂಚಿಕೆ. ಸಂಪಾದಕ ಮತ್ತು ಪ್ರಕಾಶಕ, ಶ್ರೀ। ಆಲೂರ ವೆಂಕಟರಾಯರು ಸಾಧನಕೇರಿ, ಧಾರವಾಡ. ವಾರ್ಷಿಕ ಚಂದಾ ಅಂಚೆ ವೆಚ್ಚ ಸಹಿತ ರೂಪಾಯಿ ೫-೮-೦.

ಬಿಣಗೆ— ಬಿಣಗೆ ಊರ ನಿವಾಸಿಗಳು ೩೩. ೧೭ನೇಗೆ ಬರೆದ [illegible] –

ಇಲ್ಲಿಯ ಶ್ರೀ ಸೋಮನಾಥ ದೇವಾಲಯವನ್ನು ಉದ್ಧರಿಸುವರೆ ಕೂಡಿದ ಒಂದು ಸಭೆಯ ಹಕೀಕತು ಈ ಸಾಕಿನಲ್ಲೇ ಪ್ರಕಟವಾಗಿದೆ. ಆ ಮೇಲೆ ಮೂರು ಸಭೆಗಳು ಕೂಡಿದವು. ಒಂದು ಸಭೆಯಲ್ಲಿ ೧೦ ಮಂದಿಯರಿಗೂ ಅರ್ಚಕರಾದ ವೇ। ಜೋಯಿಯವರಿಗೂ ಬಹುಕಾಲ ವಾದವಿವಾದ ನಡೆದು ಕೊನೆಗೆ ಅರ್ಚಕರು ಹತ್ತು ಮಂದಿಗೆ [illegible] ಬರೆಕೊಡಬೇಕೆಂದು ನಿರ್ಣಯವಾಯಿತು. ಅರ್ಚಕರು, ಕರಾರು ಬರೆಕೊಡಲೊಪ್ಪಲಿಲ್ಲ. ಅನಾದಿಕಾಲದಿಂದ ಅರ್ಚಕತನ ನಡೆಸುತ್ತಬಂದಿರುವ ಮೂಲಕ ಈ ವರೆಗೆ ಕರಾರು ಆಗದೆ [illegible] ಕರಾರು ಬರೆಕೊಡಲಿಕ್ಕೆ ಆಗುವದಿಲ್ಲೆಂದು ವೇ। ಜೋಯಿಸರು ಹೇಳಿಕೆ ಪುನಃ ಹತ್ತು ಸಮಸ್ತರು ಕೂಡಿದರು. ದೇವಾಲಯವು ಸಾರ್ವಜನಿಕವಿದೆ. ಅರ್ಚಕರು ತಮ್ಮ ಹಕ್ಕನ್ನು ಸ್ಥಾಪಿಸಲಿಚ್ಛಿಸುತ್ತಿರುವರು. ದೇವಾಲಯದ ಉದ್ಧಾರವಾದ ಮೇಲೆ ಹತ್ತು ಸಮಸ್ತರ ಒಪ್ಪಿಗೆ ಇಲ್ಲವಾಗಿ ತಾತ್ಕಾಲಿಕವಾಗಿ ದೇವಸ್ಥಾನದ ಕಟ್ಟೋಣ ಕೆಲಸವು ಕಡಕ್ಕಾಗಿ ಇಡಲ್ಪಟ್ಟಿತು. ಶ್ರೀ ಸೋಮನಾಥ ದೇವಾಲಯದ ಉದ್ಧಾರಕ್ಕಾಗಿ ಕೆಲವು ಹಣ ಭಕ್ತಜನರಿಂದ ಕೂಡಿಸೋಣಾಗಿತ್ತು. ಆ ವಿಷಯ ಚರ್ಚೆಮಾಡುವರೆ ಹತ್ತು ಸಮಸ್ತರು ಇನ್ನೊಮ್ಮೆ ಸಭೆ ಸೇರಿದರು. ಸೋಮನಾಥ ದೇವಾಲಯದ ಉದ್ಧಾರದ ಯೋಜನೆಯು ಕಡಕಡೆಯಾದ್ದರಿಂದ ಈ ಹಣವನ್ನು ಶ್ರೀ ಕುಲದೇವಸ್ಥಾನಕ್ಕೆ ಒಪ್ಪಿಸಿ ಆ ದೇವಸ್ಥಾನವನ್ನು ಕಟ್ಟಿಸಬೇಕೆಂದು ತೀರ್ಮಾನವಾಯಿತು. ನಾನು ಕೇಳುವದಿಷ್ಟೇ ವೇದಮೂರ್ತಿ ಜೋಯಿಯವರು ಶ್ರೀ ದೇವಾಲಯದ ಅರ್ಚಕತನವನ್ನು ಬಹುಕಾಲದಿಂದ ನಡಿಸಿಬಂದದ್ದಿದ್ದು, ಅವರ ಪರಿಚಯವು ಮಕ್ತೇಸರರಿಗಿದ್ದು, ಇದನ್ನೆಲ್ಲ ಅರಿತುಕೊಂಡು ನಿರ್ಧರಿಸಿ ಈಗ ಕಾಲುಕೆದರಿ ಜಗಳತೆಗೆದು ಶ್ರೀ ಸೋಮನಾಥ ದೇವಾಲಯಕ್ಕೆಂದು ಎತ್ತಿದ ನಿಧಿಯನ್ನು ಕುಲದೇವಸ್ಥಾನಕ್ಕೆ ಒಪ್ಪಿಸುವದು ಅನುಚಿತವು. ಶ್ರೀ ಸೋಮನಾಥ ದೇವಾಲಯದ ಕಟ್ಟೋಣವು ಬಹು ಜೀರ್ಣವಾಗಿದ್ದು, ಅದನ್ನು ಅಷ್ಟಕ್ಕೇ ಬಿಟ್ಟುಕೊಟ್ಟರೆ ದೇವಾಲಯವು ಕುಸಿದುಬಿದ್ದು ಲುಕ್ಸಾನಾಗುವದು. ಕಾರಣ ಇತ್ತಟ್ಟಿನವರೂ ಆ ಊರಿನ ಪ್ರಮುಖ ಜಂಗರನ್ನು ಸೇರಿಸಿಕೊಂಡು ವಾದಗ್ರಸ್ತಮುದ್ದೆಗಳನ್ನು ತೀರ್ಮಾನಿಸಿಕೊಂಡು ಶ್ರೀ ಸೋಮನಾಥ ದೇವಾಲಯದ ಉದ್ಧಾರವಾಗಬೇಕಾಗಿ ಬಿನ್ನಹ.

ಮುಂಡೇಶ್ವರ— ದನಗಳ ರೋಗ ಕಡಿಮೆ ಆದೆ. ಮಾವಳ್ಳಿ ಗ್ರಾಮದಲ್ಲಿ ಸುಮಾರು ೧೧೦ ದನಗಳಿಗೆ ದಾಕು ಹಾಕಿದ ಪೈಕಿ ೪-೫ ಮಾತ್ರ ರೋಗದಿಂದ ಸತ್ತವು ಕನ್ಯಾಕೆಣಿ ಗ್ರಾಮದಲ್ಲಿಯೂ ಇದರಂತೆ ದಾಕು ಹಾಕಲ್ಪಟ್ಟ ದನಗಳಲ್ಲಿ ಸತ್ತಂಥವು ತೀರ ಕಡಿಮೆಯೇ.

ಮೈಲಿ ರೋಗವು ಪೂರ್ಣವಾಗಿ ನಿಂತುಹೋಯಿತು. ಈ ಊರಲ್ಲಿ ಅದು ತಲೆದೋರಿದ ಕೂಡಲೆ, ಮೈಲಿ ಬಂದ ಕೇರಿಗಳನ್ನು ಕೇರಿಗಳನ್ನು ಬಿಟ್ಟು ಬಾಕಿ ಕಡೆ ಮೈಲಿ ದಾಕು ಹಾಕುವ ಕೆಲಸವು ಜೋರಿನಿಂದ ನಡೆಯಿತು. ಅದ್ದರಿಂದ ೫-೬ ಮನೆಗಳಲ್ಲಿ ಮಾತ್ರ ಮೈಲಿಯಾಗಿ ೪—೫ [illegible] ತೀರಿಕೊಂಡವು.

ಪೂರ್ಣ ಬಾಂದವಸಾಹತ ಕೆಲಸ ಈ ವರ್ಷ ಜಮಾಬಂದಿ ಆಫೀಸರರಾದ ಮೆ।। ಪ್ರಾಂತಾಧಿಕಾರ ಆಗಮನದಿಂದ ಮಧ್ಯೇ ಮಧ್ಯೇ ಇಲ್ಲಿ ತುರ್ತ ಬಂದಿರುತ್ತದೆ. ಕನ್ಯಾಕೆಣಿ ಗ್ರಾಮದಲ್ಲಿ ಮೊದಲಿನ ೧೦೦ ಸರ್ವೆ ನಂಬರುಗಳು ಮಾತ್ರ ಈ ವರ್ಷಕ್ಕೆ ಇಡಲ್ಪಟ್ಟದ್ದಿಲ್ಲ ಪೂರ್ಣ ಬಾಂದ ಪಹಾಣಿ ಮುಗಿದಿದೆ. ಮಾವಳ್ಳಿಯಲ್ಲಿ ಒಟ್ಟು ೯೦೫ ಸರ್ವೆ ನಂಬರಗಳಲ್ಲಿ ಕಳೆದ ವರ್ಷ ೩೫೦ ಆಗಿದ್ದು. ಬಾಕಿ ಎಲ್ಲವನ್ನೂ ಈ ವರ್ಷಕ್ಕೇ ಇಟ್ಟಿದ್ದಾರಂತೆ; ಇಂದಿಗೆ ಈ ಪೈಕಿ ಸುಮಾರು ೧೫೦—೨೦೦ ಆಗಿರಬಹುದು. ಕಾಯಂ ಸರಕಾಲ ಅನ್ನಪೆಕ್ಟರರಾದ ಮಿ। ಪಾಂಡುರಂಗರಾವ ಕುಲಕರ್ಣಿ ಇವರು ರೈತರಿಂದ ಬಂದು [illegible] ಅಂಗೀಕರಿಸದೆ, ಮಹಾ ನಿಸ್ಪೃಹರೂ ಭಿನ್ನಭೇದವಿಲ್ಲದೇ ಎಲ್ಲ ರೈತರಿಗೂ ನ್ಯಾಯದಿಂದ ನಡೆಸುವಂಥವರು ಆಗಿದ್ದರೂ, ಪೂರ್ಣ ಬಾಂದ ಪಹಾಣಿಯು ಕಾಯಿದೆಯು ಕಡಕವಾರಿ ಮಾತ್ರ ಪೂರ್ಣವಾಗಿ ಅಮಲಿನಲ್ಲಿ ಇವರ: ತಂದ [illegible] ಕೋಣದ ವರ್ಷ ಮಾವಳ್ಳಿಯಲ್ಲಿ ೩೫೦ ಸರ್ವೇ ನಂಬರ ಪಹಾಣಿಯಲ್ಲಿ ರೈತರಿಗೆ ಸುಮಾರು ೪೧೮ ರೂ [illegible] ದಂಡ [illegible] ಈ ವರ್ಷ ಜನರು ಬಹಳೇ ಜಾಗ್ರತರಾಗಿ ಬಹಳವಾಗಿ ಎಲ್ಲ ರೈತರು ಕಳೆದ ಮಳೆಗಾಲದಲ್ಲಿಯೇ ಬಾಂದಕಲ್ಲು ತಯಾರಿಸಿಕೊಂಡು ಇಟ್ಟಿದ್ದಲ್ಲದೇ, ಪಹಾಣಿ ಸಮಯದಲ್ಲಿ ತಮ್ಮ ತಮ್ಮ ಗದ್ದೆಗಳಲ್ಲಿ ಹಾಜರಿದ್ದು, ತೋರಿಸಿಕೊಟ್ಟ ಸ್ಥಾನಗಳಲ್ಲಿ ಆಗಿಂದಾಗ ಬಾಂದಕಲ್ಲು ಹಾಕಿಸಿ ಅವಕ್ಕೆ ಸುಣ್ಣ ಬಾಸು ಬಣ್ಣ ಮಾಡಿದ್ದು ಕಂಡುಬರುತ್ತದೆ. ಕನ್ಯಾಕೆಣಿ ಗ್ರಾಮದ ೧೦೦ ಸರ್ವೆ ನಂಬ್ರುಗಳ ಪಹಾಣಿಯಲ್ಲಿ ಸುಮಾರು ೧೫ ರೂಪಾಯಿ ಮಾತ್ರ, ದಂಡ ವಸೂಲಿಯಾಗಿದೆಂಬ ವಾರ್ತೆ ಇದೆ.

ಸಿ।। [illegible] ಏಪ್ರಿಲ ೨—೩ ತಿಂಗಳದ ಶೇಕ ರಜೆಯಮೇಲೆ ಇದ್ದವರು ಇದೇ ಬರುವ ಮೇ ನೇ ತಾರೀಖಿಗೆ ಹಾಜರಾಗುತ್ತಾರೆಂಬ ವದಂತಿ ಇದೆ.

ಅಖಿಲ ಭಾರತೀಯ ಒಡೆಯ ಪರಿಷತ್ತಿನ ಅಧ್ಯಕ್ಷರಾಗಿ ಕರಾಚಿಯ ಸಿಂಧ ಕಾಲೇಜಿನ ಅಧ್ಯಕ್ಷರಾದ ಶ್ರೀ ರುವರು ಶನಿವಾರ ತಾ| ೧೧ನೇಗೆ ಹೃದಯಬಾಧ ಳಗಿನ ಕಾಲುವೆಯಲ್ಲಿ ಜಳಕ ಮಾಡುತ್ತಿರುವಾಗ ಮುಣುಗಿ ಸತ್ತರು.

— ಅಹಮ್ಮದಾಬಾದದ ಸರಸ್ವತಿ ಎಣ್ಣೆಯ ಕಾರಖಾನೆಯಲ್ಲಿ ಒಂದು 'ಕೋಣೆ'ಯನ್ನು ಸ್ವಚ್ಛಿಸಲು ಹೋದ ಕೂಲಿ ಆಳುಗಳು ಉಸುರುಗಟ್ಟಿ ಸತ್ತರು.

— ಮೇಷಸಂಕ್ರಮಣ ಸಮಯ ಹರಿಕ್ಷೇತ್ರದಲ್ಲಿ ದೊಡ್ಡ ಜಾತ್ರೆ ನೆರೆಯುತ್ತದೆ. ಒಂದು ಲಕ್ಷ ಯಾತ್ರಸ್ಥರು ಕೂಡುತ್ತಾರೆ ರಾಷ್ಟ್ರೀಯ ಸಭೆಯವರು ಸ್ವಯಂಸೇವಕರ ವಿದ್ಯಮಾನ ಅಲ್ಲಿ ವ್ಯವಸ್ಥೆಯನ್ನಿಟ್ಟರು

— ದೇಶಬಂಧುಗಳು ಪ್ರಕೃತಿಸ್ವಾಸ್ಥ್ಯಕ್ಕಾಗಿ ವಿಲಾಯತಿಗೆ ಪ್ರಯಾಣ ಮಾಡುವವರಿದ್ದಾರೆ ವಿಲಾಯತಿಯಲ್ಲಿ ಸರ್ವಾಧಿಪತಿ ಲೀಡಿಂಗ ದೊರೆಗಳ ಕೂಡ ಭಾರತ ಮಂತ್ರಿಗಳು ನಡಿಸುವ ಮಾತುಕತಿನಲ್ಲಿ ಹಿಂದುಸ್ಥಾನ ವಿಷಯಕ ಸುಧಾರಣೆಯ ವಿಚಾರದಲ್ಲಿ ದೇಶಬಂಧುಗಳು ಪಾಲುಗಾರರಾಗಬಹುದೆಂದು ಸುದ್ದಿ.

— ಬಿಝುಂಟ ಅಮ್ಮನವರು ಹಿಂದುಸ್ಥಾನದ ಘಟನೆಯ ಕಾಯಿದೆಯ ಮಸೂದೆಯೊಂದನ್ನು ತಯಾರಿಸಿ, ಅದನ್ನು ತಮ್ಮ ಸಭೆಯಲ್ಲಿ ಕಳೆದ ಎಪ್ರಿಲ್ ೧೩ನೇ ತಾರೀಖಿಗೆ ಮಂಜೂರುಮಾಡಿಕೊಂಡಿರುವರು. ಈ ಮಸೂದೆಗೆ ಲೋಕಮತದ ಬೆಂಬಲವನ್ನು ದೊರಕಿಸುವರೆ ದೇಶದಲ್ಲೆಲ್ಲಾ ದೊಡ್ಡ ಚಳವಳಿಯನ್ನೆಬ್ಬಿಸುವರು

— ಮಹಾತ್ಮರು ಅಖಿಲ ಭಾರತೀಯ ಕಾಂಗ್ರೆಸ ಕಾರ್ಯಕಾರಿ ಮಂಡಳದ ಸಭೆಗೂಡಿಸುವರೆ ಸಭಾಪತಿಯೊಡನೆ ಪತ್ರವ್ಯವಹಾರ ನಡಿಸಿರುವರು. ಮಹಾತ್ಮರ ನಾಲುವ ಮತಾಧಿಕಾರದ ವಿಷಯ ಶ್ರೀ ವಿಠ್ಠಲಭಾಯಿ ಪಟೇಲ ಮೊದಲಾದವರು ಪುನಃ ಆಕ್ಷೇಪ ಪ್ರದರ್ಶಿಸಿ, ಅದನ್ನು ತಿದ್ದುಪಡಿಯಾಗಲು ಚಳವಳಿ ಮಾಡುತ್ತಿರುವರು. ಅಖಿಲ ಭಾರತೀಯ ಕಾಂಗ್ರೆಸ ಕಮೀಟಿಯು ಸಭೆಸೇರಿ ಈ ವಿಷಯವನ್ನು ಅವಶ್ಯವಿದ್ದರೆ ನಿರ್ಣಯಿಸಬಹುದೆಂದು ಮಹಾತ್ಮರ ಹೇಳಿಕೆ ಇದೆ.

— ಮದ್ರಾಸ ಇಲಾಖೆಯ ಅನುಮಂಬಟ್ಟ ಸ್ಟೇಶನಿನಲ್ಲಿ ಅನೇಕ ಸ್ತ್ರೀ-ಪುರುಷರು ಜಾತ್ರೆಗೆ ಹೋಗಿ ಮರಳುತ್ತಿದ್ದರು. ರಾತ್ರಿಯ ಸಮಯ ನದಿ ನೀರೊಳಗಿಂದ ಹಾದು ಹೋಗುವದರ ಬದಲು ಉಗಿಬಂಡಿಯ ಸಂಕದ ಮೇಲಿಂದ ಹೋಗುತ್ತಿದ್ದರು. ಅಷ್ಟರಲ್ಲಿ ಉಗಿಬಂಡಿಯು ಬಂತೇ ಬಂತು! ೩ ಗಂಡಸರು, ೩ ಹೆಂಗಸರು, ಒಬ್ಬ ಹುಡುಗನು ಅಡಿಗೆ ಬಿದ್ದು ಅಲ್ಲಿಂದಲ್ಲೇ ನಿಧನಹೊಂದಿದರು ಉಳಿದ ಮೂವರು ಜೀವದಾಸೆಗೆ ನದಿಯಲ್ಲಿ ಹಾರಿದರು. ಅಲ್ಲಿ ಮುಳುಗಿ ಸತ್ತರು.

— ಜಂಗಲ ಕಮೀಟಿಯ ಸಭಾಸದರಾದ, ಮುಂಬಯಿ ಕಾಯಿದೆ ಕೌನ್ಸಿಲಿನ ಸಭಾಸದರಾದ ಶ್ರೀ ಶಂಕರ ಶ್ರೀಕೃಷ್ಣ ದೇವರವರು, ಜಂಗಲ ದೂರುಗಳ ವಿಷಯ ಕಮೀಟಿಯು ಅಧ್ಯಕ್ಷರಿಗೆ ಅರ್ಜಿಗಳನ್ನು ಸಾದರಪಡಿಸಲು ಪ್ರಜೆಗಳಿಗೆ ಬಿನ್ನೈಸಿರುವರು.

— ಜಪಾನದ ಕೋಬ ಬಂದರದಲ್ಲಿ ತಾಕೋದಾ ಮಾರು ಎಂಬ ಹಡಗಿಗೆ ಬೆಂಕಿ ಹತ್ತಿ ಅದರ ಮೇಲಿನ ೭ ಸಾವಿರ ಹತ್ತಿಯ ಗಟ್ಟಿಗಳು ಸುಟ್ಟು ಬೂದಿಯಾದವು.

— ಕಾನಪುರದೊಳಗಿನ ಸ್ತ್ರೀ ಪಾರಮಾರ್ಥ ವಿದ್ಯಾಮಂದಿರದಲ್ಲಿ ಕಳೆದ ತಾರೀಖು ೧೮ನೇಯಿಂದ ಅಖಿಲ ಭಾರತೀಯ ಸಂಸ್ಕೃತ ಸಾಹಿತ್ಯ ಸಮ್ಮೇಲನವು ಪ್ರಾರಂಭವಾಗಿದೆ. ಅಧ್ಯಕ್ಷರು ಮಹಾ ಮಹೋಪಾಧ್ಯಾಯ ಪಂಡಿತ ಜಯದೇವ ಮಿಶ್ರ, ವ್ಯಾಕರಣ ಕೇಸರಿಯವರು. ಇವರು ಹಿಂದೂ ವಿಶ್ವ ವಿದ್ಯಾಲಯದಲ್ಲಿ ಶಿಕ್ಷಕರಿರುವರು.

— ಕಾರವಾರದ ವೀಣಾವಾದನಪಟು ಶ್ರೀ ಮಂಗೇಶರಾವ ತೇಲಂಗರವರು ಮುಂಬಯಿಯ ರಾಷ್ಟ್ರೀಯ ವಿದ್ಯಾಗಿರಿಕ ಪ್ರದರ್ಶನದ ಚಾಲಕರ ನಿಮಂತ್ರಣೆಯ ಮೇರೆಗೆ ಅಲ್ಲಿಹೋಗಿ ತಮ್ಮ ವೀಣಾವಾದನ ಕಲೆಯ ನೈಪುಣ್ಯವನ್ನು ತೋರಿಸಿದರು. ಇವರ ಗುರುಗಳು ವಿಖ್ಯಾತ ಶ್ರೀಯುತ ಪನ್ನಾಲಾಲ ಮಹಾರಾಜ, ಹಾಗು ಅಲ್ಲೀ ಮುಕೀನಖಾನ ಬೀನಕಾರರವರು.

— ವಿಲಾಯತಿಯಲ್ಲಿ ಜರ್ಮನ ಉಗಿಹಡಗಕ್ಕೆ ಬೆಂಕಿ ಹತ್ತಿ ೫೦ ಲಕ್ಷ ಪವನುಗಳ ಹಾನಿಯಾಯಿತು.

— ಪಂಜಾಬದೊಳಗಿನ ನೋರ್ಥ ವೆಸ್ಟ ರೇಲ್ವೆ ಕಂಪನಿಯಲ್ಲಿ ೭ ಸಾವಿರ ಕೂಲಿಕಾರರೂ ಸಂಪುಮಾಡಿರುವರು.

— ಹಾರಣದಲ್ಲಿ ಹಾಪ ಬ್ರಹ್ಮಚಾರಿಯಾಶ್ರಮವು ಸ್ಥಾಪಿಸಲ್ಪಟಿದೆ. ಅಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಶಿಕ್ಷಣ, ಭೋಜನ, ಮೊದಲಾದವುಗಳನ್ನು ಕೊಡುತ್ತಾರೆ ಇಲ್ಲಿ ೨೧ ವಿದ್ಯಾರ್ಥಿಗಳಿರುವರು.

— ಮುಂಬಯಿ ಕ್ರಾನಿಕಲ ಪತ್ರಿಕೆಯ ಸಂಪಾದಕರಾಗಿದ್ದ ಮಿ| ಮಾರ್ಮಡ್ಯೂಕ ಪಿಕ್ಥಾಲರವರು ಈಗ ಹೈದರಾಬಾದದಲ್ಲಿ ಸರಕಾರಿ ಹ್ಯಾಸ್ಕೂಲ ಪ್ರಿನ್ಸಿಪಾಲರಿರುವರು ಮಾಥರಗುಟ ಎಂಬಲ್ಲಿ ಹಳೇ ಗ್ರಂಥಸಂಗ್ರಹ ಹಾಗು ಸಾಮ್ಯಗಳವ ಈ ಗ್ರಂಥಸಂಗ್ರಹ ನೋಡಿ ಇದೊಂದು ವಿಖ್ಯಾತ ಗ್ರಂಥಾವಳಿಯೆಂದು ಅವರು ನುಡಿದರು.

— ಆಯುರ್ವೇದ ಪದ್ಧತಿಯ ಶಾಸ್ತ್ರೋಕ್ತ ಅಭ್ಯಾಸ ಮಾಡುವ ಕುರಿತು ಚೌಕಶಿ ಮಾಡಲು ಸಂಯುಕ್ತ ಪ್ರಾಂತದಲ್ಲಿ ಪಂಡಿತ ಗೋಕರ್ಣನಾಥ ಮಿಶ್ರ ಇವರ ಅಧ್ಯಕ್ಷತೆಯಲ್ಲಿ ಚೌಕಶಿ ಮಂಡಳವೊಂದು ನೇಮಕ ಹೊಂದಿದೆ.

ಜಾಹೀರ ನೋಟೀಸು.

ಹೊನ್ನಾವರ ತಾಲೂಕು, ಬಟಕಳ ಪೇಟಾ ಮುಡೇಶ್ವರದಲ್ಲಿರುವ ಈ ಕೆಳಗೆ ಸಹಿ ಮಾಡುವ, ಪಡಿಯಾರ ಜಾತಿಯ ಲಕ್ಷ್ಮೀಬಾಯಿ ತಾಯಿ ಮುಕಾಂಟಿ ನ್ಯಾಕ್ತಿ ಈಕೆಯು ಇದರ ಮೂಲಕ ಎಲ್ಲ ಜನರಿಗೆ ಪ್ರಕಟವಾಗಿ ತಿಳಿಸುವದೇನಂದರೆ:—

ನನ್ನ ಅಕ್ಕ ಮೃತ ಮಹಾಕಾಳಿಯ ಮಗಳು ಯಲ್ಲಮ್ಮನು ಈಗ ೧೦ಲಿ ಅಪ್ರಾಯಸ್ಥ ಮಗುವಾಗಿ ನನ್ನ ರಕ್ಷಣೆಯಲ್ಲಿರುತ್ತಾಳೆ ನನ್ನ ಅಕ್ಕ ಜೀವಂತ ಇರುವಾಗಲೇ ಆವಳ ಸದರೀ ಮಗಳನ್ನು ನನ್ನ ಕುಟುಂಬದೊಳಗಿನ ಅಯ್ಯು ತಾಯಿ ಜೆಂದ್ರಿ ಈತನು ನಾನು ಅವಿವಾಹಿತ ಮನುಷ್ಯನಾದರಿಂದ, ತನ್ನ ನಂತರ ತನ್ನ ಉತ್ತರ ಕ್ರಿಯೆ, ವ ಪ್ರತಿ ವರ್ಷ ಶ್ರಾದ್ಧ ಮುಂತಾದ ಸದ್ಗತಿಯ ಕೆಲಸಗಳನ್ನು ಮಾಡಿ, ತನ್ನ ಸಂತತಿ ನಡೆದು ಬರುವ ಉದ್ದಿಶ್ಯವಾಗಿ, ನಮ್ಮ ಜಾತಿ ರಿವಾಜಿನಂತೆ, ಇಷ್ಟಮಿತ್ರರನ್ನು ಕೂಡಿ, ಪುರೋಹಿತರನ್ನು ಇಟ್ಟುಕೊಂಡು, ದತ್ತಕ ಹೋಮಾದಿ ವಿಧ್ಯುಕ್ತ, ರೀತಿಯಂತೆ ಪ್ರಸಿದ್ಧವಾಗಿ ಸಪ್ರಿ ಯಲ್ಲಮ್ಮನನ್ನು ದತ್ತಕ ಕೊಂಡು ಜಾತಿಯವರಿಗೆ ಸಂತರ್ಪಣೆ ಮಾಡಿಸಿದನು. ವ ಅದೇ ದಿನ (ತಾ. ೫—೫—೧೯೧೮) ಈ ಕುರಿತು ಲೇಖಿ ದಾಖಲೆಯಾಗಿ ಸದರೀ ಅಯ್ಯು ಮಾಗ್ದಾನ ಪತ್ರವನ್ನು ಸಹ ಬರಿಸಿಕೊಟ್ಟನು, ಈ ದತ್ತಪತ್ರದಲ್ಲಿ ಆ ದಿನದಲಾಗ್ಯಾತು ತನ್ನ ಯಾವತ್ತೂ ಸ್ಥಿರಚರ ಅಸ್ತಿಗೆ ತನ್ನ ಜನಿತ ಮಗಳಂತೆ ಸಪ್ರಿ ದತ್ತಕಳಾದ ಯಲ್ಲಮ್ಮನೇ ಬಾಧ್ಯಸ್ಥಳೆಂದು ಆತನು ನಮೂದಿಸಿರುತ್ತಾನೆ.

ಸದರೀ ಲೇಖಕ್ಕೆ ನಮ್ಮ ಅಪ್ತರ, ಪುರೋಹಿತರ, ವ ನಮ್ಮ ಊರ ಅನೇಕ ಅನ್ಯ ಜಾತಿಯ ಪ್ರಮುಖರ ಸಾಕ್ಷಿಗಳೂ ಇದ್ದು, ಇದು ಮಾವಳ್ಳಿ ಶ್ಯಾನಭಾಗರೇ ಸ್ವತಃ ಬರೆದದ್ದು ಇರುತ್ತದೆ. ಆ ನಂತರ ತಾ. ೨೦—೫—೨೩ಕ್ಕೆ ಗ್ರಾಮ ರಿಕಾರ್ಡಿನಲ್ಲಿ ಇದನ್ನು ಹಾಜರ ಪಡಿಸಿದ ಶರಾ ಸಹ ಇದರಮೇಲೆ ಇರುತ್ತದೆ.

ಹಾಗೂ ಈ ದತ್ತಪತ್ರವಾದ ಮಾರನೇ ವರ್ಷವೇ ಸಪ್ರಿ ದತ್ತ ತಂದೆ ಅಯ್ಯು ಬಾಬತು ಮಾವಳ್ಳಿ ಗ್ರಾಮದ ಸರ್ವೇ ನಂಬರ ೧೫೩, ಪೋಟ ನಂಬರ ೨ ರಲ್ಲಿ ದತ್ತಕಳ ಬಗ್ಗೆ ಹೊಸದಾಗಿ ಮನೆ ಕಟ್ಟಿಸಲಿಕ್ಕೆ ಈ ದತ್ತ ತಂದೆಯು ಹಿತ್ತಲು ದತ್ತಕಳ ಜನಿತ ತಾಯಿಗೆ ಬಿಟ್ಟಂತೆ, ದತ್ತಕಳ ಕೆಲವು ದಾಗಿನೆ ದಾಗಾಟ ಮಾಡಿ ಬಂದ ಹಣದಿಂದ ಅಲ್ಲಿ ಮಹಾಕಾಳಿಯು ಮನೆ ಕಟ್ಟಿಸಿ ತಾನು ಸಾಯುವ ವರೆಗೆ ಅದೇ ಮನೆಯಲ್ಲಿ ಸದರಿ ದತ್ತಕಳನ್ನು ಇಟ್ಟುಕೊಂಡು ವಾಸಿಸಿರುತ್ತಿದ್ದಳು.

ಹೋದ ಮಳೆಗಾಲದಲ್ಲಿ ಸದರಿ ಮನೆಯಲ್ಲಿ ತಣಸು ಬಂದ ಕಾರಣ, ಸದರಿ ಮಹಾಕಾಳಿಯು ಈ ಮಗುವನ್ನು ಕರಕೊಂಡು ನನ್ನ ಮನೆಯಲ್ಲಿ ಬಂದು ಉಳಿದಳು. ಆ ಸಮಯಾ ಈ ಅಯ್ಯು ತಾಯಿ ಜೆಂದ್ರಿ ಈತನು ಸಹಾ ಅಸ್ವಸ್ಥನಾಗಿ ಅವರೊಡನೆ ನಮ್ಮಲ್ಲೇ ಬಂದು ಉಳಿದನು. ಕ್ರಮೇಣ ಅಸ್ವಸ್ಥ ಹೆಚ್ಚಾದ್ದರಿಂದ ತನ್ನ ಜೀವದ ಆಸೆ ಬಿಟ್ಟು ಗೋದಾನಾದಿ ಧರ್ಮ ಕೃತ್ಯಗಳನ್ನು ಸಹ ನಮ್ಮಲ್ಲೇ ಜರುಗಿಸಿದನು. ಅದೇ ಮಳೆಗಾಲ ಶ್ರಾವಣದಲ್ಲಿ ನನ್ನ ಅಕ್ಕ ಮಹಾಕಾಳಿಯು ತೀರಿಕೊಂಡರೂ, ಈ ಅಯ್ಯು ನಮ್ಮಲ್ಲೇ ತನ್ನ ದತ್ತಕಳ ಸಂಗಡ ಇದ್ದನು. ಅವನೆ, ವೃದ್ಧಾಪ್ಯದ ದೀರ್ಘ ಕಾಲದ ಅಸ್ವಸ್ಥದಿಂದ ಮತಿ ಭ್ರಾಂತಿ ಹೊಂದಿದ್ದನು.

ನಮ್ಮ ಅಪ್ತರಲ್ಲಿರುವ ಕೆಲ ಸ್ವಾರ್ಥಿ ಜೀವಿಗಳು ಈ ಸಮಯವನ್ನು ಸಾಧಿಸಿ, ಹಳಸಂಡು ಮಾಡಿ, ಮದ್ದು ಕೊಡಿಸುತ್ತೇವೆಂಬ ನೆವ ತೋರಿಸಿ, ಈ ಮುದುಕನನ್ನು ತಮ್ಮಲ್ಲಿ ಕರೆದೊಯ್ದು, ಅವನಿಗೆ ಭಲತೇ ಭುಲತಾವ ಕೊಟ್ಟು, ದತ್ತಕಳಾದ ಅಪ್ರಾಯಸ್ಥಳ ಹಕ್ಕು ಮುಳುಗಿಸಿ ತಾವು ಅಯೋಗ್ಯ ಫಾಯದೆ ಹೊಂದುವ ಅಭಿಲಾಷೆಯಿಂದ, ತಮಗೆ ಬೇಕಾದ ಹಾಗೆ ಸುಳ್ಳು ಮಜಕೂರು ನಮೂದಿಸಿ, ಅವರ ಅಸ್ತಿಯ ಮೂಲಗೇಣಿ—ಆಧವು—ಕ್ರಯ ಮುಂತಾದ ಹಕ್ಕುಗಳನ್ನು ಅವನಿಂದ ಬರಿಸಿಕೊಂಡಿರುತ್ತಾರೆ. ವ ಇನ್ನು ಮುಂದೆ ಬರಿಸಿಕೊಳ್ಳುವದಿದ್ದಾರೆಂದು ಕೇಳುತ್ತೇನೆ.

ಕಾರಣ ಮತಿ ಭ್ರಾಂತಿಯಿಂದಲೂ, ಅಸ್ವಸ್ಥದಿಂದಲೂ ಪರತಂತ್ರನಾದ ಈ ಅಯ್ಯುನ ಕಡೆಯಿಂದ ದತ್ತಕಳ ಅಸ್ತಿಯ ಬಾಬತು ಮೇಲೆ ನಮೂದಿಸಿದಂಥ ಯಾವ ತರದ ಹಕ್ಕು ಯಾರೇ ಮಾಡಿಕೊಂಡರೂ, ಕಾಯಿದೆ ಮತ್ತು ನ್ಯಾಯ ನೀತಿಗೆ ವಿರುದ್ಧವಾದಂಥ ಅಂಥ ಹಕ್ಕುಗಳೂ, ಆ ಸಂಬಂಧದ ಕಾಗದ ಪತ್ರಗಳೂ ರದ್ದಾಗಿರುತ್ತವೆ. ಹಾಗೂ ಅಪ್ರಾಯಸ್ಥಳಾದ ಈ ದತ್ತಕ ಯಲ್ಲಮ್ಮನ ಹಕ್ಕಿಗೆ ಅಂಥವುಗಳಿಂದ ಏನೇನೂ ಬಾಧಕ ಬರತಾರದು.

ನನ್ನ ಸದರಿ ಅಕ್ಕ ಮೃತ ಮಹಾಕಾಳಿಯ ಮಗ ನರಸಿಂಹನಿಗೆ ತನ್ನ ಜನಿತ ತಂಗಿಯಾದ ಸದರಿ ದತ್ತಕಳ ಸ್ವಂತ ಹೆಸರಲ್ಲಿರುವ ಜಮೀನು, ದತ್ತಕಳು ವಾಸವಾಗಿರಲಿಕ್ಕೆ ಅವಳ ಹಣದಿಂದ ಕಟ್ಟಿಸಿದ ಮನೆ, ಅದರಲ್ಲಿರುವ ಮನೆವಾರ್ತೆ ಸಾಮಾನಿನ ಮೇಲೆ ಸಹಾ ಏನೊಂದೂ ಹಕ್ಕು ಸಂಬಂಧ ಸ್ವಾಮಿತ್ವ ಇರುವದಿಲ್ಲ. ಕಾರಣ ಅವನಿಂದ ಸಹ ಅಂಥ ಸ್ಥಿರ-ಚರ ಅಸ್ತಿಯ ಹಕ್ಕು ಯಾರಾದರೂ ಪಡೆದರೂ, ಯಾ, ಮುಂದೆ ಪಡೆಯುವವರಿದ್ದರೂ ಅದು ರದ್ದಾಗಿರುತ್ತದೆ. ತಿಳಿಯುವದು.

ಮುಡೇಶ್ವರ, ತಾ. ೧೯-೪-೧೯೨೫.

ಲಕ್ಷ್ಮೀಬಾಯಿ ತಾಯಿ ಮುಕಾಂಟಿ ನ್ಯಾಕ್ತಿ.

ಸನಾತನಿಗಳೇ, ಮಿಥ್ಯಾವಾದವನ್ನು ಬಿಟ್ಟುಬಿಡಿ!

(೫ ನೇ ಪಾನಿನಿಂದ ಮುಂದರಿದದ್ದು.)

(೩) ಬಲಾತ್ಕಾರದಿಂದ ಇಸ್ಲಾಮು ಧರ್ಮದಲ್ಲಿ ಸೇರಿಸಲ್ಪಟ್ಟವರಿಗೆ ಪುನಃ ಹಿಂದೂ ಧರ್ಮದಲ್ಲಿ ಸೇರಿಸಿಕೊಳ್ಳುವದು,

(೪) ಹಿಂದೂ ಯೌವನಸ್ಥ ಸ್ತ್ರೀ-ಪುರುಷರಿಗಾಗಿ ಗರಡಿ ಮನೆಗಳನ್ನು ಏರ್ಪಡಿಸುವದು,

(೫) ಸೇವಾ ಸಮಿತಿಗಳನ್ನು ಸಂಘಟಿಸುವದು,

(೬) ಹಿಂದೀ ಭಾಷೆಯನ್ನು ಇಡೀ ಹಿಂದುಸ್ಥಾನದಲ್ಲಿ ಪ್ರಸಾರ ಮಾಡುವದು; ಹಿಂದೀ ಸಾಹಿತ್ಯ ಸಮ್ಮೇಲನದ ಸಹಾಯ ಪಡೆಯುತಕ್ಕದ್ದು.

(೭) ಹಿಂದೂ ದೇವಾಲಯಗಳ ಆಡಳಿತದಾರರಿಗೆ ಬಿನ್ನೈಸಿ ದೇವಾಲಯದ ಜೊತೆಗೆ ಸಭಾ ಮಂದಿರಗಳನ್ನು ತೆರೆದು ಅಲ್ಲಿ ಸಾಮಾಜಿಕ ಹಾಗು ಧಾರ್ಮಿಕ ವಿಷಯಗಳನ್ನು ಚರ್ಚಿಸುವದು,

(೮) ಹಿಂದೂಗಳ ಒಳ ಭೇದಗಳಲ್ಲಿ ಬಂಧುಭಾವ ಜನಿಸುವಂತೆ ಹಿಂದೂ ಉತ್ಸವಗಳನ್ನು ನೆರವೇರಿಸುವದು,

(೯) ಮಹಮ್ಮದೀಯ ಹಾಗು ಕ್ರೈಸ್ತರೊಡನೆ ಸ್ನೇಹ ಬೆಳೆಸುವದು;

(೧೦) ಸಮಸ್ತ ರಾಜಕೀಯ ಚರ್ಚೆಗಳಲ್ಲಿ ಸನಾತನ ಸಮಾಜದ ಹೇಳಿಕೆಯನ್ನು ಅರುಹುವದು,

(೧೧) ಹಿಂದೂ ಹುಡುಗರಿಗೆ ಔದ್ಯೋಗಿಕ ವ್ಯವಸಾಯಗಳನ್ನು ಕೈಕೊಳ್ಳಲು ಪ್ರೋತ್ಸಾಹಿಸುವದು,

(೧೨) ಹಿಂದೂ ಬೇಸಾಯಗಾರ ಹಾಗು ಇತರರಲ್ಲಿ ಬಂಧುಭಾವವನ್ನು ಬೆಳೆಸುವದು;

(೧೩) ಪರದೆಯ ಪದ್ಧತಿಯನ್ನು ಕಿತ್ತೊಗೆದು, ಕಾಯಿಕ-ಮಾನಸಿಕ ಉನ್ನತಿಯಾಗುವಂತೆ ಹಿಂದೂ ಸ್ತ್ರೀಯರ ಜೀವನ ಮಾಡುವದು,

ಲಜಪತರಾಯರ ಭಾಷಣವಾದಬಳಿಕ, ಅನೇಕ ಠರಾವುಗಳು ಮಂಜೂರಾದವು. ಸನಾತನಿಗಳ ಧರ್ಮಾಂತರವನ್ನು ಪ್ರತಿಬಂಧಿಸುವದು; ಸಂಘಟನೆಗಳನ್ನು ಏರ್ಪಡಿಸುವದು, ಅಸ್ಪೃಶ್ಯರ ಉದ್ಧಾರ ಮಾಡುವದು; ಸಾರ್ವಜನಿಕ ಸಂಸ್ಥೆಗಳಲ್ಲಿ ಅಸ್ಪೃಶ್ಯರ ಹುಡುಗರನ್ನು ನಿರಾತಂಕವಾಗಿ ಪ್ರವೇಶ ಮಾಡಿಕೊಳ್ಳುವದೂ, ಅನಾಥಾಲಯಗಳನ್ನು ಸ್ಥಾಪಿಸಲು ಬಿನ್ನಹ, ಕರ್ತಪೂರದ ದೊಂಬಿಯಲ್ಲಿ ಸರೆ ಬಿದ್ದವರಿಗೆ ವಿಮೋಚನ ಮಾಡಲಿಕ್ಕೆ ಸರಕಾರಕ್ಕೆ ಬಿನ್ನಹ, ಸಂಘಟನೆಗಾಗಿ ೧ ಲಕ್ಷ; ಅಸ್ಪೃಶ್ಯ ಹಾಗು ಕೋಹತ ಹಿಂದೂಗಳ ದುಃಖನಿವಾರಣಕ್ಕಾಗಿ ೪ ಲಕ್ಷ, ಹೀಗೆ ೫ ಲಕ್ಷ ರೂಪಾಯಿಗಳನ್ನು ಸಂಗ್ರಹಿಸಬೇಕೆಂದು ಗೊತ್ತಾಯಿತು. ಪಂಡಿತ ಮಾಲವೀಯರವರು ನಿಧಿಗೆ ಧನವನ್ನರ್ಪಿಸಲು ಆಗ್ರಹದ ವಿನಂತಿ ಮಾಡಿದರು. ಸಭೆಯಲ್ಲಿಯೇ ೧॥ ಲಕ್ಷದ ವಾಗ್ದಾನ ದೊರಕಿದವು. ಗೋಹತ್ಯವನ್ನು ಪ್ರತಿಬಂಧಿಸಲಿಕ್ಕೂ, ಭಗವದ್ಗೀತೆಯನ್ನು ಸಾರ ಮಾಡಲಿಕ್ಕೂ ಠರಾವುಗಳು. ಮಂಜೂರಾದವು. ಠರಾವುಗಳ ಕೆಲಸವು ಸೋಮವಾರ ರಾತ್ರಿ ವರೆಗೆ ನಡೆಯಿತು. ಬಳಿಕ, ಲಜಪತರಾಯರು ಸನಾತನ ಸಮಾಜಕ್ಕೆ ಐಕ್ಯಮತ್ಯದಿಂದ ಕಾರ್ಯಾಸಕ್ತರಾಗಲು ಬೋಧಿಸಿದರು. ಸಮಸ್ತ ಪಂಥಗಳ, ಸಂಪ್ರದಾಯಗಳ ಹಿಂದೂಗಳು ಒಂದೇ ಎಂಬ ಭಾವನೆಯು ದೃಢವಾಗಲೆಂದು ಲಜಪತರಾಯರು ಆಗ್ರಹದಿಂದ ಹೇಳಿದರು. ಸನಾತನೇತರರು ಸನಾತನಿಗಳ ಮೇಲೆ ಸಾಗಿಬಂದಾಗ ಎಲ್ಲ ಸನಾತನಿಗಳು ಒಮ್ಮನಸ್ಸಿನಿಂದ ಇದಿರಾಗಬೇಕೆಂದರು. ಬಳಿಕ, ಸಭೆಯು ವಿಸರ್ಜನವಾಯಿತು. ಮುಂದಿನ ಸಭೆಯು ದಿಲ್ಲಿಯಲ್ಲಿ ನೆರವೇರುವದು. ಕಲಕತ್ತೆಯ ಕೆಲ ಪುರಾತನ ಮತದ ಸನಾತನಿ ಧರ್ಮದವರು ತಮ್ಮದೊಂದು ಸಭೆ ಸೇರಿಸಿ ಹಿಂದೂ ಮಹಾ ಸಭೆಯ ಸುಧಾರಣೆ ಕಾರ್ಯಕ್ರಮವನ್ನು ಅಲ್ಲಗಳೆದಿರುವರು. ಮತ್ತು ತಮ್ಮದೊಂದು ಕಾರ್ಯಕ್ರಮವನ್ನು ನಿಶ್ಚಯಿಸಿಕೊಂಡಿರುವರು.

"ಅಂಕೋಲಾ ಇಂಗ್ಲಿಷ ಸ್ಕೂಲ ಕಮೀಟಿಯವರ ಶಿಕ್ಷಕದ್ರೋಹ."

"ಕಾನಡಾವೃತ್ತ" ಪತ್ರಕರ್ತರಿಗೆ—

ನಿಮ್ಮ ಪತ್ರದ ಕಳೆದ ಸಂಚಿಕೆ (ತಾ.೧೩-೪-೨೫) ಯಲ್ಲಿ ಶ್ರೀಯುತ ಎಮ್. ಎಮ್. ಪಿ. ಯವರು ಅಂಕೋಲಾ ಎಡ್ವರ್ಡ ಶಾಲೆಯ ಸುಪರಿಂಟೆಂಡೆಂಟರವರ ನೇಮಣೂಕಿಯ ವಿಷಯವಾಗಿ ಒಂದು ಲೇಖವನ್ನು ಕೊಟ್ಟಿದ್ದರು. ಅದರಲ್ಲಿ ಶಾಲೆಯ ಕಮೀಟಿಯವರಿಗೂ [illegible] ಶಂಕರರಾಯರಿಗೂ ದೂಷಿಸುವದೇ ಅವರ ಪ್ರಾಧಾನ್ಯ ಉದ್ದೇಶವೆಂದು ತೋರುತ್ತದೆ. ಆದರೆ ಈ ಶಾಲಾ ಕಮಿಟಿಯು ಹೊಸ ಸುಪರಿಂಟೆಂಡೆಂಟರವರಿಗೆ ಸ್ಥಾನವನ್ನೀಯುವ ಸಂಯೋಗವು ಯಾಕೆ ಬಂದದೆ ಎಂಬುದನ್ನು ಈ ಶಾಲೆಯ ಒಬ್ಬ ಹಳೇ ವಿದ್ಯಾರ್ಥಿಯಾದ್ದರಿಂದ ನಮ್ಮ ಕಾನಡಿಗ ಬಂಧುಗಳಿಗೆ ತಿಳಿಸುವದು ನನ್ನ ಆದ್ಯ ಕರ್ತವ್ಯವೆಂದು ನೆನಿಸುತ್ತೇನೆ.

ಶ್ರೀ ಎಮ್. ಎಮ್. ಪಿ ರವರು ಈ ಶಾಲೆಯ ಹೆಡ್ ಮಾಸ್ತರರು ಹರಿಣಿಯಂತೆ ಶಾಂತ ಸ್ವಭಾವಿಗಳೂ, ಜನರು ಏನೂ ಹೇಳಿದರೆ ಅದರಂತೆ ವರ್ತಿಸುವವರೂ ಎಂದು ವಿವರಿಸಿದ್ದರಿಂದ ಇಂಥ ಸ್ವಂತ ಬುದ್ಧಿ ಇಲ್ಲದೆ, ಬಸವಣ್ಣನಂತೆ ತಲೆದೂಗಿ ಎರಡನೇಯವರು ಹೇಳಿದಂತೆ ನಾಡಲೆತ್ತಿಸುವ ಗ್ರಾಜ್ಯುಏಟನು ಹೆಡ್ ಮಾಸ್ತರ ಕೆಲಸಕ್ಕೆ ಅಯೋಗ್ಯನೆಂಬುವದೂ ತಾವು ಸ್ವತಃ ಕಬೂಲ ಮಾಡಿದ ಹಾಗಾಯಿತು. ಇಂಥಾ ಸ್ಥಿತಿಯಲ್ಲಿ ಒಳ್ಳೆಯ ಹೆಡ್ ಮಾಸ್ತರರಂಥ ಅನುಭವಿಕ ಗ್ರಾಜ್ಯುಏಟನು ಹೆಡ್ ಮಾಸ್ತರಿ ಜಾಗದ ಕೆಲಸವನ್ನು ಹ್ಯಾಗೆ ಮಾಡ್ಯಾನು? ಶಾಲೆಯನ್ನು ಹ್ಯಾಗೆ ಊರ್ಜಿತ ಸ್ಥಿತಿಗೆ ತಂದ್ಯಾನು? ಎಂಬುದರ ಅರಿವು ಸಹ ಎಮ್. ಎಮ್. ಪಿ ಯವರಿಗೆ ಎಳ್ಳಷ್ಟಾದರೂ ಇರಬಾರದೇ? ಅಯ್ಯೋ! ಏನು ವಿಪರೀತ ಅಜ್ಞಾನ!

ಇಂಥ ಗ್ರಾಜ್ಯುಏಟನನ್ನು ಎಡ್ವರ್ಡ ಶಾಲೆಯ ಕಮೀಟಿಯವರು ಹೆಡ್ ಮಾಸ್ತರರನ್ನಾಗಿ ನೇಮಿಸಿದ್ದು ಅವರ ಆದ್ಯ ತಪ್ಪಾಗಿರುತ್ತದೆ. ಆದರೆ, ಈ ತಪ್ಪು ಅವರಿಗೆ ಕೂಡಲೆ ಕಂಡುಬಂದು ಅವರು ಈ ಹೊಸ ಸುಪರಿಂಟೆಂಡೆಂಟರನ್ನು ತರತಂದಲ್ಲಿ ಎಮ್. ಎಮ್. ಪಿ. ಯವರಿಗೆ ಯಾಕೆ ಸಹನವಾಗಲಿಲ್ಲಬಹುದು? ನನ್ನ ಅಲ್ಪಮತಿಗೆ ಏನೂ ಗೊತ್ತಾಗಲೊಲ್ಲದು. ಈ ಹೊಸ ಸುಪರಿಂಟೆಂಡೆಂಟರವರು ಅನುಭವಿಕರೂ, ವಿದ್ಯಾ ಪದವೀಧರರೂ ಇದ್ದುದರಿಂದಾ ಈ ಶಾಲೆಯು ಇನ್ನುಮುಂದೆ ಯಾಕೆ ಊರ್ಜಿತಾವಸ್ಥೆ ಹೊಂದಬಾರದು? ಈ ಶಾಲೆಗೆ ಕೊಟ್ಟ ಎಜ್ಯುಕೇಶನಲ್ ಇನ್ಸ್‌ಪೆಕ್ಟರ ಸಾಹೇಬರ ಶಿಫಾರಸು ಇನ್ನುಮುಂದಕ್ಕೆ ಇರಲಿಕ್ಕಿಲ್ಲೆಂದು ನನಗೆ ತೋರುತ್ತದೆ.

"The School, however did not strike me as doing good work;" ಮತ್ತು "The staff is inexperienced and inadequate" ಇಂಥಾ ರಿಮಾರ್ಕನ್ನು ಸಾಹೇಬರಿಂದಾ ಕೇಳಿದ್ದಲ್ಲಿ ನಿಸ್ವಾರ್ಥ ಬುದ್ಧಿಯಿಂದಾ ಶಾಲೆಯನ್ನು ಊರ್ಜಿತಾವಸ್ಥೆಗೆ ತಂದಂಥಾ ಕಮೀಟಿಯ ಮೆಂಬರರು [illegible] ಶುಭ ಸದಿಚ್ಛೆಯಿಂದಾ ಯೋಗ್ಯ ಅನುಭವಿಕ ಗ್ರಾಜ್ಯುಏಟನನ್ನು ತಂದದ್ದು ಏನು ತಪ್ಪಾಯಿತು?

ಶಾಲಾ ಕಮೀಟಿಯವರು ಈ ಮದ್ರಾಸ ಗ್ರಾಜ್ಯುಏಟರನ್ನು ನೂರಾರು ಮೈಲಿನಿಂದ ಕರೆಯುವದರ ಬದಲು ಶ್ರೀ ವಿಶ್ವನಾಥ ಪ್ರಭುಗಳವರಿಗೆ ಕೈ ಮುಗಿದಲ್ಲಿ ಅವರು ದೇಶಸೇವಾರ್ಥವಾಗಿ ಏನೂ ಪಗಾರ ಸಹಾ ತೆಗೆದುಕೊಳ್ಳದೆ ಶಾಲೆಯಲ್ಲಿ ಬೋಧಕ ಕೆಲಸ ಮಾಡುವ ಹಾಗಿದ್ದರೆಂದು ಈ ವಿದ್ಯಾವಿಶಾರದ ಎಮ್. ಎಮ್. ಪಿ.ರವರು ಪ್ರತಿಪಾದಿಸಿದ್ದಾರೆ. ಆದರೆ ಅವರ ಈ ಭ್ರಮೆಯು ನಿರಸನವಾಗಬೇಕಾದರೆ, ಶ್ರೀ ಪ್ರಭುಗಳವರ ಹಿಂದಿನ ಕಾರಕೀರ್ದಿಯನ್ನು ತಿಳಕೊಳ್ಳಬಹುದು. ಯಾಕೆಂದರೆ ಅವರು ಈ ಶಾಲೆಯಲ್ಲಿ ಈ ಮೊದಲು ಪಗಾರ ತೆಗೆದುಕೊಂಡು ಹೆಡ್ ಮಾಸ್ತರ ಕೆಲಸ ಸ್ವೀಕರಿಸಿ, ಈ ಶಾಲೆಗೆ ಬೇಕಾದ ಸುಧಾರಣೆ ಮಾಡುವ ಸುಸಂಧಿಯು ಸಿಕ್ಕಿದ್ದಾಗ್ಯೂ ಆ ಸುಧಾರಣೆ ಬದಲಾಗಿ ಬರೇ ಗೈರಶಿಸ್ತ ಆಗುತ್ತಿದ್ದು ಈ ಕಾರಣದ ಮೂಲಕ ಶಾಲಾ ಕಮೀಟಿಯವರಿಗೆ ಮತ್ತು ಪ್ರಭುಗಳವರಿಗೂ ಕೂಡಿ ಬಾರದೆ ಮೆಂಬರರು ಈ ವರೆಗೆ ರಾಮರಾಮ ಕೊಟ್ಟು ಹ್ಯಾಗಾದರೂ ಬುಚಬುಚಾ ಮಾಡಬೇಕಾಯಿತೆಂಬುದನ್ನು ಸರ್ವರು ಬಲ್ಲರು. ಇಂಥಾ ಪ್ರಭುಗಳವರಿಗೆ ಬಿನ್‌ಪಗಾರ ಹೆಡ್ ಮಾಸ್ತರರನ್ನು ನೇಮಿಸಿದ್ದಲ್ಲಿ ಶಾಲೆಯ ಸುಧಾರಣೆಯು ಎಷ್ಟುಮಟ್ಟಿಗೆ ಮುಟ್ಟುವದೆಂಬುದು. ಎಮ್. ಎಮ್. ಪಿ ಮತ್ತು ಪ್ರಭುವೇ ಬಲ್ಲ. ಹೀಗಿದ್ದು, ಇಂಥ ಪ್ರಭುಗಳವರಿಗೆ ಕೈ ಮುಗಿದು ಕರತರಬೇಕೆಂಬ ಉಪದೇಶ ಮಾಡುವದು ಎಮ್. ಎಮ್. ಪಿ ಯವರ ಅವರ್ಣನೀಯ ಜಾಣತನವನ್ನು ಯಾರೂ ಮರೆಯದೇ ಇರುವರೇ! ಎಮ್. ಎಮ್. ಪಿ ಮಹಾಶಯರೇ, ತಾವು ಕಮೀಟಿಗೆ ಹೀಗೆ ಉಪದೇಶಮಾಡಿ ವಿಘ್ನಸಂತುಷ್ಟಿಗಳಾಗುವದಕ್ಕಿಂತ ತಮಗೆ ಈ ಪ್ರಕಾರವಾಗಿ ಯಾವಬಾಬದರೊಂದು ಪಕ್ಷವನ್ನು ಹಿಡಿದು ಸುಮ್ಮ ಸುಮ್ಮನೆ ಏನಾದರೂ ಒರೆಯಲಿಕ್ಕೆ ವಿಚಾರ ಬುದ್ಧಿಯನ್ನು ಕೊಡಬಾರದೆಂದು ಪ್ರಭುಗಳನ್ನಾದರೂ ಪ್ರಾರ್ಥಿಸಿರಿ.

ಅಂಕೋಲೆಯಂಥ ಸ್ವಾರ್ಥ-ದ್ವೇಷದ ಮತಭೇದದ ಜಗಳಾಟಗಳಿದ್ದ ಊರಲ್ಲಿ ಈ ಪ್ರಕಾರದ ಇಲ್ಲದ ಕಾರಣಗಳಿಗೆ ತಮ್ಮ ವಿಚಾರಸರಣಿಯಿಲ್ಲದ ತಲೆಯನ್ನು ತವರಮನೆಯನ್ನಾಗಿ ಮಾಡಿ ಬಾಯಿಗೆ ಬಂದಹಾಗೆ ಪರನಿಂದೆಯನ್ನು ಮಾಡಿ ಕೈ ಮುಚ್ಚಿಕೊಂಡು ಕೂಡದ ಮೂಕದಂತೆ ಕೂತುಕೊಳ್ಳುವದೇ ಅವರ ಉದ್ಯೋಗ (business) ವೆಂದು ಅವರ ಲೇಖನಿಯಿಂದಾ ವ್ಯಕ್ತವಾಗುತ್ತದೆಂಬ ನನ್ನ ಬಡವನ ಮತಿಗೆ ಪದೇ ಪದೇ ಭಾಸವಾಗುತ್ತದೆ. ಮತ್ತು ಎಮ್. ಎಮ್. ಪಿ. ಯವರಿಗೆ ಶಾಲಾ ಮಾಸ್ತರ ಹಾಗು ಶ್ರೀ ವಿಶ್ವನಾಥ ಪ್ರಭುಗಳ ಮಾಸ್ತರಿಯನ್ನು ವಹಿಸಿಕೊಂಡು ನಂಜುಳ ದೀಪಕ್ಕೆ ಎಣ್ಣೆ ಹೊಯ್ದಂತೆ ಜಗಳಾಟವನ್ನೆಬ್ಬಿಸುವ ಬಾಲಬುದ್ಧಿಯಲ್ಲಿ ತಮ್ಮ ತಲೆಯನ್ನು ಹಾಕುವದು ಅವರ ವಿದ್ಯೆಗೆ ಎಷ್ಟರಮಟ್ಟಿಗೆ ಭೂಷಣವಿರಬಹುದು ಎಂಬುದನ್ನು ಯಾರು ಹುಚ್ಚನಾದರೂ ಮನಗಂಡ್ಯಾನು; ಗೊತ್ತಾಯಿತೇ! ಹಿಂದು-ಮುಸಲ್ಮಾನರ ಐಕ್ಯಭಾವವು ನಡೆಯುವ ಸದ್ಯದ ಪರಿಸ್ಥಿತಿಯಲ್ಲಿ ತಾವು ಈ ಐಕ್ಯದ ಬಗ್ಗೆ ವಿಚಾರ ಮಾಡುವದನ್ನು ಮರೆತು, ತಮ್ಮ ಅವರ್ಣನೀಯ ವಿಚಾರಗಳನ್ನು ಇಂಥಾ ಜಗಳಾಟದಲ್ಲಿ ಹಾಕಿದ್ದೀರಿ; ಇದು ನಿಮಗೆ ಭೂಷಣವೇ? ಯೋಗ್ಯವೇ? ಹೀಗಿಲ್ಲದಿದ್ದರೆ ನಮ್ಮ ಎಡ್ವರ್ಡ ಶಾಲೆಗೇ ಅಲ್ಲ, ನಮ್ಮ ಊರಿಗೂ, ಇಡೀ ಕಾನಡಾ ಜಿಲ್ಲೆಗೂ ಸುಶೋಭಿತಾರವನ್ನೀಯುವ ಪರಮಭಾಗ್ಯವನ್ನು ಕಟ್ಟಿಕೊಳ್ಳುತ್ತಿದ್ದಿರಲ್ಲಾ? ಇಂಥಾ ಮಹಾಪುರುಷರಿಗೆ ಅಯ್ಯೋ! ದೈವವೇ!

Ankola, 17-4-25 } G. R. S

— ಕಲ್ಕತ್ತೆಯ ಮುನಿಸಿಪಾಲಿಟಿಯವರು ಪಂಡಿತ ಮಾಲವೀಯ ಹಾಗು ಲಾಲಾಜಿಯವರಿಗೆ ಕಳೆದ ಗುರುವಾರ ಮಾನಪತ್ರಗಳನ್ನರ್ಪಿಸಿ ಸತ್ಕರಿಸಿದರು.

ಪ್ಪನು ಜಬೆಗೆ ಎಪ್ರಿಲ್ ೧೪ ನೇ ವರೆಗೆ ೧೬೭೯೪ ...ಗಳು ಸಭಾಸದರ ಪಟದಲ್ಲಿ ದಾಖಲಾಗಿದ್ದವರು- ...ಗಳಲ್ಲಿ ೨೨೭೩ ಮಂದಿಗಳು ಅವರಲ್ಲಿ ಸ್ವತಃ ...ಲುವವರು ೩೫೪ ಗುಜರಾಥದಲ್ಲಿ ೨೧೯೩ ಅವರಲ್ಲಿ ...ನೂಲುವವರು ೨೦೯೫ ಕರ್ನಾಟಕದಲ್ಲಿ ೬೮೭ ...ನೂಲುವವರು ೩೬೬ ಎಲ್ಲಕ್ಕೂ ಹೆಚ್ಚು ನೂಲುವವರು ಗುಜರಾಥದಲ್ಲಿಯು.

ಜಾಹೀರಾತು.

ಚಲೋ ತರಿ ಜಮೀನು ವ ಬಾಗಾಯತ.

ಕ್ರಯಕ್ಕೆ ಕೊಡುವದುಂಟು.

ಕಾನಡಾ ಜಿಲ್ಲಾ ಹೊನ್ನಾವರ ಶಹರ ದಾಂಡಿ ... ಸಮೀಪ ಕಕೇರಿಗೆ ಹೋಗುವ ರಸ್ತೆಯ ... ಸ್ಥಳದಲ್ಲಿರುವ ಹೊನ್ನಾವರ ಕಸಬಾ ಸರ್ವೆ ನಂಬ್ರ ... ಎಕ್ರೆ ... ಸರಕಾರ ತೀರ್ವೆ ರೂ. ೩-೩-೧೦ರ ತರಿ ಜಮೀನು ವ ಬಾಗಾಯತ. ಇದಕ್ಕೆ ದರ ಸಾಲ ಗೇಣಿ ... ಕಬ್ಬಿಗೆಲಕ್ಕೆ ... ಮುಕ್ತ ... ಉತ್ಪನ್ನ ಇರುತ್ತದೆ. ಈ ಆಸ್ತಿ ... ಮೂಲಗೇಣಿ ಹಕ್ಕಿನ ಆಸ್ತಿ ಇರುತ್ತದೆ ... ಮೂಲಗೇಣಿದಾರ್ರ. ಇದಕ್ಕೆ ... ಮಾಲೀಕರಿಗೆ ಬರೇ ... ಮೂಲಗೇಣಿ ... ಮೂಲಗೇಣಿ ಸಹಿತವಾಗಿ ಯಾ ಮೂಲಗೇಣಿ ... ಬರೇ ಸರಕಾರ ತೀರ್ವೆ ಪೂರ್ತ ಮೂಲಗೇಣಿ ಜವಾಬದಾರಿ ಸಹಿತ ಕ್ರಯಕ್ಕೆ ಕೊಡಲಿಕ್ಕೆ ಅಡ್ಡಿಯಿಲ್ಲಾ. ಯಾಕಂದರೆ ಮೂಲಗೇಣಿ ಜಮೀನು ಕ್ರಯಕ್ಕೆ ತೆಗೆದುಕೊಂಡವರು ಕ್ರಯಕ್ಕೆ ಕೊಡುವವರ ಮೂಲಗೇಣಿ ಜವಾಬದಾರಿ ... ಸಿಕೊಳ್ಳಲಿಕ್ಕೆ ಬರುವದಿಲ್ಲ. ಅದ್ದರಿಂದ ಸರಕಾರ ತೀರ್ವೆ ... ಬಾಕಿ ಮೂಲಗೇಣಿ ... ಸ್ವಕಸಾ ... ಬರೆ ಆಸ್ತಿ ಮೇಲೆ ... ಇಲ್ಲವೇ ಸಮ್ರಿ ಆಸ್ತಿ ... ಆಸ್ತಿ ... ಬಾಕಿ ... ಎಕ್ರೆ ಜಮೀನು ... ಉತ್ಪನ್ನವುಳ್ಳ ಕ್ರಯಕ್ಕೆ ಕೊಡುವದುಂಟು. ಕ್ರಯಕ್ಕೆ ಅಪೇಕ್ಷಿಸುವವರು ಇದೇ ಇಪ್ರಿಲ ... ರೊಳಗೆ ಕೆಳಗೆ ಸಹಿ ಮಾಡುವವರಿಗೆ ಸಾಕ್ಷಾತ ಭೆಟ್ಟಿಯಾಗಿ ಯಾ ಪತ್ರದ್ವಾರಾ ಕ್ರಯದ ಶರ್ತಗಳು ನಿರ್ಣಯಿಸಿ ಕ್ರಯಕ್ಕೆ ಪಡಕೊಳ್ಳಬಹುದು.

ಹೊನ್ನಾವರ, ತಾ. ೧೫-೪-೩೬. } **ಶಿವರಾವ ರಾಮರಾವ ಮುರ್ಡೇಶ್ವರ,**

ವಕೀಲ ಹೊನ್ನಾವರ.

ಉತ್ತಮ ಮಾಲು! ಉತ್ತಮ ಮಾಲು!!

ಮಂಗಳೂರ ಹಂಚು!

ನಮ್ಮ ಊರಾದ ಮಂಗಳೂರ ವಿ ... ಹಂಚುಗಳು ನಮ್ಮಲ್ಲಿ ಮಾರಾಟಕ್ಕೆ ಸಿಗುವವು. ಬೇಕಾದವರು ಮಾಲು ನೋಡಿ ದರವಾರ ತಿಳಕೊಳ್ಳಬಹುದು. ದರವಾರ ಸವಲತ್ತಿಯಾಗಿರುವವು.

ಪತ್ತೆ:— ಕಾಜೀ ಅಬ್ದುಲ್ ಖಾದರ್,

ಮುನಸಿಫ್ ಕೋರ್ಟ ಸಮೀಪ, ಕುಮಟಾ.

DAVAR'S

COLLEGE OF COMMERCE

(Established 25 years)

CELEBRATES ITS SILVER JUBILEE THIS YEAR UNDER THE DISTINGUISHED PATRONAGE OF MERCHANT PRINCES, LEADERS OF THOUGHT AND EDUCATION

The Institution under the sole direction of its Founder and Principal has done pioneer work in introducing for the First Time in India Courses in SPECIALISED BANKING SPECIALISED SECRETARIAL WORK and SPECIALISED ACCOUNTANCY as the result of his numerous journeys to Europe and to the Colleges and Universities there.

The fact that a Scholar has successfully trained in DAVAR'S COLLEGE has always been accepted by businessmen all over India, Burma and Ceylon as a hall mark of perfection.

Prospectus on application to the Principal,

Great Western Bldg,
Apollo Street BOMBAY

ಅಮೇರಿಕನ್ ಉಪಾಯ.

ಎಂಬ್ರೋಸಿಯಾ.

AMBROSIA

ಸ್ತ್ರೀರೋಗಪರಿಹಾರಕ್ಕಾಗಿ.

ಎಂಬ್ರೋಸಿಯಾವು ಸಮಸ್ತ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು. ಇದು ಸ್ತ್ರೀಸೌಂದರ್ಯವನ್ನುಂಟುಮಾಡುತ್ತದೆ. ಸಾಮಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರುತ್ತದೆ ಚಲೋ ಆಹಾರ ದೊರಕದೆ, ವಿಶೇಷ ಆಯಾಸಗೊಳ್ಳುವದರಿಂದ ಸ್ತ್ರೀಯರ ಪ್ರಕೃತಿಯು ಕೆಡುತ್ತದೆ, ಮುಟ್ಟಾಗುವಾಗ ಶೂಲಿ ಏಳುವದು, ಮುಟ್ಟು ಗದಿರುವದು, ಅಪಸ್ಮಾರ, ಬಂಜೆತನ ಮುಂತಾದ ಗರ್ಭಾಶಯದ ಬೇನೆಗಳು, ಅಜೀರ್ಣ ತಲೆಶೂಲಿ ಭ್ರಮಿಷ್ಟತನ ಇವೆಲ್ಲ ಸ್ತ್ರೀರೋಗಗಳಮೇಲೆ ರಾಮಬಾಣ ಮದ್ದು. ಎಂಬ್ರೋಸಿಯಾವು ಸಮಸ್ತ ಸ್ತ್ರೀರೋಗಗಳನ್ನು ದೂರಮಾಡಿ, ಸ್ತ್ರೀಯರನ್ನು ಸಶಕ್ತರೂ ಸೌಂದರ್ಯವಂತರನ್ನಾಗಿ ಮಾಡುತ್ತದೆ.

ಒಮ್ಮೆ ಪರೀಕ್ಷೆ ನೋಡಿ.

ಬೆಲೆ ಬಾಟ್ಲ ೧ ಕ್ಕೆ ರೂಪಾಯಿ ೩—೦—೦

ಏಜಂಟರು:— ಇಂಪೀರಿಯಲ ಏಜನ್ಸಿ,

ಪ್ರಿನ್ಸೆಸ ಸ್ಟ್ರೀಟ, ಮುಂಬಯಿ ನಂಬರ ೨.

ಜಾಹೀರಾತು.

ಚಲೋ ಬಾಗಾಯತ ವ ಮನೆ ಕ್ರಯಕ್ಕೆ ಕೊಡುವದುಂಟು.

ಕಾನಡಾ ಜಿಲ್ಲಾ ಹೊನ್ನಾವರ ಶಹರ ಹತ್ತಿರ ಜನತ ಮಠದ ಸಮೀಪ ಮಧ್ಯ ಸ್ಥಳದಲ್ಲಿರುವ ಹೊನ್ನಾವರ ಕಸಬಾ ಸರ್ವೆ ನಂಬರ ೩೧೫ ವ ೩೧೬ ಪೋಟ ೧ ಗಳಲ್ಲಿರುವ ಮಾಲ್ಕಿ ಹಕ್ಕಿನ ಎಕ್ರೆ ೦-೧೨-೮ ಸರಕಾರ ತೀರ್ವೆ ಆಕಾರ ರೂಪಾಯಿ ೨-೫-೦ ರ ಬಾಗಾಯತ ಸ್ಥಳ ವ ಸರ್ವೆ ನಂಬರ ೩೧೬ ಪೋಟ ೧ನೇ ದಲ್ಲಿರುವ ಅಡಮಾಳ ... ಗಳ ಮಾಳಿಗೆ ವ ಮೇಲ್ಮಚ್ಚರಿಗೆ ಕಲ್ಲ ಕೋಟೆ ಹಂಚಿನ ಛಾವಣಿ ಮನೆ ಮುನಸಿಪಲ್ ತೆರಿಗೆ ರೂಪಾಯಿ ೩-೧೨-೦ರದು ಕಸಬಾ ಕ್ರಯಕ್ಕೆ ಕೊಡುವದುಂಟು. ಕ್ರಯಕ್ಕೆ ಅಪೇಕ್ಷಿಸುವವರು ಇದೇ ಎಪ್ರಿಲ್ ೩೦ನೇ ತಾರೀಖಿನ ಒಳಗೆ ಕೆಳಗೆ ಸಹಿ ಮಾಡುವವರಿಗೆ ಸಾಕ್ಷಾತ ಭೆಟ್ಟಿಯಾಗಿ ಯಾ ಪತ್ರದ್ವಾರಾ ಕ್ರಯದ ಶರ್ತಗಳನ್ನು ನಿರ್ಣಯಿಸಿ ಕ್ರಯಕ್ಕೆ ಪಡಕೊಳ್ಳಬಹುದು.

ಹೊನ್ನಾವರ ತಾ. ೯-೪-೩೬ } **ಶಿವರಾವ ರಾಮರಾವ ಮುರ್ಡೇಶ್ವರ,**

ವಕೀಲ ಹೊನ್ನಾವರ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ ಬೀ ಯವರ

ಸುಗಂಧ ನಸ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳ, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇರ್ಪಟ್ಟ ರೋಗಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡುತ್ತಿದೆ. ಮೂರು ಚಿಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾರೆವು.

ಬುದ್ಡಿ ಒಂದಕ್ಕೆ ಕ್ರಯ ರೂ. ೦-೪-೦, ಪ್ಯಾ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ಪ್ಯಾ ಪಿ. ೦-೮-೦.

ದಯಮಾಡಿ ನಿಮ್ಮ ಹೆಸರನ್ನು, ಅಡ್ರೆಸನ್ನು ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ:— ಗುರುಬಸವ ಅಂಡ್ ಕಂಪನಿ ಶಿವಿ ಟೆಡ್

ಪೋ. ಬಾ. ೫೧೦, ಮದರಾಸ.

ನಮ್ಮ ಪ್ರೆಸ್ಸಿನಲಿ

ಗೇಣಿ ಚಾಕರಿ ನಾಮೆಯ ಫಾರ್ಮುಗಳು ತಯಾರಿವೆ

ವಕಾಲತ, ಅಮಲಜಾರಿ ಮೊದಲಾದ ಕೋರ್ಟ ವ್ಯವಹಾರದ ಹಾಗೂ ಕಸ್ಟಮ್ ಖಾತೆಯ ಫಾರ್ಮುಗಳು ಅಗ್ಗವಾಗಿ ಸಿಗುತ್ತವೆ

ಮೆನೇಜರ,
ಸ್ಟಾರ್ ಆಫ್ ಕೆನರಾ ಪ್ರೆಸ್, ಕುಮಟಾ

ಪ್ರಯಾಣಿಕರ ಅನುಕೂಲತೆ ಬಗ್ಗೆ ಡೇಲಿ ಮೊಟರ ಸರ್ವಿಸ.



ಕುಮಟೆಯಿಂದ— ಹೊನ್ನಾವರಕ್ಕೆ ಭಟ್ಕಳಕ್ಕೆ ಬೈಂದೂರಕ್ಕೆ

ಕುಮಟೆಯಿಂದ— ಸಿರ್ಸಿಗೆ ಹುಬ್ಬಳ್ಳಿಗೆ ಹಾವೇರಿಗೆ

ಕುಮಟೆಯಿಂದ— ಅಂಕೋಲೆಗೆ ಕಾರವಾರಕ್ಕೆ, ಮುಂತಾದ ಕಡೆ ಹೋಗುವ ಮೋಟಾರಿನ ಟಿಕೀಟುಗಳು ನಮ್ಮಲ್ಲಿ ಪ್ರತಿ ನಿತ್ಯವೂ ಸಿಗುವವು

ಬಿ. ದಾಸ,
ಏಜಂಟ ಕುಮಟಾ.

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧ ರಾಗದ ಪೆಟ್ಟಿಗೆ ಕಿಂ ೩೦, ೪೦ ೬ ೭೫, ೧೦೦
೨ [illegible] ಪೆಟ್ಟಿಗೆ ಕಿ ೬೫ ೭೫ ೧೨ , ೧೪
೩ ತಬಲೆ ಜೋಡಿ ಕಿಂ ೧೬ ೧೮ ೨೦ [illegible]
೪ ಹಾರ್ಮೋನಿಯಮ ಗೈಡ [illegible] ಕಿ ೧॥
ತಬಲೆ ಗೈಡ ಕಿಂ ೧೨ ೮

ವಿಶೇಷ ಮಾಹಿತಿಗೆ ನಮ್ಮ ಮುದ್ರಿತ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು

ಪತ್ತೆ - ಗೋಪಾಳ ಸಖಾರಾಮ ಮತ್ತು ಕಂಪನಿ, ವಿಠ್ಠಲವಾಡಿ ಎದುರಿಗೆ
೩೬೩ ಕಾಳಬಾದೇವಿ, ಮುಂಬಯಿ

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ



ಕಳೆದ ೪-೫ ವರ್ಷಗಳಿಂದ ನಾವು ಶಿವಮೊಗ್ಗಾ-ತೀರ್ಥಹಳ್ಳಿ-ಆಗುಂಬೆ, ಶಿವಮೊಗ್ಗಾ-ಸಾಗರ-ತಾಳಗುಪ್ಪೆ ಶಿವಮೊಗ್ಗಾ-ಹರಿಹರ-ದುಗ್ಗಾವತಿ, ಶಿವಮೊಗ್ಗಾ-ಕಳೂರಕಟ್ಟೆ, ಸಾಗರ-ಸೊರಬ-ಶಿರಾಳಕೊಪ್ಪ ಸಾಗರ-ತೀರ್ಥಹಳ್ಳಿ ಸಾಗರ-ಕಳೂರಕಟ್ಟೆ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ ಸರ್ವಿಸನ್ನು ನಡೆಸುತ್ತಿದ್ದದಲ್ಲದೆ ದಕ್ಷಿಣ ಕನ್ನಡ ಜಿಲ್ಹೆಯ ಕಾರ್ಕಳ, ಉಡುಪಿ, ಕುಂದಾಪುರ, ಮಂಗಳೂರ ಹಾಗು ಬೆಳ್ತಂಗಡಿ ಈ ಕಡೆಗೆ "ಕಾರ್ಕಳ ಮೋಟರ ಸರ್ವಿಸಿನ" ವಿದ್ಯಮಾನವೂ, ಬಳ್ಳಾರಿ ಜಿಲ್ಹೆಯ ಹರಪನಹಳ್ಳಿಗೆ ಲಕ್ಷ್ಮೀ ಮೋಟರ ಸರ್ವಿಸಿನ ವಿದ್ಯಮಾನವೂ ಪ್ರಯಾಣಿಕರ ಎಲ್ಲ ಸೌಕರ್ಯಗಳ ವ್ಯವಸ್ಥೆ ಮಾಡಿರುತ್ತೇವೆ

ಉತ್ತರ ಕನ್ನಡ ಜಿಲ್ಹೆಯ ಪ್ರಯಾಣಿಕರು ಜೋಗ (Gersoppa Falls), ಶಿವಮೊಗ್ಗಾ ಸಾಗರ ಹರಿಹರ ಮತ್ತು ಮೇಲ್ಕಂಡ ಸ್ಥಳಗಳಿಗೆ ಪ್ರಯಾಣ ಬೆಳೆಸಲು ಅನುಕೂಲವಾಗಬೇಕೆಂದು ಶಿವಮೊಗ್ಗಾ ಸಾಗರ ಜೋಗ ಸಿದ್ದಾಪುರ, ಶಿರ್ಸಿ ಕುಮಟಾ ಈ ಲೈನಿನಲ್ಲಿ ಮೋಟರ ಸರ್ವಿಸ ಪ್ರಾರಂಭ ಮಾಡಿರುತ್ತೇವೆ

ಕಾಲಕ್ರಮಗಳು.

ಕುಮಟೆಯಿಂದ ಹೊರಡುವದು —	ಬೆಳಿಗ್ಗಿನ ೭ ಘಂಟೆಗೆ
ಶಿರ್ಸಿಗೆ ಸೇರುವದು	„ ೧೦ „
ಶಿರ್ಸಿಯಿಂದ ಬಿಟ್ಟು ಶಿವಮೊಗ್ಗಾ ಕಡೆಗೆ—	ಮಧ್ಯಾನ್ಹ ೧ „
ಸಾಗರಕ್ಕೆ ಸೇರುವದು (ಸಿದ್ದಾಪುರ ಮಾರ್ಗವಾಗಿ)—	ಸಾಯಂಕಾಲ ೬ ,
ಸಾಗರದಿಂದ ಶಿರ್ಸಿ ಕಡೆ ಹೊರಡುವದು —	ಬೆಳಿಗ್ಗಿನ ೬ ,
ಸಿದ್ದಾಪುರ ಮಾರ್ಗವಾಗಿ ಶಿರ್ಸಿಗೆ ಸೇರುವದು—	„ ೧೧
ಶಿರ್ಸಿಯಿಂದ ಕುಮಟೆಗೆ ಹೊರಡುವದು—	ಮಧ್ಯಾನ್ಹ ೨ ,
ಕುಮಟೆಗೆ ಸೇರುವದು—	ಸಾಯಂಕಾಲ ೫ ,

N. B. ಈ ವೇಳಿನ ಲೈನಗಳ ವಿನಹ ಶಿರಸಿಯಿಂದ ಹುಬ್ಬಳ್ಳಿಗೆ ಪ್ರತ್ಯೇಕ ಒಂದು ಸರ್ವಿಸ ಪ್ರಾರಂಭಿಸುವ ಯೋಚನೆ ನಡೆಸಿರುತ್ತೇವೆ. ಸರ್ವರೂ ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ

SHIMOGA
11—1924

M. MANJAPPA.
PROPRIETOR

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು ವನೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ ಈ ಮಧುವಿನ ಸೇವನದಿಂದ ವಾತ ಪಿತ್ತ ಕಫ ಈ ತ್ರಿದೋಷಗಳ ವಿಕೃತಿಯಿಂದಾದ ಬೇನೆಯು ಹೋಗುವದು ೬೦-೭೦ ವರ್ಷದ ಮುದುಕರ ಕಾಮವಿಕಾರವು ಕೂಡ ತರುಣರಂತೆ ವೃದ್ಧಿಂಗತವಾಗುವದು (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ [illegible] ಪುಂಸತ್ವವು ಇಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು — ಪರಮಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರೋಗವಾಗುವದು ಮೂರೇ ದಿವಸದಲ್ಲಿ ಗುಣಬರುವದು ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು ದಿವಸದಲ್ಲಿ ೫ ತಾಸಿನ [illegible] ಊಟವಾದಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು ಶೌಚ ಸಾಫ ಆಗುವದು ಪ್ರಮೇಹ [illegible] ಎಷ್ಟೋ ದಿವಸದ ಹಳೇದಿದ್ದರೂ ಒಂದು ವಾರದಲ್ಲಿ ನಾಶವಾಗುವದು ಈ ಔಷಧಕ್ಕೆ ಪಥ್ಯವಿಲ್ಲ ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ ಹೊಸ ಬೇನೆ ಇದ್ದರೆ ೧೦ ದಿವಸ ನಡೆಯುವ ಒಂದು ಬಾಟಲಿಯಿಂದ ಗುಣಬರುವದು ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತ್ತು ೧॥ ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೩—೮—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು ಅಂದರೆ ಟಪಾಲ ಖರ್ಚು ಹೆಚ್ಚು ಬೀಳುವದಿಲ್ಲ ಆರು ಬಾಟಲಿಗಳ ಕಿಮ್ಮತ್ತು ೧೩—೦—೦ ಮತ್ತು ೧ ಬಾಟಲಿ ಪುಕ್ಕಟೆ ಕೊಡುವದು ಟಪಾಲ ಖರ್ಚು ಬೇರೆ ಬೀಳುವದು ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧—೮—೦ ೩ ಬಾಟ್ಲಿಗೆ ೩—೦—೦ ಆರಕ್ಕೆ ೧೨—೦—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸು ಪೋ. ನಿಪ್ಪಾಣಿ ಜಿ. ಬೆಳಗಾಂವ

ವಿವಿಧ ಸಂಗ್ರಹ.

ಕೈರಾಟೆಯ ಪರಮಾನಂದ !

ಮಹಾತ್ಮರು ಕಾಠೇವಾಡದ ಸಂಸ್ಥಾನಗಳಲ್ಲಿ ಮೂರಾವರ್ತಿ ಪ್ರಯಾಣ ಬೆಳೆಸಿದರು. ಮೂರನೆ ಸರ್ತಿ ಪ್ರಯಾಣದಲ್ಲಿ ಮಹಾತ್ಮರು ಭಾವನಗರದ ಪ್ರಾಂತ ಗ್ರಾಮಕ್ಕೆ ಹೋಗಿದ್ದರು. ಶ್ರೀ॥ ಶಿವಜಿಭಾಯಿಯವರು ಮುಂಬಯಿಯಲ್ಲಿ ದೊಡ್ಡ ವರ್ತಕರಿದ್ದರು. ಅಸಹಯೋಗದ ಮೂಲಕ ಅವರು ತಮ್ಮ ವ್ಯಾಪಾರವನ್ನು ನಿಲ್ಲಿಸಿ, ಈ ಗ್ರಾಮದಲ್ಲಿ ಕೈನೂಲು ಹಾಗು ಕೈಮಗ್ಗಗಳ ಕಾರಖಾನೆಯೊಂದನ್ನು ನಿರ್ಮಿಸಿರುವರು. ಮಹಾತ್ಮರು ಈ ಸಂಸ್ಥೆಯನ್ನು ಸಂದರ್ಶಿಸಿದರು. ರಾತ್ರಿ ೧೧ ಘಂಟೆಗೆ ನಾಗರಿಕರ ಸಭೆ ನೆರೆದರು. ಮಹಾತ್ಮರು ಅರ್ಧ ತಾಸು ಭಾಷಣ ಮಾಡಿದರು. ಸರ್ ಪ್ರಭಾಶಂಕರ ಪಟ್ಟಣಿಯವರೂ ಸಭೆಗೆ ಚಿತ್ತೈಸಿದ್ದರು. ಸಭಿಕರು ಸರ್ ಪ್ರಭಾಶಂಕರರವರಿಗೆ ಮಾತಾಡಲು ಆಗ್ರಹಮಾಡಿದರು. ಅವರು ನುಡಿದದ್ದೆನಂದರೆ —"ಕೈನೂಲು ತೆಗೆಯುವ ಆನಂದವನ್ನು ನಾನು ಹೇಳಬೇಕೆಂದು ನಿಮ್ಮ ಇಚ್ಛೆಯಿದೆಯಲ್ಲವೇ, ಕೈನೂಲು ತೆಗೆಯುವ ಆನಂದವು ಅದೇ ನಮೂನೆಯಲ್ಲಿ ನೀವು ಹೊಲಗಳಲ್ಲಿ ದುಡಿಯುತ್ತೀರಿ, ವೈಶಾಖ ಮಾಸದ ಬಿಸಿಲು ತಾಪವನ್ನು ಸಹಿಸುತ್ತೀರಿ. ಬೆವರು ಮಣ್ಣನ್ನು ಹಿಡಿದು ಮಿದುವು ದಣಿದಲು ಮೈಗರೆದ ಎತ್ತುಗಳಿಗೆ ಹೊಡೆಯುತ್ತೀರಿ ಇದು ಆನಂದವೇ? ಆದರೆ ಕಣದೊಳಗಿಂದ ಪೈರನ್ನು ಮನೆಗೆ ತಂದು ಹೆಂಡರು ಮಕ್ಕಳೊಡನೆ ಕೂತುಕೊಂಡಾಗ ನಿಮಗಾದ ಆನಂದವು ಉಂಟಾಗುತ್ತದೆ. ನೂಲುವವರು ಕೈರಾಟೆಯೊಡನೆ ಇದೇ ಕಷ್ಟವನ್ನು ನಾನು ಅನುಭವಿಸಬೇಕಾಯಿತು. ಈಗ ಅದರಿಂದುಂಟಾಗುವ ಆನಂದವನ್ನು ನಾನು ಬಣ್ಣಿಸಲಾರೆ. ಕೈರಾಟೆಯನ್ನು ಹಾಸಿಗೆ ಎಳೆ ನಾನಿಡುತ್ತೇನೆ ಮತ್ತು ೩ ತಿಂಗಳ ಮುಂಚೆ ಕೈಕೊಂಡ ಪ್ರತಿಜ್ಞೆಯಂತೆ ಪ್ರಾತಃ ಭೋಜನದ ಮೊದಲು ಅದನ್ನು ತಿರುಹುತ್ತೇನೆ. ಇಷ್ಟೇ ಅಲ್ಲ, ಮಧ್ಯಾಹ್ನದ ಮೂಲಕ ಸರಕಾರಿ ಕೆಲಸದ ಮೂಲಕ ಚಿತ್ತಭ್ರಮಣವಾಗಿ ನಿದ್ದೆ ಹತ್ತದಿರುವಾಗ ನಾನು ಹಾಸಿಗೆಯಿಂದೆದ್ದು ಕೈರಾಟೆಯನ್ನು ತಿರುವಿ ಅದರ ಝೇಂಕಾರ ಗಾನದಿಂದ ಚಿತ್ತಶಾಂತಿಯನ್ನು ಪಡೆದುಕೊಳ್ಳುತ್ತೇನೆ. ಅನೇಕ ವರ್ಷ ಪರದೇಶ ವಾಸ ಮಾಡಿದ್ದರಿಂದ ಶಾಸ್ತ್ರಗಳನ್ನು ಹಾಡುತ್ತ ಕೈರಾಟೆಯನ್ನು ನಾನು ತಿರುವುವೆನು. ಆದರೆ ಅದರಿಂದ ದಣಿವಾಗದೆ ನನ್ನ ಮನಸ್ಸು ಸಮಾಧಾನವಾಗಿ ನನಗೆ ಸ್ಫುರಿಸಿತು. 'ತಿನ್ನಲಿಕ್ಕಿದ್ದವರ ಮನಸ್ಸು ಈ ಕಷ್ಟ ಕೈಕೊಳ್ಳಲಿಕ್ಕೆ?' ಎಂದು ಅನೇಕರ ಪ್ರಶ್ನೆ ಸ್ಥಾರೆ. ಆದರೆ ಅವರೂ ನೂಲುವದು ಅತ್ಯವಶ್ಯವೆಂದು ನನ್ನ ಹೇಳಿಕೆ ಇದೆ. ಅವರಿಗಾದರೂ ದಣುವಾರಿಸಲಿಕ್ಕಾಗಲಿ, ಮನೋರಂಜನೆಕ್ಕಾಗಲೀ ಏನಾದರೊಂದು ಸಾಧನ ಬೇಕಲ್ಲವೇ? ಕೈರಾಟೆಯಷ್ಟು ಶ್ರೇಷ್ಠವಾದ ಸಾಧನವನ್ನು ನಾನರಿಯೆ. ಗಾಂಧಿಜಿಯವರು ಹೋರಾಟದಲ್ಲಿ ಕೈರಾಟೆಯ ವಿಷಯ ಏನಾದರೊಂದು ಹೊಸ ಲಕ್ಷಣವನ್ನರುಹುತ್ತಾರೆ. ಆದರೆ ನಾನು ಹೇಳುವದಿಷ್ಟೇ. ಬಡ ಎತ್ತುಗಳನ್ನು ದುಡಿಸಿ ಹೊಲ ಸಾಗುವಳಿ, ಕಷ್ಟದಿಂದ ಬೆಳೆಸಿದ ಹತ್ತಿಯನ್ನು ಪರದೇಶಗಳಿಗೆ ರಫ್ತ ಮಾಡುವ ದಲಾಲರಿಗೆ ಮಾರಿದರೆ, ಅದರಷ್ಟು ವ್ಯಸನಪ್ರದ ಸಂಗತಿಯು ಇನ್ನೊಂದಿಲ್ಲ. ನೀವು ಬೆಳೆಸಿದ ಹತ್ತಿಯನ್ನು ನೀವೆ ನೂಲಬೇಕು. ಇದರಿಂದ ನಿಮ್ಮ ಗಳಿಕೆಯು ಮಿಗಿಲಾಗುವದು. ಪ್ರಪಂಚಕ್ಕೆ ಬೇಕಾಗುವ ಸಾಮಗ್ರಿಗಳು ನಿಮ್ಮಿಂದಲೇ ಪ್ರಾಪ್ತವಾಗುವವು. ಉಪನ್ಯಾಸ ಕೊಡಬೇಕೆಂದು ಮಧ್ಯರಾತ್ರಿಯಲ್ಲಿ ನಾನು ಮಾತಾಡುವದಿಲ್ಲ. ಕೈರಾಟೆಯ ಆನಂದವನ್ನು ನಾನು ಅರಿತವನಿದ್ದೇನೆ. ನನ್ನೊಡನೆ ನಾನು ಅದನ್ನು ವಿಲಾಯತಿಗೆ ಒಯ್ದು ಇಲ್ಲಿಯಂತೆಯೇ ಅಲ್ಲಿ ನೂಲುವೆನು. ನನ್ನ ಆವೇಶವು ವರರಿಗೆ ಹ್ಯಾಗೆ ಉತ್ತೇಜಿಸಿರುವದೆಂದು ನಿಮಗೆ ಗೊತ್ತಿಲ್ಲ. ಗಾಂಧಿಜಿಯವರ ಸಮಕ್ಷ ನಾನು ಪ್ರತಿಜ್ಞೆ ಕೈಕೊಳ್ಳುವಾಗ ನನ್ನ ಹೆಂಡತಿಯು ವಿಸ್ಮಯಮಾನ ಕೊಳ್ಳಬೇಕೆಂದು ನನಗನಿಸಿತ್ತು. ಆದರೆ ಈಗ ನಾನು ತಡೆದೆನು ಮುಂದೇನಾಯಿತು



ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. ರಿಜಿಸ್ಟರ್ಡ

ನುಣುಪಾದ ಗುಂಗುರು ಗುಂಗುರಾಗಿರುವ, ನೀಲಿಯಿಂದ 'ನಿಬಿಡವಾದ ಕೇಶ'ವನ್ನು ಯಾವ ನಾರಿಯು ತಾನೇ ಬಯಸಲೊಲ್ಲಳು? ಅಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ.

ಕಾಮಿನಿಯಾ ಆಯಿಲ್ ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿರುವದೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ತೊಡೆದುಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ, ಅವು ಹುಲುಸಾಗಿ ಬೆಳೆದು ನಮ್ರವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಕಳೆಯುವದು ಹಾಳುಮಾಡಿಕೊಳ್ಳುವದಕ್ಕಿಂತ ಒಂದೇ ಒಂದು ಬಾರಿ ಈ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಹಲವಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರೆತಿವೆ.

ಕ್ರಯ — ಸೀಸೆಗೆ ರೂಪಾಯಿ 1 0 0, ಸೀಸೆ 3ಕ್ಕೆ ರೂಪಾಯಿ 2 10-0, ವಿ.ಪಿ. ಖರ್ಚು 0 14 0

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವೂ ಚನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಪಡಿಸಿದೆ. ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವೆ. ಒಂದೇ ಒಂದು ಸಲ ನಿಮ್ಮ ಕೈ ಪಟ್ಟಿಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿನಂತಾಗುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರದ ಗಂಧವು ಎಲ್ಲವುಗಳನ್ನು ಮೀರಿ ಮನುಷ್ಯನನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆ 1 ಕ್ಕೆ 0-8-0, 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0 12-0, ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0 0 ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0-12 0.

Address - **The Anglo Indian Drug & Chemical Co,**
16, Market, **BOMBAY, 2.**

ಕೇಳಿರಿ! ೩-೪ ದಿವಸಗಳಲ್ಲಿ ಕ್ಯರಾಟೆಯ ಮೇಲೆ ನನ್ನ ಹೆಂಡತಿಯು ಅಭ್ಯಾಸಮಾಡುತ್ತಿದ್ದಳು. ಬಳಿಯಲ್ಲಿ ಪ್ರತ್ಯಕ್ಷ ಸಹಾಯಮಾಡಲು ಕೆಲ ಗೆಳತಿಯರೂ ಇದ್ದರು. ಈಗ ಅವಳು ಸುಮಾರು ೪೦ ಮಂದಿಗಳ ಒಂದು ವರ್ಗವನ್ನೇ ನಿರ್ಮಿಸಿರುವಳು. ಅತ್ತೆಯ ಅನುಗ್ರಹ ಸಂಪಾದನೆಗಾಗಿ ಸೊಸೆಯಂದಿರೂ ನೂಲುತ್ತಿರುವರು." ಕ್ಯರಾಟೆಯನ್ನು ತಿರುವಿ, ಆನಂದವನ್ನು ಅನುಭವಿಸಿರಿ!

⁂

ಮಹಾತ್ಮರ ಸ್ವಾವಲಂಬನದ ಮಾತು.

ಮಹಾತ್ಮರು ಕಾಠೇವಾಡದೊಳಗಿನ ಲಾಠಿ ಪಟ್ಟಣಕ್ಕೂ ಹೋಗಿದ್ದರು. ಅಸ್ಪೃಶ್ಯ ವರ್ಗದ ರಮಜಿಭಾಯಿಯವರ ಮೇಲಿನ ಮಹಾತ್ಮರ ಪ್ರೇಮ ವಿಶೇಷ. ಅದರಿಂದ ಮಹಾತ್ಮರು ಅಲ್ಲಿ ಅನುಗ್ರಹಿಸಿದ್ದರು. ರಮಜಿಭಾಯಿಯವರು ವಿಶೇಷ ಕಾರ್ಯವನ್ನು ಮಾಡಿರುವರು. ಕೈನೂಲನ್ನು ನೆಯುವದರಲ್ಲಿ ನೇಯಲು ಅಲ್ಲಿ ಯಾರೂ ಒಪ್ಪಲಿಲ್ಲ. ಆಗ ರಮಜಿಭಾಯಿಯವರು ಮುಂದಾಗಿ ಕೈನೂಲನ್ನು ನೆಯ್ದು ರಾಷ್ಟ್ರಸೇವೆಯನ್ನು ಜರುಗಿಸಿದರು. ಅವರೆ, ಇಲ್ಲಿ ಮಹಾತ್ಮರು ಚಿತ್ತೈಸಿದಾಗ ಸಂಗ್ರಹಿಸಿದ ಹಣ ಕೂಡ ಅಲ್ಲಿಯ ಶಾಲೆಯೊಳಗೆ. ಲಾಠಿ ಗ್ರಾಮಸ್ಥರು ತಮ್ಮ ಒಂದು ಶಾಲೆಯನ್ನು ನಿರ್ಮಿಸಿಕೊಂಡಿರುವರು. ಅಲ್ಲಿಯ ಶಾಲೆಯು ಚಲೋ ರೀತಿಯಿಂದ ನಡೆದಿದೆ. ಮಹಾತ್ಮರು ಅಲ್ಲಿ ಅನುಗ್ರಹಿಸಿದರು. ಶಾಲಾಶಿಕ್ಷಕರಿಗೂ, ವಿದ್ಯಾರ್ಥಿಗಳಿಗೂ ಮಹಾತ್ಮರನ್ನು ಅತ್ಯಾನಂದದಿಂದ ಬರಮಾಡಿಕೊಂಡರು. ಗ್ರಾಮಸ್ಥರು ಮಹಾತ್ಮರಿಗೆ ಶಾಲೆಯ ವಿಷಯ ಮಾತಾಡಿ ಹೇಳಿ, ಗ್ರಾಮದಲ್ಲಿ ಒಂದು ದೇವಾಲಯವು ಬೇಕೆಂತಲೂ, ಅದನ್ನು ಮಹಾತ್ಮರು ಕಟ್ಟಿಸಿಕೊಡಬೇಕೆಂತಲೂ ಪ್ರಾರ್ಥಿಸಿಕೊಂಡರು. ಮಹಾತ್ಮರು ಉತ್ತರವನ್ನೀಯುವಾಗ, ರಮಜಿಭಾಯಿಯವರ ದೇಶಸೇವೆಯ ವರ್ಣನೆ ಮಾಡಿ, ಅವರಂತೆ ದೇಶಸೇವೆಯನ್ನು ಜರುಗಿಸಿ ಕೃತಾರ್ಥರಾಗಲು ಬೋಧಿಸಿದರು. ಬಳಿಕ, ಮಹಾತ್ಮರು ದೇವಾಲಯದ ವಿಷಯ ನುಡಿದದ್ದೇನಂದರೆ:— "ಈ ವಿಷಯ ನಿಮಗೇನೂ ನಾನು ಅಕೆ ಹೇಳಲಾರೆನು. ನಿಮಗಾಗಿ ಪ್ರತ್ಯೇಕ ಮಂದಿರವು ಮಾಡುವ ಮನಸ್ಸಿದ್ದರೆ, ಅದನ್ನು ನಾನು ಖಾತ್ರಿಕವಾಗಿ ಮಾಡಬಲ್ಲೆ. ಆದರೆ, ನೀವೇ ಯತ್ನಮಾಡಬೇಕು ಮತ್ತು ಹಣ ಜಮಾಯಿಸಿಕೊಳ್ಳಬೇಕು. ಇದೊಂದು ಧಾರ್ಮಿಕ ಅವಶ್ಯಕತೆಯು. ದೇವಾಲಯವು ಯೋಗ್ಯವೆಂದು ಅಂತಃಕರಣಪೂರ್ವಕ ಇಚ್ಛೆ ಇರುವವರಾಗಿ ಸಿದ್ಧಗೊಳಿಸಬೇಕಾದರೆ, ಅದನ್ನು ಪೂರೈಸಿಕೊಳ್ಳಲಿಕ್ಕೆ ಸಾಲುವಷ್ಟು ಹಣವನ್ನು ನೀವೇ ಹುಟ್ಟಿಸಬೇಕು. ನೀವು ಯತ್ನ ಮಾಡದೆ, ಇಲ್ಲಿ ನಾನೇ ದೇವಾಲಯವನ್ನು ಕಟ್ಟಿದರೆ, ಅದು ನಿಷ್ಪ್ರಯೋಜಕವಾಗುವದೆಂದು ನೀವು ಖಚಿತ ತಿಳಿಯಿರಿ. ಅದನ್ನು ನೀವು ಜೂಗಾರು ಮುಂತಾದ್ದಕ್ಕಾಗಲಿ, ಮೋಜುಮಾನಿಗಳಿಗಾಗಲಿ ಉಪಯೋಗಿಸುವಿರಿ. ನಿಮ್ಮ ಕಷ್ಟದಿಂದ ಸಂಪಾದಿಸಿದ ಹಣವನ್ನು ಅರ್ಪಿಸಿರಿ; ರಮಜಿಭಾಯಿಯವರಿಗೆ ಹಣ ಕೊಡುತ್ತೇವಿರಿ; ಈ ಕಾರ್ಯದ ನಾಯಕರಾಗಿ ಅವರಿಗೆ ನೇಮಿಸಿರಿ; ಅಂದರೆ, ನಾನು ಸಹಾಯವನ್ನೀಯಲು ವಚನ ಕೊಡುತ್ತೇನೆ. ನಿಮ್ಮ ತಕ್ಕ ರಕಮನ್ನು ಕೂಡಿಸಿರಿ; ಮತ್ತು ಅಷ್ಟೇ ರಕಮನ್ನು ಅರ್ಪಿಸಲು ನಿಮ್ಮ ಸಂಸ್ಥಾನಿಕರಿಗೆ ಬಿನ್ನೈಸಿರಿ; ಈ ಎರಡೂ ರಕಮುಗಳಷ್ಟು ರಕಮನ್ನು ನಾನು ನಿಮಗೆ ಸಂಪಾದಿಸಿಕೊಡುತ್ತೇನೆ. ಹೀಗೆ ಹುಟ್ಟುಮಾಡಿದ ನಿಧಿಯಿಂದ ಕಟ್ಟಿದ ದೇವಾಲಯವು ಮೂರು ಟ್ರಸ್ಟಿಗಳ ವಶದಲ್ಲಿ ಕೊಡಲ್ಪಡುವದು. ಒಬ್ಬರನ್ನು ನಿಮ್ಮ ಸಂಸ್ಥಾನಿಕರು ನೇಮಿಸುವರು; ಮತ್ತೊಬ್ಬರನ್ನು ನಾನು ನೇಮಿಸುವೆನು. ಉಳಿದವರನ್ನು ನೀವು ನೇಮಿಸಬೇಕು. ದೇವರ ಅರ್ಚಕರು ಧರ್ಮನಿಷ್ಠ, ಕರ್ಮನಿಷ್ಠ ವೈಷ್ಣವರಿರಬೇಕು." ಸಭೆಯಲ್ಲಿ ಮಹಾತ್ಮರಿಗೆ ೮ ರೂಪಾಯಿಗಳ ಕಾಣಿಕೆಯಾಯಿತು. ಅದರಿಂದ ಮಹಾತ್ಮರು ಈ ನಿಧಿಯ ಪ್ರಾಣಪ್ರತಿಷ್ಠೆ ಮಾಡಿ ಶೀಘ್ರವೇ ನಿಧಿ ಸಂಗ್ರಹಿಸಲು ಸಭಿಕರಿಗೆ ಆಗ್ರಹಮಾಡಿದರು. ಎಲ್ಲರೂ ಆನಂದದಿಂದ ಮಹಾತ್ಮರ ಸೂಚನೆಯನ್ನು ಮನ್ನಿಸಿದರು. ಮಹಾತ್ಮರು ಸಭೆಯನ್ನು ವಿಸರ್ಜಿಸಿ ಎದ್ದು ಹೋಗುವಷ್ಟರಲ್ಲಿ, ಚಿಕ್ಕ ಹುಡುಗಿಯೊಬ್ಬಳು ಮಹಾತ್ಮರೆಡೆಗೆ ಹೋದಳು. "ಯಾರ ಮಗಳಿದು!" ಎಂದು ಮಹಾತ್ಮರು ಪ್ರಶ್ನಿಸಿ, ಅವಳ ಕೊರಳಲ್ಲಿದ್ದ ಭಾರವಾದ ಬೆಳ್ಳಿಯ ಆಭರಣವನ್ನು ಕೈಯಿಂದ ಎತ್ತಹತ್ತಿದರು. ಅವಳು ಮುಖ್ಯಾಧ್ಯಾಪಕರ ಹುಡುಗಿಯು. "ಇದೊಂದು ಅಂದಗೇಡು ಕಾಣುತ್ತಿಲ್ಲವೇ? ಇದನ್ನು ನಾನು ತೆಗೆಯಲೇನು?" ಎಂದು ಮಹಾತ್ಮರು ಉದ್ಗರಿಸಿದ್ದಕ್ಕೆ "ಖಂಡಿತವಾಗಿ" ಎಂದು ನಗುಮೋರೆಯಿಂದ ಹುಡುಗಿಯು ಉತ್ತರವನ್ನಿತ್ತಳು. ಮಹಾತ್ಮರು ಅದನ್ನು ತೆಗೆಯಲಾರಂಭಿಸಿದರು. ಹುಡುಗಿಯ ತಂದೆಯವರು ಅದನ್ನು ತೆಗೆದುಕೊಟ್ಟರು; ಹುಡುಗಿಯು ಮೂಗುತಿಯನ್ನು ತೆಗೆದುಕೊಟ್ಟಳು. ಮಹಾತ್ಮರು ಇದು ದೇವಾಲಯದ ನಿಧಿಗೆ ಸ್ತ್ರೀ ಜನಾಂಗದವರ ಕಾಣಿಕೆಯೆಂದು ಘೋಷಿಸಿದರು. ಆಗ ಚಪ್ಪಾಳೆಯ ಘೋಷದಿಂದ ಸಭಿಕರು ಆನಂದವನ್ನು ವ್ಯಕ್ತಪಡಿಸಿದರು. ಚಿಕ್ಕ ಹುಡುಗಿಯು ತೆಗೆದು ಮಹಾತ್ಮರ ಕೈಗೆ ಇತ್ತಳು, ತನ್ನ ಧನವನ್ನೂ ಮಹಾತ್ಮರಿಗೆ ಅರ್ಪಿಸಿ, ವಿನಯದಿಂದ ಹಾಗೆ ನಿಂತಳು. ಮುದ್ದುಗಳಾದ ಇಂಥ ಹುಡುಗಿಯರ ಪವಿತ್ರ ಕಾಣಿಕೆಯಿಂದ ದೇವಾಲಯದ ನಿಧಿಯು ಪಾವನವಾಗಿದೆ. ಇದಕ್ಕಿಂತ ಪಾವನವಾದ ದ್ರವ್ಯವು ಈ ನಿಧಿಗೆ ದೊರೆಯಬಲ್ಲದೇನು?"

⁂

ಅಮೇರಿಕೆಯೊಳಗಿನ ತುಟ್ಟಿ!

ಅಮೇರಿಕೆಯಲ್ಲಿ ಕಸಬಿ ಬಡಿಗರು ದಿನಾ ೪೭ ರೂಪಾಯಿ ಗಳಿಸುತ್ತಾರೆ. ಏನೂ ಅರಿಯದಿದ್ದವರೂ ದಿನಾ ೧೫ ರೂಪಾಯಿ ಸಂಪಾದನೆ ಮಾಡಬಲ್ಲರು. ಖರ್ಚುವರೂ ಹಾಗೆ ಪ್ರಚಂಡವಿದೆ. ತೆಂಗಿನಕಾಯಿ ೧ಕ್ಕೆ ೭॥ ಆಣೆ; ಎಂಟು ದಿವಸಕ್ಕೊಮ್ಮೆ ತಲೆ ಕೂದಲು ಹೊಡಕೊಳ್ಳಲಿಕ್ಕೆ ಕನಿಷ್ಟ ೩ ರೂಪಾಯಿ. ಇತ್ತ ಹೆಂಗಸರೂ ಸೌಂದರ್ಯ ಬೆಳೆಸಿಕೊಳ್ಳುವರೆ ಕೂದಲು ಕೊಡಕೊಳ್ಳುತ್ತಿರುವರು! ನರವು ಮುಕ್ತಾ ಏರುವದು. ಕಾಫಿ ಕಪ್ಪ ೧ಕ್ಕೆ—೫ ಆಣೆ! ಒಂದು ಶರ್ಟು ಒಗೆದು ತರಲಿಕ್ಕೆ ಅಗಸರಿಗೆ ೮ ಆಣೆ ಕೊಡಬೇಕು! ನೆಲಗಳ್ಳೆ ಕಾಟು ಗುಳಿಗೆ, ದೊಡ್ಡ ಪೆಟ್ಟಿಗೆ, ಸಿಗರೇಟು, ಟಪಾಲ ಟಿಕೇಟು ಇವನ್ನೆಲ್ಲ ಆತ್ಮಚಲನೆಯ ಯಂತ್ರಗಳಿಂದ ಮಾರುತ್ತಾರೆ. ಹಣ ಹಾಕಿದ ಕೂಡಲೆ, ಪದಾರ್ಥಗಳು ಹೊರಬೀಳುತ್ತವೆ. ಈ ಮೌಜು ನೋಡುವದಕ್ಕಾಗಿಯೇ ಅನೇಕರು ಆ ಪದಾರ್ಥಗಳನ್ನು ಕೊಂಡುಕೊಳ್ಳುತ್ತಾರೆ: ೧೫ ವರ್ಷಗಳ ವರೆಗೆ ಪ್ರತಿಯೊಬ್ಬರು ಶಿಕ್ಷಣ ಪಡೆಯಲೇಬೇಕೆಂದು ಕಾಯಿದೆಯಿದೆ. ಬಡವರಿದ್ದರೆ ಅವರಿಗೆ ಪಾಟಿ-ಪುಸ್ತಕ-ಪಟ್ಟಿ ಮೊದಲಾದವುಗಳನ್ನು ಸರಕಾರವು ಪೂರೈಸುತ್ತದೆ. ರೋಗ ಬಿದ್ದು ಯಾವದೇ ಪ್ರಾಂತದಲ್ಲಿ ಕಷ್ಟ ಒದಗಿದರೆ, ಸರಕಾರವು ಶ್ರೀಮಂತರಿಂದ ಹಣವನ್ನು ಕಾಯಿದೆಯಂತೆ ವಸೂಲಮಾಡಿ, ಬಡವರಿಗೆ ಸಹಾಯ ಮಾಡುತ್ತದೆ. ಎಲ್ಲ ಸುಖದ ಸಾಧನಗಳ ಪೂರೈಕೆಯ ಸರ್ವ ತಯಾರಿಯು ಅಮೇರಿಕೆಯಲ್ಲಿ ಕಂಡು ಬರುತ್ತದೆ.

⁂

ಮುಪ್ಪಿನಮೇಲೆ ಮದ್ದು!

ಅಮೇರಿಕಾ ದೇಶದ ಶಿಕಾಗೋ ವಿಶ್ವವಿದ್ಯಾಲಯದ ಶರೀರ ಶಾಸ್ತ್ರ ಖಾತೆಯ ಪ್ರೊಫೆಸರರಾದ ಎ. ಜೆ. ಕಾರ್ಲಸನ್‌ರವರು ೩ ವರುಷಗಳಿಂದ ಮುಪ್ಪು ಪರಿಹರಿಸುವ ಉಪಾಯವನ್ನು ಪರಿಶೋಧಿಸಿ, ಉಪೋಷಣವೇ ಮುಪ್ಪಿನಮೇಲೆ ರಾಮಬಾಣ ಉಪಾಯವೆಂದು ಅವರು ಕಂಡುಹಿಡಿದಿರುವರು. ಒಂದು ಪಕ್ಷದ ವರೆಗೆ ಉಪವಾಸ ಮಾಡುವದು ಯೋಗ್ಯ ಉಪಾಯವೆಂದು ಇವರ ಹೇಳಿಕೆ. ಹೀಗೆ ಉಪವಾಸ ಮಾಡಿದರೆ, ದೇಹದ ಪುನರ್ಘಟನೆಯಾಗಿ ಉಪೋಷಣ ವ್ರತಸ್ಥನು ಪ್ರಸನ್ನಚಿತ್ತದಿಂದ ಕಾರ್ಯಾಸಕ್ತನಾಗುತ್ತಾನೆ ಮತ್ತು ನಗು ಮೋರೆಯಿಂದ ವಿಶ್ರಮಿಸುತ್ತಾನೆ. ಶರೀರ ಶಾಸ್ತ್ರದ ಪ್ರಯೋಗ ಶಾಲೆಯಲ್ಲಿ ಮೂವರು ದೀರ್ಘ ಉಪವಾಸದಿಂದ ಪುನರ್ಘಟಿತರಾದರೆಂದು ಕಂಡುಬಂತು. ಅವರು ಪುನಃ ಆಹಾರ ಗ್ರಹಣ ಮಾಡಲು ೧೫ ವರ್ಷದ ಎಳೆ ಪ್ರಾಯದವರು ಪಚನ ಮಾಡಿಕೊಳ್ಳುವಷ್ಟು ಅನ್ನವನ್ನು ಸೇವಿಸಹತ್ತಿದರು. ಅವರ ಹಸಿಬುರುಕೆಯು ೧೫ ವರ್ಷದ ಹುಡುಗರಂತೆ ತೋರುತ್ತಿತ್ತು. ಈ ಪ್ರಯೋಗದಿಂದ ಮತ್ತೊಂದು ಸಂಗತಿಯೂ ಸಿದ್ಧವಾಗಿದೆ, ಅನ್ನಗ್ರಹಣಮಾಡಹತ್ತಿದ ಬಳಿಕ, ಜಠರದೊಳಗಿನ ಪಚನ ರಸವು ವಿಶೇಷವಾಗಿ ಹಿಗ್ಗಾಗುತ್ತದೆ. ಡಾಕ್ಟರ ಕಾರ್ಲಸನ್‌ರವರು ಸ್ವತಃ ಉಪವಾಸ ಮಾಡಿನೋಡಿದರು. ದೀರ್ಘ ಉಪವಾಸದಿಂದ ಕಷ್ಟವಾಗದಿದ್ದೆಂದು ಅವರ ಹೇಳಿಕೆ. ಉಪವಾಸದಿಂದ ಸ್ವಲ್ಪ ದುರ್ಬಲರಾದರೂ, ಅವರು ತಮ್ಮ ಕಾರ್ಯಗಳನ್ನು ನಿತ್ಯದಂತೆ ನಡಿಸಿದರು. ದೀರ್ಘ ಉಪವಾಸದಿಂದ ಪಚನ ರಸದ ಸಂಗ್ರಹವು ಹಿಗ್ಗಿ ಬರುವ ಸಾಧನವ್ಯಾವದು? ದೇಹದೊಳಗಿನ ಜೀವೋತ್ಪಾದಕ ಸಾಮಗ್ರಿಗಳು ಪುನರ್ಘಟಿತವಾಗುವ ಬಗೆ ಹೇಗೆ? ಎಂಬುದು ಇನ್ನೂ ನಿಶ್ಚಿತವಾಗಿ ತಿಳಿದಿಲ್ಲ. ಆದರೂ, ಉಪವಾಸದಿಂದ ನರಗಳಿಗೆ ಯೌವನ ಶಕ್ತಿಯು ಪ್ರಾಪ್ತವಾಗುತ್ತದೆಂಬುದು ಖಂಡಿತ ಮಾತು.

—ವರಿಷ್ಠ ಕಾಯದೆ ಕೌನ್ಸಿಲಿನಲ್ಲಿ ಸ್ವತಂತ್ರ ಪಕ್ಷದವರು ರಾಷ್ಟ್ರೀಯ ಪಕ್ಷದ ಪ್ರಾತಿನಿಧ್ಯತೆಯ ಕಾಲಕ್ಕೆ ನಿಶ್ಚಿತವಾದ ಧೋರಣದಂತೆ ನಡೆಯದೆ, ಸ್ವರಾಜ್ಯ ಪಕ್ಷದವರಿಗೆ ಬೇಸರ ಮಾಡಿ ಸರಕಾರಕ್ಕೆ ನೆರವಾಗಿದ್ದರು. ಸ್ವತಂತ್ರ ಪಕ್ಷದ ನಾಯಕರಾದ ಮಿ| ಜಿನ್ನಾರವರು ಸ್ವತಂತ್ರರ ಧೋರಣವನ್ನು ಪ್ರತಿಪಾದಿಸುತ್ತಿರುವರು. ಸ್ವರಾಜ್ಯ ಪಕ್ಷದ ಪಂಡಿತ ಮೋತಿಲಾಲ ನೆಹರೂರವರು "ಮುಂಬಯಿ ಕ್ರಾನಿಕಲ್" ಪತ್ರಿಕೆಯಲ್ಲಿ ಸ್ವತಂತ್ರರ ಧೋರಣವನ್ನು ಖಂಡಿಸಿ, ಅವರು ಮಾಡಿದ ರಾಷ್ಟ್ರಕಾರ್ಯ ಹಾನಿಯನ್ನು ಸಾಧಾರ ಸಿದ್ಧಪಡಿಸುತ್ತಿರುವರು. ಪಂಡಿತ ಮೋತಿಲಾಲರ ಲೇಖನಗಳಿಂದ ಸ್ವತಂತ್ರರ ನಿಜರೂಪವು ಸ್ಪಷ್ಟವಾಗಿದೆ

'Mr. Edie is a very good man !'

ಮಿ। ಎಡಿಯವರು ಬಹಳ ಒಳ್ಳೇ ಮನುಷ್ಯರು!

ಜಂಗಲಖಾತೆಯವರ ನಾಟಕ; ಖಾಸಗಿ ಕಾರ್ಯದರ್ಶಿಗಳ ಕಾರಸ್ಥಾನ!

ನಾಮದಾರ ಗವ್ಹರ್ನರರ ಆಗಮನದ ಹಕೀಕತು!

—(ನಮ್ಮ ಪ್ರತಿನಿಧಿಗಳಿಂದ —

ನಮ್ಮ ಮುಂಬಯಿ ಪ್ರಾಂತದ ಅಧಿಪತಿಗಳಾದ ನಾಮದಾರ ವಿಲ್ಸನ್ ದೊರೆಗಳು ಕಳೆದ ೧೮ ನೇ ತಾರೀಖಿಗೆ ಯಲ್ಲಾಪುರಕ್ಕೆ ಬಂದು ಮುಟ್ಟಿದರು ಅಲ್ಲಿ ಬೇಟೆಯಾಡಿ ೨ ಹುಲಿಗಳ ಸಂಹಾರ ಮಾಡಿದರು. ಬಳಿಕ ದೊರೆಗಳು ನಮ್ಮ ಜಿಲ್ಲೆಯ ಪ್ರಮುಖ ನಗರಿಯಾದ ಕಾರವಾರಕ್ಕೆ ಕಳೆದ ತಾರೀಖು ೨೨ ನೇ ಬುಧವಾರಕ್ಕೆ ಆಗಮಿಸಿದರು। ದೊರೆಗಳ ಆಗಮನವು ೧೧ ಘಂಟೆಗಾಯಿತು. ಕಾರವಾರ ಬಂದರದ ಮೇಲೆ ದೊರೆಗಳನ್ನು ಸ್ವಾಗತೀಕರಿಸಲಿಕ್ಕೆ ಅಧಿಕಾರಿಗಳು ಅಲ್ಲಿ ಸಣ್ಣದೊಂದು ಮಂಟಪವನ್ನು ನಿರ್ಮಿಸಿ, ಮನಮನೋಹರವಾಗಿ ಶೃಂಗರಿಸಿದ್ದರು. ಉಪ್ಪಿನ ಖಾತೆಯ ಅಧಿಪತಿಗಳಾದ ಮಿ। ಮೆಗ್ರೆಗರ ಸಾಹೇಬರು ಇಲ್ಲಿ ಪ್ರಾಂತಾಧಿಪರ ಸೇವೆಗಾಗಿ ಸನ್ನದ್ಧರಾಗಿದ್ದರು. "ಲೇಡಿ ವ್ಯಾಘ" ಎಂಬ ಮೋಂಡು ಬೋಟು ತಯಾರಿತ್ತು. ಮಿ। ಮೆಗ್ರೆಗರರವರು ದೊರೆಗಳನ್ನು ಇಳಿಸಿಕೊಂಡು ದೇವಗಡಕ್ಕೆ ಕರೆದು ಒಯ್ದರು ಅಲ್ಲಿ ದೊರೆಗಳು ವರುಣನ ಸೌಂದರ್ಯ ನೋಡಿದರು. ಕೆಲವು ಫೋಟೋಗಳೂ ತೆಗೆಯಲ್ಪಟ್ಟವು. ದೇವಗಡದ ಭಾಗ್ಯವು ಅಂದು ಉದಯವಾಯಿತು. ಬಳಿಕ, ದೊರೆಗಳು ಕೋಡಿಬಾಗಕ್ಕೆ ಹೋದರು. ಅಲ್ಲಿ ಜಂಗಲ ಡಿಪೋವನ್ನು ಸಂದರ್ಶಿಸಿದರು. ಅಲ್ಲಿಯೂ ಒಂದು ಫೋಟೋ ತೆಗೆಯಲಾಯಿತಂತೆ. ಇಷ್ಟಾದ ಬಳಿಕ ದೊರೆಗಳು ಮೋಟಾರಾರೂಢರಾಗಿ ಪೇಟೆಯ ಮಾರ್ಗದಿಂದ ಕಲೆಕ್ಟರರ ಬಂಗಲೆಗೆ ತೆರಳಿದರು. ದೊರೆಗಳು ವಿವಿಧ ಮೋಟಾರಿನ ಚಪ್ಪರು ತೆಗೆಯಲಾಗಿತ್ತು; ದೊರೆಗಳ ದರ್ಶನವು ಅನೇಕ ಉತ್ಸುಕ ವ್ಯಕ್ತಿಗಳಿಗಾಯಿತು. ದೊರೆಗಳು ಸಲಾಮು ಕೊಳ್ಳುತ್ತ ಕೈಯ ಮಾಡುತ್ತಿದ್ದರು. ಕಲೆಕ್ಟರರ ಬಂಗ್ಲೆಯು ಬೆಟ್ಟದ ಮೇಲಿರುವದರಿಂದ ದೊರೆಗಳು ಅಲ್ಲಿ ಗಾಡಿಯನ್ನು ಹತ್ತಿಕೊಂಡು ಹೋದರು ಇಲ್ಲಿ ಮುಟ್ಟಲಿಕ್ಕೆ ೨ ಘಂಟೆ ಬಡಿಯಿತು. ಇಲ್ಲಿ ಆಗ ಔತಣ ಸಮಾರಂಭವಿತ್ತು. ಜಿಲ್ಲೆಯೊಳಗಿನ ಸಣ್ಣ ಪುಟ್ಟ ಅಧಿಕಾರಿಗಳೆಲ್ಲರೂ ಬಂದಿದ್ದರು. ಸೆಟ್ಲಮೆಂಟ ಆಫೀಸರರಾದ ಮಿ। ಕೋಲಿನ್ಸರೂ, ಚೀಫ ಕನ್ಸರ್ವೇಟರರಾದ ಮಿ। ಎಡಿಯವರೂ, ಉಪ್ಪಿನ ಖಾತೆಯ ಕಲೆಕ್ಟರರಾದ ಮಿ। ಮೆಗ್ರೆಗರರವರೂ ಔತಣ ಸಮಾರಂಭಕ್ಕೆ ಹಾಜರಿದ್ದರು. ಜಿಲ್ಲಾ ಲೋಕಲ್ ಬೋರ್ಡಿನ ಅಧ್ಯಕ್ಷರಾದ ಮಿ। ವ್ಹಿ. ಎ. ಕೋಯಿಲೋರರವರೂ ಅನುಗ್ರಹಿಸಿದ್ದರು. ಕಾರ್ಯಕ್ರಮದಂತೆ ಭೋಜನ ಸಮಾರಂಭವು ೩ ಘಂಟೆಗೆ ೧೦ ಮಿನಿಟು ಇರುವಾಗ ಮುಗಿಯಬೇಕಾಗಿತ್ತು. ಆದರೆ, ಭೋಜನವಾದ ಬಳಿಕ, ಅಲ್ಲಿ ಒಂದು ಸಣ್ಣ ಸಮಾರಂಭವಾಯಿತು. ನಾಮದಾರ ವಿಲ್ಸನ್ ದೊರೆಗಳು ಡಿ। ಲೋ। ಬೋರ್ಡಿನ ಅಧ್ಯಕ್ಷರಾದ ಮಿ। ಕೋಯಿಲೋರವರಿಗೆ ಸಾರ್ವಭೌಮ ಪಂಚಮ ಜಾರ್ಜರು ಸಾರ್ವಜನಿಕ ಸೇವೆಯ ಬಗ್ಗೆ ಪ್ರಸನ್ನಚಿತ್ತರಾಗಿ ಈ ಸಂವತ್ಸರದಲ್ಲಿ ಅರ್ಪಿಸಿದ "ಕೈಸರ್-ಈ-ಹಿಂದ-" ಪದಕವು ಅರ್ಪಣವಾಗುವದಿತ್ತು. ನಾಮದಾರರೇ ಈ ಸಮಯ ಅದನ್ನು ಅರ್ಪಿಸಿದರು. ಮಿ। ಕೋಯಿಲೋರವರಿಗೆ ಇದೀ ಜೀವನಕ್ರಮದಲ್ಲಿ ಇದೊಂದು (ಪ್ರೌಡೆಸ್ಟ ಮೊಮೆಂಟ) ಭಯಂಕರ ಅಭಿಮಾನಾಸ್ಪದ ಕ್ಷಣವೆನ್ನಿಸಿದರೇ ಸಾಶ್ಚರ್ಯ! ಭೋಜನ ಸಮಾರಂಭವು ೩ಕ್ಕೆ ೫ ಮಿನಿಟು ಇರುವಾಗ ಮುಗಿಯಿತು

ನಮ್ಮ ಜಿಲ್ಲೆಯ ಕೌನ್ಸಿಲು ಪ್ರತಿನಿಧಿಗಳಾದ ಶ್ರೀ ಮಂಜುನಾಥ ಭಟ್ಟ ಕರ್ಕಿಯವರು ಬೆಳಿಗ್ಗೆ ದೊರೆಗಳ ಭೆಟ್ಟಿಗೆ ಹೋಗಿದ್ದರು ೩ಕ್ಕೆ ೧೦ ಮಿನಿಟು ಇರುವಾಗ ಬರಲು ಅವರಿಗೆ ಆಜ್ಞೆಯಾಗಿತ್ತು. ಶ್ರೀ। ಕರ್ಕಿಯವರು ಹೋಗುವ ಕಾರಣದ ಬಗ್ಗೆ ಸ್ವಲ್ಪ ಹಿಂದಿನ ಕಥೆ ಹೇಳಬೇಕಾಗಿದೆ. ಪ್ರಾಂತಾಧಿಪರು ಸಾರ್ವಭೌಮ ಅಂತರ ಪ್ರತಿನಿಧಿಗಳು. ನಮ್ಮ ಜಿಲ್ಲೆಯೊಳಗಿನ ಪ್ರಮುಖರಿಗೆ ಜಿಲ್ಲಾವಿಷಯಕ ಹಕೀಕತನ್ನು ತಿಳಿಸುವದಿದ್ದಲ್ಲಿ ಮುಂದಾಗಿ ವ್ಯವಸ್ಥೆ ಮಾಡಿಕೊಳ್ಳಲು ಆಜ್ಞೆಯಾಗಿತ್ತು. ಕಲೆಕ್ಟರರು ಮುಂಬಯಿ ಸರಕಾರದ ಹುಕುಮಿನಂತೆ, ಶ್ರೀ। ಕರ್ಕಿಯವರಿಗೆ ಈ ವಿಷಯ ತಿಳಿಸಿದ್ದರು. ಶ್ರೀ। ಕರ್ಕಿಯವರು ಯಲ್ಲಾಪುರದಲ್ಲಿ ಭೆಟ್ಟಿ ಕೊಳ್ಳಲಿಚ್ಛಿಸುತ್ತೇವೆಂದೂ, ಅದೇ ಸಮಯದಲ್ಲಿ ಕೋಟಿಗರ ತರ್ಫೆನಿಂದ ಮಾನಪತ್ರವನ್ನೊಂದು ಅರ್ಪಿಸುವ ವಿಚಾರವಿರುವದೆಂದೂ ಕಲೆಕ್ಟರರಿಗೆ ಬರಕೊಂಡಿದ್ದರು. ಕಲೆಕ್ಟರರು ಈ ವಿಷಯವನ್ನು ವರಿಷ್ಠರಿಗೆ ತಿಳಿಸಿದರೋ ಏನೋ! ಅಲ್ಲಿಂದ ಮಾನಪತ್ರವನ್ನು ಸ್ವೀಕರಿಸಲು ದೊರೆಗಳಿಗೆ ಸಮಯವಿಲ್ಲೆಂದು ತಿಳಿಸಿದರು. ಮತ್ತು ಕಾರವಾರದಲ್ಲಿ ೨೨ ನೇ ತಾರೀಖಿನ ೩ ಘಂಟೆಗೆ ದೊರೆಗಳನ್ನು ಕಾಣಬಹುದೆಂದು ಕಲೆಕ್ಟರರು ತಂತಿಮೂಲಕ ಉತ್ತರವನ್ನಿತ್ತರು. ಪತ್ರವನ್ನೂ ಕಳುಹಿದರು.

ಕಲೆಕ್ಟರರು ಶ್ರೀ। ಕರ್ಕಿಯವರಿಗೆ ಬರೆದ ಪತ್ರ.

Government of Bombay.

Office of the Collector
of Kanara, Karwar.
16th April, 1925.

Dear Mr. Karki,

His Excellency, the Governor will be pleased to see you at Karwar on the 22nd instant at 3 P. M.

His Excellency regrets that his time being too fully occupied, it would not be possible for him to receive any address on his visit which is purely a private one.

I have already sent you a telegram today regarding this which I believe you have already received.

Yours sincerely,
V. S. Bhide.

M. D. Karki Esq. M. L. C.
Honavar.

ಶ್ರೀ। ಕರ್ಕಿಯವರು ೩ಕ್ಕೆ ೫ ಮಿನಿಟು ಇರುವಾಗ ದೊರೆಗಳ ದರ್ಶನ ಪಡೆದರು. ಇಬ್ಬರೂ ಒಂದು ಕೋಣೆಯಲ್ಲಿ ಹಿಂದೇ ಬಾಗಿಲಿನ ಮೇಲೆ ಕೂತುಕೊಂಡರು. ಶ್ರೀ। ಕರ್ಕಿಯವರನ್ನು ಕಂಡ ಕೂಡಲೆ, ದೊರೆಗಳು :—(I feel very sultry; Kanara is a lovelyplace; Karwar is a beautiful town.) "ವಿಪರೀತ ಸೆಕೆಯಾಗುತ್ತದೆ; ಕಾನಡಾ ಜಿಲ್ಲೆಯು ಮನೋಹರ ಪ್ರದೇಶವು; ಕಾರವಾರವು ಅಂದವಾದ ನಗರಿಯು." ಮುಂತಾದ ಉದ್ಗಾರಗಳನ್ನು ತೆಗೆದು, ಯಲ್ಲಾಪುರದಲ್ಲಿ ೨ ಹುಲಿಗಳ ಸಂಹಾರ ಮಾಡಿದೆವೆಂದರು. ದೊರೆಗಳು ದೊರೆಸಾನಿಯವರನ್ನು ತಮ್ಮೊಡನೆ ಇಲ್ಲಿ ತರದ ಬಗ್ಗೆ ವ್ಯಸನವನ್ನು ಪ್ರದರ್ಶಿಸಿದರು. ಶ್ರೀ। ಕರ್ಕಿಯವರು ದೊರೆಗಳನ್ನು ಅಭಿನಂದಿಸಿ ಮುಂದಾದರು. ಕಾನಡಾ ಜಿಲ್ಲೆಯೊಳಗಿನ ಮಾರ್ಗಗಳು ಬಹಳೇ ಸಮಾಧಾನಕರವಿರುವವೆಂದು ದೊರೆಗಳು ಉದ್ಗರಿಸಿದರು. "ನಾನು ಯಲ್ಲಾಪುರದಿಂದ ಬಂದ ಮಾರ್ಗವು ಉತ್ತಮವಿತ್ತು." ಎಂದೂ ದೊರೆಗಳು ಉದ್ಗರಿಸಿದರು. ಶ್ರೀ। ಕರ್ಕಿಯವರು ಅಂದದ್ದು, "ತಮ್ಮ ಆಗಮನಕ್ಕಾಗಿ ಆ ಮಾರ್ಗವು ಒಳ್ಳೇ ಸ್ಥಿತಿಯಲ್ಲಿಡಲ್ಪಟ್ಟಿದೆ; ಇತರ ಕಡೆಗಳಲ್ಲಿ ಮಾರ್ಗಗಳು ಚಲೋ ಸ್ಥಿತಿಯಲ್ಲಿಲ್ಲ. ದೊರೆಗಳು ಅತ್ತಿತ್ತ ಅಡ್ಡಾಡಿ ನೋಡಬಹುದು." "ನೀವು ಯಾವದಾರಿಯಿಂದ ಮುಂಬಯಿಗೆ ಹೋಗುತ್ತೀರಿ? ಉಗಿಹಡಗದಿಂದ ಬರುವದಿಲ್ಲೇನು?" ಎಂಬ ದೊರೆಗಳ ಪ್ರಶ್ನೆಗೆ ಶ್ರೀಯುತರು ಕೌನ್ಸಿಲಿನ ಅಧಿವೇಶನಗಳು ಉಗಿಹಡಗದ ಪ್ರವಾಸಕ್ಕೆ ಅನುಕೂಲವಾಗಿರುವದಿಲ್ಲ. ಆದಕ್ಕಾಗಿ ನಾನು ಕಾಲ್ದಾರಿಯಿಂದಲೇ ಹೋಗಬೇಕಾಗುತ್ತದೆಂದು ನುಡಿದರು.

ಬಳಿಕ ರೇಲ್ವೆ ವಿಷಯ ಬಂತು. "ನಮ್ಮ ಜಿಲ್ಲೆಯಲ್ಲಿ ರೇಲ್ವೆಯಿರುವದಿಲ್ಲ. ಉಗಿಬಂಡಿಯಿದ್ದರೆ, ನಮಗೆ ಬಹಳೇ ಅನುಕೂಲವಾಗುವದು. ಕಮೀಶನರರೂ ಇದೇ ರೀತಿ ಅಭಿಪ್ರಾಯಪಟ್ಟಿರುವರು." ಮುಂತಾದ ಸಂಗತಿಗಳನ್ನು ಶ್ರೀ। ಕರ್ಕಿಯವರು ಅರುಹಿದರು.

"ಗೋವೆಯ ಸರಕಾರದಗೂಡ ಕರಾರನಾಮೆಯಾಗಿತ್ತು. ೪೦ ವರ್ಷಗಳವರೆಗೆ ಇತ್ತ ಉಗಿಬಂಡಿ ತರಲು ನಮಗೆ ಪ್ರತಿಬಂಧವಿತ್ತು. ಈಗ ಆ ಅವಧಿಯು ಮುಗಿದದೆ," ಎಂದು ದೊರೆಗಳು ನುಡಿದರು.

ಶ್ರೀ। ಕರ್ಕಿಯವರು ಮಲೇರಿಯಾ ಯಾನೆ ಚಳಿಜ್ವರದಿಂದ ಹಳ್ಳಿಗರ ಆರೋಗ್ಯ ಹಾನಿಯಾಗಿದೆಂದರು. ದೊರೆಗಳು ಈ ಸಂಗತಿಯನ್ನು ಅಲ್ಲಗಳೆದರು. "ಆಸ್ಟ್ರೇಲಿಯಾ ದೇಶದಿಂದಲೂ, ದೇಶಾಂತರದಿಂದ

(೬ನೇ ಪಾನಿನಮೇಲೆ ಮುಂದುವರಿಸಿದೆ.)

ಕಾನಡಾವೃತ್ತ.

ಮಿತಿ ಕ್ರೋಧನ ಸಂ| ವೈಶಾಖ ಶು| ೪ಥೀ ಸೋಮವಾರ.

ಪ್ರಜಾವಂಚನೆ!

ನಮ್ಮ ಮುಂಬಯಿ ಇಲಾಖೆಯ ಒಡೆಯರಾದ ನಾಮದಾರ ವಿಲ್ಸನ್ ದೊರೆಗಳು ನಮ್ಮ ಕಾನಡಾ ಜಿಲ್ಲೆಗೆ ಅನುಗ್ರಹಿಸಿದರು. ದೊರೆಗಳು ಸಾರ್ವಜನಿಕವಾಗಿ ಭೆಟ್ಟಿಯನ್ನೀಯದೆ, ಖಾಸಗಿಯಿಂದಲೇ ನಮ್ಮಲ್ಲಿ ಅನುಗ್ರಹಿಸಿದ್ದರು. ನಮ್ಮ ಜಿಲ್ಲೆಯಲ್ಲಿ ಅಂತು ದೊರೆಗಳು ಒಂದು ಸಪ್ತಾಹದ ವರೆಗೆ ಉಳಕೊಂಡರು. ಪ್ರಜೆಗಳ ಸುಖ ದುಃಖಗಳನ್ನು ಕೇಳಿಕೊಳ್ಳಲಿಕ್ಕೆ ೧೦ ಮಿನಿಟುಗಳಷ್ಟು ಅವಕಾಶವು ಮಾತ್ರ ದೊರಕಿತು. ಸಪ್ತಾಹದ ಉಳಿದ ಎಲ್ಲ ಸಮಯವು ಬೇಟೆ, ದೇವಗಡ, ಕೋಡಿಬಾಗದ ಜಂಗಲ ಡಿಪ್ಪೋ, ಔತಣ ಮುಂತಾದ ಸತ್ಕಾರ ಸ್ವೀಕಾರಗಳಲ್ಲಿಯೇ ಕಳೆದು ಹೋಯಿತು. ನಮ್ಮ ಜಿಲ್ಲೆಯ ಕೌನ್ಸಿಲು ಪ್ರತಿನಿಧಿಗಳಾದ ಶ್ರೀ| ಕರ್ಕಿಯವರೊಡನೆ ನಡೆದ ಸಂಭಾಷಣಾದ ಹಕೀಕತನ್ನು ವಿಶೇಷ ವಿಸ್ತಾರವಾಗಿ ಬೇರೊಂದೆಡೆಯಲ್ಲಿ ಕೊಟ್ಟಿರುವೆವು. ಇದರ ಮೇಲಿಂದ ಅನೇಕ ವಿಚಾರಗಳು ವಾಚಕರಿಗೆ ಸೂಚಿಸದಿರವು.

ಇಡೀ ಹಕೀಕತನ್ನು ವಿಮರ್ಶಿಸಿದರೆ, ಇದೊಂದು ಜಂಗಲ ಖಾತೆಯವರು ತಮ್ಮ ಪ್ರತಿಷ್ಠೆಗಾಗಿ ರಚಿಸಿದ ನಾಟಕವೆಂದು ಯಾರೂ ಹೇಳದಿರರು. ದೊರೆಗಳು ಶ್ರೀ| ಕರ್ಕಿಯವರೊಡನೆ ಮಾತಾಡುವಾಗ, ಜಂಗಲ ಖಾತೆಯ ತರ್ಕಗಳನ್ನೇ ಹೇಳಿದರು. ಲೋಕಸಂಖ್ಯೆಯು ಕುಗ್ಗಿತೆಂದರೆ, ಇನ್‌ಫ್ಲುಯೆಂಝಾ ಬೇನೆ, ದೇಶಾಂತರ ಮುಂತಾದ ಜಂಗಲ ಖಾತೆಯವರು ಠರಾಯಿಸಿದ ಉತ್ತರಗಳು ತಯಾರು! ಇನ್‌ಫ್ಲುಯೆಂಝಾ ಬೇನೆಯು ಎಂದಾಯಿತು? ಪ್ರಜಾಸಂಖ್ಯೆಯು ಎಂದಿನಿಂದ ಕುಗ್ಗುತ್ತಿದೆ? ಯಾವ ಕಾರಣದಿಂದ ಕುಗ್ಗುತ್ತಿದೆ? ಎಂಬುದನ್ನು ಸಪ್ರಮಾಣ ತಿಳಿಸಲಿಕ್ಕೆ ಅಂಗ್ಯ ಮೇಲಿದ್ದ ಗಡಿಯಾರವು ಅಡ್ಡ ಬರುತ್ತದೆ. ಸಮಯವೇ ಸಿಗುವದಿಲ್ಲ. ವಿಪರೀತ ಮಾಹಿತಿಯನ್ನು ಪಡೆಯಲು ದೊರೆಗಳಿಗೆ ಸಾಕಷ್ಟು ಅವಕಾಶವು ದೊರೆಯುತ್ತದೆ. ದೇಶಾಂತರದ ತರ್ಕವು ಪೊಳ್ಳೆಂದು ಶ್ರೀ| ಕರ್ಕಿಯವರು ಅಲ್ಲಿಂದಲ್ಲೇ ಸ್ವಾನುಭವದಿಂದ ಹೇಳಿಬಿಟ್ಟರು. ಚಳಿ ಜ್ವರದಿಂದ ಹಳ್ಳಿಗರ ಆರೋಗ್ಯವು ನೆಟ್ಟಗಿಲ್ಲೆಂದು ಶ್ರೀ| ಕರ್ಕಿಯವರು ಹೇಳಿದರೆ, ಅದಕ್ಕೆ ದೊರೆಗಳು ಪ್ರತ್ಯಕ್ಷ ಪ್ರಮಾಣವನ್ನು ಕೊಡುತ್ತಾರೆ. ಯಲ್ಲಾಪುರದ ನೆರೆಹೊರೆಯ ಒಂದು ಗ್ರಾಮದಲ್ಲಿ ದೊರೆಗಳು ಹೋಗಿದ್ದರಂತೆ. ಅಲ್ಲಿ ಒಬ್ಬ ಆಳು ದೊರೆಗಳಿಗೆ ಫಲಾರ್ಪಣ ಮಾಡಿದನಂತೆ. ಆತನು ಗಟ್ಟಿಗನಂತೆ! ಅದರ ಮೇಲಿಂದ ಚಳಿ ಜ್ವರದಿಂದ, ಜಂಗಲ ಧೋರಣದಿಂದ ಹಳ್ಳಿಗರ ಆರೋಗ್ಯವು ಕೆಟ್ಟು, ಅವರು ಬೇನೆಯಲ್ಲಿ ನರಳುತ್ತಿರುವರೆಂಬ ಆಕ್ರೋಶವು ನಿರಾಧಾರವೆಂದು ದೊರೆಗಳ ಕಲ್ಪನೆಯಾಗಿದೆ. ದೊರೆ. ಯಾವ ಹಳ್ಳಿಗೆ ಹೋಗಿದ್ದರು! ಯಾರ ದರ್ಶನ ಪಡೆದರು! ಯಾರ ಹೇಳಿಕೆಯ ಮೇಲಿಂದ ಹೋಗಿದ್ದರು? ಎಂಬ ಸಂಗತಿಗಳು ನಮಗೇನು ತಿಳಿಯಲಿಲ್ಲ. ಸರಕಾರದ ವಿರುದ್ಧ, ಜಂಗಲ ಖಾತೆಯ ವಿರುದ್ಧ ಏನೇನೂ ದೂರಿಲ್ಲದ ಪುಣ್ಯಾತ್ಮ ಗಟ್ಟಿ ಆಳಿನ ಚೌಕಶಿ ಮಾಡಿ ಯಾರಾದರೂ ನಮಗೆ ಮಾಹಿತಿ ಕೊಟ್ಟರೆ, ಅದನ್ನು ನಾವು ಆನಂದದಿಂದ ಪ್ರಕಟಿಸುವೆವು. ಶ್ರೀ| ಕರ್ಕಿಯವರಾದರೂ, ಈ ವಿಷಯ ಚೌಕಶಿ ಮಾಡಬೇಕಾಗಿ ನಮ್ಮ ಬಿನ್ನಹ ಇದೆ.

ದೊರೆಗಳ ಸಂಭಾಷಣದಿಂದ ಇನ್ನೊಂದು ಕಾರಸ್ಥಾನವು ಹೊರಬಿದ್ದಿದೆ. ಪ್ರಾಂತಾಧಿಪರಂಥ ದೊಡ್ಡ ಅಧಿಕಾರಿಗಳ ಆಗಮನವಾಗುವದು ನಮ್ಮಲ್ಲಿ ಅಪರೂಪ. ಈ ಶುಭ ಸಮಯ: ಶ್ರೀ| ಕರ್ಕಿಯವರು ಬೆಟ್ಟದ ಕರಾರಿನಿಂದ ತೋಟಗರಿಗೆ ಪೀಡಿಸುವ ಜಂಗಲ ಖಾತೆಯ ಕಾರಸ್ಥಾನಗಳನ್ನು ದೊರೆಗಳಿಗೆ ಪ್ರತ್ಯಕ್ಷವಾಗಿ ಅರುಹಲು ಅಪ್ಪಣೆ ಬೇಡಿದ್ದರು. ದೊರೆಗಳ ಸಮಯವು ಇತರ ಕಾರ್ಯಕಲಾಪಗಳಲ್ಲಿಯೇ ತುಂಬಿಹೋಗಿರುವದೆಂದು ಖಾಸಗಿ ಕಾರ್ಯದರ್ಶಿಗಳು ನುಡಿದು, ಮಾನಪತ್ರವನ್ನು ಸ್ವೀಕರಿಸಲಾಗದೆಂದು ಶ್ರೀ| ಕರ್ಕಿಯವರಿಗೆ ಜಿಲ್ಹಾಧಿಪತಿಗಳ ಮುಖಾಂತರ ತಿಳಿಸಿದರು, ಈ ವಿಷಯ ದೊರೆಗಳಿಗೆ ವ್ಯಸನವಾಗುತ್ತದೆಂದೂ ಅವರು ತಿಳಿಸಿದ್ದರು. ಈ ಸಂಗತಿಯನ್ನು ಶ್ರೀ| ಕರ್ಕಿಯವರು ಕಾಣಬರುವ ಮೊದಲು, ಖಾಸಗಿ ಕಾರ್ಯದರ್ಶಿಗಳು ದೊರೆಗಳಿಗೆ ತಿಳಿಸಿ ತಯಾರ ಮಾಡಲಿಲ್ಲೆಂಬಂತೆ ತೋರುತ್ತಿದೆ. ಇಲ್ಲದಿದ್ದರೆ ದೊರೆಗಳು ಈ ವಿಷಯ ತಮಗೇನೂ ಗೊತ್ತಿಲ್ಲವೆಂದು ಹೇಳಿ, ತೋಟಿಗರ ಮಾನಪತ್ರವನ್ನು ನಿರಾಕರಿಸಿದ ಬಗ್ಗೆ ವ್ಯಸನಪಡುತ್ತಿದ್ದಿಲ್ಲ. ಶ್ರೀ| ಕರ್ಕಿಯವರು ದೊರೆಗಳ ಪ್ರತ್ಯಕ್ಷ ದರ್ಶನ ಪಡೆದದ್ದರಿಂದ ಅನುಪೇಕ್ಷಿತವಾಗಿ ಈ ವಿಷಯದ ಉಲ್ಲೇಖವಾದ್ದರಿಂದ ಸತ್ಯವು ಹೊರಬಿದ್ದು, ಖಾಸಗಿ ಕಾರ್ಯದರ್ಶಿಗಳು ಖಾಸಗಿಯಿಂದ ನಡಿಸುವ ಕಾರಸ್ಥಾನಗಳ ಅರಿವಾಗಲಿಕ್ಕನುಕೂಲವಾಯಿತು. ದೇವರು ಪ್ರಸನ್ನಚಿತ್ತರಿದ್ದರೂ, ಹೊಟ್ಟೆಕೂಲಿಯ ಪೂಜಾರಿಗಳ ಗೊಂದಲವೊದಗುತ್ತದೆಂಬದು ಹೀಗೆಯೇ. ದೊರೆಗಳು ಈ ಬಗ್ಗೆ ಖಾಸಗಿ ಕಾರ್ಯದರ್ಶಿಗಳಿಗೆ ಯಾವ ಶಾಸನ ವಿಧಿಸುತ್ತಾರೆಂದು ತಿಳಿಯಲಿಲ್ಲ. ಅವರ ಉದ್ಗಾರದ ಮೇಲಿಂದ ಖಾಸಗಿ ಕಾರ್ಯದರ್ಶಿಗಳ ವ್ಯವಸ್ಥೆಯಂತೆ ಅವರು ನಡೆಯುಬದ್ಧರೆಂದು ತೋರುತ್ತದೆ. ಖಾಸಗಿ ಕಾರ್ಯದರ್ಶಿಗಳ ಸಂಕೇತದಂತೆ, ಅವರ ಸೂತ್ರ ಗೊಂಬೆಯಾಗಿ ದೊರೆಗಳು ಜಿಲ್ಲೆಯಲ್ಲಿ ಓಡ್ಯಾಡಿದರೆಂದು ಪ್ರಜೆಗಳು ತಿಳಿಯಬಹುದೇನು!

ದೊರೆಗಳು ಖಾಸಗಿ ಭೆಟ್ಟಿಯಿಂದ ಪ್ರಜೆಗಳ ಸುಖ-ದುಃಖಗಳ ವಿಚಾರ ಮಾಡಲು ವಿಶೇಷ ಅನುಕೂಲವಾಗುತ್ತದೆಂಬ ಸಿದ್ಧಾಂತವನ್ನು ಹೇಳಿದರು. ಸಾರ್ವಜನಿಕವಾಗಿ ಬಂದರೆ, ಔಪಚಾರಿಕ ವಿಧಿಯಲ್ಲಿಯೇ ಎಲ್ಲ ಸಮಯವು ಕಳೆದು ಹೋಗುತ್ತದೆಂದೂ ದೊರೆಗಳು ನುಡಿದರು. ಖಾಸಗಿ ಭೆಟ್ಟಿಯಿಂದ ಕೌನ್ಸಿಲು ಪ್ರತಿನಿಧಿಗಳಾದ ಶ್ರೀ| ಕರ್ಕಿಯಂಥವರಿಗೆ ಇಡೀ ಒಂದು ಸಪ್ತಾಹದಲ್ಲಿ ೧೦ ಮಿನಿಟುಗಳ ಮೇಲೆ ಸಂಭಾಷಣ ಮಾಡಲು ಇಂಬು ದೊರಕದ ಬಳಿಕ, ಖಾಸಗಿ ಭೆಟ್ಟಿಯಿಂದ ಪ್ರಜೆಗಳ ಸುಖ-ದುಃಖಗಳು ದೊರೆಗಳಿಗೆ ಹೇಗೆ ತಿಳಿದಾವು? ಒಂದು ಮಾತು ಮಾತ್ರ ಇಲ್ಲಿ ನಮೂದಿಸಬಹುದು. ಖಾಸಗಿ ಭೆಟ್ಟಿಯು ಸೂತ್ರಚಾಲಕರಿಗೆ, ದೊರೆಗಳಿಗೆ ಪೂರ್ವ ಸಂಕೇತದಂತೆ ತಮಗೆ ಬೇಕಾದಲ್ಲಿ ಒಯ್ದು ತಮ್ಮ ಸಿದ್ಧಾಂತಕ್ಕೆ ಅನುಕೂಲವಾಗುವ ಸಂಗತಿಗಳ ಪ್ರದರ್ಶನವನ್ನು ಏಕಪಕ್ಷಿನಿಂದ ಮಾಡಲು ತುಂಬಾ ಇಂಬು ದೊರಕುತ್ತದೆ. ಚೆಫ್ ಕನ್ಸರವ್ಹೇಟರರಾದ ವಿ| ಎಡಿಯವರಿಗೆ ಶಿಫಾರಸು ಕೊಡುವ ಮರ್ಮವಾದರೂ ಇದೇ. ಬೇಟೆಯ ವ್ಯವಸ್ಥೆಯನ್ನು ಅವರ ಖಾತೆಯವರೇ ನಡಿಸಿದ್ದರು. ಗಟ್ಟಿ ಆಳಿನ ದರ್ಶನವು ಅವರ ಯತ್ನದಿಂದಲೇ ಒದಗಿಬಂದಿರುವದೆಂದರೆ, ಅಯಥಾರ್ಥವಾಗಲಾರದು. ಬೇಟೆಗೆ ಅನುಕೂಲವಾದ ದಟ್ಟ ಬೆಟ್ಟವನ್ನು ದುಷ್ಟ ಬೇಸಾಯಗಾರರಿಂದ ಕಾದಿಟ್ಟವರೂ ಅವರೇ. ಇಂಥವರಿಗೆ ಕೃತಜ್ಞಬುದ್ಧಿಯಿಂದ ದೊರೆಗಳು "ಬಹಳ ಒಳ್ಳೇ ಮನುಷ್ಯರೆಂ"ದು ಸಹಜವಾಗಿ ಹೇಳಬಹುದು.

ದೊರೆಗಳು ಸಾರ್ವಭೌಮ ಪಂಚಮ ಜಾರ್ಜರ ಪ್ರತಿನಿಧಿಗಳು. ಇವರು ಇಲ್ಲಿ ಅಡ್ಡಾಡುವ ಮೂಲ ಹೇತುವು ಪ್ರಜೆಗಳ ಸುಖ-ದುಃಖಗಳ ಮಾಹಿತಿಯನ್ನು ಪ್ರತ್ಯಕ್ಷವಾಗಿ ಅರಿತುಕೊಳ್ಳುವದು. ಇದರಿಂದ ಕೆಳ ನೌಕರರು ಕುಯುಕ್ತಿಗಳಿಂದ ವಿಪರ್ಯಾಸ ಮಾಡಿದರೂ, ಸತ್ಯಸ್ಥಿತಿಯು ಪ್ರಜಾ ಮುಖದಿಂದಲೇ ತಿಳಿಯಬರಬೇಕೆಂದು ಇಂಥ ದರ್ಶನಗಳ ಏರ್ಪಾಟಾಗಿದೆ. ನಮ್ಮಲ್ಲಿಯ ದರ್ಶನ ಹೇತುವಾದರೂ ಇದೇ! ಒದಗಿ ಬಂದ ಪರಿಣಾಮವು ಮಾತ್ರ ಬೇರೆ! ಅದಕ್ಕೆ ಕಾರಣರ್‍ಯಾರು! ಖಾಸಗಿ ಕಾರ್ಯದರ್ಶಿಗಳು; ಹಾಗು ಅವರ ಬೆಂಬಲಕ್ಕಿದ್ದ ಜಂಗಲ ಖಾತೆಯ ಅಧಿಕಾರಿಗಳು ಪ್ರಜೆಗಳ ಹಿತಕ್ಕಾಗಿ ನಮ್ಮಲ್ಲಿಗೆ ಚಿತ್ತೈಸಿ, ಪ್ರಜೆಗಳ ಅಹಿತದ ಸಂಗತಿಗಳನ್ನಷ್ಟು ದೊರೆ

ಗಳು ಮರಳಿರುವರು. "ಮಹಾತ್ಮರು ಹೇಳುವಂತೆ, ರಾಜ್ಯಪದ್ಧತಿಯು ದೋಷವಿದು! ಅದನ್ನು ಆಮೂಲಾಗ್ರ ಕಿತ್ತೊಗೆದ ಹೊರತು ನಮ್ಮ ತರಣೋಪಾಯವಿಲ್ಲ.

ಸ್ಫುಟ ಸೂಚನೆಗಳು.

೧. ಕರ್ನಾಟಕ ಸಾಹಿತ್ಯ ಸಮ್ಮೇಲನದ ಹನ್ನೊಂದನೇ ಅಧಿವೇಶನವು ಬೆಳಗಾವಿಯೊಳಗೆ ಇದೇ ಬರುವ ಮೇ ತಾರೀಖು ೯-೧೦-೧೧ನೆ ಗೆ ಸೇರುವದಿದೆ, ಸನ್ಮಾನಿತ ಕಾರ್ಯದರ್ಶಿಗಳಾದ ಶ್ರೀ| ಕೃ. ಗೋ. ಗೆಜ್ಜಿ ಹಾಗು ಪ. ರಾ. ಜಿಕ್ಯೋತಿ ಇವರು ಅಖಿಲ ಕರ್ನಾಟಕ ಭಕ್ತರಿಗೆ ಸಮ್ಮೇಲನಕ್ಕೆ ಚಿತ್ತೈಸಲು ಕೊಟ್ಟ ನಿಮಂತ್ರಣವನ್ನು ನಾವು ಪುನಃ ಪ್ರಕಾಶ ಪಡಿಸಿ, ಸಮಸ್ತ ಕನ್ನಡಾಭಿಮಾನಿಗಳೂ ಸಮ್ಮೇಲನವನ್ನು ಸೇರಿಕೊಂಡು ಕರ್ನಾಟಕ ಸಾಹಿತ್ಯವನ್ನು ಉದ್ಧರಿಸಲು ಉಪಾಯ ಯೋಜಿಸಬೇಕಾಗಿ ಬಿನ್ನೈಸಿಕೊಳ್ಳುವೆವು. ಕನ್ನಡ-ಮರಾಠಿಯ ಸೀಮೆಯ ಮೇಲಿದ್ದ ಬೆಳಗಾವಿ ನಗರಿಯು ರಾಷ್ಟ್ರೀಯ ಸಭೆಯ ಸತ್ಕಾರ ಮಾಡಿದ ವರುಷವೇ, ಕರ್ನಾಟಕ ಸಾಹಿತ್ಯಕ್ಕಾಗಿ ಮುಂದಾಗಿ ಬಂದದ್ದು ಪ್ರಶಂಸನೀಯವಿದೆ. ಅಖಿಲ ಕರ್ನಾಟಕಸ್ಥರು ಈ ಪ್ರಯತ್ನವನ್ನು ಯಶಸ್ವಿಯಾಗಿ ನೆರವೇರಿಸಲು ಶಕ್ತಿಮೀರಿ ದುಡಿಯಲು ಬದ್ಧರಿರುವರು ಕರ್ನಾಟಕ ಸಾಹಿತ್ಯದ ಸ್ಥಿತಿಗತಿಯನ್ನು ನಾವಾಗಿ ಹೇಳಬೇಕಾಗಿಲ್ಲ. ಸಕಲ ಕರ್ನಾಟಕಸ್ಥರು ಅರಿತ ವಿಷಯವಿದು. ಸ್ವಾಗತ ಮಂಡಲದವರು ಮ| ತಮ್ಮಪ್ಪ ಸ. ಜಿಕ್ಯೋತಿಯವರನ್ನು ತಮ್ಮ ನಾಯಕರನ್ನಾಗಿ ನೇಮಿಸಿಕೊಂಡು, ಕನ್ನಡ ಸಾಹಿತ್ಯದಲ್ಲಿ ಶ್ರೀಯುತರು ಮಾಡಿದ ಸೇವೆಯನ್ನು ಸ್ಮರಿಸಿರುವರು. ಮದ್ರಾಸಿನ ಸರಕಾರಿ ಭಾಷಾಂತರಕಾರರಾದ ಶ್ರೀ| ಬೆನಗಲ್ ರಾಮರಾಯರು ಕನ್ನಡ ಸಾಹಿತ್ಯ ಸೇವಕರಲ್ಲಿ ಹೆಸರಾದವರು. ಇವರು ಬೆಳಗಾವಿಯಲ್ಲಿ ಸೇರಲಿಕ್ಕಿದ್ದ ಪರಿಷತ್ತಿನ ಅಧ್ಯಕ್ಷರು. ಇಂಥ ಏಕನಿಷ್ಠ ಸಾಹಿತ್ಯ ಸೇವಕರ ನೇತೃತ್ವದಲ್ಲಿ ಜರಗಲಿಕ್ಕಿದ್ದ ಅಧಿವೇಶನವನ್ನು ಸಮಸ್ತ ಸಾಹಿತ್ಯಪ್ರಿಯ ಕರ್ನಾಟಕಸ್ಥರು ಚಿತ್ತೈಸಿ, ಕರ್ನಾಟಕ ಸಾಹಿತ್ಯದ ಉದ್ಧಾರ ಮಾಡಬೇಕಾಗಿ ನಾವು ಮನಃಪೂರ್ವಕ ಸೂಚಿಸುವೆವು.

೨. ಸಮ್ಮೇಲನಕ್ಕಾಗಿ ಹೋಗುವ ಪ್ರತಿನಿಧಿ-ಪ್ರೇಕ್ಷಕರ ಊಟ-ಉಳಕೊಳ್ಳುವ ವ್ಯವಸ್ಥೆಯನ್ನು ಸ್ವಾಗತ ಮಂಡಳದವರು ಅಲ್ಲಿಯ ಹ್ಯಾಸ್ಕೂಲಿನ ವಸತಿಗೃಹದಲ್ಲಿ ಮಾಡಿರುವರು. ಜೈನ-ಲಿಂಗಾಯತ-ಬ್ರಾಹ್ಮಣ ಮುಂತಾದ ಭಿನ್ನ ಭಿನ್ನ ಸಮಾಜದವರಿಗೆ ಪ್ರತ್ಯೇಕ ಏರ್ಪಾಟು ಮಾಡಲಾಗಿದೆ. ಕರ್ನಾಟಕದೊಳಗಿನ ಹೆಸರಾದ ಜೈನ-ಲಿಂಗಾಯತ-ಬ್ರಾಹ್ಮಣ ಕೀರ್ತನಕಾರರೂ, ಸಂಗೀತಕಾರರೂ ಸಮ್ಮೇಲನ ಕರ್ತರ ನಿಮಂತ್ರಣವನ್ನು ಮನ್ನಿಸಿ ಸಮ್ಮೇಲನವನ್ನು ಚಿತ್ತೈಸುವರಾಗಿ ತಿಳಿದು ಬರುತ್ತದೆ. ಸಮ್ಮೇಲನದ ಸಮಯ ಒಂದು ಪ್ರದರ್ಶನವೂ ಜರಗುವದು. ಅದರಲ್ಲಿ ಹಳೇಗನ್ನಡದ ಹಸ್ತಪ್ರತಿಗಳೂ, ತಾಮ್ರಪಟಗಳೂ, ತಾತವಾಲೆಗಳೂ, ಕರ್ನಾಟಕ ಭೂಭಾಗದ ಚಿತ್ರಗಳೂ, ನಾಣ್ಯಗಳೂ, ಇತರೇ ಗ್ರಂಥಗಳೂ ಇರಿಸಲ್ಪಡುವವು. ಸಂಕ್ಷೇಪತಃ ಹೇಳಬೇಕಾದರೆ, ಕರ್ನಾಟಕ ಸಾಹಿತ್ಯದ ಈ ವರೇಗಿನ ಸ್ಥಿತಿಯು ಈ ಪ್ರದರ್ಶನದಲ್ಲಿ ಪ್ರತಿಬಿಂಬಿತವಾಗುವದು. ಮಹನೀಯರೆಲ್ಲರೂ ಸಮ್ಮೇಲನವನ್ನು ಚಿತ್ತೈಸಬೇಕಾಗಿ ಮತ್ತೊಮ್ಮೆ ಬಿನ್ನೈಸುವೆವು.

೩. ಇದೇ ಬರುವ ಮೇ ತಿಂಗಳ ೧-೨ ತಾರೀಖುಗಳಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳದೊಳಗಿನ ಶ್ರೀ ಶ್ರೀನಿವಾಸಾಶ್ರಮದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ತೃತೀಯ ಪರಿಷತ್ತಿನ ಅಧಿವೇಶನವು ಮಹಾತ್ಮರ ಏಕನಿಷ್ಠ ಸೇವಕರಾದ ಶ್ರೀ| ದತ್ತಾತ್ರೇಯ ಬಾಲಕೃಷ್ಣ ಕಾಲೇಲಕರರವರ ಅಧಿಪತ್ಯದಲ್ಲಿ ಸೇರುವದು. ಸಭೆಗೆ ಅಖಿಲ ಭರತಖಂಡದ ಪ್ರಮುಖರೂ ಚಿತ್ತೈಸುವವರಿದ್ದಾರಾಗಿ ಸ್ವಾಗತಾಧ್ಯಕ್ಷರಾದ ಶ್ರೀ| ಲಕ್ಷ್ಮಣ ಕುಡ್ವರವರು ತಿಳಿಸಿ, ಸಭೆಗೆ ಚಿತ್ತೈಸಲು ರಾಷ್ಟ್ರೀಯ ಸಭಾಭಿಮಾನಿಗಳಿಗೆ ಅತ್ಯಾಗ್ರಹದಿಂದ ಪ್ರಾರ್ಥಿಸಿಕೊಂಡಿರುವರು. ಪರಿಷತ್ತಿನ ಅಧಿವೇಶನ ಮುಗಿದ ಮಾರನೇ ದಿನ, ಅಂದರೆ ೩ ನೇ ತಾರೀಖಿಗೆ ಮದ್ರಾಸಿನ ಶ್ರೀ| ಶ್ರೀನಿವಾಸ ಅಯ್ಯಂಗಾರರವರ ನೇತೃತ್ವದಲ್ಲಿ ಸ್ವರಾಜ್ಯ ಪಕ್ಷದ ಸಭೆಯು ಸೇರಲಿದೆ, ಮಹಿಳೆಯರ ಪರಿಷತ್ತೂ ಒಂದು ಜರುಗಲಿದೆ. ಜಿಲ್ಲಾ ಪರಿಷತ್ತಿನವರು ಸ್ವದೇಶೀ ಪ್ರದರ್ಶನವನ್ನೊಂದೂ ಏರ್ಪಡಿಸಲಿರುವರು. ಮುಂದಿನ ವಾರವು ಕಾರ್ಕಳದಲ್ಲಿ ದೇಶಸೇವಕರ ಅನುಗ್ರಹದಿಂದ ಪಾವನವಾಗುವದು. ಇಂಥ ಸಮಯದಲ್ಲಿ ನಮ್ಮಲ್ಲಿಯ ದೇಶಬಾಂಧವರು ನಮ್ಮ ನೆರೆಯಲ್ಲಿದ್ದ ಕಾರ್ಕಳಕ್ಕೆ ಗಮಿಸಿ, ದೇಶಸೇವೆಯ ಪಾಠ ಕಲಿಯಬೇಕಾಗಿ ನಮ್ಮ ಬೇಡಿಕೆಯಿದೆ.

೪. ಪ್ರಾಂತಾಧಿಪರಾದ ನಾಮದಾರ ವಿಲ್ಸನ್ ದೊರೆಗಳು ಮಿ| ಎಡಿಯವರಿಗೆ ಕೊಟ್ಟ ಶಿಫಾರಸನ್ನು ಯಾರೂ ನಿರರ್ಥಕವೆಂದೆನ್ನಬಾರದು. ಅದು ಅರ್ಥಪೂರ್ಣವಿದೆ. ಮಿ| ಎಡಿಯವರು ಜಂಗಲ ಖಾತೆಯನ್ನು ಆಳತಕ್ಕವರು. ಅವರು ಸ್ವಭಾವತಃ ಒಳ್ಳೆಯವರಿದ್ದಾರೆಂಬ ಗೃಹೀತ ಕೃತ್ಯದಿಂದ ಜಂಗಲ ಖಾತೆಯ ಆಡಳಿತೆಯೂ ಪ್ರಜಾಹಿತದ ದೃಷ್ಟಿಯಿಂದಲೇ ನಡೆದದೆಂಬದೊಂದು ಅರ್ಥ; ಅದರಿಂದ ಜಂಗಲ ದೂರುಗಳನ್ನು ಹೇಳುವವರೆಲ್ಲರೂ ಅಪ್ರಾಮಾಣಿಕರಲ್ಲಿದ್ದರೂ ಅಪ್ರಾಮಾಣಿಕರಲ್ಲೆಂಬದೊಂದು ಗರ್ಭಿತಾರ್ಥ. ದೊರೆಗಳು ಬೆನ್ನು ಬಡಿಯುವ ಅಥವಾ ದೊರೆಗಳ ಬಾಯಿಯಿಂದ ಬೆನ್ನು ಬಡಿಸುವ ಇನ್ನೊಂದು ಮುಖ್ಯ ಹೇತುವು ಜಂಗಲ ಕಮಿಟಿಯ ಅವರ ಅಧ್ಯಕ್ಷತ್ವವನ್ನು ಸ್ಥಿರಪಡಿಸುವದು. ಮಿ| ಎಡಿಯವರಿಗೆ ಜಂಗಲ ಕಮಿಟಿಯ ಅಧ್ಯಕ್ಷಸ್ಥಾನವನ್ನು ಅರ್ಪಿಸುವದು ಕಳ್ಳನ ವಶಕ್ಕೆ ತಿಜೋರಿಯ ಕೀಲಿ ಕೊಡುವಷ್ಟು (ಸೌಮ್ಯತನದಿಂದ ಹೇಳಬೇಕಾದರೆ) ದಡ್ಡತನವೆಂದು ನಾವು ಮೊದಲೇ ಪ್ರತಿಪಾದಿಸಿರುವೆವು. ಕೌನ್ಸಿಲು ಸಭಾಸದರೂ ಅವರನ್ನು ಸ್ಥಾನಭ್ರಷ್ಟ ಮಾಡಲು ಯತ್ನಿಸುತ್ತಿರುವರು. ಶ್ರೀ| ಕರ್ಕಿಯವರೂ ಅವರ ಯಜಮಾನತನವನ್ನು ನಷ್ಟಪಡಿಸಲುದ್ಯುಕ್ತರಾಗಿರುವರು. ಕಾನಡಾ ಜಿಲ್ಲೆಯನ್ನು ಸಂದರ್ಶಿಸಿ, ಮಿ| ಎಡಿಯವರು ಬಹಳ ಒಳ್ಳೆಯವರೆಂದು ದೊರೆಗಳ ತಲೆಯಲ್ಲಿ ತುಂಬಿದವರೆ, ಕೌನ್ಸಿಲು ಸಭಾಸದ ಬಳವಳಿಯು ಕಿಡಿಗೇಡಿಯೆಂದು ದೊರೆಗಳು ಕರಾ ಹೊಡೆದು ಸಭಾಸದರಿಗೆ ಸುಮ್ಮಗಿರಿಸಬಹುದು. ಇದೂ ಒಂದು ಖಾಸಗಿ ಭೆಟ್ಟಿಯ ಖಾಸಗಿ ಹೇತು ಇರಬಹುದು. ಇಲ್ಲದಿದ್ದರೆ, ಮಿ| ಎಡಿಯವರು ಬಹಳ ಒಳ್ಳೇ ಮನುಷ್ಯರೆಂಬ ಹಿತೋಕ್ತಿ ತುಂಬುವ ಕಾರಣವೇನು? ಹಿತೋಕ್ತಿ ತುಂಬಿದ್ದರೆ, ಶ್ರೀ| ಕರ್ಕಿಯವರೊಡನೆ ಸಹಜವಾಗಿ ಸಂಭಾಷಣ ಮಾಡುವಾಗ ಥಕ್ಕನೆ ಇಂಥ ಉದ್ಗಾರವು ಸಂದರ್ಭವಿಲ್ಲದೆ ಹೊರಬೀಳುತ್ತಿತ್ತೇನು?

೫. ದೇರೊಳ್ಳಿಯ ಕಟ್ಟಿನ ವಿಷಯ ಕಳೆದ ಸಂಚಿಕೆಯಲ್ಲಿ ಬರೆಯುವಾಗ ನಮ್ಮದೊಂದು ತಪ್ಪು ಗ್ರಹಿಕೆಯಾಯಿತೆಂದು ತಿಳಿಸಲು ವ್ಯಸನವಾಗುತ್ತದೆ. ರಾವಬಹಾದ್ದೂರ ಕೊಯಿಮತ್ತೂರರವರ ಕರ್ತವ್ಯಪರಾಙ್ಮುಖತೆಯಿಂದಲೇ ದೇರೊಳ್ಳಿಯ ರೈತರು ಕಷ್ಟಕ್ಕೀಡಾದರೆಂದು ನಮೂದಿಸಿದ್ದೆವು. ಈಗ ದೊರೆತ ಮಾಹಿತಿಯಮೇಲಿಂದ ಈ ವಿಷಯ ರಾವಬಹಾದ್ದೂರರ ತಪ್ಪು ಏನೂ ಇರುವದಿಲ್ಲವಾಗಿ ತಿಳಿಯುತ್ತದೆ. ಇದನ್ನು ನಮೂದಿಸಲು ನಮಗೆ ಆನಂದವಾಗುತ್ತದೆ. ರಾವಬಹಾದ್ದೂರರು ದೇರೊಳ್ಳಿಯ ಕಟ್ಟಿನ ಕುರಿತು ಯಥಾರ್ಥ ರಿಪೋರ್ಟನ್ನು ಜಿಲ್ಲಾಧಿಪತಿಗಳಿಗೆ ಸಾದರಪಡಿಸಿದ್ದರು. ಜಿಲ್ಲಾಧಿಪರು ತಮ್ಮ ಕರ್ತವ್ಯ ಮಾಡದೆ ಹೋದ್ದರಿಂದ, ನ್ಯಾಯವಾಗಿ ಸಿಗತಕ್ಕ ಸರಕಾರ ಸಹಾಯವು ದೊರೆಯಲಿಲ್ಲ. ಜಿಲ್ಲಾಧಿಪರೇ ಅಡ್ಡಬಂದು ಬಿದ್ದು ದೇರೊಳ್ಳಿಯವರಿಗೆ ಹಾನಿಪಡಿಸಿದರು. ಹೊಸ ಜಿಲ್ಲಾಧಿಪರು ಪೂರ್ವಾಧಿಕಾರಿಗಳ ನಿರ್ಣಯದಲ್ಲಿ ಕೈಹಾಕಲಿಕ್ಕೆ ಸುವದಿಲ್ಲೆಂಬ ಸುಲಭ ಉತ್ತರವನ್ನು ಕೊಟ್ಟು ಪ್ರಜೆಗಳಿಗೆ ನಿರಾಶೆಪಡಿಸದೆ ದೇರೊಳ್ಳಿಯ ಸ್ಥಿತಿಯನ್ನು ಸಂಪೂರ್ಣವಾಗಿ ವಿಚಾರಿಸಿ, ಅವರನ್ನು ಕಾಯಬೇಕಾಗಿ ನಮ್ಮ ವಿನಂತಿಯಿದೆ

ಸ್ಥಾನಿಕ ವೃತ್ತಾಂತ.

ಕುಮಟಾ— ೨೫ ಏಪರೀಲ. ಊರಲ್ಲಿ ಜ್ವರಾದಿ ರೋಗಗಳ ಮುಕ್ಕಾಮು ಇನ್ನೂ ಇಳಿದು

ಕಳೆದ ಗುರುವಾರಕ್ಕೆ ಹೊನ್ನಾವರ ಕಡೆಯ ಪತ್ತಿ ಜಾತಿಯ ಒಬ್ಬನು ತಂಗಿಯ ಗಂಡನು ಸದ್ಯಕ್ಕೆ ಕಾರವಾರದಲ್ಲಿ ಮೃತ ಹೊಂದಿದನೆಂದು ಅಲ್ಲಿ ಹೋಗಿ, ಅಲ್ಲಿಂದ ಅನಾಥಳಾದ ತನ್ನ ತಂಗಿಯನ್ನೂ, ಅವಳ ಮಕ್ಕಳನ್ನೂ ಕರಕೊಂಡು ಇಲ್ಲಿ ಬಂದನು. ಮೂರು ದಿನಗಳ ವರೆಗೆ ಸತತ ಪ್ರವಾಸ ಮಾಡಬೇಕಾಯಿತು. ಹೊಟ್ಟೆತುಂಬ ಊಟಮಾಡಲಿಕ್ಕೆ ಅನುವಾಗಲಿಲ್ಲ. ಇಲ್ಲಿ ಊಟಮಾಡ ಬಯಸಿ, ಆಸ್ಪತ್ರೆಯ ಮುಂದಿನ ಒಂದು ಹಿತ್ತಲಲ್ಲಿ ಪಾತ್ರೆ ಬೇಡಿಕೊಂಡು ಅಡಿಗೆ ಮಾಡಿದನು. ಹುಡುಗರಿಗೆ ಉಣಿಸಿ, ತಾನು ಊಟಕ್ಕೆ ಕೂತುಕೊಂಡನು. ಎರಡು ತುತ್ತು ಉಣ್ಣುವಷ್ಟರಲ್ಲಿ ಸರ್ಪವೊಂದು ಹಾರಿ ಆತನ ಎಲೆಯಮೇಲೆ ಬಿತ್ತು. ಅದನ್ನು ಹಿಂದಕ್ಕೆ ಎಡಗೈಯಿಂದ ಬದಿಗೆ ಸಾರಿದ್ದೇ; ಸರ್ಪವೊಂದು, ಭಕ್ಷ್ಯ ತಪ್ಪಿಸಿದ ಸಿಟ್ಟಿನಿಂದಲೋ ಏನೋ, ಹಾರಿ ತೀಕ್ಷ್ಣವಾಗಿ ದಂಶಮಾಡಿತು. ಬಹಳ ಉಪಾಯ ಮಾಡಿದರೂ ಆತನು ನಿಶ್ಚೇಷ್ಟನಾದನು. ಸಾಯಂಕಾಲಕ್ಕೆ ಆತನ ಶವವು ಹೊನ್ನಾವರಕ್ಕೆ ಒಯ್ಯಲ್ಪಟ್ಟಿತು. ಈತನ ಹೆಂಡರು ಮಕ್ಕಳು ಈಗ ಅನಾಥರಾದರು! ದೀನ ಬಂಧೋ, ಏನು ಅನರ್ಥವಿದು!

ಕಳೆದ ಶುಕ್ರವಾರಕ್ಕೆ ಇಲ್ಲಿಯ ಮುನಿಸಿಪಲ ಕಚೇರಿಯಲ್ಲಿ ಹೊತ್ತಿಕೊಂಡ ಗಲಭೆ. ಅಂದು ಮೆನೇಜಿಂಗ ಕಮಿಟಿ ಕೂಡಿತ್ತು. ಸಭಾಪತಿಗಳು [illegible] ವಾಸುದೇವ ಕಾಮತ ಇವರು. ಆದಿನ ಪಟ್ಟಿಕ್ಕೆ ಶಾಲೆಯಲ್ಲಿ ಒಬ್ಬ ಶಿಕ್ಷಕರನ್ನು ನೇಮಿಸುವದಿತ್ತು. ಅದಕ್ಕಾಗಿ ಇಬ್ಬರು ಅರ್ಜಿ ಮಾಡಿದ್ದರು. ಒಬ್ಬರು ರಾ| ಶೆಟ್ಟಿಯವರು; ಇನ್ನೊಬ್ಬರು ರಾ| [illegible]ರವರು. ರಾ| ಶೆಟ್ಟಿಯವರು ಶಿಕ್ಷಕರಾಗಲಿಕ್ಕೆ ವಿಶೇಷ ಪಾತ್ರತೆಯುಳ್ಳವರಂತೆ! ಕಮಿಟಿಯಲ್ಲಿ ಆ ದಿನ ಸಭಾಪತಿಗಳ ಹೊರತು ರಾ| ಉಪೇಂದ್ರಕೃ. ಭಾಗವತ, ಡಿ. ಕೇ. ಪೈ ಇವರು ಹಾಜರಿದ್ದರು. ರಾ| ಭಾಗವತರು ರಾ| ಶೆಟ್ಟಿಯವರನ್ನು ನೇಮಣೂಕ ಮಾಡಬೇಕೆಂದು ಸೂಚಿಸಿದರು. ರಾ| ಡಿ. ಕೇ. ಪೈರು ಅನುಮೋದಿಸಿ

ಕರು ರಾ| ಉಪೇಂದ್ರಪೈಯವರೂ, ಸಭಾಪತಿಗಳಾಗಿದ್ದ ರಾ| ಕೇಶಗಿರಿ ಕಾಮತರೂ ವಿರುದ್ಧ ಮತ ಕೊಟ್ಟರು. ಎರಡೂ ಕಡೆಗೆ ಸರಿ ಮತಗಳಾದವು. ಸಭಾಪತಿಗಳು ಕಾಸ್ಟಿಂಗ ವೋಟು ಯಾನೆ ಸಭಾಪತಿತ್ವದ ವೋಟನ್ನು ಕೊಟ್ಟು ರಾ| ಭಾಗವತರ ಸೂಚನೆಯನ್ನು ಕಿತ್ತೊಗೆಯಿಸಿದರು. ಕೂಡಲೆ, ಭಾಗವತರು ಮುನಿಸಿಪಲ ಕಮೀಟಿಯ ಚೆಅರಮನರಿಗೆ ಸಭಾಪತಿತ್ವದ ಕಾಸ್ಟಿಂಗ ವೋಟು ಕೊಡುವ ಅಧಿಕಾರ ಎಲ್ಲಿಂದದು? ರಾ| ಕಾಮತರು ಇರುವದೆಂದರು. ಕ್ವಾದೆಯ ಕಲಮ್ ತೋರಿಸಿರಿ ಎಂದು ರಾ| ಭಾಗವತರು ಗಟ್ಟಿ ಹಿಡಿದರು. ರಾ| ಪಿ. ಕೇ. ಪೈರು ಸಭಾಪತಿಗೆ ರಾ| ಭಾಗ್ವತರ ಸೂಚನೆಯನ್ನು ಯಾಕ ಅಲ್ಲಗಳೆಯುತ್ತೀರೆಂದು ಪ್ರಶ್ನಿಸಿದರು. "ಅದನು ದಾಸ ಕಿಟ್ಟಿದ ಮಗನೆಂದು" ಎಂದು ಉತ್ತರ ದೊರೆಕಿತು. "ಹಾಗೇ ಬರಿಯಿರಿ" ಎಂದು ರಾ| ಪಿ. ಕೇ. ಪೈರು ಸೂಚಿಸಿದರು. "ನಾನು ಕಾಸ್ಟಿಂಗ ವೋಟಿನಿಂದ ನಿಮ್ಮ ಸೂಚನೆಯನ್ನು ತಿರಸ್ಕರಿಸುತ್ತೇನೆ" ಎಂದು ರಾ| ಕಾಮತರು ವಾಂಡ ಮಾತಾಡಿದರು. "ಕಾಸ್ಟಿಂಗ ವೋಟು ಇರುವ ಕಲಮು ತೋರಿಸಿರಿ" ಎಂದು ಪ್ರಶ್ನೆ ಉತ್ಪನ್ನವಾಯಿತು. "ನಾಳೆ ತೋರಿಸುತ್ತೇನೆ" ಎಂದು ಅವಿವೇಚನ ಉತ್ತರ. "ಈ ಹೊತ್ತೇ ಈ ಸಭೆಯಲ್ಲೇ ಆ ಪ್ರಶ್ನೆಯು ನಿರ್ಣಯವಾಗಬೇಕು" ಎಂದು ವಿರೋಧಕರು ಬಿಗಿಹಿಡಿದು ಕೂತುಕೊಂಡರು. ಆಗ ಇಷ್ಟೊತ್ತಿನ ತನಕ ಸುಮ್ಮನೆ ಕೂತುಕೊಂಡಿದ್ದ ರಾ| ಉಪೇಂದ್ರ ಪೈರು ನುಡಿದದ್ದೇನಂದ-

"ವಕೀಲ ಪೈರು ಪತ್ರಿಕೆಯಲ್ಲಿ ಒಂದು ಹೇಳಿದ್ದಾರೆ ತಪ್ಪದಲ್ಲಿ ಅದಕೆ ಕ್ಷಮವಾಗಿ ವಕ್ತೃಂದು ಆದರವು ಉಪಸ್ಥಿತನಾದೆನು. ರಾ| ಕೇಶಗಿರಿ ಕಾಮತರು ಸ್ಕೂಲ ಬೋರ್ಡ ಕಮೀಟಿಯ ಮೆಂಬರರು ಆಗ್ಗೆ ಕೆಲವು ದಿವಸಗಳ ಮುಂಚೆ ಇದೇ ವಿಷಯದ ಚರ್ಚೆಗೆ ಬಂದಾಗ ರಾ| ಬಿ. ಕಿಣಿಯವರು ಕಿಟ್ಟಪ್ಪನವರ ವಿಶೇಷ ಖಾದ ಸಲೆಂದು ರಾ| ಕಾಮತರು ಅಭಿಪ್ರಾಯ ಪ್ರಗಟಿಸಿದ್ದರು. ಆ ಠರಾವನ್ನು ತೆಗೆದು ರಾ| ಪಿ. ಕೇ. ಪೈರು ತೋರಿಸಿದರು. "ನಾನು ಹಾಗೆ ವೋಟು ಕೊಟ್ಟಿದ್ದೇನೆ, ಎಲ್ಲಿದೆ ?" ಎಂದು ರಾ| ಕಾಮತರು ಕೇಳಿದರು. ರಾ| ಪಿ. ಕೇ. ಪೈರು ಠರಾವನ್ನು ತೆಗೆದು ತೋರಿಸಿದರು. ಠರಾವು ಸರ್ವಾನುಮತದಿಂದ ಮಂಜೂರಾಗಿತ್ತು. 'ಸರ್ವಾನುಮತದಿಂದ' ಎಂದು ಓದಿದದ್ದು ತಪ್ಪು. 'ಅದನ್ನು ಕೂಡ' ಎಂದು ಕಾರಕೂನರಿಗೆ ರಾ| ಕಾಮತರು ತಿದ್ದ ಹೇಳಿದಂತೆ ಹುಕುಮು ಮಾಡಿದರು. 'ಬೊಟ್ಟು ಕೂಡಿಸಬೇಡಿರಿ ಬೊಟ್ಟಿಯಿಂದ ದರಾಗೆ ಪ್ರತಿ ದೊರಕುವದಿಲ್ಲ ಎಲ್ಲಾ ನೀಲಿದ ಹಾಕಬೇಡಿರಿ' ಎಂದು ರಾ| ಪಿ. ಕೇ. ಪೈರು ಸಮಾಧಾನವಾಗಿ, ಮೂಲ ಸೂಚನೆಯ ಅರ್ಥವಿವರ ಕೇಳಿದರು. ರಾ| ಕಾಮತರು ಕಾಸ್ಟಿಂಗ ವೋಟಿನಿಂದ ಸೂಚನೆಯನ್ನು ಕಳೆದರು. ಮುನಿಸಿಪಾಲಿಟಿಯು ಸಂತೆ ಪೇಟೆಯಾಯಿತು. ಆಗ ಮುನಿಸಿಪಾಲಿಟಿಯ ಅಧ್ಯಕ್ಷರಾದ ಮಿ| ಗಾವಸ್ಕರರು ಆಗ ಆಫಿಸಿನಲ್ಲಿದ್ದರು. ಎಲ್ಲ ತಮಾಷೆ ಕೇಳುತ್ತಿದ್ದರು. (ಟೀಪ್ಪ — ರಾ| ದಾ. ಸ. ಶೆಟ್ಟಿ ಎಂಬವರು ಮುನಿಸಿಪಾಲಿಟಿಯಲ್ಲಿ ನೌಕರರಿರುವರು. ರಾ| ಸುಕುರ್ಪೈರು ಗಿಬ್ಬ ಹಾಸ್ಕೂಲಿನ ಶಿಕ್ಷಕರೊಬ್ಬರು)

ಗ್ಯಾಕದೇವಿಯ ಛತ್ರಮಂಡಳಿಗಳು ಹರವಟ್ಟಿಯ ದ ಕಮಾಟಿಯಲ್ಲಿ ಸ್ವಾದನವಾಗಿವೆ. ಪೋಲೀಸರು ಕಣ್ಣು ಮುಚ್ಚು ಕೂರುತರೋ?, ಅಥವಾ ನಿಜವಾಗಿ ಅಂಧರೋ? ಸಬ್ ಇನ್ಸ್ಪೆಕ್ಟರರು ಸ್ವಲ್ಪ ಜಾಗ್ರತರಾಗಲಿ. ಪೋಲೀಜ ಸ್ಟೇಟರೂ ವಿಶೇಷ ದಕ್ಷರಾಗಬೇಕು.

ಶ್ರೀಗೋಕರ್ಣ ಕ್ಷೇತ್ರದ ಶ್ರೀ ಮಹಾಬಲೇಶ್ವರನ ಪೂಜೆಗೆ ಕಳೆದ ಶನಿವಾರ ಪ್ರಾತಃಕಾಲ ಅರ್ಚಕರು ಹೋದಾಗ ಶ್ರೀದೇವರ ಲಿಂಗವೆಲ್ಲ ರಕ್ತದಿಂದ ತುಂಬಿಹೋಗಿತ್ತು, ಬಳಿಯಲ್ಲಿ ಒಂದು ಶವವಿತ್ತು. ಚೂರಿಯೊಂದೂ ಬಿದ್ದಿತ್ತು. ಅದೇ ದಿನ ಸಮುದ್ರ ದಂಡೆಯ ಮೇಲೂ ಒಂದು ಹೆಣ ದೊರಕಿತು. ಶವಗಳು ಯಾರದೆಂದು ಪತ್ತೆಯಿಲ್ಲ.

ನಿನ್ನೆ ಸಾಯಂಕಾಲ ಕಾರವಾರ ಹಾರಿಯು ಸಂಕದಿಂದ ಬಿಡಗುವ ಭಾವಿ ಸಂಕಟವನ್ನರುಹಲು ಎಗ್ಸಿಕ್ಯುಟಿವ ಇಂಜನಿಯರರಾದ ಮಿ|| ಗುಜ್ಜರರವರ ಕಡೆಗೆ ಇಲ್ಲಿಯ ಒಂದು ಶಿಷ್ಟಮಂಡಳವು ಹೋಗಿತ್ತು. ಶ್ರೀ| ಮಾಧವರಾವ ಶ್ಯಾನಭಾಗ, ಗೋವಿಂದ ಸುಬ್ಬಯ್ಯ ಶ್ಯಾನಭಾಗ, ಅಣ್ಣಪ್ಪ ರಾಮಚಂದ್ರ ಪೈ, ಸುಬ್ರಾಯ ಶಿವಪ್ಪ ನಾಯಕ, ವೈಕುಂಠ ಶಾಂತಯ್ಯ ನಾಯಕ. ಇಷ್ಟು ಮಂದಿ ಇದ್ದರು. ಮಿ|| ಗುಜ್ಜರರ ದರ್ಶನ ಪಡೆದರು. ಮಂಡಳದವರು ಯೋಜನೆಯಂತೆ ಸಂಕಕ್ಕೆ ಮೂರು ಮೂರು ಫೂಟು ಅಗಲಳತೆಯ ಎಂಟು ಗಂಡಿಗಳಿಂದ ನೀರು ಸಾಗಿಹೋಗದೆ ಕೆಳಬಾಗ ಗ್ರಾಮದ ನರೀಗುಂಟದ ಗಜನಿಗಳಿಗೆ ಪೆಟ್ಟಾಗುವದೆಂದು ಸಾಧಾರ ಪ್ರತಿಪಾದಿಸಿದರು. "ಕಂಟ್ರಾಕ್ಟ ಕೊಟ್ಟು ಹೋಗಿದೆ; ಪ್ಲೇನ ಎಸ್ಟಿಮೇಟಿನಂತೆ ಕೆಲಸ ನಡಿಸಬೇಕಾಗಿದೆ" ಎಂಬರ್ಥದ ಮಾತೆಯ ಆ ಪಟಿಸಗಳಿಗೆ ಮಿ| ಗುಜ್ಜರರು ನಿವೇದಿಸಿದರು.

ಶಿಷ್ಟಮಂಡಳದವರು ಗಂಡಿಗಳ ಸಂಖ್ಯೆಯನ್ನಾದರೂ ಇಮ್ಮಡಿ ಮಾಡಿರಿ. ಅಂತು ನೀರಿನ ಪ್ರವಾಹಕ್ಕೆ ತಡೆಯಾಗದಂತೆ ನೀರು ಸುಸೂತ್ರವಾಗಿ ಹೋಗಲು ಯೋಜಿಸಿರಿ" ಎಂದು ವಿನ್ಯಸಿಕೊಂಡರು. ಮಿ| ಗುಜ್ಜರರವರಿಗೆ ಶಿಷ್ಟಮಂಡಳದ ಹೇಳಿಕೆಯು ವಾಸ್ತವವೆಂದು ತೋರಿ, ಆ ಬಗ್ಗೆ ಪಿ. ಡಬ್ಲ್ಯೂ. ಡಿ. ಆಫೀಸದವರಿಗೆ ಬರಕೊಂಡು ಯುಕ್ತ ಕೂಡ ಬದಲಾವಣೆಗಳನ್ನು ಮಾಡುತ್ತೇನಾಗಿ ಅಭಿವಚನವನ್ನಿತ್ತಿರುವರು. ಶಿಷ್ಟಮಂಡಳದವರು ಕೃತಜ್ಞರಾಗಬೇಕು.

ಈ ಹಂಗಾಮಿನ ಕೊನೆಯ ಆಗಬೋಟಿಯು ಇದೇ ಬರುವ ೧೫ನೇ ಸೋಮವಾರಕ್ಕೆ ಮುಂಬಯಿಯಿಂದ ಹೊರಡುವದೆಂದು ತಿಳಿದು ಬರುತ್ತದೆ.

ಸಾಭಾರ ಸ್ವೀಕಾರ

ಕನ್ನಡಿಗ—ವಾರಪತ್ರಿಕೆ ಸಂವತ್ಸರ ಪ್ರತಿಪದೆಯಿಂದ ಪ್ರಕಟವಾಗ ಹತ್ತಿದೆ. ಸಂಪಾದಕ ಮತ್ತು ಪ್ರಕಾಶಕ ಮಂಗಳವೇಡ ರಾಜೋಪಾಧ್ಯರ ಮಕ್ಕಳಾದ ಶ್ರೀ ಶ್ರೀನಿವಾಸರಾವ. ವಿದ್ಯಾರಣ್ಯ ಮುದ್ರಾಮಂದಿರ ಬಾಗಲಕೋಟೆ. ವಾರ್ಷಿಕ ವರ್ಗಣಿ ಅಂಚೆ ವೆಚ್ಚಸಹಿತ ರೂಪಾಯಿ ೧-೧೪-೦ ಅಥವಾ ೧೫ ಸಂಚಿಕೆಗೆ ಕಡಿಮೆಯಾಗದ ೧೬೦೦೦ ಪಾರ್ಮ ಕ್ಯಸಲು

ವಸಂತ—ಕನ್ನಡ ಮಾಸಪತ್ರಿಕೆ. ೩ನೇ ವರುಷದ ೪ನೇ ಸಂಚಿಕೆ ಸಂಪಾದಕ ಮತ್ತು ಪ್ರಕಾಶಕ—ಶ್ರೀ| ಶಿವರಾಮ. ಕಾರಂತ ಕೋಟ, ವಸಂತ ಕಾರ್ಯಾಲಯ ಕುಂದಾಪುರ ವಾರ್ಷಿಕ ವರ್ಗಣಿ ಅಂಚೆ ವೆಚ್ಚ ಸಹಿತ ರೂಪಾಯಿ ೨-೪-೦.

ಅಧ್ಯಾತ್ಮ ಪ್ರಕಾಶ— ಎರಡನೇ ವರುಷದ ಪ್ರಥಮ ಸಂಚಿಕೆ ಕನ್ನಡ ಮಾಸಪತ್ರಿಕೆ ಸಂಪಾದಕ ಮತ್ತು ಪ್ರಕಾಶಕ — ಶ್ರೀ| ವೈ. ಸುಬ್ಬರಾವ ಅಧ್ಯಾತ್ಮ ಪ್ರಕಾಶಕಾರ್ಯಾಲಯ, ೩ನೇ ಬೀದಿ ಚಾಮರಾಜಪೇಟೆ ಬೆಂಗಳೂರು ಸಿಟಿ

ಸಿಸಿರ್—ಇಲ್ಲಿಯ ಲೋಕಪ್ರಿಯ ಡಾಕ್ಟರರಾದ ಕ್ಯಾಪ್ಟನ್ ಡಬಳೆಯವರು ವರ್ಗವಾಗಿ ಹೋಗಿರುವರು. ಇವರು ಶಾಂತ ಸ್ವಭಾವದವರಿದ್ದು ಮೊಲಾಕ ಆಸ್ಪತ್ರೆಗೆ ಔಷಧಿಗಾಗಿ ಬಂದ ಜನರು ಸಹಜವಾಗಿ ಇವರ ಸುತ್ತ ನೆರೆಯುತ್ತಿದ್ದರು. ರೋಗಿಯನ್ನು ತೋರಿಸುವದಕ್ಕಾಗಿ ಒಮ್ಮೆ ಮನೆಗೆ ಒಯ್ದರೆ ಸಾಕು. ಅವನು ಪೂರ್ಣ ಗುಣವಾಗುವವರೆಗೆ ನಡು ನಡುವೆ ಎಷ್ಟೋ ಸಾರೆ ತಾವಾಗಿಯೇ ಹೋಗಿ ನೋಡಿಬರುತ್ತಿದ್ದರು. ಆದರೆ ಆ ಬಗ್ಗೆ ಫೀ ತೆಗೆದುಕೊಳ್ಳುತ್ತಿದ್ದಿಲ್ಲ. ಇದು ಸಾಮಾನ್ಯ ಜನರ ಮಾತಾಯಿತು. ರೋಗಿಯು ಬಡವನಿದ್ದರಂತೂ ಅವನ ಕಡೆಗೆ ವಿಶೇಷ ಲಕ್ಷಕೊಡುತ್ತಿದ್ದರು. ಹಳ್ಳಿಯ ಜನರಿಗೆ ಇವರಿಂದ ಬಹಳ ಸಹಾಯವಾಗುತ್ತಿದ್ದಲ್ಲದೆ ಶಹರದ ಆರೋಗ್ಯರಕ್ಷಣ ವಿಷಯದಲ್ಲಿಯೂ ಇವರು ಮುನಿಸಿಪಾಲಿಟಿಯವರಿಗೆ ವಿಶೇಷ ನೆರವಾಗುತ್ತಿದ್ದರು. ಒಟ್ಟಿನಲ್ಲಿ ಇವರು ಯಾವಾಗಲೂ ಕರ್ತವ್ಯದಕ್ಷರಾಗಿದ್ದು ಜನರ ಆದರಕ್ಕೆ ಪಾತ್ರರಾಗಿದ್ದರು. ಹುದ್ದೆಗಿಂತ ಪ್ರೇಮವೇ ಅವರ ಇಷ್ಟದೇವತೆಯಾಗಿತ್ತು. ಹೀಗಾಗಿ ಅವರು ಊರು ಬಿಟ್ಟು ಹೋಗುವದರ ಮೊದಲು ೧೫ ದಿನಗಳವರೆಗೆ ಆ ನಂತ್ರಿಗಳ ಸುಗ್ಗಿಯಾಗಿತ್ತು. ಒಂದೊಂದು ದಿನ ಅವರಿಗೆ ೩-೪ ಕಡೆಗೆ ಊಟ ಫಳಾಹಾರಾದಿಗಳ ಉಸ್ತವನ್ನು ಮಾಡಬೇಕಾಗುತ್ತಿತ್ತು. ಆದರೆ ಒಬ್ಬರಿಗೂ ಅಸಮಾಧಾನಗೊಳಿಸಲಿಲ್ಲ. ಇಂಥವರ ವರ್ಗದಿಂದ ಇಡೀ ತಾಲೂಕಿನ ವಿಶೇಷವಾಗಿ ಶಹರದ ಜನರಿಗೆ ಬಹಳೇ ಹಾನಿಯಾಯಿತೆಂತ ಹೇಳಲಿಕ್ಕೇನೂ ಅಡ್ಡಿ ಇಲ್ಲ.

ಮಾವಿನಹಣ್ಣುಗಳು ಈಗ ಬಾರ ಪ್ರಾರಂಭ ದೊಡ್ಡ ಮೊಂದು ಗೊಂಡಿ.

ಮುಹಮ್ಮದೀ ಬಾಂಧವರು ಚನ್ನಪಟ್ಟಣದೊಳಗೆ ಮಸೀದೆಯಲ್ಲಿ ಒಂದು ಸಾರ್ವಜನಿಕ ಧರ್ಮಾರ್ಥ ವಾಚನಾಲಯವನ್ನು ತೆರೆದಿರುವರು.

ದನ-ಕರುಗಳ ರೋಗವು ಇನ್ನೂ ಕಡಿಮೆಯಾಗಿಲ್ಲ.

ಮೋಡಗಳು ದಿನಾಲು ಆಗಹತ್ತಿವೆ. ಬಂದರಕು ಮಳೆಯಾಯಿತು.

ವೃತ್ತಸಾರ.

— ಮುಲ್ತಾನಿನಲ್ಲಿ ಕಳೆದ ಗುರುವಾರಕ್ಕೆ ಒಂದು ಕೂಸು ಹುಟ್ಟಿದೆ. ಅದಕ್ಕೆ ಎರಡು ತಲೆ, ಎರಡು ಮೂಗು, ನಾಲ್ಕು ಕಣ್ಣು, ನಾಲ್ಕು ಕಿವಿ. ಈ ಕೂಸು ನೋಡಲು ನೂರಾರು ಮಂದಿಗಳು ತಂಡುಗಟ್ಟಿ ಹೋಗುತ್ತಿರುವರು. ಅದ್ಭುತ! ಅಗಾಧ ಲೀಲೆ!!

— ಇಟಾಲಿಯ ಈಜಿಸಿಜವಿಲಿ ಹಾಗು ಬಾಲ್ಕನ ಪ್ರದೇಶದೊಳಗಿನ ಎಂಟನ ಕಾಂಡಿ ನಗರ ಎಂಬ ಇಬ್ಬರು ಸ್ವಾಕಲಿನಿಂದ ಭೂಪ್ರದಕ್ಷಿಣೆ ಮಾಡಲಿಕ್ಕೆ ಟೊಂಕ ಕಟ್ಟಿರುವರು. ಇವರು ೧೯೨೦ನೇ ಇಸ್ವಿಯಲ್ಲಿ ಹೊರಟವರು. ಇವರು ಕಳೆದ ವಾರ ಅಮೃತಸರದಲ್ಲಿ ಬಂದ. ಮುಟ್ಟಿರುವರು. ಹಿಂದುಸ್ತಾನದಲ್ಲಿ ಅವರಿಗೆ ಚಲೋ ಸತ್ಕಾರವಾಯಿತಂತೆ!

— ಮೈಸೂರ ಸಂಸ್ಥಾನದ ಕುಡೂರಜಿಲ್ಲೆಯ ಲೋಕಲ್ ಬೋರ್ಡಿನವರು ತಮ್ಮ ಪ್ರಾಥಮಿಕ ಹಾಗು ಮಾಧ್ಯಮಿಕ ಶಾಲೆಗಳಲ್ಲಿ ನೂಲುವ ಹಾಗು ನೇಯುವ ಕಲೆಗಳನ್ನು ಕಡ್ಡಾಯದಿಂದ ಸಮಸ್ತ ವಿದ್ಯಾರ್ಥಿಗಳಿಗೆ ಕಲಿಸಬೇಕೆಂದು ಠರಾವು ಮಂಜೂರು ಮಾಡಿರುವರು.

— ಮುಂಬಯಿಯಲ್ಲಿ ಗೌರಕಾಯದ ಸೈನಿಕನೊಬ್ಬನಿಗೆ ಚಳಜ್ವರದಿಂದ ರಕ್ತವೆಲ್ಲ ನೀರಾಗಿ ಪರಿಣಮಿಸಿತು. ಹೊಸರಕ್ತವನ್ನು ಮೈಯಲ್ಲಿ ಸೇರಿಸಿದರೆ ರೋಗಿಯು ಬದುಕಬಹುದೆಂದು ಡಾಕ್ಟರರ ಮತವಾಯಿತು. ಆಗ ಅನೇಕ ಸಹಗಾಮಿ ಸೈನಿಕರು ಮುಂದಾದರು. ಡಾಕ್ಟರರು ಒಬ್ಬನ ಮೈಯೊಳಗಿಂದ ಒಂದು ರತ್ತಲು ರಕ್ತವನ್ನು ತೆಗೆದು ರೋಗಿಯ ಮೈಯಲ್ಲಿ ಸೇರಿಸಿದರು. ರೋಗಿಯು ಗುಣಹೊಂದುತ್ತಿರುವನು. ಏನು ಸ್ವಾರ್ಥತ್ಯಾಗ! ಏನು ಬಂಧುತ್ವವು!

— ಗುಂಟೂರ ಮುನಿಸಿಪಾಲಿಟಿಯು ೩೧ ಶಾಲೆಗಳೊಳಗಿನ ೩೫ ಮಂದಿ ಶಿಕ್ಷಕರು ದರತಿಂಗಳಿಗೆ ೨೦೦೦ ವಾರು ನೂಲು ಕಳುಹುತ್ತಾರೆ.

— ಗುಜರಾಥ ಪ್ರಾಂತದ ರಾಜಕೋಟದಲ್ಲಿ ವಧೂ, ದಕ್ಷಿಣೆ ಕೊಳ್ಳುವ ರೂಢಿಯಿದೆ. ಒಬ್ಬವನಿಗೆ ಒಬ್ಬ ಹೆಣ್ಣುಮಗಳಿದ್ದಳು. ಅವನು ಎಲ್ಲರಿಗಿಂತಲೂ ಹೆಚ್ಚು ಹಣ ಕೊಟ್ಟ ಒಬ್ಬ ಮುದುಕನಿಗೆ ಮದುವೆ ಮಾಡಿಕೊಟ್ಟನು. ಹುಡುಗಿಯು ಎಷ್ಟು ಹೇಳಿದರೂ ಗಂಡನು ಕೇಳದೆ ಮುದುಕನಿಗೆ ಮಗಳನ್ನರ್ಪಿಸಿದನು. ಇದರಿಂದ ಹುಡುಗಿಯು ಬೇಸರಗೊಂಡು ಚಿಮಣಿ ಎಣ್ಣೆಯನ್ನು ಮೈ ಮೇಲೆ ಸುರಿಕೊಂಡು ಜೀವ ಕೊಟ್ಟಳು.

— ಅಖಿಲ ಭರತ ಖಂಡದಲ್ಲಿ ೧೩೭ ಕ್ರೈಸ್ತ ಮತದ ಧರ್ಮೋಪದೇಶಕ ಸಂಸ್ಥೆಗಳಿದ್ದು ಅವುಗಳ ವಿದ್ಯಮಾನ ೪೦೦ ಚಿಕಿತ್ಸಾಲಯಗಳೂ, ೧೪೩ ಅನಾಥಾಲಯಗಳೂ, ೮೮ ವೃತ್ತಪತ್ರಿಕೆಗಳೂ, ೪೩ ಅಚ್ಚುಕೂಟಗಳೂ ೬೧೦ ಇಂಗ್ಲಿಷ ಶಾಲೆಗಳೂ, ೧೧೬ ಔದ್ಯೋಗಿಕ ಶಾಲೆಗಳೂ ೫೦ ಕಾಲೇಜುಗಳೂ ೬೧ ಟ್ರೇನಿಂಗ ಶಾಲೆಗಳೂ ನಡೆಯುತ್ತಿವೆ. ೪೦೦ ಆಸ್ಪತ್ರೆಗಳಲ್ಲಿ ೧೫೦೦ ಡಾಕ್ಟರರು ಇರುವರು. ಕ್ರೈಸ್ತಮತ ಪ್ರಸಾರಕರ ಧರ್ಮನಿಷ್ಠೆ ನೋಡಿರಿ.

— ಬಲೂಚಿಸ್ತಾನದ ಕಾರ್ಯಸ್ಥಾನದಲ್ಲಿ ದೊಂಬಿಯಾಗಿ ಆಂಗ್ಲೋ ಸರಕಾರದವರು ಅಪರಾಧಿಗಳ [illegible] ಮಾಡಿ ೨೭ ಮಂದಿಗಳನ್ನು ಗಲ್ಲಿಗೇರಿಸಿದರು.

[illegible] ಮಹಾತ್ಮರು ಐದು ವಾರಗಳ ವರೆಗೆ ಬಂಗಾಲದಲ್ಲಿ ಪ್ರವಾಸ ಮಾಡುವರು. ಕಲಕತ್ತೆಗೆ ಮೇ ೧ ನೇ ತಾರೀಖಿಗೆ ಮುಟ್ಟುವರು. ಮಹಾತ್ಮರು [illegible] ಈಗ ಪ್ರಕೃತಿ ನೆಟ್ಟಗಿದೆ.

— ೧ ಅಬ್ಜ ಮೋಂಬತ್ತಿ ಶಕ್ತಿಯುಳ್ಳ ದೀಪವೊಂದು [illegible]ಪಡಿಸಲ್ಪಟ್ಟಿದೆ. ಈ ದೀಪವು ವಿಮಾನುಗಳಿಗೆ ಬೆಳಕು [illegible] ೫೦೦ ಮೈಲು ಆಚೆ ಈಚೆ ಇದು [illegible] ಆಕಾಶವ ನಿಂತ್ಯವಿರಬೇಕು.

— ಸ್ಪೇನದಲ್ಲಿಯೂ ದೊಂಬಿ. ದೊಂಬಿ ಮಾಡುವ [illegible]ಗಳ ಮೇಲೆ ಗುಂಡು ಬಗೆದು ಹೋದ ವೈಮಾನಿಕ [illegible]ರೆ ಕೆಳಗಿನಿಂದ ದಂಗೆಗಾರರು ಗುಂಡು ಹಾರಿ ಅವರನ್ನು ಕೊಂದರು.

— ಬಲ್ಗೇರಿಯಾದಲ್ಲಿ ಬೇಹಾಯ ವರ್ಗದವರು ದಂಗೆ [illegible]ಸಿದ್ದರು. ಅರಮನೆ ಮೇಲೆ ಗುಂಡು ಹಾರಿಸಿ [illegible] ಗುಂಡು ತಪ್ಪಿತು. ಬಳಿಕ ಸೇನಾಪತಿಗಳನ್ನು ಕೊಂ[illegible] [illegible] ಜಗಳದಲ್ಲಿ ಸೇನಾಪತಿಗಳ ಉತ್ತರ ವಿಧಿಯು [illegible] ಜನ ಸಂದಣಿಯಾದಾಗ ಕ್ರಾಂತಿಕಾರಕರು [illegible] ಹಾಕಿ ನೂರಾರು ಮಂದಿಗಳನ್ನು ಕೊಂದರು. [illegible] ಕ್ಯಾದೆಯೂ ಅಮಲಿನಲ್ಲಿ ಬಂದಿದೆ. ೧೦,೦೦೦ [illegible] ಸೈನಿಕರು ವಿಗಿಲಾಗಿರುವರು.

— ಆ ದಿವಸ ದಿನದಲ್ಲಿ ಪೋಲೀಸ ಇನಸ್ಪೆಕ್ಟರ [illegible] ಪೋಲೀಸ ಇನಸ್ಪೆಕ್ಟರ ಬೆಂಟ ಇವರ [illegible] ಹೆಂಡರು ಮಕ್ಕಳು ನಿತ್ಯ ಜಗಳಾಡುತ್ತಿದ್ದರು. [illegible] ಹೆಂಡರಲ್ಲಿ ಜಗಳವಾಯಿತು. ಕೋಪಿಷ್ಟನಾದ [illegible]ರವರ ಪತ್ನಿ [illegible] ಮೇಲೆ ಕೈ [illegible] ಮೂರು ಗುಂಡಿ ರಿವಾಲ್ವರ [illegible] ಗುಂಡಿನಿಂದ ಹೊಡೆ ಕೊಳ್ಳಲಾಯಿತು. ಬೆಂಟರ ಪತ್ನಿಯವರು ಜಸಿಲು ಮಾಡಲು, [illegible] ತಮ್ಮ ಬಂಧುಗಳನ್ನು ಆಂಕೆಯ [illegible] ದ್ವಾರವಿಲ್ಲೆಂದು ಕದಾ ಹೊಡೆದು, ಇಂಥ ಪ್ರಸಂಗದಲ್ಲಿ ಈ ಕಲಹವನ್ನು ಉದಯೋಗಿಸಬಾರದೆಂದು [illegible] ಕಳಕೋರ್ಟಿನ [illegible] ದವಿಸಿದರು. ಪ್ರಜಾಪತ್ರಿಕಾ ಬಲ್ಲದ ಪೋಲೀಸರವರ

— ರಂಗೂನಿನಲ್ಲಿ ಕಳೆದ ೨೧ ನೇ ತಾರೀಖಿಗೆ ಬೆಂಕಿ [illegible] ೪೦ ಮನೆಗಳು ಸುಮಾರು [illegible] ಸುಮಾರು ೪೦೦೦೦ ರೂಪಾಯಿಗಳ ಹಾನಿ.

— ಅಮೇರಿಕೆಯ ಉತ್ತರ ಭಾಗದ [illegible] ದಲ್ಲಿ ಜಹಾಜದ ಒಂದು ದೊಡ್ಡ ಹಡಗವು ಮುಳುಗಿ ೪೦ ಮಂದಿ ಖಲಾಸಿ, ಸಾಮಗ್ರಿ ಸಹಿತ ಇಡೀ ಹಡಗವು ಮುಳುಗಿಹೋಯಿತು.

— ನೋರ್ಥ ವೆಸ್ಟರ್ನ ರೇಲ್ವೆ ಕಂಪನಿಯಲ್ಲಿ ೩೦೦೦೦ ಮಂದಿಗಳು ಸಂಪು ನಡಿಸಿರುವರು.

— ಪಂಡಿತ ಮೋತೀಲಾಲ ನೆಹರೂರವರ ೭೪ ನೇ ಹುಟ್ಟಿದ ದಿನದ ಸಮಾರಂಭವು ಪಂಡಿತಜೀಯವರ ಅಲಹಾಬಾದಿನೊಳಗಿನ ಆನಂದ ಭುವನದಲ್ಲಿ ಉತ್ಸಾಹದಿಂದ ಕಳೆದ ೨೦ ನೇ ಸೋಮವಾರಕ್ಕೆ ನೆರವೇರಿತು. ಅನೇಕ ಮಿತ್ರರೂ, ಪ್ರಶಂಸಕರೂ ಪಂಡಿತಜೀಯವರಿಗೆ ಅಭಿನಂದಿಸಿ ದೀರ್ಘಾಯುಷ್ಯವು ಪ್ರಾಪ್ತವಾಗಲೆಂದು ಹರಸಿದರು.

— ದಿಲ್ಲಿಯ ಅಸೆಂಬ್ಲಿಯ ಕಾಂಗ್ರೆಸ್ಸ ಪಕ್ಷದಲ್ಲಿದ್ದ ಬಾಬು [illegible] ರಾಯ, ಸತ್ಯೇಂದ್ರ ಚಂದ್ರ ಮಿತ್ರ ಇವರು ಕೌನ್ಸಿಲಿನಲ್ಲಿ ಗೈರ ಹಾಜರಿದ್ದ ಬಗ್ಗೆ ಅವರ ಸಭಾಸದತ್ವವು ರದ್ದಾಗಿತ್ತಷ್ಟೇ. ಈಗ ಅವರು ಹೊಸ ಇಲೆಕ್ಷನಿನಲ್ಲಿಯೂ ಉಮೇದ್ವಾರರಾಗಿ ನಿಂತಿರುವರು. ದೇಶಬಂಧುಗಳು ಅವರನ್ನೇ ಆರಿಸಿ, ಸರಕಾರದ ಅಪಕೃತ್ಯವನ್ನು ನಿಷೇಧಿಸಲು [illegible] ಮಾಡಿರುವರು. ದೇಶಬಂಧುಗಳು ಪ್ರತ್ಯಕ್ಷ [illegible]ಕ್ಕಾಗಿ ವಿಲಾಯತಿಗೆ ಹೋಗಲು ಅನುಕೂಲವಾಗದೆ ಇದ್ದುದರಿಂದ ಅಲ್ಲಿಗೆ ಹೋಗಲಿಕ್ಕಾಗಲಿಲ್ಲ. ಶ್ರೀ ಸತ್ಯೇಂದ್ರ ಮಿತ್ರರವರು ಪ್ರತಿಸ್ಪರ್ಧಿಗಳಿಲ್ಲದೆ ಆರಿಸಲ್ಪಟ್ಟಿರುವರು.

— ಫೋರ್ಡ ಮೋಟರ ಕಂಪನಿಯ ಮಾಲೀಕರಿಗೆ ೧೯೩೪ ನೇ ಇಸ್ವಿಯ ವರ್ಷದ ಬಾಬತು ೩ ಕೋಟಿ ೧ ಲಕ್ಷ ಹಣವು ನಷ್ಟವಾಗಿದೆ. ವರ್ಷಕ್ಕೆ ಮೂರು ಕೋಟಿ! ಅಬ್ಬಬ್ಬ!

— ಶಿಕ್ಷಣ ಕಮಿಟಿ ಗುಂಡಪ್ಪರ ಪ್ರಬಂಧ ಕಮಿಟಿಯವರು ನಾಭಾ ಜೈಲಿನಲ್ಲಿ ಅಕಾಲಿಗಳ ಮೇಲೆ ನಡಿಸಿದ ಅಮಾನುಷ ಅತ್ಯಾಚಾರಗಳನ್ನು ಸರ್ಕಾರಿ ವರದಿ ಬಿಟ್ಟ ದೊರೆಗಳಿಗೆ ತಿಳಿಸಿರುವರು.

— ಅಕೋಲೆಯಲ್ಲಿ ಲೋಕಮಾನ್ಯರ ಸ್ಮಾರಕಕ್ಕಾಗಿ ಲೋಕಮಾನ್ಯ ನಾಟಕಗೃಹವೊಂದು ಕಟ್ಟಲ್ಪಟ್ಟಿದೆ. ಅದರ ಉದ್ಘಾಟನ ಸಮಾರಂಭವು ಕಳೆದ ಎಪ್ರಿಲ್ ೧೩ ನೇ ತಾರೀಖಿಗೆ ನೇರವೇರಿತು.

— ಸಂಯುಕ್ತ ಪ್ರಾಂತದ ಗೋಂಡಾ ಜಿಲ್ಲೆಯಲ್ಲಿ ಪ್ರಚಂಡ ಸೊಂಟರ ಗಾಳಿ ಎದ್ದು, ಅನೇಕ ಮನೆಗಳಿಗೆ ಪೆಟ್ಟು ಬಿತ್ತು ೩ ತಿಂಗಳ ಹಸುಳೆ ಹಾರಿ ಹೋದವು.

— ಶಿಕ್ಷಿಸಿನಲ್ಲಿ ದಂಗೆಯಾದ್ದರಿಂದ ಈಗ ಸ್ವಲ್ಪ ಶಾಂತ ವಾಗಿದೆ.

— ಸಿಂಧ ನದಿಯ ಬ್ಯಾರೇಜಿನಲ್ಲಿ ಅಮೇರಿಕೆಯಿಂದ ಪ್ರಶಾಂತ ಯಂತ್ರಗಳು ಎಪ್ರಿಲ್ ೧೪ ನೇ ತಾರೀಖಿಗೆ ಕಾಲುವೆ ಆರಂಭಿಸಿದ್ದನ್ನು ನೋಡಲಿಕ್ಕೆ ಅಲ್ಲಿ ರೈತರು ಅಲ್ಲಿ ಒಟ್ಟುಗೂಡಿದರು. ಹೋಗೆಂದರೂ ಅವರು ಹೋಗಲಿಲ್ಲವಂತೆ. ಆದುದರಿಂದ ಅವರ ಮೇಲೆ ಗುಂಡು ಹಾರಿಸಲಾದವಂತೆ!

ಮದ್ರಾಸು ಇಲಾಖೆಯ ಜಿಲ್ಲೆಯಲ್ಲಿ ಅಷ್ಟಾದಶ ೬೩೫ ರೂಪಾಯಿಗಳ ನೆರ ಕಾಣಿಸಿದರು. ನಾಗರ ೧೬ ಮಾಸದೊಳಗೆ ಸಂಗ್ರಹಿಸಿದ ಕೆ. ರಾ. ಡಾ. ದ ರಾಜ್ಯದ ಸಾಹೇಬರು ೬೦೦ ರೂಪಾಯಿ ಗಳನ್ನು ಅರ್ಪಿಸಿ, ತನ್ನ ಸಂಸ್ಥಾನದಲ್ಲಿ ಶೈಕ್ಷಣಿಕ ಪ್ರಚಾರ ಮಾಡಲು ಕಸ್ತೂರಿ [illegible] ದ ಕ್ಷೇತ್ರವಾಗಿ [illegible]

— ನಡುವ ಇಲಾಖೆಯೊಳಗಿನ ಬೊಡಿನಾಯಕನೂರು ನ ಸಿಗಿಲ ಹಳ್ಳಿಯಲ್ಲಿ ನಾಸ್ತರ ಜಾತಿಯವರು ಧರ್ಮಾರ್ಥವಾಗಿ ಕಟ್ಟಿಸಿದ ಬಾವಿಯ ಬಗ್ಗೆ ನಾಸ್ತರ ಜಾತಿಯವರಿಗೂ, ಇತರ ಜಾತಿಯವರಿಗೂ ಜಗಳವಾಯಿತು. ಅನೇಕರ ಘಾಯ ಹೊಂದಿದರು. ೧೦೦೦ ಮಂದಿ ಗೃಹಸ್ಥರು ಪಂಚಾಯತಿ ಮಾಡಿ ನಾಸ್ತರ ಜಾತಿಯವರಿಗೆ ರೂ. ೩೫೦ ಗಳನ್ನು ದಂಡ ವಿಧಿಸಿದರು. ಜಗಳಾಡಿದರೂ ಪಂಚರ ಮಾತಿಗೆ ನಿಜಾಯಿತಿಯಾದದ್ದು ಆಶ್ಚರ್ಯವೇನೋ!

— ಈ ವರುಷ ಸಿಂಹಳ ದ್ವೀಪದಲ್ಲಿ ಮುತ್ತಿನ ವ್ಯಾಪಾರದಿಂದ ವಿಶೇಷ ಲಾಭವಾಗಲಿಲ್ಲವಂತೆ. ಬಹಳ ಚಿಪ್ಪಿಗಳು ಪೂರ್ಣವಾಗಿ ಬೆಳೆದಿಲ್ಲ. ಸಾಪ್ತಕಾಲದ ಗಾಬರಿ.

— ವಿಜಾಪುರದ ಜಿಲ್ಲಾ ಲೋಕಲ್ ಬೋರ್ಡಿನವರು ಆಯುರ್ವೇದ ಚಿಕಿತ್ಸಾಲಯಗಳನ್ನು ನಡೆಸುತ್ತಿರುವರು. ಬಾಗಲಕೋಟೆಯ ಶ್ರೀ ರಾಮದಾಸ ದೇಸಾಯಿರವರು ತಮ್ಮ ವಿಶಾಲವಾದ ಊರ ಹೊರಗಿನ ಬಂಗಲೆಯನ್ನು ಆಯುರ್ವೇದ ದವಾಖಾನೆಗಾಗಿ ಧರ್ಮ ಮಾಡಿರುವರು. ಸ್ತುತ್ಯ!

‘Mr. Edie is a very good man!’

(೫ ನೇ ಪಾನಿನಿಂದ ಮುಂದರಿಸಿದ್ದು.)

ಲೂ ಲೋಕಸಂಖ್ಯೆಯು ಕುಗ್ಗಿರುವದಾಗಿ ದೊರೆಗಳೂ ಅಭಿಪ್ರಾಯ ಪಟ್ಟರು. ಶ್ರೀ ಕರ್ಕೆಯವರು ಸರಕಾರಿ ಅಂಕೆಗಳನ್ನೇ ನಿವೇದಿಸಿದರು. ೧೮೮೧ ನೇ ಇಸ್ವಿಯಲ್ಲಿ ಹವೀಕರೇ ೪೩ ಲಕ್ಷ ಇದ್ದರು. ಮುಂದೆ ಅವರ ಸಂಖ್ಯೆಯು ಕುಗ್ಗಿ ೪೦ ಲಕ್ಷವಾಯಿತು. ಈಗ ಎಲ್ಲ ದ್ರಾವಿಡ ಬ್ರಾಹ್ಮಣರು ಕೂಡಿ ೩೮ ಲಕ್ಷರಿರುವರು ಹವೀಕರ ವಿಷಯ ನನಗೆ ವಿಶೇಷ ಮಾಹಿತಿ ಇದೆ. ಘಟ್ಟದ ಕೆಳಗೆ ಜನಸಂಖ್ಯೆಯು ಏರುತ್ತಿತ್ತು, ಲೋಕಸಂಖ್ಯೆಯು ಕುಗ್ಗುತ್ತಿರುವದರ ಮೇಲಿಂದ, ಘಟ್ಟದ ಮೇಲೆ ಹ್ಯಾಗೆ, ಹ್ಯಾಗೆ ಪ್ರಜಾನಾಶವಾಗುತ್ತಿದೆ ಎಂದು ದೊರೆಗಳಿಗೆ ತಿಳಿಯಬಹುದೆಂದರು. ಮೈಸೂರ ಅತ್ತ ಕಡೆಗೆ ದೇಶಾಂತರ ಮಾಡುವವರು ವಿಶೇಷವಾಗಿ ಮುಂದಾಗುತ್ತಿರುವರು. ಇದರಿಂದ ಲೋಕಸಂಖ್ಯೆಯು ಹೀಗೆ ಕುಗ್ಗಬಾರದು, ಎಂದೂ ಶ್ರೀ ಕರ್ಕೆಯವರು ಉತ್ತರವನ್ನಿತ್ತರು.

ಮಲೇರಿಯಾ ಜ್ವರದಿಂದ ಹಳ್ಳಿಗರ ಆರೋಗ್ಯ ಕೆಟ್ಟಿದೆ, ಎಂದು ಶ್ರೀ ಕರ್ಕೆಯವರು ಉದ್ಗರಿಸಿದ ಕೂಡಲೇ ದೊರೆಗಳು ‘ಹಾಗೆ ತೋರುವದಿಲ್ಲ. ನಿನ್ನೆ ನಾನು ಯಲ್ಲಾಪುರದಲ್ಲಿ ಒಂದು ಹಳ್ಳಿಗೆ ಹೋಗಿದ್ದೆ ಅಲ್ಲಿ ಹಳ್ಳಿಗನೊಬ್ಬನು ನನಗೊಂದು ಕಾಯಿಯನ್ನು ಅರ್ಪಿಸಿದನು. ಆತನ ಆರೋಗ್ಯವು ನೆಟ್ಟಗಿತ್ತು. ಚಲೋ ಗಟ್ಟಿ ಆಳು!” ಎಂದು ದೊರೆಗಳು ಉದ್ಗರಿಸಿದರು. ಆತನು ದೂರುಗಳೇನಿಲ್ಲೆಂದೂ ಹೇಳಿದನು. ಶ್ರೀ ಕರ್ಕೆಯವರು — “ನನ್ನೊಡನೆ ಬಂದರೆ, ನಾನು ಹಳ್ಳಿಗರಿಗೆ ತೋರಿಸುವೆನು. ಹಿಂದೆ ಕನ್ನಡ ಪ್ರಾಂತಾಧಿಕಾರಿಗಳು ಇಲ್ಲಿ ಬಂದಾಗ, ೪-೬ ಹಳ್ಳಿಗಳಿಗೆ ಹೋಗಿದ್ದರು; ತಾವೂ ಹೋಗಿ ನೋಡಬಹುದು ಮನೆ ಮನೆಯಲ್ಲಿ ಈ ಜ್ವರದಿಂದ ೩-೪ ಹಾಸಿಗೆಗಳು ಇದ್ದೇ ಇವೆ. ದೊರೆಗಳಿಗೆ ನಮ್ಮಲ್ಲಿಯ ತೋಟಿಗರ ಕರ್ಜನಿಂದ ಮಾನಪತ್ರವನ್ನೊಂದು ಅರ್ಪಿಸುವ ವಿಚಾರವಿತ್ತು. ಅದನ್ನು ಸ್ವೀಕರಿಸಲು ದೊರೆಗಳಿಗೆ ಅವಕಾಶವಿಲ್ಲೆಂದು ನನಗೆ ತಿಳಿಸೋಣಾದ್ದರಿಂದ ನಿರುಪಾಯವಾಯಿತು.”

‘No, No,” ಇಲ್ಲ, ಇಲ್ಲ. ಹಾಗೆ ನಾನು ಹೇಳಲಿಲ್ಲ, ಎಂದು ದೊರೆಗಳು ನಿಶ್ಚಿತ ಸ್ವರದಿಂದ ಶ್ರೀ ಕರ್ಕೆಯವರನ್ನು ಖಂಡಿಸಿದರು.

ಅದನ್ನು ಕೇಳಿದೊಡನೆ ಶ್ರೀ ಕರ್ಕೆಯವರಿಗೆ ಆಶ್ಚರ್ಯವಾಯಿತು, “ಕಲೆಕ್ಟರರಿಂದ ನನಗೆ ತಂತಿ ಬಂದಿದೆ ಹಾಗು ಪತ್ರವೂ ಒಂದು ಬಂದಿದೆ” ಎಂದು ಹೇಳಿ ಶ್ರೀ ಕರ್ಕೆಯವರು ಕಿಸೆಯೊಳಗಿಂದ ತಂತಿ-ಪತ್ರಗಳನ್ನು ತೆಗೆಯುವಷ್ಟರಲ್ಲಿ, “My Private Secretary might have done that, I was on tour” (ನನ್ನ ಖಾಸಗಿ ಕಾರ್ಯದರ್ಶಿಗಳು ಹೀಗೆ ಮಾಡಿರಬಹುದು. ನಾನು ಪ್ರವಾಸದ ಮೇಲೆ ಹೋಗಿದ್ದೆ) ಎಂದು ಉದ್ಗರಿಸಿ, ಇಂಥ ಖಾಸಗಿ ಭೆಟ್ಟಿಗಳಿಂದ ಪ್ರಮುಖ ಪ್ರಜೆಗಳೊಡನೆ ಸಂಭಾಷಣ ಮಾಡಲಿಕ್ಕೂ, ಅವರ ಸ್ಥಿತಿ ನೋಡಲಿಕ್ಕೂ ವಿಶೇಷ ಅನುಕೂಲವಾಗುತ್ತದೆಂದು ದೊರೆಗಳು ನುಡಿದರು ಸಾರ್ವಜನಿಕವಾಗಿ ಪ್ರಯಾಣ ಮಾಡಿದರೆ ಎಲ್ಲ ತೋರಣ, ಮೆರವಣಿಗೆ, ಮಾನಪತ್ರ ಸ್ವೀಕಾರ ಮುಂತಾದ ಉಪಚಾರಿಕ ವಿಧಿಯಲ್ಲಿಯೇ ವ್ಯಯವಾಗಿ, ಪ್ರಜೆಗಳ ಕಷ್ಟ-ನಷ್ಟಗಳನ್ನು ಪ್ರತ್ಯಕ್ಷ ಅರಿತುಕೊಳ್ಳಲು ಅನುವಾಗುವದಿಲ್ಲೆಂದೂ ದೊರೆಗಳು ನುಡಿದರು. ಬಳಿಕ, “Mr Edie is a very good man!” (ಮಿ| ಎಡಿಯವರು ಬಹಳ ಒಳ್ಳೇ ಮನುಷ್ಯರು!) ಎಂದು ದೊರೆಗಳು ಉದ್ಗಾರ ತೆಗೆದುಬಿಟ್ಟರು ಶ್ರೀ| ಕರ್ಕೆಯವರು ಅದನ್ನು ಖಂಡಿಸಲು ಮಾತಾಡುವಷ್ಟರಲ್ಲಿ ಅಂಗೈಯ ಗಡಿಯಾರ ನೋಡಿ, “ಸಮಯವಾಯಿತು” ಎಂದು ದೊರೆಗಳು ಎದ್ದೇಬಿಟ್ಟರು. ಆಗ ೨ ಬಡಿದು ೫೫-೬ ಮಿನಿಟುಗಳಾಗಿದ್ದವು. ಇಷ್ಟಕ್ಕೇ ಈ ಸಂಭಾಷಣವು ಮುಗಿಯಿತು.

ದೊರೆಗಳು ಅಲ್ಲಿ ನೆರೆದವರೊಡನೆ ಶೇಕ ಹ್ಯಾಂಡ್ ಮಾಡಿಕೊಂಡು ಮೇಜೆಯೊಳಗಿಂದ ಕೆಳಗಿಳಿದು, ಮೋಟಾರಾರೂಢರಾಗಿ ಯಲ್ಲಾಪುರಕ್ಕೆ ತೆರಳಿದರು. ಅಲ್ಲಿ ತಾ. ೨೫ ನೇ ವರೆಗೆ ದೊರೆಗಳು ಉಳಕೊಳ್ಳುವವರಿದ್ದರಂತೆ.

ಅಂಕೋಲಾ ಇಂಗ್ಲೀಷ ಸ್ಕೂಲ ಕಮೀಟಿಯವರ ಶಿಕ್ಷಕದ್ರೋಹ.

ಎಮ್. ಎಮ್. ಪಿ ಇವರು ಕತ್ತಲೆಯಲ್ಲಿ ಅಡಗಿದ್ದ ಅಲ್ಲಿಯ ಇಂಗ್ಲೀಷ ಶಾಲೆಯ ಮೇಲೆ ಬೆಳಕಿನ ಶುಭ್ರ ಉಜ್ವಲ ಪ್ರಕಾಶವನ್ನು ಕೆಡವಿ ಈ ಶಾಲೆಗೆ ಅಂಟಿಕೊಂಡಿರುವ ಕೊಳಕುತನದ ವಾತಾವರಣವನ್ನು ನಿರ್ಮೂಲ ಮಾಡುವ ಸತ್ಕಾರ್ಯ ಪ್ರಯತ್ನವನ್ನು ಕೈಕೊಂಡ ಬಗ್ಗೆ ನಾವೆಲ್ಲರೂ ಎಮ್ ಎಮ್ ಪಿ ಇವರಿಗೆ ಮನಃಪೂರ್ವಕ ಆಭಾರಿ ಇರುತ್ತೇವೆ. ಆದರೆ ಕಾನಡಾವೃತ್ತದ ಕಳೆದ ಸಂಚಿಕೆಯಲ್ಲಿ ಎಮ್ ಎಮ್ ಪಿ ಇವರ ಪತ್ರಕ್ಕೆ ಪ್ರತ್ಯುತ್ತರವೆಂತಾ ಒಂದು ಲೇಖವನ್ನು ನೀವು ಪ್ರಕಟ ಮಾಡಿರುವಿರಷ್ಟೆ. ಈ ಲೇಖಕನು ತಾನು ಒಬ್ಬ ವಿದ್ಯಾರ್ಥಿ ಇರುತ್ತಾನೆಂತಾ ಅನ್ನುವನು. ಇರಲಿಕ್ಕೆ ಸಾಕು ಆದರೆ ಲೇಖದ ಮೇಲಿಂದೇನೂ ಇವನು ವಿದ್ಯಾರ್ಥಿ ಇರುವಂತೆ ತೋರುವದಿಲ್ಲ. ವಿದ್ಯಾರ್ಥಿಯು ನಿರಂತರ ಸತ್ಯವನ್ನು ಹುಡುಕಿ ತೆಗೆದು ಸತ್ಯದ ಆಧಾರದ ಮೇಲೆಯೇ ತನ್ನ ಮತಗಳನ್ನು ಪ್ರತಿಪಾದಿಸುವನು. ವಿದ್ಯಾರ್ಥಿಯಾಗಿಯಾದರೂ ತನ್ನ ಮುಂದೆ ಬಂದ ಪ್ರಶ್ನೆಗಳ ಮೇಲೆ ಸ್ವತಂತ್ರ ಬುದ್ಧಿಯಿಂದ ನಿರ್ಣಯವನ್ನು ಕೊಡುವನು. ಆದರೆ ಈ ಲೇಖವನ್ನು ಬರೆದ ವಿದ್ಯಾರ್ಥಿಯಲ್ಲಿ ವಿದ್ಯಾರ್ಥಿಗೆ ಅನುರೂಪವಾದ ಗುಣಗಳು ಕೆಲವೂ ಅವನಿಂದ ದೂರ ದೃಗ್ಗೋಚರವಾಗುವದಿಲ್ಲ. ಆದ್ದರಿಂದ ಈ ವಿದ್ಯಾರ್ಥಿಗಳು ಬರಹದ ಕೆಲಸವನ್ನು ಮಾಡಲಿಕ್ಕೆ ಬಾಡಿಗೆಗೆ ತೆಗೆದುಕೊಂಡ ಲೇಖಕರಿರುವರೆಂತಾ ಅನುಮಾನವು ಸಹಜವಾಗಿ ಹೊರಡುವದು. ಅಥವಾ ಈ ಲೇಖಕರಲ್ಲಿ ಕಮೀಟಿಯವರ ಭೂತಸಂಚಾರವಾಗಿರುವದೋ? ಅದೇ ಪ್ರಕಾರ ಈ ವಿದ್ಯಾರ್ಥಿಗಳಿಗೆ ಗುರುಮಂತ್ರೋಪದೇಶವು ಯಾರ ಕಡೆಯಿಂದಾಯಿತು ಎಂಬುದು ತಿಳಿಯುವದಿಲ್ಲ. ವಿದ್ಯಾರ್ಥಿ ಮಹಾನುಭಾವರೇ, ನಿಮಗೆ ಉಪದೇಶ ಕೊಟ್ಟವರು ನಾಲ್ಕು ಕಣ್ಣಿನ ಶುಕ್ರಾಚಾರ್ಯರೋ ಅಥವಾ ಸಾವಿರ ಕಣ್ಣಿನ ಮಹೇಂದ್ರರೋ? ಇದರೆ ಈ ಇಬ್ಬರು ಗುರುಗಳಲ್ಲಿ ಒಬ್ಬರು ನಿಮಗೆ ಗಂಟು ಬಿದ್ದಿರುವದರಲ್ಲಿ ಏನೂ ಸಂದೇಹವಿಲ್ಲ. ಇದು ನ್ಯಾಯವಿರಲಿ. ಇದರ ಭಾಷೋತ್ಪತ್ತಿ ಮಾಡುವ ಭಾರವೇ ಈ ಕಮೀಟಿಗೂ ಮಾಸ್ತರರಿಗೂ ಸಂಬಂಧಿಸಿದ ವಾದದಲ್ಲಿ ವೈಷ್ಣವ ಸ್ಮಾರ್ತರ ಕಲಹವು ಎಲ್ಲಿಂದ ಬಂತು? ಕಳ್ಳನು ಕಳ್ಳನಿಗೆ ಹಿಡಿಯಿರಿ ಎಂತಾ ಒದರುವಂತೆ ತಾವೇ ಸ್ವತಃ ಕಲಹವನ್ನು ಎಬ್ಬಿಸಲಿಕ್ಕೆ ಯತ್ನಿಸುವವರಿಗೆ ಉಪದೇಶ ಮಾಡುವ ಈ ಬುದ್ಧಿಯ ಧಿಟ್ಟತನವನ್ನು ನೋಡಿದಿರಾ. ವಿದ್ಯಾರ್ಥಿ ಮಹಾಶಯರೇ, ನಿಮ್ಮ ಮನೆಯಲ್ಲಿ ಗಂಡ ಹೆಂಡರೊಳಗೆ ಜಗಳವಾದರೂ ಅದಕ್ಕೆ ವೈಷ್ಣವ-ಸ್ಮಾರ್ತರ ಕಲಹವೇ ಕಾರಣವಿರುವದೆಂತಾ ನೀವು ಹೇಳುವಿರಲ್ಲವೇ? ಅಥವಾ ದುರ್ಯೋಧನನಿಗೆ ಜಗತ್ತೆಲ್ಲಾ ದುಷ್ಟ ಜನರಿಂದ ತುಂಬಿದಂತೆ ಕಂಡಹಾಗೆ ನಿಮಗೆ ಈ ಜಗತ್ತೆಲ್ಲಾ ವೈಷ್ಣವ-ಸ್ಮಾರ್ತರ ಕಲಹದಿಂದಾ ತುಂಬಿದ ಹಾಗೆ ತೋರುವದೋ? ಈಗ ಎರಡು ಮೂರು ತಿಂಗಳ ಹಿಂದೆ ಶಾಲೆಯ ಸ್ಥಿತಿಯನ್ನು ಸುಧಾರಿಸುವದರ ಸಲುವಾಗಿ ಧಂಡ ಕಾಡಿಸುವ ಇಚ್ಛೆಯಿಂದಾ ನಮ್ಮೆಲ್ಲವರ ವಿಶೇಷತಃ, ಎಮ್. ಎಮ್. ಪಿ ಇವರ ಪ್ರಯತ್ನಗಳಿಂದ ಕೂಡಿದ ವೈಷ್ಣವ-ಸ್ಮಾರ್ತರ ಸಭೆಯಲ್ಲಿ ಸರ್ವಾನುಮತಿಯಿಂದಾ ಗುರುವಾದ ಠರಾವುಗಳನ್ನು ಯಾಕೆ ಕಮೀಟಿಯವರು ಅಮಾನ್ಯಮಾಡಿದರು, ಎಂಬುವದನ್ನು ಎಮ್ ಎಮ್. ಪಿ ಇವರಿಗೆ ಐಕ್ಯದ ಉಪದೇಶವನ್ನು ಕೊಡಲಿಕ್ಕೆ ಬಂದ ಈ ಮಾಸ್ತ್ರೀ ಸಾಹೇಬರು ನಮಗೆ ಹೇಳುವರೋ? ವಿಶ್ವನಾಥ ಪ್ರಭುಗಳಿಗೆ ಹುಚ್ಚಾ ಹುಚ್ಚಾ ಮಾಡಿದರೋ ಅಥವಾ ವಿಶ್ವನಾಥ ಪ್ರಭುಗಳು ಥುತ್ ನಿಮ್ಮ ಶಾಲೆ ಎಂತಾ ಉಗುಳಿಬಂದರೋ? ಹೀಗಿಲ್ಲದಿದ್ದಲ್ಲಿ ಪ್ರಭುಗಳಿಗಿಂತ ಮುಂಚೆ ಅಲ್ಲಿ ಕೆಲಸ ಮಾಡಿದ ಹೆಡ್‌ಮಾಸ್ತರರಿಗೆ ಅಂದರೆ ಶ್ರೀ ಕೇಣಿ, ಶ್ರೀ ಪಾತರ್ಕರ ಮುಂತಾದವರಿಗೆ ಬಹಳ ದಿವಸ ನೌಕರಿ ಮಾಡಿ ಅವರಿಗೆ ಶಾಲೆಗೆ ರಾಮ ರಾಮ ಹೊಡೆಯುವ ಪ್ರಸಂಗವು ಯಾಕೆ ಬಂತು? ಅದೇ ರೀತಿಯಲ್ಲಿ ಕಮೀಟಿಯ ದೋಷಗಳನ್ನೆಲ್ಲಾ (of omission and commission) ಸಹಿಸಿಕೊಂಡು ತಮ್ಮ ಪ್ರೀತಿಯ ವರ್ತನದಿಂದಲೇ ಕಮೀಟಿಯವರನ್ನು ಅಸ್ತ ಅಸ್ತ ಸುಧಾರಿಸಲಿಕ್ಕೆ ಯತ್ನಿಸುವ ಈಗಿನ ಹೆಡ್ ಮಾಸ್ತರರಿಗೆ ಸಹ ತಮ್ಮ ಯತ್ನದಲ್ಲಿ ಸೋತು ಅವರಿಗೆ ತಮ್ಮ ಹೆಡ್ ಮಾಸ್ತರಿಯನ್ನು ಬಿಟ್ಟುಕೊಟ್ಟು ಬಿಡಬೇಕಾಯಿತಲ್ಲವೇ? ಅಂದಮೇಲೆ ಕಮೀಟಿಯವರ ಮೊಂಗಲಾಯಿ ದರಬಾರದ ಈ ಪಿಂಡ ಬ್ರಹ್ಮಾಂಡದಲ್ಲಿ ಕೈ ಹಾಕಿ ಸುಧಾರಣೆ ಮಾಡಲಿಕ್ಕೆ ಸಮರ್ಥರಿದ್ದವರು ಈ ಜಗತ್ತಿನಲ್ಲಿಯಾದರೂ ಯಾರು ಇರುವರು?

ಕುತ್ರಿಮ ವಿದ್ಯಾರ್ಥಿಯವರೇ, ನೀವು 'The school however, I must admit, means doing good work' ಮತ್ತು 'The staff is inexperienced and inadequate' ಎಂಬ ಇನ್ಸಪೆಕ್ಟರ ಸಾಹೇಬರ ರಿಮಾರ್ಕಗಳನ್ನು ನಮ್ಮ ಮುಂದಿಟ್ಟದ್ದಕ್ಕೆ ನಾವೆಲ್ಲರೂ ನಿಮಗೆ ಆಭಾರಿ ಇದ್ದೇವೆ. ಆದರೆ ಈ ಶರಾಗಳು ಯಾರಿಗೆ ಸಂಬಂಧಿಸಿರುತ್ತವೆಂಬುದನ್ನು ನಿಮ್ಮ ಗುರುಗಳಿಗಾದರೂ ಕೇಳಿಕೊಂಡಿರಿಯೋ? ತಮ್ಮ ಕೈಯಿಂದಲೇ ಇಷ್ಟು ದಿವಸ ಆದಾಗ್ಯೂ ತಮ್ಮ ಗುರುಗಳ ನ್ಯೂನಗಳನ್ನು ಹೊರಗೆಡಹುವವರು ಇವರೆಂಥಾ ಶಿಷ್ಯರು! ಶಾಲೆಯು ಚಲೋ ಕೆಲಸ ಮಾಡುತ್ತಿರುವದೆಂತಾ ನಿಮಗೆ ತೋರುವದಿಲ್ಲ. ಇದರ ಅರ್ಥವು ಮಾಸ್ತರರು ಹುಡುಗರಿಗೆ ಯೋಗ್ಯರೀತಿಯಿಂದ ಕಲಿಸುವದಿಲ್ಲವೆಂತಾ ಆಗುವದಿಲ್ಲ? ಶಾಲೆಯು ಸ್ವಲ್ಪ ದಿವಸಗಳಲ್ಲಿ ದಿವಾಳಿ ತೆಗೆದು ಹೋಗುವದೆಂತಾ ಇನ್ಸಪೆಕ್ಟರ ಸಾಹೇಬರು ಬುದ್ಧಿಪೂರ್ವಕ ರಿಮಾರ್ಕ ಮಾಡಿದರೆ ದಿವಾಳಿ ತೆಗೆಯುವವರ ಮಾಸ್ತರ ಜನರು ಆಗುವರೋ? ಅಥವಾ ಶಾಲೆಯ ಚಾಲಕರಾಗುವರೋ? ಶಾಲೆಯೊಳಗೆ ಬೇಕಾದ ಪುಸ್ತಕ, ಬೋರ್ಡ, ಡಾಯಗ್ರಾಮ, ಲೆಬೊರೆಟರಿ ಬುಕ್ಸ್ ನಕಾಶೆ ಬೇಂಚು ಖುರ್ಚಿ ಮುಂತಾದ ಸಾಹಿತ್ಯಗಳು (furniture) ಯೋಗ್ಯರೀತಿಯಿಂದ ಪೂರೈಸದಿದ್ದರೆ ಮೇಲಿನ ಶರತ್ತುಗಳನ್ನು ಪೂರ್ತ ತೀರಿಸಿಕೊಳ್ಳಬೇಕಾಗುವದೆಂತಾ ಪಗ್ಗೆ ಇನ್ಸಪೆಕ್ಟರರು ಮಾಡಿದ ರಿಮಾರ್ಕಗಳನ್ನು ಈ ವಿದ್ಯಾರ್ಥಿಗಳು ಯಾಕೆ ಮುಚ್ಚಿಟ್ಟರು? ಅಂದಮೇಲೆ ಇದರ ಮೇಲಿಂದಾ ಇನ್ಸಪೆಕ್ಟರರು ಮಾಡಿದ ರಿಮಾರ್ಕಗಳು ಸಂಬಂಧಿಸಿರುತ್ತವೆಂಬ ಸ್ಪಷ್ಟವಾಗಿ ಆಗುವದಿಲ್ಲವೇ? ಹತ್ತು ವರ್ಷದ ಹಿಂದಿನ ಸ್ಥಿತಿಯಲ್ಲಿ ಮತ್ತ ದಿವಸಕ್ಕೆ ಆರು ತಾಸು ಕೆಲಸ ಮಾಡುವ ಕೂಲಿಕಾರರ ಸ್ಥಿತಿಯಲ್ಲಿ ಶಿಕ್ಷಕರಿಗೆ ಇಟ್ಟು ಅವರ ಹೆಸರಿನಿಂದ ತಂಟೆ ಮಾಡುತ್ತ ತಿರುಗುವದು ಲಜ್ಜಾಸ್ಪದವಲ್ಲವೇ? ಕಮೀಟಿಯವರ ಕರಣೀ ಮುಖವನ್ನು ತಮ್ಮ ತಲೆಯಮೇಲೆ ಹಾಕಿಕೊಂಡು ಕುಣಿದಾಡುವ ಈ ವಿದ್ಯಾರ್ಥಿಗಳು ಇದಕ್ಕೆ ಉತ್ತರ ಕೊಡುವರೋ? ಅದೇ ಪ್ರಕಾರ ಶಾಲಾಖಾತೆಯೊಳಗಿನ ಹೊಸ ಪದ್ಧತಿಯಂತೆ ಇಂಗ್ಲೀಷ ಶಾಲೆಯೊಳಗಿನ ಗ್ರ್ಯಾಜುಏಟ ಮಾಸ್ತರರಿಗೆ ಬಿ. ಟಿ ಪರೀಕ್ಷೆಗೆ ಕಳುಹಿಸಿ ಕೊಡಬೇಕೆಂಬ ಶಾಲಾಖಾತೆಯವರು ಮಾಡಿದ ನಿಯಮವು ಈ ವಿದ್ಯಾರ್ಥಿಗಳಿಗೆ ಗೊತ್ತಿರುವದೋ? ಮತ್ತು ಈ ಶಾಲೆಯ ಮಾಸ್ತರರು ತಮಗೆ ಬಿ ಟಿ ಪರೀಕ್ಷೆಗೆ ಕಳುಹಿಸಿ ಕೊಡಲಿಕ್ಕೆ ಕಮಿಟಿಯವರಿಗೆ ಒದೇಪದೇ ಹೇಳಿದರೂ ತಮ್ಮ ಕಡೆಗೆ ಖರ್ಚಿಗೆ ಕೊಡಲಿಕ್ಕೆ ಹಣವಿಲ್ಲವೆಂತಾ ಹೇಳಿದ್ದು ಇವರಿಗೆ ವಿದಿತವಿರುವದೋ? ಅದೇ ಪ್ರಕಾರ ಇನ್ಸಪೆಕ್ಟರ ಸಾಹೇಬರು ಇಲ್ಲಿ ಬಂದಾಗ ಈಗ ಕೆಲಸ ಮಾಡುತ್ತಿದ್ದ ಗ್ರ್ಯಾಜುಏಟ ಮಾಸ್ತರರಿಗೆ ಬಿ. ಟಿ ಪರೀಕ್ಷೆಗೆ ಕಳುಹಿಸಿ ಕೊಡಬೇಕೆಂತಲೂ ಮತ್ತು ಅವರ ಪಗಾರವನ್ನು ಏರಿಸಬೇಕೆಂತಲೂ ಕಮೀಟಿಯ ಪ್ರೆಸಿಡೆಂಟ ಸಾಹೇಬರಿಗೆ ಬುಜಾಯಿಸಿ ಹೇಳಿದ್ದು ಕೇಳಿರುವರೋ? ಮಾಸ್ತರರಿಗೆ ಯಾವ ತನಕ ಶಿಕ್ಷಣದ ಅನುಭವವನ್ನು ದೊರಕಿಸುವದಕ್ಕೋಸ್ಕರ ನಂತರವೇ ಇಷ್ಟು ಬಿ ಟಿ ಪರೀಕ್ಷೆಗೆ ಕಳುಹಿಸಿಕೊಡುವದಿಲ್ಲವೋ ಅಷ್ಟರ ತನಕ ಮಾಸ್ತರರು ಎಷ್ಟು ಪ್ರಯತ್ನದಿಂದ ಕಲಿಸಿದರೂ ಅವರು ಅನನುಭವಿಕರಿರುವರೆಂತಾ ರಿಮಾರ್ಕ ಮಾಡಲಿಕ್ಕೆ ಇನ್ಸಪೆಕ್ಟರ ಸಾಹೇಬರಿಗೆ ಸಹಜವಾಗಿ ಅವಕಾಶವಿರುವದಲ್ಲವೇ? ಅಂದಮೇಲೆ ಇಂಥ ತರದ ರಿಮಾರ್ಕಗಳಿಗೆ ಶಿಕ್ಷಕರು ಜವಾಬದಾರರಾಗುವರೋ ಅಥವಾ ಕಮೀಟಿಯವರೋ?

ಐರಾವತಿ ಸಂಸ್ಥಾನದೊಳಗಿನ ಸ್ತುತಿಪಾಠಕರೇ, ಈ ಶುಕ್ರಾಚಾರ್ಯರ ಆಶ್ರಮದೊಳಗಿನ ಶಿಷ್ಯವೃಂದವೇ, ನೀವು ಜಾತಿಯ ಅಭಿಮಾನವನ್ನು ಮುಂದೆಮಾಡಿ ಬೇರೆಯವರ ತಲೆಯಮೇಲೆ ಕೈ ಎಳೆದು ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವ ಕಾರಸ್ಥಾನೀ ಜನರ ಸ್ತುತಿಪಾಠಕ ವೃತ್ತಿಯನ್ನು ಸ್ವೀಕರಿಸಿದ್ದು ನೋಡಿ ಯಾರು ಮರುಗಲಾರರು? ಇದೇ ಬುದ್ಧಿಯೋ, ಅಯ್ಯೋ ಪಾಪ! ವಿದ್ಯಾರ್ಥಿಯೆಂದು ಹೇಳಿಸಿಕೊಳ್ಳುವ ನೀವು ನಿಮ್ಮ ಚಿತ್ತವೃತ್ತಿಯನ್ನು ಅಭ್ಯಾಸದ ಕಡೆಗೆ ಹೊರಳಿಸದೆ ಈ ಪ್ರಕಾರ "ಅವ್ಯಾಪಾರೇಷು ವ್ಯಾಪಾರಃ" ಎಂಬ ಹೇಳಿಕೆಯಂತೆ ನಿಮಗೆ ಸಂಬಂಧವಿಲ್ಲದ ಸಂಗತಿಗಳಲ್ಲಿ ತಲೆಹಾಕುವದು ಉಚಿತವೇ? ದೇಶಾಭಿಮಾನವು ನಿಮ್ಮಲ್ಲಿ ತುಂಬಿ ತುಳುಕುತ್ತಿದ್ದರೆ ನೀವು ಕೈರಾಟಿಯನ್ನು ತಿರುಗಿಸುವದೇ ನಿಮಗೆ ಭೂಷಣವು ಕಂಡಿತು!

Ankola
24th April, 1925 } P R S.

⁂ ಈ ವಿಷಯ ನಮ್ಮ ಕಡೆ ಅನ್ಯ ಪತ್ರವ್ಯವಹಾರ ಬಂದಿರುವದು. ಈ ಮೂರೂ ಪತ್ರ ಪ್ರಕಟಿಕೆಯಿಂದ ಈ ವಿಷಯದ ಸಾಕಷ್ಟು ಚರ್ಚೆಯಾಗಿರುವದೆಂದು ನಮಗೆ ತೋರುವದರಿಂದ ಈ ವಿಷಯ ಇನ್ನು ಪತ್ರಗಳು ಪ್ರಕಟಿಸಲಾಗಲಿಕ್ಕಿಲ್ಲ.

ಸಂ. ಕಾ. ವೃ.]

ಜಾಹೀರ ನೋಟೀಸು.

ಕುಮಟಾ ತಾಲೂಕ ಕುಮಟಾ ಕಸಬಾದಲ್ಲಿ ಇರುವ ಸುಬ್ರಾಯ ದುರ್ಗಪ್ಪಾ ಹಣ್ಣುಮನೆ ಈತನು ಇದರ ಮೂಲಕ ತಿಳಿಸುವದೇನಂದರೆ:—

ನನ್ನ ಕುಟುಂಬದ ಲಕ್ಷ್ಮೀ ಕೋಮ್ ತಿಮ್ಮಪ್ಪ ಇವಳ, ಚಿಕ್ಕ ಅತ್ತೆಯಾದ ನಾಗಮ್ಮಾ ಕೋಂ ಹಣ್ಣಪ್ಪಾ ಹಣ್ಣುಮನೆ ವ ತನ್ನ ಭಾವನ ಹೆಂಡತಿಯಾದ ಲಕ್ಷ್ಮೀ ಕೋಮ್ ಅಪ್ಪಯ್ಯಾ ಇವರಿಗೆ ಪಗೆ ಪಡಿಸುವ ಇರಾದೆಯಿಂದಾ, ನನ್ನ ಕುಟುಂಬದ ಬಾಬತು ಚರ ಜಿಂದಗಿನ ಪಾಲಿನ ಕೂಡ ಎಲ್ಲಾ ಅಡಗಿಸಿ ನಮ್ಮನ್ನಿಗೆ ಬಂದಾಕೆ ನಡೆಯುತ್ತಾಳೆ. ನನ್ನ ಕುಟುಂಬದ ಒಬ್ಬ್ರು ಕುಮಟಾದ ಭಟಕಳ ಪೇಟೆ ಮೈಲೂರದಲ್ಲಿ ಇರುವ ಸ್ಥಿರ ಜೀತನ ಅಸ್ತಿ ಕೂಡಾ ಪರಾಧೀನ ಮಾಡುವ ತಯಾರಿಯಲ್ಲಿ ಇದ್ದಾಳೆ. ಕಾರಣ ಇದರ ಮೂಲಕ ಜಾಹೀರಪಡಿಸುವದೇನಂದರೆ— ಸದರ ಲಕ್ಷ್ಮೀ ಇವಳಿಗೆ ಪರಾಧೀನ ಮಾಡಿಕೊಡುವ ಹಕ್ಕು ಇರುವದಿಲ್ಲಾ. ಅದಕ್ಕೆ ಮೀರಿ ಪರಾಧೀನ ಮಾಡಿಕೊಟ್ಟಲ್ಲಿ ಅದು ನನಗೆ ಬಾಧಿಸಲಾರದು. ಇದರಿಂದ ಗನ್ಮಾನ್ಯಿಸಾಪರಾ ಬುಕ್ಸಾನು ಹಿಂದಗಿದ್ದಲ್ಲಿ ಅವನ್ನ ಪರಾಧೀನ ಮಾಡಿಕೊಂಡವರು ನಮಗೆ ಜುಂಜಿಕೊಡಬೇಕಾದೀತು ತಿಳಿಯುವದು.

ಕುಮಟಾ, ತಾ ೨೩—೪—೧೯೨೫.

ಸುಬ್ರಾಯ ದುರ್ಗಪ್ಪಾ,

ಹಣ್ಣುಮನೆ.

ಭಾಷಾಂತರಕರ್ತರಿಗೆ ಸುಸಂಧಿ!

ಸುಪ್ರಸಿದ್ಧವಾದದ್ದು, ಅನೇಕ ವಿದ್ವಾಂಸರಿಂದ ಚಲೋ ಅಭಿಪ್ರಾಯ ಪಡೆದದ್ದು ಆಗಿರುವ ಋಗ್ವೇದಿಯವರು ಬರೆದ "**आर्यांच्या सणांचा प्राचीन व अर्वाचीन इतिहास**" ಎಂಬ ಮರಾಠಿ ಪುಸ್ತಕವನ್ನು ಕನ್ನಡದಲ್ಲಿ ಭಾಷಾಂತರಿಸುವದಿದೆ. ಇದನ್ನು ಕೈಕೊಳ್ಳಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳತಕ್ಕದ್ದು.

Apply to:--
V. PRABHA & CO.
BOMBAY 4.

Copies can be had from:-
THE NORTH KANARA TRADING Co.
KARWAR

DAVAR'S
COLLEGE OF COMMERCE
(Established 25 years)
CELEBRATES ITS SILVER JUBILEE THIS YEAR UNDER THE DISTINGUISHED PATRONAGE OF MERCHANT PRINCES, LEADERS OF THOUGHT AND EDUCATION

The Institution under the sole *direction of its Founder and* Principal has done pioneer work in introducing for the First Time in India Courses in SPECIALISED BANKING, SPECIALISED SECRETARIAL WORK and SPECIALISED ACCOUNTANCY as the result of his numerous journeys to Europe and to the Colleges and Universities there

The fact that a Scholar has successfully trained in DAVAR'S COLLEGE has always been accepted by businessmen all over India, Burma and Ceylon as a hallmark of perfection.

Prospectus on application to the *Principal*,
Great Western Bldg,
Apollo Street, BOMBAY.

ಜಾಹೀರಾತು.

ಚಲೋ ಕರೀ ಜಮೀನು ವ ಬಾಗಾಯತು
ಕ್ರಯಕ್ಕೆ ಕೊಡುವದುಂಟು.

[illegible] ಪೇಟ್ಯಲ್ಲಿ ಹೊನ್ನಾವರ ಶಹರ ಬಾಂದಿಕಟ್ಟದ ಸಮೀಪ ಕರ್ಕಿಗೆ ಹೋಗುವ ರಾಜಮಾರ್ಗದ [illegible] ಪಕ್ಕೆಗೆ [illegible] ಸ್ಥಳದಲ್ಲಿರುವ ಹೊನ್ನಾವರ ಕಸಬಾ ಸರ್ವೆ ನಂಬ್ರ ೧೨೮ ಎಕ್ರೆ ೩-೩-೦ ಸರಕಾರ ತೀರ್ವೆ ರೂ. ೩-೩-೦ರ ಕರೀ ಜಮೀನು ವ ಬಾಗಾಯತು ಇದರಲ್ಲಿ ದರ ಸಾಲ ಗೇಣಿ ಪೇಟೀ ಕೊಳ್ಳಿ ಕುಚ್ಚಿಗೆಅಕ್ಕಿ ಖಂಡಿ ೧೯। ಮತ್ತು ತೆಂಗಿನಕಾಯಿಂದ ಉತ್ಪನ್ನ ಇರುತ್ತದೆ. ಈ ಆಸ್ತಿ [illegible] ಮೂಲಗೇಣಿ ಹಕ್ಕಿನ ಆಸ್ತಿ ಇರುತ್ತದೆ [illegible] ಮೂಲಗೇಣಿಯದಲ್ಲ. ಇದಕ್ಕೆ ಮೂಲಗೇಣಿ ಮಾಲೀಕರಿಗೆ ಬರೇ ಕುಚ್ಚಿಗೆ ಅಕ್ಕಿ ಖಂಡಿ ೬ ಮಾತ್ರ ಮೂಲಗೇಣಿ ಕೊಡುವದಾಗುತ್ತದೆ ಈ ಆಸ್ತಿಯು ಮೂಲಗೇಣಿ ಸಹಿತವಾಗಿ ಯಾ ಮೂಲಗೇಣಿ ರಹಿತವಾಗಿ ಬರೇ ಸರಕಾರ ತೀರ್ವೆ ಪೂರ್ತ ವ ಮೂಲಗೇಣಿ ಜವಾಬದಾರಿ ಸಹಿತ ಕ್ರಯಕ್ಕೆ ಕೊಡಲಿಕ್ಕೆ ಅಡ್ಡಿಯಿಲ್ಲ. ಯಾಕೆಂದರೆ ಮೂಲಗೇಣಿ ಜಮೀನು ಕ್ರಯಕ್ಕೆ ಕೊಟ್ಟರೂ ಕ್ರಯಕ್ಕೆ ಕೊಡುವವರ ಮೂಲಗೇಣೀ ಜವಾಬದಾರಿ ಕಾಯಮೆಯಂತೆ ತಪ್ಪಿಸಿಕೊಳ್ಳಲಿಕ್ಕೆ ಬರುವದಿಲ್ಲ. ಅದ್ದರಿಂದ ಸರಕಾರ ತೀರ್ವೆ [illegible] ಬಾಕಿ ಮೂಲಗೇಣೀ ಜವಾಬದಾರಿ ಸ್ವತಃ ಮತ್ತು ಬೇರೆ ಆಸ್ತಿ ಮೇಲೆ ಇಟ್ಟುಕೊಂಡು ಇಲ್ಲವೆ ಸದ್ರಿ ಆಸ್ತಿ ಪೈಕಿ ೩ ಗುಂಟೆ ಆಸ್ತಿಮೇಲೆ ಇಟ್ಟು, ಅಷ್ಟು ಆಸ್ತಿ ಖಾಸಾಕ್ಕೆ ಇಟ್ಟುಕೊಂಡು, ಬಾಕಿ ೨ ಎಕ್ರೆ ಜಮೀನು [illegible] ಅಂಕಗಳ ಸಿಕ್ಕಿ ಉತ್ಪನ್ನದಷ್ಟು ಕ್ರಯಕ್ಕೆ ಕೊಡತಕ್ಕದುಂಟು. ಕ್ರಯಕ್ಕೆ ಅಪೇಕ್ಷಿಸುವವರು ಇದೇ ಇಸ್ವಿ ಮೇ ತಾ ೧೮ರೊಳಗೆ ಕೆಳಗೆ ಸಹಿ ಮಾಡುವವರಿಗೆ ಸಮಕ್ಷಮ ಭೆಟ್ಟಿಯಾಗಿ ಯಾ ಪತ್ರದ್ವಾರಾ ಕ್ರಯದ ಶರ್ತುಗಳು ನಿರ್ಣಯಿಸಿ ಕ್ರಯಕ್ಕೆ ಪಡಕೊಳ್ಳಬಹುದು.

ಹೊನ್ನಾವರ, } **ಶಿವರಾವ ರಾಮರಾವ**
ತಾ. ೧೧-೪-೩೬. } **ಮುರ್ಡೇಶ್ವರ,**
ವಕೀಲ ಹೊನ್ನಾವರ.

ಸುಲಭ ಕ್ರಯ! ಸುಲಭ ಕ್ರಯ!!
ಈಶ್ವರ ಜೀ ಬೀ [illegible]

ಸುಗಂಧ ನಸ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು, ಕಂಡುಹಿಡಿದು [illegible] ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರು ಯೋಗ್ಯತಾ ಪತ್ರಗಳನ್ನು ಕೊಟ್ಟಿರುವ ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆಸೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಪರಿಹರಿಸಿ ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡುತ್ತದೆ ಮೂರು ಚಿಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಿದ್ದಾರೆ ಮಾದರಿ ಸೀಸೆ ಪುಕ್ಕಟೆ ಕಳಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦, ವ್ಹಿ. ಪಿ. ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೬

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ - ಗುರುಬಸವ ಅಂಡ್ ಕಂಪನಿ ಲಿಮಿಟೆಡ್
ಪೋ। ಬಾ. ೫೧೦, ಮದರಾಸು

ಉತ್ತಮ ವಸ್ತುಲು! ಉತ್ತಮ ವಸ್ತುಲು!!

ಮಂಗಳೂರ ಹಂಚು!

ನಮ್ಮ ಊರಾದ ಮಂಗಳೂರ ಮಿಶನ್ ಹಂಚುಗಳು ನಮ್ಮಲ್ಲಿ ಮಾರಾಟಕ್ಕೆ ಸಿಗುವವು. ಬೇಕಾದವರು ವಸ್ತುಲು ನೋಡಿ ದರವಾರ ತಿಳಕೊಳ್ಳಬಹುದು. ದರವಾರ ಸವಲತ್ತಿಯದಿರುವವು.

ಪತ್ತೆ:— **ಕಾಫೀ ಅಬ್ದುಲ್ ಖಾದರ,**
ಮುನಸಫ್ ಕೋರ್ಟ ಸಮೀಪ, ಕುಮಟಾ

ಅಮೇರಿಕನ್ ಉಪಾಯ.

ಎಂಬ್ರೋಸಿಯಾ.

ಸ್ತ್ರೀರೋಗಪರಿಹಾರಕ್ಕಾಗಿ.

ಎಂಬ್ರೋಸಿಯಾವು ಸಮಸ್ತ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು. ಇದು ಸ್ತ್ರೀಸೌಂದರ್ಯವನ್ನುಂಟುಮಾಡುತ್ತದೆ ಸಾಮಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರುತ್ತದೆ ಚಲೋ ಆಹಾರ ದೊರೆಯದೆ, ವಿಶೇಷ ಆಯಾಸ ಕೊಳ್ಳುವದರಿಂದ ಸ್ತ್ರೀಯರ ಪ್ರಕೃತಿಯು ಕೆಡುತ್ತದೆ. ಮುಟ್ಟಾಗುವಾಗ ಶೂಲಿ ಏಳುವದು, ಮುಟ್ಟಾಗದಿರುವದು, ಅಪಸ್ಮಾರ, ಬಂಜೆತನ ಮುಂತಾದ ಗರ್ಭಾಶಯದ ಬೇನೆಗಳು, ಅಜೀರ್ಣ, ತಲೆಶೂಲಿ, ಭ್ರಮಿಷ್ಟತನ ಇವೆಲ್ಲ ಸ್ತ್ರೀರೋಗಗಳಮೇಲೆ ರಾಮಬಾಣ ಮದ್ದು ಎಂಬ್ರೋಸಿಯಾವು ಸಮಸ್ತ ಸ್ತ್ರೀರೋಗಗಳನ್ನು ದೂರಮಾಡಿ, ಸ್ತ್ರೀಯರನ್ನು ಸಶಕ್ತ ಹಾಗು ಸೌಂದರ್ಯವಂತರನ್ನಾಗಿ ಮಾಡುತ್ತದೆ.

ಒಮ್ಮೆ ಪರೀಕ್ಷೆ ನೋಡಿ.
ಬೆಲೆ ಬಾಟ್ಲಿ ೧ಕ್ಕೆ ರೂಪಾಯಿ ೨—೦—೦

ಏಜಂಟರು:— **ಮೀರಿಯಲ ಏಜನ್ಸಿ,**
ಪ್ರಿನ್ಸೆಸ ಸ್ಟ್ರೀಟ, ಮುಂಬಯಿ ನಂಬರ ೨.

ಧಾರ್ವಾಡ ಕರ್ನಾಟಕ ಮಹಾವಿದ್ಯಾಲಯದಿಂದ ಹೊರಡುವ
ತಿಳಿಗನ್ನಡದ **ಸ್ವಧರ್ಮ** ಮಾಸಪತ್ರಿಕೆ.

ಸಂಪಾದಕ—ಸುರೇಂದ್ರ ಶಿವರಾವ ದೇಸಾಯಿ

ಚೈತ್ರ ಮಾಸದಿಂದ ದ್ವಿತೀಯ ವರ್ಷ ಪ್ರಾರಂಭ.

ಪ್ರಾಪಂಚಿಕ ಸಂಪತ್ತೂ ಪಾರಮಾರ್ಥಿಕ ಸಂಪತ್ತೂ ಕೂಡಿ ಬೆಳೆಯುವಂತೆ ಸ್ವಸಂಸ್ಕೃತಿ ಪ್ರೇಮ ಸ್ವದೇಶ ಪ್ರೀತಿ ಸ್ವಭಾಷಾಭಿಮಾನ ಸ್ವಧರ್ಮಾನುರಾಗ ಸ್ವಾರ್ಥ ತ್ಯಾಗ ಮುಂತಾದ ಗುಣಗಳನ್ನು ಉಜ್ವಲಗೊಳಿಸುವಂತ ಲೇಖನ ಪ್ರಾಚೀನ [illegible] ಜೀವನಚರಿತ್ರ ಇತಿಹಾಸ ನಾಟಕ ಕಥೆ ಮತ್ತು ಕಾದಂಬರಿ ಮುಂತಾದ ರೂಪದಲ್ಲಿ [illegible] ಸ್ವಧರ್ಮ ದೃಷ್ಟಿಯಿಂದ [illegible] ವರ್ಷಕ್ಕೆ ೧ ರೂಪಾಯಿ. ಕಳೆದ ವರ್ಷದ ಸಂಚಿಕೆಗಳಿದ್ದು [illegible] ರೂ. ೧-೦-೦.

ವ್ಯವಸ್ಥಾಪಕ, "ಸ್ವಧರ್ಮ" ಧಾರವಾಡ.

ವಿಶೇಷ] ಅನುಭವಸಿದ್ಧ [ಪ್ರಸಿದ್ಧ.

ವನೌಷಧಿ ಗುಳಿಗೆಗಳು

[illegible] ಹೊಟ್ಟೆಯಲ್ಲಿ ಕೃಮಿನಾಶಕ [illegible] ಔಷಧಿಗಳ [illegible] ಅನುಭವ [illegible] ಔಷಧಿಗಳ [illegible] Tincture [illegible]

ವಾಯುಗುಲ್ಮದ ಬಗ್ಗೆ ಔಷಧಿ [illegible] ಕ್ಕೆ ೦-೩-೦

ಕೆಮ್ಮಿನ ಬಗ್ಗೆ ೦-೩-೦

ಅರ್ಧಾಂಗ ವಾಯುವಿನ ಬಗ್ಗೆ ೦-೪-೦

ನಾರೂ ರಕ್ತದ ಬಗ್ಗೆ ೦-೪-೦

ಸರ್ಪ ಸುತ್ತಿನ ಬಗ್ಗೆ ೦-೩-೦

ಹೊಟ್ಟೆಯಲ್ಲಿ ಕೃಮಿನಾಶಕ ಔಷಧಿ ಬಗ್ಗೆ
(ತೊಲೆ ೧೦ ಕ್ಕೆ ೦-೮-೦.

ರಕ್ತಶುದ್ಧಿ ವ ಮಲಶೋಧನೆ ಬಗ್ಗೆ
ಮಾತ್ರೆ [illegible] ಕ್ಕೆ ೧-೦-೦.

ಮೊಳಕಾಲು (ನೆಲ್ಲಿಕಾಯಿ ಗುಳಿಗೆ)
[illegible] ಕ್ಕೆ ೧-೦-೦

[illegible] ಅದಕ್ಕೂ ಹೆಚ್ಚು ತರಿಸಿಕೊಳ್ಳುವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು. ಟಪಾಲು ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿ ಪತ್ರ ದ್ವಾರಾ. ಅನುಪಾನ ಪತ್ರ ಔಷಧಿ ಸಂಗಡ.

ಎನ್. ಜಿ. ಹೆಗಡೆ, ಮಾಸ್ಕೇರಿ,

ಪೋಸ್ಟ—[illegible] ತಾ. ಜಿ. ಉತ್ತರ ಕಾನಡಾ

ತಾಮ್ರ ಹಿತ್ತಾಳಿ ಭಾಂಡೆ

ವ ತರತರದ ಇತರ ಭಾಂಡೆಗಳು.

ಮಹಾಶಯರೇ, ನಮ್ಮ ಕಂಪನಿಯು ಸದ್ಯದಲ್ಲಿ ಸ್ಥಾಪನೆಯಾಗಿ ತಾಮ್ರ-ಹಿತ್ತಾಳಿ ಭಾಂಡೆಗಳನ್ನು ಇಲ್ಲಿಯೇ ತಯಾರಿಸಿ ಗ್ರಾಹಕರಿಗೆ ಸೋವು ಧಾರಣೆಯಿಂದ ಖಾತ್ರಿ ಭಾಂಡೆಗಳು ಸಿಗುವಂತೆ ಮಾಡಿದ್ದು ಇರಲು, ಒದಗಬರುತ್ತ ಗಿರಾಕಿಗಳು ತರತರದ ಭಾಂಡೆಗಳನ್ನು ಇಚ್ಛಿಸುತ್ತಿದ್ದರಿಂದ ಅಲ್ಯೂಮಿನಿಯಮ ಸಂದಿನ ವ ಬಿನ್ ಸಂದಿನ ಭಾಂಡೆಗಳನ್ನು ಶೋಧ ಮಾಡುವದಕ್ಕಾಗಿ ಹಿಂದುಸ್ಥಾನದಲ್ಲೆಲ್ಲ ಸಂಚರಿಸಿ, ನೋಟಕ್ಕೆ ಅಂದವಾಗಿ ಕಂಡು ಬಂದ ತಾಮ್ರ ಹಿತ್ತಾಳಿ ಕಂಚು ಇವೇ ಮೊದಲಾದ ಧಾತುಗಳ ಭಾಂಡೆಗಳನ್ನು ಕುಂಭಕೋಣ, ತ್ರಿನಾವೇಲಿ, ತಿರುಪೂರ, ಬೆಂಗಳೂರ, ಕಾಳಹಸ್ತಿ, ಹುಬ್ಬಳ್ಳಿ, ನಾಶಿಕ, ಪುಣೆ, ಮುರಾದಬಾದ, ಮುಂಬಯಿ ಮುಂತಾದ ಪ್ರಸಿದ್ಧ ಪಟ್ಟಣಗಳಿಂದ ಖರೇದಿಸಿ ತಂದಿಟ್ಟು, ಗಿರಾಕಿಗಳು ಕೇಳಿದ ಭಾಂಡೆಗಳನ್ನು ಕೊಡುವಂತೆ ಅನುಕೂಲತೆಯನ್ನೂ, ಇದಕ್ಕೂ ಹೆಚ್ಚಿನ ನಮೂನೆಯ ಭಾಂಡೆಗಳನ್ನು ಗ್ರಾಹಕರು ಅಪೇಕ್ಷಿಸಿದಲ್ಲಿ ಆಗಿಂದಾಗಲೇ ತಯಾರಿಸಿ ಕೊಡುವರೆ ಉತ್ತಮ ತರಗತಿಯ ಮೇಸ್ತ್ರಿಯನ್ನೂ ಇಟ್ಟಿರುತ್ತೇವೆ. ಇದಲ್ಲದೆ, ನಮ್ಮ ಕಂಪನಿ ಶಾಖೆಗಳು ಅಂಕೋಲಾ—ಶಿರ್ಶಿಯಲ್ಲಿ ಇರುವಂತೆ ಅಲ್ಲಿಯೂ ಎಲ್ಲಾ ತರದ ಭಾಂಡೆಗಳು ತಯಾರಾಗುವವು. ಬೇಕಾದವರು ಅಲ್ಲಲ್ಲಿ ಖರೇದಿಸಬಹುದು. ಈ ಹೊರತು, ದಕ್ಷಿಣ ಕಾನಡಾ ಮಂಗಳೂರಿನಲ್ಲೂ ಖುದ್ದ ದುಕಾನವಿರುವದು. ಅಲ್ಲಿಯೂ ತರತರದ ಭಾಂಡೆಗಳು [illegible] ತಯಾರಿಸುವವು ಹೊಸ ಹೊಸ ನಮೂನೆಯ ಭಾಂಡೆಗಳನ್ನೂ, ಕೊಪ್ಪರಿಗೆಗಳನ್ನೂ ಕೂಡಲೇ ಅಪೇಕ್ಷಿತ [illegible] ಅಲ್ಪಾವಧಿಯಲ್ಲಿ ತಯಾರಿಸಿ ಕೊಡುವ ಸಾಮುಗ್ರಿಯೂ ಇಟ್ಟಿರುತ್ತದೆ. ಇನ್ನು ಸೋವಿಯಿಂದ ಮಾಡಿದ ಭಾಂಡೆಗಳು ಇಚ್ಛಿತ ವೇಳೆಗೆ ಮತ್ತೆ [illegible] ದೊರೆಯಲಾರವು. ಬೇಕಾದವರು ಈ ಕೆಳಗಿನ ಪತ್ತೆಯ ಮೇಲೆ ಟಪಾಲದ್ವಾರ ಪತ್ರವ್ಯವಹಾರ ನಡೆಸಿ ಬೇಕಾದ ಮಾಹಿತಿ ಪಡೆಯಬಹುದು. ಗ್ರಾಹಕರಿಗೂ, ವ್ಯಾಪಾರಿಗಳಿಗೂ ೨೫ ರೂಪಾಯಿಗಳ ಮೇಲೆ ಕಮಿಶನ್ ಕೊಡಲಾಗುವದು.

ಅಜ್ಞೀ ಸಾಹೇಬ ಆದಮ ಸಾಹೇಬ ಬಸ್ತಿ ಹಿತ್ತಲ ಕಂಪನಿ, ಕುಮಟಾ

ಪೋಸ್ಟ—ಕುಮಟಾ. ಜಿಲ್ಹಾ ಉ. ಕಾನಡಾ

ಬೇಸಿಗೆಯು ಪ್ರಾರಂಭವಾಯಿತು !

ದನಗಳ ಆಹಾರದ ಕಣಿಕೆಯನ್ನು ಕಾದಿಡಿರಿ !!
ಕಿರ್ಲೋಸ್ಕರ ಕಣಿಕೆ ಯಂತ್ರವನ್ನು ಉಪಯೋಗಿಸಿರಿ !!!



ನಮ್ಮ ಕಾರಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕೊರೆಯುವ ಯಂತ್ರಗಳು ತಯಾರಾಗುತ್ತವೆ. ಒಂದು ಕೈಯಂತ್ರ ಬೆಲೆ ೨೦ರೂ. ಇನ್ನೊಂದು ಗಾಲೀ ಯಂತ್ರ ಬೆಲೆ ೭೫ರೂ. ಸಣ್ಣ ಕಿಮ್ಮತವುಳ್ಳವರು ಕೈಯಂತ್ರವನ್ನೂ ದೊಡ್ಡ ಕಿಮ್ಮತವುಳ್ಳವರು ಗಾಲೀ ಯಂತ್ರವನ್ನೂ ಉಪಯೋಗಿಸಬಹುದು. ಕಣಿಕೆಯು ೪ ಇಂಚುಗಳಿಂದ ಒಂದು ಇಂಚಿನವರೆಗೆ ಕೊರೆಯಲ್ಪಡುತ್ತದೆ. ಸವಿಸ್ತರ ಸಂಗತಿ ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ;
ಜಿಲ್ಹಾ ಸಾತಾರಾ.



ಅಮೃತಾಂಜನ.

[illegible]ದರ ಉಪಯೋಗದಿಂದ, [illegible], ಉಳುಕು ಇತ್ಯಾದಿ ವ್ಯಾಧಿಗಳ ಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳ ಮೇಲೆ ಇದು ಗುಣಕಾರಿಯೆಂದು ಅರಿಯುವವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿ ಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಪೋರ್ಟ, ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta.

ವರ್ಷ ೯.

ಕಾನಡಾವೃತ್ತ.

THE KANARA NEWS.

ಸಂಚಿಕೆ ೨೯.

ನರಪತಿहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಡ ವರ್ಗಣಿ.
ಊರಲ್ಲಿ ಅಗಾವು
ವರ್ಷಾಯಿ 2-4-0.
ಪೋಸ್ಟರಿಯಿಂದ
ರೂ. 3-0-0.
. ಅಂಚೆವೆಚ್ಚ ಸೇರಿ
ವರ್ಷಾಯಿ 3-2-0.
ಸಂಚಿಕೆಗೆ 0-1-0.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ಮ್ಯಾ ಕ್ಯಾಲಮಿನ (೧೫ ಎಮ್ ಉದ್ದ)
೮ ಸಾಲುಗಳವರೆಗೆ ರೂ. 1-0-
ಆ ನಂತ್ರ ಪ್ರತಿಸಾಲಿಗೆ 0-2-0.
ಹೆಚ್ಚಿಂದ ಸಾಲು ಎಷ್ಟು ಹೆಚ್ಚಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

ಕುಮಟಾ— ಕಾನಡಾವೃತ್ತ ಸೋಮವಾರ. ತಾರೀಖು ೪ ಮಾಹೆ ಮೇ ಸನ್ ೧೯೨೫ನೇ ಇಸವಿ.

हिंदुस्थानातील रहिवाशांस ज्याप्रमाणें
स्थानची हवा त्याप्रमाणेंच हें औषध हिं
ानातील लोकांस ज्यास्त फायदेशीर आहे.

द्राक्षासव- दीड रत्तलची किंमत २ रुपये.

रामबाण औषधें —
सर्दि घालविणारें,
भूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,
— पिण्यास रुचिकर.

क्याटलाग मागवा,
दु फार्मास्युटिकल वर्क्स लिमिटेड,
मुंबई नं. १२

ಕ್ಷಯ ರೋಗ?
ವೈದ್ಯ ಫರ್ನಾಂಡಿಸರ
ಬರೇ ನಾಲ್ಕು ಔಷಧಗಳು.
ಪ್ರಕೃತಿಮಾನ ತಿಳಿಸಿರಿ. ಅಂದರೆ ಯೋಗ್ಯ ಷಧಗಳನ್ನು ತಯಾರಿಸಿ ಕಳುಹಿಸುವೆವು. ಸಮಗ್ರ ಮ್ಯಾಲಿಕ್ಷ ಹಚ್ಚಿನ ಮಾಹಿತಿ ದೊರಕುವದು. ವನಾಡದೇಹಿರಿ. ಬೇಗನೇ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ. (ರೂ. ೩೮-೧೦-೦.)
ವೈದ್ಯ ಫರ್ನಾಂಡಿಸ,
ರೋಗಾಂತಕ ಡಿಪೋ,
ಕಾರವಾರ

☞ ಗ್ಯಾಸ ದೀಪಗಳು
ಬಾಡಿಗೆಗೆ ಇಟ್ಟಿರುತ್ತವೆ.
ದರವಾರವು ಎಲ್ಲಕ್ಕಿಂತ ಕಡಿಮೆ ಇಟ್ಟಿರುತ್ತದೆ ಬೇಕಾದವರು ಕೆಳಗಿನ ಪತ್ತೆಯ ಮೇಲೆ ಬರೆಕೊಳ್ಳಬಹುದು. ಪತ್ತೆ:— ವೈಕುಂಠ ಜನಾರ್ದನ ನಾಯ್ಕ
ಪೋಸ್ಟ:— ಉಪ್ಪಿನಪಟ್ಟಣ, ತಾ. ಕುಮಟಾ.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, B. A.
Jewellers, KUMTA.
ಆರ್. ಎಸ್. ಕಾಸರಗೋಡ,
ರತ್ನಾಭರಣ ವ್ಯಾಪಾರಿ, ಕುಮಟಾ.

ಆಯುರ್ವೇದ(ಪ್ರಕ) ಧಾತುಪೌಷ್ಟಿಕ, ಶಕ್ತಿವರ್ಧಕ, ರಕ್ತಶೋಧಕ (ಮಲಬಾರಿಕೃತಿ

ಮದನಕಾಮೇಶ್ವರೀಲೇಹ.

ಅಬಾಲ ವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.
ಇದರಲ್ಲಿ ಕೇಸರ, ಕಸ್ತೂರಿ, ಪ್ರವಾಲ, ಲೋಹ, ಅಭ್ರಕ ಇತ್ಯಾದಿ ಅನೇಕ ವನೌಷಧಿಯುಕ್ತ ಇರುವದರಿಂದ ಧಾತು ತೆಳ್ಳಗಾಗೋಣ, ಸಪ್ತಧಾತು, ಪ್ರಮೇಹ ಮುಷ್ಟಿಮೈಥುನಜನ್ಯ ಧಾತುಕ್ಷೀಣತೆ, ಸ್ವಪ್ನಾವಸ್ಥೆ ಉರಿಮೂತ್ರ, ಸಂಧಿವಾತ ಸ್ತ್ರೀಯರ ಗರ್ಭಾಶಯರೋಗ, ಪ್ರದರ (ಗರ್ಮಿ) ಇ. ನಿರ್ಮೂಲಿಸಿ ಉಂಟಾ ರಕ್ತ-ಧಾತು ಸಂಚಯಮಾಡಿ ದುರ್ಬಲ್ಯ ಸಂಹಾರಿಸುವುದನ್ನು ಲಭಿಸು ಸಿದ್ಧೌಷಧ. ೧ ತಿಂಗಳು ಸಾಲುವ ಪ.೧ಕ್ಕೆ ೩||ರೂ. ಟ. ಖ. ||ರೂ. ಒಮ್ಮೆಲೆ ೩ ಪ. ೩||ರೂ. ಟ.ಖ. ಮಾಫಿ. ಅನು ಔಷಧದ ಸಂಗಡ.

ಅತ್ಯುತ್ತಮ) ಜಂತುವಿನ ಔಷಧ (ದರಸುಲಭ.

ಪ್ರತಿ ೧ಕ್ಕೆ ೧||ರೂ ೫ಂಕ್ಕೆ ರೂ.೫|||. ೧೦ಂಕ್ಕೆ ರೂ.೫. ಅನುಭವ ತಕ್ಕೊಳ್ಳಿರಿ. ಇವಲ್ಲದೆ ಎಲ್ಲಾರೋಗಗಳ ಮೇಲೆ ಅನುಭವ ಸಿದ್ಧೌಷಧಗಳು ಸಿಗುವವು. ವಿ. ಪಾ. ಬೇಕಾದವರು ೧ರೂ ಇಟ್ಟು ಪತ್ರಬರೆದಲ್ಲಿ ನಮ್ಮ ಆಯುರ್ವೇದೌಷಧ ಗುಣರತ್ನಮಾಲಾ ಎಂಬ ಸಂಪೂರ್ಣ ಮಾಹಿತಿಯ ಪುಸ್ತಕವನ್ನು ಪುಕ್ಕಟೆಯಾಗಿ ಕಳಿಸುವೆವು.
ಮ್ಯಾನೇಜರ ಆಯುರ್ವೇದಚಿಕಿತ್ಸಾಮಂದಿರ, ತಾ. ಕಾರವಾರ, ಪೋ. ಚೆಂಡಿಯೆ.
ಮುಂಬೈ ಏಜಂಟ:— R. C. KAMAT, Teashop Store Lane, Fort, BOMBAY.

ಹುಟ್ಟಿದ ವೇಳೆ ತಿಳಿಸಿರಿ) ಸುಖಸಾಧನಕ್ಕೆ ಯೋಗ್ಯ ಉಪಾಯವು. (ಯಾ ಜನ್ಮಟಿಪ್ಪಣ ಕಳಿಸಿರಿ.

☞ ಮಲಬಾರಿ) ಕೇರಳ ಜ್ಯೋತಿಷ. (ಭವಿಷ್ಯ.

ನಿಮ್ಮ ಜನ್ಮಟಿಪ್ಪಣ ಕಳಿಸಿ. ೧ವರ್ಷದ ಫಲಾಫಲ ೬.೧||ರೂ. ೫.೫||ರೂ. ೧೦ವ.೬.ವರೂ. ಸಮಗ್ರ ಟಿಪ್ಪಣ ಹಣೆಯಮೇಲಿಂದ ಆಯುಷ್ಯಾಂತಕ್ಕೆ ಒದಗುವ ಇಷ್ಟಾನಿಷ್ಟ ಫಲಗಳನ್ನು ಅನಿಷ್ಟಫಲ ನಿವಾರಣಾರ್ಥ ಶಕ್ತಿಧಾರ್ಮಿಕ ದಾನೋದ್ಧಾರಗಳಿಂದ ಸಂಕಟಗಳನ್ನು ಪರಿಹರಿಸುವ ಉಪಾಯಗಳನ್ನು ತಿಳಿಕೊಂಡು ಮುಂದಿನ ಭವಿಷ್ಯ ಕಾಲವು ಸುಖಕಾರಕ ಮತ್ತು ಲಾಭದಾಯಕವಾಗುವಂತೆ ಸಧರೀ ಫಲವನ್ನು ಮಲಬಾರದಲ್ಲಿ ಪ್ರಸಿದ್ಧವಾದ ಜ್ಯೋತಿಶಾಸ್ತ್ರ "ಕೇರಳ" ಇ. ಬಹುಮಾನ್ಯ ಗ್ರಂಥಗಳ ಪ್ರಮಾಣ್ಯತೆಯಿಂದ ಬರೆದು ಕಳಿಸುವೆ. ಟ. ಖ ಬೇರೆ.
ಮ್ಯಾನೇಜರ, "ಜ್ಯೋತಿಷ ಶಾಸ್ತ್ರ-ಭುವನ," ಚೆಂಡಿಯೆ. ತಾ. ಕಾರವಾರ.

ದೆಂದು, ವಿದ್ಯಾರ್ಥಿಗಳಿಗೆ ಪಾಲಕರು ಧನಾರ್ಜನಾಶೆಯಿಂದ ಮನೆಯಲ್ಲಿಟ್ಟುಕೊಳ್ಳಬಾರದೆಂದು ಪ್ರಾಥಮಿಕ ಶಿಕ್ಷಣವನ್ನು ಪಡೆಯಲೇಬೇಕೆಂಬ ಕಾಯಿದೆ ೫ ವರುಷಗಳಿಂದ ೧೪ ವರುಷಗಳ ವರೆಗೆ ಯಾವ ವಿದ್ಯಾರ್ಥಿಯೂ ಶಾಲೆಗೆ ಹೋಗದೆ ಇರಲಾರನು. ಉತ್ಸಾಹದಿಂದ ಶಾಲೆಗಳಿಗೆ ಹೋಗಬೇಕೆಂದು ಚಿಕ್ಕ ಹುಡುಗರ ಶಾಲೆಗಳಲ್ಲಿ ದಾರಿಗಳನ್ನಿಟ್ಟಿರುವರು. ದಾರಿಗಳು ಹುಡುಗರ ಅರಿವೆ-ಅಂಚಡಿಗಳನ್ನು ಚೊಕ್ಕವಾಗಿಟ್ಟು, ಹಸಿದಾಗ ಹುಡುಗರಿಗೆ ಅಕ್ಕರತೆಯಿಂದ ತಿಂಡಿ ಕೊಡುತ್ತಾರೆ. ೭ ವರುಷಗಳ ವರೆಗೆ ಬಾಲ್ಯವೆಂದು ತಿಳಿದು ಆ ವರೆಗಿನ ಶಿಕ್ಷಣವೆಲ್ಲ ಹೆಂಗಸರ ಕಡೆಗೆ ವಹಿಸಲ್ಪಟ್ಟಿದೆ. ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಒಂದು ಊಟ ಒಂದು ಮೋಜು ಸಿಗುತ್ತದೆ. ಮೋಜಿನ ಒಂದು ಕೋಣೆಯಲ್ಲಿ ನಾನಾ ಪ್ರಕಾರದ ಆಟದ ಸಾಮಾನುಗಳಿವೆ. ಎರಡನೇ ಕೋಣೆಯಲ್ಲಿ ವರ್ಣಮಾಲೆ, ಚಿತ್ರ ಮುಂತಾದವುಗಳು ಇರುತ್ತವೆ. ಕೆಲ ಕಾಲ ಶಿಕ್ಷಣಕೊಟ್ಟು ಕೂಡಲೆ ಅವರಿಗೆ ಆಡಬಿಡುತ್ತಾರೆ. ಆಡುತ್ತಿರುವಾಗ ಆಡುತ್ತಿರುವಾಗ ಹಾಡುತ್ತಿರುವಾಗ ವಿದ್ಯಾದಾನವಾಗುತ್ತದೆ. ವಿಶೇಷ ಸಂಗತಿ ಏನೆಂದರೆ ವಿದ್ಯಾರ್ಥಿಗಳಿಗೆ ಶಿಕ್ಷಕರು ಹೊಡೆಯುವದಿಲ್ಲ. ಹೊಡೆಯುವ ಶಿಕ್ಷಕರು ವಿದ್ಯಾದಾನಕ್ಕೆ ಅನಾಲಾಯಕರೆಂದೆಣಿಸಲ್ಪಡುತ್ತಾರೆ. ೭ ವರ್ಷಗಳಾದ ಬಳಿಕ ವಿದ್ಯಾರ್ಥಿಗಳನ್ನು ಮೇಲಿನ ವರ್ಗಕ್ಕೆ ಹಾಕುತ್ತಾರೆ. ಅಲ್ಲಿ ಓದು ಬರಹ [illegible], ಕವಾಯತ ಕೆಲಸ ಕಲಿಸುತ್ತಾರೆ. [illegible] ಅಡಿಗೆ, ಬಟ್ಟೆಗಳನ್ನು ಒಗೆಯುವದು ಮುಂತಾದ ಕೆಲಸಗಳನ್ನು ಅವಶ್ಯವಾಗಿ ಕಲಿಯಬೇಕು. ಪ್ರತಿಯೊಂದು ಪ್ರಾಥಮಿಕ ಶಾಲೆಯಲ್ಲಿ ಸಂಗೀತ ಕಲೆಯೊಂದಿದೆ. ಅಲ್ಲಿ ಹಾಡುವದು ಬಾರಿಸುವದು [illegible] ಮುಂತಾದ ಕಲೆಗಳನ್ನು ಕಲಿಸುತ್ತಾರೆ.

ಪ್ರಾಥಮಿಕ ಶಿಕ್ಷಣವಾದ ಬಳಿಕ ವಿದ್ಯಾರ್ಥಿಗಳು ತಮ್ಮ ತಮ್ಮ ಇಚ್ಛೆಯಂತೆ ಮಾಧ್ಯಮಿಕ ಶಾಲೆಗಳಲ್ಲಾಗಲಿ [illegible] ವಿಷಯಕ ಶಾಲೆಗಳಲ್ಲಾಗಲಿ ಹೋಗಬಹುದು. ಅಲ್ಲಿ ೪ ವರುಷಗಳ ವರೆಗೆ [illegible] ಮಾಧ್ಯಮಿಕ ಶಿಕ್ಷಣವಾದ ಬಳಿಕ ನಾಲ್ಕು ವರುಷಗಳ ವರೆಗೆ ಯಾವದಾದರೊಂದು ಉದ್ಯೋಗವನ್ನು ಕಲಿಸುತ್ತಾರೆ. ಲಂಡನ ನಗರದ ಆಧಿಕ್ಯದಲ್ಲಿ ಉದ್ಯೋಗ-ವ್ಯಾಪಾರ ವಿಷಯಕ ೫೦ ಶಾಲೆಗಳಿವೆ. ಅಲ್ಲಿ ಸುಮಾರು ೧೧ ವರ್ಷ ವಯಸ್ಸಿನ ಹುಡುಗರು ಕಲಿಯುತ್ತಿರುವರು. ಪ್ರತಿ ಒಂದು ಶಾಲೆಗೆ ವಿಶಾಲವಾದ ಬೈಲು ಆಟಕ್ಕಾಗಿ ಕೊಡಲ್ಪಡುತ್ತದೆ. [illegible] ಕಲೆಗಳ ಯೋಜನೆ ಇದೆ. ಸಮಾಜದ ಸೇವೆಮಾಡಲು ಅವಶ್ಯವುಳ್ಳ ಗುಣಸಂವರ್ಧನವಾಗುವಂತೆ ವ್ಯವಸ್ಥೆಯು ಇಡಲ್ಪಟ್ಟಿದೆ.

ಶಿಕ್ಷಣಕ್ರಮ ಮುಗಿಸಿದರೂ, ಮುಂದಳಿತ್ತು ವಿದ್ಯಾರ್ಥಿಯ ಕಲ್ಯಾಣವನ್ನೇ ಬಯಸುತ್ತದೆ. ವಿದ್ಯಾರ್ಥಿಯು ಕಲಿತ ವಿದ್ಯೆಗೆ ಅನುರೂಪವಾದ ಉದ್ಯೋಗವು ಅವನಿಗೆ ದೊರಕಿಸಿಕೊಡುವ ಕಾರ್ಯವೂ ಮುಂದಳಿದ್ದಿದೆ. ವಿದ್ಯಾರ್ಥಿಗಳಿಗೆ ಸಹಾಯಮಾಡಲು ಅಲ್ಲಲ್ಲಿ ಸಂಸ್ಥೆಗಳು ಸ್ಥಾಪಿಸಲ್ಪಟ್ಟಿವೆ. ಈ ಸಂಸ್ಥೆಗಳಲ್ಲಿ ಮುಖ್ಯಾಧ್ಯಾಪಕರೂ, ಉದ್ಯೋಗಿಕ ಖಾತೆಯವರೂ, ವಿದ್ಯಾರ್ಥಿಗಳೂ ಒಟ್ಟಿಗೆ ಸೇರಿ ವಿದ್ಯಾರ್ಥಿಗೆ ತಕ್ಕ ಕೆಲಸ ಕೊಡಲು ನಿರೀಕ್ಷಕರೊಬ್ಬರನ್ನು ನೇಮಿಸಿ, ಅವರಿಗೆ ಸಮಸ್ತ ಪ್ರಕಾರದಿಂದ ಸಹಾಯ ಮಾಡಲು ಯೋಜಿಸುತ್ತಾರೆ.

ಈ ಪ್ರಕಾರದ ಯೋಜನೆಗಳಿಂದ ಇಂಗ್ಲಂಡದಲ್ಲಿ ನಿರಕ್ಷರ ವ್ಯಕ್ತಿಗಳು ಈಗ ದೊರಕುವದು ಅಪರೂಪವಾಗಿದೆ. ೧೮೭೦ಕ್ಕೆ ೫ ಮಂದಿಗಳು ಸಹಿ ಒದು ಬರಹ ಬಲ್ಲವರಿದ್ದವರು [illegible] ಇಷ್ಟು ಪ್ರಗತಿಯು ಇಂಗ್ಲಂಡದಲ್ಲಿ ಕಳೆದ ೬೫ ವರುಷಗಳಲ್ಲಿ ಆದಂತಾಗಿದೆ.

ಹಿಂದುಸ್ಥಾನದ ಸ್ಥಿತಿಯಾದರೋ, ತೀರ ವಿಪರೀತ. ೧೦೦ಕ್ಕೆ ೬-೮ ಮಂದಿಗಳಿಗೆ ತಮ್ಮ ಸಹಿ ಸಹ ಮಾಡ ಬರುವದಿಲ್ಲ. ಶ್ರೀಕಾರ, ಹೆಬ್ಬೆಟ್ಟಿನ ಮುದ್ರೆ, ನಟ್ಟಿನ ಯಾ ಅಡ್ಡ ಗೀಟುಗಳಿಂದ ಸಹಿ ಮಾಡಬೇಕಾಗುತ್ತದೆ. ಇಂಗ್ಲಂಡದಲ್ಲಿ ಪ್ರತಿ ಒಬ್ಬ ವಿದ್ಯಾರ್ಥಿಗಾಗಿ ಅಲ್ಲಿ ೧೩೫ ರೂಪಾಯಿಗಳನ್ನು ಪ್ರತಿ ವರ್ಷಕ್ಕೆ ಖರ್ಚು ಮಾಡಲು ಸರಕಾರದ ಹತ್ತರ ಹಣವಿದೆ. ಇಲ್ಲಿ ಒಂದೆರಡು ರೂಪಾಯಿ ಖರ್ಚು ಮಾಡಬೇಕಾದರೆ, ಸರಕಾರಕ್ಕೆ ಪರಮ ಕಷ್ಟ! ಶಾಲೆಗಳಿಂದ ಹೊರಬಿದ್ದ ಮೇಲೆ, ವಿದ್ಯಾರ್ಥಿಯು ಎಲ್ಲಿ ಹೋದನು, ಏನು ಮಾಡುತ್ತಾನೆ, ಎಂಬ ಚಿಂತೆಯು ಶಾಲೆಯ ಚಾಲಕರಿಗಿರುವದಿಲ್ಲ. ಇಂಗ್ಲಂಡದಲ್ಲಿ ಬೆತ್ತಕ್ಕೆ ಪ್ರಾಧಾನ್ಯವಿಲ್ಲ. ಬೆತ್ತ ಹಿಡಿದವರಿಗೆ ಸರಸ್ವತೀ ಮಂದಿರದೊಳಗಿಂದ ಹೊರತಳ್ಳುತ್ತಾರೆ. ಇಲ್ಲಿ ಬೆತ್ತಕ್ಕೇ ಪ್ರಾಧಾನ್ಯ. ಬೆತ್ತದ ಪೆಟ್ಟು ತಿಂದ ಹೊರತು, ವಿದ್ಯಾದೇವಿಯ ಅನುಗ್ರಹವಾಗುವದಿಲ್ಲೆಂಬ ತಪ್ಪು ತಿಳುವಳಿಕೆ. ಶಾಲೆಗಳಾದರೋ, ಒಂದು ಪ್ರಕಾರದ ಕೈದಖಾನೆಗಳು. ಅಲ್ಲಿ ಹೋಗಲಿಕ್ಕೆ ಚಿಕ್ಕ ಬಾಲಕರು ಎಂದೂ ಒಪ್ಪುವದಿಲ್ಲ. ಹೊಡೆದು, ಬಡಿದು, ಬೆದರಿಸಿ ಅವರನ್ನು ಶಾಲೆಗಳಲ್ಲಿ ಒಯ್ಯಬೇಕಾಗುತ್ತದೆ. ಪಾಲಕರಾದರೂ ಚಿಕ್ಕ ಬಾಲಕರ ಬಾಲಚೇಷ್ಟೆಗಳಿಂದ ಬೇಸರಪಟ್ಟು, ಅವರ ನಿಗ್ರಹಕ್ಕಾಗಿಯೇ ಅವರನ್ನು ಶಾಲೆಗೆ ಕಳಿಸುತ್ತಾರೆ. ಶಾಲೆಗಳಲ್ಲಿ ಶಿಕ್ಷಕರೆಂದರೆ, ಯಮಧರ್ಮನ ದೂತರು. ಆಟ-ಓಟಗಳಿಗೆ ಅಲ್ಲಿ ಅಂಟಿಲ್ಲ. ಹಾರ್ದಿಕದ [illegible] ಇಲ್ಲ. ಗಾಂಭೀರ್ಯದಿಂದ ಚಿಕ್ಕ ಬಾಲಕರು ವಿದ್ಯೆಯನ್ನು ಕಲಿಯಬೇಕಾಗುತ್ತದೆ. ಶಾಲೆಗಳಲ್ಲಿ ವಿಶೇಷವಾಗಿ ಪುಸ್ತಕಿ ಜ್ಞಾನವೇ. ಇಂಗ್ಲಂಡದಲ್ಲಿ ಶಿಕ್ಷಣವು ಸಕ್ತಿಯವಾದರೆ, ಹಿಂದುಸ್ಥಾನದಲ್ಲಿ ಶಿಕ್ಷಣಸ್ವಾತಂತ್ರ್ಯವು. ಬೇಕಾದರೆ, ಶಿಕ್ಷಣ ಪಡೆಯಬಹುದು, ಬೇಡಾದರೆ ಬಿಡಬಹುದು. ಪ್ರಾಂತದೊಳಗಿನ ಎಲ್ಲ ಶಾಲೆಗಳಲ್ಲಿ ನಡೆಯುವದು ಒಂದೇ ಶಿಕ್ಷಣಕ್ರಮ. ಇಂಗ್ಲಂಡದಲ್ಲಿ ಸ್ತ್ರೀಯರಿಗೆ ಪ್ರಪಂಚಕ್ಕೆ [illegible] ಅಂದರೆ, ಅಡಿಗೆ ಮಾಡುವ ಬಟ್ಟೆ ಒಗೆಯುವ ಮುಂತಾದ ಗೃಹಕೃತ್ಯಗಳು ಕಲಿಸಲ್ಪಡುತ್ತವೆ. ಇಲ್ಲಿ ಶಿಕ್ಷಣ ಪಡೆದ ಸ್ತ್ರೀಯರ ಮುಖ್ಯ ಲಕ್ಷಣವು ಅಡಿಗೆ ಮುಂತಾದ ಗೃಹಕೃತ್ಯಗಳನ್ನು ಮಾಡದೆ ಸೀರೆ ಗೌನು, ಬೂಟು ಮುಂತಾದವುಗಳನ್ನು ಧರಿಸಿ ಸಾಹೇಬರಂತೆ ನಡೆಯುವದು. ಕಾರಣವೇನು? ಇಂಗ್ಲಂಡದಲ್ಲಿ ಸ್ವರಾಜ್ಯವಿದೆ, ಹಿಂದುಸ್ಥಾನದಲ್ಲಿ ಸಾಮ್ರಾಜ್ಯವಿದೆ. ಈ ಎರಡು ಶಬ್ದಗಳ ಮೂಲಕವೇ ಹಿಂದುಸ್ಥಾನದಲ್ಲಿ ವಿದ್ಯಾಪ್ರಸಾರದ ಅಭಿವೃದ್ಧಿಯಾಗುವದಿಲ್ಲ. ಇಂಗ್ಲಂಡದಲ್ಲಿ ಅಕ್ಷರಶತ್ರುಗಳು ಸಾಮಾನ್ಯ [illegible] ಸ್ವರಾಜ್ಯ-ಸಾಮ್ರಾಜ್ಯಗಳೊಳಗಿನ ಭೇದ ಇದೇ.

— [illegible] ಗ್ರಾಮ ಪಂಚಾಯತಿ [illegible] ಮಾರ್ಗಗಳಾಗಿವೆ [illegible] ಹಿಂಸ್ರ ಪಶುಗಳ, ಅಗ್ನಿ-ಜಲಪ್ರಳಯಗಳಂಥ ಗ್ರಾಮದ ಮೇಲೊದಗುವ ವಿಪತ್ತಿನ ಸಮಯದ ರಕ್ಷಣೆಗಳ ವ್ಯವಸ್ಥೆ ಕೊಳ್ಳಲಿಕ್ಕೂ ಅವಶ್ಯವಿದ್ದರೆ ಗ್ರಾಮರಕ್ಷಣ ಕಾರ್ಯಕ್ಕೆ [illegible] ಕೊಡ್ಲಿಕ್ಕೆ ಪಂಚಾಯತಿಗಳಿಗೆ ಅಧಿಕಾರ ಕೊಡಲ್ಪಟ್ಟಿದೆ. ಆಪತ್ಕಾಲದಲ್ಲಿ ನೆರವಾದ ಗಸ್ತಿಗಳಿಗೆ ಇನಾಮು ಮುಂತಾದ ರೂಪದಿಂದ ಉತ್ತೇಜನ ಕೊಡುವದು. ಕೈಮುಗಿಸಿಕೊಂಡು ಮನೆಯಲ್ಲಿ ಕುಳಿತುಕೊಳ್ಳುವವರಿಗೆ ದಂಡಿಸುವ ಯೋಜನೆಯು ಈ ಕಾಯದೆಯಲ್ಲಿ ಮಾಡಲ್ಪಟ್ಟಿದೆ.

— ಬೆಂಗಳೂರು ಸಿಟಿ ಮುನಿಸಿಪಾಲಿಟಿಯವರು ಖಾದಿಯ ವಿಕ್ರಯಕ್ಕೆ ಅನುಕೂಲವಾಗಬೇಕೆಂದು ಅಲ್ಲಿಯ ಕಾಂಗ್ರೆಸ ಕಮಿಟಿಗೆ ಧನಸಹಾಯ ಮಾಡಿರುವರು. ಅನುಕರಣೀಯ.

— ಆಂಧ್ರ ಪ್ರಾಂತಸ್ಥರು ಗೂಂಟೂರಿನಲ್ಲಿ ಒಂದು ಖಾದಿಯ ಬೇಂಕನ್ನು ೧ ಲಕ್ಷ ರೂಪಾಯಿ ಬಂಡವಲು ಹಾಕಿ ತೆರೆದಿರುವರು. ಹತ್ತಿಯನ್ನು ಕೊಂಡು ಖಾದಿ ತಯಾರಾಗುವ ವರೆಗಿನ ಎಲ್ಲ ವ್ಯವಸ್ಥೆಯು ಈ ಬೇಂಕಿನಲ್ಲಿ ನಡೆಯುತ್ತಿದೆ.

— ಲಂಕಾಶಾಯರದಲ್ಲಿ ಒಂದು ಕೂಟ ಹಾಳು ಹತ್ತಿಯಿಂದ ಅಗ್ಗ ಅರಿವೆಯನ್ನು ತಯಾರು ಮಾಡುವ ಬಗೆ ಹೇಗೆ ಎಂಬ ಆಲೋಚನೆಯಂತೆ! ಬಡ ಭಾರತೀಯರ ಕಲ್ಯಾಣಕ್ಕಾಗಿ ಈ ಪರಿಶ್ರಮ"

ವಿವಿಧ ಸಂಗ್ರಹ.

ಅತಿ ದೊಡ್ಡ ಗಡಿಯಾರ!

ಅಮೇರಿಕಾ ಖಂಡದ ನ್ಯೂಯೋರ್ಕ ಪಟ್ಟಣಿಗರಿಗಾಗಿ ಈಗ ಹೊಸತೊಂದು ಗಡಿಯಾರ ಒಂದು ತಯಾರಿಸಿರುವರು. ಈ ಗಡಿಯಾರವು ಭೂಮಂಡಲದಲ್ಲಿ ಅತಿ ದೊಡ್ಡದು. ಇದು, ನ್ಯೂಯೋರ್ಕ ಪಟ್ಟಣಿಗರಿಗೆಲ್ಲ ಕಾಲಕಾಲಕ್ಕೆ ಹೊತ್ತು ತಿಳಿಯಬೇಕೆಂದು ಎತ್ತರವಾಗಿ ಇಟ್ಟಿರುವರು. ಈ ಗಡಿಯಾರದ ವ್ಯಾಸವು ಐವತ್ತು ಫೂಟು. ಅಂದರೆ ಗಡಿಯಾರದ ವೇಳೆ ತೋರಿಸುವ ತಬಕಡಿಲ್ಲೆಯು ಅಜಮಾಸ ೮೦ ಚದರ ಫೂಟು; ಮಿನಿಟಿನ ಮುಳ್ಳು ೩೭ ಫೂಟು ಉದ್ದವಿರುವದು; ಸಾಧಾರಣ ಒಂದು ಬೀದಿಯ ಅಗಲವಿದ್ದಂತಾಯಿತು. ಮಿನಿಟು ಮುಳ್ಳಿನ ಪೃಷ್ಠ ಭಾಗವು ೫೫ ಚದರ ಫೂಟು ಇದೆ. ಈ ಮುಳ್ಳಿನಮೇಲೆ ೧೬ ವಿದ್ಯುದ್ದೀಪಗಳಿವೆ. ಇದರಿಂದ ರಾತ್ರಿ ಸಮಯ ಈ ಮುಳ್ಳನ್ನು ಬಹು ದೂರದಿಂದ ನೋಡಬಹುದು. ತಾಸಿನ ಮುಳ್ಳು ೭೭ ಫೂಟು ಉದ್ದವಿದೆ. ಮಿನಿಟಿನ ಮುಳ್ಳಿಗಿಂತ ಅಗಲವು ಹೆಚ್ಚಿದೆ. ೧ ಮುಳ್ಳಿನಮೇಲೆಯೂ ೧೦೦ ವಿದ್ಯುದ್ದೀಪಗಳಿವೆ. ಗಡಿಯಾರದ ಮುಖ ಬಿಳಿಯ ಬಿಳಿದಿದೆ. ಮಿನಿಟು-ತಾಸಿನ ಮುಳ್ಳುಗಳು ಅಚ್ಚ ಕಪ್ಪು ಇವೆ. ಅದರಿಂದ ಹೊತ್ತನ್ನು ಬಹು ದೂರದಿಂದ ತಿಳಿಕೊಳ್ಳಲು ವಿಶೇಷ ಅನುಕೂಲವಾಗುತ್ತದೆ. ಈ ಗಡಿಯಾರವು ೪ ಟನ್ನು ಅಂದರೆ ೩೨೦ ಮಣ ಭಾರದಿದೆ.

*

ಯಂತ್ರಗಳ ಅದ್ಭುತ ಕಾರ್ಯ!

ಅಮೇರಿಕೆಯ ರಾಜಧಾನಿಯಾದ ವೊಶಿಂಗಟನ್ ಪಟ್ಟಣದಲ್ಲಿ ಕಳೆದ ಮಾರ್ಚ ತಾ. ೪ನೇಗೆ ಅಧ್ಯಕ್ಷರಾದ ಕೂಲಿಡ್ಜರವರು ಅಧಿಕಾರಸೂತ್ರಗಳನ್ನು ವಹಿಸಿಕೊಳ್ಳುವ ವಿಧಿಯಾಯಿತು. ಆ ಸಮಾರಂಭವು ಅಪರಾಹ್ನ ೧ ಘಂಟೆಗೆ ನೆರವೇರಿತು. ಆ ಸಮಾರಂಭದ ಹಕೀಕತು ೩ ಸಾವಿರ ಮೈಲು ದೂರವಿರುವ ಸಾನ್‌ಫ್ರಾನ್ಸಿಸ್ಕೋ ಪಟ್ಟಣದಲ್ಲಿ ಅದೇ ದಿನ ೨-೪ ಘಂಟೆಗೆ ಭಾಷಣ-ಫೋಟೋಗಳ ಸಹಿತ ಪ್ರಕಟವಾಯಿತು. ವೃತ್ತಪತ್ರದ ಸಂಚಿಕೆಗಳು ಆಗ ಪಾರ ಸಿಗುತ್ತಿದ್ದವು. ಕೂಲಿಡ್ಜರವರು ಭಾಷಣ ಕೊಡುವಾಗ ರೇಡಿಯೋ ಎಂಬ ತಂತಿಯಿಲ್ಲದ ವಾರ್ತಾವಾಹಕ ಸಾಧನಗಳನ್ನು ಏರ್ಪಡಿಸಿದ್ದರಂತೆ. ಅವು ಪ್ರತಿಯೊಂದು ವೃತ್ತಪತ್ರದ ಕಚೇರಿಯಲ್ಲಿ ಭಾಷಣವನ್ನು ಮುಟ್ಟಿಸುತ್ತಿದ್ದವು. ವೃತ್ತಪತ್ರಕಾರರು ಭಾಷಣ ಕೇಳುತ್ತ ಕೇಳುತ್ತ ಮೊಳೆಜೋಡಿಸಿದರು. ಫೋಟೋಗಳು ತಂತಿಯಿಂದ ಕಳಿಸಲ್ಪಟ್ಟವು! ೭ ನಿಮಿಷಗಳಲ್ಲಿ ಫೋಟೋಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಕಳಿಸುವ ವ್ಯವಸ್ಥೆಯು ಈಗ ಆಗಿದೆ. ರೇಡಿಯೋ ಅಂದರೆ ತಂತಿಯಿಲ್ಲದ ವಾರ್ತಾವಾಹಕ ಸಾಧನದಿಂದ ಭಾಷಣಗಳಂತೆ ಫೋಟೋಗಳನ್ನೂ ಕಳಿಸುವ ವ್ಯವಸ್ಥೆಯಾಗುವದಿರುವದಂತೆ. ೩-೪ ತಾಸುಗಳಲ್ಲಿ ಸಾನಫ್ರಾನ್ಸಿಸ್ಕೋದಂಥ ೩ ಸಾವಿರ ಮೈಲು ದೂರದಲ್ಲಿರುವ ಪಟ್ಟಣದಲ್ಲಿ ವೊಶಿಂಗಟನ್‌ದೊಳಗಿನ ಸಮಗ್ರ ಹಕೀಕತ

ನ್ನು ಅಚ್ಚುಹಾಕಿ ಪತ್ರಿಕೆಯನ್ನು ಪೇಟೆಯಲ್ಲಿ ಮಾರುವದು ಸ್ವಿಯಂತ್ರಗಳ ಅದ್ಭುತ ಪ್ರಭಾವವಲ್ಲೇನು?

⁂

ಹಿಂದೂ ಯುವತಿ ಶರಣಾಲಯಂ

ಮದ್ರಾಸ ಇಲಾಖೆಯಲ್ಲಿ 'ಹಿಂದೂ ಯುವತಿ ಶರಣಾಲಯಂ' ಎಂಬದೊಂದು ಸಂಸ್ಥೆಯಿದೆ. ಲೋಕ ದೃಷ್ಟಿಯಿಂದ ದುರಾಚಾರಕ್ಕೊಳಗಾದ ಹೆಂಗಸರನ್ನು ಪುನಃ ಸನ್ಮಾರ್ಗಕ್ಕೆ ಹಚ್ಚುವದು ಈ ಸಂಸ್ಥೆಯ ಉದ್ದೇಶವಿದೆ. ಇದರ ಸಂಸ್ಥಾಪಕರು ಶ್ರೀಮತಿ ಯಾಮಿನಿಪೂರ್ಣ ತಿಲಕಮ್ಮನವರು. ಈ ಸಂಸ್ಥೆಯಲ್ಲಿ ಸೇರುವವರಿಗೆ ನೈತಿಕ, ಔದ್ಯೋಗಿಕ ಶಿಕ್ಷಣವು ಕೊಡಲ್ಪಡುತ್ತದೆ, ಸಾಮಾನ್ಯ ಪ್ರಾಥಮಿಕ ಜ್ಞಾನವು ಕೊಡಲ್ಪಡುತ್ತದೆ. ಔದ್ಯೋಗಿಕ ಶಿಕ್ಷಣಕ್ಕೆ ವಿಶೇಷ ಪ್ರಾಧಾನ್ಯ. ಯಾಕಂದರೆ, ವಿದ್ಯಾರ್ಥಿನಿಗಳು ಪ್ರೌಢರಾದ ಬಳಿಕ, ಉದ್ಯೋಗವಿಲ್ಲದೆ ಪರಂಪರಾಗತ ದುರಾಚಾರಕ್ಕೊಳಗಾಗಬಾರದು. ಕೈರಾಟೆಯಮೇಲೆ ನೂಲು ತೆಗೆಯುವದು, ನೇಯುವದು, ಬಣ್ಣ ಕೊಡುವದು, ಬುಟ್ಟಿ ಮಾಡುವದು, ಕೋಟ ಮೊದಲಾದ ಹೊಲಿಗೆ ಇತ್ಯಾದಿ ಸ್ವಾವಲಂಬಿ ಹೋರೆಗಳು ಕಲಿಸಲ್ಪಡುತ್ತವೆ. ಮಹಾತ್ಮರೂ ಈ ಸಂಸ್ಥೆಯನ್ನು ಸಂದರ್ಶಿಸಿ, ಶ್ರೀಮತಿ ತಿಲಕಮ್ಮನವರ ನಿಷ್ಠಾಪೂರ್ಣ ಸೇವೆಯ ವಿಷಯ ಪ್ರಶಂಸೆಯ ಉದ್ಗಾರಗಳನ್ನು ತೆಗೆದಿರುವರು. ಶ್ರೀಮತಿ ತಿಲಕಮ್ಮನವರು ತೆಲುಗು ಭಾಷೆಯನ್ನರಿಯುವ ಪ್ರದೇಶದಲ್ಲಿ ಹೆಸರಾದವರು. ಇವರ ಉಪನ್ಯಾಸಗಳು ಕೇಳುವವರಿಗೆಲ್ಲ ಚಿತ್ತಾಕರ್ಷಕವಾಗುತ್ತವೆ. ಶ್ರೀಮತಿ ತಿಲಕಮ್ಮನವರ ಶರಣಾಲಯದಲ್ಲಿ ಈಗ ೧೭ ಮಂದಿ ವಿದ್ಯಾರ್ಥಿನಿಗಳಿರುವರು. ಶರಣಾಲಯಕ್ಕೆ ಮನಸ್ಸುಬಿಟ್ಟು ಸಹಾಯ ಮಾಡಲು ಮಹಾತ್ಮರು "ಯಂಗ ಇಂಡಿಯಾ" ಪತ್ರಿಕೆಯಲ್ಲಿ ಬೋಧಿಸಿರುವರು.

⁂

ಆಳರಸರ ಚಲ್ಲಾಟ

ಮದ್ರಾಸ ಇಲಾಖೆಯಲ್ಲಿ ಆಳರಸರು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳೊಡನೆ ಬಡಿದಾಡುತ್ತಿರುವರು! ಮೊಂಟೆಗ್ಯೂ ಸ್ವರಾಜ್ಯದ ದಿವಾಣರೂ ಅವರಿಗೆ ಬೆಂಬಲವನ್ನೀಯುತ್ತಿರುವರು. ಕಾಕಿನಾಡ ಮ್ಯುನಿಸಿಪಾಲಿಟಿಯವರು ಮೌ। ಮಹಮುದ ಅಲ್ಲಿಯವರಿಗೆ ಮಾನಪತ್ರವನ್ನಿತ್ತು ಸತ್ಕರಿಸಿದ ಬಗ್ಗೆ ಕಲೆಕ್ಟರರು ಆಕ್ಷೇಪಿಸಿದರು. ಗುಂಟೂರ ತಾಲೂಕ ಬೋರ್ಡಿನವರು ಅಲ್ಲಿಯ ಸ್ತ್ರೀ-ರಾಷ್ಟ್ರೀಯ ಶಾಲೆಯಾದ ಶಾರದಾ ನಿಕೇತನಕ್ಕೆ ೧೫ ರೂಪಾಯಿಗಳನ್ನಿತ್ತರು. ಈ ರಕಮನ್ನು ಜಿಲ್ಲಾಧಿಪರು ಮಂಜೂರ ಮಾಡಲಿಲ್ಲ; ಆದರೂ, ರಕಮು ಕೊಟ್ಟುಹೋಯಿತು. ಕಲೆಕ್ಟರರ ಹುಕುಮನ್ನು ರದ್ದುಪಡಿಸಿಕೊಳ್ಳಲು ಬೋರ್ಡಿನವರು ಸರಕಾರದ ಮೇಲೆ ದಾವೆ ಮಾಡಿರುವರು. ಬೇಝವಾಡಾ ಮ್ಯುನಿಸಿಪಾಲಿಟಿಯೊಡನೆ ಈಗಿಂದಾಗ ಬಡದಾಟವೇಳುತ್ತದೆ. ಅಲ್ಲಿ ಮ್ಯುನಿಸಿಪಾಲಿಟಿಯು ಸಂಪೂರ್ಣವಾಗಿ ರಾಷ್ಟ್ರೀಯ ಪಕ್ಷದವರ ಕೈಯಲ್ಲಿದೆ. ಅಲ್ಲಿಯ ದಿವಾಣರಿಗೆ ಇದು ಸೇರುವದಿಲ್ಲ. ಅವರು ಮ್ಯುನಿಸಿಪಾಲಿಟಿಯೊಡನೆ ಈಗಿಂದಾಗ ಕಲಹ ಮಾಡುತ್ತಿರುವರು. ಮ್ಯುನಿಸಿಪಾಲಿಟಿಯವರು ವ್ಯಾಕಮಿನ ಸತ್ಯಾಗ್ರಹಕ್ಕಾಗಿ ೧೦೦೦ ರೂಪಾಯಿಗಳನ್ನು ಮಂಜೂರ ಮಾಡಿದರು. ಜಿಲ್ಲಾಧಿಪರು ಸಮ್ಮತಿಯನ್ನೀಯಲಿಲ್ಲ. ದಿವಾಣರು ಜಿಲ್ಲಾಧಿಪತಿಗಳನ್ನು ಎತ್ತಿ ಹಿಡಿದರು. ಮಹಾತ್ಮರು ಉಪೋಷಣ ವ್ರತದ ಪಾರಣ ಮಾಡಿದ ದಿವಸ ಮ್ಯುನಿಸಿಪಾಲಿಟಿಯವರು ೧೨೦ ರೂಪಾಯಿ ಖರ್ಚು ಮಾಡಿ ಉತ್ಸವ ಮಾಡಿದರು. ಈ ರೂಪಾಯಿಗಳಿಗೂ ಕಲೆಕ್ಟರರು ಒಪ್ಪಲಿಲ್ಲ. ದಿವಾಣರು ಕಲೆಕ್ಟರರ ಹುಕುಮನ್ನು ಸ್ಥಿರಪಡಿಸಿದರು. ಮುಸಲಿಪಟ್ಟಣದೊಳಗಿನ ಆಂಧ್ರ ಜಾತಿಯ ಕಲಾಶಾಲೆ ಎಂಬ ದೇಶೀ ಚಿತ್ರಕಲೆಯ ಸಂಸ್ಥೆಗೆ ಮ್ಯುನಿಸಿಪಾಲಿಟಿಯವರು ರೂಪಾಯಿ ೫೦ ಅರ್ಪಿಸಿದರು. ಅದಕ್ಕೂ ಕಲೆಕ್ಟರರು ಒಪ್ಪಲಿಲ್ಲ. ದಿವಾಣರು ಕಲೆಕ್ಟರರ ತೀರ್ಪನ್ನು ಕಾಯಂ ಮಾಡಿದರು. ಡಾ। ಲಕ್ಷ್ಮೀಪತಿ ಎಂಬವರು ಆಂಧ್ರ ಆಯುರ್ವೇದಿಕ ಕಾಲೇಜನ್ನು ನಡೆಸುತ್ತಿರುವರು. ಈ ಸಂಸ್ಥೆಗೆ ಮ್ಯುನಿಸಿಪಾಲಿಟಿಯವರು ೧೦೦ ರೂಪಾಯಿ ಕೊಟ್ಟರು. ಈ ಸಣ್ಣ ರಕಮನ್ನೂ ಕಲೆಕ್ಟರರ ಹುಕುಮ ತೆಗೆದು, ಅದನ್ನು ನಾಮಂಜೂರ ಮಾಡಿದರು. ಕಲೆಕ್ಟರರ ಶೌರ್ಯ ಇಷ್ಟಕ್ಕೇ ಮುಗಿಯಲಿಲ್ಲ. ಮಹಾತ್ಮರ ಬಂಧವಿಮೋಚನದ ದಿನ, ಐಕ್ಯದ ದಿನ ಮ್ಯುನಿಸಿಪಾಲಿಟಿಯವರು ಸ್ವರಾಜ್ಯ ಪತಾಕೆಯನ್ನು ಮ್ಯುನಿಸಿಪಾಲಿಟಿಯ ಕಟ್ಟಡದ ಮೇಲೆ ಹಾರಾಡಿಸಿದ್ದರು. ಅದರಿಂದಾಗಿ ಕಲೆಕ್ಟರರಿಗೆ ಪಿತ್ತಪ್ರಕೋಪವಾಯಿತು. ಸ್ವರಾಜ್ಯ ಪತಾಕೆಯನ್ನು ಹಚ್ಚಿ ಮ್ಯುನಿಸಿಪಾಲಿಟಿಯವರು ಬ್ರಿಟಿಶ ಅಧಿಕಾರವನ್ನೇ ಅಲ್ಲಗಳೆದರೆಂದೂ ಅಂಥ ಅವಶ್ಯಕಗಳನ್ನು ಮಾಡಬಾರದೆಂದೂ ಮ್ಯುನಿಸಿಪಾಲಿಟಿಗೆ ಬರೆದರು. ಮ್ಯುನಿಸಿಪಾಲಿಟಿಯು ಚೇರಮನರಾದ ಡಾ। ಎಸ್. ರಾಮಚಂದ್ರರಾಯರು ಇದಕ್ಕೆ ಉತ್ತರವನ್ನಿತ್ತದ್ದೇನಂದರೆ:— ಕಾನಡಾ ಆಸ್ಟ್ರೇಲಿಯಾ ಮೊದಲಾದ ವಸಾಹತುಗಳು ತಮ್ಮ ತಮ್ಮ ದೇಶದ ಪತಾಕೆಗಳನ್ನು ಹಾರ್ಯಾಡಿಸುವಂತೆ, ಮ್ಯುನಿಸಿಪಾಲಿಟಿಯವರು ಭಾರತೀಯ ರಾಷ್ಟ್ರಪತಾಕೆಯನ್ನು ಹಾರ್ಯಾಡಿಸಲು ಅಧಿಕೃತರಿರುವರು. ಕಲೆಕ್ಟರರು ಪುನಃ ಬರೆದದ್ದೇನಂದರೆ — ಬ್ರಿಟಿಶ ಸರಕಾರವು ಸ್ವರಾಜ್ಯ ಪತಾಕೆಯನ್ನು ಸಮ್ಮತಿಸದ ವರೆಗೆ ಚೇರಮನರು ಈ ಪತಾಕೆಯನ್ನು ಹಚ್ಚಬಾರದು, ಇನ್ನು ಮುಂದೆ ಅದನ್ನು ಹಚ್ಚಬಾರದಾಗಿಯೂ ಚೇರಮನರಿಗೆ ವಿನಂತಿ ಮಾಡಿದರು. ಚೇರಮನರು ಈ ವಿನಂತಿಗೆ ಸಮ್ಮತಿಸಲಿಲ್ಲ. ಹೀಗೆಲ್ಲ ಸ್ವರಾಜ್ಯ ಸಂಸ್ಥೆಗಳಿಗೂ, ಸ್ವರಾಜ್ಯ ವಿರೋಧಕರಿಗೂ ಬಡದಾಟವೆದ್ದಿದೆ.

⁂

ಗಾಂಧಿ ಆಶ್ರಮ.

ಮದ್ರಾಸದ ಪ್ರಸಿದ್ಧ ದೇಶಭಕ್ತರಾದ ಶ್ರೀ। ರಾಜಗೋಪಾಲಾಚಾರ್ಯರು ತಮಿಳನಾಡಿನ ಪುದುಪಾಳ್ಯಮಿನಲ್ಲಿ 'ಗಾಂಧಿ ಆಶ್ರಮ'ವನ್ನೊಂದು ಸದ್ಯಕ್ಕೆ ಸ್ಥಾಪಿಸಿರುವರು. ಈ ಆಶ್ರಮಕ್ಕಾಗಿ ಅಲ್ಲಿಯ ಔದಾರ್ಯವಂತ ಜಮೀನದಾರರಾದ ಶ್ರೀ। ರತ್ನಸಭಾಪತಿ ಗೌಂಡರರವರು ಸ್ಥಳವನ್ನು ದಾನಮಾಡಿರುವರು. ಇಲ್ಲಿ ಶ್ರೀ। ರಾಜಗೋಪಾಲಾಚಾರ್ಯರು ಕುಟುಂಬ ಸಹಿತ ವಾಸ್ತವ್ಯ ಮಾಡಿಕೊಂಡು ನಿಯಮಿತವಾಗಿ ಕೈರಾಟೆಯಮೇಲೆ ನೂತು, ತಮ್ಮ ನೂಲಿನಿಂದಲೇ ನೆಯ್ದ ಖಾದಿಯನ್ನು ಧರಿಸುತ್ತಿರುವರು. ಈ ಆಶ್ರಮಕ್ಕೆ ಮಹಾತ್ಮರು ಕಳೆದ ಮಾರ್ಚ ತಿಂಗಳಿನಲ್ಲಿ ದಯಮಾಡಿಸಿದ್ದರು. ಆಗ ಶ್ರೀಯುತರೂ, ಅವರ ಅಣ್ಣನ ಮಗನೂ ಖಾದಿಗಾಗಿ, ಮದ್ಯಪಾನ ನಿಷೇಧಕ್ಕಾಗಿ ತನುಮನ ಧನದಿಂದ ದುಡಿಯಲು ಅಭಿವಚನ ಕೊಟ್ಟಿರುವರು. ಈ ಆಶ್ರಮದಲ್ಲಿ ೧೫ ಮಂದಿಗಳಿರುವರು. ಇಬ್ಬರು ಅಸ್ಪೃಶ್ಯರು, ಸುಮಾರು ಸಾವಿರಕ್ಕೆ ಮಿಕ್ಕಿದ ಹೆಂಗಸರು ಕೈರಾಟೆಯಮೇಲೆ ನೂತು ನೂಲು ತಂದು ಕೊಡುತ್ತಾರೆ. ಪ್ರತಿ ಒಬ್ಬ ಆಶ್ರಮವಾಸಿಯು ದಿವಸ ಒಂದರ ೧೫೦ ಗಜ ನೂಲನ್ನು ನೂಲಬೇಕೆಂದಿದೆ. ಆಶ್ರಮದೊಳಗಿನವರೆಲ್ಲರೂ ಒತ್ತಟ್ಟಿಗೆ ಕೂತುಕೊಂಡು ಊಟ ಮಾಡುತ್ತಾರೆ. ಆಶ್ರಮಕ್ಕೆ ಹೊಂದಿಕೆಯಾಗಿಯೇ ಒಂದು ತೋಟವಿದೆ. ಹೊಲಗೆಲಸವನ್ನೂ ಆಶ್ರಮದವರೇ ಮಾಡುತ್ತಾರೆ. ವಕೀಲರೊಬ್ಬರು ಈ ಸಂಸ್ಥೆಗೆ ಭೆಟ್ಟಿಕೊಟ್ಟಿದ್ದರು. ಇದನ್ನು ನೋಡಿ, ಇದೊಂದು ಅಪೂರ್ವ ಸಂಸ್ಥೆಯೆಂದು ಅವರು ಅಭಿಪ್ರಾಯಪಟ್ಟರು.

⁂

ಭಯಂಕರ ಕೂಸು!

ತ್ರಾವಣಕೋರ ಸಂಸ್ಥಾನದಲ್ಲಿ ಒಂದು ಭಯಂಕರ ಕೂಸು ಜನಿಸಿದೆ. ಈ ಕೂಸಿನ ಜನ್ಮಸ್ಥಾನವು ನೆಯ್ಯತ್ತಿನಕರಯು ಎಂಬ ಗ್ರಾಮ. ಕೂಸಿನ ಜಾತಿ ಎಝುವಾ. ಈ ಕೂಸು ಹುಟ್ಟಿದ ಕೂಡಲೆ ಕೈ ಊರಿ ಎದ್ದು ನಿಂತಿತಂತೆ. ಸಾಧಾರಣ ೨ ವರ್ಷ ಪ್ರಾಯದ ಕೂಸಿನಷ್ಟು ಬೆಳೆದಿತ್ತು. ಅವಯವಗಳು ಭಯಂಕರವಿದ್ದವು. ಕಣ್ಣುಗಳು ಹಣೆಯ ಮೇಲೆ. ತಲೆಯ ಹಿಂಭಾಗದಲ್ಲಿ ಒಂದು ಜುಟ್ಟು; ಮೂರು ಬುಗುಟೆ. ಮೈಮೇಲೆಲ್ಲ ಉದ್ದುದ್ದ ಕೂದಲು, ೧-೧ ಇಂಚು ಉದ್ದ. ಕೈಕಾಲು ಬಹು ಉದ್ದವಿದ್ದವು. ಕೂಸು ತಾಯಿಯ ಮೊಲೆ ಕುಡಿಯಲಿಲ್ಲ. ಆಗ ಸೀಯಾಳ ನೀರನ್ನು ಕೊಟ್ಟರು. ಇಷ್ಟು ದೊಡ್ಡ ಕೂಸಾದರೂ ತಾಯಿಗೆ ಪ್ರಸೂತಿ ಸಮಯ ವಿಶೇಷ ವೇದನೆಯಾಗಲಿಲ್ಲ. ಕೂಸಿನ ಆಯುರ್ಬಲವು ತೀರ ಕಡಿಮೆ. ೪ ತಾಸುಗಳಲ್ಲಿ ಮೃತ ಹೊಂದಿತು.

⁂

ಸನಾತನ ಧರ್ಮಾಭಿಮಾನಿ ಸಾಹೇಬರು.

ಸಂಯುಕ್ತ ಪ್ರಾಂತದಲ್ಲಿ ಸೀತಾಪುರ ಎಂಬದೊಂದು ಜಿಲ್ಲೆ ಇದೆ. ಈ ಜಿಲ್ಲೆಯಲ್ಲಿ ನಬೀನಗರ ಎಂಬದೊಂದು ಸಂಸ್ಥಾನವಿದೆ. ಈ ಸಂಸ್ಥಾನದ ಕಾರ್ಯಭಾರಿಗಳು ವಿ। ದಂತ ಎಂಬ ಯುರೋಪಿಯನ್ ಗೃಹಸ್ಥರು. ವಿ। ದಂತರವರಿಗೆ ಸನಾತನ ಧರ್ಮದ ಮೇಲೆ ವಿಶೇಷ ಶ್ರದ್ಧೆ. ಕೆರೆ-ಬಾವಿ-ಉಪವನ-ದೇವಾಲಯ ಮೊದಲಾದವುಗಳ ಜೀರ್ಣೋದ್ಧಾರ ಮಾಡುವದು ಇವರಿಗೆ ವಿಶೇಷ ಪ್ರಿಯ. ಬ್ರಾಹ್ಮಣರ ಹುಡುಗರೆಲ್ಲರೂ ಸ್ನಾನ-ಸಂಧ್ಯಾವಂದನ ಮೊದಲಾದ ಧರ್ಮಾಚಾರಗಳನ್ನು ಆಚರಿಸುವಂತೆ ಇವರು ಉಪಾಯಯೋಜನೆ ಮಾಡುತ್ತಾರೆ. ತಮ್ಮ ತಲದಿನೊಳಗಿಂದ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಶಿಷ್ಯವೃತ್ತಿಗಳನ್ನು ಅವರು ಕೊಡುತ್ತಾರೆ. ಸಾಹೇಬರು ನಬೀನಗರದ ನೆರೆಹೊರೆಯಲ್ಲಿಯೇ ಒಂದು ಶಿವಾಲಯವನ್ನು ಸ್ಥಾಪಿಸಿ, ಅದರ ಉತ್ಪತ್ತಿ ತಿಳಿಯಬೇಕೆಂದೋ ಏನೋ, ತಮ್ಮ ದಂಡ ಹೆಸರನ್ನು ಜೋಡಿಸಿ, "ದಂಡೇಶ್ವರ"ವೆಂದು ಹೆಸರಿಟ್ಟಿರುವರು. ಶ್ರೀ ದೇವರ ಪೂಜೆಯನ್ನು ಸ್ವತಃ ತಾವೇ ಮಾಡಬೇಕೆಂದು ಅವರಿಗೆ ಪ್ರಬಲ ಆಕಾಂಕ್ಷೆಯಾಯಿತು. ಆದರೆ, ಅವರ ಜಾತಿ, ಧರ್ಮವು ಅಡ್ಡಬರುತ್ತದೆ. ಅದಕ್ಕಾಗಿ ಸಾಹೇಬರು, ಯವಭಕ್ಷಣ, ಪಂಚಗವ್ಯಪಾಶನ ಮೊದಲಾದ

(೧೦ನೇ ಪಾನಿನ ಮೇಲೆ ಮುಂದುವರಿಸಿದೆ.)

ಕಾನಡಾವೃತ್ತ.

ಮಿತಿ ಕ್ರೋಧನ ಸಂ। ವೈಶಾಖ ಶ ೧೨ ಸೋಮವಾರ

ಗೋಪಾಲಕರಾಗಿರಿ!

ಗೋವು ನಮ್ಮ ಭರತಖಂಡದ ಪ್ರಜೆಗಳ ಮೂಲ ಆಧಾರಸ್ತಂಭವು. ಭಾರತೀಯರು ಪ್ರಾಮುಖ್ಯವಾಗಿ ಬೇಸಾಯಗಾರರು. ಬೇಸಾಯದ ಮುಖ್ಯ ಸಾಧನವು ಗೋಪುತ್ರನು. ಗೋವು, ಗೋವುಗಳ ಹೀನಾವಸ್ಥೆಯನ್ನು ಕಂಡುಹಿಡಿದು, ಅದನ್ನು ಉದ್ಧರಿಸಿ, ಪರ್ಯಾಯದಿಂದ ಆತ್ಮೋದ್ಧಾರವನ್ನು ಸಾಧಿಸಿಕೊಳ್ಳಲು, ಅಖಿಲ ಭರತಖಂಡದೊಳಗಿನ ಗೋಭಕ್ತರು ಅಲ್ಲಲ್ಲಿ ಗೋರಕ್ಷಕ ಸಂಸ್ಥೆಗಳನ್ನು ನಿರ್ಮಿಸಿದರು. ಈ ಸಂಸ್ಥೆಗಳನ್ನೆಲ್ಲ ಕೇಂದ್ರೀಕರಿಸಿ, ಅಖಿಲ ಭಾರತೀಯ ಸ್ವರೂಪವನ್ನಿತ್ತು ಸಮಸ್ತ ಸಂಸ್ಥೆಗಳ ಕಾರ್ಯವನ್ನು ಪದ್ಧತಿ ಪೂರ್ವಕವಾಗಿ ನಡಿಸುವದೆ ಬೆಳಗಾವಿಯಲ್ಲಿ ಅಖಿಲ ಭಾರತೀಯ ಗೋಪರಿಷತ್ತಿನ ಯೋಜನೆಯಾಯಿತು. ಮಹಾತ್ಮರು ಸಭಾಪತಿಗಳಿದ್ದರು. ಈ ಪರಿಷತ್ತಿಗೆ ತಕ್ಕ ಘಟನೆಯನ್ನು ನಿರ್ಮಿಸಿಕೊಂಡು ಪರಿಷತ್ತಿಗೆ ಪ್ರಾತಿನಿಧಿಕ ಸ್ವರೂಪವನ್ನೀಯಲು ಆಗ ಅವಕಾಶ ದೊರೆಯಲಿಲ್ಲ. ಆದರಿಂದ ಈ ವಿಷಯ ಸಮಾಲೋಚಿಸಿ, ಘಟನೆಯನ್ನು ಮಂಜೂರು ಮಾಡಿಕೊಳ್ಳಲು ಕಳೆದ ಬುಧವಾರ ತಾ ೨೯ ನೇಗೆ ಮುಂಬಯಿಯಲ್ಲಿ ಅಖಿಲ ಭಾರತೀಯ ಗೋರಕ್ಷಣ ಪರಿಷತ್ತು ಕೂಡಿತು. ಮಹಾತ್ಮರೇ ಸಭಾಪತಿಗಳಾಗಲು ಅಹಮದಾಬಾದದಿಂದ ಮುದ್ದಾಂ ಹೋಗಿದ್ದರು. ಈ ಸಭೆಗೆ ಮೌ। ಶೌಕತ ಅಲ್ಲಿ, ಸರ್ ಪುರುಷೋತ್ತಮದಾಸ ಠಾಕೂರದಾಸ, ಶ್ರೀ। ಜಮನಾದಾಸ ದ್ವಾರಕಾದಾಸ, ಚೌಂಡೇ ಮಹಾರಾಜ, ಡಾ। ಮುಂಜೇ ಮೊದಲಾದ ಭಿನ್ನ, ಭಿನ್ನ ಪಕ್ಷಗಳ ಪ್ರಮುಖರು ಸೇರಿಕೊಂಡಿದ್ದರು.

ಮಹಾತ್ಮರು ಸಭಾಪತಿ ಸ್ಥಾನದಿಂದ ಆಡಿದ ನುಡಿಗಳು ಮನನೀಯವಿವೆ. ಸನಾತನಿಗಳೆಲ್ಲರೂ ಅವನ್ನು ಪುನಃ ಪುನಃ ನೆನಿಸಿ ಗೋಮಾತೆಯ ಪಾಲನಕ್ಕಾಗಿ, ರಕ್ಷಣಕ್ಕಾಗಿ ಮನಃಪೂರ್ವಕ ಯತ್ನಿಸಬೇಕು. ನಿಮ್ಮಂಥ ಮಾನವರಿಗೆ, ತಮ್ಮ ತಮ್ಮ ಕಷ್ಟಗಳನ್ನು ಹೇಳಿಕೊಳ್ಳಲು ಬಾಯಿಯಿದೆ. ಗೋಮಾತೆಯು ಮೂಕಳು. ಅವಳಿಗೆ ಬಾಯಿಯಿಲ್ಲ; ಎಷ್ಟೊ ಕಷ್ಟ ಪ್ರಾಪ್ತವಾದರೂ, ಅದನ್ನು ಅವಳು ಹೇಳಲಾರಳು. ಅದರಿಂದ ಅವಳ ಪಾಲನ ಪೋಷಣಕ್ಕಾಗಿ ನಾವು ಶಕ್ತಿಮೀರಿ ಯತ್ನಮಾಡಬೇಕು. ಗೋವಧೆಯನ್ನು ಪ್ರತಿಬಂಧಿಸುವದೇ ಇತಿಕರ್ತವ್ಯವೆಂದು ಯಾರೂ ಎಣಿಸಲಾಗದು. ಗೋವಿನ ಪರಿಪಾಲನೆಯು ವಿಶೇಷ ಮಹತ್ವದ್ದಿದೆ. ನಾವು ಈಗ ಗೋವನ್ನು ತೀರ ದುಷ್ಟ ರೀತಿಯಿಂದ ನಡಿಸಿಕೊಳ್ಳುತ್ತೇವೆ. ಭರತಭೂಮಿಯಲ್ಲಿ ಗೋವಿನ ದುರ್ದೆಶೆಯಾಗಿದೆ. ಇಷ್ಟು ದುಸ್ಥಿತಿಯು ಇನ್ನಾವ ದೇಶದಲ್ಲಿಯೂ ಇರುವದಿಲ್ಲ. ಭರತ ಭೂಮಿಯಲ್ಲಿಯಾದರೋ, ಸನಾತನ ಧರ್ಮಾನುಯಾಯಿಗಳಾದ ಹಿಂದೂಗಳೇ ಗೋವನ್ನು ದುಷ್ಟ ರೀತಿಯಿಂದ ನಡಿಸಿಕೊಳ್ಳುತ್ತಾರೆಂದು ಮಹಾತ್ಮರು ಉದ್ಗರಿಸಿದರು. ಗೋವಿನ ಪರಿಪಾಲನೆಯನ್ನು ತಕ್ಕಷ್ಟು ಜಾಗ್ರತೆಯಿಂದ ನಡಿಸದೆ, ನಾವು ಬುದ್ಧಿಪೂರ್ವಕವಾಗಿ ಗೋಮಾತೆಯನ್ನು ಪೀಡಿಸುತ್ತೇವೆಂದೂ ಮಹಾತ್ಮರು ಮರುಗಿದರು. ದನಗಳ ಕೊಟ್ಟಿಗೆಗಳನ್ನು ನಾವು ಸ್ವಚ್ಛವಾಗಿಟ್ಟು ಗೋಮಾತೆಗೆ ಕಷ್ಟವಾಗದಂತೆ ಯೋಜಿಸಲು ಬದ್ಧರಿದ್ದೇವೆ. ಹಾಲು ಹಿಂಡದಿದ್ದ ಗೋವುಗಳನ್ನು ಕಟುಕರಿಗೆ ನಾವು ಮಾರುತ್ತೇವೆ. ಇದು ತೀರ ಅನುಚಿತವು. ಗೋರಕ್ಷಣವೆಂದರೆ ಗೋವುಗಳಿಗೆ ಯಾವದೇ ಪ್ರಕಾರದಿಂದ ಕಷ್ಟ ಕೊಡದಿರುವದು. ಪರಧರ್ಮದವರನ್ನು ನೋಯಿಸುವ ಪ್ರಶ್ನೆಯು ಗೋರಕ್ಷಣದಲ್ಲಿ ಪ್ರವೇಶಿಸಲಾರದು.

ಮಹಾತ್ಮರು ಕೊನೆಗೆ ಒಂದು ಮಾತನ್ನು ಹೇಳಿದರು. ಆದರಿಂದ ಮಹಾತ್ಮರ ಅಂತಃಕರಣವು ಪರಮ ಪೂಜ್ಯ ಗೋಮಾತೆಗಾಗಿ ಹೇಗೆ ತಿಲ್ಲಣಿಸುತ್ತದೆಂಬುದು ಸ್ಪಷ್ಟವಾಗುವದು. ಮಹಾತ್ಮರು ಹಾಲು ಕುಡಿಯುವದಿಲ್ಲವಂತೆ! ಕಾರಣವೇನು? ಗೋರಸವನ್ನೀಯುವ ಗೋವಿಗೆ ನಾವು ದಯಾರ್ದ್ರ ಬುದ್ಧಿಯಿಂದ ನಡಿಸಿಕೊಳ್ಳುವದಿಲ್ಲ. ಇನ್ನೊಂದು ಮಾತನ್ನೂ ವೈಷ್ಣವರೆನಿಸಿಕೊಳ್ಳುವ ಸನಾತನಿಗಳು ಆಚರಿಸುತ್ತಾರೆಂದು ಮಹಾತ್ಮರು ಹೇಳಿದರು. ಡಾಕ್ಟರರು ಪಾಶ್ಚಾತ್ಯ ವೈದ್ಯವಿದ್ಯೆಯಲ್ಲಿ ನಿಪುಣರಾದವರು (ಆರೋಗ್ಯ ಸಂವರ್ಧನದ ದೃಷ್ಟಿಯಿಂದ ದನಾಕಾರಗಳೊಲ್ಲರು, ಗೋಮಾಂಸ ದೂಷಿತವಾದ ಚಹವನ್ನು, ಗೋಮಾಂಸದ ಸತ್ವವನ್ನು ವೈಷ್ಣವರಿಗೆ ಕೊಳ್ಳಹೇಳಿದರೆ, ಅದನ್ನು ಅವರು ಸೇವಿಸುತ್ತಾರೆಂದು ಮಹಾತ್ಮರು ಮರುಗಿದರು. ಬಳಿಕ, ಮಹಾತ್ಮರು ಘಟನೆಯನ್ನು ಸಭೆಯ ಮುಂದಿಟ್ಟು, ಮಂಜೂರು ಮಾಡಿಕೊಂಡರು.

ಘಟನೆಯಲ್ಲಿ ಗೋಪಾಲನದ ಎಲ್ಲ ಉಪಾಯಗಳ ಯೋಜನೆಯಾಗಿರುವದರಿಂದ, ಇನ್ನೊಂದೆಡೆಯಲ್ಲಿ ಕೊಟ್ಟ ಮಾಹಿತಿಯು ಮೇಲಿಂದ ವಾಚಕರಿಗೆ ತಿಳಿಯಬರುವದು. ಗೋರಕ್ಷಣಕ್ಕಾಗಿ ಪರಧರ್ಮದವರೊಡನೆ ನಾವು ಯಾವದೇ ಪ್ರಕಾರದಿಂದ ಜಗಳಾಡಲಾಗದು. ಗೋರಕ್ಷಣದ ಕಾರ್ಯವನ್ನು ಪ್ರೀತಿಯಿಂದ, ಸ್ನೇಹಭಾವದಿಂದ ನಡಿಸಲು ನಾವು ಬದ್ಧರಿದ್ದೇವೆ. ಗೋವಿಗೆ ಸುಖ ಕೊಡಲು ಮಹಮ್ಮದೀಯರೂ ಕರ್ತವ್ಯ ಬದ್ಧರಿರುವರೆಂದು ಮೌ। ಶೌಕತ ಅಲ್ಲಿಯವರು ನುಡಿದು, ಮಹಮ್ಮದೀಯರ ವಿಷಯ ಸನಾತನಿಗಳಲ್ಲಿರಬಹುದಾದ ಸಂದೇಹವನ್ನು ದೂರಪಡಿಸಿರುವರು. ಅಶಕ್ತ, ರೋಗಗ್ರಸ್ತ ಗೋವುಗಳನ್ನು ಬಡ ಮಾಲಿಕರಿಂದ, ಪಡಕೊಂಡು ಅವುಗಳಿಗೆ ವಿಮೋಚನ ಮಾಡಲು ಅಖಿಲ ಭಾರತೀಯ ಗೋಪರಿಷತ್ತು ಯೋಜಿಸಿ ಬಡ ಮಾಲಿಕರಿಗೂ, ಗೋವುಗಳಿಗೂ ಮಹದುಪಕಾರ ಮಾಡಿರುವದು. ಈ ಘಟನೆಯಂತೆ ಸನಾತನ ಧರ್ಮಾಭಿಮಾನಿಗಳೆಲ್ಲರೂ ಈ ದುಡಿದು, ಗೋವುಗಳ ದೈನ್ಯವನ್ನು ಪರಿಹರಿಸಿ ಭರತ ಭೂಮಿಯ ಉದ್ಧಾರ ಮಾಡುವರಾಗಿ ನಮ್ಮ ನಂಬಿಗೆ ಇದೆ.

ಗೋವುಗಳ ದೈನ್ಯವನ್ನು ಪರಿಹರಿಸುವಷ್ಟು, ಸನಾತನ ಧರ್ಮಾಭಿಮಾನಿ ಭರತಭೂಮಿಯಲ್ಲಿ ಗೋವಿನ ಅವನತಿಯಾದದ್ದು ಶೋಚನೀಯವು. ಕಾಮಧೇನುರೂಪವಾದ ಗೋವನ್ನು ರಕ್ಷಿಸಲು ಸನಾತನಿಗಳು ಧರ್ಮಬದ್ಧವಿದ್ದು, ನಾವು ನಮ್ಮ ಧರ್ಮದಂತೆ ನಡೆಯದೆ, ಗೋಧನವನ್ನು ಕಳಕೊಂಡು ದರಿದ್ರರಾಗಿರುವೆವು. ಗೋವುಗಳ ದಾರಿದ್ರ್ಯಕ್ಕೂ, ನಮ್ಮ ದಾರಿದ್ರ್ಯಕ್ಕೂ ನಮ್ಮ ಧರ್ಮಚ್ಯುತಿಯೇ ಕಾರಣವು; ಕರ್ತವ್ಯ ಪರಾಙ್ಮುಖತೆಯಿಂದಲೇ ದೇಶದಲ್ಲಿ ದೈನ್ಯವು ಒದಗಿಬಂದಿದೆ. ಗೋವಿನಷ್ಟು ಪೂಜ್ಯ ಪ್ರಾಣಿಯು, ಉಪಯುಕ್ತ ಪ್ರಾಣಿಯು, ಉಪಕಾರಕ ಪ್ರಾಣಿಯು ನಮಗೆ ಬೇರೊಂದಿಲ್ಲ. ಗೋಪುತ್ರರು ನಮ್ಮ ಅನ್ನದಾತೃಗಳು; ಗೋರಸವು ನಮ್ಮ ಜೀವನವು. ಇಷ್ಟು ಉಪಕಾರದಿಂದ ಮೂಕ ಗೋವು ನಮ್ಮನ್ನು ಹಂಗಿನಲ್ಲಿಟ್ಟರೂ, ಧರ್ಮವನ್ನು ಧಿಕ್ಕರಿಸಿ, ಕ್ಷುದ್ರ ಸ್ವಾರ್ಥಪ್ರೇರಿತರಾಗಿ ಗೋವುಗಳಿಗೆ ನಾವು ಕಷ್ಟಕ್ಕೀಡು ಮಾಡುತ್ತೇವೆ. ಮಹಾತ್ಮರು ನುಡಿದಂತೆ, ಇದು ಅಪಕೃತ್ಯವು; ಅಧರ್ಮವು. ಗೋವುಗಳ ದೈನ್ಯವನ್ನು ಸಹಿಸಲಾರದೆ, ಮಹಾತ್ಮರು ಗೋರಸವನ್ನು ತ್ಯಜಿಸಿರುವರು. ಕ್ಷಣಭಂಗುರ ದೇಹಕ್ಕಾಗಿ ಪಾಶ್ಚಾತ್ಯ ವೈದ್ಯವಿಶಾರದ, ಸನಾತನ ಧರ್ಮದ ತತ್ವವನ್ನರಿಯದ ಡಾಕ್ಟರರ ಅಭಿಪ್ರಾಯಗಳಂತೆ ಗೋಮಾಂಸದ ಸತ್ವವನ್ನು ಭಕ್ಷಿಸಿ, ಶಾಶ್ವತವಾದ ಧರ್ಮತ್ಯಾಗ ಮಾಡುವದು ಅಕ್ಷಮ್ಯ ಅಪರಾಧವಲ್ಲವೇ? ಶ್ರೀ ಗೋಪಾಲಕೃಷ್ಣನನ್ನು ಪರಮಾತ್ಮನ ಅವತಾರವೆಂದು ಎಣಿಸಿ, ಹಗಲಿರುಳು ಆತನ ಪೂಜೆಮಾಡುವ ಸನಾತನಿಗಳಿಗೆ, ಗೋಪಾಲಕರಾಗಿರೆಂದು ಬೋಧಿಸಬೇಕಾದದ್ದು ವಿಪರೀತ ಕಾಲವು. ಆದರೂ, ಸನಾತನಿಗಳು ಬೇಸರಪಡದೆ, ಮನಃಪೂರ್ವಕ ಪಶ್ಚಾತ್ತಾಪಪಟ್ಟು, ಇಹ-ಪರಕಲ್ಯಾಣಪ್ರದವಾದ ಗೋವನ್ನು ಪಾಲಿಸಿ ಪೋಷಿಸಲು ಟೊಂಕ

ತ್ಯ ಮುಂದಾದ ಅಖಿಲ ಭಾರತೀಯ, ಗೋವಪತ್ತಿನ ಸಭಾಸದರಾಗಿ, ಸ್ವಯಂಸೇವಕರಾಗಿ ದುಡಿದು, ಗೋಮಾತೆಯ ಉದ್ಧಾರವನ್ನೂ, ಅಭ್ಯುದ್ಧಾರವನ್ನೂ ಸಾಧಿಸಿ, ಶ್ರೇಯ ಹೊಂದಬೇಕಾಗಿ ನಾವು ಅಂತಃಕರಣಪೂರ್ವಕ ಬೋಧಿಸುವೆವು.

ಸ್ಫುಟ ಸೂಚನೆಗಳು.

೧. ಮುಂಬಯಿಯೊಳಗಿನ ಗಿರಣಿಗಳಲ್ಲಿ ಇತ್ತ ವಿಶೇಷ ಗೊಂದಲವೆದ್ದಿದೆ. ಹಾಂಗಕಾಂಗ ಮೊದಲಾದ ಗಿರಣಿಗಳು, ಹತ್ತಿಗಿಂತ ಅರಿವೆಯೇ ಅಗ್ಗವಾದ್ದರಿಂದ ನಷ್ಟಕ್ಕೆ ಮುಚ್ಚಲ್ಪಟ್ಟವು. ವಾಡಿಯಾ ಊಲನ್ ಎಂಬ ಉಣ್ಣೆಯ ಗಿರಣಿಯು ಬಂಡವಲು ಸಮಾಪ್ತವಾಗಿ ಗಿರಣಿಯು ದಿವಾಳಿ ತೆಗೆದಿದೆ. ಗಿರಣಿ ತೆಗೆಯುವಾಗ ಬಹು ದೊಡ್ಡ ಮುನಾಫೆಯ ದೊಡ್ಡ ದೊಡ್ಡ ಜಾಹೀರಾತು ಹಚ್ಚಿ ಶೇರು ಹೊಲ್ಡರರಿಂದ ಹಣವನ್ನೆತ್ತಿದ ಗಿರಣಿಗಳಿಗೆ ಇಂಥ ಹೀನಾವಸ್ಥೆಯು ಪ್ರಾಪ್ತವಾಗುವ ಕಾರಣವೇನು? ಸೂಕ್ಷ್ಮವಾಗಿ ಪರ್ಯಾಲೋಚಿಸಿದರೆ, ಗಿರಣಿಗಳ ಬಂಡವಲು ಕೂಡುವ ಯಜಮಾನರು ಶೇರು ಹೊಲ್ಡರರಿದ್ದರೂ, ಪ್ರತ್ಯಕ್ಷ ಅಡಳಿತೆಯು ಡಾಯರೆಕ್ಟರ ಹಾಗು ಅವರ ತಂತ್ರದಿಂದ ಆಡಳಿತೆ ನಡಿಸುವವರು ಮೆನೇಜಿಂಗ ಏಜಂಟ್ಸ ಯಾನೆ ಕಾರಭಾರಿಗಳು. ಹಣವನ್ನೆತ್ತುವಾಗ ಶೇರು ಹೊಲ್ಡರರ ಗಂಟು ಇಷ್ಟಷ್ಟು ಗಿರಣಿ ನಡಿಸುವಂಗ ಇರುವದಿಲ್ಲ. ಒಮ್ಮೆ ಬಂಡವಲು ಕೈವಶವಾದ ಕೂಡಲೆ, ಮೆನೇಜಿಂಗ ಏಜಂಟರೂ, ಡ್ಯಾರೆಕ್ಟರರೂ ಒಕ್ಕಟ್ಟಾಗಿ ಎರಡೂ ಮಂಡಳಗಳಲ್ಲಿ ಅನ್ಯೋನ್ಯ ಪ್ರೀತಿಯು, ಪರಸ್ಪರ ಸೆಳೆಸದ ತಮ್ಮ ತಮ್ಮ ಮರಿಗಳನ್ನೇ ನೇಮಿಸಿ ಕೊಂಡು, ಶೇರು ಹೊಲ್ಡರರು ವಿಶ್ವಾಸದಿಂದ ಕೊಟ್ಟ ನಿಧಿಯನ್ನು ಡ್ಯಾರೆಕ್ಟರರೂ, ಮೆನೇಜಿಂಗ ಏಜಂಟ್ಸರೂ, ಚೂರು ಹಾರಿಸಿ ಬಿಡುತ್ತಾರೆ. ಕಂಪನಿಯನ್ನು ಕಂಪನಿಯವರ ಹಿತಕ್ಕಾಗಿ ನಡೆಸದೆ, ಸ್ವಾರ್ಥಪರಾಯಣರಾಗಿಯೇ ನಡೆಸುವದರಿಂದ ಗಿರಣಿಗಳನ್ನು ಮುಚ್ಚುವ ಪ್ರಸಂಗವು ಸ್ವದೇಶಿ ಉದ್ಯೋಗಗಳ ಉತ್ಸಾಹದಲ್ಲಿ ಒದಗಿ ಬಂದಿದೆ. ಗಿರಣಿಗಳ ಕಾರಭಾರಿ ಮಂಡಳದ ಮೇಲಿನ ಟೀಕೆಯು ಸಾಮಾನ್ಯವಾಗಿ ಸಮಸ್ತ ಕಂಪನಿಗಳಿಗೂ ಲಾಗು ಆಗುತ್ತದೆಂದು ಕಂಪನಿಯ ಕಾರಭಾರದ ಅಂತರಂಗಪರೀಕ್ಷಣ ಮಾಡುವವರಿಗೆಲ್ಲ ಹೊಳೆಯದಿರದು. ಶೇರುಹೊಲ್ಡರರು ವಿಶೇಷ ಜಾಗೃತರಾಗಿ ಮೆನೇಜಿಂಗ ಏಜಂಟರ ಏಕತಂತ್ರ ಅಧಿಕಾರವನ್ನು ಅಳಿಗಳೆಯಲು ಮುಂದಾದ ಹೊರತು ಕಾರಭಾರಿಗಳ ಸ್ವಾರ್ಥಕ್ಕೆ ಅಂಕುಶ ಬೀಳಲಾರದು; ದೇಶಿ ಉದ್ಯೋಗಗಳೂ ಊರ್ಜಿತ ಹೊಂದಲಾರವು.

೨. ಕಾಠೇವಾಡದೊಳಗಿನ ಶೇರವಾಡದ ಠಾಕೂರ ಸಾಹೇಬರು ಮುಂಬಯಿ ಕ್ರಾನಿಕಲ್ ಪತ್ರಿಕೆಯಲ್ಲಿ ಸುಧಾರಿಸಿದ ಬ್ರಿಟಿಶ ರಾಜ್ಯದಿಂದ ಹಳ್ಳಿಗಳ ಸ್ಥಿತಿಯು ಸುಧಾರಿಸಿತೋ ಹೇಗೆ? ಎಂಬ ಪ್ರಶ್ನೆಯನ್ನು ಎತ್ತಿ, ಒಂದು ಪತ್ರ ಪ್ರಕಟಿಸಿರುವರು. ಠಾಕೂರ ಸಾಹೇಬರು ಗ್ರಾಮದೊಳಗಿನ ಪ್ರಜಾರಕ್ಷಣೆಯನ್ನು ಮೊಟ್ಟಮೊದಲು ವಿಚಾರಿಸಿರುವರು. ಪಟ್ಟಣದಲ್ಲಿ ೪-೫ ಪೋಲೀಸ ಠಾಣ್ಯಗಳಿವೆ ಗ್ರಾಮಗಳಲ್ಲಿ ಪೋಲೀಸ ಠಾಣ್ಯಗಳ ಸುಳುವು ಇಲ್ಲವೆಂದೂ ಹೇಳಬಹುದು. ತಾಲೂಕಿನೊಳಗಿನ ಪೋಲೀಸರು ದೂರ ದೂರ ಇರುವ ಗ್ರಾಮಗಳ ರಕ್ಷಣೆ ಮಾಡುತ್ತಿರಬೇಕು. ಹೀಗೆ ರಕ್ಷಣ ಮಾಡುವದು ಮಾನವನ ಶಕ್ತಿಬಾಹ್ಯ ವಿಷಯವು. ಸ್ವರಕ್ಷಣವನ್ನು ಸ್ವಪರಾಕ್ರಮದಿಂದಲೇ ಸಾಗಿಸುವ ಎಂದರೆ ಅವಕಶ್ಯ ತೊಂದರೆ ಇದೆ. ತುಬಾಕಗಳಿಗಂತು ಲಾಯಸನ್ಸ ಇದೆ; ಕೆಲವೆಡೆಗಳಲ್ಲಿ ಸ್ವೋರ್ಡ ಯಾನೆ ಕತ್ತಿಗಳಿಗೂ ಲಾಯಸನ್ಸ ಕೊಳ್ಳಬೇಕಾಗಿದೆ. ವೈದ್ಯ ಚಿಕಿತ್ಸೆಯ ವಿಷಯವು ಇದಕ್ಕೂ ಹೀನತರವು. ತಾಲೂಕಿನ ಮುಖ್ಯ ಸ್ಥಳದಲ್ಲಿ ಒಂದು ಚಿಕಿತ್ಸಾಲಯವಿರುತ್ತದೆ. ಆಚೆ-ಈಚೆ ಐವತ್ತಕ್ಕೂ ಮಿಕ್ಕಿ ಗ್ರಾಮಗಳು. ಕೆಲಕೆಲವು ಸಲ ೧೦-೨೦ ಮೈಲು ದೂರದಿಂದ ರೋಗಿಗಳು ಚಿಕಿತ್ಸೆ ಪಡೆಯಬೇಕಾದರೆ ಪಟ್ಟಣಕ್ಕೆ ಹೋಗಬೇಕಾಗುತ್ತದೆ. ಕೆಟ್ಟ ಮಾರ್ಗಗಳ ಮೇಲೆ ಸಾವಕಾಶವಾಗಿ ರೋಗಿಯು ಜಗಿದಾತ ಎತ್ತಿನ ಗಾಡಿಯಲ್ಲಿ ಕೂತುಕೊಂಡು ಬರುವಷ್ಟು ಸಾಕ ಧೈರ್ಯವಂತನಾದರೆ, ಅವನಿಗೆ ಮಟ್ಟಿನ ಅವಶ್ಯಕತೆ ಏನೇನು ಠಾಕೂರ ಸಾಹೇಬರ ಸವಾಲು. ಟಪಾಲು ಆಫೀಸಿನವರೂ, ಗ್ರಾಮಸ್ಥರ ಮೇಲೆ ವಿಶೇಷ ಉಪಕಾರ ಮಾಡುತ್ತಾರೆ. ಪಟ್ಟಣಗಳಲ್ಲಿ ದಿನಕ್ಕೆ ಮೂರು ನಾಲ್ಕಾವರ್ತಿ ಟಪಾಲು ಸಿಗುತ್ತಿದ್ದರೆ, ಹಳ್ಳಿಗಳಲ್ಲಿ ತಿಂಗಳಿಗೆ ನಾಲ್ಕಾವರ್ತಿ ಪತ್ರಗಳು ಕೈಸೇರುತ್ತವೆ. ಹಳ್ಳಿಗಳಲ್ಲಿ ರಾತ್ರಿ ದೀವಗಳಿಲ್ಲ; ಮಾರ್ಗಗಳಿಲ್ಲ; ನೀರಿನ ಪೂರೈಕೆ ಇಲ್ಲ; ಆರೋಗ್ಯಪಾಲನದ ಆಫೀಸರರಿಲ್ಲ ಶಾಲೆಗಳ ವಿಷಯದಲ್ಲಿಯೂ ಇದೇ ಹಾಡು. ಒಮ್ಮೊಮ್ಮೆ ೪-೫ ಮೈಲು ದೂರ ವಿದ್ಯಾರ್ಥಿಯು ವಿದ್ಯಾರ್ಜನಕ್ಕಾಗಿ ನಿತ್ಯವೂ ಬರ-ಹೋಗಬೇಕಾಗುತ್ತದೆ. ಇವಕ್ಕಾಗಿ ತೆರಿಗೆ ತೆರುವ ಪ್ರಜೆಗಳು ಪ್ರಾಮುಖ್ಯವಾಗಿ ಹಳ್ಳಿಗರೇ. ಅಖಿಲ ಭರತಖಂಡದ ಜನಸಂಖ್ಯೆಯಲ್ಲಿ ೧೦ಕ್ಕೆ ೮೦ರಷ್ಟು ಪ್ರಜೆಗಳು ಗ್ರಾಮನಿವಾಸಿಗಳು. ಅವರು ತೀರ್ವೆ, ಸ್ಟ್ಯಾಂಪು, ಅಬಕಾರಿ, ರಜಿಸ್ಟ್ರಿ ಮೊದಲಾದ ರೂಪದಿಂದ ಕೋಟ್ಯಾವಧಿ ರೂಪಾಯಿಗಳನ್ನು ಸರಕಾರಿ ದೊಕ್ಕಸದಲ್ಲಿ ಸೇರಿಸುವರು. ಆದರೂ ಅವರ ಚಿಂತೆ ಸರಕಾರಕ್ಕಿಲ್ಲ. ಮೋಗಲಾಯ ಯಾ ಮರಾಠರ ಆಡಳಿತೆಯಲ್ಲಿದ್ದಂತೆ ಹಳ್ಳಿಗರು ಈಗಲೂ ಇರುವರೆಂದು ಠಾಕೂರ ಸಾಹೇಬರ ಅಭಿಪ್ರಾಯವಿದ್ದು, ಗ್ರಾಮಗಳ ಉದ್ಧಾರಕ್ಕಾಗಿ ಸಮಸ್ತರೂ ದುಡಿಯಬೇಕೆಂದು ವಿನಂತಿ ಮಾಡಿಕೊಂಡಿರುವರು. ಠಾಕೂರ ಸಾಹೇಬರು ಮುಂಬಯಿ ಕಾಯಿದೆ ಕೌನ್ಸಿಲು ಸಭಾಸದರಿದ್ದು, ಸಹಕಾರಿ ಸಭಾಸದರ ಆಲೋಚನೆಯಿಂದ ಈ ವಿಷಯದ ಕಡೆಗೆ ಸರಕಾರದ ಲಕ್ಷ್ಯ ಸೆಳೆಯುವಂತೆ ಉಪಾಯಯೋಜನೆ ಮಾಡಲೆಂದು ಹಾರೈಸುವೆವು.

೩. ನಿಜಾಮ ಸಾಹೇಬರ ರಾಜ್ಯದಲ್ಲಿ ಒದಗುವ ಲೀಲೆಗಳನ್ನು ಕೇಳಿದರೆ, ಒಮ್ಮೆ ನಗೆ ಬರುತ್ತದೆ; ಒಮ್ಮೆ ಕ್ಲೇಶ ಉಂಟಾಗುತ್ತದೆ. ವರಂಗೂಲದಲ್ಲಿ ಶ್ರೀ ಪಿಂಗಲ ರಂಗರಾವ ಎಂಬ ಹೆಸರಾದ ವಕೀಲರು ಸ್ವರ್ಗವಾಸಿಯಾದರು. ಇವರು ಅರಬಿ, ಫಾರ್ಸಿ, ಉರ್ದು ಮೊದಲಾದ ಭಾಷೆಗಳಲ್ಲಿ ಪ್ರವೀಣರು. ಈ ಪ್ರಾವೀಣ್ಯದಿಂದಲೇ ಹಿಂದೂಗಳಿದ್ದರೂ ಕೈಲಾಸವಾಸಿಗಳು ಮಹಮ್ಮದೀಯರಿರಬೇಕೆಂದು ವರಂಗೂಲದೊಳಗಿನ ಮಹಮ್ಮದೀಯರ ಗ್ರಹಿಕೆಯಾಗಿ, ಮೃತಾತ್ಮರ ದೇಹಕ್ಕೆ ಅಗ್ನಿಸಂಸ್ಕಾರ ಮಾಡದೆ, ಹುಗಿಯಬೇಕೆಂದು ಹಟ ಹಿಡಿದರು. ಹಿಂದೂಗಳು ಒಪ್ಪಲಿಲ್ಲ. ಪ್ರಕರಣವು ನಿಜಾಮ ಸಾಹೇಬರ ಧರ್ಮಾಚಾರ್ಯರ ಕಡೆಗೆ ಹೋಯಿತು. ಅವರು, ಮಹಮ್ಮದೀಯ ದೀಕ್ಷೆಯನ್ನು ಪಡೆದ ಧಪ್ರ ಪುರಾವೆ ದೊರಕಿದ ಹೊರತು ಮೃತರಿಗೆ ದಫನ ಸಂಸ್ಕಾರದ ಬಗ್ಗೆ ಆಗ್ರಹ ಮಾಡಬಾರದೆಂದರು. ಧಪ್ರ ಪುರಾವೆಯು ಏಕೆ? ಏನೂ ಪುರಾವೆಯು ದೊರಕದ್ದರಿಂದ ಕಟ್ಟಕಡೆಗೆ ಕೈ। ವಾ। ಗಳ ದೇಹವನ್ನು ಪೋಲೀಸ ಬಂದೋಬಸ್ತಿನಿಂದ ಹಿಂದೂಗಳು ಸುಡಬೇಕಾಯಿತು. ಇಷ್ಟರಲ್ಲಿ ನಿರ್ಣಯವಾಗುವವರೆಗೆ ಎರಡು ದಿನಗಳು ಕಳೆದವು. ಅಲ್ಲಿಯವರೆಗೆ ಶವವು ಹಾಗೆಯೇ ಇರಬೇಕಾಯಿತು. ನಿಜಾಮ ರಾಜ್ಯದಲ್ಲಿ ಇಸ್ಲಾಮ ಧರ್ಮದ ಹುಚ್ಚು, ಬಲಾತ್ಕಾರವು ಎಲ್ಲಿಯವರೆಗೆ ಮುಟ್ಟಿರುವದೆಂಬು ನೋಡಿರಿ!

೪. ಪ್ರಾಂತಾಧಿಪರ ಆಗಮನದ ಹಕೀಕತಿನ ಸಮಾರಂಭದಿಂದ ಇನ್ನೊಂದು ವಿಚಾರವು ನಮಗೆ ಸೂಚಿಸುತ್ತಿದೆ. ಅರಬೈಲ ಮಾರ್ಗವು ನೆಟ್ಟಗಿರುವದೆಂಬವರ ಮೇಲಿಂದ ಜಿಲ್ಲೆಯೊಳಗಿನ ರಾಜಮಾರ್ಗಗಳಲ್ಲಿ ಈ ಮಾರ್ಗದಂತೆಯೇ ಸಕಲಗುಣಸಂಪನ್ನವಿರುವವೆಂಬ ದೊರೆಗಳ ಗ್ರಹಿಕೆಯು ನಿರಾಧಾರವಿದ್ದಷ್ಟು ವಸ್ತುಸ್ಥಿತಿಯು ವಿಪರ್ಯಾಸವಿದೆ. ಯಾವದಾದರೊಂದು ಹಳ್ಳಿಯಲ್ಲಿ, ಯಾವನಾದರೊಬ್ಬ ಹಳ್ಳಿಗನು ಸಶಕ್ತನಿರುವದರಿಂದ ಹಳ್ಳಿಗರ ಆರೋಗ್ಯವು ನೆಟ್ಟಗಿಲ್ಲೆಂಬ ಅನುಮಾನಕ್ಕೆ ಏನೂ ಬಾಧೆ ತಟ್ಟಲಾರದು. ಯಾಕೆಂದರೆ ಜಂಗಲಖಾತೆಯವರ ಧೋರಣದಿಂದ ಸಮಸ್ತ ಹಳ್ಳಿಗಳೊಳಗಿನ ಸಮಸ್ತ ಪ್ರಜೆಗಳು ಹಾಸಿಗೆ ಹಿಡಿಕೊಂಡು ಬಿದ್ದಿರುವರೆಂದು ಲೋಕಪಕ್ಷದ ಅಂಬೋಣವಿಲ್ಲ. ಅಷ್ಟು ಕಷ್ಟ ಬರುವವರೆಗೆ ನಾವು ಸುಮ್ಮಗುಳಿಯಬೇಕೆಂದು ದೊರೆ ಚಿತ್ತಕ್ಕೆ ತೋರಿದರೆ, ನಮ್ಮ ಉಪಾಯವಿಲ್ಲ. ಅನೇಕ ಹಳ್ಳಿಗಳು ಚಳಿಜ್ವರ ಪೀಡೆಯಿಂದ ನಿರ್ನಾಮವಾದರೂ ದೊರೆಗಳು ಗಟ್ಟಿಯಾಳಿನ ಕಡೆಗೆ ಬೊಟ್ಟು ತೋರಿಸಿ, ಸಮಸ್ತ ಹಳ್ಳಿಗಳಲ್ಲಿಯೂ, ಸಮಸ್ತ ಹಳ್ಳಿಗರೂ ಇದೇ ಪ್ರಕಾರದಿಂದ ಅಭಿವೃದ್ಧಿ ಹೊಂದುತ್ತಿರುವರೆಂದು ತಿಳಕೊಳ್ಳುವದು, ಒಂದೇ ಮೂರ್ಖತನವಿರಬೇಕು; ಅಥವಾ ಧೂರ್ತತನವಿರಬೇಕು. ಬ್ರಿಟಿಶ ರಾಜ್ಯದಿಂದ ಪ್ರಜೆಗಳ ವೈಭವವು ವಿಶೇಷ ಬೆಳೆಯಿತೆಂದು ಪ್ರತ್ಯಕ್ಷ ಪ್ರಮಾಣ ಕೊಟ್ಟು ಜಗತ್ತಿನಲ್ಲಿ ಜಾಹೀರುಪಡಿಸಲಿಕ್ಕೆ ಇಂಥ ಖಾಸಗಿ ಹಾಗು ಏಕತರ್ಫೀ ಆಗಮನಗಳು ಬಹು ಅನುಕೂಲವಾಗುತ್ತವೆ. ದೊರೆಗಳ ಆಗಮನದಿಂದ ಪ್ರಜೆಗಳಿಗೆ ಏನೂ ಲಾಭವಾಗದೆಂಬ ಮಾತು ಖಂಡಿತ ಇಷ್ಟಕ್ಕೇ ಈ ಉಪಾಧಿಯು ತಪ್ಪುವದಿಲ್ಲ. ಮುಂದೆ ಪ್ರಸಂಗವಶಾತ್ ನಮ್ಮ ದುಸ್ಥಿತಿಯನ್ನು ಹೇಳಿಕೊಂಡಲ್ಲಿ, "ಛೇ, ನಾವು ಅಲ್ಲಿ ಸ್ವತಃ ಹೋಗಿದ್ದೆವು; ನಿಮ್ಮ ಹೇಳಿಕೆಯು ವಸ್ತುಸ್ಥಿತಿಯ ನಿದರ್ಶಕವಲ್ಲ. ಸುಮ್ಮನೆ ಏನಾದರೂ ಚಳವಳಿಯನ್ನೆಬ್ಬಿಸುತ್ತೀರಿ" ಎಂದು ಉದ್ಗರಿಸಿ, ಪ್ರಜಾಸೇವೆ ಮಾಡುವವರಿಗೆ ದಬ್ಬಲಿಕ್ಕೊಂದು ಅನುಕೂಲ, ಮುಂದೆ ಅಧಿಕಾರಚ್ಯುತಿಯಾದ ಬಳಿಕ, ವಿಲಾಯತಿಯಲ್ಲಿ ಹೋಗಿ, ಬಂಗಲ ಜಿಲ್ಹೆಗಳಲ್ಲಿಯೂ ಬ್ರಿಟಿಶರು ವಾಹನಸೌಕರ್ಯಗಳನ್ನು ಹೆಚ್ಚಿಸಿ, ಪಾಶ್ಚಾತ್ಯ ಸುಧಾರಣೆಗಳನ್ನು ಹಳ್ಳಿಗರ ವರೆಗೆ ಮುಟ್ಟಿಸಿರುವರೆಂದೂ, ಬಂಗಲ ಜಿಲ್ಹೆಯಲ್ಲಿ ಆರೋಗ್ಯ ಪಾಲನಕ್ಕಾಗಿ ಬ್ರಿಟಿಶರು ಶಕ್ತಿಮೀರಿ ದುಡಿಯುತ್ತಾರಾಗಿಯೂ ಪ್ರತಿಪಾದಿಸಿ, ಗಟ್ಟಿಯಾಳಿನ ಭಾವಚಿತ್ರವನ್ನೊಂದು ವಿಲಾಯತಿಯೊಳಗಿನ ವರ್ತಮಾನಪತ್ರಗಳಲ್ಲಿ ಪ್ರಸಿದ್ಧಿಸಲಿಕ್ಕೂ

ಒಂದು ಅನುಕೂಲ ಕಾನಡಾ ಜಿಲ್ಲೆಯೊಳಗಿನ ಜಂಗಲ ವಿರುದ್ಧ ಚಳವಳಿಯೆಲ್ಲ ಪ್ರಾಮಾಣಿಕ ಬುದ್ಧಿಯಿಂದ ನಡೆಸಲ್ಪಟ್ಟಿಲ್ಲವೆಂದು ಶರಾ ಹೊಡೆದು, ಪ್ರಜಾಸೇವಕರ ಹೇಳಿಕೆಯನ್ನು ತಳ್ಳಿಬಿಡಲಿಕ್ಕೂ ಒಂದು ಅನುಕೂಲ ಖಾಸಗಿ ಭೆಟ್ಟಿಯಿಂದ ಒದಗುವ, ಒದಗಬಹುದಾದ ಅನರ್ಥಪರಂಪರೆಯಿದು. ಮಹಾನುಭಾವರ ಕಾರ್ಯಕ್ರಮವು ದಿಕ್ಕುತಪ್ಪಿ ನಡೆದರೆ ಸಮಸ್ತ ಪ್ರಜೆಗಳ ಮೇಲೆ ಗಂಡಾಂತರ ಒದಗುವದೆಂಬುದು ಹೀಗೆ

ಈ ಕರ್ನಾಟಕದ ಏಕೀಕರಣದ ಹಕೀಕತು ರಾಷ್ಟ್ರೀಯ ಸಭೆಯ ಹಕೀಕತಿನ ಮೂಲಕ ಸವಿಸ್ತರ ತಿಳಿಸಲನುವಾಗಲಿಲ್ಲ. ಕರ್ನಾಟಕದ ಏಕೀಕರಣವೆಂದರೆ, ಕಾಲಚಕ್ರದ ಮೂಲಕ ಅಲ್ಲಲ್ಲಿ ಹರಡಿಬಿದ್ದ ಕರ್ನಾಟಕ ಭಾಷೆಯನ್ನಾಡುವ ಪ್ರದೇಶಗಳನ್ನೆಲ್ಲ ಒತ್ತಟ್ಟಿಗೆ ತಂದು, ಕರ್ನಾಟಕವನ್ನು ಅಖಂಡವಾಗಿ ಮಾಡುವದು. ಇದರಿಂದ ಒಂದೇ ಭಾಷೆಯನ್ನಾಡುವ ಕರ್ನಾಟಕಸ್ಥರು ಒತ್ತಟ್ಟಿಗೆ ಸೇರಿ, ರಾಷ್ಟ್ರಭಾವನೆಯ ಉದ್ಧಾರಕ್ಕೆ ಬಲು ಅನುಕೂಲವಾಗುತ್ತದೆ. ಬಂಗಾಲ ದೇಶಬಾಂಧವರು ವಂಗಭಂಗವಾದಾಗ, ಇದೇ ಬಂಗಾಲಿ ಭಾಷೆಯ ಇದೇ ಬಂಗಾಲ ಪ್ರಾಂತವನ್ನು ಒಂದುಗೂಡಿಸುವದಕ್ಕಾಗಿಯೇ ಅಪರಿಮಿತವಾಗಿ ಸ್ವಾರ್ಥತ್ಯಾಗವನ್ನೂ, ಆತ್ಮಕ್ಲೇಶವನ್ನೂ ಸಹಿಸಿದರು. ಕರ್ನಾಟಕಕ್ಕೆ ಸೇರಿದ ಕೊಲ್ಹಾಪುರ, ವಿಜಾಪುರ, ಬೆಳಗಾಂವ, ಧಾರವಾಡ, ಉತ್ತರ-ದಕ್ಷಿಣ ಕನ್ನಡ ಜಿಲ್ಲೆ, ಬಳ್ಳಾರಿ, ನೀಲಗಿರಿ ಸೇಲಮ್, ಕೊಯಿಮುತ್ತೂರ, ಅನಂತಪುರ, ಕೊಡಗು ಮುಂತಾದ ಕರ್ನಾಟಕ ಭಾಷೆಯ ಜಿಲ್ಲೆಗಳೆಲ್ಲ ಭಿನ್ನ ಭಿನ್ನ ಆಡಳಿತೆಗೆ ಸೇರಿ, ಅಖಿಲ ಕರ್ನಾಟಕಸ್ಥರಿಗೆ ಭಾಷಾಪ್ರಸಾರ, ಸಂಪದಭಿವೃದ್ಧಿ, ಸಾಮಾನ್ಯಜ್ಞಾನಪ್ರಾಪ್ತಿ ಮುಂತಾದ ರಾಷ್ಟ್ರಕಾರ್ಯಗಳಿಗೆ ಬಲು ಅನಾನುಕೂಲವಾಗಿದೆ. ಇವನ್ನೆಲ್ಲ ಪರಿಹರಿಸಿಕೊಂಡು, ಕರ್ನಾಟಕವನ್ನು ಒಂದೇ ಆಡಳಿತೆಗೆ ಸೇರಿಸಲಿಕ್ಕೂ, ಸ್ವತಂತ್ರ ವಿಶ್ವವಿದ್ಯಾಲಯ, ಉಚ್ಚನ್ಯಾಯಾಸನ ಒಂದು ದೊಡ್ಡ ಬಂದರ ಮುಂತಾದ ಅಖಿಲ ಕರ್ನಾಟಕದ ಅಭಿವೃದ್ಧಿ ಮಾಡಲಿಕ್ಕೂ ಕರ್ನಾಟಕದ ಏಕೀಕರಣ ಸಭೆಯು ಜನ್ಮವನ್ನಿತ್ತಿದೆ. ರಾಷ್ಟ್ರೀಯ ವಾರದಲ್ಲಿ ಸೇರಿದ ಸಭೆಯಲ್ಲಿ ತೀರ್ಮಾನವಾದಂತೆ, ಹುಬ್ಬಳ್ಳಿಯಲ್ಲಿ ಕಳೆದ ಎಪ್ರಿಲ ತಾರೀಖು ೨೬ನೇಗೆ ಕಾರ್ಯಕಾರಿ ಮಂಡಳದ ಸಭೆ ಸೇರಿ, ಸಂಘದ ಕಾರ್ಯಕ್ರಮವು ನಿಶ್ಚಿತವಾಯಿತು. ಕರ್ನಾಟಕದ ಏಕೀಕರಣವು ಯಾವದೇ ಒಂದು ಪಕ್ಷದ್ದಲ್ಲ; ಅಖಿಲ ಕರ್ನಾಟಕಸ್ಥರದು. ಬ್ರಾಹ್ಮಣ—ಬ್ರಾಹ್ಮಣೇತರ ಭೇದಭಾವಗಳಿಗೆ ಎಡೆ ಇಲ್ಲ. ಕೌನ್ಸಿಲ ಪ್ರವೇಶಕರಿಗೂ, ಕೌನ್ಸಿಲ ಸನ್ಯಾಸಿಗಳಿಗೂ ಇಲ್ಲಿ ಸ್ಥಳವಿದೆ. ಸಭಾಧ್ಯಕ್ಷರು ಬಹುಮಾನ್ಯ ಬ್ರಾಹ್ಮಣೇತರ ಮುಖಂಡರಾದ ಮುಂಬಯಿ ಕಾಯಿದೆ ಕೌನ್ಸಿಲಿನ ಸಭಾಸದರಾದ ಶ್ರೀ|| ಕಂಬಳಿಯವರು. ಏಕೀಕರಣ ಸಭೆಯ ಸಭಾಸದರಾಗಬೇಕಾದರೆ, ವರ್ಷಕ್ಕೆ ೧ ರೂಪಾಯಿ ಚಂದಾ ಹಣ ಇಡಲಾಗಿದೆ. ಸಮಸ್ತ ಕರ್ನಾಟಕಾಭಿಮಾನಿ ಕನ್ನಡ ದೇಶಬಾಂಧವರೆಲ್ಲರೂ ಏಕೀಕರಣ ಸಭೆಗೆ ಸಭಾಸದರಾಗಿಯೂ, ಕಾಣಿಕೆಯನ್ನಿತ್ತು, ದ್ರವ್ಯಸಹಾಯವನ್ನಿತ್ತು, ಏಕೀಕರಣವನ್ನು ಶೀಘ್ರವೇ ಒದಗಿಸಿ ತರಬೇಕೆಂದು ನಾವು ಪ್ರಾರ್ಥಿಸುವೆವು

ಸ್ಥಾನಿಕ ವೃತ್ತಾಂತ

ಕುಮಟಾ—ವಿಪರೀತ ಶೆಕೆ, ಮೋಡಗಳ ಮೂಲಕ ವಿಶೇಷ ವಣುವು ಬಿಸಿಲೂ ಚಲೋ ಕಾಯುತ್ತಿದೆ. ಒಮ್ಮೊಮ್ಮೆ ಮಳೆ ಸುರಿಯುವ ಆಭಾಸವಾಗುತ್ತದೆ

ನೆರೆಯ ಮೂರೂರ ಹಳ್ಳಿಯಲ್ಲಿ ಒಂದು ಗೋವು ಹೈನವಾಗಿ ಎರಡು ಕರುಗಳನ್ನು ಹಾಕಿದೆ!

ನಾಳೆ ಇಲ್ಲಿಯ ಶ್ರೀ ಶಾಂತಿಕಾ ಪರಮೇಶ್ವರಿ ದೇವಸ್ಥಾನದಲ್ಲಿ ವಾರ್ಷಿಕ ಬಂಡಿ ಹಬ್ಬವು ಜರಗುವದು

ಇಲ್ಲಿಯ ಗಿಬ್ಬ ಹೈಸ್ಕೂಲಿನ ಸುಪರಿಂಟೆಂಡೆಂಟರಾದ ಶ್ರೀ ನಾರಾಯಣ ಸುಬ್ರಾಯ ಕಾಮತ ಇವರು ಈಗ ೧೭ ವರ್ಷಗಳಿಂದ ಗಿಬ್ಬ ಹೈಸ್ಕೂಲಿನಲ್ಲಿ ಅಖಂಡ ಸೇವೆ ಮಾಡಿ, ಮುಂದಿನ ತಿಂಗಳಲ್ಲಿ, ಸರ್ವಿಸ [illegible] ರಿಟಾಯರ ಆಗುವವರಿದ್ದುದರಿಂದ, ಶ್ರೀ ಕಾಮತರಿಂದ ವಿದ್ಯಾರ್ಜನ ಮಾಡಿದ ಸಮಸ್ತ ವಿದ್ಯಾರ್ಥಿಗಳು ಅವರಿಗೊಂದು ಮಾನಪತ್ರವನ್ನರ್ಪಿಸುವರೆ ಯೋಜಿಸಬೇಕೆಂದೂ, ಈ ವ್ಯವಸ್ಥೆಯು ಶೀಘ್ರವೇ ಆಗಬೇಕೆಂದೂ ಶ್ರೀ ಕಾಮತರ ವಿದ್ಯಾರ್ಥಿಯೊಬ್ಬರು ತಾ. ೨೭-೪-೩೬ನೇ ಪತ್ರ ಬರೆದು ಸೂಚಿಸುತ್ತಾರೆ.

ಶ್ರೀ ಗೋಕರ್ಣ ಕ್ಷೇತ್ರದಲ್ಲಿ ಕಳೆದ ವಾರದಲ್ಲಿ ಒಂದು ಖೂನಿಯಾಗಿದೆ. ಮೊಗೆಕಾಯಿಯ ಕಳವು ಮಾಡಲಿಕ್ಕೆ ಹೋದವನನ್ನು ಕೊಂದು ಮರಕ್ಕೆ ತೂಗಹಾಕಿದರಂತೆ!

ಶ್ರೀ ಮುಂಬಯಿಯ ವೆ ಸರ್ವ ಗೋಪಾಲ ಸಭಾದವರು ಮತ್ತು ಕಂಪನಿ, ಇವರ ಕ್ಯಾಟಲಾಗನ್ನು ಈ ಸಂಚಿಕೆಯೊಡನೆ ಹಂಚಿರುವೆವು. ಅದನ್ನು ವಾಚಕರು ಪರಾಮರ್ಶಿಸಬೇಕು

ಕ್ಷತ್ರಿಯ ದೇಶಪ್ಪರು ತಿಳಿಸುವದೇನಂದರೆ, ದಕ್ಷಿಣ ಕನ್ನಡ ಜಿಲ್ಲೆಯೊಳಗಿನ ಕಾಸರಗೋಡ ತಾಲೂಕು ಕಸಬಾ ಕೊಳಕೋಡದಲ್ಲಿ ಶ್ರೀ ಸುಬ್ರಹ್ಮಣ್ಯ ದೇವರ ಜೀರ್ಣೋದ್ಧಾರ ಕೆಲಸವು ಕೊಳಕೋಡ ನಾಯ್ಕರ ಶ್ರೀ ವೆಂಕಟಪ್ಪ ನಾಯ್ಕರವರು ಸಾಂಗಗೊಳಿಸಿದರು. ಬ್ರಹ್ಮಕಲಶ ಪ್ರತಿಷ್ಠೆಯ ಕಾರ್ಯವು ಸಮ್ಯಕ್ ಅಲ್ಲಿ ನೆರವೇರಿಸಿದರು. ಆ ಸಮಾರಂಭಕ್ಕೆ ಈ ಜಿಲ್ಲೆಯೊಳಗಿನ ಜ್ಞಾತಿ ಬಾಂಧವರನ್ನು ನಿಮಂತ್ರಿಸಲಿಕ್ಕೂ, ದ್ರವ್ಯ ಸಹಾಯ ಕೇಳಲಿಕ್ಕೂ ಶ್ರೀ ವೆಂಕಟಪ್ಪಮಣಿ ನಾಯ್ಕರು ಬಂದಿದ್ದರು. ಅವರಿಗೆ ಹಳದೀಪುರದ ರಾ|| ಕೃಷ್ಣ ಅಣ್ಣಯ್ಯ ಯಾಜಿ ಶಿವಪ್ಪ ನಾಯ್ಕ, ಸುಬ್ರಾಯ ರಾಮಣ್ಣ ನಾಯ್ಕ, ರಾಮನಾಥ ಪರಮೇಶ್ವರ ನಾಯ್ಕ ಮುಂತಾದವರು ರೂಪಾಯಿ ೫೦ನ್ನು, ಚಂದಾವರದ ಕಟ್ಟೆಮನೆ ರಾ|| ಗಣಪತಿ ಮಂಜಯ್ಯ ನಾಯ್ಕ ಮುಂತಾದವರು ರೂಪಾಯಿ ೪೦-೧-೦ನ್ನು, ಹೆಗಡೆಯ ರಾ|| ರಾಮನಾಥ ಭರಮ ನಾಯ್ಕ ಕಟ್ಟೆಮನೆ, ರಾಮಯ್ಯಾ ಮೇಘ ನಾಯ್ಕ, ಕಣ್ಣಯ್ಯ ಮಂಜಯ್ಯ ನಾಯ್ಕ ಮುಂತಾದವರು ರೂಪಾಯಿ ೫೦-೬-೦ನ್ನು, ಮಿರ್ಜಾನ-ಕೋಡಕಣಿ ಗ್ರಾಮಗಳಲ್ಲಿ ರಾ|| ಪುರಸಯ್ಯಾ ನಾಗಪ್ಪ ನಾಯ್ಕ, ಧುಮ್ಮನಮನೆ ಶ್ರೀನಿವಾಸ ನಾರಾಯಣ ನಾಯ್ಕ, ಸುಬ್ರಾಯ ಪೂರ್ಣಯ್ಯಾ ಜಾಲಿಸತ್ತಿ ಮೊದಲಾದವರು ರೂ ೮೮-೧೩-೦ನ್ನು ಕೊಟ್ಟು, ಶ್ರೀ ದೇವರ ಮೇಲಿನ ಭಕ್ತಿಯನ್ನು ಪ್ರದರ್ಶಿಸಿದರು. ಇವರಂತೆಯೇ ಉಳಿದ ಕಡೆಯವರೂ ಶ್ರೀ ದೇವತಾ ಕಾರ್ಯಕ್ಕೆ ಸಹಾಯ ಮಾಡಬೇಕು.

ಸಾಭಾರ ಸ್ವೀಕಾರ.

ಅಧ್ಯಾತ್ಮ ಪ್ರಕಾಶ— ಕ್ರೋಧನ : ಸಂ|| ವೈಶಾಖ ಮಾಸದ ಸಂಚಿಕೆ. ಸಂಪಾದಕ— ಶ್ರೀ|| ವೈ. ಸುಬ್ಬರಾವ. ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ೩ನೇ ಬೀದಿ, ಚಾಮರಾಜ ಪೇಟೆ, ಬೆಂಗಳೂರು ಸಿಟಿ. ಚಂದಾ ಹಾಸಲು ರೂಪಾಯಿ ೩-೦-೦ ; ಪೋಷಕರಿಗೆ ರೂಪಾಯಿ ೫-೦-೦ ಮತ್ತು ಅದಕ್ಕೂ ಮೇಲೆ.

ವಾಗ್ಭೂಷಣ— ಮಾರ್ಚ-ಎಪ್ರಿಲ' ತಿಂಗಳ ಸಂಚಿಕೆ. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಪ್ರಕಟವಾಗುವ ಮಾಸಪತ್ರಿಕೆ ಸಂಪಾದಕ:— ಶ್ರೀ|| ಎಸ್. ಎಸ್. ಬಸವನಾಳ, ಎಮ್. ಎ., ಧಾರವಾಡ ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂ. ೩—೮—೦.

ಬಿಣಗೆ—ಇಲ್ಲಿ ಕಳೆದ ಆದಿತ್ಯವಾರಕ್ಕೆ ಕ್ರೈಸ್ತಬಾಂಧವರಲ್ಲಿ ಬಲು ದೊಡ್ಡ ಗಲಾಟೆ. ಆ ದಿನ ಕ್ರೈಸ್ತರ ಬಂಡಿ ಹಬ್ಬವಿತ್ತು. ಈ ಹಬ್ಬಕ್ಕೆ ಮುಖ್ಯಸ್ಥರನ್ನು ನೇಮಿಸುವ ಪದ್ಧತಿಯಿದೆ. ಮುಖ್ಯಸ್ಥರು ಬಂಡಿ ಹಬ್ಬದ ಖರ್ಚ ಕೊಡಬೇಕು. ಈ ವರುಷ ಮಿ| ಲೋರೆಸ ಎಂಬವರು ಮುಖ್ಯಸ್ಥರಾಗಿ ನೇಮಿಸಲ್ಪಟ್ಟರು. ಇವರು ಸುಮಾರು ೧೦೦-೧೫೦ ರೂಪಾಯಿ ಖರ್ಚ ಮಾಡಿ ವಿಜೃಂಭಣೆಯಿಂದ ಹಬ್ಬ ಸಾಗಿಸಬೇಕೆಂದು, ತಯಾರಿ ಮಾಡಿದರು. ಕಾರವಾರದಿಂದ ಮುದ್ದಾಂ ಐದು ಧರ್ಮಗುರುಗಳನ್ನು ಕರೆತಂದರು. ಊರಲ್ಲಿ ಮಿ| ಜಾಬ್ಯು ಸಂತಾನ ಎಂಬವರಿಗೆ ಕೆಲವೊಂದು ಕಾರಣದ ಮೂಲಕ ಬಹಿಷ್ಕಾರವಿತ್ತು. ಈ ಬಹಿಷ್ಕಾರದ [illegible] ಕಾರವಾರ ಜರಲ ಗುರುಗಳೊಡನೆ ಯಾಕೆ ಮಾಡಿದರೋ ಏನೋ! ಜರಲರು ಯಾರ ಹತ್ತರ ಹೇಳದೆ ಕೇಳದೆ ಮಿ| ಸಂತಾನರವರಿಗೆ ಸೇರಿಸಿಕೊಂಡು ಹಬ್ಬ ಸಾಗಿಸಬೇಕೆಂದರು. ಊರವರು ಒಪ್ಪಲಿಲ್ಲ. ಅದರಿಂದ ಹಬ್ಬದಲ್ಲಿ ಆಗತಕ್ಕ ಮಾಸ ಪ್ರಾರ್ಥನೆ ಆಗದೆ ಹಬ್ಬಕ್ಕಾಗಿ ಸೇರಿದ ೫೦೦-೬೦೦ ಮಂದಿಗಳು ಬಹಳೇ ಕಷ್ಟದಲ್ಲಿ ಬಿದ್ದರು. ಇಲ್ಲಿಯ ಪಾದ್ರಿ ಸಾಹೇಬರು ಕೂಡಾ ಅವರ ವಶಕ್ಕಿದ್ದ ಚಿನ್ನ, ಹಣ ಮುಂತಾದ ಎಲ್ಲ ಸಾಮಗ್ರಿಗಳನ್ನು ತೆಗೆದುಕೊಂಡು ಕಾರವಾರಕ್ಕೆ ಹೋದರು. ಕಾರವಾರದಿಂದ ೬ ಮಂದಿ ಪೋಲೀಸರು ಅದೇ ಸಾಯಂಕಾಲಕ್ಕೆ ಅವತೀರ್ಣರಾದರು. ಆಗ ಊರಲ್ಲಿ ಗಡಿಬಿಡಿಯೇನೂ ಇದ್ದಿಲ್ಲ: ಎಲ್ಲರೂ ತಮ್ಮ ತಮ್ಮ ಮನೆಗೆ ಹೋಗಿ, ಜರಲರ ಹಟವನ್ನು ಮರುಗುತ್ತಿದ್ದರು. ಒಬ್ಬಿಬ್ಬರಿಗೆ ಪೋಲೀಸರು ಕರೆತಂದು ಏನೋ ವಿಚಾರ ನಡಿಸಿದರಂತೆ! ಫಿರ್ಯಾದೂ ದಾಖಲಾಗಿಯದೆ. ಬಹಳ ಹೊತ್ತಿನ ವರೆಗೆ ಕಾದುಕೊಂಡು ಕುಳಿತು, ಕಟ್ಟಕಡೆಗೆ ಕ್ರೈಸ್ತ ಬಾಂಧವರು ತಮಗೆ ತಿಳಿದಷ್ಟರ ಮಟ್ಟಿಗೆ ಪರಮಾತ್ಮನ ಪ್ರಾರ್ಥನೆ ಮಾಡಿದರು. ೧೫೦ ಕ್ಕೆ ಮಿಕ್ಕಿ ಕರ್ಮನಿಷ್ಠ ಕ್ರೈಸ್ತರು "ಸೆಕ್ರಿಫೈಸ" ಸಂಸ್ಕಾರ ಪಡೆಕೊಳ್ಳಲಿಕ್ಕೆ ಉಪೋಷಣ ಮಾಡುತ್ತಿದ್ದರು. ಜರಲ ಸಾಹೇಬರು ವಿವೇಕಿಗಳಿದ್ದು ಈ ಪರಿಯಿಂದ ತಿರಸ್ಕಾರವನ್ನು ಹಬ್ಬದ ಸಮಯ ಕಾಣಬಾರದಿತ್ತು

ಕಾರವಾರ— ಪೈಲಿ, ಬ್ರಹ್ಮಾದಿಗಳ ಬಿಡಾರಿದೆ

ವಿಧವೆಗಳ ಉದ್ಧಾರಕ್ಕಾಗಿ ಹಗಲಿರುಳು ದುಡಿಯುವ ಶ್ರೀ|| ಘೋಟೋಸ್ಕರರವರು ಕಳೆದ ತಾರೀಖು ೭-೪-೧೯೩೬ನೇಗೆ ಇಲ್ಲಿ ಬಂದವರು ತಾ. ೨೧-೪-೩

ವರೆಗೆ ಇಲ್ಲಿ ಉಳಿದರು. ಸಾರಸ್ವತ ವಿಧವೆ ...ರ ಶಿಕ್ಷಣ ಫಂಡಿಗೆ ಪ್ರತ್ಯಸಂಚಯ ಸರಾಫರು ...ವರು ಇಲ್ಲಿ ಬಂದಿದ್ದರು. ಇವರು ೧೦೦೦ ರೂಪಾಯಿ ...ಪಿಸಿದರು. ಕುಮಟಾ-ಅಂಕೋಲೆಗಳಲ್ಲಿ ಎಕ್ಕೆ... ಸಹಾಯ ದೊರಕಲಿಲ್ಲವೆಂದು ಶ್ರೀಯುತರು ...ರಿಸಿದರು.

ಪ್ರಾಂತಾಧಿಪರಿಗೆ ಜಿಲ್ಹಾಧಿಪರು ಕೊಟ್ಟ ಫೋಟೊ ...ಪ್ರಾರಂಭಕ್ಕೆ ೧೫ ಮಂದಿಗಳು ಕೂಡಿದ್ದರು. ...ಮುಂಬಯಿ ಗವ್ಹರ್ನರರು ಯಲ್ಲಾಪುರದಲ್ಲಿ ಇಂಥ ...ಲಿಗಳ ಸಮಾಚಾರ ಕೇಳಿದರು ಎಂದ ಪವಿತ್ರಿಯ ...ಕಂಟಿತು!

ಸಿರಿಗನ್ನಡಂ ಗೆಲ್ಗೆ.

...ನ್ನಡ ನುಡಿಯ ೧೧ನೆಯ ಹಬ್ಬ.

ಬೆಳಗಾಂವಿ, ತಾ. ೬. ೧೯೨೪.

ಕಾರ್ಯಾವಳಿ ೩.

...ಬ್ಬದಲ್ಲಿ ನಡೆಯುವ ಕೆಲಸಗಳ ವಿವರ

...ಕ್ರವಾರ ವೈಶಾಖ ಶು. ಪಾಡ್ಯ (ಮೇ ೮) ಯು ...ಸುಮಾರು ೫॥ ಗಂಟೆಗೆ ಕನ್ನಡ ಸರಸತಿಯು ...ಕನ್ನಡ ತಾಯಿಯ ಮಕ್ಕಳ ಮೆರವಣಿ... ಬೆಳಗಾಂವಿಯ ನಿಲ್ದಾಣದ (ಸ್ಟೇಶನ) ಯಿಂದ ...ಟು ಕೋಟೆಯೊಳಗಿನ ಬಸದಿಗಳನ್ನು ಕಂಡು ...ದ ಸಹಾಬೀದಿಯೊಳಗಿಂದ ಸಾಗಿ, ಬಿಡಾರಕ್ಕೆ ...ವದು

...ದ ಮೊದಲನೇಯ ದಿನ-ಶನಿವಾರ ವೈ. ಶು. ೧ ...ಹೊತ್ತಿನ ೩॥ ಘಂಟೆಗೆ ಸಭೆಯು. ತಿಮಾಸಂದ ನಾಟಕ-...ದಲ್ಲಿ ನೇರುವದು.

...) ೧ (ಅ) ಕನ್ನಡಿಗರನ್ನು ಬರಮಾಡಿಕೊಳ್ಳುವ ಹಾಡು.

೪ (ಆ) ಕನ್ನಡದ ಬಿನ್ನಣೆಯ ಹಾಡು.

೫ ಸ್ವಾಗತ ಮಂಡಳದ ಹಿರಿಯನಾದ ವ॥ ಚಿಕ್ಕೋಡಿ ತಮ್ಮಣ್ಣಪ್ಪನವರು ಕನ್ನಡಿಗರನ್ನು ...ಲಗಿಸುವದು

೩ ಸಭೆಗೆ ಹಿರಿಯರೆಂದು ಗೊತ್ತುಪಡಿಸಿದ ವ॥ ಬೆನಗಲ್ ರಾಮರಾಯರನ್ನು ಸಭೆಯ ಅಧ್ಯಕ್ಷತನವನ್ನು ವಹಿಸಲು ಕೇಳಿಕೊಳ್ಳುವದು. ಸೂಚಕರು — ವೇ॥ ಗಂಗಾಧರರಾಯರು. ಅನುಮೋದಕರು.—ಮ॥ ಬೆಳವಿಯವರು

೪ ಸಭೆಯ ಹಿರಿಯರ ಮಾತುಗಳು.

ಭಾರತಮಾತೆಯ ಹಾಡು,

೫ ವಿಷಯ ನಿಯಾಮಕ ಮಂಡಲವನ್ನೇರ್ಪಡಿಸುವದು.'

ಎರಡನೆಯ ದಿನ.

...ಪಿನ ೮ ಗಂಟೆಯಿಂದ ೧೧ರ ವರೆಗೆ ವಿಷಯನಿ...ಕ ಮಂಡಲದ ಸಭೆ.

-ಸರಕಾರದ ಇಂಗ್ಲಿಷ ಶಾಲೆಯ ಸಭಾಮಂದಿರ.

...೧-೩॥ ಗೊತ್ತುವಳಿಗಳ ವಿಚಾರ.

...೫ ಬರಹಗಳ ಓದುವಿಕೆ.

೫ ಕೀರ್ತನೆ.

೬ ಗಾಯನವಾದನ.

೩ನೆಯ ದಿನ.

...೮-೧೧ ವಿಷಯನಿಯಾಮಕ ಮಂಡಲದ ಸಭೆ.

...೧-೩॥ ಗೊತ್ತುವಳಿಗಳ ವಿಚಾರ.

...-೪ ಬರಹಗಳ ಓದುವಿಕೆ.

-೫ ಕೀರ್ತನೆ

-೬ ಹಳ್ಳಿಯ ಹಾಡುಗಳ ದಾಸರಪದಗಳು.

-೭ ಸಭೆಯನ್ನು ಮುಗಿಸುವ ಕೆಲಸಗಳು

...ಸೂ ಹಬ್ಬದ ಪ್ರಕಟಿಸೆದುಲ್ಲಿ ತಿಳಿಯಪಡಿಸಿ... ...ನ್ನಡನಾಡಿನ ಎಲ್ಲ ಹುಂಬುಗಳಲ್ಲಿರುವ ಹೆಸರಾದ ಕನ್ನಡಿಗರಿಗೂ ಅನ್ಯ ಭಾಷೆಯವರಿಗೂ ಸಭೆಗೆ ಕರೆಯುವ ಪತ್ರಿಕೆಗಳನ್ನು ನಮಗೆ ತಿಳಿದ ಮಟ್ಟಿಗೆ ಕಳಿಸಲಾಗಿದೆ. ಅರಿಯದೆಯಾಗಲಿ, ಮರೆತಾಗಲಿ, ಯಾರಿಗಾದರು ಪತ್ರಿಕೆಗಳು ಬಾರದೆ ಇದ್ದಲ್ಲಿ, ಕ್ಷಮಿಸಬೇಕಾಗಿ ಬಿನ್ನಹ. ವೃತ್ತ ಪತ್ರಗಳಲ್ಲಿ ಪ್ರಚುರಪಡಿಸಿದ ೧-೨ ಪ್ರಕಟನೆಗಳಲ್ಲಿ ಸಾರಿ ಬೇಡಿಕೊಂಡಂತೆಯು, ಕನ್ನಡಿಗರೆಲ್ಲರೂ ನಲುಮೆಯಿಂದ ಇಲ್ಲಿಗೆ ಬಂದು, ತಾಯ್ ನುಡಿಯ ಹಬ್ಬವನ್ನು ಹಿಗ್ಗಿನಿಂದ ಆಗಮಾಡಿಸಬೇಕೆಂದು ಹಲವಾಗಿ ಇನ್ನೊಂದುಸಲ ಬೇಡಿಕೊಳ್ಳುತ್ತೇವೆ. ಬೇಕಾದಾಗ ಕಾರ್ಯಕ್ರಮವನ್ನು ಮಾರ್ಪಡಿಸಲಾದೀತು.

ಸ್ವಾಗತ ಸಂಘದ ಸಭಾಸದರ ಮತ್ತು ಪ್ರತಿನಿಧಿಗಳ ಚಂದಾಹಣವನ್ನು ಕೊಟ್ಟವರಿಗೆ ತಿಕೀಟುಗಳು ತಾ॥ ೬, ಗುರುವಾರದಿಂದ ಸನ್ಮೇಲನದ ಕಚೇರಿಯಲ್ಲಿಯೂ (ಸರಕಾರದ ಇಂಗ್ಲಿಷ ಶಾಲೆಯ ವಸತಿಗೃಹ Hostel) ತಾ॥ ೯ ಶನಿವಾರದಿಂದ ತಿಮಾಸಂದ ನಾಟಕ ಶಾಲೆಯಲ್ಲಿಯೂ ದೊರೆಯುವವು

ಬೆಳಗಾಂವಿ,
೧೮೪೬ [illegible]
ತಾ. ೧—೫—೧೯೨೪

ಕೃ. ಗೋ. ಗೆಜ್ಜೆ,
ವ. ರಾ. ಚಿಕ್ಕೋಡಿ
ಸ್ವ ಕಾರ್ಯದರ್ಶಿಗಳು

ವೃತ್ತಸಾರ.

— ಮೈಸೂರು ನಗರದೊಳಗಿನ ಪ್ರಜೆಗಳು ಖಾದಿಯ ಉತ್ಪತ್ತಿ ಹಾಗು ಪ್ರಚಾರಗಳನ್ನು ಹೆಚ್ಚಿಸುವದಕ್ಕಾಗಿಯೂ, ಕೈನೂಲು ಕೈಮಗ್ಗಗಳನ್ನು ಹರಡಿಸುವದಕ್ಕಾಗಿಯೂ ಖಾದಿ ಪ್ರಚಾರದ ಪರಸ್ಪರ ಸಹಾಯಕ ಸಂಘವನ್ನು ಸ್ಥಾಪಿಸಿ, ಅದನ್ನು ಸರಕಾರ ಮಾನ್ಯತೆ ಕೊಡಲು ಬೇಡಿಕೊಂಡದ್ದಕ್ಕೆ, « ಖಾದಿಯಿಂದ ಹಾಗಿನ ಲಾಭವಿಲ್ಲ; ನಿಮ್ಮ ಸಂಘವನ್ನು ರಜಿಸ್ಟರ ಮಾಡಲಾಗದು " ಎಂಬರ್ಥದ ಉತ್ತರವು ಸರಕಾರದಿಂದ ಬಂದಿರುವದಂತೆ! ಖಾದಿಯ ಲಾಭವಿಲ್ಲದಿದ್ದರೆ, ಸಾಕೆಯವರ ಗಂಟು ಏನು ಹೋಗುತ್ತದೇನು ?

— ಕಳೆದ ವಾರದಲ್ಲಿ ಮದ್ರಾಸ ಹೈಕೋರ್ಟಿನಲ್ಲಿ ಇಬ್ಬರು ಪಕ್ಷಕಾರರಾಗಿ ನ್ಯಾಯಾಸನದಲ್ಲಿ ನುಗ್ಗಿದರು. ಅಲ್ಲಿ ದ್ವಾರಪಾಲಕರು ಅಡ್ಡಗಟ್ಟಲು, « ನ್ಯಾಯಮೂರ್ತಿಗಳೊಡನೆ ಸದ್ಯದ ಒಂದು ಪ್ರಕರಣದಲ್ಲಿ ಆದ ಅನ್ಯಾಯವನ್ನು ಹೇಳಿಕೊಳ್ಳಬೇಕಾಗಿದೆ. " ಎಂದು ನುಡಿದು ದ್ವಾರಪಾಲಕರ ಮೇಲೆ ಕೈಮಾಡಹೋದರು. ಈ ಭಂಡತನದ ಬಗ್ಗೆ ಅವರ ಮೇಲೆ ಫಿರ್ಯಾದಿಯಾಗಿ ಅವರಿಗೆ ಮೆಜಿಸ್ಟ್ರೇಟರು ದಂಡ ವಿಧಿಸಿದರು. ಹೈಕೋರ್ಟಿನ ನ್ಯಾಯಮೂರ್ತಿಗಳು ಕಳೆದ ತಾ ೩ನೇಗೆ ಇಬ್ಬರನ್ನೂ ತಮ್ಮ ಮುಂದೆ ಕರೆಸಿ ವಿಚಾರಿಸಿ, ಅವರ ಅಂಬೋಣ ಕೇಳಿದರು ೧೯೨೨ನೇ ಇಸ್ವಿಯಲ್ಲಿ ಅವರು ಮಾಡಿದ ಒಂದು ಅರ್ಜಿಯು ವಿಚಾರವಿಲ್ಲದೆ ರದ್ದಾಗಿತ್ತಂತೆ! ನ್ಯಾಯಮೂರ್ತಿಗಳು ಹಿಂದಿನ ಕಾಗದಪತ್ರ ನೋಡಿ, ಅನ್ಯಾಯವಾಗಿಯದೋ ಹೇಗೆ ಎಂಬುದನ್ನು ಖುಲಾಸೆಮಾಡಿ ಹೇಳಲು ವಕೀಲರೊಬ್ಬರಿಗೆ ನೇಮಿಸಿರುವರು

— ಸರ್ವಾಧಿಪತಿ ರೆಡಿಂಗ ದೊರೆಗಳೂ ಭಾರತಮಂತ್ರಿ ಬರ್ಕನಹೆಡರೂ ಮಾತುಕಥೆ ಮಾಡಿದರಂತೆ. ವಿಲಾಯತಿಯೊಳಗಿನ ಇಂಡಿಯಾ ಆಫೀಸಿನಲ್ಲಿ ಸಣ್ಣದೊಂದು ಕಚೇರಿಯನ್ನೇರ್ಪಡಿಸಿಕೊಂಡು ದೊರೆಗಳು ಹಿಂದುಸ್ಥಾನದ ಕಲ್ಯಾಣಕ್ಕಾಗಿ ದುಡಿಯುತ್ತಿರುವರು.

— ಮುಮುಕ್ಷುಗಳ ನಿಮಿತ್ತದಿಂದ ಬವಣೆಬಂದ ಬೌರಾ ಕೊಲೆಯ ಚೌಕಶಿಯು ಮುಂಬಯಿಯ ಹೈಕೋರ್ಟಿನಲ್ಲಿ ಕಳೆದ ತಾರೀಖು ೨೭ ನೇಯಿಂದ ನಡೆಯಲಾರಂಭಿಸಿದೆ. ೯ ಮಂದಿ ಆರೋಪಿಗಳಿರುವರು. ಫಿರ್ಯಾದಿ ತರ್ಫೆನಿಂದ ೫೬ ಮಂದಿ ಸಾಕ್ಷಿಗಾರರಿರುವರು. ಸರಕಾರ ತರ್ಫೆನಿಂದ ಸರಕಾರಿ ಎಡ್ವೋಕೇಟ ಜನರಲರವರು ಕೆಲಸ ನಡಿಸುತ್ತಿರುವರು. ಆರೋಪಿಯ ತರ್ಫೆನಿಂದ ಮುಂಬಯಿಯ ಬ್ಯಾರಿಸ್ಟರ ಮುಹಮ್ಮದ ಅಲ್ಲಿಜಿನ್ನಾ, ಎಸ್. ಜಿ. ವೆಲಿಣಕರ, ಹಾಗು ಕಲಕತ್ತೆಯ ಜೆ ಎಮ್. ಸೇನಗುಪ್ತರವರು ಕೆಲಸ ನಡಿಸುತ್ತಿರುವರು. ಖಟ್ಲೆಯ ಮುಕ್ತಾಯ [illegible] ಜಿನ್ನಾ ಜಬಾನಿಯು ಮೂರು ದಿವಸಗಳ ವರೆಗೆ ನಡೆಯಿತು. ಬೆರಿಸ್ಟರರು ಎಷ್ಟು ಒದ್ದಾಡಿದರೂ ಅದರಿಗೆ ಹಾದಿ ತಪ್ಪಿಸಲು ಅಶಕ್ಯವಾಯಿತು. ಅನೇಕರ ಸಾಕ್ಷಿಗಳಾಗುತ್ತಿವೆ. ಒಂದು ತಿಂಗಳು ನಡೆಯುತ್ತದೋ? ಎರಡು ತಿಂಗಳು ನಡೆಯುತ್ತದೋ? ಮುಂಬಯಿಯಲ್ಲಿ ಎಲ್ಲಿ ಕೇಳಿದರೂ ಇದೊಂದೇ ಸುದ್ದಿ!

— ಇಂದೂರಿನ ಶ್ರೀ। ಶರದರುಚಿ ಎಂಬುವರು ತಮ್ಮ ಚಿಕ್ಕ ಹುಡುಗಿಗೆ ಸಂಸ್ಕೃತ-ಹಿಂದೀ-ಮರಾಠಿ-ಇಂಗ್ಲಿಷ ಈ ನಾಲ್ಕು ಭಾಷೆಗಳಿಂದ ಮಾತಾಡಲು ಕಲಿಸಿರುವರು. ಹುಡುಗಿಯ ವಯಸ್ಸಾದರೋ ಬರೇ ಮೂರು ವರುಷ! ಪೂರ್ವ ಸಂಸ್ಕಾರದ ಫಲವೇನಿದು ?

— ಫ್ರೆಂಚ ದೇಶದ ಅಪಲೋನ ಪ್ರದೇಶದಲ್ಲಿ ಭಯಂಕರ ಬೆಂಕಿ ತಗಲಿ, ಅನೇಕ ಮನೆ ಮಾರುಗಳು ಸುಟ್ಟು ಒಟ್ಟು ೩೦೦ ಕ್ಕೆ ಮಿಕ್ಕಿ ಮಂದಿಗಳು ನಿರಾಶ್ರಿತರಾಗಿರುವರು.

— ನಾಗಪುರದೊಳಗಿನ ಕೋರ್ಟಿನಲ್ಲಿ ಭಯಂಕರ ಪ್ರಕಾರ. ರಾಮಶರಣ ಹಾಗು ಜಯದೇವ ಇವರೊಳಗೆ ವ್ಯಾಜ್ಯ ನಡೆದಿತ್ತು. ಕೋರ್ಟಿನಲ್ಲಿ ಮಾತಿಗೆ ಮಾತಾಗಿ, ರಾಮಶರಣರು ಜಯದೇವನ ಕೊಲೆ ಮಾಡಿದರು. ಹಾಗು ಆತ್ಮಹತ್ಯ ಮಾಡಿಕೊಂಡರು.

— ೮ ತಾಸೆಯ ನಿಕಲ್ ಧಾತುವಿನ ನಾಣ್ಯವನ್ನು ೧೯೨೪ ನೇ ಇಸವಿಯ ಸಪ್ಟಂಬರ ಅಂತ್ಯದ ವರೆಗೆ ಒಯ್ದು ಕೊಟ್ಟಲ್ಲಿ ಅದರ ಬದಲು ಬೆಳ್ಳಿಯ ನಾಣ್ಯ ಕೊಡಲಾದೀತು.

— ಮದ್ರಾಸ ಪ್ರಾಂತದ ನಾಯಿಯಾವರಂ ತಾಲೂಕಿನಲ್ಲಿ ೯೦ ಸಾವಿರ ರೂಪಾಯಿಗಳ ತೀರ್ವೆ ಕಡಿಮೆಯಾಗುತ್ತದೆ.

— ವಾಲಾಜಾಪುರಂ ತಾಲೂಕಿನ ಕೊಂಗ್ರೆಸ ಕಮಿಟಿಯ ಕಾರ್ಯದರ್ಶಿಗಳು ಸ್ವಯಂಸೇವಕರೊಡನೆ ಕೊಂಗ್ರೆಸ ಕಚೇರಿ ಬಳಸುಗ್ಗಿ ತಮಗೆ ಹೊಡೆದರೆಂದು, ಕಾಂಗ್ರೆಸು ಕಾರ್ಯಕಾರಿ ಮಂಡಳದ ಸಭಾಸದರಾದ ರಾ। ರಾಮಸ್ವಾಮಿ ಅಯ್ಯಂಗಾರವರು ಪೋಲೀಸರ ಕಡೆಗೆ ಫಿರ್ಯಾದು ಮಾಡಿರುವರು. ಏನು ಅನರ್ಥವಿದು!

—ಮೈಸೂರ ಸಂಸ್ಥಾನ ದಿವಾನರಾದ ಶ್ರೀ॥ ಬಾನರ್ಜಿಯವರು ಮೈಸೂರಿಗೆ ಹೋಗುವಾಗ ಮಾರ್ಗದ ಸ್ಟೇಶನಿನ ಮೇಲೆ ಇಬ್ಬರು ಯುರೋಪಿಯನರು ಅಪಮಾನ ಮಾಡಿದರೆಂದು ೧೦ ಸಾವಿರ ರೂಪಾಯಿಗಳ ಮಾನನಷ್ಟದ ದಾವೆ ಮಾಡಿರುವರು

— ತ್ರಿಂಬಕೇಶ್ವರದೊಳಗಿನ ಸಂಸ್ಕೃತ ಪಾಠಶಾಲೆಗೆ ಮುಂಬಯಿಯೊಳಗಿನ ಶೇಟ ಹರಗೋವಿಂದ ಜೀವನದಾಸರವರು ೩ ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಒಂದು ಕಾರಾ ಮಂದಿರವನ್ನು ಕಟ್ಟಿಕೊಟ್ಟರು.

— ಮುಂಬಯಿಯೊಳಗಿನ ಪ್ರಾಂತಿಕ ಹಿಂದೂ ಮಹಾಸಭೆಯವರು ಮಾಟುಂಗಾದೊಳಗಿನ ೬೦ ಕ್ರೈಸ್ತರನ್ನು ಪುನಃ ಹಿಂದೂ ಧರ್ಮದಲ್ಲಿ ಸೇರಿಸಿಕೊಂಡರು. ಇನ್ನು ೭-೮ ಸಾವಿರ ಮಂದಿಗಳು ಸನಾತನ ಧರ್ಮದಲ್ಲಿ ಸೇರಲು ಆತುರರಾಗಿರುವರು.

— ಮಹಾಯುದ್ಧದಲ್ಲಿ ರಣದೇವಿಗೆ ಸಾವಿರಾರು ಎಳೆ ಪ್ರಾಯದವರು ಬಲಿಬಿದ್ದರು ಆದರಿಂದ ಇಂಗ್ಲಂಡದಲ್ಲಿ ಬಾಲಿಕೆಯರಿಗೆ ಬಾಲಕರು ಸಿಗದೆ ಬಹು ತೊಂದರೆಯಾಗಿದೆ. ೫೦ ಲಕ್ಷ ಪ್ರೌಢ ಬಾಲಿಕೆಯರು ಬಾಲಕರಿಲ್ಲದೆ ತಲ್ಲಣಿಸುತ್ತಿರುವರು. ಕಾನಡಾ ವಸಾಹತಿನಲ್ಲಿ ಅನೇಕ ಗಂಡಸರಿಗೆ ಹೆಂಗಸರು ಸಿಗದೆ ಸಂಸಾರ ಹೂಡಲು ತೊಂದರೆಯಾಗಿದೆ. ಇಂಗ್ಲಂಡದಿಂದ ಅಲ್ಲಿ ಬಾಲಿಕೆಯರನ್ನು ರವಾನಿಸಬಹುದೋ?

— ಮೈಸೂರಿನೊಳಗಿನ ವಕೀಲರು ಸಭೆಸೇರಿ ಠರಾವನ್ನು ಮಾಡಿರುವರೇನೆಂದರೆ:— « ವಕೀಲರೆಲ್ಲರೂ ಸ್ವದೇಶಿ ಬಟ್ಟೆಗಳನ್ನು ಧರಿಸಬೇಕು; ಖಾದಿಯ ಬಟ್ಟೆಯೂ ಒಳ್ಳೆಯದು. " ಠರಾವು ಹೇಗಿದೆ? ಪ್ರತಿಭಾಸಂಪನ್ನ ವಕೀಲರ ಠರಾವಿದು! ಹಾವು ಸಾಯಬಾರದು; ಕೋಲು ಮುರಿಯಬಾರದು.

— [illegible] ೧ನ ಶ್ರೀ ವೆಂಕಟಗಿರಿಯಪ್ಪನವರ ಕರ್ನಾಟಕ ಸಂಗೀತವನ್ನು ಕೇಳಿ, ಸಂತೋಷಭರಿತರಾದರು. [illegible] ನಿಕೇತನದಲ್ಲಿ ವೀಣಾವಾದನದ ಪದವಿಯೊಂದನ್ನಿಟ್ಟು, ಮೈಸೂರಿನಿಂದ ವೀಣಾವಾದನದಲ್ಲಿ ಬರುವವರೊಬ್ಬರನ್ನು ಕಳುಹಲು ಮೈಸೂರಿನವರಿಗೆ ಕೇಳಿಕೊಂಡಿರುವರು.

— ದೇಶಬಂಧುಗಳು ಪ್ರಕೃತಿಸ್ವಾಸ್ಥ್ಯಕ್ಕಾಗಿ ಡಾರ್ಜಿಲಿಂಗದಲ್ಲಿರುವರೆಂದು ಗೊತ್ತಾಗಿದೆ.

— ನಿಜಾಮ ಸಂಸ್ಥಾನಕ್ಕೆ ಸೇರಿದ ಹನುಮ[illegible] ಗ್ರಾಮದ ಬಾಲ ವಿಧವೆಯರಲ್ಲಿ ಬಾಲಕನೊಬ್ಬನು ಸಾಹಸ ಕೃತಿಯನ್ನು ಮಾಡಿತೋರಿಸಿದನು. ಬಾಲ ವಿಧವೆಯು [illegible] ಒಂದು ಕೆರೆಯು. ಅದರಲ್ಲಿ [illegible] ಬಾಲಿಕೆಯರು ಬಿದ್ದರು. [illegible] ಅಲ್ಲಿ ಇದ್ದನು. ೧೨ ವರ್ಷ [illegible] ಕೆರೆಯಲ್ಲಿ ಒಳಕ್ಕೆ ನೇರ ಹಾರಿ [illegible] ಬಿಡಿಸಿದನು. ಅಲ್ಲಿಯ [illegible] ತಕ್ಕ ಸಂತೋಷಕರವನ್ನಿತ್ತು [illegible]

— [illegible] ಬಿಟ್ಟದಲ್ಲಿ ಶ್ರೀ [illegible] ಪ್ರಾಚೀನ ದೇವಾಲಯ [illegible] ಒಂದು ಗವಿ ತೋರಿತು [illegible] ಯೋಗಿಯು [illegible]

— [illegible]

ಅಖಿಲ ಭಾರತೀಯ ಗೋರಕ್ಷಣಾ ಮಂಡಳದ ಘಟನೆ.

[illegible]

ಕಳೆದ ಡಿಸೆಂಬರ ತಾ. ೨೮ನೇಗೆ ಬೆಳಗಾವಿ [illegible] ಸಮಯದಲ್ಲಿ ಸೇರಿದ ಅಖಿಲ ಭಾರತೀಯ ಗೋರಕ್ಷಣ ಪರಿಷತ್ತಿನಲ್ಲಿ ಮಂಜೂರಾದ ಅಖಿಲ ಭಾರತೀಯ ಗೋರಕ್ಷಣ ಮಂಡಳದ ಘಟನೆಯು ಇಂತಿದೆ. —

ಮಂಡಳದ ಧ್ಯೇಯ

ಸಮಸ್ತ ಧಾರ್ಮಿಕ ಉಪಾಯಗಳಿಂದ ಗೋರಕ್ಷಣ ಮಾಡುವದು. ಈ ಮಂಡಳದ ಧ್ಯೇಯವು.

ಗೋರಕ್ಷಣವೆಂದರೆ, ಗೋವನ್ನು ಗೋಸಂತತಿಯನ್ನು ವಧೆಯಿಂದ ಹಾಗು ಕ್ರೂರ ವರ್ತನೆಗಳಿಂದ ತಪ್ಪಿಸಿ ರಕ್ಷಿಸುವದು.

ಟೀಪು:— ಗೋವಧೆಯನ್ನು [illegible] ಪ್ರತಿಬಂಧಿಸದ ಅಥವಾ ಉತ್ತೇಜಿಸದ [illegible] ಸರಕಾರದವರ ಮೇಲೆ ಬಹಿಷ್ಕಾರ ಹಾಕುವದು. ಈ ಮಂಡಳದ ಧ್ಯೇಯಕ್ಕೆ ವಿರೋಧಕವಿದೆ.

ಸಾಧನೆಗಳು

ತನ್ನ ಧ್ಯೇಯವನ್ನು ಮಂಡಳವು ಕೆಳಗಿನ ಉಪಾಯಗಳಿಂದ ಸಾಧಿಸಿಕೊಳ್ಳುವದು.

೧. ಗೋವು ಹಾಗು ಗೋಸಂತತಿಯವರ ಮೇಲೆ ನಡಿಸುವ ಕ್ರೂರ ಕೃತ್ಯಗಳನ್ನು ನಿಲ್ಲಿಸಲು ಸ್ನೇಹಭಾವದಿಂದ ಸಮುಕ್ತರ ಮನವೊಲಿಸಿ ಅವುಗಳಿಗೆ ರಕ್ಷಣ ಮಾಡುವದು, ಲೇಖಗಳನ್ನು ಬರೆದು ಪ್ರಚಾರ ಮನವೊಲಿಸುವದು; ಗೋರಕ್ಷಣ ಕಾರ್ಯಕ್ಕಾಗಿ ಸ್ವಯಂಸೇವಕರನ್ನು ಕಳುಹುವದು; ಉಪನ್ಯಾಸಗಳನ್ನಿತ್ತು, ಗೋರಕ್ಷಣ ಮಾಡಲು ಉಪದೇಶ ಮಾಡುವದು.

೨. ದುರ್ಬಲ ಹಾಗು ಅಶಕ್ತ ಗೋವು ಹಾಗು ಗೋವೃಷಭಗಳಿಗೆ ಸಾಕಷ್ಟು ತಿಂದಿ ಸಿಗದಿದ್ದಲ್ಲಿ ಅಥವಾ ಅವುಗಳ ಒಡೆಯನು ಅವನ್ನು ಸಾಕಲು ಅಸಮರ್ಥನಿದ್ದಲ್ಲಿ ಅವುಗಳ ಒಡೆಯರಿಂದ ಅವನ್ನು [illegible].

೩. ಗೋಶಾಲೆ ಹಾಗು ಪಾಂಜರಪೋಳಗಳಂಥ ಸಂಸ್ಥೆಗಳನ್ನು ಸಂಘಟಿಸಿ, ಈ ಸಂಸ್ಥೆಗಳ ನಾಯಕರಿಗೆ ಸಹಾಯಮಾಡುವದು; ಇಂಥ ಸಂಸ್ಥೆಗಳಿಲ್ಲದಿದ್ದಲ್ಲಿ ಅವನ್ನು ಹೊಸದಾಗಿ ಸ್ಥಾಪಿಸುವದು.

೪. ಗೋಶಾಲೆ ಪಾಂಜರಪೋಳ ಮುಂತಾದ ಸಂಸ್ಥೆಗಳ ಸಹಾಯದಿಂದ ಗೋವುಗಳ ಸಶಕ್ತ ಸಂತತಿಯನ್ನು ಉಂಟುಮಾಡುವದು;

೫. ಸತ್ತುಹೋದ ಗೋವುಗಳ ಚರ್ಮ ತೆಗೆಯಲು ಚರ್ಮಗಾರರನ್ನು ನೇಮಿಸಿ, ಚರ್ಮವು ರಫ್ತಾಗದಂತೆ ಯೋಜಿಸುವದು.

೬. ಸ್ವಯಂಸೇವಕರಿಗೆ ವಿಶೇಷ ಮಾಹಿತಿ ಕೊಟ್ಟು [illegible] ಗೋರಕ್ಷಕರನ್ನು ತಯಾರಿಸುವದು.

೭. ಮೇವು ಕ್ಷೇತ್ರ ಕ್ಷೀಣವಾಗುವ ಕಾರಣಗಳನ್ನು ಪರಿಶೋಧಿಸಿ, ಮೇವು ಕ್ಷೇತ್ರವನ್ನು ಪುನಃ ಪಡೆಯಲು ಯತ್ನಿಸುವದು.

೮. ಹೋರಿಗಳ ಬೀಜ ತೆಗೆಯುವ ಪದ್ಧತಿಯು ಆವಶ್ಯಕ ಹೇಗೆ? ಎಂಬುದನ್ನು ವಿಚಾರಿಸಿ, ಬೀಜ ತೆಗೆಯುವ [illegible] ಬೀಜ ತೆಗೆಯುವ ಪದ್ಧತಿಯನ್ನು ಸುಧಾರಿಸುವದು.

೯. ಮಂಡಳದ ಕಾರ್ಯಕ್ಕಾಗಿ ದ್ರವ್ಯಸಂಚಯ ಮಾಡುವದು.

೧೦. ಗೋರಕ್ಷಣದ ಕಾರ್ಯಕ್ಷೇತ್ರವಾಗಲು ಅವಶ್ಯ [illegible] ಉಪಾಯಗಳನ್ನು ಯೋಜಿಸುವದು.

ವಿವಿಧ ಸಂಗ್ರಹ.

[illegible])

[illegible] ಪತ್ರಿಕೆಗಳನ್ನು ಪಡೆದು, [illegible] ಸಾಹೇಬರು [illegible] ಹೋಗಿದ್ದರು.

* *

ಸ್ವದೇಶಿ ಸಾಹೇಬರಿಗಾಗಿ!

[illegible] ಅನುಕರಣೆಯನ್ನು [illegible] ಸಮಾಜದಲ್ಲಿ [illegible] ಎಡಿಸನ್‌ರವರ ಹೆಸರು ಗೊತ್ತು [illegible] ವಿಚಿತ್ರ [illegible] ಕಠಿಣ ಶಾಸ್ತ್ರ ಪ್ರಯೋಗಗಳಿಗಾಗಿ ಇವರು [illegible], ಒಂದು ವಾರದಲ್ಲಿ ೧೫೦ ತಾಸು ಏಕಾಗ್ರ ಚಿತ್ತದಿಂದ [illegible] ಮಾಡಿದರು. ಅವರ ಊಟ ತೀರ ಸಣ್ಣದು. ಅರ್ಧ ಸೇರು ಅನ್ನ ಕೊಳ್ಳುತ್ತಾರೆ. ನಿದ್ರೆಯಂತೂ ತೀರ ಅಲ್ಪ. ಸಾಹೇಬರು ನಿದ್ದೆ ಮಾಡುವದಿಲ್ಲೆಂದು ಅಮೇರಿಕೆಯಲ್ಲಿ ಖ್ಯಾತಿ; ಅಷ್ಟು ಅಲ್ಪ ನಿದ್ದೆಯನ್ನು ಇವರು ಮಾಡುತ್ತಾರೆ. ರಾತ್ರಿ ೮-೧೦ ತಾಸು ನಿದ್ರೆ ಮಾಡಬೇಕೆಂಬುದೊಂದು ಬಲವಾದ [illegible]. ಎಡಿಸನ್‌ರ ಮತ ಬೇರೆ. ಬೆಳಕಿನ ಸಾಧನಗಳು ಬೆಳೆದು ಹಗಲಿನಷ್ಟು ರಾತ್ರಿ [illegible] ತೆಂದರೆ, ಮಾನವನಿಗೆ ನಿದ್ದೆ ಮಾಡದೆ ಉಳಿಯುವ ಅಭ್ಯಾಸವಾಗುವದೆಂದು ಅವರ ಹೇಳಿಕೆ. ಅಶನ-ವಸನಗಳ ಮೇಲಿನ ಅವರ ಮತವು ವಿಶೇಷ ವಿಚಾರಣೀಯವಿದೆ. [illegible] ಎಡಿಸನ್‌ರವರ [illegible] ಫಲಗಳು ಮತ್ತು ಗೋದಿಯ (ಬ್ರಾನ್) ಎಂಬ ರೊಟ್ಟಿಗಳು [illegible] ಅವರೂಟ. ಸಾಹೇಬರಿಗೆ ಯುರೋಪಿಯನ್ನರಂತೆ ಉಡುಪು ಧರಿಸುವದು ಸೇರುವದಿಲ್ಲ. ಅದರಿಂದ ಆರೋಗ್ಯಹಾನಿಯಿರುವದೆಂದು ಅವರ ಮತ. ಬಿಗಿಯಾದ, [illegible] ಹತ್ತುವ ಅಂಗಿ, ಕಟೂರ ಮೊದಲಾದ ಬಟ್ಟೆಗಳನ್ನು, ಕುತ್ತಿಗೆಗೆ ಬಿಗಿಯಾದ ಕೊಲರು ಯಾನೆ ಕೊರಳಪಟ್ಟಿಯನ್ನೂ, ಕಾಲಿಗೆ ಬಿಗಿಯಾದ ಬೂಟನ್ನೂ ಹಾಕಿಕೊಳ್ಳುವದರಿಂದ ರಕ್ತವು ಸರಿದಾಡದೆ, ಮನುಷ್ಯನ ಕಾರ್ಯಕ್ಷಮಶಕ್ತಿಯು ಕುಂದುತ್ತದೆಂದು ಸಾಹೇಬರ ಅಂಬೋಣ. ಅದರಿಂದ ಅವರು ಸಡಿಲಾದ ಬಟ್ಟೆಗಳನ್ನೇ ತೊಟ್ಟುಕೊಳ್ಳುತ್ತಾರೆ. ಇಂಥ ಉದ್ಯೋಗಿ ಸಾಹೇಬರು ವಯೋವೃದ್ಧರಾಗಿಯೂ, ಚೈತನ್ಯವಂತರಾಗಿ ಬಾಳಿಕೊಂಡಿರುವದು ಸಹಜವು.

* *

ಬ್ರಿಟಿಶ ರಾಜ್ಯವು ತುರ್ಕರ ರಾಜ್ಯಕ್ಕಿಂತಲೂ ಕಡೆ!

ಪಾಲೆಸ್ಟೈನ ಪ್ರಾಂತವು ಮೊದಲು ತುರ್ಕರ ಆಡಳಿತದಲ್ಲಿತ್ತು. ಮಹಾ ಯುದ್ಧದ [illegible] ಬ್ರಿಟಿಶರು ಅಲ್ಲಿ ವಾಸ್ತವ್ಯ ಮಾಡಿರುವ ಪ್ರಜೆ [illegible] ಕಲ್ಯಾಣಕ್ಕಾಗಿ ಈ ಪ್ರದೇಶವನ್ನು ತಮ್ಮ [illegible] ನಲ್ಲಿ ಸೇರಿಸಿದರು. ಅಲ್ಲಿ ಅರಬರ ವಾಸ್ತವ್ಯ ಪ್ರಚಂಡವಿದೆ. ಯಹೂದಿ, ಅಂದರೆ, [illegible] ಉಪಧರ್ಮದವರ ಲೋಕಸಂಖ್ಯೆಯು ಅಲ್ಲಿ ಕಡಿಮೆ. ಬ್ರಿಟಿಶರ ಪ್ರವೇಶವಾದಂಗ, ಅಂದರೆ, ೭ ವರ್ಷ ಪೂರ್ವದಲ್ಲಿ, ಅಲ್ಲಿ ೫೫ ಸಾವಿರ ಯಹೂದಿಯರಿದ್ದರು. ಈಗ ಅವರ ಸಂಖ್ಯೆಯು [illegible] ದರೆ, ೧ ಲಕ್ಷ, ೬೦ ಸಾವಿರವಾಗಿದೆ. ಬ್ರಿಟಿಶ ಪ್ರೇಮವು ಯಹೂದಿಯರ ಮೇಲೆ ವಿಶೇಷ. [illegible] ಲ್ಲಿ ಹರಡಿಬಿದ್ದ ಯಹೂದಿಯರನ್ನೆಲ್ಲ ಪಾಲೆಸ್ಟೈನದಲ್ಲಿ ಕೇಂದ್ರೀಕರಿಸಬೇಕೆಂದು ಧೂರ್ತ ಬ್ರಿಟಿಶರ ಆಲೋಚನೆ. ಸದ್ಯಕ್ಕೆ ಅಲ್ಲಿ ಯಹೂದಿಯರದೊಂದು ವಿದ್ಯಾಲಯದ ಅನಾವರಣ [illegible] ವನ್ನು ಮಾಡುವರೆ, ಹಿಂದೆ ಗ್ರೇಟ ಬ್ರಿಟನದ [illegible] ಪ್ರಧಾನರಾಗಿದ್ದ ಬಾಲ್ಫರ ದೊರೆಗಳು ಅಲ್ಲಿ [illegible] ಗಿದ್ದರು. ಆಗ ಅರಬರು ಅವರನ್ನು ಬಹಿಷ್ಕರಿಸಿ ಅವರು ಇಳಕೊಂಡಿದ್ದ ಠಾಣ್ಯದ ಮೇಲೆ ಕಲ್ಲುಗಳನ್ನೂ, ಗುಂಡುಗಳನ್ನೂ ಎಸೆದು ವಿಶೇಷ ಅನರ್ಥ ಮಾಡಿದರು. ಈ [illegible] ಕಾರಣದಿಂದ ಗ್ರೇಟ ಬ್ರಿಟನದ ಪ್ರಧಾನ [illegible] ದಲ್ಲಿ ಕಳ್ಳೋಳವೆದ್ದಿತು. ಅವರಿಗೆ ಸಮಾಧಾನ [illegible] ಸುಪರ ಕರ್ನಲ್ [illegible] ಅರಬರ ಮಂಡಳವನ್ನು ಕಾಣಿಸಿಕೊಂಡರು. [illegible] ದ್ದೇನಂದರೆ:— 'ತುರ್ಕರ ಅಧಿರಾಜ್ಯದಲ್ಲಿ ನಮಗೆ ವಿಶೇಷ ಅನುಕೂಲವಿತ್ತು. ನಮ್ಮ ಅಧಿಕಾರವು ಈಗ [illegible], ದ್ರವ್ಯಸ್ಥಿತಿಯಿಂದ [illegible] ದರೆ, ನಾವು ಕ್ರಮವಾಗಿ ದರಿದ್ರರಾಗಿ ಉಪವಾಸ ಬಿದ್ದು ಸಾಯುವ ಪ್ರಸಂಗ ಬಂದದ್ದು. ನಮ್ಮ [illegible] ದಲ್ಲಿ ನಾವು ಪರಸ್ಥರಾಗಿದ್ದೇವೆ. ಹೀಗೆ ಉಳಿಯಲು ನಮಗೆ ಸೇರುವದಿಲ್ಲ. ಇಲ್ಲಿ [illegible] ಯುಕ್ತ ಸಭೆಯನ್ನು ಸ್ಥಾಪಿಸಬೇಕು. ಮತ್ತು [illegible] ವಿಧ್ಯಮಾನ ಕಾರಭಾರ ನಡಿಸಬೇಕು. [illegible] ಕಲ್ಯಾಣದ ಯೋಜನೆಗಳಿಗೆ ಬ್ರಿಟಿಶರ [illegible] ಬಂಧಗಳು ಅಡ್ಡಬರಬಾರದು.' ಅರಬರಿಗೂ [illegible] ಶರ ರಾಜ್ಯಭಾರದ ಅಂತರಂಗವು ಬಹು ಬೇಗ [illegible] ಯಿತು. ಆಂಗ್ಲಾಯಿಯು ಮೋಗಲಾಯಿಗಿಂತ [illegible] ಯಸ್ಕರವೆಂದು ಹೇಳುವವರು ಇದನ್ನು [illegible] ಮಾಡಲಿ!

ಭಾಷಾಂತರಕರ್ತರಿಗೆ ಸುಸಂಧಿ!

ಸುಪ್ರಸಿದ್ಧವಾದದ್ದು, ಅನೇಕ ವಿದ್ಯಾ ಪಂಡಿತರಿಂದ ಚಲೋ ಅಭಿಪ್ರಾಯ ಪಟ್ಟದ್ದು ಆಗಿರುವ ಚತುರ್ವೇದಿಯರು ಬರೆದ "**आर्यांच्या सणांचा प्राचीन व अर्वाचीन इतिहास**" ಎಂಬ ಮರಾಠಿ ಪುಸ್ತಕವನ್ನು ಕನ್ನಡದಲ್ಲಿ ಭಾಷಾಂತರಿಸುವದಿದೆ. ಇದನ್ನು ಕೈಕೊಳ್ಳಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳತಕ್ಕದ್ದು.

Apply to:--
V. PRABHA & CO.
BOMBAY 4.

Copies can be had from:-
THE NORTH KANARA TRADING-CO.
KARWAR.

ಮಳೆಗೆ ಮೊದಲೇ ಎಚ್ಚರಿಕೆ!

ಅತ್ಯುತ್ತಮ, ಸುಂದರ, ಬಾಳಿಕೆಯುಳ್ಳ, ಮಜಬೂತಾದ

ಕಡಿಮೆ ಧಾರ!] ಛತ್ರಿಗಳು. [[illegible] !!

ಪ್ರತಿಯೊಬ್ಬರಿಗೂ ಅನುಕೂಲವಾದ ಮಳೆಗಾಲದ ವಸ್ತು.

ದೇಶೀಯ ಕೈಗಾರಿಕೆ ' [illegible] ' [illegible]

ದೇಶೀಯರಿಗೆ ಖಾತರಿ ಬಗೆಗೆ ಸ್ವಲ್ಪ [illegible]

ಕಾನಡಾ ಜಿಲ್ಲೆಯೊಳಗಿನ ಪ್ರಮುಖ ಛತ್ರಿ ದುಕಾನುಗಳಲ್ಲಿ ವಿಕರೀ ಇದೆ

ಸೇಠ್ ನಾಗಜೀ ಪುರುಷೋತ್ತಮದಾಸ ಮತ್ತು ಕಂಪನಿಯವರ

ಕಲ್ಲಿಕೋಟೆಯ ಕಾರಖಾನೆಯ.

ಸೂರ್ಯ ಛಾಪಿನ ಛತ್ರಿಗಳೇ ಛತ್ರಿಗಳು!

ದುಕಾನುದಾರರಿಗೆ ತಕ್ಕ ಕಮಿಶನ್ ಕೊಡಲಾಗುತ್ತದೆ.

ಪತ್ತೆ.— **ಶ್ರೀನಿವಾಸ ರಂಗ ಪೈ, ಸಾವಕಾರ ಮಹಾಲ್.**
ಮಂಗಳೂರು, ದ. ಕನ್ನಡ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಪಿ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸ, ಒಂಟಿತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇರಲ್ಪಟ್ಟ ಸರ್ವ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೆ ಪುಕ್ಕಟೆ ಕಳಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವ್ಹಿ. ಪಿ. ೪ ಅಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ—**ಗುರುಬಸವ ಅಂಡ್ ಕಂಪನಿ ಲಿಮಿಟೆಡ್** ಪೋ. ಬಾ. ೫೧೦, ಮದರಾಸು

DAVAR'S
COLLEGE OF COMMERCE
(Established 25 *years*)

CELEBRATES ITS SILVER JUBILEE THIS YEAR UNDER THE DISTINGUISHED PATRONAGE OF MERCHANT-PRINCES, LEADERS OF THOUGHT AND EDUCATION.

The Institution under the sole direction of its Founder and Principal has done pioneer work in introducing for the First Time in India Courses in SPECIALISED BANKING, SPECIALISED SECRETARIAL WORK and SPECIALISED ACCOUNTANCY as the result of his numerous journeys to Europe and to the Colleges and Universities there.

The fact that a Scholar has successfully trained in DAVAR'S COLLEGE has always been accepted by businessmen all over India, Burma and Ceylon as a hallmark of perfection.

Prospectus on application to the Principal,
Great Western Bldg.,
Apollo Street, BOMBAY.

ಅಮೇರಿಕನ್ ಉಪಾಯ.

ಎಂಬ್ರೋಸಿಯಾ.

AMBROSIA

ಸ್ತ್ರೀರೋಗಪರಿಹಾರಕ್ಕಾಗಿ.

ಎಂಬ್ರೋಸಿಯಾವು ಸಮಸ್ತ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು. ಇದು ಸ್ತ್ರೀಸೌಂದರ್ಯವನ್ನುಂಟುಮಾಡುತ್ತದೆ. ಸಾಮಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರುತ್ತಲೆ ಚಲೋ ಆಹಾರ ದೊರಕದೆ, ವಿಶೇಷ ಆಯಾಸ ಕೊಳ್ಳುವದರಿಂದ ಸ್ತ್ರೀಯರ ಪ್ರಕೃತಿಯು ಕೆಡುತ್ತದೆ. ಮುಟ್ಟಾಗುವಾಗ ಶೂಲಿ ಏಳುವದು, ಮುಟ್ಟಾಗದಿರುವದು, ಅಪಸ್ಮಾರ, ಬಂಜೆತನ ಮುಂತಾದ ಗರ್ಭಾಶಯದ ಬೇನೆಗಳು, ಅಜೀರ್ಣ, ತಲೆಶೂಲಿ, ಭ್ರಮಿಷ್ಟತನ ಇವೆಲ್ಲ ಸ್ತ್ರೀರೋಗಗಳಮೇಲೆ ರಾಮಬಾಣ ಮದ್ದು. ಎಂಬ್ರೋಸಿಯಾವು ಸಮಸ್ತ ಸ್ತ್ರೀರೋಗಗಳನ್ನು ದೂರಮಾಡಿ, ಸ್ತ್ರೀಯರನ್ನು ಸಶಕ್ತರೂ ಹಾಗು ಸೌಂದರ್ಯವಂತರನ್ನಾಗಿ ಮಾಡುತ್ತದೆ.

ಒಮ್ಮೆ ಪರೀಕ್ಷೆ ನೋಡಿ.

ಬೆಲೆ ಬಾಟ್ಲಿ ೧ ಕ್ಕೆ ರೂಪಾಯಿ ೨—೦—೦

ಏಜಂಟರು:— **ವೀರಿಯಲ ಏಜನ್ಸಿ,**
ಪ್ರಿನ್ಸೆಸ ಸ್ಟ್ರೀಟ, ಮುಂಬಯಿ ನಂಬರ ೨.

ಧಾರ್ವಾಡ ಕರ್ನಾಟಕ ವಿದ್ಯಾವರ್ಧಕ ಸಂಘದವರಿಂದ [illegible]

ತಿಳಿಗನ್ನಡದ **ಸ್ವಧರ್ಮ** ಮಾಸಪತ್ರಿಕೆ

ಸಂಪಾದಕ—ಸುರೇಂದ್ರ ಶಿವರಾವ ದೇಸಾಯಿ

ಚೈತ್ರ ಮಾಸದಿಂದ ದ್ವಿತೀಯ ವರ್ಷ ಪ್ರಾರಂಭ

ಪ್ರಾಪಂಚಿಕ ಸಂಪತ್ತು ಪಾರಮಾರ್ಥಿಕ ಸಂಪತ್ತು ಕೂಡಿ ಬೆಳೆಯುವಂತೆ ಸ್ವಸಂಸ್ಕೃತಿ ಪ್ರೇಮ ಸ್ವದೇಶ ಪ್ರೀತಿ ಸ್ವಭಾಷಾಭಿಮಾನ ಸ್ವಧರ್ಮನಿಷ್ಠೆ [illegible] ಸ್ವಾರ್ಥ ತ್ಯಾಗ ಮುಂತಾದ ಗುಣಗಳನ್ನು [illegible] ಕೀರ್ತನ ಪುರಾಣ ಪ್ರವಚನ ನೀತಿಪರ ಜೀವನಚರಿತ್ರೆ ಇತಿಹಾಸ ಸಾಹಿತ್ಯ [illegible] ಕಾದಂಬರಿ [illegible] ರೂಪದಲ್ಲಿ ಜನಸಾಮಾನ್ಯರ ಉನ್ನತಿಗೆ [illegible] ಸರ್ವ ವ್ಯವಹಾರಗಳನ್ನು ಸ್ವಧರ್ಮ ದೃಷ್ಟಿಯಿಂದ ವಿಚಾರ ಮಾಡಿ ವಿವರಿಸುವ [illegible] ವರ್ಷಕ್ಕೆ ೩ ರೂಪಾಯಿ ಕಳಿಸಿ ವರ್ಗಣಿ [illegible] ಸೇರಿಸಿ ಕಟ್ಟಿದ ಪುಸ್ತಕದ [illegible]

ವ್ಯವಸ್ಥಾಪಕ [illegible]

ವಿಶೇಷ] ಅನುಭವಸಿದ್ಧ [[illegible]

ವನೌಷಧಿ ಮಾತ್ರೆಗಳು

[illegible] ಅನುಭವ [illegible] ಪ್ರತಿನಿತ್ಯ ಅಕಡೆಗೆ [illegible] ಔಷಧಿಗಳ ತಾಜಾ ಮೂಲಿಕೆಗಳ [illegible] ಅನುಭವ [illegible] ಔಷಧಿಗಳ ದ್ರಾವಕ Tincture [illegible] ಸೂಚಿಸಿದರೆ ಕಳಿಸುವೆವು

ವಾಯುಮುದ್ರಾನದ ಬಗ್ಗೆ ಔಷಧಿ ಮೂಲಿಕೆ ತೊಲ ೧ ಕ್ಕೆ	೦ ೩ ೦
ಕೊಳೆರೋಗದ ಬಗ್ಗೆ ,, ,, ,,	೮-೩-೦
ಅರ್ಧಾಂಗ ವಾಯುವಿನ ಬಗ್ಗೆ	೦ ೪ ೯
ನಾರು ಕಡಿತದ ಬಗ್ಗೆ	೦ ೪ ೦
ಸರ್ಪಸುತ್ತಿನ ಬಗ್ಗೆ	೦-೩ ೦
ಹೊಟ್ಟೆಯಲ್ಲಿ ಕ್ರಿಮಿ [illegible] ಔಷಧಿ ಬಗ್ಗೆ ತೊಲೆ ೧೦ ಕ್ಕೆ	-೨ ೦
ರಕ್ತಶುದ್ಧಿ ವ ಮಲಶೋಧನೆ ಬಗ್ಗೆ ಮೂಲಿಕಾ ರಾತ್ತಲ್ಲ ೧ ಕ್ಕೆ	೧ ೦ ೦
ಮೋರಾವಳಾ (ನೆಲ್ಲಿಕಾಯಿ ಗುಳಂಬ) ರಾತ್ತಲ್ಲ ೧ ಕ್ಕೆ	೧ ೦-೦

ರತ್ನಗಿರಿ ಯಾವ ಅದಕ್ಕೂ ಹೇಳಿ ತರಿಸಿಕೊಳ್ಳಿ. ವರ್ತಕರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು. ಟಪಾಲ ಖರ್ಚು ಪ್ರತ್ಯೇಕ ವಿಶೇಷ ವಿವರಕ್ಕೆ ಪತ್ರ ದ್ವಾರಾ [illegible] ಔಷಧಿ ಸಂಗ್ರಹ

ಎನ್. ಜಿ ಹೆಗಡೆ, ಮಾಸ್ಕೇರಿ,

ಪೋಸ್ಟ—ಬಂಕಿಕೊಡ್ಲ ಜಿ ಉತ್ತರ ಕಾನಡಾ

ತಾಮ್ರ ಹಿತ್ತಾಳಿ ಭಾಂಡೆ

ವ ತರತರದ ಇತರ ಭಾಂಡೆಗಳು.

ಮಹಾಶಯರೇ, ನಮ್ಮ ಕಂಪನಿಯು ಸದ್ಯದಲ್ಲಿ ಸ್ಥಾಪನೆಯಾಗಿ ತಾಮ್ರ-ಹಿತ್ತಾಳಿ ಭಾಂಡೆಗಳನ್ನು ಇಲ್ಲಿಯೇ ತಯಾರಿಸಿ ಗ್ರಾಹಕರಿಗೆ ಯೋಗ್ಯ ಧಾರಣೆಯಿಂದ ಖಾತ್ರಿ ಭಾಂಡೆಗಳು ಸಿಗುವಂತೆ ಮಾಡಿ, ಇರಲು ಬರಬರುತ್ತ ಗಿರಾಕಿಗಳು ತರತರದ ಭಾಂಡೆಗಳನ್ನು ಇಚ್ಛಿಸಹತ್ತಿದ್ದರಿಂದ ಆಯಾಯ ನಮೂನೆಯ [illegible] ಬಿನ್ ಸಂದಿನ ಭಾಂಡೆಗಳನ್ನು ಶೀಘ್ರ ಮಾಡುವದಕ್ಕಾಗಿ ಹಿಂದುಸ್ಥಾನದಲ್ಲೆಲ್ಲ ಸಂಚರಿಸಿ, ನೋಟಕ್ಕೆ ಅಂದವಾಗಿ ಕಂಡು ಬಂದ ತಾಮ್ರ ಹಿತ್ತಾಳಿ ಕಂಚು ಇವೇ ಮೊದಲಾದ ಧಾತುಗಳ ಭಾಂಡೆಗಳನ್ನು ಕುಂಭಕೋಣ, ತ್ರಿನಾವೇಲಿ, ತಿರಪೂರ, ಬೆಂಗಳೂರ, ಕಾಳಸ್ತಿ, ಹುಬ್ಬಳ್ಳಿ, ನಾಶಿಕ, ಪುಣೆ, ಮೊರಾದಬಾದ, ಮುಂಬಯಿ ಮುಂತಾದ ಪ್ರಸಿದ್ಧ ಪಟ್ಟಣಗಳಿಂದ ಖರೇದಿಸಿ ತಂದಿಟ್ಟು, ಗಿರಾಕಿಗಳು ಕೇಳಿದ ಭಾಂಡೆಗಳನ್ನು ಕೊಡುವಂತೆ ಅನುಕೂಲತೆಯನ್ನೂ, ಇದಕ್ಕೂ ಹೆಚ್ಚಿನ ನಮೂನೆಯ ಭಾಂಡೆಗಳನ್ನು ಗ್ರಾಹಕರು ಅಪೇಕ್ಷಿಸಿದಲ್ಲಿ ಆಗಿಂದಾಗಲೇ ತಯಾರಿಸಿ ಕೊಡುವರೆ ಉತ್ತಮ ತರಗತಿಯ ಮೇಸ್ತ್ರಿಗಳನ್ನು ಇಟ್ಟಿರುತ್ತೇವೆ. ಇದಲ್ಲದೆ, ನಮ್ಮ ಕಂಪನಿ ಶಾಖೆಗಳು ಅಂಕೋಲಾ—ಶಿರ್ಶಿಯಲ್ಲಿ ಇರುವಂತೆ, [illegible] ಭಾಂಡೆಗಳು ತಯಾರಿರುವವು ಬೇಕಾದವರು ಅಲ್ಲಲ್ಲಿ ಖರೇದಿಸಬಹುದು. ಈ ಹೊರತು ದಕ್ಷಿಣ [illegible] ಮಂಗಳೂರಿನಲ್ಲೂ ಒಂದು ದುಕಾನವಿರುವದು. ಅಲ್ಲಿಯೂ ತರತರದ ಭಾಂಡೆಗಳು [illegible] ತಯಾರಿರುವವು ಹೊಸ ಹೊಸ ನಮೂನೆಯ ಭಾಂಡೆಗಳನ್ನೂ, ಕೊಪ್ಪರಿಗೆಗಳನ್ನೂ [illegible] ಅಪೇಕ್ಷಿತರು ಕಣ್ಣಿಂದೆಯೇ ಅಲ್ಪಾವಧಿಯಲ್ಲಿ ತಯಾರಿಸಿ ಕೊಡುವ ಅನುಕೂಲ [illegible] ಇಷ್ಟು ಯೋಗ್ಯ [illegible] ಮಾದರಿಯ ಭಾಂಡೆಗಳು ಇಚ್ಛಿತ ವೇಳೆಗೆ ಮತ್ತೆಲ್ಲಿ [illegible] ಬೇಕಾದವರು ಈ ಕೆಳಗಿನ ಪತ್ತೆಯ ಮೇಲೆ ಟಪಾಲದ್ವಾರ ಪತ್ರವ್ಯವಹಾರ [illegible] ಮಾಹಿತಿ ಪಡಕೊಳ್ಳಬಹುದು ಗ್ರಾಹಕರಿಗೂ, ವ್ಯಾಪಾರಿಗಳಿಗೂ ೨೫ ರೂಪಾಯಿ [illegible] ಕೊಡಲಾಗುವದು

ಅಶ್ವಿನೀ [illegible] ಬಿಸ್ತಿ ಹಿತ್ತಲ ಕಂಪನಿ, ಕುಮಟಾ

ಪೋಸ್ಟ—ಕುಮಟಾ. ಜಿಲ್ಹಾ ಉ ಕಾನಡಾ

ಬೇಸಿಗೆಯು ಪ್ರಾರಂಭವಾಯಿತು !

ದನಗಳ ಆಹಾರವಾದ ಕಣಿಕೆಯನ್ನು ಕಾದಿಡಿರಿ !

ಕಿರ್ಲೋಸ್ಕರ ಕಣಿಕೆ ಯಂತ್ರವನ್ನು **ಉಪಯೋಗಿಸಿರಿ !!**



ನಮ್ಮ ಕಾರ್ಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕೊರೆಯುವ ಯಂತ್ರಗಳು ತಯಾರಾಗುತ್ತವೆ. ಒಂದು ಕೈಯಂತ್ರ ಬೆಲೆ ೩೦ರೂ ಇನ್ನೊಂದು ಗಾಲೀ ಯಂತ್ರ ಬೆಲೆ [illegible] ಸಣ್ಣ ಕಸಾಯತವುಳ್ಳವರು ಕೈಯಂತ್ರವನ್ನೂ ದೊಡ್ಡ ಕಸಾಯತವುಳ್ಳವರು ಗಾಲೀ ಯಂತ್ರವನ್ನೂ ಉಪಯೋಗಿಸಬಹುದು. ಕಣಿಕೆಯು ೪ ಇಂಚುಗಳಿಂದ ಒಂದು ಇಂಚಿನವರೆಗೆ ಕೊರೆಯಲ್ಪಡುತ್ತದೆ ಸವಿಸ್ತಾರ ಸಂಗತಿ ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಿರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ,
ಜಿಲ್ಲಾ ಸಾತಾರಾ

ಅಮೃತಾಂಜನ.



ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳ ಮೇಲೆ, ರಾಮಬಾಣದಂತಾಗಿರುವದು. ಕಳೆದ ೩೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಲೆ ಜನರು ಅಮೃತಾಂಜನವನ್ನು ಉಪಯೋಗಿಸುತ್ತಿರುವರು. ಇದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಜೇಗು, ಸಂಧಿವಾತ ನೆಗಡಿ ಮುಂತಾದ ಎಷ್ಟೋ ವ್ಯಾಧಿಗಳ ಮೇಲೆ ಇದು ಗುಣಕಾರಿಯೆಂದು ತಿಳಿಯುವವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತ್ತು ೧೦ ಆಣೆ. ಟಪಾಲ ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ, ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta.

Monday, May 11th, 1925.

ವರ್ಷ ೯.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೦.

ತ್ರದ ವರ್ಗಣಿ.
ಮು ಪ್ತಿ ಅಗಾವು
..ವಾಯಿ 2-4-0.
ರ್ಮಾರಿಯಿಂದ
ರೂ. 3-0-0.
. ಅಂಚೆವೆಚ್ಚ ಸೇರಿ
..ಯಿ 3-2-0.
..ಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ಪೈಕಾ
ಟೈಪಿನ (೧೧ ಎಮ್ ಅಗಲ)
೮ ಸಾಲುಗಳವರೆಗೆ ರೂ. 1-0-
೮ ನಂತರ ಪ್ರತಿಸಾಲಿಗೆ 0-2-0.
ಹೆಡಿಂಗದ ಸಾಲು ಎಷ್ಟು
ದೊಡ್ಡದಿರುವದೋ ಆ ಮಾನ
ದಿಂದ ಅಷ್ಟು ಸಾಲುಗಳು ಹಿಡಿ
ಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ
ಪತ್ರವ್ಯವಹಾರ ಮೂ ಸಮಕ್ಷ ತಿಳಿ
ಸಲ್ಪಡುವದು.

ಕುಮಟಾ— ಕಾನಡಾವೃತ್ತ ಸೋಮವಾರ, ತಾರೀಖು ೧೧ ಮಾಹೆ ಮೇ ಸನ್ ೧೯೨೫ನೇ ಇಸವಿ.

हिंदुस्थानातील रहिवाशास ज्याप्रमाणे
नची हवा त्याप्रमाणेंच हे औषध हिं
नातील लोकास ज्यास्त फायदेशीर आहे

द्राक्षासव- दीड रत्तलची किंमत २ रुपये.

रामबाण औषधें
सर्दि घालविणारें,
भूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,
पिण्यास रुचिकर.

क्याटलाग मागवा,
डु फार्मास्युटिकल वर्क्स लिमिटेड,
मुंबई नं. १२

ಕ್ಷಯ ರೋಗ?
ವೈದ್ಯ ಫರ್ನಾಂಡಿಸರ
ಬರೀ ನಾಲ್ಕು ಔಷಧಗಳು.

ಪ್ರಕೃತಿಮಾನ ತಿಳಿಸಿರಿ ಅಂದರೆ ಯೋಗ್ಯ ಷಧಗಳನ್ನು ತಯಾರಿಸಿ ಕಳುಹುವೆವು ಸಮಕ್ಷ ಯಾವಲ್ಲ ಹೆಚ್ಚಿನ ಮಾಹಿತಿ ದೊರಕುವದು ವಸಾತವೇಡಿರಿ ಬೇಗನೇ ಕೆಳಗಿನ ವಿಳಾಸಕ್ಕೆ ಯಿರಿ. (ರೂ. ೫೮-೧೦-೦.)

ವೈದ್ಯ ಫರ್ನಾಂಡಿಸ,
ರೋಗಾಂತಕ ಡಿಪೋ,
ಕಾರವಾರ

☞ ಗ್ಯಾಸ ದೀಪಗಳು
ಭಾಡಿಗೆಗೆ ಇಟ್ಟಿರುತ್ತವೆ

ದರವಾರವು ಎಲ್ಲಕ್ಕಿಂತ ಕಡಿಮೆ ಇಟ್ಟಿರುತ್ತದೆ ವವರು ಕೆಳಗಿನ ಪತ್ತೆಯ ಮೇಲೆ ಬರೆಕೊಳ್ಳ ಹುದು. ಪತ್ತೆ:— ವೈಕುಂಠ ಜನಾರ್ದನ ನಾಯ್ಕ
ಪೋಷ್ಟ:— ಉಪ್ಪಿನಪಟ್ಟಣ. ತಾ. ಕುಮಟಾ

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ
ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, B. A.
Jewellers, KUMTA.
ಆರ್. ಎಸ್. ಕಾಸರಗೋಡ,
ರತ್ನಾಭರಣ ವ್ಯಾಪಾರಿ, ಕುಮಟಾ.

ಆಯುರ್ವೇದೀಯ) ಧಾತುಪೌಷ್ಟಿಕ, ಶಕ್ತಿವರ್ಧಕ, ರಕ್ತಶೋಧಕ (ಮಲಬಾರಿಕೃತಿ
ಮದನಕಾಮೇಶ್ವರೀಲೇಹ.

ಆಬಾಲ ವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಇದರಲ್ಲಿ ಕೇಶರ ಕಸ್ತೂರಿ, ಪವಳ, ಶಿಲಾಜಿತು ಅಭ್ರಕಸತ್ವಾದಿ ಅನೇಕ ವನೌಷಧಿಯುಕ್ತ ಇರುವದರಿಂದ ಧಾತು ತೆಳ್ಳಗಾಗೋಣ ನಪುಂಸಕತ್ವ, ಪ್ರಮೇಹ ಮುಷ್ಟಿಮೈಥುನಜನ್ಯ ಧಾತುಕ್ಷೀಣತೆ, ಸ್ವಪ್ನಾವಸ್ಥೆ ಉರಿ ವಾತ ಸಂಧಿವಾತ ಸ್ತ್ರೀಯರ ಗರ್ಭಾಶಯರೋಗ, ಪ್ರದರ (ಗರ್ಮಿ) ಇ. ನಿರ್ಮೂಲಿಸಿ ಕುಂಬಾ ರಕ್ತ-ಧಾತು ಸಂಚಯಮಾಡಿ ಯಥೇಚ್ಛ ಸಂಸಾರಸುಖವನ್ನು ಲಭಿಸು ಆ ಸಿದ್ಧೌಷಧ ೧ ತಿಂಗಳು ಸಾಲುವ ಶೀಸೆಕ್ಕೆ ೩॥ರೂ. ಟ. ಖ ॥ರೂ ಬಿನ್ಮೆಲೆ ೩ ಶೀ ೩॥ರೂ ಟ.ಖ. ಮಾಫಿ ಲಸು ಔಷಧದ ಸಂಗಡ

ಅತ್ಯುತ್ತಮ) ಜಂತುವಿನ ಔಷಧ(ದರಸುಲಭ.

ಪ್ರತಿ ೧ಕ್ಕೆ ೧॥ಆಣೆ ೫ಂಕ್ಕೆ ರೂ ೩॥ ೧೦ಂಕ್ಕೆ ರೂ.೫ ಅನುಭವ ತಕ್ಕೊಳ್ಳಿರಿ. ಇವಲ್ಲ ಎಲ್ಲ ರೋಗಗಳ ಮೇಲೆ ಅನುಭವ ಸಿದ್ಧ ಪತ್ರಗಳು ಸಿಗುವವು. ವಿ. ಮಾ. ಬೇಕಾದವರು ೧ಆಣೆ ಹಚ್ಚಿ ಪತ್ರಬರೆದಲ್ಲಿ ನಮ್ಮ ಆಯುರ್ವೇದ ಗುಣರತ್ನಮಾಲಾ ಎಂಬ ಸಂಪೂರ್ಣ ಮಾಹಿತಿಯ ಪುಸ್ತಕವನ್ನು ಪುಕ್ಕಟೆಯಾಗಿ ಕಳಿಸುವೆವು.

ಮೆನೇಜರ ಆಯುರ್ವೇದ ಚಿಕಿತ್ಸಾಮಂದಿರ, ತಾ. ಕಾರವಾರ, ಪೋ. ಚೆಂಡಿಯೆ.

ಮುಂಬೈ ಏಜೆಂಟ — R. C. KAMAT, Teashop Store Lane, Fort, BOMBAY.

ಹುಟ್ಟಿದ ಪಕ್ಕಾವೇಳೆ ತಿಳಿಸಿರಿ) ಸುಖಸಾಧನಕ್ಕೆ ಯೋಗ್ಯ ಉಪಾಯವು.(ಯಾ ಜನ್ಮಟಿಪ್ಪಣಿ ಕಳಿಸಿರಿ.

☞ ಮಲಬಾರಿ) ಕೇರಳ ಜ್ಯೋತಿಷ. (ಭವಿಷ್ಯ.

ನಿಮ್ಮ ಜನ್ಮಟಿಪ್ಪಣಿ ೧ಆಣೆ ೧ವರ್ಷದ ಫಲಾಫಲ ಟಿ.೧॥ರೂ ೫.೨॥ರೂ. ೧೦ವ.ಟಿ.೪ರೂ. ಸದರೀ ಟಿಪ್ಪಣಿಯ ಮೇಲಿಂದ ಆಯಾಕಾಲಕ್ಕೆ ಒದಗುವ ಇಷ್ಟಾನಿಷ್ಟ ಫಲಗಳನ್ನೂ ಅನಿಷ್ಟಫಲ ನಿವಾರಣಾರ್ಥ ಶಕ್ತಿಧರ್ಮ ದಾನೋದ್ಧಾರಗಳಿಂದ ಸಂಕಟಗಳನ್ನು ಪರಿಹರಿಸುವ ಉಪಾಯಗಳನ್ನೂ ತಿಳಕೊಂಡು ಮುಂದಿನ ಭವಿಷ್ಯ ಕಾಲವು ಸುಖಕರಕ ಮತ್ತು ಲಾಭದಾಯಕವಾಗುವಂತೆ ಸದರೀ ಫಲವನ್ನು ಮಲಬಾರದಲ್ಲಿ ಪ್ರಸಿದ್ಧವಾದ ಹೋರಾಶಾಸ್ತ್ರ ಕೇರಳ'' ಇ. ಬಹುಮಾನ್ಯ ಗ್ರಂಥಗಳ ಪ್ರಮಾಣ್ಯತೆಯಿಂದ ಬರೆದು ಕಳಿಸುವೆ. ಟ. ಖ. ಬೇರೆ

ಮೆನೇಜರ, "ಜ್ಯೋತಿಷ ಶಾಸ್ತ್ರ-ಭುವನ," ಚೆಂಡಿಯೆ. ತಾ. ಕಾರವಾರ.

ನಮ್ಮ ಪ್ರೆಸ್ಸಿನಲ್ಲಿ

ಗೇಣ ಬಾಕಿ ದಾವೆಯ ಫಾರಂಗಳು ತಯಾರಿವೆ

ವರ್ತಕರ ಅನುಕೂಲಕ್ಕಾಗಿ [illegible] ವ್ಯವಹಾರಣೆಯ ಸಾಗಣೆ [illegible] ಫಾರಂಗಳು ಅಗ್ಗವಾಗಿ ಸಿಗುತ್ತವೆ

ಮೆನೇಜರ,

[illegible]

ಪ್ರಯಾಣಿಕರ ಅನುಕೂಲತೆ ಬಗೆ

ಡೇಲಿ ಮೋಟರ ಸರ್ವಿಸ.



ಕುಮಟೆಯಿಂದ— [illegible]

ಕುಮಟೆಯಿಂದ— [illegible]

ಕುಮಟೆಯಿಂದ— [illegible]

[illegible] ಪ್ರತಿ ದಿವಸ [illegible]

ಬಿ. ದಾಸ,

ಏಜಂಟ ಕುಮಟಾ

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧ ರಾಗದ ಕೈಪೆಟ್ಟಿಗೆ ಕಿ° ೩೨, ೪೦ ೬೦, ೭೫, ೧೦೦

೨ ಕಾಲು ಪೆಟ್ಟಿಗೆ ಕಿ° ೬೫ ೭೫, ೧೨೦, ೧೪೦

೩ ತಬಲೆ ಜೋಡಿ ಕಿ° ೧೬ ೧೮, ೨೦, ೨೫

೪ ಹಾರ್ಮೋನಿಯಮ ಗ್ಯಾಡ (ಮರಾಠಿ) ಕಿಂ ೧॥ ತಬಲೆ ಗ್ಯಾಡ ಕಿಂ. ೧೨ ಆ

ವಿಶೇಷ ಮಾಹಿತಿಗೆ ನಮ್ಮ ಮರಾಠಿ ಕ್ಯಾಟಲಾಗ ಪುಕ್ಕಟೆ ಕೊಡುವೆವು

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು

ಪತ್ತೆ – ಗೋಪಾಳ ಸಖಾರಾಮ ಮಾಕ ಕಂಪನಿ, ವಿಠ್ಠಲವಾಡಿ ಎದುರಿಗ, ೬೨ ಕಾಳಬಾದೇವಿ. ಮುಂಬಯಿ

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ



ಕಳೆದ ೬ ೭ ವರ್ಷಗಳಿಂದ ನಾವು ಶಿವಮೊಗ್ಗಾ–ತೀರ್ಥಹಳ್ಳಿ–ಆಗುಂಬೆ ಶಿವಮೊಗ್ಗಾ–ಸಾಗರ–ತಾಳಗುಪ್ಪೆ ಶಿವಮೊಗ್ಗಾ–ಹರಿಹರ–ದುಗ್ಗಾವತಿ, ಶಿವಮೊಗ್ಗಾ–ಕಳೂರಕಟ್ಟೆ, ಸಾಗರ–ಸೊರಬ–ಶಿರಾಳಕೊಪ್ಪ ಸಾಗರ ತೀರ್ಥಹಳ್ಳಿ ಸಾಗರ–ಕಳೂರಕಟ್ಟೆ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ [illegible] ನಡೆಸುತ್ತಿದ್ದೇವೆ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ, ಉಡುಪಿ, ಕುಂದಾಪುರ, ಮಂಗಳೂರ [illegible] ಈ ಕಡೆಗೆ "ಕಾರ್ಕಳ ಮೋಟರ ಸರ್ವಿಸಿನ" ವಿದ್ಯಮಾನವೂ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ [illegible] ಮೋಟರ ಸರ್ವಿಸಿನ ವಿದ್ಯಮಾನವೂ ಪ್ರಯಾಣಿಕರ ಎಲ್ಲ ಸೌಕರ್ಯಗ[illegible] ಮಾಡಿರುತ್ತದೆ

ಉತ್ತರ ಕನ್ನಡ ಜಿಲ್ಲೆಯ ಪ್ರಯಾಣಿಕರ ಜೋಗ (Gersoppa Falls), ಶಿವಮೊಗ್ಗಾ [illegible] ಹರಿಹರ ಮತ್ತು ಮೈಸೂರು [illegible] ಸ್ಥಳಗಳಿಗೆ ಪ್ರಯಾಣ ಬೆಳೆಸಲು ಅನುಕೂಲವಾಗಬೇಕೆಂದು [illegible] ಜೋಗ, ಸಿದ್ದಾಪುರ, ಶಿರಸಿ ಕುಮಟಾ ಈ ಲೈನಿನಲ್ಲಿ ಮೋಟರ ಸರ್ವಿಸ ಪ್ರಾ[illegible]ದ್ದೇವೆ

ಕಾಲಕ್ರಮಗಳು.

ಕುಮಟೆಯಿಂದ ಹೊರಡುವದು —	ಬೆಳಿಗ್ಗಿನ ೭ ಘಂಟೆಗೆ
ಶಿರಸಿಗೆ ಮುಟ್ಟುವದು	,, ೧೦ ,,
ಶಿರಸಿಯಿಂದ [illegible] ಶಿವಮೊಗ್ಗಾ ಕಡೆಗೆ—	ಮಧ್ಯಾನ್ಹ ೧ ,,
ಶಿವಮೊಗ್ಗಾಕ್ಕೆ ಮುಟ್ಟುವದು (ಸಿದ್ದಾಪುರ ಸಾಗರ ಮಾರ್ಗವಾಗಿ)—	ಸಾಯಂಕಾಲ ೬
ಶಿವಮೊಗ್ಗದಿಂದ ಶಿರಸಿ ಕಡೆಗೆ ಹೊರಡುವದು —	ಬೆಳಿಗ್ಗಿನ ೬
ಸಿದ್ದಾಪುರ ಸಾಗರ ಮಾರ್ಗವಾಗಿ ಶಿರಸಿಗೆ ಮುಟ್ಟುವದು—	.. ೧೧ ,,
ಶಿರಸಿಯಿಂದ ಕುಮಟೆ ಕಡೆಗೆ ಹೊರಡುವದು —	ಮಧ್ಯಾನ್ಹ ೩ ,,
ಕುಮಟೆಗೆ ಮುಟ್ಟುವದು —	ಸಾಯಂಕಾಲ ೫ ,,

N. B. — ಈ ಮೇಲಿನ ಲೈನುಗಳ ಮೇಲೆ [illegible] ಪ್ರತ್ಯೇಕ ಒಂದು ಸರ್ವಿ[illegible] ಸಾರ್ವಜನಿಕರೂ ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ

SHIMOGA, —11—1924 }

M. MANJAPPA.
PROPRIETOR

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕಿಟಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ ಮಧುವಿನ ಸೇವನದಿಂದ ವಾತ ಪಿತ್ತ [illegible] ಈ ತ್ರಿದೋಷಗಳ ವಿಕೃತದಿಂದಾದ ಬೇನೆಯು ಹೋಗುವದು [illegible] ವರ್ಷದ ವೃದ್ಧನ [illegible] ತರುಣನಂತೆ ಪ್ರವರ್ಧಮಾನವಾಗುವದು (ವಿಶೇಷ [illegible] ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ [illegible] ಷಂಡಕತ್ವವು ಇಲ್ಲದಂತಾಗುವದು ಮಲವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಒಂದಾಗ ವದು — ಬಾಲ್ಯ ಹಾಗೂ ಕಾವಿನಿಂದ ದೂಷಿತವಾದ ಕಾರಣ ನಿರ್ದೋಷವಾಗುವದು [illegible] ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು ಇದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವ ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವು ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು ಕೌಚ ಸುಖ ಆಗ ವದು ಮೈಯಲ್ಲಿ ಎಷ್ಟೇ ದಿವಸದ [illegible] ಇದ್ದರೂ ಒಂದು ವಾರದಲ್ಲಿ ನಾಶವಾಗುವದು ಈ ಔಷಧಕ್ಕೆ ಪಥ್ಯವಿಲ್ಲ ಸ್ತ್ರೀಸಂಭೋಗ ಬಿಡುವ ಕಾರಣವಿ[illegible] ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು ಹಳೇ ರೋಗವಿದ್ದರೆ [illegible] ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತ್ತು ೧॥ ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೪—೪—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸ ಬೇಕು ಅಂದರೆ ಟಪಾಲಖರ್ಚು ಹತ್ತಬೇಳುವದಿಲ್ಲ ಡಜನ ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು ಟಪಾಲಖರ್ಚು ಬೇರೆ ಬೀಳುವದು ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧—೪—೦ ೩ ಬಾಟ್ಲಿಗೆ ೩—೦—೦, ಡಜ[ನಕ್ಕೆ] ೧೩—೮—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸು ಪೋ° ನಿಪ್ಪಾಣಿ ಜಿ ಬೆಳಗಾ[ವಿ]

ವಿಮರ್ಶೆ.

ಕನ್ನಡಿಗ—ಕಳೆದ ಯುಗಾದಿಯಿಂದ ಬಾಗಲಕೋಟೆಯಲ್ಲಿ ಪ್ರಕಟಿಸಲ್ಪಡುವ ವಾರಪತ್ರಿಕೆ. ಕನ್ನಡ ನವಜೀವನದಿಂದ ಪುನರುಜ್ಜೀವನ ನವಜೀವನವನ್ನು ಕರ್ನಾಟಕದಲ್ಲಿ ಬೀರುತ್ತಿದ್ದ ಮಂಗಳವೇಢೆ ರಾಜೆ ರಾಯರ ಮುಕ್ಕಳಾದ ಶ್ರೀ ಶ್ರೀನಿವಾಸರಾಯರೇ 'ಕನ್ನಡಿಗ'ನ ಸಂಪಾದಕರು. ಕನ್ನಡಿಗನ ಭಾಷೆಯ ವಿಷಯ ಬರೆಯುವ ಅಗತ್ಯವಿಲ್ಲ. ಕನ್ನಡಿಗನು, ಎದ್ದರೆ ಕನ್ನಡ, ಕುಳಿತರೆ ಕನ್ನಡ, ನುಡಿದರೆ ಕನ್ನಡ, ಹೃದ್ಯವು ಕನ್ನಡ, ಉದ್ಯಮ ಕನ್ನಡಗಳನ್ನು ಕರ್ನಾಟಕದಲ್ಲಿ ಬೀರಿ ಕರ್ನಾಟಕದ ಉನ್ನತಿಗೈಯ್ಯಲು ಟೊಂಕಕಟ್ಟಿದವನು. ಧ್ಯೇಯವಾದರೋ 'ಯದ್ಯತ್ಕರ್ಮ [illegible] । ಯದ್ಯದ್ಭಕ್ತ್ಯಾ [illegible] ॥' ಆತ್ಮನಿಂದಾಗಿ [illegible] ಕರ್ನಾಟಕಸ್ಥರಿಗೆ 'ಕನ್ನಡಿಗ'ನು ಬೋಧಿಸುವನು. ಕನ್ನಡಿಗನ ೫ ಸಂಚಿಕೆಗಳು ನಮ್ಮ ಕೈಸೇರಿವೆ. ಕರ್ನಾಟಕದ ನಾಟ್ಯ, ನಮ್ಮ ನಾಡು ಮುಂತಾದ ಕರ್ನಾಟಕಕ್ಕೆ ಸಂಬಂಧಿಸಿದ ಲೇಖನಗಳ ಹೊರತು ಪುನರುಕ್ತ 'ನವಜೀವನ'ದೊಳಗಿಂದ ವಿಚಾರಣೀಯ ಲೇಖನಗಳು ಪ್ರಕಟವಾಗುತ್ತಿವೆ. 'ಬಾರಕೋಲಿ'ನಿಂದ ಅನೇಕರು ಎಚ್ಚರದಪ್ಪಿ ಬಿದ್ದ ಕರ್ನಾಟಕಸ್ಥರಿಗೆ ಜಾಗೃತ ಮಾಡಲು ಹವಣಿಸುತ್ತಿರುವರು. ಇದೊಂದು ವಿಶೇಷ. ಕನ್ನಡಿಗನ ವಾರ್ಷಿಕ ಚಂದಾ ೧ ರೂಪಾಯಿ ಮಾತ್ರ, ಅಂಚೆ ವೆಚ್ಚ ಹಿಡಿದರೆ ರೂ ೧ ೧೩ ೦ ಮಾತ್ರ. ದೇಶೋದ್ಧಾರಕ ಕೈರಾಟೆಯನ್ನು ತಿರುವಿ, ನೂಲು ತೆಗೆಯುವವರಿಗೆ ಅನುಕೂಲವಾಗಬೇಕೆಂದು ಶ್ರೀ ಶ್ರೀನಿವಾಸರಾಯರು 'ಕನ್ನಡಿಗ'ನ ಚಂದಾ ಕೈನೂಲಿನಲ್ಲಿ ಇಟ್ಟಿರುವರು. ಸ್ಥಳದವರು ೧೫ ನಂಬರಿನ ಕಡಿಮೆಯಿಲ್ಲದಂತೆ ೯ ಸಾವಿರ ಗಜ ನೂಲು ಕೊಡಬೇಕು, ಪರಸ್ಥಳದವರು ೧೦ ಸಾವಿರ ಗಜ ನೂಲು. ಕೈನೂಲಿನ ಚಂದಾ ಇಟ್ಟವನು ಕನ್ನಡಿಗನೊಬ್ಬನೇ.

ಲೋಕರಹಸ್ಯ—ಕೊಡಗಿನ ವೀರರಾಜೇಂದ್ರಪೇಟೆಯಲ್ಲಿ ಶ್ರೀ ಕೆ. [illegible]ಯವರು ಹೊರಡಿಸಿದ ಮಾಸಪತ್ರಿಕೆಯಿದು. ಸರ್ವಾಂಗಸುಂದರವಾಗಿ [illegible] ಮುದ್ರಣವು ಮುದ್ದಾಗಿದೆ. ವಿಷಯಗಳು ಲೋಕದೊಳಗಿನ ರಹಸ್ಯವನ್ನು ಸ್ಫುಟಪಡಿಸುವ ಮನೋರಂಜಕ ಕಾದಂಬರಿಗಳೂ ಬೋಧಪ್ರದ ಕಥೆಗಳೂ ಕಾಯಿದೆ ವಿಷಯಕ ಮಾಹಿತಿಯೂ ಗೃಹಕೃತ್ಯಕ್ಕೆ ಅವಶ್ಯಕವಾದ ಮದ್ದುಗಳೂ ಜ್ಯೋತಿಷ ವೇದಾಂತಗಳ ಮಾಹಿತಿಯೂ ಸಂಗ್ರಹವಾಗಿ, ಸಾಮಾನ್ಯ ಜನರಿಗೆ ಸಹ ತಿಳಿಯುವಂತೆ ನಿರೂಪಿಸಲ್ಪಟ್ಟವೆ. ಪ್ರಚಲಿತ ವಿಷಯಗಳ ಮೇಲೆ ಸಂಪಾದಕರ ಟಿಪ್ಪಣಿಗಳೂ ಇವೆ. 'ಲೋಕರಹಸ್ಯ'ವು ಮಾಸಪತ್ರಿಕೆ ಸಂಗ್ರಾಹ್ಯವಾಗಿದೆ, ಎಲ್ಲರಿಗೂ ಉಪಯುಕ್ತವಾದ ಮಾಹಿತಿಯು ಮಾಸದಿಂದ. ವಾರ್ಷಿಕ ಚಂದಾ ರೂ ೩-೮-೦ ಅಲ್ಪವೆಂದೇ ಎಣಿಸಬೇಕು.

ಜಯಕರ್ನಾಟಕ—ಶ್ರೀ ಆಲೂರ ವೆಂಕಟರಾಯರಿಂದ ಧಾರವಾಡದಲ್ಲಿ ಪ್ರಕಟವಾಗುತ್ತಿರುವ ಜಯಕರ್ನಾಟಕವು ಕನ್ನಡಿಗರ [illegible] ಜಯಕರ್ನಾಟಕದ [illegible] ಹಾಗು ಕ್ರೋಧನ ಸಂವತ್ಸರದ ಚೈತ್ರ ಮಾಸದ ಜೋಡು ಸಂಚಿಕೆಯು ಅಷ್ಟೇ ಮಾಹಿತಿಪೂರ್ಣವಿದೆ. 'ಉಪಾಧಿಯು ಒಂದು ಜಾಡ್ಯವೇ' ಎಂಬ ವೇದಾಂತವಿಷಯಕ ಲೇಖನವೂ, ಮಧುಗಿರಿಯ ವರ್ಣನೆಯೂ, ಕಾಳಿದಾಸನ ಆಧ್ಯಾತ್ಮಿಕ ವಿಚಾರಗಳೂ ಮನನೀಯವಿವೆ. ಶ್ರೀ ಗುರುರಾವ ಮಳ್ಳೇಕರರು ಶೈವಗ್ರಂಥಗಳ ಮೇಲಿನ ಸಂಶೋಧನ [illegible] ದರಿಂದ ಹೊರಗೆಳೆದಿರುವರು. ಕೊಪ್ಪಳದ [illegible] ಶ್ರೀ ರಾಘವೇಂದ್ರರಾಯರು ಸ್ವಾತಂತ್ರ್ಯದ ದಿವ್ಯ ಜ್ಯೋತಿಯನ್ನು ಬರೆದರೆ, ಪ್ರಸಿದ್ಧ ಶ್ರೀ ಶ್ಯಾಮಸುಂದರರು ಸಮಕಾಲ ಹಾಗು [illegible] ಅವುಗಳನ್ನು ಸರಿ ಹೋಲಿಸಿ, [illegible] ಕಾರಖಾನೆಯನ್ನು ದೊಡ್ಡ ಪ್ರಮಾಣದ ಮೇಲಿಂದ ತೆಗೆದರೆ ನಿರುದ್ಯೋಗವೊಂದು ನಿವಾರಣವಾಗುವದಲ್ಲದೆ, [illegible] ದಿಂದ ವೆಚ್ಚವಾಗುವ ನೂರಾರು ರೂಪಾಯಿಗಳು ಉಳಿಯಬಹುದೆಂದು ಪ್ರತಿಪಾದಿಸಿರುವರು. ವಾರ್ಷಿಕ ಚಂದಾ ರೂ ೫-೮-೦ ಮಾತ್ರ.

ಅಧ್ಯಾತ್ಮ ಪ್ರಕಾಶ—ಬೆಂಗಳೂರ [illegible] ಪೇಟೆಯಲ್ಲಿ ಶ್ರೀ ವೈ. ಸುಬ್ಬರಾಯರು ಪ್ರಕಟಿಸುತ್ತಿರುವ ಧರ್ಮವಿಷಯಕ ಪತ್ರಿಕೆ. ಅಧ್ಯಾತ್ಮವನ್ನು ಪ್ರಕಾಶಿಸಿ, ಸಾಮಾನ್ಯರಿಗೆ ಅರ್ಥಬೋಧವಾಗುವಂತೆ ಪ್ರಕಟಿಸಿ, ಸನಾತನ ಸೇವೆ ಮಾಡಲು. ಮುಂದಾದ ಮಾಸಪತ್ರಿಕೆಯಿದು ಈ ಪತ್ರಿಕೆಯ ಕ್ರೋಧನ ಸಂವತ್ಸರದ ಚೈತ್ರ, ವೈಶಾಖ ಸಂಚಿಕೆಗಳು ನಮ್ಮ ಕೈಸೇರಿವೆ. ಅಧ್ಯಾತ್ಮಜ್ಞಾನಕ್ಕೆ ಅನುಕೂಲವಾದ ವಾಙ್ಮಯವನ್ನೆಲ್ಲ "ಅಧ್ಯಾತ್ಮ ಪ್ರಕಾಶ"ವು ಪ್ರಕಟಿಸುವದು. ಸನಾತನ ಧರ್ಮಜ್ಞಾನವ

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. ರಿಜಿಸ್ಟರ್ಡ

ಮೃದುವಾದ ಗುಂಗುರು ಗುಂಗುರಾಗಿರುವ, ನೀಲಿಯಿಂದ ನಿಬಿಡವಾದ ಕೇಶಗಳನ್ನು ಯಾವ ನಾರಿಯು ತಾನೇ ಮೆಚ್ಚದಿರಬಲ್ಲಳು? ಅಂತಹ ಕೇಶಗಳನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವುದೋ.

ಕಾಮಿನಿಯಾ ಆಯಿಲ್ ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿರುವದೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಆವಶ್ಯಕ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ಕಡಿಮೆಯಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಅವಶ್ಯ ಕೂಡೆಯು ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಅಲ್ಲದೆ, ಅವು ಸೊಂಪಾಗಿ ಬೆಳೆದು ದಪ್ಪವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಕಳೆಯುವದು ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ ಈ 'ಕಾಮಿನಿಯಾ ಆಯಿಲ್' ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ವೆಂಬ್ಲೀ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಅಲ್ಲದೆ ಆವಿರಾರು ಗ್ರಾಹಕರ ಉತ್ತಮೋತ್ತಮವಾದ ಮಾನಪತ್ರಗಳೂ ದೊರೆತಿವೆ.

ಕ್ರಯ — ಸೀಸೆಗೆ ರೂಪಾಯಿ 1 0 0, ಸೀಸೆ 3ಕ್ಕೆ ರೂಪಾಯಿ 2-10-0,, ವಿ.ಪಿ. ಖರ್ಚ 0-14 0

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧ ಮಾಡುತ್ತ ಇದರಲ್ಲಿ ಬುರಿಕೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿ ಕೆ ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವದು. ಬೇರೆ ಯಾವ ಬಗೆಯ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋ-ದಿಲ್ ಬಹಾರದ ಗಂಧವು ಅವೆಲ್ಲವುಗಳನ್ನು ಮೀರಿ ಮನುಷ್ಯನನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0 0 ಅಂಚೆಯ ವೆಚ್ಚ ಬೇರೆ 0-4-(ಸಣ್ಣ ಸೀಸೆ 1 ಕ್ಕೆ 0-8-0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0, ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ O 12 O.

ddress.- **The Anglo Indian Drug & Chemical Co,**
16 Market, **BOMBAY.2.**

ಗಹನವಾದ ಸಂಸ್ಕೃತ ಭಾಷೆಯಲ್ಲಿದ್ದು, ಅವನ್ನು ತಿಳಿಕೊಳ್ಳುವದು ಸಾಮಾನ್ಯರಿಗೆ ದುಸ್ಸಾಧ್ಯವಿದೆ ವಾಗ, 'ಅಧ್ಯಾತ್ಮ ಪ್ರಕಾಶ'ವು ಸಾಮಾನ್ಯರಿಗೆ ತಿಳಿಯುವಂಥ ಕನ್ನಡದಲ್ಲಿ ಮಾಡುತ್ತಿದ್ದ ಈ ಕಾರ್ಯದಿಂದ, ಅಧ್ಯಾತ್ಮ ನಿರತರೆಲ್ಲರೂ ಬೋಧ ಪಡೆದು, ಧಾರ್ಮಿಕ ಬುದ್ಧಿಯನ್ನು ಬೆಳೆಸಿಕೊಳ್ಳುವದು ಕರ್ತವ್ಯವು. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂ ೩—೦—೦

ವಸಂತ—ಕುಂದಾಪುರದಲ್ಲಿ ಶ್ರೀ ಕೊ [illegible] ಮ ಕಾರಂತರು ಪ್ರಕಟಿಸುತ್ತಿರುವ ಮಾಸಪತ್ರಿಕೆಯಿದು. 'ವಸಂತ'ವು ನುಣುಪಾದ ಹೊಳಪುಳ್ಳ ಕಾಗದಗಳಿಂದಲೂ, ಲಕ್ಷ್ಮೀ ಆರ್ಟ ಚಿತ್ರಶಾಲೆಯ ನಯನಮನೋಹರ ಚಿತ್ರಗಳಿಂದಲೂ ವೃಂದಾವನದ ದೇವಾಲಯ ಮೊದಲಾದ ಫೋಟೋಗ್ರಾಫಗಳಿಂದಲೂ ಕಂಗೊಳಿಸುತ್ತಿರುವದು. "ಅಕ್ಕನ ಬಳಗ" ಎಂಬ ಕಥೆಯು ಬೋಧಪ್ರದವಿದೆ. ಕರ್ನಾಟಕ ಪಂಡಿತರಾದ ಶ್ರೀ ತಿರುಮಲಾರ್ಯರವರು ಕಾವ್ಯದೋಷಗಳನ್ನು ಹೊರಗೆಡಹುತ್ತಿರುವರು. [illegible] ಮುಂದೆ ಬಂದಂತೆ [illegible] ವೈಚಿತ್ರ್ಯ ವಿಶೇಷ ಮುಂತಾದ ಚಿಕ್ಕ ಲೇಖನಗಳು ಚಿತ್ತಾಕರ್ಷಕವಿವೆ. ವಾರ್ಷಿಕ ಚಂದಾ ಒಂದೇ ರೂ [illegible]

ಬಸವರಾಜ— ಹಾವೇರಿಯಲ್ಲಿ ಶ್ರೀ ಚನ್ನಬಸಪ್ಪ ಮುರಿಗೆಯಪ್ಪ ಹಾಲಪ್ಪನವರು ಹೊರಡಿಸುವ 'ಬಸವರಾಜ' ಮಾಸಪತ್ರಿಕೆಯು. ಬಸವ ಜಯಂತಿಯ ಸಂಚಿಕೆಯಿದು. ಈ ವರ್ಷದ ಪ್ರಥಮ ಸಂಚಿಕೆಯು ಬಸವೇಶ್ವರ [illegible] ಶ್ರೀ ಬಸವರಾಜನ [illegible] ಬಾಂಧವರಿಗೆ [illegible] ಅಸ್ಪೃಶ್ಯರ [illegible] ಸದ್ವಸ್ತುವಿನಲ್ಲಿ [illegible] ಪ್ರತಿಬಿಂಬಿತವಾಗಿದ್ದು [illegible] ಕನ್ನಡಿಗರ [illegible] ಕರ್ನಾಟಕದ [illegible] ಕನ್ನಡಿಗರು [illegible] ಕರ್ನಾಟಕದವರಿಗೆ [illegible] ಸಂಚಿಕೆಯು [illegible] ಗೃಹವು [illegible] ಶ್ರೀ [illegible] ಬಸವಣ್ಣನವರ [illegible] ರುವರು [illegible] ಸಮಾಜದ [illegible] ಹಾಲಪ್ಪನವರನ್ನು [illegible] ವಾರ್ಷಿಕ ವರ್ಗಣಿ [illegible] ರೂ ೩—೮—೦ ಮಾತ್ರ.

WANTED an influential gentleman to represent a well established Indian Life Insurance Company as a District agent for N. Kanara. Handsome Office allowance and Commission will be paid. Apply stating age, experience and minimum business guarantee to the *Local Secretaries, The India Equitable Insurance Co., Ltd., 79, Medow's Street, Fort, BOMBAY*

ಗಾಂಧಿಯವರ ವಿಜಯ!

(ರೆವರೆಂಡ ಹೋಮ್ಸರವರು
ಅಮೇರಿಕದಲ್ಲಿ ಕೊಟ್ಟ ಭಾಷಣದ ಸಾರಾಂಶ.)

ಕಳೆದ ವರ್ಷ ಫೆಬ್ರುವರಿ ತಾ ೪, ಬುಧವಾರ ದಿನ ಹಿಂದುಸ್ಥಾನದ ಮುಖಂಡರಾದ ಮಹಾತ್ಮಾ ಗಾಂಧಿಯವರನ್ನು ಜೈಲಿನಿಂದ ಬಿಟ್ಟರು. ಈ ವರ್ಷ ಅದೇ ಸಮಯವು ಬಂದಿರುವದರಿಂದ ಆ ಮಹಾತ್ಮನ ವಿಚಾರವಾಗಿ ಆಲೋಚಿಸಲು ತಕ್ಕ ಸಮಯವಿರುತ್ತದೆ. ೧೯೨೪ನೇ ಇಸ್ವಿಯ ಜನವರಿಯಲ್ಲಿ ಗಾಂಧೀಜೀಯವರಿಗೆ ಕಠಿಣ ಅಸ್ವಸ್ಥವೆಂದು ದೇಶದಲ್ಲೆಲ್ಲ ವರ್ತಮಾನವು ಹಬ್ಬಿತು. ಜನವರಿ ತಾ ೧೮ನೇ ದಿನವು ಪ್ರಾರ್ಥನಾ ದಿನವಾಗಿ ಆಚರಿಸಲ್ಪಟ್ಟಿತು. ಫೆಬ್ರುವರಿ ೪ನೇ ದಿನ ಬ್ರಿಟೀಶ ಸರಕಾರದವರು ಗಾಂಧೀಜೀಯವರನ್ನು ಜೈಲಿನಿಂದ ಬಿಟ್ಟರು. ಅಸ್ವಸ್ಥರಿದ್ದರೂ ಗಾಂಧೀಜೀಯವರು ಕೂಡಲೇ ಜನಾಂಗದ ಮುಖಂಡತ್ವವನ್ನು ವಹಿಸಿಕೊಂಡರು. ಗಾಂಧೀಜೀಯವರು ಸ್ವಲ್ಪ ಸಮಯದಲ್ಲಿಯೇ ಕಾಂಗ್ರೆಸ್ಸಿನ ಅಧ್ಯಕ್ಷಸ್ಥಾನಕ್ಕೆ ಆರಿಸಲ್ಪಟ್ಟರು.

ನಾನು ಈ ಸಂದರ್ಭದಲ್ಲಿ ಗಾಂಧೀಜೀಯವರ ವಿಷಯವಾಗಿ ವರ್ಣಿಸುವದಕ್ಕಿಂತ ಹಿಂದುಸ್ಥಾನದ ಈಗಿನ ಪರಿಸ್ಥಿತಿಯನ್ನು ವರ್ಣಿಸಲಿಚ್ಛಿಸಿದ್ದೇನೆ. ಅಹಿಂಸೆಯ ಕುರಿತು ಅದರಿಂದ ಹೊರಡಬಹುದಾದ ವಿಚಾರಗಳಿಗೋಸ್ಕರ ಇದರಲ್ಲಿ ಕೈಹಾಕುತ್ತೇನೆ. ಗಾಂಧೀಜೀಯವರ ಚಳವಳದ ಜಯಾಪಜಯಗಳ ಮೇಲೆ ಹಿಂದುಸ್ಥಾನದ ಮಾತ್ರವಲ್ಲ ಜಗತ್ತಿನ ಭವಿಷ್ಯವು ಹೊಂದಿಕೊಂಡಿದೆ. ಇತ್ತಲಾಗೆ ಬರುತ್ತಿರುವ ಅಪಜಯದ ವರ್ತಮಾನಗಳ ದೆಸೆಯಿಂದ ಈ ಪ್ರಶ್ನೆಯನ್ನು ವಿಚಾರಿಸುವದು ಮುಖ್ಯವಾಯಿತು. ಗಾಂಧಿಯವರ ಧೋರಣವು ಒಂದು ಮುಖ್ಯ ಸಭೆಯಲ್ಲಿ ಒಂದೇ ನಾಲ್ಕು ವೋಟುಗಳಿಂದ ಗೆದ್ದಿತೆಂಬ ವರ್ತಮಾನವನ್ನು ನಿಮ್ಮಲ್ಲಿ ಕೆಲವರು ಕೇಳಿದಿರಿ. ಗಾಂಧಿಯವರ ೨೧ ದಿವಸಗಳ ಉಪವಾಸದ ವೃತ್ತಾಂತವನ್ನು ನೀವೆಲ್ಲರೂ ಓದಿರುವಿರಿ. ಕೊನೆಗೆ ಗಾಂಧಿಯವರು ತಮ್ಮ ಕಾರ್ಯಕ್ರಮವನ್ನು ನಿಲ್ಲಿಸಿಬಿಟ್ಟು, ತಮ್ಮ ವಿರೋಧಿಗಳಿಗೆ ಶರಣುಹೋದರೆಂಬ ವರ್ತಮಾನವು ಬಂದಿರುವದು. ಮಹಾತ್ಮರಿಗೆ ಅಪಜಯವಾಗಲಿಲ್ಲವೇ ಎಂಬ ಪ್ರಶ್ನೆಯು ಇದರಿಂದಲೇ ಮುಂದೆ ಬಂದಿರುವದು. ಇಂಥ ಮುಖಂಡನ ಕೈಕೆಳಗೆ ಅಹಿಂಸೆಗೆ ಜಯಪ್ರಾಪ್ತಿ ಇಲ್ಲದಿದ್ದರೆ ಮತ್ತೆ ಅಹಿಂಸೆಯು ಜಯಗಳಿಸುವದು ಸಾಧ್ಯವೇ ಎಂಬ ಪ್ರಶ್ನೆಯು ಹುಟ್ಟುವದು.

ಹಿಂದುಸ್ಥಾನದ ಚಳವಳವು ಐದು ವರ್ಷಗಳ ಕೆಳಗೆ ಕಲಕತ್ತಾ ಕಾಂಗ್ರೆಸದಲ್ಲಿ ಪ್ರಾರಂಭವಾಯಿತು. ಸರಕಾರದೊಡನೆ ಅಸಹಕಾರವನ್ನು ಬೆಳೆಸಿ ಒಂದೇ ಒಂದು ಬಿಂದು ರಕ್ತವನ್ನಾದರೂ ಚೆಲ್ಲದೆ ಸ್ವರಾಜ್ಯವನ್ನು ಸಾಧಿಸುವ ಕಾರ್ಯಕ್ರಮವು ಜನಾಂಗದ ಮುಂದಿಡಲ್ಪಟ್ಟಿತು. ಅನೇಕರಿಗೆ ಈ ಕಾರ್ಯಕ್ರಮದಲ್ಲಿ ನಂಬಿಗೆಯು ಬರಲಿಲ್ಲ. ಅನ್ನಿಬಿಸೆಂಟರ ಮುಖಂಡತ್ವದಲ್ಲಿ ಅನೇಕರು ಕಾಂಗ್ರೆಸ್ಸನ್ನು ಬಿಟ್ಟುಹೋದರು. ಇನ್ನು ಕೆಲವರು ಸಿ. ಆರ್. ದಾಸರ ಮುಖಂಡತ್ವದಲ್ಲಿದ್ದವರು ಬಹುಮತದ ನಿರ್ಣಯಕ್ಕೆ ಒಪ್ಪಿ ಕಾಂಗ್ರೆಸದ ಒಳಗೆ ನಿಂತರು. ಮೊದಲು ಜನರು ತಮ್ಮೊಳಗಿನ ಭೇದಗಳನ್ನೆಲ್ಲ ಮರೆತು ಚಳವಳವು [illegible] ಉತ್ಸಾಹದಿಂದ ನಡೆಯಿತು. ೧೯೨೨ನೇ ಮಾರ್ಚ ೧೦ನೇ ದಿನ ಗಾಂಧೀಜೀಯವರನ್ನು ಜೈಲಿನಲ್ಲಿಟ್ಟರು. ಕೊನೆಗೆ ಎರಡು ವರ್ಷದ ಬಳಿಕ ಅಸ್ವಸ್ಥದ ದೆಸೆಯಿಂದ ಅವರ ಬಿಡುಗಡೆಯಾಯಿತು. ಗಾಂಧೀಜೀಯವರು ಪುನಃ ದೇಶಸ್ಥಿತಿಯನ್ನು ನೋಡುವಾಗ ಸ್ಥಿತಿಯು ಬದಲಾಗಿತ್ತು. ಮೂರು ಮುಖ್ಯ ಗಂಡಾಂತರಗಳು ತೋರಿದವು.

ಮೊದಲನೆಯದಾಗಿ ಬಹಿಷ್ಕಾರಗಳಲ್ಲಿ ಜನರ ವಿಶ್ವಾಸವು ಸಡಿಲಾಗಿತ್ತು. ವಕೀಲರೂ ವಿದ್ಯಾರ್ಥಿಗಳೂ ಅನೇಕರು ಹಿಂದೆ ಹೋಗಿದ್ದರು. ಇವೆಲ್ಲಕ್ಕಿಂತ ಮುಖ್ಯವಾಗಿ ಕೌನ್ಸಿಲು ಬಹಿಷ್ಕಾರವನ್ನು ಸ್ವರಾಜ್ಯಪಕ್ಷದವರು ಪ್ರಯತ್ನಪೂರ್ವಕ ಕಾಂಗ್ರೆಸಿನಿಂದ ತೆಗೆದುಹಾಕಿಸಿದ್ದರು. ಇಂಥ ಸಂದರ್ಭದಲ್ಲಿ ಗಾಂಧೀಜೀಯವರು ತಮ್ಮ ಮೊದಲಿನ ಕಾರ್ಯಕ್ರಮವನ್ನು ಬಂದು ಆಲ್ ಇಂಡಿಯಾ ಕಮಿಟಿಯ ಸಭೆಯ ಮುಂದೆ ಇರಿಸಿದ್ದಲ್ಲಿ ೧೪೮ ವೋಟುಗಳು ಅನುಕೂಲವಾಗಿಯೂ ೧೪೦ ವೋಟುಗಳು ಪ್ರತಿಕೂಲವಾಗಿಯೂ ಅದು ಮಂಜೂರಾಯಿತು. ಅದು ದಾಸರ ವಿಜಯವೆಂದೇ ಗಾಂಧಿಯವರು ಹೇಳಿದರು. ಮತ್ತು ಕೌನ್ಸಿಲು ಬಹಿಷ್ಕಾರವನ್ನು ಇನ್ನು ಸಾರುವದಿಲ್ಲವೆಂದರು.

ಚಳವಳಕ್ಕೆ ಬಂದ ಎರಡನೇ ಗಂಡಾಂತರವು ಹಿಂದೂ-ಮುಸಲ್ಮಾನರೊಳಗಿನ ಕಲಹ. ಇದು ಕೋಹಾಟಿನಲ್ಲಿ ಪರಮಾವಧಿಯನ್ನೈದಿತು. ಗಾಂಧಿಯವರು ೨೧ ದಿನದ ಕಠಿಣ ಉಪವಾಸವನ್ನು ಮಾಡಿದರು.

ಮೂರನೆಯ ಗಂಡಾಂತರವು ಹಿಂಸೆಯನ್ನು ಸಾರುವ ಉತ್ಕ್ರಾಂತಿವಾದಿಗಳ ಪ್ರಗತಿ. ಇದರ ಪರಿಣಾಮವಾಗಿ ಬಂಗಾಲ ಆರ್ಡಿನಾನ್ಸು ಬಂದು ಅದು ಸ್ವರಾಜ್ಯ ಪಕ್ಷದವರ ಮೇಲೆ ಬಂದಿತು. ಎಪ್ಪತ್ತು ಮಂದಿ ಆ ಪಕ್ಷದವರನ್ನು ತನಿಖೆಯಿಲ್ಲದೆ ಜೈಲಿಗೆ ಹಾಕಿದರು. ಗಾಂಧೀಜೀಯವರು ಕೂಡಲೇ ತಮ್ಮೊಳಗಿನ ಭೇದವನ್ನು ಅಳಿಸಲು, ಒಂದು ಬಹಿಷ್ಕಾರವನ್ನು ಮಾತ್ರವಲ್ಲ, ಎಲ್ಲ ಬಹಿಷ್ಕಾರಗಳನ್ನು ಬಿಟ್ಟುಕೊಟ್ಟು ಸ್ವರಾಜ್ಯ ಪಕ್ಷದವರೊಡನೆ ಒಪ್ಪಂದಮಾಡಿಕೊಂಡರು.

ಈ ಮೂರು ಗಂಡಾಂತರಗಳ ಮೇಲೆ ಸ್ವರಾಜ್ಯ ಪಕ್ಷದವರಿಗಾಗಿ ತನ್ನ ಕಾರ್ಯಕ್ರಮವನ್ನು ಬಿಟ್ಟುಕೊಟ್ಟದ್ದೇ ಗಾಂಧೀಜೀಯವರ ಅಪಜಯವೆಂದು ಸಾರುತ್ತಿರುವರು. ಈ ಒಪ್ಪಂದದ ಶರ್ತಗಳನ್ನು ಮೇಲಿಂದ ಮೇಲೆ ನೋಡಿದರೂ ಗಾಂಧೀಜೀಯವರ ಕಾರ್ಯಕ್ರಮದ ಮುಖ್ಯ ತತ್ವಗಳು ಇನ್ನೂ ಹಾಗೆಯೇ ಉಳಿದಿರುತ್ತವೆಯೆಂಬುದು ಸ್ಪಷ್ಟವಾಗುತ್ತಿದೆ. ಎಲ್ಲಕ್ಕೂ ಮುಖ್ಯ ತತ್ವವು ಅಹಿಂಸೆ. ಅದನ್ನು ಬದಲಾಯಿಸುವದಿಲ್ಲ. ಎರಡನೇಯದಾಗಿ ರಾಟಿ. ಅದನ್ನು ಬಿಟ್ಟುಕೊಡುವ ಬದಲು ಅದು ಇನ್ನಷ್ಟು ಗಟ್ಟಿಯಾಗಿ ಸ್ಥಾಪಿಸಲ್ಪಟ್ಟಿರುವುದು. ಬಿಟ್ಟುಕೊಟ್ಟದೆಂದರೆ ಬಹಿಷ್ಕಾರಗಳನ್ನು ಮಾತ್ರ. ಅನೇಕರಿಗೆ ಅದರಲ್ಲಿ ವಿಶ್ವಾಸವು ತಪ್ಪಿರುವುದು. ಅದರ ಬದಲು ಕೌನ್ಸಿಲುಗಳಲ್ಲಿ ಜಗಳಾಡಲು ಇಚ್ಛಿಸುತ್ತಿರುವವರು ತಮ್ಮ ದಾರಿಯನ್ನು ಸಾಧಿಸಲು ತನಗೆ ಅಧಿಕಾರವಿದೆಯಂತೆ, ಅವರಿಗೂ ಅಧಿಕಾರವಿರಬೇಕೆಂದು ಗಾಂಧಿಯವರು ಅವರಿಗೆ ಸ್ವಾತಂತ್ರ್ಯವನ್ನು ಕೊಟ್ಟಿರುವರು. ಹೀಗೆ ಗಾಂಧಿಯವರ ಕಾರ್ಯಕ್ರಮವು ಮುಖ್ಯ ಅಂಶಗಳಲ್ಲಿ ಹಾಗೆಯೇ ಇರುತ್ತ ಗಾಂಧಿಯವರಿಗೆ ಅಪಜಯವಾಯಿತೆಂಬ ಭಾವನೆ ಕಾರಣಗಳನ್ನು ಬೇರೆಡೆ ಹುಡುಕಬೇಕು.

ಗಾಂಧೀಜೀಯವರು ಸ್ವರಾಜ್ಯವನ್ನು ಸ್ಥಾಪಿಸಲು ಹೊರಟವರು. ಐದು ವರ್ಷಗಳಾದರೂ ಅದು ಇನ್ನು ಬರಲಿಲ್ಲ. ಇಂಗ್ಲಂಡು ಹಿಂದೆ ಇದ್ದಷ್ಟೆ ಬಲಶಾಲಿಯಾಗಿದೆ. ಗಾಂಧಿಯವರು ಕೆಲವು ಶರ್ತಗಳನ್ನಿಟ್ಟು ಹೀಗೆ ನಡೆದರೆ ಸ್ವರಾಜ್ಯವು ಬರುವದೆಂದು ಹೇಳಿದರು. ಅಸ್ಪೃಶ್ಯತಾನಿವಾರಣೆ, ಹಿಂದೂ-ಮುಸಲ್ಮಾನರ ಐಕ್ಯ ಇವುಗಳ ವಿನಾ ಸ್ವರಾಜ್ಯವಿಲ್ಲವೆಂದು ಸಾರಿ ಹೇಳಿದ್ದರು. ಹಿಂದುಸ್ಥಾನದಲ್ಲಿ ಐಕ್ಯವು ಸಾಧಿಸಲ್ಪಟ್ಟಿಲ್ಲವೆಂಬದೇ ಈ ಅಪಜಯದ ಮುಖ್ಯ ಕಾರಣ. ಅಸ್ಪೃಶ್ಯತೆಯು ಹೋಗಿಲ್ಲ. ಹಿಂದೂ-ಮುಸಲ್ಮಾನರು ಜಗಳಾಡುವರು. ಐಕ್ಯದಿಂದ ಸಾಧಿಸಬೇಕಾದ ಬಹಿಷ್ಕಾರಗಳೇ ಭೇದಕ್ಕೆ ಕಾರಣಗಳಾದವು. ಆದದರಿಂದಲೇ ಗಾಂಧಿಯವರು ಮುಂದೆ ಹೋಗದೆ ನಿಲ್ಲಬೇಕಾಯಿತು. ವಿಧಾಯಕ ಕಾರ್ಯವಿಲ್ಲದೆ ಕಾಯಿದೆ ಭಂಗವು ಸಾಧ್ಯವಿಲ್ಲ. ಆದ್ದರಿಂದ ವಿಧಾಯಕ ಕಾರ್ಯಕ್ರಮವೇ ಸದ್ಯದ ಕರ್ತವ್ಯವೆಂದರು. ಗಾಂಧಿಯವರು ಮುಂದೆ ಹೋಗಲು ಸಿದ್ಧಪಡಿಸುವದಕ್ಕಾಗಿಯೇ ಸದ್ಯಕ್ಕೆ ನಿಲ್ಲಬೇಕಾಯಿತು.

ಸದ್ಯದ ಸ್ಥಿತಿಯನ್ನು ಅಪಜಯವೆಂದೇ ಹೇಳಬೇಕು. ಆದರೆ ಯಾರ ಅಪಜಯ? ಗಾಂಧಿಯವರ ಅಪಜಯವೇ? ಅವರ ಕಾರ್ಯಕ್ರಮದ ಅಪಜಯವೇ? ಅಲ್ಲ. ಹಿಂದುಸ್ಥಾನದ ಜನರ ಅಪಜಯ. ದೇವರು ಅವರಿಗೆ ಕೊಟ್ಟ ಮುಖಂಡನನ್ನು ಅನುಸರಿಸಲಿಕ್ಕೆ ಅವರಿಂದ ಸಾಧ್ಯವಾಗಿಲ್ಲ. ಅವರು ಗಾಂಧಿಯವರನ್ನು ಹೊಗಳಿದರು; ಪೂಜಿಸಿದರು, ಆದರೆ ಅವರ ಮಾತಿನಂತೆ ಮಾತ್ರ ನಡೆಯಲಿಲ್ಲ. ಅಪಜಯವಾದರೆ ಅದು ಗಾಂಧಿಯವರಿಗಲ್ಲ, ಅದು ಜನರ ಪಾಲಿಗೆ ಬಂದುದು.

ಗಾಂಧಿಯವರಿಗೆ ಮೂರು ದಾರಿಗಳಿದ್ದವು. ಮುಖಂಡತ್ವವನ್ನು ಬಿಟ್ಟು ಹೋಗಬಹುದಿತ್ತು. ಅಥವಾ ಸಭೆಯಲ್ಲಿ ತನಗೆ ಬಹುಮತವಿದ್ದುದರಿಂದ ತನ್ನ ಕಾರ್ಯಕ್ರಮವನ್ನೇ ಒತ್ತಾಯದಿಂದ ಇರಿಸಬಹುದಿತ್ತು. ಅಥವಾ ತನ್ನ ವಿರೋಧಪಕ್ಷವನ್ನು ಅಹಿಂಸೆಯ ಮಾರ್ಗದಿಂದ ಜಯಿಸಲೆತ್ನಿಸುವುದು. ಈ ಮೂರನೆಯ ದಾರಿಯನ್ನು ಕೈಕೊಂಡೇ ಗಾಂಧಿಯವರು ವಿಜಯಿಗಳಾಗಿರುವರು. ಅದರಲ್ಲಿಯೇ ಅವರು ತನ್ನ ಮುಖಂಡತ್ವಕ್ಕೆ ಯೋಗ್ಯತೆಯನ್ನು ಸ್ಪಷ್ಟಮಾಡಿರುವರು. ತಮ್ಮಿಂದ ಹಿಂದುಸ್ಥಾನದ ಜನರು ಅಪಯಶಸ್ಸನ್ನು ಹೊಂದಿರುವರು. ಆದರೆ ಅವರ ಮುಖಂಡರಿಗೆ ಬಾಹ್ಯ ದೃಷ್ಟಿಯಿಂದಲೂ ಆಂತರ್ಯ ದೃಷ್ಟಿಯಿಂದಲೂ ವಿಜಯಪ್ರಾಪ್ತಿಯಾಗಿರುವುದು

ಬಾಹ್ಯ ದೃಷ್ಟಿಯಿಂದ ಅವರು ಪುನಃ ರಾಷ್ಟ್ರದಲ್ಲಿ ಐಕ್ಯವನ್ನು ಸಾಧಿಸಿರುವರು. ತತ್ವವನ್ನಲ್ಲ, ಅಭಿಮಾನವನ್ನು ಬಿಟ್ಟುಕೊಟ್ಟು, ಅಧಿಕಾರಕ್ಕಿಂತ ನಮ್ರತೆಯ ದಾರಿಯಿಂದ, ದ್ವೇಷವನ್ನು ಬಿಟ್ಟು ಪ್ರೇಮದ ಸಹಾಯದಿಂದ ಅವರು ರಾಷ್ಟ್ರವನ್ನು ಒಟ್ಟುಗೂಡಿಸಿರುವರು. ಜಗತ್ತನ್ನು ಜಯಿಸುವದಕ್ಕಿಂತ ಮನಸ್ಸನ್ನು ಜಯಿಸುವುದು ಶ್ರೇಷ್ಠವೆಂದಾದರೆ ಈ ಆಂತರ್ಯದ ದೃಷ್ಟಿಯಿಂದಲೂ ಗಾಂಧಿಯವರಿಗೆ ಪೂರ್ಣ ವಿಜಯವಾಗಿದೆ.

ಇಂಥ ವಿಜಯದಿಂದ ರಾಜಕಾರ್ಯದಲ್ಲಿನವರಲ್ಲಿ ಗಾಂಧಿಯವರು ಮೊದಲಿನ ತರಗತಿಯವರಾಗಿರುವರು, ಧಾರ್ಮಿಕ ಪುರುಷರಲ್ಲಿ ಮುಂದಾಳಾಗಿರುವರು, ಕ್ರೈಸ್ತನು ಬೋಧಿಸಿದ ತತ್ವಗಳನ್ನು ಗಾಂಧಿಯವರು ಯಥಾರ್ಥವನ್ನಾಗಿ ಮಾಡಿರುವರು, ಪ್ರೇಮಕ್ಕೆ ಅಪಜಯವಿಲ್ಲವೆಂಬ ಸೇಂಟ ಪಾಲರ ವಚನವನ್ನು ರುಜುಮಾಡಿ ಕೊಟ್ಟಿರುವರು. ನಮ್ಮ ಶಸ್ತ್ರಾಸ್ತ್ರಗಳನ್ನು ಬದಿಗಿರಿಸಿ, ನಮ್ಮ ಕೈಗಳಲ್ಲಿಯ ರಕ್ತವನ್ನು ತೊಳೆದು ಪರಧರ್ಮದವರಾದ ಇವರು ತೋರಿಸಿಕೊಡುತ್ತಿರುವ ಈ ಸತ್ಯವನ್ನು ನಾವು ಅನುಸರಿಸುವ ದಿನವು ಯಾವಾಗ ಬರುವುದು

— ಸತ್ಯಾಗ್ರಹೀ.

— ಪ. ಹಾಕ್ಮಂಗೋಟ್ಸರ ಪ್ರಶ್ನೆ.— 'ನಿಮ್ಮ ಜೀವನಕ್ಕೆ, ಪ್ರಯಾಣಕ್ಕೆ ನೀವು ರಾಷ್ಟ್ರೀಯ ಸಭೆಯ ನಿಧಿಯನ್ನು ಉಪಯೋಗಿಸುತ್ತೀರೋ ಹೇಗೆ? ಇಲ್ಲದಿದ್ದರೆ, ನಿಮ್ಮ ಚರಿತಾರ್ಥ ಹೇಗೆ ಸಾಗಿಸುತ್ತೀರಿ?" ಮಹಾತ್ಮರ ಉತ್ತರವೇನಂದರೆ — ನನಗೇನೂ ಆಸ್ತಿ ಇಲ್ಲ. ನನ್ನ ಖರ್ಚನ್ನೆಲ್ಲ ಗೆಳೆಯರು ಸಾಗಿಸುತ್ತಾರೆ ನನಗೆ ನಿಮಂತ್ರಿಸುವವರು ಪ್ರಯಾಣ ಖರ್ಚು ಕೊಡುತ್ತಾರೆ ನನಗೆ ಅರಿವೆ-ಅಂಚಡಿಯ ಹೊರೆಗಳನ್ನರ್ಪಿಸುತ್ತಾರೆ. ಇದರಿಂದ ನನಗೆ ಆಸ್ತಿ ಇಲ್ಲದಿದ್ದಾಗ್ಯೂ, ಏನೂ ಯಾವದಕ್ಕೂ ಕಡಿಮೆಯಿಲ್ಲ. ಈ ಪ್ರಕಾರಗಳಿಂದ ಶ್ರೀ ದೇವರ ಮೇಲಿನ ನನ್ನ ವಿಶ್ವಾಸವು ಮಿಗಿಲಾಗಿದೆ. ಯಾಕೆಂದರೆ ಅವನೇ ನನ್ನ ರಕ್ಷಣೆ ಮಾಡುತ್ತಿರುವನು.

— ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಸಾಧಾರಣ ಸಭೆಯು ಇದೇ ತಾರೀಖು ೧೨-೧೩ನೇಗೆ ಬೆಳಗಾವಿಯ ಜಿಲ್ಲಾ ಕಾಂಗ್ರೆಸ ಕಮಿಟಿಯ ಕಚೇರಿಯಲ್ಲಿ ಸೇರುವದಿದೆ. ಕರ್ನಾಟಕ ರಾಷ್ಟ್ರೀಯ ಸಭೆಯ ಸ್ವಾಗತ ಮಂಡಳದ ಸಭೆಯೂ ಅದೇದಿನ ಅದೇ ಸ್ಥಳದಲ್ಲಿ ಸೇರುವದಿದೆ.

ವಿವಿಧ ಸಂಗ್ರಹ.

ಹಿಂದುಸ್ಥಾನವು ಸ್ವರಾಜ್ಯಕ್ಕೆ ಅಪಾತ್ರವೆಂದು ಸಿದ್ಧಮಾಡಲಿಕ್ಕೆಂದು ನಮ್ಮ ಹಿತಶತ್ರುಗಳು ನಮ್ಮ ಸಮಾಜದೊಳಗಿನ ಸಣ್ಣ ದೊಡ್ಡ ದೋಷಗಳನ್ನು ಪ್ರಪಂಚದೆದುರಿನಲ್ಲಿ ಮುಂದೊತ್ತುವದುಂಟು. ನಮ್ಮ ಸಮಾಜದಲ್ಲಿ ಅಸ್ಪೃಶ್ಯತೆಯಂಥ ಮಹಾ ದೋಷವುಂಟು, ಅನೇಕ ಜಾತಿಭೇದಗಳುಂಟು; ಜನತೆಯಲ್ಲಿ ಎಷ್ಟೋ ಹಳೇ ಮೂಢ ಭಾವನೆಗಳು ನೆಲಗೊಂಡಿರುವವು, ಧಾರ್ಮಿಕ ವಿಷಯಗಳಲ್ಲಿ ಅಸಹಿಷ್ಣುತೆಯೂ, ಹಚ್ಚಿನ [illegible] ತುಂಬಿ ತುಳುಕುತ್ತಿರುವದು. ಇಂಥ ದೋಷಗಳು ಅಳಿದುಹೋಗಿ ಪವಿತ್ರ ಪರಿಶುದ್ಧ ಮತ್ತು ಸದ್ಗುಣ ಸಂಪನ್ನವಾಗದ ಜನರ ಸ್ವರಾಜ್ಯದ ಆಶೆಯು ಸಿದ್ಧವಾದರೂ, ಸ್ವರಾಜ್ಯ ದೊರೆತರೂ ಅದು ಸ್ಥಿರವಾಗಲಾರದೆಂದು ಪ್ರತಿಪಾದಿಸುವದುಂಟು. ದೇಶದ ದುರ್ದೈವದಿಂದ ನಮ್ಮೊಳಗಿನ ಕೆಲ ವಿದ್ವಾಂಸರೆನ್ನಿಸಿಕೊಳ್ಳುವ ಸಾಮಾಜಿಕ ಸುಧಾರಕರಲ್ಲಿ ಇಂಥ ಯುಕ್ತಿವಾದಗಳಿಗೆ ಒಲಿದಿದ್ದು ಆಶ್ಚರ್ಯಜನಕ [illegible]. ಇಂಥ ಪ್ರಸಕ್ತಿಯಲ್ಲಿ ಸ್ವರಾಜ್ಯ ಸಂಪಾದಿಸಿ ತನ್ನನ್ನು ಸ್ವಪ್ರತಿಷ್ಠೆಯ ಸ್ವತಂತ್ರ ರಾಷ್ಟ್ರಗಳು ಮೇಲೆ ಹೇಳಿದ ದೋಷಗಳಿಂದ ಎಷ್ಟು ಮಟ್ಟಿಗೆ ಮುಕ್ತವಾಗಿವೆಯೆಂಬುದು ವಿಚಾರಾರ್ಹವಾದ ಸಂಗತಿಯು. ಉದಾಹರಣಾರ್ಥವಾಗಿ ಸ್ವಾತಂತ್ರ್ಯಪ್ರಿಯರಾಗಿ ಪಕ್ಕಾ ಲೋಕಸತ್ತಾತ್ಮಕ ಸಂಪೂರ್ಣ ಸ್ವರಾಜ್ಯವನ್ನನುಭವಿಸುವ ಅಮೇರಿಕೆಯೊಳಗಿನ ಆಚಾರ-ವಿಚಾರಗಳನ್ನೇ ನೋಡಿರಿ! ಈ ಕೆಳಗೆ ಕೊಟ್ಟ ಎರಡು ಸಂಗತಿಗಳು ಮನೋರಂಜಕವಿದ್ದಷ್ಟು ಬೋಧಪ್ರದವಿವೆ.

* *

ಬ್ಯಾಬಲಿನೊಳಗಿನ ಬದನೆಕಾಯಿ!

ಆಫ್ರಿಕದೊಳಗಿನ ಸಿದ್ದಿ ಜನರೆಂದರೆ ಕಲ್ಲಿದ್ದಲಿಗಿಂತಲೂ ಕಪ್ಪು ಜನರು. ಅವರೆ ಅಮೇರಿಕೆಗೆ ಹೋಗಿ ಅಲ್ಲಿಯ ೨೦೦-೩೦೦ ವರ್ಷಗಳ ವಾಸ್ತವ್ಯದಿಂದ ಎಷ್ಟೋ ಸಾವಿರ ಸಿದ್ದಿ ಜನರ ಮೈಬಣ್ಣವು ಅಚ್ಚ ಬಿಳಿದಾಗಿ ಹೋಗಿದೆ. ಹೀಗಾಗಿ ಈಗ ಸಿದ್ದಿ ಹಾಗು ಬಿಳಿ ಜನರೊಳಗಿನ ಅಂತರವು ಗುರುತು ತೆಗೆಯುವದು ಸ್ವಲ್ಪ ಕಠಿಣವಾಗಿದೆ. ಆದರೂ, ವರ್ಣದ್ವೇಷವು ಅವರಿಗೆ ಅಂಟಿಕೊಂಡೇ ಇದೆ. ಕರಿಯರ ಅಸ್ಪೃಶ್ಯತೆಯೂ ಇನ್ನೂ ಮಾಯವಾಗಲಿಲ್ಲ! ಈ ಗೊಂದಲದಲ್ಲಿ ಎಂಥ ಮನೋರಂಜಕ ನೋಟವಾಗುತ್ತದೆ ನೋಡಿರಿ! ಒಂದಾನೊಂದು ದಿನ ಒಬ್ಬ ಗೌರ ಕಾಯದ ಸಿದ್ದಿಯು ದಕ್ಷಿಣ ಅಮೇರಿಕೆಯ ಒಂದು ಸಂಸ್ಥಾನದಲ್ಲಿ ಪ್ರವಾಸ ಮಾಡುತ್ತಿರುವಾಗ ಅವನಿಗೆ ಒಂದು ಅಂದವಾದ ಕ್ರೈಸ್ತರ ಇಗರ್ಜೆಯು ಕಣ್ಣಿಗೆ ಬಿತ್ತು. ಅಂದು ರವಿವಾರವಿತ್ತು. ಒಳಮಗ್ಗುಲಿನಲ್ಲಿ ರವಿವಾರದ ಸಾಪ್ತಾಹಿಕ ಪ್ರಾರ್ಥನೆ ನಡೆದಿತ್ತು. ಹೊರಮಗ್ಗಲಿಗೆ "ಎಲ್ಲರಿಗೂ ಹೃತ್ಪೂರ್ವಕ ಸ್ವಾಗತಂ, ಸುಸ್ವಾಗತಂ" ಎಂಬ ಹಲಿಗೆಯು ತೂಗುತ್ತಿತ್ತು. ಸಿದ್ದಿಯು ಒಳನುಗ್ಗಿ ಪಾದ್ರಿ ಸಾಹೇಬರಿಗೆ ಭೆಟ್ಟಿಯಾಗಿ, "ನನಗೆ ನಿಮ್ಮ ಇಗರ್ಜೆಯ ಸಭಾಸದನನ್ನಾಗಿ ಮಾಡಿಕೊಳ್ಳುವಿರಾ?" ಎಂದು ಕೇಳಿದನು. ಬಳಿಕ ಪಾದ್ರಿ ಸಾಹೇಬರು ತಿರಸ್ಕಾರದಿಂದ 'ತಮ್ಮಾ, ನೀನು ಕ್ರಿಸ್ತಿ ಧರ್ಮದವನಿರುವಿಯೋನು?' ಎಂದರು. ಅದಕ್ಕೆ "ಹೌದು" ಎಂದು ಉತ್ತರ ದೊರಕಿತು. ಆದರೂ, ಪಾದ್ರಿ ಸಾಹೇಬರು ಸೂಕ್ಷ್ಮ ಟೀಕೆ ಮಾಡತೊಡಗಿದರು. "ನಮ್ಮ ಧರ್ಮಗುರು ಯೇಸು ಕ್ರಿಸ್ತನ ಬ್ಯಾಬಲಿನಲ್ಲಿ ಪ್ರತಿಪಾದನ ಮಾಡಿದ ತತ್ವಗಳಮೇಲೆ ತಮ್ಮ ವಿಶ್ವಾಸವಿರುವದಲ್ಲವೇ? ಹಾಗಿದ್ದರೆ, ತಮ್ಮನ್ನು ನಮ್ಮ ಇಗರ್ಜೆಯಲ್ಲಿ ಸೇರಿಸಿಕೊಳ್ಳಲಿಕ್ಕೆ ನನಗೆ ಎಷ್ಟು ಆನಂದವಾಗುತ್ತದೆಂದು ಹೇಳಲಿ! ಪ್ರಸ್ತುತ ಸರ್ವ ಜಗತ್ತು ಐಹಿಕ ಸುಖದಲ್ಲಿ ಮುಳುಗಿಹೋಗಿದೆ! ಪರಮೇಶ್ವರನು ನಮ್ಮೆಲ್ಲರ ಜನ್ಮದಾತನು, ನಾವೆಲ್ಲರೂ ಸಹೋದರರು ಎಂಬ ಉಚ್ಚ ತತ್ವವನ್ನು ಎಲ್ಲರೂ ಮರೆತುಬಿಟ್ಟಿರುವರು! ಇಂಥ ಪ್ರತಿಕೂಲ ಪರಿಸ್ಥಿತಿಯಲ್ಲಿ ತಮ್ಮಂಥ ತತ್ವವೇತ್ತ ಮತ್ತು ಶ್ರದ್ಧಾವಂತರ ಲಾಭವು ನಮ್ಮ ಇಗರ್ಜೆಗೆ ಆಗುವದಾದರೆ ಅದೊಂದು ನಮ್ಮ ಭಾಗ್ಯವೆಂದೇ ತಿಳಿಯುವೆನು!" ಎಂದರು. ಅದಕ್ಕೆ ಆ ಸಿದ್ದಿಯು 'ಯೇಸು ಕ್ರಿಸ್ತನ ತತ್ವಗಳ ಮೇಲೆ ನಮ್ಮ ಪಾದ್ರಿಗಳಿಗೂ ಪೂರ್ಣ ವಿಶ್ವಾಸವುಂಟಲ್ಲವೇ? ಎಂದು ಕೇಳಿದನು. ಪಾದ್ರಿ ಸಾಹೇಬರು ತುಸು ಉದ್ವಿಗ್ನರಾಗಿ "ಹೌದು, ಹೌದು, ಅವಶ್ಯವುಂಟು" ಎಂದು ಉತ್ತರಿಸಿದರು. ಇಷ್ಟಾದ ಬಳಿಕ ಆ ಚತುರ ಸಿದ್ದಿಯು ತನ್ನ ನಿಜ ಸ್ವರೂಪವನ್ನು ಹೊರಗೆಡಹಿದನು! "ನಾನ್ಯಾರೆಂಬುದು ತಮಗೆ ಸ್ಪಷ್ಟವಾಗಲಿಲ್ಲವಂತೆ ತೋರುತ್ತದೆ; ನಾನೊಬ್ಬ ಸಿದ್ದಿಯು." ಈ ಶಬ್ದಗಳು ಪಾದ್ರಿ ಸಾಹೇಬರ ಕಿವಿಯಮೇಲೆ ಬಿದ್ದೊಡನೆ, ಥಟ್ಟನೆ ಹೌಹಾರಿದವರಾಗಿ ಗಾಬರಿಯಿಂದ "ಎಲ್ಲಿ! ಇದೇನು ಬಡಬಡಿಸುತ್ತೀ!" ಎಂದು ಆರ್ಭಾಟ ಮಾಡಿದರು. 'ಇದೇಕೆ ನಾವೆಲ್ಲರೂ ಒಂದೇ ದೇವರ ಮಕ್ಕಳು; ನಾವೆಲ್ಲರೂ ಬಂಧು-ಬಾಂಧವರು ಎಂದು ತಾವೇ ಹೇಳಿ ಇದೇನು, ಈಗ ಹೌಹಾರಿದಂತೆ ತೋರುತ್ತೀರಿ' ಎಂದು ಸಿದ್ದಿಯು ಪ್ರಶ್ನಿಸಲು, ಪಾದ್ರಿ ಸಾಹೇಬರು ಶುದ್ಧಿಗೆ ಬಂದರು! "ಹೌದು, ತಮ್ಮಾ, ನನ್ನ ಅಂದೋಣದ ಮರ್ಮವು ನಿನಗೆ ತಿಳಿಯಲಿಲ್ಲ! ಬಿಳೇ ಜನರೂ ಸಿದ್ದಿ ಜನರೂ ಒಟ್ಟಿಗೆ ಒಂದೇ ಇಗರ್ಜೆಯಲ್ಲಿ ಪ್ರಾರ್ಥನೆ ಮಾಡಹತ್ತಿದರೆ, ಜನರು ಏನು ತಿಳಿದಾರು! ಅಸ್ಪೃಶ್ಯತೆಯು ಹಿಂದಿನ ಕಾಲದಲ್ಲಿತ್ತು, ಅದು ಇಂದಿಲ್ಲವೆಂದು ವೇಷದಿಂದ ಮುಂದಾದರೂ ಇದ್ದೇ ಇರುವದು" ಎಂದು ಹೇಳಿ ಬ್ಯಾಬಲಿನೊಳಗಿನ ವಿಶ್ವಬಂಧುತ್ವದ ಬದನೇಕಾಯಿಗಳನ್ನು ಬ್ಯಾಬಲಿನಲ್ಲೇ ಅಡಗಿಸಿ ಪಾರಾಗಬೇಕಾದರೆ, ಪಾದ್ರಿ ಸಾಹೇಬರಿಗೆ ಸಾಕುಬೇಕಾಯಿತು!!!

* *

"೧೩" ರ ಭೂತ ಬಾಧೆಯು.

ಹಿಂದೂ ಸಮಾಜಕ್ಕೆ ಹಳೇ ಮೂಢ ಭಾವನೆಗಳ ಅಚ್ಚುಹೊಡೆದು, ಸ್ವರಾಜ್ಯಕ್ಕೆ ಅಪಾತ್ರರೆಂಬ ಸಿದ್ಧಾಂತ ಹೂಡುವವರು ಅಮೇರಿಕೆಯೊಳಗಿನ ಸುಶಿಕ್ಷಿತರೆಂದೆನಿಸಿಕೊಳ್ಳುವವರಲ್ಲಿ ಸ್ಥಿರವಾಗಿ ನೆಲೆಗೊಂಡ ಆಚಾರ-ವಿಚಾರಗಳನ್ನು ವಿಮರ್ಶಿಸಲಿ. ಕ್ರೈಸ್ತರಲ್ಲಿ "೧೩" ಅಂಕಿಗೆ ಅಶುಭವೆಂದು ಬಹಿಷ್ಕಾರವಿರುತ್ತದೆ. ಮತ್ತು ಈ ಭಾವನೆಯು ಸಾರ್ವಜನಿಕ ವ್ಯವಹಾರದಲ್ಲಿ ಎಷ್ಟು ಗೊಂದಲವನ್ನೆಬ್ಬಿಸುತ್ತದೆ ನೋಡಿರಿ! ಮುನಿಸಿಪಾಲಿಟಿಯು ಮನೆಗಳಿಗೆ ನಂಬರು ಹಾಕುವಾಗ ಈ ಅಂಕೆಯನ್ನು ಸಂಪೂರ್ಣ

(೬ ನೇ ಪಾನಿನಮೇಲೆ ಮುಂದರಿದಿದೆ.)

ಕಾನಡಾವೃತ್ತ.

ಮಿತಿ ಕ್ರೋಧನ ಸಂ। ವೈಶಾಖ ಬ। ೩ ಮಾ ಸೋಮವಾರ

ಸಂಧಾನ-ಪ್ರಸ್ತಾವಗಳು.

[illegible]

ಈ ವಸಂತ ಋತುವಿನಲ್ಲಿ ಇಡೀ ದೇಶದಲ್ಲಿ ಅನೇಕ ಪರಿಷತ್ತುಗಳು ಜರಗುತ್ತಲಿರುವವು. ಆದರೆ, ಕಳೆದ ತಾ ೨ನೇ ಫರೀದಪುರದಲ್ಲಿ ದೇಶಬಂಧು ದಾಸರ ಅಧ್ಯಕ್ಷತೆಯಲ್ಲಿ ನೆರೆದ ಬಂಗಾಲ ಪ್ರಾಂತಿಕ ಪರಿಷತ್ತಿಗೆ ವಿಶೇಷ ಮಹತ್ವವು ಪ್ರಾಪ್ತವಾಗಿದೆ. ಮೊಂಟೆಗ್ಯು ಸುಧಾರಣಾ ಕಾಯಿದೆಯಲ್ಲಿ ಮುಡ್ಡಿಮನ್ ಚೌಕಶಿ ಕಮೀಟಿಯ ಸೂಚನೆಗಳ ಮೇರೆಗೆ ಚಿಕ್ಕಪುಟ್ಟ ತಿದ್ದುಪಡಿ ಮಾಡುವದರಲ್ಲಿ ಸರಕಾರವು ಮಗ್ನವಾಗಿದೆ. ಲೋರ್ಡ ರೀಡಿಂಗ ಸಾಹೇಬರು ಇನ್ನೂ ಕೆಲ [illegible] ಭಾರತ ಮಂತ್ರಿ ಬರ್ಕನ್‌ಹೆಡ್ ದೊರೆಗಳ ಹತ್ತರ ಮಸಲತ್ತು ನಡಿಸಲು ಈ ವೇಳೆಲೇ ಲಂಡನಕ್ಕೆ ಪ್ರಯಾಣ ಬೆಳೆಸಿರುವರು. ಕಳೆದ ೨ ವರ್ಷಗಳಲ್ಲಿ ಸ್ವರಾಜ್ಯ ಪಕ್ಷವು ಸರಕಾರವನ್ನು ಪದೇ ಪದೇ ಸೋಲಿಸಿದ್ದರಿಂದ ಸರಕಾರವು ಕಳಕೊಂಡ ಮಾನವನ್ನು ಪುನಃ ಪ್ರಸ್ಥಾಪಿಸಬೇಕೆಂಬ ಅಪೇಕ್ಷೆಯು ಭಾರತ ಮಂತ್ರಿಗಳಿಗೆ ಉಂಟಾದದ್ದು ಸಹಜವು. ಸ್ವರಾಜ್ಯ ಪಕ್ಷದ ಸಹಕಾರಿತೆಯನ್ನು ಅಪೇಕ್ಷಿಸಿ, ಅವರ ಶರತ್ತಿನ ಬೇಡಿಕೆಗಳನ್ನು ತಿಳಕೊಳ್ಳುವ ಉದ್ದೇಶದಿಂದಲೋ ಏನೋ, ಭಾರತ ಮಂತ್ರಿಗಳು ಮೊಟ್ಟ ಮೊದಲು ಸ್ವರಾಜ್ಯ ಪಕ್ಷದ ಅಧ್ಯಕ್ಷರಾದ ದೇಶಬಂಧು ದಾಸರವರಿಗೆ ಸರಕಾರದೊಡನೆ ಸಹಕಾರ ಮಾಡಲು ಆಮಂತ್ರಿಸಿದರು. ಅದಕ್ಕೆ ದೇಶಬಂಧುಗಳು ಕೊಟ್ಟ ಉತ್ತರವು ಮೊದಲೇ ಜಾಹೀರಾಗಿರುವದು. "ಸ್ವಾಭಿಮಾನದಿಂದ ಸಹಕಾರ ಮಾಡಲು ಅಡ್ಡ ಬರುವ ನಮ್ಮ ಹಾದಿಯೊಳಗಿನ ನಿರ್ಬಂಧಗಳನ್ನು ದೂರಪಡಿಸಿರಿ" ಎಂಬ ಚೊಕ್ಕವಾದ ಸಂದೇಶವನ್ನು ದೇಶಬಂಧುಗಳು ಪ್ರಕಟಿಸಿದ್ದರು. ಇನ್ನೂ ಭಾರತ ಮಂತ್ರಿ ಮತ್ತು ದೇಶಬಂಧುಗಳ ನಡುವೆ ಸಂಧಾನದ ಮಾತುಗಳು ನಡೆಯುತ್ತಿರುವವೆಂದು ತಿಳಿಯುತ್ತದೆ. ಅತ್ತ ರೀಡಿಂಗ ದೊರೆಗಳು ಇಂಡಿಯಾ ಆಫೀಸಿಗೆ ಹೋಗಿ, ತಮ್ಮದೊಂದು ಪೀಠ ಹೂಡಿ ಭಾರತ ಮಂತ್ರಿಗಳಿಗೆ ಗುಪ್ತ ರೀತಿಯಿಂದ ತಮ್ಮ ಇಲ್ಲಿಯ ಕಾರಭಾರವನ್ನು ಸಮರ್ಥಿಸಲು ಕರ್ಣಮಂತ್ರ ಮಾಡುತ್ತಿರುವರು. ಇತ್ತ ಈ ಸಂಧಾನದಲ್ಲಿ ದೇಶಬಂಧುಗಳು ಯಾವ ಯಾವ ಶರ್ತುಗಳ ಮೇಲೆ ಸಂಧಾನಕ್ಕೆ ಒಪ್ಪಲಿಕ್ಕಿರುವರೆಂಬುದನ್ನು ಅರಿತುಕೊಳ್ಳಲು ಪ್ರತಿಯೊಬ್ಬ ಭಾರತೀಯನು ಆತುರನಾಗಿರುವದು ಸಹಜವು. ದೇಶಬಂಧುಗಳು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಈ ವಿಷಯದ ತಮ್ಮ ಸ್ಪಷ್ಟ ಮತಗಳನ್ನು ಜಾಹೀರುಪಡಿಸಿದ್ದಲ್ಲದೆ, ಪರಿಷತ್ತಿನಲ್ಲಿ ಅವುಗಳ ಚರ್ಚೆ ನಡೆದು, ಶರ್ತುಗಳು ಠರಾವಿನ ರೂಪದಿಂದ ನಿಶ್ಚಿತವಾಗಿರುವವು. ಇದೇ ಈ ಪರಿಷತ್ತಿನ ವೈಶಿಷ್ಟ್ಯವು

ದೇಶಬಂಧುಗಳು ತಮ್ಮ ಭಾಷಣದಲ್ಲಿ ಸಂಧಾನದ ಶರ್ತುಗಳನ್ನು ಈ ಕೆಳಗಿನಂತೆ ಕೊಟ್ಟಿರುವರು — "ಮೊಟ್ಟಮೊದಲು, ಸರಕಾರವು ಪ್ರಜೆಗಳನ್ನು ನಿರಂಕುಶವಾಗಿ ಪ್ರತಿಬಂಧಿಸುವ ಎಲ್ಲ ಅಧಿಕಾರಗಳನ್ನು ತ್ಯಜಿಸಿಬಿಡುವದಲ್ಲದೆ, ಎಲ್ಲ ರಾಜಕೀಯ ಕೈದಿಗಳನ್ನು ಒಮ್ಮೆಲೆ ಬಿಟ್ಟುಕೊಡಬೇಕು, ಅಲ್ಪಾವಧಿಯಲ್ಲಿ ಪೂರ್ಣ ಸ್ವರಾಜ್ಯ ಸ್ಥಾಪಿಸಬೇಕೆಂಬ ನಮ್ಮ ಹಕ್ಕನ್ನು ಜಾಹೀರ ರೀತಿಯಿಂದ ಒಪ್ಪಿಕೊಂಡು, ತುರ್ತಕ್ಕೆ ಅದರ ನಿಜವಾದ ಪೂರ್ವಪೀಠಿಕೆಯನ್ನು ಕೂಡಲೆ ಪ್ರಸ್ಥಾಪಿಸಬೇಕು. ಯಾವ ಪ್ರಕಾರದ ಸ್ವರಾಜ್ಯದ ಹವಣಿಯನ್ನು ಈಗಲೇ ಪ್ರಸ್ಥಾಪಿಸಬಹುದೆಂಬ ಪ್ರಶ್ನೆಯನ್ನು ಸರಕಾರವೂ, ಪ್ರಜೆಗಳೂ ಒಟ್ಟಾಗಿ, ಉಘಡವಾಗಿ ಚರ್ಚಿಸಿ, ನಿಶ್ಚಯಿಸಬೇಕು. ಯುರೋಪಿಯನ್ನರೂ, ಆಂಗ್ಲೋ ಇಂಡಿಯನ್ನರೂ ಈ ಚರ್ಚೆಯಲ್ಲಿ ಸಮಾನವೆನಿಸಿಕೊಳ್ಳಲಿ. ಏನೂ ಅಡ್ಡಿ ಇಲ್ಲ. ಇದಕ್ಕೆ ಪ್ರತಿಫಲವಾಗಿ ನಾವು ಮನೋವಾಕ್ಕಾಯಗಳಿಂದಲೂ, ಯಾವ ಪರಿಯಿಂದಲೂ ಕ್ರಾಂತಿಕಾರಕ ಚಳವಳಿಗೆ ಉತ್ತೇಜನ ಕೊಡಲಾರೆವೆಂದು ಸರಕಾರಕ್ಕೆ ನಾವು ಆಶ್ವಾಸನವನ್ನು ಕೊಡಬೇಕು. ಸರಕಾರದ ಮನೋವೃತ್ತಿಯಲ್ಲಿ ಈ ಪ್ರಕಾರದ ಸುಧಾರಣೆಯಾದರೆ, ಕ್ರಾಂತಿಕಾರಕರ ಮನೋವೃತ್ತಿಯು ಬದಲಾಗದಿರದು ಮತ್ತು ಅವರು ಈಗ ಸರಕಾರದ ವಿರುದ್ಧ ಅತ್ಯಾಚಾರ ಮಾಡುವದರಲ್ಲಿ ವ್ಯಯ ಮಾಡುತ್ತಿರುವ ಶಕ್ತಿ, ಸಾಮರ್ಥ್ಯ ಬುದ್ಧಿಯನ್ನು ದೇಶಕಾರ್ಯಕ್ಕಾಗಿ ಹಚ್ಚದಿರರು.

ಮೇಲೆ ಅನುಕರಿಸಿದ ದೇಶಬಂಧುಗಳ ಶರ್ತುಗಳು ಬಹು ಸೌಮ್ಯವಿರುವವೆಂದು ಪ್ರತ್ಯೇಕ ಹೇಳಬೇಕಿಲ್ಲ. ಬಂಗಾಲದ ಹೊರಗಿನ ಲೋಕನಾಯಕರು ಈ ಶರ್ತುಗಳಿಗೆ ಸಹಸಾ ಒಪ್ಪುವರೆಂದು ಹೇಳಲಾಗದು. ಆದರೂ ದೇಶಬಂಧುಗಳ ವರ್ಚಸ್ವದಿಂದ ಆ ಪರಿಷತ್ತಿಗೆ ಮಾನ್ಯವಾದವು. ದೇಶಬಂಧುಗಳಿಗೆ ಈಗಲೇ ಪೂರ್ಣ ಜವಾಬದಾರ ರಾಜ್ಯಪದ್ಧತಿಯು ಬೇಕೆಂತಿಲ್ಲ. ಅಲ್ಪಾವಧಿಯಲ್ಲಿ ಅದು ನಮಗೆ ಸಿಗಬೇಕೆಂಬ ಆಶ್ವಾಸನ ದೊರೆಯಬೇಕು. ತುರ್ತಕ್ಕೆ ಸ್ವರಾಜ್ಯದ ನಿಜವಾದ ಪೂರ್ವಪೀಠಿಕೆಯನ್ನಿಷ್ಟು ದಯಮಾಡಿಸಿದರೆ ಸಾಕು! ಈ ಪೂರ್ವಪೀಠಿಕೆಯ ಮುಖ್ಯ ಮುಖ್ಯ ರೂಪರೇಷೆಗಳನ್ನು ಸಹ ದೇಶಬಂಧುಗಳು ನಿರ್ದೇಶಿಸಲಿಲ್ಲ. ತಮ್ಮ ಶರ್ತುಗಳನ್ನು ದೇಶಬಂಧುಗಳು ಒಮ್ಮೆಲೇ ಇಷ್ಟು ಸೌಮ್ಯತರಕ್ಕೆ ಯಾಕೆ ಇಳಿಸುತ್ತಿರುವರು? ಅವರ ಪರಮ ಮಿತ್ರರಾದ ಸುಭಾಷಚಂದ್ರ ಬೋಸ ಮೊದಲಾದವರನ್ನು ಆದಷ್ಟು ಬೇಗ ಬಂಧಮುಕ್ತ ಮಾಡಬೇಕೆಂಬ ಉತ್ಕಟ ಆಕಾಂಕ್ಷೆಯು ದೇಶಬಂಧುಗಳವನ್ನು ಹತ್ತಿರುವದೆಂದು, ಅವರು ಭಾ। ಮಂ। ಬರ್ಕನಹೆಡ್ಡರಿಗೆ ಗ್ರಾಹ್ಯವಾಗಬಹುದಾದಂಥ ಮಾತುಗಳನ್ನೇ ಆಡುತ್ತಿರುವರೆಂದು ಕೆಲ ಜನರ ತರ್ಕವಿದೆ! ಅದು ಹೇಗೂ ಇರಲಿ, ಲೋರ್ಡ ಬರ್ಕನಹೆಡ್ಡ ದೊರೆಗಳು ಜಾಣರಿದ್ದರೆ, ದೂರದರ್ಶಿಗಳಾದರೆ, ಆದರಿಂದ ಮುಂದಿಟ್ಟ ಈ ಸೌಮ್ಯ ಶರ್ತುಗಳನ್ನು ಅವರು ಸ್ವೀಕರಿಸುವರು. ಅದಲ್ಲದೆ, ಪಾರ್ಲಿಮೆಂಟಿನಲ್ಲಿ ಬಲವಾದ ಕನ್ಸರವೇಟಿವ ಪಕ್ಷದ ಬೆಂಬಲವಿರುವದೆಂಬ ಗರ್ವದಿಂದ, ಲೋರ್ಡ ರೀಡಿಂಗ-ಲಿಟನರಂಥ ಅಳಸರಸರ ಕರ್ಣಮಂತ್ರಗಳಿಂದ ಮೋಸ ಹೋದರೆ, ರೀಡಿಂಗ-ಲಿಟನರ ಹೊಣೆಗಾರಿಕೆಯನ್ನೇ ಮುಂದರಿಸಿ ಕಾರಭಾರ ನಡಿಸಬೇಕಾಗುವದು! ಮೊದಲೇ ಸರಕಾರದ ಮೇಲಿನ ಜನರ ವಿಶ್ವಾಸವು ಹಾರಿಹೋಗಿ ಸ್ವರಾಜ್ಯ ಪಕ್ಷದ ವರ್ಚಸ್ವವು ದಿನೇ ದಿನೇ ಲೋಕದಲ್ಲಿ ಬೆಳೆಯಹತ್ತಿದೆ. ಮುಂದಿನ ಕೌನ್ಸಿಲ ಇಲೆಕ್ಷನದಲ್ಲಿ ಸ್ವರಾಜ್ಯ ಪಕ್ಷವು ವಿಜಯವಾದರೆ, ಕೌನ್ಸಿಲುಗಳಲ್ಲಿ ಸರಕಾರವು ಯಾವ ಯಾವ ಗಂಡಾಂತರಕ್ಕೆ ಒಳಗಾಗಬೇಕಾಗುವದು. ಮತ್ತು ಸರಕಾರದ ಪ್ರತಿಷ್ಠೆಗೆ ಎಷ್ಟು ಪೆಟ್ಟು ತಗಲೀತೆಂದು ಅವರೇ ಕಲ್ಪನೆ ಮಾಡಬಹುದು.

ದೇಶಬಂಧುಗಳ ಸಂಧಾನ-ಪ್ರಸ್ತಾವಗಳು ಭಾರತ ಮಂತ್ರಿಗಳಿಗೆ ಮಾನ್ಯವಾಗದಿದ್ದರೆ ಮುಂದೇನು? ಎಂಬ ಪ್ರಶ್ನೆಯನ್ನು ದೇಶಬಂಧುಗಳೇ ಬಿಡಿಸಿ ಹೇಳಿರುವರು "ಈ ಸಂಧಾನದ ಪ್ರಸ್ತಾವಗಳು ಅಮಾನ್ಯವಾದರೆ, ನಾವು ನಮ್ಮ ಕೊಂಗ್ರೆಸ ಹಾಗೂ ಕೌನ್ಸಿಲು ಕಾರ್ಯಕ್ರಮವನ್ನು ಮುಂವರಿಸಿ, ಪದೇ ಪದೇ ಸಾರ್ವಭೌಮ ಅಧಿಕಾರವನ್ನುಪಯೋಗಿಸಿದ ವಿನಹ ಸರಕಾರದ ಕಾರಭಾರವು ನಡೆಯಲಾಗದಂತೆ ಮಾಡಬೇಕು. ಕರನಿರಾಕರಣೆಗೆ ದೇಶವು ತಯಾರಾಗುವ ತನಕ ನಾವು ಸರಕಾರದ ಜಮಾಖರ್ಚನ್ನು ನಾಮಂಜೂರ ಮಾಡುವದು ಅಯೋಗ್ಯವೆಂದು ಕೆಲವರು ಹೇಳಬಹುದು. ಆದರೆ ಕರನಿರಾಕರಣೆಗೆ ಅವಶ್ಯವುಳ್ಳ ವಾತಾವರಣವನ್ನೇ ನಾವು ಈಗಿನಿಂದಲೇ ಕ್ರಮೇಣ ತಯಾರಮಾಡುತ್ತಿರುವೆವು. ಸರಕಾರವು ಲೋಕಮತವನ್ನು ಪದೇಪದೇ ಧಿಕ್ಕರಿಸಿ ಕರಗಳನ್ನು ಎತ್ತ ಹತ್ತಿದ ಹೊರತು ಇಂಥ ವಾತಾವರಣವು ಜನಿಸಲಾರದೆಂದು ಇಂಗ್ಲಂಡದ ಇತಿಹಾಸವೇ ಸಾರುತ್ತದೆ. ಲೋಕಮತವನ್ನು ಧಿಕ್ಕರಿಸಿ ಸರಕಾರವು ಎತ್ತುತ್ತಿರುವ

ಕರಗಳನ್ನು "ಕೊಡಬೇಡಿರೆಂದು ನಾವು ಸಹ ಯೋಗ್ಯ ಸಮಯವನ್ನು ನೋಡಿ ನಮ್ಮ ದೇಶಬಾಂಧವರಿಗೆ ಬೋಧಿಸಲು ಹಿಂಜರಿಯಲಾರೆವು."

ಸರಕಾರದಲ್ಲೂ, ಜನತೆಯಲ್ಲೂ ಅನುಕೂಲವಾದ ಮನೋವೃತ್ತಿಯು ಜನಿಸಹತ್ತಿರುವದೆಂದು ದೇಶಬಂಧುಗಳ ಅಭಿಪ್ರಾಯವು. ಅದಕಾರಣ ಲಾರ್ಡ ಬರ್ಕನಹೆಡ್ ದೊರೆಗಳು ದೇಶಬಂಧುಗಳ ಸಂಧಾನ-ಪ್ರಸ್ತಾಪಗಳನ್ನು ಮನ್ನಿಸಿ ಯೋಗ್ಯ ಸಮಾಚಾರ ಕೊಳ್ಳುವರೆಂಬ ದೃಢವಾದ ಆಶಾವಾದವು ದೇಶಬಂಧುಗಳಿಗೆ ಅಂಟಿಕೊಂಡಿರುವದು. ಸದ್ಯಕ್ಕೆ ದೇಶಬಂಧುಗಳು ಭಾರತ ಮಂತ್ರಿಗಳ ಕಡೆಗೆ ಮೋರೆ ತಿರುಗಿಸಿ ಚಾತಕ ಪಕ್ಷಿಯಂತೆ ಅತ್ತಕಡೆಯ ವರ್ತಮಾನವನ್ನು ಆತುರತೆಯಿಂದ ನಿರೀಕ್ಷಿಸುತ್ತಿರುವರು. ಇಂಥ ಪರಿಸ್ಥಿತಿಯಲ್ಲಿ ಈ ಸಂಧಾನ-ಪ್ರಸ್ತಾಪಗಳ ಗತಿಯು ಏನಾಗಬಹುದೆಂಬ ಭವಿಷ್ಯವನ್ನು ನಾವು ಈಗಲೇ ಹೇಳುವದು ಉಚಿತವಾಗಲಾರದು. ನೋಡುವಾ, ಏನು ನಿಷ್ಪನ್ನವಾಗುತ್ತದೆಂದು!

ಸ್ಫುಟ ಸೂಚನೆಗಳು.

೧. ಮಹಾಯುದ್ಧದಲ್ಲಿ ಜರ್ಮನ ಕೈಸರ ಬಾದಶಹರ ಸೇನಾಪತಿಗಳಾದ ಜನರಲ ಹಿಂಡನಬರ್ಗರು ಜರ್ಮನಿಯ ಸದ್ಯದ ಇಲೆಕ್ಷನದಲ್ಲಿ ವಿಜಯಿಯಾಗಿ ಜರ್ಮನ ಪ್ರಜಾಸತ್ತಾತ್ಮಕ ರಾಷ್ಟ್ರದ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರೆಂಬುದನ್ನು ವಾಚಕರು ಬಲ್ಲರು. ಹಿಂಡನಬರ್ಗರ ಅಧಿಕಾರಾರೋಹಣದಿಂದ ಜರ್ಮನಿಯಲ್ಲಿ ಉಂಟಾದ ನವಚೈತನ್ಯಕ್ಕಿಂತ ಜರ್ಮನಿಯ ವೈರಿಗಳಾದ ಫ್ರಾನ್ಸ ಬೆಲ್ಜಿಯಮ್, ಇಂಗ್ಲಂಡ ಮೊದಲಾದ ಮಿತ್ರರಾಷ್ಟ್ರಗಳಲ್ಲಿ ಹೆಚ್ಚು ಗೊಂದಲವೂ, ಕೋಲಾಹಲವೂ ಎದ್ದಿರುವವು. ಮಹಾಯುದ್ಧ ಸಮಾಪ್ತಿಯಾದಂದಿನಿಂದ ಮಿತ್ರರಾಷ್ಟ್ರಗಳು ಜರ್ಮನಿಯ ರೆಕ್ಕೆಪಕ್ಕಗಳನ್ನು ಮುರಿದು ಭೂರ್ದಂಡದ ಮಹಾ ದೊಡ್ಡ ಕುಂಟೆಯನ್ನು ಕತ್ತಿಗೆ ಕಟ್ಟಿ, ಇನ್ನು ತಲೆಯೆತ್ತಲಾಗದಂತೆ ಬರೇ ಅಸಹಾಯ ಸ್ಥಿತಿಯಲ್ಲಿ ಜರ್ಮನಿಯನ್ನು ಇಟ್ಟಿದ್ದರು. ಫ್ರಾನ್ಸ ದೇಶವಂತೂ ಹಿಂದಿನ ಒಂದು ಸೇಡ ತಗೆದು ಜರ್ಮನ ರಾಷ್ಟ್ರದ ಒಂದೊಂದೇ ಪ್ರಾಂತವನ್ನು ಆಕ್ರಮಿಸಲಿಕ್ಕೆ ಹವಣಿಸುತ್ತಿತ್ತು. ರುಹ್ರದ ಪ್ರಾಂತವು ಮೊದಲೇ ಫ್ರಾನ್ಸದ ಅಧೀನವಾಗಿತ್ತು. ಮಿತ್ರರಾಷ್ಟ್ರಗಳು ಪಾಲಿಸಬೇಕಾದ ಒಪ್ಪಂದದ ಶರ್ತುಗಳನ್ನು ಪಾಲಿಸಹೇಳುವಷ್ಟು ಸ್ಥೈರ್ಯವು ಜರ್ಮನಿಗೆ ಇಲ್ಲದಂತಾಗಿತ್ತು. ಮಿತ್ರರಾಷ್ಟ್ರಗಳು ಆಚರಿಸುತ್ತಿರುವ ಅನ್ಯಾಯಗಳ ಕರುಣ ಕಥೆಯನ್ನು ಅಮೇರಿಕಾ, ಜಪಾನ, ತುರ್ಕಸ್ತಾನ, ರಶಿಯಾ, ಹೊಲಂಡ, ಆಸ್ಟ್ರಿಯಾ ಮೊದಲಾದವುಗಳಿಗೆ ನಿವೇದಿಸಿ ಅವುಗಳ ಸಹಾನುಭೂತಿಯನ್ನು ಗಳಿಸಲೆತ್ನಿಸುವ ಹೊರತು ಜರ್ಮನಿಗೆ ಅನ್ಯ ಗತಿಯಿರಲಿಲ್ಲ! ಇಂಥ ಪರಿಸ್ಥಿತಿಯಲ್ಲಿ "ಜರ್ಮನಿಯ ನಷ್ಟವಾದ ಪ್ರತಿಷ್ಠೆಯನ್ನು ತಿರುಗಿ ಸಂಪಾದಿಸುವೆನು! ಜರ್ಮನಿಯನ್ನು ಈಗಿನ ದೈನ್ಯದಿಂದ ವಿಮೋಚಿಸಲೆತ್ನಿಸುವೆನು!" ಎಂದು ಜಾಹೀರ ಮಾಡಿ ಹಿಂಡನಬರ್ಗರಂಥ ಮಹಾಯುದ್ಧದ ಪ್ರಖ್ಯಾತ ವೀರನು ಅಧ್ಯಕ್ಷಸ್ಥಾನಕ್ಕೆ ಉಮೇದವಾರನಾಗಿ ಮುಂದೆ ಬಂದದ್ದು ನೋಡಿ ಮಿತ್ರರಾಷ್ಟ್ರಗಳು ಭಯಭೀತರಾಗಿ ಕೋಲಾಹಲವನ್ನೆಬ್ಬಿಸುವದು ಸಹಜವು. ಹಿಂಡನಬರ್ಗರ ಪ್ರಾಯವು ೮೦ಕ್ಕೆ ಮುಟ್ಟಿದಾಗ್ಯೂ, ಈ ಮುದುಕ ವೀರರಿಗೆ ಇಲೆಕ್ಷನದಲ್ಲಿ ಎಳ್ಳಷ್ಟು ಪ್ರಯಾಸವಿಲ್ಲದೆ ಎಲ್ಲಕ್ಕೂ ಹೆಚ್ಚು ಅಂದರೆ ೧॥ ಕೋಟಿಯಷ್ಟು ವೋಟುಗಳು ದೊರೆತಿರುವವು! ಇದರಿಂದ ಇವರ ಮೇಲಿರುವ ಜರ್ಮನ ರಾಷ್ಟ್ರದ ಪ್ರೇಮವೂ, ವಿಶ್ವಾಸವೂ ಎಷ್ಟು ಆಳವಿರುವದೆಂದು ಸ್ಪಷ್ಟವಾಗುತ್ತದೆ. ಸೈನಿಕವೃತ್ತಿಯ ಇವರ ಕೈಯಲ್ಲಿ ರಾಜ್ಯಸೂತ್ರಗಳು ಬಂದಿರುವದರಿಂದ, ದೈನ್ಯದಲ್ಲಿದ್ದ ಜರ್ಮನಿಯ ರಾಜ್ಯಕಾರಭಾರದಲ್ಲಿ ಹೊಸ ರಾಜಕಳೆಯು ಪ್ರಾದುರ್ಭೂತವಾಗದಿರದು. ಆದ್ದರಿಂದ 'ಹಂ ಕರೇಸೋ ಕಾಯದಾ' ಎಂದು ಹೇಳಿ ಜರ್ಮನಿಯನ್ನು ಪೀಡಿಸುವದು ಇನ್ನು ಶಕ್ಯವಾಗಲಾರದೆಂದು ಮಿತ್ರರಾಷ್ಟ್ರಗಳು, ವಿಶೇಷವಾಗಿ, ಫ್ರಾನ್ಸವು ಬಹಳೇ ಚಿಂತೆಯಲ್ಲಿ ಬಿದ್ದಿರುವವು. ಹಿಂಡನಬರ್ಗರ ನೇತೃತ್ವದಲ್ಲಿ ಜರ್ಮನಿಯು ಪುನಃ ಸುಸಂಘಟಿತವಾಗಿ ಪೂರ್ವವೈಭವ ಸಾಮರ್ಥ್ಯಗಳನ್ನು ಸಂಪಾದಿಸುವದೋ ಏನೆಂದು ಸಂಶಯಗ್ರಸ್ತರಾಗಿ ಯುರೋಪಖಂಡದ ಎಲ್ಲ ರಾಷ್ಟ್ರಗಳೂ ಪೇಚಾಡಹತ್ತಿರುವವು.

೨. ಫರೀದಪೂರ ಪರಿಷತ್ತಿನ ಅಧ್ಯಕ್ಷರಾಗಿ ದೇಶಬಂಧುಗಳು ಮಾಡಿದ ಭಾಷಣವು ಸೌಮ್ಯವಿರುವದರಿಂದ ಬಂಗಾಲದ ನೇಮಸ್ತ ಹಾಗೂ ಎಂಗ್ಲೋಇಂಡಿಯನ ಪತ್ರಕಾರರಿಗೂ ಅದು ಮಾನ್ಯವಾಗಿ ಇದಕ್ಕಾಗಿ ಅವರು ದೇಶಬಂಧುಗಳಿಗೆ ಧನ್ಯವಾದಗಳನ್ನು ಅರ್ಪಿಸಿರುವರು. ದೇಶಬಂಧುಗಳ ಕಡು ಪ್ರತಿಸ್ಪರ್ಧಿಗಳಾದ ವಿಕ್ಷಿಪ್ತ ಪಕ್ಷದ ಬಿಪಿನ ಚಂದ್ರಪಾಲರೂ ಸಹ ತಮ್ಮ ಮಾನ್ಯತೆಯನ್ನು ದರ್ಶಿಸಿರುವರು! ನೇಮಸ್ತಾಗ್ರಣಿಗಳಾದ ಸರ್ ಸುರೇಂದ್ರನಾಥ ಬಾನರ್ಜಿಯವರಂತೂ ಇನ್ನೂ ಮುಂದರಿದು, ದೇಶಬಂಧುಗಳ ಪ್ರಸ್ತುತ ಧೋರಣವನ್ನು ಸ್ವೀಕರಿಸಿ, ನೇಮಸ್ತರೆಲ್ಲರೂ ಸ್ವರಾಜ್ಯ ಪಕ್ಷಕ್ಕೆ ಸೇರಬಹುದೆಂದು ಶಿಫಾರಸು ಮಾಡಿರುವರು! ದೇಶಬಂಧುಗಳ ಈ ಸ್ಪಷ್ಟೀಕರಣದಿಂದ ಸ್ವರಾಜ್ಯ ಪಕ್ಷದ ವಿಷಯ ಬಂಗಾಲದ ಕೆಲವೆಡೆಯಲ್ಲಿ ಹಬ್ಬಿಕೊಂಡ ತಪ್ಪು ತಿಳುವಳಿಕೆಗಳೂ, ಪೂರ್ವಗ್ರಹಗಳೂ ಬಹುಮಟ್ಟಿಗೆ ದೂರವಾದಂತೆ ತೋರುತ್ತದೆ. ಭಾರತ ಮಂತ್ರಿಗಳ ಸಂಧಾನ ಪ್ರಕರಣದಲ್ಲಿ ಈ ಭಾಷಣದ ಉಪಯೋಗವು ಎಷ್ಟೂ ಆಗಲಿ, ಇಲ್ಲವೆ ಆಗದಿರಲಿ, ಬಂಗಾಲದ ನೇಮಸ್ತರೂ, ಸ್ವತಂತ್ರ ಪಕ್ಷದವರೂ ಸರ್ ಸುರೇಂದ್ರರ ಉಪದೇಶದ ಮೇರೆಗೆ ಸ್ವರಾಜ್ಯ ಪಕ್ಷಕ್ಕೆ ಸೇರಿ ಸರಕಾರಕ್ಕೆ ಎದುರಾಗುವದಾದರೆ ಅದೇನು ಸಣ್ಣ ಲಾಭವಲ್ಲ. ಒಟ್ಟಿಗೆ ಈ ಫರೀದಪೂರ ಪರಿಷತ್ತಿನಿಂದ ದೇಶಬಂಧುಗಳ ಪಕ್ಷವು ಬಂಗಾಲದಲ್ಲಿ ಹೆಚ್ಚು ಲೋಕಪ್ರಿಯ ಹಾಗೂ ಸಬಲವಾಗುವ ಪೂರ್ವಚಿನ್ಹಗಳು ತೋರುತ್ತವೆಂಬುದು ಆನಂದಕರವು.

೩. ಫರೀದಪೂರ ಪರಿಷತ್ತಿನ ಸಮಯ ಮಹಾತ್ಮಾ ಗಾಂಧಿಯವರು ಬಂಗಾಲಕ್ಕೆ ಹೋಗಿ ಅಲ್ಲಿಯೆ ಕಾಂಗ್ರೆಸಿನ ವಿಧಾಯಕ ಕಾರ್ಯಕ್ರಮದ ವಿಷಯ ವ್ಯಾಖ್ಯಾನಗಳನ್ನು ಕೊಡಹತ್ತಿರುವರು. ಹೋದಹೋದಲ್ಲಿ ಮಹಾತ್ಮರನ್ನು ಜನರು ಬಹು ವಿಜೃಂಭಣೆಯಿಂದಲೂ, ಭಕ್ತಿಯಿಂದಲೂ ಆದರಿಸುತ್ತಿರುವರು. ಕಳೆದ ತಾ. ೧ನೇ ರಾತ್ರಿ ಕಲಕತ್ತೆಯ ಮಿರ್ಜಾಪೂರ ಉಪವನದಲ್ಲಿ ಮಹಾತ್ಮರು ಕೊಟ್ಟ ಭಾಷಣವು ; ಸ್ಮರಣೀಯವಿದೆ. ಕಾಂಗ್ರೆಸ ಕಾರ್ಯಕ್ರಮದಲ್ಲಿ ಕೌನ್ಸಿಲು ಕಾರ್ಯ ಮತ್ತು ವಿಧಾಯಕ ಕಾರ್ಯವೆಂಬ ಎರಡು ವಿಭಾಗಗಳಿದ್ದು, ಕೌನ್ಸಿಲು ಕಾರ್ಯವನ್ನು ಸ್ವರಾಜ್ಯಪಕ್ಷಕ್ಕೆ ಸಂಪೂರ್ಣವಾಗಿ ವಹಿಸಿಕೊಟ್ಟು ವಿಧಾಯಕ ಕಾರ್ಯವನ್ನಷ್ಟು ತಾವು ಸ್ವತಃ ಇಟ್ಟುಕೊಂಡಿರುವರೆಂದು ಹೇಳಿ, ಮಹಾತ್ಮರು ಚಿತ್ತವೇಧಕವಾಗುವ ರೀತಿಯಲ್ಲಿ ಕೈರಾಟೆಯ ಪ್ರಯೋಜನವನ್ನು ಈ ಪ್ರಕಾರ ಬೋಧಿಸಿದರು: "ಬೇಸಾಯವನ್ನು ಅವಲಂಬಿಸಿರುವ ಯಾವ ದೇಶವಾದರೂ ಇನ್ನೊಂದು ಪುರವಣಿ ಉದ್ಯೋಗವನ್ನಾಶ್ರಯಿಸಿದ ಹೊರತು ಬದುಕಿ ಬಾಳುವದು ಅಶಕ್ಯವು. ನಮ್ಮ ದೇಶವು ೧೯೦೦ ಮೈಲು ಉದ್ದ ೧೫೦೦ ಮೈಲು ಅಗಲವಿದ್ದು, ಜನರು ೭ ಲಕ್ಷ ಹಳ್ಳಿಗಳಲ್ಲಿ ಹರಡಿಬಿದ್ದಿರುವರು. ಇವುಗಳಲ್ಲಿ ಹೆಚ್ಚು ಪಾಲು ಹಳ್ಳಿಗಳು ಉಗಿಬಂಡಿಯಿಂದ ಬಹು ದೂರವಿರುವವು. ಇಂಥ ನಮ್ಮ ದೇಶಕ್ಕೆ ಕೈರಾಟೆಯ ಹೊರತು ಅನ್ಯಾವ ಜೀವನಸಾಧನವು ಲಭ್ಯವೆಂದು ಯಾವನಾದರೂ ಅರ್ಥಶಾಸ್ತ್ರಜ್ಞನ ಮತವಾದರೆ, ಅವನು ಅದನ್ನು ಪ್ರತಿಪಾದಿಸಲಿಕ್ಕೆ ಮುಂದೆ ಬರಲಿ. ಕೈರಾಟೆಗಿಂತಲೂ ಹೆಚ್ಚು ಉಪಯುಕ್ತ ಅನ್ಯೋಪಾಯದ ಶೋಧವಾಗುವ ತನಕ ನೀವು ನಿಮ್ಮ ಕಾಲವನ್ನು ವೃಥಾ ಕಳೆಯಬೇಡಿರಿ. ದೈನ್ಯಾವಸ್ಥೆಯಲ್ಲಿ ಹೊರಳಾಡುವ ಅಸಂಖ್ಯ ಬಡ ದೇಶಬಾಂಧವರ ಸಲುವಾಗಿ ನಾನು ಬೇಡುವ – ಕಾಂಗ್ರೆಸು ಅಪೇಕ್ಷಿಸುವ – ದಿನಾ ಅರ್ಧ ತಾಸನ್ನು ಅರ್ಪಿಸುವದಕ್ಕೆ ಇಲ್ಲೆನ್ನಬೇಡಿರಿ. ಕೈರಾಟೆಯಿಂದ ತಯಾರಾದ ನೂಲಿನ ಶುದ್ಧ ಖಾದಿಯು ನಮಗೆ ಬೇಕು. ಮಿಂಚೆಸ್ಟರ ಮತ್ತು ಜಪಾನದಿಂದ ಬರುವ ಅರಿವೆಯು ಬೇಡ. ಅಹಮ್ಮದಾಬಾದ ಹಾಗೂ ಮುಂಬಯಿಯ ಗಿರಣಿಗಳ ಅರಿವೆಯೂ ಬೇಡ; ವಂಗಭಂಗ ಚಳವಳಿಯಾದ ಕಾಲಕ್ಕೆ ಮೇಲಿನ ಗಿರಣಿಗಳಿಂದ ನಮಗೆ ಸಾಕಷ್ಟು ಅರಿವೆಯು ಪೂರವತೆಯಾಗದೆ ಹೋಯಿತು. ಆದ್ದರಿಂದ ಎಂಥ ಪ್ರಸಂಗದಲ್ಲಿಯೂ ನಮಗೆ ಸಿಗಬಹುದಾದ ಶುದ್ಧ ಖಾದಿಯನ್ನೇ ಯಾವಾಗಲೂ ಆಶ್ರಯಿಸಿರಿ. ನಮ್ಮ ಹಳ್ಳಿಯೊಳಗಿನ ಜನತೆಯು ಸುಖಸಮೃದ್ಧಿಯಿಂದ ಇರಬೇಕೆಂಬುದು ನನ್ನ ಅಪೇಕ್ಷೆಯು. ಖುಲನಾದಂಥ ಹಳ್ಳಿಯೊಳಗಿನ ಜನರು ಬರಬಿದ್ದಾಗ ಡಾ। ರೊಯರಂಥವರು ಕರುಣೆಯಿಂದ ಅವರೆಡೆಗೆ ಎಸೆದ ಅಕ್ಕಿಯ ಕಾಳುಗಳಿಂದ ಅವರು ಜೀವನ ಮಾಡಬೇಕೆಂತಿಲ್ಲ. ಕೈರಾಟೆಯು ಬಳಿಯಲ್ಲಿರುವ ತನಕ ಜೀವನಕ್ಕೆ ಇಂಥ ಭಿಕ್ಷೆಯು ಅವಶ್ಯವಿಲ್ಲೆಂದು ಅವರು ಚನ್ನಾಗಿ ನಂಬಿರಬೇಕು. ಶಾರೀರಿಕ ಪರಿಶ್ರಮದ ಮಹಿಮೆಯನ್ನು ಅರಿತುಕೊಳ್ಳಬೇಕು. ಕೈರಾಟೆಯಂಥ ಅಮೋಘ ಜೀವನಾಸ್ತ್ರವು ಕೈವಶವಾಗಿರುವಾಗ, ಯಾರೂ ಭಿಕ್ಷೆ ಬೇಡಬೇಕಾಗಿಲ್ಲ. ಬರಬಿದ್ದಾಗಂತೂ ಕೈರಾಟೆಯಂಥ ಉತ್ತಮೋಪಾಯವು ಬೇರೊಂದಿಲ್ಲ. ಇದನ್ನು ನಿಮಗೆ ತಿಳಿಯಪಡಿಸಲಿಕ್ಕೇ ನಾನು ಇಲ್ಲಿಗೆ ಬರಬೇಕಾಯಿತು."

೪. ನಿನ್ನೆ ತಾ. ೧೦ಕ್ಕೆ ಸಾತಾರೆಯಲ್ಲಿ ವರ್ಹಾಡದ ಬೆರಿಸ್ಟರ ರಾಮರಾವ ದೇಶಮುಖ ಇವರ ಅಧ್ಯಕ್ಷತೆಯಲ್ಲಿ ಮಹಾರಾಷ್ಟ್ರ ಪ್ರಾಂತಿಕ ಪರಿಷತ್ತು ಕೂಡಬೇಕೆಂದು ಗೊತ್ತಾಗಿದೆ. ಬೆಳಗಾಂವ ಕಾಂಗ್ರೆ

ಸಿನಲ್ಲಿ ಮಂಜೂರಾದ ನೂಲಿನ ವರ್ಗಣಿಯ ಪ್ರಸಾರವು ಸಾಕಷ್ಟು ಆಗಲಿಲ್ಲೆಂಬ ಕಾರಣ ಅದನ್ನು ರದ್ದು ಪಡಿಸಿ, ಮೊದಲಿನ ನಾಲ್ಕಾಣೆಯ ವರ್ಗಣಿಯನ್ನೇ ಪುನಃ ಪ್ರಸ್ಥಾಪಿಸಬೇಕೆನ್ನುವವರ ಸಂಖ್ಯೆಯು ಇತರ ಪ್ರಾಂತದವರಿಗಿಂತ ಈ ಮಹಾರಾಷ್ಟ್ರ ಪ್ರಾಂತದಲ್ಲಿ ಹೆಚ್ಚಿರುವದು. ಈ ವಿಷಯದ ಚರ್ಚೆಯನ್ನು ಮುಂದಿನ ಕಾಂಗ್ರೆಸ ಕೂಡುವ ತನಕ ಕಾಯಿತದೇ ಈಗಲೇ ಅದರ ಸಮಾಚಾರ ಕೊಳ್ಳಬೇಕೆಂಬ ಮಹಾಗ್ರಹವು ಈ ಹೊಸ ಪಕ್ಷಕ್ಕೆ ಅಂಟಿಕೊಂಡಿರುವದು! ಅದ್ದರಿಂದ ನೂಲಿನ ವರ್ಗಣಿಯನ್ನು ರದ್ದುಪಡಿಸಬೇಕೆನ್ನುವವರೆಲ್ಲರೂ ತಪ್ಪದೆ ಸಾತಾರೆಗೆ ಬರಬೇಕೆಂದು ಪುಣೆಯ 'ಕೇಸರೀ' ಪತ್ರವು ಡಂಗುರ ಬಡಿಯುತ್ತಿರುವದು. ಅದರಿಂದ ಈ ಮತವನ್ನು ಪುಷ್ಟೀಕರಿಸುವವರಲ್ಲನೇಕರು ಸಾತಾರೆಗೆ ಕೂಡುವರೆಂಬದರಲ್ಲಿ ಸಂದೇಹವಿಲ್ಲ. ಆದರೆ ಈ ವರ್ಗಣಿ ವಿಷಯವನ್ನು ಪರಿಷತ್ತು ಚರ್ಚಿಸುವದೋ ಇಲ್ಲೆಂಬ ಬಗ್ಗೆ ಇನ್ನೂ ಖಾತ್ರಿಯಿಲ್ಲ! ಇಂಥ ಅಕ್ರಿಯ ಮತ್ತು ಅತಿ ವಿವಾದಾತ್ಮಕ ಪ್ರಶ್ನೆಯನ್ನು ಚರ್ಚಿಸಿ, ಮಹಾರಾಷ್ಟ್ರದ ಕೌನ್ಸಿಲು ವಾದಿಗಳಲ್ಲೂ ಅಸ್ಸಲ ಅಸಹಕಾರವಾದಿಗಳಲ್ಲೂ ಪುನಃ ವೈಮನಸ್ಯವುಂಟಾಗಬಹುದಾದ್ದರಿಂದ ಇಂಥ ಅನಿಷ್ಟದಿಂದ ಹೇಗಾದರೂ ಪಾರಾಗಬೇಕೆಂದು ಸಾತಾರಾ ನಿವಾಸಿಗಳೂ, ಸ್ವಾಗತ ಮಂಡಳದವರೂ ಹವಣಿಸುತ್ತಿದ್ದಾರೆ. ಪರಿಷತ್ತಿನ ವಿಷಯನಿಯಾಮಕ ಕಮಿಟಿಯು ಈ ವರ್ಗಣಿ ವಿಷಯವನ್ನು ಸಭೆಯಲ್ಲಿ ಚರ್ಚೆಗೊಡಬಾರದೆಂಬ ಒಂದು ಸೂಚನೆಯು ಸ್ವಾಗತ ಮಂಡಳದ ವಿಚಾರಕ್ಕಾಗಿ ಬಂದಿದ್ದು, ಈ ಮಂಡಳದ ಒಂದು ಸ್ಪೆಶಲ್ ಸಭೆ ಕೂಡಿ ಈ ಸೂಚನೆಯ ವಿಚಾರ ಮಾಡಲಿಕ್ಕಿದೆಂದು ತಿಳಿಯುತ್ತದೆ.

---

* ನಾಭಾ ಸಂಸ್ಥಾನದಲ್ಲಿ ಅಲ್ಲಿಯ ಅಧಿಕಾರಿಗಳು ನಡೆಸುತ್ತಿರುವ ಅತ್ಯಾಚಾರಗಳು ಆಗಾಗ್ಗೆ ಕೇಳಿಬರುತ್ತಿರುವವು. ನಾಭಾ ಸಂಸ್ಥಾನದ ಜೇಲಿನಲ್ಲಿರುವ ಸತ್ಯಾಗ್ರಹಿ ಶೀಖರಮೇಲೆ ನಡೆದ ಅತ್ಯಾಚಾರಗಳನ್ನು ಕೇಳಿದರೆ, ಮನಸ್ಸು ಹೇಸುತ್ತದೆ. ಕೈದಿಗಳು ಕ್ಷಮೆ ಬೇಡಬೇಕೆಂದು ಅವರನ್ನು ಅಮಾನುಷತೆಯಿಂದ ಹೊಡೆದು ಅವರ ಸತ್ವಹರಣ ಮಾಡುವ ಉದ್ಯೋಗವು ಅಲ್ಲಿನಲ್ಲಿ ನಡೆದಿರುವದು ತಿಳಿಯುತ್ತದೆ. ಕೆಲವರ ಗಡ್ಡವನ್ನೂ, ಕೂದಲನ್ನೂ ಜಗ್ಗಿ ಕಿತ್ತುತೆಗೆದಿರುವರಂತೆ! ಹೀಗೆ ಕಿತ್ತುತೆಗೆದ ಕೂದಲು ಅಮೃತಸರದ ಗುರುದ್ವಾರ ಪ್ರಬಂಧಕ ಕಮಿಟಿಗೆ ಮುಟ್ಟಿರುವದು. ಇಂಥ ಅತ್ಯಾಚಾರಗಳಿಂದ ಕಷ್ಟಬಡುವ ೧೪೪ ಮಂದಿ ಶೀಖರು ಈಗ ನಾಭಾದಲ್ಲಿದ್ದಾರೆ. ಅವರಲ್ಲಿ ಏಳು ಮಂದಿಗೆ ಅಸಹ್ಯ ವೇದನೆಯಾಗಿದೆ. ಇಬ್ಬರಿಗೆ ತಲೆಗೂ, ಎಂಟು ಮಂದಿಗೆ ಮುಖಕ್ಕೂ, ಹತ್ತು ಮಂದಿಗೆ ಕೈಗಳಿಗೂ, ಏಳು ಮಂದಿಗೆ ತೊಡೆಗೂ, ಎಂಟು ಮಂದಿಗೆ ಬದಿಗಳಿಗೂ, ಎಂಟು ಮಂದಿಗಳ ಗುಪ್ತ ಪ್ರದೇಶಗಳಿಗೂ, ಇದು ಮಂದಿಗೆ ಬೆನ್ನಿಗೂ, ಐವತ್ತೊಂದು ಜನರಿಗೆ ಸಾಮಾನ್ಯ ಪೆಟ್ಟು ಆಗಿರುವದಂತೆ! ನಾಭಾದ ಮೊದಲಿನ ಸಂಸ್ಥಾನಾಧಿಪತಿಗಳು ರಾಜ್ಯವಾಳಲಿಕ್ಕೆ ನಾಲಾಯಕರೆಂದು ಅವರಿಂದ ರಾಜ್ಯಕಾರಭಾರವನ್ನು ವಹಿಸಿಕೊಂಡು, ಹಿಂದುಸ್ಥಾನ ಸರಕಾರವು ನೇಮಿಸಿದ ಯುರೋಪಿಯನ್ ಕಾರಭಾರಿಯು ನಡಿಸುವ ಕಾರಭಾರವಿದು! ರಾಜ್ಯವಾಳಲು ಚತುರರಾದ ಈ ಕಾರಭಾರಿಯು ಕಾರಭಾರವನ್ನಾದರೂ ನೋಡುವಾ, ಎಂದು ಪಂಡಿತ ಮೋತಿಲಾಲರಂಥವರು ನೋಡಹೋದರೆ, ಅವರಿಗೂ ಪ್ರತಿಬಂಧ! ಅದರಿಂದ ಈ ಸಂಸ್ಥಾನದ ಈಗಿನ ಕಾರಭಾರವು ಎಷ್ಟು ಪ್ರಜಾವಾತ್ಸಲ್ಯದಿಂದಲೂ, ಸುವ್ಯವಸ್ಥಿತ ರೀತಿಯಿಂದಲೂ ನಡೆಯುತ್ತಿರುವದೆಂಬದನ್ನು ಬಿಡಿಸಿಹೇಳಬೇಕಾಗಿಲ್ಲ. ಸರಕಾರದಿಂದ ನೇಮಕವಾದ ಕಾರಭಾರಿಯ ಕಾರಭಾರದ ಚೌಕಶಿಯನ್ನು ಸರಕಾರವು ನಡಿಸಬೇಕೆಂದು ಮೊದಲೊಮ್ಮೆ ಸೂಚಿಸಿದಾಗ, ಸರಕಾರವು ಅದಕ್ಕೆ ಒಪ್ಪಲಿಲ್ಲ. "ದೇಶಿ ಸಂಸ್ಥಾನಗಳ ಕಾರಭಾರದಲ್ಲಿ ಹಿಂದುಸ್ಥಾನ ಸರಕಾರವು ಕೈಹಾಕಲಾರದು" ಎಂಬ ಶುಷ್ಕ ಕಾಯಿದೆಯ ನೆವಹೇಳಿ ಪಾರಾಯಿತು! ಅಂದಮೇಲೆ ಈ ಸಂಸ್ಥಾನದಲ್ಲಿ ಎಂಥ ಪ್ರಜಾಪೀಡನೆ ನಡೆಸಲೂ, ಅತ್ಯಾಚಾರಗಳ ಮಳೆಗರೆದರೂ ಈ ಸರಕಾರ ನಿಯುಕ್ತ ಕಾರಭಾರಿಗಳಿಗೆ ಕೇಳುವವರು ಈ ಜಗತ್ತಿನಲ್ಲಿ ಯಾರೂ ಇಲ್ಲಂತಾಯಿತಲ್ಲವೇ? ಇದನ್ನಿಷ್ಟು ಸರಕಾರವು ಸ್ಪಷ್ಟೀಕರಿಸುವದುತ್ತಮ. ಅಂದರೆ, ಹಿಂದುಸ್ಥಾನ ಸರಕಾರದ ಪ್ರಸ್ತುತ ಧೋರಣದ ನಿಜವಾದ ಬಣ್ಣವು ಸಹಜವಾಗಿ ಕಾಣುವದು.

ಸ್ಥಾನಿಕ ವೃತ್ತಾಂತ.

ಕುಮಟಾ—ಸೆಕೆ ಬಹಳ. ಕೆಲವೆಡೆಯಲ್ಲಿ ಮೈಲಿ, ಜ್ವರಾದಿ ರೋಗಗಳಂತೂ ಇದ್ದೇ ಇರುವವು. ಎರಡು ಮೂರು ದಿವಸಗಳಿಂದ ಮೋಡಗವಿಯುತ್ತಲಿದೆ. ನಿನ್ನೆ ಮಧ್ಯಾಹ್ನದಿಂದ ಅಲ್ಪ ಸ್ವಲ್ಪ ಮಳೆ ಬೀಳಲಾರಂಭಿಸಿದೆ, ಗುಡುಗು ಮಿಂಚುಗಳ ಅಬ್ಬರ ವಿಶೇಷ. ಮನೆಹೊದಿಕೆ ವಗೈರೆ ಗಡಿಗಾಲದ ಕೆಲಸಗಳು ಶುರುವಾಗಿವೆ.

ಕಳೆದ ಮಂಗಳವಾರ ಶ್ರೀ ಶಾಂತಿಕಾ ಪರಮೇಶ್ವರಿ ಅಮ್ಮನವರ ವಾರ್ಷಿಕ ಬಂಡಿ ಹಬ್ಬವು ವಾಡಿಕೆಯಂತೆ ಸಾಂಗವಾಗಿ ನೆರವೇರಿತು.

ನಿಯಮಿತ ಸಂಖ್ಯೆಗಿಂತ ಹೆಚ್ಚಿಗೆ ಪ್ರಯಾಣಿಕರನ್ನು ಮೋಟಾರಿನಲ್ಲಿ ಕೂಡ್ರಿಸಿಕೊಂಡ ಆರೋಪದ ಮೇಲೆ ಪೋಲಿಸ ತನಖಿಯಾಗಿ ಇಲ್ಲಿಂದ ಶಿರ್ಶಿಗೆ ಓಡ್ಯಾಡುತ್ತಿದ್ದ ಮೆಸರ್ಸ ಕಾಮತ ಬ್ರದರ್ಸ ಮೋಟಾರ ಸರ್ವಿಸಿಗೂ, ಮಿ| ಎಚ್. ಡಿ. ನಾಯ್ಕ ಮೋಟಾರ ಸರ್ವಿಸಿಗೂ ಅನುಕ್ರಮವಾಗಿ ೧೦ ಹಾಗ, ೩೦ ರೂಪಾಯಿ ದಂಡವಾಗಿರುವದಾಗಿ ತಿಳಿಯುತ್ತದೆ.

ಕಳೆದ ಮಂಗಳವಾರಕ್ಕೆ ಮಂಗಳೂರಿನಿಂದ ಇಲ್ಲಿ ಒದಗಬೇಕಾದ ಮಾಲು ಬೋಟಿಯು ಇಲ್ಲಿ ಒಂದರಮಾತಡೆ ಮುಂದರಿಯಿತು. ಅದರಿಂದ ಬುಧವಾರದ ಪೆಸೆಂಜರ ಆಗಬೋಟಿಗೆ ಪ್ರಯಾಣಿಕರ ವಿಶೇಷ ಭರತಿ ಇತ್ತು. ಇಂದು ಸೂರ್ಯಾಸ್ತವಾಗುವದರಲ್ಲಿ ಎರಡು ಪಡಾವಗಳಲ್ಲಿ ತಮ್ಮ ಸಾಮಾನು ಹೇರಿ ಗಂಡಸರೂ, ಹೆಂಗಸರೂ ಮಕ್ಕಳೂ ಪಡಾವ ಹತ್ತಿ ಆಗಬೋಟಿಯ ಹಾದಿಕಾಯುತ್ತಾ ಕುಳಿತುಕೊಂಡರು. ಈ ಪ್ರಕಾರ ೩-೪ ತಾಸು ಬಕಪಕ್ಷಿಗಳಂತೆ ಜಪ್ಪೇಕುಳಿತುಕೊಂಡು ರಾತ್ರಿ ೧೧ ಘಂಟೆಗೆ ಬಂದ ಬೋಟಿ ಹತ್ತಿಹೋದರು!

ಮುಂಬಯಿಯಿಂದ ಮಾಲುಬೋಟಿಯು ನಿನ್ನೆ ಸಾಯಂಕಾಲ ೪ ಘಂಟೆಗೆ ಇಲ್ಲಿ ಬಂದು ಮುಟ್ಟಿತು. ಬಹಳೇ ತೂಫಾನು ಮಳೆ ಇರುತ್ತಿದ್ದರಿಂದ ಇಲ್ಲಿ ಇಳಿಕೆಯ ಪ್ರಯಾಣಿಕರು ಪಡಾವಿನಮೇಲೆ ಒಮ್ಮೆ ಇಳಿದು ಪುನಃ ಬೋಟ ಹತ್ತಿಕೂಡ್ರಬೇಕಾಯಿತು. ತೂಫಾನು ೧-೭ ತಾಸಿನ ನಂತರ ಸ್ವಲ್ಪ ಶಾಂತವಾದ ಬಳಿಕ ದಂಡೆಗೆ ಬಂದು ಮುಟ್ಟಿದರು. ಈ ಗೊಂದಲದಲ್ಲಿ ಪಡಾವಿನ ಮೇಲೆ ಇಳಿದ ಸಕ್ಕರೆ ಚೀಲ ಮೊದಲಾದ ಸಾಮಾನು ಮಳೆಯಿಂದ ಒದ್ದೆಯಾಗಿ ಮಾಲೀಕರಿಗೆ ಬಹಳೇ ಲುಕ್ಸಾನು ಆಗಿದೆ. ಕೆಲವು ಸಾಮಾನು ಕಳ್ಳರ ಪಾಲಾಯಿತು. ಈ ಬಗ್ಗೆ ಕಳುವಿನ ಪಂಚನಾಮೆ ಆಗಿದೆಯಾಗಿಯೂ ಸುದ್ದಿ ಇದೆ.

ಇಲ್ಲಿಯ ಮುನಿಸಿಪಾಲಿಟಿಯ ಇಬ್ಬ ಮೆಂಬರರ ಸಭಾಸದತ್ವವನ್ನು ಹಿಂದೆ ಸತತ ೪ ತಿಂಗಳು ಗೈರಹಾಜರಿದ್ದದರಿಂದ ಕಲೆಕ್ಟರರು ರದ್ದುಮಾಡಿದ್ದರು. ಆ ಬಗ್ಗೆ ಬೈ ಇಲೆಕ್ಶನು ನಾಳೆಗೆ ಇಡಲ್ಪಟ್ಟಿದೆ. ಪ್ರತಿ ಒಂದು ವಾರ್ಡಿಗೆ ಏಳೇಳು ಮಂದಿ ಉಮೇದ್ವಾರರು ನಿಂತಿದ್ದಾರೆ; ವೋಟುಗಳಿಗಾಗಿ ಬಹಳೇ ಮೋಕಾಟ ನಡೆದದೆ!

ಗೋಕರ್ಣ— ಕಳೆದ ಜೂನ ತಿಂಗಳಲ್ಲಿ ಭರಣಾ ಮಾಡಲಿಕ್ಕೆಂತ ಕೊಟ್ಟ ರೂಪಾಯಿ ೩೨೧ನ್ನು ಇಲ್ಲಿಯ ಮುನಿಸಿಪಾಲಿಟಿಯ ಸೆಕ್ರೆಟರಿಗಳಾಗಿದ್ದ ನರಸಿಂಹ ವೆಂಕಟರಮಣ ಭಟ್ಟ ಮಾರ್ಕಾಂಡೆಯರು ತಮ್ಮ ಸ್ವಂತ ಉಪಯೋಗಕ್ಕೆ ಬಳಿಸಿಕೊಂಡರೆಂಬ ಆರೋಪದಮೇಲೆ ಮುನಿಸಿಪಾಲಿಟಿಯು ನಡಿಸಿದ ಫಿರ್ಯಾದಿಯ ತನಿಖೆಯು ಕುಮಟಾ ೧ ನೇ ವರ್ಗದ ಮೆಜಿಸ್ಟ್ರೇಟರಲ್ಲಿ ಆಗಿ ಆರೋಪಿಯು ಅಪರಾಧ ಒಪ್ಪಿಕೊಂಡದ್ದರಿಂದ, ಅವರಿಗೆ ಕಳೆದ ಮಂಗಳವಾರ ೬ ತಿಂಗಳ ಶಿಕ್ಷೆ ಮತ್ತು ೧೦೦ ರೂಪಾಯಿ ದಂಡ ವಿಧಿಸಲ್ಪಟ್ಟಿರುತ್ತದೆ.

ಸದಾಶಿವಗಡ— ಶ್ರೀಯುತ ಶಂಕರ ಭಾಸ್ಕರ ನಾಡಕರ್ಣಿ ಇವರು ೧೮೯೫ನೇ ಇಸವಿಯಲ್ಲಿ ಸದಾಶಿವಗಡದಲ್ಲಿ "ಪ್ರಾಯವ್ಹೇಟ ಇಂಗ್ಲಿಷ ಸ್ಕೂಲ ಸದಾಶಿವಗಡ" ಎಂಬ ಶಿಕ್ಷಣ ಸಂಸ್ಥೆಯೊಂದನ್ನು ಸ್ಥಾಪಿಸಿ, ಅದನ್ನು ೩೦ ವರ್ಷಗಳ ವರೆಗೆ ಅತುಲ ಸ್ವಾರ್ಥತ್ಯಾಗದಿಂದ ಮತ್ತು ಅನೇಕ ಸಂಕಟಪರಂಪರೆಯೊಳಗಿಂದ ಪಾರುಮಾಡಿ ನಡಿಸಿದ್ದರು. ಈಗ ಆ ಸಂಸ್ಥೆಯಲ್ಲಿ ೫ ಇಯತ್ತೆಗಳಿದ್ದು ಒಟ್ಟು ೧೩೦ ವಿದ್ಯಾರ್ಥಿಯರು ಜ್ಞಾನಾಮೃತವನ್ನು ಪಾನಮಾಡುತ್ತಿರುವರು. ಸದ್ಯಕ್ಕೆ, ಅಂದರೆ ತಾರೀಖು ೧ನೇ ಎಪ್ರಿಲಕ್ಕೆ ಶ್ರೀಯುತ ನಾಡಕರ್ಣಿಯವರು "ಸದಾಶಿವಗಡ ಎಜ್ಯುಕೇಶನ್ ಸೊಸಾಯಿಟಿ" ಎಂಬ ಜವಾಬದಾರ ಸಂಸ್ಥೆಯ ಪ್ರಾಣಪ್ರತಿಷ್ಠೆ ಮಾಡಿ ಅದರ ವಶಕ್ಕೆ ತಮ್ಮ ಪ್ರಿಯ ಸಂಸ್ಥೆಯನ್ನು ಕೊಟ್ಟಿರುವರು. ಅಭಿನಂದನೀಯವು!

ಜಾಹೀರಾತು.

ತಾರೀಖು ೭-೪-೧೯೨೫ನೇ ಪತ್ರದಲ್ಲಿ ಪ್ರಸಿದ್ಧಪಡಿಸಿರುವ ನಾಮಾಂಕಿತ ಸುಪ್ರಸಿದ್ಧ ಪರಂಪರಾ ಜ್ಯೋತಿಷಿ ಕೇ. ಸಿ. ನಾರಾಯಣಶಾಸ್ತ್ರಿ ಎಂಬವರು ಸ್ವಲ್ಪ ದಿವಸದಿಂದ ಶಿವಮೊಗ್ಗಾ ಡಿಸ್ಟ್ರಿಕ್ಟ ಸಾಗರದಲ್ಲಿ ಕೆಲವು ದಿವಸದ ಪೂರ್ತಕ ಮುಕ್ಕಾಂ ಮಾಡಿರುತ್ತಾರೆ. ಅವಶ್ಯವಿದ್ದ ಯಾವತ್ತೂ ಜನರು ಸದ್ರಿಯವರಿಗೆ ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡತಕ್ಕದ್ದು.

ಪತ್ತೆ:—

ಕೇರಳ ಜ್ಯೋತಿಷಿ

ಕೇ. ಸಿ. ನಾರಾಯಣ ಶಾಸ್ತ್ರಿ.

ಮುಕ್ಕಾಂ ಕಾನಲೆ ಛತ್ರ, ಪೋ. ಸಾಗರ,
ಡಿಸ್ಟ್ರಿಕ್ಟ - ಶಿವಮೊಗ್ಗಾ.

ಉತ್ತಮ ಮಾಲು! ಉತ್ತಮ ಮಾಲು!

ಮಂಗಳೂರ ಹಂಚು!

ನಮ್ಮ ಊರಾದ ಮಂಗಳೂರ ಮಿಶನ್ ಹಂಚುಗಳು ನಮ್ಮಲ್ಲಿ ಮಾರಾಟಕ್ಕೆ ಸಿಗುವವು. ಬೇಕಾದವರು ಮಾಲು ನೋಡಿ ದರವಾರ ತಿಳಕೊಳ್ಳಬಹುದು. ಪರವಾದ ಸವಲತ್ತಿಯಿರುವದು.

ಪತ್ತೆ:— **ಕಾಜೀ ಅಬ್ದುಲ್ ಖಾದರ,**

ಮುನಸಿಫ್ ಕೋರ್ಟ ಸಮೀಪ, ಕುಮಟಾ.

ವೃತ್ತಸಾರ.

— ತುರ್ಕಸ್ಥಾನದಲ್ಲಿ ಕೇಮಾಲಪಾಶಾರವರ ನಿಯಂತ್ರಣದಿಂದ ಅನೇಕ ಹಳೇ ರೂಢಿಗಳು ಸುಧಾರಿಸಲ್ಪಡುತ್ತಿರುತ್ತವೆ. ಮುಸಲ್ಮಾನರಲ್ಲಿ, ಕಾದಿ ಧರ್ಮದ ಲಗ್ನಸಮಾರಂಭದಲ್ಲಿ ವರಪಕ್ಷದವರು ತಮ್ಮ ಐಶ್ವರ್ಯಕ್ಕೆ ಗೌರವವನ್ನು ತೋರಿಸುವದಕ್ಕಾಗಿ ವಧುವಿಗೆ ಅಮೂಲ್ಯವಾದ ಉಂಗುರವನ್ನು ಕೊಡುವ ಪದ್ಧತಿಯುಂಟು. ಲಗ್ನಸಮಾರಂಭಕ್ಕಾಗಿ ಮಿತಿಮೀರಿ ವೆಚ್ಚವೂ ತಗಲುತ್ತದೆ. ಅಂಥ ನಿರರ್ಥಕ ವೆಚ್ಚವನ್ನು ನಿಲ್ಲಿಸುವದಕ್ಕಾಗಿ ತುರ್ಕಸ್ಥಾನ ಗೃಹಮಂತ್ರಿಗಳು ಇಸ್ತಂಬೂಲ ನಿವಾಸಿಗಳಿಗೆ ವಿವಾಹ ವಿಧಿಯನ್ನು ಸ್ವಲ್ಪದರಲ್ಲಿ ಮುಗಿಸುವದಕ್ಕಾಗಿಯೂ, ಮತ್ತು ಈ ಕೊಡತಕ್ಕ ಉಂಗುರವು ೨೦ ಪೌಂಡು ಬೆಲೆಗಿಂತ ಹೆಚ್ಚಿನದು ಇರಬಾರದೆಂದೂ, ಹುಕುಮು ಹೊರಡಿಸಿದ್ದಾರೆ. ವಧುವಿನ ಪೋಷಾಕು ಎರಡಕ್ಕಿಂತ ಹೆಚ್ಚು ಇರಬಾರದೆಂದಲೂ, ಮತ್ತು ಆಕೆಯು ಗಂಡನ ಮನೆಗೆ ಹೋಗುವಾಗ ಒಂದು ಮಹಾಲ ಮನೆ ಬಿಡಾರಕ್ಕೆ ಬೇಕಾಗುವದಕ್ಕಿಂತ ಹೆಚ್ಚು ಸಾಮಾನುಗಳನ್ನು ಒಯ್ಯಬಾರದೆಂತಲೂ ವಧೂವರಪಕ್ಷಕ್ಕೆ ನಿರ್ಬಂಧ ಮಾಡಿದ್ದಾರೆ.

— ಪೂರ್ವ ಆಫ್ರಿಕೆಯೊಳಗೆ ಕೌನ್ಸಿಲು ಪ್ರವೇಶದ ಪ್ರಶ್ನೆಯು ಬಹಳೇ ತೀವ್ರವಾಗಿ ಚರ್ಚಿಸಲ್ಪಟ್ಟಿತು. ನೈರೋಬಿಯೊಳಗೆ ಕೂಡಿದ ಪೂರ್ವ ಆಫ್ರಿಕೆಯ ಭಾರತೀಯರ ರಾಷ್ಟ್ರೀಯ ಸಭೆಯು, ಈ ಪ್ರಶ್ನೆಯನ್ನು ಒಂದು ವರ್ಷದವರೆಗೆ ಮುಂದೂಡಬೇಕೆಂದು ಠರಾಯಿಸಿತ್ತು. ಏಪ್ರಿಲ್ ೧೯ನೇ ರವಿವಾರಕ್ಕೆ ಸುಮಾರು ೪೦೦ ಜನರು ಸಭೆ ಸೇರಿ ಮೊದಲಿನ ಠರಾವನ್ನು ಒರೇ ೧೭ ಜನರು ಎತ್ತಿ ಹಿಡಿದರು. ಅದನ್ನು ಕಿತ್ತು ಹಾಕಿ ಮೇ ೩ನೇ ತಾರೀಖಿಗೆ ಸಭೆ ಸೇರಿ ಕೌನ್ಸಿಲು ಪ್ರವೇಶಕ್ಕಾಗಿ ಆಪ್ತ ಉಮೇದ್ವಾರರನ್ನು ಆರಿಸ ತಕ್ಕದ್ದು ಬೇಕೆಂದು ಠರಾಯಿಸಿದರು. ಸರಕಾರ ನಿಯೋಜಿತವ ಜಾಗೆಗಳು ಕೌನ್ಸಿಲಿನಲ್ಲಿ ಕೊಟ್ಟರೂ, ನಿಷೇಧಕ ವರ್ಗ ಅಧಿಕಾರಗಳನ್ನು ಗ್ರಹಿಸಬೇಕೆಂದು ಜನರ ನಿಶ್ಚಯವಾಯಿತು.

— ಅಂಗೋರಾ ಸಮಿತಿಯು ಇಸ್ಮತ ಪಾಶಾರವರ ಪ್ರಾಣಹಾನಿ ಮಾಡುವ ಒಳಸಂಚು ಮಾಡಿದ ಬಗ್ಗೆ ಮನೋವಕೇನ ಎಂಬ ಆರ್ಮೀನಿಯನ್ ಮನುಷ್ಯನಿಗೆ ಮರಣ ಶಾಸನವನ್ನು ವಿಧಿಸಿರುತ್ತದೆ.

— ವರಿಷ್ಠ ಕಾಯಿದೆ ಮಂಡಳದ ಅಧಿವೇಶನಗಳಿಂದ ಆರೋಗ್ಯವನ್ನು ದುರ್ಲಕ್ಷಿಸಿದ್ದರಿಂದ ಪಂಡಿತ ಮೋತಿಲಾಲ ನೇಹರೂರವರು ಮಲೇರಿಯಾ ಜ್ವರದಿಂದ ಬೇನೆ ಬಿದ್ದಿರುತ್ತಾರೆ.

— ಮಧ್ಯಪ್ರಾಂತ ಕಾಯಿದೆ ಕೌನ್ಸಿಲಿನ ಸಭಾಸದರೂ, ಮುಂದಿನ ವಾರದಲ್ಲಿ ನೆರೆಯಲಿಕ್ಕಿದ್ದ ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ ಕಮಿಟಿಯ ನಿಯೋಜಿತ ಅಧ್ಯಕ್ಷರೂ ಆದ ಬೆರಿಸ್ಟರ ರಾಮರಾವ ದೇಶಮುಖರವರಿಗೆ ಪುಸದ ಮುನಸಿಪಾಲಿಟಿಯು ಮಾನಪತ್ರವನ್ನರ್ಪಿಸಬೇಕೆಂದು ನಿಶ್ಚಯಿಸಿತ್ತು. ಕಮಿಶನರ ಸಾಹೇಬರು ಮಾನಪತ್ರ ಅರ್ಪಣೆಗೆ ಮಂಜೂರಿಯನ್ನು ಕೊಡಲಿಲ್ಲ. ಪೌರಜನರು ಏನು ಮಾಡುತ್ತಾರೆ ಪಾಪ!

— ಸುರತ ಜಿಲ್ಲೆಯಲ್ಲಿ ಪಾಂತ್ರಿಕ ಬ್ರಾಹ್ಮಣ ಜಾತಿಯ ಮಿ|| ಎಮ್. ಡಿ. ಜೋಶಿಯವರು ಕಳೆದ ತಿಂಗಳ ೭ನೇ ತಾರೀಖಿಗೆ ಕರಾಚಿಯಲ್ಲಿ ಮಿಸ್ ಸಿಂಧುಬಾಯಿ ಪ್ರಧಾನ ಎಂಬ ಸುಧಾರಕ ಬ್ರಾಹ್ಮಣೇತರ ಜಾತಿಯ ಹುಡುಗಿಯೊಡನೆ ಲಗ್ನವಾದರು.

— ಪಂಜಾಬದಲ್ಲಿ ಜಹಲಮ್ ಜಿಲ್ಲಾ ಕಟಾಸ ಯಾತ್ರೆಗಾಗಿ ನೆರೆದ ಯಾತ್ರಿಕರಲ್ಲಿ ಭಯಂಕರವಾಗಿ ಕಾಲರಾ ರೋಗವು ಎದ್ದಿರುತ್ತದೆ. ದಿನದಿನಕ್ಕೆ ೫೦೦ ಜನರು ಸಾಯುತ್ತಿದ್ದರು. ಈಗ ಸ್ವಲ್ಪ ಕಡಿಮೆಯಾಗಿರುತ್ತದೆ.

— ಲಾಹೋರ ಮುನಸಿಪಾಲಿಟಿಯು ಮೋಟಾರ ಬಂಡಿಗಳ ಮೇಲೆ ೬ ತಿಂಗಳಿಗೆ ೫೦ ರೂಪಾಯಿ ಪ್ರತಿ ಒಂದಕ್ಕೆ ತೆರಿಗೆ ವಸೂಲಮಾಡಬೇಕೆಂದು ನಿಶ್ಚಯಿಸಿರುತ್ತದೆ. ಆ ಬಗ್ಗೆ ಜನರ ಅಭಿಪ್ರಾಯವನ್ನು ಕೇಳಿದೆ.

— ಮಾಪಿಳ್ಳೆಯರ ದಂಗೆಯಲ್ಲಿ ಸ್ಮೃತಪಟ್ಟ ಮಾಪಿಳ್ಳೆಯರ ವಿಷಯವಾಗಿ ಅಲ್ಲಲ್ಲಿಗೆ ಸ್ಮಾರಕಗಳನ್ನು ಏರ್ಪಡಿಸಬೇಕೆಂದು, ಖಿಲಾಫತಿನ ಮಾಪಿಳ್ಳೆಯರು ಯೋಚಿಸಿದ್ದರು ಎಂಬ ಸುದ್ದಿಯು, ಮಲಬಾರ ಜಿಲ್ಲಾ ಮೆಜಿಸ್ಟ್ರೇಟರಿಗೆ ತಿಳಿದ ಕೂಡಲೆ ಅವರು ಖಿಲಾಫತಿನ ಕೆಲವು ಪ್ರಮುಖ ಮಾಪಿಳ್ಳೆಯರ ಸಭೆ ಕೂಡಿಸಿ, ಅವರು ಆ ತರದ ಯಾವ ಸ್ಮಾರಕವನ್ನೂ ಮಾಡಬಾರದೆಂದು ಅಡ್ಡಿ ಮಾಡಿದರು. “೧೯೨೧ನೇ ಇಸ್ವಿಯಲ್ಲಿ ಸರಕಾರದವಿರುದ್ಧ ಹಾಗು, ಕ್ರಿಮಿನಲ್ ಅಪರಾಧಕ್ಕೆ ಗುರಿಯಾಗಿ ಸತ್ತ ಅನೇಕ ಮಾಪಿಳ್ಳೆಯರ ವಿಷಯವಾಗಿ ಸ್ಮಾರಕಗಳನ್ನು ಏರ್ಪಡಿಸಬೇಕೆಂದು ಕೆಲವು ಅಜ್ಞಾನಿ ಜನರು ಯೋಚಿಸಿದ್ದಾರಾಗಿ ತಿಳಿದುಬರುತ್ತದೆ. ಕಳೆದ ದಂಗೆಯು ಮುಗಿದು ಈಗ ಯಾವತ್ತು ಜಾತಿಗಳು ಒಳ್ಳೇ ಸಹಕಾರದಿಂದ ನಡೆಯುತ್ತಿದ್ದು. ಅಂಥ ಸ್ಮಾರಕಗಳು ಏರ್ಪಡಿಸಿದರೆ ಹಿಂದು ಜನರೂ, ಬೇರೆ ಜಾತಿಗಳೂ ರೇಗಿಗೇಳುವ ಪ್ರಸಂಗವು ಒಂದು, ಪುನಃ ದಂಗೆಯಾಗುವ ಸಂಭವವು ಉಂಟು. ಕಾರಣ ಅಂಥ ಯಾವ ಸ್ಮಾರಕಗಳನ್ನು ಕೈಕೊಳ್ಳಬಾರದಾಗಿ ನಾನು ಪ್ರತಿಬಂಧಿಸುತ್ತೇನೆ” ಎಂಬ ವಿಷಯದ ನೋಟೀಸನ್ನು ಯಾವತ್ತು ಮಾಪಿಳ್ಳೆಯರಿಗೆ ಅವರು ಜಾಹೀರ ಮಾಡಿರುತ್ತಾರೆ.

— ಬ್ರಿಟಿಶ ಇಂಡಿಯನ್ ಸ್ಟೀಮ ನೆವಿಗೇಶನ್ ಕಂಪನಿಯ ೮೦೦ ಜನರು ಆಕಸ್ಮಾತ್ತಾಗಿ ಸಂಬಳ ಇಳಿಸಿದ್ದಕ್ಕಾಗಿ ಸಂಪು ಮಾಡಿರುವರು.

— ಬ್ರಹ್ಮದೇಶದಲ್ಲಿ ಮೈಮನಸಿಂಗ ಎಂಬಲ್ಲಿ ಕೆಲವ ಡಕಾಯಿತರು ಒಂದು ಮನೆಯನ್ನು ಸುಟ್ಟು ಲೂಟಿ ಮಾಡಲಿಕ್ಕೆಂದು ಬಂದಿದ್ದರು. ೭-೮ ಸಿಕ್ಖ ಹುಡುಗರು ಅವರನ್ನು ಹೊಡೆದು ಓಡಿಸಿದ್ದಕ್ಕಾಗಿ ಆ ದೇಶದ ನೇಕನಾಮದಾರ ಗವರ್ನರ ದೊರೆಗಳು ಡಿಸ್ಟ್ರಿಕ್ಟ ಕಮೀಶನರರ ಮುಖಾಂತರ ಆ ಹುಡುಗರಿಗೆ ಧನ್ಯವಾದಗಳನ್ನು ಅರ್ಪಿಸಿದ್ದಾರೆ. ಹಿಂದೀ ನಿವಾಸಿಗಳಿಗೆ ಶಸ್ತ್ರಗಳು ಅನಾವಶ್ಯಕವೆಂದು ತೋರಿಸುವ ಇದೊಂದು ಉದಾಹರಣೆ ಅಲ್ಲವೇನು?

— ಇಂಗ್ಲಂಡದ ಮೊರಲಿಬೋನದಲ್ಲಿ ಬಾಡಿಗೆಗೆ ಮೋಟಾರ ನಡಿಸುವ ಎಡ್ವರ್ಡ ಗೆಸ್ಟ ಎಂಬುವನು ವಿನಿಫ್ರೇಡ ಟೇಲರ ಎಂಬೊಬ್ಬ ಹೆಂಗಸು, ತನ್ನ ಬಂಡಿಯಮೇಲೆ ಆಕೆಯು ಹೆಗಲ ವಸ್ತ್ರವನ್ನು ತಗೆದು ಹೆಚ್ಚು ಭಾಗವನ್ನು ಆಕ್ರಮಿಸಿಕೊಂಡಳೆಂದೂ, ತಾನು ಹೆಸರು ಕೇಳಿದರೆ ಹೇಳದೆ, ತನಗೆ ಮೋರೆಯಮೇಲೆ ಚಪರಾಕು ಕೊಟ್ಟಳೆಂದೂ ಫಿರ್ಯಾದು ತಂದಿದ್ದನು. ಎಲ್ಬರ ಫೋರ್ಸ ಮ್ಯಾಜಿಸ್ಟ್ರೇಟರು ವಿಚಾರ ಮಾಡುತ್ತಿರುವಾಗ, “ಹೆಸರು ಹೇಳದೆ ಇದ್ದ ಹೆಂಗಸಿಗೆ ಪ್ರತಿಬಂಧಿಸುವದು ಮೋಟಾರ ನಡಿಸುವವನ ಅಧಿಕಾರವಲ್ಲ ಆಕೆಯು ಬಂಡಿಯಿಂದ ಇಳಿಯುವಾಗ ಕೈ ಅಡ್ಡಹಾಕಿ ಅವಳಿಗೆ ನಿಷ್ಕಾರಣವಾಗಿ ಪ್ರತಿಬಂಧಿಸಿದಬಗ್ಗೆ ಮೋರೆಯಮೇಲೆ ಸಾಕಷ್ಟು ಒಡೆದು ತಪ್ಪಿಸಿಕೊಳ್ಳುವದು ಅವಳಿಗೆ ಹಕ್ಕು ಇರುತ್ತದೆ” ಎಂದು ಫಿರ್ಯಾದು ತೆಗೆದುಹಾಕಿದರು.

— ಮುಂಬಯಿಯಲ್ಲಿ ಬಾವಲಾ ಖೂನಿಖಟ್ಲೆಯು ವಿಚಾರಕ್ಕೆ ಬಂದಂದಿನಿಂದ ಇಂದೂರಿನಲ್ಲಿ “ಕ್ರಾನಿಕಲ್” ಪತ್ರವನ್ನು ಕ್ರಯಕ್ಕೆ ಕೊಳ್ಳಲಿಕ್ಕೆ ರೇಲ್ವೆ ಸ್ಟೇಶನಿನಲ್ಲಿ ಜನರು ಗುಂಪುಗುಂಪಾಗಿ ನೆರೆಯುತ್ತಿರುವರು. ತುಕೋಗಂಜದಲ್ಲಿ ಮಹಾರಾಜರ ಖಾಸಗಿ ಕಾರ್ಯದರ್ಶಿಗಳ ಮನೆಯಲ್ಲಿ ದರೋಡೆಖೋರರು ಬಂದಿದ್ದರು. ಸಂದುಕಗಳನ್ನು ಒಡೆಯಲಿಕ್ಕೆ ಹತ್ತಿದ ಮಾತ್ರದಲ್ಲಿಯೇ ಕೂಗಿ ಎಬ್ಬಿಸಿದ್ದರಿಂದ ಕಳ್ಳರು ಓಡಿಹೋದರು. ಇಂದೋರ ಮಹಾರಾಜ ಸಾಹೇಬರ ಆನೆಗೆ ಮದವೇರಿ ಮಾವುತನ ಅಂಕೆಯನ್ನು ತಪ್ಪಿಸಿಕೊಂಡು, ಒಬ್ಬ ಬನಿಯಾ ಸಾಹುಕಾರನನ್ನೂ, ಎರಡು ಎಮ್ಮೆಗಳನ್ನೂ ಕೊಂದುಹಾಕಿತು. ಈಟಿಗಳಿಂದ ಸೈನಿಕರು ಕಷ್ಟತರವಾಗಿ ಅದನ್ನು ಸ್ವಸ್ಥಾನಕ್ಕೆ ಅಟ್ಟಲಾಯಿತು.

— ಪ್ರಾಂತಿಕ ಕಾಂಗ್ರೆಸ ಕಮಿಟಿಯ ಮುಖಂಡರಾದ ಸಿ. ರಾಜಗೋಪಾಲಾಚಾರ್ಯರು ರಾಜೀನಾಮೆಯನ್ನಿತ್ತಬಗ್ಗೆ ಕಾರಣವನ್ನು ಕೇಳಲಾಗಿ, ಅವರು ಈ ಪ್ರಕಾರ ಉತ್ತರವನಿತ್ತರು. “ಜಾತಿಭೇದಕ್ಕೆ ಕಾರಣೀಭೂತವಾಗುವ ರೀತಿಗಳು ಬಹಳೇ ಕಟ್ಟುನಿಟ್ಟಿನಿಂದ ನಡೆಯುವ ಸಹಭೋಜನವನ್ನು ನಿಶ್ಚಯಿಸುವ ವಿಷಯವು ಶೇರಮಾದೇವಿ ಗುರುಕುಲದವರಿಗೇನೇ ಬಿಟ್ಟುಕೊಡಬೇಕು; ಮತ್ತು ಅಸ್ಪೃಶ್ಯತೆಯನ್ನು ಅಳಿಯ ಹತ್ತ ಹೊರಡು, ಪಂಚಮರ ಉದ್ಧಾರಕ್ಕಾಗಿ ಸಿದ್ಧನಾಗಿದ್ದೇನೆ. ಅಂಥ ಸ್ಥಿತಿಯಲ್ಲಿ ಅವರಿಗೆ ಯಾವದೇ ತರದಿಂದ ನೋಯಿಸುವ ಸ್ಥಿತಿಯಲ್ಲಿ ನಾನು ಇರಬಾರದು. ಊಟದ ವೇಳೆಯಲ್ಲಿ ಅಸ್ಪೃಶ್ಯರು ದೃಷ್ಟಿಗೆ ಬಿದ್ದರೆ ಭ್ರಷ್ಟವಾಗುತ್ತದೆಂಬ ತಿಳುವಳಿಯು ತೀರ ತಪ್ಪಾಗಿರುತ್ತದೆ. ನಂಬಿಗೆಯವರಾದ ಗುರುಕುಲದವರಿಗೆ ಒಳ ಕಾರಭಾರಕ್ಕೆ ಸ್ವತಂತ್ರತೆಯನ್ನು ಕೊಟ್ಟರೆ, ಹೊರ ಕಾರಭಾರವು ಸರಿಯಾಗಿ ನಡೆಯಲಾರದೆಂಬುದು ಸರಿ ತೋರಲಾರದು.” ಪ್ರಸಿದ್ಧ ವರದರಾಜುಲು ನಾಯುಡು ಮತ್ತು ಅವರಲ್ಲಿ ಮೇಲಿನ ವಿಷಯ ಮತಭೇದವಾಯಿತು.

— ಮಿ| ಅಂಕ್ಲೇಸರರವರು ಇಟಾಲಿಗೆ ಹೋಗುತ್ತಿದ್ದಾಗ ಅವರೊಡನೆ ಮಿ| ಸಾಕಿಬೇಖಾನ, ಎಮ್. ಎಲ್. ಸಿ ರವರು ಹೋಗಿದ್ದರು. ವಿಕ್ಟೋರಿಯಾ ರೇಲ್ವೆ ಸ್ಟೇಶನಿನಲ್ಲಿ “ಬಿಪಿಮಾಕ್ಸ ಎಸ್ಕ್ವಾಯರಿ ಕಮಿಟಿ”ಯ ವಕೀಲನ ಪೆಟ್ಟಿಗೆಯು ಮಿ| ಸಾಕಿಬೇಖಾನರವರು ಅಲ್ಲಿಂದ ಕಳವಾಗಿ ಹೋಯಿತು. ಬಹಳೇ ಹುಡುಕಲು ಹತ್ತಿದಾಗ ರೇಲ್ವೆ ಸ್ಟೇಶನಿನ ಒಂದು ಕೋಣೆಗೆ ಆ ಪೆಟ್ಟಿಗೆ ಇತ್ತು. ಮತ್ತು ಸಮೀಪ ಕೆಲ ಪೋಲೀಸ ಅಧಿಕಾರರು ನಿಂತಿದ್ದರು. “ನನ್ನ ಅನುಮತಿಯ ಹೊರತು ಈ ಪ್ರಕಾರ ಪೆಟ್ಟಿಗೆಯನ್ನು ನೀವು ತರುವ ಕಾರಣವೇನು?” ಎಂತ ಅವರು ಕೂಗಿ ಕೇಳಿದರು. ಅವರಲ್ಲಿ ಯಾರೂ ಉತ್ತರ ಕೊಡದೆ ಇದ್ದದರಿಂದ ತಮ್ಮ ಆಳಿನ ತಲೆಯಮೇಲೆ ಅದನ್ನು ಹೊರಿಸಲಿಕ್ಕೆ ಅವರು ಮಾಡುವಷ್ಟರಲ್ಲಿ ಪೋಲೀಸ ಅಧಿಕಾರಿಯು ಅವರನ್ನು ತಳ್ಳಿ ಹೊಡೆದನು. ಅವರು ಪುನಃ ಪೋಲೀಸ ಅಧಿಕಾರಿಗೆ ಹೊಡೆದರು. ಈ ಪ್ರಕಾರ ಗುದ್ದಾಟವಾಗಿ ಪೆಟ್ಟಿಗೆ ದೊರೆತಿರಬೇಕಾದರೆ, ಎಮ್. ಎಲ್. ಸಿ. ರವರಿಗೆ ಸಾಕುಬೇಕಾಗಿ ಹೋಯಿತು. ಇದೆಂಥ ಕಮಾಲ!

— ಮಹಾತ್ಮರು ಬಾರಾಕಪೂರದೊಳಗಿನ ಸರ್ ಸುರೇಂದ್ರನಾಥ ಬಾನರ್ಜಿಯವರ ಮನೆಯಲ್ಲಿಯೇ, ಅವರೊಡನೆ ಸಮಗ್ರ ಎರಡು ತಾಸುಗಳವರೆಗೆ ಭರತಖಂಡದ ಸ್ಥಿತಿಗತಿಗಳಬಗ್ಗೆ ಸಂಭಾಷಣವನ್ನು ಮಾಡಿದರು.

— ರತ್ನಾಗಿರಿಜಿಲ್ಲೆಯ ಖಾರೇಪಟ್ಟಣದೊಳಗೆ ಶಿವಜಯಂತ್ಯುತ್ಸವಕಾಲದಲ್ಲಿ ಜನರು ಶ್ರೀ ಛತ್ರಪತಿ ಶಿವಾಜಿಮಹಾರಾಜರ ಭವಾನಿ ಖಡ್ಗದ ಬಗ್ಗೆ ಈ ಕೆಳಗಿನ ಠರಾವನ್ನು ಪಾಸುಮಾಡಿಕೊಂಡರು, “ಇಡೀ ಜಗತ್ತಿನಲ್ಲಿ ಖ್ಯಾತಿಗೊಂಡ, ಮತ್ತು ಯಾವತ್ತು ಜಾತಿ ಮತ್ತು ಪಂಥದ ಜನರ ಪೂಜೆಗೆ ಪಾತ್ರವಾದ ಶ್ರೀ ಭವಾನಿ ಖಡ್ಗವು ಬ್ರಿಟಿಶರ ಲಂಡನ ವಸ್ತುಸಂಗ್ರಹಾಲಯದಲ್ಲಿ, ಪುರಾತನ ಜನರ ಕಾರ್ಯದಕ್ಷತೆಗೆಂದು ಇರಿಸಿಟ್ಟಿರುತ್ತದೆ. ಆ ಬಗ್ಗೆ ಚೌಕಶಿ ನಡಿಸಿ ಅದು ಪುನಃ ಪ್ರಿಯ ಮಹಾರಾಷ್ಟ್ರಕ್ಕೆ ದೊರಕುವಂತೆ ಅದನ್ನು ಮುಂಬಯಿ ವಸ್ತುಸಂಗ್ರಹಾಲಯದಲ್ಲಿ ಇಡುವದಬಗ್ಗೆ ಪ್ರಯತ್ನಮಾಡಬೇಕಾಗಿ ಎಲ್ಲ ಸನ್ಮಾನ್ಯ ಮುಂಬಯಿ ಕಾಯಿದೆ ಕೌನ್ಸಿಲಿನ ಸಭಾಸದರಿಗೆ ಈ ಸಭೆಯು ಸನ್ಮಾನಪೂರ್ವಕದಿಂದ ಬಿನ್ನೈಸುತ್ತದೆ.”

— ಬಾವಲಾ ಖೂನಿ ಖಟ್ಲೆಯು ಆಕಸ್ಮಾತ್ತಾಗಿ ಪಂಚಾಯತ ಜೂರಿಗಳ ಪೈಕಿ ಮಿ| ಕಾವಾಸಿಯವರು ಅಸ್ವಸ್ಥವಿದ್ದದರಿಂದ ಸೋಮವಾರ ನಿಂತುಹೋಗಿತ್ತು. ಕಳೆದ ಬುಧವಾರದಿಂದ ಮತ್ತೆ ಪುನಃ ವಿಚಾರಕ್ಕೆ ಹಿಡಿಯಲ್ಪಟ್ಟಿದೆ. ಪೋಲೀಸ ಅಧಿಕಾರರ, ವೈದ್ಯರ ಪ್ರತ್ಯಕ್ಷದರ್ಶಿಗಳ ಸಾಕ್ಷಿಗಳನ್ನು ಕೇಳಲಾಗುತ್ತಲಿದ್ದಾರೆ. ಆರೋಪಿಗಳ ಆರೋಗ್ಯ ಸಮಾಧಾನ ನಡೆದಿರುತ್ತದೆ. ಮಿ| ಜಿನ್ನಾ, ವೆಲಿಂಕರ ಮೊದಲಾದ ವಕೀಲರು ತಮ್ಮ ಪಕ್ಷಗಳ ಪುರಾವೆಯನ್ನು ಪುರಿಸುತ್ತಿದ್ದಾರೆ. ಬಹಳವಾಗಿ ಮುಂದಿನ ವಾರಕ್ಕೆ ಮಹತ್ವದ ಸುದ್ದಿಗಳು ಹೊರಬೀಳಬಹುದು.

— ರಸಾಯನ ದ್ರವ್ಯಗಳ ಸಹಾಯದಿಂದ ಕಲ್ಲಿದ್ದಲಿಯಿಂದ ಮುತ್ತು ತಯಾರಿಸಲಿಕ್ಕಾಗುತ್ತದೆಂದು ಜರ್ಮನಿದೇಶದೊಳಗಿನ ಇಬ್ಬರು ಶಾಸ್ತ್ರಜ್ಞರು ಸಿದ್ಧ ಮಾಡಿರುವರು.

— ಇಂಗ್ಲಂಡದ ಪರರಾಷ್ಟ್ರೀಯ ಮಂತ್ರಿಗಳಾದ ಮಿ। ಚೆಂಬರಲೇನರ [illegible] ಒಳಸಂಚಿನ ಒಂದು ಹೊರಬಿದ್ದಿರುತ್ತದೆ

— ಕೂಲಿ ಹೆಂಗಸರ ಸ್ಥಿತಿಯನ್ನು ಪರೀಕ್ಷಿಸುವದಕ್ಕಾಗಿ ಇಂಗ್ಲಂಡದೊಳಗಿನ ಹೆಂಗಸರದೊಂದು ಶಿಷ್ಟಮಂಡಳವು ರಶಿಯಾಕ್ಕೆ ಹೋಗಿರುತ್ತದೆ

— ಪುಣೆ ಪಟ್ಟಣದೊಳಗೆ ಮಿ. ಕೆ. ಮೋಹ [illegible] ಎಂಬ ಹುಡುಗಿಗೆ ಜನಾರ್ದನ ಮೋಹನಸಿಂಗ ಎಂಬವರು ಮಾನಭಂಗ ಮಾಡಿದ ಆರೋಪದ ಮೇಲಿಂದ ಅವರ ಮೇಲೆ ಸೆಶನ್ಸ ಕೋರ್ಟಿನೊಳಗೆ ವಿಚಾರಣೆ ನಡೆದಿತ್ತು. ತಾನು ಮನೆಯೊಳಗೆ ಇದ್ದಾಗ ಮೋಹನಸಿಂಗರು ಅಕ್ರಮ ಪ್ರವೇಶ ಮಾಡಿ, ತನ್ನ ಕೈ ಹಿಡಿದು ಎಳೆದರೆಂದು [illegible] ಇತ್ತು. [illegible] ನಾನು ಒಳಗೆ ಪ್ರವೇಶ ಮಾಡಿ [illegible] ಜ್ಯೂರಿಯವರು [illegible] ನ್ಯಾಯಾಧೀಶರು [illegible] ಬಿಟ್ಟುಕೊಟ್ಟರು.

— ಮುಂಬಯಿ [illegible] ರೋಗನಿವಾರಣ [illegible] ರೂಪಾಯಿ ಬಿಟ್ಟು [illegible]

— [illegible]

— [illegible] ವರ್ಷ ಪ್ರಾಯದಲ್ಲಿ [illegible] ತನ್ನ ೧೩ನೇ ವರ್ಷ ಪ್ರಾಯದಲ್ಲಿ [illegible]

— ಮುಂಬಯಿ ಎಕ್ಸೆಲ್ಸಿಯರ ಥಿಯೇಟರದಲ್ಲಿ [illegible] ಅವರ ಮಿತ್ರ [illegible] ಪ್ರತಿ ಒಬ್ಬರಿಗೆ ೧೦ ರೂಪಾಯಿ ದಂಡ. ದಂಡ ಕೊಡದಿದ್ದರೆ ೪ ದಿವಸದ ಸಾದಾ ಕೈದಿ ಶಿಕ್ಷೆ ಕೊಟ್ಟಿತು.

— ಬ್ರಿಟಿಶ ಇಂಡಿಯನ್ ಸ್ಟೀಮ ನೆವಿಗೇಶನ್ ಕಂಪನಿ [illegible] ಜನರು [illegible] ಸಂಪ್ರದಾಯವಿರುವರು.

— ಅತಿ ಪ್ರಾಚೀನ ಕಾಲದಿಂದ ವಿಲಾಯತಿಯೊಳಗಿನ [illegible] ಆರಬ ದೇಶಗಳಲ್ಲಿ ಸಹ [illegible] ಕಾಣಬರುತ್ತದೆ. ಅರಬರು [illegible] ದೇವರ ಪವಿತ್ರವೆಂದೆನಿಸುತ್ತಾರೆ. ಹಿಂದುಸ್ಥಾನದ ಮುಸಲ್ಮಾನರು, ಅರಬರು ಪೈಗಂಬರರ ವಂಶಜರೆಂದು ಪವಿತ್ರರೆಂದು ಎನಿಸುತ್ತಾರೆ. ಖರ್ಜೂರದ ಮಾಲೀಕರಾದ ಅರಬರು ಹಿಂದುಸ್ಥಾನದೊಳಗಿನ ೭ ಕೋಟಿ ಮುಸಲ್ಮಾನರು ತಮ್ಮ ಖರ್ಜೂರವನ್ನೇ ಉಪಯೋಗಿಸಬೇಕೆಂದು ಒತ್ತಿಹೇಳುತ್ತಿರುವರು.

— ಮಾಕ್ರಾ ಎಂಬಲ್ಲಿ ಸಕ್ಕರ ಬ್ಯಾರೇಜ ಕಾಲುವೆ ಆಗುತ್ತಿದ್ದ ಘಾತಗಳನ್ನು ನೋಡಲಿಕ್ಕೆ ಹೋದ ಅಷ್ಟ ಹತ್ತಿಗರ ಮೇಲೆ ಗುಂಡು ಹಾರಿಸಿದ ಪ್ರೊಫೆಸರ [illegible] ರಾಜಿಯಿಂದ [illegible] ಬಹುದಾದ ಅಪರಾಧವೆಂದು ಎಣಿಸಲ್ಪಟ್ಟಿದೆ.

— ಮುಂಬಯಿ ಪ್ರಾಂತಿಕ ಕಾಂಗ್ರೆಸ ಕಮೀಟಿಯು ನೆಸನಲ್ ಮೆಡಿಕಲ್ ಕಾಲೇಜದ ರಸಾಯನ ಶಾಸ್ತ್ರ ಸಂಗ್ರಹಾಲಯವನ್ನು ಹೆಚ್ಚು ಹೆಚ್ಚಿಸುವಂತೆ [illegible] ಮಾಡಬೇಕೆಂದು ನಿಶ್ಚಯಿಸಿರುತ್ತದೆ.

— ಸ್ವರ್ಗವಾಸಿ ಲಾರ್ಡ ಕರ್ಜನದೊರೆಗಳ ಲಾರ್ಡ ಸಭೆಯೊಳಗಿನ ಖಾಲಿಬಿದ್ದ ಜಾಗಕ್ಕೆ ಲಾರ್ಡ ಬಾಲ್ಫೋರರ ನೇಮಣೂಕು ಮಾಡಲ್ಪಟ್ಟಿರುತ್ತದೆ.

— ತ್ರಾವಣಕೋರ ಸಂಸ್ಥಾನದೊಳಗೆ ಅತಿ ಭಯಂಕರವಾದ ಬಿರುಗಾಳಿ ಎದ್ದು ಸಿಡಿಲಿನಿಂದ ಒಂದು ಮನೆಯು ಕುಸಿದುಬಿತ್ತು. ಒಬ್ಬ ಮನುಷ್ಯನು ಸತ್ತನು. ೧೮ ಜನರು ಗಾಯಪಟ್ಟರು.

— ಕೀರ್ತನಕೇಸರಿ ಜಯರಾಮಾಚಾರ್ಯರು ಹೈದರಾಬಾದಿನಲ್ಲಿ ಕೀರ್ತನೆಗಳನ್ನು ಮಾಡುತ್ತಿರುವರು. ಇವರ ಕೀರ್ತನೆಗಳು ಮೊದಲಿನಂತೆ ಕನ್ನಡದಲ್ಲಿ ಸರಸವಾಗಿ ಆಗುತ್ತಿರುವವು.

— ಜೈತೋ ಸತ್ಯಾಗ್ರಹಕ್ಕಾಗಿ ೧೦೧ ಅಕಾಲಿಗಳ [illegible] ಒಂದು [illegible] ತಾ. ೨೮ ನೇಗೆ ಅಮೃತಸರಕ್ಕೆ ಹೊರಟಿರುವದು.

— ಆಗ್ರಾ ಪಟ್ಟಣದೊಳಗೆ ಹಿಂದೂ ವಿದ್ಯಾರ್ಥಿಗೆ ಕೊಲೆಗಡಕನೊಬ್ಬನು ಹಗಲು ನಡು ರಾಜಮಾರ್ಗದಲ್ಲಿ ಕತ್ತಿಗೆಯನ್ನು ಕೊಯಿದನು.

— ಮಥುರಾ ಪಟ್ಟಣದೊಳಗೆ ಸ್ವರಾಜ್ಯಪಕ್ಷದ ಸಭೆ ಸೇರಿ ಸತತ ರಾಜಕೀಯ ಚಳವಳಿಯನ್ನು ನಡಿಸಲು ಒಂದು ಮಂಡಳ ಸ್ಥಾಪಿಸಲ್ಪಟ್ಟಿರುತ್ತದೆ.

— ಇಡೀ ಜಗತ್ತಿನಲ್ಲಿ ೧ ಅಬ್ಜ, ೭೦ ಕೋಟಿ ಲೋಕಸಂಖ್ಯೆಯಿದೆ. ಪ್ರತಿ ವರ್ಷಕ್ಕೆ ೫ ಕೋಟಿ ಜನರು ಸಾಯುತ್ತಾರೆ. ಅಂದರೆ ದಿವಸಕ್ಕೆ ೧ ಲಕ್ಷ, ೩೬ ಸಾವಿರ ೯೮೬; ತಾಸಿಗೆ ೫,೭೦೮; ಮಿನಿಟಿಗೆ ೯೦. ಅಂದರೆ ೨ ಸೆಕೆಂಡುಗಳಿಗೆ ೩.

— ಬ್ಯಾಡಗಿಯಲ್ಲಿ ಬಸವ ಜಯಂತಿಯ ಪ್ರೀತ್ಯರ್ಥ ಅನ್ನಸಂತರ್ಪಣೆಯಾಯಿತು. ಸುಮಾರು ೩-೪ ಸಾವಿರ ಪ್ರಜೆಗಳು ಮಿಷ್ಟಾನ್ನ ಭೋಜನ ಮಾಡಿ ಶ್ರೀ ಬಸವೇಶ್ವರನ ಅಗಾಧ ಮಹಿಮೆಯನ್ನು ಹೊಗಳಿದರು.

— ಮದ್ರಾಸ ಇಲಾಖೆಯಲ್ಲಿ ಒಂದು ರೂಪಾಯಿಯ ಖೊಟ್ಟಿ ನೋಟುಗಳು ತಯಾರಾಗುತ್ತಿರುವವು! [illegible] ಜಾಗ್ರತೆ ಕೊಳ್ಳಬೇಕಾಗಿ ಮದ್ರಾಸ ಸರಕಾರವು ಪ್ರಕಟಣೆಯನ್ನು ಹೊರಡಿಸಿದೆ.

— ಈ ವರ್ಷ ನಮ್ಮ ಹಿಂದುಸ್ಥಾನ ದೇಶದಲ್ಲಿ ಹಾಲಂಡ ದೇಶದಿಂದ ೧೨೫೦೦೦ ಮಣ ತುಪ್ಪ ಆಮದಾಗಿದೆ. ಗೋಪ್ರತಿಪಾಲಕ ಭರತಭೂಮಿಯ ಅವಸ್ಥೆಯಿದು.'

— ಭೂಮಧ್ಯ ಸಮುದ್ರದಲ್ಲಿ ಒಂದು ಅದ್ಭುತ ಚಮತ್ಕಾರ. ಜಲಗಾರರೊಬ್ಬರು ಸ್ಪಂಜ ತೆಗೆಯಲು ಮುಳುಗಿದ್ದರು. ಅವನಿಗೆ ಸುಂದರ ಸ್ತ್ರೀದರ್ಶನವಾಯಿತು. ಭಯಭೀತನಾಗಿ ಅವನು ಮೇಲಕ್ಕೆ ಬಂದನು. ಬಳಿಕ ಇತರ ಜಲಗಾರರು ಮುಳುಗಿ ಪರೀಕ್ಷಿಸಲು ಅದೊಂದು ಗ್ರೀಕ ದೇವತೆಯ ಪ್ರತಿಮೆಯೆಂದು ಕಂಡುಹಿಡಿದರು. [illegible]

— ಧಾರವಾಡದಲ್ಲಿ ಶ್ರೀ ಬಸವೇಶ್ವರ ಜಯಂತಿಯ ಉತ್ಸವವು ಬಲು ವಿಜೃಂಭಣೆಯಿಂದ ನೆರವೇರಿತು.

— ಬ್ರಹ್ಮದೇಶದ [illegible] ಪಟ್ಟಣದಲ್ಲಿ ಬತ್ತದ ಉಗ್ರಾಣಕ್ಕೆ ಬೆಂಕಿ ಹತ್ತಿ, ಸುಮಾರು ೬। ಲಕ್ಷ ರೂಪಾಯಿಗಳ ಭತ್ತವು ಸುಟ್ಟು ಬೂದಿಯಾಯಿತು.

— ನೇಪಾಳದ ಸೈನ್ಯದಲ್ಲಿ ಒಬ್ಬರೂ ಗೌರಕಾಯದ ಸೈನಿಕರಿಲ್ಲ

— ಹಿಂದೂ-ಮುಸಲ್ಮಾನರ ವಾದದ ಪ್ರಶ್ನೆಯನ್ನು ಬಿಡಿಸಲಿಕ್ಕೆ ಮಹಾತ್ಮಾ ಗಾಂಧಿ, ದೇಶಬಂಧು ದಾಸ, ಪಂಡಿತ ನೆಹರು, ಶ್ರೀಮತಿ ಸರೋಜಿನಿದೇವಿ ನಾಯುಡು, ಹಕೀಮ ಅಜಮಲಖಾನ, ಡಾ। ಅನಸಾರಿ, ಮತ್ತು ಮೌ। ಅಬ್ದುಲ ಕಲಮ ಆಜಾದ ಈ ನೇತೃಗಳೆಲ್ಲ ಒಂದು ಕಮೀಟಿ ನೇಮಿಸಿದರೆ ಇದರ ನಿಕಾಲೆಯು ಸುಲಭ ಸಾಧ್ಯವೆಂದು ಡಾ। ಕಿಚಲು ಇವರು "ತಂಜೀಮ"ಎಂಬ ಪತ್ರಿಕೆಯಲ್ಲಿ ಸೂಚಿಸಿರುವರು.

ವಿವಿಧ ಸಂಗ್ರಹ.

(೫ ನೇ ಪಾನಿನಿಂದ ಮುಂದರಿಸಿದ್ದು.)

ಬಿಟ್ಟುಬಿಡಬೇಕಾಗುತ್ತದೆ. ನಾಟಕಗೃಹಗಳಲ್ಲಿ ಯಾವದಾದರೊಂದು ಕಾದಿಟ್ಟ ಖುರ್ಚಿಯಮೇಲೆ "೧೩" ಈ ಅಂಕೆಯು ಇದ್ದರೆ, ಆ ಖುರ್ಚಿಯು ನಾಟಕದ ಕೊನೆಯವರೆಗೆ ಖಾಲಿ ಬೀಳುತ್ತದೆ; ಕುದುರೆ ಟಾಂಗ, ಮೋಟಾರು ಮುಂತಾದ ವಾಹನಗಳಿಗೆ "೧೩" ಎಂಬ ನಂಬರು ಇಡಲು ಯಾರೂ ಒಪ್ಪುವದಿಲ್ಲ. ಖಾನಾವಳಿಯೊಳಗಿನ ನಂಬರುವಾರ ಖೋಲಿಯೊಳಗಿನ "೧೩"ನೇ ಖೋಲಿಯೊಳಗೆ ಯಾರೂ ಪ್ರವೇಶಿಸಲು ಧೈರ್ಯಗೊಳ್ಳುವದಿಲ್ಲ. ಈ ಮೂಢ ಭಾವನೆಯನ್ನು ಕಿತ್ತುಹಾಕಬೇಕೆಂದು ಅಮೇರಿಕೆಯ ಕಾನಡಾ ದೇಶದೊಳಗಿನ ಒಂದು ಮ್ಯುನಿಸಿಪಾಲಿಟಿಯು ಮನೆಗಳಿಗೆ ಅನುಕ್ರಮ ನಂಬರುಗಳನ್ನು ಹಾಕುವಾಗ, "೧೩" ಈ ಅಂಕೆಯನ್ನು ಲೋಪಮಾಡಬಾರದೆಂದು ಠರಾಯಿಸಿ, ಅದರಂತೆ ಆ ಅಂಕೆಯು ಒಂದು ಮನೆಯ ಪಾಲಿಗೆ ಬಂತು. ಆದರೆ ಮನೆಯ ಯಜಮಾನನು ಈ ಅಂಕೆಯ ಮೂಲಕ ಯಾರೂ ಆ ಮನೆಯನ್ನು ಭಾಡಿಗೆಗೆ ಪಡೆಯಲು ಒಪ್ಪಲಿಕ್ಕಿಲ್ಲೆಂದೂ, ಮತ್ತು ಹಾಗಾದರೆ ತನಗೆ ಆಗುವ ಹಾನಿಗೆ ಮ್ಯುನಿಸಿಪಾಲಿಟಿಯು ಹೊಣೆಯಾಗಿರುವದೆಂದೂ, ಮ್ಯುನಿಸಿಪಾಲಿಟಿಯ ವಿರುದ್ಧ ದಾವೆ ತಂದು ಮನಾಯಿ ಹುಕುಮನ್ನು ಸಹ ಪಡೆಕೊಂಡಿರುವನು! ನಮ್ಮೊಳಗಿನ ಮೂಢ ಭಾವನೆಗಳು ಎಷ್ಟು ಮೂಢವಿದ್ದರೂ, ಸಾರ್ವಜನಿಕ ಸಂಸ್ಥೆಗಳ ಆಡಳಿತದಲ್ಲಿ ಸೇರಿ, ಇಂಥ ಹಾವಳಿಯನ್ನೆಬ್ಬಿಸಿದ ಸಂಗತಿಯು ಕ್ವಚಿತ್ತಾಗಿ ಕಾಣಬಹುದು.

⁂

ಅಂಧ ಶ್ರದ್ಧೆಯೂ, ತತ್ತ್ವಾಭಿಮಾನವೂ.

ಕ್ರೈಸ್ತರ ಬೈಬಲಿನಲ್ಲಿ ಪ್ರತಿಪಾದಿಸಿದ ಪ್ರಮಾಣಗಳು ಎಷ್ಟೊ ಸತ್ಯವಿರಲಿ, ಅಸತ್ಯವಿರಲಿ, ಅದ್ಭುತಭೂತವಿರಲಿ, ಭ್ರಾಮಕವಿರಲಿ, ಅವುಗಳಿಗೆ ವಿಸಂಗತವಾದ ಯಾವ ತತ್ವವನ್ನಾಗಲಿ, ಸಿದ್ಧಾಂತವನ್ನಾಗಲಿ ಪ್ರಚುರಗೊಳಿಸಬಾರದೆಂದು ಅಮೇರಿಕೆಯೊಳಗಿನ ಟೆನೆಸಿ ಸಂಸ್ಥಾನದ ಶಾಸನಮಂಡಳವು ಬದ್ಧಕಂಕಣವಾಗಿರುವದೆಂಬಂತೆ ತೋರುತ್ತದೆ. ಮಾನವಪ್ರಾಣಿಯು ಉತ್ಕ್ರಾಂತಿಯ ಮರ್ಕಟನಿಂದ ಪ್ರಾರಂಭವಾಯಿತೆಂದು ಡಾರ್ವಿನ್ ಮೊದಲಾದ ತತ್ವಜ್ಞಾನಿಗಳ ಸಿದ್ಧಾಂತವಿರುವದು. ಈ ಸಿದ್ಧಾಂತವು ಬೈಬಲಿನೊಳಗಿನ ಸೃಷ್ಟಿನಿರ್ಮಾಣದ ವರ್ಣನೆಗೆ ವಿಸಂಗತವಿರುವದೆಂಬ ಕಾರಣದಿಂದ ಡಾರ್ವಿನ್ ಪ್ರಭೃತಿಗಳ ಉತ್ಕ್ರಾಂತಿವಾದವನ್ನೇ ಇಡೀ ಸಂಸ್ಥಾನದೊಳಗೆ ಸಂಪೂರ್ಣವಾಗಿ ಬಹಿಷ್ಕರಿಸಬೇಕೆಂದು ಈ ಶಾಸನಮಂಡಳವು ಠರಾಯಿಸಿರುವದು. ಯಾಕೆಂದರೆ ಇಂಥ ಸಿದ್ಧಾಂತಗಳ ಪ್ರಚಾರದಿಂದ ಬೈಬಲಿನೊಳಗಿನ ಪ್ರಮಾಣದ ಮೇಲೆ ಜನರ ಅಂಧ ಶ್ರದ್ಧೆಯು ಕುಗ್ಗಿಹೋಗುವದೆಂಬ ಇವರ ಭೀತಿಯು. ಇದಕ್ಕಾಗಿ ಇನ್ನು ಮುಂದೆ ಶಾಲೆ—ಕಾಲೇಜುಗಳಲ್ಲಿ ಅಥವಾ ಇನ್ನಿತರ ಸಾರ್ವಜನಿಕ ಸಂಸ್ಥೆಗಳಲ್ಲಿ ಈ ಉತ್ಕ್ರಾಂತಿ ವಾದದ ಉಚ್ಚಾರ ಮಾಡುವದು ಸಹ ಒಂದು ದೊಡ್ಡ ಅಪರಾಧವೆನಿಸಿಕೊಳ್ಳುತ್ತದೆ. ಟೆನೆಸಿಯಂಥ ಸ್ವತಂತ್ರ ಸಂಸ್ಥಾನದಲ್ಲಿರುವ ತತ್ವಾಭಿಮಾನದ ಮಾದರಿಯಿದು !

ಭಾಷಾಂತರಕರ್ತರಿಗೆ ಸುಸಂಧಿ!

ಸುಪ್ರಸಿದ್ಧವಾದದ್ದೂ, ಅನೇಕ ವಿದ್ಯಾ ಪಂಡಿತರಿಂದ ಚಲೋ ಅಭಿಪ್ರಾಯ ಪಟ್ಟದ್ದೂ ಆಗಿರುವ ಋಗ್ವೇದಿಯವರು ಬರೆದ " **आर्यांच्या सणांचा प्राचीन व अर्वाचीन इतिहास** " ಎಂಬ ಮರಾಠಿ ಪುಸ್ತಕವನ್ನು ಕನ್ನಡದಲ್ಲಿ ಭಾಷಾಂತರಿಸುವದಿದೆ. ಇದನ್ನು ಕೈಕೊಳ್ಳಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳತಕ್ಕದ್ದು

Apply to:--
V. PRABHA & CO.
BOMBAY 4.

Copies can be had from:-
The North Kanara Trading Co.
KARWAR.

ಮಳೆಗೆ ಮೊದಲೇ ಎಚ್ಚರಿಕೆ !

ಅತ್ಯುತ್ತಮ, ಸುಂದರ, ಬಾಳಿಕೆಯುಳ್ಳ, ಮಜಬೂತಾದ

ಸೂರ್ಯ ಛಾಪು !] **ಛತ್ರಿಗಳು.** [ಅಗ್ಗ ! ವಿವಿಧ !!

ಪ್ರತಿಯೊಬ್ಬರಿಗೂ ಅನುಕೂಲವಾದ ಮುಂದಿನ ವಸ್ತುಗಳು !

ದೇಶೀಯ ಕೈಗಾರಿಕೆ ! ದೇಶೋಪಯೋಗಿಯೂ !! ಆದುದರಿಂದ ದೇಶೀಯರಿಗೆ ಖಾತರಿಯಾಗಿ ತೃಪ್ತಿಯಾಗುವುದು !

ಕಾನಡಾ ಜಿಲ್ಲೆಯೊಳಗಿನ ಪ್ರಮುಖ ಛತ್ರೀ ದುಕಾನುಗಳಲ್ಲಿ ಬಿಕರಿಗೆ ಇದೆ.

ಸೇಠ್ ನಾಗಜೀ ಪುರುಷೋತ್ತಮ್ ಮತ್ತು ಕಂಪನಿಯವರ ಕಲ್ಲಿಕೋಟೆಯ ಕಾರಖಾನೆಯ

ಸೂರ್ಯ ಛಾಪಿನ ಛತ್ರಿಗಳೇ ಛತ್ರಿಗಳು !

ದುಕಾನುದಾರರಿಗೆ ಖಾಸ್ತ ಕಮಿಷನ್ನು ಸವಲತ್ತು ಕೊಡಲಾಗುತ್ತದೆ.

ಪತ್ತೆ:— **ಶ್ರೀನಿವಾಸ ರಂಗ ಪೈ, ಸಾವಕಾರ ಮಹಾಲ್.**
ಮಂಗಳೂರು, ದ. ಕನ್ನಡ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ ಬಿ ಯವರ

ಸುಗಂಧ ನಸ್ಯದ ಪುಡಿ.

(Registered Trade Mark.)

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇರಲ್ಪಟ್ಟ ಸಕಲ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦ ವ್ಹಿ. ಪಿ. ೧ ಡಜನ್ ೧ಕ್ಕೆ ರೂ. ೩-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೩೧೦, ಮದರಾಸು

DAVAR'S

COLLEGE OF COMMERCE.
(Established 25 years.)

CELEBRATES ITS SILVER JUBILEE THIS YEAR UNDER THE DISTINGUISHED PATRONAGE OF MERCHANT-PRINCES, LEADERS OF THOUGHT AND EDUCATION.

The Institution under the sole direction of its Founder and Principal has done pioneer work in introducing for the First Time in India Courses in SPECIALISED BANKING, SPECIALISED SECRETARIAL WORK and SPECIALISED ACCOUNTANCY as the result of his numerous journeys to Europe and to the Colleges and Universities there.

The fact that a Scholar has successfully trained in DAVAR'S COLLEGE has always been accepted by businessmen all over India, Burma and Ceylon as a hallmark of perfection.

Prospectus on application to the Principal,
Great Western Bldg.,
Apollo Street, BOMBAY.

ಅಮೇರಿಕನ್ ಉಪಾಯ.

ಎಂಬ್ರೋಸಿಯಾ.

AMBROSIA

ಸ್ತ್ರೀರೋಗಪರಿಹಾರಕ್ಕಾಗಿ.

ಎಂಬ್ರೋಸಿಯಾವು ಸಮಸ್ತ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು. ಇದು ಸ್ತ್ರೀಸೌಂದರ್ಯವನ್ನುಂಟುಮಾಡುತ್ತದೆ. ಸಾಮಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರುತ್ತದೆ ಚಲೋ ಆಹಾರ ದೊರಕದೆ, ವಿಶೇಷ ಆಯಾಸ ಕೊಳ್ಳುವದರಿಂದ ಸ್ತ್ರೀಯರ ಪ್ರಕೃತಿಯು ಕೆಡುತ್ತದೆ. ಮುಟ್ಟಾಗುವಾಗ ಶೂಲಿ ಏಳುವದು, ಮುಟ್ಟಾಗದಿರುವದು, ಅಪಸ್ಮಾರ, ಬಂಜೆತನ ಮುಂತಾದ ಗರ್ಭಾಶಯದ ಬೇನೆಗಳು, ಅಜೀರ್ಣ, ತಲೆಶೂಲಿ, ಭ್ರಮಿಷ್ಟತನ ಇವೆಲ್ಲ ಸ್ತ್ರೀರೋಗಗಳಮೇಲೆ ರಾಮಬಾಣ ಮದ್ದು. ಎಂಬ್ರೋಸಿಯಾವು ಸಮಸ್ತ ಸ್ತ್ರೀರೋಗಗಳನ್ನು ದೂರಮಾಡಿ, ಸ್ತ್ರೀಯರನ್ನು ಸಶಕ್ತ ಹಾಗು ಸೌಂದರ್ಯವಂತರನ್ನಾಗಿ ಮಾಡುತ್ತದೆ.

ಒಮ್ಮೆ ಪರೀಕ್ಷೆ ನೋಡಿ.

ಬೆಲೆ ಬಾಟ್ಲಿ ೧ ಕ್ಕೆ ರೂಪಾಯಿ ೨—೦—೦

ಏಜಂಟರು:— **ಓರಿಯೆಂಟಲ ಏಜನ್ಸಿ,**
ಪ್ರಿನ್ಸೆಸ ಸ್ಟ್ರೀಟ, ಮುಂಬಯಿ ನಂಬರ ೨

ನಮ್ಮ ಪ್ರೆಸ್ಸಿನಲ್ಲಿ

ನೇಟ ಬಾಕಿ ನಾವೆಯ ಫಾರ್ಮಗಳು ತಯಾರಿವೆ ವಹಾಲತ, ಅಮಲದಾರಿ ವೊದಲಾದ [illegible] ವ್ಯವಹಾರಗಳಿಯು [illegible] ಫಾರ್ಮಗಳು ಅಗ್ಗವಾಗಿ ಸಿಗುತ್ತವೆ

ಮೆನೇಜರ,

[illegible]

ಪ್ರಯಾಣಿಕರ ಅನುಕೂಲತೆ ಬಗ್ಗೆ

ಡೇಲಿ ಮೋಟರ ಸರ್ವಿಸ.



ಕುಮಟೆಯಿಂದ— [illegible], [illegible]

ಕುಮಟೆಯಿಂದ— [illegible], ಹುಬ್ಬಳ್ಳಿಗೆ [illegible]

ಕುಮಟೆಯಿಂದ— [illegible], ಕಾರವಾರಕ್ಕೆ, [illegible] ಹೋಗುವ ಮೋಟರಿನ ಟಿಕೇಟುಗಳು ನಮ್ಮಲ್ಲಿ ಪ್ರತಿ ನಿತ್ಯವೂ ಸಿಗುವವು

ಬಿ. ದಾಸ,
ಏಜಂಟ ಕುಮಟಾ

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು

೧ ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೬೦, ೭೫, ೧೦೦

೨ ,, ಕಾಲು ಪೆಟ್ಟಿಗೆ ಕಿಂ. ೬೫, ೭೫, ೧೨೦, ೧೫೦

೩. ತಬಲೆ ಜೋಡಿ ಕಿಂ. ೧೬, ೧೮, ೨೦, ೨೫.

೪. ಹಾರ್ಮೋನಿಯಮ ಗ್ಯಾಡ (ಮರಾಠಿ) ಕಿಂ. ೧॥. ತಬಲೆ ಗ್ಯಾಡ ಕಿಂ. ೧೨ ಅ.

ವಿಶೇಷ ಮಾಹಿತಿಬಗ್ಗೆ ನಮ್ಮ ಮರಾಠಿ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ:— ಗೋಪಾಳ ಸಖಾರಾಮ ಮಾತು
ಕಂಪನಿ, ವಿಠ್ಠಲವಾಡಿ ಎದುರಿಗೆ,
೬೨ ಕಾಳಬಾದೇವಿ, ಮುಂಬಯಿ,

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ



ಕಳೆದ ೪–೫ ವರ್ಷಗಳಿಂದ ನಾವು ಶಿವಮೊಗ್ಗಾ–ತೀರ್ಥಹಳ್ಳಿ–ಆಗುಂಬೆ, ಶಿವಮೊಗ್ಗಾ–ಸಾಗರ–ತಾಳಗುಪ್ಪ, ಶಿವಮೊಗ್ಗಾ–ಹರಿಹರ–ದುಗ್ಗಾವತಿ, ಶಿವಮೊಗ್ಗಾ–ಕಳೂರಕಟ್ಟೆ, ಸಾಗರ–ಸೊರಬ–ಶಿರಾಳಕೊಪ್ಪ, ಸಾಗರ–ತೀರ್ಥಹಳ್ಳಿ, ಸಾಗರ–ಕಳೂರಕಟ್ಟೆ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ ಸರ್ವಿಸನ್ನು ನಡೆಸುತ್ತಿದ್ದುದಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ, ಉಡುಪಿ, ಕುಂದಾಪುರ, ಮಂಗಳೂರ ಹಾಗು ಬೆಳ್ತಂಗಡಿ ಈ ಕಡೆಗೆ "ಕಾರ್ಕಳ ಮೋಟರ ಸರ್ವಿಸಿನ" ವಿದ್ಯಮಾನವೂ, ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಗೆ "ಲಕ್ಷ್ಮೀ ಮೋಟರ ಸರ್ವಿಸಿನ" ವಿದ್ಯಮಾನವೂ ಪ್ರಯಾಣಿಕರ ಎಲ್ಲ ಸೌಕರ್ಯಗಳ ವ್ಯವಸ್ಥೆ ಮಾಡಿರುತ್ತೇವೆ.

ಉತ್ತರ ಕನ್ನಡ ಜಿಲ್ಲೆಯ ಪ್ರಯಾಣಿಕರು ಜೋಗ (Gersoppa' Falls), ಶಿವಮೊಗ್ಗಾ ಸಾಗರ, ಹರಿಹರ ಮತ್ತು ಮೇಲ್ಕಂಡ ಸ್ಥಳಗಳಿಗೆ ಪ್ರಯಾಣ ಬೆಳಸಲು ಅನುಕೂಲವಾಗಬೇಕೆಂದು ಶಿವಮೊಗ್ಗಾ, ಸಾಗರ, ಜೋಗ, ಸಿದ್ದಾಪುರ, ಶಿರ್ಸಿ ಕುಮಟಾ ಈ ಲೈನಿನಲ್ಲಿ ಮೋಟರ ಸರ್ವಿಸ ಪ್ರಾರಂಭ ಮಾಡಿರುತ್ತೇವೆ

ಕಾಲಕ್ರಮಗಳು.

ಕುಮಟೆಯಿಂದ ಹೊರಡುವದು—	ಬೆಳಗ್ಗಿನ ೭ ಘಂಟೆಗೆ.
ಶಿರ್ಸಿಗೆ ಸೇರುವದು—	,, ೧೦ ,,
ಶಿರ್ಸಿಯಿಂದ ಬಿಡುವದು ಶಿವಮೊಗ್ಗಾ ಕಡೆಗೆ—	ಮಧ್ಯಾಹ್ನ ೧ ,,
ಸಾಗರಕ್ಕೆ ಸೇರುವದು (ಸಿದ್ದಾಪುರ ಮಾರ್ಗವಾಗಿ)—	ಸಾಯಂಕಾಲ ೬
ಸಾಗರದಿಂದ ಶಿರ್ಸಿ ಕಡೆಗೆ ಹೊರಡುವದು—	ಬೆಳಗ್ಗಿನ ೬ ,,
ಸಿದ್ದಾಪುರದ ಮೇಲಾಗಿ ಶಿರ್ಸಿಗೆ ಸೇರುವದು—	,, ೧೧ ,,
ಶಿರ್ಸಿಯಿಂದ ಕುಮಟೆಗೆ ಹೊರಡುವದು—	ಮಧ್ಯಾಹ್ನ ೨ ,,
ಕುಮಟೆಗೆ ಸೇರುವದು—	ಸಾಯಂಕಾಲ ೫ ,,

N B.— ಈ ಮೇಲಿನ ಲೈನುಗಳ ವಿನಹ ಶಿರಸಿಯಿಂದ ಹುಬ್ಬಳ್ಳಿಗೆ ಪ್ರತ್ಯೇಕ ಒಂದು ಸರ್ವಿಸ ಪ್ರಾರಂಭಿಸುವ ಯೋಚನೆ ಸಹಾ ಇರುತ್ತದೆ. ಸರ್ವರೂ ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

SHIMOGA,
22—11—1924.

M. MANJAPPA.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ, ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು. ೬೦,೭೦ ವರ್ಷದ ಮುದುಕರ ಕಾಮವಿಕಾರವು ತರುಣರಂತೆ ಪ್ರವರ್ಧಮಾನವಾಗುವದು. (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಪ್ರಾಪ್ತವಾದ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.— ಪರಮಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರೋಗಿಯಾಗುವದು. ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವದು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವು ಚೆನ್ನಾಗಿ ಆಗುತ್ತದೆ, ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ತಾಪ ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಡೈಬೇಟಿಸ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೩–೪–೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚು ಹೆಚ್ಚು ಬೀಳುವದಿಲ್ಲ. ಐದರ ಬಾಟಲಿಗಳ ಕಿಮ್ಮತ್ತು ೧೨–೦–೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧–೪–೦ ೩ ಬಾಟ್ಲಿಗೆ ೩–೦–೦, [illegible] ೧೩–೦–೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸು, ಪೋ. ನಿಪ್ಪಾಣಿ, ಜಿ ಬೆಳಗಾಂ

ಜಾಹೀರ ವಿನಂತಿ.

ಅಂಕೋಲೆಯಲ್ಲಿ ಒಂದು ಹೊಸ ಇಂಗ್ಲೀಷ ಶಾಲೆಯನ್ನು ಸ್ಥಾಪಿಸುವಬಗ್ಗೆ ಅನೇಕ ಜನರ ಕಡೆಯಿಂದ ನಮ್ಮಕಡೆಗೆ ಸೂಚನೆಗಳು ಬಂದದ್ದರಿಂದ, ನಾವು ಇದೇ ಬರುವ ಜೂನ ತಿಂಗಳಲ್ಲಿ ಮೊದಲಿನ ನಾಲ್ಕು ಇಯತ್ತೆಗಳನ್ನು ತೆರೆಯಬೇಕೆಂಬ ಆಲೋಚನೆ ಮಾಡಿದ್ದೇವೆ. ಶಾಲೆಯನ್ನು ಈ ವರುಷವೇ ಶಾಲಾ ಖಾತೆಯವರ ಕಡೆಯಿಂದ ರಜಿಸ್ಟರ ಮಾಡಿಸಿಕೊಳ್ಳುವದು [illegible] ಅಭಾವದ ಮೂಲಕ ಸಾಧ್ಯವಿಲ್ಲದ್ದರಿಂದ [illegible] ಹುಡುಗರಿಗೆ [illegible] ಅಥವಾ [illegible] ಹೈಸ್ಕೂಲಿನಲ್ಲಿ [illegible] ಮಾಡಿಸಿ [illegible] ನಿಶ್ಚಯಿಸಿದ್ದೇವೆ. [illegible] ಶಿಕ್ಷಣವನ್ನು [illegible] ಗಳು [illegible] ಜನರ ಅಗ್ರಹದ ಮೂಲಕ [illegible] ಈ ಶುಭಕಾರ್ಯದ [illegible] ಗನೆ ಕೈಕೊಳ್ಳಬೇಕಾ[illegible] ಅದ್ದರಿಂದ [illegible] ತಮ್ಮ [illegible] ಗೆ ತಿಳಿಸಿಕೊಟ್ಟು [illegible] ತಕ್ಕ ಸ್ವರೂಪವನ್ನು [illegible] ಕ್ಕೀವೆ. [illegible] ದರವು [illegible] ತೀರ ಬಡ ಸ್ಥಿತಿಯ ಹುಡುಗರಿಗೂ ಸಹ ಶಾಲೆಯ ಫಾಯದೆ ಸಿಗಬೇಕೆಂಬ ಹೇತುವಿನಿಂದಾ ಅದನ್ನು ಕಡಿಮೆ ಪ್ರಮಾಣದ ಮೇಲೆ ಇಡಬೇಕೆಂತಲೂ ನಮ್ಮ ಆಲೋಚನೆ ಇರುವದು. ಈ ಶಾಲೆಯಲ್ಲಿ ಗ್ರ್ಯಾಜುಯೇಟ್ ಮಾಸ್ತರರ ಕಡೆಯಿಂದಲೇ ಮುಖ್ಯ ಮುಖ್ಯ ವಿಷಯಗಳನ್ನು ಕಲಿಸುವ ವ್ಯವಸ್ಥೆಯನ್ನು ಮಾಡಬೇಕೆಂತಲೂ ನಮ್ಮ [illegible] ಇರುವದು. ನಮ್ಮ ಪ್ರಯತ್ನದಬಗ್ಗೆ ಸಹಾನುಭೂತಿಯುಳ್ಳವರು ತಮ್ಮ ಕೈಲಾದಮಟ್ಟಿಗೆ ಯಾವ ರೂಪದಿಂದಾದರೂ ಸಹಾಯ ಮಾಡಬೇಕೆಂತಾ ನಮ್ಮ ಪ್ರಾರ್ಥನೆಯಿರುವದು. ಇದೇ ಪ್ರಕಾರ, ಶಾಲೆಯ ಹಿತಚಿಂತಕರು ಶಾಲೆಯಬಗ್ಗೆ ತಮ್ಮ ಸೂಚನೆಗಳನ್ನು ಕಳುಹಿಸಿಕೊಟ್ಟಲ್ಲಿ ಅವುಗಳನ್ನು [illegible] ಸ್ವೀಕರಿಸಿ ಅನುಕೂಲವಾದವುಗಳನ್ನು ಕೃತಿಯಲ್ಲಿ ತರಲಿಕ್ಕೆ ಪ್ರಯತ್ನಿಸಲಾಗುವದು. [illegible] ಜನರ ಒಂದು [illegible] ಯನ್ನು [illegible] ನಮ್ಮ [illegible] ಉದ್ದೇಶ [illegible] Union and [illegible] ಇಷ್ಟಪಡಿಸುವ ಈ [illegible] ಸೂಚನೆ [illegible] ಸೂಚನೆಗಳನ್ನು [illegible] ಈ ಕೆಳಗೆ ಸಹಿ ಮಾಡಿದವರ ಕಡೆಗೆ ಪತ್ರವ್ಯವಹಾರ ನಡೆಸಬೇಕು.

Ankola, 14-5-1925. } **M. M. Pikle,** B. A.
Secretary,
of the Provisional Committee,
The New English School. Ankola.

ಜಾಹೀರಾತು.

ತಾರೀಖು ೭-೪-೧೯೨೫ನೇ ಪತ್ರದಲ್ಲಿ ಪ್ರಸಿದ್ಧಪಡಿಸಿರುವ ನಾಮಾಂಕಿತ ಸುಪ್ರಸಿದ್ಧ ಪರಂಪರಾ ಜ್ಯೋತಿಷಿ ಕೇ. ಸಿ. ನಾರಾಯಣಶಾಸ್ತ್ರಿ ಎಂಬುವರು ಸ್ವಲ್ಪ ದಿವಸದಿಂದ ಶಿವಮೊಗ್ಗಾ ಡಿಸ್ಟ್ರಿಕ್ಟ್ ಸಾಗರದಲ್ಲಿ ಕೆಲವು ದಿವಸದ ಪ್ರಾರ್ಥನೆ [illegible] ಮುಕ್ಕಾಂ ಮಾಡಿರುತ್ತಾರೆ. ಅವಶ್ಯವಿದ್ದ ಯಾವತ್ತೂ ಜನರು [illegible] ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡತಕ್ಕದ್ದು.

ಪತ್ತೆ:—
ಕೇರಳ ಜ್ಯೋತಿಷಿ
ಕೇ. ಸಿ. ನಾರಾಯಣ ಶಾಸ್ತ್ರಿ.
ಮುಕ್ಕಾಂ ಕಾವಲೆ ಛತ್ರ, ಪೋ. ಸಾಗರ,
ಡಿಸ್ಟ್ರಿಕ್ಟ - ಶಿವಮೊಗ್ಗಾ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. ರಿಜಿಸ್ಟರ್ಡ



[illegible], ನುಣುಪಾಗಿರುವ, ನೀಲಿಯಿಂದ ನಿಬಿಡವಾದ ಕೇಶವನ್ನು ಹೊಂದಲು ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶದಾಯಿಯನ್ನು ಸ್ತ್ರೀಯರು [illegible] ಉಪಕರಣವಾಗುವದೋ.

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಂದರ್ಯವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಾಯಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ತಪ್ಪಿಹೋಗಿ, ಮನಸ್ಸು ಉಲ್ಲಾಸದಿಂದ [illegible] ಕೂದಲುಗಳು ಅದನ್ನು [illegible] ತೊಡಗಿ [illegible] ರೋಗಗಳೂ ತಪ್ಪು, ಆದರೆ, ಅವು ದಟ್ಟವಾಗಿ ಬೆಳೆಯ[illegible] ವಾಸನೆಯು ಮಧುರವೂ ಮೋಹಕವೂ ಆಗಿರುವದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡಿಕೊಳ್ಳ[illegible] ಈ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. [illegible] ಶ್ರೇಷ್ಠತೆಯು ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ "ಸರ್ಟಿಫಿಕೇಟ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಅನೇಕ [illegible] ಗೃಹಸ್ಥರ ಉತ್ತಮೋತ್ತಮವಾದ ಪ್ರಶಸ್ತಿಪತ್ರಗಳೂ ದೊರೆತಿವೆ.

ಕ್ರಯ — ಸೀಸೆ 1 ಕ್ಕೆ ರೂಪಾಯಿ 1-0-0, ಸೀಸೆ 3 ಕ್ಕೆ ರೂಪಾಯಿ 2-10-0, ವಿ.ಪಿ. ಖರ್ಚು (-14)

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಆದ್ದಾಗಿ ಪರೀಕ್ಷಿಸಿ [illegible] ತೆಗೆದ [illegible] ಕುಸುಮಗಳಿಂದ ಸಿದ್ಧ ಮಾಡುವದು. ಅದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ಚೀಲಿಯಲ್ಲಿ ಅಥವಾ [illegible] ಈ [illegible] ದ ಕೆಲವು ಹನಿಗಳನ್ನು ಚಿಮುಕಿಸಿ [illegible] ಬಹಳ ಕಾಲ ಉಳಿಯುತ್ತದೆ. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರದ ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವದು. ಬೇರೆ [illegible] ಒಂದೇ ಒಂದು ಸೀಸೆಯನ್ನು ಖರೀದಿಸಿ [illegible] ಗಂಧವು ಅವೆಲ್ಲವುಗಳನ್ನು ವಿಶಾರ ಮನುಷ್ಯನನ್ನು ತನ್ನ ಶಕ್ತಿಯಿಂದ ಸೆಳೆದುಕೊಳ್ಳುವದು. ಕ್ರಯ [illegible] ಸೀಸೆ 1 ಕ್ಕೆ 0-12-0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0 ಅಂಚೆಯ ವೆಚ್ಚ ಬೇರೆ 0-4-0 ಸಣ್ಣ ಸೀಸೆ 1 ಕ್ಕೆ 0-8-0; 1 ಡ್ರಾಮ್ (ಮಾದರಿಯ) ಸೀಸೆ 1 ಕ್ಕೆ 0-12-0
ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0

Address:- **The Anglo Indian Drug & Chemical Co,**
16 Market, **BOMBAY 2.**

ವಿವಿಧ ಸಂಗ್ರಹ.

ಸುರಾಜ್ಯ ಸ್ವರಾಜ್ಯಗಳ ಅಂತರ

ಸದ್ಯಕ್ಕೆ ಹಿಂದುಸ್ಥಾನದ [illegible] ಹಾಗಿದೆ ಅವಹೇಳನವಲ್ಲವೆ. [illegible] ಅಂತಃಕಲಹದ ಮಂಗಗಳನ್ನು [illegible] ಯನ್ನು ಸ್ವಾಧೀನಕ್ಕೆ ಅರ್ಹ [illegible] ಬಿಟ್ಟಾರಯೆ ತಂತೆ! [illegible] ಬಾಯಿಗೂಡಿದ [illegible] ದ ಉದ್ಯೋಗ [illegible] ಸಂಬಳವನ್ನು [illegible] ಬರು. ಪರಕೀಯ [illegible] ಮಾಡಿದ ಸವಲತ್ತು ದೊರೆತ [illegible] ದೇಶದಲ್ಲಿ [illegible] ಅಂಥ ಪರಿಸ್ಥಿತಿಯಲ್ಲಿ [illegible] ಮಾಡಿ ಉದ್ಯೋಗ [illegible] ನಿರ್ಧರಿಸಿರುವರು [illegible] ಉದ್ಯೋಗ ಮೊದಲಾದ [illegible] ಗಕ್ಕೆ ಬೇಕಾಗಿರುವ [illegible] ದಿನಗಳ ವರೆಗಿನ [illegible] ನಿಶ್ಚಯಿಸಿರುವರು. [illegible] ಸುತ್ತಿರುವ [illegible] ವಿರೋಧ [illegible] ಹೊಸ ಉದ್ಯೋಗಗಳನ್ನು [illegible] ನಮ್ಮ ಸರಕಾರಕ್ಕೆ ಹಣದ ಅಡಚಣೆ [illegible] ಮೇಲೆ ಅನ್ಯಾಯದಿಂದ ಹೇರಿದ [illegible] ನ್ನು ತೆಗೆದು [illegible] ಹಣದ ಅಡಚಣೆ [illegible] ಯಾವ ಹೊಸ ಉದ್ಯೋಗವನ್ನಾದರೂ [illegible] ಸಲಿಕ್ಕೆ ಯಾವಾಗಲೂ ಹಣದ ಅಡಚಣೆ [illegible] ಸಿವಿಲ ಸರ್ವಿಸು ಮೊದಲಾದ [illegible] ಪಗಾರದಾರಿಯನ್ನು [illegible] ದೊಡ್ಡದೆ ಹಣದ ಅಡಚಣೆ [illegible]. ಇದ ನಮ್ಮ ಸರಕಾರವು ಮಾಡ [illegible] ಸ್ವಾರ್ಥತ್ಯಾಗವು ಸ್ವರಾಜ್ಯ-ಸುರಾಜ್ಯದೊಳಗಿನ ಅಂತರವದರಿಂದ ಇದೆ.

⁂

ವಚನಭಂಗದ ಬಾಕಿಂಗು

ಲ್ಯಾಸಿಯಾ ಜೆಕಿಲು ಎಂಬವಳು ಒಬ್ಬ ಇಂಗ್ಲಿಷ ಬ್ಯಾರಿಸ್ಟರನ ಹೆಂಡತಿಯು. ಆಕೆಯ ಗಂಡನು ೧೯೧೬ನೇ ಇಸವಿಯಲ್ಲಿ ಯುದ್ಧದಲ್ಲಿ ತೀರಿಕೊಂಡನು. ಧನ[illegible] ಈಕೆಯು ಸಿಮ್ಲಾದಲ್ಲಿರುವಾಗ ೧೯೧೮ ರಲ್ಲಿ ಕಲಕತ್ತೆಯ ಒಂದು ಕಂಪನಿಯ ನೌಕರನಾದ ಹೆನ್ರಿ ವಿಲ್ಲ ಎಂಬವನು ಈಕೆಗೆ ಭೆಟ್ಟಿಯಾದನು. ವಿಲ್ಲನು ಶ್ರೀಮಂತನು. ಲ್ಯಾಸಿಯು ಚೆಲುವೆಯು. ವಿಧವೆಯಾದ ಈಕೆಗೂ, ಹೆಂಡತಿಯಿಲ್ಲದ ಈ ಯುವಕನಿಗೂ ಪರಸ್ಪರ ಪ್ರೀತಿಯುಂಟಾಯಿತು! ಪ್ರಣಯಿಗಳ ಪತ್ರವ್ಯವಹಾರ ನಡೆಯಿತು! ಅಷ್ಟರಲ್ಲಿ ಈ ಮದುವೆಗಳ ದುರ್ದೈವವು ಫಲಿಸಿತು. ಮಹಾಯುದ್ಧದ ಗಡಿಬಿಡಿಯಲ್ಲಿ ಈಕೆಯು [illegible] ಸಂಶಯ ದಿಂದ ಸರಕಾರದ ನಿಷ್ಕಾರಣ ಪ್ರತಿಬಂಧಕ್ಕೆ ಒಳಗಾಗಬೇಕಾಯಿತು. ಅಷ್ಟರಲ್ಲಿ ವಿಲ್ಲನಿಗೆ ಇನ್ನೊಂದ ಹೆಣ್ಣು ಗಂಟುಬಿದ್ದು ೧೯೨೦ರಲ್ಲಿ ಮದುವೆಯಾಯಿತು! ಯುದ್ಧ ಮುಗಿದ ನಂತರ ಲ್ಯಾಸಿಯು ನಿರಪರಾಧಿಯೆಂದು ಸರಕಾರದ ಮನವರಿಕೆಯಾಯಿತು. ಈಕೆಯು ನಷ್ಟಕ್ಕಾಗಿ ೨೦ ಸಾವಿರ ರೂಪಾಯಿ ಸರಕಾರದ ಪ್ರತಿಫಲರೂಪವಾಗಿ ಸಿಕ್ಕಿತು! ಆದರೂ ವಿಲ್ಲನಂಥ ಶ್ರೀಮಂತ [illegible] ತಪ್ಪಿ ಹೋದ್ದರಿಂದ ಉಂಟಾದ ನಷ್ಟ [illegible] ದಲೆಲ್ಲೆಂದು ಇವಳು ಸರಕಾರವನ್ನು ದೂರಿ [illegible] ಆರೋಪ ಹೊರಿಸಿ [illegible] ದಾವೆ ಹಂಚಿದಳು! ಮೂರು ಕೋರ್ಟಿನಲ್ಲಿ ಇವಳ [illegible] ಕ್ಕೆ ಡಿಕ್ರಿಯಾಯಿತು. ಹೈಕೋರ್ಟಿನ ಅಪೀಲು [illegible] ಈ ಡಿಕ್ರಿಯು ಕಿತ್ತುಕೊಂಡಿತು. ಲ್ಯಾಸಿಯು ಪ್ರಿವ್ಹಿ ಕೌನ್ಸಿಲಿನಲ್ಲಿ ಅಪೀಲು ಮಾಡಿರುವಳು. ಇಂಥ ವಚನಭಂಗದ ಅಪೀಲು ಪ್ರಿವ್ಹಿ ಕೌನ್ಸಿಲಿನಲ್ಲಿ ಬಂದದ್ದು ಇದೇ ಮೊದಲನೇ ಸಲವಂತೆ! [illegible] ಹತ್ತು ವರ್ಷಗಳಿಂದ ಸಿಮ್ಲಾದಲ್ಲಿ ಮದುವೆಯ ಸ್ವಪ್ನದ ನಡುವೆ ವಿಲ್ಲನು ಹಣಗೆ ಕಟ್ಟಿಕೊಡ [illegible]. ಇನ್ನೂ ಕೇಳಿಗೆಯಿಲ್ಲ ಪಾಪ!

⁂

ವಿಮಾನಗಳಿಂದ ನೀರಿನ ಪೂರವಣೆ!

ಕ್ರೈಸ್ತರನ್ನು ಸೋಲಿಸಿದೆವೆಂಬ ಅಹಂಕಾರದಿಂದ ಮೊರೊಕ್ಕೋದ ಸ್ವಾತಂತ್ರ್ಯವಾದಿಗಳು ಈಗ ಫ್ರೆಂಚರ ಮೇಲೆ ತಿರುಗಿ ಬಿದ್ದಿದ್ದಾರೆ. ಅವರ ಕೆಲ ಪ್ರದೇಶಗಳು [illegible] ಇದು ಗುಡ್ಡಗಾಡಾಗಿರುವದರಿಂದ ಅವರಿಗೆ ಅನುಕೂಲವಾಗುವದೆಂದು ಬಗೆದ, ಫ್ರೆಂಚರು ಅತ್ಯಂತ ಮೇಲೆ ಶಿಬಿರ ನಿಂತಿದ್ದಾರೆ. ಈ ಫೌಜನ್ನು ಸುಮಾರು ಮುನ್ನೂರು ಮೈಲು ವಿಸ್ತಾರವಾದ [illegible] ಇದ್ದು ಅಯಕಟ್ಟಿನ ಸ್ಥಳಗಳನ್ನು ಆಕ್ರಮಿಸಿದ್ದಾರೆ. ಇದರಲ್ಲಿ ಸಣ್ಣ ಸಿಕ್ಕ ಫ್ರೆಂಚ ದಂಡಿನ ಠಾಣೆಗಳನ್ನು ಮುತ್ತಿದ್ದಾರೆ. ಈ ಸೈನಿಕರನ್ನು ಬಿಗಿ ಕೊಳ್ಳತೊಡಗುವಾಗ ಫ್ರೆಂಚ ಸೈನ್ಯವು ಹೊರಟಿರುತ್ತದೆ. ಇದ ಅಧಿಕ ಯುದ್ಧವಲ್ಲ. ಫ್ರೆಂಚರ ಪಾಲಿನ [illegible] ಅವಮಾನ ಮಾಡಿಕೊಳ್ಳಬೇಕಾಗಬಹುದೆಂದು ಈ ಸರಕಾರದವರು ಅಂದುಕೊಂಡು [illegible] ದೊರೆಯುವಂತೆ ಸೇನಾಸಿದ್ಧತೆ ನಡೆಸಿದ್ದಾರೆ. ಈಗ ಮೊರೊಕ್ಕೋದ ಮುಸಲಮಾನರ ಮುತ್ತಿಗೆಯಲ್ಲಿ ಸಿಕ್ಕ ಫ್ರೆಂಚ ಸೈನಿಕರಿಗೆ ನೀರ ಕೊರತೆಯಾಗಿದೆ. ವಿಮಾನಗಳಲ್ಲಿ ನೀರಿನ ಹೇಂಟೆಗಳನ್ನು ಒಯ್ದು, [illegible] ಸ್ಥಳಗಳಲ್ಲಿ ಚೆಲ್ಲುತ್ತಿದ್ದಾರೆ! ನೀರಿನಂತ [illegible]!

—ವಿಜಯ.

⁂

ಮಹಾರೇಕಾರರ ಮೇಲಾಟ

ಹಂಗೇರಿಯ ರಾಜಧಾನಿಯಾದ ಬೂಡಾಪೆಸ್ಟದಲ್ಲಿ ಗಲ್ಲಿಗೇರಿಸುವ ಮಹಾರೇಕಾರನ ಒಂದು ಜಾಗವು ಖಾಲಿ ಬಿತ್ತು. ಈ ಸುದ್ದಿಯು ತಿಳಿದ ಕೂಡಲೆ ೬ ತಾಸಿನಕ್ಕೆ ೫೦೦ ಉಮೇದ್ವಾರರ ಅರ್ಜಿಗಳು ಬಂದವು; ಅದರೊಳಗೆ ೩ ರಂಗದವರ ಅರ್ಜಿಗಳೂ ಇದ್ದವು! ಅರ್ಜಿಗಳಿಂದಮೇಲೆ, ಅವರು ಉಮೇದ್ವಾರರು ತಮ್ಮ ಯೋಗ್ಯತೆಯ ಹೆಚ್ಚಳವನ್ನು ತೋರಿಸುವದು ಸಹಜವು. ಅನೇಕ ಉಮೇದ್ವಾರರು ತಾವು ಈ ಗಲ್ಲಿಗೇರಿಸುವ ಕೆಲಸವನ್ನು ಪ್ರತ್ಯಕ್ಷ ಮಾಡುತ್ತೇವೆಂದು ತಿಳಿಸಿದ್ದರು! ಬೇರೆ ಕೆಲವರು ತಾವು ಅನೇಕ ಜನರನ್ನು ಗಲ್ಲಿಗೇರಿಸಿದ್ದೇವೆಂದು ತಮ್ಮ ವಿಸ್ತೃತ ಅನುಭವದ ಇತಿಹಾಸವನ್ನೇ ಬರೆದಿದ್ದರು! ಒಬ್ಬನು ತನ್ನ ಅರ್ಹತೆಯನ್ನು ಸಿದ್ಧಮಾಡುವದಕ್ಕಾಗಿ ತನಗೆ ಬೇರೆ ಬೇರೆ ಹುರುಳ್ಳಿಗಳ ಗುಣಧರ್ಮಗಳು ಚನ್ನಾಗಿ ಗೊತ್ತಿರುತ್ತವೆಂದು ನಮೂದಿಸಿದ್ದನು! ಆದರೆ ಒಬ್ಬ ಸಾಹಸಿಗ ಉಮೇದ್ವಾರನಂತೂ, ತಾನು ಅಮೆರಿಕೆಯಲ್ಲಿ ಇದ್ದಾಗ ೨೫ ನಿಗ್ರೋ ಜನರನ್ನು "ಲಿಂಚ" ಅಂದರೆ ಮರಕ್ಕೆ ತೂಗಹಾಕಿ, ಅಮಾನುಷ ರೀತಿಯಿಂದ ಹೊಡೆದು ಕೊಂದನಂತ ಮೇಲೆ ಹುರಿಮಾಡಿದ್ದನು! ಇಂಥ ಅತಿರಥಿ ಮಹಾರಥಿಗಳೊಳಗಿಂದ ಯಾರನ್ನು ನೇಮಿಸಬೇಕೆಂಬ ವಿವಂಚನೆಯಲ್ಲಿ ಆ ಸರಕಾರವು ಬಿದ್ದರಬೇಕಾಗಿದೆ!

⁂

ಅಮೇರಿಕದ ಪತ್ರಿಕೆಗಳ ಅತ್ಯದ್ಭುತ ಅಭಿವೃದ್ಧಿಯು

ಇಡೀ ಪ್ರಪಂಚವನ್ನೇ ಬೆರಗು ಮಾಡುತ್ತಿದೆ. 'ನ್ಯೂಯಾರ್ಕ ಟೈಮ್ಸ್' ಎಂಬ ದೈನಿಕ ಪತ್ರವೊಂದೇ ದಿನವೊಂದಕ್ಕೆ ೧೭೫ ಟನ್ ಕಾಗದಗಳನ್ನೂ, ೪ ಟನ್ ಮಸಿಯನ್ನೂ ನುಂಗುತ್ತದೆ. ವರ್ಷಂಪ್ರತಿ ಇವರಿಗೆ ಬೀಳುವ ವೆಚ್ಚ ರೂ. ೧೮,೦೦೦,೦೦೦. ಇಲ್ಲಿನ ಪ್ರಮುಖ ಪತ್ರಿಕೆಗಳ 'ಅಫೀಸ' ಎಂಬುದು ಸಣ್ಣದೊಂದು ನಗರವೇ ಆಗಿದ್ದು, ಎಡಿಟರ್ ಸಬ್ ಎಡಿಟರ್ ಮೊದಲಾದವರ ವಾಸಗೃಹವೂ ಉದ್ಯೋಗ ಅಭ್ಯಾಸ ಮಂದಿರವೂ ಇಲ್ಲಿಯೇ. ಪತ್ರಿಕೆಗಳ ದರೆ ಅಲ್ಲಿ ನಮ್ಮ ಕರ್ನಾಟಕದಂತೆ ಸಾಮಾನ್ಯವಲ್ಲ. ಬರಿಯೋ, ಬರದೆಯೋ ಕರೆದು ಬಿಸಾಡುವಷ್ಟದಲ್ಲ; ಸ್ನೇಹಕ್ಕಾದರೂ, ದಾಕ್ಷಿಣ್ಯಕ್ಕಾದರೂ, ಒತ್ತಾಯಕ್ಕಾದರೂ 'ಚಂದಾ' ಕೊಡುವದಲ್ಲ. ಯುನೈಟೆಡ್ ಸ್ಟೇಟ್ಸಿನ ಕಾಲೇಜುಗಳಲ್ಲಿ ಕೂಡ 'ಟೆಕ್ಸ್ಟ್ ಬುಕ್ಸ್'ಗಳೊಂದಿಗೆ ಪತ್ರಿಕೆಗಳನ್ನೂ ಕ್ಲಾಸುಗಳಲ್ಲಿಟ್ಟುಕೊಂಡೇ ಅಭ್ಯಾಸಮಾಡುತ್ತಾರೆ. ಪ್ರಪಂಚದ ರಾಜನೀತಿಯೂ, ಪ್ರಚಲಿತ ಐತಿಹಾಸಿಕ ವಿಷಯಗಳೂ, ಸಾಹಿತ್ಯಸಿದ್ಧಿಯೂ, ಕಲಾಶಾಸ್ತ್ರವೂ ಚರಿತ್ರೆ ಭೂಗೋಲಗಳ ವಿಷಯಗಳ ಪರಿಜ್ಞಾನವೂ, ರಸಾಯನ ಶಾಸ್ತ್ರದ ನವೀನ ಶೋಧಗಳ ಪರಿಚಯವೂ ಆಗುವದಲ್ಲ ಪತ್ರಿಕೆಗಳಿಂದಲೇ. ಹೆಚ್ಚೇಕೆ? ಪ್ರತಿಯೊಂದು ವಿಷಯದ ಅನುಭವವೂ ದೊರೆಯುವದು ಪತ್ರಿಕೆಗಳಿಂದಲೇ. ಅದೇ, ಬರೇ ಪಠ್ಯಪುಸ್ತಕಗಳ ಶಿಕ್ಷಣವು ಅಪೂರ್ಣವೆಂದು ಅಲ್ಲಿನವರ ಭಾವನೆ. 'ಮೃತ ಚರಿತ್ರೆಗಿಂತಲೂ ಜೀವಂತ ಪತ್ರಿಕೆಯೇ ಉತ್ತಮ'ವೆಂದು ಅಲ್ಲಿನ ವಿದ್ಯಾಂಗದ ಅಧಿಕಾರಿಗಳ ಸೂಚನೆ. ಅಮೇರಿಕದಲ್ಲಿ, ಅದೇ ಕಾರಣದಿಂದ, ಪತ್ರಿಕಾ ಉದ್ಯೋಗಕ್ಕೆ 'ಪಂಡಿತ ವೃತ್ತಿ' ಎಂಬ ಗೌರವ ನಾಮವಿದೆ. ಮಹಾನಮಾರ್ಜನಗಳೂ ಇವೆ. ಈ ಉದ್ಯೋಗದ ಶಿಕ್ಷಣಕ್ಕಾಗಿಯೇ ಮಿಸೌರಿ ವಿಶ್ವವಿದ್ಯಾಲಯ ಒಂದರಲ್ಲಿಯೇ ಸುಸಜ್ಜಿತವಾದ ೩ ಕಾಲೇಜುಗಳಿರುವದಷ್ಟೇ ಅಲ್ಲ; ಒಟ್ಟಿಗೆ ಅಮೇರಿಕದಲ್ಲಿ ೨೦೦ ಕಾಲೇಜುಗಳಲ್ಲಿ ಇದೇ ವೃತ್ತಿಯನ್ನು ಕಲಿಸುತ್ತಿದ್ದಾರೆ. ಈ ಶಿಕ್ಷಣದಲ್ಲಿ ಪಾರಂಗತನಾದ ಬಳಿಕ, ಅಲ್ಲಿ 'ಡಿಗ್ರಿ' ಎಂಬ ಪ್ರಶಸ್ತಿಯೂ ಇದೆ, ಸ್ವತಂತ್ರವಾದ ಸಂಪಾದನೆಯೂ ಇದೆ. ಆದುದರಿಂದಲೇ ಸಕೆಂಡರಿ ಶಾಲೆಗಳಲ್ಲಿ ಕೂಡ, ಈ 'ಪತ್ರಿಕಾ' ಸಂಬಂಧದ ಪ್ರಥಮ ಶಿಕ್ಷಣದ ಪಾಠಗಳನ್ನು, ಪಾಠಗಳ ಪಟ್ಟಿಯಲ್ಲಿ ಸೇರಿಸಿ ಮುಂದಿನ ಹೆಚ್ಚಿಗೆಯ ಶಿಕ್ಷಣಕ್ಕೆ ಅನುಕೂಲ ಮಾಡಿಕೊಟ್ಟಿರುತ್ತಾರೆ. ವಿದ್ಯಾಂಗದ ಈ ಪಾಲಿಸಿಯು ಎಷ್ಟೊಂದು ಉತ್ಕೃಷ್ಟ! ಇಂಡಿಯದಲ್ಲಿಯಾದರೆ, ಅಂತಹ ಪಾಲಿಸಿಯಾಗಲಿ, ಪ್ರಯೋಜನವಾಗಲಿ, ಸ್ವಪ್ನದಲ್ಲಿಯಾದರೂ ದೊರೆಯುವ ಸಂಭವವುಂಟೇ?

— ಕಂಠೀರವ.

⁂

ಸರ್ ಸುರೇಂದ್ರನಾಥ ಬನರ್ಜೀಯವರು ಮತ್ತು ಅವರ ಸಿದ್ಧಿ.

ಕಲ್ಕತ್ತೆಯಲ್ಲಿ ಸರ್ ಸುರೇಂದ್ರನಾಥ ಬನರ್ಜಿಯೆಂಬ ಬಂಗಾಲಿ ಬ್ರಾಹ್ಮಣರೊಬ್ಬರು ರಾಜಕೀಯ ವಿಷಯಗಳನ್ನು ತಿಳಿದುಕೊಂಡು ರಾಜಕೀಯ ಸಂಗತಿಗಳಲ್ಲಿ ನಿಪುಣರೆನಿಸಿಕೊಂಡಿರುತ್ತಾರೆ. ಅವರು ಕೆಲ ವರ್ಷಕಾಲ "ಬೆಂಗಾಲಿ" ಎಂಬ ಒಂದು ಇಂಗ್ಲಿಷ ಪತ್ರಿಕೆಯ ಸಂಪಾದಕರಾಗಿದ್ದರು. ಹಳೆಯ ಕೌನ್ಸಿಲುಗಳಲ್ಲಿ ಮೆಂಬರರಾಗಿದ್ದರು. ಇಂಗ್ಲಂಡ, ಅಮೇರಿಕ ಮುಂತಾದ ದೇಶಗಳನ್ನು ಸಂಚರಿಸಿದ್ದವರೂ, ಅನೇಕ ದೇಶಗಳ ಮುಖ್ಯಸ್ಥರ ಸ್ನೇಹಿತರೂ ಆಗಿರುತ್ತಾರೆ. ಅವರಿಗೆ ಈಗ ೭೭ ವರ್ಷ ವಯಸ್ಸಾಗಿದೆ.

ಈ ಮುದಿ ಪ್ರಾಯದಲ್ಲಿ ಅವರೊಂದು ತಮ್ಮ "ಜೀವನ ಸ್ಮೃತಿ" ಎಂದು ತನ್ನ ಜೀವಮಾನದಲ್ಲಿ ನಡೆದ ಸಂಗತಿಗಳನ್ನೆಲ್ಲಾ ಬರೆದು ಒಂದು ಪುಸ್ತಕವನ್ನು ಪ್ರಚುರಪಡಿಸಿರುತ್ತಾರೆ. ಅವರಿಗೆ ಅಷ್ಟು

ಸ್ವಾಯುಮದರೂ ಏಳ ಆರೋಗ್ಯದಲ್ಲಿರುತ್ತಾರೆಂಬ ವಿಷಯವನ್ನೆಲ್ಲ ಬರೆದಿರುತ್ತಾರೆ. ಅವರು ನಿದ್ರೆ ಕೆಲಸಂತೆ ಜಾಗರೂಕತೆಯುಳ್ಳವರಂತೆ. ಈ ಸಂಬಂಧವಾಗಿ ಕೆಲವು ಸ್ಮೃತಿಗಳನ್ನು ಬರೆದಿರುತ್ತಾರೆ ಅವುಗಳಲ್ಲಿ ಒಂದು ಹಿಂದುಸ್ಥಾನಕ್ಕೆ ಸಂಬಂಧಪಟ್ಟಿದೆ.

ಈಗ್ಗೆ ೬ ವರ್ಷಗಳ ಹಿಂದೆ ಹಿಂದುಸ್ಥಾನದ ರಾಜದ್ರೋಹಕರ ,ಚಳವಳಗಳನ್ನು ನಿಲ್ಲಿಸುವದಕ್ಕೆಂದು ಹಿಂದುಸ್ಥಾನದ ಸರಕಾರದವರು 'ರೌಲೆಟ್ ಆಕ್ಟ್' ಎಂಬ ಒಂದು ಕಾನೂನನ್ನು ಮಾಡುವದಕ್ಕೆ ಕೌನ್ಸಿಲ್ ಮೆಂಬರುಗಳ ಅಭಿಪ್ರಾಯವನ್ನು ತೆಗೆದುಕೊಳ್ಳುವದಕ್ಕಾಗಿ ಆಗಿನ ವೈಸರಾಯರಾಗಿದ್ದ ಲಾರ್ಡ ಚೆಮ್ಸ್‌ಫೋರ್ಡರವರು ಮೆಂಬರುಗಳ ಒಂದು ಮೀಟಿಂಗ್ ಮಾಡಿದರು. ಆಗ ಸುರೇಂದ್ರನಾಥ ಬ್ಯಾನರ್ಜಿಯವರೂ ಒಬ್ಬ ಮೆಂಬರರಾಗಿದ್ದರು. ಆ ಕಾನೂನನ್ನು ಆದಷ್ಟು ಬೇಗ ಜಾರಿಗೆ ತರಬೇಕೆಂದು ವೈಸರಾಯರವರು ರಾತ್ರಿಯೂ ಮೀಟಿಂಗನ್ನು ನಡೆಸಿದರು. ಆದರೆ ಸರ್ ಸುರೇಂದ್ರನಾಥ ಬ್ಯಾನರ್ಜಿಯವರು ೯ ಗಂಟೆಗೆ ಸರಿಯಾಗಿ ಮನೆಗೆ ಹೋಗಿ ನಿದ್ರೆ ಮಾಡಿದರಂತೆ ಆ ರಾತ್ರಿಯೇ ಆ ಕಾನೂನನ್ನು ಮಂಜೂರು ಮಾಡಿದರು. ಆದರೆ ಒಂದು ಕಡೆ ಗವರ್ನಮೆಂಟಿನವರಿಗೂ ಕಷ್ಟಗಳಿದ್ದವು. ಇನ್ನೊಂದು ಕಡೆ ಆ ಕಾನೂನನ್ನು ಜಾರಿಗೆ ತಂದರೆ ತಮ್ಮ ಸ್ವಾತಂತ್ರ್ಯವೆಲ್ಲವೂ ನಿರ್ನಾಮವಾಗುವದೆಂದು ಜನರು ಗೋಳಾಡುತ್ತಿದ್ದರು ಆ ಕಾನೂನು ಮಂಜೂರಾದ ಮೇಲೆಯೇ (ಅನಿಹತಾರ) ಪಾನ್‌ಕ-ಅಬ್ರೇಕನ್ ಮುಂತಾದವುಗಳೆಲ್ಲವೂ ಜರುಗಿದವು ಅಂತಹ ಸಮಯದಲ್ಲಿ ತಮ್ಮ ಅಭಿಪ್ರಾಯಗಳನ್ನು ನಿರ್ಭಯವಾಗಿ ಕೊಡುವುದರ ಬದಲು ಸ್ಸರ್ ಬ್ಯಾನರ್ಜಿಯವರು ಎಲ್ಲರ ಕ್ಷೇಮಕ್ಕಿಂತಲೂ ತಮ್ಮ ನಿದ್ರೆಯೇ ದೊಡ್ಡದೆಂದೂ ಹೆಚ್ಚೆಂದು ಸುಖವಾಗಿ ನಿದ್ರೆ ಮಾಡಿದರೆಂದು ಕೊಚ್ಚಿಕೊಳ್ಳುತ್ತಾರೆ

"ಈ ವರೆಗೂ ನನ್ನ ಮಿದುಳೆಲ್ಲವೂ ಚೆನ್ನಾಗಿದೆ" ಯೆಂದು ಬರೆದಿರುತ್ತಾರೆ. ರೌಲೆಟ್ ಆಕ್ಟನ್ನು ಜಾರಿಗೆ ತರುವುದಕ್ಕಿಂತ ಮುಂಚಿನಿಂದಲೇ ಅವರು ಅನಾರೋಗ್ಯದಲ್ಲಿರಬಹುದೆಂದು ನಮ್ಮ ಅಭಿಪ್ರಾಯವಾಗಿದೆ.

* *

"ಎಲ್ಲದಕ್ಕಿಂತಲೂ ಸಂಸಾರವೇ ಮೇಲು" ಗವರ್ನರಾದ ಒಬ್ಬ ಹೆಂಗಸಿನ ಅಭಿಪ್ರಾಯ.

ಅಮೇರಿಕದ ಸಂಯುಕ್ತ ರಾಜ್ಯಗಳಲ್ಲಿ ಬೇರೆ ಬೇರೆ ಪ್ರಾಂತ್ಯಗಳಿವೆ. ಅವುಗಳಲ್ಲಿ ಒಂದೊಂದರಲ್ಲಿ ಇಲ್ಲಿ ಕಲೆಕ್ಟರರು ಮತ್ತು ಕಮಿಶನರುಗಳು ಹೇಗೋ ಹಾಗೆಯೇ ಗವರ್ನರರುಗಳ ಉದ್ಯೋಗವಿರುತ್ತದೆ ಆದರ ಇಲ್ಲಿನ ಉದ್ಯೋಗಸ್ಥರನ್ನು ಸರಕಾರದವರೇ ನೇಮಿಸುತ್ತಾರೆ. ಅಲ್ಲಿಯ ಗವರ್ನರುಗಳನ್ನು ಪ್ರಜೆಗಳೇ ಓಟು ಕೊಟ್ಟು ನೇಮಕ ಮಾಡುತ್ತಾರೆ.

ಹೀಗೆ, ಅಲ್ಲಿನ ಟೆಕ್ಸಾಸ್ ಎಂಬ ಪ್ರಾಂತ್ಯಕ್ಕೆ ಒಬ್ಬ ಹೆಂಗಸನ್ನು ಗವರ್ನರ್ ಕೆಲಸಕ್ಕೆ ಅಲ್ಲಿಯ ಪ್ರಜೆಗಳು ನೇಮಿಸಿರುತ್ತಾರೆ ಆಕೆಯ ಹೆಸರು ಮಿಸೆಸ್ ಫರ್ಗ್ಯುಸನ್ ಎಂಬುದಾಗಿದೆ.

ಗವರ್ನರ್ ಪದವಿಯು ಸಿಕ್ಕಿತೆಂದು ಆಕೆಯು ತನ್ನ ಇತರ ನಾಚಿಕೊಂಡು ಆಫೀಸಿನಲ್ಲೇ ಕುಳಿತುಕೊಳ್ಳುವಳೇ? ಇಲ್ಲ.

"ನಾನು ಜನಪ್ರತಿನಿಧಿಯೆಂದು ನನ್ನ ಗೃಹಕೃತ್ಯಗಳನ್ನು ಬಿಡಲಾಗುವದಿಲ್ಲ. ನಾನು ಹೆಂಗುಸಾದುದರ ಮೂಲಕ ಹೀಗೆ ಹೇಳುತ್ತೇನೆಂದಲ್ಲ. ಸರಿಯಾದ ಹೆಂಗಸಿಗೆ ಎಲ್ಲದಕ್ಕಿಂತಲೂ ಸಂಸಾರವೇ ಮೇಲಾಗಿದ್ದರಿಂದ ನಾನು ಹಾಗೆ ನಡೆಯುವದಕ್ಕೆ ಕಾರಣ. ಪ್ರಾಪಂಚಿಕ ವ್ಯವಹಾರಗಳು ಹೆಂಗಸನ್ನು ಗೃಹಕಾರ್ಯದಿಂದ ಹೊರಗಿಸ ಕೂಡದು

"ನನ್ನ ಸಮಯದ ಅರ್ಧ ಭಾಗವನ್ನು ಆಫೀಸಿನಲ್ಲೂ, ಇನ್ನರ್ಧ ಭಾಗವನ್ನು ಮಕ್ಕಳ ಕೊಳಕು ಬಟ್ಟೆಗಳನ್ನು ತೊಳೆಯುವದರಲ್ಲೂ ಕಳೆಯುತ್ತೇನೆ.

"ನಮಗೆ ಪ್ರಾಪಂಚಿಕ ವ್ಯವಹಾರಗಳಲ್ಲಿ ಕೈಹಾಕುವ ಸುಯೋಗಗಳು ಸಿಕ್ಕಿದ ಕೂಡಲೆ ಗೃಹಕೃತ್ಯವನ್ನು ಬಿಡುವ ಉಪಾಯವಾಯಿತೆಂದು ಅನೇಕ ಹೆಂಗಸರು ತಿಳಿಯುತ್ತಾರೆ. ಪ್ರತಿಯೊಬ್ಬ ಹೆಂಗಸೂ ಬಹಿರ್ ಪ್ರಪಂಚದ ಕೆಲಸಕ್ಕಾಗಿ ಗೃಹಕೃತ್ಯವನ್ನು ತ್ಯಾಗಮಾಡುತ್ತಿದ್ದರೆ ನಮ್ಮ ನಾಗರೀಕತೆಯೆಲ್ಲವೂ ಕಾಡು ಮನುಷ್ಯರ ಸ್ಥಿತಿಯಂತಾಗುವದು" ಎಂದು ಹೇಳುತ್ತಾಳೆ.

ಆಕೆಯ ಮಾತಿನ ಪ್ರಕಾರ, ಗವರ್ನರಳಾದ ಆ ಹೆಂಗಸು ತನ್ನ ಮನೆಯನ್ನು ಗುಡಿಸುವದರಿಂದ ಮೊದಲ್ಗೊಂಡು ಪಾತ್ರೆಗಳನ್ನು ಸಹ ಸ್ವತಃ ಬೆಳಗುತ್ತಿದ್ದಾಳಂತೆ!

ಧನ್ಯ ಫರ್ಗ್ಯುಸನ್! — ಲೋಕರಹಸ್ಯ

ಅಂಕೋಲಾ ಇಂಗ್ಲೀಷ ಶಾಲೆಯ ಸದ್ಯದ ಸ್ಥಿತಿಯು.

ಅಂಕೋಲಾ ಇಂಗ್ಲೀಷ ಶಾಲೆಯ ಸದ್ಯದ ಸ್ಥಿತಿಯನ್ನು ತಿಳಕೊಂಡ ಪ್ರತಿಯೊಬ್ಬ ವಿಚಾರಶೀಲ ಮನುಷ್ಯನ ಮನಸ್ಸಿನಲ್ಲಿ ಈ ಶಾಲೆಯ ಬಗ್ಗೆ ಉದಾಸೀನತೆಯು, ಸಂದೇಹ, ತಿರಸ್ಕಾರವು ಮತ್ತು ಬೇಸರವು ಉಂಟು ಮಾಡದೇ ಇರಲಾರದು. ಈ ನಾಲ್ಕೈದು ವರ್ಷಗಳಿಂದ ಶಾಲಾ ಮಾಸ್ತರರಲ್ಲಿಯೂ ಬಾಲಕರಲ್ಲಿಯೂ, ವಿರೋಧಭಾವವು ಹೆಚ್ಚಿದ ಸಂಗತಿಯು ಪ್ರತಿ ಒಬ್ಬನಿಗೆ ಗೊತ್ತಿರುತ್ತದಷ್ಟೆ? ಇದರ ಕಾರಣಗಳನ್ನು ಸೂಕ್ಷ್ಮದೃಷ್ಟಿಯಿಂದ ವಿಚಾರ ಮಾಡಿ ನೋಡಿದರೆ [illegible] ಶಾಲೆಯ ಬಾಲಕರ ಮನಸ್ಸಿನಲ್ಲಿ ಹಳೇ ಅನುಭವೀಕ ಮಾಸ್ತರರನ್ನು ಓಡಿಸಿ, ಹೊಸ ಹೊಸ ಅನನುಭವಿಕ ಮಾಸ್ತರರನ್ನು ಕರಿಸಿ ಪಗಾರದ ಮೇಲೆ ನೇಮಿಸಿಕೊಳ್ಳುವರೇ ಇವರ ಮುಖ್ಯ ಉದ್ದೇಶವಿರುತ್ತದೆಂಬುದು, ಸಹಜವಾಗಿ ಹೇಳಬೇಕಾಗುತ್ತದೆ. ಈ ಶಾಲೆಯು ಸ್ವಲ್ಪ ಹಿಂದಿನ ಕಾಲಕ್ಕಿಂತ ಸ್ಥಿತಿಯನ್ನು ತಿಳಕೊಂಡಲ್ಲಿ ಎಷ್ಟೋ ಅನುಭವೀಕ ಮಾಸ್ತರರು ಹಲವು ವರ್ಷಗಳ ವರೆಗೆ ಕೆಲಸ ಮಾಡಿ ಕಮಿಟಿಯವರ ಉದ್ದಾಮ ವೃತ್ತಿಗೆ ಬೇಸತ್ತು ಕಟ್ಟಕಡೆಗೆ ಶಾಲೆಗೆ ಕಾಯಂ "ರಾಮ ರಾಮ" ಕೊಟ್ಟ ಸಂಗತಿಯು ಎಲ್ಲವರಿಗೂ ತಿಳಿದವಾಗಿರಬಹುದು. ಮತ್ತ ಈಗಿನ ಮಾಸ್ತರರ ಪೈಕಿ ಸ್ಥಳೀಕರ ಮಾಸ್ತರರು ಸಹ ನಾಲ್ಕೈದು ವರ್ಷ [illegible] ಕಮಿಟಿಯವರ ವರ್ತನೆಯಿಂದ ಅಸಮಾಧಾನಪಟ್ಟು ಮೊದಲಿನವರಂತೆ ಶಾಲೆಯನ್ನು ಸ್ವೀಕರಿಸಲಿಕ್ಕೆ ತಯಾರಾಗಿ ನಿಂತಿದ್ದಾರೆ ತಿಳಿಸಲಿಕ್ಕೆ ಬಹಳೇ ವ್ಯಸನವಾಗುತ್ತದೆ. ಆದರೆ ಸ್ಥಳೀಕರ ಮಾಸ್ತರರು ತಮ್ಮ ಕರ್ತವ್ಯಕ್ಕೆ ವಿಮುಖರಾಗುವದನ್ನು ನೋಡಿ ಪ್ರತಿ ಒಬ್ಬನಿಗೆ ಆಶ್ಚರ್ಯವಾಗದೆ ಇರಲಾರದು "ಇಲಿಯು ಸಿಟ್ಟಿನಿಂದ ಮನೆಗೆ ಬೆಂಕಿ ಹಚ್ಚಿದಂ"ತೆ ಕಮಿಟಿಯ ಸಿಟ್ಟಿನಿಂದ ತಮ್ಮ ಊರಲ್ಲಿದ್ದ ಸಾರ್ವಜನಿಕ ಸಂಸ್ಥೆಯ ಹಿತದ ಕಡೆಗೆ ಏನೂ ಲಕ್ಷ ಕೊಡದೆ ಒಣ ಸ್ವಾರ್ಥವನ್ನು ಸಾಧಿಸಲಿಕ್ಕೆ ಈ ಶಾಲೆಯನ್ನು ಬಿಟ್ಟು ಹೋಗುವದನ್ನು ನೋಡಿ ನಿಮ್ಮ ಕಡೆಗೆ ಬೆಟ್ಟು ತೋರಿಸಿ ಯಾರಾದರೂ ನಗದೆ ಇರುವರೇ? ಆದರೆ, ನೀವು ಈ ಶಾಲೆಯನ್ನು ಬಿಟ್ಟು ಹೋಗುವದರಿಂದ ಶಾಲೆಗೆ ಎಳ್ಳಷ್ಟಾದರೂ ಹಾನಿ ತಗಲಲಿಕ್ಕಿಲ್ಲವೆಂಬ ಸಂಗತಿ ನಿಮ್ಮ ನೆನಪಿನಲ್ಲಿರಲಿ ಅಯ್ಯೋ! ಅಂಕೋಲೆಯ ದುರ್ದೈವವು ಇನ್ನೂ ಸರಿಯಾಗಲಿಲ್ಲವಲ್ಲ! ಹೈಸ್ಕೂಲವಾಗುವದು ಒಂದು ಕಡೆಗೇ ಇರಲಿ. ಮಾತ್ರ "ಅಡಲ್ಯಾಹರಿ, ಗಾಢವಾಚೆ ಪಾಯ ಧರೀ" ಎಂಬ ಮರಾಠಿ ಗಾದೆಯಂತೆ ಈ ಕಮಿಟಿಯು ಹೊಸ ಅನನುಭವೀಕ ಮಾಸ್ತರರ ಕಾಲುಗಳನ್ನು ಹಿಡಿಯಬೇಕಾಗಲಿಕ್ಕಿಲ್ಲವೇ?

ಇದೇ ಹೋದ ಮೂರು-ನಾಲ್ಕು ತಿಂಗಳ ಹಿಂದೆ ಕಮಿಟಿಯ ವ್ಹಾಯಿಸ ಪ್ರೆಸಿಡೆಂಟರಿದ್ದ ಕ್ರಿಯಾಶೀಲ [illegible] ಇವರು ಈ ಶಾಲೆಯ ಆರ್ಥಿಕ ಸ್ಥಿತಿಯನ್ನು ಸುಧಾರಿಸಲಿಕ್ಕೆ ಶಾಲೆಯ ಘಟನೆಯಲ್ಲಿ ಫೇರಫಾರ ಮಾಡುವದರ ಬಗ್ಗೆ ಎಷ್ಟು ಹೇಳಿಕೊಂಡರೂ ಕೇಳದೆ, ಅವರಿಗೆ ರಾಜೀನಾಮೆ ಕೊಡುವ ಪ್ರಸಂಗವು ಬಂದೆಂಬುದು ಎಲ್ಲರಿಗೂ ಗೊತ್ತಿದ್ದ ಸಂಗತಿಯೇ ಸರಿ. ಅದೇ ಪ್ರಕಾರ ಮಾಸ್ತರರು ತಮ್ಮ ಪಗಾರವನ್ನು ಬೆಳಸಿರಿ, ಎಂದು ಹೇಳಿದರೆ ಹೆಕ್ಮನ್ ಎಜ್ಯುಕೇಶನಲ್ ಸೊಸೈಟಿಯ ಹೈಸ್ಕೂಲುಗಳಲ್ಲಿ ಕೆಲಸ ಮಾಡುವ ಶಿಕ್ಷಕರಂತೆ ನೀವು ಸಹ ಕಡಿಮೆ ಪಗಾರದ ಮೇಲೆ ಕೆಲಸ ಮಾಡಬೇಕೆಂಬ ಸಬೂಬು ಹೇಳುವದು ಉಚಿತವೇ? ಪ್ರಾವಿಡೆಂಟ ಫಂಡದ ಮಾತು ಚರ್ಚೆಗೆ ಬಂದರೆ ಮುನಿಸಿಪಲ್ ಶಾಲೆಗಳಲ್ಲಿ ಅಂಥ ತರದ ಧರ್ಮದ ಯೋಜನೆಯು ಕೈಕೊಳ್ಳಲಿಲ್ಲೆಂದು ಹೇಳಿ ಶಿಕ್ಷಕರನ್ನು ಝುಲಾಯಿಸುವದು ಕಮಿಟಿಯವರಿಗೆ ಯೋಗ್ಯವೇ? ಗ್ರಾಜ್ಯುಯೆಟ ಮಾಸ್ತರರನ್ನು ಲೈಫ ಮೆಂಬರನ್ನಾಗಿ ಮಾಡಿಕೊಳ್ಳಿರಿ ಎಂದು ಹೇಳಿದರೆ ಸರಕಾರಿ ಶಾಲೆಗಳಲ್ಲಿ ಹತ್ತು ಪಗಾರಿನ ಮೇಲೆ ಕೆಲಸ ಮಾಡುವ ಶಿಕ್ಷಕರನ್ನು ತೋರಿಸಿ ಅಂಥಾ ಪಗಾರಿ ಮಾಸ್ತರರಿಗೆ ಎಂದೂ ಶಾಲೆಯ ಆಡಳಿತೆಯಲ್ಲಿ ಏನೂ ಸಂಬಂಧ ಇರಬಾರದೆಂಬ ಅನ್ಯಾಯದ ರೀತಿ ಭಾಸ ಮಾಡುವರು ಇದು ಯಾವ ಹಿತದ ದೃಷ್ಟಿಯಿಂದ ವಿಹಿತವೇ? ಗ್ರಾಜ್ಯುಯೆಟ ಮಾಸ್ತರರು ತಮಗೆ B. T. ಪರೀಕ್ಷೆಗೆ ಕಳುಹಿಸಿ ಕೊಡಲಿಕ್ಕೆ ಹೇಳಿದರೆ ಕಾರವಾರ ಗಿಬ್ಸ ಹೈಸ್ಕೂಲಿನಲ್ಲಿ ಮೆಟ್ರಿಕ ಮಾಸ್ತರರು S. T. C. ಪರೀಕ್ಷೆಗೆ ಕಳಿಸುತ್ತಾರೆ ಎಂಬ ಸಬೂಬಿನ ಮೇಲೆ ನೀವು ಸಹ ನಿಮ್ಮ ಖರ್ಚಿನಿಂದ S. T. C. ಪರೀಕ್ಷೆಗೆ ಹೋಗಬೇಕು ಎಂಬ ಆದರ್ಶದ ಉತ್ತರವನ್ನು ಕೊಡುತ್ತಾರೆ. ಕಮಿಟಿಯು ಈ ವಿಪರೀತ ಅಜ್ಞಾನವನ್ನು ನೋಡಿ ದೂರಾಗಿ ಮರುಗದೇ ಇರುವರೇ? ಶಾಲೆಗೆ ಬೇಕಾದ ಸಾಹಿತ್ಯಗಳನ್ನು ಪೂರೈಸಲಿಕ್ಕೆ ಹೇಳಿದರೆ ನಿಮ್ಮ ಮಾತಿನ ಮೇಲೆ ಭರವಸೆ ಇಡಲಿಕ್ಕೆ ಆಗುವದಿಲ್ಲೆಂಬ ಉತ್ತರ ಕೊಡುವದು ಶಾಲೆಯ ಭಾಗ್ಯೋದಯದ ದೃಷ್ಟಿಯಿಂದ ಯುಕ್ತವೇ? ಇಂಥ ಮೇಲೆ ಕಮಿಟಿಯವರಲ್ಲಿ ಮತ್ತು ಶಿಕ್ಷಕರಲ್ಲಿ ವಿರೋಧಭಾವ ಉಂಟಾದರೆ ಏನು ಆಶ್ಚರ್ಯವು? ಕುರುಡನಿಗೆ ಇಡೀ ಜಗತ್ತು ಅಂಧಕಾರಮಯವಾಗಿ ಕಾಣುವಂತೆ ನಮ್ಮ ಶಾಲೆಯ ಬಾಲಕರಿಗೆ ಈ ದೊಡ್ಡ ದೊಡ್ಡ ಸಂಗತಿಗಳ ವ್ಯಂಗಗಳೇ ಮಹತ್ವ, ಕಾಣುತ್ತವಲ್ಲ ಅಯ್ಯೋ ಪಾಪ ವಿಪರೀತ ಅಜ್ಞಾನ

ಅಜ್ಞಾನವೃತ್ತಿಯ ಪ್ರಸಿದ್ಧ ಬಾಲಕರೇ, ಈಗಲಾದರೂ ನೀವು ನಿಮ್ಮ ಪ್ರಮಾದಕೃತ್ಯವನ್ನು ಬಿಟ್ಟು ಶಾಲೆಯ ಹಿತದೃಷ್ಟಿಯಿಂದಲೇ ಈಗಿನ ಪರಿಸ್ಥಿತಿಗೆ ಅನುಕೂಲವಾಗಿ ಹೊಸ ಹೊಸ ಉಪಾಯಗಳನ್ನು ಹುಡುಕಿ ತೆಗೆದು ಅವುಗಳನ್ನು ಅಮಲಿನಲ್ಲಿ ತರುವದು ಭೂಷಣಾಸ್ಪದವಲ್ಲವೇ? ಶಾಲೆಯೆಂದರೆ ಬರೇ ಇಮಾರತು ಬುಕ್, ಬೆಂಚು, ಲ್ಯಾಬೋರೇಟರಿ ಮುಂತಾದವುಗಳಷ್ಟೇ ಅಲ್ಲ. ಶಾಲೆಯ ಮುಖ್ಯಾಂಗವು ಶಿಕ್ಷಕರಿದ್ದು ಶಾಲೆಯ ಭಾಗ್ಯೋದಯವು ಅವರ ಮೇಲೆಯೇ ಅವಲಂಬಿಸಿರುವದರಿಂದ ಅವರ ಮೇಲೆ ನಂಬಿಗೆ ಇಟ್ಟು ಅವರಲ್ಲಿ ಶಾಲೆಯು ತಮ್ಮದೇ ಎಂದು ಪವಿತ್ರ ಭಾವನೆಯನ್ನುಂಟು ಮಾಡಿ ಶಾಲೆಯನ್ನು ಉದ್ಧಾರಮಾಡುವದಕ್ಕೆ ತರುವದು ಬಾಲಕರ ಅವಶ್ಯಕರ್ತವ್ಯವಿದೆ. ಅಂಕೋಲೆಯಲ್ಲಿ ಹೈಸ್ಕೂಲವಾಗಬೇಕಾದರೆ ಪಾಲಕರಲ್ಲಿಯೂ, ಬಾಲಕರಲ್ಲಿಯೂ ಶಿಕ್ಷಕರಲ್ಲಿಯೂ ಐಕ್ಯಭಾವವಿರಬೇಕೆಂಬ ಸಂಗತಿಯು ಶಾಲೆಯ ಒಬ್ಬ ಹುಡುಗನಾದರೂ ತಿಳಿದಿದ್ದಾನೆ. ಹೇಳುವನು ಕಮಿಟಿಯು ಒಂದು ಕಡೆಗೆ, ಶಿಕ್ಷಕರು ಮತ್ತೊಂದು ಕಡೆಗೆ ಇಂಥ ಮೇಲೆ ಶಾಲೆಯು ಮೂರನೇ ಕಡೆಗೆ ಆದರೆ ಅದರಲ್ಲಿ ಏನು ಆಶ್ಚರ್ಯವು? ಕಂಡಿರಾ!

ಅಂಕೋಲಾ, } *Pro-Bono-Publico.*
ತಾ ೧೨-೫-೨೫

[ಈ ವಿಷಯವನ್ನು ಪ್ರಸಿದ್ಧಿಪಡಿಸುವ ಇಚ್ಛೆಯು ನಮಗಿದ್ದಿಲ್ಲ ಆದರೆ ಜಾತಿಪಕ್ಷದ ಸಂಬಂಧವಿಲ್ಲದ ಈ ಲೇಖವನ್ನು ಪ್ರಕಟಿಸಲೇಬೇಕೆಂದು ೫-೬ ಮಂದಿ ಪ್ರತಿಷ್ಠಿತ ಸ್ಥಾನಿಕ ಪ್ರಜೆಗಳು ಲೇಖನದ ಮೂಲಕ ವಿನಂತಿಸಿಕೊಂಡದ್ದರಿಂದ ಪ್ರಕಟಿಸಿದೆವು. ಸಂ. ಕಾ.]

ಕಾನಡಾವೃತ್ತ.

ಮಿತಿ ಕ್ರೋಧನ ಸಂ| ವೈಶಾಖ ಬ| ೧೧| ಸೋಮವಾರ

ಕಲಹದ ಪ್ರಸ್ತಾವಗಳು.

ಕಳೆದ ವಾರ ಫರೀದಪುರ ಪರಿಷತ್ತಿನಲ್ಲಿ ನಡೆದ ಸಂಧಾನದ ಪ್ರಸ್ತಾವಗಳನ್ನು ನಿರೂಪಿಸಿದ್ದೆವು. ಈ ಸಾರೆ ಸಾತಾರೆಯಲ್ಲಿ ನಡೆದ ಕಲಹದ ಪ್ರಸ್ತಾವಗಳನ್ನು ನಿವೇದಿಸಬೇಕಾಗಿದೆ. ಸರಕಾರ-ಪ್ರಜೆಗಳೊಳಗೆ ಸಂಧಾನವಾಗಿ, ಶಾಂತತೆ ಹಾಗೂ ಸ್ವರಾಜ್ಯವು ನೆಲೆಸುವವೋ? ಎಂಬ ಆಶೆಯು ಕಳೆದ ವಾರ ಕೆಲ ಆಶಾವಾದಿಗಳಲ್ಲಾದರೂ ಅಂಕುರಿಸಿರಬಹುದು. ಆದರೆ ಈ ವಾರದಲ್ಲಿ ಸಾತಾರೆಯಲ್ಲಿ ಜರುಗಿದ ಮಹಾರಾಷ್ಟ್ರ ಪರಿಷತ್ತಿನಿಂದ ಕಾಂಗ್ರೆಸಿನಲ್ಲಿ ಪುನಃ ಕಲಹಗಳುಂಟಾಗುವವೋ ಎಂಬ ಭೀತಿಯು ಉಂಟಾಗಹತ್ತಿದೆ! ಇದೇ ಈ ಸಾತಾರೆಯ ಪರಿಷತ್ತಿನ ವೈಶಿಷ್ಟ್ಯವು.

ಅಧ್ಯಕ್ಷರಾದ ಬೆರಿಸ್ಟರ ರಾಮರಾವ ದೇಶಮುಖರ ಭಾಷಣವನ್ನಾಗಲಿ, ಸಭೆಯಲ್ಲಿ ಪಾಸಾದ ಠರಾವುಗಳನ್ನಾಗಲಿ ವಿಚಾರಾಲೋಚಿಸಿದರೆ, ಬೆಳಗಾವಿಯ ಮಹಾಸಭೆಯಲ್ಲಿ ಮಂಜೂರಾದ ರಾಜಿಯ ಕರಾರುಗಳನ್ನು ಮುರಿದು ಕಾಂಗ್ರೆಸನ್ನು ಸ್ವರಾಜ್ಯಪಕ್ಷವಾಗಿ ರೂಪಾಂತರಿಸಬೇಕೆಂಬದೊಂದೇ ದುರಾಗ್ರಹವು ವ್ಯಕ್ತವಾಗುತ್ತದೆ. ಇದು ಮಹಾರಾಷ್ಟ್ರೀಯರ ವಿಲಕ್ಷಣಗುಣವಾಗಿಯೆ! ಇದಾವದೆಂಬದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ. ಮಹಾತ್ಮರು ಬಂಧನದಲ್ಲಿದ್ದಾಗ ಕೌನ್ಸಿಲ ಪ್ರವೇಶದ ಕೋಲಾಹಲವನ್ನೆಬ್ಬಿಸಿ, ಕಾಂಗ್ರೆಸಿನಲ್ಲಿ ಬಿರುಕಿನ ಬೀಜ ಬಿತ್ತಿದ ಶ್ರೇಯಸ್ಸು 'ಕೇಸರಿ' ಪಂಥದ ಮಹಾರಾಷ್ಟ್ರೀಯರಿಗೇ ಸಲ್ಲಬೇಕಾಗಿದೆ. ಬಹು ಪ್ರಯಾಸದಿಂದ ಮಹಾತ್ಮರು ಬೆಳಗಾವಿಯಲ್ಲಿ ನೆರವೇರಿಸಿದ ಐಕ್ಯವನ್ನು ಮುರಿಯುವ ಪ್ರಯತ್ನವು ಈಗ ಪುನಃ ಸಾತಾರೆಯಲ್ಲಿ ಪ್ರಾರಂಭವಾಗಿದೆ. ಮಹಾತ್ಮರು ತಮ್ಮ ಭಾಷಣಗಳಲ್ಲಿ ಮಹಾರಾಷ್ಟ್ರಕ್ಕೆ 'ವೀರ'ವೆಂದು ಸಂಬೋಧಿಸುವದುಂಟು. ಐಕ್ಯವಿದ್ದಲ್ಲಿ ಬಿರುಕು ಹುಟ್ಟಿಸುವದೇ ವೀರತನವಾಗಿದ್ದರೆ, ಇಡೀ ದೇಶದಲ್ಲಿ ಮಹಾರಾಷ್ಟ್ರಕ್ಕೆ ಸರಿದೊರೆಯುವ ವೀರರು ಇನ್ನಾರಿಲ್ಲೆಂಬುದು ನಿಜ!

ಬೆಳಗಾವಿಯ ಮಹಾಸಭೆಯಲ್ಲಿ ಮಂಜೂರಾದ ರಾಜಿಯ ಕರಾರುಗಳು - ಮುಖ್ಯವಾಗಿ ನೂಲಿನ ವರ್ಗಣಿಯ ಕರಾರು - ಎಷ್ಟೋ ಸ್ವರಾಜ್ಯ ಪಕ್ಷದವರಿಗೆ ಮಾನ್ಯವಿದ್ದಿಲ್ಲ; ಆದರೆ ಸ್ವರಾಜ್ಯ ಪಕ್ಷಕ್ಕೆ ಕಾಂಗ್ರೆಸಿನ ಮಾನ್ಯತೆ ದೊರೆಯಬೇಕೆಂಬ ಆಕಾಂಕ್ಷೆಯಿಂದ ನೂಲಿನ ವರ್ಗಣಿಗೆ ತಲೆಬಗ್ಗಿಸಿದ್ದರು! ಆದರೂ ಇನಾಸಿಯಿಂದಲೂ, ಅಂತಃಕರಣಪೂರ್ವಕವಾಗಿಯೂ ಈ ಕರಾರನ್ನು ಪಾಲಿಸಲು ವಚನಬದ್ಧರಾಗಿದ್ದರು. ಬೆಳಗಾವಿಯ ತೀರ್ಮಾನವಾಗಿ ಬರೇ ನಾಲ್ಕು ತಿಂಗಳಾಗಿರುವವು. ಇತರ ಪ್ರಾಂತಗಳಲ್ಲಿ ಈ ಕಾರ್ಯವು ಇನ್ನು ಸಾಗುತ್ತಲಿದೆ. ಮಹಾತ್ಮರು ಪ್ರಾಂತ-ಪ್ರಾಂತಗಳಲ್ಲಿ ಪ್ರವಾಸ ಬೆಳೆಸಿ ಕೈರಾಟೆಯ ಪ್ರಚಾರವನ್ನು ಮಾಡುತ್ತಿರುವರು. ಇಷ್ಟರಲ್ಲಿ ನೂಲಿನ ವರ್ಗಣಿಯು ರದ್ದಾಗಬೇಕೆಂಬ ಹಾಹಾಕಾರವು ಮೊದಲಿಗೇ ಮಹಾರಾಷ್ಟ್ರದಲ್ಲಿ ಪ್ರಾರಂಭವಾಯಿತು. ಈ ಅಭಿಪ್ರಾಯದ ಜನರೇ ಸಾತಾರೆಯಲ್ಲಿ ಕೂಡಹತ್ತಿದರು! ಅಸ್ಸಲ ಅಸಹಕಾರಿಗಳು ಕಾಂಗ್ರೆಸಿನಲ್ಲಿ ಬೇಸರು ಹುಟ್ಟಿಸುವಂತ ಈ ಪ್ರಸ್ತಾವಗಳನ್ನು ತ್ಯವ ಪರಿಷತ್ತಿಗೆ ಹಾಜರಾಗಲು ಒಪ್ಪದ್ದರಿಂ, ಈ ದುರಾಗ್ರಹಿಗಳ ಐಕ್ಯವಾಯಿತೆಂದು ಹೇಳಿದರೆ ತಪ್ಪಾಗದು. ಅದರಿಂದ ನೂಲಿನ ವರ್ಗಣಿಯು ಯಶಸ್ವಿಯಾಗಲಿಲ್ಲೆಂದೂ, ಇನ್ನು ಯಶಸ್ವಿಯಾಗುವ ಸಂಭವವಿಲ್ಲೆಂದೂ ಇಷ್ಟು ಬೇಗನೇ ಕರಾ ಕೊಡೆದು, ಅದನ್ನು ರದ್ದು ಮಾಡಿ ಅದರ ಬದಲಾಗಿ ಮೊದಲಿನ ನಾಲ್ಕಾಣೆಯ ವರ್ಗಣಿಯು ಪುನರುಜ್ಜೀವನ ಮಾಡಬೇಕೆಂದು, ಅಖಿಲ ಭಾರತ ಕಾಂಗ್ರೆಸ ಕಮೀಟಿಗೆ ಬಿನ್ನೈಸುವ ತೀರ್ಮಾನವು 'ಪ್ರಚಂಡ' ಬಹುಮತದಿಂದ ಮಂಜೂರಾಯಿತಂತೆ! ಈ 'ಪ್ರಚಂಡ' ಪರಿಷತ್ತಿಗೆ ಸ್ವಾಗತ ಕಮೀಟಿಯ ೧೫೦ ಸಭಾಸದರೂ, ಬರೇ ಸುಮಾರು ೧೫೦ ಮಂದಿ ಪ್ರತಿನಿಧಿಗಳೂ ಕೂಡಿದ್ದರೆಂದು ಮರೆಯಕೂಡದು!

ಈ ಪರಿಷತ್ತಿನಲ್ಲಿ ಮಂಜೂರಾದ ಇನ್ನೊಂದು ಠರಾವು ಇನ್ನಿಷ್ಟು ಮನೋರಂಜಕವಿದೆ. ಪರಿಷತ್ತು ಸದ್ಯಸ್ಥಿತಿಯನ್ನು ಪರೀಕ್ಷಿಸಿ, ಈಗ ಇಡೀ ದೇಶದಲ್ಲಿ ಕಂಡು ಬರುವ ಅನಾಸ್ಥೆಯ ಮೂಲ ಕಾರಣಗಳನ್ನೂ, ಅದನ್ನು ಪರಿಹರಿಸಲು ಅವಶ್ಯವುಳ್ಳ ಸಂಗತಿಗಳ ಹೊಸ ಶೋಧವನ್ನೂ ಹಚ್ಚಿರುವದು. ಮಹಾತ್ಮರ ವಿಧಾಯಕ ಕಾರ್ಯಕ್ರಮದಿಂದ ಲೋಕದಲ್ಲಿ ಅನಾಸ್ಥೆಯುಂಟಾಗಿದೆ! ಅದಕ್ಕೆ ರಾಜಕೀಯ ಸ್ವರೂಪವಿಲ್ಲ! ಅಂದರೆ, ಸರಕಾರದಗೂಡ ಜಗ್ಗಾಡಿ ವಾಕ್ಪ್ರಹಾರದ ಶೌರ್ಯ ತೋರಿಸಲು ಅನುವಿಲ್ಲ! ಆದ್ದರಿಂದ ಸ್ವರಾಜ್ಯ ಪಕ್ಷದ 'ವೀರ' ಧೋರಣವನ್ನು ಕಾಂಗ್ರೆಸ್ಸು ಅಂಗೀಕರಿಸಬೇಕು; ಸ್ವರಾಜ್ಯ ಪಕ್ಷವೂ, ಕಾಂಗ್ರೆಸ್ಸೂ ಏಕರೂಪವಾಗಿರಬೇಕು. ಅಂದರೇನೇ ಲೋಕದಲ್ಲಿ ಹೊಸ ಉತ್ಸಾಹವೂ, ಚೈತನ್ಯವೂ ತುಂಬಿ ತುಳುಕುವವು! ಈ ಮೇರೆಗೆ ಕಾಂಗ್ರೆಸ ಕಾರ್ಯಕ್ರಮವನ್ನು ಪುನರಾಲೋಚಿಸಿ ಬದಲಾಯಿಸಲು ಕೂಡಲೇ ಅಖಿಲ ಭಾರತೀಯ ಕಾಂಗ್ರೆಸ ಕಮೀಟಿಯನ್ನು ಕೂಡಿಸುವದಗತ್ಯವೆಂದು ತೀರ್ಮಾನಾಗಿರುವದು.

ಒಟ್ಟಿಗೆ, ಮಹಾತ್ಮರು ಪ್ರತಿಪಾದಿಸುತ್ತಿರುವ ಕಾರ್ಯಕ್ರಮದಲ್ಲಿ ಮಹಾರಾಷ್ಟ್ರೀಯರಿಗೆ ವಿಶ್ವಾಸವಿಲ್ಲ. ಬೆಳಗಾಂವಿಯ ಮಹಾ ಸಭೆಯಲ್ಲಿ ಪಾಸಾದ ರಾಜಿಯ ಕರಾರು ಮಾನ್ಯವಿಲ್ಲ. ಮಹಾತ್ಮರ ಧುರೀಣತ್ವವೂ ಬೇಕಾಗಿಲ್ಲ! - ಇದೇ ಈ ಪರಿಷತ್ತಿನ ಮಥಿತಾರ್ಥವು. ಈ ಸಂಗತಿಯು ಪರಿಷತ್ತಿನ ಅಧ್ಯಕ್ಷರಾದ ಬೆರಿಸ್ಟರ ರಾಮರಾವ ದೇಶಮುಖರ ಪ್ರಾಸ್ತಾವಿಕ ಭಾಷಣದಿಂದ ಸ್ಪಷ್ಟವಾಗುತ್ತದೆ. ಈ ಮಹಾಶಯರು ದೇಶದಲ್ಲಿ ಪ್ರಸ್ತುತ ನಡೆಯುತ್ತಿರುವ ಸಾಮಾಜಿಕ ಹಾಗೂ ಧಾರ್ಮಿಕ ಕಲಹಗಳೂ, ಅನಿಷ್ಟಕರ ಮೇಲಾಟವೂ ಮಹಾತ್ಮರು ಕಾಂಗ್ರೆಸಿನಲ್ಲಿ ಕಾಲಿಟ್ಟದರಿಂದ ಪ್ರಾರಂಭವಾದವೆಂದು ಅಭಿಪ್ರಾಯಪಟ್ಟಿರುವರು! ಇಷ್ಟೇ ಅಲ್ಲ; ಮಹಾತ್ಮರು ತಮ್ಮ ಕಾರ್ಯಕ್ರಮದ ಗಂಟುಮೂಟೆ ಕಟ್ಟಿಕೊಂಡು ಕಾಂಗ್ರೆಸನ್ನು ಬಿಟ್ಟು ಹೋದರೆ ಒಳಿತಾಗುವದೆಂದೂ ಸ್ಪಷ್ಟವಾಗಿ ನಮೂದಿಸಿರುವರು:— "ನಾನಂತೂ ಮಹಾತ್ಮರ ಚರಣಾರವಿಂದಗಳಿಗೆ ನಮ್ರತೆಯಿಂದ ಎರಗಿ ಬಿನ್ನೈಸುವದಿಷ್ಟೇ ಮಹಾರಾಯರೇ, ತಾವು ಇನ್ನು ಕಾಂಗ್ರೆಸನ್ನು ಬಿಟ್ಟು ಹೋದರೆ, ಮಹಾ ದೊಡ್ಡ ಉಪಕಾರವಾದೀತು. ತಾವು ಹೊರಗೆ ಹೋದ ಬಳಿಕ ೧೫—೨೦ ಸಾವಿರ ವರ್ಷಗಳಲ್ಲಾದರೂ ತಮ್ಮ ಪಂಥಕ್ಕೆ ವಿಜಯವಾಗಲಿ! ಈಗಂತೂ ತಮ್ಮನ್ನು ಅನುಸರಿಸುವದು ಶಕ್ಯವಿಲ್ಲ. ಯಾಕಂದರೆ, ಶಿವಾಜಿ, ಪ್ರತಾಪಸಿಂಹ, ರಣಜಿತಸಿಂಗ ಇಲ್ಲವೆ ಶ್ರೀರಾಮ, ಶ್ರೀಕೃಷ್ಣರಿಂದಲೂ ಅನುಸರಿಸಲಾರದ ತಮ್ಮನ್ನು ನಮ್ಮಂಥ ಪಾಮರರು ಅನುಸರಿಸುವದು ಎಂದಾದರೂ ಶಕ್ಯವೇ ?" ಎಂದು ಈ ಪಾಮರ ಶಿರೋಮಣಿಗಳು ಉದ್ಗರಿಸಿರುವರು! ಮಹಾತ್ಮರಂಥ ಜಗದ್ವಂದ್ಯ ವಿಭೂತಿಯನ್ನು ಇಂಥ ಹಾಸ್ಯಾಸ್ಪದ ಪ್ರಲಾಪಗಳಿಂದ ಹಳಿಯುವ ಈ ವೀರರ ನೇತೃತ್ವದಲ್ಲಿ ಕೂಡಿದ ಈ ಪರಿಷತ್ತಿನ ಯೋಗ್ಯತೆಯನ್ನೂ, ಘನತೆಯನ್ನೂ ವಾಚಕರು ಊಹಿಸಬಹುದು.

ಪ್ರಸ್ತುತ ಇನ್ನೊಂದು ಸಂಗತಿಯನ್ನು ನಮೂದಿಸುವದು ಅವಶ್ಯವೆನಿಸುತ್ತದೆ. ಮಹಾತ್ಮರ ಕಾರ್ಯಕ್ರಮವು ಅವ್ಯವಹಾರವೆಂದು ಹಳಿಯುವ ಈ ಮಹಾರಾಷ್ಟ್ರೀಯರಿಗೆ ಸ್ವರಾಜ್ಯಪಕ್ಷದ ಕಾರ್ಯಕ್ರಮವಾದರೂ ಸಂಪೂರ್ಣವಾಗಿ ಮಾನ್ಯವಿರುವದೆಂದು ಹೇಳಲಾಗದು. ಸ್ವರಾಜ್ಯ ಪಕ್ಷದ ಪ್ರಸ್ತುತ ಧೋರಣವನ್ನು ದೇಶದೊಳಗಿನ ಇತರ ಪಕ್ಷಗಳಿಗೆ ಮಾನ್ಯವಾಗುವಂತೆ ಶಿಥಿಲಿಸಿ, ಕಾಂಗ್ರೆಸು ಸ್ವೀಕರಿಸ

ಬೇಕೆಂಬ ಅಭಿಪ್ರಾಯವು ಪರಿಷತ್ತಿನ ತೀರ್ಮಾನಗಳಲ್ಲೊಳಗೊಂಡಿದೆ. ಮಹಾರಾಷ್ಟ್ರೀಯರಿಗೆ ೧೯೧೯ ರಲ್ಲಿ ಕೂಡಿದ ಅಮೃತಸರದ ಕಾಂಗ್ರೆಸ್ಸು ಇನ್ನೂ ಕಣ್ಮುಂದೆ ಹೊಳೆಯುತ್ತಿದೆ. ಅಲ್ಲಿ ಪ್ರತಿಪಾದಿಸಲ್ಪಟ್ಟ ಪ್ರತಿಯೋಗಿ ಸಹಕಾರಿತೆಯೇ ಸ್ವರಾಜ್ಯ ಸಂಪಾದನೆಯ ಅತ್ಯುತ್ಕೃಷ್ಟ ಉಪಾಯವೆಂದು ಅವರಿಗೆ ಅನಿಸುತ್ತದೆ. "ಇತರ ಪಕ್ಷಗಳಿಗೆ ಮಾನ್ಯವಾಗುವಂತೆ" ಎಂಬದರ ಅರ್ಥವನ್ನೂ ಊಹಿಸಬಹುದು ನೇಮಸ್ತ ಪಕ್ಷ ಬೆಝೆಂಟ ಅಮ್ಮನವರ ಪಕ್ಷ, ಸ್ವತಂತ್ರರ ಪಕ್ಷಗಳಿಗೆ ಮಾನ್ಯವಾಗುವಂತೆ ಹವಣಿಸಹೋದರೆ, ಅಮೃತಸರದ ಈ ಪ್ರತಿಯೋಗಿ ಸಹಕಾರದ ವೇತಾಳನು ಪೂರ್ವ ಸ್ಥಳಕ್ಕೆ ಬರುವ ಸಂಬಂಧದಲ್ಲಿ ಸಂದೇಹವಿಲ್ಲ. ಒಟ್ಟಿಗೆ, ಕಳೆದ ೪ ೫ ವರ್ಷಗಳಲ್ಲಿ ಮಹಾರಾಷ್ಟ್ರೀಯರು ನಡಿಸಿದ 'ಖಟಾಟೋಪವನ್ನು ಸಮಾಲೋಚಿಸಿದರೆ, ಕಾಂಗ್ರೆಸ್ಸಿನಲ್ಲಿದ್ದುಕೊಂಡು ಮಹಾತ್ಮರ ಅಸಹಕಾರದ ಒಂದೊಂದೇ ರೆಕ್ಕೆಯನ್ನು ಕಡಿದು, ಮುಂದರಿದ ಕಾಂಗ್ರೆಸ್ಸನ್ನು ಅಮೃತಸರದ ತನಕ ಹಿಂದೆಳೆಯಬೇಕೆಂಬದಿಷ್ಟು ಸ್ಪಷ್ಟವಾಗುತ್ತದೆ. 'ಸಿಕ್ಕಷ್ಟು ಸವಲತ್ತುಗಳನ್ನು ಜೇಬಿನಲ್ಲಿ ಒತ್ತಿ, ಇನ್ನಿಷ್ಟರ ಸಲುವಾಗಿ ಚಳವಳವೆಬ್ಬಿಸಿರಿ' ಎಂಬ ರಾಜಕೀಯ ತತ್ವವನ್ನೇ ಅವಲಂಬಿಸಿ ಕಾಲಕಾಲಕ್ಕೆ ಇದೆಲ್ಲ ಖಟಾಟೋಪವು ನಡೆದಿರುವದೆನ್ನಬಹುದು! ವಿಚಿತ್ರ ಭಾಷ್ಯಗಳನ್ನು ಹೂಡಿ ಸ್ವರಾಜ್ಯ ಪಕ್ಷದ ಅಡ್ಡಗಟ್ಟುವ ಧೋರಣಕ್ಕೆ ಪ್ರತಿಯೋಗಿ ಸಹಕಾರಿತೆಯ ಬಣ್ಣ ಹಚ್ಚುವ ಪ್ರಯೋಗವೂ ಮಹಾರಾಷ್ಟ್ರೀಯರ ಪತ್ರಿಕೆಗಳಲ್ಲೂ ಭಾಷಣಗಳಲ್ಲೂ ತಲೆದೋರಹತ್ತಿವೆ! ಒಟ್ಟಿಗೆ ಹಿಂದೀ ರಾಷ್ಟ್ರದ ರಾಜಕಾರಣದ ಬಣ್ಣವು ಕ್ರಮೇಣ ತಮ್ಮ ಬಣ್ಣದಲ್ಲಿ ರೂಪಾಂತರವಾಗುವ ತನಕ ಈ 'ವೀರ' ಮಹಾರಾಷ್ಟ್ರೀಯರಿಗೆ ಸಮಾಧಾನವಾಗಲಾರದೆಂದು ತೋರುತ್ತದೆ ಇರಲಿ

ಬೆಳಗಾವಿಯಲ್ಲಿ ಬಹು ಪ್ರಯಾಸದಿಂದ ಸಾಧಿಸಿದ ಐಕ್ಯದಿಂದ ಕೆಲ ಕಾಲವಾದರೂ ಕಾಂಗ್ರೆಸ್ಸದ ಲಕ್ಷವು ನಿಜವಾದ ರಾಷ್ಟ್ರಕಾರ್ಯಕ್ಕೆ ಸೆಳೆಯುವದೆಂದು ಆಶೆಯುಂಟಾಗಿತ್ತು. ಆದರೆ, ಬರೇ ನಾಲ್ಕು ತಿಂಗಳುಗಳಾಗುವದರೊಳಗೆ ದೇಶದಲ್ಲಿ ಪುನಃ ಕಲಹದ ಬೀಜ ಬಿತ್ತುವ ಪ್ರಸ್ತಾವಗಳು ಸಾತಾರೆಯಲ್ಲಿ ಎತ್ತಲ್ಪಟ್ಟವೆಂಬದು ಬಲು ಶೋಚನೀಯವು. ಒಟ್ಟಿಗೆ, ಕಾಂಗ್ರೆಸ್ಸಿನೊಳಗಿನ ಒಡಕೂ, ದೇಶದ ದುರ್ದೈವವೂ ಇನ್ನೂ ತೀರಲಿಲ್ಲೆಂಬಂತೆ ತೋರುತ್ತದೆ.

ಸ್ಫುಟ ಸೂಚನೆಗಳು.

೧. ಜರ್ಮನಿಯ ಹೊಸ ಅಧ್ಯಕ್ಷರಾದ ವೊನ್ ಹಿಂಡೆನಬರ್ಗರು ಇಲೆಕ್ಷನದಲ್ಲಿ ವಿಜಯಿಗಳಾಗಿ ಜರ್ಮನಿಯ ರಾಜಧಾನಿಯಾದ ಬರ್ಲಿನ ಶಹರಕ್ಕೆ ಆಗಮಿಸಲು, ವಿಮಾನುಗಳಿಂದ ಪುಷ್ಪವೃಷ್ಟಿಯಾಯಿತು. ಪ್ರಜೆಗಳು ಅವರಿಗೆ ಹೂಮಾಲೆಯನ್ನರ್ಪಿಸಿ, ಬಹು ವಿಜೃಂಭಣೆಯಿಂದಲೂ, ಆದರದಿಂದಲೂ ಸ್ವಾಗತೀಕರಿಸಿದರು. ಅವರ ಪ್ರತಿಸ್ಪರ್ಧಿಗಳಾದ ರಿಪಬ್ಲಿಕನ ಪಕ್ಷದವರು ಮಾತ್ರ, ಈ ಸಮಾರಂಭವನ್ನು ಬಹಿಷ್ಕರಿಸಿದ್ದರು. ಕಳೆದ ತಾ. ೧೨ಕ್ಕೆ ಅಲ್ಲಿಯ ಪ್ರಜಾ ಸಭೆಯಲ್ಲಿ ಹೋಗಿ ಹಿಂಡೆನಬರ್ಗರು ಕಾಯಿದೆಯಂತೆ ಶಪಥವನ್ನು ಕೊಂಡು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡರು. ಜರ್ಮನ ಜನತೆಯನ್ನುದ್ದೇಶಿಸಿ, ಅವರು ಒಂದು ಜಾಹೀರ ಪತ್ರವನ್ನು ಹೊರಡಿಸಿ ತಮ್ಮ ಧೋರಣವನ್ನು ಪ್ರಕಟಿಸಿರುವರು. ರಾಜ್ಯಪದ್ಧತಿಯ ಘಟನೆಯನ್ನೂ, ಕಾಯಿದೆಗಳನ್ನೂ ಪಾಲಿಸಿ, ಶಾಂತತೆಯ ಉಪಾಯಗಳಿಂದಲೇ ರಾಷ್ಟ್ರದ ಏಳಿಗೆಯನ್ನು ಸಾಧಿಸುವದಲ್ಲದೆ, ಜರ್ಮನಿಗೆ ಅಂಟಿಕೊಂಡ ಸದ್ಯದ ಅಪಕೀರ್ತಿಯನ್ನು ಅಳಿಸಿ ತೊಳೆದು, ಜರ್ಮನಿಯ ಪ್ರತಿಷ್ಠೆಯನ್ನು ಲೋಕದಲ್ಲಿ ಪ್ರಸ್ಥಾಪಿಸುವದೇ ತಮ್ಮ ಕರ್ತವ್ಯವಾಗಿರುವದೆಂದು ಜಾಹೀರಪಡಿಸಿರುವರು. ಈ ಉಗ್ರ ಪುರುಷರು ಪುರಸ್ಕರಿಸಿದ ಈ ಶಾಂತತೆಯ ಈ ಸೌಮ್ಯ ಧೋರಣವನ್ನು ನೋಡಿ ಇಂಗ್ಲಂಡಕ್ಕೆ ಸ್ವಲ್ಪ ಸಮಾಧಾನವೆನಿಸಿರುವದಂತೆ! ಅಧ್ಯಕ್ಷಪದವು ಪ್ರಾಪ್ತವಾದಬಳಿಕ ಹಿಂಡೆನಬರ್ಗರಿಗೆ ಎಷ್ಟೋ ರಾಷ್ಟ್ರಗಳಿಂದ ಅಭಿನಂದನಪರ ಸಂದೇಶಗಳು ಬಂದಿರುವವು. ಆದರೆ, ಇಂಗ್ಲಂಡದ ಹೊರತು ಇನ್ನಾವ 'ಮಿತ್ರರಾಷ್ಟ್ರ'ವೂ ಈ ಸಾಂಪ್ರದಾಯಿಕ ಸೌಜನ್ಯವನ್ನು ಸಹ ತೋರಿಸಲಿಲ್ಲವಂತೆ! ಆದಕಾರಣ ಹಿಂಡೆನಬರ್ಗರ ಅಧಿಕಾರಾರೋಹಣದಿಂದ ಈ ಮಿತ್ರರಾಷ್ಟ್ರಗಳ ಮನಃಸ್ಥಿತಿಯು ಹೇಗಾಗಿರುವದೆಂದು ಅನುಮಾನಿಸಬಹುದು

೨ ಹಿಂದುಸ್ಥಾನದ ಕಾರಭಾರದ ವಿಷಯವಾಗಿ ಭಾರತ ಮಂತ್ರಿ ಬರ್ಕನಹೆಡ್ ದೊರೆಗಳೂ, ಲಾರ್ಡ ರೀಡಿಂಗ ದೊರೆಗಳೂ ಕೆಲವು ದಿವಸಗಳಿಂದ ಮಸಲತ್ತು ನಡಿಸುತ್ತಿರುವರೆಂಬದು ಸರ್ವಶ್ರುತವಿದೆ. ಆದರೆ, ಈ ಮಸಲತ್ತಿನಲ್ಲಿ ನಡೆದ ಸಂಗತಿಗಳು ಎಳ್ಳಷ್ಟಾದರೂ ಹೊರಬೀಳದಂತೆ ಬಂದೋಬಸ್ತು ಇಟ್ಟಿರುವರಂತೆ! 'ಇಂಗ್ಲಿಷಮನ್' ಎಂಬ ಪತ್ರದ ಲಂಡನದ ಬಾತ್ಮೀದಾರನು ಹೇಳುವದೇನಂದರೆ, ಲಂಡನದೊಳಗಿನ ಬಡೇ ಬಡೇ ಅಧಿಕಾರಿಗಳಿಗೆ ಸಹ ಈ ಮಸಲತ್ತಿನ ಏನೊಂದು ಪತ್ತೆ ಹತ್ತದು. ಅವರೂ ಭಾರತ ಮಂತ್ರಿಗಳೂ, ಲಾರ್ಡ ರೀಡಿಂಗರೂ ಗುಪ್ತ ರೀತಿಯಿಂದ ಒಂದು ಹೊಸ ಏರ್ಪಾಟನ್ನು ತಯಾರಿಸಿ, ಅದಕ್ಕೆ ಪ್ರಧಾನ ಮಂಡಲದ ಸಮ್ಮತಿಯನ್ನು ಪಡೆದು ಬೇಗನೆ ಅಮಲಿನಲ್ಲಿ ತರುವವರಿದ್ದಾರೆಂದು ವಾರ್ತೆಯಿದೆ. ದೇಶಬಂಧುಗಳಂಥವರು ತಾವಾಗಿ ತಮ್ಮ ಅಭಿಪ್ರಾಯಗಳನ್ನು ಹೇಳಬಂದರೆ ಅವರನ್ನು ಕೇಳಿಕೊಳ್ಳಲು ಈ ಬಡೇ ದೊರೆಗಳು ಸಿದ್ಧರಿರುವರಂತೆ! ಆದರೆ, ಅವರಿಂದ ದೊರೆಗಳ ಮತಪರಿವರ್ತನವಾಗುವ ಸಂಭವವಿಲ್ಲವಂತೆ! ಅಂದಮೇಲೆ ಇನ್ನು ಈ ದೊರೆಗಳ ಕಡೆಗೆ ಶಿಷ್ಟಮಂಡಳವನ್ನು ಕಳಿಸುವದರಿಂದ ಏನೂ ಫಲಪ್ರಾಪ್ತಿಯಾಗದೆಂದಾಯಿತು. ಹಿಂದುಸ್ಥಾನಕ್ಕೆ ಈ ಗುಪ್ತ ಮಸಲತ್ತಿನಿಂದ ಸಿಗಬಹುದಾದ ಲಾಭವು ಮೊದಲೇ ಕಟ್ಟಿಟ್ಟದ್ದೇ ಇರುವದೆಂದು ತರ್ಕಿಸಬೇಕಾಗಿದೆ. ಅಂದರೆ, ಲಾರ್ಡ ರೀಡಿಂಗ ದೊರೆಗಳು ಇಲ್ಲಿಂದ ಹೊರಡುವ ಪೂರ್ವದಲ್ಲಿ ಯೋಜಿಸಿದ ಏರ್ಪಾಟನ್ನೇ ಭಾರತ ಮಂತ್ರಿಗಳಿಗೆ 'ಪಚಾಯಿಸಿ' ಅಮಲಿನಲ್ಲಿ ತರುವದಿಷ್ಟೇ! ಇರಲಿ. ಲಾರ್ಡ ರೀಡಿಂಗರು ಇಷ್ಟು ಆಡಂಬರದಿಂದ ನಡೆಯಿಸುವ ಈ ಗುಪ್ತ ಮಸಲತ್ತಿನೊಳಗಿಂದ ಎಷ್ಟು ದೊಡ್ಡ ಇಲಿಯು ಹೊರಬೀಳುತ್ತದೆಂದು ನೋಡುವಾ!

೩. ಹಿಂದುಸ್ಥಾನಕ್ಕೆ ರಾಜಕೀಯ ಸವಲತ್ತುಗಳನ್ನು ಕೊಡುವ ಪ್ರಶ್ನೆಯೆದ್ದ ಕೂಡಲೇ ನಮ್ಮ ಎಂಗ್ಲೋ ಇಂಡಿಯನ್ ಮಿತ್ರರಿಗೆ (ಹಿಂದುಸ್ಥಾನದಲ್ಲಿ ಹಾಲಿ ಇರುವ ಯುರೋಪಿಯನ್‌ರಿಗೆ) ಹೊಟ್ಟೆಕಡಿತವುಂಟಾಗುತ್ತದೆ. ಪ್ರಸ್ತುತ ಭಾರತ ಮಂತ್ರಿ ಹಾಗು ಲಾರ್ಡ ರೀಡಿಂಗರ ಮಸಲತ್ತು ನಡೆದಿರುವದರಿಂದ ಈ ಸಮಯದಲ್ಲೇ ತಮ್ಮ ಹೋಳಿಗೆಯ ಮೇಲೆ ಇನ್ನಿಷ್ಟು ತುಪ್ಪ ಎಳೆದುಕೊಳ್ಳುವ ಉದ್ಯೋಗವು ಪ್ರಾರಂಭವಾಗಿದೆ. ಕಳೆದ ತಾ. ೧೦ಕ್ಕೆ ಕಲಕತ್ತೆಯಲ್ಲಿ ಈ ಎಂಗ್ಲೋ ಇಂಡಿಯನರ ಒಂದು ಪ್ರಚಂಡ ಜಾಹೀರ ಸಭೆಗೂಡಿ, ಇಂಗ್ಲಂಡಕ್ಕೆ ತಮ್ಮದೊಂದು ಶಿಷ್ಟಮಂಡಳವನ್ನು ಕಳಿಸಬೇಕೆಂದು ನಿರ್ಣಯವಾಗಿರುವದು. ಶಿಷ್ಟಮಂಡಳದ ಖರ್ಚಿಗಾಗಿ ೨ ಸಾವಿರ ರೂಪಾಯಿ ಸಭೆಯಲ್ಲೇ ಕೂಡಿರುವವಂತೆ. ಇನ್ನೂ ಹಣ ಕೂಡಿಸುವ ವ್ಯವಸ್ಥೆಯಾಗದೆ. ಎಂಗ್ಲೋ-ಇಂಡಿಯನರು ಒಂದು ತೀರ ಸಣ್ಣ ಸಮಾಜವಾಗಿರುವದರಿಂದ ಹಿಂದುಸ್ಥಾನಕ್ಕೆ ಸ್ವರಾಜ್ಯ ದೊರೆತಮೇಲೆ, ಈ ಸಮಾಜವು ದಿಕ್ಕಿಲ್ಲದ ಪರದೇಶಿಯಾಗುವದೆಂದು ಅವರ ಭೀತಿಯು. ಆದ್ದರಿಂದ ಹಿಂದೂ-ಮುಸಲಮಾನರಂಥ ದೊಡ್ಡ ಸಮಾಜಗಳಿಗೆ ಸಿಗಬಹುದಾದಷ್ಟೇ ಎಲ್ಲ ಬಗೆಯ ಹಕ್ಕುಗಳೂ ಈ ಸಣ್ಣ ಸಮಾಜಕ್ಕೆ ಸಿಗಬೇಕಂತೆ! ಕಾರಭಾರದಲ್ಲಿ ಕ್ರಮೇಣ ಹೆಚ್ಚೆಚ್ಚು ಹಿಂದೀಯರನ್ನು ಸೇರಿಸಬೇಕೆಂಬದು ಗೊತ್ತಾಗಿದೆ ಈ ತತ್ವಕ್ಕನುಸಾರವಾಗಿ ಹಿಂದೀಯರನ್ನು ನೇಮಿಸುವ ಪ್ರಸಂಗದಲ್ಲಿ ಈ ಎಂಗ್ಲೋ ಇಂಡಿಯನರು ಹಿಂದೀಯರೆಂದು ಭಾವಿಸಿ ಹಿಂದೂ-ಮುಸಲ್ಮಾನರಿಗೆ ಸಿಗುವ ಜಾಗೆಗಳಷ್ಟೇ ಜಾಗೆಗಳನ್ನು ಎಂಗ್ಲೋಇಂಡಿಯನರಿಗೆ ಕೊಡಬೇಕು. ಅಂದರೆ, ಇಂಗ್ಲಂಡದಿಂದ ವರ್ಷಂಪ್ರತಿ ಬರುವ ಸಿವ್ಹಿಲಿಯನ ಯುರೋಪಿಯನರು ಬೇರೆ, ಹಿಂದುಸ್ಥಾನದಲ್ಲಿ ಹಾಲಿ ಇರುವ ಯುರೋಪಿಯನ್ನರು (ಎಂಗ್ಲೋ-ಇಂಡಿಯನ್ನರು) ಬೇರೆ ಎಂದು ಕಲ್ಪಿಸಿ, ಹಿಂದೀಯರಿಗೆಂದು ಕಾದಿಟ್ಟ ಜಾಗೆಯೊಳಗಿಂದ ಎಂಗ್ಲೋ-ಇಂಡಿಯನ್ನರಿಗೆ ಹಿಂದೂ-ಮುಸಲ್ಮಾನರೊಂದಿಗೆ ಸರಿಯಾದ ಪಾಲು ಸಿಗಬೇಕು! ಹಿಂದೂ-ಮುಸಲ್ಮಾನರು ತೆರುತ್ತಿರುವ ಹೇರಳ ಕರಗಳ ಭಾರವನ್ನು ಬಿಡ ಹಿಂದು ಮುಸಲ್ಮಾನರೇ ಹೊರಬೇಕು. ಆದರೆ ರಾಜಕೀಯ ಹಕ್ಕುಗಳನ್ನು ಹಂಚುವದಾದರೆ ಮಾತ್ರ, 'ಕಲ್ಲ ಪ್ರಸಾದ ಬೇರೆ, ದೇವರ ಪ್ರಸಾದ ಬೇರೆ' ಎಂಬಂತೆ, ಯುರೋಪಿಯನರು ಬೇರೆ, ಎಂಗ್ಲೋ-ಇಂಡಿಯನರು ಬೇರೆ! ಹಿಂದೂಗಳೂ, ಮುಸಲಮಾನರೂ, ಎಂಗ್ಲೋ-ಇಂಡಿಯನರೂ ಸರಿ ಪಾಲುಗಾರರು! ಈ ತರದ ಸಮತೆಯನ್ನು ಹಿಂದುಸ್ಥಾನದಲ್ಲಿ ಪ್ರಸ್ಥಾಪಿಸಬೇಕೆಂದು ಪ್ರಧಾನ ಮಂಡಳಕ್ಕೆ ಬೋಧಿಸುವದೇ ಈ ಶಿಷ್ಟಮಂಡಳದ ಉದ್ದಿಷ್ಟವಂತೆ!

೪ ದೇಶಬಂಧುಗಳು ಫರೀದಪುರದ ಪರಿಷತ್ತಿನಲ್ಲಿ ಮಾಡಿದ ಭಾಷಣದ ವಿಷಯವಾಗಿ ಜನರಲ್ಲಿ ಹಬ್ಬಿದ ತರ್ಕ-ವಿತರ್ಕಗಳನ್ನು ಕುರಿತು, ಮಹಾತ್ಮರು ತಮ್ಮ

‘ಯಂಗ ಇಂಡಿಯಾ’ ಪತ್ರಿಕೆಯು ಇದೇ ತಾ ೧೪ನೇ ಸಂಚಿಕೆಯಲ್ಲಿ ಈ ಸ್ಪಷ್ಟೀಕರಣವನ್ನು ಪ್ರಕಟಿಸಿರುವರು:- “ಈ ಭಾಷಣದೊಳಗಿನ ಒಳಗುಟ್ಟೇನಿರಬಹುದೆಂದು ಅನೇಕ ಜನರು ನನಗೆ ಕೇಳಹತ್ತಿದರು. ಇದೇ ಪ್ರಶ್ನೆಯನ್ನು ನಾನು ದೇಶಬಂಧುಗಳಿಗೆ ಕೇಳಲಾಗಿ ಅವರು ನುಡಿದದ್ದೇನಂದರೆ - “ನನ್ನ ಭಾಷಣವು ನನ್ನ ಯುರೋಪಿಯನ್ ಮಿತ್ರರ ಆಹ್ವಾನಕ್ಕೆ ಉತ್ತರವಾಗಿದ್ದಿತು. ಹಿಂಸೆಯು ನನಗೆ ಸಮ್ಮತವಿಲ್ಲೆಂದೂ, ಅಹಿಂಸೆಯಿಂದಲೇ ಸ್ವರಾಜ್ಯ ಸಂಪಾದಿಸಬೇಕೆಂದೂ ನನ್ನ ಅಭಿಪ್ರಾಯವನ್ನು ಅವರಿಗೆ ಅನೇಕಾವರ್ತಿ ತಿಳಿಸಿದ್ದೆ. [illegible] ಅವನ್ನಷ್ಟು ಉಘಡವಾಗಿಯೂ, ಸ್ಪಷ್ಟವಾಗಿಯೂ [illegible] ಪಡಿಸಲಿಕ್ಕೆ ಕೇಳಿಕೊಂಡಿದ್ದಕ್ಕೆ ನಾನು ಒಪ್ಪಿದೆನು. ನನ್ನ ಭಾಷಣದಲ್ಲಿ [illegible] ಅತ್ಯಾಚಾರಗಳನ್ನೂ, ಸರಕಾರದ ದಬ್ಬಾಳಿಕೆಯನ್ನೂ [illegible] ನಿವೇದಿಸಿರುವೆನು. ಸರಕಾರದ [illegible] ಅತ್ಯಾಚಾರದ [illegible] ಇದೇ ಕಾಲಕ್ಕೆ ಸ್ವಾಭಿಮಾನದಿಂದ ಸರಕಾರದ [illegible] ಸಹಕಾರ ಮಾಡಲಿಕ್ಕೆ [illegible] ಸಹಜವಾಗಿ [illegible]. ಈ ನನ್ನ [illegible] ಇದ್ದಲ್ಲಿ [illegible] ಕೇಳಿದ ಇನ್ನು, [illegible] ಸರಕಾರದ [illegible].”

---

೭. ಕಾಸಿಂ ಬಜಾರಿನ [illegible] ಕರಾದ ಮಹಾರಾಜ ಸರ ಮಣೀಂದ್ರಚಂದ್ರರವರ ಸ್ವಾಗತಕ್ಕಾಗಿ [illegible] ಸ್ಸಿಗೆ [illegible] ಸ್ಥಾಪಿತವಾಗಿದೆ. ಈ ಮಂಡಳಿಯ [illegible] ಸಮಾರಂಭವು ನಾ| ಶಾಸ್ತ್ರಿಗಳ ಹಸ್ತದಿಂದ ನೆರವೇರಿತು. ಈ ಸಮಾರಂಭಕ್ಕೆ ಬಹು ದೊಡ್ಡ ಜನಸಮುದಾಯವು ಕೂಡಿತ್ತು. ನಾ| ಶಾಸ್ತ್ರಿಗಳು ಕ್ರಿ| ವಾ| ಮೊಂಟೆಗ್ಯೂ ಸಾಹೇಬರ [illegible] ತಮ್ಮ ಸ್ವಾನುಭವದ ಸಂಗತಿಗಳನ್ನು ನಿವೇದಿಸಿದ್ದಲ್ಲದೆ, ಅವರು ಭಾರತ ಮಂತ್ರಿಗಳಾಗಿ ಹಿಂದುಸ್ಥಾನಕ್ಕೆ ಮಾಡಿದ ಮಹದುಪಕಾರಗಳನ್ನು ಒಂದೊಂದಾಗಿ ವಿವರಿಸಿದರು. ಈ ತನಕ ಆಗಿ ಹೋದ ೩೭ ಭಾರತ ಮಂತ್ರಿಗಳು ನಡಿಸಿದ ಕಾರಭಾರಗಳಲ್ಲಿ ಮೊಂಟೆಗ್ಯೂ ಸಾಹೇಬರ ಕಾರಕೀರ್ದಿಯು ಬಹಳೇ ಸಂಸ್ಮರಣೀಯವಾಗಿರುವದೆಂದರು ಹಿಂದುಸ್ಥಾನದ ರಾಷ್ಟ್ರಸೂತ್ರಗಳು ಬ್ರಿಟಿಶರ ಕೈಸೇರಿದಂದಿನಿಂದ, ಈ ದೇಶಕ್ಕೆ ಈ ತನಕ ಲಭಿಸಿದ ಬ್ರಿಟಿಶ ಕೈವಾರಿಗಳಲ್ಲಿ ಇವರ ಹಂಬಲವು ಎಲ್ಲಕ್ಕೂ ಮೇಲಾಗಿರುವದೆಂದು ಸಾಧಾರ ಪ್ರತಿಪಾದಿಸಿದರು. ಬಹಳೇ ಪ್ರತಿಕೂಲ ಸ್ಥಿತಿಯಲ್ಲಿ ವೈರಿಗಳ ಅಸಹ್ಯ ನಿಂದೆಯನ್ನು ಲಕ್ಷಿಸದೆ, ಹಿಂದುಸ್ಥಾನಕ್ಕೆ ಮಹದುಪಕಾರ ಮಾಡಿದ ಈ ಉಪಕಾರಕರ್ತರಿಗೆ, ಕಟ್ಟಕಡೆಗೆ ನಾವು ಅಸಹಕಾರಿತೆಯಿಂದ ಸತ್ಕರಿಸಿದ್ದು ಅತಿ ಶೋಚನೀಯವೆಂದು ಹಳಹಳಿಸಿದರು. ಹಿಂದುಸ್ಥಾನದ ಉತ್ಕರ್ಷವೇ ತನ್ನ ಇತಿಕರ್ತವ್ಯವೆಂದು ಎಣಿಸಿ, ಧೈರ್ಯದಿಂದಲೂ, ನಿಕಸಿಷ್ಠೆಯಿಂದಲೂ ಹೋರಾಡುವ ಇನ್ನೊಬ್ಬ ಇಂಥ ಕೈವಾರಿಯು ನಮಗೆಂದು ಲಭಿಸುವರೋ! ಎಂದು ಉದ್ಗರಿಸಿ ನಾಮದಾರರು ತಮ್ಮ ಭಾಷಣವನ್ನು ಮುಗಿಸಿದರು.

[redacted]

ಕೈ| ವಾ| ದಿ| ಬ| ವೆಂಕಟರಾಯರು.

ಸಂಚಿಕೆಯು ಮುದ್ರಣ ಸಮಯು ಕಿವಿಸೇರಿದ ಶೋಕವಾರ್ತೆಯನ್ನೊಂದು ವಾಚಕರಿಗರುಹುವ ಕಠಿಣ ಪ್ರಸಂಗವೊಂದು ನಮ್ಮ ಮೇಲೊದಗಿ ಬಂದಿದೆ. ಕಾರವಾರದ ವಯೋವೃದ್ಧ ಪೆನ್ಶನರರಾದ ದಿ| ಬ| ಎಣ್ಣೆಮಠಿ ವೆಂಕಟರಾಯರು ನಿನ್ನೆ ರವಿವಾರ ರಾತ್ರಿ ೧೦ ಘಂಟೆಯ ಸಮಯ ಕಫಜ್ವರ ಬೇನೆಯಿಂದ ದೇಹಾವಸಾನ ಹೊಂದಿದರು. ದಿವಾಣಬಹಾದ್ದೂರರು ಇತ್ತ ೧೫-೨೦ ದಿನಗಳಿಂದ ಕಫಜ್ವರದಿಂದ ಪೀಡಿತರಾದಾಗ್ಯೂ, ಇಷ್ಟು ಬೇಗ ಅವರು ಕೈಲಾಸವಾಸಿಗಳಾಗುವರೆಂದು ಯಾರೂ ಎಣಿಸಿದ್ದಿಲ್ಲ. ಆದರೆ, “ದೈವಮನ್ಯತ್ ವಿಚಿಂತಯೇತ್ ” ಎಂಬಂತೆ, ದಿವಾಣ ಬಹಾದ್ದೂರರು ನಿನ್ನೆ ರವಿವಾರಕ್ಕೆ ಆಪ್ತ-ಇಷ್ಟಮಿತ್ರ-ಬಂಧುಬಾಂಧವರನ್ನೆಲ್ಲ ಆಳವಾದ ಶೋಕಸಾಗರದಲ್ಲಿ ಕೆಡವಿ, ಇಹಲೋಕಯಾತ್ರೆಯನ್ನು ಪರಿಸಮಾಪ್ತಿಯಾಗೈದರು. ದಿ|| ಬ|| ರು ೭೬ ವರ್ಷದ ಮುಪ್ಪಿನವರಾಗಿದ್ದರೂ, ಸಾರಸ್ವತ ಸಮಾಜದ ಏಳ್ಗೆಗಾಗಿ, ಉದ್ಧಾರಕ್ಕಾಗಿ, ಅವರು ನವಯುವಕರಂತೆ, ನವ ಚೈತನ್ಯದಿಂದ ದುಡಿಯುತ್ತಿದ್ದರು. ಸಾರಸ್ವತ ಸಮಾಜವೆಂದರೆ, ನಮ್ಮ ಗೌಡ ಸಾರಸ್ವತ ವರ್ಗದೊಳಗಿನ ಮುಂದುವರಿದ ಸಮಾಜವು. ಬೌದ್ಧಿಕ ಉನ್ನತಿ ಹೊಂದಿದವರಲ್ಲಿ ಸಾರಸ್ವತರೇ ಪ್ರಮುಖರೆಂದು ನಾವು ಅಭಿಮಾನದಿಂದ ಹೇಳುವೆವು. ದಿ| ಬ| ರು ಸಾರಸ್ವತ ಸಮಾಜದವರು ಸ್ವಸಮಾಜದ ಉನ್ನತಿಗಾಗಿ ಅವರು ತನು-ಮನ-ಧನದಿಂದ ದುಡಿದಿರುವರು. ನಮ್ಮ ಸಾರಸ್ವತರು ಸ್ವಸಮಾಜದ ಐಕ್ಯಕ್ಕಾಗಿ ಹೆಸರಾಗಿರುವರು. ದಿವಾಣ ಬಹಾದ್ದೂರರು ಸಾರಸ್ವತ ಐಕ್ಯದ ಕಮಾನಿನ ಮುಖ್ಯ ಕೀಲಿ ಕಲ್ಲೆಂದು ಸಾರ್ಥಕವಾಗಿ ಹೇಳಬಹುದು. ಸ್ವಸಮಾಜವನ್ನು ಐಕ್ಯದಿಂದ ನಡಿಸಿಕೊಂಡು ಬಂದವರಲ್ಲಿ ಕೈ| ವಾ| ದಿ| ಬ| ರು ಅಗ್ರಗಣ್ಯರು. ದಿ| ಬ| ಕಾಲಕಾಲಕ್ಕೆ ಸಮಾಜದ ಆರ್ಥಿಕ, ಔದ್ಯೋಗಿಕ ಮುಂತಾದ ಅವಶ್ಯಕತೆಗಳನ್ನು [illegible] ಕಂಡು ಹಿಡಿದು, ಸಾರಸ್ವತ ಸಮಾಜದ ಪರಿಪರಿಯ ಕಲ್ಯಾಣ ಮಾಡಿರುವರು. ಅನೇಕರಿಗೆ ಸರಕಾರಿ ನೌಕರಿ, ಧಂದೆ ಇತ್ಯಾದಿಗಳನ್ನು ಸಂಪಾದಿಸಿಕೊಟ್ಟು, ಅವರ ಜೀವಿತಾರ್ಥಕ್ಕೆ ಇಂಬುಗೊಟ್ಟ ಕೈಲಾಸವಾಸಿಗಳು ಅವರನ್ನು ಉಪಕೃತ ಮಾಡಿರುವರು. ಸಾರಸ್ವತ ಸಮಾಜವು ಈ ಉಪಕಾರವನ್ನು ಎಂದೂ ಮರೆಯಲಾರದು; ಸಾರಸ್ವತ ಸಮಾಜದ ಐಕ್ಯವೃತ್ತಿಯಿಂದ, ದಿವಾಣ ಬಹಾದ್ದೂರರ [illegible] ನಮಗೊಂದು ಅನ್ಯಾಯವು ಆಗಿಂದಾಗ ಸಂಭವಿಸುತ್ತಿತ್ತು. ದಿ| ಬ| ರರ ಸಾರ್ವಜನಿಕ ವಿಷಯಗಳಮೇಲಿನ ಮತಗಳೂ, ಆಚಾರಗಳೂ ಅನೇಕಾವರ್ತಿ ನಮಗೆ ಸಮ್ಮತವಿರುತ್ತಿದ್ದಿಲ್ಲ. ಪ್ರಾಮಾಣಿಕತನದಿಂದ ಲೋಕಹಿತಾರ್ಥವಾಗಿ ಸಮಯಾನುಸಾರ, ವೃತ್ತಪತ್ರ ಧರ್ಮಾನುಸಾರ ದಿ| ಬ| ರನ್ನು ಟೀಕಿಸುವ ‘ಅಪ್ರಿಯ ಪ್ರಸಂಗವು ನಮಗೆ ಬರುತ್ತಿತ್ತು. ದಿ| ಬ|ರರ ವಿಷಯದ ನಮ್ಮ ಟೀಕೆಯು ಅವರ ವ್ಯಕ್ತಿಗತ ಮತವ್ಯಾಪ್ತಿಯದಿರುತ್ತ, ಅದು ಇಡೀ ಸಮಾಜದ್ದೇ ಟೀಕೆಯು, ಎಂಬ ಭಾವನೆಯಿಂದ ಅನೇಕ ಸಾರಸ್ವತರು ವೃಥಾ ಭಾವಿಸಿ, ತಪ್ಪು ಗ್ರಹಿಕೆ ಮಾಡಿಕೊಳ್ಳುತ್ತಿದ್ದರು. ಇದರ ಮೇಲಿಂದಲೂ ಸಾರಸ್ವತ ಸಮಾಜದ ಐಕ್ಯವು ಸಿದ್ಧವಾಗುತ್ತದೆ. ಸಾರಸ್ವತರ ಐಕ್ಯವೃತ್ತಿಯು ನಿಜವಾಗಿ ಅನುಕರಣೀಯವೆಂದು ಹೇಳಿ ದಿ| ಬ| ಐಕ್ಯವೃತ್ತಿ ಪೋಷಕ ಕಾರ್ಯವನ್ನು ನಾವು [illegible] ಕೊಂಡಾಡುವೆವು.

ದಿ| ಬ| ರರು ಸಚ್ಛೀಲ ಪುರುಷರು. ಅವರ ವೃತ್ತಿ ನಿಷ್ಕಲಂಕವಿತ್ತು. ಕೈ| ವಾ| ಗಳು ಧಾರ್ಮಿಕ ಭಾವನಾಪ್ರೇರಿತರು. ದಿ| ಡೆ| ಕಲೆಕ್ಟರಿಯ ದೊಡ್ಡ ದೊಡ್ಡ ಹುದ್ದೆಗಳ ಅನುಗ್ರಹವಾದರೂ, ಬ|ರರು ಪುರಾತನ ಕಾಲದ ವಹಿವಾಟಿಯಂತೆ, ಶೀಲವನ್ನೂ, ಧರ್ಮಬುದ್ಧಿಯನ್ನೂ [illegible] ಕಾಪಾಡಿ ಸಮಾಜಕ್ಕೆ ಆದರ್ಶಭೂತರಾಗಿರುವ ಕೈ| ವಾ| ಗಳ ಉದ್ಯೋಗಪ್ರಿಯತೆಯಾದರೂ ಅಷ್ಟೇ ಪ್ರಶಂಸನೀಯವಿದೆ. [illegible] ರು ಮಾಮಲೇದಾರಿಕೆಯ [illegible] ಮೂಲ [illegible] ಟಿಗೆಯಾದ [illegible] ಹುದ್ದೆಯಿಂದ ಕ್ರಮವಾಸ್ಥಿರವಾಗಿ ಪರಿಶ್ರಮದಿಂದಲೂ, ದಕ್ಷತೆಯಿಂದಲೂ ಸ್ವಾಮಿನಿಷ್ಠೆಯಿಂದಲೂ ದುಡಿದು, ಡೆಪ್ಯುಟಿ ಕಲೆಕ್ಟರ ಹುದ್ದೆಯವರೆಗೆ ಏರಿಹೋದರು. ಪೆನ್ಶನರಾಯೂ ದಿವಾಣ ಬಹಾದ್ದೂರರು ದುಡಿದರು. [illegible] ೩೧ ವರ್ಷಗಳ ವರೆಗೆ ಸರಕಾರಿ ಸೇವೆಯು [illegible] ಹಿತದ ಬ್ರಿಟಿಶ ರಾಜ್ಯವರ್ಧಿತಿಯನ್ನು ನಂಬಿದ್ದ ದಿವಾಣ ಬಹಾದ್ದೂರರ ಸೇವೆಯ ಧೋರಣವು ಜೀವನವಿರುವವರೆಗೆ ಸರಕಾರ ಪಕ್ಷದಿಂದಲೇ ನಡೆಯಿತು. ನಮ್ಮ ಜಿಲ್ಲೆಯೊಳಗಿನ ಇವರ ಪ್ರತಿಷ್ಠೆಯನ್ನೂ ಸೇವೆಯನ್ನೂ ಸ್ಮರಿಸಿ, ಸರಕಾರವು ಇವರಿಗೆ ಬಹುಮಾನವನ್ನಿತ್ತು ಸತ್ಕರಿಸಿದ್ದು ಸಹಜವು. ಕೈ| ವಾ| ಗಳು ಪೆನ್ಶನರರಾಗಿದ್ದರೂ ಪೂರ್ವಪ್ರತಿಷ್ಠೆಯು ಮುಂದರಿಸಿದ್ದರು. ದಿ| ಬ| ರರ ಸಚ್ಛೀಲವೃತ್ತಿಯಿಂದ ಧರ್ಮಬುದ್ಧಿಯಿಂದ ಅವರಿಗೆ ಪ್ರಾಪ್ತವಾದ ಪ್ರತಿಷ್ಠೆಯು ಪ್ರಶಂಸನೀಯವಿತ್ತು. ಆದರೆ, ಕೊನೆಕೆ ಈ ಪ್ರತಿಷ್ಠೆಯು ಸ್ಥಿರವಾಗಿ ಬಾಳಲಿಲ್ಲ. [illegible] ಉದಾಹರಣೆಯನ್ನೀಯುವೆವು. ರಾ| ಬ| ಕಲ್ಯಾಣ[illegible]ಕರರು ಆಳರಸರ ಮಹಂತಿಯಿಂದ, ದಿ| ಬ| [illegible] ಪ್ರತಿಷ್ಠೆಯ ಬೆಂಬಲದಿಂದ ಕೌನ್ಸಿಲು ಉಮೇದರಿಯ ಪ್ರಚಂಡ ಜವಾಬದಾರಿಯನ್ನು ಹೊತ್ತುಕೊಂಡಿದ್ದರೆಂದು ಅನೇಕ ವಿಚಾರಶೀಲರ ಹೇಳಿಕೆ [illegible] ಇದು ನಿಜವಿದ್ದರೆ, ರಾ| ಬ| ರರ ಪರಾಜಯವು ಬ| ರರ ಪ್ರತಿಷ್ಠೆ ಕುಗ್ಗಿದ ಸ್ಪಷ್ಟ ಲಕ್ಷಣವೆಂ[illegible] ಯಾರೂ ಹೇಳುವರು. ಇಂಥ ಪ್ರಸಂಗವೊದಗು ಕಾರಣವು ಸ್ಪಷ್ಟವಿದೆ. ದಿ| ಬ| ರರು ದೇಶಕಾಲಸ್ಥಿತಿಯಲ್ಲಿ ಒದಗಿಬಂದ ಅವಸ್ಥಾಂತರಗಳ [illegible] ಮರ್ಮವನ್ನು ತಿಳಕೊಳ್ಳದೆ, ನವವಿಚಾರ ಸಲಕ್ಷಣಗಳ ನವಸ್ಫೂರ್ತಿಯನ್ನು ಗ್ರಹಿಸಲಾರದೆ, [illegible]ಳೇ ವಿಚಾರಗಳ ಹಳೇ ಪುರಾಣದ ಧೋರಣವನ್ನೇ ಮುಂದರಿಸಿದ್ದರು. ಇದರಿಂದ ಲೋಕಮತವು ಅವರ ಪ್ರತಿಷ್ಠೆಯನ್ನು ವಿಮುಖತ್ವದಿಂದ ದಬ್ಬಿಹಾಕಬೇಕಾಯಿತು. ಇಷ್ಟಾದರೂ ದಿ|| ಬ|| ರು ತಮ್ಮ ಸಂಕುಚಿತ ಕಾರ್ಯಕ್ಷೇತ್ರದಲ್ಲಿ ಪ್ರಶಂಸನೀಯವಾಗಿ ಯಶಸ್ವಿಯಾಗಿರುವರೆಂದು ಅವರ ಇಡೀ ಚರಿತ್ರೆಯ ಮೇಲಿಂದ ನಿಸ್ಸಂಶಯವಾಗಿ ಹೇಳಬಹುದು. ಕೈ|| ವಾ|| ಗಳ ಏಕನಿಷ್ಠ ಸೇವೆಯನ್ನೂ, ಸಚ್ಛೀಲತೆಯನ್ನೂ, ಐಕ್ಯಪಾಲನದ ಧೋರಣವನ್ನೂ, ಉದ್ಯೋಗಶೀಲತೆಯನ್ನೂ ನೆನಿಸಿದರೆ ನಿಜವಾಗಿ ನಮಗೆ ಅಭಿಮಾನವುಂಟಾಗುತ್ತದೆ. ಇಂಥ ಪುರುಷನಿಗೆ ಜನ್ಮವನ್ನಿತ್ತು ಕೃತಾರ್ಥವಾದ ಸಾರಸ್ವತ ಸಮಾಜವನ್ನೂ ನಾವು ಕೊಂಡಾಡುವೆವು. ಕೈ

ಸ್ತಾ| ಗಳ ಆಚಾರ-ವಿಚಾರಗಳ ಕುರಿತು ಮತಭೇದವೇನಿದ್ದರೂ, " ಗುಣಾಃ ಪೂಜಾಸ್ಥಾನಂ ಗುಣಿಷು ನ ಚ ಲಿಂಗಂ ನ ಚ ವಯಃ " ಎಂಬಂತೆ, ಕ್ರೈ| ಸ್ತಾ| ಗಳ ಗುಣಗಳಷ್ಟು ನಮಗೆ ಅನುಕರಣೀಯವಿವೆ. ಕೈಲಾಸನಾಥನು ಕ್ರೈ| ಸ್ತಾ| ಗಳಿಗೆ ಚಿತ್ತಶಾಂತಿಯನ್ನೀಯಲೆಂದು ಪ್ರಾರ್ಥಿಸಿ, ಈ ದುಃಖ ಮೃತ್ಯುಲೇಖವನ್ನು ಮುಗಿಸುವೆವು. ಈ ಗಾಬರಿಯಲ್ಲಿ ನಾವು ಮತ್ತೇನು ಹೇಳಬಲ್ಲೆವು?

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ವಿಪರೀತ; ಮೋಡಗಳು ಆಗಾಗ ಕವಿಯುತ್ತಿದ್ದು ಅಲ್ಪಸ್ವಲ್ಪ ಮಳೆಯೂ ಸುರಿಯುವದು.

ಇಲ್ಲಿಯ ಮ್ಯುನಿಸಿಪಾಲಿಟಿ ಬೈ-ಇಲೆಕ್ಷನಿನಲ್ಲಿ ರಾ| ಕೇಶವ ನಾರಾಯಣ ಪೈ ಮತ್ತು ರಾ| ಸುಬ್ರಾಯ ಅಣ್ಣಾ ನ್ನಾಕ ಇವರು ಖಾಲಿ ಬಿದ್ದ ಎರಡು ವಾರ್ಡುಗಳ ಮೆಂಬರರಾಗಿ ಆರಿಸಲ್ಪಟ್ಟರು. ಎರಡನೇ ವಾರ್ಡಿಗಾಗಿ ನಿಂತ ೭ ಉಮೇದ್ವಾರರಲ್ಲಿ ಆರು ಜನರು ತಮ್ಮ ಅರ್ಜಿಗಳನ್ನು ಹಿಂದೆಗೆದುಕೊಂಡದ್ದರಿಂದ, ಶ್ರೀ| ಕೇಶವ ನಾರಾಯಣ ಪೈ ಇವರು ಬಿನ್‌ಹರಕತ ಆರಿಸಲ್ಪಟ್ಟರು. ೪ ನೇ ವಾರ್ಡಿನ ೭ ಉಮೇದ್ವಾರರಲ್ಲಿ ೫ ಜನರು ತಮ್ಮ ತಮ್ಮ ಅರ್ಜಿಗಳನ್ನು ಮರಳಿ ತಕ್ಕೊಂಡದ್ದರಿಂದ ರಾ| ಗಣಪತಿ ಹೆಗಡೆ ಹಾಗು ರಾ| ಸುಬ್ರಾಯ ಅಣ್ಣಾನ್ನಾಕ ಇವರಲ್ಲಿ ಮೇಲಾಟ ನಡೆದು ಸುಬ್ರಾಯ ನ್ನಾಕರು ಆರಿಸಿಬಂದರು.

ಕಳೆದ ವಾರದಲ್ಲಿ ಆಗಬೋಟಿಯಿಂದ ಇಳಿದ ಸಾಮಾನು ಕಳವಾಗಿ ಹೋಯಿತೆಂದು ತಿಳಿಸಿದ್ದೆವು. ಕಳವಿನ ತನಿಖೆಯು ಪೋಲೀಸರ ಮಾರ್ಫತ ನಡೆಯುತ್ತಿದೆ. ನಿಜವಾದ ಕಳ್ಳರ ಪತ್ತೆಯು ಇನ್ನೂ ಹತ್ತುವದಿಲ್ಲವಂತೆ! " ಆಂದರೇ ಖಾಕ ರಾಮ ಜಾವೆ '' ಇಬ್ಬಾರಿ ಈ ಇಡೀ ಪ್ರಕರಣದಲ್ಲಿ ಬಲು ಸಾಹಸದಿಂದ ಈ ಕಳವನ್ನು ಹಿಡಿದು, ಪಂಚನಾಮೆ ಮಾಡಿಕೊಟ್ಟ ಕಸ್ಟಮ ಶಿಪಾಯಿ ದೇವಪ್ಪ ಸುಬ್ಬಯ್ಯಾ ನ್ನಾಕ ಇವನು ವಿಶೇಷ ಸ್ತುತಿಗೂ, ಸರಕಾರದ ತರ್ಫೆ ಬಹುಮಾನಕ್ಕೂ ಪಾತ್ರನಿರುವನು. ಕಲೆಕ್ಟರ ಸಾಹೇಬರು ಮುಂದಾಗಿ ಈ ವಿಷಯದಲ್ಲಿ ವಿಶೇಷ ಲಕ್ಷಪೂರೈಸುವರೇನು? ಮುಂದಿನ ಸಂಗತಿ ಹಿಂದಿನಿಂದ.

ಗೋಕರ್ಣ— ಸುಗ್ಗಿ ಹೋಳಿ ಸಮಯದಲ್ಲಿ ಶ್ರೀ ಮಹಾಬಲೇಶ್ವರ ದೇವಸ್ಥಾನದಲ್ಲಿ ಸಂಪ್ರದಾಯದಂತೆ ವಿಧಿಪೂರ್ವಕ ಸುಗ್ಗಿ ದಾಖಲಿಕ್ಕೆ ಅಡಂಕ ಮಾಡಿದ್ದರಿಂದ ದೇವಸ್ಥಾನದ ಮೊಕ್ತೇಸರರು ಶ್ರೀ| ಭಡತಿ ಮೊದಲಾದವರ ಮೇಲೆ ಮಾಡಿದ ಫಿರ್ಯಾದಿಯ ವಿಷಯದಲ್ಲಿ ಆರೋಪಿಗಳು ದೇವರ ಭಂಡಾರಕ್ಕೆ ೨೫ ರೂಪಾಯಿ ಅರ್ಪಿಸಲಿಕ್ಕೆ ಒಪ್ಪಿದ್ದರಿಂದ, ಫಿರ್ಯಾದು ಮರಳಿ ತೆಗೆದುಕೊಳ್ಳಲಾಗಿದೆ.

ಇಲ್ಲಿಯ ಮಹಾ ಗಣಪತಿ ಮಂದಿರದಲ್ಲಿ ಹಿಂದಿನ ಅಶ್ವಿನ ಶುದ್ಧ ೧ ಯಿಂದ ಪ್ರತಿನಿತ್ಯವೂ ತ್ರಿಕಾಲ ಋಗ್ವೇದ ಸಂಹಿತಾ, ಅಭಿಷೇಕ, ಪಂಚಾರ್ಚನಪೂರ್ವಕವಾಗಿ ಕೋಟಿ ಲಿಂಗಾರ್ಚನ ಇತ್ಯಾದಿಗಳು ಪ್ರಾರಂಭವಾಗಿದ್ದು ಅದೇ ಜ್ಯೇಷ್ಠ ಶುದ್ಧ ೫ ಯಿಂದ ೧೩ ನೆಯ ವರೆಗೆ ಅವಭೃತ ಪೂರ್ಣಾಹುತಿಮಾಡಬೇಕೆಂದು ನಿಶ್ಚಯಿಸಿದೆ. ಈ ಕಾರ್ಯಕ್ಕೆ ಬಹುಜನರ ಧನಸಹಾಯವು ಸಿಗುವದು ಅವಶ್ಯ.

ಕಾರವಾರ— ಬಿಣಗೆಯ ಫೇಸ್ಟಿವಲಕ್ಕೆ ಆದ ಮಾರಾಮಾರಿಯಲ್ಲಿ ಪೋಲೀಸ ಸಬ್ ಇನ್ಸಪೆಕ್ಟರ ಮತ್ತು ಹವಾಲದಾರ ಇವರಿಗೆ ಹೊಡತ ಬಿದ್ದಬಗ್ಗೆ ಪೋಲೀಸರಿಂದ ಫ್ರಾನ್ಸಿಸ್ ಮತ್ತು ಅವನ ಮಗ ರುಜಾರಿ ಇವರ ಮೇಲೆ ಖಟ್ಲೆಯಾಗಿ ಇಬ್ಬರಿಗೆ ೬ ತಿಂಗಳ ಕಠಿಣ ಶಿಕ್ಷೆ ಮತ್ತು ೨೫ ರೂಪಾಯಿ ದಂಡವಾಗಿರುವದು. ಶಿಕ್ಷೆ ತೀರಿದನಂತರ ೧ ವರ್ಷದ ತನಕ ಚಾಲಚಲನಕ್ಕಾಗಿ ಜಾಮೀನು ಕೊಡಬೇಕಾಗಿಯೂ ಇಲ್ಲಿಯ ಟೌನ ಮೆಜಿಸ್ಟ್ರೇಟರು ಫರ್ಮಾಯಿಸಿರುವರು.

ಇಲ್ಲಿಯ ಕೆಲವು ಪ್ರಮುಖ ವ್ಯಾಪಾರಿಗಳೂ ನಾಗರಿಕರೂ ಮಳೆಗಾಲದಲ್ಲಿ ಇಲ್ಲಿನಿಂದಲೂ ಆಗಬೋಟುಗಳನ್ನು ಚಾಲು ಇಡಬೇಕೆಂದು ಮುಂಬಯಿಯ ಸ್ಟೀಮ ನೆವಿಗೇಶನ್ ಕಂಪನಿಗೆ ಅರ್ಜಿಮಾಡಿ, ಬಿನ್ನೈಸಿಕೊಂಡಿರುವರು.

ಇಲ್ಲಿಯ ತಾಲೂಕಾ ಬೇಸಾಯ ಸುಧಾರಕ ಸಂಘದ ವಾರ್ಷಿಕ ಸಭೆಯು ಇದೇ ಬರುವ ತಾ| ೨೧ಕ್ಕೆ ಕೂಡುವದಿದೆ. ಬೇಸಾಯ ಖಾತೆಯ ಡಿ| ಡಿರೆಕ್ಟರರಾಗಿರುವ ಮಿ| ಗೋಖಲೆ ಸಾಹೇಬರು ಈ ಸಭೆಗೆ ಚಿತ್ತೈಸುವವರಿದ್ದಾರಂತೆ!

ತಾಜಾ ಸುದ್ದಿ.

ನಿಜಾಮರ ಹೈದರಬಾದದಲ್ಲಿ ಅಲ್ಲಿಯ ಹಿಂದೀ ಸಭೆಯ ವಾರ್ಷಿಕ ಸಮಾರಂಭವು ಪಂಡಿತ ಮದನ ಮೋಹನ ಮಾಲವೀಯರ ಅಧ್ಯಕ್ಷತೆಯಲ್ಲಿ ಇದೇ ಬರುವ ತಾ. ೨೪ಕ್ಕೆ ಆಗಬೇಕೆಂದು ಗೊತ್ತಾಗಿತ್ತು. ಪಂಡಿತಜೀಯವರಿಗೆ ವಿಜೃಂಭಣೆಯಿಂದ ಸ್ವಾಗತಿಕರಿಸಬೇಕೆಂದು ಏರ್ಪಾಡಾಗಿತ್ತು. ಆದರೆ, ಅಷ್ಟರಲ್ಲಿ ಮಾಲವೀಯರು ನಿಜಾಮ ಸಂಸ್ಥಾನದಲ್ಲಿ ಬರಕೂಡದೆಂಬ ಪ್ರತಿಬಂಧದ ಫರ್ಮಾನವನ್ನು ನಿಜಾಮರು ಹೊರಡಿಸಿರುವರಂತೆ! ಇದೆಂಥ ಆಟ!

ಪಂಡಿತ ಮೋತಿಲಾಲರಿಗೆ ಹಿಂದುಸ್ತಾನದ ಸರಕಾರದ 'ಲೊ ಮೆಂಬರ'ರ ಜಾಗೆಯನ್ನೂ ದೇಶಬಂಧು ದಾಸರಿಗೆ ಬಂಗಾಲದ ದಿವಾಣರ ಜಾಗೆಯನ್ನೂ ಸರಕಾರವು ಕೊಡಮಾಡಿರುವದೆಂದೂ, ದೇಶಬಂಧುಗಳು ಫರಿದಪುರದಲ್ಲಿ ಮಾಡಿದ ಸಂಧಾನ ಪ್ರಸ್ತಾವಗಳಿಗೆ ಇದು ಸರಕಾರದ ಉತ್ತರವಾಗಿರುವದೆಂದೂ 'ಮದ್ರಾಸ ಮೇಲ' ಪತ್ರಿಕೆಯು ಪ್ರಕಟಿಸಿರುವದು! ಮಿಕ್ಕ ದೇಶಭಕ್ತರಿಗೆ ಸರಕಾರವು ಕಲ್ಲಿಗುಂಡು ಕೊಡುವದೆಂದರೆ ಇದೇ!

WANTED an influential gentleman to represent a well established Indian Life Insurance Company as a District agent for N. Kanara. Handsome Office allowance and Commission will be paid. Apply stating age, experience and minimum business guarantee to the *Local Secretaries, The India Equitable Insurance Co., Ltd., 79. Medow's Street, Fort, BOMBAY.*

ವೃತ್ತಸಾರ.

— ಸಿಂಧೂ ದೇಶದಲ್ಲಿ ಮುಸಲ್ಮಾನರು ಹಿಂದೂ ಜನರನ್ನು ಅತಿಶಯ ಗುಪ್ತ ರೀತಿಯಿಂದ ಮುಸಲ್ಮಾನ ದೀಕ್ಷೆಯನ್ನು ಕೊಡುತ್ತಿದ್ದಾರೆ. ಅಲ್ಲಿಯ ಒಂದು ಭಯಂಕರ ಪರಿಣಾಮವು ಹೊರಬಿದ್ದಿರುತ್ತದೆ. ಒಬ್ಬ ಬ್ರಾಹ್ಮಣನ ಹೆಂಡತಿಯು ಮುಸಲ್ಮಾನ ಕಮ್ಮಾರನ ಮನೆಯೊಳಗೆ ಹೊಕ್ಕಳಂತೆ! ತನ್ನ ಹೆಂಡತಿಯನ್ನು ಮರುಳುಮಾಡಿ ಆಭರಣ ಸಹಿತ ಮನೆಯೊಳಗೆ ಪ್ರವೇಶಿಸಿಕೊಂಡನೆಂದು, ಆ ಬ್ರಾಹ್ಮಣನು ಕಮ್ಮಾರನ ಮೇಲೆ ಫಿರ್ಯಾದಿ ಹೂಡಿದನು. ವಿಚಾರಣೆಯ ಕಾಲಕ್ಕೆ ಎರಡು ಸಾವಿರ ಹಿಂದೂ-ಮುಸಲ್ಮಾನರು ಕೋರ್ಟಿನೊಳಗೆ ದೊಣ್ಣೆಗಳನ್ನು ತೆಗೆದುಕೊಂಡು ಬಂದಿದ್ದರು. ಏನೊಂದು ದಂಗೆಯಾಗದಂತೆ ಪೋಲೀಸರು ಕಾವಲಿಟ್ಟಿದ್ದರು. ಅದಲ್ಲದೆ ಹುಡುಗರನ್ನು ಒಯ್ದುಕೊಂಡು ಹೋಗಿ, ಮುಸಲ್ಮಾನರನ್ನಾಗಿ ಮಾಡುವ ಸುದ್ದಿಯೂ ಉಂಟು. ತಮಗೆ ಈ ಸುದ್ದಿ ತಿಳಿದರೂ, ಹೇಳಲಿಲ್ಲವೆಂತ ಒಬ್ಬ ಪೋಲೀಸ ಶಿಪಾಯಿಯವರಿಗೆ ಬಡತರ್ಫಮಾಡಿದ್ದಾರೆ.

— ಮದ್ರಾಸದ ವಿದ್ಯಾಖಾತೆಯ ಮಂತ್ರಿಗಳು ಮಧ್ಯಮ ತರಗತಿ ಶಿಕ್ಷಣವನ್ನು ಜನತೆಯ ಆರ್ಥಿಕ ಮತ್ತು ಬೇಡಿಕೆಗಳ ಸ್ಥಿತಿಗನುಸಾರವಾಗಿ ನಡಿಸಲಿಕ್ಕೆ ಆಗುವಂತೆ ಒಂದು ವಿಶೇಷ ಸಮಿತಿಯನ್ನು ತಯಾರಿಸುವವರಿದ್ದಾರೆ. ಈ ಬಗ್ಗೆ ಜಿಲ್ಲೆಯೊಳಗಿನ ವಿದ್ಯಾಖಾತೆಯ ಅಧಿಕಾರಿಗಳ ಮತ್ತು ಅನುಭವಿಕ ಮುಖ್ಯಾಧ್ಯಾಪಕರ ಪರಿಷತ್ತನ್ನು ಅವರು ನೆರೆಯಿಸಲಿಕ್ಕಿದ್ದಾರೆ.

— ಮೊರೊಕ್ಕೋದೊಳಗೆ ಸದ್ಯಕ್ಕೆ ಫ್ರೆಂಚರಿಗೂ ರಿಫ್ ಜನಾಂಗದ ಮಹಮ್ಮದೀಯರಿಗೂ ಕಾದಾಟ ನಡೆದಿರುತ್ತದೆ. ಆ ಜನದ ಮುಂದಾಳಾದ ಅಬ್ದುಲ್ ಕರೀಮನು ತಾನು ಸ್ವಾತಂತ್ರ್ಯಕ್ಕಾಗಿಯೂ, ಧರ್ಮದ ಉದ್ಧಾರಕ್ಕಾಗಿಯೂ ಕಾದುತ್ತಿದ್ದೇನೆಂದು ಸಾರಿಹೇಳುತ್ತಿದ್ದು, ತನ್ನ ಕರೆಯ ಸ್ವಜಾತಿಯ ಜನದವರನ್ನು ಹುರಿದುಂಬಿಸುತ್ತಿದ್ದಾನೆ. ಬಹಳ ಭದ್ರವಾದ ಸ್ಥಾನಗಳನ್ನು ಹಿಡಿದುಕೊಂಡು ಫ್ರೆಂಚರನ್ನು ಅಲ್ಲಲ್ಲಿ ಈ ಜನದವರು ಸೋಲಿಸುತ್ತಿದ್ದಾರೆ. ಗುಪ್ತ ರೀತಿಯಿಂದ ಜರ್ಮನಿಯ ಸಹಾಯವೂ ಅವರಿಗೆ ಸಿಕ್ಕಿರುವದಂತೆ! ರಣದೇವಿಯ ಆಟವೇನು?

— ಕಾಮಾಗಾಟಾಮಾರು ಎಂಬ ಹಡಗದಲ್ಲಿ ಕೂತು ಅಮೇರಿಕೆಯಿಂದ ಬಂದ ಸೀಖರಲ್ಲಿರುವ ಆಯುಧಗಳನ್ನು ಜಪ್ತಮಾಡಲು ಕಲಕತ್ತೆಯಲ್ಲಿ ಪೋಲೀಸ ಕಮಿಶನರರೇ ಮೊದಲಾದ ಅನೇಕರು ಕೊಲ್ಲಲ್ಪಟ್ಟರು. ಈ ಕೊಲೆಯಾದನಂತರ ಸರಕಾರವು ಅದರಲ್ಲಿದ್ದ ಸಾಮಾನು ಜಪ್ತು ಮಾಡಿತು. ಆದರಿಂದ ತಮ್ಮ ಎರಡೂವರೆ ಲಕ್ಷ ರೂಪಾಯಿ ಹಾನಿಯಾಯಿತು; ಅದನ್ನು ತುಂಬಿಸಿಕೊಡಬೇಕೆಂದು ಸರದಾರ ಗುರುದತ್ತಸಿಂಗರು ಸರಕಾರದ ಮೇಲೆ ಕಲಕತ್ತೆ ಹೈಕೋರ್ಟಿನಲ್ಲಿ ದಾವೆ ಹೂಡಿದ್ದಾರೆ.

— ಪಂಡಿತ ಗೋವಿಂದಾಚಾರ್ಯರೆಂಬವರು ಮೈಸೂರಿನಲ್ಲಿ ವೈಷ್ಣವ ಬ್ರಾಹ್ಮಣರಿರುತ್ತಾರೆ. ಇವರು ಅಂತ್ಯಜೋದ್ಧಾರಕ್ಕೆ ಅನುಕೂಲರಿರುವರು. " ವೈಷ್ಣವ ಧರ್ಮದಲ್ಲಿ ಅಸ್ಪೃಶ್ಯ ಹೇಳಿರುವದಿಲ್ಲ ಅಸ್ಪೃಶ್ಯರನ್ನು ಶಿಷ್ಯರನ್ನಾಗಿ ಮಾಡಿಕೊಂಡು ಅಧ್ಯಯನ ಮಾಡಿಸುತ್ತೇವೆ"ಎಂದು ನೆಲಮಂಗಲದಲ್ಲಿ ಕೂಡಿದ ಅಸ್ಪೃಶ್ಯರ ಸಭೆಯಲ್ಲಿ ;ಅವರು ಉಪದೇಶಮಾಡಿದರಂತೆ!

— ಮದ್ರಾಸದೊಳಗೆ ತಮಿಳನಾಡು, ಆಂಧ್ರ, ತುಳು ಕರ್ನಾಟಕ, ಸ್ವರಾಜ್ಯ ಪಾರ್ಟಿಗಳ ಸಭೆಯು ಶ್ರೀ| ಶ್ರೀನಿವಾಸ ಅಯ್ಯಂಗಾರರ ನೇತೃತ್ವದೊಳಗೆ ಇದೇ ೧೦ ನೇ ತಾರೀಖಿಗೆ ನೆರೆದಿತ್ತು. ಮದ್ರಾಸ ಸ್ವರಾಜ್ಯ ಪಾರ್ಟಿಯು ಬೇಕಾದಾಗ ಬೇರೆ ಸ್ವರಾಜ್ಯ ಪಾರ್ಟಿಗಳೊಡನೆ ಸಹಕಾರ ಮಾಡಲಿಕ್ಕೆ ಅಡ್ಡಿಯಿಲ್ಲ, ಇನ್ನು ಮುಂದೆ ಪ್ರತ್ಯೇಕವಾಗಿ ಕೆಲಸ ಮಾಡಬೇಕೆಂತ ಠರಾಯಿತು. ಶ್ರೀ| ಶ್ರೀನಿವಾಸ ಅಯ್ಯಂಗಾರರು, ಶ್ರೀ| ಶಿವಗಿರಿರಾವ ಚೆಟ್ಟಿಯರ ನಿಧನದಿಂದ ಖಾಲಿಯಾದ ಮದ್ರಾಸ ಕೌನ್ಸಿಲಿನೊಳಗಿನ ಜಾಗಕ್ಕೆ ಉಮೇದ್ವಾರರಾಗಿ ನಿಲ್ಲುವವರಿದ್ದಾರೆ. ಹಾಗು ಕೌನ್ಸಿಲ ಆಫ್ ಸ್ಟೇಟ ಚುನಾವಣೆಗಾಗಿ ಬಂದ ಅನೇಕ ಅಭಿಪ್ರಾಯಗಳನ್ನು ವಿಮರ್ಶಿಸುವರೆ ಶ್ರೀ| ರಂಗಸ್ವಾಮಿ ಅಯ್ಯಂಗಾರರ ನೇತೃತ್ವದೊಳಗೆ ಒಂದು ಕಮಿಟಿ ನೇಮಕ ಮಾಡಲ್ಪಟ್ಟಿದೆ.

— ಪಂಡಿತ ಜವಾಹಿರಲಾಲ ನೇಹರು ಎಮ್. ಎಲ್. ಸಿ. ಯವರಿಗೆ ಅಲಹಾಬಾದದ ಮೆಜಿಸ್ಟ್ರೇಟರು ಮಾಡಿದ ಖಟ್ಲೆಯಂತೆ, ಮೋಟಾರ ಓಡಿಸುವಾಗ ಎಣ್ಣೆಯ ದೀಪ ಉರಿಸದ ಬಗ್ಗೆ ೫ ರೂಪಾಯಿ ದಂಡಮಾಡಿದರು. ಮೋಟಾರ ವಾಹನ ಕಾಯಿದೆಯು ಯಾವ ತರದ ದೀಪಗಳನ್ನು ಮೋಟಾರ ಬಂಡಿಗೆ ಉರಿಸಬೇಕೆಂಬುದನ್ನು ಸ್ಪಷ್ಟವಾಗಿ ಹೇಳುವದಿಲ್ಲವೆಂತ ಪಂಡಿತ ಜವಾಹರಲಾಲರು ತಮ್ಮ ಜವಾಬು ಕೊಟ್ಟರು. ಹೈಕೋರ್ಟಿಗೆ ಅಪೀಲು ನಡೆಯುವದು; ಮತ್ತು ವರಿಷ್ಠ ಕಾಯದೆ ಕೌನ್ಸಿಲಿನಲ್ಲಿ ಒಂದು ಬಿಲ್ಲು ಇದರ ತಿದ್ದುಪಡಿಗಾಗಿ ಪಂಡಿತರು ತರುವವರಿದ್ದಾರೆ.

— ನಾಭಾ ಸಂಸ್ಥಾನದೊಳಗೆ ಎರಡನೇ [illegible] ಜಥಾದೊಳಗಿನ ಅಕಾಲಿಗಳು ಸಹಿಸಬೇಕಾದ [illegible] ಚಾರಗಳನ್ನು ಕುರಿತು, ಶಿರೋಮಣಿ ಗುರುದ್ವಾರ ಕಮಿಟಿಯು ಕೆಲವು ವೃತ್ತಾಂತವನ್ನು ಪ್ರಕಟಿಸಿತ್ತು. ಅದರ ಸತ್ಯಸ್ಥಿತಿಯನ್ನು ನಾಭಾ ಅಧಿಕಾರಿಗಳಿಂದ ಹಿಂದುಸ್ಥಾನ ಸರಕಾರವು ತಿಳಕೊಂಡು [illegible] [illegible] ಜಾಹೀರು ಮಾಡಿರುತ್ತದೆ. ಅದೇನೆಂದರೆ, “ನಾಭಾ ಜೈಲಿನೊಳಗಿನ ಎರಡನೇ ಅಕಾಲಿ [illegible]ಳಗಿನ ಕೆಲವು ಅಕಾಲಿಗಳು ಆ ಸಂಸ್ಥಾನ ಅಧಿಕಾರಿಗಳ ಹತ್ತರ ಕ್ಷಮೆ ಬೇಡಲಿಕ್ಕೆ ಸಿದ್ಧರಾದದ್ದನ್ನು ತಿಳಿದು, ಅದೇ ಜಥಾದೊಳಗಿನ ಬೇರೆ ಕೆಲವರು ಹಾಗೆ ಮಾಡಿದರೆ ಪರಿಣಾಮ [illegible] [illegible] ಅವರಿಗೆ ಬೆದರಿಸಹತ್ತಿದರು. ಅದಲ್ಲದೆ ಆ ಅಕಾಲಿಗಳು ಜೈಲ ಅಧಿಕಾರಿಗಳ ಅಪ್ಪಣೆಯನ್ನು [illegible] ಮನ್ನಿಸುತ್ತಿದ್ದಿಲ್ಲ. ಇವೆಲ್ಲ ಕಾರಣದಿಂದ ಆ ಉದ್ಧಟ ಮಂದಿಗಳಿಗೆ ಬೇರೆ ಸ್ಥಳದಲ್ಲಿ ಇಡಬೇಕೆಂತ ನಾಭಾ ಸಂಸ್ಥಾನ ಜೈಲ ಅಧಿಕಾರಿಗಳು ಅವರಿಗೆ ತಿಳಿಸಿದರು. ಆದರೆ ಅವರು ಅದಕ್ಕೆ ಒಪ್ಪದ್ದರಿಂದ ಬಲಾತ್ಕಾರದಿಂದ ಅವರಿಗೆ ಸ್ಥಳಾಂತರ ಮಾಡುವ ಪ್ರಸಂಗ [illegible]. ಆ ವ್ಯಕ್ತಿಗಳು [illegible] [illegible] [illegible] ಶಕ್ತಿಯನ್ನು ಉಪಯೋಗಿಸಿ [illegible] [illegible] ಬೇರೆ ಕಡೆಗೆ ಒಯ್ಯಲ್ಪಟ್ಟರು. ಈ [illegible] ಅಕಾಲಿಗಳಿಗೆ [illegible] [illegible] [illegible] ನಾಭಾ ಸಂಸ್ಥಾನದ ಅಧಿಕಾರಿಗಳ [illegible] [illegible] ದರು.”

— ಬಾವಲಾ ಖೂನಿ ಖಟ್ಲೆಯ [illegible] [illegible] ತ್ತಿದ್ದಾಗ, ಅದರಲ್ಲೊಳಗಿಂದ [illegible] ಮೊದಲಾದವರ ಸಾಕ್ಷಿ [illegible] [illegible] ನ್ನು [illegible]. ಈ ಖಟ್ಲೆಯ [illegible] [illegible] [illegible] ಕವು ಪ್ರಸಿದ್ಧ ಬ್ಯಾರಿಸ್ಟರ [illegible] ಜಿನ್ನಾ ಅವರು. ಪ್ರತಿವಾದಿ [illegible] ಮಾಡಿ, [illegible] [illegible] [illegible] ನ್ಯಾಯಮೂರ್ತಿಗಳಿಗೆ [illegible]. [illegible] ನ್ಯಾಯಮೂರ್ತಿಗಳು [illegible] ಚೆನ್ನಾಗಿ [illegible]. ಸಮಾಧಾನದಿಂದ ಯೋಗ್ಯ ಪರಿಣಾಮವೇನಾಗದೆ [illegible] [illegible], ಇನ್ನು ಮುಂದೆ [illegible] ಪತ್ರಿಕೆಗಳು ಈ ಖಟ್ಲೆ ಪೂರ್ತಿ ನಿಕಾಲಿಯಾಗುವವರೆಗೆ [illegible] [illegible] [illegible] [illegible] [illegible] ಕೊಟ್ಟಿರುವರು. ಅರ್ಜಿ ಕೊಟ್ಟ ಮಿ. ಜಿನ್ನಾ ಅವರು [illegible] [illegible] ಕೋರ್ಟಿನ ಮೇಲೆ [illegible] ಹಾಜರಾಗಿದ್ದರು.

— ಹಿಂದುಸ್ಥಾನದೊಳಗಿನ ಮುಸಲ್ಮಾನರ ಬೇರೆ ಬೇರೆ ಪಕ್ಷಗಳ ಐಕ್ಯತೆ ಸಾಧಿಸುವ ಒಂದು ಸರ್ವ ಪಕ್ಷೀಯ ಮುಸಲ್ಮಾನರ ಪರಿಷತ್ತು ಅಮೃತಸರದಲ್ಲಿ ಬೇಗನೆ ಕೂಡಬೇಕೆಂದು ಗೊತ್ತಾಗಿದೆ. [illegible] [illegible] [illegible] ಮುಂದಾಳುಗಳು ಈ ವಿಷಯದ ಆಮಂತ್ರಣ ಪತ್ರಿಕೆಯನ್ನು ಹೊರಡಿಸುವವರಿದ್ದಾರೆ. ಮೌ. ಶೌಕತ ಅಲಿ ಸಾಹೇಬರು [illegible] ಮಾಡಿ ಅಧ್ಯಕ್ಷರಾಗುವರು. ಈ [illegible] ಅಮೃತಸರದಲ್ಲಿ [illegible] [illegible] ನಡೆಯು ತ್ತದೆ.

— ಮಹಾತ್ಮರು ಪರೀದಪೂರ ಪರಿಷತ್ತಿನಿಂದ ತಿರುಗಿ ಪೂರ್ವ ಬಂಗಾಲದಿಂದ ಬರುವಾಗ ವಿಕ್ರಮಪೂರ ಶಹರ [illegible] ಕಡೆಯಿಂದ ಶ್ರೀ ಪ್ರಫುಲ್ಲಚಂದ್ರ, [illegible] ಸ್ವಾಗತದ ಮಾನಪತ್ರವನ್ನು, ೩೦೦೦ ರೂಪಾಯಿಗಳ ಗಂಟನ್ನು ಮಹಾತ್ಮರಿಗೆ ಅರ್ಪಿಸಿದರು.

— ಪೂರ್ವಬಂಗಾಲ ನಾರಾಯಣಗಂಜ [illegible] [illegible] ಹಳ್ಳಿಯಲ್ಲಿ ಬನಾವಟ ನೋಟು ಮಾಡುವ ಜನರ ತಂಡದ ಪತ್ತೆಹತ್ತಿರುತ್ತದೆ. ಗುಪ್ತ ಪೋಲೀಸ ಸುಪರಿಂಟೆಂಡ [illegible] ಈ ತಂಡದ ಸುದ್ದಿ ಹತ್ತಿದಕೂಡಲೇ ಕೆಲ ಪೋಲೀಸರೊಡನೆ ಅಲ್ಲಿ ಹೋಗಿ ಪ್ರಭೋಧಚಂದ್ರದಾಸ ಗುಪ್ತ ಮತ್ತು ಸತೀಶಚಂದ್ರ ಚಕ್ರವರ್ತಿ ಎಂಬ ಇಬ್ಬರನ್ನು ಕೈದುಮಾಡಿ ಅವರ ಮನೆ ಝಡತಿ ಮಾಡಲಿಕ್ಕೆ ಆರಂಭಿಸಿದರು. ಅಷ್ಟರೊಳಗೆ ಅವರು ತಪ್ಪಿಸಿಕೊಂಡು ಓಡಿಹೋಗಲಿಕ್ಕೆ ಹವಣಿಸುತ್ತಿದ್ದರು. ಅವರ [illegible] [illegible]ಟು, ನೋಟು ಮಾಡುವ ಸೀಸದ ಅಚ್ಚು ಮತ್ತು ೩೦೦ ಹತ್ತು ರೂಪಾಯಿಗಳ ನೋಟುಗಳು ಸಿಕ್ಕಿದವು. ಅದಲ್ಲದೆ ಮನೆಯಲ್ಲಿ ಕೆಲವು ನೋಟುಮಾಡಲಿಕ್ಕೆ ಉಪಯೋಗಕ್ಕೆ ಬೀಳುವಂಥ ರಸಾಯನ ದ್ರವ್ಯಗಳೂ ಸಿಕ್ಕಿದವು; ಇದಲ್ಲಿ ಬನಾವಟ ನೋಟಿನ ಹಣವು ಬಂಗಾಲದೊಳಗಿನ ಕ್ರಾಂತಿಕಾರಕ ಜನರ ಸಹಾಯಕ್ಕೆ ಉಪಯೋಗಿಸಲ್ಪಡುತ್ತದೆಂಬದೂ ತಿಳಿಯುತ್ತದೆ.

— ಭರತಖಂಡದ ಶೆರಿಗೆ ವಿಚಾರಣೆ ಕಮಿಟಿಯು ಜೂನ ೫ರಿಂದ ೧೦ರ ವರೆಗೆ ಪುಣೆಯೊಳಗೆ ೧೧ರಿಂದ ೧೫ರ ವರೆಗೆ ನಡೆಯುವದು. ಕಮಿಟಿಯ ಮುಂದೆ ಸಾಕ್ಷಿ ಕೊಡಲು ಒಪ್ಪುವ ಸದ್ಗೃಹಸ್ಥರು ಆ ಕಮಿಟಿಯ ಸೆಕ್ರೆಟರಿಗಳ ಹತ್ತರ ಬೆಂಗಳೂರಿನಲ್ಲಿ ತಮ್ಮ ಅಭಿಪ್ರಾಯದ ಪತ್ರವನ್ನು ಕಳಿಸಿಕೊಡಬೇಕು.

— ಶಾಂತಿನಿಕೇತನದೊಳಗಿನ [illegible] ಸಂಸ್ಥಾನದ [illegible] [illegible] ಕವಿಶ್ರೇಷ್ಠ ರವೀಂದ್ರನಾಥ ಟಾಗೋರರ ವಿಶ್ವಭಾರತಿ ಸಂಸ್ಥೆಯಕ್ಕೆ ಕೊಡತಕ್ಕ ದೇಣಿಗೆ ಹಣದ ಕೊನೆಯ ಕಂತಿನ ಹಣ ೫೦೦೦ ರೂಪಾಯಿಗಳನ್ನು ಕಳಿಸಿಕೊಟ್ಟರು. ಮೊದಲು, ೧೪,೪೦೦ ರೂಪಾಯಿಗಳನ್ನು ಕೊಟ್ಟಿದ್ದರು.

— ಪುಣೆಕರರು ಸಾತಾರಾ ಮಹಾರಾಷ್ಟ್ರೀಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ದೇಶಮುಖ, ಎಮ್. ಎಲ್. ಸಿ. ಅವರಿಗೆ ಸ್ವಾಗತದ ಮಾನಪತ್ರವನ್ನು ಅರ್ಪಿಸಿದರು.

— ಫಿಜಿ ದ್ವೀಪದಲ್ಲಿ ವಿಷಮಜ್ವರದ ಹಾವಳಿಯಿಂದ ೧೦೦ ಯುರೋಪಿಯನ್ನರೂ, ಅನೇಕ ಹಿಂದೀಯರೂ ಸಾಯುತ್ತಿರುವರು. ಆಸ್ಟ್ರೇಲಿಯಾ ದ್ವೀಪಕ್ಕೆ ವೈದ್ಯ [illegible] ಕರೆಕಳಿಸಿರುತ್ತದೆ. ಏನು ದುರವಸ್ಥೆ!

— ದೇಶಬಂಧು ದಾಸರಿಗೆ ಕಲಕತ್ತೆಯ ಮ್ಯುನಿಸಿಪಾಲಿಟಿ [illegible] ಸಂಘವು ಇದೇ ೯ ನೇ ತಾರೀಖಿಗೆ ಮಾನಪತ್ರವನ್ನು ಅರ್ಪಿಸಿತು.

— ಜರ್ಮನಿಯು ಮಹಾಯುದ್ಧದ ಪೂರ್ವದ ತನ್ನ ರಾಷ್ಟ್ರೀಯತ್ವವನ್ನು ಪುನಃ ಸಿದ್ಧಗೊಳಿಸಲಿಕ್ಕೆ ಹವಣಿಸಹತ್ತಿದೆ. ಹೊಸ ಪ್ರೆಸಿಡೆಂಟರಾದ ವೋನ ಹಿಂಡೆನ್‌ಬರ್ಗ ರವರು ಮೊನ್ನೆ ಅಧಿಕಾರಾರೂಢರಾಗುವಾಗ ಹೊರಡಿಸಿದ ಜಾಹೀರನಾಮೆಯು ಮನನೀಯವಿರುತ್ತದೆ. ಇವರು ಬರ್ಲಿನ್ ನಗರಪ್ರವೇಶಮಾಡುವಾಗ ಯಾವತ್ತು ಪಕ್ಷದವರು [illegible] ಸಮಾರಂಭದಿಂದ ಇವರನ್ನು ಕರೆತಂದರು. ವಿಮಾನಗಳ ಮೇಲಿಂದ ಪುಷ್ಪವೃಷ್ಟಿಯಾಯಿತು. ಜನರ ಜಯಜಯಕಾರವು ಧುಮುಧುಮಿಸುತ್ತಿತ್ತು. ಇವರು ಸಭಾಸ್ಥಾನವನ್ನು ಪ್ರವೇಶಿಸುವಾಗ ಸೋಶಿಯಲಿಸ್ಟ, ರಿಪಬ್ಲಿಕ್ ಎಂಬ ಒಂದು ಪಕ್ಷವು “ಹೊಡೆದು ಕೆಡವಿರಿ” ಎಂದು ಒಂದೇ ಘೋಷದಿಂದ ಸಭಾಸ್ಥಾನವನ್ನು ಬಿಟ್ಟು ನಡೆದರು; ಇಡೀ ಜರ್ಮನಿಯು ಇವರ ಭಾಷಣದಿಂದ ಆನಂದಿತವಾಗಿ ಹೋಗಿತ್ತು. ಯಾವ ಪಕ್ಷದವರಿಗೂ ನೋಯಿಸದೆ, ಬೇರೆ ರಾಷ್ಟ್ರಗಳಿಂದ ನಮ್ಮ ರಾಷ್ಟ್ರೀಯತ್ವದ ಅರಿವನ್ನು ಪೋಷಿಸುವದು ತನ್ನ ಕರ್ತವ್ಯವಾಗಿರುತ್ತದೆಂದು ಇವರು ಜನರಿಗೆ ಚೆನ್ನಾಗಿ ಬೋಧಿಸಿದರು.

— ಅಂತರ್ರಾಷ್ಟ್ರೀಯ ರೇಲ್ವೇ ಸಂಘದ ಹೇಳಿಕೆಯಂತೆ, ಕ್ರಿಶ್ಚನ್ ಪಂಚಾಂಗ ಯಾನೆ ಕೆಲೆಂಡರನ್ನು ತಿದ್ದಲಿಕ್ಕೆ ಬ್ರಿಟಿಶ ರೇಲ್ವೆ ಕಂಪನಿಗಳು ಒಪ್ಪಿರುತ್ತವೆ. ಈ ತಿದ್ದುಪಡಿಯಿಂದ ೨೮ ದಿವಸಗಳ ೧೩ ತಿಂಗಳಿನ ಇಸ್ವಿಯು ಉಂಟಾಗುವದು. ಮೊದಲು ೩ನೇ ಜಾರ್ಜ ಅರಸನ ಕಾಲಕ್ಕೆ ಹೀಗೆಯೇ ಪಂಚಾಂಗವನ್ನು ತಿದ್ದುಪಡಿ ಮಾಡಿ, [illegible] ಆಯುಷ್ಯದ ೧೧ ದಿವಸಗಳನ್ನು ಕಳೆದು ಮಾಡಿದ (೧೧ ದಿವಸಗಳಷ್ಟು ಪಂಚಾಂಗದಿಂದ ಕಿತ್ತು ಹಾಕಿದ) ಬಗ್ಗೆ ಬ್ರಿಸ್ಟಲ್ ಮುಂತಾದ ಇಂಗ್ಲಂಡದೊಳಗಿನ ಪಟ್ಟಣಗಳಲ್ಲಿ ದಂಗೆಯಾಗಿತ್ತು. ಮಹಾಯುದ್ಧದ ನಂತರ ಕೆಲವು ಯುರೋಪಿಯನ್ ರಾಷ್ಟ್ರಗಳು ಗಡಿಯಾಲಗಳನ್ನು ತೀವ್ರವಡಿಸಿ ತಮ್ಮ ಆಯುಷ್ಯವನ್ನು ಹೆಚ್ಚಿಸಿಕೊಳ್ಳುತ್ತಿವೆ. ಭಗವಾನ್ ಸೂರ್ಯನಾರಾಯಣನು ತನ್ನ ಗತಿಯನ್ನು ಕಲ್ಪಾಂತದವರೆಗೂ ಸರಿಯಾಗಿ ನಡಿಸಹತ್ತಿದ್ದಾಗ ಇವರು ಬೇಕಾದ ಸುಧಾ[illegible] ಮಾಡಿ ಫಲವೇನು! [illegible], ಇಂಗ್ಲಂಡದಲ್ಲಿ ಮೊದಲು ದಂಗೆಯಾದಂತೆ ನಮ್ಮ ಭರತಖಂಡದಲ್ಲಿ ಹಾಗೇನೂ ಆಗದೆ ಇದ್ದದಾಯಿತು. ಬೇರೆ ಇವರು ಯಥೇಷ್ಟ [illegible] ಕೊಳ್ಳಲಿ.

— ಲಂಡನ ಶಹರಿನ ಪ್ಲೀಟ ಬೀದಿಯೊಳಗೆ ವಾಸಿಸುವ ಪ್ಯಾಟ್ರಿಕ್ ಡ್ಯಾಲಿ ಎಂಬುವನ ಹೆಂಡತಿಯು ನಾಲ್ಕು ಕೂಸುಗಳನ್ನು ಏಕಕಾಲಕ್ಕೆ ಹೆತ್ತಳು. ಅವುಗಳಲ್ಲಿ ಎರಡು ಸತ್ತುಹೋದವು ಉಳಿದವೆರಡು ಜೀವಂತವಿರುತ್ತವೆ. ಈ ಕೂಸುಗಳ ತಾಯಿಯ ತಾಯಿಯು ಒಂದೇ ಕಾಲಕ್ಕೆ ಮೂರು ಕೂಸುಗಳನ್ನು ಹೆತ್ತಿದ್ದಳು. ಅವುಗಳಲ್ಲಿ ಒಂದು ಕೂಸು ಈಗ ನಾಲ್ಕು ಹೆತ್ತವಳಾಗಿರುವಳು. ತಾಯಿಯಂತೆ ಮಗಳು!

— ಕಲಕತ್ತೆಯಲ್ಲಿ ನಾಲ್ವರು ಮುಸಲ್ಮಾನ ಹುಡುಗರು ತಮ್ಮ ಬಳಿಯಲ್ಲಿ ಪಿಸ್ತೂಲ ಉಪಯೋಗಿಸಿದರೆಂದು ಹಿಡಿಯಲ್ಪಟ್ಟರು. ಅವರಿಗೆ ಕೇಳಲಾಗಿ ದಾರಿಯಲ್ಲಿ ಬಿದ್ದಿತ್ತೆಂದು ಉತ್ತರ ದೊರೆಯಿತು.

— ಕಳೆದ ಜನವರಿಯಲ್ಲಿ ಅಲಹಾಬಾದದಲ್ಲಿ ನಡೆದ ಆಯ್. ಸಿ. ಎಸ್. ಪರೀಕ್ಷೆಯಲ್ಲಿ ಬರೇ ೫ ಮಂದಿಗಳು ಯಶಸ್ವಿಗಳಾದರು. ೯೦ ಮಂದಿಗಳು ನಾಪಾಸಾದರು.

— ಶ್ರೀಮಾನ್ ಮೈಸೂರ ಮಹಾರಾಜರು ಯಾತ್ರಾರ್ಥಿಗಳಾಗಿ ಬದರೀಕಾಶ್ರಮಕ್ಕೆ [illegible] ಪ್ರಯಾಣ ಬೆಳೆಸಿರುವರು.

— ಫೋರ್ಡ ಮೋಟಾರುಕಂಪನಿ ಕರ್ತರಾದ ಫೋರ್ಡ ಸಾಹೇಬರು ಅದೇ ಮಾದರಿ ಸಣ್ಣ ವಿಮಾನುಗಳನ್ನು ತಯಾರಿಸಹತ್ತಿರುವರು.

— ಬಾರಾಮತಿಯೊಳಗೆ ಒಬ್ಬ ಬ್ರಾಹ್ಮಣನ ೧೨-೧೩ ವರ್ಷದ ಹುಡುಗನು ಗದ್ದೆಯೊಳಗೆ ಒಂದು ಆಕಳಕರುವಿನ ಕುತ್ತಿಗೆಗೆ ಮತ್ತು ತನ್ನ ಕೈಗೆ ಒಂದು ಬಳ್ಳಿಯನ್ನು ಕಟ್ಟಿಕೊಂಡು ಆಡುತ್ತಿದ್ದನು. ಅಕಸ್ಮಾತ್ತಾಗಿ ಎಲ್ಲಿಯೋ ನೆರೆಯಲ್ಲಿ ಹೊಂಚು ಹಾಕಿಕೊಂಡಿದ್ದ ಒಂದು ದೊಡ್ಡ ಹೆಬ್ಬಾವು ಬಂದು ಆತನನ್ನು ನುಂಗಲಿಕ್ಕೆ ಆರಂಭಿಸಿತು. ಹೆಬ್ಬಾವು ಮನುಷ್ಯನನ್ನು ನುಂಗಿದರೆ ಒಂದು ದೊಡ್ಡ ಮರಕ್ಕೆ ಸುತ್ತುಹಾಕಿಕೊಳ್ಳುತ್ತದಂತೆ! ಈ ಹುಡುಗನನ್ನು ಕುತ್ತಿಗೆವರೆಗೆ ನುಂಗಿ, ಆ ಮೇಲೆ ಅಂಥ ಮರವೆಲ್ಲಾದರೂ ಸಿಗುತ್ತದೋ ನೋಡಬೇಕೆಂದು ಸರಿದು ಹೋಗಹತ್ತಿತು. ಆಗ ನುಂಗಲ್ಪಟ್ಟ ಹುಡುಗನ ಕೈ ಬಳ್ಳಿಯಿಂದ ಆಕಳಕರುವಿಗೆ [illegible]ಹಾಕಿದಂತೆ ಆಗಿ ಅದು ದೈನ್ಯಸ್ವರದಿಂದ ಕೂಗಹತ್ತಿತು. ಕೂಡಲೇ ನೆರೆಯಲ್ಲಿದ್ದ ಜನರು ಓಡಿಬಂದು ಈ ಅದ್ಭುತ ಚಮತ್ಕಾರವನ್ನು ನೋಡಿದರು. ಒಬ್ಬನು ಹುಡುಗನನ್ನು ಬಳ್ಳಿ ಹಿಡಿದು ಎಳೆಯಲಿಕ್ಕೆ ಆರಂಭಿಸಿದನು. ಮತ್ತೊಬ್ಬನು ಕತ್ತಿಯಿಂದ ಹೆಬ್ಬಾವಿನ ಮೋರೆಯನ್ನು ತಿವಿದು ಸೀಳಿದನು. ಬೇರೆ ಕೆಲವರು ಬಾಲದ ಬದಿಗೆ ಬೆಂಕಿ ಹಾಕಿ, ಅದರ ಶಕ್ತಿಯನ್ನು ಕುಗ್ಗಿಸಿದ ಮೇಲೆ ಆ ಹುಡುಗನಿಗೆ ಎಳೆದು ತೆಗೆಯಲು ಸಾಧ್ಯವಾಯಿತು. ಅಂಥ ವಿಷಮಯ ಭಯಂಕರ ಪ್ರಾಣಿಯ ಬಾಯಿಯಿಂದ ಬಿಡಿಸಲ್ಪಟ್ಟ ಹುಡುಗನು ಈಗ ಬದುಕಿ ಉಳಿದಿದ್ದಾನೆ. ಬರೇ ಅವನ ಮುಖಕಾಂತಿಯು ಕಪ್ಪಾಗಿದೆ.

— ಪಂಡಿತ ಮೋತೀಲಾಲ ನೇಹರೂಗಳ ಜನ್ಮದಿವಸಕ್ಕಾಗಿ ಕಾಣಿಕೆಯೆಂತ ತಾನು ಸ್ವರಾಜ್ಯಪಕ್ಷದ ಮೆಂಬರನಾಗಲಿಕ್ಕೆ ಬಾಬೂ ಗಯಾ ಪ್ರಸಾದಸಿಂಗ ಎಮ್. ಎಲ್. ಎ. ರವರು, ಅರ್ಜಿಮಾಡಿಕೊಂಡಿರುವರು.

— ರೇಶಿಮ ಕೈಗಾರಿಕೆಯ ಮುಖ್ಯ ಸ್ಥಳವಾದ [illegible] ಎಂಬ ಜಪಾನದೊಳಗಿನ ಪಟ್ಟಣದಲ್ಲಿ ಎರಡು ಸಾವಿರ ಮನೆಗಳೂ, ದೊಡ್ಡ ಇಮಾರತುಗಳೂ ಸುಟ್ಟು ಹೋದವು.

ಭಾಷಾಂತರಕರ್ತರಿಗೆ ಸುಸಂಧಿ !

ಸುಪ್ರಸಿದ್ಧ ಮರಾಠಾ ಅನೇಕ ವಿದ್ಯಾ ಪಂಡಿತರಿಂದ ಚಲೋ ಅಭಿಪ್ರಾಯ ಪ ಆಗಿರುವ ಋಗ್ವೇದಿಯವರು ಬರೆದ " आर्यांच्या सणांचा प्राचीन व न इतिहास " ಎಂಬ ಮರಾಠಿ ಪುಸ್ತಕವನ್ನು ಕನ್ನಡದಲ್ಲಿ ಭಾಷಾಂತರಿ ದೆ. ಇದನ್ನು ಕೈಕೊಳ್ಳಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳ ಬೇ.

pply to:-- Copies can be had from:-

PRABHA & CO. The North Kanara Trading Co.
BOMBAY 4 KARWAR.

ಮಳೆಗೆ ಮೊದಲೇ ಎಚ್ಚರಿಕೆ !

ಅತ್ಯುತ್ತಮ, ಸುಂದರ, ಬಾಳಿಕೆಯುಳ್ಳ, ಮಜಭೂತಾದ

ರಿಯರ ಭಾಗ್ಯ !] **ಛತ್ರಿಗಳು.** [[illegible]

ಪ್ರತಿಯೊಬ್ಬರಿಗೂ ಅನುಕೂಲವಾದ ಪಸಂದಿನ ನಮೂನೆಗಳು !

ದೇಶೀಯ ಕೈಗಾರಿಕೆ ! ದೇಶಾಭಿಮಾನಿಗಳೇ !! ಆದುದರಿಂದ

ದೇಶೀಯರಿಗೆ ಖಾತರಿಯಾಗಿ ತೃಪ್ತಿಯಾಗುವುದು !

ಕಾನಡಾ ಜಿಲ್ಲೆಯೊಳಗಿನ ಪ್ರಮುಖ್ಯ ಛತ್ರೀ ದುಕಾನುಗಳಲ್ಲಿ ವಿಕರಿಗೆ ಇದೆ.

ಸೇಠ ನಾಗಜೀ ಪುರುಷೋತ್ತಮ್ ಮತ್ತು ಕಂಪನಿಯವರ

ಕಲ್ಲಿಕೋಟೆಯ ಕಾರಖಾನೆಯ

ಸೂರ್ಯ ಛಾಪಿನ ಛತ್ರಿಗಳೇ ಛತ್ರಿಗಳು !

ದುಕಾನುದಾರರಿಗೆ ಕಾತ್ಪರ್ಯವಿಟ್ಟು ಸವಲತ್ತು ಕೊಡಲಾಗುತ್ತದೆ.

ಪತ್ತೆ:— **ಶ್ರೀನಿವಾಸ ರಂಗ ಪೈ, ಸಾವಕಾರ ಮಹಾಲ್.**
ಮಂಗಳೂರು, ದ. ಕನ್ನಡ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬಿ. ದುವರ

ಸುಗಂಧ ನಶ್ಯದ ಪುಡಿ.

ರೋಗಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಸೇವನೆಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ನೆಗಡಿ, ಒಂದುತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇರಲ್ಪಟ್ಟ ಕಫ ವ್ಯಾಧಿಗಳನ್ನು ನಿವಾರಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮಾಸಿದ ಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸಿಸೆ ಫುಕ್ಕಟೆ ಕಳಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦, ವ್ಹಿ. ಪಿ. ೪ ಪಾರ್ಸಲ್ ೧ಕ್ಕೆ ರೂ. ೨-೮-೦ ವ್ಹಿ. ಪಿ. ೦-೩-೦
ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಮದರಾಸು

DAVAR'S
COLLEGE OF COMMERCE.
(Established 25 years.)

CELEBRATES ITS SILVER JUBILEE THIS YEAR UNDER THE DISTINGUISHED PATRONAGE OF MERCHANT-PRINCES, and LEADERS OF THOUGHT AND EDUCATION.

"The Institution under the sole direction of its Founder and Principal has done pioneer work in introducing for the First Time in India Courses in SPECIALISED BANKING, SPECIALISED SECRETARIAL WORK and SPECIALISED ACCOUNTANCY as the result of his numerous journeys to Europe and to the Colleges and Universities there.

The fact that a Scholar has successfully trained in DAVAR'S COLLEGE has always been accepted by businessmen all over India, Burma and Ceylon as a hallmark of perfection.

Prospectus on application to the Principal,
Great Western Bldg.,
Apollo Street, BOMBAY.

ಅಮೇರಿಕನ್ ಉಪಾಯ.

ಎಂಬ್ರೋಸಿಯಾ.

AMBROSIA

ಸ್ತ್ರೀರೋಗಪರಿಹಾರಕ್ಕಾಗಿ.

ಎಂಬ್ರೋಸಿಯಾವು ಸಮಸ್ತ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು. ಇದು ಸ್ತ್ರೀಸೌಂದರ್ಯವನ್ನುಂಟುಮಾಡುತ್ತದೆ. ಸಾಮಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರುತ್ತದೆ. ಜಲೋಷ್ಣ ಆಹಾರ ದೋಷದಿಂದ, ವಿಶೇಷ ಆಯಾಸ ಕೆಲಸ್ಮದರಿಂದ ಸ್ತ್ರೀಯರ ಪ್ರಕೃತಿಯು ಕೆಡುತ್ತದೆ. ಮುಟ್ಟಾಗುವಾಗ ಕಷ್ಟ ಪಡುವದು, ಮುಟ್ಟು ನಿಂತಿರುವದು, ಅಪಸ್ಮಾರ, ಬಿಳಿಸೆರಗಿನ ಮುಂತಾದ ಗರ್ಭಾಶಯದ ರೋಗಗಳು, ಅಜೀರ್ಣ, ತಲೆಶೂಲಿ, ಪ್ರಮಿತ್ಸಕದ ಇವೆಲ್ಲ ಸ್ತ್ರೀರೋಗಗಳಮೇಲೆ ರಾಮಬಾಣ ಮದ್ದು. ಎಂಬ್ರೋಸಿಯಾವು ಸಮಸ್ತ ಸ್ತ್ರೀರೋಗಗಳನ್ನು ದೂರಮಾಡಿ, ಸ್ತ್ರೀಯರನ್ನು ಸಶಕ್ತ ಹಾಗು ಸೌಂದರ್ಯವಂತರನ್ನಾಗಿ ಮಾಡುತ್ತದೆ.

ಒಮ್ಮೆ ಪರೀಕ್ಷೆ ನೋಡಿ.

ಬೆಲೆ ಬಾಟ್ಲಿ ೧ಕ್ಕೆ ರೂಪಾಯಿ ೨—೦—೦

ವಿತರಕರು:— **ವೀರಿಯಲ ಏಜನ್ಸಿ,**
ಪ್ರಿನ್ಸೆಸ ಸ್ಟ್ರೀಟ, ಮುಂಬಯಿ ನಂಬರ ೨

ನಮ್ಮ ಪ್ರೆಸ್ಸಿನಲ್ಲಿ

ಗೇಣ ಬಾಕಿ ದಾವೆಯ ಫಾರ್ಮುಗಳು ತಯಾರಿವೆ

ವಕಾಲತ ಅಮುಲಜಾರಿ ವೊ[illegible] ವ್ಯವಹಾರಣೆಯು ಹಾಗೂ [illegible] ಫಾರ್ಮುಗಳು ಅಗ್ಗವಾಗಿ ಸಿಗುತ್ತವೆ

ಮೆನೇಜರ,

[illegible]

ಪ್ರಯಾಣಿಕರ ಅನುಕೂಲತೆ ಬಗ್ಗೆ

ಡೇಲಿ ಮೋಟರ ಸರ್ವಿಸ.



ಕುಮಟೆಯಿಂದ— ಹೊನ್ನಾ[illegible] ಭಟ್ಕಳಕ್ಕೆ, ಜೈ ಮೂರಕ್ಕೆ

ಕುಮಟೆಯಿಂದ— ಶಿರಸಿ [illegible]

ಕುಮಟೆಯಿಂದ— [illegible]

[illegible]

ಬಿ. ದಾಸ,

[illegible] ಕುಮಟಾ

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಧನಗಳು

೧ ರಾಗದ ಪೆಟ್ಟಿಗೆ ಕಿಂ ೩೦ [illegible], ೩೫, ೪೫, [illegible]

೨ [illegible] ಕಾಲು ಪೆಟ್ಟಿಗೆ ಕಿಂ ೩೫ ೪೫, [illegible], [illegible]

೩ ತಬಲೆ ಜೋಡಿ ಕಿಂ ೧೬ ೧೮, ೨೦ ೨೫

೪ ಹಾರ್ಮೋನಿಯಮ ಗೈಡ (ಕನ್ನಡಿ) ಕಿಂ ೧॥ ತಬಲೆ ಗೈಡ ಕಿಂ. ೧೨ ಆ

ವಿಶೇಷ ಮಾಹಿತಿಗೆ ನಮ್ಮ [illegible] ಪುಸ್ತಕ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು

ಪತ್ತೆ - ಗೋಪಾಳ ಸಖಾರಾಮ [illegible]

ಕಂಪನಿ, ವಿಠ್ಠಲವಾಡಿ ಎದುರಿಗೆ,

೨೬೨ ಕಾಳಬಾದೇವಿ. ಮುಂಬಯಿ

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ



ಕಳೆದ ೬ ೫ ವರ್ಷಗಳಿಂದ ನಾವು ಶಿವಮೊಗ್ಗಾ-ತೀರ್ಥಹಳ್ಳಿ-ಆಗುಂಬೆ, ಶಿವಮೊಗ್ಗಾ-ಸಾಗರ-[illegible], ಶಿವಮೊಗ್ಗಾ-ಹರಿಹರ-[illegible], ಶಿವಮೊಗ್ಗಾ-ಕಲ್ಲೂರಕಟ್ಟೆ, ಸಾಗರ-ಸೊರಬ-ಶಿರಾಳಕೊಪ್ಪ, ಸಾಗರ ತೀರ್ಥಹಳ್ಳಿ, ಸಾಗರ-ಕಲ್ಲೂರಕಟ್ಟೆ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ ಸರ್ವಿಸನ್ನು ನಡೆಸುತ್ತಿದ್ದದಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ, ಉಡುಪಿ, ಕುಂದಾಪುರ, ಮಂಗಳೂರ [illegible] ಈ ಕಡೆಗೆ " ಕಾರ್ಕಳ ಮೋಟರ ಸರ್ವಿಸಿನ " ವಿದ್ಯಮಾನವೂ, ಬಳ್ಳಾರಿ ಜಿಲ್ಲೆಯ [illegible] ಲಕ್ಷ್ಮೀ ಮೋಟರ ಸರ್ವಿಸಿನ ವಿದ್ಯಮಾನವೂ ಪ್ರಯಾಣಿಕರ ಎಲ್ಲ ಸೌಕರ್ಯಗಳ [illegible] ಮಾಡಿರುತ್ತೇವೆ

[illegible] ಪ್ರಯಾಣಿಕರ ಜೋಗ (Gersoppa Falls), ಶಿವಮೊಗ್ಗಾ [illegible] ಸ್ಥಳಗಳಿಗೆ ಪ್ರಯಾಣ ಬೆಳೆಸಲು ಅನುಕೂಲವಾಗಬೇಕೆಂದು [illegible] ಜೋಗ ಸಿದ್ದಾಪುರ, ಶಿರಸಿ ಕುಮಟಾ ಈ ಲೈನಿನಲ್ಲಿ ಮೋಟರ ಸರ್ವಿಸ ಪ್ರಾ[illegible]

ಕಾಲಕ್ರಮಗಳು.

[illegible] ಹೊರಡುವದು—	ಬೆಳಿಗ್ಗಿನ ೭ ಘಂಟೆಗೆ
[illegible]	„ ೧೨ „
[illegible] ಶಿವಮೊಗ್ಗಾ ಕಡೆಗೆ—	ಮಧ್ಯಾಹ್ನ ೧ „
[illegible] ಸಿದ್ದಾಪುರ ಮಾರ್ಗವಾಗಿ)—	ಸಾಯಂಕಾಲ ೬ „
[illegible] ಕಡೆಗೆ ಹೊರಡುವದು—	ಬೆಳಿಗ್ಗಿನ ೭ „
[illegible] ಸೇರುವದು—	„ ೧೧ „
[illegible] ಹೊರಡುವದು—	ಮಧ್ಯಾಹ್ನ ೨ „
[illegible] ಸೇರುವದು—	ಸಾಯಂಕಾಲ ೫ „

[illegible] ಶಿರಸಿಯಿಂದ ಹುಬ್ಬಳ್ಳಿಗೆ ಪ್ರತ್ಯೇಕ ಒಂದು ಸರ್ವಿಸ [illegible] ಸರ್ವರೂ ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ

SHIMOGA }
— —1 [illegible] }

M. MANJAPPA.
PROPRIETOR

ಸರಕಾರದಲ್ಲಿ ರಜಿಸ್ಟರ ಆದಂಥ

[illegible] ಚಿಕಿತ್ಸೆಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

[illegible] ಔಷಧಿಯಾಗಿದ್ದು ಬಹಳ ಸೀದಾಗಿಯೂ, ರುಚಿಕರವಾಗಿಯೂ ಇರುತ್ತದೆ [illegible] ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು [illegible] ಕಾಮವಿಕಾರವು ಕೂಡ ತರುಣರಂತೆ ಪ್ರವರ್ಧಮಾನವಾಗುವದು (ನಿಜವಾಗಿ [illegible] ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಪ್ರಾಪ್ತವಾದ [illegible] ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯ [illegible] ಬಂದಾಗುವದು — [illegible] ಶರೀರವು ನಿರೋಗವಾಗುವದು ಮೂರೇ ದಿವಸದಲ್ಲಿ ಗುಣಬರುವದು ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ [illegible] ಮಾಡಬೇಕು ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವದು ದಿವಸದಲ್ಲಿ ಮೂರುವರೆ [illegible] ಹಸಿವು ಚನ್ನಾಗಿ ಆಗುತ್ತದೆ ಇದರ ಅನುಭವವು ಮೊದಲನೇ ದಿವಸವೇ ಬರುವದು ಶೌಚ ಸಾಫ ಆಗುವದು ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು ಈ ಔಷಧಕ್ಕೆ ಪಥ್ಯವಿಲ್ಲ ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. [illegible] ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತ ೧। ರೂಪಾಯಿ ಮೂರು ಬಾಟಲಿಯ ಕಿಮ್ಮತು ೩—೪—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು ಅಂದರೆ ಟಪಾಲಖರ್ಚ ಹೆಚ್ಚು ಬೀಳ ಹೋಲ್ಲ [illegible] ಬಾಟಲಿಗಳ ಕಿಮ್ಮತ್ತು ೧೩—೦—೦ ಮತ್ತು ೧ ಬಾಟಲಿ ಪುಕ್ಕಟ ಕೊಡುವದು ಟಪಾಲ ಖರ್ಚ ಬೇರೆ ಬೀಳುವದು ಏಜಂಟರ ಕಡಿಯಿಂದ ೧ ಬಾಟ್ಲಿಗೆ ೧—೪—೦ ೩ ಬಾಟ್ಲಿಗೆ ೩—೦—೦, ಡಜನಿಗೆ ೧೩—೯—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಅಫೀಸು, ಪೋ ನಿಪ್ಪಾಣಿ, ಜಿ ಬೆಳಗಾಂವ.

MR. NORONHA'S REJOINDER.

To

The Editor of the 'KANARA NEWS

Dear Sir,

Kindly publish this in your paper in the interests of truth & fair-play

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳ ಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಆದಕಾರಣ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಲ್ಲಾ ವ್ಯಾಧಿಗಳ ಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತ್ತು ೧೦ ಆಣೆ ವ್ಹಿ. ಪಿ. ಖರ್ಚ ಬೇರೆ.

ಅಮೃತಾಂಜನ ಡಿಪೊ, ಫೋರ್ಟ್, ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta.

No. B. 1270.

ವರ್ಷ ೯.

Monday, June 1st, 1925.

ಸಂಚಿಕೆ ೨೨.

ಕಾನಡಾವೃತ್ತ.

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति-महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.
ಜಿಲ್ಲೆಯಲ್ಲಿ ಅಗಾವು
ರೂಪಾಯಿ 2-4-0.
ಉದ್ರಿಯಿಂದ
ರೂ. 3-0-0.
ಜಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಸಂಚಿಕೆಗೆ 0-1-0.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ಸ್ಮಾಲ ಪೈಕಾ (೧೫ ಎಮ್ ಅಗಲ)
೫ ಸಾಲುಗಳವರೆಗೆ ರೂ. 1-0-0.
ಆ ನಂತರ ಪ್ರತಿಸಾಲಿಗೆ 0-2-0.
ಹತಿಂಗಳ ಸಾಲು ಎಷ್ಟು ಬೇಕಾದರೂ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಯಾ ಸಮಕ್ಷ ತಿಳಿಸಲ್ಪಡುವದು.

ಕುಮಟಾ— ಕಾನಡಾವೃತ್ತ ಸೋಮವಾರ, ತಾರೀಖು ೧ ಮಾಹೆ ಜೂನ ಸನ್ ೧೯೨೫ನೇ ಇಸವಿ.)

हिंदुस्थानांतील रहिवाशांस ज्याप्रमाणें
दुस्थानची हवा त्याप्रमाणेंच हें औषध हिं
थानांतील लोकांस ज्यास्त फायदेशीर आहे

द्राक्षासव- दीड रतलची किंमत २ रुपये.

रामबाण औषधें —
[illegible] वाढविणारें,
भूक वाढविणारें,
शौच्यास साफ करणारें,
झोप आणणारें,
शक्ति देणारें,
तेजस्वीपणा आणणारें,
पिण्यास रुचिकर.

क्याटलाग मागवा,
हिंदु फार्मास्युटिकल वर्क्स लिमिटेड,
मुंबई नं. १२

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, B. A.
Jewellers, KUMTA.
ಆರ್. ಎಸ್. ಕಾಸರಗೋಡ,
ರತ್ನಾಭರಣ ವ್ಯಾಪಾರಿ, ಕುಮಟಾ.

ಅನುಭವಸಿದ್ಧ) ಧಾತುಪೌಷ್ಟಿಕ, ಶಕ್ತಿವರ್ಧಕ, ರಕ್ತಶೋಧಕ (ಮಲಬಾರಿಕೃತ

ಮದನಕಾಮೇಶ್ವರೀಲೇಹ.

ಆಬಾಲ ವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.
ಇದರಲ್ಲಿ ಕೇಸರ, ಕಸ್ತೂರಿ, ಪ್ರವಾಳ, ಶಿಲಾಜಿತು ಅಮೃತಸತ್ವದಿ ಅನೇಕ ವನೌಷಧಿಯುಕ್ತ ಇರುವದರಿಂದ ಧಾತು ತೆಳ್ಳಗಾಗುವಿಕೆ, ನಪುಂಸಕತ್ವ, ಪ್ರಮೇಹ ದುಷ್ಟಮೈಥುನಜನ್ಯ ಧಾತುಕ್ಷೀಣತೆ, ಸ್ವಪ್ನಾವಸ್ಥೆ ಉರಿಮೂತ್ರ, ಸಂಧಿವಾತ ಸ್ತ್ರೀಯರ ಗರ್ಭಾಶಯದ ರೋಗ, ಪದರ (ಗರ್ಮಿ) ಇ. ನಿವಾರಣವಾಗಿ ತುಂಬಾ ರಕ್ತ-ಧಾತು ಸಂಚಯವಾಗಿ ಯಥೇಚ್ಛ ಸಂಸಾರಸುಖವನ್ನು ಅನುಭವಿಸುವಿರಿ. ಸಿದ್ಧೌಷಧ. ೧ ತಿಂಗಳ ಸಾಲುವ ಬಾಟ್ಲಿ ೨॥ರೂ. ಟ. ಖ. ॥ರೂ. ಒಮ್ಮೆಲೆ ೩ ಡ. ೬॥ರೂ. ಟ.ಖ. ಮಾಫ ಅದು ಔಷಧದ ಸಂಗತಿ

ಅತ್ಯುತ್ತಮ) **ಜಂತುವಿನ ಔಷಧ** (ದರಸುಲಭ.

ಪುಡಿ ೧ಕ್ಕೆ ೧॥ ಆಣೆ ೫ಂಕ್ಕೆ ರೂ.೩॥. ೧೦ಂಕ್ಕೆ ರೂ.೫ ಅನುಭವ ತಕ್ಕೊಳ್ಳಿರಿ. ಇವಲ್ಲದೆ ಎಲ್ಲಾರೋಗಗಳಮೇಲೆ ಅನುಭವ ಸಿದ್ಧೌಷಧಗಳು ಸಿಗುವವು. ಬಿ. ಸಾ. ಬೇಕಾದವರು ೧ಆಣೆ ತಿಕೀಟು ಪತ್ರದಲ್ಲಿ ಹಾಕಿ ಆಯುರ್ವೇದ ಗುಣವತ್ವ ಎಂಬ ಸಂಪೂರ್ಣ ಮಾಹಿತಿಯ ಪುಸ್ತಕವನ್ನು ಪುಕ್ಕಟೆಯಾಗಿ ತರಿಸುವದು.

ಮೆನೇಜರ ಆಯುರ್ವೇದಿಕ ಚಿಕಿತ್ಸಾ ಮಂದಿರ, ತಾ. ಕಾರವಾರ, ಪೋ. ಚೆಂಡಿಯೆ.

ಮುಂಬೈ ಏಜಂಟ:— R. C. KAMAT, Teashop Store Lane, Fort, BOMBAY

ಹುಟ್ಟಿದ ವೇಳೆ ಕಳಿಸಿರಿ.) **ಸುಖಸಾಧನಕ್ಕೆ ಯೋಗ್ಯ ಉಪಾಯವು.** (ಫಲ ಜನ್ಮಟಿಪ್ಪಣ ಕಳಿಸಿರಿ.

☞ ಮಲಬಾರಿ) **ಕೇರಳ ಜ್ಯೋತಿಷ.** (ಭವಿಷ್ಯ.

ಸಾದಾ ಜನ್ಮಟಿಪ್ಪಣ ೫ಆಣೆ. ೧ವರ್ಷದ ಫಲಾಫಲ ರೂ.೧॥ರೂ. ಮ.೩॥ರೂ. ೧೦ವ.ಟಿ.೪ರೂ. ಸದರೀ ಟಿಪ್ಪಣಿಯು ಜನ್ಮತಿಥಿಯಿಂದ ಆಯುಷ್ಯಕಾಲಕ್ಕೆ ಒದಗುವ ಇಷ್ಟಾನಿಷ್ಟಫಲಗಳನ್ನು, ಅನಿಷ್ಟಫಲ ನಿವಾರಣಾರ್ಥ ಶಾಸ್ತ್ರಧಾರ್ಮಿಕ ಬಾಣೋದ್ಧಾರಗಳಿಂದ ಸಂಕಟಗಳನ್ನು ಪರಿಹರಿಸುವ ಉಪಾಯಗಳನ್ನು ತಿಳಿಸಿಕೊಂಡು ಮುಂದಿನ ಭವಿಷ್ಯ ಕಾಲವು ಸುಖಕಾರಕ ಮತ್ತು ಲಾಭದಾಯಕವಾಗುವಂತೆ ಸದರೀ ಫಲವನ್ನು ಮಲಬಾರದಲ್ಲಿ ಪ್ರಸಿದ್ಧವಾದ ಜ್ಯೋತಿಶಾಸ್ತ್ರ "ಕೇರಳ" ಇ. ಬಹುಮಾನ್ಯ ಗ್ರಂಥಗಳ ಪ್ರಮಾಣ್ಯತೆಯಿಂದ ಬರೆದು ಕಳಿಸುವೆ. [illegible] ಬೇಕು.

ಮೆನೇಜರ, "ಜ್ಯೋತಿಷ ಶಾಸ್ತ್ರ-ಭುವನ," ಚೆಂಡಿಯೆ. ತಾ. ಕಾರವಾರ.

ಕ್ಷಯ ರೋಗ?
ವೈದ್ಯ ಫರ್ನಾಂಡಿಸರ
ಬರೇ ನಾಲ್ಕು ಔಷಧಗಳು.

ಪ್ರಕಟವಾದ ಶಿಫಾರಸು. ಅಂಥರ ಯೋಗ್ಯ ಔಷಧಗಳನ್ನು ತಯಾರಿಸಿ ಕಳುಹಿಸುವೆವು. ಸನ್ನಿಪಾತಯಾದಲ್ಲಿ ಹೆಚ್ಚಿನ ಮಾಹಿತಿ ದೊರಕುವದು ಪ್ರಮಾಣವಾಗಿದೆ. ಬೇಗನೇ ಕೆಳಗಿನ ವಿಳಾಸಕ್ಕೆ ಬರೆಯಿರಿ. (ರೂ. ೩೮-೧೦-೦.)

ವೈದ್ಯ ಫರ್ನಾಂಡಿಸ,
ರೋಗಾಂತಕ ಡಿಪೋ,
ಕಾರವಾರ

☞ **ಗ್ಯಾಸ ದೀಪಗಳು**

ಭಾಡಿಗೆಗೆ ಇಟ್ಟಿರುತ್ತವೆ.

ದರವಾರವು ಎಲ್ಲಕ್ಕಿಂತ ಕಡಿಮೆ ಇಟ್ಟಿರುತ್ತದೆ. ಬೇಕಾದವರು ಕೆಳಗಿನ ಪತ್ತೆಯ ಮೇಲೆ ಬರೆಯಬಹುದು. ಪತ್ತೆ:— ವೈಕುಂಠ ಜನಾರ್ದನ ನಾಯ್ಕ,
ಪೋಸ್ಟ:— ಉಪ್ಪಿನಪಟ್ಟಣ, ತಾ. ಕುಮಟಾ.

ನಮ್ಮ ಪ್ರೆಸ್ಸಿನಲ್ಲಿ

ರೇಶೆ ಬಾಕಿ ದಾವೆಯ ಫಾರ್ಮಗಳು ತಯಾರಿವೆ

ವಸೂಲಾತ ಅಮಲದಾರಿ ಮೊದಲಾದ ಕೋರ್ಟ ವ್ಯವಹರಣೆಯ ಹಾಗೂ ಕಸ್ಟಮ್ ಖಾತೆಯ ಫಾರ್ಮಗಳು ಅಗ್ಗವಾಗಿ ಸಿಗುತ್ತವೆ

ಮೆನೇಜರ,

ಸ್ಟಾರ ಒಫ್ ಕೆನರಾ ಪ್ರೆಸ್, ಕುಮಟಾ

ಪ್ರಯಾಣಿಕರ ಅನುಕೂಲತೆ ಬಗ್ಗೆ

ಡೇಲಿ ಮೊಟರ ಸರ್ವಿಸ.



ಕುಮಟೆಯಿಂದ— ಹೊನ್ನಾವರಕ್ಕೆ, ಭಟ್ಕಳಕ್ಕೆ, ಬೈಂದೂರಕ್ಕೆ

ಕುಮಟೆಯಿಂದ— ಶಿರಸಿ, ಹುಬ್ಬಳ್ಳಿ ಹಾವೇರಿಗೆ

ಕುಮಟೆಯಿಂದ— ಅಂಕೋಲೆಗೆ, ಕಾರವಾರಕ್ಕೆ ಗೋವಾ ದಕ್ಕೆ ಹೋಗುವ ಮೋಟಾರಿನ ಟಿಕೇಟುಗಳು ನಮ್ಮಲ್ಲಿ ಪ್ರತಿ ನಿತ್ಯವೂ ಸಿಗುವವು

ಬಿ. ದಾಸ,

ಏಜಂಟ ಕುಮಟಾ.

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಧನ

೧ ರಾಗದ ಕೈಪೆಟ್ಟಿಗೆ ಕಿಂ ೩೦ ೪೦, ೬೦, ೭೫, ೧೦೦

೨ „ ಕಾಲು ಪೆಟ್ಟಿಗೆ ಕಿಂ ೬೫ ೭೫ ೧೨೦, ೧೪೦

೩ ತಬಲೆ ಜೋಡಿ ಕಿಂ. ೧೬, ೧೮, ೩೦, ೫೦.

೪ ಹಾರ್ಮೋನಿಯಮ ಗ್ರಾಂಥ (ಮರಾಠಿ) ಕಿಂ. ೧॥ ತಬಲೆ ಗ್ರಾಂಥ ಕಿಂ. ೧೩ ಆ

ವಿಶೇಷ ಮಾಹಿತಿಬಗ್ಗೆ ನಮ್ಮ ಮರಾಠಿ ಕ್ಯಾಟಲಾಗ ಫುಕ್ಕಟ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು

ಪತ್ತೆ - **ಗೋಪಾಳ ಸಖಾರಾಮ** ಮುಳೆ

ಕಂಪನಿ, ವಿಠ್ಠಲವಾಡಿ ಎದುರಿಗೆ,

೩೬೩ ಕಾಳಬಾದೇವಿ. ಮುಂಬಯಿ,

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ

ಕಳೆದ ೪-೫ ವರ್ಷಗಳಿಂದ ನಾವು ಶಿವಮೊಗ್ಗಾ-ತೀರ್ಥಹಳ್ಳಿ-ಆಗುಂಬೆ, ಶಿವಮೊಗ್ಗಾ-ಸಾಗರ-ತಾಳಗುಪ್ಪೆ ಶಿವಮೊಗ್ಗಾ-ಹರಿಹರ-ದುಗ್ಗಾವತಿ, ಶಿವಮೊಗ್ಗಾ-ಕಲ್ಲೂರಕಟ್ಟೆ, ಸಾಗರ-ಸೊರಬ-ಶಿರಾಳಕೊಪ್ಪಾ, ಸಾಗರ-ತೀರ್ಥಹಳ್ಳಿ, ಸಾಗರ-ಕಲ್ಲೂರಕಟ್ಟೆ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ ಸರ್ವೀಸನ್ನು ನಡೆಸುತ್ತಿದ್ದುದಲ್ಲದೆ ದಕ್ಷಿಣ ಕನ್ನಡ ಜಿಲ್ಹೆಯ ಕಾರ್ಕಳ, ಉಡುಪಿ, ಕುಂದಾಪುರ, ಮಂಗಳೂರ ಹಾಗು ಬೆಳ್ತಂಗಡಿ ಈ ಕಡೆಗೆ "ಕಾರ್ಕಳ ಮೋಟರ ಸರ್ವೀಸಿನ" ವಿದ್ಯಮಾನವೂ, ಬಳ್ಳಾರಿ ಜಿಲ್ಹೆಯ ಹರಪನಹಳ್ಳಿಗೆ "ಲಕ್ಷ್ಮೀ ಮೋಟರ ಸರ್ವೀಸಿನ" ವಿದ್ಯಮಾನವೂ ಪ್ರಯಾಣಿಕರ ಎಲ್ಲ ಸೌಕರ್ಯಗಳ ವ್ಯವಸ್ಥೆ ಮಾಡಿರುತ್ತೇವೆ.

ಉತ್ತರ ಕನ್ನಡ ಜಿಲ್ಹೆಯ ಪ್ರಯಾಣಿಕರು ಜೋಗ (Gersoppa Falls), ಶಿವಮೊಗ್ಗಾ ಸಾಗರ, ಹರಿಹರ ಮುಂತಾದ ಮೇಲ್ಕಂಡ ಸ್ಥಳಗಳಿಗೆ ಪ್ರಯಾಣ ಬೆಳೆಸಲು ಅನುಕೂಲವಾಗಬೇಕೆಂದು ಶಿವಮೊಗ್ಗಾ, ಸಾಗರ, ಜೋಗ, ಸಿದ್ದಾಪುರ, ಶಿರಸಿ, ಕುಮಟಾ ಈ ಲೈನಿನಲ್ಲಿ ಮೋಟರ ಸರ್ವೀಸ ಪ್ರಾರಂಭ ಮಾಡಿರುತ್ತೇವೆ

ಕಾಲಕ್ರಮಗಳು.

ಕುಮಟೆಯಿಂದ ಹೊರಡುವದು—	ಬೆಳಿಗ್ಗಿನ ೭	ಘಂಟೆಗೆ
ಶಿರಸಿಗೆ ಸೇರುವದು—	„ ೧೦	„
ಶಿರಸಿಯಿಂದ ಬಿಡುವದು ಶಿವಮೊಗ್ಗಾ ಕಡೆಗೆ—	ಮಧ್ಯಾಹ್ನ ೧	„
ಸಾಗರಕ್ಕೆ ಸೇರುವದು (ಸಿದ್ದಾಪುರ ಮಾರ್ಗವಾಗಿ)—	ಸಾಯಂಕಾಲ ೬	„
ಸಾಗರದಿಂದ ಶಿರಸಿ ಕಡೆಗೆ ಹೊರಡುವದು—	ಬೆಳಿಗ್ಗಿನ ೬	„
ಸಿದ್ದಾಪುರದ ಮೇಲಾಗಿ ಶಿರಸಿಗೆ ಸೇರುವದು—	„ ೧೧	„
ಶಿರಸಿಯಿಂದ ಕುಮಟೆಗೆ ಹೊರಡುವದು—	ಮಧ್ಯಾಹ್ನ ೨	„
ಕುಮಟೆಗೆ ಸೇರುವದು—	ಸಾಯಂಕಾಲ ೫	„

N B — ಈ ಮೇಲಿನ ಲೈನುಗಳ ವಿನಹ ಶಿರಸಿಯಿಂದ ಹುಬ್ಬಳ್ಳಿಗೆ ಪ್ರತ್ಯೇಕ ಒಂದು ಸರ್ವೀಸ ಪ್ರಾರಂಭಿಸುವ ಯೋಜನೆ ಸಹಾ ಇರುತ್ತದೆ ಸರ್ವರೂ ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ

SHIMOGA,
22—11—1924 } **M. MANJAPPA.**
PROPRIETOR

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕಿಟಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮದ್ದು ಮಹೌಷಧಿಯಾಗಿದ್ದು ಬಹಳ ಸೀಯಾಗಿಯೂ, ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕೃತಿಯಿಂದಾದ ಬೇನೆಯು ಹೋಗುವದು ೩೦,೩೫ ವರ್ಷದ ಪುರುಷರ ಕಾಮವಿಕಾರವು ತರುಣರಂತೆ ಪ್ರವರ್ಧಮಾನವಾಗುವದು. (ನಿಜವಾಗಿ ಒಂದೇ ಸಪ್ತಾಹದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಮ್ಲಾನವಾದ ನಪುಂಸಕತ್ವವು ಇಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ತರುವಾಯ ಹೋಗುವ ವೀರ್ಯವು ನಿಂತುಹೋಗುವದು — ಸಿಫಿಲಿಸ ಹಾಗೂ ಗರ್ಮಿಯಿಂದ ದೂಷಿತವಾದ ರಕ್ತವು ನಿರ್ದೋಷವಾಗುವದು. ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ತಿಳಿಯಬೇಕು. ಇದರಿಂದ ಕ್ಷಯರೋಗ, ಉದರರೋಗ ಮುಂತಾದ ರೋಗಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವು ಹೆಚ್ಚಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾಯಿಲೆ ಇದ್ದರೂ ಒಂದು ವಾರದಲ್ಲಿ ನಾಶವಾಗುವದು ಈ ಔಷಧಕ್ಕೆ ಪಥ್ಯವಿಲ್ಲ ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತ ೧। ರೂಪಾಯಿ ಮೂರು ಬಾಟಲಿಯ ಕಿಮ್ಮತ ೩—೪—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂಚೆ ಖರ್ಚು ಹಚ್ಚ ಬೀಳುವದಿಲ್ಲ ಡಜನ ಬಾಟಲಿಗಳ ಕಿಮ್ಮತ್ತು ೧೨—೦—೦ ರೂ ಮತ್ತು ೧ ಬಾಟಲಿ ಪುಕ್ಕಟ ಸಿಗುವದು ಟಪಾಲ ಖರ್ಚ ಬೇರೆ ಬೀಳುವದು ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧—೪—೦ ೩ ಬಾಟ್ಲಿಗೆ ೩—೦—೦, ಡಜನಿಗೆ ೧೩—೮—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಅಫೀಸು ಪೋ. ನಿಪ್ಪಾಣಿ, ಜಿ ಬೆಳಗಾಂವ

ವಿವಿಧ ಸಂಗ್ರಹ.

ಮಜ್ಜಿಗೆಯ ಮಹಾತ್ಮ್ಯೆ

ಮಜ್ಜಿಗೆಯನ್ನು ಕುಡಿಯುವವರಿಂದ ಉಂಟಾಗುವ ಲಾಭಗಳನ್ನು ಧುಳೆಯ ಪ್ರಾಣಿರಕ್ಷಕ ಸಂಸ್ಥೆಯ ಕಾರ್ಯದರ್ಶಿಗಳು ಪ್ರಕಟಿಸಿರುವರು. ಕಾರ್ಯದರ್ಶಿಗಳು ಚಹ, ಕಾಫಿ, ಸರಾಯಿ ಮುಂತಾದವುಗಳಿಂದ ಉಂಟಾಗುವ ಹಾನಿಗಳನ್ನು ಬಣ್ಣಿಸಿ, ಮಜ್ಜಿಗೆಯ ಕುರಿತು ಬರೆಯುವದೇನಂದರೆ — “ ಮಜ್ಜಿಗೆಯು ಶ್ರೇಷ್ಠ ತರಗತಿಯ ಪೋಷಕ ಪದಾರ್ಥವಿರುತ್ತದೆ ಅದು ೩೦ ನಿಮಿಷ ಯಾನೆ ಮಿನಿಟುಗಳಲ್ಲಿ ಪಚನವಾಗುತ್ತದೆ ರೋಗಗ್ರಸ್ತ ಇಂದ್ರಿಯಗಳನ್ನು ಸರಿಪಡಿಸುವ ಸಾಮರ್ಥ್ಯವು ಮಜ್ಜಿಗೆಯಲ್ಲಿ ವಿಶೇಷವಿದೆ; ಮಜ್ಜಿಗೆಯಿಂದ ಹೊಸ ರಕ್ತವು ಉಂಟಾಗುತ್ತದೆ, ಕಡೆದಂತ ಕೂಡಲೆ, ಸವಿ ಇರುವಾಗಲೇ ಕುಡಿದರೆ, (ಶರೀರದಲ್ಲಿ) ಹೊಸ ತಂತುಗಳು ನಿರ್ಮಾಣವಾಗುತ್ತವೆ, ಹುಳಿ ಕುಡಿದರೆ, ಕರಳುಗಳಲ್ಲಿ ವಿಷ ಪದಾರ್ಥಗಳನ್ನು ಉತ್ಪಾದಿಸುವ ಜಂತುಗಳು ಕೂಡಲೆ ನಷ್ಟವಾಗುತ್ತವೆ ಶರೀರದೊಳಗಿನ ತಂತುಗಳ ಬೆಳವಣಿಗೆಗೆ ಮಜ್ಜಿಗೆಯಷ್ಟು ಯಾವದೇ ಪದಾರ್ಥವು ಉಪಯುಕ್ತವಾಗಲಾರದೆಂದು ಈಗಿನ ಡಾಕ್ಟರ ಹಾಗು ಶಾಸ್ತ್ರಜ್ಞರ ಸ್ಪಷ್ಟ ಮತವಾಗಿದೆ. ಮಜ್ಜಿಗೆಯಲ್ಲಿ ಔಷಧ ಧರ್ಮಗಳೂ ವಿಶೇಷವಿವೆ. ಸವಿ ಮಜ್ಜಿಗೆಯಿಂದ ಇಂದ್ರಿಯಗಳ ತಂತು ಬೆಳೆಯುತ್ತವೆ ಹುಳಿ ಮಜ್ಜಿಗೆಯಿಂದ ಕರಳುಗಳೊಳಗಿನ ವಿಷ ಜಂತುಗಳು ಕೂಡಲೆ ಸಾಯುತ್ತವೆ. ಮಜ್ಜಿಗೆಯನ್ನು ಹಿತವು ತಕ್ಕಷ್ಟು ಅಲ್ಪವಾಗಿ ಕುಡಿದರೂ ಅದರಿಂದ ಹೇರಳ ಲಾಭವಿದೆ. ಮಜ್ಜಿಗೆಯನ್ನು ಹಿಂದೊಂದು ಗುಟುಕು ಕೊಂಡು ಜೊಲ್ಲಿನೊಡನೆ ಮಿಶ್ರಣ ಮಾಡಿಕೊಂಡು ಕುಡಿಯಬೇಕು. ಡಾಕ್ಟರರು ಅಶಕ್ತ ಅನೇಕ ರೋಗಿಗಳು ಮಜ್ಜಿಗೆಯ ಸೇವನದಿಂದ ವಾಸಿಯಾಗಿ ಬಹು ಕಾಲದವರೆಗೆ ಬಾಳಿಕೊಂಡಿರುವರು. ಮರಣೋನ್ಮುಖರಾಗಿದ್ದ ಹಲವರು, ಬರೇ ಮಜ್ಜಿಗೆ ಕುಡಿದು ಸಶಕ್ತರಾಗಿರುವರು ಶರೀರಸಂವರ್ಧಕ ಸಾಮಗ್ರಿಯೆಂದು, ಮಜ್ಜಿಗೆಯನ್ನು ಪ್ರತಿ ನಿತ್ಯದ ಆಹಾರದಲ್ಲಿ ಉಪಯೋಗಿಸಲು ಸರ್ವಥೈವ ಯೋಗ್ಯವಿದೆ. ಇದಕ್ಕೆ ಡಾಕ್ಟರ ಕೆಲ್ಲಾಗ್ ಬರಿಯುವರು ಆಧಾರವಾಗಿ ಉದ್ಗರಿಸುವದೇನಂದರೆ — ನಾಲ್ಕು ಕಾಸಿನ ಮಜ್ಜಿಗೆಯ ಸೇವನದಿಂದ ಉಂಟಾಗುವಷ್ಟು ಸಾಮರ್ಥ್ಯವು ನಾಲ್ಕು ರೂಪಾಯಿಗಳ ಔಷಧದಿಂದ ಸಹ ಪ್ರಾಪ್ತವಾಗುವದಿಲ್ಲ ”

⁂

ಈ ವರ್ಷದ ಮಳೆಯ ಅನುಮಾನ

ಕಳೆದ ತಾರೀಖು ೨೩-೫-೧೯೩೫ನೇ ‘ಕೇಸರಿ’ ಪತ್ರಿಕೆಯಲ್ಲಿ ಶ್ರೀ ಜನಾರ್ದನ ಸಖಾರಾಮ ಕರಂದೀಕರರು ಈ ವರ್ಷದ ಮಳೆಯ ಅನುಮಾನವನ್ನು ಪ್ರಕಟಿಸಿರುವರು. ಅದರ ಕ್ರಮವೇನಂದರೆ:— ಈ ವರ್ಷ ಮಳೆಗಾಲಕ್ಕೆ ತಡವಾಗಿ ಪ್ರಾರಂಭವಾಗುವದು ಆದರೆ ವರೆಗೆ ಜ್ಯೇಷ್ಠ ಶುದ್ಧ ತಿಥಿಯಿಂದ ೧೨ಶಿ ವರೆಗೆ ಮತ್ತು ವದ್ಯ ೭ಮಿಯಿಂದ ೯ಮಿ ವರೆಗೆ ಕೆಲವೆಡೆಗಳಲ್ಲಿ ಮಳೆ ಬೀಳುವದು ಇದರಿಂದ ಮಳೆಗಾಲ ಪ್ರಾರಂಭವಾಯಿತೆಂದು ತಿಳಿದು ಬಿತ್ತಿಗೆ ಪ್ರಾರಂಭ ಮಾಡಲಾಗದು ವದ್ಯ ೧೪ಶಿಯಿಂದ ಮಳೆಗಾಲಕ್ಕೆ ಶುರುವಾಗಿ ಹಿಂದು ವಾರದೊಳಗೆ ಘಟ್ಟದ ಮೇಲೆ ಹಬ್ಬಿ, ಆಷಾಢ ಶು. ೧೨ಶಿಯೊಳಗೆ ಬಹುತರ ಎಲ್ಲ ಕಡೆಗಳಲ್ಲಿ ಮಳೆ ಬೀಳುವದು ಆಷಾಢ ವದ್ಯ ೧ ಪ್ರತಿಪದ ತಿಥಿ ವರೆಗೆ ೧೪ಶಿ ಶ್ರಾವಣ ಶುದ್ಧ ೧ ಪ್ರತಿಪದ ೭ ನೆಗೆ ಗುರುವಾರ ವರೆಗೆ ಹಾಗು ೮ಮಿಯಿಂದ ೧೧ ಶಿವರೆಗೆ ವರ್ಷಣ ಯೋಗಗಳಿವೆ ಶ್ರಾವಣ ವದ್ಯ ೧ ಪ್ರತಿಪದ ೭ಮಿ ವರೆಗೆ ಮತ್ತು ೧೧ಶಿಯಿಂದ ೧೪ಶಿವರೆಗೆ ಹಾಗು ಭಾದ್ರಪದ ಶುದ್ಧ ೫ಮಿಯಿಂದ ೭ಮಿ ವರೆಗೆ ವಿಶೇಷ ವರ್ಷಣ ಯೋಗಗಳಿವೆ. ಭಾದ್ರಪದ ವದ್ಯ ೩ಗೆ, ೮ಮಿಯಿಂದ ೧೦ಮಿ, ವದ್ಯ ೧೩ಶಿಯಿಂದ ಅಶ್ವಿನಶುದ್ಧ ಅರ್ಧ,

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. ರಿಜಿಸ್ಟರ್ಡ

ಮೃದುವಾದ ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದ ಮುಡಿಯನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಅಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವದೋ.

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಶಕ್ತಿಯನ್ನು ವಹಿಸುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುವದರಿಂದ ಮಸ್ತಕದ ತಲೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದು ಸುಗಂಧವಾದದ್ದೋ ಮಧುರವೂ ಕೋಮಲವೂ ಆಗಿರುವುದು

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ಹಣವನ್ನು ಕಳೆಯುವ ಹಾಳ-ಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ ಈ “ಕಾಮಿನಿಯಾ ಆಯಿಲ್”, ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ವೆಂಬ್ಲಿ ಪ್ರದರ್ಶನದಲ್ಲಿ “ಸರ್ಟಿಫಿಕೇಟ ಆಫ್ ಮೆರಿಟ” ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗ್ರಾಹಕರ ಉತ್ತಮೋತ್ತಮವಾದ ಮಾನಪತ್ರಗಳೂ ದೊರೆತವೆ.

ಕ್ರಯ — ಸೀಸೆಗೆ ರೂಪಾಯಿ 1-8-0, ಸೀಸೆ ೩ಕ್ಕೆ ರೂಪಾಯಿ 2-10 0, ವಿಪಿ ಖರ್ಚ 0 14 0

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಚನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡುವದ ಈ ತರದಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿರಿ ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರ ತನ್ನ ಶಕ್ತಿಯಿಂದ ಸೆಳೆಕೊಳ್ಳುವದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಈ ಗಂಧವು ಆವಳಿವುಗಳನ್ನು ಮಾರಿ ದನಾಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವದು. ಸೀಸೆ 1 ಕ್ಕೆ 0-12-0; ½ ಡಸ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-9 ಸಣ್ಣ ಸೀಸೆ 1 ಕ್ಕೆ 0-8-0, 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0;

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0-12-0.

Address:- **The Anglo Indian Drug & Chemical Co,**
16, Market, **BOMBAY. 2.**

ವರೆಗೆ ಮತ್ತು ಶುದ್ಧ ೯ಮಿಗೆ ಸಾಮಾನ್ಯವಾಗಿ ಮಳೆಯಾಗುವದು. ಅಶ್ವಿನ ವದ್ಯ ೩ರಿಂದ ೫ಮಿ ವರೆಗೆ ಮತ್ತು ವದ್ಯ ೧೧ರಿಂದ ಕಾರ್ತಿಕ ಶುದ್ಧ ೩ರವರೆಗೆ ಯೋಗಗಳು ಪ್ರಬಲವಿವೆ. ಶುದ್ಧ ೧೧-೧೨ರಿಗೂ ಮಳೆಯ ಯೋಗವಿದೆ. ಕಾರ್ತಿಕ ವದ್ಯ ೯ಮಿ, ೩೦ಸ್ಯೆ, ಮಾರ್ಗಶೀರ್ಷ ೯ಮಿ ಈ ಮೂರು ದಿನಗಳಿಗೂ ಮಳೆ ಬೀಳುವ ಯೋಗಗಳಿವೆ. ಪುಷ್ಯದ ಮೇಲೆ ಜ್ಯೇಷ್ಠ ವದ್ಯ ಹಾಗು ಆಷಾಢ ಶುದ್ಧ ಸಾಧಾರಣ ಮಳೆಬೀಳುವವು. ಆಷಾಢ ವದ್ಯ ಹಾಗು ಶ್ರಾವಣ ಶುದ್ಧದಲ್ಲಿ ಎಲ್ಲ ಕಡೆಗಳಲ್ಲಿ ಬೇಕಷ್ಟು ಮಳೆ ಸುರಿಯುವದು. ನಂತರದ ಒಂದು ತಿಂಗಳ ವರೆಗೆ ಮಳೆಯ ಮಾನವು ಕಡಿಮೆ ಇದ್ದರೆ, ಅಶ್ವಿನ ವದ್ಯ ಹಾಗು ಕಾರ್ತಿಕ ಶುದ್ಧದಲ್ಲಿ ವಿಶೇಷ ಮಳೆಬಿದ್ದು ಹಿಂದಿನ ತಿಂಗಳೊಳಗಿನ ನೀರಿನ ಕೊರತೆಯು ದೂರವಾಗುವದು. ಮುಂದೆ ಸಂಕಷ್ಟ ಮಳೆ ಬೀಳುವದು. ಈ ವೃಷ್ಟಿಯಿಂದ ಕಾರಬೆಳೆಗೆ ವಿಶೇಷ ಪ್ರಯೋಜನವಿದೆ. ಜನರ ಪ್ರಕೃತಿಗೆ ಆರೋಗ್ಯ ವಿಶೇಷ ದೊರೆಯುವದು.

⁂

ವೀರಾಂಗನೆಯ ಸಾಹಸ

ಸನ್ಪ್ರಾನ್ಸಿಸ್ಕೊ ಪಟ್ಟಣದ ರಜಪೂತ ಸ್ತ್ರೀಯ ಸಾಹಸದ ಶೌರ್ಯ ಕಥೆಯು ಪ್ರಕಟವಾಗಿದೆ. ಗ್ರೇಟ ಇಂಡಿಯನ್ ಪೆನಿನ್ಸುಲಾ ರೇಲ್ವೆಯ ಪುಣೆ ಸ್ಟೇಶನದಲ್ಲಿ ರಜಪೂತ ವೀರಾಂಗನೆಯೊಬ್ಬಳು ದಿಲ್ಲಿ ನಗರಿಗೆ ತೆರಳಲು ಹೆಂಗಸರ ಡಬ್ಬಿಯೊಳಗೆ ಸೇರಿಕೊಂಡಳು. ಪುಣೆ ಸ್ಟೇಶನದಲ್ಲಿ ಮತ್ತೂ ಅನೇಕ ಸ್ತ್ರೀಯರೂ ಆ ಡಬ್ಬಿಯಲ್ಲಿ ಸೇರಿದ್ದರು. ವೀರಾಂಗನೆಯೊಡನೆ ೭೦೦ ರೂಪಾಯಿ ರೊಕ್ಕವಿತ್ತು. ಅದಲ್ಲದೆ ಸುಮಾರು ೪೦೦ ರೂಪಾಯಿ ಕಿಮ್ಮತ್ತಿನ ಆಭರಣಗಳಿದ್ದವು. ಮತ್ತು ೧೦ ತಿಂಗಳಿನ ಎಳೆ ಶಿಶುವನ್ನು ಜತೆಯಲ್ಲಿ ತಂದಿದ್ದಳು. ಉಗಿಬಂಡಿಯು ರತಲಾಮು ಸ್ಟೇಶನಕ್ಕೆ ಮುಟ್ಟಿತು. ಡಬ್ಬಿಯೊಳಗಿನ ಪ್ರಯಾಣಿಕರೆಲ್ಲ ಇಳಿದುಹೋದರು. ಇವರ ಒಡನೆ ಗಂಡಸರು ಡಬ್ಬಿಯಲ್ಲಿ ಸೇರಿಕೊಂಡರು. ಅಷ್ಟರಲ್ಲಿ ಪಠಾಣನೊಬ್ಬನು ಬಳಿಯ ಡಬ್ಬಿಯೊಳಗಿಂದ ವೀರಾಂಗನೆಯ ಡಬ್ಬಿಯಲ್ಲಿ ಸೇರಿಕೊಂಡನು. ಬೆಲೆಯ ಆಭರಣಗಳನ್ನು ಆತನು ಕೇಳತೊಡಗಿದನು. ಅಶ್ಲೀಲ ವಿಷಯಗಳನ್ನು ಮಾತಾಡಿದನು. ತನ್ನ ಹೊಲಸು ವಿಚಾರ ಸಫಲವಾಗದಿದ್ದರೆ, ಅನರ್ಥವಾಗುವದೆಂದು ಬೆದರಿಕೆ ಹಾಕಿದನು. ಆತನೊಡನೆ ಒಂದು ಚಿಕ್ಕ ಉದ್ದ ಚೂರಿ ಇತ್ತು. ಸದ್ಯ ವೀರ ಸ್ತ್ರೀಯು ಆಭರಣಗಳ ಪೆಟ್ಟಿಗೆಯನ್ನು ತನ್ನ ಉಟ್ಟ ಪಟ್ಟೆಯಲ್ಲಿ ಸುತ್ತಿಕೊಂಡಳು. ಮತ್ತು ಶಿಶುವನ್ನು ಸಾವರಿಸಿಕೊಂಡು ಕೂತುಕೊಂಡಳು. ಅಧಮನು ಪರಿಪರಿಯಿಂದ ಅವಳೊಡನೆ ಅಧಮಚೇಷ್ಟೆ ನಡೆಸಲು ಯತ್ನಿಸಿದರೂ, ವೀರ ರಮಣಿಯು ದಿಟ್ಟತನದಿಂದ ಎದೆಗಟ್ಟಿ ಮಾಡಿ ತಿರಸ್ಕಾರಪೂರ್ವಕವಾಗಿ ಅವನನ್ನು ಧಿಕ್ಕರಿಸಿದಳು. ಅಧಮನು ರೇಗಿಗೆದ್ದು ಎಳೆ ಶಿಶುವನ್ನು ಬಲಾತ್ಕಾರದಿಂದ ಅವಳ ಕೈಯಿಂದ ಸೆಳಕೊಂಡು, ಉಗಿಬಂಡಿಯೊಳಗಿಂದ ಹೊರಕ್ಕೆ ಎಸೆದನು. ಉಗಿಬಂಡಿಯು ದಿಲ್ಲಿಯ ಕಡೆಗೆ ಓಡುತ್ತಲೇ ಇತ್ತು; ಅದರೂ ವೀರ ಸ್ತ್ರೀಯು ಇಕ್ಕಟ್ಟಿನ ಪ್ರಸಂಗದಲ್ಲಿ ಸ್ತ್ರೀಸಹಜವಾದ ಅನುತಾಪಕ್ಕೀಡಾಗಲಿಲ್ಲ. ನಿಶ್ಚಲವೃತ್ತಿಯಿಂದ ಅಧಮನ ಕೈಯೊಳಗಿಂದ ಪಾರಾಗುವ ಹೊತ್ತು ಸಾಧಿಸುತ್ತಿದ್ದಳು. ಉಗಿಬಂಡಿಯು ಬಾಗರೋದ ಸ್ಟೇಶನವನ್ನು ಹಿಂದೆ ಹಾಕಿ, ಹರದಾರಿ ಮುಂದೆ ಸಾಗಿತ್ತು. ಮುಹಮ್ಮದೀಯನಿಗೆ ಏನು ತೋಚಿತೋ ಏನೋ, ಚೂರಿಯನ್ನು ಬಾಂಕಿನಮೇಲಿಟ್ಟು, ಆತನು ಕಿಡಕಿಯೊಳಗಿಂದ ಹಣಕಿ ನೋಡತೊಡಗಿದನು. ವೀರ ಪತ್ನಿಯು ಕೂಡಲೆ ಚೂರಿಯನ್ನು ತೆಗೆದುಕೊಂಡು ಅಧಮನಿಗೆ ಹೊಡೆದು ಕೆಡವಿಬಿಟ್ಟಳು; ಮತ್ತು ಉಗಿಬಂಡಿ ನಿಲ್ಲಿಸಲು ಸನ್ನೆಮಾಡಿದಳು. ಡ್ರೈವ್ಹರನಿಗೆ ಹಕೀಕತನ್ನೆಲ್ಲ ಅವರು ತಿಳಿಸಿದ ಬಳಿಕ, ಉಗಿಬಂಡಿಯನ್ನು ಹಿಂದಕ್ಕೊಯ್ದು ನೋಡಲು, ಎಳೆ ಶಿಶುವಿನ ಹೆಣ ದೊರಕಿತು. ಎರಡೂ ಹೆಣಗಳು ಪೋಲೀಸರ ಸ್ವಾಧೀನ ಮಾಡಲ್ಪಟ್ಟವು. ಕ್ಷಾತ್ರಿಯ ಬೀಜದ ತೇಜ ಪ್ರಖರವಿದು!

⁂

ಸ್ವಪ್ನವು ದೃಷ್ಟಾಂತಕ್ಕೆ ಬಂತು.

ಪಂಢರಪುರದಲ್ಲಿ ಸರದಾರ ನಾನಾಸಾಹೇಬ ಎಂಬ ಸರದಾರರಿರುವರು. ಇವರಿಗೆ ಬಾಳಾಸಾಹೇಬರೆಂಬ ಒಬ್ಬ ಮಗನಿರುವರು. ಅವರು ಬಿ. ಎ. ವರ್ಗದಲ್ಲಿದ್ದರು. ಪರೀಕ್ಷೆಯ ತಯಾರಿಯು ಭರದಿಂದ ನಡೆದಿತ್ತು. ಒಂದು ದಿನ ಬಾಳಾಸಾಹೇಬರು ಗಾಢ ನಿದ್ರೆಯಲ್ಲಿದ್ದರು. ಆಗ ಸ್ವಪ್ನ ಬಿತ್ತು. ಸ್ವಪ್ನದಲ್ಲಿ ಸರ್ಪವು ಬಂದು ಅವರಿಗೆ ಹೀಗೆ ಹೇಳಿತೆಂದರೆ:— “ನಾನು ನಿನ್ನ ಮನೆತನದ ಮೂಲ ಪುರುಷನು, ನೀನು ಈ ಸಲದ ಪರೀಕ್ಷೆಗೆ ‘ಕೂತ್ರುಬಾರದು; ನನ್ನ ಮಾತು ಮೀರಿ, ಪರೀಕ್ಷೆಗೆ ಕೂತುಕೊಂಡರೆ ನಿನ್ನನ್ನು ಕಚ್ಚಿ ಕೊಂದುಬಿಡುವೆನು. ನೆನಪಿನಲ್ಲಿಟ್ಟುಕೋ.” ಬಾಳಾಸಾಹೇಬರು ಚಕಿತರಾದರು. ಸ್ವಪ್ನದ ಹಕೀಕತನ್ನು ತಮ್ಮ ಹಿರಿಯರಿಗೆ ಬರೆದು ತಿಳಿಸಿ ಪರೀಕ್ಷೆಗೆ ಕೂತ್ರುವದು ಸುರಕ್ಷಿತವಲ್ಲೆಂದು ಸೂಚಿಸಿದರಂತೆ! ನಾನಾಸಾಹೇಬರು ಮಗನು ಹೆದರುವನೆಂದು ಗ್ರಹಿಸಿ, “ನೀನು ಪರೀಕ್ಷೆಗೆ ಕೂತ್ರಲೇಬೇಕು” ಎಂದು ಆಗ್ರಹದಿಂದ ಉತ್ತರ ಬರೆದರು. ಬಾಳಾಸಾಹೇಬರು ನಿರುಪಾಯರಾಗಿ ಪರೀಕ್ಷೆಗೆ ಕೂತುಕೊಂಡರು. ಎರಡು ದಿನಗಳು ಕಳೆದವು. ೩ನೇ ದಿನ ಚಮತ್ಕಾರವಾಯಿತು. ಬಾಳಾಸಾಹೇಬರು ಪರೀಕ್ಷಾ ಮಂದಿರದ ಕೋಣೆಯಲ್ಲಿ ಕೂತಿದ್ದರು. ಸ್ವಪ್ನದೊಳಗಿನ ಸರ್ಪವು ಪ್ರತ್ಯಕ್ಷವಾಯಿತು; ಒಂದಷ್ಟೇ ಬಾಳಾಸಾಹೇಬರಿಗೆ ದಂಶ ಮಾಡಿಬಿಟ್ಟಿತು. ಬಾಳಾಸಾಹೇಬರು ಎಚ್ಚರದಪ್ಪಿ ಫಕ್ಕನೆ ನೆಲಕ್ಕುರುಳಿದರು. ಸರ್ಪವೇನು ಸಿಗಲಿಲ್ಲ. ನೆರೆಹೊರೆಯ ಜನರು ಬಂದು ಬಾಳಾಸಾಹೇಬರನ್ನು ಚಿಕಿತ್ಸಾಲಯಕ್ಕೊಯ್ದು, ಉಪಚಾರ ನಡೆಸಿದರು. ಬಾಳಾಸಾಹೇಬರು ಸದ್ಯಕ್ಕೆ ಕ್ಷೇಮದಿಂದಿರುವರು. ಇದೊಂದು ಶುಭ ವಾರ್ತೆ.

⁂

ಮಾನವನ ಕಲ್ಪಕಬುದ್ಧಿ.

ಫ್ರಾನ್ಸದ ರಾಜಧಾನಿಯಾದ ಪಾರಿಸ ಪಟ್ಟಣದಲ್ಲಿ ಸಮ್ಮಕಿನ್ನೊಂದು ಶಸ್ತ್ರ ಉಪಚಾರವು ನಡೆಯಿತು. ಚಿಕಿತ್ಸಾಲಯದಲ್ಲಿ ೫ ವರ್ಷ ಪ್ರಾಯದ ಹುಡುಗಿಯೊಬ್ಬಳು ಪಾರ್ಶ್ವವಾತರೋಗದಿಂದ ಮರಣೋನ್ಮುಖಳಾಗಿದ್ದಳು. ಅವಳಿಗೆ ಶಸ್ತ್ರಪ್ರಯೋಗ ಮಾಡುವ ವಿಚಾರ ನಡೆದಿತ್ತು. ಅದೇ ಸಮಯ ಒಬ್ಬ ಹಗಲುಗಳ್ಳನಿಗೆ ಫಾಸಿ ಶಿಕ್ಷೆಯಾಗಿತ್ತು. ಕಾಯಿದೆಯಂತೆ ಆತನ ಶಿರಚ್ಛೇದವಾಯಿತು. ಅವನಿಗೆ ಹುಗಿಯುವ ಮುಂಚೆ ಚಿಕಿತ್ಸಾಲಯದೊಳಗಿನ ವೈದ್ಯರು ಆತನ ಗಂಟಲಿನೊಳಗಿನ ಒಂದು ಅವಯವವನ್ನು ತೆಗೆದು ಅದನ್ನು ಆಸ್ಪತ್ರಿಗೆ ಒಯ್ದು ಹುಡುಗಿಯ ಗಂಟಲಿಗೆ ಶಸ್ತ್ರಪ್ರಯೋಗಮಾಡಿ ಜೋಡಿಸಿ ಬಿಟ್ಟರು. ಹುಡುಗಿಯ ರೋಗವು ವಾಸಿಯಾಗಿದೆ!

⁂

ವಿಚಿತ್ರ ಲಿಂಬೇಗಿಡ !

ದಕ್ಷಿಣ ಆಫ್ರಿಕೆಯ ಟ್ರಾನ್ಸವಾಲ ಪ್ರಾಂತದಲ್ಲಿ ಲಿಂಬೆಯ ಗಿಡಕ್ಕೆ ಕಿತ್ತಳೆ, ದ್ರಾಕ್ಷೆ ಹಾಗು ಲಿಂಬೆ ಹಣ್ಣುಗಳಾಗುತ್ತವೆ! ಲಿಂಬೆ ಗಿಡವು ಬೆಳೆದಮೇಲೆ ಮೂರು ಟೊಂಗೆಗಳನ್ನು ಮಾತ್ರ ಇಟ್ಟು, ಉಳಿದ ಎಲ್ಲ ಟೊಂಗೆಗಳು ಕಡಿಯಲಾದವು ಮತ್ತು ಮೂರರಲ್ಲಿ ಕಿತ್ತಳೆಯ ಕಲಮು, ದ್ರಾಕ್ಷೆಯ ಕಲಮು ಹಚ್ಚಲ್ಪಟ್ಟವು. ಈಗ ಮೂರೂ ಟೊಂಗೆಗಳಿಗೆ ಫಲಬರುತ್ತಿದೆ. ಗಿಡ ಒಂದೇ! ಬುಡ ಒಂದೇ! ಮೂರು ಟೊಂಗೆಗಳಿಗೆ ಮೂರೂ ಜಾತಿಯ ಫಲ! ಒಂದು ಟೊಂಗೆಗೆ ಲಿಂಬೆ ಹಣ್ಣು; ಎರಡನೇ ಟೊಂಗೆಗೆ ಕಿತ್ತಳೆ ಹಣ್ಣು; ಇನ್ನೊಂದು ಟೊಂಗೆಗೆ ದ್ರಾಕ್ಷೆಯ ಹಣ್ಣು. ಉದ್ಯಾನಕೋಟಿಯಲ್ಲಿ ವಿಶೇಷ ಕ್ರಾಂತಿಕಾರಕ ಪ್ರಯೋಗವಿದು!

⁂

ಚಿಕ್ಕ ಬಾಲಕನ ಅಗಾಧ ಲೀಲೆ.

ಬ್ರಹ್ಮದೇಶದ ಇರಾವತಿ ನದಿಗೆ ದಂಡೆಯ ಹಿಂದು ಗ್ರಾಮದಲ್ಲಿ ಒಬ್ಬ ಚಿಕ್ಕ ಬಾಲಕನಿರುವನು. ಆತನ ವಯವು ಬರೇ ೫ ವರುಷ. ನೋಟಕ್ಕೆ ಸಾಮಾನ್ಯ ಬಾಲಕರಂತೆ ಕಾಣುವನು. ಹೆಸರ ಟುನ್ನಕೀನ. ಆದರೆ ತನ್ನ ಸ್ವಶಕ್ತಿಯಿಂದ ವಕ್ತೃತ್ವಪೀಠದಲ್ಲಿ ನಿಲ್ಲುವದೇ ತಡ, ಬೌದ್ಧ ಧರ್ಮ ಮುಂತಾದ ಗಹನ ವಿಷಯಗಳ ಮೇಲೆ ಆಶ್ಚರ್ಯಜನಕವಾದ ಉಪನ್ಯಾಸಗಳನ್ನೀಯುತ್ತಾನೆ. ಇತ್ತ ೧೬ ತಿಂಗಳುಗಳಲ್ಲಿ ಬ್ರಹ್ಮದೇಶದಲ್ಲಿ ಆತನು ಬಹಳೇ ಪ್ರಸಿದ್ಧಿಗೆ ಬಂದಿರುವನು. ಆತನ ಭಾಷಣಗಳನ್ನು ಕೇಳಲಿಕ್ಕೆ ಜನರು ಗುಂಪಾಗಿ ಸಭೆಸೇರುತ್ತಿರುರು. ಕಳೆದ ಮೇ ೧೬ನೇ ಶನಿವಾರಕ್ಕೆ ಮ್ಯೂಂಗಡೆ ಎಂಬಲ್ಲಿ ಆತನು ೧೫ ಸಾವಿರ ಜನರಿಗೆ ಭಾಷಣ ಕೊಟ್ಟನು; ಸೋಮವಾರ ತಾ ೧೮ನೇಗೂ ಆತನು ಪ್ರೋಮು ಪಟ್ಟಣದಲ್ಲಿ ಉಪನ್ಯಾಸವನ್ನಿತ್ತನು. ಈ ಸಭೆಯಲ್ಲಿ ಟುನ್ನಕೀನನು ಯಹುದೀ ಧರ್ಮದ ಆಚಾರಗಳನ್ನು ಹೇಳುವ ಮೋಜೆಸ್‌ರವರ ಸಂಭಾಷಣವನ್ನು ವಿಶದವಾಗಿ ಹೇಳಿದನು; ಹಾಗೂ ಕ್ರೈಸ್ತವೃಂದಕ್ಕೆಲ್ಲ ಸಾಮಾಜಿಕ, ಧಾರ್ಮಿಕ, ನೈತಿಕ ಬಂಧನಗಳನ್ನೆಲ್ಲ ಪಾಲಿಸಲು ಅಂತಃಕರಣಪೂರ್ವಕವಾಗಿ ಬೋಧಿಸಿದನು. ಇದಲ್ಲದೆ ಬುದ್ಧಮತದ ತತ್ವಗಳನ್ನೂ ಸ್ಪಷ್ಟೀಕರಿಸಿದನು. ಆ ಸಭೆಯಲ್ಲಿ ಪಾಲಿ ಭಾಷೆಯ ಹಸ್ತಲಿಖಿತ ಪುರಾತನ ತಾಡವಾಲೆಯನ್ನು ಆತನು ಸಹಜವಾಗಿ ಓದಿಬಿಟ್ಟನು. ಇನ್ನೊಂದು ಭಾಷೆಯ ತಾಡವಾಲೆಯು ಆತನಿಗೆ ತೋರಿಸಲಾಯಿತು; ಅದನ್ನೂ ಆತನು ಓದಿಕೊಂಡು ಬ್ರಹ್ಮೀಭಾಷೆಯಲ್ಲಿ ಅರ್ಥ ಹೇಳಿದನು. ಇದೇನು ಚಮತ್ಕಾರ!

ಇನಕಮ್ ಟೆಕ್ಸಿನ ಸುಲಿಗೆ !

ಅಂಕೋಲಾ ತಾಲೂಕ ಕೆಳಗೇರಿ ನಿವಾಸಿಗಳಾದ ಮರ್ಕು ವಾಮನ ಭಟ್ಟರು [illegible] ಪ್ರಭು ಅವರು ಬರೆಯುವದೇನಂದರೆ:—

ಇನಕಮ್ ಟೆಕ್ಸ ಇನಸ್ಪೆಕ್ಟರರು ಯಾವ ಯಾವ ಸವಕಾರಿ ಇನಕಮ್ ಟೆಕ್ಸ ಆಕರಣಿ ಮಾಡುತ್ತಾರೆಂಬುದು ಜಗತ್ತಿಗೆ ಜಾಹೀರ ಇದೆ. ಇವರ ನಿಜಾಂಶಿಯ ಮೇಲೆ ಪರಿಷ್ಕರಣೆಗೆ ಅಪೀಲು ಮಾಡುವ ಅವಕಾಶವಿದೆ. ಆದರೆ ಅಪೀಲಿನ ಕಾರಣಗಳು ಅಯೋಗ್ಯ (Unreasonable) ಅಥವಾ "ಕಾರಣಗಳಿಲ್ಲದೆ ಮಾಡಿದ್ದರಲ್ಲಿ ಕೈಹಾಕುವದಿಲ್ಲ." ಹೀಗೆ ಅಪ್ಪಣೆ [illegible] ಸಿಗುತ್ತದೆ. ಮ.ಕಲೆಕ್ಟರ ಮೇಲೆ ಹೋದರೂ ಅದೇ ಗತಿ. ಈ ಅಪೀಲಿಗೆ ಕಾರಣಗಳು ಮೂರು ಇರುವವು.

(೧) ನಗದಿ ಶಿಲ್ಕು ಇಲ್ಲ.

(೨) ನಗದಿ ಶಿಲ್ಕು ಇಟ್ಟರೆ ಅಥಾವೆ ಸರಿ ಇಲ್ಲ.

(೩) ಅಥಾವೆ ಸರಿಯಾಗಿದ್ದರೂ ಶಿಲ್ಕು ಮಾಲಿನ ದರ ಸರಿಯಾಗಿ ತೋರಿಸಲಿಲ್ಲ.

ಈ ಕಾರಣಗಳನ್ನು ಮುಂದೊತ್ತಿ ನಾವು ಮಾಡಿದ ಅಪೀಲುಗಳೇ ರದ್ದಾಗುತ್ತವೆ.

ನಮ್ಮಲ್ಲಿ ಯೋಗ್ಯ ಲೆಕ್ಕ ಇದೆ, ಸಿವ್ಹಿಲ್ ಕೋರ್ಟಿನಲ್ಲಿ ಕಾಗದ ಪತ್ರಗಳ ಮೇಲೆ ದಾವೆ ಮಾಡಿ ಸರಕಾರದ ಮಾನ್ಯತೆ ಪಡೆದ ಲೆಕ್ಕ. "ನಾವು ತೆಗೆದ ಅಥಾವೆ ಸರಿಯೋ ಬರೆ ಇಲ್ಲವಾದರೆ, ನೀವೇ ಅಥಾವೆ ತೆಗೆದು ನೋಡಿರಿ" ಎಂದು ಹೇಳಿದರೆ, "ಅಥಾವೆ ತೆಗೆದು ನೋಡುವ ಬಗ್ಗೆ ನನಗೆ ನೇಮಿಸಲಿಲ್ಲ. ನೀವು ಕೊಟ್ಟ ಲೆಕ್ಕ ಯೋಗ್ಯ ಅಯೋಗ್ಯ ಇಷ್ಟೇ ನೋಡುವದು ನಮ್ಮ ಕೆಲಸ; ದುರುಸ್ತಿ ಮಾಡಿ ನೋಡುವ ಕಾರಣವಿಲ್ಲ. ಯೋಗ್ಯ ರೀತಿಯಿಂದ ಅಥಾವೆ ತೆಗೆಯಬೇಕಾದರೆ ಕಮೀಶನರರಿಗೆ ಯಾ ಕಲೆಕ್ಟರರಿಗೆ ಅರ್ಜಿ ಮಾಡಿರಿ; ಅವರು ಕಾರಕೂನರಿಗೆ ನೇಮಿಸುವರು; ಕಾರಕೂನರ ಪಗಾರು ನೀವು ಕೊಡಬೇಕು. ಕಾರಕೂನರ ಲೆಕ್ಕದಿಂದ ಟೆಕ್ಸ ಆಕರಣಿ ಮಾಡಿದ್ದು ಸರಿಯಾಗಿದ್ದರೆ ವಾದವಿಲ್ಲ. ಇಲ್ಲವಾದರೆ, ಟೆಕ್ಸು ನಿಮಗೆ ಧಂಡ ಸಿಗುವದು," ಇತ್ಯಾದಿ ಇನಸ್ಪೆಕ್ಟರರು ಹೇಳುತ್ತಾರೆ.

ಟೆಕ್ಸ ಪ್ರವೃತ್ತ ಅಂಗಡಿಕಾರರಿಗೆ ಟೆಕ್ಸ ಕಾಯಂ ಮಾಡುವ ಹೊಸ ಸುಲಭ "ನಗದಿ ಶಿಲ್ಕು ಇಲ್ಲ, ತನ್ನಿಮಿತ್ತ ಟೆಕ್ಸ ಕಾಯಂ ಆಯಿತು" ಎಂಬ ಶೆರಾ. ಈ ಅಂಗಡಿಕಾರರು ನಗದಿ ಶಿಲ್ಕು ಇಡತಕ್ಕೋದರೆ ಕಾರಕೂನರೇ ಅಂಗಡಿಯ ಲಾಭವನ್ನು ತಿಂದುಬಿಡುವರು. ಯಾಕಂದರೆ, ಕಾರಕೂನರಿಗೆ ಕನಿಷ್ಠ ರೂಪಾಯಿ ೩೦ ಸಂಬಳವನ್ನಾದರೂ ಕೊಡಬೇಕು.

ನಗದಿ ಶಿಲ್ಕು ಇಟ್ಟು ಅಥಾವೆ ಸರಿಯಾಗಿ ತೆಗೆದರೂ, ಶಿಲ್ಕು ಮಾಲಿನ ದರ ಸರಿಯಾಗಿ ಹಚ್ಚಿಕೊಳ್ಳಲಿಲ್ಲ ಎಂಬ ೩ನೇ ನೆವವು ಎಷ್ಟು ನಿರಾಧಾರವಾದ್ದೆಂದು ಹೇಳುವ ಕಾರಣವಿಲ್ಲ.

ನಾವು ಈ ವಿಷಯ ಪರಿಷ್ಕ ಕ್ಯಾ ಡೆಕೌನ್ಸಿಲಿನ ಸಭಾಸದರಾದ ಶ್ರೀ ದತ್ತಾತ್ರಯ ವೆಂಕಟೇಶ ಬೆಳವಿ ಇವರು [illegible] ಕಾರವಾರಕ್ಕೆ ಬಂದಾಗ ಭೆಟ್ಟಿಯಾಗಿ ನಮ್ಮ ತೊಂದರೆಗಳನ್ನೂ, ಇನಕಮ್ ಟೆಕ್ಸ ಅಧಿಕಾರಿಗಳ ಚೇಷ್ಟೆಗಳನ್ನೂ ತಿಳಿಸಿದ್ದೇನೆ ಮುಂಬಯಿಯವರೆಗೆ ಹೋಗಿ ಅಪೀಲು ಮಾಡಿದ್ದೇನೆ ಲೆಕ್ಕತಪಾಸಕರನ್ನು ನೇಮಿಸಿ ನನ್ನ ಲೆಕ್ಕ ತಪಾಸ ಮಾಡಿರಿ, ಎಂದು ಮುಂಬಯಿಯ ಕಮೀಶನರರಿಗೆ ಹೇಳಿದ್ದಕ್ಕೆ ಲೆಕ್ಕತಪಾಸಕರನ್ನು ನೇಮಿಸ ಬರುವದಿಲ್ಲವಾಗಿ ಅವರು ಹೇಳಿದರು. ತಪಾಸಕರ ಪಗಾರವನ್ನು ನಾವು ಕೊಡುತ್ತೇವೆಂದು ನಾವು ಹೇಳಿದರೂ ಮುಂಬಯಿಯ ಕಮೀಶನರರು ಒಪ್ಪಲಿಲ್ಲ. ಶ್ರೀ ಬೆಳವಿ-ಯವರವರಿಗೆ ಈ ಬಗ್ಗೆ ತಿಳಿಸುತ್ತೇನೆ. ಈ ಬಗ್ಗೆ ಅಲ್ಲಿಯ ವರ್ತಕರು ಅನುಭೋಗಿಸುವ ಕಷ್ಟಗಳನ್ನು ಅವರಿಗೆ ತಿಳಿಸಿ, ಅದನ್ನು ಲೋಕಹಿತವಾಗುವಂತೆ ತಿದ್ದುಪಡಿ ಮಾಡುವ ಉಪಾಯಗಳನ್ನು ಸೂಚಿಸಬೇಕು.

ನನ್ನ ಸೂಚನೆಗಳು,

೧. ನಗದಿ ಶಿಲ್ಕು ಇಲ್ಲದಿದ್ದಲ್ಲಿ ಇಂತಿಷ್ಟು ಸಾವಿರ ರೂಪಾಯಿ ಖರೀದಿ ಆದಲ್ಲಿ ಇನಕಮ್ ಟೆಕ್ಸಕ್ಕೆ ಪಾತ್ರನೆಂದು ವಿಧಿಸತಕ್ಕದ್ದು.

೨. ಅಥಾವೆಯನ್ನು ಇನ್ಸಪೆಕ್ಟರರೇ ತೆಗೆಯಬೇಕು.

೩. ಶಿಲ್ಕು ತೆಗೆಯುವ ಹಂಗಾಮು ವರ್ಷದ ತಿಂಗಳು; ಆ ಸಮಯ ಅಲ್ಲಿಯ ಇನ್ಸಪೆಕ್ಟರರು ಅಂಗಡಿಗಳಲ್ಲಿ ಹೋಗಿ, ಶಿಲ್ಕು ಮಾಲು ನೋಡಿ, ಆಗಿನ ದರ ನೋಡಿ ಇಂತಿಷ್ಟು ರೂಪಾಯಿಗಳ ಮಾಲು ಶಿಲ್ಕು ಇರುತ್ತದಾಗಿ ಶೆರಾ ಹೊಡೆದು, ಸಹಿ ಹಾಕಿ ಹೋಗಬೇಕು.

೪ ಮೇಲಿನ ಮೂರು ತಿದ್ದುಪಡಿಯಾಗುವ ವರೆಗೆ, ಅಲ್ಲಲ್ಲಿಯ ಪ್ರತಿಷ್ಠಿತ ಗೃಹಸ್ಥರ ಕಮಿಟಿಯೊಂದನ್ನು ರಚಿಸಿ, ಟೆಕ್ಸಕ್ಕೆ ಯಾರು ಪಾತ್ರರು, ಯಾರು ಅಪಾತ್ರರು ಎಂಬುದನ್ನು ನಿರ್ಣಯಿಸಿ ಟೆಕ್ಸ ಆಕರಣಿಯಾದರೆ, ಅಧಿಕಾರಿಗಳ ಹಾವಳಿಯೊಳಗಿಂದ ವರ್ತಕರು ತಪ್ಪುವರು.

ಶಿಕ್ಷಕರ ಗೋಳಾಟ.

'ಪ್ರೀತ ಶಿಕ್ಷಕ ಹಿತೇಚ್ಛು' ತಾ. ೨೨-೫ ೧೯೨೫ನೇದಕ್ಕೆ ಪತ್ರ ಬರೆದು ತಿಳಿಸುವದೇನಂದರೆ—

ಈ ನಮ್ಮ ಕಾರವಾರ ಜಿಲ್ಲೆಯಲ್ಲಿ ಈಗ ಒಂದು ಎರಡು ವರ್ಷಗಳಿಂದ ಶಿಕ್ಷಕರ [illegible] ಹಲವು ತರದಿಂದ ಅನಾನುಕೂಲತೆಗಳು ಒದಗುತ್ತಿರುತ್ತವೆ. ಉದಾಹರಣಾರ್ಥವಾಗಿ ಒಬ್ಬ ವಿಶಿಷ್ಟ ವ್ಯಕ್ತಿಯು [illegible] "[illegible]" ವಿಷಯಕವಾಗಿ ಅನುಕೂಲತೆಯ ಸ್ಥಳದಿಂದ [illegible] ವಿರುದ್ಧವಾಗಿ ಅನ್ಯರಿಗೆ ಅನುಕೂಲತೆಯುಳ್ಳ ಜಾಗೆಗೆ ವರ್ಗ ಮಾಡುವದು, [illegible] ಪಗಾರ ಸರಿಯಾಗಿ ಬಾರದು [illegible] ಶಿಕ್ಷಕರಿಂದ [illegible] ಕಾಗದ-ಪತ್ರಗಳಿಗೆ ಪತ್ರಕ್ಕೆ ಉತ್ತರ ದೊರೆಯದ [illegible] ಮನಸ್ಸಿಗೆ ಬಂದಾಗ ಜವಾಬು ಕೊಡುವದು, [illegible] ತರದ ಅವ್ಯವಸ್ಥೆಗಳಿಂದ ಶಿಕ್ಷಕರಿಗೆ ತೊಂದರೆಯಾಗ ಹತ್ತಿದೆ. [illegible] ಶಿಕ್ಷಕರಿಗೆ ಬೇರೆ ಖಾತೆಗಳಂತೆ ಪ್ರತಿ ತಿಂಗಳಲ್ಲಿ ನಿಯಮಿತ ಕಾಲಕ್ಕೆ ಪಗಾರ [illegible] ಶಿಕ್ಷಕರ. ವಿಶೇಷವಾಗಿ, [illegible] ಶಿಕ್ಷಕರ ಕಷ್ಟವನ್ನು ಬಣ್ಣಿಸಲಸಾಧ್ಯವು. ೧೯೨೫ನೇ ಇಸವಿಯ [illegible] ತಿಂಗಳ ಪಗಾರವಿಲ್ಲ [illegible] ತಿಂಗಳಲ್ಲಿ ಬಂತು. ಆದರೆ [illegible] ಶಿಕ್ಷಕರ [illegible] ಯ [illegible] "[illegible]" ಎಂಬಂತೆ [illegible] ಪಗಾರ ಎಷ್ಟೋ ಜನ ಶಿಕ್ಷಕರಿಗೆ [illegible] ಬಟವಡೆಯಾಗಿರುವದಿಲ್ಲ. [illegible] ಶಿಕ್ಷಕರ [illegible] ಎಷ್ಟೋ ತಿಂಗಳ ಪಗಾರ [illegible] ನೇ ತಿಂಗಳ ೧೩ನೇ ತಾರೀಖಿಗೇನೇ ಬಂತು. [illegible] ತಿಂಗಳ [illegible] ಬಗ್ಗೆ [illegible] ಬೇಗನೇ [illegible] ಸರಿ. ಅದ [illegible] "[illegible]" ಎಂಬಂತೆ [illegible] ಕಾಲಕ್ಕೆ ಹಾಗೂ ಪಗಾರ [illegible] ಸಿಗದೆ [illegible] ಪಗಾರ ಸಿಗಲು ತಡವಾಗುತ್ತಿದೆ. [illegible] ಶಿಕ್ಷಕರು ಎಷ್ಟೋ ಸಾರೆ [illegible] ಶಿಕ್ಷಕರ ದಿನಚರಿಯನ್ನು ನಂಬಿ ಜೀವಿಸುವ [illegible] ಬಳ್ಳಾರಿ ಮನಸ್ಸಿಗೆ [illegible] ಸಾಧ್ಯವಿಲ್ಲ ಎಂಬುದು. [illegible] ಶಿಕ್ಷಕರು [illegible] ಯಾರೂ ಶಿಕ್ಷಕರ ಕಷ್ಟವನ್ನು ಕೇಳುವವರು ಇಲ್ಲ. [illegible] ಶಿಕ್ಷಕರ ಮುಖ್ಯಾಧಿಕಾರಿಗಳು ಲಕ್ಷ್ಯ ಕೊಡುವರೇನು? [illegible] ಕೆಲಸ, ಹಾಗೂ [illegible] ಕೆಲಸ ಬೇರೆ ಮನುಷ್ಯರ [illegible] ಈ ಅವ್ಯವಸ್ಥೆಯು ದೂರವಾಗಿ ಬಡ ಶಿಕ್ಷಕರ [illegible] ಹಾಗೂ ಶಿಕ್ಷಕರಿಗೆ ಸರಿಯಾಗಿ ಪಗಾರ ಬಾರದು.

ಈ ಎಲ್ಲ ಗೋಳಾಟವನ್ನು, [illegible] ಜಿಲ್ಲೆಯ ಶಿಕ್ಷಣಾಧಿಕಾರಿಗಳಾದ ರಾ॥ ರಾ॥ ಎ॥ ಆ॥ [illegible] ದಿನ ದಿನದಿಂದ ಕೇಳಿಕೊಳ್ಳುವ ಹಾಗೂ ಕಷ್ಟಗಳನ್ನು [illegible] ಗಮನಕ್ಕೆ [illegible] ಶಿಕ್ಷಕರ ಬಗ್ಗೆ [illegible] ಹಾಗೂ ಅಧಿಕಾರವನ್ನು, [illegible] ಶಿಕ್ಷಕ ವರ್ಗಕ್ಕೆ ಆಗಿಂದಾಗ್ಗೆ ಒದಗುತ್ತಿದ್ದ ಈ ಕಷ್ಟವನ್ನು ದೂರಮಾಡುವ ಸದ್ಬುದ್ಧಿಯನ್ನು ಶ್ರೀಶನು ಅವರಿಗೀಯಲೆಂದು ಪ್ರಾರ್ಥಿಸುತ್ತೇನೆ. ತಾ. ೨೨-೫-೧೯೨೫.

ಶಿಕ್ಷಕ ಹಿತೇಚ್ಛು—[illegible]

ದೀ ಗೌ॥ ಸಾ॥ ಸ್ಕಾಲರಶಿಪ್ಸ ಲೀಗ, ಮುಂಬಯಿ.

ಈ ಸಂಸ್ಥೆಯ ಕಡೆಯಿಂದ ಸಹಾಯ ಕೇಳಬಿಚ್ಛಿಸುವ ವಿದ್ಯಾರ್ಥಿಗಳು ಲೀಗದ ಛಾಪೀ ಫಾರಮುಗಳ ಮೇಲೆಯೇ ಅರ್ಜಿ ಮಾಡಿ, ಅವನ್ನು ಸಂಸ್ಥೆಯ ಕಡೆಗೆ ಬರುವ ಜೂನ ೩೦ನೇ ತಾರೀಖಿನೊಳಗಾಗಿ ಕಳುಹಿಸಿ ಕೊಡತಕ್ಕದ್ದು. 28-5-1925.

Motilal House
No. 2. 2nd floor,
Tribhuvan Road,
GIRGAUM BOMBAY.

K. P. Prabhu.
Hon. Secretary

— ಕಳೆದ ಮಂಗಳವಾರ ತಾ. ೨೬ನೇಗೆ ಮುಂಬಯಿಯೊಳಗಿನ [illegible] ಎಂ. [illegible] ೧ ಲಕ್ಷ ೭೦ ಸಾವಿರ ರೂಪಾಯಿ [illegible] ೧೭,೫೦೦ ಬೆಲೆಯ ಮೂರು [illegible] ೫೫೦೦೦ ರೂಪಾಯಿಗಳ [illegible] ೫೫೦೦೦ ರೂಪಾಯಿಗಳ [illegible] ಬೇಗನು [illegible].

— [illegible] ೩ ಕೋಟಿ ರೂಪಾಯಿ [illegible] ತಿಂಗಳವರೆಗೆ [illegible] ಪ್ರತಿಗಳು [illegible] ರವನ್ನು [illegible] —

ಕಾನಡಾವೃತ್ತ.

೨೨ ಶ್ರೀಯುವ ಸಂ। ಜ್ಯೇಷ್ಠ ಶು। ೧೦ಮಿ ಸೋಮವಾರ.

ಆತ್ಮನಿರೀಕ್ಷಣೆ.

ಸನಾತನಿಗಳ ಸ್ವಭಾವದೋಷ.

ಪ್ರಸಿದ್ಧ ಲೋಕನಾಯಕರಾದ ಲಾಲಾ ಲಜಪತರಾಯರವರು ಸನಾತನ ಸಮಾಜದ ದುಸ್ಥಿತಿಯನ್ನು ಹೋಗಲಾಡಿಸಿ, ಸಮಾಜವನ್ನು ಪುನರ್ಘಟಿಸಲು ಹಿಂದೂ ಮಹಾಸಭೆಯು ವಿದ್ಯಮಾನ ತತ್ಪರತೆಯಿಂದ ದುಡಿಯುತ್ತಿರುವರಷ್ಟೇ! ಕೋಹತದ ಅತ್ಯಾಚಾರದಿಂದ ಹಿಂದೂ ಧರ್ಮಬಾಂಧವರ ದೌರ್ಬಲ್ಯದ ನೆನವರಿಕೆಯಾಗಿ ಈ ಕುಂದು-ಕೊರತೆಗಳನ್ನು ಅರಿತುಕೊಂಡು ಅವಕ್ಕೆ ತಕ್ಕುದಾದ ಉಪಾಯಯೋಜನೆಗಳನ್ನು ಕಂಡು ಹಿಡಿಯಲು ದೇಶಭಕ್ತರು ಉತ್ತರ ಹಿಂದುಸ್ಥಾನದಲ್ಲಿ ಸದ್ಯಕ್ಕೆ ಅಡ್ಡಾಡಿದರು. ಲಜಪತರಾಯರು ತಮ್ಮ ಪ್ರವಾಸದ ಅನುಭವಗಳನ್ನು ದಿಲ್ಲಿಯ "ಹಿಂದುಸ್ಥಾನ ಟೈಮ್ಸ್" ಪತ್ರಿಕೆಯಲ್ಲಿ "ಫ್ರೊಮ ರಾವಿ ಟು ಬ್ರಹ್ಮಪುತ್ರಾ," ಅಂದರೆ ರಾವಿನದಿಯಿಂದ ಬ್ರಹ್ಮಪುತ್ರಾ ನದಿಯವರೆಗೆ, ಎಂಬ ಹೆಸರಿನಲ್ಲಿ ಲೇಖಮಾಲೆಯನ್ನು ಬರೆಯಲಾರಂಭಿಸಿರುವರು. ಈವರೆಗೆ ಮೂರು ಲೇಖಾಂಕಗಳು ಪ್ರಕಟವಾಗಿದೆ. ದೇಶಭಕ್ತರು ಮೊಟ್ಟಮೊದಲು ಅಲ್ಲಲ್ಲಿಯ ರಾಷ್ಟ್ರೀಯ ರಾಜಕಾರಣದ ಪರಿಸ್ಥಿತಿಯನ್ನು ಸಮಾಲೋಚಿಸಿ, ನಮ್ಮ ರಾಜಕಾರಣದ ಪ್ರಾಬಲ್ಯವು ಬಹುಮಟ್ಟಿಗೆ ಕುಗ್ಗಿರುವದೆಂದು ಅಭಿಪ್ರಾಯಪಟ್ಟಿರುವರು. ಆದರೂ, ಅಸಹಯೋಗವನ್ನಾಚರಿಸಿ, ರಾಷ್ಟ್ರಕಾರಭಾರದಲ್ಲಿ ಸ್ವಸಂತೋಷದಿಂದ ಸೇರಿಕೊಂಡು, ಪ್ರಾಪಂಚಿಕ ಸುಖವನ್ನೆಲ್ಲ ತೊರೆದು, ಇಂಥ ಪರಿಸ್ಥಿತಿಯಲ್ಲಿಯೂ ರಾಷ್ಟ್ರಕಾರ್ಯವನ್ನು ಆತ್ಮವಿಶ್ವಾಸದಿಂದ, ನಿಷ್ಕಾಮಬುದ್ಧಿಯಿಂದ, ಸದ್ದಿಲ್ಲದೆ ನಡಿಸುತ್ತಿರುವ ಸಾತ್ವಿಕ ದೇಶಸೇವಕರಿಗೆ ಆದರಪೂರ್ವಕವಾಗಿ ವಂದನೆಗಳನ್ನರ್ಪಿಸಿ, ಇವರೆಲ್ಲರೂ ಸನಾತನ ಸಮಾಜದವರೆಂದು ಅಭಿಮಾನಪೂರ್ವಕವಾಗಿ ಉದ್ಗರಿಸಿ, ಸನಾತನ ಸಮಾಜದ ಅವನತಿಯಾಗಲು ಸನಾತನಿಗಳ ಸ್ವಭಾವದೋಷಗಳೇ ಕಾರಣವೆಂದು ಹೇಳಿ, ಅವನ್ನು ವಿಸ್ತಾರಪೂರ್ವಕವಾಗಿ ಚರ್ಚಿಸಿರುವರು. ಲಜಪತರಾಯರ ಚರ್ಚೆಯು ಅಖಿಲ ಹಿಂದೂ ಸಮಾಜಕ್ಕೂ ಸಂಬಂಧಿಸಿದ್ದು, ರಾಷ್ಟ್ರವಿಮೋಚನದ ಪ್ರಚಂಡ ಕಾರ್ಯವನ್ನು ಕೈಕೊಂಡ ನಮ್ಮ ಸಮಾಜವು ಅದನ್ನರಿತುಕೊಂಡು ಮುಂದರಿಯುತ್ತಿದ್ದರೆ, ನಮ್ಮ ಉದ್ಧಾರವಾಗುವದು ಅಶಕ್ಯವಿದ್ದದರಿಂದ ಅದರ ಮಥಿತಾರ್ಥವನ್ನು ನಾವು ಇಂದಿಗೆ ವಾಚಕರಿಗೆ ನಿವೇದಿಸಲಿಚ್ಛಿಸುವೆವು.

ಲಜಪತರಾಯರ ಒಂದು ಉದ್ಗಾರವನ್ನು ನಾವೆಲ್ಲರೂ ಲಕ್ಷ್ಯದಲ್ಲಿಡಬೇಕು; ಪರಮತಸ್ಥರೂ ಅದನ್ನು ಅರಿತುಕೊಂಡಿರಬೇಕು. ಸನಾತನ ಸಮಾಜದ ಉನ್ನತಿಯನ್ನು ರಾಷ್ಟ್ರಹಿತಕ್ಕೆ ವಿರೋಧವಾಗಿ ಸಾಧಿಸಲು ದೇಶಭಕ್ತರು ಮುಂದಾಗಿರುವದಿಲ್ಲ. ಕ್ರೈಸ್ತರೂ, ಎಂಗ್ಲೋ ಇಂಡಿಯನ್‌ರೂ, ಮಹಮ್ಮದೀಯರೂ ತಮ್ಮ ತಮ್ಮ ಧರ್ಮಪ್ರಸಾರವನ್ನು ಸಭ್ಯಾಸಭ್ಯ ಉಪಾಯಗಳಿಂದ ಸಾಧಿಸುತ್ತಿರುವಾಗ, ಅ ಕುರಿತು ಲೋಕನಿಂದೆಯಾಗದೆ, ಕೆಲ ಮಟ್ಟಿಗೆ ಅವರಿಗೆಲ್ಲರಿಗೆ ಪ್ರೋತ್ಸಾಹವೂ ದೊರಕುತ್ತಿರುವಾಗ, ಸನಾತನಿಗಳು ಮಾತ್ರ ಸಮಾಜೋನ್ನತಿಯು ರಾಷ್ಟ್ರಹಿತವಿಘಾತಕವೆಂದು ಹೆದರುವ ಕಾರಣವೇನು? ಉಳಿದ ಸಮಾಜಗಳಿಗೆ ಅದರಿಂದ ಕಲ್ಯಾಣವಾಗುತ್ತಿದ್ದರೆ, ಸನಾತನಿಗಳಿಗೆ ಮಾತ್ರ ಅದರಿಂದ ಅಕಲ್ಯಾಣವಾಗಲಾರದು; ವಿಶೇಷವಾಗಿ, ಹಿಂದೂ ಸಮಾಜದ ಮೇಲೆ ನಾಲ್ಕೂ ಬದಿಯಿಂದ ಆಘಾತಗಳಾಗುತ್ತಿದ್ದಾಗ, ಸನಾತನಿಗಳು ರಾಷ್ಟ್ರಹಿತದ ವೇದಾಂತ ಹೇಳಿ, ಕೈ ಮುದುಗಿಸಿಕೊಂಡು ಕೂತುಕೊಳ್ಳುವದು ಎಂದೂ ಕ್ಷೇಮಕರವಲ್ಲ; ಎಂದೂ ಕ್ಷೇಮಕರವಾಗಲಾರದು. ಸ್ವಸಂರಕ್ಷಣಾರ್ಥವಾಗಿ ನಮ್ಮ ಸನಾತನ ಸಮಾಜವನ್ನು ಸಂಘಟಿಸಲು ನಾವು ಬದ್ಧರಿದ್ದೇವೆಂದು ಲಜಪತರಾಯರು ಸಪ್ರಮಾಣ ಪ್ರತಿಪಾದಿಸಿರುವರು.

ಸನಾತನ ಸಮಾಜದ ಧ್ಯೇಯವು ತೀರ ಉಚ್ಚವಿದೆ. ಭೌತಿಕ ಸಂಸಾರವು ಸನಾತನಿಗಳಿಗೆ ತೃಣಪ್ರಾಯವು. ನಮ್ಮ ದೃಷ್ಟಿಯೆಲ್ಲ ಪರಮಾರ್ಥದ ಕಡೆಗೇ ಒಲಿದಿರುತ್ತದೆ. ಪ್ರಾಪಂಚಿಕ ಸುಖವೆಲ್ಲ ಅನಿತ್ಯವು; ಕ್ಷಣಭಂಗುರವು; ಅಶಾಶ್ವತವು; ಇತ್ಯಾದಿ ಉಚ್ಚ ಕಲ್ಪನೆಗಳ ಮರ್ಮವನ್ನು ಅರಿತುಕೊಳ್ಳದೆ, ವೈರಾಗ್ಯಪ್ರೇರಿತರಾಗಿ, ನಾವು ದೀನಾವಸ್ಥೆಗೆ ಬಂದು ಮುಟ್ಟಿರುವೆವು. ನಮ್ಮ ಪರಮಾತ್ಮನ ಮೇಲಿನ ಅಂಧ ಶ್ರದ್ಧೆಯೂ, ಅತನ ಕೈಯೊಳಗಿನ ಗೊಂಬೆಗಳೆಂಬ ಅಪೌರುಷೇಯ ಭಾವನೆಯೂ ನಮ್ಮನ್ನು ಸತ್ವಶೂನ್ಯವನ್ನಾಗಿ ಮಾಡಿವೆ. ಸನಾತನಿಗಳ ಜಾಣತನಕ್ಕೇನು ಕಡಿಮೆ ಇಲ್ಲ; ತರ್ಕಶಾಸ್ತ್ರವು ತರ್ಕಶುದ್ಧವಿದೆ; ವೇದಾಂತವನ್ನು ಅವರೇ ಹೇಳಬೇಕು. ಇಂಥ ಉಚ್ಚ ತತ್ವಗಳಿಂದ ಅವರು ಯುಕ್ತವಾಗಿದ್ದರೂ, ಐಹಿಕ ಕಷ್ಟಗಳನ್ನೆಲ್ಲ ದುರ್ಬಲ ಪ್ರಾಣಿಗಳಂತೆ ಅವರು ಅನುಭವಿಸುತ್ತಿರುವ ಕಾರಣವೇನಿರಬಹುದು!

ಲಜಪತರಾಯರು ಎರಡು ಕಾರಣಗಳನ್ನು ಹೇಳಿರುವರು. "ಸಂಶಯ ಮತ್ತು ಭೀತಿ;" ಇವುಗಳಿಂದ ಸನಾತನ ಸಮಾಜವು ತೇಜೋಹೀನವಾಗಿದೆ; ಸತ್ವಶೂನ್ಯವಾಗಿದೆ. ಯಾವದೇ ವಿಷಯವಿರಲಿ, ಅಲ್ಲಿ ತರ್ಕ, ವೇದಾಂತಗಳ ಚರ್ಚೆಯಾಗಿ ಕಟ್ಟಕಡೆಗೆ ಬರುವದು ಸಂಶಯ, ಮತ್ತು ಭೀತಿ. ಸನಾತನ ರಾಜ್ಯಭಾರವು ನಡೆಯುತ್ತಿರುವಾಗ, ಮಹಮ್ಮದೀಯರು ದಂಡೆತ್ತಿಕೊಂಡು ಹೆಬ್ಬಾಗಿಲಿನಲ್ಲಿ ಬಂದು ಪ್ರವೇಶಕ್ಕಾಗಿ ಕದಗಳನ್ನು ನೂಕುತ್ತಿದ್ದಾಗ, ನಮ್ಮ ಸನಾತನಿಗಳು ಮಾಡಿದ್ದೇನು! ಪಂಚಾಂಗ ತೆಗೆದುಕೊಂಡು ಜ್ಯೋತಿಷ್ಯ ನೋಡಿ, ಮಹಮ್ಮದೀಯರು ದೌಡು ದಿಗ್ವಿಜಯ ಮಾಡುವದೆಂದು ಭವಿಷ್ಯ ಹೇಳಿದರು; ಎದುರಾದರೆ ಪ್ರಾಣಹಿಂಸೆಯ ದೋಷ ಬಂದೀತೆಂದು ವಾದವಾಯಿತು! ಸನಾತನಿಗಳ ಜಾಣತನದ ಉಪಯೋಗವಿದು. ರಾಜ-ಪ್ರಜೆಗಳಲ್ಲಿ ಸಂಶಯ ಭೀತಿಗಳು ಉಂಟಾದವು ಆದರೂ ಕ್ಷತ್ರಿಯರು ಕ್ಷಾತ್ರತೇಜದಿಂದ ಜೀವದಾಶೆ ಬಿಟ್ಟು ಕಾದಾಡಿದರು. ಇತ್ತ ಪ್ರಜೆಗಳು ಭೀತಿಗ್ರಸ್ತರಾಗಿ ಶತ್ರುಗಳಿಗೆ ತಮ್ಮ ರಾಜ್ಯದಲ್ಲಿ ಬರ ಮಾಡಿಕೊಂಡರಂತೆ! ಇಂಥ ಹೇಡಿತನದಿಂದ ಅಂಧ ಶ್ರದ್ಧೆಯಿಂದ ನಾವೆಂದಾದರೂ ಪಾರಮಾರ್ಥಿಕ ಉನ್ನತಿಯನ್ನು ಪಡೆಯುವೆವೇ! "ಸಂಶಯಾತ್ಮಾ ವಿನಶ್ಯತಿ" ಎಂಬ ಗೀತಾವಚನದ ಯಥಾರ್ಥ ಪರಿಣಾಮವು ಸನಾತನ ಸಮಾಜಕ್ಕೆ ಫಲಿಸಿರುವದೆಂದು ಲಜಪತರಾಯರು ತಮ್ಮ ಅನುಭವಗಳಲ್ಲಿ ನಮೂದಿಸಿರುವರು.

ಸನಾತನಿಗಳು ಶತ್ರುಗಳಿಗೆ ಹೆದರುತ್ತಿರುವರು, ಮಿತ್ರರಿಗೂ ಹೆದರುತ್ತಿರುವರು; ಐಹಿಕ ದೇವತೆಗಳಿಗೂ ಹೆದರುತ್ತಿರುವರು, ಪಾರಲೌಕಿಕ ದೇವತೆಗಳಿಗೂ ಹೆದರುತ್ತಿರುವರು. ಮತ್ತೊಂದು ಬದಿಯಿಂದ ಜಾತಿ ಬಹಿಷ್ಕಾರದ ಬೆದರಿಕೆ, ಇನ್ನೊಂದು ಬದಿಯಿಂದ ಪರರ ಬೆದರಿಕೆ, ನಾಲ್ಕೂ ಬದಿಯಿಂದ ಬೆದರಿಕೆ. ತರ್ಕಶಾಸ್ತ್ರದ ನೈಪುಣ್ಯದ ಮೂಲಕ ತರ್ಕಶಾಸ್ತ್ರಶುದ್ಧ ನಿರ್ಣಯಗಳನ್ನು ಕೈಕೊಳ್ಳಲು ಬುದ್ಧಿ, ಅದು ದೊರಕದ್ದರಿಂದ, ಪ್ರತಿಯೊಂದು ಕಾರ್ಯದಲ್ಲಿಯೂ ಸಂಶಯ. ಯಾಕಂದರೆ, ಭೂಮಂಡಲವೇನು ತರ್ಕಶಾಸ್ತ್ರದಮೇಲೆ ರಚಿತವಾಗಿರುವದಿಲ್ಲ; ಇಲ್ಲಿಯ ವ್ಯವಹಾರಗಳೆಲ್ಲ ತರ್ಕಶಾಸ್ತ್ರದಂತೆ ಸತತವಾಗಿ ನಡಿಯುತ್ತವೇನು? ಅನೇಕಾವರ್ತಿ ತರ್ಕಶಾಸ್ತ್ರವನ್ನೆಲ್ಲ ಕಟ್ಟಿಟ್ಟು, ವಿಚಾರವಂತರಾಗಿ ನಿರ್ಧಾರದಿಂದ ಮುಂದಾದವರೇ ವಿಜಯಶ್ರೀ ವಿಭೂಷಿತರಾದದ್ದು ನಾವು ನೋಡಿದ್ದೇವೆಂದು ಲಜಪತರಾಯರು ಉದ್ಗರಿಸಿರುವರು.

ಲಜಪತರಾಯರು ಇಂಥ ವೃತ್ತಿಯಿಂದ ಹಿಂದೂ ಸಮಾಜವು ಯಾವದೇ ಕಾರ್ಯವನ್ನು

ಮನಮುಟ್ಟಿ ಮಾಡದೆ ದುರ್ಬಲವಾಗಿರುವದೆಂದು ಅಭಿಪ್ರಾಯಪಟ್ಟಿರುವರು. ಬೌದ್ಧಿಕ ಉನ್ನತಿಯಿದ್ದವಂಗೆ ಸಂಶಯ, ಭೀತಿ ಹೆಚ್ಚು, ಇತರರಿಗೆ ಮೂಢ ಬುದ್ಧಿ ಹೆಚ್ಚು; ಅಂತು ಸಮಾಜದ ಕಾರ್ಯವು, ಕಾರ್ಯಶಕ್ತಿಯು ಶೂನ್ಯವಾಗಿದೆ. ಪ್ರಸಕ್ತಿಯಲ್ಲಿ ದಿಟ್ಟತನದಿಂದ ಎದೆಗಟ್ಟಿ ಮಾಡುವ ಚೈತನ್ಯವು ಹಿಂದೂ ಸಮಾಜದಲ್ಲಿರುವದಿಲ್ಲ. ಇದರಿಂದಲೇ ಸಮಾಜವು ಕ್ರಮವಾಗಿ ಬಲಹೀನವಾಗಿದೆ. ಅದ್ದರಿಂದ ನಾವು ಮಾಡಬೇಕಾದುದೇನು ? ಸಮಾಜದಲ್ಲಿ ನಿರ್ಭಯವೃತ್ತಿಯನ್ನು ಬೆಳಿಸಿ, ದಿಟ್ಟತನದಿಂದ ಎದರುಗಳಿಗೆ ಎದುರಾಗಲು ಸನಾತನಿಗಳಿಗೆ ತಯಾರಿಸಬೇಕು. ಪ್ರಪಂಚವು ಕ್ಷಣಭಂಗುರವೆಂದು ಅದನ್ನು ಧಿಕ್ಕರಿಸಲಾಗದು. ಪ್ರಪಂಚವು ಅನಿತ್ಯವಿದ್ದಾಗ್ಯೂ ಅದೊಂದು ಸತ್ಯಸ್ಥಿತಿಯೆಂದು ನೆನಿಸಿ, ಇಲ್ಲಿ ನಾವು ವರ್ತಿಸಬೇಕು. ಪ್ರಾಪಂಚಿಕ ಸುಖಕ್ಕಿಂತ ಪಾರಮಾರ್ಥಿಕ ಸುಖವು ಶ್ರೇಷ್ಠವಾಗಿದ್ದರೂ, ಅಮೂಲ್ಯವಾಗಿದ್ದರೂ, ಪಾರಮಾರ್ಥಿಕ ಸುಖವನ್ನು ಸಂಪಾದಿಸುವ ಪಾವಟಿಗೆಯು ಪ್ರಾಪಂಚಿಕ ಸುಖವೆಂದು ಮರೆಯಲಾಗದು; ಪ್ರಾಪಂಚಿಕ ಜೀವನವನ್ನು ನಿರ್ಭಯದಿಂದ, ನಿರ್ಧಾರದಿಂದ, ಸಚ್ಛೀಲದಿಂದ, ಅಚಲ ಬುದ್ಧಿಯಿಂದ ನಡಿಸಿದರೆನೇ ಪಾರಲೌಕಿಕ ಸುಖವು ನಮಗೆ ಪ್ರಾಪ್ತವಾಗುವದು. ಇದೇ ನಿಜವಾದ ವೈರಾಗ್ಯಬುದ್ಧಿಯು. ಈಗಿನಂತೆ ಸಾಧು-ಸನ್ಯಾಸಿ-ಮಹಂತರಾಗಿ ತಿರುಗುವದು, ಸಮಾಜದ ಭಕ್ತಿಭಾವಗಳನ್ನು ಸುಲಿಯುವದು, ಸನಾತನ ಧರ್ಮಕ್ಕೆ ಕಲ್ಯಾಣಪ್ರದವಲ್ಲ.

ಗ್ಯ ತತ್ವದ ಮರ್ಮವನ್ನರಿಯದೆ, ವೇದಾಂತದ ಅರ್ಥ ಮಾಡಿಕೊಳ್ಳದೆ, ಅವನ್ನು ಐಹಿಕ ವ್ಯವಹಾರಗಳಿಗೆಲ್ಲ ತಾರತಮ್ಯಕೋಸ್ಕರಾಗಿ, ದೇಶ-ಕಾಲಗಳನ್ನು ಲಕ್ಷಿಸದೆ ಹಚ್ಚಿಕೊಂಡದ್ದರಿಂದಲೇ ಸನಾತನ ಸಮಾಜವು ಪ್ರಚಂಡವಿದ್ದಾಗ್ಯೂ, ಬುದ್ಧಿಕುಶಲವಿದ್ದಾಗ್ಯೂ, ಐಶ್ವರ್ಯವಂತವಿದ್ದಾಗ್ಯೂ, ಕಲಾನಿಪುಣವಿದ್ದಾಗ್ಯೂ ಶಕ್ತಿಹೀನವಾಗುತ್ತ ನಡೆದದೆಂದು ಲಜಪತರಾಯರು ಸಾರಿಹೇಳಿ, ಹಿಂದೂ ಸಭೆಯಂಥ ಸಾರ್ವಜನಿಕ ಉದ್ಧಾರದ ಸಂಸ್ಥೆಯ ಕಾರ್ಯವನ್ನು ಮಂಡಿಸಿರುವರು.

ಲಜಪತರಾಯರ ವಿಚಾರಗಳನ್ನು ಸನಾತನಿಗಳೂ, ಸನಾತನೇತರರೂ ಲಕ್ಷಪೂರ್ವಕವಾಗಿ ಆಲೋಚಿಸಬೇಕೆಂದು ನಾವು ಮತ್ತೊಮ್ಮೆ ಹೇಳುವೆವು. ಪ್ರಾಣಿಹಿಂಸೆ, ವೈರಾಗ್ಯ, ವೇದಾಂತ ಮುಂತಾದ ಉಚ್ಚ ತತ್ವಗಳಿಂದ ಆತ್ಮನಾಶವೇ ಒದಗಿಬರುತ್ತಿದ್ದರೆ, ಆ ತತ್ವಗಳನ್ನು, ಆ ತತ್ವಗಳ ಅರ್ಥವನ್ನು ಐಹಿಕ, ಪಾರಲೌಕಿಕ ಉನ್ನತಿಯಾಗುವಂತೆ, ನಾವು ಸರಿಪಡಿಸಿಕೊಳ್ಳಬೇಕು. ಆತ್ಮನಾಶವು ಸನಾತನಿಗಳಿಗೆ ಹೇಳಲ್ಪಟ್ಟಿರುವದಿಲ್ಲ. " ಆತ್ಮಾನಂ ಸತತಂ ರಕ್ಷೇತ್, ದಾರೈರಪಿ ಧನೈರಪಿ, " ಅಂದರೆ, ಆಪತ್ಕಾಲ ಬಂದೊದಗಿದಾಗ ಧರ್ಮಶಾಸ್ತ್ರದಂತೆ ಸನಾತನಿಯು ಮಡದಿಯನ್ನೂ, ಧನವನ್ನೂ ಧಿಕ್ಕರಿಸಿ, ಆತ್ಮರಕ್ಷಣ ಮಾಡಿಕೊಳ್ಳಲು ಬದ್ಧನಿರುವನು. ಅಂದ ಬಳಿಕ, ಜ್ಯೋತಿಷ, ತರ್ಕಶಾಸ್ತ್ರ, ವೇದಾಂತ ಮುಂತಾದ ಸಾಮಾನ್ಯ ಶಾಂತಿಕಾಲದ ತತ್ವಗಳ ಪಠಣವನ್ನು ಆಪತ್ಕಾಲದಲ್ಲಿ ಆತನು ಒಮ್ಮೆಲೇ ತೊಲಗಿ, ಆಪತ್ತಿಗೆ ಎದುರಾಗಿ, ಆತ್ಮರಕ್ಷಣವನ್ನು ಮಾಡಿಕೊಳ್ಳಲು ನಿರ್ಧಾರ ಬುದ್ಧಿಯಿಂದ, ಸ್ಥಿರ ಬುದ್ಧಿಯಿಂದ ಟೊಂಕ ಕಟ್ಟಿ ನಿಲ್ಲಬೇಕೆಂದು ನಾವು ಹೇಳಬೇಕೇನು !

ಸ್ಫುಟ ಸೂಚನೆಗಳು.

೧. ಮ. ಗಾಂಧಿಯರ " ಯಂಗ ಇಂಡಿಯಾ " ಪತ್ರಿಕೆಯಲ್ಲಿ ಅಲಹಾಬಾದದೊಳಗಿನ ಮ್ಯುನಿಸಿಪಾಲಿಟಿ ಶಾಲೆಯಲ್ಲಿ ಕೈರಾಟಿಯನ್ನು ಪ್ರವೇಶಿಸಿದ ಹಕೀಕತು ಪ್ರಸಿದ್ಧವಾಗಿದೆ. ೭-೮ ತಿಂಗಳುಗಳಿಂದ ಮುನಿಸಿಪಾಲಿಟಿಯವರು ಈ ಪ್ರಯೋಗವನ್ನು ಮಾಡಹತ್ತಿರುವರು. ಮೊದಮೊದಲು, ಇದರಿಂದ ಶಾಲಾಖಾತೆಗೆ ಬಹಳೇ ಹಾನಿ ತಟ್ಟಿತು, ಶೇಕಡಾ ೩೬ ರಷ್ಟು ಹತ್ತಿಯು ಹಾಳಾಗಿ ಹೋಗುತ್ತಿತ್ತು. ಮ್ಯುನಿಸಿಪಾಲಿಟಿಯವರು ಕೈರಾಟಿಯಲ್ಲಿ ನುರಿತ ಶಿಕ್ಷಕರನ್ನೇ ನೇಮಿಸಿ, ಪ್ರಯೋಗವನ್ನು ವಿಶೇಷ ಆಗ್ರಹದಿಂದ ಮುಂದರಿಸಿದರು. ಇದರಿಂದ ಅನಪೇಕ್ಷಿತವಾದ ಫಲ ದೊರಕಹತ್ತಿದೆ. ಈಗ ಮುನಿಸಿಪಾಲಿಟಿ ಶಾಲೆಗಳಲ್ಲಿ ೩೩೪ ಕೈರಾಟಿಗಳಿದ್ದರೂ ಅರ್ಧದಷ್ಟು, ಅಂದರೆ ೧೬೭ ರಾಟಿಗಳು ಕೆಲಸ ಮಾಡುತ್ತಿದ್ದಾಗ್ಯೂ ಆಗಿಂದಾಗ ನೆಟ್ಟಗೆ ಮಾಡಬೇಕಾದ್ದರಿಂದ ಶೇಕಡಾ ಅರ್ಧದಷ್ಟು ಮಾತ್ರ ರಾಟಿಗಳು ನಡೆಯುತ್ತವೆಂದು ಹೇಳಬಹುದು. ಶಾಲೆಗಳಲ್ಲಿ ೩೪೦೦ ವಿದ್ಯಾರ್ಥಿಗಳಿರುವರು. ಇವರೊಳಗಿನ ೪ ರಲ್ಲಿ ೧ ಪಾಲು ಹುಡುಗರಿಗೆ ದಿನಾ ೪೫ ಮಿನಿಟು ನೂಲದೊರಕುತ್ತದೆ. ಈಗಿನ ಮಾನದಿಂದ ಮುನಿಸಿಪಾಲಿಟಿಗೆ ಹತ್ತಿಯ ಖರ್ಚ ಕಳೆದು ಸುಮಾರು ೩೦೦೦ ರೂಪಾಯಿ ಉಳಿಯಲಿಕ್ಕಡ್ಡಿಯಿಲ್ಲ. ಕೈರಾಟಿಯ ಸಂಖ್ಯೆಯನ್ನು ಬೆಳಿಸಿ, ಎಲ್ಲ ಹುಡುಗರಿಗೆ ನೂಲಹಚ್ಚಿದರೆ, ಮುನಿಸಿಪಾಲಿಟಿಗೆ ವರ್ಷಕ್ಕೆ ೧೫—೨೦ ಸಾವಿರ ರೂಪಾಯಿ ಉತ್ಪನ್ನವಾಗಬಹುದಂತೆ ! ಹೆಣ್ಣುಮಕ್ಕಳು ಕೈನೂಲು ತೆಗೆಯುವದರಲ್ಲಿ ವಿಶೇಷ ಪ್ರಾವೀಣ್ಯ ಸಂಪಾದಿಸಿರುವರೆಂದು ತಿಳಿಸಲು ಸಂತೋಷವಾಗುತ್ತದೆ. ಕೈರಾಟಿಯ ಪ್ರವೇಶದಿಂದ ಹುಡುಗರ ವಿದ್ಯಾವ್ಯಾಸಂಗಕ್ಕೆ ತೊಂದರೆ ಬರಲಿಲ್ಲ; ಇಷ್ಟೇ ಅಲ್ಲ, ಕೈರಾಟಿಯಿಂದ ವಿದ್ಯಾವ್ಯಾಸಂಗವು ವಿಶೇಷ ಭದ್ರವಾಗುತ್ತದೆಂದು ಮುನಿಸಿಪಾಲಿಟಿಯವರು ನಮೂದಿಸಿರುವರು. ಇದಲ್ಲದೆ ಶಾಲಾ ಖಾತೆಯ ಸರಕಾರಿ ಇನ್ಸಪೆಕ್ಟರಳಾದ ಮಿಸ್ ಜೆ. ಎ ಮೆಕ್‌ರೆಡ್ಡಿಯವರು ಹೆಣ್ಣುಮಕ್ಕಳ ಶಾಲೆಯೊಳಗಿನ ಕೈನೂಲನ್ನು ಪ್ರಶಂಸಿಸಿ, ಕೈರಾಟಿಯಿಂದ ವಿದ್ಯಾರ್ಥಿಗಳಿಗೆ ಮನೋರಂಜನವಾಗುತ್ತದೆಂದೂ ಮಾನಸಿಕ ಪರಿಶ್ರಮ ಮಾಡುವವರಿಗೆ ಇದೊಂದು ಪ್ರಕಾರದ ವಿಶ್ರಾಂತಿ ದೊರಕುತ್ತದೆಂದೂ ಅಭಿಪ್ರಾಯಪಟ್ಟಿರುವರು. ಈ ಹಕೀಕತೇ ಕೈರಾಟಿಯ ಮಹಾತ್ಮ್ಯವನ್ನು ಹೇಳುತ್ತಿರುವಾಗ, ನಾವು ಮತ್ತೇನು ಹೇಳತಕ್ಕದ್ದಿದೆ? ಇಲ್ಲಿಯ ಮ್ಯುನಿಸಿಪಾಲಿಟಿಯವರು ಪ್ರಯಾಗ ಮ್ಯುನಿಸಿಪಾಲಿಟಿಯ ಪ್ರಯೋಗದಿಂದ ಬುದ್ಧಿಗಲಿತು, ಶಾಲೆಗಳಲ್ಲಿ ಕೈರಾಟಿಯ ಪಾಠಗಳನ್ನು ಇತರ ಪಾಠಗಳಂತೆ ಕಲಿಸಿದರೆ, ಮಿಸ್ ಮೆಕ್‌ರೆಡ್ಡಿಯವರು ನುಡಿದಂತೆ, ಬಾಲಕರಿಗೆ ವಿಶ್ರಾಂತಿಯೂ, ಮನೋರಂಜನವೂ ದೊರಕಿ, ಮ್ಯುನಿಸಿಪಾಲಿಟಿಗೂ ಉತ್ಪನ್ನ ದೊರಕುವದು.

೨. ಸನಾತನಿಗಳ ಅವನತಿ ಕುರಿತು ಇಂದಿನ ಅಗ್ರಲೇಖದಲ್ಲಿ ದೇಶಭಕ್ತ ಲಾಲಾ ಲಜಪತರಾಯರ ವಿಚಾರಗಳನ್ನು ಚರ್ಚಿಸುವಾಗ, ಬಿಹಾರದಲ್ಲಿ ಸಂಭವಿಸಿದ ಹಿಂದು ಶೋಚನೀಯ ಹಕೀಕತನ್ನು ನಿವೇದಿಸಬೇಕಾಗಿದೆ. ಬಿಹಾರದ ಪ್ರಾಂತಾಧಿಪರು ಜಗನ್ನಾಥಪುರಿಯನ್ನು ಅನುಗ್ರಹಿಸಿದ್ದರು. ಅಲ್ಲಿ ಅಮರಮಠವೆಂಬದೊಂದು ಸನಾತನ ಧರ್ಮಸಂಸ್ಥೆಯಿದೆ. ಈ ಮಠದ ಆಚಾರ್ಯಶ್ರೇಷ್ಠರಾದ ಮಹಂತರು ಪ್ರಾಂತಾಧಿಪರಿಗೆ ಮನೋಪಹಾರವನ್ನು ಕೊಡಲುದ್ಯುಕ್ತರಾಗಿ ೧೮,೦೦೦ ರೂಪಾಯಿಗಳನ್ನು ಈ ಸಮಾರಂಭಕ್ಕೆ ಧಾರೆ ಎರೆದರು. ಮಹಂತರು ಪರಧರ್ಮದ ಅಧಿಕಾರಿಗಳಿಗೆ ಉಪಹಾರಗಳನ್ನು ಸಮರ್ಪಿಸಿ, ಅವರ ದೊಡ್ಡಸ್ತನವನ್ನು ಮನ್ನಿಸುವದು ವಿಹಿತವಲ್ಲದಿದ್ದರೂ, ಸನಾತನ ಧರ್ಮಕ್ಕುಚಿತವಾದ ಉಪಹಾರ ಸಾಮಗ್ರಿಗಳನ್ನಷ್ಟೇ ಪೂರೈಸಿಕೊಂಡಿದ್ದರೆ, ವಿಶೇಷ ಆಕ್ಷೇಪವಿದ್ದಿಲ್ಲ. ಆದರೆ. ಮಹಂತರು ಈ ಸಮಾರಂಭಕ್ಕಾಗಿ ಗೋಮಾಂಸವನ್ನೂ ಸರಾಯಿಯನ್ನೂ ತರಿಸಿ, ಧರ್ಮಭ್ರಷ್ಟರಾದರು. ಪರಮ ಪವಿತ್ರವಾದ ಕ್ಷೇತ್ರದಲ್ಲಿ ಅಧರ್ಮಕೃತ್ಯಗಳು ನಡೆಯುವಾಗ ಯಾವ ಧರ್ಮಾಭಿಮಾನಿಯು ಸುಮ್ಮಗುಳಿಯುವನು ? ಈ ಮನೋಪಹಾರದ ಸಮಾರಂಭವನ್ನು ಬಹಿಷ್ಕರಿಸುವ ಚಳವಳಿಯು ಅವತಾರ ಹೊಂದಿತು. ಕೂಡಲೆ ಶಾಂತಿಭಂಗದ ಭೀತಿಯು ಅಧಿಕಾರಿಗಳಿಗೆಲ್ಲ ಬಡಿದು, ಧರ್ಮನಿಷ್ಠ ಪ್ರಮುಖರ ಮೇಲೆ ಕ್ರಿ. ಪ್ರೊ. ಕೋ. ೧೪೪ ಕಲಮಿನನ್ವಯ ಪ್ರತಿಬಂಧಕ ಹುಕುಮುಗಳು ಹೊರಟವು. ಇಷ್ಟಾದರೂ, ಪ್ರಜೆಗಳು ಹರತಾಳವನ್ನು ಆಚರಿಸಿ, ಮಹಾಸಭೆಯನ್ನು ಸೇರಿಸಿ, ಮಹಂತರ ಅಧರ್ಮ ಕೃತ್ಯದ ನಿಷೇಧ ಮಾಡಿದರು. ಸನಾತನ ಧರ್ಮಸಂಸ್ಥೆಯ ಆಚಾರ್ಯಶ್ರೇಷ್ಠರು ಪರಮಾತ್ಮನ ಅನುಗ್ರಹಸಂಪಾದನೆಯನ್ನು ಬಿಟ್ಟುಕೊಟ್ಟು, ಪ್ರಾಂತಾಧಿಪರ ಅನುಗ್ರಹ ಸಂಪಾದಿಸುವದಕ್ಕಾಗಿ ಒದ್ದಾಡುವದೂ, ಅದಕ್ಕಾಗಿ ಧರ್ಮನಿಷಿದ್ಧ ತಿಂಡಿಗಳನ್ನು ಪೂರೈಸುವದೂ ಸನಾತನ ಸಮಾಜದ ಅವನತಿಯ ದ್ಯೋತಕವಲ್ಲವೇ !

೩ ಬ್ರಿಟಿಶ ರಾಜ್ಯಪದ್ಧತಿಯಲ್ಲಿ ಭಾರತೀಯ ಪ್ರಜೆಗಳ ಸುಲಿಗೆಯಾದರೂ, ಸರಕಾರದ ಆಮಾಖರ್ಚ ಪ್ರಾಮಾಣಿಕತನದಿಂದ ನಡೆವದೆಂದು ಅನೇಕರ ಕಲ್ಪನೆಯಿದೆ. ಆದರೆ ಸಂಯುಕ್ತ ಪ್ರಾಂತದಲ್ಲಿ ಸರಕಾರಿ ಅಧಿಕಾರಿಗಳು ನಡಿಸುವ ವಂಚನೆಯನ್ನು ಹೊರಗೆಡಹಿರುವರು. ಗೋರಖಪುರ ಜಿಲ್ಲೆಯ ಘೋಟಿ ತಾಲೂಕಿನಲ್ಲಿ ಕಟ್ಟೋಣಕ್ಕಾಗಿ ೧॥ ಲಕ್ಷ ಇಟ್ಟಂಗಿಗಳ ಖರೇದಿಯಾಯಿತಂತೆ ! ಇವುಗಳಲ್ಲಿ ಬರೇ ೪೫ ಸಾವಿರ ಇಟ್ಟಂಗಿಗಳ ಪತ್ತೆಯಾಗುತ್ತದೆ. ಉಳಿದವು ಕಾಣೆ ! ಮತ್ತೊಂದು ಜಿಲ್ಲೆಯಲ್ಲಿ ಇಲ್ಲದಿದ್ದರೂ ಇಟ್ಟಂಗಿಗಾಗಿ ರೂಪ್ಯಾ ೧೦೪೦ ಗಳನ್ನು ಪಡಕೊಂಡರು ! ಆದರೆ ಆ ಗಳಿಮಿನ ಸಾ

ಮಗ್ರಿಯನ್ನು ಪೂರೈಸಿದ್ದು ಎಲ್ಲಿಯೂ ಕಂಡು ಬರುವದಿಲ್ಲ. ಅಗ್ರಾದೆಯೊಳಗಿನ ಒಂದು ಹಾಸ್ಪಿಟಲಿಗೆ ಕಟ್ಟೋಣಕ್ಕಾಗಿ ಸರಕಾರವು ೯೦ ಸಾವಿರ ರೂಪಾಯಿಗಳನ್ನು ಅರ್ಪಿಸಿತು. ಅವುಗಳಲ್ಲಿ ರೂಪಾಯಿ ೮೦೦೦೦ಗಳು ಹಾಸ್ಪಿಟಲಿನ ಚಾಲಕರ ಜೇಬಿನಲ್ಲಿ ಸೇರಿಕೊಂಡವಂತೆ! ಪೋಲೀಸಖಾತೆಯಲ್ಲಿಯೂ ಇಂಥ ಸರಕಾರ ವಂಚನೆಯ ಅನೇಕ ಉದಾಹರಣೆಗಳನ್ನು ಲೆಕ್ಕಪರಿಶೋಧಕರು ಪತ್ತೆ ಹಚ್ಚಿದರು! ಅಪರಾಧಗಳನ್ನು ಕಂಡ ಹಿಡಿಯುವ ಪೋಲೀಸರೇ ಅಪರಾಧಗಳಿಗೇದಾರಿಮಾಡಿದರೆ ಏನು ಹೇಳುವದು? ಪೈರು ರಕ್ಷಣೆಗಾಗಿ ಕಟ್ಟಿದ ಬೇಲಿಯೇ ಪೈರುಗಳನ್ನು ನುಂಗಿಕೊಂಡು ಅಪಹರಿಸಹತ್ತಿದರೆ, ಯಾರ ಉಪಾಯವಿದೆ? ಇದರಲ್ಲಿ ಬ್ರಿಟಿಶ ರಾಜ್ಯದಲ್ಲಿ ಬಡ ಪ್ರಜೆಗಳ ಕಷ್ಟದಿಂದ ಸಂಪಾದಿಸಿ ರಾಜ್ಯಾರ್ಥ ತೆತ್ತ ಹಣದ ವ್ಯಯವಿದು!

---

೪ ಹೊಸ ಮುದ್ರಣಕೋಶವನ್ನಯ ಪ್ರಜೆಗಳಿಗರ್ಪಿಸಿದ ಜಂಗಲ ಪ್ರದೇಶದಲ್ಲಿ ವ್ಯಾಪಾರ ಜಂಗಲದ ವಿಸ್ತಾರವಿದೆ. ವ್ಯಾಪಾರ ಜಂಗಲಿನೊಳಗಿಂದ ಅಷ್ಟಿಷ್ಟು ಕಟ್ಟಿಗೆಯು ಡಿಪೋಗಳಿಗೆ ಕಟ್ಟಿಗೆ ಪೂರೈಕೆಯಾಗುತ್ತದೆ. ವ್ಯಾಪಾರ ಜಂಗಲು ಪ್ರಜೆಗಳಿಗೆ ವಹಿಸಿಕೊಟ್ಟದ್ದರಿಂದ, ಅದರಿಂದ ಸರಕಾರವು ಯಾವ ಹಾನಿಯಾಗುವದಿಲ್ಲೆಂದು ಯಾವನಾದರೂ ಎಣಿಸಿದರೆ ಅದು ಅಯಥಾರ್ಥವಾಗುವದು. ಅಂಕೋಲಾ ಗೋಕರ್ಣ, ಗಂಗಾವಳಿ ಇವುಗಳ ಡಿಪೋಗಳಿಗೆ ಸರಕಾರವು ಕಳೆದ ವರುಷ ವ್ಯಾಪಾರ ಜಂಗಲುಗಳನ್ನೇ ಕೊಟ್ಟು ೩-೪ ಸಾವಿರ ರೂಪಾಯಿಗಳ ನುಂಚುಕಟ್ಟು ಸರಕಾರವು ಕಂಟ್ರ್ಯಾಕ್ಟರ ರೀತಿಯ ಡಿಪೋ ಕಟ್ಟಿಗೆಯು. ಸರಕಾರ ಮಾತ್ರವಾಗ ವ್ಯಾಪಾರ ಜಂಗಲಿನೊಳಗಿಂದ ಲಾಭ ಪಡೆಯುವಂತೆ ವಿಚಾರ ಮಾಡುವದಿಲ್ಲ. ಅದೊಂದು ತನ್ನ ಹಕ್ಕಿನ ಆಸ್ತಿ ಎಂಬ ದೃಷ್ಟಿಯಿಂದಲೇ ನೋಡುತ್ತದೆ. ಉದಾಹರಣಾರ್ಥವಾಗಿ, ಗೋಕರ್ಣ-ಗಂಗಾವಳಿ ಡಿಪೋಗಳಲ್ಲಿ ಕಟ್ಟಿಗೆ ಪೂರೈಸದ್ದರಿಂದ ಕಲಿಸುವ ಈ ಡಿಪೋಗಳಿಗೆ ಗುಂಡಬಾಳೆಯ ವ್ಯಾಪಾರ ಜಂಗಲಿನಿಂದ ಕಟ್ಟಿಗೆ ಕಡಿಸಬೇಕು. ಸರಕಾರವು ಕಂಟ್ರ್ಯಾಕ್ಟರರಿಗೆ ಹೇಳುವದೇನಂದರೆ—'ಗುಂಡಬಾಳೆಯಲ್ಲಿ ಇಂಥ ಕೂಪ ಇದೆ ಗಂಗಾವಳಿಯಲ್ಲಿ ಇಂಥ ಡಿಪೋ ಇದರಿಂದ ಮಾಡಬೇಕು. ಮನಗಿನ ಕೂಪಿನ ಬಗ್ಗೆ ಕೊಡುತ್ತೀರಿ?' ಹೀಗೆ ಹೆಚ್ಚು ಸವಾಲು ಬಂದವರಿಗೆ ಡಿಪೋ ಒಪ್ಪಿಕೊಟ್ಟರಾಯಿತು. ವ್ಯಾಪಾರ ಜಂಗಲು ಮುದ್ರಣಕೋಶದೊಳಗೆ ಬಾಕೀಯಾಗಿಸಿದಂತೆ, ಪ್ರಜೆಗಳದಾಗಿದ್ದರೆ, ಸರಕಾರವು ಸವಾಲು ಕೇಳುವ ನಮೂನೆಯೇ ಬೇರೆ ಇರಬೇಕಾಗಿತ್ತು. ಅದೇನಂದರೆ—"ಗಂಗಾವಳಿಯಲ್ಲಿ ಡಿಪೋ ಇದೆ ಗುಂಡಬಾಳೆಯಲ್ಲಿ ಜಂಗಲು ಇದೆ, ಜಂಗಲಿನ ಬಗ್ಗೆ ಸರಕಾರಕ್ಕೆ ಬಾಡಿಗೆ ಕೊಡಬೇಕಾಗಿಲ್ಲ ಡಿಪೋದಲ್ಲಿ ಕಟ್ಟಿಗೆ ತಂದು ಯಾವ ದರದಿಂದ ಪೂರೈಸುವಿ" ಎಂದು ಕೇಳಿ ಕಡಿಮೆ ದರ ಹೇಳುವವನಿಗೆ ಡಿಪೋ ವಹಿಸುತ್ತಿದ್ದರೆ, ವ್ಯಾಪಾರ ಜಂಗಲು ಪ್ರಜೆಗಳಿಗೆ ವಹಿಸಿದ್ದರ ಫಾಯಿದೆ. ಇಲ್ಲದಿದ್ದರೆ ಸರಕಾರಿ ಠರಾವು ಹಿಂದು, ಕೃತಿ ಮುಂದು, ಎಂಬ ಅಗಬಾರದಿತ್ತೇ! ಆದರೆ, ನಮ್ಮ ಸರಕಾರವು ಪುನಃ ಪುನಃ ವಚನಭಂಗ ಮಾಡಿ ಪ್ರಜೆಗಳನ್ನು ವಂಚಿಸಬೇಕೆನ್ನುತ್ತಿದ್ದಾಗ ಇದೆಂಥ ದೊಡ್ಡ ಮಾತು? ಕದ ತಿನ್ನುವವನಿಗೆ ಪಪ್ಪಳ ಈಡೇ!

---

೫ ಶ್ರೀ ಗೋಕರ್ಣ ಕ್ಷೇತ್ರದಲ್ಲಿ ಕೊಲೆ ಪ್ರಕರಣದ ದಪ್ತರವು ನಾಗಮಂದಿಗೆಯ ಮೇಲಿಂದ ಕೆಳಗಿಳಿದ ಭಾಸವಾಗಿದೆ. ಆತ್ಮಹತ್ಯೆಯ ಸಿದ್ಧಾಂತದ ಪೋಲೀಸ ಅಧಿಕಾರಿಗಳೇ ಚೌಕಶಿಯನ್ನು ಮಾಡುತ್ತಿರುವರು. ಈ ಪೋಲೀಸ ಅಧಿಕಾರಿಗಳಿಂದ ಕೊಲೆಯು ಪತ್ತೆಯಾಗುವದೆಂದು ನಮಗೆ ತಿಳಿದಷ್ಟರ ಮಟ್ಟಿಗೆ ತೋರುವದಿಲ್ಲ. ಈಗಿನ ಪೋಲೀಸರೂ, ಪೋಲೀಸ ಅಧಿಕಾರಿಗಳೂ ತಮ್ಮ ವರ್ತನದಿಂದ ಈ ಚಳವಳಿಯನ್ನು ನಡಿಸಲು ಅಪಾತ್ರರಿರುವರೆಂದು ನಾವು ಹೇಳುವದು ನಿರಾಧಾರವಾಗುವದೇನು? ಕಾಲ ಕಳೆದರೆ, ಈಗ ಇರುವ ಪುರಾವೆಯೂ ನಶಿಸಿ ಅದೃಶ್ಯವಾಗುವ ಸಂಭವವಿದೆ. ಕಾರಣ ಮೇಲಧಿಕಾರಿಗಳು ಮೊದಲು ಚೌಕಶಿ ಮಾಡುವ ಪೋಲೀಸರನ್ನು ಕೂಡಲೆ ಸ್ಥಳಾಂತರ ಮಾಡಿ, ಗುಪ್ತ ಪೋಲೀಸರನ್ನು ಬರಮಾಡಿಕೊಂಡು, ಹೊಸ ಪೋಲೀಸರ ಸಹಾಯದಿಂದ ಹೊಸ ಧೋರಣದಿಂದ ಚೌಕಶಿ ನಡಿಸಿದರೆ ಮಾತ್ರ ಪತ್ತೆಯಾಗುವದು. ಹೆಚ್ಚಿಗೆ ನಾವೇನು ಹೇಳಬೇಕು?

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರದಲ್ಲಿ ಜೋರಿನ ಮಳೆ. ಒಕ್ಕಲಿಗರು ಹೊಲಗಳಲ್ಲಿ ತೊಡಗಿರುವರು. ಮಸವೆ ಮೀನುಗಳ ಗದ್ದಲ. ಈ ವಾರದಲ್ಲಿ ೧೧-೪೪ ಇಂಚು ಮಳೆ ಬಿತ್ತು. ನಿನ್ನೆ ಮಂಗಳವಾರ ಮಳೆ. ನಿನ್ನೆಗೆ ೪-೮೭ ಇಂಚು ಮಳೆ.

ಮೂರೂರ ಶ್ರೀ ರಾಮ ಶಂಕ್ರಪ್ಪ ಕೇಶವ ಹೆಗಡೆಯವರ ಮನೆಯಲ್ಲಿ ಬಲು ದೊಡ್ಡ ಕಳವು. ರೋಖ ೪೦೦೦ ರೂಪಾಯಿ ಸುಮಾರು ೪೦೦೦ ರೂಪಾಯಿಗಳ ಬೆಲೆಭರಣಗಳು ಕಳುವಾಗಿವೆ. ಕನ್ನ ತೆಗೆದು ಕಳುವು. ನಮ್ಮ ಫೌಜದಾರ ಮಿ| ಕರಂದೀಕರ ತಪಾಸು ನಡೆಸಿದೆ. ಕಳುವಿನ ಪತ್ತೆಯಾಗಿ ಕಳುವಿನ ಮಾಲು ಸಿಕ್ಕಿದರೆ ರಾಮ ಕೇಶವ ಹೆಗಡೆರ ಪುಣ್ಯ!

ಮೊಬೈಲ ಖಟ್ಲೆಯು ಕಳೆದ ವಾರದಲ್ಲಿ ನಡೆಯಿತು. ಆರೋಪಿ ಕಡೆಯಿಂದ ರಾಮಸ್ವಾಮಿ ಕೆ ಲಕ್ಷಣ— ಹಿಂದಿ ದಿನಗಳವರ. ಕೆಲಸ ನಡಿಸುತ್ತಿರುವರು. ಮೊದಲಿನ ಸಾಕ್ಷಿಗಾರರಿಗೆ ಆರೋಪಿ ಕಡೆಯಿಂದ ಉತ್ತ ಸವಾಲುಗಳಾದವು. ಪಂಚನಾಮೆ, ಕಳುವಿನ ವಸ್ತುಗಳು, ಆ ದಿನದ ಹಕೀಕತ್ತು ಇತ್ಯಾದಿ ವಿಷಯಗಳ ಬಗ್ಗೆ ವಕೀಲರ ಸವಾಲಗಳಾದವು. ಸಾಕ್ಷಿದಾರರು ಮರೆಮಾಚದೆ ನಡೆದ ಹಕೀಕತನ್ನು ಯಥಾರ್ಥವಾಗಿ ಹೇಳಿದರು. ತಾರೀಖು ೩ನೇ ಬುಧವಾರಕ್ಕೆ ಪುನಃ ಖಟ್ಲೆಯ ವಿಚಾರ ನಡೆಯುವದು.

ಇಲ್ಲಿಯ ಅಡಿಕೆ ಮಾರಾಟದ ಸಹಕಾರಿ ಸಂಘದ ವಾರ್ಷಿಕ ಸಾಧಾರಣ ಸಭೆಯು ತಾ. ೨೭-೫-೩೪ನೇಗೆ ಸೇರಿ, ಕಳೆದ ವರ್ಷದ ರಿಪೋರ್ಟಿನ ಮಂಜೂರಿ, ಮುಂದಿನ ವರ್ಷದ ಮೆನೇಜಿಂಗ ಕಮೀಟಿಯ ನೇಮಣೂಕಿ, ಪೋಟ ನಿಯಮಗಳ ದುರುಸ್ತಿ ವಗೈರೆ ಠರಾವುಗಳು ಮಂಜೂರಾದವು. ೯ ನೇ ಠರಾವು ಮಹತ್ವದ್ದಿದೆ. ಅದೇನಂದರೆ:— ಮೂರೂರ, ಅಳವಳ್ಳಿ, ಕಲ್ಲಬ್ಬೆ, ನೀಲಕೋಡ ಈ ಗ್ರಾಮಗಳಿಂದ ಅಡಿಕೆಯು, ಅಡಿಕೆ ಮಾರಾಟದ ಸಂಘಕ್ಕೆ ಒದಗುವಂತೆ ಮುಖ್ಯ ಸದಸ್ಯರಿಗೆ ಅಡಿಕೆಯನ್ನು ಆಕರ್ಷಕ ರೀತಿಯಿಂದ ಹೆಚ್ಚು ಬೆಳೆಸಲಿಕ್ಕೆ ಅನುಕೂಲವಾಗುವಂತೆ, ಯೋಗ್ಯ ಗಾಡಿ ರಸ್ತೆಗಳು ಆಗುವಂತೆ ಪ್ರಯತ್ನ ಮಾಡುವ ಬಗ್ಗೆ ಇತರಂತೆ ಹೊನ್ನಾವರ ತಾಲೂಕು ಸಾಲಕೋಡ ಗ್ರಾಮದ ಹಳ್ಳಕ್ಕೆ ಗಾಡಿ ತಿರುಗಾಡುವ ಪೂಲ ಕಟ್ಟುವಂತೆ ಕಟವಿ ಮಾಡುವರೆ ಸಹ ಮೆನೇಜಿಂಗ ಕಮೀಟಿಯವರು ಮೆ| ರಿಜಿಸ್ಟ್ರಾರ ಸಾಹೇಬ ಬಹಾದ್ದೂರರ ಮುಖಾಂತರ ಡಿಸ್ಟ್ರಿಕ್ಟ ಲೋಕಲ್ ಬೋರ್ಡಿಗೆ ಪತ್ರವ್ಯವಹಾರ ನಡಿಸಿ, ಆದಷ್ಟು ಬೇಗನೆ ಈ ಕೊರತೆಯನ್ನು ದೂರ ಮಾಡಿಸುವದಕ್ಕಾಗಿ ಖಟಪಟ ಮಾಡುವರೆ ಮೆನೇಜಿಂಗ ಕಮೀಟಿಯವರಿಗೆ ಈ ಸಭೆಯು ಅಧಿಕಾರ ಕೊಡುತ್ತದೆ.

ಶಿರಸಿ— ಸೆಶನ್ ಕೋರ್ಟು ಬರಖಾಸ್ತ ಆಗಿ, ಸ್ಪೆಶಲ ಕೋರ್ಟ ಸುರುವಾಗಿರುವದು. ಅದು ಬುಧವಾರ ದಿವಸ ಸುರುವಾಗಲಿಕ್ಕೆ ಮುಳ ಸುರುವಾಗಬೇಕಾಗಿದೆ.

ಜಾತ್ರೆಯ ಕಾಲಕ್ಕೆ ಬಂದಿದ್ದ ಹಾವೇರಿಯ ಗುರುಸಿದ್ಧ ಸಂಗೀತ ನಾಟಕ ಮಂಡಳಿಯ ಮುಕ್ಕಾಂ ಮುಗಿಯಿತು. ಅವರು ಒಂದು ಆಟದ ಉತ್ಪನ್ನವನ್ನು ಕ್ಷಯರೋಗ ನಿವಾರಣ ಫಂಡಿಗೆ ಕೊಟ್ಟಿರುವರು.

ಮೈಸೂರ ಕಡೆಯ ಒಬ್ಬ ಕೀರ್ತನಕಾರರ ಮೂರು ಕೀರ್ತನಗಳಾದವು. ಪೌರಾಣಿಕ ಕಥೆಗಳನ್ನು ವ್ಯವಹಾರಕ್ಕೆ ಹೋಲಿಸಿ ತತ್ವವನ್ನು ಜನರ ಮನಸ್ಸಿನಮೇಲೆ ಸರಿಯಾಗಿ ಬಿಂಬಿಸುವ ಇವರ ರೀತಿಯು ಪ್ರಶಂಸನೀಯವಾಗಿತ್ತು. ಇವರ ಕೀರ್ತನಗಳಲ್ಲಿ ಭಕ್ತಿ, ಅನುಭವ, ಚಾತುರ್ಯ, ಹಾಸ್ಯ, ಸ್ವಾಭಿಮಾನ ಮೊದಲಾದವು ತುಂಬಿ ತುಳುಕುತ್ತಿರುವದರಿಂದ ಎಲ್ಲ ವರ್ಗದ ಜನರೂ ಗುಂಪು ಗುಂಪಾಗಿ ಬಂದು, ಏಕಚಿತ್ತದಿಂದ ಕೇಳಿ ಆನಂದಪಡುತ್ತಿದ್ದರು. ಶ್ರೀ ಮಾರಿ ದೇವಸ್ಥಾನದ ಪೊತ್ತೇದಾರರು ಇಷ್ಟು ವರ್ಷಗಳ ವರೆಗೆ ನಡೆಯುತ್ತಬಂದಿರುವ ನೀರಸವಾದ ಕೀರ್ತನ-ಕಥೆಗಳಿಗೇ 'ಪಸ್ಸನೋಟ' ಹಾಕಿದರು. ಈ ವರ್ಷದ ನವರಾತ್ರಿಯಲ್ಲಿಯೂ ಇಂಥ ಹರಿದಾಸರನ್ನು ಕರಿಸಿದ್ದರೆ ಉತ್ಸವಕ್ಕೂ ಶೋಭೆ ಇಲ್ಲವೇ, ಬರುವರಿಗೂ ಇಷ್ಟವಲ್ಲವೇ?

ಸಿದ್ದಾಪುರ— ಕುಂಬಾರಕುಳಿ ಖೂನಿ ಪ್ರಕರಣದಲ್ಲಿ ಸೆಶನ್ಸ ಜಡ್ಜರು ಆರೋಪಿಗಳನ್ನು ಅಪರಾಧಿಗಳೆಂದು ಠರಾಯಿಸಿರುವರು. ಇಲ್ಲಿಯ ೧ನೇ ವರ್ಗದ ಮೆಜಿಸ್ಟ್ರೇಟರಾಗಿ ಈ ಪ್ರಕರಣದ ಪೂರ್ವ ಚೌಕಶಿ ನಡಿಸಿದ ಮಿ|| ಕುಳಕರ್ಣಿಯವರಿಗೆ ಚೀಫ ಸರ್ಟಿಫಿಕೇಟು ಸಿಕ್ಕಿದೆ. ಭಯಂಕರವಾಗುವ ಖೂನಿ ಪ್ರಕರಣದ ಆರೋಪಿಯನ್ನು ಮೆಜಿಸ್ಟ್ರೇಟರು ಜಾಮೀನಿನ ಮೇಲೆ ಬಿಟ್ಟದ್ದು ಅನುಚಿತವಾಯಿತು. ಜಾಮೀನಿನ ಮೇಲೆ ಬಿಡಬೇಕಾದರೆ, ಪೋಲೀಸರು ಆರೋಪಿಯ ಯಾವ ಅರೋಪದ ಪತ್ರಿಕೆಯನ್ನು ಸಹ ಸಾದರಪಡಿಸಿದ್ದಿಲ್ಲವಂತೆ! ಡಿಸ್ಟ್ರಿಕ್ಟ ಮೆಜಿಸ್ಟ್ರೇಟರಿಗೆ ಈ ವಿಷಯ ಚೌಕಶಿ ಮಾಡಲಿಕ್ಕೆ ಅಪ್ಪಣೆಯಾಗಿದೆ. ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಪ್ರಕರಣದ ಮಹತ್ವವನ್ನರಿತು, ಆರೋಪಿಯನ್ನು ಜಾಮೀನಿನಮೇಲೆ ಬಿಡಲು ಅಂತರಂಗ ಕಾರಣಗಳೇನಾದರೂ ಇದ್ದಲ್ಲಿ, ಅವುಗಳ ಚೌಕಶಿಯನ್ನು ಸ್ವತಃ ನಡಿಸಿ, ಈ ಮುಂದೆ ಇಂಥ ಅಪಕೃತ್ಯಗಳು ಘಟಿಸದಂತೆ ಉಪಾಯಯೋಜನೆ ಮಾಡಬೇಕಾಗಿ ಒಬ್ಬರು ಸೂಚಿಸುತ್ತಾರೆ.

ಇಲ್ಲಿಯ ಪೋಜದಾರಿ ಖಟ್ಲೆಯ ವಿಚಾರವು ಶಿರಸಿ ಮುಕ್ಕಾಮಿನಲ್ಲಿ ಸೆಶನ್ಸ ಕೋರ್ಟಿನಲ್ಲಿ ನಡೆದು ತಾ. ೨೮-೫-೧೯೩೪ನೇಗೆ ಆರೋಪಿಗಳು ದೋಷಮುಕ್ತರಾಗಿರುವರು.

— ಜಪಾನದ ಹೊಕೊಡೇಟ ಹಾಗು ಹಿನೋಸಾಕಿ ಪಟ್ಟಣದಲ್ಲಿ ಬೆಂಕಿ ಬಿದ್ದು ೨೩೮ ಮಂದಿಗಳು ಮಡಿದರು. ಸುಮಾರು ೧೮ ಲಕ್ಷ ರೂಪಾಯಿಗಳಷ್ಟು ಉಗ್ರದ ಲುಕ್ಸಾನಾಗಿದೆ. ಇದರ ಹೊರ್ತು ಹೇರಳ ಮನೆ ಮಾರು ಸುಟ್ಟಿರುವದು.

ಕೈರಾಟೆಯ ಪ್ರಸಾರ.

ಇಲ್ಲಿವರೆಗೆ ೧೪,೩೩೫ ಮಂದಿಗಳು ರಾಷ್ಟ್ರೀಯ ಸಭೆಯ ಸಭಾಸದರಾಗಿರುವರು. ಅವರಲ್ಲಿ ೫,೫೮೪ ಮಂದಿಗಳು ಸ್ವತಃ ನೂಲುತ್ತಿರುವರು. ಕರ್ನಾಟಕದಲ್ಲಿ ೭೩೦ ಮಂದಿ ಸಭಾಸದರು. ೩೭೭ ಸ್ವತಃ ನೂಲುವವರು.

ನೌಖಾಲಿ ಜಿಲ್ಲೆಯ ೯ ಮುಪ್ಪಿನ ಮುದುಕ ಬಿಕ್ಕೆ ಬೇಡಿ ಹೊಟ್ಟೆ ಹೊರೆಕೊಳ್ಳುತ್ತಿದ್ದ ಇಬ್ಬ ವೇಶ್ಯರು ಈಗ ಕೈರಾಟೆಯಮೇಲೆ ನೂತು ಹೊಟ್ಟೆ ಹೊರೆಕೊಳ್ಳುತ್ತಿರುವರು.

ಬೌರಿಂಗ ಪೇಟೆಯಲ್ಲಿ ಕೆಲ ಯುವಕರು ರಾಮನಾಮ ಸಂಕೀರ್ತನ ಮಾಡುತ್ತ ಕಳೆದ ರಾಮನವಮಿಯಿಂದ ಏಳು ದಿನಗಳ ವರೆಗೆ ಕೈರಾಟೆಯ ಮೇಲೆ ನೂತು, ಆಗ ನೂತ ನೂಲನ್ನು ಮಹಾತ್ಮರಿಗೆ ಕಳಿಸಿದರು. ಇದನ್ನು ಎಲ್ಲರೂ ಅನುಕರಿಸಬೇಕೆಂದು ಮಹಾತ್ಮರ ಅಪ್ಪಣೆ.

ಒಮ್ಮೆ ಮಹಾತ್ಮರಿಗೆ ಢಾಕಾ ಪಟ್ಟಣದಲ್ಲಿ ಕೆಲ ಗಾಯನ ಪಾತ್ರರು ಸಕಾರ ಗಾಯನದಿಂದ ಸ್ವಾಗತ ಮಾಡಬಯಸಿದರು. ಆ ದಿನ ಸೋಮವಾರ, ಮಹಾತ್ಮರ ಮೌನವ್ರತದ ದಿನ. ಗಾಯನಕ್ಕೆ ಕಾಲಾವಕಾಶ ಕಡಿಮೆ. ಮಹಾತ್ಮರು ಮನಸ್ಸು ಒಪ್ಪಲಿಲ್ಲ. ಗಾಯನ ಮಂಡಲಿಗೆ ಅಸಮಾಧಾನವೆನಿಸುವದೂ ಅವರಿಗೆ ಸರಿಬೋರಲಿಲ್ಲ. "ನೀವು ಸಕಾರ ಗಾಯನ ಮಾಡಿರಿ, ನಾನು ನೂಲುತ್ತ ನಿಮ್ಮ ಗಾಯನ ಕೇಳತೇನೆ!" ಎಂದರಂತೆ! ಮಹಾತ್ಮರ ಕೈರಾಟೆಯು ಪ್ರಾರಂಭವಾಯಿತು. ಅದರಿಂದ ಅತ್ತ ಗಾಯನ ನಡೆಯಿತು; ಇತ್ತ ನೂಲು ತೆಗೆಯಲಾಯಿತು, ಮಹಾತ್ಮರ ಮೌನವ್ರತಕ್ಕೆ ಭಂಗ ಬರಲಿಲ್ಲ. ಏಕೆ ಅಂದರೆ, ಆ ದಿನ ಮಹಾತ್ಮರ ಕೈಯು ಸ್ಥಿರವಾಗಿ ಸಾಗಿ ನೂಲು ತೆಗೆಯುತ್ತಿರಲು, ಮನಸ್ಸಂತೋಷಕ್ಕಾಗಲಿ ಪರಮಾತ್ಮನೊಡನೆ ಏಕಾಗ್ರಚಿತ್ತ ಮಾಡಲಿಕ್ಕಾಗಲಿ ಪ್ರತಿಬಂಧವಾಗಲಿಲ್ಲವಂತೆ!

ಕಾಮಿಲಾ ಪಟ್ಟಣದಲ್ಲಿ ಮಹಾತ್ಮರಿಗೆ ಒಂದು ಕೈರಾಟೆ ತೋರಿಸಲಾಯಿತು! ಅದರ ಪ್ರಾಯ ಸುಮಾರು ೧೦೦ ವರುಷ. ಈಗಲೂ ಆ ಕೈರಾಟೆಯು ಸರಿಯಾಗಿ ನಡೆಯುತ್ತದೆ. ಅದರ ಮೇಲೆ ಈಗ ನೂಲುವ ಹೆಂಗಸಿನ ಪ್ರಾಯ ೫೮ ವರುಷ. ಇವಳು ೧೪ ವರುಷಕ್ಕೆ ವಿಧವೆಯಾದಳು. ಅಂದಿನಿಂದ ಇದನ್ನು ಅವಳು ಆಶ್ರಯಿಸಿರುವಳು. ಮೊದಲು ಇವಳ ಅತ್ತೆಯು ಕೈರಾಟೆ ನೂಲುತ್ತಿದ್ದಳು. ಅತ್ತೆಯು ಇದನ್ನು ಇವಳ ಕೈಯಿಗೆ ಕೊಟ್ಟಳು. ಇವಳು ಇದರ ಮೇಲಿನ ನೂಲಿನಿಂದಲೇ ತನಗೂ, ಮನೆಯವರಿಗೂ ಅವಶ್ಯವುಳ್ಳ ಅರಿವೆಗಳನ್ನು ನೇಯ್ದು ಕೊಳ್ಳುತ್ತಿರುವಳಂತೆ! ಇನ್ನೂ ವರೆಗೆ ಅವಳು ಪರರ ನೂಲಿನಿಂದ ನೇಯ್ದ ಅರಿವೆಯನ್ನು ಹೊದ್ದುಕೊಂಡಿಲ್ಲವಂತೆ!

ರೇವಾ ಸಂಸ್ಥಾನದ ರಾಜಪುತ್ರನು ಕಿರಿದಾಗಿದ್ದ ರಾಜಪುತ್ರಿಯ ಪಾಣಿಗ್ರಹಣ ಮಾಡಿದನು. ಕಿರಿದಾಗಿದ್ದ ಸ್ಥಾನಾಧಿಪರು ಲಗ್ನ ಖರ್ಚನ್ನು ಪಡೆಯಲ ಪಾಡು ಕಷ್ಟಕ್ಕಾಗಿ ಪ್ರಜೆಗಳ ಮೇಲೆ ಕರಪಟ್ಟಿಯನ್ನು ಹೇರಿರುವರು. ಕಳೆಗ ೯ ರೂಪಾಯಿ ಕರಪಟ್ಟಿ ಕೊಡಲಿಕ್ಕೆ ಶಕ್ತಿ ಇಲ್ಲದಿದ್ದವರು ಸಂಸ್ಥಾನಬಿಟ್ಟು ಹೊರಹೋಗಬೇಕಂತೆ! 'ಮದುವೆ ಸಾಯುಕಪ್ಪ ಸಾಕು!' ಕರಪಟ್ಟಿಯ ಕಾಟವೂ ಸಾಕು!

ಮಹಾತ್ಮರ ನಿತ್ಯಾಚರಣೆ.

ಮಹಾತ್ಮರು ಕೇವಲ ಶಾಕಾಹಾರಿಗಳಾಗಿರುವರು. ದಿವಸದಲ್ಲಿ (ಅದು ಸೂರ್ಯಾಸ್ತಕ್ಕೆ ಮೊದಲು) ಮೂರಾವರ್ತಿ ಊಟ ಮಾಡುತ್ತಿರುವರು. ಪ್ರತಿ ಸಾರೆಯೂ ಮೂರೇ ಪದಾರ್ಥಗಳಿಗಿಂತ ಹೆಚ್ಚಾಗಿ ಯಾವ ತಿಂಡಿಯೂ ಅದರಲ್ಲಿ ಸೇರಿರ ಕೂಡದು. ಸದ್ಯಕ್ಕಂತೂ ಹಣ್ಣು ಹಂಪಲಗಳೇ ಅವರ ಮುಖ್ಯಾಹಾರವಾಗಿದೆ.

ಮಹಾತ್ಮಾಜಿಯವರು ಪ್ರತಿ ಸೋಮವಾರ ಮೌನವ್ರತವನ್ನಾಚರಿಸುತ್ತಿರುವರು. ಇದರಿಂದ ಬಹುಭಾರವಾದರೂ ಬೆಳಗಿನಿಂದ ೬ ತಾಸು ಮೌನವ್ರತ ಕ್ರಿಯೆಯಿಂದಲೇ ಇರುವರು. ತಮ್ಮ ಉತ್ಸಾಹ ಶಕ್ತಿಯನ್ನು ಉಳಿಸಿಕೊಳ್ಳಲಿಕ್ಕೆ ಅವರು ಈ ವ್ರತವನ್ನು ಪಾಲಿಸುತ್ತಿರುವರಂತೆ. ಸೋಮವಾರ ಇಡೀ ದಿವಸದಲ್ಲಿ ತಮ್ಮ ಪತ್ರವ್ಯವಹಾರಕ್ಕೆ ಬೇಕಾದವುಗಳನ್ನು ಬರೆಯುವದರಲ್ಲಿ ಕಾಲಕಳೆಯುವರು. ಇದರ ಮೇಲಿಂದ ಇವೆರಡೂ ದಿವಸ ಅವರು ಉಪೋಷಣೆ ಮಾಡುತ್ತಾರೆಂದು ತಿಳಿಯಬಾರದು. ಎಲ್ಲ ವ್ಯವಹಾರಗಳೂ ತಮ್ಮ ಸೂತ್ರಗಳಿಂದಾಗಲೀ ಬರೆದು ತಿಳಿಸುವದರಿಂದಾಗಲೀ ಸಾಗಿಸಲ್ಪಡುವವು.

ಗಾಂಧಿಯವರಿಗೆ ಗಡಿಯಾರ, ಗಳಾಟೆಯೂ ಎಳ್ಳಷ್ಟು ಸರಿಬೀಳುವದಿಲ್ಲ. ಚಿಕ್ಕ ಮಕ್ಕಳೊಡನೆ ಸರಸ ವಿನೋದಗಳನ್ನಾಡುವದರಲ್ಲಿ ಅವರಿಗೆ ಬಲು ಆಸಕ್ತಿ. ತಮಗೆ ಅರ್ಪಿಸಿದ ಹೂವಿನ ಹಾರಗಳನ್ನು ಅಲ್ಲಿಯೇ ಹಾಜರಿದ್ದ ಕುಮಾರಿಯ ಕೊರಳಿಗೆ ಅವರು ಅತ್ಯಂತ ಆನಂದದಿಂದ ಹಾಕುವರು. ಒಂದು ಸಾರೆ ಅವರ ದೃಷ್ಟಿ ಮೊನ್ನೆ ಒಂದು ಸಭೆಯಲ್ಲಿ ಕೋಮಲೆಯರಾದ ಬಾಲಿಕೆಯರ ಮೇಲೆ ಬಿದ್ದಿತು; ಅಯ್ಯೋ, ಇಲ್ಲಿ ನನ್ನ ಪ್ರೇಮಪಾತ್ರರಾದ ಕೋಮಲೆಯರು ಇದ್ದಾರಲ್ಲ! ಈ ಹೂಮಾಲೆಗಳನ್ನೆಲ್ಲ ಯಾರಿಗೆ ಅರ್ಪಿಸಲಿ, ಎಂದು ಉದ್ಗರಿಸಿದರಂತೆ. — ಕನ್ನಡಿಗ.

ವೃತ್ತಸಾರ.

— ಬಂಗಾಲದಲ್ಲಿ ಹೊಸದೊಂದು ರೋಗ ಬಂದಿದೆ. ಮಾನವರು ಇದ್ದಲ್ಲಿಯೇ ಸಹಜವಾಗಿ ಸಾಯುತ್ತಾರೆ. ಈ ಬೇನೆಯಿಂದ ಸುಮಾರು ೧ ಕೋಟಿ ಜನರು ಬಳಲುತ್ತಿರುವರು.

— ಗ್ರಂಥ ಹೊರಡಿಸಿದ ಶ್ರೀ ನಿವಾಸರಾವ ಅವರಿಗೆ ಬೆಳಗಾವಿಯ ಸಾಹಿತ್ಯ ಸಮ್ಮೇಲನದಲ್ಲಿ ಸುವರ್ಣ ಪದಕವೊಂದು ಪಾರಿತೋಷಿಕವು ದೊರೆಯಿತು.

— ಮದ್ರಾಸ ಪ್ರಾಂತದಲ್ಲಿ ಸ್ವರಾಜ್ಯ ಪಕ್ಷದ ಪ್ರಚಾರವು ರಭಸದಿಂದ ನಡೆದಿದೆ. ಕ್ರೀಯುತ ಶ್ರೀನಿವಾಸ ಅಯ್ಯಂಗಾರರು ಪಶ್ಚಿಮ ದಂಡೆಯಲ್ಲಿ ಪ್ರವಾಸ ಬೆಳಸಿ ಅಲ್ಲಲ್ಲಿ ಸ್ವರಾಜ್ಯ ಪಕ್ಷದ ಸಂಸ್ಥೆಗಳನ್ನು ಸ್ಥಾಪಿಸುತ್ತಿರುವರು. ಶ್ರೀ ರಂಗಸ್ವಾಮಿ ಅಯ್ಯಂಗಾರರು ತಂಜಾವೂರ, ತ್ರಿಚನಾಪಳ್ಳಿ ಜಿಲ್ಲೆಗಳಲ್ಲಿ ಇದೇ ಕೆಲಸಕ್ಕಾಗಿ ವ್ಯಾಖ್ಯಾನ ಕೊಡುತ್ತ ತಿರುಗುತ್ತಿರುವರು. ಮತ್ತು ಮುಂದಿನ ಕೌನ್ಸಿಲು ಚುನಾವಣೆಯಲ್ಲಿ ಸ್ವರಾಜ್ಯ ಪಕ್ಷದ ಉಮೇದ್ವಾರರನ್ನೇ ಆರಿಸಿಕೊಳ್ಳಬೇಕೆಂದು ಜನರಿಗೆ ಉಪದೇಶಿಸುತ್ತಿರುವರು. ಖಾದಿಯ ಪ್ರಚಾರವನ್ನು ಜೋರಿನಿಂದ ನಡಿಸಲು ಅವಶ್ಯವಿರುವದರಿಂದ ಕಾಂಗ್ರೆಸ ಮುಂಬರರನ್ನೇ ಸ್ಥಾನಿಕ ಸಂಸ್ಥೆಗಳಿಗೆ ಆರಿಸಿಕೊಳ್ಳುವದರಿಂದ ಈ ಕಾರ್ಯವನ್ನು ನೆರವೇರಿಸಿಕೊಳ್ಳಬೇಕೆಂದೂ ಬೋಧಿಸುತ್ತಿರುವರು.

— ಬೆಳಗಾವಿಯ ಗೋವರ್ಧನ ಸಂಸ್ಥೆಯವರು ಊರವರಿಗೆ ಚೊಕ್ಕ ಹಾಲನ್ನು ಪೂರೈಸುವರು, ಹಿತವರ ಕೆಲವರಿಗೆ ಉಚಿತವಾಗಿ ಹಾಲನ್ನು ಕೊಡುವ ಏರ್ಪಾಡು ಮಾಡಿರುವರು.

— ಛಪ್ರಾ ಜಿಲ್ಲೆಯಲ್ಲಿ ಮ್ಹಾದೇಶ್ವರ ಎಂಬದೊಂದು ಗ್ರಾಮವಿದೆ. ಅಲ್ಲಿ ಶ್ರೀ ಸಭಾಪತಿ ಅಮೀನ ಎಂಬ ಬಿಲ್ಲಿ ಯರ್ದಂಡ ಗೃಹಸ್ಥರಿರುವರು. ಅಸಹಯೋಗಿಗಳಿರುವರು; ತಮ್ಮ ಗ್ರಾಮದಲ್ಲಿಯೂ ಸುತ್ತಮುತ್ತಲಿಯೂ ಖಾದಿ ಪ್ರಸಾರದ ಕಾರ್ಯವನ್ನು ನಿಷ್ಠೆಯಿಂದ ನಡೆಸುತ್ತಿರುವರು. ಸದ್ಯಕ್ಕೆ ಅವರ ಸಹೋದರನ ಮಗಳ ಮದುವೆಯಾಯಿತು. ಮದುಮಗಳು ಸ್ವತಃ ನೂತ ನೂಲಿನ ವಸ್ತ್ರಗಳನ್ನು ನೇಯಿಸಿ, ಮದುವೆ ಸಮಯ ಮದುಮಗನಿಗೆ ಆ ಅರಿವೆಗಳನ್ನು ಉಡುಗರೆ ಅರ್ಪಿಸಿದಳಂತೆ!

— ಸಂಸ್ಥಾನದೊಳಗಿನ ಸರಕಾರಿ ದೇವಾಲಯಗಳಲ್ಲಿ ಪಶುಹತ್ಯೆ ಮಾಡಬಾರದೆಂದು ಹುಕುಮು ಹೊರಡಿಸಿರುವರು.

— ಕೃಷ್ಣಾನದಿಗೆ ವಿಪರೀತ ನೆರೆಬಂದು ನೆರೆಗುಂಟೂರ ಪ್ರದೇಶದಲ್ಲಿ ಹೇರಳ ನಷ್ಟ. ಸುಮಾರು ೫೦೦೦ ಜನಗಳು ನಿರ್ಗತಿಕರಾದರು.

— ತ್ರಿಚನಾಪಳ್ಳಿಯ ಕರೂರ ಪಟ್ಟಣದಲ್ಲಿ ಬೆಂಕಿ ಬಿದ್ದು ೧೫ ಮನೆಗಳು ಸುಟ್ಟು ಹೋದವು.

— ರಂಗೂನದಿಂದ ಚಿತಗಾಂಗಕ್ಕೆ ಅಕ್ಕಿ ಚೀಲಗಳನ್ನು ಹೇರಿಕೊಂಡು ಹೋಗುತ್ತಿರುವ ಹಡಗವೊಂದು ಬಿರುಗಾಳಿಯ ಮೂಲಕ ಜಲಸಮಾಧಿ ಹೊಂದಿತು. ಹಡಗದ ಮೇಲೆ ೧೦೦೮೦ ಅಕ್ಕಿಯ ಚೀಲಗಳಿದ್ದವಂತೆ.

— ಮುಂಬಯಿಯಿಂದ ಜಪಾನದ ಕಡೆಗೆ ಹತ್ತಿಯ ಗಂಟು ಹೇರಿಕೊಂಡು ಹೋಗುತ್ತಿದ್ದ ಹಡಗವು ಹಾದಿಯಲ್ಲಿ ಬೆಂಕಿ ಹತ್ತಿ ೧೧ ಸಾವಿರ ಗಂಟುಗಳು ಸುಟ್ಟು ಹೋದವು.

— ಸಿಂಧಿಯಾ ಸಂಸ್ಥಾನಾಧಿಪತಿಗಳಾದ ಮಹಾರಾಜರು ಪ್ಯಾರೀಸ ಪಟ್ಟಣದಲ್ಲಿ ಬೇನೆಯಿಂದ ನರಳುತ್ತಿರುವರು.

— ಪಂಜಾಬ ಹಿಂದೂ ಸಭೆಯ ಅಧಿವೇಶನವು ಅಮೃತಸರದಲ್ಲಿ ಲಾಲಾ ಲಜಪತರಾಯರ ಅಧ್ಯಕ್ಷತೆಯಲ್ಲಿ ಸದ್ಯಕ್ಕೆ ನೆರವೇರಿತು.

— ಮುಂಬಯಿಯ ಗಾಂವದೇವಿಯಲ್ಲಿ ನಮ್ಮ ಕಾನಡಾ ಜಿಲ್ಲೆಯ ಸಾರಸ್ವತ ಬಾಂಧವರು ತಾ. ೨೪-೫-೧೯೨೫ನೇಗೆ ಸಭೆಸೇರಿ, ಶ್ರೀ॥ ರಾ॥ ರಾ॥ ಯಜ್ಞಮೂರ್ತಿ ವೆಂಕಟ್ರಾಯರ ನಿಧನದ ಕುರಿತು ಶೋಕಪ್ರದರ್ಶನ ಮಾಡಿದರು. ರಾ॥ ಬಿ. ಎಚ್. ನಾಡಕರ್ಣಿಯವರು ಅಧ್ಯಕ್ಷಸ್ಥಾನವನ್ನು ಭೂಷಿಸಿದ್ದರು. ರಾ॥ ಉದ್ಯಾವರರವರು ದಿವಂಗತರ ಕಾರ್ಯವನ್ನು ಸ್ಥಾಪಿಸಿ ವ್ಯಾಪಾರ ಸ್ಮೃತಿಯನ್ನು ಶಾಶ್ವತವಾಗಿ ಕಾಪಾಡಬೇಕೆಂದು ಸೂಚಿಸಿದರು.

ಸನ್ ೧೯೨೫ನೆ ಮೇ ತಿಂಗಳ ೧೬-೧೭ ಮತ್ತು ೧೮ನೇ ತಾರೀಖುಗಳಲ್ಲಿ ಬೆಳಗಾಂವಿಯಲ್ಲಿ ಸೇರಿದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಸಾಧಾರಣ ಅಧಿವೇಶನದಲ್ಲಿ ನಿರ್ಣಯವಾದ ಠರಾವುಗಳು—

ಸದಸ್ಯರ ಸಂಖ್ಯೆ ೩೯

ಗೊತ್ತುವಳಿಗಳು.

(೧) ತಾ. ೧-೧೦-೧೯೨೪ರಿಂದ ತಾ. ೩೦-೯-೧೯೨೫ ವರೆಗಿನ ಜಮಾಖರ್ಚಿನ ಪಟ್ಟಿಯನ್ನು, ಲೆಕ್ಕ ಪರೀಕ್ಷಕರ ವರದಿಯನ್ನೂ ಓದಿ ಮಂಜೂರ ಮಾಡಲಾಯಿತು.

(೨) ಕರ್ನಾಟಕ ಪ್ರಾಂತದಲ್ಲಿ ಈಗ ಇರುವ ನಿರುತ್ಸಾಹ ಸ್ಥಿತಿಯನ್ನು ಹೋಗಲಾಡಿಸುವದಕ್ಕೆ, ಮುಖಂಡರು ಪ್ರವಾಸಮಾಡಿ ಕಷ್ಟ ಪ್ರೋತ್ಸಾಹವನ್ನು ಕೊಡುತ್ತಿರುವದರಿಂದ ಕೆಲವರ ಆಕ್ಷೇಪಗಳನ್ನು ಹೋಗಲಾಡಿಸುವದಕ್ಕೂ ಪುನಃ ಪ್ರಾಂತದಲ್ಲಿ ಉತ್ಸಾಹವನ್ನು ಹುಟ್ಟಿಸುವದಕ್ಕೂ, ಅಧ್ಯಕ್ಷರೂ, ದೇ. ಭ. ಗಂಗಾಧರರಾವ ದೇಶಪಾಂಡೆಯವರೂ ಮತ್ತು ದೇ. ಭ. ಶ್ರೀನಿವಾಸರಾವ ಕೌಜಲಗಿಯವರೂ ಕೂಡಿ ಆಯಾ ಜಿಲ್ಲೆಗಳ ಮುಖಂಡರ ಜೊತೆ ಪ್ರವಾಸ ಮಾಡಿ ನೂಲಿನ ಸದಸ್ಯತ್ವದ ಪ್ರಚಾರವು ಹೆಚ್ಚಾಗಿ ಉತ್ಸಾಹ ಹುಟ್ಟುವಂತೆ ಪ್ರಯತ್ನಿಸಬೇಕೆಂದು ವಿನಂತಿ ಮಾಡಿಕೊಳ್ಳುವದು.

(೩) ನೂಲಿನ ಶರತ್ತಿನ ಸದಸ್ಯತ್ವ ಕೇವಲವು ಪ್ರಾಂತದಲ್ಲಿ ಹೊಳಪು ಹೊಂದುವದಿಲ್ಲವೆಂದು ಈ ಸಭೆಯು

ಬೇದಪಡುವದಲ್ಲದೆ ಬರುವ ಎರಡು ತಿಂಗಳುಗಳಲ್ಲಿ ಎಲ್ಲ ಜಿಲ್ಲಾ ಕಾಂಗ್ರೆಸ ಕಮಿಟಿಗಳು ಜೋರಿನಿಂದಲೂ, ಏಕ ಮನಸ್ಸಿನಿಂದಲೂ ಯತ್ನಮಾಡಿ ಈ ಕಾರ್ಯವನ್ನು ಮುಂದರಿಸಬೇಕೆಂದು ಈ ಕಮಿಟಿಯು ಕೇಳಿಕೊಳ್ಳುತ್ತದೆ ಮತ್ತು ಕಾನಪುರದ ಕಾಂಗ್ರೆಸ್ಸಿನ ಮುಂದೆ ಈ ಪ್ರಾಂತವು ತನ್ನ ಅನುಭವದಮೇಲಿಂದ ತನ್ನ ಅಭಿಪ್ರಾಯವನ್ನು ಇಡುವದರ ಸಲುವಾಗಿ ಪ್ರತಿಯೊಂದು ಜಿಲ್ಲಾ ಕಮಿಟಿಯು ನೂಲಿನ ಕರದ ಯುಕ್ತತೆಯ ವಿಷಯವಾಗಿ ವರದಿಯನ್ನು ಕಳಿಸತಕ್ಕದ್ದು

ಈ ಪ್ರಾಂತದಲ್ಲಿ ಸ್ವರಾಜ್ಯ ಪಕ್ಷದ ಅಭಿಪ್ರಾಯವುಳ್ಳ ಕಾಂಗ್ರೆಸ ಸದಸ್ಯರು ತಮ್ಮ ಕಾರ್ಯಕ್ರಮವನ್ನು ಮುಂದರಿಸುವದರ ಜತೆಗೆ ಕಾಂಗ್ರೆಸ್ಸಿನ ವಿಧಾಯಕ ಕಾರ್ಯಕ್ರಮದ ಈ ಅಂಗಕ್ಕೆ ಕಮಿಟಿಗಳಿಗೆ ಸಂಪೂರ್ಣ ಸಹಾಯ ಮಾಡಬೇಕೆಂದು ಅವರಿಗೆ ಈ ಸಭೆಯು ವಿನಂತಿ ಮಾಡಿಕೊಳ್ಳುತ್ತದೆ

(೪) ನೂಲಿನ ವರ್ಗಣಿಯ ವಿಷಯದಲ್ಲಿ ಮಂಗಳೂರಿನಲ್ಲಿ ೨—೨—೨೫ನೇ ದಿವಸ ಕಾರ್ಯಕಾರೀ ಮಂಡಳದವರು ಮಾಡಿದ ನಿರ್ಣಯಗಳಲ್ಲಿ ಮೂರನೇ ಠರಾವಿನ ನಿಯಮವು ಪ ಇದರ ಬದಲಾಗಿ ಮುಂದಿನ ನಿಯಮವು ಜಾರೀಕ

ಕಾಂಗ್ರೆಸ ಕಮಿಟಿಗಳು ಕಳಿಸತಕ್ಕ ವರ್ಗಣಿಯ ಎಲ್ಲ ನೂಲನ್ನು ಜಿಲ್ಲಾ ಕಮಿಟಿಯವರು [illegible] ನೂಲಿನ ಬೆಲೆಯ ಅರ್ಧವನ್ನು ಆಯಾ ಕಾಂಗ್ರೆಸ ಕಮಿಟಿಗಳಿಗೆ ಕೊಡತಕ್ಕದ್ದು. ಉಳಿದ ಅರ್ಧದಲ್ಲಿ ಒಟ್ಟು ನೂಲಿನ ಬೆಲೆಯ ನೂರಕ್ಕೆ ೨೦ ಪ್ರಾಂತಿಕ ಕಮಿಟಿಗೆ ಕಳುಹಿಸತಕ್ಕದ್ದು. ಇದರ ಅರ್ಧವನ್ನು ಪ್ರಾಂತಿಕ ಕಮಿಟಿಯು ಅ. ಭಾ. ಕಾಂಗ್ರೆಸ ಕಮಿಟಿಗೆ ಕಳುಹಿಸತಕ್ಕದ್ದು

(೫) ಸನ್ ೧೯೨೪ ೨೫ ಸಾಲಿನ [illegible] ತಿಂಗಳ ೩೦ರ ವರೆಗಿನ ಜಮಾಖರ್ಚಿನ ಅಂದಾಜುಪಟ್ಟಿಯನ್ನು ಈ ಕೆಳಗಿನ ಸೂಚನೆಗಳೊಡನೆ ಮಂಜೂರ ಮಾಡಲಾಯಿತು

೧ ಖರ್ಚಿನ ಎರಡನೇ ಬಾಬಿನಲ್ಲಿ (ಆಫೀಸ ಬಾಡಿಗೆ) ಅಸಿಸ್ಟಂಟ ಕಾರ್ಯದರ್ಶಿಗೆ ಮನೆ ಬಾಡಿಗೆಯೆಂದ ತಿಂಗಳಿಗೆ ೫ ರೂ. ಕೊಡತಕ್ಕದ್ದು.

೨ ಆಡಿಟರರು ಕೆಲಸದ ಮೇಲಿದ್ದಾಗ ಅವರ ಪ್ರವಾಸ ಖರ್ಚನ್ನು ಹೊರತು ಪಡಿಸಿ, ದಿನಕ್ಕೆ ಒಂದು ರೂಪಾಯಿ ಭತ್ತೆಯನ್ನೂ, ವರ್ಷಕ್ಕೆ ನೂರು ರೂಪಾಯಿ ಸಂಭಾವನೆಯನ್ನೂ ಕೊಡತಕ್ಕದ್ದು

೩ ಖಾದಿಯನ್ನು ಕಡಿಮೆ ಮಾರುವವರ ಸಲುವಾಗಿ ಖಾದಿ ಪ್ರಚಾರ ಮಾಡಿದ್ದರಲ್ಲಿ ರೂಪಾಯಿಗೆ ೨ ಪೈಸೆ ಕಮಿಶನ್ ಕೊಡುವದರ ಸಲುವಾಗಿ ೧೦೦೦ ರೂಪಾಯಿ ಮಂಜೂರ ಮಾಡಿದೆ.

೪ ಶಿಕ್ಷಣ ಸಮಿತಿಯವರು ಎರಡು ತಿಂಗಳು ಅಂದರೆ ಜುಲಾಯಿ ೧೫ ನೇ ತಾರೀಖಿನ ಒಳಗಾಗಿ ತಾವು ಮುಂದೆ ಬರೆಯಿಸುವ ಪುಸ್ತಕಗಳ ಹೆಸರು ವಗೈರೆ ತಪಶೀಲವಾರ ಮಾಹಿತಿ ಮತ್ತು ಅವುಗಳ ಖರ್ಚಿನ ಅಂದಾಜು ಪತ್ರಿಕೆ ಕಳುಹಿಸಿದ ಮೇಲೆ ಕೊಡುವದಕ್ಕೆ ಶಿಕ್ಷಣ ಸಮಿತಿಯ ಬಗ್ಗೆ ಬಜೆಟಿನಲ್ಲಿ ೧೦೦೦ ರೂ. ಹಾಕಿದೆ.

೫ ಹಿಂದುಸ್ಥಾನೀ ಸೇವಾದಲ ಶಾಖೆಗಳನ್ನು ಪ್ರಾಂತದಲ್ಲಿ ಏರ್ಪಾಡು ಮಾಡುವ ಕಾರಣ. ಪ್ರಾಂತಿಕ ಸೇವಾದಲದ ಖರ್ಚಿಗಾಗಿ ಬಜೆಟಿನಲ್ಲಿ ೧೦೦೦ ರೂ. ಹಾಕಬೇಕು.

೬. ಈ ಕೆಳಗಿನ ಠರಾವು ಸರ್ವಾನುಮತದಿಂದ ಮಂಜೂರಾಯಿತು.—

೧ ಸ್ವಾಗತ ಮಂಡಳದಿಂದ ಬಂದ ಹಣದಲ್ಲಿ ೨೫೦೦೦ ರೂಪಾಯಿ ಮುಂದಿನ ಬಜೆಟಿನ ವರೆಗೆ ಕಾಯ್ದಿಟ್ಟ ನಿಧಿ (Reserved fund) ದಾಗಿ ಪ್ರತ್ಯೇಕವಾಗಿ ಇಡತಕ್ಕದ್ದು.

೨ ಕರ್ನಾಟಕ ಪ್ರಾಂತದಲ್ಲಿ ನೂಲಿನ ಕರದ ಪ್ರಚಾರವನ್ನು ಮುಖ್ಯತಃ ಮತ್ತು ವಿಧಾಯಕ ಕಾರ್ಯಕ್ರಮದ ಇತರ ಭಾಗಗಳನ್ನು ಜೋರಿನಿಂದ ನವಂಬರದಲ್ಲಿ ಜರಗುವ ಮುಂದಿನ ಸಭೆಯ ವರೆಗೆ ಮುಂದರಿಸುವದರ ಸಲುವಾಗಿ ಈ ಕೆಳಗಿನ ಸದಸ್ಯರಿಂದ ಕೂಡಿದ ಕಮಿಟಿಯನ್ನು ನೇಮಿಸಲಾಯಿತು:—

ಸದಸ್ಯರು.

ಶ್ರೀ ಕರ್ನಾಡ ಸದಾಶಿವರಾಯರು.
" ವಿನಾಯಕರಾವ ಜೋಶಿ.
" ಮಧ್ವರಾವ ಕೆಂಭಾವಿ (ಕಾರ್ಯದರ್ಶಿ)
" ಕೆ ಗುರುರಾಜರಾವ, ಬಳ್ಳಾರಿ.
" ಶ್ರೀನಿವಾಸರಾವ ಕೌಜಲಗಿ.

೩ ಮೇಲಿನ ಕಾರ್ಯಕ್ರಮವನ್ನು ತಮ್ಮ ಅನಿಯಂತ್ರಿತ ಅಭಿಪ್ರಾಯದ ಮೇರೆಗೆ ನಡಿಯಿಸಲು ೬೦೦೦ ರೂಪಾಯಿಗಳನ್ನು ಮಂಜೂರ ಮಾಡಲಾಯಿತು

೪. ಕಾಂಗ್ರೆಸ ಕಮಿಟಿಗಳಲ್ಲದೆ ಇತರ ಸಂಸ್ಥೆಗಳಿಂದ ಸಹಾಯದ ಕುರಿತು ಬಂದ ಎಲ್ಲ ಅರ್ಜಿಗಳನ್ನು ಪರ್ಯಾಲೋಚಿಸಿ ರಿಪೋರ್ಟು ಮಾಡುವದಕ್ಕಾಗಿ ಮೇಲಿನ ಕಮಿಟಿಗೆ ಕಳುಹಿಸಲಾಯಿತು.

೫ ಭಾಗ (೨) ರಲ್ಲಿ ಕಾಣಿಸಿದ ಕಾರ್ಯವನ್ನು ೧೯೨೫ನೇ ಡಿಸೆಂಬರದ ವರೆಗೆ ಮುಂದರಿಸುವದಕ್ಕೆ ಬರುವ ವರ್ಷದ ಬಜೆಟಿನಲ್ಲಿ ೪೫೦೦ ರೂ. ಗಳನ್ನು ಹಾಕತಕ್ಕದ್ದು

೬. ಧಾರವಾಡ ಜಿಲ್ಲಾ ಕಮಿಟಿಯವರು ಪ್ರಾಂತಿಕ ಪರಿಪತ್ರಕನ್ನು ತಾವು ಮಾಡುವದಾಗುವದಿಲ್ಲೆಂದು ಕಳುಹಿಸಿದ ಅವರ ಠರಾವನ್ನು ಓದಿದರು. ಆದರೆ ಈ ವಿಷಯವನ್ನು ಪುನಃ ವಿಚಾರ ಮಾಡಿ ಪ್ರಾಂತಿಕ ಪರಿಪತ್ರಕವನ್ನು ತಮ್ಮ ಜಿಲ್ಲೆಯಲ್ಲಿ ನೆರವೇರಿಸುವ ಕುರಿತು ಧಾರವಾಡ ಜಿಲ್ಲಾ ಕಾಂಗ್ರೆಸ ಕಮಿಟಿಯವರಿಗೆ ವಿನಂತಿ ಮಾಡಲಾಯಿತು

೧೦ ಮೈಸೂರ ಸ್ಟೇಟ ಕಾಂಗ್ರೆಸ ಕಮಿಟಿಗೂ, ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಗೂ ಇರತಕ್ಕ ಸಂಬಂಧವನ್ನು ಕುರಿತು ನಿಯಮಗಳನ್ನು ಮಾಡಲಿಕ್ಕೂ, ಅಲ್ಲಿಯ ಕಮಿಟಿಗಳನ್ನು ಸುಸಂಘಟಿತ ಮಾಡಲಿಕ್ಕೂ ಶ್ರೀ ಶ್ರೀನಿವಾಸರಾವ ಕೌಜಲಗಿ, ಶ್ರೀ ಕೃಷ್ಣರಾವ ಮುದವೀಡಕರ ಮತ್ತು ಶ್ರೀ ಹನುಮಂತರಾವ ಮೋಹರೆ ಇವರನ್ನು ನೇಮಿಸಲಾಯಿತು ಅವರು ಜುಲೈ (೧೯೨೫) ಅಂತ್ಯದೊಳಗಾಗಿ ತಮ್ಮ ಕೆಲಸದ ವರದಿಯನ್ನು ಒಪ್ಪಿಸಬೇಕು.

೧೧ ಪ್ರಾಂತಿಕ ಕಮಿಟಿಯು, ಖಾದೀ ಬೋರ್ಡಿನ ಮತ್ತು ಪ್ರಾಂತಿಕ ಕಮಿಟಿಯ ಅಧೀನದಲ್ಲಿರುವ ಎಲ್ಲ ಕಮಿಟಿಗಳ ಕೆಲಸದ ವಿಷಯಕ ಪ್ರತಿ ತಿಂಗಳ ವರದಿಯನ್ನೂ ಲೆಕ್ಕದ ಜಮಾ ಖರ್ಚಿನ ಪಟ್ಟಿಯನ್ನೂ ಪ್ರಾಂತಿಕ ಕಮಿಟಿಯ ಕಾರ್ಯಕಾರಿ ಮಂಡಳದ ಸಭೆಯಮುಂದಿಟ್ಟು, ಇಡೀ ವರ್ಷದ ಕೆಲಸದ ವರದಿಯನ್ನೂ ಲೆಕ್ಕದ ಪಟ್ಟಿಯನ್ನೂ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಸಾಮಾನ್ಯಸಭೆಯ ಮುಂದಿಡತಕ್ಕದ್ದು.

೧೨ ನಮ್ಮ ಪ್ರಾಂತಿಕ ಖಾದಿ ಬೋರ್ಡಿನ ಮತ್ತು ಖಾದಿ ಅಂಗಡಿಗಳ ಲೆಕ್ಕಗಳನ್ನು ತಪಾಸು ಮಾಡುವದಕ್ಕಾಗಿ ಅ. ಭಾ. ಖಾದೀ ಮಂಡಳದವರು (ಪರಪ್ರಾಂತದವರನ್ನು ನೇಮಿಸಿದ್ದು ಅವರಿಗೆ ಕನ್ನಡ ಭಾಷೆಯು ತಿಳಿದಿರುವದಿಲ್ಲ. ಆದ್ದರಿಂದ ನಮ್ಮ ಪ್ರಾಂತದೊಳಗಿನ ಕೆಳಗೆ ಹೆಸರು ಕಾಣಿಸಿದ ಮೂವರಲ್ಲಿ ಒಬ್ಬರನ್ನು ನೇಮಿಸಬೇಕಾಗಿ ಅ. ಭಾ. ಖಾದಿಮಂಡಳಕ್ಕೆ ಈ ಕಮಿಟಿಯು ವಿನಂತಿ ಮಾಡುತ್ತದೆ.

ಹೆಸರುಗಳು.

(೧) ಶ್ರೀ ಹಿರಿಯಣ್ಣ ನಾರಾಯಣರಾವ, ಉಡುಪಿ
(೨) " ಸಿದ್ದರಾವ ಪೂಜಾರಿ, ವಿಜಾಪುರ.
(೩) " ಮಧ್ವರಾವ ಕಬ್ಬೂರ ಧಾರವಾಡ.

೧೩ ಕ. ಪ್ರಾ. ಕಾ. ಕಮಿಟಿಯ ಮೇಲೆ ಖಾಲೀ ಬಿದ್ದ ಸ್ಥಳಗಳಲ್ಲಿ ಶ್ರೀ ಹನುಮಂತರಾವ ಮೋಹರೇ ವಿಜಾಪುರ ಮತ್ತು ಶ್ರೀ ಗುಳವಾಡಿ ಇವರನ್ನು ಆರಿಸಿದೆ.

ಬೆಳಗಾಂವಿ, ಕಾರ್ನಾಡ ಸದಾಶಿವರಾವ
೧೫-೫-೨೫ ಅಧ್ಯಕ್ಷ ಕ. ಪ್ರಾಂ. ಕಾಂ.
ಕಮಿಟಿ.

ಬಾಬುವಿನ ಬಂಧಮುಕ್ತತೆ.

(ಅನುವಾದಕ:— ವ್ಹಿ. ಎ. ಹೊದ್ಯೆ, ಶಿರ.)

ಹಿಂದಿನ ಸಂಚಿಕೆಯಿಂದ ಮುಂದೆ ಸಾಗಿದ್ದು.

(೨)

ಸಾಯಂಕಾಲದ ಸಮಯ. ಕೆಲವು ಶಾಲೆಯ ಹುಡುಗರು ಧರ್ಮಲಿಂಗದ ಬೀದಿಯಲ್ಲಿ ಅತ್ತಿತ್ತ ಅಡ್ಡಾಡುತ್ತಿದ್ದರು. ಕೈಯಲ್ಲಿ ಒಂದು ಬಿಸ್ಕೀಟಿನ ಡಬ್ಬಿಯನ್ನು ಹಿಡಿದುಕೊಂಡು ಒಂದು ಅಂಗಡಿಯೊಳಗಿಂದ ಪಟ್ಟೇವಾಲನ ಪೋಷಾಕಿನಲ್ಲಿ ಹೊರಬೀಳುತ್ತಿದ್ದ ಒಬ್ಬ ಮನುಷ್ಯನನ್ನು ಅವರು ಕಂಡರು.

ಕೂಡಲೆ ಹುಡುಗರು ಅವನ ಹತ್ತರ ಹೋಗಿ— "ಎಲೋ, ನೀನು ಯಾವ ತರದ ಬಿಸ್ಕೀಟುಗಳನ್ನು ಕೊಂಡಿದ್ದೀ ನೋಡುವಾ" ಅಂದರು.

ಆ ಮನುಷ್ಯನು ನಿಂತು ಡಬ್ಬಿಯನ್ನು ಹುಡುಗರ ಕೈಯಲ್ಲಿ ಕೊಟ್ಟನು, ಅವರು ಅದನ್ನು ಪರೀಕ್ಷಿಸಿ— "ಛೀ! ಇದು ಇಂಗ್ಲಂಡದಲ್ಲಿ ತಯಾರಾದದ್ದು" ಅಂದರು.

"ಹೌದು ಬಾಬುಜಿ, ಇಂಗ್ಲಂಡದಲ್ಲಿ ತಯಾರಾದ ಸಾಮಾನು ಚಲೋ ಇರುತ್ತದೆ, ಅಲ್ಲವೋ?" ಎಂತ ಆ ಪಟ್ಟೇವಾಲನು ಸ್ವಲ್ಪ ಆಶ್ಚರ್ಯಚಕಿತನಾಗಿ ಅಂದನು.

"ನೀನು ಹಿಂದುವೋ, ಮುಸಲ್ಮಾನನೋ?" ಎಂತ ಆ ಹುಡುಗರಲ್ಲಿ ಒಬ್ಬನು ನಡುವೇ ಕೇಳಿದನು.

"ಮುಸಲ್ಮಾನ, ಸ್ವಾಮೀ."

"ಇಂಗ್ಲಂಡದಲ್ಲಿ ತಯಾರಾದ ಆಹಾರವು ಹರಾಮು ಎಂತ ನಿನಗೆ ಗೊತ್ತಿಲ್ಲವೇ?"

"ತೋಬಾ, ತೋಬಾ, ಬಾಬೂಜಿ, ಹಾಗೆ ಹೇಳಬೇಡ."

"ಅದಕ್ಕೆ ನೀನು ಏನು ಕೊಟ್ಟೀ?"

"ಒಂದು ರೂಪಾಯಿ ಎಂಟಾಣೆ."

"ಏನು, ಒಂದು ರೂಪಾಯಿ ಎಂಟಾಣೆ' ಒಂದೇ ರೂಪಾಯಿ ಕೊಟ್ಟರೆ, ನಿನಗೆ ಭಟ್ಟಿಯೊಳಗಿಂದ ಹೊರಬಿದ್ದ ಚಲೋ ತಾಜಾ ದೇಶೀ ಬಿಸ್ಕೀಟಿನ ಡಬ್ಬಿ ಸಿಗುತ್ತಿತ್ತು"

ಆ ಮನುಷ್ಯನು ಒಬ್ಬ ಯುರೋಪಿಯನ್ ಚಹಾ ತೋಟಿಗನ ಬಂಗ್ಲೆಯ ಪಟ್ಟೇವಾಲನಾಗಿದ್ದನು. ಅವನು ವಿಚಾರಿಸಿದ್ದೇನಂದರೆ:— "ಒಳ್ಳೇದು, ನನ್ನ ಸಾಹೇಬರು ಬಿಸ್ಕೀಟಿನ ಒಂದು ಡಬ್ಬಿಗಾಗಿ ೧||ರೂಪಾಯಿ ಕೊಟ್ಟಿರುವರು ಅದರ ಸಲುವಾಗಿ ನನಗೆ ಒಂದೇ ರೂಪಾಯಿಗೆ ಇದಕ್ಕೂ ಚಲೋ ಬಿಸ್ಕೀಟು ಸಿಕ್ಕರೆ,ನನಗೆ ಎಂಟು ಆಣೆ ಲಾಭವಾಗುವದಲ್ಲದೆ, ಅವರಿಗೂ ತಿನ್ನಲಿಕ್ಕೆ ಚಲೋ ಬಿಸ್ಕೀಟು ಸಿಗುವದು. ಅದರಿಂದ ಕೆಡಕೇನು?" ಅವನು ಆ ಹುಡುಗರಿಗೆ ಗಟ್ಟಿಯಾಗಿ ಅಂದದ್ದು.—"ಸ್ವಾಮೀ, ನೀವು ಹೇಳುವದು ನಿಜವೋ?"

ಇದರಿಂದ ಸ್ವಲ್ಪ ಹುರುಪೆದ್ದು ಹುಡುಗರು ಅಂದದ್ದು,—"ಹೌದು, ನಮಗೆ ಅಗದೀ ಖಾತ್ರಿ ಅದೆ. ನಮ್ಮ ಸಂಗಡ ಬಾ ಮತ್ತು ದೇಶೀ ಡಬ್ಬಿಯನ್ನು ನೀನೇ ಸ್ವತಃ ನೋಡು. ಮೊದಲು ನಾವೆಲ್ಲರೂ ಹೋಗಿ ಆ ಅಂಗಡಿಕಾರನಿಗೆ ಈ ಡಬ್ಬಿಯನ್ನು ತಿರುಗಿ ಕೊಡೋಣ."

ಅವರಲ್ಲಿ ಕೆಲವರು ಡಬ್ಬಿಯನ್ನು ಕೊಟ್ಟ ಅಂಗಡಿಕಾರನ ಕಡೆಗೆ ಆ ಪಟ್ಟೇವಾಲನನ್ನು ಕರಕೊಂಡು ಹೋಗಿ, ಡಬ್ಬಿಯನ್ನು ತಿರುಗಿ ತೆಗೆದುಕೊಂಡು ಹಣವನ್ನು ಕೊಡಲು ಅವನಿಗೆ ಬಿನ್ನಹ ಮಾಡಿಕೊಂಡರು. ಆದರೆ ಅಂಗಡಿಕಾರನು ಅದಕ್ಕೆ ಒಪ್ಪಲಿಲ್ಲ. ಅವನು ಅಂದದ್ದು:—"ಈ ಆರಿಷ್ಟ ಸ್ವದೇಶೀ ಚಳವಳಿಯ ಮೂಲಕ ನನ್ನ ಅಂಗಡಿಯಲ್ಲಿ ಇಂಗ್ಲಂಡದೊಳಗೆ ತಯಾರಾದ ವಸ್ತುಗಳ ರಾಶಿಗಳೇ ಕೊಳೆಯುತ್ತ ಬಿದ್ದಿವೆ. ಒಮ್ಮೆ ಮಾರಿದ ಡಬ್ಬಿಯನ್ನು ನಾನು ತಿರುಗಿ ತೆಗೆದುಕೊಳ್ಳುವವನಲ್ಲ"

ನಿರಾಶೆಯಿಂದ ಆ ಹುಡುಗರು ಅಂಗಡಿಯನ್ನು ಬಿಟ್ಟರು. ಅವರೆಲ್ಲರು ವಿಚಾರ ವಿನಿಮಯಕ್ಕಾಗಿ ಒಟ್ಟುಗೂಡಿ, ತಮ್ಮ ಸ್ವಂತ ಖರ್ಚಿನಿಂದ ಆ ಪಟ್ಟೇವಾಲನಿಗೆ ಒಂದು ದೇಶೀ ಬಿಸ್ಕೀಟಿನ ಡಬ್ಬಿಯನ್ನು ಕೊಡಿಸಬೇಕೆಂತ ನಿಶ್ಚಯಿಸಿದರು. ಇಂಗ್ಲಂಡದೊಳಗೆ ತಯಾರಾದ ಡಬ್ಬಿಯನ್ನು ತಾವೇ ಇಟ್ಟುಕೊಂಡು, ಅದರ ಬದಲು ಒಂದು ದೇಶೀ ಡಬ್ಬಿಯನ್ನು ಕೊಡುವದಾಗಿ ಅವನಿಗೆ ಸೂಚಿಸಿದರು. ಪಟ್ಟೇವಾಲನು ಅದಕ್ಕೆ ಸಮ್ಮತಿಯನ್ನಿ

...ಲು, ಆ ಹುಡುಗರು ಅವನನ್ನು ಸ್ವದೇಶಿ ಸಂಗ್ರಹಾಲಯಕ್ಕೆ ಕರೆದೊಯ್ದು ಅವನಿಗೆ ಒಂದು ದೇಶಿ ಪೆಟ್ಟಿಯನ್ನು ಉಚಿತವಾಗಿ ಕೊಡಿಸಿದರು.

ಆ ಪೆಟ್ಟಿಯನ್ನು ನೋಡಿ ಪಟ್ಟೇವಾಲನು ಸಂಕೋಚಪಟ್ಟನು. ಅವನು ಅಂದದ್ದು:— “ಬಾಬುಜಿ, ಇದು ಅದೇಕೆ ಎಂತ ನನಗೆ ಗೊತ್ತಾಗುತ್ತದೆ. ಆದರೆ ಇದರ ಕಿಮ್ಮತ್ತು ಬರೇ ಒಂದು ರೂಪಾಯಿ. ಹಾಗೆ ಎಂಥಾದ್ದು?”

ಹುಡುಗರು ಆ ಸ್ವದೇಶಿ ಅಂಗಡಿಕಾರನಿಗೆ ಅಂದದ್ದು:— “ದಯಮಾಡಿ ಪೆಟ್ಟಿಗೆ ಬಗ್ಗೆ ಆ ಬಿಲ್ ಕೊಡಿರಿ. ಅದನ್ನು ಪೆಟ್ಟಿಯ ಕಿಮ್ಮತ್ತಿನೊಂದಿಗೆ ನಾವೇ ಕೊಡುವೆವು.”

ಪಟ್ಟೇವಾಲನು ತನ್ನ ಆ ಅಂಗಗಳನ್ನು ಕೈಯಲ್ಲಿ ಹಿಡಿದುಕೊಂಡು, ಪೆಟ್ಟಿಯ ಕಡೆಗೆ ತಿರುತಿರುಗಿ ನೋಡಿ ಹೇಳಿದ್ದು:— “ಬಾಬುಜಿ, ಈ ಬಿಸ್ಕೀಟುಗಳು ಇಂಗ್ಲಿಷ ಬಿಸ್ಕೀಟುಗಳಷ್ಟು ಉತ್ತಮವಿರುತ್ತವೆಂಬ ಬಗ್ಗೆ ನಿಮಗೆ ಖಾತ್ರಿಯುಂಟೋ?”

“ಹೆಚ್ಚು ಉತ್ತಮ, ಬಹಳೇ ಉತ್ತಮ— ಸ್ವದೇಶದ ಜನರು ಮಾತ್ರ ಮಾಡಿ ಕೊಡುತ್ತಾರೆ. ಇನ್ನು ಮುಂದೆ ಇಂಗ್ಲಿಷ ಬಿಸ್ಕೀಟುಗಳನ್ನು ಎಂದೂ ಕೊಳ್ಳಬೇಡ. ಅದು ಸರಿಯಿರುತ್ತದೆ.”

“ಹೋಗಲಿ, ಹೋಗಲಿ,” ಅನ್ನುತ್ತ ಪಟ್ಟೇವಾಲನು ಬಂಗ್ಲೆಯ ಕಡೆಗೆ ಸಾಗಿದನು.

ಹುಡುಗರು ಅಂಗಡಿಯೊಳಗಿಂದ ಹೊರಗೆ ಬಂದು, ಪೆಟ್ಟಿಯನ್ನು ತೆರೆದು, ಒಳಗೆ ಇದ್ದದ್ದನ್ನೆಲ್ಲ ರಸ್ತೆಯ ಮೇಲೆ ಹರವಿದರು. ಆ ಮೇಲೆ ಅವರು ಪರದೇಶಿ ವ್ಯಾಪಾರವನ್ನೆಲ್ಲ ಒದ್ದು ಸ್ವದೇಶದಿಂದ ಹೊರಗೆ ಹಾಕಲು ಜನರನ್ನು ಬೋಧಿಸುವ ಕೋಳ್ಪಿತ್ರಿಯುವಾದ ಒಂದು ಪದವನ್ನು ಹಾಡುತ್ತ ಆ ಬಿಸ್ಕೀಟುಗಳ ಮೇಲೆ ಕುಣಿಯುತ್ತಿದ್ದರು. ನಡುನಡುವೆ “ವಂದೇ ಮಾತರಂ” ಎಂತಲೂ ಒದರುತ್ತಿದ್ದರು. ಅವರಲ್ಲಿ ಒಬ್ಬನು ಆ ಖಾಲಿ ಪೆಟ್ಟಿಯನ್ನು ಒದ್ದು ದೂಡುತ್ತ, ಅದನ್ನು ನಗರದ ಒಡಿಗಿದ್ದ ಕಾಲುವೆಯಲ್ಲಿ ಚೆಲ್ಲಿಕೊಟ್ಟನು.

ಆ ಪಟ್ಟೇವಾಲನು ಸ್ವಲ್ಪ ದೂರ ನಿಂತು ಇದನ್ನೆಲ್ಲ ನೋಡುತ್ತಿದ್ದನು. ಆಶ್ಚರ್ಯದಿಂದ ಹೊಸದಾಗಿ ಬಂದದ್ದರಿಂದ, ಇದೆಲ್ಲ ಏನೆಂಬುದು ಅವನಿಗೆ ತಿಳಿಯಲಿಲ್ಲ. ಮುಂದೆ ತನ್ನಿಷ್ಟನು ಹತ್ತರ ಹೋಗುತ್ತಿರುವವನನ್ನು ಕಂಡು,— “ಬಾಬುಗಳಿಗೆ ಹುಚ್ಚು ಹಿಡಿದಿದೆ ಪರೋ ಏನು?” ಎಂತ ಅವನನ್ನು ಕೇಳಿದನು.

“ವಂದೇ ಮಾತರಂ” ಶುರುವಾದಂದಿನಿಂದ ಹುಡುಗರು ದುಕಾನಗಳ ವಿಲಾಯತೀ ವಸ್ತುಗಳನ್ನು ಕೊಳ್ಳಲು ಕೊಡುತ್ತಿಲ್ಲ”

“ಅವರೇನನ್ನುತ್ತಾರೆ? ಬಂದೋಕ ಮಾತಂ?”

“ಅಲ್ಲ, ಅಲ್ಲ- ಬಂದೇಮಾತರಂ”

“ಅದೇನು?”

“ಅವರು ಹೊಸದೊಂದು ದೈವವನ್ನು ಹುಡುಕಿ ತೆಗೆದಿರುವರು ಎಂತ ನನಗೆ ತೋರುತ್ತದೆ. ಇತ್ತಿತ್ತಲಾಗಿ, ಈ ಹುಡುಗರು ಪೋಲೀಸ್‌ಮನ್ನರನ್ನು ನೋಡಿದಾಗೆಲ್ಲ ಹೀಗೆ ಒದರುತ್ತಿರುತ್ತಾರೆ”

(ಮುಂದೆ ಸಾಗುವದು.)

ಭಾಷಾಂತರಕರ್ತರಿಗೆ ಸುಸಂಧಿ!

ಸುಪ್ರಸಿದ್ಧ ವಾಚಕರೂ ಅನೇಕ ವಿದ್ಯಾ ಪಂಡಿತರಿಂದ ಚಲೋ ಅಭಿಪ್ರಾಯ ಪಡೆದದ್ದೂ ಆಗಿರುವ ಋಗ್ವೇದಿಯರು ಬರೆದ “**आर्यांच्या सणांचा प्राचीन व अर्वाचीन इतिहास**” ಎಂಬ ಮರಾಠಿ ಪುಸ್ತಕವನ್ನು ಕನ್ನಡದಲ್ಲಿ ಭಾಷಾಂತರಿಸುವದಿದೆ. ಇದನ್ನು ಕೈಕೊಳ್ಳಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳತಕ್ಕದ್ದು.

Apply to:—	Copies can be had from:-
V. PRABHA & CO.	THE NORTH KANARA TRADING CO.
BOMBAY 4.	KARWAR.

ಸುಲಭ ಕ್ರಯ! ಸುಲಭ ಕ್ರಯ!!

ಡಾ॥ ಕರಜೀ ಬಿ ಮವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ನಾಶವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇರಿಲ್ಪಟ್ಟ ಕಿವಿ ವ್ಯಾಧಿಗಳನ್ನೂ ಸ್ಪಷ್ಟಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಇಸೆ ಪುಕ್ಕಟೆ ಕಳಿಸಲಾರೆವು.

ವ್ಹಿ. ಪಿ. ೪ ಆಣೆ ಡಜನ್ ೧ಕ್ಕೆ ರೂ. ೨-೮-೦ ವ್ಹಿ. ಪಿ. ೦ ೮-೦
ಬಾಡ್ಡಿ ಒಂದಕ್ಕೆ ಕ್ರಯ ರೂ ೦-೪-೦. ವ್ಹಿ. ಪಿ.
ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ—ಗುರುಬಸನ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಮದರಾಸು

DAVAR'S
COLLEGE OF COMMERCE.
(Established 25 years.)

CELEBRATES ITS SILVER JUBILEE THIS YEAR UNDER THE DISTINGUISHED PATRONAGE OF MERCHANT-PRINCES, LEADERS OF THOUGHT AND EDUCATION.

The Institution under the sole direction of its Founder and Principal has done pioneer work in inrtoducing for the First Time in India Courses in SPECIALISED BANKING, SPECIALISED SECRETARIAL WORK and SPECIALISED ACCOUNTANCY as the result of his numerous journeys to Europe and to the Colleges and Universities there.

The fact that a Scholar has successfully trained in DAVAR'S COLLEGE has always been accepted by businessmen all over India, Burma and Ceylon as a hallmark of perfection.

Prospectus on application to the Principal,
Great Western Bldg,
Apollo Street, BOMBAY

ಅಮೇರಿಕನ್ ಉಪಾಯ.

ಎಂಬ್ರೋಸಿಯಾ.

AMBROSIA

ಸ್ತ್ರೀರೋಗಪರಿಹಾರಕ್ಕಾಗಿ.

ಎಂಬ್ರೋಸಿಯಾವು ಸಮಸ್ತ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು. ಇದು ಸ್ತ್ರೀಸೌಂದರ್ಯವನ್ನುಂಟುಮಾಡುತ್ತದೆ. ಸಾಮಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರುತ್ತದೆ. ಚಲೋ ಆಹಾರ ದೊರೆಯದೆ, ವಿಶೇಷ ಆಯಾಸ ಕೊಳ್ಳುವದರಿಂದ ಸ್ತ್ರೀಯರ ಪ್ರಕೃತಿಯು ಕೆಡುತ್ತದೆ, ಮುಟ್ಟಾಗುವಾಗ ಶೂಲಿ ಏಳುವದು, ಮುಟ್ಟು ಗದಿರುವದು, ಅಪಸ್ಮಾರ, ಬಂಜೆತನ ಮುಂತಾದ ಗರ್ಭಾಶಯದ ಬೇನೆಗಳು, ಅಜೀರ್ಣ, ತಲೆಶೂಲಿ, ಭ್ರಮಿಷ್ಟತನ ಇವೆಲ್ಲ ಸ್ತ್ರೀರೋಗಗಳಮೇಲೆ ರಾಮಬಾಣ ಮದ್ದು. ಎಂಬ್ರೋಸಿಯಾವು ಸಮಸ್ತ ಸ್ತ್ರೀರೋಗಗಳನ್ನು ದೂರಮಾಡಿ, ಸ್ತ್ರೀಯರನ್ನು ಸಶಕ್ತ, ಹಾಗು ಸೌಂದರ್ಯವಂತರನ್ನಾಗಿ ಮಾಡುತ್ತದೆ.

ಒಮ್ಮೆ ಪರೀಕ್ಷೆ ನೋಡಿ.

ಬೆಲೆ ಬಾಟ್ಲಿ ೧ಕ್ಕೆ ರೂಪಾಯಿ ೩—೦—೦

ಏಜಂಟರು:— **ಪೀರಿಯಲ ಏಜನ್ಸಿ,**
ಪ್ರಿನ್ಸೆಸ ಸ್ಟ್ರೀಟ, ಮುಂಬಯಿ ನಂಬರ

ಜಾಹೀರಾತು.

ತಾರೀಖು ೭-೯-೧೯೩೪ನೇ ಪತ್ರದಲ್ಲಿ ಪ್ರಸಿದ್ಧಿಪಡಿಸಿದ [illegible] [illegible] ಕೇರಳ ಜ್ಯೋತಿಷಿ ಕೇ. ಸಿ. ನಾರಾಯಣ ಶಾಸ್ತ್ರಿ ಎಂಬವರು [illegible] [illegible] [illegible] ಶಿಷ್ಯರು ಸಾಗರದಲ್ಲಿ [illegible] [illegible] [illegible] [illegible] [illegible] ಅವಶ್ಯವಿದ್ದ [illegible] [illegible] ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡತಕ್ಕದ್ದು.

ಪತ್ತೆ —

ಕೇರಳ ಜ್ಯೋತಿಷಿ

ಕೇ. ಸಿ. ನಾರಾಯಣ ಶಾಸ್ತ್ರಿ

ಮುಕ್ಕಾಂ ಕಾನಲೆ ಪತ್ರ, ಶ್ರೀ [illegible]

ಜಿಲ್ಲಾ- ಶಿವಮೊಗ್ಗಾ.

ಸಿದ್ಧ] ಅನುಭವಸಿದ್ಧ [ಪ್ರತ್ಯಕ್ಷ

ವನೌಷಧಿಮಾಲಿಕೆಗಳು.

[illegible] [illegible] (ನೆವ್ರಾಸಿಯಾ) [illegible] (ಕಾಲರಾ) [illegible] ಅರ್ಧಾಂಗವಾಯು. ([illegible] [illegible] [illegible] [illegible] ಹೊಟ್ಟೆಯಲ್ಲಿ ಕ್ರಿಮಿ [illegible] (ಕ್ರಿಮಿಗ) [illegible] ರೋಗಗಳಿಗೆ [illegible] [illegible] [illegible] ಮಾತ್ರೆಯಾಗಿ [illegible] [illegible] [illegible] ಕಾಲದಿಂದ ಅನುಭವ [illegible] [illegible] [illegible] [illegible] [illegible] ಔಷಧಿಗಳ [illegible] ಮಾಲಿಕೆಗಳು [illegible] [illegible] ಅನುಭವ [illegible] ಮಾತ್ರೆಯಾದೀತು ಕಾಲರಾ ಔಷಧಿಗಳ [illegible] Emetine [illegible] [illegible] [illegible] [illegible]

ವಾಯು [illegible] ಬಗ್ಗೆ ಔಷಧಿ ೧ ಮಾಲಿಕೆ ತೊಲ
೧ಕ್ಕೆ ೦-೩-೦
ಕಾಲರಾದ ಬಗ್ಗೆ „ „ ೦-೩-೦
ಅರ್ಧಾಂಗ ವಾಯುವಿನ ಬಗ್ಗೆ . . . ೦ ೪ ೦
[illegible] ಬಗ್ಗೆ . . . ೦ ೪-೦
ಸರ್ಪ [illegible] ಬಗ್ಗೆ . . . ೦-೩ ೦
ಹೊಟ್ಟೆಯಲ್ಲಿ ಕ್ರಿಮಿ ಔಷಧಿ ಬಗ್ಗೆ
ತೊಲೆ ೧೦ ಕ್ಕೆ ೦-೮ ೦
ರಕ್ತಶುದ್ಧಿ [illegible] ಬಗ್ಗೆ
ಮಾಲಿಕೆ ಡಜನ್ನು ಕ್ಕೆ ೧-೦ ೦
[illegible] (ವೆಲ್ಲಿಂಗ್ [illegible] ೧೬)
ಡಜನ್ನು ೧ ಕ್ಕೆ ೧-೫ ೦

[illegible] [illegible] [illegible] [illegible] [illegible] ಕಡಿಮೆ ದರದಿಂದ [illegible] [illegible] [illegible] [illegible] [illegible] ಅನುಭವಸಿದ್ಧ ಔಷಧಿ ಸಂಗ್ರಹ

ಎನ್. ಜಿ. ಹೆಗಡೆ, ವೈದ್ಯ[illegible]

ಪೋ—ಬಂಕಿಕೋಡ್ಲ, ಜಿ. ಉತ್ತರ ಕನ್ನಡಾ

ಮಳೆಗೆ ಮೊದಲೇ ಎಚ್ಚರಿಕೆ !

ಅತ್ಯುತ್ತಮ, ಸುಂದರ, ಬಾಳಿಕೆಯುಳ್ಳ, ಮಜಬೂತಾದ

ಸುಂದರ ಛಾಪ !] **ಛತ್ರಿಗಳು.** [ಅಗ್ಗ ! ವಿವಿಧ !!

ಪ್ರತಿಯೊಬ್ಬರಿಗೂ ಅನುಕೂಲವಾದ ಪಸಂದಿನ ವ್ಹಾಲು !

ಮೇಲೆಯ ಕೈಗಾರಿಕೆ ! ದೇಶೀಯ [illegible] !! ಆದುದರಿಂದ

ದೇಶೀಯರಿಗೆ ಖಾತರಿಯಾಗಿ ತೃಪ್ತಿಯಾಗುವುದು !

ಕಾನಡಾ ಜಿಲ್ಲೆಯೊಳಗಿನ ಪ್ರಮುಖ್ಯ ಛತ್ರೀ ದುಕಾನುಗಳಲ್ಲಿ ಬಿಕರಿಗೆ ಇದೆ.

ಸೇಠ. ನಾಗಜೀ ಪುರುಷೋತ್ತಮ್ ಮತ್ತು ಕಂಪನಿಯವರ

ಕಲ್ಲಿಕೋಟೆಯ ಕಾರಖಾನೆಯ

ಸೂರ್ಯ ಛಾಪಿನ ಛತ್ರಿಗಳೇ ಛತ್ರಿಗಳು !

ಮುಖಾನುದಾರರಿಗೆ [illegible] ಕಮಿಷನ್ [illegible] ಕೊಡಲಾಗುತ್ತದೆ.

ಪತ್ತೆ — **ಶ್ರೀನಿವಾಸ ರಂಗ ಪೈ, ಸಾವಕಾರ ಮಹಾಲ್.**

ಮಂಗಳೂರು, ದ. ಕನ್ನಡ

ಬೇಸಿಗೆಯು ಪ್ರಾರಂಭವಾಯಿತು !

ದನಗಳ ಆಹಾರವಾದ ಕಣಿಕೆಯನ್ನು ಕಾದಿರಿ !!

ಕಿರ್ಲೋಸ್ಕರ ಕಣಿಕೆ ಯಂತ್ರವನ್ನು ಉಪಯೋಗಿಸಿರಿ !!!

ನಮ್ಮ ಕಾರ್ಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕೊರೆಯುವ ಯಂತ್ರಗಳು ತಯಾರಾಗುತ್ತವೆ. ಒಂದು ಕೈಯಂತ್ರ ಬೆಲೆ ೩೦ರೂ. ಇನ್ನೊಂದು ಗಾಲೀ ಯಂತ್ರ ಬೆಲೆ [illegible] ಸಣ್ಣ ಕಸುಬುಳ್ಳವರು ಕೈಯಂತ್ರವನ್ನೂ, ದೊಡ್ಡ ಕಸುಬುಳ್ಳವರು ಗಾಲೀ ಯಂತ್ರವನ್ನೂ ಉಪಯೋಗಿಸಬಹುದು ಕಣಿಕೆಯು ೪ ಇಂಚುಗಳಿಂದ ಒಂದು ಇಂಚಿನವರೆಗೆ ಕೊರೆಯಲ್ಪಡುತ್ತದೆ ಸವಿಸ್ತರ ಸಂಗತಿ ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ; ಜಿಲ್ಲಾ ಸಾತಾರಾ.

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ ರಾಮಬಾಣದಂತಾಗಿರುವದು. ಕಳೆದ ೩೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು ಇದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಆರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ, ಮುಂಬಯಿ

Printed and Published by Krishnarao Keshav Shenvi (Editor) at his Star of Kanara Press Kumta.

ಪುಸ್ತಕ ೯.

ಕಾನಡಾವೃತ್ತ.

THE KANARA NEWS.

ಸಂಚಿಕೆ ೩೪.

ಪತ್ರದ ದರಗಳು.

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮನೆಯಾರ್ಡರಿಯಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ವ್ಯಾಕಾ ಬ್ಯುಲಿನ (೧೫ ಎಮ್ ಅಗಲ) ೮ ಸಾಲುಗಳವರೆಗೆ ರೂ. 1-0- ಆ ನಂತರ ಪ್ರತಿಸಾಲಿಗೆ 0-2-0.

ಹೆಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೮ ಮಾಹೆ ಜೂನ ಸನ್ ೧೯೩೬ನೇ ಇಸವಿ.)

हिंदुस्थानांतील रहिवाशास ज्याप्रमाणे हिंदुस्थानची हवा त्याप्रमाणेंच हे औषध हिंदुस्थानांतील लोकास ज्यास्त फायदेशीर आहे

द्राक्षासव- दीड रत्तलाची किंमत २ रुपये,

रामबाण औषधें —
सर्दि घालविणारे,
भूक वाढविणारें,
शौच्यास साफ करणारे,
झोप आणणारें,
शक्ति देणारें,
तेजस्वीपणा आणणारे,

पिण्यास रुचिकर.

क्याटलाग मागवा,

पंडु फार्मास्युटिकल वर्क्स लिमिटेड,
मुंबई नं. १३

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, *B. A.*
Jewellers, KUMTA.

ಆರ್. ಎಸ್. ಕಾಸರಗೋಡ,
ರತ್ನಾಭರಣ ವ್ಯಾಪಾರಿ, ಕುಮಟಾ.

ಕ್ಷಯ ರೋಗ?

ವೈದ್ಯ ಫರ್ನಾಂಡಿಸರ
ಬರೇ ನಾಲ್ಕು ಔಷಧಗಳು.

ಪ್ರಕಾಶವಾಗಿ ತಿಳಿಸಿರಿ ಅಂದರೆ ಯೋಗ್ಯ ಔಷಧಗಳನ್ನು ತಯಾರಿಸಿ ಕಳಿಸುವೆವು ನಮ್ಮ [illegible] ಹೆಚ್ಚಿನ ಮಾಹಿತಿ ದೊರಕುವದ [illegible] ಬೇಗನೇ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ. (ರೂ. ೫೮-೧೦-೦.)

ವೈದ್ಯ ಫರ್ನಾಂಡಿಸ,
ರೋಗಾಂತಕ ಡಿಪೋ,
ಕಾರವಾರ

☞ ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುತ್ತವೆ.

ದರವಾರವು ಎಲ್ಲಕ್ಕಿಂತ ಕಡಿಮೆ ಇಟ್ಟಿರುತ್ತವೆ ಬೇಕಾದವರು ಕೆಳಗಿನ ಪತ್ತೆಯ ಮೇಲೆ ಬರೆಕೊಳ್ಳಬಹುದು. ಪತ್ತೆ:— ವೈಕುಂಠ ಜನಾರ್ದನ ನಾಯಕ
ಪೋಸ್ಟ:— ಉಪ್ಪಿನಪಟ್ಟಣ. ತಾ. ಕುಮಟಾ.

(ಆಸ್. ಪೀ. [illegible]) ಧಾತುಪೌಷ್ಟಿಕ, ಶಕ್ತಿವರ್ಧಕ, ರಕ್ತಶೋಧಕ (ಮಲಬಾರಿಕೃತಿ

ಮದನಕಾಮೇಶ್ವರೀಲೇಹ.

ಆಬಾಲ ವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

[illegible] ಕಸ್ತೂರಿ, [illegible] ಅನೇಕ ವನೌಷಧಿಯುಕ್ತ ಇರುವದರಿಂದ [illegible] ಧಾತುಕ್ಷೀಣತೆ, ಸ್ವಪ್ನದೋಷ [illegible] ನಿರ್ಮೂಲಗೊಳಿಸಿ [illegible] ರಕ್ತ ಧಾತು [illegible] ಸಿದ್ಧೌಷಧ. ೧ ತಿಂಗಳು ಸಾಲುವ ಡಬ್ಬಿಗೆ ೨॥ರೂ. [illegible]

ಅತ್ಯುತ್ತಮ) ಜಂತುವಿನ ಔಷಧ (ದರಸುಲಭ.

ಪ್ರತಿ ೧ಕ್ಕೆ ॥ಆಣೆ ೫ಂಕ್ಕೆ ರೂ. ೨।। ೧೦ಂಕ್ಕೆ ರೂ. ೫ ಅನುಭವ [illegible] ಎಲ್ಲಾ ರೋಗಗಳ [illegible] ಅನುಭವ [illegible] ಬೇಕಾದವರು [illegible] ಪತ್ರ ಬರೆದಲ್ಲಿ ನಮ್ಮ [illegible] ಪುಸ್ತಕವನ್ನು ಪುಕ್ಕಟೆಯಾಗಿ ಕಳಿಸುವೆವು.

ಮೆನೇಜರ ಆಯುರ್ವೇದ ಚಿಕಿತ್ಸಾ ಮಂದಿರ, ತಾ. ಕಾರವಾರ, ಪೋ. ಚೆಂಡಿಯೆ.

ಮುಂಬೈ ಏಜಂಟ — R. C KAMAT, Teashop Store Lane, Fort, BOMBAY

ಹುಟ್ಟಿದ ವೇಳೆ) ಸುಖಸಾಧನಕ್ಕೆ ಯೋಗ್ಯ ಉಪಾಯವು (ಯಾ ಜನ್ಮಟಿಪ್ಪಣಿ

☞ ಮಲಬಾರಿ) ಕೇರಳ ಜ್ಯೋತಿಷ. (ಭವಿಷ್ಯ.

ನೋಡಿ ಜನ್ಮಟಿಪ್ಪಣಿ ಬರೆಸಿ. ೧ ವರ್ಷದ ಫಲಾಫಲ [illegible] ಅನಿಷ್ಟಗಳ ನಿವಾರಣಾರ್ಥ [illegible] ಫಲಗಳನ್ನು [illegible] ಸಂಕಟಗಳನ್ನು ಪರಿಹರಿಸುವ ಉಪಾಯಗಳನ್ನು ತಿಳಕೊಂಡು ಮುಂದಿನ ಭವಿಷ್ಯ [illegible] ಮಲಬಾರದಲ್ಲಿ ಪ್ರಸಿದ್ಧವಾದ [illegible] "ಕೇರಳ" [illegible] ಗ್ರಂಥಗಳ [illegible] ಬರೆದು ಕಳಿಸುವೆ. [illegible]

ಮೆನೇಜರ, "ಜ್ಯೋತಿಷ ಶಾಸ್ತ್ರ-ಭುವನ," ಚೆಂಡಿಯೆ. ತಾ॥ ಕಾರವಾರ.

ನಮ್ಮ ಪ್ರೆಸ್ಸಿನಲ್ಲಿ

ಗೋಲ ಬಾಕಿ ದಾವೆಯ ಫಾರ್ಮುಗಳು ತಯಾರಿವೆ

ಮಾಮಲತ. ಅಮಲದಾರಿ ಮೊದಲಾದ ಕೋರ್ಟ ವ್ಯವಹಾರದ ಹಾಗೂ ಕಸ್ಟಮ್ಸ್ ಖಾತೆಯ ಫಾರ್ಮುಗಳು ಅಗ್ಗವಾಗಿ ಸಿಗುತ್ತವೆ.

ಮೆನೇಜರ,

ಸ್ಟಾರ ಆಫ್ ಕನರಾ ಪ್ರೆಸ್, ಕುಮಟಾ

ಪ್ರಯಾಣಿಕರ ಅನುಕೂಲತೆ ಬಗ್ಗೆ

ಡೇಲಿ ಮೊಟರ ಸರ್ವಿಸ.



ಕುಮಟೆಯಿಂದ— ಹೊನ್ನಾವರಕ್ಕೆ, ಭಟ್ಕಳಕ್ಕೆ, ಬೈಂದೂರಕ್ಕೆ.

ಕುಮಟೆಯಿಂದ— ಶಿರ್ಶಿ, ಹುಬ್ಬಳ್ಳಿ, ಧಾರವಾಡ.

ಕುಮಟೆಯಿಂದ— ಅಂಕೋಲೆ, ಕಾರವಾರಕ್ಕೆ, ಸದಾಶಿವಗಡಕ್ಕೆ ಹೋಗುವ ಮೋಟಾರಿನ ಟಿಕೇಟುಗಳು ನಮ್ಮಲ್ಲಿ ಪ್ರತಿನಿತ್ಯವೂ ಸಿಗುವವು

ಬಿ. ದಾಸ,
ಏಜಂಟ ಕುಮಟಾ.

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು



೧ ರಾಗದ ಕೈಪೆಟ್ಟಿಗೆ ರೂ. ೩೦, ೪೦, ೬೦, ೭೫, ೧೦೦

೨ ,, ಕಾಲು ಪೆಟ್ಟಿಗೆ ರೂ. ೬೫, ೭೫, ೧೨೦, ೧೫೦

೩. ತಬಲೆ ಜೋಡಿ ರೂ. ೧೬, ೧೮, ೨೦, ೨೫,

೪. ಹಾರ್ಮೋನಿಯಮ ಗ್ಯಾಡ (ಮರಾಠಿ) ರೂ. ೧॥ ತಬಲೆ ಗ್ಯಾಡ ರೂ. ೧॥ ೮.

ವಿಶೇಷ ಮಾಹಿತಿಗೆ ನಮ್ಮ ಮರಾಠಿ ಕ್ಯಾಟಲಾಗ ಪುಕ್ಕಟೆ ಕಳಿಸುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ :- **ಗೋಪಾಳ ಸಖಾರಾಮ ಮತ್ತು ಕಂಪನಿ, ವಿಠ್ಠಲವಾಡಿ ಎದುರಿಗೆ, ೨೬೨ ಕಾಳಬಾದೇವಿ. ಮುಂಬಯಿ,**

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ

ಸು ಕಳೆದ ೪-೫ ವರ್ಷಗಳಿಂದ ನಾವು ಶಿವಮೊಗ್ಗಾ-ತೀರ್ಥಹಳ್ಳಿ-ಆಗುಂಬೆ, ಶಿವಮೊಗ್ಗಾ-ಸಾಗರ-ತಾಳಗುಪ್ಪೆ, ಶಿವಮೊಗ್ಗಾ-ಹರಿಹರ-ದುಗ್ಗಾವತಿ, ಶಿವಮೊಗ್ಗಾ-ಕಳೂರಕಟ್ಟೆ, ಸಾಗರ-ಸೊರಬ-ಶಿರಾಳಕೊಪ್ಪ, ಸಾಗರ-ತೀರ್ಥಹಳ್ಳಿ, ಸಾಗರ-ಕಳೂರಕಟ್ಟೆ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ ಸರ್ವಿಸನ್ನು ನಡೆಸುತ್ತಿದ್ದುದಲ್ಲದೆ ದಕ್ಷಿಣ ಕನ್ನಡ ಜಿಲ್ಹೆಯ ಕಾರ್ಕಳ, ಉಡುಪಿ, ಕುಂದಾಪುರ, ಮಂಗಳೂರ ಹಾಗು ಬೆಳ್ತಂಗಡಿ ಈ ಕಡೆಗೆ " ಕಾರ್ಕಳ ಮೋಟರ ಸರ್ವಿಸಿನ " ವಿದ್ಯಮಾನವೂ, ಬಳ್ಳಾರಿ ಜಿಲ್ಹೆಯ ಹರಪನಹಳ್ಳಿಗೆ " ಲಕ್ಷ್ಮೀ ಮೋಟರ ಸರ್ವಿಸಿನ " ವಿದ್ಯಮಾನವೂ ಪ್ರಯಾಣಿಕರ ಎಲ್ಲ ಸೌಕರ್ಯಗಳ ವ್ಯವಸ್ಥೆ ಮಾಡಿರುತ್ತೇವೆ.

ಉತ್ತರಕನ್ನಡ ಜಿಲ್ಹೆಯ ಪ್ರಯಾಣಿಕರು ಜೋಗ (Gersoppa Falls), ಶಿವಮೊಗ್ಗಾ ಸಾಗರ, ಹರಿಹರ ಮತ್ತು ಮೇಲ್ಕಂಡ ಸ್ಥಳಗಳಿಗೆ ಪ್ರಯಾಣ ಬೆಳೆಸಲು ಅನುಕೂಲವಾಗಬೇಕೆಂದು ಶಿವಮೊಗ್ಗಾ, ಸಾಗರ, ಜೋಗ, ಸಿದ್ದಾಪುರ, ಶಿರ್ಶಿ, ಕುಮಟಾ ಈ ಲೈನಿನಲ್ಲಿ ಮೋಟರ ಸರ್ವಿಸ ಪ್ರಾರಂಭ ಮಾಡಿರುತ್ತೇವೆ

ಕಾಲಕ್ರಮಗಳು.

ಕುಮಟೆಯಿಂದ ಹೊರಡುವದು—	ಬೆಳಿಗ್ಗಿನ ೭ ಘಂಟೆಗೆ.
ಶಿರ್ಶಿಗೆ ಸೇರುವದು—	,, ೧೦ ,,
ಶಿರ್ಶಿಯಿಂದ ಬಿಡುವದು ಶಿವಮೊಗ್ಗಾ ಕಡೆಗೆ—	ಮಧ್ಯಾಹ್ನ ೧ ,,
ಸಾಗರಕ್ಕೆ ಸೇರುವದು (ಸಿದ್ದಾಪುರ ಮಾರ್ಗವಾಗಿ)—	ಸಾಯಂಕಾಲ ೬ ,,
ಸಾಗರದಿಂದ ಶಿರ್ಶಿ ಕಡೆಗೆ ಹೊರಡುವದು—	ಬೆಳಿಗ್ಗಿನ ೬ ,,
ಸಿದ್ದಾಪುರದ ಮೇಲಾಗಿ ಶಿರ್ಶಿಗೆ ಸೇರುವದು—	,, ೧೧ ,,
ಶಿರ್ಶಿಯಿಂದ ಕುಮಟೆಗೆ ಹೊರಡುವದು—	ಮಧ್ಯಾಹ್ನ ೨ ,,
ಕುಮಟೆಗೆ ಸೇರುವದು—	ಸಾಯಂಕಾಲ ೫ ,,

N. B.— ಈ ಮೇಲಿನ ಲೈನುಗಳ ವಿನಹ ಶಿರಶಿಯಿಂದ ಹುಬ್ಬಳ್ಳಿಗೆ ಪ್ರತ್ಯೇಕ ಒಂದು ಸರ್ವಿಸ ಪ್ರಾರಂಭಿಸುವ ಯೋಜನೆ ನಡಾ ಇರುತ್ತದೆ. ಸರ್ವರೂ ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ

SHIMOGA,
22—11—1924.

M. MANJAPPA.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ, ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕೃತಿಯಿಂದಾದ ಬೇನೆಯು ಹೋಗುವದು. ೬೦,೭೦ ವರ್ಷದ ಮುದುಕರ ಶರೀರವು ಕೂಡ ತರುಣರಂತೆ ಪ್ರವರ್ಧಮಾನವಾಗುವದು. (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಪ್ರಾಪ್ತವಾದ ನಪುಂಸಕತ್ವವು ಇಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಆಚೆಗೆ ಹೋಗುವ ವೀರ್ಯವು ಬಂದಾಗುವದು.— ಪರಮಾ ಹಾಗೂ ಗರ್ಮಿಯಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಅದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಅದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವದು ದಿವಸದಲ್ಲಿ ಮೂರುವರೆ ಊಟಮಾಡಿದರೂ ಅನ್ನ ಪಚನವಾಗಿ ಹಸಿವು ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ತಾಪ ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತ ೧॥ ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೪—೪—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚ ಹೆಚ್ಚು ಬೀಳುವದಿಲ್ಲ. [illegible] ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚ ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧—೪—೦ ೩ ಬಾಟ್ಲಿಗೆ ೩—೦—೦, ಡಜನಿಗೆ ೧೩—೮—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಅಫೀಸು ಪೋ. ನಿಪ್ಪಾಣಿ, ಜಿ. ಬೆಳಗಾಂವ.

ಅಮೇರಿಕೆಯ ಪ್ರವಾಸ

(ಕರ್ಮವೀರದೊಳಗಿಂದ)

ಪುಣೆಯ ಫರ್ಗ್ಯುಸನ್ ಕಾಲೇಜಿನ ಕರ್ನಾಟಕಸ್ಥ ಪ್ರೊಫೆಸರರಾದ ಶ್ರೀ ಎಲ್. ಬಿ. ಕುಲಕರ್ಣಿಯವರು ವಿಶೇಷ ವಿದ್ಯಾಭ್ಯಾಸ ಮಾಡಲು ಅಮೇರಿಕೆಗೆ ಹೋಗಿ ಬಂದರು. ಅವರು ಕಳೆದ ತಾ. ೧೯ನೇಗೆ ಧಾರವಾಡದಲ್ಲಿ ತಮ್ಮ ಅಮೇರಿಕೆಯೊಳಗಿನ ಅನುಭವಗಳನ್ನು ಕನ್ನಡದಲ್ಲಿಯೇ ನಿವೇದಿಸಿದರು. ಅವರ ಹೇಳಿಕೆಯೇನಂದರೆ:-

ಪಾಶ್ಚಾತ್ಯರಲ್ಲಿ ಸ್ತ್ರೀ-ಪುರುಷರ ಸಮಾನತ್ವಭಾವವಿದ್ದಂತೆ ಅಮೇರಿಕೆಯಲ್ಲಿಯೂ ಈ ಭಾವವು ಬಳಕೆಯಲ್ಲಿ ರೂಢವಾಗಿದೆ. ಮೊದಲು ಹೇಳಬೇಕಾದುದೇನಂದರೆ, ಅಮೇರಿಕೆಯಲ್ಲಿ ಗಂಡ ಹೆಂಡರು ಕೂಡಿ ಅಡಿಗೆ ಮಾಡುವರು. ಆ ಮೇಲೆ ಗಂಡನು ಎಲ್ಲವನ್ನು ಬಡಿಸಿ, ಹೆಂಡತಿಯನ್ನು ಕರೆದು ಆಕೆಗೆ ಮೊದಲು ಊಟಕ್ಕೆ ಕೂಡ್ರಲಿಕ್ಕೆ ಹೇಳಿ, ಆ ಮೇಲೆ ತಾನು ಕುಳಿತುಕೊಳ್ಳುವನು. ಅಮೇರಿಕೆಯಲ್ಲಿ ಟೆಕ್ಸಾಸ್ ಎಂಬ ಸಂಸ್ಥಾನದ ಅಧಿಪತ್ಯವು ಒಬ್ಬ ಸ್ತ್ರೀಯಳಿಗೆ ಕೊಡಲ್ಪಟ್ಟಿದೆ. ಅಮೇರಿಕಾ ದೇಶದಲ್ಲಿ ಸ್ತ್ರೀಯರು ಪುರುಷರ ಕೂಡ ಯಾವ ವ್ಯವಸಾಯದಲ್ಲಿಯೂ ಹೋರಾಟವನ್ನಾಡುತ್ತಾರೆ. ಸೈನ್ಯದಲ್ಲಿಯೂ ಸ್ತ್ರೀಯರು ಸೇರಲು ಹತ್ತಿದ್ದಾರೆ. ಬೇರೆ ಎಲ್ಲ ವ್ಯಾಪಾರ, ಕಾರಖಾನೆ ಮೊಂತಾದ ವ್ಯವಸಾಯಗಳಲ್ಲಿಯಂತೂ ಅವರು ಬಹಳವಾಗಿ ಸೇರಿಕೊಂಡಿದ್ದಾರೆ. ಪ್ರತಿಯೊಂದು ಕಚೇರಿಯಲ್ಲಿಯೂ ಪುರುಷರಷ್ಟೇ ಮಂದಿ ಸ್ತ್ರೀಯರು ಕೆಲಸ ಮಾಡುತ್ತಿರುವರು. ಅವರಲ್ಲಿ ಅವಿವಾಹಿತರು ಬಹಳ. ಒಂದು ನ್ಯೂಯಾರ್ಕ ಪಟ್ಟಣದಲ್ಲಿಯೇ ೧೫ ವರ್ಷದಿಂದ ೩೦ ವರ್ಷಗಳ ಒಳಗಿನ ಹೆಂಗಸರಲ್ಲಿ ನೂರಕ್ಕೆ ೩೭ರಂತೆ ಅವಿವಾಹಿತರಿರುವರಂತೆ. ಇದಕ್ಕೆ ಮುಖ್ಯ ಕಾರಣವೆಂದರೆ, ಅಮೇರಿಕೆಯ ಸಾಂಪತ್ತಿಕ ಸಮಾಧಾನ ಸ್ಥಿತಿಯನ್ನು ಕಾಯ್ದುಕೊಳ್ಳಲು ಅದಷ್ಟು ಮಂದಿ ಗಂಡಸರು ಹೆಂಗಸರ ಲಗ್ನ ಮಾಡಿಕೊಳ್ಳುವರಿಲ್ಲವಂತೆ. ಹೀಗಾದಲ್ಲಿ ಗಂಡಸರ ಮೇಲೆಯೇ ಅವಲಂಬಿಸಿರುವ ಸ್ತ್ರೀಯರಿಗೆ ಜೀವನವು ಹೇಗೆ ಸಾಗಬೇಕೆಂದು ಅಲ್ಲಿಯ ಸರಕಾರದವರು ಪ್ರತಿಯೊಬ್ಬ ಸುಶಿಕ್ಷಿತ ಸ್ತ್ರೀಗೂ ಅವಳನ್ನು ನೌಕರಿಯಲ್ಲಿ ತೆಗೆದುಕೊಂಡರೆ ಕನಿಷ್ಠ ೧೫೦ ರೂ. ಗಳಷ್ಟಾದರೂ ತಿಂಗಳ ಸಂಬಳವನ್ನಾಗಿ ಕೊಡಬೇಕೆಂದು ವಿಧಿಸಿದ್ದಾರೆ. ಸ್ತ್ರೀ-ಪುರುಷರು ಬಹುವಾಗಿ ಅವಿವಾಹಿತರಿದ್ದರೂ ಅವರಲ್ಲಿ ದುರ್ವರ್ತನೆಗಳು ನಾವು ಕಲ್ಪಿಸುವಂತೆ ಕಂಡುಬರುವದಿಲ್ಲ. ಅವಿವಾಹಿತರಾಗಿದ್ದರೂ ತಮ್ಮ ನೀತಿಯನ್ನು ಕಾಯ್ದುಕೊಳ್ಳಲು ಅಲ್ಲಿಯ ಅತಿಶಯವಾದ ಕೌಶಲ ಹವಣೆಯೇ ಸಹಕಾರಿಯಾಗಿದೆ. ಹೊರಗಾಗಿ ಸ್ತ್ರೀ-ಪುರುಷರಲ್ಲಿ ಅಲ್ಲಿ ಸಖ್ಯವು ಹೆಚ್ಚು. ನಮ್ಮ ದೇಶದಲ್ಲಿ ಪುರುಷರು-ಪುರುಷರುಗಳ ನಡುವೆ ಸಖ್ಯವೂ, ಸಲಗೆಯೂ, ಚೇಷ್ಟೆ, ಮುಂತಾದವುಗಳೂ ನಡೆಯುವಂತೆ ಅಮೇರಿಕೆಯಲ್ಲಿಯ ತರುಣರಾಗಲಿ, ವಯಸ್ಕರಾಗಲಿ, ಸ್ತ್ರೀ-ಪುರುಷರ ನಡುವೆ ಅಂಥ ಸಂಬಂಧವು ಯಾವ ಕಾರಣದಿಂದಲೂ ಅಲ್ಲದೆ ನಡೆಯುವದಂತೆ. ಒಟ್ಟಿಗೆ ಅಲ್ಲಿಯ ಸಾಮಾಜಿಕ ಸ್ಥಿತಿಯು ಬಹು ಮುಂದುವರಿದದ್ದು.

ಅಲ್ಲಿಯ ಶೈಕ್ಷಣಿಕ ಪ್ರಗತಿಯಾದರೂ ನಮಗೆ ಸೋಜಿಗವಾಗಿ ಕಂಡುಬರುತ್ತದೆ. ಅಮೇರಿಕೆಯ ಪ್ರಾಥಮಿಕ ಶಾಲೆಗಳಲ್ಲೆಲ್ಲ ಸ್ತ್ರೀಯರೇ ಶಿಕ್ಷಕರು. ಚಿಕ್ಕ ಮಕ್ಕಳ ಅಧ್ಯಾಪನ ಕಾರ್ಯವು ಸ್ವಲ್ಪ ಕಠಿಣವಾದದ್ದಾದ ಪುರುಷರಿಂದ ಆಗದೆಂದು ಸ್ತ್ರೀಯರನ್ನೇ ಈ ಕಾರ್ಯಕ್ಕೆ ನಿಯಮಿಸುವರು. ಈ ಶಿಕ್ಷಕಿಯರು ತಮ್ಮ ಚಿಕ್ಕ ವಿದ್ಯಾರ್ಥಿಗಳನ್ನು ಬಯಲಿನಲ್ಲಿಯಾಗಲಿ, ತೋಟದಲ್ಲಿಯಾಗಲಿ, ಕರೆದುಕೊಂಡು ಹೋಗಿ, ಅವರಿಗೆ ರುಚಿಸುವಂತೆಯೂ, ಅಪ್ರಿಯವಾಗದಂತೆಯೂ ಪ್ರತ್ಯಕ್ಷ ಆಟನೋಟದ ಪಾಠಗಳನ್ನೇ ಕಲಿಸುವರಲ್ಲದೆ, ಹಿಂದುಸ್ಥಾನದಲ್ಲಿಯಂತೆ ಪಾಟಿ ಪೆನ್ಸಿಲುಗಳನ್ನು ಕೊಟ್ಟು ತೀಡುವದು, ಪಾಠ ಮಾಡುವದು ಮುಂತಾದವುಗಳನ್ನು ಎಂದಿಗೂ ಹೇಳರು. ಹಾಯಸ್ಕೂಲು ಅಥವಾ ಮಾಧ್ಯಮಿಕ ಶಾಲೆಗಳಲ್ಲಿಯೂ ಸ್ತ್ರೀಯರು ಶಿಕ್ಷಕಿಯರಿರುವರು. ಕಾಲೇಜ ಅಥವಾ ಉಚ್ಚ ವರ್ಗಗಳಲ್ಲಿ ಮಾತ್ರ ಪುರುಷರೇ ಶಿಕ್ಷಕರಾಗಿರುವರು. ಪ್ರಾಥಮಿಕ ಶಾಲೆ ಹಾಗೂ ಹಾಯಸ್ಕೂಲುಗಳಲ್ಲಿಯ ವಿದ್ಯಾರ್ಥಿಗಳಲ್ಲಿ ಗಂಡು ಹುಡುಗರಿಗಿಂತ ಸುಮಾರು ಇಮ್ಮಡಿ ಹೆಚ್ಚು ಹೆಣ್ಣು ಹುಡುಗೆಯರಿರುವರು. ಕಾಲೇಜುಗಳಲ್ಲಿಯೂ ಸ್ತ್ರೀಯರ ಸಂಖ್ಯೆಯು ಪುರುಷರಷ್ಟೆಯಾದರೂ ಇರುವದು. ಅಮೇರಿಕೆಯಲ್ಲಿಯ ವಿದ್ಯಾಪ್ರಸಾರವು ಸುಮಾರು ೧೦ ವರ್ಷಗಳ ಅವಧಿಯಲ್ಲಿ ಇಮ್ಮಡಿ—ಮುಮ್ಮಡಿಯಾಗಿ ಬೆಳೆಯುತ್ತಲಿದೆ. ಎಂಥ ದೂರದ ಹಳ್ಳಿಹಳ್ಳಿಗಳಲ್ಲಿಯೂ ಸ್ತ್ರೀ-ಪುರುಷರು ಪದವೀಧರರಾಗಿರುತ್ತಾರೆ.

ಅಮೇರಿಕೆಯಲ್ಲಿಯ ಆರ್ಥಿಕ ಸ್ಥಿತಿಯೂ ತುಂಬಾ ಸಂತೋಷಕರವಾಗಿದೆ. ಅಲ್ಲಿ ಸ್ತ್ರೀ-ಪುರುಷರೀರ್ವರೂ ಗಳಿಕೆ ಮಾಡುತ್ತಿರುವದರಿಂದ ಪ್ರಪಂಚದ ವೆಚ್ಚವು ವಿಪತ್ತಿಲ್ಲದೆ ಸಾಗುತ್ತದೆ. ಎಂಥ ಸಿರಿವಂತರ ಚಿಕ್ಕ ಮಕ್ಕಳೂ ದುಡಿಮೆಯಿಂದ ರೊಕ್ಕ ಗಳಿಸುವದುಂಟು. ಅಮೇರಿಕೆಯ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷನಾದ

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದ ಯುವ ನಾರಿಯು ತಾನೇ ಮಂಜುಳವಲ್ಲಳು? ಅಂತಹ ಕೇಶರಾಶಿಯನ್ನು ಸ್ತ್ರೀಯು [illegible] ಕೊಂಡಿರುವ ಉಪಕರಣವಾದರೋ.

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ)

[illegible] ಸ್ತ್ರೀಯರಿಗೆ ಅಪರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ [illegible] ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ [illegible] ಯಾಗಿರುತ್ತದೆ. ಈ ಆಯಿಲ್ ತೊಡೆದುಕೊಳ್ಳುತ್ತಲೇ ಮಸ್ತಿಷ್ಕದ [illegible] ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು [illegible] ಉದುರಿ ಬಿದ್ದು ಹೋಗಲಾರವು, ಅಲ್ಲದೆ, ಅವು ದಟ್ಟ [illegible] ದ ಸುಗಂಧವಾದರೋ ಮಧುರವೂ ಮೋಹಕವೂ [illegible]

[illegible] ಎಷ್ಟೋ ಜನರು [illegible] ತಮ್ಮ ಜೀವನವನ್ನು ಕಳೆಯುವರು [illegible] ಈ "ಕಾಮಿನಿಯಾ ಆಯಿಲ್" [illegible] ದಿನದಿಂದ ನಮಗೆ ಮೈಸೂರು [illegible] ಯೋಗ್ಯತಾಪತ್ರವು, ಇತರ [illegible] ಪತ್ರಗಳೂ ದೊರೆತಿವೆ.

[illegible] ರೂಪಾಯಿ 2-10-0, ವಿವಿ. [illegible]

ಅತಿ ಮನೋಹರವಾದ ಸುವಾಸನೆ!

ಒಟ್ಟೋ-ದಿ- ಬ[illegible] ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸಾಯಿ ಮತ್ತು ಅತ್ಯುತ್ತಮವು ಚನ್ನಾಗಿ ಪರೀಕ್ಷಿಸಲ್ಪಟ್ಟು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡುವದು. ಒಂದೇ ಒಂದು ಸಲ ನಿಮ್ಮ ಕೈ ಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿ. ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಸುತ್ತಲು ಸ್ವಾಭಾವಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋ-ದಿಲ್ ಬಹಾರ ನಿಮ್ಮ ಸುತ್ತಲು ಸ್ವಾಭಾವಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. ಈ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವದು. 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4- ಸಣ್ಣ ಸೀಸೆ 1 ಕ್ಕೆ 0-3-0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಒಟ್ಟೋ-ದಿಲ್ ಬಹಾರ್ ಪರಿಮಳ ಕಾಡುಗಳು ಡಜನ್ 1 ಕ್ಕೆ 0-12-0.

Address:- **The Anglo Indian Drug & Chemical Co**
16 Market, **BOMBAY 2**

ತ್ತೆ. ಕೂಲಿಕನ ಚಿಕ್ಕ ಮಗನನ್ನು ಒಂದು ದಿನ ವರ್ತಮಾನಪತ್ರಗಳನ್ನು ಮಾರುತ್ತಿರುವಾಗ್ಗೆ ಶ್ರೀ ಕುಲಕರ್ಣಿಯವರು ನೋಡಿದರು. ಅಮೇರಿಕೆಯಲ್ಲಿ ಎಂಥ ಮನಿಷತ್ಯ ಅಪಮಾನವಿಲ್ಲ. ಅಲ್ಲಿ ಕೂಲಿಯವರು ಮಾಲಕರಾದರು. ತಮ್ಮ ಸಾಮಾನು ಮೊದಲಾದವುಗಳನ್ನೇನಾದರೂ ಒಯ್ಯುವದಿದ್ದರೆ ತಾವೇ ಹೊತ್ತುಕೊಂಡು ಹೋಗಬೇಕಂತೆ. ಒಮ್ಮೆ ಶ್ರೀ ಕುಲಕರ್ಣಿಯವರಿಗೆ ಕೆಲ ಪುಸ್ತಕಗಳನ್ನು ಹೊತ್ತುಕೊಂಡು ಹೋಗುವದಕ್ಕೆ ಒಬ್ಬ ಸೇವಕನು ಬೇಕಾಗಿದ್ದನು, ಅಲ್ಲಿಯ ಯಜಮಾನನು ಅವರಿಗೆ, "ನಿಮಗೆ ಅಮೇರಿಕೆಯ ಪದ್ಧತಿಗಳು ತಿಳಿದಿಲ್ಲವೆಂದು ತೋರುತ್ತದೆ. ಇಲ್ಲಿ ಕೂಲಿಯವರಿಲ್ಲ. ನೀವೇ ನಿಮ್ಮ ಸೇವಕರು" ಎಂದು ಉತ್ತರ ಕೊಟ್ಟನು. ಕಾಲೇಜದ ಹುಡುಗರ ಎಲ್ಲ ವಿದ್ಯಾರ್ಥಿಗಳೂ ತಮ್ಮ ವಿದ್ಯಾಭ್ಯಾಸದ ವೆಚ್ಚವನ್ನು ತಾವೇ ದುಡಿಮೆಯಿಂದ ಗಳಿಸುತ್ತಾರೆ. ಹಿಂದೀಯರಿಗೆ ಇದೊಂದು ಅನುಕರಣೀಯವಾದ ವಿಷಯವು.

ಅಮೇರಿಕೆಯಲ್ಲಿ ರೈಲು ಮಾರ್ಗಗಳ ನಿಲ್ದಾಣಗಳಿಂದ ಬಹು ದೂರದಲ್ಲಿರುವ ಹಳ್ಳಿ ಹೊಲಗಳಲ್ಲಿಯೂ ಸುಶಿಕ್ಷಿತರು ಇರುವದುಂಟು. ಅವರಿಗೆ ಅಲ್ಲಿ ಟಪಾಲು ಮುಂತಾದವುಗಳ ಸೌಕರ್ಯ, ಟೆಲಿಫೋನ ಅಂದರೆ ದೂರವಾಣಿ ಯಂತ್ರ, ರೇಡಿಯೋ ಅಂದರೆ ಬಹುದೂರದಿಂದ ಕೇಳುವ ಯಂತ್ರ, ಮುಂತಾದವುಗಳೂ, ಮಾಸಪತ್ರಿಕೆ, ವೃತ್ತಪತ್ರಿಕೆಗಳೂ ದೊರಕುತ್ತಿರುವದರಿಂದ ದೊಡ್ಡ ಪಟ್ಟಣದಲ್ಲಿದ್ದಂತೆಯೇ ಆಗುತ್ತದೆ. ರೇಡಿಯೋದಿಂದ ತಮ್ಮ ದೇಶದ ತುಂಬೆಲ್ಲ ನಡೆಯುವ ವ್ಯಾಖ್ಯಾನ ಮೊದಲಾದವುಗಳನ್ನೂ, ಸಂಗೀತ ಮುಂತಾದವುಗಳಲ್ಲಿನ ಶಬ್ದಗಳನ್ನೂ ಬಹು ಸೊಗಸಾಗಿ ಕೇಳಬಹುದು. ಯಂತ್ರ ಹಾಗೂ ರಸಾಯನ ಶಾಸ್ತ್ರಗಳಲ್ಲಿಯ ಹೊಸ ಹೊಸ ಶೋಧನೆಗಳಿಂದಲೂ, ಅವುಗಳ ಉಪಯೋಗದ ಹೆಚ್ಚಳದಿಂದಲೂ ಅಮೇರಿಕೆ ಮೊದಲಾದ ದೇಶಗಳಲ್ಲಿಯ ಜೀವನವು ಅತ್ಯಂತ ಭಿನ್ನವೂ, ಸುಖಮಯವೂ ಆಗಿದೆ.

ವಾಶಿಂಗ್ಟನ್‌ದಲ್ಲಿಯ 'ಕಾಂಗ್ರೆಶನಲ್' ಲಾಯಬ್ರರಿ ಎಂಬ ವಾಚನಾಲಯದಲ್ಲಿ ಒಂದೇ ಕಾಲಕ್ಕೆ ಸುಮಾರು ೨೦೦೦ ಜನ ಏನೂ ವ್ಯತ್ಯಯವಿಲ್ಲದೆ ಶಾಂತವಾಗಿ ಓದುತ್ತ ಕುಳಿತುಕೊಳ್ಳಬಹುದು. ಅಲ್ಲಿ ದೊಡ್ಡ ದೊಡ್ಡ ಪಂಡಿತರಿಗೆ ಬೇಕಾದ ಪುಸ್ತಕಗಳಷ್ಟೇ ದೊರೆಯುತ್ತವೆಂತಲ್ಲ, ಅಲ್ಲಿಯೇ ಅವರ ಭೋಜನ ವ್ಯವಸ್ಥೆಯೂ ಮಾಡಲ್ಪಡುತ್ತದೆ. ಜಗತ್ತಿನಲ್ಲೆಲ್ಲವೂ ವಿಖ್ಯಾತವಾದ ಪುಸ್ತಕಾಲಯವಂತೆ. ಇದರಲ್ಲಿ ಪುಸ್ತಕಗಳನ್ನು ತಂದುಕೊಳ್ಳುವದು, ಮುಂತಾದ ಎಲ್ಲ ಕಾರ್ಯಗಳೂ ವಿದ್ಯುತ್ತಿನ ಸಹಾಯದಿಂದಲೇ ಕಾಲವಿಲಂಬವಿಲ್ಲದೆ ನಡೆಯುತ್ತವೆ.

ಕೈರಾಟೆಯ ಪ್ರಸಾರ.

ಮಹಾತ್ಮರ ಪ್ರವಾಸದಲ್ಲಿ ಬಂಗಾಲದ ಬಂಧು-ಭಗಿನಿಯರು ಮಹಾತ್ಮರಿಗೆ ಖಾದಿಯ ಧೋತರ, ಕೈವಸ್ತ್ರ, ಮೇಜಿನ ಮೇಲೆ ಹಾಸುವ ಅರಿವೆಗಳನ್ನು ಕಾಣಿಕೆಯಾಗಿ ಅರ್ಪಿಸಿದರು. ವಿಶೇಷವಾಗಿ ಭಗಿನಿಯರು ಸ್ವಂತ ನೂತ ನೂಲಿನಿಂದ ತಯಾರಾದ ಖಾದಿಯನ್ನೇ ಅರ್ಪಿಸಿದರು. ಚಿತಗಾಂಗದಲ್ಲಿ ಎಳೆ ಪ್ರಾಯದ ಹುಡುಗಿಯೊಬ್ಬಳು ಸ್ವತಃ ನೂತು ನೆಯ್ದ ನಯನ ಮನೋಹರ ಕೈವಸ್ತ್ರವನ್ನು ಮಹಾತ್ಮರಿಗೆ ಅರ್ಪಿಸಿದರು.

ಮಹಾತ್ಮರು ಕಲಕತ್ತೆಗೆ ಮುಟ್ಟಿದಂದಿನಿಂದ ಅನೇಕ ಕಡೆಗಳಲ್ಲಿ ಗಾಂಧಿ ದಿನವು ಪಾಲಿಸಲ್ಪಡುತ್ತಿತ್ತು. ಸಾಖಾಲಿಯಲ್ಲಿ ೪ನೇ ಗಾಂಧಿ ದಿನಕ್ಕೆ ೩೦ ಮಂದಿ ಭಗಿನಿಯರು ಉಪೋಷಣ ವ್ರತದಿಂದ ಪರಮಾತ್ಮನ ಪ್ರಾರ್ಥನೆ ಮಾಡುತ್ತ ನೂತ ನೂಲಿನ ೨ ಧೋತರಗಳನ್ನು ಮಹಾತ್ಮರಿಗೆ ಅರ್ಪಿಸಿದರು.

ಚಾಂದಪುರದಲ್ಲಿ ಬಹುತರ ಎಲ್ಲರೂ ಸ್ವಂತ ನೂತ ನೂಲನ್ನು ಮಹಾತ್ಮರಿಗೆ ಅರ್ಪಿಸಿದರು.

ಮೈಮನಸಿಂಗದಲ್ಲಿ ನೂರಾರು ಭಗಿನಿಯರು ಸಭೆಗೆ ಚಿತ್ತೈಸಿದರು. ಮಳೆಯು ಸುರಿಯುತ್ತಿತ್ತು ಆದರೂ ಭಗಿನಿಯರು ತಂಡುಗಟ್ಟಿ ಸೇರಿಕೊಂಡಿದ್ದರು. ಭಗಿನಿಯರು ನೂತ ನೂಲನ್ನು ಸಮರ್ಪಿಸಿದರು; ಅದರೊಡನೆ ಚಿನ್ನದ ಬಳೆಗಳನ್ನೂ, ಇತರ ಭೂಷಣಗಳನ್ನೂ ಮಹಾತ್ಮರಿಗೆ ಅರ್ಪಿಸಿದರು.

ಬಂಗಾಲದ ಖಾದಿ ಪ್ರತಿಷ್ಠಾನದವರು ಅಗ್ಗವಾದ ಕೈರಾಟೆಯೊಂದನ್ನು ತಯಾರಿಸಿರುವರು. ಖಾದಿ ಪ್ರತಿಷ್ಠಾನದ ಚಾಲಕರು ಶ್ರೀ ಸತೀಶ ಬಾಬು ದಾಸರು. ಇವರ ಕೈರಾಟೆಯ ಬೆಲೆ ೨|| ರೂಪಾಯಿ

ವಿವಿಧ ಸಂಗ್ರಹ.

ಇಷ್ಟಾದರೂ ಲಜ್ಜೆಯಿಲ್ಲ!

ಹಿಂದುಸ್ಥಾನದೊಳಗಿನ ಕರ ಎತ್ತುವಳಿ ಚೌಕಶಿಗಾಗಿ ಹಿಂದುಸ್ಥಾನ ಸರಕಾರವು ಸರ್ ಚಾರ್ಲ್ಸ ಟೊ[illegible]ರವರ ಯಜಮಾನತ್ವದಲ್ಲಿ ಒಂದು ಮಂಡಳವನ್ನ ನೇಮಿಸಿತು. ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಈ ಕಮಿಟಿಯು ಪ್ರಜಾಹಿತವಾಗದೆಂದು ಅಭಿಪ್ರಾಯಪಟ್ಟು ಮಂಡಳವನ್ನು ವಿಸರ್ಜಿಸಲು ಠರಾಯಿಸಿದ್ದರು ಆದರೂ ಸರಕಾರವು ಕಮೀಟಿಯನ್ನು ನೇಮಿಸಿಕೊಂಡು, ಅದರ ವಿದ್ಯಮಾನ ಚೌಕಶಿ ನಡಿಸಿದೆ. ಈ ಕಮೀಟಿಯಲ್ಲಿ ನಾಲ್ವರು ಯುರೋಪಿಯನ್ ಮೆಂಬರರಿರುವರು, ಮೂವರು ಹಿಂದೀಯರು: ಡಾ|| ಹೈದರ, ಡಾ|| ಪರಾಂಜಪೇ ಹಾಗು ಬರದ್ವಾನದ ಮಹಾರಾಜರು. [illegible] ಸಭಾಸದರೆಲ್ಲರೂ ಪ್ರಾಂತದ ಪ್ರವಾಸಕ್ಕೆ ಉಟಕಮಂಡಿಗೆ ಹೋಗಿದ್ದರು. ಉಟಕಮಂಡದಲ್ಲಿಯ ಯುರೋಪಿಯನ್ ಸಭಾಸದರಿಗೆ ಗವ್ಹರ್ನರ ದೊರೆಗಳ ಭವನದಲ್ಲಿ ವ್ಯವಸ್ಥೆಯಾಯಿತು. ಹಿಂದೀ ಸಭಾಸದರಿಗೆ ಮಾತ್ರ [illegible]. ಡಾ|| ಹೈದರರವರು [illegible] ಹೋಟೆಲಿನಲ್ಲಿ ಉಳಕೊಂಡರು. ಬರದ್ವಾನದ ಮಹಾರಾಜರು ಕುನ್ನೂರದ ವರೆಗೆ ಹೋಗಿ ಬಂದು ಬಿಡಾರ ಹುಡುಕಿ ತ್ಯಾಗರಾಜರ ವ್ಯವಸ್ಥೆ ಮಾಡಿಕೊಂಡರು. ಡಾ|| ಪರಾಂಜಪೇಯವರು ಬಿಡಾರಕ್ಕಾಗಿ ಬಹಳ ಹುಡುಕಿದರು. ಕಟ್ಟಕಡೆಗೆ [illegible] ಒಂದು ಧಾರ್ಮಿಕ ಹೋಟೆಲಿನಲ್ಲಿ ಕೋಣೆ ಕೊಂಡು ಉಳಿದರು. ಕಮೀಟಿ ಮೆಂಬರರಿಗೆ ಆಸನಗಳನ್ನು ಕೊಡುವಾಗಲೂ ತರ-ತಮ ಭಾವದಿಂದಲೇ; ಎಲ್ಲ [illegible] ನ್ಯಾಯವಂತೆ! ಯುರೋಪಿಯನ್ನರಿಗೆ ಚಲೋ ಆಸನಗಳು! ಹಿಂದೀಯರಿಗೆ ಜೀರ್ಣವಾದ ಆಸನಗಳು! ಬರದ್ವಾನದ ಮಹಾರಾಜರು ಇದನ್ನು ನೋಡಿ, ಸಂತಪ್ತರಾದರಂತೆ! "ಚಾರ್ಲಸ್ ಸಾಹೇಬರೇ, ಇದೇ ನಿಮ್ಮ ಸರಕಾರವೇನು? ಹೀಗೆ ಭೇದ ಬುದ್ಧಿಯ ವ್ಯವಸ್ಥೆ ಮಾಡಲು ನೀವೇ ಕಾರಣರೇನು?" ಎಂದು ಉದ್ಗರಿಸಿದರಂತೆ! ಉಗಿಬಂಡಿಯ ಪ್ರವಾಸದಲ್ಲಿಯೂ ನಮ್ಮ ಹಿಂದೀಯರಿಗಾಗಿ ವಿಶೇಷ ವ್ಯವಸ್ಥೆ. ಡಾ|| ಹೈದರರಿಗೆ ೧ನೇ ವರ್ಗದ ಟಿಕೇಟು ಸಿಗದೆ, ಅವರು ಬರದ್ವಾನದ ಮಹಾರಾಜರ ಡಬ್ಬಿಯಲ್ಲಿ ಹೋಗಿ ಕುಳಿತುಕೊಳ್ಳಬೇಕಾಯಿತಂತೆ! ಇಷ್ಟಾದರೂ ನಮ್ಮ ಹಿಂದೀಯರು ಅಪಮಾನಗಳನ್ನೆಲ್ಲ ಸಹಿಸಿ, ಕಮೀಟಿಯ ಮೆಂಬರರಾದರು. ಕಮೀಟಿಯ ಸಭಾಸದತ್ವವನ್ನು ಹಿಂದೀ ಲೋಕನಾಯಕರ ಮತದಂತೆ ತ್ಯಜಿಸಿಬಿಟ್ಟಿದ್ದರೆ, ಮೆಂಬರರಿಗೆ ಲಜ್ಜೆಯಿರುವದೆಂದು ಸ್ಪಷ್ಟವಾಗುತ್ತಿತ್ತು. ಆದರೆ, ನಮ್ಮ ಹಿಂದೀ ಸಭಾಸದರು ಬಹಳೇ ಸಹನಶೀಲರು

⁂

ಮದ್ದಿಗೂ ಮದ್ಯ ಬೇಡ!

ಮದ್ಯಪಾನವನ್ನು ನಿರ್ಮೂಲಿಸಲು ಸರಕಾರಕ್ಕೆ ಹೇಳಿಕೊಂಡರೆ, ಮದ್ಯವು ಮದ್ದಿಗೆ ಬೇಕು ; ಮಿತಿಯಿಂದ ಅದನ್ನು ಕುಡಿದರೆ, ಆರೋಗ್ಯಕ್ಕೆ ಅನುಕೂಲವು; ಮುಂತಾದ ಸಿದ್ಧಾಂತಗಳ ಪ್ರತಿಪಾದನೆಯಾಗುತ್ತದೆ. ಅದಕ್ಕೆ ಉತ್ತರವನ್ನು ಕಲಕತ್ತೆಯ ಸರ್ ಲಿಯೋನೋಲ್ಡ ರೋಜರ್ಸ ಡಾಕ್ಟರರು ಕೊಟ್ಟಿರುವರು. ಸರ್ ಲಿಯೋನೋಲ್ಡರವರು "ಸ್ಕೂಲ ಆಫ್ ಟ್ರೋಪಿಕಲ್ ಡಿಸೀಜೆಸ್" ಅಂದರೆ, ಉಷ್ಣ ಪ್ರದೇಶದೊಳಗಿನ ರೋಗಗಳ ಪ್ರಯೋಗ ಶಾಲೆಯ ಮುಖ್ಯ ಚಾಲಕರು. ಇವರು ಉಷ್ಣ ಪ್ರದೇಶದೊಳಗಿನ, ಅಂದರೆ, ನಮ್ಮತ್ತ ಕಡೆ ಹರಡುವ ರೋಗಗಳ ಮೇಲೆ ಉಪಾಯಯೋಜನೆ ಮಾಡಲು ಇತ್ತ ೨೦–೨೫ ವರ್ಷಗಳಿಂದ ದುಡಿಯುತ್ತಿರುವರು. ಡಾಕ್ಟರರು 'ಪ್ರೆಕ್ಟಿಶನರ' ಮಾಸಪತ್ರಿಕೆಯಲ್ಲಿ ಒಂದು ಲೇಖ ಬರೆದು, ಮದ್ಯವು ಮದ್ದಿಗೂ ಅವಶ್ಯವಿಲ್ಲ ; ಆರೋಗ್ಯಕ್ಕೂ ಹಾನಿಕರವು; ಎಂದು ಸ್ವಾನುಭವದಿಂದ ಸಿದ್ಧಪಡಿಸಿರುವರು. ಅವರು ಹೇಳುವದೇನಂದರೆ:- "ನಾನು ಮದ್ಯ ಬಿಟ್ಟು ೨೨ ವರುಷಗಳಾದವು. ಹಿಂದುಸ್ಥಾನದ ಉಷ್ಣ ಪ್ರದೇಶದಲ್ಲಿ ನಾನು ಪರಿಶ್ರಮದಿಂದ ದುಡಿಯುತ್ತಿದ್ದೇನೆ. ಇದೇ ೨೨ ವರ್ಷಗಳಲ್ಲಿ ಹಿಂದೇ ಒಂದು ವರ್ಷ ನಾನು ಶೀತಲ ಹವೆಯ ಬೆಟ್ಟದ ಪ್ರದೇಶದಲ್ಲಿದ್ದೆನು. ಒಮ್ಮೆ ಸಹ ನಾನು ರಜೆ ಪಡಕೊಳ್ಳಲಿಲ್ಲ. ಮದ್ಯ ಬಿಟ್ಟು ಕೆಲಸ ಮಾಡಿದರೆ, ನನ್ನ ಪ್ರಕೃತಿಯು ಕೆಡುವದೆಂದು ನನಗೆ ಅನೇಕ ಮಿತ್ರರು ಬೆದರಿಸಿದರು. ಸಂಧ್ಯಾಸಮಯ ಮಿತಿಯಿಂದ ಮದ್ಯ ಕುಡಿಯುತ್ತಿದ್ದರೆ, ಪ್ರಕೃತಿಯು ನೆಟ್ಟಗಿರುತ್ತದೆಂದು ನನಗೆ ಉಪದೇಶ ಕೊಟ್ಟರು. ಆದರೆ, ಅವರ ಬೆದರಿಕೆಯೂ, ಉಪದೇಶವೂ ತಪ್ಪು ಗ್ರಹಿಕೆಯೆಂದು ಸ್ವಾನುಭವದಿಂದ ಸಿದ್ಧವಾಗಿದೆ ಮತ್ತೂ ಮುಂದಾಗಿ ನಾನು ಹೇಳುವದೇನಂದರೆ, ಮದ್ಯಪಾನವನ್ನು ಬಿಟ್ಟಲ್ಲಿ ಉಷ್ಣ ಪ್ರದೇಶದಲ್ಲಿ ಆಯುರ್ಮಾನವು ಸಹ ಬೆಳೆದು, ತರತರದ ರೋಗಗಳಿಗೆ ಬಲಿಬೀಳುವದು ಕಡಿಮೆಯಾಗುವದು." ಶೀತ ಪ್ರದೇಶದಲ್ಲಿಯೂ ಮದ್ಯ ಕುಡಿಯಬೇಕಾಗಿಲ್ಲವೆಂದು ಅಮೇರಿಕಾ, ರಶಿಯಾ, ಸ್ಕಾಟಲಂಡ ಮುಂತಾದ ದೇಶಗಳಲ್ಲಿ ನಡೆದ ಮದ್ಯಪಾನ ನಿಷೇಧಕ ಚಳವಳಿಯಿಂದ ಸ್ಪಷ್ಟವಾಗುತ್ತಿದೆ. ಸರ್ ರೊನೆಲ್ಡ ಮಾರ್ಟೀನ್ ಎಂಬ ಇನ್ನೊಬ್ಬ ಡಾಕ್ಟರರೂ ಸರ್ ರೋಜರ್ಸರವರಂತೆಯೇ ಅಭಿಪ್ರಾಯಪಟ್ಟಿರುವರು.

⁂

ಸ್ತ್ರೀಯರ ಮಾರಾಟ!

ಹಿಮಾಲಯದ ಗುಡ್ಡಗಾಡು ಪ್ರದೇಶದಲ್ಲಿ ಪತಲಿ ಸಂಸ್ಥಾನವಿದೆ. ಇಲ್ಲಿಯ ಪ್ರಜೆಗಳು ತಮ್ಮ ಎಳೆ ಎಳೆ ಹುಡುಗಿಯರನ್ನೂ, ಹೆಂಡರನ್ನೂ ಬ್ರಿಟಿಶ ರಾಜ್ಯದಲ್ಲಿ ತಂದು ಮಾರುತ್ತಿರುವರು! ಪ್ರಜೆಗಳು ಬಹು ಬಡವರು ; ವ್ಯಾಪಾರವಿಲ್ಲ ; ಉದ್ಯೋಗವಿಲ್ಲ ; ಕಲೆಗಳಿಲ್ಲ. ಸಂಸ್ಥಾನಿಕರಂತೂ ಪ್ರಜೆಗಳ ಮೇಲೆ ಕರಗಳನ್ನು ಹೇರಿ ಹಿಂಡುತ್ತಿರುವರು. ಆದರಿಂದ ಪ್ರಜೆಗಳು ಬಹಳೇ ದರಿದ್ರರಾಗಿರುವರು. ಬಡತನದ ಮೂಲಕ ಹೆಂಡರನ್ನು ಮಾರಿದರೆ, ಆ ರಕಮಿನ ಮೇಲೆಯೂ ಸಂಸ್ಥಾನಿಕರಿಗೆ "ರೀತ" ಕರ ಎಂಬ ಕರ ಕೊಡ

ಯೇನಂತೆ! ಇಂಥ ರಾಜ್ಯಕಾರಭಾರ ನಡೆದ ಬಳಿಕ, ಪ್ರಜೆಗಳು ಗೋಳಿಡದೆ ಮತ್ತೇನು ಮಾಡುವರು ?

⁂

ಈ ಚಿತ್ರ ನೋಡಿರಿ !

ನೇಪಾಳದ ಮಹಾರಾಜರು ಪ್ರಜಾವತ್ಸಲರು. ತಮ್ಮ ರಾಜ್ಯದೊಳಗೆ ಗುಲಾಮ ಪದ್ಧತಿಯನ್ನು ಮಹಾರಾಜರು ನಿರ್ಮೂಲಿಸಹತ್ತಿ ಆ ಕಾರ್ಯಕ್ಕಾಗಿ ೫೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡತಕ್ಕವರಾಗಿರುವರು. ನಿತ್ಯವೂ ಯಜಮಾನರು ತಂಡತಂಡವಾಗಿ ದರ್ಬಾರಕ್ಕೆ ಹೋಗಿ ಗುಲಾಮರನ್ನು ಮಹಾರಾಜರ ಸ್ವಾಧೀನ ಮಾಡಿ, ನಿಶ್ಚಿತ ಧನವನ್ನು ತೆಗೆದುಕೊಳ್ಳುತ್ತಿರುವರು, ಅನೇಕ ಔದಾರ್ಯವಂತ ಗೃಹಸ್ಥರು ತಮ್ಮ ತಮ್ಮ ಗುಲಾಮರಿಗೆ ಉಚಿತವಾಗಿ ಸ್ವಾತಂತ್ರ್ಯದಾನ ಮಾಡುತ್ತಿರುವರು. ಒಂದು ಚಮತ್ಕಾರವೂ ಸಂಭವಿಸಹತ್ತಿದೆ. ಸ್ವಾತಂತ್ರ್ಯ ದೊರಕಿದ ಗುಲಾಮರು ಪುನಃ ತಂತಮ್ಮ ಸಾವುಕಾರರಲ್ಲಿಯೇ ಉಳಕೊಳ್ಳುವರಂತೆ! ನೇಪಾಳದ ಮಹಾರಾಜರ ಔದಾರ್ಯವನ್ನೂ, ಸಾವುಕಾರರ ಪರೋಪಕಾರವನ್ನೂ, ಗುಲಾಮರ ಕೃತಜ್ಞತೆಯನ್ನೂ ಎಷ್ಟೆಂದು ಹೇಳುವದು? ಸನಾತನ ಮಹಾರಾಜರ ಧರ್ಮರಾಜ್ಯದೊಳಗಿನ ಕಥೆಯಿದು !

⁂

ತ್ರಾವಣಕೋರದ ಪ್ರಗತಿ !

ತ್ರಾವಣಕೋರ ಸಂಸ್ಥಾನದಲ್ಲಿ ಶಿಕ್ಷಣವು ಭರದಿಂದ ಸಾಗುತ್ತಲಿದೆ. ಶಿಕ್ಷಣಕ್ಕಾಗಿ ೧೯೨೪-೨೫ನೇ ಸಾಲಿನಲ್ಲಿ ೩೬,೫೦,೯೬೭ ರೂಪಾಯಿಗಳು ಖರ್ಚಾದವು. ಈ ಖರ್ಚಿನಲ್ಲಿ ಶಾಲೆಗಳ ಕಟ್ಟೋಣ, ವಾಚನಾಲಯ ಮುಂತಾದವುಗಳಿಗಾಗಿ ಖರ್ಚಾದ ರಕಮುಗಳು ಬೇರೆ. ಇವನ್ನೆಲ್ಲ ಹಿಡಿದರೆ ತಲೆಯೊಂದಕ್ಕೆ ೧೫ ಆಣೆ ಖರ್ಚಾಗುತ್ತದೆಂದು ಹೇಳಬಹುದು. ೫,೫೫,೦೩೩ ಹುಡುಗರು ಕಲಿಯುತ್ತಿರುವರು. ಮಹಮ್ಮದೀಯ, ಕ್ರೈಸ್ತ, ಮುಳಿಯಾಳಿ, ಬ್ರಾಹ್ಮಣ ಹಾಗು ಅಸ್ಪೃಶ್ಯ ಇವರಿಗಾಗಿ ಸ್ವತಂತ್ರ ಶಾಲೆಗಳಿವೆ. ಖಾಸಗಿ ಶಾಲೆಗಳಿಗಾಗಿ ೭,೩೧,೦೬೭ ರೂಪಾಯಿ ದಾನಕ ಕೊಡೋಣಾಗುತ್ತವೆ. ಬೇಸಾಯ, ಶಿಕ್ಷಣ, ಆಯುರ್ವೇದ, ನೇಯ್ಗೆ ಇವುಗಳನ್ನು ಕಲಿಸುವ ಶಾಲೆಗಳು ಸ್ವತಂತ್ರವಿವೆ.

⁂

ನಿರ್ಲಜ್ಜ ಮುದ್ದು !

ಕಳೆದ ಮಾರ್ಚ ತಿಂಗಳಲ್ಲಿ ವಿಲಾಯತಿಯೊಳಗಿನ ಪಾರ್ಲಿಮೆಂಟಿನಲ್ಲಿ ಒಂದು ವಿಲಕ್ಷಣ ಪ್ರಕಾರವು ಸಂಭವಿಸಿತು. ವಿನಸ್ಟನ್ ಚರ್ಚಿಲ್‌ರವರು ಬ್ರಿಟಿಶ ಸರಕಾರದ ಕೋಶ ಮಂತ್ರಿಗಳು. ಇವರು ಕಳೆದ ಮಾರ್ಚ ತಿಂಗಳಲ್ಲಿ ಬ್ರಿಟಿಶ ಸರಕಾರದ ಜಮಾಖರ್ಚಿನ ಪತ್ರಿಕೆಯನ್ನು ಸಾದರಪಡಿಸಿದರು. ಸಾಹೇಬರು ೨-೩ ತಾಸುಗಳ ವರೆಗೆ ಅಸ್ಖಲಿತವಾಗಿ ಮಾತಾಡಿದರು. ಪಾರ್ಲಿಮೆಂಟಿನ ಸಭಾಸದರೂ, ಪ್ರೇಕ್ಷಕವರ್ಗವೂ ಸಾಹೇಬರ ವಕ್ತೃತ್ವ ಕೇಳಿ, ಗಾದರಂತೆ ! ಚರ್ಚಿಲ್‌ರವರ ಪತ್ನಿಯವರೂ ಪತಿಯವರ ಮಾತುಗಳನ್ನು ಕೇಳಿ ಪರವಶರಾಗಿ, ಭಕ್ಕನೆ ಬಂದು ಚರ್ಚಿಲ್‌ರವರಿಗೆ ಮುದ್ದುಕೊಟ್ಟರು ! ಎಂಥ ಸುಧಾರಣೆಯ ಪ್ರೇಮ ! ನಿರ್ಲಜ್ಜತನವೇ ಸುಧಾರಣೆಯೆಂದು ಕಾಡು ಜನಾಂಗದ ಭಾರತೀಯರಿಗೆ ತೋರಬಹುದು !

⁂

ಪಾಶ್ಚಾತ್ಯರ ಸ್ತ್ರೀಸ್ವಾತಂತ್ರ್ಯ

ಅಮೇರಿಕೆಯಲ್ಲಿ ಪಾಶ್ಚಾತ್ಯ ಸ್ತ್ರೀಯರ ಅನೇಕ ಸ್ವಾತಂತ್ರ್ಯ ಲೀಲೆಗಳು ಕಂಡುಬರುತ್ತಿವೆ. ಮದುವೆಯ ಕುಚೇಷ್ಟೆಗಳೇ ವಿಶೇಷವಾಗಿ ಕಂಡುಬರುತ್ತವೆ. ಮೇರಿ ಸ್ಪೇನ್ಸರ ಹೆಸರಿನ ಸ್ತ್ರೀಯೊಬ್ಬಳು ಒಂದಲ್ಲ, ಎರಡಲ್ಲ, ಹನ್ನೊಂದು ಬಾರಿ ಮದುವೆ ಮಾಡಿಕೊಂಡು ಮೆರೆದಳು ! ಕೆಲಿಫೋರ್ನಿಯಾದಲ್ಲಿ ಕ್ಲೆಮಂಟ ರುಇಸ್ಕು ಹೆಸರಿನ ಸ್ತ್ರೀಯು ಮೂರು ವರುಷಗಳಲ್ಲಿ ಹದಿಮೂರು ಮಂದಿ ಗಂಡಸರೊಡನೆ ಸಂಸಾರ ನಿರ್ವಾಹಮಾಡಿದಳಂತೆ ! ನೆಬ್ರಾಸ್ಕಾ ಪಟ್ಟಣದೊಳಗೆ ಡಬ್ಲ್ಯೂ. ಬ್ರೌಂಡಕೆಂಡ ಹೆಸರಿನ ಹೆಂಗಸಿರುವಳು. ಇವಳು ಸಂಸಾರಸುಖಕ್ಕಾಗಿ ಪಾತರಗಿತ್ತಿಯಂತೆ ಒಬ್ಬ ಗಂಡನಿಂದ ಇನ್ನೊಬ್ಬ ಗಂಡನನ್ನು ಮಾಡಿಕೊಳ್ಳುತ್ತ ಕಟ್ಟಕಡೆಗೆ ಹದಿನಾಲ್ಕನೇ ಗಂಡನೊಡನೆ ಸುಖದಿಂದ ಇದ್ದುಕೊಂಡಿದ್ದಾಳಂತೆ ! ಪಾಪ ! ಇದ್ದುಕೊಳ್ಳಲಿ, ಇನ್ನೊಬ್ಬ ಸ್ತ್ರೀಯಳ ಸಾಹಸವನ್ನು ಎಪ್ಪಲಿಯಸ್ ಎಂಬ ಗೃಹಸ್ಥರು ತಮ್ಮ ದಿನಚರಿಯಲ್ಲಿ ನಮೂದಿಸಿರುವರು. ಈ ಸ್ತ್ರೀಯು ೨೨ ಮಂದಿಗಳೊಡನೆ ಸಂಸಾರ ಮಾಡಿದಳು, ಕೊನೆಗೆ, ೨೩ನೇ ಗಂಡನೂ ಸತ್ತನು ! ಅನಾಥಳು ಸನಾಥಳಾಗಲು ಗಿರಾಕಿ ಹುಡುಕುತ್ತಿರುವಲ್ಲಿ, ಕಾಯಿದೆಯಿಂದ ಹಾಗೆ ಮದುವೆಯಾಗದಂತೆ ಪ್ರತಿಬಂಧವಾಯಿತು ! ಆಗ ಅವಳು ನಿರುಪಾಯಳಾಗಿ ವಿಧವೆಯಾಗಿ ಉಳಿಯಬೇಕಾಯಿತು ! ಸ್ತ್ರೀ ಸ್ವಾತಂತ್ರ್ಯ ಪ್ರಕಾರ ಕಾಣಿಸಿತೆ !

⁂

ಜಗನ್ನಾಥ ಪುರಿ ದೇವಾಲಯ.

ಪುರಿಯ ಜಗನ್ನಾಥ ದೇವಾಲಯವು ಬಹಳ ಪ್ರಖ್ಯಾತಿಪಡೆದ ದೇವಾಲಯವಾಗಿದೆ. ಇಲ್ಲಿ ನಡೆಯುವ ಉತ್ಸವಕ್ಕೆ ದೇಶದ ಎಲ್ಲಾ ಕಡೆಗಳಿಂದಲೂ ಲಕ್ಷ ಸಂಖ್ಯೆಯಿಂದ ಜನರು ಬಂದು ಸೇರುತ್ತಾರೆ. ಈ ದೇವಾಲಯದೊಳಗೆ ೪ ಮುಖ್ಯ ಭಾಗಗಳಿವೆ. ಮೊದಲನೆಯದು ಭೋಗಮಂಟಪ. ಈ ಮಂಟಪವನ್ನು ೪೦ ಲಕ್ಷ ರೂಪಾಯಿ ವೆಚ್ಚಮಾಡಿ ಮರಾಠರು ಕಟ್ಟಿಸಿದ್ದರೆಂದು ತಿಳಿದು ಬರುತ್ತದೆ. ಇದು ೪೦ ಅಡಿ ಚೌಕವುಳ್ಳದ್ದಾಗಿದೆ. ಎರಡನೆಯದು ನಾಟ್ಯಮಂದಿರ. ಇದು ಸುಮಾರು ೭೦ ಅಡಿ ಚಚ್ಚೌಕವಾಗಿದೆ. ನಾಟ್ಯಗಳೂ, ಭಜನೆ ಮೊದಲಾದವುಗಳೂ ಈ ಮಂದಿರದಲ್ಲಿ ನಡೆಯುತ್ತವೆ. ಜಗಮೋಹನ ಮಂದಿರವು ಮೂರನೆಯದು. ಈ ಮಂದಿರದಿಂದ ಯಾತ್ರಸ್ಥರು ದೇವರ ದರ್ಶನ ತಕ್ಕೊಳ್ಳುತ್ತಾರೆ. ಒಳಗಿನ ಮಂದಿರ(ಗರ್ಭಗೃಹ)ಕ್ಕೆ ಬಡದವಾಲ್ ಎಂಬ ಹೆಸರಿದೆ. ಇಲ್ಲಿ ಶ್ರೀ ಜಗನ್ನಾಥನ, ಅವನ ಪತ್ನಿಯಾದ ಲಕ್ಷ್ಮಿಯ, ಬಲಭದ್ರನ ಮತ್ತು ಸುಭದ್ರೆಯ ಪ್ರತಿಮೆಗಳಿವೆ. ಈ ಮಂದಿರದೊಳಗೆ ಹೋಗಲು ದೇವಾಲಯದ ಅಧಿಕಾರಿಗಳಿಂದ ಪ್ರತ್ಯೇಕ ಅಪ್ಪಣೆ ಪಡೆಕೊಳ್ಳಬೇಕು. ಇದರೊಳಗೆ ಕತ್ತಲೆಯಾಗಿರುವದರಿಂದ ಮೂರ್ತಿಗಳನ್ನು ನೋಡಹೋಗುವವರು ದೀಪ ಹಿಡುಕೊಳ್ಳಬೇಕಾಗುತ್ತದೆ. ಮೂರ್ತಿಗಳು ಮರದವಿದ್ದು, ಅವು ಬಹಳ ಹರುಕು ಮುರುಕಾಗಿವೆಯೆಂದೂ, ಅವು ಸಮುದ್ರದಿಂದ ಮೇಲಕ್ಕೆ ಬಂದವುಗಳೆಂದೂ ಅಲ್ಲಿನವರು ಹೇಳುತ್ತಾರೆ. ಈ ದೇವಾಲಯಕ್ಕೆ ಇರುವ ಉಂಬಳಿ ಆಸ್ತಿಗಳಿಂದ ವರ್ಷಕ್ಕೆ ಸುಮಾರು ೪॥ ಲಕ್ಷ ರೂಪಾಯಿಗಳ ಹುಟ್ಟುವಳಿ ಬರುವದಲ್ಲದೆ, ಯಾತ್ರಿಕರಿಂದ ವರ್ಷಂಪ್ರತಿ ೬ ಲಕ್ಷ ರೂಪಾಯಿಗಳಷ್ಟು ಕಾಣಿಕೆಯಾಗಿ ಸಿಗುತ್ತದೆ. ಧನಿಕರಾದ ಕೆಲವು ಯಾತ್ರಸ್ಥರು ಸಾವಿರಗಟ್ಟಲೆ ಕಾಣಿಕೆಯಿಕ್ಕುತ್ತಾರೆ. ಈ ದೇವಾಲಯದ ಫಂಡಿನಿಂದ ೨೦೦೦೦ ಜನರು ಪೋಷಿಸಲ್ಪಡುತ್ತಾರೆ. ಇಲ್ಲಿರುವ ಒಂದು ವಿಶೇಷತೆಯೇನೆಂದರೆ: ದೇವಾಲಯದೊಳಗೆ ಜಾತಿಭೇದವಿಲ್ಲದೆ ಯಾರೂ ಪ್ರವೇಶಿಸಬಹುದು. ದೇವರಿಗೆ ಅರ್ಪಿಸಲ್ಪಟ್ಟ ನೈವೇದ್ಯವನ್ನೂ, ದೇವಸ್ಥಾನದಲ್ಲಿ ತಯಾರಿಸಲ್ಪಟ್ಟ ಆಹಾರವನ್ನೂ ಎಲ್ಲರೂ ಒಂದೇ ಕಡೆ ಕುಳಿತುಕೊಂಡು ಸಂತೋಷದಿಂದ ಉಣ್ಣುವರು. ದೇವಾಲಯದ ಅಡಿಗೆಯವರೆಲ್ಲರೂ ಕೆಳಜಾತಿಯವರೇ ಆಗಿರುವರು. ಈ ಬದಲಾವಣೆಯು ಬಂಗಾಳದ ಶಿಖಾಮಣಿಗಳಲ್ಲೊಬ್ಬನೂ, ಮುಖ್ಯ ಸುಧಾರಣಾಕರ್ತನೂ ಆದ ಚೈತನ್ಯನ ಬೋಧನೆಯಿಂದ ಉಂಟಾದುದಾಗಿದೆ. ಪುರಿಯ ರಥೋತ್ಸವವು ಇತರ ಎಲ್ಲಾ ಉತ್ಸವಗಳಿಗಿಂತಲೂ ವಿಶೇಷವಷ್ಟ , ಈ ಸಮಯದಲ್ಲಿ ಪಟ್ಟಣದ ೩೫ ಸಾವಿರ ಜನರಲ್ಲದೆ, ೧ ಲಕ್ಷ ಜನರು ಹೊರಗಣಿಂದ ಬಂದು ಕೂಡುತ್ತಾರೆ. ಪೂರ್ವದಲ್ಲಿ ಅನೇಕರು ತಮಗೆ ಸ್ವರ್ಗ ಸಿಗುವದೆಂಬ ಭಾವನೆಯಿಂದ ರಥ ಎಳೆಯುವಾಗ ಅದರಡಿಗೆ ಬಿದ್ದು ಸಾಯುತ್ತಿದ್ದರಂತೆ ! ಆದರೆ, ಈಗ ಅದು ನಿಂತಿರುವದು. (ನವಯುಗ)

⁂

ಸಂಪುಗಾರರ ಘೋರ ಪ್ರತಿಜ್ಞೆ.

ವಾಯುವ್ಯ ಸರಹದ್ದಿನ ಮೇಲಿನ ಉಗಿಬಂಡಿಯ ಸುಮಾರು ೨೨ ಸಾವಿರ ಕೆಲಸಗಾರರು ಸಂಬಳ ಏರಿಕೆಗಾಗಿ ಸಂಪು ಮಾಡಿರುವರು. ಇವರು ಲಾಹೋರದಲ್ಲಿ ಸದ್ಯಕ್ಕೊಂದು ಮೆರವಣಿಗೆಯನ್ನು ಹೊರಡಿಸಿ ತಮ್ಮ ನಿರ್ಧಾರವನ್ನು ಜಾಹೀರುಪಡಿಸಿದರು. ಮೆರವಣಿಗೆಯ ಮುಂಬದಿಗೆ ಒಂದು ಪತಾಕೆಯಿತ್ತು. ಆದರಮೇಲೆ ಕೆಲಸಗಾರ ಸಂಘದ ಕಾರ್ಯದರ್ಶಿಗಳಾದ ಮಿ| ಖಾನರವರು ತಮ್ಮ ಕೈಬೊಟ್ಟಿನೊಳಗಿನ ನೆತ್ತರ ತೆಗೆದು ತಮ್ಮ ಹೆಸರನ್ನು ಪತಾಕೆಯ ಮೇಲೆ ಬರೆದರು. ಇನ್ನೂ ಅನೇಕರೂ ತಮ್ಮ ತಮ್ಮ ಇತರ ಅವಯವಗಳೊಳಗಿಂದ ನೆತ್ತರ ತೆಗೆದು ತಮ್ಮ ತಮ್ಮ ಗುರುತು ಮಾಡಿದರು. ಈ ಪತಾಕೆಯು ಮುಂದೆ ಸಂಪುಗಾರರ ನಿರ್ಧಾರವನ್ನು ಸಾರುತ್ತಿತ್ತು. ಪ್ರಸಂಗದಲ್ಲಿ ಪ್ರಾಣಾರ್ಪಣ ಮಾಡುವೆವು ; ಆದರೆ, ನಮ್ಮ ಬೇಡಿಕೆಗಳಂತೆ ಫಲವನ್ನು ಪಡೆಯದ ಹೊರತು, ಪುನಃ ಉಗಿಬಂಡಿಯಲ್ಲಿ ಸೇವೆಯನ್ನು ಕೈಕೊಳ್ಳಲಾರೆವೆಂದು ಸಂಪುಗಾರರ ತರ್ಫೆನಿಂದ ಈ ಪತಾಕೆಯು ಸಾರುತ್ತಿದೆ. ತುಕಾರಾಮ ಮಹಾರಾಜರ ವಚನದಂತೆ, ಈ ನಿಶ್ಚಯ ನೋಡಿ, ಇವಕ್ಕೆ ಫಲ ದೊರೆಯಲಿಕ್ಕಿಲ್ಲೆಂದು ಯಾರೂ ಹೇಳರು.

— ಮುಳಶಿ ಸತ್ಯಾಗ್ರಹದ ಒಬ್ಬ ಸತ್ಯಾಗ್ರಹಿಗಳಾದ ರಾಮಚಂದ್ರ ಮಹಾದೇವ ಚಿಪಳೂಣಕರರವರು ಪಿರಂಗುಟದಲ್ಲಿ ಉಪೋಷಣ ಮಾಡುತ್ತಿರುವರು. ಇಂದಿಗೆ ೨೫ ದಿನಗಳಾದವು. ೩೩ ದಿನಗಳವರೆಗೆ ಉಪೋಷಣ ಮಾಡುವ ವಿಚಾರವಿರುವದಂತೆ !

— ವಿಪರೀತ ನೆರೆಯಿಂದ ಮದ್ರಾಸ ಇಲಾಖೆಯ ರೆಪಲ್ಲಿ ತಾಲೂಕಿನಲ್ಲಿ ೫ ಲಕ್ಷ ರೂಪಾಯಿ ಲುಕ್ಸಾನಾಯಿತು. ಮದ್ರಾಸ ಸರಕಾರದವರು ೧ ಲಕ್ಷ ರೂಪಾಯಿಗಳನ್ನು ಸಾಲ ಕೊಡುವದಕ್ಕಾಗಿ ಮಂಜೂರು ಮಾಡಿರುವರು.

— ಪುಣೆಯ ಗಣೇಶ ಪೇಠೆಯೊಳಗಿನ ವಿಷ್ಣು ಹಾಗು ಲಕ್ಷ್ಮಿಯ ಮೂರ್ತಿಗಳನ್ನು ಯಾರೋ ಅಧಮರು ಒಡೆದು ಹಾಕಿರುವರು.

ಕಾನಡಾವೃತ್ತ.

[illegible] ಸಂ ಜ್ಯೇಷ್ಠ ಬ ೬ ಶ್ರೀ ಸೋಮವಾರ

ಅಗ್ರ[illegible].

* * *

ಸನಾತನಿಗಳ ಉದ್ಧಾರಮಾರ್ಗ.

ದೇಶಭಕ್ತ ಲಾಲಾ ಲಜಪತರಾಯರ ವಿಚಾರಸರಣಿಯನ್ನು ನಾವು ಕಳೆದ [illegible] ವಾಚಕರಿಗೆ ನಿರೂಪಿಸಿರುವೆವು. ಹಿಂದೂ ಧರ್ಮಸಮಾಜವು ಪ್ರಚಂಡವಿದ್ದು [illegible] ಮೇಲೊಂದಾಗುವ ಆಘಾತಗಳ ಮಾರ್ಗವನ್ನು ಪರಿಶೋಧಿಸಲು, ದೇಶಭಕ್ತರು [illegible] ಪ್ರಮಾಣದ ಪರಿಸ್ಥಿತಿಯಿಂದ ಸ್ವಭಾವದೋಷಗಳನ್ನು ಕಂಡುಹಿಡಿದ ಬಳಿಕ ಅವುಗಳನ್ನು ಪರಿಹರಿಸಿದ ಹೊರತು, ನಮ್ಮ [illegible]ಯು ಇಲ್ಲೆಂದು ತಿಳಿದ ಬಳಿಕ, ಆ ವಿಷಯ ನಿರೂಪಿಸುವದು ಸದ್ಯಕ್ಕೆ ನಮ್ಮ ಕರ್ತವ್ಯವಾಗಿದೆ. ಇದೇ ಸಮಯಕ್ಕೆ ಪಂಜಾಬದಲ್ಲಿ ಪ್ರಾಂತಿಕ ಹಿಂದೂ ಧರ್ಮ ಪರಿಷತ್ತು ಸೇರಿ ಹಿಂದೂ ಧರ್ಮ ಸಮಾಜದ ಉದ್ಧಾರಮಾರ್ಗವು ದೇಶಾಂಕಿತವಾಗಿದೆ. ಅದರ ಸಾರಾಂಶವನ್ನಷ್ಟು ಇಂದಿಗೆ ನಿವೇದಿಸಲಿಚ್ಛಿಸುವೆವು.

ಸುದೈವದಿಂದ ಪಂಜಾಬ ಹಿಂದೂ ಪರಿಷತ್ತಿಗೆ ನಮ್ಮ ಲಜಪತರಾಯರೂ ದಯಮಾಡಿಸಿದ್ದರು. ದೇಶಭಕ್ತರ ಉಪನ್ಯಾಸವು ಸಭೆಯಲ್ಲಿ ವಿಸ್ತಾರಪೂರ್ವಕ ನಡೆಯಿತು. ಲಜಪತರಾಯರು ನಾವೇ ನಮ್ಮ ಅವನತಿಗೆ ಕಾರಣರೆಂದು ಇನ್ನೊಮ್ಮೆ ಹೇಳಿದರು. "ಆತ್ಮೈವ ರಿಪುರಾತ್ಮನಃ।" ಎಂಬ ಗೀತಾ ವಚನದಂತೆ ನಮ್ಮ ಉದ್ಧಾರಕ್ಕೂ, ಅಧೋಗತಿಗೂ ನಾವೇ ಕಾರಣರಾಗಿರುವೆವಲ್ಲವೇ! ಘೋರೀ ಮಹಮ್ಮದನಾಗಲೀ, ಘಜನೀ ಮಹಮ್ಮದನಾಗಲೀ, ಸನಾತನ ಸಮಾಜದ ಅಧೋಗತಿಯ ಕಾರಣರಲ್ಲ. ಅವರೇನು ಮಾಡ್ಯಾರು? ಅವರಿಂದೇನಾದೀತು! ನಮ್ಮ ಸನಾತನ ಸಮಾಜದ ಧರ್ಮಬಾಂಧವರಾದ ಜಯಚಂದ, ಪೃಥ್ವೀರಾಜ, ಶೋದರಮಲ್ಲರವರಂಥ ಅತಿರಥಿ, ಮಹಾರಥಿಗಳೇ ನಮ್ಮ ಸಮಾಜದ ಗತಿಗೆಡಿಸಿದರು. ಇವರೇ ಧರ್ಮದ್ರೋಹ, ದೇಶದ್ರೋಹದಂಥ ಮಹಾ ಪಾಪಗಳನ್ನಾಶ್ರಯಿಸಿ, ಸ್ವದೇಶವನ್ನೂ, ಸ್ವಸಮಾಜವನ್ನೂ ಪರಸ್ಥರ ಸ್ವಾಧೀನ ಒಪ್ಪಿಸಿ, ಅಖಿಲ ಭರತ ಪುತ್ರರ ದುರ್ದಶೆಗೆ ಕಾರಣರಾದರು. ಕೋಹತ ಅತ್ಯಾಚಾರಕ್ಕಾದರೂ ಕೆಲಮಟ್ಟಿಗೆ ಸನಾತನಿಗಳೇ ಜಬಾಬದಾರರೆಂದು ಲಜಪತರಾಯರು ಒತ್ತಿ ಹೇಳಿದರು. ಮಹಮ್ಮದೀಯರನ್ನಾಗಲೀ, ಇತರ ಯಾವದೇ ಸಮಾಜವನ್ನಾಗಲೀ ನಾವು ದೂಷಿಸಲಾರೆವು, ದೂಷಿಸುವದೂ ನಮ್ಮ ಧರ್ಮವಲ್ಲ; ಪರಧರ್ಮದವರ ಆಕ್ಷೇಪ ಬರದಂತೆ ನಾವು ಎಚ್ಚರಾಗಿರತಕ್ಕದ್ದು, ಎಂದೂ ಲಜಪತರಾಯರು ಸೂಚಿಸಿ, ಸಿಖ ಸಮಾಜವು ಸನಾತನ ಸಮಾಜಕ್ಕೆ ಸಹಾಯವಾಗುವದೆಂದು ಹೇಳಿ, ಆ ಸಮಾಜದೊಡನೆ ಸಾಹಚರ್ಯ ಬೆಳೆಸಬೇಕೆಂದು ಅಭಿಪ್ರಾಯಪಟ್ಟರು.

ಲಜಪತರಾಯರ ನುಡಿಗಳು ಅಯಥಾರ್ಥವೆಂದು ಯಾರು ಹೇಳುವರು? ಹಿಂದಿನ ಇತಿಹಾಸ, ಪ್ರಚಲಿತ ಪರಿಸ್ಥಿತಿಗಳನ್ನು ಸಮಾಲೋಚಿಸಿದರೆ, ಸನಾತನಿಗಳು ಇಕ್ಕಟ್ಟಿನ ಸ್ಥಿತಿಯಲ್ಲಿ ಕ್ಷುದ್ರ ಬುದ್ಧಿಯನ್ನು ತಳೆದು [illegible] ಆಟಗಳನ್ನು ನೆನಿಸಿದರೆ, ನಮ್ಮ ಕಾಲ ಮೇಲೆ ನಾವೇ ಕಲ್ಲು ಹಾಕಿಕೊಂಡೆವೆಂದು ಸ್ಪಷ್ಟವಾಗುವದಿಲ್ಲವೇ! ಇತರರಿಗೆ ದೂರುವದರಿಂದೇನು ಫಲ ಸಿಕ್ಕೀತು! ನಾವು ಸಶಕ್ತರಾಗಿದ್ದರೆ, ಸಶಸ್ತ್ರರಾಗಿದ್ದರೆ ಧೈರ್ಯವಂತರಾಗಿದ್ದರೆ, ಶೂರರಾಗಿದ್ದರೆ, ಧರ್ಮನಿಷ್ಠರಾಗಿದ್ದರೆ ನಮ್ಮ ಅವನತಿಯು ಈ ಪರಿಯಿಂದ ಒದಗಿ ಬರುತ್ತಿತ್ತೇನು! ನಮ್ಮ [illegible] ಧರ್ಮತತ್ವಗಳ ಮರ್ಮವನ್ನರಿಯದೆ, ಅವನ್ನು [illegible] ಪ್ರಯೋಗಿಸಿದ್ದರಿಂದಲೇ, ನಾವಿಂದು ಕಂಗೆಟ್ಟು ಒರಲುತ್ತಿದ್ದೇವೆ. ಪರಮತದವರನ್ನು, ಪರಧರ್ಮದವರಿಗೆ ನಿಷೇಧಿಸಿ, ನಮ್ಮ [illegible] ಆಗಬಾರದು. ಅವರ [illegible] ಕೂಗಬಾರದು. ನಮ್ಮ [illegible] ಬೆಳೆಸಿಕೊಳ್ಳಬೇಕು, ಅಂದರೆ ನಾವು ತೇಜಃಪುಂಜರಾಗಿ, [illegible], ಸನಾತನ ಧರ್ಮ ಕಾಂತಿಯಿಂದ [illegible] ಮಂಡಲದಲ್ಲಿ ಬೆಳಗುವೆವು.

ಹಿಂದೂ ಧರ್ಮ ಪರಿಷತ್ತಿನಲ್ಲಿ ಪಂಜಾಬದ ಠರಾವುಗಳಿಂದ ನಮ್ಮ ಉದ್ಧಾರಮಾರ್ಗದ ಸ್ವರೂಪವು ವಾಚಕರಿಗೆ ಹೊಳೆಯುವಹಾಗಿದೆ. ಹಿಂದೂ ಸಮಾಜವು ಸಂಘಟಿತವಾಗಿ ಯಾವದೇ ಪ್ರಕಾರದಿಂದ ವಿಶಿಷ್ಟ ಕ್ಷುದ್ರ ಹಕ್ಕುಸಂಪಾದನೆಗಾಗಿ ಒದ್ದಾಡುವದಿಲ್ಲ. ಜಾತಿವಾರ ಪ್ರತಿನಿಧಿತ್ವವು ಅದಕ್ಕೆ ಬೇಕಾಗಿಲ್ಲ. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಾಗಲಿ, ಸರಕಾರಿ ಅಧಿಕಾರಗಳಲ್ಲಾಗಲಿ ಈ ತತ್ವವನ್ನಾಶ್ರಯಿಸುವದು ನಿಂದ್ಯವೆಂದು ಪರಿಷತ್ತು ನಮೂದಿಸಿದೆ. ಇಂಥ ಯೋಜನೆಯಿಂದ ಸಮಾಜವು ನೀತಿಭ್ರಷ್ಟ ಕಾರ್ಯಭ್ರಷ್ಟವಾಗುವದೆಂದು ಪರಿಷತ್ತು ಅಭಿಪ್ರಾಯಪಟ್ಟಿದೆ. ಪ್ರಾಂತಗಳಲ್ಲೆಲ್ಲ ಹಿಂದೂ ಮಹಾಸಭೆಯ ಉಪಸಮಿತಿಗಳನ್ನು ಸ್ಥಾಪಿಸಿ, ಅವುಗಳ ವಿದ್ಯಮಾನ ಅಲ್ಲಲ್ಲಿಯ ಹಿಂದೂ ಸಮಾಜವನ್ನು ಸಂಘಟಿಸಬೇಕೆಂದೂ ಪರಿಷತ್ತು ನಮೂದಿಸಿದೆ. ಸನಾತನ ಸ್ತ್ರೀಯರಿಗಾಗಿ ಧರ್ಮಸಂಸ್ಥೆಗಳನ್ನು ಏರ್ಪಡಿಸಿಕೊಂಡು, ಅವರಿಗೆ ಧರ್ಮತತ್ವಗಳನ್ನು ಚನ್ನಾಗಿ ತಿಳಿಸಿಹೇಳಿ ಧರ್ಮದಂತೆ ನಡೆಯಹಚ್ಚಬೇಕೆಂದು ಪರಿಷತ್ತು ಒತ್ತಿಹೇಳಿದೆ. ಸ್ತ್ರೀಯರ ಉದ್ಧಾರಕ್ಕಾಗಿ ಪರಿಷತ್ತು ವಿಶೇಷ ಯೋಚನೆ ಮಾಡ ಹೇಳುವ ಕಾರಣವೇನಿರಬಹುದು? ಸಮಾಜದ ತಳಹದಿಯು ಸ್ತ್ರೀಯು; ಸ್ತ್ರೀಯರ ನೀತಿಯ ಮೇಲೆಯೇ ಸಮಾಜದ ಏಳಿಗೆಯು ಅವಲಂಬಿಸಿರುತ್ತದೆ. ಕರ್ತವ್ಯಾಕರ್ತವ್ಯ ಮೋಹದಲ್ಲಿ ಸಿಲುಕಿದಾಗ ಅರ್ಜುನನು, ಸ್ತ್ರೀಯರು ದುಷ್ಟರಾದರೆ, ನೀತಿಭ್ರಷ್ಟರಾದರೆ ವರ್ಣಸಂಕರವಾಗಿ ಅಖಿಲ ಭೂತಲದ ವಿನಾಶಕಾಲವು ಒದಗಿಬರುವದೆಂದು ಭೀತಿಪಟ್ಟು, ಧನುಸ್ಸನ್ನು ಕೆಳಗಿಟ್ಟು, ಕರ್ಮಸನ್ಯಾಸ ಕೊಂಡು ಐಹಿಕ ಸುಖೋಪಭೋಗಗಳನ್ನು ತ್ಯಜಿಸತಕ್ಕ [illegible] ಮರ್ಮವನ್ನು ಸನಾತನ ವಾಚಕರಿಗೆ ಹೇಳಬೇಕೇನು! ಸ್ತ್ರೀಯರು ಧರ್ಮಿಷ್ಠರಾಗಿ ನಡೆದರೆ, ಇಡೀ ಗೃಹವೇ ಧರ್ಮಕಾಂತಿಯಿಂದ ಬೆಳಗುತ್ತದೆ. ಅಷ್ಟು ಧರ್ಮಿಷ್ಠ ಸ್ತ್ರೀಯ ಪ್ರಾಬಲ್ಯವಿದೆ, ಪ್ರತಿಷ್ಠೆಯಿದೆ; ವರ್ಚಸ್ಸವಿದೆ. ಸನಾತನ ಸಮಾಜವು ಧರ್ಮಶಿಕ್ಷಣವಿಲ್ಲದೆ, ಧರ್ಮದ ಮರ್ಮವನ್ನರಿತುಕೊಳ್ಳದೆ, ಇಹ ಪರಗಳಲ್ಲಿ ದರಿದ್ರವಾಗಿದೆ.

ನಮ್ಮ ಉದ್ಧಾರಮಾರ್ಗಗಳೆವು ಲಾಲಾಜಿಯವರು ನುಡಿದಂತೆ, ನಾವೇ ನಮ್ಮ ಅಧೋಗತಿಯ ಜನಕರೆಂದು ಅರಿತವರೆಲ್ಲರೂ ಈ ಯೋಜನೆಯನ್ನು ಕೂಡಲೆ ಅನುಷ್ಠಾನದಲ್ಲಿ ತರಲು ಉಪಾಯವನ್ನು ಕಂಡುಹಿಡಿಯಬೇಕು. ಲೋಕೋದ್ಧಾರಕ್ಕಾಗಿ ದುಡಿಯುವ ಸನಾತನಿಗಳ ಆದ್ಯ ಕರ್ತವ್ಯವು ಸ್ವಸಮಾಜದ ಉದ್ಧಾರವು. ಕೈಕಾಲುಗಳೇ ಗಟ್ಟಿ ಇಲ್ಲದಿದ್ದರೆ, ನಡುಗುತ್ತಿದ್ದರೆ, ನಾವು ಪರರನ್ನು ಹೇಗೆ ಹೊತ್ತುಕೊಂಡು ನಡೆಯಬಲ್ಲೆವು? ಸ್ವಸಮಾಜವನ್ನು ಬಲಪಡಿಸಲು ಸನಾತನ ಲೋಕನಾಯಕರೆಲ್ಲರೂ, ಕರ್ತವ್ಯಬದ್ಧರಿರುವರು ಅಲ್ಲಲ್ಲಿಯ ಪ್ರಮುಖರೂ, ಅವರಿಗೆ ನೆರವಾಗಿ ಸಮಾಜದ ಉದ್ಧಾರವೂ, ದೇಶೋದ್ಧಾರವೂ ಒಮ್ಮೆಲೇ ಸಾಧಿಸಲೆಂದು ಹಾರೈಸಿ, ದೇಶಭಕ್ತ ಲಜಪತರಾಯರಿಗೆ ಆದರಬುದ್ಧಿಯಿಂದ ವಂದನೆಗಳನ್ನರ್ಪಿಸುವೆವು.

— ಇಂದೂರದಲ್ಲಿ ಸದ್ಯಕ್ಕೆ ಮೂರು ಸರ್ತಿ ಬೆಂಕಿ ಬಿದ್ದು ೧೦ ಲಕ್ಷಕ್ಕೆ ಮಿಕ್ಕಿ ಲುಕ್ಸಾನಾಯಿತು. ಬೆಂಕಿ ನಂದಿಸಲು ಮಹಾರಾಜರು ಸ್ವತಃ ಹೋಗಿದ್ದರಂತೆ!

— ಜೋಧಪುರದ ಮಹಾರಾಜರು ವಿಲಾಯತಿಯಲ್ಲಿ ೫ ಬೆಳ್ಳಿಯ ಮೋಟಾರುಗಳನ್ನು ಖರೀದಿಮಾಡಿರುವರು. ಅದಕ್ಕಾಗಿ ೧೦ ಲಕ್ಷರೂಪಾಯಿಗಳ ಖರ್ಚು!

ಸ್ಫುಟ ಸೂಚನೆಗಳು.

೧. ಇಂದಿನ ರಾಜಕಾರಣದ ಪ್ರಚಲಿತ ಪರಿಸ್ಥಿತಿಯು ಬಲು ಗಡುಚಾಗಿದೆ. ಪಕ್ಷಭೇದ, ಮತಭೇದಗಳಿಂದ ಕಾರ್ಯಹಾನಿಯಾಗಹತ್ತಿದೆ. ಎಲ್ಲರೂ ಐಕ್ಯ ಬೇಕೆನ್ನುವವರೇ. ಐಕ್ಯದಿಂದಲೇ ನಮ್ಮ ವಿಜಯವಾಗುವದೆಂದೂ ಹೇಳುತ್ತಾರೆ. ಆದರೂ ತಮ್ಮ ಹಟ ಬಿಡದೆ, ತಂತಮ್ಮ ಕಾರ್ಯಕ್ರಮವನ್ನು ಮಾತ್ರ ಎಲ್ಲರೂ ಹಿಂಬಾಲಿಸಿದರೆ ಕಲ್ಯಾಣವಾಗುವದೆಂದೂ ಅವರ ಹೇಳಿಕೆ ಇದೆ. ಮಾದರಿಗಾಗಿ ಸ್ವತಂತ್ರ ಪಕ್ಷದ ನಾಯಕರಾದ ಬೆ| ಜಿನಾರವರು ಪ್ರಕಟಿಸಿದ ಪ್ರಕಟಣೆಯನ್ನಷ್ಟು ವಾಚಕರು ಪರ್ಯಾಲೋಚಿಸಬಹುದು. ಪ್ರಕಟಣೆಯಲ್ಲಿ ಸ್ಪಷ್ಟ ಕಾರ್ಯಕ್ರಮವು ರೇಖಾಂಕಿತವಾಗಿಲ್ಲ. ಕಾಯಿದೆ ಕೌನ್ಸಿಲು ಹಾಗು ಸ್ವತಂತ್ರ ಉಪಾಯಗಳಿಂದ ದೇಶದಲ್ಲಿ ವಿಧಾಯಕ ಕಾರ್ಯಕ್ರಮ ನಡಿಸಬೇಕಂತೆ! ವರಿಷ್ಠ ಕಾಯಿದೆ ಕೌನ್ಸಿಲಿನ ವಿದ್ಯಮಾನ ಕಾಣಗೊಡಬಹುದಾದ ವಿಧಾಯಕ ಕಾರ್ಯಕ್ರಮವಾವದು? ಸ್ವತಂತ್ರ ಉಪಾಯಗಳ್ಯಾವವು? ಅವುಗಳಿಂದ ಸಾಧಿಸಬಹುದಾದ ಕಾರ್ಯಕ್ರಮವೇನ? ಎಂಬುದರ ನಿರ್ದೇಶವೇನು ಬೆರಿಷ್ಟರರ ಪ್ರಕಟಣೆಯಲ್ಲಿ ಕಂಡುಬರುವದಿಲ್ಲ. ಕಾಯಿದೆ ಕೌನ್ಸಿಲು, ದೇಶದೊಳಗಿನ ಸಾರ್ವಜನಿಕ ಸಂಸ್ಥೆಗಳು ಹಾಗು ಪ್ರಜೆಗಳು ಇವು ಕಾರ್ಯವನ್ನೆಲ್ಲ ಕೇಂದ್ರೀಕರಿಸುವ ಸಿದ್ಧಾಂತವನ್ನು ಬೆರಿಷ್ಟರರು ಮಂಡಿಸಿರುವರು. ಹೀಗೆ ದೇಶದೊಳಗಿನ ತರತರದ ಚಟುವಟಿಕೆಗಳ ಭಿನ್ನಭಿನ್ನ ಧೋರಣದ ಸಂಸ್ಥೆಗಳು ಒಕ್ಕಟ್ಟಿಗೆ ಕೂಡುವಹಾಗೆ ಕಾರ್ಯ ನಡಿಸುವ ವ್ಯವಹಾರಿಕ ಮಾರ್ಗಗಳ್ಯಾವವು? ಎಂಬುದನ್ನು ಶೋಧಿಸಿದರೆ, ಎಲ್ಲಿಯೂ ಯಾರಿಗೂ ಪತ್ತೆಯಾಗದು. ಇನ್ನೊಂದು ಸಿದ್ಧಾಂತವು ಮತ್ತೂ ಚಮತ್ಕಾರಿಕವಿದೆ. ಕಾಯಿದೆ ಕೌನ್ಸಿಲುಗಳಲ್ಲಿಯೂ, ಸಾರ್ವಜನಿಕ ಸಂಸ್ಥೆಗಳಲ್ಲಿಯೂ ವಿಶಿಷ್ಟ ಯೋಜನೆಗಳನ್ನೂ ಅವುಗಳ ಪಾತ್ರಾಪಾತ್ರತೆಯನ್ನೂ ಆಲೋಚಿಸಿ, ಮುಂದೆ ರಾಷ್ಟ್ರಕಲ್ಯಾಣವಾಗುವಂತೆ ಅವನ್ನು ಪುರಸ್ಕರಿಸಬೇಕು. ಅಥವಾ ತಿರಸ್ಕರಿಸಬೇಕು. ಸಿದ್ಧಾಂತವು ರಮಣೀಯವಿದೆ; ಕಟ್ಟುಯೋಜನೆಯು ಅಸ್ಪಷ್ಟವಾಗಿದೆ. ವಿಶಿಷ್ಟಯೋಜನೆಗಳ್ಯಾವವು? ಅವುಗಳಮೇಲೆ ತೀರ್ಪುಕೊಡುವವರ್ಯಾರು? ಯಾರು ತೀರ್ಪುಕೊಟ್ಟರೆ ಯಾರು ಮಾನ್ಯ ಮಾಡಬೇಕು? ಎಂಬ ನಿಯಮವೇನಿಲ್ಲ. ಜಹಾಲರೂ ನೇಮಸ್ತರೂ, ಉದಾರ ಮತವಾದಿಗಳೂ, ಬ್ರಾಹ್ಮಣೇತರರೂ, ಸ್ವತಂತ್ರರೂ, ಸ್ವರಾಜ್ಯ ಪಕ್ಷದವರೂ, ರಾಷ್ಟ್ರೀಯ ಸಭೆಯವರೂ ಎಲ್ಲರೂ ದೇಶಕಲ್ಯಾಣಕ್ಕಾಗಿ ದುಡಿಯುತ್ತಿರುವರು. ಪ್ರತಿಯೊಂದು ಯೋಜನೆಯಮೇಲೆ ಪಕ್ಷಭೇದದಷ್ಟು, ಮತಭೇದದಷ್ಟು, ಭಿನ್ನ ಭಿನ್ನ ಅಭಿಪ್ರಾಯಗಳುಂಟಾಗಿ ಗೊಂದಲವಾಗಿದೆ. ಇದೇನು ಬೆ| ಜಿನಾರವರು ಅರಿಯದ ಮಾತಲ್ಲ. ಇಂಥ ಪರಿಸ್ಥಿತಿಯಲ್ಲಿ ಬೆ| ಜಿನಾರವರ ಮತದಂತೆ ಎಲ್ಲರೂ ನಡೆಕೊಳ್ಳಬೇಕೆಂದು ಜಿನಾರವರ ಮತವಿದ್ದರೆ, ಆ ಮಾತು ಬೇರೆ. ಮತದಾರ ಮಂಡಳಗಳನ್ನು ಸಂಘಟಿಸಬೇಕಂತೆ! ಅವರು ನಮೂದಿಸಿದ ಧೋರಣಕ್ಕನುಗುಣವಾಗಿ ನಡೆಕೊಳ್ಳಲು ಮತದಾರರನ್ನು ತಯಾರಿಸಬೇಕಂತೆ! ಧೋರಣವೇ ಸ್ಪಷ್ಟವಿಲ್ಲ. ಅಂದಬಳಿಕ ಮತದಾರ ಮಂಡಳಗಳನ್ನು ತಯಾರಿಸುವ ಬಗೆ ಹೇಗೆ? ಬೆ| ಜಿನಾರವರು ರಾಷ್ಟ್ರೈಕ್ಯವಾಗಲು ಯೋಜಿಸಿದ ಉಪಾಯಗಳ ಅರ್ಥವಿದು: ಹಾವು ಸಾಯಬಾರದು, ಕೋಲು ಮುರಿಯಬಾರದು. ತಮ್ಮ ಮತವೇ ರಾಷ್ಟ್ರಕಲ್ಯಾಣದ ಮತವು, ಎಂಬ ಅಹಂಕಾರದಿಂದ ಬುಡಮೇರಿಲ್ಲದ ಸಿದ್ಧಾಂತಗಳನ್ನು ನಮೂದಿಸಿ, ಐಕ್ಯರಾಗಬೇಕೆಂದು ಬೋಧಿಸಿದರೆ, ಐಕ್ಯವಾಗುವದೆಂದಾದರೂ ಸಾಧ್ಯವೇ? ವ್ಯವಹಾರಿಕ ಯೋಜನೆಗಳನ್ನು ನಮೂದಿಸಿ, ಅವುಗಳಿಗೆ ಕೈಕೊಳ್ಳಬೇಕಾದ ವ್ಯವಹಾರಿಕ ಉಪಾಯಗಳ ನಿರ್ದೇಶ ಮಾಡಿದ್ದರೆ ಬೆರಿಸ್ಟರರ ಐಕ್ಯದ ಬಯಕೆಯು ಎಷ್ಟರಮಟ್ಟಿಗೆ ನಿಜವಿರುತ್ತದೆಂಬುದು ಸ್ಪಷ್ಟವಾಗುತ್ತಿತ್ತಲ್ಲವೇ!

---

೨. ಮೈಸೂರ ಸಂಸ್ಥಾನದಲ್ಲಿ ಸರಕಾರವು ಒಂದು ಅಧರ್ಮ ಆಜ್ಞಾಪತ್ರವನ್ನು ಹೊರಡಿಸಿರುವದು. ಮೈಸೂರ ಕಾಯಿದೆ ಕೌನ್ಸಿಲು ಸಭೆಯಲ್ಲಿ ಗೋಹತ್ಯಾಪ್ರತಿಬಂಧಕ ಸೂಚನೆಯನ್ನು ಯಾರೂ ತರಕೂಡದಂತೆ. ಏನು ಚಮತ್ಕಾರವಿದು! ಮೈಸೂರ ಸಂಸ್ಥಾನವು ಸನಾತನ ಸಂಸ್ಥಾನವು ಸನಾತನ ಸಂಸ್ಕೃತಿಯ ಪೋಷಣೆಕ್ಕಾಗಿ ಅವರು ಶಕ್ತಿ ಮೀರಿ ದುಡಿಯಲು ಬದ್ಧರಿರುವರು ವಿಶೇಷವಾಗಿ ಗೋವು ಪ್ರಜೆಗಳ ಧನವಾಗಿಯೂ. ಇಂಥ ಗೋವಿನ ಕೊಲೆಯನ್ನು ನಿಲ್ಲಿಸಹೇಳಲು ರಾಜ್ಯದಲ್ಲಿ ಪ್ರತಿಬಂಧವಾದ ಬಳಿಕ, ಇದಕ್ಕೆ ಹಿಂದೂ ರಾಜ್ಯವೆಂದು ಯಾರಾದರೂ ಹೇಳುವರೇ! ಗೋಪ್ರತಿಪಾಲಕರೆಂಬ ಬಿರುದು ಗೋಪಾಲಕೃಷ್ಣನ ಭಕ್ತರಾದ ಸನಾತನಿಗಳಿಗೆಲ್ಲ ಪರಮ ಶ್ರೇಷ್ಠವಾದದ್ದು. ಗೋವಿನ ಕೊಲೆಯನ್ನು ಪ್ರತಿಬಂಧಿಸುವದಕ್ಕಾಗಿ ಪ್ರಸಕ್ತಿಯಲ್ಲಿ ಪ್ರಾಣಾರ್ಪಣ ಮಾಡಲಿಕ್ಕೂ ಸನಾತನಿಗಳು ತಯಾರಿರಬೇಕಾದಾಗ, ಮೈಸೂರ ದರ್ಬಾರಿನಲ್ಲಿ ಬಾಯಿಕಟ್ಟಿ ಗುದ್ದುವದು ಕೇವಲ ಅಧರ್ಮವು. ಮೈಸೂರು ಸರಕಾರದವರು ಈ ವಿಷಯ ಪುನರಾಲೋಚಿಸಿ, ನಿರಪರಾಧಿ, ಪರೋಪಕಾರಿ ಗೋವನ್ನು ಜೋಪಾನಮಾಡಿ, ಸ್ವಧರ್ಮಪರಿಪಾಲನೆ ಮಾಡಬೇಕಾಗಿಯೂ, ಪ್ರಜೆಗಳಿಗೂ ಉದ್ಧಾರ ಮಾಡಬೇಕಾಗಿಯೂ ನಾವು ಪ್ರಾರ್ಥಿಸುವೆವು.

---

೩. ಮದ್ಯಪಾನದ ವಿಷಯ ಕಲ್ಕತ್ತೆಯ ವಿಖ್ಯಾತ ಡಾಕ್ಟರರಾದ ಸರ್ ರೋಜರ್ಸರವರು ಕೊಟ್ಟ ಅಭಿಪ್ರಾಯವನ್ನು ವಿವಿಧ ಸಂಗ್ರಹದ ಸದರಿನಲ್ಲಿ ಪ್ರಕಟಿಸಿರುವೆವು. ಅದರಮೇಲಿಂದ ನಮ್ಮ ಬ್ರಿಟಿಷ ಸರಕಾರವು ಕೈಕೊಂಡ ಅಬಕಾರಿ ಧೋರಣವು ಅಕ್ಷಮ್ಯವೆಂದು ಸಿದ್ಧವಾಗುವದು. ಹೆಂಡಗುಡಕತನದಿಂದ ಪ್ರಜೆಗಳು ಸತ್ವಶೂನ್ಯರಾಗಿ, ಧನಹೀನರಾಗಿ ಬಳಲುತ್ತಿರುವರೆಂಬ ಈವರೆಗೆ ಸಪ್ರಮಾಣ ಪ್ರತಿಪಾದನೆಯಾಗಿದೆ. ಅಬಕಾರಿ ಧೋರಣವನ್ನು ಬದಲಿಸಿ, ಪ್ರಜೆಗಳು ಹೆಂಡಗುಡಕರಾಗದಂತೆ ವ್ಯವಸ್ಥೆ ಮಾಡಿರೆಂದು ರಾಷ್ಟ್ರೀಯ ಸಭೆಯಂಥ ಲೋಕಸಂಸ್ಥೆಗಳು ಪುನಃ ಪುನಃ ಹೇಳುತ್ತಿವೆ. ಆದರೂ, ಸರಕಾರವು ವಿತಂಡವಾದದಿಂದ ಪ್ರಜಾಕಲ್ಯಾಣವಾಗುತ್ತದೆ; ಔಷಧೋಪಚಾರಕ್ಕಾಗಿ ಮದ್ಯವು ಅವಶ್ಯವಿದೆ; ಇತ್ಯಾದಿ ಕಾರಣಗಳನ್ನು ಮುಂದೊಡ್ಡುತ್ತಿದೆ. ಕಲ್ಕತ್ತೆಯ ಪ್ರೊಫೆಸರರು ತಮ್ಮ ಅನುಭವದಿಂದ ಈ ವಿಧಾನಗಳನ್ನು ಸಪ್ರಮಾಣ ಖಂಡಿಸಿರುವರು: ಮತ್ತು ಮುಂದಾಗಿ, ಸರಾಯಿಯಿಂದ ಪ್ರಜೆಗಳ ಆರೋಗ್ಯಹಾನಿಯಾಗುವದಲ್ಲದೆ ಕೋಂಕು ರೋಗ ಬಂದಾಗ ಪ್ರಜೆಗಳು ಹೊಣಗಳಂತೆ ಸಾಯುವರು. ಕಾರಣವು ಪ್ರಾಮುಖ್ಯವಾಗಿ ಮದ್ಯಪಾನವೇ ಎಂದು ಕಂಡುಹಿಡಿದಿರುವರು. ಹಿಂದುಸ್ಥಾನದ ಉಷ್ಣ ಪ್ರದೇಶದಲ್ಲಿ ಗೆಳೆಯರ ಪೆಡರಿಕೆಗಳಿಗೂ, ಉಪದೇಶಕರಿಗೂ ಇಂಬುಗೊಡದೆ, ಮದ್ಯಪಾನವನ್ನು ತೊರೆದು, ಆರೋಗ್ಯ ಪಾಲನ ಮಾಡಿದವೆಂದು ಅವರು ಹೇಳುತ್ತಿರುವಾಗ, ಅದನ್ನು ಅಲ್ಲಗಳೆಯುವವರಾರು? ಈ ಅಭಿಪ್ರಾಯದಿಂದ ಮದ್ಯಪಾನದ ಚಳವಳಿಗೆ ಹೇಳಲಾಗದಂಥ ಸಹಾಯವು ಪ್ರಾಪ್ತವಾಗಿದೆ. ಸಾಮಾನ್ಯವಾಗಿ ಮದ್ಯವು ಕೆಡುಕೆಂದು ಪ್ರಾಪಂಚಿಕ ಅನುಭವದಮೇಲಿಂದ ಯಾರೂ ಹೇಳಬಹುದಾದರೂ, ಸರ್ ರೋಜರ್ಸರವರು ಪ್ರಕಟಿಸಿದ ಲೇಖದಿಂದ ನಿಃಪಕ್ಷಪಾತಿ ತಜ್ಞರೂ ಕೂಡ ಅದೇ ಅಭಿಪ್ರಾಯಪಡುತ್ತಾರೆಂದು ಈಗ ಸಿದ್ಧವಾಯಿತು. ಇದರಿಂದ ಸರಕಾರದ ಮದ್ಯಪಾನದ ಮೂಲಾಧಾರವೇ ನಷ್ಟವಾಗಿದೆ. ಹೆಂಡಗುಡುಕತನವು ಮಹಾ ಪಾಪವಿದ್ದು, ಅದನ್ನು ನಿರ್ಮೂಲಿಸುವ ಸಾಮರ್ಥ್ಯವೂ, ಅಧಿಕಾರವೂ ಸಾರ್ವಭೌಮ ಸರಕಾರಕ್ಕಿರುತ್ತ, ಅದನ್ನು ಅಳಿಯದೆ ಮುಂದರಿಸುವದು ಅಕ್ಷಮ್ಯ ಅಪರಾಧವೆಂದು ಯಾರೂ ಹೇಳುವರು. ಪ್ರಜಾಪರಿಪಾಲನಕ್ಕಾಗಿ ಹಗಲಿರುಳು ದುಡಿಯುತ್ತೇವೆಂದು ಆಳರಸರು ಈ ವಿಷಯ ಇನ್ನಾದರೂ ದುರಾಗ್ರಹ ಹಿಡಿಯದೆ, ಮದ್ಯವನ್ನು ಒಮ್ಮೆಲೇ ನಿಲ್ಲುಗೆಯಬೇಕಾಗಿ ನಾವು ಹೇಳುವದಕ್ಕಿಂತ ಮುಂಚಿತವಾಗಿಯೇ ಅವರಿಗೆ ತಿಳಿಯುವದಾಗಿದೆ.

---

೪. ನಮ್ಮ ಕಡೆಗೆ ಹೊಸ ಅಗಬೋಟುಗಳನ್ನು ತಂದು ವರ್ತಕರ ಹಾಗು ಪ್ರವಾಸಿಕರ ಗೋಳಿನ ಪರಿಹಾರ ಮಾಡಲ್ಪಡುವದೆಂದು ಡಂಗುರ ಹೊಡೆದು ಯುನಿವರ್ಸಲ ಅಗಬೋಟ ಕಂಪನಿಯವರು ಶೇರು ಹಣ ಎತ್ತಿದ್ದರಷ್ಟೇ. ಈ ಕಂಪನಿಯ ಅಗಬೋಟುಗಳು ನಿಯಮಿತವಾಗಿ ಇನ್ನೂ ಬರಲಿಲ್ಲ; ಇನ್ನು ಬರುವವೆಂದು ಯಾರೂ ಆಶೆ ಮಾಡಬಾರದು. ಮುಂಬಯಿಯ ಶ್ರೀ| ಶಿವರಾಮ ಗೋವಿಂದ ಪಾಂಡ್ವೇಕರರವರು ಈ ವಿಷಯ ಕಂಪನಿಯ ರಿಜಿಸ್ಟ್ರರರಿಗೆ ಸವಾಲು ಮಾಡಿದ್ದಕ್ಕೆ ಕಂಪನಿಯು ನಾಮಶೇಷವಾಗಿರುವದಾಗಿಯೂ, ಅದರ ಉತ್ತರಕ್ರಿಯೆ ವ್ಯವಸ್ಥೆಯನ್ನು ತಾವು ಮಾಡುತ್ತೇವಾಗಿಯೂ ಅವರಿಂದ ಶ್ರೀ| ಪಾಂಡ್ವೇಕರರವರಿಗೆ ಉತ್ತರ ದೊರಕಿದೆ. ನಮ್ಮ ಕಡೆಯವರು ಹೊಸ ಕಂಪನಿಯ ಅಗಬೋಟಿಯ ಆಶೆಯನ್ನು ಬಿಟ್ಟು, ತಮ್ಮ ಹಿತರಕ್ಷಣೆಯ ಅನ್ಯ ಉಪಾಯಗಳನ್ನು ಯೋಚಿಸಲಿ.

---

೫. ಇಲ್ಲಿಯ ಅಗಬೋಟ ಧಕ್ಕಾಲು ಕಳವಿನ ಖಟ್ಲೆಯು ಮೊನ್ನೆ ನಿರ್ಣಯವಾಯಿತು. ಮೆಜಿಸ್ಟ್ರೇಟರು ಆರೋಪಿ ಗೋಳಿ ಬಿನ್ ಪುರ್ಖ ಆತನಿಗೆ ಅಪರಾಧಿಯೆಂದು ನಿರ್ಣಯಿಸಿ, ೬ ತಿಂಗಳ ಸಕ್ತ ಶಿಕ್ಷೆ ಹಾಗು ೫೦ ರೂಪಾಯಿ ದಂಡ ವಿಧಿಸಿದರು. ಮೆಜಿಸ್ಟ್ರೇಟರು ತೀರ್ಪಿನಲ್ಲಿ ಖಟ್ಲೆಯ ಹಕೀಕತನ್ನು ನಮೂದಿಸುವಾಗ, ಕಸ್ಟಮ್ ಅಧಿಕಾರಿಗಳ ಸಾಕ್ಷಿಯನ್ನು ವಿಶೇಷವಾಗಿ ನಂಬಿರುವರೆಂದು ತೋರುತ್ತದೆ. ಆರೋಪಿಯೂ ಬಚಾವಿಗಾಗಿ ಇಟ್ಟ ಸಾಕ್ಷಿದಾರರ ಯಾದಿಯನ್ನು ಕೊಟ್ಟರೂ, ವಿಚಾರಕಾಲಕ್ಕೆ ಅವರಿಷ್ಟರನ್ನೂ ಬಿಟ್ಟುಕೊಟ್ಟು, ಮೆಜಿಸ್ಟ್ರೇಟ

ರಿಗೆ ಸಹಾಯಕ್ಕೆ ರಾಗಲು ಬಿನ್ನವಿಸಿಕೊಂಡರ [illegible] ನ್ನು ಕೇಳಿ, ಅನೇಕರಿಗೆ [illegible] ಖಟ್ಲೆಯು ನವಾಗವಿದರು. ಮೊಟ್ಟಮೊದಲು ಅರೋಪಿಗಳೆಲ್ಲರೂ ನಿರಪರಾಧಿಗಳೆಂದು ಶಾಲೆನಿಂದ ಪ್ರತಿಪಾದಿಸಿದ ವಕೀಲರು, ಆರೋಪಿಗಳ ಹೇಳಿಕೆಯನ್ನು ಬಲಪಡಿಸುವ ಬಹಾಸಿ ಪುರಾವೆ ಕೊಡದೆ, ಕೊನೆಗೆ ನ್ಯಾಯಮೂರ್ತಿಗಳಿಗೆ ದಯೆ ತೋರಿಸಲು ಹೇಳಿಕೊಂಡಿದ್ದರು. ಇದೇ ಕಥೆಯು ದೊಡ್ಡ ಖಟ್ಲೆಯಲ್ಲಿ ಒದಗಿಬಂದದ್ದರ ಮೇಲಿಂದ ಕಳುವಿನ ಹಕೀಕತು ನಿಜವಾದದ್ದೆಂದು ಇನ್ನಷ್ಟು ಖಾತ್ರಿಯಾಗಿದೆ. ಇಂಥ ಪ್ರಸಕ್ತಿಯಲ್ಲಿ ಕಸ್ಟಮ್ಸ ಅಧಿಕಾರಿಗಳ [illegible] ತಮ್ಮ [illegible] ನಿಯಲ್ಲಿ ಕೇಳಿದ ಪಟ್ಟಣಪ್ಪ ಹಾಗು ಗೋಪಿನಾಥ ಇವರಿಬ್ಬರ ಆರೋಪದ ವಿಷಯ ಚೌಕಶಿ ಮಾಡಿ [illegible] ಬರೆಯುವರೆಂದು ನಮ್ಮ [illegible] ಕಳವಿನ ಮಾಲಿನ ಪ್ರಮಾಣವನ್ನು ನೋಡಿದರೆ, ಇಷ್ಟೇ ಅಷ್ಟು ಮಾಲನ್ನು ಅವರ [illegible] ಯಲ್ಲಿ ಅಡಗಿಸುವದು ಅಸಾಧ್ಯವೆಂದು ಮೆಜಿಸ್ಟ್ರೇಟರು ಅರಿಯದ ಮಾತಲ್ಲ. ಹಾಗಿದ್ದು ಈ ವಿಷಯ ಉಲ್ಲೇಖ ಮಾಡದಿದ್ದದ್ದು ಅನುಚಿತವಾಯಿತೆಂದು ನಮ್ಮ ಮತವು.

---

೩. ಸ್ಥಳಿಕ ಪೋಲೀಸರ ವಿಷಯ [illegible] ಟ್ಟುಗಳಿಂದ ಒದೆಯುವದು ಅಸಾಧ್ಯವು, ಅಷ್ಟು ಅಕ್ಷಮ್ಯ ಅಜಾಗ್ರತೆಯನ್ನು ಅವರು ಮಾಡಿರುವರೆಂದು ನಮಗೆ ತೋರಬೇಕಾಗಿದೆ. ಕಸ್ಟಮ್ಸ ಅಧಿಕಾರಿಗಳು ಆರೋಪಿಯನ್ನು, ಕಳವಿನ ಮಾಲನ್ನು ಪೋಲೀಸರ ಸ್ವಾಧೀನ ಕಳಿಸಿಕೊಟ್ಟಾಗ, ಅರೋಪಿಯನ್ನು ಕೂಡಲೆ ಸೆರೆಯಲ್ಲಿಡದೆ, ಅತನನ್ನು ಬಿಟ್ಟುಕೊಟ್ಟು, ೧೦-೧೧ ದಿನಗಳವರೆ ಒಳಿಕ, ಖಟ್ಲೆ ನಡೆಯುವ ದಿವಸ ೧ ಘಂಟೆಗೆ ಮುಂಚಿತವಾಗಿ ಕಚೇರಿ ಕಂಪೌಂಡದ ಮೇಲಿಂದ ಆರೋಪಿಯು ಪ್ರತಿಷ್ಠೆ [illegible] ಹೋಗಲಬೇಕೆ? ಪೋಲೀಸರ ಕರ್ತವ್ಯ [illegible] ನ್ನು ಮರುಗುವದೇಕೆ? ಕಳವಿನ ಆರೋಪಿಗಳ ಅಲ್ಲಿಂದಲೇ ಹಿಡಿದಿದ್ದರೆ ಈ ತಪಿದಲ್ಲಿ [illegible] ಗೊಂಡ ಪ್ರತಿಷ್ಠಿತ ಕಳ್ಳರ ಪುರಾವೆಯಾಗದ ಇರತ್ತಿದ್ದಿಲ್ಲವೆಂದು ಅನೇಕರು ಹೇಳುತ್ತಾರೆ. ಕಳವು ಮಾಲು ಒಯ್ದ ದೊಣಿಯ ದೋಣೀಕಾರನ ವಿಷಯವಾಗಿಯೂ ಪೋಲೀಸರು ಚೌಕಶಿ ನಡೆಸಲಿಲ್ಲ. ಆ ದಿವಸ ಎಷ್ಟು ಮಾಲು ದೋಣಿಯ ಮೇಲಿಂದ ಶಾಭೀತ ದಡಾಪಿನಲ್ಲಿ ಇಳಿದಿತ್ತೆಂಬ ಪುರಾವೆಯಾಗಿದೆ. ಕಸ್ಟಮು ಅಫೀಸಿಗೆ ಬಂದಿಳಿದ ಒಳಿಕ, ಮಾಲನ್ನೆಲ್ಲ ಅಳತೆ ಮಾಡಿ ವರ್ತಕರಿಗೆ ಒಪ್ಪಿಸಿದ್ದರೆ, ಆ ದಿನ ದಡಾಪಿನ ಮೇಲಾದ ಅಸಾಧಾರಣ ಕಳವಿನ ಸ್ವರೂಪವು ಸ್ಪಷ್ಟವಾಗಿ ಹೊರೆದು, ದಡಾವುಗಳ ಮೇಲೆ ನಡಿಯುತ್ತಿರುವ ಲೂಟಿಯು ಕೋರ್ಟಿಗೆ ತೋರಿ, ಕೈಗೆ ಸಿಕ್ಕ ಆರೋಪಿಗೆ ವಿಶೇಷ ಶಿಕ್ಷೆ ವಿಧಿಸಲು ಅನುಕೂಲವಾಗುತ್ತಿತ್ತು. ಇದೇ ಪ್ರಕರಣವನ್ನು ಅಲೋಚಿಸಿದರೆ, ಪೋಲೀಸರು ಮನಃಪೂರ್ವಕವಾಗಿ ಈ ಕಳವಿನ ಖಟ್ಲೆಯನ್ನು ಮಾಡಿಕೊಟ್ಟಿಲ್ಲವೆಂದು ಯಾರೂ ಹೇಳುವರು. ಈ ಲೂಟಿಯಿಂದ ನಮ್ಮಲ್ಲಿಯ ವ್ಯಾಪಾರಿಗಳಿಗೊದಗುವ ಲುಕ್ಸಾನನ್ನು ಹೇಳತೀರದು. ಈ ವಿಷಯ ಸವಿಸ್ತರವಾಗಿ ಮುಂದೆ ಯಥಾವಕಾಶ ಬರೆಯಲಿಚ್ಛಿಸುವೆವು. ಸದ್ಯಕ್ಕೆ ಅಪರಾತ್ರಿಯಲ್ಲಿ ಬಲು ಸಾಹಸದಿಂದ ಕಳವು ಹಿಡುಕೊಟ್ಟ [illegible] ಡ್ಯೂಟಿ ಹವಾಲದಾರ ದೇವಪ್ಪ ನಾಯ್ಕ ಹಾಗು ಆತನ ಜೊತೆಗಾರನಾದ ಸುಬ್ರಾಯ ಇವರೀರ್ವರಿಗೂ ನಾವು ಮನಃಪೂರ್ವಕ ಅಭಿನಂದಿಸಿ, ಇನ್ನು ಮುಂದೆ ದಡಾವುಗಳ ಮೇಲೆ ವಿಶೇಷ ಕಾವಲಿಡಲು ಅವರಿಗೆ ಅಗ್ರಹದಿಂದ ಸೂಚಿಸುವೆವು.

ಸ್ಥಾನಿಕ ವೃತ್ತಾಂತ.

ಕುಮಟಾ—ವಿಪರೀತ ಮಳೆ ಸುರಿಯಿತು. ಕೆರೆ-ಕಟ್ಟೆಗಳು ತುಂಬಿ ಸೂಸುತ್ತವೆ. ಮುನಿಸಿಪಾಲಿಟಿಯವರ ಮಾರ್ಗಗಳ ದುರಸ್ತಿಯ ಕಡೆಗೆ ಲಕ್ಷ [illegible] ಕೊಳಚೆಗಳಲ್ಲಿ ತೊಡಗಿರುವವು. ಈ ವರೆಗೆ ೨೨—೦೫ ಇಂಚ ಮಳೆ ಬಿತ್ತು; ಈ ವರ್ಷ ೧೦—೫೮ ಇಂಚು.

ಕಳೆದ ರವಿವಾರ ಮುನಿಸಿಪಾಲಿಟಿಯಲ್ಲಿ ಸಾಧಾರಣ ಸಭೆಸೇರಿ ವನ್ನಳ್ಳಿಯಲ್ಲಿ ಪ್ರಾಥಮಿಕ ಶಾಲೆ [illegible] ಸದ್ಯಸ್ಥಿತಿಯಲ್ಲಿ ಆವಶ್ಯವಿಲ್ಲೆಂಬ ಠರಾವ [illegible] ಮಂಜೂರಾಗಿದೆ. ವನ್ನಳ್ಳಿ ಶಿಂಗರ ಹಿಂದೆ [illegible] ಶಾಲೆಗಾಗಿ [illegible] ಅವಶ್ಯವಿಲ್ಲೆಂದು ಮುಕ್ತಗೊಟ್ಟಿದೆ. ಪರಿಸ್ಥಿತಿ ಬದಲಿಸ್ಯ [illegible] ರಾ। ದಾಸಶೆಟ್ಟಿಯು [illegible] ನೇಮಿಸುವ ವಾದವು ಕಾರಣವಾಗಿರಬೇಕೆಂದು [illegible].

[illegible] ಬಾದಶಹರ ಜನ್ಮದಿನದ ಪ್ರೀತ್ಯರ್ಥ ಇಲ್ಲಿಯ ಕನ್ನಡ ಶಾಳೆಯ ಮೇಲುಪ್ಪರಿಗೆಯ ಮೇಲೆ ಒಂದು ಸಭೆಯಾಗಿತ್ತು. ರಾ। ಬ। ಕಲ್ಯಾಣಪೂರಕರರು ಸಭಾಪತಿಗಳಿದ್ದರು. ಸಭೆಯಲ್ಲಿ ಮುಂಬಯಿಯ ರಾ। ನಾರಾಯಣರಾವ ಕುಲಕರ್ಣಿಯವರ [illegible] ಉಪನ್ಯಾಸ ದಲ್ಲಿ ರಾ। ನಾರಾಯಣರಾಯರು ನಾರಲೀನು ಪ್ರೋ [illegible] ಸರ್ಟಿಫಿಕೆಟ ಇತ್ಯಾದಿ ಚಟಿ ಚಟಿಕಗಳು ಅ [illegible] ಟೀಕೆಮಾಡಿದರು. ಸಭಿಕ ರಾಜ [illegible] ರಾ। ನಾರಾಯಣರಾಯರು (You need not be nervous) ಗಾಬರಿಯಾಗ [illegible] ಯುದ್ಧಕಾಲ ಮುಂ [illegible] ಮಾತಾಡುತ್ತಿದ್ದರು. ಸಭಿಕರಲ್ಲೊಬ್ಬರು [illegible] ಎದ್ದುನಿಂತು. (Those who are not loyal have no business to be here) ರಾಜನಿಷ್ಠರಲ್ಲದವರಿಗೆ ಇಲ್ಲಿ ಕೆಲಸವಿಲ್ಲೆಂದು ತಿಳಿದರು. ಅತ್ತ ಅಧ್ಯಕ್ಷರೂ ರಾ। ನಾರಾಯಣರಾಯರಿಗೆ ತಡೆಯುತ್ತಿದ್ದರು. ಇದರೂ, ಅವರ ಭಾಷಣವು ಮುಂದೆ ಸಾಗುತ್ತಿತ್ತು. "ಯುದ್ಧಕಾಲದಲ್ಲಿ ಪ್ರೋ [illegible] ಸರ್ಟಿಫಿಕೇಟಿನ ಯೋಜನೆಯನ್ನು ನಾನೇ ಸೂಚಿಸಿದೆ. ಅದನ್ನು ಸರಕಾರವು ಅಂಗೀಕರಿಸಿತು." ಇತ್ಯಾದಿ ತಮ್ಮ ರಾಜನಿಷ್ಠ ಕಾರ್ಯ ಹೇಳಿ "Loyalty without patriotism is next to nothing" ದೇಶಾಭಿಮಾನವಿಲ್ಲದಿದ್ದರೆ ರಾಜನಿಷ್ಠೆಯು ನಿಷ್ಪ್ರಯೋಜಕವು ಎಂದು ಸೂಚಿಸಿ, ಇಂದಿನ ಶುಭ ದಿವಸಕ್ಕೆ ಉಪವಾಸ ಬೀಳುವ ಪ್ರಜೆಗಳ ಉದ್ಧಾರಕ್ಕಾಗಿ ನಿಧಿ ಗೂಡಿಸಿ ಕಾರ್ಯವನ್ನಾಡಿರಿ, ಅಂದರೆ ಬಾದಶಹರಿಗೆ ಆನಂದವಾಗುವದು. ಸಭೆಸೇರಿ ಗವರ್ನರರ ಕಾರ್ಯವಿಷಯಗಳಿಗೆ ಹಣ ತಂದುಕೊಡುವದು ನಿರರ್ಥಕವು ಇತ್ಯಾದಿ ಹೇಳಿ ತಮ್ಮ ಯೋಜನೆಯನ್ನು ಸವಿಸ್ತರ ಹೇಳತೊಡಗಿದರು. ಸಭಿಕರಿಗೂ ರಾ। ನಾರಾಯಣರಾಯರಿಗೂ ಭಾಷಣದ ವಿಷಯವು ಅಪ್ರಸಂಗಿಕವೆಂದು ವಾದವಾಯಿತು. ಅತ್ತ ಅಧ್ಯಕ್ಷರಾದ ರಾ। ಬ। ರರು ಉಪನ್ಯಾಸಕರವರಿಗೆ ಸಾಕು ಮಾಡಹೇಳುತ್ತಿದ್ದರು. ಕೊನೆಗೆ ಸಭಿಕರಿಬ್ಬರು "Obey the President" ಅಂದರೆ ಅಧ್ಯಕ್ಷರಿಗೆ ವಿಧೇಯರಾಗಿ ಆಸನಸ್ಥರಾಗಿರಿ ಎಂದು ರಾ। ನಾರಾಯಣರಾಯರಿಗೆ ಹೇಳಿದರು. ಕೂಡಲೆ ಉಪನ್ಯಾಸಕರು "Let there be no two Presidents" ಇಬ್ಬರ ಯಜಮಾನತನ ಬೇಡ ಎಂದು ನುಡಿದು; 'ನನ್ನ ಯೋಜನೆ ಕೇಳಿರಿ' ಎಂದು ಹೇಳುತ್ತಿದ್ದರು. "We have taken your hint" "ನಿಮ್ಮ ಸೂಚನೆಯು ನಮಗೆ ತಿಳಿಯಿತು" ಎಂದು ಅಧ್ಯಕ್ಷರು ಹೇಳಿದರು. "What is that hint about which you do not know?" "ನಿಮಗೆ ಗೊತ್ತಿಲ್ಲದ ಸೂಚನೆಯೇನದು?" ಎಂದು ಉಪನ್ಯಾಸಕರು ಸಭಾಪತಿಗಳಿಗೆ ಪ್ರಶ್ನಿಸಿದರು. ಕಟ್ಟಕಡೆಗೆ ಅಧ್ಯಕ್ಷರ [illegible] ಯನ್ನು ಮನ್ನಿಸಿ ಉಪನ್ಯಾಸಕರು [illegible] ಕೊಂಡರು. ಬಳಿಕ ಅಧ್ಯಕ್ಷರ ಉಪನ್ಯಾಸದ [illegible] ಸಭೆಯು ವಿಸರ್ಜನವಾಯಿತು.

ಇಲ್ಲಿಯ ಕೃಷ್ಣ ಪದ್ಮನಾಭ ಪ್ರಭು ಹಾಗು ಹರಿ ಕೃಷ್ಣ ಕಾನಭಾಗ ಇವರು ಎಲ್. ಎಲ್. ಬಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು.

ಕಾರವಾರ— ಇಲ್ಲಿಯ ಮೋಹನವಾಡಾದೊಳಗಿನ ಪಟೇಲರು ಮತ್ತು ಜಮೀನದಾರರೂ ಆದ ಬಾಲಕೃಷ್ಣ ಪುರಷೋತ್ತಮ ನಾಯಕ ಇವರಿಗೆ ರಾವಸಾಹೇಬ ಕಿತಾಬು ಕೊಡಲ್ಪಟ್ಟಿರುತ್ತದೆ.

ಹೊನ್ನಾವರ— ಇಲ್ಲಿಯ ವಕೀಲರಾಗಿದ್ದ ಶ್ರೀಯುತ ತ್ರಿವಿಕ್ರಮ ಬಾಬ ಕಾನಭಾಗ, ಬಿ. ಎ, ಎಲ್. ಎಲ್. ಬಿ, ಇವರು ವಡಗಾಂವ ಎಂಬಲ್ಲಿ ಸಬ್ ಜಜರಾಗಿ ನೇಮಕರಾಗಿರುವರೆಂದು ತಿಳಿದು ಬಹಳೇ ಸಂತೋಷವಾಗಿರುತ್ತದೆ. ಇವರು ತಮ್ಮ ಬಹಳೇ ಬಡತನದ ಸ್ಥಿತಿಯಲ್ಲಿ ಸ್ವಂತ ಪರಿಶ್ರಮದಿಂದ ಮತ್ತು ಚಾತುರ್ಯದಿಂದ ಉಚ್ಚ ಶಿಕ್ಷಣವನ್ನು ಹೊಂದಿದ್ದರು. ಉತ್ತರಾದಿ ಗೌಡ ಸಾರಸ್ವತ ವೈಷ್ಣವರಲ್ಲಿ ಈ ಅಧಿಕಾರ ಶಿಕ್ಕಿದವರು ಬಹುಶಃ ಇವರೇ ಮೊದಲಿನವರಾಗಿರಬೇಕು. ಇದು ಈ ಜ್ಞಾತಿಗೆ ಭೂಷಣಾಸ್ಪದವು!

ಶಿರಸಿ— ಶಾಳೆಯು ಪ್ರಾರಂಭವಾಗಿದೆ. ಹ್ಯಾಸ್ಕೂಲಿನ ಹೊಸ ಕಟ್ಟಡದ ಅನಾವರಣ ಸಮಾರಂಭವು ಬರೇ ಒಂದು ಮಾವಿನ ತೋರಣದ ಮೇಲಿಯೇ ಹೋಯಿತು. ಹೆಡ್ ಮಾಸ್ತರೀ ಜಾಗಕ್ಕೆ ಮಿ। ಬದೆಂಬಲ, ಬಿ. ಎ., ಬಿ. ಟಿ ಎಂಬವರಿಗೆ ರೂಪಾಯಿ ೧೫೫ ರ ಮೇಲೆ ನೇಮಿಸೋಣವಾಗಿದೆ. ರಾ। ಬ। ಪಂಡಿತರವರು ಸ್ವತಃ ೪—೫ ಸಾವಿರ ರೂಪಾಯಿ ಖರ್ಚ ಮಾಡಿ ಒಂದು ಮಹಾಗೃಹವನ್ನು ಸದ್ಯದಲ್ಲಿಯೇ ಕಟ್ಟಿಸಿಕೊಡುವವರಿದ್ದಾರಾಗಿ ದಟ್ಟ ವದಂತಿ.

ವೃತ್ತಸಾರ.

— ಮುಂಬಯಿಯ ಮಾರ್ವಾಡಿಗಳು ತಮ್ಮಲ್ಲಿ ಅನೇಕ ಸಾವಿರ ರೂಪಾಯಿಗಳ ವಸ್ತ್ರ ವ್ಯಾಪಾರವಾಗದೆ ಬಿದ್ದಿರುವದರಿಂದ ಇನ್ನು ೪ ತಿಂಗಳವರೆಗೆ ಪರದೇಶ ವಸ್ತ್ರ ತರಿಸುವದಿಲ್ಲವೆಂದು ನಿರ್ಧರಿಸಿರುವರು. ಇದರಂತೆ ಕಲ್ಕತ್ತೆಯ ಮಾರ್ವಾಡಿಗಳೂ ನಿಶ್ಚಯ ಮಾಡಿದ್ದಾರೆ.

— ಅರಬಸ್ಥಾನದಲ್ಲಿ ಇನ್ನೂ ೧೪೦ ವರುಷದ ಅರಬ ಮುದುಕನು ಇದ್ದಾನೆ. ಅವನು ೧ನೇ ನೆಪೋಲಿಯನ ಬಾಣನಿಗೆ ತಾನು ೧೩ ವರ್ಷದವನಿದ್ದಾಗ ನೋಡಿದ್ದೆನೆಂದು ಹೇಳುತ್ತಾನೆ.

— ಅಮೇರಿಕೆಯ ನ್ಯೂಯಾರ್ಕ ಪಟ್ಟಣದಲ್ಲಿ ಶಾಸ್ತ್ರೀಯ ಚಮತ್ಕಾರಗಳು ಸಂಭವಿಸುತ್ತವೆ. ಒಬ್ಬನು ಬೇನೆಬಿದ್ದ. ೧೦೦೦ ಮೈಲು ದೂರ ಅವನ ವೈದ್ಯರು. ಆತನೊಡನೆ ರೋಗಿಯು ಕೂತಲ್ಲಿಂದಲೇ ಬಿನ್‌ತಾರಾಯಂತ್ರದಿಂದ ಉಪಚಾರ ಕೇಳಿದನು. ಡಾಕ್ಟರರು 'ಕ್ಷ' ಕಿರಣದಿಂದ ತೆಗೆದ ಛಾಯಾಚಿತ್ರ ಕಳಿಸಹೇಳಿದರು. ಅರ್ಧ ತಾಸಿನೊಳಗೆ ರೋಗಿಯ ಛಾಯಾಚಿತ್ರವು ವೈದ್ಯರ ಕೈಸೇರಿತು. ಡಾಕ್ಟರರು ಮದ್ದನ್ನು ಕೂಡಲೆ ಬಿನ್‌ತಾರಾಯಂತ್ರದಿಂದ ತಿಳಿಸಿದರು. ಬಿನ್‌ತಾರಾಯಂತ್ರದ ಚಮತ್ಕಾರಗಳಿವು!

— ರಜಪೂತಸ್ಥಾನದೊಳಗೆ ಅರವಲೀ ಪರ್ವತದ ಪೂರ್ವದಿಕ್ಕಿಗೆ ಅಲವಾರವೆಂಬ ಸಂಸ್ಥಾನವಿರುತ್ತದೆ. ಈ ಸಂಸ್ಥಾನದ ಪ್ರಜೆಗಳು ತಮ್ಮ ಮೇಲೆ ಏರಿಸಿದ ತೆರಿಗೆಯ ನಿಷೇಧಾರ್ಥವಾಗಿ ಒಂದು ಸಭೆಯನ್ನು ಕೂಡಿಸಿದರು. ಹಾಗೆ ಸಭೆಯನ್ನು ಕೂಡಿಸಬಾರದಾಗಿ ಆ ಸಂಸ್ಥಾನದ ಸರಕಾರದವರು ಅವರಿಗೆ ಮುಂಚಿತವಾಗಿ ಹೇಳಿದ್ದರು; ಮತ್ತು ಪ್ರಜೆಗಳ ಯಾವತ್ತು ದೂರುಗಳನ್ನು ಸಂಸ್ಥಾನದ ಅಧಿಕಾರಿಗಳ ಮುಂದೆ ಹೇಳಿಕೊಳ್ಳಬೇಕೆಂಬದಾಗಿ ಸೂಚಿಸಲಾಗಿತ್ತು. ಹೀಗೆ ದೂರು ಕೊಟ್ಟರೆ ಏನೂ ಉಪಯೋಗವಿಲ್ಲೆಂದು ಜನರು ಮನಗಂಡು ತೀರ್ವೆ ಎತ್ತುವ ನೀತಿಯನ್ನು ಯುವಕರು ಜನರಿಗೆ ಸ್ಪಷ್ಟವಾಗಿ ತಿಳಿಯಗೊಡಬೇಕೆಂದು ಸಭೆಯನ್ನು ನೆರೆಯಿಸಿಯೇ ಬಿಟ್ಟರು. ಈ ಸುದ್ದಿ ತಿಳಿದ ಕೂಡಲೇ ಸಂಸ್ಥಾನದ ಸಶಸ್ತ್ರ ೧೦೦ ಸೈನಿಕರು ಆ ಸ್ಥಳಕ್ಕೆ ಹೋಗಿ ಬಂದೂಕಿನ ಗುಂಡುಹಾರಿಸಿ ೫೦೦ ಜನರನ್ನು ಕೊಂದರು. ಇದರಿಂದಲೂ ತೃಪ್ತಿಯಾಗದೆ ಜನರಿಗೆ ನೀರು ಸಿಗದಂತೆ ದೊಡ್ಡ ಜಲಾಶಯಗಳನ್ನು ಪ್ರತಿಬಂಧಿಸಿದರು. ಮತ್ತು ಮನೆ ಮಾರುಗಳಿಗೆ ಬೆಂಕಿಹಚ್ಚಿ ಹಲವು ಬಗೆಯ ಅತ್ಯಾಚಾರಗಳನ್ನು ಮಾಡಿದರು. ಸಭೆಗಾಗಿ ಹೋದ ಒಂದು ಕುಟುಂಬದ ೧೬ ಮಂದಿಗಳ ಪೈಕಿ ಒಬ್ಬನು ಜೀವ ಉಳಿಸಿಕೊಂಡು ಓಡಿಬಂದು ಈ ಸುದ್ದಿಯನ್ನು ನೆರೆಯ ಸಂಸ್ಥಾನದಲ್ಲಿ [illegible]. ದಿಲ್ಲಿಯ ಕಾಂಗ್ರೆಸ ಕಮೀಟಿಯ ಜನರಲ್ ಸೆಕ್ರೆಟರಿಗಳು ಚೌಕಶಿಗಾಗಿ [illegible] ಅಸಫ ಅಲಿ ಎಂಬವರು ಗುಡ್ಗಾಂವ ಪ್ರದೇಶದಲ್ಲಿ ಮುಕ್ಕಾಮಕ್ಕೆ ಹೋದ ಈ ಸಂಸ್ಥಾನದ ಮಹಾರಾಜರಿಗೆ ಈ ಸುದ್ದಿಯ ಸತ್ಯಾಸತ್ಯತೆಯ ಸ್ವರೂಪವನ್ನು ಹೊರಗೆಡಹಲಿಕ್ಕೆ ಕೆಲವು ಕಾಂಗ್ರೆಸ ಪ್ರತಿನಿಧಿಗಳಿಗೆ ಆ ಸ್ಥಳಕ್ಕೆ ಭೆಟ್ಟಿಗೊಡಲು ಬಿಡುವದಕ್ಕಾಗಿ ಅಪ್ಪಣೆಯನ್ನು ಶಾಂತಿಯಿಂದ ಕೇಳಿರುವರು. ಇದು [illegible] ಜಾಲಿಯನ್‌ವಾಲಾಬಾಗದಂಥ ಘೋರ [illegible] ಸಂಗತಿ ಒದಗಿ ಬಂದಿರುವದೇನು? ಅದಕ್ಕೆ ನಮ್ಮ ಹಿಂದುಸ್ಥಾನ ಸರಕಾರವು ತನ್ನ ರೆಸಿಡೆಂಟರ ಮುಖಾಂತರ ಯೋಗ್ಯ ಚೌಕಶಿ ನಡೆಸುತ್ತದೋ ಏನು ನೋಡಬೇಕು.

— [illegible] ಕಳವು, ಘೋಟಾಳೆ ಮೊದಲಾದ ವ್ಯಾಪಾರಗಳು ಯುರೋಪಿಯನ್ನರಿಗೆ ಸುಲಭವಾಗಿರುವವು. ಹಿಂದುಸ್ಥಾನದೊಳಗಿನ ಫ್ರೆಂಚ ವಸಾಹತಿನ ಮುಖ್ಯ ಪಟ್ಟಣವಾದ ಪಾಂಡಿಚೇರಿಯೊಳಗೆ, ಎ. ಪಿ. ಎಡ್. ಹೆನಲೇ ಮತ್ತು ಕಾರಟೇರ ಎಂಬ ಇಬ್ಬರು ಯುರೋಪಿಯನ್ ಗೃಹಸ್ಥರಿಗೆ ಸೆರೆಯಲ್ಲಿಟ್ಟಿರುವರು. ಇವನು ಕಳೆದ ಮೂರು ತಿಂಗಳ ಹಿಂದೆ ತಾನು ಒಂದು ದೊಡ್ಡ ವ್ಯಾಪಾರದ ಮತ್ತು ಉದ್ಯೋಗದ ಕಾರಖಾನೆಯನ್ನು ತೆಗೆಯುವವನಿದ್ದೇನೆಂದು ಸುದ್ದಿ ಬೀರಿದನು. ಅದಕ್ಕೋಸ್ಕರ ಈ ಗೃಹಸ್ಥನ ಹೆಸರಿನಲ್ಲಿ ೫೦ ಸಾವಿರಾರು ರೂಪಾಯಿಗಳ ಇನ್ಶೂರ ಮತ್ತು ಮನಿ ಆರ್ಡರುಗಳನ್ನು ಆತನಿಗೆ ಕೊಡಬಾರದೆಂತ, ಬ್ರಿಟಿಶ ಹಿಂದುಸ್ಥಾನದ ಕೋರ್ಟುಗಳಿಂದ ಕಳಿಸಿಕೊಟ್ಟ ಗೃಹಸ್ಥರು, ಅಲ್ಲಿಯ ಪೋಸ್ಟಮಾಸ್ತರರಿಗೆ ಶಾಂತಿಯಿಂದ ತಿಳಿಸಿದರು. ಪೋಸ್ಟ ಮಾಸ್ತರರು ಹಣವನ್ನು ಕೊಡದೆ ಇದ್ದದರಿಂದ ತಾನು ಕಾಯದೇ ೫೦ [illegible] ದಾವಾ ಹಾಕುವೆನೆಂದು ಬೆದರಿಸಹತ್ತಿದರು. ಕರಾಚಿ, ಮುಂಬಯಿ ಮುಂತಾದ ದೊಡ್ಡದೊಡ್ಡ ಪಟ್ಟಣಗಳಿಂದ ಸಾವಿರಾರು ರೂಪಾಯಿಗಳು ಹೊರಗೆ [illegible]ಗಾಗಿ ಹೋಗುವದನ್ನು ತಡೆಹಿಡಿದು, ಈ ಅಧಿಕಾರವಿಲ್ಲದ ಬಂದರೆ [illegible] ಪಡೆಯದ ಇದ್ದ [illegible]ಯನ್ನು ಇಷ್ಟ ಪಡಲು ಮುಂಬಯಿ ಪೋಲೀಸರು ಫ್ರೆಂಚ ಸರಕಾರಕ್ಕೆ ತಿಳಿಸಿದ್ದರು. ಈ ಎಲ್ಲ ಸುದ್ದಿಯಿಂದ, ಇವರನ್ನು ಫ್ರೆಂಚ ಸರಕಾರದ ಮ್ಯಾಜಿಸ್ಟ್ರೇಟರು ವಿಚಾರಣೆ ಸಮಯಕ್ಕೆ ಕೇಳಲು, ಏನೂ ಹೇಳಲಾರೆನೆಂದು ಅವನು ಉತ್ತರವನ್ನಿತ್ತಿದ್ದಾನೆ. ರಿಮಾಂಡ ಕೋರ್ಟಿನಲ್ಲಿ ತನಗೆ ಹಣಕೊಡದ ಇದ್ದಬಗ್ಗೆ ಪೋಸ್ಟ ಮಾಸ್ತರರಮೇಲೆ ದಾವೆ ಹೂಡಿದ್ದಾನೆ. ತನಗೆ ಸರಿಯಾಗಿ ಯಾರು [illegible] ಕೊಡಲಿಲ್ಲ. ತನಗೆ ಇನ್ನೂ ೫೦೦ ರೂಪಾಯಿಗಳು ಬರತಕ್ಕವಿವೆಯೆಂತ ಅವನ ಕಾರಕೂನ ವಿಲಿಯಮ್ [illegible]ಟರನನು ಅವನಮೇಲೆ ದಾವೆ ಹೂಡಿದ್ದಾನೆ!

— ಪಂಜಾಬಿನೊಳಗೆ ವಾಯವ್ಯ ಸರಹದ್ದಿನ ಪ್ರಾಂತದ ಡೇರಾ ಇಸ್ಮಾಯಿಲಖಾನ ಎಂಬಲ್ಲಿ ಅನೇಕ [illegible] ಧರ್ಮ ಅತ್ಯಾಚಾರಗಳು ಸಂಭವಿಸುತ್ತವೆ. [illegible] ಡೇರಾ ಇಸ್ಮಾಯಿಲಖಾನ ಪಟ್ಟಣದೊಳಗಿನ ಸಾಮಾನ್ಯ ಹಿಂದೂ ಮುಂದಾಳುಗಳ ಮನೆಯ ಬಾಗಿಲುಗಳಿಗೆ ಕೆಂಪು ಹಸ್ತಪತ್ರಗಳು ಅಂಟಿಸಲ್ಪಟ್ಟವು. 'ನಮ್ಮ ಅಂಜುಮಾನ ಮುಸಲ್ಮಾನ ಗುಪ್ತ ಸಭೆಯು ನಮ್ಮ ಕಾರ್ಯಗಳಿಗೆ ಒಪ್ಪುವವರೆಗೆ, ಹಿಂದೂಗಳು ಈ ಪ್ರಾಂತದಲ್ಲಿ ವಾಸಿಸಕೂಡದೆಂದು ನಿಶ್ಚಯಿಸಿದೆ. ಹಿಂದೂಗಳು [illegible] ಇಲ್ಲದಿದ್ದರೆ ಅವರು ನಮ್ಮ ಈ ಪ್ರಾಂತವನ್ನು ಬಿಟ್ಟು ನಡೆಯಬೇಕು. ಈ ಕಾಗದಗಳಿಗೆ ಒಪ್ಪದಿದ್ದರೆ (ಕೆಂಪು ಕೊಟ್ಟು) ಕೆಲವು ಹಿಂದೂ ಮಹಾಪ್ರಭುಗಳಿಗೆ ನಾವು ಕೊಂದು ತೆಗೆಯುತ್ತೇವೆಂದು [illegible] ಸಾಯುತ್ತೇವೆ. ನಾವು ಈ ಕಾರ್ಯಗಳನ್ನು [illegible], ಮನೆಗಳಿಗೆ ಬೆಂಕಿ ಹಚ್ಚುವೆವು; [illegible] ಸುಲಿಯುವೆವು; ಬೀದಿಗಳಲ್ಲಿ [illegible], ಅನೇಕ ಹಲವು [illegible], ಮತ್ತು ಮಕ್ಕಳಿಗೆ ಕಷ್ಟವಾಗುವಂತಹ ಅತ್ಯಾಚಾರಗಳನ್ನು ಮಾಡುವೆವು. [illegible] ನಮ್ಮ ಗೊತ್ತಾದಾಗ [illegible] ಉಳಿಯಬೇಕು. ಕೋಟಿಕವನ್ನು ನೆನಪಿನಲ್ಲಿಡಿರಿ" ಧರ್ಮಾಂಧರಾದ ಪ್ರಾಂತ [illegible] ದಿವಸ [illegible] ತಿಳಿಯದು. ಹಿಂದೂ ಬಾಂಧವರು ಜಾಗ್ರತರಾಗಿರಬೇಕಾಯಿತು.

— ನಮ್ಮ ಇಡೀ ಹಿಂದುಸ್ಥಾನದಲ್ಲಿ ಮಧ್ಯಪ್ರಾಂತವು ಹತ್ತಿಯ ಬೆಳೆಯಲ್ಲಿ ವಿಶೇಷ ಪ್ರಸಿದ್ಧವಾದ ಪ್ರದೇಶವು. ಹಿಂಗಣಘಾಟದ ಆಳವೂ ಅದರ ಸುತ್ತುವಿನ ಪ್ರದೇಶದಲ್ಲಿ ಮತ್ತು ಉತ್ತಮತೆಯಲ್ಲಿ [illegible] ಹೀಗಿದ್ದು ರಾಟಿಯ ಪ್ರಚಾರವು ಬಹಳೇ [illegible]. ಹತ್ತಿಯು ಬಿತ್ತುಗಳ ಪ್ರಮಾಣವು [illegible]. ಮಹಾತ್ಮಾ ಗಾಂಧಿಯವರು ಬಂಗಾಲದೊಳಗಿನ ತಮ್ಮ ಪ್ರವಾಸವನ್ನು ಮುಗಿಸಿ ಹಿಂತಿರುಗುವಾಗ, ಖಾದಿಯ ಪ್ರಚಾರಕ್ಕಾಗಿ ಮಧ್ಯಪ್ರಾಂತವನ್ನು ಸಂದರ್ಶಿಸುವರು.

— ಮಹಾತ್ಮರು [illegible] ಕಾಂಗ್ರೆಸ್ ಮಹಾಸಭೆಯ ಸಮಗ್ರ ಸದಸ್ಯರು [illegible] ಮತ್ತು [illegible] ಮಾಡಿಸಿದರು. [illegible] ಬಂಗಾಲದೊಳಗೆ ಅವರು ಪ್ರವಾಸ ಬೆಳಿಸಿ ದಾರ್ಜಿಲಿಂಗಕ್ಕೆ ದೇಶಬಂಧು ದಾಸರ ಬಳಿಗೆ ಹೋಗಿರುವರು. ಮಹಾತ್ಮರು ಉಪವಾಸಗಳು [illegible], ಸದ್ಯಕ್ಕೆ ಪ್ರಕೃತಿ ಸುಧಾರಿಸಿಯೂ ಕಾಣುತ್ತಾರೆ.

— ಡಾ॥ ಅನಸೂಯಾ ನೇತೃತ್ವದೊಳಗೆ "ಕೋಮು [illegible]" ಎಂಬ ಒಂದು ಕಮೀಟಿಯು ಕಾನ್ಸ್‌ಟಾಂಟಿನೋಪಲಕ್ಕೆ ಹೋಗಿತ್ತು. ಅದರ ಸಂಗಡ ಹೋದ [illegible] ಸಿದ್ದೀಕ ಎಂಬ ಗೃಹಸ್ಥನಿಗೆ ಮೇ ತಾ॥ ೨ನೇಗೆ ಕಾನ್ಸ್‌ಟಾಂಟಿನೋಪಲ್ ದೊಳಗಿನ ಒಂದು ಗಲ್ಲಿಯಲ್ಲಿ ೩-೪ ಜನರು ಗುಂಡು ಹಾರಿಸಿ ಕಾಲನ್ನು ಕುಂಟನನ್ನಾಗಿ ಬಿಟ್ಟಿರುವರು. ಅಂಥ ಊನ ಸ್ಥಿತಿಯಲ್ಲಿ ಸಮಗ್ರ ನಾಲ್ಕು ತಾಸುಗಳವರೆಗೆ ಅವನು ಮಳೆಯಲ್ಲಿ ತೋಯ್ಯುತ್ತ ಗಲ್ಲಿಯಲ್ಲಿ ಬಿದ್ದುಕೊಂಡಿದ್ದನು. ಪೋಲೀಸರು ಆಸ್ಪತ್ರೆಯಲ್ಲಿ ಒಯ್ದು ಹಾಕಿದ್ದಾರೆ.

— ಬಂಗಾಲದ ಮಾಜಿ ಗವರ್ನರಾಗಿದ್ದ ಮಿ॥ ಫಜಲೂಲ್ ಹಕ್ಕರಿಗೆ, ಕಲಕತ್ತೆಯ ಹಾಯಕೋರ್ಟ ನ್ಯಾಯಾಧೀಶರಾದ ಮಿ॥ ಜಸ್ಟಿಸ್ ಸಿಯುರಸನ್‌ರವರು ಕೋರ್ಟ ವಾರಂಟನ್ನೇ ಹಿಡಿದು ತಂದರು. ತಾಕು ನವಾಬರ ಮೇಲೆ ೨,೪೦,೦೦೦ ರೂಪಾಯಿಗಳ ದಾವೆಯೊಂದು ಕೋರ್ಟ ಮುರಿದಬಗ್ಗೆ ಮಿ॥ ಕಾದರನಾಥ ಸನ್ಯಾಲರವರು ದಾವೆ ಹೂಡಿದ್ದರು. ಅದರಲ್ಲಿ ಸ್ಪಷ್ಟವಾದ ಬಯಾನ ಇಲ್ಲ, ಫಜಲೂಲ ಹಕ್ಕರಿಗೆ ಸಾಕ್ಷಿ ಸಮನ್ಸ ಹೋಗಿತ್ತು. ಅದನ್ನು ಅವರು ನಿರಾಕರಿಸಿದ್ದರಿಂದ ನ್ಯಾಯಾಧೀಶರು ವಾರಂಟು ಹೊರಡಿಸಿದರು. ನಿರಾಕರಣೆಯ ಬಗ್ಗೆ ನ್ಯಾಯಾಧೀಶರು ಮಿ॥ ಫಜಲೂಲರಿಗೆ ಜವಾಬು ಕೇಳಲೇಳು, ತಾನು ಆ ಕಾಲಕ್ಕೆ ಸಾಯಂಕಾಲದೊಳಗೆ ಕಲಕತ್ತ ಕೋರ್ಟಿನಲ್ಲಿ ಖಟ್ಲೆ ನಡೆಸುತ್ತಿದ್ದೆನೆಂದೂ, ಹಾಗೂ ಮುಂತ್ರ ಮಾಡುವುದು ಅನಾನುಕೂಲತೆಯ ಬಗ್ಗೆ ತಾವು ಬಿಡಲು ಸವಡು ಸಿಗಲಿಲ್ಲೆಂತಲೂ ಹೇಳಿ, ಮಾಫಿಯನ್ನು ಬೇಡಿದರು. ಮಾಜಿ ವಕೀಲರಾದ ಮಿ॥ ಸರಕಾರರವರು ಇವರಿಗೆ ಸವಲು ಮಾಡುತ್ತಿರುವಾಗ, ಇವರ ವಿರುದ್ಧ ಅನೇಕ ಕೋರ್ಟ ಡಿಕ್ರಿಗಳೂ ಆದಯಂತಲೂ, ಇತ್ತರ ದೊಡ್ಡ ಅನೇಕ ವಾರಂಟುಗಳು ಹೊರಡಲಿಕ್ಕೆ ಸಂಭವವಿದ್ದೆಯೂ ಇವರು ಹೇಳಿದರು. ಇಷ್ಟು ದೊಡ್ಡ ಮನುಷ್ಯರಿಗೆ ಹೀಗೆ ಸಾಲವಾಗುವ ಕಾರಣವೇನಿರಬಹುದು?

— ಇಂದೂರ ಮಹಾರಾಜರು ಕುರ್ತಿ ಮತ್ತು ಶಾಂತಿ ಇವರ ಕಾರ್ಯಕ್ಕಾಗಿ ೫೦ ಸಾವಿರ ರೂಪಾಯಿಗಳನ್ನು ಅರ್ಪಿಸುವವರು. ಮಹಾರಾಜರ ಔದಾರ್ಯವು ಪ್ರಶಂಸನೀಯವು.

— ಚೀನದಲ್ಲಿ ಸರಕಾರದ ವಿರುದ್ಧ ಚೀನೀ ವಿದ್ಯಾರ್ಥಿಗಳು ದಂಗೆ ಎಬ್ಬಿಸಿರುವರು. ಈ ವಾರ ಸುಮಾರು ೩೦೦ ಮಂದಿ ವಿದ್ಯಾರ್ಥಿಗಳು ರಸ್ತೆಯಲ್ಲಿ ಮೆರವಣಿಗೆಯಿಂದ ಹೋಗಿ "ಪರದೇಶೀಯರು ನಮ್ಮ ಸಂಪತ್ತನ್ನು ಒಯ್ಯುತ್ತಿದ್ದಾರೆ, ಅವರನ್ನು ಕೊಲ್ಲಿರಿ." ಎಂದು ಕೂಗುತ್ತಿದ್ದಾಗ, ಇವರನ್ನು ಪೋಲೀಸರು ಚದರಿಸಹೋಗಲು, ಪೋಲೀಸರೇ ಹೊಡೆತ ತಿನ್ನಬೇಕಾಯಿತು. ಗುಂಡು ಹಾರಿಸಿ ಪೋಲೀಸರು ೬ ಮಂದಿಗಳನ್ನು ಕೊಂದು ಹಾಕಿದರು. ೪ ಮಂದಿಗಳಿಗೆ ಬಹಳೇ ಗಾಯವಾಗಿದೆ.

— ಇಂದೂರ ಸಂಸ್ಥಾನದಲ್ಲಿ ಬಾವಲಾ ಖೂನಿ ಖಟ್ಲೆ ನಿಮಿತ್ತ ಈಗ ಜನರು ಬಹಳೇ ವಿಚಾರದಲ್ಲಿ ತೊಡಗಿರುವರು. ಈ ಖಟ್ಲೆಯ ಸುದ್ದಿಯನ್ನು ಹೊರಗೆಡಹುವ 'ಟಾಯಿಮ್ಸ' ಮತ್ತು 'ನವೋಜ' ಈ ಎರಡು ಪತ್ರಗಳು, ಸಂಸ್ಥಾನದಲ್ಲಿ ಬರದಂತೆ ದಿವಾನರು ಜಾಹೀರನಾಮೆ ಹೊರಡಿಸಿದ್ದಾರೆ. ಗುಪ್ತ ಪೋಲೀಸರು ನಾಲ್ಕೂ ಕಡೆಯಿಂದ ಜನರ ಮೇಲೆ ನಜರಿಟ್ಟಿರುವರು. ಎಂತನೇ ಆ ರೋಪಿಯಾದ ಮುಂತಾಜ ಈತನ ತಾಯಿಯು ಮಹಾರಾಜರ ಅಸ್ತ್ರೀಯಾಗಿರುವಳು. ತನ್ನ ಮಗನಿಗೆ ಫಾಶಿ ಶಿಕ್ಷೆ ವಿಧಿಸಿದ್ದು ನೋಡಿ ಬಹಳೇ ನೊಂದುಕೊಂಡಿರುವಳು. ಫಾಶಿ ಮತ್ತು ಹೊಂದಿ ಇವರ ಆಸ್ತಿಗಳನ್ನು ಇಂದೂರ ಸರಕಾರವು ಕಾಯಿದೆಯಂತೆ ಇವರಿಗೆ ಶಿಕ್ಷೆಯಾದ್ದರಿಂದ ಜಪ್ತ ಮಾಡಲಿಕ್ಕಿದೆ. ಆರೋಪಿ ಗೌಶೆ ಇವನ ಆಸ್ತಿಯು ಜಪ್ತ ಮಾಡಲ್ಪಟ್ಟಿದೆ. ಫಾಶಿ ಹಾಗು ಜನ್ಮಠಾಪು ಶಿಕ್ಷೆಗೆ ಪಾತ್ರರಾದ ಕೆಲವರು ಮತ್ತು ಕುಟುಂಬಗಳು ಅವರಿಗೆ ಭೆಟ್ಟಿಯಾಗಲಿಕ್ಕೆ ಮುಂಬಯಿಗೆ ಹೋಗಿರುವವು. ಸಂಸ್ಥಾನದ ಅಧಿಕಾರಿಗಳಲ್ಲಿ ಯಾರ ಹೆಸರು ಬಾವಲಾ ಖಟ್ಲೆಯಲ್ಲಿ ಬಂದದೆಯೋ ಅವರಿಗೆಲ್ಲ ಅಧಿಕಾರ ಚ್ಯುತರಾಗಿ ಮಾಡಿರುವರು.

— ಡಾ॥ ಬಿಸೆಂಟ ಅಮ್ಮನವರ ಸ್ವರಾಜ್ಯ ಬಿಲ್ಲಿಗೆ ಸಮ್ಮತಿ ದೊರಕಿಸಬೇಕೆಂದು ಕಾಶಿಯಲ್ಲಿ ಸಭೆಕೂಡಿತ್ತು. ಅದು ಸ್ವರಾಜ್ಯಪಕ್ಷದ ಸಭೆಯಲ್ಲಾಗಲೀ, ಕಾಂಗ್ರೆಸಿನ ಲ್ಲಾಗಲೀ ಸ್ಪಷ್ಟ ಚರ್ಚಿಸಲ್ಪಟ್ಟು ಸಮ್ಮತಿ ದೊರಕಲಿಲ್ಲ. ಆ ಕಾರಣ ಅದಕ್ಕೆ ಏನೊಂದು ಅಭ್ಯಂತರವಿರದೆಂದು ಸಭೆಯಲ್ಲಿ ಜಾಹೀರಾಯಿತು. ಅಮ್ಮನವರು ಈಗ ದೇಶಬಂಧು ದಾಸರ ಬಳಿಗೆ ದಾರ್ಜಿಲಿಂಗಕ್ಕೆ ಸಮ್ಮತಿ ದೊರಕಿಸಲಿಕ್ಕೆ ತೆರಳುತ್ತಾರೆ.

ಬಾಬುವಿನ ಬಂಧಮುಕ್ತತೆ.

(ಅನುವಾದಕ:— ವ್ಹಿ. ಎ. ಹೊನ್ನೆ. ಬಿ.ಎ.)

ಹಿಂದಿನ ಸಂಚಿಕೆಯಿಂದ ಮುಂದೆ ಸಾಗಿದ್ದು

ಎಂಟು ಆಣೆಗಳ ಲಾಭವನ್ನು ಪಡೆದು ಪಟ್ಟೇಮಾಲನು ಅತ್ಯಾನಂದದಿಂದ ಬಂಗ್ಲೆಯಕಡೆಗೆ ಸಾಗಿದನು. ತನ್ನ ಯಜಮಾನನು ಜಗಲಿಯಮೇಲೆ ಚಿಂತೆಯಿಂದ ಅತ್ತಿತ್ತ ಅಡ್ಡಾಡುವದನ್ನು ಕಂಡನು.

ಪಟ್ಟೇಮಾಲನನ್ನು ನೋಡಿ ಸಾಹೇಬನು ಸಿಟ್ಟಿನ ಸ್ವರದಲ್ಲಿ ತಡವಾದ ಕಾರಣವನ್ನು ವಿಚಾರಿಸುತ್ತ, ಪೆಟ್ಟಿಗೆಯನ್ನು ತನ್ನ ಕೈಯಲ್ಲಿ ತೆಗೆದುಕೊಂಡನು. ಅದರಮೇಲೆ 'ಸ್ವದೇಶೀ ಬಿಸ್ಕಿಟ್' ಎಂದು ಬರೆದ ಅಕ್ಷರಗಳನ್ನು ನೋಡಿ ಪಕ್ಕದಲ್ಲಿ ಕರೆ ತಿಳಿಸಿದಂತಾಗಿ ಅದನ್ನು ತನ್ನ ಸೇವಕನ ತಲೆಮೇಲೆ ಬಹಳೇ ಜೋರಿನಿಂದ ಎಸೆದನು. ಈ ಮೊದಲೇ ಜಗಲಿಯ ತುದಿಗೆ ನಿಂತಿದ್ದ ಆ ಬಡಪಾಯಿಯು ಕೆಳಗೆ ಕವಚಿಬಿದ್ದ ಸ್ಥಳಕ್ಕೆ ಉರುಳಿದನು. ಮತ್ತು ಪೆಟ್ಟಿಗೆಯ ಅಂಚಿನ ಮೂಲಕ ಅವನ ಹಣೆ ಒಡೆದು ರಕ್ತವು ಒಂದೇ ಸಮನಾಗಿ ಹರಿಯಹತ್ತಿತು.

ಸಾಹೇಬನು ಅವನ ದುಸ್ಥಿತಿಯಕಡೆಗೆ ಲಕ್ಷ್ಯ ಕೊಡದೆ, "ಹಂದೀ ಮಗನೇ, ಈ ದೇಶೀ ಬಿಸ್ಕಿಟುಗಳನ್ನು ಯಾಕೆ ತಂದಿ?" ಎಂದು ಗದರಿಸಿದನು.

ಪಟ್ಟೇಮಾಲನು ಪ್ರಯಾಸದಿಂದ ಎದ್ದು ಸಾವಕಾಶವಾಗಿ ಜಗಲಿಯನ್ನೇರಿ, ಅಂಜಿಕೆಯಿಂದ ನಡುಗುತ್ತ ತನ್ನ ಯಜಮಾನನ ಮುಂದೆ ನಿಂತನು. ಕೈಗಳನ್ನು ಮುಗಿದುಕೊಂಡು ಅವನು ಅಂದದ್ದು,— "ಹುಜೂರ, ನಾನು ಮೊದಲು ವಿಲಾಯತಿ ಬಿಸ್ಕಿಟುಗಳನ್ನೇ ಕೊಂಡಿದ್ದೆನು-ಆದರೆ-"

"ನೀನು ಕೊಂಡಿದ್ದಿ,—ಅಲ್ಲವೇ? ಅವೇನಾದವು?"

"ಆದರೆ ಹುಜೂರ—ಕಾಲೇಜು ಹುಡುಗರು—"

ಪಟ್ಟೇಮಾಲನು ತನ್ನ ಎಂಟು ಆಣೆಗಳಿಗೆ ದಾನರೂಪ ಕೊಡುವದೂ, ದೇಶೀ ಬಿಸ್ಕಿಟಗಳೇ ಉತ್ತಮವಾಗಿರುವವಲ್ಲದೆ ದರದಲ್ಲಿಯೂ ಕಡಿಮೆ ಅಗ್ಗವಾಗಿರುವವೆಂದು ಹೇಳಿದ ಹುಡುಗರ ಹೇಳಿಕೆಯಮೇಲೆ ವಿಶ್ವಾಸವಿಟ್ಟು, ಅವುಗಳನ್ನೇ ಕೊಂಡೆನೆಂದು ಒಪ್ಪಿಕೊಳ್ಳುವದೂ, ಇನ್ನು ಮೇಲೆ ಎಂದೂ ಹಾಗೆ ಮಾಡಲಿಕ್ಕಿಲ್ಲವೆಂದು ಹೇಳುವದು ಹಿತಕರವೆಂದು ಆಲೋಚಿಸಿದನು. ಆದರೆ ಸಿಟ್ಟಿನಿಂದ ಉರಿಯುತ್ತಲಿದ್ದ ಯಜಮಾನನು ಅವನನ್ನು ತಡೆದು ಅಂದದ್ದು— "ಏನು? ಕಾಲೇಜ ಹುಡುಗರು? ವಂದೇ ಮಾತರಂ? ಅವರು ನಿನ್ನ ಪೆಟ್ಟಿಗೆಯನ್ನು ಕಸಕೊಂಡು ಹೋದರು—ಹೌದೋ?"

ಸಾಂಪ್ರತ ಸಂಕಟದೊಳಗಿಂದ ಪಾರಾಗಲು ಇದೇ ಉತ್ತಮವಾದ ದಾರಿ ಎಂದು ತಿಳಿದು, ಪಟ್ಟೇಮಾಲನು ಕೂಡಲೇ ತನ್ನ ಮನಸ್ಸನ್ನು ತಿರುಗಿಸಿದನು. ಆದ್ದರಿಂದ ಅವನು ಬಗ್ಗಿ ಸಲಾಮುಮಾಡಿ—"ಹುಜೂರ, ಹೌದು—ಅವರು ನನ್ನ ವಿಲಾಯತಿ ಪೆಟ್ಟಿಗೆಯನ್ನು ಅಪಹರಿಸಿದರು" ಎಂದು ಉತ್ತರ ಕೊಟ್ಟನು.

"ನೀನು ಯಾಕೆ ಸುಮ್ಮನೆ ನಿಂತೀ?"

"ಹುಜೂರ, ನಾನೇನು ಮಾಡಲಿ? ನನ್ನ ಒಬ್ಬನ ವಿರುದ್ಧ ಅವರು ೩೦-೪೦ ಮಂದಿ."

ಸಾಹೇಬರು ತಾವೆ ಉತ್ತೇಜಿತರಾಗಿ ವೃತ್ತಪತ್ರಗಳಲ್ಲಿ ಓದುತ್ತಿರುವಂತೆಯೇ ಆಯಿತು ಎಂದು ತಿಳಿದರು.

"ಎಲೇ ಹೇಡಿಯೇ,—ನೀನು ಪೋಲೀಸರನ್ನು ಯಾಕೆ ಕರೆಯಲಿಲ್ಲ?"

"ಗರೀಬ ಪರವಾರ, ನಾನು ಕರೆದೆನು— ಪೋಲೀಸರಿಗಾಗಿ ನಾನು ಗಟ್ಟಿಯಾಗಿ ಒದರಿದೆನು, ಆದರೆ ಯಾರೂ ಬರಲಿಲ್ಲ. ಹುಡುಗರು ಆ ಪೆಟ್ಟಿಗೆಯನ್ನು ಒಡೆದರು. ಮತ್ತು ಬಿಸ್ಕಿಟಗಳನ್ನು ಬೀದಿಯಲ್ಲಿ ಹರವಿ, 'ವಂದೇ ಮಾತರಂ' ಅಥವಾ ಇಂಥಾದ್ದೇ ಏನೋ ಹೇಳಿ ಒದರುತ್ತ ಅವುಗಳಮೇಲೆ ಕುಣಿಯುತ್ತಿದ್ದರು. ಹುಜೂರರ ಚಹಾ ತಣ್ಣಗಾಗುತ್ತ ನಡೆದಿತ್ತು. ಮತ್ತು ಕಿಸೆಯಲ್ಲಿ ನನ್ನ ಸ್ವಂತ ರೂಪಾಯಿಯೊಂದು ಇದ್ದದ್ದರಿಂದ, ನಾನು ಒಂದು ದೇಶೀ ಪೆಟ್ಟಿಗೆಯನ್ನು ಕೊಂಡೆನು. ಧರ್ಮಾವತಾರ, ವಿಲಾಯತಿ ಪೆಟ್ಟಿಗೆಗಳು ೧॥ ರೂಪಾಯಿಗಿಂತ ಕಡಿಮೆ ಕಿಮ್ಮತ್ತಿಗೆ ಸಿಗುವಂತಿದ್ದಿಲ್ಲ."

ಸಾಹೇಬನಿಗೆ ಖಾತ್ರಿಯಾಯಿತು. "ಒಳ್ಳೇದು, ಇದರ ವಿಷಯವಾಗಿ ಕಲೆಕ್ಟರರ ಭೆಟ್ಟಿಗೆ ನಾನು ಈಗಲೇ ಹೋಗುವೆನು. ಈ ನೀಚ ಹುಡುಗರನ್ನು ನಾನು ತುರಂಗದಲ್ಲಿ ಕೊಳೆಸುವೆನು."— ಅನ್ನುತ್ತ ತನ್ನ ಟೊಪ್ಪಿಗೆಯನ್ನು ತೆಗೆದುಕೊಂಡು, ಅವರು ಸ್ಟೇಶನ್ ಕ್ಲಬ್ಬಿನ ಕಡೆಗೆ ನಡೆದರು.

ಕಲೆಕ್ಟರರು, ಜಜ್ಜ ಸಾಹೇಬರು, ಪೋಲೀಸ ಸುಪರಿಂಟೆಂಡೆಂಟರು ಮತ್ತು ಬೇರೆ ಕೆಲ ಯುರೋಪಿಯನ್ ಅಧಿಕಾರಿಗಳು ಆ ಕ್ಲಬ್ಬಿನೊಳಗಿದ್ದರು. ಮೇಜರ್ ಸಾಹೇಬರು ಸಹ ಕೆಲವರು ಹಾಜರಿದ್ದರು. ಜಜ್ಜ ಸಾಹೇಬರು ಮತ್ತು ಕಲೆಕ್ಟರರು ತಮ್ಮ ಮೇಲಂಗಿಗಳನ್ನು ತೆಗೆದಿಟ್ಟು, ಒಳ ಅಂಗಿಯ ಕೈಗಳನ್ನು ಮೇಲಕ್ಕೇರಿಸಿ ಚಂಡಿನ ಒಂದು ಆಟವನ್ನಾಡುತ್ತಿದ್ದರು. ಜೊಯಿಂಟ್ ಮ್ಯಾಜಿಸ್ಟ್ರೇಟರು, ಪೋಲೀಸ ಸಾಹೇಬರು ಮತ್ತು ಅವರವರ ಧರ್ಮಪತ್ನಿಯರು ಮತ್ತೊಂದು ಆಟವನ್ನಾಡುತ್ತಿದ್ದರು. ಸಿವಿಲ್ ಸರ್ಜನರು ಬಾಯಿಯಲ್ಲಿ ಚುರೂಟ ಹಿಡಕೊಂಡು, 'ಸಚಿತ್ರ ಲಂಡನ್ ವೃತ್ತ'ವನ್ನು ಓದುತ್ತಿದ್ದರು. ಗೃಹಸ್ಥರು ಬ್ರ್ಯಾಂಡಿಯನ್ನು ಕುಡಿಯುತ್ತಿದ್ದರೆ, ಗೃಹಿಣಿಯರು ವ್ಹಿಸ್ಕಿಯ ರುಚಿ ನೋಡುವದರಲ್ಲಿ ತೊಡಗಿದ್ದರು.

ಚಹಾ ತೋಟಿಗರಾದ ಸಾಹೇಬರು ಹೆಬ್ಬಾಗಿಲಿನ ಹತ್ತರ ಬಂದು, ಒಂದು ಚೀಟಿಯನ್ನು ಕಳಿಸಲು, ಕಲೆಕ್ಟರರು ಅವರನ್ನು ಕೂಡಲೇ ಒಳಕರೆಕಳಿಸಿದರು. ಕೈಯಲ್ಲಿ ಟೊಪ್ಪಿಗೆಯನ್ನು ಹಿಡಕೊಂಡು, ಅವರು ಆಮಂತ್ರಣವಿಲ್ಲದೆ ಬಂದದ್ದಕ್ಕಾಗಿ ತನಗೆ ಬಹಳೇ ವ್ಯಸನವಾಗುತ್ತದೆಂದು ಗುಣುಗುಟ್ಟುತ್ತ, ತಮ್ಮ ಸೇವಕನಿಂದ ಕೇಳಿದ ಸಂಗತಿಯನ್ನೆಲ್ಲ ವಿವರಿಸಿದರು.

ಕಲೆಕ್ಟರರ ಮೋರೆಯು ಸಿಟ್ಟಿನಿಂದ ಕಪ್ಪಿಟ್ಟಿತು. ಪೋಲೀಸ ಸುಪರಿಂಟೆಂಡೆಂಟರನ್ನುದ್ದೇಶಿಸಿ,— "ಇದು ಬಹಳ ಭಯಂಕರವೆಂತ ನನ್ನ ಹೇಳಿಕೆ. ಕೂಡಲೇ ಇದರ ಕಡೆಗೆ ಲಕ್ಷ ಕೊಡಲಿಕ್ಕೇ ಬೇಕು." ಎಂದರು.

ಪೋಲೀಸ ಸಾಹೇಬರು ತಾವೇ ಸ್ವತಃ ಹೋಗಿ ಅದನ್ನು ವಿಚಾರಿಸುವೆನಾಗಿ ಹೇಳುತ್ತ ಅವಸರದಿಂದ ಎದ್ದರು. ತಮ್ಮ ಜಾಗವನ್ನು ಸಿವಿಲ್ ಸರ್ಜನರಿಗೆ ಕೊಟ್ಟು ಅವರು ಚಹಾ ತೋಟಿಗರಾದ ಸಾಹೇಬರೊಂದಿಗೆ ಕ್ಲಬ್ಬಿನೊಳಗಿಂದ ಹೊರಬಿದ್ದರು. ದಾರಿಯಮೇಲೆ ಅವರು ಫೌಜದಾರರನ್ನು ಕರಕೊಂಡು ಬರಲು ಒಬ್ಬ ಪೋಲೀಸನಿಗೆ ಹುಕುಂ ಮಾಡಿದರು.

ಬಂಗ್ಲೆಗೆ ಮುಟ್ಟಿದಮೇಲೆ ಚಹಾ ತೋಟಿಗರು ಫೌಜದಾರರು ಬರುವತನಕ ಸ್ವಲ್ಪ ಬ್ರ್ಯಾಂಡಿಯನ್ನು ಸ್ವೀಕರಿಸಲು ಆಗ್ರಹಮಾಡಲು ಪೋಲೀಸ ಸಾಹೇಬರು,— "ಒಳ್ಳೇದು, ಏನೂ ಅಡ್ಡಿ ಇಲ್ಲ" ಅಂದರು.

ಬಾಟ್ಲಿ, ಗ್ಲಾಸುಗಳು ಮತ್ತು ಸೋಡಾ ಅವು ಮೇಜಿನಮೇಲೆ ಹಾಜರಾದವು. ಚುರೂಟುಗಳು ಸಹ ಬಂದು ಬಿದ್ದವು.

"ನೀವು ಇಷ್ಟು ಶ್ರಮಪಡುವದು ನಿಜವಾಗಿ ಬಹಳೇ ಸ್ತುತ್ಯವು" ಎಂದು ತೋಟಿಗರು ಅಂದರು.

ಪೋಲೀಸ ಸಾಹೇಬರು ಹೇಳಿದ್ದೇನಂದರೆ,— "ಈ ವಂದೇಮಾತರಂ'ದ ಹಾವಳಿಯು ದಿನೇ ದಿನೇ ಅಸಹ್ಯವಾಗುತ್ತ ನಡೆದದೆ. ರಾಷ್ಟ್ರೀಯ ಶಾಲೆಯ ದುಷ್ಟರು ಇದನ್ನು ಮಾಡಿರಲಿಕ್ಕೆ ಬೇಕು"

ಆ ಮೇಲೆ ಆ ಗೃಹಸ್ಥರು ಗ್ಲಾಸಿನೊಳಗಿನ ಮಾದಕ ಪೇಯದ ರುಚಿ ನೋಡುತ್ತ, ಹಿಂದುಸ್ಥಾನದೊಳಗಿನ ಅಶಾಂತತೆ, ಈಗಿನ ಕಾಲದ ಬಂಗಾಲಿಗಳ ಅನ್ಯಾಚಾರ, ಪ್ರತೀಕಾರ, ಕಠಿಣವಾದ ಉಪಾಯಗಳನ್ನು ಕೈಕೊಳ್ಳದ ಸರಕಾರದ ಅಜಾಗ್ರತೆ, ದೇಶೀಯರ ಕಾಯಿದೆ-ಉಲ್ಲಂಘನಕ್ಕೆ ತಮ್ಮ ಮೂರ್ಖ ಪ್ರಶ್ನೆಗಳಿಂದ ಉತ್ತೇಜನ ಕೊಡುವಂಥ ಪಾರ್ಲಮೆಂಟಿನೊಳಗಿನ 'ಬಿಳೇ ಬಾಬು'ಗಳ ಸರ್ವೋಪರಿಯಾದ ಮೂರ್ಖತನ ಮೊದಲಾದ ವಿಷಯಗಳನ್ನು ಚರ್ಚಿಸಹತ್ತಿದರು.

ಅಷ್ಟರಲ್ಲಿ ಫೌಜದಾರ ಕಾಸಿಮುಲ್ಲಾಖಾನರವರು ಹಾಜರಾಗಿ, ಪೋಲೀಸ ಸಾಹೇಬರಿಗೆ ಸಲಾಮುಮಾಡಿ, ಸಾವಧಾನದಿಂದ ನಿಂತುಕೊಂಡರು.

"ಫೌಜದಾರರೇ, ಈ ಹೊತ್ತು ಪೇಟೆಯಲ್ಲಿ ಗಲಾಟೆಯಾದದ್ದು ನಿಮಗೆ ಗೊತ್ತುಂಟೇ?"

"ಹೌದು, ಹುಜೂರ, ನಾನು ಅದನ್ನು ಇದೇ ಈಗ ಕೇಳಿದ್ದೇನೆ."

"ನೀವು ಏನು ವ್ಯವಸ್ಥೆ ಮಾಡಿರುವಿರಿ?"

"ಸ್ವಾಮೀ, ಫಿರ್ಯಾದಿಯನ್ನು ಹುಡುಕಿ ತೆಗೆಯಲು ಹವಾಲದಾರನನ್ನು ಕಳಿಸಿದ್ದೇನೆ."

"ಫಿರ್ಯಾದಿಯು ಇಲ್ಲಿಯೇ ಇರುವನು. ಅವನ ಜಬಾನಿ ತೆಗೆದುಕೊಂಡು, ಪ್ರಥಮ ಮಾಹಿತಿಯ ರಿಪೋರ್ಟನ್ನು ತಯಾರಿಸಲು ಕೂಡಿಕೊಂಡರು. ಪಟ್ಟೇಮಾಲನು ತನ್ನ ಯಜಮಾನನಿಗೆ ಹೇಳಿದ ಕಥೆಯನ್ನೇ ಹೇಳಿದನು. ಅನ್ಯಮಧ್ಯದಲ್ಲಿ ಫೌಜದಾರರು ಪಟ್ಟೇಮಾಲನಿಗೆ, "ಅವರು ನಿನ್ನನ್ನು ಹೊಡೆದು ಗಾಯಮಾಡಿದರೋ," ಎಂದು ಕೇಳಿದರು.

"ಹೌದು, ಅವರು ನನ್ನನ್ನು ಬಹಳ ಹೊಡೆದರು ಮತ್ತು ಇವೇ ನನಗಾದ ಗಾಯಗಳು - ನೋಡಿರಿ ಫೌಜದಾರರೇ" ಎಂದು ಅಳುತ್ತ ಪಟ್ಟೇಮಾಲನು ಯಜಮಾನನಿಂದಾದ ತನ್ನ ಹಣೆಯಮೇಲಿನ ಗಾಯವನ್ನೂ, ಕೆಳದ ರಸ್ತೆಯಮೇಲೆ ಬಿದ್ದದ್ದರಿಂದ ಹತ್ತಿದ ಅನೇಕ ಪೆಟ್ಟುಗಳನ್ನೂ ಅವರಿಗೆ ತೋರಿಸಿದನು.

ಇದೆಲ್ಲ ಚಹಾ ತೋಟಿಗರಿಗೆ ಕೇಳಬರುವಂತಿತ್ತು. ಆದರೆ ತಮ್ಮ ಸೇವಕನನ್ನು ತಿದ್ದುವದು ಅವಶ್ಯವೆಂದು ಅವರಿಗೆ ಅನಿಸಲಿಲ್ಲ. "ಈ ಪಾಪಿಷ್ಠರಾದ ದೇಶೀಯರು ಎಂಥ ಸುಳ್ಳುಗಾರರಿದ್ದಾರೆ," ಎಂದು ಅವರು ತಮ್ಮಷ್ಟಕ್ಕೆ ಗುಣುಗುಟ್ಟಿದರು.

ಪ್ರಥಮ ಮಾಹಿತಿಯು ಸಿದ್ಧಮಾಡಿಕೊಂಡ ಮೇಲೆ ಪೋಲೀಸ ಸಾಹೇಬರು ಫೌಜದಾರರಿಗೆ— "ಈ ಹೊತ್ತು ನೀವು ಆ ಆರೋಪಿಗಳನ್ನು ಹಿಡಿಯಲಿಕ್ಕೆ ಬೇಕು. ರಾತ್ರಿಯಲ್ಲಿ ನೀವು ಅವರನ್ನು ಜಾಮೀನಿನಮೇಲೆ ಬಿಡಬೇಡಿರಿ." ಎಂದು ಹೇಳಿದರು. ಆ ಮೇಲೆ ಅವರು ಚಹಾ ತೋಟಿಗರಿಗೆ ಹಸ್ತಾಂದೋಲನಮಾಡಿ ಹೊರಟರು.

ಆ ಮೇಲೆ ಫೌಜದಾರರು ಚಹಾ ತೋಟಿಗರ ಹತ್ತರ ಹೋಗಿ ಆದರಪೂರ್ವಕವಾಗಿ ಅಂದದ್ದು,

"ಹುಜೂರರು ದಯಮಾಡಿ ಆರೋಪಿಗಳನ್ನು ತೋರಿಸಲು ಪಟ್ಟೇಮಾಲನಿಗೆ ಸ್ವಲ್ಪ ಹೊತ್ತು ನನ್ನ ಸಂಗಡ ಬರಲು ಪರವಾನಗಿ ಕೊಟ್ಟಾರೋ?"

"ಒಳ್ಳೇದು, ಪಟ್ಟೇಮಾಲ್, ನೀನು ಹೋಗಬಹುದು. ಫೌಜದಾರರಿಗೆ ಆರೋಪಿಗಳನ್ನು ತೋರಿಸು."

ಪಟ್ಟೇಮಾಲನು ಅತ್ಯಂತ ಅನುಮಾನದಿಂದ ಅಂದದ್ದು—"ಹುಜೂರ್, ಅವರು ಬಹಳೇ ಹುಡುಗರಿದ್ದರು ಮತ್ತು ಕತ್ತಲೆಯೂ ಆಗುತ್ತ ನಡೆದಿತ್ತು. ನನಗೆ ಅವರ ಗುರ್ತು ಸಿಕ್ಕೀತೋ ಹ್ಯಾಗೆ ಎಂಬ ಬಗ್ಗೆ ಸಂಶಯವೇ ಇದೆ."

"ಸುಂವರ್"—ಎಂದು ಯಜಮಾನನು ಗದರಿಸಿ ಅಂದದ್ದು—"ನಿನ್ನಿಂದ ಆರೋಪಿಗಳ ಗುರ್ತು ಹಿಡಿಯುವದಾಗದಿದ್ದರೆ ನಾನು ನಿನ್ನನ್ನು ಕೂಡಲೇ ಡಿಸ್ಮಿಸ್ ಮಾಡುವೆನು."

"ಜೋ ಹುಕುಂ ಹುಜೂರ್" ಎಂದು ಗುಣುಗುಟ್ಟುತ್ತ, ಆ ಬಡವನು ಫೌಜದಾರರೊಂದಿಗೆ ನಡೆದನು.

ಈ ಅತ್ಯುತ್ಸಾಹಿ ಪೋಲೀಸ ಅಧಿಕಾರಿಗಳು ಯಾವದೇ ತರದ ವಿಚಾರಣೆಯ ವಿಷಯದಲ್ಲಿ ಏನೂ ಪ್ರಯತ್ನ ಮಾಡದೆ, ರಾಷ್ಟ್ರೀಯ ಶಾಲೆಗೆ ಹೊಂದಿರುವ ವಸತಿಗೃಹದ ದಾರಿ ಹಿಡಿದರು. ಆ ಕಾಲಕ್ಕೆ ಶಿಕ್ಷಕರ್ಯಾರೂ ಹಾಜರಿದ್ದಿಲ್ಲ. ಎಷ್ಟೋ ವಿದ್ಯಾರ್ಥಿಗಳೂ ಸಹ ಹೊರಗೆ ಹೋಗಿದ್ದರು. ಮಧ್ಯ ಕೋಣೆಯಲ್ಲಿ ನಾಲ್ಕೈದು ಹುಡುಗರು ಹುಲ್ಲು ಚಾಪೆಯ ಮೇಲೆ ಕೂತು, ಮಣ್ಣಿನ ಹಣತಿಗೆಯ

ಬೆಳಕಿನ ಸಹಾಯದಿಂದ ತಮ್ಮ ಪಾಠಗಳನ್ನು ತಯಾರಿಸುವದರಲ್ಲಿ ತೊಡಗಿದ್ದರು. ಪಟ್ಟೇವಾಲನು ಆ ಹುಡುಗರಲ್ಲಿ ಮೂವರನ್ನು ತೋರಿಸಿದನು. ಮತ್ತು ಫೌಜದಾರರು ಅವರನ್ನು ಕೂಡಲೇ ಕೈದು ಮಾಡಿದರು.

ಆ ಹುಡುಗರಿಗೆ ಈ ಸಂಗತಿಯ ವಿಷಯ ಏನೂ ಗೊತ್ತಿಲ್ಲವೆಂತ ಹೇಳುವದು ಅವಶ್ಯವಿಲ್ಲ. ಬಹಳೇ ಆಶ್ಚರ್ಯಚಕಿತರಾಗಿ ಅವರು — " ಫೌಜದಾರ ಸಾಹೇಬರೇ, ನಮ್ಮನ್ನು ಯಾಕೆ ಕೈದ ಮಾಡುತ್ತೀರಿ ? ನಾವು ಏನು ಮಾಡಿದ್ದೇವೆ ? " ಎಂತ ಕೇಳಿದರು.

" ತರುಣರೇ, ನಿಮಗೆ ಅದು ಕೋರ್ಟಿನಲ್ಲಿ ತಿಳಿಯುವದು" ಎಂತ ಫೌಜದಾರರು ಸಂಕ್ಷಿಪ್ತ ಉತ್ತರವನ್ನಿತ್ತರು. ಅವರು ಈ ಹುಡುಗರನ್ನು ಮೂವರು ಶಿಪಾಯಿಯರ ವಶಕ್ಕೆ ಕೊಟ್ಟು ಅವರನ್ನು ಪೋಲೀಸ ಠಾಣೆಗೆ ಕಳಿಸಿದರು.

ಆಮೇಲೆ ಫೌಜದಾರರು ಪಟ್ಟೇವಾಲನನ್ನು ಸರಕಾರೀ ಆಸ್ಪತ್ರಿಗೆ ಕರಕೊಂಡು ಹೋಗಿ ಸರ್ಜನ್ನರ ಕೈಯಿಂದ ಅವನ ಗಾಯಗಳನ್ನು ತಪಾಸಿಸಿ, ಅದರಂತೆ ರಿಪೋರ್ಟ ಒಂದನ್ನು ತಯಾರಿಸಿದರು. ಅಷ್ಟರ ಮೇಲೆ ಅವರು ಪಟ್ಟೇವಾಲನಿಗೆ ತಮ್ಮ ಸಂಗಡ ಠಾಣೆಗೆ ಬರಹೇಳಿದರು.

" ಆದರೆ, ನನಗೆ ಈಗಲೇ ತಡವಾಗಿದೆ. ಮತ್ತು ನಾನು ನನ್ನ ಯಜಮಾನನಲ್ಲಿಗೆ ಹೋಗಲಿಕ್ಕೆ ಬೇಕು. ಠಾಣೆಯಲ್ಲಿ ನಾನು ಏನು ಮಾಡಬೇಕಾಗಿದೆ ? "

" ಆರೋಪಿಗಳ ಗುರುತು ಹಿಡಿಯುವದು. "

" ಈಗಲೇ ನಾನು ಹಾಗೆ ಮಾಡಿಲ್ಲವೋ ? "

" ಹೌದು, ಹೌದು — ಆದರೆ ಈ ಹೊತ್ತು ರಾತ್ರಿ ನೀನು ಅವರ ಗುರುತು ಚೆನ್ನಾಗಿ ನೆನಪಿರುವಂತೆ ಮಾಡಿಕೊಳ್ಳಲಿಕ್ಕೆ ಬೇಕು. ನಾಳೆ ಯಾರೊಬ್ಬ ಡೆಪ್ಯುಟಿ ಕಲೆಕ್ಟರರು ಬಂದು ಆರೋಪಿಗಳನ್ನು ಅಷ್ಟೇ ವಯಸ್ಸಿನ ಬೇರೆ ಬೇರೆ ಹುಡುಗರೊಂದಿಗೆ ನಿಲ್ಲಿಸಬಹುದು — ಮತ್ತು ನೀನು ಅವರನ್ನು ಗುರುತು ತೆಗೆಯಬೇಕಾಗಬಹುದು. ನೀನು ತಪ್ಪಿದರೆ, ನಿನ್ನ ಫಿರ್ಯಾದಿಯು ಕೆಟ್ಟುಹೋಗುವದು."

" ಆದರೆ, ನಾನು ಬಹಳ ಹೊತ್ತು ನಿಂತರೆ ಸಾಹೇಬರು ಸಿಟ್ಟಾಗಬಹುದು.

" ಅವರ ಹತ್ತಿರ ಹೋಗಿ, ಇನ್ನು ಕೆಲವು ತಾಸುಗಳ ರಜೆ ತೆಗೆದುಕೊಂಡು ಬಾ. "

ಪಟ್ಟೇವಾಲನು ತಿಳಿಸಿ ಹೇಳಿದಂತೆಯೇ ಮಾಡಿದನು. ಅವನ ಯಜಮಾನರು ತಮ್ಮಷ್ಟಕ್ಕೆ — " ಈ ಶಿಪಾಯಿಗಳು ಎಷ್ಟು ಅಪ್ರಾಮಾಣಿಕರಿರುತ್ತಾರೆ ! " ಎಂತ ಹೇಳುತ್ತ ಅವನಿಗೆ ಪರವಾನಗಿಯನ್ನು ಕೊಟ್ಟರು.

ಆ ಮೇಲೆ ಫೌಜದಾರರು ಹೋಟೆಲದೊಳಗಿನ ಪರಿಚಾರಕರು ಮೊದಲಾದವರನ್ನು ಸಾಕ್ಷಿಗಾರರನ್ನಾಗಿ ಹಿಡಿದು, ಅವರನ್ನು ಠಾಣೆಗೆ ಕರಕೊಂಡು ಹೋದರು. ಪೋಲೀಸರ ಅಂಜಿಕೆಯಿಂದ ಅವರು ತಾವು ನೋಡಿರದಂಥ ಅಲ್ಪ ವಿಷಯವನ್ನು, ನೋಡದೇ ಇದ್ದಂಥ ಬಹಳೇ ವಿಷಯವನ್ನು ಸಾಕ್ಷಿಯಾಗಿ ಹೇಳಲು ಒಡಂಬಟ್ಟರು. ಕೋರ್ಟಿನಲ್ಲಿ ಕೊಡಬೇಕಾದ ಜಬಾನಿಯ ವಿಷಯದಲ್ಲಿಯೂ, ಮರುದಿವಸ ಆರೋಪಿಗಳನ್ನು ಗುರ್ತಿಸುವ ವಿಷಯದಲ್ಲಿಯೂ ಈ ಸಾಕ್ಷೀದಾರರಿಗೆ ತಕ್ಕ ತಾಲೀಮು ಕೊಡುವದರಲ್ಲಿಯೇ ಎಷ್ಟೋ ರಾತ್ರಿಯು ಕಳೆದು ಹೋಯಿತು.

(ಮುಂದೆ ಸಾಗುವದು.)

ಭಾಷಾಂತರಕರ್ತರಿಗೆ ಸುಸಂಧಿ!

ಸುಪ್ರಸಿದ್ಧವಾದದೂ ಅನೇಕ ವಿದ್ವಾಂಸರಿಂದ ಒಳ್ಳೇ ಅಭಿಪ್ರಾಯ ಪಡೆದದ್ದೂ ಆಗಿರುವ ಋಗ್ವೇದಿಯವರು ಬರೆದ " **आर्यांच्या सणांचा प्राचीन व अर्वाचीन इतिहास** " ಎಂಬ ಮರಾಠಿ ಪುಸ್ತಕವನ್ನು ಕನ್ನಡದಲ್ಲಿ ಭಾಷಾಂತರಿಸುವದಿದೆ. ಇದನ್ನು ಕೈಕೊಳ್ಳಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳತಕ್ಕದ್ದು.

Apply to:--
V. PRABHA & CO.
BOMBAY 4.

Copies can be had from:-
THE NORTH KANARA TRADING CO.
KARWAR.

DAVAR'S
COLLEGE OF COMMERCE.
(Established 25 years)
CELEBRATES ITS SILVER JUBILEE
THIS YEAR UNDER THE DISTINGUISHED PATRONAGE OF MERCHANT-PRINCES, LEADERS OF THOUGHT AND EDUCATION.

The Institution under the sole direction of its Founder and Principal has done pioneer work in introducing for the First Time in India Courses in SPECIALISED BANKING, SPECIALISED SECRETARIAL WORK and SPECIALISED ACCOUNTANCY as the result of his numerous journeys to Europe and to the Colleges and Universities there.

The fact that a Scholar has successfully trained in DAVAR'S COLLEGE has always been accepted by businessmen all over India, Burma and Ceylon as a hallmark of perfection.

Prospectus on application to the Principal,
Great Western Bldg.,
Apollo Street, BOMBAY.

ಸುಲಭ ಕ್ರಯ! ಸುಲಭ ಕ್ರಯ!!

ಡಾ॥ ಕ ರ ಜೀ ಬಿ ಯವರ

ಸುಗಂಧ ನಶ್ಯದ ಪುಡಿ.

(Registered Trade Mark.)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ [illegible] ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಪಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. [illegible]

ಸೀಸೆ ಪ್ಯಾಕೆಟ ಕಳಿಸಲಾದೀತು. [illegible] ಡಜನ್ ೧ ಕ್ಕೆ ರೂ. ೩-೮-೦ ವ್ಹಿ. ಪಿ. ೦-೮-೦
ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦ ವ್ಹಿ ಪಿ [illegible] ಸರಿಯಾಗಿ ತಿಳಿಯುವಂತೆ ಬರೆಯಿರಿ.
ದಯಮಾಡಿ ನಿಮ್ಮ ಹೆಸರನ್ನೂ, ಆಡ್ರೆಸನ್ನೂ
ಪತ್ತೆ— ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ॥ ಬಾ. ೫೧೦, ಮದರಾಸು

ಅಮೇರಿಕನ್ ಉಪಾಯ.

ಎಂಬ್ರೋಸಿಯಾ.

AMBROSIA

ಸ್ತ್ರೀರೋಗಪರಿಹಾರಕ್ಕಾಗಿ.

ಎಂಬ್ರೋಸಿಯಾವು ನಮೂನೆ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು. ಇದು ಸ್ತ್ರೀಸೌಂದರ್ಯವನ್ನುಂಟುಮಾಡುತ್ತದೆ. ಸಾಮಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರುತ್ತದೆ. ಒಳ್ಳೇ ಆಹಾರ ದೊರಕದೆ, ವಿಶೇಷ ಆಯಾಸ ಕೊಳ್ಳುವದರಿಂದ ಸ್ತ್ರೀಯರ ಪ್ರಕೃತಿಯು ಕೆಡುತ್ತದೆ. ಮುಟ್ಟಾಗುವಾಗ ಶೂಲಿ ಏಳುವದು, ಮುಟ್ಟಾಗದಿರುವದು, ಅಪಸ್ಮಾರ, ಬಂಜೆತನ ಮುಂತಾದ ಗರ್ಭಾಶಯದ ಬೇನೆಗಳು, ಅಜೀರ್ಣ, ತಲೆಶೂಲಿ, ಭ್ರಮಿಷ್ಟತನ ಇವೆಲ್ಲ ಸ್ತ್ರೀರೋಗಗಳಮೇಲೆ ರಾಮಬಾಣ ಮದ್ದು. ಎಂಬ್ರೋಸಿಯಾವು ನಮೂನೆ ಸ್ತ್ರೀರೋಗಗಳನ್ನು ದೂರಮಾಡಿ, ಸ್ತ್ರೀಯರನ್ನು ಸಶಕ್ತ, ಹಾಗು ಸೌಂದರ್ಯವಂತರನ್ನಾಗಿ ಮಾಡುತ್ತದೆ.

ಒಮ್ಮೆ ಪರೀಕ್ಷೆ ನೋಡಿ.

ಬೆಲೆ ಬಾಟ್ಲಿಗೆ ಕ್ರಯ ರೂಪಾಯಿ ೩—೦—೦

ಏಜಂಟರು:— **ವೀರಿಯಲ ಏಜನ್ಸಿ,**
ಪ್ರಿನ್ಸೆಸ ಸ್ಟ್ರೀಟ, ಮುಂಬಯಿ ನಂಬರ ೨.

ಜಾಹೀರಾತು.

[illegible] ಪತ್ರದಲ್ಲಿ [illegible] ಜಾತಕ [illegible]

ಪತ್ತೆ —

ಕೇರಳ ಜ್ಯೋತಿಷಿ

ಕೇ. ಸಿ. ನಾರಾಯಣ ಶಾಸ್ತ್ರಿ

[illegible] ಸಾಗರ,

[illegible]

[illegible]] ಅನುಭವಸಿದ್ಧ [[illegible]

[illegible]

[illegible]

ಹೊಟ್ಟೆಯುಷ್ಣ ಕೃತ್ತಿ... ಔಷಧಿ [illegible]

ರಕ್ತಶುದ್ಧಿ ವ ಮಲಶೋಧನೆ [illegible]

ರಾತ್ರಿಗಳಲ್ಲಿ [illegible] ವವರಿಗೆ ಕಡಿಮೆ ದರದಿಂದ [illegible] ಟಪಾಲ ಖರ್ಚು ಪ್ರತ್ಯೇಕ [illegible] ದ್ವಾರಾ ಅನುಪಾನಪತ್ರ ಔಷಧಿ ಸಂಗಡ

ಎನ್. ಜಿ. ಹೆಗಡೆ, ಮಾಸ್ಕೇರಿ,

ಪೋಸ್ಟ - [illegible]

ಮಳೆಗೆ ಮೊದಲೇ ಎಚ್ಚರಿಕೆ !

ಅತ್ಯುತ್ತಮವು, ಸುಂದರ, ಬಾಳಿಕೆಯುಳ್ಳ, ಮಜಬೂತಾದ

[illegible]] **ಛತ್ರಿಗಳು.** [ಅಗ್ಗ ! ವಿವಿಧ !!

ಪ್ರತಿಯೊಬ್ಬರಿಗೂ ಅನುಕೂಲವಾದ ಪಸಂದಿನ ಮಾಲು !

ದೇಶೀಯ ಕೈಗಾರಿಕೆ ! [illegible] !! ಆದುದರಿಂದ
ದೇಶೀಯರಿಗೆ ಖಾತರಿಯಾಗಿ ತೃಪ್ತಿಯಾಗುವುದು !
ಕಾನಡಾ ಜಿಲ್ಲೆಯೊಳಗಿನ ಪ್ರಮುಖ್ಯ ಛತ್ರೀ ದುಕಾನುಗಳಲ್ಲಿ ಬಿಕರಿಗೆ ಇದೆ.

ಶೇಠ ನಾಗಜೀ ಪುರುಷೋತ್ತಮ್ ಮತ್ತು ಕಂಪನಿಯವರ

ಕಲ್ಲೀಕೋಟೆಯ ಕಾರಖಾನೆಯ

ಸೂರ್ಯ ಛಾಪಿನ ಛತ್ರಿಗಳೇ ಛತ್ರಿಗಳು !

[illegible] ಸವಲತ್ತು ಕೊಡಲಾಗುತ್ತದೆ.

ಪತ್ತೆ — **ಶ್ರೀನಿವಾಸ ರಂಗ ಪೈ, ಸಾವಕಾರ ಮಹಾಲ್.**
ಮಂಗಳೂರು, ದ. ಕನ್ನಡ

ಬೇಸಿಗೆಯು ಪ್ರಾರಂಭವಾಯಿತು !

ದನಗಳ ಆಹಾರವಾದ ಕಣಿಕೆಯನ್ನು ಕಾದಿರಿ !!
ಕಿರ್ಲೋಸ್ಕರ ಕಣಿಕೆ ಯಂತ್ರವನ್ನು ಉಪಯೋಗಿಸಿರಿ !!!

ನಮ್ಮ ಕಾರಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕೊರೆಯುವ ಯಂತ್ರಗಳು ತಯಾರಾಗುತ್ತವೆ. ಒಂದು ಕೈಯಿಂದ [illegible] ಈ ಯಂತ್ರ [illegible] ಸಣ್ಣ ಕಮತದವರು ಕೈಯಂತ್ರವನ್ನು, ದೊಡ್ಡ ಕಮತದವರು [illegible] ಯಂತ್ರವನ್ನು ಉಪಯೋಗಿಸಬಹುದು. [illegible] ಸವಿಸ್ತರ ಸಂಗತಿ [illegible] ತರಿಸಿಕೊಳ್ಳಿರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ,
ಜಿಲ್ಲಾ ಸಾತಾರಾ.

ಅಮೃತಾಂಜನ.



[illegible] ಉಪಯೋಗದಿಂದ, ತಲೆನೋವು, [illegible] ಇತ್ಯಾದಿ ವ್ಯಾಧಿಗಳ ಮೇಲೆ, [illegible] ಕಳೆದ ೩೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳ ಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತ್ತು ೧೦ ಆಣೆ [illegible] ಬೇರೆ.

ಅಮೃತಾಂಜನ ಡಿಪೋ, ಫೋರ್ಟ್, ಮುಂಬಯಿ

Printed and Published by Krishnarao Keshav Shenvi (Editor) at his Star of Kanara Press Kumta.

Reg No. B. 1270

Monday, June 15th, 1925.

ವರ್ಷ ೯.

ಕಾನಡಾವೃತ್ತ.

ಸಂಚಿಕೆ ೩೫.

THE KANARA NEWS.

ಪತ್ರದ ವರ್ಗಣಿ.
ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮನೆಯಾರ್ಡರಿಯಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ಸ್ಮಾಲ ಪೈಕಾದ (೧೫ ಎಮ್ ಅಗಲ) ೫ ಸಾಲುಗಳವರೆಗೆ ರೂ. 1-0-0 ಆ ನಂತರ ಪ್ರತಿಸಾಲಿಗೆ 0-2-0.
ಹೆಚ್ಚಿಗೆ ಸಾಲು ಎಷ್ಟು ಹತ್ತಿರುವವೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಯಾ ಸಮಕ್ಷ ತಿಳಿಸಲ್ಪಡುವದು.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

—(ಕುಮಟಾ— ಕಾನಡಾವೃತ್ತ ಸೋಮವಾರ, ತಾರೀಖು ೧೫ ಮಾಹೆ ಜೂನ ಸನ್ ೧೯೨೫ನೇ ಇಸವಿ)—

हिंदुस्थानातील रहिवाशास ज्याप्रमाणें हिंदुस्थानची हवा त्याप्रमाणेंच हें औषध हिंदुस्थानातील लोकास ज्यास्त फायदेशीर आहे.

द्राक्षासव- दीड रत्तलची किंमत २ रुपये;

रामबाण औषधें —
सर्दि घालविणारें,
भूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,
— पिण्यास रुचिकर.

क्याटलाग मागवा,
झंडु फार्मास्युटिकल वर्क्स लिमिटेड,
मुंबई नं. १३

ಕ್ಷಯ ರೋಗ?
ವೈದ್ಯ ಫರ್ನಾಂಡಿಸರ
ಬರೇ ನಾಲ್ಕು ಔಷಧಗಳು.

ಪ್ರಕೃತಿಮಾನ ತಿಳಿಸಿರಿ ಅಂದರೆ ಯೋಗ್ಯ ಔಷಧಗಳನ್ನು ತಯಾರಿಸಿ ಕಳುಹಿಸುವೆವು ಸಮಕ್ಷ ಭೆಟ್ಟಿಯಾದಲ್ಲಿ ಚಿಕಿತ್ಸೆಯ ಮಾಹಿತಿ ದೊರಕುವದು ತಡಮಾಡಬೇಡಿರಿ ಬೇಗನೇ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ. (ರೂ. ೨೮-೧೦-೦.)

ವೈದ್ಯ ಫರ್ನಾಂಡಿಸ,
ರೋಗಾಂತಕ ಡಿಪೋ,
ಕಾರವಾರ

☞ ಗ್ಯಾಸ ದೀಪಗಳು
ಭಾಡಿಗೆಗೆ ಕೊಡಲ್ಪಡುತ್ತವೆ.

ದರವಾರವು ಎಲ್ಲಕ್ಕಿಂತ ಕಡಿಮೆ ಇಟ್ಟಿರುತ್ತದೆ. ಬೇಕಾದವರು ಕೆಳಗಿನ ಪತ್ತೆಯ ಮೇಲೆ ಬರಕೊಳ್ಳಬಹುದು. ಪತ್ತೆ:—ವೈಕುಂಠ ಜನಾರ್ದನ ನಾಯಕ

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, *B. A.*
Jewellers, KUMTA.
ಆರ್. ಎಸ್. ಕಾಸರಗೋಡ,
ರತ್ನಾಭರಣ ವ್ಯಾಪಾರಿ, ಕುಮಟಾ.

ಆಯುರ್ವೇದೀಯ) ಧಾತುಪೌಷ್ಟಿಕ, ಶಕ್ತಿವರ್ಧಕ, ರಕ್ತಶೋಧಕ (ಮಲಬಾರಿಕೃತಿ
ಮದನಕಾಮೇಶ್ವರೀಲೇಹ.

ಆಬಾಲ ವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು. ಇದರಲ್ಲಿ ಕೇಸರ ಕಸ್ತೂರಿ, ಪ್ರವಾಲ, ಶಿಲಾಜಿತು ಅಮೃತಸತ್ವಾದಿ ಅನೇಕ ವನೌಷಧಿಯುಕ್ತ ಇರುವದರಿಂದ ಧಾತು ತೆಳ್ಳಗಾಗೋಣ ನಪುಂಸಕತ್ವ, ಪ್ರಮೇಹ ಮುಷ್ಟಿಮೈಥುನಜನ್ಯ ಧಾತುಕ್ಷೀಣತೆ, ಸ್ವಪ್ನದೋಷ ಉರಿಮೂತ್ರ, ಸಂಧಿವಾತ ಸ್ತ್ರೀಯರ ಗರ್ಭಾಶಯದ ರೋಗ, ಪ್ರದರ (ಗರ್ಮಿ) ಇ. ನಿರ್ಮೂಲಿಸಿ ಹುಂಬಾ ರಕ್ತ ಧಾತು ಸಂಚಯಮಾಡಿ ಯಥೇಚ್ಛ ಸಂಭೋಗಸುಖವನ್ನು ಲಭಿಸುವ ಸಿದ್ಧೌಷಧ. ೧ ತಿಂಗಳು ನಡೆಯುವ ಡ.೧ಕ್ಕೆ ೨॥ರೂ. ಟಿ. ಖ. ರೂ ಒಮ್ಮೆಲೆ ೩ ಡ. ೩॥ರೂ ಟಿ. ಖ. ಮಾಫ ಅಸು ಔಷಧದ ಸಂಗತ

ಅತ್ಯುತ್ತಮ) ಜಂತುವಿನ ಔಷಧ (ದರಸುಲಭ.

ಪ್ರತಿ ೧ಕ್ಕೆ ೧॥ಡಜ ಹಂಕ್ಕೆ ರೂ ೩॥. ೧೦೦ಕ್ಕೆ ರೂ ೫. ಅನುಭವ ಶಕ್ತ್ಯಾಗಿ ಇವಲ್ಲ ಎಲ್ಲಾರೋಗಗಳ ಮೇಲೆ ಅನುಭವ ಸಿದ್ಧೌಷಧಗಳು ಸಿಗುವವು. ಪಿ. ಮಾ. ಬೇಕಾದವರು ೧ಆಣೆ ಹಚ್ಚಿ ಪತ್ರಬರೆದಲ್ಲಿ ನಮ್ಮ 'ಆಯುರ್ವೇದದ ಗುಣರತ್ನಮಾಲಾ' ಎಂಬ ಸಂಪೂರ್ಣ ಮಾಹಿತಿಯು ಪುಸ್ತಕವನ್ನು ಪುಕ್ಕಟೆಯಾಗಿ ಕಳಿಸುವೆವು

ಮೆನೇಜರ ಆರ್ಯಚಿಕಿತ್ಸಾಮಂದಿರ, ತಾ. ಕಾರವಾರ, ಪೋ. ಚೆಂಡಿಯಾ.

ಮುಖ್ಯ ಏಜಂಟ:— R. C. KAMAT, Teashop Store Lane, Fort, BOMBAY

ಹುಟ್ಟಿದ ವೇಳೆ ತಿಳಿಸಿ.) ಸುಖಸಾಧನಕ್ಕೆ ಯೋಗ್ಯ ಉಪಾಯವು (ಯಾ ಜನ್ಮಟಿಪ್ಪಣಿ ಕಳಿಸಿರಿ

☞ ಮಲಬಾರಿ) ಕೇರಳ ಜ್ಯೋತಿಷ. (ಭವಿಷ್ಯ.

ನಿಮ್ಮ ಜನ್ಮಟಿಪ್ಪಣಿ ಕಳಿಸಿ. ೧ ವರ್ಷದ ಫಲಾಫಲ ಟಿ.೧॥ರೂ. ಪ.೨॥ರೂ. ೧೦ವ.ಟಿ.೯ರೂ. ಸದರೀ ಟಿಪ್ಪಣಿಯ ಮೇಲಿಂದ ಆಯಾ ಕಾಲಕ್ಕೆ ಒದಗುವ ಇಷ್ಟಾನಿಷ್ಟ ಫಲಗಳನ್ನು ಅನಿಷ್ಟಫಲ ನಿವಾರಣಾರ್ಥ ಶಾಸ್ತ್ರಧಾರ್ಮಿಕ ಅನುಷ್ಠಾನಗಳಿಂದ ಸಂಕಟಗಳನ್ನು ಪರಿಹರಿಸುವ ಉಪಾಯಗಳನ್ನು ತಿಳಕೊಂಡು ಮುಂದಿನ ಭವಿಷ್ಯ ಕಾಲವು ಸುಖಕಾರಕ ಮತ್ತು ಲಾಭದಾಯಕವಾಗುವಂತೆ ಸದರೀ ಫಲವನ್ನು ಮಲಬಾರದಲ್ಲಿ ಪ್ರಸಿದ್ಧವಾದ 'ಜ್ಯೋತಿಷ್ಯ ಕೇರಳ' ಇ. ಬಹುಮಾನ್ಯ ಗ್ರಂಥಗಳ ಪ್ರಮಾಣ್ಯತೆಯಿಂದ ಬರೆದು ಕಳಿಸುವೆ. ಟಿ. ಖ. ಬೇರೆ

ಮೆನೇಜರ, "ಜ್ಯೋತಿಷ ಶಾಸ್ತ್ರ-ಭುವನ," ಚೆಂಡಿಯಾ. ತಾ. ಕಾರವಾರ.

ನಮ್ಮ ಪ್ರೆಸ್ಸಿನಲ್ಲಿ

[illegible] ಮಾಡಲಾಗುತ್ತದೆ [illegible] ಬಗ್ಗೆ [illegible] ಉಗ್ರವಾಗಿ [illegible]

ಮೆನೇಜರ,

[illegible] ಪ್ರೆಸ್ [illegible]

ಪ್ರಯಾಣಿಕರ ಅನುಕೂಲತೆ ಬಗ್ಗೆ

ಶೇಲಿ ಮೋಟರ ಸರ್ವಿಸ.



ಕುಮಟೆಯಿಂದ— [illegible]

ಕುಮಟೆಯಿಂದ— [illegible]

ಕುಮಟೆಯಿಂದ— [illegible]

ಜಿ. ದಾಸ.

[illegible] ಕುಮಟಾ.

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು

೧ ರಾಗದ ಪೆಟ್ಟಿಗೆ ಕಿಂ. ೩೦, ೪೦, ೬೦, ೭೫, ೧೦೦

೨ ,, [illegible] ಪೆಟ್ಟಿಗೆ ಕಿಂ ೩೫ ೭೫, ೧೨೦, ೧೪೦

೩ ತಬಲೆ ಜೋಡಿ ಕಿಂ. ೧೬, ೧೮, ೨೦, ೨೫.

೪ ಹಾರ್ಮೋನಿಯಮ ಗೈಡ (ಮರಾಠಿ) ಕಿಂ. ೧॥ ತಬಲೆ ಗೈಡ ಕಿಂ. ೧೬ ಅ

ವಿಶೇಷ ಮಾಹಿತಿಗೆ ನಮ್ಮ ಮರಾಠಿ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ :- ಗೋಪಾಳ ಸಖಾರಾಮ ಮ.ಕಂ
ಕಂಪನಿ, ವಿಠ್ಠಲವಾಡಿ ಎದುರಿಗೆ,
೨೬೩ ಕಾಳಬಾದೇವಿ. ಮುಂಬಯಿ.

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ

ಕಳೆದ ೪-೫ ವರ್ಷಗಳಿಂದ ನಾವು ಶಿವಮೊಗ್ಗಾ-ತೀರ್ಥಹಳ್ಳಿ-ಆಗುಂಬೆ, ಶಿವಮೊಗ್ಗಾ-ಸಾಗರ-ತಾಳಗುಪ್ಪೆ ಶಿವಮೊಗ್ಗಾ-ಹರಿಹರ-ದುಗ್ಗಾವತಿ, ಶಿವಮೊಗ್ಗಾ-ಕಳೂರಕಟ್ಟೆ, ಸಾಗರ-ಸೊರಬ-ಶಿರಾಳಕೊಪ್ಪ, ಸಾಗರ-ತೀರ್ಥಹಳ್ಳಿ, ಸಾಗರ-ಕಳೂರಕಟ್ಟೆ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ ಸರ್ವಿಸನ್ನು ನಡೆಸುತ್ತಿದ್ದೆವಲ್ಲದೆ ದಕ್ಷಿಣ ಕನ್ನಡ ಜಿಲ್ಹೆಯ ಕಾರ್ಕಳ, ಉಡುಪಿ, ಕುಂದಾಪುರ, ಮಂಗಳೂರ ಹಾಗು ಬೆಳ್ತಂಗಡಿ ಈ ಕಡೆಗೆ "ಕಾರ್ಕಳ ಮೋಟರ ಸರ್ವಿಸಿನ" ವಿದ್ಯಮಾನವೂ, ಬಳ್ಳಾರಿ ಜಿಲ್ಹೆಯ ಹರಪನಹಳ್ಳಿಗೆ "ಲಕ್ಷ್ಮೀ ಮೋಟರ ಸರ್ವಿಸಿನ" ವಿದ್ಯಮಾನವೂ ಪ್ರಯಾಣಿಕರ ಎಲ್ಲ ಸೌಕರ್ಯಗಳ ವ್ಯವಸ್ಥೆ ಮಾಡಿರುತ್ತೇವೆ.

ಉತ್ತರ ಕನ್ನಡ ಜಿಲ್ಹೆಯ ಪ್ರಯಾಣಿಕರು ಜೋಗ (Gersoppa Falls), ಶಿವಮೊಗ್ಗಾ ಸಾಗರ, ಹರಿಹರ ಮತ್ತು ಮೇಲ್ಕಂಡ ಸ್ಥಳಗಳಿಗೆ ಪ್ರಯಾಣ ಬೆಳೆಸಲು ಅನುಕೂಲವಾಗಬೇಕೆಂದು ಶಿವಮೊಗ್ಗಾ, ಸಾಗರ, ಜೋಗ, ಸಿದ್ದಾಪುರ, ಶಿರಸಿ, ಕುಮಟಾ ಈ ಲೈನಿನಲ್ಲಿ ಮೋಟರ ಸರ್ವಿಸ ಪ್ರಾರಂಭ ಮಾಡಿರುತ್ತೇವೆ

ಕಾಲಪ್ರ. ಗಳು.

ಕುಮಟೆಯಿಂದ ಹೊರಡುವದು—	ಬೆಳಿಗ್ಗಿನ ೭ ಘಂಟೆಗೆ.
ಶಿರಸಿಗೆ ಸೇರುವದು—	,, ೧೦ ,,
ಶಿರಸಿಯಿಂದ ಬಿಡುವದು ಶಿವಮೊಗ್ಗಾ ಕಡೆಗೆ—	ಮಧ್ಯಾಹ್ನ ೧ ,,
ಸಾಗರಕ್ಕೆ ಸೇರುವದು (ಸಿದ್ದಾಪುರ ಮಾರ್ಗವಾಗಿ)—	ಸಾಯಂಕಾಲ ೬ ,,
ಸಾಗರದಿಂದ ಶಿರಸಿ ಕಡೆಗೆ ಹೊರಡುವದು—	ಬೆಳಿಗ್ಗಿನ ೬ ,,
ಸಿದ್ದಾಪುರದ ಮೇಲಾಗಿ ಶಿರಸಿಗೆ ಸೇರುವದು—	,, ೧೧ ,,
ಶಿರಸಿಯಿಂದ ಕುಮಟೆಗೆ ಹೊರಡುವದು—	ಮಧ್ಯಾಹ್ನ ೨ ,,
ಕುಮಟೆಗೆ ಸೇರುವದು—	ಸಾಯಂಕಾಲ ೫ ,,

N. B. ಈ ಮೇಲಿನ ಲೈನುಗಳ ಹೊರತು ಶಿರಸಿಯಿಂದ ಹುಬ್ಬಳ್ಳಿಗೆ ಪ್ರತ್ಯೇಕ ಒಂದು ಸರ್ವಿಸ [illegible] ಜನ ಸದಾ ಇರುತ್ತದೆ. ಸರ್ವರೂ ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ

SHIMOGA,
2[illegible]– 1.– 1924.

M. MANJAPPA.
PROPRIETOR

ಸರಕಾರದಲ್ಲಿ ರಜಿಸ್ಟರ ಆದಂಥ

[illegible] ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ [illegible] ಔಷಧಿಯಾಗಿದ್ದು ಬಹಳ ಸೀಯಾಗಿಯೂ, ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ಥ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು. ೬೦,೭೦ ವರ್ಷದ ಮುದುಕರ ಕಾಮವಿಕಾರವು ತರುಣರಂತೆ ಪ್ರವರ್ಧಮಾನವಾಗುವದು. (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ [illegible] ಪುಂಸತ್ವವು ಇಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು — ಪರಮಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಅವರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವು ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಗಾಯ ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ [illegible] ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೩—೪—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚ ಹೆಚ್ಚು ಬೀಳುವದಿಲ್ಲ ಆರು ಬಾಟಲಿಗಳ ಕಿಮ್ಮತ್ತು ೧೩—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲಖರ್ಚ ಬೇರೆ ಬೀಳುವದು. [illegible] ಕಡಿಯಿಂದ ೧ ಬಾಟ್ಲಿಗೆ ೧—೪—೦ ೩ ಬಾಟ್ಲಿಗೆ ೩—೦—೦, ಆರಕ್ಕೆ ೧೩—೧—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸು ಪೋ. ನಿಪ್ಪಾಣಿ, ಜಿ ಬೆಳಗಾಂವ

ಕೈರಾಟೆಯ ಪ್ರಸಾರ.

ಬಂಗಾಲದ ದಿನಾಜಪುರದಲ್ಲಿ ಬಾಬು ಜೋಗೇಂದ್ರ ಚಂದ್ರ ಚಕ್ರವರ್ತಿಯವರು ಖಾದಿಯ ಪ್ರಸಾರವನ್ನು ಕೈಕೊಂಡಿರುವರು. ಇವರು ಸ್ವರಾಜ್ಯ ಪಕ್ಷದವರು; ಬಂಗಾಲದ [illegible] ಕೌನ್ಸಿಲಿನ ಸಭಾಸದರು. ಮಹಾತ್ಮರು ದಿನಾಜಪುರಕ್ಕೆ ಹೋದಾಗ ಬಾಬು ಮಹಾಶಯರು ಒಂದು ಕೈರಾಟೆಯ ಪ್ರತ್ಯಕ್ಷ ಪ್ರಯೋಗ ಮಾಡಿತೋರಿಸಿದರು. ಅಲ್ಲಿಯ ಹುಡುಗರೂ, ಮುದುಕರೂ, ಹಿಂದೂಗಳೂ ಮುಸಲ್ಮಾನರೂ, ಸ್ವರಾಜ್ಯಪಕ್ಷದವರೂ, ಕೌನ್ಸಿಲು ಸನ್ಯಾಸಿಗಳೂ, ವಕೀಲರೂ, ಜಮೀನದಾರರೂ, ದೊಡ್ಡವರೂ, ಬಡವರೂ, ಅಸ್ಪೃಶ್ಯರೂ, ಸಂತಾಲರೂ ಒತ್ತಟ್ಟಿಗೆ ಸೇರಿಕೊಂಡು ಸಭೆಯ ಮಧ್ಯದಲ್ಲಿ ನೂಲುತ್ತಿದ್ದರು. ಇದೊಂದು ದಿವ್ಯ ಚಿತ್ರವೆಂದು ಮಹಾತ್ಮರು ಸಂಭೋಧಿಸಿದರು!

ಬೋಗ್ರಾದಲ್ಲಿಯೂ ಇಂಥ ಚಿತ್ರವು ಮಹಾತ್ಮರಿಗೆ ಲಭಿಸಿತು. ಮುದುಕರೂ, ಪ್ರಾಯದವರೂ, ಮುನಿಸಿಪಾಲಿಟಿಯ ಸಭಾಸದರೂ, ಚೆಯರಮನರೂ ವಕೀಲರೂ ಬಕ್ತಗಾರರೂ ಕೂಡಿ ಸೇರಿಕೊಂಡು ನೂಲುತ್ತಿದ್ದರು. ಒಂದು ಶಾಲೆಯ ಹುಡುಗಿಯರು ತಮ್ಮ ನೂಲಿನಿಂದ ನೆಯ್ದ ಧೋತರವನ್ನು ಮಹಾತ್ಮರಿಗೆ ಅರ್ಪಿಸಿದರು. ನೂಲು ತೆಗೆದವರು ಹುಡುಗಿಯರು, ನೆಯ್ದವನು ಒಬ್ಬ ಎಳೆ ಹುಡುಗನು.

ತಲೋರಾ ಪಟ್ಟಣವು ವಿಖ್ಯಾತ ಖಾದಿ ಭಕ್ತರಾದ ಡಾ। ರೇಯವರ ನೆರೆ ನಿವಾರಣೆಯ ಕೇಂದ್ರವು. ಇಲ್ಲಿ ಡಾ। ರೇಯವರು ೩ ಸಾವಿರ ಕೈರಾಟೆಗಳನ್ನು ನಿರಾಶ್ರಿತರಿಗೆ ಪೂರೈಸಿ, ಅವರಿಗೆ ಸ್ವಾವಲಂಬಿಗಳಾಗಿ ಮಾಡಿದರು. ಖಾದಿ ತಯಾರ ಮಾಡಿ ಅಲ್ಲಿ ತಿಂಗಳಿಗೆ ೪ ಸಾವಿರ ರೂಪಾಯಿಗಳ ಉತ್ಪನ್ನವಾಗುತ್ತದೆ. ಇದರ ಚಾಲಕರು ಶ್ರೀ। ಸತೀಶ ಬಾಬುರವರು. ಮಹಾತ್ಮರು ಅಲ್ಲಿ ಹೋದಾಗ ೩೦ ಮಂದಿಗಳು ಅಲ್ಲಿ ನೂಲುತ್ತಿದ್ದರು. ಸಾಮಾನ್ಯವಾಗಿ ತಾಸಿಗೆ ೪೦೦ ಗಜಕ್ಕೆ ಮಿಕ್ಕಿ ಅವರು ನೂಲುತ್ತಾರೆ. ನೂಲಿನ ನಂಬರು ೧೫ರಿಂದ ೩೦ರವರೆಗೆ. ಮಿಯಾಂಜಾನ ಎಂಬ ಮುಸಲ್ಮಾನ ಹುಡುಗನು ತಾಸಿಗೆ ೬೦೦ ಗಜ ನೂಲು ತೆಗೆಯುತ್ತಾನೆ.

ಮಿಯಾಂಜಾನ ಹುಡುಗನು ಡಾ। ರೇಯವರ ಮುದ್ದಿನವನು. ಡಾ। ರೇಯವರು ತಿಂಗಳಿಗೊಮ್ಮೆ ಅಲ್ಲಿ ಹೋಗುತ್ತಾರೆ. ಹುಡುಗರಿಗೆ ತಿಂದಿ ಕೊಡುತ್ತಾರೆ. ಮಹಾತ್ಮರ ಆಗಮನಮಾದಂದಿನಿಂದ ಬಂಗಾಲ ಪ್ರಾಂತದಲ್ಲಿ ಅಲ್ಲಲ್ಲಿ ಗಾಂಧಿ ದಿನಗಳು ಆಚರಿಸಲ್ಪಡುತ್ತವೆ ಗಾಂಧಿ ಪುಣ್ಯಾಹಗಳಿವು! ನೇಮದಂತೆ ಡಾ। ರೇಯವರು ಮಿಯಾಂಜಾನನಿಗೆ ಮಿಠಾಯಿ ಕೊಡಹೋದರು. ಆದರೆ, ಮಿಯಾಂಜಾನನು ನುಡಿದದ್ದೇನೆಂದರೆ "ಈ ತಿಂಡಿಯನ್ನು ತಿನ್ನಬಯಸುವೆನು ಆದರೆ, ಇಂದು ಗಾಂಧೀ ಪುಣ್ಯಾಹ ವ್ರತವನ್ನು ನಾನು ಕೈಕೊಂಡಿರುತ್ತೇನೆ ಅದರಿಂದ ತಿಂಡಿಯನ್ನು ತಿನ್ನಲಾರೆನು"

ಮಹಾತ್ಮರು ತಲೋರಾ ಪಟ್ಟಣಕ್ಕೆ ಹೋದಾಗ ಚಿಕ್ಕ ಬಾಲಕರೂ ಹೆಂಗಸರೂ ನೂಲುತ್ತಿದ್ದರು. ೭ ವರ್ಷ ಪ್ರಾಯದ ಹುಡುಗಿಯು ತಾಸಿಗೆ ೫೦೦ ಗಜಕ್ಕೆ ಮಿಕ್ಕಿ ನೂಲನ್ನು ರಭಸದಿಂದ ತೆಗೆಯುತ್ತಿದ್ದಳು. ಮಹಾತ್ಮರು ಅವಳೆದುರಿಗೆ ಕೆಲ ಕಾಲ ನಿಂತುಕೊಂಡರು. ಅವಳ ಚಿತ್ತವೆಲ್ಲ ಕೈರಾಟೆಯ ಮೇಲೆ ಲಕ್ಷ್ಯವಾದದ್ದರಿಂದ ಅವಳು ಮೇಲೆ ನೋಡಲೇ ಇಲ್ಲ. ಮಹಾತ್ಮರು ಅವಳ ಕಿವಿಹಿಡಿದು "ನಿನಗೆ ಮಹಾತ್ಮಾ ಗಾಂಧಿಯವರ ಗುರುತಿದೆಯೋ?" ಎಂದು ಕೇಳಿದರು. ಆದರೂ, ಆ ಹುಡುಗಿಯೇನು ಉತ್ತರ ಕೊಡಲಿಲ್ಲ. ಬಳಿಯಲ್ಲಿದ್ದವರು ಮಹಾತ್ಮರ್ಯಾರೆಂದು ಅವಳಿಗೆ ಗೊತ್ತಿಲ್ಲವೆಂದರು. ಅಲ್ಲಿ ೮೦ ವರ್ಷ ಪ್ರಾಯದ ಹೆಂಗಸೂ ಕೂಡ ನೂಲುತ್ತಿದ್ದಳು. ಕೈರಾಟೆಯಿಂದ ತನಗೂ, ತನ್ನ ಹುಡುಗನಿಗೂ ಕೂಡಿ ತಿಂಗಳಿಗೆ ೮ ರೂಪಾಯಿ ಪ್ರಾಪ್ತಿಯಾಗುತ್ತದೆಂದು ಇನ್ನೊಬ್ಬಳು ಡೌಲಿನಿಂದ ಹೇಳಿದಳು.

ಪಾಬ್ನಾ ಪಟ್ಟಣದಲ್ಲಿ ಬಾಬು ಜೋಗೇಂದ್ರ ಮಿತ್ರ ಎಂಬ ದೊಡ್ಡ ಸಾಹುಕಾರರಿರುವರು. ಅವರು ಮಹಾತ್ಮರಿಗೆ ಒಂದು ಧೋತರವನ್ನು ಅರ್ಪಿಸಿದರು. ಧೋತರವು ಬಹಳೇ ಜನುಗು ನೂಲಿನದು. ಇಷ್ಟು ಜನುಗು ಖಾದಿಯನ್ನು ತಾವು ಬಂಗಾಲದಲ್ಲೆಲ್ಲಿಯೂ ನೋಡಲಿಲ್ಲವೆಂದೂ ಮಹಾತ್ಮರೊಡನೆ ಬಂಗಾಲದಲ್ಲಿ ಪ್ರವಾಸಗೈದಿಹ ಶ್ರೀ। ಮಹಾದೇವಭಾಯಿ ದೇಸಾಯಿಯವರು ಬರೆಯುತ್ತಾರೆ. ಧೋತರಕ್ಕೆ ತಗಲಿದ ಎಲ್ಲ ನೂಲನ್ನು ಬಾಬು ಜೋಗೇಂದ್ರ ಮಿತ್ರರೂ, ಅವರ ಹೆಂಡರು-ಮಕ್ಕಳೂ ತೆಗೆದಿದ್ದರಂತೆ. ಇದೊಂದು ವಿಶೇಷವು.

ಪಾಬ್ನಾ ಪಟ್ಟಣದಲ್ಲಿ ನಾರೀಶಿಲ್ಪ ಮಂದಿರವೆಂಬವೊಂದು ಸಂಸ್ಥೆಯಿದೆ. ಮಹಾತ್ಮರೂ ಈ ಸಂಸ್ಥೆಯ ಸಭಾಸದರೊಡನೆ ಮಾತುಕಥೆ ನಡಿಸಿದರು. ಹೆಂಗಸರು ಮಹಾತ್ಮರಿಗೆ ಬಂಧುಭಾವದಿಂದ ನಡಿಸಿಕೊಂಡರು; ಮೋರೆಗೆ ಹಾಕಿಕೊಂಡ ಬುರುಖೆಯನ್ನು ತೆಗೆದುಕೊಂಡಿದ್ದರು. ಅವರು ಮಹಾತ್ಮರಿಗೆ ಒಂದು ಧೋತರವನ್ನೂ, ಕೆಂಪು ೮೦

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. ರಜಿಸ್ಟರ್ಡ

ಮೃದುವಾದ ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ.

ಕಾಮಿನಿಯಾ ಆಯಿಲ್ (ರಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ತೊಡೆದುಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ತಕ್ಷಣವಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು. ಆದರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ಕೂದಲನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇ ಒಂದು ಬಾರಿ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ವ್ಯಾಪಾರ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಆಫ್ ಮೆರಿಟ" ಅರ್ಥಾತ್ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಪ್ರಮಾಣಪತ್ರಗಳೂ ದೊರೆತಿವೆ.

ಕ್ರಯ— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10-0 ವ್ಹಿ. ಪಿ. ಖರ್ಚು 0-14-0.

ಅತಿ ಮನೋಹರವಾದ ಸುರಭಿಯು

ಒಟ್ಟೋ-ದಿಲ್ ಬಹಾರ್ !! ರಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡಿದ ಇದರಲ್ಲಿ ಮದಿರೆಯ (ಅಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಆವಿರ್ಭವಿಸಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳಕೊಳ್ಳುವುದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ!

ಸಣ್ಣ ಸೀಸೆ 1 ಕ್ಕೆ 0-8-0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0·12·0.

Address:- **The Anglo Indian Drug & Chemical Co**
16, Market, **BOMBAY 2.**

ಚಿನ ಸೀರೆಯನ್ನೂ ಅರ್ಪಿಸಿ, ಸೀರೆಯು ಸೌ॥ ಕಸ್ತೂರಿಬಾಯಿ ಗಾಂಧಿಯವರಿಗಾಗಿ ಅರ್ಪಿಸಲ್ಪಟ್ಟಿರುವದೆಂದು ಹೇಳಿದರು. ಮುಸಲ್ಮಾನ ಸ್ತ್ರೀಯೊಬ್ಬಳು ಬುರುಖಿಯೊಳಗಿಂದಲೇ ಮಾಡುತ್ತಿದ್ದಳು.

“ನಿನ್ನ ಬಂಧು ಬಂದಾಗ ಬುರುಖಿ ಇರಲಾಗದು.” ಎಂದು ಮಹಾತ್ಮರು ಹೇಳಿದ ಕೂಡಲೆ, ಆವಳು ಬುರುಖಿಯನ್ನು ತೆಗೆದಳು.

ಬೋಗ್ರಾ ಜಿಲ್ಹೆಯ ನಿವಾಸಿಗಳಲ್ಲಿ ಶೇಕಡಾ ೮೦ ರಷ್ಟು ಮುಸಲ್ಮಾನರಿರುವರು. ರಾಷ್ಟ್ರ ಸೇವೆ ಮಾಡುವವರು, ಪ್ರಜೆಗಳಲ್ಲಿ ಖಾದಿ ಪ್ರಸಾರ ನಡಿಸುವವರು ಪ್ರಾಮುಖ್ಯವಾಗಿ ಹಿಂದೂಗಳೇ. ಹಿಂದೂ- ಮಹಮ್ಮದೀಯ ಐಕ್ಯದ ನಿದರ್ಶನವಿದು!

ಕೊಡಗಿನಲ್ಲಿ ಖಾದಿ ಭಂಡಾರವು ಸ್ಥಾಪಿತವಾಗಿ ೨-೩ ತಿಂಗಳುಗಳಾದವು. ತಿರಪುರದೊಳಗಿನ ತಮಿಳನಾಡು ಕಾಂಗ್ರೆಸ ಕಮೀಟಿಯ ವಸ್ತ್ರಾಲಯದೊಳಗಿಂದ ಖಾದಿಯು ಖರೇದಿಯಾಗುತ್ತದೆ. ಬೆಳಗಾವಿಯ ರಾಷ್ಟ್ರೀಯ ಸಭೆಯ ಪೂರ್ವದಲ್ಲಿ ಅಲ್ಲಿ ಖಾದಿಯನ್ನು ಧರಿಸುವವರು ವಿರಳರಿದ್ದರು. ಈಗ ನೂರಾರು ಮಂದಿಗಳು ಖಾದಿ ಧರಿಸಹಾರಂಭಿಸಿರುವರು. ಅನೇಕ ಕೈರಾಟಗಳೂ ಅಲ್ಲಲ್ಲಿ ನೂಲು ತೆಗೆಯಲಾರಂಭಿಸಿರುವವು.

ಬೋಗ್ರಾದಲ್ಲಿ ಈಗ ೧೦ ನೂಲುವ ಕೇಂದ್ರಗಳಿವೆ; ೩ ನೇಯುವ ಕೇಂದ್ರಗಳಿವೆ; ೧೯೯ ಗ್ರಾಮಗಳಲ್ಲಿ ೨೯೨೩ ಕೈರಾಟಗಳು ನಡಿಯುತ್ತವೆ. ಮೂರು ಕೇಂದ್ರಗಳಲ್ಲಿ ಕೂಡಿ ೨೦೦ ನೇಕಾರರಿರುವರು. ಅವರಲ್ಲಿ ಒಬ್ಬೇ ೧೨ ಮಂದಿ ಹಿಂದೂ ನೇಕಾರರು. ಸಾಮಾನ್ಯವಾಗಿ ನೇಕಾರರು ವರ್ಷಕ್ಕೆ ರೂಪಾಯಿ ೧೧೦ ರಿಂದ ೧೫೦ ರವರೆಗೆ ಗಳಿಸುತ್ತಾರೆ. ಭೋಜನ ಬಿಬಿ ಎಂಬವನು ಅಲ್ಲಿ ನೂಲುವವರಲ್ಲಿ ಶ್ರೇಷ್ಠನು. ಈತನು ತಿಂಗಳಿಗೆ ರೂಪಾಯಿ ೬-೧೩-೩ನ್ನು ಸಂಪಾದಿಸುತ್ತಾನೆ. ಯೋಸ್ಮಾಶ ಎಂಬವನು ಶ್ರೇಷ್ಠ ನೇಕಾರನು. ಈತನು ತಿಂಗಳಿಗೆ ರೂಪಾಯಿ ೩೧-೦-೦ನ್ನು ಗಳಿಸುತ್ತಾನೆ. ತಲೋರಾ ಪಟ್ಟಣದ ಸಿನ್ಮೋಡಿಪಿ ಗ್ರಾಮದಲ್ಲಿ ೧೨೨ ಕೈರಾಟಗಳಿಂದ ಆರು ತಿಂಗಳಲ್ಲಿ ರೂಪಾಯಿ ೧೨೪೦ ಗಳ ಉತ್ಪನ್ನವಾಯಿತು. ಹಿಳಿದಾಳ್ಲಿಯ ತಿಲಕಪುರದ ಬೋಲ ಗ್ರಾಮದಲ್ಲಿ ೧೦ ಮಂದಿ ನೇಕಾರರು ರೂಪಾಯಿ ೧೧೬೪ ಗಳನ್ನು ದುಡಿದರು. ಈ ಮಾಹಿತಿಯು ಪಾಸ್ಪರೇಮವರು ಮಹಾತ್ಮರಿಗೆ ಅರ್ಪಿಸಿದ ಮಾನಪತ್ರದಲ್ಲಿ ನಮೂದಾಗಿರುವದು.

ಬಂಗಾಲದೊಳಗಿನ ಖಾದಿ ಪ್ರತಿಷ್ಠಾನ ಸಂಸ್ಥೆಯು ಡಾ॥ ರೇ ಹಾಗು ಶ್ರೀ॥ ಸತೀಶ ಬಾಬು ಇವರ ನೇತೃತ್ವದಲ್ಲಿ ನಡಿಯುತ್ತಿದ್ದು ಸಂಶೋಧಕ ಬುದ್ಧಿಯಿಂದ ಅಲ್ಲಿನ ಕಾರ್ಯಗಳು ನಡೆದಿವೆ. ಖಾದಿಯ ತಯಾರಿಗೆ ಅವಶ್ಯವುಳ್ಳ ಸಮಸ್ತ ಸಾಮಗ್ರಿಗಳನ್ನು ಸಂಸ್ಥೆ ತಯಾರಿಸಿ ಅವು ಅಗ್ಗವಾಗಿ ಸಿಗುವಂತೆಯೂ, ಖಾದಿಯು ಬಡ ಪ್ರಜೆಗಳಿಗೂ ಪ್ರಾಪ್ತವಾಗುವಂತೆ ವ್ಯವಸ್ಥೆ ಮಾಡಲಿಕ್ಕೆ ಚಾಲಕರು ಹಗಲಿರುಳು ದುಡಿಯುತ್ತಿರುವರು. ಅವರ ಕಾರ್ಯವನ್ನು ತಜ್ಞರು ಪರೀಕ್ಷಿಸಿ ದೋಷಗಳನ್ನು ತೋರಿಸಿಕೊಡಬೇಕೆಂದು ಮಹಾತ್ಮರು ಬಲ್ಲವರಿಗೆ ಬಿನ್ನೈಸಿಕೊಂಡಿರುವರು.

— ಸರ್ವಾಧಿಪತಿ ಹಾಗು ಭಾರತಮಂತ್ರಿಗಳೊಳಗಿನ ಆಲೋಚನೆಯು ಮುಗಿಯುತ್ತ ಬಂದ ಹಾಗೇ ಅದರ ಫಲವು ಇನ್ನೂ ಗುಪ್ತವಾಗಿದೆ. ಸರ್ವಾಧಿಪತಿಗಳು ಹಿಂದುಸ್ಥಾನಕ್ಕೆ ಬಂದ ಬಳಿಕ ವರಿಷ್ಠ ಕಾಯಿದೆ ಕೌನ್ಸಿಲಿನ ಅಧಿವೇಶನದ ಸಮಯ ಫಲನಿವೇದನವಾಗುವದಂತೆ! ಬಿಟ್ಟುಬಿಟ್ಟು ಆಶೆ ಬೆಳಿಸುವ ದಿನಗಳು ಆಗಲೇ ಹೋದವು. ಕಾಲಹರಣವಾಗುವದರ ಮೇಲಿಂದ ಅಶುಭ ಫಲವೆಂದು ತರ್ಕ.

— ಗ್ವಾಲ್ಹೇರ ಸಂಸ್ಥಾನದ ಮಹಾರಾಜರು ಬಹುಮೂತ್ರ ರೋಗದಿಂದ ಪ್ಯಾರಿಸ ಪಟ್ಟಣದಲ್ಲಿ ದಿವಂಗತರಾದರು!

— ವಿಲಾಯತಿಯ ಗೌಳಿಗರು ಹಾಲಿನ ಸತ್ವ ತೆಗೆದು ಮಾರುತ್ತಿರುವರು. ನಿಸ್ಸತ್ವ ಹಾಲಿನಿಂದ ಪ್ರಯೋಜನ ಏನಿದೆ?

ವಿವಿಧ ಸಂಗ್ರಹ.

ದೇವಿಯ ಸುವರ್ಣ ಮಂದಿರ

ಪಂಜಾಬದ ಕಾಂಗ್ರಾ-ಕಂದರದಲ್ಲಿ ಒಂದು ದೇವಿಯ ಮಂದಿರವಿದೆ. ೨೦೦ ಅಡಿ ಉದ್ದ ೧೦೦ ಅಡಿ ಅಗಲಳತೆಯ ಪ್ರಾಕಾರವಿದೆ. ಮಂದಿರದ ಮೇಲೆ ಎಲ್ಲ ಕಡೆಗಳಲ್ಲಿ ಚಿನ್ನದ ತಗಡು ಹಾಕಲ್ಪಟ್ಟಿವೆ; ಚಿನ್ನದ ಕಳಸವೂ ಏರಿಸಲ್ಪಟ್ಟಿದೆ. ಮುಂಬದಿಗೆ ಚಿನ್ನದ ಪ್ರಾವರಣವಿದ್ದ ಎರಡು ಹುಲಿಗಳಿವೆ. ಮಂದಿರದ ಹೊರಬದಿಗೆ ಒಂದು, ಒಳಬದಿಗೆ ಮತ್ತೊಂದು ಹೀಗೆ ಎರಡು ನೀರಿನ ಹೌದುಗಳಿವೆ. ಗುಡ್ಡದ ಮೇಲಿಂದ ಎರಡು ನಳಗಳನ್ನು ತಂದು ಹೌದಿನಲ್ಲಿ ಬಿಟ್ಟಿದ್ದಾರೆ. ಯಾತ್ರಿಕರು ಈ ಹೌದುಗಳನ್ನು ಸ್ಪರ್ಶಿಸಬಾರದು. ಹೌದಿನ ಕಥೆಯು ಕೇಳತಕ್ಕಂಥಾದ್ದಿದೆ. ದೇವಿಯ ಮಂದಿರದಲ್ಲಿ ಜ್ವಾಲೆಗಳು ಉರಿಯುತ್ತಿವೆ. ಇವು ಜ್ವಾಲಾಮುಖಿಗಳು. ಇವನ್ನು ನಂದಿಸಲಿಕ್ಕೆ ಅಕಬರ ಬಾದಶಹರು ನೀರು ತಂದಿದ್ದರಂತೆ! ಆದರೆ, ಕೊನೆಗೆ ಅವನ್ನು ನಂದಿಸಲಿಕ್ಕಾಗದೆ ಸೋತು ಚಿನ್ನದ ಹೌದುಗಳನ್ನು ಕಟ್ಟಿಸಿದರೆಂದು ಹೇಳುತ್ತಾರೆ. ಇದಲ್ಲದೆ, ಶ್ರೀದೇವಿಗೆ ೧। ಮಣ ಚಿನ್ನದ ಕೊಡೆಯನ್ನೊಂದು ಮಾಡಿ ಅರ್ಪಿಸಿದರು. ಚಿನ್ನದ ಕೊಡೆಯನ್ನು ತಾನೊಬ್ಬನೇ ಮಾಡಿಕೊಟ್ಟನೆಂದು ಅಕಬರ ಬಾದಶಹರಿಗೆ ಗರ್ವ ಬಂದಿತೆಂದೂ, ಕೂಡಲೆ ಚಿನ್ನದ ಕೊಡೆಯು ಪಂಚದ್ದಾಯಿತೆಂದೂ ಕ್ಷೇತ್ರಸ್ಥರು ಹೇಳುತ್ತಾರೆ. ಈ ಮಂದಿರದಲ್ಲಿ ನೂರಾರು ಗಂಟೆಗಳಿವೆ. ನೇಪಾಳದ ಮಹಾರಾಜರು ಅರ್ಪಿಸಿದ ಗಂಟೆಯು ಎಲ್ಲಕ್ಕೂ ದೊಡ್ಡದು. ಗರ್ಭಗುಡಿಯಲ್ಲಿ ೪×೩×೩ ಘನ ಫೂಟ ಆಕಾರದ ಹೋಮಕುಂಡವೊಂದಿದೆ. ಮಂದಿರದಲ್ಲಿ ಸಂಗಮರವರಿ ಕಲ್ಲು ಹಾಸಿರುವರು. ಮಧ್ಯಭಾಗದಲ್ಲಿ ಶ್ರೀ ದೇವಿಯ ಮೂರ್ತಿಯಿದೆ. ದೇವಿಯ ಬಾಯೊಳಗಿಂದ ಜ್ವಾಲೆಯು ಉರಿಯುತ್ತಿರುತ್ತದೆ. ಗರ್ಭಗುಡಿಯಲ್ಲಿ ೧೦-೧೨ ಜ್ವಾಲೆಗಳು ಉರಿಯುತ್ತಿವೆ. ಜ್ವಾಲೆಗಳಿಗೆ ಮಹಾಂಕಾಳೀ, ಮಹಾಲಕ್ಷ್ಮೀ, ಮಹಾಸರಸ್ವತೀ, ಚಂಡೀ, ದುರ್ಗಾ ಮುಂತಾದ ಹೆಸರುಗಳಿವೆ. ಈ ಜ್ವಾಲೆಗಳು ಕೆಲ ಹೊತ್ತು ಶಾಂತವಾಗುತ್ತವೆ, ಕೆಲ ಹೊತ್ತು ಉರಿಯುತ್ತವೆ. ಒಲೆಯಲ್ಲಿ ಉರಿಯುವ ಕಟ್ಟಿಗೆಯ ಬೆಂಕಿಯಂತೆ ಈ ಜ್ವಾಲೆಗಳು ಹೊಳೆಯುತ್ತವೆ. ಕೆಲ ಜ್ವಾಲೆಗಳು ನಿಸ್ತೇಜ; ಕೆಲವು ತೇಜಃಪುಂಜವಿವೆ. ಈ ಜ್ವಾಲೆಗಳು ೧೫ ಇಂಚು ಉದ್ದ ೩ ಇಂಚು ಅಗಲ ವರೆಗೆ ಕಾಣುತ್ತವೆ. ಭಾವಿಕರು ಈ ಜ್ವಾಲೆಗಳಿಗೆ ಪೇಢೆ, ಬರ್ಫಿ, ಬತ್ತಾಸುಗಳನ್ನು ಅರ್ಪಿಸುತ್ತಾರೆ. ಈ ಮಂದಿರದಲ್ಲಿ ಇದು ಸರ್ವ ಪೂಜೆಯಾಗುತ್ತಿದೆ; ಮಧ್ಯಾಹ್ನಕ್ಕೆ ಹೋಮವಾಗುತ್ತದೆ. ೧೯೦೫ರಲ್ಲಿ ಧರಣಿಕಂಪವಾಗಿತ್ತು; ಆದರೆ ಅದರಿಂದ ಈ ಜ್ವಾಲೆಗಳು ಎಂದಿನಂತೆ ಉರಿಯುತ್ತಿವೆ. ಕುರಿಗಳಿಗೆ ಬಲಿಕೊಡುತ್ತಾರೆ. ದೇವಸ್ಥಾನದೊಳಗಿನ ಬ್ರಾಹ್ಮಣರು ಗೌಡ ಸಾರಸ್ವತ ಸಮಾಜದವರು. ದೇವಸ್ಥಾನದ ವ್ಯವಸ್ಥೆಯು ಗೌಡ ಸಾರಸ್ವತ ಸಮಾಜದ ಮಂಡಳದ ಕೈಕೆಳಗಿದೆ. ಜ್ವಾಲೆಗಳಲ್ಲಿ ಉರಿಯುವ ಜ್ವಾಲಾಮುಖಿಯವು. ಆದರೆ ಈ ಜ್ವಾಲೆಗಳಿಗೆ ಗಂಧಕ ಮುಂತಾದ ಯಾವದೇ ಪ್ರಕಾರದ ದುರ್ವಾಸನೆ ಬರುವದಿಲ್ಲ. ಶ್ರೀ ದೇವಿಯ ದರ್ಶನಕ್ಕಾಗಿ ಅಖಿಲ ಭರತ ಖಂಡದೊಳಗಿಂದ ಸಾವಿರಾರು ಯಾತ್ರಸ್ಥರು ಬರುತ್ತಿರುವರು.

⁂

ಪಾಶ್ಚಾತ್ಯರ ಅನುಭವ ಕೇಳಿರಿ!

ಅಮೇರಿಕೆಯೊಳಗಿನ ಸಮಾಜ ಸ್ಥಿತಿಯ ವಿಷಯ ಪಾದ್ರಿ ಸಾಹೇಬರಾದ ಫಿಲಿಫ ಯಾರೋ ಇವರು ಬರೆಯುವದೇನಂದರೆ:—“ಎಳೆ ಪ್ರಾಯದ ಹೆಂಗಸರಲ್ಲಿ ಲಜ್ಜೆಯು ಸ್ವಾಭಾವಿಕ ಗುಣವು. ಲಜ್ಜೆಯಿಂದಲೇ ಹೆಂಗಸರು ಇದುವರೆಗೆ ತಮ್ಮ ಸಂರಕ್ಷಣ ಮಾಡಿಕೊಂಡರು. ಆದರೆ ಈ ವಿನಯವು ಈಗ ನಷ್ಟವಾಗುತ್ತ ನಡೆದದೆ. ಇದು ಪೂರ್ವಕಾಲದಿಂದ ನಡೆದು ಬಂದ ಆಚಾರಗಳ ಪರಿಣಾಮವು. ಚಿಕ್ಕ ಬಾಲಕಿಯರಿಗೆ ಚಲಚ್ಚಿತ್ರ ಪಟಗಳಲ್ಲಿ ಈ ವರೆಗೆ ನೋಡಬಾರದ (ಶೃಂಗಾರ) ದರ್ಶನೀಯಗಳು ತೋರಿಸಲ್ಪಡುತ್ತವೆ; ಅಂತಃಪುರದೊಳಗಿನ ದೃಶ್ಯಗಳೂ ಅಲ್ಲಿ ತೋರಿಬರುತ್ತವೆ. ಈ ದೃಶ್ಯಗಳಿಂದ ಗೃಹಬಂಧನಗಳು ಸಡಿಲಾಗಿವೆ. ಎಳೆ ಹುಡುಗರಿಗೆ ಮನಬಂದಂತೆ ನಡೆಯಗೊಡುತ್ತಾರೆ. ತಮ್ಮಲ್ಲಿಯ ವಿಶಿಷ್ಟ ಗುಣಗಳನ್ನು ಪ್ರಕಟವಾಗಗೊಡಬೇಕೆಂಬ ವಿಚಾರಸರಣಿಗೆ ವಿಶೇಷ ಪುಷ್ಟಿ ಸಿಗಹತ್ತಿದೆ.” ವಿಲಾಯತಿಯಲ್ಲಿ ಇತ್ತಿತ್ತ ಸ್ತ್ರೀಯರ ಸ್ವೈರ ವರ್ತನವನ್ನು ಅಡ್ಡಗಟ್ಟಲು ಉಪಾಯಯೋಜನೆ ಮಾಡುವ ಚರ್ಚೆ ನಡೆದದೆ. ಯುರೋಪಿಯನ ಸ್ತ್ರೀಯರು ಅರಿವೆ ಅಂಚಡಿಗಳಲ್ಲಿ ವೆಸಷ್ಟವೊಡಲು ಸುಧಾರಣೆ ಮಾಡಬೇಕೆಂದು ಪೋಲಂಡದ ಯಹೂದಿಯ ಧರ್ಮಗುರುಗಳ ಯೋಜನೆಯು. ಪಾಶ್ಚಾತ್ಯ ಸಂಸ್ಕೃತಿಯ ಧೋರಣವನ್ನೇ ಬದಲಿಸಬೇಕೆಂದು ಕೂಲಿಕಾರ ಪಕ್ಷದ ನಾಯಕರಾದ ಮೆಕ್ಡೊನಲ್ಡರವರು ಸೂಚಿಸುತ್ತಾರೆ; ಅಧ್ಯಾತ್ಮ ದೃಷ್ಟಿಯನ್ನಿಟ್ಟು ಮುಂದರಿಯಿರಿ, ಎಂದು ಮಿ॥ ಶಿನ್ನಬೆರಿಯವರು ಎಚ್ಚರಿಸುತ್ತಾರೆ.

⁂

ಅರಸರ ಬಿರುದು ಬೇಡ!

ಕಳೆದ ಫೇಬ್ರುವರಿ ೨೮ನೇ ತಾರೀಖಿಗೆ ದಕ್ಷಿಣ ಆಫ್ರಿಕೆಯ ಕಾಯಿದೆ ಕೌನ್ಸಿಲಿನ ಸಭೆಯಲ್ಲಿ ಬ್ರಿಟಿಶ ಅರಸರು ಅನುಗ್ರಹಿಸುವ ಬಿರುದುಗಳ ವಿಷಯ ಚರ್ಚೆಯಾಯಿತು. ದಕ್ಷಿಣ ಹಾಗು ನೈಋತ್ಯ ಸರಕಾರದ ಅಧಿಪತ್ಯದೊಳಗಿನ ಪ್ರಜೆಗಳಿಗೆ ಬಿರುದುಗಳನ್ನು ಕೊಡಬಾರದೆಂದು ಅರಸರಿಗೆ ವಿಜ್ಞಾಪಿಸುವ ಕಾಯಿದೆಯನ್ನು ಮಿ॥ ಬಾಲೋರ್‌ರವರು ಸೂಚಿಸಿದರು. ಈ ಕಾಯಿದೆಯ ಮೇಲೆ 'ರಾಷ್ಟ್ರೀಯ' ಪಕ್ಷದವರೂ, ಕೂಲಿಕಾರ ಪಕ್ಷದವರೂ ಆವೇಶಯುಕ್ತ ಭಾಷಣ ಮಾಡಿದರು. ದಕ್ಷಿಣ ಆಫ್ರಿಕೆಯೊಳಗಿನ ರಾಷ್ಟ್ರ ಪುರುಷನಿಗೆ ಬಿರುದು ಕಳಂಕವೆಂದು ಹಲವರು ಉದ್ಗರಿಸಿದರು. ಮುಖ್ಯ ಪ್ರಧಾನರಾದ ಜನರಲ ಹರ್ಟಝೋಗರವರು ಉದ್ಗರಿಸಿದ್ದೇನಂದರೆ:—“ಮಾನವರಲ್ಲಿ ಭೇದಬುದ್ಧಿ ಮಾಡಬಾರದೆಂದು ಪ್ರಜೆಗಳ ಅಭಿಪ್ರಾಯವಿದೆ. ಗುಣಗಳ ಮೇಲಿಂದಲೇ ಉಚ್ಚ-ನೀಚತ್ವಗಳ ನಿರ್ಣಯವಾಗಬೇಕು. ಬಿರುದುಗಳಿಂದ ಒಂದು ಪ್ರಕಾರದ ಜಾತಿ ಮತ್ಸರವು ಜನಿತವಾಗಿ, ಜಾತಿ ಪ್ರತಿಬಂಧಗಳು ಫಲಿಸುತ್ತವೆ. ಇದನ್ನು ಅಳಿಗಳೆಯುವರಾರು?”

⁂

ಕನ್ಯಾವಿಕ್ರಯದ ಅನರ್ಥ.

ಧನದ ಹೆಬ್ಬಾಶೆಯ ಮೂಲಕ ಕನ್ಯಾವಿಕ್ರಯದ ಪಾಪವನ್ನು ಹೊತ್ತುಕೊಳ್ಳಲು ಜನರು ಎಳ್ಳಷ್ಟೂ ಹೇಸುವದಿಲ್ಲೆಂಬ ಬಗ್ಗೆ ವರ್ತಮಾನದೊಳಗೆ ಕದ್ದುಕ್ಕೆ

ಸಂಭವಿಸಿದ ಸಂಗತಿಯು ನಿದರ್ಶಕವಾಗಿರುತ್ತದೆ. ವಿಧವೆ ಬ್ರಾಹ್ಮಣ ಜಾತಿಯ ೧೩ ವರ್ಷ ಪ್ರಾಯದ ಬಾಲಿಕೆಯನ್ನು, ಆಕೆಯ ತಾಯಿಯು [illegible] ವಿಚಾರವುಳ್ಳ ೪೦ ವರ್ಷದ ಇಳಿ ಪ್ರಾಯದವನಿಗೆ ಬಹಳ ದೊಡ್ಡ ರಕಮಿಗೆ ಲಗ್ನಕ್ಕೆ ಮುಂಚೆಯೇ ಮಾರಿಬಿಟ್ಟಿದ್ದಳು. ಲಗ್ನವಾದ ಒಂದು ತಿಂಗಳ ಅವಧಿಯಲ್ಲಿ ಆ ಬಾಲಿಕೆಯು ತನ್ನ ಸೌಭಾಗ್ಯವನ್ನು ಕಳಕೊಂಡಳು. ಕೂಡಲೆ ಆ ತಾಯಿಯು ಮತ್ತೆ ಪುನಃ ತನ್ನ ಮಗಳ ಯೌವನದ ಲಾಭವನ್ನು ದೋಚಿಕೊಳ್ಳಬೇಕೆಂದು ಮತ್ತೊಬ್ಬ ೪೫ ವಯಸ್ಸಿನ ವಿಧುರನೊಡನೆ ವಾಗ್ದಾನ ಪ್ರಸ್ತಾವಗೆಲ್ಲ ಕೂಡಿದಳು. ಪುನರ್ವಿವಾಹದ ಒಲವು ತಿಳಿದೊಡನೆ ಚಿಕ್ಕ ನಿಷ್ಪಾಪ ವಿಧವೆಯ ಮನಸ್ಸು ಹೇಸಿಹೋಯಿತು. ಪರಿಪರಿಯಿಂದ ತನ್ನ ತಾಯಿಯೊಡನೆ ಹಾಗೆ ಮಾಡಕೂಡದೆಂದು ಕೈ ಮುಗಿದು ಬೇಡಿಕೊಂಡಳು. ಕಲ್ಲೆದೆಯ ತಾಯಿಯ ಮನಸ್ಸು ಕರಗಲಿಲ್ಲ. ತನ್ನ ಮನಸ್ಸಿನ ವಿರುದ್ಧ ತಾಯಿಯು ಅಥವಾ ಆಚರಣೆಯ ನಿಶ್ಚಯವನ್ನು ಅರಿತು, ಬಾಲಿಕೆಯು ತನ್ನ ಸೀರೆಯನ್ನ ಚಿಮಣಿ ಎಣ್ಣೆಯಲ್ಲಿ ಅದ್ದಿಸಿಕೊಂಡು, ಅದಕ್ಕೆ ಬೆಂಕಿ ಹಾಗಿಸಿ ಬೆಂಕಿಯೊಡನೆ ಅಪ್ರತ್ಯಕ್ಷ ಸಹಗಮನವನ್ನು ಮಾಡಿದಳು. ಎಂಥ ಅನರ್ಥ! ಪಾಶ್ಚಾತ್ಯರಲ್ಲಿ, ವಿವಾಹಬಂಧನಗಳ ಶೈಥಿಲ್ಯದ ಮೂಲಕ ವರ್ಣಸಂಕರಕ್ಕೆ ಎಡೆಗೊಟ್ಟರೂ, ಹಿಂದೂ ರಮಣೀಯರು [illegible] ಎಡೆಯನ್ನೀಯಲಾರರೆಂಬ ಬಗ್ಗೆ ಇದೊಂದು ನಿಜವಾದ ಆದರ್ಶ!

* * *

ಗ್ವಾಲ್ಹೇರದ ಸಿಂಧ್ಯಾ ಮಹಾರಾಜರು.

ಗ್ವಾಲ್ಹೇರದ ಮಹಾರಾಜರಾದ ಆಲಿಜಾಬಹಾದ್ದೂರ ಮಾಧವರಾವ ಶಿಂದೇಯವರು ಫ್ರಾನ್ಸ ದೇಶದಲ್ಲಿ ಕಳೆದ ಶುಕ್ರವಾರ ತಾರೀಖು ೫ ನೇಗೆ ನಿಧನ ಹೊಂದಿದರು. ಶ್ರೀಮಂತರು ರಾಜ್ಯಕಾರಭಾರವನ್ನು ನಿರಾಲಸ್ಯ ಬುದ್ಧಿಯಿಂದ ನಡಿಸುತ್ತಿದ್ದರು. ತಮಗೆ ಆಲೋಚನೆ ಹೇಳಲಿಕ್ಕೆ ೯ ಮಂತ್ರಿಗಳ ಒಂದು ಮಂತ್ರಿಮಂಡಳವನ್ನು ನೇಮಿಸಿಕೊಂಡಿದ್ದರು. ಕಾರಭಾರದಲ್ಲಿ ಸ್ವತಃ ಲಕ್ಷಗೊಟ್ಟು ಮಹಾರಾಜರು ನಡಿಸುತ್ತಿದ್ದರು. ಅದರಿಂದ ಅಲ್ಲಿ ರಾಜ-ಪ್ರಜಾ ಸಂಬಂಧ ತಾಯಿ-ಮಕ್ಕಳಂತೆ ನಡೆದು ಬಂದಿದೆ. ಮಾಧವರಾಯರಿಗೆ ಸೈನ್ಯಶಿಸ್ತಿನ ಪ್ರೇಮ. ಶಿಕಾರ ಬಹು ಹವಸಿಗರು. ಚೀನ ದೇಶದಲ್ಲಿ ಬೊಕ್ಸರ ದಂಗೆಯನ್ನು ಮುರಿಯಲು ಅವರು ಸ್ವತಃ ಚೀನ ದೇಶಕ್ಕೆ ಹೋಗಿದ್ದರು. ಅವರ [illegible] ಕುಮಾರೆ ವಾರರೂ, [illegible] ಇರುತ್ತಿದ್ದರು. [illegible]ದ ತೋಫಖಾನೆಯ ವ್ಯವಸ್ಥೆಯೂ ವಿಶೇಷತ್ತವಿದೆ. ಮಹಾ ಯುದ್ಧಕ್ಕಾಗಿ ೩॥ ಕೋಟಿ ರೂಪಾಯಿಗಳನ್ನು ಸ್ವತಃ ಖರ್ಚು ಮಾಡಿದ್ದಲ್ಲದೆ, [illegible] ಕೋಟಿ ರೂಪಾಯಿ ಸಾಲ ಕೊಟ್ಟರು. ಮಹಾರಾಜರು ನರೇಂದ್ರ ಮಂಡಳದ ಕಲ್ಪಕರೆಂದು ಹೇಳಬಹುದು. ಹಿಂದುಸ್ಥಾನದ ಸಂಸ್ಥಾನಿಕರೆಲ್ಲರೂ ಈ ಸಂಸ್ಥೆಯನ್ನು ಸ್ಥಾಪಿಸಿಕೊಂಡು, ತಮ್ಮ [illegible]ರುಗಳನ್ನೆಲ್ಲ ಪರಿಹರಿಸಿಕೊಳ್ಳಬೇಕಾಗಿ ಅವರು [illegible] ದುಡಿದರು. ಸ್ವದೇಶಿ ಉದ್ಯೋಗ-ಧಂದೆಗಳಿಗೆ ಶ್ರೀಮಂತರು ಆಶ್ರಯವನ್ನಿತ್ತು ಪ್ರೋತ್ಸಾಹನ ಮಾಡಿ[illegible]. ಉದ್ಯೋಗಗಳನ್ನು ಬೆಳಿಸುವದಕ್ಕಾಗಿ ಸಂಸ್ಥಾನಗಿನ ಪ್ರಜೆಗಳಿಗೆ ಅನೇಕ ಅನುಕೂಲತೆಗಳ ವ್ಯವಸ್ಥೆ ಮಾಡಿದ್ದರು. ಜಮಶೇದಪುರದೊಳಗಿನ ಟಾಟಾ ಉಕ್ಕಿನ ಕಾರಖಾನೆಗೆ ಆವಶ್ಯಕವಿದ್ದಲ್ಲಿ ಒಂದು ಕೋಟಿ ರೂಪಾಯಿ ವರೆಗೆ ಸಾಲಕೊಟ್ಟು ಕಂಪನಿಯನ್ನು ಸಂರಕ್ಷಿಸಿದರು. ಮಹಾರಾಜರು ಔಷಧೋಪಚಾರಕ್ಕಾಗಿ ಪಾರೀಸ ಪಟ್ಟಣಕ್ಕೆ ಹೋಗುವ ಮುಂಚೆ ಯುವರಾಜ ಶ್ರೀಮಂತ ಜಯಾಜಿರಾವ ಮಹಾರಾಜರಿಗೆ ಪಟ್ಟವನ್ನೊಪ್ಪಿಸಿ, ಯುವರಾಜರು ಅಪ್ರಾಪ್ತವಯಸ್ಕರಿದ್ದುದರಿಂದ ಮಹಾರಾಣಿಯವರಿಗೆ ಪಾಲಕರನ್ನಾಗಿ ನೇಮಿಸಿದ್ದರು. ಮಹಾರಾಜರ ನಿಧನದಿಂದ ಮಹಾರಾಣಿಯವರ ಮೇಲೆ ಕಠಿಣ ಪ್ರಸಂಗ ಬಂದೊದಗಿದೆ. ಇಂಥ ಸ್ವದೇಶಾಭಿಮಾನಿ, ಸ್ವದೇಶಸೇವಾರತ, ಪ್ರಜಾವತ್ಸಲ ಸಾಹಸಿ ಪುರುಷನು ಪರ ದೇಶದಲ್ಲಿ ನಿಧನ ಹೊಂದಿದ್ದು ಅತಂತ ಶೋಚನೀಯವು.

* * *

ರೈತ ಹಾಗು ಪೋಲೀಸರ ಕಲಹ!

ಇಲ್ಲಿಯ (ಧಾರವಾಡದ) ತಾಲೂಕ ಪೋಲೀಸ ಸಬ್ ಇನಿಸ್ಪೆಕ್ಟರರಾದ ಮಿ. ಸಮಂತರು ರೈತರನ್ನು ವ್ಯರ್ಥವಾಗಿ ಗೋಳಿಗೀಡುಮಾಡುತ್ತಾರೆಂದು ರೈತರು ಕಲೆಕ್ಟರ ಸಾಹೇಬರಿಗೆ ಸಮಕ್ಷಮ ದೂರು ಹೇಳಿದರು. ಈ ಪ್ರಕಾರವಾಗಿ ಅನೇಕ ಸಾರೆ ಅನೇಕ ಜನರುಗಳು ಹೇಳಲ್ಪಟ್ಟವು. ಮಿ. ಕಲೆಕ್ಟರ ಸಾ. ರವರು ಮಾಮಲೇದಾರ ಹಾಗು ಇನ್ನಿತರ ಅನೇಕಾನೇಕ ಅಧಿಕಾರಿಗಳಿಂದ ರೈತರ ಹೇಳಿಕೆಯನ್ನು ತಪಾಸ ಮಾಡಿಸಿದರು. ಮೆ. ಮಾಮಲೇದಾರರು ಅಮೀನಭಾವಿಗೆ ಬಂದು ಪ್ರಕರಣವನ್ನು ತಪಾಸಿ ಮಾಡಿದ ಒಂದೆರಡು ದಿವಸಗಳಲ್ಲಿಯೇ ಅಮೀನಭಾವಿಯ [illegible] ಮಾವಿನ ಗಿಡಗಳು ಕಡಿಯಲ್ಪಟ್ಟಿರುತ್ತವೆ. ಆ ಗಿಡಗಳ ಕ್ರಯವು ಸುಮಾರು ೫ ಸಾವಿರ ರೂಪಾಯಿ ಆಗಬಹುದು. ಈ ಕೃತ್ಯವನ್ನು ಮಾಡಿದವರು ರೈತರೆಂದು ಪೋಲೀಸರ ಅಂಬೋಣ. ಆದರೆ, ಇದು ಪೋಲೀಸರದೆ ಕಾರಭಾರವೆಂದು ಬಹುತೇಕರ ಹೇಳಿಕೆ. ಹಿಂದುಸ್ಥಾನದ ಇತಿಹಾಸವನ್ನು ಅವಲೋಕಿಸಲು, ಇಂಥ ಉಪದ್ವ್ಯಾಪಕ್ಕೆ ಕೈ ಹಾಕುವವರು ಪೋಲೀಸರ ಹೊರತು ಅನ್ಯರೂ ಇಲ್ಲವೆಂದು ಬಹುತರ ಎಲ್ಲ ಜನರ ಊಹೆ. ಆದ್ದರಿಂದ ಈ ಪ್ರಕರಣವನ್ನು ಸರಕಾರವು ಯೋಗ್ಯ ರೀತಿಯಿಂದ ವಿಚಾರ ಮಾಡಬೇಕಾಗಿ ನನ್ನ ಸವಿನಯ ಹಾಗು ಒತ್ತಾಯದ ಸೂಚನೆ.

— ಕರ್ನಾಟಕ [illegible].

ಮುಂಬಯಿ ಇಲಾಖೆಯ ಪ್ರಾಥಮಿಕ ಶಿಕ್ಷಕ ಸಂಘ.

ಮುಂಬಯಿ ಇಲಾಖೆಯ ಪ್ರಾಥಮಿಕ ಶಿಕ್ಷಕ ಸಂಘದ ೮ನೇ ಅಧಿವೇಶನವು ಬೆಳಗಾಂವದಲ್ಲಿ ಕಳೆದ ೩೦—೩೧ನೇ ತಾರೀಖಿಗೆ ನೆರವೇರಿತು. ಶ್ರೀ. ಗೋಪಾಲಕೃಷ್ಣ ದೇವಧರರವರು ಸಭಾಪತಿಗಳಿದ್ದರು. ಪ್ರತಿನಿಧಿಗಳನ್ನು ಸ್ವಾಗತ ಮಾಡುವಾಗ, ಸ್ವಾಗತಮಂಡಳದ ಅಧ್ಯಕ್ಷರಾದ ಶ್ರೀ. ಠಾಕೂರರವರು ನುಡಿದದ್ದೇನಂದರೆ:— ಶಿಕ್ಷಕರು ಸಂಘ ಮಾಡಲು ತಯಾರಾದ ಕೂಡಲೆ, ಸರಕಾರವು ಜಾಗ್ರತವಾಗಿ ಕೆಳ ತರಗತಿಯ ಶಿಕ್ಷಕರ ಪಗಾರು ರೂಪಾಯಿ ೯ ರಿಂದ ೧೫ ರೂಪಾಯಿ ಆಯಿತು, ಬಳಿಕ ೨೦ ರೂಪಾಯಿ, ಅನಂತರ ೨೫ ರೂಪಾಯಿ ವರೆಗೆ ಸಂಬಳ ಏರಿತು. ಟ್ರೇಂಡ ಶಿಕ್ಷಕರಿಗೆ ೩೦—೩೫—೪೦ ಹೀಗೆ ಪಗಾರು ಕೊಡಬೇಕೆಂದು ಗೊತ್ತಾಯಿತು. ಸಂಬಳ ಏರಿಕೆಯು ಹಿಂದಾಯಿತು, ಅದರಿಂದ ಈಗ ನೇಮಕ ಹೊಂದಿದ ಸುರ್ವೇ ಕಮಿಟಿಯವರು ಶಿಕ್ಷಕರ ವಿಷಯ ಅನುದಾರ ಧೋರಣವನ್ನು ಸ್ವೀಕರಿಸಿರುವರು. ಸಾತೆ-ಪರಾಂಜಪೆಯವರ ಪಗಾರಿನ ಪ್ರಮಾಣದಂತೆ ಕಲಬು ಸಿಕ್ಕಿದರೆ ಶಿಕ್ಷಕರಿಗೆ ಸಂತೋಷವಾಗುವದು. ಟ್ರೇನಿಂಗ ಕಾಲೇಜನಲ್ಲಿ ಸಂಸ್ಕೃತ ಶಿಕ್ಷಣವಿಲ್ಲ. ಅದರಿಂದ ಶಿಕ್ಷಕರ ಜ್ಞಾನಕ್ಕೆ ಕುಂದು ಬಂದಿದೆ. ಅಧ್ಯಕ್ಷರು ವಿಷಯನಿಯಾಮಕ ಕಮಿಟಿಯಲ್ಲಿ ಶಿಕ್ಷಕರ ಅಭಿಪ್ರಾಯಗಳನ್ನೆಲ್ಲ ಕೇಳಿಕೊಂಡು ಭಾಷಣ ಮಾಡಿದ್ದೇನಂದರೆ:— ನೀವು ನಿರಾಶರಾದದ್ದು ತೋರುತ್ತದೆ. ನಿರಾಶರಾಗದೆ ಪ್ರಯತ್ನ ಮಾಡತಕ್ಕದ್ದು ಇರಬೇಕು; ಅಂದರೆ ನಿಮಗೆ ಯಶಸ್ಸು ಪ್ರಾಪ್ತವಾಗುವದು. ಸಾತೆ—ಪರಾಂಜಪೆಯವರ ಯೋಜನೆಯು ನ್ಯಾಯ್ಯವಿದೆ. ನಾನೂ ನಿಮ್ಮ ತರ್ಫೆಯಿಂದ ಸರಕಾರದ ಕೂಡ ಬಡಿದಾಡುವೆನು. ಸಾತೆ—ಪರಾಂಜಪೆ ಯೋಜನೆಯನ್ನು ಮನ್ನಿಸಬೇಕೋ, ಸುರ್ವೇಯವರ ಯೋಜನೆಯನ್ನು ಮನ್ನಿಸಬೇಕೋ, ಎಂಬುದನ್ನು ನಿಮಗೆ ವಿಚಾರಿಸಿ ನಾನು ತಿಳಕೊಳ್ಳುವೆನು. ಮುಸಲ್ಮಾನ ಶಿಕ್ಷಕರ ಬೇಡಿಕೆಗಳನ್ನು ಮನ್ನಿಸಬೇಕಾಗಿದೆ. ಪೆನ್ಶನ ಫಂಡಿನ ಬದಲು ಇನ್ನೊಂದು ನಿಧಿಯನ್ನು ನಿರ್ಮಿಸುವದು ಅವಶ್ಯವಿದೆ, ಆಬಗ್ಗೆ ನಾನೂ ವಿಚಾರ ಮಾಡುತ್ತಿದ್ದೇನೆ. ಧಾರ್ಮಿಕ ಶಿಕ್ಷಣದಾನದ ವಿಷಯ ಮತಭೇದವಿರಬಹುದು; ಆದರೆ ಬಾಲಸೈನಿಕ ಶಿಕ್ಷಣವನ್ನು ಕೊಟ್ಟಲ್ಲಿ ವಿದ್ಯಾರ್ಥಿಗಳ ಶೌರ್ಯಸಂವರ್ಧನವಾಗುತ್ತದೆ. ಸಮ್ಮೇಲನದೊಂದಿಗೆ ಪ್ರದರ್ಶನವನ್ನೊಂದು ಸೇರಿಸಿದರೆ, ನಿಮ್ಮ ಕಾರ್ಯವು ವಿಶೇಷ ಲೋಕಪ್ರಿಯವಾಗುವದು.

ಠರಾವುಗಳು.

೧. ಸೊಲ್ಲಾಪುರದ ಅಧಿವೇಶನದಲ್ಲಿ ಮಂಜೂರಾದ ಪಗಾರಿನ ಯೋಜನೆಯು ಸಂಘದ ಧ್ಯೇಯವಿದೆ ಸದ್ಯಕ್ಕೆ ಸಾತೆ - ಪರಾಂಜಪೆ ಯೋಜನೆಯನ್ನು ಕೂಡಲೆ ಅಮಲಿನಲ್ಲಿ ತರಬೇಕು. ಮತ್ತು ಅದರಂತೆ ಕಲಬುನ್ನು ತಾರೀಖು ೧-೪-೨೪ ರಿಂದ ಕೊಡತಕ್ಕದ್ದು. (೨) ಶಿಕ್ಷಕರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವದಕ್ಕಾಗಿ ಯತ್ನಮಾಡಿದ ಸಭಾಸದರ ಆಭಾರಮನ್ನಣೆ; ಹಾಗು ವಿರೋಧಿಸಿದವರ ವಿಷಯ ಅಸಂತೋಷ ಮತ್ತು ನಿರಾಶೆ (೩) ಪಗಾರಿನ ಪ್ರಮಾಣ ನಿರ್ಣಯವಾದ ಹೊರತು ಸ್ಥಳಿಕ ಬೋರ್ಡುಗಳು ಶಾಲೆಯ ಖಾತೆಯನ್ನು ವಹಿಸಿಕೊಳ್ಳಬಾರದು; (೪) ಪಗಾರಿನ ನಿಶ್ಚಯವಾದ ಹೊರತು ಶಾಲೆಯ ಖಾತೆಯು ಬೋರ್ಡಿಗೆ ವಹಿಸಲ್ಪಟ್ಟರೆ, ನೌಕರಿಮಾಡಲಿಚ್ಛಿಸದ ಶಿಕ್ಷಕರಿಗೆ ಅರ್ಧ ಪೆನ್ಶನು ಕೊಡಬೇಕು (೫) ಶ್ರೀ. ವಾಡಕರ, ಘಾಟವಾಂಡೆ, ದೇಸಾಯಿ, ತೇಲಿ ಇವರಿಗೆ ಕಾರ್ಯದರ್ಶಿಗಳಾಗಿ ನೇಮಣೂಕಿಯಾಯಿತು (೬) ಮುಂದಿನ ವರ್ಷಕ್ಕೆ ಇಲಾಖೆಯ ಸಭೆಯ ಅಧಿವೇಶನವು ಸುರತ ಜಿಲ್ಲೆಯಲ್ಲಿ ಸೇರಬೇಕೆಂಬ ಸುರತ ಪಟ್ಟಣಿಗರ ನಿಮಂತ್ರಣದ ಸ್ವೀಕಾರವಾಯಿತು. ಇದಲ್ಲದೆ ಇನ್ನೂ ಅನೇಕ ಕಿರಕೋಳ ಠರಾವುಗಳು ಮಂಜೂರಾಗಿ ಅಧಿವೇಶನವು ವಿಸರ್ಜನವಾಯಿತು.

ಕಾನಡಾವೃತ್ತ.

ಮಿತಿ ಕ್ರೋಧನ ಸಂ|| ಜ್ಯೇಷ್ಠ ಬ|| ೯ ಮಿ ಸೋಮವಾರ

ಇದೆಂಥ ಗೊಂದಲ!

ಮುಸಲ್ಮಾನ ಯಾತ್ರಸ್ಥರ ಗೋಳು

ಅಖಿಲ ಭರತ ಖಂಡದೊಳಗಿನ ಮಹಮದೀಯ ಸಮಾಜದಲ್ಲಿ ಅನಪೇಕ್ಷಿತವಾಗಿ ಒಂದು ಗೊಂದಲವೆದ್ದಿದೆ. ಪ್ರತಿ ವರ್ಷಕ್ಕೆ ಭರತಖಂಡದೊಳಗಿಂದ ಹಾಜ ಯಾತ್ರಿಕರು ಅರೇಬಿಯಾದೊಳಗಿನ ಪೈಗಂಬರನ ಮುಕ್ಕಾ ಕ್ಷೇತ್ರಕ್ಕೆ ಭಕ್ತಿ ಭಾವದಿಂದ ಹೋಗುತ್ತಿರುವರು. ಇಕ್ಷಿ ಮೊದಮೊದಲು ೨೦ ಸಾವಿರವರೆಗೆ ಯಾತ್ರಸ್ಥರು ಹೋಗುತ್ತಿದ್ದರು. ಇತ್ತಿತ್ತ ಯಾತ್ರಿಕರ ವ್ಯವಸ್ಥೆಯಾಗದೆ, ಯಾತ್ರಸ್ಥರ ಸಂಖ್ಯೆಯು ಕ್ರಮವಾಗಿ ಕುಗ್ಗುತ್ತ ನಡೆದದೆ. ಆದರೂ ಪ್ರತಿ ವರ್ಷಕ್ಕೆ ತಮ್ಮ ಧರ್ಮಸಂಸ್ಥಾಪಕರ ಸಾನ್ನಿಧ್ಯದಿಂದ ಪವಿತ್ರವಾದ ಮುಕ್ಕಾ ಕ್ಷೇತ್ರಕ್ಕೆ ಸಕಲ ಕಷ್ಟಗಳಿಗೂ ಇದಿರಾಗಿ ಮಾಹಮ್ಮದೀಯರು ಸಾಗಿ ಹೋಗುತ್ತಿರುವರು.

ಈ ಪ್ರದೇಶದಲ್ಲಿ ಬಡೂನಿ ಜಾತಿಯವರ ಕಾಟ ವಿಶೇಷ. ಮರು ಪ್ರದೇಶದೊಳಗಿಂದ ಹೋಗುತ್ತಿರುವಾಗ, ಹಾದಿಯಲ್ಲಿಯೇ ಇವರು ಯಾತ್ರಸ್ಥರನ್ನು ಅಡ್ಡಗಟ್ಟಿ ಅವರಿಗೆ ಸುಲಿಯುತ್ತಿರುವರು. ಸದ್ಯಕ್ಕೆ ಅಲ್ಲಿ ಯುದ್ಧವು ನಡೆದಿದೆ. ಈ ಕ್ಷೇತ್ರಸ್ಥಳಗಳ ಸ್ವಾಧೀನತ್ವಕ್ಕಾಗಿ ಇಬ್ನಸೂದರೂ, ಅಮೀರ ಅಲ್ಲಿಯವರೂ ಬಡದಾಡಿಕೊಳ್ಳುತ್ತಿರುವರು. ಅಮೀರ ಅಲ್ಲಿಯವರು ಬ್ರಿಟಿಶ ಮುತ್ಸದ್ದಿಗಳ ಪ್ರೀತಿಯವರಂತೆ. ಇವರಿಗೆ ಬ್ರಿಟಿಶರ ಸಹಾನುಭೂತಿ ವಿಶೇಷ. ಇಬ್ನಸೂದರು ಮಹಮ್ಮದೀಯ ಧರ್ಮ ರಕ್ಷಕರು. ಇವರಿಗೆ ಯುದ್ಧ ಸಾಮುಗ್ರಿ ಪೂರೈಕೆಯಾಗದಂತೆ ಸಹಜವಾಗಿ ಅಮೀರ ಅಲ್ಲಿಯವರು ಯತ್ನಪಡುತ್ತಾರೆ. ಯಾತ್ರೆಯ ಸಮಯದಲ್ಲಿ ಮಹಮ್ಮದೀಯರನ್ನು ಅಡ್ಡಗಟ್ಟಿದರೆ, ಇಬ್ನಸೂದರ ವಿಷಯ ಅವರ ಸಹಾನುಭೂತಿಯು ಕುಗ್ಗಲು ಬಲು ಅನುಕೂಲವಾಗುವದೆಂದು ಬಲ್ಲವರ ಹೇಳಿಕೆ. ಹೀಗೆ ಇಬ್ಬರ ಬಡದಾಟದಲ್ಲಿ ಭಾವಿಕ ಯಾತ್ರಸ್ಥರು ಇತ್ತಿತ್ತ ಬಹು ಪರಿಯಿಂದ ಬಳಲುತ್ತಿರುವರು.

ಈ ವರುಷ ಪುನಃ ಯಾತ್ರಿಕರು ಮುಕ್ಕಾ ಕ್ಷೇತ್ರಕ್ಕೆ ಹೋಗಲಿದ್ದರು; ಸೆಂಟ್ರಲ್ ಖಿಲಾಫತ ಕಮಿಟಿಯು ತರ್ಫೆನಿಂದ ಮೌ|| ಶೌಕತ ಅಲ್ಲಿಯವರು ಭಾಗಿಸಾಗ ಕಂಪನಿಯವರೊಡನೆ ಪತ್ರವ್ಯವಹಾರ ನಡಿಸಿ, ರಬೀಗ ಬಂದರದಲ್ಲಿ ಯಾತ್ರಿಕರನ್ನು ಕ್ಷೇಮದಿಂದ ಮುಟ್ಟಿಸಬೇಕೆಂದು ಹೇಳಿದ್ದಕ್ಕೆ ಕಂಪನಿಯವರು ಒಪ್ಪಿದರು. ೩೫೦೦ ಯಾತ್ರಿಕರು ಜಹಾಂಗೀರ ಹಡಗವನ್ನು ಹತ್ತಿಕೊಂಡು ರಬೀಗ ಬಂದರದ ಕಡೆಗೆ ನಡೆದರು. ಈಗ ಅಲ್ಲಿ ದೊಡ್ಡದೊಂದು ಗೊಂದಲವಾಗಿದೆ. ರಬೀಗ ಬಂದರದಮೇಲೆ ಅಮೀರ ಅಲ್ಲಿಯವರು ಗುಂಡಿನ ಸುರಿಮಳೆ ನಡಿಸಿದ್ದಾರೆಂದು ಜಹಾಂಗೀರ ಬೋಟಿಯು, ದೂರದಲ್ಲಿ ಅಂದರೆ ಪೋರ್ಟ ಸೂಡನದಲ್ಲಿಯೇ ಲಂಗರ ಹಾಕಿ ಬಿಟ್ಟಿತು. ಇತ್ತ ಮನೆಯೂ ಇಲ್ಲ; ಅತ್ತ ಕ್ಷೇತ್ರವೂ ಇಲ್ಲ. ಯಾತ್ರಸ್ಥರೆಲ್ಲರೂ ತ್ರಿಶಂಕುಗಳಾಗಿ ಗೋಳಿಡುತ್ತಿರುವರು. ಯಾತ್ರೆಗಾಗಿ [illegible] ಅನ್ನಸಾಮುಗ್ರಿಯು ಮುಗಿದದೆ. ಯಾತ್ರಸ್ಥರ ಗೋಳು ಬಣ್ಣಿಸಿತೀರದು. ಯಾತ್ರಸ್ಥರಲ್ಲಿ ಹೆಂಗಸರೂ, ಮಕ್ಕಳೂ ಇರುವದಾಗಿ ತಿಳಿಯುತ್ತದೆ. ಜಹಾಂಗೀರ ಬೋಟಿಯವರ ಮೇಲೆ ಒದಗುತ್ತಿರುವ ಕಷ್ಟಗಳನ್ನು ಹೇಳತೀರದು.

ಯಾತ್ರಸ್ಥರ ಅವಸ್ಥೆಯನ್ನು ಕೇಳಿ ಮಹಮ್ಮದೀಯ ಸಮಾಜದಲ್ಲಿ ಕಲ್ಲೋಲವೆದ್ದಿದೆ. ಮೌ|| ಮಹಮ್ಮದ ಅಲ್ಲಿಯವರ ಅಧ್ಯಕ್ಷತೆಯಲ್ಲಿ ಕಳೆದ ತಾ. ೧೦ನೇ ಜೂನಕ್ಕೆ ದಿಲ್ಲಿಯ ಜುಮ್ಮಾ ಮಶೀದೆಯಲ್ಲಿ ದೊಡ್ಡದೊಂದು ಸಭೆಯಾಯಿತು. ಮೌ|| ಮಹಮ್ಮದ ಅಲ್ಲಿಯವರು ರಬೀಗ ಬಂದರದೊಳಗಿನ ಸುರಿಮಳೆಯ ವೃತ್ತಾಂತವು [illegible] ಹುಟ್ಟುಮಾಡಿದ್ದೆಂದು ಅಭಿಪ್ರಾಯಪಟ್ಟು, ಹಡಗನ್ನು ಕೂಡಲೆ ನಿಲ್ಲಿಸಿ, ಯಾತ್ರಸ್ಥರಿಗೆ ಕ್ಷೇಮದಿಂದ ಮುಂದರಿಯಗೊಡದಿದ್ದರೆ, ಬ್ರಿಟಿಶರ ಆಶ್ರಯದಲ್ಲಿಯೇ ಯಾತ್ರಸ್ಥರ ಗೋಳು ನಡೆದಿರುತ್ತದೆಂದು ಮಹಮ್ಮದೀಯರು ತಿಳಕೊಳ್ಳಬೇಕಾಗುವದೆಂದು ಸಾರಿ ಹೇಳಿದರು. ಯಾತ್ರಸ್ಥರಿಗೆ ಯಾತ್ರೆ ಕೈಕೊಳ್ಳದಂತೆ ಹಿಂದುಸ್ಥಾನ ಸರಕಾರವು ನಿಷ್ಕಾರಣವಾಗಿ ನಿರಾಧಾರ ಬೆದರಿಕೆಗಳನ್ನು ತೋರಿಸಿತೆಂದೂ, ಮಹಮ್ಮದ ಅಲ್ಲಿಯವರ ಆರೋಪವಿದೆ. ರಬೀಗ ಬಂದರದಮೇಲೆ ಅಮೀರ ಅಲ್ಲಿಯವರು ಸಾಗಿ ಹೋಗಬೇಕೆಂಬ ದುರಾಲೋಚನೆಯಿಂದಲೇ ಜೆದ್ದಾದೊಳಗಿನ ಬ್ರಿಟಿಶ ರಾಜ್ಯಭಾರಿಗಳು ಕುಹಕಗಳನ್ನು ರಚಿಸಿರಬೇಕೆಂದೂ ಮೌಲಾನಾರವರು ಪ್ರತಿಪಾದಿಸಿದರು. ಬ್ರಿಟಿಶರು ನಡಿಸುವ ಕಾರಸ್ಥಾನಗಳನ್ನು ಲಕ್ಷಿಸಿ, ಜುಮ್ಮಾ ಮಶೀದೆಯಲ್ಲಿ ನೆರೆದ ಮಹಮ್ಮದೀಯರು ಅಮೀರ ಅಲ್ಲಿಯವರಿಗೆ ಕೂಡಲೆ ಎಚ್ಚರಿಕೆ ಕೊಟ್ಟು, ಜಹಾಂಗೀರ ಬೋಟಿಯನ್ನು ಯಾತ್ರಸ್ಥರ ಇಚ್ಛೆಯಂತೆ ಮುಂದುವರಿಯಗೊಡಬೇಕೆಂದೂ, ಇಲ್ಲದಿದ್ದರೆ, ಬ್ರಿಟಿಶರೇ ಈ ಧರ್ಮಕಾರ್ಯದಲ್ಲಿ ಅಡ್ಡ ಬರುತ್ತಾರೆಂದು ಮಹಮ್ಮದೀಯರು ನಿಶ್ಚಯಪೂರ್ವಕವಾಗಿ ತಿಳಿಯುವರೆಂದೂ ಠರಾವಾಗಿದೆ. ಯಾತ್ರಿಕರೊಡನೆ ಯಾವದೇ ಪ್ರಕಾರದ ಯುದ್ಧಸಾಮುಗ್ರಿಯಿರುವದಿಲ್ಲ. ಯಾತ್ರೆಗೆ ಅವಶ್ಯವುಳ್ಳ ಸಾಮುಗ್ರಿಗಳನ್ನಷ್ಟು ಹಿಡಕೊಂಡು ಯಾತ್ರಾರ್ಥಿಗಳಾಗಿ ಅವರು ಮುಕ್ಕಾ ಕ್ಷೇತ್ರಕ್ಕೆ ನಡೆದಿರುವರು. ಅವಶ್ಯವಿದ್ದರೆ, ಅವರಿಗೆ ಯುಕ್ತಕಂಡ ಮೇಲ್ಪಾಸು ಮಾಡಿಬಿಟ್ಟರೆ ಯಾರದೂ ಅಡ್ಡಿ ಇರಲಾರದು.

ಯಾತ್ರಸ್ಥರ ಸುರಕ್ಷಿತತೆಗಿಂತ ಇನ್ನೊಂದು ಮಹತ್ವದ ಜವಾಬದಾರಿಯು ಬ್ರಿಟಿಶರ ಮೇಲಿದೆ. ಬ್ರಿಟಿಶರು ನೌಕಾಧಿಪತಿಗಳು ಸಮುದ್ರಸಂಚಾರವಮಾಡಲು ಅವರಿಗೆ ಎಂದೂ, ಯಾರೂ ಅಡ್ಡಗಟ್ಟಲಾರರೆಂದು ಖ್ಯಾತಿಯಿದೆ. ಯಾತ್ರಸ್ಥ ಮಹಮ್ಮದೀಯರೆಲ್ಲರೂ ಬ್ರಿಟಿಶ ಪ್ರಜಾಜನರು; ಅವರು ಶಾಂತ ರೀತಿಯಿಂದ, ಧರ್ಮಬುದ್ಧಿಯಿಂದ ನಡಿಸುವ ಧರ್ಮಕಾರ್ಯವನ್ನು ನಿರ್ವಿಘ್ನವಾಗಿ ನೆರವೇರಿಸಗೊಡಲು ಬ್ರಿಟಿಶರು ಬದ್ಧಕಂಕಣರಿರುವರು. ಬ್ರಿಟಿಶ ರಾಷ್ಟ್ರದ ಕರ್ತವ್ಯಕರ್ಮವಿದು. ಅಮೀರ ಅಲ್ಲಿಯವರು ಬ್ರಿಟಿಶ ಪ್ರಜೆಗಳ ಮೇಲೆ ಸ್ವತಂತ್ರ್ಯದಿಂದಲೇ ಸ್ವಂತ ಬುದ್ಧಿಯಿಂದಲೇ ಸಾಗಿ ಹೋಗುವಾರೆಂದು ಕಂಡರೂ, ಬ್ರಿಟಿಶ ಮುತ್ಸದ್ದಿಗಳ ಆಶ್ರಯದಲ್ಲಿಯೇ ಈ ಅಧರ್ಮ ಕಾರ್ಯವು ನಡೆದಿದೆಂದು ಮಹಮ್ಮದೀಯರ ಕಲ್ಪನೆಯಾಗಿದೆ. ಬ್ರಿಟಿಶರು ತಮ್ಮ ಕೀರ್ತಿಯನ್ನು ಕಾಪಾಡಿಕೊಳ್ಳಲಿಕ್ಕಾದರೂ ಜಹಾಂಗೀರದೊಳಗಿನ ಯಾತ್ರಸ್ಥರಿಗೆ ರಬೀಗದಲ್ಲಿ ಸುರಕ್ಷಿತವಾಗಿ ವಚನದಂತೆ ಇಳಿಸಲೇ ಬೇಕು. ಯಾತ್ರೆಯ ದಿನಗಳು ತೀರ ಸಮೀಪಿಸಿವೆ. ನಿರಾಶರಾಗಿ ಯಾತ್ರಸ್ಥರು ಪೋರ್ಟ ಸೂಡನ ಬಂದರದಿಂದ ಮರಳಿ ಬಂದರೆ, ಮಹಮ್ಮದೀಯರ ಕ್ಷೋಭವು ಕಡೆಗೇರಿ ಹಿಂದೀ ವಾತಾವರಣವು ಪ್ರಕ್ಷುಬ್ಧವಾಗುವದು. ಮೌ|| ಶೌಕತ ಅಲ್ಲಿಯವರು ಕಳೆದ ಮಂಗಳವಾರಕ್ಕೆ ಅಮೀರ ಅಲ್ಲಿಯವರಿಗೆ ತಂತಿ ಮಾಡಿ ಯಾತ್ರಸ್ಥರಿಗೆ ಕ್ಷೇತ್ರಕ್ಕೆ ಹೋಗಗೊಡಲು ಅಪ್ಪಣೆಯನ್ನೀಯಬೇಕೆಂದು ಬಿನ್ನೈಸಿಕೊಂಡಿರುವರು. ಬ್ರಿಟಿಶರೂ ಅಮೀರ ಅಲ್ಲಿಯವರಿಗೆ ಎಚ್ಚರಿಕೆ ಕೊಟ್ಟು, ಯಾತ್ರಿಕರನ್ನು ಕ್ಷೇತ್ರಕ್ಕೆ ಮುಟ್ಟಿಸಲು ನೆರವಾದರೆ ಮಾತ್ರ, ಬ್ರಿಟಿಶರಿಗೆ ಅಪಕೀರ್ತಿಯು ತಗಲದು; ಇಲ್ಲದಿದ್ದರೆ, ಅಮೀರ ಅಲ್ಲಿಯವರಿಗೆ ಎಬ್ಬಿಸಿ, ಬ್ರಿಟಿಶರೇ ಈ ಅಧರ್ಮಕ್ಕೀಡಾಗಿರುವರೆಂದು ಮಹಮ್ಮದೀಯರ ಕಲ್ಪನೆಯಾಗುವದು. ಯಾಕಂದರೆ, ಯಾತ್ರೆ ಮಾಡಗೊಡುವದು ಪ್ರತಿ ಒಬ್ಬ ಧರ್ಮಬಾಂಧವನ ಕರ್ತವ್ಯವು ಹೀಗಿದ್ದು, ಇಬ್ನಸೂದರಿಗೂ, ಅಮೀರ ಅಲ್ಲಿಯವರಿಗೂ ಧರ್ಮಯುದ್ಧ ನಡೆದಾಗ, ಧರ್ಮಸ್ಥಳದ ಸಂರಕ್ಷಣೆಗಾಗಿ ಇಬ್ಬರೂ ಬಡದಾಡುತ್ತಿರುವಾಗ, ಇಸ್ಲಾಮ ಧರ್ಮಾನುಯಾಯಿಗಳಾದ ಅಮೀರ ಅಲ್ಲಿಯವರೇ ಯಾತ್ರಸ್ಥ ಧರ್ಮಬಾಂಧವರನ್ನು ಅಡ್ಡಗಟ್ಟುವರೇ

ನಂಬ ಮೌ॥ ಶೌಕತಅಲ್ಲಿಯವರ ಪ್ರಶ್ನೆಗೆ ಯಾವ ಉತ್ತರ ಹೊರಡುತ್ತದೆ ?

ಸ್ಫುಟ ಸೂಚನೆಗಳು.

೧. ವಾಯಿಕೋಮದೊಳಗಿನ ಸತ್ಯಾಗ್ರಹ ಸಂಗ್ರಾಮವು ಸತ್ಯಾಗ್ರಹಿಗಳಿಗೆ ಅನುಕೂಲವಾಗಿ ಫಲಿಸುವ ಸುಚಿಹ್ನಗಳಾಗಿವೆ. ತ್ರಾವಣಕೋರದ ದಿವಾಣರು ಮಹಾರಾಣಿಯವರಿಗೆ ಸತ್ಯಾಗ್ರಹಿಗಳ ಮೇಲಿನ ಪ್ರತಿಬಂಧಕ ಹುಕುಮನ್ನು ರದ್ದುಪಡಿಸಲು ಶಿಫಾರಸು ಮಾಡಿರುವರಾಗಿ ಮದ್ರಾಸದ 'ಸ್ವರಾಜ್ಯ' ಪತ್ರಿಕೆಗೆ ತಿಳಿದುಬಂದಿದೆ. ದಿವಾಣರು ಶಿಫಾರಸು ಮಾಡುವಾಗ, ದರಬಾರದ ಅಮಲಕೆಯೊಳಗಿನ ಮಾರ್ಗಗಳೆಲ್ಲ ಜಾತಿಭೇದವಿಲ್ಲದೆ ಸಮಸ್ತ ಪ್ರಜೆಗಳಿಗೆ ಬೇಕಾದಂತೆ ಆಜ್ಞಾಪಿಸಲ್ಪಡಬೇಕೆಂದು ಬರೆಕೊಂಡಿರುವರಾಗಿಯೂ ತಿಳಿಯುತ್ತದೆ. ಹಿಂದೂ ಸಮಾಜಕ್ಕೆ ಒಪ್ಪದ ಇತರ ಧರ್ಮದ ಕೀಳು ಜಾತಿಯವರಿಗೆ ಸಹ ಸಾರ್ವಜನಿಕ ಮಾರ್ಗಗಳು ನಿರಾತಂಕವಾಗಿರಲು, ಹಿಂದೂ ಸಮಾಜದವರಿಗೆ ಮಾತ್ರ ಅಸ್ಪೃಶ್ಯವೆಂಬ ನೆವದಿಂದ ಅಡ್ಡಿ ಮಾಡುವದು ನೀತಿಗೂ ನ್ಯಾಯಕ್ಕೂ ವಿರುದ್ಧವಾದದ್ದೆಂದು ದಿವಾಣರ ಮತವಿರುವದಾಗಿಯೂ ತಿಳಿಯುತ್ತದೆ. ಈ ಪತ್ರವ್ಯವಹಾರವು ನಡೆದದ್ದಿದ್ದರೆ, ಸತ್ಯಾಗ್ರಹಿಗಳು ಏಕಾಗ್ರಚಿತ್ತದಿಂದ ನಡಿಸಿದ ತಪಸ್ಸು ಫಲಿಸಿತೆಂದು ಹೇಳಲಿಕ್ಕೇನೂ ಅಡ್ಡಿ ಇಲ್ಲ. ಸತ್ಯಾಗ್ರಹಪ್ರಾರಂಭವಾದಂದಿನಿಂದ ಇದೇ ವಿಚಾರಸರಣಿಯು ಸತ್ಯಾಗ್ರಹಿಗಳ ತರ್ಫಿನಿಂದ ಪುನಃ ಪುನಃ ಪ್ರತಿಪಾದಿಸಲ್ಪಡುತ್ತಿದ್ದರೂ, ಆಗಲೇ ಆ ವಿಚಾರವು ಹೊಳೆಯದೆ, ಸತ್ಯಾಗ್ರಹಿಗಳು ನಿಷ್ಕಾರಣವಾಗಿ ಕಷ್ಟವನ್ನನುಭವಿಸಬೇಕಾಯಿತು. ಮಹಾತ್ಮರು ಸ್ವತಃ ಅಲ್ಲಿಯ ವರೆಗೆ ಪ್ರಯಾಣ ಬೆಳೆಸಿ, ತಮ್ಮ ಅಸಾಮಾನ್ಯ ಚಾತುರ್ಯದಿಂದ, ಪ್ರೇಮದಿಂದ ಅಲ್ಲಿಯ ಅಧಿಕಾರಿಗಳಿಗೆಲ್ಲ ಸತ್ಯಾಗ್ರಹಿಗಳ ಸ್ಥಿತಿಗತಿಯನ್ನು ನಿವೇದಿಸಿ, ಸಂಧಾನ ಕಾರ್ಯವನ್ನು ಬಲುಮಟ್ಟಿಗೆ ನೆರವೇರಿಸಿದ್ದರು. ಮಹಾತ್ಮರು ಮರಳಿ ಅಹಮ್ಮದಾಬಾದಿಗೆ ಬಂದೊಡನೆ ಪೋಲೀಸ ಕಮಿಶನರರು ಪ್ರತಿಬಂಧಕ ಹುಕುಮನ್ನು ರದ್ದುಪಡಿಸಿದರು. ಈಗ ದಿವಾಣರು ಮಹಾರಾಣಿಯವರಿಗೆ ಸತ್ಯಾಗ್ರಹಿಗಳ ಹೇಳಿಕೆಯಂತೆ ಮಾರ್ಗಗಳನ್ನೆಲ್ಲ ಸಮಸ್ತ ಪ್ರಜೆಗಳಿಗೆ ಬಿಡುಗಡೆ ಮಾಡುವ ಜಾಹೀರನಾಮೆಯನ್ನು ಹೊರಡಿಸಹೇಳಿರುವರು. ದಿವಾಣರ ಶಿಫಾರಸಿನಂತೆ, ಜಾಹೀರನಾಮೆಯು ಶೀಘ್ರವೇ ಹೊರಟರೆ, ಅಹಿಂಸೆಯಿಂದ ಆಚರಿಸಿದ ಪ್ರಚಲಿತ ರಾಜಕಾರಣದೊಳಗಿನ ಸತ್ಯಾಗ್ರಹ ಶಸ್ತ್ರದ ಪ್ರತ್ಯಕ್ಷ ಪ್ರಭಾವವು ಪ್ರಜೆಗಳಿಗುಂಟಾಗುವದು. ಮಹಾರಾಣಿಯವರು ದಿವಾಣರ ಹೇಳಿಕೆಗೆ ತಲೆದೂಗುವರೆಂದು ನಾವು ಹಾರೈಸುವೆವು.

---

೨. ಸದ್ಯಕ್ಕೆ ಮುಂಬಯಿ ಹೈಕೋರ್ಟಿನಲ್ಲಿ ಧಾರವಾಡದ ಸುಂದರಾಬಾಯಿಯ ಭ್ರೂಣಹತ್ಯೆಯ ಪ್ರಕರಣದ ನಿರ್ಣಯವಾಯಿತು. ಸುಂದರಾಬಾಯಿಯ ಹಕೀಕತು ಶೋಚನೀಯವಿದೆ. ಈಕೆಯ ಪ್ರಾಯವು ಈಗ ೨೨ ವರುಷ. ಇವಳು ೧೭ ವರ್ಷ ಪ್ರಾಯದವಳಿದ್ದಾಗ ಪತಿಯು ನಿಧನಹೊಂದಿ, ಇವಳು ಅನಾಥಳಾಗಿ ತವರಮನೆಯಲ್ಲುಳಕೊಂಡಳು. ಮಾನವ ದೇಹದ ಸ್ವಾಭಾವಿಕ ವಾಸನೆಗಳನ್ನು ಸೈರಿಸಲಾರದೆ, ಅವಳು ದುರ್ವೃತ್ತಿಗೀಡಾಗಿ ಗರ್ಭವತಿಯಾದಳು. ತವರಮನೆಯವರು ಅವಳನ್ನು ಹೊರಪಡಿಸಿದರು. ನಿರುಪಾಯವಾಗಿ ಅವಳು ಸವಣೂರಿಗೆ ಹೋಗಿ ಅಲ್ಲಿ ಧರ್ಮಶಾಲೆಯಲ್ಲಿ ಪ್ರಸೂತಳಾಗಿ, ಪಾಪಕರ್ಮವನ್ನು ಬಚ್ಚಿಡಲು, ಹೊಟ್ಟೆಯ ಕರಳಿನ ಹತ್ಯೆ ಮಾಡಿದಳು. ಪೋಲೀಸರು ಅವಳ ಕೃತ್ಯವನ್ನು ಹೊರಗೆಳೆದು ತನಖಿ ನಡಿಸಿದರು. ಧಾರವಾಡದ ಸೆಶನ್ಸ ಜಜ್ಜರು, ಭ್ರೂಣಹತ್ಯೆಯು ಕ್ರೂರ ಕೊಲೆಯು ಮತ್ತು ಕಠೋರವೆಂದು ನಮ್ಮಲ್ಲಿಯ ನ್ಯಾಯದಂತೆ ಎಣಿಸುತ್ತಿದ್ದರೂ, ಇಟಾಲಿ, ಫ್ರಾನ್ಸ, ಜರ್ಮನಿಗಳಂಥ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಭ್ರೂಣಹತ್ಯೆಯ ಪರಿಸ್ಥಿತಿಯನ್ನು ಲಕ್ಷಿಸಿ ಈ ವಿಷಯ ಅನ್ಯ ವ್ಯವಸ್ಥೆ ಮಾಡಬೇಕೆಂದು ಹೈಕೋರ್ಟಿಗೆ ಸೆಶನ್ಸ ಜಜ್ಜರು ಬರೆಕೊಂಡರು. ನ್ಯಾಯಮೂರ್ತಿ ಮಿ|| ಮಿರ್ಝಾ ಹಾಗು ಮರ್ಕವಲರವರೂ ಸೆಶನ್ಸ ಜಜ್ಜರವರ ಅಭಿಪ್ರಾಯವನ್ನೇ ಎತ್ತಿಹಿಡಿದು ಸುಂದರಾಬಾಯಿಗೆ [illegible] ವರ್ಷದ ಶಿಕ್ಷೆ ವಿಧಿಸಿದರು. ಹಿಂದೂ ಸಮಾಜವು ಈ ಉದಾಹರಣೆಯಿಂದ ಬೋಧಗಲಿತು, ದುರ್ದೈವಿಗಳಾದ ವಿಧವೆಯರು ಅಧರ್ಮಕ್ಕೀಡಾಗದಂತೆ ತಕ್ಕ ಉಪಾಯಯೋಜನೆ ಮಾಡಬೇಕಾಗಿರುವದು. ಅಖಿಲ ಭಾರತೀಯ ಹಿಂದೂ ಮಹಾಸಭೆಯವರೂ ಈ ವಿಷಯ ವಿಚಾರ ಮಾಡಬೇಕಾಗಿ ನಮ್ಮ ಅಗ್ರಹದ ವಿನಂತಿಯಿದೆ.

---

೩. 'ವಿವಿಧ ಸಂಗ್ರಹ' ದಲ್ಲಿ ಕೊಟ್ಟ ಇನ್ನೊಂದು ಹಕೀಕತೂ ಶೋಚನೀಯವಿದೆ. ಹಿಂದೂ ಸಮಾಜದ ಬಂಗಾಲದಂಥ ಪ್ರಾಂತಗಳಲ್ಲಿ, ವರದಕ್ಷಿಣೆಯು ಅನರ್ಥದಿಂದ ವಧು ಪೀಡೆಗೊಳಗಾಗುತ್ತಿದ್ದರೆ, ಇನ್ನು ಕೆಲವೆಡೆಗಳಲ್ಲಿ ಕನ್ಯಾವಿಕ್ರಯದ ಅನರ್ಥವು ಸಂಭವಿಸುತ್ತದೆ. ವಡವಾನದೊಳಗಿನ ವಿಧವೆಯು ದುಡ್ಡಿನ ದುರಾಶೆ ಬಗೆದು ತಾಯಿಯು ನಡಿಸಿದ ಅಧರ್ಮವನ್ನು ಸಹಿಸಲಾರದೆ, ಚಿಮಣಿ ಎಣ್ಣೆಯನ್ನು ಹೊಯ್ದುಕೊಂಡು ದೇಹತ್ಯಾಗ ಮಾಡಿದ್ದು ಶೋಚನೀಯವಿದ್ದಷ್ಟು ತಾಯಿಯ ವಾತ್ಸಲ್ಯವನ್ನೂ ಪ್ರಕಟಿಸುತ್ತದೆ. ಧನಲೋಭ ಹಿಡಿದ ಬಳಿಕ ತಾಯಿಯ ಪ್ರೇಮವು ಸಹ ನಷ್ಟವಾಗುತ್ತದೆಂದು ಹೇಳಬೇಕೇನು? ವರದಕ್ಷಿಣೆಯ ಕಾಟಕ್ಕೆ ವರರು ಕಾರಣರು; ಆದರೆ ಕನ್ಯಾವಿಕ್ರಯದ ಹಾವಳಿಗೆ ಹೊಟ್ಟೆ ಕರುಳಿನ ತಾಯಿ-ತಂದೆಗಳೇ ಕಾರಣರಾಗುತ್ತಾರೆಂದು ತಿಳಿದು, ಮನಸ್ಸು ಬಹಳೇ ಬೇಸರಗೊಳ್ಳುತ್ತದೆ. ತಾಯಿಯು ಮಗಳ ಸುಖ ಬಯಸಿ ನಡಕೊಳ್ಳುವದು ಮಾನವ ಧರ್ಮವಿರುವಾಗ, ಧನಲೋಭದಿಂದ ಇಂಥ ಅಧರ್ಮ ಕೃತ್ಯಗಳು ನಡೆಯುವದು ಸಮಾಜಹಿತವಿಘಾತಕವು. ಹಿಂದೂ ಸಮಾಜದಲ್ಲಿ ಹಿರಿಯರು ಕ್ಷೇಮತನಕ್ಕಾಗಿ, ಸಭ್ಯತನಕ್ಕಾಗಿ ಹಾಕಿಕೊಟ್ಟ ನಿಯಮಗಳನ್ನು ಸನಾತನಿಗಳು ಧರ್ಮಬುದ್ಧಿಯಿಂದ ಪಾಲಿಸದೆ, ಸ್ವಾರ್ಥಪರಾಯಣರಾಗಿ ನಡಕೊಳ್ಳಹತ್ತಿದ್ದರಿಂದ, ಇಂಥ ಅನರ್ಥಗಳು ಸಂಭವಿಸಹತ್ತಿವೆ. ಸಮಾಜವು ಜಾಗೃತವಾಗಿ ತಪ್ಪಿದ ಕೀಲಿಯನ್ನು ತಿದ್ದುಪಡಿ ಮಾಡಲೆಂದು ನಾವು ಬಯಸುವೆವು.

---

೪. ಕಾಲು-ಮೊಸರಿಗೆ ಕಡಿಮೆಯಾದರೂ ಹತ್ತು ಮೊಸರಿಗೇನು ಕಡಿಮೆಯಿಲ್ಲವೆಂಬದೊಂದು ಗಾದೆ ಮಾತಿದೆ. ಬ್ರಿಟಿಶ ರಾಜ್ಯಧೋರಣದಲ್ಲಿ ಈ ಗಾದೆ ಮಾತು ಪುನಃ ಪುನಃ ಹೊಳೆಯುತ್ತಿರುತ್ತದೆ. ಬಂಗಾಲದ ಕಾರ್ಯಕಾರಿ ಮಂಡಳದ ಉಪಾಧ್ಯಕ್ಷರಾದ ಸರ್ ಅಬ್ದುಲ ರಹೀಮರವರಿಗೆ ಈ ವರೇಗಿನ ವಹಿವಾಟಿಯಂತೆ ಲಿಟನ ದೊರೆಗಳು ಸರ್ವಾಧಿಪತಿಗಳಾದ ಬಳಿಕ, ಬಂಗಾಲದ ಗವ್ಹರ್ನರ ಅಧಿಕಾರವು ಸಿಗಬೇಕಾಗಿತ್ತು; ಆದರೆ ಬ್ರಿಟಿಶ ಸರಕಾರವು ಅವರ ಅಧಿಕಾರವನ್ನು ಮುಣುಗಿಸಿ, ಆಸಾಮದ ಗವರ್ನರರನ್ನು ಕಲ್ಕತ್ತೆಗೆ ಸ್ಥಲಾಂತರಮಾಡಿ ಸರ್ ಅಬ್ದುಲ ರಹೀಮರವರಿಗೂ, ಪರ್ಯಾಯದಿಂದ ಅಖಿಲ ಭಾರತೀಯರಿಗೂ ಅಪಮಾನ ಮಾಡಿದ್ದರಷ್ಟೇ! ಸಾರ್ವಭೌಮರ ಜಯಂತಿ ಮಹೋತ್ಸವದ ಶುಭ ಮುಹೂರ್ತದಲ್ಲಿ ಅವರಿಗೆ ಕೆ.ಸಿ.ಎಸ್.ಆಯ್. ಎಂಬ ನಾಲ್ಕು ಅಕ್ಷರಗಳನ್ನು ಬೀಸಿ ಬ್ರಿಟಿಶ ಸರಕಾರವು ಸಂತೋಷಪಡಿಸಿಯದೆ. ಕೆ. ಸಿ. ಎಸ್. ಆಯ್. ಇದೊಂದು ದೊಡ್ಡ ಪದವಿಯು. ಪರೀಕ್ಷೆ ಪಾಸಾಗುವದು ಬೇಡ; ಅಭ್ಯಾಸ ಮಾಡುವದು ಬೇಡ; ಪುಣ್ಯವಂತ ಸಾರ್ವಭೌಮರ ಅಪೇಕ್ಷೆಯಂತೆ, ಈ ಅಕ್ಷರಗಳು ಬರುತ್ತವೆ. ನಿಜವಾದ ಅಧಿಕಾರ ಸಂಪಾದಿಸಲಿಕ್ಕೆ ಎಷ್ಟೊ ಅಕ್ಷರ ಸಿಕ್ಕಿದರೂ ಪ್ರಯೋಜನವಿಲ್ಲ. ಅಧಿಕಾರದಾನಕ್ಕೆ ಕೊರತೆಯಾದರೂ ಶಬ್ದ-ಅಕ್ಷರದಾನಗಳಿಗೆ ಎಂದೂ ಕೊರತೆಯಿಲ್ಲ. ಬ್ರಿಟಿಶ ರಾಜ್ಯಧೋರಣವಿದೆಂದು ಅನೇಕರು ಟೀಕಿಸಹತ್ತಿರುವರು! ಆದರೂ, ಸರ್ ಅಬ್ದುಲ್ ರಹೀಮರು ಸುಮ್ಮನೇಕೆ ? ಗವ್ಹರ್ನರ ಅಧಿಕಾರವು ಶ್ರೇಷ್ಠವೋ ? ಕೇ. ಸಿ. ಎಸ್. ಆಯ್. ಪದವಿಯು ಶ್ರೇಷ್ಠವೋ ? ಸರ್ ಅಬ್ದುಲ್ ರಹೀಮರವರೇ ಉತ್ತರಿಸಬೇಕು; ಕೃತಿಯಿಂದ ಉತ್ತರಿಸಬೇಕು.

ಸ್ಥಾನಿಕ ವೃತ್ತಾಂತ.

ಕುಮಟಾ— ಬಿಸಿಲು ಕಾಯುತ್ತದೆ. ಒಕ್ಕಲಿಗರು ಮೇಘರಾಜನ ಅನುಗ್ರಹಕ್ಕಾಗಿ ಗೋಳಿಡುತ್ತಿರುವರು. ಶುಕ್ರವಾರ-ಶನಿವಾರ ಅಲ್ಪ ಸ್ವಲ್ಪ ಮಳೆ ಸುರಿಯಿತು. ಈ ವಾರದಲ್ಲಿ 0 32 ಇಂಚು ಮಳೆ ಬಿತ್ತು.

ಕಾರವಾರ ಡಿಸ್ಟ್ರಿಕ್ಟ ಕೋರ್ಟಿನಲ್ಲಿ ಗೋಳಿ ಬಿಂನ ಪುರ್ಸ ಈತನ ಅಪೀಲು ದಾಖಲಾಗಿದೆ. ಅಪೀಲಾಂಟನನ್ನು ಜಾಮೀನಿನ ಮೇಲೆ ಬಿಡಲಿಕ್ಕೆ ಅರ್ಜಿಯಾಗಿತ್ತು. ಆದರೆ ಜಜ್ಜರು ಜಾಮೀನಿನ ಅರ್ಜಿಯನ್ನು ಕಿತ್ತೊಗೆದರು.

ಮೂರೂರ ಕಳುವಿನ ವಸ್ತ್ರಗಳು ಇನ್ನೂ ಪೋಲೀಸರಿಗೆ ಹತ್ತಿದ ಸುದ್ದಿ ಇಲ್ಲ.

ಪದ್ಮಾವತೀದೇವಿಯ ಭಜನೆಯ ಮೇಳಗಳು ಕೂಡಿದ ಸುದ್ದಿಗಳು ಹಬ್ಬಿವೆ. ಫೌಜದಾರರು ಕತ್ತರಿಯಲಿ. ಇಲ್ಲದಿದ್ದರೆ ಮುಂಬಯಿಯಲ್ಲಿ ನಡೆದಂತೆ ಪೋಲೀಸರೇ ಈ ಮೇಳಗಳನ್ನು ನಡಿಸುತ್ತಾರೇನು. ಲೋಕಾಪವಾದವಾಗುವದು.

ಇಲ್ಲಿಯ ರಾ॥ ಸುಬ್ರಾಯ ಪದ್ಮನಾಭ ದೀಕ್ಷಿತ ಹಾಗು ರಾಮಕೃಷ್ಣ ಮಂಜನಾಥ ಕುಲಕರ್ಣಿಯವರು ಬಿ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು.

ಸಾಭಾರ ಸ್ವೀಕಾರ.

ಕನ್ನಡ ಬಾಲಭಾಗವತ— (ಲೇಖಕ - ಕೆ. ರಾಮಸ್ವಾಮಯ್ಯಂಗಾರ್ಯ, ಆಸ್ಥಾನ ವಿದ್ವಾನ. ಪ್ರಕಾಶಕರು - ಕೆ. ಯಂ. ವಾಸ ಪ್ರಭು, ಪುಸ್ತಕ ವ್ಯಾಪಾರಿಗಳು, ಮಂಗಳೂರು. ಬೆಲೆ ೮ ಆಣೆ.) ಪರೀಕ್ಷಿತ, ಪ್ರಲ್ಹಾದ, ವರಾಹಾವತಾರ, ವಾಮನಾವತಾರ, ಮತ್ಸ್ಯಾವತಾರ, ಕೂರ್ಮಾವತಾರ, ಭರತ, ಅಜಾಮಿಳ, ಧ್ರುವ, ಗಜೇಂದ್ರ ಮೋಕ್ಷಣ, ಯಯಾತಿ, ರಂತಿ ದೇವ, ಶ್ರೀ ರಾಮ, ಪರಶುರಾಮ, ಅಂಬರೀಷ, ದಕ್ಷಬ್ರಹ್ಮ, ವೇನ, ಪೃಥು, ಚಂದ್ರವಂಶದ ಭರತ ಚಕ್ರವರ್ತಿ, ಕಪಿಲಾವತಾರ, ಚಿತ್ರಕೇತು,

ಋಷಭಾವತಾರ, ದತ್ತಾತ್ರೇಯ, ಶ್ರೀ ಕೃಷ್ಣ ಲೀಲೆ ಪ್ರಸ್ತಾವ, ಇವರ ಬೋಧಪ್ರದ, ಪುಣ್ಯಪ್ರದ ಕಥೆಗಳಿವೆ. ಕನ್ನಡ ಭಾಷೆಯು ಸುಲಭವಿದೆ. ಚಿಕ್ಕ ಬಾಲಕರು ಇವನ್ನು ಓದಿ ಲಾಭಪಡೆಯಬೇಕ

ಸಿದ್ದಾಪುರ— ದಿನಗಳ ಹೋಗ ಇಷ್ಟು ಇಲ್ಲಿ ಇನ್ನೂ ಬಿಗುವುತ್ತಲೇ ಇದೆ ೪-೬ ದಿವಸಗಳಿಂದ ಮಳೆಯೇ ಇಲ್ಲ ಬಿಸಿಲು ಚೆನ್ನಾಗಿ ಕಾಯುತ್ತಿದೆ

ಚಳಿ ಜ್ವರದ ಪ್ರಮಾಣವು ಹೆಚ್ಚಾಗುತ್ತ ನಡೆದದೆ. ಈ ಹ[illegible]ದಲ್ಲಿ ಆಗಿರುವ ಮರಣಗಳ ಸಂಖ್ಯೆಯು ಸುದೈವದಿಂದ ಹೆಚ್ಚುತ್ತಿಲ್ಲ. ಇಲ್ಲಿಯ ಮಾಮಲೇದಾರರ [illegible] ಹೆಸರಿನ ಅವರ ಮನೆಯಲ್ಲಿ ಅಗ್ಗ ದವಾಖಾನೆಯು ಶುರುವಾಗಿದೆ. ಜ್ವರದ ಗುಳಿಗೆಗಳು ೧೦೦ಕ್ಕೆ ೮ ಆಣೆಯಂತೆ ಸಿಗುತ್ತವೆ. ಚಿಕ್ಕಾಣಿ ಬೇರೆ [illegible] ಒಳಗೆ ಸ್ವಲ್ಪ ಖರ್ಚಿನಿಂದ [illegible] ಒಳಗೆ ಅಗ್ಗವಾಗಿ ಅಂದರೆ ೪ ಆಣೆ [illegible] ಮಾರುವ ವ್ಯವಸ್ಥೆ ಮಾಡಿದ್ದಾರೆ. ಲೋಕಲ್ ಬೋರ್ಡದವರ ಸರಕಾರಿ ಕ್ವಿನೀನ ಗುಳಿಗೆಗಳ ಬದಲು ಇವರ [illegible] ಗಳನ್ನೇ ಕೊಂಡ[illegible] ಜನರಿಗೆ ಉಪಯೋಗವಾಗುತ್ತಿತ್ತು. ಮಾಮಲೇದಾರ ಸಾಹೇಬರು ತಮ್ಮ [illegible] ದಾಂಶಕ್ಯವನದಿಂದ ಲೋಕಪ್ರಿಯರಾಗಿರುವರು. ವೈದ್ಯ ಕಾಲೇಜು [illegible] ಪತ್ರಿಕೆ [illegible] ಲೋಕಪ್ರಿಯ [illegible] ರೆಂಬುವಕ್ಕೆ ಸಂಶಯವಿಲ್ಲ

ಮತಭೇದವಾದರೂ, ದೇಶಬಂಧುಗಳು ರಾಷ್ಟ್ರೀಯ ಸಭೆಯನ್ನು ತೊರೆಗಲಿಲ್ಲ; ಸ್ವರಾಜ್ಯ ಪಕ್ಷವು ರಾಷ್ಟ್ರೀಯ ಸಭೆಗೆ ಎದಿರಾಗಬೇಕೆಂದು ಬಯಸಲಿಲ್ಲ. ಈ ಇಚ್ಛೆಯಿಂದ ಮಹಾತ್ಮರು ತಮ್ಮೊಳಗೆ ಬಂದು ಸೇರಿದೊಡನೆ ಜುಹುದಲ್ಲಿಯೂ, ಕಲಕತ್ತೆಯಲ್ಲಿಯೂ ಮಾತುಕತೆ ನಡಿಸಿ, ಕೌನ್ಸಿಲಿನೊಳಗಿನ ರಾಜಕಾರಣಗಳನ್ನೆಲ್ಲ ಸ್ವರಾಜ್ಯ ಪಕ್ಷವು ವಹಿಸಿಕೊಂಡು, ಬೆಳಗಾಂವಿಯ ರಾಷ್ಟ್ರೀಯ ಸಭೆಯಲ್ಲಿ ರಾಷ್ಟ್ರೀಯ ಸಭೆಯ ಅಂಗವಾಯಿತು.

ಬಂಗಾಲದೊಳಗಿನ ಕಾರ್ಯ.

ದೇಶಬಂಧುಗಳು ಅಖಿಲ ಭಾರತೀಯ ಲೋಕನಾಯಕರಿದ್ದರೂ, ಬಂಗಾಲ ಪ್ರಾಂತದ ಸರ್ವಾಧಿಕಾರಿಗಳೆಂದು ಅವರಿಗೆ ಸಾರ್ಥಕವಾಗಿ ಹೇಳಬಹುದು. ಬಂಗಾಲ ಪ್ರಾಂತದಲ್ಲಿ ರಾಷ್ಟ್ರಕಾರ್ಯಕ್ಕಾಗಿ ಅವರು ತನು-ಮನ-ಧನಗಳಿಂದ ದುಡಿದಿರುವರು. ಕೌನ್ಸಿಲು ಕಾರ್ಯಕ್ಕೆ ಬೆಂಬಲ ದೊರಕಿಸಿಕೊಳ್ಳಲು, ದೇಶಬಂಧುಗಳು ಗ್ರಾಮಸಂಘಟನೆಯನ್ನು ಕಲ್ಪಿಸಿ, ಇದೇ ಬಂಗಾಲ ಪ್ರಾಂತದಲ್ಲಿ ಪ್ರಯೋಗವನ್ನು ಕೈಕೊಂಡರು. ಈ ಪ್ರಯಾಸದಿಂದ ದೇಶಬಂಧುಗಳಿಗೆ ಬಹಳೇ ಕಷ್ಟಗಳು ಸಂಭವಿಸಿದವು. ಗ್ರಾಮಸಂಘಟನೆಕ್ಕಾಗಿಯೇ ತಮ್ಮ ವಿಚಾರವನ್ನು ಪ್ರಜೆಗಳಿಗೆ ತಿಳಿಸಲು ಅವರು "ಫಾರವರ್ಡ" ಎಂಬ ಪತ್ರಿಕೆಯನ್ನು ನಿತ್ಯವೂ ಹೊರಡಿಸಹತ್ತಿದರು. ಕಾಯಿದೆ ಕೌನ್ಸಿಲಿನಲ್ಲಿ ಆಳರಸರಿಗೆ ಹೆಜ್ಜೆ ಹೆಜ್ಜೆಗೆ ಅಡಿಯಾಗಿ ಸಾಕು ಬೇಕು ಮಾಡಿದರು. ಬಂಗಾಲದ ಅಧಿಪತಿಗಳಾದ ಲಿಟನ್ ದೊರೆಗಳು ಮಂತ್ರಿಗಳ [illegible] ಮಂಜೂರ ಮಾಡಿಕೊಳ್ಳಲು ಬಹು ಪರಿಯಿಂದ ಒದ್ದಾಡಿದರೂ, ದೇಶಬಂಧುಗಳು ಅವರಿಗೆ ಅಡಿಯಾಗಿ ಸಂಬಳವನ್ನು ಕಿತ್ತೊಗೆದು ದಿವಾನರಿಗೆ ನೇಮಿಸಗೊಡಲಿಲ್ಲ. ತಾವು ಕೌನ್ಸಿಲಿನ ಅಧಿಪತಿಗಳೆಂದು ಕೃತಿಯಿಂದ ತೋರಿಸಿದರು. ಕಟ್ಟಕಡೆಗೆ, ಆಳರಸರು ಸೋತುಹೋಗಿ, ದೇಶಬಂಧುಗಳು ನಿಧನ ಹೊಂದುವ ೧-೨ ದಿನಗಳ ಮುಂಚೆ ಬಂಗಾಲದೊಳಗಿನ ಮೊಂಟೆಗ್ಯೂ ಸ್ವರಾಜ್ಯವು ಅಂತ್ಯವಾಯಿತೆಂದು ಡಂಗುರ ಸಾರಿದರು.

ದೇಶಬಂಧುಗಳ ಔದಾರ್ಯ.

ದೇಶಬಂಧುಗಳು ಮೊದಲಿನಿಂದ ಔದಾರ್ಯವಂತ ಪುರುಷರು. ವಿದ್ಯಾರ್ಥಿಗಳಿಗೆ ಅವರು ಪ್ರಾಮುಖ್ಯವಾಗಿ ಸಹಾಯ ಮಾಡುತ್ತಿದ್ದರು. ಸುಮಾರು ೫೦೦ ಮಂದಿ ವಿದ್ಯಾರ್ಥಿಗಳು ಅವರ ಕಡೆಯಿಂದ, ಅವರು ವಕೀಲಿ ನಡಿಸುತ್ತಿರುವ ಸಮಯದಲ್ಲಿ, ಸಹಾಯ ಪಡೆಯುತ್ತಿದ್ದರಂತೆ. ಮಹಾತ್ಮರು ದೇಶಬಂಧುಗಳಿಗೆ ವಕೀಲಿ ಬಿಡಹೇಳಲು, ತನ್ನ ಸಹಾಯದಿಂದ ಕಲಿಯುವ ವಿದ್ಯಾರ್ಥಿಗಳ ಗತಿ ಏನೆಂದು ಚಿತ್ತರಂಜನರು ಪ್ರಶ್ನಿಸಿದ್ದರಂತೆ. ಇತ್ತಿತ್ತ ದೇಶಬಂಧುಗಳು ಮಹಾತ್ಯಾಗಿಗಳಾಗಿದ್ದರು. ಕೆಲವು ಆಸ್ತಿಯನ್ನು ಮಾತ್ರ ಇಟ್ಟುಕೊಂಡು, ರಸಾ ರೋಡಿನ ಮೇಲಿನ ದೊಡ್ಡ ಮನೆಯನ್ನು ಸಹ, ಅವರು ರಾಷ್ಟ್ರಕಾರ್ಯಕ್ಕೆ ಅರ್ಪಿಸಿ, ತಪೋನಿಧಿಗಳಾಗಿದ್ದರು. ಪ್ರಾಪಂಚಿಕ ಆಸಕ್ತಿಯು ಈಗ ಅವರಲ್ಲಿ ಕಂಡು ಬರುತ್ತಿದ್ದಿಲ್ಲ. ದೇಹಕ್ಕೆ ಎಷ್ಟು ಕಷ್ಟವೊದಗಿದರೂ, ಸುಖೋಪಭೋಗಗಳಿಗಾಗಿ ಅವರಿಗೆಂದೂ ಆಸಕ್ತಿಯುಂಟಾಗುತ್ತಿದ್ದಿಲ್ಲ. ದೇಶಕ್ಕಾಗಿ ಹಗಲಿರುಳು ತನು-ಮನ-ಧನಗಳಿಂದ ಅವರು ದುಡಿಯುತ್ತಿದ್ದರು.

ಮುಂದಿನ ಯೋಜನೆ.

ದೇಶಬಂಧುಗಳು ಸಕಲ ಪಕ್ಷಗಳ ಐಕ್ಯಕ್ಕಾಗಿ ಯೋಚಿಸಹತ್ತಿದ್ದರು. ಫರೀದಪುರದಲ್ಲಿ ಪ್ರಾಂತಿಕ ಪರಿಷತ್ತಿನ ಅಧ್ಯಕ್ಷಸ್ಥಾನದಿಂದ ಅವರು ಮಾಡಿದ ಭಾಷಣವು, ಸರ್ ಸುರೇಂದ್ರನಾಥ ಬಾನರ್ಜಿಯವರಂಥ ಕಡು ನೇಮಸ್ತರಿಗೆ ಮಾನ್ಯವಾಗತ್ತೆಂದು ಹೇಳಿದ ಬಳಿಕ, ದೇಶಬಂಧುಗಳ ರಾಷ್ಟ್ರಹಿತೈಕ್ಯ ಬುದ್ಧಿಯು, ಎಷ್ಟು ನಿರ್ಮಲವಿತ್ತೆಂದು ತಿಳಿಯುವದಾಗಿದೆ. ದಾರ್ಜಿಲಿಂಗದಲ್ಲಿ ಐದು ದಿವಸಗಳ ವರೆಗೆ ಮಹಾತ್ಮರಿಗೂ ದೇಶಬಂಧುಗಳಿಗೂ ಮಾತುಕತೆ ನಡೆದು, ಮುಂದಿನ ಕಾರ್ಯಕ್ರಮವು ರೇಖಾಂಕಿತವಾಗಿತ್ತು; ಸರ್ವ ಪಕ್ಷಗಳ ಐಕ್ಯಯೋಜನೆಯು ಕಲ್ಪನೆಯಾಗಿತ್ತು. ಆದರೆ, ಭಾರತೀಯರ ದುರ್ದೈವದಿಂದ ದೇಶಬಂಧುಗಳು, ಕಲ್ಪಿಸಿದ ಕಾರ್ಯವನ್ನೆಲ್ಲ ಕಲ್ಪನೆಯಲ್ಲಿಯೇ ಇಟ್ಟುಕೊಂಡು ದೇಹಾವಸಾನ ಹೊಂದಿದರು. ಈಶೇಚ್ಛೆ!

* * *

ದೇಶಬಂಧುಗಳೇ, ತಮ್ಮ ಅವತಾರಕಾರ್ಯ ಸಮಾಪ್ತಿಯಾಯಿತೇ?

ಕಾನಡಾವೃತ್ತ.

ಮಿತಿ ಜ್ಯೇಷ್ಠ [illegible]

ವಿರಹವಿಲಾಪ.

ನಮ್ಮ ದೇಶಬಂಧುಗಳೆಲ್ಲಿ ಹೋದರು. ಡಾರ್ಜಿಲಿಂಗದಲ್ಲಿ ವಿಶ್ರಾಂತಿಗೋಸ್ಕರವಾಗಿ ಹೋಗಿ [illegible] ಕುಳಿತ ದೇಶಬಂಧುಗಳು ಸ್ವರ್ಗವಾಸವಾದ [illegible] ಕಾಲಕ್ಕೆ ಎಲ್ಲ [illegible] ದೇಶಬಂಧುಗಳೇ ಯಾವಕಡೆಗೆ ಹೋದಿರಿ? ದೇಶಬಂಧುಗಳೇ, ನೀವು ದೇಶವನ್ನು ಬಿಟ್ಟು ಎಲ್ಲಿ ಹೋದಿರಿ? ದೇಶಕ್ಕಾಗಿ ನೀವೆಷ್ಟು ಸಾಹಸ ಮಾಡಿದಿರಿ! ಕಷ್ಟ ಪಟ್ಟಿರಿ; ದೇಶವು ಕಷ್ಟ ಸ್ಥಿತಿಯಲ್ಲಿದೆ: ಈಗ ನೀವು ಸ್ವತಃ ಸ್ವರ್ಗವಾಸಿಗಳಾಗಿರುವಿರಿ. ದೇಶಬಂಧುಗಳೇ, ನೀವು ದೇಶಕ್ಕಾಗಿ ಮಹಾತ್ಮರ ಅಸಹಯೋಗವನ್ನಾಶ್ರಯಿಸಿ ಬ್ಯಾರಿಸ್ಟರಿಯನ್ನು [illegible] ಬಿಟ್ಟಿರಿ; ನಿಮ್ಮ ಬ್ಯಾರಿಸ್ಟರಿಯ ಉತ್ಪನ್ನವು ಸಾಮಾನ್ಯವೇ? ದಿನದೊಳಗಾಗಿ ಸಾವಿರಾರು ರೂಪಾಯಿ ನಿಮ್ಮ ಜೇಬಿನಲ್ಲಿ ಸೇರುತ್ತಿತ್ತು. ನಮ್ಮ ದೇಶಸೇವಕರಾದ ಪ್ರಖ್ಯಾತ ಅರವಿಂದ ಘೋಷರವರ ಮೇಲೆ ರಾಜದ್ರೋಹದ ಆಪತ್ತು ಬಂದಾಗ, ಅನೇಕ ತಿಂಗಳುಗಳ ವರೆಗೆ ಶ್ರಮಪಟ್ಟು ನೀವೇ ಕಾಪಾಡಿದ ಉಪಕಾರಿ ಪುಣ್ಯಾತ್ಮರು ನೀವು. ನಿಮ್ಮ ಔದಾರ್ಯವು ಎಷ್ಟೆಂದು ಹೇಳುವದು? ಔದಾರ್ಯವು ಎಷ್ಟೆಂದು ಹೊಗಳುವದು? ಬಹಳ ಧನವನ್ನು [illegible] ದಾನಶೂರ ಪುತ್ರರು ನೀವು. ಧನದ ದಾನದ [illegible] ದೇಶಾಭಿಮಾನಿಗಳು; [illegible] ದಿವಾಳಿ ತೆಗೆದರು ಈ ಸಾಲ ತೀರಿಸುವ ಜವಾಬದಾರಿಯು ನಿಮ್ಮದಿದ್ದಿಲ್ಲ; ಆದರೂ ನೀವು ಸಾಲಗಾರರನ್ನು ಕರೆಸಿ, ಒಂದು ಕಾಸು ಸಹ ಬಿಟ್ಟುಕೊಡದೆ ಎಲ್ಲರ ಋಣವನ್ನು ಸಂಪೂರ್ಣವಾಗಿ ತೀರಿಸಿ, ತೀರ್ಥರೂಪರವರ ಮೇಲೆ ಬಂದ ಕಳಂಕವನ್ನು ಅಳಿಸಿದಿರಿ. ಲಕ್ಷಾವಧಿ ರೂಪಾಯಿ ನೀವು ಗಳಿಸಿದರೂ ನೀವೇನು ಸ್ವಾರ್ಥಕ್ಕೋಸ್ಕರವಾಗಿ [illegible] ಇಟ್ಟಿಲ್ಲ.—ಮಕ್ಕಳಿಗಾಗಿ ಸ್ವಲ್ಪ ಆಸ್ತಿಯನ್ನು ಕೂಡಿಡಲಿಲ್ಲ. ದೇಶಬಾಂಧವರೇ ನಿಮ್ಮ ಸ್ವಂತ [illegible] ವಿದ್ಯಾರ್ಥಿಗಳಿಗೆ [illegible] ಲಕ್ಷಾವಧಿ ರೂಪಾಯಿಗಳನ್ನಿತ್ತು ಉಪಕರಿಸಿದಿರಿ. ಅನೇಕರು ಈ ಉಪಕಾರವನ್ನು ಎಂದಾದರೂ ಮರೆಯುವರೇ? ದೇಶಪ್ರೇಮಿಗಳು ನೀವು. ದೇಶಬಂಧುಗಳು ನೀವು; ದೇಶಕ್ಕಾಗಿ ಹಗಲಿರುಳು ದರಿದ್ರನಾಗಿ [illegible] ಸ್ವರಾಜ್ಯ ಪ್ರಾಪ್ತಿಯಾಗುವರೆಗೆ ನೀವು ಟೊಂಕಕಟ್ಟಿದ್ದಿರಿ. ಮಹಾತ್ಮರಂಥ ಸಾಧು ಪುರುಷರೂ, ಪಂಡಿತ ಮೋತೀಲಾಲರವರಂಥ ತ್ಯಾಗಿಗಳೂ ನಿಮ್ಮ ಸಹಕಾರಿಗಳು. ನಿಮ್ಮ ಪರಮ ಪ್ರಿಯ ಭಾರತ ಮಾತೆಯು ಇನ್ನೂ ಪಾರತಂತ್ರ್ಯಶೃಂಖಲೆಯಲ್ಲಿ ಬಳಲುತ್ತಿರುವಳು. ಪ್ರಜೆಗಳು ನೋಯುತ್ತಿರುವರು. ಇಂಥ ಸಮಯದಲ್ಲಿ ನೀವೆಲ್ಲಿಗೆ ಗಮಿಸಿದಿರಿ? ಪಂಡಿತ ಮೋತಿಲಾಲರವರು ಸ್ವರಾಜ್ಯ ಪಕ್ಷದ ಕಾರ್ಯಕ್ಕಾಗಿ ನಿಮಗೆ ಕರೆಯುತ್ತಿರುವರು ನೀವೆಲ್ಲಿರುವಿರಿ? ಮಹಾತ್ಮರು ಅಖಿಲ ಭಾರತೀಯ ರಾಷ್ಟ್ರೀಯ ಕಾರ್ಯಕಾರಿ ಸಭೆಗಾಗಿ ಪ್ರಕಟಣೆ ಹೊರಡಿಸಿರುವರು. ಈ ಸಭೆಯಲ್ಲಿ ನೀವೆಲ್ಲಿ ಹೋಗಿರುವಿರಿ?

ದೇಶಬಂಧುಗಳೇ, ನಮ್ಮ ಮೇಲೆ ರೇಗಿದ್ದೀರೇನು? ನಾವೇನು ಮಾಡಿದೆವು? ನಿಮ್ಮೊಡನೆ ನಿಮ್ಮ ಹೇಳಿಕೆ ಮೇರೆ ದೇಶಕಾರ್ಯದಲ್ಲಿ [illegible] ನಮ್ಮನ್ನಗಲಿದಿರಲ್ಲ [illegible] ನಾವು [illegible] ನಡೆಕೊಳ್ಳಲಿಕ್ಕೆ [illegible] ಇದೆ. [illegible] ನಿರ್ಮಿಸಬೇಕೆಂದು ನೀವು [illegible] ನಾವು ಶಿರಸಾ ವಹಿಸಿ ನಡೆಯಲಿಲ್ಲವೇ! ನಮಗಾಗಿ ನೀವು ಆ ಸಮಯ [illegible] ನಾವು ನಿಮ್ಮ ಹೇಳಿಕೆಯನ್ನು ನೆರವೇರಿಸಿದೆವು. ಅಸಹಯೋಗದ ಸಮಯ ವಿದ್ಯಾರ್ಥಿಗಳೇ ಸರಕಾರಿ ಶಾಲೆಗಳನ್ನು ತೊರೆಯಬೇಕೆಂದು ಆಜ್ಞಾಪತ್ರ ಹೊರಡಿಸಿದೊಡನೆ ವಿದ್ಯಾರ್ಥಿಗಳೆಲ್ಲರೂ ಶಾಲಾ ಮಂದಿರಗಳನ್ನು ಕಟ್ಟಕಡೆ ಧಿಕ್ಕರಿಸಿ, ಹೊರಬರಲಿಲ್ಲವೇನು? ಇದನ್ನು ನೋಡಿ, ಸರ್ ಆಶುತೋಷ ಮುಕರ್ಜಿಯವರು ಹೆದರಿದರು. ದೇಶಬಂಧುಗಳೇ ನಿಮಗೆ ನಾವು ನಮ್ಮ ಹೃದಯದಲ್ಲಿದ್ದ ಅತ್ಯಂತ ಶ್ರೇಷ್ಠ ಪದವನ್ನು ಅರ್ಪಿಸಿರುವೆವು ಎರಡಾವರ್ತಿ ಅರ್ಪಿಸಿರುವೆವು.

ಅಹಮದಾಬಾದದ ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನವನ್ನು ನಾವು ನಿಮಗೆ ಅರ್ಪಿಸಿದ್ದೆವು. ಸರಕಾರದ ಬೊಂಬೆಯ ಮೂಲಕ, ಅದು ನಿಮಗೆ ಪ್ರಾಪ್ತವಾಗಲಿಲ್ಲ. ನಾವು ಹಿಂಜರಿದೆವೇನು? ಮರುವರ್ಷವೇ ಗಯಾ ರಾಷ್ಟ್ರೀಯ ಸಭೆಯಲ್ಲಿ ಸರ್ವಾಧಿಕಾರವನ್ನು ನಾವು ನಿಮಗರ್ಪಿಸಿ, ಪೂಜಿಸಲಿಲ್ಲವೇನು? ಕಲಕತ್ತೆಯವರಿಗೆ ಮ್ಯುನಿಸಿಪಾಲಿಟಿಯ ಅಧಿಕಾರ ದೊರೆತ ಕೂಡಲೆ, ಇಡೀ ಮ್ಯುನಿಸಿಪಾಲಿಟಿಯನ್ನೇ ಅವರು ನಿಮಗೆ ವಹಿಸಲಿಲ್ಲವೇನು? ವರಿಷ್ಠ ಕಾಯದೆ ಕೌನ್ಸಿಲಿನಲ್ಲಿ ನಮ್ಮ ಪಂಡಿತ ಮೋತೀಲಾಲರವರ ಜೊತೆಗೆ ಅಧಿಕಾರಿಗಳೊಡನೆ ಜಗಳಾಡಲು ನಿಮಗೆ ನಾವು ಕಳಿಸಲು ತಯಾರಿದ್ದೆವು. ನೀವೇ ಒಪ್ಪಲಿಲ್ಲ. ನಿಮ್ಮ ಬಂಗಾಲದ ಕಾಯದೆ ಕೌನ್ಸಿಲಿನಲ್ಲಿಯೇ ಸಭಾಸದರಾಗಬೇಕೆಂದು ಹಟ ಹಿಡಿದಿರಿ. ನಾವು ನಿಮ್ಮ ಇಚ್ಛೆಯಂತೆ, ನಿಮ್ಮನ್ನು ಕಳುಹಿಸಿದೆವು. ಅಲ್ಲಿ ಯಾವರೂ ನಿಮ್ಮನ್ನೇ ಹಿಂಬಾಲಿಸಿ, ದಿವಾಣರ ಸಂಬಳವನ್ನು [illegible] ಅಧಿಕಾರಿಗಳಿಗೆ [illegible] ನಿಮಗೆ ಸಂಕೋಚಪಡಿಸಲಿಲ್ಲವೇನು? [illegible] ಮೂಲಕ ತಮಗೆ ನಾವು ಉಪದ್ರವ ಕೊಡಬೇಕಾಯಿತು, ಅಧಿಕಾರಿವರ್ಗದವರೂ ಕೌನ್ಸಿಲು ಮಂದಿರದಲ್ಲಿ ನಿಮ್ಮನ್ನು ನಾವು ಹೊತ್ತು ತಂದು, ನಿಮ್ಮ ಸನ್ನಿಧಿಯಲ್ಲಿ, ನಿಮ್ಮ ಪ್ರೇರಣೆಯಿಂದ ನಾವು ರಾಷ್ಟ್ರಕಾರ್ಯವನ್ನು ನೆರವೇರಿಸಿದೆವಲ್ಲವೇ? ಅಂಥ ಪ್ರೇರಕ ಶಕ್ತಿಯು ಈಗ ಎಲ್ಲಿ ಅಡಗಿತು? ಇನ್ನೆಲ್ಲಿ ದೊರಕೀತು?

ದೇಶಬಂಧುಗಳೇ, ಬಂಗಾಲದ ಪ್ರವಾಸದಿಂದ ನಿಮಗೆ ಕಷ್ಟವಾಯಿತೇ? ಹಳ್ಳಿ-ಹಳ್ಳಿ ಗ್ರಾಮ-ಗ್ರಾಮಗಳಲ್ಲಿ ಹಗಲಿರುಳು ಅಡ್ಡಾಡಿ ಪ್ರಜೆಗಳನ್ನು ರಾಷ್ಟ್ರಕಾರ್ಯಕ್ಕಾಗಿ ಸಂಘಟಿಸುವ ಯತ್ನದಿಂದ ದಣುವಾಯಿತೇ? ದಣುವಾರಿಸಿಕೊಳ್ಳಲಿಕ್ಕಾಗಿ ಅಂತರ್ಧಾನ ಹೊಂದಿದಿರೇನು? ಅಥವಾ ಸ್ವರಾಜ್ಯ ಪಕ್ಷದ ನಾಯಕರು ನೀವು; ಕೌನ್ಸಿಲುಗಳನ್ನು ಮುರಿದ, ಅಧಿಕಾರಿಗಳು ಪ್ರಜಾವಂಚನ ಮಾಡಲು ಪ್ರಾರಂಭಿಸಿದ ಅತ್ತ ಪರದೆಯನ್ನು ಹರಿದುಹಾಕಲು ಟೊಂಕಕಟ್ಟಿದವರು ನೀವು. ಅಧಿಕಾರಿಗಳು ಬಂಗಾಲದ ರಾಜಕೀಯ [illegible] ನಿಮ್ಮ ಸಾಹಸದಿಂದ ನಿಮ್ಮ ಚೈತನ್ಯಶಕ್ತಿಯಿಂದ ನಿಮ್ಮ ಪ್ರೇರಣೆಯಿಂದ ಬಂಗಾಲದ ಪ್ರಜೆಗಳು ಅಂತರಂಗದ ಸರ್ವಾಧಿಕಾರಿಗಳು ನೀವೆಂದು ತೋರಿ [illegible] ಸ್ವರಾಜ್ಯದ ಅತ್ತ ಪರದೆಯನ್ನು ಚೂರುಚೂರಾಗಿ ಹರಿದು, ಕೊನೇತನಕ ಅಧಿಕಾರಿಗೆ ರಂಗಸ್ಥಳದ ಮೇಲೆ ಕುಣಿಯಗೊಡಲಿಲ್ಲ. ನಿರುಪಾಯರಾಗಿ ಅಧಿಕಾರಿಗಳು ಕೊನೆಗೊಮ್ಮೆ ಸ್ವರಾಜ್ಯದ ವೇಷವನ್ನು ಕಳಚಿಬಿಸಿದರು. ನಿಮ್ಮ ಸ್ವರಾಜ್ಯ ಪಕ್ಷದ ವಿಜಯವಾಯಿತು. ನೀವು ವಿಜಯಶ್ರೀವಿಭೂಷಿತರಾದಿರಿ. ಮುಂದಿನ ರಾಷ್ಟ್ರೋದ್ಧಾರದ ಮಾರ್ಗವನ್ನು ಕಲ್ಪಿಸಿ ನಮಗೆ ತೋರಿಸುವಿರಿ; ನಿಮ್ಮೊಡನೆ ಹಿಂಬಾಲಿಸುವ ಚೈತನ್ಯವನ್ನೂ, ಪ್ರೇರಣೆಯನ್ನೂ ನಮ್ಮಲ್ಲಿ ಉಂಟುಮಾಡುವಿರಿ; ನಿಮ್ಮ ಸಂದೇಶವೇನು? ಅಧಿಕಾರಿಗೆ ನಿಮ್ಮ ಉತ್ತರವೇನು? ದಾರ್ಜಿಲಿಂಗದ ಕಡೆಗೆ ನೋಡಿ [illegible] ನಾವು ನಿರೀಕ್ಷಿಸುತ್ತಿದ್ದೇವೆ! ಅಹಹಾ! ದಾರ್ಜಿಲಿಂಗದಲ್ಲಿ ನೀವು ಅಂತರ್ಧಾನ ಹೊಂದಿದ ಸುದ್ದಿ ಬಂತು. ಏನು ವಿಧಿಘಟನೆ! ಏನು ನಮ್ಮ ದೈವದ ವಿಲಾಸ! ನಮಗೆ ಇನ್ನ್ಯಾರು ಗತಿ! ಸ್ವರಾಜ್ಯ ಪಕ್ಷದ ಧ್ಯೇಯವು ಬಂಗಾಲದಲ್ಲಿ ನೆರವೇರಿತೆಂದು ನೆರವಿನ ೫ ದಿವಸಗಳಲ್ಲಿ ತಾವು ಅವತಾರ ಮುಗಿಸಿದಿರೇನು? ಇದೇ ನಿಮ್ಮ ಅವತಾರ ಕಾರ್ಯವೇ? ಸ್ವರಾಜ್ಯಪ್ರಾಪ್ತಿ ಮಾಡಿಕೊಡುವದು ನಿಮ್ಮ ಕರ್ತವ್ಯವಿದ್ದಿಲ್ಲವೇ? ಸ್ವರಾಜ್ಯ ಕಾರ್ಯಕ್ಕಾಗಿ ನೀವು ಸರ್ವಸ್ವವನ್ನು ಅರ್ಪಿಸಿದಿರಿ! ಅರಮನೆಯಂಥ ರುಸಾ ರೋಡಿನ ಮನೆಯಲ್ಲಿನ ಐಹಿಕ ಸುಖೋಪಭೋಗಗಳಿಂದ ತುಂಬಿ ತುಳುಕುತ್ತಿರುವ ಗೃಹವನ್ನೂ ಧಿಕ್ಕರಿಸಿ ಸನ್ಯಾಸಿಗಳಾದಿರಿ. ಪ್ರಖ್ಯಾತ ಬ್ಯಾರಿಸ್ಟರರು ತಾವು; ಸೂಕ್ಷ್ಮ ದೇಹದವರು ತಾವು ಈ ತ್ಯಾಗದಿಂದ ತಮಗೆ ಶಾರೀರಿಕ ಸುಖವಿಲ್ಲದಾಯಿತು. ನೆಲದ ಮೇಲೆ ಕೂಡ್ರುವದೂ ಬಹು ಕಷ್ಟವೇ; ಏಳುವದೂ ಕಷ್ಟವೇ; ಇಷ್ಟು ಅಶಕ್ತಿಯ ಸಮಯದಲ್ಲಿಯೂ ತಾವು ದೇಶಕಾರ್ಯಕ್ಕಾಗಿ, ದೇಶದ ಬಂಧವಿಮೋಚನಕ್ಕಾಗಿ ಸನ್ಯಾಸಿಗಳಾದಿರಿ. ಅಂಥವರನ್ನು ನಾವು ಎಲ್ಲಿ ಹುಡುಕುವದು? ದೇಶಬಂಧುಗಳೇ, ನಮ್ಮ ಚೈತನ್ಯಶಕ್ತಿಯು ಥಟ್ಟನೆ ಮಾಯವಾಯಿತು! ರಾಷ್ಟ್ರಕಾರ್ಯಕ್ಕಾಗಿ ನಮಗೆ ಇನ್ನು ಚೈತನ್ಯವನ್ನೀಯುವ ಪುಣ್ಯಪುರುಷನು ಯಾರಿಹನು? ಯಾರಮೇಲೆ ನಿಮ್ಮ ಕಾರ್ಯವನ್ನು ವಹಿಸಿ, ನೀವು ಅಂತರ್ಧಾನ ಹೊಂದಿದಿರಿ?

ದೀನಬಂಧುವೇ, ದೇಶಬಂಧುವೆಲ್ಲಿಹನು? ಅನಾಥನಾಥನಾದ, ಚರಾಚರ ಸೃಷ್ಟಿಯ ಒಡೆಯನಾದ ಪರಮಾತ್ಮನೇ, ನಮ್ಮ ಸ್ಥಿತಿ ನೋಡು; ದೇಶದ ನಡೆದ ಪಕ್ಷಭೇದಗಳ, ಮತ ಮತಾಂತರಗಳ ಗಬಿಲಿ ನೋಡು; ಅಧಿಕಾರಿಗಳ ಔದ್ಧತ್ಯವನ್ನು ನಿ-

ಅಥವಾ ಪುನರ್ಜನ್ಮ ಬಯಸಿ, ಅಂತರ್ಧಾನ ಹೊಂದಿದಿರಿ?

ಸು ; ಮಹಾತ್ಮರ ಪರಿಶ್ರಮವನ್ನು ಲಕ್ಷಿಸು ; ಂಡಿತ ಮೋತೀಲಾಲರ ಮನಸ್ಥಿತಿಯನ್ನೀಕ್ಷಿಸು ; ತ್ತು ದೇಶಬಂಧುಗಳ ಪರಲೋಕಗಮನದಿಂದ ಂಟಾದ ಹಾನಿಯನ್ನು ಎಷ್ಟೆಂದು ಕಲ್ಪಿಸು. ನಿನ್ನ ಷ್ಟಿಯಿಂದಲೇ ಈ ಸಂಕಟವು ನಮ್ಮ ಮೇಲೆ ಬಂದೊ ಗಿದಲ್ಲವೇ ! ನಾವೇನು ಪಾಪ ಮಾಡಿದ್ದೆವು ? ಅಥ ದೇಶಬಂಧುಗಳ ಶರೀರವು, ವಿಷಯಸುಖವನ್ನನು ಭವಿಸುವ ಪ್ರಾಪಂಚಿಕ ದೇಹವು ಕಷ್ಟಮಯವಾದ ಷ್ಟ್ರಕಾರ್ಯಕ್ಕೆ ಸಲ್ಲದೆಂದು ಗ್ರಹಿಸಿ, ನವದೇಹದ ನವಕಾರ್ಯಕ್ಕಾಗಿ ದೇಶಬಂಧುಗಳಿಗೆ ಕರುಣಿ ಮಹಾನುಭಾವರನ್ನು ನಿನ್ನಡಿಗೆ ಬರಮಾಡಿ ಂಡಿಯೇನು ? ದೇಶಬಂಧುಗಳೇ ಆಗಿಂದಾಗ ಹೇಳುತ್ತಿದ್ದರು:— "ದೇಶಕಾರ್ಯ ಮಾಡುವಾಗ ತ್ಯಾಗವಾದಲ್ಲಿ, ದೇಶಕಾರ್ಯಕ್ಕಾಗಿ ಇದೇ ಶದಲ್ಲಿ ಪುನಃ ಪುನಃ ನಾನು ಜನ್ಮವನ್ನೆತ್ತುವೆನು." ರ್ಜನ್ಮವನ್ನೆತ್ತಲು ದೇಶಬಂಧುಗಳು ಬಯಸಿದರೇ ? ಆ ಬಯಕೆಯು, ಸರ್ವಜ್ಞನೇ, ನಿನಗೆ ತಿಳಿಯಿ ? ಪರಮಾತ್ಮನೇ, ವಿರಹವೇದನೆಯು ಅಸಹ್ಯ ಗಿದೆ. ನಮ್ಮನ್ನು ಅನುಗ್ರಹಿಸು. "ದೇಶಬಂಧು ವು" ಎಂದು ಮಹಾತ್ಮರು ಈಗ ಯಾರಿಗೆ ಕರೆ ವರು? "ಮಿ। ಸಿ. ಆರ್. ದಾಸ" ಎಂದು ಡಿತ ಮೋತೀಲಾಲರು ಯಾರಿಗೆ ಸಂಬೋಧಿಸುವ ? ಬಂಗಾಲದ ಅರಸರಿಗೆ ಕಾಯಿದೆ ಕೌನ್ಸಿಲಿನ ಎದಿರಾಗುವವರಿನ್ಯಾರು ? ಕಲಕತ್ತೆಯ ಮ್ಯುನಿ ಪಾಲಿಟಿಯಲ್ಲಿ ಪ್ರಜಾಪರಿಪಾಲಕ ಕಾರ್ಯವನ್ನು ಸುವವರಾರು ? ಅಖಿಲ ಭಾರತೀಯ ರಾಷ್ಟ್ರೀಯ ಯ ಸಂಸ್ಥೆಗಳಲ್ಲಿ ರಾಷ್ಟ್ರೋದ್ಧಾರಕ ಯೋಜನೆ ನ್ನು ಕಲ್ಪಿಸುವ ಪುಣ್ಯಾತ್ಮನಾರು, ನಿರ್ಭಯದಿಂದ, ಧೈರ್ಯದಿಂದ ಮುಂದರಿಸುವ ಸಾಹಸಿಗನಾರು ಇನ್ನ್ಯಾ ರು ! ಬಂಗಾಲಕ್ಕೆ ಚೈತನ್ಯಪ್ರಾಪ್ತಿ ಮಾಡಿಕೊ ಡುವನ್ಯಾರು? ಅರಸರೊಡನೆ ಸಂಧಾನ ಶರ್ತ ನ್ನು ರಾಷ್ಟ್ರದ ಮಾನ ಕಾಯ್ದು ಕಲ್ಪಿಸುವವರ್‍ಯಾ ಅಖಿಲ ಭರತ ಖಂಡದಲ್ಲಿ ಅಖಿಲ ಪ್ರಜೆಗಳನ್ನು ಕಾರ್ಯೋನ್ಮುಖವಾಗಿ ಸಂಘಟಿಸುವ ಪುರುಷ ರು ? ಪ್ರೇರಕನ್ಯಾರು ? ಚೈತನ್ಯಜನಕನ್ಯಾರು ? ಬಂಧುಗಳೇ, ದೀನಬಂಧುವೇ, ನಾವು ಇನ್ನೇನು ಮಾಡುವದು? ದೀನರು ನಾವು; ನಿರಾಧಾರಿಗಳು ; ವಿದ್ವೇಷಿಗಳು ನಾವು. ಅನಾಥನಾಥನೇ, ಗೆ ನೀನೇ ಕಾಯಬೇಕು. ನಾವೇ ನಿನಗೆ ಶರಣು ರುವೆವು. ನಮ್ಮನ್ನು ಈ ಆಪತ್ತಿನೊಳಗಿಂದ, ಶೀಘ್ರವಾಗಿ, ಅನಪೇಕ್ಷಿತವಾಗಿ ಬಂದೊದಗಿರುವ ಟದೊಳಗಿಂದ ಪಾರಗಾಣಿಸಿ, ಜೋಪಾನ ತು. ನಿನ್ನ ಹೊರತು ನಮಗೆ ತಾರಕನ್ಯಾರಿರು ? ನೀನೇ ಸರ್ವಶಕ್ತಿಯುಳ್ಳವನು!

ದೇಶಬಂಧುಗಳ ಪತ್ನಿಯವರ ಕಠಿಣ ಅವಸ್ಥೆ.

ಹಾತ್ಮರು ದೇಶಬಂಧುಗಳ ಕಲಕತ್ತೆಯ ಮನೆ ಮುಕ್ಕಾಮು ಮಾಡಿರುವರು. ವಾಸಂತೀ ದೇವಿ ಯವರಿಗೆ ಘಳಿಗೆ ಘಳಿಗೆಗೆ ಕಣ್ಣುಕತ್ತಲೆಯಾಗು ವದು. ಮಹಾತ್ಮರು ದೇಶಬಂಧುಗಳ ಪತ್ನಿಯ ಸಾಂತ್ವನ ಮಾಡುತ್ತಿರುವರು.

ದೇಶಬಂಧುಗಳ ವೀರ ವಿಚಾರಗಳು.

ನನ್ನ ಜನ್ಮಭೂಮಿಯನ್ನು ಬಾಲ್ಯದಿಂದ ಅಂತಃಕರಣಪೂರ್ವಕವಾಗಿ ಪ್ರೀತಿಸುತ್ತಿದ್ದೇನೆ; ಪ್ರಾಯ ಸಮಯದಲ್ಲಿ ನನ್ನ ಮನಸ್ಸು ಯಾವದೇ ಅವಸ್ಥೆಯಲ್ಲಿದ್ದರೂ, ದೇಶದ ಪವಿತ್ರ ಮೂರ್ತಿಯನ್ನು ನನ್ನ ಅಂತಃಕರಣದಲ್ಲಿಯೂ, ಶರೀರದಲ್ಲಿಯೂ ಕಾಪಾಡಲು ನಾನು ಯತ್ನ ಮಾಡಿದ್ದೇನೆ. ಈಗ ಪ್ರಾಯದ ಸಮಯ ಆ ಮೂರ್ತಿಯು ಕ್ರಮವಾಗಿ ಸ್ಪಷ್ಟವಾಗಿ ನನಗೆ ಕಾಣಹತ್ತಿದೆ. ಲೋಕನಾಯಕನೆಂದು ಅಧಿಕಾರದಿಂದ ನಾನು ಹೇಳುವದಿಲ್ಲ. ಆಳವಾದ ದೇಶಪ್ರೇಮವಿದ್ದವರು ಲೋಕನಾಯಕರಾಗುತ್ತಿದ್ದರೆ, ಆಷ್ಟರಮಟ್ಟಿಗೆ ನಾನು ಲೋಕನಾಯಕನೆಂದು ಹೇಳುವೆನು. ದೇಶಪ್ರೇಮವೇ ನನಗೆ ದೀಪದಂತೆ ನನ್ನ ಮಾರ್ಗದರ್ಶಕವಾಗುವದು. ಮತ್ತ ನಿಮ್ಮೆಲ್ಲರ ಕಡೆಯಿಂದ ಲೋಕನಾಯಕತ್ವದ ಪಾತ್ರತೆಯು ನನಗೆ ಪ್ರಾಪ್ತವಾದಲ್ಲಿ ನನ್ನ ದೋಷಗಳೆಲ್ಲ ಮಾಯವಾಗುವವು.

⁂

ಭಾರತ ದೇಶಸೇವೆಯು ಯುರೋಪಿಯನ್ ರಾಜಕಾರಣದ ಅಂಧ ಅನುಕರಣೆಯಲ್ಲ. ದೇಶಸೇವೆಯು ಹಿಂದು ಧರ್ಮಾಂಗವು, ಜೀವನದ ಧ್ಯೇಯವೂ ಅದೇ. ದೇಶದಲ್ಲಿ ನಾನು ಪರಮಾತ್ಮನನ್ನು ಕಾಣುತ್ತೇನೆ. ದೇಶಸೇವೆಯು ರಾಷ್ಟ್ರಸೇವೆಯು; ಮಾನವಜಾತಿಯ ಸೇವೆಯು ಈಶ ಸೇವೆಯು.

⁂

ನಾವು ದೇವದತ್ತ ಸಂಸ್ಕೃತಿಯ ವಾರಸದಾರರು. ನಾವು ಪಾರಮಾರ್ಥಿಕ ಸಂಸ್ಕೃತಿಯ ಪೋಷಕರು. ಅದನ್ನು ನಾವು ಜಗತ್ತಿಗೆ ತೋರಿಸಲು ಬದ್ಧರಿದ್ದೇವೆ. ಆ ತೇಜವನ್ನು ನಾವು ಪುನಃ ಉದ್ದೀಪಿಸಬೇಕು. ಮಲೀನತೆಯನ್ನು ತೊಲಗಲಾಡಿಸಿ, ತೇಜವನ್ನು ಪುನಃ ಬೆಳಗಿಸಬೇಕು.

⁂

ಭಾರತ ದೇಶವು ಎಂದೂ ಸೋಲಲಿಲ್ಲ. ಈಶ ಕೃಪೆಯಾದರೆ, ಅದೆಂದೂ ಸೋಲಲಿಕ್ಕಿಲ್ಲ. ಭಾರತ ದೇಶವು ಇದೇ ಭೂತಲದ ಮೇಲೆ ತನ್ನ ಧ್ಯೇಯವನ್ನೂ, ಸಂಸ್ಕೃತಿಯನ್ನೂ, ಸುಧಾರಣೆಯನ್ನೂ ಪ್ರತಿಷ್ಠಾಪನ ಮಾಡದಿರಲಿಕ್ಕಿಲ್ಲ. ಇದು ಆ ಕಾರ್ಯವು ಪ್ರಾರಂಭವಾಗಿದೆ. ಆ ಕಾರ್ಯವು ಹೀಗೆಯೇ ಮುಂದರಿಯುವದು. ಭರತ ಖಂಡದ ಸಂದೇಶವನ್ನು ಭೂಮಂಡಲವು ಕೇಳಲೇ ಬೇಕಾಗುವದು.

⁂

ಯಾರಾದರೂ ನಿನ್ನೆ ಧುರೀಣನಿದ್ದನೆಂದು ಆತನನ್ನು ನಾನು ಹಿಂಬಾಲಿಸುವವನಲ್ಲ. ಲೋಕನಾಯಕನು ಪ್ರತ್ಯಕ್ಷ ಧುರೀಣನಾಗಬೇಕು. ಲೋಕಮತವಂತೆ ನಡೆದರೆ, ನಾವು ಲೋಕನಾಯಕರು; ಅದನ್ನು ಬಿಟ್ಟರೆ, ನಾವು ಲೋಕನಾಯಕರಲ್ಲ. ನಾನು ಪಾಮರನು. ಎಲ್ಲ ಲೋಕನಾಯಕರೂ ಪಾಮರರೇ. ನನ್ನ ಶಕ್ತಿಯು ರಾಷ್ಟ್ರಶಕ್ತಿಯು. ನಾನು ರಾಷ್ಟ್ರಪ್ರತಿನಿಧಿಯು. ಬೇರಾದವರು ರಾಷ್ಟ್ರಪ್ರತಿನಿಧಿಯಾಗಬಹುದು. ಇದು ನನ್ನ ಸ್ವಂತ ಸಾಮರ್ಥ್ಯವಲ್ಲ; ಪ್ರಜೆಗಳ ಸಾಮರ್ಥ್ಯವಿದು. ಇದನ್ನಷ್ಟು ನಿಶ್ಚಯವಾಗಿ ತಿಳಕೊಳ್ಳಿರಿ. ಅಂದರೆ, ನಾವು ನಿಮಗೆ ಲೋಕನಾಯಕರೆಂದು, ತ್ಯಾಗಿಗಳೆಂದು — ಏಕೆ; ದೇಶಾದಷ್ಟು ದೊಡ್ಡ ಹೆಸರಿನಿಂದ — ನಾವು ಅವರಿಗೆ ಪೂಜಿಸುವೆವು. ಈ ಧ್ಯೇಯ ಮರೆಯಿರಿ; ಎಳ್ಳು ಕಾಳಿನಷ್ಟು [illegible]; ಅಂದರೆ, ನಿಮ್ಮ ಅಧಿಕಾರವನ್ನು ನಾವು ಲಕ್ಷಿಸುವದಿಲ್ಲ.

⁂

ಅಹಿಂಸಾಪ್ರಧಾನ ಅಸಹಯೋಗದ ಧ್ಯೇಯದಿಂದ ನೀವು ಚ್ಯುತರಾಗಬೇಡಿರಿ; ಇದೇ ನನ್ನ ಪ್ರಥಮ ಅರ್ಜಿ; ಕಡೆಯ ಅರ್ಜಿಯೂ ಇದೇ. ಈ ಮಾರ್ಗಕ್ರಮಣವು ಕಠಿಣವೆಂದು ನಾನರಿತಿರುವೆನು. ಒಮ್ಮೊಮ್ಮೆ ಚಿತ್ತಪ್ರಕೋಪವು ವಿಪರೀತವಾಗಿ ಕಾಯಾ-ವಾಚಾ-ಮನಸಾ ಅಹಿಂಸೆಯನ್ನು ಪಾಲಿಸುವದು ಅತ್ಯಂತ ಕಠಿಣವಾಗುತ್ತದೆ. ಜನತೆಯನ್ನು ನಿಯಂತ್ರಿಸಲು ನಾವು ಅಸಮರ್ಥರಾದಷ್ಟರ ಮಟ್ಟಿಗೆ ಅಸಹಯೋಗವು ಸೋಲಿತೆಂದು ಲಕ್ಷದಲ್ಲಿಟ್ಟು ನಡೆಯಿರಿ. ಜವಾಬದಾರಿಯು ಸಂಪೂರ್ಣವಾಗಿ ನಮ್ಮದಿದೆ. ಜನತೆಯನ್ನು ನಿಯಂತ್ರಿಸಲು ಅಸಮರ್ಥರಾದರೆ, ನಮಗೆ ಹೇಗೆ ಗೆಲವಾಗಬಲ್ಲದು?

ತಾಜಾ ಸುದ್ದಿ !

ಸಾರ್ವತ್ರಿಕ ಶೋಕ ಪ್ರದರ್ಶನ

ಮಹಾತ್ಮರು ಈ ಕೆಳಗಿನ ಜಾಹೀರ ವಿನಂತಿಯನ್ನು ಹೊರಡಿಸಿರುವರು:—

ಇಷ್ಟರಲ್ಲಿ ದೇಶದಲ್ಲೆಲ್ಲ ದುಃಖಪ್ರದರ್ಶಕ ಸಭೆಗಳನ್ನು ಸೇರಿಸಿ, ಭರತಖಂಡವು ತನ್ನ ಗೌರವವನ್ನು ಕಾಪಾಡಿಕೊಂಡಿದೆ, ಆದರೆ, ಜನರಿಗೆ ತಮ್ಮ ಅಂತಃಕರಣದಲ್ಲುಂಟಾದ ತಾಪವನ್ನು ಪೂರ್ಣರೀತಿಯಿಂದ ವ್ಯಕ್ತಪಡಿಸಲು ಅತಿ ಅಲ್ಪ ಅವಕಾಶವಿತ್ತು. ಆದದರಿಂದ ಕಾಂಗ್ರೆಸದ ಅಭಿಮಾನವುಳ್ಳ ಪ್ರತಿ ಒಂದು ಗ್ರಾಮ ಹಾಗೂ ಶಹರುಗಳಲ್ಲಿ ಒಂದೊಂದು ಸ್ಮಾರಕ ಸಭೆಗೂಡಿ ಐಕ್ಯದಾಯ ಠರಾವುಗಳಾಗಬೇಕು. ಇಂಥ ಸಾರ್ವತ್ರಿಕ ಸ್ಮಾರಕ ಪ್ರದರ್ಶನದಲ್ಲಿ ಯುರೋಪಿಯನ್ನರನ್ನೂ ಕರೆಯಬೇಕು. ದೇಶದೊಳಗಿನ ಎಲ್ಲ ಪಕ್ಷಗಳ ಐಕ್ಯವೇ ದೇಶಬಂಧುಗಳ ಮರಣ ಸಮಯದ ಆಕಾಂಕ್ಷೆಯಾಗಿತ್ತು. ಆದಕಾರಣ ಈ ಸಾರ್ವತ್ರಿಕ ಸ್ಮಾರಕ ಸಭೆಗಳೇ ಆ ಐಕ್ಯದ ಸಾಧನವಾಗಲೆಂದು ಬಯಸುವೆನು. ಇಂಥ ಸಾರ್ವತ್ರಿಕ ಸ್ಮಾರಕ ಪ್ರದರ್ಶನವು ತಾ. ೧ನೇ ಜುಲೈ ದಿವಸ ಜರುಗಬೇಕೆಂಬದು ಕಲಕತ್ತೆಯೊಳಗಿನ ಮುಖಂಡರ ಹಾಗೂ ದೇಶಬಂಧುಗಳ ಕುಟುಂಬದವರ ಅಭಿಪ್ರಾಯವಾಗಿರುವದು. ಅದು ದೇಶಬಂಧುಗಳ ನಿಧನದ ೧೬ನೇ ದಿವಸವಿದ್ದರಿಂದ ಅದು ಅವರ ಶ್ರಾದ್ಧದ ದಿನವು! ಈ ಸಮಾರಂಭದ ವೇಳೆಯು ಇಡಿ ಭರತಖಂಡದಲ್ಲಿ ಒಂದೇ ಇದ್ದರೆ, ಆ ಸಮಾರಂಭಕ್ಕೆ ಇನ್ನಿಷ್ಟು ಗೌರವವು ಪ್ರಾಪ್ತವಾಗಬಹುದಾದ್ದರಿಂದ, ಮುಂದಿನ ತಾ ೧ನೇ ದಿವಸ ಪ್ರಾ [illegible] ಯವೆಂದೆಣಿಸಿದ್ದೇನೆ

ಸ್ಫುಟ ಸೂಚನೆಗಳು.

೧. ಹಿಂದುಸ್ಥಾನ ಸರಕಾರವು ಬಂಗಾಲದಲ್ಲಿ ಮೋಂಟೆಗ್ಯೂ ಸ್ವರಾಜ್ಯದ ಉತ್ತರ ಕ್ರಿಯೆಯನ್ನು ಮಾಡಿದ ಸುದ್ದಿಯು ಜಾಹೀರ ಪ್ರಕಟಣೆಯದ್ವಾರಾ ಪ್ರಜೆಗಳಿಗೆ ತಿಳಿಸಲ್ಪಟ್ಟಿದೆ. ಬಂಗಾಲದ ಕಾಯಿದೆ ಕೌನ್ಸಿಲು ಸಾರಿಹೇಳಿದರೂ ಕೇಳದೆ. ಮಂತ್ರಿವರ್ಗದ ದಿವಾಣರ ತಲಬನ್ನು ಕಿತ್ತುಗೆಸದ್ದರಿಂದ, ದಿವಾಣರನ್ನು ನೇಮಿಸಿಕೊಳ್ಳುವದು ಕೌನ್ಸಿಲಿನ ಮನಸ್ಸಿನಲ್ಲಿಲ್ಲೆಂದು ಸರಕಾರವು ತಿಳಿದು, ಮೋಂಟೆಗ್ಯೂ ಸ್ವರಾಜ್ಯವನ್ನು ಅಂತ್ಯಗೊಳಿಸಬೇಕಾಗಿರುವದೆಂದು ಹಿಂದುಸ್ಥಾನ ಸರಕಾರದವರು ಬರೆದಿರುವರು. ಕಾಯಿದೆ ಕೌನ್ಸಿಲಿನ ಇಚ್ಛೆಯು ದೇಶಬಂಧುಗಳ ಪ್ರವೇಶದಿಂದ ಸ್ಪಷ್ಟವಾಗಿ ಪುನಃ ಪುನಃ ವ್ಯಕ್ತವಾಗಿದ್ದರೂ, ಬೆಕ್ಕಿನಂತೆ ಸರಕಾರವು ಕಣ್ಣುಮುಚ್ಚಿಕೊಂಡು ದಿವಾಣರ ತಲಬನ್ನು ಕೌನ್ಸಿಲಿನ ಕಡೆಯಿಂದ ಅಂತೂ, ಹೀಗೂ, ಹೇಗೂ ಮಂಜೂರ ಮಾಡಿಸಿಕೊಳ್ಳಲು ಒದ್ದಾಡಿ, ಕೊನೆತನಕ ಬಂಗಾಲಿಗಳ ಸರಕಾರದ ಗೌಡ ಬಂಗಾಲಕ್ಕೆ ಸೊಪ್ಪು ಹಾಕುವದಿಲ್ಲೆಂದು ನಿರ್ಧಾರವಾದ ಬಳಿಕ, ಈ ಜಾಹೀರ ಪ್ರಕಟಣೆಯನ್ನು ಹೊರಡಿಸಿರುವರು. ಆಳರಸರಿಗೆ ಪ್ರಜೆಗಳ ಅಂತರಂಗ ತಿಳಕೊಳ್ಳಲು ಇಷ್ಟು ಅವಕಾಶವು ಬೇಕು. ಆದರೆ, ಒಂದು ಮಾತು ಪ್ರಕಟಣೆಯಲ್ಲಿ ನಮೂದಿಸಲ್ಪಟ್ಟಿದೆ, ಯಾವದೇ ಕಾಲದಲ್ಲಿ ಕೌನ್ಸಿಲು ಬಯಸಿದರೆ, ಮೋಂಟೆಗ್ಯೂ ಸ್ವರಾಜ್ಯದ ಅಧಿಕಾರಗಳನ್ನು ಪುನಃ ಕೊಡಲು ಸರಕಾರವು ತಯಾರ ಇರುವದಂತೆ. ಆಳರಸರ ಪ್ರಜಾವಾತ್ಸಲ್ಯ ನೋಡಿರಿ! ಇದರ ಮೇಲಿಂದ ಮೋಂಟೆಗ್ಯೂ ಸ್ವರಾಜ್ಯವು ಕೋತಿಕೆಯ ಸ್ವರಾಜ್ಯವೆಂದು ಖಂಡಿತವಾಗಿ ಹೇಳಬಹುದು. ಯಾಕಂದರೆ, ನಿಜವಾದ ಸ್ವರಾಜ್ಯವನ್ನು ಆಳರಸರು ಕೌನ್ಸಿಲಿನ ಇಚ್ಛೆಯಂತೆ ಕೊಡಲು ಎಂದಾದರೂ ತಯಾರಾದದ್ದುಂಟೇ?

೨. ಘಾಟಕೋಪರದೊಳಗಿನ 'ಜೀವದಯಾ ಜ್ಞಾನ ಪ್ರಸಾರಕ ಸಂಘ'ದವರು ಉತ್ತರ ಹಿಂದುಸ್ಥಾನದಲ್ಲಿ ನಡೆದ ದನಗಳ ಕೊಲೆಯ ಅಂಕಿಗಳನ್ನು ಒಟ್ಟುಮಾಡಿ ಪ್ರಕಟಿಸಿರುವರು. ಮುಂಬಯಿ ಪಟ್ಟಣದಲ್ಲಿ ನಡೆಯುತ್ತಿರುವ ದನಗಳ ಸಂಹಾರವೂ ಪ್ರಕಟಣೆಯಲ್ಲಿ ನಮೂದವಾಗಿದೆ. ಮುಂಬಯಿ ಪಟ್ಟಣದಲ್ಲಿ ೬,೪೪,೪೯೩, ಕಲಕತ್ತೆಯಲ್ಲಿ ೩,೫೩,೩೮೪; ದಿಲ್ಲಿಯಲ್ಲಿ ೨,೫೦,೩೫೪, ಲಾಹೋರದಲ್ಲಿ ೩,೧೨, ೩೮೬, ಲಖನೌದಲ್ಲಿ ೧,೯೯,೭೮೭; ಕಾನಪುರದಲ್ಲಿ ೫೪,೪೫೦, ಆಗ್ರಾದಲ್ಲಿ ೫೬,೯೭೦. ಗೋರಖಪುರದಲ್ಲಿ ೪೧,೩೪೬; ಸಿಯಾಲಕೋಟದಲ್ಲಿ ೩೨,೭೫೦; ಮಿರತದಲ್ಲಿ ೫೩,೮೫೦; ಪೇಶಾವರದಲ್ಲಿ ೧೩,೮೫೫; ಅಂತು ೧೯,೭೭,೫೩೪ ದನಗಳ ಕೊಲೆಯಾಯಿತು. ಮುಂಬಯಿಯಲ್ಲಿ ೩೪ ಸಾವಿರ ಆಕಳುಗಳೇ ಕೊಲ್ಲಲ್ಪಟ್ಟವು. ಕಳೆದ ೫ ವರುಷಗಳಲ್ಲಿ ಮುಂಬಯಿ ಪಟ್ಟಣದಲ್ಲಿ ೨,೬೯,೨೫೭ ಆಕಳುಗಳ ಸಂಹಾರವಾಯಿತು. ಇವುಗಳ ವಾಚನದಿಂದ ಹಿಂದುಸ್ಥಾನದಲ್ಲಿ ನಡೆಯುವ ಮೂಕ ದನಗಳ ಗೋಳು ವಾಚಕರಿಗೆ ವಿದಿತವಾಗುವದು. ಹಿಂದುಸ್ಥಾನದಲ್ಲಿ ಮುಖ್ಯ ಉದ್ಯೋಗವು ಒಕ್ಕಲತನವು. ಒಕ್ಕಲತನಕ್ಕೆ ಅವಶ್ಯವಾದದ್ದು ಗೋವು; ಗೋಪುತ್ರರು. ಹೀಗೆ ಅತ್ಯವಶ್ಯವಾದ, ಜೀವನಾಧಾರವಾದ ದನಗಳನ್ನೇ ಈ ಪ್ರಕಾರ ಸಂಹರಿಸುತ್ತಿರುವಾಗ, ನಾವು ಯೋಗ್ಯ ಉಪಾಯ ಯೋಜನೆ ಮಾಡದಿರುವದು ಎಷ್ಟಕ್ಕೂ ಸರಿಯಲ್ಲ. ಅನ್ನ ಕೊಡುವ ದನಗಳನ್ನು ಕೊಂದು ಮಾಂಸ ಭಕ್ಷಣ ಮಾಡುವದೆಂದರೆ, ಹಾಲು ಹಿಂಡುವ ಗೋವಿನ ಕೆಚ್ಚಲು ಕೊಯ್ಯುವಷ್ಟು ಮೂರ್ಖತನವು; ದುಷ್ಟತನವು. ಮುಹಮ್ಮದೀಯರಿಗೂ, ಗೋಮಾಂಸ ಭಕ್ಷಣ ಮಾಡಲು ಧರ್ಮಾಜ್ಞೆಯಿರುವದಿಲ್ಲೆಂದು ಸೀತಾಪುರದ ವಕೀಲರಾದ ಸಯ್ಯದ ನಾಝರ ಅಹಮ್ಮದ ಎಂಬ ಮುಹಮ್ಮದೀಯ ಬಾಂಧವರು "ಇಸ್ಲಾಮಿ ಗೋರಕ್ಷಣ" ಎಂಬ ಚಿಕ್ಕ ಪುಸ್ತಕದಲ್ಲಿ ಸಪ್ರಮಾಣ ಪ್ರತಿಪಾದಿಸಿರುವರು. ಗೋಮಾಂಸ ಭಕ್ಷಣದಿಂದ ಆರೋಗ್ಯಕ್ಕೂ ಹಾನಿಯಿರುವದೆಂದು ಡಾಕ್ಟರರ ಅಭಿಪ್ರಾಯಗಳನ್ನು ಸಯ್ಯದ ನಾಝರರವರು ಎತ್ತಿಕೊಟ್ಟಿರುವರು. ಈ ವಿಷಯವನ್ನು ಕಾಯಿದೆ ಕೌನ್ಸಿಲಿನ ಸಭಾಸದರೂ, ಸರಕಾರವೂ ಆಲೋಚಿಸಿ ಗೋಧನದ ಸಂಹಾರವಾಗದಂತೆ ಶೀಘ್ರವೇ ಉಪಾಯಯೋಜನೆ ಮಾಡುವದು ಕ್ಷೇಮಕರವು; ಕರ್ತವ್ಯ ದೃಷ್ಟಿಯಿಂದಲೂ ಕ್ಷೇಮಕರವು

ಸ್ಥಾನಿಕ ವೃತ್ತಾಂತ.

ಕುಮಟೆ— ವಿಪರೀತ ಮಳೆ ಸುರಿಯಿತು. ಮೃಗಶಿರಾ ನಕ್ಷತ್ರದ ಕೊನೆಯ ೨ ದಿನಗಳಲ್ಲಿ ಏಕಸವನೆ ಮಳೆ ಸುರಿದು, ಹೊಳೆ-ಹಳ್ಳಗಳೆಲ್ಲ ತುಂಬಿ ಹರಿಯುತ್ತಿವೆ. ನೀರಿಲ್ಲದೆ ಗೋಳಿಡುವ ಒಕ್ಕಲಿಗರಿಗೆ ಈಗ ಸ್ವಲ್ಪ ಸಮಾಧಾನವಾಗಿದೆ. ಈ ವಾರದಲ್ಲಿ ೧೩-೨೮ ಇಂಚ ಮಳೆಯಾಯಿತು.

ದೇಶಬಂಧುಗಳ ನಿಧನ ವಾರ್ತೆಯು ಇಲ್ಲಿ ಗುರುವಾರ ಸಾಯಂಕಾಲ ತಂತಿಯ ಮೂಲಕ ತಿಳಿಯಿತು. ಕುಂಭಾಪುರಸ್ಥರು ಬಹಳ ಹಳಹಳಿಸಿದರು. ಮಾರನೇ ದಿನ ೧೨ ಘಂಟೆಯವರೆಗೆ ಹರತಾಳ ಆಚರಿಸಲ್ಪಟ್ಟಿತು. ಸಾಯಂಕಾಲ ೫ ಘಂಟೆಗೆ ಶ್ರೀ ಶಂಕರಿ ಕಾಮಾಕ್ಷಿ ದೇವಸ್ಥಾನದಲ್ಲಿ ನಾಗರಿಕರು ಸಭೆ ಸೇರಿ, ದೇಶಬಂಧುಗಳ ದೇಶಸೇವೆಯನ್ನೂ, ಸ್ವಾರ್ಥ ತ್ಯಾಗವನ್ನೂ ಕೊಂಡಾಡಿ, ದೇಶಬಂಧುಗಳಿಗೆ ಭಗವಂತನು ಸದ್ಗತಿಯನ್ನೀಯಲೆಂದು ಪ್ರಾರ್ಥಿಸಿಕೊಂಡರು

ಹಿರೇಗುತ್ತಿಯಲ್ಲಿ ಈ ವರ್ಷವೇ ಕಟ್ಟಿಸಿದ ಎರಡು ಹೊಸ ಸಂಕಗಳು ಈಗಲೇ ಬಿರಿದುಹೋದ ಸುದ್ದಿಯಿದೆ. ನಡೆದಾಡಲಿಕ್ಕೆ ಬಹಳೇ ಅನಾನುಕೂಲತೆ. ಸಂಕಗಳನ್ನು ವಹಿಸಿಕೊಳ್ಳುವ ಮೊದಲು ಇಂಜಿನಿಯರ ಖಾತೆಯ ಅಧಿಕಾರಿಗಳು ತಪಾಸ ಮಾಡಿದ್ದರಂತೆ; ಕಂಟ್ರಾಕ್ಟರರು ಕೆಲಸ ನಡಿಸುವಾಗ ಮೇಲ್ತಪಾಸ ಮಾಡಲು ಒಬ್ಬ ಆಫೀಸರರನ್ನೂ ನೇಮಿಸಿದ್ದರಂತೆ; ಆದರೂ ಇಷ್ಟು ಅವಸ್ಥೆ!

ಕುಡವೈಲ ಸಂಕವು ಜೀರ್ಣವಾಗಿರುವದರಿಂದ ಇತ್ತ ೧೫-೨೦ ದಿವಸಗಳಿಂದ ಹೊನ್ನಾವರ ಮೋಟಾರದ ಓಡಾಟವು ನಿಂತಿದೆ.

ಮೊನ್ನೆ ಶನಿವಾರ ೧೯ನೇ ತಾರೀಖಿಗೆ ಇಲ್ಲಿಯ ಮ್ಯುನಿಸಿಪಾಲಿಟಿಯ ಜನರಲ್ ಕಮಿಟಿ ಕೂಡಿ ದೇಶಬಂಧು ಚಿತ್ತರಂಜನ ದಾಸರವರ ನಿಧನದ ಬಗ್ಗೆ ದುಃಖಪ್ರದರ್ಶಕ ಠರಾವು ಸರ್ವಾನುಮತದಿಂದ ಪಾಸಾಯಿತು.

ಕಾರವಾರ— ಈಗ ೨-೩ ದಿನಗಳಿಂದ ಮಳೆ ಸುರಿಯಲಾರಂಭಿಸಿದೆ. ಅಬ್ಬರದ ಮಳೆ.

ದೇಶಬಂಧುಗಳ ಮರಣ ವಾರ್ತೆಯು ಇಲ್ಲಿ ಶುಕ್ರವಾರಕ್ಕೆ ತಿಳಿಯಿತು. ಎಲ್ಲರೂ ಹಳಹಳಿಸುವವರೇ. ಅನಪೇಕ್ಷಿತವಾದ ನಿಧನದಿಂದ ದೇಶಾಭಿಮಾನಿಗಳೆಲ್ಲರೂ ವಿಶೇಷವಾಗಿ ಮರುಗುತ್ತಿರುವರು.

ಅತ್ಯಂತ ಶೋಚನೀಯ ವಾರ್ತೆ. ಇಲ್ಲಿಯ ವಕೀಲರಾದ ಡಿ. ಬಿ. ಸಾತಕರ್ಣಿಯವರ ಮಗಳಾದ ಕುಮಾರಿ ಯಮುನಾಬಾಯಿ, ಬಿ. ಎ., ಇವಳ ವಿವಾಹವು ಬೆಳಗಾವಿಯಲ್ಲಿ ಕಳೆದ ರವಿವಾರಕ್ಕೆ ಜರಗುವದಿತ್ತು. ಮುಂಬಯಿಯ ವಾಸ್ತವ್ಯರಾದ ಜ್ಞಾನೇಶ್ವರ ಬಾಲಕೃಷ್ಣ ಪಾಲೇಕರ, ಎಮ್. ಬಿ. ಬಿ. ಎಸ್. ರವರು ಮದುಮಗನಿದ್ದರು. ಬೆಳಗಾವಿಯಲ್ಲಿ ಮದುವೆಯ ದಿನ ತಾಸ್ಯರಲು ಮುಂಜಾವಿಗೆ ಎದ್ದು ಶರೀರದಲ್ಲಿ 'ಯೂರೀಮಿಯಾ' ಅಂದರೆ ವಿಷಕಾರಕ ಪದಾರ್ಥವನ್ನೊಂದು ಹುಟ್ಟಿಕೊಂಡು ಮಲಗಿದರು. ಸುಮಾರು ೧೦ ಘಂಟೆಗೆ ಮದುಮಗನ ಅವಸ್ಥೆಯು ಕಠಿಣವಾಯಿತು. ಆಸ್ಪತ್ರೆಗೆ ಒಯ್ದು ಉಪಚಾರ ನಡಿಸಿದರೂ ಉಪಯೋಗವಾಗದೆ, ಜ್ಞಾನೇಶ್ವರರು ಮದುವೆಯ ಮುಹೂರ್ತ ಸಮಯ, ಅಂದರೆ, ೧೨ ಘಂಟೆಗೆ ದೇಹಾವಸಾನ ಹೊಂದಿದರು. ಡಾ|| ಜ್ಞಾನೇಶ್ವರರ ವಯಸ್ಸು ಒಟ್ಟು ೨೯ ವರುಷ. ಮುಂಬಯಿಯಲ್ಲಿ ಇವರು ಲೋಕಪ್ರಿಯರಿದ್ದರು. ಪ್ರಾಕ್ಟೀಸೂ ವಿಶೇಷವಿತ್ತು.

ಮುರ್ಡೇಶ್ವರ— ಮೃಗಶಿರಾ ನಕ್ಷತ್ರದ ಕಡೆಯ ದಿನದಿಂದ ಮಳೆ ಕಡಿದು, ಪ್ರಖರ ಬಿಸಿಲು ಕಾಯುತ್ತಿತ್ತು. ಇತ್ತ ೪—೫ ದಿವಸಗಳಿಂದ ದಿನಾ ೧೦—೧೫ ಮಿನಿಟು ಸಣ್ಣ ಮಳೆಗರೆಯುತ್ತದೆ. ಮೊದಲಿನ (ರೋಹಿಣೀ) ನಕ್ಷತ್ರಕ್ಕೆ ವಿಶೇಷ ಮಳೆಯಾದುದರಿಂದ ಈ ಊರಲ್ಲಿ ನೆಟ್ಟಿ ಪ್ರಾರಂಭವಾಗಿ, ಒಂದು ಪಂಚಮಾಂಶ ಗದ್ದೆಗಳ ನೆಟ್ಟಿಯಾಗಿತ್ತು. ಇತ್ತಲಾಗೆ ಮಳೆ ಇಲ್ಲದೆ, ಗದ್ದೆಗಳಲ್ಲಿ ನೀರಾಗದೇ ಇರುವ ಪ್ರಯುಕ್ತ ಒಕ್ಕಲಿಗರ ಗೋಳೇ ಗೋಳು. ಅಗೆ ಮಿತಿಮೀರಿ ಬೆಳೆದರಿಂದ, ಇನ್ನು ೮—೧೦ ದಿನಗಳಲ್ಲಿ ಪೂರ್ಣ ನೆಟ್ಟಿಯಾಗದೇ ಉಳಿದರೆ, ಮುಂದಿನ ಬೆಳೆ ಕೆಡುವದೆಂದು ಅನುಭವೀಕರ ತರ್ಕ. ಇನ್ನಾದರೂ ಮೇಘರಾಜನ ಕೃಪಾದೃಷ್ಟಿಯಾಗಲೆಂದು ದೇವರಲ್ಲಿ ಪ್ರಾರ್ಥನೆ.

ಒಂದು ಅದ್ಭುತ ಕಾಡಾನೆಯು ಮೈಸೂರು ಅಡ ಯಿಂದ ಕೊಪ್ಪ ಗ್ರಾಮದ ಕಾಡನ್ನು ಸೇರಿ, ಮುಂದೆ ಬ ದು, ಈ ಮುರ್ಡೇಶ್ವರ ಪೂರ್ವಕ್ಕೆ ಗುಡ್ಡದ ಬದಿಗಿರ ವ ಹೊಂಡಕಣಿ, ವಿಠಲ್ಕು, ಹಡಾಲು ಮುಂತಾದ ಊರುಗಳ ನೆರೆಯಲ್ಲಿ ಆಗಾಗ್ಗೆ ದಾಳಿಮಾಡುತ್ತಿದೆ. ಕೆಲ ಕಬ್ಬು, ಮತ್ತು ಅಡಿಕೆ ಮರಗಳಹೊರತು ಇನ್ನು ಬೇ ಹೆಚ್ಚಿನದೇನೂ ಲುಕ್ಸಾನಿ ಮಾಡಿದ್ದು ಕೇಳಿಬರುವದಿ ಮುಂದೇನು ಮಾಡೀತೋ ತಿಳಿಯದು.

ಬೆಲೆಧಾರಣೆ ಮಿತಿಮೀರಿ ಏರುತ್ತಿದೆ. ಈಗ ನೆಟ್ಟಿ ಮಾಡುವದರಲ್ಲಿ ಮಳೆ ಬೀಳದೇ ಮುಂದಿನ ಬೆ ಯ ಖಾತ್ರಿ ಇಲ್ಲದಿರುವ ಕಾರಣ, ಅಕ್ಕಿ ಕ್ರಯ ಈ ಲೇ(ಖಂಡಿಗೆ)ಮುಡಿಗೆ ೮-೪-೦ ಆಗಿದೆ. ಅದಲ್ಲದೆ ಮೆ ಸು (೨೪ ತೊಲೆ) ಸೇರಿಗೆ ೬ ಆಣೆ, ಹುಣಸೆಹುಳಿ ಸೇ ೧।। ಆಣೆ, ಹೀಗೆ ಚಿಲ್ಲರೆ ವಸ್ತುಗಳ ದರ ಏರಿದೆ. ವರ್ಷ ಉಪ್ಪಿನ ಸರಕಾರೀ ಟ್ಯಾಕ್ಸ ಮಣಕ್ಕೆ ೨।। ರೂ ಯ ಇದ್ದದ್ದು ೧। ರೂಪಾಯಿ ಆದರೂ, ಈ ಮುರ್ಡೇ ಶ್ವರ ನಗರದಲ್ಲಿ, ಉಪ್ಪಿನ ದರದಲ್ಲಿ ಬೇಸಿಗೆಯಲ್ಲಿ ಹೋದವರ್ಷಕ್ಕಿಂತಲೂ ವಿಶೇಷ ಹೆಚ್ಚು ಇದ್ದುದಾಗಿ ಈಗ ಮಳೆಗಾಲದಲ್ಲಂತೂ ದರ ಏರುತ್ತ ಹೋಗುವ ಪರ್ಯಾಸನ ದಯಾಮೂಲವೇ ಸರಿ.

ಕೇರಳಕಟ್ಟೆಯಲ್ಲಿ ಉಪ್ಪು ದಾಸ್ತಾನ ಮಾಡುವ ಲೈ ನ್ಸ ಇಲ್ಲದಂತೆ ಒಬ್ಬ ಅಂಗಡಿಕಾರನು ೧೦ ಚೀಲ ಉ ಹೊನ್ನಾವರದಿಂದ ತಂದು ಅಂಗಡಿಯಲ್ಲಿಟ್ಟುಕೊಂಡ ತಮ ಇಲ್ಲಿಯ ಕಸ್ಟಂ ಕಾರಕೂನನಿಗೆ ಹತ್ತಿ, ಅವರು ದನ್ನು ಹಿಡಿದು ರೀತಿ ಪ್ರಕಾರ ಭಟ್ಕಳ ಮುನ್ಸೀಫ ಕೋ ರ್ಟಿನಲ್ಲಿ ಫಿರ್ಯಾದು ಮಾಡಿದರಲ್ಲಿ, ಅಪರಾಧಿಯು ಗು ನ್ಹೆ ಕಬೂಲ ಮಾಡಿ, ಉಪ್ಪಿನ ಕಾಯದೆಯ ಅಜ್ಞಾನದ ಮುಂದಾಗಿದ್ದರಿಂದ, ಆತನಿಗೆ ೧೦ ರೂಪಾಯಿ ದಂ ಯಿತು. ಉಪ್ಪು ಸರಕಾರದ ಪಾಲಾಯಿತು.(೧೯-೬-೨

ವಿವಿಧ ಸಂಗ್ರಹ.

ಖಾದಿಗೆ ವೇದದ ಆಧಾರ!

ಮಹಾತ್ಮರು ಭಾರತೀಯರಿಗೆ ಖಾದಿಯ ವೈಶಿಷ್ಟ್ಯವನ್ನು ಅನೇಕ ಬಗೆಯಿಂದ ತೋರಿಸುತ್ತಿದ್ದು, ಅದೇ ನಮಗೆ ಸ್ವರಾಜ್ಯವನ್ನು ದೊರಕಿಸಿ ಕೊಡಲಿಕ್ಕೆ ಸುಲಭವಾದ ಮುಖ್ಯ ಸಾಧನವಾಗಿರುತ್ತದೆಂದು ಸಾರುತ್ತಿರುವರು. ಪ್ರಾಚೀನರಿಗಳಿಂದ ಸರ್ವದಾ ಮಾನ್ಯನೀಯವಾದ ವೇದವು ಸಹ ಇದನ್ನೇ ಎತ್ತಿ ಹಿಡಿಯುತ್ತದೆ. ಅಥರ್ವಣ ವೇದದ ೧೪ ನೇ ಭಾಗ, ೨ ನೇ ಸರ್ಗ ೫೦ನೇ ಅವತರಣದಲ್ಲಿ ವಿವಾಹಕ್ಕೆ ಉಪಯುಕ್ತವಾದ ಸಾಮಗ್ರಿಗಳಲ್ಲಿ ವರನ ಪೋಷಾಕು ವರ್ಣಿಸುವಾಗ "ವರನು ವಿವಾಹ ಮುಹೂರ್ತವಿದ್ದ ದಿನಕ್ಕೆ ವಧುವು ತನ್ನ ಸ್ವಂತ ಕೈಯಿಂದ ನೆಯ್ದು, ಮತ್ತು ತನಗೆ ಯುಕ್ತ ಕಂಡಂತೆ ಚಿತ್ರಿತ ಮಾಡಿ, ಅಂಚುಗಳನ್ನು ಕಸೂತಿಯಿಂದ ಹೊಲಿದ ವಸ್ತ್ರವನ್ನೇ ಉಟ್ಟುಕೊಳ್ಳಬೇಕೆಂತ" ನಿರ್ಬಂಧವಿರುತ್ತದೆ. ವೇದಕಾಲದೊಳಗಿನ ಈ ಜನ್ಮಾವಸ್ಥೆಯುಳ್ಳ ಖಾದಿಯು ಈಗ ಬಹಳೇ ಸುಧಾರಿಸಿದ ಸ್ಥಿತಿಗೆ ಬಂದು ಮುಟ್ಟಿದೆಂಬ ಬಗ್ಗೆ ಮಹಾತ್ಮರು ಇದೀ ಬಂಗಾಲದೊಳಗೆ ತಾವು ಕೈಕೊಂಡ ಪ್ರಯಾಣದಲ್ಲಿ ಸ್ಪಷ್ಟವಾಗಿ ನಿವೇದಿಸಿರುವರು. ಹೆಂಗಸರಿಗೆ ಇದೊಂದು ವೇದಕಾಲದಲ್ಲಿ ಅತ್ಯಾವಶ್ಯಕವಾದ ಗೃಹಶಿಕ್ಷಣದ ಭಾಗವಾಗಿತ್ತೆಂಬುದಕ್ಕೆ ಸಂದೇಹವಿಲ್ಲ. ಯಾಕೆಂದರೆ, ತನ್ನ ಭಾವೀ ಪ್ರಾಣಪತಿಗೆ ಅರ್ಪಣ ಮಾಡುವ ಉಡುಪೆಂದರೆ, ಆಕೆಯು ಎಷ್ಟು ಮನವಿಟ್ಟು ದುಡಿದು, ಸ್ವಂತ ಕೈಯಿಂದ ನೆಯ್ದು ಹೆಮ್ಮೆಗಾಣ ಶೋಭಾಯಮಾನ ವಸ್ತ್ರವನ್ನು ಅರ್ಪಿಸಬೇಕು ಎಂಬುದು ಸಹಜವಾದ ಕಲ್ಪನೆಗೆ ಹೋಲುವ ಸಂಗತಿಯು. ಈಗಿನ ಸುಧಾರಣಾ ಸ್ಥಿತಿಯಲ್ಲಿ ನಮ್ಮ ಭಾರತೀಯ ಅಂಗನೆಯರು ಖಾದಿಯ ಉಡುಪನ್ನು ಅತ್ಯುಚ್ಚ ಶಿಖರಕ್ಕೆ ಏರಿಸಲಾರರೇನು!

⁂

ಅವಳಿ ಜವಳಿ ಸಹೋದರರು!

ವಿಲಾಯತಿಯೊಳಗೆ ಒಂದು ಕಾರಖಾನೆಯಲ್ಲಿ ಕೆಲಸ ಮಾಡುವಂಥ ಅವಳಿ ಜವಳಿ ಬಂಧುಗಳಿರುತ್ತಾರೆ. ಅವರು ೧೮೫೧ನೇ ಇಸ್ವಿಯಲ್ಲಿ ಒಂದೇ ಕಾಲಕ್ಕೆ ಜನ್ಮವೆತ್ತಿದ್ದರು. ತಮ್ಮ ಹನ್ನೆರಡನೇ ವರ್ಷದಲ್ಲಿ ಆ ಕಾರಖಾನೆಯಲ್ಲಿ ಕೆಲಸಕ್ಕೆ ನಿಂತರು. ಏಕಸಮನೆ ೬೨ ವರ್ಷಗಳವರೆಗೆ ತಮ್ಮ ಸೇವೆಯನ್ನು ಅಲ್ಲಿ ನಡಿಸಿದರು. ಅವರಿಗೆ ಒಂದೇ ವರ್ಷಕ್ಕೆ ವಿವಾಹವಾಯಿತು. ಮತ್ತು ಪ್ರತಿಯೊಬ್ಬರೂ ಹತ್ತತ್ತೇ ಹುಡುಗರ ಅಪ್ಪಂದಿರಾದರು. ಇದಕ್ಕೂ ವಿಶೇಷ ಸೋಜಿಗ ಸಂಗತಿಯೆಂದರೆ, ಸಯಾಮದಲ್ಲಿ ಚಾಂಗ ಮತ್ತು ಯಾಂಕ ಎಂಬಿಬ್ಬರು ಅವಳಿ ಜವಳಿ ಬಂಧುಗಳಿರುವರು. ಇವರಲ್ಲಿ ಅಣ್ಣನಿಗೆ ಚೆನ್ನಾಗಿ ಸುರಾಪಾನ ಮಾಡಿಸಿದರೆ, ತಮ್ಮನಿಗೆ ಮದವೇರಿ ಅವನು ಕುಣಿಯುತ್ತಾನೆ. ಇದು ನವಮಾಸ ಒಂದೇ ಗರ್ಭದಲ್ಲಿ ಸರಿಯಾಗಿ ಶೋಣಿತಾದಿ ಸಪ್ತ ಧಾತುಗಳಲ್ಲಿ ಬೆಳೆದದ್ದರ ಪರಿಣಾಮವಿರಬಹುದು.

⁂

ಶ್ರೀ ವೆಂಕಟೇಶ ವಿಶ್ವವಿದ್ಯಾಲಯ.

ತಿರುಪತಿಯಲ್ಲಿ ಹಿಂದೂ ವಿಶ್ವವಿದ್ಯಾಲಯವನ್ನೊಂದು ಸ್ಥಾಪಿಸಬೇಕೆಂದು ಮದ್ರಾಸ ಪ್ರಾಂತದ ದಿವಾಣರಾದ ಪಾನಗಲ್ಲಿನ ರಾಜರು ಆಲೋಚಿಸುತ್ತಿರುವರು. ವಿಶಾಖಾ ಪಟ್ಟಣದಲ್ಲಿ ದಿವಾಣರು ತಮ್ಮ ಯೋಜನೆಯ ಮುಖ್ಯಾಂಶಗಳನ್ನು ನಿವೇದಿಸಿದರು. ಶ್ರೀ ಕಾಶಿ ಕ್ಷೇತ್ರದಲ್ಲಿ ಸ್ಥಾಪಿಸಿದ ಹಿಂದೂ ವಿಶ್ವವಿದ್ಯಾಲಯದ ಮಾದರಿಯ ಮೇಲೆ ಈ ವಿಶ್ವವಿದ್ಯಾಲಯದ ರಚನೆಯಾಗುವದಿದೆ. ತಿರುಪತಿಯ ಅಧಿಪತಿಯಾದ ಶ್ರೀ ವೆಂಕಟೇಶನ ಭಂಡಾರದಿಂದ ಈ ವಿಶ್ವವಿದ್ಯಾಲಯದ ಖರ್ಚಿನ ವ್ಯವಸ್ಥೆಯಾಗುವದಿದೆ. ಶ್ರೀ ಭಂಡಾರದಲ್ಲಿ ೪೦ ಲಕ್ಷ ರೂಪಾಯಿಗಳ ಶಿಲಕು ಇರುವದು. ದೇವಸ್ಥಾನದ ವಾರ್ಷಿಕ ಉತ್ಪನ್ನವು ರೂ. ೧೦ ಲಕ್ಷಕ್ಕೆ ಮಿಕ್ಕಿದೆ. ಈ ವಿದ್ಯಾಲಯದ ಅಭ್ಯಾಸಕ್ರಮದಲ್ಲಿ ಶ್ರೀ ವೆಂಕಟೇಶದೇವರ ಮಹಾತ್ಮ್ಯವನ್ನು ಕಲಿಸುವ ಏರ್ಪಾಡಾಗುವದು. ಆದಿತ್ಯಪುರಾಣ, ಶ್ರೀ ವೆಂಕಟೇಶ ಮಹಾತ್ಮ್ಯ ಮುಂತಾದ ಶ್ರೀವೆಂಕಟೇಶನ ಗುಣವರ್ಣನಪರ ಗ್ರಂಥಗಳ ಪಠಣವಾಗುವದು. ಅಲ್ಲದೆ, ಹಿಂದೂಸಮಾಜದ ಇತರ ಶಾಸ್ತ್ರಗಳು ಪಠಿಸಲ್ಪಡುವವು. ದ್ವೈತ, ವಿಶಿಷ್ಟಾದ್ವೈತಗಳೂ ಪಠಿಸಲ್ಪಡುವವೆಂದು ಹೇಳುತ್ತಾರೆ. ರಾ| ಬ| ಲಿಂಗಯ್ಯನವರು ತಿರುಪತಿಯ ನೆರೆಯ ಚಂದ್ರಗಿರಿಯನ್ನು ನೋಡಿ ಬಂದಿರುವರು. ಚಂದ್ರಗಿರಿಯಲ್ಲಿ ಹಿಂದಿನ ಕಾಲದ ಅರಮನೆಯೊಂದಿದೆ. ಸದ್ಯಕ್ಕೆ ಆ ಹೊಸ ಮಂದಿರರಚನೆಯಾಗುವ ತನಕ ಅಲ್ಲಿ ಶಿಕ್ಷಣ ಕೊಡಲಿಕ್ಕಿರುವರು. ವಿಶ್ವವಿದ್ಯಾಲಯದ ಸ್ಥಾಪನೆಯ ವಿಚಾರವು ಈ ತಿಂಗಳಿನ ಕಾಯಿದೆ ಕೌನ್ಸಿಲಿನ ಅಧಿವೇಶನದಲ್ಲಿ ಚರ್ಚೆಯಾಗವದಿದೆ

⁂

ಅಮೇರಿಕೆಯೊಳಗಿನ ಕೋಟ್ಯಾಧೀಶರು.

ಅಮೇರಿಕಾ ದೇಶವು ಐಶ್ವರ್ಯವಂತ ದೇಶವು. ಅನೇಕ ಕಾರಣಗಳ ಮೂಲಕ ಭೂತಲದ ಮೇಲಿನ ಸಂಪತ್ತಿಯು ಅಮೇರಿಕೆಯಲ್ಲಿ ಸಂಚಯವಾಗಿರುವದೆಂದು ಹೇಳಬಹುದು. ಅತ್ಯಂತ ದೊಡ್ಡ ಕುಬೇರರು ಹೆನರಿ ಫೋರ್ಡರವರು. ಇವರ ಉದ್ಯೋಗವು ಮೋಟಾರು; ಮೋಟಾರ ಉದ್ಯೋಗದಲ್ಲಿ ೪೦ ಕೋಟಿ ಪವನು ಕಾಯಂ ಭಂಡವಲಿದೆ. ೩ ಕೋಟಿ ೬೦ ಲಕ್ಷ ಪವನುಗಳು ಕಚ್ಚಾ ಸಾಮಗ್ರಿಗಳಿಗಾಗಿ ಉಪಯೋಗಿಸಲ್ಪಡುತ್ತದೆ. ೨೨ ಕೋಟಿ ಪವನು ವರ್ಷಕ್ಕೆ ಲಾಭವಿದೆ. ಕಳೆದ ೧೯೨೪ನೇ ಸಾಲಿನಲ್ಲಿ ಅವರು ೫ ಲಕ್ಷ ಪವನುಗಳನ್ನು ಇನಕಮ್ ಟೆಕ್ಸಿಗಾಗಿ ತೆತ್ತರು. ಜೊನ್ ರೊಕ್‌ಫೆಲರ್ ಇವರೂ ಒಬ್ಬ ಕುಬೇರರೇ. ಇವರ ಸಂಪತ್ತಿಯು ಈಗ ೨೨ ಕೋಟಿ ಪವನಿದೆ. ಸುಮಾರು ೧೧ ಕೋಟಿ ಪವನುಗಳನ್ನು ಇವರು ಶಿಕ್ಷಣ ಮೊದಲಾದ ಧರ್ಮಕಾರ್ಯಗಳಿಗಾಗಿ ಅರ್ಪಿಸಿದರು. ಫ್ರೆಂಕ ಜೆ. ಗೂಡ ಎಂಬವರು ೮ ಕೋಟಿ ಪವನು ಸಂಪತ್ತಿಯ ಶ್ರೀಮಂತರು. ಜೊನ್ ನಿಕೋಲಸ್ ಎಂಬವರು ಜವಳಿ ವರ್ತಕರಿರುವರು. ಇವರ ಸಂಪತ್ತಿಯು ೬ ಕೋಟಿ ಪವನು. ಗೂಡರವರನ್ನು ಹಿಂದಕ್ಕೆ ಹಾಕಬೇಕೆಂದು ನಿಕೋಲಸ್‌ರವರು ಯತ್ನಿಸುತ್ತಿರುವರು, ಆತ್ಮರಕ್ಷಣಕ್ಕಾಗಿ ಇವರ ಸುತ್ತು ಮುತ್ತು ಗುಪ್ತ ಪೋಲೀಸರ ಕಾವಲಿದೆ. ಸಂಪತ್ತಿಯಿಂದ ದೊರಕುವ ಸುಖದ ದೃಷ್ಟಾಂತವೇನಿದು? ೧೯೨೨ನೇ ಇಸವಿಯಲ್ಲಿ ೭೮ ಮಂದಿ ಕೋಟ್ಯಾಧೀಶರು ಆತ್ಮಹತ್ಯ ಮಾಡಿಕೊಂಡರು. ವಿಲಾಯತಿಯಲ್ಲಿ ರೊಕ್‌ಫೆಲರ ಅಥವಾ ಫೋರ್ಡರವರಷ್ಟು ಶ್ರೀಮಂತರ್ಯಾರೂ ಇರುವದಿಲ್ಲ. ಹೀಗಿದ್ದರೂ, ಅಮೇರಿಕೆಯೊಳಗಿನ ಕೋಟ್ಯಾಧೀಶರ ನಡಾವಳಿಯು ತೀರ ಸಾಮಾನ್ಯವಿದೆ. ನಿಯಮಿತತನದಿಂದ, ನಿರಲಸ ಬುದ್ಧಿಯಿಂದ ತಮ್ಮ ವ್ಯವಹಾರವನ್ನು ದಕ್ಷತೆಯಿಂದ ನಿರ್ವಹಿಸುತ್ತಿರುವರು. ಆದರಿಂದಲೇ ಅಲ್ಲಿ ಲಕ್ಷ್ಮೀದೇವಿಯು ವಾಸವಾಗಿ ಬಿಟ್ಟಿರುವಳು.

ಕೈರಾಟಿಯ ಪ್ರಸಾರ.

ಬರ್ದ್ವಾನದಲ್ಲಿ ಮಹಾತ್ಮರು ಗಮನಮಾಡಿದಾಗ ಅಲ್ಲಿಯ ಒಬ್ಬ ಗೃಹಸ್ಥರು ಮಹಾತ್ಮರಿಗೆ ನಯವಾದ ಮನೋಹರವಾದ ಖಾದಿಯನ್ನು ಸಮರ್ಪಿಸಿದರು. ೩ ವರುಷಗಳಿಂದ ತಮ್ಮ ಕುಟುಂಬದಲ್ಲಿ ಯಾರೂ ಹೊರಗಿನಿಂದ ಅರಿವೆಯನ್ನು ತರಿಸಿ ತರಲಿಲ್ಲೆಂದು ಮಹಾತ್ಮರಿಗೆ ಹೇಳಿ, ಇನ್ನು ಮುಂದೆ ಸಹ, ಮನೆಯಲ್ಲಿಯೇ ತಯಾರಾದ ಅರಿವೆಯನ್ನೇ ಉಪಯೋಗಿಸುವದಾಗಿ ಹೇಳಿದರು.

ಮಿ| ಮಹಮ್ಮದ ಯಾಸಿನ್‌ರವರು ಸ್ವರಾಜ್ಯ ಪಕ್ಷದವರು, ಬಂಗಾಲದ ಕಾಯಿದೆ ಕೌನ್ಸಿಲಿನ ಸಭಾಸದರು. ಇವರೂ ಬರ್ದ್ವಾನದಲ್ಲಿ ಮಹಾತ್ಮರಿಗೆ ಭೆಟ್ಟಿಯಾದರು. ಮಿ| ಯಾಸಿನ್‌ರವರು ಎಳೆ ಪ್ರಾಯದವರು. ಸ್ವರಾಜ್ಯ ಪಕ್ಷದವರಲ್ಲಿ ಚಿಕ್ಕವರಾಗಿ, ತೀವ್ರವಾಗಿ ಹೋರಾಡುವವರು ಮಹಾತ್ಮರು ಅವರ ಚಪಲತೆಯನ್ನು ನೋಡಿ ಉದ್ಗರಿಸಿದ್ದೇನಂದರೆ:—"ನೀವು ಇಷ್ಟು [illegible] ಮಾತಾಡುತ್ತಿದ್ದರೆ, ನಾನು ಕೌನ್ಸಿಲುಗಳನ್ನು ಸೇರಿಕೊಳ್ಳುವ ಆಲೋಚನೆ ಮಾಡಬೇಕಾಗುವದು."

ಹುಗ್ಲಿ ಸ್ಟೇಶನಿನಿಂದ ೨೨ ಮೈಲು ದೂರ ಅಂಬಿಕಾ ಎಂಬದೊಂದು ಹಳ್ಳಿಯಿದೆ. ಅಲ್ಲಿ ಚಳಿ ಜ್ವರದ ಬಾಧೆ ವಿಶೇಷ. ವಿಶೇಷ ಮಳೆಯೂ ಸುರಿದಿತ್ತು. ಆದರೂ ಅಲ್ಲಿಯ ರಾಷ್ಟ್ರಸೇವಕರು ಹುಗ್ಲಿಯಲ್ಲಿ ಮಹಾತ್ಮರ ಪ್ರತ್ಯಕ್ಷ ದರ್ಶನ ಪಡೆದರು. ಅವರು ಹೇರಳ ಖಾದಿಯನ್ನು ಕೂಡ ತಂದಿದ್ದರು; ನೂಲು ತಂದಿದ್ದರು, ನೂಲಿನ ಬಿಲ್ಲೆಗಳನ್ನೂ ತಂದಿದ್ದರು. ಚಳಿ-ಮಳೆಗಳನ್ನು ಲೆಕ್ಕಿಸದ, ೨೨ ಮೈಲು ದೂರ ನಡೆಕೊಂಡು ಬರುವದು ಎಂಥ ಖಾದಿನಿಷ್ಠೆಯು!

ಪ್ರಾಚ್ಯದೇಶದಲ್ಲಿ ಮೊದಲು ಕೈರಾಟಿಯು ವಿಶೇಷ ಪ್ರಚಾರದಲ್ಲಿತ್ತು. ಅಲ್ಲಿಯ ಒಬ್ಬ ಹೆಂಗಸಿನೊಡನೆ ನಕ್ಷೆ ಕೊರೆದಿದ್ದ ಒಂದು ಕೈರಾಟಿಯನ್ನು ಒಬ್ಬರು ೫ ರೂಪಾಯಿಗಳಿಗೆ ಕೊಂಡರು. ಅದನ್ನು ಅಖಿಲ ಭಾರತೀಯ ಖಾದಿ ಮಂಡಳಕ್ಕೆ ಅವರು ಅರ್ಪಿಸಿರುವರು. ಈ ಕೈರಾಟಿಯಿಂದ ನೂಲು ತೆಗೆಯಲು ವಿಶೇಷ ಅನುಕೂಲವಿರುವದರಿಂದ ನೂಲು ತುಂಡಾಗುವದಿಲ್ಲ; ಹರಿಯುವದಿಲ್ಲ; ನೂಲಿನ ಶಕ್ತಿಯು ವಿಶೇಷವಿದೆ. ಈ ರಾಟಿಯ ವರ್ಣನೆಯನ್ನು ಅಖಿಲ ಭಾರತೀಯ ಖಾದಿಮಂಡಲದ ಚಾಲಕರಾದ ಶ್ರೀ| ಮಗನಲಾಲ ಗಾಂಧಿಯವರು 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಕೊಟ್ಟಿರುವರು. ಇಂಥ ರಾಟಿಗಳನ್ನು ಸುಲಭವಾಗಿ ಅಲ್ಲಲ್ಲಿ ತಯಾರಿಸಬಹುದೆಂದೂ ಹೇಳಿ, ಆ ವಿಷಯದ ಸೂಚನೆಗಳನ್ನೂ ಕೊಟ್ಟಿರುವರು. ಅಲ್ಲಲ್ಲಿಯ ಕೊಂಗ್ರೆಸ ಕಮೀಟಿಗಳು ಈ ಮಾದರಿಯ ಒಂದೊಂದು ಕೈರಾಟಿಯನ್ನು ತಯಾರಿಸಿ, ಪ್ರಸಾರ ಮಾಡಬೇಕು.

— ತ್ರಾವಣಕೋರ ರಾಜಸರಕಾರವು ಯಾವತ್ತು ಜಾತಿಯ ಜನರಿಗೆ ವೈಕೋಮ ದೇವಸ್ಥಾನದ ಸುತ್ತಲಿನ ಮಾರ್ಗ ನಿರಾತಂಕವಾಗಿ ಅಡ್ಡಾಡಲಿಕ್ಕೆ ಬಿಟ್ಟುಕೊಟ್ಟಿರುತ್ತದೆ. ಮಹಾತ್ಮರು ವೈಕೋಮ ಸತ್ಯಾಗ್ರಹಿಗಳಿಗೆ ಈ ವಿಜಯಕ್ಕಾಗಿ ಶ್ರೀ ಭಗವಂತನ ಕೃಪೆಯನ್ನು ಸ್ಮರಿಸಲಿಕ್ಕೆ ಬೋಧಿಸಿರುತ್ತಾರೆ; ಇನ್ನು ಮುಂದೆಯೂ ಸಂಪೂರ್ಣವಾಗಿ ಅಹಿಂಸೆಯನ್ನು ಕಾಪಾಡಲಿಕ್ಕೆ ತಿಳಿಸಿದ್ದಾರೆ.

— ಹಜಯಾತ್ರೆಗಾಗಿ ಮುಸಲ್ಮಾನರನ್ನು ತೆಗೆದುಕೊಂಡು ಹೋದ "ಜಹಾಂಗೀರ" ಹಡಗವು ಅಮೀರ ಅಲ್ಲಿಯ ಕಾಟದಿಂದ ಸೂಡಾನ ಬಂದರದಲ್ಲಿ ನಿಲ್ಲಿಸಲ್ಪಟ್ಟಿದ್ದು, ಈ ೧೭ನೇಗೆ ಸುರಕ್ಷಿತವಾಗಿ ರಾಬೀಗ ಬಂದರಕ್ಕೆ ಮುಟ್ಟಿತು.

ಬಾಬು [illegible] ಬಂಧವಿಮುಕ್ತತೆ.

([illegible] ಮೊದ್ಲೆ, ಶೀಕ)
[illegible] ಮುಂದೆ ಸಾಗಿದ್ದು.

ನೇ [illegible] ದಿವಸ [illegible] ವಿಚಾರಣೆ ಆರಂಭವಾ [illegible] ಮಾಡಿದ ವಿಮರಿವಕ [illegible] ಪೂರ್ವಾಗಿ ಅವ [illegible] ತನ್ನ ಹಾಜರ [illegible] ಮೂಲಕ ಆ [illegible] ಟ್ಟನಲ್ಲಿ ಹುಡುಗರ [illegible]

[illegible] ಜಬಾನಿಯಲ್ಲಿ ವಸ [illegible] ಊಟದ ತಪಾಸಣೆ [illegible] ಪಟ್ಟೇವಾಲನಿಗೆ ಅವನ [illegible] ಬಿಸ್ಕೀಟಿನ ಪಟ್ಟಿಯನ್ನು ಅವನ [illegible] ಅವನ ಹಣೆಯ ಮೇಲಿನ ಗಾಯ [illegible] ನಿಜವಲ್ಲವೆಂತ ಹೇಳಿದರು. ಪಟ್ಟೇ [illegible] ಹೊಡೆದು ಗುದಿ ಗಾಯ [illegible] ತನ್ನ ಮೊದಲಿನ ಹೇಳಿ [illegible] ಹೇಳಿದ್ದಲ್ಲ ಸುಳ್ಳಂ [illegible]

[illegible] ಮಾಡಿದ್ದ ದೇ [illegible] ಪಟ್ಟಿಯನ್ನು ಕ [illegible] ಸುಳ್ಳೆಂತ ಪ್ರ [illegible]

[illegible], ಪಟ್ಟಿಯನ್ನು ಬಡೆ [illegible] ಮೇಲೆ ಬಿಟ್ಟಿಕೊಟ್ಟು ಹು [illegible] ವಿಷಯವನ್ನು ಹೇಳಿದ [illegible] ವಿಷಯದಲ್ಲಿ ಆ [illegible] ಇಲ್ಲವೆಂತ ಹೇಳಿದರು. ಪೋಲೀಸರು [illegible] ಅರಿಸಿತಂದ ಬಿಸ್ಕೀಟ [illegible] ಪ್ರಮಾಣ ಎಂತ ಹಾಜರ ಮಾಡಿದರು.

[illegible] ಗುರ್ತಿಸಿದ್ದಲ್ಲವೆ, ಪಟ್ಟೇವಾಲನನ್ನು [illegible] ತನ್ನ ಅಂಗಡಿಯ ಒಳಗೆ ಬಿಡದು, ಇಂಗ್ಲೀಷ [illegible] ತೆಗೆದುಕೊಂಡು [illegible] ಆಗ್ರಹ ಮಾಡಿದಂಥ ಹುಡುಗರವಳಗೆ ಅವರು [illegible] ಅಣೆಮಾಡಿ ಹೇಳಿದನು. ಮತ್ತು ಅವರು [illegible] ಹೊತ್ತಿನ ಮೇಲೆ ಸ್ವದೇಶೀ ಅಂಗಡಿದು [illegible] ಬಂದೇ ಮಾತರಂ' ಎಂತ ಕೂಗಿದ್ದನ್ನು ಕೇಳಿದೆನೆಂದನು. ಊಟದ ತಪಾಸಣೆಯಲ್ಲಿ, ಆಲಿಯು ಹುಡುಗರು ಎಷ್ಟೋ ದಿವಸಗಳ ವರೆಗೆ ಪಿಕೆಟಿಂಗ ಮಾಡಿದ್ದು, ಅದರಿಂದ ಅವನಿಗಾದ ನಷ್ಟವು ನಿಜವೆ ಕಾಲದೋ ಅಲ್ಲವೋ ಎಂತ ಕೇಳಿದ್ದಕ್ಕೆ ತನಗೆ ಅದರಿಂದ ಏಳ್ಳಷ್ಟು ಹಾನಿಯಾಗಿಲ್ಲವೆಂತ ಉತ್ತರವನ್ನಿತ್ತನು.

ಸರ್ಜನ್ ಸಾಹೇಬರು ಹಣೆ ಮೇಲಿನ ಗಾಯವು ಬಹುಶಃ ಯಾವದೋಂದು ಕಠಿನವಾದ ಜಾಗಕ್ಕೆ ಘಟ್ಟಿಸ ಬಹುದೆಂತ ಸಾಕ್ಷಿ ಹೇಳಿದರು. ಬಾವೆಯು ಊಟದ ತಪಾಸಣೆಯ ಕಾಲಕ್ಕೆ ಅದು ಅಂಗ್ಯೆಯಿಂದ ಅಥವಾ ಮುಷ್ಟಿಯಿಂದಾಗಿದ್ದ ಶಕ್ಯವಿದ್ದಿಲ್ಲವೆಂತ ಹೇಳಿದರು.

ಖಟ್ಲೆಯು ಜವಾಬನ ಪುರಾವೆಗಾಗಿ ಮುಂದಿಕ್ಕಲ್ಪಟ್ಟಿತು. ನೇಮಿಸಿದ ದಿವಸ ಸ್ವದೇಶೀ ಅಂಗಡಿಯ ಯಜಮಾನನು ಬಂದು ನಿಜವಾಗಿ ನಡೆದದ್ದನ್ನೆಲ್ಲ ಆಣೆ ಮಾಡಿ ಹೇಳಿದನು. ಇದಲ್ಲದೆ ದೇಶೀ ಪಟ್ಟಿಯನ್ನು ಕೊಳ್ಳಲು ತನ್ನ ಅಂಗಡಿಗೆ ಬಂದವರೊಳಗೆ ಆರೋಪಿಗಳಲ್ಲಿ ಯಾರೂ ಇದ್ದಿಲ್ಲವೆಂತ ಹೇಳಿದನು.

ಗುಂಪಟೀ ಡಾಕ್ಟರರೊಬ್ಬರು ತಾವು ಪೇಟೆಯೊಳಗಿಂದ ಹೋಗುತ್ತಿದ್ದಾಗ ಕೆಲವು ಹುಡುಗರು ಪಟ್ಟೇವಾಲನ ಸಂಗಡ ಮಾತಾಡುತ್ತಿದ್ದದ್ದನ್ನು ನೋಡಿದ್ದೇನೆಂತ ಹೇಳಿದರು. ಮತ್ತು ಪಟ್ಟೇವಾಲನು ಹುಡುಗರಿಗೆ ಪಟ್ಟಿಯನ್ನು ತಾನಾಗಿಯೇ ಕೊಟ್ಟು ಅದರ ಬದಲಾಗಿ ದೇಶೀ ಪಟ್ಟಿಯನ್ನು ತೆಗೆದುಕೊಳ್ಳಲು ತನ್ನ ಇಚ್ಛೆಯನ್ನು ಪ್ರಕಟಿಸಿತನೆಂತಲೂ ಹೇಳಿದ್ದಲ್ಲದೆ, ಅವನು ಸ್ವದೇಶೀ ಅಂಗಡಿಗೆ ಹುಡುಗರನ್ನು ಹಿಂಬಾಲಿಸಿ ಹೋದದ್ದನ್ನು ತಾವು ನೋಡಿದ್ದೇವೆಂತ ಆಣೆ ಮಾಡಿ ಹೇಳಿದರು. ಪೋಲಿಸರು ಮಾಡಿದ ಊಟದ ತಪಾಸಣೆಯಲ್ಲಿ, [illegible] ಸ್ಥಿರವಾದ ಸ್ವದೇಶೀ ಭಕ್ತರಿದ್ದು ಪ್ರಸ್ತುತ ಸ್ವದೇಶೀ ಅಂಗಡಿಯಲ್ಲಿ ತನ್ನ [illegible] ರೂಪಾಯಿಗಳ ಪಾಲು ಇರುವದೆಂತ ಒಪ್ಪಿದರು.

ಆ ಬಳಿಕ ತೋರಿಸಿದ ಸಾಹೇಬರು ಇದ್ದ ಬಂಗ್ಲೆಯು ಭಾಡಿಗೆಯ ಬಂಗ್ಲೆಯಾಗಿದ್ದು, ಅದರ ಯಜಮಾನನ ಸ್ತ್ರೀಯೂ ಆ ವೇಳೆಯಿಂ . ಸಾಹೇಬರು ಒಂದು ಬಿಸ್ಕೀಟಿನ ಪಟ್ಟಿಯನ್ನು ತನ್ನ [illegible] ಹಣೆಯ ಕಡೆಗೆ ಬಗೆದಿದ್ದರೆಂತಲೂ ಮತ್ತು ಅವನು ಕವಕಡ್ಡಿಯ ದೀಯ ಮೇಲೆ [illegible] ಬಿದನೆಂತಲೂ ಆಕೆ ಸಾಕ್ಷಿಯನಿತ್ತಳು. ನೇವಕನು ಪೇಟೆಯಿಂದ ತಿರುಗಿ ಬಂದಾಗ ಅವನ ಮೈಮೇಲೆ ಗಾಯಗಳು ಇದ್ದಿಲ್ಲವೆಂತ ಆವನು ಸ್ಪಷ್ಟವಾಗಿ ಹೇಳಿದನು. ಊಟದ ತಪಾಸಣೆಯಲ್ಲಿ [illegible] ರು, ಎಂದಾದರೂ [illegible] ವಾಗಿ [illegible] ಯಪಡಿಸಲು ತನಗೆ ಹೇಳಿ [illegible] ಕತ್ತಲೆಯೊ ದಮೇಲೆ ತನ್ನ [illegible] ಸುವರೆಂತಲೂ, ಆ ದೇಶಿಂದು ತನ್ನ [illegible] ವಿಷಯವಾಗಿರ ತ್ತದೆಂತಲೂ ಒಪ್ಪಿಕೊಂಡಳು.

ಆ ವೇಳೆ ಖಟ್ಲೆಯ [illegible], ವಾದವಿವಾದವೂ ಆಗಿದು ನಿರ್ಣಯವು ಅದೇ ದಿವಸ ಮಧ್ಯಾಹ್ನದ ಮೇಲೆ ತಿಳಿಸಲ್ಪಡುವದೆಂತ [illegible]

ಅಷ್ಟರಲ್ಲಿ ಹೆಸ್ರತು ಬಾಬುರವರ [illegible] ಸುಹೇಬರ ಬಂಗ್ಲೆಗೆ [illegible] ಬಂದಿದ್ದರು. ಮತ್ತು ಇದು ಅಹುಭ ಸಂದರ್ಭವೆಂತ ಜನರು ತನ್ನ ತಮ್ಮೊಳಗೆ ಆಡಿಕೊಳ್ಳಹತ್ತಿದರು.

ತೀರ್ಮಾನದ ದಿವಸ ನಾಗೇಂದ್ರ ಬಾಬುರವರ ತಜೇರಿಯು ಕೋರ್ಟುಗಳಿಂದ ಪೂರಾ ತುಂಬಿಕೊಂಡಿತ್ತು. ಎಷ್ಟೋ ಹುಡುಗರು ಹಾಜರಿದ್ದರಲ್ಲದೆ, [illegible] ತಿಳಕೊಳ್ಳಲು ಉತ್ಸುಕರಾದ ಆನೇಕ ಜನ ಬಂದಿದ್ದರು.

ನಾಗೇಂದ್ರ ಬಾಬುರವರು ನಿರ್ಣಯವನ್ನು ಹೇಳಿದರು ಆರೋಪಿಗಳೆಲ್ಲ ನಿರ್ದೋಷಿ ಎಂತ ನಿರ್ಣಯಿಸಿ ಪ್ರತಿ ಒಬ್ಬರಿಗೆ ೩ ತಿಂಗಳ [illegible] ರೂಪಾಯಿ ದಂಡವು ವಿಧಿಸಲ್ಪಟ್ಟಿತು.

ಇದು ಕಿಳಿದ ಕೂಡಲೇ, ಆರೋಪಿಗಳ ಗೌರವಾರ್ಥವಾಗಿ ಹುಡುಗರು ೩ ಸಾರೆ 'ವಂದೇ ಮಾತರಂ' ಎಂತ ಗಟ್ಟಿಯಾಗಿ ಕೂಗಿದರು. ಮತ್ತು ಪೋಲೀಸರು [illegible] ಪ್ರಯಾಸದಿಂದ ಗದ್ದಲವನ್ನು ನಿಲ್ಲಿಸಿ ಕಚೇರಿಯನ್ನು ಖಾಲಿ ಮಾಡಿದರು.

ಆರೋಪಿಗಳ ವಕೀಲರಲ್ಲಿ ಪ್ರಮುಖರಾದ ಕಾಲಿಕಾಂತರೆಂಬುವರು ಜಜ್ಮೆಂಟನ್ನು ತೆಗೆದುಕೊಂಡು ಪೂರಾ ಓದಿ ನೋಡಿದರು. ಡೆಪ್ಯುಟಿ ಕಲೆಕ್ಟರರು ಅದರಲ್ಲಿ ಬರೆದದ್ದೇನಂದರೆ, ಫಿರ್ಯಾದಿಯ ಕಡೆಯ ಪುರಾವೆಯ ವಿಷಯದಲ್ಲಿ ಎಂಥದೊ ವಿರೋಧವು ಕಂಡುಬರುವದು ನಿಜವಿದ್ದರೂ, ಅದೆಲ್ಲ ಕೇವಲ 'ಕ್ಷುಲ್ಲಕ ಸಂಗತಿ' ಯಾಗಿರುವದು. ಅದರಿಂದ ಏನಾದರೂ ವ್ಯಕ್ತವಾಗುವಂತಿದ್ದರೆ ಅದು ಫಿರ್ಯಾದಿಯ ಸಾಕ್ಷಿದಾರರು ಕಲಿಸಿ ತಯಾರಮಾಡಿದವರು ಅಲ್ಲೆಂಬುದು ಬೇಕಾಯಿತೆಂದು ಗಿಂಪಿನೊಳಗೆ ೧೫-೨೦ ಹುಡುಗರಿದ್ದರೆಂತ ಕೆಲವು ಸಾಕ್ಷಿದಾರರೂ, ೫೦-೬೦ ಇದ್ದರೆಂತ ಉಳಿದವರು ಹೇಳಿದ್ದು ನಿಜ ಅದರೆ ಈ ಸಾಕ್ಷಿದಾರರಲ್ಲಿ ಒಬ್ಬರೂ ಅಲ್ಲಿದ್ದ ಹುಡುಗರ ಸಂಖ್ಯೆಯನ್ನು ಸ್ವತಃ ಎಣಿಸಿ ನೋಡಿದ್ದಿಲ್ಲ. ಆದ್ದರಿಂದ ಅವರ ಲೆಕ್ಕದಲ್ಲಿ ವ್ಯತ್ಯಾಸ ಬರುವದು ಅಗದೀ ಸಹಜವಿದೆ. ಆರೋಪಿಗಳು ತನ್ನ ಹಣೆಯಮೇಲೆ ಹೊಡೆದು ಗುದ್ದಿ ಗಾಯ ಮಾಡಿದರೆಂತ ಫಿರ್ಯಾದಿಯು ಆಣೆ ಮಾಡಿ ಹೇಳಿದನು. ಆದರೆ ಆ ರೀತಿಯಲ್ಲಿ ಆಗುವದು ಶಕ್ಯವಿದ್ದಿಲ್ಲವೆಂತ ಸರ್ಜನರ ಹೇಳಿಕೆ. ಆರೋಪಿಗಳ ತರ್ಫೆಯ ವಿದ್ವಾನ್ ವಕೀಲರು ಈ ಮಾತಿಗೇ ಹೆಚ್ಚು ಮಹತ್ವವನ್ನು ಕೊಟ್ಟು, ಖಟ್ಲೆಯು ಬನಾವಟ ಇರುತ್ತದೆಂತ ತೀರ್ಮಾನಿಸಲು ಕೋರ್ಟಿಗೆ ಕೇಳಿಕೊಂಡರು. ಆದರೆ ಆ ಸಂಗತಿಯು ನಡೆದ ಕಾಲಕ್ಕೆ, ಪ್ರಸ್ತುತ ಗಾಯವನ್ನು ಹುಡುಗರು ತನಗೆ ಯಾತರಿಂದ ಮಾಡಿದರು ಎಂಬದನ್ನು ಸರಿಯಾಗಿ ನೆನಪಿಡಲಿಕ್ಕೆ ಆಗದಷ್ಟು ಫಿರ್ಯಾದಿಯು ಗಾಬರಿಯಾಗಿ ಇಂಗಿತ್ಟಿತಲಿಕ್ಕೆ ಬೇಕೆಂತ ಡೆಪ್ಯುಟಿ ಕಲೆಕ್ಟರರ ಮನಸ್ಸಿಗೆ ತೋರುತ್ತದೆ. ಬಹಾವಿ ಸಾಕ್ಷಿದಾರರ ವಿಷಯವಾಗಿ ಹೇಳುವದೆಂದರೆ ಅವರೆಲ್ಲ ಸ್ವದೇಶೀ ಎಂತ ಹೇಳಿಕೊಳ್ಳುವ ಸಮಾಜಕ್ಕೆ ಸೇರಿದವರು ಇದ್ದದರಿಂದ, ಹುಡುಗರ ರಕ್ಷಣೆಗಾಗಿ ಅವರು ಸುಳ್ಳು ಹೇಳುತ್ತಿರಲಿಕ್ಕೆ ಬೇಕೆಂತ ಡೆಪ್ಯುಟಿಯವರ ಅಭಿಪ್ರಾಯವು. ಬಂಗ್ಲೆಯ ಯಜಮಾನನು ಸ್ವತಂತ್ರ ಸಾಕ್ಷಿದಾರನಿದ್ದದರಿಂದ ಅವನ ಮಾತಿಗೆ ಮಹತ್ವವನ್ನು ಕೊಡಬೇಕೆಂತ ಆರೋಪಿಗಳ ಕಡೆಯ ವಕೀಲರು ಸೂಚಿಸಿದರು ಆದರೆ ಆ ವ್ಯಕ್ತಿಯು ಎಲ್ಲಾ ಸ್ವದೇಶಿಯರಾಗಿರುವ ವಕೀಲರ ಅನುಗ್ರಹವನ್ನು ಹಿಡೇದದೇ ಪಡೆಯುತ್ತಿದ್ದನೆಂತ ಡೆಪ್ಯುಟಿ ಕಲೆಕ್ಟರರಿಗೆ ತೋರುತ್ತದೆ. ಮತ್ತು ಅದರಿಂದ, ಬಹಾ ತೋಟಗಳರಿಗೆ ಸಾಹೇಬರಂಥ ಅನಿಶ್ಚಿತವಾಗಿ ಖಟ್ಲೆಯ ವೃಷ್ಟಿಗಾಗಿ ನಿಜವನ್ನು ನುಡಿದು ಅವನು ತನ್ನ ನಿತ್ಯದ ಗಿರಾಕಿಗಳ ಅಸಂತೋಷಕ್ಕೆ ಗುರಿಯಾಗುವ ಸಂಭವವಿದ್ದಿಲ್ಲ.

ವಕೀಲರು ಕೂಡಲೆ ಅರ್ಜಿ ಮಾಡಿ ಜಜ್ಮೆಂಟಿನ ನಕಲನ್ನು ಪಡೆದರು. ಆ ಮೇಲೆ ಅವರು ಅಪೀಲ ದಾಖಲ ಮಾಡುವದಕ್ಕಾಗಿ ಸೆಶನ್ ಜಜ್ಜರ ಕಡೆಗೆ ಹೋದರು ಮತ್ತು ಆರೋಪಿಗಳನ್ನು ಜಾಮೀನಿನಮೇಲೆ ಬಿಡಬೇಕೆಂದು ಕೇಳಿಕೊಂಡರು.

ಜಜ್ಜ ಕೋರ್ಟಿನ ಹೊರಗೆ ನೂರಾರು ಶಾಲೆಯ ಹುಡುಗರು ಕಾದುಕೊಂಡಿದ್ದರು. ಜಾಮೀನು ಕೊಟ್ಟು ಕೋರ್ಟಿನ ಹೊರಗೆ ಬಂದು ನಿಶ್ಚಿತವೆಂತ ಕೇಳಿದ ಕೂಡಲೇ ಅವರೆಲ್ಲ 'ವಂದೇ ಮಾತರಂ' ಎಂತ ಗಟ್ಟಿಯಾಗಿ ಕೂಗಹತ್ತಿದರು. [illegible] ಗಾಡಿಯೊಂದನ್ನು ತಂದು [illegible] ಆರೋಪಿಗಳನ್ನು ಅದರೊಳಗೆ ಕೂಡ್ರಿಸಿದರು. ಮತ್ತು [illegible] ಗಳನ್ನು ಬಿಟ್ಟು ಆ ಗಾಡಿಯನ್ನು ತಾವೇ ಸ್ವತಃ ಎಳೆಯುತ್ತಿದ್ದರು. ಮೆರವಣಿಗೆಯನ್ನು ಹೊರಡಿಸಿ ಅವರು ತನ್ನ ಸಲುವಾಗಿ ಕಷ್ಟವನ್ನನುಭವಿಸುವ ವೀರರನ್ನು ಕೊಂಡಾಡುವಂತೆ ಜಯಘೋಷದಿಂದ ಪದ ಒಂದನ್ನು ಹಾಡುತ್ತ [illegible] ಪ್ರಮುಖ ಪೇಟೆಗಳೊಳಗಿಂದ ಸಾಗಿದರು.

(ಮುಂದೆ ಸಾಗುವದು)

ಉತ್ತಮ, ಸುವಾಸಿಕ, ಶುದ್ಧ, ಮಿಶ್ರಣವಿಲ್ಲದ,

ಜನರಿಗೆ ಅವಶ್ಯ ಬೇಕಾಗಿರುವ

ಕಾಬೂಲೀ ಹಿಂಗು.

೪೦ ತೊಲೆಯ ಫ್ಲೈಟ ಡಬ್ಬಿ ಗೆ ೫—೦—೦
೨೦ ತೊಲೆ ಡಬ್ಬಿ ಗೆ ೨—೧೨—೦
೧೦ ತೊಲೆ ಡಬ್ಬಿ ಗೆ ೧—೮—೦
೫ ತೊಲೆ ಡಬ್ಬಿ ಗೆ ೧—೦—೦.
೧ ತೊಲೆಯ ಡಬ್ಬಿಗಳ ಡಜನ ಗೆ ೨—೦—

ನಮ್ಮ ಹಿಂಗು ಹೋಟು ಬಿಂದಲ್ಲಿ ವಿರತ ಕೊಡುವೆವು, ಟಪಾಲು ಖರ್ಚು ಪ್ರತ್ಯೇಕ.

ಕರೇಕರ ಕಾಬೂಲೀ ಹಿಂಗಿನ ದುಕಾನ ಜವಳಿ ಬಜಾರ ಕುಮಟಾ, (ಉ. ಕಾನ

— ಕರಾಚಿ ಮ್ಯುನಿಸಿಪಾಲಿಟಿಯು ಸ್ಥಾನಿಕ "ಝುಲೋಜಿಕಲ್" ಎಂಬ ಹೆಸರುಳ್ಳ ಉದ್ಯಾನಕ್ಕೆ "ಮಹಾತ್ಮಾ ಗಾಂಧಿ" ಉದ್ಯಾನವೆಂದು ಹೆಸರಿಡಬೇಕಾಗಿ ಠರಾಯಿಸಿದೆ.

— ಇಂಡಿಯಾ ಸರಕಾರದವರು "ಜಹಾಂಗೀರ"ಎಂಬ ಮುಸಲ್ಮಾನರ ಯಾತ್ರಿಕರು ಬರತಕ್ಕ ಹಡಗವನ್ನು ಕ್ವಾರಂಟಾಯಿನದಲ್ಲಿ ಯಾಕೆ ನಿಲ್ಲಿಸಿದ್ದರೆಂದು ತಿಳಿಕೊಳ್ಳುವದರ ಸಲುವಾಗಿ ಯುದ್ಧ ಹಡಗವನ್ನೊಂದು ಕಳಿಸಿರುತ್ತಾರೆ. "ಅಕಬರ" ಎಂಬ ಹಡಗವು ಕಳೆದ ೧೦ ನೇ ತಾರೀಖಿಗೆ ೪೦೦ ಮುಸಲ್ಮಾನರ ಯಾತ್ರಿಕರೊಡನೆ ಜಿದ್ದಾಗೆ ಮುಂಬಯಿಕ್ಕೆ ಪ್ರಯಾಣ ಮಾಡಿತು.

— ಉತ್ತರಾಖಂಡ ಹಿಮಾಲಯದ ಕಡೆಗೆ ಪ್ರಯಾಣ ಬೆಳೆಸಿದ್ದ ಶ್ರೀ ಮೈಸೂರ ಯುವರಾಜರು ಪರಿವಾರ ಸಮೇತ ಹಿಂದೇಗೆ ತಮ್ಮ ಅರಮನೆಗೆ ತಿರುಗಿ ಸುಖರೂಪ ಮುಟ್ಟಿದರು.

धातु क्षीणता व कमजोरपणा यांसाठी

मदन मंजरी गोळ्या. (रजिस्टर्ड.)

या दिव्य गोळ्या रक्त व वीर्य सुधारून त्यांची चांगली वाढ करतात. पचन शक्ति सुधारून परसाकडे साफ होतें. त्याप्रमाणें प्रत्येक प्रकारची अशक्तता दूर होऊन शरीर तेजदार व बळवान होतें. कि ४० गोळयांच्या डबीस रु १.

रमण विलासिनी गोळ्या. रात्रीं फक्त १ गोळी दुधाबरोबर खाल्यानें इच्छेप्रमाणें वीर्यस्तंभन होतें

नपुंसकत्वारी घृत. हा लेप पुरुषाच्या गुह्यभागास लावला असतां सर्व रोग नाश पाऊन खरें पुरुषत्व प्राप्त होतें. कि. डबीस रु. १

कुमटा एजंट :— माधव सांतप्पा शेणवी मेडिकल.

राजवैद्य नारायणजी केशवजी ब्रँच:— १९३ काळबादेवी रोड मुंबई नं. २.

ಭಾಷಾಂತರಕರ್ತರಿಗೆ ಸುಸಂಧಿ!

ಸುಪ್ರಸಿದ್ಧವಾದದ್ದೂ ಅನೇಕ ವಿದ್ವನ್ಮಂಡಳದಿಂದ ಉತ್ತಮ ಅಭಿಪ್ರಾಯ ಪಡೆದದ್ದೂ ಆಗಿರುವ ಋಗ್ವೇದಿಯವರು ಬರೆದ "**आर्यांच्या सणांचा प्राचीन व अर्वाचीन इतिहास**" ಎಂಬ ಮರಾಠಿ ಪುಸ್ತಕವನ್ನು ಕನ್ನಡದಲ್ಲಿ ಭಾಷಾಂತರಿಸುವದಿದೆ. ಇದನ್ನು ಕೈಕೊಳ್ಳಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು.

Apply to:--
V. PRABHA & CO.
BOMBAY 4.

Copies can be had from:-
THE NORTH KANARA TRADING CO.
KARWAR.

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬಿ. ಯವರ

ಸುಗಂಧ ನಶ್ಯದ ಪುಡಿ.

(Registered Trade Mark.)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿದಂದಿನಿಂದ ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ— ನೆಗಡಿ, ಒಂದುತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನೂ ನಾಶಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಪಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾರೆವು.

ಬುದ್ದಿ ಒಂದಕ್ಕೆ ಕ್ರಯ ರೂ. ೦-೪-೦. ವ್ಹಿ. ಪಿ. ೪ ಆಣೆ. ಡಜನ್ ೧ಕ್ಕೆ ರೂ. ೩-೮-೦. ವ್ಹಿ. ಪಿ. ೦-೮-೬ ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಮದರಾಸು.

ಅಮೇರಿಕನ್ ಉಪಾಯ.

ಎಂಬ್ರೋಸಿಯಾ.

AMBROSIA

ಸ್ತ್ರೀರೋಗಪರಿಹಾರಕ್ಕಾಗಿ.

ಎಂಬ್ರೋಸಿಯಾವು ಸಮಸ್ತ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು. ಇದು ಸ್ತ್ರೀಸೌಂದರ್ಯವನ್ನು ಹೆಚ್ಚಿಸುತ್ತದೆ. ಸಾಮಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರುತ್ತದೆ. ಆರೋಗ್ಯ ಆಹಾರ ದೊರೆಯದೆ, ವಿಶೇಷ ಆಯಾಸ ಕೊಳ್ಳುವದರಿಂದ ಸ್ತ್ರೀಯರ ಪ್ರಕೃತಿಯು ಕೆಡುತ್ತದೆ. ಮುಟ್ಟಾಗುವಾಗ ಶೂಲಿ ಏಳುವದು, ಮುಟ್ಟಾಗದಿರುವದು, ಅಪಸ್ಮಾರ, ಬಂಜೆತನ ಮುಂತಾದ ಗರ್ಭಾಶಯದ ಬೇನೆಗಳು, ಅಜೀರ್ಣ, ತಲೆಶೂಲಿ, ಭ್ರಮಿಷ್ಟತನ ಇವೆಲ್ಲ ಸ್ತ್ರೀರೋಗಗಳಮೇಲೆ ರಾಮಬಾಣ ಮದ್ದು. ಎಂಬ್ರೋಸಿಯಾವು ಸಮಸ್ತ ಸ್ತ್ರೀರೋಗಗಳನ್ನು ದೂರಮಾಡಿ, ಸ್ತ್ರೀಯರನ್ನು ಸಶಕ್ತ ಹಾಗು ಸೌಂದರ್ಯವಂತರನ್ನಾಗಿ ಮಾಡುತ್ತದೆ.

ಒಮ್ಮೆ ಪರೀಕ್ಷೆ ನೋಡಿ.

ಬೆಲೆ ಬಾಟ್ಲಿ ೧ಕ್ಕೆ ರೂಪಾಯಿ ೩—೦—೦

ಏಜಂಟರು:— **ಪೀರಿಯಲ ಏಜನ್ಸಿ,**
ಪ್ರಿನ್ಸೆಸ ಸ್ಟ್ರೀಟ, ಮುಂಬಯಿ ನಂಬರ ೨.

DAVAR'S
COLLEGE OF COMMERCE.
(Established 25 years)
CELEBRATES ITS SILVER JUBILEE
THIS YEAR UNDER THE DISTINGUISHED
PATRONAGE OF MERCHANT-PRINCES,
LEADERS OF
THOUGHT AND EDUCATION

The Institution under the sole direction of its Founder and Principal has done pioneer work in introducing for the First Time in India Courses in SPECIALISED BANKING, SPECIALISED SECRETARIAL WORK and SPECIALISED ACCOUNTANCY as the result of his numerous journeys to Europe and to the Colleges and Universities there.

The fact that a Scholar has successfully trained in DAVAR'S COLLEGE has always been accepted by businessmen all over India, Burma and Ceylon as a hallmark of perfection.

Prospectus on application to the Principal,
Great Western Bldg.,
Apollo Street, BOMBAY.

ಜಾಹೀರಾತು.

[illegible] ವಿವರಿಸಿದ [illegible] ಪ್ರತಿ [illegible] ಕೇ. ಪಿ. [illegible] ಮಾಡುವರ [illegible] ತಿಸ್ತ್ರಕ್ಕೆ [illegible] ಯಾವತ್ತೂ [illegible] ವಿಳಾಸಕ್ಕೆ [illegible]

ಪತ್ತೆ —

ಕೇರಳ ಜ್ಯೋತಿಷಿ

ಕೇ. ಪಿ. ನಾರಾಯಣ [illegible]

[illegible] ಕಾಸರಗೋಡು [illegible]

ಜಿಲ್ಲೆ [illegible]

[illegible]] ಅನುಭವಸಿದ್ಧ [

ವನೌಷಧಿಮೂಲಿಕೆಗಳ

[illegible] ಕಪ್ಪು ಕೃತ್ರಿಮ ವಿಷಕಾರಿ [illegible] ರೋಗಗಳಿಗೆ ಒಂದೇ ಒಂದು ಮೂಲಿಕೆ [illegible] ತೀವ್ರ ಗುಣಕರ [illegible] ಅನುಭವ [illegible] ಔಷಧಿಗಳು [illegible] Tincture [illegible]

[illegible]

[illegible] ೧೦೩೦

[illegible] ೦-೩-೦

[illegible] ೦ ೪ ೦

[illegible] ೦ ೪ ೦

[illegible] ೦ ೩ ೦

[illegible] ಕೃತ್ರಿಮ [illegible]

[illegible]

[illegible]

[illegible] ೧-೦-೦

[illegible]

[illegible] ೧೦೦

[illegible] ಆದಕಾರಣ [illegible] ಕಡಿಮೆ ದರದಿಂದ [illegible] ಖರ್ಚು ಪ್ರತ್ಯೇಕ [illegible] ಅನುಪಾನಪತ್ರ ಔಷಧಿ ಸಂಗಡ

ಎನ್. ಜಿ. ಹೆಗಡೆ, ಮಾಸ್ತೇರಿ,

ಪೋಸ್ಟ — ಬಂಕೀಕೊಡ್ಲ ಜಿ. ಉತ್ತರ ಕನ್ನಡ.

ಮಳೆಗೆ ಮೊದಲೇ ಎಚ್ಚರಿಕೆ !

ಅತ್ಯುತ್ತಮ, ಸುಂದರ, ಬಾಳಿಕೆಯುಳ್ಳ, ಮಜಭೂತಾದ

[illegible]] **ಛತ್ರಿಗಳು.** [ಅಗ್ಗ ! ವಿವಿಧ !!

ಪ್ರತಿಯೊಬ್ಬರಿಗೂ ಅನುಕೂಲವಾದ ಪಸಂದಿನ ಮಾಲು !

[illegible] ದೇಶೀಯವಾಗಿಯೇ !! ಆದುದರಿಂದ

[illegible] ಪೂರ್ತಿಯಾಗಿ ತೃಪ್ತಿಯಾಗುವುದು !

[illegible] ಛತ್ರಿ ದುಕಾನುಗಳಲ್ಲಿ ಬಿಕರಿಗೆ ಇದೆ.

[illegible] ಪುರುಷೋತ್ತಮ್ ಮತ್ತು ಕಂಪನಿಯವರ

ಕಲ್ಲಿಕೋಟೆಯ ಕಂಪನಿಯ

[illegible] ಛಾಪಿನ ಛತ್ರಿಗಳೇ ಛತ್ರಿಗಳು !

[illegible] ತಾತ್ಪರ್ಯ ಹೆಚ್ಚು ಸವಲತ್ತು ಕೊಡಲಾಗುತ್ತದೆ.

— ಶ್ರೀನಿವಾಸ ರಂಗ ಪೈ, ಸಾವಕಾರ ಮಹಾಲ್.

ಮಂಗಳೂರು, ದ. ಕನ್ನಡ

[illegible]ಯು ಪ್ರಾರಂಭವಾಯಿತು !

ದನಗಳ ಆಹಾರವಾದ ಕಣಿಕೆಯನ್ನು ಕಾದಿರಿ !!

ಕಿರ್ಲೋಸ್ಕರ ಕಣಿಕೆ ಯಂತ್ರವನ್ನು ಉಪಯೋಗಿಸಿರಿ !!!



ನಮ್ಮ ಕಾರ್ಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕೊರೆಯುವ ಯಂತ್ರಗಳು ತಯಾರಾಗುತ್ತವೆ. ಒಂದು ಕೈಯಂತ್ರ ಬೆಲೆ ೩೦ರೂ. ಇನ್ನೊಂದು ಗಾಲೀ ಯಂತ್ರ ಬೆಲೆ [illegible] ಕಮತದ [illegible] ಯಂತ್ರವನ್ನೂ, ದೊಡ್ಡ ಕಮತದವರು ಗಾಲೀ ಯಂತ್ರವನ್ನೂ ಉಪಯೋಗಿಸಬಹುದು. [illegible] ಕಣಿಕೆಯು [illegible] ಇಂಚುಗಳಿಂದ ಒಂದು ಇಂಚಿನವರೆಗೆ ಕೊರೆಯಲ್ಪಡುತ್ತದೆ. ಸವಿಸ್ತರವಾದ ಸಂಗತಿ [illegible] ಕ್ಯಾಟಲಾಗನ್ನು ತರಿಸಿಕೊಳ್ಳಿರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಅದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯಬೇಕಾದರೆ ಇದು ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ [illegible] ಖರ್ಚು ಬೇರೆ

ಅಮೃತಾಂಜನ ಡಿಪೊ, ಫೋರ್ಟ್, ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press K[illegible].

Monday, June 29th, 1925.

ವರ್ಷ ೯.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೨.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮನಿಯಾರ್ಡರಿಯಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಪ್ಯಾಕಾ ಟೈಪಿನ (೧೫ ಎಮ್ ಉದ) ೮ ಸಾಲುಗಳವರೆಗೆ ರೂ 1-0- ೮ ನಂತ್ರ ಪ್ರತಿಸಾಲಿಗೆ 0-2-0.

ಹೆಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವರು

(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೨೯ ಮಾಹೆ ಜೂನ ಸನ್ ೧೯೨೫ನೇ ಇಸವಿ)

हिंदुस्थानातील रहिवाशांस ज्याप्रमाणें हिंदुस्थानची हवा त्याप्रमाणेंच हें औषध हिंदुस्थानातील लोकांस ज्यास्त फायदेशीर आहे.

द्राक्षासव- तीन रतलची किंमत २ रुपये;

रामबाण औषधें —
सर्दी घालविणारें,
भूक वाढविणारें,
शौच्यास साफ करणारें,
झोप आणणारें,
शक्ति देणारें,
तेजस्वीपणा आणणारें,
— पिण्यास रुचिकर.

क्याटलाग मागवा,

[illegible] फार्मास्युटिकल वर्क्स लिमिटेड,
मुंबई नं. १२

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, B. A.
Jewellers, KUMTA.
ಆರ್. ಎಸ್. ಕಾಸರಗೋಡ,
ರತ್ನಾಭರಣ ವ್ಯಾಪಾರಿ, ಕುಮಟಾ.

ಕ್ಷಯ ರೋಗ?

ವೈದ್ಯ ಫರ್ನಾಂಡಿಸರ
ಬರೇ ಫಾಲ್ಕ್ ಔಷಧಗಳು.

ಪ್ರಕರಣವಾನ ತಿಳಿಸಿರಿ. ಅಂದರೆ ಯೋಗ್ಯ ಔಷಧಗಳನ್ನು ತಯಾರಿಸಿ ಕಳುಹಿಸುವೆವು. ಸಮಕ್ಷ ಭೆಟ್ಟಿಯಾದಲ್ಲಿ ಹೆಚ್ಚಿನ ಮಾಹಿತಿ ದೊರಕುವದು. [illegible]. ಬೇಗನೇ ಕೆಳಗಿನ ವಿಳಾಸಕ್ಕೆ ಬರೆಯಿರಿ. (ರೂ. ೨೮-೧೦-೦.)

ವೈದ್ಯ ಫರ್ನಾಂಡಿಸ,
ರೋಗಾಂತಕ ಡಿಪೋ,
ಕಾರವಾರ

ಆಯುರ್ವೇದಿಕ) ಧಾತುಪೌಷ್ಟಿಕ, ಶಕ್ತಿವರ್ಧಕ, ರಕ್ತಶೋಧಕ (ಮಲಬಾರಿಕೃತಿ

ಮದನಕಾಮೇಶ್ವರೀಲೇಹ.

ಆಬಾಲ ವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಇದರಲ್ಲಿ ಕೇಸರ ಕಸ್ತೂರಿ [illegible] ಅಮೃತಸತ್ವಾದಿ ಅನೇಕ ವನೌಷಧಿಯುಕ್ತ [illegible] ಧಾತು [illegible] ನಪುಂಸಕತ್ವ [illegible] ಧಾತುಕ್ಷೀಣತೆ ಸ್ವಪ್ನಸ್ಖಲನ [illegible] ಸಂಧಿವಾತ [illegible] (ಗರ್ಮಿ) [illegible] ೧ ತಿಂಗಳು ಸಾಲುವ ಡಬ್ಬಿಗೆ [illegible] ಸಂಗಡ

ಅತ್ಯುತ್ತಮ) ಜಂತುನಾಶಕ ಔಷಧ (ದರಸುಲಭ.

[illegible] ಎಲ್ಲಾರೋಗಗಳಮೇಲೆ [illegible] ಬೇಕಾದವರು [illegible] ಪತ್ರ ಬರೆದಲ್ಲಿ ನಮ್ಮ [illegible] ಪುಸ್ತಕವನ್ನು ಪುಕ್ಕಟೆಯಾಗಿ ಕಳಿಸುವೆವು.

ಮೆನೇಜರ ಆಯುರ್ವೇದ ಚಿಕಿತ್ಸಾ ಮಂದಿರ, ತಾ. ಕಾರವಾರ, ಪೋ. ಚೆಂಡಿಯೆ.

ಮುಂಬೈ ಏಜಂಟ.— R, C KAMAT, Teashop Store Lane, Fort, BOMBAY

ಅತಿ ಉತ್ತಮವಾದ ನಶ್ಯ!

ಈ ನಶ್ಯವು ನಮ್ಮಲ್ಲಿ ಬಹಳ ವರ್ಷಗಳಿಂದ ಪ್ರಖ್ಯಾತಿ ಹೊಂದಿರುತ್ತದೆ. ಬೇಕಾದವರು ತರಿಸಿಕೊಳ್ಳಬಹುದು. ಸೆಂಪಲ್ ಬೇಕಾದವರು ೧ಅಣೆ ಸ್ಟಾಂಪು ಕಳುಹಿಸಬೇಕು

ನಂಬರ ೧. ಫೌಂಡು ೧ಕ್ಕೆ ೨-೪-೦.
" ೨ ಫೌಂಡು ೧ಕ್ಕೆ ೨-೦-೦

ಜಿ. ರಾಮಯ್ಯಾ ಕಾರಡಿ,
ಪೋಸ್ಟ.- ಕರ್ಕಿ, ಉ ಕಾನಡಾ

ಹುಟ್ಟಿದ ವೇಳೆ ತಿಳಿಸಿರಿ.) ಸುಖಸಾಧನಕ್ಕೆ ಯೋಗ್ಯ ಉಪಾಯವು. (ಯಾ ಜನ್ಮಟಿಪ್ಪಣಿ ಕಳಿಸಿರಿ.

☞ ಮಲಬಾರಿ) ಕೇರಳ ಜ್ಯೋತಿಷ. (ಭವಿಷ್ಯ.

ನಿಮ್ಮ ಜನ್ಮಟಿಪ್ಪಣಿ ಕಳಿಸಿ. [illegible] ಆಯುಷ್ಯದಲ್ಲಿ [illegible] ಇಷ್ಟಾನಿಷ್ಟ ಫಲಗಳನ್ನು, ಅನಿಷ್ಟಫಲ ನಿವಾರಣಾರ್ಥ [illegible] ಸಂಕಟಗಳನ್ನು ಪರಿಹರಿಸುವ ಉಪಾಯಗಳನ್ನು ತಿಳಿಸೋಣ. ಮುಂದಿನ ಭವಿಷ್ಯ [illegible] ಸುಖಕಾರಕ ಮತ್ತು ಲಾಭದಾಯಕವಾಗುವಂತೆ ಸರಿಯಾದ ಫಲವನ್ನು [illegible] ಪ್ರಸಿದ್ಧವಾದ [illegible] "ಕೇರಳ" [illegible] ಗ್ರಂಥಗಳ ಏಕವಾಕ್ಯತೆಯಿಂದ ಬರೆದು ಕಳಿಸುವೆ. [illegible]

ಮೆನೇಜರ, "ಜ್ಯೋತಿಷ ಶಾಸ್ತ್ರ-ಭುವನ," ಚೆಂಡಿಯೆ, ತಾ ಕಾರವಾರ

ನಮ್ಮ ಪ್ರೆಸ್ಸಿನಲ್ಲಿ

[illegible] ಜಾತಿ ದಾವೆ [illegible] ತಯಾರಿಸಿ ವಖಾಲತ, ಅಮುಖತ್ಯಾರಿ ಪೊರ್ಮ [illegible] ವ್ಯವಹಾರಗಳ [illegible] ಅಗ್ಗವಾಗಿ ಸಿಗುತ್ತವೆ

ಮನೇಜರ,

[illegible]

ಪ್ರಯಾಣಿಕರ ಅನುಕೂಲತೆ [illegible]

ಡೇಲಿ ಮೋಟರ ಸರ್ವಿಸ.



ಕುಮಟೆಯಿಂದ— ಹೊನ್ನಾವರಕ್ಕೆ, ಭಟ್ಕಳಕ್ಕೆ [illegible]

ಕುಮಟೆಯಿಂದ— ಶಿರ್ಸಿ ಹುಬ್ಬಳ್ಳಿಗೆ, [illegible]

ಕುಮಟೆಯಿಂದ— [illegible] ಟಿಕೇಟುಗಳ [illegible]

ಬಿ. ದಾಸ.
ಏಜಂಟ ಕುಮಟಾ

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು

೧ ರಾಗದ ಕೈಪೆಟ್ಟಿಗೆ ಕಿಂ ೩೦, ೪೦, ೬೦, ೭೫, ೧೦೦
೨ [illegible] ಪೆಟ್ಟಿಗೆ ಕಿಂ ೬೫, ೭೫, ೧೨೦, ೧೪೦
೩. ತಬಲೆ ಜೋಡಿ ಕಿಂ. ೧೬, ೧೮, ೨೦ ೨೫
೪ ಹಾರ್ಮೋನಿಯಮ ಗ್ಯಾಡ (ಸ ದಾರಿ) ಕಿಂ ೧॥
ತಬಲೆ ಗ್ಯಾಡ ಕಿಂ ೧॥ ಆ

ವಿಶೇಷ ಮಾಹಿತಿಗೆ ನಮ್ಮ ಮರಾಠಿ ಕ್ಯಾಟಲಾಗ ಪುಕ್ಕಟ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು

ಪತ್ತೆ:— **ಗೋಪಾಳ ಸಖಾರಾಮ** [illegible]
ಕಂಪನಿ, ವಿಠ್ಠಲವಾಡಿ ಎದುರಿಗೆ,
೨೩೩ ಕಾಳಬಾದೇವಿ. ಮುಂಬಯಿ

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ

ಕಳೆದ ೪ ವರ್ಷಗಳಿಂದ ನಾವು ಶಿವಮೊಗ್ಗಾ—ತೀರ್ಥಹಳ್ಳಿ—ಅಗುಂಬೆ, ಶಿವಮೊಗ್ಗಾ—ಸಾಗರ—ತಾಳಗುಪ್ಪೆ, ಶಿವಮೊಗ್ಗಾ—ಹರಿಹರ—ದುಗ್ಗಾವತಿ, ಶಿವಮೊಗ್ಗಾ—ಕಳೂರಕಟ್ಟೆ, ಸಾಗರ—ಸೊರಬ—ಶಿರಾಳಕೊಪ್ಪ [illegible] ತೀರ್ಥಹಳ್ಳಿ ಸಾಗರ—ಕಳೂರಕಟ್ಟೆ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ ಸರ್ವಿಸನ್ನು ನಡೆಸುತ್ತಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ, ಉಡಪಿ, ಕುಂದಾಪುರ, ಮಂಗಳೂರ [illegible] ಈ ಕಡೆಗೆ "ಕಾರ್ಕಳ ಮೋಟರ ಸರ್ವಿಸಿನ" ವಿಶ್ವಮಾನವೂ, ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ [illegible] ಮೋಟರ ಸರ್ವಿಸಿನ" ವಿಶ್ವಮಾನವೂ ಪ್ರಯಾಣಿಕರ ಎಲ್ಲ ಸೌಕರ್ಯಗಳ ವ್ಯವಸ್ಥೆ ಮಾಡಿದ್ದೇವೆ

[illegible] ಪ್ರಯಾಣಿಕರು ಜೋಗ (Gersoppa Falls), ಶಿವಮೊಗ್ಗಾ [illegible] ಹರಿಹರ [illegible] ಸ್ಥಳಗಳಿಗೆ ಪ್ರಯಾಣ ಬೆಳೆಸಲು ಅನುಕೂಲವಾಗಬೇಕೆಂದು [illegible] ಜೋಗ, ಸಿದ್ದಾಪುರ, ಶಿರ್ಸಿ, ಕುಮಟಾ ಈ ಲೈನಿನಲ್ಲಿ ಮೋಟರ ಸರ್ವಿಸ ಪ್ರಾ[illegible]

ಕಾಲಕ್ರಮಗಳು.

[illegible] ಹೊರಡತಕ್ಕದ್ದು—	ಬೆಳಿಗ್ಗಿನ ೭ ಘಂಟೆಗೆ.
ಶಿರ್ಸಿ [illegible] —	„ ೧೦ „
ಶಿರ್ಸಿ [illegible] ಶಿವಮೊಗ್ಗಾ ಕಡೆಗೆ—	ಮಧ್ಯಾಹ್ನ ೧ „
[illegible] ಸಿದ್ದಾಪುರ ಮಾರ್ಗವಾಗಿ)—	ಸಾಯಂಕಾಲ ೬ „
[illegible] ಶಿರ್ಸಿ [illegible] ಹೊರಡುವದು—	ಬೆಳಿಗ್ಗಿನ ೬ „
ಸಿದ್ದಾಪುರ [illegible] ಶಿರ್ಸಿಗೆ ಸೇರುವದು—	„ ೧೧ „
ಶಿರ್ಸಿ [illegible] ಕುಮಟೆಗೆ ಹೊರಡುವದು—	ಮಧ್ಯಾಹ್ನ ೨ „
ಕುಮಟೆಗೆ ಸೇರುವದು—	ಸಾಯಂಕಾಲ ೫ „

N B — ಈ ಮೇಲಿನ ಲೈನುಗಳ ವಿನಹ ಶಿರಶಿಯಿಂದ ಹುಬ್ಬಳ್ಳಿಗೆ ಪ್ರತ್ಯೇಕ ಒಂದು ಸರ್ವಿಸ [illegible] ಇರುತ್ತದೆ ಸರ್ವರೂ ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

SHIMOGA, } **M. MANJAPPA.**
---1—1924 } **PROPRIETOR.**

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಔಷಧಿ ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತ . ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕೃತಿಯಿಂದಾದ ಬೇನೆಯು ಹೋಗುವದು. [illegible] ವರ್ಷದ ಮುದುಕರ ಕಾತುವಿಕಾರವು ಕಡಿಮೆಯಾಗಿ [illegible] ಪ್ರವರ್ಧಮಾನವಾಗುವದು. ([illegible] ಅನುಭವಕ್ಕೆ ಬರುವದು) ಜನನೇಂದ್ರಿಯ ಶಕ್ತಿಯು ಹೋಗಿ [illegible] ಮೂತ್ರವಿಸರ್ಜನೆ ಪೂರ್ವದಲ್ಲಿ ಅಥವಾ [illegible] ಹೋಗುವ ವೀರ್ಯ [illegible] ಕ್ಷೀಣವಾಗುವದು. ಮೂರೇ ದಿವಸದಲ್ಲಿ [illegible] ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು ಇದರಿಂದ ಕ್ಷಯರೋಗ, ಉಬ್ಬಸರೋಗ ಕೆಮ್ಮು ಇವುಗಳು ನಾಶವಾಗುವವು ದಿವಸದಲ್ಲಿ [illegible] ಊಟಮಾಡಿದರೂ ಅನ್ನ ಪಚನವಾಗಿ ಹಸಿವು ಚನ್ನಾಗಿ ಆಗುತ್ತ . ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ ಮೂರು ಬಾಟಲಿಯ ಕಿಮ್ಮತು ೩—೪—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚು ಹೆಚ್ಚು ಬೀಳುವದಿಲ್ಲ ಇದರ ೬ ಬಾಟಲಿಗಳ ಕಿಮ್ಮತು ೬॥—೦—೦ ಮತ್ತು ೧ ಬಾಟಲಿ ಪುಕ್ಕಟ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧—೪—೦ ೩ ಬಾಟ್ಲಿಗೆ ೩—೦—೦, ಡಜನಿಗೆ ೧೩—೮—.

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸು, ಪೋ ನಿಪ್ಪಾಣಿ, ಜಿ ಬೆಳಗಾಂವ.

ಕೈರಾಟಿಯ ಪ್ರಸಾರ.

ಮಹಾತ್ಮರು ದೇಶಬಂಧುಗಳೊಡನೆ ಮಾತಾಡಲು ಡಾರ್ಜಿಲಿಂಗಕ್ಕೆ ಹೋಗಿದ್ದರಷ್ಟೇ. ಡಾರ್ಜಿಲಿಂಗವೆಂದರೆ, ಬೆಟ್ಟದ ಪ್ರದೇಶ. ಮೂಲ ನಿವಾಸಿಗಳು ಕಾಡು ಜನರು. ಅಲ್ಲಿ ಹೋಗುವವರು ದೊಡ್ಡವರು; ವಿಲಾಸಿಗಳು. ಅಂಥ ಪ್ರದೇಶದಲ್ಲಿಯೂ ಕೈರಾಟಿಯು ಪ್ರವೇಶಗೊಂಡಿದೆ. ಒಬ್ಬರು ಕೈರಾಟಿಯನ್ನು ಸುಧಾರಿಸಲು ಯತ್ನಿಸುತ್ತಿರುವವರೂ ಅವರು ಆ ರಾಟಿಯಮೇಲೆ ಅತ್ಯುತ್ತಮವಾದ ನೂಲು ತೆಗೆಯುತ್ತಿರುವರು. ಮಹಾತ್ಮರಿಗೆ ಅವರು ಕೈರಾಟಿಯನ್ನು ತೋರಿಸಿದರು. ಒಂದು ಮೋಜಿನದಾಯಿತು. ಮಹಾತ್ಮರು ಸಾಮಾನ್ಯ ರಾಟಿಯಮೇಲೆ ನೂಲು ತೆಗೆಯಲಾರಂಭಿಸಿದರು. ಅವರು ತಮ್ಮ ಹೊಸ ನಮೂನೆಯ ರಾಟಿಯ ಮೇಲೆ ನೂಲು ತೆಗೆದರು. ಹೊಸ ರಾಟಿಯ ಮೇಲಿನ ನೂಲು ತಾಸಿಗೆ ೪೦೦ ಗಜಕ್ಕಿಂತ ಮಿಕ್ಕಿಲ್ಲ. ಸಾಮಾನ್ಯ ರಾಟಿಯ ಮೇಲೆ ತಾಸಿಗೆ ೮೦೦ ಗಜ ನೂಲು ತೆಗೆಯಬಹುದು.

ಡಾ| ರಾಜಬಾಲಿ ಎಂಬ ಮಹಿಳೆಯರೂ ಮಾತ್ರರು ಡಾರ್ಜಿಲಿಂಗಕ್ಕೆ ಹೋಗಿರುವರು. ಅವರೊಡನೆ ಅವರ ಕಂಪನಿಯೂ ಹೋಗಿರುವಳು.. ಗಂಡ ಹೆಂಡರು ನಿತ್ಯವೂ ನೂಲು ತೆಗೆಯುತ್ತಾರೆ. ಅವರು ಮಹಾತ್ಮರಿಗೆ ಖಾದಿ ಕಾರ್ಯಕ್ಕಾಗಿ ಕೆಲವೊಂದು ರಕಮನ್ನು ಅರ್ಪಿಸಿದರ [illegible] ವರ ಕೈರಾಟಿಯು ನಡೆದಿದ್ದಿಲ್ಲ. ಅದನ್ನು ಖಾದಿ ಪ್ರತಿಷ್ಠಾನದ ಬಂಗಾಲದ ಶ್ರೀ ಸತೀಶ ಬಾಬೂರವರೂ, ಮಹಾತ್ಮರ ಜೊತೆಗಾರರಾದ ಶ್ರೀ ಮಹಾದೇವಭಾಯಿ ದೇಸಾಯಿಯವರು ದುರಸ್ತಿಗೆ ಮಾಡಿ ಕೊಟ್ಟರು. ಅದಾಗಿಯೂ, ಡಾ| ರಾಜಬಾಲಿಯವರು ಅನೇಕ ಯೋಗಕ್ಕೆ ಸೇರಿದವರಲ್ಲ [illegible] ಮಯ ಜೊತೆ ಮಾಡ್ಯರು; ಹೇರಳ ಉತ್ಸಾಹವಿದೆ. ಈ ಕುಟುಂಬದ [illegible] ವಿಶ್ವವಿದ್ಯಾಲಯದ ಪರೀಕ್ಷಕರು. ಮೇಲಾಗಿ, ಅನೇಕ ಸಂಸ್ಥೆಗಳಲ್ಲಿ ಸರಕಾರ ಕಡೆಯಿಂದ ಸಭಾಸದರಾಗಿಯೂ ಇವರು ಸೇವಾ ಕೊಂಡಿರುವರು.

ಡಾರ್ಜಿಲಿಂಗದಲ್ಲಿ ದೇಶಬಂಧುಗಳ ಸಾನ್ನಿಧ್ಯದಿಂದಲೂ, ಮಹಾತ್ಮರ ಆಗಮನದಿಂದಲೂ ಅನೇಕ ಜನ ಸರಳ ಕೈರಾಟಿಯ ಮರ್ಮಗಳನ್ನು ಕಲಿಯಹತ್ತಿದರು. ದೇಶಬಂಧುಗಳ ಪತ್ನಿಯರು ಕೈರಾಟಿಯ ಒಂದು ಸಮಿತಿಯನ್ನು ಸ್ಥಾಪಿಸಿದ್ದರು

ಡಾರ್ಜಿಲಿಂಗಕ್ಕೆ ಹೋಗುವಾಗ ಬೆಟ್ಟದ ಮೇಲೆ ಸಂಯುಕ್ತ ಪ್ರಾಂತದ ಬುಲಿಯಾ ಪಟ್ಟಣದವರೊಬ್ಬರು ಇರುವರು. ಅವರೊಂದು ಸಣ್ಣ ಅಂಗಡಿಯಿಟ್ಟ ಅವರು ಖಾದಿಯನ್ನು ಧರಿಸುತ್ತಾರೆ. ಖಾದಿಕಾರ್ಯಕ್ಕಾಗಿ ಮಹಾತ್ಮರಿಗೆ ಅವರು ೫೦ ರೂಪಾಯಿಗಳನ್ನು ಅರ್ಪಿಸಿದರು. ಹಿಂತಿರುಗಿಬರುವಾಗ ಪುನಃ ಅವರು ಅವರ ಹೆಂಡತಿಯೂ ಮಹಾತ್ಮರ ದರ್ಶನ ಪಡೆದು, ಇನ್ನು ೫೦ ರೂಪಾಯಿಗಳನ್ನು ಅರ್ಪಿಸಿದರು. ಈ ಬಾರಿ ಅವರು ತಮ್ಮ ಗೆಳೆಯರ ಸಹಿತವಾಗಿ ಮಹಾತ್ಮರ ದರ್ಶನ ಕೊಳ್ಳ ಬಂದಿದ್ದರು. ಖಾದಿಕಾರ್ಯಕ್ಕಾಗಿ ನಾನು ಹಣಕೊಡಬೇಕಾಗಿತ್ತಲ್ಲ, ಎಲ್ಲಿ ಕಳಿಸಬೇಕೆಂದು ಅವರು ಶ್ರೀ| ಮಹಾದೇವ ದೇಸಾಯಿಯವರಿಗೆ ಕೇಳಿದರು.

ದಾರಿಯ ಮೇಲೆ ಸಿಲಿಗುರಿ ಎಂಬ ಪಟ್ಟಣವಿದೆ. [illegible] ಇಲ್ಲಿ ಒಬ್ಬ ಬಿಹಾರಪ್ರಾಂತದವರಿರುವರು. ಇವರು ಖಾದಿ ಪಟ್ಟಿ [illegible]. ಮಹಾತ್ಮರು ಡಾರ್ಜಿಲಿಂಗಕ್ಕೆ ಹೋಗುತ್ತಿದ್ದರು. ದಾರಿಯಲ್ಲಿ ಅವರು ಮಹಾತ್ಮರಿಗೆ ಕಂಡುಕೊಂಡು, ಹಿಂತಿರುಗಿ ಬರುವಾಗ, ತಮ್ಮ ಗ್ರಾಮದಲ್ಲಿ ೧ ತಾಸು ಮಹಾತ್ಮರು ಉಳಿಯಬೇಕೆಂದು ಅವರು ಹೇಳಿಕೊಂಡಿದ್ದರು. ಅದರಂತೆ, ಮಹಾತ್ಮರು ಸಿಲಿಗುರಿಗೆ ಹೋಗಲು ಅವರಿಗೆ ಪರಮಾನಂದವಾಯಿತು. ೨ ಸಭೆಗಳಾದವು. ಒಂದು ಗಂಡಸರದು; ಒಂದು ಹೆಂಗಸರದು. ಭಕ್ತರಾದವರು ಅಷ್ಟು ಸಮಯದಲ್ಲಿ [illegible] ರೂಪಾಯಿಗಳನ್ನು ಸಂಗ್ರಹಿಸಿ ಮಹಾತ್ಮರಿಗೆ ಅರ್ಪಿಸಿದರು.

ತಮಿಳನಾಡು ಪ್ರಾಂತದಲ್ಲಿ [illegible] ಮಂದಿಗಳು ರಾಷ್ಟ್ರೀಯ ಸಭೆಯ ಸಭಾಸದರಾಗಿರುವರು. ಸ್ವತಃ ನೂಲು ತೆಗೆದು ಕೊಡುವವರು [illegible] ಮಂದಿಗಳು

ನೇತೃಗಳ ಭಾಷಣಕ್ಕೆ ಕಿವಿಗೊಳ್ಳುವದು ಈಗಿನ ಕಾಲದ ಒಂದು ಪದ್ಧತಿಯಾಗಿದೆ. ಅದರಂತೆಯೇ ದೊಡ್ಡವರ ಹಸ್ತಾಕ್ಷರವನ್ನು ಪಡೆಕೊಂಡು ಇಡುವದೂ ಒಂದು ಪದ್ಧತಿ. ಮಹಾತ್ಮರು ಪದೇ ಪದೇ ಭಾಷಣಕ್ಕೆ ಕೂಡಲು ಒಪ್ಪುವದಿಲ್ಲ. ಸಿಕ್ಕಸಿಕ್ಕಲ್ಲಿ ಹಸ್ತಾಕ್ಷರ ಕೊಡುವದೂ ಅವರಿಗೆ ಒಪ್ಪಿಗೆಯಿಲ್ಲ. ಆದರೆ ಹಸ್ತಾಕ್ಷರ ಬೇಕೆನ್ನುವವರು ಮಿತಿಮೀರಿದಂತೆ, ಅವರೊಂದು ಯುಕ್ತಿಯನ್ನು ಹುಡುಕಿ ತೆಗೆದಿರುವರು. ಹಸ್ತಾಕ್ಷರ ಪಡೆಯಬೇಕಾದರೆ, ಅದಕ್ಕೆ ಬೆಲೆ ಕೊಡಬೇಕು. ದ್ರವ್ಯದ ಬೆಲೆಯು ಮಹಾತ್ಮರಿಗೆ ಬೇಕಾಗಿಲ್ಲ. ಹಸ್ತಾಕ್ಷರ ಬೇಕಾದವರಿಗೆ ಅವರು ಹೇಳುವದೇನಂದರೆ — 'ನನ್ನ (ಹಸ್ತಾಕ್ಷರದ) ಬೆಲೆಯು ತೀರ ಸಾಮಾನ್ಯವಿದೆ. ದೇಶಕ್ಕಾಗಿ ನಿತ್ಯವೂ ಅರ್ಧ ತಾಸು

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂಥ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವದೋ.

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ಕಡಿಮೆಯಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಸಿ ಕೊಂಡಿರುವ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಅದರೆ, ಅವು ಸೊಂಪಾಗಿ ಬೆಳೆದು ದಟ್ಟವಾಗುವವು. ಇದರ ಸುಗಂಧವಂತೂ ಮಧುರವೂ ಮನೋಹರವೂ ಆಗಿರುವದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇ ಒಂದು ಬಾರಿ "ಕಾಮಿನಿಯಾ ಆಯಿಲ್ ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಪ್ಯಾರಿಸ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಅನೇಕ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರೆತಿವೆ.

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ ೩ಕ್ಕೆ ರೂಪಾಯಿ 2-10-0 ವ್ಹಿ. ಪಿ. ಖರ್ಚ 0-14-0.

ಅತಿ ಮನೋಹರವಾದ ಸುಗಂಧಿಯು!

ಒಟ್ಟೋ-ದಿಲ್ ಬಹಾರ್ !! ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವಾದ್ದು ಹೊಸ್ಸಾಗಿ ಶೋಧಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡಿದೆ. ಇದರಲ್ಲಿ ಮದಿರೆಯು (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಹಚ್ಚಿದರೆ ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಆವಿರ್ಭವಿಸುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋ-ದಿಲ್ ಬಹಾರದ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಕಿರು ಸೀಸೆ 1ಕ್ಕೆ 0-8-0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0; ¼ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0,

ಒಟ್ಟೋ ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0-12-0.

ddress:- **The Anglo Indian Drug & Chemical Co.**

16 Market, **BOMBAY 2**

ನ್ನೊಲ್ಲಬೇಕು. ಧಾರಾನಗಲೂ ಖಾದಿ ಪ್ರಧಾನ ಮಾಡುವ ವಚನ ಕೊಡಬೇಕು." ಈ ಮಾತು ಕೇಳಿದೊಡನೆ ಆಕೆಯರು ಹಿಂಜರಿಯುತ್ತಿದ್ದರು. [illegible] ಈ ವಚನ ಕೊಟ್ಟು ಮಹಾತ್ಮರ ಹಸ್ತಾಕ್ಷರ ಪಡೆದರು. ಎಳೆ ಪ್ರಾಯದ ಹೆಂಗಸೊಬ್ಬಳು ಹಸ್ತಾಕ್ಷರದ ಪುಸ್ತಕವನ್ನು ತಂದು ಮಹಾತ್ಮರಿಗೆ ಒಪ್ಪಿಸಿದಳು. ಮಹಾತ್ಮರು ಮೇಲಿನ ಪ್ರಶ್ನೆಯನ್ನಿಟ್ಟರು. ಆಗ ಅವಳು ಮನೆಗೆ ಹೋದಳು. ಮಾರನೇ ದಿನ ವಿಚಾರ ಮಾಡಿ, ಪುನಃ ಬಂದು, ಮಹಾತ್ಮರ ಕರ್ತನಂತೆ ನಡೆಯುತ್ತೇನೆಂದು ಹೇಳಿದಳು. ಆಗ, ಮಹಾತ್ಮರು ಅವಳ ಪುಸ್ತಕದಲ್ಲಿ ಬರೆದದ್ದೇನಂದರೆ — "ಗಾಂಧಿಯಿಂದ ಎಂದೂ ವಚನ ಕೊಡಬೇಡ. ಒಮ್ಮೆ ವಚನವನ್ನಿತ್ತ ಬಳಿಕ, ಪ್ರಾಣತ್ಯಾಗ ಮಾಡಿ ಸಹ ಅದನ್ನು ಪಾಲಿಸು."

ದಾರ್ಜಿಲಿಂಗದಿಂದ ಕೆಳಗಿಳಿಯುವಾಗ ವಿದ್ಯಾರ್ಥಿಯೊಬ್ಬನು ಮಹಾತ್ಮರೊಡನೆ ಹಸ್ತಾಕ್ಷರ ಬೇಡಿದನು. "ಖಾದಿಯನ್ನು ಧರಿಸಿ, ದಿನಾ ಅರ್ಧ ತಾಸು ನೂಲುವಿಯೋ?" ಎಂದು ಮಹಾತ್ಮರು ಕೇಳಿದೊಡನೆ, ಆತನು ಬೆಪ್ಪಾದನು. ಬಳಿಕ, "ಸರ್. ರವೀಂದ್ರನಾಥ ಠಾಕೂರರವರು ತಮ್ಮ ಹಸ್ತಾಕ್ಷರವನ್ನು ನನಗೆ ಕೊಟ್ಟರು." ಎಂದು ಆತನು ಗುಣುಗುಟ್ಟಿದನು. "ಅವರು ದೊಡ್ಡ ಮನಸ್ಸಿನವರು; ಸಾಧು ಪುರುಷರು." ಎಂದು ಮಹಾತ್ಮರು ಉತ್ತರಿಸಿದ ಕೂಡಲೆ, ಪುಸ್ತಕವನ್ನು ಜೇಬಿನಲ್ಲಿ ಸೇರಿಸಿ ತಣ್ಣಗೆ ನಡೆದನು.

ದೇಶಬಂಧುಗಳ ಪುಣ್ಯಸ್ಮರಣೆ!

"ಮುಂದಿನ ಸ್ಥಿತಿ ಭಗವಂತನಿಗೇ ಗೋಚರ!"

ಅಂತ್ಯಕಾಲದ ಹಕೀಕತು

ದೇಶಬಂಧುಗಳ ಪ್ರಕೃತಿಯು ದಾರ್ಜಿಲಿಂಗದಲ್ಲಿ ಹೋದಂದಿನಿಂದ ಸ್ವಲ್ಪ ಸುಧಾರಿಸಿತ್ತು. [illegible] ಗ್ರಂಥವನ್ನು ತಯಾರಿಸಲು ಅವರು ತೊಡಗಿದ್ದರು. ಮೊದಲಿನಿಂದ ದಾಸರಿಗೆ [illegible] ವಾರದ ವರೆಗೆ, ಅಂದರೆ, ಸಾಯುವ ೫ ದಿವಸಗಳ ಮುಂಚೆ ಚಿತ್ತರಂಜನರು [illegible] ಹತ್ತಿದ್ದರು. ದೇಶಬಂಧುಗಳಿಗೆ [illegible] ಜ್ವರ ಬರುತ್ತಿತ್ತು; [illegible] ಬಿಡುತ್ತಿತ್ತು. ಆದರೂ, ಪ್ರಾಣಾಂತಿಕ [illegible] ಇನ್ನು [illegible] ವರೆಗೆ [illegible] ವೈಕುಂಠವಾಸಿಗಳ [illegible] ನ ಹೊಂದಿದ್ದ ಮಂಗಳವಾರಕ್ಕೆ. ಮುಂಚಿನ ರವಿವಾರದ ವರೆಗೆ ದೇಶಬಂಧುಗಳ ಪ್ರಕೃತಿಯು ನೆಟ್ಟಗಿತ್ತು; ರವಿವಾರಕ್ಕೂ ನೆಟ್ಟಗಿತ್ತು. ಅಂದು ಮುಂಜಾವಿನಲ್ಲಿ ದೇಶಬಂಧುಗಳು [illegible] ರೊಡನೆ ಅವರಲ್ಲಿ ಹೋಗಿ ಮಾತುಕಥೆ ನಡಿಸಿದರು. ಮಧ್ಯಾಹ್ನ ಊಟವಾದ ಬಳಿಕ, ಕೆಲ ಮುಹೂರ್ತದ ಕೆಲಸ ನೀಗಿಸಿದರು. ಸಾಯಂಕಾಲವಾದರೂ ಬಾರಿ ಜ್ವರವೇನು ಕಂಡುಬರಲಿಲ್ಲ. ಸಾಯಂಕಾಲ ವಾಸಂತಿ ದೇವಿ ದಾಸರಿಗೆ [illegible]. ಆಗ ಅವರು ಉದ್ಗರಿಸಿದ್ದೇನಂದರೆ, "ನನಗೆ ಜ್ವರ ಬರುವದೆಂದು ತಾವು ಯಾವಾಗಲೂ ಆಲೋಚಿಸುತ್ತಿರುತ್ತೀರಿ. ಇನ್ನು ನನಗೆ ಜ್ವರ ಬರದು." ಏನು ಆಶೆ! "ದೈವಮನುಷ್ಯ [illegible]" ಸಾಯಂಕಾಲಕ್ಕೆ ಊಟ ಮಾಡಲು ವಾಸಂತಿ ದೇವಿಯವರು ಪತಿಗಳಿಗೆ ಅತ್ಯಾಗ್ರಹ ಮಾಡಿದರು. ದೇಶಬಂಧುಗಳೂ ಊಟ ತೀರಿಸಿದರು. ೯ ಘಂಟೆಗೆ ಕೆಲವು ನಿಬಂಧಗಳನ್ನು ಪತ್ನಿ ಹಾಗು ಮಗಳಂದಿರಿಗೂ ಓದಿ ಹೇಳಿದರು. ಚಿತ್ತರಂಜನರ ವಾಚನವದು! ವಾಙ್ಮಯ ಪ್ರೇಮಿಗಳ ವಾಚನವದು!! ಹೆಂಡತಿ-ಮಕ್ಕಳಿಗೂ, ದೇಶಬಂಧುಗಳಿಗೂ ಪರಮಾನಂದವಾಯಿತು. ೧೧ ಬಡಿದವು. ಕಾಲು ಜ್ವರವು ಪುನಃ ದೇಶಬಂಧುಗಳ ಮೇಲೆ ಸಾಗಿ ಬಂತು. ದೇಶಬಂಧುಗಳು ನಡುಗುತ್ತಿದ್ದರು. ಇಡೀ ರಾತ್ರಿ ಇದೇ ಅವಸ್ಥೆಯಲ್ಲಿಯೇ ಕಳೆಯಬೇಕಾಯಿತು. ಮುಂಜಾವಿಗೆ ಜ್ವರ ಇಳಿಯುವದೆಂಬ ಗ್ರಹಿಕೆ ಇತ್ತು; ಆದರೆ, ಪರೀಕ್ಷಿಸಿ ನೋಡಲು, ಸೋಮವಾರ ಮುಂಜಾವಿಗೆ ಜ್ವರವು ೧೦೩ ಡಿಗ್ರಿಗೆ ಮುಟ್ಟಿತ್ತು. ಆದರೂ, ದೇಶಬಂಧುಗಳ ಆತ್ಮಶಕ್ತಿಯು ಕಡಿಮೆ [illegible] ಯಾರೂ ಎಣಿಸಲಿಲ್ಲ. ಆದರಿಂದ ಜ್ವರದ ಸುದ್ದಿಯು ಎಲ್ಲಿಯೂ ಹಬ್ಬಲಿಲ್ಲ. ಸೋಮವಾರ ಮಧ್ಯಾಹ್ನ ೧೧ ಘಂಟೆಯ ಸಮಯ ಮೈ ನೋವಾಗಿದೆಂದು ಚಿತ್ತರಂಜನರು ನುಡಿದರು. ಕ್ರಮೇಣ ಉಸಿರು ಗಟ್ಟಲಿಕ್ಕೂ ಪ್ರಾರಂಭವಾಯಿತು. ಅವರಾಪ್ತ ಡಾ|| ಡಿ. ಎನ್. ರಾಯ್‌ರವರಿಗೆ ಕರೆಕಳುಹಿದರು. ಡಾಕ್ಟರರು ಚಿಕಿತ್ಸೆ ಮಾಡಿದರು; [illegible] ಅವರ ಮತವಾಯಿತು. ಆದರೂ, ವಾಸಂತಿ ದೇವಿ ದಾಸರಿಗೆ [illegible] ಬೀಳುವದೆಂದು ಕಲ್ಪನೆಯಾಗಲಿಲ್ಲ. ಆದರಿಂದ ಕಲಕತ್ತೆಗೆ ಈ ಅಶುಭ ವಾರ್ತೆ ತಿಳಿಯಬೇಕಿಲ್ಲ. ಮಂಗಳವಾರ ದಿವಸ ಬೆಳಗಾಯಿತು. ದೇಶಬಂಧುಗಳ ಕಾಲಿಗೆ ಬೇನೆ [illegible] ಆಗ ಗಾಬರಿಯಾಗಿ ಕಲಕತ್ತೆಗೆ ತಂತಿ ಕಳುಹಲಾಯಿತು. ನೋಡ ನೋಡುತ್ತ, ಕೇಳಕೇಳುತ್ತ ದೇಶಬಂಧುಗಳ ಇಹಲೋಕದ ಸ್ಮೃತಿಯು ತಪ್ಪಿಹೋಯಿತು. ಸಾಯಂಕಾಲ ೫ ಬಡಿಯುವದರೊಳಗೆ ವಾಸಂತಿ ದೇವಿ ದಾಸರ ಸೌಭಾಗ್ಯ ತಿಲಕನಾದ ದೇಶಬಂಧು ದಾಸರು ಸಮಸ್ತ ಪ್ರಜೆಗಳನ್ನು ಶೋಕಸಾಗರದಲ್ಲಿ ಕೆಡವಿ ಅಂತರ್ಧಾನ ಹೊಂದಿದರು. ಈ ಸಮಯ ದಾರ್ಜಿಲಿಂಗದಲ್ಲಿ ಬಂಗಾಲದ ಪ್ರಾಂತಾಧಿಪರೂ, ಕಾರ್ಯಕಾರಿ ಮಂಡಲದ ಸಭಾಸದರೂ, ಇದ್ದರು. ಅವರು ದೇಶಬಂಧುಗಳ ಕುಟುಂಬದವರಿಗೆ ಶಕ್ಯವಾದಷ್ಟು ಸಹಾಯ ಮಾಡಿದರು. ದೇಶಬಂಧುಗಳ ಪ್ರೇತವು ಕೆಡದಂತೆ, ಅದಕ್ಕೆ ತಕ್ಕ ರಸಾಯನ ದ್ರವ್ಯವನ್ನು ಸೇರಿಸಿ ಉಗಿಬಂಡಿಯಿಂದ ಕಲಕತ್ತೆಗೆ ತಂದರು. ವಾಸಂತಿ ದೇವಿಯವರು ಕಲಕತ್ತೆಗೆ ಬರುವ ವರೆಗೆ ಪತಿಗಳ ಶವದೊಡನೆ ನಿಂತು ಕೊಂಡಿದ್ದರು. ದೇಶಬಂಧುಗಳಿಗೆ ಒಬ್ಬರೇ ಮಗಂದಿರು. ಅವರ ಹೆಸರು ಚಿರರಂಜನ ದಾಸರು. ಇವರು ತೀರ್ಥರೂಪರವರ ನಿಧನ ಸಮಯ ಅಲ್ಲಿ ಹಾಜರಿದ್ದಿಲ್ಲ. ಇವರು, ಉಗಿಬಂಡಿಯಿಂದ ಶವವು ಕೆಳಗಿಳಿದ್ದು ಸಿಲಿಗುರಿಗೆ ಬಂದ ಬಳಿಕ, ತೀರ್ಥರೂಪರ ದರ್ಶನ ಪಡೆದರು. ಅಂತ್ಯಕಾಲಕ್ಕೆ ದೇಶಬಂಧುಗಳಿಗೆ ಪುತ್ರದರ್ಶನವೊದಗದಿದ್ದರೂ, ಪುತ್ರನಿಗೆ ಪಿತನ ದರ್ಶನವೊದಗದಿದ್ದುದೂ ಶೋಚನೀಯವು.

* * *

ದೇಶಬಂಧುಗಳ ಮಗಳಾದ ಶ್ರೀ। ಅಪರ್ಣಾ ದೇವಿಯು ಕಳೆದ ೩೦, ೧೯ನೇಗೆ ಅಲ್ಲಿಯ ರೂಢಿಯಂತೆ ದೇಶಬಂಧುಗಳ ಪ್ರೀತ್ಯರ್ಥ ಕೆಲವು ವಿಧಿಗಳನ್ನು ನೆರವೇರಿಸಿದರು. ಬ್ರಾಹ್ಮಣರಿಗೆ ಅಡಿಗೆ ಪಾತ್ರೆಗಳೂ, ಭಿಕ್ಷೆಯೂ ದಾನ ಮಾಡಲಾಯಿತು. ನೂರಾರು ಭಿಕ್ಷುಕರಿಗೆ ಭಿಕ್ಷೆ ಹಾಕಲಾಯಿತು. ಈ ವಿಧಿಗೆ ಮಹಾತ್ಮರೂ ಚಿತ್ತೈಸಿದ್ದರು. ಬಂಗಾಲದಲ್ಲಿ ಮಹಾತ್ಮರು ಇನ್ನು ೧ ತಿಂಗಳ ವರೆಗೆ ಉಳಕೊಳ್ಳುವ ಆಲೋಚನೆ ಮಾಡಿದ್ದಾರೆ. ದೇಶಬಂಧುಗಳ ನಿಧನದ ಮೂಲಕ ಜುಲೈ ೬ ನೇ ತಾರೀಖಿಗೆ ನೆರೆಯಲಿಕ್ಕಿದ್ದ ಅಖಿಲ ಭಾರತೀಯ ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆಯು ಮುಂದೂಡಲ್ಪಟ್ಟಿದೆ. ಕಲಕತ್ತೆಯ ಮ್ಯುನಿಸಿಪಾಲಿಟಿಯವರು ಕಳೆದ ೧೯ ನೇ ತಾರೀಖಿಗೆ ಸಭೆಸೇರಿ ದುಃಖಪ್ರದರ್ಶಕ ಠರಾವನ್ನು ಮಂಜೂರು ಮಾಡಿರುವರು. ದೇಶಬಂಧುಗಳ ಪ್ರೀತ್ಯರ್ಥ ಒಂದು ಸ್ಮಾರಕವನ್ನು ನಿರ್ಮಿಸುವ ವಿಚಾರ ನಡೆದದೆ

* * *

ಬಾಬು ಅರವಿಂದ ಘೋಷರವರ ಉದ್ಗಾರ!

ವಿಖ್ಯಾತ ದೇಶಭಕ್ತರಾದ, ತತ್ವಜ್ಞಾನಿಗಳಾದ, ವೈರಾಗ್ಯಪರರಾದ ಬಾಬು ಅರವಿಂದ ಘೋಷರವರು ಈಗ ಪಾಂಡಿಚೆರಿಯಲ್ಲಿರುವರು. ಇವರಿಗೆ ೧೯೦೮ ನೇ ಇಸ್ವಿಯಲ್ಲಿ ರಾಜದ್ರೋಹದ ಖಟ್ಲೆಯೊಳಗಿಂದ ದೇಶಬಂಧುಗಳೇ ವಾದಿಸಿ, ವಿಮೋಚನ ಮಾಡಿದ್ದರು. ಅವರು ಚಿತ್ತರಂಜನರ ವಿಷಯ ಬರೆಯುವದೇನಂದರೆ:- "ಚಿತ್ತರಂಜನರು ನಿಧನಹೊಂದಿ ಬಹು ದೊಡ್ಡ ಹಾನಿಯಾಗಿದೆ. ಚಿತ್ತರಂಜನರು ರಾಜಕಾರಣಧುರಂಧರರೂ, ಕಲ್ಪಕರೂ, ಚಿತ್ತಾಕರ್ಷಕ ಸಾಮರ್ಥ್ಯವುಳ್ಳವರೂ, ಚೇತನಶಕ್ತಿಯುಳ್ಳವರೂ, ದೃಢನಿಶ್ಚಯಿಗಳೂ, ಪರಿಸ್ಥಿತಿ ಗ್ರಹಿಸಿ ದೇಶಕಾಲೋಚಿತವಾಗಿ ನಡಕೊಳ್ಳುವ ಅಸಾಮಾನ್ಯ ಪ್ರಸಂಗಾವಧಾನಿಗಳೂ ಆಗಿದ್ದು, ಲೋಕಮಾನ್ಯರ ತರುವಾಯ ಸ್ವರಾಜ್ಯ ಸಂಪಾದಿಸಿಕೊಡಲು ಅವರೊಬ್ಬರೇ ಅರ್ಹರಾಗಿದ್ದರು.

* * *

ಪಂಡಿತ ಮೋತಿಲಾಲರ ಶೋಕ!

ಪಂಡಿತ ಮೋತೀಲಾಲರ ಸಂದೇಶವನ್ನು ಓದಿದರೆ ಕರಳು ಕರಗುತ್ತದೆ. ಮೋತೀಲಾಲರು ಕೆಮ್ಮಿನಿಂದ ಅಸ್ವಸ್ಥರಿದ್ದು ಈಗ ಚಾಂಬಾದಲ್ಲಿ ವಿಶ್ರಾಂತಿಗೈಯುತ್ತಿದ್ದರು. ಅವರು ಗುರುವಾರ ವಾಸಂತಿದೇವಿಯವರಿಗೆ ತಂತಿಯಿಂದ ತಿಳಿಸುವದೇನಂದರೆ:- "ಭಗಿನಿಯೇ, ನಮಗೊದಗಿದ ಆಪತ್ತು ಪ್ರಚಂಡವಿದೆ. ಹಾಯ್! ಈಗ ಇಲ್ಲಿ ವರೆಗೆ ಪ್ರವಾಸಮಾಡುವಷ್ಟು ಸಾಮರ್ಥ್ಯವಿಲ್ಲ. ಆದಷ್ಟು ಬೇಗನೆ ನಿಮ್ಮೆಡೆಗೆ ಬರುವೆನು." ಅದೇ ತಾರೀಖಿಗೆ ಮೋತೀಲಾಲರು ಮಹಾತ್ಮರಿಗೆ ತಂತಿ ಬಿಟ್ಟು ತಿಳಿಸುವದೇನಂದರೆ:- "ಚಿತ್ತರಂಜನರ ನಿಧನವಾರ್ತೆ ಕೇಳಿ ಎದೆಯೊಡೆದಿದೆ. ಮಾಡುವದೇನು? ಹೇಳುವದೇನು? ಮನೆಯವರಿಗೆ ತಾವು ಸಮಾಧಾನ ಹೇಳಿರಿ. ವಂಗ ದೇಶಕ್ಕೆ ಈ ಮಹಾ ಸಂಕಟದಿಂದ ಎದೆಗುಂದದೊಡನೆ ಉತ್ತೇಜನ ಕೊಡಿರಿ. ಪ್ರಯಾಣ ಮಾಡಲು ತೀರ ಅಸಮರ್ಥನಿದ್ದೇನೆ. ಆದಷ್ಟು ಬೇಗನೆ ಬಂಗಾಲಕ್ಕೆ ಬಂದು ಮುಟ್ಟುವೆನು." ಶ್ರೀ ಸರೋಜಿನಿ ದೇವಿಯವರು ದೇಶಬಂಧುಗಳ ನಿಧನವನ್ನು ಸಾರ್ವಭೌಮರ ಸ್ವರ್ಗವಾಸವೆಂದು ಉದ್ಗರಿಸಿರುವರು. ಸರ್ವಾಧಿಪತಿ ರೀಡಿಂಗ ದೊರೆಗಳೂ ದೇಶಬಂಧುಗಳನ್ನು ಹೊಗಳಿ, ಅವರು ಭರತ ಖಂಡಕ್ಕಾಗಿ ಅಂತಃಕರಣಪೂರ್ವಕ, 'ಅನನ್ಯಭಾವದಿಂದ' ಶಕ್ತಿ ಮೀರಿ ದುಡಿದಿರುವರೆಂದು ಉದ್ಗರಿಸಿರುವರು.

ಸಂಪನ್ನ ಪುರುಷರು ಯಾವುವಾದರೆಂದು ಭಾರತ ಮಂತ್ರಿಗಳಾದ ಬರ್ಕನ್‌ಹೆಡ್ ದೊರೆಗಳು ಬರೆದಿರುವರು. ಇದಲ್ಲದೆ, ಅಖಿಲ ಭರತ ಖಂಡದೊಳಗೆ ಅಲ್ಲಲ್ಲಿ ಸಭೆಸೇರಿ ಶೋಕಪ್ರದರ್ಶನ ಮಾಡಿದ ಹಕೀಕತುಗಳು ನಿತ್ಯವೂ ಪ್ರಕಟವಾಗುತ್ತಿವೆ

⁂

ಮಹಾತ್ಮರ ಅಪಾರ ಶೋಕ !

ದೇಶಬಂಧುಗಳ ನಿಧನ ವಾರ್ತೆಯು ಮಹಾತ್ಮರಿಗೆ ಖುಲನಾದಲ್ಲಿ ತಿಳಿಯಿತು. ಆ ದಿನ, ಅಂದರೆ, ಬುಧವಾರಕ್ಕೆ ಸಭೆ ಸೇರುವದಿತ್ತು. ಹಳ್ಳಿಹಳ್ಳಿಗಳೊಳಗಿಂದ ಪ್ರಜೆಗಳು ಮಹಾತ್ಮರ ದರ್ಶನೋತ್ಸುಕರಾಗಿ ಬಂದಿದ್ದರು. ಮಹಾತ್ಮರಿಗೆ ಇತ್ತ ಸಭೆಗೆ ಹೋಗಲಿಕ್ಕೂ ಮನಸ್ಸೊಪ್ಪುವದಿಲ್ಲ; ಬಿಟ್ಟು ಹೋಗಲಿಕ್ಕೂ ಮನಸ್ಸೊಪ್ಪುವದಿಲ್ಲ. ಆದರೂ, ಎದೆ ಗಟ್ಟಿ ಮಾಡಿಕೊಂಡು, ಸಭಿಕರಿಗೆ ಶೋಕ ವಾರ್ತೆಯನ್ನರುಹಿ, ದೇಶಬಂಧುಗಳನ್ನೇ ಇಂದು ಕೊಂಡಾಡುತ್ತೇವೆಂದರು! "ದೇಶಬಂಧುಗಳು ಶ್ರೇಷ್ಠ ಪುರುಷರು" ಎಂದು ಹೇಳಿ, ಮಹಾತ್ಮರು ಹಿಂದೆರಡು ಮಿನಿಟು ಮರಮರನೆ ಮರುಗಿದರು. ಬಳಿಕ, ದೇಶಬಂಧುಗಳ ಗುಣಾನುವಾದ ಮಾಡಿ, ವೈವಾಗರ ಅನುಯಾಯಿಗಳಿಗೆ ಶಕ್ತಿ ಮೀರಿ ಬೆಂಬಲ ನೀಡುವೆವೆಂದು ಜಾಹೀರು ಮಾಡಿದರು. ಮಹಾತ್ಮರು ಮರುದಿನ ಕಲಕತ್ತೆಗೆ ಬಂದು ದೇಶಬಂಧುಗಳ ಅಂತ್ಯ ಸಂಸ್ಕಾರವನ್ನು ನೋಡಿಕೊಂಡು ಬಂದರು. ಅಂದು ರಾತ್ರಿ ಮಹಾತ್ಮರ ಶೋಕವು ಅನಿವಾರ್ಯವಾಯಿತು. ಬಹಳ ಮರುಗಿದರು. ಅವರು ಉದ್ಗರಿಸಿದ್ದೇನಂದರೆ,— "ದೇಶಬಂಧುಗಳು ನನಗೆ ಮೋಸ ಮಾಡಿದರು, ನನ್ನ ತರುವಾಯ ನನ್ನ ಪ್ರಶಂಸೆಯನ್ನು ಆತನೇ ಮಾಡಬೇಕೆಂದು ನನ್ನ ಆಕಾಂಕ್ಷೆಯಿತ್ತು. ಆದರೆ, ಆತನು ಮೊದಲೇ ದೇಹಾವಸಾನ ಹೊಂದಿದನಲ್ಲಾ!" ಮಹಾತ್ಮರಿಗೆ ಶೋಕವು ಉಕ್ಕೇರಿ ಬರುತ್ತದೆ. ಆದರೂ, ಮಹಾತ್ಮರು ಅದನ್ನು ಧಡ್ಡಿಕೊಂಡು, ಮನೆಯವರನ್ನು ಸಮಾಧಾನಗೊಳಿಸುತ್ತಿರುವರು. ದೇಶಬಂಧುಗಳ ತಮ್ಮಂದಿರಾದ ಪಿ. ಆರ್. ದಾಸ ಎಂಬವರು ಪಾಟಣಾ ಹೈಕೋರ್ಟಿನ ನ್ಯಾಯಮೂರ್ತಿಗಳು, ಅವರೂ ಕಲಕತ್ತೆಗೆ ಬಂದಿರುವರು. ಆಗಿಂದಾಗ ಶೋಕಾವೇಗದ ಮೂಲಕ ಇವರು ಮೂರ್ಛೆ ಹೋಗುತ್ತಾರೆ. ಕಲಕತೆಯಲ್ಲಿ ದೇಶಬಂಧುಗಳಿಗಾಗಿ ಮರುಗದ ಮನೆಯಿಲ್ಲೆಂದು "ಮುಂಬಯಿ ಕ್ರಾನಿಕಲ್" ಪತ್ರಿಕೆಯ ಚಿತ್ರಗುಪ್ತರು ತಾ. ೨೦ ನೇಗೆ ಬರೆಯುತ್ತಾರೆ, ೫ ದಿನಗಳಾದರೂ, ಕಣ್ಣೀರು ಆರಿಲ್ಲೆಂದು ಅವರ ಹೇಳಿಕೆ.

⁂

ಒಂದು ಸಾಮುದ್ರಿಕ ಭವಿಷ್ಯ!

ಬಂಗಾಲದ ಶ್ರೀ। ಹರೇಂದ್ರಲಾಲ ಬಾನರ್ಜಿಯವರು ದೇಶಬಂಧುಗಳ ಕುರಿತು ಒಂದು ಕಥೆಯನ್ನು ನಿವೇದಿಸಿರುವರು. ಯುವರಾಜರ ಆಗಮನದ ಸಮಯದದು! ರಾಷ್ಟ್ರೀಯ ಸಭೆಯು ಬಹಿಷ್ಕಾರ ಜಾಹಿರುಪಡಿಸಿದ ಯೋಗವದು! ಶ್ರೀ। ಬಾನರ್ಜಿಯವರೂ, ದೇಶಬಂಧುಗಳೂ, ಇನ್ನಿತರ ಜೊತೆಗಾರರೂ ಅಲೀಪುರ ಸೆರೆಮನೆಯನ್ನು ಸೇರಿಕೊಂಡಿದ್ದರು. ಶ್ರೀ। ಬಾನರ್ಜಿಯವರಿಗೆ ಸಾಮುದ್ರಿಕ ಶಾಸ್ತ್ರಜ್ಞಾನವಿದೆ, ಬೇಸರ ಬಂದಾಗ್ಗೆ ಅವರು ಅಲ್ಲಿಯ ಜೊತೆಗಾರರ ಹಸ್ತರೇಷೆಯನ್ನು ನೋಡಿ, ಕಾಲ ಕಳೆಯುತ್ತಿದ್ದರು. ದೇಶಬಂಧುಗಳೂ ತಮ್ಮ ಕೈಯನ್ನು ಬಾನರ್ಜಿಯವರಿಗೆ ತೋರಿಸುತ್ತಿದ್ದರು. ಒಂದು ದಿನ ಕೈತೋರಿಸಿ, ದೇಶಬಂಧುಗಳು ಮುಂದಿನ ಕ್ರಮವನ್ನು ಬಾನರ್ಜಿಯವರಿಗೆ ಕೇಳಿದರು, ತಮ್ಮ ಪ್ರತಿಷ್ಠೆಯು ಮಿಗಿಲಾಗುವದೋ? ಕುಗ್ಗುವದೋ? ಇತ್ಯಾದಿ ಪ್ರಶ್ನೆಗಳನ್ನು ದೇಶಬಂಧುಗಳು ಬಾನರ್ಜಿಯವರಿಗೆ ಕೇಳಿದರಂತೆ. ಬಾನರ್ಜಿಯವರು ಹಸ್ತರೇಷೆಗಳನ್ನು ಪರೀಕ್ಷಿಸಿ ಹೇಳಿದ್ದೇನಂದರೆ:—"ನಿಮ್ಮ ಮುಂದಿನ ಇತಿಹಾಸವನ್ನೆಲ್ಲ ನಾನು ಹೇಳಲಾರೆ. ಆದರೆ, ನೀವು ಕೀರ್ತಿ ಕಾಂತಿಯಿಂದ ತೇಜಃಪುಂಜರಾಗಿ ನಿಧನ ಹೊಂದುವಿರಿ; ಶ್ರೀ। ಬಾನರ್ಜಿಯವರ ಈ ಭವಿಷ್ಯವನ್ನು ದೇಶಬಂಧುಗಳು ಹಾಗೆಯೇ ಸ್ಮರಣೆಯಲ್ಲಿಟ್ಟುಕೊಂಡು, ಈ ವರ್ಷ ಪಾಟಣಾದಲ್ಲಿ ಬಾನರ್ಜಿಯವರ ಅಣ್ಣಂದಿರೊಡನೆ ಮಾತಾಡುವಾಗ, ಭವಿಷ್ಯದ ಕಥೆ ಹೇಳಿದ್ದರಂತೆ.

⁂

ದೇಶಬಂಧುಗಳ ಕೊನೆಯ ಕಾಂಕ್ಷೆ.

ದೇಶಬಂಧುಗಳ ಕೊನೆಯ ಕಾಂಕ್ಷೆಯೇನಿತ್ತೆಂದು ಪ್ರಜೆಗಳು ಕೇಳಬಹುದು. ದೈವಯೋಗದಿಂದ ದೇಶಬಂಧುಗಳ ಕಾಂಕ್ಷೆಯು ದೇಶಬಂಧುಗಳ ಹಸ್ತಗಳಿಂದಲೇ ಬರೆದಿಡಲ್ಪಟ್ಟಿದೆ. ನಿಧನ ಹೊಂದುವ ೩ ದಿನ ಮುಂಚಿತವಾಗಿ ದೇಶಬಂಧುಗಳು ಸಹಕಾರಿ ಗೆಳೆಯರಾದ ಪಂಡಿತ ಮೋತೀಲಾಲರಿಗೆ ತಮ್ಮ ವಿಚಾರಗಳನ್ನು ಪತ್ರ ಬರೆದು ತಿಳಿಸಿರುವರಾಗಿ ಪಂಡಿತ ಮೋತೀಲಾಲರು ಡಾಲಹೌಸಿ ಪಟ್ಟಣದಿಂದ ತಾರೀಖು ೨೫ ನೇಗೆ ತಂತಿಯಿಂದ "ಮುಂಬಯಿ ಕ್ರಾನಿಕಲ್"ಗೆ ತಿಳಿಸಿರುವರು. ಈ ಪತ್ರವು ಪಂಡಿತರಿಗೆ ಕೈಸೇರಿದ್ದು ೨೦ ನೇ ತಾರೀಖಿಗೆ; ದೇಶಬಂಧುಗಳು ದೇಹಾವಸಾನ ಹೊಂದಿದ ೪ ನೇ ದಿನ. ಇದರೊಳಗೆ ಪ್ರಚಲಿತ ರಾಜಕೀಯ ಪರಿಸ್ಥಿತಿಯ ಮೇಲೆ ಯಾವ ಯಾವ ಉಪಾಯಯೋಜನೆ ಮಾಡಬೇಕೆಂಬುದು ನಮೂದಿಸಲಾಗಿದೆ, ಪತ್ರ ಬರೆಯುವ ಬುದ್ಧಿ ಭಗವಂತನೇ ಅವರಿಗೆ ದಯಪಾಲಿಸಿದನೆಂದು ಪಂಡಿತ ಮೋತೀಲಾಲರ ಹೇಳಿಕೆ. ಪಾಟಣಾದಲ್ಲಿ ಪಂಡಿತ ಮೋತೀಲಾಲರೂ, ದೇಶಬಂಧುಗಳೂ ಕೂಡಿದಾಗ ವಿಶ್ರಾಂತಿಕಾಲದಲ್ಲಿ ರಾಜಕಾರಣದ ಕುರಿತು ಪರಸ್ಪರ ಪತ್ರ ಬರೆಯಬಾರದೆಂದು ನಿಶ್ಚಯಮಾಡಿಕೊಂಡಿದ್ದರು. ಅದರಿಂದ ಏಪ್ರಿಲ್ ತಿಂಗಳಿನಿಂದ ಅವರೀರ್ವರ ಪತ್ರವ್ಯವಹಾರವೇ ಕಟ್ಟಾಗಿತ್ತು. ಈ ಪತ್ರವು ದೇಶಬಂಧುಗಳ ಸ್ವಹಸ್ತಾಕ್ಷರದಲ್ಲಿದೆ, ೫ ಪುಟಗಳು ತುಂಬಿದೆ. ಪತ್ರದ ಸ್ವರೂಪವು ಗುಪ್ತವಿದ್ದಾಗ್ಯೂ, ಅದರೊಳಗಿನ ಕೆಲವು ಉಲ್ಲೇಖಗಳನ್ನು ಮಾತ್ರ ಪಂಡಿತ ಮೋತೀಲಾಲರು ಪ್ರಕಟಿಸಿರುವರು. "ದೇಶಬಂಧುಗಳು ಬರೆಯುವದೇನಂದರೆ, ನನ್ನ ಪ್ರಕೃತಿಯು ಸುಧಾರಿಸುತ್ತ ನಡೆದದೆ; ತೀರ ಸಾವಕಾಶವಾಗಿ ಸುಧಾರಿಸುತ್ತಿದೆ. ವಾರಕ್ಕೊಮ್ಮೆ ಜ್ವರ ಬರುವದಕ್ಕೆ ೬ನೇ ದಿನಕ್ಕೆ ಜ್ವರ ಬರುತ್ತದೆ. ಪೂರ್ಣವಾಗಿ ಪ್ರಕೃತಿಯು ಸುಧಾರಿಸುವವರೆಗೆ ನಾನು ಇಲ್ಲಿಯೇ ಉಳಕೊಳ್ಳುವ ನಿಶ್ಚಯ ಮಾಡಿದ್ದೇನೆ." ಕೊನೆಗೆ ದೇಶಬಂಧುಗಳು ಉದ್ಗರಿಸುವದೇನಂದರೆ:—"ನಮ್ಮ ಇತಿಹಾಸದಲ್ಲಿ ತೀರ ಇಕ್ಕಟ್ಟಿನ ಪರಿಸ್ಥಿತಿಯು ಸಮೀಪಿಸುತ್ತಿದೆ. ಈ ವರುಷದ ಅಂತ್ಯ ಸಮಯದಲ್ಲಿ ಹಾಗು ಮುಂಬರುವ ವರುಷದ ಪ್ರಾರಂಭ ಕಾಲದಲ್ಲಿ ನಾವು ಭದ್ರವಾದ ಕಾರ್ಯವನ್ನು ನೆರವೇರಿಸಬೇಕು. ನಮ್ಮ ಉಪಾಯಯೋಜನೆಯ ಸಾಮರ್ಥ್ಯವನ್ನೆಲ್ಲ ನಾವು ವೆಚ್ಚ ಮಾಡಬೇಕಾಗುವದು. ಆದರೆ, ನಾವಿಬ್ಬರೂ ಬೇಗ ಬಿದ್ದಿದ್ದೇವೆ. ಮುಂದಿನ ಸ್ಥಿತಿ ಭಗವಂತನಿಗೇ ಗೋಚರ!" ಈ ಉಲ್ಲೇಖಗಳನ್ನು ಕೊಟ್ಟು, ಪಂಡಿತ ಮೋತೀಲಾಲರು ಮಹಾತ್ಮರ ಶಬ್ದಗಳನ್ನೇ ಎತ್ತಿ ಕೊಟ್ಟಿರುವರು. "ದೇಶಬಂಧುಗಳು ಸ್ವರಾಜ್ಯಕ್ಕಾಗಿಯೇ ಬದುಕಿದರು; ಸ್ವರಾಜ್ಯಕ್ಕಾಗಿಯೇ ಮಡಿದರು."

⁂

ದೇಶಬಂಧುಗಳ ಸ್ಮಾರಕ !

ಮಹಾತ್ಮರು ಬಂಗಾಲ ಪ್ರಾಂತದಲ್ಲಿ ದೇಶಬಂಧುಗಳ ಸ್ಮಾರಕವನ್ನು ಏರ್ಪಡಿಸಲು ಆಗ್ರಹ ಮಾಡಿರುವರು. ದೇಶಬಂಧುಗಳಿಗೆ ಸ್ತ್ರೀಯರ ಚಿಕಿತ್ಸಾಲಯವನ್ನೊಂದು ಸ್ಥಾಪಿಸುವ ಇಚ್ಛೆ ಇತ್ತು. ಇದಕ್ಕಾಗಿಯೇ ಇವರು ತಮ್ಮ ಮನೆಮಾರುಗಳನ್ನೆಲ್ಲ ರಾಷ್ಟ್ರನಿಧಿಗೆ ಅರ್ಪಿಸಿದ್ದರು. ಮಹಾತ್ಮರು ಇಂಥ ಸಂಸ್ಥೆಯನ್ನೊಂದು ಕಲಕತ್ತೆಯಲ್ಲಿ ಏರ್ಪಡಿಸುವರೆ ೧೦ ಲಕ್ಷ ರೂಪಾಯಿಗಳನ್ನು ಬಂಗಾಲಿಗಳೊಡನೆ ಬೇಡಿಕೊಂಡಿರುವರು. ಈ ವಿನ್ನಹಕೆ ಸರ್ ಸುರೇಂದ್ರನಾಥ ಬಾನರ್ಜಿ, ಸರ್ ಸತ್ಯೇಂದ್ರಪ್ರಸನ್ನ ಸಿಂಹ ಮೊದಲಾದ ಭಿನ್ನ ಭಿನ್ನ ಮತದವರು ಸಹಿ ಮಾಡಿರುವರು. ಈ ನಿಧಿಯು ಇದೇ ಜುಲೈ ೧ ನೇ ತಾರೀಖಿನೊಳಗೆ ಒಟ್ಟುಗೂಡಬೇಕು, ವಾಗ್ದಾನಗಳನ್ನು ಕೊಳ್ಳದೆ, ರೋಖ ಹಣವನ್ನೇ ಕೊಳ್ಳಬೇಕಾಗಿಯೂ ಮಹಾತ್ಮರ ಹೇಳಿಕೆ ಇದೆ. ಈ ವರೆಗೆ ಸುಮಾರು ೨ ಲಕ್ಷ ರೂಪಾಯಿಗಳು ಒಟ್ಟುಗೂಡಿದ ಸುದ್ದಿಯಿದೆ. ಕಲಕತ್ತೆಯ ಹೈಕೋರ್ಟಿನ ಬ್ಯಾರಿಸ್ಟರರಾದ ಡಾ। ಎನ್. ಎನ್. ಸರಕಾರರವರು ೧೦ ಸಾವಿರ ರೂಪಾಯಿಗಳನ್ನಿತ್ತಿರುವರು; ಎಡ್ವೊಕೇಟ ಜನರಲ್‌ರಾದ ಮಿ| ಎಸ್. ಆರ್. ದಾಸರವರೂ, ಸರ್ ಪಿ. ಸಿ. ಮಿತ್ತರರವರೂ ೫-೫ ಸಾವಿರ ರೂಪಾಯಿಗಳನ್ನೂ, ಸರ್ ಆರ್. ಎನ್. ಮುಕರ್ಜಿಯವರು ೨ ಸಾವಿರ ರೂಪಾಯಿಗಳನ್ನು ಅರ್ಪಿಸಿರುವರು. ಮಹಾತ್ಮರು ಬಂಗಾಲ ಪ್ರಾಂತದ ಮುಖ್ಯ ಮುಖ್ಯ ಪಟ್ಟಣಗಳೊಳಗಿನ ಪ್ರಮುಖರಿಗೆ ತಂತಿ ಕೊಟ್ಟು ದೇಶಬಂಧುಗಳ ಸ್ಮಾರಕ ನಿಧಿಗೆ ದ್ರವ್ಯಸಂಚಯ ಮಾಡಲು ಆಗ್ರಹ ಮಾಡಿರುವರು.

⁂

ಕೌನ್ಸಿಲು ಪ್ರವೇಶವಂತೆ, ನೂಲುವದೂ ಅವಶ್ಯವೇ.

ಮಹಾತ್ಮರು ದಾರ್ಜಿಲಿಂಗಕ್ಕೆ ಹೋದಾಗ, ದೇಶಬಂಧುಗಳಿಗೆ ತಕ್ಕಿ ಯಾನೆ ಸಣ್ಣ ಕೈರಾಟೆಯಮೇಲೆ ನೂಲುವ ಪಾಠ ಕಲಿಸಿದರು. ಪಾಟಣಾದಲ್ಲಿಯೂ ಮಹಾತ್ಮರು ದೇಶಬಂಧುಗಳಿಗೆ ನೂಲ ಕಲಿಸಿದ್ದರು. ದೇಶಬಂಧುಗಳಿಗೆ ನೂಲುವದು ಬಹಳೇ ಕಠಿಣವಾಗುತ್ತಿತ್ತಂತೆ. ಸರಕಾರಕ್ಕೆ ಸೋಲಿಸುವದೂ, ಪಕ್ಷಗಾರರ ಪ್ರಕರಣಗಳನ್ನು ಬಿಡಿಸುವದೂ ನೂಲುವದಕ್ಕಿಂತ ಸುಲಭವಿತ್ತೆಂದು ಮಹಾತ್ಮರು ವಿನೋದದಿಂದ 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಬರೆದಿರುವರು. ದೇಶಬಂಧುಗಳಿಗೆ ನೂಲಲಾರದ ಸ್ಥಿತಿ ನೋಡಿ ಪತ್ನಿಯರಾದ ವಾಸಂತಿ ದೇವಿಯವರಿಗೆ ಸ್ವಲ್ಪ ಅಚ್ಚರಿಯಾಗುತ್ತಿತ್ತು. ಅವರು ಮಹಾತ್ಮರೊಡನೆ ಈ ಪ್ರಕಾರ ಉದ್ಗರಿಸಿದರು:— "ನನ್ನ ಪತಿಗಳಿಗೆ ಪೆಟ್ಟಿಗೆಯ ಕೀಲಿಯನ್ನು ಸರಿಯಾಗಿ ತೆಗೆಯಬರುವದಿಲ್ಲ. ನಾನೇ ಅವರಿಗೆ ಸಹಾಯಮಾಡ

(ಮುಂದೆ ೮ ನೇ ಪಾನಿನ ಕೊನೆ ಮುಂದರಿಸಿದೆ.)

ಕಾನಡಾವೃತ್ತ.

ಮಿತಿ ಕ್ರೋಧನ ಸಂ ಜ್ಯೇಷ್ಠ ಬ। ೮ ಮಿ ಸೋಮವಾರ

ಧ್ಯಾನಸ್ಥರಾಗಿರಿ !

ನಾಡದು ಬುಧವಾರ ಜುಲೈ ೧ ನೇ ತಾರೀಖು, ದೇಶಬಂಧುಗಳು ದೇಹಾವಸಾನ ಹೊಂದಿದ ೧೬ ನೇ ದಿನವು. ಅಂದಿಗೆ ಅಖಿಲ ಭರತಖಂಡದಲ್ಲಿ ದೇಶಬಂಧುಗಳ ಪುಣ್ಯಸ್ಮರಣೆಗಾಗಿ ಮಹಾಸಭೆಗಳು ಸೇರಿ, ಸಮಸ್ತ ಭಾರತೀಯರು ಧ್ಯಾನಸ್ಥರಾಗುವರು. ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ, ಅಖಿಲ ಭಾರತೀಯ ಪ್ರಜಾಜನರ ಅಧಿಪತಿಗಳಾದ ಮಹಾತ್ಮರು ಹೊರಡಿಸಿದ ಆಜ್ಞಾಪತ್ರವನ್ನು ದೇಶಾಭಿಮಾನಿಗಳೆಲ್ಲರೂ ಶಿರಸಾ ವಹಿಸಿಕೊಂಡು, ನಾಡದು ಬುಧವಾರ ಸಾಯಂಕಾಲ ೫ ಘಂಟೆಗೆ ಮಹಾಸಭೆ ಸೇರಿ ಜಗಚ್ಚಾಲಕನೊಡನೆ ಅನನ್ಯಭಾವದಿಂದ ದೇಶೋದ್ಧಾರಕ್ಕಾಗಿ ಪ್ರಪಂಚದಮೇಲೆ ದಾರೆಯೆರೆದ ದೇಶಬಂಧುಗಳಿಗೆ ಸದ್ಗತಿಯನ್ನೀಯಲು ಬೇಡಿಕೊಳ್ಳುವರು

ಬುಧವಾರಕ್ಕೆ ದೇಶಬಂಧುಗಳ ಸದ್ಗತಿಗಾಗಿ ಬೇಡಿಕೊಳ್ಳುವದಂತು ಆಯಿತು. ನಿಜವಾಗಿ ನೋಡಿದರೆ, ಆಳವಾಗಿ ವಿಚಾರಿಸಿದರೆ, ಪುಣ್ಯಪುರುಷನಾದ ನಮ್ಮ ದೇಶಬಂಧುವಿಗೆ ಸದ್ಗತಿಯನ್ನೀಯಬೇಕೆಂದು ನಾವು ವಿನಂತಿ ಮಾಡಬೇಕೇ? ದೇಶೋದ್ಧಾರಕ್ಕಾಗಿ ದೇಶಮಾತೆಯ ಚರಣಕಮಲಗಳಮೇಲೆ ಜನತೆಯೇ ಜನಾರ್ದನನೆಂಬ ಭಾವನೆಯಿಂದ ಸರ್ವಸ್ವವನ್ನು ಅರ್ಪಿಸಿದ ಮಹಾಪುರುಷನು ಸದ್ಗತಿಯ ಅಧಿಕಾರಿಯಾಗದಿದ್ದರೆ, ವೈಕುಂಠಪತಿಯು ಆತನಿಗೆ ವೈಕುಂಠವಾಸವನ್ನು ದಯಪಾಲಿಸದಿದ್ದರೆ, ಇನ್ನೆಂಥ ಪುರುಷನು ಸದ್ಗತಿಗರ್ಹನಾಗುವನು! ದೇಶವೇ ಪರಮಾತ್ಮನು, ದೇಶಸೇವೆಯೇ ಈಶಸೇವೆ. ದೇಶದ ಉನ್ನತಿಗಾಗಿ ಉದ್ಧಾರಕ್ಕಾಗಿ, ಸತತವಾಗಿ ಶ್ರಮಪಡುವದೇ ಪರಮಾತ್ಮನ ಪೂಜೆ, ಇದೊಂದೇ ಭಾವನೆಯಿಂದ ದೇಶಬಂಧುಗಳು ನಿಧನಹೊಂದುವವರೆಗೆ ನಡಕೊಂಡು ಬಂದರು. ಪ್ರಜಾಸೇವೆಗಾಗಿ, ದೇಹದ ಪರಿವೆಯಿಲ್ಲದೆ, ಇಡೀ ಬಂಗಾಲ ಪ್ರಾಂತದಲ್ಲಿ ಅಡ್ಡಾಡಿ, ಬಂಧುಭಗಿನಿಯರಿಗೆ ದೇಶೋದ್ಧಾರದ ಸಾರ ಪರಿಸಹೇಳಿ, ನಿರುಪಾಯವಾದ ಬಳಿಕ ಮಾತ್ರ, ದಾರ್ಜಿಲಿಂಗದಲ್ಲಿ ಅನಪೇಕ್ಷಿತವಾಗಿ ದೇಹಾವಸಾನಹೊಂದಿದರು. ಇಂಥ ಪುಣ್ಯಾತ್ಮರು, ರಾಷ್ಟ್ರಪುರುಷರು ಸದ್ಗತಿಯನ್ನು ಸ್ವಪರಾಕ್ರಮದಿಂದಲೇ ಪ್ರಾಪ್ತಮಾಡಿಕೊಳ್ಳುವರು. ಪರಮಾತ್ಮನಾದರೋ, ಅವರ ಅನನ್ಯಭಕ್ತಿಗೆ ಮೆಚ್ಚಿ, ಭಕ್ತನನ್ನು ಸಂತೋಷದಿಂದ ಬರಮಾಡಿಕೊಳ್ಳುವನು.

ಆದರೆ ಬುಧವಾರಕ್ಕೆ ಸಮಸ್ತ ಭಾರತೀಯರು ಇನ್ನೊಂದು ಕಾರ್ಯವನ್ನು ನೆರವೇರಿಸಬೇಕಾಗಿದೆ. ದೇಶಬಂಧುಗಳು ದೇಶಸೇವೆಗಾಗಿ ದೇಹಾವಸಾನಹೊಂದಿದರು. ಪುಣ್ಯಪುರುಷನ ಕಾರ್ಯವನ್ನು ಮುಂದರಿಸುವ ಪುಣ್ಯಾತ್ಮನು ಇನ್ನೂ ಭಾರತೀಯರ ಕಣ್ಣಿಗೆ ಹೊಳೆಯಲೊಲ್ಲನು. ದೇಶಬಂಧುಗಳೊಡನೆ ಅಂದಿಗೆ ನಾವು ಪ್ರಾರ್ಥಿಸಬೇಕಾದ್ದೇನಂದರೆ — ದೇಶಬಂಧುಗಳೇ, ತಾವು ದೇಶಾಂಕಿತಮಾಡಿಕೊಂಡ ಕಾರ್ಯ ನೋಡಿರಿ, ಕಾರ್ಯವು ಕೈಗೂಡಿತೇ? ಕೈಗೂಡದಿದ್ದರೆ ಅದನ್ನು ಕೈಗೂಡಿಸಬಲ್ಲಾತ ತಮ್ಮಂಥ ಪುರುಷನೆಲ್ಲಿಹನು? ಆ ಪುರುಷನ ಅರಿವು ನಮಗೆ ಮಾಡಿಕೊಡಿರಿ. ಆ ಪುರುಷನಿಗೆ ನೀವೇ ಪ್ರೇರೇಪಿಸಿರಿ. ನಿಮ್ಮ ಕೃಪೆಯಿಂದಲೇ, ಅನುಗ್ರಹದಿಂದಲೇ ಆತನು ನಮಗೆ ಲಭ್ಯನಾಗಬೇಕು. ದೇಶಬಂಧುಗಳೇ, ಈಗಿನ ಸ್ಥಿತಿಯೇನು ತಮಗೆ ಗೊತ್ತಿಲ್ಲದ ಮಾತಲ್ಲ. ತಮ್ಮಂಥ ದೇಶಾಭಿಮಾನಿ, ದೇಶಸೇವಾತುರ, ಸಾಹಸಿಗ, ಕುಲೀನ ಪುರುಷನನ್ನು ಇಕ್ಕಟ್ಟಿನ ಸ್ಥಿತಿಯಲ್ಲಿ ನಮಗನುಗ್ರಹಿಸದಿದ್ದರೆ, ನಮ್ಮ ಗತಿಯೇನಾಗುವದೆಂದು ವಿಚಾರಿಸಿ, ನಮ್ಮನ್ನು ಅನುಗ್ರಹಿಸಿರಿ. ದೇಶಬಂಧುಗಳೊಡನೆ, ಅಂದರೆ ಅವರ ಆತ್ಮನೊಡನೆ ಬುಧವಾರ ಸಾಯಂ ೫ ಘಂಟೆಗೆ ಮಾನಸಿಕ ದ್ವಾರದಿಂದ ತನ್ಮಯರಾಗಿ ಪ್ರಾರ್ಥಿಸಿಕೊಳ್ಳಬೇಕಾದ ವಿಷಯವಿದು.

ಇನ್ನೊಂದು ಪ್ರಾರ್ಥನೆಯನ್ನು ನಾವು ಮಾಡಿಕೊಳ್ಳಬೇಕು. ರಾಷ್ಟ್ರಕಲ್ಯಾಣದ ಮಹಾದೊಡ್ಡ ಪುರುಷನು ಅಂತರ್ಧಾನ ಹೊಂದಿದ ಸಮಯವಿದು. ನಾವೀಗ ರಣಕ್ಷೇತ್ರದಮೇಲೆ ಎದ್ದುನಿಂತಿರುವೆವು. ಆಳರಸರಿಗೂ ಭಾರತೀಯರಿಗೂ—ಅಹಿಂಸೆಯಿಂದ್ಯಾಕಾಗಲೊಲ್ಲದು, ಸಭ್ಯತನದಿಂದ್ಯಾಕಾಗಲೊಲ್ಲದು—ಮಹಾಯುದ್ಧವು ಪರಿಣಮಿಸಿದೆ. ಅಂಥ ಪ್ರಸಕ್ತಿಯಲ್ಲಿ ದಿವ್ಯಬಲದ ಸಾಹಸಿ ಸೇನಾಪತಿಯು ದೇಹದ ಹಾದಿಯಿರಿದಿರುವನು. ಈ ಸಮಯ, ಸೈನಿಕರೇನುಮಾಡಬೇಕು ? ಸೇನಾಪತಿಗಾಗಿ ಮರುಗುವದು ಸಹಜ ಧರ್ಮವಾದರೂ, ಶೋಕಮಾಡುತ್ತ ಕೂಡ್ರುವದು ಸಮಯೋಚಿತವಲ್ಲ. ದೇಶಬಂಧುಗಳಿಗೂ ಇದು ಬೇಕಾಗಿಲ್ಲ. ಸೈನಿಕರೆಲ್ಲರೂ ಸೇನಾಪತಿಗಳಿದ್ದಂತೆ ಒಮ್ಮನಸ್ಸಿನಿಂದ, ಐಕ್ಯಭಾವದಿಂದ ಸೇನಾಪತಿಯ ಕಾರ್ಯವನ್ನು ವಿಶೇಷ ಜಾಗ್ರತೆಯಿಂದ, ದಕ್ಷತೆಯಿಂದ ಮುಂದರಿಸಬೇಕು. ಈ ಬುದ್ಧಿಯನ್ನು ಈ ಸಾಮರ್ಥ್ಯವನ್ನು ಈ ತೇಜವನ್ನು, ದೇಶಬಂಧುವೇ, ನಮಗೆ ದಯಪಾಲಿಸು; ಪರಮಾತ್ಮನೇ, ಅನುಗ್ರಹಿಸು. ಧರ್ಮಸಂಗ್ರಾಮದಲ್ಲಿ ದೇಶೋದ್ಧಾರಕ್ಕಾಗಿ ದೇಶಬಂಧುಗಳು ನಡಿಸಿದ ಕಾರ್ಯವನ್ನು ನಮ್ಮಿಂದ ಕಡೆಗಾಣಿಸಿಕೋ. ನಾವು ಸೂತ್ರಗೊಂಬೆಗಳು. ನಿನ್ನ ಅನುಗ್ರಹದಿಂದ ದೇಶಬಂಧುಗಳ ಸಾನ್ನಿಧ್ಯದಿಂದ ಮಹಾಸಮರದಲ್ಲಿ ನಾವು ಇಳಿದಾಗಿದ್ದೇವೆ. ಸಮರದಲ್ಲಿ ಇತ್ತಟ್ಟಿನವರೂ ಕೈಕೈ ಮಾಡಿಕೊಂಡು, ಒಬ್ಬರಮೇಲೊಬ್ಬರು ಸಾಗಿ ಬೀಳುತ್ತಿರುವ ಪ್ರಸಂಗದಲ್ಲಿ ಆಜ್ಞೆಗಳನ್ನೀಯುವ ಪುರುಷನು ಮಾಯವಾಗಿರುವನು. ಕರುಣಾಸಾಗರನೇ, ನಮ್ಮಮೇಲೆ ಕೃಪಾಕಟಾಕ್ಷವನ್ನಿಟ್ಟು ಸಲಹು. ದೇಶಬಂಧುಗಳೇ, ತಾವೀಗ ಭಗವಂತನೊಡನೆ ಐಕ್ಯರಾಗಿರುವಿರಿ, ಆತನೊಡನೆ ನಮಗಾಗಿ ವಕೀಲಿ ನಡಿಸಿ, ನಮ್ಮ ಮೇಲೊಂದು ಉಪಕಾರ ಮಾಡಿರಿ. ತಾವು ಹಿಡಿದ ಕಾರ್ಯವನ್ನು ನಮ್ಮಿಂದ ನೆರವೇರಿಸಿಕೊಳ್ಳಿ. ನಾವೇನು ಪಾಮರರು; ಸ್ವಾರ್ಥಪರಾಯಣರು, ಪ್ರಪಂಚದಲ್ಲಿ ನಿತ್ಯವೂ ಮುಳುಗಿ ಏಳುತ್ತಿದ್ದೇವೆ. ದೇಶಸೇವೆಗಾಗಿ ಸ್ವಾರ್ಥದ ಆಹುತಿಮಾಡುವ ಬುದ್ಧಿಯನ್ನಿತ್ತು, ಪರೋಪಕಾರಕ್ಕಾಗಿ, ಪರಾರ್ಥಕ್ಕಾಗಿ, ದೇಶಬಂಧುಗಳೇ ನಿಮ್ಮನನುಕರಿಸುವ ಮನೋಬಲವನ್ನೂ ಕಾರ್ಯಸಾಮರ್ಥ್ಯವನ್ನೂ ನಮಗೆ ಅನುಗ್ರಹಿಸಿರಿ

ಇದೇ ಪ್ರಾರ್ಥನೆಯನ್ನು ನಾವೆಲ್ಲರೂ ಬುಧವಾರ ಸಾಯಂಕಾಲ ಒಕ್ಕಟ್ಟಿಗೆ ಸೇರಿ ಮಾಡಬೇಕಾಗಿದೆ. ಮಹಾಸಭೆ ಸೇರುವದೂ, ಪ್ರಾರ್ಥನೆ ಮಾಡುವದೂ ನಮ್ಮ ಹಿತಕ್ಕಾಗಿಯೇ, ದೇಶಹಿತವನ್ನು ಸಾಧಿಸಿದರೆ, ದೇಶಕ್ಕಾಗಿ ಅನುಪಮೇಯ ಸ್ವಾರ್ಥತ್ಯಾಗಮಾಡಿದ, ಪರಿಪರಿಯ ಕಷ್ಟಗಳನ್ನನುಭವಿಸಿದ ದೇಶಬಂಧುಗಳಿಗೆ ಹೇಳಕೂಡದಷ್ಟು ಆನಂದವಾಗುವದು. ನಮಗೂ ದೇಶಬಂಧುಗಳ ಅಭಾವದಲ್ಲಿ ಅವರ ಕಾರ್ಯವನ್ನು ಅವರ ಪ್ರೇರಣೆಯಿಂದಲೇ ಮುಂದರಿಸಿದ ಶ್ರೇಯಸ್ಸು ಪ್ರಾಪ್ತವಾಗಿ, ನಾವೂ ಆನಂದಿತರಾಗುವೆವು, ನಮ್ಮ ಉದ್ಧಾರವಾಗುವದು. ನಮ್ಮ ಜನ್ಮಭೂಮಿಯು, ನಮ್ಮ ದುರ್ದೈವದಿಂದ ಪಾರತಂತ್ರ್ಯದಲ್ಲಿ ಸಿಲುಕಿಕೊಂಡು ನರಳುತ್ತಿದ್ದ ಭಾರತಮಾತೆಯು ದೇಶಬಂಧುವಿನ ಪುತ್ರಶೋಕವನ್ನು ಕೆಲಮಟ್ಟಿಗಾದರೂ ಮರೆತು, ದೇಶಪುತ್ರರು ದೇಶಬಂಧುವಿನ ಸಾಮರ್ಥ್ಯದಿಂದ, ಪ್ರೇರಣೆಯಿಂದ ತನ್ನನ್ನು ವಿಮೋಚನಮಾಡಿದರೆಂದು ನಮ್ಮನ್ನು ಹಾಡಿ ಹರಸುವಳು. ಪರಮಾತ್ಮನೇ, ದೇಶಬಂಧುವಿನ ತೇಜಸ್ಸನ್ನೂ, ವೀರ್ಯವನ್ನೂ ನಮಗೆ ದಯಪಾಲಿಸು. ದೇಶಬಂಧುವೇ, ನಿನ್ನ ಸಾಮರ್ಥ್ಯವನ್ನೂ, ಬುದ್ಧಿಶಕ್ತಿಯನ್ನೂ ನಮಗನುಗ್ರಹಿಸು, ನೀನೇ ಪ್ರಾರಂಭ ಮಾಡಿದ ದೇಶವಿಮೋಚನ ಕಾರ್ಯವನ್ನು ನಮ್ಮಿಂದ ಪಾರಗಾಣಿಸಿಕೊಂಡು, ನಮಗೆ ಕೃತಕೃತ್ಯರಾಗಿ ಮಾಡು. ಇಷ್ಟೇ ನಿನ್ನೆಡೆಗೆ ನಮ್ಮ ಪ್ರಾರ್ಥನೆ

* * *

ಸ್ಫುಟ ಸೂಚನೆಗಳು.

೧. ಸರ್ವಾಧಿಪತಿಗಳೂ, ಭಾರತ ಮಂತ್ರಿಗಳೂ ಭರತಖಂಡದ ಉದ್ಧಾರದ ಕುರಿತು ಆಲೋಚನೆ ನಡಿಸ ಹತ್ತಿದ್ದಾರೆಂದೂ, ಅದರಿಂದ ಭರತಖಂಡಕ್ಕೆ ಹಿತವಾಗುವದೆಂದೂ, ಕೆಲವು ಭಾವಿಕರು ತಿಳಕೊಂಡಿದ್ದರು. ಕಲಕತ್ತೆಯ 'ಸ್ಟೇಟ್ಸಮನ್' ಪತ್ರಿಕೆಯು ಈ ಆಲೋಚನೆಯ ಫಲವನ್ನು ಪ್ರಕಟಿಸಿದೆ. ೧೯೨೯ ನೇ ಇಸ್ವಿಯ ಮುಂಚೆ ಮೊಂಟೆಗ್ಯು ಸ್ವರಾಜ್ಯ ಯೋಜನೆಯಲ್ಲಿ ಎಳ್ಳುಕಾಳಿನಷ್ಟು ತಿದ್ದುಪಡಿಯಾಗಲಿಕ್ಕಿಲ್ಲ. ಹಿಂದುಸ್ಥಾನದಲ್ಲಿ ಯಾವದೇ ಚಳವಳಿಯಾದರೂ ಈ ದೃಢ ನಿಶ್ಚಯದಿಂದ ಸಾಮ್ರಾಜ್ಯ ಸರಕಾರವು ಚಲಿಸದು. ಆದರೆ, ಮೊಂಟೆಗ್ಯು ಸ್ವರಾಜ್ಯದೊಳಗಿನ ಕುಂದುಗಳನ್ನು ಹೋಗಲಾಡಿಸಲು, ನೇಮಿಸಲ್ಪಟ್ಟ ಮುಡಿಮನ್ ಮಂಡಳದ ಬಹುಮತದಂತೆ, ಸ್ವರಾಜ್ಯಪಾತ್ರತೆಯನ್ನು ಸಿದ್ಧಪಡಿಸಲಿಕ್ಕೂ, ಬಂಗಾಲ ಹಾಗು ಮಧ್ಯಪ್ರಾಂತಗಳಲ್ಲಿ ಹಿಡಗಿದ ಅಡ್ಡಗಟ್ಟುವ ಕುತಂತ್ರಗಳನ್ನು ಮುರಿಯಲಿಕ್ಕೂ ತಕ್ಕುದಾದ ಉಪಾಯಯೋಜನೆ ಮಾಡಲ್ಪಡುವವು. ಆದರೂ, ಸರಕಾರವು ಹಿಂದುಸ್ಥಾನದೊಳಗಿನ ಲೋಕನಾಯಕರು ತಯಾರಿಸಬಹುದಾದ ಸ್ವರಾಜ್ಯಯೋಜನೆಗಳನ್ನು ಸಹಾನುಭೂತಿಪೂರ್ವಕ ವಿಚಾರಿಸುವದು. ೧೯೨೯ ನೇ ಇಸ್ವಿಯಲ್ಲಿ ಕೊಡಲಿಕ್ಕಿದ್ದ ಸ್ವರಾಜ್ಯಯೋಜನೆಯ ಸಮಯ ಇವೆಲ್ಲ ಯೋಜನೆಗಳ ಆಲೋಚನೆಯಾಗುವದು. ಬಂಗಾಲ ಮುಂತಾದ ಪ್ರಾಂತಗಳಲ್ಲಿ ಕ್ರಾಂತಿಕಾರಕರನ್ನು ದಬ್ಬಲು ಬೇಕಾದ ಸಹಾಯವನ್ನು, ಬೇಕಾದಾಗ ಹಿಂದುಸ್ಥಾನ ಸರಕಾರಕ್ಕೆ ಸಾಮ್ರಾಜ್ಯ ಸರಕಾರವು ನಿಶ್ಚಯಪೂರ್ವಕ ಅರ್ಪಿಸುವದು. ಆಳರಸರಲ್ಲಿ ಈಗಿರುವ ಯುರೋಪಿಯನ್ನರ ಪ್ರಮಾಣವು ಕಡಿಮೆಯಾಗಲಿಕ್ಕಿಲ್ಲ. ಅವರಿಗಾಗಿ ಶಿಫಾರಸು ಮಾಡಿದ ಅನುಕೂಲ್ಯಗಳೆಲ್ಲ ಶೀಘ್ರವೇ ಕೊಡಲ್ಪಡುವವು. ಇನ್ನು ಕೆಲವು ಕಾಲದವರೆಗೆ ಭಾರತೀಯರಿಗೆ ಆಳರಸರಲ್ಲಿ ಸೇರಿಸಲ್ಪಡಲಿಕ್ಕಿಲ್ಲ. ಈಗ ಇವರನ್ನು ಸೇರಿಸಿಕೊಂಡಿದ್ದು ವಿಶೇಷವಾಯಿತೆಂದು ದೊರೆಗಳೀರ್ವರ ವಿಚಾರವಾಗಿರುವದಂತೆ! ಇನ್ನು ಭಾರತೀಯರನ್ನು ಆಳರಸರನ್ನಾಗಿ ನೇಮಿಸಿದರೆ, ಗಂಡಾಂತರ ಒದಗಬಹುದೆಂದೂ ದೊರೆಗಳ ಅಭಿಮತವಾಗಿದೆ. ಹಿಂದುಸ್ಥಾನದೊಳಗಿನ ಸಾಮುಗ್ರಿಗಳನ್ನು ಅಭಿವೃದ್ಧಿ ಮಾಡುವ ಕುರಿತು ಆಲೋಚಿಸಲು ಆರ್ಥಿಕ ಮಂಡಳವನ್ನೊಂದು ನೇಮಿಸಬೇಕೆಂದು ಗೊತ್ತಾಗಿರುವದಂತೆ.

೨. 'ಸ್ಟೇಟ್ಸಮನ್' ಪತ್ರಿಕೆಯು ಪ್ರಕಟಿಸಿದ ನಿರ್ಣಯಗಳನ್ನು ಓದಿದರೆ, ಸುಮಾರು ೪೦ ಸಾವಿರ ರೂಪಾಯಿಗಳನ್ನು ವೆಚ್ಚಮಾಡಿ, ಸರ್ವಾಧಿಪತಿಗಳು ಭಾರತ ಮಂತ್ರಿಗಳೊಡನೆ ಆಲೋಚನೆ ಮಾಡಹೋಗಿದ್ದು ಹಿಂದುಸ್ಥಾನಕ್ಕೆ ಹಿತಪ್ರದವಾಯಿತೆಂದು ಯಾರೂ ಹೇಳಲಾರರು. ಭಾರತೀಯರಿಗೆ ಆಳರಸರಾಗಿ ನೇಮಿಸಿದ್ದರಿಂದ ಹಿಂದುಸ್ಥಾನವು ಗಂಡಾಂತರದಲ್ಲಿ ಸಿಲುಕಿಕೊಳ್ಳಬಹುದಾದರೆ, ಇತ್ತ ಭಾರತೀಯರನ್ನು ಮೆಟ್ಟಮೊದಲು ಪದಚ್ಯುತ ಮಾಡುವ ಆಲೋಚನೆ ಮಾಡಿದ್ದರೆ, ಹಿಂದುಸ್ಥಾನಕ್ಕೆ ಮಹತ್ತು ಹಿತವಾಗುತ್ತಿತ್ತು. ಯುರೋಪಿಯನ್ ಆಳರಸರ [illegible]ಯನ್ನೂ, ಹಿಂದ ಹಿತಬುದ್ಧಿಯನ್ನೂ, ಪರೋಪಕಾರವನ್ನೂ, ಇದಕ್ಕಾಗಿ ಅವರು ದೇಶಾಂತರದಲ್ಲಿ ಮಕ್ಕಳು-ಮರಿಗಳನ್ನು ಬಿಟ್ಟು ಪ್ರೇಮದಿಂದ ದುಡಿಯುವದನ್ನೂ ನೋಡಿದರೆ, ಅವರಿಗೆ ಹಳೇ ಮಂಡಳಗಳ ಶಿಫಾರಸುಗಳಂತೆ, ಸಂಬಳ, ಭತ್ತೆ ಮುಂತಾದವುಗಳನ್ನಷ್ಟೇ ಕೊಡುವದು ಎಂದೂ ಕೃತಜ್ಞತೆಯಾಗಲಾರದು. ಅವರಿಗೆ ಬೇಕಾದಷ್ಟು ಹಣವನ್ನು, ಬೇಕಾದಾಗ ತೆಗೆದುಕೊಳ್ಳಲು ಸಂಪೂರ್ಣ ಸ್ವಾತಂತ್ರ್ಯವಿರಬೇಕು. ಶಿಫಾರಸು, ಮಂಜೂರಿ, ಅರ್ಜಿ, ಬೇಡಿಕೆ, ದೌಲತ ಇವೆಲ್ಲ ವಿಧಿಗಳು ಪರೋಪಕಾರಕ್ಕಾಗಿ ದೇಶಾಂತರ ಮಾಡಿದ ಪುಣ್ಯಾತ್ಮರಿಗೆ ಶೋಭಿಸುವದಿಲ್ಲ. ಹಿಂದುಸ್ಥಾನ ಸರಕಾರಕ್ಕೆ ಕ್ರಾಂತಿಕಾರಕ ಚಳವಳಿಯನ್ನು ದಬ್ಬಿಹಾಕಲು ಸಾಮ್ರಾಜ್ಯ ಸರಕಾರವು ಕೊಟ್ಟ ಸರ್ವಾಧಿಕಾರದಿಂದ ಹಿಂದುಸ್ಥಾನದ ಪ್ರಜೆಗಳು ಎಚ್ಚರಿಕೆ ಪಡೆಯಬೇಕು. ಕ್ರಾಂತಿಕಾರಕ ಶಬ್ದದ ಅರ್ಥವನ್ನು ಸರಕಾರದ ಕಡೆಯಿಂದಲೇ ತಿಳಕೊಂಡು, ಆ ಕಡೆಗೆ ಹೊರಗಣ್ಣಿನಿಂದ ಸಹ ನೋಡದಂತೆ ಜಾಗ್ರತೆ ಕೊಳ್ಳಬೇಕು. ಇಲ್ಲದಿದ್ದರೆ, ಸಾಮ್ರಾಜ್ಯ ಸರಕಾರವು ಕೊಟ್ಟ, ಹಿಂದುಸ್ಥಾನ ಸರಕಾರವು ನೀಡಿದ ದೊಣ್ಣೆಯಿಂದ ಹಿಂದುಸ್ಥಾನ ಸರಕಾರವು, ಮನಸ್ಸೊಪ್ಪದಿದ್ದರೂ, ರಾಜ್ಯರಕ್ಷಣೆಗಾಗಿ ಕ್ರಾಂತಿಯನ್ನು ಕಠೋರತನದಿಂದ ದಬ್ಬಿಹಾಕಬೇಕಾಗುವದು. ಬಂಗಾಲ, ಮಧ್ಯಪ್ರಾಂತಗಳ ಕೌನ್ಸಿಲುಗಳು ದುರ್ಬುದ್ಧಿಯಿಂದ ಕೈಕೊಂಡ ಧೋರಣದಿಂದ ಮೊಂಟೆಗ್ಯು ಸ್ವರಾಜ್ಯಕ್ಕೆ ಬಾಧೆ ಬರದಂತೆ ಮಂತ್ರವಾದಿಗಳು ಕೊಟ್ಟ ಯಂತ್ರವನ್ನು ಕಟ್ಟುವ ನಿಶ್ಚಯವಾಗಿದೆ, ಹಿಂದುಸ್ಥಾನದ ಹಿತಕ್ಕಾಗಿ ಪೂರ್ವಸಂಕೇತದಂತೆ, ಸಾಮ್ರಾಜ್ಯ ಸರಕಾರದ ವಚನಭಂಗವಾಗದಂತೆ, ೧೯೨೯ನೇ ಇಸ್ವಿಯ ಮುಂಚಿತವಾಗಿ ಮೊಂಟೆಗ್ಯು ಸ್ವರಾಜ್ಯವನ್ನೇ ನಡಿಸುವ ನಿರ್ಧಾರವಾಗಿರುವ ಮೂಲಕ, ಮುಂದೆ ಯಾವದಾದರೊಂದು ನಮೂನೆಯ ಸ್ವರಾಜ್ಯ ಕೊಡುವಲ್ಲಿ, ಭಾರತೀಯರು ಅದಕ್ಕಾಗಿ ಪಾತ್ರತೆಯನ್ನು ಈಗಿನಿಂದಲೇ, ಈ ಸ್ವರಾಜ್ಯದಲ್ಲೇ ಸಿದ್ಧಮಾಡಿ ತೋರಿಸಲು ಸರ್ವಾಧಿಪತಿಗಳೂ, ಭಾರತ ಮಂತ್ರಿಗಳೂ ಬೇಕಷ್ಟು ಇಂಬಿಟ್ಟಿರುವರು. ಕಾರಣ, ಈಗಲೇ ಸ್ವರಾಜ್ಯ ಪಡೆಯುವ ದುರಾಶೆಗೆ ಹೋಗದೆ, ಕೊಟ್ಟ ಸ್ವರಾಜ್ಯವನ್ನು ಆಳರಸರಿಗೆ ಮನ್ನಣೆಯಾಗುವಂತೆ, ಅವರಿಗೆ ಸಂತೋಷವಾಗುವಂತೆ ಪ್ರಜೆಗಳು ನಡಿಸಿ ತೋರಿಸಬೇಕು. ಹೊಸ ಹೊಸ ಸ್ವರಾಜ್ಯಯೋಜನೆಗಳನ್ನು ತಯಾರಿಸಲು ಸರ್ವಾಧಿಪತಿಗಳ ಅಪ್ಪಣೆಯಿದೆ; ಭಾರತ ಮಂತ್ರಿಗಳೂ ಅಡ್ಡಗಟ್ಟುವದಿಲ್ಲ. ಕೋಣೆಯಲ್ಲಿ ಒತ್ತಟ್ಟಿಗೆ ಕೂಡುಕೊಂಡು, ಬೇಕಾದಷ್ಟು ಸ್ವರಾಜ್ಯ ಯೋಜನೆಗಳನ್ನು ತಯಾರಿಸಿರಿ; ೧೯೨೯ ನೇ ಇಸ್ವಿಯ ಮುಂಚಿತವಾಗಿ ತಯಾರಿಸಿರಿ. ಆದರೆ, ಹಿಂದುಸ್ಥಾನ ಸರಕಾರವು ಅವನ್ನೆಲ್ಲ ಆಲೋಚಿಸಿ, ಹಿಂದುಸ್ಥಾನದ ಅಹಿತವಾಗದಂತೆ, ಇದುವರೆಗಿನ ಧೋರಣದಂತೆ, ಹಿಂದುಸ್ಥಾನದ ಅಭಿವೃದ್ಧಿಯಾಗುವಂತೆ, ಇವೆಲ್ಲ ಯೋಜನೆಗಳ ಮಂಥನದಿಂದ ಒಂದು ಯೋಜನೆಯನ್ನು ತಯಾರಿಸಿ, ಬ್ರಿಟಿಶ ಪಾರ್ಲಿಮೆಂಟಿನ ಮಂಜೂರಿಯ ಮುದ್ರೆ ಹೊತ್ತು ಭಾರತೀಯರಿಗೆ ಅರ್ಪಿಸುವದು. ಮಧ್ಯದಲ್ಲಿ ಹಿಂದುಸ್ಥಾನದ ಕಚ್ಚಾ ಸಾಮುಗ್ರಿಗಳ ಉತ್ಪತ್ತಿ ಮಾಡಲಿಕ್ಕೆ ಒಂದು ಆರ್ಥಿಕ ಮಂಡಳವು ನೇಮಿಸಲ್ಪಡುವದು. ಹಿಂದುಸ್ಥಾನವು ವ್ಯವಸಾಯಪ್ರಧಾನ ದೇಶವು, ವ್ಯವಸಾಯೋದ್ಧಾರ ಮಾಡಿದರೆ, ಹಿಂದುಸ್ಥಾನದ ಉದ್ಧಾರವಾಗುತ್ತದೆ. ಅದರಿಂದ ಯಾವ ಯಾವ ಭಾಗಗಳಲ್ಲಿ ಯಾವ ಯಾವ ನಮೂನೆಯ ಬೆಳೆಗಳಾಗುತ್ತವೆ, ಯಾವ ಯಾವ ಭಾಗದಲ್ಲಿ ಯಾವ ಯಾವ ಬೆಳೆಗಳನ್ನು ಇನ್ನೂ ಬೆಳೆಸಬಹುದು, ಬೆಳೆಯುವ ಬೆಳೆಗಳಿಗೆ ರಾಸಾಯನಿಕ ಗೊಬ್ಬರಗಳನ್ನು ಹಾಕಿ ಹ್ಯಾಗೆ, ಹ್ಯಾಗೆ ಹೆಚ್ಚಿಷ್ಟು ಬೆಳೆಗಳನ್ನು ಪಡೆಯಬಹುದು, ಪಕ್ಕಾ ಮಾಲು ಸಾಮ್ರಾಜ್ಯದಲ್ಲಿ ಎಲ್ಲೆಲ್ಲಿ ಆಗುತ್ತದೆ, ಅಲ್ಲಿಗೆ ನಮ್ಮ ಕಚ್ಚಾ ಮಾಲು ಎಷ್ಟು ಮಾರಬಹುದು, ಪಕ್ಕಾ ಮಾಲು ಎಲ್ಲೆಲ್ಲಿಂದ ಇಲ್ಲಿಗೆ ಆಮದು ಮಾಡಿ ತರಬಹುದು, ರಾಸಾಯನಿಕ ದ್ರವ್ಯಗಳು ಎಲ್ಲೆಲ್ಲಿ ಅಗ್ಗವಾಗಿ ಸಿಗುತ್ತವೆ, ಎಂಬುವನ್ನೆಲ್ಲ ಈ ಆರ್ಥಿಕ ಮಂಡಳವು ವಿಚಾರಿಸಿ, ಹಿಂದುಸ್ಥಾನವನ್ನು ಲಕ್ಷ್ಮೀನಿವಾಸವನ್ನಾಗಿ ಪರಿಣಮಿಸುವದು. ನಿಮಗೆ ಮತ್ತೇನು ಬೇಕು?

ಭಾರತೀಯರೇ,
ದೇಶಬಂಧುಗಳ ಪ್ರೀತ್ಯರ್ಥ
ಮಹಾತ್ಮರ ಆಜ್ಞೆಯಂತೆ,

ನಾಡದು ಬುಧವಾರ
ಸಾಯಂಕಾಲ ೫ ಘಂಟೆಗೆ
ಸಭೆಸೇರಿ ಈಶಪ್ರಾರ್ಥನೆ
ನಡಿಸಿರಿ.

೩. ನಮ್ಮ ಕಾನಡಾ ಜಿಲ್ಲೆಯು 'ಸಾಮ್ರಾಜ್ಯಸೇನೆಯಲ್ಲಿ ಬಹಳೇ ಮುಂದುವರಿದಿರುವದೆಂದು ನಮಗೆ ಸಂತೋಷವಾಗುತ್ತದೆ. ಸಾಮ್ರಾಜ್ಯದ ಕುಷ್ಠರೋಗ ನಿವಾರಣಾನಿಧಿಗೆ ನಮ್ಮ ಕಾನಡಾ ಜಿಲ್ಲೆಯು ೨,೯೩೪ ರೂಪಾಯಿಗಳನ್ನು ಅರ್ಪಿಸಿ, ಇಡೀ ಮುಂಬಯಿ ಇಲಾಖೆಯಲ್ಲಿ ೪ನೇ ನಂಬರವನ್ನು ಹೊಂದಿರುವದು. ನಮಗಿಂತ ಧಾರವಾಡ ಜಿಲ್ಲೆಯು ಜನಸಂಖ್ಯೆಯಿಂದ ೩ ಪಟ್ಟು ದೊಡ್ಡದಿದೆ. ಕ್ಷೇತ್ರಮಾನವೂ ವಿಶೇಷವಾಗಿ ಹೆಚ್ಚಿದೆ. ಅಲ್ಲಿಯ ವ್ಯಾಪಾರ-ಉದ್ದಿಮೆಗಳೂ, ಐಶ್ವರ್ಯವೂ ನಮಗಿಂತ ಎಷ್ಟೋ ಪಾಲು ಹೆಚ್ಚು. ಆದರೆ, ಅಲ್ಲಿಯ ಜನರು ತೀರ ಕೃಪಣರು. ಬರೇ ೨,೪೫೩ ರೂಪಾಯಿಗಳನ್ನು ಬಹಳೇ ಅಸಮಾಧಾನದಿಂದ ಕೊಟ್ಟಂತೆ ಕಾಣುತ್ತದೆ! ಪುಣೆಜಿಲ್ಲೆಯು, ದೊಡ್ಡ ಸುಧಾರಿಸಿದ ಜಿಲ್ಲೆಯು, ರಾಷ್ಟ್ರಸೇವಾತುರ ಜಿಲ್ಲೆಯಂತೆ! ಸಾಮ್ರಾಜ್ಯ ಸೇವೆಗೆ ಅವರು ಕೊಟ್ಟ ರಕಮನ್ನು ಕೇಳಿದಿರೇನು? ಬರೇ ೪೪೮ ರೂಪಾಯಿ. ಅಹಮದಾಬಾದ ಜಿಲ್ಲೆಯೆಂದರೆ, ಗಿರಣಿಗಳ ತವರುಮನೆ, ಮಹಾತ್ಮರಂಥ ಜಗದುದ್ಧಾರಕರ ನಿವಾಸಸ್ಥಾನ. ಅಲ್ಲಿಯೂ ಸಾಮ್ರಾಜ್ಯದ ಸೇವೆಯ ಅರಿವಿಲ್ಲ. ಅಲ್ಲಿಯವರು ಕೊಟ್ಟ ಅಂಕಿಗಳನ್ನು ತಿಳಿಸಲಿಕ್ಕೆ ನಮಗೆ ನಾಚಿಕೆಯಾಗುತ್ತದೆ. ೩೫೩ ರೂಪಾಯಿಯ ಅಂಕಿಗಳು ಬಿದ್ದಿವೆ; ೧೭೭

ರೂಪಾಯಿ ಪಡೆದು, ನಮ್ಮ ಕುಮಟಾ ತಾಲೂಕಿನಲ್ಲಿಯೇ ೬೭೫ ರೂಪಾಯಿಗೆ ವಿಕ್ರಿಸಿಕೊಂಡಿವೆ. ರಾಷ್ಟ್ರಸೇವೆ, ರಾಷ್ಟ್ರಸೇವೆ ಎಂದು ಹೇಳುವವರಿಗೆ ಸಾಮ್ರಾಜ್ಯ ಸೇವೆಯ ನೆನಪೇ ಆಗುವದಿಲ್ಲ; ಸಾಮ್ರಾಜ್ಯದೊಳಗಿನ ಕುಷ್ಠರೋಗಿಗಳ ಸಹಾಯಕ್ಕೆಂದು [illegible] ಕರಗದವಿಲ್ಲ [illegible] ದಿರದವರ. ಸಾಮ್ರಾಜ್ಯದ ಹಿತಕ್ಕಾಗಿ ೯ ಸಾವಿರ ರೂಪಾಯಿಗಳನ್ನು ನೀಡಿ ಶಕ್ತಿಮೀರಿ ಸೇವೆ ಮಾಡಿದ ಬಳಿಕ ಪ್ರತಿಫಲವೇನು. ಸಾಮ್ರಾಜ್ಯ ಸರಕಾರವು ಬಡವ [illegible] ಪ್ರತಿಫಲ ನಮ್ಮ ಕಾನಡಾ ಜಿಲ್ಲೆಗೆ ದಾನಶಾಲೆ, ದಾನಶಿಕ್ಷಣವು, ವಿದ್ಯಾ [illegible] ವಿಧವಾದ ಪರಿಯುದಾರವನ್ನಿತ್ತು ನನ್ನೀಕರೀತ ನಮ್ಮ ಜಿಲ್ಲೆಯು ಬಡತನಪಟ್ಟಿದ್ದು, ನಾವು ಶಕ್ತಿಮೀರಿ ಸಾಮ್ರಾಜ್ಯಕ್ಕೆ ಧನಸಹಾಯ ಮಾಡಿದವರೇ ಸರಕಾರದ ಅಂಕಿಗಳೇ ಹೇಳುತ್ತಿರುವಾಗ, ನಮಗೆ ಪ್ರತಿಫಲ ದೊರಕದಿರುವದೇನು? ಪ್ರಜಾಪ್ರಭುತ್ವದಲ್ಲಿ ಪರಮಾತ್ಮನೆಂಬಂತೆ, ನಮ್ಮ ಪ್ರಭುತ್ವಕ್ಕೆ ಪರಮಾತ್ಮನಂತಿರುವ ಸಾಮ್ರಾಜ್ಯ ಸರಕಾರವು ನಿಜ ಹೊತ್ತಿರುವದೇ?

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರದಲ್ಲಿ ಮಂಜೆ ಮಂಜೆ ನೆರೆ ಬಿದ್ದಿತ್ತು. ನದಿದಂಡೆಯ ಕೆಲ ಕೆಲವು ಮನೆಗಳಿಗೆ ನೀರು ಹೊಗಲಿತು. ಅಷ್ಟರಲ್ಲಿ ಮೇಘರಾಜನು ಸಮಾಧಾನ ಮಾಡಿದದರಿಂದ ನೀರು ಇಳಿದು ಹೋಯಿತು. ಇತ್ತ ೫-೬ ದಿನಗಳಿಂದ ಸೂರ್ಯನಾರಾಯಣನ ದರ್ಶನವಾಗಹತ್ತಿದೆ. ಮ್ಯುನಿಸಿಪಾಲಿಟಿಯ, ಮಾರ್ಗದ ದುರಸ್ತಿಯು ಇನ್ನೂ ಆಗಲಿಲ್ಲದೆ. ಇನ್ನೂ ಹಿಂದಿನಂತೆ, ಮಾರ್ಗಗಳು ಬಿಟ್ಟುಹೋಗುವವು. ಜನಗಳ ರೋಗದಿಂದ ಹಿರೇಗುತ್ತಿಯಲ್ಲಿ ಹೇರಳ ಹಾನಿಯಾಗಿದೆ. ನಮ್ಮ ಕಸಬೆಯಲ್ಲಿಯೂ ಈ ರೋಗವು ಪ್ರಾದುರ್ಭೂತವಾಗಿರುವದು. ಜನಗಳ ವಿಪತ್ತಾದಷ್ಟೆ! ದೇಸಾಯಿಗಾರರ ಗೋಳು!! ಇತ್ತ ದನಗಳು ಸಾಯುತ್ತಿರುವವು. ಮ್ಯುನಿಸಿಪಾಲಿಟಿಯವರು ಇವುಗಳನ್ನು ಹೂಳಿಸಲಿಕ್ಕೆ ಏನೂ ವ್ಯವಸ್ಥೆ ಇಟ್ಟಿಲ್ಲ. ಮುಂಚೆ ಇವುಗಳನ್ನು ಹಿಡಿಸಲಿಕ್ಕೆ ಒಬ್ಬ ನೌಕರನು ನೇಮಕ ಹೊಂದಿದ್ದನು. ಹೊಸ ಮನ್ವಂತರದಲ್ಲಿ ಲೋಕಾನುಕೂಲತೆಯಿತ್ತು. ಕೆರೆಗೆ ಮಾತ್ರ ಕೆಟ್ಟುಹೋಗಿದೆ. ಇಷ್ಟು ಕುಟಾಕಿಯು ನೌಕರನಾದ ಇಲ್ಲದೆ ಬಿಟ್ಟುಕೊಂಡಿದೆ. ಈ ವಾರದಲ್ಲಿ ೩೦-೩೧ ಇಂಚು ಮಳೆ; ಈ ವರೆಗೆ ಅಂತು ೬೩-೧೧ ಇಂಚು ಮಳೆಯಾಯಿತು.

ಒಬ್ಬರು ತಿಳಿಸುವದೇನಂದರೆ:— ಶಾರದಾ— ಹೊನ್ನಾವರ ವರೆಗಿನ ಮಾರ್ಗಗಳ ಮೇಲಿನ ಏರಿಗಳಲ್ಲಿ ಬಿರ್ಗಿ ಭಿತ್ತದ ಏರಿಯು ಬಹಳ ದೊಡ್ಡದು. ಈ ಮಾರ್ಗದ ಎರಡೂ ಬದಿಗೆ ಆಳವಾದ ಕಂದರಗಳಿವೆ. ಮಾರ್ಗಗಳಿಂದ ಸೈಕಲ—ಗಾಡಿ ಮುಂತಾದ ವಾಹನಗಳು ಜಾರಿ ಬೀಳುವ ಭೀತಿಯು ಇಲ್ಲಿ ಹೆಚ್ಚಿದೆ. ಅದಕ್ಕಾಗಿ ಬದಿಗೆ ಏರು ಇಳಿ ಇದ್ದ ಮಾರ್ಗಗಳ ಎರಡೂ ಬದಿಗೆ ಸೊಂಟದಷ್ಟು ಎತ್ತರ ಪಾಗಾರುಗಳನ್ನು ಹಾಕಬೇಕು. ಬದಿಗಳಲ್ಲಿ ಸಣ್ಣ ಸಣ್ಣ ಕಲ್ಲುಗಳನ್ನು ನಿಲ್ಲಿಸಿ ಪ್ರಯೋಜನವಾಗದು.

ಅಂಕೋಲಾ— ಇಲ್ಲಿಯ ವರದಿಗಾರರೊಬ್ಬರು ತಿಳಿಸುವದೇನಂದರೆ:— ಇಲ್ಲಿಯ ಎಜ್ಯುಕೇಶನ ಶಾಲೆಯ ಮಂಡಳಿಯವರನ್ನೂ ಶಿಕ್ಷಕರಿಗೂ ಕಳೆದ ವಾರದಲ್ಲಿ ತೀವ್ರ ವಾದ-ವಿವಾದವಾಗಿ ಶ್ರೀ ಸಖಳೀಕರ ಹಾಗು ಕೊಲಕರ್ಣಿ ಹೀಗೆ ಇಬ್ಬರು ಗ್ರ್ಯಾಜ್ಯುಏಟ ಶಿಕ್ಷಕರು ಶಾಲೆಗೆ ರಾಜೀನಾಮೆ ಕೊಟ್ಟರು. ಈ ಶಿಕ್ಷಕರು ವಿದ್ಯಾರ್ಥಿಗಳಿಗೆ ಬಹಳೇ ಪ್ರಿಯರಾಗಿದ್ದರು. ಶಿಕ್ಷಕರಾದ ಶ್ರೀ ಭಟ್ಟರವರು ನಿರುಪಾಯರಾಗಿ ಶಾಲೆಯ ಕೆಲಸ ನಡೆಸಿಕೊಂಡಿರುವರಾಗಿ ಹೇಳಿಕೆ ಅದೆ. ಮದ್ರಾಸಿನಿಂದ ಮತ್ತೆ ಶಿಕ್ಷಕರು ಬರುವರಾಗುತ್ತಾರೋ ನೋಡಬೇಕು. ಮದ್ರಾಸಿಗಳ ಹಾವಳಿಯು ಅಂಕೋಲೆಗೂ ಬಂದು ಮುಟ್ಟಿತು. ಶಾಲೆಯ ಕಮಿಟಿಯಲ್ಲಿಯೂ ಇತ್ತಿತ್ತ ಕೆಲವು ಮಂದಿಗಳಲ್ಲಿ ಈಗಿನ ಆಡಳಿತೆಯಿಂದ ಅಸಮಾಧಾನವಾಗಿರುವದಂತೆ. ಅಂತು ಎಜ್ಯುಕೇಶನ ಶಾಲೆಯ ಸ್ಥಿತಿಯು ನಿರಂಕುಶ ಆಡಳಿತೆಯಿಂದ ಕಂಗೆಟ್ಟಿರುವದು. ಹೊಸ ಶಾಲೆಯು ಇನ್ನೂ ಪ್ರಾರಂಭವಾಗಲಿಲ್ಲ. ಶಾಲೆಗೆ ತಕ್ಕಷ್ಟು ಕಟ್ಟಡವು ಸಿಗಲಿಲ್ಲವಂತೆ. ಮುಂದಿನ ವರ್ಷ ಹೊಸ ಶಾಲೆ ಸ್ಥಾಪನೆಯಾಗಬಹುದೆನ್ನುತ್ತಾರೆ.

ಶಿರಸಿ—ಮಳೆಯೂ ಗಾಳಿಯೂ ವಿಪರೀತ. ಕಳೆದ ೨೦ ನೇ ತಾರೀಖಿನ ದಿವಸ ಮುನಿಸಿಪಲ್ ಜನರಲ್ ಕಮಿಟಿಯಲ್ಲಿ ದೇಶಬಂಧು ಚಿತ್ತರಂಜನ ದಾಸರವರ ಮರಣದ ಮೂಲಕವಾದ ದುಃಖಪ್ರದರ್ಶಕ ಠರಾವು ಸರ್ವಾನುಮತದಿಂದ ಮಂಜೂರಾಯಿತು. ಮರುದಿವಸ ಯಾವತ್ತು ಅಂಗಡಿಕಾರರು ತಮ್ಮ ತಮ್ಮ ಅಂಗಡಿಗಳನ್ನು ಬಂದಿಟ್ಟು ದಾಸ ಬಾಬುಗಳ ವಿಷಯವಾಗಿದ್ದ ತಮ್ಮ ಆದರವನ್ನು ವ್ಯಕ್ತಪಡಿಸಿದ್ದಲ್ಲದೆ, ಸಾಯಂಕಾಲ ಸಾರ್ವಜನಿಕ ಸಭೆಯೇರ ದುಃಖಪ್ರದರ್ಶಕ ಠರಾವು ಮಂಜೂರಾಗಿ ಅದರ ನಕಲು ಅವರ ಕುಟುಂಬಕ್ಕೆ ಕಳಿಸಲ್ಪಟ್ಟಿತು. ಮತ್ತು ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು ಶ್ರೀದೇವರಿಗೆ ಪ್ರಾರ್ಥನೆಯಾಯಿತು.

ವಿವಿಧ.

ಪೋಲೀಸರ ಬಂದೋಬಸ್ತು!

— ಮುಂಬಯಿಯಲ್ಲಿ ಜೂಗಾರು ಮಂಡಳಿಗಳು ಕೆಲವು ಪೋಲೀಸ ಅಧಿಕಾರರ ಆಶ್ರಯದಲ್ಲಿಯೇ ನಡೆಯುತ್ತವೆಂದು ಪೋಲೀಸ ಕಮೀಶನರರಿಗೆ ಸಂಶಯಬಂದು, ಅಬಗ್ಗೆ ಚೌಕಶಿಯಾಗಿ ಸುಪರಿಂಟೆಂಡೆಂಟ ಫುಲ್ಲರ, ಇನ್ಸಪೆಕ್ಟರ ಚಿಪ್‌ಮನ್ ಮತ್ತು ಡೆಪ್ಯುಟಿ ಇನ್ಸಪೆಕ್ಟರ ದಾಪ್ರೋಡಕರ ಈ ಮೂವರಿಗೆ ಪದಭ್ರಷ್ಟ ಮಾಡಿರುವರು.

ಪೋಲೀಸರ ದರೋಡೆ!

— ರಂಗೂನದಲ್ಲಿ ಒಂದು ದೊಡ್ಡ ದರೋಡೆಯಾಯಿತು. ದರೋಡೆ ಹಾಕಿದವರು ಪೋಲೀಸರು. ದರೋಡೆಯಾದದ್ದು ಸೂಳೆಯ ಮನೆಯಲ್ಲಿ. ಒಬ್ಬ ಡೆಪ್ಯುಟಿ ಇನ್ಸಪೆಕ್ಟರ, ಒಬ್ಬ ಕಾವಲ ಮಾಡುವ ಸರ್ಜಂಟ, ಒಬ್ಬ ಗುಪ್ತ ಪೋಲೀಸ ಖಾತೆಯ ಮುಖ್ಯ ಶಿಪಾಯಿ, ಇಬ್ಬ ಅದೇ ಖಾತೆಯ ಶಿಪಾಯಿಗಳು, ಇನ್ನು ೬ ಮಂದಿಗಳು ಕೂಡಿ ಸೂಳೆಯ ಮನೆಗೆ ಹೋಗಿ, ಸೂಳೆತನ ಮಾಡುವ ಬಗ್ಗೆ ಸೆರೆ ಹಿಡಿಯುತ್ತೇವೆಂದು ಬೆದರಿಸಿ, ೧೯೯ ರೂಪಾಯಿ ಹಾಗು ದಾಗಿನಗಳನ್ನು ಅಪಹರಿಸಿದರು. ಈ ಬಗ್ಗೆ ಪೋಲೀಸ ಅಧಿಕಾರರಿಗೆ ಸೆರೆಹಿಡಿಯಲಾಗಿದೆ.

ಅರವತ್ತು-ಕುಮಾರಿ ವಿವಾಹ!

— ಮುಂಬಯಿಯ ಪ್ರಸಿದ್ಧ ಮಿ| ಎಸ್. ಆರ್. ಬೊಮ್ಮನಜಿ ಎಂಬ ವ್ಯಾಪಾರಿ ಸಾವ್ಕಾರರು ಪಾರೀಸದಲ್ಲಿ ಒಬ್ಬ ಫ್ರೆಂಚ ಲೇಡಿಯನ್ನು ಮದುವೆ ಮಾಡಿಕೊಂಡರು. ಮಿ| ಬೊಮ್ಮನಜಿಯವರ ಪ್ರಾಯ ೬೦ ವರುಷ! ಲೇಡಿಯ ಪ್ರಾಯ ೩೩ ವರುಷ!! ಈ ಮದುಮಗನು ಮದುವೆಯ ಕಾಲಕ್ಕೆ ಖಾದಿಯ ಟೊಪ್ಪಿಗೆ, ಖಾದಿಯ ಅಂಗಿ, ಖಾದಿಯ ವಸ್ತ್ರಗಳನ್ನು ಧರಿಸಿದ್ದನಲ್ಲದೆ, ತಮ್ಮ ಧರ್ಮದ ಕಸ್ತಿ ಅಂಬರವನ್ನು ಹಿಂದುಸ್ಥಾನದ ಸಾಮಗ್ರಿಗಳಿಂದಲೇ ತಯಾರಿಸಿ ತಂದಿದ್ದನು. ಮದುವೆಯಾದ ಬಳಿಕ, ಔತಣಸಮಾರಂಭವಾಯಿತು. ಪಾರೀಸದೊಳಗಿನ ಲಕ್ಷಾಧೀಶರೂ ಹಾಜರಿದ್ದರು. ಹಿಂದುಸ್ಥಾನದೊಳಗಿನ ಸಂಸ್ಥಾನಿಕರೂ ಹಾಜರಿದ್ದರು. ಮದುಮಗನ ಪೋಷಾಕು ಸ್ವದೇಶಿ! ಮದುಮಗನೂ ಸ್ವದೇಶಿ!! ಮದುಮಗಳು ಪರದೇಶಿ!!! ಮದುವೆಯಾದದ್ದು ಪರದೇಶದಲ್ಲಿ!!!! ಅಷ್ಟಾಗಿ ಮಿ| ಬೊಮ್ಮನಜಿಯವರು ಸ್ವದೇಶಿ ಭಕ್ತರು! ಮೆಚ್ಚಿದವನಿಗೆ.........

— ಚಿತಗಾಂಗದಲ್ಲಿ ೨ ಅರಳೀ ಉಗ್ರಾಣಗಳಿಗೆ ಬೆಂಕಿ ಹತ್ತಿ ೧॥ ಲಕ್ಷ ರೂಪಾಯಿಗಳ ಹಾನಿ.

ದೇಶಬಂಧುಗಳ ಪುಣ್ಯಸ್ಮರಣೆ!

(೫ ನೇ ಪಾನಿನಿಂದ ಮುಂದರಿಸಿದ್ದು.)

ದೇಕಾಗುತ್ತದೆ. " ಇದರಮೇಲಿಂದ ಸ್ವರಾಟೆಯ ಮೇಲಿನ ಒಲವು ಯಾಕೆ ಕಠಿಣವಾಗುತ್ತದೆಂದು ನಿಮಗೆ ತಿಳಿಯ ಬಹುದಾಗಿದೆ. ಆದರೂ, ದೇಶಬಂಧುಗಳಿಗೆ ಸ್ವರಾಟೆಯ ಮೇಲೆ ವಿಶೇಷ ಶ್ರದ್ಧೆ ಇತ್ತು. ನೂಲುತ್ತಿರುತ್ತೇವೆಂದು ಅವರು ಮಹಾತ್ಮರಿಗೆ ವಚನ ಕೊಟ್ಟಿದ್ದರು. ಹಿವ್ವೊಮ್ಮೆ ಅವರು ಉದ್ಗರಿಸುತ್ತಿದ್ದೇನೆಂದರೆ:— ಕೌನ್ಸಿಲುಗಳನ್ನು ಸೇರಿಕೊಳ್ಳುವದು ಅವಶ್ಯವೆಂದು ನನ್ನ ಮತವು. ಅದರೊಡನೆ ನೂಲುವದಾದರೂ ಅಷ್ಟೇ ಅವಶ್ಯವು. ಅವಶ್ಯವೆಂದೇ ಹೇಳಿ, ಕಡೆಯಲಾರೆ. ನೂಲ ಹೊರತು, ಕೌನ್ಸಿಲು ಕಾರ್ಯವು ಫಲಿಸುವದಿಲ್ಲ. " ದೇಶಬಂಧುಗಳ ಸ್ವರಾಟೆಯ ಮೇಲಿನ ಶ್ರದ್ಧೆಯಿದು! ಸ್ವರಾಟೆಯು ಮಹಾತ್ಮರವು ದೇಶಬಂಧುಗಳ ಮನಸ್ಸಿನಮೇಲೆ ವಿಶೇಷವಾಗಿ ಬಿಂಬಿಕೊಂಡಿತ್ತು. ಇಂಥ ವೀರ ಪುರುಷರು, ರಾಷ್ಟ್ರಹಿತದಕ್ಷ ಪುರುಷರು, ನಿಶ್ಚಲ ವೃತ್ತಿಯವರು ಥಟ್ಟನೆ ಕಾಲವಶರಾಗಿ, ದಂಡಿತ ಮೋಹಿತರಾದರೆ ಮಡಿಯುವಂತೆ, ಎಲ್ಲಿ ನೋಡಿದತಲ್ಲಿ ಯಾವದೇ ದೃಷ್ಟಿಯಿಂದ ವಿಚಾರಿಸಿದರೂ, ಒಂದು ದೊಡ್ಡ ಆಳವಾದ ಪರ್ವತವು ಕುಸಿದುಬಿದ್ದಂತೆ ಕಾಣುತ್ತದಲ್ಲವೇ? ಭಗವಂತನೇ, ನೀನೇ ಇನ್ನು ಮಾರ್ಗದರ್ಶಕನು!

⁂

ಇತರ ಸುದ್ದಿ.

ದೇಶಬಂಧುಗಳು ಸ್ವರಾಜ್ಯಪಕ್ಷದ ನಾಯಕರು. ಅವರ ಸ್ಥಳದಲ್ಲಿ ಅರವಿಂದರು ನಾಯಕರಾಗುತ್ತಾರೆಂದು, ಯಾರಾಗಬೇಕೆಂದು ತರ್ಕ ನಡೆದಿದೆ. ಮಹಾತ್ಮರು ಪೊಂಡಿಚೇರಿಯಲ್ಲಿದ್ದ ತಪೋನಿಧಿ ಬಾಬು ಅರವಿಂದ ಘೋಷರವರಿಗೆ ಕರಿಸಿದವರೆಂಬದೊಂದು ವಾರ್ತೆಯಿತ್ತು. ಆದರೆ, ಮದ್ರಾಸಿನ 'ಸ್ವದೇಶಮಿತ್ರಂ' ಪತ್ರಿಕೆಯು ಈ ಹಕೀಕತು ನಿರಾಧಾರವೆಂದು ಪ್ರಕಟಿಸಿದೆ. ಬಂಗಾಲದೊಳಗಿನ ಕೆಲವು ಪ್ರಮುಖರು ಬಾಬು ಮಹಾಶಯರಿಗೆ ಬಂಗಾಲಕ್ಕೆ ಬರಲು ೨-೩ ತಂತಿ ಬಿಟ್ಟಿದ್ದರಂತೆ. ಆದರೆ, ಘೋಷರವರು ಇನ್ನೂ ಉತ್ತರ ಕೊಡಲಿಲ್ಲ. ಇವರು ಪೊಂಡಿಚೇರಿಯಲ್ಲಿ ವಾಸವಾಗಿ ೧೬ ವರ್ಷಗಳಾದವು. ರಾಜದ್ರೋಹದ ಖಟ್ಲೆಯೊಳಗಿಂದ ವಿಮೋಚನ ಹೊಂದಿದಂದಿನಿಂದ ಇಲ್ಲಿ ಅವರು ಉಳಕೊಂಡಿರುವರು. ಈ ಸುದ್ದಿ ಕೇಳಿ, ಮುಂಬಯಿಯ "ಟೈಮ್ಸ" ಮುಂತಾದ ಪತ್ರಿಕೆಗಳು ಎದೆಹಾರಿದೆ. ಅರವಿಂದ ಬಾಬುರವರು ಕ್ರಾಂತಿಕಾರಕರೆಂದು ಅವರದೊಂದು ಹಳೇ ದೂರು. ಸ್ವರಾಜ್ಯ ಪಕ್ಷದ ಮುಖಂಡತನವನ್ನು ಡಾಕ್ಟರ ಸೇನಗುಪ್ತರು ವಹಿಸಿಕೊಳ್ಳಬೇಕೆಂದು ಮಹಾತ್ಮರ ಅಂಬೋಣ.

ಶ್ರೀ ವಾ॥ ದೊಡ್ಮನೆ ನಾರಾಯಣ ಹೆಗಡೆಯವರು.

ಈ ತಾಲೂಕಿನ ದೊಡ್ಮನೆ ಗ್ರಾಮದ ನಿವಾಸಿಕರಾದ ನಾರಾಯಣ ಗಣೇಶ ಹೆಗಡೆ ಅವರು ಕಳೆದ ತಾ. ೧೨-೬-೨೫ನೇ ಶುಕ್ರವಾರ ಬೆಳಿಗ್ಗೆ ೯ ಘಂಟೆಗೆ ತಮ್ಮ ೪೫ನೇ ವರ್ಷದಲ್ಲಿ ಇಹಲೋಕಯಾತ್ರೆಯನ್ನು ಕೀರ್ತಿಯುತವಾಗಿ ಮುಗಿಸಿ ಪರಲೋಕವಾಸಿಯಾದ ಸಂಗತಿಯನ್ನು ತಿಳಿಸಲಿಕ್ಕೆ ಬಹಳೇ ದುಃಖವೆನಿಸುತ್ತದೆ. ಇವರು ಈ ತಾಲೂಕಿನ ದೊಡ್ಮನೆ ಎಂಬ ಗ್ರಾಮದಲ್ಲಿ ಸಂಪತ್ತಿ-ಸಂತತಿಗಳಿಂದಲೂ, ಧಾರ್ಮಿಕ, ಸಾಮಾಜಿಕ, ವ್ಯವಹಾರಗಳಲ್ಲಿಯೂ ದೊಡ್ಡಸ್ತನವನ್ನು ಪಡೆದ ಹವೀಕ ಮನೆತನದಲ್ಲಿ ಕಳೆದ ವಿಷು ಸಂ॥ ದ ಶ್ರಾವಣ ಶುದ್ಧ ೫ ದಿವಸ ಜನ್ಮವನ್ನೆತ್ತಿದರು. ಇವರ ತಂದೆ ಗಣೇಶ ಹೆಗಡೆ ತಾಯಿ ತಿಮ್ಮಮ್ಮಾಬಾಯಿ ಈ ದಂಪತಿ-ಪಿತೃಗಳಾದರೂ ಸರಳ ಮನಸ್ಸಿನವರೂ, ಉದಾರ ಬುದ್ಧಿಯವರೂ, ವಿದ್ಯಾ ಪಂಡಿತರೂ ಆಗಿದ್ದರು. ಆ ಗುಣಗಳೇ ಇವರಲ್ಲಿಯೂ, ಒಡಮೂಡಿದ್ದವು.

ಇವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಮನೆಯಲ್ಲಿ ತಮ್ಮ ೯ನೇ ವರ್ಷ ಪ್ರಾಯದಲ್ಲಿಯೇ ಮುಗಿಸಿಕೊಂಡು, ಮುಂದೆ ಇಂಗ್ಲಿಶ ಶಿಕ್ಷಣದ ಅಭ್ಯಾಸವನ್ನು ಕುಮಟಾ-ಕಾರವಾರಗಳಲ್ಲಿ ತೀರಿಸಿ, ತಮ್ಮ ೧೬ನೇ ವರ್ಷ ಪ್ರಾಯದಲ್ಲಿ ಮುಂಬಯಿ ಸೆಂಟರಿನಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣ ಹೊಂದಿದರು. ಅದೇ ವರ್ಷವೇ ಉಚ್ಚ ಶಿಕ್ಷಣವನ್ನು ಪಡೆಯುವ ಬಗ್ಗೆ ಪುಣೆಗೆ ತೆರಳಿದರು. ಕಾಲೇಜಿನಲ್ಲಿ ಸೇರಿ ಏಳು-ಎಂಟು ತಿಂಗಳಾಗುವಷ್ಟರಲ್ಲಿಯೇ ಪ್ಲೇಗ ರೋಗವು ಪುಣೆಯಲ್ಲಿ ಮೊದಲನೇ ಸಾರೆ ಜನ್ಮವೆತ್ತಿದ ಸುದ್ದಿ ಇವರ ತೀ॥ರಿಗೆ ತಿಳಿದು, ಅವರನ್ನು ಮನೆಗೆ ಕರೆಸಿಕೊಂಡರು. ಇವರು ಇಂಗ್ಲಿಶ ಶಿಕ್ಷಣ ಪಡೆದವರಾದಾಗ್ಯೂ, ಹ್ಯಾಟ್, ಬೂಟು ಮುಂತಾದ ಪಾಶ್ಚಾತ್ಯ ಸಂಸ್ಕೃತಿಯ ಬಾಹ್ಯೋಪಭೋಗಗಳಿಗೆ ಮರುಳಾಗದೆ, ತಮ್ಮ ಆರ್ಯಸಂಸ್ಕೃತಿಯ ಬಗ್ಗೆ ಪೂರ್ಣ ಅಭಿಮಾನವುಳ್ಳವರಾಗಿದ್ದರು.

ಇವರು ಮನೆಗೆ ಬಂದ ನಂತರವಾದರೂ, ಸುಮ್ಮನೆ ಕೂಡ್ರಲಿಲ್ಲ. ಧಾರ್ಮಿಕ, ರಾಜನೈತಿಕ ಮುಂತಾದ ಉಚ್ಚ ವಿಷಯಗಳ ಜ್ಞಾನವನ್ನು ಸ್ವತಃ ಅಧ್ಯಯನದಿಂದ ಮಾಡಿಕೊಂಡರು. ಅದಕ್ಕಾಗಿ ಅವರು ಲೋಕಮಾನ್ಯ ತಿಲಕರ ಸಂಪಾದಕತ್ವದಲ್ಲಿ ನಡೆಯುವ 'ಮರಾಠಾ' ಎಂಬ ಇಂಗ್ಲಿಷ ವರ್ತಮಾನ ಪತ್ರವೇ ಮೊದಲಾದ ಆ ಕಾಲದಲ್ಲಿ ಪ್ರಸಿದ್ಧಿಯಲ್ಲಿರುವ ವೃತ್ತಪತ್ರಗಳನ್ನು ತರಿಸಿ ಸ್ವತಃ ಓದಿ ತಿಳಕೊಂಡು, ಜನರಲ್ಲಿಯೂ ಪ್ರಸಾರ ಮಾಡಿ ತಮ್ಮ ಜನರಲ್ಲಿರುವ ಅಜ್ಞಾನವನ್ನು ಹೋಗಲಾಡಿಸಲಿಕ್ಕೆ ದೇಶಸೇವೆಯೇ ಈಶಸೇವೆ ಎಂಬ ಭಾವನೆಯಿಂದ ಎಲ್ಲ ರೀತಿಯಿಂದಲೂ ಪ್ರಯತ್ನಿಸುತ್ತಿದ್ದರು. ಇವರು ತಾವು ಹಿಡಿದ ಸತ್ಯ ಮಾರ್ಗವನ್ನು ಎಂದೂ ಬಿಡುತ್ತಿದ್ದಿಲ್ಲವಾದ್ದರಿಂದ ಸರಕಾರಿ ಅಧಿಕಾರಿಗಳು ಇವರನ್ನು ರಾಜಕಾರಣದಲ್ಲಿ ಬೀಳದಂತೆ ಎಷ್ಟು ಪ್ರಯತ್ನಿಸಿದಾಗ್ಯೂ ಅದೆಲ್ಲಾ ನಿಷ್ಫಲವಾದದ್ದಲ್ಲದೆ, ಅದರಿಂದ ಇವರ ಕೀರ್ತಿಯು ಮತ್ತಿಷ್ಟು ಹೆಚ್ಚಿತು. ಮತ್ತು ಇವರು ಭಾರತ ಮಾತೆಯ ನಿಜವಾದ ದುಃಖವನ್ನು ತಿಳಕೊಂಡು, ಕಾಲ ಕಾಲಕ್ಕೆ ಆಗುವ ರಾಷ್ಟ್ರಜಾಗೃತಿಯಂತೆ ನಡಕೊಳ್ಳುತ್ತಾ ಬಂದು, ಮೊದಲು ಹೋಮರೂಲ ಮೆಂಬರರೂ, ನಂತರ ಕಾಂಗ್ರೆಸ ಮೆಂಬರರೂ ಆಗಿದ್ದರು. ಈ ವರ್ಷ ಸಹ ಸ್ವತಃ ನೂಲಿನ ಮೆಂಬರರಾದದ್ದಲ್ಲದೆ, ತಮ್ಮ ಬಾಂಧವರನ್ನೂ ಮೆಂಬರರನ್ನಾಗಿ ಮಾಡಿಸಿದ್ದರು. ಇವರು ಧಾರ್ಮಿಕ, ಸಾಮಾಜಿಕ, ರಾಜಕೀಯ, ವಿಷಯಗಳಲ್ಲಿ ಚನ್ನಾಗಿ ನುರಿತವರಾಗಿದ್ದು, ನುಡಿದಂತೆ ನಡೆಯುವವರಾದ್ದರಿಂದ ಇವರ ಕೀರ್ತಿಯು ಹವೀಕ ಸಮಾಜದಲ್ಲಂತೂ ಚನ್ನಾಗಿ ನೆಲೆಗೊಂಡಿತ್ತು.

ಅಸಹಕಾರಿತೆಯು ಶುರುವಾದ ಕೂಡಲೇ ಇವರು ಈ ತಾಲೂಕಿನಲ್ಲಿ ಅಲ್ಲಲ್ಲಿ ಗ್ರಾ. ಕಾಂ. ಕಮಿಟಿಗಳನ್ನು ಸ್ಥಾಪಿಸಲಿಕ್ಕೂ, ಜನರಲ್ಲಿ ರಾಷ್ಟ್ರಭಕ್ತಿಯನ್ನು ಹುಟ್ಟಿಸಲಿಕ್ಕೂ ಬಹಳ ಪ್ರಯತ್ನಪಟ್ಟದ್ದಲ್ಲದೆ, ಈ ತಾಲೂಕಿನೊಳಗಿನ ದೊಡ್ಮನೆ, ಲಂಬಾಪುರ, ಇಟ್ಗಿ, ಕ್ಯಾದ್ಗಿ ಮುಂತಾದ ಬಹುತೇಕ ಗ್ರಾಮಗಳ ಪಟೇಲರ ಕೈಯಿಂದ ರಾಜೀನಾಮೆ ಕೊಡಿಸಿ, ಅಸಹಕಾರಿತೆಯ ತತ್ವವನ್ನು ಜನರಲ್ಲಿ ಚನ್ನಾಗಿ ಪ್ರಸ್ಥಾಪಿಸಿದ್ದರು. ಇವರು ಖಾದೀ ಬಗ್ಗೆ ಬಹಳೇ ಅಭಿಮಾನವುಳ್ಳವರಾದ್ದರಿಂದ ತಾವು ಸ್ವತಃ ನೂಲುತೆಗೆದು ಖಾದಿ ಧರಿಸುತ್ತಿದ್ದರಲ್ಲದೆ, ಜನರಲ್ಲಿಯೂ ಖಾದೀಪ್ರಚಾರ ಚನ್ನಾಗಿ ಮಾಡಿಸಿದ್ದರು. ಕಳೆದ ೧೯೨೪ನೇ ಇಸ್ವಿ ಇಟ್ಗಿ ಜಾತ್ರೆಯ ವೇಳ್ಯಾ ಫಕ್ತ ತಮ್ಮ ಆಸಪಾಸ ಹಳ್ಳಿಗಳ ಜನರಿಂದಲೇ, ೧೦೦೦ ಸಾವಿರ ರೂಪಾಯ ಭಾಂಡವಲ ಕೂಡಿಸಿ, ಆ ಜನರಿಂದ ಖಾದಿ ತಂದು ವಿಕ್ರಯಿಸಿದ್ದರ ಮೇಲಿಂದ, ಖಾದಿಯ ಮೇಲಿನ ಅವರ ಪ್ರೀತಿಯು ಹೆಚ್ಚು ಬಹುಮೂಡಿ ಕಾಣುವಂತಿತ್ತು.

ಈ ತಾಲೂಕಿನ ಹವೀಕ ಗೃಹಸ್ಥರೊಬ್ಬರು ಹವೀಕ ಸಮಾಜದಲ್ಲಿ ಪುನರ್ವಿವಾಹವನ್ನು ರೂಢಿಯಲ್ಲಿ ತರಲಿಕ್ಕೆ ಸಾಹಸಪಟ್ಟಾಗ, ಇವರು ಪುನರ್ವಿವಾಹವು ಧರ್ಮಸಮ್ಮತವಲ್ಲೆಂಬುದನ್ನೂ, ಅದರಿಂದ ಆಗುವ ಹಾನಿಯನ್ನೂ ಸಶಾಸ್ತ್ರ, ಸಕಾರಣವಾಗಿ ಜನರಿಗೆ ತೋರಿಸಿಕೊಟ್ಟು, ವಜ್ರಾಘಾತದಂತೆ ಹವೀಕ ಸಮಾಜಕ್ಕೆ ಬರಬಹುದಾಗಿದ್ದ ಪುನರ್ವಿವಾಹದ ರೂಢಿಯನ್ನು ತಮ್ಮ ವಿದ್ವತ್ತೆಯ ಸಾಹಸದಿಂದಲೂ ನೀತಿಯ ವರ್ಚಸ್ಸಿನಿಂದಲೂ ನಿಲ್ಲಿಸಿದರು.

ಇವರು ಕಳೆದ ಮೂರು ವರ್ಷಗಳ ಹಿಂದೆ ಆದ ಲೋಕಲ್ ಬೋರ್ಡ ಚುನಾವಣೆಯಲ್ಲಿ ದೊಡ್ಮನೆ ಗ್ರೂಪಿನಲ್ಲಿ ಉಮೇದ್ವಾರರಾಗಿ ನಿಂತಿದ್ದರು. ಅದರಲ್ಲಿ ಪ್ರತಿಸ್ಪರ್ಧಿಗಳಿದ್ದರೂ, ಇವರೇ ಆರಿಸಿಬಂದದ್ದರ ಮೇಲಿಂದ, ಜನರಲ್ಲಿ ಇವರ ಬಗ್ಗೆ ಇದ್ದ ಅಭಿಮಾನವು ಚನ್ನಾಗಿ ಸ್ಪಷ್ಟವಾಗುವಂತಿತ್ತು. ಈಗಿನ ಪ್ರಾಂತ ಸಾಹೇಬರು ಒಮ್ಮೆ ದೊಡ್ಮನೆ ಮುಕ್ಕಾಂ ಮಾಡಿದಾಗ, ಕಾರ್ಯವಾಹಿಯಿಂದ ಉಂಟಾದ ತಮ್ಮ ಸರಕಾರಿ ಅಮಲಿನ ಸತ್ತೆಯನ್ನು ತೋರಿಸಲಿಕ್ಕೆ ಮಾಡಿದ ಗೈರಶಿಸ್ತ ವರ್ತನವನ್ನು ಇವರು ಸಂಪೂರ್ಣವಾಗಿ ನಿಷೇಧಿಸಿದ ಸಂಗತಿಯ ಮೇಲಿಂದ, ಇವರ ನೀತಿಧೈರ್ಯವೂ, ರಾಷ್ಟ್ರಾಭಿಮಾನವೂ, ಚನ್ನಾಗಿ ವ್ಯಕ್ತವಾಯಿತು. ಒಮ್ಮೆ ಸಿದ್ದಾಪುರದಲ್ಲಿ ಕೂಡಿದ ಜಾಹೀರ ಸಭೆಯ ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವ ಪೂರ್ವದಲ್ಲೇ ಇವರಿಗೆ ಮಾಮಲೇದಾರ ಹುಕುಂ ಜಾರಿ ಆದರೂ, ಆ ಅನ್ಯಾಯದ ಹುಕುಂ ಎಂತ ತಿರಸ್ಕರಿಸಿ, ತಮ್ಮ ಸತ್ಯಸಂಕಲ್ಪದಂತೇ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದರಿಂದ. ತನ್ಮೂಲಕ ಇವರಲ್ಲಿರುವ ಶಾಂತಿಯೂ, ನೀತಿಧೈರ್ಯವೂ, ಜನರಲ್ಲಿ ಮತ್ತಿಷ್ಟು ಪ್ರಕಟವಾದವು.

ಇವರು ಸ್ವತಃ ಹೆಚ್ಚೇ ಶ್ರೀಮಂತರಿದ್ದಾಗ್ಯೂ, ತಮ್ಮ ಶ್ರೀಮಂತಿಕೆಯ ಉಪಯೋಗವನ್ನು ಫಕ್ತ ಸ್ವಾರ್ಥಕ್ಕೇ ಮಾಡಿಕೊಳ್ಳದೆ "ಸರ್ವಭೂತ ಹಿತೇ ರತಃ" ಎಂಬ ಗೀತಾ ವಾಕ್ಯದಂತೆ, ಲೋಕಹಿತ ಮಾಡುವದೇ, ತನ್ನ ಆದ್ಯ ಕರ್ತವ್ಯವೆಂದು ತಿಳಿದು, ಇವರ ಆಚಾರ-ವಿಚಾರಗಳಿದ್ದವು. ಈ ತಾಲೂಕಿನಲ್ಲಿ ಮುಂದಿನ ವರ್ಷ ರಿವ್ಹಿಜನ್ ಸೆಟ್ಲಮೆಂಟು ಆಗುವದೆಂಬ ಸುದ್ದಿ ಕೇಳಿ ಅದರಿಂದ ಇವರಿಗೆ ಸ್ವತಃ ದೊಡ್ಡ ಲುಕ್ಸಾನು ಆಗುವಂತಿಲ್ಲವಾದರೂ, ಬಡ ರೈತರಿಗೆ ಆಗುವ ಕಷ್ಟಗಳನ್ನು ತಪ್ಪಿಸುವ ಬಗ್ಗೆ ಒಂದು ಜಾಹೀರ ಸಭೆ ಮಾಡಿ ಪ್ರಯತ್ನಿಸಹತ್ತಿದರು.

ಈ ಪ್ರಕಾರ ಇವರು ಪ್ರತಿಯೊಂದು ಧಾರ್ಮಿಕ, ಸಾಮಾಜಿಕ, ರಾಜಕೀಯ ಕಾರ್ಯಗಳಲ್ಲಿ ಮುಂದಾಳಾಗಿ ತಮ್ಮ ಶ್ರೀಮಂತಿಕೆಯನ್ನು ಅಲಕ್ಷಿಸಿ, ತನು-ಮನ-ಧನದಿಂದ ನಿಗರ್ವಿಗಳಾಗಿ ದುಡಿಯುತ್ತಿದ್ದದರಿಂದ ಇವರ ವರ್ಚಸ್ಸು ತಾಲೂಕ ಕಡೆಗೆ ಹಬ್ಬಿದ್ದಲ್ಲದೆ, ಹವೀಕ ಸಮಾಜದಲ್ಲಂತೂ, ಇವರ ಮಾತಿನ ಹೊರತು ಯಾವ ಮಹತ್ವದ ಕೆಲಸವೂ ನಡೆಯುತ್ತಿದ್ದಿಲ್ಲ. ಆದರೆ, ಅವರಿಗೆ ಲೋಕ ಸೇವೆ ಮಾಡಬೇಕೆಂಬ ಎಷ್ಟು ಉತ್ಕಟವಾದ ಇಚ್ಛೆಯಿತ್ತೋ, ಅಷ್ಟೇ ಅಥವಾ ಅದಕ್ಕೂ ಹೆಚ್ಚು ದೇಹಸಂಪತ್ತಿಯು ಮಾತ್ರ ಇವರಲ್ಲಿ ಇಲ್ಲವಾದದ್ದು ದುರ್ದೈವದ ಸಂಗತಿಯೇ ಸರಿ. ಕಳೆದ ಎರಡು ವರ್ಷಗಳಿಂದ ಅವರು ಕ್ಷಯರೋಗ ಪೀಡಿತರಾಗಿ ಬಹಳ ಅಶಕ್ತರಾಗಿದ್ದರೂ, ದೇಶಕಾರ್ಯದಲ್ಲಿ ಶಕ್ತಿಮೀರಿ ದುಡಿಯುತ್ತ ಇದ್ದರು. ಅಂದಿನ ದಿವಸವಂತೂ ಹವೀಕ ಸಮಾಜದ ಒಬ್ಬ ರವಿ ಬಿಂಬವು ಅಸ್ತಂಗತವಾದ ದಿನವು. ದೇಶಸೇವೆಯೇ ಈಶಸೇವೆಯೆಂದು ತಿಳಿದು ಮನಮುಟ್ಟಿ ದುಡಿಯುವ ಕಾಂಗ್ರೆಸ ಮುಖಂಡರ ವ್ಯಕ್ತಿಯೊಬ್ಬರು ಅದೃಶ್ಯವಾದ ದಿನವು. ಮೃತರ ಆತ್ಮಕ್ಕೆ ಪರಮಾತ್ಮನು ಸುಖಶಾಂತಿಯನ್ನೀಯಲೆಂದೂ, ಅವರ ಕುಟುಂಬಕ್ಕೆ ಆಕಾಲದಲ್ಲಿ ಬಂದಂಥ ಈ ಸಂಕಟದಲ್ಲಿ ನಾವೆಲ್ಲರೂ ಸಮಭಾಗಿಗಳಿದ್ದೇವೆಂತಲೂ ತಿಳಿದು, ಅವರ ಬಂಧುಬಳಗದವರೂ, ಆಪ್ತೇಷ್ಟರೂ, ಅನುಯಾಯಿಗಳೂ ಆಗಿರುವ ನಾವೆಲ್ಲರೂ, ಅವರ ಬಗ್ಗೆ ಮಾಡಬೇಕಾದ ಮುಂದಿನ ಶ್ರಾದ್ಧ (ಸ್ಮಾರಕ) ಅಂದರೆ, ಬರೇ ಪಿಂಡ, ತಿಲ, ತರ್ಪಣಗಳೆಂದೇ ತಿಳಿಯದೆ, ಅವರ ಸದ್ಗುಣಗಳ ಮೇಲೆ ಪೂರ್ಣ ಶ್ರದ್ಧೆಯನ್ನಿಟ್ಟು, ಅವರು ಕೈಕೊಂಡ ಸತ್ಕಾರ್ಯಗಳನ್ನು ಹೆಚ್ಚು ಉತ್ಸಾಹದಿಂದ ಮುಂದರಿಸುವದೇ ನಿಜವಾದ ಶ್ರದ್ಧಾಯುಕ್ತ ಶ್ರಾದ್ಧವೆಂಬುದನ್ನು ತಿಳಿದು ವರ್ತಿಸುವಂತೆ ನಮಗೆಲ್ಲರಿಗೂ ಪರಮಾತ್ಮನು ಸದ್ಬುದ್ಧಿಯನ್ನೂ, ಆಯುರಾರೋಗ್ಯವನ್ನೂ ಈಯಲೆಂದು ಪ್ರಾರ್ಥಿಸಿ ಈ ಮೃತ್ಯುಲೇಖವನ್ನು ಮುಗಿಸುತ್ತೇನೆ.

ಸಿದ್ದಾಪುರ
ತಾ. ೨೪-೬-೨೫. } ಸಿದ್ಧ.

— ಚೀನದಲ್ಲಿ ಗಡಿಬಿಡಿಯಾಗಿದೆ. ಬ್ರಿಟಿಶ ಸಾಮಗ್ರಿಗಳ ಬಹಿಷ್ಕಾರವು ಜಾಹೀರವಾಗಲ್ಪಟ್ಟಿದೆ. ವಿಲಾಯತಿಯೊಳಗಿನ ಪತ್ರಿಕೆಗಳು ಬೊಬ್ಬಿರಿಯುತ್ತಿವೆ.

— ಬಂಗಾಲ ಪ್ರಾಂತದ ಹೌರಾದೊಳಗಿನ ಹತ್ತಿಯ ಗಿರಣಿಯಲ್ಲಿ ಕಳೆದ ತಾ. ೧೯ನೇಗೆ ಧಕ್ಕನೆ ಬೆಂಕಿ ಹತ್ತಿ, ಒಬ್ಬ ಹೆಂಗಸು ಸುಟ್ಟು ಹೋದಳು; ಇಬ್ಬ ಹೆಂಗಸರಿಗೆ, ಐದ ಗಂಡಸರಿಗೆ ಘಾಯಗಳಾಗಿವೆ. ೨೦೦೦೦ ರೂಪಾಯಿ ಹಾನಿ!

— ದೇಶಬಂಧುಗಳ ಅಕಾಲ ಮರಣ ದುಃಖಪ್ರದರ್ಶನಾರ್ಥ ಧಾರವಾಡ ಜಿಲ್ಲೆ ವಿಜಾಪುರ ಬೆಳಗಾಂವ ಬಾಗಲಕೋಟ ಮುಂತಾದ ಕಡೆಗಳಲ್ಲಿ ಸಭೆಗಳಾಗಿ ದುಃಖಪ್ರದರ್ಶಕ ಠರಾವುಗಳು ಪಾಸಾಗಲ್ಪಟ್ಟಿವೆ.

— ಮೈಸೂರಿನ ಶ್ರೀ ಮನ್ಮಹಾರಾಜರವರ ತಂಗಿಯಾದ ಶ್ರೀ॥ ಚೆಲುವಾಜಮ್ಮಣ್ಣಿಯವರು ಪುತ್ರಕಾಮೇಷ್ಟಿಯಾಗವನ್ನು ಕೈಕೊಂಡಿರುವರು.

— 'ವಿಶ್ವಬಂಧು' ಪತ್ರಿಕಾ ಕರ್ತರಾದ ಶ್ರೀ॥ ಶಾಂತಿರಾಜ ಶಾಸ್ತ್ರಿಗಳಿಗೆ 'ಆಸ್ಥಾನ ವಿದ್ವಾಂಸ' ಎಂಬ ಬಿರುದು ದೊರಕಿದೆ.

— ಅನಾಥ ವಿಧವೆಯರಿಗೆ ಮಕ್ಕಳ ಪೋಷಣ ಹಾಗು ಹೊಟ್ಟೆ ಹೊರಕೊಳ್ಳುವದು, ಅಸಾಧ್ಯವಾದಲ್ಲಿ ಮ್ಯುನಿಸಿಪಾಲಿಟಿಯವರು ಸಹಾಯ ಮಾಡಬೇಕೆಂದು ಜೇನ ಸಂಸ್ಥಾನದವರು ಕಾಯಿದೆ ಮಾಡಿರುವರು. ಮ್ಯುನಿಸಿಪಾಲಿಟಿಗೆ ಅವಶ್ಯವುಳ್ಳ ಪೂರೈಕೆಯಾಗಬೇಕು.

ಉತ್ತಮ, ಸುವಾಸಿಕ, ಶುದ್ಧ, ಮಿಶ್ರಣವಿಲ್ಲದ

ಜನರಿಗೆ ಅವಶ್ಯ ಬೇಕಾಗಿರುವ

ಕಾಬೂಲೀ ಹಿಂಗು.

೪೦ ತೊಲೆಯುಳ್ಳ ಡಬ್ಬಿ ೧ಕ್ಕೆ ೫—೦—೦.
೨೦ ತೊಲಿ ಡಬ್ಬಿ ೧ಕ್ಕೆ ೨—೧೨—೦
೧೦ ತೊಲಿ ಡಬ್ಬಿ ೧ಕ್ಕೆ ೧—೮—೦.
೫ ತೊಲಿ ಡಬ್ಬಿ ೧ಕ್ಕೆ ೧—೦—೦.
೧ ತೊಲೆಯ ಡಬ್ಬಿಗಳ ಡಜನ ೧ಕ್ಕೆ ೨—೦—

ನಮ್ಮ ಹಿಂಗು ಫೋಟೋ ಬಿಂಬಲ್ಲದೆ ವಿರತ ಕೊಡುವವು. ಟಪಾಲು ಖರ್ಚು ಪ್ರತ್ಯೇಕ.

ಕೆರೇಕರ ಕಾಬೂಲೀ ಹಿಂಗಿನ ದುಕಾನ
ಜವಳಿಬಜಾರ, ಕುಮಟಾ.

ಬಾಬುವಿನ ಬಂಧಮುಕ್ತಿ.

(ಅನುವಾದಕ:- ಕೆ. ಎ. [illegible])

ಹಿಂದಿನ ಸಂಚಿಕೆಯಿಂದ ಮುಂದೆ ಸಾಗಿದೆ.

೬

ಆ ದಿನ ಸಾಯಂಕಾಲ ನಾಗೇಂದ್ರ ಬಾಬುರವರು [illegible] ಅನವಧಾನ ಚಿತ್ತದಿಂದ ಮನೆಗೆ ಬಂದರು. ತಾವು [illegible] ಒಂದು ಹೊಸ ಅಪಾಯದಲ್ಲಿ ಸಿಲುಕಿದಂತೆ ಅವರಿಗೆ ಅನಿಸಹತ್ತಿತ್ತು. ಕಣ್ಣುಗಳು [illegible] ಮುಖವು ಕಳೆಗುಂದಿತ್ತು, ಮತ್ತು ಅವರು [illegible] ಬಾಡಿದ್ದರು.

ಅವರ ಹೆಂಡತಿಯು [illegible] [illegible] ನಾಗೇಂದ್ರ ಬಾಬುರವರು ಅವಳನ್ನು [illegible] ಬದಿ, ಅವಳು ಅವರ ಕಡೆಗೆ [illegible] ಅವರ್ಣ್ಣ ಯಾತರ ಪರಿಣಾಮವೂ ಆದಂತೆ [illegible]

ನಾಗೇಂದ್ರ ಬಾಬುರವರು ತಮ್ಮ [illegible] ಸ್ವಲ್ಪ ಹೊತ್ತಿನ ಮೇಲೆ ಪುನಃ ತಮ್ಮ [illegible] ಕಡೆಗೆ ಬಂದರು. ಚಾರುಶೀಲೆಯು [illegible] ದೀಪಪ್ರಕಾಶದಲ್ಲಿ ಅವಳ ಕಣ್ಣುಗಳು [illegible] ತುಂಬಿದ್ದವು.

“ಚಾರು, ನಿನಗೆ ಯಾಕೆ ಇಷ್ಟು ದುಃಖವಾಗಿದೆ?” ಎಂತ ನಾಗೇಂದ್ರ ಬಾಬುರವರು ಪ್ರೇಮಪೂರ್ವಕವಾಗಿ ಕೇಳಿದರು.

ಚಾರುಶೀಲೆಯು ತನ್ನ ಪತಿಯನ್ನು [illegible] ನೋಡುತ್ತಿದ್ದಳು. “ಚಾರು, [illegible] ನನಗೆ ಹೇಳು” ಎಂತ ಅವರು ಪುನಃ ಅಂದರು.

“ನನ್ನ ತಲೆ ನೋಯುತ್ತದೆ” ಎಂತ ಚಾರುಶೀಲೆಯು ಅಸ್ಪಷ್ಟವಾಗಿ ಅಂದಳು.

“ತಲೆನೋವೆ? ನಿಜವಾಗಿ ನನಗೆ ದುಃಖವಾಗುತ್ತದೆ. ಅದು ದಣಿವಿನ [illegible] ಒಂದು [illegible] ವನ್ನು ಕೊಳ್ಳುವ ಪಾಟಿಯಲ್ಲಿ ಅದಿ ಅದರಿಂದ ನಿನ್ನ ತಲೆಯನ್ನು ಕಟ್ಟುವೆನು. ಅದರಿಂದ ನಿನಗೆ ಕೂಡಲೆ ಗುಣವಾಗುವದು.”

“ಬೇಡ, ಬಹಳ ಉಪಕಾರವಾಯಿತು. ಅದರಿಂದ ನನಗೆ ಏನೂ ಉಪಯೋಗವಾಗಲಿಕ್ಕಿಲ್ಲ.” ಎಂತ ಚಾರುಶೀಲೆಯು ಉತ್ತರ ಕೊಟ್ಟಳು.

ನೆಪ್ಪಟ ಬಾಬುರವರು ಸ್ವಲ್ಪ ಹೊತ್ತು ಅವಳನ್ನು ಬಿಟ್ಟುಹೋದರು.

ಮನೆಯೊಳಗಿನ [illegible] [illegible] ನನ್ನು, [illegible] ಊಟದ ಹೊತ್ತಿನಲ್ಲಿ ಚಾರುಶೀಲೆಯು ಸ್ವತಃ ತನ್ನ [illegible] ನ್ನು ಮಾಡುತ್ತಿದ್ದಳು. ಆದರೆ, ಈದಿನ ಅವಳು ಹಾಗಿಲ್ಲ. ನಾಗೇಂದ್ರ ಬಾಬುರವರು ತಮ್ಮ ಮುಂದೆ ಇಟ್ಟಂಥ ಪಕ್ವಾನ್ನಗಳನ್ನು ತಿನ್ನಲು ಯತ್ನಿಸಿದರು. ಆದರೆ ಸ್ವಲ್ಪವೂ ಕೂಡ ತಿನ್ನುವದು ಅವರಿಗೆ ಕಠಿಣವೆಂತ ತೋರುತಿತ್ತು. ತಮ್ಮ ಹೃದಯದ ಹೊರಬಿನಲ್ಲಿ ಕಲ್ಲುಗಳನ್ನು ತುಂಬಿದಂತೆ ಅವರಿಗೆ ಅನಿಸಹತ್ತಿತು. ಆಮೇಲೆ ಅವರು ಮನರಂಜನೆಗಾಗಿ ತಮ್ಮ ಹುಕ್ಕಾವನ್ನು ಆಶ್ರಯಿಸಿದರು. ಅವರು ಬಹಳ ಹೊತ್ತಿನವರೆಗೆ ಅದನ್ನು ಸೇದಹತ್ತಿದರು. ಅದು ಅಸಹ್ಯವಾದಮೇಲೆ ಅವರು ಎದ್ದರು ಮತ್ತು ಪುನಃ ತಮ್ಮ ಪತ್ನಿಯನ್ನು ಸಮೀಪಿಸಿದರು. ಅದೇ ಸ್ಥಳದಲ್ಲಿ ಮತ್ತು ಅದೇ ಸ್ಥಿತಿಯಲ್ಲಿ ಕೂತಿರುವದನ್ನು ಕಂಡು, ಅವರು ಮೆಲ್ಲಗೆ ಅವಳ ಭುಜವನ್ನು ಮುಟ್ಟಿ ಅಂದದ್ದು — “ಚಾರು, ಪ್ರಿಯೇ, ಹಾಗೆ ಚಿಂತಿಸಬೇಡ. ನಾನು ನಿನಗೆ ಈ ಹೊತ್ತು ಒಂದು ಆನಂದದ ಸುದ್ದಿಯನ್ನು ಹೇಳುವವನಿದ್ದೆ. ಅದನ್ನು ಕೇಳಿ ನಿನಗೆ ಆನಂದವಾದೀತೆಂತ ತಿಳಿದಿದ್ದೆ...”

ಚಾರುಶೀಲೆಯು ಸಾವಕಾಶವಾಗಿ ತನ್ನ ತಲೆಯನ್ನು [illegible] ತ್ತಿದಳು ಮತ್ತು “ಅದೇನು?” ಎಂತ ಕೇಳಿದಳು.

ಕಲೆಕ್ಟರರು ಈ ಹೊತ್ತು ತಮಿಳನಾಡಿನವರಿಗೆ ನನ್ನ ಪಗಾರವನ್ನು ರೂ ೩೦೦ ಕ್ಕೆ ಏರಿಸಲು ಶಿಫಾರಸ ಮಾಡಿ ಬರೆದಿದ್ದಾರೆ.

ಚಾರುಶೀಲೆಯು ಪುನಃ ತನ್ನ ತಲೆಯನ್ನು ತಗ್ಗಿಸಿದಳು. ಮತ್ತು ಈ ಸಾರೆ ಅವಳ ಕಣ್ಣೀರು ಅಬಾಧಿತವಾಗಿ ಸುರಿಯಹತ್ತಿತು. ಮತ್ತು ಅದು ಗಂಡನು ತನ್ನ ಮಾಟದಿಂದ ದ ಪಡೆದ ಬೆಲೆಯು ಅವೇ ಎಂಬ ವಿಚಾರದಿಂದುಂಟಾದ ಅಸಹ್ಯವಾದ ನಾಚಿಕೆ ಮೂಲಕವಾದ ಕಣ್ಣೀರಾಗಿತ್ತು.

ತಮ್ಮ ಹೆಂಡತಿಯನ್ನು ಅವಳು ಕೂತಲ್ಲಿಂದ ಎಬ್ಬಿಸಲು ಯತ್ನಿಸುತ್ತ ನಾಗೇಂದ್ರ ಬಾಬುರವರು ಅಂದದ್ದು — “ಚಾರು, ಹೀಗೆ ಅಳಬೇಡ. ಪ್ರಿಯೇ, ಅದರಲ್ಲಿ ಅಳತಕ್ಕಂಥಾದ್ದೇನಿದೆ?”

ಚಾರುಶೀಲೆಯು ಸಾವಕಾಶವಾಗಿ ತನ್ನ ಗಂಡನನ್ನು ನೋಡಿ ಅಂದದ್ದೇನಂದರೆ — “ದಯಮಾಡಿ ಈ ಹೊತ್ತು ನನ್ನನ್ನು ಮಾತಾಡಿಸಬೇಡಿರಿ. ಇನ್ನೊಂದು ದಿನ ನನ್ನಿಂದ ಏನು ಆಗ್ಗಿ, ಎಂತ ನಾನು ತಮ್ಮನ್ನು ಬೇಡಿಕೊಳ್ಳುತ್ತೇನೆ.” [illegible] ಹೇಳುತ್ತ ಅವಳು ಎದ್ದಳು ಮತ್ತು ತನ್ನ ಮಲಗುವ ಕೋಣೆಗೆ ಹೋದಳು.

ನಾಗೇಂದ್ರ ಬಾಬುರವರು ತಿರುಗಿ ಹೊರಗೆ ಬಂದು [illegible] ಕಚೇರಿಯಲ್ಲಿ ಕುಳಿತುಕೊಂಡರು. ಸೇವಕನು [illegible] ತಯಾರಿಸಿದನು ಮತ್ತು ಅವರು ಕಾಂತಿಯುಕ್ತವಾದ ದೀಪ ಹಾಕುವದರಲ್ಲಿ ತೊಡಗಿದರು. ಅವರು [illegible] ಜಲಿಮುಗಳನ್ನು ನೋಡಿದರು. ಅಷ್ಟರಲ್ಲಿ [illegible] [illegible] [illegible] [illegible]ಭವಾಯಿತು. ಈ [illegible] ಅವರು [illegible] ಬಾರದಲ್ಲಿ [illegible] [illegible] ಏನೆಂದರೆ —

“ನಾನು ಕಾಲೇಜಿನೊಳಗಿಂದ ಹೊರಬಿದ್ದಾಗ ಹೊರಬಿದ್ದು ದೇಶಸೇವೆಯ ಅಧಿಕಾರಿಯಾಗುವಾಗ ತ್ಯಾಗ [illegible] ಮತ್ತು [illegible] ಗಿದ್ದೇನೆ? ಈ ಹೊತ್ತು ಚಾರುಶೀಲೆಯು [illegible] ತಾರಾಡಿಸದ [illegible] ಲಿಕ್ಕೆ ನನ್ನ [illegible] ನಾನು [illegible], ಪತಿತನೂ ಆದನೆಂತ ಅವಳು ತಿಳಿಯುತ್ತಾಳೆಂಬದಕ್ಕೆ ಸಂಶಯವಿಲ್ಲ. ಇದು ಅವಳ ತಪ್ಪೇ? ಈ ದಿವಸ ನಾನು ನ್ಯಾಯದ ಪವಿತ್ರ [illegible] ದಂಡಿಸಿಕೊಂಡು ಅದನ್ನು ಉದ್ಧರಿಸಿ ಪಾಲಿಸುವದರ ಬದಲಾಗಿ ಅದನ್ನು ಕೆಸರಿಗೆ ಎಳೆಯಲಿಲ್ಲವೇ? ನಿಶ್ಚಿತ ನಾನು ಹೀಗೆ ಮಾಡಿದ್ದು ಇದು ಮೊದಲನೆಯದಲ್ಲ ನಾನು ಇಂಥ ಹೀನ ಸ್ಥಿತಿಗೆ ಮುಟ್ಟಲು ಕಾರಣವೇನು? ಅಸಹ್ಯವಾದ [illegible] ಎಷ್ಟೋ ವರ್ಷಗಳ ಶಿಕ್ಷಣ ಮತ್ತು ಶ್ರಮ ಪರಿಣಾಮ, ತರ್ಕಶಾಸ್ತ್ರಜ್ಞಾನ, [illegible] [illegible] ನೈತಿಕ ಸರಳತನ, ಇವನ್ನೆಲ್ಲ ನಾನು ಯಾಕೆ ಗಾಳಿಯಲ್ಲಿ ತೂರಿಬಿಟ್ಟೆನು? ಕೇವಲ ಒಂದು ಹಿಡಿ ಬೆಳ್ಳಿಗಾಗಿ. ದರಿದ್ರರನ್ನು ಅನವಧಾನಗೊಳಿಸಿದರೆ, ಆ ಹಿಡಿ ಬೆಳ್ಳಿಗೆ ಧಕ್ಕೆ ಬಂದೀತೆಂಬ ಕಳವಳದಿಂದ ಅರ್ಧ ಸುಶಿಕ್ಷಿತ ದಪ್ತರ [illegible] ತಮ್ಮ ಕೋರ್ಟುಗಳಲ್ಲಿ ವ್ಯವಹರಿಸುವದರಿಂದ ಲಂಚವನ್ನು ಪಡೆಯುತ್ತಲಿದ್ದ ಕಾಲವು [illegible] [illegible]. ಅವರು ಹೆಚ್ಚಿನ ಪಡಕನಿಗೆ ಅರ್ಹರಿದ್ದಿಲ್ಲ. ಏಕೆಂದರೆ, ಅವರಿಗೆ ಹೆಚ್ಚಿನ ಜ್ಞಾನವಿದ್ದಿಲ್ಲ. ಆದರೆ ನಾನು, ನಾಗೇಂದ್ರಬಾಬು, ವಿಶ್ವವಿದ್ಯಾಲಯದಿಂದ ಪ್ರಕಟವಾದ ದಿವ್ಯವಾದ ಫಲವು. ನನ್ನ ಮಾಸಿಕ ವೇತನದಲ್ಲಾಗುವ ೫೦ ರೂಪಾಯಿಗಳ ದೋಷದಿಂದ ಸ್ವಾಭಿಮಾನವನ್ನು ಬಿಡಲಿಲ್ಲವೇ? ಇನ್ನೊಂದು ರೀತಿಯಲ್ಲಿ ಇದು ಲಂಚವೇ ಅಲ್ಲವೇ? ಇದು ನನ್ನ ತಪ್ಪಲ್ಲವೆಂತ ತೋರಿಸಲು ಆಧಾರವೇನಿದೆ? ಏನೂ ಇಲ್ಲ; ಏನೇನೂ ಇಲ್ಲ.”

ಇಂಥ ವಿಚಾರಗಳಲ್ಲಿ ನಾಗೇಂದ್ರ ಬಾಬುರವರು ಮಗ್ನರಾಗಿದ್ದರು. ಅವು ಅಸಹ್ಯವೆನಿಸಲು, ಅವರು ಹೊರಗೆ ಆಡ್ಡಾಡಲಿಕ್ಕೆ ಹೋಗಲು ನಿಶ್ಚಯಿಸಿದರು. ತಮ್ಮ ಟೋಪಿಯನ್ನು, ಬೆತ್ತವನ್ನು ತೆಗೆದುಕೊಂಡು ಅವರು ಮನೆಯಿಂದ ಹೊರಟು ಅತ್ತಿತ್ತ ಸುಳಿಯುತ್ತ, ಮತ್ತು ಅವು [illegible] ತಿರುಗಿದ ಇದರಂಥ [illegible] ನಡೆಯಹತ್ತಿದರು. ತಮ್ಮ ಗುರುತಿನವರೆಲ್ಲ ಅಕಸ್ಮಾತ್ತಾಗಿ ತಮಗೆ ಬೆಟ್ಟಿಯಾದಾರು? ಎಂತ ಅವರು ಅಂಜಿಕೊಂಡಿದ್ದರು. ನೇಮದಂತೆ ಅವರು ಮಲಗಲಿಕ್ಕೆ ಹೋದರು. ಆದರೆ, ಅವರಿಗೆ ನಿದ್ರೆಯೇ ಬರಲಿಲ್ಲ. ಮರುದಿವಸ ರಜೆಯಿತ್ತು. ಆದ್ದರಿಂದ ಅವರು ಸರ್ಕೀಟಿನ ಮೇಲೆ ಹೋಗಬೇಕೆಂತ ನಿಶ್ಚಯಿಸಿದರು. ಸೇವಕರು ಪ್ರವಾಸದ ತಯಾರಿಯಲ್ಲಿ ತೊಡಗಿದರು. ನಾಗೇಂದ್ರ ಬಾಬುರವರು ಕೈಯಲ್ಲಿ ಒಂದು ಪುಸ್ತಕವನ್ನು ಹಿಡಕೊಂಡು ತಮ್ಮ ಮಲಗುವ ಕೋಣೆಯಲ್ಲಿ ಕೂತಿದ್ದರು. ಆದರೆ ಅವರ ಲಕ್ಷ್ಯವು ಪುಸ್ತಕದ ಕಡೆಗೆ ಇದ್ದಿಲ್ಲ. ಅಷ್ಟರಲ್ಲಿ ಚಾರುಶೀಲೆಯು ಬಂದಳು.

ಅವಳು ತನ್ನ ಪತಿಯ ನಿಸ್ತೇಜವಾದ ಮೋರೆಯ ಕಡೆಗೆ ನೋಡಿ, ಕೂಡಲೆ ಅವನ ಮಾನಸಿಕ ಸ್ಥಿತಿಯನ್ನು ತಿಳಕೊಂಡಳು. ಕ್ಷಣ ಹೊತ್ತಿನಲ್ಲಿ ತನ್ನ ಗಂಡನ ಮಾನಸಿಕ ವ್ಯಥೆಗಾಗಿ ಪ್ರೀತಿಪೂರ್ವಕವಾದ ಸಹಾನುಭೂತಿಯಿಂದ ಅವಳ ಅಂತಃಕರಣವು ಕರಗಿಹೋಯಿತು. ಅವರ ಸಮೀಪಕ್ಕೆ ಹೋಗಿ, “ಯಾವಾಗ ತಿರುಗಿ ಬರುತ್ತೀರಿ?” ಎಂತ ಪ್ರೇಮಪೂರ್ವಕವಾಗಿ ಕೇಳಿದಳು.

“ನಾಳೆಯಂತ ಕಾಣುತ್ತದೆ,” ಎಂದು ನಾಗೇಂದ್ರ ಬಾಬುರವರು ತಮ್ಮ ಹೆಂಡತಿಯ ಕಡೆಗೆ ನೋಡದ ಉತ್ತರಕೊಟ್ಟರು.

“ನಿಮಗೆ ಕಡವಾಗಲಿಕ್ಕಿಲ್ಲ, ಅಲ್ಲವೇ?”

“ಒಂದು ವೇಳೆ ಆದರೂ, ನಿನಗೆ ದುಃಖವಾಗಲಿಕ್ಕಿಲ್ಲ”

ಇದನ್ನು ಕೇಳಿದ ಕೂಡಲೆ, ಚಾರುಶೀಲೆಯ ಕಣ್ಣುಗಳಲ್ಲಿ ನೀರುಬಂತು. ಅವಳು ತನ್ನ ಮೋರೆಯನ್ನು ಪತಿಯ ವಕ್ಷಸ್ಥಳದಲ್ಲಿ ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅಳಹತ್ತಿದಳು.

“ಚಾರು, ಇದೇನು? ಪ್ರಿಯೇ, ಹೀಗೆ ಮಾಡಬೇಡ” ಎಂದು ನಾಗೇಂದ್ರ ಬಾಬುರವರು ಪ್ರೀತಿಯಿಂದ ತಮ್ಮ ಪತ್ನಿಯ ಮೋರೆಯನ್ನು ಎರಡೂ ಕೈಗಳಿಂದ ಎತ್ತಿದರು.

ಆದರೆ ಅವಳ ಅಳುವಿಕೆಯು ಕಡಿಮೆಯಾಗಲಿಲ್ಲ. ಕಟ್ಟಕಡೆಗೆ ನಾಗೇಂದ್ರ ಬಾಬುರವರು ಅಂದದ್ದು — “ನಾನು ನಿನ್ನ ದುಃಖವನ್ನು ಇನ್ನು ಹೆಚ್ಚು ಸಹಿಸಲಾರೆನು. ನಾನು ಏನು ಮಾಡಬೇಕೆಂಬುದನ್ನು ಮತ್ತು ಯಾತರಿಂದ ನಿನಗೆ ಸಂತೋಷವಾದೀತೆಂಬುದನ್ನು ಹೇಳು ಮತ್ತು ಕೂಡಲೆ ಅದರಂತೆ ಮಾಡುವೆನು.

ಚಾರುಶೀಲೆಯು ತನ್ನ ಪತಿಯ ಕಡೆಗೆ ಕೆಲ ಹೊತ್ತಿನ ವರೆಗೆ ಲಕ್ಷ್ಯಪೂರ್ವಕವಾಗಿ ನೋಡಿದಳು. ಆಮೇಲೆ ಅವಳು “ನನ್ನ ಮನೋರಥವನ್ನು ಪೂರ್ಣ ಮಾಡುವಿರಾ?” ಎಂತ ಮೆಲ್ಲಗೆ ಕೇಳಿದಳು.

“ಅದೇನೆಂಬುದನ್ನು ನನಗೆ ಹೇಳು.”

“ನಿಮ್ಮ ಮನೋದೇವತೆಯನ್ನು ಮಾರಲು ಅಗತ್ಯಪಡಿಸುವಂಥ ನೌಕರಿವೃತ್ತಿಯಿಂದ ನೀವು ಮುಕ್ತರಾಗಬೇಕೆಂತ ನಾನು ಇಚ್ಛಿಸುತ್ತೇನೆ. ನಿಮ್ಮ ಮಾಸಿಕ ೩೦೦ ರೂಪಾಯಿಗಳು ನನಗೆ ಬೇಡ. ನೀವು ಒದಗಿಸಿಕೊಡುವಂಥ ಯಾವ ಬೆಳ್ಳಿ-ಬಂಗಾರವೂ, ಹವಳ-ಆರಾಮವೂ ನನಗೆ ಬೇಡ. ತಿಂಗಳಿಗೆ ೫೦ ರೂಪಾಯಿಯ ಮೇಲೆ ನೀವು ಕಾಲೇಜಿನ ಶಿಕ್ಷಕರಾದರೂ ನನಗೆ ಆನಂದವೇ. ಆ ವೇತನದ ಮೇಲೆಯೇ ನಮ್ಮ ಸಂಸಾರವನ್ನು ಸಾಗಿಸಿ ಸುಖಿಯಿರಬಹುದು.”

ನೆಪ್ಪಟ ಬಾಬುರವರು ಕೆಲ ಹೊತ್ತಿನ ವರೆಗೆ ಗಾಢ ವಿಚಾರದಲ್ಲಿ ತೊಡಗಿದರು. ಆಮೇಲೆ ಅವರು ಅಂದದ್ದೇನಂದರೆ, “ಪ್ರಿಯೇ, ಹೌದು. ನೀನು ಹೇಳುವದು ನಿಜ. ನಿನ್ನ ಇಚ್ಛೆಯಂತೆಯೇ ಮಾಡುವೆನು.”

ಹೊರಗೆ ಗಾಡಿಯು ಸಿದ್ಧವಾಗಿತ್ತು. ಅಗಲುವಿಕೆಯ ವೇಳೆಯೂ ಆಗಿತ್ತು. ಅವಳಿಗೆ ಪುನಃ ಖಾತ್ರಿಯಾಗುವಂತೆ “ಹೌದು, ನಾನು ನನ್ನ ರಾಜೀನಾಮೆಯನ್ನು ಕಳಿಸುವೆನು. ಪ್ರಿಯೇ, ನೀನು ದುಃಖಿಯಾಗಿರುವದು ನನಗೆ ಬೇಕಾಗಿಲ್ಲ,” ಎಂದು ಅವಳನ್ನು ಮುಂದಿಟ್ಟು ಹೊರಟರು.

(ಮುಂದೆ ಸಾಗುವದು.)

— ಟಾಂಜೇರು. ಹಾಗೂ ರಾಜ ಮುಂಬಯಿ ಮತ ನ್ನದೀಯರ ಚಳವಳಿ ಸಂಘಟನೆಯ ವಿಚಾರದ ಕಾರಣ, ಅಖಿಲ ಮುಸಲ್ಮಾನರ ಪರಿಷತ್ತು ಅಧ್ಯಕ್ಷರವಲ್ಲಿ ದಾ। ಕಿಚಲುವರು ಜುಲೈ ತಿಂಗಳಲ್ಲಿ ಕರೆಯಬೇಕೆಂದರೆ ಕೌಶಲ ಅಲ್ಲಿಯವರಿಗೆ ಶಾಂತಿಯನ್ನು ಬಿಟ್ಟಿರುವರೆ. ಖಿಲಾಫತ ಕಮಿಟಿಯು ಇಲ್ಲಿಯೇ ಕೂಡುವದು.

— ಲಖನೌ ಕಾಂಗ್ರೆಸಿಗೆ ಆಂಧ್ರ ಪ್ರಾಂತಿಕ ಪರಿಷತ್ತು, ಶ್ರೀ ಕೊಂಡ ವೆಂಕಟಪ್ಪಯ್ಯ ಮತ್ತು ಶ್ರೀಮತಿ ಸರೋಜಿನಿ ದೇವಿಯವರಿಗೆ ನಿಯೋಜಿತ ಅಧ್ಯಕ್ಷರಾಗಲು ಶಿಫಾರಸು ಮಾಡಿರುತ್ತದೆ. ಮಹಾತ್ಮರಿಗೆ ಆಂಧ್ರ ದೇಶಕ್ಕೆ ಆಗಮಿಸಲು ಕೋರಬೇಕೆಂತಲೂ ಠರಾಯಿಸಿದೆ.

— ಸಿಮ್ಲಾದೊಳಗೆ ವರಿಷ್ಠ ಶಾಸನ ಕೌನ್ಸಿಲಿನ ಅಧಿವೇಶನವು ಆಗಸ್ಟ ತಾ। ೨೦ನೇಗೆ ಪ್ರಾರಂಭ.

* * *

धातु क्षीणता व कमजोरपणा यांसाठी

मदन मंजरी गोळ्या. (रजिस्टर्ड.)

या दिव्य गोळ्या रक्त व वीर्य सुधारून त्यांची चांगली वाढ करतात पचन शक्ति सुधारून परसाकडे साफ होतें. त्याचप्रमाणें प्रत्येक प्रकारची अशक्तता दूर होऊन शरीर तेजदार वं बळवान होतें. किं. ४० गोळ्यांच्या डबीस रु १.

रमण विलासिनी गोळ्या. रात्रौ फक्त १ गोळी दुधाबरोबर खाल्यानें इच्छेप्रमाणें वीर्यस्तंभन होते.

नपुंसकत्वारी घृत. हा लेप पुरुषाच्या गुह्यभागावर लावला असतां सर्व रोग नाश पाऊन खरें पुरुषत्व प्राप्त होतें. किं. डबीस रु. १.

कुमटा एजंट :— माधव सांतप्पा शेणवी वेलेकर.

राजवैद्य नारायणजी केशवजी ब्रँचः— ३९३ काळबादेवी रोड मुंबई नं. २.

* * *

ಭಾಷಾಂತರಕರ್ತರಿಗೆ ಸುಸಂಧಿ!

ಸುಪ್ರಸಿದ್ಧವಾದದೂ ಅನೇಕ ವಿದ್ವಾ ಪಂಡಿತರಿಂದ ಚಲೋ ಅಭಿಪ್ರಾಯ ಪಟ್ಟಿದ್ದೂ ಆಗಿರುವ ಋಗ್ವೇದಿಯರು ಬರೆದ " आर्यांच्या सणांचा प्राचीन व अर्वाचीन इतिहास " ಎಂಬ ಮರಾಠಿ ಪುಸ್ತಕವನ್ನು ಕನ್ನಡದಲ್ಲಿ ಭಾಷಾಂತರಿಸುವದಿದೆ. ಇದನ್ನು ಕೈಕೊಳ್ಳಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳತಕ್ಕದ್ದು.

Apply to:--	Copies can be had from:-
V. PRABHA & CO.	THE NORTH KANARA TRADING CO.
BOMBAY 4.	KARWAR.

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬಿ. ಯಾವರ

ಸುಗಂಧ ನಶ್ಯದ ಪುಡಿ.

(Registered Trade Mark.)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಏರ್ಪಟ್ಟ ಸಕಲ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಪೀಸ ಪುಕ್ಕಟೆ ಕಳಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦ ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ। ಬಾ. ೫೧೦, ಮದರಾಸು.

ಅಮೇರಿಕನ್ ಉಪಾಯ.

ಎಂಬ್ರೋಸಿಯಾ.

AMBROSIA

ಸ್ತ್ರೀರೋಗಪರಿಹಾರಕ್ಕಾಗಿ.

ಎಂಬ್ರೋಸಿಯಾವು ಸಮಸ್ತ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು. ಇದು ಸ್ತ್ರೀಸೌಂದರ್ಯವನ್ನು ಉಂಟುಮಾಡುತ್ತದೆ. ಸಾಮಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರುತ್ತದೆ. ಚಲೋ ಆಹಾರ ದೊರೆಕದೆ, ವಿಶೇಷ ಆಯಾಸ ಕೊಳ್ಳುವದರಿಂದ ಸ್ತ್ರೀಯರ ಪ್ರಕೃತಿಯು ಕೆಡುತ್ತದೆ. ಮುಟ್ಟಾಗುವಾಗ ಶೂಲಿ ಏಳುವದು, ಮುಟ್ಟು ಆಗದಿರುವದು, ಅಪಸ್ಮಾರ, ಬಂಜೆತನ ಮುಂತಾದ ಗರ್ಭಾಶಯದ ಬೇನೆಗಳು, ಅಜೀರ್ಣ, ತಲೆಶೂಲಿ, ಭ್ರಮಿಷ್ಟತನ ಇವೆಲ್ಲ ಸ್ತ್ರೀರೋಗಗಳಮೇಲೆ ರಾಮಬಾಣ ಮದ್ದು. ಎಂಬ್ರೋಸಿಯಾವು ಸಮಸ್ತ ಸ್ತ್ರೀರೋಗಗಳನ್ನು ದೂರಮಾಡಿ, ಸ್ತ್ರೀಯರನ್ನು ಸಶಕ್ತ ಹಾಗು ಸೌಂದರ್ಯವಂತರನ್ನಾಗಿ ಮಾಡುತ್ತದೆ.

ಒಮ್ಮೆ ಪರೀಕ್ಷೆ ನೋಡಿ.

ಬೆಲೆ ಬಾಟ್ಲಿ ೧ ಕ್ಕೆ ರೂಪಾಯಿ ೨—೦—೦

ಏಜಂಟರು:— **ವೀರಿಯಲ ಏಜನ್ಸಿ,**
ಪ್ರಿನ್ಸೆಸ ಸ್ಟ್ರೀಟ, ಮುಂಬಯಿ ನಂಬರ ೨.

DAVAR'S
COLLEGE OF COMMERCE

(Established 25 years.)

CELEBRATES ITS SILVER JUBILEE THIS YEAR UNDER THE DISTINGUISHED PATRONAGE OF MERCHANT-PRINCES, LEADERS OF THOUGHT AND EDUCATION.

The Institution under the sole direction of its Founder and Principal has done pioneer work in introducing for the First Time in India Courses in SPECIALISED BANKING, SPECIALISED SECRETARIAL WORK and SPECIALISED ACCOUNTANCY as the result of his numerous journeys to Europe and to the Colleges and Universities there.

The fact that a Scholar has successfully trained in DAVAR'S COLLEGE has always been accepted by businessmen all over India, Burma and Ceylon as a hallmark of perfection.

Prospectus on application to the Principal,
Great Western Bldg.,
Apollo Street BOMBAY.

ಜಾಹೀರಾತು.

ತಾರೀಖು [illegible] ನೇ [illegible] ಪ್ರಸಿದ್ಧ [illegible] ಜ್ಯೋತಿಷಿ ಕೇ. ಸಿ. ನಾರಾಯಣ [illegible] ಎಂಬವರು ಸ್ವಲ್ಪ ದಿವಸ [illegible] ಜಿಲ್ಲೆಯ [illegible] ಪ್ರಶ್ನೆಗಳಿಗೆ [illegible].

ಪತ್ತೆ —

ಕೇರಳ ಜ್ಯೋತಿಷಿ

ಕೇ. ಸಿ. ನಾರಾಯಣ [illegible]

ಮುಕ್ಕಾಂ [illegible]

[illegible]

ವಿಶೇಷ] ಅನುಭವಸಿದ್ಧ [[illegible]

ವನೌಷಧಿಮೂಲಿಕೆಗಳು

[illegible] ([illegible]) [illegible] ಅರ್ಧಾಂಗವಾಯು ([illegible]) [illegible] ಹೊಟ್ಟೆಯಲ್ಲಿ ಕೃತ್ರಿಮ ವಿಷಹಾಕಿದ್ದು (ಕೈಮದ್ದು) ಮತ್ತು [illegible] ರೋಗಗಳಿಗೆ [illegible] ಮಾತ್ರೆಯಾಗಿ [illegible]. [illegible] ಕಾಲದಿಂದ ಅನುಭವ [illegible]. [illegible] ಪ್ರತಿಯೊಬ್ಬರಿಗೆ [illegible] ಔಷಧಿಗಳ [illegible] ಮೂಲಿಕೆಗಳ [illegible] ಅನುಭವ [illegible] ಮಾತ್ರೆಯಾದೀತು. [illegible] ಔಷಧಿಗಳ ದ್ರಾವಕ (Tincture) [illegible] ಸೂಚಿಸಿದರೆ ಕಳುಹುವೆವು

ವಾಯುದುಸ್ವಪ್ನದ ಬಗ್ಗೆ ಔಷಧಿ [illegible]	೧ ಕ್ಕೆ ೦-೩-೦
ಕೊಲೆರಾದ ಬಗ್ಗೆ	೦-೩-೦
ಅರ್ಧಾಂಗ ವಾಯುವಿನ ಬಗ್ಗೆ	೦-೪-೦
ನಾಯಿ ಕಡಿತದ ಬಗ್ಗೆ	೦-೪-೦
ಸರ್ವಗಾತ್ರದ ಬಗ್ಗೆ	೦-೩-೦
ಹೊಟ್ಟೆಯಲ್ಲಿ ಕೃತ್ರಿಮ ಔಷಧಿ ಬಿದ ಬಗ್ಗೆ	ತೊಲೆ ೧೦ ಕ್ಕೆ ೦-೮-೦
ರಕ್ತಶುದ್ಧಿಯ ಮಲಶೋಧನೆ ಬಗ್ಗೆ ಮೂಲಿಕೆ	ರಾತ್ತಲ ಕ್ಕೆ ೧-೦-೦
ಮೋರಂಬಳಾ (ನೆಲ್ಲಿಕಾಯಿ ಗುಳುಂಬ)	ರಾತ್ತಲ ೧ ಕ್ಕೆ ೧-೦-೦

ಕತ್ತೆಗಟ್ಲೆ ಯಾವ ಆದಕಲ್ಲು ಹೆಚ್ಚು ತರಿಸಿಕೊಳ್ಳ ವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು. ಟಪ್ಪಾಲ ಖರ್ಚು ಪ್ರತ್ಯೇಕ. ಗಿರೀಶ ವಗೈರೆ ಪತ್ರ ದಲ್ಲಾರ /ಅನುಭವಸಿದ್ಧ ಔಷಧೀ ಸಂಗ್ರಹ

ಎಸ್. ಜಿ. ಹೆಗಡೆ, ಮಾಸ್ತರ,

ಪೋಸ್ಟ — ಬಂಕಿಕೊಡ್ಲ ಜಿ ಉತ್ತರ ಕನ್ನಡ

ಮಳೆಗೆ ಮೊದಲೇ ಎಚ್ಚರಿಕೆ !

ಅತ್ಯುತ್ತಮ, ಸುಂದರ, ಬಾಳಿಕೆಯುಳ್ಳ, ಮಜಭೂತಾದ

] ಛತ್ರಿಗಳು. [

ಅಗ್ಗ !
ವಿವಿಧ !!

ಪ್ರತಿಯೊಬ್ಬರಿಗೂ ಅನುಕೂಲವಾದ ಪಸಂದಿನ ಮ್ಹಾಲು !

[illegible] ದೇಶೀಯವಿಗಾಗಿಯೇ !! ಆದುದರಿಂದ

[illegible] ಖರೀದಿಯಾಗಿ ತೃಪ್ತಿಯಾಗುವುದು !

[illegible] ಛತ್ರಿ ದುಕಾನುಗಳಲ್ಲಿ ವಿಕರಿಗೆ ಇದೆ.

ಶೇಟ ನಾಗರ್ಜಿ ಪುರುಷೋತ್ತಮ್ ಮತ್ತು ಕಂಪನಿಯವರ

ಕಲ್ಲಿಕೋಟೆಯ **ಕಾರ್ಖಾನೆಯ**

[illegible] ಛಾಪಿನ ಛತ್ರಿಗಳೇ ಛತ್ರಿಗಳು !

[illegible] ಕಮಿಶನ್ ಕೊಡಲಾಗುತ್ತದೆ.

ಶ್ರೀನಿವಾಸ ರಂಗ ಪೈ, ಸಾವಕಾರ ಮಹಾಲ್.

ಮಂಗಳೂರು, ದ. ಕನ್ನಡ

ಕಿರ್ಲೋಸ್ಕರ ಪಂಪ.

ಬಾವಿಯೊಳಗಿನ ನೀರನ್ನು ಮೇಲಕ್ಕೆ ತರುವದರಲ್ಲಿ

ಕಿರ್ಲೋಸ್ಕರ [illegible] ಯಂತ್ರ ಮೇಲ್ತರದ್ದಿರುತ್ತದೆ. ಸಣ್ಣ ಮಕ್ಕಳು, ಅಬಲೆಯರು ಈ ಪಂಪಿನಿಂದ ನೀರನ್ನು ಒಂದೇ ನಿಮಿಷದಲ್ಲಿ ಮೇಲಕ್ಕೆ ತರುವರು. ಪ್ರಪಂಚದಲ್ಲಿ [illegible] ಅಡಚಣೆಗಳಲ್ಲಿ ನೀರಿನ ತೊಂದರೆಯು ಸ್ವಾಭಾವಿಕವು. ಈ ಅಡಚಣೆಯು [illegible] ಪಂಪಿನಿಂದ ದೂರಾಗುವದು.

ಪರದೇಶದಿಂದ ಬರುವ ಪಂಪ್‌ಗಳು ಬಹು ತುಟ್ಟಿ ಇರುವದರಿಂದ ಮಧ್ಯಮ ಜನರಿಗೆ [illegible] ಕೊಳ್ಳ ಬರುವದಿಲ್ಲ. ಇದನ್ನು ತಿಳಿದು ನಾವು ಈ ಪಂಪವನ್ನು ಬಹು [illegible] ದಿಂದ ಕೊಡುತ್ತಿರುವೆವು. ಇದಲ್ಲದೆ, ಈ ಪಂಪಿನ ಬಿಡಿ ಭಾಗಗಳು ನಮ್ಮ ಕಾರ್ಖಾನೆಯಲ್ಲಿ [illegible] ತಯಾರಾಗುತ್ತಿರುವದರಿಂದ ಬೇಗನೆ ದೊರೆಯುತ್ತವೆ.

ಈ [illegible] ವಿದೇಶೀ ಪಂಪುಗಳನ್ನು ಕೊಂಡಲ್ಲಿ ದೊರೆಯದು.

ಕೇ. ಬಿ. ಜೋಶಿ ಮುಂಬೈ ಇವರು ನಮ್ಮ ಸೋಲ ಏಜಂಟರು.

ವಿಸ್ತಾರ ಸಂಗತಿಗಳ ಬಗ್ಗೆ ಬರೆದು ತಿಳಿದುಕೊಳ್ಳಿರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ;
ಜಿಲ್ಹಾ ಸಾತಾರಾ.

ಅಮೃತಾಂಜನ.

[illegible] ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳ ಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಅದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೇನೆ, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳ ಮೇಲೆ ಇದು ಗುಣಕಾರಿಯೆಂದು ಅರಿಯದವರು ಅದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಡಬ್ಬಿಗೆ ೧೦ ಆಣೆ [illegible] ಪೋಸ್ಟೇಜ ಬೇರೆ.

ಅಮೃತಾಂಜನ ಡಿಪೋ, ಫೋರ್ಟ, ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta

ವರ್ಷ ೯.

Monday, July 6th, 1925.

ಸಂಚಿಕೆ ೩೮.

ಕಾನಡಾವೃತ್ತ.

THE KANARA NEWS.

ಪತ್ರದ ವರ್ಗಣಿ.
ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮನಿಯಾರ್ಡರಿಯಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ಮರಾಠಿ ಟೈಪಿನ (೧೫ ಎಲ್ ಉದ)
೮ ಸಾಲುಗಳವರೆಗೆ ರೂ. 1-0-
೮ ನಂತ್ರ ಪ್ರತಿಸಾಲಿಗೆ 0-2-0.
ಹೆಚ್ಚಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟುಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತರಿಸಲ್ಪಡುವದು.

(ಕುಮಟಾ— ಕಾನಡಾವೃತ್ತ ಸೋಮವಾರ, ತಾರೀಖು ೬ ಮಾಹೆ ಜುಲೈ ಸನ ೧೯೨೫ ನೇ ಇಸವಿ.)

हिंदुस्थानांतील रहिवाशास ज्याप्रमाणें स्थानची हवा त्याप्रमाणेंच हें औषध हिंदुस्थानांतील लोकास ज्यास्त फायदेशीर आहे.

द्राक्षासव- दीड रत्तलची किंमत २ रुपये;

रामबाण औषधें —

सर्दि बालविणारें,
भूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

— **पिण्यास रुचिकर.**

क्याटलाग मागवा,

फार्मास्युटिकल वर्क्स लिमिटेड,
मुंबई नं. १३

ಕ್ಷಯ ರೋಗ ?

ವೈದ್ಯ ಫರ್ನಾಂಡಿಸರ
ಬರೇ ನಾಲ್ಕು ಔಷಧಗಳು.

ಪ್ರಕರ್ಷವಾನ ತಿಳಿಸಿರಿ. ಅಂದರೆ ಯೋಗ್ಯ ಔಷಧಗಳನ್ನು ತಯಾರಿಸಿ ಕಳುಹಿಸುವೆವು. ಸಮಕ್ಷ ಬಂದು ಮಾಡಿದಲ್ಲಿ ಹೆಚ್ಚಿನ ಮಾಹಿತಿ ದೊರಕುವದು. ನಾಲ್ಕು ತಿಂಗಳು ಬೇಡಿರಿ ಬೇಗನೆ ಕೆಳಗಿನ ವಿಳಾಸಕ್ಕೆ ಬರೆಯಿರಿ. (ರೂ. ೨೮-೧೦-೦.)

ವೈದ್ಯ ಫರ್ನಾಂಡಿಸ,
ರೋಗಾಂತಕ ಡಿಪೋ,
ಕಾರವಾರ

ಉತ್ತಮವಾದ ನಶ್ಯ!

ನಶ್ಯವು ನಮ್ಮಲ್ಲಿ ಬಹಳ ವರ್ಷಗಳಿಂದ ಖ್ಯಾತಿ ಹೊಂದಿರುತದೆ. ಬೇಕಾದವರು ತರಿಸಿ ನೋಡುದು. ಸ್ಯಾಂಪಲ್ ಬೇಕಾದವರು ೧ ಆಣೆ ಸ್ಟ್ಯಾಂಪು ಕಳಿಸಬೇಕು.

ನಂಬರ ೧. ಪೌಂಡು ೧ಕ್ಕೆ ೨-೪-೦.
" ೨ ಪೌಂಡು ೧ಕ್ಕೆ ೨-೦-೦

ಜಿ. ರಾಮಯ್ಯಾ ಕುರಡಿ,
ಪೋಷ್ಟ- ಅಂಕೋಲಾ, ಉ. ಕಾನಡಾ

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ
ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, *B. A.*

Jewellers, KUMTA.

ಆರ್. ಎಸ್. ಕಾಸರಗೋಡ,
ರತ್ನಾಭರಣ ವ್ಯಾಪಾರಿ, ಕುಮಟಾ.

ಆಯುರ್ವೇದಿಕ) ಧಾತುಪೌಷ್ಟಿಕ, ಶಕ್ತಿವರ್ಧಕ, ರಕ್ತಶೋಧಕ (ಮಲಬಾರಿಕೃತಿ

ಮದನಕಾಮೇಶ್ವರೀಲೇಹ.

ಆಬಾಲ ವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಇದರಲ್ಲಿ ಕೇಶರ ಕಸ್ತೂರಿ ಪ್ರವಾಳ ಕಿರಾಜಕು ಅಮೃತಸತ್ವಾದಿ ಅನೇಕ ವನೌಷಧಿಯುಕ್ತ ಇರುವದರಿಂದ ಧಾತು ತಳ್ಳುಗಾಗಿ ನಪುಂಸಕತ್ವ ಪ್ರಮೇಹ ಮುಷ್ಟಿಮೈಥುನಜನ್ಯ ಧಾತುಕ್ಷೀಣತೆ ಸ್ವಪ್ನಾವಸ್ಥೆ ಉರಿವ ಶಾಕ್ತಿ ಸಂಧಿವಾತ ಸ್ತ್ರೀಯರ ಗರ್ಭಾಶಯರೋಗ ಪ್ರದರ (ಗರ್ಮಿ) ಇ. ನಿರ್ಮೂಲಿಸಿ ಕುಂಟಾ ರಕ್ತ-ಧಾತು ಸಂಚಯಮಾಡಿ ದೇಹಪುಷ್ಟ ಸಂತಾನಸುಖವನ್ನು ಲಭಿಸುವ ಸಿದ್ಧೌಷಧ. ೧ ತಿಂಗಳು ಸಾಲುವ ಡಬ್ಬಿಗೆ ೩॥ರೂ. ಟ ಖ ॥ರೂ. ಒಮ್ಮೆಲೆ ೩ ಡ ೩॥ರೂ. ಟಿ ಖ. ಮಾಫ ಅನು ಔಷಧದ ಸಂಗಡ

ಆಸ್ಪತ್ರೆಸು) ಜಂತುಘ್ನ ಔಷಧ (ದರಸುಲಭ.

ಪುಡಿ ೧ಕ್ಕೆ ೧॥ಆಣೆ ೩ಂಕ್ಕೆ ರೂ ೩॥ ೧೦ಂಕ್ಕೆ ರೂ.೫ ಅನುಭವ ತಕ್ಕೊಳ್ಳಿರಿ. ಇವಲ್ಲ ಎಲ್ಲಾರೋಗಗಳ ಮೇಲೆ ಅನುಭವ ಸಿದ್ಧೌಷಧಗಳು ಸಿಗುವವು. ಏ ಮಾ ಬೇಕಾದವರು ೧ಆಣೆ ತಿಕೀಟು ಪತ್ರದಲ್ಲಿ ನಮ್ಮ ಆಯುರ್ವೇದೌಷಧ ಗುಣರತ್ನಾವಳಿ ಎಂಬ ಸಂಪೂರ್ಣ ಮಾಹಿತಿಯ ಪುಸ್ತಕವನ್ನು ಪುಕ್ಕಟೆಯಾಗಿ ಕಳಿಸುವೆವು

ಮೆನೇಜರ ಆಯುರ್ವೇದಚಿಕಿತ್ಸಾಮಂದಿರ, ತಾ. ಕಾರವಾರ, ಪೋ. ಚೆಂಡಿಯೆ.

ಮುಂಬೈ ಏಜಂಟ - R C KAMAT, Teashop Store Lane, Fort, BOMBAY

ಹುಟ್ಟಿದ ವೇಳೆ ತಿಳಿಸಿರಿ.) ಸುಖಸಾಧನಕ್ಕೆ ಯೋಗ್ಯ ಉಪಾಯವು. (ಯಾ ಜನ್ಮಟಿಪ್ಪಣ ಕಳಿಸಿರಿ.

☞ ಮಲಬಾರಿ) ಕೇರಳ ಜ್ಯೋತಿಷ. (ಭವಿಷ್ಯ.

ಸಾದಾ ಜನ್ಮಟಿಪ್ಪಣ ಜಾತಕ. ೧ವರ್ಷದ ಫಲಾಫಲ ಟಿ.೧॥ರೂ. ೫.೫॥ರೂ. ೧೦ವ.ಟಿ.೪ರೂ. ಸದರೀ ಟಿಪ್ಪಣ ಜೆಯಮೇಲಿಂದ ಆಯಾಕಾಲಕ್ಕೆ ಒದಗುವ ಇಷ್ಟಾನಿಷ್ಟ ಫಲಗಳನ್ನು ಅನಿಷ್ಟಫಲ ನಿವಾರಣಾರ್ಥ ಶಕಧಾರ್ಮಿಕ ದಾನೋಪಾಯಗಳಿಂದ ಸಂಕಟಗಳನ್ನು ಪರಿಹರಿಸುವ ಉಪಾಯಗಳನ್ನು ತಿಳಕೊಂಡು ಮುಂದಿನ ಭವಿಷ್ಯಕಾಲವು ಸುಖಕಾರಕ ಮತ್ತು ಲಾಭದಾಯಕವಾಗುವಂತೆ ಸದರೀ ಫಲವನ್ನು ಮಲಬಾರದಲ್ಲಿ ಪ್ರಸಿದ್ಧವಾದ ಹೋರಾಸಾರ, ಕೇರಳ" ಇ. ಬಹುಮಾನ್ಯ ಗ್ರಂಥಗಳ ವಿಶ್ವಾಸ್ಯತೆಯಿಂದ ಬರೆದು ಕಳಿಸುವೆ. ಟಿ. ಖ ಬೇರೆ.

ಮೆನೇಜರ, "ಜ್ಯೋತಿಷ ಶಾಸ್ತ್ರ-ಭುವನ," ಚೆಂಡಿಯೆ. ತಾ. ಕಾರವಾರ

ನಮ್ಮ ಪ್ರೆಸ್ಸಿನಲ್ಲಿ

[illegible] ಬಾಕಿ [illegible] [illegible] [illegible] ವಿಶಾಲತ ಅಮುಲವಾರಿ [illegible] [illegible] ವ್ಯವಹಾರದ [illegible] [illegible] [illegible] [illegible] ಆಗುತ್ತದೆ

ಮೆನೇಜರ,

[illegible]

ಪ್ರಯಾಣಿಕರ ಅನುಕೂಲತೆ ಬಗ್ಗೆ

ಶೇಲಿ ಮೋಟರ ಸರ್ವಿಸ.



ಕುಮಟೆಯಿಂದ— [illegible] ಘಟ್ಟದಕ್ಕೆ [illegible]

ಕುಮಟೆಯಿಂದ— ಶಿರ್ಸಿ [illegible] ಳ್ಳಿಗೆ [illegible]

ಕುಮಟೆಯಿಂದ— [illegible] ಕಾರವಾರಕ್ಕೆ, [illegible] [illegible] [illegible] ರಿನ್ನ ಟಿಕೀಟುಗಳು ನಮ್ಮಲ್ಲಿ ಪ್ರತಿ ನಿತ್ಯ [illegible] ಸಿಗುವವು

ಬಿ. ದಾಸ,

ಏಜಂಟ ಕುಮಟಾ.

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು

೧ ರಾಗದ ಕೈಪೆಟ್ಟಿಗೆ ಕಿಂ [illegible] [illegible]

೨ ಕಾಲು ಪೆಟ್ಟಿಗೆ ಕಿಂ [illegible]

೩ ತಬಲೆ ಜೋಡಿ ಕಿಂ [illegible]

೪ ಹಾರ್ಮೋನಿಯಮ ಗ್ಯಾತ (ಪ ರಾರಿ) ಕಿಂ [illegible] ತಬಲೆ ಗ್ಯಾಡ ಕಿಂ, [illegible]

ವಿಶೇಷ ಮಾಹಿತಿಬಗ್ಗೆ ನಮ್ಮ ಪ ರಾರಿ [illegible] ಧುಕ್ಕಟ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಅಥವಾ ಇಂಗ್ರಜಿಯಿಂದ ಮಾಡಬೇಕು

ಪತ್ರ.— **ಗೋಪಾಳ ಸಖಾರಾಮ** ಮತ್ತು

ಕಂಪನಿ, ವಿಠ್ಠಲವಾಡಿ ಎದುರಿಗೆ,

೩೬೨ ಕಾಳಬಾದೇವಿ. ಮುಂಬಯಿ

ಟಿ. ಎಸ್. ಮೋಟರ ಸರ್ವಿಸ. ಶಿವಮೊಗ್ಗಾ

ಕಳೆದ [illegible] ವರ್ಷಗಳಿಂದ ನಾವು ಶಿವಮೊಗ್ಗಾ-ತೀರ್ಥಹಳ್ಳಿ-ಆಗುಂಬೆ, ಶಿವಮೊಗ್ಗಾ-ಸಾಗರ [illegible] ಶಿವಮೊಗ್ಗಾ-ಹರಿಹರ-ದಾವಣಗೆರೆ, ಶಿವಮೊಗ್ಗಾ-ಶಿಕಾರಿಪುರ, ಶಿವಮೊಗ್ಗಾ-ಹೊನ್ನಾಳಿ, ಸಾಗರ-ಸೊರಬ-ಶಿರಾ [illegible] [illegible] ಸಾಗರ-ತೀರ್ಥಹಳ್ಳಿ, ಸಾಗರ-ಕಳೂರಕಟ್ಟೆ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ ಸರ್ವಿಸ್ [illegible] [illegible] ದಕ್ಷಿಣ ಕನ್ನಡ ಜಿಲ್ಹೆಯ ಕಾರ್ಕಳ, ಉಡುಪಿ, ಕುಂದಾಪುರ, ಮಂಗಳೂರ [illegible] [illegible] ಈ [illegible] "ಕಾರ್ಕಳ ಮೋಟರ ಸರ್ವಿಸಿನ" ವಿದ್ಯಮಾನವೂ, ಬಳ್ಳಾರಿ ಜಿಲ್ಹೆಯ [illegible] [illegible] ಮೋಟರ ಸರ್ವಿಸಿನ ವಿದ್ಯಮಾನವೂ ಪ್ರಯಾಣಿಕರ ಎಲ್ಲ ಸೌಕರ್ಯಗಳ [illegible] [illegible] ಬಂದಿದೆ.

[illegible] ಜಿಲ್ಹೆಯ ಪ್ರಯಾಣಿಕರು ಜೋಗ (Gersoppa Falls), ಶಿವಮೊಗ್ಗಾ [illegible] [illegible] ಮೊದಲಾದ ಸ್ಥಳಗಳಿಗೆ ಪ್ರಯಾಣ ಬೆಳೆಸಲು ಅನುಕೂಲವಾಗಬೇಕೆಂದು [illegible] [illegible] ಜೋಗ, ಸಿದ್ದಾಪುರ, ಶಿರ್ಸಿ, ಕುಮಟಾ ಈ ಲೈನಿನಲ್ಲಿ ಮೋಟರ ಸರ್ವಿಸ ಪ್ರಾ[illegible]

ಕಾಲಕ್ರಮಗಳು.

[illegible] ಹೊರಡುವದು—	ಬೆಳಗಿನ ೭ ಘಂಟೆಗೆ.
ಶಿರ್ಸಿ [illegible] — ...	„ ೧೦ „
ಶಿರ್ಸಿ [illegible] ಶಿವಮೊಗ್ಗಾ ಕಡೆಗೆ—	ಮಧ್ಯಾನ್ಹ ೧ „
[illegible] (ಸಿದ್ದಾಪುರ ಮಾರ್ಗವಾಗಿ)—	ಸಾಯಂಕಾಲ ೭ „
[illegible] ಕಡೆಗೆ ಹೊರಡುವದು—	ಬೆಳಗಿನ ೭ „
[illegible] ಶಿರ್ಸಿ ಸೇರುವದು— ...	„ ೧೧ „
ಶಿ[illegible] ಕುಮಟೆಗೆ ಹೊರಡುವದು—	ಮಧ್ಯಾನ್ಹ ೩ „
[illegible] ಸೇರುವದು—	ಸಾಯಂಕಾಲ ೫ „

[illegible] — ಈ ಮೇಲಿನ ಲೈನುಗಳ ವಿನಹ ಶಿರಸಿಯಿಂದ ಹುಬ್ಬಳ್ಳಿಗೆ ಪ್ರತ್ಯೇಕ ಒಂದು ಸರ್ವಿಸ [illegible] [illegible] ಸದಾ ಇರುತ್ತದೆ ಸರ್ವರೂ ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿ ವಿನಂ[illegible]

SHIMOGA,
22—11—1924

M. MANJAPPA.
PROPRIETOR

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕಿಟಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವ [illegible] [illegible] [illegible] [illegible] [illegible] ಪ್ರವರ್ಧಮಾನವಾಗುವದು (ನಿಜ ಒಂದೇ ಸಪ್ತಾಹದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ [illegible] [illegible] ಇಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ [illegible] [illegible] ಬಂದಾಗುವದು — [illegible] ಹಾಗೂ [illegible] ದುರ್ಬಲವಾದ ಶರೀರವು ನಿರೋಗಿಯಾಗುವದು [illegible] ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ [illegible] [illegible] [illegible] ಮಾಡಬೇಕು ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು [illegible] ದಿವಸದಲ್ಲಿ [illegible] [illegible] ಅನ್ನ ಪಚನವಾಗಿ ಹಸಿವು ಚನ್ನಾಗಿ ಆಗುತ್ತದೆ [illegible] [illegible] ಮೊದಲನೇ ದಿವಸವೇ ಬರುವದು. [illegible] [illegible] ಆಗುವದು [illegible] ಎಷ್ಟೋ ದಿವಸದ [illegible] ಒಂದು ವಾರದಲ್ಲಿ ನೋಡಾಗುವದು [illegible] [illegible] [illegible] ಸ್ತ್ರೀಸಂಭೋಗ [illegible] [illegible] [illegible] ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. [illegible] [illegible] ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೩—೪—೦ ಹೋದು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ [illegible] ಬೀಳುವದಿಲ್ಲ ತನನ ಬಾಟಲಿಗಳ ಕಿಮ್ಮತ್ತು ೧೩—೦—೦ ಮತ್ತು ೧ ಬಾಟಲಿ ಪುಕ್ಕಟ ಸಿಗುವದು. [illegible] [illegible] ಬೇರೆ ಬೀಳುವದು ಪಿಕಂಟರ [illegible] ೧ ಬಾಟ್ಲಿಗೆ ೧—೪—೦ ೩ ಬಾಟ್ಲಿಗೆ ೩—೦—೦, [illegible] ೧೩—೯—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸು, ಪೋ. ನಿಪ್ಪಾಣಿ, ಜಿ. ಬೆಳಗಾ

ಕೈರಾಟೆಯ ಪ್ರಸಾರ.

ಬಂಗಾಲ ಪ್ರಾಂತದ ಜಲಪೈಗುರಿಯು ಚಹ ತೋಟಗಳ ನಿವಾಸವು. ಮಹಾತ್ಮರಿಗೆ ಅಲ್ಲಿ ಖಾದಿ ಕಾರ್ಯಕ್ಕಾಗಿ ೩ ಸಾವಿರ ರೂಪಾಯಿ ನಿಧಿ ದೊರೆಯಿತು. ಜೋಗೇಶ ಬಾಬು ಎಂಬೊಬ್ಬರವರ ಹೆಂಡತಿಯೊಬ್ಬಳೇ ೧೦೧ ಪವನುಗಳನ್ನು ಅರ್ಪಿಸಿದಳು. ಜಲಪೈಗುರಿಯಲ್ಲಿ ಸಕ್ಕರೆಯ ಉದ್ಯೋಗಕ್ಕಾಗಿ ಕೋಟ್ಯಾವಧಿ ರೂಪಾಯಿಗಳನ್ನು ಸರಕಾರವು ಅರ್ಪಿಸಿದಂತೆ, ಖಾದಿಗೂ ಭಾರತೀಯರು ಸಹಾಯ ಮಾಡಬೇಕೆಂದು ಮಹಾತ್ಮರು ತೋಟಗರಿಗೆ ಹೇಳಿದರು. ಅಲ್ಲಿ ಹೆಣ್ಣು ಹುಡುಗಿಯರ ಶಾಲೆಯೊಂದಿದೆ. ಅಲ್ಲಿ ನೂಲುತ್ತಲಿರುತ್ತಾರೆ.

ನವಾಬಗಂಜದಲ್ಲಿ 'ಅಭಯ ಆಶ್ರಮ' ಎಂಬುದೊಂದು ಖಾದಿ ಪ್ರತಿಷ್ಠಾನ ಸಂಸ್ಥೆಯಿದೆ ಶ್ರೀ [illegible] ಬಾಬುರವರು ಈ ಸಂಸ್ಥೆಯ ಚಾಲಕರು. ಈ ಭಾಗದಲ್ಲಿ ಶ್ರೀಮಂತರೇ ಹೆಚ್ಚು. ಖಾದಿ ಪ್ರಸಾರಕ್ಕಾಗಿ ಶ್ರೀ [illegible] ಬಹಳ ಯತ್ನಮಾಡುತ್ತಿರುವರು ಅಲ್ಲಿ ಮಹಾತ್ಮರಿಗೆ ೩೦೦೦ ರೂಪಾಯಿಗಳ ದ್ರವ್ಯಸಹಾಯವಾಯಿತು.

ಮುಂದೆ ಮಹಾತ್ಮರು [illegible], [illegible] ಪಟ್ಟಣದ ಕಡೆಗೆ ಹೋದರು. [illegible]ಯಲ್ಲಿ ಒಂದು ಹೈಸ್ಕೂಲು ಇದೆ ಸರಕಾರಿ ಪಟದಲ್ಲಿ ದಾಖಲ ಆದ [illegible], ಆದ. ಸರಕಾರಿ ಸಹಾಯ ಪಡೆಯುವದಿಲ್ಲ [illegible] ಹುಡುಗರು ೧ ತಾಸು ನೂಲಲೇಬೇಕು [illegible] ದ್ಯದ ಅಲ್ಲಿಯವರಿಗೆ ೧೯೨೧ ನೇ ಇಸ್ವಿಯಲ್ಲಿ ಒಂದು ವಾರ ಒದಗಿದ ಬುದ್ಧಿಯಾದಾಗ ಅಲ್ಲಿ ನೇಯುವ ಕಲೆಯು ಕಳೆಸೋಗಿರುವುದು. ಅಲ್ಲಿ ಈಗ ಖಾದಿಯನ್ನೇ ತಯಾರುಮಾಡಿಸುವರು. ಮಹಾತ್ಮರು ಹೋದಾಗ ಸುಮಾರು ೧೦೦ ಮಂದಿ ಹುಡುಗರು ಚರಕದಿಂದ ನೂಲುತ್ತಿದ್ದರು. ಅದನ್ನು ನೋಡಿ, ಮಹಾತ್ಮರಿಗೆ ಬಹಳ ಸಂತೋಷವಾಯಿತು ನೂಲುವ ಉತ್ಸಾಹದಿಂದ ಹುಡುಗರ ಸಂಖ್ಯೆಯು ಕಡಿಮೆಯಾಗಲಿಲ್ಲೆಂದು ಅಧ್ಯಾಪಕರು ತಿಳಿಸಿದರು ಈ ಶಾಲೆಯನ್ನು ನೋಡಿ ಮಹಾತ್ಮರಿಗೆ ಅತ್ಯಾನಂದವಾಯಿತು. ಇಂಥ ಶಾಲೆಯು ಬಂಗಾಲದ [illegible]ದಲ್ಲಿ ಇನ್ನೊಂದಿದೆ ಈ ಎರಡು ಶಾಲೆಗಳನ್ನು ಹೊರ್ತುಪಡಿಸಿ ಇನ್ನೆಲ್ಲಿಯೂ ಹಿಂದುಸ್ಥಾನದಲ್ಲಿ ಇಂಥ ಶಾಲೆಗಳಿರುವದಿಲ್ಲೆಂದು ಮಹಾತ್ಮರ ಜೊತೆಗಾರರಾದ ಶ್ರೀ ಮಹಾದೇವ ದೇಸಾಯಿಯವರು ಬರೆಯುತ್ತಾರೆ.

ಮದಾರಿಪುರದಲ್ಲಿ ಬಾಬು ಸುರೇನ ವಿಶ್ವಾಸರೆಂಬವರಿರುವರು ಇವರನ್ನು [illegible] ದೂರಕಳುಹಿದರು [illegible] ಬಿಟ್ಟರು, ಸ್ವರಾಜ್ಯಪಕ್ಷದವರಿವರು., ಇವರೂ ಸ್ವರಾಜ್ಯ ಪಕ್ಷ, ಸ್ವರಾಜ್ಯೇತರ ಪಕ್ಷ ಎಂಬ ಭೇದಬುದ್ಧಿ ಇವರಲ್ಲಿಲ್ಲ ಇವರ ಸೌಭಾಗ್ಯವತಿಯರು ಖಾದಿಗಾಗಿ ಬಹಳ ಪ್ರಯತ್ನ ಪಡುತ್ತಿರುವರು. ಮಹಾತ್ಮರು ಅಲ್ಲಿ ಗಮಿಸಿದಾಗ, ಇವರ ಹೆಂಡತಿಯು ಹೆಂಗಸರ ಸಭೆ ಸೇರಿಸಿ ೨೦೦ ಕೈರಾಟೆಗಳಮೇಲೆ ನೂಲು ತೆಗೆಸಿ ತೋರಿಸಿದರು

ಬಾರಿಸಾಲದಲ್ಲಿ ಪರಸ್ಪರ ಕಲಹಗಳೂ ದ್ವೇಷ-ಅಸೂಯೆ ಬುದ್ಧಿಗಳೂ ವಿಶೇಷವಾಗಿವೆ. ಆದರೂ, ಮಹಾತ್ಮರಿಗೆ ಸ್ವಾಗತವು ವಿಶೇಷವಾಯಿತು ಸುಮಾರು ೩೦ ಲಕ್ಷ ಗಜ ನೂಲು ಮಹಾತ್ಮರಿಗೆ ಅರ್ಪಣವಾಯಿತು. ಅದರೊಳಗಿನ ೪ ಲಕ್ಷ ಗಜ ನೂಲನ್ನು ಹೆಂಗಸರೇ ನೂತಿದ್ದರು ಸ್ವರಾಜ್ಯ ಪಕ್ಷದವರೊಬ್ಬರು ೧೪ ಸಾವಿರ ಗಜ ನೂಲನ್ನು ತೆಗೆದಿದ್ದರು. ಚಿಕ್ಕ ಬಾಲಕನೊಬ್ಬನು ೧೫ ದಿನಗಳಲ್ಲಿ ಭಕ್ತಿಭಾವದಿಂದ ತೆಗೆದ ೧೪ ಸಾವಿರ ಗಜ ನೂಲು ಅದರೊಳಗೆ ಸಮಾವೇಶವಾಗಿತ್ತು ೬೦ ವರ್ಷ ಪ್ರಾಯದ ಮುದುಕನೊಬ್ಬ ಈ ಕಾಣಿಕೆಗಾಗಿ ೩೬ ಸಾವಿರ ಗಜ ನೂಲು ನೂತಿದ್ದನು. ಮುಸಲ್ಮಾನರ ಮಹಮ್ಮದೀಯ ನೇತಾರರು [illegible] ಲಕ್ಷಾವಧಿ ಗಜ ನೂಲೂ ಈ ಕಾಣಿಕೆಯೊಳಗೊಂಡಿದೆ ಅಲ್ಲಿಯ ವಾತಾವರಣವು ನಿರ್ಮಲವಿದ್ದಿದ್ದರೆ, ಮತ್ತೂ ವಿಶೇಷ ಪ್ರಗತಿ ಕಾಣಬರುತ್ತಿತ್ತು.

ಬಾರಿಸಾಲದಲ್ಲಿ [illegible] ಹಾಗು ಚಮುಗಾರ-ಭಂಗಿಗಳ ಸಭೆಗಳಾದವು ಈ ಸಭೆಗಳಲ್ಲಿ ಮಹಾತ್ಮರು ಕೆಲ ಸಂಭಾಷಣ ನಡಿಸಿದರು "ಹೆಂಡ ಕುಡಿಯುವದನ್ನು ನೀವು ಬಿಡಲಾರಿರೇ? ಅದರೊಳಗೇನಾದರೂ ವಿಶೇಷ ರುಚಿಯಿದೆಯೋ?"

'ಅದನ್ನು ಅದನ್ನು ನಾವು ಬಿಡಲಾರೆವು, ಅದು ಬಹು ಪುರಾತನ ವ್ಯಸನವು"

'[illegible] -"

'ನಿಮ್ಮಂಥ ಮಹಾತ್ಮರು ಏನುಹೇಳಿದರೆ ನಾವು ಬಿಡುವೆವು,'

[illegible], ಭಂಗಿ [illegible] ಮೊದಲಾದವರ ಗೆಳೆಯನೆಂದು ನಾನು ಸಾರಿಕೊಳ್ಳುತ್ತೇನೆಂಬದು ನಿಮಗೆ ಗೊತ್ತಿದೆಯೋ? ನೀವು ಹೆಂಡ ಕುಡಿಯುವದನ್ನು ಬಿಡದಿದ್ದರೆ,

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶವನ್ನು ಯುವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವದೋ.

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುವದೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುವದು ಈ ಆಯಿಲ್ ತೊಡೆದುಕೊಳ್ಳುವದರಿಂದ ಮಸ್ತಕದ ಬೇನೆಯು ತಾನಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುವದು ಕೂದಲುಗಳು ಅದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಅಷ್ಟೇ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುತ್ತದೆ

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ಕಳೆಯನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಸಾರೆ ಕಾಮಿನಿಯಾ ಆಯಿಲ್ ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಒಫ್ ಮೆರಿಟ" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಪ್ರಮಾಣಪತ್ರಗಳೂ ದೊರೆತಿವೆ.

ಕ್ರಯ — ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10-0 ವ್ಹಿ. ಪಿ. ಖರ್ಚು 0-14-0

ಅತಿ ಮನೋಹರವಾದ ಸುರಭಿಯು!

ಒಟ್ಟೋ-ದಿಲ್ ಬಹಾರ್ !! ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವಾದ್ದು ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡಿದ್ದು ಇದರಲ್ಲಿ ಮದಿರೆಯ (ಅಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಆವಿರ್ಭವಿಸಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಕಡೆಯಿಂದ ಸೆಳೆಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1ಕ್ಕೆ 0-8-0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0, ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0.

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0-12-0.

Address:- **The Anglo Indian Drug & Chemical Co.**
16, Market, **BOMBAY 2**

ನಾನು ನಿಮ್ಮೊಡನೆ ಜಗಳವಾಡಬೇಕಾಗಿಲ್ಲ."

«ನಾವು ಅದನ್ನು ಬಿಟ್ಟುಬಿಡುತ್ತೇವೆ.»

«ಬಾಬಿಯ ಬಗ್ಗೆ ನೀವು ಅಂದುಕೊಂಡದ್ದೇ [illegible] ಹುಟ್ಟಿದಂದು ನಿಮ್ಮ ಮನೆಗೆ ಬಾರದೆ [illegible] ನನ್ನಂತೆ ಕಷ್ಟ ಅನುಭವಿಸುವದು ಏನು ಇದೆ? ನಿಮಗಾಗಿಯೇ ನಾನು ಇಷ್ಟು ಸಣ್ಣ ಕಷ್ಟ [illegible] ಸಿದ್ಧನೇ ತಿಳಿಯಿತೇನು?»

«ಆದೀತು ಸ್ವಾಮೀ.»

«ನಿಮ್ಮ ದೋಷವನ್ನೇನು ಬಿಟ್ಟು [illegible]»

«೧ ರೂಪಾಯಿ ೬ [illegible]»

«ಹಾಗಾದರೆ, ನಾನು ಹುಟ್ಟಿದ ಕಷ್ಟವನ್ನು [illegible]ಗೆ ನಿಮಗೆ ಕೊಡುವೆನು. ನೀವು ಅದನ್ನು [illegible]ರೋ?»

«ಆಹುದು, ಆಹುದು.»

«ನೋಡಿ, ಸುಳ್ಳು [illegible] ಕೊಳ್ಳುತ್ತಿದ್ದರೆ, [illegible] ನೋಡಬಹುದು [illegible] ನು. [illegible]»

«ಆಹುದು.»

ಹೀಗೆ, ಮಹಾತ್ಮರು [illegible] ಸಾಹೇಬರ ಬಿನ್ನಹ ಮಾಡಿ ಅವರ [illegible] ನೋಡಿ ಬಂದವರು «ಇದೆಲ್ಲ ಗಿರಣಿ ನಡೆ[illegible] ಬಡವರಿಗೇನು ಉಪಯೋಗ [illegible] ಅವರಿಗೊಂದು ಉದ್ಯೋಗ ದೊರಕುವದು. [illegible] ದೊರೆಗಳ ಅಂದಾಜಿನಂತೆ, ಭಾರತೀಯರ ಸರಾಸರಿ ವಾರ್ಷಿಕ ಉತ್ಪನ್ನವು ೫೦ ರೂಪಾಯಿ, ನಮ್ಮ ಅಂದಾಜು ೩೬ ರೂಪಾಯಿ. ಶ್ರೀಮಂತರ ಐಶ್ವರ್ಯವನ್ನು [illegible] ಮಾಡಿದರೆ, ಉತ್ಪನ್ನದ [illegible] ಮತ್ತೂ ಕಡಿಮೆಯಾಗುವದು. ನೂಲು ನೂತು ವರ್ಷಕ್ಕೆ ೧೦ ರೂಪಾಯಿ ಗಳಿಸಿದರೂ, ಅವರಿಗೆ ಅದು ದೊಡ್ಡದೇ. ೫ ರೂಪಾಯಿಯೆಂದರೆ ನಿಮಗೇನು ದೊಡ್ಡ [illegible] ಆದರೆ, ಬಡವರಿಗೆ ೫ ರೂಪಾಯಿಯೆಂದರೆ, ಐಶ್ವರ್ಯವೇ.»

ಈ ಮಾತುಗಳಿಂದ ಮುಗ್ಧರ [illegible] ಬಾಲಕರಾದ [illegible] ಮನಸ್ಸು ಕರಗಿತು. [illegible] ಮನೆಯಲ್ಲಿ ಪ್ರವೇಶಿಸಲು ತಾವು [illegible] ಅವರು ವಚನವಿತ್ತರು.

ದೀನಬಂಧು ಎಂಡ್ರ್ಯೂಸರವರು 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಆಶ್ರಮವಾಸಿಗಳಾದ ಹೆಂಗಸರ ವಿಷಯ ಬರೆಯುವದೇನಂದರೆ — ಅಲ್ಲಿಯ [illegible] ನನಗೆ ಆದರ್ಶರೂಪವಾಗಿ [illegible] ಇವರೆಲ್ಲರೂ ದೇಶಾಭಿಮಾನಿಗಳು, [illegible] ತ್ಯಾಗಬುದ್ಧಿಯಿಂದ, ಏಕಾಗ್ರಚಿತ್ತದಿಂದ ತಮ್ಮ ಕೆಲಸ ಮಾಡುವರು. ಅಲ್ಲಿ ಮನೆತನಕ್ಕೆ ತಗಲುವಷ್ಟು [illegible] ಮನೆಯೊಳಗಿನ ಹೆಂಗಸರು [illegible] ನೂಲುತ್ತಿದ್ದರು. ನೂಲುವರು ಕೆಲವರೇ [illegible] ಇದರಿಂದ ಮನೆಯಲ್ಲಿ [illegible] ಪ್ರಕಾರದ [illegible] ೧೦೦ಕ್ಕೆ [illegible] ಮಂದಿಗಳು ಹಿಂದೂ ನಿವಾಸಿಗಳು [illegible] ಯಿಂದಲೇ ಈ ಪ್ರದೇಶವು ಇಷ್ಟು ಸಮೃದ್ಧವಿದೆ. ವಿಧವೆಯರು ತ್ಯಾಗಬುದ್ಧಿಯಿಂದ, ಭಕ್ತಿಭಾವದಿಂದ [illegible] ಗಿರುವ [illegible] ಮನೆಯಲ್ಲಿ [illegible] ಕಾಲ ಕಳೆಯುತ್ತಿರುವರು. ಮನೆಮಂದಿಗೆ ತಗಲುವ ಅರಿವೆಯನ್ನು ಅವರೇ ನೇಯುತ್ತಾರೆ. ಮತ್ತು ಚಿಕ್ಕ ಚಿಕ್ಕ ಹುಡುಗಿಯರಿಗೆಲ್ಲ ಇದನ್ನೇ ಕಲಿಸುತ್ತಾರೆ. ಅವರಿಗೆ [illegible] ಕಲಿಸುತ್ತಾರೆ. ಸ್ವತಂತ್ರವಾಗಿ ವಿಧವೆಯರು ಹೊಟ್ಟೆ ಹೊರೆದುಕೊಳ್ಳುವದರಿಂದ ಮನೆಯಲ್ಲೆಲ್ಲ ಅವರಿಗೆ ಪ್ರತಿಷ್ಠೆ ಇದೆ. ಸೌಭಾಗ್ಯವತಿಯರೂ ಮನೆಯಲ್ಲಿ ತಗಲುವ ಸಾಮಾನುಗಳನ್ನು ಮನೆಯಲ್ಲಿಯೇ ತಯಾರಿಸಿಕೊಳ್ಳುವದರಿಂದ, ಗಂಡಸರಂತೆ ಹೆಂಗಸರೂ ಮನೆತನದ [illegible]ಗಿವೆ. ಮಹಮ್ಮದೀಯರೂ ಹಿಂದೂಗಳೊಡನೆ ಐಕ್ಯಭಾವದಿಂದ ಶಾಂತರಾಗಿ ಕಾಲ ಕಳೆಯುತ್ತಿರುವರು.

ಬಾಬುವಿನ ಬಂಧನಮುಕ್ತತೆ

(ಅನುವಾದಕ [illegible] ಕೊಡ್ಲೆ ಸೀ.ಕೆ.)

ಹಿಂದಿನ ಸಂಚಿಕೆಯಿಂದ ಮುಂದೆ ಸಾಗಿದ್ದು

೭

ಮರುದಿವಸ [illegible] ಬಾಬುರವರು ಒಂದು [illegible] ವಿದ್ಯಾರ್ಥಿಗಳನ್ನು [illegible] ಸಿದ್ಧತೆಗಳನ್ನು, ಎಂದರೆ [illegible] ಇರುವದನ್ನು [illegible] ಅವರಲ್ಲಿ [illegible] [illegible] ಆದರೆ [illegible] ದೇ ಸಂಚಿಕೆಯು [illegible] ಆಡಿಗೆ ಮನೆ [illegible] ಕೊಟ್ಟಳು.

ಸಾಯಂಕಾಲ [illegible] ಹೋಗಿದ್ದ [illegible] ಬಾಬುರವರು ೧೦ ಘಂಟೆಯ ಸಮಯಕ್ಕೆ ತಿರುಗಿ ಬಂದು, ತಮ್ಮ ಸ್ನಾನವನ್ನು ಮುಗಿಸಿ ಊಟವನ್ನು ಬೇಗ ತೀರಿಸಿಕೊಂಡು ಕಚೇರಿಗೆ ಹೋದರು.

ತನ್ನ ಬಾಲಕನು ಇನ್ನೂ ಮನೆಯ ಹತ್ತಿರವೇ ಸುತ್ತಾಡುತ್ತಿರುವದನ್ನು ಕಂಡು ಚಾರುಶೀಲೆಯು ಶಾಲೆಗೆ ಯಾಕೆ ಹೋಗಲಿಲ್ಲವೆಂತ ಅವನನ್ನು ವಿಚಾರಿಸಿದಳು. ಅದಕ್ಕೆ ಆ ಬಡ ಬಾಲಕನು ಉತ್ತರ ಕೊಟ್ಟದ್ದೇನಂದರೆ,— «ಅಮ್ಮಾ, ಈಗಾಗಲೇ ಹುಡುಗರೆಲ್ಲ ಬೇರೆ ಬಾಲಕರು ನನಗೆ ಅಪಮಾನವನ್ನು ಮಾಡುವರು. ಅದರಿಂದ ನಾನು ಇನ್ನೂ ಹೆಚ್ಚು ಅಪಮಾನವನ್ನು, [illegible] ಪ್ರಸಂಗವನ್ನು ತಂದುಕೊಳ್ಳಲು ಇಚ್ಛಿಸುವದಿಲ್ಲ.»

ಚಾರುಶೀಲೆಗೆ ಆದರ ಕಾರಣವು ತಿಳಿಯಿತು. ಅವಳು ಅಂದದ್ದೇನಂದರೆ — «ಒಳ್ಳೇದು. ಈ ದಿನ ಶಾಲೆಗೆ ಹೋಗಬೇಡ. ನಾನು ನಿನ್ನನ್ನು ಕರಕೊಂಡು ಎಲ್ಲಿಗೋ ಹೋಗಬೇಕಾಗಿದೆ.»

ಮಧ್ಯಾಹ್ನದ ಸಮಯಕ್ಕೆ ಚಾರುಶೀಲೆಯು ಗಾಡಿಯನ್ನು ತರಿಸಿ, ತನ್ನ ಬಾಲಕನನ್ನು ಕರೆದುಕೊಂಡು ಬಾಬು ಕಾಲಿಕಾಂತ ವಕೀಲರ ಮನೆಗೆ ಹೋದಳು.

ಒಳಗೆ ಹೋಗಿ ನೋಡಲಾಗಿ, ಸೆರೆಯಲ್ಲಿದ್ದ ವಕೀಲರ ಹೆಂಡತಿಯಿಂದ ಬೇರೆ ಎಷ್ಟೋ ಸ್ತ್ರೀಯರು ಅಲ್ಲಿ ಕೂಡಿರುವದನ್ನು ಕಂಡಳು. ಅವರಲ್ಲಿ ಕೆಲವು ಹೆಂಗಸರು ಇಸ್ಪೀಟನ್ನು ಆಡುತ್ತಿದ್ದರು ಮತ್ತು ಉಳಿದವರು ಅದನ್ನು ನೋಡುತ್ತ ಕೂತಿದ್ದರು. ಅವರು ಚಾರುಶೀಲೆಯನ್ನು ನೋಡಿದರು ಆದರೆ ಸ್ವಾಗತಪರವಾದ ಒಂದು ಶಬ್ದವನ್ನು ಕೂಡ ಆಡಲಿಲ್ಲ. ಕಾಲಿಕಾಂತ ಬಾಬುರವರ ಪತ್ನಿಯು ಅವಳನ್ನು ಬರಮಾಡಿಕೊಂಡಳು, ಆದರೆ, ಆ ಮೊದಲಿನಷ್ಟು ಆದರಪೂರ್ವಕವಾಗಿ ಅಲ್ಲ.

ಚಾರುಶೀಲೆಯು [illegible] ಸಂಗತಿಗಳ ವಿಷಯವಾಗಿ ಮಾತಾಡಹತ್ತಿದಳು ಮತ್ತು ಅದರಲ್ಲಿ ಮನೆಯ ಯಜಮಾನಿಯೂ ಮಾತ್ರ ಭಾಗವನ್ನು ತೆಗೆದುಕೊಂಡಳು. ಉಳಿದ ಹೆಂಗಸರು ಬೇಕೆಂತ ಮೌನವಾಗಿದ್ದರು. ಕಟ್ಟಕಡೆಗೆ ಅವಳು ವಿದ್ಯಾರ್ಥಿಗಳ ಖಟ್ಲೆಯ ವಿಷಯವನ್ನು ತಾನಾಗಿಯೇ ತೆಗೆದಳು.

ಅಲ್ಲಿ ಕುಳಿತಿದ್ದ ಸ್ತ್ರೀಯರಲ್ಲಿ ಒಬ್ಬಳು, «ಬಹಳ ಕಷ್ಟವಾಯಿತು. ಹೀಗೆ ಆದೀತೆಂತ ನಮ್ಮ ಕಲ್ಪನೆಯೇ ಇದ್ದಿಲ್ಲ», ಎಂದಳು.

ಆಪೀಲಿನಲ್ಲಿ ಬಹುತರವಾಗಿ ಆರೋಪಿಗಳು ದೋಷಮುಕ್ತರಾದಾರೆಂದು ತನ್ನ ಗಂಡನು ತನಗೆ ಹೇಳುತ್ತಿದ್ದನೆಂತ, ಕಾಲಿಕಾಂತ ಬಾಬುರವರ ಪತ್ನಿಯು ನುಡಿದಳು.

«[illegible] ಸ್ವದೇಶೀ ಖಟ್ಲೆ ಇರುತ್ತದೆಂಬುದಾಗಿ ಸಾಕಷ್ಟು ನ್ಯಾಯವನ್ನು ಕೊಡಲು ಹಿಂಜರಿಯದಿದ್ದರೆ ಮಾತ್ರ» ಎಂತ ಇನ್ನೊಬ್ಬ ಹೆಂಗಸು ಅಂದಳು.

«ಆಪೀಲಿನ ವಿಚಾರಣೆಯು ಯಾವ ತಾರೀಖಿಗೆ ಇಟ್ಟಿರುತ್ತದೆ?» ಎಂತ ಚಾರುಶೀಲೆಯು ಕೇಳಿದಳು.

«ನನಗೆ ಖಾತ್ರಿ ಇಲ್ಲ ಆದರೆ ಬೇಗನೇ ಅದರ ವಿಚಾರವಾಗುವದು,» ಎಂತ ಕಾಲಿಕಾಂತ ಬಾಬುರವರ ಹೆಂಡತಿಯು ಉತ್ತರಕೊಟ್ಟಳು.

«ಆ ಹುಡುಗರಿಗೆ ಕಲಕತ್ತೆಯ ಚತುರನಾದ ವಕೀಲನೊಬ್ಬನು ಬೇಕಾಗಿದ್ದನು» ಎಂತ ಚಾರುಶೀಲೆಯು ನುಡಿದಳು.

ಕಾಲಿಕಾಂತ ಬಾಬುರವರ ಹೆಂಡತಿಯು ಸ್ವಲ್ಪ ವಿಚಾರ ಮಾಡಿ ಅಂದದ್ದು — «ಹೌದು ಆದರೆ ಅದಕ್ಕೆ ಹಣ ಬಹಳ ಬೇಕು ಎಂಬುದು ನಿನಗೆ ಗೊತ್ತದೆ. ಆ ಹುಡುಗರು ಅದನ್ನು ಕೊಡಬಲ್ಲರೆಂತ ನಾನು ತಿಳಿಯುವದಿಲ್ಲ. ನಮ್ಮ ಗಂಡಂದಿರು ಅವರಿಗೆ ತಮ್ಮಿಂದಾದಷ್ಟು ಸಹಾಯ ಮಾಡುವರು.»

«ಒಬ್ಬ ವಕೀಲನ ರುಸುಮನ್ನು ಕೊಡುವದು ನನ್ನ ಮನಸ್ಸಿನಲ್ಲಿತ್ತು,» ಎಂತ ಚಾರುಶೀಲೆಯು ತಲೆ ಬಾಗಿಸಿಕೊಂಡು ಅಂದಳು.

ಇದನ್ನು ಕೇಳಿ ಅಲ್ಲಿದ್ದ ಹೆಂಗಸರು ಆಶ್ಚರ್ಯಚಕಿತರಾದರು. ಅವರಲ್ಲೊಬ್ಬಳು— «ನೀನು? ನೀನ್ಯಾಕೆ ಕೊಡಬೇಕು?» ಅಂದಳು.

ಚಾರುಶೀಲೆಯು [illegible] ದ್ದೇನಂದರೆ — «ನೀವೂ, ನಿಮ್ಮ ಗಂಡಂದಿರೂ ಕಾಲ ಹಣದ ವ್ಯಯದಿಂದ ಆ ಬಡ ಹುಡುಗರ ಸಲುವಾಗಿ ಇಷ್ಟೆಲ್ಲ ಮಾಡುತ್ತಿರುವಿರಿ. ನನಗೂ ಕೂಡ ಅವರಿಗೆ ಯಥಾಶಕ್ತಿ ಸಹಾಯ ಮಾಡುವ ಸ್ವಾತಂತ್ರ್ಯ ಇಲ್ಲವೇ? ನಾನು ನನ್ನ ಸಂಗಡ ಒಂದು ಬಂಗಾರದ ಬಳೆಯ ಜೋಡಿಯನ್ನು ತಂದಿರುವೆನು. ಅವುಗಳನ್ನು ಮಾರಿದರೆ, ೧೦೦೦ಕ್ಕಿಂತ ಹೆಚ್ಚು ರೂಪಾಯಿಗಳು ಬರಲಿಕ್ಕೆ ಅಡ್ಡಿ ಇಲ್ಲ. ಆ ರಕಮು ಒಬ್ಬ ವಿಖ್ಯಾತ ವಕೀಲರನ್ನು ನೇಮಿಸುವದರಲ್ಲಿ ವ್ಯಯವಾಗಲಿ. ನಾನು ಕೊಟ್ಟಿರುವದನ್ನು ಬೇಡವೆನ್ನಬೇಡಿರಿ. ನನ್ನ ಮನಸ್ಸಿನ ಸಮಾಧಾನಕ್ಕಾಗಿ ನಾನು ಕಿಂಚಿತ್ ತ್ಯಾಗವನ್ನು ಮಾಡುವೆನು.»

ಇಷ್ಟೆಲ್ಲ ಮುಗಿಸುವದರೊಳಗೆ ಚಾರುಶೀಲೆಯ ಕಣ್ಣುಗಳು ನೀರಿನಿಂದ ತುಂಬಿದ್ದನ್ನು ಉಳಿದ ಸ್ತ್ರೀಯರು ನೋಡಿದರು.

«ಒಳ್ಳೇದು. ನನ್ನ ಪತಿಯವರು ಕಚೇರಿಯಿಂದ ಮನೆಗೆ ಬಂದಮೇಲೆ ನಾನು ಅವರಿಗೆ ಹೇಳುವೆನು,» ಅನ್ನುತ್ತ ಕಾಲಿಕಾಂತ ಬಾಬುರವರ ಹೆಂಡತಿಯು ಆ ಬಳೆಗಳನ್ನು ತೆಗೆದುಕೊಂಡಳು.

ಈ ಸಂಗತಿಯು ಉಳಿದ ಸ್ತ್ರೀಯರ ಮನಸ್ಸನ್ನು ಕೂಡಲೇ ಕರಗಿಸಿತು. ಅವರು ಚಾರುಶೀಲೆಯ ಸಂಗಡ ಪ್ರೇಮಪೂರ್ವಕವಾಗಿ ಮಾತಾಡಿ ತಮ್ಮ ಆ ಮೊದಲಿನ ಕಠೋರತನವನ್ನು ಮುಗಿಸಲು ಯತ್ನಿಸಹತ್ತಿದರು.

(ಮುಂದೆ ಸಾಗುವದು.)

ವಿವಿಧ ಸಂಗ್ರಹ.

ಮಕ್ಕಳ ಗದ್ದಲ!

ಸಂತತಿಯ ಮೌಲ್ಯ ಸದ್ಯಕ್ಕೆ ವಿಚಾರಣೀಯವೆಂದಗಿನ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ. ೧೭ ನೇ ಶತಮಾನದಲ್ಲಿ ಸ್ಕಾಟಲಂಡ ದೇಶದಲ್ಲಿ ನೇಕಾರನೊಬ್ಬನಿದ್ದನು. ಆತನಿಗೆ ಹೆಂಡತಿ ಒಬ್ಬಳೇ; ಮಕ್ಕಳು ೬೨ ಅವರಲ್ಲಿ ೧೬ ಮಕ್ಕಳು ಆ ನೇಕಾರನ ಮುಂದೆಯೇ ತೀರಿಕೊಂಡವು. ಆದರೂ, ೪೬ ಮಕ್ಕಳು ಬದುಕಿ ಉಳಿದಿದ್ದರು. ಇಂಗ್ಲಂಡದ ಯೊರ್ಕ ಪಟ್ಟಿಯಲ್ಲಿ ಮಿಸೆಸ್ ಉರ್ಸುಲ್ ಬ್ಯಾಟವ್ರೂಟ ಇವಳು ೯೪ ವರ್ಷ ಬಾಳಿ ಬದುಕಿ ನಿಧನ ಹೊಂದಿದಳು. ಮರಣ ಕಾಲಕ್ಕೆ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಕೂಡಿ ೧೬೭ ಮಂದಿಯಿದ್ದರು. ಜೋರ್ಜಿಯಾದಲ್ಲಿ ಮಿಸೆಸ್ ಶಿಸರ ಎಂಬವಳು ಮರಣಕಾಲದಲ್ಲಿ ೩೧೦ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳನ್ನು ನೋಡಿದಳು. ಉರಾ ಶದ ಸಾರಾ ಎಂಬವಳು ಮರಿಮೊಮ್ಮಕ್ಕಳ ರೆಗೆ ಬೆಳಗಿದವರನ್ನು ಕಂಡಳು. ಇವಳ ನಿಧನ ಸಮಯ ೩೦೩ ಕುಟುಂಬದ ಜನರಿದ್ದರು. ಕಾಂಬ ಡದ ವೆಬ್ ಎಂಬವನ ಸಂತತಿಧನವು ಮಹಾ ಶ್ಚರ್ಯಕಾರಕವಿದೆ! ಆತನಿಗೆ ೬ ಮಂದಿ ಗಂಡು, ಮಂದಿ ಹೆಣ್ಣು ಮಕ್ಕಳು ಹುಟ್ಟಿದರು. ಜೇಸನ್ ಎಂಬವನು ಹಿರೇ ಮಗನು. ಇವನ ಪರಂಪರೆಯ ೪೪೪ ಮಂದಿಗಳು ಜನಿಸಿದರು. ಇನ್ನೊಬ್ಬ ಮಗನು ೪೦೩ ಮಂದಿಗಳ ಮೂಲ ಪುರುಷನಾದನು. ಮತ್ತೊಬ್ಬನು ೧೬೩ ಮಂದಿಗಳ ಹಿರಿಯನಾದನು. ೩ ಜನ ಹೆಣ್ಮಕ್ಕಳಲ್ಲಿ ೩೩೯ ಮಂದಿಗಳು ಜನ್ಮವೆತ್ತಿದ್ದರು. ಅಂತು ವೆಬ್‌ನು ಸಾಯುವಾಗ ತನ್ನಿಂದ ಹುಟ್ಟಿದ ೧,೩೫೧ ಮಕ್ಕಳನ್ನು ಕಣ್ಣಾರೆ ಕಂಡನು! ಇದು ದೊಡ್ಡ ಸಂಸಾರದ ಕಥೆ! ನಮ್ಮ ದೇಶದಲ್ಲಿ ಇನ್ನೊಂದು ಚಮತ್ಕಾರವು. ಅಂಟ್ವರ್ಪದಲ್ಲಿ ಮೇಡಮ್ ಕೊಲೀಯರ ಎಂಬ ಒಬ್ಬ ಸ್ತ್ರೀಯಳಿರುವಳು. ಇವಳಿಗೆ ಒಂದು ವರುಷದಲ್ಲಿ ೬ ಮಕ್ಕಳು ಹುಟ್ಟಿದರು! ಒಂದೇ ಇಸವಿಯ ಜನವರಿ ತಿಂಗಳಲ್ಲಿ ೩!! ಡಿಸೆಂಬರ ತಿಂಗಳಲ್ಲಿ ೩!!! ಅಮೇರಿಕೆಯ ಚಿಕಾಗೋದಲ್ಲಿ ಜೊಸೆಫೈನ ಓಬ್ರಾಯನ ಎಂಬವಳಿರುವಳು. ಇವಳಿಗೆ ಮದುವೆಯಾಗಿ ೭ ವರ್ಷಗಳಾದವು. ೭ ವರ್ಷಗಳಲ್ಲಿ ೧೪ ಮಕ್ಕಳು! ಇವರು ೭ ಸಲ ಹೆತ್ತಳು. ಒಮ್ಮೆ ೪, ಮತ್ತೊಮ್ಮೆ ೩; ಇನ್ನೊಮ್ಮೆ ೨, ಇನ್ನೊಮ್ಮೆ ಎರಡೇ. ಬಳಿಕ, ಸಾಮಾನ್ಯ. ಮಾನವರಂತೆ ಒಮ್ಮೊಮ್ಮೆ ಒಂದೊಂದು; ಅಂತು ೧೪.

⁂

ಪಾತಾಳದೊಳಗಿನ ಶೋಧ!

ಅಮೇರಿಕೆಯೊಳಗಿನ ಶಾಸ್ತ್ರಜ್ಞರು ಇತ್ತಿತ್ತ ವರುಣದೇವನ ಕಡೆಗೆ ದೃಷ್ಟಿ ತಿರುವುತ್ತಿರುವರು. ಸಮುದ್ರದಲ್ಲಿ ಹೇರಳ ಸಂಪತ್ತಿಯು ಅಡಗಿಕೊಂಡಿದೆ; ಭೂತಲದ ಮೇಲಿನ ಅಗಣಿತ ದ್ರವ್ಯವೂ ಜಲಸಮಾಧಿ ಹೊಂದಿ ವರುಣ ದೇವನು ಐಶ್ವರ್ಯಸಂಪನ್ನನಾಗಿರುವನು. ಅದನ್ನು ಹಸ್ತಗತ ಮಾಡಿಕೊಳ್ಳಲು ಶಾಸ್ತ್ರಜ್ಞರು ಯೋಚಿಸುತ್ತಿರುವರು. ಸಮುದ್ರದಲ್ಲಿ ಸೇರಿಕೊಂತೆ, ಅಲ್ಲಿಯ ಸ್ಥಿತಿಯನ್ನು ಭಾವಚಿತ್ರದ ಮೂಲಕ ತೆಗೆದುಕೊಂಡು ಅಲ್ಲೋದನೆ ಮಾಡುವ ಯುಕ್ತಿಯೊಂದು ಇತ್ತಿತ್ತ ಶೋಧಿಸಲ್ಪಟ್ಟಿದೆ. ಭಾವಚಿತ್ರ ತೆಗೆಯಬೇಕಾದರೆ, ಅಲ್ಲಿ ಪ್ರಕಾಶ ಬೇಕು. ಭಾವಚಿತ್ರಕ್ಕನುಕೂಲವಾದ ಸಾಮಗ್ರಿಯು ಆಳವಾದ ಜಲಾಶಯದಲ್ಲಿ ಒಯ್ಯಬೇಕು. ಇದಕ್ಕಾಗಿ, ಶಿಲ್ಪಕರು ಹೊಸ ಮಾದರಿಯ ಉಡುಪನ್ನು ತಯಾರಿಸಿರುವರು. ಆ ಉಡುಪನ್ನು ಧರಿಸಿ ಜಲಪ್ರವೇಶ ಮಾಡಬೇಕು. ಅಂದರೆ, ಅಲ್ಲಿ ಭಾವಚಿತ್ರ ತೆಗೆಯಲು ಅನುಕೂಲವಾಗುತ್ತದೆ. ಭಾವಚಿತ್ರಕ್ಕೆ ಬೆಳಕು ಬೇಕು, ಬೆಳಕಿಗೆ ದೀಪ ಬೇಕು. ಸಾಮಾನ್ಯ ದೀಪವು ಜಲಾಶಯದಲ್ಲಿ ಉರಿಯಲಾರದು. ಹಾಗು ಸಾಮಾನ್ಯ ದೀಪದ ಬೆಳಕಿನಿಂದ ಭಾವಚಿತ್ರವನ್ನು ತೆಗೆಯಲು ಅನುಕೂಲವಾಗುವದಿಲ್ಲ. ಆದರಿಂದ ಪಾರದದ ಉಗಿಯಿಂದ ದೀಪಗಳನ್ನು ತಯಾರಿಸಿರುವರು. ಅವಕ್ಕೆ ದಪ್ಪ ಕನ್ನಡಿಗಳನ್ನು ಹಾಕಿರುವರು. ದೀಪಗಳ ವ್ಯಾಸವು ೫ ಇಂಚು ಇದ್ದು, ಈ ದೀಪಗಳಿಂದ ೨೫-೩೦ ಫೂಟು ಸುತ್ತಳತೆಯ ಭಾಗವು ಸ್ಪಷ್ಟವಾಗಿ ಕಾಣುತ್ತದೆ. ಈ ದೀಪಗಳು ಒಡೆಯದಂತೆ ಇವುಗಳಿಗೆ ಕಂಬಿಯ ಕವಚಗಳು ಹಾಕಲ್ಪಟ್ಟಿವೆ. ಅಮೇರಿಕೆಯ 'ವರ್ಲ್ಡ ಪ್ರೊಗ್ರೆಸ್' (ಭೂತಲದ ಪ್ರಗತಿ) ಎಂಬ ಮಾಸ ಪತ್ರಿಕೆಯಲ್ಲಿ ಈ ಶೋಧದ ವಿಶೇಷ ಮಾಹಿತಿಯು ಪ್ರಕಟವಾಗುತ್ತಿದೆ. ಸಮುದ್ರದ ಭಾವಚಿತ್ರಗಳನ್ನು ಚಲಚ್ಚಿತ್ರದ ಕಂಪನಿಯವರು ಪ್ರದರ್ಶಿಸುತ್ತಿರುವರು.

⁂

ಸೃಷ್ಟಿದೇವಿಯ ಕೋಪ!

ಅಮೇರಿಕಾ ಖಂಡದ ಕೆಲಿಫೋರ್ನಿಯಾ ಸಂಸ್ಥಾನದಲ್ಲಿ ಕಳೆದ ಜೂನ ೨೯ ನೇ ತಾರೀಖಿನ ಮುಂಜಾವಿಗೆ ಭೂಕಂಪವಾಗಿ, ಅಮಿತ ಹಾನಿಯಾಯಿತು. ಸಾಂತಾ ಬಾರ್ಬರಾ ಎಂಬ ಬಂದರದಲ್ಲಿ ಭೂಕಂಪವು ಮೊಟ್ಟಮೊದಲು ಪ್ರಾರಂಭವಾಯಿತು. ದೊಡ್ಡ ದೊಡ್ಡ ಕಟ್ಟಡಗಳು ಧರಧರನೆ ನೆಲಕ್ಕುರುಳಿದವು. ನೀರಿನ ನಳಗಳೆಲ್ಲ ಒಡೆದು, ಪಟ್ಟಣದಲ್ಲೆಲ್ಲ ನೀರೇ ನೀರು. ಅತ್ತ ಸಾಗರರಾಯನೂ ಪ್ರಕ್ಷುಬ್ಧನಾದನು. ಅತನು ಉಕ್ಕೇರಿ ಬಂದನು. ಅಗ್ನಿನಾರಾಯಣನೂ ಪ್ರಾದುರ್ಭೂತನಾದನು. ಮೊಂಟೀಸಾ ಎಂಬಲ್ಲಿ ೧೦ ಮೈಲು ಉದ್ದ ಒಂದು ದೊಡ್ಡ ಕಂದರವು ಬಿದ್ದಿದೆ. ೩೦೦ ಫೂಟು ಎತ್ತರವಿದ್ದ ಬಂಡೆಗಲ್ಲೊಂದು ನೆಲಕ್ಕುರುಳಿ, ಉಗಿಬಂಡಿಯು ಕುಸಿದುಹೋಗಿದೆ. ಈ ವರೆಗೆ ೧೨ ಮಂದಿಗಳು ಮಡಿದ ಸುದ್ದಿ. ಪನ್ನಾರು ನೆಲಕ್ಕುರುಳಿ ಒಡೆದ ಪಟ್ಟಣದಲ್ಲಿ ೩೦ ಸಾವಿರ ಪ್ರಜೆಗಳು ನಿರಾಶ್ರಿತರಾಗಿರುವರು; ಅಂಗಳಗಳಲ್ಲಿ ಬಿಡಾರು ಕಟ್ಟಿಕೊಂಡಿರುವರು. ಅಲ್ಲಿಯ ಒಂದು ಪ್ರಾಣಾವಳಿಯಲ್ಲಿ ಒಂದು ಚಮತ್ಕಾರವು ಸಂಭವಿಸಿತು. ಪ್ರಾಣಾವಳಿಯ ನಾಲ್ಕು ಗೋಡೆಗಳು ಅವಕಾಶವಾಗಿ ಹೊರಬಿದ್ದಾಗ ಹಿರಗುತ್ತ, ಹಿರಗುತ್ತ ನೆಲಕ್ಕುರುಳಿದವು. ಪ್ರಾಣಾವಳಿಯಲ್ಲಿ ಎಲ್ಲರೂ ಊಟ ಮಾಡಿ ಮಲಗಿದ್ದರು. ಅವರಿಗೇನು ಅಪಾಯವಾಗಲಿಲ್ಲ; ನಿದ್ರಾಭಂಗವೂ ಆಗಲಿಲ್ಲ. ಕೈದಿಗಳಿಗೊಂದು ಉಪಕಾರವಾಯಿತು. ಸೆರೆಮನೆಯ ಗೋಡೆಗಳು ಬಿದ್ದ ಕೂಡಲೆ, ಕೈದಿಗಳು ಎದ್ದು ಹಾರಿದರು. ಈ ಕಾಲಕ್ಕೋಸ್ಕರ ಪಟ್ಟಣಿಗರ ಅರಕ್ಷಿತ ಧನವನ್ನು ಲೂಟಿ ಮಾಡುತ್ತಿರುವರು. ಸೈನಿಕರೂ, ಸ್ವಯಂಸೇವಕರೂ ರಕ್ಷಣ ಮಾಡುತ್ತಿರುವರು. ಇನ್ನೂ ಭೂಮಿಕಂಪನವಾಗುತ್ತದೆ. ರಶಿಯಾ ದೇಶದ ಪೋಲಂಡ ಪ್ರದೇಶದಲ್ಲಿ ಭೀಕರ ನೆರೆ ಬಂದಿದೆ. ಸಂಕಗಳೂ, ಗಿರಣಿಗಳೂ, ಸಾವಿರಾರು ಮನೆಗಳೂ ನೀರುಪಾಲಾಗಿರುವವು. ಸುಮಾರು ೧೫ ಕೋಟಿ ರೂಪಾಯಿಗಳ ಹಾನಿ. ೧॥ ಲಕ್ಷ ಮಂದಿಗಳು ಗೋಳಿಡುತ್ತಿರುವರು.

⁂

ಕರ್ನಾಟಕ ಸೇವಾ ಸಂಘ.

ಧಾರವಾಡದಲ್ಲಿ ಸ್ಥಾಪನೆಯಾದ ಕರ್ನಾಟಕ ಸೇವಾಸಂಘವು ಗ್ರಾಮಸಂಘಟನೆಯ ಶಿಕ್ಷಣಕ್ರಮವನ್ನು ಕೊಡುವ ಏರ್ಪಾಟು ಮಾಡಿದೆ. ೨ ವರ್ಷಗಳ ಅಭ್ಯಾಸಕ್ರಮವಿದು. ವಿದ್ಯಾರ್ಥಿಗಳು ೧೮ ವರ್ಷ ಪ್ರಾಯದವರಿರಬೇಕು. ಮೊದಲಿನ ವರ್ಷದಲ್ಲಿ ಕನ್ನಡ, ಹಿಂದೀ ಭಾಷೆಯ ಶಿಕ್ಷಣ ಕೊಡುವದಲ್ಲದೆ, ಹಿಂದುಸ್ಥಾನದ ಇತಿಹಾಸ, ರಾಜ್ಯಕಾರಣ ಅರ್ಥಶಾಸ್ತ್ರ ಇವುಗಳ ಮೂಲ ತತ್ವಗಳು ಕಲಿಸಲ್ಪಡುವವು. ಗ್ರಾಮಪಂಚಾಯತು, ಆಯುರ್ವೇದ, [illegible], ನೂಲುವದು, ನೇಯುವದು, ಬೇಸಾಯ ಇವುಗಳ ಜ್ಞಾನವೂ ಕೊಡಲ್ಪಡುವದು. ಎರಡನೇ ವರ್ಷ ವಿದ್ಯಾರ್ಥಿಗಳಿಗೆ ಗ್ರಾಮಾಂತರಗಳಲ್ಲಿ ಒಯ್ದು ಪ್ರತ್ಯಕ್ಷ ಶಿಕ್ಷಣ ಕೊಡಲ್ಪಡುವದು. ಬಳಿಕ, ಇವರು ಗ್ರಾಮಸಂಘಟನೆಗಾಗಿ ಗ್ರಾಮಗಳಿಗೆ ಕಳುಹಿಸಲ್ಪಡುವರು. ಹೊಟ್ಟೆಯ ಪೂರ್ತ ಸಂಬಳ ಸಿಗುವದು. ಶ್ರೀ ವಿನಾಯಕರಾವ ಜೋಶಿ, ಸುರೇಂದ್ರರಾವ ದೇಸಾಯಿ, ರಂಗನಾಥ ದಿವಾಕರ, ಗೋವಿಂದಾಚಾರ್ಯ ಗುತ್ತಲ, ಮಧ್ವರಾವ ಕಬ್ಬೂರ ಇತ್ಯಾದಿ ಅನುಭವಿಕ ದೇಶಸೇವಕರು ಶಿಕ್ಷಣ ಮಂಡಳದಲ್ಲಿರುವರು.

⁂

ದೇಶಬಂಧುಗಳ ಸ್ವರಾಜ್ಯ ಗಾಬರಿ!

ಪ್ರೊ|| ಸುಕುಮಾರದತ್ತ ಎಮ್. ಎ., ಇವರು ದಿಲ್ಲಿಯಲ್ಲಿಯ "ಹಿಂದುಸ್ಥಾನ ಟೈಮ್ಸ'' ಪತ್ರಿಕೆಯಲ್ಲಿ ದೇಶಬಂಧುಗಳ ಕುರಿತು, ಕೆಲವು ಜ್ಞಾಪಕ ಸಂಗತಿಗಳನ್ನು ಬರೆದಿರುವರು. ಸ್ವರಾಜ್ಯ"ಗಾಬರಿಯ ಸಂಗತಿಯು ಮನನೀಯವಿದೆ. ಇತ್ತಿತ್ತ ದೇಶಬಂಧುಗಳಿಗೆ ಸ್ವರಾಜ್ಯಪ್ರಾಪ್ತಿಯ ನಿಧಿ ಧ್ಯಾಸವಾಗಿತ್ತು. ಕಾಲವು ತೀರ ಅಲ್ಪವಿರುವದೆಂಬ ಭಾವನೆಯಿಂದ, ತಮ್ಮ ನಿಧನದ ಮುಂಚಿತವಾಗಿ ಸ್ವರಾಜ್ಯಪ್ರಾಪ್ತಿಯಾದ್ದು ನೋಡಬೇಕೆಂಬ ಆತುರತೆಯಿಂದ ಅವರು ಹಗಲಿರುಳು ದಣಿಯದೆ ದುಡಿಯುತ್ತಿದ್ದರು. ಎಲ್ಲರೂ ಅದೇ ಪ್ರಕಾರ ದುಡಿಯಬೇಕೆಂಬ ಅವರ ಅಭಿಲಾಷೆ ಇತ್ತು. ಫರಿದಪುರದಲ್ಲಿ ಸ್ವರಾಜ್ಯ ಪಕ್ಷವನ್ನು ಸಂಸ್ಥಾಪಿಸಲು ದೇಶಬಂಧುಗಳು ಹೋಗಿದ್ದರು. ದೇಶಬಂಧುಗಳು ಸ್ವರಾಜ್ಯ ಪಕ್ಷದ ಅಷ್ಟಗಟ್ಟುಳ್ಳ ಕಾರ್ಯಕ್ರಮವನ್ನು ಸ್ಪಷ್ಟ ಮಾಡಿದರು. ಆದರೂ, ಸಭಿಕರಿಗೆ ಅವರ ಕಾರ್ಯಕ್ರಮ ಸೇರಲಿಲ್ಲ. ದೇಶಬಂಧುಗಳು ಪ್ರಕ್ಷುಬ್ಧರಾದರು. ನೇತ್ರಗಳು ಕೆಂಡದಂತೆ ಕ್ರೋಧಾಗ್ನಿಯನ್ನು ಹೊರಸೂಸುತ್ತಿದ್ದವು. ದೇಶಬಂಧುಗಳು ಉದ್ಗರಿಸಿದ್ದೇನೆಂದರೆ :— "ಎಲೆ ಹುಡುಗರೇ, ಗಾಂಧಿಯವರ ವಿಧಾಯಕ ಕಾರ್ಯಕ್ರಮದಿಂದ ಸ್ವರಾಜ್ಯ ಪ್ರಾಪ್ತಿಯಾಗಲಿಕ್ಕೆ ಎಷ್ಟು ಕಾಲವಿಳಂಬವಾಗುವದೆಂಬ ಅಂದಾಜು ಮಾಡಲಾಗದು. ನೀವು ಬಿಸಿ ಹುಡುಗರಿದ್ದೀರಿ, ಬಹಳ ವರ್ಷ ಬದುಕಿ ಬಾಳುವಿರಿ. ನೀವು ವಿಳಂಬವನ್ನು ಸೈರಿಸಬಲ್ಲಿರಿ. ನನ್ನ ಆಯುಷ್ಯವು ಭರದಿಂದ ಕ್ಷೀಣವಾಗುತ್ತಿದೆ. ನಾನು ಸೈರಿಸಲಾರೆ.

(ಮುಂದೆ ೧೦ ನೇ ಪಾನಿನಮೇಲೆ ಮುಂದರಿಸಿದೆ)

ಕಾನಡಾವೃತ್ತ.

ಮಿತಿ ಕ್ರೋಧನ ಸಂ। ಆಷಾಢ ಶು। ೧೫ ಸೋಮವಾರ

ಯುದ್ಧವಾಗುವದೇನು ?

ಚೀನ ದೇಶದೊಳಗಿನ ಗಡಿಬಿಡಿ!

ಮಹಾಯುದ್ಧವು ಮುಗಿಯಿತು. ಶಾಂತಿಸ್ಥಾಪನೆಯಾಯಿತು, ಸುಖದಿಂದ ಕಾಲಕಳೆಯುವ, ದಣಿವಾರಿಸಿಕೊಳ್ಳುವ, ಎಂದು ಯುದ್ಧದಲ್ಲಿ ಸಿಲುಕಿದ ರಾಷ್ಟ್ರಗಳು ಹಾರೈಸುತ್ತಿದ್ದವು. ಭೂಮಂಡಳದಲ್ಲಿ ಶಾಂತಿಯೇನು ಇನ್ನೂ ನೆಲೆಗೊಳ್ಳುವದಿಲ್ಲ. ಸಣ್ಣಪುಟ್ಟ ಯುದ್ಧಗಳು ಅಲ್ಲಲ್ಲಿ ಆಗುತ್ತಿವೆ. ಆದರೆ, ಚೀನ ದೇಶದೊಳಗಿನ ಗಡಿಬಿಡಿಯನ್ನು ನೋಡಿದರೆ, ಮುಂಬಯಿ ಪೇಟೆಯೊಳಗಿನ ಹತ್ತಿಯ ಖರೇದಿಯನ್ನು ಲಕ್ಷಿಸಿದರೆ, ಸಧ್ಯದಲ್ಲಿಯೇ ಚೀನದೇಶದಲ್ಲಿ ರಣದೇವತೆಯು ರಣತುತೂರಿಯನ್ನು ಪುನಃ ಊದಿ, ಪ್ರಜೆಗಳಿಗೆ ಸಂಕಟದಲ್ಲಿ ಸಿಲುಕಿಸುವ ಭಯಪ್ರದ ಲಕ್ಷಣಗಳು ಸ್ಪಷ್ಟವಾಗಿ ತೋರುತ್ತವೆ. ಈ ಯುದ್ಧದ ಲಕ್ಷಣಗಳನ್ನಷ್ಟು ವಾಚಕರಿಗೆ ಇಂದಿಗೆ ಹೇಳಬಯಸುವೆವು.

ಚೀನದ ಗಡಿಬಿಡಿಯ ಮರ್ಮವೇನು? ಚೀನ ದೇಶದಲ್ಲಿಯ ಪ್ರಜೆಗಳು ತೀರ ಬಡವರು. ಅಲ್ಲಿ ಕೂಲಿಕಷ್ಟ ಮಾಡಲು ಹೇರಳ ಕೂಲಿಗಳು ಅಲ್ಪ ಕೂಲಿಗೆ ದೊರಕುತ್ತಾರೆ. ಶಾಂಘಾಯಿದಲ್ಲಿ ಬ್ರಿಟಿಶರ ಕಾರಖಾನೆಗಳಿವೆ. ಅಲ್ಲಿ ಚಿಕ್ಕ ಬಾಲಕರು ಆಳಾಗಿ ದುಡಿಯುತ್ತಿರುವರು. ಇಡೀ ವಾರದಲ್ಲಿ ೧ ದಿವಸ ಸಹ ರಜೆಯಿಲ್ಲದೆ, ಚಿಕ್ಕ ಚಿಕ್ಕ ಮಕ್ಕಳು ದಿನಾ ೧೨ ತಾಸಿನ ಮಿಕ್ಕಿ ದುಡಿಯಬೇಕಾಗುತ್ತದೆ. ಇದರಿಂದ ಅನೇಕ ಬಾಲಕರು ಗಂಡಾಂತರಕ್ಕೀಡಾಗುತ್ತಿರುವರು. ಒಮ್ಮೆ ರಾತ್ರಿ ಪಾಳಿಗೆ ಒಬ್ಬ ಹುಡುಗಿಯು ಕಾರಖಾನೆಯಲ್ಲಿ ಕೆಲಸ ಮಾಡುವಾಗ ನಿದ್ದೆಯಿಂದ ತೂಗಡಿಸಹತ್ತಿ, ಅಷ್ಟರಲ್ಲಿ ಅವಳ ಕೂದಲು ಯಂತ್ರದಲ್ಲಿ ಸಿಲುಕಿ ಹುಡುಗಿಯು ಕ್ಷಣಾರ್ಧದಲ್ಲಿ ತುಂಡು ತುಂಡಾಗಿ ಬಿದ್ದಳು. ಬೆಳಗಿನ ಜಾವಿಗೆ ಕಾರಖಾನೆಯಲ್ಲಿ ಕೆಲಸಕ್ಕೆ ಹೋಗಬೇಕು, ಚಳಿಗಾಲದಲ್ಲಂತು ಪರಮ ಕಷ್ಟ. ಕಾರಖಾನೆಗೆ ಹೋಗುವಾಗ ಚಿಕ್ಕ ಮಕ್ಕಳು ಬಿಕ್ಕಿ ಬಿಕ್ಕಿ ಅಳುತ್ತ ಗಿರಣಿಗೆ ಹೋಗುವದನ್ನು ನೋಡಿದರೆ, ಕರುಳು ಕರಗಿ ನೀರಾಗುತ್ತದೆ. ಇದರಿಂದ ಮ್ಯುನಿಸಿಪಾಲಿಟಿಯ ಕಾರ್ಯಕಾರಿ ಸಭೆಯವರು ಚಿಕ್ಕ ಬಾಲಕರಿಗೆ ದಿನಾ ಒಂದು ತಾಸು ವಿಶ್ರಾಂತಿ, ೧೪ ದಿವಸಕ್ಕೊಮ್ಮೆ ರಜೆ ಇತ್ಯಾದಿ ಕೆಲವು ಸೂಚನೆಗಳನ್ನು ಮಾಡಿದ್ದರು. ಆದರೆ ಈ ಸೂಚನೆಗಳು ಬಿದ್ದುಹೋದವು. ಕಾರಣವೇನಂದರೆ, ಮ್ಯುನಿಸಿಪಾಲಿಟಿಯ ಸೂತ್ರಗಳೆಲ್ಲ ಬ್ರಿಟಿಶ ಗಿರಣಿಕಾರ ಸಾವುಕಾರರ ಕೈಯೊಳಗಿವೆ.

ಸಾವುಕಾರರ ದುಷ್ಟತನದಿಂದ ಚೀನಿ ಪ್ರಜೆಗಳು ಬೇಸತ್ತು ದೊಂಬಿಯನ್ನೆಬ್ಬಿಸಿಬಿಟ್ಟರು. “ನಾವು ಬ್ರಿಟಿಶರ ಕೂಲಿಯಾಳುಗಳಾಗಿ ದುಡಿಯುವದರಿಂದ ಇಷ್ಟೆಲ್ಲ ಆಯಾಸಪಡಬೇಕಾಗುತ್ತದಲ್ಲವೇ? ಅದಕ್ಕೆ ನಾವು ಕೂಡದು ಬಿಡುವ” ಎಂಬ ವಿಚಾರವೇ ಯಿತು ಮೂಲೇ ಕಾರಣ ಹೊಡೆಯುವ ಆಲೋಚನೆಯಿದು! ವಿದ್ಯಾರ್ಥಿಗಳು ಈ ಆಲೋಚನೆಯನ್ನು ಪುರಸ್ಕರಿಸಹತ್ತಿದರು. ಬ್ರಿಟಿಶರನ್ನು ಬಹಿಷ್ಕರಿಸಬೇಕು. ಸರ್ವಪ್ರಕಾರದಿಂದಲೂ ಬಹಿಷ್ಕರಿಸಬೇಕು. ಅವರ ಬಳಿಸಾಗಿ ಚಾಕರಿ ಮಾಡಬಾರದು. ಅವರನ್ನು ಕೂಡಲೇ ಹೊರತಳ್ಳಬೇಕು, ಅವರು ತಯಾರಿಸಿದ, ಅವರ ದೇಶದಲ್ಲಿ ತಯಾರಾಗುವ ಸಾಮಗ್ರಿಗಳನ್ನೂ ಕೊಂಡುಕೊಳ್ಳಬಾರದು. ಈ ಉಪದೇಶದಿಂದ ಚೀನ ದೇಶದೊಳಗಿನ ಬ್ರಿಟಿಶರು ಕಂಗೆಟ್ಟುಹೋಗಿರುವರು. ವಿಲಾಯತಿಯಲ್ಲಿಯೂ ವಿಲಕ್ಷಣವಾದ ಗದ್ದಲವೆದ್ದಿದೆ. ಲಂಡನದ ‘ಟೈಮ್ಸ’ ಪತ್ರಿಕೆಯು — “ನಮ್ಮ ಅನ್ನ ಹೋಯಿತು, ನಮ್ಮ ಜೀವ ಹೋಗುವದು” ಎಂದು ಸಾರಹತ್ತಿದೆ. ಈ ಪ್ರಸಕ್ತಿಯಲ್ಲಿ ಯಾವ ಉಪಾಯಯೋಜನೆ ಮಾಡಬೇಕು ಎಂಬದೊಂದು ಭಯಂಕರ ಚಿಂತೆಯು ಮುತ್ಸದ್ದಿಗಳಿಗೊದಗಿಬಂದಿದೆ.

ಚೀನ ದೇಶದೊಳಗಿನ ಬ್ರಿಟಿಶ ಪ್ರಜೆಗಳ ಪಿಶನೆಯೂ ಅಷ್ಟೇ ತೀಕ್ಷ್ಣವಿದೆ. ಶಾಂಘಾಯ, ಕೆಂಟನ್, ಹೊಂಗಕೊಂಗ ಮುಂತಾದ ಮುಖ್ಯಮುಖ್ಯ ಬಂದರಗಳೆಲ್ಲ ಬ್ರಿಟಿಶರ ಸ್ವಾಧೀನವಿದ್ದು, ಅಲ್ಲಿಂದ ಬ್ರಿಟಿಶರ ಸಾಮಗ್ರಿಗಳೆಲ್ಲ ಚೀನದೇಶದಲ್ಲಿ ಸಾಗಿಹೋಗುತ್ತವೆ. ಮೊಟ್ಟಮೊದಲು, ವಿದ್ಯಾರ್ಥಿಗಳ ಚಳವಳಿಯು ಶಾಂಘಾಯ ಬಂದರದಲ್ಲಿ ಉಂಟಾಯಿತು. ವಿದ್ಯಾರ್ಥಿಗಳು ಶಾಂಘಾಯದಲ್ಲಿ ದಂಗೆಯನ್ನೆಬ್ಬಿಸಿದ ಕೂಡಲೆ, ಉತ್ತರ ಚೀನದಲ್ಲಿಯ ಮುಕಡೆನ್ ಗವ್ಹರ್ನರರು ಬ್ರಿಟಿಶರ ರಕ್ಷಣೆಕ್ಕಾಗಿ ಸೈನ್ಯ ಕಳುಹಿದರು. ಇದು ಬ್ರಿಟಿಶರ ಅಪ್ರತಿಷ್ಠೆಯ ಲಕ್ಷಣವೆಂದು ಬಲ್ಲವರ ಹೇಳಿಕೆ. ಬ್ರಿಟಿಶರು ಯಾವಾಗಲೂ ಕಲಹವೆದ್ದಾಗ ಪರರ ರಕ್ಷಣೆಕ್ಕಾಗಿ ಸೈನ್ಯ ಕಳುಹಿ ಚಂಚುಪ್ರವೇಶ ಮಾಡುವ ಬುದ್ಧಿಯವರು. ಅವರ ರಕ್ಷಣೆಕ್ಕಾಗಿ ಪರರು ಸೈನ್ಯ ಕಳುಹುವದರ ಮೇಲಿಂದ ಬ್ರಿಟಿಶರ ಕಾಯುಕ್ತಿಯು ಬ್ರಿಟಿಶರಿಗೆ ಫಲಿಸಿತೆಂದು ಹೇಳಬಹುದು.

ಮುಂದಿನ ಕಥೆ ಕೇಳುವ. ವಿದ್ಯಾರ್ಥಿಗಳ ದೊಂಬಿಗೆ ಬಹಿಷ್ಕಾರಕ್ಕೆ ಈಗ ಅವಶ್ಯವುಳ್ಳ ಸೈನ್ಯಸತ್ತೆಯೂ ದೊರಕಿದೆ. ಮುಕಡೆನ್‌ದ ಗವ್ಹರ್ನರರೂ, ಪೇಕಿಂಗದ ಗವ್ಹರ್ನರರೂ, ದಕ್ಷಿಣ ಚೀನದ ಕೆಂಟನ್‌ದವರೂ ಬ್ರಿಟಿಶರಿಗೆ ಪ್ರತಿಕೂಲರಾಗಿ ವಿದ್ಯಾರ್ಥಿಗಳಿಗೆ ಕೂಡಿಕೊಂಡಿರುವರು. ಶಾಂತತೆಯಿಂದ ಬ್ರಿಟಿಶರ ಬಹಿಷ್ಕಾರವನ್ನು ಸಾಗಿಸಲು ಅವರು ಉಪದೇಶಿಸುತ್ತಾರೆ. ವಿದ್ಯಾರ್ಥಿಗಳಂತೂ ದೊಡ್ಡ ದೊಡ್ಡ ಮೆರವಣಿಗೆಗಳನ್ನು ತೆಗೆದು, “ಕ್ರೈಸ್ತ ಧರ್ಮ ಬೇಡ; ಬ್ರಿಟಿಶರಿಗೆ ಕೊಂದು ಒಗೆಯಿರಿ; ಬ್ರಿಟಿಶರ ಮೇಲೆ ಯುದ್ಧ ಹೂಡಿರಿ” ಎಂಬ ಘೋಷಗಳನ್ನು ಘೋಷಿಸಹತ್ತಿರುವರು. “ಯುದ್ಧಕ್ಕಾಗಿ ಗಾಬರಿಗೊಳ್ಳಬೇಡಿ, ಯುದ್ಧವನ್ನೊಂದು ಬಿಟ್ಟು ಉಳಿದ ಎಲ್ಲ ಉಪಾಯಯೋಜನೆಗಳನ್ನು ನಾವು ಮಾಡತಕ್ಕದ್ದೇವೆಂ”ದು ಚೀನದೊಳಗಿನ ಅಧಿಕಾರಿಗಳೆಲ್ಲ ಹೇಳಿ, ಟಿವಸ್ಟೀನ, ಸಿನಾನ, ನಾನ್‌ಕಿಂಗ, ಮುಂತಾದ ಉಗಿಬಂಡಿಯ ಕೇಂದ್ರಗಳನ್ನೆಲ್ಲ ಸ್ವಾಧೀನ ಪಡಿಸಿಕೊಂಡು, ಬ್ರಿಟಿಶರಿಗೆ ಚೀನದಲ್ಲಿ ಹಾಯಗೊಡದಂತೆ ಪ್ರತಿಬಂಧ ಮಾಡಿರುವರು. ಚೀನ ದೇಶದ ರಣಕ್ಷೇತ್ರದಲ್ಲಿ ಇಂಥ ಸ್ಥಿತಿಯಲ್ಲಿ ಯುದ್ಧ ಮಾಡಿ ಸೋಲಿಸುವದು ಬ್ರಿಟಿಶರಿಗೆ ಆಗದ ಮಾತು, ಅಮೇರಿಕೆಯವರೊಡನೆ ಕೂಡಿಕೊಂಡರೂ ಆಗದ ಮಾತು, ಅಷ್ಟು ಚೀನದೊಳಗಿನ ಸೇನಾನಾಯಕರು ಸೈನ್ಯಬಲವನ್ನು ಭದ್ರಪಡಿಸಿಕೊಂಡಿರುವರು, ಮೇಲಾಗಿ, ಈಗ ರಾಷ್ಟ್ರಸೈನ್ಯವೂ ತಯಾರಾಗಿದೆ. ಬ್ರಿಟಿಶರು ನೌಕಾಧಿಪತಿಗಳು ಯುದ್ಧಹಡಗುಗಳನ್ನು ತಂದು ಶಾಂಘಾಯ, ಪೇಕಿಂಗ, ಕೆಂಟನ ಮುಂತಾದ ಬಂದರಗಳ ಮೇಲೆಯೇ ಗುಂಡಿಕ್ಕಿದರು. ಚೀನಿಯರನ್ನು ಹಣ್ಣಿಗೆ ತರುವ, ಆದರೆ, ಅದರಿಂದ ಉಪಯೋಗವಿಲ್ಲ. ಈ ಬಂದರಗಳ ಮೇಲೆ ಸಮುದ್ರದ ದಂಡೆಗುಂಟ ಫ್ರಾನ್ಸ, ಇಟಾಲಿ, ಜಪಾನ ಮುಂತಾದ ರಾಷ್ಟ್ರಗಳೊಳಗಿನ ವರ್ತಕರ, ಸಾವುಕಾರರ ವಸ್ತಿಯಿದೆ. ಇದನ್ನು ಹಾಳುಗೆಡಹಿದರೆ, ಆ ರಾಷ್ಟ್ರಗಳು ಪ್ರಕ್ಷುಬ್ಧವಾಗಿ ಬ್ರಿಟಿಶರ ಮೇಲೆ ಸಾಗಿಬರುವ ಭೀತಿಯಿದೆ. ಇದರಿಂದ ಬ್ರಿಟಿಶರು ಬಹಳ ಸಂಕಟಕ್ಕೊಳಗಾಗಿರುವರು. ಹ್ಯಾಗೆ ಮರ್ಯಾದೆಯಿಂದ, ವ್ಯಾಪಾರಕ್ಕೆ ಹಾನಿ ತಟ್ಟದಂತೆ ಪಾರಾಗುವದೆಂಬದೊಂದ ಬ್ರಿಟಿಶ ಮುತ್ಸದ್ದಿಗಳಿಗೆ ಚಿಂತೆಯಾಗಿದೆ.

ಚೀನಿ ರಾಜಕಾರಣದಲ್ಲಿ ಬ್ರಿಟಿಶರು ಚಂಚುಪ್ರವೇಶಮಾಡಿ, ಮುಖ್ಯ ಬಂದರಗಳನ್ನು ಸ್ವಾಧೀನಪಡಿಸಿಕೊಂಡು, ಅನೇಕ ಪರಿಯಿಂದ ರಾಷ್ಟ್ರಹಾನಿ ಮಾಡಿರುವರು! ತಮ್ಮ ಸಾಮಗ್ರಿಗಳನ್ನು ಒಳಗೆ ನೂಕುವದು, ಅಫೀಮಿನ ವ್ಯಾಪಾರ ನಡಿಸುವದು, ಗಿರಣಿಗಳಲ್ಲಿ ಕೂಲಿಕಾರರಿಗೆ ಪೀಡಿಸುವದು, ಮತ್ತು ಸ್ವಾರ್ಥಪರಾಯಣರಾಗಿ ಸ್ವೇಚ್ಛಾಚಾರದಿಂದ ನಡೆಯುವದು, ಮುಂತಾದ ಕೃತ್ಯಗಳಿಂದ ಚೀನಿ ರಾಷ್ಟ್ರ

ವು ಮೊದಲೇ ಜರ್ಜರಿತವಾಗಿತ್ತು. ಬ್ರಿಟಿಶರ ಪೀಡನೆಯನ್ನು ಹೋಗಲಾಡಿಸುವ ವಿವಂಚನೆಯಲ್ಲಿ ರಾಷ್ಟ್ರನಾಯಕರು ಕಾಲಕ್ಷೇಪಮಾಡುತ್ತಿದ್ದರು. ವಿದ್ಯಾರ್ಥಿಗಳ ಚಳವಳಿಯಿಂದ ರಾಷ್ಟ್ರ ಚಳವಳಿಯು ಸಜೀವವಾಗಿ ಈಗ ಲೋಕನಾಯಕರು ಚೀನ ದೇಶದ ವಿಮೋಚನಾ ನ ಯೋಜನೆಯಾದ ಹೊರತು ಹಿಂಜರಿಯುವುದಿಲ್ಲ. ಅಷ್ಟು ಪೂರ್ವತಯಾರಿಯಿಲ್ಲ, ಪೂರ್ವ ಸಿದ್ಧತೆಯಿಲ್ಲ ಮೊದಲೇ ನಡೆದದೆ. ಚಿಕ್ಕ ಚಿಕ್ಕ ಸುಧಾರಣೆಗಳಿಂದ ಇನ್ನು ಕೆಲಸ ಸಾಗದು. ಅದರಿಂದಲೇ ಬ್ರಿಟಿಶರು ಚಿಂತೆಗೊಳಗಾಗುವರು. ಜಪಾನ ರಾಷ್ಟ್ರವು ಚೀನ ದೇಶದವರಿಗೆ ಅನುಕೂಲವಾಗಿದೆ. ಬ್ರಿಟಿಶರಿಗೆ ಇದಿರುವ ತಯಾರಿಯನ್ನು ಭರದಿಂದ ನಡಿಸಬಹುದೆಂದು ಹೇಳಬಹುದು. ಈ ಹಂಗಾಮದಲ್ಲಿ ಹತ್ತಿಯ ದರವು ಯಾವಾಗಲೂ ಇಳಿಯುತ್ತಿತ್ತು. ಆದರೆ, ಈಗ ಜಪಾನದ ವರ್ತಕರು ವಿಪರೀತವಾಗಿ ನಮ್ಮ ಹಿಂದುಸ್ಥಾನದೊಳಗಿನ ಪೇಟೆಗಳಲ್ಲಿ ಹತ್ತಿ ಖರೇದಿಮಾಡುತ್ತಿರುವರು. ಯುದ್ಧ ಒದಗಿದ್ದಲ್ಲಿ ಜಪಾನದೊಳಗಿನ ಜನಗಳು ಉಪವಾಸ ಬೀಳದಂತೆ, ಪ್ರಜೆಗಳಿಗೆ ಅನಾನುಕೂಲತೆಯಾಗದಂತೆ ಯೋಜನೆಯಿದು. ಬ್ರಿಟಿಶರಿಗೆ ಅನುಕೂಲರಾಗಿ ಯುದ್ಧ ಮಾಡುವದಿದ್ದರೆ, ಹಿಂದುಸ್ಥಾನದಲ್ಲಿ ಬೆಳೆಯುವ ಅರಳೆಯನ್ನು ಬೇಕಾದಾಗ ಯುದ್ಧ ಸಮಯದಲ್ಲಿಯೂ ಖರೇದಿಮಾಡಬಹುದಿತ್ತಲ್ಲವೇ? ಜಪಾನದ ರಾಷ್ಟ್ರವು ಯುದ್ಧದಲ್ಲಿ ಸೇರಿಕೊಂಡ ಪಾಸಿಫಿಕ್ ಮಹಾಸಾಗರದ ಪೂರ್ವಸಮುದ್ರದಲ್ಲಿ ರಣದೇವಿಯ ಆರ್ಭಟವು, ಅಟ್ಟಹಾಸವು, ಸಂಹಾರವು ಒದಗಿ, ಭೂದೇವಿಯು ಸಂತಪ್ತಳಾಗುವಳು. ಚಿಕ್ಕ ಬಾಲಕರ ಅಮಾನುಷ ಪೀಡನೆಯಿಂದ, ವಿದ್ಯಾರ್ಥಿಗಳ ಉತ್ಕ್ರೋಶವಾದ ಬೀಜದಿಂದ ಅಂಕುರದ ವಿರಾಟ ಸ್ವರೂಪವನ್ನು ನೋಡಿ, ಮತಿಯು ಕುಂಠಿತವಾಗುತ್ತದೆ. ಬ್ರಿಟಿಶ ಸಾವುಕಾರ. ಅಷ್ಟಕ್ಕೇ ನಡೆದಿದ್ದರೆ, ಇಷ್ಟೆಲ್ಲ ಅನರ್ಥಪರಂಪರೆಯು ಈಗಲೇ ಒದಗಿ ಬರುತ್ತಿತ್ತೇ? ಅಥವಾ ಬ್ರಿಟಿಶ ಸಾಹುಕಾರರು ಚೀನ ದೇಶದಲ್ಲಿ ನಡಿಸಿದ ಪಾಪದ ಸಂಚಯವು ತುಂಬಿ ತುಳುಕಹತ್ತಿದ್ದರಿಂದ ಪಾಪಕ್ಕೆ ಪ್ರಾಯಶ್ಚಿತ್ತ ಕೊಳ್ಳಲು ಅವರಿಗೆ ಈ ದುರ್ಬುದ್ಧಿ ಟಾಯಿತೇ?

* * *

ಸ್ಫುಟ ಸೂಚನೆಗಳು.

೧ ಬ್ರಿಟಿಶರ ಹಿಂದುಸ್ಥಾನದ ರಾಜ್ಯಧೋರಣೆಯು ಇನ್ನೂ ಬಿಗಿಯಾಗುತ್ತ ನಡೆದದೆ. ಭಾರತ ಮಂತ್ರಿ ಬರ್ಕನ್‌ಹೆಡ್ ದೊರೆಗಳು ಪುನಃ ಗವಜನ್ನು ಎತ್ತಿರುವರು. ಕಳೆದ ಜೂನ ೩೦ ನೇ ತಾರೀಖಿಗೆ ವಿಲಾಯತಿಯಲ್ಲಿ ಔತಣ ಸಮಾರಂಭವೊಂದು ಜರುಗಿತು. ಆಗ ದೊರೆಗಳು ಮಾತಾಡಿದ್ದೇನಂದರೆ — "ಹಿಂದುಸ್ಥಾನದ ಸಂರಕ್ಷಣದ ಜವಾಬದಾರಿಯು ಸಂಪೂರ್ಣವಾಗಿ ಬ್ರಿಟಿಶರದೇ. ನಾವು ಅನೇಕ ಶತಮಾನಗಳ ಹಿಂದೆ ಹಿಂದುಸ್ಥಾನದಲ್ಲಿ ಹೊಕ್ಕದ್ದು ಯಾಕೆ? ಭಾರತೀಯ ಸಂಸ್ಕೃತಿಯನ್ನು ಕೊಲೆಗಟ್ಟುವ ಕಲಹಗಳನ್ನು ಅಪ್ಪಳಿಯಲಿಕ್ಕೆ ಹೇಗೆ ಅಪ್ಪಳಿಯುವದು? ಪಶುವಾದ ಶಸ್ತ್ರದಿಂದ. ಇದೇ ನಮ್ಮ ಹಿಂದುಸ್ಥಾನದ ಪ್ರಭುತ್ವದ ಸನದು " ಸ್ವತಂತ್ರರೇ, ಉದಾರ ಪಂಥವಾದಿಗಳೇ, ಭಾರತ ಮಂತ್ರಿಗಳ ಹಿಂದುಸ್ಥಾನದ ಆಡಳಿತೆಯ ಮಾತ್ರ ಕೇಳಿರಿ. ಹಿಂದೀ ಸಂಸ್ಕೃತಿಯ ಸಂರಕ್ಷಣೆಕ್ಕಾಗಿ ಬ್ರಿಟಿಶರು ಹಿಂದುಸ್ಥಾನಕ್ಕೆ ಬಂದು ಅನುಗ್ರಹ ಮಾಡಿದರು. ಈಗಾದರೂ ಆ ಧೋರಣವನ್ನು ಅವರು ತ್ಯಜಿಸುವರೆಂದು ನೀವು ತಿಳಿಯಬಹುದ? ಕೇಳಿರಿ ಭಾರತ ಮಂತ್ರಿಗಳೇನು ಹೇಳುತ್ತಾರೆಂದು. 'ನಾಳೆ ನಾವು ಹಿಂದುಸ್ಥಾನವನ್ನು ತ್ಯಜಿಸಿದರೆ, ಕ್ಲೈವ್ವನ ಕಾಲದಲ್ಲೊದಗಿದಂತೆ, ಹಿಂದುಸ್ಥಾನದಲ್ಲಿ ಅರಾಜಕತೆಯುಂಟಾಗಿ ರಕ್ತಪಾತ ಪ್ರಾಪ್ತವಾಗುವದು.'" ಹಿಂದುಸ್ಥಾನದಲ್ಲಿ ಚಿರಕಾಲ ಪ್ರಭುತ್ವವನ್ನು ನಡೆಸುವ ಹೇತುವಾದರೂ ಭರತಖಂಡದ ಹಿತಕ್ಕಾಗಿಯೋ, ಭಾರತೀಯ ಸಂಸ್ಕೃತಿಯ ಜೋಪಾನಕ್ಕಾಗಿಯೋ!

---

೨ ಭಾರತ ಮಂತ್ರಿಗಳ ವಿಚಾರಗಳನ್ನು ಕೇಳಿದರೆ, ಬ್ರಿಟಿಶ ರಾಜ್ಯದಿಂದ ಹಿಂದುಸ್ಥಾನಕ್ಕೆ ಎಳ್ಳುಕಾಳಿನಷ್ಟು ಲಾಭವಾಗಲಿಲ್ಲೆಂದು ಯಾರೂ ಹೇಳುವರು? ಬ್ರಿಟಿಶರು ಮೊಟ್ಟಮೊದಲು ಪ್ರವೇಶಿಸಿದ್ದು ಕ್ಲೈವನ ಮುಖಾಂತರ, ಪ್ಲಾಸಿ, ಅರ್ಕಾಟ ಮುಂತಾದ ಪಟ್ಟಣಗಳಲ್ಲಿ ಸಂಪಾದಿಸಿದ ವಿಜಯಗಳಿಂದ ಬ್ರಿಟಿಶ ರಾಜ್ಯದ ಬೀಜಾರೋಪಣವಾಗಿ, ಈಗ ಅದು ದೊಡ್ಡ ವೃಕ್ಷವಾಗಿ ಅಖಿಲ ಹಿಂದುಸ್ಥಾನದಲ್ಲಿ ಹಬ್ಬಿಕೊಂಡಿದೆ. ಬ್ರಿಟಿಶ ರಾಜ್ಯದಿಂದ, ಬ್ರಿಟಿಶರ ಸಂಸ್ಕೃತಿಯಿಂದ ಭಾರತೀಯರು ಸುಧಾರಿಸಿರುವರೆಂದು ಬ್ರಿಟಿಶರು ಡಂಗುರ ಹೊಡೆಯುತ್ತಾರೆ. ಭಾರತ ಮಂತ್ರಿಗಳ ಭಾಷಣವನ್ನು ಕೇಳಿದರೆ, ಉದ್ಗಾರಗಳನ್ನು ಕೇಳಿದರೆ, ಬ್ರಿಟಿಶರು ಕೇವಲ ಸ್ವಾರ್ಥಕ್ಕಾಗಿಯೇ ಪರಕ್ಕರಂತೆ ಇಲ್ಲಿ ಉಳಕೊಂಡಿರೆಂದು ಹೇಳಬೇಕಾಗುತ್ತದೆ. "ನಾವು ಹಿಂದುಸ್ಥಾನವನ್ನು ಬಿಟ್ಟರೆ, ದೇಶದಲ್ಲಿ ಅರಾಜಕತೆಯುಂಟಾಗುವದೆಂಬ ಹೇಳಿಕೆಯಮೇಲಿಂದ, ದೇಶವು ಬ್ರಿಟಿಶರ ಆಳಿಕೆಯಲ್ಲಿ ಬಂದು ೧೦೦-೨೦೦ ವರ್ಷಗಳಾದರೂ, ಇದ್ದಕ್ಕಿದ್ದ ಹಾಗೆಯೇ ಇರುವದೆಂದು ಸ್ಪಷ್ಟವಾಗುವದಿಲ್ಲವೇ? ಬ್ರಿಟಿಶರು ನಮಗೆ ಕಲಿಸುತ್ತಿರುವ, ನಾವು ಕಲಿಯುತ್ತಿರುವ ಸ್ವರಾಜ್ಯಪಾಠಗಳ ಗತಿಯೇನು? ಅಥವಾ ಬ್ರಿಟಿಶರು ಹೇಳುತ್ತಿರುವ ಸ್ವರಾಜ್ಯ ಪಾಠಗಳೆಲ್ಲ ಕೇವಲ ವಂಚನೆಯವು? ಭಾರತ ಮಂತ್ರಿಗಳ ಮಾತಿನ ಮೇಲಿಂದ ಭಾರತೀಯರಲ್ಲಿ ಸ್ವರಾಜ್ಯಶಕ್ತಿಯು ಏನೂ ನೆಲಸಲಿಲ್ಲ. ಎಷ್ಟೋ ದಿನಗಳವರೆಗೂ ಈ ಗುರುಗಳೇನು ಸ್ವರಾಜ್ಯ ಮಂತ್ರೋಪದೇಶ ಮಾಡುವದಿಲ್ಲ. ಇಂಥ ಗುರುಗಳ ಗೊಡವೆಗೆ ಹೋಗದೆ ಮಹಾತ್ಮರ ಆತ್ಮೋದ್ಧಾರದ ಅಸಹಯೋಗವನ್ನೇ ಆಶ್ರಯಿಸುವದು ಉತ್ತಮ ಪಕ್ಷವು. ದೊಡ್ಡತನದ ಸಾಹೇಬರಿಗೂ, ಬಡ ಭಾರತೀಯರಿಗೂ ಎಂದಾದರೂ ಕೂಡಿಬರುವದೇನು?

---

೩ ಬರ್ಕನ್‌ಹೆಡ್ ದೊರೆಗಳು ಇನ್ನೊಂದು ವಿಚಾರವನ್ನು ಪ್ರಕಟಿಸಿದರು. ಅದನ್ನು ವಾಚಕರೆಲ್ಲರೂ ವಿಚಾರ ಮಾಡತಕ್ಕದ್ದು. ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಜನವನ್ನು ಬಿಟ್ಟುಕೊಟ್ಟು, ಇಂಗ್ಲಿಷ ವರ್ತಮಾನಪತ್ರಗಳನ್ನೋದಿ, ಸಾಮ್ರಾಜ್ಯವು ಚಿರಸ್ಮರಣೀಯವು; ಅದು ನಷ್ಟವಾಗಲೇಬೇಕು; ಎಂಬ ದುರ್ಬುದ್ಧಿಯಿಂದ ಪ್ರೇರಿತರಾಗಿರುವರು. ಅವರೇ ಸಾಮ್ರಾಜ್ಯ ವಿನಾಶದ ಕಾರಣರು. ಚೀನದೇಶದಲ್ಲಾಗಲಿ, ಈಜಿಪ್ತ ದೇಶದಲ್ಲಾಗಲಿ, ಹಿಂದುಸ್ಥಾನದಲ್ಲಾಗಲಿ ವಿದ್ಯಾರ್ಥಿಗಳೇ ಹೆಚ್ಚು ಗಡಿಬಿಡಿ ಮಾಡುತ್ತಿರುವರು ಹೀಗೆ ಬರ್ಕನ್‌ಹೆಡ್‌ರವರು ವಿದ್ಯಾರ್ಥಿಗಳ ಮೇಲೆ ಹಾರಿಬಿದ್ದರು. ಇಂಗ್ಲಿಷ ವಿದ್ಯೆಗಲಿತ ವಿದ್ಯಾರ್ಥಿಗಳೇ ಇಂಗ್ಲಿಷ ವರ್ತಮಾನಪತ್ರ ಓದಿದ ವಿದ್ಯಾರ್ಥಿಗಳೇ ಇಂಗ್ಲಿಷರ ವಿರುದ್ಧ ಏಕೆ ದೊಂಬಿಯನ್ನೆಬ್ಬಿಸುವರು? ಇಂಗ್ಲಿಷ ವಾಙ್ಮಯದೊಳಗಿನ ತತ್ವಗಳಿಗೂ, ಸಾಮ್ರಾಜ್ಯದಲ್ಲಿ ನಡೆಯುವ ಕೃತಿಗಳಿಗೂ ಅಜಗಜಾಂತರ ಭೇದವಿರುತ್ತದೆಂದು ಇದರ ಮೇಲಿಂದ ಸಿದ್ಧವಾಗುವದಿಲ್ಲವೇ? ಬ್ರಿಟಿಶರ ಅಪಕೃತ್ಯಗಳು ಅಸಮರ್ಥನೀಯವೆಂದು ಸಿದ್ಧವಾಗುವದಿಲ್ಲವೇ? ಇಲ್ಲವಿದ್ದರೆ, ಎಳೆ ಪ್ರಾಯದ ಪ್ರಾಪಂಚಿಕ ಕುಯುಕ್ತಿಗಳ ಅರಿವಿಲ್ಲದ ನಿಷ್ಕಪಟ ಬುದ್ಧಿಯ ವಿದ್ಯಾರ್ಥಿಗಳು ಸಾಮ್ರಾಜ್ಯದ ವೈರಿಗಳಾಗಿ ಎಂದೂ ಮುಂದಾಗುತ್ತಿದ್ದರೇನು? ಭಾರತ ಮಂತ್ರಿಗಳು ಸಾವಧಾನ ಚಿತ್ತದಿಂದ ವಿಚಾರಿಸಿದ್ದರೆ, ವಿದ್ಯಾರ್ಥಿಗಳ ದೊಂಬಿಯ ಮರ್ಮವು ಈಗಲೇ ಹೊಳೆಯುತ್ತಿತ್ತು. ಸ್ವಾರ್ಥಾಂಧರಾದ ಮೂಲಕ ದೇಶೋದ್ಧಾರಕ ವಿದ್ಯಾರ್ಥಿಗಳ ದೇಶಸೇವೆಯ ಧೋರಣದ ಮರ್ಮವು ಅವರಿಗೆ ಹೊಳೆಯಲಿಲ್ಲವೇ? ಅಥವಾ ಹೊಳೆದರೂ, ದುಷ್ಟ ಹೇತುವಿನಿಂದ ವಿದ್ಯಾರ್ಥಿಗಳ ಹೆಸರಿಗೆ ಕಟ್ಟಲು ಬಯಸಿರುವರೇನು? ಬರ್ಕನ್‌ಹೆಡ್ ದೊರೆಗಳು ಎಷ್ಟು ಕೈದೊಟ್ಟುಗಳನ್ನು ಮುರಕೊಂಡರೂ, ಈಗ ಅವರಿಗೆ ಕೇಳುವವರ್‍ಯಾರಿಲ್ಲ. ವಿದ್ಯಾರ್ಥಿಗಳೀಗ ಸಾಮ್ರಾಜ್ಯದ ಪೀಡನೆಯಿಂದ ಮುಕ್ತರಾಗಲು ಮುಂದಾಗಿರುವರು. ಕಾಲಸಂಕೇತದಂತೆ, ಚೀನ ದೇಶದಲ್ಲಿ ಅವರಿಗೆ ವಿಜಯವಾಗುವ ಸ್ಪಷ್ಟ ಲಕ್ಷಣಗಳು ತೋರುತ್ತವೆ. ಈಜಿಪ್ತದಲ್ಲಿಯೂ, ಹಿಂದುಸ್ಥಾನದಲ್ಲಿಯೂ ಶಾಂತತೆಯಿಂದ ಚಳವಳಿ ನಡಿಸಿ, ಕಾಲಾಂತರದಿಂದ್ಯಾಕಾಗಲೊಲ್ಲದು - ಅವರು ವಿಜಯವನ್ನು ಸಂಪಾದಿಸುವರು.

---

೪. ಮೈಸೂರಿನ ಪ್ರಜಾಪ್ರತಿನಿಧಿಕ ಸಭೆಯಲ್ಲಿ ಶ್ರೀ। ಹೊಸಕೊಪ್ಪ ಕೃಷ್ಣರಾಯರು ಪ್ರಾಥಮಿಕ ಶಾಲೆಗಳಲ್ಲಿ ಕೈರಾಟೆಯಮೇಲೆ ನೂಲಲು ಕಲಿಸಬೇಕೆಂದು ಸೂಚನೆ ತಂದಿದ್ದರು. ಈ ಸೂಚನೆಗೆ ಡಾ। ವೃಜೇಂದ್ರನಾಥ ಶೀಲರೆಂಬ ಬಂಗಾಲಿ ಗೃಹಸ್ಥರು ಇದಿರಾಗಿ, ಕೊನೆಗೆ ಶ್ರೀ। ಕೃಷ್ಣರಾಯರ ಸೂಚನೆಯು ಬಿದ್ದುಹೋಯಿತೆಂದು ನಮೂದಿಸಲು ನಮಗೆ ಅತ್ಯಂತ ವ್ಯಸನವಾಗುತ್ತದೆ. ಶ್ರೀ। ವೃಜೇಂದ್ರನಾಥರವರ ಅಭಿಪ್ರಾಯದಂತೆ, ರಾಟೆಯಿಂದ ಹೆಚ್ಚು ಖರ್ಚಾಗುವದೆಂದು ತಿಳಕೊಳ್ಳಲು ನಾವು ತಯಾರಿದ್ದೇವೆ. ಮೊದಮೊದಲು, ಹೆಚ್ಚು ಖರ್ಚಾಗುವದು ಅಪರಿಹಾರ್ಯ

ವು. ಆದರೆ, ಕೈರಾಟೆಯು ಪ್ರವೇಶಗೊಂಡು, ವಿದ್ಯಾರ್ಥಿಗಳು ನೂಲುವದರಲ್ಲಿ ಹೆಚ್ಚೆಚ್ಚು ನಿಪುಣರಾದ ಹಾಗೆ ಅದರಿಂದ ಕೆಲವು ಖರ್ಚು ಹುಟ್ಟುತ್ತದೆಂದು ಅಲಹಾಬಾದದ ಮ್ಯುನಿಸಿಪಾಲಿಟಿಯವರು ಸ್ವಾನುಭವದಿಂದ ಹೇಳಿರುವರು. ಹೀಗೆ ಖರ್ಚಾಗುತ್ತದೆಂದು ತಿಳಕೊಂಡರೂ, ಅವರಿಂದ ರಾಟೆಯ ಪ್ರಸಾರ ಮಾಡಬಾರದೆಂದು ಸಿದ್ಧವಾಗುವದಿಲ್ಲ. ಯಾಕಂದರೆ, ಪಾಠ್ಯಾತ್ಮಕ ಶಿಕ್ಷಣದಿಂದ ಪ್ರತ್ಯಕ್ಷ ಹುಟ್ಟುವಳಿಯೇನು ದೊರಕುವದಿಲ್ಲ. ಶಿಕ್ಷಣವೆಂದ ಕೂಡಲೆ, ಖರ್ಚ ಹೊರತು, ಉತ್ಪನ್ನವಿಲ್ಲ. ಡಾ| ನೃಪೇಂದ್ರನಾಥರೂ, ಅವರ ಸಹಕಾರಿಗಳೂ ಈ ದೃಷ್ಟಿಯಿಂದ ಆಲೋಚಿಸಿದಂತೆ ತೋರುವದಿಲ್ಲ

---

೫. ಕೈರಾಟೆಯನ್ನು ಕರ್ನಾಟಕದಲ್ಲಿ ಪ್ರಚುರಪಡಿಸುವದರಿಂದ ವಿಶೇಷ ಲಾಭಗಳಿವೆ. ಕರ್ನಾಟಕವೆಂದರೆ, ಹತ್ತಿ ಬೆಳೆಯುವ ಪ್ರಾಂತವು. ಒಕ್ಕಲಿಗರು ನೂಲುವ ಕೈಗಾರಿಕೆಯನ್ನು ೧೫೦-೨೦೦ ವರ್ಷಗಳಾಚೆ ನಡಿಸುತ್ತಿದ್ದರೆಂದು ಕೈ| ವಾ| ರಮೇಶ ದತ್ತರವರು ತಮ್ಮ 'ಹಿಂದುಸ್ಥಾನದ ಸಾಂಪತ್ತಿಕ ಇತಿಹಾಸ' ವೆಂಬ ಗ್ರಂಥದಲ್ಲಿ ಸ್ಪಷ್ಟವಾಗಿ ನಮೂದಿಸಿದ್ದಾರೆ. ಹತ್ತಿಯನ್ನು ನೂಲುವ ಕೈಗಾರಿಕೆಯನ್ನು ನಾವು ಪ್ರಚುರಪಡಿಸಿದರೆ, ಕೈಗಾರಿಕೆಯಿಲ್ಲದೆ ನಿರುದ್ಯೋಗಿಗಳಾಗಿ ಕಾಲಹರಣ ಮಾಡುವ ಒಕ್ಕಲಿಗರಿಗೆ ಅದೊಂದು ದೊಡ್ಡ ಉಪಕಾರವಾಗುವದು. ಡಾ| ನೃಪೇಂದ್ರನಾಥ ಸೀಲರಿಗೆ ಈ ಆಲೋಚನೆ ಹೊಳೆಯಲಿಲ್ಲವೆಂತೆ ತೋರುತ್ತದೆ. ಮೊಟ್ಟಮೊದಲು ಖರ್ಚಾದರೂ, ಕೊನೆಗೆ ಪ್ರಜೆಗಳಿಗೆ ಲಾಭವಾಗುವದಿದ್ದರೆ, ಆ ಕಲೆಯನ್ನು ಕಲಿಸಲು ಸರಕಾರವು ಬದ್ಧವಿದೆ. ಶ್ರೀ| ಕೃಷ್ಣರಾಯರು ಎದೆಗುಂದದೆ ಪುನಃ ಅದೇ ಠರಾವನ್ನು ತಂದು ಯಶಸ್ಸು ಪಡೆಯಬೇಕಾಗಿ ನಮ್ಮ ಹೇಳಿಕೆ ಇದೆ.

---

೬. ಮುಂಬಯಿ ಕಾಯಿದೆ ಕೌನ್ಸಿಲಿನ ಸಭಾಸದರಾದ ಮಿ|| ಹುಸೇನಭಾಯಿ ಲಾಲಜಿಯವರು ಮುಂದಿನ ಅಧಿವೇಶನದಲ್ಲಿ ಸರಕಾರವು ಕಿತಾಬುಗಳನ್ನು ಅರ್ಪಿಸಬಾರದೆಂದು ಠರಾವು ಸೂಚಿಸಲಿರುವರು. ಈ ಕಿತಾಬುಗಳಿಂದ ಪ್ರಜೆಗಳಲ್ಲಿ ಉಂಟಾಗುವ ಅನರ್ಥಗಳನ್ನೂ, ವೃಥಾ ಪ್ರತಿಷ್ಠೆಯನ್ನೂ, ಕ್ಷುದ್ರ ಪ್ರಲೋಭನವನ್ನೂ ಹೇಳಿ ತೀರಸು. ಪುರಾತನ ಕಾಲದಲ್ಲಿ ಸಾರ್ವಭೌಮರು ರಾಜಸೇವೆ ಮಾಡಿದವರಿಗೆ ಅಥವಾ ಈಗಿನ ಭಾಷೆಯಲ್ಲಿ ಹೇಳಬೇಕಾದರೆ, ಪಬ್ಲಿಕ್ ಸರ್ವಿಸ ಯಾನೆ ಸಾರ್ವಜನಿಕ ಸೇವೆ ಮಾಡುವವರಿಗೆ ಜಾಹಗೀರುಗಳನ್ನಿತ್ತು ಸತ್ಕರಿಸುವ ಪದ್ಧತಿ ಇತ್ತು. ಈಗಿನ ಬ್ರಿಟಿಶ ರಾಜ್ಯಪದ್ಧತಿಯಲ್ಲಿ ದುಡ್ಡು ಕೊಡುವದು ಬೇಡ, ಭೂಮಿ ಹಾರಿಸುವದು ಬೇಡ, ಯಾವದಾದರೊಂದು ನಾಲ್ಕಾರು ಅಕ್ಷರಗಳನ್ನು ಹೆಸರಿನ ಹಿಂದೆ-ಮುಂದೆ ಹಚ್ಚಿಗೊಟ್ಟರೆ, ಅದೊಂದು ದೊಡ್ಡ ಅಭಿಮಾನವಾಗಿ, ಕಿತಾಬುಧಾರಿಗಳು ಆ ಅಕ್ಷರಗಳಿಗಾಗಿ ಸರಕಾರದ ಮುಖಸ್ತುತಿ ಮಾಡಿ, ಸರಕಾರವು ಕೈಕೊಂಡ ಕಾರ್ಯವಲ್ಲ, ಮನಸ್ಸಿಗೆಯಿಲ್ಲದಿದ್ದರೂ, ತನ್ಮಯರಾಗಿದ್ದಂತೆ ಪ್ರದರ್ಶಿಸಿಕೊಳ್ಳುತ್ತಾರೆ. ಕಿತಾಬುಗಳಿಂದ ಪ್ರಜಾಸೇವೆಗೆ ಬಹಳ ಹಾನಿ ತಟ್ಟಿದೆ. ಸಾಮ್ರಾಜ್ಯ ಸರಕಾರದ ಇತರ ಘಟಕಗಳು ಬಿರುದುಗಳನ್ನು ತೊರೆಯುವ ನಿರ್ಣಯಗಳನ್ನು ಕೈಕೊಂಡಿರುವಾಗ, ಮಿ|| ಲಾಲಜಿಯವರು ಸೂಚಿಸಿದ ಠರಾವು ಸಮಯೋಚಿತವಿರುತ್ತದೆಂದು ನಾವು ಹೇಳಿ, ಇದನ್ನು ಮುಂಬಯಿ ಕಾಯಿದೆ ಕೌನ್ಸಿಲು ಮಂಜೂರು ಮಾಡುವದೆಂದು ನಂಬಿರುವೆವು. ಆದರೆ ಪ್ರಾಂತಿಕ ಕಾಯದೆ ಮಂಡಳಕ್ಕಿಂತ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿಯೇ ಈ ವಿಷಯ ಚರ್ಚೆ ನಡಿಸುವದು ಯುಕ್ತವಲ್ಲವೇ?

ಸ್ಥಾನಿಕ ವೃತ್ತಾಂತ.

ಕುಮಟಾ.— ಮೇಘರಾಜನು ಭಕ್ತನ ಪರಾವು ಗೈಯ್ಯುತ್ತಿರುವನು. ಈ ವರ್ಷದ ಮೇಘರಾಜನ ಚಂಚಲವೃತ್ತಿ ನೋಡಿದರೆ ಚಿಂತೆಯಾಗುತ್ತದೆ. ಮಳೆ ಸುರಿಯುತ್ತಿದ್ದರೆ, ನೆರೆ ಕಟ್ಟುವ ವರೆಗೆ ಎಡೆಬಿಡದೆ ಮಳೆ. ಮಳೆ ನಿಂತರೆ ಹಗಲಿಗೆ ಬಿಸಿಲು ರಾತ್ರಿಗೆ ಬೆಳದಿಂಗಳು. ಈಗ ನೆಟ್ಟಿಯ ಸಮಯ. ಗದ್ದೆಯಲ್ಲಿ ನೀರು ಬೇಕು. ಹೀಗೆ ಬಿಸಿಲು ಕಾಯುತ್ತಿದ್ದರೆ, ಮುಂದಿನ ಗತಿಯೇನೆಂದು ಒಕ್ಕಲಿಗರು ಗೋಳಿಡುತ್ತಿರುವರು. ಜನರ ರೋಗವು ಇನ್ನೂ ಶಾಂತವಾಗಲಿಲ್ಲ. ಈ ವಾರದಲ್ಲಿ ೨ ೭೪ ಇಂಚ ಮಳೆ, ಅಂತು ಈ ವರೆಗೆ ೬೫ ೮೫ ಇಂಚು ಮಳೆ.

ಮರೂರದ ಕಳವಿನ ಖಟ್ಲೆಯು ಇನ್ನೂ ಪತ್ತೆಯಾಗಲಿಲ್ಲ. ಫೌಜದಾರರು ತತ್ಪರತೆಯಿಂದ ಹುಡುಕಲಿ.

ಮೊನ್ನೆ ತಾ ೪ ನೇ ಶನಿವಾರ ಇಲ್ಲಿಯ ಪಬ್ಲಿಕ ಧರ್ಮಶಾಲೆಯಲ್ಲಿ ಸಹಕಾರಿಗಳ ಸುಗ್ಗಿ ಹಬ್ಬವಾಯಿತು. 'ಇಂಟರನೆಶನಲ್ ಕೊ-ಒಪರೇಟಿವ್ ಎಲಾಯನ್ಸ' ಅಂದರೆ ಅಂತರರಾಷ್ಟ್ರೀಯ ಸಹಕಾರಿ ಸಂಸ್ಥೆಯ ಆಜ್ಞೆಯಂತೆ, ಇತ್ತ ೨ ವರ್ಷಗಳಿಂದ ಜುಲೈ ತಿಂಗಳ ಮೊದಲನೇ ಶನಿವಾರವನ್ನು ಜಗತ್ತಿನೊಳಗಿನ ಸಹಕಾರಿಗಳು ಹಬ್ಬದ ದಿನವೆಂದು ಪಾಲಿಸುತ್ತಿರುವರು. ಈ ದಿನ ಸಹಕಾರಿಗಳೆಲ್ಲರು ಸಭೆಸೇರಿ ಸಹಕಾರದ ಭಜನೆ ಮಾಡುತ್ತಾರೆ. ಮೊನ್ನೆ ಶನಿವಾರದ ಸಭೆಗೆ ಇಲ್ಲಿಯ ಸಬಜಡ್ಜ ಮಿ| ದಿನ್‌ಮಹಮ್ಮದರವರು ಅಧ್ಯಕ್ಷರಾಗಿದ್ದರು. ಸಭೆಯಲ್ಲಿ ಸರಕಾರಿ ಅಧಿಕಾರಿಗಳೂ, ಶಾಲೆ ಹುಡುಗರೂ, ಅರ್ಧಸರಕಾರಿ ಗೃಹಸ್ಥರೂ ಕೂಡಿ ಸುಮಾರು ೧೦೦-೨೦೦ ಸಭಿಕರಿದ್ದರು. ಮೊಟ್ಟಮೊದಲು, ಕೋ-ಒಪರೇಟಿವ್ ಇನ್ಸ್ಟಿಟ್ಯೂಟಿನ ಚೇರಮನ್‌ರಾದ ರಾ| ಬ| ಕಲ್ಯಾಣಪುರಕರರು ಸಹಕಾರದ ಇತಿಹಾಸವನ್ನು ಬುಡದಿಂದ ತಮ್ಮ ಇನ್ಸ್ಟಿಟ್ಯೂಟ ಸ್ಥಾಪನೆಯಾಗುವ ವರೆಗೆ ವಿಸ್ತಾರವಾಗಿ ಹೇಳಿದರು. ಬಳಿಕ, ತಮ್ಮ ಇನ್ಸ್ಟಿಟ್ಯೂಟ ಸಂಸ್ಥೆಯ ದೊಡ್ಡಸ್ತಿಕೆಯನ್ನು ಬಣ್ಣಿಸಿದರು. ಇನ್ಸ್ಟಿಟ್ಯೂಟು ವಿಲಾಯತಿಯೊಳಗಿನ ಸಂಸ್ಥೆಯ ತಾಯಿಯೆಂದು ಹೇಳಿ, ತಮ್ಮ ಕೈಯು ವಿಲಾಯತಿಯ ವರೆಗಿರುವದೆಂದರು. ಪ್ರಾಂತಿಕ ಕಾಯಿದೆ ಕೌನ್ಸಿಲಿನಲ್ಲಿ ಇನ್ಸ್ಟಿಟ್ಯೂಟಗೊಂದು ಆಸನ ಪಡೆಯುವ ವಿಚಾರವಿದೆಂದರು. ಅರ್ಬನ್ ಬೇಂಕು ಮುಂತಾದ ಸಂಸ್ಥೆಗಳ ಮೇಲೆ ಮೇಲ್ವಿಚಾರ ನಡಿಸುವ ಸಂಸ್ಥೆಯು ತಮ್ಮದೆಂದರು. ಬಳಿಕ, ಶ್ರೀ|| ಗಣೇಶ ರಾಮ ಯಾಜಿಯವರ ಹಳ್ಳಿಯ ಕೈಗಾರಿಕೆಗಳ ವಿಷಯ ಭಾಷಣವಾಯಿತು. ಸಹಕಾರದಿಂದ ಹಳ್ಳಿಗಳಲ್ಲಿ ಬೆತ್ತದ ಸಾಮಾನು, ನೂಲು ತೆಗೆಯುವದು ಮುಂತಾದ ಲೋಕೋಪಕಾರದ ಉದ್ಯೋಗಗಳನ್ನು ಸ್ಥಾಪಿಸಿ, ಬಡ ಬೇಸಾಯಗಾರರಿಗೆ ನಿರುದ್ಯೋಗ ಸಮಯದಲ್ಲಿ ಉದ್ಯೋಗ ದೊರಕಿಸಿಕೊಟ್ಟು ಲಾಭ ಮಾಡಿಕೊಡಬಹುದೆಂದು ಹೇಳಿದರು. ಬಳಿಕ, ಆರ್ಗನೈಝರ ಮಿ| ಗಣೇಶ ಹೆಗಡೆಯವರ ಉಪನ್ಯಾಸವೊಂದಾಯಿತು. ಮಿ| ಹೆಗಡೆಯವರು ಮೇಲ್ವಿಚಾರಕ ಸಂಸ್ಥೆಯ ವಿಷಯ ಕೆಲವು ಮಾಹಿತಿ ಕೊಟ್ಟರು. ಬಳಿಕ ಅಧ್ಯಕ್ಷರು ಇಂಗ್ಲಿಷ ಭಾಷೆಯಿಂದ ಸಮಾರೋಪದ ಭಾಷಣ ಮಾಡಿದರು. "ಈ ದಿನ ೨೦೦ ಮಂದಿಗಳು ಸಭೆ ಸೇರಿರುವರು. ವೃತ್ತಪತ್ರಗಳಲ್ಲಿ ೧೦ ಮಂದಿಗಳ ಪ್ರಚಂಡ ಜಾಹೀರ ಸಭೆಯಾಯಿತೆಂದು ಈ ಮಂಡಿನಂತೆ (ಕುಷ್ಠರೋಗ ನಿವಾರಣ ಸಭೆಯನ್ನು ಧ್ವನಿಸಿ) ಟೀಕೆಗೇನು ಆಸ್ಪದವಿಲ್ಲ." ಎಂಬರ್ಥದ ಮಾತುಗಳನ್ನು ಮೊಟ್ಟಮೊದಲು ಅಭಿಮಾನಪೂರ್ವಕ ಅತಿಶೋಭಿಸಿದರು. ಸಭೆಯಲ್ಲಿ ಸರಕಾರಿ ಅಧಿಕಾರಿಗಳೆಷ್ಟು? ಶಾಲೆಯ ಹುಡುಗರೆಷ್ಟು? ಪರಸ್ಥ ಗೃಹಸ್ಥರೆಷ್ಟು? ಊರ ಮಂದಿಗಳೆಷ್ಟು? ಎಂಬುದನ್ನು ತರ-ತಮ ಭಾವದಿಂದ ಆಲೋಚಿಸಿದ್ದರೆ, ಅಹಂಭಾವಕ್ಕೆ ಆಸ್ಪದವಿರುತ್ತಿದ್ದಿಲ್ಲೆಂದು ಬಲ್ಲವರ ಹೇಳಿಕೆ. ಕೃತೋದ್ಗಾರದ ನಂತರ, ಅಧ್ಯಕ್ಷರು ಸಹಕಾರದ ಚಳುವಳಿಯ ವಿಷಯ ನಾಲ್ಕು ಮಾತಾಡಿದರು. ಸಾಲ ಕೊಡುವ ಸಹಕಾರಿ ಬೇಂಕುಗಳಿಂದ ಹೇಳತಕ್ಕಂಥ ಲಾಭವೇನಿಲ್ಲೆಂದೂ, ಹಳ್ಳಿಗಳಲ್ಲಿ ಬೇಸಾಯಕ್ಕೆ ಉಪಕಾರಕವಾದ ಬೇಂಕುಗಳನ್ನು ಸ್ಥಾಪಿಸಿ, ಬೇಸಾಯಗಾರರಿಗೆ ವಾರ್ಷಿಕ ಕಂತುಬಂದಿಯಿಂದ ಕೊಡುವಂತೆ ಸಾಲ ಸಿಗುವ ವ್ಯವಸ್ಥೆಯಾಗಬೇಕೆಂದೂ, ಹೀಗೆ ವ್ಯವಸ್ಥೆಯಾದರೆ, ಬೇಸಾಯದ ಅಭಿವೃದ್ಧಿಯಾಗಿ ಹಳ್ಳಿಗರಿಗೆ ಒಳಿತಾಗುವದೆಂದೂ ಉದ್ಗರಿಸಿ, ಸ್ವಸ್ಥಾನವನ್ನೈದಿದರು. ಆಭಾರ ಪ್ರದರ್ಶನವಾದ ಬಳಿಕ, ಸಭೆಯು ವಿಸರ್ಜನವಾಗಿ ಚಹಾಪಾನ-ಉಪಹಾರ ಇತ್ಯಾದಿಗಳು ನಡೆದವು. ನಮ್ಮ ಗ್ರಾಮೋದ್ಧಾರದ ಚಳವಳಿಯಲ್ಲಿ ರೆವ್ಹಿ ಸ್ಮ್ಯಾತಯವರಂತೆ ಉತ್ಸಾಹದಿಂದ ದುಡಿಯುವ ಇಲ್ಲಿಯ ಸಬಜಡ್ಜರಿಗೆ ಜನರು ಋಣಿಯಾಗದಿರರು.

ಕಳೆದ ಜುಲೈ ೧ ನೇ ತಾರೀಖಿಗೆ ಇಲ್ಲಿಯ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ಜನರು ಸೇರಿ ದೇಶಬಂಧುಗಳಿಗೆ ಸದ್ಗತಿಯನ್ನೀಯುಲಿಕ್ಕೂ, ದೇಶಬಂಧುಗಳ ದೇಶೋದ್ಧಾರದ ಕಾರ್ಯವನ್ನು ಕಡೆಗಾಣಿಸಲು ನಮಗೆ ಶಕ್ತಿಯನ್ನೀಯಲಿಕ್ಕೂ ಭಗವಂತನೊಡನೆ ಪ್ರಾರ್ಥನೆ ಮಾಡಿದರು.

ಕಾರವಾರ.— ಈ ವಾರದಲ್ಲಿ ವಿಶೇಷ ಮಳೆ ಇಲ್ಲ.

ಕೊಂಗ್ರೆಸ ಕಮಿಟಿಯ ವಿದ್ಯಮಾನ ದೇಶಬಂಧು ದಾಸರ ಪ್ರೀತ್ಯರ್ಥ ಮಹಾತ್ಮರ ಆಜ್ಞೆಯಂತೆ, ಜುಲೈ ೧ ನೇ ತಾರೀಖಿಗೆ ಇಲ್ಲಿ ಒಂದು ಜಾಹೀರ ಸಭೆಯಾಯಿತು. ಸದಾಶಿವಗಡದ ಶ್ರೀ| ಗಣಬರಾವ ನಾಡಕರ್ಣಿಯವರು ಅಧ್ಯಕ್ಷರಿದ್ದರು. ದುಃಖಪ್ರದರ್ಶಕ ಠರಾವನ್ನು ಶ್ರೀ| ಸುಬ್ರಾವ ರಾಮಚಂದ್ರ ಹಳದೀಪುರಕರರವರು ಸೂಚಿಸಿ, ದೇಶಬಂಧುಗಳ ಮಹಾತ್ಮ್ಯವನ್ನೂ, ದೇಶಸ್ಥಿತಿಯನ್ನೂ ತಿಳಿಸಿ ಹೇಳಿದರು. ಶ್ರೀ| ಮಾಧವ ಶ್ಯಾನಭಾಗರು ಕೊಂಕಣಿ ಭಾಷೆಯಿಂದ ಮತ್ತು ಮಿ| ಮುಲ್ಲಾರವರು ಉರ್ದು ಭಾಷೆಯಿಂದ ಠರಾವನ್ನು ಅನುಮೋದಿಸಿದ ಬಳಿಕ, ಠರಾವು ಸರ್ವಾನುಮತದಿಂದ ಮಂಜೂರಾಯಿತು.

ಮಿ। ಕೊಲಿನ್ಸರವರು ತಾ. ೨-೭-೨೫ ನೇಗೆ ಮುಡಗೇರಿಗೆ ಹೋಗಿದ್ದರು. ನೆರೆಹೊರೆಯ ಗ್ರಾಮಗಳಲ್ಲಿ ಹಾವಳಿಯನ್ನೆಬ್ಬಿಸುತ್ತಿದ್ದ ವ್ಯಾಘ್ರನ ಬೇಟೆಯಾಡಲು ಅವರು ಗಮಿಸಿದ್ದರು. ಆ ದಿನ ಒಂದು ಹುಲಿಗೆ ಗುಂಡು ತಾಗಿ ಅದು ಪಲಾಯನವಾಯಿತು. ಇಡೀ ದಿನ ಬಹಳ ಹುಡುಕಿದರೂ ಅದು ಸಿಗಲಿಲ್ಲ. ಬಳಿಕ, ಮಿ। ಕೊಲಿನ್ಸರೂ, ತಾಲೂಕ ಕಚೇರಿಯ ಧಫೇದಾರ ಮುಬಾಂವನೂ, ಗಾಂವಠಾಣಿಯ ದಸ್ತಾಬ್ಬು ಎಂಬುವನೂ ತಾರೀಖು ೩ ನೇಗೆ ಪುನಃ ಹುಲಿಯ ಶೋಧ ಮಾಡಹತ್ತಿದರು. ಹೀಗೆ ಹುಡುಕುತ್ತಿರುವಾಗ, ಥಟ್ಟನೆ ಒಂದು ಗಿಡಗಂಟೆಯೊಳಗಿಂದ ಹುಲಿಯು ಹಾರಿಬಿಟ್ಟಿತು. ದಸ್ತಾಬ್ಬುನು ದೈವಬಲದಿಂದಲೇ ಪಾರಾದನು. ಮುಬಾಂವನಿಗೆ ಹುಲಿಯು ಬಿಡದೆ, ಕಡಿದು ಬಗಿದು ಆತನ ಪ್ರಾಣಹರಣ ಮಾಡಿತು. ಮಿ। ಕೊಲಿನ್ಸರು ಗುಂಡು ಹಾಕಿ ಕೊಂದರು. ಅಪರಾಹ್ನ ೪ ಘಂಟೆಗೆ ಎರಡೂ ಶವಗಳನ್ನು ಇಲ್ಲಿ ತಂದರು. ಒಂದು ಹುಲಿಯದು; ಮತ್ತೊಂದು ಮುಬಾಂವನದು. ಹುಲಿಯು ಉದ್ದಳತೆ ೮॥ ಫೂಟು ಇತ್ತು. ಸೆಶನ್ಸ ಜಡ್ಜರಾದ ಮಿ। ಡೆನ್ಹ್ಯಾಮರೂ, ಕಲೆಕ್ಟರಾದ ಮಿ। ಭಿಡೆಯವರೂ ಆ ಮಾಂವನ ಶವವನ್ನು ನೋಡಲು ಆತನ ಮನೆಗೆ ಹೋಗಿದ್ದರು. ಮಾರನೇ ದಿನ ಮುಂಜಾವಿಗೆ ಪೋಲೀಸ ಬೆಂಡವಾದ್ಯದ ಘೋಷದಿಂದ ಆತನ ಅಂತ್ಯಸಂಸ್ಕಾರಗಳಾದವು. ಮುಬಾಂವನ ತರುವಾಯ ಮುದುಕ ತಾಯಿಯು, ಹೆಂಡತಿಯೂ, ಒಬ್ಬ ಮಗನೂ ಇರುವರು. ಮುಬಾಂವನ ನಿಧನದಿಂದ ಅವರೀಗ ಅನಾಥರಾಗಿರುವರು. ಮಿ। ಕೊಲಿನ್ಸರು ಮುಬಾಂವನ ಕುಟುಂಬದ ಪೋಷಣಕ್ಕಾಗಿ ತಕ್ಕ ದ್ರವ್ಯಸಹಾಯವನ್ನಿತ್ತು ಸಲಹುವರೆಂದು ಇಲ್ಲಿಯವರು ನಂಬಿಕೊಂಡಿರುವರು.

ಇಲ್ಲಿಯ ಡಿ। ಪೋ। ಸುಪರಿಂಟೆಂಡೆಂಟ ರಾ। ಬ। ಗುಡಿಯವರು ರಿಟಾಯರ ಆಗುವವರಿದ್ದುದರಿಂದ ಅವರ ಸ್ಥಳದಲ್ಲಿ ಮಿ। ಹೊಜಲಸ ಇವರ ನೇಮಣೂಕಿಯಾಗಿದೆ.

ಬ್ರಿಟಿಶ ಸರಹದ್ದಿಯ ಸವಿಾಪದ ಗೋವಾಪ್ರದೇಶದ ಕಾಣಕೋಣದಲ್ಲಿ ರಾಮಾ ಮಾಲೂಣಕರ ಎಂಬುವರ ದರೋಡೆಯ ಕಳವಿಗೆ ಹೋದ ಸಾಮಾನು ಗಾಂವಠಾಣಿಯ ದಸ್ತಾಬ್ಬು ಎಂಬುವನಲ್ಲಿ ಸಿಕ್ಕಿತೆಂದು ಆತನ ಮೇಲೆ ಇಲ್ಲಿಯ ಸೆಶನ್ಸ ಕೋರ್ಟಿನಲ್ಲಿ ಖಟ್ಲೆಯಾಗಿತ್ತು. ನ್ಯಾಯದರ್ಶಿಗಳಿಗೆ ಫಿರ್ಯಾದಿಪಕ್ಷದ ಪುರಾವೆಯು ಗ್ರಾಹ್ಯವಾಗದ್ದರಿಂದ ದಸ್ತಾಬ್ಬುನನ್ನು ಬಿಡುಗಡೆ ಮಾಡಿದರು.

ಇಲ್ಲಿಯ ಹುಡುಗಿಯರ ಶಾಲೆಯಲ್ಲಿ ಪರಸ್ಪರ ಸಹಕಾರಿಗಳ ಹಬ್ಬದ್ದಿವಸವು ಉತ್ಸಾಹದಿಂದ ಆಚರಿಸಲ್ಪಟ್ಟಿತು.

ಸದಾಶಿವಗಡ— ದೇಶಬಂಧುಗಳ ನಿಧನದ ಸಂಬಂಧ ಜುಲೈ ೧ ನೇ ಶ್ರಾದ್ಧ ದಿನಕ್ಕೆ ಇಲ್ಲಿಯ ಅಂಗಡಿಗಳೆಲ್ಲ ಮುಚ್ಚಿಕೊಂಡಿದ್ದವು. ಅದರಾತ್ರ ೫ ಘಂಟೆಗೆ ನಾಗರಿಕರು ಸಭೆ ಸೇರಿ ಹಿಂದಮಾತೆಯ ಪರಮಭಕ್ತರಾದ ದೇಶಬಂಧುಗಳ ಅನಪೇಕ್ಷಿತ ಅಕಾಲಿಕ ನಿಧನದ ಬಗ್ಗೆ ದುಃಖಪ್ರದರ್ಶಕ ಠರಾವು ಮಂಜೂರುಮಾಡಲಾಯಿತು. ಅಧ್ಯಕ್ಷಸ್ಥಾನವನ್ನು ರಾವಸಾಹೇಬ ಬಾಳಕೃಷ್ಣ ನಾಯಕರು ವಹಿಸಿದ್ದರು.

ಚೆಂಡಿಯೆ— ಮಹಾತ್ಮಾಜಿಯವರ ಆಜ್ಞೆಯಂತೆ ಜುಲೈ ತಾ. ೧ ನೇ ದಿವಸ ಸಾಯಂಕಾಲಕ್ಕೆ ಇಲ್ಲಿ ಸ್ವರ್ಗಸ್ಥರಾದ ದೇಶಬಂಧುಗಳ ನಿಧನದ ಸಂಬಂಧ ದುಃಖಪ್ರದರ್ಶನಾರ್ಥವಾಗಿ ಊರ ಎಲ್ಲ ಅಂಗಡಿಗಳು ಬಂದ ಇದ್ದವು. ಕೋರ್ಟದಲ್ಲಿ ಸರ್ಕಾರದವರಾದ ಒಬ್ಬನ ಹೊರತು ಬೇರೆ ಉಳಿದ ಶಾಲೆಗಳೆಲ್ಲ ಬಂದ ಇದ್ದವು. ಸಂಜೆಯ ೫ ಘಂಟೆಗೆ ದೇಶಬಂಧುಗಳು ಸದ್ಗತಿಯನ್ನು ಹೊಂದಲೆಂತ ದೇವರೊಡನೆ ಪ್ರಾರ್ಥನೆ ಬಗ್ಗೆ ಮಾಡಲ್ಪಟ್ಟಿತು.

ಕುಂಕೇರಿ— ಇಲ್ಲಿ ಸಾಧಾರಣವಾಗಿ ರಾಷ್ಟ್ರೀಯ ಅಭಿಮಾನವು ನಾಮಶೇಷವಾಗಹತ್ತಿದ್ದರೂ, ದೇಶಬಂಧು ದಾಸರ ಆಕಸ್ಮಿಕ ನಿಧನ ವಾರ್ತೆಯನ್ನು ಕೇಳಿದಂದಿನಿಂದ ಜನರು ಸ್ವಲ್ಪ ಎಚ್ಚತ್ತು ಆ ತ್ಯಾಗವೀರರ ಬಗ್ಗೆ ತಮಗಿರುವ ಆದರವನ್ನು (ಅಲ್ಪಸ್ವಲ್ಪವಾದರೂ ಆಗಲೊಲ್ಲದು.) ವ್ಯಕ್ತಪಡಿಸಲು ತಮ್ಮತಮ್ಮೊಳಗೆ, ಪರಸ್ಪರರಿಂದ ೫ ಆಣೆ ಸ್ವಲ್ಪ ಹಣವನ್ನು ಒಟ್ಟುಗೂಡಿಸಿ, ಅದರಿಂದ ಜುಲೈ ೧ ನೇ ತಾರೀಖಿನ ಅವರ ಶ್ರಾದ್ಧ ತಿಥಿಯ ದಿವಸ ಸುಮಾರು ೨೦೦ ಬಡಬಗ್ಗರಿಗೆ ಅಕ್ಕಿಯ 'ಧರ್ಮ' ಹಂಚಿದರು. ಇನ್ನು ಮುಂದೆಯೂ ಈ ಮಹನೀಯನ ಅಸಂಖ್ಯ ಸದ್ಗುಣಗಳೊಳಗಿನ ಒಂದೊಂದನ್ನಾದರೂ ಅನುಕರಿಸಹತ್ತಿದರೂ ಜನರು ತಮ್ಮ ಧ್ಯೇಯವನ್ನು ಸಾಧಿಸಬಹುದಾಗಿದೆ.

ಇಲ್ಲಿಯವರೊಬ್ಬರಿಗೆ ಅಂಕೋಲೆಯಿಂದ ಜೂನ ೨೦ ನೇ ತಾರೀಖಿಗೆ ಪೋಸ್ಟ ಮಾಡಿದ ಪತ್ರವೊಂದು ಕದ್ರ ಹೋಗಿ ಪತ್ರಿಯಾಗದ ಮಾಲೀಕರಿಗೆ ೨೮ನೇ ತಾರೀಖಿಗೆ ತಲುಪಿತಂತೆ'

ಇಲ್ಲಿಯ ವಾಚನ ಮಂದಿರದಲ್ಲಿ (ಮಹಾರಾಷ್ಟ್ರ ಜ್ಞಾನಕೋಶ'ದ ಸದ್ಯಕ್ಕೆ ೨-೩ ಭಾಗಗಳೂ ಒಂದು ಪುಸ್ತಕವು ಇವೆ. ವಾಚನಾಭಿರುಚಿಯುಳ್ಳವರಿಗೂ, ವಿಶ್ವಜ್ಞಾನವನ್ನು ಪಡೆಯುವ ಅಭಿಲಾಷೆಯುಳ್ಳವರಿಗೂ ಇದೊಂದು ಸುಸಂಧಿಯು ದೊರೆತಂತಾಯಿತಲ್ಲವೇ ?

ಅಂಕೋಲೆ— ಮಹಾತ್ಮಾ ಗಾಂಧಿಯವರ ಆಜ್ಞೆಯಂತೆ, ಸ್ವ। ವಾ। ದೇಶಬಂಧು ಚಿತ್ತರಂಜನ ದಾಸರವರ ಸ್ಮಾರಕ ದಿನವನ್ನು ಕಳೆದ ಜುಲೈ ೧ನೇ ತಾರೀಖಿಗೆ ಆಚರಿಸಿ, ಅಂಕೋಲೆಯ ನಾಗರಿಕರು ದೇಶಬಂಧುಗಳ ಮೇಲಿರುವ ತಮ್ಮ ಭಕ್ತಿಯನ್ನು ಕೃತಜ್ಞತಾಪೂರ್ವಕವಾಗಿ ವ್ಯಕ್ತಪಡಿಸಿದರು. ಅದಿವಸ ಸಾಯಂಕಾಲ ೫ ಘಂಟೆಗೆ ದೇಶಬಂಧುಗಳ ಛಾಯಾಚಿತ್ರವನ್ನು ಪಲ್ಲಕ್ಕಿಯಲ್ಲಿಟ್ಟುಕೊಂಡು ಊರೊಳಗಿನ ಎಲ್ಲ ಪ್ರಮುಖ ಭಾಗಗಳೊಳಗಿಂದ ಮೆರವಣಿಗೆ ತೆಗೆದನಂತರ ಶ್ರೀ ಶಾಂತಾದುರ್ಗಾ ದೇವಸ್ಥಾನದ ಪಟಾಂಗಣದಲ್ಲಿ ಸಭೆ ನೆರೆಯಿತು. ಸಭೆಗೆ ಊರೊಳಗಿಂದ ಹಳ್ಳಿಗಳಿಂದ ಒಂದು ಸಾವಿರದಷ್ಟು ಜನರು ಕೂಡಿದ್ದರು. ದೇಶಬಂಧುಗಳ ಛಾಯಾಚಿತ್ರವು ಸಭೆಯ ಮಧ್ಯದಲ್ಲಿ ಎತ್ತರವಾದ ಜಾಗದಮೇಲೆ ಒಂದು ಸುಶೋಭಿತವಾಗಿ ಶೃಂಗರಿಸಿದ ಕುರ್ಚಿಯ ಮೇಲೆ ಇಡಲ್ಪಟ್ಟಿತು. ಶ್ರೀ। ವಿಶ್ವನಾಥ ಪ್ರಭುಗಳು ಅಧ್ಯಕ್ಷರನ್ನಾಗಿ ಆರಿಸಲ್ಪಟ್ಟರು. ಶ್ರೀ। ಪ್ರಭುರವರು ದೇಶಬಂಧುಗಳ ಚರಿತ್ರೆಯನ್ನು, ಅವರ ಅಲೌಕಿಕ ಸ್ವಾರ್ಥತ್ಯಾಗದ, ನಿಸ್ಸೀಮ ದೇಶಭಕ್ತಿಯ ಮುಖ್ಯ ಮುಖ್ಯ ಸಂಗತಿಗಳನ್ನು ಚನ್ನಾಗಿ ವಿವರಿಸಿ ಹೇಳಿದರು. ಆ ನಂತರ, ದೇಶಬಂಧುಗಳ ಅಕಾಲಿಕ ನಿಧನದಿಂದ ಉಂಟಾದ ದುಃಖವನ್ನೂ ಹಾನಿಯನ್ನೂ ವ್ಯಕ್ತ [illegible] ವ್ಯಕ್ತಪಡಿಸಿ, ಅವರ ಪುಣ್ಯಾತ್ಮಕ್ಕೆ ಪಾರಲೌಕಿಕ ಶಾಂತಿಯನ್ನೀಯಲೆಂದು ಜಗದೀಶನಿಗೆ ಪ್ರಾರ್ಥಿಸುವ ಠರಾವು ಎಲ್ಲರೂ ಎದ್ದುನಿಂತು ಪಾಸು ಮಾಡಲ್ಪಟ್ಟಿತು. ಶ್ರೀ। ಹರಿಕೃಷ್ಣರು ಠರಾವನ್ನು ಅನುಮೋದಿಸುವಾಗ ದೇಶಬಂಧುಗಳ ಅದ್ವಿತೀಯಗುಣಗಳ ವರ್ಣನವನ್ನು, ಒಂದೆರಡು ಸಂಗತಿಗಳನ್ನು ಹೇಳಿ ವಿವರಿಸಿದರು. ಅಷ್ಟಾದ ನಂತರ ಸಭೆಯು ಬರಖಾಸ್ತ ಆಯಿತು.

ಸಿದ್ಧಾಪುರ— ಇತ್ತ ಮಳೆಯು ಚನ್ನಾಗಿ ನಡೆಸಿದೆ. ಇನ್ನು ಉಳಿದ ೬ ನಕ್ಷತ್ರಗಳೂ, ಹಿಂದಿನವರ ಗಾದೆಮಾತಿನಂತೆ, ಉತ್ತರ ಮಳೆಯು ಸುರಿದಂತೆ ಸುರಿದೀತೆಂದು ಭಾವನೆ.

ತಾ ೨೪—೬—೨೫ನೇ ಬುಧವಾರ ಮಳೆಯು ಜೋರಾಗಿತ್ತು. ಅಂದು ಮೂರು ಸಾಲ್ಯಾಕಟ್ಟೆಯಲ್ಲಿ ಅಕಸ್ಮಾತವಾಯಿತಾಗಿ ತಿಳಿದು ಬರುತ್ತದೆ. ಕಾನಗೋಡಿನಿಂದ ಅಕ್ಕಿಯನ್ನು ಹಂಚಿಗೆ ತರುತ್ತಿದ್ದ ಒಬ್ಬ ಹೆಂಗಸು ಕಲ್ಲುನೀರ ಹೊಳೆಸಂಕವನ್ನು ದಾಟುವಾಗ ಸಂಕವು ಮುರಿದು (ಬೇರ್ಲಾಮಾಡ್ದರಿಂದ) ನೀರಿನ ಸೆಳವಿಗೆ ಸಿಕ್ಕು ನಾಪತ್ತೆಯಾದಳು. ಆ ಸಂಕವನ್ನು ಲೋ. ಬೋರ್ಡಿನವರು ಮುಂಚಿತವಾಗಿಯೇ ಕಟ್ಟಿಸಿ, ಬೇರೆ ಹಣವನ್ನು ಮಾಡಿಸಿದ್ದರೆ, ಆ ಹೆಂಗಸಿನ ಪ್ರಾಣಕ್ಕೆ ಹಾನಿ ತಗಲುತ್ತಿದ್ದಿಲ್ಲ. ಇನ್ನೊಬ್ಬನು ಗಾಡಿ ಎತ್ತನ್ನು ಹಳ್ಳದಲ್ಲಿ (ಕಾವಿನಗುಂಡಿಯಿಂದ ಬರುವ) ಕಳಕೊಂಡಿರುವದಾಗಿ ಸುದ್ದಿ ಬಂದದೆ.

ಮಳೆ-ಗಾಳಿಯಿಂದ ಹಾರಿದ ಹಂಚಿಗಳ ಮೇಲ್ಮನೆಗಳು ಬಿದ್ದು, ಕೆಲವು ದಿವ್ಸದಿಂದ ಹಾನಿ ಬಂದು ಅದ ಎಂದು ತಿಳಿದು ಬರುತ್ತದೆ.

ಇಲ್ಲಿಯ ಪುಟ್ಟ ಡಿಸ್ಪೆನ್ಸರಿಯು ಹೆಸರಿಗೆ ಮಾತ್ರ ಉಂಟು. ಅದರ ಸ್ಮಾರಕವೆಂತ ಒಂದು ಬಿಲ್ಡಿಂಗು ಮಾತ್ರ ಕಾಣುತ್ತದೆ. ಅದರಲ್ಲಿ, ಶಿರಸಿಯಿಂದ ಇಲ್ಲಿಗೆ ಯಾವುದಾದರೂ ಕೇಸುಗಳ ನಿಮಿತ್ತ, ಬಂದಂಥ ವಕೀಲರು ತಮ್ಮ ವಸತಿ ಮಾಡುತ್ತಿದ್ದರು. ಈಗ ಆ ಬಿಲ್ಡಿಂಗ (ದವಾಖಾನೆ)ಯಲ್ಲಿ, ಇಲ್ಲಿಯ ಗರ್ಲ್ಸ ಸ್ಕೂಲು ಬಿಡಾರಹೂಡಿರುವದಾಗಿ ಕೇಳುತ್ತದೆ. ಗರ್ಲ್ಸಸ್ಕೂಲಿನಲ್ಲಿ ಅಜಮಾಸು ೩೫ ಹುಡುಗಿಯರಿದ್ದು, ಅಷ್ಟು ಸಣ್ಣ ರೂಮಿನಲ್ಲಿ, ಅನೇಕ ಮುಲ್ಕಿ ವರ್ಗಗಳನ್ನು ಇಬ್ಬರು ಶಿಕ್ಷಕಿಯರು ಕಲಿಸುತ್ತಿರುವರೆಂದರೆ, ಹುಡುಗಿಯರ ಅಭ್ಯಾಸಕ್ಕೆ ತೊಂದರೆಯೇ ಸರಿ.

ಶಹರದಲ್ಲಿ ಕಾಲುವೆಗಳಿಂದ ಮಳೆನೀರು ಸೀದಾ ಸರಿಯಾಗಿ ಹೋಗುವಂತೆ ಮಾಡಿಸಲ್ಪಡುವ ಕೆಲಸವು ಒಳ್ಳೇ ಭರಭರಾಟಿಯಿಂದ ಸಾಗಿದೆ. ಇನ್ನು ಅಲ್ಲಲ್ಲಿ ಮಣ್ಣುಗುಡ್ಡೆ ತೆಗೆಯುವದು ಯಾವ ಕಾಲಕ್ಕೋ?

ದೇ। ಭ। ಸ್ವರ್ಗಸ್ಥ ಚಿತ್ತರಂಜನ ದಾಸರ ಸ್ಮಾರಕವಾಗಿ ತಾ. ೧ ನೇ ಜುಲೈ ದಿವಸ ಅಂದು ಸಂತೆ ಇದ್ದದ್ದರಿಂದ, ಒಂದೇ ತಾಸು ಅಂಗಡಿಗಳನ್ನು ಮುಚ್ಚಿ ಭಜನೆ ಮೇಳದಿಂದ, ದಾಸರ ಭಾವಚಿತ್ರದೊಂದಿಗೆ, ಊರಲ್ಲಿ ತಿರುಗಾಡಿ, ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದೂ,"ಅವರು ಕೈಕೊಂಡ ಕಾರ್ಯವು ಬೇಗನೇ ಸಿದ್ಧಿಗೈಯಲೆಂದೂ ಈಶಪ್ರಾರ್ಥನೆ ಮಾಡಲ್ಪಟ್ಟಿತು.

ಶಹರದ ಪೋಸ್ಟ ಡಿಲಿವರಿಗೆ ಇದ್ದ ಪೋಸ್ಟಮನನು ಶಹರದ ಪರಿಚಯ ಇಲ್ಲದವನಿಂದ ಸ್ವಲ್ಪ ತೊಂದರೆಯು ಗುಪ್ತವಾಗಿ ತಿಳಿದು ಬರುತ್ತದೆ. ಶಹರಕ್ಕೆ ಮೊದಲು ಇದ್ದ ರಾಮಚಂದ್ರನೆಂಬ ಪೋಸ್ಟಮನ್ನನ ಕಾಲಕ್ಕೆ ಈ ತೆರದ ತೊಂದರೆಯು ಕಂಡುಬರಲಿಲ್ಲ. ಶಹರದ ಡಿಲಿವರಿಗೆ ಅನುಕೂಲನಾದವನು, ಇಂಗ್ಲಿಷ, ಮರಾಠಿ, ಕನ್ನಡ, ಇತರೇ ಎಲ್ಲ ಜಾತಿ ಬರಹದ ಜ್ಞಾನವಿದ್ದವನು. ಅಂಥವನು ಒಳ್ಳೇದು. ಅದ್ದರಿಂದ ಈಗ ಶಹರಕ್ಕೆ ಇದ್ದವನನ್ನು, ಹಳ್ಳಿಗೂ. ಹಳ್ಳಿಯಲ್ಲಿದ್ದ ರಾಮಚಂದ್ರ ಎಂಬುವನನ್ನು ಶಹರಕ್ಕೂ ಹಾಕಿದರೆ ಒಳ್ಳೇದಾಗುತ್ತಿತ್ತು. ಈ ಕಡೆ ಪೋಸ್ಟ ಅಧಿಕಾರಿಗಳು ಲಕ್ಷ ಕೊಡುವರೋ ?

ಆಷಾಢಮಾಸವು ಮುಗಿಯುತ್ತ ಬಂದರೂ, ಲಗ್ನಕಾರ್ಯಗಳಿಗೆ ಮಾತ್ರ ರಜಾ ಇನ್ನೂ ಸಿಕ್ಕಿಲ್ಲ.

ವೃತ್ತಸಾರ.

— ದೇಶಬಂಧುಗಳ ಶ್ರಾದ್ಧವು ಜುಲೈ ೧ನೇ ತಾರೀಖಿಗೆ ಕಲಕತ್ತೆಯಲ್ಲಿ ಅವರ ಮಗನಾದ ಚಿರರಂಜನ ದಾಸರವರಿಂದ ಆಚರಿಸಲ್ಪಟ್ಟಿತು. ಅಂತ್ಯಸಂಸ್ಕಾರವನ್ನು ನೋಡಲಿಕ್ಕೆ ೨೦ ಸಾವಿರ ಮಂದಿಗಳು ಸೇರಿದ್ದರು. ಸಾಯಂಕಾಲಕ್ಕೆ ಸುಮಾರು ೧೨ ಸಭೆಗಳಾದವು. ದೇಶಬಂಧುಗಳ ಸ್ಮಾರಕಕ್ಕೆ ೨ ಲಕ್ಷ, ೪೦ ಸಾವಿರ ರೂಪಾಯಿಗಳು ಬಂದಾಗಿವೆ. ಮುಂಬಯಿಯಲ್ಲಿ ಜುಲೈ ೧ನೇ ತಾರೀಖಿಗೆ ದೊಡ್ಡ ಸಭೆಯಾಗಿ, ದೇಶಬಂಧುಗಳ ಗುಣಸಂಕೀರ್ತನ ಮಾಡಲ್ಪಟ್ಟಿತು. ಸರ್ ದಿನಶಾ ಪೆಟೀಟರವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ದೇಶಬಂಧುಗಳ ಸ್ಮಾರಕ ಮಾಡಲು ಒಂದು ಸ್ಮಾರಕ ಕಮಿಟಿ ಏರ್ಪಡಿಸಿರುವರು.

— ಅಹಮದಾಬಾದದ ಮ್ಯುನಿಸಿಪಾಲಿಟಿಯು ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ಕೈಕೊಳ್ಳುವ ಠರಾವು ಪಾಸಾಗಿರುವದು

— ಕಲ್ಲಿಕೋಟೆಯ ಮಾಪಳೇಯರಲ್ಲಿ ಪ್ರಾರ್ಥನೆಯ ಕುರಿತು ವಿಷಯ ಅತ್ತಂಡಗಳಾಗಿವೆ ಕಳೆದ ಶುಕ್ರವಾರ ತಾ ೨೬ ನೇಗೆ ಜುಮ್ಮಾ ಪ್ರಾರ್ಥನೆಗಾಗಿ ೧ ಸಾವಿರಕ್ಕೆ ಮಿಕ್ಕಿ ಮಾಪಿಳೇಯರು ಸೇರಿದ್ದರು ಆಗ ಅತ್ತಂಡಗಳಲ್ಲಿಯೂ ಕಲಹವೆದ್ದು ಬಡದಾಟವಾಯಿತು ಅಷ್ಟರಲ್ಲಿ ಪೋಲೀಸರು ಶಾಂತಿಸ್ಥಾಪನೆ ಮಾಡಿದರು ಅನೇಕರಿಗೆ ಘಾಯಗಳಾದವು

— ಮಹಾತ್ಮರು ಬಂಗಾಲದ ಪ್ರವಾಸವನ್ನು ಪುನಃ ಪ್ರಾರಂಭಿಸಿರುವರು

— ಸಾರ್ವಭೌಮ ಬಾದಶಹರು ಹಿಂದುಸ್ಥಾನಕ್ಕೆ ಚಳಿಗಾಲದಲ್ಲಿ ಅನುಗ್ರಹಿಸುವವರಿದ್ದಾರೆಂದು ಲಂಡನಿನ "ಸಂಡೇ ಟೈಮ್ಸ" ಪತ್ರಿಕೆಯು ಪ್ರಕಟಿಸುತ್ತದೆ ಅವರ ಜೊತೆ ಭಾರತ ಮಂತ್ರಿಗಳೂ ಬರುವವರಿದ್ದಾರಂತೆ

— ಬಂಗಾಲದ ಸ್ವರಾಜ್ಯ ಪಕ್ಷದವರೂ ಕಾಂಗ್ರೆಸ ಕಮೀಟಿಯವರೂ ದೇಶಬಂಧುಗಳ ನಿಧನದಿಂದ ಖಾಲಿಯಾದ ಅಧ್ಯಕ್ಷಸ್ಥಾನದಲ್ಲಿ ಬಾರಿಸ್ಟರ ಸೇನಗುಪ್ತರನ್ನು ನೇಮಿಸಿರುವರು

— ಮುಂಬಯಿ ಕಾಯಿದೆ ಕೌನ್ಸಿಲಿನ ಸಭಾಸದರಾದ ಶ್ರೀ ಆರ್ ಜಿ ಪ್ರಧಾನರವರು ದೇಶಬಂಧುಗಳ ನಿಧನದಿಂದ ಕಾಯಿದೆ ಕೌನ್ಸಿಲಿಗೆ ಉಂಟಾದ ಶೋಕಪ್ರದರ್ಶನ ಮಾಡಲು ಬರುವ ಕಾಯಿದೆ ಕೌನ್ಸಿಲಿನಲ್ಲಿ ಠರಾವು ಸೂಚಿಸಲಿರುವರು

— ಅಖಿಲ ಭಾರತೀಯ ಕಾರ್ಯಕಾರಿ ಕಮೀಟಿಯು ಜುಲೈ ತಾ ೧೬ನೇ ಗುರುವಾರಕ್ಕೆ ಕಲಕತ್ತೆಯಲ್ಲಿ ಸೇರಲಿದೆ

— ಬೌಲಾ ಖೂನಿ ಖಟ್ಲೆಯಲ್ಲಿ ಫಾಶೀ ಶಿಕ್ಷೆಯಾದ ಅಪರಾಧಿಗಳು ಮುಂಬಯಿ ಸರಕಾರದೊಡನೆ ಕೃಪಾದೃಷ್ಟಿಯಿಂದ ಫಾಶೀ ಶಿಕ್ಷೆಯನ್ನು ರದ್ದುಪಡಿಸಿ ಕರಿ ನೀರಿನ ಶಿಕ್ಷೆ ಬೇಡಿದ್ದರು ಆದರೆ, ಅವರ ಬಿನ್ನಹವು ಮಾನ್ಯವಾಗಲಿಲ್ಲ ಸರ್ವಾಧಿಪತಿಗಳಿಗೂ ಅವರ ಬಿನ್ನಹವಾಯಿತು ಅಲ್ಲಿಯೂ ದುರ್ದೈವಿಗಳಿಗೆ ಲಾಭವಾಗಲಿಲ್ಲ ಪ್ರಿವ್ಹಿಕೌನ್ಸಿಲಿಗೆ ಅಪೀಲು ಮಾಡುವವರಿದ್ದಾರಾಗಿ ಸುದ್ದಿಯಿದೆ ಇತ್ತ ಮುಮತಾಜ ಬೇಗಮಳು ಬೌಲಾ ಖಟ್ಲೆಯ ಸಾಕ್ಷಿಗಳನ್ನೆಲ್ಲ ಫೌಶೀ ಮಾಡಲು ಹಿಂದುಸ್ಥಾನ ಸರಕಾರದಿಂದ ಬೇಡಿಕೊಂಡಿರುವಳು ಆರೋಪಿಯ ತರ್ಫೆನ ದೊಡ್ಡ ದೊಡ್ಡ ವಕೀಲರಿಗೆ ದುಡ್ಡು ಯಾರು ಕೊಟ್ಟರು? ಎಂಬುದೊಂದು ಚಿಕಿತ್ಸೆಯಾಗಹತ್ತಿದೆ

— ವೈಕಮದಲ್ಲಿ ಮೂರು ಮಾರ್ಗಗಳು ನಾಲ್ಕು ಅಸ್ಪೃಶ್ಯರ ಸಂಚಾರಕ್ಕೆ ಬಿಡುಗಡೆ ಮಾಡಲ್ಪಟ್ಟಿವೆ ಮಹಾತ್ಮರಿಗೂ ಅಲ್ಲಿಯ ಪೋಲೀಸ ಕಮೀಶನರರಿಗೂ ಆದ ಕರಾರು ನಾಮೆಯಂತೆ ಈ ಮಾರ್ಗಗಳು ಬಿಡಲಾಗಿವೆ ಆದರೆ, ಸತ್ಯಾಗ್ರಹಿಗಳು ಉಳಿದ ಮಾರ್ಗಗಳನ್ನು ಸಹ ಬೇಡಿ ಪುನಃ ಸತ್ಯಾಗ್ರಹವನ್ನು ಪ್ರಾರಂಭಿಸಿರುವರು

ಸುವಾಸಿಕ, ಶುದ್ಧ, ಮಿಶ್ರಣವಿಲ್ಲದ

ಜನರಿಗೆ ಅವಶ್ಯ ಬೇಕಾಗಿರುವ

ಕಾಬೂಲೀ ಹಿಂಗು.

೪೦ ತೊಲೆಯುಳ್ಳ	ಡಬ್ಬಿ	೧ಕ್ಕೆ	೫—೦—೦
೨೦ ತೊಲಿ	ಡಬ್ಬಿ	೧ಕ್ಕೆ	೨—೧೨—೦
೧೦ ತೊಲಿ	ಡಬ್ಬಿ	೧ಕ್ಕೆ	೧—೮—೦
೫ ತೊಲಿ	ಡಬ್ಬಿ	೧ಕ್ಕೆ	೧—೦—೦
೧ ತೊಲೆಯ ಡಬ್ಬಿಗಳ	ಡಜನ	೧ಕ್ಕೆ	೨—೦—೦.

ನಮ್ಮ ಹಿಂಗು ಖೋಟಾ ಬಂದಲ್ಲಿ, ಪರತ ಕೊಳ್ಳುವೆವು. ಟಪಾಲು ಖರ್ಚು ಪ್ರತ್ಯೇಕ.

ಕೆರೇಕರ ಕಾಬೂಲೀ ಹಿಂಗಿನ ದುಕಾನ

ಜವಳಿಬಾಜಾರ, ಕುಮಟಾ

ವಿವಿಧ ಸಂಗ್ರಹ.

(೯ ನೇ ಪಾನಿನಿಂದ ಮುಂದರಿಸಿದ್ದು)

ನಾನು ಕಾಲಾಧೀನನಾಗುವ ಮುಂಚೆ ನನ್ನ ದೇಶವು ಪಾರತಂತ್ರ್ಯದೊಳಗಿಂದ ಮುಕ್ತನಾಗಲೇಬೇಕು "

⁂

ಚತುರಂಗನಿಪುಣ ಭಾರತೀಯರು!

ಚದುರಂಗದ ಆಟವು ಬಹು ಪುರಾತನ ಕಾಲದಿಂದ ಭರತಖಂಡದೊಳಗಿನ ಸಾರ್ವಭೌಮರು, ಮಹಾರಾಜರು ಮುಂತಾದ ಕಾರ್ಯಕರ್ತ ಪುರುಷರು ಆಡಿ ಬಂದ ಆಟ ಈ ಆಟವಲ್ಲದೆ ಬುದ್ಧಿಚಾತುರ್ಯವನ್ನು ಸಂಗ್ರಹಿಸತಕ್ಕ ದೂರದೃಷ್ಟಿಯ ಆಟ ಇಷ್ಟು ಸುಲಭದು ಇದ ಶ್ರೇಷ್ಠ ತರಗತಿಯ ಭಾರತೀಯರ ಆಟವು ಯುರೋಪ ಖಂಡದಲ್ಲಿಯೂ ಈ ಆಟವು ಇತ್ತೀಚೆ ಪ್ರಾಮುಖ್ಯತೆಯನ್ನು ಹೊಂದುತ್ತಿದ್ದು, ಅಲ್ಲಿನ ಸ್ವತಂತ್ರ್ಯ ಸರಕಾರಗಳೂ, ಶ್ರೀಮಂತರೂ ಈ ಆಟಗಾರರಿಗೆ ಆಶ್ರಯ ಕೊಟ್ಟು ಪ್ರಾವೀಣ್ಯವನ್ನು ಸಂಪಾದಿಸಲು ಅನುಕೂಲ ಮಾಡಿಕೊಡುತ್ತಿರುವರು ಬೋರಿಸ್ ಕೊಸ್ಟಿಚ್ ಎಂಬುವ ದೇಶಪರದೊಳಗಿನ ವಿಖ್ಯಾತ ಚದರಂಗನಿಪುಣರು ಯುರೋಪಖಂಡದಲ್ಲೆಲ್ಲ ವಿಜಯ ಸಂಪಾದಿಸಿ ಭರತಖಂಡದಲ್ಲ ದಿಗ್ವಿಜಯಕ್ಕಾಗಿ ಸನ್ಯಕ್ಕೆ ಬಂದಿದ್ದರು ಪತಿಯಾಲಾದ ಮಹಾರಾಜರು ಸಿಮ್ಲಾದಲ್ಲಿ ಅಖಿಲ ಭರತಖಂಡದೊಳಗಿನ ಚದುರಂಗದ ಆಟಗಾರರನ್ನು ಸೇರಿಸಿ, ಬೋರಿಸ್ ಕೊಸ್ಟಿಚರಿಗೆ ಎದುರಾಗಲು ಏರ್ಪಡಿಸಿದ್ದರು ಪ್ರತಿಯ ಶ್ರೀ ನಾರಾಯಣರಾವ ಜೋಶಿ ಯವರಿಗೂ, ಶ್ರೀ ಬೋರಿಸರವರಿಗೂ ಬಹು ದಿನಗಳವರೆಗೆ, ನಿಕರದಿಂದ ಮೇಳಾಟ ನಡೆದು, ಕಟ್ಟಕಡೆಗೆ ಶ್ರೀ ನಾರಾಯಣರಾಯರು ವಿಜಯಶ್ರೀ ಸಂಪಾದನೆ ಮಾಡಿದರು ನಾರಾಯಣರಾಯರಿಗೆ ೨ ಸಾವಿರ ರೂಪಾಯಿ ಇನಾಮು ದೊರಕಿತು ಕಳೆದ ೨೭ ನೇ ತಾರೀಖಿಗೆ ಪುಣೆಯ ಸಾರ್ವಜನಿಕ ಸಭೆಯು ರ ಸಭೆಯಿಂದ ಭರತಖಂಡದ ಮಾನ ಕಾಪಾಡಿದ ಜೋಶಿಯವರಿಗೆ ಅಭಿನಂದನಪತ್ರವನ್ನಿತ್ತು, ಒಂದು ಸುವರ್ಣ ಪದಕವನ್ನು ಪಾರಿತೋಷಿಕವನ್ನಾಗಿ ಕೊಟ್ಟರು ಯುರೋಪಿಯನ್ ಆಟಗಾರರಿಗೆ ಅಲ್ಲಿಯ ಸ್ಥಳೀಕ ಸರಕಾರದವರೂ, ಐಶ್ವರ್ಯವಂತರೂ ಆಶ್ರಯವನ್ನಿತ್ತು ಕಲೆಯನ್ನು ಅಭಿವೃದ್ಧಿ ಮಾಡುತ್ತಿರುವಂತೆ, ಹಿಂದುಸ್ಥಾನದಲ್ಲಿ ಜನ್ಮವನ್ನೆತ್ತಿದ ಈ ಆಶ್ಚರ್ಯ ಆಟಕ್ಕೆ ಹಿಂದುಸ್ಥಾನದಲ್ಲಿ ಸೋಮೇಶ್ವರ ರಾಜ್ಯರಿಕ್ಷಣೂ ಶ್ರೀಜೋಶಿಯವರು ಉದ್ಧರಿಸಿದರು!

⁂

ಭಾರತೀಯರ ವಿಪನ್ನಾವಸ್ಥೆ

ಅಹಮದಾಬಾದದ "ಮಜೂರ ಸಂದೇಶ" ಪತ್ರಿಕೆಯು ಗಿರಣಿಯೊಳಗಿನ ಕೂಲಿಕಾರರ ಮೂರು ಕಡೆಯಿಂದ ಆತ್ಮಹತ್ಯೆಯ ೨ ಕಥೆಗಳನ್ನು ಪ್ರಕಟಿಸಿದೆ ಆತ್ಮಹತ್ಯೆಯ ಕಾರಣವೇನೆಂದರೆ, ಸಾಲ ತೀರಿಸಲಿಕ್ಕಾಗದಿದ್ದದ್ದು ಒಬ್ಬನು 'ಅಯೋರ್ಡಯು' ನೂಲುವ ಗಿರಣಿಯೊಳಗಿನವ ಆತನಿಗೆ ೨ ಸಾವಿರ ರೂಪಾಯಿಗಳ ಸಾಲವಿತ್ತು ಬಡ್ಡಿ ತೆರುವದು ಕಠಿಣವಾಯಿತು ಸಂಬಳ ಕೊಡತಕ್ಕ ದಿನ ಆತನ ಸುತ್ತುಮುತ್ತಲೂ ಸಾಲಗಾರರು ಮುತ್ತಿದರು ಇದನ್ನು ನೋಡಿ ಆತನಿಗೆ ಬೇಸರ ಬಂತು ಕೂಡಲೆ ಆತನು ನೆರೆಹೊರೆಯ ಗಿರಣಿಯ ಹೌದಿನಲ್ಲಿ ಹಾರಿ ಜೀವಕೊಟ್ಟನು ಇನ್ನೊಬ್ಬ ಆಳು ಸಾಲದಲ್ಲಿ ಮುಳುಗಿಕೊಂಡಿದ್ದನು; ಹೆಂಡಗುಡುಕನಿದ್ದನು ಒಂದು ದಿನ ಬೆಳಿಗ್ಗೆ ಮಲಗಿದ್ದಲ್ಲಿಯೇ ಆತನು ಮೃತ ಹೊಂದಿದನು ಇನ್ನೊಬ್ಬನು ಸಾಲದ ತಗಾದೆಯನ್ನು ಸೈರಿಸಲಾರದೆ ಉಗಿಬಂಡಿಯು ಭರದಿಂದ ಓಡುತ್ತಿರುವಾಗ ಕಂಬಿಗಳ ಮೇಲೆ ಬಿದ್ದುಕೊಂಡು ಮರಣಪಟ್ಟನು ಭಾರತ ಮಾತೆಯ ಪುತ್ರರು ಹೊಂದುತ್ತಿರುವ ಶೋಚನೀಯ ಅವಸ್ಥೆಯಿದು!

⁂

ವಿಲಕ್ಷಣ ಪರೋಪಕಾರ!

ಇತ್ತೀಚೆ ಯುರೋಪಿಯನ್ ವೈದ್ಯಶಾಸ್ತ್ರಜ್ಞರು ರೋಗಿಗಳ ಶರೀರದಲ್ಲಿ ಅನ್ಯರ ರಕ್ತವನ್ನು ಸೇರಿಸಿ ವಾಸಿಮಾಡುವ ಹೊಸ ಪ್ರಯೋಗವೊಂದು ೫—೬ ವರ್ಷಗಳಿಂದ ಶೋಧಿಸಿರುವರು ಒಮ್ಮೆ ಲಂಡನದೊಳಗಿನ ವಿ! ಟಿಬ್ಲರವರು ಹಾದಿ ಹೋಗುತ್ತಿದ್ದರು ಅಷ್ಟರಲ್ಲಿ ಒಂದು ಕೂಸಿಗೆ ಅಪಘಾತವಾಯಿತು. ಅದರ ರಕ್ತವು ನಷ್ಟವಾಗಿ ಕೂಸು ಮರಣೋನ್ಮುಖವಾಗಿತ್ತು ಆಸ್ಪತ್ರೆಗೆ ಒಯ್ಯಲು, ಡಾಕ್ಟರರು ಯಾರಾದರೂ ವ್ಯಕ್ತಿಯೊಳಗಿನ ರಕ್ತವನ್ನು ಕೂಸಿನ ಶರೀರದಲ್ಲಿ ಸೇರಿಸಲು ಕೊಟ್ಟರೆ, ಕೂಸು ಬದುಕುವದೆಂದರು ಕೂಡಲೆ, ಟಿಬ್ಲರು ಮುಂದಾಗಿ ತಮ್ಮ ರಕ್ತವನ್ನು ಕೊಟ್ಟು ಬದುಕಿಸಿದರು ಈ ವರೆಗೆ ಅವರು ೭೦ ಮಂದಿಗಳಿಗೆ ರಕ್ತ ಪೂರೈಸಿ ಬದುಕಿಸಿರುವರು ಒಮ್ಮೊಮ್ಮೆ ಅವರು ೫—೬ ಮಂದಿಗಳಿಗೆ ಒಮ್ಮೆಲೇ ರಕ್ತಪೂರೈಸಿ ಬದುಕಿಸಿದ ಉದಾಹರಣೆಗಳಿವೆ ವಾರಕ್ಕೆರಡಾವರ್ತಿ ಇವರು ತಮ್ಮ ಶರೀರದೊಳಗಿಂದ ರಕ್ತಹೀರಗೊಟ್ಟಿರುವರು. ಈ ಬಗ್ಗೆ ಈ ಪುಣ್ಯಾತ್ಮರು ಪ್ರತಿಯಾಗಿ ಒಂದು ಕಾಸನ್ನೂ ಪಡೆಯಲಿಲ್ಲ ಇವರ ರಕ್ತವು ಗಂಡಸರಿಗೂ, ಹೆಂಗಸರಿಗೂ, ಬಾಲಕ-ಬಾಲಕಿಯರಿಗೂ ಯೋಗ್ಯವಿರುವದಂತೆ ಅವರು ಬೀಡಿ ಸೇದುವದಿಲ್ಲ, ಸಿಂದಿ ಕುಡಿಯುವದಿಲ್ಲ ಅವರ ಚೈತನ್ಯಶಕ್ತಿಯೂ ಕುಗ್ಗಿಲ್ಲ ಈ ಉಪಕಾರಕ್ಕಾಗಿ ಸಾಮ್ರಾಜ್ಯ ಸರಕಾರವು ಅವರಿಗೆ ಸುವರ್ಣ ಪದಕವನ್ನು ಅರ್ಪಿಸಿದೆ ಮತ್ತು ಅವರಿಗೆ ಲಂಡನ್ ಆಸ್ಪತ್ರೆಯ ಜೀವರಕ್ಷಕರನ್ನಾಗಿ ನೇಮಿಸಿದೆ

Wanted.

A Secretary for the Karwar Urban Co-operative Bank, Limited on a monthly pay of Rs 50 75 according to qualifications, with future prospects Only those who know Kanarese, Marathi and English and have experience of work in Co-operative or other Banks should apply with testimonials. Graduates will be preferred. Applications should reach the Bank before the 25th of July 1925

Karwar, 30-6-1925 } **D. B. Nadkarni**
Chairman.

— ನಿನ್ನೆ ಪಟ್ಟಣದಲ್ಲಿ ಜಡ ರಂಗದ ಪಂದ್ಯಾಟ ನಡೆದಿತ್ತು. ಅದರೊಳಗೆ ಶ್ರೀ ಜೋಶಿಯವರು ಅಗ್ರಸ್ಥಾನವನ್ನು ಪಡೆದಿರುವರು. ಇವರಿಗೆ [illegible] ರೂಪಾಯಿಗಳ ಪಾರಿತೋಷಕ ದೊರಕಿದೆ

— ಜಬಲಪೂರದಲ್ಲಿ ಕೆಲ ಯುರೋಪಿಯನ್ ಮಂದಿ ಸ್ಥನಿಕರು ಅತ್ಯಾಚಾರ ಮಾಡಿದರು. ವಿಂಕ್ಲರ ಹಾಗು ಬಾರ್ಟನ್ ಎಂಬ ಇಬ್ಬರು ಸ್ತ್ರೀಯರಿಗೆ ಹೊಡೆದು, ವಿಂಕ್ಲರ ಇವಳ ಪ್ರಾಯಕ್ಕೆ ಬಂದ ಕುಮಾರಿಯನ್ನು ಹೊತ್ತುಕೊಂಡು ನಡೆದರು. ಕುಮಾರಿಯು ಜೀವದಂತೆ ಬಾಯಿಯಲ್ಲಿ ಅಂತ ಕುರುಕಿದ್ದರು.

धातु क्षीणता व कमजोरपणा यांसाठीं

मदन मंजरी गोळ्या. (रजिस्टर्ड)

या दिव्य गोळ्या रक्त व वीर्य सुधारून त्यांची चांगली वाढ करतात. पचन शक्ति सुधारून परसाकडे साफ होतें त्याप्रमाणे प्रत्येक प्रकारची अशक्तता दूर होऊन शरीर तेजदार व बळवान होते कि. ४० गोळ्यांच्या डबीस रु १.

रमण विलासिनी गोळ्या. रात्रौ फक्त १ गोळी दुधाबरोबर खाल्याने इच्छेप्रमाणें वीर्यस्तंभन होतें

नपुंसकत्वारी घृत. हा लेप पुरुषाच्या गुह्यभागावर लावला असता सर्व रोग नाश पाऊन खरें पुरुषत्व प्राप्त होते. कि. डबीस रु. १

कुमटा एजंट — माधव सांतप्पा शेणवी बेलेकेरी

राजवैद्य नारायणजी केशवजी ब्रँच:— ३९३ काळबादेवी रोड मुंबई नं २.

ಭಾಷಾಂತರಕರ್ತರಿಗೆ ಸುಸಂಧಿ!

ಸುಪ್ರಸಿದ್ಧರಾದ ಅನೇಕ ವಿದ್ವತ್ ಪಂಡಿತರಿಂದ ಚಲೋ ಅಭಿಪ್ರಾಯ ಪಟ್ಟಿದ್ದು ಆಗಿರುವ ಋಗ್ವೇದಿಯರು ಬರೆದ "**आर्यांच्या सणांचा प्राचीन व अर्वाचीन इतिहास**" ಎಂಬ ಮರಾಠಿ ಪುಸ್ತಕವನ್ನು ಕನ್ನಡದಲ್ಲಿ ಭಾಷಾಂತರಿಸುವದರೆ ಇದನ್ನು ಕೈಕೊಳ್ಳಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳತಕ್ಕದ್ದು.

Apply to:—
V. PRABHA & CO.
BOMBAY 4.

Copies can be had from -
THE NORTH KAN A TRADING Co
KARWAR.

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬಿ ಯವರ

ಸುಗಂಧ ನಶ್ಯದ ಪುಡಿ.



ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಿಗೆ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂದೇತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಬಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೆ ಸೆ ಪುಕ್ಕಟೆ ಕಳಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦ ವ್ಹಿ. ಪಿ [illegible] ಡಜನ್ ೧ ಕ್ಕೆ ರೂ ೨-೮-೦. ವ್ಹಿ ಪಿ ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಮದರಾಸು

ಅಮೇರಿಕನ್ ಉಪಾಯ.

ಎಂಬ್ರೋಸಿಯಾ.

AMBROSIA

ಸ್ತ್ರೀರೋಗಪರಿಹಾರಕ್ಕಾಗಿ.

ಎಂಬ್ರೋಸಿಯಾವು ಸಮಸ್ತ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು ಇದು ಸ್ತ್ರೀಸೌಂದರ್ಯವನ್ನುಂಟುಮಾಡುತದೆ. ಸಾಮಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರುತದೆ ಚಲೋ ಆಹಾರ ದೊರಕದೆ, ವಿಶೇಷ ಆಯಾಸ ಕೊಳ್ಳುವದರಿಂದ ಸ್ತ್ರೀಯರ ಪ್ರಕೃತಿಯು ಕೆಡುತದೆ ಮುಟ್ಟಾಗುವಾಗ ಶೂಲಿ ಏಳುವದು, ಮುಟ್ಟುಗೆಡಿಸುವದು, ಅಪಸ್ಮಾರ, ಬಂಜೆತನ ಮುಂತಾದ ಗರ್ಭಾಶಯದ ಬೇನೆಗಳು, ಅಜೀರ್ಣ, ತಲೆಶೂಲಿ, ಭ್ರಮಿಷ್ಟತನ ಇವೆಲ್ಲ ಸ್ತ್ರೀರೋಗಗಳಮೇಲೆ ರಾಮಬಾಣ ಮದ್ದು ಎಂಬ್ರೋಸಿಯಾವು ಸಮಸ್ತ ಸ್ತ್ರೀರೋಗಗಳನ್ನು ದೂರಮಾಡಿ, ಸ್ತ್ರೀಯರನ್ನು ಸಶಕ್ತ ಹಾಗು ಸೌಂದರ್ಯವಂತರನ್ನಾಗಿ ಮಾಡುತದೆ.

ಒಮ್ಮೆ ಪರೀಕ್ಷೆ ನೋಡಿ

ಬೆಲೆ ಬಾಟ್ಲಿ ೧ ಕ್ಕೆ ರೂಪಾಯಿ ೨—೦—೦

ಏಜಂಟರು — **ವೀರಿಯಲ ಏಜನ್ಸಿ,**
ಪ್ರಿನ್ಸೆಸ ಸ್ಟ್ರೀಟ, ಮುಂಬಯಿ ನಂಬರ ೨.

DAVAR'S

COLLEGE OF COMMERCE.
(Established 25 years)
CELEBRATES ITS SILVER JUBILEE
THIS YEAR UNDER THE DISTINGUISHED PATRONAGE OF MERCHANT-PRINCES, LEADERS OF THOUGHT AND EDUCATION

The Institution under the sole direction of its Founder and Principal has done pioneer work in introducing for the First Time in India Courses in SPECIALISED BANKING, SPECIALISED SECRETARIAL WORK and SPECIALISED ACCOUNTANCY as the result of his numerous journeys to Europe and to the Colleges and Universities there

The fact that a Scholar has successfully trained in DAVAR'S COLLEGE has always been accepted by businessmen all over India, Burma and Ceylon as a hallmark of perfection.

Prospectus on application to the Principal,
Great Western Bldg,
Apollo Street BOMBAY

ನಮ್ಮ ಪ್ರೆಸ್ಸಿನಲ್ಲಿ

ಗೇಜಿ ಬಾಕಿ ಮಾಡದೆ ಫಾರಂಗಳ ತಯಾರಿಕೆ ವಕಾಲತ್, ಅಮಲದಾರಿ ಮೊದಲಾದ ಕೋರ್ಟ ವ್ಯವಹರಣೆಯ ಹಾಗೂ ಕನ್ನಡ್ ಇಂಗ್ಲೀಷ ಛಾಪಾಕಾಮಗಳು ಅಗ್ಗದಲ್ಲಿ ಸಿಗುತ್ತವೆ

ಮೆನೇಜರ.

[illegible]

ಪ್ರಯಾಣಿಕರ ಅನುಕೂಲತೆ ಬಗ್ಗೆ

ಡೈಲಿ ಮೋಟರ ಸರ್ವಿಸ.



ಕುಮಟೆಯಿಂದ— [illegible] ಹುಬ್ಬಳ್ಳಿಕ್ಕೆ, [illegible].

ಕುಮಟೆಯಿಂದ— [illegible], ಕಾರವಾರ

ಕುಮಟೆಯಿಂದ— [illegible] ಮಾರಕ್ಕೆ, ಕುಮಟಾ, ಹುಬ್ಬಳ್ಳಿ ಜೋಗ ಮೊದಲಾದ ಟಿಕೇಟುಗಳು ನಮ್ಮಲ್ಲಿ ಪ್ರತಿನಿತ್ಯವೂ ಸಿಗುವವು

ಬಿ. ದಾಸ.
ಏಜಂಟ ಕುಮಟಾ.

ರಾಗದ ಪೆಟ್ಟಿಗೆಗಳು.

ತಬಲಿ ಜೋಡಿ ಇತ್ಯಾದಿ ಗಾಯನ ಸಾಮಾನು



೧ ರಾಗದ ಪೆಟ್ಟಿಗೆ ಕಿಂ. ೩೦, ೪೦, ೬೦, ೭೫, ೧೦೦
೨ " ಕಾಲು ಪೆಟ್ಟಿಗೆ ಕಿಂ. ೭೫, ೮೫, ೧೨೦, ೧೫೦
೩ ತಬಲಿ ಜೋಡಿ ಕಿಂ. ೧೬, ೧೮, ೨೦. ೨೫.
೪. ಹಾರ್ಮೋನಿಯಮ ಗೈಡ (ಮರಾಠಿ) ಕಿಂ. [illegible]
ತಬಲಿ ಗೈಡ ಕಿಂ. ೧೨ ಆ.

ವಿಶೇಷ ಹಕೀಕತ್ತಿಗೆ ನಮ್ಮ ಮರಾಠಿ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ:— **ಗೋಪಾಳ ಸಖಾರಾಮ ಮತ್ತು**
ಕಂಪನಿ, ವಿಠ್ಠಲವಾಡಿ ಎದುರಿಗೆ,
[illegible] ಕಾಳಬಾದೇವಿ. ಮುಂಬಯಿ,

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ

ಕಳೆದ ೬-೭ ವರ್ಷಗಳಿಂದ ನಾವು **ಶಿವಮೊಗ್ಗಾ-ತೀರ್ಥಹಳ್ಳಿ-ಆಗುಂಬೆ, ಶಿವಮೊಗ್ಗ** [illegible] ಶಿವಮೊಗ್ಗಾ-ಹರಿಹರ-ದುರ್ಗಾಪತಿ, **ಶಿವಮೊಗ್ಗಾ-ಕಳೂರಕಟ್ಟೆ, ಸಾಗರ-ಸೊರ** [illegible] ಸಾಗರ-ತೀರ್ಥಹಳ್ಳಿ, ಸಾಗರ-ಕಳೂರಕಟ್ಟೆ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಸರ್ವೀಸನ್ನು ನಡೆಸುತ್ತಿದ್ದುದಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ್ಳ, ಉಡುಪಿ, ಕುಂದಾಪುರ, ಮು [illegible] ಹಾಗು [illegible] ಈ ಕಡೆಗೆ "ಕಾರ್ಕಳ ಮೋಟರ ಸರ್ವೀಸಿನ" ವಿದ್ಯಮಾನವೂ, ಬಳ್ಳಾರಿ [illegible] "ಲಕ್ಷ್ಮೀ ಮೋಟರ ಸರ್ವಿಸಿನ" ವಿದ್ಯಮಾನವೂ ಪ್ರಯಾಣಿಕರ ಎಲ್ಲ ಸೌ [illegible] ವ್ಯವಸ್ಥೆ ಮಾಡಿರುತ್ತೇವೆ.

ಉತ್ತರ ಕನ್ನಡ ಜಿಲ್ಲೆಯ ಪ್ರಯಾಣಿಕರು ಜೋಗ (Gersoppa Falls); ಶಿ [illegible] ಸಾಗರ, [illegible] ಮುಂತಾದ ಸ್ಥಳಗಳಿಗೆ ಪ್ರಯಾಣ ಬೆಳೆಸಲು ಅನುಕೂಲವಾಗ [illegible] ಶಿವಮೊಗ್ಗಾ, ಸಾಗರ, ಜೋಗ, ಸಿದ್ದಾಪುರ, ಶಿರ್ಸಿ, ಕುಮಟಾ ಈ ಲೈನಿನಲ್ಲಿ ಮೋಟರ ಸರ್ವಿ [illegible] ಪ್ರಾರಂಭ ಮಾಡಿರುತ್ತೇವೆ

ಕಾಲಕ್ರಮಗಳು.

ಕುಮಟೆಯಿಂದ ಹೊರಡುವದು—	ಬೆಳಿಗ್ಗಿನ ೭ ಘಂಟೆಗೆ
ಶಿರ್ಸಿ ಸೇರುವದು—	" ೧೦ "
ಶಿರ್ಸಿಯಿಂದ ಬಿಡುವದು ಶಿವಮೊಗ್ಗಾ ಕಡೆಗೆ—	ಮಧ್ಯಾಹ್ನ ೧ "
ಶಿವಮೊಗ್ಗಾ ಸೇರುವದು (ಸಿದ್ದಾಪುರ ಮಾರ್ಗವಾಗಿ)—	ಸಾಯಂಕಾಲ ೬ "
ಶಿವಮೊಗ್ಗೆಯಿಂದ ಶಿರ್ಸಿ ಕಡೆಗೆ ಹೊರಡುವದು—	ಬೆಳಿಗ್ಗಿನ ೬ "
ಸಿದ್ದಾಪುರದ ಮೇಲಿಂದ ಶಿರ್ಸಿಗೆ ಸೇರುವದು—	" ೧೧ "
ಶಿರ್ಸಿಯಿಂದ ಕುಮಟೆಗೆ ಹೊರಡುವದು—	ಮಧ್ಯಾಹ್ನ ೨ "
ಕುಮಟೆ ಸೇರುವದು—	ಸಾಯಂಕಾಲ ೫ "

A B — ಈ ಮೇಲಿನ ಲೈನುಗಳ ವಿನಹ ಶಿರಶಿಯಿಂದ ಹುಬ್ಬಳ್ಳಿಗೆ ಪ್ರತ್ಯೇಕ ಹಿಂದು [illegible] ಸ್ಥಾಪಿಸುವ ಯೋಚನೆ ನಡೆದಿರುತ್ತದೆ. ಸರ್ವರೂ ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿ

SHIMOGA,
22—11—1924.

M. MANJAPPA.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕಿಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧು [illegible] ಔಷಧಿಯಾಗಿದ್ದು ಬಹಳ ಸೌಮ್ಯವಾಗಿಯೂ ರುಚಿಕರವಾಗಿಯೂ ಇರುತ್ತ [illegible] ಸೇವಿಸುವದರಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗ [illegible] ಪ್ರವರ್ಧಮಾನವಾಗುವದು. (ನಿ [illegible] ಒಂದೇ ಸಪ್ತಕದಲ್ಲಿ ಇದರ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ [illegible] ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ [illegible] ಬಂದಾಗುವದು — [illegible] ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. [illegible] ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ [illegible] ಇದರಿಂದ ಕ್ಷಯರೋಗ, ಉದರರೋಗ ಮತ್ತು [illegible] ಗಳು ನಾಶವಾಗ [illegible] ಊಟಮಾಡಿದರೂ ಅನ್ನ ಪಚನವಾಗಿ ಹಸಿವು ಚನ್ನಾಗಿ ಆಗುತ್ತದೆ. [illegible] ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸ [illegible] ಒಂದು ವಾರದಲ್ಲಿ ನಾಶವಾಗುವದು ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರ [illegible] ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದ [illegible] ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ ಮೂರು ಬಾಟಲಿಯ ಕಿ [illegible] ೩—೪—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚ [illegible] ಬಾಟಲಿಗಳ ಕಿಮ್ಮತ್ತು ೧೩—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. [illegible] ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧—೪—೦ ೩ ಬಾಟ್ಲಿಗೆ ೩—೦—೦, [illegible]

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸು ಪೋ. ನಿಪ್ಪಾಣಿ, ಜಿ ಬೆಳಗಾ

Wanted.

A Secretary for the Karwar Urban Co-operative Bank, Limited on a monthly pay of Rs. 50-75 according to qualifications, with future prospects. Only those who know Kanarese, Marathi and English, and have experience of work in Co-operative or other Banks should apply with testimonials. Graduates will be preferred. Applictaions should reach the Bank before the 25th of July 1925.

Karwar, 30 6-1925. } **D. B. Nadkarni** *Chairman.*

— [illegible]

ಕೈರಾಟೆಯ ಪ್ರಸಾರ.

[illegible]

[illegible]

[illegible]

[illegible]

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ಮಿಂಚುವ ಕೇಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಅಂಥ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಸಾಧನವಾವುದೋ.

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ)

[illegible]

[illegible]

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10-0 ವ್ಹಿ. ಪಿ ಖರ್ಚು 0-14-0.

ಅತಿ ಮನೋಹರವಾದ ಸುಗಂಧಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ.)

[illegible]

ಸಣ್ಣ ಸೀಸೆ 1 ಕ್ಕೆ 0-8-0; 1 ಪ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-

ಒಟ್ಟೋ-ದಿಲ್ ಬಹಾರ್ ಪರಿಮಳ ಕಾಗದಗಳು ಡಜನ್ 1 ಕ್ಕೆ 0-12-0

Address: **The Anglo Indian Drug & Chemical Co**

16, Market, **BOMBAY**

ವಿವಿಧ ಸಂಗ್ರಹ.

ಗೋವುಗಳನ್ನು ಜೋಪಾನ ಮಾಡಿರಿ!

ಅಖಿಲ ಭಾರತೀಯ ಗೋಪರಿಷತ್ತು, ಹಾಗು ಹಿಂದುಸ್ಥಾನದೊಳಗಿನ ಗೋವುಗಳ ಅಭಿವೃದ್ಧಿ ಸಂರಕ್ಷಣೆಗಳ ಸಂಘದ ಕಾರ್ಯದರ್ಶಿಗಳಾದ ಶ್ರೀ ಕೆ. ಎಸ್. ಜೆಸ್ವಾವಾಲಾರವರು ಮಹಾತ್ಮಾ ಗಾಂಧಿ ಮೊದಲಾದ ಭಾರತೀಯ ಪ್ರಮುಖರಿಗೆ ಒಂದು ಪತ್ರವನ್ನು ಬರೆದು ಭಾರತ ದೇಶವನ್ನು ದನಗಳ ಕೊಲೆಯ ವಿಪತ್ತಿನಿಂದ ಪಾರುಗಾಣಿಸಲು ಬೇಡಿಕೊಂಡಿರುವರು. ವರ್ಷ ವರ್ಷಕ್ಕೆ ಗೋಧನವು ಕಡಿಮೆ ಯಾಗುತ್ತ ನಡೆದದೆ. ೧೯೨೦ ನೇ ಇಸ್ವಿಯಲ್ಲಿ ೪ ಕೋಟಿ ೩೦ ಲಕ್ಷ ಕರುಗಳಿದ್ದವು ೧೯೩೧ ನೇ ಇಸ್ವಿಯಲ್ಲಿ ಲೆಕ್ಕ ಮಾಡಿದರೆ, ೨ ಲಕ್ಷ ಕಡಿಮೆ. ಶ್ರೀ ಜೆಸ್ವಾವಾಲಾರವರು, ತಮ್ಮ ಪತ್ರದಲ್ಲಿ ಕೆಲವು ಅಭಿಪ್ರಾಯಗಳನ್ನೂ, ಅಂಕಿಗಳನ್ನೂ ನಮೂದಿಸಿರುವರು. ಅವನ್ನು ಹಿಂದೂ-ಮುಸಲ್ಮಾನರು ಲಕ್ಷದಲ್ಲಿಡತಕ್ಕದ್ದು. ಮಹಮ್ಮದಿಯ ಬಾಂಧವರು ವಿಶೇಷವಾಗಿ ಲಕ್ಷದಲ್ಲಿಡತಕ್ಕದ್ದು. ಯಾಕೆಂದರೆ, ಹಿಂದೂಗಳಿಗಿಂತ ಮಹಮ್ಮದೀಯ ಬಾಲಕರೇ ಹಾಲಿನ ಕೊರತೆಯಿಂದ ಹೆಚ್ಚಿಗೆ ಸಾಯುತ್ತಾರೆಂದು ಜೆಸ್ವಾವಾಲಾರವರು [illegible] ತ್ತಾರೆ. ಕಾರ್ಯದರ್ಶಿಗಳು ಹೇಳುವದೇನಂದರೆ —

೧ ಮುಂಬಯಿ ಸರಕಾರವು ಪ್ರಾಂತದೊಳಗಿನ ಗೋವನ್ನು ಕಾಪಾಡುವ, ಸುಧಾರಿಸುವ ಉಪಾಯ ಯೋಜನೆ ಮಾಡುವದಕ್ಕೆ ಒಂದು ಮಂಡಳವನ್ನು ನೇಮಿಸಿತ್ತು. ಅವರು ಅಭಿಪ್ರಾಯಪಡುವದೇನಂದರೆ.— "ಚೊಕ್ಕ ಹಾಲು ದೊರಕಬೇಕಾದರೆ, ದನಗಳ ಕೊಲೆಯನ್ನು ತಗ್ಗಿಸಲು ಉಪಾಯ ಕೈಕೊಳ್ಳಬೇಕು."

೨. ೧೯೩೩ ನೇ ಇಸ್ವಿಯ ಫೇಬ್ರುವರಿ ೧೭ ನೇ ತಾರೀಖಿಗೆ ಸಂಯುಕ್ತ ಪ್ರಾಂತದಲ್ಲಿ ಗೋವುಗಳ ಅಭಿವೃದ್ಧಿಯ ವಿಚಾರ ಮಾಡಲು ಒಂದು ಸಭೆ ನೆರೆದಿತ್ತು. ಸಭಿಕರು ಅಭಿಪ್ರಾಯಪಟ್ಟದ್ದೇನಂದರೆ— "ಸಿಕ್ಕ ಸಿಕ್ಕ ಕಾರಣವಿಲ್ಲದೆ ಮಾಡುವ ದನಗಳ ಕೊಲೆಯನ್ನು ಸಭೆಯು ನಿಷೇಧಿಸುತ್ತದೆ. ಉಪಯುಕ್ತ ದನಗಳ ಸಂಹಾರ ನಿಲ್ಲುವಂತೆ ನಿಯಮಗಳನ್ನು ಮಾಡಬೇಕು."

೩. ಮಿ|| ಈಸಾ ಟ್ರೇಸಿ ಎಂಬವರು, ಗೋಪ್ರಶ್ನೆಯನ್ನು ಸೂಕ್ಷ್ಮವಾಗಿ ಪರ್ಯಾಲೋಚಿಸಿ, "ಹಿಂದುಸ್ಥಾನದೊಳಗಿನ ಗೋಸಂಹಾರ" ವೆಂಬದೊಂದು ಗ್ರಂಥವನ್ನು ಬರೆದಿರುವರು. ಅವರು ಹೇಳುವದೇನಂದರೆ:— 'ಕೊಲೆಗಡುಕರಿಗೆ ಚಲುವ ಆಕಳುಗಳನ್ನು ಮಾರುವದು, ರಾಷ್ಟ್ರಹಾನಿಯು; ಮಹಾ ಅಪರಾಧವು."

೪. ಮುಂಬಯಿಯ ಬೇಸಾಯ ಖಾತೆಯ ಡಾ|| ಹೆರೊಲ್ಡ ಎಚ್. ಮೆನ್, ಡಿ. ಎಸ್. ಸಿ ಇವರು ಬರೆಯುವದೇನಂದರೆ:— "ಮುಂಬಯಿ ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಹಾಲು ಹಿಂಡುವ ದನಗಳನ್ನು ಕೊಲ್ಲುವದರಿಂದ ದೇಶದೊಳಗೆ, ಸಾಕಷ್ಟು ಹಾಲಿನ ಪೂರೈಕೆಯಾಗುವದು ಕಠಿಣವಾಗಿದೆ. ಈ ವಿಷಯ ತೀವ್ರವೇ ತತ್ಪರತೆಯಿಂದ ಮಡಿಸುವದೆ ಕಾಗಿದೆ."

೫. ಸಂಯುಕ್ತ ಪ್ರಾಂತದ ಆರೋಗ್ಯ ಖಾತೆಯ ಕಮೀಶನರರಾದ ಕರ್ನಲ್ ಮೆಕ್‌ಆಗಾರ್ಟರವರು ಹೇಳುವದೇನಂದರೆ — 'ಹಾಲು ಬಡವರಿಗೂ ಸುಲಭಸಾಧ್ಯವಾದರೆ, ಅದರಿಂದ್ಯ ಕೂಸುಗಳ ಮರಣದ ಪ್ರಮಾಣವು ಸಹಜವಾಗಿ ಕುಗ್ಗವಹಾಗಿದೆ, ಶಿಕ್ಷಣ ಪಡೆದ ದಾಯಿಗಳಿಗಿಂತ ಈ ಉಪಾಯವು ವಿಶೇಷ ಪರಿಣಾಮಕಾರಕವು."

ಈ ಅಭಿಪ್ರಾಯಗಳನ್ನು ಕೊಟ್ಟು ಶ್ರೀ ಜೆಸ್ವಾವಾಲಾರವರು ಬರೆಯುವದೇನಂದರೆ:— "ಕೆಲಕೆಲವು ಮ್ಯುನಿಸಿಪಾಲಿಟಿಗಳಲ್ಲಿ ನೂರಕ್ಕೆ ೩೦ ರಿಂದ ೫೦ ರ ವರೆಗೆ ಎಳೆ ಪ್ರಾಯದ ಉಪಯುಕ್ತ ದನಗಳು ಕೊಲ್ಲಲ್ಪಡುತ್ತಿವೆ. ಮುಂಬಯಿಯ ನೆರೆಯ ಬಾಂದ್ರಾದಲ್ಲಿ ಗೋವಧಸ್ಥಾನವಿದೆ. ಇಲ್ಲಿ ಕೊಲೆಗೀಡಾಗುವ ದನಗಳ ಸರಾಸರಿ ಪ್ರತಿ ವರ್ಷದಲ್ಲಿ ಹೆಚ್ಚಾಗುತ್ತದೆ. ೨ ವರ್ಷಕ್ಕೆ ಮೀರಿದ ೪೫೭, ೩ ವರ್ಷದಿಂದ ೭ ವರ್ಷದೊಳಗಿನ ೯೮೮, ೮ ವರ್ಷ [illegible] ೧೪೦೩ ಆಕಳು-ಕರುಗಳು ಕೊಲ್ಲಲ್ಪಟ್ಟವು ಇದಲ್ಲದೆ, ೧೪೭ ಎತ್ತುಗಳ ಕೊಲೆಯಾಯಿತು. ಇದು ಪ್ರತಿ [illegible] ಎಮ್ಮೆಗಳ ಪ್ರಮಾಣವು [illegible], ೩,೫೬೩ ಹೋರಿ-ಎತ್ತುಗಳು, [illegible] ಆಕಳು-ಕರುಗಳು [illegible], ೩,೩೩,೨೧೩ ಎಮ್ಮೆಗಳು, [illegible]. ೫ ವರ್ಷಗಳ ಹಿಂದು ಮಾಡಿ [illegible] ಕಡಿಮೆಯಾಗಿರುವವೆಂದು ಕಂಡುಬರುತ್ತದೆ. ಬೇಸಾಯ ಕ್ಷೇತ್ರವು ೪೬,೩೬,೦೦೦ ಎಕರೆ ಕುಗ್ಗಿತು." ಕೊನೆಗೆ ಶ್ರೀ ಜೆಸ್ವಾವಾಲಾರವರು [illegible] ಕಾಯಿದೆಯನ್ನು ಮಾಡಿ ೪ ವರ್ಷಕ್ಕಿಂತ ಕಡಿಮೆ ವಯಸ್ಸಿನ ಕರುಗಳ ಕೊಲೆಯನ್ನು ಪ್ರತಿಬಂಧಿಸಬೇಕು, ಪ್ರತಿ ೧೦೦ ಎಕರೆ ಭೂಮಿ ಸಾಗುವಳಿಗುವಲ್ಲಿ ೫ ಎಕರೆ ಸ್ಥಳವನ್ನು ಸರಕಾರವು ಮೇವಿಗಾಗಿ [illegible] ಕರಿಗೆಯ ಸ್ವತಂತ್ರವಾಗಿ [illegible] ಬಿಡಬೇಕೆಂದೂ [illegible] ಸೂಚಿಸಿರುವರು.

⁂

ಗಾಂಧಿ ಭಕ್ತಿ!

ಮಹಾತ್ಮರು ಬಂಗಾಲದಲ್ಲಿ ಪ್ರಯಾಣ ಬೆಳೆಸಿದಾಗ ಒಬ್ಬನ ಗಾಂಧಿಭಕ್ತಿಯ ಒಂದು ಉದಾಹರಣೆಯನ್ನು ಶ್ರೀ ಮಹಾದೇವ ದೇಸಾಯಿಯವರು ನಮೂದಿಸಿರುವರು. [illegible] ಪಟ್ಟಣದಲ್ಲಿ ೨೦ ವರ್ಷ ಪ್ರಾಯದ ಒಬ್ಬ ಯುವಕನು ಮಹಾತ್ಮರ ಬೆನ್ನು ಹತ್ತಿಕೊಂಡನು. ಆತನ ಕೊರಳಿಗೆ ಮಹಾತ್ಮರ ಭಾವಚಿತ್ರವು ತೂಗಬಿಡಲ್ಪಟ್ಟಿತ್ತು. "ಮಹಾತ್ಮರನ್ನು ಕಂಡ ಕೂಡಲೆ, ಆತನು ಭಕ್ತಿಭಾವದಿಂದ ಚರಣಗಳಿಗೆರಗಿ ಮಹಾತ್ಮರ ಉಪಕಾರ ಸ್ಮರಿಸಿದನು. ತನಗೆ ಅರ್ಧಾಂಗವಾಯು [illegible] ದವಾಖಾನೆಗಳಿಂದ ತಾವೇ ಪಾರಾಗಿಸಿದಿರಿ. ಎಲ್ಲ ಉಪಾಯಗಳಿಂದ ಬೇಸರಿಯಾದ ಬಳಿಕ ನಿಮ್ಮ ನಾಮಸ್ಮರಣೆಯನ್ನು ನಾನು ಪುನಃ ಪುನಃ ಮಾಡಿದೆನು. ಒಂದು ದಿನ ನನ್ನ ಪ್ರಕೃತಿಯು ನೆಟ್ಟಗಾಯಿತು. ಮಹಾತ್ಮರು ನುಡಿದದ್ದೇನಂದರೆ:— "ನಾನು ನಿನಗೆ ಗುಣಪಡಿಸಲಿಲ್ಲ. ಪರಮಾತ್ಮನೇ ನಿನ್ನನ್ನು ಆರೋಗ್ಯವಂತನಾಗಿ ಮಾಡಿದನು. ಮಹಾತ್ಮರು ಎಷ್ಟು ತಿಳಿಸಿಹೇಳಿದರೂ, ಆತನು ಒಪ್ಪಲಿಲ್ಲ. ಕೊನೆಗೆ ಮಹಾತ್ಮರು ನುಡಿದದ್ದೇನಂದರೆ,— "ಗೆಳೆಯನೇ ನಿನ್ನ ಕೊರಳಲ್ಲಿರುವ ಭಾವಚಿತ್ರವನ್ನು ತೆಗೆದರೆ ನನಗೊಂದು ಉಪಕಾರವಾಗುವದು." ಕೂಡಲೆ, ಆತನು ಭಾವಚಿತ್ರವನ್ನು ತೆಗೆದು, ಪರಮಾತ್ಮನ ಸ್ಮರಣೆ ಮಾಡುತ್ತ ನಡೆದನು. ಗಾಂಧಿ ಭಕ್ತಿಯು ಅಶಿಕ್ಷಿತರಲ್ಲಿ ಮಾತ್ರ ಕಂಡುಬರುತ್ತದೆಂದು ಹೇಳಲಾಗದು. ಶ್ರೀ|| ಮಹಾದೇವ ದೇಸಾಯಿಯವರು ಒಬ್ಬ ವಕೀಲರ ಗಾಂಧಿಭಕ್ತಿಯ ಉದಾಹರಣೆಯನ್ನಿತ್ತಿರುವರು. ಮಹಾತ್ಮರು ಪ್ರಯಾಣ ಮಾಡುತ್ತಿದ್ದ ಉಗಿಬಂಡಿಯು ಒಂದು ಸ್ಟೇಶನಿನಲ್ಲಿ ಬಂದು ನಿಂತಿತ್ತು. ಹೊರಡುವ ಸಮಯವಾಯಿತು. ಅಷ್ಟರಲ್ಲಿ ವಕೀಲರೊಬ್ಬರು ಬಂಡಿಯನ್ನು ಹತ್ತುತ್ತಿದ್ದರು. ಕಾಲು ಜಾರಿ ಕೆಳಗಾಗಿ ಅವರು ಬಿದ್ದರು. ಅದೇ ಬಂಡಿಯಿಂದ ಅವರ ಮಗನೂ ಪ್ರವಾಸಮಾಡುತ್ತಿದ್ದನು. ಕೂಡಲೆ, ಆತನು ಅಪಾಯಕಾಲದ ಸರಪಳಿಯನ್ನು ಎಳೆದು, ಬಂಡಿಯನ್ನು ನಿಲ್ಲಿಸಿದನು. ವಕೀಲರು ಕ್ಷೇಮದಿಂದ ಬಂಡಿಯನ್ನು ಹತ್ತಿದರು. ಉಗಿಬಂಡಿಯು ಮತ್ತೊಂದು ಸ್ಟೇಶನಿಗೆ ಮುಟ್ಟಿದ ಕೂಡಲೆ, ವಕೀಲರು ಮಹಾತ್ಮರ ಬಳಿಗೆ ಬಂದು, ನಡೆದ ಹಕೀಕತನ್ನು ನಿವೇದಿಸಿ, ಮಹಾತ್ಮರು ಬಂಡಿಯಲ್ಲಿರದಿದ್ದರೆ, ತಾವು ಬದುಕುತ್ತಿದ್ದಿಲ್ಲವೆಂದು ಉದ್ಗರಿಸಿದರು. ಇದನ್ನು ಕೇಳಿ ಮಹಾತ್ಮರು— "ನಾನಿಲ್ಲದಿದ್ದರೆ, ಅಪಘಾತವು ಸಂಭವಿಸುತ್ತಿದ್ದಿಲ್ಲ; ಹೀಗೇಕೆ ನೀವು ಹೇಳುವದಿಲ್ಲ?" ಎಂದು ಮಹಾತ್ಮರು ಮರುಸವಾಲು ಮಾಡಿದರು. ಅದರೆ, ಮಹಾತ್ಮರ ಸಾನ್ನಿಧ್ಯದಲ್ಲಿ ಸಮಸ್ತರಿಗೂ ಕಲ್ಯಾಣವಾಗುತ್ತದೆಂಬ ಭಾವನೆಯು ದೃಢಮೂಲವಾಗಿದೆ.

⁂

ಸುಳ್ಳಾಡುವವರು ಕೈಯನ್ನೆತ್ತಿರಿ!

ಬಂಗಾಲದೊಳಗಿನ ನವಾಬಗಂಜ ಜಿಲ್ಹೆಯ ಕಾಮಿಲಾ ಪಟ್ಟಣದಲ್ಲಿ ಒಂದು ದೊಡ್ಡ ರಾಷ್ಟ್ರೀಯ ಶಾಲೆಯಿದೆ ಈ ರಾಷ್ಟ್ರೀಯ ಶಾಲೆಯ ಯಜಮಾನರು ಶ್ರೀ|| ಹರಿಪ್ರಸಾದರವರು. ರಾಷ್ಟ್ರೀಯ ಶಾಲೆಯ ಹುಡುಗರೆಲ್ಲರೂ ಖಾದಿಯನ್ನೇ ಧರಿಸುತ್ತಾರೆ. ಮಹಾತ್ಮರು ಶಾಲೆಯನ್ನು ಮುಂಜಾವಿಗೆ ಸಂದರ್ಶಿಸಿದರು. ಹಿಂದಿನ ದಿನ ರಾತ್ರಿ ವಿಪರೀತ ಮಳೆ ಸುರಿದದ್ದರಿಂದ ಹುಡುಗರಿಗೆ ಬೇಗನೆ ಶಾಲೆಗೆ ಹೋಗಲು ಕೂಡಲಿಲ್ಲ. ಸ್ವಲ್ಪ ಅವಕಾಶದಿಂದ ಮಹಾತ್ಮರಿದ್ದೆಡೆಗೆ ಬಾಲಕರು ಹೋದರು. ಬೇರೆಕಡೆಯಲ್ಲಿ ಆಗಲೇ ಹೋಗಬೇಕಾದ್ದರಿಂದ ಕೆಲ ಹೊತ್ತು ಹುಡುಗರೊಡನೆ ಮಾತುಕತೆ ನಡಿಸಿದರು. "ನೀವೆಲ್ಲರೂ ನೂಲ ತೀರಿ; ಖಾದಿಯನ್ನು ಧರಿಸುತ್ತೀರಿ; ಯಾವಾಗಲೂ ಸುಳ್ಳಾಡದೆ, ಸತ್ಯವನ್ನಾಡುವವರಾರು?" ಹುಡುಗರು ಕೈಯೆತ್ತಿದರು. "ಇರಲಿ, ಪ್ರಸಂಗದಲ್ಲಿ ಸುಳ್ಳಾಡುವವರು ಯಾರು?" ಕೂಡಲೆ, ಒಬ್ಬರು ಕೈಯೆತ್ತಿದರು. ಬಳಿಕ, ಒಬ್ಬನು, ಇನ್ನೊಬ್ಬನು ಹೀಗೆ ಎಲ್ಲರೂ ಕೈಯೆತ್ತಿದರು "ಸಾಕು, ತಾವು ಪ್ರಸಂಗದಲ್ಲಿ ಸುಳ್ಳಾಡುತ್ತೇವೆಂದು ತಿಳಿದು ಒಪ್ಪಿಕೊಳ್ಳುವವರು ಮುಂದೆ ಸುಧಾರಿಸಬಹುದು; ಎಂದೂ ಸುಳ್ಳಾಡುವದಿಲ್ಲೆಂದು ತಿಳಿಯುವ ಮಂದಿಗಳ ಅವಸ್ಥೆಯು ಮಾತ್ರ ಕಠಿಣವಿದೆ, ಇಬ್ಬರೂ ಸುಧಾರಿಸಲೆಂದು ಬಯಸ"

— ಮೈಸೂರಿನ ಮಹಾರಾಜರು ಶ್ರೀ ದೇವಲಂದರ ಜರ್ಮನ ಆಟವನ್ನು ತಮ್ಮ ಜಗನ್ಮೋಹನ ಅರಮನೆಯಲ್ಲಿ ಮಾಡಿಸಿ, ಪ್ರೊಫೆಸರ ಮಹಾಶಯರಿಗೆ ೧,೦೦೦ ರೂಪಾಯಿಗಳ ಪಾರಿತೋಷಕವನ್ನರ್ಪಿಸಿದರು.

ದುಡ್ಡಿನ ದುರಾಶೆ!

ಚೀನದೊಳಗಿನ ಪಾಶ್ಚಾತ್ಯರ ಅತ್ಯಾಚಾರಗಳು.

ಸದ್ಯಕ್ಕೆ ಚೀನ ದೇಶದೊಳಗಿನ ವಿದ್ಯಾರ್ಥಿಗಳು ಬ್ರಿಟಿಶ ಮುತ್ಸದ್ದಿಗಳ ಕಣ್ಣು ಕುಕ್ಕುತ್ತಿರುವರು. ಕಪ್‌ಹೆರ್ ದೊರೆಗಳು ಆಡಿದ ಮಾತುಗಳನ್ನು ವಾಚಕರು ಅರಿತಿರುವರು. ಚೀನದೊಳಗಿನ ಪ್ರಜೆರಮೇಲೆ ಪಾಶ್ಚಾತ್ಯ ರಾಷ್ಟ್ರಗಳೂ, ಪಾಶ್ಚಾತ್ಯರಲ್ಲಿ ಸೇರಿಕೊಂಡ ಜಪಾನ ದೇಶವೂ ನಡಿಸಿದ ಅತ್ಯಾಚಾರಗಳನ್ನು ಈ ಲೇಖದಲ್ಲಿ ನಿವೇದಿಸಲಿಚ್ಛಿಸುವೆವು.

ಚೀನ ದೇಶದಲ್ಲಿ ಅಫೀಮಿಗೆ ಪ್ರತಿಬಂಧವಾದೊಡನೆ ಬ್ರಿಟಿಶರು ಅಫೀಮಿನ ಯುದ್ಧ ನಡಿಸಿ, ಚೀನಿ ಪ್ರಜೆಗಳು ಅಫೀಮನ್ನು ತಿನ್ನಲೇಬೇಕು; ನಮಗೆ ಲಾಭ ಕೊಡಲೇಬೇಕು; ಎಂಬ ದುಷ್ಟ ಹೇತುವಿನಿಂದ ಪಶುತುಲ್ಯಬಲದಿಂದ ವಿಜಯ ಸಂಪಾದಿಸಿದರು. ಮತ್ತು ಚೀನದೊಳಗಿನ ಬಂದರಗಳನ್ನು ಕ್ರಮವಾಗಿ ಸ್ವಾಧೀನಪಡಿಸಿಕೊಂಡರು. ಕ್ರಮವಾಗಿ ಚೀನದೊಳಗಿನ ರಾಜಕಾರಣದಲ್ಲಿಯೂ ಪಾಶ್ಚಾತ್ಯ ವರ್ತಕರು ಹಂಚುಪ್ರತೀಕ ಮಾಡಿ, ಚೀನ ದೇಶವನ್ನು ತುಂಡರಿಸಿಬಿಟ್ಟರು. ಯುರೋಪಿಯನ್ನರ ಪ್ರವೇಶವೆಂದರೆ. ಕಲಿಪ್ರವೇಶವು. ಅಲ್ಲಿಯ ಕೈಗಾರಿಕೆಗಳೂ, ಉದ್ಯೋಗಗಳೂ ನಷ್ಟವಾದವು. ಅಲ್ಲಿ ಕೂಲಿಗಳಿಗೆ ಕೂಲಿಯ ಪ್ರಮಾಣವು ತೀರ ಕಡಿಮೆ. ವರ್ತಕರು ಸ್ವದೇಶದೊಳಗಿಂದ ಸಾಮಗ್ರಿಗಳನ್ನು ಒಯ್ದು ಮಾರಿ ಲಾಭ ಹೊಂದುವದಕ್ಕಿಂತ ಚೀನ ದೇಶದಲ್ಲಿಯೇ ಕಾರಖಾನೆಗಳನ್ನಿಡುವದು ಹೆಚ್ಚು ಲಾಭಕರವೆಂದು ಕಂಡುಹಿಡಿದು, ಚೀನದಲ್ಲಿ ಸ್ವಂತ ಕಾರಖಾನೆಗಳನ್ನು ಸ್ಥಾಪಿಸಿದರು. ಕಾರಖಾನೆಗೆ ಬೇಕಾಗುವ ಕಚ್ಚಾ ಸಾಮಗ್ರಿಯನ್ನು ಸಿಕ್ಕಿದರೆ ಚೀನ ದೇಶದಲ್ಲಿ ಕೊಳ್ಳುವದು, ಇಲ್ಲದಿದ್ದರೆ, ಪರದೇಶಗಳಿಂದ ಒಯ್ಯುವದು, ಮತ್ತು ತಯಾರು ಮಾಲನ್ನು ಚೀನ ದೇಶದಲ್ಲಿ ಮಾರಿ, ಗಂಟು ಕಟ್ಟುವದು; ಈ ಪ್ರಕಾರವು ನಡೆಯಿತು. ಇದರಿಂದ ಚೀನ ದೇಶದೊಳಗಿನ ಆರ್ಥಿಕ ಪ್ರಪಂಚವೆಲ್ಲ ಸ್ಥಿರವಾಗಿ ಶೂನ್ಯವಾಯಿತು.

ಕಾರಖಾನೆಯೊಳಗಿನ ಅಮಾನುಷ ಅತ್ಯಾಚಾರಗಳನ್ನು ಕೇಳಿರಿ! ಸಾವುಕಾರರು ೫-೬ ವರ್ಷ ಪ್ರಾಯದ ಹುಡುಗರನ್ನು ಗಿರಣಿಗಳಲ್ಲಿ ಕೂಲಿಯಾಳಾಗಿ ಸೇರಿಸಿಕೊಳ್ಳುತ್ತಾರೆ. ತೀರ ಬಡತನ! ದುಡ್ಡಿನ ಆಶೆ! ೨ ಹೊಲರು, ಅಂದರೆ, ತಿಂಗಳಿಗೆ ೬ ರೂಪಾಯಿ ಸಂಬಳ ಗೊತ್ತುಮಾಡಿ ತಂದೆ-ತಾಯಿಗಳು ಚಿಕ್ಕ ಮಕ್ಕಳನ್ನು ಗಿರಣಿಗಳಿಗೆ ಕಳಿಸುತ್ತಾರೆ. ಮಕ್ಕಳು ದಿವಸ-ರಾತ್ರಿ ಕೆಲಸ ಮಾಡಬೇಕು. ವಾರಕ್ಕೆ ಏಳೂ ದಿನ ಕೆಲಸವಿದೆ. ಎಳೆಬೆಳಗಿನ ೧೦ರಿಂದ ೧೨ ತಾಸಿನ ವರೆಗೆ ಕೆಲಸ ಮಾಡಬೇಕಾಗುತ್ತದೆ. ಊಟಕ್ಕೆ ಒಂದು ತಾಸು ಅವಕಾಶ ದೊರಕುವದಷ್ಟೇ. ಗಿರಣಿಗಳಲ್ಲಿ ಇಡೀ ಹೊತ್ತು ಎದ್ದು ನಿಂತು ಕೆಲಸ ಮಾಡಬೇಕು. ಮಕ್ಕಳ ಕೆಲಸದಿಂದ ಸಾವುಕಾರರಿಗೆ ತಲೆಗೆ ೧೨ ರೂಪಾಯಿ ಲಾಭವಾಗುತ್ತದೆ. ಶಾಂಘಾಯಿದಲ್ಲಿ ಬ್ರಿಟಿಶರ ೫ ಗಿರಣಿಗಳು ಇವೆ; ಜಪಾನದವರ ೩೦ ಗಿರಣಿಗಳಿವೆ. ಅಂದರೆ, ೫ ಬ್ರಿಟಿಶ ಗಿರಣಿಗಳೆಂದರೆ, ೧೦ ಜಪಾನ ಗಿರಣಿಗಳು; ಅಷ್ಟು ಬ್ರಿಟಿಶ ಗಿರಣಿಗಳು ದೊಡ್ಡವು. ಸಾವುಕಾರರು ಲಾಭ ಹೊಡೆಯುವ ಪ್ರಮಾಣವನ್ನು ನೀವೇ ಕಲ್ಪಿಸಿರಿ. ೧೯೧೯ ನೇ ಇಸ್ವಿಯಲ್ಲಿ ಇಂಗ್ಲಂಡದಿಂದ ಚೀನದಲ್ಲಿ ೨ ಸಾವಿರ ಟನ್ನು ಅರಿವೆ ಮಾಡುವ ಗಿರಣಿಗಳ ಯಂತ್ರಸಾಮಗ್ರಿಯು ಆಮದಾಯಿತು. ಇದರಮೇಲಿಂದ ಪರರಾಷ್ಟ್ರ ವರ್ತಕರು ಚೀನ ದೇಶದಲ್ಲಿ ನಡಿಸಿದ ಸುಲಿಗೆಯು ಅರಿವು ವಾಚಕರಿಗಾಗುವ ಹಾಗಿದೆ.

ಚೀನ ದೇಶದೊಳಗಿನ ಪ್ರಜೆಗಳು ಹೀಗೆ ನಿತ್ಯವೂ ಸುಲಿಯಲ್ಪಟ್ಟು ಬಹಳ ವಿಪನ್ನಾವಸ್ಥೆಗೆ ಬಂದಿರುವರು. ಅವರು ಸಾಮಗ್ರಿಗಳ ಮೇಲೆ ಕಸ್ಟಮ್ ತೆರಿಗೆಗಳನ್ನು ಹೇರಿ ಸ್ವಸಂರಕ್ಷಣ ಮಾಡಿಕೊಳ್ಳಲಿಕ್ಕೂ ಈ ವರ್ತಕರೇ ಅಡ್ಡಗಟ್ಟುತ್ತಿರುವರು. ಅಫೀಮ ಯುದ್ಧಗಳಿಂದ ಚೀನ ದೇಶದೊಳಗಿನ ಬಂದರಗಳಲ್ಲಿ ಸಂಪಾದಿಸಿದ ರಾಷ್ಟ್ರವಿನಾಶಕ ಅನುಕೂಲ್ಯಗಳನ್ನು ತ್ಯಜಿಸಬೇಕೆಂದೂ ಚೀನ ದೇಶದವರ ಹೇಳಿಕೆ ಇದೆ. ಈ ಬಗ್ಗೆ ಅಮೇರಿಕೆಯ ವಾಶಿಂಗಟನ್ ಪಟ್ಟಣದಲ್ಲಿ ಪರಿಷತ್ತು ಸೇರಿ, ನಿರ್ಣಯವಾಗಿತ್ತು. ಆದರೆ, ಅದಕ್ಕೆ ಬ್ರಿಟಿಶರೂ, ಜಪಾನದವರೂ ಸ್ವಾರ್ಥಾಂಧರಾಗಿ ಒಪ್ಪುವದಿಲ್ಲ. ಇಂಗ್ಲಂಡದೊಳಗಿನ 'ನ್ಯೂ ಲೀಡರ' ಪತ್ರಿಕೆಯು ಬ್ರಿಟಿಶರ ಅತ್ಯಾಚಾರಗಳನ್ನು ಒಂದೊಂದಾಗಿ ಹೇಳಿರುವದು.

ಪತ್ರಿಕೆಯು ಹೇಳುವದೇನಂದರೆ. — "ನಮ್ಮ ಸೇನೆಯೂ, ನೌಕೆಯೂ ೧೮೪೦ ನೇ ಇಸ್ವಿಯಲ್ಲಿ ಯುದ್ಧ ಮಾಡಿ ಕಂಗೆಟ್ಟ ಚೀನ ದೇಶದ ಗಂಟಲಲ್ಲಿ ಒತ್ತಾಯದಿಂದ ಅಫೀಮನ್ನು ಸೇರಿಸಿತು. ೧೯೨೫ ನೇ ಇಸ್ವಿಯಲ್ಲಿ ನಮ್ಮ ಯುದ್ಧದ ಹಡಗುಪಡೆಗಳೂ, ಪೋಲೀಸರೂ ಒಟ್ಟಾಗಿ, ಶಾಂಘಾಯಿದೊಳಗಿನ ಹೆಂಗಸರು-ಹುಡುಗರ ಮೇಲೆ ಮನಸ್ಸು ಹೇಸುವ ಕೂಲಿ ಪದ್ಧತಿಯನ್ನು ಹೇರಿಸಲುದ್ಯುಕ್ತವಾದವು. ನಮ್ಮ ಹಿರಿಯರು ಮಾಡಿದಂತೆ, ನಮ್ಮ ಪ್ರಚಂಡ ಸೈನ್ಯಬಲವನ್ನು ನೀತಿಭ್ರಷ್ಟ ಮಾಡಲಿಕ್ಕೂ, ಅತ್ಯಾಚಾರ ಮಾಡಲಿಕ್ಕೂ ನಾವು ಉಪಯೋಗಿಸುತ್ತಿದ್ದೇವೆ. ಚೀನ ದೇಶದೊಳಗಿನ ಪಟ್ಟಣಗಳಲ್ಲಿ ನಾವು ಅಧಿಕಾರವನ್ನು ಅಪಹಾರ ಮಾಡಿದ್ದೇವೆ. ಅದನ್ನು ಪಡಕೊಳ್ಳುವ ಹಕ್ಕು ನಮಗಿರುವದಿಲ್ಲ. ನಿಂದ್ಯ ವ್ಯಾಪಾರಗಳಿಂದ ಲಾಭ ಪಡೆಯುವ ದುರಾಶೆಗೊಳಗಾಗಿ ಪಶುತುಲ್ಯಬಲವನ್ನು ತೋರಿಸಿ, ಒಪ್ಪಂದವನ್ನು ನಾವು ಮಾಡಿಕೊಂಡಿದ್ದೇವೆ. ಅವುಗಳಿಗೇನೂ ಬೆಲೆಯಿರುವದಿಲ್ಲ. ಈ ಬಂದರಗಳು ನಮ್ಮ ಸ್ವಾಧೀನವಿರುವವರೆಗೆ ಕ್ಷಣ ಸಹ ವಿಲಂಬ ಮಾಡದೆ, ನಮ್ಮ ಔದ್ಯೋಗಿಕ ದಾಖಲೆಯೊಳಗಿಂದ ಈ ಅನ್ಯಾಯವನ್ನು ದೂರಪಡಿಸಬೇಕೆಂದು ಕೂಲಿಕಾರ ಪಕ್ಷವು ಆಗ್ರಹ ಹಿಡಿಯಬೇಕು. (ದೊಂಬಿಯನ್ನೆಬ್ಬಿಸಿದ ವಿದ್ಯಾರ್ಥಿಗಳನ್ನುದ್ದೇಶಿಸಿ) ಈ ವಿದ್ಯಾರ್ಥಿಗಳು ತಮ್ಮನ್ನು ಬದುಕಿಸಿಕೊಳ್ಳಲು ನಮಗೆ ಮರೆಹೊಕ್ಕಿರುವರಲ್ಲವೆ?"

'ನ್ಯೂ ಲೀಡರ' ಪತ್ರಿಕಾಕರ್ತರು ತಮ್ಮ ಬ್ರಿಟಿಶ ಬಾಂಧವರ ಅಮಾನುಷ ಕೃತ್ಯವನ್ನು ನಮೂದಿಸಿರುವರು. ಅದೇನಂದರೆ:— "ಶಾಂಘಾಯಿದೊಳಗಿನ ಜಪಾನದ ಗಿರಣಿಯಲ್ಲಿ ಮೂರಾವರ್ತಿ ಕೂಲಿಕಾರರು ಸಂಪುಹೂಡಿದರು. ಈ ಮೂರೂ ಸಂಪುಗಳು ೩ ತಿಂಗಳುಗಳಲ್ಲಿ ಸಂಭವಿಸಿದವು. ಗಿರಣಿಯ ಪಾಲಕರಿಗೂ, ಸಂಪುಗಾರರಿಗೂ ವಿವಾದವಾಗಿ, ಗಿರಣಿಯವರು ಇಬ್ಬ ಚೀನಿಯರಿಗೆ ಗುಂಡುಹಾಕಿದರು. ೭ ಮಂದಿಗಳಿಗೆ ಘಾಯಗಳಾದವು. ಚೀನ ಜನರು ಸೌಮ್ಯ ಸ್ವಭಾವದವರು; ಶಾಂತ ಚಿತ್ತದವರು. ಇದರಿಂದ ಅವರಿಗೂ ಚಿತ್ತಪ್ರಕ್ಷೋಭವಾಯಿತು. ವಿದ್ಯಾರ್ಥಿಗಳೂ, ಪಟ್ಟಣದೊಳಗಿನ ಕೂಲಿಕಾರ ಸಂಘದವರೂ ಒಟ್ಟಾಗಿ ಈ ಕೃತ್ಯದ ನಿಷೇಧವೆಂದು ಮೆರವಣಿಗೆಯಲ್ಲಿ ಸೇರಿಕೊಂಡು ಕೂಗು ಮಾಡಹತ್ತಿದರು. ಕೂಗು ಮಾಡುವ ಮಾರ್ಗವು ನಾನ್‌ಕಿಂಗ ಮಾರ್ಗವಿದ್ದು, ಅದು ಬ್ರಿಟಿಶರಿಗೆ ಸ್ವಾಧೀನಪಡಿಸಿದ ಪ್ರದೇಶದೊಳಗಿಂದ ಹಾಯ್ದು ಹೋಗುತ್ತದೆ. ಬ್ರಿಟಿಶ ಪೋಲೀಸರು ಈ ಮೆರವಣಿಗೆಯ ಮೇಲೆ ಗುಂಡು ಹೊಡೆದು, ೯ ಮಂದಿಗಳನ್ನು ಕೊಂದುಬಿಟ್ಟರು; ಎರಡನೇ ದಿನ ಇನ್ನು ಮೂವರ ಕೊಲೆಯಾಯಿತು; ಮೂರನೇ ದಿನಕ್ಕೆ ಇನ್ನು ೩೧ ಜನರ ಸಂಹಾರವಾಯಿತು; ಅಂತು ೨೦೦ ಮಂದಿಗಳಿಗೆ ಘಾಯವಾಯಿತು. ಬ್ರಿಟಿಶರಿಗೆ ಏನೂ ಅಪಾಯವಾಗಲಿಲ್ಲ. ಕೆಲವರನ್ನು (ಜೀವ ದಾಶೆಗೆ) ಓಡುತ್ತಿರುವಾಗ ಗುಂಡು ಹಾಕಿ ಕೊಂದರೆಂದೂ ಚೀನದವರ ಹೇಳಿಕೆ ಇದೆ."

ಇದರ ಮೇಲಿಂದ ತಮ್ಮ ವ್ಯಾಪಾರಕ್ಕಾಗಿ, ದುಡ್ಡಿಗಾಗಿ ಸುಧಾರಿಸಿದ ರಾಷ್ಟ್ರಗಳೆಂದು ಮೆರೆಯುವ, ಜಪಾನದವರೂ, ವಿಶೇಷವಾಗಿ ಬ್ರಿಟಿಶರೂ ಎಂಥೆಂಥ ಅಪಕೃತ್ಯಗಳನ್ನು ಆಚರಿಸುತ್ತಾರೆಂದು ತಿಳಿಯುವ ಹಾಗಿದೆ. ಚೀನದಲ್ಲಿ ಹೋಗಿ ಬಲಾತ್ಕಾರದಿಂದ ತಮಗನುಕೂಲವಾದ ಸಂಧಾನ ಕರಾರುಗಳಿಂದ ಪಟ್ಟಣಗಳನ್ನು ಅಪಹರಿಸಿಕೊಂಡು, ಅಲ್ಲಿ ಗಿರಣಿಗಳನ್ನು ರಚಿಸಿ, ಚಿಕ್ಕ ಮಕ್ಕಳನ್ನು ದಣಿಸಿ, ಪ್ರತಿಬಲಿಕ್ಕಾಗದೆ, ಬೇರೊಂದು ಗಿರಣಿಯಲ್ಲಿ ಕೆಲವು ಕಾರಣಗಳ ಮೂಲಕ ಸಂಪು ಆದಲ್ಲಿ ಬ್ರಿಟಿಶ ಪೋಲೀಸರು ಮಾನವಧರ್ಮವನ್ನು ಮರೆತು, ಓಡಿಹೋಗುವ ಬಡ ಚೀನಿ ಪ್ರಜೆಗಳನ್ನು ಗುಂಡುಹಾಕಿ ಕೊಲ್ಲುವದು ಪಶುತುಲ್ಯವೆಂದು ಹೇಳಿದರೆ, ಪಶುಗಳಿಗೆ ಅಪಮಾನವಾಗದೇನು? ಬೆಲ್ಜಮ್ ದೇಶದ ಸ್ವಾತಂತ್ರ್ಯಕ್ಕಾಗಿ ಜರೆಯಿಂದ ಯುದ್ಧವನ್ನೆಸೆದ ಬ್ರಿಟಿಶರ ದೀನಬಂಧು ಬುದ್ಧಿಯು ಎಲ್ಲಿ ಮಾಯವಾಯಿತು? ಅಥವಾ ಆಗಲೂ ದುಡ್ಡಿನ ದುರಾಶೆಯಿಂದಲೇ ಜರ್ಮನಿಯಮೇಲೆ ಹಾಗೆ ಹೋಗಿದ್ದರೆಂದು ನಾವು ಹೇಳಬಹುದೇನು? ಒಬ್ಬ ಜರ್ಮನ್ ಮಿಶನರಿಯನ್ನು ಕೊಂದಾಗ ಜರ್ಮನ್ ಕೈಸರರು ಚೀನ ದೇಶದ ಇಡೀ ಪ್ರಾಂತವನ್ನೇ ಪಡೆದುಬಿಟ್ಟರು. ಬ್ರಿಟಿಶ ವರ್ತಕನೊಬ್ಬನು ಪ್ರಯಾಣ ಮಾಡುತ್ತಿರುವಾಗ ಚೀನಿ ದರೋಡೆಕೋರರು ಆತನಿಗೆ ಕೊಂದರು. ಬ್ರಿಟಿಶರು ಕೋಟ್ಯವಧಿ ರೂಪಾಯಿಗಳನ್ನು ಚೀನಿ ಸರಕಾರದಿಂದ ಸುಲಕೊಂಡರು. ಚೀನಿ ಪ್ರಜೆಗಳಮೇಲೆ ಗುಂಡು ಹೊಡೆಯುವಾಗ ಮಾನವರ ಪ್ರಾಣದ ಬೆಲೆಯು ಬ್ರಿಟಿಶರಿಗೆ ಯಾಕಾಗಲಿಲ್ಲ? ಅಥವಾ ಚೀನಿ ಪ್ರಜೆಗಳೆಂದರೆ, ಕಾಡು ಪಶುಗಳು ಎಂಬ ಭಾವನೆಯಿಂದ ವಿನೋದಕ್ಕಾಗಿ ದಿಕ್ಕುಪಾಲಾಗಿ ಓಡುತ್ತಿದ್ದ, ಕಂಗೆಟ್ಟ ಚೀನಿಯರ ಕೊಲೆ ಮಾಡಿದರೇನು? ಆಗ ಈ ಅಮಾನುಷ ಕೃತ್ಯದಿಂದ ಪ್ರಕ್ಷುಬ್ಧರಾಗಿ ಅಲ್ಲಿಯ ವಿದ್ಯಾರ್ಥಿಗಳು ದೊಂಬಿಯನ್ನೆಬ್ಬಿಸಿದರೆ, ಬ್ರಿಟಿಶ ಮುತ್ಸದ್ದಿಗಳು ಪಾಪ-ಪುಣ್ಯದ ವಿಚಾರ ಮಾಡದೆ, ಚೀನಿ ವಿದ್ಯಾರ್ಥಿಗಳ ಹೆಡಮುರಿಗೆ ಕಟ್ಟಲು ಚಿಂತಿಸುತ್ತಾರಲ್ಲವೇ? ಬಾಹುಬಲವಿದ್ದರೂ, ಆತ್ಮಬಲವು ಬ್ರಿಟಿಶರಿಗಿರುವದಿಲ್ಲೆಂಬ ಪಾಠವನ್ನು ಅರಿತು, ಬ್ರಿಟಿಶರು ಮುಂದಾಗಲಿ!

ಕಾನಡಾವೃತ್ತ.

ಮಿತಿ ಶ್ರೀಮುಖನಾಮ ಸಂ। ಆಷಾಢ [illegible] ಸೋಮವಾರ

ಬಕಚಿಂತೆ!

ಆಳರಸರ ರೈತರ ಕಲ್ಯಾಣದ ಚಿಂತೆ!

ಮುಂಬಯಿ ಕಾಯಿದೆ ಕೌನ್ಸಿಲಿನ ಸಭಾಸದರು ಬೇಸಾಯಗಾರರ ಕಲ್ಯಾಣ ಸಾಧಿಸಲಿಕ್ಕಾಗಿ ತೀರ್ವೆ ಆಕರಣೆಯ ಪದ್ಧತಿಯನ್ನು ಚೌಕಶಿ ಮಾಡಲು ನಮ್ಮ ಮುಂಬಯಿ ಸರಕಾರದವರಿಂದ ಒಂದು ಚೌಕಶಿ ಮಂಡಳವನ್ನು ಬೇಡಿಕೊಂಡಿದ್ದರು. ಈಗಿನ ತೀರ್ವೆ ಆಕರಣೆಯ ಪದ್ಧತಿಯಿಂದ ಬೇಸಾಯಗಾರರಿಗೆ ಬಹಳ ಅಕಲ್ಯಾಣವಾಗುತ್ತದೆಂದು ಸಭಾಸದರ ಹೇಳಿಕೆಯಿದ್ದು, ತೀರ್ವೆ ಆಕರಣೆಯು ಕ್ರಮವಾಗಿ ಏರುತ್ತ ನಡೆದದ್ದರಿಂದ ಬೇಸಾಯಗಾರರ ಸ್ಥಿತಿಯು ಕಂಗೆಟ್ಟು ಹೋಗಿದೆ, ಇದನ್ನು ತಿದ್ದುಪಡಿಸುವದಕ್ಕೆ ಯೋಗ್ಯ ತೀರ್ವೆಯನ್ನು ಈಗಲೇ ನಿಶ್ಚಯಿಸಿ ಅಷ್ಟಕ್ಕೇ ಶಾಶ್ವತವಾಗಿ ತೀರ್ವೆ ಇರುವಂತೆ ಕಾನೂನನ್ನೇ ಪಡಿಸಲು ಲೋಕಪಕ್ಷದ ಸಭಾಸದರು ಈ ಚೌಕಶಿಯನ್ನು ಬೇಡಿದ್ದರು. ಈ ಮಂಡಳದ ಚೌಕಶಿಯು ಪುಣೆಯೊಳಗಿನ ಕೌನ್ಸಿಲು ಸಭಾಮಂದಿರದಲ್ಲಿ ಕಳೆದ ಜೂನ ತಾ ೨೩ ನೇಯಿಂದ ೨೯ನೇ ವರೆಗೆ ನಡೆಯಿತು. ಕಮೀಟಿಯ ವರದಿಯು ಸದ್ಯಕ್ಕೆ ಸಾದರವಾಗುವದಿದೆ

ಕಮೀಟಿಯ ಚೌಕಶಿಯ ಧೋರಣದಿಂದ ಸೂಚಿಸಿದ ಕೆಲವು ವಿಚಾರಗಳನ್ನು ಇಂದಿಗೆ ನಮೂದಿಸಬೇಕಾಗಿದೆ. ಕಮೀಟಿಯಲ್ಲಿ ಅಂತು ೨೨ ಮಂದಿಗಳ ಸಾಕ್ಷಿಗಳಾದವು. ಕಮೀಟಿಯೊಳಗಿನ ಸರಕಾರಿ ಪಕ್ಷದ ಸಭಾಸದರ ಧೋರಣವನ್ನು ಪರ್ಯಾಲೋಚಿಸಿದರೆ, ಈ ಕಮೀಟಿಯಿಂದ ಪ್ರಾಂತಿಕ ಸರಕಾರವು ಇನ್ನೂ ರೈತರನ್ನು ಹಿಂಡಲಿಕ್ಕೆ ಹೊಂಚುಹಾಕಿರುವದೆಂದು ಹೇಳಬಹುದು. ಸರಕಾರಿ ಪಕ್ಷದ ಸವಾಲು ಕೇಳುವ ಧೋರಣವು ಹಾಗಿತ್ತು: ಸರಕಾರವು ಪ್ರಾಂತದೊಳಗಿನ ಎಲ್ಲ ಭೂಮಿಯ ಒಡೆಯನೆಂದು ಹೇಳಿಸಿಕೊಳ್ಳುತ್ತದೆ. ಅದನ್ನು ಬೇಸಾಯಗಾರರು ಈವರೆಗೆ ಸ್ವೀಕರಿಸಿ, ಸರಕಾರಕ್ಕೆ ಭೂಮಿಯ ಉತ್ಪನ್ನದಮೇಲೆ ಸರಕಾರವೆಂಬ ಅಧಿಕಾರದಿಂದ ರಾಜ್ಯರಕ್ಷಣಕ್ಕಾಗಿ ಅವಶ್ಯವುಳ್ಳ ತೆರಿಗೆಯನ್ನುಮಾತ್ರ ಇತರ ಪ್ರಜಾಜನರಿಂದ ಕರಗಳನ್ನು ಎತ್ತುವ ಅಧಿಕಾರ ಮಾತ್ರವಿದೆ. ಸರಕಾರವು ಒಡೆತನವನ್ನು ಅಪಹರಿಸಿಕೊಂಡು, ಅಮಲಬಜಾವಣಿ ಅಧಿಕಾರ ಬಲದಿಂದ ಬೇಕಾದಷ್ಟು ತೀರ್ವೆಯನ್ನೇರಿಸಿ ಬೇಸಾಯಗಾರರನ್ನು ದಣಿಸುತ್ತದೆಂದು ಈ ವರೆಗೆ ಪ್ರಜೆಗಳ ದೂರಿದೆ. ಈ ಚೌಕಶಿಯಲ್ಲಿ ಈ ಪ್ರಶ್ನೆಯನ್ನೇ ಸಂಕ್ಷೇಪವಾಗಿ ಚರ್ಚೆ ಮಾಡಿ ತಮ್ಮ ಒಡೆತನದಮೇಲೆ ಕಮೀಟಿಯ ಅನುಮತಿಯನ್ನು ಪಡೆಕೊಳ್ಳಲೆತ್ನಿಸುತ್ತದೆಂದು ಸರಕಾರ ಚೌಕಶಿಯ ಮೇಲಿಂದ ಅನುಮಾನ ತೋರುತ್ತದೆ. ಸರಕಾರವು ಭೂಮಿಯ ಒಡೆಯನಲ್ಲೆಂದು ಪುರಾತನ ದಾಖಲೆ ಬೇಕಾದರೆ, ೧೮೫೮ನೇ ಇಸ್ವಿಯಲ್ಲಿ ಇಂಗ್ಲಿಷ ಸರಕಾರವು ಒಡೆದಿಟ್ಟ ಅಭಿಪ್ರಾಯವೇ ಸಾಕು. ಆದರೆ, ಬೇಸಾಯಗಾರರ ಹಿತಕ್ಕಾಗಿ ಹಗಲಿರುಳು ಬಡಬಡಿಸುವ, ಅವರ ಹಿತಕ್ಕಾಗಿಯೇ ದೇಶಾಂತರ ಮಾಡಬಂದ ಆಳರಸರಿಗೆ ಈ ದಾಖಲೆಯ ಕಡೆಗೆ ಬೊಟ್ಟು ತೋರಿಸಿ, ಪ್ರಯೋಜನವೇನಿದೆ?

ಮೇಲೆ ಧೋರಣವು ಈ ಪ್ರಕಾರದ್ದಿದ್ದ ಬಳಿಕ ಅದಕ್ಕೆ ಪೂರಕವಾಗಿಯೇ ವಿವರಗಳು ಹೊರಬರುವವು. ಈಗ ೩೦ ವರುಷಕ್ಕೊಮ್ಮೆ ತೀರ್ವೆ ತಿದ್ದುಪಡಿಯಾಗುತ್ತದೆ. ತೀರ್ವೆಯ ತಿದ್ದುಪಡಿ ಬಂದರೆ, ತೀರ್ವೆಯ ಏರುವಿಕೆಯೆಂದು ಬೇಸಾಯಗಾರರು ಸ್ವಾನುಭವದಿಂದ ಬಲ್ಲರು. ಈಗಿನ ತೀರ್ವೆಯ ಕಾಯಿದೆಯಂತೆ, — ಮಹಿವಾಟಿಯು ಬೇಕಾದರೆ ಅದಕ್ಕೆ ವಿಸಂಗತವಾಗಿರಲಿ — ಬೇಸಾಯಗಾರರು ಸ್ವಂತ ಪರಿಶ್ರಮದಿಂದ ಭೂಮಿಗೆ ಮಾಡಿದ ಬಾಗವಾಡಿಸ ಮೇಲೆ, ಅಂದರೆ, ಬಾಗವಾಡಿಸಿಂದ ದೊರಕುವ ಉತ್ಪನ್ನದ ಮೇಲೆ ಕರ ಹೇರಬಾರದೆಂದು ಸ್ಪಷ್ಟ ಕಲಮಿದೆ. ಕರ ಹೇರತೊಡಗಿದರೆ ರೈತರಿಗೆ ಭೂಮಿಯನ್ನು ಸುಧಾರಿಸಲು ಉತ್ತೇಜನ ದೊರಕುವದಿಲ್ಲವಾಗಿ ತಜ್ಞರ ಮತವಿದೆ. ಆದರೆ, ಈ ಪ್ರತಿಬಂಧವನ್ನು ಕಾಯಿದೆಯೊಳಗಿಂದ ಕಿತ್ತುಹಾಕಲು ಆಳರಸರು ಯತ್ನಿಸುತ್ತಿರುವರು. ಇದರಿಂದ ಲಾಭವೂ ಇಲ್ಲ, ಹಾನಿಯೂ ಇಲ್ಲ ನಿಮ್ಮ ದುಡಿತದಿಂದ ದೊರಕಿದ ಲಾಭವನ್ನು ತಿನ್ನಲಿಕ್ಕೆ ನಮ್ಮ ಅಡ್ಡಿಯೇನಿಲ್ಲೆಂದು ಬಾಯಿಯಿಂದ ಸರಕಾರವು ಹೇಳುತ್ತಿರುವಾಗ, ಕೃತಿಯಿಂದ ಅದರ ಮೇಲೆ ಕರ ಹೇರುವದಕ್ಕಾಗಿ ಕಾಯಿದೆಯೊಳಗಿನ ಕಲಮು ಕಿತ್ತೊಗೆದು ಕರ ಹೇರುವದು ದುಷ್ಟತನವಾದರೂ, ಸ್ಪಷ್ಟಕಪಟವಲ್ಲವೇ?

ತೀರ್ವೆ ಆಕರಣೆಯ ಹೊಸ ಪ್ರಕಾರವೊಂದು ಆಳರಸರಲ್ಲಿ ತಲೆದೋರಿದೆ. ಈವರೆಗೆ ನಮ್ಮ ಪ್ರಾಂತದೊಳಗಿನ ಭೂಮಿಯ ವರ್ಗವಾರಿಯನ್ನು ಮಾಡಿ ಇಂಥಿಂಥ ಮಣ್ಣಿನ ಭೂಮಿಗೆ ಇಂತಿಷ್ಟು ಕರವೆಂದು ನಿಶ್ಚಯಿಸಿ, ಸರಕಾರವು ಕರ ಹೇರುತ್ತಿತ್ತು. ಈಗ ಈ ಪದ್ಧತಿಯು ಬದಲಾಗಬಹುದು. ಒಡೆಯರು-ಒಕ್ಕಲುಗಳ ಕಡೆಯಿಂದ ಕೊಳ್ಳುವ ಗೇಣಿಯೇ ಸರಕಾರದ ತೀರ್ವೆ ಹೇರುವ ಮೂಲ ಪೀಠಿಕೆಯಾಗುವವು. ಒಡೆಯ-ಒಕ್ಕಲುಗಳೊಳಗೆ ನಿಶ್ಚಯವಾದ ಗೇಣಿಯೊಳಗಿನ ಇಂತಿಷ್ಟನೇ ಭಾಗವನ್ನು ತೆರಿಗೆ ರೂಪದಿಂದ ತೆರಬೇಕೆಂದು ವಿಧಿಸಿದರಾಯಿತು. ಭೂಮಿಯು ಯಾವದೇ ವರ್ಗದ್ದಿರಲಿ, ಅದನ್ನು ಸಾಗುವಳಿ ಮಾಡಲಿಕ್ಕಾಗಿ ಒಡೆಯನು ಎಷ್ಟೋ ಹಣ ಖರ್ಚು ಮಾಡಿದ್ದಿರಲಿ, ಒಕ್ಕಲು ಎಷ್ಟು ಪರಿಶ್ರಮಪಟ್ಟದ್ದಿರಲಿ, ಬೆಳೆ ಹುಟ್ಟಲಿ, ಹುಟ್ಟದಿರಲಿ, ಅದನ್ನೆಲ್ಲ ವಿಚಾರಿಸದೆ ನಿಶ್ಚಯಿಸಿದ ಗೇಣಿಯೆಲ್ಲ ನಿರಾತಂಕವಾಗಿ ಒಡೆಯನಿಗೆ ವಸೂಲ ಸಿಗುತ್ತದೆಂದು ಗೃಹೀತ ಹಿಡಿದು ತೀರ್ವೆ ವಸೂಲ ಮಾಡುವ ಸುಲಭ ಕ್ರಮವನ್ನು ನಮ್ಮ ಮುಂಬಯಿ ಸರಕಾರವು ಬೇಸಾಯಗಾರರ ಹಿತಕ್ಕಾಗಿ ನಿರ್ಧರಿಸುವ ವಿಚಾರದಲ್ಲಿರುವದಾಗಿ ತಿಳಿಯುತ್ತದೆ

ಮುಂಬಯಿ ಕಾಯಿದೆ ಕೌನ್ಸಿಲಿನ ಸಭಾಸದರು ಬೇಸಾಯಗಾರರ ಕಲ್ಯಾಣ ಮಾಡಲಿಕ್ಕಾಗಿ ನೇಮಿಸಿಕೊಂಡ ಚೌಕಶಿ ಮಂಡಳದ ಫಲಶ್ರುತಿಯಿದು! ಪ್ರಚಲಿತ ಕರ ಆಕರಣೆಯ ಪದ್ಧತಿಯಿಂದ ಕರದ ಮಾನವು ಏರೇರುತ್ತ ಹೋಗಿ, ಬೇಸಾಯಗಾರರು 'ಕಂಗೆಟ್ಟು ಹೋಗಿರುವದರಿಂದ ಪ್ರಾಂತದಲ್ಲಿ ಶಾಶ್ವತವಾದ ತೀರ್ವೆ ಪದ್ಧತಿಯನ್ನು ಸ್ಥಾಪಿಸಿ, ಪ್ರತಿ ೩೦ ವರುಷಗಳಿಗೊದಗುವ ಅಮಲಬಜಾವಣಿ ಅಧಿಕಾರಿಗಳ ಪೀಡನೆಯಿಂದ ರೈತರನ್ನು ತಪ್ಪಿಸಲು ಲೋಕ ಪಕ್ಷದ ಸಭಾಸದರು ಯೋಚಿಸಿದ್ದರು. ಚೌಕಶಿ ಮಂಡಳದ ವಿಚಾರವೂ, ಸರಕಾರಿ ಧೋರಣವೂ ಸರಿ ವಿರುದ್ಧವಾಗಿ ರೈತರ ಹಿತಕ್ಕಾಗಿ ನೇಮಿಸಿದ ಕಮೀಟಿಯಿಂದಲೇ ರೈತರ ಅಹಿತವನ್ನು ಸಾಧಿಸಿ, ಸರಕಾರವು ಮತ್ತಷ್ಟು ಹಣವನ್ನು ಸುಲಿಕೊಳ್ಳಲೆತ್ನಿಸುತ್ತದೆ. ಆಳರಸರ ವಿಪನ್ನಾವಸ್ಥೆಯನ್ನು ದೂರ ಮಾಡಲು ಹಣದ ಬಾಯಾರಿಕೆಯು ಸರಕಾರಕ್ಕೆ ವಿಶೇಷವಾಗಿದೆ. ಅದನ್ನು ತಣಿಸಿಕೊಳ್ಳಲು ಇದೊಂದು ಸಾಧನ ಮಾಡಿಕೊಳ್ಳಬೇಕೆಂದು ಸರಕಾರದ ಆಲೋಚನೆ ಇದೆ. ಮೊಂಟೆಗ್ಯೂ ಸ್ವರಾಜ್ಯವಿರಲಿ, ಮೋರ್ಲೆ-ಮಿಂಟೋ ಸುಧಾರಣೆಗಳಿರಲಿ, ಆಳರಸರು ನಿರಂಕುಶ ಕಾರಭಾರವನ್ನು ನಡಿಸುವವರೆಗೆ, ಪ್ರಜೆಗಳಿಗೆ ನಿಜವಾದ ಸ್ವರಾಜ್ಯಾಧಿಕಾರ ದೊರಕದ ವರೆಗೆ ಇರದ ಕಮೀಟಿಗಳಿಂದ ಎಂದೂ ಪ್ರಜೆಗಳ ಕಲ್ಯಾಣವಾಗದು. ಈ ಸಿದ್ಧಾಂತಕ್ಕೆ ಮತ್ತೊಂದು ಉದಾಹರಣೆ ಬೇಕಾದರೆ, ಇದೇ ನಮ್ಮ ಭಾರತೀಯರ ಹಿತಸಂಬಂಧಗಳು ಬೇರೆ; — ಏಕೆ, ಪರಸ್ಪರ ವಿರುದ್ಧವಿವೆ. ಇಂಥ ಪ್ರಸಕ್ತಿಯಲ್ಲಿ ಆಳರಸರ ಆಶ್ರಯದಲ್ಲಿ ನೇಮಿಸಿದ ಯಾವದೇ ಸಂಸ್ಥೆಯಿಂದ ನಮಗೆಂದಾದರೂ ಹಿತವಾದೀತೇ? ಚೌಕಶಿ ಮಂಡಳದ ಚರ್ಚೆಯಿಂದ ನಮ್ಮ ಆಳರಸರ ಬೇಸಾಯಗಾರರ ಚಿಂತೆಯೆಂಬುದು ಬಕಚಿಂತೆಯೆಂದು ಸ್ಪಷ್ಟವಾಗಿದೆ. ಲೋಕ ಪಕ್ಷದ ಸಭಾಸದರ ಚೌಕಶಿಯಿಂದ ಅಹಿತವಾಗದಂತೆ ಕಾಪಾಡಿಕೊಂಡರೆ, ನಾವು ಗೆದ್ದೆವು

ಸ್ಫುಟ ಸೂಚನೆಗಳು.

೧. ಕೊನೆಗೆ ಭಾರತ ಮಂತ್ರಿಗಳು ಹಿಂದುಸ್ಥಾನದ ಪರಿಸ್ಥಿತಿಯ ಮೇಲೆ ಕಳೆದ ಜುಲೈ ೫ ನೇ ತಾರೀಖಿಗೆ ಪಾರ್ಲಿಮೆಂಟಿನಲ್ಲಿ ತಮ್ಮ ವಿಚಾರಗಳನ್ನು ಪ್ರದರ್ಶಿಸಿದರು. ದೊರೆಗಳು ೮೦ ಮಿನಿಟುಗಳವರೆಗೆ ಎಡಬಿಡದೆ ಮಾತಾಡಿದರು. ಮುಂದೆ ಸ್ವರಾಜ್ಯಾಧಿಕಾರದಾನದ ವಿಷಯ ದೊರೆಗಳ ಅಭಿಪ್ರಾಯವೇನೆಂದು ವಾಚಕರು ಕೇಳಬಹುದು. ಇಡೀ ಭಾಷಣವನ್ನು ಮೊದಲಿಂದ ಕಡೆತನಕ ಓದಿದರೆ, ಹಿಂದುಸ್ಥಾನದ ವಿಷಯಕ ಬ್ರಿಟಿಶರ ಜವಾಬದಾರಿ, ಬೇಸಾಯಗಾರರ ಕಲ್ಯಾಣಚಿಂತೆ, ಮೊಂಟೆಗ್ಯೂ ಸ್ವರಾಜ್ಯದ ಮನದಣಿ ಸ್ತುತಿ, ಅಸಹಯೋಗಿ ಸ್ವರಾಜ್ಯ ಪಕ್ಷದವರ ವಿನಾಶಕ ಚಟುವಟಿಕೆಗಳ ನಿಂದೆ, ಸರಕಾರದೊಡನೆ ಸಹಕಾರ ಮಾಡುವ ಪ್ರಜೆಗಳಲ್ಲಿ ಪ್ರತಿಷ್ಠೆ ಇರುವ ಲೋಕನಾಯಕರ ಅಭಾವದ ಬಗ್ಗೆ ವ್ಯಸನ, ಬ್ರಿಟಿಶರ ಔದಾರ್ಯ, ಹಿಂದೂ—ಮುಸಲ್ಮಾನರ ಕಲಹ, ಅರಸರ ಉಪಕಾರ ಮನ್ನಣೆ ಮುಂತಾದ ಅಪ್ರಾಸಂಗಿಕ ವಿಷಯಗಳು ತುಂಬಿತುಳುಕುತ್ತಿವೆ. "ಹಿಂದುಸ್ಥಾನದ ಪರಿಸ್ಥಿತಿಯನ್ನು ಪ್ರತ್ಯಕ್ಷ ಅರಿತುಕೊಳ್ಳಲು ಸಾವಿರಾರು ರೂಪಾಯಿಗಳ ಖರ್ಚು ಬಡ ಭಾರತೀಯರ ಮೇಲೆ ಹೇರಿ, ನೀವು ಸರ್ವಾಧಿಪತಿಗಳನ್ನು ಬರಮಾಡಿಕೊಂಡಿರಿ; ಈಗ ನಿಮ್ಮಿಬ್ಬರ ಆಲೋಚನೆಗಳು ಮುಗಿದವು. ಮುಂದೆ ಭಾರತೀಯರಿಗೆ ಕೊಡುವದೇನು?" ಎಂದು ನೆಟ್ಟಗೊಂದು ಸವಾಲು ಬಂದರೆ, ಅದಕ್ಕೆ ಭಾರತ ಮಂತ್ರಿಗಳ ಉತ್ತರವಿಷ್ಟೇ: "ನಮ್ಮ ಆಲೋಚನೆಗಳು ಮುಗಿದಿವೆ; ನಾವಿಬ್ಬರೂ ಆಳವಾಗಿ ವಿಚಾರಿಸಿದ್ದೇವೆ. ಆದರೆ, ಹಿಂದುಸ್ಥಾನದ ಸರಕಾರ ಹಾಗೂ ವರಿಷ್ಠ ಕಾಯಿದೆ ಕೌನ್ಸಿಲುಗಳೊಡನೆ ವಿಚಾರ ನಡಿಸಿದ ಹೊರತು, ಈಗಲೇ ಏನೊಂದೂ ಹೇಳಲಾರೆವು." ಭಾರತ ಮಂತ್ರಿಗಳು ಕೈಕೊಂಡ ನಿರ್ಣಯವಿದು! ಮತ್ತೇನು ಬೇಕು?

೨. ಭಾರತ ಮಂತ್ರಿಗಳ ಉಪನ್ಯಾಸದಲ್ಲಿ ಒಂದೆರಡು ಸಂಗತಿಗಳು ಪ್ರಾಮುಖ್ಯವಾಗಿ ನಮೂದಿಸಲ್ಪಟ್ಟಿವೆ. ಮೊಂಟೆಗ್ಯೂ ಸ್ವರಾಜ್ಯದ ತಿದ್ದುಪಡಿಯ ವಿಚಾರ ನಾವು ಮಾಡುತ್ತಿದ್ದೇವೆ. ಸ್ವರಾಜ್ಯಕಾಂಕ್ಷಿ ಭಾರತೀಯರ ಉಮೇದ್ವಾರಿಯ ಮುದ್ದತ್ತನ್ನು ೧೦ ವರ್ಷಗಳಿಂದ ಕೆಳಕ್ಕಿಳಿಸುತ್ತಿದ್ದೇವೆ. ಆದರೆ, ಏನು ಮಾಡುವದು? ಭಾರತೀಯ ರಾಜಕಾರಣ ಧುರಂಧರರು ಅಸಹಕಾರಿಗಳಾಗಿ ಕುಣಿದು, ನಮ್ಮೊಡನೆ ಸಹಕಾರ ಬೆಳೆಸಲಿಲ್ಲ. ಅವರು ಸಹಕಾರ ಮಾಡಲಿ; ಈಗಲೂ ಮೊಂಟೆಗ್ಯೂ ಸ್ವರಾಜ್ಯವನ್ನು ಭಕ್ತಿಯಿಂದ, ಪ್ರೇಮದಿಂದ, ಔದಾರ್ಯದಿಂದ ನಡೆಸಲಿ; ದಿವಾಣರಿಗೆ ಬೆಂಬಲವನ್ನೀಯಲಿ; ಮತ್ತು ಸ್ವರಾಜ್ಯಚಾಲಕತ್ವದ ಸಾಮರ್ಥ್ಯವನ್ನು ಸಿದ್ಧಪಡಿಸಲಿ; ಅಂದರೆ, ಇನ್ನೇನೇನು ನಿಮಗೆ ಕೊಡಬೇಕೆಂಬುದನ್ನು ನಾವು ವಿಚಾರಿಸುವ; ಸಾರ್ವಭೌಮ ಕಮಿಶನು ಬೇಕಾದರೆ ನೇಮಿಸಿ, ವಿಚಾರ ಮಾಡುವ; ಎಂಬರ್ಥದ ಮಾತುಗಳನ್ನಾಡಿ ಇನ್ನೂ ಬ್ರಿಟಿಶರ ಔದಾರ್ಯವನ್ನು ನಂಬಿರುವ ಮಂದಿಗಳಲ್ಲಿ ಆಶೆಯನ್ನು ಹುಟ್ಟಿಸತೊಡಗಿರುವರು. ಅಸಹಯೋಗ ಆಶ್ರಯದಿಂದಲೇ ನಮ್ಮ ಕೆಡಕಾಗಿದೆಂದು ದೂರುವ ಪುಣ್ಯಾತ್ಮರಿಗೆ ಭಾರತ ಮಂತ್ರಿಗಳು ಬೊಟ್ಟು ತೋರಿಸಲು ಒಂದು ಇಂಬು ಮಾಡಿಕೊಟ್ಟಿರುವರು. ಆದರೆ, ಬ್ರಿಟಿಶರ ಸ್ವಭಾವವನ್ನರಿತವರು ಹೀಗೆಂದೂ ವಿಚಾರಿಸಲಿಕ್ಕಿಲ್ಲ. ಕಲಕತ್ತೆಯೊಳಗಿನ 'ಮೊಡರ್ನ ರಿವ್ಯೂ' ಪತ್ರಿಕೆಯ ಲೇಖಕರೊಬ್ಬರು ಬ್ರಿಟಿಶರ ಸ್ವಭಾವವನ್ನು ಸಂಕ್ಷಿಪ್ತವಾಗಿ, ಮರ್ಮಭೇದಕವಾಗಿ ವರ್ಣಿಸಿರುವರು: "*Kiss John Bull and he will cuff you; kick John Bull and he will kiss you.*" "ಬ್ರಿಟಿಶರಿಗೆ ಮುದ್ದಿಡಹೋಗಿರಿ; ಅಂದರೆ, ಅವರು ಗುದ್ದುವರು; ಅವರೇ ಒದೆಯಿರಿ; ಅಂದರೆ, ಅವರು ಮುದ್ದಿಡಬರುವರು." ಇದು ಬ್ರಿಟಿಶ ರಾಷ್ಟ್ರದ ಲಕ್ಷಣವು! ಸ್ನೇಹಭಾವಕ್ಕೆ, ಬಿನ್ನಹಕ್ಕೆ ಅವರೆಂದೂ ಮಣಿಯುವವರಲ್ಲ; ಶ್ರೀ॥ ಜಮನಾದಾಸ ಮೇಹತಾರವರು ನುಡಿದಂತೆ, ನಾವೀಗ ಕಾಯಿದೆ ಭಂಗ ಮುಂತಾದ ಪ್ರತ್ಯಕ್ಷ ಕಾರ್ಯವನ್ನು ಕೈಕೊಂಡು ಎದುರಾಗಬೇಕಾಗಿದೆ. ಸಹಕಾರದಿಂದ, ಗೆಳೆತನದಿಂದ ಮುದ್ದಿಡುವದರಿಂದ ನಮಗೆಂದೂ ಫಲಪ್ರಾಪ್ತಿಯಾಗದು ಇದನ್ನು ಬ್ರಿಟಿಶರ ಇತಿಹಾಸವೇ ಸಾರುತ್ತಿರುವಾಗ, ದೊರೆಗಳ ಸಹಕಾರದ ನಿಮಂತ್ರಣೆಯನ್ನು ಮಾನಧನ ಭರತ ದೇಶವು ಎಂದಾದರೂ ಸ್ವೀಕರಿಸುವದೋ?

೩. ಪರರ ಹಣ ಸಿಕ್ಕಿದರೆ, ಖರ್ಚು ಮಾಡುವ ಬಗೆಯನ್ನು ನಮ್ಮ ಆಳರಸರಿಂದಲೇ ಕಲಿಯಬೇಕು. ಹಣದ ಅಡಚಣೆಯೆಂದು ತೆರಿಗೆಗಳನ್ನೆತ್ತುವರು; ಹೊಸ ಹೊಸ ವಿಲಾಸಗಳಿಗಾಗಿ ಖರ್ಚು ಮಾಡುವರು. ಮೊದಲು ಸರ್ವಾಧಿಪತಿ, ಪ್ರಾಂತಾಧಿಪತಿ ಮುಂತಾದ ಅಧಿಕಾರಿಗಳಿಗೆ ರಜೆ ಕೊಡುವ ಕ್ರಮವಿದ್ದಿಲ್ಲ. ಸದ್ಯಕ್ಕೆ ಈ ಕ್ರಮವನ್ನೇರ್ಪಡಿಸಿ, ಸಾವಿರಾರು ರೂಪಾಯಿಗಳ ಚೂರಾಗುತ್ತಿದೆ. ಸರ್ವಾಧಿಪತಿ ರೀಡಿಂಗ ದೊರೆಗಳು ಭಾರತ ಮಂತ್ರಿಗಳೊಡನೆ ಆಲೋಚನೆ ಮುಗಿಸಿ ಮರಳಿ ಬರುವವರಾದರು. ಆ ಬಗ್ಗೆ ಭಾರತ ಮಂತ್ರಿಗಳಾದ ಬರ್ಕನ್‌ಹೆಡ್ ದೊರೆಗಳೂ, ದೊರೆಸಾನಿಗಳೂ, ರೀಡಿಂಗ ದೊರೆ-ದೊರೆಸಾನಿಯವರಿಗೆ ಪ್ರಚಂಡ ಮೇಜವಾನಿಯನ್ನಿತ್ತರು. ಆ ಸಮಾರಂಭಕ್ಕಾಗಿ ಪ್ರಧಾನ ಮಂತ್ರಿಯವರೂ, ಹಿಂದುಸ್ಥಾನದೊಳಗಿನ ಸಂಸ್ಥಾನಾಧಿಪರೂ, ದೊಡ್ಡದೊಡ್ಡ ಅರಸರೂ, ಶ್ರೀಕ ಮುಖಂಡರೂ ಕೂಡಿ ಸುಮಾರು ೩ ಸಾವಿರ ಅತಿಥಿ-ಅಭ್ಯಾಗತರು ಹಾಜರಿದ್ದರಂತೆ. ಮೇಜವಾನಿಯು ಸಂಗಮರವರಿ ಕಲ್ಲಿನಿಂದ ರಚಿಸಿದ ದರಬಾರ ಭವನದಲ್ಲಿ ನಡೆಯಿತು. ತರತರದ ಹೂವುಗಳಿಂದ ಮಂದಿರವನ್ನು ಶೃಂಗರಿಸಿದ್ದರು. ಸಂಸ್ಥಾನಿಕರು ಅಮೂಲ್ಯವಾದ ರತ್ನಾಭರಣಗಳನ್ನು ಧರಿಸಿಕೊಂಡು, ಜರಿ ವಸ್ತ್ರಗಳನ್ನು ಉಟ್ಟುಕೊಂಡು, ಮದುಮಗಂದಿರರಂತೆ ಕಂಗೊಳಿಸುತ್ತಿದ್ದರು! ಇಂಥ ಔತಣ ಸಮಾರಂಭವು ಇತ್ತ ಹಲವು ವರ್ಷಗಳಲ್ಲಿ ಕಂಡುಬಂದಿದ್ದಿಲ್ಲೆಂದು ಅಲ್ಲಿಯ ವರ್ತಮಾನಪತ್ರಗಳು ಕೊಂಡಾಡುತ್ತಿವೆ. ಈ ಸಮಾರಂಭಕ್ಕಾಗಿ ಖರ್ಚು ಮಾಡಿದ್ದು ಯಾರು? ಎಂದು ಅನೇಕರು ಪ್ರಶ್ನಿಸುತ್ತಿದ್ದಾರೆ. ಬ್ರಿಟಿಶರೂ, ವರ್ತಕರೂ ಪೈಗೆ ಪೈ ಕೂಡಿಸಿ ಗಂಟು ಕಟ್ಟುವವರು. ಅವರು ಇಂಥ ಸಮಾರಂಭಕ್ಕಾಗಿ ದ್ರವ್ಯವನ್ನು ಎಂದಾದರೂ ಖರ್ಚು ಮಾಡುವವರೇ? ಅಲ್ಲ. ಭಾರತೀಯರಿಗೆ ಭ್ರಾಂತಿಗೈಯ್ಯಲು ಸಮಾರಂಭವು ಒದಗಿಬಂದಿತ್ತೆಂದು ಬಲ್ಲವರ ಹೇಳಿಕೆ. ಇಲ್ಲದಿದ್ದರೆ, ರೀಡಿಂಗ ದೊರೆಗಳು ಯಾವ ಮಹಾಕಾರ್ಯ ನೆರವೇರಿಸಿದರೆಂದು, ಭಾರತ ಮಂತ್ರಿಗಳು ಅವರಿಗಾಗಿ ಔತಣಸಮಾರಂಭವನ್ನು ನೆರವೇರಿಸಿದರು? ಭರತ ಖಂಡದ ದ್ರವ್ಯಶೋಷಣದ ಯೋಜನೆಯಲ್ಲೇನಿದು?

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರದಲ್ಲಿ ಮೇಘರಾಜನು ಅನುಗ್ರಹ ಮಾಡಹತ್ತಿರುವನು. ನಿತ್ಯವೂ ಸ್ವಲ್ಪ ಸ್ವಲ್ಪ ಮಳೆ ಬೀಳುತ್ತದೆ. ಮಳೆಯು ನೆಟ್ಟಗೆ ಸಾಲದು. ಒಕ್ಕಲಿಗರು ನೀರಿಲ್ಲದೆ ಬಳಲುತ್ತಿರುವರು. ಈ ವಾರದಲ್ಲಿ ಮಳೆಯು ಇಂಚು ೨—೭೩ ಬಿತ್ತು. ಈ ವರೆಗೆ ಒಟ್ಟು ೬೮—೫೭ ಇಂಚು ಬಿತ್ತು.

ಕಳೆದ ಗುರುವಾರ ಸಾಯಂಕಾಲಕ್ಕೆ ಪೇಟೆಯೊಳಗಿನ ಮೂರು ಕಟ್ಟೆಯ ಮಾರ್ಗದಮೇಲೆ ಡಾ॥ ಖಂಬದಕೋಣರವರ ಮೋಟಾರ ಡ್ರ್ಯೈವ್ಹರನು ಮೋಟಾರು ಹೊಡೆಯುತ್ತಿದ್ದಾಗ ಹುಡುಗಿಯೊಬ್ಬಳು ಮೋಟಾರಿನ ಬುಡಕ್ಕೆ ಬಿದ್ದು ಕಾಲಿಗೆ ಘಾಯ ಮಾಡಿಕೊಂಡಳು. ಕಾಲಿನ ಎಲುಬು ಮುರಿದುಹೋಗಿರುವದಂತೆ. ಪೋಲೀಸರು ಈ ಬಗ್ಗೆ ಏನು ವ್ಯವಸ್ಥೆ ಮಾಡಿದರೆಂದು ತಿಳಿಯಲಿಲ್ಲ.

ಮ್ಯುನಿಸಿಪಾಲಿಟಿಯ ದೀಪಗಳ ಬೆಳಕು ಬೀಳದೆ ಪ್ರಯಾಣಿಕರ ಗೋಳು. ದೀಪಗಳಿಗಾಗಿ ನಿತ್ಯವೂ ಎಷ್ಟು ಖರ್ಚು ಬೀಳುವದಿಲ್ಲೇನು? ಜನಗಳ ರೋಗವು ಶಾಂತವಾಗಿದೆಂದು ತಿಳಿಯುತ್ತದೆ.

ಇಲ್ಲಿಯ ಅಬಕಾರಿ ಬೊಂಡೆಡ ವೇರಹೌಸಿನ ಅಫೀಸರರು ಕೋನಳ್ಳಿಯ ಸೆರೆ ಅಂಗಡಿಯವರಿಗೆ ಇಂಡೆಂಟಿಗಿಂತ ೧ ಗಲನ್ ಸರಾಯಿ ಹೆಚ್ಚು ಮಾರಿ ಸರಕಾರಕ್ಕೆ ವಂಚನೆ ಮಾಡಿದರೆಂಬ ಒಂದು ಪ್ರಕರಣವೆದ್ದಿದೆ. ಅಬಕಾರಿ ಖಾತೆಯ ಅಫೀಸರರು ಚೌಕಶಿ ಮಾಡುತ್ತಿರುವರು.

ಸಾಭಾರ ಸ್ವೀಕಾರ.

ಜಯಕರ್ನಾಟಕ—ಆಷಾಢ ಮಾಸದ ಸಂಚಿಕೆ, ಸಂಪಾದಕ ಆಲೂರ ವೆಂಕಟರಾಯರು, ಧಾರವಾಡ, ವಾರ್ಷಿಕ ಚಂದಾ ರೂ. ೫-೮-೦.

The Volunteer— *Edited and published by Dr. N. S. Hardiker, at the* "VOLUNTEER" *office, Hubli. Annual Subscription Rs 3 only.*

ಸಿದ್ದಾಪುರ— ಜ್ವರವು ವಿಶೇಷವಾಗಿ ಪ್ರಾದುರ್ಭೂತವಾಗಿದೆ. ಜನಗಳ ದೇಸೆಯು ಬಿಡಾರು ಕಟ್ಟಿಕೊಂಡಿದೆ. ಅನೇಕ ದನ-ಕರುಗಳು ಮಡಿದವು. ಮೇಘರಾಜನು ಚಂಚಲಮನಸ್ಕನಾಗಿರುವನು. ಕೆಲ ಹೊತ್ತು ಬಿಸಿಲು ಬೀಳುತ್ತದೆ; ಕೆಲ ಹೊತ್ತು ಮಳೆ ಸುರಿಯುತ್ತದೆ. ಕೊಳೆ ರೋಗಕ್ಕೆ ಗೊಬ್ಬರ ಹಾಕಿದಂತಾಗಿ, ಅದೀಗ ಎಲ್ಲ ಕಡೆಯಲ್ಲಿ ಪ್ರಾರಂಭವಾಗಿದೆ. ತಾ. ೯ ರ ವರೆಗೆ ೪೪॥ ಇಂಚು ಮಳೆ ಬಿತ್ತು.

ಇಲ್ಲಿಯ ಸಹಕಾರಿ ಸಂಘದ ಆಫೀಸಿನಲ್ಲಿ ತಾ. ೫ ನೇ ರವಿವಾರಕ್ಕೆ ಊರವರು ಸಭೆ ಸೇರಿ ಈ ಊರಿಗೊಂದು ಅರ್ಬನ್ ಕೋ-ಆಪರೇಟಿವ್ ಕ್ರೆಡಿ

ಟ್ ಸೊಸೈಟಿಯನ್ನು ಸ್ಥಾಪಿಸಬೇಕೆಂದು ಠರಾಯಿಸಿದರು, ಮಂಜೂರಿಗಾಗಿ ಮೇಲಧಿಕಾರಿಗಳ ಕಡೆ ಅರ್ಜಿ ಹೋಗಿಯದೆ.

ಆತ್ಮಹತ್ಯೆಯ ಸದ್ದಿ. ಹೇರೂರಿನ ಜೋಯಿಸರ ಮನೆಯ ಮುಕ್ತ್ಯಾದೆ ಹೆಂಗಸು ಬಾವಿಯ ಹಗ್ಗ ಕೊರಳಿಗೆ ಸುತ್ತಿಕೊಂಡು ಬಾವಿಯಲ್ಲಿ ಹಾರಿ ಪ್ರಾಣಕೊಟ್ಟರು ಕಿರಳಗಿಯ ಶ್ರೀ ನರಸಿಂಹ ದೇವಸ್ಥಾನದ ಅರ್ಚಕ ಗಣೇಶ ಭಟ್ಟರು ವಿಪ್ರಸಂಬಂಧ ತಾಪತ್ರಯವನ್ನು ಸೈರಿಸಲಾರದೆ, ವಿಷ ಕುಡಿದನಂತೆ, ಕೂಡಲೆ ಔಷಧೋಪಚಾರವಾದ್ದರಿಂದ್ದ ಈ ವರೆಗೆ ಬದುಕಿಕೊಂಡಿರುವನು. ಬಹಳ ಕಷ್ಟ !

ಇಲ್ಲಿಯ ಒಬ್ಬ ಟಪಾಲ ಶಿಪಾಯಿಯ ಮಗನು ತಾ. ೯ ನೇ ಸಾಯಂಕಾಲಕ್ಕೆ ಒಬ್ಬ ಮುಸಲ್ಮಾನನ ಜವಳಿ ಅಂಗಡಿಗೆ ಹೋಗಿ ನಿಮಗೆ ಕಾಗದವಿದೆಯೆಂದು ಹೇಳಿ, ಒಂದು ಪತ್ರ ಕೊಟ್ಟನಂತೆ ಹಾಗೆಯೇ ಒಳನುಗ್ಗಿ ತರತರದ ಬಟ್ಟೆಗಳ ಧಾರಣೆ ಕೇಳಿದನು ಕೇಳಕೇಳುತ್ತ ಸದ್ದಿಲ್ಲದೆ ೨ ಧೋತರ ಜೋಡಿಗಳನ್ನು ಬಗಲಲ್ಲಿ ಸೇರಿಸಿ, ಅಂಗಡಿಯಿಂದ ಹೊರಬಿದ್ದನು. ದಾರಿಯಲ್ಲಿಯೇ ಪತ್ತೆಯಾಗಿ, ಆತನು ಪೋಲೀಸರ ಸ್ವಾಧೀನವಾದನು ಮುಂದೆ ಪ್ರಕರಣ ನಡೆಯುವದು.

ಒಬ್ಬರು ಬರೆಯುವದೇನಂದರೆ — ತಾ ೫ ನೇ ರಾತ್ರಿ ೯ ಘಂಟೆಯ ಸಮಯ ಇಲ್ಲಿಯ ಭೀಕಾಜಿ ಎಂಬವನ ಮನೆಯಲ್ಲಿ ಸ್ಥಳಿಕ ಪೋಲೀಸ ಅಧಿಕಾರಿಗಳ ಮೇಜವಾನಿಯೊಂದಿತ್ತು. ಈ ಸಮಯ ಈ ಅಧಿಕಾರಿಗಳು ವಿಪರೀತ ಮದ್ಯಸೇವನ ಮಾಡಿಬಿಟ್ಟದ್ದರಿಂದ ಆತನು ಅವರಿಗೆ ಹಳಿದನಂತೆ, ಕೂಡಲೆ, ಅವರೆಲ್ಲರೂ ಅವನ ಮೈಮೇಲೆ ಕಡಕೊಂಡು ಬಿದ್ದು ಅವಾಚ್ಯ ಶಬ್ದಗಳನ್ನು ಬೈದರು, ರಾತ್ರಿ ೨ ಘಂಟೆಯ ವರೆಗೆ ಗಲಾಟೆ ನಡೆದಿತ್ತು. ನೆರೆಹೊರೆಯವರೆಲ್ಲರೂ ಅಲ್ಲಿ ಬಂದು ಸೇರಿದರೂ, ಮಿಕಿ ಮಿಕಿ ನೋಡುತ್ತಿದ್ದರು, ಹೊರತು, ಅಧಿಕಾರಿಗಳಿಗೆ ಸುಮ್ಮಗಿರಿಸಲು ಧೈರ್ಯವಾಗುತ್ತಿದ್ದಿಲ್ಲ. ಮೇಲಧಿಕಾರಿಗಳು ಈ ವಿಷಯ ಚೌಕಸಿ ಮಾಡಿ ಅಪರಾಧಿಗಳನ್ನು ದಂಡಿಸಬೇಕು.

ಕಾರವಾರ— ವಿಶೇಷ ಮಳೆಯಿಲ್ಲ.

ಸಹಕಾರಿಗಳ ಹಬ್ಬದ ದಿವಸದ ಪ್ರೀತ್ಯರ್ಥ ಕಳೆದ ಜುಲೈ ೩ ನೇ ಶನಿವಾರಕ್ಕೆ ಸಹಕಾರಿಗಳ ಸಭೆಯಾಯಿತು. ಸರಕಾರಿ ವಕೀಲ ಮಿ। ಕಾಟನೀಸರವರು ಸಭಾಪತಿಗಳಿದ್ದರು. ಮೊಟ್ಟಮೊದಲು, ರಾ। ಗಿರಸಪ್ಪೆಯವರು ಸಭೆಯ ಉದ್ದೇಶವನ್ನು ತಿಳಿಸಿಹೇಳಿ, ಸಹಕಾರದಿಂದ ಒದಗುವ ಲಾಭದ ಪರಂಪರೆಯನ್ನು ನಿವೇದಿಸಿದರು. ಬಳಿಕ, ಮಿ। ಶೆಟ್ಟಿ ವಕೀಲರು ಸಹಕಾರ ಚಳವಳಿಯ ಇತಿಹಾಸವನ್ನು ಸಂಕ್ಷಿಪ್ತವಾಗಿ ನಿವೇದಿಸಿ, ಸಹಕಾರ ಕಾಯಿದೆಯು ಬ್ರಿಟಿಶ ರಾಜ್ಯದಿಂದ ಒದಗಿದ ಅನೇಕ ಲಾಭಗಳಲ್ಲಿ ಒಂದೆಂದರು ಈ ಬಗ್ಗೆ ನಾವೆಲ್ಲರೂ ಬ್ರಿಟಿಶರ ಉಪಕಾರ ಮನ್ನಿಸಬೇಕಾಗಿಯೂ, ಈ ಮುಂಚೆ ಇಂಥ ಚಳವಳಿಯು ಹಿಂದುಸ್ಥಾನದಲ್ಲಿ ಸ್ಥಾಪಿಸಲ್ಪಟ್ಟಿಲ್ಲವಾಗಿಯೂ ಹೇಳಿ, ಈ ಚಳವಳಿಯಿಂದ ಬೇಸಾಯಗಾರರಿಗೆ ಬಹಳ ಲಾಭವಾಗಿರುವದೆಂದರು. ರಾ। ಹಬ್ಬುರವರು ಸಹಕಾರಿ ಸಂಘಗಳನ್ನು ೩ ವರ್ಗಗಳಾಗಿ ಮಾಡಿ, ಸಾಲಕೊಡುವ ಸಂಸ್ಥೆಗಳೇ ೧೧೦೦ಕ್ಕೆ ಮಿಕ್ಕಿರುವದಾಗಿಯೂ, ಔದ್ಯೋಗಿಕ ಸಂಘಗಳು ೫—೬ ಇರುವದಾಗಿಯೂ ನುಡಿದರು ಸಾಲ ಕೊಡುವ ಸಂಸ್ಥೆಗಳಿಂದ ಫಲದಾಯಕ ಕಾರ್ಯಗಳಿಗೆ ಉಪಯೋಗವಾಗುವದಿಲ್ಲೆಂದು ನುಡಿದು, ಒಕ್ಕಲಿಗರೂ, ಕಾರಖಾನೆಯವರೂ ಒಕ್ಕಟ್ಟಾದ ಹೊರತು, ಶಾಶ್ವತವಾದ ಲಾಭವಾಗದೆಂದರು ಸಾಲು ಮುಂತಾದ ಸಾಮಗ್ರಿಗಳನ್ನು ಪೂರೈಸಲಿಕ್ಕೆ ಸಂಘಗಳನ್ನು ಸ್ಥಾಪಿಸಬೇಕೆಂದರು ಕೊನೆಗೆ ಸಹಕಾರಿ ಸಂಘದ ಚೇರಮನ್‌ರಾದ ರಾ। ವತ್ಸಾತ್ರೆಯ ನಾಡಕರ್ಣಿಯವರು ಸಹಕಾರಿ ಚಳವಳಿಯು ಯಶಸ್ವಿಯಾಗಲಿಲ್ಲೆಂದು ತೋರಿತು ಸಹಕಾರಿ ಸಂಘಗಳಲ್ಲಿ ಸೇರುವವರಲ್ಲಿ ಪ್ರಾಮಾಣಿಕ ಮಂದಿಗಳು ಸಿಗುವದು ದುರ್ಲಭವೆಂದರು ಕಾರ್ಯದರ್ಶಿ, ಚೇರಮನ್ನರನ್ನು ಆರಿಸುವಾಗ, ಪ್ರಾಮಾಣಿಕ ಮಂದಿಗಳನ್ನೇ ನೋಡಿ ಆರಿಸಬೇಕೆಂದರು ಜಾಮೀನದಾರರು ಜಾಮೀನ ನಿಲ್ಲಬೇಕಾದರೆ, ಜಾಗ್ರತ ಕೊಳ್ಳಬೇಕೆಂದೂ ಅವರು ನುಡಿದರು ಅಧ್ಯಕ್ಷರು ಸಮಾರೋಪ ಮಾಡುವಾಗ ಕಾರ್ಯಕಾರಿ ಮಂಡಳದ ಅರ್ಧ ಸಭಾಸದರನ್ನಾದರೂ ಆಗಿಂದಾಗ ಬದಲಿಸದಿದ್ದರೆ, ಕಾರ್ಯಕಾರಿ ಮಂಡಳದ ಸಭಾಸದರು ನಿರಂಕುಶರಾಗುತ್ತಾರೆಂದು ನುಡಿದರು. ಬಳಿಕ ಸಭೆಯು ವಿಸರ್ಜನವಾಯಿತು.

ಇಲ್ಲಿಯ ಟೌನ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ಅಬಕಾರಿ ಖಟ್ಲೆಯು ಬಂದು ಗಲ್ಪೆ ಅಬಕಾರಿ ಖಾತೆಯವರು ಸೋಯ್ರು ಶೇಟ ಎಂಬುವನಮೇಲೆ ಒಂದು ಫಿರ್ಯಾದು ದಾಖಲ ಮಾಡಿರುವರು ಫಿರ್ಯಾದಿಯು ವಿಚಾರವನ್ನು ಟೌನ ಮೆಜಿಸ್ಟ್ರೇಟರ ಕೋರ್ಟಿನಿಂದ ಬೇರೆ ಕಡೆಗೆ ವಿಚಾರಕ್ಕೆ ಕಳುಹಬೇಕಾಗಿ ಡಿ। ಮೆಜಿಸ್ಟ್ರೇಟ ಕೋರ್ಟಿನಲ್ಲಿ ಅರ್ಜಿ ದಾಖಲ ಮಾಡಿದನು ಈ ಅರ್ಜಿಯಲ್ಲಿ ಟೌನ ಮೆಜಿಸ್ಟ್ರೇಟರು ಈ ಪ್ರಕರಣದ ವಿಷಯ ಪೂರ್ವಗ್ರಹ ಮಾಡಿಕೊಂಡ ಅನೇಕ ಕಾರಣಗಳು ನಮೂದಾಗಿದ್ದವು ಈ ಕಾರಣಗಳೆಲ್ಲ ಸುಳ್ಳೆಂದು ಡಿ। ಮೆಜಿಸ್ಟ್ರೇಟರು ಅಭಿಪ್ರಾಯಪಟ್ಟು ಅರ್ಜಿಯನ್ನು ಕಿತ್ತೊಗೆದು ಬಿಟ್ಟರು ಅರ್ಜಿ ದಾಖಲು ಮಾಡಿದ ವಕೀಲರಿಗೆ ಕೆಲವು ಕಾರಣಗಳು ಸುಳ್ಳೆಂದು ಮನವರಿಕೆಯಾಗಿದ್ದರೂ ಬುದ್ಧ್ಯಾ ಅವನ್ನು ನಮೂದಿಸಿದ ಬಗ್ಗೆ ಎಚ್ಚರಿಕೆಯನ್ನೂ ಕೊಟ್ಟಿರುವರು

ಮಾಹಾಳಿ— ತಾರೀಖು ೩-೭-೧೯೨೫ನೇ ದಿವಸ ಕೂಡಿದ ಮಾಹಾಳಿ ನಾಗರಿಕರ ಸಭೆಯಲ್ಲಿ ಸದಾಶಿವಗಡದ ಶ್ರೀಯುತ ಗಣಪತ ಸಬನೀಸ ನಾಡಕರ್ಣಿ ಇವರ 'ದೇಶಬಂಧು ಚಿತ್ತರಂಜನದಾಸ ಮತ್ತು ಅವರ ರಾಷ್ಟ್ರಕಾರ್ಯ' ಈ ವಿಷಯದ ಮೇಲೆ ಮಾಹಿತಿಯಿಂದ ತುಂಬಿದ ಪರಿಣಾಮಕಾರಕ ವ್ಯಾಖ್ಯಾನವಾಯಿತು ದೇಶಬಂಧುಗಳು ತಮ್ಮ ಅತುಲ ತ್ಯಾಗ, ಔದಾರ್ಯ ಧೈರ್ಯ, ಲೋಕೋತ್ತರ ದೇಶಭಕ್ತಿ, ಇತ್ಯಾದಿ ಸದ್ಗುಣಗಳಿಂದ ಹ್ಯಾಗೆ ಎಲ್ಲ ಹಿಂದೀ ಬಾಂಧವರ ಪ್ರೇಮಕ್ಕೆ ಪಾತ್ರರಾದರು, ಹಾಗೂ ತಮ್ಮ ಸಂಘಟನಾಚಾತುರ್ಯದಿಂದ 'ಸ್ವರಾಜ್ಯಪಕ್ಷ' ಸ್ಥಾಪಿಸಿ ಕೌನ್ಸಿಲುಗಳಲ್ಲಿ ಹೋಗಿ ಸುಧಾರಣೆಗಳ ನಿಷ್ಫಲತೆ ಸಿದ್ಧಮಾಡಿ ಎಷ್ಟು ಉತ್ಕೃಷ್ಟ ಕಾರ್ಯ ಮಾಡಿ ತೋರಿಸಿದರು ಎಂಬುದನ್ನು ವಿಸ್ತಾರಪೂರ್ವಕ ಹೇಳಿ, ಎಲ್ಲ ಹಿಂದೀ ಜನರು ಈಗ, ಅವರ ಸ್ವರಾಜ್ಯಕಾರ್ಯವನ್ನು ತಮ್ಮಿಂದಾದಷ್ಟರಮಟ್ಟಿಗೆ ಮುಂದರಿಸಬೇಕಾಗಿ ವಿನಂತಿ ಮಾಡಿ ತಮ್ಮ ೦॥ ತಾಸಿನವರೆಗೆ ನಡೆದ ಭಾಷಣ ಮುಗಿಸಿದರು

ಕುಂಭಾರವಾಡಾ— ಈ ಸ್ಟೇಶನಿನೊಳಗಿನ ಪೋಲೀಸ ನಾಯಕನು ಬಡ ರೈತರಿಗೆ ಬಹು ಪರಿಯಿಂದ ಕಾಡುತ್ತಾನೆಂದು ರೈತರೊಬ್ಬರು ತಾ। ೪-೭-೧೯೨೫ನೇಗೆ ಪತ್ರ ಬರೆದು ತಕರಾರು ಮಾಡುತ್ತಾರೆ ಮೇಲಧಿಕಾರಿಗಳು ಚೌಕಸಿ ನಡಿಸಬೇಕು.

ವೃತ್ತಸಾರ.

— ಗ್ರಾಮಪಂಚಾಯತಿಗಳ ವಿಷಯ ಚೌಕಸಿ ಮಾಡಿ ಅವುಗಳ ಸ್ಥಾಪನೆಗೆ ಅನುಕೂಲವಾದ ಉಪಾಯಗಳನ್ನು ಸೂಚಿಸಲು ಮುಂಬಯಿ ಸರಕಾರವು ಮಧ್ಯಭಾಗದ ಕಮೀಶನರರ ಅಧ್ಯಕ್ಷತ್ವದಲ್ಲಿ ಒಂದು ಕಮೀಟಿಯನ್ನು ನೇಮಿಸಿದೆ ಈ ಕಮೀಟಿಯ ಕೆಲಸವು ಇಂದು ೧೩ನೇ ತಾರೀಖಿನಿಂದ ಪುಣೆಯಲ್ಲಿ ಪ್ರಾರಂಭವಾಗುವದಿದೆ

ಮಹಾತ್ಮರು ಬಾಬು ಅರವಿಂದ ಘೋಷರವರಿಗೆ ನಿಮಂತ್ರಿಸಿರಲಿಲ್ಲವಾಗಿ ಪಾಂಡಿಚೇರಿಯ 'ಕ್ರಾನಿಕಲ್' ಪತ್ರಿಕೆಯ ಚಿತ್ರಗುಪ್ತರು ಬರೆದಿರುವರು. ಇತ್ತ ಬಾಬು ಮಹಾಶಯರ ಆಶ್ರಮದ ಸುತ್ತಲೂ ಗುಪ್ತ ಪೋಲೀಸರ ಕಾವಲಿದ್ದು ಅಲ್ಲಿ ಹೋಗಿ ಬರುವವರ ಮೇಲೆ ಗುಪ್ತ ಪೋಲೀಸರು ನೆರಳಿನಂತೆ ಹಿಂಬಾಲಿಸುತ್ತಾರೆಂದು ಸುದ್ದಿಗಾರರು ಬರೆಯುತ್ತಾರೆ.

— ದೇಶಬಂಧು ದಾಸರ ಸ್ಮಾರಕ ನಿಧಿಗೆ ೩। ಲಕ್ಷ ರೂಪಾಯಿಗಳು ದೊರಕಿವೆ

— ಇಂಗ್ಲಂಡದಲ್ಲಿ ಸದ್ಯಕ್ಕೆ ಉಗಿಬಂಡಿಯ ಶತಸಾಂವತ್ಸರಿಕ ದಿನವಾಯಿತು ಆಗ ಇಂಜಿನುಗಳನ್ನೇ ಜೋಡಿಸಿ, ೬ ಮೈಲು ಉದ್ದ ಒಂದು ಬಂಡಿಯನ್ನು ರಚಿಸಿದ್ದರು.

— ಮೈಸೂರಿನ ದಿವಾನರಾದ ಶ್ರೀ ಬಾನರ್ಜಿಯವರು ಮಾಟುಂಗಾ ಸ್ಟೇಶನಿನಲ್ಲಿ ಅಪಮಾನ ಮಾಡಿದ ಮಿ। ಗೋರ್ಡನ್ ಎಂಬ ಯುರೋಪಿಯನ್ನನ ಮೇಲೆ ಫಿರ್ಯಾದು ದಾಖಲ ಮಾಡಿದ್ದರು ಈ ಬಗ್ಗೆ ಮಿ। ಗೋರ್ಡನ್‌ರು ಮಾಫಿ ಬೇಡಿ ೫೦೦ ರೂಪಾಯಿ ಲುಕ್ಸಾನ ಭರಪಾಯಿ ಕೊಟ್ಟರು ಶ್ರೀ ಬಾನರ್ಜಿಯವರು ಇವರೊಳಗಿನ ೨೫೦ ರೂಪಾಯಿಗಳನ್ನು ಅವರಿಗೆ ತಿರುಗಿಕೊಟ್ಟು, ೨೫೦ ರೂಪಾಯಿಗಳನ್ನು ಮಾಟುಂಗದೊಳಗಿನ ಕುಷ್ಠರೋಗ ನಿವಾರಣ ಫಂಡಿಗೆ ಕೊಟ್ಟಿರುವರು.

— ನಮ್ಮ ಇಲಾಖೆಯೊಳಗಿನ ಜಿಲ್ಹಾ ಲೋಕಲ್‌ಬೋರ್ಡುಗಳ ಸ್ಥಿತಿಯನ್ನು ವಿಚಾರಿಸಿ, ಬೋರ್ಡುಗಳಿಗೆ ಸರಕಾರವು ಯಾವ ಯಾವ ಪ್ರಕಾರದಿಂದ ಸಹಾಯ ಮಾಡಬೇಕೆಂದು ಶಿಫಾರಸು ಮಾಡಲು ಮುಂಬಯಿ ಸರಕಾರವು ಒಂದು ಮಂಡಳವನ್ನು ನೇಮಿಸಿದೆ. ಈ ಮಂಡಳದ ಅಧಿಪತಿಗಳು ಸ್ಥಾನಿಕ ಸ್ವರಾಜ್ಯದ ದಿವಾನರು ನಮ್ಮಲ್ಲಿಯ ಕಲೆಕ್ಟರರಾಗಿದ್ದ ಮಿ। ಹೇಗರವರು ಈ ಕಮೀಟಿಯಲ್ಲಿ ಒಬ್ಬ ಮೆಂಬರರಾಗಿರುವರು.

— ದಿಲ್ಲಿಯ ಸೇಂಟ ಸ್ಟೀಫನ್ಸ ಕಾಲೇಜಿನ ಪ್ರಿನ್ಸಿಪಾಲರಾದ ಸುಶೀಲಕುಮಾರ ರುದ್ರರವರು ಕಳೆದ ಜೂನ ತಾರೀಖು ೩೦ನೇಗೆ ದಿಲ್ಲಿಯಲ್ಲಿ ದೇಹಾವಸಾನ ಹೊಂದಿದರು. ಸುಶೀಲ ರುದ್ರರವರು ದೇಶಸೇವಕರಿದ್ದು ದೇಶಹಿತಚಿಂತನ ಮಾಡುತ್ತಲೇ ಕ್ರಿಸ್ತವಾಸವನ್ನೈದಿದರು. ಅಸಹಯೋಗವು ಅವರ ಮನೆಯಲ್ಲಿಯೇ ಜನನವಾಯಿತೆಂದು ಮಹಾತ್ಮರು ಬರೆಯುತ್ತಾರೆ ದೀನಬಂಧು ಎಂಡ್ರೂಸರವರು ಶ್ರೀ ವಾಸಿಗಳ ಹಾಸಿಗೆಯ ಬುಡದಲ್ಲಿ ಕೂತುಕೊಂಡು ಸುಶ್ರೂಷೆ ಮಾಡುತ್ತಿದ್ದರು. ಎಚ್ಚರ ತಪ್ಪುವ ಸಮಯ ಸುಶೀಲ ರುದ್ರರು ಉದ್ಗರಿಸಿದ್ದೇನಂದರೆ — 'ನನ್ನ ರಾಷ್ಟ್ರಮಾತೆ, ಪ್ರಿಯ ರಾಷ್ಟ್ರಮಾತೆ,' ಗಳಿಗೆಯಲ್ಲಿ " ಪರಮಾತ್ಮನ ಲೀಲೆಯು ಅಗಾಧವಾದದ್ದು " ಎಂದು ಉದ್ಗರಿಸಿ, ಸುಶೀಲರು ಕ್ರಿಸ್ತವಾಸಿಗಳಾದರು. ಪುಣ್ಯಾತ್ಮ ಭಾರತಪುತ್ರರು !

— ಕಲಕತ್ತೆಯಲ್ಲಿ ಶಿವರಪುರದಲ್ಲಿ ಬಕರೀಯದ ಸಮಯ ದೊಂಬಿಯಾಯಿತು ಪೋಲೀಸರು ೬೦ ಮಂದಿ ಹಿಂದೂ ಹಾಗು ಶೀಖರನ್ನು ಸೆರೆಹಿಡಿದಿರುವರು. ಮುಕದ್ದಮವು ಇನ್ನೂ ತೀರಲಿಲ್ಲ.

— ಕಳೆದ ಜೂನ ೩೦ನೇ ತಾರೀಖಿಗೆ ಅಜಮೀರದಲ್ಲಿ ಉಗಿಬಂಡಿಯು ೧॥ ತಾಸುವರೆಗೆ ಕಲ್ಲಿನಂತೆ ನಿಂತುಕೊಂಡಿತ್ತು. ಕಾರಣವೇನಂದರೆ, ಜನರಲ್ ಟ್ರೆಫಿಕ್ ಮೇನೇಜರರು ಅದೇ ಬಂಡಿಯಿಂದ ಬರಬೇಕಾಗಿತ್ತು. ಮಹತ್ವದ ಕೆಲಸದ ಮೇಲೆ ಮೇನೆಜರರು ತೊಡಗಿದ್ದರಿಂದ ಉಗಿಬಂಡಿಯೊಳಗಿನ ಪ್ರಯಾಣಿಕರೆಲ್ಲರೂ ಅಷ್ಟು ಹೊತ್ತಿನವರೆಗೆ ಸ್ಟೇಶನಿನಲ್ಲಿ ಕಾದುಕೊಂಡುಳಿಯಬೇಕಾಯಿತು. ಮಹತ್ವದ ಕೆಲಸವ್ಯಾವದು? ಇತರ ಆಫೀಸರರೊಡನೆ ಟೆನಿಸ ಹೊಡೆಯುವದು ಹಾಗು ಈಜುವದು. ಮೊಗಲ್ ದರಬಾರವು ಮತ್ತು ಹೇಗಿರುತ್ತದೆ ?

- ಆಫ್ರಿಕಾ ಖಂಡದ ಮೊರೊಕ್ಕೊದಲ್ಲಿ ಫ್ರೆಂಚರಿಗೂ, ರೊಕ್ಕೊದೊಳಗಿನ ರಿಫ್ ಜನರಿಗೂ ಕಾಳಗ ನಡೆಯುದೆ. ೪೦೦ ಮಂದಿ ಫ್ರೆಂಚರು ಮಡಿದರು.

— ನಾಗಪ್ಪುರದ ಡಿ. ಪೋಲೀಸ ಸುಪರಿಂಟೆಂಡೆಂಟರು ಜಮುಖನ ಎಂಬ ಪೋಲೀಸ ಹೆಡ್ ಕಾನ್‌ಸ್ಟೇಬಲ ಶಿಪಾಯಿಯು ಭಯಂಕರ ಹೊಡೆದನಂತೆ. ಅದಕ್ಕೆ ಹೆಡ್ ಕಾನ್‌ಸ್ಟೇಬಲನು ಸುಪರಿಂಟೆಂಡೆಂಟರ ಮೇಲೆ ಫಿರ್ಯಾದು ಮಾಡಲು ಮಾಡುವ ಗುಲ್ಲು ಎಬ್ಬಿಸಿದ್ದಾನೆ. ಶಾಭಾಸ!

— ಬ್ರಹ್ಮಕೋಶದಲ್ಲಿ ಹರಿಯುವ ನದಿಗೆ ನೆರೆಬಿಟ್ಟು ನದಿಗುಂಟದ ಪ್ರದೇಶದ ಮೇಲಿನ ಮರಗಳೂ, ಕಟ್ಟಡಗಳೂ ಖುಷ ಮೇಲಾದವು. ಹೊಲಗಳಲ್ಲಿ ನೀರು ನಿಂತಿದೆ. ಕಾಳು ಕಡಿಗಳ ಧಾರಣೆಯೇರಿತು.

— ಈ ವರುಷ ವಿಲಾಯತಿಯಲ್ಲಿ ಆಯ್. ಸಿ. ಎಸ್., ಅಂದರೆ, ಆಳರಸರ ಪರೀಕ್ಷೆಗೆ ೧೩೨ ಮಂದಿ ಉಮೇದ್ವಾರರು ಕುಳಿತುಕೊಂಡಿರುವರು. ಅವರಲ್ಲಿ ೩೬ ಮಂದಿ ಯುರೋಪಿಯನ್‌ರು ಇಷ್ಟು ಯುರೋಪಿಯನ್‌ರು ಕಳೆದ ೭ ವರುಷಗಳಲ್ಲಿಯೂ ಕೂಡ ಉಮೇದ್ವಾರರಾಗಿರಲಿಲ್ಲ. ಇಲ್ಲಿಯ ಆಳರಸರ ವಿವಸ್ಥೆಯಿಂದ ಯುರೋಪಿಯನ್‌ರು ಹಿಂಜರಿಯುವ ಲಕ್ಷಣವೇನಿದು?

— ಜಪಾನದ ನಾಗೋಯಾ ಎಂಬಲ್ಲಿ ಭೂಕಂಪವಾಗಿ ಅಪಾರ ಹಾನಿಯಾಗಿದೆ. ನಾಗೋಯಾ ಪಟ್ಟಣದಲ್ಲಿ ವಿಧವಿಧದ ಗುಲ್ಲು ಪತ್ರಗಳು ತಯಾರಾಗುತ್ತವೆ.

— ಪಂಡಿತ ಮೋತೀಲಾಲ ನೆಹರೂರವರು ಪಾಲಂಪೂರ ಪಟ್ಟಣದಿಂದ ಲಾಹೋರಿಗೆ ಬಂದಿರುವರು. ದಮ್ಮಿನ ಉಪದ್ರವ ವಿಶೇಷ ಕೆಲಕೆಲವರಿನ ಒಂದು ನಿಮಿಷ ಸಹ ನಿದ್ದೆ ಹತ್ತುವದಿಲ್ಲವಂತೆ ಕಳೆದ ೭ನೇ ತಾರೀಖಿಗೆ ಅವರಿಗೆ ಜ್ವರಬಂತು. ಈಗ ಅವರು ಸ್ವಸ್ಥರಾಗಿರುವರು. ಕೆಲ [illegible] ಈ ಊರಿಗೆ ತೆರಳಿದರು

— ಗ್ಲಾಸಗೋ ಪಟ್ಟಣದಲ್ಲಿ ಕಳೆದ ಜುಲೈ ೩ನೇ ತಾರೀಖಿಗೆ ಒಂದು ದೊಡ್ಡ ಬೆಂಕಿ ಹತ್ತಿ 'ಕೆಲ್‌ವಿನ್ ಹಾಲ್' ಎಂಬ ಪ್ರಾರ್ಥನಾಲಯವು ಅರ್ಧ ಸುಟ್ಟುಹೋಯಿತು. ಸುಮಾರು ೩೦ ಲಕ್ಷ ರೂಪಾಯಿಗಳ ಹಾನಿ!

— ಪುರಿಯ ಗೋವರ್ಧನ ಪೀಠದ ಶ್ರೀ ಶಂಕರಾಚಾರ್ಯರಾದ ಶ್ರೀ ಸ್ವಾಮಿ ಶ್ರೀ ಮಧುಸೂದನ ತೀರ್ಥ ಮಹಾರಾಜರವರು ಕಳೆದ ಜೂನ ತಾ. ೨೯ ನೇಗೆ ಪುರಿ ಕ್ಷೇತ್ರದಲ್ಲಿ ದೇಹಾವಸಾನ ಹೊಂದಿದರು. ಶ್ರೀ ಶಾರದಾ ಪೀಠದ ಶಂಕರಾಚಾರ್ಯರಾದ ಸ್ವಾಮಿ ಶ್ರೀ ಭಾರತೀಕೃಷ್ಣ ತೀರ್ಥರವರು ನಿನ್ನೆ ಈ ೧೨ ನೇಗೆ ಪೀಠಾರೂಢರಾಗುವವರಿದ್ದರು.

— ಪಂಜಾಬ ಪ್ರಾಂತದ ಮರಿಯಲ್ಲಿ ರಾವಲಪಿಂಡಿಯೊಳಗಿನ ರಾಯಸಾಹೇಬ ಪಿರ್ತೀಚಂದನಾಥ ಕಲಮಾರರವರಿಗೆ ಕೆಲವು ಯುರೋಪಿಯನ್‌ರು ಪೆಟ್ಟು ಕೊಟ್ಟರಂತೆ ಪೋಲಿಸರು ಇಬ್ಬ ಯುರೋಪಿಯನ್‌ರನ್ನು ಸೆರೆಹಿಡಿದು ಅವರಿಂದ ಜಾಮೀನು ಕರಾರು ಬರೆಸಿಕೊಂಡು, ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಅವರಿಗೆ ಬಿಟ್ಟುಕೊಟ್ಟರಾಗಿ ತಿಳಿಯುತ್ತದೆ.

ಉತ್ತಮ, ಸುವಾಸನೆಯ, ಶುದ್ಧ, ಮಿಶ್ರಣವಿಲ್ಲದ

ಜನರಿಗೆ ಅವಶ್ಯ ಬೇಕಾಗಿರುವ

ಕಾಬೂಲೀ ಹಿಂಗು.

೪೦ ತೊಲೆಯುಳ್ಳ	ಡಬ್ಬಿ	೧ಕ್ಕೆ	೫—೦—೦
೨೦ ತೊಲೆ	ಡಬ್ಬಿ	೧ಕ್ಕೆ	೨—೧೨—೦
೧೦ ತೊಲೆ	ಡಬ್ಬಿ	೧ಕ್ಕೆ	೧—೮—೦.
೫ ತೊಲೆ	ಡಬ್ಬಿ	೧ಕ್ಕೆ	೧—೦—೦.
೧ ತೊಲೆಯ ಡಬ್ಬಿಗಳ ಡಜನ		೧ಕ್ಕೆ	೨—೧—೦.

ನಮ್ಮ ಹಿಂಗು ಪೋಟಾ ಬಂದಲ್ಲಿವರೆಗೆ ಕೊಳ್ಳವೆವು ಟಪಾಲು ಖರ್ಚು ಪ್ರತ್ಯೇಕ.

ಕೆರೇಶರ ಕಾಬೂಲೀ ಹಿಂಗಿನ ದುಕಾನ.

ಪವಳಿಬಾಜಾರ, ಕುಮಟಾ.

ಬಾಬುವಿನ ಬಂಧಮುಕ್ತತೆ.

(ಅನುವಾದಕ:- ವ್ಹಿ. ಎ. ಹೊದ್ಲೆ ಸಿಕೆ.)

ಹಿಂದಿನ ಸಂಚಿಕೆಯಿಂದ ಸಮಾಪ್ತ.

೮

ವಿದ್ಯಾರ್ಥಿಗಳ ಅಪೀಲಿನ ನಿಕಾಲಿಯಾಗಿದೆ. ಕಲಕತ್ತೆಯ ಒಬ್ಬ ವಿಖ್ಯಾತ ಬಾರಿಸ್ಟರರು ಅವರ ಕಡೆಯಿಂದ ಹಾಜರಾಗಿದ್ದರು. ಆದರೆ ಎಲ್ಲ ವ್ಯರ್ಥವಾಯಿತು. ಸೆಶನ್ ಜಡ್ಜರು ಅಪೀಲನ್ನು ತೆಗೆದುಹಾಕಿದರು. ಹುಡುಗರು ಪುನಃ ಜೈಲಿಗೆ ಹೋಗಿದ್ದಾರೆ ರಿವ್ಹಿಜನಕ್ಕಾಗಿ ಹೈಕೋರ್ಟಿಗೆ ಅಪೀಲ ಮಾಡುವ ತಯಾರಿ ನಡೆದಿದೆ.

ನಾಗೇಂದ್ರ ಬಾಬುರವರ ಹೆಂಡತಿಯು ತನ್ನ ಆಭರಣಗಳನ್ನು ಮಾರಿ, ಹುಡುಗರಿಗೆ ಸಹಾಯ ಮಾಡಿದಳು ಎಂಬ ಸುದ್ದಿಯು ಊರತುಂಬ ಹಬ್ಬಿದೆ. ಸ್ವತಃ ಕಲೆಕ್ಟರ ಸಾಹೇಬರವರ ಕಿವಿಯವರೆಗೆ ಸಹ ಅದು ಹೋಗಿ ಮುಟ್ಟಿದೆ. ಅಂದಿನಿಂದ ಆ ಅಧಿಕಾರಿಗಳು ನಾಗೇಂದ್ರ ಬಾಬುರವರನ್ನು ಸ್ವಲ್ಪ ಕಠೋರತನದಿಂದ ನಡೆಸುತ್ತಿರುವರು. ಒಂದು ದಿವಸ ಅವರು ಕೆಲವು ಕಾಗದಪತ್ರಗಳನ್ನು ತಿಳಿಸಿ ಹೇಳಲಿಕ್ಕೆ ಕಲೆಕ್ಟರರ ಬಳಿಗೆ ಹೋಗಬೇಕಾಗಿತ್ತು. ಆ ಕಾಲಕ್ಕೆ ಹಿಂದಿನಂತೆ ಅವರಿಗೆ ಕೂತುಕೊಳ್ಳಲು ಹೇಳಲಿಲ್ಲ. ಯಃಕಶ್ಚಿತ್ ಕಾರಕೂನನಂತೆ ನಿಂತುಕೊಂಡೇ ಅವರು ಕಾಗದ ಪತ್ರಗಳನ್ನು ತಿಳಿಸಿ ಹೇಳಬೇಕಾಯಿತು. ಇನ್ನೊಂದು ದಿನ ಅವರಿಗಿಂತ ಕನಿಷ್ಠ ತರಗತಿಯ ಅಧಿಕಾರಿಗಳ ಸಮಕ್ಷ, ಅವರು ನಡೆಸಿದಂಥ ಆದರೆ, ಅಪೀಲಿನಲ್ಲಿ ಜಡ್ಜರು ತೆಗೆದುಹಾಕಿದಂಥ ಒಂದು ಖಟ್ಲೆಯ ವಿಷಯವಾಗಿ ಕಲೆಕ್ಟರ ಸಾಹೇಬರು ಅವರನ್ನು ಕಠೋರತನದಿಂದ ಗದ್ದರಿಸಿದರು.

ಕಲೆಕ್ಟರರ ಈ ತರದ ವರ್ತನಕ್ಕಾಗಿಯೂ ಹಾಗೂ ತಮ್ಮ ಹೆಂಡತಿಯನ್ನು ಸಂತೋಷಪಡಿಸುವದಕ್ಕಾಗಿಯೂ, ನಾಗೇಂದ್ರ ಬಾಬುರವರು ಸೇವಾವೃತ್ತಿಯಿಂದ ನಿವೃತ್ತರಾಗಲಿಕ್ಕೂ ಮತ್ತು ಕಾಯದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಹೈಕೋರ್ಟಿನಲ್ಲಿ ವಕೀಲಿಯನ್ನು ನಡಿಸಲಿಕ್ಕೂ ನಿಶ್ಚಯಿಸಿರುವರು. ಪತಿಪತ್ನಿಯರೀರ್ವರೂ ಈ ಉಪಾಯವನ್ನು ಕುರಿತು ಪ್ರತಿ ದಿವಸವೂ ಮಾತಾಡುತ್ತಿರುವರು. ನಾಗೇಂದ್ರ ಬಾಬುರವರು ತಮ್ಮ ರಾಜಿನಾಮೆಯನ್ನು ಒಂದು ತಿಂಗಳ ಅವಧಿಯಲ್ಲಿ ಕಳಿಸುವದು ನಿಶ್ಚಯವಾಗಿಹೋಗಿದೆ.

ಜಡ್ಜ ಸಾಹೇಬರು ವಿದ್ಯಾರ್ಥಿಗಳ ಖಟ್ಲೆಯ ವಿಷಯದಲ್ಲಿ ತೀರ್ಮಾನವನ್ನು ಹೇಳಿದ ೧-೨ ದಿವಸಗಳ ನಂತರ ಕಲೆಕ್ಟರ ಸಾಹೇಬರು ಒಂದು ದಿನ ಬೆಳಿಗ್ಗೆ ತಮಗೆ ಬಂಗ್ಲೆಯಲ್ಲಿ ಭೆಟ್ಟಿಯಾಗಲು ತಿಳಿಸಿದರು ಈ ಮೊದಲು ಅವರು ತಾವಾಗಿಯೇ ಕಲೆಕ್ಟರರಿಗೆ ಆಗಾಗ್ಗೆ ಭೆಟ್ಟಿಯಾಗುತ್ತಿದ್ದರು. ಆದರೆ ಕೆಲವು ದಿವಸಗಳಿಂದ ಅವರು ಬೇಕೆಂತಲೇ ದೂರ ಇರುತ್ತಿರುವರು.

ನೇಮಿಸಿದ ಹೊತ್ತಿಗೆ ನಾಗೇಂದ್ರ ಬಾಬುರವರು ಪೋಷಾಕು ಹಾಕಿಕೊಂಡು ಕಲೆಕ್ಟರರ ಬಂಗ್ಲೆಗೆ ಹೋದರು. ಪಟ್ಟೇವಾಲನು ಅವರ ಚೀಟಿಯನ್ನು ಒಳಗೆ ಒಯ್ದನು. ಹೊರಗಡೆಯ ವರಾಂಡೆಯಲ್ಲಿ ಒಂದು ಕಟ್ಟಿಗೆಯ ಬಾಂಕು ಇಟ್ಟಿತ್ತು. ದೊಡ್ಡ ದೊಡ್ಡ ಅಧಿಕಾರಿಗಳಾಗಲಿ, ಜಮೀನದಾರರಾಗಲಿ ತಮ್ಮ ಭೆಟ್ಟಿಗೆ ಬಂದರೆ ತಾವು ಬರುವವರೆಗೆ ಅವರನ್ನು ಒಳಗೆ ಕೂಡ್ರಿಸುವದು ಕಲೆಕ್ಟರರ ನೇಮವಾಗಿತ್ತು. ಕನಿಷ್ಠ ಯೋಗ್ಯತೆಯ ಮನುಷ್ಯರು ತಮ್ಮತಮ್ಮ ಆಗಮನ ಕಾಲಕ್ಕನುಸಾರವಾದ ಸರತಿಯಂತೆ ಕಲೆಕ್ಟರರಿಂದ ಕರೆಯಲ್ಪಡುವವರೆಗೆ ಹೊರಗಿನ ಬೆಂಚಿನಮೇಲೆ ಕೂಡ್ರಬೇಕಾಗಿತ್ತು. ನೇಮಕ್ಕೆ ವಿರೋಧವಾಗಿ ಪಟ್ಟೇವಾಲನು ಹೊರಗೆ ಬಂದು ನಾಗೇಂದ್ರ ಬಾಬುರವರಿಗೆ ಬೆಂಚಿನಮೇಲೆ ಕೂಡ್ರಹೇಳಿದನು ಕನಿಷ್ಠ ಯೋಗ್ಯತೆಯ ೫-೬ ಜನರಿಗೂ ಅದರ ಮೇಲೆಯೇ ಕೂಡ್ರಿಸಿತ್ತು. ತಮಗೆ ಮಾಡಿದ ಅಪಮಾನವು ನಾಗೇಂದ್ರ ಬಾಬುರವರ ಮನಸ್ಸಿಗೆ ಬಹಳ ಹತ್ತಿತು. ಅವರು ಬೆಂಚಿನಮೇಲೆ ಕೂಡ್ರುವದರ ಬದಲಾಗಿ, ತಮ್ಮ ಸರದಿಯು ಬರುವ ವರೆಗಿನ ವೇಳೆಯನ್ನು ಕಳೆಯುವದಕ್ಕೆ ವರಾಂಡೆಯಲ್ಲಿ ಅತ್ತಿತ್ತ ಅಡ್ಡಾಡುತ್ತಿದ್ದರು.

ಸ್ವಲ್ಪ ಹೊತ್ತಿನಮೇಲೆ ಪಟ್ಟೇವಾಲನು ಕಲೆಕ್ಟರರು ಕೂತ ಕೋಣೆಯೊಳಗಿಂದ ಹೊರಗೆಬಂದು, [illegible]— "ಸ್ವಾಮೀ ನಿಮ್ಮ ಬೂಟುಗಳಿಂದಾಗುವ ಸಪ್ಪಳದಿಂದ ಸಾಹೇಬರಿಗೆ ತೊಂದರೆಯಾಗುತ್ತದೆ. ದಯಮಾಡಿ ಬೆಂಚಿನಮೇಲೆ ಕೂತುಕೊಳ್ಳಿರಿ." ಎಂದು ಹೇಳಿದನು.

ಈ ಎರಡನೇ ಅಪಮಾನದಿಂದ ನಾಗೇಂದ್ರ ಬಾಬುರವರಿಗೆ ಸಿಟ್ಟು ಕೆರಳಿತು— ಆದರೆ ಅವರು ಆತ್ಮಸಂಯಮನವನ್ನು ಮಾಡಿದರು. ಹೋಗಿ ಅವರು ಬೆಂಚಿನಮೇಲೆ ಕೂತರು ಕನಿಷ್ಠ ಯೋಗ್ಯತೆಯ ಜನರು ತಮಗೂ ಡೆಪ್ಯುಟಿ ಕಲೆಕ್ಟರರಿಗೂ ನಡುವೆ ಸಾಕಷ್ಟು ಅಂತರವನ್ನಿಡಲು ಇಚ್ಛಿಸದವರಂತೆ ಒತ್ತಿ ಕೂತುಕೊಂಡರು.

ಸ್ವಲ್ಪ ಹೊತ್ತಿಗೆ ಸಾಹೇಬರು ತಮ್ಮ ಕಾರ್ಯಕ್ಕಾಗಿ ಬಂದವರ ಸಮಾಚಾರವನ್ನು ತೆಗೆದುಕೊಳ್ಳಲು ಪ್ರಾರಂಭಿಸಿದರು. ಆದರೆ ಅವರು ಪ್ರಥಮತಃ ನಾಗೇಂದ್ರ ಬಾಬುರವರನ್ನು ಕರೆಯಲಿಲ್ಲ. [illegible] ಜಿಲ್ಲಾಧಿಕಾರಿಗಳು ಕನಿಷ್ಠ ತರಗತಿಯವರನ್ನೇ ಮೊದಲು ಒಬ್ಬೊಬ್ಬರನ್ನಾಗಿ ತಮ್ಮ ಸನ್ನಿಧಿಯಲ್ಲಿ ಕರೆಮಾಡಿಕೊಂಡರು, ಕೆಲವು ನಿಮಿಷಗಳ ಸಂಭಾಷಣದನಂತರ ಅವರನ್ನು ಕಳಿಸಿದರು. ನಾಗೇಂದ್ರ ಬಾಬುರವರ ಆಗಮನದ ನಂತರ ಎಷ್ಟೋ ಜನರು ಬಂದರು. ಸಾಹೇಬರು ಕ್ರಮೇಣ ಅವರನ್ನು ಸಹ ಒಳಗೆ ಕರೆಮಾಡಿಕೊಂಡರು. ತಮಗೆ ಸಾರ್ವಜನಿಕ ರೀತಿಯಲ್ಲಿ ಅಪಮಾನಗೊಳಿಸುವದೇ ಕಲೆಕ್ಟರರ ಉದ್ದೇಶವೆಂಬುದಾಗಿ ನಾಗೇಂದ್ರ ಬಾಬುರವರಿಗೆ ಸಂಶಯವಿರಲಿಲ್ಲ. ಈ ಅವಧಿಯೊಳಗಿನ ಅವರ ಮಾನಸಿಕ ಸ್ಥಿತಿಯನ್ನು ವರ್ಣಿಸುವದು ಅಸಾಧ್ಯವು. ಅವರ ಮೈಯೆಲ್ಲ ಮೇಲಿಂದ ಮೇಲೆ ಬೆವರುತ್ತಿದ್ದರಿಂದ, ಕೈವಸ್ತ್ರವು ಕೆಲ ಹೊತ್ತಿನಮೇಲೆ ತೀರ ನಿರುಪಯೋಗಿಯಾಯಿತು. ಅಲ್ಲಿ ಬೆಂಚಿನಮೇಲೆ ಕೂತುಕೊಂಡು, ಒಂದು ತಿಂಗಳ ನಂತರ ಕಳಿಸಬೇಕೆಂತ ಮಾಡಿದ ರಾಜಿನಾಮೆಯನ್ನು ಅದೇ ದಿವಸವೇ ಕಳಿಸಬೇಕೆಂತ ಅವರು ನಿಶ್ಚಯಿಸಿದರು.

ಕಟ್ಟಕಡೆಗೆ ನಾಗೇಂದ್ರ ಬಾಬುರವರೊಬ್ಬರೇ ಆ ಬೆಂಚನ್ನು ಆಶ್ರಯಿಸಿದ್ದರು. ಕೊನೆಯ [illegible] ನಂತರ ಅವರಿಗೆ ಕರೆ ಬಂತು. ನಾಗೇಂದ್ರ ಬಾಬುರವರು ಅಮಲೇರಿದವರಂತೆ ತೂರಾಡುತ್ತ ಕಲೆಕ್ಟರರ ಸನ್ನಿಧಿಯನ್ನು ಸೇರಿದರು.

"ನಮಸ್ಕಾರ ಸ್ವಾಮೀ," ಎನ್ನುತ್ತ ನಾಗೇಂದ್ರ ಬಾಬುರವರು ಒಳಗೆ ಹೋದರು. ಕಲೆಕ್ಟರರು ಕುರ್ಚಿಯಿಂದ ಏಳದೆ "ನಮಸ್ಕಾರ ಬಾಬು" ಅಂದರು.

'ಬಾಬು'— ಈ ಮೊದಲು, ಕಲೆಕ್ಟರರು ಎದ್ದು ನಿಂತು ಹಸ್ತಾಂದೋಲನವನ್ನು ಮಾಡಿ— "ನಮಸ್ಕಾರ, ನಾಗೇಂದ್ರ ಬಾಬು" ಎನ್ನುವ ನೇಮವಿತ್ತು. ಹಿಂದೆ ಹೆಸರನ್ನು ಹಚ್ಚದೆ ಬರೇ ಬಾಬು ಎಂತ ಯಾರಾದರೂ ಸಂಬೋಧಿಸಿದರೆ ದೊಡ್ಡ ಯೋಗ್ಯತೆಯ ಬಂಗಾಲಿ ಗೃಹಸ್ಥರಿಗೆ ಅದೊಂದು ಅಪಮಾನವೆನಿಸುತ್ತದೆಂಬುವದು ಅವರಿಗೆ ಚನ್ನಾಗಿ ಗೊತ್ತಿತ್ತು. ಆದರೆ, ನಾಗೇಂದ್ರ ಬಾಬುರವರು ಅದಕ್ಕೆ ಮಹತ್ವವನ್ನೇ ಕೊಡಲಿಲ್ಲ. ಯಾಕಂದರೆ, ತಾವು ತ್ಯಾಗ ಪತ್ರ ಕೊಡಬೇಕೆಂಬುದನ್ನು ಅವರು ಈ ಮೊದಲೇ ನಿಶ್ಚಯಿಸಿಬಿಟ್ಟಿದ್ದರು.

ಚುರುಟನ್ನು ಹಲ್ಲುಗಳ ಮಧ್ಯದಲ್ಲಿ ಸೇರಿಸಿಕೊಂಡು ಕಲೆಕ್ಟರರು— "ಸ್ವದೇಶಿಯ ವಿಷಯವಾಗಿ ಊರಲ್ಲಿ ಏನು ಸುದ್ದಿ?" ಎಂತ ಕೇಳಿದರು.

"ಒಳ್ಳೇದು," ಎಂತ ನಾಗೇಂದ್ರ ಬಾಬುರವರು ಉತ್ತರವನ್ನಿತ್ತರು.

"ಇದನ್ನು ಕೇಳಿ ನನಗೆ ಆನಂದವಾಯಿತು ಅದಲ್ಲಿ ಬಿಸ್ಕೋಟಿನ ಖಟ್ಲೆಯಲ್ಲಿ ಕೈಕೊಂಡ ತಕ್ಕ ಉಪಾಯಗಳ ಪರಿಣಾಮವು"

"ಸ್ವಾಮೀ, ನಿಮಗೆ ತಪ್ಪು ತಿಳುವಳಿಕೆಯಾಯಿತೆಂತ ನನಗೆ ತೋರುತ್ತದೆ. ನಾನು ಜನರ ದೃಷ್ಟಿಯಿಂದ

'ಒಳ್ಳೇದು' ಎಂತ ಹೇಳಿದೆನು. ಆದರೆ ಸರಕಾರದ ದೃಷ್ಟಿಯಿಂದಲ್ಲ. ಟಿಸ್ಕೋಟನ ಖಟ್ಲೆಯಲ್ಲಿ ನಾನು ನಿರ್ಣಯವನ್ನು ಕೊಟ್ಟಂದಿನಿಂದ ಊರ ಜನರು ಸ್ವದೇಶೀಯ ವಿಷಯವಾಗಿ ಮೊದಲಿಗಿಂತಲೂ ಹೆಚ್ಚು ಭಕ್ತಿಯನ್ನು ತೋರಿಸಹತ್ತಿರುವರು."

"ಹಾಗಾದರೆ, ನೀವು ಅದು ಒಳ್ಳೇದು ಎಂತ ಯಾಕೆ ಅನ್ನುತ್ತೀರಿ? ನೀವು ಸಹ ಸ್ವದೇಶೀ ಭಕ್ತರೋ?" ಎಂತ ಕಲೆಕ್ಟರರು ಆಶ್ಚರ್ಯದಿಂದ ನುಡಿದರು.

"ಸ್ವಾಮೀ, ಸ್ವದೇಶೀ ಚಳವಳಿಯು ಪ್ರಾರಂಭವಾದಂದಿನಿಂದ, ಒಂದು ಪೈ ಬೆಲೆಯ ಯಾವದೇ ಪರದೇಶೀ ವಸ್ತುವು ಕೂಡ ನನ್ನ ಮನೆಯನ್ನು ಪ್ರವೇಶಿಸಿರುವದಿಲ್ಲ" ಎಂತ ನಾಗೇಂದ್ರ ಬಾಬುರವರು ಅಭಿಮಾನಪೂರ್ವಕವಾಗಿ ಉತ್ತರವನ್ನಿತ್ತರು.

ಕಲೆಕ್ಟರರ ಮೋರೆಯು ಕೆಂಪಗಾಯಿತು. ಸರಕಾರಿ ಸೇವೆಯಲ್ಲಿದ್ದ ಎಷ್ಟೋ ಬಂಗಾಲಿಗಳು ಅಂತರಂಗದಲ್ಲಿ ಸ್ವದೇಶೀ ವ್ರತವನ್ನು ಪಾಲಿಸುತ್ತಿದ್ದದ್ದು ಅವರಿಗೆ ಚನ್ನಾಗಿ ಗೊತ್ತಿತ್ತು. ಆದರೆ ಈವರೆಗೆ ತಮ್ಮ ಯಜಮಾನರಾದ ಸಾಹೇಬರ ಮುಂದೆ ಅದರ ಉದ್ಗಾರವನ್ನು ಮಾಡುವ ಧೈರ್ಯವು ಯಾರಿಗೂ ಇದ್ದಿಲ್ಲ. ತಾನು ಈ ಮೊದಲು ಮಾಡಿದ ಅಪಮಾನದ ಸೇಡನ್ನು ನಾಗೇಂದ್ರ ಬಾಬುರವರು ತೀರಿಸುತ್ತಿರುವರೆಂತಲೂ ಅವರಿಗೆ ಅನಿಸಹತ್ತಿತು. ಆದರೆ ಆ ಗರ್ವಿಷ್ಠ ಸಾಹೇಬರು ತಮ್ಮ ಮನೋವಿಕಾರಗಳನ್ನು ತೋರಗೊಡದಂತೆ [illegible] ಅವರು ಕೃತಿಮ ಮನರಂಜನೆಯನ್ನು ತೋರಿಸುತ್ತ,—"ಹೌದು ಸ್ವದೇಶೀಯ ವಿಷಯದಲ್ಲಿ ಬಂಗಾಲಿ ಹೆಂಗಸರಿಗೆ ಗಂಡಸರಿಗಿಂತಲೂ ಹೆಚ್ಚು ಶ್ರದ್ಧೆಯುಂಟೆಂಬುದನ್ನು ನಾನು ಕೇಳಿರುವೆನು" ಎಂತ ನಸುನಕ್ಕು ನುಡಿದರು. ಪ್ರಶ್ನೋತ್ತರದಲ್ಲಿ ಸಾಹೇಬರಿಗೆ [illegible] ಯಿತು. ಅವರು ಗದ್ದರಿಸಿದ್ದೇನೆಂದರೆ— [illegible] ಆದರೆ ನಿಮ್ಮ ಹೆಂಡತಿಯೂ ತನ್ನ [illegible] ಮಾರಿ ವಿದ್ಯಾರ್ಥಿಗಳ [illegible] ಗಳನ್ನು ಕೊಟ್ಟಳೆಂತ ನಾನು ಕೇಳಿದೇನೆ. ಅದು ನಿಜವೋ?"

"ಹೌದು, ಸ್ವಾಮೀ, ಅದು ನಿಜವೇ. ಇಷ್ಟೇ ಅಲ್ಲ ನನ್ನ ಹೆಂಡತಿಯು ಹ್ಯಾಕೋರ್ಟಿಗೆ ಹೋಗುವ ಅಪೀಲಿನ ಖರ್ಚನ್ನು ಸಹ ತಾನೇ ಕೊಡುವ ವಚನವನ್ನು ಕೊಟ್ಟಿರುವಳು" ಎಂತ ನಾಗೇಂದ್ರ ಬಾಬುರವರು ತಮಗೆ ಏನೂ ಸಂಬಂಧವಿಲ್ಲದಂತೆ ನುಡಿದರು.

ಇದು ಮಾತ್ರ ಕಲೆಕ್ಟರರಿಗೆ ಸರ್ವಥಾ ಸಹನವಾಗಲಿಲ್ಲ. ಅವರು ಸಿಟ್ಟಿನಿಂದ ಕೆಂಪುಮುಖರಾಗಿ ಗದ್ದರಿಸಿದ್ದೇನೆಂದರೆ—"ಆದರೆ ಹೀಗೆ ಮಾಡುವದರಿಂದ ಸರಕಾರವನ್ನು ತಿರಸ್ಕರಿಸಿದಂತಾಗುವದಿಲ್ಲವೇ?"

"ಸ್ವಾಮೀ, ನನಗೆ ಗೊತ್ತಿಲ್ಲ. ಹ್ಯಾಕೋರ್ಟಿನ ನ್ಯಾಯಾಧೀಶರೂ ಸರಕಾರದಿಂದಲೇ ಆರಿಸಲ್ಪಟ್ಟ ಕಾರಣ, ನ್ಯಾಯದಾನದ ವಿಷಯದಲ್ಲಿ ಅವರು [illegible] ಮಾಗಿಬೇಕೆಂತ ನಾನು ಭಾವಿಸಿದ್ದೆ."

"ಇರಬಹುದು. ಆದರೆ ನಿಮ್ಮ ಹೆಂಡತಿಯು ನಮ್ಮ ನ್ಯಾಯಾಲಯದ [illegible] ಇದರಿಂದ ಸರಕಾರವನ್ನು ಧಿಕ್ಕರಿಸಿದಂತಾಗದಿದ್ದರೂ, ಸರಕಾರಿ ಅಧಿಕಾರಿಗಳನ್ನು ತಿರಸ್ಕರಿಸಿದಂತಾಗುವದು."

"ಸ್ವಾಮೀ, ನನ್ನ ಹೆಂಡತಿಯು ಸರಕಾರಿ ಅಧಿಕಾರಿಯಾಗದೇ ಇದ್ದ ಬಗ್ಗೆ ನಾನು ದೇವರ ಉಪಕಾರವನ್ನು ನೆನಿಸಬೇಕಾಗಿದೆ."

ಸಿಟ್ಟಿನೊಂದಿಗೆ ಆಶ್ಚರ್ಯವೂ ಕಲೆಕ್ಟರ ಸಾಹೇಬರ ಮನಸ್ಸನ್ನು ಆಕ್ರಮಿಸಹತ್ತಿತು. ಬಂಗಾಲದಲ್ಲಿ ಅವರು ಕೆಲಸಮಾಡಹತ್ತಿ ಎಷ್ಟೋ ವರ್ಷಗಳಾಗಿದ್ದವು. ಆದರೆ, ಬಂಗಾಲಿಗಳಲ್ಲಿ ಇಂಥ ಧಿಟ್ಟತನವನ್ನು ಅವರು ನೋಡಿದ್ದು ಇದೇ ಮೊದಲು. ತಾವು ಮಾಡಿದ ಅಪಮಾನದ ಸೇಡನ್ನು ನಾಗೇಂದ್ರ ಬಾಬುರವರು ಹೀಗೆಂತ ತೀರಿಸುತ್ತಿರುವರೆಂತ ಕಲೆಕ್ಟರರಿಗೆ ಪೂರ್ಣ ಖಾತ್ರಿಯಾಯಿತು. ಆದರೆ ಸ್ವರ್ಗಮಾತ್ರದಿಂದ ನಾಗೇಂದ್ರ ಬಾಬುರವರನ್ನು ಮುತ್ತಿಗೆಹಾಕಬಲ್ಲಂಥ ಸಾಧನವೊಂದು ಸಾಹೇಬರ ಕೈಯೊಳಗಿತ್ತು. ಅವರು ಕ್ಷಣಹೊತ್ತು ಆಲೋಚಿಸಿ ಅಂದದ್ದು—

"ಅದು ಹ್ಯಾಗೂ ಆಗಲಿ. ಈ ದಿನ ಬೆಳಿಗ್ಗೆ ನಾನು ನಿಮಗೆ ಕರೆಸಿದ್ದರ ಕಾರಣವೇನೆಂದರೆ ಇತ್ತೀಚೆಗಾಗಿ ನೀವು ನಿಮ್ಮ ಕೆಲಸದಲ್ಲಿ ಬಹಳೇ ಅಜಾಗ್ರತೆಯನ್ನು ತೋರಿಸುತ್ತಿರುವಿರಿ. ನೀವು ಹೆಚ್ಚು ಜಾಗ್ರತೆಯುಳ್ಳವರಾಗದಿದ್ದರೆ ನಿಮ್ಮ ಬಡತಿಗಾಗಿ ಕಮೀಶನರ ಸಾಹೇಬರಿಗೆ ಮಾಡಿದ ಶಿಫಾರಸವನ್ನು ನಾನು ತಿರುಗಿ ತೆಗೆದುಕೊಳ್ಳಬೇಕಾದೀತು. ಇಷ್ಟೇ ಅಲ್ಲ ನಿಮ್ಮ ಸದ್ಯದ ವೇತನವನ್ನೂ ಸಹ ಕಡಿಮೆ ಮಾಡುವದು ನನಗೆ ಅಗತ್ಯವೆನಿಸೀತು."

ಈ ಬಾಣವನ್ನು ಬಿಟ್ಟು ಅವರ ಸಹಜವಾದ ಪರಿಣಾಮವನ್ನು ಕಲೆಕ್ಟರರು ಅಭಿಮಾನಪೂರ್ವಕವಾಗಿ ನಾಗೇಂದ್ರ ಬಾಬುರವರ ಮೋರೆಯ ಕಡೆಗೆ ದಿಟ್ಟಿಸಿ ನೋಡಹತ್ತಿದರು. ನಾಗೇಂದ್ರ ಬಾಬುರವರು ಕೂಡಲೆ ಮೆತ್ತಗಾಗಿ ದೀನವಾಣಿಯಿಂದ ತಮ್ಮ ಕ್ಷಮೆಯನ್ನು ಬೇಡುವರೆಂತ ಅವರ ಮನವರಿಕೆಯಾಗಿತ್ತು.

ಆದರೆ ಸಾಹೇಬರ ಅಪೇಕ್ಷೆಯು ತಪ್ಪಾಯಿತು. ಶಿರಸ್ತೇದಾರ ನಗೆಮುಖದಿಂದ ನಾಗೇಂದ್ರ ಬಾಬುರವರು ಅಂದದ್ದೇನಂದರೆ— "ಸ್ವಾಮೀ, ನಿಮ್ಮ ಮನಸ್ಸಿಗೆ ಬಂದಂತೆ ನೀವು ಮಾಡಬಹುದು. ಯಾಕೆಂದರೆ ನನಗೇನೂ ಅದರ ಚಿಂತೆ ಇಲ್ಲ."

ಈ ಅನಿರೀಕ್ಷಿತ ಉತ್ತರವನ್ನು ಕೇಳಿ ಸಾಹೇಬರು ತಬ್ಬಿಬ್ಬಾದರು. [illegible] ಕಲೆಕ್ಟರರು ನುಡಿದರು.

"ಸ್ವಾಮೀ, ನಾನು ನನ್ನ ರಾಜೀನಾಮೆಯನ್ನು ಕಳಿಸಲಿಕ್ಕೆ ನಿಶ್ಚಯಿಸಿದೇನೆ. ಮತ್ತು ಅದು ನಿಮಗೆ ಈ ದಿವಸ ಮುಟ್ಟುವದು. ನೀವು ದಯವಂತರು. ಒಂದು ತಿಂಗಳೊಳಗಾಗಿ ನನಗೆ ಹೆಚ್ಚು ವಿಳಂಬವಾಗದಂತೆ ವ್ಯವಸ್ಥೆ ಮಾಡುವಿರಾ?"

ಸಾಹೇಬರ ಮೋರೆಯು ಕಳೆಗುಂದಿತು. ವಿದ್ಯಾವಂತ ಬಂಗಾಲಿಯು— ಕೇವಲ ಸರಕಾರಿ ಸೇವೆಯೇ ಜೀವನಾಧಾರವಾಗಿದ್ದಂಥ ಬಂಗಾಲಿಯು— ಹೆಪ್ಪೇ ಕಲೆಕ್ಟರರ ಅಧಿಕಾರವನ್ನು ಈ ರೀತಿಯಿಂದ ಧಿಕ್ಕರಿಸುವದು ಒಳ್ಳೇದು, ಸಾಹೇಬರು ಇದಕ್ಕೆ ತಯಾರಿದ್ದಿಲ್ಲ. ನಿಜವಾಗಿ ಆ ಕಾಲವೇ ಅಂಥದಾಗಿತ್ತು.

ನಾಗೇಂದ್ರ ಬಾಬುರವರು ತಮ್ಮ ಗಡಿಯಾರದ ಕಡೆಗೆ ನೋಡಿ ಎದ್ದು ನಿಂತು ಅಂದದ್ದು— "ಸ್ವಾಮೀ, ನಾನು ನಿಮ್ಮ ಹೆಚ್ಚು ವೇಳೆಯನ್ನು ತೆಗೆದುಕೊಳ್ಳಬಾರದು. ನಮಸ್ಕಾರ."

ಹೆಚ್ಚಾದ ಮನಸ್ಸಿನಿಂದ ಕಲೆಕ್ಟರ ಸಾಹೇಬರು ಎದ್ದು ನಿಂತು, ನಾಗೇಂದ್ರ ಬಾಬುರವರಿಗೆ ಹಸ್ತಾಂದೋಲನವನ್ನು ಮಾಡಿ, ನಮಸ್ಕಾರ ಅಂದರು.

ಒಂದು ವಾರವು ಕಳೆಯಿತು. ಈ ದಿನ ನಾಗೇಂದ್ರ ಬಾಬುರವರು ಇಡೀ ಸಾರೆ ನ್ಯಾಯಾಸನದ ಮೇಲೆ ಕೂಡುವ ಕಡೆಯ ದಿವಸವು. ವಿದ್ಯಾರ್ಥಿಗಳ ದೊಡ್ಡದೊಂದು ಗುಂಪು ಅವರ ಕಚೇರಿಯ ಹೊರಬದಿಯಲ್ಲಿ ಕಾಯುತ್ತಿತ್ತು. ಅವರಲ್ಲಿ ಕೆಲವರು "ವಂದೇ ಮಾತರಂ" ಎಂತ ಬರೆದ ನಿಶಾನಿಗಳನ್ನು ಹಿಡಿದಿದ್ದರು. ಕುದುರೆಗಳಿಲ್ಲದ ವಿಕ್ಟೋರಿಯಾ ಗಾಡಿಯೊಂದು ಆಲದ ಮರದ ಬುಡದಲ್ಲಿ ತಯಾರ ಮಾಡಿಟ್ಟಿತ್ತು.

ನಾಗೇಂದ್ರ ಬಾಬುರವರು ಕಚೇರಿಯಿಂದ ಹೊರಗೆ ಬಂದ ಕೂಡಲೆ, ಅವರಿಗೆ ಹುಡುಗರು ಹೂವಿನ ಮಾಲೆಯನ್ನು ಹಾಕಿದರು. ಆಗ ಅವರಿಗೆ ವಿಕ್ಟೋರಿಯಾದಲ್ಲಿ ಕೂಡ್ರಲು ವಿನಂತಿ ಮಾಡಿಕೊಂಡರು ಮತ್ತು ಆ ಗಾಡಿಯನ್ನು ತಾವೇ ಸ್ವತಃ ಪಟ್ಟಣದ ಪ್ರಮುಖ ಬೀದಿಗಳೊಳಗಿಂದ ಎಳಕೊಂಡು ಹೋಗುವ ತಮ್ಮ ಇಚ್ಛೆಯನ್ನು ಪ್ರಕಟಿಸಿದರು. ತಮ್ಮ ವಿಷಯವಾಗಿ ಈ ತರದ ಆದರವನ್ನು ತೋರಿಸಿದ್ದಕ್ಕಾಗಿ ನಾಗೇಂದ್ರ ಬಾಬುರವರು ಅವರ ಉಪಕಾರವನ್ನು ಸ್ಮರಿಸಿದರು. ಆದರೆ ತಾವು ಮೆರವಣಿಗೆಗೆ ತಯಾರಿಲ್ಲವೆಂತ ಖಂಡಿತವಾಗಿ ಹೇಳಿದರು. ಹುಡುಗರು ಗಿಡದ ಬುಡದಲ್ಲಿದ್ದ ಗಾಡಿಯನ್ನು ತಂದರು ಮತ್ತು ತಮ್ಮ ವಿನಂತಿಯನ್ನು ಮಾನ್ಯಮಾಡಲು ಅವರಿಗೆ ಬೇಡಿಕೊಳ್ಳಹತ್ತಿದರು.

ಈ ಕಾಲಕ್ಕೆ ಇಬ್ಬರು ಒಕ್ಕಲಿಗರು ದಾರಿಹಿಡಿದು ಹೋಗುತ್ತಿದ್ದರು. ಅವರಲ್ಲೊಬ್ಬನು ಪಟ್ಟಣವಾಸಿಯೂ, ಇನ್ನೊಬ್ಬನು ಹೊರಗಿನ ಹಳ್ಳಿಯಿಂದ ಅದೇ ಬಂದಂಥವನೂ ಆಗಿದ್ದರು.

ಹಳ್ಳಿಯ ಹುಡುಗನು ಪಟ್ಟಣದ ಪಂಡಿತನಿಗೆ ಕೇಳಿದ್ದೇನಂದರೆ.—"ಇದೆಲ್ಲ ಏನು? ಕೊರಳಲ್ಲಿ ಹೂಮಾಲೆಯನ್ನು ಧರಿಸಿರುವಂಥ ಆ ಬಾಬುವಿನ ಮದುವೆ ಆಗತಕ್ಕದುಂಟೇ?"

ಪಟ್ಟಣದ ಪಂಡಿತನು ಅಂದದ್ದು:— "ನಿನಗೆ ಹಾಗೆ ತೋರುವದಿಲ್ಲ. ಇದೇ ಹಗೆ ಆ ಬಾಬುವಿನ ಬಂಧಮುಕ್ತತೆಯಾದಂತೆ ಕಾಣುತ್ತದೆ. ಅತ್ತಿತ್ತಲಾಗಿ ಜನರು ಜೈಲಿನೊಳಗಿಂದ ಹೊರಗೆ ಬಂದ ಬಾಬುಗಳಿಗೆ ಹೂವಿನ ಮಾಲೆಯನ್ನು ಹಾಕಿ ಅವರ ವಿಷಯವಾಗಿ ದೊಡ್ಡದೊಂದು ಗೊಂದಲವನ್ನು ಎಬ್ಬಿಸುತ್ತಿರುವರು."

ಗಾಡಿಯಲ್ಲಿ ಕೂತುಕೊಳ್ಳಿರೆಂತ ಹುಡುಗರು ನಾಗೇಂದ್ರ ಬಾಬುರವರ ಕಡೆ ಅನ್ನ ಮಾಡಿಸುತ್ತಲೇ ಇದ್ದರು. ಆದರೆ, ಅವರ ಬಿನ್ನಹವನ್ನು ಪ್ರೇಮಪೂರ್ವಕವಾಗಿ ಅವರು ನಿರಾಕರಿಸಿದರು. ದಿನದಂತೆ ಅವರು ನಡೆಯುತ್ತಲೇ ಮನೆಗೆ ಬಂದರು.

ತನ್ನ ಪತಿಯು ಬಂಧಮುಕ್ತನಾಗಿ ಬಂದದ್ದನ್ನು ಕಂಡು ಚಾರುಶೀಲೆಗೆ ಆನಂದವಾಯಿತು. ಅಷ್ಟರಲ್ಲಿ ಹ್ಯಾಕೋರ್ಟಿಗೆ ಮಾಡಿದ ಅಪೀಲಿನಲ್ಲಿ ವಿದ್ಯಾರ್ಥಿಗಳು ನಿರ್ದೋಷಿಗಳಾದ ಸುದ್ದಿಯೂ ಬಂದು ಮುಟ್ಟಿದ್ದರಿಂದ ಅವಳಿಗೆ ಹೊಟ್ಟೆಯಲ್ಲಿ ಹಿಡಿಸದಷ್ಟು ಹರ್ಷವಾಯಿತು.

(ಸಮಾಪ್ತ)

ಅಮೇರಿಕನ್ ಉಪಾಯ.

ಎಂಬ್ರೋಸಿಯಾ.

AMBROSIA

ಸ್ತ್ರೀರೋಗಪರಿಹಾರಕ್ಕಾಗಿ

ಎಂಬ್ರೋಸಿಯಾವು ಸಮಸ್ತ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು. ಇದು ಸ್ತ್ರೀಸೌಂದರ್ಯವನ್ನುಂಟುಮಾಡುತದೆ. ಸಾಮಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರುತದೆ. ಚಲೋ ಆಹಾರ ದೊರಕದೆ, ವಿಶೇಷ ಆಯಾಸ ಕೊಳ್ಳುವದರಿಂದ ಸ್ತ್ರೀಯರ ಪ್ರಕೃತಿಯು ಕೆಡುತದೆ. ಮುಟ್ಟಾಗುವಾಗ ಶೂಲಿ ಏಳುವದು, ಮುಟ್ಟಾಗದಿರುವದು, ಅಪಸ್ಮಾರ, ಬಂಜೆತನ ಮುಂತಾದ ಗರ್ಭಾಶಯದ ಬೇನೆಗಳು, ಅಜೀರ್ಣ, ತಲೆಶೂಲಿ, ಭ್ರಮಿಷ್ಟತನ ಇವೆಲ್ಲ ಸ್ತ್ರೀರೋಗಗಳಮೇಲೆ ರಾಮಬಾಣ ಮದ್ದು. ಎಂಬ್ರೋಸಿಯಾವು ಸಮಸ್ತ ಸ್ತ್ರೀರೋಗಗಳನ್ನು ದೂರಮಾಡಿ, ಸ್ತ್ರೀಯರನ್ನು ಸಶಕ್ತ ಹಾಗು ಸೌಂದರ್ಯವಂತರನ್ನಾಗಿ ಮಾಡುತದೆ.

ಒಮ್ಮೆ ಪರೀಕ್ಷೆ ನೋಡಿ

ಬೆಲೆ ಬಾಟ್ಲಿ ೧ ಕ್ಕೆ ರೂಪಾಯಿ ೨—೦—೦

ಏಜಂಟರು — ವೀರಿಯೆಲ ಏಜನ್ಸಿ,
ಪ್ರಿನ್ಸೆಸ ಸ್ಟ್ರೀಟ, ಮುಂಬಯಿ ನಂಬರ ೨.

ಕೂಲಿಕಾರರಿಗೆ ಎಚ್ಚರಿಕೆ!

ನಮ್ಮ ಕಾನಡಾ ಜಿಲ್ಲೆಯೊಂದರಿಂ, ಬಹು ಜನರು. ಅಲ್ಲಿ ಹೊಟ್ಟೆಗೆ ಸಹ ಪೂರಾ ಬೇಳದೆ ಇರುವವರ ಸಂಖ್ಯೆಯು ವಿಶೇಷ. ಎರಡು ಮೂರು ತಿಂಗಳ ಮೊದಲು ಅಂಕೋಲೆ ಕುಮಟೆ ಇತ್ತ ಕಡೆಯ ಒಬ್ಬ ಮನುಷ್ಯನು ಅತ್ತ ಕಡೆಗೆ ಒಂದು ದೊಡ್ಡ ಟಿಸ್ಟ್ಮೇಲಿನ ಕಾರಖಾನೆ ತೆಗೆದಿದ್ದಾರೆ. ಆ ಕಾರಖಾನೆಯು ಏಜಂಟರು ಬೇಕಾದಷ್ಟು ಕೂಲಿ ಹೆಚ್ಚು ಕೊಟ್ಟು, ನಮ್ಮ ಜಿಲ್ಲೆಯಿಂದ ಬಹು ಜನರನ್ನು ಕರೆದೊಯ್ದು ಕೆಲಸಕ್ಕೆ ಹಚ್ಚಿಕೊಂಡು ಹೋಗುತ್ತಾರೆ. ಅವರಿಗೆ ಪ್ರಯಾಣದ ಖರ್ಚು ಸಹ ಬೇಳುವದಿಲ್ಲ," ಎಂಬ ಒಂದು ಸುದ್ದಿಯು ಬಂದಿತ್ತು. ಕಳೆದ ವಾರದ ಪತ್ರದಲ್ಲಿ ಈ ಬಗ್ಗೆ ವಿವರ ಬರೆದು ಬಂದಿಲ್ಲದ ಕಾರಣ ಇದೊಂದು ಸಳ್ಳು ಹರಟೆ ಇರಬಹುದೆಂದು ಭಾವಿಸಿದೆನು. ಆದರೆ, ಈಗ ೧೫ ದಿವಸಗಳಾದವು ಆ ಏಜಂಟರಿಂದ ಒಂದು ಪತ್ರವು ನನ್ನ ಒಬ್ಬ ಮಿತ್ರನಿಗೆ ಬಂದಿತು. ಅದನ್ನು ಓದಿ ನೋಡಲು, ಆ ಏಜಂಟರೆಂದರೆ ಚಹದ ತೋಟದಲ್ಲಿ ದುಡಿಯಲಿಕ್ಕೆ ಮಜೂರರನ್ನು ಕಳಿಸುವ ಮನುಷ್ಯರೆಂಬುದು ಗೊತ್ತಾಯಿತು. ನಾನು ಬಹಳೇ ಕಳವಳಗೊಂಡೆನು. 'ಅಯ್ಯೋ, ನನ್ನ ಬಡ ಬಂಧುವರೇ, ನೀವು ಸಹ ಈ ದಮ್ಮ ಮದ್ರಾಸರು ಕೊಡುವ ಆಮಿಷಕ್ಕೆ ಬಲಿಬಿದ್ದು ನಾನಾತರದ ಯಮಯಾತನೆಗಳಿಗೆ ಗುರಿಯಾಗಬೇಕಾಯಿತೇ ! ಅಲ್ಲಿಯ ಕೆಲಸವೆಂದರೇನು ಇಡೀ ದಿವಸದಲ್ಲಿ ಒಂದು ತಾಸು ಸಹ ಪುರಸತ್ತು ಸಿಗುವದಿಲ್ಲ. ಕೆಲಸವು ನಡೆಯುತ್ತಿರುವಾಗ ಸ್ವಲ್ಪ ನಿಂತರೆ ಬೆನ್ನಿನಮೇಲೆ ಬಾರಕೋಲಿನ ಪೆಟ್ಟು. ಸಿಕ್ಕ ಮಜೂರಿಯಿಂತೂ ಹೊಟ್ಟೆಗೆ ಸಾಕಾಗುವದಿಲ್ಲ. ಮನೆಗೆ ತಿರುಗಿ ಹೋಗುವದೆಂದರೆ ಕೆಲವು ವರ್ಷಗಳ ತನಕ ತಮ್ಮ ಗುಲಾಮರಾಗಿರಬೇಕೆಂದು ಏಜಂಟರು ಆದರಿಂದ ಬರಸಿಕೊಂಡಿರುತ್ತಾರೆ. ಇಂತೂ ಇಂತಹ ನಾಯಕವದೇ ಏನೆಂದು ನಿಮಗೆ ತಿಳಿಯುವದು.

ಇದಲ್ಲದೆ ನೀವು ಅಲ್ಲಿ ಇರಬೇಕಾದರೆ ಕುಟುಂಬ ಸಹಿತ ಹೋಗಬೇಕಾಯಿತಲ್ಲವೇ ? ಒಂದೆರಡು ವರ್ಷಗಳ ಹಿಂದೆ ಅಸ್ಸಾಮದ ಚಹದ ತೋಟದಲ್ಲಿ 'ಹಿರಾಬಾಯಿ' ಎಂಬ ಮಜೂರಿಯ ಹೆಂಗಸಿನಮೇಲೆ ಅಲ್ಲಿಯ ಯುರೋಪಿಯನ್ ಅಧಿಕಾರಿಗಳು ಮಾಡಿದ ಅತ್ಯಾಚಾರಗಳನ್ನು ನೀವು ಕೇಳಿರುವಿರಾ ? ಯಾವ ಕೆಲಸಕ್ಕೆ ಹೋದರೆ ಅಂಥ ಅಮಾನುಷ ಯಾತನೆಗಳಿಗೆ ಗುರಿಯಾಗಬೇಕಾಗುತ್ತದೋ ಮತ್ತು ಎಲ್ಲಿ ತಮ್ಮ ಸ್ತ್ರೀಯರ ಮಾನವ್ಯಕ್ಕೆ ಭಂಗ ಬರುತ್ತದೋ ಅಂಥ ಕೆಲಸಕ್ಕೆ ಹೋಗಲು ನೀವು ಕಾತುರ ಇದ್ದೀರೋ ?

ಕುಮಟೆ ಮತ್ತು ಅಂಕೋಲೆಯಿಂದ ಸುಮಾರು ೫೦ ಜನರು ಹೋದರೆಂದು ಕೇಳುತ್ತೇನೆ. ಭಟ್ಕಳದಿಂದಲೂ ಹೋಗಿರಬಹುದು. ಈ ಜನರು ಅಶಿಕ್ಷಿತರಿರುವದರಿಂದ ಅವರಿಗೆ ಏನು ತಿಳಿಯುತ್ತದೆ ? ಊರಲ್ಲಿ ಶಿಕ್ಷಿತರು ಅವರಿಗೆ ಉಪದೇಶಮಾಡಿ ಹೋಗಲು ಅಡ್ಡಿಮಾಡಬೇಕಾಗಿತ್ತು. ಸಾರಾಂಶ, ನಮ್ಮ ಜಿಲ್ಲೆಯಲ್ಲಿರುವ ಮುಂದಾಳುಗಳಿಗೆ ಮತ್ತು ಶಿಕ್ಷಿತರಿಗೆ ನನ್ನದೊಂದು ಬಿನ್ನಹವೇನೆಂದರೆ — ನೀವು ಎಲ್ಲ ಕಡೆಗೆ ದೇಶಬಂಧುಗಳ ಪ್ರೀತ್ಯರ್ಥ ವ್ಯಾಖ್ಯಾನ, ಹರತಾಳ ವಗೈರೆ ಮಾಡಿದಿರಿ. ದೊಡ್ಡ ದೊಡ್ಡ ಸಭೆ ಮಾಡಿ ದೇಶಬಂಧುಗಳ ಗುಣವರ್ಣನೆ ಮಾಡಿದಿರಿ. ಇದರಿಂದ ದೇಶಬಂಧುಗಳಿಗೆ ಅಷ್ಟು ಆನಂದವಾಗಲಿಕ್ಕಿಲ್ಲ. ದೇಶಬಂಧುಗಳ ಕೆಲಸವೇನಿತ್ತು ? ದೇಶದಲ್ಲಿಯ ದೀನರಿಗೆ ಸಂಕಟದಲ್ಲಿ ಸಹಾಯಮಾಡಿ ಸ್ವರಾಜ್ಯಸಂಪಾದನೆಗೆ ಹೋರಾಡುವದು.

ಕಾರಣ ನೀವು ಅಲ್ಲಲ್ಲಿಯ ಬಡ ಜನರಿಗೆ ಚಹದ ತೋಟದೊಳಗಿನ ದುಷ್ಕೃತ್ಯಗಳ ಹೃದಯದ್ರಾವಕ ವರ್ಣನೆಗಳನ್ನು ತಿಳಿಸಿ ಹೇಳಿ, ಅವರಿಗೆ ಅಲ್ಲಿ ಹೋಗದಂತೆ ಮಾಡಿದರೆ ದೀನರಕ್ಷಕ ದೇಶಬಂಧುಗಳಿಗೆ ಪರಲೋಕದಲ್ಲಿ ಅತಿಶಯ ಆನಂದವಾಗುವದೆಂಬುದಕ್ಕೇನೂ ಸಂದೇಹವಿಲ್ಲ.

ತಮ್ಮ
ದೀನಬಂಧು. (ಚೆಂಡಿಯೆ)

— ಬೆಳಗಾಂವಿಯ ಸರಕಾರಿ ಖಜಾನೆಯಲ್ಲಿ ೫೨೦೦೦ ರೂಪಾಯಿಗಳ ಅಪಹಾರವಾಗಿದೆ. ೨೦–೨೨ ಮಂದಿಗಳಿಗೆ ಶಿಕ್ಷೆಯಾಗಿರುವದು.

— ಮುಂಬಯಿಯ ಖಾದಿ ಭಂಡಾರದಲ್ಲಿ ಕಳೆದ ೧೧ ತಿಂಗಳ ವಿಕ್ರಿಯು ೧೪ ಲಕ್ಷವಾಗಿರುವದಂತೆ !

— ಮದರಾಸಿನಲ್ಲಿ ಶ್ರೀಕೃಷ್ಣದೇವ ವಿಜಯನಗರದ ಪ್ರಖ್ಯಾತ ದೇವರಾಯರ ಕಾಲದ ೨೪ ಭಂಗಾರದ ನಾಣ್ಯಗಳು ಮುಂಬಯಿ ಟಂಕಸಾಲೆಯಲ್ಲಿ ದೊ. ಒಬ್ಬ ಬಂದರಿಂದ ಮಾರಲಿಕ್ಕೆ ಇಟ್ಟಿದ್ದಾರಂತೆ. ಅವುಗಳನ್ನು ಮದರಾಸದ ಪುರಾತತ್ವಶೋಧನ ಖಾತೆಯ ಅಧಿಕಾರಿಗಳು ಕೊಳ್ಳುವದಕ್ಕೆ ಯೋಗ್ಯವಾಗಿರುವರು.

धातुक्षीणता व कमजोरपणा यांसाठी

मदन मंजरी गोळ्या. (रजिस्टर्ड)

या दिव्य गोळ्या रक्त व वीर्य सुधारून त्यांची चांगली वाढ करतात पचन शक्ति सुधारून परसाकडे साफ होतें. त्याचप्रमाणें प्रत्येक प्रकारची अशक्तता दूर होऊन शरीर तेजस्वी व बळवान होतें. किं ४० गोळ्यांच्या डबीस रु १.

रमण विलासिनी गोळ्या. रात्रौ फक्त १ गोळी दुधाबरोबर खाल्यानें इच्छेप्रमाणें वीर्यस्तंभन होते. किं डबीस रु. १

नपुंसकत्वारी घृत. हा लेप पुरुषाच्या गुह्यभागावर लावला असता सर्व रोग नाश पाऊन खरें पुरुषत्व प्राप्त होतें. किं. डबीस रु. १

कुमटा एजंट — माधव सातप्पा शेणवी बेलेकेरी

राजवैद्य नारायणजी केशवजी ब्रँचः— ३१३ काळबादेवी रोड मुंबई न २.

ಭಾಷಾಂತರಕರ್ತರಿಗೆ ಸುಸಂಧಿ!

ಸುಪ್ರಸಿದ್ಧವಾದದ್ದೂ, ಅನೇಕ ವಿದ್ಯಾ ಪಂಡಿತರಿಂದ ಭಲೇ ಅಭಿಪ್ರಾಯ ಪಟ್ಟದ್ದೂ ಆಗಿರುವ ಋಗ್ವೇದಿಯವರು ಬರೆದ "**आर्यांच्या सणांचा प्राचीन व अर्वाचीन इतिहास**" ಎಂಬ ಮರಾಠಿ ಪುಸ್ತಕವನ್ನು ಕನ್ನಡದಲ್ಲಿ ಭಾಷಾಂತರಿಸುವದಿದೆ. ಇದನ್ನು ಕೈಕೊಳ್ಳಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳತಕ್ಕದ್ದು.

Apply to.--
V. PRABHA & CO.
BOMBAY 4.

Copies can be had from:-
THE NORTH KANARA TRADING CO.
KARWAR.

(Registered Trade Mark.)

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬಿ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಪು ಹಿಡಿಸಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು\ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಶಿರದಲ್ಲಿಯೇ ಹುಟ್ಟಿದ ಸಕಲ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುವದು. ಮೂರು ಪೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸಿಸೆ ಪುಕ್ಕಟೆ ಕಳಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦ ವ್ಹಿ. ಪಿ. ಖರ್ಚು ಅಲಾಹಿದ. ಡಜನ್ ೧ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦.
ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ ಬಾ ೫೧೦, ಜಾರ್ಜಟೌನ, ಮದರಾಸು

ಜಾಹೀರಾತು.

ತಾರೀಖು ೭-೯-೧೯೩೩ನೇ ಪತ್ರಿಕೆಯಲ್ಲಿ ಪ್ರಸಿದ್ಧಿಪಡಿಸಿರುವ ಸಾಮಾಜಿಕ [illegible] ಪರಾ ಜ್ಯೋತಿಷಿ ಕೇ. ಪಿ. ನಾರಾಯಣ ಶಾಸ್ತ್ರಿ ಎಂಬವರು ಸ್ವಲ್ಪ ದಿವಸದಿಂದ [illegible] ಡಿಸ್ಟ್ರಿಕ್ಟ್ ಸಾಗರದಲ್ಲಿ [illegible] ಶವನ್ನು ಮುಂದಿಟ್ಟು [illegible] ಯಾವತ್ತೂ ಜನರು ಪ್ರಿಯರವರಿಗೆ ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡತಕ್ಕದ್ದು.

ಪತ್ತೆ —

ಕೇರಳ ಜ್ಯೋತಿಷಿ

ಕೇ. ಪಿ. ನಾರಾಯಣ ಶಾಸ್ತ್ರಿ.

ಮುಕ್ಕಾಂ ಕಾನಲೆ ಛತ್ರ, ಪೋ॰ ಸಾಗರ

ಡಿಸ್ಟ್ರಿಕ್ಟ್ [illegible]

ವಿಶೇಷ] ಅನುಭವಸಿದ್ಧ [ಪ್ರಸಿದ್ಧ

ವನೌಷಧಿಮೂಲಿಕೆಗಳು.

ವಾಯುದುಮ್ಮಸ (ನಿಮೋನಿಯಾ) ವಾಂತಿ ಭ್ರಾಂತಿ (ಕೋಲೆರಾ) ಅರ್ಧಾಂಗವಾಯು (ಪೆರಾಲಿಸಿಸ್) ಹುಚ್ಚು ನಾಯಿ ನರಿ ಕಡಿತ ಸರ್ಪಸುತ್ತು, ಹೊಟ್ಟೆಯಲ್ಲಿ ಕೃತ್ರಿಮ ವಿಷ ಹಾಕಿದ್ದು (ಕೈವಶಗಳು) ವಗೈರೆ ರೋಗಗಳಿಗೆ ಒಂದೇ ಒಂದು ಮೂಲಿಕೆ ನಿಂದ ಖಾತ್ರಿಯಾಗಿ ತೀವ್ರ ಗುಣಬರುವದು. ಇವು ಬಹುಕಾಲದಿಂದ ಅನುಭವ ತಕ್ಕೊಂಡ [illegible] ಪ್ರತಿನಿತ್ಯ ಉಕತೆಗೆ ಬಳಕೆಯಲ್ಲಿದ್ದು [illegible] ಔಷಧಿಗಳ ತಾಜಾ ಮೂಲಿಕೆಗಳು! ಒಮ್ಮೆ ತರಿಸಿ ಅನುಭವ ತಕ್ಕೊಂಡರೆ ಖಾತ್ರಿಯಾದೀತು. ಕೆಳಗಿನ ಔಷಧಿಗಳ ದ್ರಾವಕ (Tincture) ಸಹ ಆಗಾವ್ಯ ಸೂಚಿಸಿದರೆ ಕಳುಹುವದು

ವಾಯುದುಮ್ಮಸದ ಬಗ್ಗೆ ಔಷಧಿ ಮೂಲಿಕೆ ತೊಲೆ ೧ಕ್ಕೆ ೦-೨-೦

ಕೋಲೆರಾದ ಬಗ್ಗೆ ,, ,, ೦-೨-೦

ಅರ್ಧಾಂಗ ವಾಯುವಿನ ಬಗ್ಗೆ ೦-೪-೦

ನಾಯಿ ಕಡಿತದ ಬಗ್ಗೆ ೦-೪-೦

ಸರ್ಪಸುತ್ತಿನ ಬಗ್ಗೆ ೦-೨-೦

ಹೊಟ್ಟೆಯಲ್ಲಿ ಕೃತ್ರಿಮ ಔಷಧಿ ಬಿದ್ದ ಬಗ್ಗೆ ತೊಲೆ ೧೦ ಕ್ಕೆ ೦-೮-೦.

ರಕ್ತಶುದ್ಧಿ ವ ಮಲಶೋಧನೆ ಬಗ್ಗೆ ಮೂಲಿಕೆ ರಾತ್ತಲ ೧ಕ್ಕೆ ೧-೦-೦

ಮೋರಾವಳಾ (ನೆಲ್ಲಿಕಾಯಿ ಗುಳುಂಬ) ರಾತ್ತಲ ೧ಕ್ಕೆ ೧-೦-೦

[illegible] ಯಾ ಜನಕ್ಕೂ ಹೆಚ್ಚು ತರಿಸಿಕೊಳ್ಳುವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು. ಟಪಾಲ ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿ ಪತ್ರದ್ವಾರಾ ಅನುಪಾನಪತ್ರ ಔಷಧಿ ಸಂಗಡ

ಎನ್. ಜಿ. ಹೆಗಡೆ, ಮಾಸ್ಕೇರಿ,

ಪೋಸ್ಟ—ಬಂಕಿಕೊಡ್ಲ ಜಿ. ಉತ್ತರ ಕಾನಡಾ

ಮಳೆಗೆ ಮೊದಲೇ ಎಚ್ಚರಿಕೆ !

ಅತ್ಯುತ್ತಮ, ಸುಂದರ, ಬಾಳ್ಕೆಯುಳ್ಳ, ಮಜಭೂತಾದ

ಸೂರ್ಯ ಛಾಪು] **ಛತ್ರಿಗಳು.** [ಅಗ್ಗ ವಿವಿಧ

ಪ್ರತಿಯೊಬ್ಬರಿಗೂ ಅನುಕೂಲವಾದ ಪಸಂದಿನ ಮ್ಹಾಲು!

ದೇಶೀಯ ಕೈಗಾರಿಕೆ ! ದೇಶೀಯರಿಗಾಗಿಯೇ !! ಆದುದರಿಂದ

ದೇಶೀಯರಿಗೆ ಖಾತರಿಯಾಗಿ ತೃಪ್ತಿಯಾಗುವುದು !

ಕಾನಡಾ ಜಿಲ್ಲೆಯೊಳಗಿನ ಪ್ರಮುಖ್ಯ ಛತ್ರೀ ದುಕಾನುಗಳಲ್ಲಿ ಬಿಕರಿಗೆ ಇದೆ.

ನೇರ ನಾಗಜೀ ಪುರುಷೋತ್ತಮ್ ಮತ್ತು ಕಂಪನಿಯವರ

ಕಲ್ಲಿಕೋಟೆಯ ಕಾರಖಾನೆಯ

ಸೂರ್ಯ ಛಾಪಿನ ಛತ್ರಿಗಳೇ ಛತ್ರಿಗಳು !

ವ್ಯಾಪಾರದಾರರಿಗೆ ತಾತ್ಪರ್ಯವುಳ್ಳ ಸವಲತ್ತು ಕೊಡಲಾಗುತ್ತದೆ.

[illegible] — **ಶ್ರೀನಿವಾಸ ರಂಗ ಪೈ, ಸಾವಕಾರ ಮಹಾಲ್.**

ಮಂಗಳೂರು, ದ. ಕನ್ನಡ

ಕಿರ್ಲೋಸ್ಕರ ಪಂಪ.

ಬಾವಿಯೊಳಗಿನ ನೀರನ್ನು ಮೇಲಕ್ಕೆ ತರುವದರಲ್ಲಿ

ಕಿರ್ಲೋಸ್ಕರರ ಈ ಪಂಪು ಮೇಲ್ಪಟ್ಟದ್ದಿರುತ್ತದೆ. ಸಣ್ಣ ಮಕ್ಕಳು, ಅಬಲೆಯ ಈ ಪಂಪಿನಿಂದ ನೀರನ್ನು ಬೇಗ ನಿಮಿಷದಲ್ಲಿ ಮೇಲಕ್ಕೆ ತರುವರು. ಪ್ರಪಂಚ ಏಕ್ಕ ಅಡಚಣೆಗಳಲ್ಲಿ ನೀರಿನ ತೊಂದರೆಯು ಸ್ವಾಭಾವಿಕವು. ಈ ಅಡಚಣೆ ಮೇಲಿನ ಉಪಾಯದಿಂದ ದೂರಾಗುವದು

ಪರದೇಶದಿಂದ ಬರುವ ಪಂಪುಗಳು ಬಹು ತುಟ್ಟಿ ಇರುವದರಿಂದ ಮಧ್ಯಮ ಜನ ಅವುಗಳನ್ನು ಕೊಳ್ಳುವದಾಗುವದಿಲ್ಲ. ಇದನ್ನು ತಿಳಿದು ನಾವು ಈ ಪಂಪನ್ನು ಅಗ್ಗದಿಂದ ಕೊಡುತ್ತಿರುವೆವು. ಇದಲ್ಲದೆ, ಈ ಪಂಪಿನ ಬಿಡಿ ಭಾಗಗಳು ನಮ್ಮ ಕಾ ನೆಯಲ್ಲಿಯೇ ತಯಾರಾಗುತ್ತಿರುವದರಿಂದ ಬೇಡಿದಾಗ ದೊರೆಯುತ್ತವೆ

ಈ ಸೌಕರ್ಯವು ವಿದೇಶೀ ಪಂಪುಗಳನ್ನು ಕೊಂಡಲ್ಲಿ ದೊರೆಯದು.

ಕೇ. ಬಿ. ಚಿಕೋಡಿ ಮುಂಬೈ ಇವರು ನಮ್ಮ ಸೋಲ ಏಜಂಟರು

ಸವಿಸ್ತರ ಸಂಗತಿಯ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾ
ಜಿಲ್ಲಾ ಸಾತಾ

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ ಗಳ ಮೇಲೆ, [illegible] ಹಾಗಿರುವದು. ಕಳೆದ [illegible] ವ ಇದರ ಉಪಯುಕ್ತತೆಯು ಸಾಬೀತಾಗಿ ಸಿದ್ಧವಾಗುತದೆ. ಲಕ್ಷಗ ಜನಗಳು ಅಮೃತಾಂಜನವನ್ನು ಉಪಯೋಗಿಸುತ್ತಿದ್ದಾರೆ. ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಳು, ಸಂಧಿವಾತ ಎಷ್ಟೋ ವ್ಯಾಧಿಗಳ ಮೇಲೆ ಇದು ಗುಣಕಾರಿಯೆಂದು ಅದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ, ಮುಂ

Printed and Published by Krishnarao Keshav Shenvi (Editor) at his Stor of Kanara Press Ku

ರ್ಷ ೯.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೦.

ದ ವರ್ಗಣಿ.
ಲ್ಲಿ ಅಗಾವು
ಪಾಯಿ 2-4-0.
ರ್ಡರಿಯಿಂದ
ರೂ. 3-0-0.
ಂಚವೆಚ್ಚ ಸೇರಿ
ಪಾಯಿ 3-2-0.
ಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ [illegible] ([illegible]) ೮ ಸಾಲುಗಳವರೆಗೆ ರೂ. 1-0- ೮ ಸಂಕ್ರ ಪ್ರತಿಸಾಲಿಗೆ 0-2-0. [illegible]

ಕುಮಟಾ— ಕಾನಡಾವೃತ್ತ ಸೋಮವಾರ, ತಾರೀಖು ೨೦ ನೇ ಜುಲೈ ಸನ್ ೧೯೩೬ ನೇ ಇಸವಿ)

स्थानातील रहिवाशांस ज्याप्रमाणें
नची हवा त्याप्रमाणेंच हें औषध हिं
तील लोकांस ज्यास्त फायदेशीर आहे.

क्षासव- शीश रतलची किंमत १ रुपये;

मबाण औषधें —
सर्दी घालविणारें,
भूक वाढविणारें,
श्वासोच्छ्वास साफ करणारें,
झोप आणणारें,
शक्ति देणारें,
तेजस्वीपणा आणणारें,

विश्वास लायक
क्याटलाग मागवा,
फार्मास्युटिकलवर्क्स लिमिटेड,
मुंबई नं: [illegible]

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ
ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, *B. A.*
Jewellers, KUMTA.
ಆರ್. ಎಸ್. ಕಾಸರಗೋಡ,
ರತ್ನಾಭರಣ ವ್ಯಾಪಾರಿ, ಕುಮಟಾ.

ಆಯುರ್ವೇದಿಕ) ಧಾತುಪೌಷ್ಟಿಕ, ಶಕ್ತಿವರ್ಧಕ, ರಕ್ತಶೋಧಕ (ಮಲಬಾರಿಕೃತಿ

ಮದನಕಾಮೇಶ್ವರೀಲೇಹ.

ಅಬಾಲ ವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು. [illegible]

ಅತ್ಯುತ್ತಮ) ಜಂತುವಿನ ಔಷಧ (ಬಹುಸುಲಭ.

[illegible]

ಮೆನೇಜರ ಆಯುರ್ವೇದ ಚಿಕಿತ್ಸಾ ಮಂದಿರ, ತಾ. ಕಾರವಾರ, ಪೋ. ಚೆಂಡಿಯೆ.

ಮುಂಬೈ ಏಜಂಟ:— R. C. KAMAT, Teashop Store Lane, Fort, BOMBAY

ಹುಟ್ಟಿದ ಪತ್ರಿಕೆ ಕಳಿಸಿರಿ.) ಸುಖಸಾಧನಕ್ಕೆ ಯೋಗ್ಯ ಉಪಾಯವು. (ಯಾ ಜನ್ಮಟಿಪ್ಪಣ ಕಳಿಸಿರಿ.

ಮಲಬಾರಿ) ಕೇರಳ ಜ್ಯೋತಿಷ. (ಭವಿಷ್ಯ.

[illegible]

ಮೆನೇಜರ, "ಜ್ಯೋತಿಷ ಶಾಸ್ತ್ರ-ಭುವನ," ಚೆಂಡಿಯೆ, ತಾ. ಕಾರವಾರ

ಲ್ಲಿ ಯಾರ ಜಾಹೀರಾತು
ಬರಲಿರುವದು ?

ತಿ ಉತ್ತಮವಾದ ನಶ್ಯ!

[illegible]

ಜಿ. ರಾಮಯ್ಯಾ ಕುರಡಿ,
[illegible]

ನಮ್ಮ ಪ್ರೆಸ್ಸಿನಲ್ಲಿ

ಗೇಣಿ ಬಾಕಿ ದಾವೆಯ ಫಾರ್ಮುಗಳು ತಯಾರಿವೆ ವಕಾಲತ, ಅಮುಲದಾರಿ ಮೊದಲಾದ ಕೋರ್ಟ ವ್ಯವಹರಣೆಯ ಹಾಗೂ ಕಸ್ಟಮ್ಸ್ ಖಾತೆಯ ಫಾರ್ಮುಗಳು ಅಗ್ಗವಾಗಿ ಸಿಗುತ್ತವೆ

ಮೆನೇಜರ,

ಸ್ಟಾರ ಒಫ್ ಕೆನರಾ ಪ್ರೆಸ್ ಕುಮಟ

ಉತ್ತಮ, ಸುವಾಸಿಕ, ಶುದ್ಧ, ಮಿಶ್ರಣವಿಲ್ಲದ,

ಜನರಿಗೆ ಅವಶ್ಯ ಬೇಕಾಗಿರುವ

ಕಾಬೂಲೀ ಹಿಂಗು.

೬೦ ತೊಲೆಯ ಳ ಡಬ್ಬಿ ೧ಕ್ಕೆ ೫—೦—೦
೩೦ ತೊಲೆ ಡಬ್ಬಿ ೧ಕ್ಕೆ ೨—೧೨—
೧೦ ತೊಲೆ ಡಬ್ಬಿ ೧ಕ್ಕೆ ೧ ೬—
೪ ತೊಲೆ ಡಬ್ಬಿ ೧ಕ್ಕೆ ೧—೦—೦
೧ ತೊಲೆಯ ಡಬ್ಬಿಗಳ ಡಜನ ೧ಕ್ಕೆ ೨—೦—೦

ನಮ್ಮ ಹಿಂಗು ಖೋಟಾ ಬಂದಲ್ಲಿ, ಪರತ [illegible]ವೆವು. ಟಪಾಲ ಖರ್ಚ ಪ್ರತ್ಯೇಕ

ಕೆರೇಕರ ಕಾಬೂಲೀ ಹಿಂಗಿನ ದುಕಾನ
ಜವಳಿಬಾಜಾರ, ಕುಮಟಾ

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು



೧ ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೬೦, ೭೫, ೧೦೦
೨ „ ಕಾಲು ಪೆಟ್ಟಿಗೆ ಕಿಂ ೬೫, ೭೫ ೧೨೦, ೧೪೦
೩ ತಬಲೆ ಜೋಡಿ ಕಿಂ. ೧೬, ೧೮, ೨೦, ೨೫
೪ ಹಾರ್ಮೋನಿಯಮ ಗ್ಯಾಡ (ಮರಾಠಿ) ಕಿಂ. ೧॥ ತಬಲೆ ಗ್ಯಾಡ ಕಿಂ. ೧೨ ಅ

ವಿಶೇಷ ಮಾಹಿತಿಬಗ್ಗೆ ನಮ್ಮ ಮರಾಠಿ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ :- **ಗೋಪಾಳ ಸಖಾರಾಮ** ಮತ್ತು **ಕಂಪನಿ, ವಿಠ್ಠಲವಾಡಿ ಎದುರಿಗೆ, ೨೬೨ ಕಾಳಬಾದೇವಿ. ಮುಂಬಯಿ,**

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ



ಕಳೆದ ೮ ವರ್ಷಗಳಿಂದ ನಾವು ಶಿವಮೊಗ್ಗಾ—ತೀರ್ಥಹಳ್ಳಿ—ಅಗುಂಬೆ, ಶಿವಮೊಗ್ಗಾ—ಸಾಗರ—ತಾಳಗುಪ್ಪ, ಶಿವಮೊಗ್ಗಾ—[illegible]ನತಿ, ಶಿವಮೊಗ್ಗಾ—ಕಳೂರಕಟ್ಟೆ, ಸಾಗರ—ನೊರಟ—ಶಿರಾಳಕೊಪ್ಪ, ಸಾಗರ ತೀರ್ಥಹಳ್ಳಿ, ಸಾಗರ—ಕಳೂರಕಟ್ಟೆ, ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ ಸರ್ವಿಸನ್ನು ನಡೆಸುತ್ತಿದ್ದೇವೆ. [illegible] ಕನ್ನಡ ಜಿಲ್ಲೆಯ ಕಾರ್ಕಳ ಉಡುಪಿ, ಕುಂದಾಪುರ, ಮಂಗಳೂರ [illegible] ಈ ಕಡೆ "ಕಾರ್ಕಳ ಮೋಟರ ಸರ್ವಿಸಿನ" ವಿಶ್ವಾಸವನ್ನೂ, ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ [illegible] ಮೋಟರ ಸರ್ವಿಸಿನ ವಿಶ್ವಾಸವನ್ನೂ ಪ್ರಯಾಣಿಕರ ಎಲ್ಲ ಸೌಕರ್ಯಗಳ ವ್ಯವಸ್ಥೆ ಮಾಡಿದ್ದೇವೆ

ಉತ್ತರ ಕನ್ನಡ ಜಿಲ್ಲೆ ಪ್ರಯಾಣಿಕರು ಜೋಗ (Gersoppa Falls), ಶಿವಮೊಗ್ಗಾ ಸಾಗರ ಹತ್ತಿರದ [illegible] ಸ್ಥಳಗಳಿಗೆ ಪ್ರಯಾಣ ಬೆಳಸಲು ಅನುಕೂಲವಾಗಬೇಕೆಂದು ಶಿವಮೊಗ್ಗಾ ಸಾಗರ [illegible] ಸಿದ್ದಾಪುರ, ಶಿರಸಿ ಕುಮಟಾ ಈ ಲೈನಿನಲ್ಲಿ ಮೋಟರ ಸರ್ವಿಸ ಪ್ರಾರಂಭ ಮಾಡಿದ್ದೇವೆ

ಕಾಲಕ್ರಮಗಳು.

ಕುಮಟೆ [illegible] ಹೊರಡುವದು— .	ಬೆಳಿಗ್ಗಿನ ೭ ಘಂಟೆಗೆ
ಶಿರಸಿ ಸೇರುವದು — .	„ ೧೦ „
ಶಿರಸಿ [illegible] ಬಿಡುವದು ಶಿವಮೊಗ್ಗಾ ಕಡೆಗೆ—	ಮಧ್ಯಾಹ್ನ ೧ „
ಶಿವಮೊಗ್ಗಾ ಸೇರುವದು (ಸಿದ್ದಾಪುರ ಮಾರ್ಗವಾಗಿ)—	ಸಾಯಂಕಾಲ ೬ „
ಶಿವಮೊಗ್ಗದಿಂದ ಶಿರಸಿ ಕಡೆಗೆ ಹೊರಡುವದು— ...	ಬೆಳಿಗ್ಗಿನ ೬ „
ಸಿದ್ದಾಪುರದ ಮೇಲಾಗಿ ಶಿರಸಿಗೆ ಸೇರುವದು — ...	„ ೧೧ „
ಶಿರಸಿಯಿಂದ ಕುಮಟೆಗೆ ಹೊರಡುವದು— .	ಮಧ್ಯಾಹ್ನ ೨ „
ಕುಮಟೆಗೆ ಸೇರುವದು— . .	ಸಾಯಂಕಾಲ ೫ „

N B — ಈ ಮೇಲಿನ ಲೈನುಗಳ ವಿನಹ ಶಿರಸಿಯಿಂದ ಹುಬ್ಬಳ್ಳಿಗೆ ಪ್ರತ್ಯೇಕ ಒಂದು ಸರ್ವಿಸ ಪ್ರಾರಂಭಿಸುವ ಯೋಚನೆ ಸಹಾ ಇರುತ್ತದೆ ಸರ್ವರೂ ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ

SHIMOGA,
22—11—1924

M. MANJAPPA.
PROPRIETOR

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೆಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀಯಾಗಿಯೂ ರುಚಿಕರವಾಗಿಯೂ ಇರುತ್ತದೆ ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು [illegible] ವರ್ಷದ ಮುದುಕರ [illegible] ತರುಣರಂತೆ ವೃದ್ಧಿಮಾನವಾಗುವದು (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ [illegible] ಹೋಗಿ [illegible] [illegible] ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯ [illegible] — [illegible] ಹಾಗೂ [illegible] ಶರೀರವು ನಿರ್ದೋಷವಾಗುವದು. [illegible] ದಿವಸದಲ್ಲಿ ಗುಣಬರುವದು ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು ಇದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವವು ದಿವಸದಲ್ಲಿ [illegible] ಊಟಮಾಡಿದರೂ ಅನ್ನ ಪಚನವಾಗಿ ಹಸಿವು ಜಾಸ್ತಿಯಾಗುತ್ತದೆ ಇದರ ಅನುಭವವು ಮೊದಲನೇ ದಿವಸವೇ ಬರುವದು [illegible] ಸಾಫ ಆಗುವದು ಮೈಯಲ್ಲಿ ಎಷ್ಟೇ ದಿವಸದ [illegible] ಇದ್ದರೂ ಒಂದು ವಾರದಲ್ಲಿ ನಾಶವಾಗುವದು ಈ ಔಷಧಿಕ್ಕೆ ಪಥ್ಯವಿಲ್ಲ ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೩—೪—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು ಅಂದರೆ ಟಪಾಲಖರ್ಚು ಜಾಸ್ತಿ ಬೀಳುವದಿಲ್ಲ ಆರು ಬಾಟಲಿಗಳ ಕಿಮ್ಮತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚ ಬೇರೆ ಬೀಳುವದು ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧—೪—೦ ೩ ಬಾಟ್ಲಿಗೆ ೩—೨—೦, ಡಜನಿಗೆ ೧೩—೧—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸು, ಪ್ರೋ. ನಿಪ್ಪಾಣಿ, ಜಿ. ಬೆಳಗಾಂವ.

ವಿವಿಧ ಸಂಗ್ರಹ.

ಗಣರಾಯನು ಮರುಗಿದನೇಕೆ?

ಬೆಳಗಾಂವಿ ಪಟ್ಟಿಯ ಧರಣಾದ ಸ್ಟೇಶನದಿಂದ ಊರೊಳಗೆ ಹೋಗುವ ಕಾಲುದಾರಿಯ ಮೇಲೆ ಶ್ರೀ ಗಣರಾಯನ ಒಂದು ಮಂದಿರವಿದೆ. ಅಲ್ಲಿ ಕಳೆದ ಜೂನ ತಾ ೧೧-೧೨ನೇ ಗುರುವಾರ-ಶುಕ್ರವಾರಕ್ಕೆ ಮೂರ್ತಿಯ ಎರಡೂ ಕಣ್ಣುಗಳಿಂದ ಕಣ್ಣೀರು ಸುರಿಯುತ್ತಿತ್ತು. ಇದೇನು ಚಮತ್ಕಾರವೋ? ವೇಷವೋ? ಎಂದು ಅನೇಕರು ಚೌಕಶಿ ಮಾಡಿ ನೋಡಿದರು. ಆದರೆ, ನಿಜವಾಗಿ ಗಣರಾಯನೇ ಮರುಗುತ್ತಿದ್ದನೆಂದು ಖಾತ್ರಿಯಾಯಿತು. ಬಳಿಕ, ಅರಿಷ್ಟಶಾಂತಿಪ್ರೀತ್ಯರ್ಥವಾಗಿ ಗ್ರಾಮನಿವಾಸಿಗಳು ಅಭಿಷೇಕ ಮೊದಲಾದ ಶಾಸ್ತ್ರವಿಧಿಗಳನ್ನು ನಡಿಸಲು, ಅಶ್ರುಧಾರೆಯು ನಿಂತು ಹೋಯಿತು. ಗಣರಾಯನು ಏಕೆ ಮರುಗಿದನು? ಎಂದು ಬೆಳಗಾವಿಯ '[illegible]' ಪತ್ರಿಕೆಯು ಪ್ರಶ್ನೆಮಾಡುತ್ತಿದೆ. ಸಂಕಟನಿವಾರಕನಾದ, ಸಮಸ್ತ ವಿಘ್ನಗಳಿಗೂ ಅಂತಕನಾದ ಶ್ರೀ ವಿಘ್ನೇಶ್ವರನು ಮರುಗಿದ ಕಾರಣವೇನು? ಎಂಥ ವಿಚಿತ್ರ ಲೀಲೆಯಿದು? ಭಾರತಮಾತೆಯ ವರಪುತ್ರರಾದ ದೇಶಬಂಧು ಚಿತ್ತರಂಜನ ದಾಸರು ಮಡಿದು ಇಡೀ ರಾಷ್ಟ್ರವು ಹಾಹಾಕಾರದಲ್ಲಿ ಮುಳುಗುವದೆಂದು ಗಣರಾಯನೇ ನೀನು ಕಣ್ಣೀರು ಸುರಿಸಿದೆಯೋ? ಅಥವಾ ಇನ್ನಾವ ಮಹಾ ಅರಿಷ್ಟವು ಭಾರತ ಮಾತೆಯಮೇಲೆ ಬಂದೊದಗುವದಿದೆಯೋ? ಚರಾಚರ ಸೃಷ್ಟಿಯ ಪಾಲಕನಾದ ವಿಘ್ನಹರನೇ, ಅರಿಷ್ಟಶಾಂತಿಯ ಅಭಿಷೇಕದಿಂದ ಸಂತುಷ್ಟನಾಗಿ ನಮ್ಮೆಲ್ಲರ ಮೇಲಿನ ಅರಿಷ್ಟವನ್ನು ಪರಿಹರಿಸು.

⁂

ಚಮತ್ಕಾರಗಳು!

ಸಿಂಹಲದ್ವೀಪದಲ್ಲಿ ಒಂದು ಕರು ಹುಟ್ಟಿದೆ ಕೋಡುಗಳಿವೆ; ಬಾಲವಿದೆ; ಕಣ್ಣು ಬೆಕ್ಕಿನ ಕಣ್ಣುಗಳಂತೆ ಗೋಚರಿಸುತ್ತವೆ. ಕರು ಮಂಗನಂತೆ ಕಾಣುತ್ತದೆ. — ಮಲಯಾದ್ವೀಪಕಲ್ಪದಲ್ಲಿ ಮೀನುಗಳು ಮರಗಳ ಮೇಲೆ ಹತ್ತುತ್ತವೆ. ಮಂಗಗಳು ಊಟವಾದ ಬಳಿಕ ಹಲ್ಲುಗಳನ್ನು ತಿಕ್ಕುತ್ತವೆ. ಪಕ್ಷಿಗಳು ಬೆನ್ನು ಕೆಳಮಾಡಿ ಮಲಗುತ್ತವೆ. ಅಲ್ಲಿಯ ಮೀನುಗಳು ಹಾರಬಲ್ಲವು. ಅಲ್ಲಿ ಕರಡಿಯಿದೆ. ಅದು ೧। ಫೂಟು ಎತ್ತರವಿದೆ. ಜಿಗಿಯು 2॥ ಇಂಚು ಎತ್ತರ; ಇದೇ ಜಿಗಿಯನ್ನು ಜೇಬಿನಲ್ಲಿ ಸೇರಿಸಿಕೊಂಡು ಹೋಗಬಹುದು. ಇವೆಲ್ಲ ಶೋಧಗಳನ್ನು ಕಾರ್ವೆಥ್ ವೆಲ್ಸರವರು ಮಾಡಿರುವರು. ಅವರು ಮಲಯಾ ದ್ವೀಪಕಲ್ಪದಲ್ಲಿ ೬ ವರುಷಗಳ ವರೆಗೆ ಈ ಸಂಶೋಧನ ಕಾರ್ಯ ನಡಿಸಿರುವರು — ಸಹರಾ ಮರುಭೂಮಿಯಲ್ಲಿ ಮಾನವನು ವಾಸ್ತವ್ಯ ಮಾಡಿ ಉಳಿಯುವದು ಅಸಾಧ್ಯದ ಮಾತು. ಆದರಿಂದ ಅಲ್ಲಿಯ ಮೂಲ ನಿವಾಸಿಗಳು ಭೂಗರ್ಭದಲ್ಲಿ ಒಂದು ಸುಂದರವಾದ ಪಟ್ಟಣವನ್ನು ರಚಿಸಿರುವರು. ಸ್ವಿಟ್ಝರ್ಲಂಡದೊಳಗಿನ ಭೂಪ್ರವಾಸ ಮಾಡುವವರೊಬ್ಬರು ಈ ಪಟ್ಟಣವನ್ನು ಕಂಡು ಹಿಡಿದಿರುವರು. ಇಲ್ಲಿ ೩೦ ಸಾವಿರ ಜನವಸ್ತಿಯಿದೆ. ಶಾಲೆಗಳಿವೆ; ಕೋರ್ಟುಗಳಿವೆ; ಅಲ್ಲದೆ ಎಲ್ಲ ವ್ಯಾಪಾರಗಳಿವೆ. ಇದೇ ಪಟ್ಟಣದಲ್ಲಿ ಕಗ್ಗತ್ತಲೆ. ಆದರೆ, ಎಣ್ಣೆಯ ದೀಪಗಳು ಯಾವಾಗಲೂ ಉರಿಯುತ್ತಿರುತ್ತವೆ. ಹವೆ ತಂಪಾಗಿದೆ. ಭೂಮಿಯ ಮೇಲಿನ ಉರುಬಿನ ಸೂಂಟರಗಾಳಿಯಿಂದ ಈ ಪಟ್ಟಣಕ್ಕೆ ಏನೂ ಬಾಧೆಯಿಲ್ಲ. ಮಾನವನ ಚಮತ್ಕಾರಗಳಿವು!

⁂

ಸ್ತ್ರೀ-ಕುಂಭಕರ್ಣ!

ಅಮೇರಿಕೆಯಲ್ಲಿ ಮೇರಿ ಸ್ಲಾಟೋರ್ವಿಕ್ಸ ಎಂಬವಳು ಸದ್ಯಕ್ಕೆ ಎಚ್ಚತ್ತಿರುವಳು. ಇವಳು ಮಲಗಿ ೧೭ ತಿಂಗಳುಗಳಾದವು. ೧ ದಿನವಾಯಿತು, ೨ ದಿನವಾಯಿತು, ತಿಂಗಳಾಯಿತು, ವರುಷವಾಯಿತು; ಆದರೂ ಇವಳು ಯಾಕೆ ಏಳುವದಿಲ್ಲವೆಂದು ವೈದ್ಯರಾದರು ತಪಾಸು ಮಾಡಿದರು. ಮಡಿದಳೆಂದು ತಿಳಿ

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. ರಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶಸಮುಹವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಅಂಥಾ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವದೋ.

ಕಾಮಿನಿಯಾ ಆಯಿಲ್ (ರಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅ [illegible] ಈ ಆಯಿಲ್ ಕೊಡುವ ತಂಪು ತಲೆ ಮತ್ತು ಮಿದುಳಿಗೆ [illegible] ನೆಯು ಕೆಲಸಕ್ಕಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತದೆ. ಕೂದಲುಗಳು ಇದನ್ನು ಹಚ್ಚುವದರಿಂದ ಎಂದಿಗೂ ಉದುರಿ ಬಿದ್ದು ಹೋಗಲಾರವು. ಅದಲ್ಲದೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುತ್ತದೆ.

ಕೀಳು ದರ್ಜೆಯ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ಕೂದಲನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಸಲ ಬಾರಿ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ವೆಂಬ್ಲೀ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಅದರ ಸಾವಿರಾರು ಗ್ರಹಸ್ಥರು ಉಪಯೋಗಿಸಿ ಮಾಡಿದ ಪ್ರಮಾಣಪತ್ರಗಳೂ ದೊರೆತಿವೆ.

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10-0 ವ್ಹಿ. ಪಿ. ಖರ್ಚು 0-14-0

ಅತಿ ಮನೋಹರವಾದ ಸುರಭಿಯು!

ಒಟ್ಟೋ-ದಿಲ್ ಬಹಾರ್ !! ರಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯಂತವಾದ್ದು ವಿಶೇಷವಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡಿದ್ದು. ಇದರಲ್ಲಿ ಮದ್ಯಸಾರವು (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಹಾಕಿದರೆ ನಿಮ್ಮ ಸುತ್ತಲು ಸ್ವರ್ಗೀಯವಾದಂಥ ಪುಷ್ಪವಾಟಿಕೆಯು ಅವತರಿಸುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ ಈ ಒಟ್ಟೋದಿಲ್ ಬಹಾರದ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಕಡೆಯಂತೆ ಸೆಳೆದುಕೊಳ್ಳುವದು. ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8-0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ-ದಿಲ್ ಬಹಾರ್ ಪರಿಮಳ ಸಾಬೂನಗಳು ಡಜನ್ 1 ಕ್ಕೆ 0-12-0.

ಪತ್ತೆ:- The Anglo Indian Drug & Chemical Co.,
16, Market, BOMBAY 2

ಕೊಳ್ಳಲಿಕ್ಕೂ ಅನುಕೂಲವಿಲ್ಲ ಯಾಕಂದರೆ, ನಾಡಿಯು ಯಥಾಸ್ಥಿತವಿತ್ತು. ಉಪವಾಸ ಬಿದ್ದು ಸಾಯಬಹುದೆಂದು ಅಂಜಿ, ಅವಳಿಗೆ ಮೂಗಿನಿಂದ ತಿಂಡಿಗಳನ್ನು ತಿನ್ನಗೊಟ್ಟರು. ೧೭ ತಿಂಗಳುಗಳಾದ ಬಳಿಕ, ಅವಳು ಎಚ್ಚತ್ತಳು. ನೀನು ಮಲಗಿ ೧೭ ತಿಂಗಳುಗಳಾದವೆಂದು ಹೇಳಿದರೆ, 'ಛೇ ನಿನ್ನೆ ಮಲಗಿ ಈ ಹೊತ್ತು ಎಚ್ಚತ್ತಿರುವಂತೆ ನನಗೆ ತೋರುತ್ತದೆ" ಎಂದು ಅವಳು ನುಡಿಯುತ್ತಾಳೆ. ಎಂಥ ಚಮತ್ಕಾರವಿದು!

⁂

ದೊಡ್ಡ ಮುತ್ತಜ್ಜ!

ತುರ್ಕಸ್ಥಾನದ ಟ್ರಾನ್ಸ ಜಾರ್ಡೇನಿಯಾ ಎಂಬಲ್ಲಿ ಒಬ್ಬ ದೊಡ್ಡ ಮುತ್ತಜ್ಜನಿರುವನು. ಈತನ ಪ್ರಾಯ ೧೪೦ ವರುಷ. ಈ ಮುತ್ತಜ್ಜನ ಹೆಸರು ತಾಜ ತಾಹೀರ. ಈತನು ಮಕ್ಕಾ ಕ್ಷೇತ್ರದಲ್ಲಿ ಹುಟ್ಟಿದನು ವೃದ್ಧನಾಯಿದವನು. ಮುತ್ತಜ್ಜನಿಗೆ ಈಗಲೂ ಚಲೋ ಹಸಿವೆ ಹುಟ್ಟುತ್ತದೆ. ಈತನು ಮದುವೆಯಾದದ್ದು ಯಾವಾಗ ಬಲ್ಲಿರೇನು? ೭೦ ನೇ ವರ್ಷ ಪ್ರಾಯದಲ್ಲಿ ಈತನ ಮೊದಲನೇ ಮದುವೆ. ಸಂತತಿಯಿಲ್ಲ. ಹೆಂಡತಿಯು ತೀರಿಕೊಂಡಳು. ಇತ್ತೀಚೆಗೆ ಮತ್ತೊಂದು ಮದುವೆಯಾದನು. ಈತನು ಪ್ರಖ್ಯಾತ ನೇಪೋಲಿಯನ್ ಬೋನಾಪಾರ್ಟನ್ನು ಪ್ಯಾಲೆಸ್ಟೈನದಲ್ಲಿ ನೋಡಿದ್ದನಂತೆ. ಆಗ ಈತನ ಪ್ರಾಯವು ಬರೇ ೧೩ ವರುಷ.

⁂

ಕೇಮಾಲ ಪಾಶಾರವರ ದೇಶಕಾರ್ಯ!

ತುರ್ಕಸ್ಥಾನದ ವಿಖ್ಯಾತ ವೀರರಾದ ಮುಸ್ತಫಾ ಕೇಮಾಲಪಾಶಾರವರನ್ನು ಅರಿಯದವರು ಯಾರೂ ಇಲ್ಲ. ರಾಜಕಾರಣಧುರಂಧರರವರು, ರಣಧೀರರವರು, ನರೇಂದ್ರರವರು. ಇವರು ಈಗ ತುರ್ಕಸ್ಥಾನದ ಪ್ರಜಾಪ್ರತಿನಿಧಿ ಸಭೆಯ ಅಧಿಪರು. ಪ್ರಜೆಗಳಿಗೆ ಸ್ವೋದಾಹರಣದಿಂದ ಕ್ಷೇಮಕರವಾದ ಬೇಸಾಯವನ್ನು ಕಲಿಸುವದಕ್ಕಾಗಿ ಇವರು ಸ್ವತಃ ಒಂದು ಹೊಲವನ್ನು ಕೊಂಡು ಅಲ್ಲಿ ನಿತ್ಯವೂ ಹೋಗಿ ಹೊಲದ ಕೆಲಸಗಳನ್ನು ಮಾಡಿಸುವರು. ಅಲ್ಲಿ ಬೇಸಾಯ ಖಾತೆಯಿಂದ ತಂದ ನೂತನ ನೇಗಿಲುಗಳಿಂದ ಸಾಗು ಮಾಡುವ ಕೆಲಸ ನಡೆದಿದೆ, ಅಲ್ಲಿ ದನಗಳ ದೊಡ್ಡಿಗಳಿವೆ, ತೋಟಗಳಿವೆ, ಕಾಯಿಪಲ್ಲೆಯ ಉಪವನವಿದೆ, ಜೇನುಹುಟ್ಟುಗಳಿವೆ, ಹೂದೋಟವಿದೆ, ಗದ್ದೆಗಳಿವೆ, ಹೆಚ್ಚೇಕೆ— ಒಕ್ಕಲತನಕ್ಕೆ ಸಂಬಂಧಿಸಿದ ಸಕಲ ಸಾಹಿತ್ಯಗಳೂ ಅಲ್ಲಿ ಇರುವವು. ಮುಸ್ತಫಾ ಸಾಹೇಬರು ನಿತ್ಯವೂ ಬೆಳಕು ಹರಿಯುವದರೊಳಗಾಗಿ ಎದ್ದು ಹೊಲಮನೆಗಳಲ್ಲಿ ಹೋಗಿ ಅಲ್ಲಿಯ ಹೊಲಗೆಲಸಗಳನ್ನು ಸ್ವತಃ ನಿಂತು ಮಾಡಿಸುವರು. ಅವಶ್ಯವಿದ್ದರೆ, ಬೇಸಾಯಗಾರರಿಗೆ ಭೆಟ್ಟಿ ಕೊಟ್ಟು ಬೇಸಾಯದ ವಿಷಯಗಳ ಮೇಲೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವರು. ಬೇಸಾಯದಿಂದಲೇ ತುರ್ಕಸ್ಥಾನದ ಉದ್ಧಾರವಾಗುವದೆಂದು ಅವರ ಮನವರಿಕೆಯಾಗಿದೆ. ಅದರಿಂದ ಅವರು ಸ್ವತಃ ಬೇಸಾಯವನ್ನು ಕೈಕೊಂಡು, ಪ್ರಜೆಗಳಿಗೆ ಶಿಕ್ಷಣ ಹಾಕಿಕೊಟ್ಟಿರುತ್ತಾರೆ. ನೂಲು ನೂತು ಅರಿವೆ ಮಾಡಿ, ದೇಶಕ್ಕೆ ಅರಿವೆಯನ್ನು ಪೂರೈಸುವದರಿಂದ ಭಾರತ ಮಾತೆಯ ಮೋಕ್ಷವಿದೆಂದು ಮನಗಂಡ ಮಹಾತ್ಮರ ಆಚರಣೆಯಂತೆ ಮುಸ್ತಫಾ ಕೇಮಾಲಪಾಶಾರವರ ಆಚರಣೆಗೆ ಸರಿಹೋಲುತ್ತದೆ. ಲೋಕೋತ್ತರ ಪುರುಷರ ತೇಜವು ನಿಜವಾಗಿ ಒಂದೇ ಇರುವದಲ್ಲವೇ? ದೇಶಕಾಲ ಭೇದದಿಂದ ಅದರ ವ್ಯಕ್ತ ಸ್ವರೂಪವು ಭಿನ್ನವಾಗುತ್ತದಷ್ಟೇ!

⁂

ಬ್ರಿಟಿಶರಿಂದ ಇದೊಂದು ಬೋಧ ಕಲಿಯಿರಿ!

ಬ್ರಿಟಿಶರು ವರ್ತಕರು. ತಮ್ಮ ವ್ಯಾಪಾರಕ್ಕಾಗಿ ಯಾವಾಗಲೂ ದಕ್ಷತೆಯನ್ನು ಅವರು ಕಾಪಾಡುತ್ತಾರೆ. ಹಿಂದುಸ್ಥಾನದೊಳಗಿನ ಇಂಗ್ಲಿಷ ಗೃಹಸ್ಥರೊಬ್ಬರ ತಮ್ಮ ವರ್ತಕ ಬಂಧುಗಳಿಗೆ ಸೂಚನೆ ಮಾಡಿದ್ದೇನೆಂದರೆ — 'ಬ್ರಿಟಿಶರ ವ್ಯಾಪಾರವು ದಿನೇ ದಿನೇ ಕುಗ್ಗುತ್ತದೆ. ಅದಕ್ಕೆ ಹೊಣೆಗಾರರು ನಾವೇ. ನಮ್ಮ ಕಾರ್ಖಾನೆಯ [illegible] ಮಾಲನ್ನು ಗಿರಾಕಿಗಳಿಗೆ ಮೋಹಿಸುವಂತೆ ತಯಾರಿಸಬೇಕು. ಹಾಗು ಅವರ [illegible] ಕಟ್ಟಬೇಕು. ಹಿಂದುಸ್ಥಾನದಲ್ಲಿ ನಾವು ಓಪ್ಪನೆ ಕಳಿಸಿ ಪರಸ್ಪರ ಸ್ನೇಹ ಸಂಪಾದಿಸುತ್ತೇವೆ. ನಮ್ಮ ಒಬ್ಬನು ನಮ್ಮ ಗಿರಾಕಿಗೆ ಭೆಟ್ಟಿಯಾಗಿ ಬೇಕಾದ ಜಿನಸುಗಳನ್ನು [illegible] ದರ ಹೇಳುತ್ತಾನೆ. [illegible] ನೋಡಿ ನಮ್ಮ [illegible] ಜಪಾನ ಮಾಲು ಕೊಡುತ್ತಾರೆ. [illegible] ಜಪಾನ ಮಾಲಿನ ಮೇಲೆ [illegible] ಮುದ್ರಿಸಿರುತ್ತದೆ. ಈಗ ಬ್ರಿಟಿಶ ಮಾಲು [illegible] ಜರ್ಮನಿಯ ಸಾಮಗ್ರಿಗಳು [illegible] ಇದರಿಂದ ನಮ್ಮ ಒಬ್ಬೊಬ್ಬರಿಗೆ ಬ್ರಿಟಿಶ ಮಾಲು [illegible] ಬ್ರಿಟಿಶ ಮಾಲು ಯಾವದು ಎಂಬುದನ್ನು ತಿಳಿಸಿಹೇಳಿ ಬ್ರಿಟಿಶ ಸಾಮಗ್ರಿಗಳಿಗೇ ಉತ್ತೇಜನ ಕೊಡಬೇಕು. ಬ್ರಿಟಿಶ ಮಾಲು ಪರದೇಶಿ ಮಾಲಿಗಿಂತ ತುಟ್ಟಿಯಾದಲ್ಲಿ ಅದನ್ನು ಕೊಂಡುಕೊಳ್ಳುವದು ಅನೇಕ ಬ್ರಿಟಿಶರಿಗೆ ಅನಾನುಕೂಲವಾಗಬಹುದು. ಆದರೆ, ದರವು ಹೆಚ್ಚು ಕಡಿಮೆ ಇದ್ದರೂ, ಬ್ರಿಟಿಶ ಮಾಲನ್ನೇ ಕೊಂಡುಕೊಳ್ಳುವಂತೆ, ನಾವು ವ್ಯವಸ್ಥೆ ಮಾಡಬೇಕು. ಬ್ರಿಟಿಶ ಮಾಲನ್ನೇ ಬೇಡುವ [illegible] ಏಜನ್ಸಿಯನ್ನು ಹೊರಡಿಸುವ ಪ್ರಸಂಗ ಬಂದದ ಇತ್ಯಾದಿ" ಸ್ವದೇಶ ಪ್ರೇಮ ನೋಡಿರಿ!

⁂

ಬ್ರಿಟಿಶ ವ್ಯಾಪಾರವು ಕುಗ್ಗುತ್ತಿದೆ!

ಕಳೆದ ತಾ ೬ ನೇ ಸೋಮವಾರ [illegible] ಸಭೆಯಲ್ಲಿ ಬ್ರಿಟಿಶ ಪ್ರಧಾನ ಮಂಡಳದ ವ್ಯಾಪಾರ ಖಾತೆಯವರು ತಮ್ಮ ಅಂದಾಜು ಪತ್ರಕವನ್ನು ಹಾಜರಪಡಿಸಿದರು. ಸರ್ ಫಿಲಿಪ್ ಕನ್ಲಿಫ್ ಲಿಸ್ಟರರು ಬ್ರಿಟಿಶರ ವ್ಯಾಪಾರವು ಕ್ರಮವಾಗಿ ಕುಗ್ಗುತ್ತದೆಂದು ಪ್ರತಿಪಾದಿಸಿದರು. ಅವರು ನುಡಿದದ್ದೇನಂದರೆ — ೧೯೩೫ ನೇ ಇಸ್ವಿಯ ಮೊದಲಿನ ೩ ತಿಂಗಳುಗಳಲ್ಲಿ ಕಲ್ಲಿದ್ದಲಿ ಹಾಗು ಕಬ್ಬಿಣ ಇವುಗಳ ಹುಟ್ಟುವಳಿಯು ಬಹಳ ಕುಗ್ಗಿತು. ಯುದ್ಧ ಪ್ರಾರಂಭದ ೧೯೧೩ ನೇ ಇಸ್ವಿಗಿಂತ ಕಲ್ಲಿದ್ದಲಿಯು ಶೇಕಡಾ ೮ ರಷ್ಟು ಕುಗ್ಗಿದರೆ, ಕಬ್ಬಿಣವು ಶೇಕಡಾ ೩೨ ರಷ್ಟು ಕುಗ್ಗಿತು. ಈ ಮಾನದಿಂದ ಉಕ್ಕಿನ ಹುಟ್ಟುವಳಿಯೂ ಕಡಿಮೆಯಾಗಿದೆ. ಹಡಗಗಳನ್ನು ಕಟ್ಟುವ ಕೆಲಸವು ಕಡಿಮೆಯಾಯಿತು. ಯಂತ್ರಸಾಮಗ್ರಿಯನ್ನು ತಯಾರಿಸುವದೂ ಕಡಿಮೆ. ಮೋಟಾರು ಹಾಗು ಸೈಕಲುಗಳ ವ್ಯಾಪಾರವು ಮಾತ್ರ ಹೇರಳ ಬೆಳೆದಿದೆ. ನಮ್ಮ ಅರಿವೆಗೆ ಈಗ ಹೆಚ್ಚೆಚ್ಚು ಗಿರಾಕಿಗಳಿಲ್ಲ. ಉಣ್ಣೆ, ನಾರು, ಇವುಗಳ ಅರಿವೆಗಳೂ ವಿಶೇಷ ಖರ್ಚಾಗುವದಿಲ್ಲ. ರಸಾಯನಗಳ ವ್ಯಾಪಾರವು ಮಾತ್ರ ಅಷ್ಟು ಅಸಮಾಧಾನಕರವಿಲ್ಲ. ಇತ್ಯಾದಿ ಹೇಳಿ, ಕೊನೆಗೆ, ದೊರೆಗಳು ಉದ್ಗರಿಸಿದ್ದೇನಂದರೆ — ನಾವು ಭೂಮಂಡಲದ ಮೇಲೆಲ್ಲ ವ್ಯಾಪಾರ ನಡಿಸುತ್ತಿದ್ದೇವೆ. ಭೂಮಂಡಲದ ಮೇಲಿನ ರಾಷ್ಟ್ರಗಳಲ್ಲಿ ನಡೆದಿರುವ ಆರ್ಥಿಕ ಹಾಗು ರಾಜಕೀಯ ಪರಿಸ್ಥಿತಿಯನ್ನು ದುರ್ಲಕ್ಷಿಸಿ ತೀರದು. ಈಗ ಬೇರೆ ಬೇರೆ ರಾಷ್ಟ್ರಗಳಲ್ಲಿ ತಯಾರಾಗುವ ಕಬ್ಬಿಣ ಹಾಗು ಉಕ್ಕಿನ ಹುಟ್ಟುವಳಿಯ ಪ್ರಮಾಣವನ್ನು ನೋಡಿದರೆ, ಭೂಮಂಡಲದೊಳಗಿನ ಗರಜಿಗಿಂತ ಹೆಚ್ಚೇ ಕಬ್ಬಿಣ ಹಾಗು ಉಕ್ಕು ತಯಾರಾಗುತ್ತದೆಂದು ತಿಳಿದು ಬರುವಹಾಗಿದೆ. ಅದರಿಂದ ನಾವೆಲ್ಲರೂ ಕೂಡಿ ಅಂತರ್ರಾಷ್ಟ್ರೀಯ ತಹನಾಮೆಯನ್ನೊಂದು ಮಾಡಿಕೊಳ್ಳಬೇಕು. ಬ್ರಿಟಿಶ ವ್ಯಾಪಾರದ ೧೯೩೫ ನೇ ಮೇ ತಿಂಗಳ ಅಂಕೆಗಳೂ ಪ್ರಸಿದ್ಧವಾಗಿವೆ. ಇದೇ ಮೇ ತಿಂಗಳ ೬೪೨ ಲಕ್ಷ ರೂಪಾಯಿ ಮಾಲು ರಫ್ತಾಯಿತು. ೧೯೩೪ ನೇ ಇಸ್ವಿಯ ಮೇ ತಿಂಗಳಲ್ಲಿ, ಎಂದರೆ, ೧ ವರ್ಷ ಮುಂಚೆ ೭೦೨ ಲಕ್ಷ ರೂಪಾಯಿ ಮಾಲು ರಫ್ತಾಗಿತ್ತು. ೬೦ ಲಕ್ಷ ರೂಪಾಯಿ ಮಾಲು ಕಡಿಮೆಯಾದ ತಪಶೀಲವಾರಿಯು ಹೀಗಿದೆ. ಕಲ್ಲಿದ್ದಲಿ ೧೯ ಲಕ್ಷ, ಕಬ್ಬಿಣ ಹಾಗು ಉಕ್ಕಿನ ಜಿನಸು ೧೫ ಲಕ್ಷ, ಅರಿವೆ ಹಾಗು ನೂಲು ೯ ಲಕ್ಷ, ಉಣ್ಣೆಯ ಅರಿವೆ ೧೪ ಲಕ್ಷ, ಕಿರಕೋಳ ೩ ಲಕ್ಷ, ಅಂತು ೬೦ ಲಕ್ಷ ರೂಪಾಯಿ. ಇದರ ಮೇಲಿಂದ ಬ್ರಿಟಿಶರ ಮುಖ್ಯ ವ್ಯಾಪಾರವು ಕುಗ್ಗುತ್ತದೆ ಎಂದು ಸ್ಪಷ್ಟವಾಗುವದು. ಆಮದು ಅಂಕೆಗಳು ಹೀಗೆಯೇ ಕುಗ್ಗಿವೆ. ಆಮದಾಗುವದು ವಿಶೇಷವಾಗಿ ಕಾಳುಕಡಿ, ಕಚ್ಚಾ ಮಾಲು. ಕಾಳುಕಡಿಗಳು ೬ ಲಕ್ಷ ರೂಪಾಯಿ, ಹತ್ತಿ ೧೬ ಲಕ್ಷ, ಉಣ್ಣೆ ೩೯ ಲಕ್ಷ, ಇದರ ಮಾಲು ಕೂಡಿ ಸುಮಾರು ೧೭೭ ಲಕ್ಷ ರೂಪಾಯಿ[illegible] ಮಾಲು ಸಾಮಗ್ರಿಯು ಕುಗ್ಗಿತು. ನಿರುದ್ಯೋಗಿಗಳ ಸಂಖ್ಯೆಯು ಮಾತ್ರ ಬೆಳೆಯುತ್ತಲಿದೆ. ಇದೇ ಮೇ ತಿಂಗಳ ಅಂತ್ಯಕ್ಕೆ ೧೨ ಲಕ್ಷ ಕೂಲಿಕಾರರು ಕೆಲಸವಿಲ್ಲದೆ ಜಗಲಿ ಭಾಗ್ಯಶರಾಗಿದ್ದರು. ಜೂನ ೧೭ನೇ ತಾರೀಖಿನೊಳಗೆ ಮತ್ತೆ ೧ ಲಕ್ಷ ಜನರು ನಿರುದ್ಯೋಗಿಗಳಾದರು. ಅಂದರೆ, ಈಗ ೧೩ ಲಕ್ಷ ಜನರು ಕೆಲಸವಿಲ್ಲದೆ ಬಳಲುತ್ತಿರುವರು. ಹಿಂದುಸ್ಥಾನದಲ್ಲಿಯೂ ಚೀನದಲ್ಲಿಯೂ ನಡೆದ ಸ್ವದೇಶ ಪ್ರೀತಿಯ ಚಳವಳಿಯಿಂದ ಇಂಗ್ಲಂಡ ದೇಶದ ಮರ್ಮದ ಮೇಲೆ ಆಘಾತವಾಗಿದೆ.

⁂

ಕೂಸುಗಳು ಯಾಕೆ ಸಾಯುತ್ತವೆ?

ಅಮೇರಿಕೆಯಲ್ಲಿ ಕೂಲಿಕಾರ ಖಾತೆಯವರು 'ಚಿಲ್ಡ್ರನ್ಸ ಬ್ಯೂರೋ' ಅಂದರೆ, ಮಕ್ಕಳದೊಂದು ಖಾತೆಯನ್ನು ಏರ್ಪಡಿಸಿರುವರು. ಈ ಖಾತೆಯ ಪ್ರಧಾನ ಡಾ|| ವುಡ್‌ಬರಿಯವರು ಕೂಸುಗಳು ಮರಣಹೊಂದುವ ಕಾರಣಗಳ ಸಂಶೋಧನ ಮಾಡಿರುವರು. ೮ ಪಟ್ಟಣಗಳೊಳಗಿನ ೨೩ ಸಾವಿರ ಚಿಕ್ಕ ಮಕ್ಕಳ ಪರೀಕ್ಷೆ ಮಾಡಿ, ತಮ್ಮ ರಿಪೋರ್ಟನ್ನು ಪ್ರಸಿದ್ಧಗೊಳಿಸಿದರು. ಈ ೮ ಪಟ್ಟಣಗಳಲ್ಲಿ ಕೂಸುಗಳು ಪ್ರತಿ ೧೦೦೦ ಕ್ಕೆ ೧೧೩ ರಂತೆ ಮರಣಹೊಂದುತ್ತವೆ. ಯಹೂದಿ ಜಾತಿಯ ಹುಡುಗರ ಮರಣ ಹೊಂದುವ ಪ್ರಮಾಣವು ತೀರ ಕಡಿಮೆ ಅಂದರೆ, ೧೦೦೦ ಕ್ಕೆ ೫೪||. ಏಕೆ? ಯಹೂದಿ ಜಾತಿಯವರು ಸಾವುಕಾರರು. ಬಡತನದ ಮೂಲಕ

[illegible] ಹೆಚ್ಚು ಪ್ರಮಾಣದಿಂದ ಸಾಯುತ್ತಾರೆ. ತಾಯಿಯ ಮೊಲೆ ಕುಡಿಯುವ ಹುಡುಗರು ವಿಶೇಷ ಬಾಳುತ್ತಾರೆ. ತಾಯಿಯ ಮೊಲೆ ಕುಡಿಯದೆ, [illegible] ಮೇಲೆ ನಿರ್ವಾಹ ಸಾಗಿಸುವ ಹುಡುಗರು ಸಾಯುವದು ವಿಶೇಷ. ತುಲನಾತ್ಮಕ ದೃಷ್ಟಿಯಿಂದ ವಿಚಾರಿಸಿದರೆ, ತಾಯಿ ಮೊಲೆ ಕುಡಿಯುವ ಒಂದು ಶಿಶು ಸತ್ತರೆ, ತಾಯಿ ಮೊಲೆ ಕುಡಿಯದ ೪ ಕೂಸುಗಳು ಮಡಿಯುತ್ತವೆ. ಮೊದಲು ಹುಟ್ಟಿದ ಹುಡುಗರಿಗಿಂತ ಎರಡನೆ ಹುಡುಗರ ಬದುಕುವ ಸಂಭವವು ವಿಶೇಷ. ಮುಂದೆ [illegible] ಮೂರನೇ ಹುಡುಗನಿಂದ ಸಾಯುವ ಪ್ರಮಾಣವು ಹೆಚ್ಚು. ಗಂಡು ಶಿಶುಗಳಿಗಿಂತ ಹೆಣ್ಣು ಶಿಶುಗಳು ಬದುಕುವ ಪ್ರಮಾಣವು ಹೆಚ್ಚು. [illegible] ಕೆಲಸ ಮಾಡುವ ಹೆಂಗಸರ ಕೂಸುಗಳ ಸಾಯುವ ಪ್ರಮಾಣಕ್ಕೆ, ಸಾಮಾನ್ಯ ಶ್ರೀಮಂತರ, [illegible] ಹೆಂಗಸರ ಕೂಸುಗಳು ಸಾಯುವ ಪ್ರಮಾಣಕ್ಕೂ ಹೋಲಿಕೆ ಮಾಡಿದರೆ, [illegible] ಹೆಂಗಸರ ಕೂಸುಗಳು ೧೦೦೦ಕ್ಕೆ ೧೬೬ ಹೆಚ್ಚು ಸಾಯುತ್ತವೆ [illegible] ಹೆಂಗಸರ ಶಿಶುಗಳು ೧೦೦೦ಕ್ಕೆ ೭೮ ರಂತೆ ಹೆಚ್ಚು ಪ್ರಮಾಣದಿಂದ ಸಾಯುತ್ತವೆ. ಶ್ರೀಮಂತಿಕೆಯ ದೃಷ್ಟಿಯಿಂದ ವಿಚಾರಿಸಿದರೆ, ವರ್ಷಕ್ಕೆ [illegible] (೩ ರೂಪಾಯಿ) ಅಥವಾ ಅದಕ್ಕೂ ಮಿಕ್ಕಿ [illegible] ಕುಟುಂಬಗಳಲ್ಲಿ ಶಿಶುನಿಧನ ಪ್ರಮಾಣವು ೬೦ ರಷ್ಟು ಇದೆ. [illegible] ಅಥವಾ ಅದಕ್ಕೆ ಕಡಿಮೆ ಉತ್ಪನ್ನವಿರುವ ಕುಟುಂಬಗಳಲ್ಲಿ ಶಿಶುನಿಧನದ ಪ್ರಮಾಣವು ೧೭೦ ರಷ್ಟು ಇದೆ. [illegible] ತಾಯಿಗಳಿಗೆ [illegible] ಈ ಪ್ರಮಾಣವು ಮತ್ತೂ ಹೆಚ್ಚುತ್ತದೆ. [illegible] ಶಿಶುನಿಧನದ ಮುಖ್ಯ ಕಾರಣವನ್ನು ನಿವೇದಿಸುವರು. ಅದೇನಂದರೆ, ಬಡತನವು. ದಾರಿದ್ರ್ಯವೇ ಶಿಶುನಿಧನಕ್ಕೆ ಮುಖ್ಯ ಕಾರಣವೆಂದು ದಾಕ್ತರರು ನಮೂದಿಸುತ್ತಾರೆ.

* * *

ನಮ್ಮಲ್ಲಿಯೂ ಬೇಸಾಯದ ದುಸ್ಥಿತಿ

ಮುಂಬಯಿ ಸರಕಾರವು [illegible] ಬೇಸಾಯಗಾರರಿಗಾಗಿ ಒಂದು ಕಮಿಟಿಯನ್ನು ನೇಮಿಸಿದೆ. ಈ ಕಮಿಟಿಯು [illegible] ಕಮಿಟಿಯು [illegible] ಪ್ರಶ್ನಪತ್ರಿಕೆಯನ್ನು [illegible] ಉತ್ತರ ಕೊಡಲು [illegible] ಬೇಸಾಯದ ಸ್ಥಿತಿಯ ವಿಷಯ ಒಂದು [illegible] ಮುಂಬಯಿ ಇಲಾಖೆಯೊಳಗಿನ ಬೇಸಾಯಗಾರರು [illegible] ೧ ಎಕರೆ ಹೊಲದ ಉತ್ಪನ್ನವನ್ನು [illegible] ಈ ಹೊಲದ ಬೆಲೆಯು ೧೮೦೦ ರೂಪಾಯಿಯೆಂದು [illegible] ಜಮಾ-ಖರ್ಚಿನ ಲೆಕ್ಕಗಳು ಈ ಕೆಳಗಿನಂತಿವೆ:—

ಜಮಾ.		ಖರ್ಚು.
ರೂ.	೧ ಎಕರೆ ಹೊಲಕ್ಕೆ [illegible]	ರೂ.
೧೧೦	[illegible]	
	[illegible] ರೂಪಾಯಿ [illegible]	
[illegible]	[illegible]	
	೧೮೦೦ ರೂಪಾಯಿ ಮೇಲೆ [illegible]	
	[illegible]	೬೦
	ಹೊಲ [illegible]	
	[illegible]	
	[illegible]	೭೦
	[illegible]	೧೦
	ಗೊಬ್ಬರ [illegible]	೧೫
	ಬಿತ್ತಲಿಕ್ಕೆ	೪
	ಕಳೆ [illegible]	೬
	ನೀರಿನ [illegible]	೪
	ಬೆಳೆ ಕಾವಲಿಗೆ	೧೪
	[illegible] ಕೊಯ್ಯಲಿಕ್ಕೆ	೬
	ಒಕ್ಕಲಿಕ್ಕೆ	೮
	ಪೇಟೆಗೆ [illegible]	೮
	[illegible]	೬

ರೂ. ೧೩೦ ಜಮಾ ಅಂತು ಖರ್ಚು ರೂ. [illegible]

ಇವರ [illegible] ಸರಕಾರಕ್ಕೆ [illegible] ರೂಪಾಯಿ [illegible] ಕೊಡಬೇಕು [illegible] ರೂ. [illegible] ಮತ್ತು ಜಮಾ ರೂ. [illegible] ಇವರ ಮೇಲಿಂದ ನಮ್ಮಲ್ಲಿಯ ಬೇಸಾಯದ [illegible] ಸ್ಥಿತಿಯಲ್ಲಿ [illegible] ಕಲ್ಪನೆಯಾಗದೆ.

* * *

ಮುಂಬಯಿ ಇಲಾಖೆಯೊಳಗಿನ ಶಿಕ್ಷಣ

ಮುಂಬಯಿ ಸರಕಾರವು [illegible] ಯಲ್ಲಿ [illegible] ಶಿಕ್ಷಣಖಾತೆಯ [illegible] ವನ್ನು [illegible] ಪ್ರಕಟಿಸಿದೆ. ಇದರ [illegible] ನಾದರೆ:— [illegible] ಎಲ್ಲ ಶಾಲೆಗಳಲ್ಲಿ [illegible] ವರ್ಷಕ್ಕಿಂತ [illegible] ವಿದ್ಯಾರ್ಥಿಗಳು ಹೆಚ್ಚಾದರು; [illegible] ಹುಡುಗರು ಹೆಚ್ಚಾದರು. [illegible] ಸರಕಾರಕ್ಕೆ [illegible] ಲಕ್ಷ ರೂಪಾಯಿಗಳು ಪ್ರಾಥಮಿಕ ಶಿಕ್ಷಣಕ್ಕಾಗಿ [illegible] ವರ್ಷದ ಹಿಂದಿನ [illegible] ಲಕ್ಷ [illegible] ಪ್ರಾಥಮಿಕ ಶಿಕ್ಷಣಕ್ಕಾಗಿ [illegible] ಲಕ್ಷ [illegible] ಸಾವಿರ ರೂಪಾಯಿಗಳು [illegible] ೧೦ ವರುಷಗಳ ಹಿಂದೆ ೭ ಲಕ್ಷ, [illegible] ಸಾವಿರ ರೂಪಾಯಿಗಳು [illegible] [illegible] ಶಿಕ್ಷಣದ ಖರ್ಚು [illegible] ಲಕ್ಷಗಳಿಂದ [illegible] ಇದೆ [illegible] ಶಿಕ್ಷಣ ಖರ್ಚಿನ [illegible] ನೋಡಿದರೆ, ೧೦ ವರುಷಗಳ ಹಿಂದೆ [illegible] ರಷ್ಟು [illegible] ಪ್ರಾಥಮಿಕ ಶಿಕ್ಷಣಕ್ಕಾಗಿ [illegible] ಲಕ್ಷ ರೂಪಾಯಿಗಳನ್ನು [illegible] ಸ್ವರಾಜ್ಯ ಸಂಸ್ಥೆಗಳು ಕೊಟ್ಟವು. [illegible] ಮುಂಬಯಿ ಸರಕಾರಕ್ಕೆ [illegible] ವಾಗಿದೆ. [illegible] ೧೦ ಲಕ್ಷ ರೂಪಾಯಿಗಳನ್ನು ಕೊಡುತ್ತಿರುವಾಗ್ಯೂ [illegible] ಸಂಸ್ಥೆಗಳು [illegible] ಶಿಕ್ಷಣದ [illegible] ಸರಕಾರವು [illegible] ಪ್ರಾಥಮಿಕ ಶಿಕ್ಷಣ [illegible] ಸ್ವರಾಜ್ಯ ಸಂಸ್ಥೆಗಳಿಗೆ, [illegible] ಅಧಿಕಾರಗಳನ್ನು [illegible] ಶಿಕ್ಷಣಕ್ಕಾಗಿ [illegible] ಮುಂದಾಗಿ ಬರುತ್ತಿದ್ದೆಂದು ಸರಕಾರಕ್ಕೆ [illegible] ಶೇಕಡಾ ೧೦ ರಷ್ಟು [illegible] ಶಾಲೆಗಳಲ್ಲಿ [illegible] ವಿದ್ಯಾರ್ಥಿಗಳು ಹಿಂದುಳಿದವರಿರುವರು. [illegible] ಮಾನವನಿಂದ [illegible] ವನ್ನು ನಮೂದಿಸುತ್ತದೆ. ಇದಲ್ಲದೆ, ವಿಶ್ವವಿದ್ಯಾಲಯದಲ್ಲಿ [illegible] ಕಲಿಸುವ [illegible] ವೈದ್ಯಕೀಯ [illegible] ಅಧ್ಯಕ್ಷಸ್ಥಾನವು [illegible] ಸರಕಾರಕ್ಕೆ [illegible] ಗಿದೆ.

* * *

ದೇಶಬಂಧು ಸಪ್ತಾಹ

ದೇಶಬಂಧುಗಳ [illegible] ಅಲ್ಲಿಯಂತೆ, ೧೬ನೇ ದಿವಸಕ್ಕೆ [illegible] ಸಲುವಾಗಿ [illegible] ಪ್ರಾರ್ಥನೆಗಳ [illegible] ದೇಶಬಂಧುಗಳ [illegible] ಪ್ರಾರ್ಥನೆ ನಡೆಸುತ್ತಿದ್ದು [illegible] ದೇಶಬಂಧುಗಳಿಗೆ ಪೂಜಿಸುತ್ತಿದ್ದರು, ಅಲ್ಲಿಯ ಆಶ್ರಮದಲ್ಲಿ ಅವರ ೧೬ನೇ ದಿನ [illegible] ಯಿಂದ [illegible] ೭ ದಿವಸ [illegible] ಆಶ್ರಮದಲ್ಲಿ [illegible] ದಿನಾ ೧೨ [illegible] ಹುಡುಗ-ಹೆಂಗಸರು, [illegible] ದಾಲಕ್ಷರು [illegible] ಎಲ್ಲರೂ, "[illegible] ಶಿವಾಯ। [illegible] ಶಿವಾಯ॥" ಎಂಬ ಮಂತ್ರವನ್ನು ಘೋಷಿಸುತ್ತಿದ್ದರು. [illegible] ಪ್ರಾರಂಭವು [illegible] ೧೦ಮಿಗೆ [illegible] ಈ ೭ ದಿನಗಳಲ್ಲಿ ೧೫,೩೫೦ ಗಡಿಗಳು [illegible] ಲಾಯಿತು. ಸರಾಸರಿ ವೇಗವು ತಾಸಿಗೆ ೧೭೦ ಗಡಿ ಎಲ್ಲಕ್ಕೂ ಹೆಚ್ಚಿನದು [illegible] ವೇಗವು ತಾಸಿಗೆ ೩೭೮ ಗಡಿಯಾಗಿತ್ತು.

* * *

— ಅಲ್ಲಿಕದಲ್ಲಿ [illegible] ಎಂಬ ಮೂಲನಿವಾಸಿಗಳಿಗೂ, ಫ್ರೆಂಚರಿಗೂ ಯುದ್ಧ ನಡೆಯುತ್ತದೆ. ಫ್ರೆಂಚರು ಸೋಲುತ್ತಿರುವರು. [illegible] ಯಲ್ಲಿ [illegible] ಗಳು ಫ್ರೆಂಚರು ಅಲ್ಲಿಯ ಹಿಂದೀಗಳ ಬಹು ಸೈನ್ಯವನ್ನು ಎಳೆದು ಸಾಗಿಸಿರುವರು.

ಕಾನಡಾವೃತ್ತ.

ಮಿತಿ ಕ್ರೋಧನ ನಾಂ ಆಷಾಢ ಬ|| ೩೦ ಕ್ಕೆ, ಸೋಮವಾರ

ಬರೇ ಕಿಡಿಗೇಡಿತನ!

ಬಳ್ಳಾರಿಯನ್ನು ಅಪಹರಿಸುವ ಆಂಧ್ರರ ಕುಹಕ!

ಸದ್ಯಕ್ಕೆ ನಮ್ಮ ಕರ್ನಾಟಕ ಪ್ರಾಂತದಲ್ಲಿ ಒಂದು ಅನಪೇಕ್ಷಿತವಾದ ಆಪತ್ತು ಬಂದೊದಗಿದೆ. ಕರ್ನಾಟಕವು ಬ್ರಿಟಿಶರ ತತ್ತ್ವಶೂನ್ಯವಾದ ರಾಜ್ಯವಿಭಾಗದಿಂದ ತುಂಡರಿಸಿಹೋಗಿರುವ ಮಾತನ್ನು ವಾಚಕರು ಅರಿತಿರುವರು. ರಾಷ್ಟ್ರೀಯ ಸಭೆಯಲ್ಲಿ ಆದ ಹೊಸ ವ್ಯವಸ್ಥೆಯಂತೆ, ಭಾಷಾನುರೋಧದಿಂದ ಪ್ರಾಂತಗಳ ರಚನೆಯಾಯಿತು. ಪ್ರಾಂತಗಳ ರಚನೆಯಾಗುವಾಗ ಸರಹದ್ದಿಯ ಮೇಲಿನ ಜಿಲ್ಹೆಗಳನ್ನು ತಮ್ಮೊಳಗೆ ಸೇರಿಸಿಕೊಳ್ಳಲು ನೆರೆಹೊರೆಯ ಪ್ರಾಂತಗಳು ಬಗೆಯುವದು ಸಹಜವಾದರೂ, ಸಯುಕ್ತಿಕವಲ್ಲ. ಈ ವಿಷಯ ೧೯೨೦ನೇ ಇಸ್ವಿಯಲ್ಲಿ ಕಡು ವಾದ-ವಿವಾದವಾಗಿ ಪ್ರಾಂತರಚನೆಯಾಯಿತು. ಬಳ್ಳಾರಿಯ ವಿಷಯ ವಿಶೇಷ ವಾದ ನಡೆಯಿತು. ಆಂಧ್ರರು ಬಳ್ಳಾರಿಯನ್ನು ತಮಗೆ ವಹಿಸಬೇಕೆಂದರು. ಕರ್ನಾಟಕಸ್ಥರು ಬಳ್ಳಾರಿಯು ತಮ್ಮದೆಂದರು. ಕೊನೆಗೆ, ೩ ತಾಲೂಕುಗಳನ್ನು ಹೊರ್ತುಪಡಿಸಿ, ಬಳ್ಳಾರಿ ಜಿಲ್ಹೆಯು ಕರ್ನಾಟಕ ಪ್ರಾಂತಕ್ಕೆ ಸೇರಿಸಲ್ಪಟ್ಟಿತು. ಈವರೆಗೆ ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮೀಟಿಗೆ ಅಧೀನವಾಗಿಯೇ ಅಲ್ಲಿಯ ಜಿಲ್ಹಾ ಕೊಂಗ್ರೆಸ ಕಮೀಟಿಯು ನಡಕೊಳ್ಳುತ್ತಿದೆ. ಈಗ ಬಂದೊದಗಿದ ಆಪತ್ತೇನು? ಎಂದು ವಾಚಕರು ಪ್ರಶ್ನಿಸಬಹುದು. ಅದನ್ನೇ ಇಂದಿಗೆ ನಿವೇದಿಸಲಿಚ್ಛಿಸುವೆವು.

ಬಳ್ಳಾರಿ ಜಿಲ್ಹೆಯಲ್ಲಿ ಹಾಗು ಬಳ್ಳಾರಿ ಪಟ್ಟಣದಲ್ಲಿ ಒಂದು ಹೊಸ ಚಟುವಟಿಕೆ ಎದ್ದಿದೆ. ಅಲ್ಲಿ ಆಂಧ್ರ ವಿಶ್ವವಿದ್ಯಾಲಯದ ಸ್ಥಾಪನೆಯಾಗುವದಿದೆ. ಈ ವಿಶ್ವವಿದ್ಯಾಲಯಕ್ಕೆ ಅಧೀನವಾಗಿ ೪ ಕೇಂದ್ರಗಳಲ್ಲಿ ಕೊಲೇಜುಗಳು ಸ್ಥಾಪಿಸಲ್ಪಡುವವು. ಸದ್ಯಕ್ಕೆ ಅನಂತಪುರದಲ್ಲಿ ಒಂದು ಕೊಲೇಜಿದೆ. ಅದನ್ನು ಬಳ್ಳಾರಿಯಲ್ಲಿ ತರಬೇಕೆಂದು ಬಳ್ಳಾರಿಯ ಅಲ್ಪಸಂಖ್ಯಾಕ ಆಂಧ್ರರು ಕೂಗಿಕೊಳ್ಳುತ್ತಿರುವರು. ಈ ಬಗ್ಗೆ ಬಳ್ಳಾರಿ ನಗರದಲ್ಲಿ ನಾಗರಿಕರ ಸಭೆಯೊಂದು ಅಲ್ಲಿಯ ಆಂಧ್ರರು ಕೂಟ ಮಾಡಿ, ಅನಂತಪುರದ ಕೊಲೇಜನ್ನು ಬಳ್ಳಾರಿಯಲ್ಲಿ ಸ್ಥಾಪಿತ ಮಾಡಬೇಕೆಂದು ಮದ್ರಾಸ ಸರಕಾರಕ್ಕೆ ಅರಿಕೊಂಡಿರುವರು. ಕೂಟದಲ್ಲಿಯೇ ಬಳ್ಳಾರಿಯ ಕನ್ನಡಿಗರಾದ ಶ್ರೀ|| ಕೆ. ಗುರುರಾಜರಾವ ಇವರೂ ಹಾಜರಿದ್ದರು. ಇವರು ವಿರೋಧಿಸಿದರೂ, ಇವರ ವಿರೋಧವನ್ನು ಬದಿಗೊತ್ತಿ, ಅಲ್ಪಸಂಖ್ಯಾಕ ಆಂಧ್ರರು ಸಭೆಯಲ್ಲಿ ಸಿಕ್ಕಿದ ಬಹುಮತದ ಬೆಂಬಲದಿಂದ ಠರಾವು ಮಂಜೂರು ಮಾಡಿಕೊಂಡಿರುವರು. ಬಳ್ಳಾರಿ ಜಿಲ್ಹೆಯಲ್ಲಿ ಅಲ್ಲಲ್ಲಿ ಕನ್ನಡಿಗರು ಸಭೆಸೇರಿ, ಆಂಧ್ರರ ಕುಟಿಲ ಕುಹಕದ ನಿಷೇಧ ಮಾಡುತ್ತಿರುವರು. ಬೆಳಗಾವಿ ಧಾರವಾಡ ಜಿಲ್ಹೆಯೊಳಗಿನ ಕನ್ನಡಿಗರು ಎಚ್ಚತ್ತು, ಆಂಧ್ರರ ಕುಹಕಕ್ಕೆ ಇದಿರಾಗಲು ಟೊಂಕಕಟ್ಟಿರುವರು.

ವಿಶ್ವವಿದ್ಯಾಲಯದ ಸ್ಥಾಪನೆಯಾದರೆ ಕರ್ನಾಟಕದ ಮೇಲೆ ಆಗಿದ ಆಪತ್ತೇನು? ಬಳ್ಳಾರಿಯು ಹೋಗುವ ಸಂಕಟವೇನು? ವಿದ್ಯಾಲಯಗಳ ಸ್ಥಾಪನೆಯಿಂದ ಸುಸಂಸ್ಕೃತವಾದ ಸಮಾಜವು [illegible] ಕರ್ನಾಟಕದ ಅಭಿಮಾನವನ್ನು ತಾಳುವದಲ್ಲವೇ? ಎಂದು ವಾಚಕರು ಪ್ರಶ್ನಿಸಬಹುದು. ಬೆಳಗಾವಿಯ ಸಭೆಯಲ್ಲಿಯೂ ಇದೇ ಆಕ್ಷೇಪವನ್ನು ಕೆಲವರು ತೆಗೆದರು. ವಿಶ್ವವಿದ್ಯಾಲಯದ ಸ್ವರೂಪವನ್ನು ಸ್ಪಷ್ಟ ಅರುಹಿದರೆ, ಈ ಆಕ್ಷೇಪದ ನಿರಸನವಾಗಬಲ್ಲದು. ವಿಶ್ವವಿದ್ಯಾಲಯವು ಆಂಧ್ರರದು. ಆಂಧ್ರ ಸಂಸ್ಕೃತಿಯ ಪ್ರಸಾರಕ್ಕಾಗಿ, ಸಂವರ್ಧನಕ್ಕಾಗಿ ವಿದ್ಯಾಲಯದ ಸ್ಥಾಪನೆಯಾಗುತ್ತದೆ. ಶಿಕ್ಷಣ ಕೊಡುವದು ಆಂಧ್ರರ ತೆಲಗು ಭಾಷೆಯಲ್ಲಿ. ಆಂಧ್ರ ಕಾವ್ಯ, ಆಂಧ್ರ ವಾಙ್ಮಯ, ಆಂಧ್ರ ಕಲೆ, ಆಂಧ್ರ ಭಾಷೆ ಇವುಗಳೇ ಈ ವಿದ್ಯಾಲಯದ ಕೇಂದ್ರಗಳಲ್ಲಿ ಕಲಿಸಲ್ಪಡುವವು. ಅಂದಬಳಿಕ, ವಿಶ್ವವಿದ್ಯಾಲಯದ ಸ್ಥಾಪನೆಯಿಂದ ಕನ್ನಡ ನಾಡಿನ ಮೇಲೆ ಆಂಧ್ರರು (Peaceful penetration) ಯಾನೆ ಚಂಚುಪ್ರವೇಶ ಮಾಡಬಯಸುತ್ತಾರೆಂದು ಯಾರಾದರೂ ಹೇಳುವರು.

ಬಳ್ಳಾರಿಯ ಸ್ಥಿತಿಯಾದರೂ, ಚಂಚುಪ್ರವೇಶಕ್ಕೆ ಅನುಕೂಲವಾಗಿಯೇ ಇರುವದು. ಕನ್ನಡಿಗರು ಬಳ್ಳಾರಿಯಲ್ಲಿ ಬಹು ಸಂಖ್ಯಾಕರಿದ್ದರೂ, ಅಲ್ಲಿ ಕನ್ನಡದ ವ್ಯವಹಾರವು ತೀರ ಕಡಿಮೆ. ಕನ್ನಡ ಬಲ್ಲವರು ಕನ್ನಡ ಮಾತಾಡುತ್ತಿದ್ದರೂ ಅವರು ಲಿಪಿಯನ್ನೆಲ್ಲ ತೆಲಗು ಭಾಷೆಯಿಂದಲೇ ಬರೆಯುತ್ತಿರುವರು. ಅಲ್ಲಿ ವೀರಶೈವರಿರುವರು; ವೈಶ್ಯರಿರುವರು, ಇವರು ದೊಡ್ಡದೊಡ್ಡ ವರ್ತಕರು, ಕರ್ನಾಟಕದ ಅಭಿಮಾನಿಗಳು; ಕನ್ನಡದ ಅಭಿಮಾನಿಗಳು. ಕರ್ನಾಟಕ ರಾಷ್ಟ್ರೀಯ ಸಭೆಗಾಗಿ ಇಲ್ಲಿಯ ಕನ್ನಡಿಗ ಬಾಂಧವರು ೧೦ ಸಾವಿರ ರೂಪಾಯಿಗಳನ್ನಿತ್ತಿದ್ದರು. ಆದರೆ, ಇವರ ಲೆಖ್ಖಪತ್ರವೆಲ್ಲ ತೆಲಗು ಲಿಪಿಯಲ್ಲಿ; ಓದಿದರೆ ಕನ್ನಡ, ಕನ್ನಡಕ್ಕೆ ತೆಲಗು ಬಣ್ಣ. ಅಲ್ಲಿಯ ಕೋರ್ಟು ಕಚೇರಿಗಳ ಭಾಷೆ ತೆಲಗು. ಪ್ರಾಥಮಿಕ ಶಾಲೆಗಳೂ ತೆಲಗು ಭಾಷೆಯನ್ನೇ ಕಲಿಸುತ್ತವೆ. ಬಳ್ಳಾರಿ ಮ್ಯುನಿಸಿಪಲ್ ಹದ್ದಿನಲ್ಲಿ ೧೦೦ಕ್ಕೆ ೭೦ರಷ್ಟು ಕನ್ನಡಿಗರಿದ್ದರೂ, ಮ್ಯುನಿಸಿಪಾಲಿಟಿಯ ಮೆಂಬರರು ಮಾತ್ರ ಅಲ್ಪಸಂಖ್ಯಾಕ ಆಂಧ್ರರು. ಇದರಿಂದ ಅವರು ಮಾಡಿದ್ದೇ ಹುಣ್ಣಿವೆ ಅಮಾವಾಸ್ಯೆಯಾಗಿದೆ. ಆದ್ದರಿಂದ ಅಲ್ಲಿ ಕನ್ನಡ ಕಲಿಸುವ ಒಂದು ಸಹ ಶಾಲೆಯಿರುವದಿಲ್ಲ; ಇಷ್ಟು ಬಳ್ಳಾರಿಯು ತೆಲಗಿನ ಮಾಯೆಯಲ್ಲಿ ಸಿಲುಕಿಕೊಂಡಿದೆ. ಆಂಧ್ರ ವಿಶ್ವವಿದ್ಯಾಲಯದ ಕೇಂದ್ರವು ಬಳ್ಳಾರಿಯಲ್ಲಿ ಬಂದರೆ, ಕೇಳುವದೇನಿದೆ? ಸೊಲ್ಲಾಪುರವು ಮಹಾರಾಷ್ಟ್ರರ ಪಾಲಾದಂತೆ, ಬಳ್ಳಾರಿಯೂ ಆಂಧ್ರರ ಪಾಲಾಗುವದೆಂಬುದರಲ್ಲಿ ಸಂದೇಹವಿಲ್ಲ.

ಬೆಳಗಾವಿಯಲ್ಲಿ ಈ ವಿಷಯ ಕನ್ನಡಿಗರು ಕೈಕೊಳ್ಳಬೇಕಾದ ಉಪಾಯಗಳ ನಿರ್ದೇಶವಾಗಿದೆ. ಶ್ರೀ|| ಚಿಕ್ಕೋಡಿ ಪಂಡಿತಪ್ಪನವರೂ, ನಿಜ್ಜ ವಕೀಲರೂ ಅಲ್ಲಿ ಹೋಗಿ, ಕನ್ನಡಿಗರಲ್ಲಿ ಜಾಗೃತಿ ಹುಟ್ಟಿಸಿ, ಆಂಧ್ರರ ವಾದವನ್ನು ಪರಾಸ್ತ ಮಾಡಲು ಟೊಂಕ ಕಟ್ಟಿದ್ದು ಶುಭಸೂಚಕವು. ಬಳ್ಳಾರಿಯು ಕರ್ನಾಟಕ ಪ್ರಾಂತಕ್ಕೆ ಸೇರಿ ೫ ವರ್ಷಗಳಾದರೂ, ಅದಬಗ್ಗೆ ಕರ್ನಾಟಕದ ನಾಯಕರು ಸ್ವಲ್ಪ ಕಾಲದಲ್ಲಿ ತಕ್ಕ ಉಪಾಯಯೋಜನೆ ಮಾಡದೆ, ಈ ವರೆಗೆ ಅಜಾಗ್ರತೆಯಿಂದದ್ದು ಆಶ್ಚರ್ಯವು. ಬೆಳಗಾವಿಯ ದೇಶಪಾಂಡೆ ಗಂಗಾಧರರಾಯರೂ, ಬೆಳವಿ ದತ್ತಾತ್ರಯರಾಯರೂ, ಚಿಕ್ಕೋಡಿ ಪಂಡಿತಪ್ಪನವರೂ ಒಟ್ಟಾಗಿ, ಆಂಧ್ರರಿಗೆ ಇದಿರಾದದ್ದು ನೋಡಿ ನಿಜವಾಗಿ ಸಂತೋಷವಾಗುತ್ತದೆ. "ಕರ್ನಾಟಕ ಟೈಮ್ಸ" ಪತ್ರಿಕೆಯ ಶ್ರೀ|| ವ್ಹಿ. ಎಸ್. ಗುಡಗುಂಟಿಯವರು ನುಡಿದಂತೆ, 'ಕರ್ನಾಟಕದ ಒಂದೊಂದೇ ಭಾಗವು ಪರಭಾಷೆಯಿಂದ ನುಂಗಲ್ಪಡುತ್ತಿರುವ ಕಾಲಕ್ಕಾದರೂ, ಬ್ರಾಹ್ಮಣ ಲಿಂಗಾಯತರು ಒಕ್ಕಟ್ಟಾಗಬೇಕೆಂದು ಹೇಳಿದ್ದು, ಲಿಂಗಾಯತರ ಅಪಮಾನವೇ ಬ್ರಾಹ್ಮಣರ ಅಪಮಾನವೆಂದು ಉದ್ಗರಿಸಿದ್ದು ತೀರ ಪ್ರಶಂಸನೀಯವೆಂದು ಯಾರು ಹೇಳರು? ಇಂಥ ಭಾವನೆಯಿಂದಲೇ ರಾಷ್ಟ್ರಕಾರ್ಯವನ್ನು ನಾವು ನಡಿಸಲುದ್ಯುಕ್ತರಾಗಬೇಕು.

ಆಂಧ್ರರ ವಿಷಯ ಮಾತ್ರ ಒಂದು ಮಾತನ್ನು ಹೇಳಬೇಕಾಗಿದೆ. ಬಳ್ಳಾರಿಯ ವಾದವು ೧೯೨೦ನೇ ಇಸ್ವಿಯಲ್ಲಿ ಪಂಚರ ಮಾರ್ಫತ್ತು ನಿರ್ಣಯವಾಗಿದೆ. ಪಂಚರಲ್ಲಿ ಇಬ್ಬರು ಆಂಧ್ರರಿದ್ದರು, ಇಬ್ಬರು ಕನ್ನಡಿಗರಿದ್ದರು. ಮಹಾರಾಷ್ಟ್ರದ ಶ್ರೀ|| ನರಸೋಪಂತ ಕೇಳಕರರವರು ಈ ಮಂಡಳದ ಸಭಾಪತಿಗಳಿದ್ದರು. ೩ ದಿನಗಳ ವರೆಗೆ ಉಭಯ ಪಕ್ಷದ ಸಾಕ್ಷಿ-ಪುರಾವೆ, ಆಗಿದ ಪತ್ರಗಳ ವಿಚಾರವಾಗಿ, ಬಳ್ಳಾರಿಯ ೩ ತಾಲೂಕುಗಳು ಕನ್ನಡ ನಾಡೆಂದೂ, ಅದ

ವಾನಿ, ರಾಯದುರ್ಗ, ಆಲೂರು, ಈ ೩ ತಾಲೂಕುಗಳು ಆಂಧ್ರ ದೇಶದವೆಂದೂ ನಿರ್ಣಿತವಾಗಿದೆ. ಆ ನಿರ್ಣಯದಂತೆ, ನಾವೂ, ನೀವೂ ನಡಕೊಳ್ಳಲು ಬದ್ಧರಿದ್ದೇವೆ. ಈವರೆಗೆ ಈ ನಿರ್ಣಯವನ್ನು ನೀವು ಪಾಲಿಸಿರುವಿರಿ ಈಗ ಆ ನಿರ್ಣಯವನ್ನು ನೀವು ತಿದ್ದುಪಡಿಸಲು ವಿಶ್ವವಿದ್ಯಾಲಯಸ್ಥಾಪನೆಯ ನೆವವಾಗಿ ಬಡಿದಾಡುವದು ಒಳ್ಳೇ ಕಿಡಿಗೇಡಿತನವಲ್ಲವೇ?

ಬ್ರಿಟಿಶರ ಸುಲಿಗೆ!

ಸ್ವರಾಜ್ಯವನ್ನು ಸರಕಾರವು ಎಂದಾದರೂ ಅಕ್ಕರತೆಯಿಂದ [illegible] ಭರತಖಂಡಕ್ಕೆ ಅರ್ಪಿಸುವದೆಂದು ಯಾರೂ ತಿಳಿಯಲಾಗದೆಂದು ನಾವು ಅನೇಕಸಾರೆ ಸಾಧಾರ ಪ್ರತಿಪಾದಿಸಿರುವೆವು. ಹಿಂದುಸ್ಥಾನವೆಂದರೆ, ಬ್ರಿಟಿಶರ ಉಗ್ರಾಣವು; ಬೇಕಾದ ಸಾಮುಗ್ರಿಯನ್ನು ಇಚ್ಛೆಬುದ್ಧಿಯಂತೆ ಬೇಕಾದಾಗ ಪೂರೈಸಿಕೊಳ್ಳುವ ಒಂದು ಸಂಗ್ರಹ ಮನೆಯು, ಈ ಬಗ್ಗೆ ನಮಗೊಂದು [illegible] ಸಾಕ್ಷಿ ದೊರಕಿದೆ. ಪ್ರೊ|| ಡೆಮಂಜಿಯನ್ ಎಂಬವರು ಪಾರೀಸದೊಳಗಿನ ಸೂರ್ಬಾನ್ ವಿಶ್ವವಿದ್ಯಾಲಯದ ಅಧ್ಯಾಪಕರು. ಇತ್ತಕ್ಕೆ ಇವರೊಂದು "America and the race for world domination" ಅಂದರೆ, "ಅಮೇರಿಕೆಯೂ, ಭೂತಲವನ್ನು ಸ್ವಾಧೀನ ಪಡಿಸಿಕೊಳ್ಳುವ ಮೇಲಾಟವೂ." ಎಂಬ ದೊಡ್ಡ ಗ್ರಂಥವನ್ನು ಬರೆದಿರುವರು. ಇದರೊಳಗೆ ಪ್ರೊಫೆಸರ ಮಹಾಶಯರು ಬ್ರಿಟಿಶರು ಹಿಂದುಸ್ಥಾನದಿಂದ ಪಡೆಯುವ ಲಾಭಗಳ ವಿಷಯ ಉಲ್ಲೇಖಿಸುವದೇನಂದರೆ:— "ಸುಲಿಯಲಿಕ್ಕೆ ಹಿಂದುಸ್ಥಾನವು ಒಂದು ಮಾದರಿಯ ದೇಶವು; ಈ ದೇಶವು ಬೇಕಾದ ಸಾಮುಗ್ರಿಯಿಂದ ತುಂಬಿ ತುಳುಕುತ್ತಿದೆ; ಜನಸಂಖ್ಯೆಯೂ ವಿಪುಲವಿದೆ. ಅದರಿಂದ ಈ ದೇಶದ ಯಜಮಾನರಿಗೆ ಅದೊಂದು ಲಕ್ಷ್ಮೀನಿವಾಸವು; ಹಾಗೆಯೇ ಆತ್ಮಸಂರಕ್ಷಣೆಯ ದುರ್ಗವು. ಹಿಂದುಸ್ಥಾನದಿಂದಲೇ ಬ್ರಿಟಿಶ ಸಾಮ್ರಾಜ್ಯಕ್ಕೆ ಶೋಭೆಯಿದೆ. ಪೌರ್ವಾತ್ಯ ದೇಶಗಳಲ್ಲಿ ಬ್ರಿಟೀಶರು ವ್ಯಾಪಾರ ನಡಿಸಲಿಕ್ಕೆ ಹಿಂದುಸ್ಥಾನವು ಒಂದು ನಿಲ್ದಾಣವು. ಜಲಮಾರ್ಗದಿಂದ ಸಂಚರಿಸುವ ನೌಕಾಸೇನೆಗೆ ಹಿಂದುಸ್ಥಾನವು ಒಂದು ಆಧಾರವು. ಕ್ಷಾತ್ರತೇಜದ ಸಾವಿರಾರು ಸೈನಿಕರನ್ನು ಹಿಂದುಸ್ಥಾನವೇ ಪೂರೈಸುತ್ತದೆ. ಬ್ರಿಟನ್ ದೇಶಕ್ಕಾಗಿ ಚೀನದಲ್ಲಿಯೂ, ದಕ್ಷಿಣ ಆಫ್ರಿಕದಲ್ಲಿಯೂ ಹಿಂದೀ ಸೈನಿಕರು ಯುದ್ಧ ಮಾಡುತ್ತಾರೆ. ಮಹಾಯುದ್ಧದ ಸಮಯ ಹಿಂದುಸ್ಥಾನವು ೧೦ ಲಕ್ಷಕ್ಕೂ ಮಿಕ್ಕಿ ಸೈನಿಕರನ್ನು ಪೂರೈಸಿತು. ಅವರಲ್ಲಿ ೧ ಲಕ್ಷಕ್ಕೆ ಮಿಕ್ಕಿ ಜನರು ಸತ್ತರು. ಹಿಂದುಸ್ಥಾನವು ಬ್ರಿಟಿಶ ದೇಶದ ಸಾಮುಗ್ರಿ ಮಾರಾಟದ ಪ್ರಚಂಡ ಪೇಟೆಯು. ಹಿಂದುಸ್ಥಾನದಲ್ಲಿ ಆಮದಾಗುವ ಸರಕಿನಲ್ಲಿ ೩ ರಲ್ಲಿ ೨ ಅಂಶಗಳು ಬ್ರಿಟನ್ ದೇಶದಿಂದ ಬರುತ್ತವೆ. ಇಡೀ ಬ್ರಿಟಿಶ ಸಾಮ್ರಾಜ್ಯದಲ್ಲಿ ಬೆಳೆಯುವ ಗೋದಿಯಲ್ಲಿ ಶೇಕಡಾ ೫೧ರಷ್ಟು, ಚಹದಲ್ಲಿ ಶೇಕಡಾ ೫೮ರಷ್ಟು, ಕಾಫಿಯಲ್ಲಿ ಶೇಕಡಾ ೭೩ರಷ್ಟು ಸಾಮುಗ್ರಿಗಳು ಹಿಂದುಸ್ಥಾನದಲ್ಲಿ ಬೆಳೆಯುತ್ತವೆ. ಸಾಮ್ರಾಜ್ಯದೊಳಗೆ ಹತ್ತಿ ಬೆಳೆಯುವ ದೇಶವೆಂದರೆ, ಇದೊಂದೇ ಎಂದು ಹೇಳಬಹುದು ಹಿಂದುಸ್ಥಾನದ ಗಣಿಗಳಲ್ಲಿಯೂ, ಗಿರಣಿಗಳಲ್ಲಿಯೂ, ತೋಟಗಳಲ್ಲಿಯೂ, ಉಗಿಬಂಡಿಗಳಲ್ಲಿಯೂ, ನೀರು ಕಾಲುವೆಗಳಲ್ಲಿಯೂ ಬ್ರಿಟಿಶರು ಅಪರಿಮಿತವಾಗಿ ತಮ್ಮ ಬಂಡವಲು ಹಾಕಿರುವರು ಹಿಂದುಸ್ಥಾನವು ಪ್ರತಿ ವರ್ಷಕ್ಕೆ ೩೫ ಕೋಟಿ ಪವನುಗಳ ಮೇಲೆ ಬಡ್ಡಿ ಕೊಡುತ್ತಿದೆ. ಇದಲ್ಲದೆ, ಬ್ರಿಟಿಶ ಅಧಿಕಾರಿಗಳ ಒಂದು ದೊಡ್ಡ ದಂಡಿದೆ. ಅವರ ಸಂಬಳವನ್ನೂ ಭರತ ಖಂಡವೇ ಕೊಡುತ್ತದೆ; ಅವರು ಮಾಡಿದ ಉಳಿತಾಯವೆಲ್ಲ ಪ್ರತಿ ವರ್ಷವೂ ಗ್ರೇಟ ಬ್ರಿಟನ್ನಿಗೆ ಹೋಗುತ್ತದೆ ಸರಕಾರವು ತೆಗೆದ ಸಾಲಗಳ ಬಡ್ಡಿಯನ್ನೂ, ಮುಪ್ಪಾದ ಅಧಿಕಾರಿಗಳ ಪೆನ್ಶನನ್ನೂ, ಸರಕಾರಿ ಆಡಳಿತೆಯ ಖರ್ಚನ್ನೂ ಪ್ರತಿ ವರ್ಷವೂ, ಹಿಂದುಸ್ಥಾನವು ಬ್ರಿಟಿಶ ಕೋಶದಲ್ಲಿ ಸುರಿಯುತ್ತದೆ. ಬ್ರಿಟನದೊಳಗಿನ ಸಾವುಕಾರರಿಗೂ, ಅಧಿಕಾರಿಗಳಿಗೂ ಹಿಂದುಸ್ಥಾನವು ಪ್ರತಿ ವರ್ಷಕ್ಕೆ ೩ ಕೋಟಿ ಪವನುಗಳಿಗೆ ಮಿಕ್ಕು ಹಣ ಕೊಡುತ್ತದೆ. ಹೀಗೆ ಲೆಕ್ಕ ಮಾಡಿದರೆ, ಅಲ್ಲಿ ವ್ಯಾಪಾರ ಮಾಡುವ ವರ್ತಕರಿಗೂ, ಸಾಮಾನು ತರ-ಒಯ್ಯುವ ಹಡಗುಗಳ ನಾವಿಕರಿಗೂ ಎಷ್ಟು ಲಾಭವಾಗುತ್ತದೆಂಬದು ನಾವು ಹೇಳಲಾರೆವು. ಇದಕ್ಕೆ ಸುಲಿಗೆಯೆಂಬ ಶಬ್ದವು ಸರ್ವ ಪರಿಯಿಂದಲೂ ಶೋಭಿಸುತ್ತದೆ.

["India is a typical colony for exploitation. Immensely rich and thickly populated, she represents for her masters at once a fortune and a defence It is through India that the British Empire assures her destiny. India is the halting place of British Commerce to the Far East. India gives the fleet a place of support for the sea-route. India recruits for the Army legions of high-spirited soldiers; native contingents fight for Great Britain in China and South Africa. During the Great War, India supplied more than a million men, of whom more than 100,000 were killed. India is for Great Britain an enormous market: two-thirds of her importations come from English sources; she furnishes 51 per cent, of the wheat production of the Empire 58 per cent of the tea 73 per cent. of Coffee, almost all the Cotton. An immense British Capital is invested in Indian mines, factories, plantations, railways and irrigation works. India pays the interest on probably 350 millions pounds sterling. India keeps busy an army of British officials whose salaries she pays and whose savings go every year to Great Britain. She pours into British Coffers the interest on her public debt, the pensions of old officials, and the Government expenses of her administration. More than 30 million pounds sterling a year is the estimate of the sums that India pays in the United Kingdom to her creditors, her stock-holders, and officials At that we do not know how much she brings to the merchants who trade with her and the shippers who transport her goods. Never was the term exploitation better applied."]

ಸ್ಫುಟ ಸೂಚನೆಗಳು.

೧. ಇಂದಿಗೆ ನಾಲ್ಕು ದಿನಗಳಿಂದವು; ಮುಂಬಯಿ ಕಡೆಯ ಟಪಾಲ. ಕೈಸೇರದೆ ನಾಲ್ಕು ದಿನಗಳಾದವು. ನಮ್ಮಲ್ಲಿಯ ಮಾರ್ಗಗಳ ಅವ್ಯವಸ್ಥೆಯಿಂದ ನಮ್ಮಲ್ಲಿಯ ಟಪಾಲಿಗೆ ಆತಂಕವಾಗಿದೆ. ಅಂಕೋಲೆಯಿಂದ ಇತ್ತ ಕಡೆಗೆ ಬರಲು ಹೊಂಟ ಮೋಟಾರ ಟಪಾಲು ಹಂದಿಗದ್ದೆಯನ್ನು ದಾಟಲಾರದೆ, ಮರಳಿ ಅಂಕೋಲೆಗೇ ಹೋಯಿತಾಗಿ ತಿಳಿಯುತ್ತದೆ. ಮಳೆಯು ವಿಪರೀತವಾಗಿ ಸುರಿದದ್ದರಿಂದ ಹಂದಿಗದ್ದೆಯ ೩-೪ ಫರ್ಲಾಂಗು ಮಾರ್ಗದ ಮೇಲೆ ೩-೪ ಫೂಟು ನೀರೇರಿ ಮೋಟಾರು ನಡಿಸುವದು ಅಸಾಧ್ಯವಾಗಿರುವದಾಗಿಯೂ ತಿಳಿಯುತ್ತದೆ. ಈ ವಿಷಯ ಇಂಜನಿಯರಿಂಗ ಖಾತೆಯ ಅಧಿಕಾರಿಗಳಿಗೆ ನಾವೊಂದು ಸೂಚನೆ ಮಾಡದಿರಲಾರೆವು. ಇತ್ತ ಮಳೆ ಬೀಳುವದು ಸಹಜವಿದ್ದದರಿಂದ, ಈ ಕುರಿತು ಮಾರ್ಗಗಳನ್ನು ಎತ್ತರ ಪಡಿಸಿದ ಹೊರತು, ವಾಹನಗಳ ಓಡಾಟಕ್ಕೆ ಎಂದೂ ಸಾಧ್ಯವಾಗದು. ೩-೪ ಫರ್ಲಾಂಗು ಉದ್ದ ಮಾರ್ಗವನ್ನು ೩-೪ ಫೂಟು ಏರಿಸಿದರೆ, ಅಂದರೆ, ನೀರು ಮಾರ್ಗದ ಮೇಲೆ ಹತ್ತದಷ್ಟು ಎತ್ತರ ಮಾಡಿದರೆ, ವಾಹನಗಳ ಓಡಾಟಕ್ಕೆ ಎಂದೂ ಅಡ್ಡಿಯಾಗಲಾರದು. ಈ ಕುರಿತು ಟಪಾಲ ಅಧಿಕಾರಿಗಳೂ, ಇಂಜನಿಯರಿಂಗ ಖಾತೆಯ ಅಧಿಕಾರಿಗಳೂ ತಕ್ಕ ಉಪಾಯ ಯೋಜನೆ ಮಾಡಬೇಕಾಗಿ ನಮ್ಮ ಸೂಚನೆ ಇದೆ

೨ ಇದೇ ಸಮಯ ಇನ್ನೊಂದು ಸೂಚನೆಯನ್ನು ಮಾಡಬೇಕಾಗಿದೆ. [illegible] ಕಡೆ ತಾರಿಯಿಂದ ಹೆಗಡೆಯ ಬದಿಗೆ ಸುಮಾರು ೨-೩ ಫರ್ಲಾಂಗು ಮಾರ್ಗವೂ ಹಂದಿಗದ್ದೆ ಸಮೂನೆಯದೇ ಇದೆ. ಇಲ್ಲಿಯೂ ರಾಜರಸ್ತೆಯ ಮೇಲೆ ೩-೪ ಫೂಟು ಜಲಪ್ರವಾಹವು ಹರಿಯುತ್ತದೆ. ವಾಹನಸಂಚಾರ ತೊಂದರೆ; ಟಪಾಲ ಮೋಟಾರು ಓಡಾಡಲಿಕ್ಕೂ ತೊಂದರೆ. ಇನ್ನೊಂದು ವಿಶೇಷ ತೊಂದರೆಯಿದೆ ನೀರಿನ ಪ್ರವಾಹವು ಪೂರ್ವ ಬದಿಯಿಂದ ಸಾಗಿ ಹೋಗುವಾಗ ಮಾರ್ಗದ ಮೇಲಿಂದ ಎಡಬದಿಗೆ ನೀರು ಹರಿಯುವದಕ್ಕೆ ಅಲ್ಲಿಯ ಹೊಲಗದ್ದೆಗಳೊಳಗಿನ ಮಣ್ಣೆಲ್ಲ ತೊಳೆದು ಹೋಗಿ, ಗದ್ದೆಗಳು ಬಂಜರು ಬೀಳುತ್ತವೆ. ಇತ್ತ ೪-೫ ವರ್ಷಗಳಿಂದ ಇದೇ ಪ್ರಕಾರ ಬೇಸಾಯಗಾರರು ನಷ್ಟವನ್ನನುಭವಿಸುತ್ತಿರುವರು. ಮಾರ್ಗವನ್ನು ಎತ್ತರ ಮಾಡಿ, ನೀರು ಮಾರ್ಗದ ಮೇಲೆ ಏರದಂತೆ ವ್ಯವಸ್ಥೆ ಮಾಡಿದರೆ, ವಾಹನಗಳ ಓಡಾಟಕ್ಕೆ ಅನು

ಕೂಲವಾಗುವದಲ್ಲದೆ, ಬೇಸಾಯಗಾರರಿಗೆ ಪ್ರತಿ ವರ್ಷವೂ ಒದಗುತ್ತಿರುವ ನಷ್ಟವು ತಪ್ಪುವದು. ಪ್ರತಿ ವರ್ಷ ತಪ್ಪದೆ ತೀರ್ವೆಯನ್ನೆತ್ತುವ ರೆವ್ಹಿನ್ಯೂ ಖಾತೆಯವರು ಈಬಗ್ಗೆ ಸ್ವತಃ ಆ ಸ್ಥಳದಲ್ಲಿ ಹೋಗಿ ಸಂದರ್ಶಿಸಿ, ತಕ್ಕ ಉಪಾಯಯೋಜನೆ ಮಾಡಬೇಕಾಗಿ ನಮ್ಮ ಇನ್ನೊಂದು ಸೂಚನೆಯಿದೆ.

---

೨. ನಮ್ಮ ತಾಲೂಕಿನಲ್ಲಿ ಪೋಲೀಸರಿಗೂ, ಕಳ್ಳರಿಗೂ ಮೇಲಾಟ ನಡೆದಿರುವಂತೆ ಭಾಸವಾಗುತ್ತದೆ. ಪೋಲೀಸರಿಗೆ ದೊಡ್ಡ ದೊಡ್ಡ ಕಳವುಗಳ ಪತ್ತೆ ಹಚ್ಚುವ ಸಾಮರ್ಥ್ಯವಿಲ್ಲೆಂದು ಕಳ್ಳರಿಗೆ ಮನವರಿಕೆಯಾದಂತೆ ಕಳವುಗಳು ಸಂಭವಿಸಹತ್ತಿವೆ. ಮೂರೂರಲ್ಲಿ ೮-೯ ಸಾವಿರ ರೂಪಾಯಿಗಳ ಕಳವಾಯಿತು ನಮ್ಮ ಫೌಜದಾರರು ಚೌಕಶಿ ನಡಿಸಿದರು. ಕಾರವಾರದಿಂದ ಪೋಲೀಸ ಇನ್ಸಪೆಕ್ಟರರು ಗಾಬರಿಗೊಂಡು ಓಡಿ ಬಂದರು. ಚೌಕಶಿ ನಡಿಸಿದರು ಈ ವರೆಗೆ ಪತ್ತೆಯಾದದ್ದೇನು ತಿಳಿದು ಬರಲಿಲ್ಲ. ಕಳ್ಳರು ಮಾತ್ರ ಎದೆಗಟ್ಟಿ ಮಾಡಿ ಈಗ ಪಟ್ಟಣದಲ್ಲೇ ನುಗ್ಗಿರುವರು. ಕಳೆದ ಸೋಮವಾರ ರಾತ್ರೆ ಇಲ್ಲಿಯ ಜೈನರ ಬಸ್ತಿಯಲ್ಲಿ ಬೆಳ್ಳಿಯ ಶ್ರೀ ದೇವರ ಮೂರ್ತಿಯು ಕಳವಿಗೆ ಹೋಯಿತು. ೮ ದಿನಗಳಾದರೂ ಶಹರಿನಲ್ಲಿ ನಡೆದ ಈ ಕಳವಿನ ಪತ್ತೆಯನ್ನು ಮಾಡುವ ಯೋಗ್ಯತೆಯು ನಮ್ಮ ಪೋಲೀಸ ಅಧಿಕಾರಿಗಳಲ್ಲಿರುವದಿಲ್ಲ. ಇನ್ನು ಮುಂದೆಯಾದರೂ ಆದೀತೋ, ಅಥವಾ ಈ ಮುಂಚೆಯೇ ಪತ್ತೆ ಹತ್ತದ ಕಳವುಗಳಲ್ಲಿ ದಾಖಲಾಗುವದೋ ತಿಳಿಯುವದಿಲ್ಲ ಅಂತು ಪೋಲೀಸರ ಸತ್ವಹೀನತ್ವವು ಆಗಿಂದಾಗ ಬೈಲಿಗೆ ಬರುತ್ತಿದೆ. ಮೇಲಧಿಕಾರಿಗಳು ಈ ವಿಷಯ ಜಾಗ್ರತೆ ಕೊಳ್ಳಬೇಕಾಗಿ ನಮ್ಮ ಬಿನ್ನಹವಿದೆ.

ಸ್ಥಾನಿಕ ವೃತ್ತಾಂತ.

ಕುಮಟಾ— ವಿಪರೀತ ಮಳೆ, ಅಪರಿಮಿತವಾಗಿ ಸುರಿಯಿತು; ಈ ವಾರದಲ್ಲಿ ತೆರಪಿಲ್ಲದೆ ಮಳೆ ಸುರಿಯಿತು. ಈಗ ಪುನಃ ನೆರೆ ಕಟ್ಟಿದೆ. ಅಘನಾಶಿನಿ ಹೊಳೆಯ ನೀರು ಏರೇರುತ್ತ ಹೋಗಿ, ಕಳೆದ ವರ್ಷದಷ್ಟು ನೆರೆಹಾವಳಿಗೆ ಜನರು ತುತ್ತಾಗುತ್ತಾರೇನೋ ಎಂದು ಭೀತಿ ಹುಟ್ಟಿದೆ. ಗದ್ದೆಗಳಲ್ಲೆಲ್ಲ ನೀರೇ ನೀರಾಗಿದೆ. ಸಸಿಗಳು ಕೊಳೆತು ಹೋಗುತ್ತವೇನೆಂದು ಭೀತಿ, ಬಿಸಿಲು ಕಾಯ್ದು ಸುಟ್ಟು ಹೋಗುವ ಭೀತಿಯಿದ್ದಷ್ಟು ಈಗ ಮಳೆ ಸುರಿದು ಕೊಳೆತು ಹೋಗುವ ಭೀತಿಯಾಗಿದೆ. ಮೇಘರಾಜನ ಮಂಗಚೇಷ್ಟೆಗಳಿಂದ ಬೇಸಾಯವು ಕಂಗೆಟ್ಟಿತು, ಈಗ ೮ ದಿನವಾಯಿತು ಹೊಳೆಗೆ ನೀರುಕಟ್ಟಿ. ಆದರೂ, ನೆರೆ ಇಳಿಯುವ ಲಕ್ಷಣವೇನು ತೋರುವದಿಲ್ಲ. ಮಳೆಯಂತು ಕಣ್ಮುಚ್ಚಿ ಸುರಿಯುತ್ತಿದೆ. ಮಣಕಿ, ದೀವಗಿ, ಐಗಳಕುರ್ವೆ, ಚತುರ್ಕುರ್ವೆ, ಹೆಗಡೆ, ಮಿರ್ಜಾನ, ಕೋಡಕಣಿ, ಕಲ್ಲಬ್ಬೆ ಮುಂತಾದ ಗ್ರಾಮಗಳಲ್ಲಿ ಅನೇಕ ಬಡ ಒಕ್ಕಲಿಗರು ಮನೆಮಾರು ಕಳಕೊಂಡು ಅನಾಥರಾಗಿರುವರು ಈ ಮಳೆಗಾಲದಲ್ಲಿ ಹೇಗೆ ಬದುಕಿ ಉಳಿಯುವದು, ಎಂಬುದೊಂದೇ ಚಿಂತೆಯಾಗಿದೆ. ಪ್ರತಿ ವರ್ಷಕ್ಕೂ ಇದೇ ಚಿಂತೆಯಾಯಿತು. ಹವೆಯಲ್ಲಿ ಉಂಟಾದ ವಿಲಕ್ಷಣವಾದ ಬದಲಾವಣೆಯಿಂದ ಊರಲ್ಲಿ ಶೀತ, ಜ್ವರ, ಕೆಮ್ಮು ಮುಂತಾಗ ಬೇನೆಗಳು ತಲೆದೋರಿವೆ. ಗಾಳಿಯಿಂದ ಅನೇಕ ಮರಗಳು ಬುಡಮೇಲಾದವು. ಮೋಟಾರ ಸರ್ವಿಸು ಇತ್ತ ೪-೫ ದಿನಗಳಿಂದ ಕಟ್ಟಾಗಿರುವದೆಂದು ಹೇಳಬಹುದು. ನಮ್ಮ ಮೋಟಾರು ಟಪಾಲು ಹಂದಿಗದ್ದೆಯನ್ನೇ ದಾಟಲಾರದೆ ಅಂಕೋಲೆಯಲ್ಲಿಯೇ ರಾತ್ರಿಯಾಗಿ ಬಿಟ್ಟಿವೆ ಹೊನ್ನಾವರ ರನ್ನರನೊಬ್ಬನು ಓಡಾಡಿ ಹೊನ್ನಾವರ ಕಡೆಯ ಟಪಾಲನ್ನಷ್ಟು ತರುತ್ತಿದ್ದಾನೆ. ಈ ವಾರದಲ್ಲಿಯ ಮಳೆ—ಸೋಮವಾರ ೨-೪೨, ಮಂಗಳವಾರ ೮-೮೫, ಬುಧವಾರ ೧-೯೦, ಗುರುವಾರ ೧-೫೫ ಶುಕ್ರವಾರ ೫ ೭೨, ಶನಿವಾರ ೪-೬೨, ರವಿವಾರ ೩-೭೨ ಅಂತು ಈ ವಾರದಲ್ಲಿ ೨೦-೬೨ ಇಂಚು ಮಳೆ. ಈವರೆಗೆ ಅಂಕು ೮೭-೮೯ ಇಂಚು ಮಳೆಯಾಯಿತು

ಇಲ್ಲಿಯ ಜೈನರ ಬಸ್ತಿಯಲ್ಲಿ ಕಳೆದ ಸೋಮವಾರ ರಾತ್ರೆ ದೇವರ ಬೆಳ್ಳಿಯ ಪ್ರತಿಮೆಯು ಕಳವಾಯಿತು

ಈ ಸಂಚಿಕೆಯ ಮುದ್ರಣಸಮಯದಲ್ಲಿ ಮುಂಬೈ ಕಡೆಯ ಟಪಾಲು ಬಂದ ಸುದ್ದಿಯಿದೆ.

ಹೊನ್ನಾವರ— ಇಲ್ಲಿಯೂ ವಿಪರೀತ ಮಳೆ. ಗಾಳಿ ಬೀಸುತ್ತದೆ ಆದರೆ, ಕಳೆದ ೧೩ನೇ ತಾರೀಖಿನ ಸಾಯಂಕಾಲ ೬ ಘಂಟೆ ಸಮಯ ಬೀಸಿದ ಗಾಳಿಯು ಪ್ರಚಂಡ ಸುಳಿಗಾಳಿಯ ಸಮೂಹವಿದು. ಅನೇಕ ಮರಗಳು ಕಡಕೊಂಡುಬಿದ್ದವು. ಮನೆಗಳ ಮಾಡಿನ ಹಾರಿಹೋದವು, ತಗಡುಗಳ ಮಾಲುಗಳೂ ಈ ಗಾಳಿಯಿಂದ ದಿಕ್ಕಾಪಾಲಾಗಿ ಬಿದ್ದವು ಗಾಳಿಯು ೩ ೪ ಮಿನಿಟು ಬೀಸಿತು ಆದರೂ, ೩-೪ ಮಿನಿಟುಗಳಲ್ಲಿ ಅಪರಿಮಿತವಾದ ಹಾವಳಿಯು ಹೇಳಲಾಸಲ್ಲ ಇದೇ ಸಮಯ ಒಂದು ಅನರ್ಥವು ಸಂಭವಿಸಿತು ಸೇಂಟ ಥೋಮಸ್ ಕನ್ನಡ ಶಾಲೆಯ ಹುಡುಗರು ಎಂದಿನಂತೆ ಅಂದು ಶಾಲೆಯಲ್ಲಿ ಆಟ ಬಂದಿದ್ದರು. ಅಂದು ರಜಾ ದಿನ, ಸೇಂಟ ಥೋಮಸ್‌ರ ಜನ್ಮದಿನ, ಚಿಕ್ಕ ಮಕ್ಕಳು ಆನಂದದಿಂದ ಹಾರಾಡುತ್ತಿದ್ದರು. ಕೆಲವರು ಕನ್ನಡ ಶಾಲೆಯ ಇಮಾರತಿನ ಹ್ಯಾಸ್ಕೂಲಿನಲ್ಲಿ ಆಡುತ್ತಿದ್ದರು ಆಗಲೇ ಈ ಗಾಳಿಯು ಬೀಸಿತು. ಮರದ ಟೊಂಗೆಗಳು ಮುರಿದು, ಶಾಲೆಯ ಇಮಾರತಿನ ಮೇಲೆ ಬಿದ್ದವು. ಅಜ್ಞ ಬಾಲಕರಿಗೇನು ಗೊತ್ತು. ಇವರು ಆಟ ನಡೆದಿತ್ತು ನಸ್ಕನೆ ಶಾಲೆಯಲ್ಲಿ "ಟಟ್ ಟಟ್" ಶಬ್ದವಾಯಿತು. ಒಳಗಿದ್ದ ಹುಡುಗರಲ್ಲಿ [illegible] ಹೊರಬಾರರಾದರು ;ಇನ್ನುಳಿದವರಿದ್ದರು ಹೊರಬೀಳಬೇಕೆನ್ನುವಷ್ಟರಲ್ಲಿ, ಇಡೀ ಶಾಲೆಯ ಇಮಾರತು ಕಡಕೊಂಡು ಬಿತ್ತು ಒಮ್ಮೆಂದೊಮ್ಮೆ ಈ ಘಾತವಾದ್ದರಿಂದ ಒಳಗಿನ ಬಾಲಕರಿಗೆ ಹೊರಬೀಳಲು ಅಶಕ್ಯವಾಯಿತು ನೆರೆಯಲ್ಲಿಯೇ ಶಾಲೆಯ ಡ್ರಿಲ್ ಮಾಸ್ತರರಿದ್ದರು. ಅವರು ಕೆಲ ಹುಡುಗರಿಗೆ ಕರೆದುಕೊಂಡು ಶಾಲೆಯಲ್ಲಿ ಸಿಲುಕಿ ಬಿದ್ದ ಇಬ್ಬರ ಹುಡುಗರನ್ನು ಹೊರಕ್ಕೆಳೆತಂದರು ಇಬ್ಬರಿಗೂ ಚಲೋ ಪೆಟ್ಟು ತಗಲಿತ್ತು. ಇನ್ನೊಬ್ಬ ಬಾಲಕನು ಕಾಣಲಿಲ್ಲ. ಮತ್ತೆ ಶೋಧ ಮಾಡಲು ಕಲ್ಲು ಕಂಬದ ಬುಡದಲ್ಲಿ ಹಿಂದು ತಲೆಯು ಕಾಣಿಸಿತು. ಕಲ್ಲುಗಳನ್ನು ತೆಗೆದು ನೋಡುತ್ತಾರೆ— ಒಂಬತ್ತು ವರುಷದ ಚಿಕ್ಕ ಬಾಲನು ! ಲಗುಬಗೆಯಿಂದ ಅವನನ್ನು ಹ್ಯಾಸ್ಕೂಲಿನ ಬಗಲಿಯ ಮೇಲೆ ಒಯ್ದು ಹಾಕಿ, ಡಾಕ್ಟರರಿಗೆ ಕರತಂದರು. ಆದರೆ, ಏನಿದೆ? ಪರಮಾತ್ಮನು ದೇಹದೊಳಗಿಂದ ಹಾರಿ ಹೋಗಿದ್ದನು. ದೊಡ್ಡ ಅನರ್ಥ! ಶಾಲೆಗೆ ರಜೆಯಿಲ್ಲದಿದ್ದಿದ್ದರೆ, ಮತ್ತೇನೇನು ಸಂಭವಿಸುತ್ತಿತ್ತೋ?

ವೃತ್ತಸಾರ.

— ವಿಜಾಪುರದಲ್ಲಿ ಕನ್ನಡಿಗರ ಸಭೆ ಸೇರಿ ಕರ್ನಾಟಕ ಏಕೀಕರಣ ಸಭೆಯ ಶಾಖೆಯ ಸ್ಥಾಪನೆಯಾಗಿದೆ. ಶ್ರೀ| ಕೆಂಭಾವಿ ರಾಘವೇಂದ್ರರಾಯರು ಶಾಖೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು. ಸೊಲ್ಲಾಪುರ ಜಿಲ್ಹೆಗೆ ಸೇರಿದ ಕನ್ನಡ ನಾಡನ್ನು ವಿಜಾಪುರಕ್ಕೆ ಸೇರಿಸಿಕೊಳ್ಳುವರೆ ಉಪಾಯಯೋಜನೆ ಮಾಡಬೇಕೆಂದು ನಿರ್ಣಯವಾಗಿದೆ.

— ಬೆಂಗಳೂರ ಮುನಿಸಿಪಾಲಿಟಿಯವರು ತಮ್ಮ ಪ್ರಾಥಮಿಕ ಶಾಲೆಗಳಲ್ಲಿ ನೂಲುವ ಶಿಕ್ಷಣ ಕೊಡಬೇಕೆಂದು ನಿರ್ಧರಿಸಿರುವರು. ಇದಕ್ಕೆ ಶಿವಾಜಿ ರೋಡಿನ ಶಾಲೆಯಲ್ಲಿಯೂ, ಚಿಕ್ಕಪೇಟೆಯೊಳಗಿನ ಬಾಲಿಕೆಯರ ಶಾಲೆಯಲ್ಲಿಯೂ ನೂಲುವ ಶಿಕ್ಷಣ ಕೊಡುವದೇ ೩೨೦ ರೂಪಾಯಿಗಳನ್ನು ಮಂಜೂರು ಮಾಡಿಕೊಂಡಿರುವರು.

— ಮಲಯ ಪ್ರಾಂತದಲ್ಲಿದ್ದ ತಮಿಳುನಾಡಿನ ಪಣಿಯೂವರ ಪಟ್ಟಣದ ಶ್ರೀ| ಚಿದಂಬರ ಪಿಳ್ಳೆ ಎಂಬ ಧನಿಕರು ತಮ್ಮ ಆಸ್ತಿಯ ಅರ್ಧಾಂಶವನ್ನು, ಅಂದರೆ, ೧೦ ಲಕ್ಷ ರೂಪಾಯಿಗಳನ್ನು ಮಾಯಾವರದಲ್ಲಿ ! ಉಪಯುಕ್ತ ವಿದ್ಯಾಶಾಲೆಯನ್ನು ಸ್ಥಾಪಿಸಲು ವಿನಿಯೋಗಿಸಬೇಕೆಂದು ಮೃತ್ಯುಪತ್ರ ಮಾಡಿಟ್ಟು, ಕಳೆದ ಮಾರ್ಚ ತಿಂಗಳಲ್ಲಿ ನಿಧನಹೊಂದಿದರು.

—ಶ್ರೀಕ್ಷೇತ್ರ ನಾಸಿಕದಲ್ಲಿ ಪಂಚವಟಿಯೊಳಗೆ ಶ್ರೀ ರಾಮನಾಮಾಧಾರ ಆಶ್ರಮವು ಹೊರಟಿದೆ. ಚಾಲಕರು ಶ್ರೀ ವಿಷ್ಣು ದಿಗಂಬರ ಪಳೂಸ್ಕರರವರು. ಕಳೆದ ೩ ವರುಷಗಳಿಂದ ಈ ಆಶ್ರಮದಲ್ಲಿ ೬೫ ಹುಡುಗರು ಶ್ರೀ ರಾಮನಾಮ ಘೋಷವನ್ನು ನಡಿಸುತ್ತಿದ್ದಾರೆ ಶ್ರೀ ಕಾಶೀಕ್ಷೇತ್ರದ ಸುಶೀಲಾ ದೇವಿಯವರು ಈ ಸಂಸ್ಥೆಗೆ ೧೫೦೦ ರೂಪಾಯಿ ಕೊಟ್ಟಿರುವರು.

— ರಗ್ಗಾದಲ್ಲಿ ಸಾಧು ಹಾಗು ಮಹಂತರು ಸಭೆ ಸೇರಿ ದೇಶಬಂಧುಗಳ ಪುಣ್ಯ ಸ್ಮರಣೆ ಮಾಡಿದರು ಹಾಗು ದೇಶಬಂಧುಗಳದೊಂದು ಬೆಳ್ಳಿಯ ಪ್ರತಿಮೆಯನ್ನು ಸ್ಮಾರಕವಾಗಿಡಬೇಕೆಂದೂ ಗೊತ್ತಾಗಿದೆ. ಸ್ವಾಮಿ ಶಿವಪಾಲದಾಸ ಇವರು ಅಧ್ಯಕ್ಷರಿದ್ದರು.

—ಬಿಹಾರ ಪ್ರಾಂತದೊಳಗಿನ ಸೋನಾಪುರ ಸಂಸ್ಥಾನದ ಮಹಾರಾಜರು ತಮ್ಮ ಸ್ವಂತ ಬೊಕ್ಕಸದೊಳಗಿಂದ ೧೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಒಂದು ಅನಾಥ ಗೃಹ, ಕಾಲುವೆಗಳ ಯೋಜನೆ ಬರಗಾಲ ನಿವಾರಣೆ, ವಿದ್ಯಾದಾನ ಮುಂತಾದ ಲೋಕೋಪಯುಕ್ತ ಕಾರ್ಯಗಳನ್ನು ಮಾಡಬೇಕೆಂದು ವಿಧಿಸಿರುವರು. ಇದಲ್ಲದೆ, ಸಂಸ್ಥಾನದಲ್ಲಿ ಪ್ರಾಥಮಿಕ ಶಿಕ್ಷಣವು ಉಚಿತವಾಯದಿಂದ ಕೊಡಲ್ಪಡುತ್ತದೆ. ಮಹಾರಾಣಿಯವರು ಉಚ್ಚ ಶಿಕ್ಷಣ ಹೊಂದುವವರ ಬಗ್ಗೆ ತಮ್ಮ ೨ ಲಕ್ಷ ರೂಪಾಯಿಗಳನ್ನು ಕೊಟ್ಟಿರುವರು

— ಬಂಗಾಲ ಪ್ರಾಂತದ ಶಾಲೆಗಳಲ್ಲಿ ಒಕ್ಕಲತನ ಶಿಕ್ಷಣದ ಏರ್ಪಾಡಾಗಿದೆ. ಇದಕ್ಕೆ ಇದು ೪ ವರ್ಷದ ಪ್ರಯೋಗ !

— ಕಲಕತ್ತೆಯಲ್ಲಿ ಅಗ್ರವಾಲ ಜಾತಿಯವನೊಬ್ಬನು ತನ್ನ ಮಗಳನ್ನು ಮಾರಿದನು ಮಗಳ ಕ್ರಯ ರೂಪಾಯಿ ೨,೫೦೦. ಮಾರಿದ್ದು ೪೦ ವರ್ಷ ಮುದುಕನಿಗೆ. ಹುಡುಗಿಯ ಪ್ರಾಯವು ಬರೇ ೧೦ ವರುಷ.

— ಮದ್ರಾಸ ಸರಕಾರವು ಸ್ಥಾಪಿಸಿದ ಆಯುರ್ವೇದ ಶಾಲೆಯಲ್ಲಿ ಆಯುರ್ವೇದ, ಯುನಾನಿ, ಸಿದ್ಧ ಈ ಮೂರು ಪದ್ಧತಿಗಳು ಕಲಿಸಲ್ಪಡುತ್ತವೆ. ಅಭ್ಯಾಸ ಕ್ರಮವು ೩ ವರುಷದ ವರ್ಷಕ್ಕೆ ೧೨೦ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡುತ್ತದೆ. ಪ್ರಾಂತದವರಿಗೆ ವರ್ಷಕ್ಕೆ ೬೦ ರೂಪಾಯಿ ; ಬೇರೆ ಪ್ರಾಂತದವರಿಗೆ ೧೦೦ ರೂಪಾಯಿ ಫೀ.

— ಹುಬ್ಬಳಿ ಪಟ್ಟಣದಲ್ಲಿ ಅಖಿಲ ಭಾರತೀಯ ಹಿಂದಿ ಬೋಧಿನೀಸಭೆಯವರು ಅರಬರಿಗೆ ಒಬ್ಬ ಶಾಸಕ ವರ್ಗವನ್ನು ತೆರೆದಿರುವರು.

— [illegible]ನೊಳಗಿನ ಶಾಂತ ಕಾರ್ಯಕರ್ತರು ಹಿರಿಯ ಶ್ರೀ ಗಂಗಾಧರರಾಯರು ದೇಶಪಾಂಡೆಯವರು [illegible] ಕೊಡತಕ್ಕದ್ದಾಗಿ ಸ್ವರಾಜ್, ವೈಷ್ಣವ, [illegible] ಮೊದಲಾದ [illegible] ಕೊಂಡು, ಪಕ್ಷಗಳನ್ನು, ಮಠಾಧಿಪತಿಗಳನ್ನು [illegible] ಧರ್ಮಾಭಿಮಾನಿಗಳು ಧರ್ಮಾರ್ಥವಾಗಿ ಬಹು ಹಣ ಕೊಡಬೇಕು. ಆದರ ಧರ್ಮ ಪೀಠಗಳೂ ಈ ವಿಷಯವನ್ನು ಆಲೋಚಿಸಬೇಕು.

— ಬಾಗಲಕೋಟೆಯಲ್ಲಿ ಆಷಾಢ ಶು|| ೧೧ಗೆ ನಿತ್ಯದಂತೆ ಶ್ರೀ ವಿಠೋಬಾ ದೇವರ ಮೆರವಣಿಗೆಯಾಗಿತ್ತು. ಆಗ ಮುಸಲ್ಮಾನರ ಅಧಮರು ಮಸೀದಿಗೆಯ ಮೇಲೆ ಸಾಗಿಹೋಗಿ ನಾಲ್ಕು ಮಂದಿ ಹಿಂದೂಗಳನ್ನು ಕೊಂದು ಅನೇಕರನ್ನು ಘಾಯಪಡಿಸಿರುವರು. ಏನಿದು?

— ಶ್ರೀ ಸಂತೋಷ ಶ್ಯಾಮರಾವ ಮಿತ್ರ ಎಂಬ ಬಂಗಾಲದ ದೇಶಸೇವಕರಿಗೆ ಬಂಗಾಲ ಸರಕಾರದ [illegible] ಕಾನೂನಿನನ್ವಯ ತನಿಖೆ ನಡಿಸದೆ ಸೆರೆಯಲ್ಲಿಟ್ಟಿರುವರು. ಅವರಿಗೆ ಎಮ್. ಎ. ಪರೀಕ್ಷೆಗೆ ಕೂಡಿಕೊಳ್ಳುವರೆ ಕಲಕತ್ತೆಯ ವಿಶ್ವವಿದ್ಯಾಲಯದವರು ಅಪ್ಪಣೆಯನ್ನಿತ್ತಿರುವರು.

— ಝಾಂಸಿ ಮ್ಯುನಿಸಿಪಾಲಿಟಿಯವರು ಇತಿಹಾಸ ಪ್ರಸಿದ್ಧ ವೀರ ಸ್ತ್ರೀ ಮಹಾರಾಣಿ ಲಕ್ಷ್ಮೀಬಾಯಿ ಇವರ ಸ್ಮಾರಕಕ್ಕಾಗಿ ೧೦ ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿರುವರು.

— ರಶಿಯದ ಸರಕಾರದವರು, ವಿದ್ಯಾರ್ಥಿಗಳು ಲಷ್ಕರಿ ಶಿಕ್ಷಣವನ್ನು ಪಡೆಯಲೇ ಬೇಕೆಂದು ವಿಧಿಸಿರುವರು. ಪ್ರತಿ ವರ್ಷಕ್ಕೆ ೩ ತಿಂಗಳು ಸೈನ್ಯದ ಸಂಗಡ ವಾಸ ಮಾಡಬೇಕು.

— ಭಾರತ ಮಂತ್ರಿಗಳ ಭಾಷಣದ ಚರ್ಚೆಯು ವಿಲಾಯತಿಯೊಳಗಿನ ಹೌಸ ಆಫ್ ಕಾಮನ್ಸ ಸಭೆಯಲ್ಲಿ ಕಳೆದ ಜುಲೈ ೯ ನೇ ತಾರೀಖಿಗೆ ನಡೆಯಿತು. ಕರ್ನಲ್ ವೆಜ್‌ವುಡ್ ಮುಂತಾದ ಕಾರ್ಮಿಕ ಪಕ್ಷದ ಮುಂದಾಳುಗಳು ಹಿಂದುಸ್ಥಾನಕ್ಕೆ ಸ್ವರಾಜ್ಯದಾನ ಮಾಡಬೇಕೆಂದರು. ಅಸಿಸ್ಟಂಟ ಭಾರತ ಮಂತ್ರಿಗಳಾದ ವಿಂಟರಟನ್ ದೊರೆಗಳು ಹಿಂದೀ ಮುಂದಾಳುಗಳ ಸ್ವತಂತ್ರ ಯೋಜನೆಯನ್ನು ವಿಚಾರಿಸುವ ಮನಸ್ಸಿಲ್ಲೆಂದು ಹೇಳಿ, ಬರ್ಕನಹೆಡ್ ದೊರೆಗಳು ಹಾಕಿಕೊಟ್ಟ ಶರ್ತುಗಳಂತೆ ಹಿಂದೀ ಮುಂದಾಳುಗಳು ನಡೆದಲ್ಲಿ, 'ಯೋಗ್ಯ' ಕಾಲಕ್ಕೆ 'ಯೋಗ್ಯ' ಅಧಿಕಾರಿಗಳು ಅದರ ವಿಷಯ 'ಯೋಗ್ಯ' ವಿಚಾರ ಮಾಡುವರೆಂದು ಜಾಹೀರು ಮಾಡಿದರು. ಈ 'ಯೋಗ್ಯ' ಮುಹೂರ್ತಗಳು, ಕಾಲವು ಯಾವಾಗ ಕೂಡಿಬರುವವೋ ಶಿವನೇ!

— ಮದ್ರಾಸ ಪ್ರಾಂತದ ಎಲ್ಲೂರು ಗ್ರಾಮದಲ್ಲಿ ಹೆಸರಾದ ಖಾದಿ ತಯಾರಾಗುತ್ತಿದೆ. ಅಲ್ಲಿಯ ಖಾದಿ [illegible] ಸ್ತ್ರೀಗೆ ಕಳಿಸಲ್ಪಟ್ಟಿತ್ತು. ಅವರು ಅದರ ನೂಲಿನ ಸುಂದರತ್ವ, ನಯ, ನೆಗೆಸು ನೋಡಿ ಬಹು ಸಂತೋಷಪಟ್ಟರಂತೆ.

— ಕುಮಟೆಯ ರಾಷ್ಟ್ರೀಯ ಶಾಲೆಯ ಅಧ್ಯಾಪಕರಾದ ಶ್ರೀ ಶ್ರೀನಿವಾಸ ಪೈಯವರು ನಿತ್ಯವೂ ೩ ತಾಸು ನೂಲುವರು. ಪ್ರತಿ ವರ್ಷಕ್ಕೆ ೧ ಮಣ ನೂಲುತ್ತಾರೆ. ಅವರು ತಯಾರಿಸಿದ ನೂಲಿನಿಂದ ೧೨೦ ಗಜ ಬಟ್ಟೆ ತಯಾರಾಗಿದೆ. ಅವರು ತಾಸಿಗೆ ೩೦೦ ಗಜ ನೂಲು ನೂಲುತ್ತಾರೆ. ಹತ್ತಿಯನ್ನು ಸ್ವತಃ ಹಿಂಜುತ್ತಾರೆ.

— ಬೆಳಗಾವಿಯ ಸರಕಾರಿ ತ್ರಿಜೋರಿಯೊಳಗಿಂದ ೫೫ ಸಾವಿರ ರೂಪಾಯಿಗಳ ವಂಚನೆಯಾಗಿದೆ. ಮುಖ್ಯವಾಗಿ ಟಪಾಲು ಟಿಕೀಟುಗಳೇ ಅದೃಶ್ಯವಾಗಿವೆ. [illegible]

— ಧಾರವಾಡ ಮ್ಯುನಿಸಿಪಾಲಿಟಿಯು ಊರಲ್ಲಿ ವಿದ್ಯುದ್ದೀಪಗಳ ವ್ಯವಸ್ಥೆ ಮಾಡಿದೆ. ಈಗ ಅಲ್ಲಿ ಕಗ್ಗತ್ತಲೆ [illegible] ಪ್ರಸಂಗ ದೀಪದ ಕಂಬಕ್ಕೆ ೬೨ ಸಾವಿರ ರೂಪಾಯಿ ಕೊಡಬೇಕು. ಈ ರಕಮನ್ನು ಕೊಡದೆ ಇದ್ದರೆ, ದೀಪಗಳನ್ನು ಹಚ್ಚಲಾರೆವೆಂದು ಕಂಪನಿಯವರು ತಿಳಿಸಿರುವರು.

— ಕಳೆದ ಆಷಾಢ ಮಾಸದಲ್ಲಿ ಲೋಕಮಾನ್ಯರ ಪುಣ್ಯತಿಥಿಯ ಪ್ರೀತ್ಯರ್ಥ ಪುಣೆಯೊಳಗಿನ ೩ ಸಾವಿರ ಬಡ ಬಗ್ಗರಿಗೆ ಅನ್ನದಾನವಾಯಿತು.

— ಕೃಷ್ಣಾ ಜಿಲ್ಹೆಯ ದಿವಿ ತಾಲೂಕಿನ ಚಿರಸಾಲ ಎಂಬ ಗ್ರಾಮದಲ್ಲಿ ಒಬ್ಬಳು ನಾಲ್ಕು ಕೂಸುಗಳನ್ನು ಹೆತ್ತಿರುವಳು! ಒಂದು ಗಂಡು; ಮೂರು ಹೆಣ್ಣು. ಕೂಸುಗಳು ಕ್ಷೇಮದಿಂದಿವೆ.

— ಮೈಸೂರು ದರಬಾರವು ದೇವಸ್ಥಾನ, ಛತ್ರ, ರುದ್ರಭೂಮಿ, ಧರ್ಮಶಾಲೆ, ಮಸೀದಿ, ಕ್ರೈಸ್ತರ ಪ್ರಾರ್ಥನಾಲಯ ಮುಂತಾದ ಲೋಕೋಪಕಾರದ ಸಂಸ್ಥೆಗಳಿಗೆ ಪುಕ್ಕಟೆಯಾಗಿ ನೀರು ಪೂರೈಸಬೇಕೆಂದು ಹುಕುಮು ಮಾಡಿದೆ.

— ಕೆಲ ಜನರು ಪುಣೆಯಿಂದ ಮೋಟಾರ ಮೂಲಕ ಪಂಢರಪುರ ಯಾತ್ರೆಗೆ ಹೋಗಿದ್ದರು. ದೇವದರ್ಶನ ಮುಂತಾದ ವಿಧಿಗಳನ್ನಾಚರಿಸಿ, [illegible] ಮರಳಿ ಪುಣೆಗೆ ಬರುತ್ತಿರುವಾಗ, ಒಂದಕ್ಕೊಂದು ಮೋಟಾರು ಅಪ್ಪಳಿಸಿ, ನಾಲ್ವರು ಸತ್ತರು. ಅನೇಕರಿಗೆ ಘಾಯಗಳಾದವು.

— ಹಾವೇರಿಯ ಶ್ರೀ ದೇವಧರರವರು ವಿಶೇಷ ವ್ಯವಸಾಯದ ಜ್ಞಾನ ಸಂಪಾದಿಸಲು ವಿಲಾಯತಿಗೆ ಹೋಗುವವರಿದ್ದಾರೆ. ಅವರಿಗೆ ಹಾವೇರಿ, ರಾಣೆಬೆನ್ನೂರ, ದಾವಣಗೇರಿ, ಹಾನಗಲ್, ಹಿರೇಕೆರೂರ, ಶಿಗ್ಗಾಂವಿ ತಾಲೂಕು ಹಾಗು ಗುಡಗೇರಿ, ಸವಣೂರ ಸಂಸ್ಥಾನಗಳೊಳಗಿನ ಉದಾರ ಧನಿಕರು ೮-೯ ಸಾವಿರ ರೂಪಾಯಿಗಳನ್ನು ಅರ್ಪಿಸಿದರು. ಹೀಗೆ ಸಹಾಯ ಮಾಡಿದ ಧನಿಕರಲ್ಲಿ ನಮ್ಮ ವೀರಶೈವ ಬಾಂಧವರೇ ಹೆಚ್ಚು.

— ಗ್ವಾಲೇರದ ಅಲಿಜಾಬಹದ್ದೂರ ಶಿಂದೇ ಮಹಾರಾಜರವರು ಪಾರೀಸದಲ್ಲಿ ಕಾಲಾಧೀನರಾಗಿದ್ದರಷ್ಟೇ. ಅವರ ಅಸ್ಥಿಗಳನ್ನು ಭರತ ಭೂಮಿಗೆ ತಂದು ಈಗ ಗ್ವಾಲೇರದಲ್ಲಿ ಇಟ್ಟಿರುವರು. ಸದ್ಯಕ್ಕೆ ತ್ರಿವೇಣಿ ಸಂಗಮದಲ್ಲಿ ಅವನ್ನು ಧರ್ಮವಿಧಿಯಿಂದ ಜಲಸಮಾಧಿಗೆಯ್ಯುವರು.

— ಅಪ್ಪ ಶ್ರೀ ಬಸವರಾಜದೇವರ ಚರಿತ್ರೆಯನ್ನು ಬರೆಯುವದಕ್ಕಾಗಿ ಹಾವೇರಿಯ [illegible] ಶ್ರೀ ಬಸವರಾಜಾರ್ಯರು ಮೂರು ಬಹುಮಾನಗಳನ್ನಿಟ್ಟಿರುವರು. ಮೊದಲನೇದು ೨॥ ಸಾವಿರ ರೂಪಾಯಿಗಳದು; ೨ ನೇದು ೧॥ ಸಾವಿರದ್ದು; ೩ ನೇದು ೧ ಸಾವಿರ ರೂಪಾಯಿಗಳದು.

— [illegible] ಕೌನ್ಸಿಲಿನ ಸಭಾಸದರಾದ ಶ್ರೀ ದೊರೆಸ್ವಾಮಿ ಅಯ್ಯಂಗಾರರವರು ಚೆನ್ನಪಟ್ಟಣದಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಗಾಂಧಿ ಮಂದಿರವನ್ನೊಂದು ಕಟ್ಟಿಸಿರುವರು. ಈ ಕಟ್ಟಡದ ಪೂರ್ಣ ಖರ್ಚು ಅವರದೇ. ಅಲ್ಲಿ ನೂಲುವ ಸಂಘವನ್ನು ಸ್ಥಾಪಿಸಿರುವರು. ಮತ್ತು ಆ ಸಂಘಕ್ಕೆ ೬ ಕೈರಾಟಗಳನ್ನು ಪೂರೈಸಿರುವರು.

— ಧಾರವಾಡದ ಶುಕ್ರವಾರ ಪೇಟೆ [illegible] ಓಣಿಯಲ್ಲಿರುವ ಒಂದು ಮನೆಯಲ್ಲಿ ಕುಂಬಳ ಬಳ್ಳಿಯನ್ನು ನೋಡಲು ಸಾವಿರಾರು ಮಂದಿಗಳು ಹೋಗುತ್ತಿರುವರು. ಈ ಕುಂಬಳ ಬಳ್ಳಿಗೆ ನಾಗರಹಾವಿನ ಹೆಡೆಯಂಥ ಒಂದು ಎಲೆ ಹುಟ್ಟಿದೆ. ಎಲೆಯ [illegible] ಗಳು [illegible] ಕಾಣುತ್ತವೆ, [illegible]

— ಮೈಸೂರಿನ [illegible] ಶ್ರೀ [illegible] ವಯಸ್ಸು ೮೦ ವರ್ಷದ ಮುದುಕರು. ನಿತ್ಯವೂ ನಿಯಮಿತವಾಗಿ [illegible]. ಶ್ರೀ [illegible] 'ಪ್ರೊಫೆಸರ್ ಸ್ಮಿತ್' [illegible] ಒಂದು [illegible] ಅರ್ಪಿಸಿರುವರು.

— ಲಂಡನಿನಲ್ಲಿ [illegible] ನಡೆದಿದೆ. [illegible] ಕಚೇರಿಗಳನ್ನು [illegible], ಅಲ್ಲಿಯ [illegible] ಕಾರ್ಮಿಕರನ್ನು [illegible].

— ಗದಗಿನ ಶ್ರೀ [illegible] ನಾಟಕ ಕಂಪನಿಯವರು ಧಾರವಾಡದಲ್ಲಿ '[illegible]' ಪ್ರಯೋಗ ಮಾಡಿದರು. ಒಂದು [illegible] ಅಲ್ಲಿಯ ರಾಷ್ಟ್ರೀಯ ಶಾಲೆಗೆ ಅರ್ಪಿಸಿದರು.

— [illegible] ಕಲಕತ್ತೆಯಲ್ಲಿ [illegible] ಬೇಸರಿಯಿಂದ ಅವರು ವಿಶೇಷ [illegible]. ೧೦ ತಾಸು ಒಬ್ಬರು [illegible], [illegible] ಇಂತೆ.

— [illegible] ಪೋಲೀಸ ಅಧಿಕಾರಿಯು ಮುಸಲ್ಮಾನನಿದ್ದರೂ ಅವನಿಗೆ ಜಾತಿಯ ಪಕ್ಷಪಾತಬುದ್ಧಿಯಿರುವದಿಲ್ಲ. ಹಿಂದೂ-ಮುಸಲ್ಮಾನರನ್ನು ಅವನು ಸಮದೃಷ್ಟಿಯಿಂದ ನಡಿಸಿಕೊಳ್ಳುತ್ತಾನೆ. ಆದರಿಂದ ಮುಸಲ್ಮಾನರು ಅವನಿಗೆ ಬಹಳವಾಗಿ ಬೈದು ಹೊಡೆದಿರುವರಂತೆ!

— [illegible] ವ್ಯಾಪಾರದಲ್ಲಿ ಗುಜರಾಥ ಪ್ರಾಂತಿಕ ಸಮಿತಿಯವರು ೯೦೦೦ ರೂಪಾಯಿಗಳ ಸಹಾಯವನ್ನು ಮಂಜೂರು ಮಾಡಿರುವದಾಗಿ ತಿಳಿಯುತ್ತದೆ.

— ಕಲಕತ್ತೆಯಲ್ಲಿ ಅಖಿಲ ಭಾರತೀಯ ಕಾಂಗ್ರೆಸ ಕಮೀಟಿಯ ಕಾರ್ಯಕಾರಿ ಕಮೀಟಿಯ ಸಭೆಯು ಕಳೆದ ಗುರುವಾರ-ಶುಕ್ರವಾರ ಸೇರಿ [illegible] ಅಖಿಲ ಭಾರತೀಯ ಕಾಂಗ್ರೆಸ ಕಮೀಟಿಯ ಸಭೆಯನ್ನು ಸೇರಿಸಿ [illegible] ವಿಷಯ ಆಲೋಚಿಸಬೇಕೆಂದು ಗೊತ್ತಾಗಿದೆ.

— ಮುಂಬಯಿ [illegible] ಕೌನ್ಸಿಲಿನ ಅಧಿವೇಶನವು ಪುಣೆಯ ಕೌನ್ಸಿಲು ಸಭಾಮಂದಿರದಲ್ಲಿ ಈ ಹೊತ್ತಿನಿಂದ ಪ್ರಾರಂಭವಾಗಿದೆ.

ವ್ಯಾಪಾರಸ್ಥರಿಗಾಗಿ.

'ಶ್ರೀನಿವಾಸ' ಎಂಬುವರು ತಾ. ೨೬-೬-೧೯೨೫ ನೇ [illegible] ವ್ಯಾಪಾರಸ್ಥರ ವಿಷಯ ಒಂದು ಪತ್ರ ಬರೆದಿರುವರು. ಅದರ ಸಾರಾಂಶವೇನೆಂದರೆ:— ವ್ಯಾಪಾರಸ್ಥರು ಬಂಡವಲಿಲ್ಲದೆ, ಬಹು ಬಡ್ಡಿಯಿಂದ ತೊಂದರೆಗೀಡಾಗುತ್ತಾರೆ. ಅದರಿಂದ ಪರಸ್ಪರ ಅನುಕೂಲಕ್ಕಾಗಿ ದ್ರವ್ಯನಿಧಿಯನ್ನೇರ್ಪಡಿಸುವದು ಅವಶ್ಯವು. ವರ್ತಕರು ತಮ್ಮ ಸಹಾಯಕ್ಕಾಗಿ ಒಂದು ಸಂಸ್ಥೆಯನ್ನೇರ್ಪಡಿಸಿ, ಆ ಸಂಸ್ಥೆಗೆ ದ್ರವ್ಯನಿಧಿ ಕೂಡಿಸಬೇಕು. ಹಾಗು ಆ ದ್ರವ್ಯವನ್ನು ವ್ಯಾಪಾರದಲ್ಲಿ [illegible] ಹೊಂದಿದ ವ್ಯಾಪಾರಸ್ಥರಿಗೆ ಕೊಟ್ಟು ಸಹಾಯ ಮಾಡಬೇಕು. ಶ್ರೀಮಂತರು ತಮಗೆ [illegible] ಧರ್ಮಾರ್ಥವಾಗಿ ಆ ಸಂಸ್ಥೆಗೆ ಅರ್ಪಿಸಬೇಕು. ಧರ್ಮದಾಯ ಪದ್ಧತಿಯಿಂದ ಶ್ರೀ ದೇವಸ್ಥಾನಗಳಿಗೆ ದಾನಮಾಡುವಂತೆ, ಈ ಸಂಸ್ಥೆಗೂ ನಿಧಿಗೊಡಿಸಬೇಕು. ಶ್ರೀ ದೇವರ ಭಂಡಾರದೊಳಗಿಂದ ಸಾಲ [illegible] ಕೊಡಿಸಬೇಕು. ಮುಂಬಯಿಯೊಳಗಿನ [illegible] ಮಾಡಿದಂತೆ, ಇಂಥ ಒಂದು ಸಂಸ್ಥೆಯನ್ನು [illegible] ಸ್ಥಳದಲ್ಲಿ ಏರ್ಪಡಿಸಿ ವ್ಯವಸ್ಥೆ ಮಾಡಬೇಕು.

ಶ್ರೀ ವಿದ್ಯಾರಣ್ಯ ಸ್ವಾಮಿಗಳು!

ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯರು

ಕಳೆದ ತಿಂಗಳಿನಲ್ಲಿ ಧಾರವಾಡ, ವಿಜಾಪುರ ಬೆಳಗಾವಿ ಮುಂತಾದ ಕಡೆಗಳೊಳಗಿನ ಕರ್ನಾಟಕಸ್ಥರು ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯರಾದ ಶ್ರೀ ವಿದ್ಯಾರಣ್ಯ ಸ್ವಾಮಿಗಳ ಪುಣ್ಯ ತಿಥಿಯನ್ನು ಭಕ್ತಿಭಾವದಿಂದ ಸಮಾಚರಿಸಿದರು. ಶ್ರೀ ವಿದ್ಯಾರಣ್ಯ ಸ್ವಾಮಿಗಳು ನಮ್ಮ ಕರ್ನಾಟಕಕ್ಕೂ, ಅಖಿಲ ಸನಾತನ ಸಮಾಜಕ್ಕೂ ಮಾಡಿದ ಉಪಕಾರಗಳು ಅನಂತವಿವೆ. ಶ್ರೀ ಗಳ ಚರಿತ್ರವನ್ನು ನಮ್ಮ ಕಾನಡಿಗ ವಾಚಕರು ತಿಳಕೊಳ್ಳುವದು ಅವಶ್ಯವು. ಶ್ರೀ ವಿದ್ಯಾರಣ್ಯ ಸ್ವಾಮಿಗಳು ಪಂಪಾ ಕ್ಷೇತ್ರದಲ್ಲಿ ೧೨೬೮ ನೇ ಇಸ್ವಿಯಲ್ಲಿ ಜನಿಸಿದರು. ಶ್ರೀಗಳ ತಿರ್ಥರೂಪರ ಹೆಸರು ಮಾಯಣಾಚಾರ್ಯರೆಂಬುದು. ತಾಯಿಯವರ ಹೆಸರು ಶ್ರೀಮತಿ. ಮಾಯಣಾಚಾರ್ಯರು ವಿದ್ವಾಂಸರು [illegible] ಬ್ರಾಹ್ಮಣರು. ಶ್ರೀ ಮಾತೆಯರು ಸುಶೀಲೆ ಗೃಹಿಣಿಯರು. ಶ್ರೀ ಗಳ ಮುಂಚಿನ ಹೆಸರು, ಅಂದರೆ ತಾಯಿ ತಂದೆಗಳು ಇಟ್ಟ ಹೆಸರು ಮಾಧವ. ಮಾಧವನಿಗೆ ಸಾಯಣ ಹಾಗು ಯೋಗನಾಥ ಎಂಬ ಹೆಸರಿನ ಇಬ್ಬರು ಸಹೋದರರಿದ್ದರು. ಮಾಯಣಾಚಾರ್ಯರು ವಿದ್ವಾಂಸರಿದ್ದರೂ, ಸಿಷ್ಟವಂತ ಬ್ರಾಹ್ಮಣರಿದ್ದರೂ ಕೇವಲ ಬಡವರು. ಚಿಕ್ಕ ಮಕ್ಕಳಿಗೆ ಬೇಕಾಗುವಷ್ಟು ಸಾಮಾನ ಸಾಮಗ್ರಿಗಳನ್ನು ಪೂರೈಸಲಿಕ್ಕೂ ಅವರಿಗೆ ಆಗಲಿಲ್ಲ. ಮಾಯಣಾಚಾರ್ಯರು ತಮ್ಮ ಪುತ್ರರಿಗೆ ವಿದ್ಯಾದಾನವನ್ನು ಮಾತ್ರ ಪ್ರೇಮದಿಂದ ಮಾಡಿದರು. ಅವರ ಪ್ರಾಥಮಿಕ ಶಿಕ್ಷಣ ಅಭ್ಯಾಸವು ಹೀಗೆ ಮನೆಯಲ್ಲಿಯೇ ಮುಗಿಯಿತು. ಬಳಿಕ, ಮಾಧವನೂ, ಸಾಯಣನೂ ಮುಂದಿನ ಅಧ್ಯಯನಕ್ಕಾಗಿ ಕಾಮಕೋಟಿ ಪೀಠಸ್ಥ ವಿದ್ಯಾತೀರ್ಥರ ಆಶ್ರಮಕ್ಕೆ ಹೋಗಿ ಓದಿಕೊಂಡರು. ಅಧ್ಯಯನವು ಮುಗಿಯಿತು. ಇಬ್ಬರು ಗುರುಗಳಿಗೆ ವಂದನೆಗಳನ್ನರ್ಪಿಸಿ ಗುರುದಕ್ಷಿಣೆಯನ್ನು ಕೇಳಿದರು. ಈಗಿನ ಗುರುಗಳಂತೆ, ದೊಡ್ಡ ದೊಡ್ಡ ಸಂಬಳಗಳನ್ನೂ, ದ್ರವ್ಯವನ್ನೂ ವಿದ್ಯಾತೀರ್ಥರು ಬೇಡಲಿಲ್ಲ. "ರಾಜ್ಯದ ವ್ಯವಸ್ಥೆಯು ಕೆಂಗೆಟ್ಟಿದೆ. ಅದನ್ನು ಸುಧರಿಸಿ ಉದ್ಧರಿಸುವದೇ ನನ್ನ ಗುರುದಕ್ಷಿಣೆಯು" ವಿದ್ಯಾರಣ್ಯರು ಪ್ರಸನ್ನ ಗುರುಚರಣಗಳಿಗೆರಗಿ ಮನೆಗೆ ಮರಳಿದರು.

ಶ್ರೀ ವಿದ್ಯಾರಣ್ಯರು ಮನೆಗೆ ಬಂದ ತರುವಾಯ ಅವರ ಮನೆಯು ಒಂದು ಅಧ್ಯಾಪನದ ಆಶ್ರಮವಾಯಿತು. ನೂರಾರು ವಿದ್ಯಾರ್ಥಿಗಳು ಅವರಲ್ಲಿ ಬಂದು ಉಳಿದು ವಿದ್ಯಾರ್ಜನ ಮಾಡಿ ಮರಳಿದರು. ೩೦-೩೫ ವರ್ಷಗಳಾಗುವರೆಗೆ ವಿದ್ಯಾರಣ್ಯರು ವಿದ್ಯಾದಾನದ ಕಾರ್ಯ ನಡಿಸಿ, ಮುಂದೆ ತಮ್ಮ ಕಾರ್ಯವನ್ನು ಸಾಯಣಾಚಾರ್ಯರಿಗೆ ವಹಿಸಿ, ವಾನಪ್ರಸ್ಥಾಶ್ರಮವನ್ನು ಕೈಕೊಂಡರು. ಇಷ್ಟಾದರೂ, ವಿದ್ಯಾರಣ್ಯರು ಕೊಡತಕ್ಕ ಗುರುದಕ್ಷಿಣೆಯು ಬಾಕಿಯುಳಿದಿತ್ತು. ರಾಜ್ಯವ್ಯವಸ್ಥೆಯ ಕಾರ್ಯಕ್ಕೆ ಇನ್ನೂ ಶ್ರೀ ಗಳು ಕೈಹಾಕಿರಲಿಲ್ಲ. ಅದನ್ನು ತೀರಿಸುವದಕ್ಕಾಗಿ ಶ್ರೀ ಗಳು ಕಠಿಣ ತಪಶ್ಚರಣ ಮಾಡಹತ್ತಿದರು. ಹಾಲು ಸೇವನದಿಂದ ಕೆಲವು ದಿನಹರಣವಾಯಿತು, ಹಣ್ಣು ಹಂಪಲಗಳಿಂದ ಇನ್ನು ಕೆಲವು ದಿನಗಳಾದವು, ಜಲಪಾನದಿಂದಲೇ ಇನ್ನು ಕೆಲವು ದಿನಗಳಾದವು, ಆತ್ಮಸಾಮರ್ಥ್ಯ ಸಂವರ್ಧನಕ್ಕಾಗಿ, ಗುರುದಕ್ಷಿಣೆಯನ್ನು ತೀರಿಸುವ ಸಾಮರ್ಥ್ಯಸಂಪಾದನಕ್ಕಾಗಿ ಮತ್ತು ಘೋರ ತಪಸ್ಸು ಆಚರಿಸುವ ವ್ರತವನ್ನು ಶ್ರೀ ಗಳು ಕೈಕೊಂಡರು. ಗುರಿಯ ಮೇಲೆಯೇ ಕೆಲವು ಕಾಲ ಕಳೆದರು. ನಂತರ ಅವರಿಗೊಂದು ದೃಷ್ಟಾಂತವಾಯಿತು. "ಅದೇನು? ಈ ಜನ್ಮದಲ್ಲಿ ಗುರುದಕ್ಷಿಣೆಯನ್ನು ನಿನ್ನಿಂದ ತೀರಿಸಲಿಕ್ಕಾಗದು."

ಈಗ ಮಾಡುವದೇನು? ಗುರುದಕ್ಷಿಣೆಯನ್ನು ತೀರಿಸದೆ ದೇಹಾವಸಾನ ಹೊಂದುವ ವಿಚಾರವು ಶ್ರೀಗಳಿಗೆ ಅಸಹ್ಯವಾಯಿತು. ಸನ್ಯಾಸವು ಜನ್ಮಾಂತರವು. ಸನ್ಯಾಸಾಶ್ರಮವನ್ನು ಅಂಗೀಕರಿಸಿ ಗುರುದಕ್ಷಿಣೆಯನ್ನು ತೀರಿಸುವ ಸಂಕಲ್ಪವಾಯಿತು. ಸ್ವಾಮಿಗಳು ಶೃಂಗೇರಿಗೆ ಹೋದರು. ಅಲ್ಲಿ ಶ್ರೀ ಭಾರತೀ ಕೃಷ್ಣತೀರ್ಥ ಸ್ವಾಮಿಗಳಿದ್ದರು. ಅವರ ಕಡೆಯಿಂದ ಮಾಧವನು ಸನ್ಯಾಸ ದೀಕ್ಷೆಯನ್ನು ಪಡೆದು ವಿದ್ಯಾರಣ್ಯ ಸ್ವಾಮಿಗಳಾದರು. ಆದರೆ, ಕರ್ನಾಟಕದೊಳಗೆ ವರ್ಣನೀಯ ಅವ್ಯವಸ್ಥೆಯೊದಗಿತ್ತು. ಮಹಮ್ಮದ ತಘಲಖ, ಅಲ್ಲಾಉದ್ದೀನ, ಮಲೀಕ ಕಾಫರ ಮುಂತಾದ ಯವನ ರಾಜರು ದಾಳಿಯ ಮೇಲೆ ದಾಳಿ ಮಾಡಿ ಪ್ರಜೆಗಳಿಗೆಲ್ಲ ಸಾಕುಬೇಕು ಮಾಡಿದರು. ಅನಾಚಾರವು ವಿಪರೀತವಾಯಿತು. ಪ್ರತೀಕಾರ ಮಾಡಲು ಆನೆಗೊಂದಿಯ ಅರಸರು ಆಲೋಚಿಸಿದರು. ತಮ್ಮಿಂದಾಗದೆಂದು ಮನಸ್ಸಿನ ಖಾತ್ರಿಯಾದ ಬಳಿಕ ಸಕುಟುಂಬ ಅಗ್ನಿನಾರಾಯಣನ ವಶರಾಗಿ ಅಂತರ್ಧಾನ ಹೊಂದಿದರು. ಸನಾತನ ರಾಜ್ಯಸ್ಥಾಪನೆಗಾಗಿ ಪ್ರಜೆಗಳು ಆಗ ಕಳವಳಗೊಂಡಿದ್ದರು. ಸ್ತ್ರೀಯರ ಪಾತಿವ್ರತ್ಯರಕ್ಷಣ ಮಾಡುವದು ಅತ್ಯಂತ ಕಠಿಣ ಕೆಲಸವಾಗಿತ್ತು. ಈ ವಿಪತ್ತಿನ ಕಥೆ [illegible] ಹೃದಯ[illegible] ಗಳಿಗೆ ಎದುರಾಗಲು ಯಾರೂ ಮುಂದೆ ಬರಲಿಲ್ಲ.

ಈ ಸಮಯದಲ್ಲಿ ವಿದ್ಯಾರಣ್ಯರು ತಪೋನಿಧಿಗಳಾಗಿ ಸಂಚರಿಸಹತ್ತಿದ್ದರು. ಹುಕ್ಕ ಬುಕ್ಕ ಎಂಬುವರು ತಪೋನಿಧಿ [illegible] ಸೇವೆಯನ್ನು ಮಾಡುತ್ತಿದ್ದರು. ಅವರಿಗೂ ಉಪದೇಶಮಾಡಿ ರಾಜ್ಯಸ್ಥಾಪನೆಯ ಕಾರ್ಯದ ಕೆಲಸಗಳಲ್ಲಿ ಹೂಡಿದರು. ಧರ್ಮಶಾಸ್ತ್ರದಂತೆ ಹುಕ್ಕನಿಗೆ ರಾಜ್ಯಾಭಿಷೇಕವಾಯಿತು. ಕೂಡಲೆ ಸ್ವಾಮಿಗಳ ಶಿಷ್ಯರೂ, ದೂತರೂ [illegible] ಹೋಗಿ ಕರ್ನಾಟಕದಲ್ಲಿ ಹಿಂದೂ ರಾಜ್ಯ ಸ್ಥಾಪನೆಯಾದ ಸುದ್ದಿಯನ್ನು ಹರಡಿದರು. ರಾಜಧಾನಿಯು ವಿದ್ಯಾರಣ್ಯರ ಜನ್ಮಭೂಮಿಯಾದ ಪಂಪಾ ಕ್ಷೇತ್ರವೇ. ಪ್ರಜೆಗಳೆಲ್ಲರೂ ಹುಕ್ಕರ ರಾಜ್ಯವನ್ನು ಹುರುಪಿನಿಂದ ಅಂಗೀಕರಿಸಿ, ಸ್ವರಾಜ್ಯ ಕಾರ್ಯಕ್ಕೆ ಮನಸಾರೆ ನೆರವಾಗಿ ರಾಜ್ಯ ವಿಸ್ತಾರ ಮಾಡಿದರು. ಕ್ರಮವಾಗಿ ವಿಜಯನಗರವು ಪ್ರಜೆಗಳ ವಸ್ತಿಯಿಂದ ತುಂಬಿ ಕಳಕಳಿಸಿತು. ಬಳಿಕ ವಿದ್ಯಾರಣ್ಯರು ನೆರೆಹೊರೆಯ ರಾಜ್ಯಗಳಲ್ಲಿ ಅಡ್ಡಾಡಿ, ವಿಜಯನಗರದ ರಾಜ್ಯಕ್ಕೆ ಸಹಾನುಭೂತಿಯನ್ನು ಗಳಿಸಿದರು. ವಿಜಯನಗರದಲ್ಲಿ ಅನ್ಯಾಯಕ್ಕೆ ಇಂಬು ಇಲ್ಲ. ವಿದ್ಯಾರಣ್ಯ ಸ್ವಾಮಿಗಳ ಲಕ್ಷ್ಯದಲ್ಲಿ ಅನ್ಯಾಯವು ಒಂದ ದಿನಾ ತಲೆಯನ್ನೆತ್ತವೇ. ರಾಜ್ಯದಲ್ಲಿ ಜೈನರಾದರು ಲಿಂಗಾಯತ ಶಂಕರ, ವೈಷ್ಣವರಾದರೂ, [illegible], ಜಾತಿಭೇದ ಮಾಡದೆ ರಾಜನೀತಿಯಲ್ಲಿ ಭೇದವೇನಿರಲಿಲ್ಲ. ಈ ಕಾರಣದಿಂದ ಹೀಗಾಯಿತು? ಸನಾತನ ಧರ್ಮದ ತತ್ವವು ಸಮಾನತೆಯದು. ಧರ್ಮಾಧಿಕಾರಿಗಳಾದ ಶ್ರೀ ವಿದ್ಯಾರಣ್ಯರೆ ರಾಜ್ಯಕಾರಭಾರದ ಸೂತ್ರಧಾರರಾಗಿರುವಾಗ ಧರ್ಮಕ್ಕೆ ವಿರೋಧವಾಗಿ ನಡೆನುಡಿಗಳು ಘಟಿಸುವದಶಕ್ಯವು. ವಿಜಯನಗರದೊಳಗಿನ ವೈಭವವನ್ನು ನೋಡಿ, ಪ್ರಜಾಪರಿಪಾಲನೆಯ ಸುದ್ದಿ ಕೇಳಿ ನೆರೆಹೊರೆಯ ರಾಜ್ಯದೊಳಗಿನ ಪ್ರಜೆಗಳೂ ವಿಜಯನಗರದ ರಾಜ್ಯಕ್ಷೇತ್ರದಲ್ಲಿ ವಾಸಮಾಡಹತ್ತಿದರು.

ವಿದ್ಯಾರಣ್ಯರು ರಾಜಕಾರಣ ಧುರಂಧರರಿದ್ದಷ್ಟೇ ಕಾರ್ಯಕುಶಲರಿದ್ದರು. ಅವರ ನಗರ ರಚನೆಯನ್ನು ಈಗಲೂ ನೋಡಿದರೆ, ಆಶ್ಚರ್ಯವಾಗುತ್ತದೆ. ಶೃಂಗೇರಿಯಲ್ಲಿ ಅವರು ಕಟ್ಟಿಸಿದ ಮಂದಿರಗಳನ್ನು ನೋಡಿದರೆ, ಇಂಜನಿಯರಿಂಗ ಯಾನೆ ವಾಸ್ತು ಕಲೆಯಲ್ಲಿ ಅವರು ಎಷ್ಟು ನಿಷ್ಣಾತರಿದ್ದರೆಂಬುದು ಸ್ಪಷ್ಟವಾಗುತ್ತದೆ. ಇದಲ್ಲದೆ, ಶ್ರೀ ಗಳು ವೇದಾದಿ ಧರ್ಮ ಗ್ರಂಥಗಳ ಮೇಲೆ ವಿದ್ವತ್ತಾಪೂರ್ಣ ಭಾಷ್ಯಗಳನ್ನು ರಚಿಸಿರುವರು. ಹುಕ್ಕ-ಬುಕ್ಕರು ಕಾಲಾಧೀನರಾಗಿ, ಹರಿಹರರಾಯರು ರಾಜ್ಯಪದಾರೂಢರಾದರು. ಆಗಲೂ ವಿದ್ಯಾರಣ್ಯರು ರಾಜ್ಯಸೂತ್ರಗಳನ್ನು ನಡಿಸುತ್ತಿದ್ದರು. ಬಳಿಕ, ಅಂತಕ್ಕೆ ೧೧೮ ನೇ ವಯಸ್ಸಿನಲ್ಲಿ ಶ್ರೀ ವಿದ್ಯಾರಣ್ಯರು ಗುರುಪಸೆಯ ಪ್ರಚಂಡ ಧರ್ಮಕಾರ್ಯವನ್ನು ನೆರವೇರಿಸಿ ೧೩೮೬ ನೇ ಇಸ್ವಿಯಲ್ಲಿ ಸಮಾಧಿಸ್ಥರಾದರು. ಹರಿಹರರಾಯರು ಶ್ರೀಗಳ ಉಪಕಾರ ಋಣವನ್ನು ತೀರಿಸಲು ವಿದ್ಯಾರಣ್ಯಪುರವೆಂಬ ಹೊಸ ಪಟ್ಟಣವನ್ನು ರಚಿಸಿ, ಆ ಪಟ್ಟಣವನ್ನು ಶ್ರೀಗಳ ವಂಶಜರಿಗೆ ಅಗ್ರಹಾರ ಮಾಡಿಕೊಟ್ಟರು ಮತ್ತು ಶ್ರೀ ವಿದ್ಯಾರಣ್ಯರಿಗೆ ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯರೆಂಬ ಸಾರ್ಥಕ ಬಿರುದನ್ನು ಅರ್ಪಿಸಿ, ತಮ್ಮ ವಿಜಯನಗರದ ಸ್ಥಾಪನಾಚಾರ್ಯರ ಹೆಸರು ಕೀರ್ತಿಮಯವಾಗಿ ಮಾಡಿದರು.

ವಿದ್ಯಾರಣ್ಯರು ಸನ್ಯಾಸಿಗಳಿದ್ದರೂ ರಾಜಕಾರಣ ಧುರಂಧರರಾಗಿ ರಾಜ್ಯಸೂತ್ರಗಳನ್ನು ನಡಿಸುತ್ತಿದ್ದರು. ವಿದ್ವಜ್ಜನರಲ್ಲಿ ಸೇರಿಕೊಂಡು ವೇದಾಂತ ಚರ್ಚೆಯನ್ನು ನಡಿಸುತ್ತಿದ್ದರು. ವಿದ್ಯಾರಣ್ಯರ ಸಂಸ್ಕೃತ ಗ್ರಂಥಗಳು ಶ್ರೀಗಳ ವಿದ್ವತ್ತೆಯನ್ನೂ, ಧರ್ಮತತ್ವಗಳ ಬೋಧವನ್ನೂ ಮಾಡಿಕೊಡುತ್ತವೆ. ಪ್ರವೃತ್ತಿ-ನಿವೃತ್ತಿ ಮಾರ್ಗಗಳು ಕರ್ನಾಟಕ ಸಿಂಹಾಸನ ಸಂಸ್ಥಾಪನಾಚಾರ್ಯರಾದ ಶ್ರೀ ವಿದ್ಯಾರಣ್ಯ ಸ್ವಾಮಿಗಳಲ್ಲಿ ಲೀನವಾಗಿದ್ದವು. ಈ ಮಾರ್ಗಗಳು ಪರಸ್ಪರ ವಿರೋಧವಾಗಿ [illegible] ಕಾಣತಗೊಡದೆ ಅನ್ಯೋನ್ಯ ಪ್ರೇಮದಿಂದ ಸುಸಂಗತವಾಗಿ ನಡಿಸಿ ತೋರಿಸಿದ ವಿದ್ಯಾರಣ್ಯ ಸ್ವಾಮಿಗಳ ಸ್ಮರಣೆಯನ್ನು ಕರ್ನಾಟಕವು ನಿರಂತರ ಚಿಂತಿಸಿ, ಅಂಥ ವಿಭೂತಿಗಳ ಪೂಜೆಮಾಡಿ, ಅವರ ತೇಜವನ್ನು ಅಲ್ಪಾಂಶದಿಂದಲಾದರೂ ಅನುಗ್ರಹಿಸಿಕೊಳ್ಳುವದಕ್ಕಾಗಿ ಅಂಥ ವಿಭೂತಿಗಳನ್ನೇ ಅನನ್ಯಭಾವದಿಂದ ಪ್ರಾರ್ಥಿಸತಕ್ಕದ್ದು.

ಅಮೇರಿಕನ್ ಉಪಾಯ.
ಎಂಬ್ರೋಸಿಯಾ.

ಸ್ತ್ರೀರೋಗಪರಿಹಾರಕ್ಕಾಗಿ.

ಎಂಬ್ರೋಸಿಯಾವು ಸಮಸ್ತ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು. ಇದು ಸ್ತ್ರೀಸೌಂದರ್ಯವನ್ನುಂಟುಮಾಡುತದೆ. ಸಾಮಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರುತದೆ. ಚಲೋ ಆಹಾರ ದೊರಕದೆ, ವಿಶೇಷ ಆಯಾಸ ಕೊಳ್ಳುವದರಿಂದ ಸ್ತ್ರೀಯರ ಪ್ರಕೃತಿಯು ಕೆಡುತದೆ. ಮುಟ್ಟಾಗುವಾಗ ಶೂಲಿ ಏಳುವದು, ಮುಟ್ಟಾಗದಿರುವದು, ಅಪಸ್ಮಾರ, ಒಂಜೆತನ ಮುಂತಾದ ಗರ್ಭಾಶಯದ ಬೇನೆಗಳು, ಅಜೀರ್ಣ, ತಲೆಶೂಲಿ, ಭ್ರಮಿಷ್ಟತನ ಇವೆಲ್ಲ ಸ್ತ್ರೀರೋಗಗಳ ಮೇಲೆ ರಾಮಬಾಣ ಮದ್ದು. ಎಂಬ್ರೋಸಿಯಾವು ಸಮಸ್ತ ಸ್ತ್ರೀರೋಗಗಳನ್ನು ದೂರಮಾಡಿ, ಸ್ತ್ರೀಯರನ್ನು ಸಶಕ್ತ ಹಾಗು ಸೌಂದರ್ಯವಂತರನ್ನಾಗಿ ಮಾಡುತದೆ.

ಒಮ್ಮೆ ಪರೀಕ್ಷೆ ನೋಡಿ
ಬೆಲೆ ಬಾಟ್ಲಿ ೧ ಕ್ಕೆ ರೂಪಾಯಿ ೩-೦-೦
ಏಜಂಟರು — ವೀರಿಯಲ ಏಜನ್ಸಿ,
ಪ್ರಿನ್ಸೆಸ ಸ್ಟ್ರೀಟ ಮುಂಬಯಿ ನಂಬರ ೨.

ಕೈರಾಟಿಯ ಪ್ರಸಾರ.

ರಾಷ್ಟ್ರೀಯ ಸಭೆಯ ಕಾರ್ಯದರ್ಶಿಗಳು ಸಂಯುಕ್ತ ಪ್ರಾಂತದೊಳಗಿನ ಮ್ಯುನಿಸಿಪಾಲಿಟಿಗಳಿಗೂ ಡಿಸ್ಟ್ರಿಕ್ಟ ಲೋಕಲ್ ಬೋರ್ಡುಗಳಿಗೂ ಖಾದಿ ಹಾಗು ಕೈನೂಲಿನ ಮೇಲಿನ ತೆರಿಗೆಗಳನ್ನು ರದ್ದುಪಡಿಸಲಿಕ್ಕೂ, ಶಾಲೆಗಳಲ್ಲಿ ಕೈರಾಟಿಯನ್ನು ಪ್ರವೇಶಪಡಿಸಲಿಕ್ಕೂ, ತಮ್ಮ ಉಪಯೋಗಕ್ಕಾಗಿ ಖಾದಿಯನ್ನೇ ಕೊಂಡುಕೊಳ್ಳಲಿಕ್ಕೂ ಬರೆದುಕೊಂಡಿದ್ದರು. ಅದಕ್ಕೆ ಬಂದ ಉತ್ತರಗಳು 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಪ್ರಕಟವಾಗಿವೆ.

ಹರಿದ್ವಾರದಲ್ಲಿ ಖಾದಿಯಮೇಲೆ ಶೇ ೧ರ ಕರವು ತಪ್ಪಿಟ್ಟಿದೆ. ಪರದೇಶೀ ಅರಿವೆಯಮೇಲೆ ೨೦ರ ಕರವನ್ನು ಇಟ್ಟಿದೆ. ಶ್ರೀ ಕ್ಷೇತ್ರ ಕಾಶೀ ಮ್ಯುನಿಸಿಪಾಲಿಟಿಯವರು ಮ್ಯುನಿಸಿಪಾಲಿಟಿಗೆ ತಗಲುವ ಎಲ್ಲ ಅರಿವೆಯು ಖಾದಿಯೇ ಇರಬೇಕೆಂದು ವಿಧಿಸಿವೆ. [illegible] ಮ್ಯುನಿಸಿಪಾಲಿಟಿಯವರು ಕಳೆದ ಡಿಸೆಂಬರ ತಾ. ೧ನೇಯಿಂದ ಖಾದಿಯಮೇಲಿನ ತೆರಿಗೆಯನ್ನು ರದ್ದು ಮಾಡಿರುವರು. ಲಖನೌದಲ್ಲಿ ಖಾದಿಯಮೇಲೆ ತೆರಿಗೆಯಿರುವದಿಲ್ಲ. ಸೇವಕರಿಗೆಲ್ಲ ಖಾದಿಯ ಉಡುಪು ಕೊಡಲ್ಪಟ್ಟಿದೆ. ಕೈರಾಟಿಯನ್ನು ಶಾಲೆಗಳಲ್ಲಿ ಪ್ರವೇಶಿಸಲು ವ್ಯವಸ್ಥೆ ನಡೆದಿದೆ. ಪ್ರಯಾಗ ಕ್ಷೇತ್ರದಲ್ಲಿ ಮ್ಯುನಿಸಿಪಾಲಿಟಿಯ ನೌಕರರೆಲ್ಲರೂ ಖಾದಿಯನ್ನೇ ಧರಿಸಬೇಕೆಂದು ನಿಯಮವಿದೆ. ಶಾಲೆಗಳಲ್ಲಿ ವಿದ್ಯಾರ್ಥಿಗಳು ನೂಲುತ್ತಾರೆ. ಈ ಬಗ್ಗೆ ಜಮಾ ಖರ್ಚಿನ ಪತ್ರಿಕೆಯಲ್ಲಿ ಹಣದ ಪೂರೈಕೆಯಾಗಿದೆ. ಹರದೋಯಿ ಊರವರು ಖಾದಿಯ ಮೇಲಿನ ತೆರಿಗೆಯನ್ನು ರದ್ದುಪಡಿಸಿರುವರು. ಸೀತಾಪುರದಲ್ಲಿ ಖಾದಿಯಮೇಲೆ ತೆರಿಗೆಯಿಲ್ಲ. ಸೇವಕರಿಗೆಲ್ಲ ಖಾದಿಯ ಪೋಷಾಕೇ. ವೃಂದಾವನ ಹಾಗು ನಜೀಬಾಬಾದದವರು ಈ ವಿಷಯ ಆಲೋಚಿಸಲಿಕ್ಕೆ ಬರುವದಿಲ್ಲೆಂದು ತಿಳಿಸುತ್ತಾರೆ.

ಆಝಮಗಡ ಡಿಸ್ಟ್ರಿಕ್ಟ ಲೋಕಲ್ ಬೋರ್ಡಿನವರು ಒಂದು ವಿದ್ಯಾಗೃಹ ಶಾಲೆಯನ್ನು ತೆರೆದು ಖಾದಿ ಕಾರ್ಯವನ್ನು ನಡೆಸುತ್ತಿರುವರು. ಜಲೋನ ಡಿಸ್ಟ್ರಿಕ್ಟ ಬೋರ್ಡಿನವರು ತಮಗೆ ಬೇಕಾಗುವ ಅರಿವೆ-ಅಂಚಡಿಗಳನ್ನೆಲ್ಲ ಖಾದಿಯಿಂದಲೇ ಪಡೆಯಬೇಕೆಂದು ನಿರ್ಧರಿಸಿರುವರು. ಬುಂದ, ಪ್ರತಾಪಗಡದವರು ತಮ್ಮ ನೌಕರರಿಗೆ ಖಾದಿಯ ಅಂಗಿ-ಟೊಪಿಗೆಗಳನ್ನು ಪೂರೈಸುತ್ತಾರೆ. ಬಸ್ತಿ ಬೋರ್ಡಿನವರು ತಮ್ಮ ಅನೇಕ ಶಾಲೆಗಳಲ್ಲಿ ಕೈನೂಲನ್ನು ನೂಲಿಸಹತ್ತಿರುವರು. ಆದರೆ, ಚಲೋ ಕೈರಾಟಿಗಳು ದೊರೆಯದ್ದರಿಂದ ತೊಂದರೆಯಾಗಿದೆ. ಶಾಲೆಯ ಹುನ್ನರದ ಕೆಲಸ ಸಾಗಲಿಸಲು ಒಬ್ಬ ಶಿಕ್ಷಕರನ್ನೂ ಬೋರ್ಡಿನವರು ನೇಮಿಸಿರುವರು.

ಮಹಾತ್ಮರ ಅಮೇರಿಕೆಯೊಳಗಿನ ಗೆಳೆಯರೊಬ್ಬರು ಸ್ವತಃ ನೂಲಹತ್ತಿರುವರು. ಅವರು ತಮ್ಮ ಅನುಭವಗಳನ್ನು ಮಹಾತ್ಮರಿಗೆ ಬರೆದಿರುವರು. ಅವರು ಹೇಳುವದೇನೆಂದರೆ — ಬೌದ್ಧಿಕ ಉನ್ನತಿ ಹೊಂದಿ ಕೈಗಾರಿಕೆಗಳನ್ನು ಕೈಕೊಳ್ಳದವರು ಕೈರಾಟಿಯ ಮೇಲೆ ನೂಲು ಹಸ್ತಕೌಶಲ್ಯ ತೋರಿಸಿದರೆ, ಅವರ ಉಲ್ಲಾಸಕ್ಕೊಂದು ಸ್ವಲ್ಪ ದೊರೆಯುವದು. ಈ ವಿಚಾರವನ್ನು ಕೈರಾಟಿಯ ನಿಂದಕರು ಆಲೋಚಿಸಿದ್ದು ತೋರುವದಿಲ್ಲ. ಕೈರಾಟಿಯನ್ನು ತಿರುಗಿಸುವದರಿಂದ ಚೈತನ್ಯಶಕ್ತಿಯು ಹೆಚ್ಚಾಗುವದಲ್ಲದೆ, ಮನಸ್ಸಿನ ಮೇಲೂ ಒಂದು ಪ್ರಕಾರದ ಅಂಕೆಯು ಪ್ರಾಪ್ತವಾಗುತ್ತದೆ. ಕೈರಾಟಿಯನ್ನು ತಿರುಗಿಸಿ ನೂಲುತ್ತಿರುವಾಗಲೇ ಇನ್ನೊಂದು ವಿಷಯದ ಮೇಲೆ ವಿಚಾರಿಸಲಿಕ್ಕೆ ಅಡ್ಡಿಯಾಗಬಾರದು; ಅಷ್ಟು ನೂಲು ತೆಗೆಯುವದು ಸಹಜವಾಗಿ, ಮಾನವನ ಉನ್ನತಿಯು ಅಷ್ಟರ ಮಟ್ಟಿಗೆ ಮುಂದರಿವದೆಂದು ಹೇಳಬಹುದು.

— ಶ್ರೀ | ಮುಂಜಪ್ಪಾ ಹರ್ಡೇಕರರವರು ಬಾಗಲಕೋಟೆಯ ತಾಲೂಕಿನಲ್ಲಿ ಅಸ್ಪೃಶ್ಯ ಪಾಠಶಾಲೆಗಳನ್ನು ಸ್ಥಾಪಿಸುತ್ತಿರುವರು; ಖಾದಿಪ್ರಚಾರವನ್ನೂ ಮಾಡುತ್ತಿರುವರು.

— ದೇಶಭಕ್ತ ಲಾಲಾ ಲಜಪತರಾಯರು "ಪೀಪಲ" ಅಂದರೆ "ಪ್ರಜೆ" ಎಂಬ ಇಂಗ್ಲಿಷ ವಾರಪತ್ರಿಕೆಯನ್ನು ಪ್ರಕಟಿಸಲಾರಂಭಿಸಿರುವರು.

— ಬರ್ಕೆನಹೆಡ್ ದೊರೆಗಳ ಉದ್ಗಾರದಿಂದ ನಾವು ಇದ್ದಲ್ಲಿಯೇ ಇರುತ್ತೇವೆಂದು ನೇಕ ನಾಮದಾರ ಶಾಸ್ತ್ರಿಗಳ ಅಭಿಮತ.

— ಕಳೆದ ೨೪ ನೇ ಬುಧವಾರಕ್ಕೆ ಮೈಸೂರಿನ ಶ್ರೀಯುವರಾಜರವರು ಶ್ರೀ ಗೋಮಟಗಿರಿ ದೇವಾಲಯಕ್ಕೆ ಹೋಗಿ ಅಲ್ಲಿಯ ಪವಿತ್ರ ಮೂರುತಿಯನ್ನು ನೋಡಿ ಬಂದರು. ಶ್ರೀ ಗೋಮಟಗಿರಿ ದೇವಾಲಯವನ್ನು ಶ್ರೀ ಮಹಾರಾಜರು ಉದ್ಧರಿಸುವ ಆಲೋಚನೆಯಲ್ಲಿರುವರಂತೆ !

धातु क्षीणता व कमजोरपणा यांसाठीं
मदन मंजरी गोळ्या. (रजिस्टर्ड.)
या दिव्य गोळ्या रक्त व वीर्य सुधारून त्यांची चांगली वाढ करतात. पचन शक्ति सुधारून परसाकडे साफ होतें. त्याचप्रमाणें प्रत्येक प्रकारची अशक्तता दूर होऊन शरीर तेजदार व बळवान होतें. किं. ४० गोळ्यांच्या डबीस रु. १.
रमण विलासिनी गोळ्या. रात्रौ फक्त १ गोळी दुधाबरोबर खाल्यानें इच्छेप्रमाणें वीर्यस्तंभन होत. किं. डबीस रु. १
नपुंसकत्वारी घृत. हा लेप पुरुषाच्या गुह्यभागावर लावला असतां सर्व रोग नाश पाऊन खरें पुरुषत्व प्राप्त होतें. किं. डबीस रु. १.
कुमटा एजंट — माधव सांतप्पा शेणवी वेलेकर.
राजवैद्य नारायणजी केशवजी वैद्यः— १९३ काळबादेवी रोड मुंबई न. २.

ಭಾಷಾಂತರಕರ್ತರಿಗೆ ಸುಸಂಧಿ!
ಸುಪ್ರಸಿದ್ಧವಾದದ್ದೂ, ಅನೇಕ ವಿದ್ವತ್ ಪಂಡಿತರಿಂದ ಚಲೋ ಅಭಿಪ್ರಾಯ ಪಡೆದದ್ದೂ ಆಗಿರುವ ಮುಗ್ವೇದಿಯವರು ಬರೆದ "**आर्यांच्या सणांचा प्राचीन व अर्वाचीन इतिहास**" ಎಂಬ ಮರಾಠಿ ಪುಸ್ತಕವನ್ನು ಕನ್ನಡದಲ್ಲಿ ಭಾಷಾಂತರಿಸುವದಿದೆ. ಇದನ್ನು ಕೈಕೊಳ್ಳಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳತಕ್ಕದ್ದು.
Apply to:-- Copies can be had from:-
V. PRABHA & CO. THE NORTH" KANARA TRADING CO.
BOMBAY 4. KARWAR.



ಸುಲಭ ಕ್ರಯ! ಸುಲಭ ಕ್ರಯ!!
ಡಾಕ್ಟರ ಜೀ. ಬಿ. ಯವರ
ಸುಗಂಧ ನಶ್ಯದ ಪುಡಿ.
(Registered Trade Mark.)
ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತದೆ. ಮೂರು ದಟ್ಟನೆ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾರೆವು.
ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦ ವ್ಹಿ. ಪಿ. ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ!
ಪತ್ತೆ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಪಾರ್ಕಟೌನ, ಮದರಾಸು

ಜಾಹೀರಾತು.

ತಾರೀಖು ೭-೪-೧೯೩೫ನೇ ಪತ್ರದಲ್ಲಿ ಪ್ರಸಿದ್ಧಿಪಡಿಸಿರುವ ನಾಮಾಂಕಿತ ಸುಪ್ರಸಿದ್ಧ ಕೇರಳ ಜ್ಯೋತಿಷಿ ಕೇ. ಸಿ ನಾರಾಯಣಶಾಸ್ತ್ರಿ ಎಂಬವರು ಸ್ವಲ್ಪ ದಿವಸದಿಂದ ಶಿವಮೊಗ್ಗಾ ಡಿಸ್ಟ್ರಿಕ್ಟ ಸಾಗರದಲ್ಲಿ ಕೆಲವು ದಿವಸದ ಪ್ರೋಗ್ರಾಮ ತಮ್ಮ ಮುಕ್ಕಾಂ ಮಾಡುತ್ತಾರೆ ಅವಶ್ಯವಿದ್ದ ಯಾವತ್ತೂ ಜನರು ಸದ್ರಿಯವರಿಗೆ ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡೆಸಬೇಕಾಗಿದೆ.

ಪತ್ತೆ —

ಕೇರಳ ಜ್ಯೋತಿಷಿ

ಕೇ. ಸಿ. ನಾರಾಯಣ ಶಾಸ್ತ್ರಿ

ಚಾಮರಾಜೇಂದ್ರ ಪೇಟೆ, ಪೋ. ಸಾಗರ,
ಡಿಸ್ಟ್ರಿಕ್ಟ ಶಿವಮೊಗ್ಗಾ

ವಿಶೇಷ] ಅನುಭವಸಿದ್ಧ [ಸ್ವ-

ವನೌಷಧಿಮೂಲಿಕೆಗಳು

ವಾಯುದುಮ್ಮಸ (ನಿಮೋನಿಯಾ) ವಾಂತಿಭ್ರಾಂತಿ (ಕೊಲೆರಾ) ಅರ್ಧಾಂಗವಾಯು (ಪೆರಾಲಿಸಿಸ್) ಹುಚ್ಚು ನಾಯಿ ಕಡಿತ, ಸರ್ಪ ಕಡಿತ, ಹೊಟ್ಟೆಯಲ್ಲಿ ಕೃತ್ರಿಮ ವಿಷಹಾಕಿದ್ದ (ಕೈಮದ್ದು) ವಗೈರೆ ರೋಗಗಳಿಗೆ ಒಂದೇ ಒಂದು ಮೂಲಿಕೆಯಿಂದ ಖಾತ್ರಿಯಾಗಿ ತೀವ್ರ ಗುಣಬರುವದು. ಇವು ಬಹುಕಾಲದಿಂದ ಅನುಭವ ತಕ್ಕೊಂಡು, ಹಾಗು ಪ್ರತಿನಿತ್ಯ ಉಪಯೋಗಕ್ಕೆ ಒಳಕೆಯಲ್ಲಿದ್ದು ಸಿಗುವ ಔಷಧಿಗಳ ತಾಜಾ ಮೂಲಿಕೆಗಳು! ಒಮ್ಮೆ ತರಿಸಿ ಅನುಭವ ತಕ್ಕೊಂಡರೆ ಖಾತ್ರಿಯಾದೀತು. ಕೊಲೆರಾ ಔಷಧಿಗಳ ದ್ರಾವಕ (Tincture) ಬೇಕಾದಲ್ಲಿ ಸೂಚಿಸಿದರೆ ಕಳುಹುವೆವು.

ವಾಯುದುಮ್ಮಸದ ಬಗ್ಗೆ ಔಷಧಿ ಮೂಲಿಕೆ ತೊಲ ೧ಕ್ಕೆ	೦-೨-೦
ಕೊಲೆರಾದ ಬಗ್ಗೆ ,, ,, ,,	೦-೨-೦
ಅರ್ಧಾಂಗ ವಾಯುವಿನಬಗ್ಗೆ ..	೦-೪-೦
ನಾಯಿ ಕಡಿತದಬಗ್ಗೆ ..	೦-೪-೦
ಸರ್ಪಸುತ್ತಿನ ಬಗ್ಗೆ ..	೦-೨-೦
ಹೊಟ್ಟೆಯಲ್ಲಿ ಕೃತ್ರಿಮ ಔಷಧಿ ಬಿದ್ದ ಬಗ್ಗೆ ತೊಲೆ ೧ಕ್ಕೆ	೦-೮-೦
ರಕ್ತಶುದ್ಧಿ ವ ಮಲಶೋಧನೆ ಬಗ್ಗೆ ಮೂಲಿಕೆ ರಾತ್ತಲ ೧ಕ್ಕೆ	೧-೦-೦
ಮೋರಾವಳಾ (ನೆಲ್ಲಿಕಾಯಿ ಗುಳಂಬ) ರಾತ್ತಲ ೧ಕ್ಕೆ	೧-೪-೦

ರಾತುಗಟ್ಟಲೆ ಯಾ ಅದಕ್ಕಿಂತಹೆಚ್ಚು ತರಿಸಿಕೊಳುವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು. ಟಪಾಲ ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿ ಪತ್ರದ್ವಾರಾ. ಅನುಪಾನಪತ್ರ ಔಷಧೀ ಸಂಗಡ

ಎನ್. ಜಿ. ಹೆಗಡೆ, ಮಾಸ್ತೇರಿ,

ಪೋಸ್ಟ—ಬಿಳಕಿಕೋಟ್ಲ, ಜ. ಉತ್ತರ ಕಾನಡಾ

ಮಳೆಗೆ ಮೊದಲೇ ಎಚ್ಚರಿಕೆ !

ಅತ್ಯುತ್ತಮವು, ಸುಂದರ, ಬಾಳ್ವಿಕೆಯುಳ್ಳ, ಮಜಭೂತಾದ

ಸಂಖ್ಯೆ ಅಪಾರ] **ಛತ್ರಿಗಳು.** [ಅಗ್ಗ ! ವಿವಿಧ !!

ಪ್ರತಿಯೊಬ್ಬರಿಗೂ ಅನುಕೂಲವಾದ ಪಸಂದಿನ ಮಾಲು !

ದೇಶೀಯ ಕೈಕೆಲಸಗಾರಿಕೆ ! ದೇಶೀಯರಿಗಾಗಿಯೇ !! ಆದುದರಿಂದ
ದೇಶೀಯರಿಗೆ ಖಾತರಿಯಾಗಿ ತೃಪ್ತಿಯಾಗುವುದು !

ಕಾನಡಾ ಜಿಲ್ಲೆಯೊಳಗಿನ ಪ್ರಾಮುಖ್ಯ ಛತ್ರೀ ದುಕಾನುಗಳಲ್ಲಿ ವಿಕರಿಗೆ ಇದೆ.

ನೇದ ನಾಗಜೀ ಪುರುಷೋತ್ತಮ್ ಮತ್ತು ಕಂಪನಿಯವರ

ಕಲ್ಲಿಕೋಟೆಯ ಕಾರಖಾನೆಯ

ಸೂರ್ಯ ಛಾಪಿನ ಛತ್ರಿಗಳೇ ಛತ್ರಿಗಳು !

ಸಬ್ ಏಜಂಟರಿಗೆ ತಾತ್ಪರ್ಯವಿಟ್ಟು ಕಮಿಶನ್ ಕೊಡಲಾಗುತ್ತದೆ.

ಪತ್ತೆ — **ಶ್ರೀನಿವಾಸ ರಂಗ ಪೈ, ಸಾವಕಾರ ಮಡಾಲ್**
ಮಂಗಳೂರು, ದ. ಕನ್ನಡ

ಕಿರ್ಲೋಸ್ಕರ ಪಂಪ.

ಬಾವಿಯೊಳಗಿನ ನೀರನ್ನು ಮೇಲಕ್ಕೆ ತರುವದರಲ್ಲಿ

ಕಿರ್ಲೋಸ್ಕರ ನೀರಿನ ಪಂಪು ಮೇಲ್ತರದ್ದಿರುತ್ತದೆ. ಸಣ್ಣ ಮಕ್ಕಳು, ಅಬಲೆಯರು ಈ ಪಂಪಿನಿಂದ ನೀರನ್ನು ಒಂದೇ ನಿಮಿಷದಲ್ಲಿ ಮೇಲಕ್ಕೆ ತರುವರು. ಪ್ರಪಂಚದಲ್ಲಿ ಮಿಕ್ಕ ಅಡಚಣೆಗಳಲ್ಲಿ ನೀರಿನ ತೊಂದರೆಯು ಸ್ವಾಭಾವಿಕವು. ಈ ಅಡಚಣೆಯು ಮೇಲಿನ ಉಪಾಯದಿಂದ ದೂರಾಗುವದು

ಪರದೇಶದಿಂದ ಬರುವ ಪಂಪ್ಪುಗಳು ಬಹು ತುಟ್ಟಿ ಇರುವದರಿಂದ ಮಧ್ಯಮ ಜನರಿಗೆ ಅವುಗಳನ್ನು ಕೊಳ್ಳುವದಾಗುವದಿಲ್ಲ. ಇದನ್ನು ತಿಳಿದು ನಾವು ಈ ಪಂಪನ್ನು ಬಹು ಅಗ್ಗದಿಂದ ಕೊಡುತ್ತಿರುವೆವು. ಇದಲ್ಲದೆ, ಈ ಪಂಪಿನ ಬಿಡಿ ಭಾಗಗಳು ನಮ್ಮ ಕಾರಖಾನೆಯಲ್ಲಿಯೇ ತಯಾರ ಮಾಡುತ್ತಿರುವದರಿಂದ ಬೇಡಿದಾಗ ದೊರೆಯುತ್ತವೆ

ಈ ಕಾರಖಾನೆಯ ಕೃತ್ತ ವಿದೇಶೀ ಪಂಪುಗಳನ್ನು ಕೊಂಡಲ್ಲಿ ದೊರೆಯುವುದು.

ಕೇ. ಬಿ. ಜೋಶಿ ಮುಂಬೈ ಇವರು ನಮ್ಮ ಸೋಲ ಏಜಂಟರು.

ಸವಿಸ್ತರ ಸಂಗತಿಯ ಬಗ್ಗೆ ಬರೆದು ತಿಳಿದುಕೊಳ್ಳಿರಿ,

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ



ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾ ಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತದೆ. ಲಕ್ಷಗಟ್ಲೆ ಜನಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವರು. ೮ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ವ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅಯಿತ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೬ ಆ. ಖರ್ಚು ನೇರೆ.

ಅಮೃತಾಂಜನ ಡಿಪೋ, ಫೋರ್ಟ, ಮುಂ

Printed and Published by Krishnarao Keshav Shenvi (Editor) at his Star of Kanara Press Ku

Regd. No. B. 1870.

Monday, July 27th, 1925.

ವರ್ಷ ೯.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೧.

ಪತ್ರದ ವರ್ಗಣಿ.
ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮನೆಯಾರ್ಡರಿಯಿಂದ
ರೂ. 3-0-0.
ವ್ಹಿ. ಪಿ. ಉಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

[illegible]।
[illegible] ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ [illegible]
[illegible] (೧೫ ಎಂಟ್ [illegible])
ಆ ಸಾಲುಗಳವರೆಗೆ ರೂ. 1-0-
ಆ ನಂತ್ರ ಪ್ರತಿಸಾಲಿಗೆ 0-2-0.
ಜಹಿರಾಗಿದ ಸಾಲು ಎಷ್ಟು ಹೊತ್ತು ಬಿಡುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಖಾಯಿ ಜಾಹಿರಾತುಗಳ ಬಗ್ಗೆ ಪತ್ರವ್ಯಾರ ಯಾ ಸಮಕ್ಷ ತಿಳಿಸಲ್ಪಡುವದು.

(ಕುಮಟಾ— ಕಾನಡಾವೃತ್ತ ಸೋಮವಾರ, ತಾರೀಖು ೨೭ ಮಾಹೆ ಜುಲೈ ಸನ್ ೧೯೨೫ ನೇ ಇಸವಿ)

हिंदुस्थानातील रहिवाशांस ज्याप्रमाणें हिंदुस्थानची हवा त्याप्रमाणेंच हें औषध हिंदुस्थानातील लोकास ज्यास्त फायदेशीर आहे.

द्राक्षासव- रीड रक्तकणी - किंमत २ रुपये;

रामबाण औषधें —
सर्दि घालविणारें,
भूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,
— विश्वास हितकर

कॅटलाग मागवा,

झंडु फार्मास्युटिकल वर्क्स लिमिटेड,
मुंबई नं: १३

Wanted.

A special agent to represent the **National Indian Life Insurance Co. Ltd.**, in whole of North Canara District. Liberal terms with powers to appoint sub-agents. Only influential Gentlemen capable of doing good business in the said jurisdiction need apply stating the minimum amount of business they will, be able to complete each year to:—

Branch Secretary,
Rustom Building,
Churchgate Street,
FORT- BOMBAY.

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ
ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, *B. A.*
Jewellers, KUMTA.
ಆರ್. ಎಸ್. ಕಾಸರಗೋಡ,
ರತ್ನಾಭರಣ ವ್ಯಾಪಾರಿ, ಕುಮಟಾ.

ಆಯುರ್ವೇದಿಕ) ಧಾತುಪೌಷ್ಟಿಕ, ಶಕ್ತಿವರ್ಧಕ, ರಕ್ತಶೋಧಕ (ಮಲಬಾರಿನ

ಮದನಕಾಮೇಶ್ವರೀಲೇಹ.

ಆಬಾಲ ವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

[illegible]

ಅತ್ಯುತ್ತಮ) ಜಂತುವಿನ ಔಷಧ (ಬಿರಸುಲಭ.

[illegible]

ಮೆನೇಜರ ಆಯುರ್ವೇದ ಚಿಕಿತ್ಸಾ ಮಂದಿರ, ತಾ. ಕಾರವಾರ, ಪೋ. ಚೆಂಡಿಯೆ.

ಮುಂಬೈ ಏಜಂಟ:— R. C. KAMAT, Teashop Store Lane, Fort, BOMBAY

ಹುಟ್ಟಿದ ಪತ್ರಿಕೆ) ಸುಖಸಾಧನಕ್ಕೆ ಯೋಗ್ಯ ಉಪಾಯವು. (ಯಾ ಜನ್ಮಟಿಪ್ಪಣ

☞ ಮಲಬಾರ) ಕೇರಳ ಜ್ಯೋತಿಷ. (ಭವಿಷ್ಯ.

[illegible]

ಮೆನೇಜರ, "ಜ್ಯೋತಿಷ ಶಾಸ್ತ್ರ-ಭುವನ," ಚೆಂಡಿಯೆ. ತಾ. ಕಾರವಾರ

ನಮ್ಮ ಪ್ರೆಸ್ಸಿನಲ್ಲಿ

ಗೇಣಿ ಬಾಕಿ ಪಾವತಿ ಫಾರ್ಮುಗಳು ತಯಾರಿವೆ.

ವಸೂಲಾತ, ಅನುಭವಿ ಮೊದಲಾದ ಕೋರ್ಟ ವ್ಯವಹಾರದ ಹಾಗೂ ಕಸ್ಟಮ್ಸ ಖಾತೆಯ ಫಾರ್ಮುಗಳು ಅಗ್ಗವಾಗಿ ಸಿಗುತ್ತವೆ

ಮೆನೇಜರ,

ಸ್ಟಾರ ಒಫ್ ಕೆನರಾ ಪ್ರೆಸ್, ಕುಮಟಾ

ಉತ್ತಮ, ಸುವಾಸಿಕ, ಶುದ್ಧ, ಪರೀಕ್ಷಿಸಲ್ಪಟ್ಟ,

ಜನರಿಗೆ ಅವಶ್ಯ ಬೇಕಾಗಿರುವ

ಕಾಬೂಲೀ ಹಿಂಗು.

೪೦ ತೊಲೆಯ ೧ ಡಬ್ಬಿ	ರೂ.	೪—೦—
೨೦ ತೊಲೆ ಡಬ್ಬಿ	ರೂ.	೨—೮—೦
೧೦ ತೊಲೆ ಡಬ್ಬಿ	ರೂ.	೧—೬—೦
೫ ತೊಲೆ ಡಬ್ಬಿ	ರೂ.	೧—೦—
೧ ತೊಲೆಯ ಡಬ್ಬಿಗಳ ಡಜನ	ರೂ.	೨—೦—೮

ನಮ್ಮ ಹಿಂಗು ಪೋಸ್ಟ ಬಾಜದಲ್ಲಿ ದರದ ಕೊಡಲ್ಪಡುವವು. ಪಾರಸಲ ಖರ್ಚ ಪ್ರತ್ಯೇಕ

ಕೆರೇಕರ ಕಾಬೂಲೀ ಹಿಂಗಿನ ದುಕಾನ

ಜವಳಿಬಾಜಾರ, ಕುಮಟಾ

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು

೧ ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೬೦, ೭೫, ೧೦೦
೨ ,, ಕಾಲು ಪೆಟ್ಟಿಗೆ ಕಿಂ ೬೫, ೭೫, ೧೨೦, ೧೪೦
೩. ತಬಲೆ ಜೋಡಿ ಕಿಂ. ೧೬, ೧೮, ೨೦, ೨೫.
೪. ಹಾರ್ಮೋನಿಯಮು ಗ್ಯಾಡ (ಮರಾಠಿ) ಕಿಂ. ೧॥
ತಬಲೆ ಗ್ಯಾಡ ಕಿಂ. ೧೨ ಆ

ವಿಶೇಷ ಮಾಹಿತಿಬಗ್ಗೆ ನಮ್ಮ ಮರಾಠಿ ಕ್ಯಾಟಲಾಗ ಫುಕಟ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ:- **ಗೋಪಾಳ ಸಖಾರಾಮ ಮತ್ತು ಕಂಪನಿ, ವಿಠ್ಠಲವಾಡಿ ಎದುರಿಗೆ, ೩೬೩ ಕಾಳಬಾದೇವಿ, ಮುಂಬಯಿ,**

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ

ಕಳೆದ ೪-೫ ವರ್ಷಗಳಿಂದ ನಾವು ಶಿವಮೊಗ್ಗಾ-ತೀರ್ಥಹಳ್ಳಿ-ಆಗುಂಬೆ, ಶಿವಮೊಗ್ಗಾ-ಸಾಗರ-ತಾಳಗುಪ್ಪೆ, ಶಿವಮೊಗ್ಗಾ-ಹರಿಹರ-[illegible], ಶಿವಮೊಗ್ಗಾ-ಕಳೂರಕಟ್ಟೆ, ಸಾಗರ-ಸೊರಬ-ಶಿರಾಳಕೊಪ್ಪ, ಸಾಗರ-ತೀರ್ಥಹಳ್ಳಿ, ಸಾಗರ-ಕಳೂರಕಟ್ಟೆ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ ಸರ್ವಿಸನ್ನು ನಡೆಸುತ್ತಿದ್ದ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ, ಉಡುಪಿ, ಕುಂದಾಪುರ, ಮಂಗಳೂರ ಹಾಗು ಬೆಳ್ತಂಗಡಿ ಈ ಕಡೆಗೆ "ಕಾರ್ಕಳ ಮೋಟರ ಸರ್ವಿಸಿನ" ವಿದ್ಯಮಾನವೂ, ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಗೆ "ಲಕ್ಷ್ಮೀ ಮೋಟರ ಸರ್ವಿಸಿನ" ವಿದ್ಯಮಾನವೂ ಪ್ರಯಾಣಿಕರ ಎಲ್ಲ ಸೌಕರ್ಯಗಳ ವ್ಯವಸ್ಥೆ ಮಾಡಿರುತ್ತೇವೆ.

ಉತ್ತರ ಕನ್ನಡ ಜಿಲ್ಲೆಯ ಪ್ರಯಾಣಿಕರು ಜೋಗ (Gersoppa Falls), ಶಿವಮೊಗ್ಗಾ, ಸಾಗರ, ಹರಿಹರ ಮುಂತಾದ ಪ್ರೇಕ್ಷಣೀಯ ಸ್ಥಳಗಳಿಗೆ ಪ್ರಯಾಣ ಬೆಳೆಸಲು ಅನುಕೂಲವಾಗಬೇಕೆಂದು ಶಿವಮೊಗ್ಗಾ, ಸಾಗರ, ಜೋಗ, ಸಿದ್ದಾಪುರ, ಶಿರ್ಸಿ, ಕುಮಟಾ ಈ ಲೈನಿನಲ್ಲಿ ಮೋಟರ ಸರ್ವಿಸ ಪ್ರಾರಂಭ ಮಾಡಿರುತ್ತೇವೆ

ಕಾಲಕ್ರಮಗಳು.

ಕುಮಟೆಯಿಂದ ಹೊರಡುವದು—	ಬೆಳಿಗ್ಗಿನ ೭ ಘಂಟೆಗೆ.
ಶಿರ್ಸಿಗೆ ಸೇರುವದು—	,, ೧೦ ,,
ಶಿರ್ಸಿಯಿಂದ ಬಿಡುವದು ಶಿವಮೊಗ್ಗಾ ಕಡೆಗೆ—	ಮಧ್ಯಾಹ್ನ ೧ ,,
ಸಾಗರಕ್ಕೆ ಸೇರುವದು. (ಸಿದ್ದಾಪುರದ ಮಾರ್ಗವಾಗಿ)—	ಸಾಯಂಕಾಲ ೬ ,,
ಸಾಗರದಿಂದ ಶಿರ್ಸಿ ಕಡೆಗೆ ಹೊರಡುವದು.—	ಬೆಳಿಗ್ಗಿನ ೬ ,,
ಸಿದ್ದಾಪುರದ ಮಾರ್ಗವಾಗಿ ಶಿರ್ಸಿಗೆ ಸೇರುವದು—	,, ೧೧ ,,
ಶಿರ್ಸಿಯಿಂದ ಕುಮಟೆಗೆ ಹೊರಡುವದು—	ಮಧ್ಯಾಹ್ನ ೨ ,,
ಕುಮಟೆಗೆ ಸೇರುವದು—	ಸಾಯಂಕಾಲ ೫ ,,

N B — ಈ ಮೇಲಿನ ಲೈನುಗಳ ವಿನಹ ಶಿರಸಿಯಿಂದ ಹುಬ್ಬಳ್ಳಿಗೆ ಪ್ರತ್ಯೇಕ ಒಂದು ಸರ್ವಿಸ ಪ್ರಾರಂಭಿಸುವ ಯೋಚನೆ ಸಹಾ ಇರುತ್ತದೆ. ಸರ್ವರೂ ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿ ವಿನಂ

SHIMOGA,
22—11—1924 }

M. MANJAPPA.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯೂ ಹೋಗುವದು. ೬೦-೭೦ ವರ್ಷದ ಮುದುಕರ ಕಾಮವಿಕಾರವು ಸಹಿತ ತರುಣರಂತೆ ಪ್ರವರ್ಧಮಾನವಾಗುವದು. (ನಿಜ ಒಂದೇ ಸಪ್ತಾಹದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಬಂದ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಹಿಂದಾಗುವದು — ಪರಮಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಕೆಲ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ಮೊದಲಾದ ರೋಗಗಳು ಬೇಗನೆ ಗುಣವಾಗುವವು. ಕೆಲ ದಿವಸದಲ್ಲಿ ಮೊದಲಿನಂತೆ ಊಟವಾಗದಿದ್ದರೂ ಅನ್ನ ಪಚನವಾಗಿ ಹಸಿವು ಹೆಚ್ಚಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಉಷ್ಣತೆ ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ವಿಷಯಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ವಿಷಯದ ಕಾರಣ ಹೊಸಬೇನೆ ಇದ್ದರೆ ೧೦ ದಿವಸ ನಡೆಯುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ [illegible] ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೩—೪—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚ ಬೀಳುವದಿಲ್ಲ. ಹತ್ತು ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಫುಕಟ ಸಿಗುವದು. ಟಪಾಲಖರ್ಚ ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧—೪—೦ ೩ ಬಾಟ್ಲಿಗೆ ೩—೦—೦, [illegible] ೧೩—೮—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸು, ಪ್ರೋ. ನಿಪ್ಪಾಣಿ, ಜಿ. ಬೆಳಗಾ

ಶ್ರೀ. ವಾಸಂತೀ ದೇವಿಯವರಿಗೆ.

ಶ್ರೀಮತೀ ಸರೋಜಿನೀದೇವಿಯವರು ಜೂನ್ ತಾ ೨೩ರಲ್ಲಿ ಹೈದರಾಬಾದಿನಿಂದ ಬರೆದ ಲೇಖ

ಪ್ರಿಯ ಸಖಿ ವಾಸಂತೀದೇವಿ! ಬಾಲ್ಯತನದಲ್ಲಿ ನಾವೆಲ್ಲರೂ ಒಟ್ಟುಗೂಡಿ ಆಡುತ್ತಿದ್ದೆವು. ಈ ದುಃಖಸಮಯದಲ್ಲಿ ನಿನಗೆ ಸಮಾಧಾನಕರವಾಗಿ ಬರೆಯಬೇಕೆಂದು ಅನೇಕ ಸಾರೆ ಪ್ರಯತ್ನಿಸಿ ಅನೇಕ ಪತ್ರಗಳ ಬರೆದು ಹರಿದು ಬಿಟ್ಟೆನು. ದುಃಖಶಮನಕರಗಳಾದ ಶಬ್ದಗಳೇ ಗೋಚರಿಸಲಿಲ್ಲವು.

ನಿನ್ನ ಪತಿಯು ಮೃತರಾಗಿ ನೀನೊಬ್ಬಳೇ ಚಿಂತಿಸಬೇಕಾದ ದುರ್ದಶೆಯು ಪ್ರಾಪ್ತವಾಗಲಿಲ್ಲವು; ನಿನ್ನ ಪತಿಯು ಮಹಾರಾಜನು. ನೀನು ಮಹಾರಾಣಿ ನಿನ್ನ ಪತಿಯ ದುಃಖಕ್ಕಾಗಿ ೩೩ ಕೋಟಿ ಜನ ಭಾರತೀಯರು ದುಃಖದಲ್ಲಿ ಮುಳುಗಿರುವರು. ಅದು ಕಾರಣವೇ ನಿನಗೆ ಕೊಂಚ ಸಮಾಧಾನರಾಗಿರುವದು. ಚಿತ್ತರಂಜನ (ದಾಸ)ರನ್ನು ನಾನು ಮಹಾರಾಜನೆಂದೇ ಕರೆಯುತ್ತೇನೆ. ಬಾಲ್ಯತನದಿಂದಲೂ ನಾನು ಹಾಗೆಯೇ ಕರೆಯುತ್ತಿದ್ದೆನು. ಸೋದರರನ್ನು ಪ್ರೀತಿಸುವಂತೆ ನಾನು ಪ್ರೀತಿಸುತ್ತಿದ್ದೆನು. ನನ್ನ ಸಂತಾಪವನ್ನು ಪ್ರಪಂಚಕ್ಕೆ ತಿಳಿಸಲು ಆಗಲೇ ಒಂದು ಲೇಖವನ್ನು ಪ್ರಕಟಿಸಿರುತ್ತೇನೆ. ಅದನ್ನು ನೀನು ಓದಿ ನೋಡಿರುತ್ತೀಯೆ. ಅವನ ಸ್ವಭಾವವು ದೇಶಕೇನಿಗಿಂತ ಬಂಧುಮಿತ್ರ ಸಮೂಹದಲ್ಲೇ ಚೆನ್ನಾಗಿ ವಿದಿತವಾಗಿದ್ದಿತು. ದೇಶಸೇವೆಯಲ್ಲಿ ಅವನು ತೋರಿಸಿದ ಧೈರ್ಯವೂ ತ್ಯಾಗವು, ದೇಶಭಕ್ತಿಯೂ ಅತ್ಯಂತವಾಗಿರುವದಲ್ಲದೆ ಚಿರಸ್ಮರಣೀಯವಾಗಿರುವವು. ಅವನ ಪ್ರೇಮಸ್ವಭಾವವೂ, ಅವರ ರಸಪೂರ್ಣ ವಿನೋದಗಳೂ, ಔದಾರ್ಯವೂ, ವಾತ್ಸಲ್ಯಯುಕ್ತವಾದ ಸಹಾಯಕಾರ್ಯತತ್ಪರತೆಯೂ, ಪವಿತ್ರ ಸಂಪದವೂ ಪ್ರತ್ಯೇಕವಾದ ಕಾರ್ಯಪ್ರಿಯತ್ವವೂ. ಆಸ್ತಿಕತೆಯೂ, ಸದ್ವಿವೇಕದ ಸಹಜ ಹರಿಭಕ್ತಿಯೂ ಅವನ ಆಪ್ತರಿಗೆ ವಿನಾ ಇತರರಿಗೆ ಸರಿಯಾಗಿ ತಿಳಿಯಲವಕಾಶವಿಲ್ಲವು. ಅವನ್ನು ಅನುಗ್ರಹಿಸಿಕೊಳ್ಳುವ ಭಾಗ್ಯವು ನನಗೆ ಲಭಿಸಿದ್ದರಿಂದಲೇ ಅಂತಹ ಸುಗುಣನಿಧಿಯು ಅಕಾಲ ಮೃತ್ಯುವಿನ ಮುಖದಲ್ಲಾಗಿ ದುಃಖಾಂಬುಧಿಯಲ್ಲಿ ಮುಳುಗಿರುವೆನು. ಕವಿಗೆ ಸಹಜವಾದ ಭಾವನೆಯೂ ಧೀರನಿಗೆ ಸಹಜವಾದ ಕಾರ್ಯನಿರತೆಯೂ, ಕರ್ಮಯೋಗಿತ್ವವೂ, ವೈರಾಗ್ಯವೂ ಅವನಲ್ಲಿ ಚೆನ್ನಾಗಿ ವಿಕಸಿತವಾಗಿದ್ದವು. ಕವಿಗೆ ಸಹಜವಾದ ಧೀಶಕ್ತಿಯು ಕಾರ್ಯವಾಹಕವಾಗಿದ್ದಿತು. ಧೀಶಕ್ತಿಗೆ ಭಾವನಾಶಕ್ತಿಯೂ, ಧೈರ್ಯಕ್ಕೆ ಅನುಕೂಲವೂ, ಆತ್ಮವಿಶ್ವಾಸಕ್ಕೆ ದೂರದೃಷ್ಟಿಯೂ ಸಹಕಾರಿಗಳು. ಅಂತಹ ಮಹನೀಯನಿಗೆ ಅರ್ಧಾಂಗಿಯೂ, ಸಹಚಾರಿಣಿಯೂ ಪ್ರೇಮಾಸ್ಪದಳೂ ಆಗಿದ್ದ ನಿನ್ನ ಪೂರ್ವಜನ್ಮದ ಪುಣ್ಯವು ಎಷ್ಟು ಘನವಾದುದು! ವಿಪತ್ತಿನಲ್ಲಿಯೂ, ಸಂಪತ್ತಿನಲ್ಲಿಯೂ, ಭೋಗದಲ್ಲಿಯೂ, ತ್ಯಾಗದಲ್ಲಿಯೂ ನೀನು ಸಮಭಾಗಿನಿಯಾಗಿದ್ದೆ. ನಿನ್ನ ಪತಿಯಲ್ಲಿಯೂ ಸಮಗದಲ್ಲಿದ್ದು, ಸೇವೆಯ ದಿವ ಮತ್ತು ದಾರಿದ್ರ್ಯವನ್ನು ಸ್ವೀಕರಿಸಿ ಸ್ವತ್ಯಾಗ ಮಾಡಿ ಅಖಿಲ ಭಾರತ ಜನರ ವಂದನೀಯಳಾಗಿರುವೆ. ಇಂತಹ ಅವಸ್ಥೆಯಲ್ಲಿ ಮಹಾತ್ಮರು ನಿನ್ನ ಸಮೀಪದಲ್ಲಿರುವದೊಂದು ಅದೃಷ್ಟವೇ ಸರಿ. ದುಃಖದ ಮರಣವನ್ನು ಹೊಂದುವುದಕ್ಕೆ ಕೆಲ ದಿನಗಳ ಪೂರ್ವ ಮಹಾತ್ಮರು ಡಾರ್ಜಿಲಿಂಗಿನಲ್ಲಿ ನಿಮ್ಮ ಮನೆಯಲ್ಲಿ ಕೆಲ ದಿನಗಳವರೆಗಿದ್ದುದರಿಂದ ಮಹಾತ್ಮರೂ, ದಾಸರೂ ಪರಸ್ಪರ ಮನೋಭಾವವನ್ನು ಸರಿಯಾಗಿ ತಿಳಿದುಕೊಳ್ಳಲು ಅವಕಾಶವಾದುದಕ್ಕಾಗಿ ನಾನು ಬಹಳವಾಗಿ ಸಂತೋಷಿಸುತ್ತೇನೆ. ಕೆಲ ವಿಷಯಗಳಲ್ಲಿ ಮಹಾತ್ಮರು ಪಟ್ಟು ಹಿಡಿಯುವರು. ಸಂತಾಪವನ್ನು ಗ್ರಹಿಸುವಲ್ಲಿ ಸ್ತ್ರೀಯರಿಗಿರುವ ಅದ್ಭುತಶಕ್ತಿಯು ಮಹಾತ್ಮರಿಗೆ ಸಂಪೂರ್ಣವಾಗಿರುವದು. ಅವರು ದುಃಖಿತರ ಮನಸ್ಸನ್ನು ಸಮಾಧಾನ ಪಡಿಸುವ ವಿಧಾನವು ಪ್ರಶಂಸನೀಯವಾದುದು. ಈ ಸಮಯದಲ್ಲಿ ನಿನ್ನ ದುಃಖಶಾಂತಿಯನ್ನು ಮಾಡುವ ಪ್ರಯತ್ನದಲ್ಲಿ ಮಹಾತ್ಮರ ದುಃಖವೂ ಶಾಂತಿಯಾಗುವುದು.

ದೇಹಾಲಸ್ಯದಿಂದ ವಿಶ್ರಾಂತಿಯನ್ನು ಹೊಂದುವುದಕ್ಕಾಗಿ ಇಲ್ಲಿಯ ನಮ್ಮ ಮನೆಗೆ ಬಂದಿರುವೆನು. ಮತ್ತು ಕೂಡಲೇ ಮುಂಬಯಿಗೆ ಹೊರಡುವವಳಾಗಿರುವೆನು. ಅವಕಾಶವಾದಲ್ಲಿ ಅಲ್ಲಿಂದ ಕಲಕತ್ತೆಗೆ ಬರಬೇಕೆಂದಿರುವೆನು. ದಾಸರವರು ಮಾಡಬೇಕಾಗಿದ್ದ ಕಾರ್ಯವನ್ನು ನೆರವೇರಿಸುವ ಭಾರವು ನಮಗೆಲ್ಲರ ಮೇಲೂ ಬಿದ್ದುದಾಗಿರುತ್ತದೆ. ಸಾಧ್ಯವಾದಷ್ಟು ಜಾಗ್ರತೆಯಲ್ಲಿ ನಿನ್ನ ದರ್ಶನಕ್ಕೆ ಬರುವವಳಾಗಿರುವೆನು. ನೀನು ನಿರಾಳವಾಗದೆ ಧೈರ್ಯವಿಶ್ವಾಸಯುಕ್ತಳಾಗಿರುವಿಯೆಂದು ನಂಬುತ್ತೇನೆ. ಮಹಾರಾಜನು ಕಾಲವಶವಾದುದರಿಂದ, ರಾಜ್ಯಭಾರವು ಈಗ ಮಹಾರಾಣಿಯವರಾದ ನಿನ್ನ ಮೇಲೆ ಬಿದ್ದದಾಗಿದೆ. ಪ್ರಜೆಗಳ ಹೃದಯವೇ ನಿನ್ನ ಸಾಮ್ರಾಜ್ಯವು. ನಿನ್ನ ಕುವರ ಕುವರಿಯನ್ನು ಬಹಳವಾಗಿ ಕೇಳಿದ್ದೇನೆಂದು ಹೇಳುವುದು.

ಅತಿ ಸಖೀ ಸರೋಜಿನೀ

— ಸ್ವದೇಶಾಭಿಮಾನಿ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. ರಿಜಿಸ್ಟರ್ಡ

ದಪ್ಪವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಅಂತಹ ಕೇಶರಾಶಿಯನ್ನು ನೀಯುವಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ.

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಆವಶ್ಯಕ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುವದರಿಂದ ಮಸ್ತಕದ ಬೇನೆಯು ಶಮನವಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಅದನ್ನು ಹಚ್ಚದೆ ಹೋಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗುವದಿಲ್ಲ, ಅದರ, ಅವು ದಟ್ಟವಾಗಿ ಬೆಳೆದು ನಯವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತನ್ನ ಹಣವನ್ನೂ ಕಳೆಯದೆ, ಹಾನಿಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ವೆಂಬ್ಲೀ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಅನೇಕ ಸಾವಿರಾರು ಗೃಹಸ್ಥರ ಉತ್ತಮ ತರದ ಪ್ರಮಾಣಪತ್ರಗಳೂ ದೊರೆತಿವೆ.

ಕ್ರಯ :— ಸೀಸೆಗೆ ರೂಪಾಯಿ 1-0-0, ಸೀಸೆ ೩ಕ್ಕೆ ರೂಪಾಯಿ 2-10-0 ವ್ಹಿ. ಪಿ. ಖರ್ಚ 0-14-0.



ಅತಿ ಮನೋಹರವಾದ ಸುರಭಿಯು!

ಒಟ್ಟೋ-ದಿಲ್ ಬಹಾರ್ !! ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯಂತ ಹಿತವಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಪುಷ್ಪಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವರ್ಗೀಯವಾತಾವರಣವೆಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ವಿಜಯ ಮಾಡುವದನ್ನು ತನ್ನ ಶಕ್ತಿಯಿಂದ ತೋರಿಸಿಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8-0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0-12-0.

Address:- **The Anglo Indian Drug & Chemical Co.**

16, Market, **BOMBAY 2**

ದಾರ್ಜಿಲಿಂಗದಲ್ಲಿ ಲೋಕೋಪಕಾರಿ ವಿಭೂತಿಗಳ ಮಾತುಕಥೆ!

ಪ್ರಸ್ತಾವನೆ

ಮಹಾತ್ಮರು 'ಯಂಗ ಇಂಡಿಯಾ' ಪತ್ರಿಕೆಯ ಜುಲೈ ತಾ ೧೬ ನೇ ಗುರುವಾರದ ಸಂಚಿಕೆಯಲ್ಲಿ ದಾರ್ಜಿಲಿಂಗದಲ್ಲಿ ತಮಗೂ, ದೇಶಬಂಧುಗಳಿಗೂ ನಡೆದ ಮಾತುಕಥೆಗಳನ್ನು ಚಿತ್ತವೇಧಕವಾಗಿ ನಿವೇದಿಸಿರುವರು ಮಹಾತ್ಮರು ಬರೆಯುವದೇನಂದರೆ —

ದಾರ್ಜಿಲಿಂಗದಲ್ಲಿ ದೇಶಬಂಧುಗಳೊಡನೆ ೫ ದಿನಗಳ ವರೆಗೆ ನಡೆಸಿದ ಪ್ರೇಮದ ಸಂಗತಿಗಳನ್ನು ವಾಚಕರಿಗೆ ಅರುಹಲು ನಾನು ವಚನ ಕೊಟ್ಟಿದ್ದೆ. ಈ ಸಂಗತಿಗಳು ತೀರ ಅಮೂಲ್ಯವೆಂದು ನಾನು ಮೊದಲೇ ಹೇಳಿದ್ದೇನೆ. ಕಾಲಕ್ರಮಣವಾದಹಾಗೆ ಅವು ಮತ್ತಷ್ಟು ಅಮೂಲ್ಯವೆಂದು ನನಗೆ ಗ್ರಹಿಕೆಯಾಗುತ್ತದೆ. ಏಕೆಂದು ನಾನು ವಾಚಕರಿಗೆ ಹೇಳಬೇಕು. ದೇಶಬಂಧುಗಳೊಡನೆ ಈ ಮುಂಚೆ ನಾನು ಉಳಕೊಂಡಿದ್ದೆ. ಆದರೆ, ಆಗ ಬರೇ ರಾಜಕಾರಣಕ್ಕಾಗಿ ನಾವು ಮಿಲಿತವಾಗಿದ್ದೆವು. ನಮ್ಮ ನಮ್ಮ ವಿಶಿಷ್ಟ ಕಾರ್ಯಕ್ಷೇತ್ರಗಳಲ್ಲಿಯೇ ನಾವು ನಿರತರಾಗಿದ್ದೆವು. ಆದರೆ, ದಾರ್ಜಿಲಿಂಗದಲ್ಲಿ ಈ ಭೇದ ಇದ್ದಿಲ್ಲ. ದೇಶಬಂಧುಗಳು ಸಂಪೂರ್ಣವಾಗಿ ನನ್ನ ಸ್ವಾಧೀನವಿದ್ದರು ದೇಶಬಂಧುಗಳು ವಿಶ್ರಮಿಸುತ್ತಿದ್ದರು ಅವರ ಅಂತರಂಗದೊಡನೆ ನನ್ನ ಅಂತರಂಗವನ್ನು ಮಿಲಿತ ಮಾಡಿ ಬೋಧ ಪಡೆಯಲು ನಾನು ಹೋಗಿದ್ದೆ. ದಾರ್ಜಿಲಿಂಗಕ್ಕೆ ವಿಶ್ರಾಂತಿಗಾಗಿ ಹೋಗಿದ್ದೆನೆಂಬುದು ಬರೇ ನೆವವು. ದೇಶಬಂಧುಗಳ ಸಾನ್ನಿಧ್ಯವಿರದಿದ್ದರೆ, ನಾನು ಅಲ್ಲಿ ಹೋಗುತ್ತಿದ್ದಿಲ್ಲ ಹಾಗೂ ಹೋಗಬಹುತ್ತಿದ್ದಿಲ್ಲ

ಮಹಾತ್ಮರಿಗೆ ದೇಶಬಂಧುಗಳ ಆಜ್ಞೆ

ದೇಶಬಂಧುಗಳು ಪೆನಹಿಲಿನಿಂದ ಕೆಲ ದಿನಗಳ ಮೊದಲು ನನಗೊಂದು ಟಪ್ಪಾಲ ಕಳಿಸಿದ್ದರು ಅವರು ಬರೆದದ್ದೇನಂದರೆ— "ನೀವು ನನ್ನ ಅಧಿಕಾರಕ್ಷೇತ್ರದಲ್ಲಿರುವಿರೆಂದು ನೆನಪಿನಲ್ಲಿಡಿರಿ. ನಿಮ್ಮ ಸ್ವಾಗತ ಮಂಡಳದ ಸಭಾಪತಿಯು ನಾನು. ನಿಮ್ಮ ಪ್ರವಾಸ ಸ್ಥಳಗಳಲ್ಲಿ ದಾರ್ಜಿಲಿಂಗವನ್ನು ಸೇರಿಸಲೇ ಬೇಕು ನನ್ನ ಆಜ್ಞೆ ಇದು." ಈ ಮಧುರ ಟಪ್ಪಾಲವನ್ನು ನಾನು ಕಾಯ್ದಿಟ್ಟಿಕೊಳ್ಳಬೇಕಿತ್ತು. ಅಯ್ಯೋ! ಇಂಥ ಅನೇಕ ಕಾಗದಗಳಂತೆ ಈ ಟಪ್ಪಾಲವೂ ಕಳೆದುಹೋಗಿದೆ. ನನ್ನೊಡನೆ ಕಾರ್ಯಕಾರಿ ಕಮಿಟಿಯನ್ನು ಕರೆಬೇಕಾಗುವದೆಂದು ನಾನು ವಾದಿಸಿದೆ. "ಹಾಗಾದರೆ, ಅದೇ ಕಮಿಟಿಯನ್ನು ಕರೆದು ಅವರ ಉಳಕೊಳ್ಳುವ ವ್ಯವಸ್ಥೆಯನ್ನು ನಾನು ಮಾಡುತ್ತೇನೆ, ಬಂಗಾಲ ಪ್ರಾಂತಿಕ ಕೊಂಗ್ರೆಸ ಕಮಿಟಿಯು ಸಭಾಸದರ ಪ್ರಯಾಣ ಖರ್ಚನ್ನು ಕೊಡಬೇಕು. ಇದರಂತೆ [illegible] ನಾನು ಶಾಂತಿ ಪಡೆಯುತ್ತೇನೆ," ಎಂದು ಶಾಂತಿಯಿಂದ ನನಗೆ ಉತ್ತರ ಕೊಟ್ಟರು. ದಾರ್ಜಿಲಿಂಗಕ್ಕೆ ಕಾರ್ಯಕಾರಿ ಕಮಿಟಿಯನ್ನು ಒಯ್ಯಲು ಬರಲಿಲ್ಲ. ಆದರೆ, ಸಭೆ ಮುಗಿದ ಬಳಿಕ, ಅದಷ್ಟು ತೀವ್ರವೇ ನಾನು ಬರುತ್ತೇನೆಂದು ತಿಳಿಸಿದೆನು. ಅದರಂತೆ ನಾನು ಅಲ್ಲಿ ಹೋದೆನು. ೨ ದಿನ ಅಲ್ಲಿ ನಿಲ್ಲಬೇಕೆಂದು ನಾನು ಬಯಸಿದ್ದೆ. ದೇಶಬಂಧುಗಳು ೫ ದಿನಗಳ ವರೆಗೆ ನನಗೆ ಅಲ್ಲಿ ನಿಲ್ಲಿಸಿಕೊಂಡರು. ವಾಸಂತಿ ದೇವಿಯವರಿಗೆ ಆಜ್ಞಾಪಿಸಿ ನನ್ನ ಆಸಾಮದ ಪ್ರವಾಸ ಕಾರ್ಯಕ್ರಮವನ್ನು ೩ ದಿನ ಮುಂದರಿಸಬಹುದೆಂದು ಶ್ರೀ ಫೂಕನ್‌ರವರಿಗೆ ತಿಳಿಸಲಾಯಿತು. ಮತ್ತು ಸ್ವತಃ ತಮ್ಮ ಬಂಗಾಲ ದೊಳಗಿನ ಪ್ರವಾಸವನ್ನು ೩ ದಿನಗಳಿಂದ ಮುಂದರಿಸಿದರು. ನಾವು ಅನ್ಯೋನ್ಯರುಗಳಿಗೆ ಎಷ್ಟೊಂದು ಹತ್ತಿರ ಆತುರರಾಗಿದ್ದರೆಂಬುದು ಈ ವಿಷಯದ ಮೇಲಿಂದ ತಿಳಿಯುವದು [illegible] ದೇಶಬಂಧುಗಳ [illegible] ನಾ[illegible] ಮಾಡಲು ಶಕ್ಯವಾಗುವದಿಲ್ಲ.

ದೇಶಬಂಧುಗಳ ಆತಿಥ್ಯಸತ್ಕಾರ!

ದೇಶಬಂಧುಗಳು [illegible] ಅಸ್ವಸ್ಥರಾಗಿದ್ದರು ಅವರ [illegible] ನನ್ನ ಜೊತೆಗಾರರಿಗೆ [illegible] ನನ್ನ ಬಗ್ಗೆ ಪ್ರತಿಯೊಂದು ವಿಷಯದಲ್ಲಿ [illegible] ಅವರ ಅತಿಥಿಸತ್ಕಾರವು [illegible] ಅವರ [illegible] ೫ ದಿನಗಳನ್ನು ಕಳೆದೆನು. (ಮಹಾತ್ಮರು [illegible] ಒಂದು [illegible] ನಾಲ್ಕು ಪಾವು ಹಾಲು [illegible] ವಾಸಂತಿ ದೇವಿಯವರ ಸತ್ಕಾರವನ್ನು ನಾನು ಅನೇಕಾವರ್ತಿ [illegible] ಆದರೆ, ದಾರ್ಜಿಲಿಂಗದಲ್ಲಿ ದೇಶಬಂಧುಗಳು ಸ್ವತಃ ನನಗೆ ಒತ್ತಿಕೊಟ್ಟು ಸತ್ಕಾರಮಾಡಿದರು [illegible] ಅತಿಥಿಸತ್ಕಾರವು ಅವರ [illegible] ತಮ್ಮ ಪ್ರಚಂಡ [illegible] ಅನೇಕ ಚಿತ್ತವೇಧಕ ಕಥೆಗಳನ್ನು ಅವರು ನಿವೇದಿಸಿದರು [illegible] ದೇಶಬಂಧುಗಳು ವಿಶೇಷ ಪೂಜ್ಯಭಾವದಿಂದ ನಡಿಸಿಕೊಳ್ಳುತ್ತಾರೆಂದು ದಾರ್ಜಿಲಿಂಗದಲ್ಲಿಯೇ ನನಗೆ ತಿಳಿಯಿತು. ಬಂಗಾಲದಲ್ಲಿ ಕೈ ನೂಲು ನೂತು ಖಾದಿಯ ಕೆಲಸ ಮಾಡುವರಿಗೆ ನಾವೊಂದು ಕಾರ್ಯಕ್ರಮವನ್ನು ನಿಶ್ಚಯಿಸಿದ್ದೆವು. ಅದನ್ನು ಜಾರಿಗೆ ತರಲು ಖಾದಿಪ್ರತಿಷ್ಠಾನದ ಸತೀಶ ಬಾಬುರವರಿಗೆ ಕರೆಯಲು ದೇಶಬಂಧುಗಳೇ ಹೇಳಿದರು. ಸತೀಶ ಬಾಬುರವರು ಎಲ್ಲಿ ಉಳಿಯಬೇಕೆಂದು ನಾನು ಕೇಳಿದೆನು. "ಇದೇ ಈ ಮನೆಯಲ್ಲಿ" ಎಂದು ದೇಶಬಂಧುಗಳು ಉದ್ಗರಿಸಿದರು. 'ಆದರೆ, ಇಲ್ಲಿ ಜನಸಂದಣಿ ಇದೆ,' ಎಂದು ನಾನು ಹೇಳಿದಕ್ಕೆ 'ಇಲ್ಲ, ಇಲ್ಲ, ಬೇಕಾದರೆ ನನ್ನ ಕೋಣೆಯಲ್ಲಿಯೇ ಅವರು ಉಳಕೊಳ್ಳಲಿ" ಎಂದು ದೇಶಬಂಧುಗಳು ಪ್ರತ್ಯುತ್ತರ ಕೊಟ್ಟರು. ನಾನು ದೇಶಬಂಧುಗಳಿಗಾಗಿ ಅವಿಶ್ರಾಂತ ದುಡಿಯುತ್ತಿದ್ದ ಅವರ ಅರ್ಧಾಂಗಿಗಾಗಿ ಚಿಂತಿಸುತ್ತಿದ್ದೆ ದೇಶಬಂಧುಗಳು ಸತೀಶ ಬಾಬುರವರ ಅನುಕೂಲತೆಗಳನ್ನು ಆಲೋಚಿಸುತ್ತಿದ್ದರು ದೇಶಬಂಧುಗಳು ಮುಂದರಿಸಿ ನುಡಿದದ್ದೇನಂದರೆ — 'ಮತ್ತೂ ಒಂದು ಕಾರಣವಿದೆ; ಸತೀಶ ಬಾಬುರವರ ವಿಷಯ ನನ್ನ ಮನಸ್ಸು ಕಲುಷಿತವಾಗಿರುವದೆಂದು ಸತೀಶ ಬಾಬುರವರ ಗ್ರಹಿಕೆಯಾಗಿದೆ. ಅವರು ನನ್ನ ವಿಶೇಷ ಪರಿಚಯದವರಲ್ಲ. ಇತರ ಮಿತ್ರರಿಗಾಗಿ ನಾನು ಅಷ್ಟು ಹಂಬಲಿಸುವದಿಲ್ಲ, ಅವರು ನನ್ನ ವಿಷಯ ತಪ್ಪು ಗ್ರಹಿಕೆ ಮಾಡಿಕೊಳ್ಳಬಾರದು. ಸತೀಶ ಬಾಬುರವರು ಇದೇ ಮನೆಯಲ್ಲಿ ಉಳಕೊಳ್ಳಬೇಕು.

ದೇಶಬಂಧುಗಳ ನಿರ್ಮಲ ರಾಜಕಾರಣ.

ಬಂಗಾಲದೊಳಗಿನ ಬಿನ್ನ ಭಿನ್ನ ರಾಜಕಾರಣ ಪಕ್ಷಗಳ ಕುರಿತು ನಾವು ಮಾತಾಡಿದ್ದೆವು ಹೀಗೆ ಮಾತಾಡುವಾಗ ಸ್ವರಾಜ್ಯಪಕ್ಷದ ಮೇಲೆ ಲಂಚ ತಿಂದ ಹಾಗು ನೀತಿಭ್ರಷ್ಟತೆಯ ಆರೋಪಗಳನ್ನು ನಾನು ದೇಶಬಂಧುಗಳಿಗೆ ಹೇಳಿದೆನು. ಬಂಗಾಲದ ಪ್ರವಾಸವನ್ನು ಮುಗಿಸಿ ಮರಳಿ ಹೋಗುವಾಗ ನನಗೆ ಸರ್ ಸುರೇಂದ್ರನಾಥರು ತಮ್ಮಲ್ಲಿಗೆ ನಿಮಂತ್ರಿಸಿದ್ದರೆಂದು ನಾನು ದೇಶಬಂಧುಗಳಿಗೆ ಹೇಳಿದೆನು. ಅದಕ್ಕೆ ಅವರು ಉದ್ಗರಿಸಿದ್ದೇನಂದರೆ:— "ತಪ್ಪದೆ ಹೋಗಿರಿ; ನಮ್ಮೊಳಗೆ ನಡೆದ ಸಂಭಾಷಣೆಗಳನ್ನೆಲ್ಲ ಅವರಿಗೆ ಅರುಹಿರಿ. ಲಂಚ ತಿಂದ ಹಾಗು ನೀತಿಭ್ರಷ್ಟತೆಯ ಆರೋಪಗಳನ್ನೆಲ್ಲ ನಾನು ಬಹಿರಂಗವಾಗಿ ನಿರಾಕರಿಸುತ್ತೇನೆಂದೂ ಅವರಿಗೆ ತಿಳಿಸಿರಿ. ನನ್ನ ಪಕ್ಷದ ಮೇಲಿನ ಇಂಥ ಒಂದು ಆರೋಪವು ಸಹ ಸಿದ್ಧವಾದಲ್ಲಿ ನಾನು ಈ ಸಾರ್ವಜನಿಕ ಚಳವಳಿಯನ್ನು ತೊರೆಯಲು ಸಿದ್ಧನಾಗಿದ್ದೇನೆ. ಸತ್ಯಸ್ಥಿತಿಯನ್ನು ಹೇಳಬೇಕೋ, ಬಂಗಾಲದ ರಾಜಕಾರಣವು ಪರಸ್ಪರ ಹೊಟ್ಟೆಕಿಚ್ಚಿನದು ಹಾಗು ಚಾಡಿ ಹೇಳುವದು. ಸ್ವರಾಜ್ಯಪಕ್ಷದ ಪ್ರಚಂಡ ಉನ್ನತಿಯೂ, ಯಶಸ್ಸೂ ಅನೇಕರಿಗೆ ಅಸಹ್ಯವಾಗಿದೆ. ಆದರಿಂದ ನಿಮಗೆ ನಾನು ಹೇಳುವದೇನಂದರೆ — ಈ ಪಕ್ಷದ ಮೇಲೆ ಬಂದ ಆರೋಪಗಳನ್ನೆಲ್ಲ ನೀವು ಸಂಪೂರ್ಣವಾಗಿ ವಿಚಾರಿಸಿರಿ; ಮತ್ತು ನಿಮ್ಮ ತೀರ್ಪು ಕೊಡಿರಿ. ನಿಮ್ಮಂತೆ ನಾನೂ ಅಪ್ರಮಾಣಿಕತನವನ್ನು ಸಹಿಸುವವನಲ್ಲ. ನಮ್ಮ ರಾಷ್ಟ್ರವು ಅಪ್ರಾಮಾಣಿಕ ಉಪಾಯಗಳಿಂದ ಸ್ವತಂತ್ರವಾಗದೆಂದು ನನ್ನ ಮತವು. ನೀವು ಸಮಸ್ತ ಪಕ್ಷಗಳಲ್ಲಿ ಐಕ್ಯ ಮಾಡಿದರೆ, ಅಥವಾ ಪರಸ್ಪರ ನಡೆದಿರುವ ದೋಷದೃಷ್ಟಿಯನ್ನು ಪರಿಹರಿಸಿದರೆ, ಅದೊಂದು ವಿಶೇಷ ಸೇವೆಯಾಗುವದು. ಶ್ಯಾಮಬಾಬು ಹಾಗು ಸುರೇಶಬಾಬುರವರಿಗೆ ಮುದ್ದಾಂ ಭೆಟ್ಟಿಯಾಗಿ ಬನ್ನಿರಿ. ಅವರಿಗೆ ಅನನುಕೂಲವಾದರೆ, [illegible] ಬಂದರೆ, ಅವರು ನನ್ನ ಹತ್ತರ ಯಾಕೆ ಬಾರಬಾರದು? ನಮ್ಮ-ನಮ್ಮೊಳಗೆ ಮತಭೇದವಿರಬಹುದು. ಆದರೆ ಮೇಲಿಂದ ನಾವು ಪರಸ್ಪರ ಗುದ್ದಾಡಬೇಕೆಂದಿಲ್ಲ" "ಫಾರವರ್ಡ" ಪತ್ರಿಕೆಯ ಮೇಲೂ ಇದೇ ನಮೂನೆಯ ಆರೋಪ ಬಂದಿದೆ. ಆ ಬಗ್ಗೆ ನಿಮ್ಮ ಅಭಿಪ್ರಾಯವೇನು? ನಾನು ಈ ವರ್ತಮಾನ ಪತ್ರಗಳನ್ನು ಓದುವದಿಲ್ಲ. ನನಗೇನೂ ಗೊತ್ತಿಲ್ಲ ಆದರೆ, 'ಫಾರವರ್ಡ' ಪತ್ರಿಕೆಯ ವಿಷಯ ಇದೇ ನಮೂನೆಯ ದೂರುಗಳನ್ನು ನಾನು ಕೇಳಿದ್ದೇನೆ" ಎಂದು ನಾನು ಮಧ್ಯದಲ್ಲಿಯೇ ನುಡಿದೆನು. "ಹೌದು." ದೇಶಬಂಧುಗಳು ಮುಂದಾದರು, "ಫಾರವರ್ಡ ಪತ್ರಿಕೆಯು ತಪ್ಪು ಮಾಡಿದ್ದಿರಬಹುದು. ನೀವು 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಬರೆಯುವಂತೆ, ಅಥವಾ ಆ ಪತ್ರಿಕೆಯ ಮೇಲೆ ಮೇಲ್ವಿಚಾರಿಸುವಂತೆ, 'ಫಾರವರ್ಡ' ಪತ್ರಿಕೆಯಲ್ಲಿ ನಾನು ಬರೆಯುವದಿಲ್ಲ. ಅಥವಾ ನಾನು ಮೇಲ್ವಿಚಾರಿಸುವದಿಲ್ಲ. ಇದನ್ನು ನೀವು ಅರಿತಿರುವಿರಿ. ಆದರೆ, ಜನರು ಇಂಥ ಪ್ರಕಾರಗಳನ್ನು ನನ್ನ ಲಕ್ಷ್ಯಕ್ಕೆ ತಂದಲ್ಲಿ ನಾನು ಅವನ್ನು ಸಂತೋಷದಿಂದ ವಿಚಾರಿಸಿ ಚೌಕಶಿ ನಡಿಸಿ ತಿದ್ದುವದಿ ಮಾಡುವೆನು 'ಫಾರವರ್ಡ' ಪತ್ರಿಕೆಯು ಯಾವಾಗಲೂ ಸ್ವರಕ್ಷಣ ಮಾಡಿಕೊಳ್ಳುತ್ತದೆ ಪ್ರಸಕ್ತಿಯಲ್ಲಿ ಆತ್ಮರಕ್ಷಣದ ಸೀಮೆಯನ್ನು ಮೀರಿ ಹೋಗಬಹುದು. 'ಫಾರವರ್ಡ' ಪತ್ರಿಕೆಯಲ್ಲಿ ಸದ್ಯಕ್ಕೆ ಪ್ರಕಟವಾದ ಒಂದು ಹೇಳಿಕೆಯು ಅತ್ಯಂತ ಅತಿಶಯೋಕ್ತಿಯುದೆಂದು ನನಗೆ ತೋರುತ್ತದೆ ಈ ವಿಷಯ ನಾನೀಗ ಚೌಕಶಿ ನಡಿಸುತ್ತಿದ್ದೇನೆ. ಈ ಕುರಿತು ನಾನು ತೀವ್ರ ನಿಷೇಧ ಮಾಡಿ ಬರೆದಿರುವೆನೆಂದು ನಿಮಗೆ ಹೇಳುವೆನು ಲೇಖಕರಿಗೂ ನಾನು ಕರೆ ಕಳುಹಿಸಿದ್ದೇನೆ" ಹೀಗೆ ನಮ್ಮ ಸಂಭಾಷಣೆಯು ಮುಂದರಿಯಿತು. ಅದರ ಮೇಲಿಂದ ವಿರೋಧಕರಿಗೆ ನ್ಯಾಯದಿಂದ ನಡಿಸಿಕೊಳ್ಳಲಿಕ್ಕೆ, ಸಮಸ್ತ ಪಕ್ಷಗಳಿಗೆ ಸ್ವಾಭಿಮಾನದಿಂದ ಕೂಡಿಕೊಳ್ಳಲಿಕ್ಕೆ ದೇಶಬಂಧುಗಳು [illegible] ವಹೆಯನ್ನು ಸ್ಮರಿಸಿ ದುಡಿಯುತ್ತಿದ್ದರೆಂದು ನನಗೆ ತಿಳಿಯಬಂತು.

ತಿದ್ದುವದು ಬೇಡ!

"ಸಮಸ್ತ ಪಕ್ಷಗಳ ಪರಿಷತ್ತು ಕೂಡಿಸಲು ನಿಮ್ಮ ಅಭಿಪ್ರಾಯವೇನು? ಅಥವಾ ಶ್ರೀ ಕೇಳಕರರು ಸೂಚಿಸುವಂತೆ, ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಸಭೆ ಕರೆಯುವ ವಿಷಯ ನಿಮ್ಮ ವಿಚಾರವೇನು? ಎಂದು ನಾನು ಪ್ರಶ್ನಿಸಿದೆನು. ಅದಕ್ಕೆ ನನಗೆ ಬೇಕಾಗಿಲ್ಲ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ

ದೊಡ್ಡ ಆಶೆ; ದೊಡ್ಡ ನಿರಾಶೆ; ಮುಂದಿನ ಕಾರ್ಯಕ್ರಮವೇನು ?

ಈಗ ನಿಷ್ಪ್ರಯೋಜಕವು. ಸ್ವರಾಜ್ಯ ಪಕ್ಷದವರಾದ ನಾವು ವಚನದಂತೆ ನಡೆದು ಹೊಸ ಮತಾಧಿಕಾರವನ್ನು ಸಂಪೂರ್ಣವಾಗಿ ಪರೀಕ್ಷಿಸಿ ನೋಡಬೇಕು. ಕೈರಾಟಿಯ ವಿಷಯ ನಿಮ್ಮಂತೆಯೇ ನನ್ನ ವಿಚಾರಶ್ರದ್ಧೆಯು ಗಾಢವಾಗಹತ್ತಿದೆಂದು ನಾನು ನಿಮಗೆ ಹೇಳುತ್ತೇನೆ. ನಾವು ವಚನದಂತೆ ಎಲ್ಲ ಕಡೆಯಲ್ಲಿ ನಡಕೊಳ್ಳಲಿಲ್ಲೆಂದು ನನಗೆ ತೋರುತ್ತದೆ. ಬಂಗಾಲದಲ್ಲಿ ಯಾವ ಪಕ್ಷವೂ ನಿಮ್ಮನ್ನು ವಿರೋಧಿಸಲಿಲ್ಲೆಂದು ನೀವು ಹೇಳುತ್ತೀರಿ. ನಾನು ಅಸ್ವಸ್ಥನಾಗಿರದಿದ್ದರೆ, ಕೈರಾಟಿಯು ತನ್ನ ಜೋಳಿಗೆಯಿಂದ ಮೋಕ್ಷವನ್ನು ಸಂಪಾದಿಸಹತ್ತಿದೆಂದು ನಾನು ನಿಮಗೆ ತೋರಿಸುತ್ತಿದ್ದೆನು. ಕೈರಾಟಿಗಾಗಿ ಅಂತಃಕರಣಪೂರ್ವಕವಾಗಿ ದುಡಿಯಲು ನಾನು ತಯಾರಿದ್ದೇನೆಂದು ನಿಮಗೆ ನಾನು ಹೇಳುತ್ತೇನೆ. ಮತ್ತು ಈ ಸಂಘಟನೆಯಲ್ಲಿ ನೀವು ನನಗೆ ನೆರವಾಗಬೇಕೆಂದು ನನ್ನ ಬಯಕೆಯಿತ್ತು. ನೀವೇ ನೋಡುತ್ತೀರಿ; ನಾನು ತೀರ ಅಸಮರ್ಥನಾಗಿರುವೆನು. ಈ ವರುಷ ತಿದ್ದುಪಡಿಯೇನೂ ಆಗಲಾರದು. ಇಷ್ಟೇ ಅಲ್ಲ ಹೊಸ ಮತಾಧಿಕಾರವನ್ನು ಫಲಪ್ರದವನ್ನಾಗಿ ಮಾಡಲು ಸಂತೋಷದಿಂದ ನಾವೆಲ್ಲರೂ ನೆರವಾಗಬೇಕು. ಮಹಾರಾಷ್ಟ್ರ ಮಿತ್ರರಿಗೆ ನಾನು ಈ ಕುರಿತು ಬರೆಯುವವನಿದ್ದೇನೆ."

ದೇಶಬಂಧುಗಳ ಆಶೆ !

ಸಮುಕ್ತ ಪಕ್ಷಗಳ ಪರಿಷತ್ತಿನ ವಿಷಯ ದೇಶಬಂಧುಗಳು ನುಡಿದದ್ದೇನಂದರೆ:— “ಈ ಪರಿಷತ್ತನ್ನು ಈಗಲೇ ನಾವು ಸೇರಿಸಬಾರದು. ಬರ್ಕನ್‌ಹೆಡ್ ದೊರೆಗಳು ದೊಡ್ಡ ಕಾರ್ಯ ನೆರವೇರಿಸುವರೆಂದು ನನ್ನ ಬಯಕೆ ಇದೆ. ದೊರೆಗಳು ವೀರ ಪುರುಷರು. ವೀರ ಪುರುಷರೇ ನನಗೆ ಸೇರುತ್ತಾರೆ. ದೊರೆಗಳ ಮಾತಿನ ಮೇಲಿಂದ ಅವರು ಕೆಟ್ಟ ಸ್ವಭಾವದವರಾದರೆಂದು ಯಾರೂ ಹೇಳಬಹುದು; ಆದರೆ ಅವರು ಅಷ್ಟು ಕೆಡಕು ಬುದ್ಧಿಯವರಲ್ಲ. ನಾವು ಸಭೆ ಸೇರಿದರೆ, ಪರಿಸ್ಥಿತಿಯ ವಿಷಯ ನಾವು ವಿಚಾರಪ್ರದರ್ಶನ ಮಾಡಬೇಕು. ನಾವು ನಮ್ಮ ಬೇಡಿಕೆಗಳನ್ನು ಸಲ್ಲಿಸಿದರೆ, ದೊರೆಗಳಿಗೆ ಗೊಂದಲವಾಗಬಹುದು. ಅವರು ಈಗಲೇ ಅಷ್ಟು ಕೊಡಲು ತಯಾರಿಲ್ಲದಿರಬಹುದು. ನಮ್ಮ ಬೇಡಿಕೆಗಳನ್ನು ತಗ್ಗಿಸಿದರೆ, ದೊರೆಗಳು ನಿರಾಶರಾಗಬಹುದು. ಆದರಿಂದ ನಾವು ನಿರೀಕ್ಷಣೆ ಮಾಡಬೇಕಾಗಿದೆ. ನಿರೀಕ್ಷಣೆಯಿಂದ ನಮಗೇನು ಹಾನಿಯಿಲ್ಲ. ದೊರೆಗಳ ಭಾಷಣವು ಸಮಾಧಾನಕರವಿಲ್ಲದಿದ್ದರೆ, ಆಗ ಸಮಸ್ತ ಪಕ್ಷಗಳ ಪರಿಷತ್ತನ್ನು ಸೇರಿಸಿ, ನಮ್ಮೆಲ್ಲರ ಐಕ್ಯದಿಂದ ಕಾರ್ಯಕ್ರಮವನ್ನು ನಿಶ್ಚಯಿಸಲು ಪ್ರಸಂಗವೊದಗುವದು.”

ಮಹಾತ್ಮರ ಪ್ರತ್ಯುತ್ತರ.

ಪರಿಷತ್ತನ್ನು ಸೇರಿಸದಿರಲು ಇದೊಂದು ಹೊಸ ಕಾರಣವೆಂದು ನನಗನಿಸಿತು. ಆದರಿಂದ ನಾನು ನುಡಿದದ್ದೇನಂದರೆ:— “ನೀವೂ, ಮೋತೀಲಾಲಜಿಯವರೂ ಬಯಸಿದರೆ ಮಾತ್ರ, ಕೆಲವು ಪ್ರಜಾಪ್ರತಿನಿಧಿಗಳು ಅರ್ಜಿ ಕಳಿಸಿದ್ದಲ್ಲಿ ಮಾತ್ರ ನಾನು ಸಭೆ ಸೇರಿಸುವೆನು. ಆದರೆ, ಒಂದು ಮಾತನ್ನು ನಿಮಗೆ ಹೇಳುವೆನು. ನಿಮ್ಮಷ್ಟು ಶ್ರದ್ಧೆಯು (ಬರ್ಕನ್‌ಹೆಡ್ ದೊರೆಗಳ ಮೇಲೆ) ನನ್ನದಿರುವದಿಲ್ಲ. ಹಿಂದೂ-ಮುಸಲ್ಮಾನರ ಬಡಿದಾಟಗಳು ದಿನೇ ದಿನೇ ವೃದ್ಧಿಂಗತವಾಗುತ್ತಿವೆ. ಅವುಗಳ ಕಡೆಗೆ ನೋಡಿರಿ! ಬ್ರಾಹ್ಮಣ-ಬ್ರಾಹ್ಮಣೇತರರ ಜಗಳಗಳನ್ನು ಲಕ್ಷಿಸಿರಿ! ಬಂಗಾಲದೊಳಗಿನ ರಾಜಕೀಯ ಪಕ್ಷಗಳ ಕಡೆಗೆ ದೃಷ್ಟಿ ತಿರುವಿರಿ! ಈಗಿನಕ್ಕಿಂತ ಹಿಂದೆಂದೂ ನಾವು ಬಲಹೀನರಿದ್ದಿಲ್ಲ. ಬ್ರಿಟಿಶರು ಬಲಹೀನರಿಗೆ ಎಂದೂ ಏನೊಂದೂ ಕೊಡುವದಿಲ್ಲೆಂದು ನಿಮಗೆ ಒಪ್ಪಿಗೆಯಾಗುವದಿಲ್ಲವೋ? ಬ್ರಿಟಿಶರು ಏನಾದರೂ ದಯಾದಾನ ಮಾಡುವರೆಂದು ನಿರೀಕ್ಷಣೆ ಮಾಡುವ ಮುಂಚೆ ನಾವು ಸಾಮರ್ಥ್ಯವಂತರಾಗಬೇಕು.”

ಇದನ್ನು ಕೇಳಿದೊಡನೆ ದೇಶಬಂಧುಗಳು ಸ್ವರಣೆಯನ್ನು ತೊರೆದು ನುಡಿದದ್ದೇನಂದರೆ:— “ನೀವು ಕರ್ಕಶ ಸ್ಪಷ್ಟರಂತೆ ಕಾಣಿಸುತ್ತೀರಿ. ನನ್ನ ಮನೋಭಾವನೆಗಳನ್ನು ನಾನು ನಿಮಗೆ ಹೇಳುತ್ತೇನೆ. ನಮಗೆ ದೊಡ್ಡ ದೇಣಗಿಯು ಸಿಗುವದೆಂದು ನನ್ನ ಮನೋಭಾವನೆಯು ನನಗೆ ಹೇಳುತ್ತದೆ.” ನಾನು ಮುಂದೆ ತರ್ಕ ಮಾಡಲಿಲ್ಲ. ಪ್ರಪಂಚನಿಷ್ಠೆಯನ್ನು ನೋಡಿ, ಅದಕ್ಕೆ ಆದರದಿಂದ ತಲೆಬಗ್ಗಿಸಿದೆನು. ಬ್ರಿಟಿಶರ ಶೀಲವು ನನಗೂ ಆದರಣೀಯವಿದೆಂದು ನಾನು ಉದ್ಗರಿಸಿ, ಕೆಲ ಬ್ರಿಟಿಶರು ನನ್ನ ಪರಮ ಮಿತ್ರರೆಂದೂ ನಾನು ಹೇಳಿದೆನು. ಆದರೆ, ದೇಶಬಂಧುಗಳ ನಂಬಿಗೆಯು ನನಗಿಂತ ವಿಶೇಷವಿರುವದೆಂದು ನನಗೆ ತಿಳಿದುಬಂತು. ದೇಶಬಂಧುಗಳ ನಿಧನದಿಂದ ದೊಡ್ಡ ಮಿತ್ರರನ್ನೇ ಬ್ರಿಟಿಶರು ಕಳಕೊಂಡಿರುವರೆಂದು ಅವರು ತಿಳಿಯಲಿ.

(ಬಳಿಕ, ಮಹಾತ್ಮರಿಗೂ, ದೇಶಬಂಧುಗಳಿಗೂ ಕಲಕತ್ತೆಯೊಳಗಿನ ವೀರ ಭಕ್ತಿ, ಹುರಕೇಶ್ವರದ ಭಕ್ತಿ, ಬಿಝಂಟ ಅಮ್ಮನವರ ಸ್ವರಾಜ್ಯ ಕಾಯಿದೆಗಳ ವಿಷಯ ನಡೆದ ಸಂಭಾಷಣವು ಸಂಕ್ಷಿಪ್ತವಾಗಿ ನವ ಹಿಡಿಸಲ್ಪಟ್ಟಿದೆ.)

ಗ್ರಾಮ ಸಂಘಟನೆ.

ಆದರೆ, ನಾವು ಕೈರಾಟಿ ಹಾಗು ಖಾದಿ ಇವುಗಳ ವಿಷಯ ಬಹಳ ಹೊತ್ತು ಮಾತಾಡಿದೆವು. ಗ್ರಾಮಸಂಘಟನೆಗೆ ಇವರಿಂದ ಎಷ್ಟು ಅನುಕೂಲವಾಗುವದೆಂಬದು ಚರ್ಚಿಸಿದೆವು. ಗ್ರಾಮಸಂಘಟನೆಯೆಂದರೆ, ದೇಶಬಂಧುಗಳಿಗೆ ವಿಶೇಷ ಪ್ರೀತಿ. ಅದಕ್ಕಾಗಿಯೇ ಅವರು ಸುಮಾರು ೧೫ ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿದ್ದರು. ನಿಮ್ಮ ಯೋಜನೆಯು ವ್ಯಾಪಕ ಪ್ರಪಂಚವಿದ್ದು ಅದನ್ನು ಕೂಡಲೆ ನೆರವೇರಿಸಲು ಅಶಕ್ಯವೆಂದು ನಾನು ಹೇಳಿದೆನು. ಆ ಯೋಜನೆಯ ಸ್ಥೂಲ ಸ್ವರೂಪವನ್ನು ಪ್ರತಾಪ ಬಾಬುರವರಿಂದ ನನಗೆ ತೋರಿಸಲ್ಪಟ್ಟಿತ್ತೆಂದೂ, ಅದು ಸಂಪೂರ್ಣವಾಗಿ ಅವ್ಯವಹಾರಿಕವಾಗಿರುವದರಿಂದ ಅದಕ್ಕೆ ನಾನು ಎಂದೂ ಸಮ್ಮತಿಸೆನೆಂದೂ ನಾನು ಹೇಳಿದೆನು. ದೇಶಬಂಧುಗಳು ಅದನ್ನು ನೋಡಿದ್ದಿಲ್ಲ. ಅದರಂತೆ ಕಾರ್ಯ ನಡಿಸಲಿಕ್ಕೆ ಆಗದೆಂದು ಅವರು ಒಪ್ಪಿದರು. ಸ್ವತಃ ಪ್ರತಾಪ ಬಾಬುರವರೇ ಯೋಜನೆಯಂತೆ ಕಾರ್ಯಕ್ರಮ ನಡಿಸುವದು ಅಸಾಧ್ಯವೆಂದು ಒಪ್ಪಿದರು. ಕೈರಾಟಿಯನ್ನು ನಮ್ಮ ಗ್ರಾಮಜೀವನದ ಕೇಂದ್ರವನ್ನಾಗಿ ಮಾಡಬೇಕೆಂದೂ, ಕೈರಾಟಿಯ ಸುತ್ತಲೂ ಇತರ ಗ್ರಾಮ ಚಳವಳಿಗಳೆಲ್ಲ ತಿರುಗಬೇಕೆಂದೂ, ಕೈರಾಟಿಯು ಬೇರೂರಿದ್ದಲ್ಲಿ ಅವನ್ನೇ ಕೈಕೊಳ್ಳಬೇಕೆಂದೂ ನಾನು ದೇಶಬಂಧುಗಳಿಗೆ ಹೇಳಿದೆನು. ಗ್ರಾಮಸಂಘಟನೆಯು ರಾಜಕಾರಣದ ಗದ್ದಲದಲ್ಲಿ ಸಿಲುಕಿಕೊಳ್ಳಬಾರದೆಂದು ನಾನು ಸೂಚಿಸಿ, ಗ್ರಾಮಕಾರ್ಯವನ್ನು ಮಾತ್ರ ನಡಿಸಬಲ್ಲ ಯುಕ್ತವಾದ ತಜ್ಞ ಮಂಡಳವನ್ನೊಂದು ನೇಮಿಸಿ, ಅದಕ್ಕೆ ಶಕ್ತಕವಾದ ಅಧಿಕಾರಗಳನ್ನೀಯಬೇಕೆಂದೂ ನಾನು ಸೂಚಿಸಿದೆನು. ದೇಶಬಂಧುಗಳು ಸತೀಶ ಬಾಬುರವರನ್ನು ಕರೆದು ಮಂಡಳವನ್ನೊಂದು ರಚಿಸಹೇಳಬೇಕೆಂದೂ, ರಾಷ್ಟ್ರೀಯ ಸಭೆಯ ವಿಶ್ವಾಸದ ಅವರು ಈ ಕಾರ್ಯ ನಡಿಸಬೇಕೆಂದೂ ನಾನು ಹೇಳಿದೆನು. ನಮ್ಮ ಚರ್ಚೆಯ ತಾತ್ಪರ್ಯವನ್ನಷ್ಟು ಇಲ್ಲಿ ನಾನು ನಮೂದಿಸಿರುವೆನು. ದೇಶಬಂಧುಗಳು ಅದಕ್ಕೆಲ್ಲ ಒಪ್ಪಿಕೊಂಡರು. ಹಾಗು ಟಿಪ್ಪಣಿಗಳನ್ನೂ ಕೇಳಿ ಈ ಯೋಜನೆಯನ್ನು ಕೂಡಲೆ ಉಪಕ್ರಮಿಸಲು ಆತುರರಾದರು. ನಾನು ದಾರ್ಜಿಲಿಂಗದಲ್ಲಿರುವಾಗಲೇ ಸತೀಶ ಬಾಬುರವರೊಡನೆ ಈ ಯೋಜನೆಯನ್ನು ಸಂಪೂರ್ಣವಾಗಿ ಚರ್ಚಿಸಿ, ಕಾಂಗ್ರೆಸ ಕಮೀಟಿಯಲ್ಲಿ ಅವಶ್ಯಕವಿದ್ದ ಠರಾವನ್ನು ಮಂಜೂರ ಮಾಡಲು ಮಾಡಿಸಿ ಕೊಡುತ್ತೇನಾಗಿಯೂ ದೇಶಬಂಧುಗಳು ನುಡಿದರು. ಕೂಡಲೆ, ಸತೀಶ ಬಾಬುರವರಿಗೆ ನಿಮಂತ್ರಣೆಯಾಯಿತು. ಅವರು ಬಂದರು. ಮೊದಲು, ನಾವು ಮೂವರೂ ಕೂಡಿ ಚರ್ಚೆ ಮಾಡಿದೆವು. ಬಳಿಕ, ಇತರ ಕೆಲಸಕ್ಕಾಗಿ ನನ್ನ ಬಿಡುಗಡೆಯಾಯಿತು. ದೇಶಬಂಧುಗಳು ಸತೀಶ ಬಾಬುರವರೊಡನೆ ಅನೇಕ ಸಂಗತಿಗಳ ವಿಷಯ ಮಾತುಕಥೆ ನಡಿಸಿದರು. ಸತೀಶ ಬಾಬುರವರು ಮಂಡಳದ ಮೊದಲನೇ ಸಭಾಸದರು. ಸಾತಕೋರಿ ಬಾಬುರವರು ಎರಡನೇ ಸಭಾಸದರು. ಈ ಇಬ್ಬರೂ ೩ ನೇ ಸಭಾಸದರನ್ನು ಆರಿಸಬೇಕು. ಗ್ರಾಮಸಂಘಟನೆಗಾಗಿ ಸಂಗ್ರಹಿಸಿದ ನಿಧಿಯೊಳಗಿಂದ ಕೆಲವು ಹಣ ಅವರ ಸ್ವಾಧೀನದಲ್ಲಿಡಬೇಕು. ಜಲಪೈಗುರಿಯಲ್ಲಿ ಅರ್ಪಿಸಿದ ನಿಧಿಯೊಳಗಿಂದ ಕೆಲವು ಹಣವನ್ನು ಈ ಬೋರ್ಡಿಗೆಯೂ ಕಮಿಟಿಗೆ ನಾನು ಕೊಡಬೇಕು. ಕಮಿಟಿಗೆ ಭದ್ರತೆಯನ್ನುಂಟುಮಾಡಲಿಕ್ಕೆ ‘ಬೆಂಗಾಲ ಸೋಸಾಯಟೀಸ ರಿಜಿಸ್ಟ್ರೇಶನ್ ಎಕ್ಟ’ ಎಂಬ ಪರೋಪಕಾರಿ ಸಂಸ್ಥೆಗಳ ರಿಜಿಸ್ಟ್ರಿ ಕಾಯಿದೆಯಂತೆ ರಿಜಿಸ್ಟ್ರಿ ಮಾಡಬೇಕು. ಅದಕ್ಕಾಗಿ ದೇಶಬಂಧುಗಳು ಈ ಕಾಯಿದೆಯ ಅಭ್ಯಾಸ ಮಾಡುತ್ತೇವೆಂದರು. ಪ್ರತಾಪ ಬಾಬುರವರಿಗೆ ಈ ಚರ್ಚೆಯನ್ನೂ, ನಿರ್ಣಯವನ್ನೂ ದೇಶಬಂಧುಗಳು ಹೇಳಿ, ಈ ನಿರ್ಣಯವನ್ನು ಉಪಕ್ರಮಿಸಲು ಸೂಚನೆಗಳನ್ನೂ ಕೊಟ್ಟರು.

ನಿರಾಶೆಯಾದರೆ !

ಕೈರಾಟಿಯ ಮೇಲಿನ ಹಾಗು ಗ್ರಾಮಸಂಘಟನೆಯ ಮೇಲಿನ ದೇಶಬಂಧುಗಳ ಆವೇಶವಿದು! “ಬರ್ಕನ್‌ಹೆಡ್ ದೊರೆಗಳು ನಮಗೆ ನಿರಾಶೆಪಡಿಸಿದರೆ, ಕೌನ್ಸಿಲುಗಳಲ್ಲಿ ನಾವೇನು ಮಾಡಬೇಕೆಂದು ನನಗೆ ತಿಳಿಯುವದಿಲ್ಲ. ನಿಮ್ಮ ಕೈರಾಟಿಯ ಕಾರ್ಯಕ್ರಮವನ್ನು ಕೈಕೊಂಡು ಗ್ರಾಮಗಳನ್ನು ಸಂಘಟಿಸಬೇಕು; ಇದು ಮಾತ್ರ ಖಂಡಿತ! ಪುನಃ ನಮ್ಮ ರಾಷ್ಟ್ರವು ದುಡಿಯಹತ್ತಬೇಕು. ಕೌನ್ಸಿಲುಗಳಲ್ಲಿ ಸಾಮರ್ಥ್ಯವನ್ನು ಪಡೆಯಬೇಕು. ಬಂಗಾಲದ ತರುಣರನ್ನು ನಾನು ನನ್ನ ಸ್ವಾಧೀನದಲ್ಲಿಡಬೇಕು. ಶಕ್ಯವಿದ್ದರೆ, ಸರಕಾರದ ಸಹಾಯದಿಂದ ಅವಶ್ಯವಿದ್ದರೆ, ಅದನ್ನು ಧಿಕ್ಕರಿಸಿ, ಹಿಂಸೆಗೊಳಗಾಗದೆ, ಸ್ವರಾಜ್ಯ ಸಂಪಾದನೆಯ ಶಕ್ಯತೆಯನ್ನು ನಾನು ಪ್ರತ್ಯಕ್ಷ ಪ್ರಯೋಗ ಮಾಡಿ ತೋರಿಸಬೇಕು. ನಮ್ಮ ರಾಷ್ಟ್ರವಿಮೋಚನೆಗಾಗಿ, ನಿಮ್ಮಂತೆ ನನ್ನದೂ ಅಹಿಂಸೆಯೊಂದೇ ಮತವಾಗಿದೆ. ಅಹಿಂಸೆಯುಳ್ಳದ ಸವಿನಯ ಕಾಯಿದೆಭಂಗವನ್ನು ನಾವು ಆಚರಿಸಲಾರೆವು. ಕಾಯಿದೆಭಂಗವನ್ನು ಆಚರಿಸುವ ಸಾಮರ್ಥ್ಯವು ಪ್ರಾಪ್ತವಾದ ಹೊರತು, ನಮಗೆ ಸ್ವರಾಜ್ಯ ದೊರಕಲಾರದು. ಕಾಯಿದೆಭಂಗವನ್ನು ಕೈಕೊಳ್ಳುವ ಪ್ರಸಂಗವಿರಲಿಕ್ಕಿಲ್ಲ; ಆದರೆ ಅಷ್ಟು ಸಾಮರ್ಥ್ಯವು ನಮಗಿರಬೇಕು. ಗಾಬರಿಯುಳ್ಳ ಹರೆಯದವರಿಗೆ ನಾನು ಕೆಲಸ ಪೂರೈಸಬೇಕು. ನಾವು ಎಲ್ಲರಿಂದ ದುಡಿಯುತ್ತಿದ್ದರೆ, ನಮ್ಮ ಪಕ್ಷವು ನಿಃಶಸ್ತ್ರವಾಗುವ ಸಂಭವವಿರುವದೆಂದು ನೀವು ಹೇಳಿದ್ದಕ್ಕೆ ನನ್ನ ಒಪ್ಪಿಗೆಯಿದೆ. ನಮ್ಮ ಎಲ್ಲ ವ್ಯವಹಾರಗಳಲ್ಲಿ ಸತ್ಯಕ್ಕೆ ಬೆಲೆಯಿರುವದೆಂದು ನನ್ನ ಗುರುಗಳಿಂದ ನಾನು ಕಲಿತುಕೊಂಡಿರುವೆನು. ಕೆಲ ದಿನಗಳವರೆಗಾದರೂ ನೀವು ಅವರೊಡನೆ ಇರಬೇಕೆಂದು ನನ್ನ ಅಪೇಕ್ಷೆಯಿದೆ. ನನ್ನಷ್ಟು ನಿಮಗೇನು ಅವರ ಸಾನ್ನಿಧ್ಯವು ಗೊತ್ತಿಲ್ಲ. ಆದರೆ, ನನಗೆ ಅವನು ಸಾಮರ್ಥ್ಯವನ್ನಿತ್ತಿರುವನು; ಇದು ವಂಚನೆಯಾಗಿದ್ದಿಲ್ಲ. ಈಗ ನನಗೆ ವಸ್ತುಸ್ಥಿತಿಯು ಸ್ಪಷ್ಟವಾಗಿ ಕಾಣುತ್ತಿದೆ; ಮುಂಚೆ ಮಬ್ಬಾದಂತೆ ಕಾಣುತ್ತಿತ್ತು.” ಹೀಗೆ ದೇಶಬಂಧುಗಳು ನುಡಿದರು.

(ಹೀಗೆಯೇ ಭಾಷಣವು ನಡೆಯಿತು. ದೇಶಬಂಧುಗಳು ೪ ವರ್ಷಗಳ ಹಿಂದೆ ಮಹಾತ್ಮರಿಗೆ ಭಕ್ತಿ ಕೊಟ್ಟಾಗ

(ಮುಂದೆ ೧೦ ನೇ ಪಾನಿನಮೇಲೆ ಮುಂದರಿಸಿದೆ.)

ಕಾನಡಾವೃತ್ತ.

ಮಿತಿ ಶ್ರೀಭವ ಸಂ॥ ಆಷಾಢ ಶು॥ ಷಷ್ಠಿ ಸೋಮವಾರ.

ಹೊಸ ಸುಲಿಗೆ!

ಆಳರಸರ ಕುಹಕ!

ಆಳರಸರು ತೀರ್ವೆಯ ಆಕರಣೆಯ ಈ ವರೆಗಿನ ಪದ್ಧತಿಯನ್ನು ತೊರೆದು, ಹೊಸ ಪದ್ಧತಿಯನ್ನು ಉಪಕ್ರಮಿಸುವ ವಿಚಾರದಲ್ಲಿರುವರೆಂದು ಈ ಮುಂಚೆ ನಾವು ಸೂಚಿಸಿದ್ದೆವು. ಈ ಪದ್ಧತಿಯಲ್ಲಿ ಒಳಗೊಂಡ ತತ್ವವ್ಯಾವದು! ಆ ತತ್ವಕ್ಕೆ ಎಷ್ಟರಮಟ್ಟಿಗೆ ಆಧಾರವಿದೆ! ಇದರಿಂದ ಮುಂದೆ ಯಾವ ಪರಿಯ ಅನರ್ಥ ಒದಗಬಹುದು! ಎಂಬುದನ್ನೆಲ್ಲ ಇಂದಿಗೆ ವಿವರಿಸಲಿಚ್ಛಿಸುವೆವು.

ತೀರ್ವೆಯನ್ನು ಭೂಮಿಯ ಗುಣದೋಷಗಳಮೇಲಿಂದ ಆಕರಿಸುವ ಪದ್ಧತಿಯನ್ನು ಬಿಟ್ಟುಕೊಟ್ಟು, ಒಕ್ಕಲಿಗರಿಂದ ಸಾವುಕಾರರು ಪಡೆಯುವ ಗೇಣಿಯ ಮೊಬಲಗಿನ ಮೇಲೆ ತೀರ್ವೆಯನ್ನು ಕೂಡ್ರಿಸುವ ಹೊಸ ಪದ್ಧತಿಯ ತತ್ವವೇನೆಂದು ನಿಮಗೆ ತಿಳಿಯಿತೇನು? ಸರಕಾರವು ಭೂಮಿಯ ಯಜಮಾನರು. ಅದರ ಒಡೆತನವು ಖಾಸಗಿ ಸಾವುಕಾರರದಲ್ಲ. ಸರಕಾರವೇ ಸಾರ್ವಭೌಮ ಅಧಿಕಾರದಿಂದ ಭೂಮಿಯನ್ನು ಅನುಭವಿಸುತ್ತದೆ. ಸಾವುಕಾರರು ಒಡೆಯರೆಂದು, ಒಕ್ಕಲುಗಳಿಂದ ಗೇಣಿ ಕೊಂಡಂತೆ, ಸರಕಾರವೂ ಈ ಒಡೆಯರಿಂದ ಗೇಣಿ ಕೊಳ್ಳಬಯಸುತ್ತದೆ. ಈ ತತ್ವವನ್ನೇ ಆಶ್ರಯಿಸಿ, ಸರಕಾರವು ಗದ್ದಲವನ್ನೆಬ್ಬಿಸಿದೆ. ಮಧ್ಯಪ್ರಾಂತದಲ್ಲಿಯೂ ಇದೇ ಪಿಶಾಚದ ಬಾಧೆಯಾಗಿದೆ. ಅಲ್ಲಿಯ ರಾವಬಹಾದ್ದೂರ ಬ್ರಹ್ಮೇಯವರು ಸಂಸ್ಕೃತದೊಳಗಿನ 'ಭೂಪತಿ' ಎಂಬ ಶಬ್ದದಮೇಲಿಂದ ಅರಸನು ಸಮಸ್ತ ಭೂಮಿಯ ಒಡೆಯನಾದನೆಂದು ಸಿದ್ಧಾಂತವನ್ನು ಪ್ರತಿಪಾದಿಸಿದರು. ಈವರೆಗೆ ಸರಕಾರವು ಭೂಮಿಯ ಮಾಲ್ಕಿಯು ತನ್ನದೆಂದು ಸ್ಪಷ್ಟವಾಗಿ ಪ್ರತಿಪಾದಿಸಿದ್ದಿಲ್ಲ. ಸ್ಥಿರವಾಗಿ ಆ ಧ್ಯೇಯದ ಕಡೆಗೆ ಪ್ರಗತಿ ಮಾಡುತ್ತಿದ್ದರೂ, ಇನ್ನೂ ಆ ದುರಾಶೆಗೆ ಅದು ಬಲಿಬಿದ್ದಿದ್ದಿಲ್ಲ. ಈಗ ನಮ್ಮ ಧರ್ಮಶಾಸ್ತ್ರದ ಆಧಾರದಿಂದಲೇ ನಮ್ಮ ಭೂಮಿಯ ಸ್ಥಾವರ ಸೊತ್ತಿನ ಅಪಹಾರವಾಗಹತ್ತಿದ್ದರಿಂದ ಸಂಸ್ಕೃತ ಗ್ರಂಥಗಳಲ್ಲಿ ಅರಸರ ವಿಷಯದ ಉಲ್ಲೇಖಗಳನ್ನು ಹೇಳುವೆವು.

ಶುಕ್ರನೀತಿ ಶಾಸ್ತ್ರಕಾರರು ಮೊದಲನೇ ಅಧ್ಯಾಯದ ೧೮೮ನೇ ಶ್ಲೋಕದಲ್ಲಿ ಹೇಳುವದೇನೆಂದರೆ:— "ಸ್ವಭಾಗಭೃತ್ಯಾ ದಾಸ್ಯತ್ವೇ ಪ್ರಜಾನಾಂ ಚ ನೃಪಃ ಕೃತಃ ಬ್ರಹ್ಮಣಾ ಸ್ವಾಮಿರೂಪಸ್ತು ಪಾಲನಾರ್ಥಂ ಹಿ ಸರ್ವದಾ ॥" ಸ್ವಭಾಗದ ಪ್ರತಿಫಲ ಪಡೆದು, ಪ್ರಜಾಸೇವೆ ಮಾಡಲು ಅರಸನಿಗೆ ಬ್ರಹ್ಮದೇವನು ನಿರ್ಮಿಸಿದ್ದಾನೆ. ಅತನು ಪ್ರಭುವೆಂದು ತೋರಿಸಿಕೊಳ್ಳುತ್ತಾನೆ. ಪ್ರಜಾಪಾಲನವು ಮಾತ್ರ ಆತನ ಕರ್ತವ್ಯವು. ಶುಕ್ರನೀತಿ ಟೀಕಾಕಾರರ ಮತದಂತೆ, ರಾಜಪದವು ಇದೆಯಲ್ಲ, ಅಧಿಕಾರವು; ಈ ಅಧಿಕಾರದ ಕರ್ತವ್ಯ ಪ್ರಜಾಪಾಲನವು. ಪ್ರಜಾಪರಿಪಾಲನಕ್ಕಾಗಿ ಅವಶ್ಯವುಳ್ಳ ಖರ್ಚನ್ನು ಪಡೆಯಲು ಕರವನ್ನೆತ್ತುವ ಅಧಿಕಾರವು ರಾಜನಿಗೆ ಕೊಡಲ್ಪಟ್ಟಿದೆ. ಪ್ರಜಾರಕ್ಷಣವೇ ಪ್ರಧಾನವಿದ್ದರೆ, ಧರ್ಮಶಾಸ್ತ್ರಕಾರರು ಆದರ ಸಲುವಾಗಿ ಶಾಸನವನ್ನು ವಿಧಿಸಿರುವರು. ಈ ವಚನ ಕೇಳಿರಿ. "ದೇಯಂ ಚೋರಹೃತಂ ದ್ರವ್ಯಂ ರಾಜ್ಞಾ ಜಾನಪದಾಯ ತು। ಪ್ರತ್ಯಾಹರ್ತುಮಶಕ್ತಸ್ತು ಧನಂ ಚೋರೈಃ ಹೃತಂ ಯದಿ ॥ ಸ್ವಕೋಶಾದ್ಧಿ ದೇಯಂ ಸ್ಯಾತ್ ಅಶಕ್ತೇನ ಮಹೀಭೃತಾ। ವಾತಕ್ಯಂ ಸರ್ವವರ್ಣೇಭ್ಯೋ ರಾಜ್ಞಾ ಚೋರೈಃ ಹೃತಂ ಧನಂ।" ಕಳ್ಳರು ಅಪಹರಿಸಿದ ಧನವನ್ನು ಸಂಪಾದಿಸಿಕೊಡಲು ಅರಸನು ಅಸಮರ್ಥನಾದರೆ, ಅತನು ಸ್ವಂತ ಬೊಕ್ಕಸದೊಳಗಿಂದ ಅದನ್ನು ತುಂಬಿಕೊಡಬೇಕು. ಈ ವಚನದ ಮೇಲಿಂದ ಸನಾತನ ರಾಜ್ಯದೊಳಗಿನ ರಾಜನು ಎಷ್ಟರಮಟ್ಟಿಗೆ ಪ್ರಜಾಪಾಲನ ಕರ್ತವ್ಯದಲ್ಲಿ ಸಿಲುಕಿಕೊಂಡಿದ್ದನೆಂದೂ ಸ್ಪಷ್ಟವಾಗುತ್ತದೆ. ಪ್ರಜಾಪರಿಪಾಲನಕ್ಕಾಗಿಯೇ ಆತನ ನೇಮಣೂಕಿಯಾಗಿದೆಂದು ಇನ್ನು ಹೇಳಬೇಕೇನು?

ರಾಜ್ಯಾಭಿಷೇಕದಿಂದ ರಾಜನಿಗೆ ರಾಜ್ಯಾಧಿಕಾರವು ಪ್ರಾಪ್ತವಾಗುತ್ತದಲ್ಲವೇ? ರಾಜ್ಯಾಭಿಷೇಕಮಾಡಿ ರಾಷ್ಟ್ರವನ್ನು ರಾಜನಿಗೆ ವಹಿಸುವಾಗ, ಹೇಳುವ ಮಂತ್ರಗಳನ್ನು ಕೇಳಿರಿ "ಇಯಂ ತೇ ರಾಟ್ .. ಯಂತಾಸಿ ಯಮನೋ ಧ್ರುವೋಸಿ ಧರುಣಃ ಕೃಷ್ಯೈ ತ್ವಾ ಕ್ಷೇಮಾಯ ತ್ವಾ ರಯ್ಯೈ ತ್ವಾ ಪೋಷಾಯ ತ್ವಾ।" ಇದು ನಿನ್ನ ರಾಷ್ಟ್ರವು. ರಾಷ್ಟ್ರದಲ್ಲಿ ವ್ಯವಸ್ಥೆಯನ್ನಿಡುವದೂ, (ಶಿಸ್ತು ಭಂಗಿಸುವವರಿಗೆ) ಶಾಸನ ಮಾಡುವದೂ ನಿನ್ನ ಕೆಲಸವು. ನೀನು ಅಚಲಚಿತ್ತದವನು; ರಾಜ್ಯಾಧಾರನು. ಬೇಸಾಯವನ್ನು ಅಭಿವೃದ್ಧಿ ಮಾಡಲಿಕ್ಕೂ, ಸುರಕ್ಷಿತತೆಯನ್ನಿಡಲಿಕ್ಕೂ, ಸಂಪದಭಿವೃದ್ಧಿ ಮಾಡಲಿಕ್ಕೂ, ಪರಂಪರೆಯಿಂದ ರಾಷ್ಟ್ರದ ಉನ್ನತಿ ಮಾಡಲಿಕ್ಕೂ ರಾಷ್ಟ್ರವು ನಿನ್ನ ಸ್ವಾಧೀನಪಡಿಸಿರುತ್ತದೆ. ರಾಜ್ಯಾಭಿಷೇಕ ಮಂತ್ರಗಳಿಂದಲೇ ರಾಜ್ಯಾಧಿಕಾರವು ರಾಜನಿಗೆ ಪ್ರಾಪ್ತವಾಗುತ್ತದೆ. ಮೂಲ ಅಧಿಕಾರದಾನದ ಮಂತ್ರಗಳಿವು. ಅವುಗಳಲ್ಲಿ ರಾಜನಿಗೆ ಭೂಮಿಯ ಒಡೆತನವು ಕೊಡಲ್ಪಡಲಿಲ್ಲ. ರಾಷ್ಟ್ರಪಾಲನದ, ರಾಷ್ಟ್ರ ಪೋಷಣದ ಕರ್ತವ್ಯ ನೇಮಿಸಿ, ರಾಜ್ಯವು ಆತನ ಸ್ವಾಧೀನ ಮಾಡಲ್ಪಟ್ಟದೆ. ಪೂರ್ವ ಮೀಮಾಂಸೆಯಲ್ಲಿಯೂ ರಾಜನಿಗೆ ಭೂಮಿಯ ಅಧಿಕಾರವಿಲ್ಲೆಂದು ಸ್ಪಷ್ಟವಾಗಿ ಹೇಳಲ್ಪಟ್ಟದೆ. ಹಿಂದೂ ಕಾಯಿದೆ ಪಂಡಿತರಾದ ನೀಲಕಂಠ, ಮಾಧವ ಪಂಡಿತರೂ ರಾಜನಿಗೆ ಭೂಮಿಯಮೇಲೆ ಮಾಲ್ಕಿಯಿಲ್ಲವೆಂದು ಸ್ಪಷ್ಟವಾಗಿ ಹೇಳಿರುವರು. 'ಭೂಪತಿ' ಶಬ್ದವನ್ನೇ ನಿಷ್ಪಕ್ಷಪಾತ ದೃಷ್ಟಿಯಿಂದ ರಾವಬಹಾದ್ದೂರರು ವಿಚಾರಿಸಿದರೆ, 'ಪಾತೀತಿ ಪತಿಃ।' ಅಂದರೆ, ಭೂಮಿಯನ್ನು ಸಂರಕ್ಷಣ ಮಾಡುವವನೆಂದೂ ರಾವಬಹಾದ್ದೂರರಿಗೆ ತಿಳಿಯುತ್ತಿತ್ತು.

ತತ್ವನಿರೂಪಣವನ್ನು ಇಷ್ಟಕ್ಕೇ ಸಾಕುಮಾಡಿ, ಈ ಪದ್ಧತಿಯಿಂದ ಒದಗುವ ವ್ಯವಹಾರಿಕ ಹಾನಿಗಳನ್ನು ವಿಚಾರಿಸುವ. ಕರವು ಗೇಣಿಯ ಮೇಲೆ ಆಕರಿಸುವ ಯೋಜನೆಯಿಂದ ಒದಗುವ ಅನರ್ಥ ನೋಡಿರಿ! ಗೇಣಿ ಹೆಚ್ಚಾದಂತೆ, ಸರಕಾರದ ಕರದ ಮಾನವೂ ಹೆಚ್ಚುವದು. ಅಂದರೆ ಸಾವುಕಾರರು ಒಕ್ಕಲಿಗರನ್ನ ಸ್ವಾರ್ಥಸಾಧನೆಗಾಗಿ ಹಿಂಡುತ್ತಿರುವ ಸಮಯದಲ್ಲಿ, ನಮ್ಮ ಸರಕಾರವು ಅವರಿಗೆ ಪ್ರತಿಬಂಧಮಾಡದೆ ಹಿಂಡಲು ಪ್ರತ್ಯಕ್ಷಾಪ್ರತ್ಯಕ್ಷವಾಗಿ ಉತ್ತೇಜನವನ್ನೇ ಕೊಡುವದು. ಮೊದಲೇ ಸಾವುಕಾರರ ಗೇಣಿಯ ಮಾನವು ಹೆಚ್ಚಿರುವದೆಂದು ಸರಕಾರವೇ ಕೋಲಾಹಲವನ್ನೆಬ್ಬಿಸಿದೆ. ಈಗ ಅವರಿಗೇ ಸರಕಾರವು ಬೆಂಬಲವನ್ನಿತ್ತು ರೈತರ ಕಲ್ಯಾಣಕ್ಕಾಗಿ ರಾಜ್ಯಾಡಳಿತೆಯನ್ನು ತಾವು ನಡಿಸುತ್ತಿದ್ದೇವೆಂಬ ದೊಡ್ಡ ಪ್ರಮೆಯನ್ನು ನಿರಸನ ಮಾಡಿರುವರು. ರೈತರು ಈ ಕುಹಕದಿಂದ ತಕ್ಕ ಬೋಧ ಕಲಿಯಲಿ.

ಈ ಪದ್ಧತಿಯು ತೋರಿಕೆಗೆ ತೀರ್ವೆ ಆಕರಣೆಯ ಸುಲಭ ಸಾಧನವು. ಆದರೆ, ಒಂದು ಭೂಮಿಯ ಗೇಣಿಯ ಮೇಲಿಂದ ಇಡೀ ಊರೊಳಗಿನ ಸಮಸ್ತ ಹೊಲಗಳ ತೀರ್ವೆ ಆಕರಿಸುವದು ಧೋಕ್ಯಕರವು. ಒಂದೇ ಊರೊಳಗಿನ ಭೂಮಿಯಲ್ಲಿಯೂ ಭೇದವಿದೆ. ಕೆಲವು ಕಡೆಯಲ್ಲಿ ಒಕ್ಕಲುಗಳು ಮೇಲಾಟ ನಡಿಸಿ, ಭೂಮಿ ಕೊಳ್ಳುತ್ತಿದ್ದರೆ, ಇನ್ನು ಕೆಲವು ಕಡೆಗಳಲ್ಲಿ ಹಣ ಕೊಟ್ಟು ಭೂಮಿ ಸಾಗುವಳಿ ಮಾಡಹೇಳಿದರೂ ಕೊಳ್ಳುವವರ್‍ಯಾರಿಲ್ಲ. ಈ ಸ್ಥಿತಿಯನ್ನರುಹಿ ತೀರ್ವೆಯ ಮಾನವನ್ನು ತಗ್ಗಿಸಹೇಳಿದರೆ, ಸರಕಾರಕ್ಕೆ ವಂಚಿಸುವದಕ್ಕಾಗಿ ಸುಳ್ಳು ನೆವ ಹೇಳುತ್ತಾರೆಂದು ಕರಾ ಹೊಡೆದು, ತೀರ್ವೆಯನ್ನು ಹೆಚ್ಚು ಗೇಣಿಯ ಭೂಮಿಯ ಮಾನದಿಂದ ಆಕರಿಸಿದರೆ, ಭೂಮಿಯ ಮಾಲೀಕರು ಭೂಮಿಗಳನ್ನು ಮಾರಿದರೂ, ಸರಕಾರದ ಋಣವು ತೀರಲಿಕ್ಕಿಲ್ಲ. ಇದೇನು ಕಲ್ಪನೆಯಲ್ಲ. ಇನಕಮ್ ಟೆಕ್ಸ ಆಕರಣೆಯಲ್ಲಿ ನಗದಿ ಶಿಲ್ಕು ಇಟ್ಟು ಚೊಕ್ಕ

ಲಬ್ಬು ಇಟ್ಟರೂ, ಅಧಿಕಾರರು ನೆಲ ಕಗೆದು ಪುನಃ ಇನಕಮ್ ಟ್ಯಾಕ್ಸ ಆಕರಣೆ ಮಾಡುವ ಉದಾಹರಣೆಗಳು ಆಗಿಂದಾಗ ದೃಗ್ಗೋಚರವಾಗುತ್ತಿರುವಾಗ, ತೀರ್ವೆ ಆಕರಣೆಯಲ್ಲಿಯೂ ಇದೇ ಘೋರಣವು ಸಂಭವಿಸದೆಂದು ಹೇಳುವವರಾರು?

ಇನ್ನೂ ಒಂದು ಆಕ್ಷೇಪವಿದೆ. ಮೇರಾ ಜಿಲ್ಲೆಯ ರೈತರ ಸಂಘವು ಈಗಿನ ಬೇಸಾಯದ ಸ್ಥಿತಿಯನ್ನು ಅಂಕಿಗಳಿಂದ ನಿವೇದಿಸಿದೆ. ಇದನ್ನು ನಾವು ಈಮುಂಚೆ 'ವಿವಿಧ ಸಂಗ್ರಹ'ದಲ್ಲಿ ಕೊಟ್ಟಿರುವೆವು. ಅದರಮೇಲಿಂದ ಬೇಸಾಯದಿಂದ ಲಾಭವಾಗದೆಂದು ವಾಚಕರಿಗೆ ತಿಳಿಯುವಹಾಗಿದೆ. ಈಗ ಬೇಸಾಯವು ಹೀನಾವಸ್ಥೆಯಲ್ಲಿದೆ. ಅದಕ್ಕೆ ಪ್ರಜಾಪರಿಪಾಲನಕ್ಕಾಗಿ ನೇಮಕಹೊಂದಿದ ಸರಕಾರವು ತಕ್ಕ ಉತ್ತೇಜನವನ್ನು ಕೊಟ್ಟು ಅಭಿವೃದ್ಧಿಮಾಡಲು ಉಪಾಯಯೋಜನೆ ಮಾಡಬೇಕು. ಹೊಸ ಪದ್ಧತಿಯನ್ನುಪಕ್ರಮಿಸಿದರೆ, ಒಡೆಯ-ಒಕ್ಕಲುಗಳೊಳಗಿರುವ ಹಿತಸಂಬಂಧಗಳು ಬಯಲಾಗಿ, ಗೇಣಿಯ ಮಾನವು ಮಿತ್ರಿ ಏರಿ, ಒಕ್ಕಲಿಗರು ಗತಿಗೆಟ್ಟು ಹೋಗುವರು. ಒಡೆಯರೂ, ಒಕ್ಕಲುಗಳಿಂದ ಗೇಣಿ ಚೀಟಿಯೊಳಗಿನ ಗೇಣಿಯ ಮೊಬಲಗನ್ನು ಹಿಂಡಿಕೊಳ್ಳುವ ಪ್ರಯೋಗದಲ್ಲಿ, ಒಕ್ಕಲಿಗರನ್ನು ಸತ್ವಹೀನರನ್ನಾಗಿ ಮಾಡುವರು. ಇದರಿಂದ ಸರಕಾರಕ್ಕೆ ಹೆಚ್ಚು ದುಡ್ಡು ಸಿಗಬಹುದಾದರೂ, ದುಡ್ಡಿನ ದುರಾಶೆಯಿಂದ ರಾಷ್ಟ್ರವು ಕ್ಷೀಣವಾದಲ್ಲಿ ಪರ್ಯಾಯದಿಂದ ಸರಕಾರಕ್ಕೇ ಹಾನಿಯಾಗುವದು. ನೀತಿವಾಕ್ಯಾಮೃತದೊಳಗಿನ ಒಂದು ವಚನವನ್ನು ಉದಾಹರಿಸಿ, ಸರಕಾರಕ್ಕೆ ಅನರ್ಥಪರಂಪರೆಯ ಪದ್ಧತಿಯನ್ನು ಉಪಕ್ರಮಿಸಲು ದುರ್ಬುದ್ಧಿಯು ಒದಗಬಾರದೆಂದು ಪ್ರಾರ್ಥಿಸುವೆವು

"ಯೋ ರಾಜಾ ಧನಲೋಭೇನ ಹೀನಾಧಿಕ ಕರಪ್ರಿಯಃ| ತಸ್ಯ ರಾಷ್ಟ್ರಂ ವ್ರಜೇತ್ ನಾಶಂ ನ ಸ್ಯಾತ್ ಪರಮ ವೃದ್ಧಿಮತ||"

ಇದಕ್ಕಿಂತ ಇಂದಿಗೆ ಇನ್ನೇನು ಹೆಚ್ಚು ಬರೆಯುವದು! ಸರಕಾರವು ಸಾಧಕ-ಬಾಧಕ ಪ್ರಮಾಣಗಳನ್ನೆಲ್ಲ ಲಕ್ಷ್ಯಪೂರ್ವಕ ಪರ್ಯಾಲೋಚಿಸಿ ಧನಲೋಭವನ್ನು ತೊರೆದು ಪ್ರಜಾಹಿತದೃಷ್ಟಿಯನ್ನಿಟ್ಟು ತೀರ್ವೆ ಆಕರಣೆಯ ಪದ್ಧತಿಯನ್ನು ಪರ್ಯಾಲೋಚಿಸಿ ಮುಂದಾಗಲಿ!

ಸ್ಫುಟ ಸೂಚನೆಗಳು.

೧. ಭಾರತ ಮಂತ್ರಿ ಬರ್ಕನ್‌ಹೆಡ್ ದೊರೆಗಳ ಭಾಷಣದಿಂದ ರಾಷ್ಟ್ರೀಯ ಸಭೆಯ ಚಟುವಟಿಕೆಯು ಬದಲಿಸುವ ಲಕ್ಷಣಗಳು ತೋರುತ್ತಿವೆ. ಕಳೆದ ವಾರದಲ್ಲಿ ಕಲಕತ್ತಾ ನಗರಿಯಲ್ಲಿ ಜರುಗಿದ ರಾಷ್ಟ್ರೀಯ ಸಭೆಯ ಕಾರ್ಯಕಾರಿ ಮಂಡಲ ಹಾಗು ಸ್ವರಾಜ್ಯ ಪಕ್ಷದ ಸಭೆಗಳ ಕಾರ್ಯಕ್ರಮವನ್ನು ಪರ್ಯಾಲೋಚಿಸಿದರೆ, ಮಹಾತ್ಮರು ರಾಷ್ಟ್ರೀಯ ಸಭೆಯನ್ನು ಸ್ವರಾಜ್ಯ ಪಕ್ಷದವರ ಆಲೋಚನೆಯಂತೆ ರಾಜಕಾರಣ ಸಂಸ್ಥೆಯನ್ನಾಗಿ ಪರಿಣಮಿಸಲು ಅನುಕೂಲರಾಗಿರುವರೆಂಬಂತೆ ತೋರುತ್ತದೆ. ರಾಷ್ಟ್ರೀಯ ಸಭೆಯು ರಾಜಕಾರಣಧುರಂಧರರೊಡನೆ ಜಗಳಾಡುವ ತಯಾರಿ ಮಾಡುತ್ತಿದೆ. ಸ್ವರಾಜ್ಯ ಪಕ್ಷವಾದರೂ ಬರ್ಕನ್‌ಹೆಡ್ ದೊರೆಗಳೊಡನೆ ಇನ್ನೂ ಸ್ವಾಭಿಮಾನಪೂರ್ವಕ ಸಾಹಚರ್ಯ ಬೆಳೆಸಲು ತಯಾರಿರುವದೆಂದು ತಿಳಿಸಿ, ಅವರ ಈಗಿನ ಭಾಷಣವು ನಿರಾಶಾಜನಕವೆಂದು ನಿಷೇಧಿಸಿರುವದು. ಇನ್ನೂ ಮಾನ-ಧನ ರಾಷ್ಟ್ರಕ್ಕುಚಿತವಾದ ಸಹಕಾರದ ಶರ್ತುಗಳನ್ನಿಟ್ಟಲ್ಲಿ ಸ್ವರಾಜ್ಯ ಪಕ್ಷವು ಆಳರಸರೊಡನೆ ಭಾರತ ಮಾತೆಯ ಹಿತದ ಯೋಜನೆಯನ್ನು ಪುರಸ್ಕರಿಸಲು ತಯಾರಿರುವದೆಂದು ತಿಳಿಸಿದೆ. ಸರಕಾರವು ದಬ್ಬಾಳಿಕೆಯ ಕಾಯಿದೆಗಳನ್ನು ರದ್ದುಪಡಿಸದೇ ಹೋಗಿಯೂ ರಾಜಕೀಯ ಕೈದಿಗಳನ್ನು ಬಂಧಮುಕ್ತ ಮಾಡಿ ಹಿಂದಮಾತೆಯ ಕಲ್ಯಾಣವನ್ನು ಅಂತಃಕರಣಪೂರ್ವಕ ಮಾಡಬಯಸುತ್ತದೆಂದೂ ತಿಳಿಸಿದರೆ, ಸ್ವರಾಜ್ಯಪಕ್ಷವು ಸಮಾನಸ್ಕಂಧವಾಗಿ ರಾಜ್ಯರಥವನ್ನು ನಡಿಸಲು ತಯಾರಿದೆ. ಬರ್ಕನ್‌ಹೆಡ್ ದೊರೆಗಳಿಗೆ ಇದಕ್ಕಿಂತ ಕಡಿಮೆ ಬೇಡಿಕೆಗಳು ಸಿಗುವದು ಅಪರೂಪವು. ಸ್ವರಾಜ್ಯ ಪಕ್ಷದವರ ಉತ್ತರದಿಂದ ಪರಿಸ್ಥಿತಿಯಲ್ಲಿ ಸಂಯುಕ್ತ ಪಕ್ಷಗಳ ಐಕ್ಯಕ್ಕೆ ಅನುಕೂಲವಾಗುವ ಲಕ್ಷಣಗಳು ತೋರುತ್ತವೆ. ನೋಡುವ. ಸರಕಾರವು ಹ್ಯಾಗೆ ಪ್ರತ್ಯುತ್ತರವನ್ನೀಯುತ್ತದೆಂಬು!

---

೨. "ಬಾಂಬೆ ಕ್ರಾನಿಕಲ್" ಕರ್ತರು ಒಂದು ಪ್ರಶ್ನಾವಲಿಯನ್ನು ತಯಾರಿಸಿ, ದೇಶದೊಳಗಿನ ಪ್ರಮುಖರಿಗೆ ಕಳಿಸಿರುವರು. ಈ ಪ್ರಶ್ನಾವಲಿಯಲ್ಲಿ ರಾಷ್ಟ್ರೀಯ ಸಭೆಯ ಧ್ಯೇಯ, ಮತಾಧಿಕಾರ, ಕಾರ್ಯಕ್ರಮ, ಸ್ವದೇಶಿ, ಐಕ್ಯ ಉಪಾಯಯೋಜನೆ ಮುಂತಾದವುಗಳ ವಿಷಯ ಸವಾಲುಗಳಿವೆ. 'ಕ್ರಾನಿಕಲ್' ಪತ್ರಿಕೆಯವರು ಈ ಮೂಲಕ ಪ್ರಮುಖರ ಅಭಿಪ್ರಾಯಗಳನ್ನು ಸಂಗ್ರಹಿಸಿ, ಪಕ್ಷಗಳಲ್ಲೆಲ್ಲ ಐಕ್ಯವನ್ನುಂಟುಮಾಡಲು ಯತ್ನಿಸುತ್ತಿರುವರು. ಈ ವರೆಗೆ ಮಹಾತ್ಮಾ ಗಾಂಧಿ, ನೇಕ ನಾಮದಾರ ಶ್ರೀನಿವಾಸ ಶಾಸ್ತ್ರಿ, ಎ. ರಂಗಸ್ವಾಮಿ ಅಯ್ಯಂಗಾರ, ಸರ್ ದಿನಶಾ ಪೆಟಿಟ, ಲಾಲಾ ಹರಕಿಸನಲಾಲ, ಮಿ॥ ಯಾಕೂಬ ಹಸನ ಮುಂತಾದವರ ಅಭಿಪ್ರಾಯಗಳು ಪ್ರಕಟವಾಗಿವೆ. ಇನ್ನೂ ಅನೇಕ ಅಭಿಪ್ರಾಯಗಳು ಪ್ರಕಟವಾಗಲಿರುವವು. ಇವುಗಳ ವಿಷಯ ಮುಂದೆ ಯಥಾವಕಾಶ ಬರೆಯುವೆವು. ಆದರೆ, ಇಂದಿಗೆ ಒಂದು ಮಾತನ್ನು ನಮೂದಿಸಲು ಬಹಳೇ ವ್ಯಸನವಾಗುತ್ತದೆ. ಪತ್ರಿಕಾಕರ್ತರ 2 ನೇ ಸವಾಲು ಸ್ವದೇಶಿಯ ವಿಷಯವಿದೆ: "ಪರದೇಶಿ ಅರಿವೆಯನ್ನು ನೀವು ಸ್ವತಃ ತ್ಯಜಿಸಲು ತಯಾರಿರುವಿರೇನು? ಪರದೇಶಿ ಅರಿವೆಯನ್ನು ಇನ್ನೂ ಉಪಯೋಗಿಸುತ್ತಿದ್ದರೆ, ಸ್ವದೇಶಿ ಚಳವಳಿಗೆ ಉತ್ತೇಜನ ಕೊಡುವದಕ್ಕಾಗಿ ಅದನ್ನು ತ್ಯಜಿಸುವಿರೇನು?" ಎಂಬ ಸವಾಲಿತ್ತು. ಇದಕ್ಕೆ ನೇಕ ನಾಮದಾರ ಶಾಸ್ತ್ರಿಗಳು 'ಇಲ್ಲ; ಇಲ್ಲ' ಎಂದು ಉತ್ತರವನ್ನಿತ್ತಿರುವರು. ಉತ್ತರವನ್ನು ನೋಡಿ ಸ್ಪಷ್ಟವಾಗಿ ಹೇಳಿದ ದಿಟ್ಟತನದ ಬಗ್ಗೆ ಸಂತೋಷವಾಗುತ್ತಿದ್ದರೂ, ನಾ॥ ಶಾಸ್ತ್ರಿಗಳಂಥ ದೇಶಸೇವಕರೆಂದು ಮೆರೆಯುವವರು ಸ್ವದೇಶಿ ಅರಿವೆಗಳನ್ನು ತೊಟ್ಟುಕೊಳ್ಳಲು ತಯಾರಿಲ್ಲದಿದ್ದದ್ದು ತೀರ ಶೋಚನೀಯವು. ಸ್ವದೇಶಿ ಚಳವಳಿಯ ವಿಷಯ ಯಾರದೂ ಮತಭೇದವಿಲ್ಲೆಂದು ನಮ್ಮ ಅಂದಾಜಿತ್ತು. ಸವಾಲಿಗೆ ಬಂದ ಉತ್ತರಗಳ ಮೇಲಿಂದ ಶ್ರೀನಿವಾಸ ಶಾಸ್ತ್ರಿಗಳೊಬ್ಬರೇ ಪರದೇಶಿ ಅರಿವೆಯ ಬಹಿಷ್ಕಾರಕ್ಕೆ ಅನುಕೂಲರಿರುವದಿಲ್ಲೆಂದು ಸ್ಪಷ್ಟವಾಗಿ ಕಾಣುವದು. ಸರ್ ದಿನಶಾ ಪೆಟಿಟರವರು ಕೊಟ್ಟ ಉತ್ತರವು ಸಮಾಧಾನಕರವಿರದಿದ್ದರೂ; ಅದೊಂದು ಸುಯೋಗಭೋಗದ ಮಂದಿಗಳು ಸಹಜವಾಗಿ ಕೊಡುವಂಥಾದ್ದು: ಅವರೀಗ ತೊಟ್ಟುಕೊಳ್ಳುವಂಥ ತರಗತಿಯ ಸ್ವದೇಶಿ ಬಟ್ಟೆಗಳು ದೊರಕಿದರೆ, ಸ್ವದೇಶಿ ಪುರಸ್ಕಾರದಿಂದ ಸಾಮ್ರಾಜ್ಯಾಂತರ್ಗತ ಸ್ವರಾಜ್ಯ ದೊರಕುವದೆಂದು ಅವರ ಮನೋನಿಶ್ಚಯವಾದರೆ, ಸರ್ ದಿನಶಾ ಪೆಟಿಟರವರು ಸ್ವದೇಶಿ ಪುರಸ್ಕಾರ ಮಾಡಲು ತಯಾರಿರುವರು. ಇನ್ನೂ ಸ್ವದೇಶಿಯ ವಿಷಯ ಶಾಸ್ತ್ರಿ-ಪೆಟಿಟರವರಂಥ ದೊಡ್ಡ ದೊಡ್ಡ ಮಂದಿಗಳು ಈ ಪರಿಯ ಅಭಿಪ್ರಾಯ ಪಡುವದನ್ನು ನೋಡಿ, ಭಾರತ ಮಾತೆಯ ದುರ್ದೈವವು ಇನ್ನೂ ತೀರಲಿಲ್ಲೆಂದೇ ಹೇಳಬೇಕಾಗುತ್ತದೆ.

---

೩. ಸುರತ ಪಟ್ಟಣದಲ್ಲಿ ಪೋಲೀಸರ ಮೇಲೆ ದೊಡ್ಡದೊಂದು ಪ್ರಕರಣವು ನಡೆದಿದೆ. ಈ ಖಟ್ಲೆಯು ಅಲ್ಲಿಯ ೧ ನೇ ವರ್ಗದ ಮೆಜಿಸ್ಟ್ರೇಟರಲ್ಲಿ ನಡೆದಿರುವ ಮೂಲಕ ಖಟ್ಲೆಯ ಹಕೀಕತನ್ನು ಮಾತ್ರ ಇಂದಿಗೆ ನಿವೇದಿಸುವೆವು. ಸುರತ ಜಿಲ್ಲೆಯ ಓಲಪಾಡ ತಾಲೂಕಿನ ಉಮರಾಚಿ ಗ್ರಾಮದಲ್ಲಿ ಒಬ್ಬ ಹೆಂಗಸಿನ ಕ್ರೂರ ಕೊಲೆಯಾಯಿತು. ಕೊಲೆಯು ೧೯೨೪ ನೇ ಇಸ್ವಿಯ ಡಿಸೆಂಬರ ತಿಂಗಳಲ್ಲಾಯಿತು. ಕೊಲೆಯ ಚೌಕಶಿ ಮಾಡಲು ಸುರತದ ಫೌಜದಾರರಾದ ಮಿ॥ ಜೋಟಾಭಾಯಿಯವರೂ, ಇನ್ನೊಬ್ಬ ಮಿ॥ ಠಾಕೂರ ಎಂಬವರೂ ರವಾನೆಯಾದರು. ಇಬ್ಬರೂ ಚೌಕಶಿ ನಡಿಸಿ ಅಪರಾಧಿಯನ್ನು ಕಂಡು ಹಿಡಿಯಲಿಕ್ಕೆ ಅಶಕ್ಯವೆಂದು ಮೇಲಧಿಕಾರಿಗಳಿಗೆ ರಿಪೋರ್ಟ ಮಾಡಿದರು. ಕೊಲೆಯ ಪ್ರಕರಣವು ಅಷ್ಟಕ್ಕೆ ಮುಗಿದುಹೋಯಿತು; ಬಳಿಕ, ಅನೇಕರು ಪೋಲೀಸ ಮೇಲಧಿಕಾರಿಗಳಿಗೆ ಪಟಾಸದರು ಲಂಚ ತಿಂದು ಕೊಲೆಯ ಪ್ರಕರಣವನ್ನು ಅಡಗಿಸಿಟ್ಟಿದ್ದಾರೆಂದು ತಿಳಿಸಿದರು. ಆಗ ಖಾತೆಯಿಂದ ಚೌಕಶಿ ನಡೆಯಿತು. ಮತ್ತು ಈ ಉಭಯರಿಗೆ ಮೋಕೂಫು ಮಾಡಿದರು. ಕಳೆದ 2 ನೇ ತಾರೀಕಿಗೆ ಜೋಟಾಭಾಯಿಯವರ ಮೇಲೂ, ಇವಾಧ ಅಸ್ಪತ್ರಿಯ ಡಾಕ್ಟರರಮೇಲೂ, ಇನ್ನೊಬ್ಬ ಪಂಗಾಜೀವನರವರ ಮೇಲೂ ಖಟ್ಲೆ ಮಾಡಿ ಕೊಡಲಾಗಿದೆ. ಖಟ್ಲೆ ತೀರಿದ ಬಳಿಕ ಮುಂದೆ ತಿಳಿಸುವೆವು. ಈ ಖಟ್ಲೆಯ ಹಕೀಕತಿನ ವಾಚನದಿಂದ ವಾಚಕರು ಬೇಕಾದ ಅನುಮಾನಗಳನ್ನು ಹೊರಡಿಸಿ, ಸತ್ಯಸ್ಥಿತಿಯ ಕಲ್ಪನೆ ಪಡೆಯಬಹುದು.

---

೪. ಈಗ ನಮ್ಮ ಕುಮಟೆಯಲ್ಲಿ ಮ್ಯುನಿಸಿಪಾಲಿಟಿಯ ಇಲೆಕ್ಷನದ ಗದ್ದಲ ಯಾನೆ ಗೊಂದಲ. ಕಳೆದ ಇಲೆಕ್ಷನಿನಲ್ಲಿ ಸುಲಭದಿಂದ ಆರಿಸಿ ಹೋಗಿ ಮ್ಯುನಿಸಿಪಾಲಿಟಿಯಲ್ಲಿ ಗೊಂದಲವನ್ನೆಬ್ಬಿಸಿದ ಕೆಲವರು ಪುನಃ ಅಧಿಕಾರಪ್ರಾಪ್ತಿಗಾಗಿ ಪೇಚಾಡುತ್ತಿರುವರು. ಅಲ್ಪಗೆ ಐಶ್ವರ್ಯ ಬಂದರೆ ಅರ್ಧ ರಾತ್ರಿಯಲ್ಲಿ ಕೊಡೆ ಹಿಡಿಸಿಕೊಳ್ಳುವಂತೆ, ಕೆಲ ಸಭಾಸದರ ಗತಿಯಾಗಿ, ಊರಲ್ಲಿ ಸುಂಬಾ ಗದ್ದಲವೂ, ಗೊಂದಲವೂ ಆಗಿವೆ. ಈ ಮಂದಿಗಳಿಗೆ, ಈ ಮಂದಿಗಳ ಜೊತೆದಾರರಿಗೆ ಈ ಇಲೆಕ್ಷನಿನಲ್ಲಿ ಅಧಿಕಾರಭ್ರಷ್ಟ ಮಾಡಬೇಕು. ಊರೊಳಗಿನ ಸ್ವತಂತ್ರ ಬುದ್ಧಿಯ, ನಿರಪೇಕ್ಷ ಬುದ್ಧಿ

ಯು, ನಿಷ್ಪಕ್ಷಪಾತ ಬುದ್ಧಿಯ ಗೃಹಸ್ಥರು ಇಲೆಕ್ಷನಿನಲ್ಲಿ ಉಮೇದವಾರರಾಗಿ ನಿಂತು ಮ್ಯುನಿಸಿಪಾಲಿಟಿಯಲ್ಲಿ ಸೇರಬೇಕಾಗಿ ನಮ್ಮ ಇಚ್ಛೆ ಇದೆ. ಅವರು ಸೇರುವದು ಅವರ ಕರ್ತವ್ಯವು. ಇಲ್ಲವಿದ್ದರೆ, ಕೆಲಸಗೆಟ್ಟ ಅಲ್ಪ ಮಂದಿಗಳು ಅಧಿಕಾರಾರೂಢರಾಗಿ ಮ್ಯುನಿಸಿಪಾಲಿಟಿಯ ಕಾರ್ಯವನ್ನು ದುರ್ಲಕ್ಷಿಸಿ, ತಮ್ಮ ಅಧಿಕಾರಪ್ರದರ್ಶನ ಮಾಡುವವರ ಪೆಸೆಯಿಂದ ಇಲ್ಲದ ತುಂಟತನವನ್ನು ಎಬ್ಬಿಸಿ ಅನರ್ಥಗಳನ್ನುಂಟು ಮಾಡುವರು. ಯೋಗ್ಯ ಉಮೇದವಾರರು ಹೆಸರುಗಳನ್ನು ಇದೇ ಬರುವ ಸೋಮವಾರ ತಾ ೩ನೇ ಶ್ಯಾಮ ೫ ಘಂಟೆಯೊಳಗೆ ತಮ್ಮ ಹೆಸರುಗಳನ್ನು ದಾಖಲು ಮಾಡಿಸಿಕೊಳ್ಳಬೇಕಾಗಿ ನಾವು ಆಗ್ರಹಪೂರ್ವಕ ಸೂಚಿಸುವೆವು.

---

೫. ಮತದಾರರಿಗೂ ಒಂದು ಸೂಚನೆ ಮಾಡಬೇಕಾಗಿದೆ. ಯಾಕಂದರೆ, ಮತದಾರರೇ ಮ್ಯುನಿಸಿಪಾಲಿಟಿಯ ಮೂಲಾಧಾರರು. ಮತದಾರರು ಸ್ವತಂತ್ರ ಬುದ್ಧಿ ತಳೆದು, ಮತವನ್ನೀಯುವದು ಮ್ಯುನಿಸಿಪಾಲಿಟಿಯ ಹಿತ ಮಾಡುವದರ ದೆಸೆಯಿಂದಲೇ ಇರುತ್ತದೆಂದು ಅವರು ಗ್ರಹಿಸಿದರೆ, ಮ್ಯುನಿಸಿಪಾಲಿಟಿಯಲ್ಲಿ ಅಲ್ಪ ಮಂದಿಗಳಿಗೆ ಸೇರಿಕೊಳ್ಳಲು ಎಂದೂ ಶಕ್ಯವಾಗುವದಿಲ್ಲ. ಈಗ ಊರಲ್ಲಿ ಉಮೇದವಾರರ ಹೆಸರು ಜಾಹೀರಾಗುವ ಪೂರ್ವದಲ್ಲಿಯೇ 'ವ್ಹೋಟು ನನಗೆ ಕೊಡಬೇಕು; ನಾನು ಹೇಳಿದವರಿಗೆ ಕೊಡಬೇಕು;" ಇತ್ಯಾದಿ ನಮೂನೆಯಿಂದ ವ್ಹೋಟುಗಳನ್ನು ತಮ್ಮ ತಮ್ಮ ಕೂಟಗಳ ಬದಿಗೆ ರಾಶಿ ಹಾಕಿಕೊಳ್ಳುವ ಅಸಭ್ಯ ಪ್ರಕಾರಗಳು ನಡೆಯುತ್ತಿರುವವು. ಊರಲ್ಲಿ ಸದ್ಬುದ್ಧಿ ಮತದಾರರು ಇಂಥ ಆಜ್ಞೆಗಳಿಗೆ ಬಲಿಬಿದ್ದು, ತಮ್ಮ ಮತಗಳನ್ನು ಈ ಪ್ರಕಾರದಿಂದ ಎಂದೂ ಗಂಟುಮೊಟ್ಟೆ ಕಟ್ಟಿ ಕೊಡಬಾರದು. "ಉಮೇದವಾರರು ಮುಂದೆ ಬರಲಿ; ಅವರ ಪಾತ್ರಾಪಾತ್ರತೆಯನ್ನು ನಾವು ವಿಚಾರಿಸುತ್ತೇವೆ, ಅವರು ಊರವರೋ? ಊರಲ್ಲಿ ಹಿತಸಂಬಂಧವಿದ್ದವರೋ? ಬಾಡಿಗೆ ಮನೆಯಲ್ಲಿ ಒಕ್ಕಲಂತು ಊರ ಮೇಲೆ ಊರು ಹಾಕಿ ಸ್ವಾರ್ಥ ಸಾಧನೆ ಮಾಡುವವರೋ? ಮ್ಯುನಿಸಿಪಾಲಿಟಿಗೆ ಹಿತ ಮಾಡುವವರೋ? ಹಿತ ಮಾಡುವದಕ್ಕಾಗಿ ಸೇರುತ್ತಾರೋ! ಅಥವಾ ತಮ್ಮದೇ ರೊಟ್ಟಿಯ ಮೇಲೆ ಇಷ್ಟಿಷ್ಟು ತುಪ್ಪ-ಸಕ್ಕರೆಯನ್ನು ಪರೋಪಕಾರದ ನೆವಾ ಹೇಳಿ ಎಳಕೊಂಡು ಸ್ವಾರ್ಥ ಸಾಧಿಸುವ ಉಪರಿ ಮಂದಿಗಳೋ?" ಎಂಬುದಾಗಿ, ಉಮೇದವಾರರ ಹೆಸರು ಹೇಳದೆ ಮತ ಕೊಡ ಹೇಳುವವರಿಗೆ ಸ್ಪಷ್ಟವಾಗಿ ಪ್ರಶ್ನಿಸಬೇಕು, ಎಲ್ಲರೂ ವಿಚಾರಿಸಬೇಕೆಂದೇ ಮತಗಳು ಎಲ್ಲರಿಗೆ ಕೊಡಲ್ಪಟ್ಟಿವೆ. ಒಬ್ಬರಿಗೆ (ಅವರು ಬೇಕಾದರೆ ಪ್ರತಿಷ್ಠಿತರಿರಲಿ, ಪರಂಪರಾಗತ ಪ್ರತಿಷ್ಠಿತರೆಂದು ಹೇಳಿಸಿಕೊಳ್ಳಲಿ,) ಉಮೇದವಾರರನ್ನು ಚುನಾಯಿಸುವ ಅಧಿಕಾರವು ಕೊಟ್ಟಿರುವದಿಲ್ಲ. ಯಾರೊಬ್ಬರು ತಮ್ಮ ಒಡೆಯರೆಂದು ಅವರಿಗೆ ತಲೆ ಬಗ್ಗಿಸುವ ಕಾರಣವಿಲ್ಲ; ಸಾವುಕಾರರೆಂದೂ ತಲೆಬಗ್ಗಿಸುವ ಕಾರಣವಿಲ್ಲ. ಒಡೆಯರಾದರೆ, ಅಕ್ಕಿಯನ್ನು ಗೇಣಿ ಕೊಳಗದಿಂದ ಕೊಳ್ಳುವರು; ಸಾವುಕಾರರಾದರೆ, ದುಡ್ಡು-ದಮಡಿಯ ಲೆಕ್ಕ ಮಾಡಿ ವಸೂಲ ಮಾಡುವರು; ಅವರ ಆಜ್ಞೆಯಂತೆ ವ್ಹೋಟು ಕೊಟ್ಟರೂ ಇದೇನು ತಪ್ಪದು, ವ್ಹೋಟಿಗೂ ಒಡೆಯ-ಒಕ್ಕಲತನಕ್ಕೂ, ಸಾವುಕಾರ-ಸಾಲಗಾರತನಕ್ಕೂ ಏನೂ ಸಂಬಂಧವಿಲ್ಲ. ವ್ಹೋಟು ಕೊಡುವ ಅಧಿಕಾರವು ಸಂಪೂರ್ಣವಾಗಿ ಮತದಾರರದು. ವ್ಹೋಟೆಂದರೆ, ಮ್ಯುನಿಸಿಪಾಲಿಟಿಯ ಅಂಗವು. ಮ್ಯುನಿಸಿಪಾಲಿಟಿಯ ಅಂಗವನ್ನು ಚಲೋ ರೀತಿಯಿಂದ ಮತದಾರನಿಗೆ ಹಿತವಾಗಬೇಕೆಂಬ ಆಲೋಚನೆಯಿಂದ ನಡಿಸಬೇಕಾಗಿದ್ದರೆ, ಉಮೇದವಾರರ ಪಾತ್ರಾಪಾತ್ರತೆಯನ್ನು ವಿಚಾರಿಸಿ, ಆ ಬಳಿಕ ಮತದಾನ ಮಾಡಿರಿ. ನಮ್ಮನ್ನೆ ಯಾರೊಬ್ಬ ಪ್ರತಿಷ್ಠಿತ ಮಂದಿಯು "ಇವನಿಗೆ ಕೊಡಬೇಕು, ಅವನಿಗೆ ಕೊಡಬೇಕು," ಎಂದು ಹೇಳುತ್ತಾನೆಂದು ಅವರಿಗೆ ಕೊಡಬೇಡಿರಿ. ಕೂಡ ವಚನ ಕೊಟ್ಟು ಹೋಗಿದೆವೆಂದು ವ್ಯಾಕುಲರಾಗಬೇಡಿರಿ, ಉಮೇದವಾರರ ಹೆಸರು ತಿಳಿಯುವದಕ್ಕೆ ಮುಂಚಿತವಾಗಿ ಕೊಟ್ಟ ವಚನಗಳನ್ನು ಪಾಲಿಸುವ ಜವಾಬದಾರಿಯು, ಮತದಾರರೇ, ನಿಮ್ಮ ಮೇಲಿರುವದಿಲ್ಲ. ಇದನ್ನು ಲಕ್ಷ್ಯದಲ್ಲಿಟ್ಟು ನಡಕೊಳ್ಳಿರಿ.

ಸ್ಥಾನಿಕ ವೃತ್ತಾಂತ

ಕುಮಟಾ— ಮಳೆಯು ಈ ವಾರದಲ್ಲಿ ಸಮಾಧಾನದಿಂದ ಸುರಿಯಿತು. ನೆರೆಯೆಲ್ಲ ಒಯ್ದಾಗಿದ ಜ್ವರಾದಿ ರೋಗಗಳ ಬಾಧೆ ಇನ್ನೂ ನಿಲ್ಲೊಲ್ಲದು. ಈ ವಾರದಲ್ಲಿ ೩-೬೦ ಇಂಚು ಮಳೆ, ಈ ವರೆಗೆ ಅಂಕ. ೯೪ ೪೯ ಇಂಚು ಮಳೆ

ಮ್ಯುನಿಸಿಪಾಲಿಟಿಯವರು ಚಿತ್ರಿಗಿ ಸ್ಮಶಾನದಲ್ಲಿ ಕಟ್ಟಿಸಿದ ಆಶ್ರಯಸ್ಥಾನವು ದುರಸ್ತಿ ಮಾಡದೆ, ಮುರಿದು ಬೀಳಲಿಕ್ಕೆ ತಯಾರಾಗಿದೆ. ಮ್ಯುನಿಸಿಪಾಲಿಟಿಯವರು ಸ್ವಲ್ಪ ಅತ್ತ ಲಕ್ಷ್ಯಗೊಡಲಿ.

ಇಲ್ಲಿಯ ಸರಾಯಿ ಉಗ್ರಾಣದ ಅಧಿಕಾರಿರಾದ ಮಿ। ವೈಲೂರರವರಿಗೆ ಚಿತ್ತಭ್ರಮೆಯಾಗಿರುವದು. ಆದರಿಂದ ಸರಾಯಿ ಉಗ್ರಾಣಕ್ಕೆ ಮೆಜಿಸ್ಟ್ರೇಟರು ಮುದ್ರೆ ಹಾಕಿ ಮುಚ್ಚಿರುವರು.

ಮುಂಬಯಿಯ 'ಕ್ರೊನಿಕಲ' ಪತ್ರಿಕೆಯ ಸಂಪಾದಕರು "ಸ್ವರಾಜ್ಯ" ಒಗಟು ಎಂಬದೊಂದು ಸಮಸ್ಯೆಯನ್ನು ಬಿಡಿಸಹೇಳಿದ್ದರು, ಈ ಸಮಸ್ಯೆಯನ್ನು ಸರಿಯಾಗಿ ಬಿಡಿಸಿದ ಆರು ಮಂದಿಗಳಿಗೆ ರೂಪಾಯಿ ೫೦ರ ಇನಾಮು ಕೊಡುವೆವೆಂಗಿಯೂ ಜಾಹೀರು ಪಡಿಸಿದ್ದರು. ಈ ಸಮಸ್ಯೆಯನ್ನು ೧೩೪೪ ಮಂದಿಗಳು ಬಿಡಿಸಿದರು. ಇನಾಮಿಗಾಗಿ ಆರು ಮಂದಿಗಳ [illegible] ತೆಗೆದರು. ಅದರಲ್ಲಿ ನಮ್ಮಲ್ಲಿಯ ಶ್ರೀ। ಶ್ರೀಬಾಬುರಾವ ಕಲ್ಯಾಣಪುರಕರರು ನಾಲ್ಕನೇ ನಂಬರ ಬಂದು ೫೦ ರೂಪಾಯಿ ಪಾರಿತೋಷಕ ಪಡೆದರವರು. ಅಭಿನಂದನೀಯರು!

ಮುಂಬಯಿ ಕಾಯ್ದೆ ಕೌನ್ಸಿಲಿನ ಸಭಾಸದರಾದ ಹುಬ್ಬಳ್ಳಿಯ ಶ್ರೀ। ಜೋಗದವರು ಹುಬ್ಬಳ್ಳಿಯಿಂದ ಶಿರಸಿ ಮಾರ್ಗವಾಗಿ ಕುಮಟೆಯ ವರೆಗೆ ಉಗಿಬಂಡಿಯ ಮಾರ್ಗವನ್ನೇರ್ಪಡಿಸಬೇಕೆಂದು ಕೌನ್ಸಿಲಿನ ಅಧಿವೇಶನದಲ್ಲಿ ಠರಾವು ಸೂಚಿಸಲಿರುವರು.

ಹಿಂದೀ ಸ್ತ್ರೀ ವಿಶ್ವವಿದ್ಯಾಲಯದ ಮುಖ್ಯ ಪ್ರವರ್ತಕರಾದ ಪ್ರೊ। ಧೋಂಡೋಪಂತ ಕರ್ವೆಯವರು ನಾಳೆ ಸಾಯಂಕಾಲ ಇಲ್ಲಿಯ ಕನ್ನಡ ಶಾಲೆಯಲ್ಲಿ "ಹಿಂದೀ ಸ್ತ್ರೀ ವಿಶ್ವವಿದ್ಯಾಲಯ" ಎಂಬ ವಿಷಯದ ಮೇಲೆ ಭಾಷಣ ಮಾಡುವವರಿದ್ದಾರೆ. ನಾಗರಿಕರು ಚಿತ್ತೈಸಬೇಕು. ಪ್ರೊಫೆಸರರು ಪುಣೆಯ ವಿಖ್ಯಾತ ಸಾಧುಪುರುಷರಿದ್ದು ಸ್ತ್ರೀಯರ ಉನ್ನತಿಗಾಗಿ ತನು-ಮನ-ಧನದಿಂದ ದುಡಿಯುತ್ತಿರುವರು.

ಒಬ್ಬರು ತಿಳಿಸುವದೇನಂದರೆ.– "ಈ ವರುಷ ನಮ್ಮಲ್ಲಿಯ ಒಡ್ಡಾಳ, ಅತ್ತೀಹಳ್ಳ, ಸಂತೆಗೋಳಿ, ಮುಂಗಿನಾಳ, ತೇಪ್ರಿ, ಚಂದಾವರ ಈ ಆರೂ ಸಂಕಗಳು ಒಂದೆರಡು ಮಳೆ ಬೀಳುತ್ತಲೇ ಹರಿದು ಹೋದವು. ಪ್ರತಿ ವರ್ಷ ಇವನ್ನು ಇಂಜಿನಿಯರ ಖಾತೆಯವರು ರೂಪಾಯಿ ೧೭೫ ೨೦೦ ಖರ್ಚು ಮಾಡಿ ಕಟ್ಟಿಸುತ್ತಿದ್ದರು. ಕಂಟ್ರ್ಯಾಕ್ಟರರಿಗೆ ಬೀಲು ಮಳೆ ಮುಗಿದ ಬಳಿಕ ದೊರೆಯುತ್ತಿತ್ತು. ಆದರಿಂದ ಮಧ್ಯದಲ್ಲಿ ಸಂಕಗಳು ಮುರಿದು ಹೋದರೆ ಕಂಟ್ರ್ಯಾಕ್ಟರರು ಕಟ್ಟಿಸಿ ಕೊಡುತ್ತಿದ್ದರು. ಈ ವರ್ಷ ಲೋಕಲ್ಬೋರ್ಡು ಈ ಕೆಲಸವನ್ನು ವಹಿಸಿಕೊಂಡಿತು. ಈ ಕೆಲಸಕ್ಕೆ ರೂಪಾಯಿ ೫೦ ಕಂಟ್ರ್ಯಾಕ್ಟರರಿಗೆ ಕೊಡೋಣಾದವು; ಕೂಡಲೆ ಕೆಡೋಣವು. ಹಣ ಹೆಚ್ಚು ಖರ್ಚು ಮಾಡಿಯೂ ಅನುಕೂಲತೆಯಿಲ್ಲ. ಲೋಕಲ್ಬೋರ್ಡಿನ ಅಧ್ಯಕ್ಷರು ಒಂದು ಬಾರಿ ಈ ಸಂಕಗಳ ಕಡೆಗೆ ಹೋಗಿ ನೋಡಿಬರುವರೇನ? ಸಂಕಗಳನ್ನು ಪಾಸು ಮಾಡಿದ ಮೇಸ್ತ್ರಿ ಹಾಗು ಕಂಟ್ರ್ಯಾಕ್ಟರರ ಸಹಿತ ಹೋದರೆ ಪ್ರಶಸ್ತ."

ಗೋಕರ್ಣದ ಡಾ| ಬಿಲಸೇಕರ ಇವರು ಕಳೆದ ತಾ. ೧೭ ನೇಗೆ ಕಫಜ್ವರದಿಂದ ನಿಧನಹೊಂದಿದರೆಂದು ತಿಳಿಸಲು ವ್ಯಸನವಾಗುತ್ತದೆ. ಪೋಲೀಸ ಸಬ್ ಇನ್ಸಪೆಕ್ಟರ ಮಿ। ಕಾರ್ನಾತರವರಿಗೆ ಸುಪೆಗೆ ಸ್ಥಳಾಂತರವಾಯಿತು.

ಸಾಭಾರ ಸ್ವೀಕಾರ

ಲೋಕರಹಸ್ಯ— ಜುಲೈ ತಿಂಗಳ ಸಂಚಿಕೆ. ಸಂಪಾದಕ—ಶ್ರೀ ಕೇ. ನಾರಾಯಣರಾವ, ವೀರರಾಜೇಂದ್ರಪೇಟೆ, ಕೊಡಗು. ವಾರ್ಷಿಕ ಚಂದಾ ರೂ. ೩-೮-೦.

ಕಿರ್ಲೋಸ್ಕರ ವಾರ್ತೆ— ಜುಲೈ ತಿಂಗಳ ಸಂಚಿಕೆ ಸಂಪಾದಕ ಮತ್ತು ಪ್ರಕಾಶಕ— ಶ್ರೀ ಲ. ಕ. ಬಾಗಲ, ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. ೧-೪-೦.

ವಾಗ್ಭೂಷಣ— ಮೇ-ಜೂನ ತಿಂಗಳ ಸಂಚಿಕೆ ಸಂಪಾದಕ — ಶ್ರೀ ಎಲ್. ಎಸ್. ಬಸವನಾಳ, ಎಮ್. ಎ., ಕರ್ನಾಟಕ ವಿದ್ಯಾವರ್ಧಕ ಸಂಘ, ಚಾಮರಾಜಮಂದಿರ ಧಾರವಾಡ ವಾರ್ಷಿಕ ಚಂದಾ ರೂ. ೨-೮-೦.

ಗ್ರಾಮಸೇವಕ— ಫೆಬ್ರವರಿ—ಮೇ ತಿಂಗಳ ಸಂಚಿಕೆ ಸಂಪಾದಕ ಮತ್ತು ಪ್ರಕಾಶಕ—ಶ್ರೀ ಮಹಾದೇವ ವಾಸುದೇವ ನಾಯಕ ಮುದಕವಿ, ರಾಯದುರ್ಗ ವಾರ್ಷಿಕ ವರ್ಗಣಿ ಅಂಚೆ ವೆಚ್ಚ ಸೇರಿ ರೂಪಾಯಿ ೩-೦-೦.

ಹೊನ್ನಾವರ— ಕಳೆದ ೧೬ನೇಗೆ ನಿಧನಹೊಂದಿದ ಹುಡುಗನು ಅಲ್ಲಿಯ ಡಾ। ಗೋವಿಂದ ಅನಂತ ಶ್ಯಾನಭಾಗರ ಮಗನು. ದೈವಯೋಗಕ್ಕೆ ಉಪಾಯವೇನಿದೆ!

ಕಾದ್ರಿಗೆ ದೇವಸ್ಥಾನದಲ್ಲಿ ಆದ ಖೂನಿ ಪ್ರಕರಣದಲ್ಲಿ ೩-೪ ಮಂದಿ ಆರೋಪಿಗಳನ್ನು ಹಿಡಿದು ತಂದಿರುವರು. ಕಾಡ್ಲ ಕೃಷ್ಣನೆಂಬ ವಿಖ್ಯಾತ ಕಳ್ಳನೂ ಈ ಪ್ರಕರಣದಲ್ಲಿ ಆರೋಪಿಯಾಗಿ ಬಂದಿರುವನು!

ಮ್ಯುನಿಸಿಪಾಲಿಟಿಯವರು ಮಾರ್ಗಗಳ ದುರುಸ್ತಿ ಮಾಡದೆ, ಅತ್ತ ಹಾಳ ಸಹ ಹಾಕದೆ, ಮಾರ್ಗಗಳನ್ನು ಹಾಳುಗೆಡಹಿರುವರು. ಮುಂಬರದು ಕಣ್ಣೆತ್ತಿ ನೋಡಲಿ.

ಇಲ್ಲಿಯ ಡಾ। ಬೊಂದಗಾಯಿ ಕೇಶಗಿ ಸುಬ್ರಾಯ ಪೈರವರ ಮಚ್ವೆಯನ್ನು ಕಸ್ಟಮ್ ಖಾತೆಯವರು ಜಪ್ತಿ ಮಾಡಿದ್ದರು. ಮಚ್ವೆಯು ಅಪ್ಪಣೆ ಪಡೆಯದೆ, ಪರಬಂದರದಲ್ಲಿ ಹೋಗಿ ಉಪ್ಪು ತಂದು ಖಾತೆಯವರ ಆಕ್ಷೇಪವಿತ್ತು. ಕಸ್ಟಮು ಖಾತೆಯವರು ಈ ಬಗ್ಗೆ ಡಾ। ಕೇಪಗಿ ಪೈರ ಹೇಳಿಕೆ ಸಹ ಕೇಳಿಕೊಳ್ಳದೆ ಮಚ್ವೆಯನ್ನು ಜಪ್ತಿ

ಮಾಡಿಟ್ಟಿದ್ದರು. ಈ ಬಗ್ಗೆ ಕಾರವಾರ ಡಿಸ್ಟ್ರಿಕ್ಟ ಕೋರ್ಟಿನಲ್ಲಿ ಸರಕಾರದ ಮೇಲೆ ಮುಚ್ಚೆಯನ್ನು ಜಪ್ತಿಯಿಂದ ಬಿಡಿಸಬೇಕೆ ದಾವೆಯು ದಿನ ದಾಖಲಾಗಿ ಜಡ್ಜರು ದಾವೆಯನ್ನು ತನಿಖೆ ಮಾಡಿರುವರು. ಮುಚ್ಚೆಯು ಪ್ರಕರಣದಲ್ಲಿ ಖಾತೆ ಸುವರು ಕೈಕೊಂಡ ಕ್ರಮವು ಅನ್ಯಾಯವೆಂದು ಜಡ್ಜಮೆಂಟು ಕೊಟ್ಟಿರುವರು.

ಅಂಕೋಲಾ— ಮೇಘರಾಜನ ರೌದ್ರಾವತಾರವು ಈ ವಾರದಲ್ಲಿ ಬಹುಮಟ್ಟಿಗೆ ಇಳಿದು, ಅವನೀಗ ಪ್ರಸನ್ನವದನನಾಗಿ ತೋರುತ್ತಿರುವನು. ಇಲ್ಲಿಯ ಎತ್ತರ ಶಾಲೆಯಲ್ಲಿ ಪುನಃ ಗಡಿಬಿಡಿ. ಶ್ರೀ| ಸ್ವಳೇಕರ-ಕುಲಕರ್ಣಿಯವರು ಶಾಲೆ ತೊರೆದು ೩ ತಿಂಗಳು ಕಳೆಯುವಷ್ಟರಲ್ಲಿ ಆಡಳಿತೆ ಮಂಡಳದ ಅಧಿಕಾರಮದಕ್ಕೆ ಇನ್ನೊಂದು ಬಲಿಬಿತ್ತು. ಮೇ ತಿಂಗಳಲ್ಲಿಯೇ 'ಸುಪರಿಂಟೆಂಡೆಂಟ' ಎಂಬ ಹೊಸ ಜಾಗೆಯು ನಿರ್ಮಿತವಾಗಿತ್ತು. ಈ ಹೊಸ ಜಾಗೆಯ [illegible] ತಿಂಗಳಿಗೆ ೧೦೦ ರೂಪಾಯಿ. ಈ ಹೊಸ ಜಾಗೆಗಾಗಿ ಮಂಗಳೂರ ಕಡೆಯಿಂದ ಮಿ| ಪೃಥು ಎಂಬವರೊಬ್ಬರು ಬಂದರು. ಬಂದ ೧-೧॥ ತಿಂಗಳಾಗುವಷ್ಟರಲ್ಲಿ ರಾಜೀನಾಮೆ ಕೊಟ್ಟು ಹೋದರು ಎಂದು ಜಾಹೀರು ಪಡಿಸಬೇಕಾಗಿದೆ. ರಾಜೀನಾಮೆಯ ಕಾರಣವೇನೆಂದು ಕೇಳ್ವಿರೋ? ಶಾಲಾ ಮಾಸ್ತರರಿಗೆ ಎಳ್ಳಷ್ಟು ಸ್ವಾತಂತ್ರ್ಯವಿಲ್ಲ; ಆಡಳಿತೆಯ ಕಮೀಟಿಯಿಂದ ಹೊರಡುವ ಹೊಂದೀ ಹುಕುಮುಗಳು ಪರಸ್ಪರ ವಿರುದ್ಧ ವಾಗಿ ಧಂಡು ಇರುವದಿಲ್ಲ. ಆದರಿಂದ ಸ್ಥಿರತೆ ಇಲ್ಲ, ಶಿಕ್ಷಕರೂ ಅಸ್ಥಿರರೇ?" ಇತ್ಯಾದಿ ಕಾರಣಗಳನ್ನು ನಮೂದಿಸಿ ಸುಪರಿಂಟೆಂಡೆಂಟ ಸಾಹೇಬರು ಹೊರಟುಹೋದರು. ಶಿಕ್ಷಕರೂ ಹೋಗಲಿಕ್ಕೇ ಬರುತ್ತಿರುವರೆಂಬಂತೆ ವ್ಯವಹಾರ ನಡೆದಿದೆ. ವಿದ್ಯಾರ್ಥಿಗಳ ಗೋಳು. 'ಹಳಬರು ಹೋಗುತ್ತಾರೆ, ಹೊಸಬರು ಬರುತ್ತಾರೆ." ಎಂದು ಭಿಕ್ಷುಕನು ಅರಮನೆಗೆ ಸಂಬೋಧಿಸಿದಂತೆ, ನಮ್ಮ ಎತ್ತರ ಶಾಲೆಯ ಗತಿಯಾಗಿದೆ. ಆದರೂ, ಶಾಲೆಯ ಆಡಳಿತೆದಾರರ ಸರ್ವಾಧಿಕಾರದ ಮದವು ಇನ್ನೂ ಇಳಿಯುವದಿಲ್ಲ. ಶಾಲೆಯು ಅಳಿಯಲಿ, ಉಳಿಯಲಿ, ವಿದ್ಯಾರ್ಥಿಗಳು ಗೋಳಿಡಲಿ, ತಮ್ಮ ಸರ್ವಾಧಿಕಾರವೊಂದು ಉಳಿದರಾಯಿತು, ಎಂಬಂತೆ ಶಾಲೆಯ ಆಡಳಿತೆಯು ನಡೆದಿದೆ. ಇನ್ನಾವ ವೇಷವು ರಂಗಸ್ಥಳದಲ್ಲಿ ಬರುವದೆಂದು ನೋಡುವ!

ಒಬ್ಬ ಬಾತ್ಮೀದಾರರು ತಿಳಿಸುವದೇನಂದರೆ:— ಹೊಸದಾಗಿ ಬಂದ ಮಂಗಳೂರ ಕಡೆಯ ಶಿಕ್ಷಕರು ರಾಜಿನಾಮೆ ಕೊಡಲಿಕ್ಕೆ ಆಡಳಿತೆಯ ಕಮೀಟಿಯವರ ನಿರಂಕುಶ ಪ್ರಭುತ್ವವೇ ಕಾರಣವೆಂದು ಜನರ ಹೇಳಿಕೆ. ಮಿ| ಪೃಥುರವರು ಅನುಭವಿಕ ಶಿಕ್ಷಕರು, ಉದ್ಯೋಗಪ್ರಿಯರು ಶಾಲೆಯನ್ನು ಊರ್ಜಿತಾವಸ್ಥೆಗೆ ತರಲು ಮನಃಪೂರ್ವಕ ಪ್ರಯತ್ನ ಮಾಡುತ್ತಿದ್ದರು. ಇಂಥವರು ರಾಜಿನಾಮೆ ಕೊಡಬೇಕಾದದ್ದು ಕಮೀಟಿಯು ಆಡಳಿತೆಯ ಪರಿಣಾಮವು. ಈಗಲಾದರೂ ಕಮೀಟಿಯವರು ತಮ್ಮ ದೋಷಗಳನ್ನು ಅರಿತುಕೊಂಡು ಸುಸೂತ್ರ ಆಡಳಿತೆಗೆ ಅವಶ್ಯವಾದ ಸುಧಾರಣೆಗಳನ್ನು ಬೇಗನೆ ಅಮಲಿನಲ್ಲಿ ತಂದು, ಹೈಸ್ಕೂಲ ಸ್ಥಾಪನೆಯ ತಯಾರಿ ನಡಿಸಿ, ಕೀರ್ತಿಹೊಂದಬೇಕಾಗಿ ಸೂಚನೆಯಿದೆ. ಈ ಕೆಲಸ ಆಗದಿದ್ದಲ್ಲಿ ಶಾಲೆಯನ್ನು ಮಾತ್ರ ಜನರ ಕೈಯಲ್ಲಿ ಬಿಟ್ಟುಕೊಡಬಹುದು.

ಕಾರವಾರ— ಈ ವಾರದಲ್ಲಿ ಮಳೆಯು ಕಡಿಮೆಯಾಗಿದೆ. ಈ ವರುಷ ದೀಪಾವಳಿ ರಜೆಯಲ್ಲಿ ಸಹಕಾರಿ ಪರಿಷತ್ತನ್ನು ನೆರವೇರಿಸಬೇಕಾಗಿ ಕಳೆದ ತಾ, ೧೮ ನೇಗೆ ಇಲ್ಲಿಯ ಸಹಕಾರಿ ಸಂಘದವರು ನಿರ್ಣಯಿಸಿರುವರು. ಈ ಬಗ್ಗೆ ಒಂದು ಮಂಡಳವು ನೇಮಿಸಲಾಗಿದೆ.

ಮಿ| ಕೋಲಿನ್ಸರ ಹುಲಿ ಬೇಟೆಯಲ್ಲಿ ನಿಧನ ಹೊಂದಿದ ಫಡೇದಾರ ರಾಮಾಂಡನು 'ಕೆಥೋಲಿಕ' ಸೊಸಾಯಟಿಗೆ ಕೊಡಬೇಕಾದ ಸಾಲ ರೂಪಾಯಿ ೪೧೪ ನ್ನು ಮಿ| ಕೋಲಿನ್ಸ ಸಾಹೇಬರು ತೀರಿಸಿದರು. ಅದಲ್ಲದೆ, ಆತನ ಕುಟುಂಬಕ್ಕೆ ಭೂಮಿಯನ್ನು ಕೊಂಡುಕೊಳ್ಳಲಿಕ್ಕೆ ೨೦೦ ರೂಪಾಯಿಗಳನ್ನು ಕೊಟ್ಟರು.

[illegible]ದ ಪಟೇಲರಾದ ಮಿ| ಬಾಳಕೃಷ್ಣ ನಾಯ್ಕ ನಾಗಾಂಕರರವರಿಗೆ 'ರಾವಸಾಹೇಬ' ಕಿತಾಬು ದೊರೆತಿತ್ತು. ಸತ್ಕರಿಸುವ ಬಗ್ಗೆ ಮಿತ್ರಸಮಾಜ ಸಭಾಮಂದಿರದಲ್ಲಿ ತಾ. ೧೯ ನೇಗೆ ಸಭೆಯಾಯಿತು. ಕಲೆಕ್ಟರ ಮಿ| ಭಿಡೆಯವರು ಅಧ್ಯಕ್ಷರಿದ್ದರು. ಸರಕಾರದ ಆಭಾರವನ್ನು ಕೆಲವರು ಮರುಕ ಸನ್ಮಾನದವರು ಮನ್ನಿಸಿದರು. ಸಭಾಪತಿಗಳು ಕೆಲವು ಮರುಕ ಸನ್ಮಾನದವರಿದ್ದರೆ ವ್ಯಕ್ತವಾಗುತ್ತಿತ್ತು.

ಡಿಸ್ಟ್ರಿಕ್ಟ ಲೋಕಲ್ಬೋರ್ಡ ಹಾಗು ತಾಲೂಕಾ ಲೋಕಲ್ ಬೋರ್ಡುಗಳ ಚುನಾವಣೆಯ ತಾರೀಖುಗಳು ಅನುಕ್ರಮವಾಗಿ ೨೯-೧೦-೧೯೩೪ ಹಾಗು ೩೦-೧೦-೧೯೩೪ ಎಂತ ನಿರ್ಣಯವಾಗಿದೆ.

ಸಿದ್ಧಾಪುರದ ಖೂನಿ ಖಟ್ಲೆಯ ತೀರ್ಪನ್ನು ಸೆಶನ್ಸ ಜಡ್ಜರು ಕೊಟ್ಟರು. ಆರೋಪಿ ತಿಮ್ಮನು ಹೆಣವನ್ನು ಅಡಗಿಸಿಟ್ಟು ಅಪರಾಧಿಗಳನ್ನು ಸಂರಕ್ಷಿಸಲು ಯತ್ನ ಮಾಡಿದನೆಂದು ಜಡ್ಜರು ಅಭಿಪ್ರಾಯಪಟ್ಟು, ಆತನಿಗೆ ೬ ತಿಂಗಳ ಕಠಿಣ ಸಜೆಯಾಗಿದೆ. ಪೋಲೀಸ ಇನ್ಸಪೆಕ್ಟರ ಮಿ| ಗುಡಿಯವರಿಗೊಂದು ಜಡ್ಜರು ಶಿಫಾರಸು ಕೊಟ್ಟಿರುವರು. ಇನ್ಸಪೆಕ್ಟರರು ನ್ಯಾಯಾಸನದಲ್ಲಿ ಸಂಪೂರ್ಣ ಹಕೀಕತು ತರದೆ, ಕೆಲವು ಸಂಗತಿಗಳನ್ನು ಅಡಗಿಸಿಟ್ಟರೆಂದು ಜಡ್ಜರು ಅಭಿಪ್ರಾಯಪಟ್ಟಿರುತ್ತಾರೆ. ಮೇಲಧಿಕಾರಿಗಳು ಈ ವಿಷಯ ಚೌಕಶಿ ನಡಿಸಿ ತಮ್ಮ ತಿಳುವಳಿಕೆಗೆ ಬಂದ ಹಕೀಕತನ್ನು ನ್ಯಾಯಾಸನದ ಮುಂದೆ ತರದೆ ಬಚ್ಚಿಡುವ ಕಾರಣವೇನಾಯಿತೆಂದು ಶೋಧಿಸಬೇಕು.

ಮುಂಬಯಿಯ ಪ್ರಾಂತಿಕ ಕಾಯದೆ ಕೌನ್ಸಿಲಿನ ಸಭಾಸದರಾದ ಹುಬ್ಬಳ್ಳಿಯ ಶ್ರೀ| ಅಂಬೇರಿಯವರು ಕಾರವಾರ-ಹುಬ್ಬಳ್ಳಿಗಳ ನಡುವೆ ಶೀಘ್ರವೇ ಉಗಿಬಂಡಿಯ ಮಾರ್ಗವನ್ನು ನಿರ್ಮಿಸಬೇಕಾಗಿ ಕೌನ್ಸಿಲಿನಲ್ಲಿ ಠರಾವು ತರಲಿರುವರು.

ಬೆಳಗಾವಿಯ ರಾ| ವಿಷ್ಣು ರಘುನಾಥ ಕಾಮತ ಇವರು ತಾ. ೧೬-೭-೧೯೩೪ ನೇಗೆ ಪತ್ರ ಬರೆದು, ಚಂದ್ರ ಗ್ರಹಣವು ಮುಂಬಯಿಯ ಅಲ್ಮನಾಕದಲ್ಲಿ ಚಂದ್ರೋದಯಕ್ಕಿಂತ ಮುಂಚಿತವಾಗಿಯೇ ಮೋಕ್ಷಹೊಂದುವದರಿಂದ ಚಂದ್ರಗ್ರಹಣದ ದೋಷವು ಧರ್ಮಕೃತ್ಯಗಳಿಗೆ ತಟ್ಟುವದಿಲ್ಲೆಂದು ತಿಳಿಸುತ್ತಾರೆ. ಚಂದ್ರಗ್ರಹಣವು ಶ್ರಾವಣ ಶು| ೧೫ ಮಿ ಮಂಗಳವಾರ ಸೂರ್ಯಾಸ್ತಕಾಲ ೬ ಘಂಟೆ ೪೫ ಮಿನಿಟು (ಸ್ಟ್ಯಾಂಡರ್ಡ) ಸಮಯ ಮೋಕ್ಷವಾಗುತ್ತದೆ. ಅಂದು ಕಾರವಾರದಲ್ಲಿ ಚಂದ್ರೋದಯವು ೭ ಘಂಟೆ ೪ ಮಿನಿಟಗೆ ಆಗುತ್ತದೆ. ನಮ್ಮ ಕಾನಡಾ ಜಿಲ್ಲೆಯಲ್ಲಿ ಎಲ್ಲಕಡೆಯು ಸ್ಥೂಲ ಇದೇ ಸಮಯ ಚಂದ್ರೋದಯವಾಗುವದು.

ಶಿರಸಿ— ರಾ| ಎಲ್ ಪಿ| ಕುಲಕರ್ಣಿ ಹಾಗು ಎಸ್ ಆರ್ ಕಾಮತ ಇವರು ತಾ. ೧೫-೭-೧೯೩೪ ನೇಗೆ ಪತ್ರ ಬರೆದು ತಿಳಿಸುವದೇನಂದರೆ, — ಶಿರಸಿಯೊಳಗಿನ ಮಿ| ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ಕಾನಡಾ ಜಿಲ್ಲೆಯೊಳಗಿನ ತೋಟಗಾರರು ಧಂದೆಯಲ್ಲಿ ಒದಗುವ ತೊಂದರೆಗಳನ್ನು ಚರ್ಚಿಸಿ, ಅವುಗಳ ನಿವಾರಣಕ್ಕಾಗಿ ಉಪಾಯಯೋಜನೆ ಮಾಡುವದಕ್ಕೆ, ತಾ. ೨-೮-೧೯೩೪ನೇ ಅಪರಾಹ್ನ ೨ ಘಂಟೆಗೆ ಸಾಧಾರಣ ಸಭೆ ಸೇರುವದಿದೆ. ತೋಟಗಾರ ವ್ಯಾಪಾರಿಗಳೂ, ಸಾಹುಕಾರರೂ. ಈ ಧಂದೆಯ ವಿಷಯ ಸಹಾನುಭೂತಿಯುಳ್ಳವರೂ ಅಂದು ಸಭೆಗೆ ಬರಬೇಕಾಗಿ ವಿನ್ನಹವಿದೆ.

— ಹುದಲಿಯಲ್ಲಿ ಶ್ರೀ| ಗಂಗಾಧರರಾವ ದೇಶಪಾಂಡೆಯವರು ಒಂದು ಆಶ್ರಮವನ್ನು ಸ್ಥಾಪಿಸಿ ಶಿಕ್ಷಣವನ್ನು ಕೊಡುತ್ತಿರುವರು. ಸ್ಪೃಶ್ಯಾಸ್ಪೃಶ್ಯ ಭೇದವು ಈ ಆಶ್ರಮದಲ್ಲಿರುವದಿಲ್ಲ.

— ಸೊಲ್ಲಾಪುರ ಮುನಿಸಿಪಾಲಿಟಿಯವರು [illegible]ವರಿಗೆ ವಸತಿಗೃಹವನ್ನೀಯಬೇಕೆಂದು ನಿರ್ಧರಿಸಿ ಅದಕ್ಕೆ ೬ ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿರುವರು. ಇನ್ನೂ ಮುಂದಕ್ಕೆ ಹೋಗಲಿ.

ವಿವಿಧ ಸಂಗ್ರಹ.

ಕರ್ನಾಟಕ ಪ್ರಾಂತಿಕ ಸ್ವಯಂಸೇವಕ ಮಂಡಳ.

ಕರ್ನಾಟಕ ಪ್ರಾಂತಿಕ ಸ್ವಯಂಸೇವಕ ಮಂಡಳದ ಸಭೆಯು ತಾ. ೧೬-೭-೧೯೩೪ ನೇಗೆ ಹುಬ್ಬಳ್ಳಿಯಲ್ಲಿ ಸೇರಿ, ಈ ಕೆಳಗಿನ ಠರಾವು ಮಂಜೂರು ಮಾಡಲ್ಪಟ್ಟಿದೆ. ಕರ್ನಾಟಕ ಪ್ರಾಂತಿಕ ಸ್ವಯಂಸೇವಕ ಮಂಡಳದ ಉದ್ದೇಶವಾದ ಪ್ರಾಂತದಲ್ಲಿ ಸ್ವಯಂಸೇವಕ ಸಂಘಗಳ ಸ್ಥಾಪನೆ ರಾಷ್ಟ್ರೀಯ ಸಭೆಯ ಕಾರ್ಯಕ್ರಮ ಪುರಸ್ಕಾರ ಇವುಗಳ ವಿಷಯ ಕರ್ನಾಟಕದೊಳಗಿನ ಸಂಸ್ಥೆಗಳೂ, ವ್ಯಕ್ತಿಗಳೂ ಈ ಮುಂದಿನ ಪ್ರಶ್ನೆಗಳಿಗೆ ಉತ್ತರವನ್ನಿತ್ತು ತಿಳಿಸಬೇಕು. (೧) ನಿಮ್ಮಲ್ಲಿ ಎಷ್ಟು ಜನ ಸ್ವಯಂಸೇವಕರಿದ್ದಾರೆ? (೨) ಎಷ್ಟು ಮಂದಿಗಳು ಪೂರ್ಣವಾಗಿ ರಾಷ್ಟ್ರಕಾರ್ಯ ಮಾಡಬಲ್ಲರು? ಬಿಟ್ಟಕಾಲ ಎಷ್ಟುಮಂದಿ ಮಾಡಬಲ್ಲರು? (೩) ಪೂರ್ಣವಾಗಿ ರಾಷ್ಟ್ರಕಾರ್ಯ ಮಾಡುವವರು ವೇತನ ಬಯಸುತ್ತಾರೇನು? (೪) ಪೂರ್ಣವಾಗಿ ಕೆಲಸ ಮಾಡಬಲ್ಲವ ಸ್ವಯಂಸೇವಕರ ಹೆಸರುಗಳನ್ನೂ, ಅವರು ಬಯಸುವ ಸಂಬಳವನ್ನೂ ತಿಳಿಸಿರಿ (೫) ಬಿಟ್ಟಕಾಲ ಯಾ ಅವಕಾಶವಾದ್ದು ಕಡಿಮೆ ದೇಶಕಾರ್ಯ ಮಾಡಬಲ್ಲವ ಸ್ವಯಂಸೇವಕರ ಹೆಸರುಗಳನ್ನೂ, ಅವರ ಕಸಬನ್ನೂ, ಅವರ ಮಾಡಬಲ್ಲ ಕಾರ್ಯದ ಸ್ಥೂಲ ಸ್ವರೂಪವನ್ನೂ ತಿಳಿಸಿರಿ. (೬) ಗ್ರಾಮಗಳಲ್ಲಿ ಹೋಗಿ ಗ್ರಾಮ ಸಂಘಟನೆಯನ್ನು ಮಾಡಲು ತಯಾರಿದ್ದವರ ಹೆಸರುಗಳನ್ನು ತಿಳಿಸಿರಿ. (೭) ಸ್ವಯಂಸೇವಕರು ರಾಷ್ಟ್ರೀಯ ಸಭೆಯ ಪೂರ್ಣ ಕಾರ್ಯಕ್ರಮವನ್ನು ನಡಿಸಲು ತಯಾರಿರುವರೋ? ಅಥವಾ ಅದರಲ್ಲಿ ಕೆಲವೊಂದು ಬಾಬನ್ನು ಮಾತ್ರ ಪುರಸ್ಕರಿಸಲು ತಯಾರಿರುವರು? ಹಾಗಿದ್ದರೆ ಆ ಬಾಬುಗಳಾವವು? ರಾಷ್ಟ್ರೀಯ ಸಭೆಯ ಕಾರ್ಯಕ್ರಮವೆಂದರೆ:—(ಅ) ಹಿಂದೂ-ಮುಸಲ್ಮಾನರ ಐಕ್ಯ, (ಆ) ಅಸ್ಪೃಶ್ಯತಾ ನಿವಾರಣೆ, (ಇ) ರಾಷ್ಟ್ರೀಯ ಶಿಕ್ಷಣ, (ಈ) ಮದ್ಯಪಾನೋಚ್ಚಾಟನ, (ಉ) ಗ್ರಾಮ ಪಂಚಾಯತು ಹಾಗು (ಊ) ಖಾದಿ ಈ ಎಲ್ಲ ಮಾಹಿತಿಯನ್ನು ಪ್ರಾಂತಿಕ ಸ್ವಯಂಸೇವಕ ಮಂಡಳದ ಕಾರ್ಯದರ್ಶಿಗಳಾದ ಶ್ರೀ| ಹರ್ಡೀಕರರಿಗೆ ಕಳುಹಬೇಕು.

⁂

ನಮ್ಮ ಗ್ರಾಮಗಳ ಮಾದರಿ!

ಶ್ರೀ| ಹರ್ಡೇಕರ ಮಂಜಪ್ಪನವರು ವಿಜಾಪುರ ಜಿಲ್ಲೆಯ ಗ್ರಾಮಗಳಲ್ಲಿ ಖಾದಿ ಪ್ರಚಾರಕ್ಕಾಗಿ ಅಡ್ಡಾಡುತ್ತಿರುವರು. ಶ್ರೀ| ಮಂಜಪ್ಪನವರು [illegible] ಎಂಬ ಗ್ರಾಮದ ಸ್ಥಿತಿಯನ್ನು ಹೇಳಿ ಅದೊಂದು ನಮ್ಮಲ್ಲಿಯ ಗ್ರಾಮಗಳ ಮಾದರಿಯೆಂದು ಉದ್ಗರಿಸಿರುವರು. ಈ ಚಿಕ್ಕ ಗ್ರಾಮದಲ್ಲಿ ಪೌರ್ವಾತ್ಯ-ಪಾಶ್ಚಾತ್ಯ ಸಂಸ್ಕೃತಿಗಳೆರಡೂ ಕಲೆದಿರುತ್ತಿವೆ. ಶ್ರೀ| ಮಂಜಪ್ಪ ಹರ್ಡೇಕರರು ಒಬ್ಬ ಪ್ರಮುಖರ ಮನೆಗೆ ಹೋದಾಗ ಆ ಮನೆಯಲ್ಲಿ ಭಾಗವತದ ಸಮಾರಂಭವು ನಡೆದಿತ್ತು. ಬೀಡಿಯೂ ತನ್ನ ಮೋಹಜಾಲವನ್ನು ಪಸರಿಸಿತ್ತು. ಒಬ್ಬನು ತನ್ನ ಅಂಗಿಯ ಜೇಬಿನಲ್ಲಿಟ್ಟಿದ್ದ ಬೆಂಕಿಯನ್ನು ಒತ್ತಿ ಹುಟ್ಟಿದ ಉರಿಯಿಂದ ಬೀಡಿಯನ್ನು ಹಚ್ಚಿಕೊಂಡು ಸೇದುತ್ತ ನಡೆದನಂತೆ. ಪಾಶ್ಚಾತ್ಯ ಸುಧಾರಣೆಯು ನೋಡಿದಿರಿ! ಈ ಕೋಣೆಯ ಬಾಗಿಲಲ್ಲಿಯೇ ಒಬ್ಬ ಹೆಣ್ಣು

ಹಾಗಳು ನೂಲುತ್ತ ಕೂತಿದ್ದಳು. ಇದೊಂದು ಸವಾಧಾನವು. ಶ್ರೀ ಮಾರುತಿ ದೇವಸ್ಥಾನದಲ್ಲಿ ಶ್ರೀ ಹರ್ಡೇಕರರು ಹೋದರು ಅಲ್ಲಿ ೪೦-೫೦ ಜನರು ಸೇರಿದ್ದರು. ಇಬ್ಬರು ಗುಡಾರದ ನೂಲನ್ನು ನೂಲುತ್ತಿದ್ದರು. ಮೂವರು ಕುರಿ ಉಣ್ಣೆಯನ್ನು ಬಿರಿಕೆಯಲ್ಲಿ ನೂಲುತ್ತಿದ್ದರು; ಸಭೆಯಲ್ಲಿಯೂ ನೂಲುತ್ತಿದ್ದರು. ಅವರು ಖಾದಿಯ ಅಂಗಿಯನ್ನು ತೊಟ್ಟುಕೊಂಡಿದ್ದರು. ಜಯುರಿವೆಗಳು ಗಿರಣಿಯವು. ಶ್ರೀ ಮುಂಬಪ್ಪನವರ. ಅವರಿಗೆಲ್ಲ ಖಾದಿಯ ಪಂಚೆಗಳನ್ನೇ ಧರಿಸಲು ಬೋಧಿಸಿದರು.

⁂

ಗ್ರಾಮದ ಸ್ಥಿತಿ.

ಬಿಜ್ಜಳೋಳ ಗ್ರಾಮದಲ್ಲಿ ನೂಲುವದನ್ನು ಶ್ರೀ ಮುಂಬಪ್ಪನವರು ನೋಡಹೋಗಿದ್ದರು. ಒಂದು ಮನೆಯಲ್ಲಿ ಏಳ ಹೆಣ್ಣು ಮಕ್ಕಳು ನೂಲುತ್ತಿದ್ದರು, ಪುರಾಣಕಥೆಗಳನ್ನಾಡುತ್ತ ನೂಲುತ್ತಿದ್ದರು. ಪ್ರತಿಯೊಂದು ಮನೆಯಲ್ಲಿಯೂ ೨-೩ ರಾಟಿಗಳು ನಡೆಯುತ್ತಿದ್ದವು. ಒಂದು ಕಡೆಯಲ್ಲಿ ಮನೆಯ ಯಜಮಾನಿಯು ಸ್ವತಃ ನೂತ ನೂಲಿನಿಂದ ಮಾಡಿಸಿಕೊಂಡ ಸೀರೆಯನ್ನು ಶ್ರೀಯುತರಿಗೆ ತೋರಿಸಿದಳು. ಶ್ರೀ ಬೆಳಗಾಂವಕರರು ಇವಳಿಗೆ ಈ ಬಗ್ಗೆ ೧೦ ರೂಪಾಯಿ ಬಹುಮಾನವನ್ನಿತ್ತಿದ್ದರು. ಇವಳು ೪೦ ನಂಬರಿನ ನೂಲು ತೆಗೆಯುತ್ತಾಳೆ. ಇಲ್ಲಿಯ ರಾಟಿಗಳೆಲ್ಲ ಪುರಾತನದವು. ಬಹು ಭದ್ರವಿವೆ. ಚಿತ್ರವಿಚಿತ್ರ ನಕ್ಷೆಗಳಿಂದ ಅಂದವಾಗಿವೆ. ಅವುಗಳ ಮೇಲೆ ನೂಲಲು ಬಹಳ ಆನಂದವಾಗುತ್ತದಂತೆ. ಮಹಾತ್ಮರ ಖಾದಿ ಚಳವಳಿಯ ಮೂಲಕ ಮೂಲೆಗುಂಪಾಗಿ ಬಿದ್ದಿದ್ದ ಈ ರಾಟಿಗಳು ಈಗ ರಾಷ್ಟ್ರಜೀವನವನ್ನು ಪೂರ್ಣಸುತ್ತವೆ. ಈ ಗ್ರಾಮದಲ್ಲಿಯ ಬಿಟ್ಟ ಹೆಣ್ಣು ಮಕ್ಕಳು ನಿತ್ಯದ ಎಲ್ಲ ಕೆಲಸ ಸಾಗಿಸಿ, ವರ್ಷಕ್ಕೆ ೩೦ ರೂಪಾಯಿ ಗಳಿಸುತ್ತಾಳೆ. ಕಲಾದಗಿಯ ಖಾದಿ ಕಾರ್ಯಾಲಯದಲ್ಲಿ ಇದೇ ಗ್ರಾಮದಿಂದ ವಿಶೇಷ ವಸ್ತ್ರಗಳು ಹೋಗುತ್ತದೆ. ಈ ಗ್ರಾಮಕ್ಕೆ ನೂಲು ನೆಯ್ಗೆಯಿಂದ ವರ್ಷಕ್ಕೆ ೪-೫ ಸಾವಿರ ರೂಪಾಯಿ ಉತ್ಪತ್ತಿಯಾಗುತ್ತದೆ. ಇವರ ಮೇಲಿಂದ ಖಾದಿಯಿಂದ ಗ್ರಾಮಗಳ ಉನ್ನತಿಯು ಹೇಗಾಗುತ್ತದೆಂಬವದ ಅರಿವಾಗುವದು

⁂

ಇದೆಂಥ ಪಿಶಾಚ ಬಾಧೆ !

ಇಟಾಲಿಯಲ್ಲಿ ಕಲಂಬಿಯಾದ ಹತ್ತರ ಮ್ಯಾಂಟ್ಯಾಲ ಪೋರ್ಟುಗೋ ಎಂಬುದೊಂದು ಗ್ರಾಮವಿದೆ. ಅಲ್ಲಿ ಎಲಿನಾ ಎಂಬ ಬಿಟ್ಟ ಹೆಂಗಸಿರುವಳು. ಇವಳ ಮೈಯೊಳಗಿಂದ ಮಾರ್ಚ ಹಾಗು ಎಪ್ರಿಲ್ ತಿಂಗಳಲ್ಲಿ ಪ್ರತಿ ಶುಕ್ರವಾರ ಬೆವರು ಬರುತ್ತದೆ; ಬೆವರೆಂದರೆ, ಸಾಮಾನ್ಯ ಬೆವರಲ್ಲ; ರಕ್ತದ ಬೆವರು; ರಕ್ತವೇ ಸುರಿಯುತ್ತಿರುತ್ತದೆ. ಇದನ್ನು ನೋಡಲು ಈ ತಿಂಗಳುಗಳಲ್ಲಿ ಬಲು ದೊಡ್ಡ ಯಾತ್ರೆಯು ನೆರೆಯುತ್ತದೆ. ಕಳೆದ ೧೯೨೫ನೇ ಇಸ್ವಿಯ ಎಪ್ರಿಲ್ ತಿಂಗಳ ಕೊನೆಯ ಶುಕ್ರವಾರಕ್ಕೆ ಅಂದರೆ, ೩೦ ನೇ ತಾರೀಖಿಗೆ ಇವಳ ಕೌತುಕ ನೋಡಲು ದೊಡ್ಡ ದೊಡ್ಡ ಡಾಕ್ಟರರು ನೆರೆದಿದ್ದರು. ಹಗಲಿಗೆ ೧೨ ಘಂಟೆ ಬಡಿಯಿತು. ಎಲಿನಾಳಿಗೆ ಸಂಚಾರವಾದಂತಾಗಿ, ಕೆಲವು ಕಾಲದಲ್ಲಿಯೇ ಅವಳು ನಿಶ್ಚೇಷ್ಟಳಾಗಿದ್ದಳು. ಚಮತ್ಕಾರ ನೋಡಿರಿ ! ಧರ್ಮಸಂಸ್ಥಾಪಕನಾದ ಕ್ರಿಸ್ತನ ಸ್ತೋತ್ರವನ್ನು ಅವಳು ಪಠಿಸಹತ್ತಿದಳು. ೩ ನಿಮಿಷವು ಎಲಿನಾಳವಳು ಎದ್ದಳು "ನನ್ನ ಮೈಯಲ್ಲಿ ಮೊಳೆಗಳನ್ನು ಯಾರೋ ಜಡಿಯುತ್ತಿರುವರು. ನನ್ನ ತಲೆಯ ಮೇಲೆ ಯಾರೋ ಮುಳ್ಳಿನ ಕಿರೀಟ ಹಾಕುತ್ತಿರುವರು ಕ್ರಿಸ್ತನ ವಧೆ ಮಾಡುವಾಗ, ಆತನ ತಲೆಯ ಮೇಲೆ ಇಂಥ ಕಿರೀಟವು ಹಾಕಲ್ಪಟ್ಟಿತ್ತು. ಆತನು ನನ್ನ ಮೈಯಲ್ಲಿ ಸೇರಹತ್ತಿದ್ದಾನೆ. ಯಾತನೆಗಳಾಗುತ್ತವೆ" ಎಂದು ಚೀರಹತ್ತಿದಳು. ಕ್ಷಣಾರ್ಧದಲ್ಲಿಯೇ ಅವಳ ಹಣೆಯ ಮೇಲೆ, ಕೈಕಾಲುಗಳ ಮೇಲೆ, ಇಷ್ಟೇ ಅಲ್ಲದೆ ಬೆವರು ಬಂದು ರಕ್ತದ ಹನಿಗಳವು! ಹೀಗೆ ರಕ್ತವು ೨ ತಾಸು ಹರಿಯಿತು. ಬಳಿಕ, ಅವಳು ಎಂದಿನಂತೆ ಎಚ್ಚರಿಕೆ ಹೊಂದಿ ನಡೆದಳು. ಇದೆಂಥ ಪಿಶಾಚ ಬಾಧೆ !

ಅಮೇರಿಕನ್ ಉಪಾಯ.

ಎಂಬ್ರೋಸಿಯಾ.

AMBROSIA

ಸ್ತ್ರೀರೋಗಪರಿಹಾರಕ್ಕಾಗಿ.

ಎಂಬ್ರೋಸಿಯಾವು ಸಮಸ್ತ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು. ಇದು ಸ್ತ್ರೀಸೌಂದರ್ಯವನ್ನುಂಟುಮಾಡುತ್ತದೆ. ಸಾಮಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮ. ನಿರಂತರ ಚಳೆಯೋ ಆಹಾರ ದೊರೆಯದೆ, ವಿಶೇಷ ಆಯಾಸ ಕೊಳ್ಳುವದರಿಂದ ಸ್ತ್ರೀಯರ ಪ್ರಕೃತಿಯು ಕೆಡುತ್ತದೆ. ಮುಟ್ಟಾಗುವಾಗ ತಲೆನೋವು, ಮುಟ್ಟುಗದಿರುವದು, ಅಪಸ್ಮಾರ, ಬಂಜೆತನ ಮುಂತಾದ ಗರ್ಭಾಶಯದ ರೋಗಗಳು, ಅಜೀರ್ಣ, ತಲೆಶೂಲಿ, ಪ್ರಸೂತಿಕತನ ಇವೆಲ್ಲ ಸ್ತ್ರೀರೋಗಗಳಿಗೆ ರಾಮಬಾಣ ಮದ್ದು. ಎಂಬ್ರೋಸಿಯಾವು ಸಮಸ್ತ ಸ್ತ್ರೀರೋಗಗಳನ್ನು ದೂರಮಾಡಿ, ಸ್ತ್ರೀಯರನ್ನು ಸಶಕ್ತರನ್ನಾಗಿಯೂ ಸೌಂದರ್ಯವಂತರನ್ನಾಗಿ ಮಾಡುತ್ತದೆ.

ಒಮ್ಮೆ ಪರೀಕ್ಷೆ ನೋಡಿ.

ಬೆಲೆ ಬಾಟ್ಲಿ ೧ಕ್ಕೆ ರೂಪಾಯಿ ೨-೦-೦

ಏಜಂಟರು— **ವೀರಿಯಲ ಏಜನ್ಸಿ,**
ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ ನಂಬರ ೨.

ಅತಿ ಉತ್ತಮವಾದ ನಶ್ಯ!

ಈ ನಶ್ಯವು ನಮ್ಮಲ್ಲಿ ಬಹಳ ವರ್ಷಗಳಿಂದ ಪ್ರಖ್ಯಾತಿ ಹೊಂದಿರುತ್ತದೆ. ಬೇಕಾದವರು ಖರಿಸಿಕೊಳ್ಳಬಹುದು. ಸೆಂಪಲ್ ಬೇಕಾದವರು ೧ಆಣೆ ಸ್ಟಾಂಪು ಕಳುಹಿಸಬೇಕು.

ನಂಬರ ೧ ಪೌಂಡು ೧ಕ್ಕೆ ೨-೪-೦.
" ೨ ಪೌಂಡು ೧ಕ್ಕೆ ೨-೦-೦.

ಜಿ. ರಾಮಯ್ಯಾ ಕುರಡಿ,
ಪೋಸ್ಟ- ಕಲೇರ, ಉ

ದಾರ್ಜಿಲಿಂಗದಲ್ಲಿ ಲೋಕೋಪಕಾ ವಿಭೂತಿಗಳ ಮಾತುಕತೆ !

(೫ ನೇ ಪಾನಿನಿಂದ ಮುಂದರಿದಿದ್ದು.)

ಭಾಗೀರಥೀ ನದಿಯ ಮೇಲೆ ಗುಡಿಸಲನ್ನು ಕಟ್ಟಿ ಉಳಿಯಬೇಕೆಂದಿದ್ದರೆ, ಸಸ್ನಾನ ಆಸ್ಪತ್ರೆಯಲ್ಲಿಯೂ ಅದೇ ಸಂಗತಿಯನ್ನು ಅವರು ನಿವೇದಿಸಿದರು. ಅದು ಮಹಾತ್ಮರಿಗೆ ಸಮ್ಮತವೆಂದು ತೋರಲಿಲ್ಲ. ಗುಡಿಸ ಕಟ್ಟಿದಲ್ಲಿ ಮನ ನಿಶ್ಚಿಂತನೆ ಉಂಟು ನೆಂದು ಅವರು ವಿನೋದದಿಂದ ಹೇಳಿದರಂತೆ. ತಪ್ಪು, ಗೃಹಿಣಿಯಾಗಿಯುಕೊಂಡೂ ದೇಶಬಂಧುಗಳ ಅಂತ ಗವು ವೈರಾಗ್ಯಪರವೆಂದೂ ಮಹಾತ್ಮರಿಗೆ ದಾರ್ಜಿಲಿಂ ದಲ್ಲಿ ಹೊಳೆಯಿತು. ರಾಜಕಾರಣದಲ್ಲಿ ಅವರು ಸೇರಿದ್ದು ಬರೇ ಪರಿಸ್ಥಿತಿಯ ಮೂಲಕವೆಂದೂ ಮಹಾತ್ಮರು ಉದ್ಗರಿಸುತ್ತಾರೆ.)

ಮಹಾತ್ಮರ ವಿನೋದ !

ಇಡೀ ಕುಟುಂಬವು ಕೈನೂಲು ತೆಗೆಯುವ ಒಂದು ಸಂಘವಾಗಿತ್ತು. ನಾನೂ, ಮಹಾದೇವನೂ, ಸತೀಶ ಬುರಿಅರೂ ಶಿಕ್ಷಕ ಶಿಕ್ಷಕರು. ನಾವೆಲ್ಲರೂ ದೇಶಬಂಧುಗಳಿಗೆ ಬಾರಿಯಿಂದ ಕಲಿಸಿದೆವು. ಪಟ್ಟು ದಲ್ಲಿ ಪಾಠಗಳನ್ನು ಅವರು ಪಕವಾಗಿ ಕಲಿಯಲು ಪ್ರಾರಂಭಿಸಿದ್ದರು. ಶಿಕ್ಷಕರನ್ನು ಕಳುಹಿಕೊಡಲು ರಾಜೇಂದ್ರ ಬಾಬುರವರಿಗೆ ಅವರು ಬರೆದಿದ್ದರು ಆದರೆ, ಪ್ರಕೃತಿಯ ಸ್ವಸ್ಥತೆಯ ಮೂಲಕ ವಿಶೇಷ ಪ್ರಗತಿಯಾಗಲಿಲ್ಲ. ದಾರ್ಜಿಲಿಂಗದಲ್ಲಿ ಪ್ರಗತಿ ಹೊಂದುವರೆಂದು ಆಶಿಸಿದರು. ಅವರ ಎಡ ಕೈ ನೋಯುತ್ತಿತ್ತು. ನೋವು ಮಾಯವಾದ ಬಳಿಕ, ಇದು ವಿಶೇಷ ಪ್ರಗತಿ ಮಾಡುವೆವೆಂದು ಅವರು ಹೇಳಿದರು. "ಆದರೆ, ನಾನು ಕೈಗಳಿಂದ ಬರೇ ದಡ್ಡ. (I am very stupi with my hands) ನಾನು ಎಷ್ಟರಮಟ್ಟಿಗೆ ದಡ್ಡ ನೆಂದು ನನ್ನ ಹೆಂಡತಿಗೇ ಕೇಳಿರಿ." "ಹೌದು." ಎಂದು ವಾಸಂತಿ ದೇವಿಯವರು ನುಡಿದು, "ಇವರು ಸಣ್ಣ ಗೆಯ ಬೀಗ ತೆಗೆಯಲು ಸಹ ಅವರು ನನಗೆ ಕರೆಯುತ್ತಾರೆ." ಮಹಾತ್ಮರು ನುಡಿದದ್ದೇನಂದರೆ:— "ನೀವು ಹೆಂಗಸರು ಬರೇ ಠಕ್ಕರು. ಕೆಲಸಗಳನ್ನು ಸಹ ನಿಮ್ಮ ಗಂಡಸರಿಗೆ ಕಲಿಸ ಅವರ ಮೇಲೆ ಸಂಪೂರ್ಣ ಅಧಿಕಾರ ನಡಿಸಲು ರನ್ನು ಹಾಗೆಯೇ ದುರ್ಬಲರನ್ನಾಗಿರಗೊಡುತ್ತೀರಿ." ಇದನ್ನು ಕೇಳಿದೊಡನೆ ದೇಶಬಂಧುಗಳು ಜೋರಾಗಿ ನಕ್ಕರು. ಮಂದಿಗಳೆಲ್ಲರೂ ನಕ್ಕರು. ಹಾಲು ಬಾಚ ಆಸನ ಕಲಿಸಿಕೊಳ್ಳುವದು ನನ್ನ ಅಭ್ಯಾಸವಿದ್ದಂತೆ ದೇಶಬಂಧುಗಳಿಗೆ ಗೊತ್ತಿತ್ತು. ಅವರು ಹಾಸಿಗೆಯ ಮೇಲೆ ಒರ ದ್ದರು. ನಾನು ಖುರ್ಚಿಯ ಮೇಲೆ ಕುಳಿತುಕೊಂಡಿದ್ದೆ. ನನ್ನ ಕಾಲುಗಳು ಜೋಲಾಡುತ್ತಿದ್ದವು; ನನಗೆ ತೊಂದರೆಯಾಗುತ್ತಿತ್ತು. ಖುರ್ಚಿಯ ಮೇಲೆ ಕಾಲನ್ನು ಚಾಚಿ ಕುತುಕೊಳ್ಳಲು ನಾನು ಯತ್ನಿಸುತ್ತಿದ್ದೆ. ಇದನ್ನು ದೇಶಬಂಧುಗಳು ನೋಡಲಾರರು; ಆದರಿಂದ ದೇಶಬಂಧುಗಳು ತಮ್ಮ ಹಾಸಿಗೆಯ ಮೇಲೆ ತಮ್ಮ ದುರಿಗೆ ಒಂದು ದಿಂಬನ್ನು ಇಟ್ಟು ಅದರ ಮೇಲೆ ಕೈ ನೂಲಿನ ಶಾಲು ಯನ್ನು ಹಾಸಿ ಗಾದಿ ಮಾಡಿಸಿದರು. ಮತ್ತು ಅದರ ಮೇ ನನ್ನನ್ನು ಕೂಡ್ರಿಸಿದರು. ಈ ಆಸನದಿಂದ ನನಗೆ ಸು ವಾಯಿತು. ಇದನ್ನು ನೋಡಿ ನಾನು ಉದ್ಗರಿಸಿದ್ದೇನಂ ದೆ:— "ಇದರಿಂದ ನನಗೆ ಯಾತರ ನೆನಪಾಗುತ್ತದೆ ಬಲ್ಲಿರೇನು? ೪೦ ವರ್ಷದ ಹಿಂದಿನ ಸ್ಮೃತಿ ಮನಸ್ಸು ತು; ಮದುವೆಯ ಸಮಯದಲ್ಲಿ ನಾನೂ, ನನ್ನ ಹೆಂ ಯೂ ಹೀಗೆಯೇ ಕುಳಿತುಕೊಂಡಿದ್ದೆವು. ಆಗ ನಾವು ಗೆ ಕೈ ಹಿಡಿದು ಕುಳಿತುಕೊಂಡಿದ್ದೆವು; ಈಗ ಆದೊಂದ ಈ ಬಗ್ಗೆ ವಾಸಂತಿ ದೇವಿಯವರ ಹೇಳಿಕೆ ಏನಿದೆ ?

ಕೆಕ್ಕನೆ ಮನೆಮಂದಿಗಳೆಲ್ಲರೂ ಆನಂದದಿಂದ ನ ರು. ಅಯ್ಯೋ, ಅಂತಹುದನ್ನು ನಾನೆಂತಾದರೂ

ವಿಶೇಷ ಸಂಗತಿಗಳು.

ವರಿಷ್ಠ ಕಾಯಿದೆ ಕೌನ್ಸಿಲಿನ ಸಭಾಸದರಾದ ಶ್ರೀ. ದತ್ತೋಪಂತ ದೇವಿಯವರು ಇನ್‌ಕಮ್ ಟ್ಯಾಕ್ಸ ಕಾರ್ಯಕ್ರಮದ ವಿಷಯ ಮುಂದಿನ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಎರಡು ಪ್ರಶ್ನೆಗಳನ್ನು ಕೇಳಲಿರುವರು. ೧೯೩೨ '೩೩ -'೩೪ ಈ ಮೂರು ವರುಷಗಳಲ್ಲಿ ಮುಂಬಯಿ ಇಲಾಖೆಯೊಳಗಿನ ದಕ್ಷಿಣ ಭಾಗದ ಪ್ರತಿ ಜಿಲ್ಹೆಯಲ್ಲಿ ಇನ್‌ಕಮ್ ಟ್ಯಾಕ್ಸ ಕಾಯಿದೆಯಂತೆ ಎಷ್ಟು ಅಪೀಲುಗಳಾದವು? ಈ ಮೂರು ವರುಷಗಳಲ್ಲಿ ಅಪೀಲುಗಳ ಮೂಲಕ ಎಷ್ಟು ರಕಮು ಕಡಿಮೆಯಾಯಿತು? ಅಥವಾ ಮರಳಿ ಕೊಡಲಾಯಿತು? ಉತ್ತರ ಕಾನಡಾ ಜಿಲ್ಹೆಯ "ಕಾನಡಾ ವೃತ್ತ" ಪತ್ರಿಕೆಯ ತಾ. ೧೬-೬-೧೯೩೫ನೇ ಸಂಚಿಕೆಯಲ್ಲಿ ಪ್ರಕಟವಾದ 'ಇನ್‌ಕಮ್ ಟ್ಯಾಕ್ಸ ಸುಲಿಗೆ!' ಎಂಬ ಸುದ್ದಿಯೊಳಗಿನ ದೂರು ಸರಕಾರದ ಲಕ್ಷಕ್ಕೆ ಬಂದಿರುವದೇನು? ಹಾಗಿದ್ದರೆ, ಅದರೊಳಗಿನ ವಿಧಾನಗಳು ನಿಜವಿರುವವೇನು? ಫಿಯರ್ಲೆಸ್ ಮುಕುಂದ ವಿಠೋಬ ಪ್ರಭು ಇವರು ತಮ್ಮ ಲೆಕ್ಕವನ್ನು ಸರಕಾರಿ ಲೆಕ್ಕ ತಪಾಸಕರಿಂದ, ತಮ್ಮ ಖರ್ಚಿನಿಂದ ತಮ್ಮ ಲೆಕ್ಕವನ್ನು ತಪಾಸ ಮಾಡಬೇಕೆಂದು ಮುಂಬಯಿಯ ಇನ್‌ಕಮ್ ಟ್ಯಾಕ್ಸ ಕಮೀಶನರರವರಿಗೆ ತಾರೀಖು ೨೭-೧-೧೯೩೫ನೇಗೆ ಅರ್ಜಿ ಮಾಡಿದ್ದರೋ ಹ್ಯಾಗೆ? ಹಾಗಿದ್ದರೆ ಅವರ ಬೇಡಿಕೆಯು ಯಾಕೆ ನಿರಾಕರಿಸಲಾಯಿತು? ಇನಕಮ್ ಟ್ಯಾಕ್ಸ ಆಕರಣೆಯನ್ನು ತಿದ್ದುಪಡಿ ಮಾಡಲು ಅವರು ಮಾಡಿದ ಅರ್ಜಿಯು ಏಕೆ ತಿರಸ್ಕರಿಸಲ್ಪಟ್ಟಿತು?

⁂

ಮುಂಬಯಿ ಕಾಯಿದೆ ಕೌನ್ಸಿಲಿನ ನಮ್ಮ ಜಿಲ್ಹೆಯ ಪ್ರತಿನಿಧಿಗಳಾದ ಶ್ರೀ. ಕರ್ಕಿಯವರು ೧೮ ಠರಾವುಗಳ ನೋಟೀಸು ಕೊಟ್ಟಿರುವರು. ಕಾನಡಾ ಜಿಲ್ಹೆಯೊಳಗಿನ ಪ್ರಜೆಗಳ ಆರೋಗ್ಯವು ಕೆಟ್ಟಿರುವದರಿಂದ ಆ ಬಗ್ಗೆ ಶುಶ್ರೂಷೆ ಮಾಡಲು ಹಳ್ಳಿಗಳಲ್ಲಿ ತಿರುಗಾಡುವ ವೈದ್ಯರನ್ನು ನೇಮಿಸಬೇಕು. ಮುಂಬಯಿ ಇಲಾಖೆಯಲ್ಲಿ ಆಯುರ್ವೇದದ ವಿದ್ಯಾಲಯವನ್ನೊಂದು ಸ್ಥಾಪಿಸಬೇಕು. ಹೊನ್ನಾವರ ತಾಲೂಕಿನ ಕುಳಕರ್ಣ್ ಹಾಗು ಸಿದ್ದಾಪುರ ತಾಲೂಕಿನ ಕೂಡಿ ಹದ್ದಿಗಳ ನಡುವೆ ೭ ಮೈಲು ಮಾರ್ಗವನ್ನು ರಚಿಸಬೇಕು. ಕಾನಡಾ ಜಿಲ್ಹೆಯೊಳಗಿನ ಬಂಗಲು ಖಾತೆಯ ಖರ್ಚನ್ನು ತಗ್ಗಿಸಲು ಈಗಿನ ಭಾಗಗಳನ್ನೆಲ್ಲ ವಿಸರ್ಜಿಸಿ ಎರಡು ಭಾಗಗಳನ್ನು ಮಾಡಬೇಕು. ಬೇಧ ಕನ್ಸರವ್ಹೇಟರ ಅಧಿಕಾರವನ್ನು ತೆಗೆಯಬೇಕು. ಹೆಚ್ಚು ಸೇವೆ ಮಾಡಿದ ರೇಂಜರರಿಗೆ ಡಿಪ್ಟಿ ಜನಲ್ ಫ್ರಾರೆಸ್ಟ ಅಫೀಸರರಾಗಿ ನೇಮಿಸಬೇಕು. ಗೋಮಾಳ ಫೀಯನ್ನು ರದ್ದುಪಡಿಸಬೇಕು. ಗ್ರಾಮಗಳ ನೆರೆಹೊರೆಯ ೧ ಮೈಲು ವರೆಗಿನ ಕಾಡನ್ನು ಹೊಲಮನೆಗಳ ಗೊಬ್ಬರ ಪೂರೈಕೆಗಾಗಿ ಬಿಟ್ಟವೆಂದು ವಿಂಗಡಿಸಿ ಕೊಡಬೇಕು; ಅಥವಾ ಮನ್ನಾನ ಜಂಗಲಿನಲ್ಲಿ ಸೇರಿಸಬೇಕು. ಪ್ರಾಥಮಿಕ ಶಿಕ್ಷಕರಿಗೆ ೧೯೩೬ ನೇ ಇಸ್ವಿ ಮಾರ್ಚ ತಿಂಗಳಿನಿಂದ ಸುಶೇ-ಪರಾಂಜಪೇಯವರ ಪಗಾರುವಾರಿಯಂತೆ ಸಂಬಳವನ್ನು ಕೊಡಬೇಕು. ಕಿರ್ವೆಯ ಮಾಫಿ-ತಹಕೂಬಿಗಳನ್ನು ವಿಚಾರಿಸಲು ತ್ರಿ ಲೋಕ ನಿಯುಕ್ತ ಸಭಾಸದರುಳ್ಳ ಮಂಡಳವನ್ನೊಂದು ನೇಮಿಸಬೇಕು. ಮುಲ್ಕಿ ಖಾತೆಯ ಕಮೀಶನರ ಖಾತೆಯನ್ನು ನಿರ್ಮೂಲಿಸಬೇಕು. ತಾಳೀಹಿಟ್ಟು ತಿನ್ನುವ ಬಡ ರೈತರಿಗಾಗಿ ಈಗಿರುವ ಮರ ೧ರ ೪ ರೂಪಾಯಿ ಫೀಯನ್ನು ತಗ್ಗಿಸಿ, ೧ ರೂಪಾಯಿ ಇಡಬೇಕು. ಬೆಟ್ಟದ ನಿಯಮಗಳನ್ನು ಅಲ್ಲಿಯ ಪ್ರಮುಖ ತೋಟಿಗರ ವಿಚಾರದಿಂದ ತಿದ್ದುಪಡಿ ಮಾಡಬೇಕು. ಬಡಗಣಿ ಹೊಳೆಗೆ ಸಂಕ ಕಟ್ಟಬೇಕು. ವೆಂಕಟಾಪುರ ನದಿಗೆ ಸಂಕ ಕಟ್ಟಬೇಕು. ಬೆಸ್ತ ಮಾರಾಟುವದು ಶೇತಕಿ ಎಂದು ಎಣಿಸಿ, ಆ ಬಗ್ಗೆ ಕಾನಡಾ ಜಿಲ್ಹೆಯ ವಿಶಿಷ್ಟ ಪರಿಸ್ಥಿತಿಯನ್ನೆಲ್ಲ ಅನುಲಕ್ಷಿಸಿ, ಕಾರವಾರ ಪ್ರಾಂತಕ್ಕೊಂದು, ಶಿರಶಿ ಪ್ರಾಂತಕ್ಕೊಂದು, ಹೀಗೆ ಇಬ್ಬ ಪ್ರತಿನಿಧಿಗಳನ್ನು ಕಾಯಿದೆ ಕೌನ್ಸಿಲಿಗೆ ಕಳಿಸುವ ಅಧಿಕಾರವು ಈ ಪ್ರಾಂತಗಳಿಗಿರಬೇಕು. ಕಾನಡಾ ಜಿಲ್ಹೆಯೊಳಗಿನ ಗೋಂಧಳವನ್ನು ಸುಧಾರಿಸಲು ಸರಕಾರಿ ಹಾಗು ಬಿನ್‌ಸರಕಾರಿಗಳ್ಳುಳ್ಳ ಕಮೀಟಿಯನ್ನೊಂದು ನೇಮಿಸಬೇಕು.

धातू क्षीणता व कमजोरपणा यांसाठी

मदन मंजरी गोळ्या. (रजिस्टर्ड.)

या दिव्य गोळ्या रक्त व वीर्य सुधारून त्यांची चांगली वाढ करतात. पचन शक्ति सुधारून परसाकडे साफ होतें. त्याप्रमाणें प्रत्येक प्रकारची अशक्तता दूर होऊन शरीर तेजदार व बळवान होतें. किं. ४० गोळ्यांच्या डबीस रु १.

रमण विलासिनी गोळ्या. रात्रीं फक्त १ गोळी दुधाबरोबर खाल्यानें इच्छेप्रमाणें वीर्यस्तंभन होतें किं डबीस रु. १

नपुंसकत्वारी घृत. हा लेप पुरुषाच्या गुह्यभागावर लावला असतां सर्व रोग नाश पावून खरें पुरुषत्व प्राप्त होतें. किं. डबीस रु. १.

कुमठा एजंट.— माधव सांतप्पा शेणवी बेलेकेरी.

राजवैद्य नारायणजी केशवजी ब्रँचः— ३९३ काळबादेवी रोड मुंबई नं. २.

ಭಾಷಾಂತರಕರ್ತರಿಗೆ ಸುಸಂಧಿ!

ಸುಪ್ರಸಿದ್ಧವಾದದ್ದೂ, ಅನೇಕ ವಿದ್ವಾಂಸರಿಂದ ಒಳ್ಳೇ ಅಭಿಪ್ರಾಯ ಪಟ್ಟದ್ದೂ ಆಗಿರುವ ಋಗ್ವೇದಿಯರು ಬರೆದ "**आर्यांच्या सणांचा प्राचीन व अर्वाचीन इतिहास**" ಎಂಬ ಮರಾಠಿ ಪುಸ್ತಕವನ್ನು ಕನ್ನಡದಲ್ಲಿ ಭಾಷಾಂತರಿಸುವದಿದೆ. ಇದನ್ನು ಕೈಕೊಳ್ಳಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳತಕ್ಕದ್ದು.

Apply to:-- Copies can be had from:-

V. PRABHA & CO. THE NORTH KANARA TRADING CO.

BOMBAY 4. KARWAR.

ನಿಜದ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬಿ. ಯವರ

ಸುಗಂಧ ನಶ್ಯದ ಪುಡಿ.

(Registered Trade Mark.)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇರಿಲ್ಪಟ್ಟ ಸಹ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಟಾಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗಡದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾದೀತು.

ಬಾಟ್ಲಿ ಒಂದಕ್ಕೆ ಕ್ರಯ ರೂ ೦-೪-೦ ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ ೦-೯-೦ ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಜಾರ್ಜ್‌ಟೌನ, ಮದರಾಸು

ಜಾಹೀರಾತು.

ತಾರೀಖು ೭-೪-೧೯೨೫ನೇ ಪತ್ರದಲ್ಲಿ ಪ್ರಸಿದ್ಧಿಪಡಿಸಿರುವ ನಾಮಾಂಕಿತ ಸುಪ್ರಸಿದ್ಧ ಪರಮ ಜ್ಯೋತಿಷಿ ಕೇ. ಸಿ. ನಾರಾಯಣಶಾಸ್ತ್ರಿ ಎಂಬವರು ಸ್ವಲ್ಪ ದಿವಸದೊಳಗೆ ಶಿವಮೊಗ್ಗಾ ಡಿಸ್ಟ್ರಿಕ್ಟ ಸಾಗರದಲ್ಲಿ ಕೆಲವು ದಿವಸದ ಪ್ರೋಗ್ರಾಮ್ಮು ಮುಕ್ಕಾಂ ಮಾಡಿರುತ್ತಾರೆ. ಅಪೇಕ್ಷಿಸಿದ್ದ ಯಾವತ್ತೂ ಜನರ ಪ್ರಿಯರವರಿಗೆ ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡತಕ್ಕದ್ದು.

ಪತ್ತೆ—

ಕೇರಳ ಜ್ಯೋತಿಷಿ

ಕೇ. ಸಿ. ನಾರಾಯಣ ಶಾಸ್ತ್ರಿ.

ಚಾಮರಾಜೇಂದ್ರ ಪೇಟೆ, ಪೋ. ಸಾಗರ,
ಡಿಸ್ಟ್ರಿಕ್ಟ ಶಿವಮೊಗ್ಗಾ

ವಿಶೇಷ] ಅನುಭವಸಿದ್ಧ [[illegible]

ವನೌಷಧಿಮೂಲಿಕೆಗಳು

ವಾಯುದುಮ್ಮಾನ (ನೆಮೋನಿಯಾ) ವಾಂತಿ ಭ್ರಾಂತಿ (ಕಾಲರಾ) ಅರ್ಧಾಂಗವಾಯು (ಪೆರಾಲಿಸಿಸ್) ಹುಚ್ಚುನಾಯಿ ಕಡಿತ, ಸರ್ಪದಂಶ, ಹೊಟ್ಟೆಯಲ್ಲಿ ಕೃತ್ರಿಮ ವಿಷಹಾಕಿದ್ದು (ಕೈಮದ್ದು) ವಗೈರೆ ರೋಗಗಳಿಗೆ ಒಂದೇ ಒಂದು ಮೂಲಿಕೆಯಿಂದ ಖಾತ್ರಿಯಾಗಿ ತೀವ್ರ ಗುಣಬರುವದು. ಇದು ಬಹುಕಾಲದಿಂದ ಅನುಭವ ತಕ್ಕೊಂಡ. ಹಾಗು ಪ್ರತಿನಿತ್ಯ ಈಕಡೆಗೆ ಬಳಕೆಯಲ್ಲಿದ್ದು ಸಿಗುವ ಔಷಧಿಗಳ ತಾಜಾ ಮೂಲಿಕೆಗಳು! ಒಮ್ಮೆ ತರಿಸಿ ಅನುಭವ ತಕ್ಕೊಂಡರೆ ಖಾತ್ರಿಯಾದೀತು. ಕಾಲರಾ ಔಷಧಿಗಳ ದ್ರಾವಕ (Tincture) ಸಹ ಅಗತ್ಯ ಸೂಚಿಸಿದರೆ ಕಳುಹುವೆವು

ವಾಯುದುಮ್ಮಾನದ ಬಗ್ಗೆ ಔಷಧಿ ಮೂಲಿಕೆ ತೊಲೆ ೧ಕ್ಕೆ	೦-೨-೦.
ಕಾಲರಾದ ಬಗ್ಗೆ " " "	೦-೨-೦
ಅರ್ಧಾಂಗ ವಾಯುವಿನಬಗ್ಗೆ	೦-೪-೦.
ನಾಯಿ ಕಡಿತದಬಗ್ಗೆ	೦-೪-೦
ಸರ್ಪಕುತ್ತಿನ ಬಗ್ಗೆ	೦-೨-೦
ಹೊಟ್ಟೆಯಲ್ಲಿ ಕೃತ್ರಿಮ ಔಷಧಿ ಬಿದಬಗ್ಗೆ ತೊಲೆ ೧೦ ಕ್ಕೆ	೦-೮-೦.
ರಕ್ತಶುದ್ಧಿ ವ ಮಲಶೋಧನೆ ಬಗ್ಗೆ ಮೂಲಿಕೆ ರಾತ್ತಲು ೧ಕ್ಕೆ	೧-೦-೦
ಪೆಂಡಾರವಳಾ ([illegible]) ರಾತ್ತಲು ೧ ಕ್ಕೆ	೧-೦-೦

೧೦ ತೂಕಗಳಲ್ಲಿ ಯಾ ಅದಕ್ಕೂ ಹೆಚ್ಚು ತರಿಸಿಕೊಳ್ಳುವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು. ಟಪಾಲ ಖರ್ಚ ಪ್ರತ್ಯೇಕ. ವಿಶೇಷ ಮಾಹಿತಿ ಪತ್ರದ್ವಾರಾ. ಅನುಪಾನಪತ್ರ ಔಷಧಿ ಸಂಗಡ.

ಎನ್. ಜಿ. ಹೆಗಡೆ, ಮಾಸ್ಕೇರಿ,

ಪೋಸ್ಟ—ಬಿಂಕಿಕೊಡ್ಲ ಜಿ. ಉತ್ತರ ಕಾನಡಾ

ಮಳೆಗೆ ಮೊದಲೇ ಎಚ್ಚರಿಕೆ !

ಅತ್ಯುತ್ತಮ, ಸುಂದರ, ಬಾಳ್ವಿಕೆಯುಳ್ಳ, ಮಜಭೂತಾದ

ಸೂರ್ಯ ಛಾಪು!] ಛತ್ರಿಗಳು. [ಅಗ್ಗ! ವಿವಿಧ!!

ಪ್ರತಿಯೊಬ್ಬರಿಗೂ ಅನುಕೂಲವಾದ ಪಸಂದಿನ ಮ್ಹಾಲು!

ದೇಶೀಯ ಕೈಗಾರಿಕೆ! ದೇಶೀಯರಿಗಾಗಿಯೇ!! ಆದುದರಿಂದ

ದೇಶೀಯರಿಗೆ ಖಾತರಿಯಾಗಿ ತೃಪ್ತಿಯಾಗುವುದು !

ಕಾನಡಾ ಜಿಲ್ಹೆಯೊಳಗಿನ ಪ್ರಮುಖ್ಯ ಛತ್ರೀ ದುಖಾನುಗಳಲ್ಲಿ ವಿಕರಿಗೆ ಇದೆ.

ಸೇಠ ನಾಗಜೀ ಪುರುಷೋತ್ತಮ್ ಮತ್ತು ಕಂಪನಿಯವರ

ಕಲ್ಲಿಕೋಟೆಯ ಕಾರ್ಖಾನೆಯ

ಸೂರ್ಯ ಛಾಪಿನ ಛತ್ರಿಗಳೇ ಛತ್ರಿಗಳು !

ವ್ಯಾಪಾರಿಗಳಿಗೆ ತಾತ್ಪರ್ಯವಿಟ್ಟು ಸವಲತ್ತು ಕೊಡಲಾಗುತ್ತದೆ.

— **ಶ್ರೀನಿವಾಸ ರಂಗ ಪೈ, ಸಾವಕಾರ ಮಹಾಲ್**

ಮಂಗಳೂರು, ದ. ಕನ್ನಡ

ಕಿರ್ಲೋಸ್ಕರ ಪಂಪ.

ಬಾವಿಯೊಳಗಿನ ನೀರನ್ನು ಮೇಲಕ್ಕೆ ತರುವದರಲ್ಲಿ

ಕಿರ್ಲೋಸ್ಕರ ಇವರ ಪಂಪು ಮೇಲ್ತರದ್ದಿರುತ್ತದೆ. ಸಣ್ಣ ಮಕ್ಕಳು, ಅಬಲೆಯರು ಈ ಪಂಪಿನಿಂದ ನೀರನ್ನು ಒಂದೇ ನಿಮಿಷದಲ್ಲಿ ಮೇಲಕ್ಕೆ ತರುವರು. ಪ್ರಪಂಚದಲ್ಲಿ ಎಲ್ಲ ಅಡಚಣಿಗಳಲ್ಲಿ ನೀರಿನ ತೊಂದರೆಯು ಸ್ವಾಭಾವಿಕವು. ಈ ಅಡಚಣಿಯು ಮೇಲಿನ ಉಪಾಯದಿಂದ ದೂರಾಗುವದು

ಪರದೇಶದಿಂದ ಬರುವ ಪಂಪುಗಳು ಬಹು ತುಟ್ಟಿ ಇರುವದರಿಂದ ಮಧ್ಯಮ ಜನರಿಗೆ ಅವುಗಳನ್ನು ಕೊಳ್ಳುವದಾಗುವದಿಲ್ಲ. ಇದನ್ನು ತಿಳಿದ, ನಾವು ಈ ಪಂಪನ್ನು ಬಹು ಅಗ್ಗದಿಂದ ಕೊಡುತ್ತಿರುವೆವು. ಇದಲ್ಲದೆ, ಈ ಪಂಪಿನ ಬಿಡಿ ಭಾಗಗಳು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತಿರುವದರಿಂದ ಬೇಡಿದಾಗ ದೊರೆಯುತ್ತವೆ.

ಈ ಸೌಕರ್ಯವು ವಿದೇಶೀ ಪಂಪುಗಳನ್ನು ಕೊಂಡಲ್ಲಿ ದೊರೆಯದು.

ಕೇ. ಬಿ. ಜೋಶಿ ಮುಂಬೈ ಇವರು ನಮ್ಮ ಸೋಲ ಏಜಂಟರು.

ಸವಿಸ್ತರ ಸಂಗತಿಯ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ; ಜಿಲ್ಹಾ ಸಾತಾರಾ.

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳ ಮೇಲೆ, ರಾಮಬಾಣದಂತಾಗಿರುವದು. ಕಳೆದ ೩೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗಿದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಆದುದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳ ಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ವ್ಹಿ. ಪಿ. ಖರ್ಚ ಬೇರೆ.

ಅಮೃತಾಂಜನ ಡಿಪೋ, ಫೋರ್ಟ, ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Ku

Reg No B. 1270 **Monday, August 3rd, 1925**

ವರ್ಷ ೯.

ಸಂಚಿಕೆ ೪೨.

ಕಾನಡಾವೃತ್ತ.

THE KANARA NEWS.

ಪತ್ರದ ವರ್ಗಣಿ.

ಮುಂಚಿಯಲ್ಲಿ ಅಗಾವು
ರೂಪಾಯಿ 2-4-0.
ಯಾರ್ಡರಿಯಿಂದ
ರೂ. 3-0-0.
ವಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಸಂಚಿಕೆಗೆ 0-1-0.

नृपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ವ್ಯಾಕ್ಯಾಸಿನ (೧೫ ಎಮ್ ಅಗಲ) ೮ ಸಾಲುಗಳವರೆಗೆ ರೂ. 1-0- ೮ ನಂತರ ಪ್ರತಿಸಾಲಿಗೆ 0-2-0.

ಹೆಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

(ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೩ ಮಾಹೆ ಅಗೋಸ್ತ ಸನ್ ೧೯೨೫ ನೇ ಇಸವಿ)

हिंदुस्थानांतील राहिवाशांस ज्याप्रमाणें दुस्थानची हवा त्याप्रमाणेंच हें औषध हिंथानांतील लोकांस ज्यास्त फायदेशीर आहे.

द्राक्षासव- शेर रसवती किंमत २ रुपये;

रामबाण औषधें
सर्दि घालविणारें,
भूक वाढविणारें,
शौचास साफ करणारें,
झोंप आणणारें,
शक्ति देणारें,
तेजस्वीपणा आणणारें.

पिण्यास रुचिकर.

क्याटलॉग मागवा,

ंडु फार्मास्युटिकल वर्क्स लिमिटेड,
मुंबई नं. १३

ಶಾಸ್ತ್ರಸಿದ್ಧವಾದದ್ದು ! ಅನುಭವಸಿದ್ಧವಾದದ್ದು !"
ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ
ಔಷಧಿಯ ಕ್ರಯ ವಾಪಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮುಖಶೋಭೆ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.
ಟ್ರೇಡ ಮಾರ್ಕ] ರಿಜಿಸ್ಟರ ಆದದ್ದು [ನೋಂದಿ ಹೊಯ್ದಿದೆ.

ಅಗಸ್ತ್ಯ ಮನ್ಮಥ ಚಿಂತಾಮಣಿ ಲೇಹ

ಆಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು. ಮೋಹವಿಕಾರವಿದ್ದವರಿಗೂ, ನಿದ್ರೆಯಿಲ್ಲದವರಿಗೂ, ಸ್ವಪ್ನೇಂದ್ರಿಯವಾದವ ಯುವಕರಿಗೂ ಜ್ಞಾನಿ ಸುಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ
೧ ಸೇರು ನಾಲ್ವತ್ತೆಂಟು ದಿವಸಕ್ಕೆ ಸೇವಿಸಬಹುದು.
1 ಸೇರು ಡಬ್ಬಿ ಒಂದಕ್ಕೆ 3—0—0
½ ಸೇರು ಡಬ್ಬಿ ಒಂದಕ್ಕೆ 1—9—0
ವ್ಹಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿ ಬರಕೊಳ್ಳಿರಿ.

ಪತ್ತೆ:—**ದೇವಣ್ಣಾ ನಾರಾಯಣ ಸೇಟ್,**
ಸರಾಫ್, ಗೋಳೀಕಟ್ಟಾ, ಮಂಗಳೂರು, (ದ. ಕ.)

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ
ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, *B. A.*
Jewellers, KUMTA.
ಆರ್. ಎಸ್. ಕಾಸರಗೋಡ,
ರತ್ನಾಭರಣ ವ್ಯಾಪಾರಿ, ಕುಮಟಾ.

ಆಯುರ್ವೇದಿಕ) ಧಾತುಪೌಷ್ಟಿಕ, ಶಕ್ತಿವರ್ಧಕ, ರಕ್ತಶೋಧಕ (ಮಲಬಾರಿನ

ಮದನಕಾಮೇಶ್ವರೀಲೇಹ.

ಆಬಾಲ ವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಇದರಲ್ಲಿ ಕೇಸರ ಕಸ್ತೂರಿ ಪ್ರವಾಲ ಶಿಲಾಜಿತು ಅಭ್ರಕಭಸ್ಮಾದಿ ಅನೇಕ ಪದಾರ್ಥಗಳು ಇರುವದರಿಂದ ಧಾತು ತಳ್ಳಗಾಗೋಣ ನಪುಂಸಕತ್ವ ಪ್ರಮೇಹ ಮಲಬದ್ಧತೆ ಧಾತುಕ್ಷೀಣತೆ ಸ್ವಪ್ನಾವಸ್ಥೆ ಉರಿಮೂತ್ರ, ಸಂಧಿವಾತ ಸ್ತ್ರೀಯರ ಗರ್ಭಾಶಯ ಪ್ರದೇಶದ ಪದರ (ಗರ್ಮಿ) ಇ. ನಿರ್ಮೂಲಿಸಿ ಹೊಂದು ರಕ್ತ-ಧಾತು ಸಂಚಯಮಾಡಿ ದೀರ್ಘಾಯು ಸಂಸಾರಸುಖವನ್ನು ಲಭಿಸುವ ಸಿದ್ಧೌಷಧ. ೧ ತಿಂಗಳು ಸಾಲುವ ಡ.೧ಕ್ಕೆ ೩॥ರೂ. ಟ. ಖ. ॥ರೂ. ಒಮ್ಮೆಲೆ ೩ ಡ. ೭॥ರೂ. ಟ.ಖ. ಮಾಫ. ಅನು ಪಥ್ಯದ ಸಂಗಡ.

ಅತ್ಯುತ್ತಮ) ಜಂತುವಿನ ಔಷಧ (ಬಹುಸುಲಭ.

ಪುಡಿ ೧ಕ್ಕೆ ೧॥ಆಣೆ ೫ಂಕ್ಕೆ ರೂ ೫॥. ೧೦೦ಕ್ಕೆ ರೂ.೫. ಅನುಭವ ತಕ್ಕೊಳ್ಳಿರಿ. ಇವಲ್ಲ ಎಲ್ಲಾ ರೋಗಗಳಮೇಲೆ ಅನುಭವ ಸಿದ್ಧೌಷಧಗಳು ಸಿಗುತ್ತವೆ. ವಿ. ಮಾ. ಬೇಕಾದವರು ೧ಆಣೆ ಟಿಕೀಟು ಪತ್ರದಲ್ಲಿ ನಮ್ಮ ಅಯುರ್ವೇದ ಔಷಧ ಗುಣರತ್ನಮಾಲಾ ಎಂಬ ಸಂಪೂರ್ಣ ಮಾಹಿತಿಯ ಪುಸ್ತಕವನ್ನು ಪುಕ್ಕಟೆಯಾಗಿ ಕಳಿಸುವೆವು.

ಮೆನೇಜರ ಆಯುರ್ವೇದಚಿಕಿತ್ಸಾಮಂದಿರ, ತಾ. ಕಾರವಾರ, ಪೋ. ಚೆಂಡಿಯೆ.

ಮುಂಬೈ ಏಜಂಟ:— R. C. KAMAT, Teashop Store Lane, Fort, BOMBAY

ಹುಟ್ಟಿದ ವಕ್ತ್ಯಾವೇಳೆ ತಿಳಿಸಿರಿ.) ಸುಖಸಾಧನಕ್ಕೆ ಯೋಗ್ಯ ಉಪಾಯವು. (ಯಾ ಜನ್ಮಟಿಪ್ಪಣಿ ಕಳಿಸಿರಿ.

☞ ಮಲಬಾರಿ) ಕೇರಳ ಜ್ಯೋತಿಷ. (ಭವಿಷ್ಯ.

ಸಾದಾ ಜನ್ಮಟಿಪ್ಪಣಿ ಕಳಿಸಿ. ೧ವರ್ಷದ ಫಲಾಫಲ ಟ.೧॥ರೂ. ೫.೩॥ರೂ. ೧೦ವ.ಟ.೫ರೂ. ಸದರೀ ಟಿಪ್ಪಣಿಯ ದಿಂದ ಆದಿಕಾಲಕ್ಕೆ ಒದಗುವ ಇಷ್ಟಾನಿಷ್ಟ ಫಲಗಳನ್ನು ಅನಿಷ್ಟಫಲ ನಿವಾರಣಾರ್ಥ ಶಾಂತಿ ಗ್ರಹಗಳಿಂದ ಸಂಕಟಗಳನ್ನು ಪರಿಹರಿಸುವ ಉಪಾಯಗಳನ್ನು ತಿಳಿಕೊಂಡು ಮುಂದಿನ ಭವಿಷ್ಯಕಾಲವು ಸುಖಕಾರಕ ಮತ್ತು ಲಾಭದಾಯಕವಾಗುವಂತೆ ಸದರೀ ಫಲವನ್ನು ಮಲಬಾರದಲ್ಲಿ ಪ್ರಸಿದ್ಧನಾದ ಜ್ಯೋತಿಷ್ಯ "ಕೇರಳ" ಇ. ಮಹತ್ವದ ಗ್ರಂಥಗಳ ಆಧಾರಪೂರ್ವಕದಿಂದ ಬರೆದು ಕಳಿಸುವೆ. ಟ. ಖ. ಬೇರೆ.

ಮೆನೇಜರ, "ಜ್ಯೋತಿಷ ಶಾಸ್ತ್ರ-ಭುವನ," ಚೆಂಡಿಯೆ. ತಾ. ಕಾರವಾರ

ನಮ್ಮ ಪ್ರೆಸ್ಸಿನಲ್ಲಿ

ಗೇಜ ಬಾಕಿ ದಾವೆಯ ಫಾರ್ಮುಗಳು ತಯಾರಿವೆ ವಕಾಲತ, ಅಮುಲಜಾರಿ ಮೊದಲಾದ ಕೋರ್ಟ ವ್ಯವಹರಣೆಯ ಹಾಗೂ ಕಸ್ಟಮ್ ಖಾತೆಯ ಫಾರ್ಮುಗಳು ಅಗ್ಗವಾಗಿ ಸಿಗುತ್ತವೆ

ಮೆನೇಜರ,

ಸ್ಟಾರ ಆಫ್ ಕೆನರಾ ಪ್ರೆಸ್, ಕುಮಟಾ

ಉತ್ತಮ, ಸುವಾಸಿಕ, ಶುದ್ಧ, ಮಿಶ್ರಣವಿಲ್ಲದ,

ಜನರಿಗೆ ಅವಶ್ಯ ಬೇಕಾಗಿರುವ

ಕಾಬೂಲೀ ಹಿಂಗು.

೪೦ ತೊಲೆಯ ಲ್ಲ	ಡಬ್ಬಿ	೧ಕ್ಕೆ	೫—೦—೦
೨೦ ತೊಲೆ	ಡಬ್ಬಿ	೧ಕ್ಕೆ	೨—೧೨—೦
೧೦ ತೊಲೆ	ಡಬ್ಬಿ	೧ಕ್ಕೆ	೧—೮—೦.
೫ ತೊಲೆ	ಡಬ್ಬಿ	೧ಕ್ಕೆ	೧—೬—

೧ ತೊಲೆಯ ಡಬ್ಬಿಗಳ ಡಜನ ೧ಕ್ಕೆ ೨—೦—೦.

ನಮ್ಮ ಹಿಂಗು ಪೋಟೋ ಬಂದಲ್ಲಿ,ವಿರಳ ಕೊಳ್ಳುವೆವು. ಟಪಾಲು ಖರ್ಚ ಪ್ರತ್ಯೇಕ

ಕೆರೇಕರ ಕಾಬೂಲೀ ಹಿಂಗಿನ ದುಕಾನ

ಬವಳೀಬಾಜಾರ, ಕುಮಟಾ

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು

೧ ರಾಗದ ಕೈಪೆಟ್ಟಿಗೆ ಕಿಂ ೩೦,೪೦,೬೦,೭೫,೧೦೭
೨ " ಕಾಲು ಪೆಟ್ಟಿಗೆ ಕಿಂ. ೬೫,೭೫, ೧೩೦ ೧೪ .
೩. ತಬಲೆ ಜೋಡಿ ಕಿಂ. ೧೬, ೧೮, ೨೦, ೨೫.
೪ ಹಾರ್ಮೋನಿಯಮು ಗ್ಯಾಡ (ಮರಾಠಿ) ಕಿಂ. ೧೨
ತಬಲೆ ಗ್ಯಾಡ ಕಿಂ, ೧೨ ೮

ವಿಶೇಷ ಮಾಹಿತಿಬಗ್ಗೆ ನಮ್ಮ ಮರಾಠಿ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು

ಪತ್ತೆ - **ಗೋಪಾಳ ಸಖಾರಾಮ** ಮಿಸ್ತ್ರಿ
ಕಂಪನಿ, ವಿಠ್ಠಲವಾಡಿ ಎದುರಿಗೆ,
೩೬೩ ಕಾಳಬಾದೇವಿ. ಮುಂಬಯಿ

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ

ಕಳೆದ ೪-೫ ವರ್ಷಗಳಿಂದ ನಾವು ಶಿವಮೊಗ್ಗಾ-ತೀರ್ಥಹಳ್ಳಿ-ಆಗುಂಬೆ, ಶಿವಮೊಗ್ಗಾ-ಸಾಗರ-ತಾಳಗುಪ್ಪೆ ಶಿವಮೊಗ್ಗಾ-ಹರಿಹರ-ದುಗ್ಗಾವತಿ, ಶಿವಮೊಗ್ಗಾ-ಕಳೂರಕಟ್ಟೆ, ಸಾಗರ-ಸೊರಬ-ಶಿರಾಳಕೊಪ್ಪಾ, ಸಾಗರ ತೀರ್ಥಹಳ್ಳಿ ಸಾಗರ ಕಳೂರಕಟ್ಟೆ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ ಸರ್ವಿಸನ್ನು ನಡೆಸುತ್ತಿದ್ದ ಅಲ್ಲದೆ ದಕ್ಷಿಣ ಕನ್ನಡ ಜಿಲ್ಹೆಯ ಕಾರ್ಕಳ ಉಡಪಿ, ಕುಂದಾಪುರ, ಮಂಗಳೂರ ಹಾಗು ಬೆಳ್ತಂಗಡಿ ಈ ಕಡೆಗೆ " ಕಾರ್ಕಳ ಮೋಟರ ಸರ್ವಿಸಿನ '' ವಿಸ್ತಾರವನ್ನೂ, ಬಳ್ಳಾರಿ ಜಿಲ್ಹೆಯ ಹರಪನಹಳ್ಳಿಗೆ ' ಲಕ್ಷ್ಮೀ ಮೋಟರ ಸರ್ವಿಸಿನ ' ವಿಸ್ತಾರವನ್ನೂ ಪ್ರಯಾಣಿಕರ ಎಲ್ಲ ಸೌಕರ್ಯಗಳ ವ್ಯವಸ್ಥೆ ಮಾಡಿರುತ್ತೇವೆ

ಉತ್ತರ ಕನ್ನಡ ಜಿಲ್ಹೆಯ ಪ್ರಯಾಣಿಕರು ಜೋಗ (Gersoppa Falls), ಶಿವಮೊಗ್ಗಾ ಸಾಗರ, ಹರಿಹರ ಮುಂತಾದ ಮೇಲ್ಕಂಡ ಸ್ಥಳಗಳಿಗೆ ಪ್ರಯಾಣ ಬೆಳೆಸಲು ಅನುಕೂಲವಾಗಬೇಕೆಂದು ಶಿವಮೊಗ್ಗಾ ಸಾಗರ, ಜೋಗ ಸಿದ್ದಾಪುರ, ಶಿರ್ಶಿ, ಕುಮಟಾ ಈ ಲೈನಿನಲ್ಲಿ ಮೋಟರ ಸರ್ವಿಸ ಪ್ರಾರಂಭ ಮಾಡಿರುತ್ತೇವೆ

ಕಾಲಕ್ರಮಗಳು.

ಕುಮಟೆಯಿಂದ ಹೊರಡುವದು —	ಬೆಳಿಗ್ಗಿನ ೭ ಘಂಟೆಗೆ
ಶಿರ್ಶಿಗೆ ಸೇರುವದು—	,, ೧೦ ,,
ಶಿರ್ಶಿಯಿಂದ ಬಿಡುವದು ಶಿವಮೊಗ್ಗಾ ಕಡೆಗೆ—	ಮಧ್ಯಾನ್ಹ ೧ ,,
ಸಾಗರಕ್ಕೆ ಸೇರುವದು (ಸಿದ್ದಾಪುರ ಮಾರ್ಗವಾಗಿ)—	ಸಾಯಂಕಾಲ ೬ ,,
ಸಾಗರದಿಂದ ಶಿರ್ಶಿ ಕಡೆಗೆ ಹೊರಡುವದು —	ಬೆಳಿಗ್ಗಿನ ೬ ,,
ಸಿದ್ದಾಪುರದ ಮೇಲಾಗಿ ಶಿರ್ಶಿಗೆ ಸೇರುವದು— ...	೧೧ ,,
ಶಿರ್ಶಿಯಿಂದ ಕುಮಟೆಗೆ ಹೊರಡುವದು—	ಮಧ್ಯಾನ್ಹ ೨ ,,
ಕುಮಟೆಗೆ ಸೇರುವದು—	ಸಾಯಂಕಾಲ ೫ ,,

N B — ಈ ಮೇಲಿನ ಲೈನುಗಳ ಹೊರತು ಶಿರ್ಶಿಯಿಂದ ಹುಬ್ಬಳ್ಳಿಗೆ ಪ್ರತ್ಯೇಕ ಒಂದು ಸರ್ವಿಸ ಪ್ರಾರಂಭಿಸುವ ಯೋಚನೆ ಸಹಾ ಇರುತ್ತದೆ ಸರ್ವರೂ ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ

SHIMOGA,
22—11—1924 }

M. MANJAPPA.
PROPRIETOR

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ಥ, ಕಫ ಈ ತ್ರಿದೋಷಗಳ ವಿಕೃತಿಯಿಂದಾದ ಬೇನೆಯು ಹೋಗುವದು ಒಂದೊಂದು ವರ್ಷದ ಮುದುಕರು ತರುಣರಾಗುವಷ್ಟು ಶಕ್ತಿ ಬರುವಂತೆ ಪ್ರವರ್ಧಮಾನವಾಗುವದು. (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಕಳೆಯು ಹೋಗಿ ಮೃತವಾದ ಪುರುಷತ್ವವು ಇಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು — ಪರಮಾ ಹಾಗೂ ಶಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವು ಬಹಳ ಆಗುತ್ತದೆ ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ ಮೂರು ಬಾಟಲಿಯ ಕಿಮ್ಮತು ೩—೪—೦ ಮೂರು ಬಾಟಲಿಗಳನ್ನು ಒಂದೇ ಸಾರ್ತಿನಲ್ಲಿ ಕರೆಸುವವು. ಅಂದರೆ ಟಪಾಲಖರ್ಚ ಹೆಚ್ಚು ಬೀಳುವದಿಲ್ಲ ಆರು ಬಾಟಲಿಗಳ ಕಿಮ್ಮತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚ ಬೇರೆ ಬೀಳುವದು ವಿಪಿ ಡಾಕದಿಂದ ೧ ಬಾಟ್ಲಿಗೆ ೧—೪—೦ ೩ ಬಾಟ್ಲಿಗೆ ೩—೦—೦, ಆರಕ್ಕೆ ೧೩—೮—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸು, ಪೋ. ನಿಪ್ಪಾಣಿ, ಜಿ. ಬೆಳಗಾಂವ.

ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ದೊರೆತ ಮಾಹಿತಿ.

ಪ್ರಾಂತಿಕ ಸರಕಾರವು ಪುಣೆ ಜಿಲ್ಹೆಯಲ್ಲಿ ಕೃಷಿಯ ಪ್ರಸಾರ ಮಾಡಲು ಏನೂ ಉಪಾಯಯೋಜನೆ ಮಾಡಲಿಲ್ಲೆಂದು ಶ್ರೀ ಗುಂಜಾಳರವರಿಗೆ ಉತ್ತರ ದೊರೆತಿದೆ.

ಮುಂಡಗೋಡ ತಾಲೂಕಿನ ಒಂದು ಕಾಡು ಊರಿಂದ ೫ ಮೈಲುಗಳ ದೂರವಿದ್ದ ಉಳಿದವುಗಳು ಮತ್ತು ದೂರವಿ ೩ ಈ ಕಾಂಡಿಷ್ಟ ಕಾಡುಗಳಲ್ಲ ದನಗಳು ಮೇಯುವ ಪ್ರದೇಶದ ನೆರೆಯಲ್ಲಿವೆ. ಅವುಗಳಿಗೆ ಮೇರೆಗಳಿಲ್ಲ, ಬೇಲಿಯಿಲ್ಲ, ಆದರ ಕಾಡುಗಳ ಹದ್ದುಗಳನ್ನು ಹಳ್ಳಿಗರು ಅರಿತಿರುವರು. ಮೇವು ಪ್ರದೇಶದಲ್ಲಿ ಮರಗಳು ಹುಲ್ಲ ಬೆಳೆದಿರುವದು ಸಹಜವು. ನಿಜಗಂಟ ವಿಶೇಷವಿಲ್ಲ. ಮೇವು ಪ್ರದೇಶವು ಸಾಕಷ್ಟಿದ್ದು, ಮೇವಿಗೆ ಅನುಕೂಲವಿದೆ. ಕಾರವಾರ ಜಿಲ್ಹೆಯೊಳಗಿನ ಇತರ ಮೇವು ಪ್ರದೇಶಗಳಿಗಿಂತ ಮುಂಡಗೋಡದೊಳಗಿನ ದನಗಳಿಗೆ ೧೨೩೪ ಎಕರೆ ಪ್ರಮಾಣದ ಕಾಡು ಹಾಗು ಕಾಂಡಿಷ್ಟ ಬದೊಳಗಿನ ೨,೧೯೨ ಎಕರೆ ಬೈಲು ಇದೆ ಸರಾಸರಿ ದನ ಒಂದಕ್ಕೆ ೨ ಎಕರೆ ಕ್ಷೇತ್ರ ಬರುತ್ತದೆ. ಇತ್ಯಾದಿ ಮಾಹಿತಿಯು ಶ್ರೀ ಕರ್ಕಿಯವರಿಗೆ ದೊರೆತಿದೆ

ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಸರಕಾರವು ವರೆಗೆ ೩ ಸಾವಿರ ರೂಪಾಯಿಗಳನ್ನು ಕಟ್ಟಡಕ್ಕಾಗಿ ಕೊಟ್ಟಿದೆ. ಇನ್ನು ೩ ಸಾವಿರ ರೂಪಾಯಿಗಳನ್ನು ವಂತಿಗೆ ಮಾಡಿದ ಸರಕಾರಿ ಪುಸ್ತಕಗಳು ಸಂಘಕ್ಕೆ ಉಚಿತವಾಗಿ ದೊರೆಯುತ್ತವೆ ಪುಸ್ತಕಗಳ ಸಂಗ್ರಹದ ಬಗ್ಗೆ ಸರಕಾರದಿಂದ ಹಣ ಸಿಗುವದಿಲ್ಲ. ಗ್ರಂಥಕರ್ತರಿಗೆ ಉತ್ತೇಜನ ಕೊಡುವದಕ್ಕಾಗಿ ವರ್ಷಕ್ಕೆ ೫೦೦ ರೂಪಾಯಿಗಳು ಸಂಘಕ್ಕೆ ಕೊಡಲ್ಪಡುತ್ತವೆ. ಇತ್ಯಾದಿ ಮಾಹಿತಿಯು ಶ್ರೀ ಕರ್ಕಿಯವರಿಗೆ ದೊರೆತಿದೆ.

ಮುಂಬಯಿ ಹ್ಯಾಕೋರ್ಟಿನ ನ್ಯಾಯಮೂರ್ತಿಗಳು ಆ ಮಿ। ರಂಗ್ನೇಕರವರು ಬೆಂಚ ಮೆಜಿಸ್ಟ್ರೇಟ ಮುಂತಾದ ಅನುಚಿತವಾಗಿ ಕೆಲಸ ಮಾಡುವ ಆತಳತೆಯ ವಿಷಯ ಚೌಕಶಿ ಮಾಡಿ ಸರಕಾರಕ್ಕೆ ರಿಪೋರ್ಟ ಮಾಡಿರುವರು. ಆ ಬಗ್ಗೆ ಸರಕಾರದ ವಿಚಾರ ನಡೆದದೆ.

ಸುಧಾರಣೆಯ ಕಾಯಿದೆಯಂತೆ ದಿವಾಣರ ಅಥವಾ ಕಾರ್ಯಕಾರಿ ಸಭಾಸದರ ಕಾರ್ಯದರ್ಶಿಗಳಿಗೂ, ದಿವಾಣರಿಗೂ ಅಥವಾ ಮಂತ್ರಿಗಳಿಗೂ ಮತಭೇದ ಬಂದಾಗ, ಪ್ರಕರಣಗಳನ್ನು ದಿವಾಣರಿಗೆ ತಿಳಿಸದೆ, ನೆಟ್ಟಗೆ ಗವರ್ನರರ ಕಡೆಗೆ ಒಯ್ಯು ಅವ್ಯರ್ಥ ಮಾಡಿಕೊಳ್ಳುವ ಅಧಿಕಾರವು ಕಾರ್ಯಕಾರಿ ಸಭಾಸದರ ಹಾಗು ದಿವಾಣರ ಕಾರ್ಯದರ್ಶಿಗಳಿಗೆ ಕೊಡಲ್ಪಟ್ಟಿದೆ ಅಂಥ ನಿಯಮಗಳು ಮಾಡಲ್ಪಟ್ಟವು. ಈ ನಿಯಮಗಳು ಗುಪ್ತವಿದ್ದದರಿಂದ ಅವನ್ನು ಪ್ರಕಟಿಸಲು ಅನುಕೂಲವಿಲ್ಲ ಇತ್ಯಾದಿ ಮಾಹಿತಿಯು ರಾವಸಾಹೇಬ ದೇಸಾಯಿಯವರಿಗೆ ದೊರೆತಿದೆ.

ಸಿಂಧಖೇಡ ತಾಲೂಕಿನೊಳಗಿನ ಮಾಟೀಗ, ದಲವಡೇ ಪೊಂಡ್ಯಾಚಾ, ಸಿಂದಖೇಡ ಈ ಗ್ರಾಮಗಳು ಖಾನದೇಶ ಜಿಲ್ಹೆಯವು. ಅವುಗಳಲ್ಲಿ ಸರಕಾರವು ಮಾಡಿದ ಲಾಗವಣಿಯು ಅನುಕ್ರಮವಾಗಿ ೯—೬—೩—೩ ಇರುತ್ತದೆ. ಇವೇ ಗ್ರಾಮಗಳಲ್ಲಿ ಅಷ್ಟು ಸರ್ಕಾರು ಸ್ಥಳಿಕ ಒಕ್ಕಲಿಗರ ಸಹಾಯದಿಂದ ಲಾಗವಣಿ ಮಾಡಿದ ಹಕೀಕತು, ಅವರ ಲಾಗವಣಿಯು ಊಸ್ತರಿಂದ ೯ ಅರ ವರೆಗೆ ಬಂದ ಹಕೀಕತು ಸರಕಾರಕ್ಕೆ ಗೊತ್ತಿಲ್ಲ. ಸಿಂದಖೇಡ ತಾಲೂಕಿನ ಸ್ಥಿತಿಯನ್ನು ವಿಚಾರಿಸಿ, ಕಳೆದ ಜನವರಿ ತಾ. ೩೧ ಮತ್ತು ಫೆಬ್ರುವರಿ ೧ ನೇಗೆ ಶಿರಪೂರದಲ್ಲಿ ಸೇರಿದ ಜಿಲ್ಹಾ ಪರಿಷತ್ತಿನ ಅಧಿವೇಶನದಲ್ಲಿ ಹೊಸದಾಗಿ ಪರಿಸಿದ ಠರಾವನ್ನು ಸರಕಾರವು ವಸೂಲ ಕಾನಾಬಾರ ಧಾಗಿಯೂ, ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ಠರಾವು ಆದಂತೆ ನೇಮಿಸಲಾದ ಕಮಿಟಿಯ ರಿಪೋರ್ಟ ಬರುವ ವರೆಗೆ ಕೈ ಹಚ್ಚಬೇಕಾಗಿಯೂ ಮಾಡಿದ ಠರಾವು ಸರಕಾರದ ಲಕ್ಷಕ್ಕೆ ಬಂದಿದೆ. ಆದರೆ, ಅದರಂತೆ ನಡೆಯುವ ವಿಚಾರವು ಸರಕಾರಕ್ಕಿರುವದಿಲ್ಲೆಂದು ಶ್ರೀ ದೇಶಪಾಂಡೆಯವರಿಗೆ ಉತ್ತರ ದೊರೆತಿದೆ

ಬೀದರ ಹಾಗು ಹುಬ್ಬಳ್ಳಿ ನಡುವೆ ಉಗಿಬಂಡಿ ಮಾರ್ಗವನ್ನು ರಚಿಸುವ ಆಲೋಚನೆಯಿತ್ತು. ಆ ಬಗ್ಗೆ ಸರ್ವೇ ಮಾಡಲಾಗಿತ್ತು. ಬಂಡವಲಿನ ಮೇಲೆ ಶೇಕಡಾ ೩ ರಂತೆ ಮುನಾಫೆ ದೊರೆಕುವದೆಂದು ತಿಳಿದು ಬಂದದ್ದರಿಂದ ಈ ಯೋಜನೆಯ ವಿಚಾರವು ಮುಂದಾಗಲಿಲ್ಲ. ಈ ಯೋಜನೆಯ ಪುನರಾಲೋಚನೆ ಮಾಡಿದ್ದಲ್ಲಿ ಶೇಕಡಾ ೧ ರಂತೆ ಮುನಾಫೆ ದೊರೆಯುವ ಆಶೆ ಇಲ್ಲ. ರೇಲ್ವೆ ಬೋರ್ಡಿನವರು ತಾ ೧೯-೨-೧೯೩೫ ನೇಗೆ ಹೊರಡಿಸಿದ ಸರ್ಕ್ಯುಲರವನ್ನು ಈ ಉಗಿಬಂಡಿ ಮಾರ್ಗದಿಂದ ವಿಶೇಷ ಲಾಭ ಸಿಗುವ ಸಂಭವ ತೋರದೆ ಹೋಯಿತು, ಇದನ್ನು ಹೊ

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದ ಮದನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಬಲ ಉಪಕರಣವಾದರೋ.

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ ಈ ಆಯಿಲ್ ಹಚ್ಚಿಕೊಳ್ಳುತಲೇ ಮಸ್ತಿಷ್ಕದ ಬೇನೆಯು ಕ್ಷಣಾರ್ಧದಲ್ಲಿ ಮಾಯವಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮನೋಹರವೂ ಆಗಿರುವದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇ ಒಂದು ಬಾರಿ "ಕಾಮಿನಿಯಾ ಆಯಿಲ್ ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ವೆಂಬ್ಲಿ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಆಫ್ ಮೆರಿಟ" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರು ಉತ್ತಮೋತ್ತಮವಾದ ಮಾನಪತ್ರಗಳೂ ದೊರೆತಿವೆ

ಕ್ರಯ — ಸೀಸೆಗೆ ರೂಪಾಯಿ 1 0-0, ಸೀಸೆ ೩ಕ್ಕೆ ರೂಪಾಯಿ ೨-10-0 ವ್ಹಿ. ಪಿ ಖರ್ಚು 0-14-0

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಆಗುವಂತೆ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡುದು. ಇದರಲ್ಲಿ ಮದಿರೆಯು (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವದು. ಒಂದೇ ಒಂದು ಸೀಸೆಯನ್ನು ತರಿಸಿರಿ

ಸಣ್ಣ ಸೀಸೆ 1 ಕ್ಕೆ 0-8-0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0-12-0.

Address:- **The Anglo Indian Drug & Chemical Co.**
16, Market, **BOMBAY 2**

ರಡಿಸುವ ಲಕ್ಷಣ ತೋರುವದಿಲ್ಲ. ಇತ್ಯಾದಿ ಮಾಹಿತಿಯು ಶ್ರೀ ಕಂಬಳಿಯವರಿಗೆ ದೊರಕಿದೆ.

ಶಿರ್ಶಿ ತಾಲೂಕಿನ ಮುಂಡಿಗೆಹಳ್ಳಿ ಗ್ರಾಮದ ಸರ್ವೇ ನಂಬರ ೩೬ರಲ್ಲಿ ಒಂದು ಸಾರ್ವಜನಿಕ ಕೆರೆ ಇತ್ತು. ಅದರೊಳಗಿನ ನೀರಿನಿಂದ ಗ್ರಾಮಗಳ ತೋಟಗಳಿಗೆ ನೀರು ಪೂರೈಕೆಯಾಗುತ್ತಿತ್ತು. ೧೯೨೦ನೇ ಇಸ್ವಿಯಿಂದ ಈ ಕೆರೆಯು ಮಣ್ಣಿನಿಂದ ತುಂಬಿ ನಿರುಪಯೋಗಿಯಾಗಿದೆ. ಕೆರೆ ಇದ್ದ ಸರ್ವೇ ನಂಬರು ಹಾಳುಬಿದ್ದು, ಅದರೊಳಗೆ ಕಾಡು ಗಿಡಗಂಟಿಗಳು ಬೆಳೆದಿದ್ದವು. ಇದರಿಂದ ನೆರೆಹೊರೆಯ ಹೊಲಗಳಿಗೆ ತೊಂದರೆಯಾಗಹತ್ತಿದ್ದರಿಂದ ಈ ಸ್ಥಳವು ಜಂಗಾಮಿ ಸಾಗುವಳಿಗೆ ಕೊಡಲ್ಪಟ್ಟಿದೆ. ೧೯೦೪ನೇ ಇಸ್ವಿಯಿಂದ ಸರಕಾರವು ಈ ಕೆರೆಗೆ ದುರಸ್ತಿ ಮಾಡಿಲ್ಲ. ಇದಕ್ಕೂ ಹಿಂದೆ ದುರುಸ್ತಿ ಮಾಡಿತ್ತೋ ಹೇಗೆ? ಎಂಬ ಮಾಹಿತಿಯು ಸಿಗುವದಿಲ್ಲ. [illegible] ಮಾಗ ತೋಟಗಳಿಗೆ ಈ ಕೆರೆಯಿಂದ ನೀರು ಪೂರೈಕೆಯಾಗಿ ಹೊಲ ಸಾಗುವಳಿಗೆ ಅನುಕೂಲವಾಗ [illegible] ವಿಚಾರಮಾಡಿ [illegible] ಇತ್ಯಾದಿ ಮಾಹಿತಿಯು ಶ್ರೀ ಕರ್ಕಿಯವರಿಗೆ ದೊರೆತಿದೆ

ಹೊನ್ನಾವರ ತಾಲೂಕ ಕರ್ಕಿಯ ಶ್ರೀ ಬುರಶೀ ಇಂಗ್ಲಿಷ ಶಾಲೆಯ ಕಮಿಟಿಯವರು ತಾ ೨೧-೪-೧೯೩೦ ನೇಗೆ ಕರ್ಕಿ ಗ್ರಾಮದ ಸರ್ವೇ ನಂಬರ ೧೦೩೬ನೇದರಲ್ಲಿ ಶಾಲೆಯ ಆವಾರಕ್ಕೆ ಕಟ್ಟಲಿಕ್ಕೆ ಸ್ಥಳ ಬೇಡಿದ್ದರು. ಕಲೆಕ್ಟರರು ಸರಕಾರಿ ಶಾಲಾ ಖಾತೆಯ ನಿಯಮದಂತೆ, ಶಾಲೆಯನ್ನು ನಡಿಸಬೇಕೆಂದು ಶರ್ತು ಹಾಕಿದರು. ಅದಕ್ಕೆ ಮಂಡಳದವರು ಒಪ್ಪಲಿಲ್ಲ ಅದರಿಂದ ಸ್ಥಳ ಕೊಡಲ್ಪಡಲಿಲ್ಲ ಇತ್ಯಾದಿ ಮಾಹಿತಿಯು ಶ್ರೀ ಕರ್ಕಿಯವರಿಗೆ ದೊರಕಿದೆ.

ಸರಕಾರಿ ಉಪ್ಪಿನ ದರವು ಬೆಳೆಕೆಯ ಖರ್ಚಿನಷ್ಟೇ ಇರುತ್ತದೆ. ಏಡನ ಹೊರತು ಮುಂಬಯಿ ಇಲಾಖೆಯಲ್ಲಿ ೪೧೨ ಕಡೆಗಳಲ್ಲಿ ಉಪ್ಪು ಬೆಳೆಸುತ್ತಿರುವರು. ಉಪ್ಪು ತಯಾರಿಸುವ ಅಲ್ಲಲ್ಲಿಯ ಪ್ರಕಾರಗಳು ಬೇರೆ, ವ್ಯವಸ್ಥೆಯೂ ಬೇರೆ; ಸ್ಥಳಿಕ ಸ್ಥಿತಿಯು ಬೇರೆ; ಸುಣ್ಣಗುಣ ಬೇರೆ, ಉಪ್ಪು ನೀರಿನ ಪೂರೈಕೆ ಬೇರೆ; ತಯಾರಾದ ವಸ್ತುವಿನ ಕ್ರಮ ಬೇರೆ. ಈ ಮೂಲಕ ಸರಕಾರಕ್ಕೆ ಉಪ್ಪಿನ ಬೆಳೆಕೆಯ ಖರ್ಚನ್ನು ಕಂಡುಹಿಡಿಯುವದು ಕಠಿಣವಾಗಿದೆ. ಸೂಕ್ಷ್ಮ ಚೌಕಶಿ ಮಾಡಿದ ಹೊರತು ಬೆಳೆಕೆಯ ಖರ್ಚು ಕಂಡುಹಿಡಿಯಲಾಗದು. ಸ್ಥೂಲಮಾನದಿಂದ ಉಪ್ಪು ಬೆಳೆಕೆಯ ಖರ್ಚು ೧ ಆಣೆಯಿಂದ ೩ ಆಣೆಯ ವರೆಗಿರುತ್ತದೆ. ಉಪ್ಪಿನ ಮಾರಾಟದ ದರವು ಅನೇಕ ಕಾರಣಗಳಿಂದ ನಿಯಮಿತವಾಗುತ್ತದೆ. ಉಪ್ಪಿನ ಬೆಳೆ ಹೆಚ್ಚು-ಕಡಿಮೆಯಾಗುವದೂ, ಮಾರಾಟದ ಹಂಗಾಮು, ಉಪ್ಪಿನ ಮಕ್ತೆದಾರರ [illegible], ಉಪ್ಪಿನ ಕ್ರಯವನ್ನು ನಿರ್ಣಯಿಸುತ್ತವೆ. ಉಪ್ಪಿನ ಪೇಟೆಯು ಸ್ವತಂತ್ರವಿದೆ. ಲೋಕ ವ್ಯಾಪಾರಿಗಳು ಉಪ್ಪಿನ ಮಾಲೀಕರಿಗೆ ಕೊಟ್ಟ ಮಾಲ್ಕಿಯನ್ನು ಹೇಳುವದಿಲ್ಲ. ಮಾಲ್ಕಿ ೩ಂ ಮತ್ತು ೧ ಆಣೆಯಿಂದ ೧೧|| ಆಣೆಯ ವರೆಗೆ ಇರುತ್ತದೆಂದು ಹೇಳಬಹುದು. ಈ ಕೆಳಗಿನ ಕೋಷ್ಟಕದ ಮೇಲಿಂದ ಅಲ್ಲಲ್ಲಿಯ ಉಪ್ಪಿನ ಬೆಳೆಕೆಯ ಖರ್ಚು, ಮಾರಾಟದ ದರವೂ ತಿಳಿಯುವದಾಗಿದೆ.

ಜಿಲ್ಲೆ,	ತಾಲೂಕು.	ಮಣ ೧ ರ ಬೆಳೆಕೆಯ ಖರ್ಚು.	ಮಣ ೧ ರ ಮಾರಾಟದ ದರ.
		ಆಣೆ.	ಆಣೆ.
ಠಾಣೆ,	ದಾದರ	೫-೬	೭
"	ರಾಯಿ	೩-೪	೧೦-೧೧||
"	ಟ್ರೊಂಬೆ	೪-೫	೮-೧೦
"	ಬೆಲಾಪುರ	೩-೫	೮-೧೦
"	ವಸಾಯಿ	೩-೭	೧೦-೧೧||
"	ಮಾರೋಳಿ	೩-೪	೫-೧೦
"	ಭಾಂಡುಪ	೫-೬	೫-೯
ಕುಲಾಬಾ,	ಉರಣ	೧-೨	೧ ೪
"	ಕಾರಂಜಾ	೨-೩	೧ ೩||
"	ಪೇಣ	೧-೨	೧ ೪
"	ಥಳ	೨-೩	೧ ೪
ರತ್ನಾಗಿರಿ,	ವೆಂಗುರ್ಲಾ	೩-೬	೬ ೯||
ಉತ್ತರಕನ್ನಡ,	ಸಾಣಿಕಟ್ಟ	೩। ೩|||	

[illegible] ಮಾರಾಟದ ಪದ್ಧತಿ [illegible] ಬೇಲ ಮುಂತಾದ [illegible] ಇಲ್ಲ ಇತ್ಯಾದಿ ಮಾಹಿತಿಯು ಶ್ರೀ [illegible]

ಹೊನ್ನಾವರ ತಾಲೂಕಿನ [illegible] ಗ್ರಾಮಗಳ ನಡುವೆ ೩ ಮೈಲು ಮಾರ್ಗ ಮಾಡಲಿಕ್ಕೆ [illegible] ಕಿನ ಜಮೀನದಾರರೂ [illegible] ಸಂಘದ [illegible] ಇತ್ಯಾದಿ ಮಾಹಿತಿಯು ಶ್ರೀ [illegible] ದೊರೆತಿದೆ

[illegible] ಬಡಾಸರವರು [illegible] ಮಾಡಿದ [illegible] ಗವ್ಹಿ [illegible] ಗ್ರಾಮಗಳ ವಿಲ್ಲೇಜ ಪೋಲೀಸ [illegible] ೧೯೨೪ ನೇ ಇಸವಿ [illegible] ತಾರೀಖಿಗೆ [illegible] ಮಾಡಿ ಪ್ರತಿಜ್ಞೆ ಮಾಡಿ ಹೇಳಿದರು [illegible] ಪ್ರತಿಜ್ಞಾ [illegible] ಬೋರ್ಡದ [illegible] ಅಧ್ಯಕ್ಷರು [illegible] ಕ್ಕೆ ಕೊಳ್ಳಲಿಕ್ಕೆ [illegible] ಕೊಟ್ಟರು. ಕಲೆಕ್ಟರರು ಅಸಿಸ್ಟಂಟ ಕಲೆಕ್ಟರರ ವಿದ್ಯಮಾನ ವಿಸ್ತಾರಪೂರ್ವಕ ಚೌಕಶಿ ನಡಿಸಿದರು. ಮಿ। ಗೋಖಲೆ ಬಡಾಸರವರಿಗೆ ತಾ ೧೯ ನವಂಬರ ೧೯೩೪ ನೇ ಇಸ್ವಿಯ ವರೆಗೆ ರಜೆಯ ಮೇಲೆ [illegible] ಅವರಿಗೆ [illegible] ೧೯೩೫ ನೇ ಇಸ್ವಿ ಜನವರಿ ೮ ನೇ ತಾರೀಖಿಗೆ [illegible] ಕೊಟ್ಟು [illegible] ಸ್ಥಳಾಂತರ ಮಾಡಲಾಯಿತು. [illegible] ಇತ್ಯಾದಿ ಮಾಹಿತಿಯು ಶ್ರೀ [illegible]

ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ [illegible] ಯಲ್ಲಿ ಸರಾಯಿ ಅಂಗಡಿಗಳ [illegible] ನಿಯಂತ್ರಣ ಮಾಡುವ ಅಧಿಕಾರ ಕೊಡುವದು ವ್ಯವಹಾರಿಕವೆಂದು ಸರಕಾರಕ್ಕೆ ತೋರುವದಿಲ್ಲವು. ಶ್ರೀ ನರಿಯಬಾಳಾಕರವರಿಗೆ ಉತ್ತರ ದೊರೆತಿದೆ

ಸರಕಾರದಿಂದ ನಡಿಸಲ್ಪಡುವ ಶಾಲೆಗಳಲ್ಲಿ ಕ್ವಾಯಿಟ ಯನ್ನು ನಡಿಸುವ ಯೋಜನೆಯ ವಿಷಯ, ಸರಕಾರದ ವಿಚಾರವಾಗಿ, ಕ್ವಾಯಿಟನ್ನು ಕೈಕೊಳ್ಳಬೇಕೆಂದು ಸರಕಾರವು ನಿರ್ಧರಿಸಿದೆ. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳೂ, ಖಾಸಗಿ ಸಂಸ್ಥೆಗಳೂ ತಮ್ಮಲ್ಲಿಯ ಶಾಲೆಗಳಲ್ಲಿ ಕ್ವಾಯಿಟನ್ನು ಏರ್ಪಡಿಸಲು ಸರಕಾರದ ಅಡ್ಡಿ ಇಲ್ಲ. ಆದರೆ, ಕ್ವಾಯಿಟಿನ ಪಾಠಗಳಿಂದ ಇತರ ವಿಷಯಗಳ ಅಭ್ಯಾಸಕ್ರಮದಲ್ಲಿ ತೊಂದರೆ ಬರಬಾರದು. ಕ್ವಾಯಿಟಿಗೆ ತಗಲುವ ಶಿಕ್ಷಕ ಖರ್ಚಿನಲ್ಲಿ ಸರಕಾರದ್ದು ಪಾಲುಗಾರವಾಗಲಿಕ್ಕಿಲ್ಲ ಇತ್ಯಾದಿ ಮಾಹಿತಿಯು ಶ್ರೀ ನಿವಿಯುಲವಾರರವರಿಗೆ ದೊರಕಿದೆ

ಉತ್ತರ ಕಾನಡಾ ಜಿಲ್ಲೆಯ ಕುಮಟೆಯಲ್ಲಿ ಸ್ಥಾಪಿಸಲ್ಪಟ್ಟ ಯಾದ ಬೇಸಾಯ ಶಾಲೆಯು ಉತ್ತರ ಕಾನಡಾ ಜಿಲ್ಲೆಯೊಳಗಿನ ಘಟ್ಟದ ಮೈಲಿನ ಪ್ರಕೃತಿಗಳ ಅಭ್ಯಾಸ ಮಾಡುತ್ತದೆ. ಹಾಗು ಗೊಬ್ಬರ ಸೊಪ್ಪಿಗಾಗಿ ಶೀಘ್ರವೇ ಬೆಳೆಯುವಂಥ ವನಸ್ಪತಿಯನ್ನು ಹುಡುಕಿ ತೆಗೆಯುತ್ತದೆ. ಮುಂಡಗೋಡದೊಳಗಿನ ಬೇಸಾಯ ಪ್ರಯೋಗ ಹೊಲವು ಬೇಸಾಯ ಪ್ರಯೋಗಗಳನ್ನು ಬೇಸಾಯಗಾರರಿಗೆ ಮಾಡಿ ತೋರಿಸುತ್ತದೆ. ಇತ್ಯಾದಿ ಮಾಹಿತಿಯು ಶ್ರೀ ಪೇಟಕರರಿಗೆ ದೊರಕಿದೆ.

ಇಡೀ ಮುಂಬಯಿ ಇಲಾಖೆಯಲ್ಲಿ ಎಲ್ಲ ಪ್ರಾಣಿ ಮೇವಿಗಾಗಿ ೩೩೨೨ ಚದರ ಮೈಲು ಪ್ರದೇ ಕಾದಿಡಲ್ಪಟ್ಟಿದೆ. ಎಳೆ ಚಿಗುರು ಮೇಯುವ ಪ್ರಾಣಿಗಳನ್ನು ಬಿಟ್ಟು, ಉಳಿದವುಗಳಿಗಾಗಿ ೯,೧೩೩ ಚದರ ಮೈಲು ಕ್ಷೇತ್ರ ಕಾದಿಡಲ್ಪಟ್ಟಿದೆ. ದನಗಳನ್ನು ಸಾಕಲಿ ಗದ್ದೆ, ಹುಲ್ಲುಗಾವಲಿಲ್ಲದ ಬೇಸಾಯಗಾ ತಮ್ಮ ದನಗಳನ್ನು ಕೊಲೆಗಡುಕರಿಗೆ ಮಾರಿದ ಕತು ಸರಕಾರದ ತಿಳುವಳಿಕೆಗೆ ಬಂದಿರುವದಿಲ್ಲ. ದರ ಹೊರತು, ೨೧,೧೦,೦೦೦ ಎಕರೆ ಪ್ರದೇಶದ ಮೇವು ಬೆಳಸಲ್ಪಡುತ್ತದೆ ಮೇವು ಬೆಳಸುವ ಕ್ಷೇತ್ರವನ್ನು ಇನ್ನೂ ಹೆಚ್ಚು ಮಾಡುವ ವಿಚಾರವು ಸ ರಕ್ಕಿರುವದಿಲ್ಲ. ಇತ್ಯಾದಿ ಮಾಹಿತಿಯು ಶ್ರೀ ಭೋ ಕರರಿಗೆ ದೊರಕಿದೆ.

ಗೌಳಿಗರು ಜಂಗಲ ಖಾತೆಯು ನೇಮಿಸಿಕೊಟ್ಟ ಗಳಿನಲ್ಲಿ ಕಾಯಂ ಉಳಕೊಂಡಲ್ಲಿ, ಅವರ ದನಗಳಿ ಲಕ್ಕೆ ೨ ಆಣೆಯಂತೆ ಗೋಚರಾಯಿ ಫೀ ವಸೂಲ ಲ್ಪಡುತ್ತದೆ. ಒಂದೇ ಕಡೆಯಲ್ಲುಳಿಯದೆ, ಒಂದು ದಿಂದ ಮತ್ತೊಂದು ಗ್ರಾಮಕ್ಕೆ ಅಡ್ಡಾಡುತ್ತಿದ್ದರೆ, ವಾ ಒಂದು ಕಾಡಿನಿಂದ ಮತ್ತೊಂದು ಕಾಡಿಗೆ ಹೋಗುತ್ತಿದ್ದರೆ ಫಾರೆಸ್ಟ ಮೆನ್ಯುಅಲ್‌ದ ೨ ನೇ ವ್ಹಾಲ್ಯೂಮಿನ ೩೩ ಪಾನಿನ ಮೇಲೆ ಮುದ್ರಿಸಿದ ಮೇವಿನ ನಿಯಮ ೧೮ನೇ ದರವನ್ನು ದನಗಳಿಗೆ ಬುಲಕ್ಕೆ ೧ ರೂಪಾಯಿ ರ ಗೋಚರಾಯಿ ಫೀ ಎತ್ತಲ್ಪಡುತ್ತದೆ. ಇತ್ಯಾದಿ ಯು ಶ್ರೀ ಕಕೇರಿಯವರಿಗೆ ದೊರೆತಿದೆ.

ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ವ ಸರಕಾರವು ಜನರನ್ನು ನೇಮಿಸುವಾಗ ಸಂಗತಿಗಳನ್ನು ವಿಚಾರ ಮಾಡುತ್ತದೆ (೧) ಅಲ್ಪ ಕರಿಗೆ ಸ್ಥಲ ದೊರಕಿದೆಯೋ ಹ್ಯಾಗೆ? (೨) ಹಿಂ ಹಾಗು ಅಸ್ಪೃಶ್ಯ ವರ್ಗದ ಪ್ರತಿನಿಧಿಗಳು ಬಂದಿರ ವ್ಯಾಗೆ? (೩) ಸ್ಥಳದಲ್ಲಿರುವ ವಿಶಿಷ್ಟ ಹಿತಸಂಬಂ ರಿಗೆ ನೇಮಿಸುವ ಅಗತ್ಯವಿದ್ದಂತೆಯೋ ಹ್ಯಾಗೆ? (೪) ಆ ಸಾಜಗಿ ಜನಸಂಖ್ಯೆಗೆ ತಕ್ಕದಾಗಿ ಪ್ರತಿನಿಧಿಗಳ ಸಿಕ್ಕೇವೆಯೋ ಹ್ಯಾಗೆ? (೫) ಸಂಸ್ಥೆಗಳಲ್ಲಿ ತಜ್ಞರಿದ ಹ್ಯಾಗೆ? (೬) ಸ್ಥಾನಿಕಸಂಸ್ಥೆಗಳ ಆಡಳಿತೆಯು ಮ ದ್ದವರನ್ನು ಸೇರಿ ಕೊಳ್ಳುವದು ಇಷ್ಟವೋ ಹೇಗೆ [illegible] ಲೋಕಲ್ ಬೋರ್ಡ ಆಕ್ಟಿನ ಕಲಂ ನ್ವಯ [illegible] ಲ್‌ಬೋರ್ಡು ಸಂಸ್ಥೆಯಲ್ಲಿ ಆ [illegible] ಆ ವರ್ಗದವರೊಬ್ಬರನ್ನು ಸ ನೇಮಿಸಬೇಕಾಗಿದೆ. ಆ ವರ್ಗದವರು ಮಾತ್ರ ಕಾರ ಪಡೆಯಲು ಪಾತ್ರರಿರಬೇಕು ಹಾಗು ಆ ಬೇಕು ಇತ್ಯಾದಿ ಮಾಹಿತಿಯು ಮಿ। ಬಾಳೆ ದೊರಕಿದೆ.

ಜನರಲ್ ಸ್ಟಾಂಪಿನ ವಿಕ್ರಯದಿಂದ ೧೯೨೩-೨೪ನೇ ಇಸ್ವಿಯಲ್ಲಿ ರೂ.೨೫ ೦೦ ೧೯೩೩-೩೪ನೇ ಇಸ್ವಿಯಲ್ಲಿ ರೂ. ೯೬, ಹಾಗೆ ಅದೇ ವರುಷಗಳಲ್ಲಿ ಕೋರ್ಟ ಫೀ ವಿಕ್ರಯದಿಂದ, ಅನುಕ್ರಮವಾಗಿ, ೩೨,೨೬, ಮತ್ತು ೮೩,೨೮,೦೧೧ ರೂಪಾಯಿಗಳು ಕ್ಕೆ ಉತ್ಪನ್ನವಾದವು. ಇತ್ಯಾದಿ ಮಾಹಿತಿಯು ಲೇಯವರಿಗೆ ದೊರಕಿದೆ.

ಆಯುರ್ವೇದ ಮಹಾಮಂಡಲದ “ವಿಶಾ “ಆಚಾರ್ಯ” ಪರೀಕ್ಷೆಗಳಲ್ಲಿ ಉತ್ತೀರ್ಣ ಹಾಗು ಹಕೀಮರಿಗೆ ವೇತನ ಕೊಟ್ಟು ಹಳ್ಳಿಗ ಧೋರಣದ ಯೋಜನೆ ಮಾಡಲು ಸರಕಾ ಯಿಲ್ಲ. ಇತ್ಯಾದಿ ಮಾಹಿತಿಯು ಶ್ರೀ ಪ್ರಧಾನರ ರಿಕೆ.

ಕಾನಡಾ ಜಿಲ್ಲೆಯೊಳಗಿನ ಗ್ರಾಮಗಳ ಆ ಆಚೆ ಈಚೆ ಕಾಡು ಇದ್ದರೆ, ಪಶುಗಳನ್ನು ಪ ಹೇಳಬೇಕಾಗಿಯೂ ಕಳೆದ ೩ ವರುಷಗಳಲ್ಲಿ ಗಳೊಳಗಿನ ಜನಸಂಖ್ಯೆಯನ್ನು, ದನಗಳ

ಹೇಳಬೇಕಾಗಿರುವ ಶ್ರೀ ಕರ್ಕಿಯವರು ಪ್ರಶ್ನೆ ಮಾಡಿದ್ದರು. ಕಾನಡಾ ಜಿಲ್ಲೆಯಲ್ಲಿ ೧೪೧೯ ಗ್ರಾಮಗಳಿದ್ದು, ಕೇಳಿದ ಮಾಹಿತಿಯನ್ನು ಒಟ್ಟುಗೂಡಿಸಲಿಕ್ಕೆ ಬಹಳ ಕಾಲ ತಗಲುವದು. ಆದ್ದರಿಂದ ಈ ಮಾಹಿತಿಯನ್ನು ಒಟ್ಟುಗೂಡಿಸಲಿಕ್ಕೆ ಬರುವದಿಲ್ಲೆಂದು ಸರಕಾರವು ವ್ಯಸನಪೂರ್ವಕವಾಗಿ ತಿಳಿಸಿದೆ.

ಮುದ್ರಾಸದ ಕಮೀಟಿಯವರು ಸ್ವದೇಶೀ ಔಷಧೋಪಚಾರದ ವಿಷಯ ಮಾಡಿದ ಠರಾವುಗಳ ಅನುರೋಧದಿಂದ ಔಷಧೋಪಚಾರದ ಅಭ್ಯಾಸಕ್ರಮವನ್ನು ಕೈಕೊಳ್ಳಲು ವ್ಯವಸ್ಥೆ ಏನು ಮಾಡಿರುವದೆಂದು ಶ್ರೀ ಪ್ರಭುನವರು ಕೇಳಿದ್ದಕ್ಕೆ ಈ ವಿಷಯ ಸರ್ಜನ್ ಜನರಲ್‌ರಿಂದ ಬಂದ ರಿಪೋರ್ಟನ್ನು ಸರಕಾರವು ಆಲೋಚಿಸುತ್ತದೆಂದು ಉತ್ತರ ದೊರಕಿದೆ.

ಮುಂಬಯಿ ಇಲಾಖೆಯೊಳಗಿನ ವರ್ತಮಾನ ಪತ್ರಗಳಿಂದ ಪ್ರತಿ ವಾರಕ್ಕೆ ಸರಕಾರವು ರಿಪೋರ್ಟನ್ನು ತಯಾರಿಸಿ, ಕೆಲವು ವಿಶಿಷ್ಟ ಅಧಿಕಾರಿಗಳಿಗೆ ಮಾತ್ರ ಕಳಿಸಲ್ಪಡುತ್ತದೆ. ಈ ರಿಪೋರ್ಟ ಗುಪ್ತವಿದೆ. ಎಂಬ ಮಾಹಿತಿಯು ಶ್ರೀ ಪ್ರಭುನವರಿಗೆ ದೊರಕಿದೆ.

ಸಿಂದಗಿ ತಾಲೂಕಿನ ೧೫ ಗ್ರಾಮಗಳಲ್ಲಿ ಈ ವರ್ಷದ ಆಣೆವಾರಿಯು ೧ ಆಣೆಗಿಂತ ಕಡಿಮೆ ಇದೆ. ೯೩ ಗ್ರಾಮಗಳಲ್ಲಿ ೪ ಆಣೆಗಿಂತ ಕಡಿಮೆ ಇದೆ. ಕಾರಣ ಬೆಳೆಯು ವಿಪರೀತ ಹಾನಿಯ ಮೂಲಕ ಕಂಗ್ಗಿದೆ. ಆದರೆ ತಾಲೂಕಿನಲ್ಲಿ ಈ ಮೂಲಕ ಬರಗಾಲವಿಲ್ಲ ಇತ್ಯಾದಿ ಮಾಹಿತಿಯು ಶ್ರೀ ದೇಸಾಯರವರಿಗೆ ದೊರಕಿದೆ.

ಕಾರ್ಯಕಾರಿ ಕೌನ್ಸಿಲಿನ ಮೆಂಬರರಾದ ನಾಮದಾರ ಸರ್ ಚುನಿಲಾಲ ಮೆಹತಾರವರ ಪ್ರಕೃತಿಯು ನೆಟ್ಟಗಿರದ ಮೂಲಕ ಪ್ರಕೃತಿಚಿಕಿತ್ಸೆಗಾಗಿ ವಿಲಾಯತಿಗೆ ಹೋಗಲು ರಜೆ ಕೊಟ್ಟಿದೆ. ಆ ಬಗ್ಗೆ ೧೦,೬೬೬ ರೂಪಾಯಿ ಖರ್ಚು ತಗಲುವದು ಎಂದು ಶ್ರೀ ಪ್ರಭುನವರಿಗೆ ಮಾಹಿತಿಯು ದೊರಕಿದೆ.

For the kind consideration of the Honawar Taluka Local Board & the Educational Authorities.

ಮುರ್ಡೇಶ್ವರ ಹೆಣ್ಣುಮಕ್ಕಳ ಶಾಲೆಯ ದುರ್ದಶೆ.

ಅಲ್ಲಿಯ ಗಂಡು ಮಕ್ಕಳ ಶಾಲೆಯಲ್ಲಿ ಹುಡುಗಿಯರ ಸಂಖ್ಯೆಯು ಬಹಳ ಇರುತ್ತಿದ್ದನ್ನು ಮಾ|| ಕಳಸ್ಕರ ಸಾ|| ರವ, ತಿ|| ರಾ|| ರಾ|| ಪ್ರೆಸಿಡೆಂಟ ಸಾ|| ರವ, ವಿದ್ಯಾಖಾತೆಯ ಅಧಿಕಾರಸ್ಥರೂ ಕಂಡು, ಅಲ್ಲಿ ಹೊಸದಾಗಿ ಒಂದು ಹೆಣ್ಣು ಮಕ್ಕಳ ಶಾಲೆಯು ತಾ. ೭-೧-೨೪ಕ್ಕೆ ಸರಕಾರದಿಂದ ಸ್ಥಾಪಿಸಲ್ಪಟ್ಟಿತು. ಒಬ್ಬ ಒಂದು ವರ್ಷದ ಟ್ರೇನ್ಡ ಮಾಸ್ತರಣಿಯರನ್ನು ೩೦ ರೂಪಾಯಿ ಪಗಾರಿನಮೇಲೆ ನೇಮಿಸಿದ್ದಾಯಿತು. ಶಾಲೆಮನೆಯ ತಾತ್ಪೂರ್ತಿಕ ವ್ಯವಸ್ಥೆ ಬಗ್ಗೆಂದು, ಮೇಲಧಿಕಾರಿಗಳ ಹುಕುಮಿನ ಪ್ರಕಾರ, ಈ ಫಿರ್ಕಾ ಶಾನಭೋಗರು ಊರವರಿಂದ ವರ್ಗಣಿ ಮಾಡಿ, ಹೆಚ್ಚು ಕಡಿಮೆ ೧೦—೧೨ ರೂಪಾಯಿ ಕೂಡಿಸಿ ಹುಡುಗರ ಶಾಲೆ ಕಂಪೌಂಡಿನಲ್ಲಿ ಆ ಶಾಲೆಯ ಎದುರಿನ ಅಂಗಳದಲ್ಲಿ, ಒಂದು ಹಂಗಾಮಿ ಹಂದರಾ (ಚಪ್ಪರ) ಹಾಕಿ ಅದರಲ್ಲಿ ಈ ಶಾಲೆ ನಡಿಯಿತು.

ಮುಂದೆ ಮಳೆಗಾಲ ಪ್ರಾರಂಭವಾಗುವ ಪೂರ್ವದಲ್ಲಿ ಈ ಸ್ವತಂತ್ರ ಹುಡುಗಿಯರ ಶಾಲೆಗೆ ಒಂದು ಪಕ್ಕಾ ಗುಡಿಸಲು ಕಟ್ಟಿಕೊಡುವ ಬಗ್ಗೆ, ಹುಡುಗರ ಶಾಲೆ ಹೆ|| ಮಾಸ್ತರರ ಕಡಿಗೆ ೩೫ ರೂಪಾಯಿ ಮಂಜೂರಾಗಿ ಬಂದಿತಂತೆ. ಅವರು ಆ ಹಳೇ ಚಪ್ಪರ ಮುರಿಸಿ, ಅದೇ ಸ್ಥಳದಲ್ಲಿ ೪ ಮಾರು (೨೪ ಫೂ.) ಉದ್ದ ಮತ್ತು ೨ ಮಾರು (೧೨ಫೂ.) ಅಗಲ ವಿಸ್ತಾರದ ಹುಲ್ಲು ಛಾವಣಿಯ ಒಂದು ಝೋಪಡಿಯನ್ನು ಕಟ್ಟಿಸಿಕೊಟ್ಟರು. ಅದರ ಪೂರ್ವ ಬದಿಗೆ, ಶಾಲೆ ಕಂಪೌಂಡಿನ ಕಲ್ಲು (ಗೋಡೆ) ಪಾಗಾರ ಬಂತು, ಪಶ್ಚಿಮ ಬದಿಗೆ, ಹುಡುಗರ ಶಾಲೆಯ ಜಗಲಿ (ವರಾಂಡಾ) ಬಂತು. ನೆಲ ಒಂದು ಫೂಟು ಎತ್ತರಿಸಿದರು. ಈ ಗುಡಿಸಲಿನ ಪಡುವಲ ಮಾಡಿನ ನೀರು ಮತ್ತು ಗಂಡು ಮಕ್ಕಳ ಶಾಲೆಯ ಜಗಲಿಮೇಲಿನ ಹಂಚಿನ ಛಾವಣಿ ಕಡುಮಾಡಿನ ನೀರು ಸಹ ಒಟ್ಟಿಗೆ ಕೂಡಿದರಿಂದ, ಅವೆರಡರಿಂದ ಇಳಿಯುವ ಮಳೆ ನೀರು ಹೆ|| ಮ| ಶಾಲೆಯೊಳಗೆ ಬೀಳದಂತೆ ಧರಣಿ ಮರದ ಮರಿಗೆ ಯಾನೆ ಹರಣಿಗಳಂತನ್ನು ಜೋಡಿಸಿ ಕಟ್ಟಿದರು.

ಈ ವರ್ಷ ಗಂಡು ಮಕ್ಕಳ ಶಾಲೆಗೆ ದರ ವರ್ಷ ಬರತಕ್ಕ ರಿಪೇರಿ ಸಲುವಾಗಿ ಬರುವ ೨೦ ರೂಪಾಯಿಯೊಳಗೆನೇ ಈ ಗರ್ಲ್ಸ್‌ಸ್ಕೂಲ ಗುಡಿಸಲಿನ ದುರುಸ್ತಿಯಾಗಬೇಕೆಂದು ಆ ಹೆ|| ಮಾಸ್ತರರಿಗೆ ಬರೆದು ಬಂದಿತ್ತಂತೆ. ಅವರು ತಮ್ಮ ತಿಳುವಳಿಕೆ ಪ್ರಕಾರ, ಖರಚಾದ ರಿಪೇರಿಯನ್ನು ಈ ಹೆ| ಮಕ್ಕಳ ಶಾಲೆಗೂ ಮಾಡಿಸಿ, ಪ್ರತ್ಯೇಕ ಬಿಲ್ಲು ಅರ್ಜೀ ಮಾಡಿ ಕಳುಹಿಸಿದ್ದಾರಂತೆ.

ಈ ಶಾಲೆಗೆ ಮಾಸ್ತರಣಿಯರಿಗೆ ಕೂಡ್ರಲಿಕ್ಕೆ ಒಂದು ಖುರ್ಚಿ, ಒಂದು ಮೇಜು, ಒಂದು ಕರೇ ಹಲಿಗೆ, ಈ ಮೂರು ಕಟ್ಟಿಗೆಯ ಹಳೇ ಸಾಮಾನು ದಯಮಾಡಿ ಕೊಡಿಸಲಾಗಿದೆ. ಹೆಣ್ಣು ಮಕ್ಕಳಿಗೆ ಕೂಡ್ರಲಿಕ್ಕೆ ಕಾಲು ಹಲಿಗೆಗಳು (ಬೆಂಚು) ಇಲ್ಲೇ ಇಲ್ಲ. ಹರಕು ಚಾಪೆಗಳಾದರೂ ಈ ಬಾಲಿಕೆಯರಿಗೆ ಇನ್ನು ವರೆಗೆ ಸಿಗುವ ಯೋಗ್ಯತೆಯನ್ನು ದೇವರು ಪಾಲಿಸಲಿಲ್ಲ

ಮುಖ್ಯ ಸಂಗತಿ ಇದರ ಮುಂದೆ ಇದೆ. ಈ ಹೊತ್ತಿನ ಸ್ಥಿತಿ ಹೇಗೆ ಆಗಿದೆ ಎಂದರೆ:— ಈ ಶಾಲೆಯ ಪೂರ್ವ ದಿಕ್ಕಿನ ಕಲ್ಲು ಪಾಗಾರದ, ಶಾಲೆ ಬದಿಗೆ ಮಣ್ಣು ಮೆತ್ತಿಗೆ ಸಹ ಮಾಡದೇ ಇರುವದರಿಂದ, ಈ ಹಳೇ ಪಾಗಾರದ ಬಿರುಕಿನೊಳಗಿಂದ ಹಾವು ಚೇಳು, ಕಪ್ಪುರುವೆ ಇತ್ಯಾದಿ ಜಂತುಗಳು ಹೊರಬಿದ್ದು ಬರೇ ನೆಲದಮೇಲೆ ಕೂತಿರುವ ಮಕ್ಕಳನ್ನು ಪೀಡಿಸುತ್ತ, ಚಿವರಿಸುತ್ತ ಇವೆ. ಈ ಪಾಗಾರದ ಬದಿಯನ್ನೇ ಬಿಟ್ಟುಬಿಡೋಣವೆಂದರೆ, ಹರಣಿ ಕಟ್ಟಿದ ಬದಿಗೆ ಗಂಡು ಮಕ್ಕಳ ಶಾಲೆ ಹಂಚಿನ ಮಾಡು ದುರುಸ್ತ ಇಲ್ಲದರಿಂದಲೂ, ಹರಣಿಗಳನ್ನು ಸರಿಯಾಗಿ ಕಟ್ಟದೇ ಇದ್ದದರಿಂದಲೂ ಉಭಯ ಮಾಡುಗಳ ನೀರು ಅರ್ಧಕ್ಕೆ ಅರ್ಧದಷ್ಟು ಈ ಗುಡುಸಲಿನ ಒಳಗೆ ಬೀಳುತ್ತಿದ್ದು, ಈ ಕದರ ಒಟ್ಟು ೧೨ ಫೂಟು ಅಗಲಳತೆಯಲ್ಲಿ ಗಂಡು ಮಕ್ಕಳ ಶಾಲೆ ಬದಿಯ ೮ ಫೂಟು ನೆಲಕ್ಕೆ ಕೇವು ಬಂದು ಅದರ ಮೇಲೆ ಕೂಡ್ರಲಿಕ್ಕೆ ಬರೋದಿಲ್ಲ. ಪಾಗಾರದ ಬದಿಯ ಬಾಕಿ ೪ ಫೂಟು ಮಾತ್ರ ಬಳ ಜಾಗಾ ಇದೆ. ಆದದರಿಂದ “ಬಂದದ್ದು ಬರಲಿ, ಗೋವಿಂದನ ದಯೆಯೊಂದಿರಲಿ,” ಎಂದು ಈ ಮುಗ್ಧ ಹೆಣ್ಣು ಮಕ್ಕಳು ಈ ಪಾಗಾರದ ಬದಿಗನೇ ಹಾವುಚೇಳು, ಕಪ್ಪುರುವೆ ಕಡಿಯುವವೆಂದು ನೋಡಿದರು ಕೆಲವರಿಗೆ ಪಾಳಿ ಹಚ್ಚಿ ಕೊಳ್ಳುತ್ತ ಕೂಡ್ರಲೇ ಬೇಕಾಗಿದೆ. ಈ ಕಲ್ಲು ಪ್ರಾಕಾರ ಗೋಡೆಯು ಒಬ್ಬ ಆಳಿನ ಎದೆ ಮಟ್ಟ ಇದೆ. ಶಾಲೆಯೊಳಗೆ ಬೆಳಕು ಬರಬೇಕೆಂಬ ಒಳ್ಳೇ ಉದ್ದೇಶದಿಂದ ಈ ಪಾಗಾರದ ಮೇಲೆ ಕಟ್ಟು ಕಟ್ಟದೇ ಇರುವ ಪ್ರಯುಕ್ತ ಮಳೆ ಹನಿಯೂ ಯಥೇಷ್ಟವಾಗಿ ಒಳಗೆ ಬರೇ ನೆಲದಮೇಲೆ ಕೂತ ಮಕ್ಕಳ ಮೇಲೆ ನಿರ್ದಯವಾಗಿ ಬಡಿಯುತ್ತಿದೆ.

ಇದರ ಪರಿಣಾಮದಿಂದ, ಮಕ್ಕಳು ಉಟ್ಟುಕೊಂಡು ಬರುವ ಚಲೋ ವಸ್ತ್ರಗಳೆಲ್ಲ ಮಣ್ಣು ಅಥವಾ ಸಿಮೆಂಟು ಹಿಡಿಯದೇ ಇದ್ದ ಈ ಬರೇ ನೆಲದಮೇಲೆ ಬರುವ ಮಣ್ಣು ಧೂಳಿಯಿಂದ ಮಾಸಿ ಒಂದೇ ದಿನದಲ್ಲಿಯೇ ಹೊಲಸಾಗುತ್ತವೆ. ೨-೨|| ಮೊಳ ಅಷ್ಟಗಲ ಸ್ಥಳದಲ್ಲಿ ಕುಂತು, ಮುಂದೆ ೫-೬ ಮೊಳ ಅಗಲ ಕೇವಿನಿಂದ ಪ್ರಾಪ್ತವಾದ ಜಾಗದಂತೆ ಮೇಲಕ್ಕೇರುವ ಅನಾರೋಗ್ಯಕರವಾದ ಹಣಿಯನ್ನು ಈ ಮಕ್ಕಳು ಅನುಭವಿಸಿ, ಮೇಲಿನಿಂದ ಹೊಡಿಯುವ ಮಳೆಹನಿಯ ತುಂತುರೆಗಳನ್ನು ಸಹ ಸಹಿಸ ಹೊಂದುವದರಿಂದ ಈ ಎಳೆ ಮಕ್ಕಳಿಗೆ ತಂಡಿವಿಕಾರವಾಗುವ ಪ್ರಯುಕ್ತ, ಮಳೆಗಾಲ ಬರುವಿನಿಂದ ಹುಡುಗಿಯರ ಸಂಖ್ಯೆಯು ಕಡಿಮೆಯಾಗುತ್ತಿದೆಯಂತೆ

ಹೋದ ವರ್ಷ ಬಂದ ೩೫ ರೂಪಾಯಿಯಿಂದ ಈ ನಾಲ್ಕು ಮಾರು ಉದ್ದ ಎರಡು ಮಾರು ಅಗಲ ಹುಲ್ಲು ಛಾವಣಿಯ ಈ ಗುಡಿಸಲು ಕಟ್ಟಿಸುವಾಗ ಈ ಕಲ್ಲು ಗೋಡೆಯ ಒಳಬದಿಗೆ ಮಣ್ಣು ಹಾಕಿಸಲಿಕ್ಕಾಗ ಸಾಧ್ಯವಾಗಲಿಲ್ಲವೇ? ಈ ಹೊಳ್ಳಾಳ ೮ ಮಾರು ಸ್ಥಳಕ್ಕೆ ಗಂಡು ಮಕ್ಕಳ ಶಾಲೆಯ ಜಗಲಿಯ ಪ್ರಶಸ್ತ ಭಾಗದಷ್ಟು ಎತ್ತರ ಮಾಡಿಕೊಳ್ಳಲಿಕ್ಕೆ ಸಾಕಷ್ಟು ಮಣ್ಣು ತುಂಬಲಿಕ್ಕೂ ಸಾಧ್ಯವಾಗಲಿಲ್ಲವೇ? ಆ ಪ್ರಕಾರ ನೆಲಗಟ್ಟು ಇನ್ನೂ ೧½ ಎತ್ತರಿಸಿಕೊಂಡಿದ್ದರೆ, ಇಷ್ಟು ಕೆಸರು ಬರುತ್ತಿದ್ದಿಲ್ಲವಲ್ಲವೇ? ಒಂದಾನು ವೇಳೆ ಆ ೩೫ ರೂಪಾಯಿಯಿಂದ ಮೇಲೆ ಹೇಳಿದ ಮಹಾಕಾರ್ಯಗಳು ನೆರವೇರದೇ ಹೋದರೆ, ಈ ಬಗ್ಗೆ ಇನ್ನು ೪-೫ ರೂಪಾಯಿ ಖರ್ಚು ಮಾಡಲಿಕ್ಕೆ ಆಗದಷ್ಟು ಲೋಕಲ್ ಫಂಡಿಗೆ ಬಡತನ ಬಂತೇನೋ?

ಈ ಮುರ್ಡೇಶ್ವರದಿಂದ (ಕೈಕಿಣಿ, ಮಾವಳ್ಳಿ, ಎರಡು ಗ್ರಾಮಗಳಿಂದ) ಪ್ರತಿ ವರ್ಷ ಸುಮಾರು ೧೦೫೦ ರೂಪಾಯಿ ಲೋಕಲ್‌ಫಂಡು ವಸೂಲಾಗುತ್ತದೆ. ಲೋಕಲ್ ಬೋರ್ಡಿಗೆ ಇಷ್ಟು ದೊಡ್ಡ ಮೊತ್ತ ಕಟ್ಟಿ ಕೊಡುವ ಇಂತಹ ಕೋಮಲ ಹೆಣ್ಣುಮಕ್ಕಳು ೪-೫ ರೂಪಾಯಿ ಖರ್ಚಿನ ಪೇಚಾಟಕ್ಕಾಗಿ, ದನದ ಕೊಟ್ಟಿಗೆಗಿಂತ ಕೆಟ್ಟದ್ದಾದ ಇಂಥ ಜಾಗದಲ್ಲಿ ಕುಂತು ಗೋಳಾಡುವದು ಉಚಿತವೋ?

“ಕೆಂತಪ್ಪನ್ಯಾಕಿದರೆ ಕಂಠದಂತ ಸಿಟ್ಟು.” ಈಗಿನ ಸರಕಾರವೇ—“ಬೇಜವಾಬದಾರ ಸರಕಾರ” ವೆಂದು ಕೊಂಗ್ರೆಸ್ಸವಾಲಾರು ಹುಯಿಲಿಡುತ್ತಾರಂತೆ. ಅದರಲ್ಲಿಯೂ ಲೋಕಲ್ ಬೋರ್ಡು ಸ್ಥಾನಿಕ-ಸ್ವಾತಂತ್ರ್ಯದ ಸಂಸ್ಥೆ. ಇಂಥಮೇಲೆ ಕೇಳುವದೇನು?

ಈ ಶಾಲೆಯನ್ನು ಸಂದರ್ಶಿಸುವ ಎಲ್ಲ ಮಹನೀಯರು “ಇದಕ್ಕೆ ಒಂದು ಚಲೋ ಶಾಲೆಮನೆ ಬೇಕು” ಎಂದು ಶೆರಾ ಬುಕಿನಲ್ಲಿ ಶೆರಾ ಬರೆಯಲಿಕ್ಕೆ ಅಡ್ಡಿ ಇಲ್ಲ. “ನಾಳೆ ಪಟ್ಟ ಕಟ್ಟುವದು ಹೇಗೂ ಇರಲಿ; ಈ ಹೊತ್ತಿಗೆ ಹುಡಿ ಕೂಳಿಗೆ ಅಪ್ಪಣೆಯಾಗಲಿ” ಎಂದು ಒಬ್ಬ ತಿರುಕನು ಬರೆಯುತ್ತಿದ್ದನಂತೆ. ಹೊಸ ಭದ್ರವಾದ ಶಾಲೆಮನೆ ಇರಲಿ. ಸದ್ಯ ತಂಡಿಯಲ್ಲಿ ಬರೇ ನೆಲದಮೇಲೆ ಕೂತಿರುವ ಈ ಹಸುಬಾಲಿಕೆಯರಿಗಾಗಿ, ಕನಿಷ್ಟರಲ್ಲಿ ಕನಿಷ್ಟ ಪಕ್ಷಕ್ಕೆ ನೆಲಕ್ಕೆ ಹಾಸಲಿಕ್ಕೆ ಒಂದು ಮೇದಾರರು (ಹೊಲೆಯರು) ಮಾಡುವ ಬಿದುರುಕಟ್ಟಿ, ಮತ್ತು ಅದರ ಮೇಲೆ ಕೂತ್ಕೊಳ್ಳುವ ಬಗ್ಗೆ ಹಾಸಲಿಕ್ಕೆ ೩—೪ ಚಾಪೆಗಳನ್ನಾದರೂ, ಸಂಬಂಧಪಟ್ಟ ಅಧಿಕಾರಸ್ಥರು ಈಗ ಅತಿ ಬೇಗನೇ ಕೊಡಿಸಿದರೆ ಲೋಕಲ್‌ಬೋರ್ಡ ಸಂಸ್ಥಾನಕ್ಕೆ ಬೇಕಷ್ಟು ಹೊಗಳಿಕೆ ಬರುವದಿತ್ತು. ಬೆಂಚುಗಳು ಸಹ ಕ್ರಮೇಣ ಕೊಡಿಸಿದರೂ ಅಡ್ಡಿ ಇಲ್ಲ. ತಂಡಿಯಲ್ಲಿ—ಕೇವಿನಲ್ಲಿ—ಇದೇ ಈಗ ಬೀಳುವ ಮಳೆ ಹನಿಯಲ್ಲಿ ಈ ಚಿಕ್ಕ ಹೆಣ್ಣು ಮಕ್ಕಳ ಮೇಲೆ ಕನಿಕರ ಪಟ್ಟು, ಮೇಲೆ ಅರಿಕೆ ಮಾಡಿದಂತೆ, ಒಂದು ಮೇದಾರ ಕಟ್ಟಿಯನ್ನು, ಅದರ ಮೇಲೆ ಹಾಸಲಿಕ್ಕೆ ೩-೪ ಚಾಪೆಗಳನ್ನಾದರೂ ಅತಿ ಶೀಘ್ರ ಕೊಡಿಸಬೇಕಾಗಿದೆ.

ಒಬ್ಬ ಮುರ್ಡೇಶ್ವರದವನು.

— ಮಲಬಾರದಲ್ಲಿ ವಿಶೇಷ ಮಳೆ ಸುರಿದು ನ್ಯಾಸಾಕ ಘಟ್ಟದ ಮೇಲೆ ಅಪ್ಪಳಿಸುವದು ಕಂಡುಬಂದಿದೆ. ಎಂಗಿನ ಮುರಾಗು ಚಾಲಿಯಾದ ನದಿಗಳು ಉಕ್ಕೇರಿಬಂದು ದೊಡ್ಡ ದೊಡ್ಡ ಮರಗಳು ಬುಡ ಬೇರುಸಹಿತ ಕಿತ್ತು ಬಳದು ಹೋದವು.

ಕಾನಡಾವೃತ್ತ.

ಮಿತಿ ಕ್ರೋಧನ ಸಂ। ಶ್ರಾವಣ ಶು। ೧೪ ಸೋಮವಾರ.

ಬ್ರಿಟಿಶರ ರಕ್ಷಕತನ.

ಬ್ರಿಟಿಶರ ರಾಜ್ಯಸ್ಥಾಪನೆಯಿಂದ ಹಿಂದುಸ್ಥಾನಕ್ಕೆ ಒದಗಿದ ಕಲ್ಯಾಣಪರಂಪರೆಗಿಂತ ಅನರ್ಥ ಪರಂಪರೆಗಳೇ ವಿಶೇಷವೆಂದು ಭರತಖಂಡದ ದೇಶಸೇವಕರು, ಭಿನ್ನ ಭಿನ್ನ ಮತದ ಭಾರತಪುತ್ರರು ಒಪ್ಪಿರುವ ಮಾತು. ಆರ್ಥಿಕ ದೃಷ್ಟಿಯಿಂದ ವಿಚಾರಿಸಲಿ, ಸಾಮಾಜಿಕ ದೃಷ್ಟಿಯಿಂದ ವಿಚಾರಿಸಲಿ, ರಾಜಕಾರಣ ದೃಷ್ಟಿಯಿಂದ ವಿಚಾರಿಸಲಿ, ಬ್ರಿಟಿಶರ ದಾಸ್ಯತ್ವಕ್ಕೆ ಹಿಂದುಸ್ಥಾನವು ಒಳಪಟ್ಟು ತನ್ನ ಭವಿತವ್ಯತೆಯನ್ನು ಬಹು ಮಟ್ಟಿಗೆ ಕೆಡಿಸಿಕೊಂಡಿದೆ. ಹಿಂದುಸ್ಥಾನದ ಸಂಸ್ಕೃತಿಯೂ ಅಲ್ಲಿಂದಲ್ಲೇ ನಷ್ಟವಾಗುವ ದುಶ್ಚಿಹ್ನಗಳೂ ಆಗಿಂದಾಗ ತಲೆದೋರುತ್ತಿವೆ. ಆದರೂ, ಬ್ರಿಟಿಶರೂ, ಅವರಿಂದ ಸನ್ಮಾನ ಹೊಂದಿದ ಇಲ್ಲಿಯ ಆಳರಸರೂ ಬ್ರಿಟಿಶ ರಾಜ್ಯದಿಂದ ಹಿಂದುಸ್ಥಾನಕ್ಕೆ ಹೇರಳ ಲಾಭವುಂಟಾಗಿದೆಂದು ಸಾರುತ್ತಿರುವರು. ಮೊನ್ನೆ ಭಾರತಮಂತ್ರಿ ಬರ್ಕನ್‌ಹೆಡ್ ದೊರೆಗಳು ಹಿಂದುಸ್ಥಾನಕ್ಕೆ ಬ್ರಿಟಿಶ ರಾಜ್ಯದಿಂದ ಒದಗಿದ ಅಪರಿಮಿತ ಲಾಭಗಳ ಕಥೆ ಹೇಳಿದರು. ಈ ಭಾಷಣವನ್ನು ಮಹಾತ್ಮರು ಪರ್ಯಾಲೋಚಿಸಿರುವರು. ಈ ಸಮಾಲೋಚನವು ಮಹತ್ವದ್ದಿದ್ದು, ಮಹಾತ್ಮರ ಉದ್ಗಾರಗಳನ್ನು ಇಂದಿಗೆ ವಾಚಕರಿಗೆ ನಿವೇದಿಸಲಿಚ್ಛಿಸುವೆವು.

ಭಾರತ ಮಂತ್ರಿಗಳು "ನಿಮ್ಮ ಸ್ವರಾಜ್ಯ ಘಟನೆಯನ್ನು ತಯಾರಿಸಿರಿ; ನಾವು ಅದರ ವಿಚಾರ ಮಾಡುತ್ತೇವೆ." ಎಂಬರ್ಥದ ದೊಡ್ಡಸ್ತನದ ನುಡಿಗಳನ್ನಾಡಿರುವರು. ದೊರೆಗಳ ಮಾತುಗಳ ಮೇಲಿಂದ, ಭಾರತೀಯ ದೇಶಸೇವಕರು ರಾಜ್ಯಪದ್ಧತಿಯ ಯೋಜನೆಯನ್ನು ತಯಾರಿಸದಿದ್ದದರಿಂದ [illegible] ಬ್ರಿಟಿಶರಿಂದ ಸ್ವರಾಜ್ಯದಾನವು ಒದಗಿಬರಲಿಲ್ಲೆಂದು ಭಾಸವಾಗುತ್ತದೆ. ಇದು ನಿಜವಿರುವದೇನು! ೩೫ ವರ್ಷಗಳಿಂದ ಭಾರತೀಯ ರಾಷ್ಟ್ರೀಯ ಸಭೆಯು ರಾಜ್ಯಘಟನೆಯಲ್ಲಿ ತಿದ್ದುಪಡಿ ಮಾಡಲು ಭಿಕ್ಷುಕ ವೇಷ ಹಿಡಿದು ಬೇಡಿಕೊಂಡರೆ, ಅದಕ್ಕೇನು ಉತ್ತರ ದೊರಕಿತು ? "ನಿಮ್ಮ ಯೋಜನೆಯನ್ನು ನಾವು ನಾಲ್ಕೂ ದೃಷ್ಟಿಯಿಂದ ವಿಚಾರಿಸಿದೆವು; ಲಕ್ಷಪೂರ್ವಕವಾಗಿ ವಿಚಾರಿಸಿದೆವು. ಈಗಿನ ಪರಿಸ್ಥಿತಿಯಲ್ಲಿ ಇಂಥ ರಾಜ್ಯಘಟನೆಯನ್ನೇರ್ಪಡಿಸುವದು ಗಂಡಾಂತರಪ್ರದವು." ಇತ್ಯಾದಿ ಕರಾ ಹೊಡೆದು ಬ್ರಿಟಿಶರು ನಮ್ಮ ಯೋಜನೆಗಳನ್ನು ತಿರಸ್ಕರಿಸಲಿಲ್ಲೇನು ? ಇಷ್ಟು ದೂರ ನಾವು ಯಾಕೆ ಹೋಗುವದು ! ಮೊಂಟೆಗ್ಯೂ ಸ್ವರಾಜ್ಯದ ಕುಂದು-ಕೊರತೆಗಳನ್ನು ಹೋಗಲಾಡಿಸಲಿಕ್ಕೆ ನೇಮಿಸಿದ ಮಡ್ಡಿಮನ್ ಕಮಿಟಿಯು ಡಾ ತೇಜಬಹಾದ್ದೂರ ಸಪ್ರು, ಬೆರಿಸ್ಟರ ಮಹಮ್ಮದ ಅಲ್ಲಿ ಜಿನ್ನಾರವರೇ ರಾಜ್ಯಘಟನೆಯ ಹೊಸ ಯೋಜನೆಯನ್ನು ತಯಾರಿಸಿದ್ದರು. ಭಾರತ ಮಂತ್ರಿಗಳು ಇದೇ ಕಮಿಟಿಯ ಬ್ರಿಟಿಶ ಪಕ್ಷಪಾತಿ ಸಭಾಸದರು ತಯಾರಿಸಿದ ಯೋಜನೆಯನ್ನು ಹಿಡುವಾಗ ಸಪ್ರು-ಜಿನ್ನಾರವರ ಯೋಜನೆಯನ್ನೂ ಹಿಡಿರಬೇಕು. ಹೀಗಿದ್ದು, ಸೊಂಟದ ಮೇಲೆ ಕೂಸನ್ನಿಟ್ಟುಕೊಂಡು, ಇಡೀ ಊರೆಲ್ಲ ತನ್ನ ಕೂಸಿಗಾಗಿ ಶೋಧಿಸುತ್ತಿರುವ ಮೈಮರೆತ ಹೆಂಗಸಿನ ವೇಷ ಹಿಡಿದು ನಮ್ಮ ಭಾರತ ಮಂತ್ರಿಗಳು ಮಾತಾಡಹತ್ತಿದರೆ, ಪ್ರಜೆಗಳು ಯೋಜನೆಯಿಲ್ಲದೆ ಭಾರತ ಮಂತ್ರಿಗಳು ಭರತ ಖಂಡಕ್ಕೆ ಉಪಕಾರ ಮಾಡಲು ಅಸಮರ್ಥರಿರುವರೆಂದು ಎಂದೆಂದಿಗೂ ತಿಳಿಯರು

ಮಹಾತ್ಮರು ಒಂದು ಮಾತನ್ನು ಮಾತ್ರ ಪ್ರಾಮುಖ್ಯವಾಗಿ ನಮೂದಿಸಿರುವರು. ನಮಗೆ ೪ ಆಣೆ ಹಕ್ಕು ಬೇಕಾದರೆ, ನಾವು ೧೬ ಆಣೆ ಹಕ್ಕು ಬೇಡಬೇಕು; ಈ ಹೇಳಿಕೆಯು ಬಹು ಅಂಶದಿಂದ ಸತ್ಯವಿರುತ್ತದೆಂದು ಮಹಾತ್ಮರು ಉದ್ಗರಿಸಿರುವರು. ಇದೊಂದು ಬ್ರಿಟಿಶರ ಮನಸ್ಥಿತಿಯ ದ್ಯೋತಕವೆಂದೂ ಹೇಳಬಹುದು. ಮತ್ತೊಂದು ಮಾತನ್ನೂ ಮಹಾತ್ಮರು ನಮೂದಿಸುತ್ತಾರೆ. ರಾಜ್ಯಘಟನೆಯ ಯುಕ್ತಾಯುಕ್ತತೆಯನ್ನು ಪರಾಂಬರಿಸಿ, ಬ್ರಿಟಿಶರು ನಮಗೇನಾದರೂ ಅರ್ಪಿಸುವರೆಂದು ತಿಳಕೊಳ್ಳುವದು ನಿರಾಧಾರವು. ರಾಜ್ಯಘಟನೆಯು ದಡ್ಡತನದ್ದಿರಲಿ, ಬೆಂಬಲಕ್ಕೆ ಹಿಂಸೆ ಯಾ ಅಹಿಂಸೆಯ ಬಲವಿದ್ದರೆ, ನಮ್ಮ ಯೋಜನೆಯನ್ನು ಕೃತಿಯಲ್ಲಿ ರೂಪಾಂತರಿಸಿಕೊಳ್ಳುವಷ್ಟು ಸಾಮರ್ಥ್ಯ ಪ್ರಾಪ್ತಿಯಾದರೆ, ಬ್ರಿಟಿಶರು ಆ ಘಟನೆಯನ್ನು ಶೀಘ್ರವೇ ವಿಚಾರಿಸಿ ಅಮಲಿನಲ್ಲಿ ಸಹ ತರುವರು. ಬ್ರಿಟಿಶರಿಗೆ ಬಾಹುಬಲವೇ ಯಾವಾಗಲೂ ಒತ್ತಾಯಪಡಿಸುತ್ತದೆಂದೂ ಮಹಾತ್ಮರು ಧ್ವನಿತಮಾಡಿ, ಭಾರತ ಮಂತ್ರಿಗಳ ವ್ಯಾಖ್ಯಾನವು ಅಂತಃಕರಣಪೂರ್ವಕವಾದದ್ದಲ್ಲವೆಂದು ಕರಾ ಹೊಡೆದಿರುವರು.

ಬ್ರಿಟಿಶರು ಹಿಂದುಸ್ಥಾನದಲ್ಲಿ ಬಂದು ಸಾಮಾಜಿಕ ಐಕ್ಯಪಾಲನ ಮಾಡಿದರೆಂದು ಹೇಳಿಕೊಳ್ಳುತ್ತಾರೆ. ಹಿಂದುಸ್ಥಾನದಲ್ಲಿ ೯ ಧರ್ಮಗಳು, ೧೩೦ ಭಾಷೆಗಳಿದ್ದು, ಅವುಗಳಲ್ಲಿ ರಾಷ್ಟ್ರೀಯತ್ವದ ಭಾವನೆಯುಂಟಾಗುವದು ಕಠಿಣವೆಂದು ಕರಾ ಹೊಡೆದು, ಹಿಂದೂ-ಮುಸಲ್ಮಾನರೊಳಗಿನ ಕಲಹದಲ್ಲಿ ಬ್ರಿಟಿಶರು ನಿರ್ಮಲ ಬುದ್ಧಿಯಿಂದಲೇ ಇವನ್ನೆಲ್ಲ ಪರಿಹರಿಸಿರುವರೆಂದು ನುಡಿದರು. ಮಹಾತ್ಮರು ದೊರೆಗಳಿಗೆ ಚೊಕ್ಕ ಉತ್ತರವನ್ನಿತ್ತಿರುವರು. ಭಾಷಾಭೇದ, ಧರ್ಮಭೇದಗಳಿಂದ ಹಿಂದುಸ್ಥಾನದ ರಾಷ್ಟ್ರರಕ್ಷಣೆಗೆ ಎಂದೂ ಭಂಗ ಬರಲಾರದೆಂದೂ, ಅಷ್ಟು ರಾಷ್ಟ್ರೈಕ್ಯವು ನಮ್ಮಲ್ಲಿ ಬೇರೂರಿರುವದೆಂದು ಉತ್ತರಿಸಿ, ಹಿಂದೂ-ಮುಸಲ್ಮಾನರೊಳಗಿನ ಯಾದವಿಗೆ ಮುಖ್ಯವಾಗಿ ಬ್ರಿಟಿಶ ಸರಕಾರವೇ ಕಾರಣವೆಂದು ಪ್ರಜೆಗಳ ನಂಬಿಗೆಯಾಗಿರುವದೆಂದೂ ನಮೂದಿಸಿರುವರು. ಇದೊಂದು ನಿಷ್ಪಕ್ಷಪಾತಿ ನಿರ್ಮಲ ಬುದ್ಧಿಯ, ನಿಷ್ಕಪಟ ಸ್ವಭಾವದ ಬ್ರಿಟಿಶರು ಲಕ್ಷದಲ್ಲಿಡತಕ್ಕ ಮಾತು.

ಸಮಾರೋಪ ಮಾಡುವಾಗ ಮಹಾತ್ಮರು ದೊರೆಗಳಿಗೆ ಅಂತಃಕರಣದಲ್ಲಿ ಬದಲಾವಣೆ ಮಾಡಲು ಪುನಃ ಹೇಳಿರುವರು. ಹಿಂದುಸ್ಥಾನದ ಪ್ರಜೆಗಳು ಬ್ರಿಟಿಶರ ಅಂಕಿತರು; ಬ್ರಿಟಿಶರು ಅವರ ಸಾರ್ವಭೌಮರು; ಈ ಭೇದವನ್ನು ಇಬ್ಬರೂ ಮರೆತ ಹೊರತು, ಇಬ್ಬರ ಕಲ್ಯಾಣವಾಗಲು ಸರಿಕರೆಂಬ ಭಾವನೆಯನ್ನು ತಳೆದು, ಬ್ರಿಟಿಶರೂ, ಭರತ ಪುತ್ರರೂ ನಡೆಯದಿದ್ದರೆ ಎಂದೂ ಕಲ್ಯಾಣವಾಗದು. ಅದಕ್ಕಾಗಿ ಪ್ರಜೆಗಳು ತಮ್ಮ ಸಾಮರ್ಥ್ಯಸಂವರ್ಧನ ಮಾಡಬೇಕು; ಎಂಬುದಾಗಿ ಮಹಾತ್ಮರು ಬೋಧಿಸಿರುವರು.

ಮಹಾತ್ಮರ ವಿಚಾರಗಳ ದಿಗ್ದರ್ಶನದಿಂದ ಒಂದು ಮಾತು ಸ್ಪಷ್ಟವಾಗಿ ಹೊಳೆಯುವದು. ಬ್ರಿಟಿಶರು ಹಿಂದುಸ್ಥಾನದಲ್ಲಿ ಸಾರ್ವಭೌಮರೆಂಬ ಭಾವನೆಯನ್ನು ಹಿಡಿದು ಸ್ವಾರ್ಥಸಾಧನೆಗಾಗಿ ಪರೋಪಕಾರದ ವೇದಾಂತ ಹೇಳಿ, ಆಳಿಕೆಯನ್ನು ನಡಿಸುತ್ತಿರುವರು. ದೇಶದೊಳಗಿನ ವಿವಿಧ ಸಮಾಜಗಳಲ್ಲಿ ಐಕ್ಯಪಾಲನಕ್ಕಿಂತ ಐಕ್ಯ ಭಂಗದಮೇಲೆಯೇ ಆಳರಸರ ಕಟಾಕ್ಷವು ವಿಶೇಷವಿದೆ. ಐಕ್ಯಭಂಗವು ಆಗಿಂದಾಗ ಒದಗಿಬರದಿದ್ದರೆ, ಬ್ರಿಟಿಶರ ಬಾಹುಬಲದಿಂದ ಭರತಖಂಡದಲ್ಲಿ ಶಾಂತತೆಯು ಪಾಲನೆಯಾಗುತ್ತದೆಂದು, ಜಂಬ ಬಡೆಯಲು, ಇಂಬು ದೊರಕುವದಿಲ್ಲ; ಸ್ವರಾಜ್ಯದಾನದಿಂದ ಅರಾಜಕತೆಯುಂಟಾಗಿ ರಾಷ್ಟ್ರವೆಲ್ಲ ಗಂಡಾಂತರಕ್ಕೀಡಾಗುವದೆಂದು ಪ್ರತಿಪಾದಿಸಲಿಕ್ಕೂ ತೊಂದರೆಯಾಗುತ್ತದೆ. ಸಮಾಜಗಳು ಶಾಂತತೆಯಿಂದ ನಡಕೊಳ್ಳುತ್ತಿದ್ದರೆ, ಬ್ರಿಟಿಶರ ಮಧ್ಯಸ್ಥಿಕೆಯು ಅವಶ್ಯವಿಲ್ಲೆಂಬ ಗ್ರಹಿಕೆಯಾಗಲು ಕಾರಣವಾಗುತ್ತದೆ. ಅದರಿಂದ ಬ್ರಿಟಿಶರು ರಾಷ್ಟ್ರಪಾಲನದ ಸೋಗಹಾಕಿ, ರಾಷ್ಟ್ರಭಂಗದ ಕಾರ್ಯವನ್ನು ಒಳಗಿಂದೊಳಗೆ ನಡಿಸಹತ್ತಿರುವರೆಂದು ಮಹಾತ್ಮರಂಥ ನಿರ್ಮಲ ಚಿತ್ತದ ಸತ್ಯಸಂಧ ಸಾಧು ಪುರುಷರು ಉದ್ಗರಿಸಿದ ಬಳಿಕ, ಬ್ರಿಟಿ

ಕರ ಪಾರತಂತ್ರ್ಯದೊಳಗಿಂದ ವಿಮೋಚನ ಹೊಂದುವದು, ಹೊಂದಲು ತಗಲಿರುಳು ಯತ್ನಿಸುವದು ಪ್ರತಿಯೊಬ್ಬ ದೇಶಸೇವಕನ, ದೇಶಹಿತಚಿಂತಕನ ಕರ್ತವ್ಯವಾಗಿರುವದಲ್ಲವೇ!

ಸ್ಫುಟ ಸೂಚನೆಗಳು.

೧. ನೇಕ ನಾಮದಾರ ಶಾಸ್ತ್ರಿಗಳು "ಮುಂಬಯಿ ಕ್ರಾನಿಕಲ್" ಪತ್ರಿಕಾಕರ್ತರಿಗೆ ಸ್ವದೇಶಿ ಪಾಲನದ ವಿಷಯ ಕೊಟ್ಟ ಉತ್ತರವನ್ನು ಕಳೆದ ಸಂಚಿಕೆಯಲ್ಲಿ ನಾವು ವ್ಯಸನಪೂರ್ವಕ ನಮೂದಿಸಿರುವೆವು. ಇದೇ ಸಮಯ ಬ್ರಿಟಿಶ ಮುಖ್ಯ ಪ್ರಧಾನ ಮಿ। ಬೋಲ್ಡವಿನ್‌ರವರು ಸೂಚಿಸಿದ ಉಪಾಯವನ್ನೊಂದು ನಿವೇದಿಸಿ, ನಾಮದಾರ ಶಾಸ್ತ್ರಿಗಳ ದೇಶಾಭಿಮಾನಶೂನ್ಯತೆಯನ್ನು ಪ್ರತಿಪಾದಿಸಬಯಸುವೆವು. ಇಂಗ್ಲಂಡದಲ್ಲೀಗ ಗಿರಣಿಗಳೊಳಗಿನ ಮಾಲು ಮುಂಚಿನಂತೆ ಸಾಗಿಹೋಗದೆ ಶಿಲ್ಕುಬಿದ್ದು, ಕೂಲಿಕಾರರು ನಿರುದ್ಯೋಗಿಗಳಾಗಿರುವರು. ಅವರಿಗೆ ಉದ್ಯೋಗವನ್ನಿತ್ತು ಉಪೋಷಣವ್ರತವನ್ನು ತಪ್ಪಿಸಲು ವಿಲಾಯತಿಯಲ್ಲಿ ಒಂದು ಸಂಘವು ಸ್ಥಾಪಿಸಲ್ಪಟ್ಟಿದೆ. ಸಂಘದ ಕಾರ್ಯವು ಸ್ವದೇಶಿ ಯಾನೆ ಬ್ರಿಟಿಶ ಮಾಲಿನ ಪ್ರಸಾರವು. ಪ್ರತಿಯೊಬ್ಬರು ಸಾಮಗ್ರಿಗಳನ್ನು ಕೊಂಡುಕೊಳ್ಳುವಾಗ, ಸಾಮಗ್ರಿಯು ನಿಜವಾಗಿ ಬ್ರಿಟಿಶ ದೇಶದ್ದೇ ಎಂದು ನಿಶ್ಚಯ ಮಾಡಿಕೊಂಡು ಕೊಳ್ಳಬೇಕೆಂದು ಸಂಸ್ಥೆಯವರು ಪ್ರಚಾರ ಮಾಡುತ್ತಿರುವರು. ಈ ಸಂಸ್ಥೆಯಲ್ಲಿ ವಿಲಾಯತಿಯೊಳಗಿನ ದೊಡ್ಡ ದೊಡ್ಡ ಮುತ್ಸದ್ದಿಗಳಿರುವರು; ನೌಕಾಧಿಪತಿಗಳಿರುವರು; ಸೇನಾಪತಿಗಳಿರುವರು; ಮುಖ್ಯ ಪ್ರಧಾನರಂತು ಸಂಸ್ಥೆಯ ಸೂತ್ರಚಾಲಕರು. ಕಳೆದ ಜೂನ ತಾ. ೨೯ನೇಗೆ ಮುಖ್ಯ ಪ್ರಧಾನರಾದ ಮಿ। ಬೋಲ್ಡವಿನ್‌ರವರು 'ಹೌಸ ಅಫ್ ಕಾಮನ್ಸ' ಅಂದರೆ, ಪಾರ್ಲಿಮೆಂಟ ಸಭೆಯಲ್ಲಿ ಆಗ್ರಹಪೂರ್ವಕ ನುಡಿದದ್ದೇನಂದರೆ:— "ಈ ಸಭೆಯೊಳಗಿನ ಸಭಾಸದರೂ, ದೇಶದೊಳಗಿನ ಪ್ರಜೆಗಳೂ ಪ್ರತ್ಯಕ್ಷವಾಗಿ ಸಹಾಯ ಮಾಡುವ ಉಪಾಯವು ಒಂದೇ. ಅವರು ಬೇಕಾದಲ್ಲಿಂದಲಿ, ಕೈಲಾದಷ್ಟು ಬ್ರಿಟಿಶ ಸಾಮಗ್ರಿಗಳನ್ನೇ ಕೊಂಡುಕೊಳ್ಳಲು ಅವರು ನಿರ್ಧಾರ ಮಾಡಬೇಕು." ಮುಖ್ಯ ಪ್ರಧಾನರು ಬ್ರಿಟಿಶೇತರ ಸಾಮಗ್ರಿಗಳ ಬಹಿಷ್ಕಾರಕ್ಕಾಗಿ, ಬ್ರಿಟಿಶ ಸಾಮಗ್ರಿಗಳ ಪುರಸ್ಕಾರಕ್ಕಾಗಿ, ಬ್ರಿಟಿಶ ಕೂಲಿಕಾರರ ಅಭಿವೃದ್ಧಿಗಾಗಿ ಹ್ಯಾಗೆ ಹೆಣಗಾಡುತ್ತಾರೆಂದು ನೋಡಿರಿ. ಮುಖ್ಯ ಪ್ರಧಾನರೇ ಬ್ರಿಟಿಶ ಸಾಮಗ್ರಿಗಳ ಪುರಸ್ಕಾರ ಮಾಡುತ್ತಿರುವಾಗ, ಇಡೀ ಸರಕಾರವೇ ಅದಕ್ಕಾಗಿ ದುಡಿಯುತ್ತದೆಂದು ನಾವು ಹೇಳಬೇಕೇನು? ನಾಮದಾರ ಶಾಸ್ತ್ರಿಗಳಂಥ ಹಿಂದಹಿತದೇಶಸೇವಕರಿಗೆ ಮಾತ್ರ ಸ್ವದೇಶಿ ಅರಿವೆ ಅಂಚಡಿಗಳನ್ನು ತೊಟ್ಟುಕೊಳ್ಳುವದು ಸೇರುವದಿಲ್ಲ. ನಮ್ಮ ಶಾಸ್ತ್ರಿಗಳು ಮುಖ್ಯ ಪ್ರಧಾನರಿಗಿಂತ ಔದಾರ್ಯವಂತ ಮಹಾಪುರುಷರಲ್ಲವೇ?

---

೨. ಮುಖ್ಯ ಪ್ರಧಾನ ಮಿ। ಬೋಲ್ಡವಿನರ ಭಾಷಣದಿಂದ ಅನೇಕರ ಭ್ರಾಂತಿನಿರಸನವಾಗದಿರದು. ಹಿಂದುಸ್ಥಾನದಲ್ಲಿ 'ಸ್ವದೇಶಿ' ಎಂದ ಕೂಡಲೇ, ಹೌಹಾರಿ, ಆಳರಸರು ಸ್ವದೇಶಿ ಪುರಸ್ಕರ್ತರಿಗೆ ನಿಷ್ಕಾರಣವಾಗಿ ದಂಡಿಸುತ್ತಾರೆ. ಸ್ವದೇಶಿಯೊಳಗೆ ದ್ವೇಷವಿದೆ; ವಿಶೇಷವಾಗಿ ಬ್ರಿಟಿಶ ದ್ವೇಷವಿದೆ; ಹಿಂದಹಿತಬುದ್ಧಿಯು ಮುರುಳಿದೆ; ಇತ್ಯಾದಿ ಅಯಥಾರ್ಥ ಆರೋಪಗಳನ್ನು ಹೊರಿಸಿ, ದೇಶಾಭಿಮಾನಿ, ದೇಶೋದ್ಧಾರಕ ಪ್ರಜೆಗಳನ್ನು ಕಾಡುತ್ತಿರುವರು. ಇಂಥ ಆಳರಸರು ಮುಖ್ಯ ಪ್ರಧಾನರ ಮೇಲೆ ದ್ವೇಷಾರೋಪವನ್ನು ಮಾಡುತ್ತಾರೆಂದು ನಮಗನಿಸುವದಿಲ್ಲ. ಮುಖ್ಯ ಪ್ರಧಾನರ ಅನುಜ್ಞೆಯಂತೆಯೇ ಅವರು ನಡೆಯಬಯಸುತ್ತಾರೆಂದು ಮುಕ್ತ ಮುಂದಾಗಿ ಹೇಳಿದರೆ, ಅದೇನು ವಸ್ತುಸ್ಥಿತಿಯ ವಿಪರ್ಯಾಸವಾಗದು. ಜನ್ಮಭೂಮಿಯ ಕಲ್ಯಾಣದ ಇಚ್ಛೆಯು ನಮ್ಮ ಬ್ರಿಟಿಶ ಆಳರಸರಿಗೆ ನಿರಂತರವಾಗಿದ್ದು, ಈ ಉತ್ಕಟ ಇಚ್ಛೆಯಿಂದಲೇ ಭರತ ಖಂಡದ ಮೇಲಿನ ಪಾರತಂತ್ರ್ಯ ಶೃಂಖಲೆಯನ್ನು ಅವರು ಶಿಥಿಲ ಮಾಡಲೊಲ್ಲರು. ಆದರೆ, ಮುಖ್ಯ ಪ್ರಧಾನರ ಉಪದೇಶವು ವಿಲಾಯತಿಯಲ್ಲಿ ದೇಶಹಿತಕರವೆಂದು ಸಮಸ್ತರೂ ಐಕ್ಯಮತದಿಂದ ಪುರಸ್ಕರಿಸುತ್ತಿರುವಾಗ, ಅದೇ ಮಾದರಿಯ ಉಪದೇಶವು ಹಿಂದುಸ್ಥಾನದಲ್ಲಿ ಮಾತ್ರ ಹೇಗೆ ಅನರ್ಥವನ್ನುಂಟುಮಾಡುವದು? ಅಥವಾ ಬ್ರಿಟಿಶ ರಾಷ್ಟ್ರವು ಸ್ವತಂತ್ರವು; ಹಿಂದುಸ್ಥಾನವು ಪರತಂತ್ರವು; ಪರತಂತ್ರ ರಾಷ್ಟ್ರವು ಸ್ವತಂತ್ರ ರಾಷ್ಟ್ರದಂತೆ ನಡೆಯಹತ್ತಿದರೆ, ನಡೆಯಬಯಸಿದರೆ, ಪರತಂತ್ರ ರಾಷ್ಟ್ರದ ಪಾರತಂತ್ರ್ಯವು ಪರಿಹಾರವಾಗಿ, ಸ್ವತಂತ್ರ ರಾಷ್ಟ್ರದಂತೆ ಸ್ವಾತಂತ್ರ್ಯ ಪ್ರಾಪ್ತಿಯ ಸಾಮರ್ಥ್ಯವು ಒದಗಿಬರುವದೆಂದು ಆಳರಸರು ಭೀತಿಗೊಳ್ಳುವರೇನು? ಯಾವುದು ವಸ್ತುಸ್ಥಿತಿಯ ನಿದರ್ಶಕವೆಂಬ ಸೂಜ್ಞ ವಾಚಕರು ತಟ್ಟನೆ ಕಂಡು ಹಿಡಿಯದಿರರು.

---

೩. ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ಸಭಾಸದರಿಗೆ ಸಿಕ್ಕ ಮಹತ್ವದ ಉತ್ತರಗಳನ್ನು ಬೇರೊಂದೆಡೆಯಲ್ಲಿ ಕೊಟ್ಟಿರುವೆವು. ಅವುಗಳೊಳಗಿನ ಒಂದೆರಡು ಸಂಗತಿಗಳನ್ನು ಇಂದಿಗೆ ವಿಮರ್ಶಿಸಬೇಕಾಗಿದೆ. ಮದ್ಯಪಾನದ ವಿಷಯ ಸರಕಾರವು ಕೊಟ್ಟ ಉತ್ತರವನ್ನು ಓದಿ ನಮಗೆ ಬಹಳೇ ವ್ಯಸನವಾಗುತ್ತದೆ. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಮದ್ಯಪಾನ ನಿಯಂತ್ರಣ ಅಧಿಕಾರವನ್ನು ಕೊಡುವದು ಅವ್ಯವಹಾರಿಕವೆಂದು ಸರಕಾರದಿಂದ ಉತ್ತರ ದೊರೆತಿದೆ. ಮದ್ಯಪಾನದ ಅಂಗಡಿಗಳನ್ನಿಡುವ ಹಾಗು ಸ್ಥಲ ನಿರ್ಣಯಮಾಡುವ ಅಧಿಕಾರವನ್ನು ಕೊಡುವದು ಅವ್ಯವಹಾರಿಕವೆಂದು ಮುಂಬಯಿ ಸರಕಾರವು ಹೇಳಿದ್ದನ್ನು ಕೇಳಿ, ಸ್ಥಾನಿಕ ಸ್ವರಾಜ್ಯ ಕಾಯಿದೆಯು ಅಮಲಿನಲ್ಲಿ ಬಂದು ೪೫ ವರ್ಷಗಳಾದರೂ, ಜನರಿಗೆ ವಿವೇಚಕ ಶಕ್ತಿಯುಂಟಾಗಲಿಲ್ಲೆಂದು ಹೇಳಬೇಕೋ? ಅಥವಾ ಸರೆ ಅಂಗಡಿಯ ನಿಯಂತ್ರಣವನ್ನು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಒಪ್ಪಿಸಿಕೊಟ್ಟಲ್ಲಿ ಮದ್ಯಪಾನದ ಪ್ರಚಾರವು ಕುಗ್ಗಿ ದುಡ್ಡು ಹೊಗೆಯಲು ಅಡ್ಡಿಯಾಗುವದೆಂದು ಭೀತಿಯಾಗಿರುವದೇನು? 'ಅವ್ಯವಹಾರಿಕ' ಎಂಬ ಶಬ್ದದ ಅರ್ಥವು ಇನ್ನೂ ತಿಳಿಯುವದಿಲ್ಲ. ಸಭಾಸದರು ಅವ್ಯವಹಾರಿಕವೇಕೆ? ಎಂಬ ಪ್ರಶ್ನೆಮಾಡಿ, ಸರಕಾರದ ಮನೋಗತವನ್ನು ಸ್ಪಷ್ಟ ಶಬ್ದಗಳಲ್ಲಿ ಹೊರಗೆಡಹಬೇಕಾಗಿತ್ತು. ಈಗಲೂ ಈ ವಿಷಯ ಚರ್ಚೆ ಮಾಡಬಹುದಲ್ಲವೇ?

---

೪. ಕೈರಾಟಿಯ ವಿಷಯಕ್ಕೆ ಪ್ರಾಂತಿಕ ಸರಕಾರವು ಕೈಕೊಂಡ ಧೋರಣವು ಅಸಮಾಧಾನಕರವಿದೆ. ನಮ್ಮ ಮುಂಬಯಿ ಸರಕಾರವು ಕೈರಾಟಿಗಾಗಿ ಒಂದು ಪೈಯನ್ನು ಕೂಡ ಖರ್ಚ ಮಾಡಲು ತಯಾರಿಲ್ಲ. ಖಾಸಗಿ ಅಥವಾ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಕೈರಾಟಿಯ ಕಾರ್ಯಕ್ರಮವನ್ನು ಕೈಕೊಂಡಲ್ಲಿ ಸರಕಾರದ ಅಡ್ಡಿ ಏನಿಲ್ಲ. ಕೈರಾಟಿಯ ಪ್ರವೇಶದಿಂದ ಶಾಲೆಗಳ ಅಭ್ಯಾಸ ಕ್ರಮವನ್ನು ಪಾರಗಾಣಿಸುವದಕ್ಕೆ ತೊಂದರೆಯಾಗದಿದ್ದರೆ ತೀರಿತು. "ಸರ್ವನಾಶೇ ಸಮುತ್ಪನ್ನೇ ಅರ್ಧಂ ತ್ಯಜತಿ ಪಂಡಿತಃ" ಎಂಬಂತೆ, ಸರಕಾರಿ ಅಧಿಕಾರಕ್ಕೊಳಪಟ್ಟ ಬಿನ್‌ಸರಕಾರಿ ಶಾಲೆಗಳಲ್ಲಿ ಕೈರಾಟಿಯ ಪ್ರಸಾರಕ್ಕೆ ತಾವು ಪ್ರತಿಕೂಲರಿಲ್ಲೆಂಬ ನಿರ್ಣಯ ಕೊಟ್ಟದ್ದು ಅಭಿನಂದನೀಯವು. ಈ ಬಗ್ಗೆ ಮುಂಬಯಿ ಸರಕಾರವನ್ನು ನಾವು ಅಭಿನಂದಿಸುವೆವು. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳೂ, ಖಾಸಗಿ ಶಾಲೆಗಳ ಪ್ರವರ್ತಕರೂ ಕೈರಾಟಿಯ ದೇಶೋದ್ಧಾರಕ ಸಾಮರ್ಥ್ಯವನ್ನು ನೆನಿಸಿ, ಕೈರಾಟಿಗೆ ತಮ್ಮಲ್ಲಿ ಬರಮಾಡಿಕೊಳ್ಳಬೇಕೆಂದು ನಾವು ಆಗ್ರಹಪೂರ್ವಕ ಸೂಚಿಸುವೆವು. ಅಲಹಾಬಾದ ಮ್ಯುನಿಸಿಪಾಲಿಟಿಯವರ ಅನುಭವದಂತೆ, ವಿದ್ಯಾರ್ಥಿಗಳ ಸಹನಶಕ್ತಿಯೂ, ಗ್ರಹಣಶಕ್ತಿಯೂ, ಮಾನಸಿಕ ಸಾಮರ್ಥ್ಯವೂ ಕೈರಾಟಿಯ ಪ್ರಯೋಗದಿಂದ ಸ್ಥಿರವಾಗಿ ವಿಕಾಸ ಹೊಂದಿ, ವಿದ್ಯಾರ್ಥಿಗಳು ಕಾರ್ಯಕ್ಷಮರಾಗುತ್ತಾರೆಂದು ಪ್ರಕಟಿಸಿರುವಾಗ, ಸ್ವರಾಜ್ಯ ಪಾಲಿಸುವ ಸಂಸ್ಥೆಗಳು ಉಪಯುಕ್ತ ಉಪಕ್ರಮವನ್ನು ಕೈಕೊಳ್ಳುವದು ಅವುಗಳ ಕರ್ತವ್ಯವು. ಸರಕಾರವು ಅನುಕೂಲವಿಲ್ಲದಿದ್ದಾಗ್ಯೂ, ಪ್ರತಿಕೂಲವಿಲ್ಲೆಂದು ಹೇಳಿ, ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಈ ಕಾರ್ಯ ಕೈಕೊಳ್ಳಲು ಅನುಕೂಲ ಮಾಡಿಕೊಟ್ಟಿರುವದೆಂದು ಹೇಳಬಹುದು.

---

೫. ನಮ್ಮ ಮೈಸೂರ ದರಬಾರವನ್ನು ನಾವು ಮನಃಪೂರ್ವಕ ಅಭಿನಂದಿಸುವೆವು. ಮಹಾರಾಜರು ಪ್ರಜೆಗಳ ಬಿನ್ನಹವನ್ನು ಮನ್ನಿಸಿ, ರಾಜ್ಯದೊಳಗಿನ ನ್ಯಾಯಪದ್ಧತಿಯ ದೋಷವನ್ನು ಪರಿಹರಿಸಿರುವರು. ಮೈಸೂರಿನಲ್ಲಿ ಈವರೆಗೆ ಬ್ರಿಟಿಶ ಪದ್ಧತಿಯಂತೆ ಅಮಲಬಜಾವಣಿ ಅಧಿಕಾರಿಗಳಾದ ಮೆಜಿಸ್ಟ್ರೇಟರಿಗೆ ನ್ಯಾಯದಾನದ ಅಧಿಕಾರವಿತ್ತು. ಅದನ್ನೀಗ ರದ್ದುಪಡಿಸಿ, ದಿವಾಣಿ ಅಧಿಕಾರದ ನ್ಯಾಯಾಧಿಕಾರಿಗಳಿಗೆ ಕೊಡಲ್ಪಟ್ಟಿರುವದೆಂದು ತಿಳಿಸಲು ನಮಗೆ ಸಂತೋಷವಾಗುತ್ತದೆ. ಅನಿಷ್ಟ ಪದ್ಧತಿಯಿಂದ ಒದಗುವ ಅನರ್ಥವನ್ನು ಅನುಲಕ್ಷಿಸಿ ಅಮಲಬಜಾವಣಿ ಅಧಿಕಾರಿಗಳ ನ್ಯಾಯದಾನದ ಅಧಿಕಾರವನ್ನು ಸೆಳಕೊಳ್ಳಬೇಕೆಂದು ಈಗ ಬಹು ಕಾಲದಿಂದ ರಾಷ್ಟ್ರೀಯ ಸಭೆಯವರೂ, ಇತರ ಪ್ರಮುಖರೂ ಆಗ್ರಹಪೂರ್ವಕ ಬೇಡಿಕೊಳ್ಳುತ್ತಿರುವರು. ಹಿಂದುಸ್ಥಾನದ ಕಲ್ಯಾಣಕ್ಕಾಗಿ ಭರತ ಭೂಮಿಗೆ ಬಿಜಯಂಗೈದ ಬ್ರಿಟಿಶ ಆಳರಸರು, ಇದಕ್ಕೆ ಕಿವಿಗೊಡದೆ, ತಮ್ಮ ಕಾರಭಾರವನ್ನು ಸುಮ್ಮಗೆ ಸಾಗಿಸುತ್ತಿರುವರು. ಇಂಥ ಪ್ರಸಕ್ತಿಯಲ್ಲಿ ಮೈಸೂರಿನ ದರಬಾರದವರು ಮುಂದಾಗಿ ಸುಧಾರಣೆಯನ್ನು ಮಾಡಿ, ರಾಜ್ಯಾಡಳಿತೆಯ ತಜ್ಞರಾದ ಬ್ರಿಟಿಶರಿಗೆ ಕಿತ್ತಿ ಹಾಕಿಕೊಟ್ಟಿರುವರು. ಈಗಲಾದರೂ ಬ್ರಿಟಿಶರು ಮೈಸೂರ ದರಬಾರಿನಿಂದ ಬುದ್ಧಿ ಕಲಿಯುವರೇನು?

ಹಿಂದೀ ಸ್ತ್ರೀ ವಿಶ್ವವಿದ್ಯಾಲಯ.

ಪ್ರೊ| ಕರ್ವೇಯವರ ಉಪನ್ಯಾಸ

ಹಿಂಗಣೆಬುದ್ರುಕ್ (ಪುಣೆ) ದಲ್ಲಿ ಸ್ಥಾಪನೆಯಾದ ಹಿಂದೀ ಸ್ತ್ರೀ ವಿಶ್ವವಿದ್ಯಾಲಯದ ಪ್ರಮುಖ ಚಾಲಕರಾದ ಪ್ರೊ| ಧೋಂಡೋಕೇಶವ ಕರ್ವೇಯವರು ಇಲ್ಲಿ ಕಳೆದ ಶುಕ್ರವಾರಕ್ಕೆ ಹೊನ್ನಾವರದಿಂದ ಬಂದರು. ಈ ಮುಂಚೆ ಗೊತ್ತಾದಂತೆ, ಪ್ರೊ| ಕರ್ವೇಯವರು ಮಂಗಳವಾರಕ್ಕೆ ಬರುವವರಿದ್ದರು, ಆದರೆ, ಅಪರಿಹಾರ್ಯ ಅಡಚಣೆಯ ಮೂಲಕ ಅವರು ಹೊನ್ನಾವರದಲ್ಲಿ ಉಳಿಯಬೇಕಾದ್ದರಿಂದ ಇಲ್ಲಿ ಶುಕ್ರವಾರಕ್ಕೆ ಮರಳಿಬಂದರು. ಶುಕ್ರವಾರ ಸಾಯಂಕಾಲಕ್ಕೆ ಕನ್ನಡ ಶಾಲೆಯ ಮೇಲುಪ್ಪರಿಗೆಯ ಮೇಲೆ ನಾಗರಿಕರ ಸಭೆಯಾಗಿ ಪ್ರೊಫೆಸರರ ಭಾಷಣವಾಯಿತು. ಪ್ರೊಫೆಸರರವರು ನುಡಿದದ್ದೇನಂದರೆ:— ಹಿಂದೀ ಸ್ತ್ರೀ ವಿಶ್ವವಿದ್ಯಾಲಯವನ್ನು ಕುರಿತು ನಾಲ್ಕು ಮಾತಾಡಬಯಸುತ್ತೇನೆ. ಈ ವಿಶ್ವವಿದ್ಯಾಲಯವು ಈಗ ಪುಣೆಯಿಂದ ಒಂದು ಮೈಲು ದೂರ ಹಿಂಗಣೆಬುದ್ರುಕದಲ್ಲಿದೆ. ಈ ವಿಶ್ವವಿದ್ಯಾಲಯದ ಕಲ್ಪನೆಯು ನನಗೆ ಅನಪೇಕ್ಷಿತವಾಗಿ ೧೯೧೫ ನೇ ಇಸ್ವಿಯಲ್ಲಿ ತೋಚಿತು. ಮೊದಲು ನಾನು ಅನಾಥ ಬಾಲಿಕಾಶ್ರಮವನ್ನು ಹೊರಡಿಸಿ, ನನ್ನ ಕಲ್ಪನೆಯಂತೆ ಸ್ತ್ರೀಯರ ಉನ್ನತಿಯನ್ನು ಸಾಧಿಸುತ್ತಿದ್ದೆನು. ಅನಾಥ ಬಾಲಿಕಾಶ್ರಮದಲ್ಲಿ ಅನಾಥರಾದ ವಿಧವೆಯರಿಗೆ ಮಾತ್ರ ಪ್ರವೇಶವಿತ್ತು. ಕ್ರಮೇಣ, ಈ ಆಶ್ರಮದಲ್ಲಿ ಸೌಭಾಗ್ಯವತಿಯವರೂ ಬರಹತ್ತಿದರು. ದಿನ ಹೋದಹಾಗೆ ಅನಾಥ ಬಾಲಿಕಾಶ್ರಮದೊಳಗಿನ ಶಿಕ್ಷಣಕ್ರಮದಂತೆ ಸೌಭಾಗ್ಯವತಿಯವರಿಗಾಗಿ ಮಹಿಲಾಶ್ರಮವನ್ನು ತೆರೆದೆನು. ಎರಡೂ ಸಂಸ್ಥೆಗಳು ಸುಸೂತ್ರವಾಗಿ ನಡೆದವು. ೧೯೧೫ನೇ ಇಸ್ವಿಯ ಸಪ್ಟಂಬರ ತಿಂಗಳಿನಲ್ಲಿ ಜಪಾನದೊಳಗಿನ ಟೋಕಿಯೋದಲ್ಲಿದ್ದ ಸ್ತ್ರೀ ವಿಶ್ವವಿದ್ಯಾಲಯದ ಹಕೀಕತಿದ್ದ ಒಂದು ಪುಸ್ತಕವು ನನ್ನ ಕೈಸೇರಿತು. ಯಾರು ಇದನ್ನು ಕಳಿಸಿದ್ದರೆಂಬುದು ನನಗೆ ಗೊತ್ತಾಗಲಿಲ್ಲ. ಆ ಪುಸ್ತಕವನ್ನೋದಿ ಹಿಂದುಸ್ಥಾನದಲ್ಲಿಯೂ ಇಂಥ ಸ್ತ್ರೀ ವಿಶ್ವವಿದ್ಯಾಲಯವೊಂದು ಸ್ಥಾಪಿಸಬೇಕಾಗಿ ನನಗೆ ತೋಚಿತು. ಅದೇ ವರುಷ ಡಿಸೆಂಬರದಲ್ಲಿ ಸಾಮಾಜಿಕ ಪರಿಷತ್ತಿನ ಅಧಿವೇಶನವು ಮುಂಬಯಿಯಲ್ಲಿ ಸೇರತಕ್ಕದ್ದಿತ್ತು. ಕಾರ್ಯದರ್ಶಿಗಳಾದ ಸರ್ ನಾರಾಯಣ ಚಂದಾವರಕರರವರು ಪರಿಷತ್ತಿನ ಅಧ್ಯಕ್ಷರಾಗಲು ನನಗೆ ಬೇಡಿಕೊಂಡರು. ನಾನು ಅಧ್ಯಕ್ಷನಾದೆ. ಆ ಕಾಲಕ್ಕೆ ನಾನು ಮಾಡಿದ ಭಾಷಣದಲ್ಲಿ ಹಿಂದೀ ಸ್ತ್ರೀ ವಿಶ್ವವಿದ್ಯಾಲಯದ ವಿಚಾರಗಳು ಪ್ರಾಮುಖ್ಯವಾಗಿ ನಮೂದಿಸಲ್ಪಟ್ಟವೆ. ಮುಕ್ಕಾಲು ಪಾಲು ಭಾಷಣವು ಸ್ತ್ರೀ ವಿಶ್ವವಿದ್ಯಾಲಯ ಕಲ್ಪನೆಯದೇ. ಬಳಿಕ, ಸ್ತ್ರೀ ವಿಶ್ವವಿದ್ಯಾಲಯ ಸ್ಥಾಪನೆಗಾಗಿ ಪ್ರಮುಖರ ಮತ ಕೇಳಹತ್ತಿದೆನು. ಮಹಾತ್ಮರಿಗೆ ಕಂಡುಕೊಂಡು ನನ್ನ ಅಭಿಪ್ರಾಯವನ್ನು ತಿಳುಹಿದೆನು. ಮಹಾತ್ಮರು ಇಂಗ್ಲಿಷ ಭಾಷೆಯನ್ನು ಕಲಿಸುವದು ಶ್ರೇಯಸ್ಕರವಲ್ಲವೆಂದು ಅಭಿಪ್ರಾಯಪಟ್ಟರು; ವಿಶ್ವವಿದ್ಯಾಲಯದ ಕಲ್ಪನೆಯು ದೇಶಹಿತಕಾರ್ಯವಿರುವದರಿಂದ ಸಭಾಸದರಾಗಲು ಒಪ್ಪಿದರು. ಬಳಿಕ, ಮಹಾತ್ಮರು ಅಹಮದಾಬಾದದಲ್ಲಿ ಸಭೆಸೇರಿಸಿ, ಸ್ತ್ರೀ ವಿಶ್ವವಿದ್ಯಾಲಯದ ಮಹತ್ವವನ್ನು ತಿಳಿಸಿಹೇಳಿ, ಕೆಲವೊಂದು ದ್ರವ್ಯಸಂಚಯ ಮಾಡಿಕೊಟ್ಟರು. ೧೯೧೬ ನೇ ಇಸ್ವಿಯಲ್ಲಿ ಸ್ತ್ರೀ ವಿಶ್ವವಿದ್ಯಾಲಯವು ಪ್ರಮುಖರ ಸಹಾಯದಿಂದ ಹಿಂಗಣೆಬುದ್ರುಕದಲ್ಲಿ ಸ್ಥಾಪನೆಯಾಯಿತು. ಈಗಿನ ದೊಡ್ಡ ದೊಡ್ಡ ಇಮಾರತುಗಳು ಮೊದಲು ಇದ್ದಿಲ್ಲ. ಈಗಿನ ವ್ಯಾಪವು ಇಷ್ಟು ಬೇಗ ಬರಲಿಕ್ಕೆ ಒಂದು ಆಕಲ್ಪಿತ ಯೋಗಾಯೋಗವು ಒದಗಿ ಬಂತು. ಸ್ತ್ರೀ ವಿಶ್ವವಿದ್ಯಾಲಯದ ಸ್ಥಾಪನೆಯಾದ ಮೂರು ತಿಂಗಳಲ್ಲಿಯೇ ಮುಂಬಯಿಯ ಕೋಟ್ಯಾಧೀಶರಾದ ಸರ್ ವಿಠ್ಠಲದಾಸ ಠಾಕರ್ಸಿಯವರು ಭೂಪ್ರದಕ್ಷಿಣೆ ಮಾಡಬಯಸಿದರು. ಅವರೊಡನೆ ಸರ್ ವಿಶ್ವೇಶ್ವರಯ್ಯಾ, ಶ್ರೀ| ಬಟಾವರರವರೂ ಹೋಗುವವರಿದ್ದರು. ಸರ್ ವಿಠ್ಠಲದಾಸರ ಪತ್ನಿಯವರಾದ ಲೇಡಿ ಠಾಕರ್ಸಿಯವರೂ ಪತಿಗಳೊಡನೆ ಹೊರಟಿದ್ದರು. ಲೇಡಿ ಠಾಕರ್ಸಿಯವರಿಗೆ ಇಂಗ್ಲಿಷು ಬರುತ್ತಿದ್ದಿಲ್ಲ. ಆದರಿಂದ ಇಂಗ್ಲಿಷು ಬಲ್ಲಾಕೆಯನ್ನು ತಮ್ಮೊಡನೆ ಕಳುಹಬೇಕೆಂದು ಸರ್ ವಿಠ್ಠಲದಾಸರವರು ನನಗೆ ಬೇಡಿಕೊಂಡರು; ಜಾಣಳಾದ ಶಿಕ್ಷಕಿಯಿದ್ದರೆ ಉತ್ತಮವೆಂದೂ ಅವರ ಅಭಿಪ್ರಾಯವಿತ್ತು. ನಾನು ಈ ವಿಷಯವನ್ನು ನಮ್ಮ ವಿಶ್ವವಿದ್ಯಾಲಯದ ಶಿಕ್ಷಕಿಯರಿಗೆ ತಿಳಿಸಿದೆನು. ಕರ್ನಾಟಕಸ್ಥಳಾದ ಶ್ರೀಮತಿ ಸೀತಾಬಾಯಿ ಅಣ್ಣಿಗೇರಿಯವರು ಲೇಡಿ ಠಾಕರ್ಸಿಯವರೊಡನೆ ಭೂಪ್ರದಕ್ಷಿಣೆ ಮಾಡಲೊಪ್ಪಿ ಅವರೊಡನೆ ಚೀನ, ಜಪಾನ ಮುಂತಾದ ದೇಶಗಳಿಗೆ ಹೋದರು. ಈ ಮಂಡಳಿಯು ಟೋಕಿಯೋದಲ್ಲಿ ವಿಶ್ವವಿದ್ಯಾಲಯವನ್ನು ನೋಡಿತು. ಈ ವಿದ್ಯಾಲಯದಲ್ಲಿ ೧೨೦೦ ಸ್ತ್ರೀಯರಿರುವರು, ಅವರಲ್ಲಿ ೭೦೦ ಮಂದಿಗಳು ವಸತಿಗೃಹದಲ್ಲಿ ವಾಸಿಸುತ್ತಿರುವರು. ಇಲ್ಲಿ ಸ್ತ್ರೀಯರಿಗೆ ಗೃಹೋಪಯುಕ್ತ ಕೆಲಸಗಳನ್ನು ಕಲಿಸುವರು. ಉಪವನಗಳನ್ನು ತಯಾರಿಸುವದು, ಅಡಿಗೆ ಮಾಡುವದು, ಮಕ್ಕಳ ಶುಶ್ರೂಷೆ ಮುಂತಾದ ಗೃಹಕೃತ್ಯಗಳ ಜ್ಞಾನದಾನ ಮಾಡಿ, ಸ್ತ್ರೀಯರಿಗೆ ಕಾರ್ಯಕ್ಷಮ ಮಾಡುವ ಪ್ರಚಂಡ ವಿಶ್ವವಿದ್ಯಾಲಯವನ್ನು ನೋಡಿ, ಸರ್ ವಿಠ್ಠಲದಾಸರವರಿಗೆ ಬಹಳೇ ಆನಂದವಾಯಿತು. ಮರಳಿ ಹಿಂದುಸ್ಥಾನಕ್ಕೆ ಬಂದಮೇಲೆ ನನಗೆ ಕರೆ ಕಳುಹಿದರು. ತಾಸು-ಅರ್ಧತಾಸು ನನ್ನೊಡನೆ ಮಾತಾಡಿದ ಬಳಿಕ, ಲಕ್ಷ್ಮೀಪುತ್ರರು ವರ್ಷಕ್ಕೆ ೫೨॥ ಸಾವಿರ ರೂಪಾಯಿ ಬಡ್ಡಿ ಬರುವಂಥ ೧೫ ಲಕ್ಷ ರೂಪಾಯಿಗಳ ಸರಕಾರಿ ಪ್ರೊಮಿಸರಿ ನೋಟುಗಳನ್ನು ಸ್ತ್ರೀ ವಿಶ್ವವಿದ್ಯಾಲಯಕ್ಕೆ ಕೊಡುತ್ತೇವೆಂದು ಹೇಳಿದರು. ೧೫ ಲಕ್ಷ ರೂಪಾಯಿಗಳ ಪ್ರೊಮಿಸರಿ ನೋಟುಗಳನ್ನು ಈಗ ತಮ್ಮ ಹಸ್ತದಲ್ಲೇ ಇಟ್ಟುಕೊಂಡು ಅದರ ಬಡ್ಡಿಯನ್ನು ಮಾತ್ರ ಸಲ್ಲಿಸುತ್ತಿರುವರು. ಈ ಪ್ರೊಮಿಸರಿ ನೋಟುಗಳು ಸ್ತ್ರೀ ವಿಶ್ವವಿದ್ಯಾಲಯದ ಚಾಲಕರ ಸ್ವಾಧೀನದಲ್ಲಿ ಈಗ ಇರುವದಿಲ್ಲ. ಅವನ್ನು ಪಡೆಯಬೇಕಾದರೆ, ಸರ್ ವಿಠ್ಠಲದಾಸರವರು ೨ ಶರ್ತುಗಳಲ್ಲಿ ಒಂದು ಶರ್ತನ್ನು ಪೂರ್ತಿ ಮಾಡಹೇಳಿರುವರು: ಹಿಂದೀ ಸ್ತ್ರೀ ವಿಶ್ವವಿದ್ಯಾಲಯಕ್ಕೆ ಸರಕಾರದ ಮಾನ್ಯತೆ ದೊರೆಯಬೇಕು; ಅಥವಾ ವರ್ಷಕ್ಕೆ ೫೨॥ ಸಾವಿರ ರೂಪಾಯಿ ಬಡ್ಡಿ ಸಿಗುವಷ್ಟು ರಕಮನ್ನು ವಿಶ್ವವಿದ್ಯಾಲಯದವರು ಸಂಗ್ರಹ ಮಾಡಬೇಕು. ಅಂದರೆ, ೧೫ ಲಕ್ಷ ರೂಪಾಯಿಗಳ ಪ್ರೊಮಿಸರಿ ನೋಟುಗಳು ಸ್ತ್ರೀ ವಿಶ್ವವಿದ್ಯಾಲಯದವರ ಸ್ವಾಧೀನವಾಗುವವು. ಸರಕಾರದ ಮಾನ್ಯತೆಯ ಶರ್ತನ್ನು ಒತ್ತಟ್ಟಿಗೆ ಬಿಟ್ಟುಕೊಟ್ಟು, ಈಗ ನಾನು ಎರಡನೇ ಶರ್ತನ್ನೇ ಪೂರೈಸಲು ತೊಡಗಿರುವೆನು. ಇದಲ್ಲದೆ, ಸರ್ ವಿಠ್ಠಲದಾಸ ಠಾಕರ್ಸಿಯವರು ಕಟ್ಟಡಗಳಿಗಾಗಿ ೧ ಲಕ್ಷ ೫೬ ಸಾವಿರ ರೂಪಾಯಿಗಳನ್ನು ನಿಬ್ಬಡ್ಡಿಯಿಂದ ಸಾಲವಾಗಿ ಕೊಟ್ಟಿರುವರು. ಈ ಸಾಲದಲ್ಲಿ ೧ ಲಕ್ಷ ೧೧ ಸಾವಿರ ರೂಪಾಯಿ ಸಾಲವು ಈಗಲೇ ತೀರಿದೆ. ಇನ್ನು ೭ ವರ್ಷಗಳಲ್ಲಿ ಬಾಕಿ ಉಳಿಯುವ ಸಾಲವು ತೀರಬೇಕಾಗಿದೆ. ಇದಲ್ಲದೆ, ಶ್ರೀ| ಬಟಾವರರವರು ೩೫ ಸಾವಿರ ರೂ. ಗಳನ್ನು ವಸತಿಗೃಹಕ್ಕಾಗಿ ಕೊಟ್ಟಿರುವರು.

ನಮ್ಮ ಸ್ತ್ರೀ ವಿಶ್ವವಿದ್ಯಾಲಯದಲ್ಲಿ ಹೆಂಗಸರಿಗೆ ಗಣಿತ ವಿಷಯವು ಶಕ್ಯಮಟ್ಟಿಗೆ ಕಲಿಸಲ್ಪಡುತ್ತದೆ. ವಾಙ್ಮಯ, ಶಿಶುಸಂಗೋಪನ, ಪ್ರಥಮ ಚಿಕಿತ್ಸೆ ಇತ್ಯಾದಿ ಗೃಹಿಣಿಗಳಿಗುಪಯುಕ್ತವಾದ ಶಿಕ್ಷಣವೂ ಕೊಡಲ್ಪಡುತ್ತದೆ. ಈಗ ಈ ವಿಶ್ವವಿದ್ಯಾಲಯಕ್ಕೆ ಒಳಪಟ್ಟು ೨ ಕಾಲೇಜುಗಳಿವೆ. ೧ ಹಿಂಗಣೆಯಲ್ಲಿ, ೧ ಅಹಮದಾಬಾದದಲ್ಲಿ. ಅಹಮದಾಬಾದದ ಕಾಲೇಜಿನಲ್ಲಿ ಗುಜರಾಥಿಯಿಂದ ಶಿಕ್ಷಣ ಕೊಡಲ್ಪಡುತ್ತಿದೆ. ಇದರ ಹೊರತು ೬ ಹೈಸ್ಕೂಲುಗಳಿವೆ. ೧ ಹಿಂಗಣೆಯಲ್ಲಿ, ೧ ಪುಣೆಯಲ್ಲಿ, ೧ ಅಹಮದಾಬಾದದಲ್ಲಿ, ೧ ಸುರತದಲ್ಲಿ ೧ ಸಾತಾರೆಯಲ್ಲಿ, ೧ ಮಾಲವಣದಲ್ಲಿ. ಇದರ ಹೊರತು ಬಡೋದೆಯ ಮಹಾರಾಣಿ ಕಾಲೇಜಿನವರು ನಮ್ಮ ವಿಶ್ವವಿದ್ಯಾಲಯಕ್ಕಾಗಿ ವಿದ್ಯಾರ್ಥಿಗಳನ್ನು ತಯಾರಿಸುತ್ತಿರುವರು. ಮಹಾರಾಣಿ ಕಾಲೇಜಿನವರು ತಮ್ಮ ಕೊನೆಯ ವರ್ಗದ ವಿದ್ಯಾರ್ಥಿಗಳಲ್ಲಿ ೨ ಭಾಗಗಳನ್ನು ಮಾಡಿ, ಒಂದು ಪಾಲು ವಿದ್ಯಾರ್ಥಿಗಳನ್ನು ಮುಂಬಯಿಯ ವಿಶ್ವವಿದ್ಯಾಲಯಕ್ಕೆ ಕಳಿಸುತ್ತಾರೆ. ಇನ್ನೊಂದು ಪಾಲನ್ನು ನಮ್ಮ ವಿಶ್ವವಿದ್ಯಾಲಯದ ಗುಜರಾಥಿ ಶಿಕ್ಷಣಕ್ರಮಕ್ಕೆ ತಯಾರಿಸುತ್ತಾರೆ. ಮೂರನೇ ಪಾಲನ್ನು ಮರಾಠಿ ಶಿಕ್ಷಣಕ್ರಮಕ್ಕೆ ಕಳುಹುತ್ತಾರೆ. ಪ್ರವೇಶ ಪರೀಕ್ಷೆಗೆ ಕೂಡ್ರಲು ಸ್ತ್ರೀಯರಿಗೆ ಅನುಕೂಲವಾಗಬೇಕೆಂದು ವಿದ್ಯಾಲಯದವರು ಸ್ತ್ರೀಯರ ಊರುಗಳಲ್ಲಿಯೇ ಪರೀಕ್ಷೆ ಕೊಳ್ಳಲು ವ್ಯವಸ್ಥೆ ಮಾಡಿರುವರು. ಇದರ ಹೊರತು ಮತ್ತಲ್ಲಿಯಾದರೂ ಹೈಸ್ಕೂಲುಗಳಿದ್ದು, ಸ್ತ್ರೀಯರಿಗೆ ನಮ್ಮ ವಿದ್ಯಾಲಯದ ಧೋರಣದಂತೆ ಅಭ್ಯಾಸಕ್ರಮ ಕಲಿಸಿದರೆ, ನಾವು ಅಂಥ ಹೈಸ್ಕೂಲುಗಳಿಗೆ ತಕ್ಕಮಟ್ಟಿಗೆ ಸಹಾಯವನ್ನೀಯಲೂ ತಯಾರಿರುವೆವು. ಪ್ರವೇಶ ಪರೀಕ್ಷೆಯು ಮರಾಠಿ ಗುಜರಾಥಿ, ಬಂಗಾಲಿ,ಹಿಂದೀ,ಉರ್ದು, ಈ ೫ ಭಾಷೆಗಳಲ್ಲಿ ಕೊಳ್ಳಲ್ಪಡುತ್ತವೆ. ಈ ವಿದ್ಯಾಲಯದಲ್ಲಿ 'ಗೃಹಿತಾಗಮಾ' (G. A.) ಹಾಗು 'ಪ್ರದೇಯಾಗಮಾ' (P. A.) ಎಂಬ ಎರಡು ಪದವಿಗಳು ಕೊಡಲ್ಪಡುತ್ತವೆ. (G. A.) ಪದವಿಯು ಬಿ. ಎ.,-ಪರೀಕ್ಷೆಗೂ, (P. A.) ಪದವಿಯು ಎಮ್. ಎ., ಪರೀಕ್ಷೆಗೂ ಸರಿಹೋಲುತ್ತವೆಂದು ಹೇಳಬಹುದು. ಈ ವಿದ್ಯಾಲಯಕ್ಕೆ ಬಾಬು ಶಿವಪ್ರಸಾದ ಗುಪ್ತರವರು ವರ್ಷಕ್ಕೆ ೫೦೦ ರೂಪಾಯಿಗಳಂತೆ ಸಹಾಯ ಮಾಡಿರುವರು. ಟೋಕಿಯೋದಿಂದ ಸ್ತ್ರೀ ವಿಶ್ವವಿದ್ಯಾಲಯದ ಮಾಹಿತಿಯುಳ್ಳ ಪುಸ್ತಕ ಕಳುಹಿದ ಮಹಾಶಯರು ಇವರೂ, ಇವರ ಜೊತೆಗಾರ ಶ್ರೀ| ವಿನಯಕುಮಾರ ಸರಕಾರರವರೆಂದೂ ೪-೫ ವರ್ಷಗಳ ಮೇಲೆ ಬಾಬು ಶಿವಪ್ರಸಾದ ಗುಪ್ತರವರು ಪ್ರತ್ಯಕ್ಷ ಭೆಟ್ಟಿಯಾದಾಗ ತಿಳಿದು ಬಂತು. ಇವರೀರ್ವರೂ ಆ ಕಾಲಕ್ಕೆ ಭೂಪ್ರದಕ್ಷಿಣೆ ಮಾಡುತ್ತಿದ್ದರು.

ನನಗೆ ಈ ವಿದ್ಯಾಲಯದ ಉನ್ನತಿಯು ನಿಧಿಧ್ಯಾಸವಾಗಿದೆ. ನನ್ನ ಪ್ರಾಯವು ಈಗ ೬೭ ವರುಷ. ಇನ್ನೂ ಬಹಳ ಕಾರ್ಯವು ಆಗತಕ್ಕದ್ದದೆ. ಸರ್ ವಿಠ್ಠಲದಾಸ ಥೆಕರ್ಸೀಯವರ ನಿಬ್ಬಂಧಿಯು ಪಾಲವು ತೀರಬೇಕು. ಅವರ ಶರ್ತದಂತೆ, ವರ್ಷಕ್ಕೆ ರೂಪಾಯಿ ೫೨॥ ಸಾವಿರ ಬಡ್ಡಿ ಬರಬಹುದಾದಂಥ ನಿಧಿಸಂಚಯವಾಗಬೇಕು. ಈಗ ವಿದ್ಯಾಲಯದ ಖರ್ಚು ಸುಮಾರು ೬೫-೭೦ ಸಾವಿರವಿದೆ. ಇವನ್ನೆಲ್ಲ ಸಾಗಿಸಿಕೊಂಡು ನಾನು ಮುಂದರಿಯ ಬೇಕಾಗಿದೆ. ಇದಲ್ಲದೆ, ಈ ವಿಶ್ವವಿದ್ಯಾಲಯದಲ್ಲಿ ವೈದ್ಯಕ ಶಾಖೆಯನ್ನು ಹೊರಡಿಸಬೇಕು. ಅಂತು ಸ್ತ್ರೀಯರಿಗೆ ಗೃಹಿಣಿಗಳಿಗುಚಿತವಾದ ಸರ್ವ ಪರಿಯ ಶಿಕ್ಷಣವನ್ನಿತ್ತು ಅವರ ಉದ್ಧಾರ ಮಾಡಬೇಕೆಂದು ನಾನು ಹಗಲಿರುಳು ಬಯಸುತ್ತೇನೆ. ರಕ್ತ ಪರೀಕ್ಷೆಯಿಂದ ರೋಗ ಚಿಕಿತ್ಸೆಯಾಗುವಂತೆ, ಮಾನಸಿಕ ವಿಚಾರಗಳ ಅರಿವಾಗುತ್ತಿದ್ದರೆ, ನನ್ನ ಮನಸ್ಸಿನಲ್ಲಿ ಸ್ತ್ರೀಯರ ಉನ್ನತಿಯೇ ಕೇಂದ್ರೀಕೃತವಾಗಿರುವದೆಂದು ಚಿಕಿತ್ಸಕರೇ ಹೇಳದಿರರು. ಅಷ್ಟು ನಾನು ತನ್ಮಯನಾಗಿದ್ದೇನೆ. ಈಗ ನಾನು ಬಹುಕಾಲ ಬಾಳಲಾರೆ. ೧೦ ವರ್ಷ ಬಾಳಬಹುದು, ಇಷ್ಟು ಅವಧಿಯಲ್ಲಿ ಸರ್ ವಿಠ್ಠಲದಾಸ ಥೆಕರ್ಸೀಯವರು ಹಾಕಿಕೊಟ್ಟ ಶರ್ತ, ವೈದ್ಯಕ ಶಾಖೆಯ, ಸಂಸ್ಥಾಪನೆಯೂ ಒದಗಿಬರುವದೆಂದು ನನಗೆ ತೋರುವದಿಲ್ಲ. ಆದರೆ, ನಾನು ನಿರಾಶನಾಗುವವನಲ್ಲ. ನನ್ನ ಧರ್ಮವು ಪುನರ್ಜನ್ಮವನ್ನು ಪ್ರತಿಪಾದಿಸುತ್ತದೆ. ಪುನರ್ಜನ್ಮದಲ್ಲಿ ನನಗೆ ಶ್ರದ್ಧೆಯಿದೆ. ಕಾರ್ಯವನ್ನು ನೆರವೇರಿಸುವ ನಿಶ್ಚಯ ಮಾಡಿರುವೆನು. ಪುನರ್ಜನ್ಮ ಹೊಂದಿಯಾದರೂ ಈ ಕಾರ್ಯ ನೆರವೇರಿಸದೆ ಬಿಡೆನು. ಕಾರ್ಯವು ಎಷ್ಟು ಪ್ರಚಂಡವಿರಲಿ ಅದರ ಗೊಡವೆ ನನಗಿಲ್ಲ. ಈ ವಿಷಯ ನನಗೊಬ್ಬ ಗುರು ಸಿಕ್ಕಿರುವನು. ಆ ಗುರು ಯಾರೆಂದು ಕೇಳುತ್ತೀರೋ? ಸಮುದ್ರ ದಂಡೆಯ ಮೇಲಿರುವ ಸಂದಿನಲ್ಲಿ ಮನೆ ಕಟ್ಟಿಕೊಂಡಿರುವ ಚಿಕ್ಕ ಪಕ್ಷಿದಂಪತಿಗಳು. ಈ ಪಕ್ಷಿಗಳು ತಮ್ಮ ಮರಿಗಳನ್ನು ಗೂಡಿನಲ್ಲಿಟ್ಟು ಆಹಾರಕ್ಕಾಗಿ ಹೊರಗೆ ಹೋಗಿದ್ದವು. ಹೆಣ್ಣು ಪಕ್ಷಿಯು ಮರಳಿ ಬಂದು ನೋಡಿತು. ಗೂಡಿನಲ್ಲಿ ಮರಿಗಳಿದ್ದಿಲ್ಲ. ಮರಿಗಳು ಸಮುದ್ರದಲ್ಲಿ ತೆರೆಯ ಪ್ರವಾಹಕ್ಕೆ ತೇಲಿ ಹೋದವೆಂದು ಅವರ ಮನವರಿಕೆಯಾಯಿತು. ಮರಿಗಳನ್ನು ಸಂಪಾದಿಸುವ ಬಗೆ ಹೇಗೆ? ಸಮುದ್ರವನ್ನೇ ಬತ್ತಿಸಿದರೆ ಮರಿಗಳು ಸಿಗುವವು. ಕೂಡಲೆ ತಾಯಿ ಪಕ್ಷಿಯು ಸಮುದ್ರದೊಳಗಿಂದ ಚುಂಚು ತುಂಬಿ ನೀರನ್ನು ತಂದು ದೂರ ನೆಲದ ಮೇಲೆ ಹಾಕತೊಡಗಿತು; ತಂದೆ ಪಕ್ಷಿಯೂ ಹಾಗೇ ಮಾಡತೊಡಗಿತು; ಇತರ ಪಕ್ಷಿಗಳೂ ಹಾಗೆಯೇ ಮಾಡಹತ್ತಿದವು. ಪಕ್ಷಿರಾಜನಾದ ಗರುಡನೂ ಇದೇ ಕಾರ್ಯವನ್ನು ಪ್ರಾರಂಭಿಸಿದನು. ಆದರೆ, ಹೀಗೆ ಸಮುದ್ರ ಬತ್ತಿಸುವ ಕಾರ್ಯವು ತನ್ನಿಂದಾಗದೆಂದು ಮನಗಂಡು, ತನ್ನ ಒಡೆಯನಾದ ಕ್ಷೀರಸಾಗರ ವಿಷ್ಣುವಿಗೆ ಮೊರೆಹೊಕ್ಕ. ಸಮುದ್ರದಲ್ಲಿ ಬಿದ್ದ ಮರಿಗಳನ್ನು ಪಕ್ಷಿದಂಪತಿಗಳಿಗೆ ತಂದುಕೊಟ್ಟನು. ದಂಪತಿಗಳಿಗೆ ಅಪ್ರಾಪ್ಯವಿದ್ದ ಮರಿಗಳು ಅವರ ನಿರ್ಧಾರದಿಂದ ತಿರುಗಿ ಪ್ರಾಪ್ತವಾದವು, ಇದೇ ಶ್ರದ್ಧೆಯು ನನ್ನಲ್ಲಿದೆ. ಆದರಿಂದಲೇ ನಾನು ಈ ಪ್ರಚಂಡ ಕಾರ್ಯವನ್ನು ಕೈಕೊಂಡಿರುವೆನು. ಇತ್ಯಾದಿ ಭಾಷಣವನ್ನಿತ್ತು ಸಭಿಕರಿಗೆ ಕೈಲಾದಷ್ಟು ಸಹಾಯಮಾಡಲು ಬಿನ್ನೈಸಿದರು.

ಅಧ್ಯಕ್ಷರಾದ ರಾ। ನಾರಾಯಣ ಸುಬ್ರಾಯ ಕಾಮತರವರು ಸಮಾರೋಪ ಮಾಡಿದ ಬಳಿಕ, ರಾ। ಬ। ಕಲ್ಯಾಣಪುರಕರರ ಸೂಚನೆಯಂತೆ (೧) ರಾ। ಗಣೇಶ ಗಣಪತಿ ಶಾಸ್ತ್ರಿ, (೨) ಜನಾರ್ಧನ ಶಿವ ಪಂಡಿತ (೩) ಅಣ್ಣಪ್ಪ ರಾಮಚಂದ್ರ ಪೈ, (೪) ಗಂಗಾಧರ ಗಣಪಯ್ಯ ಕ್ಯಾಸಭಾಗ, (೫) ಶ್ರೀಪಾದರಾವ ಕಲ್ಯಾಣಪುರಕರ; (೬) ನಾರಾಯಣ ಸುಬ್ರಾಯ ಕಾಮತ. ಹೀಗೆ ೬ ಮಂದಿಗಳ ಕಮಿಟಿಯನ್ನೊಂದು ನೇಮಿಸಿ ದ್ರವ್ಯಸಂಗ್ರಹ ಮಾಡಬೇಕೆಂದು ಗೊತ್ತಾಯಿತು. ಕಮಿಟಿಯವರು ಮಾರನೇದಿನ ಶನಿವಾರಕ್ಕೆ [illegible] ಈವರೆಗೆ ಸ್ತ್ರೀ ವಿಶ್ವವಿದ್ಯಾಲಯಕ್ಕೆ ವಾರ್ಷಿಕ ವರ್ಗಣಿ ರೂಪಾಯಿ ೧೦೦, ವಂತಿಗೆ ರೂಪಾಯಿ ೧೫೧. ಒಟ್ಟುಗೂಡಿವೆ. ರಾವಬಹಾದ್ದೂರ ಕಲ್ಯಾಣಪುರಕರರು ಆಯ ವಾರ್ಷಿಕ ಕಂತುಗಳಿಂದ ರೂಪಾಯಿ ೩೦೦ ಹಾಗು ರಾ। ಅಣ್ಣಪ್ಪ ರಾಮಚಂದ್ರ ಪೈರವರು ಅದೇ ಶರ್ತದಿಂದ ರೂಪಾಯಿ ೧೫೦ ಕೊಡಲೊಪ್ಪಿರುವರು

ಇದರ ಹೊರತು, ಗಿಬ್ಬ ಹೈಸ್ಕೂಲಿನಲ್ಲಿ ವಿದ್ಯಾರ್ಥಿಗಳಿಗಾಗಿ ಪ್ರೊ। ಕರ್ವೇಯವರು ಭಾಷಣ ಮಾಡಿದರು. ನಿನ್ನೆ ರವಿವಾರ ಸಾಯಂಕಾಲಕ್ಕೆ ಇಲ್ಲಿಯ ಹುಡುಗಿಯರ ಶಾಲೆಯಲ್ಲಿ ಸ್ತ್ರೀಯರ ಸಭೆಯಾಗಿ ಅಲ್ಲಿಯೂ ಒಂದು ಪ್ರೊಫೆಸರರ ಭಾಷಣವಾಯಿತು.

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರದಲ್ಲಿ ಮಳೆಯು ಸಾಧಾರಣ ಸುರಿಯಿತು. ಜ್ವರಾದಿ ರೋಗಗಳ ಜೋರು ಇರುವದು. ಈ ವಾರದಲ್ಲಿ ೬-೫೪ ಇಂಚು ಮಳೆ; ಅಂತು ಈ ವರೆಗೆ ೧೦೨-೦೪ ಇಂಚು ಮಳೆಯಾಯಿತು

ಇಲ್ಲಿಯ ದೊಡ್ಡ ಯಾನೆ ಬೋಟಿಯ ಮೇಲಿನ ಪತ್ತಲು ಕಳವಾದ ಬಗ್ಗೆ ಹಿಡಿದ ಗೋಳಿ ಬಿನ್ ಪುರ್ಸು ಈತನು ಇಲ್ಲಿಯ ಮೆಜಿಸ್ಟ್ರೇಟರ ನಿಖಾಲೆಯ ವಿರುದ್ಧ ಕಾರವಾರ ಡಿಸ್ಟ್ರಿಕ್ಟ ಕೋರ್ಟಿನಲ್ಲಿ ಮಾಡಿದ ಅಪೀಲು ಕಳೆದ ೧೬ ನೇ ತಾರೀಖಿಗೆ ಸಂಕ್ಷಿಪ್ತ ವಿಚಾರದಿಂದ ತೆಗೆದುಹಾಕಲಾಗಿದೆ. ಡಿಸ್ಟ್ರಿಕ್ಟ ಜಜ್ಜರು ಕಸ್ಟಮ್ ಆಫೀಸರ ಹಾಗು ಅಗಬೋಟಿಯ ಏಜಂಟ ಮುಂದೆ ಅಪೀಲಾಂಟನು ಕೊಟ್ಟ ಕಬೂಲಿ ಜವಾಬನ್ನು ಸಂಪೂರ್ಣವಾಗಿ ನಂಬಿ, ಅಪೀಲನ್ನು ಕಿತ್ತೊಗೆದಿರುವರು. ಇತ್ತ ಈ ಕಳವಿನಲ್ಲಿ ಆರೋಪಿಗಳಿದ್ದ ಇತರ ಮಂದಿಗಳ ಚೌಕಶಿಯನ್ನು ಇಲ್ಲಿಯ ಪೋಲೀಸರು ನಡಿಸುತ್ತಿರುವರಾಗಿ ತಿಳಿಯುತ್ತದೆ. ಈ ಚೌಕಶಿ ಮಾಡಲಿಕ್ಕೆ ಹಿಂದುಸ್ಥಾನ ಸರಕಾರ ಹಾಗು ಮುಂಬಯಿ ಸರಕಾರದ ಕಡೆಯಿಂದ ಬರೆದು ಬಂದಿರುವದಾಗಿಯೂ ಸುದ್ದಿ ಇದೆ.

ತದಡಿಯಲ್ಲಿ ಸರಕಾರದವರು ಕಟ್ಟಿಸಿದ ಧಕ್ಕೆಯು ಈ ವರ್ಷದ ಮಳೆಗೆ ಕಿತ್ತುಹೋಗಿಯದೆ.

ಇಲ್ಲಿಯ ಸಬಜಜ್ಜ ಮಿ। ಜಿನ್‌ಮಳಗುಂದ ಹಾಗು ಕೋಆಪರೇಟಿವ್ಹ ಇನ್‌ಸ್ಟಿಟ್ಯೂಟಿನ ಅಧ್ಯಕ್ಷರಾದ ರಾವಬಹಾದ್ದೂರ ಕಲ್ಯಾಣಪುರಕರ ಮುಂತಾದ ಮಂಡಳಿಯವರು ಸಹಕಾರದ ಪ್ರಚಾರ ಮಾಡಲಿಕ್ಕೆ ಕಳೆದ ರವಿವಾರ ತಾ. ೨೬ ನೇಗೆ ಗುಡೆಅಂಗಡಿಗೆ ಹೋಗಿದ್ದರು. ಅಲ್ಲಿಯ ಶ್ರೀ ಕಾಂಚಿಕಾ ಪರಮೇಶ್ವರೀ ದೇವಾಲಯದಲ್ಲಿ ಸಭೆಯಾಯಿತು. [illegible] ರಾ। ಗಣೇಶ ಹೆಗಡೆ, ರಾ। ಬ। ಕಲ್ಯಾಣಪುರಕರರವರ ಭಾಷಣಗಳಾದವು. ಅಧ್ಯಕ್ಷರಾದ ಮಿ। ಜಿನಮಳಗುಂದರವರು ಪರಸ್ಪರ ಸಹಕಾರ ಸಂಸ್ಥೆಯು ಬಡಬಿದ್ದ ರೈತರ ಹಿತಕ್ಕಾಗಿ ಸರಕಾರವು ಔದಾರ್ಯದಿಂದ ನಿರ್ಮಿಸಿದ ಸಂಸ್ಥೆಯೆಂದು ವರ್ಣಿಸಿ, ಸಮಾರೋಪ ಮಾಡಿದರು.

ನವಿಲಗೋಣದ ಜ್ಯೋತಿಷಶಾಸ್ತ್ರವಿಶಾರದರೂ, ಧರ್ಮಶಾಸ್ತ್ರವೇತ್ತರೂ, ವೈದಿಕ ಲೌಕಿಕಾಭಿಜ್ಞರೂ ಆದ ವೇ। ಕಟ್ಟೆ ಗಣಪ ಭಟ್ಟರು ತಮ್ಮ ೭೫ನೇ ವಯಸ್ಸಿನಲ್ಲಿ ಕಳೆದ ತಾ. ೨೬ನೇ ರವಿವಾರ ಬೆಳಗಿನ ೮ ಘಂಟೆ ಸಮಯ ಕೈಲಾಸವಾಸಿಗಳಾದರೆಂದು ತಿಳಿಸಲು ವಿಷಾದವಾಗುತ್ತದೆ.

ವೃತ್ತಸಾರ.

— ಮಟಗಿಸೀ ಪೇಟೆಯ ಸೋಮನಾಥಿಯ ಕಟ್ಟು ಒಡೆದು ಹೊಲಗಳೆಲ್ಲ ನೀರಿನ ಮುಳುಗಿದವು. ಅಪ್ಪರು ಮರಿದರು.

— ಇದೇ ಬರುವ ವಸಂತ ಋತುವಿನಲ್ಲಿ ಇಂಗ್ಲಂಡ ಹಾಗು ಹಿಂದುಸ್ಥಾನಗಳ ಟಪಾಲು ವಿಮಾನಗಳ ಮೂಲಕ ತರ-ಒಯ್ಯಲ್ಪಡುವದು.

— ಕಳೆದ ಜುಲೈ ೨೧ನೇ ಮಂಗಳವಾರಕ್ಕೆ ಲಂಡನ್ನಿನಲ್ಲಿ ತುಫಾನು ಮಿಂಚಿನಿಂದ ಜೋರಾಗಿ ಉತ್ಪನ್ನವಾಯಿತು. ಅಂದು ವಿಲಕ್ಷಣ ಕಳೆ. ಆಣೆಕಲ್ಲು ಬಿದ್ದು ಕಿಡಕಿಗಳ ಕನ್ನಡಿಗಳು ಚೂರಾದವು ಮಿಂಚು ಬಿದ್ದು ಅನೇಕ ಮನೆಗಳಿಗೆ ಬೆಂಕಿಹತ್ತಿತು. ಹಾನಿಸಭೆಯೂ ಹಾನಿಯಾಗಿದೆ.

— ಶ್ರೀ। ಮನೋಹರದಾಸ ಹಾಗು ಮಗನಲಾಲ ಇಟ್ಟಾದಾಮರವರು ೩೦ ಸಾವಿರ ರೂಪಾಯಿಗಳನ್ನರ್ಪಿಸಿ ಅಮ್ಮೂರಾದ ಗೊಂಡೇವಿಯಲ್ಲಿ ಆಯುರ್ವೇದ ಚಿಕಿತ್ಸಾಲಯವನ್ನು ಸ್ಥಾಪಿಸಲು ಅನುಕೂಲತೆ ಮಾಡಿಕೊಟ್ಟಿರುವರು. ಅನುಕರಣೀಯವಿದೆ.

— ಸರ್ವಾಧಿಪತಿ ರೀಡಿಂಗ ದೊರೆಗಳು ಕಳೆದ ಜುಲೈ ೨೩ನೇ ಗುರುವಾರಕ್ಕೆ ಭರತ ಭೂಮಿಗೆ ಮರಳಿದರು.

— ಬೇಲೂರದಲ್ಲಿ ಕೈಲಾಸ ಮಂದಿರವನ್ನು ಕಟ್ಟಿಸಿ ಕೀರ್ತಿಶೇಷನಾದ ಶ್ರೀ ಕೃಷ್ಣರಾಜನ ೬೩೪ ಬೆಳ್ಳಿಯ ನಾಣ್ಯಗಳು ಮಧ್ಯಪ್ರಾಂತದಲ್ಲಿ ದೊರಕಿವೆ.

— ಇನ್ನೊಂದು ಮಹಾಯುದ್ಧವು ಭೂಮಂಡಲವನ್ನು ವ್ಯಾಪಿಸುವದೆಂದು ಜರ್ಮನ ರೋಡೀನವರು ಭವಿಷ್ಯ ಮಾಡಿರುವರು. ಜೀವದ ಬದಿಗೋ ಹೇಗೆ?

— ದೇಶಬಂಧುಗಳ ಸ್ಮಾರಕನಿಧಿಗೆ ೫ ಲಕ್ಷರೂಪಾಯಿಗಳು ರೋಖ ವಸೂಲಾಗಿರುವದೆಂದು ಮಹಾತ್ಮರು ಪ್ರಕಟಿಸಿರುವರು. ಪೂರ್ಣ ರಕಮು ವಸೂಲಮಾಡಿದ ಹೊರತು ಬಂಗಾಲದೊಳಗಿಂದ ಮಹಾತ್ಮರು ಕಾಲು ತೆಗೆಯಲಿಕ್ಕಿಲ್ಲವಾಗಿ ತೋರುತ್ತದೆ.

— ಮೊರೋಕ್ಕೋ ಯುದ್ಧದಲ್ಲಿ ಫ್ರೆಂಚರು ಮಹತ್ವದ ಠಾಣ್ಯಗಳನ್ನು ಕಳಕೊಂಡಿರುವರು. ರೀಫರು ವಿಜಯ ಹೊಂದುತ್ತಿದ್ದಾರೆ. ಪಾಶ್ಚಾತ್ಯರ ಸಾಮ್ರಾಜ್ಯದ ಅಳಿಗಾಲ ಪ್ರಾರಂಭವಾಯಿತೇನು?

— ಬಂಟ್ವಾಳದಲ್ಲಿ ನೆರೆಯ ಮೂಲಕ ಬೈಲುಪ್ರದೇಶದಲ್ಲಿ ವಾಸವಾಗುವದು ಗಂಡಾಂತರಪ್ರದವಾಗಿದೆ. ಆದರಿಂದ ಜನರು 'ಕಲ್ಲುಗುಡ್ಡೆ'ಯಲ್ಲಿ ಬಿಡಾರು ಜಾಗಗಳನ್ನು ಸರಕಾರಕ್ಕೆ ಕೇಳಿದರು. ಸರಕಾರವು ತೀರ್ವೆಯ ಹೊರತು ಒಂದೊಂದು ಜಾಗಕ್ಕೆ ೧೦ ರೂಪಾಯಿ ದರವಿತ್ತು. ಈಗ ಅದನ್ನೇರಿಸಿ ೩೦ ರೂಪಾಯಿ ಮಾಡಿದೆ. ಈ ಗುಡ್ಡೆಯಲ್ಲಿ ಕಲ್ಲುಗಳು; ನೆಲಸಮ ಮಾಡಲಿಕ್ಕೆ ವಿಪರೀತ ಖರ್ಚು; ಬಾವಿ ಇಲ್ಲ. ಇದನ್ನೆಲ್ಲ ಆಲೋಚಿಸಿ ಮದ್ರಾಸ ಸರಕಾರವು ಪ್ರಜೆಗಳ ಹಿತಕ್ಕಾಗಿ ೧೦ ರೂಪಾಯಿಗಳನ್ನು ೩೦ ರೂಪಾಯಿ ಮಾಡಿದೆ. ಪ್ರಜಾವಾತ್ಸಲ್ಯ!

Karwar Municipal Affairs.

(By— *A Citizen.*)

It is fortunate that we have a Municipality at Karwar but it is unfortunate that it does not function as concernedly and progressively as it ought to. So far our Municipality has confined itself to duties of a mechanical character *i. e.* collection of taxes with much rigidity and rigour as is possible and expending the same with as much economy as possible even at the sacrifice of efficiency. This may be attributed to a want of keen sense of duty and an earnest desire to discharge civic obligations on the part of the members. Their apathetic and indifferent attitude is to be highly deplored. We, the tax-payers as a matter of fact do not expect anything from nominated members because as is always the case, even in our central and Local Legislatures, they are there to thwart any proposals conducive to the betterment of the people at large. We justly demand the fulfilment of certain expectations in our civic requirements from the elected members. But it is our misfortune that these members too do not think it obligatory on them to redeem their pledges, at the time of elections. Once they think that their position is secure they with impunity ignore the responsibility that devolves upon them.

I would like to substantiate my above comments, ungenerous and unfair as they might seem to be, by the following few facts.

(1) No measures are taken to meet the requirements of the people in the matter of conservancy and sanitation The want of initiative and the constructive genius is the cause of this unsatisfactory state of things I hereby appeal to the city fathers to move in the matter early and help the people in providing them with the necessary civic amenities which are not of such a perplexing nature as in other cities.

(2) The other pressing need is a well built market. A novel feature of the Karwar "market" is that all the small dealers in vegetables and other necessaries of life throng to the open market place where they are exposed to the burning sun of May and drenched to the skin in the heavy rains of July. But still they have to pay a market tax (!) The plot in question is simply fenced and the poor folk do not get any facilities by way of shelter from rain and sun. Besides this a separate tax i. e. octroi when entering the Municipal limits is levied and exacted. The plot in question was long used for that purpose and nothing was charged for that. But this is an innovation introduced some three or four years back Such kind of resourcefulness is not wanting in Karwar.

(3) The roads in their charge are in a deplorable condition and stand in urgent repairs. All these improvements which are the crying needs of our town are held up for want of funds. Can no means be found to increase the income of the Municipality? First let them set themselves to the task with zeal and energetic efforts. Money will be ungrudgingly contributed by the Public to the execution of all these works. But our Municipality first expects the people to contribute the necessary funds and this attitude is rightly resented When we build a house, the Municipality rightly demands a house tax. So also, when they get us ready a market and latrines and such other arrangements then only can they impose extra taxes which the people will willingly pay and thus swell the Municipal coffers.

(4) Lastly, it is time for us to have a town planning scheme The town is conjested and ill laid out There is a tendency amonng the monied village folk to migrate to the town and have permanent residence of their own there. So in anticipation of a great influx of the villages it is better to have a well formulated scheme.

Well, many of the Municipal members are pleaders. If in other parts of our country, any advancement is made in matters, civic social or political, it is due to the members of the legal profession who conspicuously dominate these spheres because they are by their legal acumen, subtlety of mind and acute powers of reasoning are pre-eminetly fitted to undertake the work. But Karwar is an exception in that with an array of pleaders, it is the poorer for them. They are generally pre-occupied with their profession which leaves them very little time, to attend to such duties of Public interest. In fact meetings have to be adjourned for want of quorum. That is what I am told. They must shake off their narrow out-look on life and must come out to give the utmost benefit of their talents to the people because it is said civics is three-fourths politics.

I finally appeal to the members to evince keen and genuine interest in their civic affairs and thereby ameliorate the condition of the town.

ಅಮೇರಿಕನ್ ಉಪಾಯ.

ಎಂಬ್ರೋಸಿಯಾ.

AMBROSIA

ಸ್ತ್ರೀರೋಗಪರಿಹಾರಕ್ಕಾಗಿ.

ಎಂಬ್ರೋಸಿಯಾವು ಸಮಸ್ತ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು. ಇದು ಸ್ತ್ರೀಸೌಂದರ್ಯವನ್ನುಂಟುಮಾಡುತ್ತದೆ. ಸಾಮಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರುತ್ತದೆ. ಚಿಕ್ಕ ಆಘಾತ ದೊರಕಿದೆ, ವಿಶೇಷ ಆಯಾಸ ಕೊಳ್ಳುವದರಿಂದ ಸ್ತ್ರೀಯರ ಪ್ರಕೃತಿಯು ಕೆಡುತ್ತದೆ, ಮುಟ್ಟಾಗುವಾಗ ಶೂಲಿ ಏಳುವದು, ಮುಟ್ಟಾಗದಿರುವದು, ಅಪಸ್ಮಾರ, ಬಂಜೆತನ ಮುಂತಾದ ಗರ್ಭಾಶಯದ ಬೇನೆಗಳು, ಅಜೀರ್ಣ, ತಲೆಶೂಲಿ, ಭ್ರಮಿಷ್ಟತನ ಇವೆಲ್ಲ ಸ್ತ್ರೀರೋಗಗಳಮೇಲೆ ರಾಮಬಾಣ ಮದ್ದು. ಎಂಬ್ರೋಸಿಯಾವು ಸಮಸ್ತ ಸ್ತ್ರೀರೋಗಗಳನ್ನು ದೂರಮಾಡಿ, ಸ್ತ್ರೀಯರನ್ನು ಸಶಕ್ತ ಹಾಗು ಸೌಂದರ್ಯವಂತರನ್ನಾಗಿ ಮಾಡುತ್ತದೆ.

ಒಮ್ಮೆ ಪರೀಕ್ಷೆ ನೋಡಿರಿ.

ಬೆಲೆ ಬಾಟ್ಲಿ ೧ ಕ್ಕೆ ರೂಪಾಯಿ ೩—೦—೦

ಏಜಂಟರು:— ವೀರಿಯಲ ಏಜನ್ಸಿ,
ಪ್ರಿನ್ಸೆಸ ಸ್ಟ್ರೀಟ, ಮುಂಬಯಿ ನಂಬರ ೨.

ಅತಿ ಉತ್ತಮವಾದ ನಶ್ಯ!

ಈ ನಶ್ಯವು ಪೇಟೆಯಲ್ಲಿ ಬಹಳ ವರ್ಷಗಳಿಂದ ಪ್ರಖ್ಯಾತಿ ಹೊಂದಿರುತ್ತದೆ. ಬೇಕಾದವರು ಖರಿದಿ ಮಾಡಬಹುದು. ಸೆಂಪಲ್ ಬೇಕಾದವರು ೧ ಆಣೆ ಸ್ಟ್ಯಾಂಪು ಕಳಿಸಬೇಕು.

ನಂಬರ ೧. ಪೌಂಡು ೧ಕ್ಕೆ ೨-೪-೦.
" ೨ ಪೌಂಡು ೧ಕ್ಕೆ ೨-೦ ೦.

ಜಿ. ರಾಮಯ್ಯಾ ಕುರಡಿ,
ಪೋಸ್ಟ- ಶಿರ್ಸಿ, ಉ. ಕಾನಡಾ.

ಜಾಹೀರ ನೋಟೀಸು.

ಈ ಕೆಳಗೆ ಸಹಿ ಮಾಡುವವರು ಎಲ್ಲಾ ಜನರಿಗೆ ಈ ನೋಟೀಸ ಮೂಲಕ ತಿಳಿಯಪಡಿಸುವದೇನಂದರೆ :- ಮಂಜು ಬಿಂನ ಈರ ನ್ಯಾಕಾ ಜಾತಿ ನವಾಯತ ಉಗ್ರಾಣಿಮನೆ ಸಾಕಿಂನ ಶಿರಾಲಿ ಗ್ರಾಮದ ಹಿರೆತಮ್ಮ, ಪೇಟಾ ಭಟ್ಕಳ ಈತನು ನಮ್ಮ ತಂದೆಯಾಗಿದ್ದು; ಸದ್ರಿಯವನಿಗೆ ಎರಡು ಜನ ಹೆಂಡರಾಗಿದ್ದು ಮೃತ ಪ್ರಥಮ ಹೆಂಡತಿಯಲ್ಲಿ ಹುಟ್ಟಿದ ನಾವು ಇಬ್ಬರು ಮತ್ತು 2 ನೇ ಹೆಂಡತಿಯಲ್ಲ 1 ನೇ ಪ್ರಾಯಸ್ಥನಾದ ಜಾನೆ ಚಿಕ್ಕ 2 ನೇ ಅಣ್ಣಪ್ಪ 3 ನೇ ಅಪ್ರಾಯಸ್ಥನಾದ ಯಾನ್ಯೆಕಾರ್ 4 ನೇ ಅಪ್ರಾಯಸ್ಥ ತಿಮ್ಮಯ್ಯಾ ಈ ಪ್ರಕಾರ ನಾವು ಒಟ್ಟು ಕುಟುಂಬದಲ್ಲಿ ಉಳಿದು ನಾವು ಹಾಗು ಮೇನೇಜರ ನಮ್ಮ ತಂದೆ ವಗೈರೆಯವರು ಈ ವರೆಗೆ ನಮ್ಮ ಒಟ್ಟು ಕಷ್ಟಾರ್ಜಿತದಿಂದ ನಮ್ಮ ಪಿತ್ರಾರ್ಜಿತ ಆಸ್ತಿ ಹಾಗು ಬೇರೆ ಜನರಿಂದ ಮೂಲಗೇಣಿ, ಕ್ರಯ ವಗೈರೆಯಿಂದ ಹೆಚ್ಚಿನ ಆಸ್ತಿಗಳು ಮೆನೇಜರ ನಮ್ಮ ತಂದೆ ಹೆಸರಲ್ಲೇ ಮಾಡಿಕೊಂಡು ಬೇರೆ ಉದ್ಯೋಗ ಧಂದೆ, ಸಹಾ ಮಾಡಿ ನಮ್ಮ ಒಟ್ಟು ಕುಟುಂಬದ ಖರ್ಚ ಕಳೆದು ಉಳಿಯುವ ಉಳಿತಾಯವು ಮೆನೇಜರನ ವ ನಮ್ಮ ತಂದೆ ಕಡೆಗೆ ಠೇವು ಉಳಿಯುತ್ತ ಬರುವಲ್ಲಿ ಹಾಲಿ ಕಡೆ, ಅಂದರೆ, ಎರಡು ತಿಂಗಳ ಹಿಂದೆ ನಮ್ಮ ಪೈಕಿ 2 ನೇಯವನ ಹುಡುಗಿ ಲಗ್ನದ ಸಂಬಂಧ ಗೃಹಕಲಹವು ಉಂಟಾಗಿ 2 ನೇ ಹೆಂಡತಿ ವ ಅವಳ ಮಕ್ಕಳ ಹಾಗೂ ನಮ್ಮ ದ್ವೇಷಿಕ ಜನರ ಚಿತಾವಣಿಯಿಂದ ಅಜಮಾಸ 80 ವರ್ಷ ಪ್ರಾಯದ ನಮ್ಮ ತಂದೆ ಮಂಜು ಈತನು ತನ್ನ ಸ್ವಹಿತ ತಿಳುಕೊಳ್ಳುವಷ್ಟು ಜ್ಞಾನವಿಲ್ಲದೆ ನಮ್ಮನ್ನು ದಗಾಪಡಿಸುವ ಇರಾದೆಯಿಂದ ಕುದಾದ್ದೆಯಿಲ್ಲದೆ ಯಾ ಸುಳ್ಳು ಮುದಾದ್ದೆ ವ ಅಡಚಣ ತೋರಿಸಿ, ಸದ್ರಿ ಆಸ್ತಿಗಳು ತನ್ನ ಹೆಸರಲ್ಲ ಇದ್ದಾವೆ ಎಂಬ ಒಂದೇ ಕಾರಣದಿಂದ, ಪರಾಧೀನ ಮಾಡುವ ಇರಾದೆಯಲ್ಲ ಇರುವದಾಗಿ ನಮಗೆ ತಿಳಿದುಬಂದದರಿಂದ ಸದ್ರಿಯವನು ಎರಡು ತಿಂಗಳ ಇತ್ತಲಾಗಿ ಮಾಡಿದ ಹಾಗೂ ಇನ್ನು ಮುಂದೆ ಮಾಡಬಹುದಾದ ನಮ್ಮ ಕುಟುಂಬದ ಸ್ಥಿರ-ಚರಾಸ್ತಿಗಳು ನಮ್ಮ ಶಿವಾಯ ಸದ್ರಿಯವನಾಗಲೀ ಯಾ ಸದ್ರಿಯವನ 2 ನೇ ಹೆಂಡತಿಯು ಮಕ್ಕಳಾಗಲೀ ಕ್ರಯ, ಅಡವು ದಾನ, ಮೂಲಗೇಣಿ ವಗೈರೆ ರೀತಿಯಿಂದ ಪರಾಧೀನ ಮಾಡಿದ್ದಲ್ಲಿ ಅಂಥಾ ಪರಾಧೀನತೆಗಳು ನಮಗೆ ಯಾವ ತರದಿಂದಲೂ ಬಾಧಿಕತಕ್ಕದ್ದು ಅಲ್ಲ. ಈ ವರೇಗೆ ನಮ್ಮ ಕುಟುಂಬಕ್ಕೆ ಹೆಚ್ಚಿನ ಸಾಲ ವಗೈರೆ ಏನೂ ಇಲ್ಲದ್ದರಿಂದಲೂ, ಇನ್ನು ಮುಂದೆ ಸಹ ಸಾಲ ಮಾಡುವ ಗರಜು ಬೀಳುವಂತೆ ಇಲ್ಲದ್ದರಿಂದಲೂ ಹೀಗಿರುತ್ತ ಸದ್ರಿಯವರು ಇನ್ನು ಮುಂದೆ ಮಾಡುವ ಯಾ ಮಾಡಬಹುದಾದ ಯಾವದೊಂದು ಸಾಲಕ್ಕೆ ನಾವು ಜವಾಬದಾರರಲ್ಲ ಎಂತಾ ಕೊಟ್ಟ ಜ್ಯಾಹೀರ ನೋಟೀಸು.

ಶಿರಾಲಿ, ತಾ. 28-7-25 } (ಸಹಿ) ಖೈರಾ ಬಿನ್ ಮಂಜು.
ಸಣ್ಣ ಕೂಸಾ ಬಿನ್ ಮಂಜು

ತ್ವರೆ ಮಾಡಿರಿ!

ಪವನ ಚಿನ್ನದ ಬುಟ್ಟಿ ತೋಳಿನ ನಮೂನೆಯ ಗೆಜ್ಜೆಟಿಕ್ಕಿಗೆ ಹಾಕಿದ ತೊಲೆ ೧|| ಮಾರುವದುಂಟು. ಬೇಕಾದವರು ತ್ವರೆ ಮಾಡಬೇಕು!

ಪತ್ತೆ.—
M. c/o 'ಕಾನಡಾ ವೃತ್ತ' ಆಫೀಸು, ಕುಮಟಾ.

— ಕುಮ್ಟಾಪ್ರಾಂತದ ಕ್ಯಾದ ಕೌನ್ಸಿಲಿನ ಸಭಾಸದರಾದ ರಾ|| ಶೇಟ್ಟೆ ಹಾಗು ದೇಶಮುಖರವರು ಇನ್ನು ಮುಂದಿನ ತಿಂಗಳುಗಳನ್ನು ತಮ್ಮ ಪ್ರಾಂತದಲ್ಲಿ ಯಾರ ಮೇಲೂ ಅನುಗ್ರಹಿಸಬೇಕೆಂದು ಸಾರ್ವಜನಿಕರವರಿಗೆ ತಿಳಿಸ್ಸುವ ಕರಾರು ಸೂಚಿಸಲಿರುವರು.

धातू क्षीणता व कमजोरपणा यांसाठीं

मदन मंजरी गोळ्या. (रजिस्टर्ड.)

या दिव्य गोळ्या रक्त व वीर्य सुधारून त्यांची चांगली वाढ करतात. पचन शक्ति सुधारून परसाकडे साफ होतें. त्याचप्रमाणें प्रत्येक प्रकारची अशक्तता दूर होऊन शरीर तेजदार व बळवान होतें. किं. ४० गोळ्यांच्या डबील रु. १.

रमण विलासिनी गोळ्या. रात्रौ फक्त १ गोळी दुधाबरोबर खाल्यानें इच्छेप्रमाणें वीर्यस्तंभन होते. किं. डबीस रु. १

नपुंसकत्वारी घृत. हा लेप पुरुषाच्या गुह्यभागावर लावला असतां सर्व रोग नाश पाऊन खरें पुरुषत्व प्राप्त होतें. किं. डबीस रु. १.

कुमटा एजंट :— माधव सांतप्पा शेणवी वेलेकेरी.

राजवैद्य नारायणजी केशवजी ब्रँचः— ३२३ काळबादेवी रोड मुंबई नं. २.

ಭಾಷಾಂತರಕರ್ತರಿಗೆ ಸುಸಂಧಿ!

ಸುಪ್ರಸಿದ್ಧವಾದದ್ದೂ, ಅನೇಕ ವಿದ್ಯಾ ಪಂಡಿತರಿಂದ ಚಲೋ ಅಭಿಪ್ರಾಯ ಪಟ್ಟದ್ದೂ ಆಗಿರುವ ಋಗ್ವೇದಿಯವರು ಬರೆದ "**आर्यांच्या सणांचा प्राचीन व अर्वाचीन इतिहास**" ಎಂಬ ಮರಾಠಿ ಪುಸ್ತಕವನ್ನು ಕನ್ನಡದಲ್ಲಿ ಭಾಷಾಂತರಿಸುವದದೆ. ಇದನ್ನು ಕೈಕೊಳ್ಳಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳತಕ್ಕದ್ದು.

Apply to:—
V. PRABHA & CO.
BOMBAY 4.

Copies can be had from:-
THE NORTH KANARA TRADING CO.
KARWAR.

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬಿ. ಯವರ

ಸುಗಂಧ ನಶ್ಯದ ಪುಡಿ.

(Registered Trade Mark.)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಶಿ, ಒಂಟಿತಲೆನೋವು ತಲೆಯುರಿಯು ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇರಿಲ್ಪಟ್ಟ ಈ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ. ಮೂರು ಪಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾದೀತು.

ಬುದ್ದಿ ಒಂದಕ್ಕೆ ಕ್ರಯ ರೂ. ೦-೪-೦. ವ್ಹಿ. ಪಿ. ೪ ಅ. ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ, ಅದ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ|| ಬಾ. ೫೧೦, ಪೇರ್ಕಟೌನ, ಮದರಾಸ

ಜಾಹೀರಾತು.

ತಾರೀಖು ೭-೪-೧೯೩೫ನೇ ಪತ್ರದಲ್ಲಿ ಪ್ರಸಿದ್ಧಿಪಡಿಸಿರುವ ನಾಮಾಂಕಿತ ಸುಪ್ರಸಿದ್ಧ ಪರಂಪರಾ ಜ್ಯೋತಿಷಿ ಕೇ. ಸಿ ನಾರಾಯಣಶಾಸ್ತ್ರಿ ಎಂಬವರು ಸ್ವಲ್ಪ ದಿವಸದಿಂದ ಶಿವಮೊಗ್ಗಾ ಡಿಸ್ಟ್ರಿಕ್ಟ ಸಾಗರದಲ್ಲಿ ಕೆಲವು ದಿವಸದ ಪ್ರೂತ ತಮ್ಮ ಮುಕ್ಕಾಂ ಮಾಡಿರುತ್ತಾರೆ. ಅವಶ್ಯವಿದ್ದ ಯಾವತ್ತೂ ಜನರು ಸದ್ರಿಯವರಿಗೆ ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡತಕ್ಕದ್ದು.

ಪತ್ತೆ:—

ಕೇರಳ ಜ್ಯೋತಿಷಿ

ಕೇ. ಸಿ. ನಾರಾಯಣ ಶಾಸ್ತ್ರಿ.
ಚಾಮರಾಜೇಂದ್ರ ಪೇಟೆ, ಪೋ. ಸಾಗರ,
ಡಿಸ್ಟ್ರಿಕ್ಟ- ಶಿವಮೊಗ್ಗಾ.

ವಿಶೇಷ] **ಅನುಭವಸಿದ್ಧ** [ಪಥ್ಯವಿಲ್ಲ.

ವನೌಷಧಿಮೂಲಿಕೆಗಳು.

ವಾಯುದುಮ್ಮಾನ (ನೆಮೋನಿಯಾ) ವಾಂತಿಭ್ರಾಂತಿ (ಕಾಲರಾ) ಅರ್ಧಾಂಗವಾಯು (ಪೆರಾಲಿಸಿಸ್) ಹುಚ್ಚು ವ ಸಾದಾ ನಾಯಿಕಡತ, ಸರ್ಪಸುತ್ತು, ಹೊಟ್ಟೆಯಲ್ಲಿ ಕೃತ್ರಿಮ ವಿಷಹಾಕಿದ್ದು (ಕೈಮಸಗು) ವಗೈರೆ ರೋಗಗಳಿಗೆ ಒಂದೇ ಒಂದು ಮೂಲಿಕೆಯಿಂದ ಖಾತ್ರಿಯಾಗಿ ತೀವ್ರ ಗುಣಬರುವದು. ಇವು ಬಹುಕಾಲದಿಂದ ಅನುಭವ ತಕ್ಕೊಂಡ. ಹಾಗು ಪ್ರತಿನಿತ್ಯ ಈಕಡೆಗೆ ಒಳಕೆಯಲ್ಲಿದ್ದು ಸಿಗುವ ಔಷಧಿಗಳ ತಾಜಾ ಮೂಲಿಕೆಗಳು! ಒಮ್ಮೆ ತರಿಸಿ ಅನುಭವ ತಕ್ಕೊಂಡರೆ ಖಾತ್ರಿಯಾದೀತು. ಕೂಳಿಲಾ ಔಷಧಿಗಳ ದ್ರಾವಕ (Tincture) ಸಹ ಬೇಕಾದ್ದು ಸೂಚಿಸಿದರೆ ಕಳುಹುವೆವು.

ವಾಯುದುಮ್ಮಾನದ ಬಗ್ಗೆ ಔಷಧಿ ಮೂಲಿಕೆ ತೊಲೆ ೧ಕ್ಕೆ	೦-೨-೦.
ಕಾಲರಾದ ಬಗ್ಗೆ " " "	೦-೨-೦
ಅರ್ಧಾಂಗ ವಾಯುವಿನಬಗ್ಗೆ	೦-೪-೦.
ನಾಯಿ ಕಡತದಬಗ್ಗೆ	೦-೪-೦.
ಸರ್ಪಸುತ್ತಿನ ಬಗ್ಗೆ	೦-೨-೦
ಹೊಟ್ಟೆಯಲ್ಲಿ ಕೃತ್ರಿಮ ಔಷಧಿ ಬಿದ ಬಗ್ಗೆ ತೊಲೆ ೧೦ಕ್ಕೆ	೦-೮-೦.
ರಕ್ತಶುದ್ಧಿ ವ ಮಲಶೋಧನೆ ಬಗ್ಗೆ ಮೂಲಿಕೆ ರಾತ್ತಲ ೧ಕ್ಕೆ	೧-೦-೦
ಮೋರಾವಳಾ (ನೆಲ್ಲಿಕಾಯಿ ಗುಳಂಬ) ರಾತ್ತಲ ೧ಕ್ಕೆ	೧-೦-೦

ರಾತುಗಟ್ಟಲೆ ಇದಾ ಅದಕ್ಕೂ ಹೆಚ್ಚು ತರಿಸುವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು. ಟಪಾಲ ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿ ಪತ್ರದ್ವಾರಾ. ಅನುಪಾನಪತ್ರ ಔಷಧಿ ಸಂಗಡ

ಎನ್. ಜಿ. ಹೆಗಡೆ, ಮಾಸ್ತೇರಿ,
ಪೋಸ್ಟ — ಬಂಕಿಕೋಡ್ಲ ಜಿ ಉತ್ತರ ಕಾನಡಾ.

ಮಳೆಗೆ ಮೊದಲೇ ಎಚ್ಚರಿಕೆ!

ಅತ್ಯುತ್ತಮ, ಸುಂದರ, ಬಾಳಿಕೆಯುಳ್ಳ, ಮಜಬೂತಾದ

ಸೂರ್ಯ ಛಾಪು!] ಛತ್ರಿಗಳು. [ಅಗ್ಗ! ವಿವಿಧ!!

ಪ್ರತಿಯೊಬ್ಬರಿಗೂ ಅನುಕೂಲವಾದ ಪಸಂದಿನ ಮಾಲು!

ದೇಶೀಯ ಕೈಗಾರಿಕೆ! ದೇಶೀಯರಿಗಾಗಿಯೇ!! ಆದುದರಿಂದ
ದೇಶೀಯರಿಗೆ ಖಾತರಿಯಾಗಿ ತೃಪ್ತಿಯಾಗುವದು!
ಕಾನಡಾ ಜಿಲ್ಲೆಯೊಳಗಿನ ಪ್ರಾಮುಖ್ಯ ಛತ್ರೀ ದುಕಾನುಗಳಲ್ಲಿ ಬಿಕರಿಗೆ ಇದೆ.

ಸೇಠ ನಾಗಜೀ ಪುರುಷೋತ್ತಮ್ ಮತ್ತು ಕಂಪನಿಯವರ
ಕಲ್ಲಿಕೋಟೆಯ ಕಾರ್ಖಾನೆಯ

ಸೂರ್ಯ ಛಾಪಿನ ಛತ್ರಿಗಳೇ ಛತ್ರಿಗಳು!

ದುಕಾನುದಾರರಿಗೆ ತಾತ್ಪರ್ಯವಿಟ್ಟು ಸವಲತ್ತು ಕೊಡಲಾಗುತ್ತದೆ.

ಪತ್ತೆ— **ಶ್ರೀನಿವಾಸ ರಂಗ ಪೈ, ಸಾವಕಾರ ಮಹಾಲ್**
ಮಂಗಳೂರು, ದ. ಕನ್ನಡ

ಕಿರ್ಲೋಸ್ಕರ ಪಂಪ.

ಬಾವಿಯೊಳಗಿನ ನೀರನ್ನು ಮೇಲಕ್ಕೆ ತರುವದರಲ್ಲಿ

ಕಿರ್ಲೋಸ್ಕರ ನೀರಿನ ಪಂಪು ಮೇಲ್ಪದ್ದಿರುತ್ತದೆ. ಸಣ್ಣ ಮಕ್ಕಳು, ಅಬಲೆಯರು ಈ ಪಂಪಿನಿಂದ ನೀರನ್ನು ಒಂದೇ ನಿಮಿಷದಲ್ಲಿ ಮೇಲಕ್ಕೆ ತರುವರು. ಪ್ರಪಂಚದಲ್ಲಿ ಮಿಕ್ಕ ಅಡಚಣೆಗಳಲ್ಲಿ ನೀರಿನ ತೊಂದರೆಯು ಸ್ವಾಭಾವಿಕವು. ಈ ಅಡಚಣೆಯು ಮೇಲಿನ ಉಪಾಯದಿಂದ ದೂರಾಗುವದು

ಪರದೇಶದಿಂದ ಬರುವ ಪಂಪುಗಳು ಬಹು ತುಟ್ಟಿ ಇರುವದರಿಂದ ಮಧ್ಯಮ ಜನರಿಗೆ ಅವುಗಳನ್ನು ಕೊಳ್ಳುವದಾಗುವದಿಲ್ಲ. ಇದನ್ನು ತಿಳಿದು ನಾವು ಈ ಪಂಪನ್ನು ಬಹು ಅಗ್ಗದಿಂದ ಕೊಡುತ್ತಿರುವೆವು. ಇದಲ್ಲದೆ, ಈ ಪಂಪಿನ ಬಿಡಿ ಭಾಗಗಳು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತಿರುವದರಿಂದ ಬೇಡಿದಾಗ ದೊರೆಯುತ್ತವೆ.

ಈ ಸೌಕರ್ಯವು ವಿದೇಶೀ ಪಂಪುಗಳನ್ನು ಕೊಂಡಲ್ಲಿ ದೊರೆಯದು.

ಕೇ. ಬಿ. ಜೋಶಿ ಮುಂಬೈ ಇವರು ನಮ್ಮ ಸೋಲ ಏಜಂಟರು.

ಸವಿಸ್ತರ ಸಂಗತಿಯ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ; ಜಿಲ್ಲಾ ಸಾತಾರಾ.

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೪೦ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಇದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದೇ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ವ್ಹಿ. ಪಿ. ಖರ್ಚ ಬೇರೆ.

ಅಮೃತಾಂಜನ ಡಿಪೋ, ಫೋರ್ಟ, ಮುಂಬಯಿ.

Printed and Published by Krishnarao Keshav Sheovi (Editor) at his Star of Kanara Press Kumta.

Reg No B. 1270 Friday, August 7th, 1925.

ಕಾನಡಾವೃತ್ತ.

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಫಕ್ತ ಕುಂಭಾಪುರಸ್ಥರ ಮಾಹಿತಿಗಾಗಿ.

ಮ್ಯುನಿಸಿಪಲ್ ಇಲೆಕ್ಷನ್ ಸಂಚಿಕೆ.

ಬಿಡಿ ಸಂಚಿಕೆಗೆ ಬೆಲೆ ೧ ಆಣೆ.

(ಕುಮಟಾ— ಕಾನಡಾವೃತ್ತ, ಶುಕ್ರವಾರ, ತಾರೀಖು ೭ ಮಾಹೆ ಅಗೋಸ್ತ ಸನ್ ೧೯೨೫ ನೇ ಇಸವಿ)

ನಗರದೇವಿಯ ಸ್ವಯಂವರ ಸಂಭಾಷಣೆ.

(ಅಂತಃಪುರದಲ್ಲಿ ಕುಂಭಾಪುರಿ ನಗರದೇವಿಯೂ, ದಾಸಿಯೂ ಮಾತುಗಳನ್ನಾಡುತ್ತ ಕುಳಿತಿದ್ದಾರೆ)

ದಾಸಿ— ನಾಳಿನ ಸೋಮವಾರ ನಿನ್ನ ಉತ್ಸವದ ದಿನ. ಸ್ವಯಂವರವು ಅಂದು ಜರಗುವದಿದೆ. ಹೊಸ ಹೊಸ ಮದುಮಗಂದಿರು ನಿನ್ನ ಸಹವಾಸಕ್ಕಾಗಿ ಅಂದು ನಾ ಮುಂದೆ, ನೀ ಮುಂದೆ ಎಂದು ಜಗ್ಗಾಡುವರು. ದೊಡ್ಡ ದೊಡ್ಡ ರುಮಾಲು ಕಟ್ಟಿಕೊಂಡು ಒಂದು ಒಂದು ಆಸನ ಹೂಡುವರು. ಈಗಿನ ಯಜಮಾನರ ನಡತೆಯಿಂದ ಬೇಸರ ಹೊಂದಿದ ನಿನಗೆ ಅಂದು ಮಹದಾನಂದವಾಗುವದಲ್ಲವೇ?

ನಗರದೇವಿ—ಯಾರ್ಯಾರು ಬರುತ್ತಾರೋ ಏನೋ! ಸಭ್ಯರು, ಪ್ರತಿಷ್ಠಿತರು ಬಂದರೆ ಮಾತ್ರ ಉಪಯೋಗ. ಹಳಬರೇ ಹೊಸ ವೇಷದಿಂದ ಬಂದರೆ, ನಾನೇನು ಮಾಡುವದು? ಬಂದವರೊಳಗಿಂದ ಆರಿಸುವದಲ್ಲವೇ? ಮೊನ್ನಿನ ೩ ನೇ ತಾರೀಖಿಗೆ ನನ್ನ ಅಧಿಪತ್ಯವನ್ನು ಬಯಸುವ ಪುಣ್ಯಾತ್ಮರ ನಾಮನಿರ್ದೇಶವಾಗುವದಿತ್ತು. ನೀನು ಹೋಗಿ ಅವರ ಹೆಸರುಗಳನ್ನು ತಂದು ತಿಳಿಸಬಹುದಲ್ಲವೇ? ಹೋಗು, ಬೇಗನೇ ಹೋಗು. ಮತ್ತು ಹೆಸರುಗಳನ್ನು ತಿಳಿದುಕೊಂಡು ಬಾ.

(ದಾಸಿಯು ಹೋಗಿ ನಗುತ್ತ ಬರುತ್ತಾಳೆ.)

ನಗರದೇವಿ—ಏನು ಸಂತೋಷದ ಸುದ್ದಿ! ನಗುವಿಯೇಕೆ? ದೊಡ್ಡ ದೊಡ್ಡ ಪ್ರತಿಷ್ಠಿತ ಗೃಹಸ್ಥರು ಈ ಸಲ ನನ್ನೊಡನೆ ಸಂಸಾರ ಮಾಡಬಯಸುವರೇ? ಹೋದ ಬಾರಿಯ ಕುಚೇಷ್ಟೆಗಳಿಂದ ನಾನು ಬೇಸತ್ತೆ!

ದಾಸಿ— ಅವರೆಲ್ಲರ ಹೆಸರುಗಳನ್ನು ನೋಡಿದ ಕೂಡಲೆ, ಒಮ್ಮೆ ನಗೆ ಬಂತು; ಈಗ ವ್ಯಸನವಾಗುತ್ತದೆ. ಎಂಥೆಂಥ ವಿರಾಧಿವೀರರು ಬಂದಿರುವರೆಂದು ನೀನೇ ನೋಡಿಕೋ. ಹಳಬರೂ ಹೊಸ ಬಾಶಿಂಗಗಳನ್ನು ಕಟ್ಟಿಕೊಂಡು ಬಂದಿರುವರು. ಹಲ್ಲುಬಿದ್ದ ಮುದುಕರೂ ನಿನ್ನಮೇಲೆ ಕಣ್ಣಿಟ್ಟಿರುವರು.

ನಗರದೇವಿ— ಆತನ್ಯಾರು? ಮುದುಕ ಅಜ್ಜನ್ಯಾರು ?

ದಾಸಿ—ನಿಮ್ಮ ಹೆರವಟ್ಟೆಯ ಕೃಷ್ಣ ಪ್ರಭುರ ಯುತವಂತನಂತೆ ! ಇವನಿಗೇಕೆ? ಬಾಶಿಂಗ ಕಟ್ಟಿಕೊಳ್ಳುವ ಕಾಂಕ್ಷೆಯಾಯಿತಪ್ಪಾ?

ನೆಂ—ಯಾರೇನೋ ಕುಂಟರು ಆತನಿಗೆ ಮುಂದೆ ಮಾಡಿರಬಹುದು.

ದಾಂ—ಇರಲಿ, ಆತನು ಬಾಶಿಂಗ ಬಿಡಿಸಿಕೊಂಡು ನಡೆದನಂತೆ ! ಹೋಗಲಿ.

ನೆಂ—ಇನ್ಯಾರು? ಹೊಸ ವೇಷ ಕಟ್ಟಿದ ಹಳಬರ್ಯಾರಾರು ಬಂದಿರುವರು ?

ದಾಂ— ವೆಂಗುರ್ಲೇಯ ಜಗನ್ನಾಥ ವಿಷ್ಣು ಗಾವಸ್ಕರ ಈತನು ಬಂದಿರುವನು. ಇವನಿಗೆ ನಿನ್ನಲ್ಲಿ ಯಾವ ಆಸಕ್ತಿಯಿದೆ, ನನಗೆ ತಿಳಿಯುವದಿಲ್ಲ. ಹೇಗೆ ಈತನು ನಿನ್ನ ಕಲ್ಯಾಣ ಮಾಡಬಯಸುತ್ತಾನೆಂಬುದೂ ತಿಳಿಯುವದಿಲ್ಲ. ನಿನ್ನಲ್ಲಿ ಆತನಿಗೆ ಗೋಪಾವ ನೆಲವಿಲ್ಲ. ಬಾಡಿಗೆ ಮನೆಯಲ್ಲಿದ್ದಾನೆ. ಗಿಬ್ಬ ಹ್ಯಾಸ್ಕೂಲಿನಲ್ಲಿ ನೌಕರನು. ಗಿಬ್ಬ ಹ್ಯಾಸ್ಕೂಲಿಗೂ, ನಿನಗೂ ಮುಂಚಿನಿಂದ ಹೊಂದಿ ಬರುವದಿಲ್ಲ. ಹೀಗಿದ್ದು, ಈತನು ಪುನಃ ಪುನಃ ನಿನಗೆ ಯಾಕೆ ಸೇರಬಯಸುತ್ತಾನೆ ?

ನೆಂ—ಆತನ ಗಿಬ್ಬ ಹ್ಯಾಸ್ಕೂಲಿಗೇನಾದರೂ ಗಂಟು ಪಡಕೊಳ್ಳಬೇಕೆಂಬ ಅಭಿಲಾಷೆಯಿರಬಹುದು. ಹೊಟ್ಟೆಯಲ್ಲಿ ಸೇರಿ ಕಾಲು ನೀಡುವ ಯುಕ್ತಿಯಿದ್ದಿದ್ದರೆ, ವೆಂಗುರ್ಲೇಯವನಿಗೆ ನನ್ನ ಮೇಲೆ ಎಂತಹ ಪ್ರೀತಿಯು? ಎಲ್ಲ ಕೃತ್ರಿಮ. ಈತನಿಗೆ ಆಶ್ರಯ ಕೊಡುವ ನನ್ನ ಮನಸ್ಸಿಲ್ಲ; ನೋಡು. ಈತನಿಗೆ ಕನ್ನಡವೂ ಬರುವದಿಲ್ಲ. ಪರಜಾತಿ ಮನುಷ್ಯನಿವನು. ಹೆರವಟ್ಟೆಯ ಶೇಷ ಕಾಮತನು ಪುನಃ ಬಾಶಿಂಗ ಕಟ್ಟಿಕೊಂಡು ಬಂದಿರುವನೇನು ?

ದಾಂ—ಅಹುದು. ಆತನೆಲ್ಲಿ ನಿನಗೆ ಬಿಡುತ್ತಾನೆ? ಮ್ಯುನಿಸಿಪಾಲಿಟಿಯನ್ನು ಸಂತೆ ಪೇಟೆಯನ್ನಾಗಿ ಮಾಡಿ ಈತನು ಕುಣಿದಾಡುತ್ತಾನೆ, ದಾಸಶೆಟ್ಟಿಯ ಮಗನ ದ್ವೇಷದಿಂದ ಈತನು ತುಂಬ ತುಳುಕುತ್ತಾನೆ. ಸೇಡು ತೀರಿಸಿಕೊಳ್ಳಲಿಕ್ಕೆ ಪುನಃ ಬಾಶಿಂಗ ಕಟ್ಟಿಕೊಂಡು ಬಂದಿರಬಹುದು. ಮೊನ್ನೆ ಏನೋ ೧-೩ ತಿಂಗಳ ಮಾಸ್ತರಿ ಬದಲಿಯ ಪ್ರಕರಣವಿತ್ತಂತೆ. ಅದರೊಳಗೆ ಇವನು ಶಿಕ್ಷಕರಿಗೆ ಮಾಡಿ ತನ್ನ ದ್ವೇಷವನ್ನು ಹೊರಗೆಡಹಿದನು.

ನೆಂ—ಇಂಥವನಿಗೆ ನಾನು ಹೇಗೆ ಆಶ್ರಯ ಕೊಡಲಿ ? ಇಂಥವರು ಬರದಿದ್ದರೆ ನನಗೆ ಒಳಿತಾಗುತ್ತಿತ್ತು. ಇವನಿಗೆ ನಾನು ಬರಮಾಡಿಕೊಳ್ಳುವದಿಲ್ಲ. ಈತನು ನನಗೆ ಬೇಡ. ಖಾಸಗಿ ದ್ವೇಷ ಹಿಡಿದು ನನ್ನ ಕೆಲಸ ಇವರು ಮಾಡಬಲ್ಲರೇನು? ಖಾಸಗಿ ಲಾಭಾಲಾಭಗಳ ಆಶೆಯಿಂದ ಇವರು ನನ್ನ ಸೆರಗು ಹಿಡಿಯಬಯಸುತ್ತಾರೆಂದು ಇವರ ಈ ವರೆಗಿನ ವರ್ತನದ ಮೇಲಿಂದ ಅನೇಕರು ಊಹಿಸುತ್ತಾರೆ. ಇವರಿಂದ ಕ್ಷೇಮವಿಲ್ಲ. ಮತದಾರ ಮಕ್ಕಳೇ, ಈತನಿಗೆ ಹೊರಗೆ ಹಾಕಿರಿ.

ದಾಂ— ರಾಮಕೃಷ್ಣ ಮಂಜನಾಥ ಕಮ್ತಿಯೂ ಬಂದಿದ್ದಾನೆ.

ನೆಂ—ಈತನು ಏಕೆ ಬಂದಿರುವನು? ಮೊದಲು ನಾನು ಈತನಿಗೆ ಆಶ್ರಯ ಕೊಟ್ಟಿದ್ದೆ. ನನ್ನಲ್ಲಿ ಬರ ಕೂಡದನೆ, ಈತನನ್ನು ನಾನು ದೂರತಳ್ಳಿರುವೆನು. ಇಂಥ ಬಲಹೀನರು ನನ್ನ ಕೆಲಸ ಮಾಡರು. ಮುಂದಿನ ಹೆಸರು ಹೇಳು ನೋಡುವ.

ದಾಂ—ಹೆರವಟ್ಟೆಯವರಿಗೆ ರಾಮಕೃಷ್ಣ ಕಮ್ತಿಯು ಬೇಕಂತೆ !

ನೆಂ—ಮತ್ಯಾರು ಬೇಕಂತೆ ? ಹೆರವಟ್ಟೆಯವರು ಆತನನ್ನೇ ಬೇಡಲು ಇವನು ಎಂಥ ಕೆಲಸ ಮಾಡಿರುವನು ? ಮುಂದೆ ಏನು ಕೆಲಸ ಮಾಡಬಲ್ಲನು? ಬಿಡು, ನಿನ್ನ ವಕೀಲಿ ಸಾಕು.

ದಾಂ—ಮಂಜ ಪೈರ ಉಪೇಂದ್ರನಿಗಾದರೂ ಆಶ್ರಯ ಕೊಡು. ಶೇಕ್ ಹೆಂಡ್ ಮಾಡಲಿಕ್ಕೆ ಈತನು ಬಹಳೇ ಅನುಕೂಲನಿರುವನು.

ನೆಂ—ಈತನು ಶೇಷ ಕಮ್ತಿಗೆ ಶೇಕಹೆಂಡ್ ಮಾಡುವವನಿವನು. ಕೆಲಸದ ಕ್ರಮವು ಗೊತ್ತಿಲ್ಲ. ಶೇಷ ಕಮ್ತಿಯೇ ಸೂಚನೆ ಮಾಡಲು ಇಲ್ಲದ ಬಳಿಕ, ಈತನೇಕೆ? ಬಿಡು, ಮುಂದಾಗು.

ದಾಂ—ಗಣಪತಿ ಭಾಗ್ವತರ ಸೀತಾರಾಮನೂ ಹುರುಪಿನಿಂದ ಮುಂದೆ ಬಂದಿರುವನು. ಆತನ ಒತ್ತು ನೋಡು !

ನೆಂ—ಸಾಹಸಿಗ ಹುಡುಗನು ! ಆತನು ಭಾಗವತರ ಮಗನಾದರೂ ಆಗಬಹುದು ! ಎಲ್ಲರಿಗೂ ಕುಣಿಸುತ್ತಾನೆ. ಈಗಿನ ಮ್ಯುನಿಸಿಪಾಲಿಟಿಯಲ್ಲಿ ನಡೆಯುತ್ತಿರುವ ತುಂಟತನಕ್ಕೆ ಆತನು ಬಹುಮಟ್ಟಿಗೆ ಕಡೆ

ಇಲೆಕ್ಷನದ ಹುಡುಗಾಟಿಕೆಗಳು; ಉಮೇದ್ವಾರರ ತಂಡು.

ಹಾಕಿದ್ದನು. ಆತನಿಗೆ ನಾನು ಮುದ್ದಿಟ್ಟು ಮಾಲಿ ಹಾಕುವೆನು. ಆತನು ನನಗೆ ಬೇಕೇ ಬೇಕು.

ದಾಂ—ಹಾಗಾದರೆ, ಆತನ ಸಹಕಾರಿಗಳಾದ ಕಾಗಾಲ ಅನಂತ ಪೈರ ಗೋವಿಂದನೂ, ಗಣಪಯ್ಯ ಶ್ಯಾನಭಾಗರ ಗಂಗಾಧರನೂ ಬಂದರೆ, ಅವರಿಬ್ಬರಿಗೂ ನೀನು ಮಾಲಿ ಹಾಕಿಬಿಡುವಿ.

ನೇಂ—ಹೌದು. ಅವರಿಬ್ಬರಿಗೂ ಮಾಲಿ ಹಾಕುವದು ಖಚಿತ. ಸೀತಾರಾಮನಿದ್ದಲ್ಲಿ ಅವರಿಬ್ಬರಿರಲಿಕ್ಕೇ ಬೇಕು; ಅಂದರೆ ಮಾತ್ರ ಶೋಭೆ.

ದಾಂ—ಅಂಕೋಲೆಯ ಕೇಶವ ನಾರಾಯಣಪೈ ಹಾಗು ಆತನ ತಕ್ಕನ ಮಗ ಪದ್ಮನಾಭ ಕೃಷ್ಣ ಪೈ ಇವರೂ ಸ್ವಯಂವರ ಮಂಟಪದಲ್ಲವತರಿಸುವರು.

ನೇಂ—ಕೇಶವಪೈರು ದೊಡ್ಡ ಮನುಷ್ಯರು. ಅವರಿಗೆ ಪುರಸತ್ತೇ ಸಿಗುವದಿಲ್ಲ. ನಮ್ಮಳ್ಳಿ ಶಾಲೆಯ ತಡಂಗದಲ್ಲಿ ಈ ದೊಡ್ಡ ಗೃಹಸ್ಥರಿಗೆ ಪ್ರಕರಣ ಹಿಡಿಲಿಕ್ಕೆ ಪುರಸತ್ತಿಗಲಿಲ್ಲೆಂದು ಇಡೀ ಕಮೀಟಿಯೇ ಮುಂದೆ ಹಾಕೋಣಾಯಿತು. ಇಷ್ಟು ಕಾರ್ಯಬಾಹುಲ್ಯದ ದೊಡ್ಡವರು ನನ್ನಂಥ ಬಡವಿಗೇಕೆ? ಮಾಲಿ ಹಾಕಿದ ಕೂಡಲೆ ಇವರ ಕೆಲಸವಾಯಿತು. ಕಡೆಗೆ ನಾನು ಇವರ ಮಠ ಕಾಯುತ್ತ ಕುಳಿತರಾಯಿತು. ಪದ್ಮನಾಭ ಪೈರು ಗಿಬ್ಬ ಹೈಸ್ಕೂಲಿನಲ್ಲಿ ನೌಕರರು. ನನ್ನಲ್ಲಿ ಇವರಿಗೇನೂ ಹಿತಸಂಬಂಧವಿಲ್ಲ. ನನ್ನ ಸೇವೆ ಮಾಡುವ ಮನಸ್ಸಿದ್ದರೆ, ತಮ್ಮ ಊರಲ್ಲೊಂದು ನನ್ನ ಸ್ಥಾನವನ್ನು ರಚಿಸಿ ಸೇವೆ ಕೂಡಲಿ. ಇಲ್ಲಿ ಈತನ ಗರಜಿಲ್ಲ. ಬಿಡು. ದೀವಗಿ ಪಾಂಡುರಂಗನ ಕಥೆಯೇನು? ಆತನು ಮಂಟಪದಲ್ಲಿ ಬರಲಿಕ್ಕಿಲ್ಲವೇ? ಮುಪ್ಪಿನ ಮುದುಕ!

ದಾಂ—ಮುಪ್ಪಿನ ಮುದುಕನೆಂದು ತಿಳಿಯಬೇಡ. ಆತನಿಗೂ ಹುರುಪಿದೆ. ಆತನೂ ಬಾಶಿಂಗ ಕಟ್ಟಿಕೊಂಡಿರುವನು. ಆದರೆ ಕೇಳುವವರ್ಯಾರಿಲ್ಲ. ಅದರಿಂದ ಪೇಚಾಡುತ್ತಿದ್ದಾನೆ. ಆತನು ನಿನ್ನಲ್ಲಿ ಸೇರಲಾರನು. ನಿನಗೂ ಆತನ ಮೇಲೆ ಎಲ್ಲಿ ಬಯಕೆ ಇದೆ? ದೇಶಬಂಧು ದಾಸರ ನಿಧನದ ಠರಾವು ಮಂಜೂರಾಗುವಾಗ ಆತನು ತಟಸ್ಥನಿದ್ದನು. ಆ ಬಗ್ಗೆ ನೀನೇ ನನ್ನ ಹತ್ತರ ಬಹಳ ದೂರಿದ್ದೆ. ಈಗ ನೀನು ಆತನನ್ನು ವರಿಸುವಿಯೇನು?

ನೇಂ—ಅದಕ್ಕಾಗಿ ನಾನು ಹೇಳಲಿಲ್ಲ. ಆತನು ಹುರುಪಿನವನು. ಆತನ ಹೆಸರು ನೀನು ಹೇಳಲಿಲ್ಲೆಂದು ಕೇಳಿದೆನು ಇಷ್ಟೇ. ಗಿಬ್ಬ ಹೈಸ್ಕೂಲಿನ ಇನ್ನೊಬ್ಬ ಶಿಕ್ಷಕನು ಮಂಟಪದಲ್ಲಿ ಕಾಣುವನೇನು?

ದಾಂ—ಯಾರು, ಮರ್ಕೂ ಮಾಸ್ತರನೋ? ಅಹುದು. ಆತನು ಬರುವವನಿದ್ದಾನೆ, ಹೊಸ ಬಾಶಿಂಗ ಕಟ್ಟಿಕೊಂಡಾದರೂ ಬಂದಾನು. ಈತನಿಗೆ ಶಾಲೆಯ ಕೆಲಸ ಮಾಡಲಿಕ್ಕೆ ಆರೋಗ್ಯ ನೆಟ್ಟಗಿಲ್ಲದಿದ್ದರೂ, ಊರ ಉಸಾಬರಿ ಬಹಳ ಬೇಕು. ಸಹಕಾರಿ ಸಂಘದಲ್ಲಿ ಈತನಿದ್ದಾನೆ. ನಿನ್ನ ಆಶ್ರಯವೂ ಬೇಕು. ಒಂದರಿಂದಲೇ ತೃಪ್ತಿ ಹೊಂದುವವನಲ್ಲ. ಇನು ನಿನ್ನ ಕಲ್ಯಾಣದ ಚಿಂತೆ!

ನೇಂ—ಆತನು ನನ್ನಲ್ಲಿ ಬಂದು ಮಾಡುವನೇನು? ಶಾಲೆಯಲ್ಲಿ ಹುಡುಗರಿಗೆ ಸರಿಯಾಗಿ ಪಾಠ ಕಲಿಸಿದರೆ ಸಾಕು. ಆತನಿಗೆ ನಾನೆಲ್ಲಿ ಬರಮಾಡಿಕೊಳ್ಳುತ್ತೇನೆ? ನಾನು ಕೇಳಿದ್ದು ಎಸ್. ವ್ಹಿ. ಕಾಮತನ ಸುದ್ದಿ.

ದಾಂ—ಅವನೋ? ಅವನೂ ಬರುವನು. ಆದರೆ, ಆತನಿಗೆ ನಿನ್ನ ಮಕ್ಕಳು ಆಶ್ರಯ ಕೊಡುವ ಚಿನ್ಹ ತೋರುವದಿಲ್ಲ. ಶಾಲೆಯ ಪ್ರಕರಣಗಳಲ್ಲಿ ಈತನು ಮಾಡಿದ ಕೃತ್ಯಗಳಿಂದ ಮಕ್ಕಳು ಬೇಸರಪಟ್ಟಿರುವರೋ ಏನೋ! ನಿನ್ನ ಕೃಪೆಯ ಮೇಲೆ ಆತನು ನಂಬಿಗೆಯನ್ನಿಟ್ಟು ಬಂದಿರುವನು. ಅವನಿಗೇನು ಹಿತಸಂಬಂಧವಿಲ್ಲ. ನಿನ್ನ ಇಷ್ಟದಂತೆ ನಡಕೊ. ಹೊಸಬರ ಸುದ್ದಿ ಹೇಳುತ್ತೇನೆ ಕೇಳು. ಹೊಸಬರೆಂದ ಕೂಡಲೆ ಮುಂಚೆ ನನಗೊಂದು ನಗೆ ಬರುತ್ತದೆ.

ನೇಂ—ಹಾಗೆ ಯಾಕೆ?

ದಾಂ—ಏನು ಹೇಳುವದು? [illegible] ಕೆಲಸ ಮಾಡುವ ನೋಟೀಜರ ಮುಗಳಿನ ಸಂಗಪ್ಪನೂ ಒಬ್ಬ ಉಮೇದವಾರನು! ಮಿರ್ಜಾನ ಪೇಟೆಯಲ್ಲಿ ಅಂಗಡಿಯಿಟ್ಟ ವೆಂಕಟೇಶ ಶ್ಯಾನಭಾಗ ಅನಂತನೂ ಒಬ್ಬ ಉಮೇದವಾರನು. ಈತನ ಅಂಗಡಿಯ ಭಿಕ್ಕು ಪಿಶೋಟಿ ಪ್ರಭುನೂ ಒಬ್ಬ ಉಮೇದವಾರ. ಸಂತ ವಿಠೋಬದ ರಘು ಶ್ಯಾನಭಾಗನೂ ಮದುವೆ ಚಪ್ಪರದಲ್ಲಿ ಸೇರುವನು. ಸಂತೆಯ್ಯಾ ಸುಬ್ರಾಯ ಕಿಣಿಯಂತೆ, ಈತನದೊಂದು ಅಂಗಡಿಯು ದೇವರಹಕ್ಕಲದಲ್ಲಿದೆ, ಈತನೂ ದುಗ್ಗಾಲಿಗೆಂದು ಬಾಶಿಂಗ ಸುತ್ತಿಕೊಂಡಿರುವನು! ಹೊನ್ನಾವರದ ವೆಂಕಟೇಶ ಕೃಷ್ಣ ಶ್ಯಾನಭಾಗನೂ ಬರಲಿರುವನು. ಈತನು ಯಾವ ಸಾರ್ವಜನಿಕ ಸೇವೆ ಮಾಡಿದವನೆಂದು ನನಗೇನು ಗೊತ್ತಿಲ್ಲ! ನೌಕರಿ ಮಾಡಿದರೂ ತಿಳಿಯಲಿಲ್ಲ.

ನೇಂ—ಎಂಥ ಹುಡುಗಾಟಿಕೆಯಿದು! ಚೇಷ್ಟೆ ಏನು?

ದಾಂ—ಇಷ್ಟಕ್ಕೇ ಮುಗಿಯಲಿಲ್ಲ. ನಾತವರರೂ ಚಪ್ಪರದಲ್ಲಿ ಒಳನುಗ್ಗಿರುವರು! ಒಬ್ಬರಿದ್ದರೆ, ಯತ್ನ ಮಾಡಿದರೆ ನೀನಾಗಿ ಹಿಂದುಳಿದವರನ್ನು ಬರಮಾಡಿಕೊಳ್ಳುತ್ತಿದ್ದೆ. ಹಿಂದುಳಿದವರು ಮುಂದುವರಿಯುವ ಸಂಭ್ರಮದಲ್ಲಿ ಐಕ್ಯಭಂಗ ಮಾಡಿಕೊಂಡಿರುವರು. ಪಟೇಲ ಗೋಳಿ ತಿಮ್ಮಣ್ಣ ನಾಯ್ಕನು ಒಂದು ಬದಿಗೆ; ನಾರಾಯಣ ಗೋವಿಂದ ನಾಯ್ಕನು ಇನ್ನೊಂದು ಬದಿಗೆ. ನಾಗೇಶ ದಾಸ ಶ್ಯಾನಭಾಗನೂ ಮುಂದಾಗಿ ಬಂದಿರುವನು. ಇವನು ಯಾವ ಸೇವೆ ಮಾಡಿರುವನೋ ಏನೋ? ಏನು ಮಾಡ ಬಂದಿರುವನೋ ಏನೋ! ಗಣಪತಿ ತಿಮ್ಮಣ್ಣ ಹೆಬ್ಬಾರನೂ ಬರುವನಂತೆ! ಉದ್ದಾ ಶೆಟ್ಟರ ಸೌಕಾರ ಮಾರು ರಾವು ಗಾವಡಿಗೆ ನೋಡು! ಆತನೂ ಬಾಶಿಂಗ ಕಟ್ಟಿಕೊಳ್ಳುವ ತಯಾರಿಯಲ್ಲಿರುವನು.

ನೇಂ- ಯಾಕೆ ಹೀಗೆ ಮರುಳು ಹಬ್ಬಿದೆ?

ದಾಂ—ಮತ್ತೂ ಕೇಳು. ಫೋರೆಸ್ಟರ ಗಾರ್ಡನಾಗಿ ಪೆನ್ಶನು ಪಡೆಯುತ್ತಿರುವ ಗಣಪಯ್ಯ ಕೃಷ್ಣ ಗೌರಯ್ಯನೂ ಇಳಿ ಪ್ರಾಯದಲ್ಲಿ ನಿನ್ನ ಸೇವೆಗೆ ಬದ್ಧನಾಗಿ ನಿಂತಿರುವನು. ಶಂಕರ ಬಾಲಕೃಷ್ಣ ದುಭಾಷಿಯಂಥ ಗಾರ್ಡನು ಲೆಜಿಸ್ಲೇಟಿವ್ಹ ಕೌನ್ಸಿಲಿನ ಸಭಾಸದನಾಗುತ್ತಿದ್ದರೆ, ನಾನೇಕೆ ನಗರದೇವಿಯ ಅಂತಃಪುರದಲ್ಲಿ ನಲಿಯಬಾರದು? ಎಂಬುದಾಗಿ ಈತನ ಆಲೋಚನೆಯೋ ಏನೋ! ಅದಕ್ಕಾದರೂ ಒಕ್ಕಟ್ಟು ಬೇಕಲ್ಲವೇ?

ನೇಂ—ಹಾಗೆಂದರೆ,—ಮೊಗೇರ ಜಾತಿಯಲ್ಲಿಯೂ ಇತ್ತಟ್ಟು ಬಿದ್ದಿದೆಯೋ?

ದಾಂ—ಏನು ಹೇಳಲಿ? ನಿನ್ನ ಮೊಗೇರ ಮಕ್ಕಳೂ ಒಕ್ಕಟ್ಟಿನಿಂದಿಲ್ಲ. ಅಣ್ಣಪ್ಪಾ ಶಿವಪ್ಪಾ ಮೊಗೇರ ಎಂಬವನೂ ಸಣ್ಣ ಬಾಶಿಂಗ ಕಟ್ಟಿಕೊಂಡು ಮುಂದೆ ನುಗ್ಗುತ್ತಿರುವನು. ಈತನು ನಿನ್ನ ರಾಮಚಂದ್ರ ಪೈರ ಅಣ್ಣಪ್ಪನ ಮನೆಯ ವಸೂಲಿಯ ಆಳು.

ನೇಂ—ಏನು? ಅಣ್ಣಪ್ಪೈಯ ಆಳೋ! ನನ್ನ ಕೈ ಹಿಡಿಯಬಯಸುತ್ತಾನೆ, ಅಣ್ಣಪ್ಪೈಯು ಮದುವೆ ಚಪ್ಪರದಲ್ಲಿ ಕಾಣಲಿಕ್ಕಿಲ್ಲವೇ? ಆತನ ಕೈ ಹಿಡಿಯಲು ನಾನು ಆತುರನಾಗಿದ್ದೇನೆ ಆತನ ಆಳು ಉಮೇದವಾರನಾಗಿ ಮುಂದೆ ಬಂದದ್ದರಿಂದ ಆತನು ಹಿಂದಿರಲಿಕ್ಕೆ ಸಾಕು ಅಲ್ಲವೇ? ಆಳಿನೊಡನೆ ಒಡೆಯನು ಮೇಲಾಟ ನಡಿಸುವನೇ?

ದಾಂ—ಅದೇನು ನನಗೆ ಗೊತ್ತಿಲ್ಲ. ಅಣ್ಣಪ್ಪೈಯೂ ಬಾಶಿಂಗ ಕಟ್ಟಿಕೊಂಡು ಬಂದೇ ಬರುವನು. ಆ ಬಗ್ಗೆ ನಿನಗೆ ಚಿಂತೆ ಬೇಡ. ಆತನೊಡನೆ ಆತನ ಅವಿಭಕ್ತ ಕುಟುಂಬದ ಚಿಗಪ್ಪ ಮ್ಹಾಳಪ್ಪನೂ ಬರಲಿರುವನು. ಸ್ವಯಂವರದ ವರೆಗೆ ನಿರೀಕ್ಷಣೆ ಮಾಡಲಿರುವೆನೆಂದು ತೋರುವದಿಲ್ಲ. ಹ್ಯಾಗೂ ಇರಲಿ, ಒಂದು ಚಳೋ ಸುದ್ದಿ ಹೇಳುತ್ತೇನೆ.

ನೇಂ—ಅದೇನು?— ಅದೇನು?

ದಾಂ—ಕಲ್ಯಾಣಪುರಕರ ಶ್ರೀಪಾದನೂ ನಿನ್ನ ಸೇವೆಗೆ ತಯಾರಾಗಿ ಬಂದಿರುವನು.

ನೇಂ—ಅಸಹಯೋಗಿ ಸನ್ಯಾಸಿಯು ನನ್ನೊಡನೆ ಸಂಸಾರ ಮಾಡಲು ಬರುವನೋ? ಅತ್ಯಾನಂದವಿದು! ಆತನೊಡನೆ ಆತನ ಸರಿಕ ಮಿತ್ರರಾದ ಜನಾರ್ದನ ಪಂಡಿತ, ಗಣೇಶ ಶಾಸ್ತ್ರಿಗಳೂ ಬರಲಿ ಅವರಿಗೂ ನಾನು ಅತ್ಯಾನಂದದಿಂದ ಬರಮಾಡಿಕೊಳ್ಳುವೆನು. ಇಂಥ ಸಭ್ಯ ಊರ ಹಿತಸಂಬಂಧವಿದ್ದ ಯಜಮಾನರು ನನಗೆ ಬೇಕು, ಅವರ ಹೆಸರು ಹೇಳಿದ ಕೂಡಲೆ ನನಗೆ ಪರಮಾನಂದವಾಯಿತು. ಅವರು ನನ್ನ ಕಾರಭಾರವನ್ನು ಸುಸೂತ್ರವಾಗಿ ನಡಿಸಿದರು; ನಿರಪೇಕ್ಷ ಬುದ್ಧಿಯಿಂದ ನಡಿಸಿದರು. ಅಂಥವರೇ ನನಗೆ ಬೇಕು. ಮೂವರೂ ಬರಲಿ. ಮೂವರಿಗೂ ನಾನು ಸತ್ಕಾರದಿಂದ, ಸಂಭ್ರಮದಿಂದ ಬರಮಾಡಿಕೊಳ್ಳುವೆನು.

ದಾಂ—ಜನಾರ್ದನ ಪಂಡಿತ, ಗಣೇಶ ಶಾಸ್ತ್ರಿಗಳು ಮಂಟಪದಲ್ಲಿ ಕಾಣಲೊಲ್ಲರು, ಮಂಟಪದಲ್ಲಿ ಸೇರಲಿರುವರೆಂದು ಸುದ್ದಿಯೇ ಹೊರತು, ಅವರು ಬರಲಿಲ್ಲ. ಹುಡುಗಾಟಿಕೆಯಲ್ಲಿ ಸೇರಲೊಪ್ಪಲಿಲ್ಲವೋ ಏನೋ?

ನೇಂ—ಇನ್ನ್ಯಾರು ಬರಲಿರುವರು?

ದಾಂ—ಚಿತ್ರಿಗಿಯ ನರಸಿಂಹ ಶ್ರೀನಿವಾಸ ಶ್ಯಾನಭಾಗನೂ ಬರಲಿರುವನು. ಆತನ ಪೂರ್ವಸೇವೆಯೇನು ಇರುವದಿಲ್ಲ. ಊರಲ್ಲಿ ಹಿತಸಂಬಂಧವಿದ್ದವನು! ಆತನೊಡನೆ ಆತನ ಮನೆಯ ನಾಗಪ್ಪ ಶ್ಯಾನಭಾಗರ ಯಶವಂತನೂ ಮದುವೆ ಚಪ್ಪರದಲ್ಲಿ ಗಡಿಬಿಡಿ ಮಾಡುವನು. ಆದರೆ, ಆತನು ಕೊನೆತನಕ ನಿನ್ನ ನಿರೀಕ್ಷಣೆ ಮಾಡುವನೆಂದು ತೋರುವದಿಲ್ಲ. ಹನುಮಂತ ಶ್ಯಾನಭಾಗರ ರಾಮನೂ ಬಾಶಿಂಗ ಕಟ್ಟಿಕೊಂಡಿರುವನು. ಇವನ ಸಾರ್ವಜನಿಕ ಸೇವೆಯು

ಮತದಾರ ಮಕ್ಕಳಿಗೆ ನಗರದೇವಿಯ ಸಂದೇಶ.

ನಿನಗೆ ಗೊತ್ತಿದ್ದದ್ದೇ. ಶ್ರೀ ವೆಂಕಟರಮಣ ಹಾಗು ಶ್ರೀ ಶಾಂತೇರಿ ಕಾಮಾಕ್ಷಿ ದೇವಾಲಯಗಳ ಆಡಳಿತೆಯನ್ನು ಕೊಟ್ಟದ್ದಕ್ಕೆ ಈತನು ಊರಲ್ಲಿ ದೊಂಬಿಯನ್ನೆಬ್ಬಿಸಿಬಿಟ್ಟನು. ಇಂಥವನಿಗೆ ನಿನ್ನಮೇಲೆ ಈಗ ಮನಸ್ಸಾಗಿದೆ. ಇವನೇನು ಒಳಿತು ಮಾಡಬಲ್ಲನ? ಈತನನ್ನು ಧಿಕ್ಕರಿಸಲೇಬೇಕು.

ನೆಂ—ನೀನಾಗಿ ನನಗೆ ಹೇಳಬೇಕಾಗಿಲ್ಲ. ನಾನು ಅರಿತಿರುವೆನು. ಈತನ ಕಾರ್ಯಕ್ಷಮತೆಯನ್ನು ನೀನು ನನಗೆ ಹೇಳಬೇಕೆಂದಿಲ್ಲ. ಪೂರ್ವ ಚರಿತ್ರೆಯ ಮೇಲಿಂದ ನಾನು ಇವನಿಗೆ ಆಶ್ರಯ ಕೊಡುವೆನೇ?

ದಾಂ—ಘನುಮ್ಯಾ ಶೇಟ ಯಾನೆ ಲಕ್ಷ್ಮೀದಾಸ ಹಂಸರಾಜ ಶೇಟ ಎಂಬ ಗುಜರಾಥನೂ ಸ್ವಯಂವರ ಮಂಟಪದಲ್ಲಿ ನೇರಲಿರುವನು. ಈತನು ಕಚ್ಛ-ಮಾಂಡವಿಗೆ ಹೋಗಿದ್ದಾನೆ.

ನೆಂ—ಕಚ್ಛ-ಮಾಂಡವಿಯಿಂದ ನನಗೇನು ಉಪಕಾರ ಮಾಡಬಲ್ಲನು? ಬಿಡು. ಮತಸ್ವಾತಂತ್ರ್ಯವನ್ನೂ ಕಾಣಲೊಲ್ಲನು. ಅವರ ಸುದ್ದಿಯೇನು?

ದಾಂ—ಅವರೋ! ಇಬ್ಬರು ಬರುವರು. ಅವರಲ್ಲೊಬ್ಬನನ್ನು ನೀನು ಹೆಕ್ಕಿ ತೆಗೆದರಾಯಿತು. ಅಬಿದಿನ ಇಬ್ರಾಹಿಮ್ ಇವನೊಬ್ಬನು; ಸಯ್ಯದ ಹುಸೇನ ಸಯ್ಯದ ಕಾಸಿಮ ಈತನು ಇನ್ನೊಬ್ಬನು. ಇಬ್ರಾಹಿಮನ ಅಬಿದಿನನು ಬಹಳೇ ಚಟುವಟಿಕೆಯುಳ್ಳವನು. ಈತನಿಗೇ ನೀನು ವರಿಸು.

ನೆಂ—ನಾಳಿನ ಸೋಮವಾರಕ್ಕೆ ದೇವರು ಬುದ್ಧಿ ಕೊಟ್ಟಂತೆ ನಡೆಯುತ್ತೇನೆ. ಬಂದವರೊಳಗಿಂದ ೧೨ ಸಭ್ಯ ಗೃಹಸ್ಥರನ್ನು ನಾನು ಹೆಕ್ಕಿ ತೆಗೆಯಲೇ ಬೇಕು. ಮತದಾರ ಮಕ್ಕಳಿಗೆ ನೀನು ಧೈರ್ಯ ಹೇಳು. ಶಿಷ್ಟ ಶಿಕ್ಷಿತರಿಗೆ ಮುಂದೆಮಾಡಿ ನನಗೆ ದುಃಖಕೊಡದಂತೆ ಜಾಗರೂಕರಾಗಿರಲು ಅವರಿಗೆ ಹೇಳು. ನನ್ನ ಆಧಿಪತ್ಯವನ್ನು ಕೈಕೊಂಡು ಊರಲ್ಲಿ ದೊಂಬಿ ಎಬ್ಬಿಸುವವರು ಚಪ್ಪರದಲ್ಲಿ ಸೇರದಂತೆ ಅವರೇ ಉಪಾಯಯೋಜನೆ ಮಾಡಬೇಕು. ನೋಡುವ ಏನೇನಾಗುತ್ತದೆಂದು.

ದಾಂ—ನೋಡುವದೇನು? ಕೇಳುವದೇನು? ಕೇಳು ಊರೊಳಗಿನ ಸುದ್ದಿ. ಊರಲ್ಲೆಲ್ಲ ಪಕ್ಷಭೇದಗಳಾಗಿ ನಿನ್ನ ಮಕ್ಕಳ ಪ್ರೀತಿಯನ್ನು ಹಿತ್ತಾಯದಿಂದ ಪಡಕೊಳ್ಳುವ ಕ್ರಮ ನಡೆದಿದೆ. ಸಾವುಕಾರರು ಸಾಲತಗಾದೆ ಮಾಡುವರು, ಒಡೆಯರು ಒಕ್ಕಲಿಗರಿಗೆ ಹೊರಹಾಕುವ ಯತ್ನ ಮಾಡುತ್ತಿರುವರು. "ನಿನ್ನ ವ್ಹೋಟು ನನಗೆ ಕೊಡು; ನಗರ ದೇವಿಗೆ ನನ್ನ ಮೋಹ ಹೆಚ್ಚು. ಇಲ್ಲದಿದ್ದರೆ, ನಿನ್ನ ಕೇಸು ಮಾಡುವೆನು, ಮನೆಯೊಳಗಿಂದ ಹೊರಹಾಕುವೆನು. ಸಾಲ ವಸೂಲಿಗಾಗಿ ಕೋರ್ಟಿಗೆ ಹೋಗಿ ನಿನ್ನ ತಲೆಹೊಡೆಯುವೆನು, ಗೇಣಿ ಭೂಮಿ ತಪ್ಪಿಸುವೆನು. ಹಾಗೆಮಾಡುವೆನು; ಹೀಗೆಮಾಡುವೆನು." ಇತ್ಯಾದಿ ಕರ್ಮಗಳು ಊರಲ್ಲಿ ನಡೆಯುತ್ತಿವೆ. ನಿನ್ನ ಮತದಾರ ಮಕ್ಕಳೆಲ್ಲರೂ ಭಯಾಭೀತರಾಗಿರುವರು. ಒಬ್ಬರು ಹಿತ್ತಲು ಕೊಟ್ಟ ಒಡೆಯರು; ಇನ್ನೊಬ್ಬರು ಸಾಲಕೊಟ್ಟ ಸಾವುಕಾರರು; ಮತ್ತೊಬ್ಬರು ಗೇಣಿ ಭೂಮಿ ಕೊಟ್ಟ ಒಡೆಯರು; ಹಿತ ಬಯಸುವ ಹಿತಚಿಂತಕರು ಬೇರೆ; ಕಷ್ಟಕಾಲದಲ್ಲಿ ನೆರವಾದವರು ಬೇರೆ; ನಿನ್ನ ಸೇವೆ ಮಾಡಲು ನಿರಪೇಕ್ಷ ಬುದ್ಧಿಯಿಂದ ಮುಂದಾದವರು ಬೇರೆ; ನಿನ್ನಲ್ಲಿ ಸೇರಿಕೊಂಡು, ಅಧಿಕಾರ ಲೋಲುಪರಾಗಿ ಸೇರಿಕೊಂಡು ಸ್ವಾರ್ಥ ಸಾಧಿಸುವವರು ಬೇರೆ; ಹೀಗೆಲ್ಲ ಭಿನ್ನ ಭಿನ್ನ ಹಿತಸಂಬಂಧಗಳಿಂದ ಮತದಾರ ಮಕ್ಕಳು ಕಂಗೆಟ್ಟು ಹೋಗಿರುವರು. "ವ್ಹೋಟು ಬೇಡ; ಊರು ಬೇಡ; ಈ ಸಂಸಾರ ಬೇಡ; ಒಡೆಯರೊಳಗಿನ ಜಗಳಾಟ ಬೇಡ; ಬ್ರಿಟಿಶರ ಸ್ವರಾಜ್ಯಾಧಿಕಾರ ಬೇಡ; ದೇಶ ಬೇಡ; ದೇಶಾಂತರಕ್ಕೆ ಹೋಗುವದೇ ಲೇಸು" ಎಂದು ಬಡಬಗ್ಗ ನಿರಪರಾಧಿ ಮಕ್ಕಳು ಗೋಳಿಡುತ್ತಿರುವರು. ಏನು ಮಾಡುವದು? "ವ್ಹೋಟು ಇಲ್ಲದಿದ್ದರೆ, ನಾನು ಸುಖದಿಂದ ಇರುತ್ತಿದ್ದೆನಲ್ಲಾ!" ಎಂದು ಮೊರೆಯಿಡುತ್ತಿರುವರು.

ನೆಂ—ಅವರಿಗೆ ಹೇಳು. ಅವರು ಯಾರಿಗೂ ಹೆದರಬಾರದು. ಒಡೆಯರು-ಒಕ್ಕಲು ಎಂಬ ಸಂಬಂಧವನ್ನು ಮರೆಯ ಹೇಳು. ಆ ಭೇದವು ವ್ಹೋಟಿಗೆ ಇಲ್ಲ. ಅದನ್ನು ವಿಚಾರಿಸದೆ ನನ್ನ ಕಲ್ಯಾಣವನ್ನೇ ಚಿಂತಿಸಿ ವ್ಹೋಟು ಕೊಡಹೇಳು. ಒಡೆಯರು ಒಕ್ಕಲಿಗೆ ಹೆದರಿಸುವದು, ಸಾವುಕಾರರು ಸಾಲಗಾರರಿಗೆ ಹೆದರಿಸುವದು, ಯಾಕೆ ಗೊತ್ತದೆಯೋ? ಅವರು ಹೆದರುತ್ತಾರೆಂದು. ಹೆದರುವವರಿಗೆ ಹೆದರಿಕೆಯು ಹೆಚ್ಚಾಗುತ್ತದೆ. ಮಕ್ಕಳು ಹೆದರುತ್ತಾರೆಂದು ಹೆದರಿಸುತ್ತಾರೆ. ಹೆದರದೆ ನಡಕೊಳ್ಳಲಿ; ಅಂದರೆ, ಹೆದರಿಸುವವರು ಯಾರೂ ಇಲ್ಲ. ಬಡವರಿಗೆ ದೊಡ್ಡವರ ಆಶ್ರಯ ಬೇಕಾದರೆ, ದೊಡ್ಡವರಿಗಾದರೂ ಬಡವರ ಆಶ್ರಯವು ಬೇಕೇ ಬೇಕು. ಬಡವರು ದೊಡ್ಡವರಿಗೆ ನೆರವಾಗದಿದ್ದರೆ, ದೊಡ್ಡವರ ದೊಡ್ಡಸ್ತನವು ಘಳಿಗೆಯೊಳಗೆ ಮಾಯವಾಗುವದು. ಇದನ್ನು ನನ್ನ ಎಲ್ಲ ಮಕ್ಕಳು ಅರಿತಿರಲಿ. ದೊಡ್ಡವರ ಮರ್ಜಿಯಂತೆ ವರ್ತಿಸಬೇಕೆಂದು ಬಡವರಿಗೆ ವ್ಹೋಟು ಕೊಟ್ಟಿಲ್ಲ. ಸ್ವತಂತ್ರ ವಿಚಾರದಿಂದ, ನಿಸ್ಪೃಹ ಗೃಹಸ್ಥರಿಗೆ ಕಂಡು ಹಿಡಿದು ಅವರಿಗೇನೇ ಅಧಿಕಾರ ಸಿಂಹಾಸನದಲ್ಲಿ ಕೂಡ್ರಿಸಲು ಮತದಾನವಾಗಿರುವದು. ಇದನ್ನೂ ನನ್ನ ಮಕ್ಕಳು ಅರಿತಿರಲಿ. ಸಾವುಕಾರರಾದರೂ ಎಚ್ಚರಿಕೆಯಿಂದಿರಬೇಕು. ಪ್ರಜೆಗಳನ್ನು ಪೀಡಿಸುವದು ಧರ್ಮವಲ್ಲ; ನೀತಿಯಲ್ಲ; ಕೊನೆಗೆ ಕ್ಷೇಮಕರವಲ್ಲ. ಈಶಕೃಪೆಯಿಂದ ಪ್ರಾಪ್ತವಾದ ಸಂಪದ್ಬಲವನ್ನು ಆತ್ಮಪ್ರತಿಷ್ಠೆಗಾಗಿ [illegible] ಉಪಯೋಗಿಸಲಾಗದು, ಧರ್ಮಚ್ಯುತನಾದರೆ, ರಾವಣನ ಬಲವೂ ನಷ್ಟವಾದಂತೆ, ಪ್ರಜೆಗಳು ಮುನಿದರೆ, ಒಡೆಯ-ಸಾವುಕಾರರ ಸಂಪತ್ತೆಲ್ಲ ಸುಟ್ಟು ಬೂದಿಯಾಗುವದು. ಅದರೊಳಗೆ ನನಗೆ ವ್ಹೋಟು ಕೊಡದೆ ಹೇಳುವದು ನಾಚಿಕೆಗೇಡಿತನವು. ಪಾತ್ರರಿದ್ದವರಿಗೆ ನಗರದೇವಿಯ ಕಲ್ಯಾಣ ಮಾಡುವೆನೆಂದು ಮತದಾರರ ಮನೋನಿಶ್ಚಯವಿದ್ದರೆ, ಅವರು ಸಂತೋಷದಿಂದ ಮತ ಕೊಡಬೇಕೆಂದೇ ಮತಾಧಿಕಾರವು ಕೊಡಲ್ಪಟ್ಟಿದೆ. ಹೊರತು ಮತದಾರರಿಗೆ, ಸಾವುಕಾರರು-ಒಡೆಯರು ಪೀಡಿಸಬೇಕೆಂದು ಮತದಾನವಾಗಲಿಲ್ಲ. ಐಶ್ವರ್ಯಬಲದಿಂದ, ಬಾಹುಬಲದಿಂದ, ರಾಕ್ಷಸಿ ಕೃತ್ಯಗಳಿಂದ ಮತಗಳನ್ನು ಪಡೆಯುವದು ದರೋಡೆಖೋರತನವು; ಅಷ್ಟು ನಿಂದ್ಯವು; ಅಧರ್ಮವು; ನೀತಿಭ್ರಷ್ಟತನವು. ಇದನ್ನು ಸುಜ್ಞರೂ, ಮನೆತನಸ್ಥರೂ, ಬದುಕಿ ಬಾಳುವೆ ಮಾಡಿಕೊಂಡು ಬಾಳಬೇಕೆಂಬ ಮನಸ್ಸುಳ್ಳವರೂ ಎಂದೂ ಕೈಕೊಳ್ಳಲಾಗದು; ಕೈಕೊಂಡರೆ ಮುಂದೆ ಕ್ಷೇಮವಿಲ್ಲ. ಇದನ್ನು ಸಾವುಕಾರರಿಗೂ, ಒಡೆಯರಿಗೂ ಹೇಳು; ಚನ್ನಾಗಿ ತಿಳಿಸಿ ಹೇಳು. ನಾನು ಸಾರಿ ಹೇಳಿದ್ದೇನೆಂದು ಹೇಳು. ಮತದಾರ ಮಕ್ಕಳಿಗೆ ಧೈರ್ಯ ಕೊಡು. ಅವರೇ ವಿವೇಕದ ಬುದ್ಧಿಯಿಂದ ನಡಕೊಂಡರೆ ಮಾತ್ರ ನನ್ನ ಕಾರಭಾರವು ಸುಸೂತ್ರವಾಗಿ ನಡೆಯುವದು. ಇಂದಿಗೆ ಮತ್ತೇನು ಹೇಳುವೆನು?

(ಈ ಆವೇಶದ ಮಾತುಗಳನ್ನು ಕೇಳಿ, ದಾಸಿಯು ನಗರದೇವಿಯ ಸಂದೇಶವನ್ನರುಹಲು ಗಡಿಬಿಡಿಯಿಂದ ಅಂತಃಪುರದೊಳಗಿಂದ ಹೊರಬಿದ್ದಳು. ದೇವಿಯು ಹಿತಚಿಂತಕರಿಗೆ ಆಜ್ಞೆ ಮಾಡಿದಳು.)

ದಾಂ—ಓಹೋ, ಮರೆತುಬಿಟ್ಟೆ! ಸ್ವಯಂವರಕ್ಕೆ ಖರ್ಚ ಬಹಳ ಬರುವದು. ಅದರ ವ್ಯವಸ್ಥೆ ಹ್ಯಾಗೆ?

ನೆಂ—ನಿನಗೇಕೆ ಇದರ ಚಿಂತೆ! ಲಕ್ಷ್ಮೀಪುತ್ರರು ನನ್ನ ಸ್ವಯಂವರದ ಖರ್ಚನ್ನು ತೆರುವರು. ರಕಮು ಎಷ್ಟೆಂದು ಹೇಳು ನೋಡುವ.

ದಾಂ—ಹೀಗಾದರೆ ನನಗೇನು?

ಮೋಟಾರು, ಟಾಂಗೆ ಮುಂತಾದ ವಾಹನಗಳಿಗೆ ರೂಪಾಯಿ	೧೯೧-೧೫-೭
ಚಹಾಪಾನ, ಸಿಗರೆಟ್ಟು, ಬೀಡಿ ಇತ್ಯಾದಿ ಚಿಲ್ಲರೆ ಖರ್ಚ ರೂಪಾಯಿ	೨೦೧-೮-೯
ಕಚೇರಿಗಳಲ್ಲಿ ಗೇಣಿಬಾಕಿ ದಾವೆಗಳಿಗೆ	೫೦-೬-೫
ಕೋರ್ಟಿನಲ್ಲಿ ದಾವೆಗಳಿಗೆ ನಕಲ ಫೀ ಬಯಾನ ಸಹಿತ ರೂಪಾಯಿ	೫೨೯-೧೫-೩
ಮತದಾರರ ಸಾಲ ನಿಕಾಲಿ ಮಾಡಲಿಕ್ಕೆ ರೂಪಾಯಿ	೯೯೯-೧೫-೧೧
ಅಂತು ರೂ.	೧೯೭೩-೧೩-೧೧.

ಓಹೋ! ಮತದಾನದ ಖರ್ಚ ಹಿಡಿಯಲಿಲ್ಲ. ಕಲಬಿನವರು ಬಂದರೆ ೧೦೦-೨೦೦ ರೂಪಾಯಿ ಖರ್ಚ ಬಂದೀತು. ಅದಕ್ಕೆ ನಿನ್ನ ಅಂಬೋಣವೇನು?

ನೆಂ— ಛೇ, ಮತದಾನ ಕೊಡುವದು ಮಹಾಪಾತಕವು. ಇಂಥ ವ್ಯವಸ್ಥೆಯಿಂದ ಸರ್ವನಾಶವಾಗುವದು. ನನ್ನ ಸ್ವಯಂವರ ಸಮಯ ಅದನ್ನು ಯಾರೂ ಕೈಕೊಳ್ಳಲಾಗದು. ಇದು ನನ್ನ ಕಟ್ಟಪ್ಪಣೆ. ಇರಲಿ, ನೀನು ಹೇಳಿದಷ್ಟು ರಕಮಿಗೆ ಲಕ್ಷ್ಮೀಪುತ್ರರ ಬೇಂಕಿನ ಮೇಲೆ ಇಗೋ ಹುಂಡಿ! ತಡವಾಯಿತು. ಇನ್ನು ಮೂರೇ ದಿನಗಳು ಉಳಿದವು. ಬೇಗನೆ ಸಮಸ್ತ ತಯಾರಿ ಮಾಡು, ನಡೆ. ಮತದಾರ ಮಕ್ಕಳಿಗೆ ಬೋಧಿಸು ನಡೆ, ಹೋಗು; ಕೂತುಕೊಳ್ಳಬೇಡ.

(ದಾಸಿಯು ಲಗುಬಗೆಯಿಂದ ತನ್ನ ಕೆಲಸಕ್ಕೆ ನಡೆಯುತ್ತಾಳೆ.)

---

೧ ನೇ ವಾರ್ಡ.

ಪೋಲಿಂಗ ಸ್ಟೇಶನು.

ಶ್ರೀ ಮ್ಹಾಳಸಾ ದೇವಾಲಯ.

ಪೋಲಿಂಗ ಆಫೀಸರ.
ಸಿ. ಎಸ್. ಹೆಗಡೆ.

ಉಮೇದ್ವಾರರ ಹೆಸರು. (ಸಂಜ್ಞೆ ಸಹಿತ.)

೧ ಯಶ್ವಂತ ನಾಗಪ್ಪ ಶ್ಯಾನಭಾಗ ([illegible])
೨ ಶ್ರೀಧರ ವೆಂಕಟೇಶಪ್ಪಾ ಕಲ್ಯಾಣಪುರಕರ (ಬುಟ್ಟಿ)
೩ ಮ್ಹಾಳಪ್ಪಾ ಸುಬ್ಬಯ್ಯಾ ಪೈ (ರಿಸ್ಟ ವಾಚ)
೪ ನಾಗೇಶ ರಾಮ ಶ್ಯಾನಭಾಗ
೫ ಶ್ರೀನಿವಾಸ ವೆಂಕಟ್ರಮಣ ಕಾಮತ (ಮುರಳೀಧರ)
೬ ಅಣ್ಣಪ್ಪ ರಾಮಚಂದ್ರ ಪೈ (ಮೋಟಾರ)
೭ ವೆಂಕಟೇಶ ಕೃಷ್ಣ ಶ್ಯಾನಭಾಗ (ಕೈ)
೮ ಪಾಂಡುರಂಗ ಮಂಜಪ್ಪ ದಿವಗಿಕರ
೯ ರಘು ಜನಾರ್ದನ ಶ್ಯಾನಭಾಗ
೧೦ ಸೀತಾರಾಮ ಗಣಪತಿ ಭಾಗ್ವತ (ಸ್ಯಾಕಲ್)
೧೧ ಭಿಕ್ಕು ವಿಠೋಬ ಪ್ರಭು

ಬಂಧಮೋಕ್ಷಗಳಿಗೆ ಮನಸ್ಸೊಂದೇ ಕಾರಣವು!

೧೨ ಅನಂತ ವೆಂಕಟೇಶ ಶ್ಯಾನಭಾಗ
೧೩ ರಾಮಕೃಷ್ಣ ಮಂಜುನಾಥ ಕಾಮತ (ಪಣತಿ)
೧೪ ಉಪೇಂದ್ರ ಮಂಜ ಪೈ
೧೫ ಮಾರ್ಕ ಮಾಧವ ಪೈ (ಆಗಬೋಟ)
೧೬ ಕೇಶವ ನಾರಾಯಣ ಪೈ (ಕಮಲ)
೧೭ ನಾಗಪ್ಪ ದುರ್ಗ
೧೮ ಶೇಷಗಿರಿ ವಾಸುದೇವ ಕಾಮತ (ಕೆಂಪು ಬಣ್ಣ)
೧೯ ಜಗನ್ನಾಥ ವಿಷ್ಣು ಗಾವಸ್ಕರ (ಕುದುರೆ)

೨ ನೇ ವಾರ್ಡ

ಪೋಲಿಂಗ ಸ್ಟೇಶನು ಗಿ। ಹ್ಯಾಸ್ಕೂಲ ಕನ್ನಡ ಶಾಲೆ

ಪೋಲಿಂಗ ಆಫೀಸರ— ಸಿ ಆರ್. ಭಟ್ಟ

ಉಮೇದ್ವಾರರ ಹೆಸರು (ಸಂಜ್ಞೆ ಸಹಿತ)

೧ ಶ್ರೀನಿವಾಸ ವೆಂಕಟ್ರಮಣ ಕಾಮತ ([illegible])
೨ ಪದ್ಮನಾಭ ಕೃಷ್ಣ ಪೈ
೩ ಅಣ್ಣಪ್ಪ ರಾಮಚಂದ್ರ ಪೈ ([illegible])
೪ ಕಾಗಾಲ ಗೋವಿಂದ ಅನಂತ ಪೈ ([illegible])
೫ ಯಶ್ವಂತ ನಾಗಪ್ಪ ಶ್ಯಾನಭಾಗ (ವಿಠೋಬ [illegible])
೬ ಪ್ಯಾಳಪ್ಪ ಬಪ್ಪಯ್ಯ ಪೈ (ರಿಷ್ಟ ವಾಚ)
೭ ನಾಗೇಶ ದಾಸ ಶ್ಯಾನಭಾಗ
೮ ಸೀತಾರಾಮ ಗಣಪತ ಭಾಗ್ವತ (ಸೈಕಲ್)
೯ ರಘು ಜನಾರ್ಧನ ಶ್ಯಾನಭಾಗ
೧೦ ಬಿಕ್ಕು ವಿಠೋಬ ಪ್ರಭು
೧೧ ಅನಂತ ವೆಂಕಟೇಶ ಶ್ಯಾನಭಾಗ
೧೨ ಗಣಪತಿ ತಿಮ್ಮಣ್ಣ ಹೆಗ್ಡಾರ
೧೩ ವಿಠೋಬ ನಾಗಪ್ಪ [illegible]
೧೪ ವೆಂಕಟಯ್ಯಾ [illegible]
೧೫ ಉಪೇಂದ್ರ ಮಂಜ ಪೈ
೧೬ ಶೇಷಗಿರಿ ವಾಸುದೇವ ಕಾಮತ (ಕೆಂಪು ಬಣ್ಣ)
೧೭ ಜಗನ್ನಾಥ ವಿಷ್ಣು ಗಾವಸ್ಕರ (ಕುದುರೆ)
೧೮ ರಾಮಕೃಷ್ಣ ಮಂಜುನಾಥ ಕಾಮತ (ಪಣತಿ)
೧೯ ಕೇಶವ ನಾರಾಯಣ ಪೈ (ಕಮಲ)
೨೦ ಮಾರ್ಕ ಮಾಧವ ಪೈ (ಆಗಬೋಟ)

೩ ನೇ ವಾರ್ಡ

ಪೋಲಿಂಗ ಸ್ಟೇಶನು [illegible] ಕನ್ನಡ [illegible] ಶಾಲೆ ನಂ. ೧.

ಪೋಲಿಂಗ ಆಫೀಸರ— [illegible] ಎಸ್. ವಿ. ದೇಶಿ

ಉಮೇದ್ವಾರರ ಹೆಸರು (ಸಂಜ್ಞೆ ಸಹಿತ)

೧ ಪ್ಯಾಳಪ್ಪ [illegible] ಪೈ (ರಿಷ್ಟ ವಾಚ)
೨ ಸೀತಾರಾಮ [illegible] ಭಾಗ್ವತ (ಸೈಕಲ್)
೩ [illegible] (ರೈಲು [illegible])
೪ ನಾಗೇಶ ದಾಸ ಶ್ಯಾನಭಾಗ
೫ ವೆಂಕಟ [illegible] ಶ್ಯಾನಭಾಗ (ಕೈ)
೬ [illegible] ಪೈ (ಮೋಟಾರ)
೭ [illegible] ಶ್ಯಾನಭಾಗ (ಹುಲಿ)
೮ [illegible] ಪ್ರಭು
೯ [illegible] ಶ್ಯಾನಭಾಗ
೧೦ ತಿಮ್ಮಣ್ಣ ಗೌಡ [illegible] (ಗಿಳಿ)
೧೧ [illegible]
೧೨ [illegible] ಪೈ
೧೩ ಜಗನ್ನಾಥ [illegible] (ಕುದುರೆ)
೧೪ ಕೇಶವ [illegible] (ಕಮಲ)
೧೫ ಶೇಷಗಿರಿ [illegible] (ಕೆಂಪು ಬಣ್ಣ)
೧೬ [illegible] (ಆಗಬೋಟ)

೪ ನೇ ವಾರ್ಡ.

ಪೋಲಿಂಗ ಸ್ಟೇಶನು.

ಗುಡಗಾರಗಲ್ಲಿ—ಕನ್ನಡ ಶಾಲೆ.

ಪೋಲಿಂಗ ಆಫೀಸರ— ವಿ. ವಿ. ನಾಗರಕಟ್ಟಿ.

ಉಮೇದ್ವಾರರ ಹೆಸರು. (ಸಂಜ್ಞೆ ಸಹಿ

೧ ಅಣ್ಣಪ್ಪ ರಾಮಚಂದ್ರ ಪೈ (ಮೋಟಾರ)
೨ ಲಕ್ಷ್ಮೀದಾಸ ಹಂಸರಾಜ ಶೇಟ (ಆಗಬೋ
೩ ರಾಮಾ ಹನುಮಂತ ಶ್ಯಾನಭಾಗ (ಕುದುರ
೪ ಯಶ್ವಂತ ನಾಗಪ್ಪ ಶ್ಯಾನಭಾಗ (ವಿಠೋಬ-ರಾಕ್ಷ
೫ ಗಂಗಾಧರ ಗಣಪಯ್ಯ ಶ್ಯಾನಭಾಗ (ಆನೆ)
೬ ಪ್ಯಾಳಪ್ಪ ಬಪ್ಪಯ್ಯ ಪೈ (ರಿಷ್ಟ ವಾಚ)
೭ ನಾಗೇಶ ದಾಸ ಶ್ಯಾನಭಾಗ
೮ ಭಿಕ್ಕು ವಿಠೋಬ ಪ್ರಭು
೯ ಗಣಪಯ್ಯಾ ಕೃಷ್ಣ ಗೌಂಡ್ಯಾ (ಹಕ
೧೦ ರಘು ಜನಾರ್ದನ ಶ್ಯಾನಭಾಗ
೧೧ ಸೀತಾರಾಮ ಗಣಪತ ಭಾಗ್ವತ (ಸೈಕಲ್)
೧೨ ಮಾಸು ರಾಮ ಗಾವಡಿ
೧೩ ಉಪೇಂದ್ರ ಮಂಜ ಪೈ
೧೪ ಶೇಷಗಿರಿ ವಾಸುದೇವ ಕಾಮತ (ಕೆಂಪು ಬಣ್ಣ)
೧೫ ಅಣ್ಣಪ್ಪ ಶಿವಪ್ಪ ಮೊಗೇರ

೫ ನೇ ವಾರ್ಡ.

ಪೋಲಿಂಗ ಸ್ಟೇಶನು-ಬ್ಯಾಬಿಲಿ ಧರ್ಮಶಾಲೆ

ಪೋಲಿಂಗ ಆಫೀಸರ— ಎನ್. ಎಸ್. ಭಟ್ಟ.

ಉಮೇದ್ವಾರರ ಹೆಸರು.

೧ ಅಬಿದಿನ ಇಬ್ರಾಹಿಮ
೨ ಸಯ್ಯದ ಹುಸೇನ ಸಯ್ಯದ ಕಾಸಿಮ

ಕಾನಡಾವೃತ್ತ.

[illegible] ಶ್ರಾವಣ ಶು॥ [illegible] ಶುಕ್ರವಾರ

ಮತದಾರ ಬಾಂಧವರಿಗೆ

ನಾಳಿನ ಸೋಮವಾರ ಜರಗಲಿಕ್ಕಿರುವ ಮ್ಯುನಿಸಿಪಲ್ ಇಲೆಕ್ಷನದ ಗಡಿಬಿಡಿಯನ್ನು ನೀವು ಬಲ್ಲವರಿರಿ. ೧೨ ಅಧಿಕಾರಗಳಿಗಾಗಿ ೩೫ [illegible] ೭೨ ಅರ್ಜಿಗಳನ್ನು ಕೊಟ್ಟಿರುವರು. ಉಮೇದವಾರರ ನಾಮಾವಲಿಯ ವಾಚನದಿಂದ ಕೆಲ ವ್ಯಕ್ತಿಗಳು ಎಬ್ಬಿಸಿದ ಹಡಗಾಟಗಳು ಸ್ಪಷ್ಟವಾಗಿ ಕಂಡೂ ತಿಳಿದರೂ ಮತದಾರ ಬಾಂಧವರು ಮುಂದಾಗಿ ಬರಬಾರದೇನು ನಮ್ಮ ಅಪೇಕ್ಷೆಯಲ್ಲಿ ಪ್ರಜೆಗಳು ಸ್ವರಾಜ್ಯ ಸಂಸ್ಥೆಗಳ ಮಹತ್ವವನ್ನು ನೆನಸಿ, ಸಾರ್ವಜನಿಕ ಕಾರ್ಯಕ್ಕೆ ಪ್ರವೃತ್ತರಾದರೆ, ನಮಗೆ ವಿಶೇಷ ಆನಂದವಿದೆ. ಮತದಾರ ಬಾಂಧವರ ಪಾತ್ರ ಗ್ರಹಿಕೆಯಿಂದ ಮುಂದಾಗಬೇಕು. ಯಾರೊಬ್ಬರ ಹೇಳಿಕೆಯ ಮೇಲಿಂದ ಸಭಾಸದತ್ವದ ಗೌರವವನ್ನೂ, ಜವಾಬದಾರಿಯನ್ನೂ ಲಕ್ಷಿಸದೆ, ಮ್ಯುನಿಸಿಪಾಲಿಟಿಯ ಕಚೇರಿಯಲ್ಲಿ ಉಮೇದವಾರಿಯ ಅರ್ಜಿಯ ಫಾರ್ಮುಗಳು ಉಚಿತವಾಗಿ ಸಿಗುವವೆಂದು, ಸಹಿಹಾಕಿ ಕಳುಹುವುದು ಸಭ್ಯತನಕ್ಕೆ ತಕ್ಕುದಲ್ಲ ಇಷ್ಟೇ ನಾವು ಹೇಳಬೇಕಾಗಿದೆ.

ಮತದಾರರ ಪಾತ್ರ ಪಾತ್ರತೆಯನ್ನು ನೀವರಿತಿರುವಿರಿ ಅವರು ಸಾಗಿಸಿದ, ಸಾಗಿಸುವ ಸಾಗಿಸಬಹುದಾದ [illegible] ವೃತ್ತ ಇತರ ಸ್ವಭಾವ [illegible] ಸಂಪೂರ್ಣವಾಗಿ [illegible] ಮ್ಯುನಿಸಿಪಾಲಿಟಿಯಲ್ಲಿ ಕೆಲಸ ಮಾಡಲಿಕ್ಕೆ [illegible] ಅದರಲ್ಲಿ ಹಿತ ಸಂಬಂಧವಿದ್ದವರು [illegible] ಮನೆಗಳನ್ನು [illegible] ಅವರನ್ನು ನೀವೆ [illegible] ಆಗಿ ಪ್ರತಿನಿಧಿಗಳು [illegible] ಬಹುದು. ಅವರ ಯೋಗ್ಯತಾನುಸಾರ ಪಕ್ಷ [illegible] ಬವಾಗಲಿಲ್ಲ, ನಿಮಗೂ ಅಂದಾಜು [illegible] ಮಾಡಿದ್ದೇ, ಇದನ್ನು ಚನ್ನಾಗಿ [illegible] ಹಿ ಮಾಳಿಸುವರ, [illegible], [illegible] ರು, ಪರಮಾತ್ಮರು ಶ್ರೀಮಂತರು, ಬಡವರು ಎಂಬ ಭೇದವನ್ನು ಲೆಕ್ಕಿಸದೆ, ಮ್ಯುನಿಸಿಪಾಲಿಟಿಯ ಕಾರ್ಯಭಾರವನ್ನು ನಿಮ್ಮ ಸ್ಥಿತಿಯ ಅರಿವುಳ್ಳಂಥ ನೆಟ್ಟಗೆ ಸಾಗಿಸುವಂಥ ಪಾತ್ರ ವ್ಯಕ್ತಿಗಳಿಗಿತ್ತು ಮನ್ನಿಸಿರಿ.

ಸಾಹುಕಾರರು, ಐಶ್ವರ್ಯವಂತರು ದಬ್ಬುತ್ತಾರೆಂದು ನೀವು ಹಿಂಜರಿಯಬೇಡಿರಿ ಐಶ್ವರ್ಯವಂತರೂ, ಬಡವರೂ ಮತದಾರರಿದ್ದು, ಎಲ್ಲರೂ ಒಂದೇ ತರಗತಿಯವರು. ಬಡವರಿಗೆಷ್ಟೇ ಮತಾಧಿಕಾರವು ಶ್ರೀಮಂತರಿಗಿದ್ದು, ನೀವು ಸ್ವತಂತ್ರವಾಗಿ ನಿಮ್ಮ ಹಿತವಾಗುವಂತೆ ಉಪಯೋಗಿಸಿಕೊಂಡು ಆತ್ಮೋದ್ಧಾರವನ್ನು ಸಾಗಿಸಲು ಕಲಿಸಬೇಕೆಂಬ ಹೇತುವಿನಿಂದ ಮತಾಧಿಕಾರವು ನಿಮಗೆ ಕೊಡಲ್ಪಟ್ಟಿದೆ. ಮ್ಯುನಿಸಿಪಾಲಿಟಿಯಂಥ ಚಿಕ್ಕ ಪುಟ್ಟ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಮತಾಧಿಕಾರವನ್ನು ನೀವು ಸ್ವತಂತ್ರವಾಗಿ ಉಪಯೋಗಿಸಲು ಧೈರ್ಯಶಾಲಿಗಳಾದರೆ, ಧೈರ್ಯಹೀನರಾದರೆ, ಮುಂದೆ ಲೋಕಶಾಹಿಯ ದೊಡ್ಡದೊಡ್ಡ ಅಧಿಕಾರಗಳನ್ನು ನೀವು ಹೇಗೆ ಸಾ ಗಾಣಿಸುವಿರಿ? ವಿಚಾರಿಸಿರಿ; ದೀರ್ಘವಿಚಾರ ಮಾ ರಿ ಮತಸ್ವಾತಂತ್ರ್ಯಕ್ಕಾಗಿಯೇ ನಮ್ಮ ರಾಷ್ಟ್ರೀ ಸಭೆಯು ಹಗಲಿರುಳು ಹೆಣಗಾಡುತ್ತಿದೆ. ಸ್ವತ ಮತಕೊಡಲು ನೀವು ತಯಾರಾದಂತೆ, ನ ಪೌರ ಸೇವೆಯು ಬೆಳೆದು ನಾವು ಧನ್ಯರಾಗುವೆ ‘ನಾವು ಬಡವರು. ನಮಗೇಕೆ ಇವೆಲ್ಲ ಗಡಿಬಿ ಯಾರಾದರು ಮೆಂಬರರಾಗಲೊಲ್ಲರೇಕೆ?’ ಎಂ ವೇದಾಂತ ಹೇಳಿಕೊಂಡು ವೈರಾಗ್ಯವರ ಮಾತು ಪ್ಪಿಸಿ ಧೈರ್ಯಗೆಡಿಸುವ ಸ್ವತಂತ್ರ್ಯರಾಗಲು ಬೋಧಿ ಸ ಮನೋದೇವತೆಯ ವಚನಗಳನ್ನು ದಬ್ಬಿ ಬೇಡಿ. ಐಶ್ವರ್ಯವಂತರ, ಸಾವುಕಾರರು, ಊರ ಡೆಯರು ನಿಮಗೆ ತಾರಕರಲ್ಲ. ಅವರೇನು ನಿಮ ಮಾಡುತ್ತಾರು? ಅವರು ಕೊಟ್ಟ ಬುತ್ತಿ ನಿಮಗೆಷ್ಟು ಕಾಲವನು? ನೀವು ಮೈಮುರಿದು ದುಡಿಯದೇ ಅಂದರೆ ಮಾತ್ರ ನಿಮಗೆ ಸವಿ ಊಟ ಸಿಗುವದು ದನ್ನು ನೀವು ನೆನಪಿನಲ್ಲಿಟ್ಟು ಆತ್ಮಸ್ಮರಣೆ ಮಾಡಿ ನಿ ಮನೋದೇವತೆಯು ಹೇಳುವ ಮಾರ್ಗಗಳಿಗೆ ಮನ ನ ಮಾಡಿರಿ ನಿಸ್ಪೃಹಬುದ್ಧಿಯಿಂದ ಮತದಾನ ಡಬೇ ದೆಂದು ನಿಮಗೆ ತೋರಿದರೆ ಮತದಾನ ಮ ಬೇಡಿರಿ. ಯಾರಿಗೂ ಹೆದರದೆ ನಿಮಗೆ ಇಷ್ಟಕಂಡ ನಡೆಯಿರಿ ಮನೋದೇವತೆಯನ್ನು ಎಂದೆಂದಿ ವಂಚಿಸಬೇಡಿರಿ. ಮನೋದೇವತೆಯನ್ನು ವಂಚಿಸಿ ಎಂದಿಗೂ ನಿಮ್ಮ ಉದ್ಧಾರವಾಗದು “ಮನ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋ ಎಂಬ ವಚನವನ್ನು ನೀವು ಸ್ಮರಿಸುವಿರಲ್ಲವೆ” ಆತ್ಮ ಚನೆಮಾಡಿಕೊಳ್ಳದೆ ಸತ್ಪಾತ್ರರಿಗೇ ಮತದಾನ ಡಿರಿ. ಇಷ್ಟೇ, ಮತದಾರ ಬಾಂಧವರೇ, ನಿಮಗೆ ನ ಹೇಳಿಕೊಳ್ಳುವದು.

Printed and Published by Krishnarao Keshav Shenvi (Editor) at his Star of Kanara Press Kumta

Monday, August 10th, 1925

ವರ್ಷ ೯.

ಕಾನಡಾವೃತ್ತ.

ಸಂಚಿಕೆ ೪೬.

THE KANARA NEWS.

ಪತ್ರದ ದರಗಳು.

ಟಿಯಲ್ಲಿ ಅಗಾವು
ರೂಪಾಯಿ 2-4-0.
ಮಾರ್ಷಾರಿಯಿಂದ
ರೂ. 3-0-0.
ಪಿ. ಅಂಚೆವೆಚ್ಚ ಸಹಿತ
ರೂಪಾಯಿ 3-3-0.
ಸಂಚಿಕೆಗೆ 0-1-0.

[illegible] ।
इति महति विरोधे वर्तमाने समाने [illegible] ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ
[illegible]

(ಕುಮಟಾ— ಕಾನಡಾವೃತ್ತ ಶುಕ್ರವಾರ, ತಾ॥ ೭ ಮಾಹೆ ಅಗೋಸ್ತ ಸನ್ ೧೯೨೫ ನೇ ಇಸವಿ.)

हिंदुस्थानांतील रहिवाश्यांस ज्याप्रमाणें हिंदुस्थानची हवा त्याप्रमाणेंच हें औषध हिंदुस्थानांतील लोकांस ज्यास्त फायदेशीर आहे.

द्राक्षासव- दीड रतलची किंमत १ रुपये;

रामबाण औषधें —
सर्दि घालविणारें,
भूक वाढविणारें,
शौचास साफ करणारें,
झोप आणणारें,
शक्ति देणारें,
तेजस्वीपणा आणणारें,

विश्वास ठेवकर.

[illegible],

हु फार्मास्युटिकल वर्क्स लिमिटेड,
मुंबई नं. १२

ಕತ್ರಸಿದ್ಧವಾದದ್ದು ! ಅನುಭವಸಿದ್ಧವಾದದ್ದು !!
ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ
ಔಷಧಿಯ ಕ್ರಯ ವಾಪಸು.

ಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, [illegible] ಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.

ಮಾರ್ಕ] ರಿಜಿಸ್ಟರ ಆದದ್ದು [[illegible]

ಪಸ್ತ ಮನ್ಮಥ ಚಿಂತಾಮಣಿ ಲೇಹ.

ಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ರೆ ಗುಣಕಾರಿಯಾದದ್ದು. ಮೇಹವಿಕಾರವಿದ್ದ ಗೂ, ನಿದ್ರೆಯಿಲ್ಲದವರಿಗೂ, ಸ್ವಪ್ನೇಂದ್ರಿಯದೋ ಷ ಯುವಕರಿಗೂ [illegible] ಉಪಯೋಗವುಳ್ಳ ಪರಮಾನಂದದ ಔಷಧಿ

ಸೇರು ನಾಲ್ವತ್ತೆಂಟು ದಿವಸಕ್ಕೆ ಸೇವಿಸಬಹುದು

1 ಸೇರು ಡಬ್ಬಿ ಒಂದಕ್ಕೆ 3—0—0
½ ಸೇರು ಡಬ್ಬಿ ಒಂದಕ್ಕೆ 1—9—0

ವ್ಹಿ. ಪಿ. ಖರ್ಚ ಪ್ರತ್ಯೇಕ. ವಿಶೇಷ ಮಾಹಿತಿ ಬರೆಯಿರಿ.

-ದೇವಣ್ಣ ನಾರಾಯಣ ಸೇಟ್,
ಸರಾಫ್, [illegible], ಮಂಗಳೂರು, (ದ. ಕ.)

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ
ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, *B. A.*

Jewellers, KUMTA.

ಆರ್. ಎಸ್. ಕಾಸರಗೋಡ,
ರತ್ನಾಭರಣ ವ್ಯಾಪಾರಿ, ಕುಮಟಾ.

ಆಯುರ್ವೇದಿಕ) ಧಾತುಪೌಷ್ಟಿಕ, ಶಕ್ತಿವರ್ಧಕ, ರಕ್ತಶೋಧಕ (ಮಲಬಾರಿನ

ಮದನಕಾಮೇಶ್ವರೀಲೇಹ.

ಆಬಾಲ ವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

[illegible]

ಅಷ್ಟಾಕ್ತ್ರಮ) ಜಂತುವಿನ ಔಷಧ ([illegible]

[illegible]

ಮೆನೇಜರ ಆರ್ಯೌಷಧಿಚಿಕಿತ್ಸಾಮಂದಿರ, ತಾ. ಕಾರವಾರ, ಪೋ. ಚೆಂಡಿಯೆ.

ಮುಂಬೈ ಏಜಂಟ:— R. C. KAMAT, Teashop Store Lane, Fort, BOMBAY

[illegible]) ಸುಖಸಾಧನಕ್ಕೆ ಯೋಗ್ಯ ಉಪಾಯವು.([illegible]

☞ ಮಲಬಾರಿ) ಕೇರಳ ಜ್ಯೋತಿಷ. (ಭವಿಷ್ಯ.

[illegible]

ಮೆನೇಜರ, "ಜ್ಯೋತಿಷ ಶಾಸ್ತ್ರ-ಭುವನ," ಚೆಂಡಿಯೆ, ತಾ. ಕಾರವಾರ

ನಮ್ಮ ಪ್ರೆಸ್ಸಿನಲ್ಲಿ

ಗೇಣಿ ಬಾಕಿ ದಾವೆಯ ಫಾರ್ಮುಗಳು ತಯಾರಿವೆ

ವಕಾಲತ, ಅಮುಲದಾರಿ ಮೊದಲಾದ ಕೋರ್ಟ ವ್ಯವಹರಣೆಯ ಹಾಗೂ ಕಸ್ಟಮ್ ಖಾತೆಯ ಫಾರ್ಮುಗಳು ಅಗ್ಗವಾಗಿ ಸಿಗುತ್ತವೆ.

ಮೆನೇಜರ,
ಸ್ಟಾರ ಒಫ್ ಕೆನರಾ ಪ್ರೆಸ್, ಕುಮಟಾ

ಉತ್ತಮ, ಸುವಾಸಿಕ, ಶುದ್ಧ, ಮಿಶ್ರಣವಿರಹಿತ,

ಜನರಿಗೆ ಅವಶ್ಯ ಬೇಕಾಗಿರುವ

ಕಾಬೂಲೀ ಹಿಂಗು.

೪೦ ತೊಲೆಯುಳ್ಳ ಡಬ್ಬಿ ೧ಕ್ಕೆ ೫—೮—೦
೨೦ ತೊಲೆ ಡಬ್ಬಿ ೧ಕ್ಕೆ ೨—೧೨—೦
೧೦ ತೊಲೆ ಡಬ್ಬಿ ೧ಕ್ಕೆ ೧—೬—೦,
೫ ತೊಲೆ ಡಬ್ಬಿ ೧ಕ್ಕೆ ೦—೮—
೧ ತೊಲೆಯ ಡಬ್ಬಿಗಳ ಡಜನ ೧ಕ್ಕೆ ೨—೮—೦.

ನಮ್ಮ ಹಿಂಗು ನೋಟಾ ಬಂದಲ್ಲಿ, ಪರತ ಕೊಳ್ಳುವೆವು. ಟಪಾಲು ಖರ್ಚು ಪ್ರತ್ಯೇಕ.

ಕೆರೇಕರ ಕಾಬೂಲೀ ಹಿಂಗಿನ ದುಕಾನ
ಬವಳೀಬಜಾರ, ಕುಮಟಾ.

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧ ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೬೦ ೭೫ ೧೦೦
೨. „ ಕಾಲು ಪೆಟ್ಟಿಗೆ ಕಿಂ. ೬೫, ೭೫, ೧೨೦, ೧೪೦.
೩. ತಬಲೆ ಜೋಡಿ ಕಿಂ. ೧೬, ೧೮, ೨೦, ೨೫
೪. ಹಾರ್ಮೋನಿಯಮ ಗ್ಯಾಡ (ಮರಾಠಿ) ಕಿಂ. ೧||
ತಬಲೆ ಗ್ಯಾಡ ಕಿಂ, ೧೨ ಅ

ವಿಶೇಷ ಮಾಹಿತಿಬಗ್ಗೆ ನಮ್ಮ ಮರಾಠಿ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ:— **ಗೋಪಾಳ ಸಖಾರಾಮ ಮುತ್ತು**
ಕಂಪನಿ, ವಿಠ್ಠಲವಾಡಿ ಎದುರಿಗೆ,
೨೬೩ ಕಾಳಬಾದೇವಿ, ಮುಂಬಯಿ,

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ



ಕಳೆದ ೬—೭ ವರ್ಷಗಳಿಂದ ನಾವು ಶಿವಮೊಗ್ಗಾ—ತೀರ್ಥಹಳ್ಳಿ—ಆಗುಂಬೆ, ಶಿವಮೊಗ್ಗಾ—ಸಾಗರ—ತಾಳಗುಪ್ಪೆ, ಶಿವಮೊಗ್ಗಾ—ಹರಿಹರ—ದಗ್ಗಾವತಿ, ಶಿವಮೊಗ್ಗಾ—ಕೆರೂರಕಟ್ಟೆ, ಸಾಗರ—ಸೊರಬ—ಶಿರಾಳಕೊಪ್ಪ, ಸಾಗರ ತೀರ್ಥಹಳ್ಳಿ, ಸಾಗರ—ಕೆರೂರಕಟ್ಟೆ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ ಸರ್ವೀಸನ್ನು ನಡೆಸಿದ್ದು ಪಕ್ಕದ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ, ಉಡುಪಿ, ಕುಂದಾಪುರ, ಮಂಗಳೂರ ಹಾಗು ಬೆಳ್ತಂಗಡಿ ಈ ಕಡೆಗೆ "ಕಾರ್ಕಳ ಮೋಟರ ಸರ್ವೀಸಿನ" ವಿದ್ಯಮಾನವೂ, ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಗೆ "ಲಕ್ಷ್ಮೀ ಮೋಟರ ಸರ್ವೀಸಿನ" ವಿದ್ಯಮಾನವೂ ಪ್ರಯಾಣಿಕರ ಎಲ್ಲ ಸೌಕರ್ಯಗಳ ವ್ಯವಸ್ಥೆ ಮಾಡಿರುತ್ತೇವೆ

ಉತ್ತರ ಕನ್ನಡ ಜಿಲ್ಲೆಯ ಪ್ರಯಾಣಿಕರು ಜೋಗ (Gersoppa Falls), ಶಿವಮೊಗ್ಗಾ ಸಾಗರ, ಹರಿಹರ ಮುಂತಾದ ಪ್ರೇಕ್ಷಣೀಯ ಸ್ಥಳಗಳಿಗೆ ಪ್ರಯಾಣ ಬೆಳೆಸಲು ಅನುಕೂಲವಾಗಬೇಕೆಂದು ಶಿವಮೊಗ್ಗಾ, ಸಾಗರ, ಜೋಗ, ಸಿದ್ದಾಪುರ, ಶಿರ್ಸಿ, ಕುಮಟಾ ಈ ಲೈನಿನಲ್ಲಿ ಮೋಟರ ಸರ್ವೀಸ ಪ್ರಾರಂಭ ಮಾಡಿರುತ್ತೇವೆ

ಕಾಲಕ್ರಮಗಳು.

ಕುಮಟೆಯಿಂದ ಹೊರಡುವದು—	ಬೆಳಿಗ್ಗಿನ ೭	ಘಂಟೆಗೆ.
ಶಿರ್ಸಿ ಸೇರುವದು—	„ ೧೦	„
ಶಿರ್ಸಿಯಿಂದ ಹೊರಡುವದು ಶಿವಮೊಗ್ಗಾ ಕಡೆಗೆ—	ಮಧ್ಯಾಹ್ನ ೧	„
ಸಾಗರಕ್ಕೆ ಸೇರುವದು. (ಸಿದ್ದಾಪುರ ಮಾರ್ಗವಾಗಿ)—	ಸಾಯಂಕಾಲ ೬	„
ಸಾಗರದಿಂದ ಶಿರ್ಸಿ ಕಡೆಗೆ ಹೊರಡುವದು —	ಬೆಳಿಗ್ಗಿನ ೬	„
ಸಿದ್ದಾಪುರದ ಮೇಲಾಗಿ ಶಿರ್ಸಿಗೆ ಸೇರುವದು—	„ ೧೧	„
ಶಿರ್ಸಿಯಿಂದ ಕುಮಟೆಗೆ ಹೊರಡುವದು —	ಮಧ್ಯಾಹ್ನ ೨	„
ಕುಮಟೆಗೆ ಸೇರುವದು—	ಸಾಯಂಕಾಲ ೫	„

N B.— ಈ ಮೇಲಿನ ಲೈನುಗಳ ವಿನಹ ಶಿರಶಿಯಿಂದ ಹುಬ್ಬಳ್ಳಿಗೆ ಪ್ರತ್ಯೇಕ ಒಂದು ಸರ್ವೀಸ ಪ್ರಾರಂಭಿಸುವ ಯೋಜನೆ ಸಹಾ ಇರುತ್ತದೆ ಸರ್ವರೂ ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

SHIMOGA, 22—11—1924 } **M. MANJAPPA.**
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುರ ಶ್ರೇಷ್ಠ ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು ಒಂದೆರಡು ವರ್ಷದ ಮುದುಕರ ಕಾಮವಿಕಾರವು ಕೂಡ ತರುಣರಂತೆ ಪ್ರವರ್ಧಮಾನವಾಗುವದು. (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಸಕಿಯು ಹೋಗಿ ಮೂತ್ರವಾದ ಪಕ್ಷಂಸಕತ್ವವು ಇಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು — ಪರಮಾ ಹಾಗೂ ಕಾವಿನಿಂದ ದೋಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವು ಜನ್ಯಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಜ್ವರವು ಎಷ್ಟೇ ದಿವಸದ ಹಾಗು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ವಿಷಯಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ವಿಷಯದ ಕಾರಣವಿಲ್ಲ ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧|| ರೂಪಾಯಿ ಮೂರು ಬಾಟಲಿಯ ಕಿಮ್ಮತು ೩—೪—೦ ಮೂರು ಬಾಟಲಿಗಳನ್ನು ಒಂದೇ ಸಾರ್ತಿನಲ್ಲಿ ತರಿಸುವವರು, ಅಂದರೆ ಟಪಾಲುಖರ್ಚು ಹತ್ತುವದಿಲ್ಲ. ಒಮ್ಮೆ ೧೨ ಬಾಟಲಿಗಳ ಕಿಮ್ಮತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧—೪—೦ ೩ ಬಾಟ್ಲಿಗೆ ೩—೦—೦ ಡಜನಿಗೆ ೧೩—೮—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸು, ಪೋ. ನಿಪ್ಪಾಣಿ, ಜಿ. ಬೆಳಗಾಂವ.

ಹೊಸ ಲೋಕಲ್ ಬೋರ್ಡುಗಳು.

ಎಚ್ಚರಾಗಿರಿ !

(ಲೇ.— ಸತ್ಯಶೋಧಕರು.)

ಸ್ಥಾನಿಕ ಸ್ವರಾಜ್ಯದ ಹೊಸ ಕಾಯ್ದೆಯನುಸಾರವಾಗಿ ರಚಿತವಾಗಲಿಕ್ಕಿದ್ದ ಲೋಕಲ ಬೋರ್ಡುಗಳು ಇನ್ನು ಸ್ವಲ್ಪ ಕಾಲದಲ್ಲಿಯೇ ಅಸ್ತಿತ್ವವನ್ನು ಪಡೆಯುವವು. ಈ ಕಾಯಿದೆಯನ್ನೋದಿದರೆ ಹಿಂದಿನದಕ್ಕಿಂತ ಎಷ್ಟೋ ಹೆಚ್ಚು ಮಹತ್ವದ ಅಧಿಕಾರಗಳು ಪ್ರಾಪ್ತವಾಗಿವೆಯೆಂಬುದು ಯಾರಿಗೂ ಕಾಣದೆ ಇರಲಿಕ್ಕಿಲ್ಲ. ಇಂಥ ಅಧಿಕಾರಗಳನ್ನು ರಾಷ್ಟ್ರದ ಏಳಿಗೆಗೂ, ಸದ್ಯಕ್ಕೆ ದೇಶದಲ್ಲೆಲ್ಲಾ ನಡೆದ ರಾಜಕೀಯ ಆಂದೋಲನಕ್ಕೂ ಅನುಕೂಲವಾಗಿಯೂ, ಸಹಾಯಕಾರಿಯಾಗಿಯೂ ಹೇಗೆ ಉಪಯೋಗಿಸಿಕೊಳ್ಳಬೇಕೆಂಬುದೇ ಮಹತ್ವದ ಪ್ರಶ್ನೆಯು. ಬೆಳಗಾಂವಿಯ ರಾಷ್ಟ್ರೀಯ ಸಭೆಯಲ್ಲಿ ಈ ವಿಷಯದ ಚರ್ಚೆಯಾಗಿ, ಸ್ಥಾನಿಕ ಪರಿಸ್ಥಿತಿಯು ಅನುಕೂಲವಿದ್ದಂತೆ ಅವುಗಳನ್ನು ರಾಷ್ಟ್ರೀಯ ಪಕ್ಷದವರು ಹಸ್ತಗತ ಮಾಡಿಕೊಳ್ಳಬೇಕೆಂತಲೂ, ಅವುಗಳ ಮೂಲಕವಾಗಿ ಕಾಂಗ್ರೆಸಿನ ತ್ರಿವಿಧವಾದ ರಚನಾತ್ಮಕ ಕಾರ್ಯಕ್ರಮವನ್ನು ಮುಂಗೊಡಲಿಕ್ಕೆ ಹೊರಡಬೇಕೆಂತಲೂ ತೀರ್ಮಾನವಾಗಿರುವದಷ್ಟೇ ! ಗಾಂಧಿವಾದಿಗಳೆಂದು ಅನಿಸಿಕೊಳ್ಳುವ ನಮ್ಮ ಮಾರೀ ಬಂಧುಗಳು 'ರಾಷ್ಟ್ರೀಯ ಲೋಕಲ ಬೋರ್ಡ' ಸಂಸ್ಥೆಯನ್ನು ಸ್ಥಾಪಿಸಿ ಅವರ ಪಕ್ಷದಿಂದ ಈ ಸಂಸ್ಥೆಗಳನ್ನಾಕ್ರಮಿಸಿ ನವಾಗಿ ಹೋರಾಟಶಕ್ತಿಯನ್ನು ಹಾಕಿಕೊಟ್ಟಿರುವರು. ನಮ್ಮ ಜಿಲ್ಹೆಯಲ್ಲಿ ಲೋಕಲ ಬೋರ್ಡ ಸಭಾಸದರ ಆರಿಸುವಿಕೆಯು ಇನ್ನೆರಡು ತಿಂಗಳುಗಳಲ್ಲಾಗುವದೆಂದು ಈಗ ಪ್ರಸಿದ್ಧವಾಗಿದೆ. ಇದರ ಬಗ್ಗೆ ನಮ್ಮ ಜಿಲ್ಹೆಯಲ್ಲಿ ಏನು ಮಾಡಬಹುದೆಂದು ತೋರಿಸುವದೇ ಈ ಬರಹದ ಉದ್ದೇಶವು.

ರಾಷ್ಟ್ರೀಯ ಪಕ್ಷದವರು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳನ್ನು ಸೇರುವದೇಕೆ? ಕೇವಲಾಗಿ ನಮ್ಮ ರಾಜಕೀಯ ಬಲವನ್ನು ಸ್ಥಿರಗೊಳಿಸಲಿಕ್ಕೆಂದು ಹೇಳಬಹುದು. ಜೊತ್ತಿಗೆ 'ರಾಷ್ಟ್ರಧರ್ಮ'ಕ್ಕೆ ಪೋಷಕವಾದ ಠರಾವುಗಳನ್ನು ಮಾಡಿ ಹಳ್ಳಿಗಾಡಿನ ಜನತೆಯಲ್ಲಿ ಚೈತನ್ಯವನ್ನು ತುಂಬಿ ರಾಜಕೀಯ ಕೆಲಸಗಳಿಗೆ ಬೇಕಾದ ವಾತಾವರಣವನ್ನು ನಿರ್ಮಾಣಮಾಡಬಹುದು. ಆದರೆ ಆ ಸಂಸ್ಥೆಗಳಲ್ಲಿ ಬಹುಮತದ ಬೆಂಬಲವಿಲ್ಲದೆ ಮಾತ್ರ ಈ ಕೆಲಸವು ಮುಂದೆ ಸಾಗುವದಸಂಭವವು. ಅಲ್ಲಿ ಬಹುಮತವನ್ನು ದೊರಕಿಸಲಿಕ್ಕೆ ಕಾಂಗ್ರೆಸ ಕಮಿಟಿಗಳು ಭರದಿಂದ ಪ್ರಯತ್ನಿಸಿ ಜನರನ್ನು ಉದ್ಬೋಧಿಸಬೇಕು; ಪ್ರತಿಯೊಂದು ವಾರ್ಡಕ್ಕೆ ತಮ್ಮ ಉಮೇದವಾರರನ್ನೇ ನಿಲ್ಲಿಸಿ ಅವರನ್ನು ಆರಿಸಿ ತರಲಿಕ್ಕೆ ಸುಸಂಘಟಿತ ಪ್ರಯತ್ನ ಮಾಡಬೇಕಾಗಿದೆ.

ಈ ಎಚ್ಚರಿಕೆಯನ್ನು ನಾವು ಈಗಿನಿಂದಲೇ ಏಕೆ ಕೊಡಬೇಕೆಂದು ಯಾರಾದರೂ ಆಕ್ಷೇಪಿಸಬಹುದು. ಮತದಾರರ ಹೆಸರುಗಳು ಪ್ರಸಿದ್ಧವಾಗಿ ಈಗ ಸುಮಾರು ಮೂರು ವಾರಗಳಾಗಿರಬಹುದು ಅಷ್ಟರಲ್ಲಿಯೇ ಮತ್ತು ಇದಕ್ಕೂ ಎಷ್ಟೋ ತಿಂಗಳು ಹಿಂದಿನಿಂದಲೇ ಕೆಲವು ಧೂರ್ತ ಸ್ವಾರ್ಥಪರಾಯಣರು ಅಜ್ಞ ಮತದಾರರ ಕಡೆಯಿಂದ ತಮಗೇ ಮತವನ್ನು ಕೊಡುವ ಬಗ್ಗೆ ವಚನ ಕೊಡಲಿಕ್ಕೆ ಹೇಳುತ್ತಿರುವದು ಪ್ರಸ್ತುತ ಲೇಖಕರ ದೃಷ್ಟಿಪಥದಲ್ಲಿ ಬಂದಿದೆ. ಅಂಥ ಧೂರ್ತ ಜನರು ಹಬ್ಬಿಸುತ್ತಿರುವ ಬಲೆಯೊಳಗೆ ಬೀಳದಂತೆ ಜನರನ್ನು ಜಾಗೃತಗೊಳಿಸುವದೇ ಕೆಲ ಮಟ್ಟಿಗೆ ಈ ಲೇಖದ ಉದ್ದೇಶವು.

ಇಲೆಕ್ಷನದ ಧಾಂದಲೆಯಲ್ಲಿ ಯಾವ ಪ್ರಕಾರದ ಅನಾಚಾರಗಳು ಸಂಭವಿಸುತ್ತವೆಂಬುದು ಅನುಭವಿಕರಿಗೆ ಗೊತ್ತಿದ್ದ ಮಾತು. ಲೋಕಲ ಬೋರ್ಡದ ಸಭಾಸದನೆಂದರೆ, ಒಂದು ಬಹುಮಾನದ ಹುದ್ದೆ ಎಂದು ತಿಳಿಯುವಂಥ ಉಮೇದವಾರರು ತಮ್ಮ ದೊಡ್ಡಸ್ತಿಕೆಯನ್ನು ಹೆಚ್ಚಿಸಲಿಕ್ಕೆ ಈಗ ಮುಂದೆ ಬರುವರು. ತಮ್ಮ ಇತರ ವ್ಯವಸಾಯಗಳನ್ನು ಮುಗಿಸಿ ಪುರಸತ್ತು ಆದಾಗ ಆಫೀಸಿನಲ್ಲಿ ಬಂದು ಮೀಟಿಂಗಿನ ಸಮಯಕ್ಕೆ ಖುರ್ಚಿಯನ್ನು ಹಿಡಿಯುವವರಿರುವರು. ಹೀಗೆ ಮಾನಕ್ಕಾಗಿ ಹಾತೊರೆಯುವಂಥ ಸ್ವಯಂಮನ್ಯ ಜನರನ್ನು ಎಂದೂ ಮುಂದೆ ಬರಗೊಡದಂತೆ ಎಚ್ಚರಾಗುವದು ಜನರ ಕರ್ತವ್ಯವು. ಸಾರ್ವಜನಿಕ ಕಾರ್ಯಗಳಲ್ಲಿ ಒಳಗೊಂದು, ಹೊರಗೊಂದು ತೋರಿಸುವ ಈ ಸ್ವಾರ್ಥಿ ಢಾಂಬಿಕ ಜನರು ಒಮ್ಮೆ ಸೇರಿಕೊಂಡರೆ ಏನೂ ಪ್ರಗತಿಯಾಗಲಿಕ್ಕಿಲ್ಲೆಂದು ನಾವು ಪೂರ್ಣವಾಗಿ ತಿಳಿದಿರಬೇಕು. ಬಂದೆಂದು ಮೇಳ ಖಾದೀ ಅಂಗಿ ಮುಸ್ಸಾ, ಟೊಪ್ಪಿಗೆ ನಮ್ಮ ಹಾಕಿಕೊಂಡು ನಾವು ರಾಷ್ಟ್ರೀಯರೇ ಎಂದು ಜನರನ್ನು ಮೋಸಗೊಳಿಸಬಹುದು. ಇಂಥವರಿಗೆ ಎಂದೂ ಮೋಸ ಹೋಗಬಾರದು. ರಾಷ್ಟ್ರ

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. ರಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದ ಮುಸುಕನ್ನು ಯಾವ ನಾರಿಯು ತಾನೇ ವಾಂಛಿಸದೆಲ್ಲಳು? ಅಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲು ಉಪಕರಣವಾವುದೋ.

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಶಕ್ತಿಯನ್ನು ಕಷ್ಟದ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯವ ಸಹಕಾರಿಯಾಗಿರುತ್ತದೆ. ಈ ಆಯಿಲ್ ತೊಡೆದುಕೊಳ್ಳುವಲ್ಲಿ ಮಸ್ತಕದ ಬೇನೆಯು ತಕ್ಷಣಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹಚ್ಚುವದರಿಂದ ತೊಡಗಿದ ಬಳಿಕ ಎಂದಿಗೂ ಜಗ್ಗಿ ಬಿದ್ದು ಹೋಗಲಾರವು, ಅದರೆ, ಅವು ದಟ್ಟವಾಗಿ ಬೆಳೆದು ನವ್ಯವಾಗುವವು. ಇದರ ಸುಗಂಧವಾದರೇ ಮಧುರವೂ ಮೋಹಕವೂ ಆಗಿರುವದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಸಾರೆ ಬಾರಿ 'ಕಾಮಿನಿಯಾ ಆಯಿಲ್' ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯು ಬೇರೆಯಿಂದ ನಮಗೆ ಮೈಸೂರ ಪ್ರದರ್ಶನದಲ್ಲಿ 'ಸರ್ಟಿಫಿಕೇಟ್ ಆಫ್ ಮೆರಿಟ್' ಎಂಬ ಯೋಗ್ಯತಾಪತ್ರವೂ, ಇತರ ಸಾವಿರಾರು ಗ್ರಾಹಕರ ಉತ್ತಮೋತ್ತಮವಾದ ಸನದುಪತ್ರಗಳೂ ದೊರೆತಿವೆ.

ಕ್ರಯ.— ಸೀಸೆಗೆ ರೂಪಾಯಿ 1-0-0, ಸೀಸ 3ಕ್ಕೆ ರೂಪಾಯಿ 2-10-0 ವ್ಹಿ. ಪಿ ಖರ್ಚು 0-14-0

ಅತಿ ಮನೋಹರವಾದ ಸುಗಂಧಿಯು!

ಒಟ್ಟೋ-ದಿಲ್ ಬಹಾರ್ !! ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವಾದ ಅನೇಕ ಪ್ರೌಢ ಸುವಾಸನೆಯುಳ್ಳ ಹೊಸದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳಕೊಳ್ಳುವದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8-0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ-ದಿಲ್‌ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0-12-0

Address:- **The Anglo Indian Drug & Chemical Co.**
16, Market, **BOMBAY 2.**

ಕ್ಕಾಗಿ ಇಷ್ಟು ದಿವಸಗಳವರೆಗೆ ಅಲ್ಪಸ್ವಲ್ಪ ಕೆಲಸ ಮಾಡುತ್ತ ಬಂದಿರುವಂಥ ದೇಶಸೇವಕರಿಗೇ ಮತ ಕೊಡಬೇಕು. ರಾಷ್ಟ್ರೀಯ ಪಕ್ಷದವರು ಅಲ್ಲಲ್ಲಿ ಉಮೇದವಾರರಾಗಿ ಮುಂದಾಗಬೇಕೆಂಬುದನ್ನು ಬೇರೆ ಹೇಳುವದು ಬೇಡ.

ಜಾತಿಯ ತತ್ವವು ಅಲ್ಲಲ್ಲಿ ಮುಂದೆ ಬರಬಹುದೆಂದು ತೋರುತ್ತದೆ. ಇದನ್ನು ಜೇತಿಸುವವರಾದರೂ ನಾವು ಮೇಲೆ ಹೇಳಿದ ಸ್ವಾರ್ಥೀ ಮತ್ತು ಮಹತ್ವಾಕಾಂಕ್ಷೆಯುಳ್ಳ ಜನರೇ. ತಾನು ನಿಮ್ಮ ಜಾತಿಯವನೆಂತಲೂ ಆದ್ದರಿಂದ ತನಗೇ ಮತಕೊಡಬೇಕೆಂತಲೂ ಈ ಜನರು ಹೇಳಬಹುದು. ಈ ಜಾತಿತ್ವ (?) ಕ್ಕೆ ಬಲಿಬಿದ್ದದರಿಂದಲೇ ಹಿಂದುಸ್ಥಾನಕ್ಕೆ ಪಾರತಂತ್ರ್ಯಾವಸ್ಥೆಯು ಪ್ರಾಪ್ತಿಯಾಗಿದೆ. ಇನ್ನು ಮುಂದಾದರೂ ಅಲ್ಲಲ್ಲಿಯ ಮತದಾರರು ಈ ತತ್ವವನ್ನು ಬೇರು ಸಹಿತವಾಗಿ ಕಿತ್ತೊಗೆಯಲಿಕ್ಕೆ ಪ್ರಯತ್ನಿಸಬೇಕು. ಚುನಾವಣೆಗೆ ನಿಲ್ಲುವ ಉಮೇದವಾರರು ಅವರು ಯಾವ ಜಾತಿಯವರಿರಲೊಲ್ಲರೇಕೆ, ಒಂದೇ ರಾಜಕೀಯ ತತ್ವವನ್ನು ಹಿಡಕೊಂಡೇ ಮುಂದೆ ಬರಬೇಕು. ಅಂದರೆ ಮಾತ್ರ ದೇಶದ ಕಲ್ಯಾಣವಾಗುವದು. ಬ್ರಾಹ್ಮಣ-ಬ್ರಾಹ್ಮಣೇತರ ವಾದವೂ ಈಗ ತಾನೇ ತಲೆದೋರಬಹುದು. ಇದನ್ನು ಬಡಿಗಿಡಲಿಕ್ಕೆ ಒಂದೇ ಉಪಾಯವು. ಯಾವದೆಂದರೆ ರಾಜಕೀಯ ತತ್ವವನ್ನು ಎತ್ತಿ ಹಿಡಿದು ಚುನಾವಣೆಯಲ್ಲಿ ಹೋರಾಡಬೇಕು. ಜಾತಿತತ್ವಕ್ಕೆ ಎಂದೂ ಬಲಿ ಬೀಳಬೇಡಿರಿ, ನಾಶಹೊಂದುವಿರಿ.

ರಾಷ್ಟ್ರೀಯ ಪಕ್ಷದವರು ಈಗ ದಕ್ಷರಾಗದಿದ್ದರೆ ಮುಂದೆ ಮೂರು ವರುಷಗಳ ವರೆಗೆ ಹಾದಿ ನೋಡುತ್ತ ಸುಮ್ಮನೆ ಅಪ್ಪುಗ್ಗೆ ಹಾಕಿಕೊಂಡು ದಾರಿ ನೋಡುತ್ತ ಕಾಲ ಕಳೆಯ ಬೇಕಾಗುವದು. ಅವುಗಳನ್ನು ನೇರ ನೆರವೇರಿಸಬಹುದಾದ ಅಲ್ಪ ಸ್ವಲ್ಪ ವಿಧಾಯಕ ಕಾರ್ಯಕ್ರಮವು ನೆನೆಗುದಿಗೆ ಬೀಳುವದು. ಎಂತೇ ಇಂದಿಗೆ ಎಚ್ಚರಿಕೆಯು!

ರೂಕ್ಕಸ್ತರಿಗೆ ಒಳ್ಳೇ ಸಂಧಿ!

ಶಿರ್ಸಿ ಗ್ರಾಮ, ಶಿರ್ಸಿ ವ ಸಿದ್ದಾಪುರ ತಾಲೂಕ ಇವುಗಳಲ್ಲಿ ಭರ್ತಿ ಬಾಜಾರದಲ್ಲಿದ್ದ ಮನೆ ವ ಧಾನ ಮಡಿ ವ ಬಾಗಾಯ್ತ ಜಮೀನ ಆಸ್ತಿ ಅಜಮಾಸ ೧೫-೨೦ ಸಾವಿರ ಬೆಲೆ ಬಾಳುವಂಥಾದ್ದು ತೋರಣವಿನಿಂದ ಇಟ್ಟುಕೊಂಡು ರೂಪಾಯಿ ಐದು ಸಾವಿರ ಕೊಡುವವರು ಬೇಕು. ಬಡ್ಡಿ ವಗೈರೆ ವಿಷಯದಲ್ಲಿ ಮಾತನಾಡಬೇಕಾದವರು ಈ ಕೆಳಗಿನ ವಿಳಾಸಕ್ಕೆ ಪತ್ರ ಬರೆದು ತಿಳಕೊಳ್ಳಬಹುದು. ಪತ್ರ ವ್ಯವಹಾರ ಮಾಡುವ ಪತ್ತೆ:—

“ಕ್ಷ” c/o “Kanara News,”
KUMTA

ದಿ ಎಡ್‌ವಾನ್ಸ ಮೋಟರ

ಟ್ರೇನಿಂಗ ಕ್ಲಾಸ

ಧಾರವಾಡ ಮತ್ತು ಕುಮಟಾ

ಈ ನಮ್ಮ ಟ್ರೇನಿಂಗ ಕ್ಲಾಸಿನಲ್ಲಿ ಡ್ರಾಯ್ವಿಂಗ ಮಾಡಲಿಕ್ಕೂ, ರಿಪೇರಿ ಮಾಡಲಿಕ್ಕೂ ಕಲಿಸಿ ಮೂರು ತಿಂಗಳಲ್ಲಿ ಲೈಸನ್ಸ ಸಹ ತೆಗಿಸಿ ಕೊಡಲಾಗುತ್ತದೆ. ಬೇಕಾದವರು ಇದರ ಫಾಯಿದೆ ಪಡಕೊಳ್ಳಬಹುದು. ವಿಶೇಷ ಮಾಹಿತಿ ಸಮಕ್ಷ ಯಾ ಪತ್ರದ್ವಾರಾ ಪತ್ತೆ—

ಸರದಾರ ಹೊಟೆಲ,
ಮೋರಿ ಕಲಾಸ
ಧಾರವಾಡ.

ಅನಂತರಾವ ಮಂಗೇಶರಾವ
ಸಿರಸಿಕ್ಕರ, ಮೋಟರ ಏಜಂಟ್ಸ
ಆಫೀಸ—ಕುಮಟಾ

ಪರದೇಶಿ ಸಕ್ಕರೆಯನ್ನು ಯಾಕೆ ತಿನ್ನಬಾರದು?

ಕಣ್ಣು ಮನ ನಾಲಿಗೆಯು । ತನ್ನನೇನೆನದೇಡ ।
ಅನ್ಯರು ಕೊಂದರೆನಬೇಡ । ಇವು ಮೂರು ।
ತನ್ನನೇ ತಾನ ಕೊಲ್ಲುವವು ಸರ್ವಜ್ಞ ॥

ಮನುಷ್ಯನು ಕಣ್ಣಿನ ಮೋಹಕ್ಕಾಗಲಿ, ಅಥವಾ ಮನಸ್ಸಿನ ಚಾಂಚಲ್ಯಕ್ಕಾಗಲಿ, ಅಲ್ಲದೆ ನಾಲಿಗೆಯ ರುಚಿಗಾಗಲಿ ವಶನಾದರೆ ಮಾಡಬಾರದ ಕೆಲಸಗಳನ್ನು ಮಾಡಿ, ತಿನ್ನಬಾರದ ಪದಾರ್ಥಗಳನ್ನು ತಿಂದು, ಹೇಗೆ ಅನರ್ಥಪರಂಪರೆಗೆ ಗುರಿಯಾಗುತ್ತಾನೆಂಬುದನ್ನು ಮಹಾಜ್ಞಾನಿಯಾದ ಸರ್ವಜ್ಞ ಕವಿಯು ಮೇಲಿನ ಪದ್ಯದಲ್ಲಿ ಬಹು ಯುಕ್ತಿಯುಕ್ತವಾಗಿ ವಿವರಿಸಿದ್ದಾನೆ. ನಾಲಿಗೆಯ ರುಚಿಗಾಗಿ ಅನೇಕ ಜನರು ತಿನ್ನಬಾರದ ಪದಾರ್ಥವನ್ನು ಸಕ್ಕರೆಯಲ್ಲಿ ತಿನ್ನುತ್ತ ಎಷ್ಟು ಅನರ್ಥಕ್ಕೆ ಗುರಿಯಾಗುತ್ತಿದ್ದಾರೆಂಬುದನ್ನು ಸ್ವಲ್ಪ ನೋಡಿರಿ.

ಪರದೇಶಗಳಿಂದ ಪ್ರತಿವರ್ಷ ಹಿಂದುಸ್ಥಾನಕ್ಕೆ ಸಾಧಾರಣ ೨೦ ಕೋಟಿ ರೂ. ಗಳ ಸಕ್ಕರೆಯು ಬರುತ್ತದೆ. ಈ ಸಕ್ಕರೆಯನ್ನೇ ಚಹಾ, ಕಾಫಿ ವಗೈರೆ ಮತ್ತು ನಾನಾ ಪಕ್ವಾನ್ನಗಳಿಗೆ ಹಾಕಿ ಕೋಟ್ಯಾಂತರ ಜನರು ಸೇವಿಸುತ್ತಿದ್ದಾರೆ. ಈ ಪರದೇಶೀ ಸಕ್ಕರೆಯು ಯಾವ ಪ್ರಕಾರ ಮಾಡಲ್ಪಡುತ್ತದೆಂಬುದು ಬಹಳ ಜನರಿಗೆ ಗೊತ್ತಿಲ್ಲ. ಗೊತ್ತಿದ್ದರೆ ಅವರು ಈ ಅತ್ಯಂತ ಅಪವಿತ್ರವಾದ ಸಕ್ಕರೆಯನ್ನು ಕೈಯಿಂದ ಕೂಡ ಮುಟ್ಟುತ್ತಿರಲಿಲ್ಲ. ಆದಕಾರಣ ಸಕಲರಿಗೂ ತಿಳಿಯಲೆಂದು ಗ್ರಂಥಗಳಲ್ಲಿ ಸಕ್ಕರೆಯನ್ನು ಮಾಡುತ್ತಿರುವ ರೀತಿಯನ್ನು ಇದರಲ್ಲಿ ವಿವರಿಸಿದೆ.

೧. ಮಿ| ಟೇಲರ್ ಸಾಹೇಬರವರ "Encyclopædia Britannica" (ಇಂಗ್ಲೆಂಡ ದೇಶದ ಜ್ಞಾನಕೋಶ) ಎಂಬ ಗ್ರಂಥದ ೨೧ನೆಯ ಭಾಗದ ೩೩೩ನೆಯ ಪುಟದಲ್ಲಿ ಸಕ್ಕರೆಯನ್ನು ಮಾಡುವ ನಾನಾ ವಿಧಾನಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಒಂದು ರೀತಿಯು ಈ ಪ್ರಕಾರ ಇದೆ:—“ಆಕಳು, ಎತ್ತು, ಎಮ್ಮೆ, ಕತ್ತೆ ಕುದುರೆ, ನಾಯಿ, ಒಂಟೆ ಮತ್ತು ಹಂದಿ ಮೊದಲಾದ ಪ್ರಾಣಿಗಳ ಎಲುವನ್ನು ಪುಡಿಮಾಡಿ ಆ ಪುಡಿಯನ್ನು ಸಕ್ಕರೆಯಲ್ಲಿ ಹಾಕುವದರಿಂದ ಅದರಲ್ಲಿರುವ ಕಲ್ಮಷವೆಲ್ಲಾ ಮೇಲಕ್ಕೆ ಬಂದು ಸಕ್ಕರೆಯು ಬಹಳ ಬೆಳ್ಳಗಾಗುವದು ಮತ್ತು ಅದರಲ್ಲಿ ಎಲುವಿನ ಚೂರ್ಣವೂ ಕೂಡಿಕೊಂಡಿರುವದು.”

೨. ಸಕ್ಕರೆಯನ್ನು ಬೆಳ್ಳಗೆ ಮಾಡುವ ಇನ್ನೊಂದು ರೀತಿ— ಸಕ್ಕರೆಯು ಪಾಕಕ್ಕೆ ಬಂದ ಸಮಯದಲ್ಲಿ ಹಾಲನ್ನು ಹಾಕಿದರೂ ಸಕ್ಕರೆಯು ಬೆಳ್ಳಗಾಗುತ್ತದೆ. ಆದರೆ ವಿಲಾಯತಿಯಲ್ಲಿ ಹಾಲು ಬಹು ತುಟ್ಟಿಯಾಗಿರುವದರಿಂದ (೩ ರೂ ಗಳಿಗೆ ಒಂದು ಸೇರು) ಹಾಲಿಗೆ ಪ್ರತಿಯಾಗಿ ಆಕಳು, ಎಮ್ಮೆ, ಹಂದಿ ಮೊದಲಾದ ಪ್ರಾಣಿಗಳ ರಕ್ತವನ್ನು ಅವುಗಳ ಸಂಬಂಧದ ಯಂತ್ರಗಳಿಂದ ತೆಗೆದುಕೊಂಡು ಒಂದು ಸಕ್ಕರೆಯ ಪಾಕದಲ್ಲಿ ಹಾಕಿ ಅದನ್ನು ಬೆಳ್ಳಗೆ ಮಾಡುತ್ತಾರೆ.

೩. Dictionary of Arts ಎಂಬ ಇಂಗ್ಲೀಷಿನಲ್ಲಿ ಅಚ್ಚಾದ ಪುಸ್ತಕದ ೨೧೯ನೆಯ ಪುಟದಲ್ಲಿರುವದೇನೆಂದರೆ—“ವಿಲಾಯತಿಯ ಕಲ್ಲುಸಕ್ಕರೆಯನ್ನು ಮಾಡುವಾಗ ೫೪ ಮಣಕ್ಕೆ ೨೦ ಮಣ ಎಲುವಿನ ಪುಡಿಯನ್ನು ಹಾಕುತ್ತಾರೆ.”

೪. ಮಿ| ಎ. ಜೆ. ಟೇಲರ್ ಸಾಹೇಬರು ಬರೆದಿರುವ "Sugar machinery" ಎಂಬ ಪುಸ್ತಕದಲ್ಲಿರುವದೇನೆಂದರೆ—“ಇಂಗ್ಲೆಂಡ ಮೊದಲಾದ ದೇಶಗಳಲ್ಲಿ ಸಕ್ಕರೆಯನ್ನು ಸ್ವಚ್ಛಗೊಳಿಸುವದಕ್ಕೋಸ್ಕರ ಆಕಳು, ಹಂದಿಗಳ ರಕ್ತವನ್ನು ನೀರಿನಲ್ಲಿ ಕಾಯಿಸಿ ಸಕ್ಕರೆಯ ಪಾಕದಲ್ಲಿ ಹಾಕುತ್ತಾರೆ.”

೫. ಶ್ರೀ ಸ್ವಾಮಿ ಭಾಸ್ಕರಾನಂದಜೀಯವರು ತಮ್ಮ ಅನುಭವವನ್ನು ಈ ಪ್ರಕಾರ ಬರೆದಿದ್ದಾರೆ. “ನಾನು ವಿಲಾಯತಿಗೆ ಹೋದಾಗ ಒಂದು ಸಕ್ಕರೆಯ ಕಾರ್ಯಾಲಯದ ಮೇಲುಪ್ಪರಿಗೆಯಲ್ಲಿ ಹೋಗಲು ಸಹಿಸಲಾರದಂಥ ದುರ್ವಾಸನೆಯು ಬಂದಿತು. ಆಗ ಅಲ್ಲೀನವರಿಂದ ಕೇಳಲು ಆಕಳು, ಎಮ್ಮೆ, ಹಂದಿ ಮೊದಲಾದ ಪ್ರಾಣಿಗಳ ರಕ್ತವನ್ನು ಸಕ್ಕರೆಯ ಪಾಕದಲ್ಲಿ ಕೂಡಿಸುತ್ತಿದ್ದಾರೆಂಬುದು ಗೊತ್ತಾಯಿತು. ಇಂಥ ಅಪವಿತ್ರ ಪದಾರ್ಥವನ್ನು ಸಕ್ಕರೆಯಲ್ಲಿ ಕೂಡಿಸುತ್ತಾರೆಂಬುದು ನನಗೆ ಗೊತ್ತಿರಲಿಲ್ಲ. ಹಿಂದು-ಮುಸಲ್ಮಾನರು ಊಟದ ಸಮಯದಲ್ಲಿ ಯಾವುದರ ಹೆಸರನ್ನು ಹೇಳಿದರೆ ಊಟ ಮಾಡುವದು ಬಿಟ್ಟು ಹೋಗುತ್ತಾರೆಯೋ, ಅಂಥ ಆಕಳು ಮತ್ತು ಹಂದಿಗಳ ರಕ್ತದಿಂದ ಕೂಡಿದ್ದ ಕೋಟ್ಯಾಂತರ ಮಣ ಸಕ್ಕರೆಯನ್ನು ಹಿಂದು-ಮುಸಲ್ಮಾನರು ತಾವೇ ತಿನ್ನುತ್ತ, ದೇವರಿಗೆ ಸಮರ್ಪಿಸುತ್ತಿರುವರಲ್ಲ! ಇವರು ಹಿಂದು ಮತ್ತು ಮುಸಲ್ಮಾನರೆಂದು ಹೇಳಿಸಿಕೊಳ್ಳಲು ಯೋಗ್ಯರೇ? ಸರ್ವಥಾ ಯೋಗ್ಯರಲ್ಲ.”

ಸಕ್ಕರೆಯಲ್ಲಿ ಎಲುವು ಮತ್ತು ರಕ್ತಗಳಿರುವದನ್ನು ನಾವೇನಾದರೂ ನೋಡಿದ್ದೇವೆಯೋ? ಕಣ್ಣಿಗೆ ಕಾಣದ್ದಕ್ಕೆ ದೋಷವಿಲ್ಲ ಎಂದು ನಾಲಿಗೆಯ ರುಚಿಗೆ ದಾಸರಾಗಿ ಅನೇಕರು ಹೇಳಬಹುದು. ಅಥವಾ ಇದು ಪರದೇಶದವರ ಮೇಲಿರುವ ದ್ವೇಷದಿಂದ ಹೇಳುವ ಸುಳ್ಳು ಸಂಗತಿಯೆಂದು ಯೋಚಿಸಿದರೂ ಯೋಚಿಸಬಹುದು. ಅಂಥವರು ಪರದೇಶದ ಸಕ್ಕರೆಯನ್ನು ಈ ಕೆಳಗೆ ವಿವರಿಸಿದ ಪ್ರಕಾರ ಪರೀಕ್ಷಿಸಿ, ಅದರ ನಿಜತ್ವವನ್ನು ತಿಳಿದುಕೊಳ್ಳಬಹುದು.

ಒಂದು ಗಾಜಿನ ಪಾತ್ರೆಯಲ್ಲಿ ಕುದಿಯುವ ನೀರನ್ನು ಹಾಕಿ ಅದರಲ್ಲಿ ಪರದೇಶೀ ಸಕ್ಕರೆಯನ್ನು ಹಾಕಬೇಕು. ಆ ಸಕ್ಕರೆಯು ಕರಗುವಾಗ ಸೂಕ್ಷ್ಮದರ್ಶಕ ಯಂತ್ರದಿಂದ ನೋಡಿದರೆ, ರಕ್ತದ ರಜಃಕಣಗಳು ಕಾಣುತ್ತವೆ. ಒಂದು ಪಾತ್ರೆಯಲ್ಲಿ ಬೆಲ್ಲದಿಂದಾದ ಸ್ವದೇಶೀ ಸಕ್ಕರೆಯನ್ನೂ, ಇನ್ನೊಂದು ಪಾತ್ರೆಯಲ್ಲಿ ಪರದೇಶೀ ಸಕ್ಕರೆಯನ್ನೂ ಹಾಕಿ ಅವುಗಳ ಮೇಲೆ “ಸಲ್ಫ್ಯೂರಿಕ್ ಆಸಿಡ್” ಸ್ವಲ್ಪ ಸ್ವಲ್ಪ ಬಿಡುತ್ತಾ ಹೋದರೆ, ದೇಶೀ ಸಕ್ಕರೆಯಿಂದ ಸುವಾಸನೆಯೂ, ಪರದೇಶೀ ಸಕ್ಕರೆಯಿಂದ ದುರ್ವಾಸನೆಯೂ ಬರುತ್ತವೆ.

ಪರದೇಶೀ ಸಕ್ಕರೆಯಲ್ಲಿ ಎಲುವು ಮತ್ತು ರಕ್ತಗಳು ಸೇರುತ್ತವೆಂಬ ನಿರ್ವಿವಾದ ಸಂಗತಿಯು ತಿಳಿದ ನಂತರ ಕೂಡಾ ಅದನ್ನು ಸೇವಿಸುವದು ಯುಕ್ತವೇ? ಈ ಅಪವಿತ್ರವಾದ ಸಕ್ಕರೆಯು ಕೇವಲ ಧಾರ್ಮಿಕ ದೃಷ್ಟಿಯಿಂದಲೇ ಸೇವಿಸುವದಕ್ಕೆ ಅಯೋಗ್ಯವಾದದೆಂದಲ್ಲ, ಆರೋಗ್ಯದ ದೃಷ್ಟಿಯಿಂದಲೂ ಪರದೇಶೀ ಸಕ್ಕರೆಯು ಸೇವನಕ್ಕೆ ಅನರ್ಹವಾದುದಾಗಿದೆ. ಏಕೆಂದರೆ, ಡಾ| ಫೀನಲೆ ಮೊದಲಾದ ದೊಡ್ಡ ದೊಡ್ಡ ವೈದ್ಯರು ಕೂಡಾ ವಿಲಾಯತಿಯ ಸಕ್ಕರೆಯು ಮನುಷ್ಯನ ರಕ್ತ ಮತ್ತು ವೀರ್ಯಗಳನ್ನು ದುಷ್ಟಗೊಳಿಸುತ್ತದೆಂತಲೂ, ಹಾಲು ಮೊದಲಾದ ಪದಾರ್ಥಗಳಲ್ಲಿ ಈ ಸಕ್ಕರೆಯು ಸೇರುವದರಿಂದ ಅದು ವಿಷಮಿಶ್ರಿತ ಪದಾರ್ಥವಾಗಿ ಪರಿಣಮಿಸಿ, ಪ್ಲೇಗ, ಇನ್‌ಫ್ಲುಎಂಝಾ, ಮಲೇರಿಯಾ, ಕ್ಷಯ ಮಂದಾಗ್ನಿ ಮೊದಲಾದ ರೋಗಗಳನ್ನುಂಟು ಮಾಡುತ್ತದೆಂತಲೂ ಹೇಳುತ್ತಿದ್ದಾರೆ.

ಈ ಪ್ರಕಾರ ಅಪವಿತ್ರ ಮತ್ತು ಅಹಿತಕಾರಿಯಾದ ಪರದೇಶೀ ಸಕ್ಕರೆಯನ್ನು ತಿನ್ನುವದು ಅಯೋಗ್ಯವಲ್ಲವೇ? ಧರ್ಮಗುರುಗಳು, ಆಚಾರ್ಯರು, ದೇವಭಕ್ತರು ಸಹ ಅಯ್ಯೋ! ಈ ಅಪವಿತ್ರವಾದ ಸಕ್ಕರೆಯನ್ನು ಸೇವಿಸುತ್ತ, ದೇವರ ನೈವೇದ್ಯಕ್ಕೂ ಪ್ರಸಾದಕ್ಕೂ ಈ ಸಕ್ಕರೆಯನ್ನು ಉಪಯೋಗಿಸುತ್ತಿರುವರಲ್ಲ! ಹಬ್ಬ, ಹುಣ್ಣಿವೆ, ಲಗ್ನ ಮುಹೂರ್ತ ಮೊದಲಾದ ಶುಭ ದಿವಸಗಳಲ್ಲಿ ಈ ರಕ್ತಮಿಶ್ರಿತವಾದ ಸಕ್ಕರೆಯ ಪಕ್ವಾನ್ನಗಳನ್ನು ಮಾಡಿಕೊಂಡು ಸೇವಿಸುತ್ತಿರುವರಲ್ಲ! ಪ್ರತಿನಿತ್ಯವೂ ಚಹಾ-ಕಾಫಿಗಳಿಗೆ ಈ ಎಲುವಿನ ಸಕ್ಕರೆಯನ್ನು

ಪಾಕಶಾಲಂತು ಸೇರಿಸುತ್ತ ಅಸಂಖ್ಯ ಜನರು ಅನಾಯಾಸ ಗ್ರಹಿಸ್ತ ಅಧರ್ಮಕ್ಕೆ ಗುರಿಯಾಗುತ್ತಿರುವರಲ್ಲ! ಇಂಥ ಭಯಂಕರವಾದ ಮಹಾಪಾತಕವನ್ನು ಧರ್ಮಾಭಿಮಾನಿಗಳಾದ ಹಿಂದುಗಳಾಗಲಿ ಅಥವಾ ಮುಸಲ್ಮಾನರಾಗಲಿ ತಿಳಿದೂ ತಿಳಿದು ಆಚರಿಸಲುದ್ಯುಕ್ತರಾಗಬಹುದೇ? ಧಾರ್ಮಿಕ ಭಾವನೆಯು ಈ ಧರ್ಮಭೂಮಿಯಲ್ಲಿ ಅಷ್ಟು ಲುಪ್ತವಾಗಿ ಹೋಗಿರುವದೇ? ಕೇವಲ ಕ್ಷಣಿಕವಾದ ನಾಲಿಗೆಯ ರುಚಿಗಾಗಿ ಎಂಥ ಭಯಂಕರವಾದ ಅಪವಿತ್ರ ಪದಾರ್ಥವನ್ನು ಕೂಡಾ ತಿನ್ನುವಷ್ಟು ಭಾರತೀಯರು ನಾಲಿಗೆಯ ದಾಸರಾಗಿ ಹೋಗಿದ್ದಾರೆಯೇ? ತಮ್ಮ ನಾಲಿಗೆಯ ರುಚಿಗಾಗಿ ಗೋವು ಮೊದಲಾದ ಸಾಧು ಪ್ರಾಣಿಗಳ ಕೊಲೆಗೆ ಭಾರತೀಯರು ಕಾರಣರಾಗಬಹುದೇ? ಅಂಥ ಘೋರ ಪಾಪವನ್ನು ಕೂಡಾ ಮಾಡುವಷ್ಟು ಭಾರತೀಯರು ಹೀನಾವಸ್ಥೆಗಿಳಿದಿದ್ದಾರೆಯೇ? ಛೀ! ಛೀ! ಭಾರತೀಯರು ಅಷ್ಟು ಅವನತಿಯನ್ನು ಎಂದಿಗೂ ಹೊಂದಲಾರರು.

ಈ ವಿಷಯವನ್ನು ಓದಿದ ವಾಚಕರು ಇಂದಿನಿಂದಲೇ ಪರದೇಶೀ ಸಕ್ಕರೆಯನ್ನು ನಿಶ್ಚಯವಾಗಿಯೂ ಬಹಿಷ್ಕರಿಸದೆ ಇರಲಾರರು. ಇಷ್ಟೇ ಅಲ್ಲ; ತಮ್ಮ ಮಿತ್ರ, ಬಂಧು, ಬಾಂಧವರಿಗೂ ಕೂಡಾ ಈ ಸಕ್ಕರೆಯ ಅಪವಿತ್ರತೆಯನ್ನು ತಿಳಿಸಿ ತಮ್ಮಿಂದಾದಷ್ಟು ಮಟ್ಟಿಗೆ ಈ ಅಪವಿತ್ರ ಪದಾರ್ಥವನ್ನು ಯಾರೂ ತಿನ್ನದಂತೆ ಪ್ರಯತ್ನಿಸದೆ ಇರಲಿಕ್ಕಿಲ್ಲ.

ಇನ್ನು ಸ್ವದೇಶೀ ಸಕ್ಕರೆಯ ವಿಷಯವಾಗಿ ಸ್ವಲ್ಪ ಬರೆಯುವೆನು. ಪರದೇಶೀ "ಬೂರಾ" ಸಕ್ಕರೆಯೆಂಬುದನ್ನು ಅನೇಕರು ಪಾಕಶಾಲೆ ಪುಡಿಸಕ್ಕರೆಯನ್ನು ಮಾಡುತ್ತಿದ್ದಾರೆ ಆದಕಾರಣ ಸ್ವದೇಶೀ ಸಕ್ಕರೆಯ ವಿಷಯದಲ್ಲಿಯೂ ಬಹು ಎಚ್ಚರಿಕೆಯಿಂದಿರಬೇಕು. ಎಲ್ಲಾ ಪಕ್ವಾನ್ನಗಳಿಗೂ ಬೆಲ್ಲವನ್ನು ಉಪಯೋಗಿಸುವದೇ ಉತ್ತಮೋತ್ತಮ. ಬೆಲ್ಲದಿಂದಲೇ ಶುದ್ಧ ರೀತಿಯಲ್ಲಿ ಸಕ್ಕರೆ ಮಾಡಲ್ಪಟ್ಟ ವಿಷಯವು ಚೆನ್ನಾಗಿ ಗೊತ್ತಿದ್ದರೆ, ಅಂಥ ಸಕ್ಕರೆಯನ್ನು ಉಪಯೋಗಿಸಬಹುದು

ಹರ್ಡೇಕರ ಮಂಜಪ್ಪ

—ಲೋಕಮತ.

ಅಮೇರಿಕನ್ ಉಪಾಯ.

ಎಂಬ್ರೋಸಿಯಾ.

ಸ್ತ್ರೀರೋಗಪರಿಹಾರಕ್ಕಾಗಿ.

ಎಂಬ್ರೋಸಿಯಾವು ಸಮಸ್ತ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು. ಇದು ಸ್ತ್ರೀಸೌಂದರ್ಯವನ್ನುಂಟುಮಾಡುತ್ತದೆ. ಸಾಮಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರುತ್ತದೆ. ತಕ್ಕ ಆಹಾರ ದೊರಕದೆ, ವಿಶೇಷ ಆಯಾಸ ಕೊಳ್ಳುವದರಿಂದ ಸ್ತ್ರೀಯರ ಪ್ರಕೃತಿಯು ಕೆಡುತ್ತದೆ. ಮುಟ್ಟಾಗುವಾಗ ಶೂಲಿ ಏಳುವದು, ಮುಟ್ಟಾಗದಿರುವದು, ಅಪಸ್ಮಾರ, ಬಂಜೆತನ ಮುಂತಾದ ಗರ್ಭಾಶಯದ ಬೇನೆಗಳು, ಅಜೀರ್ಣ, ತಲೆಶೂಲಿ ಭ್ರಮಿಷ್ಟತನ ಇವೆಲ್ಲ ಸ್ತ್ರೀರೋಗಗಳಮೇಲೆ ರಾಮಬಾಣ ಮದ್ದು. ಎಂಬ್ರೋಸಿಯಾವು ಸಮಸ್ತ ಸ್ತ್ರೀರೋಗಗಳನ್ನು ದೂರಮಾಡಿ, ಸ್ತ್ರೀಯರನ್ನು ಸಶಕ್ತ ಹಾಗು ಸೌಂದರ್ಯವಂತರನ್ನಾಗಿ ಮಾಡುತ್ತದೆ.

ಒಮ್ಮೆ ಪರೀಕ್ಷೆ ನೋಡಿ.

ಬೆಲೆ ಬಾಟ್ಲಿ ೧ ಕ್ಕೆ ರೂಪಾಯಿ ೩—೦—೦

ಏಜಂಟರು:— **ವೀರಿಯೊಲ ಏಜನ್ಸಿ,**

ಪ್ರಿನ್ಸೆಸ ಸ್ಟ್ರೀಟ, ಮುಂಬಯಿ ನಂಬರ ೨

ವಿವಿಧ ಸಂಗ್ರಹ.

ಚೀನದೊಳಗಿನ ಅತ್ಯಾಚಾರ.

ಶಾಂಘಾಯ ಬಂದರದಲ್ಲಿ ಚೀನಿ ಜನರ ಮೇಲೆ ಅಲ್ಲಿಯ ಬ್ರಿಟಿಶರು ದೊಂಬಿಯನ್ನು ಶಾಂತಪಡಿಸಲಿಕ್ಕಾಗಿ ಗುಂಡು ಹಾರಿಸಿ ಕೊಂದ ವೃತ್ತಾಂತವು ಈ ಮೊದಲೇ ಜಾಹೀರಾಗಿದೆ. ತಂತಿಯಿಂದ ಬಂದ ಹಕೀಕತು ಬ್ರಿಟಿಶರಿಗೆ ಅನುಕೂಲವಾಗುವಂತೆ ಪ್ರಕಟಿಸಲಾಗುತ್ತಿತ್ತೆಂದು ಈ ಮುಂದಿನ ಹಕೀಕತಿನಿಂದ ತಿಳಿಯುವ ಹಾಗಿದೆ. ಚೀನದೊಳಗಿನ ವಿದ್ಯಾರ್ಥಿಗಳ ಮೇಲೆ ದೊಂಬಿಯನ್ನೆಬ್ಬಿಸಿದ ಬಗ್ಗೆ ಖಟ್ಲೆಯಾಗಿದೆ. ಈ ಖಟ್ಲೆಯ ಹಕೀಕತು ಶಾಂಘಾಯದೊಳಗಿನ 'ಶುನಪಾವೋ' ಎಂಬ ಪ್ರತಿಷ್ಠಿತ ವರ್ತಮಾನ ಪತ್ರದಲ್ಲಿ ಪ್ರಸಿದ್ಧವಾಗಿದೆ. ಈ ಖಟ್ಲೆಯಲ್ಲಿ ಇನ್ಸಪೆಕ್ಟರ ಎವರ್ಸನ್‌ರವರು ಕೊಟ್ಟ ಜಬಾನಿಯು ಬಹಳ ಮಹತ್ವದ್ದಿತ್ತು. ಕೆಲವು ಸವಾಲಿಗೆ ಕೊಟ್ಟ ಉತ್ತರಗಳು ಈ ಕೆಳಗಿನಂತೆ ಇವೆ:—

ಪೋಲೀಸರು ಶಾಂಘಾಯ ವಿಶ್ವವಿದ್ಯಾಲಯದ ೧೮ ಮಂದಿ ವಿದ್ಯಾರ್ಥಿಗಳಿಗೆ ಸೆರೆ ಹಿಡಿದರು. ವಿದ್ಯಾರ್ಥಿಗಳು ಆ ಸಮಯ ಏನೂ ಪ್ರತಿಕಾರ ಮಾಡಲಿಲ್ಲ.

ಪ್ರಶ್ನೆ—ಗುಂಡು ಹಾರಿಸುವ ಹುಕುಮು ಕೊಡುವ ಮುಂಚೆ ನೀವು ಮುಂಜಾಗ್ರತೆ ಕೊಟ್ಟಿದ್ದಿರೇನು?

ಉತ್ತರ—ನಾನು ಪಿಸ್ತೂಲನ್ನು ಅವರ ಮೇಲೆ ಗುರಿ ಹಿಡಿದೆ.

ಪ್ರ.—ಅಲ್ಲಿ ೨೦೦೦ ಮಂದಿಗಳು ಕೂಡಿದ್ದರು. ಅವರಲ್ಲಿ ನಿಮ್ಮ ಪಿಸ್ತೂಲು ನೋಡಿದ್ದವರು ತೀರ ಅಲ್ಪ ಮಂದಿಗಳಲ್ಲವೇ?

ಉ.—ಅಹುದು.

ಪ್ರ.—ಮುಂಜಾಗ್ರತೆ ಕೊಟ್ಟ ೧೦ ಸೆಕಂದುಗಳಲ್ಲಿ ನೀವು ಗುಂಡು ಹಾರಿಸುವ ಹುಕುಮು ಕೊಟ್ಟಿದ್ದು ನಿಜವೋ?

ಉ.—ಅಹುದು.

ಪ್ರ.—೧೦ ಸೆಕಂದುಗಳೊಳಗೆ ೨ ಸಾವಿರ ಮಂದಿಗಳು ಚದರಿ ಹೋಗುವದು ಶಕ್ಯವೆಂದು ನೀವು ತಿಳಿಯುತ್ತೀರೇನು?

ಉ.—ಇಲ್ಲ

ಇನ್ಸಪೆಕ್ಟರ ಎವರ್ಸನ್‌ರು ಮುಂದೆ ಹೇಳಿದ್ದೇನಂದರೆ:- ನನ್ನಿಂದ ೧೦ ಫೂಟು ದೂರವಿದ್ದ ಜನರಿಗೆ ಮಾತ್ರ ಚದರಲು ಕೊಟ್ಟ ಹುಕುಮು ಕೇಳಬಹುದಿತ್ತೆಂದು ನನಗೆ ಗೊತ್ತಿತ್ತು. ಆದರೂ ಗುಂಡು ಹಾರಿಸಿ ಕೊಲ್ಲಲು ನಾನು ಹುಕುಮು ಕೊಟ್ಟೆ. ಮೊಟ್ಟಮೊದಲು, ಗುಂಡುಗಳನ್ನು ತಲೆಗೆ ತಾಗದಂತೆ ತಲೆಗೂ ಮೇಲೆ ಹಾರಿಸಲಿಕ್ಕಾಗಲಿ, ಕಾಲು ಮೇಲೆ ಗುಂಡು ಹಾರಿಸಲಿಕ್ಕಾಗಲಿ ನಾನು ಹೇಳಲಿಲ್ಲ. ವಿದ್ಯಾರ್ಥಿಗಳ ಕೈಯಲ್ಲಿ ಚಿಕ್ಕ ಪುಟ್ಟ ನಿಶಾಣೆಗಳಿದ್ದವು. ಅವೇ ಅವರ ಶಸ್ತ್ರಗಳು. ಗುಂಡು ಹಾರಿಸುವ ಮುಂಚೆ 'ಟಂಗು' ಅಂದರೆ ತಡೆಯಿರಿ ಎಂಬದೊಂದೇ ಚೀನಿ ಶಬ್ದವನ್ನು ಇನ್ಸಪೆಕ್ಟರ ಎವರ್ಸನ್‌ರು ಉಚ್ಚರಿಸಿದ್ದರೆಂದು ಅಸಿಸ್ಟಂಟ ಇನ್ಸಪೆಕ್ಟರ ಮಿ॥ ಶೊರವರು ತಮ್ಮ ಜಬಾನಿಯಲ್ಲಿ ಹೇಳಿದರು. "ಪರಸ್ಥರಿಗೆ ಕೊಂದುಹಾಕಿರಿ" ಎಂಬ ಶಬ್ದಗಳನ್ನು ಚೀನಿ ಜನರು ಉಚ್ಚರಿಸಿದ್ದು ನಾನೆಂದೂ ಕೇಳಲಿಲ್ಲೆಂದು ಮಿ॥ ಎಂಡರಸನ್ ಎಂಬ ಅಮೇರಿಕೆಯ ಪಾದ್ರಿಗಳು ಹೇಳಿದರು. "ಚೀನಿ ಜನರಿಗೆ ಬೆನ್ನು ಮೇಲೆಯೇ ಗುಂಡು ತಾಗಿದ್ದವೆಂ"ದು ಹಾರ್ವರ್ಡ ವಿಶ್ವವಿದ್ಯಾಲಯದ 'ಎಮ್. ಡಿ. ಪರೀಕ್ಷೆಯಲ್ಲಿ ಉತ್ತೀರ್ಣರಾದ ಡಾ॥ ವಿನ್‌ಶರರೂ, ಹಾಗು ಇಂಗ್ಲಿಷ ವಿಶ್ವವಿದ್ಯಾಲಯದ ಡಾ॥ ಮಿಂಗರವರೂ ಹೇಳಿದರು.

ಅದರಿಂದ ಚೌಕಶಿಗಾಗಿ ನೇಮಿಸಿದ ಅಂತರ್ರಾಷ್ಟ್ರೀಯ ಕಮಿಶನನು ಗುಂಡು ಹಾಕಿ ಕೊಂದ ಸಂಪೂರ್ಣ ಜವಾಬದಾರಿಯನ್ನು ಬ್ರಿಟಿಶ ಪೋಲೀಸರ ಮೇಲೆಯೇ ಹೊರಿಸಿದೆ. ಈ ಕಮಿಶನಿನ ರಿಪೋರ್ಟು ಮಾತ್ರ ಇನ್ನೂ ಹೊರಬೀಳಲಿಲ್ಲವು.

⁂

ಕಾಯಿದೆ ಕೌನ್ಸಿಲಿನಲ್ಲಿ ದೊರೆತ ಮಾಹಿತಿ

[illegible] ಮ್ಯುನಿಸಿಪಾಲಿಟಿಯವರು ಶ್ರೀ॥ ನರಸಿಂಹ ಚಿಂತಾಮಣ ಕೇಳಕರರವರಿಗೆ ಕೊಟ್ಟ ಮಾನಪತ್ರಕ್ಕೆ ೭ ರೂಪಾಯಿ ಖರ್ಚು ತಗಲಿತು. ಅದನ್ನು ಕಲೆಕ್ಟರರು ಮಂಜೂರು ಮಾಡಿರುವರು. ಮಾನಪತ್ರದ ಖರ್ಚನ್ನು ಮಂಜೂರು ಮಾಡುವದು ಕಲೆಕ್ಟರರ ಮರ್ಜಿಯ ಮಾತು. ಕಲೆಕ್ಟರರ ಮರ್ಜಿಯ ಅಧಿಕಾರವನ್ನು ಕಾಯದೆಯಿಂದ ರದ್ದುಪಡಿಸಲು ಸರಕಾರವು ನಿರ್ಣಯಿಸಿದೆ. ಇತ್ಯಾದಿ ಮಾಹಿತಿಯು ರಾ॥ ಭೋಪಟಕರರಿಗೆ ದೊರಕಿದೆ. ಪುಣೆ, ಬಾಕನೂರ ಬೆಳಗಾಂವ, ವಿಜಾಪುರ, ಶಿಕಾರಪುರ, ಈ ೫ ಮ್ಯುನಿಸಿಪಾಲಿಟಿಯವರು ಮುಂಬಯಿ ಡಿಸ್ಟ್ರಿಕ್ಟ ಮ್ಯುನಿಸಿಪಲ್ ಕಾಯಿದೆಯಲ್ಲಿ ತಿದ್ದುಪಡಿ ಮಾಡಿ, ತಮ್ಮ ಅಧಿಕಾರ ಕಕ್ಷೆಯೊಳಗಿನ ಪ್ರದೇಶದಲ್ಲಿ ಗೋಹತ್ಯವನ್ನು ಪ್ರತಿಬಂಧಿಸುವ ಅಧಿಕಾರ ಕೊಡಬೇಕೆಂದು ಬಿನ್ನೈಸಿಕೊಂಡಿರುವರಾಗಿ ಶ್ರೀ॥ ಭೋಪಟಕರರವರಿಗೆ ಉತ್ತರ ದೊರಕಿದೆ. ಇಡೀ ಮುಂಬಯಿ ಇಲಾಖೆಯಲ್ಲಿ ೧೫೨ ಗೋಹತ್ಯದ ಸ್ಥಾನಗಳಿವೆ. ಅವುಗಳಲ್ಲಿ ವರ್ಷಕ್ಕೆ ೧,೫೧,೮೪೪ ಗೋವುಗಳ ಸಂಹಾರವಾಗುತ್ತದೆ. ಕೆಲವು ವಧಸ್ಥಾನಗಳ ವಿವರ ಸಿಕ್ಕಿರುವದಿಲ್ಲ. ಸಿಕ್ಕಿದಷ್ಟರ ಮಟ್ಟಿಗೆ ೫೪,೦೨೭ ಆಕಳುಗಳೂ, ೩೩,೫೯೪ ಹೋರಿಗಳೂ ೨೦,೯೭೭ ಎಮ್ಮೆ-ಕೋಣಗಳೂ, ೯೪೧ ಕರುಗಳೂ ಕೊಲ್ಲಲ್ಪಡುತ್ತವೆ. ಮುಂಬಯಿಯ ಬಾಂದ್ರಾದ ಕೊಲೆ ಮನೆಯಲ್ಲಿ ೩೭,೭೪೨ ಆಕಳುಗಳೂ, ೧೩,೦೧೫ ಹೋರಿಗಳೂ, ೧೧,೩೧೪ ಎಮ್ಮೆ-ಕೋಣಗಳೂ, ೧೦ ಕರುಗಳೂ ವಧಿಸಲ್ಪಡುತ್ತವೆ. ನಮ್ಮ ಕಾನಡಾ ಜಿಲ್ಲೆಯ ಕಾರವಾರದಲ್ಲಿ ಒಂದು ಕೊಲೆ ಮನೆಯಿದೆ. ವರ್ಷಕ್ಕೆ ೩೮ ಆಕಳುಗಳ ಸಂಹಾರವಾಗುತ್ತದೆ. ಭಟಕಳದಲ್ಲಿ ಕೊಲೆ ಮನೆಯಿಲ್ಲ. ಆದರೆ, ಮ್ಯುನಿಸಿಪಾಲಿಟಿಯು ಲೈಸನ್ಸ ಪಡೆದು ೬೫ ಆಕಳು, ೫೪ ಹೋರಿ ಹೀಗೆ ೧೧೯ ದನಗಳ ಸಂಹಾರವಾಗುತ್ತದೆ. ಹಳಿಯಾಳದಲ್ಲಿಯೂ ಲೈಸನ್ಸ ಪಡೆದು ಸಂಹಾರ ಮಾಡುತ್ತಿರುವರು. ಆದರೆ, ಅಲ್ಲಿ ಎಷ್ಟು ದನಗಳ ಸಂಹಾರವಾಗುತ್ತದೆಂದು ತಿಳಿಯುವದಿಲ್ಲ. ಇತ್ಯಾದಿ ತಪಶೀಲು ಸಹಿತ ಕೊಲೆ ಮನೆಗಳ ಹೆಸರು ಕೊಟ್ಟ ಮಾಹಿತಿಯು ಶ್ರೀ॥ ಕರ್ಕಿಯವರಿಗೆ ದೊರಕಿದೆ. ಅಮಲಬಜಾವಣೆ ಹಾಗು ನ್ಯಾಯದಾನದ ಖಾತೆಗಳನ್ನು ವಿಂಗಡಿಸುವ ಬಗ್ಗೆ ಸರಕಾರವು ವಿಚಾರ ಮಾಡುತ್ತದೆಂದು ಶ್ರೀ॥ ಮುಕಾದಮರವರಿಗೆ ಉತ್ತರ ದೊರಕಿದೆ.

ಕಾನಡಾವೃತ್ತ.

ಮಿತಿ ಕ್ರೋಧನ ಸಂ॥ ಶ್ರಾವಣ ಶು॥ ೬ ಷ್ಠಿ ಸೋಮವಾರ

ಸದ್ಯಸ್ಥಿತಿ.

ಭಾರತೀಯ ರಾಜಕಾರಣದಲ್ಲಿ ಸದ್ಯಕ್ಕೆ ವಿಶೇಷ ಬದಲಾವಣೆಗಳು ಕಂಡುಬರಹತ್ತಿವೆ. ಸ್ವರಾಜ್ಯ ಪಕ್ಷದವರ ಅಸಹಯೋಗದಿಂದ ಆಳರಸರು ಬಗ್ಗದೆ, ಬಂಗಾಲದಲ್ಲಿ ಮೊಂಟೆಗ್ಯೂ ಸ್ವರಾಜ್ಯವನ್ನೇ ವಿಸರ್ಜಿಸಿ ನಿರಂಕುಶ ಪ್ರಭುತ್ವವನ್ನು ಕೈಕೊಂಡರು. ಇತ್ತ ದೇಶಬಂಧುಗಳೂ ದೇಹಾವಸಾನಹೊಂದಿದರು. ಸರ್ವಾಧಿಪತಿ ಹಾಗು ಭಾರತ ಮಂತ್ರಿಗಳ ಗುಪ್ತ ಆಲೋಚನೆಯನ್ನು ಅನೇಕರು ನಂಬಿಕೊಂಡಿದ್ದರು. ದೇಶಬಂಧುಗಳೂ ಅವರನ್ನೇ ನಂಬಿಕೊಂಡಿದ್ದರೆಂದು ಮಹಾತ್ಮರು ಪ್ರಕಟಿಸಿದ ದೇಶಬಂಧುಗಳ ಸಂಭಾಷಣೆಯ ವಿವರದಿಂದ ತಿಳಿಯುವಹಾಗಿದೆ. ದೇಶಬಂಧುಗಳಿದ್ದರೂ, ಅವರಿಗೂ ನಿರಾಶೆಯಾಗುತ್ತಿತ್ತು. ಇಂದ ಸಮಯದಲ್ಲಿ ರಾಷ್ಟ್ರಪುರುಷನನ್ನು ಉದ್ಧರಿಸುವ ಉಪಾಯಯೋಜನೆ ಮಾಡಲು ಲೋಕನಾಯಕರು ತೊಡಗಿರುವರು. ಮಹಾತ್ಮರೂ ಅದೇ ಕಾರ್ಯದಲ್ಲಿ ನಿಮಗ್ನರಾಗಿರುವರು. ಮಹಾತ್ಮರಿಗೂ, ಪಂಡಿತ ಮೋತೀಲಾಲರವರಿಗೂ ಮಾತುಕಥೆ ಸಹ ನಡೆದು ಈ ಕುರಿತು ಅವರೊಳಗೆ ನಡೆದ ಪತ್ರವ್ಯವಹಾರವು ಸಹ ಪ್ರಕಟವಾಗಿದೆ. ಮಹಾತ್ಮರು ಮುಂದಿನ ಉಪಾಯಯೋಜನೆಯ ವಿಷಯ ತಮ್ಮ ಮನೋಭೂಮಿಯಲ್ಲಿ ಉಂಟಾದ ವಿಚಾರತರಂಗಗಳನ್ನು ಕಲಕತ್ತೆಯ ‹ಸ್ಟೇಟ್ಸಮನ್› ಪತ್ರಿಕೆಗೆ ಬರೆದ ಸದ್ಯಕ್ಕೊಂದು ಪತ್ರದಲ್ಲಿ ಪ್ರಕಟಿಸಿರುವರು. ಇವುಗಳ ಪರ್ಯಾಲೋಚನೆಯಿಂದ ಸೂಚಿಸುವ ಕೆಲವು ವಿಚಾರಗಳನ್ನು ಇಂದಿಗೆ ನಮೂದಿಸಲಿಚ್ಛಿಸುವೆವು.

ಬೆಳಗಾವಿಯ ರಾಷ್ಟ್ರೀಯ ಸಭೆಯಲ್ಲಿ ಐಕ್ಯಮತ್ಯದಿಂದ ನೂಲುವ ಮತಾಧಿಕಾರವು ಮಂಜೂರಾದಾಗ್ಯೂ, ಆ ಮತಾಧಿಕಾರದಂತೆ ಸ್ವತಃ ನೂಲುವ ಸಭಾಸದರ ಸಂಖ್ಯೆಯು ಉತ್ಸಾಹದಿಂದ ಬೆಳೆಯಲಿಲ್ಲೆಂಬುದು ಸರ್ವರಿಗೂ ವಿದಿತವಾದದ್ದೇ. ಮಹಾತ್ಮರು ನುಡಿದಂತೆ, ಸಭಾಸದರ ಸಂಖ್ಯೆಗಿಂತ ಕಾರ್ಯಕ್ಷಮತೆಯೇ ಶ್ರೇಷ್ಠವೆಂಬ ಸಿದ್ಧಾಂತವನ್ನು ಯಾರೂ ಒಪ್ಪುವರು; ನಾವೂ ಒಪ್ಪುವೆವು. ಅರ್ಧ ತಾಸು ನೂಲುವದೇನು ಕಠಿಣ ಕೆಲಸವಲ್ಲೆಂದೂ ಯಾರೂ ಅರಿಯದ ಮಾತಲ್ಲ. ಆದರೆ, ನೂಲುವ ಮತಾಧಿಕಾರದಿಂದ ರಾಷ್ಟ್ರೀಯ ಸಭೆಯ ವ್ಯಾಪ್ತಿಯು ಸಂಕುಚಿತವಾಯಿತೆಂಬ ಮಾತನ್ನೂ ಯಾರೂ ಒಪ್ಪಲೇಬೇಕು. ಕಾರಣಾಂತರದಿಂದ ದೇಶಕಾಲಭೇದದಿಂದ ನೂಲಲಾರದವರು ರಾಷ್ಟ್ರೀಯ ಸಭೆಯಲ್ಲಿ ಸೇರಿಕೊಳ್ಳಲಿಕ್ಕೆ ರಾಷ್ಟ್ರೀಯ ಸಭೆಯ ಠರಾವಿನಂತೆ ಪಾತ್ರರಲ್ಲ. ಇತರ ರಾಷ್ಟ್ರೀಯ ಸೇವೆಯು ಬೇಕಾದಷ್ಟಿರಲಿ, ನೂಲುವ ರಾಷ್ಟ್ರಸೇವೆ ಮಾಡದಿದ್ದರೆ, ಅವರಿಗೆ ಮತದಾನದ ಅಧಿಕಾರವಿಲ್ಲ. ಸ್ವರಾಜ್ಯ ಪಕ್ಷದವರು ಮಹಾತ್ಮರೊಡನೆ ಮಾಡಿಕೊಂಡ ಕರಾರಿನಂತೆ ನೂಲನ್ನು ಪ್ರಾಂಟಕ್ಕಿಟ್ಟು ಸಭಾಸದರ ಅನಾನುಕೂಲತೆಯನ್ನು ಪರಿಹರಿಸಲೆತ್ನಿಸಿದರೂ, ಅದೇನು ರಾಷ್ಟ್ರೀಯ ಸಭೆಯ ಠರಾವಿಗೆ ಸಮ್ಮತವಿಲ್ಲೆಂದು ಮಹಾತ್ಮರು ಹೇಳಿದ್ದರಿಂದ, ಒಂದು ಪರಿಯಿಂದ ಮತ್ತೊಂದು ಅಡಚಣೆಯುಂಟಾಯಿತು.

ಈ ಅಡಚಣೆಯನ್ನು ಪರಿಹರಿಸಲು ಸಾತಾರೆಯ ಮಹಾರಾಷ್ಟ್ರ ಪ್ರಾಂತೀಯ ಪರಿಷತ್ತಿನಲ್ಲಿ ಉಪಾಯಯೋಜನೆಗಾಗಿ, ಆ ಕುರಿತು ಇಡೀ ಭರತಖಂಡದಲ್ಲಿ ದೊಡ್ಡ ವಾದವೆದ್ದಿತು. ಅನುಕೂಲ-ಪ್ರತಿಕೂಲ ಚರ್ಚೆಯಾಯಿತು. ದೇಶಬಂಧುಗಳ ನಿಧನವಾದ ಬಳಿಕ, ಭಾರತ ಮಂತ್ರಿಗಳು ಸ್ವರಾಜ್ಯ ಪಕ್ಷದವರಿಗೆ ಕೊಟ್ಟ ಬೆದರಿಕೆಯಿಂದ ಮಹಾತ್ಮರಿಗೂ ವ್ಯಸನವಾಗಿ, ಸ್ವರಾಜ್ಯ ಪಕ್ಷದ ಕಾರ್ಯಕ್ರಮವನ್ನೇ ತೀವ್ರದಿಂದ, ಚೈತನ್ಯದಿಂದ ನಡಿಸುವದೇ ಪ್ರತ್ಯುತ್ತರವೆಂದು ಮನವರಿಕೆಯಾಯಿತು. ಮತ್ತು ಸ್ವರಾಜ್ಯ ಪಕ್ಷದ ವ್ಯಾಪ್ತಿಯನ್ನು ವಿಸ್ತರಿಸಲು ನೂಲುವ ಮತಾಧಿಕಾರದ ಕಟ್ಟೆಯಿಂದ ಅವರನ್ನು ಬಿಡುಗಡೆ ಮಾಡಿದರು. ಇದಕೂ ಮುಂದಾಗಿ ಸ್ವರಾಜ್ಯ ಪಕ್ಷವೇ ರಾಷ್ಟ್ರೀಯ ಸಭೆಯ ಸೂತ್ರಚಾಲಕವಾಗಿ ನೂಲುವ ಸಂಸ್ಥೆಯು ಅದಕ್ಕಾಧೀನವಾಗಿರಬೇಕೆಂದು ಸೂಚಿಸಿರುವರು. ಬರುವ ಅಕ್ಟೋಬರ ತಿಂಗಳಿನಲ್ಲಿ ಸೇರಲಿಕ್ಕಿದ್ದ ಅಖಿಲ ಭಾರತೀಯ ಕೊಂಗ್ರೆಸ ಕಮೀಟಿಯಲ್ಲಿ ಈ ವಿಷಯ ಚರ್ಚೆಯಾಗಿ ಮಾಡಿಕೆಯಂತೆ ತೀರ್ಮಾನವಾಗುವದು ಮಾತ್ರ ಬಾಕಿಯುಳಿದಿದೆ. ಇದು ಸ್ವರಾಜ್ಯಪಕ್ಷದ ಕಾರ್ಯಕ್ಷೇತ್ರವಾಯಿತು.

ಮಹಾತ್ಮರಿಗೆ ಕೌನ್ಸಿಲಿನಲ್ಲಿ ಶ್ರದ್ಧೆ ಇಲ್ಲ. ಅಲ್ಲಿನ ಅಡ್ಡಗಟ್ಟುವ ಅಸಹಕಾರಿತೆಯಿಂದ ರಾಷ್ಟ್ರಪುರುಷನ ಸಂವರ್ಧನವಾಗುವದೆಂದು ತೋರುವದಿಲ್ಲ. ಅದರಿಂದ ಮುಂದೇನು? ಎಂಬ ವಿವಂಚನೆಯು ಅವರಿಗೆ ವಿಶೇಷವಾಗಿದೆ. ‹ಸ್ಟೇಟ್ಸಮನ್› ಪತ್ರಿಕೆಯಲ್ಲಿ ಮಹಾತ್ಮರು ಅಹಿಂಸೆಯಮೇಲಿನ ತಮ್ಮ ಶ್ರದ್ಧೆಯನ್ನು ಪುನಃ ಒತ್ತಿಹೇಳಿ, ಅಹಿಂಸಾವಾದಿಗಳು ಶಕ್ತಿ ಮೀರಿ ದುಡಿಯುವ ಉಪಾಯವನ್ನು ತಾವು ಕಂಡು ಹಿಡಿಯತೊಡಗಿರುವರೆಂದು ಹೇಳಿರುವರು. ಅಹಿಂಸಾವಾದಿಗಳು ಶಕ್ಯವಿದ್ದ ಉಪಾಯವನ್ನೆಲ್ಲ ಕೈಕೊಂಡಾಗ್ಯೂ ಮುಂದೆ ರಾಷ್ಟ್ರೋದ್ಧಾರವಾಗದಿದ್ದರೆ, ಅದಕ್ಕೆ ಯಾರೂ ಹೊಣೆಗಾರರಲ್ಲೆಂದೂ ಮಹಾತ್ಮರು ಪ್ರಸ್ತಾವಿಸಿರುವರು. “ಯತ್ನೇ ಕೃತೇ ಯದಿ ನ ಸಿಧ್ಯತಿ ಕೋಽತ್ರ ದೋಷಃ।” ಯತ್ನ ಮಾಡುವದು ಶ್ರದ್ಧಾವಂತ ಮಾನವನದು; ಯಶ ಕೊಡುವದು ಪರಮಾತ್ಮನದು. ಅದರಿಂದ ಮಹಾತ್ಮರು ತಮ್ಮಂಥ ಅಹಿಂಸಾವಾದಿಗಳು, ಕೌನ್ಸಿಲು ಸನ್ಯಾಸಿಗಳು ಕೈಕೊಳ್ಳಬೇಕಾದ ಉಪಾಯವನ್ನು ಶೋಧಿಸಹತ್ತಿರುವರು.

ಸಾಮುದಾಯಿಕ ಕಾಯಿದೆಭಂಗವು ಸದ್ಯಸ್ಥಿತಿಯಲ್ಲಿ ಅನುಕೂಲವಿಲ್ಲ. ಸಮಸ್ತರೂ ನಿಶ್ಚಲವೃತ್ತಿಯಿಂದ ಪರಮಾತ್ಮನ ಶ್ರದ್ಧೆಯಿಂದ ಪ್ರೇರಿತರಾಗಿ, ಸಮಸ್ತ ಪ್ರಪಂಚವನ್ನು ರಾಷ್ಟ್ರಸ್ವರೂಪನ ಚರಣಾರವಿಂದಗಳಿಗೆ ಅರ್ಪಿಸಲು ಸಿದ್ಧರಾದರೆ, ಅಹಿಂಸೆಯಿಂದ ನಡಕೊಂಡರೆ, ಸಾಮುದಾಯಿಕ ಕಾಯಿದೆ ಭಂಗದಲ್ಲಿ ವಿಜಯ ಸಂಪಾದಿಸಬಹುದು; ಅಷ್ಟು ನಿರ್ಧಾರವು, ನಿಷ್ಠೆಯು ಈ ವರೆಗೆ ಕಂಡುಬರಲಿಲ್ಲ. ಪ್ರಜೆಗಳೊಳಗೆ ಅಷ್ಟು ಐಕ್ಯಮತ್ಯವಾಗುವ ಸುಚಿನ್ಹಗಳೂ ಸದ್ಯಕ್ಕೆ ತೋರಬರುವದಿಲ್ಲ. ಇಂಥ ಪ್ರಸಕ್ತಿಯಲ್ಲಿ ಮಹಾತ್ಮರು ದೊಡ್ಡ ಚಿಂತೆಗೊಳಗಾಗಿರುವರು. ಸಾಮುದಾಯಿಕ ಕಾಯಿದೆ ಭಂಗವು ಅಶಕ್ಯವಾದ್ದಲ್ಲಿ, ವ್ಯಕ್ತಿಗತ ಅಹಿಂಸಾವಾದಿಗಳಾದರೂ ರಾಷ್ಟ್ರಪುರುಷನ ಬಂಧವಿಮೋಚನಕ್ಕಾಗಿ ಅವಶ್ಯವುಳ್ಳ ವ್ಯಕ್ತಿಗತ ಕಾಯಿದೆ ಭಂಗವನ್ನು ಆಚರಿಸಿ ರಾಷ್ಟ್ರಪುರುಷನ ಬಂಧವಿಮೋಚನ ಮಾಡಲು ಉಪಾಯಯೋಜನೆ ಮಾಡಬೇಕು. ಕೌನ್ಸಿಲು ಸನ್ಯಾಸಿ ಅಸಹಯೋಗಿಗಳ ರಾಷ್ಟ್ರವಿಮೋಚನ ಯೋಜನೆಯನ್ನು ಕಂಡುಹಿಡಿಯಲು ಮಹಾತ್ಮರು ಹಗಲಿರುಳು ಚಿಂತಿಸುತ್ತಿರುವರು.

ಸದ್ಯಸ್ಥಿತಿಯೊಳಗಿನ ಮಹತ್ವದ ಬದಲಾವಣೆಗಳವು ಆಳರಸರ ಕುಯುಕ್ತಿಗಳಿಗೆ, ಅವರು ಕೈಕೊಳ್ಳುವ ಕುತಂತ್ರಗಳಿಗೆ ರಾಷ್ಟ್ರಪುರುಷನು ಇದಿರಾಗಿ ಅವರನ್ನು ಸೋಲಿಸಿದ ಹೊರತು, ಭರತ ಖಂಡದ ಉದ್ಧಾರವಾಗದು. ಹೊಸ ಯೋಜನೆಗಳಿಂದ ರಾಷ್ಟ್ರೀಯ ಸಭೆಯಲ್ಲುಂಟಾದ ಐಕ್ಯಭಂಗವು ದೂರವಾಗಿ ಸ್ವಾತಂತ್ರ್ಯ ಪ್ರಾಪ್ತಿಯ ಮಾರ್ಗವು ಶೀಘ್ರವಾಗಿ ಸಾಗುವದು. ಇತರ ರಾಜಕೀಯ ಪಕ್ಷಗಳೂ ರಾಷ್ಟ್ರೀಯ ಸಭೆಯಲ್ಲುಂಟಾದ ಬದಲಾವಣೆಗಳನ್ನನುಲಕ್ಷಿಸಿ ರಾಷ್ಟ್ರೀಯ ಸಭೆಯನ್ನು ಸೇರಿಕೊಂಡು, ಅದರ ಆಶ್ರಯದಲ್ಲಿಯೇ ನಡಕೊಳ್ಳಲು ತಯಾರಾಗುವರೆಂದು ಸಾಮಾನ್ಯವಾಗಿ ಊಹಿಸಬಹುದು.

— ಬಿರ್ಕೆಂಟ ಅರ್ಲನವರು ತಮ್ಮ “ಬಿಲ್ಲು” ತೆಗೆದುಕೊಂಡು, ಸ್ವರಾಜ್ಯವನ್ನು ಹಿಂದುಸ್ಥಾನಕ್ಕೆ ದೊರಕಿಸಿ ಕೊಡುವದಕ್ಕಾಗಿ, ಇಂಗ್ಲಂಡಿಗೆ ಜೂಜಾಡಲಿಕ್ಕೆ ಹೋಗಿದ್ದರು. ದೇಶಬಂಧುಗಳು ಮೃತ್ಯುಂಜಯರಾಗಿರುವ ಪೂರ್ವದಲ್ಲಿ ಈ ಬಿಲ್ಲು ಮುಟ್ಟಿದರೆ, ತುಂಡಾಗುವದೆಂದು ಸ್ಪಷ್ಟವಾಗಿ, ನೆಹರುರವರಿಗೆ ಬರೆದು ತಿಳಿಸಿದ್ದರು. ಮಹಾತ್ಮರಂತೂ ಮೊದಲಿನಿಂದ ಅದಕ್ಕೆ ಒಪ್ಪಿದ್ದಿಲ್ಲ. ಬಿಲ್ಲು ಮುರಿದು ಹೋಗುವ ಚಿನ್ಹಗಳು ಇಂಗ್ಲಂಡದಲ್ಲಿ ತೋರುತ್ತಿವೆ.

[redacted]

ಕೈ। ವಾ। ಸರ್ ಸುರೇಂದ್ರನಾಥ ಬಾನರ್ಜಿಯವರು.

ಭಾರತ ಮಾತೆಯು ಪುನಃ ಶೋಕಸಾಗರದಲ್ಲಿ ಮುಳುಗಿರುವಳು. ಬಂಗಾಲದ ವರಪುತ್ರರಾದ ಸರ್ ಸುರೇಂದ್ರನಾಥ ಬಾನರ್ಜಿಯವರು ಅನಪೇಕ್ಷಿತವಾಗಿ ಕಳೆದ ತಾ।೬ ನೇ ಗುರುವಾರ ಅಪರಾಹ್ನ ೧॥ ಘಂಟೆಗೆ ಬರಕಪುರದೊಳಗಿನ ತಮ್ಮ ನಿವಾಸ ಸ್ಥಾನದಲ್ಲಿ ಕಾಲಾಧೀನರಾದರು. ಇನ್ಫ್ಲುಯೆಂಝಾ ಬೇನೆಯಿಂದ ಸರ್ ಸುರೇಂದ್ರನಾಥರು ೭೭ ನೇ ವರ್ಷ ಪ್ರಾಯದಲ್ಲಿ ತೀರಿಕೊಂಡರು. ಸರ್ ಸುರೇಂದ್ರನಾಥರೆಂಬ ಹೆಸರು ಕೇಳಿದ ಕೂಡಲೆ, ಪ್ರಜೆಗಳಿಗೆಲ್ಲ ವಂಗಭಂಗ, ಸ್ವದೇಶಿ ಚಳವಳಿಯ ನೆನವರಿಕೆಯಾಗದಿರದು. ಸರ್ ಸುರೇಂದ್ರನಾಥರು ಭಾರತ ಮಾತೆಯ ಸುದೈವದಿಂದ ಸರಕಾರಿ ನೌಕರಿಯ ಸುವರ್ಣಶೃಂಖಲೆಯಿಂದ ಬಿಡುಗಡೆಹೊಂದಿ, ರಾಷ್ಟ್ರೀಯ ಸಭೆಯ ಶಕ್ತಿಯಿಂದ ವಿಲಾಯತಿಯಲ್ಲಿ ಹಿಂದುಸ್ಥಾನದೊಳಗಿನ ಆಳರಸರ ಹಾವಳಿಯನ್ನು ವಕ್ತೃತ್ವಪೂರ್ಣವಾಗಿ ಬಣ್ಣಿಸಿ, ಭಾರತ ಮಾತೆಯ ಅಲೌಕಿಕ ಸೇವೆ ಮಾಡಿರುವರು. ಭರತ ಪುತ್ರರು ಕೃತಜ್ಞರಾಗಿ ಸರ್ ಸುರೇಂದ್ರನಾಥರವರಿಗೆ ರಾಷ್ಟ್ರೀಯ ಸಭೆಯ ಸಭಾಪತಿಸ್ಥಾನವನ್ನರ್ಪಿಸಿ ಎರಡು ಬಾರಿ ಸತ್ಕರಿಸಿದರು. ಸರ್ ಸುರೇಂದ್ರನಾಥರ ಭಾಷಣಶೈಲಿಯು ಅಪ್ರತಿಮವಿದ್ದು ವಕ್ತೃತ್ವ ಪ್ರವಾಹದಲ್ಲಿ ತೇಲಿ ಹೋಗದ ಭರತಪುತ್ರರು ವಿರಳರು. ಬ್ರಿಟಿಶರ ನ್ಯಾಯಬುದ್ಧಿಯ ಮೇಲೆ ಬಹಳ ಶ್ರದ್ಧೆಯುಳ್ಳವರಿಂದ ಮೊಂಟೆಗ್ಯೂ ಸ್ವರಾಜ್ಯವನ್ನು ಅಂಗೀಕರಿಸಿ, ಸರ್ ಸುರೇಂದ್ರನಾಥರು ಕೈಲಾದಷ್ಟು ದೇಶಸೇವೆ ಮಾಡಿದರು. ಪಂಜಾಬದ ಅತ್ಯಾಚಾರ, ಖಿಲಾಫತ ಮುಂತಾದ ಅಪಕೃತ್ಯಗಳಿಂದ ಬ್ರಿಟಿಶರ ನ್ಯಾಯಬುದ್ಧಿಯು ಸತ್ವಪರೀಕ್ಷೆಯಾಗಿ ಬ್ರಿಟಿಶರ ಮೇಲಿನ ಪ್ರಜೆಗಳ ವಿಶ್ವಾಸವು ನಷ್ಟವಾದ್ದರಿಂದ ಮುಪ್ಪಿನ ಕಾಲದಲ್ಲಿ ಅವರು ಮಾಡಿದ ದೇಶಸೇವೆಯು ಪ್ರಜಾಸಮ್ಮತವಾಗದೆ, ದೇಶಬಂಧುಗಳಂಥ ಪ್ರಜಾಸೇವಕರಿಗೂ, ಸರ್ ಸುರೇಂದ್ರನಾಥರವರಿಗೂ ಆಗಿಂದಾಗ ಇದಿರುವಾದಗಳಾದದ್ದು ಕಂಡುಬರುತ್ತಿತ್ತು. ಮುಪ್ಪಿನ ಪ್ರಾಯದಲ್ಲಿ ಸರ್ ಸುರೇಂದ್ರನಾಥರು ತಮ್ಮ ಜೀವನ ಸ್ಮೃತಿಗಳನ್ನು ಬರೆದು ದೇಶಬಾಂಧವರಿಗೆ ಉಪಕಾರ ಮಾಡಿರುವರು. ಮೊನ್ನೆ ಮಹಾತ್ಮರು ಬಂಗಾಲಕ್ಕೆ ಹೋದಾಗ, ಅವರಲ್ಲಿಗೆ ಹೋಗಿ ಅವರೊಡನೆ ಮಾತುಕಥೆಯನ್ನಾಡ ಹೋಗಿದ್ದರು. ದೇಶೋದ್ಧಾರದ ಉಪಾಯಯೋಜನೆಯ ವಿಷಯ ಇಬ್ಬರಿಗೂ ಮಾತುಕಥೆಯಾಯಿತಂತೆ. ಬಂಗಾಲದ ಪ್ರವಾಸ ಮುಗಿದ ಬಳಿಕ, ಮಹಾತ್ಮರಿಗೆ ಸರ್ ಸುರೇಂದ್ರನಾಥರು ಬರಹೇಳಿದ್ದರಂತೆ. "ದೈವಮನ್ಯಥಾ ಚಿಂತಯೇತ್" ಎಂಬಂತೆ ಮಹಾತ್ಮರು ಬಂಗಾಲದಲ್ಲಿ ಪ್ರವಾಸ ಮಾಡುತ್ತಿರುವಾಗಲೇ, ೩೦-೪೦ ವರುಷಗಳಿಂದ ರಾಜಕಾರಣಕ್ಷೇತ್ರದಲ್ಲಿ ಆಳರಸರೊಡನೆ ಜೂಜಾಡಿ, ಪುನಃ 'ಬಂಗಾಲಿ' ಪತ್ರಿಕೆಯ ಅಧಿಪತ್ಯವನ್ನು ಕೈಕೊಂಡು, ರಾಜಕಾರಣ ರಣಕ್ಷೇತ್ರದಲ್ಲಿ ಅವತರಿಸಿದ ಅನುಭವಿಕ ಧೀರನು ಕಾಲವಶನಾದನು. ಮತಭೇದವು ಪ್ರಕೃತಿಭೇದದಂತೆ ಎಲ್ಲಿಯೂ ಇರುವದು. ಪ್ರಚಲಿತ ಪರಿಸ್ಥಿತಿಯಲ್ಲಿ ಸರ್ ಸುರೇಂದ್ರನಾಥರವರ ಮತಗಳು ಬಹುಜನಸಮಾಜಕ್ಕೆ ಗ್ರಾಹ್ಯವಾಗದಿದ್ದರೂ, ಸರ್ ಸುರೇಂದ್ರನಾಥರು ಮನೋದೇವತೆಯನ್ನು ಸ್ಮರಿಸಿ, ದೇಶಾಭಿಮಾನದಿಂದ ದೇಶಸೇವೆಯನ್ನು ಮಾಡುತ್ತಿದ್ದರು. ಇಂಥ ನಿರಪೇಕ್ಷ ದೇಶಾಭಿಮಾನಿ ದೇಶಸೇವಕನನ್ನು ಕಳಕೊಂಡು ಭರತಭೂಮಿಯು ಮರುಗುತ್ತದೆ. ದೇಶಬಂಧುಗಳನ್ನು ಕಳಕೊಂಡು ೨ ತಿಂಗಳುಗಳಾಗುವದರೊಳಗಾಗಿಯೇ ಸರ್ ಸುರೇಂದ್ರನಾಥರ ವಿಷಯ ಹಳಹಳಿಸುವ ದುಃಖದ ಪ್ರಸಂಗವು ಪ್ರಾಪ್ತವಾಗಿದೆ. ಇಂಥ ಪ್ರಸಕ್ತಿಯಲ್ಲಿ ಪರಮಾತ್ಮನೇ ನಮ್ಮನ್ನು ಕಾಯಬೇಕಲ್ಲದೆ, ಇನ್ಯಾರಿಗೆ ನಾವು ಮೊರೆ ಹೊಕ್ಕುವದು? ಸರ್ ಸುರೇಂದ್ರನಾಥರವರಿಗೆ ಸದ್ಗತಿಯನ್ನಿತ್ತು ಮನ್ನಿಸಲು ಆತನೆಡೆಗೆ ಭಕ್ತಿಪೂರ್ವಕ ಪ್ರಾರ್ಥಿಸಿ, ಈ ಚಿಕ್ಕ ಲೇಖವನ್ನು ಮುಗಿಸುವೆವು.

ಸ್ಫುಟ ಸೂಚನೆಗಳು.

೧. ಕರ್ನಾಟಕದ ನಿಸ್ಪೃಹ ತೇಜಸ್ವಿ ದೇಶಸೇವಕರಾದ ಶ್ರೀ। ರಂಗನಾಥ ರಾಮಚಂದ್ರ ದಿವಾಕರರವರು ಕಳೆದ ಜುಲೈ ೩೦ ನೇ ತಾರೀಖಿಗೆ ಅಕಲ್ಪಿತವಾಗಿ ಬಿಡುಗಡೆ ಹೊಂದಿದರು. ದೇಶಭಕ್ತ ರಂಗನಾಥ ರಾಯರನ್ನು ನಾವು ಮನಃಪೂರ್ವಕವಾಗಿ ಸ್ವಾಗತೀಕರಿಸುವೆವು. ಶ್ರೀ। ರಂಗನಾಥ ರಾಯರು ತಮ್ಮ ಮುದ್ರಣಾಲಯದಲ್ಲಿ ರಾಜದ್ರೋಹದ ಹಸ್ತಪತ್ರಿಕೆಯನ್ನೊಂದು ಮುದ್ರಿಸಿದ ಬಗ್ಗೆ ಕಳೆದ ತಾರೀಖು ೧೬ ನೇ ನವ್ಹಂಬರ ೧೯೨೩ ನೇಗೆ ೩ ವರುಷದ ಸಕ್ತ ಕಾರಾಗೃಹವಾಸದ ಶಿಕ್ಷೆಯಾದದ್ದನ್ನು ವಾಚಕರು ಅರಿತಿರುವರು. ದೇಶಸೇವಕರಿಗೆ ಕೊಟ್ಟ ಕಾಯಿಕ ಕಷ್ಟಗಳು ಇಷ್ಟಕ್ಕೇ ಸಾಕೆಂದು ಆಳರಸರು ಯೋಚಿಸಿ, ಅವರನ್ನು ಮುಂಚೆಯೇ ಬಿಡುಗಡೆ ಮಾಡಿದರೋ ಏನೋ! ಹ್ಯಾಗೂ ಇರಲಿ ದೇಶಸೇವಕರನ್ನು ದೇಶಸೇವಾಕ್ಷೇತ್ರದಲ್ಲಿ ಬಿಟ್ಟುಕೊಟ್ಟ ಬಗ್ಗೆ ಔದಾರ್ಯವಂತ ಸರಕಾರವನ್ನು ನಾವು ಅಭಿನಂದಿಸುವೆವು. ರಂಗನಾಥ ರಾಯರು ಸ್ವಲ್ಪ ಕೃಶರಾಗಿದ್ದರೂ, ಮನೋಬಲವು, ಮನೋನಿಶ್ಚಯವು, ದೇಶಸೇವಾ ನಿರ್ಧಾರವು ಎಳ್ಳಷ್ಟು ಕುಗ್ಗಿಲ್ಲೆಂದು ವಾಚಕರಿಗೆ ತಿಳಿಸಲು ನಮಗೆ ಅತ್ಯಾನಂದವಾಗುತ್ತದೆ. ಅಗ್ನಿಸಂಸ್ಕಾರದಿಂದ ಸುವರ್ಣವು ತೇಜಃಪುಂಜವಾಗುವಂತೆ, ರಂಗನಾಥ ರಾಯರು ಕಾರಾಗೃಹವಾಸದಿಂದ ಸತ್ವಧೀರರಾಗಿ ದೇಶಸೇವಾವ್ರತವನ್ನು ಕೈಕೊಳ್ಳಲು ವಿಶೇಷ ಪಾತ್ರರಾಗಿರುವರು. ಮುಂಚಿನಂತೆ, "ಕರ್ಮವೀರ" ಹಾಗು "ನವಶಕ್ತಿ" ಪತ್ರಿಕೆಗಳ ಚಾಲಕತ್ವವನ್ನು ಕೈಕೊಂಡು, ಕರ್ನಾಟಕ ಮಾತೆಯ ಸೇವೆಗೆ ಸನ್ನದ್ಧರಾಗುವರು. ಅಹಿಂಸಾಪ್ರಧಾನ ಅಸಹಯೋಗಿ ಸನ್ಯಾಸಿಗಳ ಸತ್ವವಿದು! ಇಂಥ ವರಪುತ್ರರು ನಮ್ಮಲ್ಲಿ ಬಂದು ಸೇರಿದ ಬಗ್ಗೆ ನಾವು ಆನಂದವನ್ನು ಪ್ರದರ್ಶಿಸಿ, ಅವರಿಗೆ ಆದರದಿಂದ ಸ್ವಾಗತೀಕರಿಸುವೆವು. ಶ್ರೀ। ರಂಗನಾಥ ರಾಯರಿಗೆ ದೇಶಸೇವಾ ವ್ರತವನ್ನು ಪಾರಗಾಣಿಸಲು ಬುದ್ಧಿಯನ್ನೂ, ಶಕ್ತಿಯನ್ನೂ ಪರಮಾತ್ಮನು ದಯಪಾಲಿಸಲೆಂದೂ ಪ್ರಾರ್ಥಿಸುವೆವು.

---

೨. ಆಳರಸರ ವಿಚಿತ್ರ ಲೀಲೆಗಳನ್ನು ಬಣ್ಣಿಸಿ ತೀರದು. ಕುಲಾಬಾ ಜಿಲ್ಲೆಯ ಪಹೂರ ಹಾಗು ಪಾರಾ ಗ್ರಾಮನಿವಾಸಿಗಳು ಗೋಚರಾಈ ಫೀಯನ್ನು ಮಾಫಿ ಮಾಡಬೇಕಾಗಿ ಕಲೆಕ್ಟರರಿಗೆ ಕಂಡು ಕೊಂಡು ಅರಿಕೆ ಮಾಡಿಕೊಂಡರು. ದೊರೆಗಳು ಗ್ರಾಮನಿವಾಸಿಗಳ ಅರಿಕೆಗಳನ್ನು ನಿವಾರಿಸಿ, ಸದ್ಯಕ್ಕೆ ಫೀಯನ್ನು ಕಡಿಮೆ ಮಾಡಲು ಅನುಕೂಲವಿಲ್ಲೆಂದರು. ಕಾರಣವನ್ನೂ ಹೇಳಿದರು. ದೊರೆಗಳು ಹೇಳುವ ಕಾರಣವನ್ನು ಎಲ್ಲರೂ ಅರಿತುಕೊಂಡಿರಬೇಕು. ಊರ ನೆರೆ ಹೊರೆಯ ಜಂಗಲುಗಳಲ್ಲಿ ಅನೇಕ ಗುನ್ಹೆಗಳು ನಡೆದವಂತೆ, ಅವು ಮುಂದೆ ಕಡಿಮೆಯಾದಲ್ಲಿ ಗೋಚರಾಈ ಫೀಯು ಮಾಫಿ ಮಾಡಲ್ಪಡುವದೆಂದು ದೊರೆಗಳು ಉತ್ತರವನ್ನಿತ್ತರು. ಗೋಚರಾಈ ಫೀಗೂ, ಬೆಟ್ಟಗಳಲ್ಲಿ ನಡೆಯುವ ಗುನ್ಹೆಗಳಿಗೂ ಏನು ಸಂಬಂಧವಿದೆ? ಮಾವಿನ ತೊಗಟನ್ನು ತಂದು ಜಂಡೆ ಮರಕ್ಕೆ ಹಚ್ಚಿದಂತೆ, ಕುಲಾಬಾ ಜಿಲ್ಲೆಯ ಕಲೆಕ್ಟರರು ಕಾರ್ಯಕಾರಣಗಳನ್ನು ಹೇಳಿ ಪಾರಾದರು. ಗೋಚರಾಈ ಫೀಯನ್ನು ಮಾಫಿ ಮಾಡುವ ಮನಸ್ಸಿಲ್ಲೆಂದು ಸ್ಪಷ್ಟವಾಗಿ ಹೇಳಿದ್ದರೆ, ಗ್ರಾಮನಿವಾಸಿಗಳು ಸುಕೂತ್ರವಾಗಿ ಬಂದ ದಾರಿಗೆ ಸುಂಕವಿಲ್ಲೆಂದು ನಿರಾಶರಾಗಿ ಮರಳುವರೆಂದು ದೊರೆಗಳು ಭೀತಿಗೊಂಡರೇನು? ಗ್ರಾಮ ನಿವಾಸಿಗಳೇ ಜಂಗಲು ಅಪರಾಧಗಳನ್ನು ಮಾಡುತ್ತಾರೆಂದು ಗೃಹೀತ ಹಿಡಿದರೂ ಅವುಗಳ ಬಗ್ಗೆ ಕಾಯಿದೆಯಂತೆ ಶಾಸನವಾಗುತ್ತಿರುವಾಗ, ಗೋಚರಾಈ ಫೀಯು ಮಾಫಿಗೆ ಆತಂಕವೇಕೆ? ಜಂಗಲು ಅಪರಾಧಗಳನ್ನು ಮಾಡುವವರೂ, ಗೋಚರಾಈ ಫೀ ಮಾಫಿಯಾಗಬೇಕೆನ್ನುವವರೂ ಭಿನ್ನ ಭಿನ್ನ ವ್ಯಕ್ತಿಗಳೆಂದು ಸ್ಪಷ್ಟವಿರುವಾಗ, ಕಳ್ಳನ ಅಪರಾಧಕ್ಕಾಗಿ ಸನ್ಯಾಸಿಗೆ ಶೂಲಕ್ಕೇರಿಸುವದು ಯಾವ ದರಬಾರದ ನ್ಯಾಯವಿದು? ಬ್ರಿಟಿಶ ರಾಜ್ಯದ ಕೀರ್ತಿಯು ಹೀಗಿರುವದಿಲ್ಲ. ಇದನ್ನು ಕುಲಾಬಾ ಜಿಲ್ಲೆಯ ಕಲೆಕ್ಟರರು ವಿಚಾರಿಸಬಹುದಿತ್ತು. ಅಥವಾ ಹಣ ಸೂಟ ಬಿಡುವ ಕೆಚ್ಚಿಗೆ ಸಾಹೇಬರು ಏನಾದರೊಂದು ಸಬಬು ಹುಡುಕಿ ಹೇಳಿರಬಹುದೆಂದು ಯಾರಾದರೂ ಹೇಳಿದರೆ, ಅದೇನು ಅಯಥಾರ್ಥವಾಗದು.

---

೩. ಕಲಕತ್ತೆಯಲ್ಲಿ ಮಹಾತ್ಮರಿಗೆ ಅಲ್ಲಿಯ ಎಂಗ್ಲೋ ಇಂಡಿಯನ್ನರು ನಿಮಂತ್ರಣೆಯನ್ನಿತ್ತು ತಮಗುಪದೇಶ ಮಾಡಲು ನಿಮಂತ್ರಿಸಿದ್ದರು. ಕಳೆದ ಜುಲೈ ೨೯ ನೆ. ತಾರೀಖಿಗೆ ಕಲ್ಕತ್ತೆಯಲ್ಲಿ ಎಂಗ್ಲೋ ಇಂಡಿಯನ್‌ರು ಸಭೆಸೇರಿ ಮಹಾತ್ಮರನ್ನು ಬರಮಾಡಿಕೊಂಡರು. ಎಂಗ್ಲೋ ಇಂಡಿಯನ್ನರ ಲಾಭಾಲಾಭಗಳು ಭರತಖಂಡದ ಲಾಭಾಲಾಭಗಳೊಡನೆ ಐಕ್ಯಮತ್ಯವಾಗಿರುವವೆಂದೂ, ಹಿಂದುಸ್ಥಾನದ ಕಲ್ಯಾಣಕ್ಕಾಗಿ ತಾವು ಮಾಡಬೇಕಾದ ಉಪಾಯಗಳನ್ನು ಸೂಚಿಸಬೇಕಾಗಿಯೂ ಸಭಾಧ್ಯಕ್ಷರಾದ ಡಾ। ಮೊರನಾರವರು ಮಹಾತ್ಮರಿಗೆ ಹೇಳಿದರು. ಇನ್ನೊಂದು ಮಾತನ್ನೂ ಹೇಳಿದರು. ಎಂಗ್ಲೋ ಇಂಡಿಯನ್‌ರು ಮಾಡತಕ್ಕ ಕಾರ್ಯವನ್ನೆಲ್ಲ ಪ್ರಚಲಿತ ಸರಕಾರಕ್ಕೆ ನಿಷ್ಠೆಯನ್ನು ಪ್ರದರ್ಶಿಸಿ ಮಾಡುವೆವಾಗಿಯೂ ಹೇಳಿ, ಮಹಾತ್ಮರು ಸೂಚಿಸಬೇಕಾದ ಉಪಾಯವು ಸರಕಾರದ ನಿಷ್ಠೆಗೆ ಭಂಗವಾಗದಂತೆ ಸೂಚಿಸಬೇಕಾಗಿಯೂ ಧ್ವನಿಸಿದರು. ಮಹಾತ್ಮರು ಸರಕಾರದ ನಿಷ್ಠೆಯ ಮೇಲೆ ಮಹತ್ವದ ವಿಚಾರಗಳನ್ನು ಪ್ರದರ್ಶಿಸಿದರು. ಅವನ್ನೆಲ್ಲರೂ ಲಕ್ಷದಲ್ಲಿಡಬೇಕು. "ಸರಕಾರ ನಿಷ್ಠೆಯ ಮಾತುಗಳನ್ನು ನಾನು ಆಡುತ್ತಿದ್ದೆ. ಆದರೆ, ಇತ್ತ ೫ ವರುಷಗಳಿಂದ ಆ ಮಾತುಗಳನ್ನು ನಾನೆತ್ತುವದಿಲ್ಲ.

ರಾಜದ್ರೋಹದ ಮಾತುಗಳನ್ನು ನಾನಾಡುವದಿಲ್ಲ. ರಾಜದ್ರೋಹ ಮಾಡುವ ಇರಾದೆಯು ನನ್ನಲ್ಲಿರುವದಿಲ್ಲ, ಆದರೆ, ಅಸತ್ಯಕ್ಕೂ, ಕೇಡಿಗೂ ನಾನು ಪ್ರತಿಕೂಲನಾಗಿರುತ್ತೇನೆ. ರಾಜನಿಷ್ಠೆಯು ಈಗ ನನ್ನ ಧ್ಯೇಯವಾಗಿರುವದಿಲ್ಲ. ರಾಷ್ಟ್ರದ ಕಲ್ಯಾಣ ಹಾಗು ಅಭಿವೃದ್ಧಿಯಾಗುವ ಸಂಸ್ಥೆಗೆ ಅದರಿಂದ ಕಲ್ಯಾಣವಾಗುವವರೆಗೆ ನಾನು ನಿಷ್ಠೆಯಿಂದ ನಡೆಕೊಳ್ಳುವೆನು. ರಾಷ್ಟ್ರಕಲ್ಯಾಣಕ್ಕೆ ಆತಂಕವಾಗುವದೆಂದು ಕಂಡ ಕೂಡಲೆ, ಅದಕ್ಕೆ ದ್ರೋಹ ಮಾಡುವದು ನನ್ನ ಕರ್ತವ್ಯವು. ಈಗಿನ ಸರಕಾರಕ್ಕೆ ನಾನು ನಿಷ್ಠಾವಂತನಾಗಿರುವೆನೆಂದು ಹೇಳಲಾರೆ, ಸರಕಾರವೆಂದರೆ, ಈಗಿನ ರಾಜ್ಯಪದ್ಧತಿಯು. ಈಗಿನ ಸರಕಾರದ ರಾಜ್ಯಪದ್ಧತಿಯಿಂದ ಹಿಂದುಸ್ಥಾನದ ಪೌರುಷವು, ಚೈತನ್ಯವು, ಸಂಪತ್ತೂ ಹಿಂಡಿಹೋಗಿವೆ, ಈ ರಾಜ್ಯಪದ್ಧತಿಯು ಚಾಲಕರಿಗೆ ಅಪಮಾನಾಸ್ಪದವು. ಅದರಿಂದ ನಾನು ಇದನ್ನು ನಷ್ಟಪಡಿಸಲು ಯತ್ನಿಸುತ್ತೇನೆ" ಮಹಾತ್ಮರು ಮಾಡಿದ ರಾಜದ್ರೋಹ [illegible] ಸರಕಾರ, ಸರಕಾರವೆಂದು ಗೌರವದರ್ಶಕ ನಾಮ ಧಾರಣ ಮಾಡಿ, ರಾಜ್ಯಪದ್ಧತಿಯು ಪ್ರಜೆಗಳ ಸತ್ವವನ್ನೇ ಹೀರುತ್ತಿದ್ದರೆ, ಅದಕ್ಕೆ ದೇಶಾಭಿಮಾನಿಗಳು ಎಂದೂ ನಿಷ್ಠೆಯನ್ನು ಪ್ರದರ್ಶಿಸಲಾರರು. ಮಹಾತ್ಮರು ಎಂಗ್ಲೋ ಇಂಡಿಯನ್ನರ ಮನೋಭೂಮಿಯ ಮೇಲಿನ ಮೋಹಪಟಲವನ್ನು ದೂರ ಮಾಡಿದ ಬಗ್ಗೆ ಭರತಭೂಮಿಯು ಮಹಾತ್ಮರಿಗೆ ಋಣಿಯಾಗದಿರದು.

ಸ್ಥಾನಿಕ ವೃತ್ತಾಂತ.

ಕುಮಟಾ— ಆಶ್ಲೇಷಾ ಮಳೆಯು ಜೋರಿನಿಂದ ಸುರಿಯುತ್ತಿದೆ. ವಿಪರೀತ ಚಳಿ. ಊರಲ್ಲಿ ಜ್ವರ, ಕೆಮ್ಮು, ಇನ್‌ಫ್ಲುಎಂಝಾ ಮುಂತಾದ ಬೇನೆಯಿದೆ. ಈ ವಾರದಲ್ಲಿ ೧೦-೫೪ ಇಂಚು ಮಳೆ, ಈ ವರೆಗೆ ೧೧೩-೮೭ ಇಂಚು ಮಳೆಯಾಯಿತು.

ಎಗ್ಸಿಕ್ಯೂಟಿವ್ ಇಂಜಿನಿಯರರ ಮುಕ್ಕಾಮವು ಇಲ್ಲಿದೆ.

ಕುಮಟಾ-ಹುಬ್ಬಳ್ಳಿ ರಸ್ತೆಯು ಕೆಟ್ಟುಹೋಗಿ ವಾಹನಗಳ ಓಡಾಟಕ್ಕೆ ಬಹಳ ಅನಾನುಕೂಲತೆಯಾಗಿದೆ.

ಸಾಂತೂರ-ಭಂಡಿವಾಳದಲ್ಲಿ ಕಬ್ಬು ಕಟ್ಟಲಿಕ್ಕೆ ಉಪ್ಪಿನಪಟ್ಟಣದಿಂದ ಹೋದ ಭಂಡಾರಿ ಜಾತಿಯ ಗಂಡ-ಹೆಂಡರು ಕಳೆದ ತಾ. ೨೮ ನೇ, ಮಂಗಳವಾರಕ್ಕೆ ಕಬ್ಬು ಕಟ್ಟುತ್ತಿರುವಾಗಲೇ ದೊಡ್ಡ ಹಳ್ಳ ಬಂದು ದಂಪತಿಗಳು ಒಮ್ಮೆಲೇ ಜಲಸಮಾಧಿ ಹೊಂದಿದರು!

ಇಲ್ಲಿಯ ಮ್ಯುನಿಸಿಪಾಲಿಟಿಯ ಬಿಲ್ ಕಲೆಕ್ಟಿಂಗ ಕಾರಕೂನರು ಮೀನುಪೇಟೆಯ ನೆಲಕರಿಗೆಯ ವಸೂಲಿಯನ್ನು ವಂಚನೆ ಮಾಡುತ್ತಾರೆಂದು ಈಗ ೨-೪ ತಿಂಗಳುಗಳಿಂದ ಮ್ಯುನಿಸಿಪಾಲಿಟಿಗೂ, ಕಲೆಕ್ಟರರಿಗೂ ಮತದಾರರೊಬ್ಬರು ಅರ್ಜಿ ಮಾಡುತ್ತಿದ್ದಾಗ್ಯೂ, ಮ್ಯುನಿಸಿಪಾಲಿಟಿಯವರು ಪ್ರಕರಣವನ್ನು ಬಚ್ಚಿಡುತ್ತಾರಾಗಿ ಮತದಾರರೊಬ್ಬರು ತಿಳಿಸುತ್ತಾರೆ. ಮ್ಯುನಿಸಿಪಾಲಿಟಿಯವರು ಇತ್ತ ಲಕ್ಷ ಕೊಡಲಿ.

ಇಂದು ಇಲೆಕ್ಷನಿನ ಗದ್ದಲ. ಉಮೇದ್ವಾರರು ಮೋಟಾರು, ಟಾಂಗೆ ಮುಂತಾದ ವಾಹನಗಳಿಂದ ಮತದಾರರನ್ನು ಒತ್ತಟ್ಟಿಗೆ ಸೇರಿಸುವದರಲ್ಲಿ ನಿಮಗ್ನರಾಗಿರುವರು. ಪರಊರಿಗೆ ಹೋಗಿದ್ದವರೂ ಬಂದಿರುವರು, ಒಂದೇ ಮತದಾನ ಮಾಡಲಿಕ್ಕಾಗಿ ಬಂದಿರುವರು. ಈ ಪ್ರಕಾರದಿಂದ ಇಲೆಕ್ಷನ ಗಲಾಟೆಯು ಹಿಂದೆಂದೂ ಆಗಿದ್ದಿಲ್ಲವೆಂದು ಊರವರು ಹೇಳುತ್ತಾರೆ. ಮತದಾರರಿಗೆ ನಾಗರಿಕ ಹಕ್ಕು, ಲೋಕಶಾಹಿಯ ಪ್ರಾಬಲ್ಯ ಇವೆರಡು ಈ ಚಳವಳಿಯಿಂದ ತಿಳಿದರೆ, ಊರೊಳಗಿನ ಇಲೆಕ್ಷನ ಗಲಾಟೆಯಿಂದ ಮುಂದೆ ಕಲ್ಯಾಣವಾಗಬಹುದು.

ನಮ್ಮಲ್ಲಿಯ ತೊರ್ಕೆ ಗ್ರಾಮದ ನಿವಾಸಿಗಳಾದ ಚಿದಂಬರ ವೆಂಕಣ್ಣ ಹೊಸಬು ನಾಯಕ ಗೋನೆಹಳ್ಳಿ, ಎಲ್. ಎ., ರವರು ವಿಜಾಪುರ ಜಿಲ್ಲೆಯ ಕಲೆಕ್ಟರರಾಗಿ ನೇಮಿಸಲ್ಪಟ್ಟಿರುವರು. ೧॥ ತಿಂಗಳ ಬದಲಿ. ಸಂತೋಷದ ಸುದ್ದಿ.

ಗಡೆಲಂಗಡಿಯ ದಯಾಶಂಕರ ವಾಮನ ಹೆಗಡೆ ಬುಡ ಇವರು ಒಡೆದ [illegible] (ತಾ ೮-೮-೩೬) ತಾ ೫-೮-೧೯೩೬ ನೇ ದಿವಸ ನನ್ನ ಬುಧವಾರ ಹೇಅಂಗಡಿ ಪರಸ್ಪರ ಸಹಕಾರ ಸಂಘದ ಜನರಲ್ ಸಭೆಯು ... ಈ ಸಭೆಗೆ ಕೆ. ವಿ. ಬಿ. [illegible] ಮಿ॥ [illegible] ಗುಂದವರವರಿಗೆ ಅಧ್ಯಕ್ಷರಾಗಲಿಕ್ಕೆ ಸೂಚಿಸಿ [illegible] ನಮ್ಮ ಕರ್ಮಂತ್ರಿಗಳಂತೆ ಇವರು ಗಣೇಶಂಗಡಿಗೆ ಬಂದು ಸಭಾಧ್ಯಕ್ಷರಾಗಿ ತಮ್ಮ ಸಮಾರೋಪ ಭಾಷಣದಲ್ಲಿ "ಪರಸ್ಪರ ಸಹಕಾರ ಸಂಘವು ಏಕೆ ಬೇಕು?" ಎಂಬ ಕೆಲಸದ ಹಿತಕ್ಕೆ ಸಂಬಂಧಿಸಿದ ಬಡ ಒಕ್ಕಲಿಗರಿಗಂತೂ ಅತಿ ಉಪಯುಕ್ತವು. ಸಾಲಗಾರರಿಂದ ಬಡ ಒಕ್ಕಲಿಗರಿಗೆ ತರತರದ ಕಷ್ಟನಷ್ಟಗಳು ಸಂಭವಿಸಬಹುದು. ಪರಸ್ಪರ ಸಹಕಾರ ಸಂಘದಿಂದ ಈ ತರದ ಕಷ್ಟನಷ್ಟಗಳು ಸಂಭವಿಸುವಂತಿಲ್ಲ. ಮೆನೇಜಿಂಗ ಕಮಿಟಿ ಮೆಂಬರರು ಬಡ ರೈತರಿಗೆ ಸಂಘದ ಲಾಭಗಳನ್ನು ತಿಳಿಸಿ ಹೆಚ್ಚು ಹೆಚ್ಚಿಗೆ ಮೆಂಬರರನ್ನು ಸೇರಿಸಿಕೊಳ್ಳಬೇಕು' ಇತ್ಯಾದಿ ಹೇಳಿದ್ದಲ್ಲದೆ "ಸುಶಿಕ್ಷಿತ ಸಾವುಕಾರ ಮೆಂಬರರು ಬಡ ರೈತರ ಹಿತವನ್ನು ಲಕ್ಷಿಸಿ ಹೇಗೆ ನಡೆಯಬೇಕು." ಎಂಬ ಸಂಗತಿಯನ್ನು ಸಹ ಪರಿಣಾಮಕಾರಕವಾಗುವಂತೆ ವಿಶದವಾಗಿ ಹೇಳಿದರು.

ಅಂಕೋಲಾ— ಪ್ರಿಯ ಸ್ತ್ರೀ ವಿಶ್ವವಿದ್ಯಾಲಯದ ಸಂಸ್ಥಾಪಕರಾದ ಪ್ರೊ| ಧೋಂಡೋ ಕೇಶವ ಕರ್ವೆಯವರು ಕಳೆದ ಬುಧವಾರ ಸಾಯಂಕಾಲಕ್ಕೆ ಗೋಕರ್ಣದಿಂದ ಇಲ್ಲಿಗೆ ಬಂದು ಮುಟ್ಟಿದರು. ಕೂಡಲೆ ಇಲ್ಲಿಯ ಇಂಗ್ಲಿಷ ಶಾಲೆಯಲ್ಲಿ ಸಭೆಯಾಗಿ ಪ್ರೊಫೆಸರ ಸಾಹೇಬರು ಒಂದು ತಾಸು ತನಕ ಸುಶ್ರಾವ್ಯ ಭಾಷಣಮಾಡಿ ಸ್ತ್ರೀ ವಿಶ್ವವಿದ್ಯಾಲಯದ ಈ ವರೆಗಿನ ಎಲ್ಲ ಇತಿಹಾಸವನ್ನು ವಿಶದವಾಗಿ ತಿಳಿಸಿಹೇಳಿ ಅಂತ್ಯದಲ್ಲಿ ಸಭಿಕರಿಗೆ ತಮ್ಮ ತಮ್ಮ ಶಕ್ತ್ಯನುಸಾರ ವಿದ್ಯಾಪೀಠಕ್ಕೆ ದ್ರವ್ಯಸಹಾಯ ಮಾಡಲಿಕ್ಕೆ ವಿನಂತಿ ಮಾಡಿ ಭಾಷಣವನ್ನು ಮುಗಿಸಿದರು. ಸಭೆಯಲ್ಲಿಯೇ ಶ್ರೀ ಶಾಮರಾವ ಟೆಂಗ್ಸೆಯವರು ರೂಪಾಯಿ ೧೧೧—೦—೦ ಕೊಟ್ಟು ತಹಾಹಯಾತ ಸಭಾಸದರಾದರು. ಇನ್ನೂ ಕೆಲವರು ಸಭಾಸದತ್ವದ ಅಂಕಡೆಗಳನ್ನು ಹಾಕಿದರು. ಮರುದಿವಸ ಊರೊಳಗಿನ ಕೆಲವು ಪ್ರಮುಖ ಗೃಹಸ್ಥರಿಂದಲೂ, ಶಾಲಾ ವಿದ್ಯಾರ್ಥಿ-ಶಿಕ್ಷಕರಿಂದಲೂ ಕೆಲವು ಫಂಡು ಕೂಡಿಸಲಾಯಿತು. ವಾರ್ಷಿಕ ೫ ರೂಪಾಯಿ ಕೊಡುವ ೧೦ ಸಭಾಸದರಾದರು. ಒಟ್ಟಿಗೆ ಇಲ್ಲಿಂದ ರೋಖ ೨೩೦ ರೂಪಾಯಿಗಳು ದೊರಕಿದವು ವ ಕೆಲವು ರಕಮಿನ ಆಶ್ವಾಸನೆಗಳು ಸಿಕ್ಕಿರುತ್ತವೆ.

ಈ ಪ್ರಕಾರ ಪ್ರೊಫೆಸರ ಸಾಹೇಬರಿಗೆ ಹೋದಹೋದಲ್ಲಿ ಜನರು ತಮ್ಮ ತಮ್ಮ ಶಕ್ತ್ಯನುಸಾರ ಹೂವು ಕೊಡುವಲ್ಲಿ ಎಸಳನ್ನಾದರೂ ಕೊಟ್ಟು ಸಹಾಯ ಮಾಡುತ್ತಿರಲು, ಇಲ್ಲಿಯ ಎಡ್ವರ್ಡ ಇಂಗ್ಲಿಷ ಶಾಲೆಯ ಸೂತ್ರಚಾಲಕರ ಲಕ್ಷ್ಮೀಶ್ವರ ಕಡೆಗೆ ಹೋಗಿ ವಿನಂತಿ ಮಾಡಿದಾಗ ಮಾತ್ರ, ಸದ್ರಿಯವರು ಗಂಭೀರ ಮುದ್ರೆಯಿಂದ ಈ ಕೆಳಗಿನ ಜವಾಬನ್ನು ಕೊಟ್ಟರಂತೆ! "ನಮಗೂ ನಮ್ಮ ಶಾಲೆಯನ್ನು ಹಾಯಸ್ಕೂಲು ಮಾಡುವ ವರೆಗೆ ಬೇರೆ ಯಾವ 'ಸಂಸ್ಥೆಯೂ' ಲಕ್ಷದಲ್ಲಿ ಬರುವದಿಲ್ಲ. ನಮಗೇ ಇದ್ದಷ್ಟು ರೊಕ್ಕವು ಕಡಿಮೆಯಿರುವದರಿಂದ ನಾವೇ ಇನ್ನು ಕೇಳು ಹೋದರೂ ಆದೀತು!" ಪ್ರೊಫೆಸರ ಸಾಹೇಬರು ತಮ್ಮ ಭಾಷಣದಲ್ಲಿ ತಮ್ಮ ವಿಷಯವಾಗಿ ಹೇಳಿದಂತೆ, ಈ ಮಹಾಶಯರ ಒಂದು ಬಿಂದು ರಕ್ತ ಪರೀಕ್ಷಿಸಿದರೆ ಇವರ ಮಿದುಳಾದರೂ, ಅವರಿಗಿಂತ ಹೆಚ್ಚು ಪ್ರಮಾಣದಿಂದ ಹಾಯಸ್ಕೂಲಮಯವಾಗಿರಬಹುದು ಎಂತ ತಿಳಿದು ಬಂದೀತು! ಇಂಥ ಶ್ರೇಷ್ಠ ಶಿಕ್ಷಣದ ಮಹಾನುಭಾವರಿದ್ದ ಬಳಿಕ ನಮ್ಮ ಊರಿಗೆ ಹಾಯಸ್ಕೂಲೇ ಯಾಕೆ, ಕಾಲೇಜು ಸಹ ಮಾಡಿಬಿಟ್ಟಾರೆಂಬುದರಲ್ಲಿ ಏನೂ ಸಂಶಯವಿಲ್ಲ.

ಕಾರವಾರ— ಇಲ್ಲಿ ಲೋ. ಟಿಳಕರ ಪುಣ್ಯತಿಥಿಯು ಎಂದಿನಂತೆಯೇ ತಾ ೧ ನೇ ಆಗಸ್ಟ ಶನಿವಾರ ದಿವಸ ಪಾಲಿಸಲ್ಪಟ್ಟಿತು. ಶ್ರೀ ಗಣಪತ ಸದಾಶಿವ ನಾಡಕರ್ಣಿಯವರು ಅಧ್ಯಕ್ಷರಾಗಿದ್ದರು. ಶ್ರೀ ಮಾಂಜ್ರೇಕರ ಹನುಮಂತರಾಯರು ತಮ್ಮ ವ್ಯಾಖ್ಯಾನದಲ್ಲಿ ಲೋಕಮಾನ್ಯರ ಸ್ವಾವಲಂಬನ, ಸ್ವಾರ್ಥತ್ಯಾಗ, ವ್ಯವಹಾರಕುಶಲತೆ ಮುಂತಾದ ಗುಣಗಳನ್ನು ಅನುಕರಿಸಲಿಕ್ಕೆ ಹೇಳಿ, ನಾವು ವಿಭೂತಿ ಪೂಜೆಯನ್ನು ಮಾಡುವಾಗಲೇ ಅವರು ಪ್ರತಿಪಾದಿಸಿದ ತತ್ವಗಳನ್ನು ಆಚರಿಸಬೇಕೆಂತಲೂ, ಭರದಿಂದ ವಿಧಾಯಕ ಕೆಲಸ ಮಾಡಿದರೆ ಈಗ ಕಾಡು ಬರುವ ನಿರಾಶೆಯು ಇಲ್ಲದಂತಾಗುವದೆಂದೂ ಹೇಳಿದರು. ಶ್ರೀ ಹಳದೀಪುರಕರ ಸುಬ್ಬರಾವ ಇವರು ಲೋಕಮಾನ್ಯರು ಹಿಂದೂ ದೇಶದಲ್ಲಿ ಜನಿಸಿದ್ದರಿಂದ ಅವರು ಹೇಗೆ ಮೋಕ್ಷಸುಖವನ್ನು ಪಡೆದರೆಂದು 'ದುರ್ಲಭಂ ಭಾರತೇ ಜನ್ಮ' ವೊದಲಾದ ಶ್ಲೋಕವನ್ನೂ ಉದಹರಿಸಿ ಹೇಳಿ, ಲೋಕಮಾನ್ಯರ ಕಾರ್ಯವನ್ನು ಮುಂದರಿಸಬೇಕೆಂತಲೂ ಬಿನ್ನೈಸಿಕೊಂಡರು. ಸಭಾಪತಿಗಳು ಸಮಾರೋಪದಲ್ಲಿ ತಮಗೆ ನಿರಾಶೆಯು ಕಾಣುವದಿಲ್ಲೆಂತಲೂ, ಲೋಕಮಾನ್ಯರು ನಿರಾಶೆಯಲ್ಲಿಯೇ ಆಶಾವಾದಿಗಳಾಗಿ ಕೆಲಸ ಮಾಡಿದಂತೆ ನಾವು ಮಾಡಬೇಕೆಂತಲೂ ಹೇಳಿ ಸಭೆಯನ್ನು ಮುಕ್ತಾಯ ಮಾಡಿದರು.

ಇಲ್ಲಿಯ ಕೊಂಗ್ರೆಸ ಪಕ್ಷದವರು ಲೋಕಲ್‌ಬೋರ್ಡುಗಳನ್ನು ಕಾಬೀಜ ಮಾಡಬಹುದೆಂದು ಅಂದಾಜು.

ಚೆಂಡಿಯೆ— ಇಲ್ಲಿ ಮಳೆಯು ಸರ್ವಸಾಧಾರಣ ಬಳ್ಳೇ ಬೀಳುತ್ತದೆ. ಮೊದಲು ಮಾತ್ರ ಅತಿಶಯ ಮಳೆ ಬಿದ್ದು ಹೊಲಗದ್ದೆಗಳಿಗೆ ಲುಕ್ಸಾನು ಆದದ್ದಲ್ಲದೆ ಮಾರ್ಗಗಳು ಸಹ ಕೆಟ್ಟು ಹೋಗಿರುತ್ತವೆ. ನಮ್ಮ ಚೆಂಡಿಯ—ಕೋಡಾರ ಲೋಕಲ್ಬೋರ್ಡ ರಸ್ತೆಯಂತೂ ದೊಡ್ಡ ದೊಡ್ಡ ತಗ್ಗು ಬಿದ್ದು ದಿಕ್ಕುಹೀನವಾಗಿರುತ್ತದೆ. ಮೊದಲು ಇಂಜಿನಿಯರ ರಸ್ತೆಯಿಂದ ಮಠದ ವರೆಗಾದರೂ ಗಾಡಿಗಳು ಹೋಗುತ್ತಿದ್ದವು. ಆದರೆ ಈಗ ಗಾಡಿ ಹೋಗುವ ಮಾತು ಒತ್ತಟ್ಟಿಗಿರಲಿ ದನಗಳೂ ಹಾದಿ ಕಾಣದೇ ಕಂದಕದಲ್ಲಿ ಬಿದ್ದು ಪಂಚನಾಮೆಯಾಗುವ ಸಂಭವವಿದೆ. ಈ ಮೇಲಾದರೂ ನಮ್ಮ ತಾಲೂಕಾ ಲೋಕಲ್‌ಬೋರ್ಡ ಮೆಂಬರರು ಕಣ್ಣು ತೆರೆದು ನೋಡುವರೇನು. ಪಾಪ! ಅವರಾದರೂ ಏನು ಮಾಡುವರು! ಸದ್ರಿ ರಸ್ತೆಯು ಸದ್ರಿ ಮೆಂಬರರಿಗೆ ಉಪಯೋಗ ಬೀಳುವ ರಸ್ತೆಯಾಗಿದ್ದರೆ ಸರಿ ಮಾಡಬಹುದಾಗಿತ್ತು. ಅದಲ್ಲದೆ ಮಿ॥ ಕೋಯಿಲೋ ಮುಂತಾದ ಅಧಿಕಾರಿಗಳು ಎದುರು ಮೂರು ಸಲ ಬಂದು ನೋಡಿ ಹೋದರು. ಅನುದಿನ ರಸ್ತೆಯು ಮಾತ್ರ ಇದೇ ಪ್ರಕಾರ ಇರುವದಂತೆ. ಕಾರಣ ನಮ್ಮ ಮೆಂಬರ ಮಿ॥ ಜೋಶಿ ಇವರು ಲಾಭಮಾರ್ಗದಿಂದಾದ್ದು ರಸ್ತೆಗಳನ್ನು ಸರಿ ಮಾಡಿದರೆ ನಮ್ಮಮೇಲೆ ಬಹಳೇ ಉಪಕಾರವಾದೀತು.

ಶಿರ್ಶಿ— ಕೆಲವು ದಿನ ವಿಶ್ರಾಂತಿಯನ್ನು ಪಡೆಯುತ್ತಿದ್ದ ಮೇಘರಾಜನ ಪ್ರಾಬಲ್ಯವು ಪುನಃ ಪ್ರಾರಂಭವಾಗಿದೆ.

ಸಂಜಾ ಆಪುದವರು ಮತ್ತು ಅಪದದರು ಹೀಗೆ ನಮ್ಮ ಮುಹಮ್ಮದೀ ಬಾಂಧವರಲ್ಲಿ ೨ ಪಕ್ಷಗಳಾಗಿವೆ. ಲಾಹೋರದಲ್ಲಿ ಸಂಜಾ ಆಪದವರ ಮಸೀದಿಯ ಸರಿಯಲ್ಲಿ ಸ್ವಲ್ಪ ಜಾಗವು ಖಾಲಿಬಿದ್ದಿತ್ತು. ಅಲ್ಲಿ ಅವರು ಆವಾರಿಕ ಮ್ಮ ಎಬ್ಬಿಸಿ ಅದರಲ್ಲಿ ಒಂದು ಸಾರ್ವಜನಿಕ ಧರ್ಮಶಾ ವಾಚನಾಲಯವನ್ನು ತೆರೆಯುವದು ಸ್ವಾಭ್ಯವೆಸರಿ. ಅದರ ಅನಾವರಣ ಸಮಾರಂಭಕ್ಕೆ ಹಿಂದುಗಳೂ ಹಾಜರಿದ್ದರು. ಆದರ ಕ್ರೀಯೆಯು ತಮ್ಮ ಸಮಾಜದ ಉದ್ಧಾರಕ್ಕಾಗಿ ಟೊಂಕಕಟ್ಟಿ ನಿಂತಿರುವ ಮೌಲ್ವಿ ಸಾಹೇಬರಿಗೆ ಸಲ್ಲುವದು ಉಚಿತವು. ಆದರೆ ಸನ್ನಿ ಜಾಗೆಯ ಮಾಲ್ಕಿಗಾಗಿ ದೊಡ್ಡ ದೊಂಬಿ ಗೊಂದಲವೇ ಎದ್ದಿತ್ತು. ತನ್ನಿಮಿತ್ತವಾಗಿ ಹೋದ ಸೋಮವಾರ ಕಾಲಕ್ಕೆ ಹೇಳಲು ವಿಳಂಬವಿಲ್ಲ. ಬಂದೋಬಸ್ತಿಗಾಗಿ ಸನ್ನಿ ಜಾಗದ ಹತ್ತರ ಪೋಲೀಸರ ಪಹರೆಯೊಂದು ಸಜ್ಜುಗೊಳಿಸಿತ್ತು.

ಪ್ಯಾಲೆಸ್ಟಾಯಿನದಲ್ಲಿ ಮುಸುಗರ ಸಂಖ್ಯೆಯು ೧.೨೫ಕ್ಕೆ ಏರಿರುವದಂತೆ. ಅವರು ಭಿಲಕರು, ಬಂಗರು, ಮುಸ್ಲಮಾನಿಗಳೂ ಆದ ಹೇಮುತ್ತರರು ಲಭಿಸಿದ್ದ ಸೀಮೆಯದ ರ ಸುದ್ದಿಯಿದೆ.

ಮೊದಲೇ ಕಾಮುಕರಿಯುಳ್ಳ ಟಪಾಲು ಹುಬ್ಬಳ್ಳಿಯ ಮಾರ್ಗವಾಗಿ ಬರುವದೆಂದರೆ ಕ್ಕೆಯನ್ನು ತರಿಯ ಹಿಂಬದಿಯಿಂದ ಇಂದು ಉಳ್ಳುವಷ್ಟು ಹಾಸ್ಯಾಸ್ಪದವು. ಅದರಲ್ಲಿಯೂ ಬರುವ ಹೊತ್ತಿನ ನೇಮವಿಲ್ಲ. ರುಟ್ಟ್ಯಾ ಮೇಲೆ, ಮೋಟಾರಮೇಲೆ, ಬಸ್ಸಿನಮೇಲೆ ಹೀಗೆ ಬಹಳ ಜಗಳಾಡಬೇಕಾಗುತ್ತಿರುವದರಿಂದ ವ್ಯವಹಾರಕ್ಕೆ ಬಹಳ ತೊಂದರೆಯಾಗಿದೆ. ಮೇಲಾಧಿಕಾರಿಗಳು ಇತ್ತ ಲಕ್ಷ ಕೊಡುವರೇ ?

ಮುಂಡಗೋಡ—(೮-೮-೧೯೨೫) ಜ್ವರ, ಕೆಮ್ಮು, ಕೈಕಾಲು ಇತ್ಯಾದಿ ಥಂಡಿ ಉಪದ್ರ ಬಹಳೇ ಹೆಚ್ಚು. ಅಶ್ಲೇಷಾ ನಕ್ಷತ್ರದ ಮಳೆಯು ಸಮಾಧಾನದಿಂದ ಬೀಳುತ್ತಿದೆ. ಸಮುದ್ರಗರ್ಜನೆಯೂ ಅತಿಯಾಗಿದೆ.

ಈ ವರ್ಷ ಗೋಮಾಳದ ಫೀಯನ್ನು ಗ್ರಾಮಸ್ಥರು ವಸೂಲ ಮಾಡುತ್ತಿದ್ದು, ಒಬ್ಬ ಗೃಹಸ್ಥರಲ್ಲಿ ೧-೧॥ ತಿಂಗಳ ಫೀ ಸಹ ಕೊಡಬೇಕಾಗಿ ಗ್ರಾಮಸ್ಥರ ಹೇಳಿಕೆಗೆ ಅವರು ಒಪ್ಪದೆ, "ಆ ಕರುಗಳಿಗೆ ನಾವು ಗೋಮಾಳದ ಜಾಗದ ಮೇಲೆ ಮೇಯಲಿಕ್ಕೆ ಬಿಡುವದಿಲ್ಲ. ನಮ್ಮ ಮನೆ ಹಿತ್ತಲದೊಳಗಿನ ಒಂದುಮುಷ್ಟಿ ಹುಲ್ಲುಕೊಡಯು ಹಾಕುತ್ತೇವೆ ಕಾರಣ ಅವುಗಳ ಫೀ ಕೊಡಲಾರೆವು" ಎಂದು ಅಂದದ್ದಕ್ಕೆ, ಗ್ರಾಮಸ್ಥರು "ಕರುಗಳು ಗುಡ್ಡಕ್ಕೆ ಹೋಗಿ ಮೇಯದೇ ಇದ್ದರೂ, ಅವುಗಳ ತಾಯಿಯಾದ ಆಕಳುಗಳು ಗುಡ್ಡದಮೇಲೆಮೇಯ್ದು ಈ ಕರುಗಳಿಗೆ ಹಾಲು ಕುಡಿಸುತ್ತಿರುವದರಿಂದ, ಅವುಗಳ ಫೀಯನ್ನು ಕೊಡಲೇ ಬೇಕು ಇಲ್ಲದಿದ್ದರೆ ವ್ಯವಹಾರ ನಿಮಗೆ ಲಭ್ಯಾನು ಆದೀತು" ಎಂಬದಾಗಿ ಉತ್ತರ ಕೊಟ್ಟರಂತೆ. ಮುಂದೇನಾಗುತ್ತದೋ ನೋಡಬೇಕಾಗಿದೆ.

ಕಳೆದ ಜೂನ ತಿಂಗಳ ಆರಂಭಕ್ಕೆ ಇಲ್ಲಿ ಒಬ್ಬ ಬೆಂಗಳೂರ ಅತ್ಯುತ್ತಮ ಹರಿದಾಸರು ಬಂದಿದ್ದು ಅವರ ಕೀರ್ತನೆಗಳು ಈ ಹೊತ್ತಿನವರೆಗೂ ನಡೆಯುತ್ತಲಿವೆ. ಹುರುಪು ಮಾತಿನ ಕೀರ್ತನೆಯುಳ್ಳವರೇ ಈ ಕಡೆ ಬರುವದು ಹೆಚ್ಚು. ಕನ್ನಡದಲ್ಲಿ ಕೀರ್ತನೆ ಹೇಳುವವರು ಇಲ್ಲಿಗೆ ಬರುವದು ಅಪರೂಪ. ಆದರೂ, ಎಂಥ ಹರಿದಾಸರು ಬಂದರೂ, ೮-೧೦ ಕೀರ್ತನೆಗಳಿಗಿಂತ ಹೆಚ್ಚು ಇಲ್ಲಿ ಆದದ್ದು ಇಲ್ಲೆಂದು ೭೦-೮೦ ವರ್ಷದ ಮುದುಕರು ಸಹ ಹೇಳುತ್ತಾರೆ. ಇವರ ಕೀರ್ತನೆಗಳು ಇದೀಗಲೇ ೩೦ಕ್ಕೆ ಮಿಕ್ಕಿರಬಹುದು. ಇವರು ವೈಷ್ಣವ (ಕೋಲಮಟಿಗರು) ಪರ್ಗದವರು. ಇವರ ಮಾತೃಭಾಷೆ ತೆಲುಗು. ಆದರೂ ಕನ್ನಡ ಮಾತು ಬೆಗ್ಗು ಇಲ್ಲದೇ ಶುದ್ಧವಾಗಿಯೂ, ಅಸ್ಖಲಿತವಾಗಿಯೂ ಆಡುವರು. ಕುಟುಂಬ ಸಹಿತ ಇಲ್ಲಿಗೆ ಬಂದಿದ್ದಾರೆ. ಐದಾರು ಲಕ್ಷದ ಪಿತ್ರಾರ್ಜಿತಸ್ಥಿರ-ಚರ ಆಸ್ತಿಯನ್ನು ಎಳೆ ಪ್ರಾಯದಲ್ಲೇ ಇವರಿಗೆ ಯೌವನವಿದ್ದ ಬಂದಾಗ್ಗೆ, ನಾಟಕ ಕಂಪನಿ, ಸರ್ಕಸ ಇತ್ಯಾದಿ ತೊರೆದಿಟ್ಟು, ಪ್ರೌಢ ಕಳೆ ಕೊಳ್ಳಲು, ವೈರಾಗ್ಯ ಪ್ರಾಪ್ತವಾಗಿ, ಸದ್ಗುರುವನ್ನು ಕಂಡುಕೊಂಡು, ಅವರ ಅನುಗ್ರಹವನ್ನು ಪಡೆದು ಮುಕ್ತಿಮಾರ್ಗದಲ್ಲಿ ನಿಶ್ಚಲರಾಗಿ ಅತ್ತ ನಾಸ್ತ್ಯಮ ಇವರಗಳಿಂದ ಈ ಪ್ರಕಾರ ಹರಿದಾಸರಾಗಿ ತಿರುಗುತ್ತೇವೆಂದು ಮುಚ್ಚುಮರೆ ಇಲ್ಲದೆ ಅವರೇ ಹೇಳುವರು. ದಾಸಾನುದಾಸ ಅನುಯಾಯಿಗಳಂತೆ, ಅವರು ಹಾಡು ಹಾಡುಗಳನ್ನು ಹಚ್ಚಿಕೊಂಡು ತಿರುಪತಿ ಗೋವಿಂದನ ನಾಮೋಚ್ಚಾರಣೆಯನ್ನು ಯಾವಾಗಲೂ ಮಾಡುತ್ತಿದ್ದರೂ, ಹರಿಹರರಲ್ಲಿ ಭೇದವಿಲ್ಲೆಂದು ಆಗಾಗ್ಗೆ ಬೋಧಿಸುತ್ತಿರುವರು. ಹಾಗೂ ಶಿವನ ಕಥೆಗಳನ್ನು ಹೇಳುತ್ತಾರೆ. ಮಹಾರಾಷ್ಟ್ರದ ಹರಿದಾಸರಂತೆ ಅವರ ತಿಟ್ಟು ಇಲ್ಲ. ಅವರು ತಲೆ ಬಿಟ್ಟು, ಒಂದು ಅ ಮೊಳದ ಧೋತರ ಉಟ್ಟು, ಒಂದು ಗಿಡ್ಡ ಕೈಯ ಬಿಳೇ ಕ್ಯಾಂಬ್ ಹಾಕಿಕೊಂಡು, ಎಡಕ ಕಾಲಿಗೆ ಗೆಜ್ಜೆ ಕಟ್ಟಿಕೊಂಡು, ಯಕ್ಷಗಾನದ ಪದ್ಧತಿಯಲ್ಲಿ, ಮೈಸೂರಿ ನಾಟಕದ ಧಾಟಿಯಲ್ಲಿ, ಕನ್ನಡ, ತೆಲುಗು ಪದಗಳನ್ನೂ, ದಸ್ಯಾಗಳನ್ನೂ ನವರಸಭರಿತವಾಗಿಯೂ, ಅತಿ ಉತ್ಸಾಹಯುಕ್ತವಾಗಿಯೂ ನೀತಿಸ್ವದ್ಧ ಭಕ್ತಿಗಳನ್ನು ಕೇಳುವ ಜನರ ಹೃದಯದಲ್ಲಿ ಬೇರೂರುವಂತೆಯುಕ್ತಿ ಹೇಳುತ್ತಿದ್ದಾರೆ. ಶ್ರೋತೃವೃಂದಕ್ಕೆ ಬೇಜಾರ ಬಾರದಂತೆ, ಹಾಸ್ಯ ಮತ್ತು ಶೃಂಗಾರಯುಕ್ತವಾಗಿ ಅವರು ಹೇಳುವ ಆಖ್ಯಾನ (ಉದಾಹರಣೆ)ಗಳನ್ನು ಕೇಳುತ್ತಿರುವಾಗಂತೂ ಅನೇಕಾನೇಕ ಹುಡುಗ ಹುಡುಗಿಯರು ಬಾಯಿಯನ್ನು ಮುಚ್ಚಲಿಕ್ಕೆ ಮರೆಯುತ್ತಾರೆ. ಪ್ರತಿ ಒಂದು ಕೀರ್ತನೆಯಲ್ಲಿಯೂ, ಪಾರಂಗತೆಯರ ನೃತ್ಯದ ಸಂಧಿ ಸಾಧಿಸಿಕೊಂಡು, ಕೊಳಲು-ತಬಲಾ-ಮುಖಗಳ ಅತೀವ ವೈಯ್ಯಾರದ ಹಾವಭಾವಗಳಿಂದ ಯುಕ್ತವಾಗಿ ಅವರು ಕುಣಿತವನ್ನು ಕುಣಿಯುವಾಗ ಈ ಮುಂಡೇಶ್ವರ ನರ್ತಕಿಯರೂ ಬೆರಗಾಗಿ ತಲೆ ತಗ್ಗಿಸುವದರಲ್ಲಿ ಆಶ್ಚರ್ಯವಿಲ್ಲ; ಇಂತ್ಯರೋ ಕಬ ರಂಭಾ ಊರ್ವಶಿಯರು ಸಹ ಈ ನಾಟ್ಯವನ್ನು ನೋಡಿದರೆ ತಪ್ಪು ಕೊಟ್ಟಾರೋ, ಎಂಬ ಸಂದೇಹ ತೋರುತ್ತದೆ. ಪಂಚತತ್ವವಿವೇಕ, ಪಂಚಕೋಶ ವಿವರಣೆ, ಮಹಾವಾಕ್ಯಬೋಧ ಇತ್ಯಾದಿ ವೇದಾಂತವನ್ನು ಇವರು ಕೀರ್ತನಾರಂಭದಲ್ಲಿ ಹೇಳುವ ರೀತಿ ಕಠಿಣ ಸರ್ವಸಾಧಾರಣವಾಗಿ ಭಕ್ತಿಯೋಗದಲ್ಲೇ ಜನರನ್ನು ಪ್ರವೇಶಿಸಬೇಕೆಂಬಾಗಲೀ, ಸಾಮಾನ್ಯ ಜನರಲ್ಲಿ ಶುದ್ಧ ವೇದಾಂತದ ಗ್ರಹಣಶಕ್ತಿ ಕಡಿಮೆ ಇರುತ್ತದೆಂಬಾಗಲೀ ಭಕ್ತಿಮಾರ್ಗವನ್ನೇ ಸರ್ವಶ್ರೇಷ್ಠ ಉಪದೇಶಿಸುತ್ತಿರಬಹುದು. ಇದಲ್ಲದೆ ಪೂರ್ವರಂಗದಂತೆ ಎಂಬ ಮಹಾರಾಷ್ಟ್ರೀಯ ಹರಿದಾಸರು ಮಾಡುವ ಭೇದವು ಇವರ ಕೀರ್ತನೆಯಲ್ಲಿ ಕಂಡುಬರುವದಿಲ್ಲ. ಕುರುವಿಗೆ ಭಗವದ್ಭಕ್ತಿಯ ವಿಷಯದಲ್ಲಿ ನಾಲ್ಕು ಉಪದೇಶದ ಮಾತುಗಳನ್ನು ಹೇಳಿ ಕಡಕಡೇ ಆಖ್ಯಾನವನ್ನು ಹಚ್ಚುತ್ತಾರೆ. ಇವರು ಮುಂದೆ ಹೊನ್ನಾವರ, ಕುಮಟಾ, ಗೋಕರ್ಣ, ಶಿರ್ಸಿ ಸಿದ್ದಾಪೂರ ಮಾರ್ಗವಾಗಿ ಸಾಗರ ಅತ್ತಕಡೆಗೆ ಪ್ರಯಾಣ ಮಾಡುವವರಿದ್ದಾರೆ.

— ಮಧ್ಯಪ್ರಾಂತದೊಳಗಿನ ವಿಲಾಸಪುರದ ಲಕ್ಷಾಧೀಶರಾದ ದೇವಕಿನಂದನರವರು ತಮ್ಮ ಸೊತ್ತನ್ನೆಲ್ಲ ನಾಗಪುರದ ವಿಶ್ವವಿದ್ಯಾಲಯಕ್ಕೆ ಅರ್ಪಿಸಿರುವರು.

-- ಕರ್ನಾಟಕದ ಆಯುರ್ವೇದ ಸಮ್ಮೇಲನದ ದ್ವಿತೀಯ ಅಧಿವೇಶನವು ಬೆಂಗಳೂರಿನಲ್ಲಿ ನಡೆಯುವದಿದೆ.

--ಗುರುದ್ವಾರಗಳ ಸ್ವಾತಂತ್ರ್ಯಕ್ಕಾಗಿ ಸಾಹಸದಿಂದ ಮುಂದಾಗಿ ಸೆರೆಬಿದ್ದ ೧೦೦೦ ಅಕಾಲಿ ಬಾಂಧವರನ್ನು ಸರಕಾರವು ಬಂಧಮುಕ್ತ ಮಾಡಿರುವನು. ಲಿಟನ್ ದೊರೆಗಳು ಬಂಗಾಲದಲ್ಲಿ ಯೂ ರಾಜಕೀಯ ಕೈದಿಗಳನ್ನು ಬಂಧಮುಕ್ತ ಮಾಡುವ ವಿಚಾರದಲ್ಲಿರುವರಂತೆ. ಪೈಕುದಲ್ಲಿ ಅಖಂಡ ಪಾತವು ಪ್ರಾರಂಭವಾಗಿರುವದು

ವೃತ್ತಸಾರ.

—ದಿಲ್ಲಿಯ ಆರ್ಯ ಸಮಾಜದ್ಮಅಧ್ಯಕ್ಷರಿಗೆ ಕಳೆದ ತಾ. ೩೦ ರಂದು ಧಕ್ಕೆ ಸಿಂಹಿಡಿದರು. ಆರೋಪ ಯಾವದೆಂಬದು ತಿಳಿಯಲಿಲ್ಲ. ೧೦ ಸಾವಿರ ರೂಪಾಯಿಗಳ ಜೊತೆ ಕೊಂಡು ಅವರಿಗೆ ಬಿಟ್ಟು ಕೊಡಲಾಯಿತು. ಕಳೆದ ೩ ನೇ ತಾರೀಖಿಗೆ ತನಿಖಿ ನಡೆಯುವದಿತ್ತು. ಆರ್ಯಸಮಾಜದವರು ಮಧ್ಯಪ್ರಾಂತದ ಸಾತಗ್ರಾಮದೊಳಗಿಂದ ಸುಮಾರು ೩ ಸಾವಿರ ಅಸ್ಪೃಶ್ಯರನ್ನು ಧರ್ಮವಿಧಿಯಂತೆ ಶುಸೀತ ಮಾಡಿದರು. ಸ್ಪೃಶ್ಯರಾದವರು ಸುರಾಪಾನ, ಗೋಮಾಂಸ ಭಕ್ಷಣ, ಮೃತಮಾಂಸಭಕ್ಷಣ ಮುಂತಾದವುಗಳನ್ನು ತ್ಯಜಿಸುವೆವಾಗಿಯೂ, ಗಾಯತ್ರಿಮಂತ್ರ ಜಪಾದಿಗಳನ್ನು ಕೈಕೊಳ್ಳುವೆವಾಗಿಯೂ ಪ್ರತಿಜ್ಞೆಕೊಂಡರು.

—ಕಲಕತ್ತೆಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಶಾರೀರಿಕ ಶಿಕ್ಷಣವನ್ನು ಪಡೆಯಲೇಬೇಕೆಂದೂ, ಕಾಲೇಜುಗಳೊಳಗಿನ ವಿದ್ಯಾರ್ಥಿಗಳು ಲಷ್ಕರಿ ಶಿಕ್ಷಣವನ್ನು ಪಡೆಯಲೇಬೇಕೆಂದೂ ವಿದ್ಯಾಲಯದವರ ಠರಾವಾಗಿದೆ.

—ಮುಂದಿನ ೩ ವರುಷಗಳಲ್ಲಿ ೮೭ ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಹೊಸ 'ಶತ್ರುಘ್ನ' ಅಂದರೆ ಜಲಾಂತರ್ಗತ ಹಡಗುಪಡೆ ಇತ್ಯಾದಿಗಳಿಗಾಗಿ ನಮ್ಮ ಬ್ರಿಟಿಶ ಸರಕಾರವು ಖರ್ಚು ಮಾಡುವದಿದೆ. ಶಸ್ತ್ರಸನ್ಯಾಸದ ವೇದಾಂತ ಯಾರಿಗೆ ಹೇಳುವದು!

—ಕಳೆದ ಅಗಸ್ಟ ೧ ನೇ ತಾರೀಖಿಗೆ ಪುಣೆಯಲ್ಲಿ ಹೋಮರೂಲ ಲೀಗ ಸಂಸ್ಥೆಯ ಠರಾವಿನಂತೆ, ಟಿಳಕ ಮಂದಿರದ ಅನಾವರಣ ಸಮಾರಂಭವು ನಾ॥ ದಾದಾಸಾಹೇಬ ಖಾಪರ್ಡೇಯವರಿಂದ ನೆರವೇರಿತು. ಶ್ರೀ॥ ನರಸೋಪಂತ ಕೇಳಕರರವರು ಮಂದಿರಕ್ಕೆ ಸುಮಾರು ೪೦ ಸಾವಿರ ರೂಪಾಯಿ ಖರ್ಚು ತಗಲಿತೆಂದು ಹೇಳಿದರು, ಈ ಮಂದಿರದಲ್ಲಿ ಲೋಕಮಾನ್ಯರ ದೇಶಸೇವೆಯ ಧೋರಣತಂತೆ, ದೇಶಸೇವೆ ನಡೆಸುವ ದೇಶಸೇವಕರನ್ನು ತಯಾರಿಸುವರು.

— ಮೈಸೂರ ಸಂಸ್ಥಾನದಲ್ಲಿ ಕಾಗದದ ಕಾರಖಾನೆಯನ್ನಿಡುವ ವಿಚಾರ ನಡೆದಿದೆ. ಭದ್ರಾವತಿಯಲ್ಲಿ 'ಫೋರ್ಡ' ಮೋಟಾರುಗರನ್ನು ತಯಾರಿಸುವ ಕಂಪನಿಯೊಂದನ್ನು ಸ್ಥಾಪಿಸುವ ವಿಷಯ ಸರ್ ವಿಶ್ವೇಶ್ವರಯ್ಯನವರಿಗೂ, ಅಮೇರಿಕೆಯ 'ಫೋರ್ಡ' ಕಂಪನಿಯ ಒಡೆಯರಾದ ಮಿ॥ ಫೋರ್ಡರವರಿಗೂ ಪತ್ರವ್ಯವಹಾರ ನಡೆದಿರುವದು.

— ದೇಶಬಂಧುಗಳ ಬಂಗಾಲ ಸ್ಮಾರಕ ನಿಧಿಗೆ ೬ ಲಕ್ಷಕ್ಕೆ ಮಿಕ್ಕಿ ದ್ರವ್ಯಸಂಗ್ರಹವಾಗಿರುವದು.

-- ಮಧ್ಯಪ್ರಾಂತದಲ್ಲಿ ಸ್ವರಾಜ್ಯ ಪಕ್ಷದವರು ದಿವಾಣಪದಗಳನ್ನು ಸ್ವೀಕರಿಸಲು ಒಪ್ಪದ್ದರಿಂದ ಪ್ರಾಂತಿಕ ಸರಕಾರವು ಮೊಂಟೆಗ್ಯು ಸ್ವರಾಜ್ಯವನ್ನು ಬಂತ್ಯ ಪಡಿಸುವ ವಿಚಾರದಲ್ಲಿದೆಯಂತೆ !

— ಧಾರವಾಡದ ಸಬಜಡ್ಜರಾದ ಮಿ॥ ರಾಘವೇಂದ್ರರಾವ ಅರ್ಸ್ ದೈಂದಕರರ ಬಿ. ಎ. ಎಲ್. ಎಲ್. ಬಿಯವರು ಗಂಗಾ ಭಾಗೀರಥಿ ಸರಸ್ವತೀ ಬಾಯಿ ಕಾಸಾರರವರೊಡನೆ ಮದುವೆಯಾದರು. ವಿಧವಾವಿವಾಹವು ಈ ಬದಿಯಲ್ಲಿ ವಿಶೇಷವು.

— ಶ್ರಾವಣ ವದ್ಯ ೯ ಮಿಯಿಂದ ಅಮವಾಸ್ಯೆವರೆಗೆ ವಿಶೇಷ ಮಳೆ ಸುರಿಯುವದೆಂಬದೊಂದು ಭವಿಷ್ಯವು ಪ್ರಕಟವಾಗಿದೆ

— ವಿಲಾಯತಿಯೊಳಗಿನ ಸರ್ ಹೊಲಕೇನ ಎಂಬ ಗ್ರಂಥಕಾರರು ಕಾದಂಬರಿಗಳನ್ನು ಬರೆದು ಪ್ರತಿ ವರ್ಷಕ್ಕೆ ಮೂವತ್ತು ಸಾವಿರ ಪವನುಗಳನ್ನು ಸಂಪಾದಿಸುತ್ತಿರುವರು. ಇಂಗ್ಲಂಡದಲ್ಲಿ ಸರಸ್ವತೀ ದೇವಿಯ ಮೇಲಿರುವ ಲಕ್ಷ್ಮೀದೇವಿಯ ಅನುಗ್ರಹ ನೋಡಿರಿ!

— ಬಾಗಲಕೋಟ-ಹುನಗುಂದ ತಾಲೂಕ ಗಳಲ್ಲಿ ಇನ್ನೂ ಮಳೆಯಿಲ್ಲ. ಮೋಡಗಳು ಹಾರ್ಯಾಡುತ್ತವೆ.

— ಶ್ರೀ| ಹರ್ಡೇಕರ ಮಂಜಪ್ಪನವರು ವಿಜಾಪುರ ಜಿಲ್ಲೆಯ ಉತ್ತರ ಭಾಗದಲ್ಲಿ ರಾಷ್ಟ್ರಕಾರ್ಯ ಪ್ರಚಾರಕ್ಕಾಗಿ ಸಂಚರಿಸುತ್ತಿರುವರು.

— ಹಿಂದೂ ಧರ್ಮದಾಯ ಕಾಯಿದೆಗೆ ಭಾರತ ಮಂತ್ರಿಗಳ ಸಮ್ಮತಿ ದೊರಕಿದೆ. ಈ ಕಾಯಿದೆಯು ಕಾಯಿದೆಗೆ ಸಮ್ಮತವಿಲ್ಲೆಂದು ಮದ್ರಾಸ ಕಾಯಿದೆ ಪಂಡಿತರ ಅಭಿಪ್ರಾಯವಾಗಿದೆ. ಈ ಬಗ್ಗೆ ಉಡುಪಿ ಮಠಾಧೀಶರ ಹಾಗು ತಿರುಪತಿಯ ಮಹಂತರ ತರ್ಫೆನಿಂದ ಮದ್ರಾಸ ಹೈಕೋರ್ಟಿನಲ್ಲಿ ಅರ್ಜಿ ದಾಖಲಾಗಿದೆ. ಶ್ರೀ| ಶ್ರೀನಿವಾಸ ಅಯ್ಯಂಗಾರರು ವಕೀಲಿ ನಡಿಸುವರು!

— ಪುದುಚೇರಿಯಲ್ಲಿ ಒಬ್ಬ ವಿದ್ಯಾರ್ಥಿಯು ಪರೀಕ್ಷೆಯಲ್ಲಿ ಉತ್ತೀರ್ಣನಾಗಲಿಲ್ಲ. ಪ್ರಪಂಚವೆಲ್ಲ ನಿಸ್ಸಾರವಾಯಿತು! ಆತನು ಸಮುದ್ರದಲ್ಲಿ ಹಾರಿ ಪ್ರಾಣ ತ್ಯಾಗ ಮಾಡಿದನು. ಅವನೊಡನೆ ಒಂದು ನಾಯಿಯಿತ್ತು. ಅದೂ ಪ್ರಾಣತ್ಯಾಗ ಮಾಡಿತು.

— ಬಂಗಾಲದೊಳಗಿನ ಸರ್ ಸುರೇಂದ್ರನಾಥ ಬಾನರ್ಜಿಯವರು ಇನ್‌ಫ್ಲುಯೆಂಜಾ ಬೇನೆಯಿಂದ ತಾರೀಖು ೬ನೇಗೆ ಸ್ವರ್ಗವನ್ನೈದಿದರು.

— ತಾರೀಖು ೬ ನೇಗೆ ಸನ್ಮಾ ಶಾಸ್ತ್ರಿಯವರು ಇಂಗ್ಲಂಡದಿಂದ ಮುಂಬಯಿಗೆ ಬಂದು, ದಿಲ್ಲಿಗೆ ಪಾರಾದರು. ಆಗಮನವು ಅತಿ ಗುಪ್ತ ರೀತಿಯಿಂದ ನಡೆಯಿತು.

— ದೆ| ಸತ್ಯಮೂರ್ತಿಯವರು ವಿಲಾಯತಿಯಲ್ಲಿ ತಮ್ಮ ಸ್ಫೂರ್ತಿದಾಯಕ ಭಾಷಣದಿಂದ, ಹಿಂದುಸ್ಥಾನದ ಸ್ವರಾಜ್ಯ ಬೇಡಿಕೆಯನ್ನು ಸಶಾಸ್ತ್ರ ಸಿದ್ಧಪಡಿಸುತ್ತಿರುವರು. ಶ್ರೋತೃವೃಂದವು ಗುಂಪುಗುಂಪಾಗಿ ಸೇರುತ್ತಿರುವದು. ನಾವು ಪಕ್ಷಭೇದವನ್ನು ಮರೆತು ನೌಕರಶಾಹಿಗೆ ಅಷ್ಟಗಟ್ಟಿದ ಹೊರತು, ಸರಕಾರವು

— ಬಾವಲಾ ಖುನಿ ಪ್ರಕರಣವು ಮತ್ತೂ ದಿನ ಹೋದಹಾಗೆ ಬೆಳೆಯುತ್ತ ನಡೆಯುತ್ತದೆ. ಮುಮತಾಜ ಬೇಗಮಳು ಕೂಸನ್ನು ಹಡೆದಿರುವಳು. ಆ ಹೆಣ್ಣುಕೂಸು ಬಾವಲಾನಂತೆಯೇ ಕಾಣುತ್ತದೆಂದು ಅವಳ ದಿಗಣ್ಣೆಯು ಹೇಳುತ್ತಿದ್ದಾಳಂತೆ! ಅವಳು ಪೋಲೀಸರ ಬಿಚ್ಚುಗತ್ತಿಯ ಸತ್ತ ಕಾವಲಿನಲ್ಲಿ ಇದ್ದಾಳೆ. ಅವಳನ್ನು ಕೊಂದ ಹೊರ್ತು ನಿಲ್ಲುವದಿಲ್ಲವೆಂತ ಕೆಲವರು ಪ್ರತಿಜ್ಞೆಯನ್ನು ಮಾಡಿರುವರಾಗಿ ಸುದ್ದಿ! ಹಾಯ್‌ಕೋರ್ಟಿನಲ್ಲಿ ಮರಣಶಾಸನಾರ್ಹರಾದ ಆರೋಪಿಗಳು ತಮ್ಮ ಯಾವತ್ತು ಹೇಳಿಕೆಯನ್ನು ಪೂರ್ಣ ನ್ಯಾಯಾಸನದ ಮುಂದೆ ವಿಚಾರಿಸಲ್ಪಡಬೇಕೆಂದು, ಮಿ| ಜಿನ್ನಾರ ಮುಖಾಂತರ ಎಡ್ವೋಕೇಟ ಜನರಲ್‌ರ ಮುಂದೆ ರುಜುವಾತು ನಡಿಸಿದ್ದಾರೆ. ಇದನ್ನು ಕೇಳಿಕೊಳ್ಳಬಹುದೆಂದು ಮಿ. ಕಾಂಗಾರವರು ಅಪ್ಪಣೆ ಕೊಡಲಿಕ್ಕಿದ್ದಾರೆಂದು ತಿಳಿಯುತ್ತದೆ. ಇಂಗ್ಲಂಡಿನಲ್ಲಿಯೂ ಆಗಸ್ಟ ಮುಗಿಯುವದರೊಳಗೆ ಅಪೀಲು ದಾಖಲಾಗಲಿಕ್ಕಿದೆ. ಬಾವಲಾರ ಖುನಿಗೆ ನ್ಯಾಯದಾನ ಹ್ಯಾಗೆ ಸಿಗುತ್ತದೆ ನೋಡಬೇಕು.

ಹಣ್ಣಿಗೆ ಬರಲಾರದೆಂದು ಅವರು ಉದ್ಗರಿಸುತ್ತಿದ್ದಾರೆ.

— ದೇಶಬಂಧುಗಳ ನಿಧನ ಸಮಯದಲ್ಲಿ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕೆಂದು ಮುಸಾಕ್ಯರು ಮಾಡಿದ ಸೂಚನೆಗೆ, ಸೂಚನೆಯು ಅವ್ಯವಹಾರಿಕವೆಂದು ಕಾರಣನ್ನ ಕಮೀಟಿಲ್ಲಿ ನಿರ್ಣಯವಾಯಿತು.

— ಹೋದ ತಿಂಗಳಲ್ಲಿ ದಾಸನೊಳಗೆ ೭೫ ಕಡೆಗಳಲ್ಲಿ ಕಳವು ಆಯಿತು. ಪೋಲೀಸರು ಮಲಗಿರಬಹುದೆಂದು ತಿಳಿದು, ಜನರು ಸ್ವಂತ ಸಂರಕ್ಷಣವನ್ನು ಮಾಡುತ್ತಿರುವರಂತೆ!

— ೧ ನೇ ವರ್ಗದ ಸಿವ್ಹಿಲ್ ಸರ್ವ್ಹಿಸ ಪರೀಕ್ಷೆಗೆ ೩೪ ಸ್ತ್ರೀ ಉಮೇದ್ವಾರರ ಕೂತಿದ್ದಾರೆ. ಇದು ಸ್ತ್ರೀಯರು ಕೈಕೊಂಡ ಹೊಸ ಸಾಹಸ

— ಈ ಸರ್ತಿ ವರಿಷ್ಠ ಕಾಯಿದೆ ಕೌನ್ಸಿಲಿನ ಅಧಿವೇಶನದ ಅಧ್ಯಕ್ಷಸ್ಥಾನವು ನಾ| ವಿಠ್ಠಲಭಾಯಿ ಪಟೇಲರು ವಹಿಸಿಕೊಳ್ಳುವವರಿದ್ದಾರೆ. ಆ ಬಗ್ಗೆ ಒಳ್ಳೇ ಕಾದಾಟವು ನಡೆಯುತ್ತದೆ. ದೇವಿ ಸರೋಜಿನಿಯವರು ಸ್ವತಂತ್ರ ಪಕ್ಷದ ಮೆಂಬರುಗಳಿಗೆ, ಪಟೇಲರಿಗೇ ಮತದಾನ ಮಾಡಲು ಒಲಿಸಲಿಕ್ಕೆ ಸಿಮ್ಲಾ ಪಟ್ಟಣಕ್ಕೆ ಗಮಿಸುವರು

— ಗ್ರೀಕದ ಪಹರೆಗಾರನಿಗೆ ಬಲ್ಗೇರಿಯಾದವನು ಕೊಂದನು, ಅಪರಾಧಿಗೆ ಶಿಕ್ಷಿಸಲು ಗ್ರೀಕರು ಸೂಚಿಸಿದ್ದಾರೆ. ಅದಕ್ಕೆ ಬಲ್ಗೇರಿಯಾದವರು ಒಪ್ಪುವದಿಲ್ಲ ಎರಡು ರಾಜ್ಯಗಳು ಕಾದಾಡಿದರೆ, ದುಷ್ಟ ಯುರೋಪದ ಯುದ್ಧ ವಾರ್ತೆಯು ಕೇಳಬರುವದಾಗಿ ಕಾಣುತ್ತದೆ.

— ಕಳೆದ ೧ ನೇ ಆಗಸ್ಟ ಶನಿವಾರಕ್ಕೆ ಕಾಂಗ್ರೆಸ ಮಂದಿರದ ಪಟಾಂಗಣದಲ್ಲಿ ಮುಂಬಯಿಯೊಳಗೆ ಲೋಕಮಾನ್ಯರ ಪುಣ್ಯತಿಥಿಯ ಸ್ಮರಣಾರ್ಥ ಸಭೆಗೂಡಿತ್ತು. ಅಧ್ಯಕ್ಷರು ಶ್ರೀ| ಖಾಡಿಲಕರರು ಮೌ| ಶೌಕತ ಅಲ್ಲಿಯವರು ಹಿಂದೂ-ಮುಸಲ್ಮಾನರ ಐಕ್ಯಕ್ಕಾಗಿ ಸ್ಫೂರ್ತಿದಾಯಕ ಭಾಷಣಮಾಡಿದರು ಲೋಕಮಾನ್ಯರ ದಹನ ಭೂಮಿಯ ಸುತ್ತಲೂ, ಮ್ಯುನಿಸಿಪಾಲಿಟಿಯವರು ಕಬ್ಬಿಣ ಬೇಲಿಯನ್ನು ಕಟ್ಟಿಸಿದ್ದಾರೆ. ಈ ಮೇಲಿನ ಸಭೆಯಲ್ಲಿ ಆ ದಹನಸ್ಥಾನದಲ್ಲಿ ಲೋಕಮಾನ್ಯರ ಒಂದು ಶಿಲಾಪ್ರತಿಮೆಯು ನಿಲ್ಲಿಸಬೇಕೆಂದು ಠರಾಯಿಸಿದ್ದಾರೆ.

— ೧೯೨೧ನೇ ಸಾಲಿನ ಖಾನೇಸುಮಾರಿಯ ಮೇಲಿಂದ ೫ ವರ್ಷದ ಕೆಳಗಿನ ಪ್ರಾಯದ ೧೧೮೯೨ ವಿಧವೆಯರಿರುವರೆಂದೂ, ೧೦ ವರೇಗಿನವರು ೮೫೦೩೭, ೧೫ ವರೇಗಿನವರು ೨೩೨೧೪೭, ೧೫ರಿಂದ ೨೦ರವರೇಗಿನವರು ೩೯೬೧೭೨, ೨೦ರಿಂದ ೨೫ ವರೇಗಿನವರು ೭೪೨೮೨೦, ೨೫ರಿಂದ ೩೦ರ ವರೇಗಿನವರು ೧೧೬೩೭೨೦ ವಿಧವೆಯರಿರುವರೆಂದೂ ತಿಳಿಯುತ್ತದೆ. ೧ ವರ್ಷದೊಳಗಿನವರು ೫೯೭ ವಿಧವೆಯರಿರುವರಂತೆ! ಎಂದು ಮದುವೆಯಾದರು? ಎಂದು ವಿಧವೆಯಾದರು! ಇದೆಂಥ ವೈಧವ್ಯ!!!

— ಮದ್ರಾಸ ಮ್ಯುನಿಸಿಪಾಲಿಟಿಯವರು ೨೦ ಕ್ರೀಡಾಂಗಣಗಳನ್ನು ಸ್ಥಾಪಿಸಲಿರುವರು. ಸ್ತುತ್ಯ!

— ನಿಜಾಮು ಸಾಹೇಬರು ಹೊಸದಾಗಿ ಬಂದ ರೆಸಿಡೆಂಟ ಮಿ| ಬಾರ್ಟನರವರಿಗೆ ಭೋಜನವನ್ನಿತ್ತರು. ಆ ಕಾಲಕ್ಕೆ ನಿಜಾಮರು ಹೇಳಿದ್ದೇನಂದರೆ:— "ನನ್ನ ತಂದೆಯವರ ಕಾಲದಿಂದ ಅನೇಕ ರೆಸಿಡೆಂಟರು ಬಂದು ಹೋದಾಗ್ಯೂ ಜನಹಿತಕ್ಕಾಗಿ ಪ್ರಜೆಗಳು ಸ್ಮರಿಸುತ್ತಿರುವ ರೆಸಿಡೆಂಟರು ಅತ್ಯಲ್ಪ ಮಂದಿಗಳಿರುವರು."

— ಬಿಹಾರ ಪ್ರಾಂತದೊಳಗಿನ ಪದ್ಮಾ ನದಿಗೆ ನೆರೆ ಕಟ್ಟಿ ಮುಂಡರಾ ಹಾಗು ಬನಾರಿ ಊರುಗಳು ಬಳಸು ಹೋದವು. ಮಹಾ ನದಿಗೆ ನೆರೆ ಕಟ್ಟಿ ಚಿಲಕಾ ಸರೋವರವು ತುಂಬಿ ತುಳುಕಿ ಪುರಿ ಹಾಗು ಕಟಕ ಜಿಲ್ಲೆಯೊಳಗಿನ ಅನೇಕ ಊರುಗಳು ಜಲಸಮಾಧಿಯನ್ನೈದಿದವು.

— ತ್ರಾವಣಕೋರದ ಮಹಾರಾಣಿಯವರು ತಮ್ಮ ರಾಜ್ಯದಲ್ಲಿ ಪಶುವಧೆಯಾಗದಂತೆ ಬಂಧಿಸಿರುವರು.

— ಬೆಂಗಳೂರಿನ "ಮೈಸೂರ ಕ್ರಾನಿಕಲ್" ಪತ್ರಿಕೆಯು ತಾ. ೨ನೇ ಆಗಸ್ಟದಿಂದ "ವಿಶ್ವಕರ್ನಾಟಕ"ವೆಂಬ ಹೆಸರಿನಿಂದ ಪ್ರಸಿದ್ಧವಾಗುತ್ತಿದೆ. ಮತ್ತು ಶ್ರೀ| ತಿರುಮಲೆ ತಾತಾಚಾರ್ಯರು ಸಂಪಾದಕರಾಗಿರುವರು.

— ನಾಶಿಕ ಪಂಚವಟಿಯೊಳಗಿನ ರಾಮನಾಮ ಆಧಾರ ಆಶ್ರಮಕ್ಕೆ ಶ್ರೀಮತಿ ಜವ್ಹೇರಿಬಾಯಿಯವರು ೫೦೦ ರೂಪಾಯಿಗಳನ್ನು ಅರ್ಪಿಸಿರುವರು.

— ನ್ಯಾಯ ಹಾಗು ಅಮಲಬಜಾವಣಿ ಖಾತೆಗಳನ್ನು ೧೯೨೭ನೇ ಇಸ್ವಿಯಿಂದ ವಿಂಗಡಿಸಬೇಕೆಂಬ ಠರಾವು ಮದ್ರಾಸ ಕಾಯಿದೆ ಕೌನ್ಸಿಲಿನಲ್ಲಿ ಬೇಗನೇ ಬರಲಿಕ್ಕಿದೆ.

— ಕರ್ನಾಟಕ ಲಿಂಗಾಯತ ಶಿಕ್ಷಣ ಸಂಘದ ತರ್ಫೆನಿಂದ ವಿಲಾಯತಿಗೆ ರಾ| ಡಿ. ಎಸ್. ಪಾವಟೇಯವರು 'ಟ್ರೈಪೊಸ' ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು.

ವಿಚಿತ್ರ ಸಂಗತಿಗಳು !

ಇಂಗ್ಲಂಡದೊಳಗಿನ ಬರ್ಲಿಂಗಟನ್ ಓಣಿಯೊಳಗೆ ಹಿಜ್ಜಿನ್ಸ ಎಂಬ ಬಡ ಕೂಲಿಕಾರನಿರುವನು. ಆತನು ಈಗ ಕೆಲಸವಿಲ್ಲದೆ ನಿರುದ್ಯೋಗಿಯಾಗಿರುವನು. ಆತನ ಹೆಂಡತಿಯು ಸದ್ಯಕ್ಕೆ ಪ್ರಸೂತಳಾದಳು. ೪ ಶಿಶುಗಳು ಹುಟ್ಟಿರುವರು. ಶಿಶುಗಳೂ,ತಾಯಿಯೂ ಕ್ಷೇಮದಿಂದಿರುವರು. ಇಷ್ಟ ಮಕ್ಕಳಿಗೆ ಗಂಜಿ ಇಲ್ಲದಾಗ, ಸದಾಶಿವನು ಮತ್ತೆ ೪ ಮಕ್ಕಳನ್ನು ಕೊಟ್ಟನು !

⁂

ಅಮೇರಿಕೆಯ ಕೋಲಿಗ್ ಎಂಬಲ್ಲಿ ಇನೊಕ ಬೇಕನ್ ಎಂಬೊಬ್ಬ ಪಾದ್ರಿಗಳಿರುವರು. ಅವರಿಗೆ ಎರಡು ಪ್ರಕಾರದ ಗಂಟಲುಗಳಿವೆ. ಆ ಗಂಟಲುಗಳೊಳಗಿಂದ ಭಿನ್ನ ಭಿನ್ನ ಪ್ರಕಾರದ ಧ್ವನಿಗಳಾಗುತ್ತವೆ. ಆ ಗಂಟಲುಗಳನ್ನು ತಮ್ಮ ನಿಧನದ ನಂತರ ಬ್ರಿಟಿಶ ಮೆಡಿಕಲ್ ಎಸೋಸಿಯೇಶನ್ ಯಾನೆ ಬ್ರಿಟಿಶ ವೈದ್ಯಕ ಸಂಘಕ್ಕೆ ಅವರು ಮಾರಿಕೊಟ್ಟಿರುವರು ಆ ಎರಡು ಗಂಟಲುಗಳ ಬೆಲೆಯು ೨೫ ಸಾವಿರ ಪವನು !

⁂

ಇಂಗ್ಲಂಡದ ಎಲ್ಲಿನ್ಸ್ ಜಿಲ್ಲೆಯಲ್ಲಿ ೪ ಮಂದಿ ಸಹೋದರಿಗಳು ವಾಸ ಮಾಡುತ್ತಿರುವರು. ಎಲ್ಲರೂ ವಿಧವೆಯರು ಒಬ್ಬಳ ವಯಸ್ಸು ೯೩; ಇನ್ನೊಬ್ಬಳ

ವಯಸ್ಸು ೯೪; ಇನ್ನಿಬ್ಬರ ವಯಸ್ಸಿನ ಬೇರಿಜು ೧೭೭ ಊ ಕ್ಷೇಮದಿಂದಿರುವರು. ಅವರೊಳಗಿನ ಎಲಿಝಾ ಯಂಗ ಎಂಬ ೯೪ ವರುಷ ವಯಸ್ಸಿನವಳಿಗೆ ೧೧ ಮಕ್ಕಳು; ೧೧೮ ಮಂದಿ ಮೊಮ್ಮಕ್ಕಳು; ೩೬ ಮಂದಿ ಮರಿ ಮಕ್ಕಳು; ಇಬ್ಬರು ಮರಿ ಮೊಮ್ಮಕ್ಕಳು. ನೋಡಿರಿ ಸಂತತಿ ಸಂಪತ್ತು !

⁂

ನೀಲಗಿರಿ-ವಾಯನಾಡಿನಲ್ಲಿ ವಿಪರೀತ ಮಳೆ. ನೆರೆಯ ಕೊಯಿಮುತ್ತೂರ ಜಿಲ್ಲೆಯ ಎರೆನಾಡಿನಲ್ಲಿ ಜಲ ಬಿಂದುವಿಲ್ಲ. ದುಡ್ಡು ಕೊಟ್ಟರೂ ನೀರು ಸಿಗುವದು ಅಪರೂಪ, ದನಗಳಿಗೆ ಹಸಿ ಎಲೆಗಳನ್ನು ಹಾಕುತ್ತಿದ್ದರು. ಈಗ ಅವೂ ಒಣಗಿಹೋಗಿವೆ, ಜನರ ಗೋಳು!

⁂

ಅಮೇರಿಕೆಯ ಕೆನಡಾ ದೇಶದಲ್ಲಿ ಚಿನ್ನದ ಹೊಸ ಖಣಿಗಳು ದೊರಕಿವೆ. ಸೈಬೇರಿಯಾದಲ್ಲೂ ದೊರಕಿವೆ. ಸೈಬೇರಿಯಾದೊಳಗಿನ ಖಣಿಗಳೊಳಗಿಂದ ೪೦೦ ಟನ್ (೮೦ ಮಣ) ಚಿನ್ನ ದೊರಕಬಹುದೆಂದು ಅಂದಾಜಿದೆ. ಕೆನಡಾ ದೇಶದ ಖಣಿಯೊಳಗಿನ ಅಂದಾಜು ಇನ್ನೂ ತಿಳಿಯಲಿಲ್ಲ.

⁂

ಕಟಿಹಾರ ಎಂಬಲ್ಲಿ ತಾ. ೨೪-೭-೧೯೨೫ ನೇ ಒಂದು ಆಕಳು ೨ ಕರುಗಳನ್ನು ಹಡಿದೆ. ಎರಡೂ ಕರುಗಳ ಬಣ್ಣ ಒಂದೇ.

⁂

ಮಲಬಾರದಲ್ಲಿ ಒಂದು ಗುಹೆ ಸಿಕ್ಕಿದೆ. ಇದು ಬಹು ಪುರಾತನ ಕಾಲದ್ದು. ಇದರೊಳಗೆ ಮುಂಚೆ ಶಿವಾರ್ಚನೆಯು ನಡೆಯುತ್ತಿತ್ತೆಂದು ಹೇಳುತ್ತಾರೆ. ಬಡೋದಾ ಸಂಸ್ಥಾನದ ಲೋಕ ತಾಲೂಕಿನ ಹೊಲದಲ್ಲಿ ಹೂಡುತ್ತಿದ್ದಾಗ ೨ ಜೈನ ಶಿಲಾಮೂರ್ತಿಗಳು ದೊರಕಿವೆ. ಅವನ್ನು ನೋಡಲು ಅನೇಕ ಜನರು ಅಲ್ಲಿ ಹೋಗುತ್ತಿರುವರು.

⁂

ಬುಂದಿ ಸಂಸ್ಥಾನದ ಪ್ರಜೆಗಳು ೨ ಲಕ್ಷ. ಸಂಸ್ಥಾನದ ಉತ್ಪನ್ನವು ೧೦ ಲಕ್ಷ. ಅಲ್ಲಿಗೆ ೫ ರೂಪಾಯಿ ರಾಜಾಧಿರಾಯಿತು. ಶಿಕ್ಷಣಕ್ಕಾಗಿ ಮಹಾರಾಜರು ಈ ವರುಷ ಬಲು ಔದಾರ್ಯದಿಂದ ೩ ಸಾವಿರ ರೂಪಾಯಿಗಳನ್ನು ಮಂಜೂರ ಮಾಡಿರುವರು ೧೦ ಲಕ್ಷದೊಳಗಿಂದ ಶಿಕ್ಷಣಕ್ಕಾಗಿ ೩ ಸಾವಿರ ರೂಪಾಯಿ. ಬಲ್ಲಿರೋ? ೨ ಲಕ್ಷ ಪ್ರಜೆಗಳುಳ್ಳ ಸಂಸ್ಥಾನದಲ್ಲಿ ಒಂದೇ ಒಂದು ಶಾಲೆ. ಬಡೋದೆ ಸಂಸ್ಥಾನದಲ್ಲಿ ಸಂಸ್ಥಾನದ ಉತ್ಪನ್ನದ ೮ ರಲ್ಲಿ ೧ ಪಾಲು ಶಿಕ್ಷಣಕ್ಕೆ ಖರ್ಚಾಗುತ್ತದೆ. ೭೩೨ ಪ್ರಜೆಗಳಿದ್ದಲ್ಲಿ ೧ ಶಾಲೆ; ಹೀಗೆ ಅಲ್ಲಿಯ ಶಾಲಾಸ್ಥಾಪನೆಯ ಪ್ರಮಾಣವಿದೆ. ಅಂತು ೨,೩೭೭ ಶಾಲೆಗಳಿವೆ.

⁂

ಉತ್ತರ ಹಿಂದುಸ್ಥಾನದಲ್ಲಿ ಒಬ್ಬ ಮಹಾರಾಜರಿರುವರು. ಅವರಿಗೊಬ್ಬ ಮುಸಲ್ಮಾನ ಸೂಳೆಯಿದೆ. ಅವಳ ಹೆಸರು ಶಾಯಿದಾ ಖಾತೂನ. ಮಹಾರಾಜರು ಇವಳಿಗೆ ಸಂಸ್ಥಾನದೊಳಗಿಂದ ೨೫೦ ಉತ್ಕೃಷ್ಟ ಊರುಗಳನ್ನು ದಾನ ಮಾಡಿರುವರು. ಇವರು ಹಿಂದೂ ಮಹಾರಾಜರು. ಇವಳಿಗೊಬ್ಬ ಹೆಂಡತಿಯಿದೆ. ಅವಳಿಂದ ಒಂದು ಮಗಳೂ ಹುಟ್ಟಿದೆ.

⁂

: ಡ್ ಎಂಬೊಬ್ಬರು ಮುಂಚೆ ಫ್ರಾನ್ಸದೊಳಗಿನ ಸೈನ್ಯಾಧಿಕಾರಿಗಳಿದ್ದರು. ಅವರು ಸದ್ಯಕ್ಕೆ ನಿವೃತ್ತಹೊಂದಿರುವರು. ಅವರು ಕುಂಟರು. ಎರಡೂ ಕಾಲು ಕುಂಟ. ಅವರು ಭೂಪ್ರದಕ್ಷಿಣೆಗಾಗಿ ಪಾರಿಸದಿಂದ ಹೊರಟು ಹಿಂದುಸ್ಥಾನಕ್ಕೆ ಬಂದು, ಮುಂಬಯಿಯಿಂದ ಮರಳಿಹೋದರು. ಅವರೊಡನೆ ಒಂದು ನಾಯಿಯಿದೆ. ೨೦ ವರುಷಗಳಲ್ಲಿ ತಮ್ಮ ಭೂಪರ್ಯಟನವು ಮುಗಿಯುವದೆಂದು ಅವರು ಹೇಳಿದರು.

⁂

ಮದ್ರಾಸ ಪಟ್ಟಣದಲ್ಲಿ ಮ್ಯುನಿಸಿಪಾಲಿಟಿಯ ಚುನಾವಣೆಯು ನಡೆದಿದೆ. ಪ್ರತಿ ದಿನ ಈಗ ಬೀದಿ ಬೀದಿಗಳಲ್ಲಿ ಭಜನೆ ಮೇಳಗಳನ್ನು ಹೊರಡಿಸಿ ಸ್ವರಾಜ್ಯ ಪಕ್ಷಕ್ಕೆ ಮತಕೊಡಿರೆಂದು ಹೇಳುತ್ತಿರುವರು.

⁂

ಅಮೇರಿಕೆಯಲ್ಲಿ ಸ್ಕೋಪ್ ಎಂಬವರು ಮಾನವನು ಮಂಗನಿಂದ ಉತ್ಕ್ರಾಂತಿಹೊಂದಿದ ಪ್ರಾಣಿ ಎಂಬ ಸಿದ್ಧಾಂತವನ್ನು ಪ್ರತಿಪಾದಿಸಿದರು. ಇದು ಅಪರಾಧವೆಂದು ಅವರ ಮೇಲೆ ಖಟ್ಲೆ ನಡೆದು,ಸ್ಕೋಪ್‌ರವರಿಗೆ ೧೦೦ ಪೌಂಡು ದಂಡ ವಿಧಿಸಲಾಗಿದೆ.

⁂

ಮದ್ರಾಸದ ಪ್ರಾಂತಾಧಿಪರು ಪುಂಗನೂರಿಗೆ ಅನುಗ್ರಹಿಸಿದ್ದರು. ಆನೆಯಮೇಲೆ ಆಸನ ಹೂಡಿ ಪ್ರಾಂತಾಧಿಪ ದಂಪತಿಗಳು ಇದೇ ಊರಲ್ಲಿ ಮೆರೆದರು. ಆನೆಯೊಡನೆ ಅದರ ಮರಿಯೂ ಇತ್ತು. ಪ್ರಾಂತಾಧಿಪರು ತಮ್ಮ ಮಗನನ್ನು ಮರಿಯಮೇಲೆ ಕೂಡ್ರಿಸಿ, ತಮ್ಮ ಚಿರಂಜೀವನ ಭಾವಚಿತ್ರ ಕೊಂಡರು.

ತ್ರಿಚನಾಪಳ್ಳಿಯಲ್ಲಿ ದೊಡ್ಡ ನೆರೆ. ನೆರೆ ನೋಡಲು ಒಂದು ಮನೆಯವರು ಗಾಡಿಯಲ್ಲಿ ಕುಳಿತು ಹೋಗಿದ್ದರು. ಒಡನೆ ೩ ವರ್ಷದ ಬಾಲಕನೊಬ್ಬನಿದ್ದನು. ಅತ್ತಿತ್ತ ಬಾಣ ಬಿರುಸುಗಳನ್ನು ಹಾರಿಸುತ್ತಿದ್ದರು. ಅದಕ್ಕೆ ಕುದುರೆ ಬೆದರಿ ಹೊಳೆಯಲ್ಲಿ ಮಗು-ಗಾಡಿ ಸಹಿತ ಹಾರಿ ಜಲಸಮಾಧಿಹೊಂದಿತು.

ಅತಿ ಉತ್ತಮವಾದ ನಶ್ಯ!

ಈ ನಶ್ಯವು ನಮ್ಮಲ್ಲಿ ಬಹಳೇ ವರ್ಷಗಳಿಂದ ಪ್ರಖ್ಯಾತಿ ಹೊಂದಿರುತ್ತದೆ. ಬೇಕಾದವರು ತರಿಸಿಕೊಳ್ಳಬಹುದು. ಸೆಂಪಲ್ ಬೇಕಾದವರು ೧ಆಣೆ ಸ್ಟ್ಯಾಂಪು ಕಳುಹಿಸಬೇಕು.

ನಂಬರ ೧ ಪೌಂಡು ೧ಕ್ಕೆ ೨-೪-೦.
„ ೨ ಪೌಂಡು ೧ಕ್ಕೆ ೨-೦-೦.

ಜಿ. ರಾಮಯ್ಯಾ ಕುರಡಿ,
ಪೋಸ್ಟ- ಕರ್ಕಿ, ಉ. ಕಾನಡಾ.

ಭಾಷಾಂತರಕರ್ತರಿಗೆ ಸುಸಂಧಿ!

ಸುಪ್ರಸಿದ್ಧವಾದದ್ದೂ, ಅನೇಕ ವಿದ್ಯಾ ಪಂಡಿತರಿಂದ ಚಲೋ ಅಭಿಪ್ರಾಯ ಪಟ್ಟದ್ದೂ ಆಗಿರುವ ಋಗ್ವೇದಿಯವರು ಬರೆದ **“ आर्यांच्या सणांचा प्राचीन व अर्वाचीन इतिहास ”** ಎಂಬ ಮರಾಠಿ ಪುಸ್ತಕವನ್ನು ಕನ್ನಡದಲ್ಲಿ ಭಾಷಾಂತರಿಸುವದಿದೆ. ಇದನ್ನು ಕೈಕೊಳ್ಳಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳತಕ್ಕದ್ದು

Apply to:--
V. PRABHA &:CO.
BOMBAY 4.

Copies can be had from:-
THE NORTH KANARA TRADING CO.
KARWAR.

धातू क्षीणता व कमजोरपणा यासाठीं

मदन मंजरी गोळ्या. (रजिस्टर्ड.)

या दिव्य गोळ्या रक्त व वीर्य सुधारून त्यांची चांगली वाढ करतात. पचन शक्ति सुधारून परसाकडे साफ होतें. त्याचप्रमाणें प्रत्येक प्रकारची अशक्तता दूर होऊन शरीर तेजदार व बळवान होतें. किं. ४० गोळ्यांच्या डबीस रु. १.

रमण विलासिनी गोळ्या. रात्रौ फक्त १ गोळी दुधाबरोबर खाल्यानें इच्छेप्रमाणें वीर्यस्तंभन होत. किं. डबीस रु. १

नपुंसकत्वारी घृत. हा लेप पुरुषाच्या गुह्यभागावर लावला असतां सर्व रोग नाश पाऊन खरें पुरुषत्व प्राप्त होतें. किं. डबीस रु. १.

कुमटा एजंट :— माधव शांतप्पा शेणवी बेलेकेरी.

राजवैद्य नारायणजी केशवजी ब्रँच:— १९३ काळबादेवी रोड मुंबई नं. २.

ಜಾಹೀರಾತು.

ತಾರೀಖು ೭-೪-೧೯೩೫ನೇ ಪತ್ರದಲ್ಲಿ ಪ್ರಸಿದ್ಧಿಪಡಿಸಿರುವ ನಾಮಾಂಕಿತ ಸುಪ್ರಸಿದ್ಧ ಪರಂಪರಾ ಜ್ಯೋತಿಷಿ ಕೇ. ಸಿ. ನಾರಾಯಣಶಾಸ್ತ್ರಿ ಎಂಬವರು ಸ್ವಲ್ಪ ದಿವಸದಿಂದ ಶಿವಮೊಗ್ಗಾ ಡಿಸ್ಟ್ರಿಕ್ಟ ಸಾಗರದಲ್ಲಿ ಕೆಲವು ದಿವಸದ ಪೂರ್ತ ತಮ್ಮ ಮುಕ್ಕಾಂ ಮಾಡಿರುತ್ತಾರೆ. ಅವಶ್ಯವಿದ್ದ ಯಾವತ್ತೂ ಜನರು ಸದ್ರಿಯವರಿಗೆ ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡತಕ್ಕದ್ದು.

ಪತ್ತೆ:—

ಕೇರಳ ಜ್ಯೋತಿಷಿ

ಕೇ. ಸಿ. ನಾರಾಯಣ ಶಾಸ್ತ್ರಿ.

ಚಾಮರಾಜೇಂದ್ರ ಪೇಟೆ, ಪೋ. ಸಾಗರ,
ಡಿಸ್ಟ್ರಿಕ್ಟ- ಶಿವಮೊಗ್ಗಾ.

ವಿಶೇಷ] **ಅನುಭವಸಿದ್ಧ** [ಪಥ್ಯವಿಲ್ಲ.

ವನೌಷಧಿಮೂಲಿಕೆಗಳು.

ವಾಯುದುಮ್ಮಾನ (ನಿಮೋನಿಯಾ) ವಾಂತಿ ಭ್ರಾಂತಿ (ಕಾಲರಾ) ಅರ್ಧಾಂಗವಾಯು (ಪೆರಾಲಿಸಿಸ್) ಹುಚ್ಚು ವ ಸಾದಾ ನಾಯಿ ಕಡತ, ಸರ್ಪಸುತ್ತು, ಹೊಟ್ಟೆಯಲ್ಲಿ ಕೃತ್ರಿಮ ವಿಷಹಾಕಿದ್ದು (ಕೈಮಸಗು) ವಗೈರೆ ರೋಗಗಳಿಗೆ ಒಂದೇ ಒಂದು ಮೂಲಿಕೆಯಿಂದ ಖಾತ್ರಿಯಾಗಿ ತೀವ್ರ ಗುಣಬರುವದು. ಇವು ಬಹುಕಾಲದಿಂದ ಅನುಭವ ತಕ್ಕೊಂಡ. ಹಾಗು ಪ್ರತಿನಿತ್ಯ ಈಕಡೆಗೆ ಬಳಕೆಯಲ್ಲಿದ್ದು [illegible] ಔಷಧಿಗಳ ತಾಜಾ ಮೂಲಿಕೆಗಳು! ಒಮ್ಮೆ ತರಿಸಿ ಅನುಭವ ತಕ್ಕೊಂಡರೆ ಖಾತ್ರಿಯಾದೀತು. ಕಾಲರಾ ಔಷಧಿಗಳ ದ್ರಾವಕ (Tincture) ಸಹ ಅಗಾವು ಸೂಚಿಸಿದರೆ ಕಳುಹುವೆವು.

ವಾಯುದುಮ್ಮಾನದ ಬಗ್ಗೆ ಔಷಧಿ ಮೂಲಿಕೆ ತೊಲೆ
೧ಕ್ಕೆ ೦-೨-೦.
ಕಾಲರಾದ ಬಗ್ಗೆ " " " ೦-೩-೦
ಅರ್ಧಾಂಗ ವಾಯುವಿನಬಗ್ಗೆ ೦-೪-೦
ನಾಯಿ ಕಡತದಬಗ್ಗೆ ೦-೪-೦
ಸರ್ಪಸುತ್ತಿನ ಬಗ್ಗೆ ೧-೩-೦
ಹೊಟ್ಟೆಯಲ್ಲಿ ಕೃತ್ರಿಮ ಔಷಧಿ ಬಿದ ಬಗ್ಗೆ
ತೊಲೆ ೧೦ ಕ್ಕೆ ೦-೮-೦
ರಕ್ತಶುದ್ಧಿ ವ ಮಲಶೋಧನೆ ಬಗ್ಗೆ
ಮೂಲಿಕೆ ರಾತ್ತಲ್ಲು ಕ್ಕೆ ೧-೦-೦
ಮೋರಾವಳಾ (ನೆಲ್ಲಿಕಾಯಿ ಗುಳಂಬ)
ರಾತ್ತಲ್ಲು ೧ ಕ್ಕೆ ೧-೦-೦

ರಾತಲಗಟ್ಲೆ ಯಾ ಅದಕ್ಕೂ ಹೆಚ್ಚು ತರಿಸಿಕೊಳ್ಳುವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು. ಟಪಾಲು ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿ ಪತ್ರ ದ್ವಾರಾ. ಅನುಪಾನಪತ್ರ ಔಷಧಿ ಸಂಗಡ.

ಎನ್. ಜಿ. ಹೆಗಡೆ, ಮಾಸ್ಕೇರಿ,
ಪೋಸ್ಟ—ಬಂಕಿಕೊಡ್ಲ. ಜಿ. ಉತ್ತರ ಕಾನಡಾ.

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬಿ. ಯವರ

ಸುಗಂಧ ನಸ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಡುಕೇಳಲ್ಪಟ್ಟ ಈ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ. ಮೂರು ಬಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ವೈದ್ಯರು ತಮ್ಮ ಗಡದಲ್ಲಿ ಕಟ್ಟು ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸಿಸೆ ಪುಕ್ಕಟೆ ಕಳಿಸಲಾಗದು.

ಬುಡ್ಡಿ ಒಂದಕ್ಕೆ ಕ್ರಯ ರೂ ೦ ೮ ೦ ವ್ಹಿ ಪಿ ೪ ಆ ಡಜನ್ ೧ ಕ್ಕೆ ರೂ. ೨-೮-೦ ವ್ಹಿ. ಪಿ. ೦-೮-೦
ದಯಮಾಡಿ ನಿಮ್ಮ ಹೆಸರನ್ನ ಅಡ್ರೆಸ್ಸೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ ೫೧೦, **ಜಾರ್ಜಟೌನ, ಮದರಾಸ.**

ಕಿರ್ಲೋಸ್ಕರ ಪಂಪ.

ಬಾವಿಯೊಳಗಿನ ನೀರನ್ನು ಮೇಲಕ್ಕೆ ತರುವದರಲ್ಲಿ

ಕಿರ್ಲೋಸ್ಕರ, ನೀರಿನ ಪಂಪು ಮೇಲ್ತರದ್ದು ಇರುತ್ತದೆ. ಸಣ್ಣ ಮಕ್ಕಳು, ಅಬಲೆಯರು ಈ ಪಂಪಿನಿಂದ ನೀರನ್ನು ಒಂದೇ ನಿಮಿಷದಲ್ಲಿ ಮೇಲಕ್ಕೆ ತರುವರು. ಪ್ರಪಂಚದಲ್ಲಿ ಮಿಕ್ಕ ಅಡಚಣೆಗಳಲ್ಲಿ ನೀರಿನ ತೊಂದರೆಯು ಸ್ವಾಭಾವಿಕವು. ಈ ಅಡಚಣಿಯು ಮೇಲಿನ ಉಪಾಯದಿಂದ ದೂರಾಗುವದು

ಪರದೇಶದಿಂದ ಬರುವ ಪಂಪುಗಳು ಬಹು ತುಟ್ಟಿ ಇರುವದರಿಂದ ಮಧ್ಯಮ ಜನರಿಗೆ ಅವುಗಳನ್ನು ಕೊಳ್ಳಲಾಗುವದಿಲ್ಲ. ಇದನ್ನು ತಿಳಿದು ನಾವು ಈ ಪಂಪನ್ನು ಬಹು ಅಗ್ಗದಿಂದ ಕೊಡುತ್ತಿರುವೆವು. ಇಲ್ಲದೆ, ಈ ಪಂಪಿನ ಬಿಡಿ ಭಾಗಗಳು ನಮ್ಮ ಕಾರಖಾನೆಯಲ್ಲಿಯೇ ತಯಾರಾಗುತ್ತಿರುವದರಿಂದ ಬೇಡಿದಾಗ ದೊರೆಯುತ್ತವೆ.

ಈ ಸೌಕರ್ಯವು ವಿದೇಶೀ ಪಂಪುಗಳನ್ನು ಕೊಂಡಲ್ಲಿ ದೊರೆಯದು.

ಕೇ. ಬಿ. ಜೋಶಿ ಮುಂಬೈ ಇವರು ನಮ್ಮ ಸೋಲ ಏಜಂಟರು.

ಸವಿಸ್ತರ ಸಂಗತಿಯ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ;
ಜಿಲ್ಹಾ ಸಾತಾರಾ.

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳ ಮೇಲೆ, ರಾಮಬಾಣದಂತಾಗಿರುವದು. ಕಳೆದ ೩೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತದೆ. ಲಕ್ಷಗಟ್ಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳ ಮೇಲೆ ಇದು ಗುಣಕಾರಿಯೆಂದು ಅರಿಯದವರು ಅದೇ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ,ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta.

Rge No B. 1270 Monday, August 17th, 1925

ವರ್ಷ ೯.

ಕಾನಡಾವೃತ್ತ.

ಸಂಚಿಕೆ ೪೪.

THE KANARA NEWS.

ಪತ್ರದ ವರ್ಗಣಿ.
ಕುಮಟೆಯಲ್ಲಿ ಆಗಾವು
ರೂಪಾಯಿ 2-4-0.
ಮನೆಯಸಾರ್ದರಿಯಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0
ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಸ್ಮಾಲ ಪೈಕಾ ಟೈಪಿನ (೧೫ ಎಮ್ ಅಗಲ) ೮ ಸಾಲುಗಳವರೆಗೆ ರೂ. 1-0-
ಆ ನಂತ್ರ ಪ್ರತಿಸಾಲಿಗೆ 0-2-0.
ಜಾ. ಹೆಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಪ್ರಮಾಣದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

(ಕುಮಟಾ—ಕಾನಡಾವೃತ್ತ, ಸೋಮವಾರ, ತಾರೀಖು ೧೭ ಮಾಹೆ ಅಗೋಸ್ತ ಸನ್ ೧೯೨೫ ನೇ ಇಸವಿ.)

हिंदुस्थानांतील रहिवाशांस ज्याप्रमाणें हिंदुस्थानची हवा त्याप्रमाणेंच हें औषध हिंदुस्थानांतील लोकांस ज्यास्त फायदेशीर आहे.

द्राक्षासव- दीड रतलची किंमत २ रुपये;

रामबाण औषधें
सर्दि घालविणारें,
भूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें.
पिण्यास रुचिकर.

क्याटलाग मागवा,

झंडु फार्मास्युटिकल वर्क्स लिमिटेड,
मुंबई नं. १३

ಲೋಕಪ್ರಸಿದ್ಧವಾದದ್ದು! ಅನುಭವಸಿದ್ಧವಾದದ್ದು!!
ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಕಾಮೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.
ಟ್ರೇಡ ಮಾರ್ಕ] ರಿಜಿಸ್ಟರ ಆದದ್ದು [ನೋಡಿ ಕೊಳ್ಳಿರಿ

ಅಗಸ್ತ್ಯ ಮನ್ಮಥ ಚಿಂತಾಮಣಿ ಲೇಹ.

ಆಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು. ಮೋಹವಿಕಾರವಿಷ್ಟರಿಗೂ, ನಿದ್ರೆಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿ ಅಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ

1 ಸೇರು ನಾಲ್ವತ್ತೆಂಟು ದಿವಸಕ್ಕೆ ಸೇವಿಸಬಹುದು.
1 ಸೇರು ಡಬ್ಬಿ ಒಂದಕ್ಕೆ 3—0—0
½ ಸೇರು ಡಬ್ಬಿ ಒಂದಕ್ಕೆ 1—9—0
ವ್ಹಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿ ತರಿಸಿಕೊಳ್ಳಿರಿ.

ಪತ್ತೆ-**ದೇವಣ್ಣ ನಾರಾಯಣ ಶೇಟ್,**
ಸರಾಫ್, ಗೋಳಿಕಟ್ಟಾ, ಮಂಗಳೂರು, (ದ. ಕ.)

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, B. A.
Jewellers, KUMTA.

ಆರ್. ಎಸ್. ಕಾಸರಗೋಡ,
ರತ್ನಾಭರಣ ವ್ಯಾಪಾರಿ, ಕುಮಟಾ.

ಆಯುರ್ವೇದಿಕ) ಧಾತುಪೌಷ್ಟಿಕ, ಶಕ್ತಿವರ್ಧಕ, ರಕ್ತಶೋಧಕ (ಮಲಬಾರಿನ

ಮದನಕಾಮೇಶ್ವರೀಲೇಹ.

ಆಬಾಲ ವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಇದರಲ್ಲಿ ಕೇಸರ ಕಸ್ತೂರಿ ಪ್ರವಾಲ ಶಿಲಾಜಿತು ಅಭ್ರಕಭಸ್ಮಾದಿ ಅನೇಕ ವನೌಷಧಿಯುಕ್ತ ಇರುವದರಿಂದ ಧಾತು ತಳ್ಳಗಾಗೋಣ ನಪುಂಸಕತ್ವ ಪ್ರಮೇಹ ಮುಷ್ಟಿಮೈಥುನಜನ್ಯ ಧಾತುಕ್ಷೀಣತೆ ಸ್ವಪ್ನಾವಸ್ಥೆ ಉರಿಮೂತ್ರ ಸಂಧಿವಾತ ಸ್ತ್ರೀಯರ ಗರ್ಭಾಶಯದರೋಗ ಪದರ (ಗರ್ಮಿ) ಇ. ನಿರ್ಮೂಲಿಸಿ ತುಂಬಾ ರಕ್ತ-ಧಾತು ಸಂಚಯಮಾಡಿ ಯಥೇಚ್ಛ ಸಂಸಾರಸುಖವನ್ನು ಲಭಿಸುವ ಸಿದ್ಧೌಷಧ. ೧ ತಿಂಗಳು ಸಾಲುವ ಡಬ್ಬಿಗೆ ೩॥ರೂ. ೬. ಡ. ॥ರೂ. ಒಟ್ಟಿಗೆ ೩ ಡ. ೩॥ರೂ. ಟ.ಖ. ಪ್ರತ್ಯೇಕ. ಅನುಪಾನ ಔಷಧದ ಸಂಗಡ.

ಅತ್ಯುತ್ತಮ) ಜಂತುವಿನ ಔಷಧ(ಪರಮಸುಲಭ.

ಪ್ರತಿ ೧ಕ್ಕೆ ೧॥ಆಣೆ ೫ಂಕ್ಕೆ ರೂ ೫॥. ೧೦೦ಕ್ಕೆ ರೂ.೫. ಅನುಭವ ಪತ್ರಿಕೆ [illegible]. ಇವಲ್ಲದೆ ಎಲ್ಲಾ ರೋಗಗಳಮೇಲೆ ಅನುಭವ ಸಿದ್ಧೌಷಧಗಳು ಸಿಗುವವು. ವಿ. ಪೀ. ಚಾರ್ಜ [illegible] ಪತ್ರಬರೆದಲ್ಲಿ ನಮ್ಮ ಆಯುರ್ವೇದೌಷಧ ಗುಣರತ್ನಮಾಲಾ ಎಂಬ ಸಂಪೂರ್ಣ ಮಾಹಿತಿಯ ಪುಸ್ತಕವನ್ನು ಪುಕ್ಕಟೆಯಾಗಿ ಕಳಿಸುವೆವು.

ಮೇನೇಜರ ಆಯುರ್ವೇದಚಿಕಿತ್ಸಾಮಂದಿರ, ತಾ. ಕಾರವಾರ, ಪೋ. ಚೆಂಡಿಯೆ.

ಮುಂಬೈ ಏಜಂಟ:— R. C. KAMAT, Teashop Store Lane, Fort, BOMBAY

ಹುಟ್ಟಿದ ಪಕ್ಕಾವೇಳೆ ತಿಳಿಸಿರಿ.) **ಸುಖಸಾಧನಕ್ಕೆ ಯೋಗ್ಯ ಉಪಾಯವು.** (ಯಾ ಜನ್ಮಟಿಪ್ಪಣಿ ಕಳಿಸಿರಿ

☞ **ಮಲಬಾರಿ) ಕೇರಳ ಜ್ಯೋತಿಷ. (ಭವಿಷ್ಯ.**

ನಿಮ್ಮ ಜನ್ಮಟಿಪ್ಪಣಿ ಕಳಿಸಿ. ೧ವರ್ಷದ ಫಲಾಫಲ ಟ.೧॥ರೂ. [illegible] ಸದರೀ ಟಿಪ್ಪಣಿಯ ಸಹಾಯದಿಂದ ಆಯುಷ್ಕಾಲಕ್ಕೆ ಒದಗುವ ಇಷ್ಟಾನಿಷ್ಟ ಫಲಗಳನ್ನೂ ಅನಿಷ್ಟಫಲ ನಿವಾರಣಾರ್ಥ ಶಕ್ತಧಾರ್ಮಿಕ ಮನೋಬಲಗಳಿಂದ ಸಂಕಟಗಳನ್ನು ಪರಿಹರಿಸುವ ಉಪಾಯಗಳನ್ನೂ ತಿಳಕೊಂಡು ಮುಂದಿನ ಭವಿಷ್ಯಕಾಲವು ಸುಖಕಾರಕ ಮತ್ತು ಲಾಭದಾಯಕವಾಗುವಂತೆ ಸದರೀ ಫಲವನ್ನು ಮಲಬಾರದಲ್ಲಿ ಪ್ರಸಿದ್ಧವಾದ "ಜ್ಯೋತಿಷ ಕೇರಳ" ಇ. ಬಹುಮಾನ್ಯ ಗ್ರಂಥಗಳ ಪ್ರಕಾರ ಕೃತಿಯಿಂದ ಬರೆದು ಕಳಿಸುವೆ. [illegible] ಬೇರೆ.

ಮೇನೇಜರ, "ಜ್ಯೋತಿಷ ಶಾಸ್ತ್ರ-ಭುವನ," ಚೆಂಡಿಯೆ, ತಾ. ಕಾರವಾರ

ನಮ್ಮ ಪ್ರೆಸ್ಸಿನಲ್ಲಿ

ಗೇಣಿ ಬಾಕಿ ದಾವೆಯ ಫಾರ್ಮುಗಳು ತಯಾರಿವೆ.

ವಕಾಲತ, ಅನುಲಜಾರಿ ಮೊದಲಾದ ಕೋರ್ಟ ವ್ಯವಹರಣೆಯ ಹಾಗೂ ಕಸ್ಟಮ್ ಖಾತೆಯ ಫಾರ್ಮುಗಳು ಅಗ್ಗವಾಗಿ ಸಿಗುತ್ತವೆ.

ಮೆನೇಜರ,

ಸ್ಟಾರ ಆಫ್ ಕೆನರಾ ಪ್ರೆಸ್, ಕುಮಟಾ

ಉತ್ತಮ, ಸುವಾಸಿಕ, ಶುದ್ಧ, ಮಿಶ್ರಣವಿಲ್ಲದ,

ಜನರಿಗೆ ಅವಶ್ಯ ಬೇಕಾಗಿರುವ

ಕಾಬೂಲೀ ಹಿಂಗು.

೪೦ ತೊಲೆಯುಳ್ಳ	ಡಬ್ಬಿ ೧ಕ್ಕೆ	೫—೦—೦
೨೦ ತೊಲೆ	ಡಬ್ಬಿ ೧ಕ್ಕೆ	೨—೧೨—೦
೧೦ ತೊಲೆ	ಡಬ್ಬಿ ೧ಕ್ಕೆ	೧—೮—೦
೫ ತೊಲೆ	ಡಬ್ಬಿ ೧ಕ್ಕೆ	೧—೦—

೧ ತೊಲೆಯ ಡಬ್ಬಿಗಳ ಡಜನ ೧ಕ್ಕೆ ೨—೦—೦.

ನಮ್ಮ ಹಿಂಗು ಪೋಸ್ಟಾ ಬಂಪಲ್ಪಿವರತ ಕೊಳ್ಳುವವರಿಗೆ ಟಪಾಲು ಖರ್ಚು ಪ್ರತ್ಯೇಕ.

ಕೆರೇಕರ ಕಾಬೂಲಿ ಹಿಂಗಿನ ದುಕಾನ
ಜವಳಿಬಾಜಾರ, ಕುಮಟಾ

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧. ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೬೦, ೭೫, ೧೦೦
೨. ಕಾಲು ಪೆಟ್ಟಿಗೆ ಕಿಂ. ೬೫, ೭೫, ೧೨೦, ೧೪೦
೩. ತಬಲೆ ಜೋಡಿ ಕಿಂ. ೧೬, ೧೮, ೨೦, ೨೫.
೪. ಹಾರ್ಮೋನಿಯಮ ಗ್ಯಾಡ (ಮರಾಠಿ) ಕಿಂ. ೧||, ತಬಲೆ ಗ್ಯಾಡ ಕಿಂ. ೧೨ ಆ.

ವಿಶೇಷ ಮಾಹಿತಿಬಗ್ಗೆ ನಮ್ಮ ಮರಾಠಿ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ:- **ಗೋಪಾಳ ಸಖಾರಾಮ** ಮತ್ತು
ಕಂಪನಿ, ವಿಠ್ಠಲವಾಡಿ ಎದುರಿಗೆ,
೨೬೨ ಕಾಳಬಾದೇವಿ, ಮುಂಬಯಿ

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ



ಕಳೆದ ೪-೫ ವರ್ಷಗಳಿಂದ ನಾವು ಶಿವಮೊಗ್ಗಾ-ತೀರ್ಥಹಳ್ಳಿ-ಆಗುಂಬೆ, ಶಿವಮೊಗ್ಗಾ-ಸಾಗರ-ತಾಳಗುಪ್ಪೆ, ಶಿವಮೊಗ್ಗಾ-ಹರಿಹರ-ದುಗ್ಗಾವತಿ, ಶಿವಮೊಗ್ಗಾ-ಕಳೂರಕಟ್ಟೆ, ಸಾಗರ-ಸೊರಬ-ಶಿರಾಳಕೊಪ್ಪ, ಸಾಗರ-ತೀರ್ಥಹಳ್ಳಿ, ಸಾಗರ-ಕಳೂರಕಟ್ಟೆ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ ಸರ್ವೀಸನ್ನು ನಡೆಸುತ್ತಿದ್ದೇವೆ ದಕ್ಷಿಣ ಕನ್ನಡ ಜಿಲ್ಹೆಯ ಕಾರ್ಕಳ, ಉಡುಪಿ, ಕುಂದಾಪುರ, ಮಂಗಳೂರ ಹಾಗು ಮೊದಲಾದ ಈ ಕಡೆಗೆ "ಕಾರ್ಕಳ ಮೋಟರ ಸರ್ವೀಸಿನ" ವಿದ್ಯಮಾನವೂ, ಬಳ್ಳಾರಿ ಜಿಲ್ಹೆಯ ಹರಪನಹಳ್ಳಿಗೆ "ಲಕ್ಷ್ಮೀ ಮೋಟರ ಸರ್ವೀಸಿನ" ವಿದ್ಯಮಾನವೂ ಪ್ರಯಾಣಿಕರ ಎಲ್ಲ ಸೌಕರ್ಯಗಳ ವ್ಯವಸ್ಥೆ ಮಾಡಿರುತ್ತೇವೆ

ಉತ್ತರ ಕನ್ನಡ ಜಿಲ್ಹೆಯ ಪ್ರಯಾಣಿಕರು ಜೋಗ (Gersoppa Falls), ಶಿವಮೊಗ್ಗಾ ಸಾಗರ, ಹರಿಹರ ಮುಂತಾದ ಮೇಲ್ಕಂಡ ಸ್ಥಳಗಳಿಗೆ ಪ್ರಯಾಣ ಬೆಳೆಸಲು ಅನುಕೂಲವಾಗಬೇಕೆಂದು ಶಿವಮೊಗ್ಗಾ, ಸಾಗರ, ಜೋಗ, ಸಿದ್ದಾಪುರ, ಶಿರ್ಶಿ, ಕುಮಟಾ ಈ ಲೈನಿನಲ್ಲಿ ಮೋಟರ ಸರ್ವೀಸ ಪ್ರಾರಂಭ ಮಾಡಿದ್ದೇವೆ

ಕಾಲಕ್ರಮಗಳು.

ಕುಮಟೆಯಿಂದ ಹೊರಡುವದು—	ಬೆಳಿಗ್ಗಿನ ೭ ಘಂಟೆಗೆ.
ಶಿರ್ಶಿ ಸೇರುವದು—	,, ೧೧ ,,
ಶಿರ್ಶಿಯಿಂದ ಬಿಡುವದು ಶಿವಮೊಗ್ಗಾ ಕಡೆಗೆ—	ಮಧ್ಯಾಹ್ನ ೧ ,,
ಸಾಗರಕ್ಕೆ ಸೇರುವದು (ಸಿದ್ದಾಪುರ ಮಾರ್ಗವಾಗಿ)—	ಸಾಯಂಕಾಲ ೬ ,,
ಸಾಗರದಿಂದ ಶಿರ್ಶಿ ಕಡೆಗೆ ಹೊರಡುವದು—	ಬೆಳಿಗ್ಗಿನ ೬ ,,
ಸಿದ್ದಾಪುರದ ಮೇಲಾಗಿ ಶಿರ್ಶಿಗೆ ಸೇರುವದು—	,, ೧೧ ,,
ಶಿರ್ಶಿಯಿಂದ ಕುಮಟೆಗೆ ಹೊರಡುವದು—	ಮಧ್ಯಾಹ್ನ ೨ ,,
ಕುಮಟೆಗೆ ಸೇರುವದು—	ಸಾಯಂಕಾಲ ೫ ,,

N. B. — ಈ ವೇಳಿನ ಲೈನುಗಳ ವಿನಹ ಶಿರಶಿಯಿಂದ ಹುಬ್ಬಳ್ಳಿಗೆ ಪ್ರತ್ಯೇಕ ಒಂದು ಸರ್ವೀಸ ಪ್ರಾರಂಭಿಸುವ ಯೋಚನೆ ಸಹಾ ಇರುತ್ತದೆ. ಸರ್ವರೂ ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

SHIMOGA,
22—11—1924.

M. MANJAPPA.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕಿಟಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು. ೬೦|೭೦ ವರ್ಷದ ಮುದುಕರ ಕಾಮವಿಕಾರವು ಕೂಡ ತರುಣರಂತೆ ಪ್ರವರ್ಧಮಾನವಾಗುವದು. (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಕಸಿಯು ಹೋಗಿ ಪ್ರಾಪ್ತವಾದ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.— ಪರಮಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು. ದಿವಸದಲ್ಲಿ ಮೂರುವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವು ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಜ್ವರ ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ವಿಷಯಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸತೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತು ೧| ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೩—೪—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚ ಹೆಚ್ಚು ಬೀಳುವದಿಲ್ಲ. ಡಜನ ಬಾಟಲಿಗಳ ಕಿಮ್ಮತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧—೪—೦ ೩ ಬಾಟ್ಲಿಗೆ ೩—೦—೦ ಡಜನಿಗೆ ೧೩—೧—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಅಫೀಸು. ಪೋ. ನಿಪ್ಪಾಣಿ, ಜಿ. ಬೆಳಗಾಂವ

ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ.

ಅನುವಾದಕ:—ವ್ಹಿ. ಎ. ಹೊದ್ಕೆ, ಸಿರ್ಸಿ.

೧.

ಸಾಯಂಕಾಲದ ಸಮಯ. ರಾಮಪುರ ರೇಲ್ವೆ ಸ್ಟೇಶನ್ನಿನ ತಾರ ಆಫೀಸಿನಲ್ಲಿ ಕೂತು, ಡಾಕ್ಟರ ದೇಸಾಯಿಯವರು ತರುಣ ತಾರ ಮಾಸ್ತರರನ್ನುದ್ದೇಶಿಸಿ,—"ನೀವು ಕಾಳಜಿ ಮಾಡುವ ಕಾರಣವಿಲ್ಲ. ನನ್ನ ಸಂಗಡ ಯಾರಾದರೂ ಬರಲಿ. ಸ್ವಲ್ಪ ಪುಡಿಯನ್ನೂ ಔಷಧಿಯನ್ನೂ ಕಳಿಸುವೆನು. ಅದನ್ನು ಎರಡು ತಾಸಿಗೊಮ್ಮೆ ಕೊಡಿರಿ. ಹೆದರುವ ಕಾರಣವಿಲ್ಲ," ಅಂದರು

"ನನ್ನ ಮೇಲೆ ತಮ್ಮ ಉಪಕಾರವು ಬಹಳವಾಯಿತು. ನೀವು ಕೊಟ್ಟ ಧೈರ್ಯದಿಂದ ನನಗೆ ಬಹಳೇ ಸಮಾಧಾನವಾಗಿದೆ. ಸ್ವಾಮೀ, ನಮಗೆ ಅವನೊಬ್ಬನೇ ಮಗನೆಂಬದನ್ನು ತಾವು ಬಲ್ಲಿರಿ. ಮತ್ತು ಅದಕ್ಕಾಗಿ ನನ್ನ ಹೆಂಡತಿಗೆ ಬಹಳೇ ಭೀತಿಯಾಗಿದೆ ನಿಜವಾಗಿ ನಾವು ಎಷ್ಟೋ ತಾಸುಗಳನ್ನು ಚಿಂತೆಯಲ್ಲಿಯೇ ಕಳೆದಿರುವೆವು." ಎನ್ನುತ್ತ ತಾರ ಮಾಸ್ತರರು ಡಾಕ್ಟರರಿಗೆ ಅವರ ಮಾಡಿಕೆಯ ಫೀಯಾಗಿರುವ ೫ ರೂಪಾಯಿಗಳನ್ನೂ, ಗಾಡಿಯ ಬಾಡಿಗೆ ಎಂಟು ೮ ಆಣೆಯನ್ನೂ ಕೊಡಹೋದರು

ಡಾಕ್ಟರರು ನೋಡಿ ನಗುತ್ತ—ಅದೇನು? ಛೇ, ಛೇ ಬೇಡ. ಹಾಗೆ ತಿಳಿಯಬೇಡಿರಿ. ದಯಮಾಡಿ ನಿಮ್ಮ ಹಣವನ್ನು ನಿಮ್ಮ ಹತ್ತರವೇ ಇಟ್ಟುಕೊಳ್ಳಿರಿ," ಅಂದರು.

"ಒಳ್ಳೇದು ಸ್ವಾಮೀ, ಉಪಾಯವಿಲ್ಲ - ಆದರೆ - ತಮ್ಮ ಶ್ರಮಕ್ಕೆ ತಕ್ಕ ಫಲವನ್ನು ಕೊಡದಿದ್ದರೆ, ನಾನು ನಿಮಗೆ ಬಹಳೇ ಅನ್ಯಾಯ ಮಾಡಿದಂತಾಗುವದು," ಎಂದ ತಾರ ಮಾಸ್ತರರು ವಾದಿಸಹತ್ತಿದರು.

"ನನಗೆ ಅನ್ಯಾಯ? ಅದ್ಹೇಗೆ? ಸ್ವಲ್ಪ ತಡೆಯಿರಿ. ನಾನು ನಿಮ್ಮ ಹುಡುಗನಿಗೆ ಪೂರ್ಣವಾಗಿ ಗುಣಪಡಿಸುವೆನು. ಆ ಮೇಲೆ ನೀವು ಮುಂದಿನ ಪೌರ್ಣಿಮೆಯ ದಿವಸ ನನಗೆ ಊಟದ ಆಮಂತ್ರಣವನ್ನು ಕೊಡಿರಿ. ಮತ್ತು ನಾನು ಬರುವ ವಚನವನ್ನು ಕೊಡುತ್ತೇನೆ. ಹುಣ್ಣಿವೆಯ ದಿವಸ ಬ್ರಾಹ್ಮಣನಿಗೆ ಕೊಟ್ಟ ಭೋಜನವು ಬಹಳೇ ಪುಣ್ಯದಾಯಕವು. ನಿಜವಾಗಿಯೂ ಹೌದು," ಎನ್ನುತ್ತ ಆ ದಯಾಳು ಡಾಕ್ಟರರು ವಿನೋದಪೂರ್ವಕವಾಗಿ ನಗಹತ್ತಿದರು. ಬಡ ಜನರಿಂದ ಎಂದೂ ಫೀ ತೆಗೆದುಕೊಳ್ಳಬಾರದೆಂಬ ಅವರ ನೇಮವಿತ್ತು.

ಮಾತು ಮುಗಿದ ಕೂಡಲೆ, ಹೊರಗೆ ಪ್ಲ್ಯಾಟಫೊರ್ಮಿನ ಮೇಲೆ ಅನೇಕ ಜನರು ಮಾಡಿದ "ವಂದೇ ಮಾತರಂ"ದ ಜಯಘೋಷವು ಕೇಳಿಸಿತು. ಡಾಕ್ಟರರು ಆಶ್ಚರ್ಯಚಕಿತರಾಗಿ "ಅದೇನು?" ಅಂದರು

"ಬೆಳಗಾಂವಿಯಿಂದ ಸ್ವದೇಶೀ ಪ್ರಚಾರಕರೊಬ್ಬರು ಬಂದಿದ್ದರು. ಜನರು ಅವರನ್ನು ಕಳುಹಿಸಲು ಬಂದಿರುವರಾಗಿ ಕಾಣುತ್ತದೆ," ಎಂದ ತಾರ ಮಾಸ್ತರರು ತಿಳಿಸಿದರು.

ಇಬ್ಬರೂ ಪ್ಲ್ಯಾಟಫೊರ್ಮಿಗೆ ಬಂದರು. ಪ್ರಚಾರಕರು ಬೇರೆ ಯಾರೂ ಇರದೆ, "ವೀರ ಕರ್ನಾಟಕ"ದ ಸುಪ್ರಸಿದ್ಧ ಸಂಪಾದಕರಾದ ಡಾ| ಭ| ದಳವಿಯವರಾಗಿದ್ದರು.

ಸರಕಾರೀ ನೌಕರರಾದರೂ, ಡಾಕ್ಟರರು ನಿಜವಾದ ಸ್ವದೇಶೀ ಭಕ್ತರಾಗಿದ್ದರು. ರಾತ್ರಿಯಲ್ಲಿ ಅವರು ಪದೇ ಪದೇ ಊರೊಳಗಿನ ಸ್ವದೇಶೀ ಅಂಗಡಿಗಳಿಗೆ ಹೋಗಿ, ನಿಷಿದ್ಧವಾದ ಅರ್ಥಾತ್ ಸ್ವದೇಶೀ ಸರಕುಗಳ ಮಾಲನ್ನೇ ಮನೆಗೆ ತರುತ್ತಾರೆಂಬ ಸುದ್ದಿಯು ಹಬ್ಬಿತ್ತು. ಡಾ| ಭ| ದಳವಿಯವರಿಗೆ ಭೆಟ್ಟಿಯಾಗಿ ಅವರನ್ನು ಮಾತಾಡಿಸದೆ ಇರುವದು ಅವರಿಂದಾಗಲಿಲ್ಲ. ಕೆಲ ಹೊತ್ತು ಸಂಭಾಷಣ ಮಾಡಿದ ಮೇಲೆ, ಗಾಡಿಯು ಸ್ಟೇಶನ್ನದ ಒಳಗೆ ಬಂದಿತು.

ವಕೀಲರು, ಮುಂದಾಳುಗಳು, ವಿದ್ಯಾರ್ಥಿಗಳು ಮೊದಲಾದವರನ್ನೊಳಗೊಂಡು ಸ್ವದೇಶೀ ಪ್ರಚಾರಕರು ಗಾಡಿಯ ಕಡೆಗೆ ಸಾಗಿದರು. ಅವರ ಹತ್ತರ ೩ನೇ ವರ್ಗದ ತಿಕೀಟು ಇತ್ತು. ಒಂದು ಡಬ್ಬಿಯ ಬಾಗಿಲನ್ನು ಅವರು ತೆಗೆದ ಕೂಡಲೆ, ಒಳಗಿದ್ದಂಥ ಯುರೋಪಿಯನ್ ಪ್ರಯಾಣಿಕನೊಬ್ಬನು, "ಎಲೋ, ಇದು ಕಪ್ಪು ಜನರಿಗಾಗಿ ಇರುವದಿಲ್ಲ," ಎಂದ ಗದ್ದರಿಸಿದನು.

"ನನ್ನ ರೂಪಾಯಿಗಳೂ ಸಹ ಕಪ್ಪಾಗಿದ್ದವೆಂದು ನೀವು ತಿಳಿಯುವದಿಲ್ಲ. ಅಲ್ಲವೇ? ನಾನಾದರೂ ೩ನೇ ವರ್ಗದ ತಿಕೀಟನ್ನೇ ಪಡೆದಿರುತ್ತೇನೆ," ಎನ್ನುತ್ತ ಸ್ವದೇಶೀ ಪ್ರಚಾರಕರು ಒಳನುಗ್ಗಿದರು.

ಆದರೆ ಆ ಬಿಳೇ ಗೃಹಸ್ಥನಿಗೆ ಸರ್ವಥಾ ಸಹನವಾಗಲಿಲ್ಲ. ಖಾದಿಯ ಉಡುಪನ್ನು ಧರಿಸಿಕೊಂಡಿರುವ ಆ ಮೂರ್ತಿಮಂತ ರಾಜದ್ರೋಹವನ್ನು ಅವನು ಜೋರಿನಿಂದ ನೂಕಿದನು. "ವೀರ ಕರ್ನಾಟಕ"ದ ವೀರ ಸಂಪಾದಕರಾದ ಡಾ| ಭ| ದಳವಿಯವರು ಬುದ್ಧಿಶಕ್ತಿಯಿಂದ ವೀರರಾಗಿದ್ದರೂ, ದೇಹಶಕ್ತಿಯಿಂದ ವೀರರಿದ್ದಿಲ್ಲ. ಅವರು ಮುಂಬಯಿಯ ವಿಶ್ವವಿದ್ಯಾಲಯಕ್ಕೆ ತಮ್ಮ ಆರೋಗ್ಯದ

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಅಂಥದ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ.

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುತಲೇ ಮುಸುಕಿದ ಬೇನೆಯು ತಕ್ಷಣಗಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಅದನ್ನು ಕುಡಿಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ, ಅವು ದೊಡ್ಡವಾಗಿ ಬೆಳೆದು ಸಮೃದ್ಧವಾಗುವವು. ಅದರ ಸುಗಂಧವಾದರೋ ಮಧುರವೂ ಮನೋಹರವೂ ಆಗಿರುವದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಒಂದು ಬಾರಿ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಅನೇಕ ಸಾವಿರಾರು ಗೃಹಸ್ಥರು ಉಪಯೋಗಿಸಿದ ಮಾನಪತ್ರಗಳೂ ದೊರಕಿವೆ.

ಕಿಮ್ಮತು:— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10-0 ವ್ಹಿ. ಪಿ. ಖರ್ಚು 0-14-0.

ಅತಿ ಮನೋಹರವಾದ ಸುರಭಿಯು!

ಒಟ್ಟೋ-ದಿಲ್ ಬಹಾರ್ !! ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಚನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಅಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ತಟಕುಗಳನ್ನು ಚಿಮುಕಿಸಿದರೆ ನಿಮ್ಮ ಸುತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಕಡೆಯಿಂದ ಸೆಳೆಕೊಳ್ಳುವದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8-0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0-12-0.

Addrese:- **The Anglo Indian Drug & Chemical Co,**
16, Market, **BOMBAY 2.**

ಹಾಗೂ ಸ್ತ್ರೀಯು ಆಹುತಿಯನ್ನು ಕೊಟ್ಟು, ಅದಕ್ಕೆ ಪ್ರತಿಫಲವಾಗಿ ಕೆಲವು ಕಾಗದದ ತುಂಡುಗಳನ್ನು (Certificates) ಪಡೆದಿದ್ದರು. ಇದಲ್ಲದೆ ಮೊಲ್ಪಟ್ಟ ಕ್ರಯವನ್ನು ಕೊಟ್ಟು ಅವರು ಬೇರೊಂದು ಕಡೆಯಿಂದ ಬಂಗಾರದ ಚೌಕಟ್ಟಿನ ಉಪನಯನ (Spectacles) ಒಂದನ್ನು ಕೊಂಡಿದ್ದರು. ಅವರು ಧೊಪ್ಪನೆ ಪ್ಲ್ಯಾಟ್‌ಫೋರ್ಮಿನ ಮೇಲೆ ಬಿದ್ದರು. ಮತ್ತು ಅವರ ಉಪನಯನದ ಹರಳುಗಳು ಒಡೆದು ಚೂರಾದವು.

ಕೂಡಲೆ ದೇ। ಬ। ದಳವಿಯವರನ್ನು ಕಳುಹಿಸಲು ಬಂದ ಜನಸಮುದಾಯವು "ವಂದೇ ಮಾತರಂ" ಎಂಬ ದೊಡ್ಡ ಜಯಘೋಷವನ್ನು ಮಾಡಿತು. ನಾಲ್ಕೈದು ಜನರು ಆ ಅಪಘಾತದಿಂದ ಆ ಯುರೋಪಿಯನ್ನನನ್ನು ಗಾಡಿಯೊಳಗಿಂದ ಹೊರಗೆ ಎಳೆದು ಪ್ಲ್ಯಾಟ್‌ಫೋರ್ಮಿನ ಮೇಲೆ ಕೆಡವಿ ಅವನನ್ನು ನಿರ್ದಯತನದಿಂದ ಒದೆಯಹತ್ತಿದರು. ಗದ್ದಲವೇಳುವದನ್ನು ನೋಡಿ ಆ ಯುರೋಪಿಯನ್ ಗಾರ್ಡನು ಜನಸಮೂಹವನ್ನು ಪ್ರವೇಶಿಸಿದನು. ಪರಿಸ್ಥಿತಿಯು ತಿಳಿದ ಕೂಡಲೆ ಅವನು ಆದಷ್ಟು ಬೇಗ ತಿರುಗಿ ತನ್ನ ಡಬ್ಬಿಗೆ ಓಡಿ ಹೋಗಿ ಗಾಡಿಯನ್ನು ಬಿಡು ಎಂತ ಎಂಜಿನ್ ಡ್ರ್ಯಾಯ್ವರನಿಗೆ ಸೂಚಿಸುವ ಹಸುರು ದೀಪವನ್ನು ತೋರಿಸಿದನು.

ಹತ್ತರ ನಿಂತವರ್ ಆ ಯುರೋಪಿಯನ್ನನನ್ನು ಅತಿ ಪ್ರಯಾಸದಿಂದ ಬಿಡಿಸಿ ಅವನನ್ನು ಆ ದುಃಸ್ಥಿತಿಯೊಳಗಿಂದ ಪಾರುಮಾಡಿದರು. ಅಷ್ಟರಲ್ಲಿ ಡಾಕ್ಟರ್ ದೇಸಾಯಿಯವರು ಅಲ್ಲಿಗೆ ಬಂದಿದ್ದರು.

ಮೈಯೊಳಗಿಂದ ರಕ್ತವು ಒಸರುತ್ತಿರುವ ಸಾಹೇಬನ ಸ್ಥಿತಿಯನ್ನು ಕಂಡು ಅವನನ್ನು ಸರಕಾರಿ ದವಾಖಾನೆಗೆ ಕರೆದೊಯ್ದು ಗಾಯವನ್ನು ತೊಳೆದು ಮುಲಾಂಪಟ್ಟಿ ಹಚ್ಚುವ ಇಚ್ಛೆಯನ್ನು ಪ್ರಕಟಿಸಲು, ಸಾಹೇಬರು ಅದಕ್ಕೆ ಕೂಡಲೆ ಒಪ್ಪಿದರು.

ಅಷ್ಟರಲ್ಲಿ ದೇ। ಭ। ದಳವಿಯವರು ಎದ್ದು ತಾನೇ ವಗನದ ಡಬ್ಬಿಯಲ್ಲಿ ಹೋಗಿ ಸಮಾಧಾನದಿಂದ ಕುಳಿತಿದ್ದರು. ಹಲ್ಲೆ ಸಾಹಸವೇನೂ ಇಲ್ಲದ ಅವರು ಮರುದಿವಸ ಬೆಳಗಾಂವಿಗೆ ಮುಟ್ಟಿ ಈ ದೇಶದೊಳಗಿನ ಯುರೋಪಿಯನ್‌ರ ಉದ್ಧಟತನವನ್ನು ಕುರಿತು ತಮ್ಮ ವೃತ್ತಪತ್ರದಲ್ಲಿ ಪ್ರಖರವಾದ ಲೇಖವೊಂದನ್ನು ಪ್ರಕಟಿಸಿದರು

(ಮುಂದೆ ಸಾಗುವದು.)

ರೊಕ್ಕಸ್ತರಿಗೆ ಒಳ್ಳೇ ಸಂಧಿ!

ಶಿರ್ಸಿ ಗ್ರಾಮ, ಶಿರ್ಸಿ ವ ಸಿದ್ದಾಪುರ ತಾಲೂಕಿನವುಗಳಲ್ಲಿ ಭರ್ತಿ ಬಾಜಾರದಲ್ಲಿರುವ ಮನೆ ವ ದಾಸ ಮುಡಿ ವ ಬಾಗಾಯ್ತ ಜಮೀನ ಆಸ್ತಿ ಅಜಮಾಸ ೧೫ ೨೦ ಸಾವಿರ ಬೆಲೆ ಬಾಳುವಂಥಾದ್ದು ಗಿರವಿ ಇಟ್ಟುಕೊಂಡು ರೂಪಾಯಿ ಐದು ಸಾವಿರ ಕೊಡುವವರು ಬೇಕು. ಸಿದ್ದಿ ವೆಗ್ಗೆರೆ ವಿಷಯದಲ್ಲಿ ಮಾತನಾಡಬೇಕಾದವರು ಈ ಕೆಳಗಿನ ವಿಳಾಸಕ್ಕೆ ಪತ್ರ ಬರೆದು ಕೇಳಿಕೊಳ್ಳಬಹುದು. ಪತ್ರವ್ಯವಹಾರ ಮಾಡುವ ಪತ್ತೆ:—

"ಕ್ಷ" c/o "Kanara News,"
KUMTA

ದಿ ಎಡ್‌ವಾನ್ಸ ಮೋಟರ
ಟ್ರೇನಿಂಗ ಕ್ಲಾಸ
ಧಾರವಾಡ ಮತ್ತು ಕುಮಟಾ.

ಈ ನಮ್ಮ ಟ್ರೇನಿಂಗ ಕ್ಲಾಸಿನಲ್ಲಿ ಡ್ರ್ಯಾಯ್ವಿಂಗ ಮಾಡಲಿಕ್ಕೂ, ರಿಪೇರಿ ಮಾಡಲಿಕ್ಕೂ ಕಲಿಸಿ ಮೂರು ತಿಂಗಳಲ್ಲಿ ಲೈಸನ್ಸ ಸಹ ತೆಗಿಸಿ ಕೊಡಿಸಲಾಗುತ್ತದೆ. ಬೇಕಾದವರು ಇದರ ಫಾಯದೆ ಪಡಕೊಳ್ಳಬಹುದು. ವಿಶೇಷ ಮಾಹಿತಿ ಸಮಕ್ಷ ಯಾ ಪತ್ರದ್ವಾರಾ.

ಪತ್ತೆ:—

ಸರದಾರ ಹೊಟೆಲ,
ಮೋರಿ ತಲಾವ,
ಧಾರವಾಡ.

ಅನಂತರಾವ ಮಂಗೇಶರಾವ
ಶಿಶಿಕ್ಕಲಿ, ಮೋಟರ ಏಜಂಟ್ಸ
ಆಫೀಸ—ಕುಮಟಾ.

ಹೈನು.

ಹಾಲು ಮಜ್ಜಿಗೆ, ಮೊಸರು ಮೊದಲಾದವುಗಳಿಂದುಂಟಾಗುವ ಲಾಭಗಳು.

ಮುಂಬಯಿಯ 'ಆರೋಗ್ಯವರ್ಧಕ ಮಂಡಳಿ'ಯಲ್ಲಿ ಮರಾಠಿ ವೈದ್ಯಕ ವರ್ಗದ ಶ್ರೀ। ಅನಂತ ವಿನಾಯಕ ಗುರ್ಜರರವರು 'ಮಜ್ಜಿಗೆ' ಈ ವಿಷಯದ ಮೇಲೆ ವಿಚಾರಪರಿಪ್ಲುತ ಭಾಷಣವನ್ನಿತ್ತರು. ಈ ಭಾಷಣದಲ್ಲಿ ಹಾಲು, ಮೊಸರು ಮುಂತಾದ ಸಾಮಾನ್ಯ ಹೈನಿನ ಚರ್ಚೆಯಿದೆ. ಮಹತ್ವದ ಭಾಷಣವಿದ್ದುದರಿಂದ, ಅದರ ಮುಖ್ಯಾಂಶಗಳು ಕೊಡಲ್ಪಟ್ಟಿವೆ.

ಮೊಟ್ಟಮೊದಲು, ಶ್ರೀ। ಗುರ್ಜರರವರು ಒಂದು ಸುಭಾಷಿತ ವಚನವನ್ನು ಹೇಳಿದರು.

ಘೃತಂ ನ ಗೃಹ್ಯತೇ ಕರ್ಣೇ।
ದಧಿ ಸ್ಪೃಶ್ಯಂ ನ ಸ್ಪೃಶ್ಯತೇ॥
ದುಗ್ಧಂ ತರ್ಕೇ ಕಿಂ ಮಾತಾರ್ಥ।
ತಕ್ರಂ ಶಕ್ರಸ್ಯ ದುರ್ಲಭಂ॥

"ತುಪ್ಪದ ಮಾತು ಕೇಳಬೇಕೆನಿಸಿತ್ತು, ಮೊಸರು ಸ್ವರ್ಗದಲ್ಲಿಯೂ ಕಾಣಸಿಗದಿತ್ತು, ಹೀಗಿದ್ದಾಗ ಹಾಲಿನ ಸ್ವರೂಪವೆಲ್ಲಿ? ಮಜ್ಜಿಗೆಯಂತೂ ಇಂದ್ರನಿಗೂ ದುರ್ಲಭವಾದದ್ದು."

ಪ್ರಾಚೀನ ಕಾಲದಲ್ಲಿ ಭಾರತದೇಶದ ಪ್ರಸಿದ್ಧಿಯು ಗೋಧನದಿಂದಲೇ ಎನಿಸಲ್ಪಡುತ್ತಿತ್ತೆಂದು 'ವಾಗ್ಭಟ' ಇತ್ಯಾದಿ ಗ್ರಂಥಗಳ ಮೇಲಿಂದ ಹೇಳಿ, ಆಕಳು ಕುರಿ ಇತ್ಯಾದಿಗಳ ಹಾಲಿನ ಗುಣಧರ್ಮಗಳನ್ನು ಅವರು ವಿವರಿಸಿದರು.

ಆಕಳು-ಎಮ್ಮೆ ಹೈನಿನ ಗುಣಧರ್ಮಗಳು

ಆಕಳ ಹಾಲಿನ ಸೇವನದಿಂದ ಆಯುಷ್ಯವು ಹೆಚ್ಚುತ್ತದೆ; ಬುದ್ಧಿಬಲವು ವೃದ್ಧಿಯಾಗುತ್ತದೆ, ದೇಹಸಾಮರ್ಥ್ಯವೂ, ಕಾಂತಿಯೂ ಹೆಚ್ಚುತ್ತವೆ, ರಕ್ತಪಿತ್ತ, ಕೆಮ್ಮು, ಜೀರ್ಣಜ್ವರ, ವಾತಪಿತ್ತ, ಶ್ವಾಸ ಮುಂತಾದ ರೋಗಗಳು ನಾಶವಾಗುತ್ತವೆ. ಈ ಹಾಲು ಮಧುರವೂ, ಸ್ನಿಗ್ಧವೂ, ಶೀತವೂ ಇರುತ್ತದೆ.

ಆಕಳ ಮೊಸರಿನಿಂದ ಪಚನಶಕ್ತಿಯು ಹೆಚ್ಚುತ್ತದೆ. ವಾತವು ನಷ್ಟವಾಗುತ್ತದೆ; ಮಜ್ಜಿಗೆಯ ಸೇವನದಿಂದ ಹಸಿವು ಹೆಚ್ಚಾಗುತ್ತದೆ; ಉದರರೋಗ, ಮೂಲವ್ಯಾಧಿಗಳು ನಿರ್ಮೂಲವಾಗುತ್ತವೆ.

ಎಮ್ಮೆಯ ಹಾಲು ವೀರ್ಯವರ್ಧಕ, ಬಲಪ್ರದ, ಶ್ರಮನಿವಾರಕವಿದ್ದು, ಅತಿ ನಿದ್ರಾಕಾರಕವಿದೆ; ವಾತಕಾರಕವಿದೆ. ಮೊಸರಿನಿಂದ ಕಫವಾಗುತ್ತದೆ. ಆದರೆ, ಮೊಸರು ವೀರ್ಯವರ್ಧಕ ಹಾಗು ವಾತನಾಶಕವಿದೆ. ಮಜ್ಜಿಗೆಯಿಂದ ಮೂಲವ್ಯಾಧಿ, ಸಂಗ್ರಹಣಿ, ಅತಿಸಾರ ನಾಶವಾಗುತ್ತದೆ. ಕಫಕಾರಕ ದೋಷಯುಕ್ತವಿದೆ.

ಆಡು-ಕುರಿಗಳ ಹೈನು

ಆಡ, ಕುರಿ, ಕಾಡ ವನಸ್ಪತಿಗಳನ್ನು ತಿಂದು ಅಡವಿಗಳಲ್ಲಿ ಜೀವಿಸುವದರಿಂದ ಅವರ ಹಾಲು ಮಧುರವೂ, ಪಚನಕ್ಕೆ ಅನುಕೂಲವೂ, ಶೀತಲವೂ ಇದೆ; ಜಠರಾಗ್ನಿದೀಪನಕ್ಕೆ ಅನುಕೂಲವಿದೆ, ಆದರೆ, ಮಲಾವರೋಧಕವು. ರಕ್ತಪಿತ್ತ, ಜ್ವರ, ಕೆಮ್ಮು ಇತ್ಯಾದಿ ರೋಗನಿವಾರಕವಿದೆ. ಮೊಸರು ಉಷ್ಣವಿದೆ. ಆದರೆ, ಯಾವಾಗಲೂ ಪಥ್ಯಕಾರಕವು. ಮಜ್ಜಿಗೆಯು ಗುಲ್ಮ, ಪಾಂಡುರೋಗ, ಶೂಲ, ಸ ಣಿ, ಮೂಲವ್ಯಾಧಿ ಮುಂತಾದ ರೋಗಗಳ ದಿವ್ಯೌಷಧಿ. ಮಹಾತ್ಮರಿಗೆ ಮೂಲವ್ಯಾಧಿಯು ಇದ್ದುದರಿಂದ, ವೈದ್ಯರು ಆಡಿನ ಹಾಲು ಕೊ ಟ್ಟಿದಂದಿನಿಂದ ಅದನ್ನೇ ಮಹಾತ್ಮರು ಸೇವಿಸು ವರು.

ಕುರಿಯ ಹಾಲು ಕೂದಲುಗಳಿಗೆ ಹಿತಕಾರ ಹೃದಯವಿಕಾರಗಳಾಗುತ್ತವೆ. ಮೊಸರು ಕ ಗೆ ಹಿತಪ್ರದವು. ಮಜ್ಜಿಗೆಯು ಅಪಥ್ಯಕಾ

ಬಳಿಕ, ವೈದ್ಯ ಗುರ್ಜರರವರು ಆನೆ, ಕುದುರೆ, ಕತ್ತೆಗಳ ಹಾಲುಗಳ ಗುಣಧರ್ಮ ವಿವರಿಸಿ, ಸ್ತ್ರೀಯರ ಹಾಲಿನ ಗುಣಧರ್ಮ ಹೇಳಿದರು.

ಸ್ತ್ರೀಯರ ಹಾಲಿನ ಗುಣಧರ್ಮಗಳು

ಸ್ತ್ರೀಯರ ಹಾಲಿನಿಂದ ಸ್ಥೈರ್ಯವೂ, ಆಯುಷ್ಯವೂ ಪ್ರಾಪ್ತವಾಗುತ್ತವೆ. ಹಾಲು ರುಚಿ ಪಾಚಕವಿದೆ. ರಕ್ತಪಿತ್ತ, ಶರೀರದೊಳಗಿನ ಮೂರ್ಛೆ, ಭ್ರಮೆ, ಪ್ರಲಾಪ (ಬಡಬಡಿಸ ನೇತ್ರ ಶೂಲ, ನೇತ್ರರೋಗ, ದೋಷಜ್ವ ವಾರ, ಶೂಲ, ವಾಂತಿ ರೋಗ, ಸಂಗ್ರಹಣಿ, ಗ್ನಿ, ಮೂಲವ್ಯಾಧಿ ಭಗಂದರ, ಮುಕ್ತಾವ ತಾದ ರೋಗಗಳಿದ್ದಾಗ ಇದನ್ನು ಸೇ ಪಥ್ಯಕರವು. ಮೂಗಿನೊಳಗಿಂದ ರಕ್ತ ಸೋ ರೆ, ಈ ಹಾಲನ್ನು ಸೇದಬೇಕು, ಅಂದರೆ, ರಕ್ತ ವಮ ನಿಲ್ಲುತ್ತದೆ. ಜ್ವರ ಬರುವ ಮೊದಲು ನಲ್ಲಿ ರುದ್ರಾಕ್ಷವನ್ನು ತೇದಿಕೊಟ್ಟರೆ ಜ್ವರ ಪ್ಪ. ಮೊಸರಿನಿಂದ ಬಲವೂ, ಜಠರಾಗ್ನಿಯು ವೃದ್ಧಿಯಾಗುತ್ತವೆ.

ಮಜ್ಜಿಗೆಯ ಚರ್ಚೆ.

ಮಜ್ಜಿಗೆಗೆ ಸಂಸ್ಕೃತದಲ್ಲಿ ತಕ್ರ, ದಂಡಾಹ ಲ, ಗೋರಸ, ಕಟ್ವರ, ದ್ರವ, ಅಮ್ಲ, ಕ ಥಿತ, ಮಲಿನ, ಭಗ್ನ, ಸಂಧಿತವೆಂದೂ, ಹಿಂ ಛ ಹಾಗು ಮಠ್ಠಾ ಎಂದೂ, ಬಂಗಾಲಿಯ ಲಿ ಎಂದೂ, ಮರಾಠಿಯಲ್ಲಿ ತಾಕ ಎಂದೂ ಧಿಯಲ್ಲಿ ಛಾಸ ಹಾಗ ಘೋಲ ಎಂದೂ, ತೆಲಗು ಭಾಷೆಯಲ್ಲಿ ಮಜ್ಜಿಗೆ ಎಂದೂ, ಫ ಮಸ್ತ ಹಾಗು ದೂಗ ಎಂದೂ, ಅರಬಿಯ ಎಂದೂ, ಇಂಗ್ಲಿಷದಲ್ಲಿ ಬಟರಮಿಲ್ಕ ಎಂದೂ ಹೆಸರುಗಳಿವೆ. ಮಜ್ಜಿಗೆಯಲ್ಲಿ ಇವೆ.

(೧) ನೀರು ಹಾಕದೆ, ಬೆಣ್ಣೆ ತೆಗೆಯ ನ್ನು ಕಡೆದು ಮಾಡುವ ಘೋಲ ತಕ್ರ ಲಗೆ ಬೆಣ್ಣೆಯಿದ್ದುದರಿಂದ ಅದರೊಳಗಿನ ಕುಗ್ಗುತ್ತದೆ; ಪಿತ್ತದ ಉಷ್ಣತೆಯೂ ಕ. ಮಜ್ಜಿಗೆಯು ಪಿತ್ತಹಾರಕವಿದೆ, ರಕ್ತಾ ಪಿತ್ತ, ರಕ್ತ ಮೂಲವ್ಯಾಧಿಗಳಿದ್ದವರು ಸುವದು ಪಥ್ಯಕರವು.

(೨) ಬೆಣ್ಣೆ ತೆಗೆದು ನೀರು ಹಾಕದಿದ್ದ ಮಥಿತ ತಕ್ರವು. ಇದು ಕಫಪಿತ್ತನಾ ವಿಕಾರದವರಿಗೆ ಇದರ ಸೇವನವು ಬ ಲವು.

(೩) ಮೂರು ಪಾಲು ಮೊಸರು, ನೀರು ಹಾಕಿ ತಯಾರಾದ ಮಜ್ಜಿಗೆಗೆ ರೆ. ಇದು ಮಧುರವಿದೆ. ಉಷ್ಣವಿಲ್ಲ

ಈ ಮಜ್ಜಿಗೆಯು ೨೦ ಮಿನಿಟುಗಳಲ್ಲಿ ಪಚನವಾಗುತ್ತದೆ. ಮಜ್ಜಿಗೆ ಕುಡಿದು ಶೈತ್ಯವಾಗುತ್ತದೆಂಬ ತಿಳುವಳಿಕೆಯು ತಪ್ಪು. ಈ ಮಜ್ಜಿಗೆಯಿಂದ ಅನ್ನರಸವು ಪಚನವಾಗಿ, ಜಠರಾಗ್ನಿಯು ಬಲಪಡುತ್ತದೆ. ಈ ಮಜ್ಜಿಗೆಯು ವೃಷ್ಯ (ಶುಕ್ರೋತ್ಪಾದನಕ, ವೀರ್ಯವರ್ಧಕ) ಪ್ರೀಣನ (ತೃಪ್ತಿಕಾರಕ)ವಿದ್ದು, ವಾತ (ವಾತದಿಂದ ಹೊಟ್ಟೆ ಉಬ್ಬುವದು) ಅತಿಸಾರ, ಸಂಗ್ರಹಣಿ ರೋಗಗಳನ್ನು ನಾಶಮಾಡುತ್ತದೆ. ಪಿತ್ತವಿಕಾರಗಳೂ, ಕಫವೂ, ತ್ರಿದೋಷ ಯಾನೆ ಫುಪ್ಫುಸದ ರೋಗಗಳೂ, ಆಮಾಶಯ, ಮೂತ್ರಪಿಂಡ, ಪಕ್ವಾಶಯಗಳ ರೋಗಗಳನ್ನು ನಾಶಪಡಿಸುತ್ತದೆ. ಈ ಮಜ್ಜಿಗೆಯು ಹುಳಿಯಿದ್ದುದರಿಂದ ಬಾಯಿಗೆ ನೀರು ಬರುವದು; ಮೂತ್ರರೋಗ, ಮೂತ್ರಕೃಚ್ಛ್ರ, ಬೇಗು ಹಾಗು ಸ್ನೇಹ (ತುಪ್ಪ, ಎಣ್ಣೆ ಮುಂತಾದವುಗಳ ಅತಿಸೇವನ)ದಿಂದ ಆಗುವ ವಿಕಾರಗಳು ನಾಶಹೊಂದುತ್ತವೆ. ಇದರಿಂದ ಬಾಯಾರಿಕೆಯೂ, ನೀರಡಿಕೆಯೂ ಶಮನವಾಗುತ್ತವೆ. ವಾಂತಿಯು ಪರಿಹಾರವಾಗುತ್ತದೆ. ಅರ್ಶಾಂಸ, ಪ್ರಮೇಹ, ಉದರ, ಶೂಲ ಮುಂತಾದ ರೋಗಗಳ ಮೇಲೆ ಪಥ್ಯಕರವಿದೆ.

ಈ ಮಜ್ಜಿಗೆಯಲ್ಲಿ ೩ ಪ್ರಕಾರಗಳಿವೆ.

(ಅ) ಸಂಪೂರ್ಣವಾಗಿ ಬೆಣ್ಣೆ ತೆಗೆದ ಮಜ್ಜಿಗೆ. ಇದು ಬಹು ಬೇಗ ಪಚನವಾಗುತ್ತದೆ. ಪಥ್ಯಕರವಿದೆ. ತ್ರಿದೋಷಗಳೆಂದರೆ, ಫುಪ್ಫುಸದ ರೋಗಗಳು ನಾಶಹೊಂದುತ್ತವೆ.

(ಆ) ಸ್ವಲ್ಪ ಬೆಣ್ಣೆ ತೆಗೆದ ಮಜ್ಜಿಗೆ. ಇದು ವೀರ್ಯವರ್ಧಕವಿದೆ.

(ಇ) ಬೆಣ್ಣೆ ತೆಗೆಯದಿದ್ದ ಮಜ್ಜಿಗೆ. ಇದು ಜಡಪದಾರ್ಥವು. ಕಫೋತ್ಪಾದಕವು. ಆದರೆ ಬಲಪ್ರದವಿದೆ.

ಮಜ್ಜಿಗೆಯು ಸವಿ ಇದ್ದರೆ, ಕಫ ಉತ್ಪನ್ನವಾಗುತ್ತದೆ, ವಾತ-ಪಿತ್ತಗಳು ನಾಶಹೊಂದುತ್ತವೆ; ಹುಳಿಯಿದ್ದರೆ, ಪಿತ್ತವಾಗುತ್ತದೆ. ಸಾಮಾನ್ಯ ಮಜ್ಜಿಗೆಯು ಕರುಳುಗಳೊಳಗಿನ ಕಫವನ್ನು ದೂರಮಾಡುತ್ತದೆ. ಮಜ್ಜಿಗೆಯನ್ನು ಬೆಚ್ಚಗೆ ಮಾಡಿ ಕುಡಿದರೆ, ಶೈತ್ಯ, ಕೆಮ್ಮು, ಶ್ವಾಸವಿಕಾರಗಳು ದೂರವಾಗುತ್ತವೆ. ಸಾರಾಂಶವಾಗಿ ಹೇಳಬೇಕಾದರೆ, ಮಜ್ಜಿಗೆ ಕುಡಿಯುವವರು ರೋಗಗ್ರಸ್ತರಾಗುವದು ಅಪರೂಪವು.

ಮಜ್ಜಿಗೆಯ ವಿಷಯ ಈ ಕೆಳಗಿನ ಪ್ರಸಿದ್ಧ ವಾಗ್ಭಟರ ವಚನವನ್ನೂ ಆಲಿಸಿರಿ.

ಅತ್ಯರ್ಥಂ ಮಂದಕಾಯಾಗ್ನೇ
ಸ್ತಕ್ರಮೇವಾವಚಾರಯೇತ್ |
ಸಪ್ತಾಹಂ ವಾ ದಶಾಹಂ ವಾ ಪಕ್ಷಮರ್ಧಂ
ಮಾಸಮೇವ ವಾ
ಬಲ-ಕಾಲ-ವಿಕಾರಜ್ಞೋ ಭಿಷಕ್
ತಕ್ರಂ ಪ್ರಯೋಜಯೇತ್ ||

ಜಠರಾಗ್ನಿಯು ಅತಿಶಯ ಮಂದವಾದಾಗ್ಗೆ, ಅಂದರೆ, ಅನ್ನ ಪಚನವಾಗದಿದ್ದಾಗ ಮಜ್ಜಿಗೆಯನ್ನು ಕುಡಿದು ಇರಬೇಕು. ಬಲ, ಕಾಲ, ರೋಗಗಳ ಚಿಕಿತ್ಸೆ ಮಾಡಿ ವೈದ್ಯರು ೭, ೧೦, ೧೫ ಅಥವಾ ೩೦ ದಿನಗಳ ವರೆಗೆ ಮಜ್ಜಿಗೆಯ ಪಥ್ಯದ ಮೇಲೆ ಇಡಬೇಕು. ಅದರಿಂದ,

ನ ವಿರೋಹಂತಿ ಗುದಜಾ ಪುನಸ್ತಕ್ರ ಸಮಾಹತಾಃ
ನಿಷಿಕ್ತಂ ತದ್ಧಿ ದಹತಿ ಭೂಮಾವಪಿ
ತೃಣೋಲುಪಂ ||

ನೆಲದ ಮೇಲೆ ಹುಟ್ಟಿದ ಹುಲ್ಲಿನ ಮೇಲೆ ಮಜ್ಜಿಗೆಯನ್ನು ಚಿಮುಕಿಸಿದರೆ, ಅಲ್ಲಿ ಪುನಃ ಹುಲ್ಲು ಹುಟ್ಟುವದಿಲ್ಲ; ಅಂದ ಬಳಿಕ ಮಜ್ಜಿಗೆಯ ಸೇವನದಿಂದ ನಷ್ಟವಾದ ಮೂಲವ್ಯಾಧಿಯು ಪುನಃ ಚಿಗುರುವದೇ?

ಮಜ್ಜಿಗೆಯ ಸೇವನದ ಕ್ರಮಗಳು.

ವಾತರೋಗವಿದ್ದವರು ಸುಂಠಿ, ಸೈಂಧವ ಲವಣಗಳನ್ನು ಮಿಶ್ರಣ ಮಾಡಿ ಹುಳಿ ಮಜ್ಜಿಗೆಯನ್ನು ಕುಡಿಯಬೇಕು. ಪಿತ್ತ ರೋಗವಿದ್ದವರು ಸಕ್ಕರೆ ಮಿಶ್ರಿಸಿದ ಮಜ್ಜಿಗೆಯನ್ನು ಕುಡಿಯಬೇಕು. ಕಫಗ್ರಸ್ತರು ತ್ರಿಕಟು, ಅಂದರೆ ಸುಂಠಿ, ಮೆಣಸಿನಕಾಳು, ಗಂಧ ಮೆಣಸುಗಳ ಮಿಶ್ರಣದಿಂದ ಮಜ್ಜಿಗೆ ಕುಡಿಯಬೇಕು. ಘೋಲ ತಕ್ರ (೧) ನೇ ನಮೂನೆಯ ಮಜ್ಜಿಗೆಯಲ್ಲಿ ಹಿಂಗು, ಜೀರಿಗೆ, ಸೈಂಧವಗಳನ್ನು ಹಾಕಿ ಕುಡಿದರೆ, ವಾತ, ಅತಿಸಾರ, ಮೂಲವ್ಯಾಧಿ, ಬಸ್ತಿ ಶೂಲಗಳು ನಾಶವಾಗುತ್ತವೆ. ಇದು ಬಲವರ್ಧಕವು. ಇದಲ್ಲದೆ, ಚಿತ್ರಕ ಚೂರ್ಣ ಹಾಕಿ ಮಜ್ಜಿಗೆಯನ್ನು ಸೇವಿಸಿದರೆ, ಪಾಂಡು ರೋಗವು ನಾಶವಾಗುತ್ತದೆ. ಚಳಿಗಾಲದಲ್ಲಿ ಮಂದಾಗ್ನಿ, ಅರುಚಿ, ವಾತರೋಗ ಮುಂತಾದವುಗಳ ನಾಶವಾಗಿ, ಅಮೃತದಂತೆ ಇದರಿಂದ ಗುಣ ಬರುತ್ತದೆ. ಕೃತ್ರಿಮ ವಿಷ, ವಾಂತಿ, ಕ್ರಿಮಿ ಮುಂತಾದವುಗಳು ಇದರಿಂದ ಪರಿಹಾರವಾಗುತ್ತವೆ.

(ಆ) ಮೊಸರಿನಷ್ಟೇ ನೀರು ಹಾಕಿ ಕಡೆದ ಮಜ್ಜಿಗೆಗೆ ಉದಶ್ವಿತ ಮಜ್ಜಿಗೆಯೆನ್ನುತ್ತಾರೆ. ಇದು ಕಫಕರವಿದ್ದರೂ, ಬಲವರ್ಧಕ ಹಾಗು ಶ್ರಮನಾಶಕವಿದೆ.

(ಇ) ಮೊಸರಿನಲ್ಲಿ ಮಿತಿಮೀರಿ ನೀರು ಬೆರಸಿ ಮಾಡುವ ಮಜ್ಜಿಗೆಗೆ ಛಚ್ಛಿಕಾ ತಕ್ರವೆನ್ನುತ್ತಾರೆ. ಇದರಿಂದ ನೀರಡಿಕೆಯು ಪಿತ್ತ, ಶ್ರಮಗಳು ನಿವಾರಣ ಹೊಂದುತ್ತವೆ. ಉಪ್ಪು ಹಾಕಿ ಕುಡಿದರೆ ಜಠರಾಗ್ನಿಯು ಪ್ರದೀಪ್ತವಾಗುತ್ತದೆ. ಕಫ-ವಾತಗಳು ನಾಶಹೊಂದುತ್ತವೆ.

ಇಷ್ಟೆಲ್ಲ ವಿವರಣೆಯಾದ ಬಳಿಕ, ವೈದ್ಯ ಗುರ್ಜರದವರು ಮಜ್ಜಿಗೆಯ ಸಾಮಾನ್ಯ ಮಹತ್ವವನ್ನು ಈ ಕೆಳಗಿನ ಶ್ಲೋಕದಿಂದ ಬಣ್ಣಿಸಿ, ತಮ್ಮ ಉಪಯುಕ್ತ ಭಾಷಣವನ್ನು ಪರಿಸಮಾಪ್ತಿಗೊಳಿಸಿದರು.

ಕೈಲಾಸೇ ಯದಿ ತಕ್ರಮಸ್ತಿ ಗಿರೀಶಃ
ಕಿಂ ನೀಲಕಂಠೋ ಭವೇತ್ |
ವೈಕುಂಠೇ ಯದಿ ಕೃಷ್ಣತಾಮನುಭವೇ
ದದ್ಯಾಪಿ ಕಿಂ ಕೇಶವಃ ||
ದುರ್ಭಗತೋ ಕ್ಷಯಂ ದ್ವಿಜಪತಿಃ
ಲಂಬೋದರತ್ವಂ ಗಣಃ |
ಕುಷ್ಠಿತ್ವಂ ಚ ಕುಬೇರಕೋ ದಹನ
ತಾಮಗ್ನಿಶ್ಚ ಕಿಂ ವಿಂದತಿ ||

ಅಂದರೆ, ಮಜ್ಜಿಗೆಯು ಕೈಲಾಸದಲ್ಲಿದ್ದರೆ, ಕೈಲಾಸನಾಥನ ಕುತ್ತಿಗೆಯು ಯಾಕೆ ನೀಲ ವರ್ಣದ್ದಾಗುತ್ತಿತ್ತು? (ಮಜ್ಜಿಗೆಯಿಂದ ವಿಷ ನಿವಾರಣವಾಗುತ್ತದೆ.) ವೈಕುಂಠದಲ್ಲಿ ಮಜ್ಜಿಗೆಯಿದ್ದರೆ ಭಗವಂತನ ಶರೀರವು ಯಾಕೆ ಶ್ಯಾಮ ವರ್ಣವಾಗುತ್ತಿತ್ತು? ಮಜ್ಜಿಗೆಯಿದ್ದರೆ, ದೇವೇಂದ್ರನ ಶರೀರದ ಮೇಲೆ ಭಗಗಳಿರುತ್ತಿದ್ದವೇನು? ಚಂದ್ರನು ಕ್ಷಯ ರೋಗದಿಂದ ಬಳಲುತ್ತಿದ್ದನೇನು? ಲಂಬೋದರನು ಲಂಬೋದರ ರೋಗದಿಂದ ಬಳಲುತ್ತಿದ್ದನೇನು? ಕುಬೇರನ ಕುಷ್ಠರೋಗದ ಪರಿಹಾರವಾಗುತ್ತಿದ್ದಿಲ್ಲವೇನು? ಅಗ್ನಿನಾರಾಯಣನ ಉಷ್ಣತೆಯು ನಿವಾರಣವಾಗುತ್ತಿದ್ದಿಲ್ಲವೇನು? ಹೀಗೆ ಮಜ್ಜಿಗೆಯ ಸ್ತೋತ್ರ ಮಾಡಿ, ಸ್ವರ್ಗದಲ್ಲಿ ಅಮೃತವಿರುವದೆಂದು ದೇವಾದಿಗಳು ಬಂದು ಬಡಿಯಬಾರದೆಂದೂ, ಅಮೃತಕ್ಕೂ ವಿಶೇಷ ಗುಣಗಳುಳ್ಳ ಮಜ್ಜಿಗೆಯು ಭೂತಲದ ಮೇಲಿರುವದೆಂದೂ ಹೇಳಿ, ವೈದ್ಯ ಗುರ್ಜರರವರು ಸ್ವಸ್ಥಾನಾಪನ್ನರಾದರು.

ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ದೊರೆತ ಮಾಹಿತಿ.

ಗ್ರಾಮಪಂಚಾಯತಿಗಳು ಲೋಕಪ್ರಿಯವಾಗಿಲ್ಲವಾದೂ, ಅವುಗಳ ಘಟನೆಯನ್ನು ಸುಧಾರಿಸಲು ಉಪಾಯ ಯೋಜನೆ ಮಾಡಲಿಕ್ಕೆ ಒಂದು ಕಮಿಟಿಯು ನೇಮಿಸಿರುವದೆಂದೂ, ಅದರ ಠರಾವುಗಳ ಮೇಲೆ ಅಭಿಪ್ರಾಯ ಪಡೆಯಲು ಜಿಲ್ಲಾ ಲೋಕಲ್ ಬೋರ್ಡಿನ ಅಧ್ಯಕ್ಷರಿಗೆ ಬರೆದು ಹೋಗಿರುವದೆಂದೂ, ಈ ವಿಷಯ ಸರಕಾರವು ಬೇಗನೇ ಮುದ್ರಿತ ಲೇಖವನ್ನು ಪ್ರಕಟಿಸಲಿಕ್ಕಿರುವದೆಂದೂ ಶ್ರೀ ದೇಸಾಯರಿಗೆ ಉತ್ತರ ದೊರಕಿತು.

ಕಾನಡಾ ಜಿಲ್ಲೆಯೊಳಗಿನ ಪ್ರಾಚೀನ ಜಂಗಲುಗಳೊಳಗಿಂದ ಸ್ಥಳಿಕ ಉಪಯೋಗಕ್ಕಾಗಿ ಸಂಗ್ರಹಿಸಿದ ಕಟ್ಟಿಗೆಯನ್ನು ಪರಜಿಲ್ಲೆಗಳಿಗೆ ರಫ್ತು ಮಾಡುವ ನಿಯಮವಿಲ್ಲ. ವಿಶೇಷ ಪ್ರಸಂಗಗಳಲ್ಲಿ ಪರ್ಮಿಂಟುಕ್ಕೆ ರಫ್ತು ಮಾಡಲು ಕಂಟ್ರಾಕ್ಟರರಿಗೆ ಪರವಾನಗಿ ಕೊಡಲಾಗುತ್ತದೆ. ಕಾನಡಾ ಜಿಲ್ಲೆಯೊಳಗಿನ ಮುಲಕಿ ಹಾಗು ದಿವಾಣಿ ಖಾತೆಯೊಳಗಿನ ಶಿಪಾಯಿಗಳು ಸಂಬಳ ಹಾಗು ಭತ್ತ್ಯ ಕಡಿಮೆಯೆಂದು ಗುಳುಗುಟ್ಟುವದಿಲ್ಲ. ಇಷ್ಟು ಮಾಹಿತಿಯು ಶ್ರೀ ಕರ್ಕಿಯವರಿಗೆ ದೊರಕಿತು.

ಸಾತಾರಾ ಹಾಗು ಸೊಲ್ಲಾಪುರ ಜಿಲ್ಲೆಗಳೊಳಗಿನ ಪ್ರಜೆಗಳು ಕನ್ನಡ ಶಾಲೆ ಬೇಕೆಂದು ಸರಕಾರಕ್ಕೆ ಅರ್ಜಿ ಮಾಡಲಿಲ್ಲವಾದ್ದರಿಂದ ಅಲ್ಲಿ ಕನ್ನಡ ಶಾಲೆಗಳು ಸ್ಥಾಪನೆಯಾಗಲಿಲ್ಲವೆಂದು ಶ್ರೀ ಸರದೇಸಾಯಿಯವರಿಗೆ ಉತ್ತರ ದೊರಕಿತು.

೧೯೨೫-೧೯೨೬ನೇ ಇಸ್ವಿಯಲ್ಲಿ ಕಾನಡಾ ಜಿಲ್ಲೆಯೊಳಗಿನ ೧೨೫ ಹಳ್ಳಿಗಳಲ್ಲಿ ೪೫೯೧ ದನಗಳು ಸತ್ತವು. ೭೭ ಗ್ರಾಮಗಳಲ್ಲಿ ೩,೪೭೧ ದನಗಳಿಗೆ ಡಾಗು ತೆಗೆಯಲಾಯಿತು. ೨೬ ಡಾಗು ತೆಗೆದ ದನಗಳು ಸತ್ತವು. ಈ ಜಿಲ್ಲೆಯಲ್ಲಿ ೩ ದನಗಳ ಚಿಕಿತ್ಸಾಲಯಗಳಿದ್ದು, ಅವುಗಳಿಂದ ಪಿಡುಗು ಬಂದಾಗ ರೋಗನಿವಾರಣೆಗಾಗಿ ಉಪಾಯ ಯೋಜನೆ ಮಾಡುವದು ಸಾಧ್ಯವಿಲ್ಲ. ಜನಗಳ ಅವರ ವ್ಯವಸ್ಥೆ ಮಾಡಲಿಕ್ಕೆ ಲೋಕರ ಸಹಕಾರ ಬೇಕಾದ್ದರಿಂದ, ಅವುಗಳನ್ನು ಸುಧಾರಿಸಲಿಕ್ಕಾಗಲಿ, ಹೆಚ್ಚಿಸಲಿಕ್ಕಾಗಲಿ ಉಪದೇಶ ಮಾಡಲಾಗುತ್ತದೆಂದು ಶ್ರೀ ಕರ್ಕಿಯವರಿಗೆ ಉತ್ತರ ದೊರಕಿತು.

ಹುಬ್ಬಳ್ಳಿ-ಸಿರ್ಸಿ ಹಾಗು ಹುಬ್ಬಳ್ಳಿ-ಕಾರವಾರಗಳ ನಡುವೆ ಉಗಿಬಂಡಿಯ ಮಾರ್ಗವಿಲ್ಲದ, ಪ್ರಯಾಣಿಕರಿಗೆ ತೊಂದರೆಗಳಾಗುತ್ತವೆಂಬ ಸಂಗತಿಯನ್ನು ಸರಕಾರವು ಅರಿತಿದೆ. ಜನರೂ ಈ ಬಗ್ಗೆ ಅರ್ಜಿ ಮಾಡಿರುವರು. ಹುಬ್ಬಳ್ಳಿ-ಸಿರ್ಸಿ ಹಾಗು ಹುಬ್ಬಳ್ಳಿ-ಕಾರವಾರ ಮಾರ್ಗಗಳ ಮೇಲೆ ರೇಲ್ವೆ ಮಾಡುವ ವಿಷಯ ಚೌಕಶಿಯಾಗಿತ್ತು. ೧೯೧೭-೧೮ನೇ ಇಸ್ವಿಯಲ್ಲಿ ಸದರ್ನ್ ಮರಾಠಾ ರೇಲ್ವೆ ಕಂಪನಿಯವರು ಹುಬ್ಬಳ್ಳಿ-ಸಿರ್ಸಿ ಮಾರ್ಗದ ತಪಾಸಣಿ ಮಾಡಿ ಉಗಿಬಂಡಿ ಮಾರ್ಗಕ್ಕೆ ೬೦ ಲಕ್ಷ, ೩೦ ಸಾವಿರ ರೂಪಾಯಿ ಖರ್ಚು ತಗಲುವದೆಂದು ಅಂದಾಜು ಮಾಡಿದ್ದರು. ಕಾರವಾರ-ಹುಬ್ಬಳ್ಳಿ ಮತ್ತು ಗದಗ ಬಿಜಾಪುರ ರೇಲ್ವೆ ಚೌಕಶಿಯು ೧೯೧೯-೨೦ನೇ ಇಸ್ವಿಯಲ್ಲಿ ಸರಕಾರ ತರ್ಫೆನಿಂದ ನಡೆಯಿತು. ಆಗ ೧ ಲಕ್ಷ ರೂಪಾಯಿ ಖರ್ಚು ಬರುವದೆಂದು ಅಂದಾಜು ಮಾಡಲ್ಪಟ್ಟಿತ್ತು. ಕಾರವಾರ-ಹುಬ್ಬಳ್ಳಿ ರೇಲ್ವೆಯ ವಿಷಯ ತಾ. ೨೭-೭-೧೯೧೯ನೇಗೆ ಮುಂಬಯಿಯ ಕಾಯಿದೆ ಕೌನ್ಸಿಲಿನಲ್ಲಿ ಠರಾವಾಗಿ ರೇಲ್ವೇ ಬೋರ್ಡಿಗೆ ಹುಬ್ಬಳ್ಳಿಯಿಂದ ಕಾರವಾರದ ವರೆಗೆ ಉಗಿಬಂಡಿ ಮಾ

(೧೦ನೇ ಪಾನಿನ ಮೇಲೆ ಮುಂದರಿಸಿದೆ.)

ಕಾನಡಾವೃತ್ತ.

ಮಿತಿ ಕ್ರೋಧನ ಸಂ| ಶ್ರಾವಣ ಬ| ೧೩ ಸೋಮವಾರ.

ನಮ್ಮ ಭದ್ರತೆ !

ಸೈನ್ಯಬಲದ ಮೀಮಾಂಸೆ.

ನಮ್ಮ ಬ್ರಿಟಿಶ ರಾಜ್ಯಪದ್ಧತಿಯಲ್ಲಿ ಸ್ಥಿರ-ಚರ ಸೊತ್ತಿನ ಭದ್ರತೆಯು ಮಿಗಿಲಾಗಿದೆಂದು ಅಖಿಲರ ತಿಳಿಕೆ ಇದೆ. ಯಾವದೇ ವ್ಯವಸ್ಥೆಯು ಹ್ಯಾಗೂ ಇದದ್ದಿರಲಿ, ಪೆಂಢಾರಿಗಳ ಸುಲಿಗೆ, ಟೀಪೂ ಸುಲ್ತಾನನ ಲೂಟಿ, ಠಕ್ಕರ ಠಕ್ಕತನ, ಪರರಾಜರ ದಾಳಿ ಮುಂತಾದ ರಾಷ್ಟ್ರೀಯ ಆಪತ್ತುಗಳಿಂದ ನಾವು ಪಾರಾಗಿರುವೆವೆಂದು ನಮ್ಮೆಲ್ಲರ ತಿಳುವಳಿಕೆ ಇದೆ. ಮುಂಬಯಿಯ ಡಾ| ಮೂಂಜೆಯವರು ಕಳೆದ ವಾರದಲ್ಲಿ ೨ ದಿನ, ಅಂದರೆ, ಸೋಮವಾರ ಬುಧವಾರ ೨ ಉಪನ್ಯಾಸಗಳನ್ನಿತ್ತು, ಸೇನಾಖರ್ಚು ವಿಪರೀತ ಬೆಳೆದರೂ, ಸೇನಾಬಲದ ಭದ್ರತೆಯು ಮಿಗಿಲಾಗಲಿಲ್ಲೆಂದು ಸಪ್ರಮಾಣ ಪ್ರತಿಪಾದಿಸಿದರು. ಡಾ| ಮೂಂಜೆಯವರು ಅಸಹಯೋಗಿಗಳಲ್ಲ; ಅಡ್ಡಗಟ್ಟುವ ಕೌನ್ಸಿಲು ಪ್ರವೇಶಕರಲ್ಲ; ನೇಮಸ್ತ ಬಾಂಧವರು. ಸರಕಾರಿ ದಪ್ತರಗಳೊಳಗಿಂದ ಸಂಗ್ರಹಿಸಿದ ಅಂಕಿಗಳನ್ನೇ ಅವರು ಆಧರಿಸಿಕೊಂಡು ವಿಷಯ ಪ್ರತಿಪಾದನೆ ಮಾಡಿರುವರು. ಡಾಕ್ಟರರ ವಿಚಾರಗಳನ್ನು ವಾಚಕರು ಪರ್ಯಾಲೋಚಿಸುವದು ಅತ್ಯವಶ್ಯ.

ಮೊಟ್ಟಮೊದಲು, ಡಾಕ್ಟರರು ಕೆಲವು ಅಪ್ರಿಯ ಹಾಗು ಪಥ್ಯಕರವಾದ ಸತ್ಯ ಮಾತುಗಳನ್ನಾಡಿದರು. ೨೦೦೦ ವರ್ಷಗಳ ಹಿಂದೆ ಬ್ರಿಟಿಶರು ಕಾಡು ಸ್ಥಿತಿಯಲ್ಲಿದ್ದರು. ಆಗ ನಮ್ಮ ಭರತಖಂಡವು ಋಷಿವರ್ಯ ತಪೋನಿಧಿಗಳಿಂದ ಅನುಗ್ರಹಿಸಲ್ಪಟ್ಟಿತ್ತು. ಹಿಂದುಸ್ಥಾನವು ಕಾಡು ಸ್ಥಿತಿಯದಲ್ಲ ಸುಸಂಸ್ಕೃತ ರಾಷ್ಟ್ರವು. ಸಂಸ್ಕೃತಿಯನ್ನು ಬ್ರಿಟಿಶರಿಂದ ಕಲಿಯುವ ಆವಶ್ಯಕತೆಯೂ ಹಿಂದುಸ್ಥಾನಕ್ಕಿರುವದಿಲ್ಲ. ಇಷ್ಟು ಪ್ರಸ್ತಾವಿಸಿ, ಸ್ವರಾಜ್ಯದ ವ್ಯಾಖ್ಯೆ ಹೇಳಿದರು. ಸ್ವರಾಜ್ಯವೆಂದರೇನು ? ಹಿಂದುಸ್ಥಾನದವರು ಹಿಂದುಸ್ಥಾನದವರಿಗಾಗಿ ಹಿಂದುಸ್ಥಾನದ ಸರಕಾರವನ್ನು ನಡಿಸುವದು. ಸ್ವರಾಜ್ಯದ ವ್ಯಾಖ್ಯೆ ಮಾಡುವಾಗ ಮೊಂಟೆಗ್ಯೂ ಸ್ವರಾಜ್ಯವು ಅರಾಜಕತೆಯೆಂದು ಅವರು ಬೋಧಿಸಿದರು; ಮೊಂಟೆಗ್ಯೂ ಸ್ವರಾಜ್ಯವು ಸೋತ ಹೋದದ್ದು ಸಹಜವೆಂದೂ ಅವರು ಉದ್ಗರಿಸಿದರು. ಬ್ರಿಟಿಶ ಮುತ್ಸದ್ದಿಗಳು ವಿವೇಕಹೀನರಾಗಿರುವರೆಂದೂ, ಬ್ರಿಟಿಶ ಪಾರ್ಲಿಮೆಂಟಿಗೆ ಹಿಂದುಸ್ಥಾನವನ್ನಾಳುವ ಪಾತ್ರತೆಯಿಲ್ಲೆಂದೂ ಕರಾ ಕೊಟ್ಟರು.

ಉಪನ್ಯಾಸದ ವಿಷಯವು "ಸ್ವರಾಜ್ಯವೂ ಹಿಂದೀ ಸೈನ್ಯ ಬಲವೂ" ಎಂಬುದಾಗಿತ್ತು. ಹಿಂದೀ ಸೈನ್ಯ ಬಲವೆಂದರೆ, ಈಗಿನ ಬ್ರಿಟಿಶ ಸೈನ್ಯಾಧಿಕಾರಿಗಳನ್ನು ಕಿತ್ತೊಗೆದು ಹಿಂದಿಯರನ್ನು ನೇಮಿಸುವದಲ್ಲ. ಹಿಂದೀ ಸೈನ್ಯವು ಸ್ವರಾಜ್ಯಕ್ಕೆ ಆಧಾರಭೂತವಾಗಿರಬೇಕು; ಅಂದರೆ, ಸ್ವರಾಜ್ಯವನ್ನು ಸಂರಕ್ಷಿಸಲು ನಾವು [illegible] ಸೈನ್ಯವು ಸ್ವರಾಜ್ಯ ಸರಕಾರದ ಕೈಕೆಳಗಿರಬೇಕು. ಈಗಿನ ಸೈನ್ಯದ ಮೇಲೆ ನಮ್ಮ ಸ್ವರಾಜ್ಯವು ಸುರಕ್ಷಿತವಾಗಿ ನೆಲೆಗೊಳ್ಳಲಾರದು. ಈಗಿನ ಸೈನ್ಯ ಪದ್ಧತಿಯನ್ನು ನಾವು ಬದಲಿಸದೆ, ಬ್ರಿಟಿಶರಿದ್ದಲ್ಲಿ ಹಿಂದೀ ಜನಗಳ ಆದೇಶ ಮಾಡುತ್ತ ನಡೆದರೆ, ನಮ್ಮ ಸ್ವರಾಜ್ಯ ಸೈನ್ಯದ ಕೆಲಸವಾಯಿತೆಂದು ತಿಳಿಯಲಾಗದೆಂದು ಡಾ| ಮೂಂಜೆಯವರು ಸಾರಿ ಹೇಳಿದರು. ಸೈನಿಕರ ಸಂಖ್ಯೆಯು ನಿಯಮಿತವಿದ್ದು, ಅದನ್ನು ಎಷ್ಟೋ ಕಾರ್ಯಕ್ಷಮವಾಗಿ ನಾವು ನಡಿಸುವದಕ್ಕಿಂತ ಇಡೀ ರಾಷ್ಟ್ರವನ್ನೇ ಸೈನ್ಯವೃತ್ತಿಯಿಂದ ತಯಾರ ಮಾಡುವದು ವಿಶೇಷ ಭದ್ರವೆಂದು ಮಹಾಯುದ್ಧದಿಂದ ತಿಳಿದುಬಂದಿರುವದೆಂದರು.

ಬ್ರಿಟಿಶರ ಆಶ್ರಯ ಹಿಡಿದರೂ, ನಾವು ಯಾಕೆ ಭದ್ರರಲ್ಲ ! ನಮ್ಮ ಸ್ಥಿರ-ಚರ ಸೊತ್ತು ಅಶಾಶ್ವತವೆಂದು ತಿಳಿಯಲು ಆಧಾರವಿರುವದೇನು ? ಹಿಂದುಸ್ಥಾನದ ಮೇಲೆ ಆಪತ್ತು ಬಂದೊದಗಿದಾಗ ನಮ್ಮನ್ನು ಕಾಪಾಡುವದಕ್ಕಾಗಿಯೇ ಬ್ರಿಟಿಶರು ಹಿಂದುಸ್ಥಾನದಲ್ಲಿ ಬಂದಿರುವವರಲ್ಲವೇ? ಎಂದು ವಾಚಕರು ಪ್ರಶ್ನಿಸಬಹುದು. ಹಿಂದುಸ್ಥಾನ ಸರಕಾರವು ಪ್ರಕಟಿಸಿದ "ಹಿಂದುಸ್ಥಾನದೊಳಗಿನ ಸೈನ್ಯ ಹಾಗು ಅದರ ಉತ್ಕ್ರಾಂತಿ" ಎಂಬ ಗ್ರಂಥದಲ್ಲಿ ಹಿಂದುಸ್ಥಾನದ ಭದ್ರತೆಯ ತಮ್ಮ ಜವಾಬದಾರಿಯು ನಮೂದಿಸಲಾಗಿದೆ. "ಹಿಂದುಸ್ಥಾನದ ಮೇಲೆ ದಾಳಿಯಂಥ ಆಪತ್ತು ಬಂದೊದಗಿದ್ದಲ್ಲಿ, ಅದನ್ನು ನಿವಾರಿಸಿಕೊಳ್ಳುವದು ಹಿಂದುಸ್ಥಾನಕ್ಕೆ ಅಶಕ್ಯವಾದ್ದಲ್ಲಿ, ಬ್ರಿಟಿಶ ಸಾರ್ವಭೌಮ ಸರಕಾರಕ್ಕೆ ಮಾನವೀ ಸಾಮರ್ಥ್ಯವಿದ್ದಲ್ಲಿ ಅದು ತತ್ಕ್ಷಣದಿಂದ ಸೈನ್ಯಬಲವನ್ನು ಕಳುಹುವದು."

ಈ ವಾಕ್ಯದ ಅರ್ಥವು ಸ್ಪಷ್ಟವಿದೆ. ಬ್ರಿಟಿಶ ದೇಶದ ಮೇಲೆ ದಾಳಿ ಬಂದು ಬ್ರಿಟಿಶರು ಸ್ವಂತ ಆಪತ್ತು ನಿವಾರಣೆಯಲ್ಲಿ ತೊಡಗಿದಾಗ, ಅದು ಹಿಂದುಸ್ಥಾನದ ಸಂರಕ್ಷಣೆಗೆ ಬರಲಾರದು. ಹಿಂದುಸ್ಥಾನದ ರಕ್ಷಣೆಯನ್ನು ಹಿಂದೀಯರೇ ಮಾಡಿಕೊಳ್ಳಬೇಕು. ಆತ್ಮಸಂರಕ್ಷಣೆಯ ಸಾಮರ್ಥ್ಯವಿಲ್ಲದಿದ್ದರೆ, ನಮ್ಮ ಹಿಂದೂ ದೇಶದ ಗತಿಯು ಮಹಾಯುದ್ಧದಲ್ಲಿ ಸಿಲುಕಿಕೊಂಡ ಬೆಲ್ಜಮ ದೇಶದಂತೆ ಒದಗಿಬರುವದು. ಸ್ವರಕ್ಷಣೆಯ ಸಾಮರ್ಥ್ಯವನ್ನು ಸಂಪಾದಿಸಿಕೊಳ್ಳುವದು, ಸ್ವರಕ್ಷಣಕ್ಕಾಗಿ ನಮ್ಮನ್ನು ತಯಾರು ಮಾಡುವದು ಸ್ವರಾಜ್ಯವಾದಿಗಳ ಆದ್ಯಕರ್ತವ್ಯವು. ವಿಶೇಷವಾಗಿ, ಸಮಸ್ತ ಪ್ರಸಂಗಗಳಲ್ಲಿಯೂ ನಮ್ಮ ಭದ್ರತೆಯ ಜವಾಬದಾರಿಯನ್ನು ಬ್ರಿಟಿಶರು ವಹಿಸಿಕೊಳ್ಳದಿದ್ದ ಮೇಲೆ, ಆತ್ಮರಕ್ಷಣಕ್ಕಾಗಿ ನಾವು ಯಾವಾಗಲೂ ತಯಾರಿದ್ದರೆ ಮಾತ್ರ, ಸಂಕಟ ಸಮಯದಲ್ಲಿ ನಾವು ಸುರಕ್ಷಿತವಾಗಿ ಇರುವೆವು, ಎಂದು ಡಾ| ಮೂಂಜೆಯವರು ಹೇಳಿದರು.

ಸೇನಾಬಲವು ಹೆಚ್ಚಿಸಬೇಕೆಂದ ಕೂಡಲೆ, ಖರ್ಚು ಹೆಚ್ಚಾಗುವದೆಂದು ಭರತ ಪುತ್ರರು ಭೀತಿಪಡಬಾರದು. ಈಗಿನ ಪದ್ಧತಿಯನ್ನು ಬಿಟ್ಟುಕೊಟ್ಟು, ಹಿಂದುಸ್ಥಾನದ ಆತ್ಮರಕ್ಷಣೆಯ ದೃಷ್ಟಿಯಿಂದ ಹಿಂದೀ ಸೈನ್ಯವನ್ನು ಸಂಘಟಿಸಹತ್ತಿದರೆ, ಈಗಿನ ಖರ್ಚಿನಿಂದಲೇ ೮ ಪಾಲು ಸೈನ್ಯವು ಹಿಂದುಸ್ಥಾನಕ್ಕೆ ಸಿಗುವದಾಗಿದೆ. ಈಗ ಹಿಂದುಸ್ಥಾನದಲ್ಲಿದ್ದ ಸೈನ್ಯವು ಯುದ್ಧಕ್ಕೆ ತಯಾರಿದ್ದ ಸೈನ್ಯವು. ಈ ಸೈನ್ಯವು ಯುದ್ಧಕ್ಕಾಗಿ ರವಾನೆಯಾದರೆ, ಬೆಂಬಲಕ್ಕೆ ಸೈನ್ಯವಿಲ್ಲ. ಮಹಾಯುದ್ಧ ಸಮಯದಲ್ಲಿ ಇದೇ ಹಾಡಾಯಿತು. ಫ್ರಾನ್ಸ ದೇಶಕ್ಕೆ ನಮ್ಮ ಸೈನ್ಯ ಹೋದ ಬಳಿಕ, ನಾವು ಸೈನ್ಯವಿಲ್ಲದೆ ಬಳಲಿದೆವು.

ಈಗಿನ ಸೈನ್ಯದ ಅಂಕಿಗಳನ್ನು ನೋಡಿರಿ! ೯೬ ಸಾವಿರ ಸೈನ್ಯವು ಪರರಾಷ್ಟ್ರಗಳ ದಾಳಿ ನಿವಾರಿಸಲು ತಯಾರಿದೆ. ಹಿಂದೀ ಪ್ರಜೆಗಳ ದಾಳಿಯಿಂದ ಹಿಂದುಸ್ಥಾನದ ಕಾರಭಾರವನ್ನು ರಕ್ಷಿಸಲು ೧ ಲಕ್ಷ, ೮ ಸಾವಿರ ಸೈನ್ಯವು ಸಜ್ಜಾಗಿದೆ. ನಮ್ಮ ಹಿಂದುಸ್ಥಾನ ಸರಕಾರವು ಸಶಸ್ತ್ರ ಪರರಾಷ್ಟ್ರಗಳಿಗಿಂತ, ನಿಶ್ಶಸ್ತ್ರ ಹಿಂದೀ ಪ್ರಜೆಗಳಿಗೇ ಹೆಚ್ಚು ಬೆದರುತ್ತದೆಂದು ಸೈನ್ಯಬಲದ ಅಂಕಿಗಳು ಹೇಳುತ್ತವೆ. ಅಂತರ್ರಕ್ಷಣೆಗೆ ಇಷ್ಟು ದೊಡ್ಡ ಸೈನ್ಯವನ್ನು ತಯಾರಿಡುವದು ಹಣದ ಅಪವ್ಯಯವು. ಇಷ್ಟೇ ಹಣದಿಂದ ಮತ್ತೂ ೪ ಪಾಲು ಸೈನ್ಯವನ್ನು ತಯಾರು ಮಾಡಬಹುದೆಂದೂ, ಯಾವದೇ ಸುಧಾರಿಸಿದ ರಾಷ್ಟ್ರದಲ್ಲಿ ಇಷ್ಟು ಸೈನ್ಯವನ್ನು ಯುದ್ಧಕ್ಕಾಗಿ ತಯಾರಿಯಲ್ಲಿಟ್ಟು, ರಾಷ್ಟ್ರಧನದ ಅಪವ್ಯಯ ಮಾಡಿಟ್ಟಲ್ಲಿ ಪ್ರಜೆಗಳು ಹಿಂದುಸ್ಥಾನದವರಂತೆ ಸುಮ್ಮಗುಳಿಯುತ್ತಿದ್ದಿಲ್ಲವೆಂದೂ ಉದ್ಗರಿಸಿ, ಇಷ್ಟೇ ಸೈನ್ಯಖರ್ಚಿನಿಂದ ನಮ್ಮ

ಧವ್ಯತೆಯನ್ನು ಮಿಗಿಲು ಮಾಡಲಿಕ್ಕೆ ಆತ್ಮಸಂರಕ್ಷಣಾದ ಸೈನ್ಯವನ್ನು ಸಂಘಟಿಸುವ ಕ್ರಮವನ್ನು ಬಲು ವಿಶದವಾಗಿ ಹೇಳಿದರು. ಡಾಕ್ಟರರ ಹೊಸ ಸೈನ್ಯ ಸಂಘಟಣೆಯ ಯೋಜನೆಯನ್ನು ವಿಸ್ತಾರಪೂರ್ವಕ ತಿಳಕೊಳ್ಳುವದು ಅವಶ್ಯವಿದ್ದದರಿಂದ, ಆ ಯೋಜನೆಯನ್ನು ಮುಂದೆ ಯಥಾವಕಾಶ ವಿಚಾರಿಸುವೆವು. ಸದ್ಯಕ್ಕೆ ನಮ್ಮ ಸೈನ್ಯ ಬಲದ ಮೀಮಾಂಸೆಯಿಂದ ಬ್ರಿಟಿಶರ ಆಶ್ರಯದಿಂದ ಆಪತ್ಕಾಲದಲ್ಲಿ ನಾವು ಸುರಕ್ಷಿತರಲ್ಲವೆಂಬದಿಷ್ಟು ಸಂಗತಿಯು ವಾಚಕರಿಗೆ ಸ್ಪಷ್ಟವಾಗಿ ಹೊಳೆಯುವ ಹಾಗಿದೆ. “ಆತ್ಮಾನಂ ಸತತಂ ರಕ್ಷೇತ್,” ಎಂಬ ಉಕ್ತಿಯಂತೆ, ಆತ್ಮರಕ್ಷಣೆಯ ಯೋಜನೆಯನ್ನೇ ನಾವು ಯೋಜಿಸಬೇಕಲ್ಲವೆ. ಬ್ರಿಟಿಶರು ಸಮಸ್ತ ಪ್ರಸಂಗಗಳಲ್ಲಿಯೂ ನಮ್ಮನ್ನು ಕಾಪಾಡುವರೆಂಬ ತಿಳುವಳಿಕೆಯು ಭ್ರಮೆಯೆಂದು ಡಾಕ್ಟರರ ಉಪನ್ಯಾಸದಿಂದ ಸ್ಪಷ್ಟವಾಗುವದು. ಸ್ವರಾಜ್ಯಕ್ಕೂ, ಸೈನ್ಯಬಲಕ್ಕೂ ಅನ್ಯೋನ್ಯ ಸಂಬಂಧವಿರುವದರಿಂದ, ಸ್ವರಾಜ್ಯ ಪಾಲನಕ್ಕೆ ಸೈನ್ಯಬಲವು ಅತ್ಯವಶ್ಯವಿದ್ದದರಿಂದ ಸೈನ್ಯ ಸಂಘಟಣೆಯನ್ನು ಅಥವಾ ಸೈನ್ಯ ಪುನರ್ಘಟನೆಯನ್ನು ಲೋಕನಾಯಕರು ಆಲೋಚಿಸಿ ಯೋಜಿಸಲು ಕರ್ತವ್ಯಬದ್ಧರಾಗಿರುವರು. ಡಾ॥ ದಾದಾಚಾಂಜಿಯವರಂಥ ನೇಮಸ್ತರು ಸೈನ್ಯ ಬಲದ ಮೀಮಾಂಸೆಯನ್ನು ನಿರ್ದಾಕ್ಷಿಣ್ಯದಿಂದ ಚರ್ಚಿಸಿ ಲೋಕನಾಯಕರಿಗೆ ಎಚ್ಚರಿಸಿದ ಬಗ್ಗೆ ನಾವು ಅವರ ಉಪಕಾರ ಮನ್ನಿಸಿ, ಈ ಲೇಖವನ್ನು ಮುಗಿಸುವೆವು.

ಸ್ಫುಟ ಸೂಚನೆಗಳು.

೧. ಕಳೆದ ಶನಿವಾರ ತಾರೀಖು ೮ನೇಗೆ ಮುಂಬಯಿ ಕಾಯಿದೆ ಕೌನ್ಸಿಲಿನ ಪುಣೆಯ ಅಧಿವೇಶನದಲ್ಲಿ ನಮ್ಮ ಸರಕಾರದ ಬ್ರಿಟಿಶ ಸಭಾಸದರ ಸ್ವಾರ್ಥವು ಪ್ರಕಟವಾಯಿತು. ಅವಶ್ಯಖರ್ಚಿನ ಪುರವಣಿ ಗ್ರಾಂಟು ಮಂಜೂರಿಯ ಸಮಯ ಮುಂಬಯಿ ಸರಕಾರವು ೫೦ ಸಾವಿರ ರೂಪಾಯಿಗಳನ್ನು ಯುರೋಪಿಯನ್ ಜಲಗಾರರ ನೇಮಣೂಕಿಗಾಗಿ ಬೇಡಿತು. ಈ ಜಲಗಾರರ ಹೆಸರು ಫೋಕ್ಸನ್ ಎಂದು. ಇವರಿಗೆ ಪ್ರವಾಸ ಖರ್ಚು ಕೊಟ್ಟು ೨ ಸಾವಿರ ರೂಪಾಯಿ ಮಾಸಿಕ ವೇತನ ಕೊಡಲು ೫೦ ಸಾವಿರ ರೂಪಾಯಿ ಬೇಕಾಗಿರುವವೆಂದು ಮುಂಬಯಿ ಸರಕಾರದ ಹೇಳಿಕೆ ಇತ್ತು. ಹಿಂದಿನ ಅನುಭವವೂ, ಜಲಸಂಶೋಧನದ ಪರೀಕ್ಷೆಯೂ ಇವರು ಕೊಟ್ಟಿದ್ದಿಲ್ಲ; ಇವರಿಗೆ ನಿಸರ್ಗದತ್ತ ಜಲಸಂಶೋಧನ ಗುಣವಿರುವದೆಂದು ಹಿಂದೀಜನರ ಮೂಢ ಬುದ್ಧಿಯನ್ನು ಹಳಿಯುವ ಪಾಶ್ಚಾತ್ಯ ಸಂಸ್ಕೃತಿಯ ಬ್ರಿಟಿಶರು ಕೌನ್ಸಿಲಿನಲ್ಲಿ ಹೇಳಿದರು. ಜಲಸ್ಥಾನಗಳನ್ನು ಹೇಳುವ ದೇಶೀ ಜಲಗಾರರು ಅನೇಕರಿರುವರು. ಅವರಿಗೆ ವೇತನ ಕೊಟ್ಟಲ್ಲಿ ಇಂಥ ೫೦ ಮಂದಿಗಳನ್ನು ಇಡಬಹುದಾಗಿ ಶ್ರೀ॥ ದೇವಧರರು ಪ್ರತಿಪಾದಿಸಿ, ಈ ಠರಾವನ್ನು ಮಂಜೂರು ಮಾಡಿದರೆ, ಮುಂಬಯಿ ಸರಕಾರಕ್ಕೆ ಹುಚ್ಚು ತಾಗಿದೆಂದು ನಾಳೆ ವರ್ತಮಾನಪತ್ರಗಳಲ್ಲಿ ಹೂಲಿಯೇಳುವದೆಂದು ಶ್ರೀ॥ ದೇವಧರರು ಬೇಡಿಕೆಯನ್ನು ಕಿತ್ತೊಗೆಯಲು ಹೇಳಿದರು. ನಗರ ಜಿಲ್ಹೆಯಲ್ಲಿ ಮಿ॥ ಫೋಕ್ಸನ್‌ರವರು ೩೬೦ ಕಡೆಗಳಲ್ಲಿ ಜಲವಿರುವದೆಂದು ಹೇಳಿದ್ದರೆಂದೂ, ೧೦ ಕಡೆಗಳಲ್ಲಿ ಬಾವಿ ತೋಡಿದ್ದಲ್ಲಿ, ಬರೇ ೬ ಕಡೆಗಳಲ್ಲಿ ಮಾತ್ರ ಜಲ ಸಿಕ್ಕಿತೆಂದೂ, ಇಷ್ಟು ಸ್ಥೂಲಮಾನದ ಅನುಮಾನವನ್ನು ಸಾಮಾನ್ಯ ಮಾನವರು ಮಾಡಬಲ್ಲರೆಂದೂ ಶ್ರೀ ಸಪ್ತರ್ಷಿಗಳು ಹೇಳಿ, ಬೇಡಿಕೆಯನ್ನು ವಿರೋಧಿಸಿದರು. ಠರಾವಿನ ಮೇಲೆ ಮತ ಕೊಳ್ಳಲು, ೪೧ ಅನುಕೂಲ, ೪೦ ಪ್ರತಿಕೂಲ ಬಿದ್ದು, ಠರಾವು ಮಂಜೂರಾಯಿತು. ಸರಕಾರಿ ಪಕ್ಷವು ಠರಾವಿಗೆ ಅನುಕೂಲವಾಗಿ ಮತ ಕೊಟ್ಟಿತ್ತೆಂದು ಹೇಳಬೇಕಾಗಿಲ್ಲ. ಜಲಗಾರರ ನೇಮಣೂಕಿಯು ಬೇಸಾಯಗಾರರಿಗೆ ಜಲಸ್ಥಾನಗಳನ್ನು ತಿಳಿಸಬೇಕೆಂದು; ತಿಳಿಯಿತೇನು ?

---

೨. ಮಿ॥ ಫೋಕ್ಸನ್‌ರವರು ತಾಯಿಯ ಹೊಟ್ಟೆಯೊಳಗಿಂದ ಹೊರಬೀಳುವಾಗಲೇ ಜಲಸಂಶೋಧನ ಗುಣವನ್ನು ಪಡೆದು ಹುಟ್ಟಿರುವರೆಂದು ಹೇಳಿದರೆ, ಯಾರೂ ನಂಬಲಾರರು. ಪಾಶ್ಚಾತ್ಯ ಸಂಸ್ಕೃತಿಯ ಅನುಗ್ರಹವಾದವರಂತೂ ಇದೊಂದು ಮೂಢ ನಂಬಿಗೆಯೆಂದು ಹಳಿಯುತಿದ್ದರು. ಮಿ॥ ಫೋಕ್ಸನ್‌ರವರ ಜಲಸಂಶೋಧನದ ಗುಣವು ನಮ್ಮ ಮುಂಬಯಿ ಸರಕಾರಕ್ಕೆ ಹ್ಯಾಗೆ ತಿಳಿಯಬಂತು? ಸಾಮಾನ್ಯ ದೇಶೀ ಜಲಗಾರರು ಹೇಳುವ ಜ್ಯೋತಿಷ್ಯಕ್ಕಿಂತ ಇವರಿಗೆ ಹೆಚ್ಚಿಗೇನಾದರೂ ತಿಳಿಯುತ್ತದೇನು? ಎಂದು ಚೌಕಶಿ ಮಾಡಲಿಕ್ಕೆ ಕೆಲವು ಸಭಾಸದರು ಮುಂದಿನ ಮಾರ್ಚ ತಿಂಗಳ ವರೆಗೆ ಅವಕಾಶ ಕೊಡಹೇಳಿದರೂ, ಅದಕ್ಕೂ ಒಪ್ಪದೆ, ದುರಾಗ್ರಹ ಹಿಡಿದು, ಬೇಡಿಕೆಯು ಮಂಜೂರು ಮಾಡಲ್ಪಟ್ಟಿದೆ. ಇದರ ಮೇಲಿಂದ ವಾಚಕರಿಗೇನು ಕಂಡುಬರುವದು? ಈ ಗಾಬರಿಗೇನು ಕಾರಣ? ಮಿ॥ ಫೋಕ್ಸನ್‌ರವರು ಯುರೋಪಿಯನ್ನರು, ಎಂಬ ಒಂದೇ ಕಾರಣದಿಂದ ಈ ಮರುಳುತನದ ಸೂಚನೆಯು ಸರಕಾರದಿಂದ ಮುಂದೆ ಬಂದು ಮಂಜೂರಾಗಿ ಹೋಗಿದೆ. ಶ್ರೀ॥ ದೇವರು ಅನ್ನುವಂತೆ, ಹುಚ್ಚು ಹಿಡಿದೆನ್ನಲಿ, ಸತ್ತರೆನ್ನಲಿ, ಮೂರ್ಖರೆನ್ನಲಿ, ಬ್ರಿಟಿಶರು ದೊಡ್ಡ ದೊಡ್ಡ ಕಲಬಿನ ಮೇಲೆ ನೇಮಕಹೊಂದಿ ಹಿಂದುಸ್ಥಾನದಲ್ಲಿ ಮೆರೆದರಾಯಿತು. ಮಾನಧನಕ್ಕಿಂತ ದ್ರವ್ಯಧನವೇ ಮೇಲೆಂದು ತಿಳಿಯುವವರ ಕೃತ್ಯಗಳಿವು! ಇವಕ್ಕೂ ಹೆಚ್ಚಿಗೆ ಬರೆಯುವದೇನು?

---

೩. ಕಿರ್ಲೋಸ್ಕರವಾಡಿಯ ಕಿರ್ಲೋಸ್ಕರ ಬಂಧುಗಳನ್ನು ಅಭಿನಂದಿಸುವ ಸಮಯವು ದೊರಕಿದ ಬಗ್ಗೆ ನಮಗೆ ಅತ್ಯಾನಂದವಾಗುತ್ತದೆ. ಶ್ರೀ॥ ಕಿರ್ಲೋಸ್ಕರ ಲಕ್ಷ್ಮಣರಾಯರು ಹೊಸ ಮಾದರಿಯ ಯಂತ್ರಗಳನ್ನು ತಯಾರಿಸಿ, ಅವುಗಳ ಉಪಯುಕ್ತತೆ, ಕಾರ್ಯಕ್ಷಮತೆಯ ಬಗ್ಗೆ ಹಜ್ಜಾರ ಶಿಫಾರಸು ಪತ್ರಗಳನ್ನೂ ಪಡೆದಿರುವರು. ಇಷ್ಟಾಗಿ, ಪಂಪುಗಳ ಬೆಲೆಯು ಅಗ್ಗವಿದೆ. ಕಿರ್ಲೋಸ್ಕರ ಕಂಪನಿಯ ಪಂಪುಗಳನ್ನು ಮಾರುವ ಮಕ್ತೆಯನ್ನು ಮುಂಬಯಿಯ ಕೇ. ಬಿ. ಜೋಶಿ ಕಂಪನಿಯವರು ಕೊಂಡಿರುವರು. ಕಳೆದ ಗುರುವಾರಕ್ಕೆ ಮುಂಬಯಿಯಲ್ಲಿ ಶ್ರೀ॥ ಜೋಶಿಯವರು ಕಿರ್ಲೋಸ್ಕರ ಪಂಪುಗಳ ಪ್ರದರ್ಶನ ಮಂದಿರವನ್ನು ತೆರೆಯುವ ಸಮಾರಂಭವು ಜರುಗಿತು, ಶ್ರೀ॥ ನರಸೋಪಂತ ಕೇಳಕರರವರು ಸಭಾಪತಿಗಳಿದ್ದರು. ಶ್ರೀ॥ ನರಸೋಪಂತರವರು ಶ್ರೀ॥ ಕಿರ್ಲೋಸ್ಕರರ ಹಾಗು ಜೋಶಿಯವರ ದೇಶಾಭಿಮಾನಯುಕ್ತ ಉದ್ಯೋಗವನ್ನು ಹೊಗಳುವಾಗ, ಶ್ರೀ॥ ಕಿರ್ಲೋಸ್ಕರರ ಸ್ವಪರಾಕ್ರಮವನ್ನು ಬಣ್ಣಿಸಿದರು. “ಶ್ರೀ॥ ಕಿರ್ಲೋಸ್ಕರರು ಮೊದಲು ಬರೇ ಸೈಕಲ ದುರುಸ್ತಿ ಮಾಡುತ್ತಿದ್ದರು. ಸತತೋದ್ಯೋಗದಿಂದ, ಅವಿಶ್ರಾಂತ ಪರಿಶ್ರಮದಿಂದ, ಬುದ್ಧಿ ಕೌಶಲ್ಯದಿಂದ ಶ್ರೀ॥ ಕಿರ್ಲೋಸ್ಕರರು ಕಿರ್ಲೋಸ್ಕರವಾಡಿಯಂಥ ಪ್ರಚಂಡ ಕಾರಖಾನೆಯನ್ನು ರಚಿಸಿ, ರೆಂಟೆ, ಪಂಪುಗಳನ್ನು ತಯಾರಿಸುವ ದೊಡ್ಡ ಕಾರಖಾನದಾರರಾಗಿರುವರು.” ನಿಜವಾಗಿ ಶ್ರೀ॥ ಕಿರ್ಲೋಸ್ಕರರ ಸಾಹಸವು ಅಭಿನಂದನೀಯವಿದೆ. ನರಸೋಪಂತರು ಕೊನೆಗೆ ಉದ್ಗರಿಸಿದಂತೆ, ಕಿರ್ಲೋಸ್ಕರರು ಹಿಂದುಸ್ಥಾನದ ಫೋರ್ಡರೆಂದು ಹೇಳಬಹುದು. “ಶ್ರೀ॥ ಕಿರ್ಲೋಸ್ಕರರು ಬೆಳಗಾವಿಯಲ್ಲಿ ಚಿಕ್ಕ ಪುಟ್ಟ ಕಮ್ಮಾರ ಕೆಲಸ ಮಾಡುವಾಗ ನಾವು ನೋಡಿದ್ದೇವೆಂ”ದು ಹೇಳಿ, ಬೇಸಾಯ ಖಾತೆಯ ಡೈರೆಕ್ಟರರಾದ ಡಾ॥ ಮೆನ್‌ರವರು ಅವರ ಸಾಹಸವನ್ನು ಕೊಂಡಾಡಿದರು. ಶ್ರೀ॥ ಕಿರ್ಲೋಸ್ಕರ ಬಂಧುಗಳ ದೇಶಾಭಿಮಾನವನ್ನೂ, ಸಾಹಸವನ್ನೂ ನಾವೂ ಕೊಂಡಾಡಿ, ಹೊಸ ಹೊಸ ದೇಶೋದ್ಧಾರಕ ಉದ್ಯೋಗಗಳನ್ನು ಕೈಕೊಳ್ಳಲು ಶ್ರೀ॥ ಕಿರ್ಲೋಸ್ಕರರವರಿಗೆ ಆಯುರಾರೋಗ್ಯಪ್ರಾಪ್ತಿಯಾಗಲೆಂದು ಬಯಸುವೆವು.

---

೪. ಹುಬ್ಬಳ್ಳಿ–ಕಾರವಾರ, ಹುಬ್ಬಳ್ಳಿ–ಶಿರಸಿಗಳ ನಡುವೆ ಉಗಿಬಂಡಿಯ ಮಾರ್ಗಗಳನ್ನು ರಚಿಸುವದಕ್ಕಾಗಿ ನಮ್ಮಲ್ಲಿಯ ಶ್ರೀ॥ ಕರ್ಕಿ, ಹುಬ್ಬಳ್ಳಿಯ ಶ್ರೀ॥ ಕಂಬಳಿಯವರು ಕಾಯಿದೆ ಕೌನ್ಸಿಲಿನಲ್ಲಿ ಯತ್ನ ಮಾಡುತ್ತಿದ್ದರೆಂದು ಕಾಯಿದೆ ಕೌನ್ಸಿಲಿನಲ್ಲಿ ದೊರಕಿದ ಮಾಹಿತಿಯ ಮೇಲಿಂದ ತಿಳಿಯುವ ಹಾಗಿದೆ. ನಮ್ಮ ಜಿಲ್ಹೆಯಲ್ಲಿ ಉಗಿಬಂಡಿಯಾಗುವ ಲಕ್ಷಣಗಳು, ಈ ವರೆಗೆ ದೊರೆತ ಮಾಹಿತಿಯ ಮೇಲಿಂದ, ಇರುವದಿಲ್ಲೆಂದೂ ವಾಚಕರಿಗೆ ತಿಳಿಯುವ ಹಾಗಿದೆ. ಉಗಿಬಂಡಿ ಮಾರ್ಗಗಳ ತಪಾಸಣೆಯು ನಡೆದು, ಖರ್ಚಿನ ಮಾನದಿಂದ ಹುಟ್ಟುವಳಿಯಾಗುವದಿಲ್ಲೆಂತು ಅರಿತು, ಈ ಬದಿಯ ಉಗಿಬಂಡಿ ರಚನೆಯ ಯೋಜನೆಯನ್ನು ಸರಕಾರವು ತ್ಯಜಿಸಿದೆ. ಶ್ರೀ॥ ಕರ್ಕಿ ಹಾಗು ಕಂಬಳಿಯವರು ಯತ್ನ ಮಾಡಿದರೆ, ನಮ್ಮ ಕಾನಡಾ ಜಿಲ್ಹೆಯ ಮೂಲೆಗುಂಪಾದ ಸ್ಥಿತಿಯನ್ನು ಲಕ್ಷಿಸಿದರೆ, ಉಗಿಬಂಡಿಯ ಏರ್ಪಾಟಿನಿಂದ ನಮ್ಮ ಜಿಲ್ಹೆಗೆ ಬಹುಮಟ್ಟಿಗೆ ಲಾಭವಾಗುವದೆಂದು ಯಾರೂ ಹೇಳುವರು. ಈ ಮತವು ನಿರ್ವಿವಾದ ಮತವೆಂದು ನಾವು ತಿಳಕೊಂಡಿದ್ದೆವು. ಉಗಿಬಂಡಿ ರಚನೆಯಿಂದ ಬಂಡವಲುಗಾರರಿಗೆ ಒದಗುವ ಲಾಭಾಲಾಭಗಳ ಮಾತು ಒತ್ತಟ್ಟಿಗಿಟ್ಟು, ರೇಲ್ವೆಯ ಆಗಮನದಿಂದ ಕಾನಡಾ ಜಿಲ್ಹೆಯ ನಿವಾಸಿಕರಿಗೆ ಸಾಮಾನ್ಯವಾಗಿ ಲಾಭವಾಗಲೇಬೇಕು, ಎಂಬುದು ಅಖಿಲರ ಮತವಿರುವದೆಂದು ನಮ್ಮ ನಂಬಿಗೆಯಿತ್ತು. ಆದರೆ, ಕೆಲವು ಬೇಸಾಯಗಾರರ ಹಿತಚಿಂತಕರು ಬೇಸಾಯ ಹಿತಚಿಂತನೆಯಿಂದ ಉಗಿಬಂಡಿಯ ಏರ್ಪಾಟಾದಲ್ಲಿ ಬೇಸಾಯಗಾರರಿಗೆ ಅಹಿತವಾಗುವದಲ್ಲದೆ, ಹೊಲಮನೆಗಳಲ್ಲಿ ಬಂಜರು ಬಿದ್ದು ಕಾನಡಾ ಜಿಲ್ಹೆಯು ಹಾಳು ಮನೆಗಳ ಬೀಡಾಗುವದೆಂದು

ಧೋರಣಿಟ್ಟಿರುವರು. ಅವರ ಕಾರಣವು ಮುಖ್ಯವಾಗಿ ಹೀಗಿದೆ. ಉಗಿಬಂಡಿಯು ರಚನೆಗೆ ಹೇರಳ ಕೂಲಿಕಾರರು ತಗಲುವರು, ನಮ್ಮ ಜಿಲ್ಹೆಯಲ್ಲಿ ಹೊಲಗೆಲಸಗಳಿಗೆ ಕೂಲಿಕಾರರು ಸಿಗುವದು ದುರ್ಲಭವಿದ್ದಾಗ, ಉಗಿಬಂಡಿಯ ಕೆಲಸಕ್ಕಾಗಿ ಇದ್ದ ಕೂಲಿಕಾರರು ಕೂಲಿಯ ಆಶೆಯಿಂದ ಹೋದರೆ, ಬೇಸಾಯವು ನಿಸ್ಸಾರವಾಗಿ ನಮ್ಮ ದುರ್ದಶೆಯಾಗುವದು. ಮೂಲ ಆಕ್ಷೇಪವು ಇದೇ.

---

೫. ಉಗಿಬಂಡಿಯ ಇತರ ಲಾಭಾಲಾಭಗಳ ವಿಷಯ ಮತಭೇದವಿರುವದು ಸಹಜವದೆ. ಅವಶ್ಯವಿದ್ದರೆ, ನಮ್ಮ ಬ್ರಿಟಿಶ ಸರಕಾರದ ಉಗಿಬಂಡಿಯ ಧೋರಣದ ವಿಷಯ ಮುಂದೆ ನಾವು ಬರೆಯುವೆವು. ಸದ್ಯಕ್ಕೆ ಇದೊಂದೇ ಆಕ್ಷೇಪವನ್ನು ಖಂಡಿಸುವದು ನಮ್ಮ ಕರ್ತವ್ಯವಾಗಿದೆ. ಉಗಿಬಂಡಿ ಬಂದಲ್ಲಿ ಆಳುಗಳು ತಗಲುವರು; ಆಳುಗಳ ಕೂಲಿಯು ಮಾನವೂ ಏರುವದು. ಇವೆಲ್ಲ ಯಾರೂ ಒಪ್ಪತಕ್ಕಂಥ ಮಾತು ಆದರೆ, ಬೇಸಾಯವು ನಿಸ್ಸಾರವಾಗುವದು, ಎಂಬ ಮಾತನ್ನು ಮಾತ್ರ ನಾವು ಒಪ್ಪಲಾರೆವು; ಯಾರೂ ಒಪ್ಪಲಿಕ್ಕಿಲ್ಲ. ಆಳುಗಳ ಬೇಡಿಕೆಯಿದ್ದ ಕೂಡಲೆ ಇಲ್ಲಿಯ ಬೇಸಾಯಗಾರರೇ ಮಾತ್ರ ಕೂಲಿಗಾರರಾಗುತ್ತಾರೆನ್ನಲಾಗದು. ನಾಲ್ಕೂ ಬದಿಯಿಂದ ಜನರು ಬಂದು ಕೂಲಿಕಷ್ಟ ಮಾಡಿ ಜೀವಿಸುವರು. ಮುಂಬಯಿ, ಪುಣೆ, ಬೆಳಗಾಂವ, ಹುಬ್ಬಳ್ಳಿ, ಧಾರವಾಡ, ವಿಜಾಪುರ, ಗದಗ ಮುಂತಾದ ಕಡೆಗಳಲ್ಲಿ ರೇಲ್ವೆಯಿಂದ ಕೂಲಿಕಾರರು ಸಿಗದೆ ಬೇಸಾಯವು ಕೆಟ್ಟುಹೋದ ಹಕೀಕತೇನು ನಾವರಿಯೆವು. ಉಗಿಬಂಡಿಯಾದ್ದರಿಂದ, ಉಗಿಬಂಡಿಯ ಅನುಕೂಲತೆಯ ಮೂಲಕ ಅಲ್ಲಲ್ಲಿಯ ಬೇಸಾಯಗಾರರಿಗೆ ಕಾಳು-ಕಡಿ, ಹಣ್ಣು-ಹಂಪಲ, ಕಾಯಿಪಲ್ಲೆ ಇತ್ಯಾದಿ ಜಿನಸುಗಳನ್ನು ಬೆಳೆಸಿ ಮಾರಲು ಅನುಕೂಲ ಪೇಟೆಯು ದೊರಕಿ ಉಪಕಾರವಾಗಿರುವದು ಹೊರತು, ಅಪಕಾರವಾಗಲಿಲ್ಲ. ನಮ್ಮಲ್ಲಿ ರೇಲ್ವೆ ಬಂದರೆ, ನಮ್ಮಲ್ಲಿಯ ಅಡಿಕೆ, ಮೆಣಸು ಯಾಲಕ್ಕಿ ಮುಂತಾದ ಸಾಮಗ್ರಿಗಳು ನಮ್ಮಲ್ಲಿಂದಲೇ ರಫ್ತಾಗುವವು. ಜಿಲ್ಹೆಯೊಳಗೆ ಬರತಕ್ಕ ಸಾಮಗ್ರಿಗಳು ನಮ್ಮಲ್ಲಿಂದಲೇ ಆಮದಾಗುವವು. ಆಮದು ರಫ್ತಿನಿಂದ ನೂರಾರು ಬಡಬಗ್ಗರು ಕೂಲಿಕಷ್ಟ ಮಾಡಿ ಜೀವಿಸುವರು. ಜನವಸ್ತಿಯು ಪಟ್ಟಣಗಳಲ್ಲಿ ಮಿಗಿಲಾದಾಗ, ಅವರ ಮಾನವೀ ಜೀವನಕ್ಕೆ ಅವಶ್ಯವಿರುವ ಪದಾರ್ಥಗಳ ಬೇಡಿಕೆಯು ಹೆಚ್ಚಾಗಿ, ಹಳ್ಳಿಗಳೊಳಗಿನ ಬೇಸಾಯಕ್ಕೆ ಉತ್ತೇಜನ ಸಿಗುವದು. ಹೀಗೆ ಬೇಸಾಯಕ್ಕೆ ಯಾವದೇ ಪರಿಯಿಂದ ಹಾನಿಯಾಗುವ ಸಂಭವವಿಲ್ಲ. ಉಗಿಬಂಡಿಯ ಇತರ ಲಾಭಾಲಾಭಗಳ ವಿಷಯ ಮತಭೇದವಿದ್ದರೂ, ಸರಕಾರದ ರೇಲ್ವೆ ಧೋರಣವು ನಮಗೆ ಅನ್ಯಾಯವಿದ್ದರೂ, ನಮ್ಮಲ್ಲಿ ರೇಲ್ವೆ ತರಲು ಶ್ರೀ ಕರ್ಕಿ-ಕಂಬಳಿಯವರು ಮಾಡಿದ ಯತ್ನಗಳು ಯಶಸ್ವಿಯಾಗಬೇಕೆಂದು ನಮ್ಮ ಇಚ್ಛೆ ಇದೆ. ಯಶಸ್ವಿಯಾಗುವ ಲಕ್ಷಣಗಳಿಲ್ಲ. ಆ ಮಾತು ಬೇರೆ.

---

೬. ನಾಳೆ ಮಂಗಳವಾರ ಶ್ರೀಮತಿ ಅಹಿಲ್ಯಾಬಾಯಿ ಹೋಳಕರರವರ ಪುಣ್ಯತಿಥಿಯಿದೆ. ಅಹಿಲ್ಯಾಬಾಯಿಯವರ ಹೆಸರು ಕೇಳಿದ ಕೂಡಲೆ, ಅವರ ಭಾವಪೂರ್ಣರಾಗದಿದ್ದವರು ವಿರಳರು. ಅಹಿಲ್ಯಾಬಾಯಿಯವರಿಗೆ ೨೦ನೇ ವರುಷ ಪ್ರಾಯದಲ್ಲಿ ವೈಧವ್ಯವು ಕಾಲಮಹಿಮೆಯಿಂದ ಪ್ರಾಪ್ತವಾದಾಗ್ಯೂ, ಅಹಿಲ್ಯಾಬಾಯಿಯವರು ಸನಾತನ ವೈಧವ್ಯ ಧರ್ಮದಂತೆ ಮನೋನಿಗ್ರಹದಿಂದ ನಡೆದು, ನಿಷ್ಕಲಂಕ ಕೀರ್ತಿಯನ್ನು ಸಂಪಾದಿಸಿರುವರು. ಇಂದೂರ ದರಬಾರದ ರಾಜ್ಯಕಾರಭಾರವನ್ನು [illegible] ಪ್ರಜಾನುರಂಜನದಿಂದ ನಡಿಸಿ, ತಮ್ಮ ರಾಜಕಾರಣ ಕೌಶಲ್ಯವನ್ನೂ, ಪ್ರಜಾವಾತ್ಸಲ್ಯವನ್ನೂ ಪ್ರಕಟಿಸಿರುವರು. ದೇವಿ ಅಹಿಲ್ಯಾಬಾಯಿಯವರು ಧರ್ಮನಿರತರಾಗಿ ನಡೆದು ಧರ್ಮಕಾರ್ಯಗಳಿಗಾಗಿ ಕೋಟ್ಯಾವಧಿ ರೂಪಾಯಿಗಳನ್ನು ಅರ್ಪಿಸಿರುವರು. ನಮ್ಮ ಶ್ರೀ ಗೋಕರ್ಣ ಕ್ಷೇತ್ರದಲ್ಲಿ ಅಹಿಲ್ಯಾಬಾಯಿಯವರು ಸ್ಥಾಪಿಸಿದ ಛತ್ರವಿದೆ. ಇಂಥ ಸನಾತನ ಧರ್ಮನಿರತ ರಾಜಕಾರಣ ಧುರಂಧರ ಪುಣ್ಯಸ್ತ್ರೀಯ ಶ್ರಾದ್ಧ ತಿಥಿಯು ನಾಳೆ. ನಾಳೆ ಇಂದೂರಿನಲ್ಲಿ ಅಹಿಲ್ಯಾಬಾಯಿಯವರ ಮೂರ್ತಿಯ ಮೆರವಣಿಗೆಯಾಗಿ, ಅಖಿಲ ಹಿಂದುಸ್ಥಾನದೊಳಗಿಂದ ಶ್ರೀ ದೇವಿಯರಿಗೆ ಆದರದಿಂದ ಕಳುಹಿದ ಪುಷ್ಪಹಾರಗಳ ಅರ್ಪಣೆಯಾಗುತ್ತದೆ. ಶ್ರೀ ಹೋಳಕರ ಅಹಿಲ್ಯಾಬಾಯಿಯವರ ಪುಣ್ಯಸ್ಮರಣೆಯನ್ನು ನಾವೆಲ್ಲರೂ ನಾಳೆ ಮಾಡಿ, ಶ್ರೀ ದೇವಿಯವರಂಥ ದೇಶೋದ್ಧಾರಕ, ಧರ್ಮನಿರತ, ನಿಷ್ಕಲಂಕ ಸ್ತ್ರೀಯರು ನಮ್ಮೀ ಭರತ ಭೂಮಿಯಲ್ಲಿ ಜನಿಸಿ, ನಮ್ಮ ಉದ್ಧಾರವಾಗಲೆಂದು ಜಗದೊಡೆಯನೊಡನೆ ನಾವು ಪ್ರಾರ್ಥಿಸುವೆವು. ಇದೇ ಶ್ರೀ ಅಹಿಲ್ಯಾಬಾಯಿಯವರ ಕೊರಳಿಗೆ ನಾವು ಭಕ್ತಿಯಿಂದ ಅರ್ಪಿಸುವ ಪುಷ್ಪಹಾರವು!

ಸ್ಥಾನಿಕ ವೃತ್ತಾಂತ.

ಕುಮಟಾ— ಆಶ್ಲೇಷಾ ಮಳೆಯು ವಿಶೇಷ ಸುರಿಯಿತು. ನಿನ್ನೆ ರಾತ್ರಿಯಿಂದ ಮಘಾ ನಕ್ಷತ್ರಕ್ಕೆ ಪ್ರಾರಂಭವಾಗಿದೆ ನಿನ್ನೆ ರಾತ್ರಿ ರಭಸದ ಮಳೆ. ವಿಲಕ್ಷಣವಾದ ತಂಪು. ಜ್ವರಾದಿ ರೋಗಗಳ ಬಾಧೆ ಇನ್ನೂ ಇಳಿದಿಲ್ಲ. ಈ ವಾರದಲ್ಲಿ ೯—೮೬ ಇಂಚು ಮಳೆ; ಈವರೆಗೆ ಒಟ್ಟು ೧೨೨—೭೩ ಇಂಚು ಮಳೆಯಾಯಿತು.

ಇಲ್ಲಿಯ ಮ್ಯುನಿಸಿಪಲ್ ಇಲೆಕ್ಷನದ ಪರಿಣಾಮವು ಕಳೆದ ಮಂಗಳವಾರಕ್ಕೆ ಮ್ಯುನಿಸಿಪಲ್ ಆಫೀಸಿನಲ್ಲಿ ಹೇಳಲಾಯಿತು. ಈ ಕೆಳಗಿನ ೧೨ ಉಮೇದ್ವಾರರು ಆರಿಸಿಬಂದಿರುವರು. (೧) ಶ್ರೀ ವಾಮನ ವೆಂಕಟೇಶಯ್ಯಾ ಕಲ್ಯಾಣಪುರಕರ, ೧೮೫ (೨) ಜಗನ್ನಾಥ ವಿಷ್ಣು ಗಾವಸ್ಕರ, ೧೬೧, (೩) ಶೇಷಗಿರಿ ವಾಸುದೇವ ಕಾಮತ, ೧೧೬. (೪) ಗೋವಿಂದ ಅನಂತ ಪೈ ಕಾಗಾಲ, ೧೨೯. (೫) ಸೀತಾರಾಮ ಗಣಪತ ಭಾಗವತ, ೧೦೯. (೬) ಕೇಶವ ನಾರಾಯಣ ಪೈ, ೧೦೮. (೭) ಪಣ್ಣಳಪ್ಪಾ ಬಿಪ್ಪಯ್ಯಾ ಪೈ, ೧೩೭. (೮) ನರಸಿಂಹ ಶ್ರೀನಿವಾಸ ಶ್ಯಾನಭಾಗ ಚಿತ್ರಿಗಿ, ೧೨೬, (೯) ಗಂಗಾಧರ ಗಣಪಯ್ಯಾ ಶ್ಯಾನಭಾಗ, ೧೨೬, (೧೦) ರಾಮಣಾ ಹನುಮಂತ ಶ್ಯಾನಭಾಗ, ೧೪೪. (೧೧) ಅಣ್ಣಪ್ಪಾ ರಾಮಚಂದ್ರ ಪೈ, ೧೧೭. (೧೨) ಅಬಿದಿನ ಇಬ್ರಾಹಿಮ ಸಾಹೇಬ, ೧೯. ಉಮೇದ್ವಾರರು ಪಡೆದ ಮತಗಳು ಅವರ ಹೆಸರ ಮುಂದೆ ಕಾಣಿಸಲ್ಪಟ್ಟಿವೆ.

ನಾಗೂರ ಗ್ರಾಮದ ಪೈಕಿ ಕಡಕೋಡ ಎಂಬಲ್ಲಿ ಒಂದು ಆಕಳು ಹೈನಾಗಿ ಬಾಲವಿಲ್ಲದ ಕರುವನ್ನು ಹಾಕಿದೆ! ಕರುವು ಕ್ಷೇಮದಿಂದಿದೆ.

ಈ ಕಡೆಯ ಅಗಬೋಟಿಯ ವ್ಯವಹಾರವು ಇದೇ ಬರುವ ಸಪ್ಟಂಬರ ೧೭ನೇ ತಾರೀಖಿಗೆ ಮುಂಬಯಿಯಿಂದ ಉಗಿಹಡಗವು ಹೊರಟು ಪ್ರಾರಂಭವಾಗುವದೆಂದು ಮುಂಬಯಿ ಸ್ಟೀಮ ನೆವಿಗೇಶನ್ ಕಂಪನಿಯವರು ಪ್ರಕಟಿಸಿರುವರು.

ಇಲ್ಲಿಯ ಜೈನರ ಬಸ್ತಿ ದೇವಾಲಯದಲ್ಲಿ ನಡೆದ ಕಳುವಿನ ಪತ್ತೆಯಾಗಿ ನಾಮಧಾರಿ ಜಾತಿಯ ಮಾಸ್ತಿ ಎಂಬವನಮೇಲೆ ಖಟ್ಲೆ ನಡೆದದೆ.

ಕಾರವಾರ.—ಮಳೆಯು ಜೋರಿನಿಂದ ಸುರಿಯುತ್ತದೆ

ಸ್ತ್ರೀ ವಿಶ್ವವಿದ್ಯಾಲಯದ ಪ್ರೊ| ಧೋಂಡೊಪಂತ ಕರ್ವೇಯವರು ಇಲ್ಲಿಯ ಕಾರವಾರ ಹೈಸ್ಕೂಲು, ಮಿತ್ರಸಮಾಜ ಹಾಗು ಹುಡುಗಿಯರ ಶಾಲೆಯಲ್ಲಿ ಸ್ತ್ರೀ ವಿಶ್ವವಿದ್ಯಾಲಯದ ವಿಷಯ ಉಪಯುಕ್ತ ಮಾಹಿತಿಯನ್ನು ಹೇಳಿದರು. ಊರವರು ಸುಮಾರು ೩೮೦ ರೂಪಾಯಿಗಳನ್ನು ಅರ್ಪಿಸಿದರು. ವಾರ್ಷಿಕ ೫ ರೂಪಾಯಿ ವರ್ಗಣಿ ಕೊಡಲೊಪ್ಪಿದ ೫೦ ಮಂದಿ ಸಭಾಸದರಾಗಿರುವರು.

ಡಿ| ಜಡ್ಜ ಮಿ| ಡೇವ್ಹಿಸನರವರಿಗೆ ಪುಣೆಗೆ ವರ್ಗವಾಗಿದೆ. ಇವರು ತಾ. ೨೨ ನೇಗೆ ಇಲ್ಲಿಂದ ತೆರಳುವರು. ಇವರ ಸ್ಥಳದಲ್ಲಿ ಮಿ| ಖಾರಕರ ಎಂಬವರು ಬರುವವರಿದ್ದಾರೆ. ಮಿ| ಡೇವ್ಹಿಸನರವರ ಕಾರಕೀರ್ದಿಯಲ್ಲಿ ಮೂಲ ತೀರ್ಪು ತಿರುಗಿದ ಉದಾಹರಣೆಗಳು ತೀರ ಅಪರೂಪ.

ಸೆಟಲ್‌ಮೆಂಟ ಆಫೀಸರ ಮಿ| ಕೊಲಿನ್ಸರವರು ಕ್ರಿಸ್ತವಾಸಿ ಜುವಾಂವನ ಕುಟುಂಬಕ್ಕೆ ಮದ್ದತ್ತು ಮಾಡಿದ ರಕಮು ೩೦೫೦ ರೂಪಾಯಿ ಆಗುವದು.

ಸಿದ್ಧಾಪುರ.—ಸಿದ್ಧಾಪುರ ರಾಷ್ಟ್ರೀಯ ಶಾಲಾ ಮುಖ್ಯಾಧ್ಯಾಪಕರು ಬರೆದು ತಿಳಿಸುವದೇನಂದರೆ:—

ಕಾರವಾರ ತಾಲೂಕ ಸದಾಶಿವಗಡ ಕಾಂಗ್ರೆಸ ಕಮಿಟಿಯಿಂದ ಸಿದ್ಧಾಪುರ ರಾಷ್ಟ್ರೀಯ ಶಾಲೆಗೆ ದೇಣಿಗಿಯಾಗಿ ಶ್ರೀ| ಜಿ. ಎಸ್. ನಾಡ್ಕರ್ಣಿಯವರು ಕಳಿಸಿದ ರೂಪಾಯಿ ೨೫ ತಲ್ಪಿದೆ. ಸದಾಶಿವಗಡ ಕಾಂಗ್ರೆಸ ಕಮಿಟಿಯವರಿಗೂ, ಶ್ರೀ| ಜಿ. ಎಸ್. ನಾಡ್ಕರ್ಣಿಯವರಿಗೂ ಸಿದ್ಧಾಪುರ ರಾಷ್ಟ್ರೀಯ ಶಾಲೆಯ ಮಂಡಳಿಗರು ಬಹಳ ಆಭಾರಿಯಾಗಿದ್ದಾರೆ. ಇದೇ ಪ್ರಕಾರ ಕಾರವಾರ ಜಿಲ್ಹೆಯ ಇತರ ಎಲ್ಲ ಗ್ರಾಮ ಕಾಂಗ್ರೆಸ ಕಮಿಟಿಗಳೂ, ತಾಲೂಕಾ ಕಾಂಗ್ರೆಸ ಕಮಿಟಿಗಳೂ, ಉದಾರಾಶ್ರಯದಿಂದ ಸಹಾಯ ಮಾಡಬೇಕಾಗಿ ವಿನಂತಿ

ನಿಲಕುಂದದ ಮಾರ್ಗವಾಗಿ ಕುಮಟೆಗೆ ಹೋಗುವ ರಸ್ತೆಯಲ್ಲಿ ೫ ಸಂಕಗಳು ಹೆಸರಿಲ್ಲದೆ ಹೋಗಿರುತ್ತವೆ. ಈ ಬಗ್ಗೆ ಸುಮಾರು ೪೦೦ ರೂಪಾಯಿ ಖರ್ಚ ಬಿದ್ದಿದೆಯೆಂತ ತಿಳಿಯುತ್ತದೆ. ಘಟ್ಟದ ಕೆಳಗೆ ಹೋಗುವ ಎಷ್ಟೋ ಜನರು ಈ ರಸ್ತೆಯ ಮೇಲಿಂದ ಹೋಗಲಿಕ್ಕೆ ಅಸಾಧ್ಯವಾಗಿ ತಿರುಗಿ ಬಂದರು. ಈ ವಿಷಯವಾಗಿ ಚೌಕಶಿ ಮಾಡುವವರು ಯಾರು? ಚೌಕಶಿ ಮಾಡಿದರೂ ಸುಲಭವಾದ ಉತ್ತರವನು ಹುಡುಕಲು ಕಷ್ಟವಿಲ್ಲ. ಹೊಳೆಯಿಂದ ಬಳದು ಹೊ

ಯಾಕೆಂದರೆ ತೀರಿತು. ಪುನಃ ಮತ್ತೊಂದು ದೀಲು ಮಾಡಲಿಕ್ಕೆ ಅಡ್ಡಿಯಿಲ್ಲ.

ಇಲ್ಲಿಯ ದೊಡ್ಡ ಅಧಿಕಾರಸ್ಥರ ಪೈಕಿ ಕೆಲವರು ತಮ್ಮ ಪ್ರೀತಿಯ ಉಮೇದವಾರರಿಗೆ ಮತ ಕೊಡಬೇಕಾಗಿ ಲೋಕಲಬೋರ್ಡ ಮತದಾರರಿಗೆ ಬೋಧಿಸಲಿಕ್ಕೆ ಶುರು ಮಾಡಿರುವರಾಗಿ ಕೇಳುತ್ತೇವೆ. ಹೀಗೆ ಮಾಡುವದರಲ್ಲಿ ಅವರ ಉದ್ದೇಶವು ಅವರ ತಿಳುವಳಿಕೆಯಂತೆ ಸ್ತುತ್ಯವಾಗಿರಬಹುದು. ಆದರೆ, ಪ್ರತಿಯೊಂದು ವಿಷಯದಲ್ಲಿಯೂ ಅಧಿಕಾರಸ್ಥರ ಸೂಚನೆಯ ನಿರೀಕ್ಷಣೆ ಮಾಡುತ್ತ ಕುಳಿತುಕೊಳ್ಳುವ ಕಾಲವು ಹಿಂದಾಗಿದೆ. ಕಾರಣ ಈ ವಿಷಯದಲ್ಲಿ ಅಧಿಕಾರಸ್ಥರು ತಟಸ್ಥರಾಗಿದ್ದು ಜನರೇ ತಮಗೆ ಯೋಗ್ಯ ಕಂಡ ಪ್ರತಿನಿಧಿಗಳನ್ನು ಆರಿಸಿಕೊಡುವಂತೆ ಉತ್ತೇಜನವಾಗಲಿಕ್ಕೆ ಆಸ್ಪದ ಕೊಡಬೇಕಾಗಿ ಅಧಿಕಾರಸ್ಥರಿಗೆ ವಿನಂತಿಸುವೆ.

ಇಲ್ಲಿಯ ಆಸ್ಪತ್ರಿಯಲ್ಲಿ ಹೆಂಗಸರು (ದಾಯಿಯಾಗಲೀ, ಕೂಲಗಿತ್ತಿಯಾಗಲೀ) ಯಾರೂ ಇಲ್ಲದೆ ಬಹಳ ತೊಂದರೆಯಾಗಿರುವದು. ಡಾಕ್ಟರರೇ ಹೆಂಗಸರ ಕೆಲಸವನ್ನು ಮಾಡಬೇಕಾಗುವದು. ಇಲ್ಲಿಯಗಿಂತ ಸಣ್ಣ ಆಸ್ಪತ್ರಿಗಳಲ್ಲಿ ಹೆಣ್ಣು ನೌಕರರು ಇರುವರು. ಆದರೆ ಇಲ್ಲಿಯವರ ದುರದೃಷ್ಟದಿಂದ ಇಲ್ಲಿ ಆ ತರದ ವ್ಯವಸ್ಥೆ ಯಾವದೂ ಇಲ್ಲದಿರುವದರಿಂದ ಎಷ್ಟೋ ಜನ ಹೆಂಗಸರು ಸಂಕೋಚದಿಂದ ಆಸ್ಪತ್ರಿಯ ಉಪಯೋಗ ಮಾಡಿಕೊಳ್ಳಲಿಕ್ಕೆ ಅನುಕೂಲವಿಲ್ಲದೆ ತಮಗೆ ಬಂದ ಕಷ್ಟವನ್ನು ಮೂಕವೃತ್ತಿಯಿಂದ ಸಹಿಸಿಕೊಳ್ಳಬೇಕಾಗಿದೆ.

ವೃತ್ತಸಾರ.

— ಮುಛಲೀ ಪಟ್ಟಣದ ಬಳಿಯಲ್ಲಿ ತಾಕುರು ಎಂಬ ಗ್ರಾಮವಿದೆ. ಇಲ್ಲಿಯ ೧೭ ವರ್ಷ ಪ್ರಾಯದ ವಿಧವೆಯೊಬ್ಬಳು ಇಸ್ಲಾಮ ಧರ್ಮಕ್ಕೆ ಸೇರಿ ಮಹಮ್ಮದೀಯನೊಬ್ಬನನ್ನು ಮದುವೆಯಾದಳು. ಸನಾತನಿಗರು ಇತ್ತ ಲಕ್ಷಗೊಡಲಿ.

— ಮೊರೋಕ್ಕೋದ ಯುದ್ಧದಲ್ಲಿ ಫ್ರೆಂಚರಿಗೆ ಸೋಲಾಗುತ್ತಿದೆ. ಮಹಮ್ಮದೀಯರು ಫ್ರೆಂಚರ ವಿಮಾನಗಳನ್ನು ನೆಲಕ್ಕೆ ಕೆಡಹಿದರು. ಮದ್ದುಗುಂಡು ಒಂಟೆಗಳಮೇಲೆ ಹೇರಿಹೋಗುತ್ತಿತ್ತು. ಅದನ್ನು ಮುಸಲ್ಮಾನರು ಹಸ್ತಗತ ಮಾಡಿಕೊಂಡಿರುವರು.

— ಇಟಾಲಿ ದೇಶದ ಇಸ್ಪೇರಿಯಾ ಎಂಬ ವಿಮಾನವು ಪ್ರತಿ ತಾಸಿಗೆ ೧೦೦ ಮೈಲಿನಂತೆ ಆಕಾಶಮಾರ್ಗದಿಂದ ಹಾರಿಹೋಗುತ್ತದೆ. ಸದ್ಯಕ್ಕೆ ಇದು ೨೪ ತಾಸುಗಳಲ್ಲಿ ೧೩೦೦ ಮೈಲು ಪ್ರವಾಸ ಮಾಡಿ ಮರಳಿ ಬಂತು. ಮಾನವನ ಮಹತ್ವಾಕಾಂಕ್ಷೆಗೆ ಎಲ್ಲೆ ಇರುವದೇ !

—ಮುಂಬಯಿಯ ಬಾಂದ್ರಾದಲ್ಲಿ ವಕೀಲರ ಹೆಂಡತಿಯಾದ ಸೌ। ಮನೋರಮಾ ಬಾಯಿಯವರು ತನ್ನ ಗಂಡನಮೇಲೆ ಫಿರ್ಯಾದು ಕೊಟ್ಟರು. ಗಂಡನು ಬೀಗತ್ತಿಯೊಡನೆ ಅಧರ್ಮ ಸ್ನೇಹಸಂಬಂಧ ಬೆಳೆಸಿದ್ದನೆಂದು ಇವಳ ಆರೋಪ. ಈ ಬಗ್ಗೆ ಪೋಲೀಸರು ಚರ್ಚೆ ನಡಿಸಿ, ಆರೋಪವು ಅಯಥಾರ್ಥವೆಂದು ರಿಪೋರ್ಟು ಮಾಡಿರುವರು. ಸುಳ್ಳು ಫಿರ್ಯಾದಿ ಕೊಟ್ಟ ಬಗ್ಗೆ ಸೌ। ಮನೋರಮಾ ಬಾಯಿಯವರಮೇಲೆ ಇಲಾಜು ನಡೆದದೆ.

—ಕಾನಪುರದೊಳಗೆ ರಾಷ್ಟ್ರೀಯ ಸಭೆಯ ಅಧಿವೇಶನದ ತಯಾರಿಯು ಭರದಿಂದ ನಡೆದದೆ. ಡಾ। ಮುರಾರಿಲಾಲರು ಸ್ವಾಗತ ಮಂಡಳದ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು. ೧ ಲಕ್ಷ ರೂಪಾಯಿಗಳ ದ್ರವ್ಯಸಂಚಯ ಮಾಡುವ ವಿಚಾರವಾಗಿಯದೆ.

—ಫ್ರಾನ್ಸ ದೇಶದಲ್ಲಿ ೩೦ ಲಕ್ಷ ಎಳೆ ಹುಡುಗಿಯರು ಪ್ರಪಂಚಸುಖವಿಲ್ಲದೆ ನರಳುತ್ತಿರುವರು. ಆದರಿಂದಲೇ ನಮ್ಮಲ್ಲಿಯ ಶ್ರೀ। ಎಸ್. ಆರ್. ಬೊಮ್ಮನಜಿಯವರು ಮುದಿಪ್ರಾಯದಲ್ಲಿಯೂ ಫ್ರೆಂಚ ಹುಡುಗಿಯನ್ನು ಮದುವೆಮಾಡಿಕೊಳ್ಳಲು ಬಯಸಿದರೇನು?

—ರಾಷ್ಟ್ರಸಂಘದ ಅಧಿವೇಶನಕ್ಕಾಗಿ ಪತಿಯಾಲಾ ಸಂಸ್ಥಾನದ ಮಹಾರಾಜರು ಹಿಂದುಸ್ಥಾನದ ಪ್ರತಿನಿಧಿಗಳಾಗಿ ಹೋಗಿರುವರು. ಅಲ್ಲಿಯ ಸೇವ್ಹೊಯ ಎಂಬ ದೊಡ್ಡ ಹೋಟೇಲಿನಲ್ಲಿ ೧೦೦ ಕೋಣೆಗಳನ್ನು ತಮ್ಮ ಪರಿವಾರಕ್ಕಾಗಿ ಕೊಂಡಿರುವರು. ಹಿಂದುಸ್ಥಾನವು ಗರ್ಭಶ್ರೀಮಂತ ದೇಶವೆಂದು ಇದೀ ಜಗತ್ತಿಗೆ ಜಾಹೀರ ಆಗಲಿಕ್ಕೆ ಅಡ್ಡಿಯಿಲ್ಲ. ಇಷ್ಟು ಘನತೆಗೆ ಏರಿಸಿದವರ್ಯಾರು! ಬ್ರಿಟಿಶರು, ಸಂಸ್ಥಾನಿಕರ ಮುಂದಿನಂಥ ಬಿರುದಗಳ ಸತ್ಯಾಪಲಾಪವಿದು!

— ಕಲಕತ್ತೆಯ ಮೇಯರರೆಂಬ ಯಹೂದಿ ಜಾತಿಯವರು ಪರಲೋಕವಾಸಿಯಾದರು. ಇವರು ಬಂಕಿಯ ಬೇಂಕಿನಲ್ಲಿ ೪೪ ಲಕ್ಷ ರೂಪಾಯಿಗಳ ಠೇವು ಇಟ್ಟಿದ್ದರು. ಇಷ್ಟು ದೊಡ್ಡ ರಕಮು ಬಂಕೆಯ ಬೇಂಕಿನಲ್ಲಿ ಇತ್ತೆಂದು ಯಹೂದಿಯವರಿಗೆ ಗೊತ್ತೇ ಇದ್ದಿಲ್ಲ ! ಅದರ ಬಡ್ಡಿಯನ್ನು ಅವರು ಸಾಯುವವರೇಗೆ ಪಡೆದದ್ದಿಲ್ಲ. ಯಾಕಂದರೆ, ಇದೊಂದು ಮೂಲೆಗೆ ಬಿದ್ದ ಕಸವಾಗಿತ್ತಂತೆ ! ಇದೆಂಥ ಕಸ !!

—ಪುಣೆಯ ಟಿಳಕ ಮಹಾವಿದ್ಯಾಲಯದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಪದವೀದಾನ ಸಮಾರಂಭವು ಬೆರಿಸ್ಟರ ಮುಕುಂದರಾವ ಜಯಕರರವರ ಅಧ್ಯಕ್ಷತೆಯಲ್ಲಿ ಉತ್ಸಾಹದಿಂದ ನೆರವೇರಿತು.

—ಯುರೋಪಖಂಡದ ನೇಪಲ್ಸ ಪಟ್ಟಣದಲ್ಲಿ ಒಂದು ಪ್ರಕಾರದ ಇರುವೆಗಳ ಪಿಡುಗು ಬಂದು ಕೆಲ ದಿನಗಳ ವರೆಗೆ ಅಂಗಡಿಗಳು ಮುಚ್ಚಿದ್ದವು.

—ಕಳೆದ ತಾ. ೨೮ ನೇಗೆ ಚಿತಗಾಂಗದಲ್ಲಿ ಭೂಕಂಪವಾಯಿತು. ಪ್ರಾಣಹಾನಿಯು ಸಂಭವಿಸಲಿಲ್ಲ.

—ಪಾನಿಪತದಲ್ಲಿ ದೊಡ್ಡ ದಂಗೆಯಾಗಿ ಅನೇಕರು ಘಾಯಪಟ್ಟಿರುವರು. ಸಭಾಬಂದಿ ಕಾಯಿದೆಯಂತೆ ಜನರು ತಂಡುಗಟ್ಟಿ ಸೇರದಂತೆ ಪ್ರತಿಬಂಧಕ ಹುಕುಮುಗಳು ಕೊಡಲ್ಪಟ್ಟಿವೆ.

—ಮುಂಬಯಿಯಲ್ಲಿ ಗಿರಣಿ ಕೂಲಿಕಾರರ ಗೋಳು ಗಿರಣಿಸಾವುಕಾರರು ಅರಿವೆ ಖರ್ಚಾಗದಿದ್ದದರಿಂದ ಆಳುಗಳ ಸಂಬಳವನ್ನು ತಗ್ಗಿಸಿರುವರು. ಕೆಲವು ಗಿರಣಿಗಳು ಬಾಗಿಲು ಮುಚ್ಚಿರುವವು. ಕೂಲಿಕಾರರ ಬೊಬ್ಬೆ!

— ಹುಬ್ಬಳ್ಳಿಯೊಳಗಿನ ಟಿಳಕ ಗ್ರಂಥಾಲಯದ ವಾರ್ಷಿಕ ಸಮಾರಂಭವು ಕರ್ಮವೀರ ರಂಗನಾಥರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಈ ಗ್ರಂಥಾಲಯದಲ್ಲಿ ೨೬೦೦ ಗ್ರಂಥಗಳಿರುತ್ತವೆ.

—ಜರ್ಮನಿಯಲ್ಲಿ ಮತ್ತೊಂದು ಶೋಧವು ನಡೆದದೆ. ನಿದ್ದೆ ಮಾಡುವದು ತಪ್ಪು ಚಟವು. ರೂಢಿಮಾಡಿಸಿಕೊಳ್ಳಲು ಅದು ಅವಶ್ಯವಿಲ್ಲ. ನಿದ್ರೆ ಸಮಯವು ಹೆಚ್ಚು ಕಡಿಮೆಯಾಗುವದು ವ್ಯಕ್ತಿಗಳ ಸಂಸ್ಕೃತಿಯ ಮೇಲೆ ಅವಲಂಬಿಸಿರುವದಾಗಿ ಜರ್ಮನ್ ಶಾಸ್ತ್ರಜ್ಞರಾದ ಡಾ। ಜೇಲ ಎಂಬವರು ಅಭಿಪ್ರಾಯಪಟ್ಟಿರುವರು. ನೇಪೋಲಿಯನ್ ಚಕ್ರವರ್ತಿಯು ಮೂರೇ ತಾಸು ನಿದ್ದೆ ಮಾಡುತ್ತಿದ್ದನು. ನಮ್ಮ ವಸಿಷ್ಠ ಮಹರ್ಷಿಗಳೂ, ವ್ಯಾಸರ, ಅಂದರೆ, ೩ ತಾಸು ಮಲಗುತ್ತಿದ್ದರೆಂದು ಯೋಗವಾಸಿಷ್ಠ ಗ್ರಂಥದಲ್ಲಿ ಉಲ್ಲೇಖವಿದೆ!

—ಚಿಕ್ಕಬಳ್ಳಾಪುರದ ಕಂಡೇನಹಳ್ಳಿ ಗ್ರಾಮದ ಪಟೇಲ ಶ್ರೀ। ವೆಂಕಟಕೃಷ್ಣಯ್ಯನವರ ಮನೆಯಲ್ಲಿ ಒಂದು ಕುದುರೆಯು ಹುಟ್ಟಿತು. ಈ ಮರಿಯ ಲಕ್ಷಣಗಳು ಶುಭಲಕ್ಷಣಗಳು. ಪಟ್ಟದ ಕುದುರೆಯಾಗುವ ಲಕ್ಷಣಗಳಿವೆ. ಶ್ರೀ। ವೆಂಕಟಕೃಷ್ಣಯ್ಯನವರು ಈ ಮರಿಯನ್ನು ಶ್ರೀಮನ್ಮಹಾರಾಜರಿಗೆ ಅರ್ಪಿಸಿದರು. ರಾಜಭಕ್ತಿಗೆ ಮೆಚ್ಚಿ ಮಹಾರಾಜರು ಬಂಗಾರದ ತೋಡೆ, ಜರಿ ಜೋಡಿ ಇತ್ಯಾದಿಗಳನ್ನು ಶ್ರೀ। ವೆಂಕಟಕೃಷ್ಣಯ್ಯನವರಿಗೆ ಅರ್ಪಿಸಿದ್ದಲ್ಲದೆ, ತಾಯಿ ಕುದುರೆಯ ಪೋಷಣಕ್ಕಾಗಿ ೧೦೦ ರೂಪಾಯಿಗಳನ್ನರ್ಪಿಸಿದರು.

—೫ ರೂಪಾಯಿಯ ಹೊಸ ನೋಟುಗಳು ಸದ್ಯಕ್ಕೆ ಪ್ರಚಾರದಲ್ಲಿ ಬರುವವು.

— ಪಾರಿಸ ಕೋರ್ಟಿನಲ್ಲಿ ಒಂದು ವಿಲಕ್ಷಣ ದಾವೆ. ಅಳಿಯನು ವಾದಿ; ಅತ್ತೆ-ಮಾವಂದಿರು ಪ್ರತಿವಾದಿಯರು. ಅತ್ತೆ-ಮಾವಂದಿರು ತಾವು ದೊಡ್ಡ ಕುಟುಂಬದವರೆಂದೂ, ತಮ್ಮ ಮಗಳು ಚಲೋ ವರ್ತನದವಳೆಂದೂ ಅಳಿಯನಿಗೆ ಹೇಳಿ, ಮಗಳಿಗೆ ಮದುವೆಮಾಡಿಕೊಳ್ಳಹೇಳಿದರಂತೆ. ಅದನ್ನು ನಂಬಿಕೊಂಡು ಅಳಿಯನು ಮದುವೆಯಾದನು. ಹೇರಳ ಹಣ ಖರ್ಚುಮಾಡಿದನು. ಈಗ ನೋಡಿದರೆ, ಅತ್ತೆ-ಮಾವಂದಿರ ಹೇಳಿಕೆಯಂತೆ ಹೆಂಡತಿಯ ಲಕ್ಷಣಗಳಿಲ್ಲ. ಅದರಿಂದ ತನಗೊದಗಿದ ಲುಕ್ಸಾನವನ್ನು ಬರಮಾಡಿಕೊಳ್ಳಲು ಆತನು ದಾವೆಮಾಡಿರುವನು. ದಾವೆಯ ತಕರಾರನ್ನು ಕೇಳಿ ನ್ಯಾಯಮೂರ್ತಿಗಳು ಚಕಿತರಾದರಂತೆ!

— ಮಂಗಳೂರಿನಲ್ಲಿ ಅಲ್ಲಿಯ ಪ್ರಸಿದ್ಧ ವೈಕುಂಠವಾಸಿ ಅಮ್ಮೆಂಬಳ ಸುಬ್ಬರಾಯ ಪೈಗಳವರ ಸ್ಮಾರಕವನ್ನೇರ್ಪಡಿಸಲು ತಲೆಗೆ ೧ ರೂಪಾಯಿಯಂತೆ ೬ ಸಾವಿರ ರೂಪಾಯಿಗಳನ್ನೆತ್ತಿ, ಶಿಲಾಮೂರ್ತಿಯನ್ನು ಮಾಡಲು ದಕ್ಷಿಣ ಕನ್ನಡದವರಿಗೆ ಬಿನ್ನಹ ಮಾಡಲಾಗಿದೆ.

— ಆಯಲಪುರದ ಸಬುಜಜ್ಜರ ಮೇಲೆ ಸಾಲಗಾರರ ೨೦ ಸಾವಿರ ರೂಪಾಯಿಗಳ ಡಿಕ್ರಿಗಳಾಗಿವೆ. ಸಾಲಗಾರರು ಪ್ರತಿ ತಿಂಗಳಿಗೆ ಸಬುಜಜ್ಜರ ಸಂಬಳವನ್ನು ಜಪ್ತು ಮಾಡುತ್ತಿರುವರು. ಇದು ಅವರ ಅಧಿಕಾರಸ್ಥಾನಕ್ಕೆ ತಕ್ಕದಲ್ಲವೆಂದು ಸರಕಾರದ ಅಭಿಪ್ರಾಯವಾಗಿ, ಅವರನ್ನು ಸರಕಾರವು ಕೆಲಸದಿಂದ ನಿವೃತ್ತ ಮಾಡಿರುವದು.

— ಕಳೆದ ತಾರೀಖು ೭ನೇ ದಿವಸ ಸಾಯಂಕಾಲ ೬ ಘಂಟೆಗೆ ಧಾರವಾಡದ ಶ್ರೀ ದತ್ತಮಂದಿರ ಪಟಾಂಗಣದಲ್ಲಿ ಧಾರವಾಡಸ್ಥರು ಸಭೆಸೇರಿ, ಕರ್ಮವೀರ ರಂಗನಾಥರಾಯರ ಅಭಿನಂದನ ಮಾಡಿದರು. 'ಜಯ ಕರ್ನಾಟಕ'ದ ಶ್ರೀ। ಆಲೂರ ವೆಂಕಟರಾಯರು ಸಭಾಪತಿಗಳಿದ್ದರು.

—ದಕ್ಷಿಣ ಕನ್ನಡ ಜಿಲ್ಹೆಯ ಲೋಕಲಬೋರ್ಡಿನವರು ತಮ್ಮ ಕಾಗದ ಪತ್ರಗಳನ್ನು ಕನ್ನಡ ಭಾಷೆಯಲ್ಲಿಡಬೇಕೆಂದು ಠರಾಯಿಸಿರುವರು.

— ಮುಂಬಯಿಯ ಕಾಯಿದೆ ಕೌನ್ಸಿಲಿನ ಅಧಿವೇಶನದಲ್ಲಿ ಮಿ। ಮಿರೆವ್ಸ್ಲರವರು ಮಾತಾಡುತ್ತಿದ್ದರು. ಮಧ್ಯದಲ್ಲಿ ಅವರಿಗೆ ಗಂಟಲೊಣಗಿತು! ನೀರು ಕುಡಿಯಹತ್ತಿದರು. ಕೂಡಲೆ ಮೆಂಬರರೊಬ್ಬರು ಅಧಿವೇಶನ ಸಮಯ ನೀರು ಕುಡಿಯುವದು ಶಿಷ್ಟಸಂಪ್ರದಾಯವಲ್ಲೆಂದು ಆಕ್ಷೇಪತೆಗೆದರು; ಅಧ್ಯಕ್ಷರೂ ಶಿಷ್ಟವಿಹಿತವಲ್ಲೆಂದು ಅಭಿಪ್ರಾಯಪಟ್ಟದ್ದರಿಂದ ಮಿ। ಮಿರೆವ್ಸ್ಲರವರು ನೀರು ಪಾತ್ರೆಯನ್ನು ಕೆಳಗಿಡಬೇಕಾಯಿತು. ಇದೆಂಥ ಶಿಷ್ಟಾಚಾರ !

—ಕಳೆದ ಸೋಮವಾರ ಅಮಾವಾಸ್ಯೆಯ ದಿವಸ ನೈಮಿಶಾರಣ್ಯದಲ್ಲಿ ಗೋಮತಿ ನದಿಯ ಮೇಲೆ ವಿನೋದವಿಹಾರಕ್ಕಾಗಿ ೪೦ ಮಂದಿಗಳು ದೋಣಿಯಲ್ಲಿ ಕುಳಿತುಕೊಂಡು ಸಂಚರಿಸುತ್ತಿದ್ದರು. ಥಟ್ಟನೆ, ದೋಣಿ ಕವಚಿಬಿದ್ದು, ೪೦ ಮಂದಿಗಳೂ ಪಿತೃಧಾಮಕ್ಕೆ ತೆರಳಿದರು.

— ಪಾರೀಸ ಪಟ್ಟಣದಲ್ಲಿ ಸದ್ಯಕ್ಕೆ ಪರಲೋಕವಿದ್ಯಾ ಪರಿಷತ್ತು ನೆರೆಯಲಿಕ್ಕಿದೆ. ಇದಕ್ಕಾಗಿ ಇಲ್ಲಿಯ ಪರಲೋಕವಿದ್ಯಾವಿಶಾರದರಾದ ಶ್ರೀ ವಿ. ಡಿ. ಋಷಿಗಳವರು ಹೋಗಲಿಕ್ಕಿರುವರು. ಅವರಿಗೆ ಸಹಾಯ ಮಾಡುವದಕ್ಕಾಗಿ ಪಂಡಿತ ಮದನಮೋಹನ ಮಾಲವೀಯ ಹಾಗು ಶ್ರೀ ಚಿಂತಾಮಣಿಯವರು ಜಾಹೀರ ವಿನಂತಿ ಮಾಡಿರುವರು.

— ಪೂರ್ವ ಖಾನದೇಶ ಜಿಲ್ಹೆಯ ನೇರಿ ಬುದ್ರುಕ್‌ದಲ್ಲಿ ಹಿಂದೂಗಳ ದಿಂಡಿಯ ಉತ್ಸವವೂ, ಮುಸಲ್ಮಾನರ ಮೋಹರಮ್ ಹಬ್ಬವೂ ಒಂದೇ ದಿವಸ ಬಂದಿತ್ತು. ಆಗ ಎರಡೂ ಸಮಾಜದವರು ಸೌಹಾರ್ದದಿಂದ ಉತ್ಸವಗಳನ್ನು ಪೂರೈಸಿಕೊಂಡರು.

— ಪುರಿಯೊಳಗಿನ ಶ್ರೀ ಗೋವರ್ಧನ ಪೀಠದ ಸ್ವಾಮಿತ್ವದ ಕುರಿತು ಕಲಹವೆದ್ದಿದೆ. ದ್ವಾರಕೆಯ ಶ್ರೀ ಶಾರದಾಪೀಠದ ಶ್ರೀ ಶಂಕರಾಚಾರ್ಯರಾದ ಶ್ರೀ ಭಾರತೀಕೃಷ್ಣ ತೀರ್ಥಜಿಯವರು ಶ್ರೀ ಗೋವರ್ಧನ ಪೀಠದ ಅಧಿಪತ್ಯವನ್ನು ವಹಿಸಿಕೊಂಡದ್ದು ಅಕ್ರಮವೆಂತಲೂ, ಶ್ರೀ ಗೋವರ್ಧನ ಪೀಠಾಧೀಶರು ಶ್ರೀ ಪರಮಾನಂದ ತೀರ್ಥಜಿಯವರೆಂದೂ, ಶ್ರೀ ಭಾರತೀ ತೀರ್ಥಜಿಯವರಿಗೆ ಶ್ರೀ ಶಂಕರಾಚಾರ್ಯರೆಂದು ಎಣಿಸಲಾಗದೆಂದೂ ಶ್ರೀ ಶಾರದಾಪೀಠದ ಕಾರಭಾರಿಗಳೂ ಶ್ರೀ ಕ್ಷೇತ್ರ ಕಾಶಿಯ ದಂಡೀ ಸ್ವಾಮಿಯವರೂ ಜಾಹೀರ ವಿನಂತಿ ಮಾಡಿಕೊಂಡಿರುವರು. ಪ್ರಕರಣವು ಸರಕಾರಿ ಕೋರ್ಟು ಮೆಟ್ಟಲು ಏರುವದಂತೆ.

— ಲಾಹೋರದಲ್ಲಿ ಮಹಮ್ಮದ ಜಾನ ಎಂಬ ತರುಣನನ್ನು ಪೋಲೀಸರು ಹಿಡಿದರು. ಈತನು ೫ ವರ್ಷ ಪ್ರಾಯದ ಹುಡುಗಿಯನ್ನು ಫರಾರಿ ಮಾಡಿದನೆಂದು ಈತನಮೇಲೆ ಆರೋಪ. ಈತನೂ, ಈತನ ತಂಡದವರೂ ೪೦ ಮಂದಿ ಹುಡುಗರನ್ನು ಫರಾರಿ ಮಾಡಿರುವರಂತೆ! ಈತನಿಗೆ ವಿಚಾರಿಸಲು, ಹಿಡಿದುಕೊಂಡು ಹೋದ ಹುಡುಗರನ್ನು ಎಣ್ಣೆಯಲ್ಲಿ ಕರೆದು ತಿನ್ನುತ್ತೇವೆಂದು ಆತನು ಹೇಳಿದನು !! ಎಂಥ ನರಭಕ್ಷಕ ಪ್ರಾಣಿ !!!

— ರಂಗೂನ ಹೈಕೋರ್ಟಿನಲ್ಲಿ ನ್ಯಾಯಮೂರ್ತಿ ಜೇ. ಆರ್. ದಾಸರವರು ವಿಚಾರಣೆಯ ಕೆಲಸ ಮುಗಿದು ಮನೆಗೆ ಹೋಗುವ ಸಮಯ ಥಟ್ಟನೆ ಮೂರ್ಛೆ ಹೊಂದಿದರು. ಡೋಲಿಯಲ್ಲಿ ಹಾಕಿ ಅವರನ್ನು ಮನೆಗೊಯ್ದರು. ಪ್ರಕೃತಿ ಸುಧಾರಿಸುತ್ತಿರುವದಂತೆ.

— ಮದ್ರಾಸಿನ ಇಲೆಕ್ಷನ್ ಗದ್ದಲದಲ್ಲಿ ಕೆಲವು ಗುಂಡರು 'ಸ್ವರಾಜ್ಯ' ಪತ್ರಿಕೆಯ ಶ್ರೀ ಸುಬ್ರಹ್ಮಣ್ಯ ಅಯ್ಯರರಿಗೆ ಭಾಷಣ ಮಾಡುವಾಗ ಗುಂಡು ಹೊಡೆದು, ಎಚ್ಚರ ತಪ್ಪಿಸಿಬಿಟ್ಟರು. 'ಇಲೆಕ್ಷನ್ ಮರುಳ.'

— ಕಳೆದ ತಾ. ೧೦ನೇ ಸೋಮವಾರಕ್ಕೆ ಹೊಲಂಡ ದೇಶದ ಬೊಕ್ಸ್ಟೇಲ ಗ್ರಾಮದಲ್ಲಿ ದೊಡ್ಡ ಸುಳಿಗಾಳಿ ಎದ್ದು ೬೦೦೦ ಜನರು ನಿರಾಶ್ರಿತರಾಗಿರುವರು. ಸುಳಿಗಾಳಿ ಬಂದಾಗ ವಿಮಾನವು ಹಾರ್ಯಾಡುತ್ತಿತ್ತು. ಥಟ್ಟನೆ ಅದು ನೆಲಕ್ಕುರುಳಿ ೩ ಜನರನ್ನು ಕೊಂದುಬಿಟ್ಟಿತು. ಅನೇಕ ಮನೆಗಳು ಬಿದ್ದು ಹೋಗಿವೆ. ಮಾರ್ಗಗಳ ಮೇಲೆ ಮರಗಳು ಬಿದ್ದು ಪ್ರವಾಸ ಮಾಡುವದು ಕಠಿಣವಾಗಿದೆ. ೪೦ ಲಕ್ಷ ಫ್ಲೋರಿನ್ ಲುಕ್ಸಾನಾಗಿರುವದಂತೆ !

— ಮಹಾತ್ಮರು ಜೇಮಶೇಟಪುರಕ್ಕೆ ಹೋದಾಗ ಅಲ್ಲಿಯ ಕೂಲಿಕಾರರು ಮಹಾತ್ಮರಿಗೆ ೫ ಸಾವಿರ ರೂಪಾಯಿಗಳ ನಿಧಿಯನ್ನರ್ಪಿಸಿದರು.

— ಪಂಜಾಬ ಕಾಯಿದೆ ಕೌನ್ಸಿಲಿನ ಸಭಾಸದರಾದ ಶ್ರೀ ಬೋಧರಾಜರವರು ತುಪಾಕಿಯ ಲೈಸನ್ಸಿಗಾಗಿ ಡಿ. ಮೆಜಿಸ್ಟ್ರೇಟರಿಗೆ ಅರ್ಜಿಮಾಡಿದರು. ಡಿ. ಮೆಜಿಸ್ಟ್ರೇಟರು ಅರ್ಜಿಯನ್ನು ತೆಗೆದುಹಾಕಲು, ಶ್ರೀ ಬೋಧರಾಜರು ಮುಲ್ತಾನ ಡಿಪ್ಟಿ ಕಮೀಶನರರೊಡನೆ ಅಪೀಲು ಮಾಡಲು ಅವರು ಮೂಲ ತೀರ್ಪು ಕಾಯಂ ಮಾಡಿರುವರು. ನಮ್ಮ ಹಿಂದುಸ್ಥಾನದ ಶಸ್ತ್ರಕಾಯಿದೆಯು ತಿದ್ದುಪಡಿಯಿಂದುಂಟಾದ ಅನುಕೂಲ್ಯದ್ಯೋತಕವಿದು!

— ಮೈಸೂರಿನ ಶಿವಸಮುದ್ರದಲ್ಲಿ ವಿದ್ಯುಲ್ಲತೆಯನ್ನುಂಟುಮಾಡುವ ೬ ಸ್ಟೇಶನುಗಳಿವೆ. ಅದರಿಂದ ೩೨ ಸಾವಿರ ಅಶ್ವಶಕ್ತಿಯು ಉತ್ಪನ್ನವಾಗುತ್ತದೆ. ಇನ್ನು ೪೫ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಹೊಸ ಸ್ಟೇಶನವೊಂದನ್ನು ರಚಿಸಿ, ಇನ್ನು ೨೪ ಸಾವಿರ ಅಶ್ವಶಕ್ತಿಯನ್ನು ನಿರ್ಮಿಸುವ ಯೋಜನೆಯಾಗಿದೆ. ಈ ಯೋಜನೆಯಿಂದ ವರ್ಷಕ್ಕೆ ೨೦ ಲಕ್ಷ ರೂಪಾಯಿ ಲಾಭವಾಗುವದಂತೆ.

— ಕ್ರಿಸ್ತವಾಸಿ ಸರ್ ಎಡ್ವರ್ಡ ಹುಲಟನ್‌ರವರ ಹತ್ತರ 'ಬೂಜಾ' ಎಂಬದೊಂದು ಕುದುರೆಯಿತ್ತು. ಅದರ ಪ್ರಾಯ ಬರೇ ೩ ವರುಷ. ಅದಕ್ಕೆ ಕಳೆದ ತಿಂಗಳಲ್ಲಿ ಏ. ಜೋಲ ಎಂಬವರು ೧೫ ೫೦೦ ಗಿನಿ ಕೊಟ್ಟು ಕೊಂಡರು. ಅಶ್ವದ ಯೋಗ್ಯತೆ ನೋಡಿರಿ!

— ನಾಗಪೂರದಲ್ಲಿ ಕಳೆದ ೧೦ನೇ ತಾರೀಖಿಗೆ ನಾಗ ನದಿಗೆ ೩ ತಾಸುಗಳ ವರೆಗೆ ನೆರೆ ಕಟ್ಟಿತ್ತು. ಅನೇಕರು ಮನೆ ಮಾಡುಗಳ ಮೇಲೆ ಮರಗಳಮೇಲೆ ನಿಂತು ಕಾಲಕಳೆದರು.

— ಮಹಾತ್ಮರು ಬಂಗಾಲದಲ್ಲಿ ಪ್ರವಾಸ ಮಾಡಿದಾಗ, ಅನೇಕ ಬಡವರು ಮಹಾತ್ಮರಿಗೆ ತಂಗು ಹಸ್ತದ ಚಿಲ್ಲಚಿಲ್ಲರೆ ನಾಣ್ಯಗಳನ್ನು ದೇಶಬಂಧು ಸ್ಮಾರಕಕ್ಕಾಗಿ ಅರ್ಪಿಸಿದರು. ಬಡವರು ತಮ್ಮ ಸಂಗ್ರಹದಲ್ಲೆಲ್ಲ ಅಡಗಿಸಿರುವ [illegible], ಇವರ ಮೇಲಿಂದ ಹಿಂದುಸ್ಥಾನದ ಬಡತನವು ಸ್ಪಷ್ಟವಾಗುತ್ತದಾಗಿಯೂ ಮಹಾತ್ಮರು 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಬರೆದಿರುವರು.

— ದಿ. ವಾ. ಸರ್ ಸುರೇಂದ್ರನಾಥ ಬಾನರ್ಜೀಯವರಿಗೆ ಮಹಾತ್ಮರು ೫ ತಿಂಗಳ ಹಿಂದೆ ಬೆರಕಪೂರದಲ್ಲಿ ಭೆಟ್ಟಿಯಾದಾಗ ತಾವು ೧೧೦ ವರ್ಷಗಳ ವರೆಗೆ ಬದುಕುವೆನೆಂತಲೂ, [illegible] ಚಿತ್ತಸ್ವಾಸ್ಥ್ಯದ [illegible] ಬದುಕುವ ಭರವಸವಿಲ್ಲವೆಂದು ಪರಲೋಕವಾಸಿ ಬಾನರ್ಜೀಯವರು ಉದ್ಗರಿಸಿದ್ದರಂತೆ!

— ದಕ್ಷಿಣ ಕನ್ನಡ ಜಿಲ್ಹೆಯ ಕಾಸರಗೋಡದ ಶ್ರೀ ವೆಂಕಟರಮಣ ದೇಮಲಮುದವರು ಗೌಡಸಾರಸ್ವತ ವಿದ್ಯಾರ್ಥಿಗಳಿಗೆ ೫೦೦ ರೂಪಾಯಿಗಳ ಧನಸಹಾಯ ಮಾಡಲೊಪ್ಪಿರುವರು.

— ದಾವಣಗೆರೆಯ [illegible] ಸುಮಾರು ೧೫-೧೬ ವರುಷದ ಪಟ್ಟಿಪ್ಪಿ ಮಲ್ಲಪ್ಪನ ಮಗ ಗುರುಬಸಪ್ಪನೂ, ನಲ್ಲಪ್ಪನ ಮಗನು [illegible] ೧೨-೧೩ ವರ್ಷದ ಹುಡುಗನೂ ೬-೭ ತಿಂಗಳ ಹಿಂದೆ ತಪ್ಪಿಸಿಕೊಂಡು ಹೋಗಿರುತ್ತಾರಾಗಿ ದಾವಣಗೆರೆಯ [illegible] ಮಠದ ಶ್ರೀ ಮಹಾಸ್ವಾಮಿಗಳವರು ಪ್ರಕಟಿಸಿರುವರು. ನಿಮ್ಮಲ್ಲಿಯು ಪೋಲೀಸರು ಶೋಧ ಮಾಡಬೇಕು.

— ಮುಂಬಯಿಯ ಹೈಕೋರ್ಟಿನಲ್ಲಿ ದಿ ಎಂಗ್ಲೋ ಇಂಡಿಯನ್ ಡ್ರಗ್ ಎಂಡ್ ಕೆಮಿಕಲ್ ಕಂಪನಿಯವರು ಮೆಸರ್ಸ ಶಿವಲಾಲ ಮತ್ತು ಕಂಪನಿಯವರ ಮೇಲೆ 'ಬಟ್ಲೀ ದಿಲಾವರ' ಎಂಬ ತೈಲವನ್ನು ಈಗಿನ ರೀತಿಯಿಂದ ಮಾರದಂತೆ ಪ್ರತಿಬಂಧಕ ಹುಕುಮು ಬೇಡಿದ್ದರು. 'ಬಟ್ಲೀ ದಿಲಾವರ'ದ ಬಾಟ್ಲಿಗಳು ಎಂಗ್ಲೋ ಇಂಡಿಯನ್ ಕಂಪನಿಯ 'ಬಟ್ಲೀ ದಿಲ್‌ಬಹಾರ'ದ ಬಾಟ್ಲಿಗಳಂತೆ ಸಮವಾಗುತ್ತಿದ್ದು, ಗಿರಾಕಿಗಳು 'ಬಟ್ಲೀದಿಲ್ ಬಹಾರ' ಎಣ್ಣೆಯೆಂದು 'ಬಟ್ಲೀ ದಿಲಾವರ' ಬಾಟ್ಲಿಗಳನ್ನು ಖರೀದಿ ಮಾಡುತ್ತಾರೆಂದೂ, ಈ ಎಣ್ಣೆಯ ಲೆಕ್ಕ ತರಿಸಿ, ಮೆಸರ್ಸ ಶಿವಲಾಲ ಕಂಪನಿಯವರು ಈ ವರೆಗೆ ಪಡೆದ ಮುನಾಫೆಯನ್ನು ಎಂಗ್ಲೋ ಇಂಡಿಯನ್ ಕಂಪನಿಗೆ ಕೊಡಬೇಕಾಗಿಯೂ ದಾವೆಯಿತ್ತು. ನ್ಯಾಯಮೂರ್ತಿ ಮಿ। ಪರ್ಣವಲರವರು ಉಭಯ ಪಕ್ಷಗಾರರ ಅನುಮತಿಯಿಂದ ಡಿಕ್ರಿಮಾಡಿದ್ದೇನೆಂದರೆ:—"ಬಟ್ಲೀ ದಿಲಾವರ' ಎಣ್ಣೆಯನ್ನು ಇನ್ನು ಮುಂದೆ ಶಿವಲಾಲ ಕಂಪನಿಯವರು ಮಾರಬಾರದು. 'ಬಟ್ಲೀ ದಿಲಾವರ' ಎಣ್ಣೆಯು ಈಗಿರುವ ಬಾಟ್ಲಿಗಳನ್ನೆಲ್ಲ ಎಂಗ್ಲೋ ಇಂಡಿಯನ್ ಕಂಪನಿಯವರಿಗೆ ಕೊಡುವದಲ್ಲದೆ, ಖರ್ಚಿನ ಬಾಬತ್ತು ೫೦೦ ರೂಪಾಯಿಗಳನ್ನೂ ಕೊಡಬೇಕು."

—ಗದಗಿನಲ್ಲಿ ಕಳೆದ ಶನಿವಾರ ತಾ. ೮ ನೇಯ ಸಂಜೆ ೫ರಿಂದ ೭ ಘಂಟೆ ವರೆಗೆ ೩ ತಾಸು ಏಕಸವನೆ ಮಳೆ ಸುರಿಯಿತು. ಜನರಿಗೆ ಬಹಳ ಪೇಚಾಟವಾಯಿತು. ಈ ೩ ತಾಸಿನ ಮಳೆಯಿಂದ ಅಲ್ಲಿಯ ಭೀಷ್ಮಕೆರೆಯು ತುಂಬಿ ತುಳುಕಿ ಹೊರಸೂಸಿತು. ೮-೧೦ ವರ್ಷಗಳ ಹಿಂದೆ ಸ್ವಾತಿ ಮಳೆಯು ೮-೧೦ ದಿನ ಸುರಿದಾಗ ಈ ಕೆರೆಯು ತುಂಬಿತ್ತು, ಇಷ್ಟು ಜೋರು ಮಳೆ ಶನಿವಾರಕ್ಕೆ ಸುರಿಯಿತು.

— ನರಸಿಂಹಗಡದ ಸಂಸ್ಥಾನಿಕರು ಒಬ್ಬ ಯುರೋಪಿಯನ್ ದಿವಾನರನ್ನು ನೇಮಿಸಿರುವರು. ಆತನ ಸಂಬಳ ವರ್ಷಕ್ಕೆ ರೂ. ೨೪,೦೦೦. ಸಂಸ್ಥಾನದ ಉತ್ಪನ್ನವು ಬರೇ ೬ ಲಕ್ಷ! ದಿವಾನರ ಮನೆ ಮಾರ್ಗದ ನೆರೆಯಲ್ಲಿದ್ದು, ತಮಗೆ ತೊಂದರೆಯಾಗುತ್ತದೆಂದು ದಿವಾನರು ಹಾದಿಯನ್ನೇ ಕಟ್ಟುಮಾಡಿರುವರು. ಪಂಡಿತ ಕೃಷ್ಣಕಾಂತ ಮಾಲವೀಯರ ೧೩ ವರ್ಷದ ಹುಡುಗನು ನರಸಿಂಹಗಡ ಮುಕ್ಕಾಮಿಗೆ ಹೋಗಲು, ದಿವಾನರು ಆತನನ್ನು ಚಬುಕದಿಂದ ಹೊಡೆದರಂತೆ. ಇದಕ್ಕೆ ಕೃಷ್ಣಕಾಂತ ಮಾಲವೀಯರು ಕಾಯಿದೆ ಇಲಾಜು ನಡಿಸುವವರಿದ್ದಾರೆ.

—ಭರತಪುರ ಸಂಸ್ಥಾನದ ಮಹಾರಾಜರು ೧೦-೧೨ ಗ್ರಾಮಗಳನ್ನು ಕಿತ್ತು ಬೇಟೆಗಾಗಿ ಒಂದು ಅಡವಿಯನ್ನು ರಚಿಸುವವರಿದ್ದಾರೆ. ಪ್ರಜಾಹಿತಚಿಂತಕ ಮಹಾರಾಜರು!

—ಜೋಧಪುರದ ಮಹಾರಾಜರು ಸದ್ಯಕ್ಕೆ ಗತಿಸಿದರು. ಇವರು ಒಮ್ಮೆ ಕ್ಷೌರ ಮಾಡಿಸುವದಕ್ಕಾಗಿ ಒಬ್ಬ ಕ್ಷೌರಿಕನನ್ನು ಮುಂಬಯಿಯಿಂದ ಮುದ್ದಾಮು ಒಯ್ದು ೬೦೦ ರವನು ಕೊಟ್ಟರಂತೆ. ಏನು ಧನದ ಅಪವ್ಯಯ!

ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ದೊರೆತ ಮಾಹಿತಿ.

(೫ ನೇ ಪಾನಿನಿಂದ ಮುಂದರಿಸಿದ್ದು.)

ರ್ಗವನ್ನು ಮಾಡುವದು ಇಷ್ಟವೆಂದು ತಿಳಿಸೋಣಾಯಿತು. ರೇಲ್ವೆ ಬೋರ್ಡಿನವರು ಈ ವಿಷಯ ಚೌಕಶಿ ಮಾಡಿ ಖರ್ಚಿನ ಮಾನದಿಂದ ಈ ಉಗಿಬಂಡಿ ಮಾಡುವದು ಲಾಭಕರವಲ್ಲೆಂದು ಅಭಿಪ್ರಾಯಪಟ್ಟು, ಈ ಯೋಜನೆಯನ್ನು ಕೈಕೊಳ್ಳಬಾರದೆಂದು ಅವರು ಮುಂಬಯಿ ಸರಕಾರಕ್ಕೆ ತಿಳಿಸಿದರು. ಸ್ವತಂತ್ರ ಚೌಕಶಿ ಮೇಲಿಂದಲೂ ಉಗಿಬಂಡಿಯು ಇಷ್ಟವಲ್ಲೆಂದು ಸರಕಾರಕ್ಕೆ ಖಾತ್ರಿಯಾಗಿದೆ. ಮಾರ್ಮಗೋವಾ ಬಂದರದ ವ್ಯಾಪಾರ ಹೆಚ್ಚಿಸಿದರೆ, ಬ್ರಿಟಿಶ ಹದ್ದುಗಳಿಗೆ ಅನುಕೂಲವಾಗುವದೆಂದು ಸರಕಾರದ ಅಭಿಪ್ರಾಯವಾಗಿ, ಕಾರವಾರ ಹಿಡಿಯ ಉಗಿಬಂಡಿಯ ಸುದ್ದಿಯು ಅಷ್ಟಕ್ಕೇ ನಡೆಯಿತು. ಇತ್ಯಾದಿ ಮಾಹಿತಿಯು ಶ್ರೀ ಕಂಬಳಿಯವರಿಗೆ ದೊರಕಿದೆ.

ಕಾನಡಾ ಜಿಲ್ಹೆಯ ಘಟ್ಟದ ತಾಲೂಕುಗಳೊಳಗಿನ ತೋಟಗಳಿಗೆ ವ್ಯಕ್ತಿಶಃ ಬೆಟ್ಟಪ್ರದೇಶವನ್ನು ಹಂಚಿಕೊಡಲು ಬೆಟ್ಟ ಪ್ರವೇಶವು ಗಿಡ-ಮರಗಳಿಂದ ಎಲ್ಲ ಕಡೆಯಲ್ಲಿಯೂ ಸರಿಯಾಗಿಲ್ಲದಿರುವದರಿಂದ ಬೆಟ್ಟಗಳನ್ನು ಗುಂಪು ಪದ್ಧತಿಯ ಮೇಲೆ ಹಂಚಿಕೊಡೋಣಾಗುತ್ತದೆಂದು ಶ್ರೀ ಕರ್ಕಿಯವರಿಗೆ ಉತ್ತರ ದೊರಕಿದೆ.

ಜಂಗಲ ಖಾತೆಯಲ್ಲಿ ೧೯೩೧-೩೨-೩೩ ಈ ಮೂರು ವರುಷಗಳಲ್ಲಿ ೧೧ ಮಂದಿ ಯುರೋಪಿಯನ್‌ರನ್ನು ನೇಮಿಸಿಕೊಳ್ಳಲಾಯಿತು. ಅವರ ಸಂಬಳ ೬೫೦ ರಿಂ ೫೨೫ ರ ವರೆಗಿದೆ. ಅವರ ಪ್ರಾಯವು ೨೩ ರಿಂದ ೩ ಒಳಗೆ. ಅವರ ನೇಮಣೂಕಿಯು ಭಾರತ ಮಂತ್ರಿಗಳ ವಿಚಾರಯುಕ್ತಿಯಲ್ಲಿ ಒದಗಿತು.

* * *

ಥಮಿಕ ಶಿಕ್ಷಕರ ಶಿಷ್ಟ ಮಂಡ ಕ್ಕೆ ದೊರಕಿದ ಉತ್ತರಗಳು.

ಯೊಳಗಡೆ ಕೂಡಿದ ಕಾರವಾರ ಜಿಲ್ಹಾ ಪ್ರಾಥಮಿ ಶಿಕ್ಷಕರ ೬ನೆಯ ಅಧಿವೇಶನದಲ್ಲಿ ಗೊತ್ತುಪಡಿಸಿದ ರಗೆ ಶ್ರೀಯುತ ಸಿ. ಸಿ. ಹುಲಕೋಟಿ, ಬಿ. ಎ., ಎಲ್. ಟಿ., ಧಾರವಾಡ ಇವರ ನೇತೃತ್ವದ ಕೆಳಗೆ ಬಿ. ಪಿ. ಜೋಶಿ ಸತ್ಯಿ, ಎಂ. ಎಮ್. ನಾಯ್ಕ. ಗಿಂಡೆ, ರ ಡೆಪ್ಯುಟೇಶನವು ಮಿ. ಎ. ಇ. ದಕ್ಷಿಣ ಭಾಗ ಧಾರವರ ಭೆಟ್ಟಿಗೆ, ತಾ. ೯-೮-೩೫ನೆಯ ರವಿವಾರ ಘಂಟೆಗೆ ಹೋಗಿತ್ತು. ಆ ಕಾಲಕ್ಕೆ ನಡೆದ ವೃತ್ತಾಂ ಕೆಳಗಿನಂತೆ ಇದೆ.

ಒಬ್ಬ ಮಾಸ್ತರನಿದ್ದ ೩-೪ಯಲ್ಲಿ ಬಿನ್. ೧ನೆಯ, ನೆಯ ಇಯತ್ತೆಗಳಿಗಿಂತ ಹೆಚ್ಚಿಗೆ ಇಯತ್ತೆಗಳನ್ನಿಡ ರದು. ೩ನೆಯ, ೪ನೆಯ ಇಯತ್ತೆಗಳನ್ನಿಡಬೇಕಾದ್ದಿ ರೆ, ಒಬ್ಬ ಅಸಿಸ್ಟಂಟನನ್ನು ಕೊಡತಕ್ಕದ್ದು.

ಈ ತತ್ವವು ನನಗೆ ಮಾನ್ಯವದೆ. ಆದರೆ ಇದರಲ್ಲಿ ಣದ ಪ್ರಶ್ನೆ ಇರುವದರಿಂದ, ಈ ತತ್ವವು ವ್ಯವಹಾ ರ್ಣವಾಗುವ ಸಂಭವವಿಲ್ಲ.

ಗುಡಿಗಳಲ್ಲಿ ಶಾಲೆ ಹಾಕದೆ, ಅದಷ್ಟು ಸ್ವತಂತ್ರ ನೆಯ ಆಧಾರವು ಇರುವದ ಅವಶ್ಯ.

ಇದೂ ನಿಜವು. ಆದರೆ ಇದೂ ಕೂಡ ಬಹಳ ದ ಹಣದ ಪ್ರಶ್ನೆಯಿದೆ.

ವೇರಿಯ ಕೆಲಸವನ್ನು ಶಿಕ್ಷಕರಿಂದ ತಪ್ಪಿಸಬೇಕು. ಕ್ಷಕರಿಂದಲೇ ಮಾಡಿಸುವದು ಅವಶ್ಯವಿದ್ದಲ್ಲಿ ಜವೇರಿ ತ್ಯ ಕೊಡಲು ಕೋರಿಯಬೇಕು.

ಈ ಬಗ್ಗೆ ವಿಚಾರ ಮಾಡುವೆವು.

ಸಾದಿಲವಾರ ರಕಮು ೩||-೬ ರೂಪಾಯಿಯ ವರೆ , ಆಯಾ ಶಾಲೆಗೆ ತಕ್ಕಂತೆ ಕೊಡಬೇಕು.

ಈ ಬಗ್ಗೆ ರಿಪೋರ್ಟ ಮಾಡಿರುವೆನು.

ಮಲೇರಿಯಾ ಹವೆಯೊಳಗಿನ ಇತರ ಸರಕಾರೀ ಕರರಿಗೆ ಕೊಟ್ಟ ಹವೆಯ ಅಲೌನ್ಸ ಸಿಗುವಂತೆ ಅ ಶಿಕ್ಷಕರಿಗೂ, ತಿಂಗಳೊಂದಕ್ಕೆ ೫ ರೂಪಾಯಿಗಿಂತ ಡಿಮೆಯಿಲ್ಲದಷ್ಟು ದೊರೆಯಬೇಕು.

ಈ ಬಗ್ಗೆ ಸರಕಾರಕ್ಕೆ ರಿಪೋರ್ಟ ಮಾಡಲ್ಪಟ್ಟಿದೆ.

ಹೊಸದಾಗಿ ಟ್ರೇನಿಂಗ ಕಾಲೇಜಿನಿಂದ ಹೊರ ಬಿದ್ದ ನ್ಡರನ್ನು ಒಮ್ಮೆಲೇ ಹೆಡ್ ಮಾಸ್ತರೀ ಕೆಲಸಕ್ಕೆ ಮಿಸದೆ ತೀರ ಕಡಿಮೆ ೩-೪ ವರ್ಷಗಳ ವರೆಗಾದರೂ, ವರನ್ನು ಅಸಿಸ್ಟಂಟರನ್ನಾಗಿ ನೇಮಿಸಬೇಕು.

ಟ್ರೇಂಡರು ಕಲಿಸಲು ಯೋಗ್ಯರೇ ಇರುವರು. ದೊ ಶಾಲೆಯೊಳಗಿನ ಟ್ರೇಂಡರನ್ನು ಹಳ್ಳಿಯಲ್ಲಿ ಹಾಕು ದರಿಂದ ಆ ಶಾಲೆಗಳ ಸ್ಥಿತಿ ಕೆಡಬಹುದು.

ಭೆಟ್ಟಿಯ ಮೇಲೆ ಒಂದೇ ಸವನೆ ೨ ವರ್ಷಕ್ಕಿಂತ ಚ್ಚು ಕಾಲ ಹಾಗೂ ಇಡೀ ಸರ್ವಿಸಿನಲ್ಲಿ ೬ ವರ್ಷ ಗಿಂತ ಹೆಚ್ಚು ಕಾಲ ಭೆಟ್ಟಿಯ ಕೆಳಗಿನ ಶಿಕ್ಷಕರನ್ನು ವರ ಕಬೂಲೀ ವಿರುದ್ಧ ಇಡಬಾರದು. ಹಾಗೂ ಅ ಮೇಲೆ ಶಿಕ್ಷಕರ ಭರತಿ ಮಾಡುವ ಕಾಲಕ್ಕೆ ಭೆಟ್ಟಿ ಮೇಲಿನ ಯೋಗ್ಯ ಉಮೇದವಾರರನ್ನು ಹೆಚ್ಚಿಗೆ ಸಂತ ಮಾಡಬೇಕು

ಈ ಪ್ರಶ್ನೆ ಬಹಳ ತೊಡಕಿನದದೆ. ಕಾನಡಾ ಜಿಲ್ಹೆ ಟ್ರೇಂಡರಲ್ಲಿ ನೂರಕ್ಕೆ ೯೦ ಮಂದಿ ಕುಮಟಾ ನ್ನಾವರ, ಅಂಕೋಲಾ ಕಡೆಯವರಿದ್ದಾರೆ. ಪ್ರತಿ ಂದು ವರ್ಗಾವರ್ಗಿಯ ಕಾಲಕ್ಕೆ ಇತರರಾರು ಲೆನಾಡದ ಯಾವ ಶಿಕ್ಷಕನೂ ಹೋಗುವದಿಲ್ಲ? ಈ ಬಗ್ಗೆ ದಷ್ಟು ಹೆಚ್ಚು ಲಕ್ಷ ಪೂರೈಸಲಾದೀತು. ಇನ್ನು ಮುಂದೆ ಆರಿಸುವ ಕೆಲಸವು ಡಿಸ್ಟ್ರಿಕ್ಟ ಲೋಕಲ ಬೋ ರ್ಡಿನ ಅಧಿಕಾರದೊಳಗಿನದದೆ.

ಅಸಿ| ಡೆಪ್ಯುಟಿ, ಸುಪರವಾಯಝರ ಕೆಲಸಕ್ಕೆ ಯೋಗ್ಯರಾದ ಶಿಕ್ಷಕರನ್ನೇ ಮೊದಲು ಆರಿಸಬೇಕು.

ಉ. ನಾನು ಅದೇ ಧೋರಣ ಇಟ್ಟು ನೇಮಣೂಕ ಮಾಡುತ್ತಿದ್ದೇನೆ. ಆದರೂ ಈ ಕೆಲಸಕ್ಕೆ ಗ್ರ್ಯಾಜ್ಯುಯೇಟರು ವಿಶೇಷ ಯೋಗ್ಯರಿರುವರು.

೯. ಅಸ್ಪೃಶ್ಯರಿಗೆ ವಿಶೇಷ ದಯ ತೋರಿಸಬೇಕು.

ಉ. ಇದಕ್ಕೆ ನನ್ನ ಪೂರ್ಣ ಸಹಾನುಭೂತಿಯಿದೆ

೧೦. ತಾಲೂಕಾ ಅಸಿಸ್ಟಂಟ ಜಾಗೆಗೆ, ಅನುಭವಿಕ ಶಿಕ್ಷಕರನ್ನು ನೇಮಿಸಿ ಆ ಕೆಲಸದ ಪೂರ್ಣ ಜವಾಬದಾರೀ ಅವರ ಮೇಲೆಯೇ ಇರಬೇಕು.

ಉ. ಜವಾಬದಾರೀ ಹೆಡಮಾಸ್ತರರ ಮೇಲೆ ಇರುವದು ಅವಶ್ಯವದೆ. ತಾಲೂಕಾ ಅಸಿಸ್ಟಂಟರು ಯೋಗ್ಯರಿರದಿದ್ದರೆ ತಾಲೂಕಾ ಮಾಸ್ತರರು ಆ ಬಗ್ಗೆ ರಿಪೋರ್ಟ ಮಾಡಿದ್ದಲ್ಲಿ ಯೋಗ್ಯ ಮನುಷ್ಯನನ್ನು ನೇಮಿಸುವದರಲ್ಲಿ ಬರುವದು.

೧೧. ಚಳಿಗಾಲದ ವಿಶೇಷವಾದ ರಜೆ ದೀಪಾವಳಿಯ ಕಾಲಕ್ಕೆ ೧ ವಾರ ಕೊಟ್ಟು, ಮೇ ತಿಂಗಳಲ್ಲಿ ರಜೆ ಕೊಡಬೇಕು.

ಉ. ಇದರ ವಿಚಾರ ಮಾಡಿ ಆಮೇಲಿನಲ್ಲಿ ತರುವೆವು.

೧೨. ಶಿಕ್ಷಣದ ಕೆಲಸಕ್ಕೆ ಅವಶ್ಯವಾದ ಶಾಸ್ತ್ರಗಳ ಭಾಷಾಂತರವನ್ನು ಯೋಗ್ಯ ಅಧಿಕಾರೀ ಜನರಿಂದ ಮಾಡಿಸಿ, ಕ್ರಮಶಃ ಶಾಲಾಪತ್ರಿಕೆಯಲ್ಲಿ ಪ್ರಸಿದ್ಧಿಸಬೇಕು.

ಉ. ಶಿಕ್ಷಕರು ಇದರಲ್ಲಿ ವಿಶೇಷ ಶ್ರಮಪಡಬೇಕು. ಯೋಗ್ಯ ಪುಸ್ತಕಗಳು ಬಂದರೆ ಅವುಗಳಿಗೆ ಉತ್ತೇಜನ ಕೊಡಲಾದೀತು. ಈ ಪ್ರಶ್ನೆಯ ವಿಚಾರ ಮಾಡುವೆವು

೧೩. ಶಾಲೆಗೆ ಅವಶ್ಯವಾದ ಪುಸ್ತಕ-ನಕಾಶೆಗಳನ್ನು, ದೊಡ್ಡ ದೊಡ್ಡ ಶಾಲೆಗಳಿಗೆ ಶಾಸ್ತ್ರೀಯ ಪಾಠಗಳನ್ನು ಕಲಿಸಲು ಬೇಕಾದ ಉಪಕರಣಗಳನ್ನು ಒದಗಿಸಿ ಕೊಡಬೇಕು.

ಉ. ಹಣದ ಅನುಕೂಲತೆಯ ಪ್ರಕಾರ ವ್ಯವಸ್ಥೆ ಮಾಡಲಾಗುವದು

೧೪. ಶಿಕ್ಷಕರಿಗೆ ಅವಶ್ಯವಾದ ಸಿವಿಲ್ ಸರ್ವೀಸ ರೆಗ್ಯುಲೇಶನದೊಳಗಿನ ಭಾಗವನ್ನು ಭಾಷಾಂತರಿಸಿ, ವರ್ನ್ಯಾಕ್ಯುಲರ ಶಿಕ್ಷಕರ ಕೋಡಿನಲ್ಲಿ ಸೇರಿಸಬೇಕು.

ಉ. ವಿಚಾರ ಮಾಡುವೆವು.

ಈ ರೀತಿ ಕೆಲಸ ನಡೆದು ಸಹಾನುಭೂತಿಪೂರ್ವಕವಾಗಿ ಭೆಟ್ಟಿ ಕೊಟ್ಟ ಬಗ್ಗೆ ಮಿ. ಎ. ಇ. ದಕ್ಷಿಣ ಭಾಗದವರ ಆಭಾರ ಮನ್ನಿಸಿ, ಡೆಪ್ಯುಟೇಶನದ ಕೆಲಸವು ಪೂರ್ಣ ಮಾಡಲ್ಪಟ್ಟಿತು.

ಹಳಿಯಾಳ
೧೧-೮-೩೫

M Y GINDE,
ಡೆಪ್ಯುಟೇಶನ ಮೆಂಬರ ಹಾಗೂ
ಸೆಕ್ರೆಟರಿ, ತಾಲೂಕಾ ಶಿಕ್ಷಕ ಸಂಘ
ಹಳಿಯಾಳ

ಅಮೇರಿಕನ್ ಉಪಾಯ.

ಎಂಬ್ರೋಸಿಯಾ.

AMBROSIA

ಸ್ತ್ರೀರೋಗಪರಿಹಾರಕ್ಕಾಗಿ.

ಎಂಬ್ರೋಸಿಯಾವು ಸಮಸ್ತ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು. ಇದು ಸ್ತ್ರೀಸೌಂದರ್ಯವನ್ನುಂಟುಮಾಡುತದೆ. ಸಾಮಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರುತದೆ. ಚೆಲೋ ಆಹಾರ ದೊರಕದೆ, ವಿಶೇಷ ಆಯಾಸ ಕೊಳ್ಳುವದರಿಂದ ಸ್ತ್ರೀಯರ ಪ್ರಕೃತಿಯು ಕೆಡುತದೆ. ಮುಟ್ಟಾಗುವಾಗ ಶೂಲಿ ಏಳುವದು, ಮುಟ್ಟಾಗದಿರುವದು, ಅಪಸ್ಮಾರ, ಬಂಜೆತನ ಮುಂತಾದ ಗರ್ಭಾಶಯದ ಬೇನೆಗಳು, ಅಜೀರ್ಣ, ತಲೆಶೂಲಿ ಭ್ರಮಿಷ್ಟತನ ಇವೆಲ್ಲ ಸ್ತ್ರೀರೋಗಗಳಮೇಲೆ ರಾಮಬಾಣ ಮದ್ದು. ಎಂಬ್ರೋಸಿಯಾವು ಸಮಸ್ತ ಸ್ತ್ರೀರೋಗಗಳನ್ನು ದೂರಮಾಡಿ,|ಸ್ತ್ರೀಯರನ್ನು ಸಶಕ್ತ ಹಾಗು ಸೌಂದರ್ಯವಂತರನ್ನಾಗಿ ಮಾಡುತ್ತದೆ ಒಮ್ಮೆ ಪರೀಕ್ಷೆ ನೋಡಿ.

ಬೆಲೆ ಬಾಟ್ಲಿ ೧ ಕ್ಕೆ ರೂಪಾಯಿ ೨—೦—೦

ಏಜಂಟರು:— ವೀರಂಯೊಲ ಏಜನ್ಸಿ,
ಪ್ರಿನ್ಸೆಸ ಸ್ಟ್ರೀಟ, ಮುಂಬಯಿ ನಂಬರ ೨

ಅತಿ ಉತ್ತಮವಾದ ನಶ್ಯ!

ಈ ನಶ್ಯವು ನಮ್ಮಲ್ಲಿ ಬಹಳೇ ವರ್ಷಗಳಿಂದ ಪ್ರಖ್ಯಾತಿ ಹೊಂದಿರುತದೆ. ಬೇಕಾದವರು ತರಿಸಿಕೊಳ್ಳಬಹುದು. ಸೆಂಪಲ್ ಬೇಕಾದವರು ೧ಆಣೆ ಸ್ಟ್ಯಾಂಪು ಕಳುಹಿಸಬೇಕು.

ನಂಬರ ೧. ಪೌಂಡು ೧ಕ್ಕೆ ೩-೪-೦.
” ೨ ಪೌಂಡು ೧ಕ್ಕೆ ೨-೦-೦.

ಜಿ. ರಾಮಯ್ಯಾ ಕುರಡಿ,
ಪೋಸ್ಟ- ಕರ್ಕಿ, ಉ. ಕಾನಡಾ.

धातू क्षीणता व कमजोरपणा यांसाठी

मदन मंजरी गोळ्या. (रजिस्टर्ड.)

या दिव्य गोळ्या रक्त व वीर्य सुधारून त्यांची चांगली वाढ करतात. पचन शक्ति सुधारून परसाकडे साफ होतें. त्याचप्रमाणें प्रत्येक प्रकारची अशक्तता दूर होऊन शरीर तेजदार व बलवान होतें. किं. ४० गोळ्याच्या डबीस रु. १.

रमण विलासिनी गोळ्या. रात्रौ फक्त १ गोळी दुधाबरोबर खाल्यानें इच्छेप्रमाणें वीर्यस्तंभन होते. किं. डबीस रु १

नपुंसकत्वारी घृत. हा लेप पुरुषाच्या गुह्यभागावर लावला असतां सर्व रोग नाश पाऊन खरें पुरुषत्व प्राप्त होतें. किं. डबीस रु. १.

कुमठा एजंट :— माधव सांतप्पा शेणवी बेलेकेरी.

राजवैद्य नारायणजी केशवजी ब्रँचः— ३९३ काळबादेवी रोड मुंबई न २.

ಜಾಹೀರಾತು.

ತಾರೀಖು ೭-೪-೧೯೩೫ನೇ ಪತ್ರದಲ್ಲಿ ಪ್ರಸಿದ್ಧಿಪಡಿಸಿರುವ ನಾಮಾಂಕಿತ ಸುಪ್ರಸಿದ್ಧ ಪರಂಪರಾ ಜ್ಯೋತಿಷಿ ಕೇ. ಸಿ ನಾರಾಯಣಶಾಸ್ತ್ರಿ ಎಂಬವರು ಸ್ವಲ್ಪ ದಿವಸದಿಂದ ಶಿವಮೊಗ್ಗಾ ಡಿಸ್ಟ್ರಿಕ್ಟ ಸಾಗರದಲ್ಲಿ ಕೆಲವು ದಿವಸದ ಪೂರ್ತ ತಮ್ಮ ಮುಕ್ಕಾಂ ಮಾಡಿರುತ್ತಾರೆ ಅವಶ್ಯವಿದ್ದ ಯಾವತ್ತೂ ಜನರು ಸದ್ರಿಯವರಿಗೆ ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡತಕ್ಕದ್ದು.

ಪತೆ—

ಕೇರಳ ಜ್ಯೋತಿಷಿ

ಕೇ. ಸಿ. ನಾರಾಯಣ ಶಾಸ್ತ್ರಿ,
ಚಾಮರಾಜೇಂದ್ರ ಪೇಟೆ, ಪೋ. ಸಾಗರ
ಡಿಸ್ಟ್ರಿಕ್ಟ- ಶಿವಮೊಗ್ಗಾ

ವಿಶೇಷ] ಅನುಭವಸಿದ್ಧ [ವಿಶ್ವಸಿ:

ವನೌಷಧಿಮೂಲಿಕೆಗಳು.

ವಾಯುದುಮ್ಮಾನ (ನಿಮೋನಿಯಾ) ವಾಂತಿ ಭ್ರಾಂತಿ (ಕಾಲರಾ) ಅರ್ಧಾಂಗವಾಯು (ಪೆರಾಲಿಸಿಸ್) ಹುಚ್ಚು ನಾಯಿ ಕಡಿತ, ಸರ್ಪಸುತ್ತು, ಹೊಟ್ಟೆಯಲ್ಲಿ ಕೃತ್ರಿಮ ವಿಷಹಾಕಿದ್ದು (ಕೈಮದ್ದು) ವಗೈರೆ ರೋಗಗಳಿಗೆ ಒಂದೇ ಒಂದು ಮೂಲಿಕೆಯಿಂದ ಖಾತ್ರಿಯಾಗಿ ತೀವ್ರ ಗುಣಬರುವದು ಇಷ್ಟು ಬಹುಕಾಲದಿಂದ ಅನುಭವ ತಕ್ಕೊಂಡು ಹಾಗು ಪ್ರತಿನಿತ್ಯ ಈಕಡೆಗೆ ಬಳಕೆಯಲ್ಲಿದ್ದು ಖಚಾರ್ಗವ ಔಷಧಿಗಳ ತಾಜಾ ಮೂಲಿಕೆಗಳು! ಒಮ್ಮೆ ತರಿಸಿ ಅನುಭವ ತಕ್ಕೊಂಡರೆ ಖಾತ್ರಿಯಾದೀತು. ಕಾಲರಾ ಔಷಧಿಗಳ ದ್ರಾವಕ (Tincture) ಸಹ ಅಗತ್ಯ ಸೂಚಿಸಿದರೆ ಕಳುಹುವೆವು.

ವಾಯುದುಮ್ಮಾನದ ಬಗ್ಗೆ ಔಷಧಿ ಮೂಲಿಕೆ ತೊಲೆ ೧ಕ್ಕೆ	೦-೨-೦
ಕಾಲರಾದ ಬಗ್ಗೆ „ „ „	೦-೨-೦
ಅರ್ಧಾಂಗ ವಾಯುವಿನಬಗ್ಗೆ	೦-೪-೦.
ನಾಯಿ ಕಡಿತದಬಗ್ಗೆ	೦-೪-೦
ಸರ್ಪಸುತ್ತಿನ ಬಗ್ಗೆ .. .	೦-೩-೦
ಹೊಟ್ಟೆಯಲ್ಲಿ ಕೃತ್ರಿಮ ಔಷಧಿ ಬಿದ್ದಬಗ್ಗೆ! ತೊಲೆ ೧೦ ಕ್ಕೆ	೦-೮-೦.
ರಕ್ತಶುದ್ಧಿ ವ ಮಲಶೋಧನೆ ಬಗ್ಗೆ ಮೂಲಿಕೆ ರಾತ್ಲು ೧ಕ್ಕೆ	೧-೦-೦
ಮೋರಾವಳಾ (ನೆಲ್ಲಿಕಾಯಿ ಗುಳುಂಬ) ರಾತ್ಲು ೧ ಕ್ಕೆ	೧-೦-೦

ರಾತಲುಗಟ್ಲೆ ಯಾ ಅದಕ್ಕೂ ಹೆಚ್ಚು ತರಿಸಿಕೊಳ್ಳುವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು. ಟಪಾಲ ಖರ್ಚು ಪ್ರತ್ಯೇಕ ವಿಶೇಷ ಮಾಹಿತಿ ಪತ್ರದ್ವಾರಾ ಅನುಪಾನಪತ್ರ ಔಷಧೀ ಸಂಗಡ.

ಎಸ್. ಜಿ. ಹೆಗಡೆ, ಮಾಸ್ಕೇರಿ,
ಪೋಸ್ಟ—ಬಂಕಿಕೊಡ್ಲ. ಜಿ. ಉತ್ತರ ಕಾನಡಾ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬಿ. ಯವರ

ಸುಗಂಧ ನಶ್ಯದ ಪುಡಿ.

(Registered Trade Mark.)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತದೆ. ಮೂರು ದಬ್ಬಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ವೈದ್ಯರು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾದೀತು.

ಒಟ್ಟಿ ಒಂದಕ್ಕೆ ಕ್ರಯ ೦-೪-೦ ವ್ಹಿ ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦ ವ್ಹಿ. ಪಿ. ೦-೮-೦
ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಪಾರ್ಕಟೌನ, ಮದರಾಸ

ಕಿರ್ಲೋಸ್ಕರ ಪಂಪ.

ಬಾವಿಯೊಳಗಿನ ನೀರನ್ನು ಮೇಲಕ್ಕೆ ತರುವದರಲ್ಲಿ

ಕಿರ್ಲೋಸ್ಕರ ನೀರಿನ ಪಂಪು ಮೇಲ್ಮಟ್ಟದ್ದಿರುತ್ತದೆ. ಸಣ್ಣ ಮಕ್ಕಳು, ಅಬಲೆಯರು ಈ ಪಂಪಿನಿಂದ ನೀರನ್ನು ಒಂದೇ ನಿಮಿಷದಲ್ಲಿ ಮೇಲಕ್ಕೆ ತರುವರು. ಪ್ರಪಂಚದಲ್ಲಿ ಮಿಕ್ಕ ಅಡಚಣೆಗಳಲ್ಲಿ ನೀರಿನ ತೊಂದರೆಯು ಸ್ವಾಭಾವಿಕವು. ಈ ಅಡಚಣೆಯು ಮೇಲಿನ ಉಪಾಯದಿಂದ ದೂರಾಗುವದು.

ಪರದೇಶದಿಂದ ಬರುವ ಪಂಪುಗಳು ಬಹು ತುಟ್ಟಿ ಇರುವದರಿಂದ ಮಧ್ಯಮ ಜನರಿಗೆ ಅವುಗಳನ್ನು ಕೊಳ್ಳುವದಾಗುವದಿಲ್ಲ. ಇದನ್ನು ತಿಳಿದು ನಾವು ಈ ಪಂಪನ್ನು ಬಹು ಅಗ್ಗದಿಂದ ಕೊಡುತ್ತಿರುವೆವು ಇದಲ್ಲದೆ, ಈ ಪಂಪಿನ ಬಿಡಿ ಭಾಗಗಳು ನಮ್ಮ ಕಾರ್ಖಾನೆಯಲ್ಲಿಯೇ ತಯಾರಾಗುತ್ತಿರುವದರಿಂದ ಬೇಡಿದಾಗ ದೊರೆಯುತವೆ.

ಈ ಸೌಕರ್ಯವು ವಿದೇಶೀ ಪಂಪುಗಳನ್ನು ಕೊಂಡಲ್ಲಿ ದೊರೆಯದು.

ಕೇ. ಬಿ. ಜೋಶಿ ಮುಂಬೈ ಇವರು ನಮ್ಮ ಸೋಲ ಏಜಂಟರು.

ಸವಿಸ್ತರ ಸಂಗತಿಯ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ;
ಜಿಲ್ಹಾ ಸಾತಾರಾ.



ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳ ಮೇಲೆ, ರಾಮಬಾಣದಂತಾಗಿರುವದು, ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಅದರಂತೆ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಜೀಗು, ಸಂಧಿವಾತ ಮುಂತಾದ ಎಷ್ಟೋ ವ್ಯಾಧಿಗಳ ಮೇಲೆ ಇದು ಗುಣಕಾರಿಯೆಂದು ಅನುಭವದಿಂದ ಅವರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತ್ತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ, ಮುಂಬಯಿ.

Printed and Published by Kuchharao Keshav Shenvi (Editor) at his Star of Kanara Press Kumta.

Rge No B. 1270

Monday, August 24th, 1925

ವರ್ಷ ೯.

ಕಾನಡಾವೃತ್ತ.

ಸಂಚಿಕೆ ೪೫.

THE KANARA NEWS.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮನೆಯಾರ್ಡರಿಯಿಂದ
ರೂ. 3-0-0.
ವಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ಪ್ಯಾಕಾ ಟೈಪಿನ (೧೫ ಏಮ್ ಉದ) ೫ ಸಾಲುಗಳವರೆಗೆ ರೂ. 1-0-
ಆ ನಂತರ ಪ್ರತಿಸಾಲಿಗೆ 0-2-0.
[illegible] ಚಿತ್ರಿಂಗದ ಸಾಲು ಎಷ್ಟು ಹೊಕ್ಕದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಖಾಸ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

(ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೨೪ ಮಾಹೆ ಅಗೋಸ್ತ ಸನ್ ೧೯೨೫ ನೇ ಇಸವಿ.)

हिंदुस्थानांतील रहिवाशांस ज्याप्रमाणे हिंदुस्थानची हवा त्याप्रमाणेच हें औषध हिंदुस्थानांतील लोकांस ज्यास्त फायदेशीर आहे.

द्राक्षासव- दीड रत्तलची किंमत २ रुपये;

रामबाण औषधें

सर्दी घालविणारें,
भूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

पिण्यास रुचिकर.

कॅटलॉग मागवा,

**पंडु फार्मास्युटिकल वर्क्स लिमिटेड,
मुंबई नं. १३**

ರೋಗಪ್ರಸಿದ್ಧವಾದದ್ದು ! ಅನುಭವಸಿದ್ಧವಾದದ್ದು !!
ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ
ಔಷಧಿಯು ಕ್ರಯ ವಾಪಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.

ಟ್ರೇಡ ಮಾರ್ಕ] ರಿಜಿಸ್ಟರ ಆದದ್ದು [ನೋಡಿ ಕೊಳ್ಳಿರಿ.

ಅಗಸ್ತ್ಯ ಮನ್ಮಥ ಚಿಂತಾಮಣಿ ಲೇಹ.

ಆಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು. ದೇಹವಿಕಾರವಿದ್ದವರಿಗೂ, ನಿದ್ರೆಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿ ಮುದ್ಕಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ

1 ಸೇರು ನಾಲ್ವತ್ತೆಂಟು ದಿವಸಕ್ಕೆ ಸೇವಿಸಬಹುದು.
1 ಸೇರು ಡಬ್ಬಿ ಒಂದಕ್ಕೆ 3—0—0
½ ಸೇರು ಡಬ್ಬಿ ಒಂದಕ್ಕೆ 1—9—0
ವ್ಹಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿ ಬರೆಕೊಳ್ಳಿರಿ.

ಪತ್ತೆ:-**ದೇವಣ್ಣ ನಾರಾಯಣ ಸೇಟ್,**
ಸಾರಾಫ್, ಗೋರೆಹಳ್ಳ, ಮಂಗಳೂರು, (ದ. ಕ.)

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ
ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, *B. A.*
Jewellers, KUMTA.

ಆರ್. ಎಸ್. ಕಾಸರಗೋಡ,
ರತ್ನಾಭರಣ ವ್ಯಾಪಾರಿ, ಕುಮಟಾ.

ಆಯುರ್ವೇದಿಕ) ಧಾತುಪೌಷ್ಟಿಕ, ಶಕ್ತಿವರ್ಧಕ, ರಕ್ತಶೋಧಕ (ಮಲಬಾರಿನ್ಯ

ಮದನಕಾಮೇಶ್ವರೀಲೇಹ.

ಆಬಾಲ ವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಇದರಲ್ಲಿ ಕೇಸರ ಕಸ್ತೂರಿ ಪ್ರವಾಲ [illegible] ಅನುಭವಸ್ಥರಾದಿ ಅನೇಕ ವನೌಷಧಿಯುಕ್ತ ಇರುವದರಿಂದ ಧಾತು ತೆಳ್ಳಗಾಗೋದು ನಪುಂಸಕತ್ವ ಪ್ರಮೇಹ ಮುಷ್ಟಿಮೈಥುನದಿಂದ್ಯ ಧಾತುಕ್ಷೀಣತೆ ಸ್ವಪ್ನಾವಸ್ಥೆ ಉರಿಮೂತ್ರ ಸಂಧಿವಾತ ಸ್ತ್ರೀಯರ ಗರ್ಭಾಶಯದರೋಗ ಪದರ (ಗರ್ಮಿ) ಇ. ನಿವಾರಣೆಮಾಡಿ [illegible] ರಕ್ತ-ಧಾತು ಸಂಚಯಮಾಡಿ ಯಥೇಚ್ಛ ಸಂಸಾರಸುಖವನ್ನು ಲಭಿಸು [illegible] ಸಿದ್ಧೌಷಧ. ೧ ತಿಂಗಳು ಸಾಲುವ [illegible] ರೂ. [illegible] ರೂ. [illegible] ಔಷಧದ ಸಂಗಡ.

ಅತ್ಯುತ್ತಮ) ಜಂತುವಿನ ಔಷಧ (ಪರಸುಲಭ.

[illegible] ರೂ. [illegible] ಅನುಭವ ಕಳಿಸ್ಸಿರಿ. ಇವಲ್ಲ ಎಲ್ಲಾ ರೋಗಗಳ ಮೇಲೆ ಅನುಭವ ಸಿದ್ಧೌಷಧಗಳು ಸಿಗುವವು. ವಿ. ಮಾ. ಬೇಕಾದವರು [illegible] ಪತ್ರಬರೆದಲ್ಲಿ ನಮ್ಮ ಆಯುರ್ವೇದೌಷಧ ಗುಣರತ್ನಮಾಲಾ ಎಂಬ ಸಂಪೂರ್ಣ ಮಾಹಿತಿಯ ಪುಸ್ತಕವನ್ನು ಪುಕ್ಕಟೆಯಾಗಿ ಕಳಿಸುವೆವು.

ಮೆನೇಜರ ಆಯುರ್ವೇದ ಚಿಕಿತ್ಸಾ ಮಂದಿರ, ತಾ. ಕಾರವಾರ, ಪೋ. ಚೆಂಡಿಯೆ.

ಮುಂಬೈ ಏಜಂಟ:— R. C. KAMAT, Teashop Store Lane, Fort, BOMBAY

ಹುಟ್ಟಿದ ವರ್ಷ ತಿಳಿಸಿರಿ.) **ಸುಖಸಾಧನಕ್ಕೆ ಯೋಗ್ಯ ಉಪಾಯವು.** (ಯಾ ಜನ್ಮಟಿಪ್ಪಣ ಕಳಿಸಿರಿ

☞ **ಮಲಬಾರಿ) ಕೇರಳ ಜ್ಯೋತಿಷ. (ಭವಿಷ್ಯ.**

ಸಾದಾ ಜನ್ಮಟಿಪ್ಪಣ ಕಳಿಸಿ. ೧ ವರ್ಷದ ಫಲಾಫಲ ರೂ. [illegible] ರೂ. [illegible] ಸದರೀ ಟಿಪ್ಪಣ [illegible] ಶುಭಾಶುಭ ಇಷ್ಟಾನಿಷ್ಟ ಫಲಗಳನ್ನೂ ಅನಿಷ್ಟಫಲ ನಿವಾರಣಾರ್ಥ [illegible] ಸಂಕಟಗಳನ್ನು ಪರಿಹರಿಸುವ ಉಪಾಯಗಳನ್ನೂ ತಿಳಿಕೊಂಡು ಮುಂದಿನ ಭವಿಷ್ಯ ಕಾಲವು ಸುಖಕಾರಕ ಮತ್ತು ಲಾಭದಾಯಕವಾಗುವಂತೆ ಸದರೀ ಫಲವನ್ನು ಮಲಬಾರದಲ್ಲಿ ಪ್ರಸಿದ್ಧವಾದ [illegible] ಕೇರಳ" ಇ. ಜ್ಯೋತಿಷ ಗ್ರಂಥಗಳ ವಿಶ್ವಾಸ್ಯತೆಯಿಂದ ಬರೆದು ಕಳಿಸುವೆ. ಟಿ. ಖ. ಬೇರೆ.

ಮೆನೇಜರ, "ಜ್ಯೋತಿಷ ಶಾಸ್ತ್ರ-ಭುವನ," ಚೆಂಡಿಯೆ, ತಾ. ಕಾರವಾರ

ನಮ್ಮ ಪ್ರೆಸ್ಸಿನಲ್ಲಿ

ಗೇಣಿ ಬಾಕಿ ದಾವೆಯ ಫಾರ್ಮುಗಳು ತಯಾರಿವೆ ವಕಾಲತ, ಅಮುಲಜಾರಿ ಮೊದಲಾದ ಕೋರ್ಟ ವ್ಯವಹರಣೆಯ ಹಾಗೂ ಕಸ್ಟಮ್ ಖಾತೆಯ ಫಾರ್ಮುಗಳು ಅಗ್ಗವಾಗಿ ಸಿಗತವೆ

ಮೆನೇಜರ,

ಸ್ಟಾರ ಒಫ್ ಕೆನರಾ ಪ್ರೆಸ್, ಕುಮಟಾ

ಉತ್ತಮ, ಸುವಾಸಿಕ, ಶುದ್ಧ, ಮಿಶ್ರಣವಿಲ್ಲದ,

ಜನರಿಗೆ ಅವಶ್ಯ ಬೇಕಾಗಿರುವ

ಕಾಬೂಲೀ ಹಿಂಗು.

೪೦ ತೊಲೆಯುಳ್ಳ	ಡಬ್ಬಿ	೧ಕ್ಕೆ	೫—೦—೦
೨೦ ತೊಲೆ	ಡಬ್ಬಿ	೧ಕ್ಕೆ	೨—೧೨—೦
೧೦ ತೊಲೆ	ಡಬ್ಬಿ	೧ಕ್ಕೆ	೧—೮—೦.
೫ ತೊಲೆ	ಡಬ್ಬಿ	೧ಕ್ಕೆ	೧—೮—
೧ ತೊಲೆಯ ಡಬ್ಬಿಗಳ ಡಜನ		೧ಕ್ಕೆ	೨—೧—೦.

ನಮ್ಮ ಹಿಂಗು ಪೋಟಾ ಬಂದಲ್ಲಿ ಮರತ ಕೊಳ್ಳುವೆವು ಟಪಾಲು ಖರ್ಚು ಪ್ರತ್ಯೇಕ.

ಕೆರೇಕರ ಕಾಬೂಲೀ ಹಿಂಗಿನ ದುಕಾನ
ಬಜಾರಿಬಾಜಾರ, ಕುಮಟಾ

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



೧, ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೬೦, ೭೫, ೧೦೦.
೨. ಕಾಲು ಪೆಟ್ಟಿಗೆ ಕಿಂ. ೬೫, ೭೫, ೧೨೦, ೧೪೦.
೩. ತಬಲೆ ಜೋಡಿ ಕಿಂ. ೧೬, ೧೮, ೨೦, ೨೫
೪. ಹಾರ್ಮೋನಿಯಮ ಗೈಡ (ಮರಾಠಿ) ಕಿಂ. ೧॥, ತಬಲೆ ಗೈಡ ಕಿಂ. ೧॥ ಆ.

ವಿಶೇಷ ಮಾಹಿತಿಬಗ್ಗೆ ನಮ್ಮ ಮರಾಠಿ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಶ್ರೀ - ಗೋಪಾಳ ಸಖಾರಾಮ ಮತ್ತು ಕಂಪನಿ, ವಿಠ್ಠಲವಾಡಿ ಎದುರಿಗೆ, ೩೬೨ ಕಾಳಬಾದೇವಿ. ಮುಂಬಯಿ

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ



ಕಳೆದ ೪-೫ ವರ್ಷಗಳಿಂದ ನಾವು ಶಿವಮೊಗ್ಗಾ-ತೀರ್ಥಹಳ್ಳಿ-ಆಗುಂಬೆ, ಶಿವಮೊಗ್ಗಾ-ಸಾಗರ-ತಾಳಗುಪ್ಪೆ, ಶಿವಮೊಗ್ಗಾ-ಹರಿಹರ-ಭದ್ರಾವತಿ, ಶಿವಮೊಗ್ಗಾ-ಕಳೂರಕಟ್ಟೆ, ಸಾಗರ-ಸೊರಬ-ಶಿರಾಳಕೊಪ್ಪ, ಸಾಗರ-ತೀರ್ಥಹಳ್ಳಿ, ಸಾಗರ-ಕಳೂರಕಟ್ಟೆ ಈ ಲೈನುಗಳ ಮೇಲೆ ನಮ್ಮ ರೆಗ್ಯುಲರ್ ಮೋಟರ ಸರ್ವಿಸನ್ನು ನಡೆಸುತ್ತಿದ್ದುದಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ಉಡುಪಿ, ಕುಂದಾಪುರ, ಮಂಗಳೂರ ಹಾಗು ಬೆಳಂಗಡಿ ಈ ಕಡೆಗೆ " ಕಾರ್ಕಳ ಮೋಟರ ಸರ್ವಿಸಿನ " ವಿದ್ಯಮಾನವೂ, ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಗೆ " ಲಕ್ಷ್ಮೀ ಮೋಟರ ಸರ್ವಿಸಿನ " ವಿದ್ಯಮಾನವೂ ಪ್ರಯಾಣಿಕರ ಎಲ್ಲ ಸೌಕರ್ಯಗಳ ವ್ಯವಸ್ಥೆ ಮಾಡಿರುತ್ತೇವೆ.

ಉತ್ತರ ಕನ್ನಡ ಜಿಲ್ಲೆಯ ಪ್ರಯಾಣಿಕರು ಜೋಗ (Gersoppa Falls), ಶಿವಮೊಗ್ಗಾ ಸಾಗರ, ಹರಿಹರ ಮತ್ತು ಮೇಲ್ಕಂಡ ಸ್ಥಳಗಳಿಗೆ ಪ್ರಯಾಣ ಬೆಳೆಸಲು ಅನುಕೂಲವಾಗಬೇಕೆಂದು ಶಿವಮೊಗ್ಗಾ, ಸಾಗರ, ಜೋಗ, ಸಿದ್ದಾಪುರ, ಶಿರ್ಸಿ, ಕುಮಟಾ ಈ ಲೈನಿನಲ್ಲಿ ಮೋಟರ ಸರ್ವಿಸ ಪ್ರಾರಂಭ ಮಾಡಿರುತ್ತೇವೆ

ಕಾಲಕ್ರಮಗಳು.

ಕುಮಟೆಯಿಂದ ಹೊರಡುವದು—	ಬೆಳಿಗ್ಗಿನ ೭ ಘಂಟೆಗೆ.
ಶಿರ್ಸಿ ಸೇರುವದು—	,, ೧೦ ,,
ಶಿರ್ಸಿಯಿಂದ ಬಿಡುವದು ಶಿವಮೊಗ್ಗಾ ಕಡೆಗೆ—	ಮಧ್ಯಾನ್ಹ ೧ ,,
ಸಾಗರಕ್ಕೆ ಸೇರುವದು (ಸಿದ್ದಾಪುರ ಮಾರ್ಗವಾಗಿ)—	ಸಾಯಂಕಾಲ ೬ ,,
ಸಾಗರದಿಂದ ಶಿರ್ಸಿ ಕಡೆಗೆ ಹೊರಡುವದು—	ಬೆಳಿಗ್ಗಿನ ೬ ,,
ಸಿದ್ದಾಪುರದ ಮೇಲಾಗಿ ಶಿರ್ಸಿಗೆ ಸೇರುವದು—	,, ೧೧ ,,
ಶಿರ್ಸಿಯಿಂದ ಕುಮಟೆಗೆ ಹೊರಡುವದು—	ಮಧ್ಯಾನ್ಹ ೨ ,,
ಕುಮಟೆಗೆ ಸೇರುವದು—	ಸಾಯಂಕಾಲ ೫ ,,

N B — ಈ ಮೇಲಿನ ಲೈನುಗಳ ವಿನಹ ಶಿರಸಿಯಿಂದ ಹುಬ್ಬಳ್ಳಿಗೆ ಪ್ರತ್ಯೇಕ ಒಂದು ಸರ್ವಿಸ ಪ್ರಾರಂಭಿಸುವ ಯೋಚನೆ ಸಹಾ ಇರುತ್ತದೆ, ಸರ್ವರೂ ಅಭಿಮಾನವಿಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

SHIMOGA,
22—11—1924

M. MANJAPPA.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೆಟಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು ಮಹೌಷಧಿಯಾಗಿದ್ದು ಸೇವಿಸಲು ಸ್ವಾದವಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನೆಯಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು ೬೦-೭೦ ವರ್ಷದ ಮುದುಕರ ಕಾಮವಿಕಾರತ್ವ ಕೂಡ ತರುಣರಂತೆ ಪುನರ್ಜೀವನವಾಗುವದು. (ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು) ಜನನೇಂದ್ರಿಯದೊಳಗಿನ ಶಿಥಿಲತೆ ಹೋಗಿ ಮೂತ್ರಮಾರ್ಗ ವಾಯುಸಂಚಾರಕ್ಕೆ ಅಡ್ಡಿಇಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯ ಪ್ರವಾಹವು ಬಂದಾಗುವದು — ಪರಮಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತ್ತದೆ, ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ ಹೊಸಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧॥ ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೩—೪—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲಖರ್ಚು ಹೆಚ್ಚು ಬೀಳುವದಿಲ್ಲ ಆರು ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧—೪—೦ ೩ ಬಾಟ್ಲಿಗೆ ೩—೦—೦ ಡಜನಿಗೆ ೧೩—೮—೦

ಮ್ಯಾನೇಜರ— ದ್ರಾಕ್ಷಾರ್ಕಮಧು ಅಫೀಸು ಪೋ. ನಿಪ್ಪಾಣಿ, ಜಿ. ಬೆಳಗಾಂವ

ವಿವಿಧ ಸಂಗ್ರಹ.

ಸ್ವದೇಶಾಭಿಮಾನಿ ಬ್ರಿಟಿಶರು.

ಬ್ರಿಟಿಶ ರಾಷ್ಟ್ರದ ವ್ಯಾಪಾರವು ಇತ್ತಿತ್ತ ಚೀನದೇಶದೊಳಗಿನ ದಂಗೆಯ ಮೂಲಕ ಕುಗ್ಗುತ್ತಿದೆ. ಅದನ್ನು ಉದ್ಧರಿಸುವದಕ್ಕಾಗಿ ಬ್ರಿಟಿಶ ಸಾಮುಗ್ರಿಗಳನ್ನು ವಿಶೇಷವಾಗಿ ಕೊಂಡುಕೊಳ್ಳಲು ಪ್ರಧಾನಮಂಡಳದವರೂ, ಇತರ ಬ್ರಿಟಿಶರೂ ಯತ್ನಿಸುತ್ತಿರುವರು. ಸ್ವದೇಶಿ ವ್ರತದ ಚಟವನ್ನು ದೇಶಬಾಂಧವರಿಗೆ ಹಚ್ಚಲು ಇಂಗ್ಲಂಡದಲ್ಲಿ ಒಂದು ಸಂಸ್ಥೆಯೂ ಸ್ಥಾಪಿತವಾಗಿದೆ. ಇದಕ್ಕೆ "ಪ್ರೊಸ್ಪರ್ ಗ್ಲಾಸ ಕಂಪನಿ" ಎಂಬ ಕಾಜಿನ ಕಂಪನಿಯ ವಾರ್ಷಿಕ ಸಾಧಾರಣ ಸಭೆಯು ಕಳೆದ ಜುಲೈ ತಾ. ೨೧ನೇಗೆ ಸೇರಿದ್ದಾಗ ಅಧ್ಯಕ್ಷರು ನುಡಿದದ್ದೇನಂದರೆ-ಇಂಗ್ಲಂಡದಲ್ಲಿ ಕಾಜಿನ ವ್ಯಾಪಾರವು ಬಹಳ ಏರಿದೆ. ರಸಾಯನಗಳ ಕಟ್ಟಿಪತ್ರಗಳ ಮೂಲಕ ಕಾಜಿನ ಸಾಮಗ್ರಿಗಳನ್ನು ಅಗ್ಗವಾಗಿ ಮಾರಬರುವದಿಲ್ಲ. ಜರ್ಮನಿ, ಫ್ರಾನ್ಸ ಮುಂತಾದ ಕಡೆಗಳೊಳಗಿನ ಕಾಜಿನ ಸಾಮಾನು ಬ್ರಿಟಿಶ ಸಾಮಾನಿನಿಗಿಂತಲೂ ಅಗ್ಗವಾಗಿ ಲಂಡನದ ಪೇಟೆಯಲ್ಲಿಯೇ ಸಿಗುತ್ತದೆ. ಅಗ್ಗ ದರದಿಂದ ಸಿಗುತ್ತದೆಂದು ದೇಶಭಾಂಧವರು ಅವನ್ನೇ ಕೊಂಡುಕೊಳ್ಳುತ್ತ ಹೋದರೆ, ಬ್ರಿಟಿಶರ ಕಾಜಿನ ಕೈಗಾರಿಕೆಯು ಎಂದೂ ಸುಧಾರಿಸದು. ಅದರಿಂದ ಬ್ರಿಟಿಶ ವ್ಯಾಪಾರದ ಉದ್ಧಾರ ಹೊಂದಬೇಕೆಂದು ಬ್ರಿಟಿಶರ ಇಚ್ಛೆಯಿದ್ದಲ್ಲಿ ಬ್ರಿಟಿಶ ಸಾಮುಗ್ರಿಗಳನ್ನೇ ಬ್ರಿಟಿಶರು ಕೊಂಡುಕೊಳ್ಳತಕ್ಕದ್ದು. "It becomes necessary to emphasize what was said in the House of Commons: "Buy British goods if you want to improve the trade of your country." ಸ್ವದೇಶದ ಕೈಗಾರಿಕೆಗಳನ್ನು ಉದ್ಧರಿಸುವ ಬ್ರಿಟಿಶರ ದೇಶಾಭಿಮಾನ ನೋಡಿರಿ!

⁂

ಅದ್ಭುತ ಚಮತ್ಕಾರ.

ಭಾವನಗರ ಸಂಸ್ಥಾನದಲ್ಲಿ ಮಹೂವಾ ಎಂಬದೊಂದು ಗ್ರಾಮವಿದೆ. ಈ ಗ್ರಾಮದ ಒಬ್ಬ ಹೆಂಗಸಿಗೆ ಒಂದು ಪಿಶಾಚವು ಮರುಳಾಗಿದೆಯಂತೆ. ಆ ಹೆಂಗಸನ್ನು ಕೆಲಕೆಲವು ದಿನಗಳಲ್ಲಿ ಪಿಶಾಚವು ಒಯ್ದು ಪುನಃ ಬಿಡುತ್ತದಂತೆ! ಮೊದಮೊದಲು, ಹೆಂಗಸು ಕಾಣದಿದ್ದಾಗ ಮನೆಯವರು ಎಲ್ಲಿಯಾದರೂ ತನ್ನಷ್ಟಕ್ಕೆ ಅವಳು ಹೋಗಿರಬಹುದೆಂದು ಭಾವಿಸಿದರು. ಎಲ್ಲಿ ಹೋಗಿದ್ದಿಯೆಂದು ಅವಳಿಗೆ ಕೇಳಲು, ಅವಳು ವಿಚಿತ್ರ ಸಂಗತಿಗಳನ್ನರುಹಿದಳು. ಅದರಿಂದ ಅವಳನ್ನು ಮನೆಯವರು ಕಾವಲಲ್ಲಿಟ್ಟರು. ಒಂದು ಕೋಣೆಯಲ್ಲಿ ಹಾಕಿ ಬೀಗ ಹಾಕಿದರು. ಆದರೂ, ಅಲ್ಲಿಂದಲೂ ಅವಳು ಅದೃಶ್ಯಳಾದಳು. ಅನೇಕ ಸಲ ಅದೃಶ್ಯಳಾದಳು. "ಯಾರೋ ಒಬ್ಬನು ತನ್ನನ್ನು ಒಯ್ಯುತ್ತಿರುತ್ತಾನೆ. ಒಂದು ಕಡೆಗೆ ಒಯ್ಯುತ್ತಾನೆ. ಅಲ್ಲಿ ನನಗೆ ಸುಖದಿಂದ ನಡಿಸಿಕೊಳ್ಳುತ್ತಾನೆ. ಹಾಗು ಇಬ್ಬರು ಹೆಂಗಸರು ತನ್ನ ಚಾಕರಿ ಮಾಡುತ್ತಾರೆ. ಆ ಹೆಂಗಸರು ಈ ಪಿಶಾಚಿಗೆ ತನ್ನನ್ನು ಬಿಡಲು ಹೇಳುತ್ತಾರೆ. ಆದರೂ, ಪಿಶಾಚವು ತನ್ನನ್ನು ಬಿಡುವದಿಲ್ಲ." ಇತ್ಯಾದಿ ಕಥೆಯನ್ನು ಅವಳು ಹೇಳುತ್ತಾಳೆ. ಅನೇಕರು ಅಲ್ಲಿ ಹೋಗಿ ಈ ಹಕೀಕತಿನ ಸತ್ಯಸ್ಥಿತಿಯ ಚೌಕಶಿಮಾಡಿ ಹೆಂಗಸಿನ ವೃತ್ತಾಂತವು ನಿಜವೆಂದು ಮನಗಂಡಿರುವರು. ಇದೆಂಥ ಪಿಶಾಚ!

⁂

ಚೀನ ದೇಶದೊಳಗಿನ ಬಹಿಷ್ಕಾರ.

ಬ್ರಿಟಿಶರ ವಿರುದ್ಧ ಚಿನಿಯರು ಬಹಳ ಸಂತಪ್ತರಾಗಿರುವರು. ಶಾಂಘಾಯ ಮ್ಯುನಿಸಿಪಾಲಿಟಿಯಲ್ಲಿ ಕರಿಗೆ ತೆರುವವರು ಮುಖ್ಯವಾಗಿ ಚೀನಿಯರು ಆದರೆ, ಮ್ಯುನಿಸಿಪಾಲಿಟಿಯ ತೋಟದಲ್ಲಿ 'Chinese and dog s not admittet' ಅಂದರೆ, ತೋಟದಲ್ಲಿ ಚೀನಿಯರಿಗೂ, ನಾಯಿಗಳಿಗೂ ಪ್ರವೇಶವಿಲ್ಲ. ಇದರ ಮೇಲಿಂದ ಚೀನಿಯರು ನಾಯಿಸಮಾನವಾಗಿರುವರೆಂ

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. ರಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದ ಮುಡಿಯನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಅಂಥಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ.

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅಪಾರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುತ್ತಲೇ ಮಸ್ತಕದ ಬೇನೆಯು ತಟ್ಟನೆ ಹೋಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹಚ್ಚಿಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ, ಅವು ದೀರ್ಘವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇ ಒಂದು ಬಾರಿ "ಕಾಮಿನಿಯಾ" ಆಯಿಲ್ ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ವೆಂಬ್ಲೀ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಆಫ್ ಮೆರಿಟ" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗ್ರಾಹಕರ ಉತ್ಸಾಹಜನಕ ಮಾನಪತ್ರಗಳೂ ದೊರಕಿವೆ.

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10-0 ವ್ಹಿ. ಪಿ. ಖರ್ಚ 0-14-0.

ಅತಿ ಮನೋಹರವಾದ ಸುರಭಿಯು!

ಒಟ್ಟೋ-ದಿಲ್ ಬಹಾರ್ !! ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಉತ್ಕಟ ಮತ್ತು ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡಿದ್ದು ಇದರಲ್ಲಿ ಸುರೆಯ (ಆಲ್ಕೋಹೋಲ್) ಸಂಸರ್ಗವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ತೊಟ್ಟುಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರದ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಕಡೆಯಿಂದ ಸೆಳಕೊಳ್ಳುವದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8-0; 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ

Address:- **The Anglo Indian Drug & Chemical Co,**
16, Market, **BOMBAY**

ದು ತಿಳಿಯುವಹಾಗಿದೆ. ಅಲ್ಲಿಯ ಬ್ರಿಟಿಶರ ಮಾನಸಿಕ ಸ್ಥಿತಿಯಿದು. ಅದಕ್ಕೆ ಪ್ರತಿಯಾಗಿ ಚೀನಿಯರು ಈಗ ಕಠೋರವಾದ ಬಹಿಷ್ಕಾರವನ್ನು ಸಾರಿರುವರು. ಚೀನದ ರಾಜಧಾನಿಯಾದ ಪೇಕಿಂಗ ಪಟ್ಟಣದಲ್ಲಿ ಬ್ರಿಟಿಶ ರಾಯಭಾರಿಗಳಿರುವರು. ಅವರ ಸೇವಕರೆಲ್ಲರೂ ಸಂಪು ಮಾಡಿರುವರು. ೨೫-೩೦ ವರುಷಗಳವರೆಗೆ ಅವರ ಕೈಕೆಳಗೆ ನಿಷ್ಠೆಯಿಂದ ಸೇವೆ ಮಾಡಿದ ಕಾರಕೂನರು ಕೂಡ ರಾಯಭಾರಿಗಳಿಗೆ ಸಹಾಯ ಕೊಡದಿರುವರು. ಕಾಯಿಪಲ್ಲೆ, ಹಾಲು, ಮೊಸರು ಇತ್ಯಾದಿ ನಿತ್ಯ ಉಪಯೋಗದ ಸಾಮಗ್ರಿಗಳನ್ನು ಕೊಂಡುಕೊಳ್ಳಲಿಕ್ಕೆ ಕಳಿಸಲು ರಾಯಭಾರಿಗಳಿಗೆ ಜನರು ದೊರಕುವದಿಲ್ಲ. ಇತರ ಜನರು ಪೇಟೆಯಲ್ಲಿ ಹೋಗಲು ಹೆದರುತ್ತಾರೆ. ಅದರಿಂದ ಚೀನ ಸರಕಾರದ ಹತ್ತರ ಹಿಂದೆ ಮುಂದೆ ಕಾವಲು ಮಾಡಲು ಪೋಲೀಸರನ್ನು ಪಡೆದು ಹೊರಹೊರಡಬೇಕಾಗುತ್ತದೆ. ಚೀನಿಯರು ಬ್ರಿಟಿಶ ರಾಯಭಾರಿಗಳಿಗೆ ಕಾಯಿಪಲ್ಲೆ ಕೊಡಲಿಕ್ಕೆ ಸಹ ತಯಾರಿಲ್ಲ. ಬ್ರಿಟಿಶರು ನಡಿಸುವ ಗಿರಣಿಗಳಲ್ಲಿ ಕೆಲಸ ಮಾಡುವ ಚೀನಿ ಕೂಲಿಯಾಳುಗಳೆಲ್ಲರೂ ಸಂಪು ಮಾಡಿ ಕೂತುಕೊಂಡಿರುವರು. ಹೀಗೆ ಬ್ರಿಟಿಶ ವ್ಯಾಪಾರದ ಮೇಲೆ ದೊಡ್ಡ ಸೊಂಪು ದಾಳಿಯೆದ್ದಿದೆ.

⁂

ಹಿಂದುಸ್ಥಾನದೊಳಗಿನ ಮೃತ್ಯುಸಂಖ್ಯೆ

ಹಿಂದುಸ್ಥಾನವು ದಿನೇ ದಿನೇ ಅಭಿವೃದ್ಧಿ ಹೊಂದುತ್ತಿದೆಂದು ಹೇಳುತ್ತಾರೆ. ಜನಸಂಖ್ಯೆಯ ಮಾನವನ್ನು ನೋಡಿದರೆ, ನಮ್ಮ ಅಭಿವೃದ್ಧಿಯು ಹ್ಯಾಗೆಂಬುದು ತಿಳಿಯುವ ಹಾಗಿದೆ. ೧೯೧೧ ನೇ ಇಸ್ವಿಯಲ್ಲಿ ಹಿಂದುಸ್ಥಾನದ ಜನಸಂಖ್ಯೆಯು ೩೧॥ ಕೋಟಿಯಿತ್ತು. ೧೯೨೧ ನೇ ಇಸವಿಯಲ್ಲಿ ಅದು ೩೧ ಕೋಟಿ, ೯೦ ಲಕ್ಷವಾಯಿತು. ಅಂದರೆ, ೧೦ ವರುಷಗಳಲ್ಲಿ ೪೦ ಲಕ್ಷ ಪ್ರಜಾಸಂಖ್ಯೆಯು ಬೆಳೆಯಿತು. ಅಂದರೆ, ವರ್ಷಕ್ಕೆ ಬರೇ ೪ ಲಕ್ಷ. ಇಷ್ಟು ಸಾವಕಾಶವಾಗಿ ಪ್ರಜಾಸಂಖ್ಯೆ ಬೆಳೆಯುವ ಕಾರಣವೇನು? ಹಿಂದುಸ್ಥಾನದಲ್ಲಿ ಪ್ರಜಾನಿಧನದ ಪ್ರಮಾಣವು ತೀರ ಹೆಚ್ಚು. ನ್ಯೂಝಿಲಂಡದಲ್ಲಿ ಸಾವಿರಕ್ಕೆ ೯೫ ಮಂದಿಗಳು ಸಾಯುತ್ತಿದ್ದರೆ, ಹಿಂದುಸ್ಥಾನದಲ್ಲಿ ಸಾವಿರಕ್ಕೆ ೩೦೦ ಮಂದಿಗಳು ಸಾಯುತ್ತಾರೆ; ಅಸ್ಟ್ರೇಲಿಯಾದಲ್ಲಿ ೧೦೫, ನ್ಯೂ ಫೌಂಡಲಂಡದಲ್ಲಿ ೧೦೬, ಅಮೇರಿಕೆಯಲ್ಲಿ ೧೩೯, ನೋರ್ವೇ ದೇಶದಲ್ಲಿ ೧೩೫, ಸ್ವೀಡನದಲ್ಲಿ ೧೩೮, ಬ್ರಿಟನದಲ್ಲಿ ೧೪೬, ಬೆಲ್ಜಮದಲ್ಲಿ ೧೫೩, ಜರ್ಮನಿಯಲ್ಲಿ ೧೬೨ ರಂತೆ ನಿಧನ ಪ್ರಮಾಣವಿದ್ದು, ಹಿಂದುಸ್ಥಾನದಲ್ಲಿ ಮಾತ್ರ ೩೦೦ರಷ್ಟು ಪ್ರಮಾಣವಿದ್ದದ್ದು ಶೋಚನೀಯವು.

⁂

ಕೈರಾಟಿಯ ಉತ್ಪನ್ನ.

ಅಖಿಲ ಭಾರತೀಯ ಖಾದಿ ಮಂಡಳದ ಕಾರ್ಯದರ್ಶಿಗಳು ತಮಿಳನಾಡಿನೊಳಗಿನ ಸೇಲಂ ಜಿಲ್ಹೆಯ ಪುದುಪಾಲಯಂ ಗ್ರಾಮದೊಳಗಿನ ಗಾಂಧೀ ಆಶ್ರಮದವರು ಕೈಕೊಂಡ ಖಾದಿ ಪ್ರಸಾರದಿಂದ ಸುತ್ತುಮುತ್ತಲಿನ ಗ್ರಾಮಗಳಲ್ಲಿ ಉಂಟಾದ ಹುಟ್ಟುವಳಿಯನ್ನು 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ನಮೂದಿಸಿರುವರು. ಪುದುಪಾಲಯಂದ ಪ್ರದೇಶವು ಬರಬೀಳುವ ಪ್ರದೇಶವು. ಕಳೆದ ೩ ವರ್ಷಗಳಿಂದ ಅಲ್ಲಿ ಮಳೆ ಬೀಳದ್ದೆ, ಬಾವಿಗಳೆಲ್ಲ ಬತ್ತಿಹೋಗಿವೆ. ಇಂಥ ಸ್ಥಿತಿಯಲ್ಲಿ ಖಾದಿಯ ಪ್ರಸಾರದಿಂದ ಅಲ್ಲಿಯ ಪ್ರಜೆಗಳಿಗೆ ದ್ರವ್ಯಸಹಾಯ ಮಾಡಲು ಗಾಂಧೀ ಆಶ್ರಮದವರು ಯೋಚಿಸಿದರು. ಕಾರ್ಯದರ್ಶಿಗಳು ಉಪ್ಪುಪಾಲಯಂ, ಸೆಂಬುಪಾಲಯಂ, ಚಿತ್ತಲಂದೂರ, ಪುಲಿಯುನ್‌ಪಟ್ಟಿ, ಪುದುಪಾಲಯಂ ಈ ೫ ಗ್ರಾಮಗಳಲ್ಲಿ ಸೂಕ್ಷ್ಮ ರೀತಿಯಿಂದ ಚೌಕಶಿ ನಡಿಸಿದರು. ೧೨೪ ಕೈರಾಟಿಗಳಿಂದ ವರ್ಷಕ್ಕೆ ೨,೧೬೭ ರೂಪಾಯಿ ಉತ್ಪನ್ನವಾಯಿತು. ಇತರ ಉತ್ಪನ್ನಕ್ಕೆ ತುಲನೆ ಮಾಡಿದರೆ, ಸರಾಸರಿ ೧೦೦ಕ್ಕೆ ೧೫ರಷ್ಟು ಉತ್ಪನ್ನವನ್ನು ಬರೇ ೧೨೪ ಕೈರಾಟಿಗಳು ಕೊಡುತ್ತವೆ. ವಿಶೇಷವಾಗಿ, ಕೈರಾಟಿಯ ಮೇಲೆ ಕೆಲಸ ಮಾಡುವದು ಇತರ ಕೆಲಸಗಳು ತೀರಿದ ನಂತರ ಅನುಕೂಲತೆಯಂತೆ ಮಾಡುವದು. ಪುಲಿಯುನ್‌ಪಟ್ಟಿಯಲ್ಲಿ ಒಬ್ಬ ಹೆಂಗಸು ಹಾಗು ಒಬ್ಬ ಸಣ್ಣ ಹುಡುಗ ಕೂಡಿ ವರ್ಷಕ್ಕೆ ೨೦ ರೂಪಾಯಿ ದುಡಿಯುತ್ತಾರೆ. ಇವರ ಇತರ ವರ್ಷದ ಉತ್ಪನ್ನವು ಬರೇ ೩೦ ರೂಪಾಯಿ. ಉಪ್ಪುಪಾಲಯಂದಲ್ಲಿ ಒಬ್ಬ ಹೆಂಗಸಿಗೆ ಬೇರೆ ಏನೂ ಆಧಾರವಿಲ್ಲ; ಒಂದೇ ಕೈರಾಟಿಯಿಂದ ವರ್ಷಕ್ಕೆ ೩೦ ರೂ. ದುಡಿಯುತ್ತಾಳೆ. ಇವರ ಮೇಲಿಂದ ಕೈರಾಟಿಯು ಬಡವರಿಗೆ ಎಷ್ಟರ ಮಟ್ಟಿಗೆ ಆಧಾರಭೂತವಾಗಿರುವದೆಂಬುದು ಸ್ಪಷ್ಟವಾಗುವದು. ಪುದುಪಾಲಯಂದಲ್ಲಿ ರತ್ನಸಭಾಪತಿ ಗೌಂಡರ ಎಂಬ ಶ್ರೀಮಂತ ಮಿರಾಸುದಾರರಿರುವರು. ಇವರ ಮನೆಯಲ್ಲಿ ೭ ಕೈರಾಟಿಗಳಿವೆ. ಪ್ರತಿ ತಿಂಗಳಿಗೆ ೧೨ ರಿಂದ ೩೦ ನಂಬರದ ವರೆಗಿನ ೨॥ ರತ್ತಲು ನೂಲು ತಯಾರಾಗುತ್ತದೆ. ತಮ್ಮ ನೂಲಿನಿಂದಲೇ ಇವರು ಅರಿವೆಯನ್ನು ತಯಾರಿಸಿ ಧರಿಸುತ್ತಿರುವರು. ಶ್ರೀಮಂತ ರತ್ನಸಭಾಪತಿಯವರು ರಾಷ್ಟ್ರನಿಧಿಗೆ ಹೇರಳ ಧನಸಹಾಯ ಮಾಡಿರುವರು. ಸದ್ಯಕ್ಕೆ ಗಾಂಧಿ ಆಶ್ರಮಕ್ಕೆ ಒಂದು ತೋಟವನ್ನೂ, ಸ್ಥಳವನ್ನೂ ಸಮರ್ಪಿಸಿರುವರು. ಇದಲ್ಲದೆ, ತಮ್ಮ ಕಲ್ಪವೃಕ್ಷಗಳನ್ನು ಮದ್ಯ ತೆಗೆಯಲು ಕರೆ ಅಂಗಡಿಕಾರರಿಗೆ ಕೊಡದೆ, ಮದ್ಯಪಾನದ ಉಚ್ಚಾಟನಕ್ಕಾಗಿ ಮನಮುಟ್ಟಿ ಸಹಾಯ ಮಾಡಿರುವರು.

⁂

ಸುರೇಂದ್ರನಾಥ ಬ್ಯಾನರ್ಜಿಯವರ ಅದ್ಭುತ ಚಿತ್ತೈಕಾಗ್ರತೆ!

ಸದ್ಯಕ್ಕೆ ದಿವಂಗತರಾದ ಬಾಬು ಸುರೇಂದ್ರನಾಥ ಬ್ಯಾನರ್ಜಿಯವರ ವಿಷಯ ಪುಣೆಯ ಶ್ರೀ। ವಾಸುದೇವ ಗೋವಿಂದ ಆಪಟೇಯವರು ಕೆಲವು ಜ್ಞಾಪಕ ಸಂಗತಿಗಳನ್ನು 'ಕೇಸರೀ' ಪತ್ರಿಕೆಯಲ್ಲಿ ನಮೂದಿಸಿರುವರು: ಸುರೇಂದ್ರನಾಥರು 'ಬಂಗಾಲಿ' ಪತ್ರಿಕೆಯ ಸಂಪಾದಕರು. ಬಂಗಾಲಿ ಪತ್ರಿಕೆಯು ದಿನಚರಿ ಪತ್ರಿಕೆಯು. ಶ್ರೀ। ಆಪಟೇಯವರು ಅವರಲ್ಲಿ ಅತಿಥಿಗಳಾಗಿದ್ದರು. ಸುರೇಂದ್ರನಾಥರು ಲೇಖ ಬರೆಯುತ್ತಿದ್ದರು. ಶ್ರೀ। ಆಪಟೇಯವರು ಒಂದು ಖುರ್ಚಿಯ ಮೇಲೆ ಒರಗಿ, ಮುಂಬಯಿಯ 'ಟೈಮ್ಸ್' ಪತ್ರಿಕೆಯನ್ನು ಓದುತ್ತಿದ್ದರು. ಬ್ಯಾನರ್ಜಿಯವರ ೮-೧೦ ವರ್ಷದ ಹುಡುಗನು, ಇಬ್ಬರೂ ಇದ್ದ ಕೋಣೆಯಲ್ಲಿ ಬಹಳ ಗೊಂದಲ ಮಾಡುತ್ತಿದ್ದನು; ಬೊಬ್ಬೆ ಹೊಡೆಯುತ್ತಿದ್ದನು. ಇದರಿಂದ ಶ್ರೀ। ಆಪಟೇಯವರಿಗೆ ತಲೆಶೂಲಿಯೆದ್ದು, ಅವರು ವಾಚನವನ್ನು ಅಷ್ಟಕ್ಕೇ ತಡೆದರು. ಆದರೂ, ಸುರೇಂದ್ರನಾಥ ಬ್ಯಾನರ್ಜಿಯವರ ಬರಹವು ಅಪ್ರತಿಹತವಾಗಿ ನಡೆದಿತ್ತು. ಲೇಖ ಮುಗಿಸಿ, ಅವರು ಲೆಖ್ಖಣಿಕೆಯನ್ನು ಕೆಳಗಿಟ್ಟ ಬಳಿಕ, ಶ್ರೀ। ಆಪಟೇಯವರು ಕೇಳಿದ್ದೇನಂದರೆ:— "ಬಾಬು ಸಾಹೇಬರೇ, ಇಂಥ ಕೋಲಾಹಲದಲ್ಲಿ ನಿಮಗೆ ಲೇಖ ಬರೆಯಲು ಸೂಚಿಸುವದೊಂದು ಆಶ್ಚರ್ಯವು!" ಅದಕ್ಕೆ ಬಾಬು ಬ್ಯಾನರ್ಜಿಯವರು ನುಡಿದದ್ದೇನಂದರೆ:— "ಬರೆಯುತ್ತಿರುವಾಗ ನನ್ನ ಚಿತ್ತವು ಏಕಾಗ್ರವಾಗುತ್ತದೆ. ಸುತ್ತುಮುತ್ತಲಿನ ಯಾವದೇ ಸದ್ದು ನನಗೆ ಕೇಳಬರುವದಿಲ್ಲ. ಪೇಟೆಯಂಥ ಗಡಿಬಿಡಿಯ ಸ್ಥಳಗಳಲ್ಲಿ ಸಹ ಕೂತುಕೊಂಡು ನಾನು ಲೇಖಗಳನ್ನು ಬರೆಯಬಲ್ಲೆನು." ಇದೊಂದು ಯೋಗಸಾಧನವೆಂದು ಶ್ರೀ। ಆಪಟೇಯವರು ಉದ್ಗರಿಸುತ್ತಾರೆ. ಸುರೇಂದ್ರ ಬಾಬು ಮಹಾಶಯರು ನಿರ್ವ್ಯಸನಿಗಳೂ, ಸತತೋದ್ಯೋಗಿಗಳೂ, ವಿದ್ಯಾವ್ಯಾಸಂಗಿಗಳೂ ಆಗಿದ್ದರೆಂದು ಶ್ರೀ। ಆಪಟೇಯವರು ನಮೂದಿಸಿ, ಅವರು ದೇಹದಾರ್ಢ್ಯವನ್ನು ಬೆಳಸಿಕೊಳ್ಳಲು ತಪ್ಪದೆ ವ್ಯಾಯಾಮ ಮಾಡುತ್ತಿದ್ದರೆಂದು ಶ್ರೀ। ಆಪಟೇಯವರು ಬರೆಯುತ್ತಾರೆ.

⁂

ಪೋಲೀಸರ ಹಣದ ಎತ್ತುವಳಿ.

ಪಂಚಮಹಾಲ ಜಿಲ್ಹೆಯಲ್ಲಿ 'ಪೋಲೀಸ ವಿಡೋ ಫಂಡ' ಯಾನೆ ಪೋಲೀಸ ವಿಧವಾ ಸಹಾಯಕ ನಿಧಿ ಹಾಗು ಬೆಂಡ ಫಂಡ ಹೀಗೆ ಎರಡು ನಿಧಿಗಳಿವೆ. ಹೀಗೆ ನಿಧಿಗಳನ್ನಿಡಲು ಪೋಲೀಸ ಇನ್ಸಪೆಕ್ಟರ ಜನರಲ್‌ರ ಸಮ್ಮತಿಯಿದೆ. ಮುಂಬಯಿ ಇಲಾಖೆಯ ಇತರ ಜಿಲ್ಹೆಗಳಲ್ಲಿ ಇಂಥ ನಿಧಿಗಳಿವೆ. ನಾಲ್ಕು ಮಂದಿ ಫೌಜದಾರರಿಗೆ ವಿಧವಾ ಸಹಾಯಕ ನಿಧಿಯನ್ನು ಒಟ್ಟು ಮಾಡಲು ಸುಪರಿಂಟೆಂಡೆಂಟರು ಅಪ್ಪಣೆ ಕೊಟ್ಟಿದ್ದರು. ಬೆಂಡ ಫಂಡನ್ನು ಒಟ್ಟು ಮಾಡಲು ಮುಖ್ಯ ಫೌಜದಾರರಿಗೆ ಅಪ್ಪಣೆ ದೊರೆತಿತ್ತು. ಆದರೆ, ಇವು ಅಕ್ರಮವಾದ್ದರಿಂದ ಇನ್ಸಪೆಕ್ಟರ ಜನರಲ್‌ರು ಇದನ್ನು ತಡೆದಿರುವರು. ಹಣ ಕೊಟ್ಟವರಿಗೆ ಪಾವತಿ ಕೊಡಲಿಲ್ಲ. ಪಂಚಮಹಾಲದೊಳಗಿನ ದೋಹದದಲ್ಲಿ ಜನರಿಗೆ ಬೆದರಿಕೆ ಹಾಕಿ ಈ ಫಂಡುಗಳಿಗೆ ಹಣ ಎತ್ತುವಳಿ ಮಾಡಿದ ಸುದ್ದಿ ಸರಕಾರಕ್ಕೆ ಹತ್ತಿರುವದಿಲ್ಲ. ಇನ್ಸಪೆಕ್ಟರ ಜನರಲ್‌ರಿಗಾಗಲಿ, ಪೋಲೀಸ ಸುಪರಿಂಟೆಂಡೆಂಟರಿಗಾಗಲಿ ಈ ಕುರಿತು ಫಿರ್ಯಾದು ಬಂದಿಲ್ಲ. ಪೋಲೀಸ ಬೆಂಡ ಫಂಡಿಗೆ ರೂ. ೧೧೯೩-೪-೦ ನಿಧಿಯು ಒಟ್ಟಾಗಿದೆ. ಗೋಧ್ರಾ ಹಾಗು ದೋಹದದೊಳಗಿನ ಸಭ್ಯ ಗೃಹಸ್ಥರು ಪೋಲೀಸ ಸುಪರಿಂಟೆಂಡೆಂಟರ ಭೆಟ್ಟಿ ಕೊಂಡು, ಈ ಸ್ಥಳಗಳಲ್ಲಿ ಬೆಂಡ ಇಲ್ಲದ್ದರಿಂದ ತಮ್ಮ ಮದುವೆ ಮೊದಲಾದ ಸಮಾರಂಭಗಳಲ್ಲಿ ತೊಂದರೆಯಾಗುತ್ತದೆಂದು ಹೇಳಿ, ಪೋಲೀಸ ಸುಪರಿಂಟೆಂಡೆಂಟರಿಗೆ ಹೊಸ ಬೆಂಡನ್ನು ತರಲಿಕ್ಕೆ ಹೇಳಿದ್ದಲ್ಲದೆ, ತಾವೂ ಸಹಾಯ ಮಾಡುತ್ತೇವೆಂದರು. ಅವರು ಕೊಟ್ಟ ವರ್ಗಣಿಯು ಫೌಜದಾರರ ಮಾರಿಫತ್ತು ಸಂಚಯ ಮಾಡಲಾಯಿತು. ಹಣವು ಆತ್ಮಸಂತೋಷದಿಂದ ಕೊಟ್ಟದ್ದರಿಂದ ಅದಕ್ಕಾಗಿ ರಶೀದಿ ಕೊಡಲಿಲ್ಲ. ವಿಧವಾಸಹಾಯಕ ನಿಧಿಗೆ ರೂ. ೨೨೩-೧೨-೦ ವಸೂಲಾಗಿದೆ. ಇದಕ್ಕೂ ರಶೀದಿ ಕೊಡಲಿಲ್ಲ. ಈ ಬಗ್ಗೆ ಪೋಲೀಸ ಸುಪರಿಂಟೆಂಡೆಂಟರು ತಪಶೀಲವಾರ ಲೆಖ್ಖವನ್ನಿಟ್ಟಿರುವರು. ಪೋಲೀಸ ಇನ್ಸಪೆಕ್ಟರ ಜನರಲ್‌ರು ಈ ಲೆಖ್ಖವನ್ನು ತಪಾಸ ಮಾಡುತ್ತಿದ್ದಾರೆ. ಈ ಲೆಖ್ಖವನ್ನು ಕಾಯಿದೆ ಕೌನ್ಸಿಲು ಸಭಾಸದರ ಮಾಹಿತಿಗಾಗಿ ಕೊಡಲಿಕ್ಕೆ ಸರಿಯಷ್ಟು ಕಾರಣಗಳಿ

ಪ್ಲ. ಇತ್ಯಾದಿ ವಗೈರೆಯು ಕಾಯಿದೆ ಕೌನ್ಸಿಲಿನ ಸಭಾಸದರಿಂದ ಶ್ರೀ। ಮುಕಾದಮರವರಿಗೆ ದೊರೆತಿದೆ.

⁂

ಸೀತಿಮನಿಯೊಳಗಿನ ಸ್ವಯಂಸೇವಕ ಶಿಬಿರ.

ಅಖಿಲ ಭಾರತೀಯ ಹಿಂದುಸ್ಥಾನಿ ಸೇವಾದಲದ ನಾಯಕರಾದ ಡಾ॥ ನಾನಾಸಾಹೇಬ ಹರ್ಡೀಕರರವರು ಇದೇ ಬರುವ ಸಪ್ಟಂಬರ ತಾ.೨೩ನೇಗೆ ವಿಜಾಪುರ ಜಿಲ್ಹೆಯ ಸೀತಿಮನೆಯಲ್ಲಿ ಸ್ವಯಂಸೇವಕ ಚಾಲಕರನ್ನು ತಯಾರಿಸುವ ಒಂದು ವರ್ಗವನ್ನು ತೆರೆಯಲಿಕ್ಕಿದ್ದಾರೆ. ಈ ವರ್ಗಕ್ಕೆ ಹಿಂದುಸ್ಥಾನದೊಳಗಿನ ಎಲ್ಲ ಪ್ರಾಂತಗಳು ೩ ಮಂದಿಗಳನ್ನು ಕಳಿಸತಕ್ಕದ್ದು. ಕರ್ನಾಟಕ ಪ್ರಾಂತಕ್ಕೆ ವಿಶೇಷ ಲಾಭಕೊಡತಬೇಕೆಂಬ ಉದ್ದೇಶದಿಂದ ಈ ಪ್ರಾಂತದ ೮ ಮಂದಿಗಳನ್ನು ಈ ಶಿಬಿರದಲ್ಲಿ ಸೇರಿಸಿಕೊಳ್ಳಲು ವ್ಯವಸ್ಥೆ ಮಾಡಿರುವರು. ಜಿಲ್ಹೆಗೊಬ್ಬನಂತೆ, ಅಲ್ಲಲ್ಲಿಯ ಜಿಲ್ಹಾ ಕೊಂಗ್ರೆಸ ಕಮಿಟಿಯವರು ಕಳಿಸತಕ್ಕದ್ದು. ಇಲ್ಲಿಯ ಶಿಕ್ಷಣವು ೩ ವಾರಗಳ ವರೆಗೆ ನಡೆಯುವದು. ಅಕ್ಟೋಬರ ೧೩ ನೇ ತಾರೀಖಿಗೆ ಈ ಶಿಕ್ಷಣವು ಮುಗಿಯುವದು. ಸ್ವಯಂಸೇವಕರಾಗಲಿಚ್ಛಿಸುವವರು ೧೮ ವರ್ಷ ಪ್ರಾಯಕ್ಕೆ ಮಿಕ್ಕಿದವರಿದ್ದು ರಾಷ್ಟ್ರೀಯ ಸಭೆಗೆ ಸೇರಿದವರಿರಬೇಕು. ಮೆಟ್ರಿಕ್ ವರೆಗೆ ಇಂಗ್ಲಿಷ ಅಭ್ಯಾಸವಾಗಿರಬೇಕು; ಹಿಂದೀ ಭಾಷೆಯನ್ನು ತಿಳಿದವರಿರಬೇಕು; ಶರೀರಬಲದಿಂದಲೂ ಸಮರ್ಥರಿರಬೇಕು; ಸುಸ್ವಭಾವದ ಶಿಫಾರಸುಪತ್ರವಿರಬೇಕು; ತಂತಮ್ಮಲ್ಲಿಯ ದಲಸೇವೆ ಮಾಡಲಿಕ್ಕೂ, ಕಾನಪೂರ ರಾಷ್ಟ್ರೀಯ ಸಭೆಗೆ ಹೋಗಲಿಕ್ಕೂ ತಯಾರಿರಬೇಕು. ಊಟ-ಉಳಕೊಳ್ಳುವ ಖರ್ಚು ಅಜಮಾಸ ೧೫ರೂಪಾಯಿ ಬರುವದು. ೧೦ರೂಪಾಯಿ ಪೋಷಾಖಿಗಾಗಿ ಕೊಡಬೇಕು. ಈ ಖರ್ಚನ್ನೆಲ್ಲ ಅಲ್ಲಲ್ಲಿಯ ಪ್ರಾಂತಿಕ ಕೊಂಗ್ರೆಸ ಕಮಿಟಿಗಳೂ, ಸ್ವಯಂಸೇವಕರೂ ಸಹಿಸಬೇಕು. ಬೆಳಗಾವಿಯ ರಾಷ್ಟ್ರೀಯ ಸಭೆಯ ಸಮಯ ಸೇರಿದ ಕರ್ನಾಟಕದ ಸ್ವಯಂಸೇವಕರಿಗೆ ಇಂಗ್ಲಿಷ ಬರದಿದ್ದರೂ ಅಡ್ಡಿಯಿಲ್ಲ. ಕರ್ನಾಟಕ ಸ್ವಯಂಸೇವಕರ ಊಟ ಉಳಕೊಳ್ಳುವ ಖರ್ಚನ್ನು ಪ್ರಾಂತಿಕ ಸ್ವಯಂಸೇವಕ ಮಂಡಳವು ಸಹಿಸುವದು. ಸ್ವಯಂಸೇವಕರು ತಮ್ಮೊಡನೆ ಹಾಸಿಗೆ, ಅಡಿಗೆ ಪಾತ್ರೆ ಹಾಗು ಅವಶ್ಯವಿರುವ ಪುಸ್ತಕಗಳನ್ನು ತರಬೇಕು. ಈ ಶಿಬಿರದಲ್ಲಿ ಸೇರಲಿಚ್ಛಿಸುವವರು ಸಪ್ಟಂಬರ ತಾ. ೧೦ನೇದರೊಳಗೆ ತಮ್ಮ ತಮ್ಮ ಪ್ರಾಂತಿಕ ಮಂಡಳ ಹಾಗು ಜಿಲ್ಹಾ ಮಂಡಳಗಳ ವಿದ್ಯಮಾನ ಅರ್ಜಿ ಕಳಿಸತಕ್ಕದ್ದು.

⁂

ಒಂದು ಭವಿಷ್ಯ.

ಜರ್ಮನಿಯ ಜ್ಯೋತಿಷಜ್ಞರಾದ ಪಿ. ಎಮ್. ಗ್ರಿಮ್‌ರವರು ೧೯೭೦ನೇ ಇಸ್ವಿಯ ವರೆಗಿನ ಭೂತಲದ ಭವಿಷ್ಯವನ್ನೊಂದು ಬರೆದಿಟ್ಟಿರುವರು. ೧೯೨೫ನೇ ಇಸ್ವಿಯಲ್ಲಿ ಸ್ತ್ರೀವರ್ಗದಲ್ಲಿ ಕ್ರಾಂತಿಯುಂಟಾಗುವದು; ಬಿಸಿಲು ಬೀಳುವದು; ಮಳೆಯಿಲ್ಲದೆ ಬಾವಿಗಳೂ, ಹೊಳೆ-ಹಳ್ಳಗಳೂ ಬತ್ತಿಹೋಗುವವು. ರಾಜ್ಯಕ್ರಾಂತಿಯಿಂದ ಒಬ್ಬ ಅರಸನಾಗಲಿ, ಅಧ್ಯಕ್ಷನಾಗಲಿ ಪದಭ್ರಷ್ಟನಾಗುವನು, ಯುರೋಪ ಖಂಡದ ಅಲ್ಪ ಪರ್ವತದಲ್ಲಿ ದೊಡ್ಡದೊಂದು ಭೂಕಂಪ ವಾಗುವದು. ೧೯೨೬ನೇ ಇಸ್ವಿಯಲ್ಲಿ ಸೈನಿಕರು ದಂಗೆಯನ್ನೆಬ್ಬಿಸುವರು. ೧೯೨೮ನೇ ಇಸ್ವಿಯಲ್ಲಿ ದೊಡ್ಡ ಅರಸನೊಬ್ಬನು ಮಡಿಯುವನು. ಆತನ ನಿಧನದಿಂದ ದೊಡ್ಡ ಯುದ್ಧ ಪ್ರಕಟವಾಗುವದು. ೧೯೨೯ನೇ ಇಸ್ವಿಯಲ್ಲಿ ಹೇಳತಕ್ಕಂಥ ಸಂಗತಿಯೇನಿಲ್ಲ. ೧೯೩೦ನೇ ಇಸ್ವಿಯಿಂದ ೧೯೪೦ನೇ ಇಸ್ವಿಯ ವರೆಗೆ ಯುರೋಪ ಖಂಡದಲ್ಲಿ ಚಿಕ್ಕದೊಡ್ಡ ರಾಜ್ಯಕ್ರಾಂತಿಗಳುಂಟಾಗುವವು. ಭೂತಲದ ಮೇಲೆಲ್ಲ ತರತರದ ಸಿಡಿಲುಗಳು ಕಾವಳೆಯನ್ನೆಬ್ಬಿಸುವವು. ೧೯೪೬ನೇ ಇಸ್ವಿಯಲ್ಲಿ ಈ ತೊಂದರೆಗಳೆಲ್ಲ ಅಲ್ಪಸ್ವಲ್ಪ ಕಮಿಯಾಗುವವು. ೧೯೫೦ ರಿಂದ ೬೦ನೇ ವರ್ಷದ ವರೆಗಿನ ಅವಧಿಯಲ್ಲಿ ರಶಿಯಾ ದೇಶದಲ್ಲಿ ಅಲ್ಲಿಯ ಸಾರ್ವಭೌಮ ಝಾರ ಪಕ್ಷದವರು ಬೊಲ್ಶೆವಿಕರನ್ನು ಸೋಲಿಸಿ, ರೋಮನೊಫ್‌ರವರನ್ನು ಸಿಂಹಾಸನದಲ್ಲಿ ಏರಿಸುವರು. ಆದರೂ, ಬೊಲ್ಶೆವಿಕ ಪಕ್ಷವು ಬೆಳೆದು, ಆಸ್ಟ್ರೇಲಿಯಾ ದೇಶದಲ್ಲಿ ರಾಜ್ಯವನ್ನು ಹೂಡುವದು. ೧೯೭೦ ನೇ ಇಸ್ವಿಯಲ್ಲಿ ಸಾರ್ವಭೌಮ ರಾಜರ ಅರಸುತನಕ್ಕೆ ಪುನಃ ಪ್ರಾರಂಭವಾಗುವದು, ರಾಜ್ಯಕ್ರಾಂತಿಯ ಗೊಂದಲವು ತೀರುವದು.

ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ.

ಅನುವಾದಕ:—ಶ್ರೀ. ಎ. ಕೊಡ್ಕೆ, ಸಿರ್ಸಿ.

(ಹಿಂದಿನ ಸಂಚಿಕೆಯಿಂದ ಮುಂದುವರಿದದ್ದು.)

೩.

ದೇಶಾಯಿಯವರು ಒಂದು ಸರಕಾರೀ ದವಾಖಾನೆಯ ಡಾಕ್ಟರರಾಗಿದ್ದರು. ಅವರು ವಯೋವೃದ್ಧರಾಗಿದ್ದು, ಅವರ ಉತ್ಪನ್ನವಾದರೂ ಒಳ್ಳೇದಿತ್ತು. ಅಲ್ಲಿ ಇಬ್ಬರು ಎಮ್. ಬಿ. ಬಿ. ಎಸ್‌ರು ಮತ್ತು ಮೂರು ಮಂದಿ ಎಲ್. ಎಮ್. ಎಂಡ್ ಎಸ್. ಆದವರೂ ಹೀಗೆ ಆ ಬೇರೆ ಡಾಕ್ಟರರಿದ್ದರು ಇವ್ಯಾವರೂ ಡಾಕ್ಟರ ದೇಸಾಯಿಯವರೇ ಹೆಚ್ಚು ಪ್ರತಿಷ್ಠೆಯನ್ನು ಪಡೆದಿದ್ದರು. ಉಳಿದವರಲ್ಲಿ ಒಬ್ಬರಾದರೂ ಅವರಷ್ಟು ಸಾರ್ವಜನಿಕ ವಿಶ್ವಾಸಕ್ಕೆ ಪಾತ್ರರಾಗಿದ್ದಿಲ್ಲ. ಹೀಗಾಗಿ ರೋಗಿಗಳ ರೋಗಪರೀಕ್ಷೆ-ಔಷಧೋಪಚಾರಗಳ ಮೂಲಕ ಅವರಿಗೆ ಊಟಕ್ಕೆ ಸಹ ಸಾಕಷ್ಟು ಅವಕಾಶ ಸಿಗುವದು ಕಠಿಣವಾಗುತ್ತಿತ್ತು.

ಡಾಕ್ಟರ ದೇಸಾಯಿಯವರಿಗೆ ಇಬ್ಬರು ಮಕ್ಕಳಿದ್ದರು. ಹಿರೇಯವನಾದ ಸದಾಶಿವನು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಬಿ. ಎ. ಪರೀಕ್ಷೆಯ ಅಭ್ಯಾಸ ಮಾಡುತ್ತಿದ್ದನು. ಕಿರಿಯವನಾದ ಶಂಕರನು ಶಹರದೊಳಗಿದ್ದ ಶಾಲೆಗೆ ಹೋಗುತ್ತಿದ್ದನು. ಬೇಸಿಗೆಯ ಸೂಟಿ ಇದ್ದದರಿಂದ ಈ ಕಾಲಕ್ಕೆ ಸದಾಶಿವನು ಮನೆಗೆ ಬಂದಿದ್ದನು. ಕೆಲವು ತಿಂಗಳುಗಳ ಪೂರ್ವದಲ್ಲಿ ಮದುವೆಯಾದ ಮೂಲಕ ಅವನ ಹೆಂಡತಿಯಾದರೂ ಮನೆಯಲ್ಲಿಯೇ ಇದ್ದಳು.

ಆ ದಿನ ರಾತ್ರಿ *೧೦* ಘಂಟೆಯ ನಂತರ ಡಾಕ್ಟರ ದೇಸಾಯಿಯವರು ದವಾಖಾನೆಯಿಂದ ಮನೆಗೆ ಬಂದರು.

“ಅಪ್ಪಾ, ಸಾಹೇಬರಿಗೆ ಹ್ಯಾಗಿದೆ ?” ಎಂತ ಸದಾಶಿವನು ತಂದೆಯು ಬಂದ ಕೂಡಲೆ ಕೇಳಿದನು.

“ಮೊದಲಿಗಿಂತ ಈಗ ಹೆಚ್ಚು ಗುಣವಿದೆ. ಅವರಿಗೆ ತಲೆಗೆ ಬಹಳ ಪೆಟ್ಟು ಹತ್ತಿತ್ತು. ಆದರೆ ಅವರಿಗೆ ಪೂರಾ ಗುಣವಾಗುವ ಆಶೆಯಿದೆ. ಬಡಪ್ರಾಣಿ ! ಜನರು ಅವರನ್ನು ತೀರ ನಿರ್ದಯತನದಿಂದ ನಡಿಸಿದರು.”

“ಅಪ್ಪಾ, ಆ ಸಾಹೇಬರ ಸೇವೆಯು ಸರಿಯಾಗಿಯೇ ಆಯಿತು; ನಿನಗೆ ಹಾಗೆ ಕಾಣುವದಿಲ್ಲವೋ ? ತಮ್ಮ ತೊಗಲು ಬೆಳ್ಳಗಿರುತ್ತದೆಂಬ ಹುಸೀ ದುರಭಿಮಾನದಿಂದಲೇ ಅವರು ತಾವೇ ಸ್ವತಃ ನ್ಯಾಯಾಧೀಶರಾಯಿದ್ದೇವೆಂತಲೇ ತಿಳಿದಿದ್ದರೆ. ಅವರ ವಿಷಯವಾಗಿ ನಿನಗೆ ಪಶ್ಚಾತ್ತಾಪವಿಲ್ಲ!!”

ಡಾಕ್ಟರರು ಕೆಲಹೊತ್ತು ವಿಚಾರಮಾಡಿ— “ಸಾಹೇಬರಿಂದ ಮೊದಲು ತಪ್ಪಾದದ್ದು ನಿಜ. ಆದರೆ ಜನರು ಒಬ್ಬನ ಮೇಲೆ ಕೈತೋರಿಸುವದು— ಇದು ನೀತಿಗೆ ಸರಿಯಾದ ಒಡಬಾಟವೇ ? ನನ್ನ ದೇಶಬಾಂಧವರ ಈ ಕಾಂಡ ವರ್ತನಕ್ಕಾಗಿ ನನಗೆ ನಾಚಿಕೆಯೆನಿಸುತ್ತದೆ.” ಅಂದರು.

“ನನಗಂತೂ ಹಾಗೆ ತೋರುವದಿಲ್ಲ. ಇಂಗ್ಲೀಷ ಮತ್ತು ಭಾರತೀಯರ ನಡುವೆ ಎಂದಾದರೂ ನ್ಯಾಯವಿರುವ ಸಂಭವವೇ ?”

“ಯಾಕಿಲ್ಲ, ಹೇಳು ?”

ಯಾಕೆಂದರೆ, ಬುಡದಿಂದ ತುದಿಯವರೆಗೆ ಅನ್ಯಾಯವೇ ಅನ್ಯಾಯ. ಉದಾಹರಣಾರ್ಥವಾಗಿ, ಈ ಸಂಗತಿಯ ವಿಷಯದಲ್ಲಿ ಕ್ರಿಮಿನಲ್ ಖಟ್ಲೆಯಾದರೆ, ಆರೋಪಿಗಳೆಂತ ಎಳೆದು ತಂದವರಿಗೆ ನ್ಯಾಯವೇನಾದರೂ ಸಿಕ್ಕೀತೇ ?”

ಡಾಕ್ಟರರು ನಗುತ್ತ “ಸದು, ನಿನ್ನ ತರ್ಕಶಾಸ್ತ್ರದ ವಿಷಯವಾಗಿ ನನಗೆ ಹೆಚ್ಚಿನ ಜ್ಞಾನವಿಲ್ಲ ! ಬೇರೆಯವರು ಯಾರೋ ತಪ್ಪು ಮಾಡುತ್ತಾರೆಂಬ ಕುಂಟ ಕಾರಣವನ್ನು ಮುಂದೊಡ್ಡಿ, ನಾನೂ ಅದರಂತೆಯೇ ವರ್ತಿಸುವದು ಯೋಗ್ಯವಾದೀತೇ ?” ಎಂದರು.

ಇದಕ್ಕೆ ಹ್ಯಾಗೆ ಪ್ರತ್ಯುತ್ತರ ಕೊಡಬೇಕೆಂಬುದು ಸದಾಶಿವನಿಗೆ ಸೂಚಿಸಲಿಲ್ಲ. ಕೆಲ ಹೊತ್ತಿನಮೇಲೆ ಅವನು — “ಅಪ್ಪಾ, ನನಗೆ ತೋರುವದೆಂದರೆ, ಇಂಥ ವಿಷಯಗಳಲ್ಲಿ ಬಡಿದಾಟದ ನ್ಯಾಯಾನ್ಯಾಯ ನಿರ್ಣಯಕ್ಕಾಗಿ ಸಂಖ್ಯೆಯನ್ನೇ ಪ್ರಮಾಣವಾಗಿ ತೆಗೆದುಕೊಳ್ಳತಕ್ಕದ್ದಲ್ಲ. ಇಂಥ ಸಂಗತಿಗಳಲ್ಲಿ ಒಬ್ಬ ಕರ್ನಾಟಕೀಯ ಕೇವಲ ಒಂದೇ ವ್ಯಕ್ತಿಯಾಗಿರುವನು. ಆದರೆ ಒಬ್ಬ ಇಂಗ್ಲೀಷ ಮನುಷ್ಯನು, ಒಂದು ವ್ಯಕ್ತಿಯೂ, ರಾಜ್ಯವನ್ನಾಳುವ ಜನಾಂಗಕ್ಕೆ ಸೇರಿದವನೂ, ಮತ್ತು ಎಷ್ಟೋ ಸಾರೆ ಒಂದಿಲ್ಲೊಂದು ಅಧಿಕಾರವನ್ನು ಪಡೆದವನೂ ಆಗಿರುವನು. ಆದ್ದರಿಂದ ಒಬ್ಬ ಇಂಗ್ಲೀಷ ಮನುಷ್ಯನಿಗೆ ನೂರಾಗಲೀ, ನೂರಕ್ಕಿಂತ ಹೆಚ್ಚಾಗಲೀ ಕರ್ನಾಟಕಸ್ಥರು ಸರಿಯಾಗುವದು ಸಹಜವಿದೆ,” ಎಂದನು.

ಡಾಕ್ಟರರು ಸ್ವಲ್ಪ ಸಿಟ್ಟಿಗೆದ್ದು, “ಸದು, ಈ ವಾದವನ್ನು ಹೂಡಿ ನೀನೇ ನಿನ್ನ ಜನಾಂಗದ ಅಪಮಾನವನ್ನು ಮಾಡುತ್ತಿ ಎಂಬುದನ್ನು ಬಲ್ಲೆಯೋ ? ಕರ್ನಾಟಕಸ್ಥನಂತೆಯೇ ಒಬ್ಬ ಇಂಗ್ಲೀಷ ಮನುಷ್ಯನಾದರೂ ಕೇವಲ ಒಂದೇ ವ್ಯಕ್ತಿಯಾಗಿರುವನು. ಅವನು ಬೇಕಾದರೆ ರಾಜ್ಯವನ್ನಾಳುವ ಜನಾಂಗಕ್ಕೆ ಸೇರಿದವನಿರಬಹುದು. ಅಥವಾ ಸ್ವತಃ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟನೇ ಇರಬಹುದು. ಆದರೆ, ಈ ವಿಚಾರಗಳಿಂದ ಅವನ ಬಾಹುಬಲವು ಹೆಚ್ಚುವದೆಂತ ನೀನು ತಿಳಿಯುತ್ತೀಯೋ ?” ಎಂದರು.

“ಅಪ್ಪಾ, ನಿಜವಾಗಿಯೂ ಅವನ ಬಾಹುಬಲವಲ್ಲ; ಆದರೆ ಅವರಿಂದ ಆತನ ಮನೋಬಲವಾದರೂ ಹೆಚ್ಚುವದಲ್ಲವೇ ?”

ಡಾಕ್ಟರರಿಗೆ ಈ ತರ್ಕದ ಮಹತ್ವವು ಹೊಳೆಯಿತು. ಅವರು ಗಟ್ಟಿಯಾಗಿ ನುಡಿದದ್ದೇನಂದರೆ— “ಸದು, ಕೆಲಮಟ್ಟಿಗೆ ನೀನು ಹೇಳುವದು ಸರಿಯೇ. ಆದರೆ, ಒಬ್ಬ ಕರ್ನಾಟಕಸ್ಥನು ಬೇರೊಂದು ಜನಾಂಗಕ್ಕೆ ಸೇರಿದ ಇನ್ನೊಬ್ಬನನ್ನು ಸರಿಗಟ್ಟಲಾರನೆಂಬುದನ್ನು ನಾನು ಎಂದೂ ನಂಬಲಾರೆನು. ಇಂಥ ಪ್ರಸಂಗಗಳಲ್ಲಿ ಕರ್ನಾಟಕಸ್ಥನ ಮನಸ್ಸಿನಮೇಲಿಂದಲೂ ಒಳ್ಳೇ ಅನುಕೂಲವಾದ ಪರಿಣಾಮವನ್ನುಂಟು ಮಾಡುವಂಥ ವಿಷಯಗಳೇನಾದರೂ ಇರಬಾರದೇ? ಸ್ವಾಭಿಮಾನಸಂರಕ್ಷಣಕ್ಕಾಗಲೀ ಜುಲುಮೆ-ಜಬರದಸ್ತ್ಯಾದಿಗಳ ಪ್ರತೀಕಾರಕ್ಕಾಗಲೀ, ಇಲ್ಲವೇ ತಾಯಿ-ತಂಗಿಯರ ಮಾನರಕ್ಷಣಕ್ಕಾಗಲೀ ನಮ್ಮೊಳಗಿನವನೊಬ್ಬನು ಟೊಂಕಕಟ್ಟಿ ನಿಂತರೆ ಈ ವಿಚಾರಗಳಿಂದ ಸತ್ಪ್ರವೃತ್ತಿಯಾದ ಅವನ ಬಾಹುಬಲವು ಹೆಚ್ಚುವ ವಿಷಯದಲ್ಲಿ ನನಗೆ ಖಾತ್ರಿಯುಂಟು !!

ಅಷ್ಟರಲ್ಲಿ ಅಡಿಗೆಯ ಭಟ್ಟನು ಬಂದು ಊಟವು ಸಿದ್ಧವಾದ ಸಂಗತಿಯನ್ನು ತಿಳಿಸಿದನು. ತಂದೆಯೂ ಮಗನೂ ಅಲ್ಲಿಂದೆದ್ದು ಒಳಗೆ ಹೋದರು.

(ಮುಂದೆ ಸಾಗುವದು.)

— ಸ್ವಿಜ್ಯದೇಶದ ಪ್ರಾಂತಾಧಿಪರು ಅಲ್ಲಿಯ ೧೧ ಸಂಘಗಳು ರಾಜದ್ರೋಹಕರವೆಂದು ಹೇಳಿ, ಅವು ಬೇಕಾಯದೇಶೀರ ಎಂದು ಜಾಹೀರುಪಡಿಸಿರುವರು.

ಕಾನಡಾವೃತ್ತ.

ಮಿತಿ ಕ್ರೋಧನ ಸಂ|| ಭಾದ್ರಪದ ಶು|| ೫ಮಿ ಸೋಮವಾರ

ಮಿತಿಮೀರಿತು!

ಬ್ರಾಹ್ಮಣೇತರ ಹಾಗು ಸಿಂಧ ಮಹಮ್ಮದೀಯರ ಸ್ವಾರ್ಥ.

ಮುಂಬಯಿ ಕಾಯಿದೆ ಕೌನ್ಸಿಲಿನ ಜುಲೈ ತಿಂಗಳಲ್ಲಿ ಸೇರಿದ ಅಧಿವೇಶನವು ಪಕ್ಷಸ ಕಳೆದ ಶನಿವಾರಕ್ಕೆ ಪರಿಸಮಾಪ್ತಿಯಾಗೈದಿತು. ಲೋಕಪಕ್ಷದ ತರ್ಫೆನಿಂದ ಕೌನ್ಸಿಲಿನಲ್ಲಿ ಸೂಚಿಸಲಿಕ್ಕಿದ್ದ ಠರಾವುಗಳ್ಯಾವವೂ ಚರ್ಚೆಗೆ ಬರದೆ, ಅಧಿವೇಶನವು ಕೊನೆಗೊಂಡಿತು. ಇಲಾಖೆಯೊಳಗಿನ ಪ್ರಜೆಗಳು ಹೀಗೆ ಅನಪೇಕ್ಷಿತವಾಗಿ ಅಧಿವೇಶನವು ಅಂತ್ಯವಾಗಲು ಕಾರಣವೇನೆಂದು ಪ್ರಶ್ನಿಸಬಹುದು. ಆಳರಸರು ಲೋಕಹಿತದ ಪ್ರಶ್ನೆಗಳನ್ನು ಚರ್ಚಿಸಬಾರದೆಂಬ ದುರಾಲೋಚನೆಯಿಂದ ಅಧಿವೇಶನವನ್ನು ಅಂತ್ಯಪಡಿಸಿರಬಹುದೆಂದು ತರ್ಕಿಸಬಹುದು; ಆದರೆ, ಇದು ಆಳರಸರ ದುರಾಲೋಚನೆಯಿಂದ ಒದಗಿಬಂದದ್ದಲ್ಲ. ಸ್ವರಾಜ್ಯ ಪಕ್ಷದ ಸಭಾಸದರ ವೈರಾಗ್ಯದಿಂದ ಕೌನ್ಸಿಲು ಅಧಿವೇಶನವು ಲೋಕಕಾರ್ಯವನ್ನು ನೆರವೇರಿಸದೆ ಕೊನೆಗಂಡಿದೆ. ಹೀಗೆ ಸ್ಥಿತಿಯಾಗಲು ಕಾರಣವೇನು?

ಕೌನ್ಸಿಲು ಪ್ರವೇಶದ ಸ್ವರಾಜ್ಯ ಪಕ್ಷದವರು ಕೌನ್ಸಿಲುಗಳನ್ನು ಅಡ್ಡಗಟ್ಟುವದಕ್ಕಾಗಿ ಸೇರಿಕೊಂಡಿದ್ದರು. ಕಾರಣಾಂತರಗಳಿಂದ ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ಸ್ವರಾಜ್ಯ ಪಕ್ಷಕ್ಕೆ ಬಹುಮತ ದೊರಕದೆ, ಅವರು ಆಳರಸರೊಡನೆ ಅಲ್ಪಸಂಖ್ಯಾಕರಾಗಿ ಜೂಜಾಡಬೇಕಾಯಿತು. ತಮ್ಮ ಲೋಕಕಾರ್ಯವನ್ನು ಸಾಧಿಸಲಿಕ್ಕಾಗಿ ತಮ್ಮ ತತ್ವಗಳ ಕಾಠಿಣ್ಯವನ್ನು ಸ್ವಲ್ಪ ಮೃದುಮಾಡಿ ಬ್ರಾಹ್ಮಣೇತರ ಪಕ್ಷಕ್ಕೂ, ಸಿಂಧದ ಮಹಮ್ಮದೀಯರಿಗೂ ಸ್ವರಾಜ್ಯ ಪಕ್ಷದವರು ನೆರವಾಗಿ ಸರಕಾರವನ್ನು ಸೋಲಿಸಿ ತಮ್ಮ ಕಾರ್ಯವನ್ನು ಸಾಧಿಸಿಕೊಂಡರು. ಇದಕ್ಕೆ ಪ್ರತಿಯಾಗಿ ಶಿಷ್ಟಾಚಾರಕ್ಕನುಸರಿಸಿ ಬ್ರಾಹ್ಮಣೇತರರೂ, ಸಿಂಧದ ಮಹಮ್ಮದೀಯ ಪ್ರತಿನಿಧಿಗಳೂ ತಮಗೆ ನೆರವಾಗುವರೆಂದು ಸ್ವರಾಜ್ಯ ಪಕ್ಷದವರು ಬಯಸಿದ್ದರು. ಆದರೆ, ಬ್ರಾಹ್ಮಣೇತರರೂ, ಸಿಂಧದ ಪ್ರತಿನಿಧಿಗಳೂ ಒಂದು ಸಲ ಸ್ವರಾಜ್ಯ ಪಕ್ಷದ ಬದಿಗೆ, ಇನ್ನೊಂದು ಸಲ ಸರಕಾರದ ಬದಿಗೆ, ಮತ್ತೊಂದು ಸಲ ಸರಕಾರದ್ದೇ ಬದಿಗೆ, ಹೀಗೆ ಸ್ವಾರ್ಥಸಾಧನೆಗಾಗಿ, ತಮ್ಮ ತಮ್ಮ ಸಮಾಜಗಳ ದುರಾಶೆಗಾಗಿ ಗಾಳಿ ಬಂದಂತೆ ತೂರಿಕೊಂಡು ನಡೆಯಹತ್ತಿದರು. ಹೊರತು ಸ್ವರಾಜ್ಯ ಪಕ್ಷದವರ ಲೋಕಕಾರ್ಯದಲ್ಲಿ ಬಂಧುಭಾವದಿಂದ ನೆರವಾಗಲಿಲ್ಲ, ಇಷ್ಟೇ ಅಲ್ಲ, ಸ್ವರಾಜ್ಯ ಪಕ್ಷದವರಿಗೂ ಆಳರಸರಿಗೂ ರಾಜಕಾರಣ ರಣಕ್ಷೇತ್ರದಲ್ಲಿ ಕಡು ಸಂಗ್ರಾಮವೆದ್ದ ಸಂಧಿ ಸಾಧಿಸಿ ಆಳರಸರ ಪಕ್ಷದಲ್ಲಿ ಸೇರಿಕೊಂಡು ಸ್ವರಾಜ್ಯ ಪಕ್ಷದವರ ಲೋಕಕಾರ್ಯದ ಸೂಚನೆಗಳನ್ನು ಒಗ್ಗಬಡಿಯಹತ್ತಿದರು. ಬೆರಿಸ್ಟರ ಮುಕುಂದರಾವ ಜಯಕರರವರ ನೇತೃತ್ವದಲ್ಲಿ ಸ್ಥೈರ್ಯದಿಂದ ಸ್ಥಿರಚಿತ್ತದಿಂದ ದುಡಿಯುತ್ತಿದ್ದ ಸ್ವರಾಜ್ಯ ಪಕ್ಷವು ಪುನಃ ಪುನಃ ನಿರಾಶೆಪಟ್ಟರೂ, ಸಭಾಸದ ಬಾಂಧವರಿಗೆ ಇನ್ನೂ ಸದ್ಬುದ್ಧಿಯು ಪ್ರಾಪ್ತವಾಗುವದೆಂಬ ಆಶೆಯಿಂದ ಈವರೆಗೆ ತಾಳಿಕೊಂಡಿತು. ಕೊನೆಗೆ, ಕಳೆದ [illegible] ಬ್ರಾಹ್ಮಣೇತರ ಹಾಗು ಸಿಂಧದ ಮಹಮ್ಮದೀಯ ಪ್ರತಿನಿಧಿಗಳ ಬಾಂಧವ್ಯದ್ರೋಹವು ಮಿತಿಮೀರಿದ್ದರಿಂದ ಸ್ವರಾಜ್ಯ ಪಕ್ಷವು ಕೌನ್ಸಿಲ ಸನ್ಯಾಸವನ್ನು ತಳೆದು, ಪ್ರಶ್ನೆಗಳನ್ನು ಕೇಳದೆ, ಠರಾವುಗಳನ್ನು ಚರ್ಚಿಸದೆ ಸುಮ್ಮಗಾದದ್ದರಿಂದ ಅಧಿವೇಶನದ ಪರದೆಯು ಘಕ್ಕನೆ ಶನಿವಾರಕ್ಕೆ ಬಿತ್ತು.

ಕಳೆದ ೧೬ನೆ ತಾರೀಖಿಗೆ ಸ್ವರಾಜ್ಯ ಪಕ್ಷದ ಶ್ರೀ| ಜೋಶಿಯವರು ಲೋಕಲ್ ಬೋರ್ಡು ಕಾಯಿದೆಯನ್ನು ತಿದ್ದುಪಡಿ ಮಾಡಬಯಸಿ, ಒಂದು ಸೂಚನೆಯನ್ನು ಸೂಚಿಸಿದ್ದರು. ಲೋಕಲ್ ಬೋರ್ಡುಗಳಿಗೆ ಈಗಿನ ಕಾಯಿದೆಯಂತೆ ವಿದ್ಯಾವಂತರಿಗೆ ಮತದಾನದ ಅಧಿಕಾರವಿಲ್ಲ; ಸುಶಿಕ್ಷಿತರಿಗೆ ಮತದಾನದ ಅಧಿಕಾರವಿರಬೇಕೆಂದು ಶ್ರೀ| ಜೋಶಿಯವರ ಅಂಬೋಣವಿತ್ತು. ಕಾಯಿದೆಯ ತಿದ್ದುಪಡಿಯ ವಿಷಯ ಮತಭೇದವೇನಿದ್ದರೆ, ಮುಂದೆ ನೋಡುವ; ಸದ್ಯಕ್ಕೆ ತಮ್ಮ ತಿದ್ದುಪಡಿಯನ್ನು ಚರ್ಚೆಮಾಡಗೊಡಿರೆಂದು ಶ್ರೀ| ಜೋಶಿಯವರು ಹೇಳಿದರ, ಸರಕಾರವು ವಿರೋಧಿಸುವ ತಯಾರಿ ನೋಡಿ, ಸ್ವರಾಜ್ಯ ಪಕ್ಷದ ನಾಯಕರಾದ ಬೆರಿಸ್ಟರ ಮುಕುಂದರಾಯರು ಪ್ರಥಮ ವಾಚನಕ್ಕೆ ಅಡ್ಡಿಯಾಗಬಾರದೆಂದು ಕೂಡಿ ಬಿದ್ದಿದೆ; ಸರಕಾರದ ಅಭಿವಚನವು ಹಾಗಿದೆ; ಹೀಗಿದ್ದು, ಪ್ರಥಮ ವಾಚನಕ್ಕೆ ಅಡ್ಡಿ ಮಾಡಬೇಡಿರಿ; ಗುಣದೋಷದ ಚರ್ಚೆಯಿಂದ ತಿದ್ದುಪಡಿ ಬೇಡಾದರೆ, ಕಿತ್ತೊಗೆಯಲಿಕ್ಕೆ ಇಂಬು ಇದ್ದೇ ಇರುವದು; ಇತ್ಯಾದಿ ನುಡಿಗಳನ್ನಾಡಿ ಮನವೊಲಿಸಲೆತ್ನಿಸಿದರೂ ಆಳರಸರು ಕೇಳದೆ, ಅಧಿಕಾರ ಮದಾಂಧರಾಗಿ ಬ್ರಾಹ್ಮಣೇತರ ಹಾಗು ಸಿಂಧ ಮಹಮ್ಮದೀಯರ ಸೈನ್ಯ ಬಲದಿಂದ ಸ್ವರಾಜ್ಯ ಪಕ್ಷದವರನ್ನು ಸೋಲಿಸಿದರು. ಇದನ್ನು ನೋಡಿ, ಸ್ವರಾಜ್ಯ ಪಕ್ಷದವರ ದ್ವೇಷದಿಂದ ಅಲ್ಪ ಸಂಖ್ಯಾಕ ಪಕ್ಷಗಳು, ಆಳರಸರ ಅಂತರಂಗದ ಮರ್ಮವನ್ನರಿಯದೆ, ತಮಗೆ ಕಾಲಕಾಲಕ್ಕೆ ಅಪಕಾರ ಮಾಡುತ್ತಾರೆಂದು ವಿಚಾರಿಸಿ, ಅಲ್ಪಸಂಖ್ಯಾಕರಿಗೆ ಆತ್ಮನಿರೀಕ್ಷಣೆ ಮಾಡುವದಕ್ಕಾಗಿ ಸ್ವರಾಜ್ಯ ಪಕ್ಷವು ಕೌನ್ಸಿಲಿನಲ್ಲಿ ಸನ್ಯಸ್ತವಾಗಿದೆ. ಯಾವದೇ ವಿಷಯದ ಮೇಲೆ ಸ್ವರಾಜ್ಯ ಪಕ್ಷವು ಇನ್ನುಮುಂದೆ ಏನೊಂದೂ ಮಾತಾಡಬಾರದೆಂದೂ, ಯಾವದೇ ಬದಿಗೆ ಮತಕೊಡಬಾರದೆಂದೂ ನಿರ್ಧರಿಸಿ, ಅದರಂತೆ ಜಾಹೀರನಾಮೆಯನ್ನೂ ಪ್ರಕಟಿಸಿದೆ.

ಈ ಜಾಹೀರನಾಮೆಯು ಮನನೀಯವಿದೆ. ಆಳರಸರ ಕುತಂತ್ರಗಳೂ, ಸ್ವರಾಜ್ಯ ಪಕ್ಷೇತರರು ಕೈಕೊಂಡ ಬಂಧುದ್ರೋಹದ ಉಪಾಯಗಳೂ ನಿರ್ದಾಕ್ಷಿಣ್ಯವಾಗಿ ನಮೂದಿಸಲ್ಪಟ್ಟವೆ. ಸ್ವರಾಜ್ಯ ಪಕ್ಷದವರು ಸ್ವಾಭಿಮಾನಪೂರ್ವಕವಾಗಿ ಕೌನ್ಸಿಲು ಕಾರ್ಯ ಮಾಡುವದು ಅಸಾಧ್ಯವೆಂದು ನಮೂದಿಸಿ, ಆಳರಸರ ಹಾಗು ಸ್ವರಾಜ್ಯ ಪಕ್ಷದವರ ಕಾದಾಟದಿಂದ ತತ್ವಶೂನ್ಯವಾದ ಇತರ ಪಕ್ಷದವರಿಗೆ ಪ್ರಾಪ್ತವಾದ ಅಧಿಕಾರವನ್ನು ಹೋಗಲಾಡಿಸಲಿಕ್ಕೂ, ಸ್ವರಾಜ್ಯ ಪಕ್ಷಕ್ಕೆ ಅಪಕಾರ ಮಾಡುವ ದೆಸೆಯಿಂದಲೇ ಇತರ ಪಕ್ಷಗಳಿಗೆ ಸರಕಾರವು ಬೆಂಬಲಕೊಡುತ್ತದೆಂದು ತೋರಿಸಲಿಕ್ಕೂ ವೈರಾಗ್ಯ ಹಿಡಿಯುವದು ಅಪರಿಹಾರ್ಯ ಕರ್ತವ್ಯವೆಂದು ಜಾಹೀರನಾಮೆಯು ನಮೂದಿಸುತ್ತದೆ. ಇದರ ಪ್ರತ್ಯಂತರವು ಇದೇ ಅಧಿವೇಶನದಲ್ಲಿ ತಾ ೧೪ನೇಗೆ ಒದಗಿಬಂತು. ರಾ| ಆರ್. ಎಸ್. ನೆಕ್ಲಿಜಾಯ್‌ರವರು ಕೇ| ಅಸ್ಪೃಶ್ಯರನ್ನು ವತನದಾರ ಹೊಲೆಯರಾಗಿ ನೇಮಿಸಿಕೊಂಡು ಅವರಿಗೆ ೧೫ರಿಂದ ೨೦ರ ವರೆಗೆ ತಲಬು ಕೊಡಬೇಕಾಗಿ ಸೂಚಿಸಲು, ಅದಕ್ಕೆ ಆಳರಸರು ವಿರೋಧಿಸಿದರು. ಸ್ವರಾಜ್ಯ ಪಕ್ಷದವರು ನೂತನ ವೈರಾಗ್ಯದ ಮೂಲಕ ನೆರವಾಗಲಿಲ್ಲ. ಆದ್ದರಿಂದ ಠರಾವು ಬಿದ್ದುಹೋಯಿತು. ಆತ್ಮನಿರೀಕ್ಷಣೆ ಮಾಡಲು ಸ್ವರಾಜ್ಯ ಪಕ್ಷವು ಇತರ ಪಕ್ಷಗಳಿಗೆ ಕೊಟ್ಟ ಸಂಧಿಯು ಸಾಧ್ಯವಾಯಿತು.

ಸ್ವರಾಜ್ಯ ಪಕ್ಷದ ಮಹತ್ವವು ಪ್ರಾಬಲ್ಯವು, ಪ್ರತಿಷ್ಠೆಯು ಅವರು ಕೈಕೊಂಡ ಸನ್ಯಾಸದಿಂದ ಪುನಃ ಪ್ರಸ್ಥಾಪಿತವಾಗುವದು. ಸ್ವರಾಜ್ಯ ಪಕ್ಷದವರಿಗೆ ಇತರ ಪಕ್ಷಗಳ ಸಹಾಯ ಬೇಕಾದರೆ, ಇತರ ಪಕ್ಷದವರಿಗೂ ಉಪಯುಕ್ತ ಕಾರ್ಯ ಮಾಡಲು, ಸರಕಾರಕ್ಕೆದುರಾಗಲು ಸ್ವರಾಜ್ಯ ಪಕ್ಷವು ಬೇಕೇಬೇಕು. ಸ್ವರಾಜ್ಯ ಪಕ್ಷವನ್ನು ಧಿಕ್ಕರಿಸಿ ಸ್ವಾರ್ಥಪರಾಯಣರಾಗಿ, ಹೊತ್ತಿಗೋಡು ರೂಪ ಧರಿಸಿ ಮಿತಿಮೀರಿ ಸ್ವರಾಜ್ಯ ಪಕ್ಷದ ಅಪಕಾರ ಮಾಡಹತ್ತಿದರೆ, ಇತರ ಪಕ್ಷಗಳಿಗೂ ಅಪಕಾರ ಮಾಡುವ ಸಾಮರ್ಥ್ಯವು ಸ್ವರಾಜ್ಯ ಪಕ್ಷದಲ್ಲಿರುವದು. ಮಾನಧನ ಸ್ವರಾಜ್ಯ ಪಕ್ಷವು ಅಸಭ್ಯ ಪ್ರಕಾರಗಳ

ಗೀಡಾಗಬಾರದೆಂದು ಈ ವರೆಗೆ ತಾಳ್ಮೆ, ತಾಳ್ಮೆ, ತಾಳ್ಮೆ ಎಂಬ ಉಕ್ತಿಯನ್ನು ಸ್ಮರಿಸಿ, ಅಪಮಾನಗಳನ್ನೆಲ್ಲ, ಅಪವಾದಗಳನ್ನೆಲ್ಲ ಸಹಿಸಿ, ಕೌನ್ಸಿಲಿನಲ್ಲಿ ತತ್ಪರತೆಯಿಂದ ದುಡಿಯಿತು. "ಇನ್ನು ನಾವು ಬಗ್ಗಲಾರೆವು." ಎಂದು ಸ್ವರಾಜ್ಯ ಪಕ್ಷವು ಉದ್ವಿಗ್ನವಾಗಿ ಇತರ ಪಕ್ಷಗಳಿಗೆ ಸಾರಿ ಹೇಳಿ, ಕೌನ್ಸಿಲು ಸನ್ಯಾಸವನ್ನು ಅಂಗೀಕರಿಸಿ, ಅಚಲ ಚಿತ್ತದಿಂದ ಅಲ್ಪಸಂಖ್ಯಾಕ ಪಕ್ಷಗಳ ಲೋಕಕಾರ್ಯದಕ್ಷ ಸಾಮರ್ಥ್ಯವನ್ನು ಪರೀಕ್ಷಿಸತೊಡಗಿದೆ. ಯಾವದೇ ಕಾರ್ಯದಲ್ಲಿ ವಸ್ತುಸ್ಥಿತಿಯನ್ನರಿಯದೆ, ಮದಾಂಧರಾಗಿ ನಡೆದರೆ ಕಾರ್ಯಹಾನಿಯಾಗಿ ಅಕಲ್ಯಾಣವಾಗುವದೆಂದು ಇತರ ಪಕ್ಷಗಳು ಅರಿತು ಸ್ವರಾಜ್ಯ ಪಕ್ಷದವರೊಡನೆ ಬಂಧುಭಾವದಿಂದ, ಸರಳ ಬುದ್ಧಿಯಿಂದ ನಡಕೊಂಡರೆ, ಸ್ವರಾಜ್ಯ ಪಕ್ಷದ ಸನ್ಯಾಸಿಗಳಿಗೆ ಕೌನ್ಸಿಲು ಸಂಸಾರವನ್ನು ನೆಟ್ಟಗೆ ನಡಿಸಲು ಅನುಕೂಲವಾಗುವದು; ಪ್ರಜಾಹಿತವೂ ಕೈಗೂಡುವದು. ಇತರ ಪಕ್ಷಗಳ ಕೌನ್ಸಿಲು ಪ್ರತಿನಿಧಿಗಳು ಸ್ವರಾಜ್ಯ ಪಕ್ಷದ ದ್ವೇಷಬುದ್ಧಿಯನ್ನು ತೊರೆದು, ಆಳರಸರ ಅಂತರಂಗವನ್ನು ನಿರೀಕ್ಷಿಸಿ, ಸ್ವರಾಜ್ಯ ಪಕ್ಷಕ್ಕೆ ಸಾಹಚರ್ಯದ ಕೈಯನ್ನು ಮುಂದೆ ನೀಡಲಿ. ಅಧಿಕಾರವಿರುವದೆಂದು, ಅಧಿಕಾರವನ್ನು ಅಮಲಿನಲ್ಲಿ ತರುವ ಸಾಮರ್ಥ್ಯವಿದೆಂದು, ಪಶುತುಲ್ಯ ಬುದ್ಧಿಯಿಂದ, ವಿವೇಕಹೀನರಾಗಿ ಅದನ್ನು ಈಡೇರಿಸಲೆತ್ನಿಸುವದು ಅಕ್ಷಮ್ಯ ಅಪರಾಧವು. ಸ್ವರಾಜ್ಯ ಪಕ್ಷದವರು ಬ್ರಾಹ್ಮಣೇತರರಿಗಾಗಲಿ, ಮಹಮ್ಮದೀಯರಿಗಾಗಲಿ ವಿರೋಧ ಮಾಡಲು ಕೌನ್ಸಿಲಿನಲ್ಲಿ ಸೇರಿರುವದಿಲ್ಲ. ಸ್ವರಾಜ್ಯ ಪಕ್ಷದವರಲ್ಲಿಯೂ ಬ್ರಾಹ್ಮಣೇತರರಿರುವರು; ಮಹಮ್ಮದೀಯರಿರುವರು. ವಿಶಾಲ ದೃಷ್ಟಿಯಿಂದ ರಾಷ್ಟ್ರಹಿತ ಮಾಡಲು ಸ್ವರಾಜ್ಯ ಪಕ್ಷದವರು ಟೊಂಕಕಟ್ಟಿರುವರು. ಇಂಥ ಸಾಹಸಿಗ ಬಾಂಧವರಿಗೆ ಆಳರಸರ ಆಶ್ರಯದಲ್ಲಿ ಸೇರಿಕೊಂಡು ಬಗ್ಗುಬಡಿಯುವದು ಬಂಧುದ್ರೋಹವು; ದೇಶದ್ರೋಹವು. ಇತರ ಪಕ್ಷಗಳು ಇನ್ನಾದರೂ ಕಣ್ತೆರೆದು, ಮಿತಿಮೀರಿ ಕೈಕೊಂಡ ಸ್ವಾರ್ಥಲೋಲುಪ ಮಾರ್ಗವನ್ನು ತೊರೆದು, ಕೌನ್ಸಿಲು ಕಾರ್ಯದ ತತ್ವಗಳನ್ನು ನಿರ್ಧರಿಸಲೆಂದು ಮನಃಪೂರ್ವಕ ಬಯಸುವೆವು.

ಸ್ಫುಟ ಸೂಚನೆಗಳು.

೧. ಯುರೋಪ ಖಂಡದ ರಾಜಕಾರಣದ ಸ್ಥಿತಿಯು ಬದಲಾಗುವ ಸ್ಪಷ್ಟ ಚಿನ್ಹಗಳು ತೋರುತ್ತವೆ; ಮಹಾಯುದ್ಧದ ಮಿತ್ರರಾಷ್ಟ್ರಗಳು ಶತ್ರುರಾಷ್ಟ್ರಗಳಾಗಿ ಪರಿಣಮಿಸುವ ಭೀತಿಯೂ ಇದೆ. ಮುಖ್ಯವಾಗಿ ಫ್ರಾನ್ಸ ಹಾಗು ಇಂಗ್ಲಂಡ ಈ ಎರಡು ದೇಶಗಳು ನಾ ಮುಂದೆ, ನೀ ಮುಂದೆ ಎಂದು ಮೇಲಾಟ ನಡಿಸಿರುವವು. ಫ್ರಾನ್ಸ ದೇಶವನ್ನು ಮಗ್ಗುಲಲ್ಲಿ ಸೇರಿಸಿಕೊಂಡು ಈಗಿನಂತೆ ಯುರೋಪ ಖಂಡದ ರಾಜಕಾರಣದ ಸೂ[illegible]ಟಿಶರು ಹವಣಿಸುತ್ತಿರುವರು. ಫ್ರಾನ್ಸ ದೇಶದವರು ಜರ್ಮನಿ, ರಶಿಯಾ ರಾಷ್ಟ್ರಗಳನ್ನು ರಾಷ್ಟ್ರಸಂಘದಲ್ಲಿ ಸೇರಿಸಿಕೊಂಡು, ಯುರೋಪ ಖಂಡದ ಯಜಮಾನರಾಗಲು ಹೊಂಚು ಹಾಕುತ್ತಿರುವರು. ಸ್ಪೇನ ದೇಶದ ಸಾಮಂತ ದೇಶವಾದ ಮೊರೊಕ್ಕೊದೊಳಗಿನ ಯುದ್ಧಸ್ಥಿತಿಯು ಮೇಲಿಂದ ಯಾರು ಅಗ್ರಪೂಜೆಯನ್ನು ಪಡೆಯುವರೆಂದು ೧-೨ ತಿಂಗಳಲ್ಲಿ ಸ್ಪಷ್ಟವಾಗುವದು. ಮೊರೊಕ್ಕೊದೊಳಗಿನ ರಿಫ್‌ಜನರು ಸ್ಪೇನ ದೇಶದ ಅಧಿರಾಸ್ಥನೆಗಳನ್ನು ಧಿಕ್ಕರಿಸಿ, ಅಬ್ದುಲ್ ಕರಿಮುರವರನ್ನು ನಾಯಕರಾಗಿ ನೇಮಿಸಿಕೊಂಡು ಸಂಗ್ರಾಮ ಹೂಡಿರುವರು. ಸ್ಪೇನ ದೇಶದವರಿಗೆ ನೆರವಾಗಲು ಫ್ರಾನ್ಸ ದೇಶದವರು ೧ ಲಕ್ಷ ಸೈನ್ಯವನ್ನು ಜುಲೈ ತಿಂಗಳಲ್ಲಿ ಕಳುಹಿದರು. ಇನ್ನೂ ೩೦-೪೦ ಸಾವಿರ ಸೈನ್ಯವನ್ನು ಕಳಿಸಿ ರಿಫ್‌ರನ್ನು ಸೋಲಿಸುವ ಉಪಾಯಯೋಜನೆಯಾಗಹತ್ತಿದೆ. ಇಷ್ಟು ಸೈನ್ಯವು ಮೊರೊಕ್ಕೊದಲ್ಲಿ ಇಳಿಯಿತೆಂದರೆ, ರಿಫ್‌ರು ಫ್ರಾನ್ಸದೇಶಕ್ಕೆ ಶರಣು ಬರಲೇಬೇಕೆಂದು ಅಲ್ಲಿಯವರ ಹೇಳಿಕೆ ಇದೆ. ಗೆಲ್ಲುವದು, ಸೋಲುವದು ಇನ್ನು ಸಪ್ಟಂಬರ ತಿಂಗಳಲ್ಲಿಯೇ. ರಿಫ್‌ರು ಅಬ್ದುಲ್ ಕರೀಮರವರ ಆಲೋಚನೆಯಂತೆ, ಫ್ರೆಂಚ ಸೈನ್ಯಕ್ಕೆ ಅಲ್ಲಿಂದಲ್ಲೇ ತಡೆದು ಹಿಡಿದರೆ, ಅಕ್ಟೋಬರ ತಿಂಗಳಿನಲ್ಲಿ ಫ್ರೆಂಚರಿಗೆ ಸೋಲಿಸಲು ರಿಫ್‌ರಿಗೆ ಸೈನ್ಯ ಬೇಡವೆ ಬೇಡ; ಅಷ್ಟು ಅಲ್ಲಿಯ ಹವಾಮಾನವು ತೀಕ್ಷ್ಣವಿದ್ದು, ಫ್ರೆಂಚರಿಗೆ ಅಸಹ್ಯವಾಗಿ ಅವರು ಅಲ್ಲಿಂದ ಕಾಲ್ತೆಗೆಯಬೇಕಾಗುವದು. ಫ್ರೆಂಚರು ಮೊರೊಕ್ಕೊದಲ್ಲಿ ವಿಜಯಶಾಲಿಗಳಾದರೆ, ಇಂಗ್ಲಂಡದ ಮಗ್ಗುಲಲ್ಲಿ ಅವರು ಸೇರದೆ, ಸ್ವತಂತ್ರವಾಗಿ ಯುರೋಪದ ರಾಜಕಾರಣವನ್ನು ಘಟಿಸಿ, ಮಹಾಯುದ್ಧದ ಶತ್ರುವಾದ ಜರ್ಮನಿಯನ್ನು ರಾಷ್ಟ್ರಸಂಘದಲ್ಲಿ ಬರಮಾಡಿಕೊಂಡು, ರಾಜಕಾರಣದ ಸೂತ್ರಚಾಲಕರಾಗುವರು. ಈ ವರೆಗಿನ ಸುದ್ದಿಗಳ ಮೇಲಿಂದ ಫ್ರೆಂಚರು ಕ್ರಮವಾಗಿ ರಿಫ್‌ರನ್ನು ಹಿಂದಕ್ಕಟ್ಟುತ್ತಿರುವರೆಂದು ತಿಳಿಯಬರುತ್ತದೆ. ಮುಂದೇನಾಗುತ್ತದೆಂದು ಕೇಳುವ.

---

೨. ಚೀನದ ರಾಜಕಾರಣದಲ್ಲಿ ಬ್ರಿಟಿಶರು ಕ್ರಮವಾಗಿ ಹಿಮ್ಮೆಟ್ಟುತ್ತಿರುವರು. ಬ್ರಿಟಿಶರ ಮೇಲಿನ ಬಹಿಷ್ಕಾರಕ್ಕೆ ದಿನೇ ದಿನೇ ತೀವ್ರ ಸ್ವರೂಪವು ಬರಹತ್ತಿದೆ. ಚೀನದ ರಾಜಧಾನಿಯಾದ ಪೇಕಿಂಗದೊಳಗಿನ ಬ್ರಿಟಿಶರ ರಾಯಭಾರಿಗೆ ಪೇಟೆಯೊಳಗಿಂದ ಕಾಯಿಪಲ್ಲೆ, ಹಾಲು-ಮೊಸರು ತರಬೇಕಾದರೆ, ಅಲ್ಲಿಯ ಸರಕಾರದ ಕಾವಲು ಬೇಕಾಗಿರುವದಾಗಿ ಬಂದ ಸುದ್ದಿಯ ಮೇಲಿಂದ, ಅಲ್ಲಿಯ ಪ್ರಜೆಗಳು ಎಷ್ಟರ ಮಟ್ಟಿಗೆ ಬ್ರಿಟಿಶರನ್ನು ದ್ವೇಷಿಸುತ್ತಾರೆಂದು ಹೊಳೆಯುವದಾಗಿದೆ. ಇದೇ ಸಂಧಿ ಸಾಧಿಸಿ ಜಪಾನವು ಚೀನ ದೇಶದ ರಾಜಕಾರಣವನ್ನು ಬ್ರಿಟಿಶರ ಅಂಕೆಯೊಳಗಿಂದ ತಪ್ಪಿಸಿ ಸ್ವತಃ ಸ್ವಾಧೀನಪಡಿಸಿಕೊಳ್ಳಲು ಯತ್ನಿಸಿರುವದು. ಕೂಲಿ ಕಡಿಮೆಯೆಂದು ಉದ್ವಿಗ್ನರಾಗಿ ಸಂಪು ಮಾಡಿದ ಚೀನಿ ಕೂಲಿಯಾಳುಗಳನ್ನು ನಿಮಂತ್ರಿಸಿ, ಅವರ ಮನವೊಲಿಕೆಯಾಗುವಂತೆ ಕೂಲಿಯ ಮಾನವನ್ನು ಏರಿಸಿ ಅವರನ್ನು ವಶ ಮಾಡಿಕೊಳ್ಳಲು ಉಪಾಯಯೋಜನೆ ಮಾಡುತ್ತಿರುವರು. ಇದರಿಂದ ಚೀನ ದೇಶದೊಳಗಿನ ಜಪಾನದವರ ಗಿರಣಿಗಳು ಒಂದೊಂದಾಗಿ ಪುನಃ ಕೆಲಸ ಮಾಡಹತ್ತಿವೆ. ಸಂಪು ಮುರಿದ ಹೊರತು, ನಿಮ್ಮ ದೂರುಗಳನ್ನು ವಿಚಾರಿಸಲಾರೆವೆಂದು ಬ್ರಿಟಿಶರು ಅಹಂಕಾರದ ನುಡಿಗಳನ್ನಾಡಿ, ಜಪಾನದವರೂ ಇವೇ ನುಡಿಗಳನ್ನಾಡಿ ಬಡ ಚೀನಿಯರನ್ನು ಹಣ್ಣಿಗೆ ತರಬೇಕೆಂದು ಬ್ರಿಟಿಶರ ಆಲೋಚನೆಯಿತ್ತು. ಆದರೆ, ಜಪಾನದವರು ಬ್ರಿಟಿಶರಿಗೆ ಚೀನ ದೇಶದೊಳಗಿಂದ ಹೊರಹಾಕಲು ಇದೇ ಸಮಯವೆಂದು ಎಣಿಸಿ, ಚೀನಿಯರೊಡನೆ ತಹನಾಮೆ ಮಾಡಿ ತಮ ಕಾರ್ಯಸಾಧನೆ ಮಾಡಹತ್ತಿರುವರು. ಜಪಾನದವರ ಸಂಧಿಪ್ರಸ್ತಾಪದಿಂದ ಬ್ರಿಟಿಶರ ಮೇಲಿನ ದ್ವೇಷವು ಮತ್ತೂ ಹೆಚ್ಚಾಗಿ, ಚೀನದೊಳಗಿನ ರಾಜಕಾರಣವು ಜಪಾನದ ಕೈಗಳಿಗೆ ಹೋಗಹತ್ತಿದೆ. ಯುರೋಪದ ರಾಜಕಾರಣದ ಗೊಂದಲವು ಫ್ರಾನ್ಸದೇಶದ ಕೈಕೆಳಗೆ; ಚೀನದೇಶವು ಜಪಾನ ದೇಶದ ಕೈಕೆಳಗೆ; ಹೀಗೆ ವ್ಯವಸ್ಥೆಯಾದರೆ, ಬ್ರಿಟಿಶ ದೇಶದ ವಿಪನ್ನಾವಸ್ಥೆಯು ಇನ್ನೂ ಮಿಗಿಲಾಗಿ, ಅಲ್ಲಿಯ ನಿರುದ್ಯೋಗಿ ಕೂಲಿಯಾಳುಗಳನ್ನು ಕಾಪಾಡುವದು ಕಠಿಣವಾಗಿ ಪ್ರಧಾನ ಮಂಡಳದ ಸ್ಥಿತ್ಯಂತರವಾಗಬಹುದು. ಈಗಾಗಲೇ ಪ್ರಧಾನ ಮಂಡಳವು ಸರಕಾರಿ ಕೋಶದೊಳಗಿಂದ ಉಪವಾಸ ಸಾಯುವ ಕೂಲಿಕಾರರಿಗೆ ಕೂಲಿಯನ್ನಿತ್ತು ಸಮಾಧಾನಪಡಿಸುತ್ತದೆ. ಆದರೆ, ಹೀಗೆ ದ್ರವ್ಯಸಹಾಯವನ್ನಿತ್ತು ಲಕ್ಷಾವಧಿ ಕೂಲಿಯಾಳುಗಳನ್ನು ಸತತವಾಗಿ ಸಾಕಿ ಸಲಹುವದು ಸಾಧ್ಯವೇ?

---

೩. ನಮ್ಮಲ್ಲಿಯ ತೊರ್ಕೆಯ ನಿವಾಸಿಗಳಾದ ಬೆರಿಸ್ಟರ ವೆಂಕಣ್ಣಾ ಹೊಸಬು ನಾಯ್ಕ, ಎಮ್. ಏ. ರವರಿಗೆ ವಿಜಾಪುರದ ಕಲೆಕ್ಟರ ಅಧಿಕಾರವು ಪ್ರಾಪ್ತವಾದ ಬಗ್ಗೆ ನಾವು [illegible]ರನ್ನೂ, ಅವರ ನಾಡವರ ಸಮಾಜವನ್ನೂ ಮನಃಪೂರ್ವಕ ಅಭಿನಂದಿಸುವೆವು. ಬೆರಿಸ್ಟರ ವೆಂಕಣ್ಣಾ ನಾಯ್ಕರು ಇತ್ತ ಕಡೆಗೆ 'ಗೋನೆಹಳ್ಳಿ ಸಾಹೇಬ'ರೆಂಬ ಹೆಸರಿನಿಂದ ಖ್ಯಾತಿಪಡೆದಿರುವರು. ಗೋನೆಹಳ್ಳಿ ಸಾಹೇಬರು ಮೊದಲು ಸಣ್ಣ ಶಿಕ್ಷಕರಿದ್ದು, ಕೇವಲ ಸ್ವಾವಲಂಬನದಿಂದ ಇಂಗ್ಲಿಷ ಕಲಿತು, ಬೇಸಾಯ ಖಾತೆಯಲ್ಲಿ ಸೇರಿ, ಆ ಖಾತೆಯ ಎಕ್ಸಟ್ರಾ ಡೆಪ್ಯುಟಿ ಡ್ಯಾರೆಕ್ಟರರಾದರು. ಮುಂದೆ ಸಹಕಾರಿ ಖಾತೆಯಲ್ಲಿ ಇವರು ಸೇರಿ, ರಿಜಿಸ್ಟ್ರಾರರ ವರೆಗೆ ಏರಿ ಹೋದರು. ಗೋನೆಹಳ್ಳಿ ಸಾಹೇಬರು ಇಷ್ಟಕ್ಕೇ ತೃಪ್ತಿಪಡದೆ, ಮತ್ತೂ ಏರಿ ಹೋಗುವ ನಿಶ್ಚಯ ಮಾಡಿ, ಪರಿಣತ ಪ್ರಾಯದಲ್ಲಿಯೂ ಕೂಡ ವಿಲಾಯತಿಗೆ ಹೋಗಿ ಬೆರಿಸ್ಟರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಂದರು. ಈಗ ೫ ವರ್ಷಗಳಿಂದ ಧಾರವಾಡದಲ್ಲಿ ಇವರು ಡೆಪ್ಯುಟಿ ಕಲೆಕ್ಟರರಾಗಿ ಮಾಡಿದ ಕೆಲಸವು ಲೋಕಸಮ್ಮತವಾಗಿದ್ದು, ಅದಕ್ಕಾಗಿ ಅಲ್ಲಿಯ ಪ್ರಜೆಗಳು ಬೆರಿಸ್ಟರ ವೆಂಕಣ್ಣಾ ನಾಯಕರಿಗೆ ತಾಂಬೂಲಸಮರ್ಪಣಾದಿ ಸತ್ಕಾರಗಳನ್ನಿತ್ತು ಮನ್ನಿಸಿದರು. ಬೆರಿಸ್ಟರ ವೆಂಕಣ್ಣ ನಾಯ್ಕರು ಮೂಲಾಗಿ ಕನ್ನಡಿಗರು; ಕನ್ನಡ ನುಡಿಯ ಅಭಿಮಾನಿಗಳು. ಇದರಿಂದ ನಮ್ಮ ಆನಂದವು ವಿಶೇಷವಾಗಿದೆ. ಬೆರಿಸ್ಟರ ವೆಂಕಣ್ಣ ನಾಯ್ಕರಂಥ ಕನ್ನಡಿಗರೂ, ಪ್ರಜಾನುರಂಜನದಿಂದ ಕೆಲಸ ಮಾಡುವ ಪುರುಷರೂ ವಿಜಾಪುರಕ್ಕೆ ಅಧಿಪತಿಗಳಾಗಿ ಲಭಿಸಿದ್ದು ಅವರ ಸುದೈವವೇ. ಬೆರಿಸ್ಟರ ಗೋನೆಹಳ್ಳಿ ಸಾಹೇಬರು ತಮ್ಮ ಆಡಳಿತೆಯನ್ನು ವಿಶೇಷ ದಕ್ಷತೆಯಿಂದ ನಡಿಸಿ, ಮತ್ತೂ ಲೋಕಪ್ರಿಯರಾಗಲೆಂದು ಹಾರೈಸಿ, ಅವರನ್ನು ಪುನಃ ಅಭಿನಂದಿಸುವೆವು.

೪. ಪ್ರಾಥಮಿಕ ಶಿಕ್ಷಕರ ಗ್ರಹಗತಿಯು ಇನ್ನೂ ತೀರಲಿಲ್ಲ. ಮುಂಬಯಿ ಸರಕಾರವು ನೇಮಿಸಿದ ಸರ್ವೇ ಕಮೀಟಿಯ ವರದಿಯು ಕಳೆದ ತಾ. ೧೫ ನೇಗೆ ಪ್ರಕಟವಾಗಿದೆ, ಸಾಠೇ-ಪರಾಂಜಪೇ ಯೋಜನೆಯಂತೆ, ಶಿಕ್ಷಕರ ಪಗಾರನ್ನು ಏರಿಸಿದರೆ, ೨೦ ಲಕ್ಷ ರೂಪಾಯಿ ಖರ್ಚು ಬೆಳೆಯುವದು. ಈ ಖರ್ಚು ವಹಿಸಲು ಸರಕಾರವು ತಯಾರಿಲ್ಲ, ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳೂ ತಯಾರಿಲ್ಲ. ಇದರಿಂದ ಸಾಠೇ-ಪರಾಂಜಪೇ ಯೋಜನೆಯು ಯಥಾಶಾಸ್ತ್ರ ಪೆಟ್ಟಿಗೆಯೊಳಗಾಗಿದೆ. ೨೦ ಲಕ್ಷ ರೂಪಾಯಿಗಳನ್ನು ಶಿಕ್ಷಕರಿಗೆ ಕೊಡುವ ಬದಲು ಶಾಲಾಸ್ಥಾಪನೆಗೆ ಉಪಯೋಗಿಸಿದರೆ, ೪-೫ ಸಾವಿರ ಶಾಲೆಗಳನ್ನು ಸ್ಥಾಪಿಸಿ ಶಿಕ್ಷಣದ ವ್ಯಾಪವನ್ನು ಮತ್ತೂ ಬೆಳಿಸಬಹುದೆಂದು, ಸರ್ವೇ ಕಮಿಟಿಯವರು ಜ್ಞಾನಪ್ರಸಾರದ ನೆವ ಮಾಡಿ, ಜ್ಞಾನದಾನ ಮಾಡುವ ಶಿಕ್ಷಕರ ಹೊಟ್ಟೆಯ ಮೇಲೆ ಹೊಡೆದಿರುವರು. ಇದೇ ತರ್ಕಶಾಸ್ತ್ರವನ್ನು ಮತ್ತೂ ಮುಂದಾರಿ ತರ್ಕಿಸಿದರೆ, ಶಿಕ್ಷಕರಿಗೆ ಪಗಾರು ಕೊಡದೆ, ಉಳಿಯುವ ಹಣದಿಂದ ೧-೨ ಲಕ್ಷ ಶಾಲೆಗಳನ್ನು ಸ್ಥಾಪಿಸಬಹುದಲ್ಲವೇ? ಅವರಿಂದ ಶಿಕ್ಷಕರಿಗೆ ಸಂಬಳ ಕೊಡಬಾರದೆಂದು ವಾದಿಸಿದರೆ, ಅವರಿಗೆ ಹುಚ್ಚರೆಂದು ಹೇಳಿ, ಸರ್ವೇ ಕಮಿಟಿಯವರೇ ಹುಚ್ಚರ ಆಸ್ಪತ್ರೆಗೆ ಕಳಿಸದಿರರು ಇಷ್ಟು ಸಾಮಾನ್ಯ ಸಿದ್ಧಾಂತ [illegible] ಸಾಠೇ-ಪರಾಂಜಪೇ ಯೋಜನೆಯನ್ನು ಬದಿಗೊತ್ತಿದ ಬಳಿಕ, ಮುಂಬಯಿ, ಠಾಣೆ, ಕಲ್ಯಾಣ, ಪುಣೆ, ಅಹಮದಾಬಾದ, ಕರಾಚಿ ಮುಂತಾದ ಪಟ್ಟಣಗಳ ಸ್ಥಿತಿಯ ವಿಚಾರದಿಂದ [illegible] ಕೊಡಬೇಕೆಂದೂ, ಇಡೀ ಇಲಾಖೆಯ ಹೆಡ್‌ಮಾಸ್ತರಿಂಗ ವಿದ್ಯಾರ್ಥಿಗಳ ಸಂಖ್ಯೆಯ ಮಾನದಿಂದ ೫೫ ರೂಪಾಯಿಗಳ ವರೆಗೆ ಭತ್ತೆಯನ್ನೀಯಬೇಕೆಂದೂ, ಮೊದಲನೇ ಅಸಿಸ್ಟಂಟರಿಗೆ ೧೦ ರೂಪಾಯಿ ವರೆಗೆ ಭತ್ತೆಯನ್ನೀಯಬೇಕೆಂದೂ ಸರ್ವೇ ಕಮೀಟಿಯು ಶಿಫಾರಸು ಮಾಡಿದೆ. ಸಿಂಧ ಪ್ರಾಂತದ ಬಗ್ಗೆ ಭತ್ತೆಯ ಪ್ರಮಾಣವು ಇನ್ನೂ ಹೆಚ್ಚಿಸಲ್ಪಟ್ಟಿದೆ. ಉರ್ದು ಹಾಗು ಅಸ್ಪೃಶ್ಯ ಶಾಲೆಗಳಲ್ಲಿ ವಿಶಿಷ್ಟ ಭತ್ತೆಯ ಪ್ರಮಾಣಗಳು ಯೋಜಿಸಲ್ಪಟ್ಟಿವೆ ಆದರೆ ಇತರ ಶಿಕ್ಷಕರಿಗೆ ಸರ್ವೇ ಕಮೀಟಿಯು ಏನೂ ದಾರಿ ತೋರಿಸಲಿಲ್ಲ. ಹೆಚ್ಚು ಸಂಬಳದ ಹೆಡ್‌ಮಾಸ್ತರ-ಅಸಿಸ್ಟಂಟ ಮಾಸ್ತರರಿಗೇ ಇನ್ನಿಷ್ಟು ಸಂಬಳ ಸಿಗುವದು. ಇದು ಬಹುಮತದ ಶಿಫಾರಸು.

[illegible] ಕಮೀಟಿಯ ಸಭಾಸದರಾದ ಶ್ರೀ। ಜಿ ಬಿ ಪ್ರಧಾನ ಹಾಗು ಎಚ್. ಟಿ. ಶಿವದಾಸಾನಿಯವರು ಭಿನ್ನ ಮತಪತ್ರಿಕೆಯನ್ನು ಬರೆದು ಬಹುಮತದ ಕರೆ [illegible] ತಮ್ಮ ಸಹಾನುಭೂತಿಯನ್ನೂ ವ್ಯಕ್ತಪಡಿಸಿರುವರು. ತಮ್ಮ ಮತಪತ್ರಿಕೆಯಲ್ಲಿ ಅವರು ಸೂಚಿಸಿದ ಪಗಾರವಾರಿಯು ಏನೆಂದರೆ:- ಅನ್‌ಕ್ವಾಲಿಫೈಡ ಅಸಿಸ್ಟಂಟರಿಗೆ ೨೦ ರೂಪಾಯಿ; ಕ್ವಾಲಿಫೈಡ ಅಸಿಸ್ಟಂಟರಿಗೆ ಹಾಗು ಅನ್‌ಕ್ವಾಲಿಫೈಡ ಹೆಡ್‌ಮಾಸ್ತರರಿಗೆ ೩೦ರಿಂದ ೪೦ ರೂಪಾಯಿ, ಕ್ವಾಲಿಫೈಡ ಹೆಡ್‌ಮಾಸ್ತರರಿಗೆ ೩೫ರಿಂದ ೪೫ ರೂಪಾಯಿ; ಮೊದಲನೇ ವರ್ಷದ ಟ್ರೇಂಡರಿಗೆ ೩೫ರಿಂದ ೫೦ ರೂ; ೨ನೇ ವರ್ಷದ ಟ್ರೇಂಡರಿಗೆ ೪೦ರಿಂದ ೬೫; ೩ ನೇ ವರ್ಷದ ಟ್ರೇಂಡರಿಗೆ ೪೫ ರಿಂದ ೮೦ ರೂ. ಸರ್ವೇ ಕಮಿಟಿಯ ರಿಪೋರ್ಟ ಇನ್ನೂ ನಮ್ಮ ಕೈಸೇರಲಿಲ್ಲ. ಅದು ನಮ್ಮ ಹಸ್ತಗತವಾದ ಬಳಿಕ, ಈ ವಿಷಯ ಸವಿಸ್ತರ ಚರ್ಚಿಸುವೆವು

ಸ್ಥಾನಿಕ ವೃತ್ತಾಂತ

ಕುಮಟಾ— ಮಳೆಯ ಮಾನವು ಸಮಾಧಾನಕರವಿದೆ. ಜ್ವರಾದಿ ರೋಗಗಳು ಹಿಮ್ಮೆಟ್ಟುವ ಲಕ್ಷಣವಿದೆ. ಈ ವಾರದಲ್ಲಿ ೪-೨೧ ಇಂಚು ಮಳೆ, ಈ ವರೆಗೆ ಒಟ್ಟು ೧೨೭-೪೪ ಇಂಚು ಮಳೆಯಾಯಿತು.

ಹಿರೇಗುತ್ತಿಯಲ್ಲಿ ವ್ಯಾಘ್ರರಾಜನ ವಿಶೇಷ ಹಾವಳಿ. ಸುಮಾರು ೧೦-೧೫ ದನಗಳು ಬಲಿಬಿದ್ದವು. ಅಧಿಕಾರಿಗಳು ಇತ್ತ ಲಕ್ಷ ಕೊಡಬೇಕು.

ಕಾರವಾರದ ಹೈಸ್ಕೂಲಿನ ಹೆಡ್‌ಮಾಸ್ತರರಾಗಿದ್ದ ಪೆನ್ಶನರ ರಾ। ಆರ್. ಡಿ. ನಾಡಕರ್ಣಿ, ಬಿ ಎ., ಯವರು ಕಳೆದ ತಾ ೧೯ ನೇಗೆ ಬಹುಮೂತ್ರ ರೋಗದಿಂದ ಕೈಲಾಸವಾಸಿಗಳಾದರೆಂದು ತಿಳಿಸಲು ವ್ಯಸನವಾಗುತ್ತದೆ

ಸಾಭಾರ ಸ್ವೀಕಾರ.

ಜಯಕರ್ನಾಟಕ— ಶ್ರಾವಣ ಮಾಸದ ಸಂಚಿಕೆ ಸಂಪಾದಕ—ಶ್ರೀ। ಆಲೂರ ವೆಂಕಟರಾಯರು ಧಾರವಾಡ ವಾರ್ಷಿಕ ಚಂದಾ ಅಂಚೆವೆಚ್ಚ ಸಹಿತ ರೂಪಾಯಿ ೪-೬-೦.

ವಸಂತ — ಚಿತ್ರರಂಜನ ಅಂಕ- ಸಂಪಾದಕ— ಶ್ರೀ। ಶಿವರಾಮ ಕಾರಂತ ಕೋಟ, ಕುಂದಾಪುರ. ವಾರ್ಷಿಕ ಚಂದಾ ರೂಪಾಯಿ ೩-೪-೦.

ಲೋಕರಹಸ್ಯ— ಅಗಸ್ಟ ತಿಂಗಳ ಸಂಚಿಕೆ ಸಂಪಾದಕ— ಶ್ರೀ। ಕೇ ನಾರಾಯಣರಾವ, ವೀರರಾಜೇಂದ್ರಪೇಟೆ, ಕೊಡಗು, ವಾರ್ಷಿಕ ಚಂದಾ ರೂಪಾಯಿ ೨-೮-೦

ಲೋಕಪಾವನ— ವಾರಪತ್ರಿಕೆ ಪ್ರಥಮ ಸಂಪುಟ, 2 ನೇ ಸಂಚಿಕೆ ಸಂಪಾದಕ ಶ್ರೀ। ಬಿ ಎ ಬೆಳಿಯಪ್ಪ, ಬಿ ಎ, ಮಡಿಕೇರಿ, ಕೊಡಗು ವಾರ್ಷಿಕ ಚಂದಾ ರೂಪಾಯಿ ೩-೦-೦.

The Volunteer.— August issue Edited & Published by Dr N S. Hardikar, at the 'Volunteer' office Hubli. Annual subscription Rs 3-0-0 only.

ಕಾರವಾರ— ಇಲ್ಲಿಯ ಹೈಸ್ಕೂಲಿನ ಕ್ರೀಡಾಂಗಣಕ್ಕಾಗಿ ೪೦ ಸಾವಿರ ರೂಪಾಯಿಗಳ ಖರ್ಚು ಮಾಡುವ ಒಂದು ಯೋಜನೆಯು ನಡೆದಿದೆ. ರಾ। ಮಂಜನಾಥ ವಿಠ್ಠಲ ಕ್ಯಾಸ್ಕಿಣಿಯವರ ಮನೆಯ ಮುಂದಿನ ಹೊಲಗಳನ್ನು ಕೊಂಡುಕೊಳ್ಳುವದಕ್ಕಾಗಿ ಇಷ್ಟು ಖರ್ಚಾಗುವದಂತೆ. ಈ ಸ್ಥಳವು ಹೈಸ್ಕೂಲಿನಿಂದ ಸುಮಾರು ಅರ್ಧ ಮೈಲು ದೂರವಿದ್ದದರಿಂದ ವಿದ್ಯಾರ್ಥಿಗಳಿಗೆ ಆಟವಾಡಲು ವಿಶೇಷ ಅನುಕೂಲವಾಗಲಿಕ್ಕಿಲ್ಲೆಂದು ಹೇಳುತ್ತಾರೆ. ಡಿ। ಜ। ಮಿ। ಡೇವ್ಹಿಸರವರು ಕಳೆದ ತಾ. ೨೧ ನೇಗೆ ಇಲ್ಲಿಂದ ಪುಣೆಗೆ ತೆರಳಿದರು. ವಕೀಲರು ತಾಂಬೂಲಸಮರ್ಪಣ ಮಾಡಿ ಅವರನ್ನು ಸತ್ಕರಿಸಿದರು, ಹೊಸ ಜಡ್ಜರು ತಾ. ೨೨ ನೇಗೆ ಹಾಜರಾಗಿರುವರು.

ಮುಂಡಗೋಡ—ಪ್ರವಾಸಿಗಳ ಹಿತಚಿಂತಕರು ತಾ. ೧೯-೮-೧೯೨೫ನೇಗೆ ಪತ್ರ ಬರೆದು ತಿಳಿಸುವದೇನಂದರೆ:—ಇಲ್ಲಿ ಒಂದು ಧರ್ಮಶಾಲೆಯಿದೆ. ಈ ಧರ್ಮಶಾಲೆಗೆ ಎರಡೇ ಕೋಣೆಗಳು, ಧರ್ಮಶಾಲೆ ಕಟ್ಟಿದ್ದು ಪ್ರಾಂತಸ್ಥರ ಅನುಕೂಲತೆಗಾಗಿ. ಆದರೆ, ಈ ಧರ್ಮಶಾಲೆಯು ಈಗ ಬಿಡಾರಾಗಿ ಬಿಟ್ಟಿದೆ. ಮಹಾಲಕರಿ ಆಫೀಸಿನ ಕಾರಕೂನರಾದ ಮಿ। ಎಸ್. ಎನ್. ಜೋಶಿಯವರು ಇಲ್ಲಿ ವರ್ಗವಾಗಿ ಬಂದು ೧೦ ತಿಂಗಳುಗಳಾದವು. ಅಂದಿನಿಂದ ಈವರೆಗೆ ಕುಟುಂಬ ಸಹಿತ ಇವರೊಂದು ಕೋಣೆಯಲ್ಲಿಳಕೊಂಡಿರುವರು. ಇನ್ನೊಂದು ಕೋಣೆಯು ಖಾಲಿಯಿತ್ತು. ಅಲ್ಲಿ ಹೆಡ್ ಕಾರಕೂನ ಮಿ। ಎನ್. ಎಸ್. ನಾಡಕರ್ಣಿಯವರು ೨॥ ತಿಂಗಳುಗಳಿಂದ ಬಿಡಾರು ಹೂಡಿರುವರು ಹೀಗೆ ಧರ್ಮಶಾಲೆಯು ಮಹಾಲಕರಿ ಆಫೀಸಿನ ಕಾರಕೂನರ ನಿವಾಸಸ್ಥಾನವಾಗಿದೆ. ಧರ್ಮಶಾಲೆಯ ಸುತ್ತಲೂ ಕೆಲವು ಖಾಲಿ ಜಾಗವಿದೆ, ಅಲ್ಲಿ ಕಾರಕೂನರು ಕಾಯಿಪಲ್ಲೆ ನೆಟ್ಟು ಉಪಭೋಗಿಸುತ್ತಿರುವರು. ತಿರುಪತಿ ಅತ್ತ ಕಡೆಯ ಯಾತ್ರೆಗಾಗಿ ಶಿರಸಿ-ಹುಬ್ಬಳ್ಳಿ ಮಾರ್ಗದಿಂದ ಹೋಗುವ ಯಾತ್ರಸ್ಥರಿಗೆ ಇಳಕೊಳ್ಳಲು ಈ ಧರ್ಮಶಾಲೆಯು ದೊಡ್ಡದೊಂದು ಆಶ್ರಯವಾಗಿತ್ತು. ಈಗ ಅದಿಲ್ಲದೆ, ಪ್ರಾಂತಸ್ಥರ ಗೋಳು. ಧರ್ಮಶಾಲೆಯನ್ನು ಖಾಲಿ ಮಾಡಲಿಕ್ಕೆ ಹೇಳಲಿಕ್ಕೂ ಯಾರೂ ಧೈರ್ಯಪಡುವದಿಲ್ಲ. ಯಾಕಂದರೆ, ಇವರು ಮಹಾಲಕರಿ ಆಫೀಸಿನ ಕಾರಕೂನರು! ಹಿಂದೆ ಇದೇ ಧರ್ಮಶಾಲೆಯಲ್ಲಿ ಹೆಡ್‌ಕಾರಕೂನ ಮಿ। ಮುಡಭಟಕಳರವರು ವಾಸವಾಗಿದ್ದರ, ಅವರ ಕಡೆಯಿಂದ ಸರಕಾರವು ಬಾಡಿಗೆಯನ್ನು ವಸೂಲ ಮಾಡಿರುವದಂತೆ ಬಾಡಿಗೆ ವಸೂಲಿಯಿಂದ ಕಾರಕೂನರು ಜಾಗೃತರಾಗುವದಿಲ್ಲ. ಅದರಿಂದ ಅವರಿಗೆ ಸಂಬಳವನ್ನೇ ತಗ್ಗಿಸಿ ಶಿಕ್ಷಿಸುವ ಉಪಾಯವು ಪ್ರಶಸ್ತವು.

ಶಿರಸಿ— ಭಕ್ತಿವಿಷಯವನ್ನೇ ಪ್ರಾಮುಖ್ಯವಾಗಿಟ್ಟುಕೊಂಡು ಸದ್ಯಸ್ಥಿತಿಗನುಸರಿಸಿ ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯಾದಿ ವಿಷಯಗಳನ್ನು ನವರಾತ್ರಿಯಲ್ಲಿ ಕೀರ್ತನರೂಪದಿಂದ ಪರಿಣಾಮಕಾರಕವಾಗಿ ಬೋಧಿಸುವ ಒಳ್ಳೇ ಅನುಭವಿಕರಾದ ಒಬ್ಬ ಕನ್ನಡ ಕೀರ್ತನಕಾರರು ಬೇಕಾಗಿರುವರು. ಹೆಚ್ಚಿನ ಮಾಹಿತಿ ಬೇಕಾದವರು ಶ್ರೀ ಮಾರೀದೇವಸ್ಥಾನದ ಮೊಕ್ತೇಸರರಿಂದ ಅದನ್ನು ಪಡೆಯಬಹುದು.

ದಿ ಎಡ್‌ವಾನ್ಸ ಮೋಟರ
ಟ್ರೇನಿಂಗ ಕ್ಲಾಸ
ಧಾರವಾಡ ಮತ್ತು ಕುಮಟಾ.

ಈ ನಮ್ಮ ಟ್ರೇನಿಂಗ ಕ್ಲಾಸಿನಲ್ಲಿ ಡ್ರಾಯ್ವಿಂಗ ಮಾಡಲಿಕ್ಕೂ, ರಿಪೇರಿ ಮಾಡಲಿಕ್ಕೂ ಕಲಿಸಿ ಮೂರು ತಿಂಗಳಲ್ಲಿ ಲೈಸನ್ಸ ಸಹ ತೆಗಿಸಿ ಕೊಡಿಸಲಾಗುತ್ತದೆ. ಬೇಕಾದವರು ಇದರ ಫಾಯಿದ ಪಡೆಕೊಳ್ಳಬಹುದು. ವಿಶೇಷ ಮಾಹಿತಿ ಸಮಕ್ಷ ಯಾ ಪತ್ರದ್ವಾರಾ. ಪತ್ತೆ—

ಸರದಾರ ಹೊಟೆಲ,
ಮೋರಿ ತಲಾವ,
ಧಾರವಾಡ

ಅನಂತರಾವ ಮಂಗೇಶರಾವ
ಶಿರಹಿಟ್ಟಲ, ಮೋಟರ ಏಜಂಟ
ಆಫೀಸ— ಕುಮಟಾ.

ಜಾಹೀರನಾಮೆ.

ಶ್ರೀ ಮದ್ರಾಮಚಂದ್ರಾಪುರ ಶ್ರೀ ಸಂಸ್ಥಾನಾಧಿಕಾರಸ್ಥಾನದಿಂದ—

ಸಮಸ್ತ ವಿದ್ವಚ್ಛಿರೋಮಣಿಗಳಿಗೆ,

ಸಂಧ್ಯಾವಂದನಾದಿ ನಿತ್ಯ ಕರ್ಮಾದಿಗಳಲ್ಲಿ ಮಾಡುವ ಮಾರ್ಜನ ವಿಧಿ ನಿರೂಪಣ ಪ್ರಸಂಗದಲ್ಲಿ.

೧

प्रशस्तमुदकं ग्राह्य मुखालयेनाभिमंत्र्य च ॥
आपोहिष्ठादिभिर्मंत्रै दर्भैः शिरासि मार्जयेत्
॥१॥

स्पृष्ट्वा चाभिमंत्रितोयं मूर्ध्नी ब्रह्ममुखेन च॥
आपोहिष्ठादिभिर्मंत्रैर्दर्भैः शिरासि मार्जयेत्
॥२॥

ಇವೆರಡೂ ಭಿನ್ನ ಭಿನ್ನ ಮಹಾಸ್ಮೃತಿಗಳ ಶ್ಲೋಕಗಳಾಗಿರುತ್ತವೆ. ಇವುಗಳಲ್ಲಿ ಪ್ರಯೋಗ ಮಾಡುವ **मूर्ध्नी, ब्रह्ममुख,** ಈ ಶಬ್ದಗಳು ಯಾವ ಮಂತ್ರಗಳಿಗೆ ಸಂಜ್ಞೆಯಾಗಿರುತ್ತವೆ. ಅಥವಾ ಬೇರೆ ಯಾವದಾದರೂ ಅರ್ಥಗಳಾಗುತ್ತವೆಯೋ?

ಮತ್ತೂ ಸಕಲ ಮಹಾಜನಗರೂ ಕೂಡಾ ಪ್ರದೋಷ ಕಾಲದಲ್ಲಿ ಪಠಿಸುವ ನಾರದ ಪುರಾಣಾಂತರ್ಗತವಾದ ಶ್ರೀ ಮಹಾಗಣಪತಿ ಸ್ತೋತ್ರದಲ್ಲಿ ಸೇರಿರುವ.

೨

अष्टानां ब्राह्मणानां च लिखित्वा यः समर्पयेत् ॥
तस्य विद्या भवेत्सर्वा गणेशस्य प्रसादतः॥१॥

ಈ ಶ್ಲೋಕದಲ್ಲಿ (**अष्टभ्यो ब्राह्मणेभ्यश्च**) ಯೆಂಬದಾಗಿ ಚತುರ್ಥೀ ವಿಭಕ್ತ್ಯಂತ ಪಾಠವೂ ಕೂಡಾ ತೋರುತ್ತದೆ. ಅದರ ಸಪ್ರಮಾಣವಾದ್ದು. ಷಷ್ಠಿ ವಿಭಕ್ತ್ಯಂತವೋ? ಚತುರ್ಥೀ ವಿಭಕ್ತ್ಯಂತವೋ?

ಈ ವಿಷಯಗಳಂತಾ ಯೋಗ್ಯ ಶಾಸ್ತ್ರಾರ್ಥ ವಿಚಾರದಿಂದ ಸಪ್ರಮಾಣವಾಗಿ ನಿರೂಪಣ ಮಾಡಿ ಈ ಕೆಳಗೆ ವಿವರಿಸಿದವರ ವಿಳಾಸಕ್ಕೆ ಬರುವ ಅಶ್ವಯುಜ ಶು| ೧೦ (ವಿಜಯಾ ದಶಮಿ) ಯೊಳಗೆ ಕಳಿಸಿಕೊಡತಕ್ಕದ್ದು. ಅದೇ ಅಶ್ವಯುಜ. ಬಹುಳದಲ್ಲಿ ಶ್ರೀ ಶ್ರೀ ಮಹಾಸಂನಿಧಿಯ ಮುಂದೆ ಬಂದು ಈ ವಿಷಯಗಳನ್ನು ನಿರೂಪಣ ಮಾಡಿ ಸಮಾಧಾನ ಕೊಟ್ಟಲ್ಲಿ ಅವರವರ ಶಾಸ್ತ್ರಾರ್ಥನಿರೂಪಣಾನುಸಾರವಾಗಿ, ಉತ್ತಮ, ಮಧ್ಯಮಾದಿ ತರತಮಭಾವವನ್ನು ತಿಳಿದು ಯೋಗ್ಯ ಬಹುಮಾನವನ್ನು ಕೂಡಾ ಕೊಡಬೇಕೆಂತ ನಿಶ್ಚಯಿಸಿರುತ್ತದೆ.

ಕ್ರೋಧನ ಸಂ। ಭಾದ್ರಪದ
ಶು ೧ಯು ಗುರುವಾರ,
ಶ್ರೀಕ್ಷೇತ್ರ ರಘೋತ್ತಮ ಮಠ,
ಜಿಲ್ಲಾ ಉತ್ತರ ಕಾನಡಾ.
ತಾ. ಹೊನ್ನಾವರ,
ಪೋಸ್ಟ— ಮಲ್ಲಾಪುರ.

ಶ್ರೀ; ಶ್ರೀ; ಮಹಾ
ಸನ್ನಿಧಾನದ
ಅಪ್ಪಣೆ ಪ್ರಕಾರ.
ಗಂಗಾಧರಶಾಸ್ತ್ರಿ,
ಪಾರುಪತ್ಯಗಾರ.

— ಸಾಂಗಲಿಯ ವರ್ತಕರಾದ ಲಾಲಚಂದ ದೇವಚಂದ ಯಾನೆ ಕೃಷ್ಣಶೇಟರವರು ತಮ್ಮ ಪಿತೃಸ್ಮರಣಾರ್ಥ ೩,೨೦೦ ರೂಪಾಯಿಗಳನ್ನು ಖರ್ಚುಮಾಡಿ ಒಂದು ಧರ್ಮಶಾಲೆಯನ್ನು ಕಟ್ಟಿಸಿರುವರು

ವೃತ್ತಸಾರ.

— ಬಾಬು ಅರವಿಂದ ಘೋಷರವರು ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿ ಕೆಲಸ ನಡಿಸುವದು ತಮಗೆ ಸಾಧ್ಯವಿಲ್ಲೆಂದು ಹೇಳಿ ಪ್ರಾಂತಿಕ ಕಾಂಗ್ರೆಸ ಕಮೀಟಿಯವರಿಗೆ ಅಧ್ಯಕ್ಷಸ್ಥಾನಕ್ಕೆ ತಮ್ಮ ಹೆಸರು ಸೂಚಿಸಬಾರದೆಂದು ಜಾಹೀರು ಪಡಿಸಿರುವರು.

— ಬೆಲ್ಜಮ ದೇಶದ ಅರಸರು ದಂಪತಿಯುಕ್ತರಾಗಿ ಹಿಂದುಸ್ಥಾನಕ್ಕೆ ಇದೇ ಬರುವ ಸಪ್ಟೆಂಬರ ತಾ ೧೧ನೇಗೆ ಆಗಮಿಸುವರು.

— ಹಿಂದುಸ್ಥಾನದ ವಿಖ್ಯಾತ ಚಿತ್ರಕಲಾವಿಶಾರದರಾದ ಮಿ| ಕೃಷ್ಣ ರಹೇಮಾನರವರ ೨ ಚಿತ್ರಗಳನ್ನು ಭಾರತ ಮಂತ್ರಿಗಳು ಕೊಂಡಿರುವರು.

— ಮಿಸೆಸ್ ರತನಬಾಯಿ ಬಾಮಜಿರವರು ಹೆಂಗಸರ ಉದ್ಧಾರಕ್ಕಾಗಿ ೨೫ ಸಾವಿರ ರೂಪಾಯಿಗಳನ್ನು ಅರ್ಪಿಸಿರುವರು.

— ಜಪಾನದ ನಾಗೋಯಾ ಪಟ್ಟಣದಲ್ಲಿ ನೆರೆಬಂದು ಹೇರಳ ಹಾನಿ ಸಂಭವಿಸಿ ೨ ಕೋಟಿ ರೂಪಾಯಿ ಹಾನಿಯಾಗಿರುವದಂತೆ!

— ಗೋಮತಿ ನದಿಯು ಉಕ್ಕೇರಿ ಬಂದು ಗೋಂಡಾ· ಭರೇ ಜಿಲ್ಲೆಗಳೊಳಗಿನ ಅನೇಕ ಗ್ರಾಮಗಳು ಜಲದಲ್ಲಿ ನಿಂತಿವೆ. ಲಖಿಮಪುರ ಪಟ್ಟಣವು ೪ ದಿವಸಗಳಿಂದ ನೀರಿನಲ್ಲಿ ಮುಳುಗಿಕೊಂಡಿದೆ

— ಸಿಂಧ ಹೈದರಾಬಾದದ ತೈಲಬುದ್ಧಿಯ ವಿದ್ಯಾರ್ಥಿನಿಯಾದ ಭೋಜಿ ಸಿಪಾಯಿ ಮಾಲಾನಿ ಎಂಬುವಳು ಕರುಳುರೋಗದಿಂದ ನರಳುತ್ತಿದ್ದಳು. ದಿಲ್ಲಿಯಲ್ಲಿ ಅವಳಿಗೆ ಶಸ್ತ್ರಕ್ರಿಯೆ ಮಾಡುತ್ತಿರುವಾಗಲೇ ಅವಳು ನಿಧನಪಟ್ಟಳು

— ಗದಗದ ಶ್ರೀ ದತ್ತಾತ್ರಯ ನಾಟಕ ಮಂಡಳಿಯ ಒಡೆಯರಾದ ಶ್ರೀ| ಸದಾಶಿವರಾವ ಗರೂಡರವರು ನಾಟಕ ಟಿಕೀಟುಗಳ ವಿಕ್ರಯದಿಂದ ಹುಟ್ಟುವ ಸರಿ ಅರ್ಧ [illegible]ಗಳನ್ನು ಗೋರಕ್ಷಣ ಫಂಡಿಗೆ ಅರ್ಪಿಸುವ ನಿರ್ಧಾರ ಮಾಡಿರುವರು

— ಮಹಾತ್ಮರು ಸಿಂಗಪೂರಕ್ಕೆ ಹೋಗಿದ್ದರು. ಆಗ ಅಲ್ಲಿಯ ಜನರು ಅಖಿಲ ಭಾರತೀಯ ದೇಶಬಂಧುಗಳ ಸ್ಮಾರಕಕ್ಕಾಗಿ ೨೪ ಸಾವಿರ ರೂಪಾಯಿಗಳನ್ನು ಅರ್ಪಿಸಿದರು.

— ಬಾರಿಸಾಲದಲ್ಲಿ ಒಂದು ಶೋಚನೀಯ ಪ್ರಕಾರ. ಸನಾತನ ಧರ್ಮದ ಕನ್ಯೆಯು ವಿವಾಹ ಮಾಡಿಕೊಳ್ಳಲು ಸಿದ್ಧಳಾಗಿದ್ದಳು. ತಾಯಿ-ತಂದೆಗಳು ವರನನ್ನು ಹುಡುಕಿದರು. ಆದರೆ ವರದಕ್ಷಿಣೆ ಕೊಡಲು ಅನುಕೂಲತೆಯು ಇಲ್ಲದ್ದರಿಂದ ಬಹಳ ಕಷ್ಟಪಟ್ಟರು. ಇದನ್ನು ನೋಡಲಿಕ್ಕಾಗದ ಕನ್ಯೆಯು ಆತ್ಮಹತ್ಯೆ ಮಾಡಿಕೊಂಡಳು.

— ಆಗ್ರಾದೊಳಗಿನ ಸಾಧು ಸಮಿತಿಯ ಅಧ್ಯಕ್ಷರಾದ ಸ್ವಾಮಿ ಕಪಿಲದಾಸರವರಿಗೆ ಅಮೇರಿಕೆಯ ನ್ಯೂಯಾರ್ಕದೊಳಗಿನ ಆಂತರರಾಷ್ಟ್ರೀಯ ವ್ಯಾಖ್ಯಾನ ಮಂಡಳದವರು ಬುದ್ಧ, ಶ್ರೀ ರಾಮಚಂದ್ರ, ಶ್ರೀ ಕೃಷ್ಣ, ಶ್ರೀ ಶಂಕರಾಚಾರ್ಯ, ಗುರುನಾನಕ, ಗುರು ಗೋವಿಂದ, ಸ್ವಾಮಿ ದಯಾನಂದ, ಕಬೀರ, ಶ್ರೀ ಮಹಾವೀರ, ರಾಜಾರಾಮ ಮೋಹನರಾಯ ಇತ್ಯಾದಿ ವಿಭೂತಿಗಳ ವಿಷಯ ೩೦ ವ್ಯಾಖ್ಯಾನಗಳನ್ನು ಕೊಡಲು ನಿಮಂತ್ರಿಸಿರುವರು. ಪ್ರತಿಯೊಂದು ಉಪನ್ಯಾಸಕ್ಕೆ ೪೦೦ ಡಾಲರು, ಅಂದರೆ, ೧,೨೦೦ ರೂಪಾಯಿ ಸಿಗುವವು. ಇದೆಲ್ಲ ಹಣವನ್ನು ಸ್ವಾಮಿ ಕಪಿಲದಾಸರವರು ಸಂಗ್ರಹಿಸಿ, ಹಿಂದುಸ್ಥಾನದಲ್ಲಿ ಸರ್ವಧರ್ಮಗಳ ವಿಶ್ವವಿದ್ಯಾಲಯವನ್ನೊಂದು ಸ್ಥಾಪಿಸುವ ಆಲೋಚನೆಯಲ್ಲಿರುವರು.

— ಸರ್ವಾಧಿಪತಿ ರೀಡಿಂಗ ದೊರೆಗಳು ಕಳೆದ ತಾ ೨೦ ನೇ ಗುರುವಾರಕ್ಕೆ ಶಿಮ್ಲೆ ಕಾಯದೆ ಕೌನ್ಸಿಲಿನಲ್ಲಿ ಭಾಷಣ ಮಾಡಿ ಸದ್ಯಕ್ಕೆ ಸುಧಾರಣೆಗಳು ಸುಧಾರಿಸುವ ಹಾಗಿಲ್ಲೆಂದು ಹೇಳಿ, ಕೊಂಡಿಗ್ಯ ಸ್ವರಾಜ್ಯವನ್ನೇ ಸಹಕಾರ್ಯದಿಂದ ನಡಿಸಲು ಪ್ರಜೆಗಳಿಗೆ ನಿಮಂತ್ರಿಸಿದರು. ಅದರಿಂದ ಪ್ರಜೆಗಳು ನಿರಾಶರಾಗಿರುವರು.

— ಚೀನ ದೇಶದ ಕೆಂಟನ್ ಸರಕಾರದವರು ತಮ್ಮ ಬಂದರಗಳಲ್ಲಿ ಬ್ರಿಟಿಷ ಹಡಗುಗಳು ಬರದಂತೆ ಪ್ರತಿಬಂಧ ಮಾಡಿರುವರು. ಬ್ರಿಟಿಷ್ ದೇಶದಲ್ಲಿ ದೊಡ್ಡ ಗಲಭೆ!

— ನ್ಯೂ ಪೋರ್ಟ ಎಂಬಲ್ಲಿ ಹೊಸವಾಕ್ ಎಂಬ ಹಡಗದ ಬೊಯ್ಲರುಗಳ ಸ್ಫೋಟವಾಗಿ ೩೦ಕ್ಕೆ ಮಿಕ್ಕಿ ಜನರು ಸತ್ತಿದರು.

— ಅಖಿಲ ಭಾರತೀಯ ಕಾಂಗ್ರೆಸ ಕಮೀಟಿಯು ಬಿಹಾರ ಪ್ರಾಂತದ ಪಾಟಣಾದಲ್ಲಿ ಸಪ್ಟೆಂಬರ ೨೨ ನೇ ತಾರೀಖಿಗೆ ಸೇರಲಿಕ್ಕಿದೆ.

— ಇಟಾಲಿ ಹಾಗು ಅಫಗಾಣಿಸ್ಥಾನದ ಸರಕಾರಗಳಲ್ಲಿ ವಿಕಲ್ಪ ಬೆಳೆದಿದೆ. ರಾಯಭಾರಿಗಳು ಸ್ವದೇಶಕ್ಕೆ ಹೋಗಿರುವರು.

— ದೇಶಬಂಧು ದಾಸರ ಸ್ಮಾರಕ ನಿಧಿಯು ೬॥ ಲಕ್ಷ ರೂಪಾಯಿಗಳಿಗೆ ಮುಟ್ಟಿತು! ಇನ್ನೂ ೩॥ ಲಕ್ಷ ರೂಪಾಯಿಗಳು ಬೇಕು.

— ಮದ್ರಾಸದೊಳಗಿನ ಮ್ಯುನಿಸಿಪಾಲಿಟಿಯ ಇಲೆಕ್ಷನಿನಲ್ಲಿ ಸ್ವರಾಜ್ಯ ಪಕ್ಷದವರಿಗೂ, ಜಸ್ಟಿಸ ಪಕ್ಷದವರಿಗೂ ಹೋರಾಟ ನಡೆದಿತ್ತು. ೪ ವಾರ್ಡಗಳಲ್ಲಿ ಸ್ವರಾಜ್ಯ ಪಕ್ಷದವರು ಗೆದ್ದರು. ಜಸ್ಟಿಸ ಪಕ್ಷದವರು ರೇಗಿಗೆದ್ದು ಸ್ವರಾಜ್ಯ ಪಕ್ಷದ ಜನರ ಮೇಲೆ ಕಲ್ಲು ಒಗೆದರು.

— ಅಹಮದಾಬಾದ ಮ್ಯುನಿಸಿಪಾಲಿಟಿಯ ಸೇವಕರೆಲ್ಲರೂ ಖಾದಿಯನ್ನೇ ಧರಿಸಬೇಕೆಂದು ಅಧ್ಯಕ್ಷರು ಹುಕುಂ ಮಾಡಿದ್ದರು. ಅದನ್ನು ಉಲ್ಲಂಘಿಸಿ ಮ್ಯುನಿಸಿಪಾಲಿಟಿಯ ಚೀಫ ಆಫೀಸರರು ನೌಕರರ ಪೋಷಾಕಿಗಾಗಿ ವಿಲಾಯತಿ ಬಟ್ಟೆಯನ್ನು ಖರೇದಿ ಮಾಡಿದರು. ಸಭಾಸದರು ಸಂತಪ್ತರಾಗಿರುವರು.

— ಸಾತಾರೆಯಲ್ಲಿ ಶ್ರೀ| ಸೀತಾರಾಮಪಂತ ಸರದೇಸಾಯರವರು ಹಿಂದೂ ದೇವಾಲಯಗಳ ಚಿತ್ರಗಳ ಒಂದು ಪ್ರದರ್ಶನವನ್ನು ತೆರೆದಿರುವರು.

— ಸಾಷ್ಟಾಂಗ ನಮಸ್ಕಾರದ ಕಾರ್ಯಕ್ರಮಗಳು ಇದೇ ಭಾದ್ರಪದ ಮಾಸದಲ್ಲಿ ಸಾಂಗಲಿಯಲ್ಲಿ ಜರಗುವವು. ೫೦೦ ನಮಸ್ಕಾರಗಳನ್ನು ಉಮೇದ್ವಾರರು ಹಾಕಬೇಕು.

— ಮಿಸೆಸ್ ಮರ್ಫ ಎಂಬುವಳು ಅಮೇರಿಕೆಯ ಬ್ರೂಕಲಿನ್ ಪಟ್ಟಣದಲ್ಲಿರುವಳು. ಅವಳ ವಯಸ್ಸು ಬರೇ ೧೦೪ ವರುಷ! ಎಷ್ಟು ತರುಣಿ!! ಅವಳು ತನ್ನ ಗಂಡನು ಸತ್ಯೇನ್ನ ಮುದುಕನೆಂದು ತಕರಾರು ಮಾಡಿ, ತನಗೆ ಪ್ರತ್ಯೇಕವಾಗಿ ಸಂಸಾರ ಮಾಡಲು ಅಪ್ಪಣೆಯನ್ನೀಯಬೇಕೆಂದು ಕೋರ್ಟಿನಲ್ಲಿ ಫಿರ್ಯಾದು ಮಾಡಿರುವಳು!!!

— ಕಳೆದ ತಾ. ೮ನೇಗೆ ಮಾರೀಸದಲ್ಲಿ ಒಬ್ಬ ಫಕೀರನು ಅದ್ಭುತ ಯೋಗಸಾಮರ್ಥ್ಯವನ್ನು ಪ್ರದರ್ಶಿಸಿದನು. ಫಕೀರನ ಹೆಸರು ತಾಹರಾಬೇ. ತನ್ನ ಕುತ್ತಿಗೆಯನ್ನೂ, ಹಿಮ್ಮಡಿಯನ್ನೂ ಹರಿತವಾದ ಕತ್ತಿಗಳ ಬಾಯಮೇಲೆ ಇರಿಸಿ ತಲಹೊತ್ತು ನಿದ್ರಿಸಿದನು. ಮೈಯು ನೆಲಕ್ಕೆ ಹತ್ತದ, ಎರಡೂ ಕತ್ತಿಗಳಮೇಲೆ ಇತ್ತು. ಹಾಗೆ ಮಲಗಿರುವಾಗಲೇ ಆತನ ಹೊಟ್ಟೆಯಮೇಲೆ ೧ ಮಣ ಕಲ್ಲನ್ನಿಟ್ಟು ಅದರ ಚೂರು ಚೂರು ಮಾಡಿದರು. ದೇಹಕ್ಕೆ ಕತ್ತಿಯ ಸ್ಪರ್ಶವಾಗಿದ್ದಿಲ್ಲ. ಬಳಿಕ, ಆತನು ಮೊಳೆಗಳ ಮೊನೆಗಳ ಮೇಲೆ ಮಲಗಿದನು. ಬಳಿಕ ಒಬ್ಬನು ಆತನ ಎದೆಯ ಮೇಲೆ ಕೂತು ಒತ್ತಿದನು. ಮೈಗೆ ಘಾಯವಾಗಲಿಲ್ಲ. ದೀಪದಿಂದ ಸುಡನೋಡಿದರು. ಆದರೆ, ಆತನಿಗೆ ಬಾಧೆಯಪ್ಪಲಿಲ್ಲ. ಆತನಿಗೆ ಒಂದು ಪೆಟ್ಟಿಗೆಯಲ್ಲಿರಿಸಿ ಬಾಗಿಲು ಮುಚ್ಚಿದರು. ೨೦ ನಿಮಿಷಗಳವರೆಗೆ ಹಾಕಿಟ್ಟರೂ, ಆತನು ಬದುಕಿಕೊಂಡಿದ್ದನು. ಬಾಗಿಲು ತೆಗೆಯಲು ಎಚ್ಚತ್ತನು. ಈ ಪ್ರಯೋಗವಾಗುವಾಗ, ೨೦೦೦ ಜನರು ಹಾಜರಿದ್ದರು. ೯ ಮಂದಿ ಡಾಕ್ಟರರು ಪ್ರಸಂಗದಲ್ಲಿ ಸಹಾಯ ಮಾಡಲು ತಯಾರಿದ್ದರು.

— ನಾಸಿಕ ಮ್ಯುನಿಸಿಪಾಲಿಟಿಯವರು ಗೋಹತ್ಯವನ್ನು ಪ್ರತಿಬಂಧಿಸಬೇಕೆಂದು ಠರಾಯಿಸಿರುವರು.

— ಸಿಂಧೂನದಿಗೆ ಒಡ್ಡು ಹಾಕಿ ಮಾಡಿದ ಸ್ಥಳದಲ್ಲಿ ಯಾವ್ಯಾವ ಬೆಳೆ ಬೆಳೆಸಬಹುದೆಂದು ಶೋಧಿಸಲು ಸರಕಾರವು ಸಂಶೋಧಕ ಕಾರ್ಯಮಾಡಹತ್ತಿದೆ. ಅದಕ್ಕಾಗಿ ಈ ವರ್ಷಕ್ಕೆ ೩ ಲಕ್ಷ ರೂಪಾಯಿ ಬೇಕೆಂದು ಸರಕಾರವು ಕೌನ್ಸಿಲಿನಲ್ಲಿ ಬೇಡಿತು. ಆ ಸ್ಥಳವು ಮಾನವೀ ವಾಸ್ತವ್ಯಕ್ಕೆ ಅನುಕೂಲವಿಲ್ಲವೆಂದು ಸಿಂಧದ ಸಭಾಸದರು ಒತ್ತೊತ್ತಿ ಹೇಳಿದಾಗ್ಯೂ, ಗ್ರಾಂಟು ಮಂಜೂರಾಗಿ ಹೋಯಿತು. ಸಂಶೋಧನವು ಹತ್ತು ವರುಷಗಳ ವರೆಗೆ ನಡೆಯುವದು. ಅಂದರೆ ೩೦ ಲಕ್ಷ ರೂಪಾಯಿ ಖರ್ಚು ಮಾಡಿ ಅಲ್ಲಿ ಯಾವ ಬೆಳೆ ಬೆಳೆಸುತ್ತಾರೋ ಏನೋ! ಕೋಟ್ಯಾವಧಿ ರೂಪಾಯಿ ಒಡ್ಡು ಕಟ್ಟಲಿಕ್ಕೆ! ಲಕ್ಷಾವಧಿ ರೂಪಾಯಿ ಬೆಳೆ ಸಂಶೋಧನ ಮಾಡಲಿಕ್ಕೆ!!! ಇಷ್ಟಾಗಿ ಸರಕಾರಕ್ಕೆ ಹಣದ ಅಡಚಣಿ !!!

— ಮುಂಬಯಿಯ ಕ್ಯಾದೆ ಕೌನ್ಸಿಲಿನ ಅಧಿವೇಶನದಲ್ಲಿ ಸ್ವರಾಜ್ಯ ಪಕ್ಷದವರಿಗೂ, ಸರಕಾರಕ್ಕೂ ಕಡು ಸಂಗ್ರಾಮ ನಡೆದಿದೆ. ಸರಕಾರವು ಶಿಷ್ಟಸಮ್ಮತ ನೀತಿಯನ್ನು ಸಹ ಬದಿಗೊತ್ತಿ ಸ್ವರಾಜ್ಯ ಪಕ್ಷದವರಿಗೆ ಅಡ್ಡಗಟ್ಟುತ್ತಿರುವರು. ನಮ್ಮ ದೇಶಬಾಂಧವರಾದ ಬ್ರಾಹ್ಮಣೇತರರೂ, ಸಿಂಧದ ಮುಸಲ್ಮಾನರೂ ಸ್ವರಾಜ್ಯ ಪಕ್ಷದ ಮೇಲೆ ದ್ವೇಷಬುದ್ಧಿಯಿಂದ ಸರಕಾರಕ್ಕೆ ನೆರವಾಗುತ್ತಿರುವರು. ತೀರ ಕೊಡಲಿಯು!

— ಧಾರವಾಡದ ಬ್ರಾಹ್ಮಣೇತರ ಸಂಘದವರು ನಮ್ಮಲ್ಲಿಯ ಶ್ರೀ ವೆಂಕಣ್ಣಾ ಹೊಸಬನಾಯಕ ಎಮ್. ಎ. ಬೇರಿಸ್ಟರ-ಎಟ್-ಲಾ ಇವರಿಗೆ ವಿಜಾಪುರದ ಕಲೆಕ್ಟರ ಅಧಿಕಾರ ದೊರೆತದ ಬಗ್ಗೆ ಸಭೆಸೇರಿ ಅಭಿನಂದನ ಮಾಡಿದರು. ಸಭೆಯಲ್ಲಿ ಸಹಕಾರಿ ಸಂಘದ ಶ್ರೀ ಎಸ್. ಟಿ. ಕಂಬಳಿಯವರ ಗೌರವಪರ ಭಾಷಣವಾಯಿತು. ತಾಂಬೂಲಾದಿಗಳ ಅರ್ಪಣೆಯಾದ ಬಳಿಕ ಸಮಾರಂಭವು ವಿಸರ್ಜನೆ ಹೊಂದಿತು.

— ಸದ್ಯಕ್ಕೆ ಧಾರವಾಡದ ಲಿಂಗಾಯತ ಪ್ರಮುಖರಾದ ಶ್ರೀ ಕಂಬಳಿ-ಹುಲಕೋಟಿ-ಹೊಸಮನಿಯವರೊಳಗಿನ ಅಂತಃಕಲಹನಿವಾರಣೆಯ ವಿಷಯ ಧಾರವಾಡದ ವೀರಶೈವರ ಸಭೆಯು ಲಿಂಗಾಯತ ಸಭಾಮಂದಿರದಲ್ಲಿ ಸೇರಿ ಪಂಚರು ನಿರ್ಣಯಿಸಿದಂತೆ ಮೂವರೂ ಐಕ್ಯಮತ ಮಾಡಿಕೊಳ್ಳಬೇಕೆಂದು ನಿರ್ಣಯವಾಯಿತು. ನಿಜವಾಗಿ ಅಭಿನಂದನೀಯ!

— ಪಂಜಾಬದ ಬಾಲವೀರ ಹಮೀದನವರು ಚಂಬಾಪರ್ವತದ ೧೫೦೦೦ ಫೂಟು ಎತ್ತರ ವರೆಗೆ ಏರಿಬಂದಿರುವರು. ಸ್ತುತ್ಯ ಸಾಹಸ!

— ಕಳೆದ ತಾ. ೧೯ನೇಗೆ ಮುಂಬಯಿಯ ಗೌಡಸಾರಸ್ವತ ಮಿತ್ರ ಮಂಡಳದವರು ಶ್ರೀ ಮಾ॥ ಕಾಶೀನಾಥಪಂತ ತ್ರಿಂಬಕ ತೆಲಂಗರವರ ಪುಣ್ಯತಿಥಿಯನ್ನು ಪಾಲಿಸಿದರು. ಪ್ರಸಿದ್ಧ ಮಹಮ್ಮದೀಯ ಕಾಯಿದೆ ಪಂಡಿತರಾದ ಮಿರ್ಝಾ ಅಲ್ಲಿ ಅಕಬರಖಾನರವರು ಸಭಾಪತಿಗಳಿದ್ದರು.

— ಅಮೇರಿಕೆಯಿಂದ ವೈದ್ಯವಿದ್ಯೆಯನ್ನು ಕಲಿತು ಕರ್ನಾಟಕಕ್ಕೆ ಮರಳಿಬಂದ ಡಾ॥ ಕೋಕಟನೂರ ಮಹಾಶಯರು ಬೆಳಗಾವಿಯಲ್ಲಿ ಚಿಕಿತ್ಸಾಲಯವನ್ನೊಂದು ಸ್ಥಾಪಿಸಿರುವರು. ಡಾ॥ ಕೋಕಟನೂರರವರ ಚಿಕಿತ್ಸಾಲಯದಲ್ಲಿ ಹೊಸ ಹೊಸ ರೋಗಗಳ ಶಸ್ತ್ರವೈದ್ಯೆಯ ಶಸ್ತ್ರಾಸ್ತ್ರಗಳು ಉಂಟಿವೆ. ಶಸ್ತ್ರಕ್ರಿಯೆಯಲ್ಲಿ ಇವರು ನಿಷ್ಣಾತರು. ಬಡಬಗ್ಗರಿಗೆ ಇವರು ಉಚಿತವಾಗಿ ಚಿಕಿತ್ಸೆ ಮಾಡುತ್ತಾರೆ.

— ಮುರಾದಾಬಾದಿನಿಂದ ಲಖನೌ ಪಟ್ಟಣಕ್ಕೆ ಉಗಿಬಂಡಿ ಹೋಗುತ್ತಿದ್ದಾಗ ಮಧ್ಯದಲ್ಲಿ ದರೋಡೆಖೋರರು ಉಗಿಬಂಡಿಯನ್ನು ನಿಲ್ಲಿಸಿ, ರೇಲ್ವೆ ಕಂಪನಿಯ ತ್ರಿಜೋರಿಯನ್ನೊಡೆದು ೧೦ ಸಾವಿರ ರೂಪಾಯಿಗಳನ್ನು ಕದ್ದೊಯ್ದರು. ಉಗಿಬಂಡಿ ಕಂಪನಿಯ ಸಾಹೇಬನೊಬ್ಬನು ಗುಂಡು ಹೊಡೆಯಲು ತಯಾರಿ ಮಾಡುತ್ತಿರುವದನ್ನು ಕಂಡು ದರೋಡೆಖೋರರು ಆತನಿಗೆ ಗುಂಡು ಹಾಕಿ ಕೊಂದರು. ಇನ್ನಿಬ್ಬರು ಪ್ರಯಾಣಿಕರೂ ಕೊಲ್ಲಲ್ಪಟ್ಟರು.

॥ ಶ್ರೀಮನ್ಮಹಾ ಗಣಪತಯೇ ನಮಃ ॥

ಗಣೇಶ ಚತುರ್ಥಿ ಹಬ್ಬ.

ದೇವರು ಒಬ್ಬನೇ ಇದ್ದಾನೆಂಬ ಮಾತು ಸಕಲ ಮತಾನುಯಾಯಿಗಳೂ ಒಪ್ಪುತ್ತಾರೆ. “ಏಕಮೇವಾದ್ವಿತೀಯಂ ಬ್ರಹ್ಮ” ಇತ್ಯಾದಿ ವೇದವಾಕ್ಯಗಳು ಇದಕ್ಕೆ ಪ್ರಮಾಣವಾಗಿವೆ. ತಥಾಪಿ, ನಮ್ಮ ಸನಾತನ ಧರ್ಮದಲ್ಲಿ, ವಿಶೇಷತಃ ಪುರಾಣಗಳಲ್ಲಿ, ಹಲವು ದೇವತೆಗಳ ವರ್ಣನೆ ಮಾಡಿದ್ದು ಇದ್ದರೂ, ಅವೆಲ್ಲ ಒಬ್ಬನೇ ಪರಮೇಶ್ವರನ ರೂಪಭೇದಗಳು—ತತ್ವ, ಗುಣ, ಶಕ್ತಿಗಳಿಗೆ ಅನುಗುಣವಾಗಿ—ನಾವು ಮನುಷ್ಯರು ಕಲ್ಪಿಸಿದಂಥವು ಆಗಿರುತ್ತವೆ. ಒಬ್ಬ ಮಾಮಲೇದಾರನಿಗೆ, ಕಚೇರಿಯಲ್ಲಿ ಮಾಮಲೇದಾರನೆಂತಲೂ, ಕ್ರಿಮಿನಲ್ ಖಟ್ಲೆ ವಿಚಾರಕಾಲದಲ್ಲಿ ಮೆಜಿಸ್ಟ್ರೇಟನೆಂತಲೂ, ಮನೆಯಲ್ಲಿ ಆತನ ಹೆಂಡತಿಯು ಆತನಿಗೇನೇ ಗಂಡನೆಂತಲೂ, ಮಕ್ಕಳು ಅಪ್ಪಯ್ಯನೆಂತಲೂ, ಇನ್ನೂ ಬೇರೆ ಬೇರೆ ಜನರು ಬೇರೆ ಬೇರೆ ಹೆಸರಿನಿಂದಲೂ ಕರೆದರೂ, ಆ ಮನುಷ್ಯನು ಹೇಗೆ ಒಬ್ಬನೇ ಇದ್ದಾನೋ, ಅದರಂತೆ, ಒಬ್ಬ ಪರಮಾತ್ಮನಿಗೇನೇ, ಶುದ್ಧ ಸತ್ವ ಗುಣದಲ್ಲಿ ಈಶ್ವರನೆಂತಲೂ, ತಮೋಗುಣಯುಕ್ತನಾಗಲು, ರುದ್ರನೆಂತಲೂ, ತ್ರಿಗುಣಗಳಿದ್ದರೂ ಅವುಗಳಲ್ಲಿ ಸತ್ವಾಧಿಕನಾದಾಗ ಆತನಿಗೇ ವಿಷ್ಣುವೆಂತಲೂ, ರಜೋಗುಣಾಧಿಕ್ಯದಿಂದ ಬ್ರಹ್ಮನೆಂತಲೂ, ವಿಶ್ವಪಾಲನೆಯ ಕರ್ತವ್ಯಕ್ಕಾಗಿ ವಿಷ್ಣುವೇ ರಾಮಕೃಷ್ಣ ಇತ್ಯಾದಿ ಅವತಾರ ತಾಳಿ ಮನುಷ್ಯನಾಗಿ ಜನಿಸಿದಾಗ ರಾಮನೂ, ಕೃಷ್ಣನೂ ಎಂತಲೂ, ನಾವು ಕರೆದರೂ, ಜಗತ್ಕರ್ತನಾದ ದೇವರು ಒಬ್ಬನೇ ಎಂಬುದು ಸಿದ್ಧವಾದ ಮಾತು.

ಗಣಪತಿಯು ಇಂಥ ಒಬ್ಬನೇ ಪರಮಾತ್ಮನ ಬುದ್ಧಿಶಕ್ತಿಯು. ಈ ಲೋಕವನ್ನು ಹುಟ್ಟಿಸಿ, ಪರಿಪಾಲಿಸಿ, ಕಲ್ಪಸಮಯಕ್ಕೆ ಅದರ ನಾಶ (ಒದಲಾವಣೆ) ವನ್ನು ಮಾಡಿ ಪುನಃ ಹುಟ್ಟಿಸಲಿಕ್ಕೆ ಅದರ ಬೀಜವನ್ನು ಇಡುವಂಥ ಪರಮೇಶ್ವರನ ವಿಶಾಲವಾದ ಬುದ್ಧಿಯೊಂದಿಗೆ ಆತಗೆ ನಾವು ಗಣೇಶ (ಗಣಪತಿ) ನೆನ್ನುತ್ತೇವೆ. ಬುದ್ಧಿಶಕ್ತಿಯ ಪ್ರಸನ್ನತೆಯು ಹೊರತು ನಮಗೆ ಯಾವ ಕಾರ್ಯವೂ ಸಾಧ್ಯವಾಗದು; ಆ ಕಾರಣ, ಯಾವ ಕೆಲಸಕ್ಕಾದರೂ ಪ್ರಥಮತಃ ಗಣೇಶ ಪೂಜೆಯನ್ನು ಮಾಡಬೇಕೆಂಬ ಶಿಷ್ಟಾಚಾರವು. ಬುದ್ಧಿಯು ಜಾಗ್ರತವಾಗಿಯೂ, ಚುರುಕಾಗಿಯೂ ಇರುತ್ತಿದ್ದರೆ, ಯಾವದನ್ನು ಗಳಿಸಲಿಕ್ಕೂ ಅದಕ್ಕೆ ಅಸಾಧ್ಯವಿಲ್ಲೆಂಬುದರಿಂದ, ಈ ಸಿದ್ಧಿವಿನಾಯಕ ದೇವರು “ಸಂಪತ್ತಿ, ಸಂತತಿ, ಸನ್ಮತಿ, ಸದ್ಗತಿ” ಮುಂತಾದ ಬೇಕಾದಂಥ ಭಕ್ತರ ಮನೋರಥಗಳನ್ನು ಪಾಲಿಸುತ್ತಾರೆಂದು ಮಹಾತ್ಮರಾದಂಥ ಸಾಧು ಸತ್ಪುರುಷರು ಈ ದೇವತೆಗೆ ಹೊಗಳುತ್ತಾರೆ.

ಇಂಥ ಪರಮಾತ್ಮನ ಬುದ್ಧಿಶಕ್ತಿಯಲ್ಲಿ ಸಹಜವಾಗಿ ಕರ್ತೃತ್ವಶಕ್ತಿ ಹೆಚ್ಚು ಇರುವದರಿಂದ, ಈ ವಿನಾಯಕ ದೇವರಿಗೆ ಬಾಕಿ ದೇವತೆಗಳಿಗೆ ಇದ್ದ ಹಾಗೆ ನಾಲ್ಕು ಕೈಗಳು ಇರುವದಲ್ಲದೆ, ಈ ನಾಲ್ಕು ಕೈಗಳಿಗಿಂತಲೂ ಹೆಚ್ಚು ಕಾರ್ಯಶಕ್ತಿಯುಳ್ಳ ಸೊಂಡಿಯು ಉಂಟು. ಬುದ್ಧಿಶಕ್ತಿಯ ದೃಷ್ಟಿಯು ಸೂಕ್ಷ್ಮವಾಗಿದ್ದೂ, ಬಹು ದೂರ ಪರಿಯಂತ ಮುಟ್ಟುವಂಥಾದ್ದಾಗಿಯೂ ಇರುವದರಿಂದ, ಈ ಗಣಪತಿ ದೇವರ ಕಣ್ಣುಗಳು ನೋಡಲಿಕ್ಕೆ ಅತಿ ಸಣ್ಣವಾಗಿದ್ದರೂ, ಅತೀ ಸೂಕ್ಷ್ಮವಾಗಿಯೂ, ದೂರದರ್ಶಿಯಾಗಿಯೂ ಇರುವ ಆನೆಯ ಕಣ್ಣುಗಳಂತೆ ಇರುತ್ತವೆಂದು ನಮ್ಮ ಕಲ್ಪನೆಯು. ಈ ವಿಶಾಲವಾದ ಬುದ್ಧಿಶಕ್ತಿಯು ಸೂಕ್ಷ್ಮ ವಿಚಾರ ಮಾಡುವಕಾಲಕ್ಕೆ, ಅನೇಕ ಅತೀಸೂಕ್ಷ್ಮ (ಸಣ್ಣ ಮತ್ತು ಹಗುರ) ವಾಗಿ ಆಗುತ್ತದೆಂಬುದು ಈ ಗಣೇಶನು ಇಲಿಯನ್ನು ವಾಹನ ಮಾಡಿಕೊಂಡಿರುತ್ತಾನೆಂಬುದರ ಮೇಲಿಂದ ನಾವು ತರ್ಕಿಸಬಹುದು. ಆದರೂ, ಪರಮಾತ್ಮನ ಈ ಬುದ್ಧಿಶಕ್ತಿಯು ಅತೀ ವಿಶಾಲವಾಗಿಯೂ, ದೊಡ್ಡದಾಗಿಯೂ ಇರುತ್ತದೆಂಬುದರಿಂದ ಈ ಗಣಪತಿಯೂ ಮಹಾಸ್ಥೂಲಕಾಯದವನೂ, ದೊಳ್ಳು ಹೊಟ್ಟೆಯವನೂ ಎಂದು ಪುರಾಣಗಳಲ್ಲಿ ವರ್ಣಿಸಿ ಇದೆ.

ಶಾರೀರಿಕ ಯಾವತ್ತು ಶಕ್ತಿಗಳಿಗೂ, ಸಂಸ್ಕಾರ, ಚಿತ್ತ, ಮನಸ್ಸು, ಅಂತಃಕರಣ ಸಾಹಸ, ಧೈರ್ಯ, ಉತ್ಸಾಹ ಇತ್ಯಾದಿ ಮಾನಸಿಕ ಶಕ್ತಿಗಳಿಗೂ ಬುದ್ಧಿಯೇ ನಾಯಕನಾಗಿ, ಸಾರಾಸಾರ ವಿಚಾರದಿಂದಲೂ, ವಿವೇಕದಿಂದಲೂ ಸರಿಯಾದ ಮಾರ್ಗದಲ್ಲಿ ಇವುಗಳನ್ನು ನಡಿಸಿಕೊಂಡು ಹೋಗಬೇಕಾದ ಪ್ರಯುಕ್ತ, ಯಾವತ್ತು “ಗಣ” ಗಳಿಗೆ ಈತನು ನಾಯಕನೂ—ಪತಿಯೂ ಆಗಿರುತ್ತಾನೆಂಬುದರಿಂದ, ಈ ದೇವರಿಗೆ, ವಿನಾಯಕ, *ಗಣಪತಿ*, *ಗಣನಾಯಕ* ಎಂಬ ಹೆಸರುಗಳು ಬಂದಿವೆ.

ಯಾವತ್ತು ಅಂತಃಕರಣಗಳಲ್ಲಿ ಸಂಕಲ್ಪ ವಿಕಲ್ಪಾತ್ಮಕವಾದಂಥ ಮನಸ್ಸು ಅತೀ ಚಂಚಲವಾಗಿಯೂ, ಇದರ ಮೇಲೆ ಬುದ್ಧಿಯ ಸರಿಯಾದ ಅಂಕೆ ಇಲ್ಲದಿದ್ದರೆ ಅಡ್ಡ ಮಾರ್ಗಕ್ಕೆ ಒಯ್ಯುವಂಥಾದ್ದಾಗಿಯೂ ಇರುವದರಿಂದ “ಚಂದ್ರಮಾ ಮನಸೋ ಜಾತಃ” ಇತ್ಯಾದಿ ವೇದವಾಕ್ಯಗಳಿಂದ ಪ್ರತಿಪಾದಿಸಲ್ಪಟ್ಟಂತೆ ಈ ಮನಸ್ಸಿನ ಅಧಿದೇವತೆಯು ಚಂದ್ರನಾಗಿರುವದರಿಂದಲೂ ಕೂಡ ಇಂಥ ಬುದ್ಧಿದೇವತೆಯಾದ ಗಣಪತಿಯ ಪ್ರಸನ್ನತೆಯ ಕಾಲದಲ್ಲಿ ಮುಂಗಚೇಷ್ಟೆಯನ್ನು ಮಾಡುವ ಮನಸ್ಸಿನ ಅಧಿದೇವತೆಯಾದ ಚಂದ್ರನನ್ನು ಈ ಗಣಪತಿಯು ತನ್ನ ಕೋರೆ ಹಲ್ಲಿನಿಂದ ಹೊಡೆಯಲಿಕ್ಕೆ ಹವಣಿಸಿದ್ದಲ್ಲದೇ ಚಂದ್ರಬಿಂಬವನ್ನು ಆ ದಿನ (ಭಾದ್ರಪದ ಶು. ೪) ಯಾರೂ ನೋಡಬಾರದೆಂತಲೂ, ನೋಡಿದವರಿಗೆ ಮಿಥ್ಯಾಪವಾದ ದೋಷ ಉಂಟಾಗುವದೆಂಬ ಶಾಪವನ್ನು ಕೊಟ್ಟಿರುತ್ತಾನೆಂತಲೂ ಬಹುಶ್ರುತವಿದೆ.

ಬುದ್ಧಿಶಕ್ತಿಯ ಪ್ರಭಾವದಿಂದಲೇ ಯಾವತ್ತು ಕಾರ್ಯಸಿದ್ಧಿಯಾಗುವದರಿಂದ, ಈ ವಿನಾಯಕ ದೇವರ ವಶದಲ್ಲಿ ಅಣಿಮಾದಿ ಅಷ್ಟಸಿದ್ಧಿಗಳು ಇವೆ ಎಂದು ಹೇಳಲಾಗುತ್ತೆ. ಸನಾತನಿಗಳಲ್ಲಿ (ಹಿಂದೂ ಜನರಲ್ಲಿ) ಯಾವ ಪಂಥದವನಾದರೂ, ಯಾವ ಜಾತಿಯವನಾದರೂ, ಈ ಪರಮಾತ್ಮನ ಬುದ್ಧಿಶಕ್ತಿಯ ಆರಾಧನೆಯನ್ನು ಮಾಡಿ ತನ್ಮೂಲಕವಾಗಿ ತನ್ನ ಬುದ್ಧಿಶಕ್ತಿಗೆ ಸಂಸ್ಕಾರವನ್ನು ಹೊಂದುವದು ಯುಕ್ತವಾದದರಿಂದ, ಕೇವಲ ಹೊಲೆಯನಾದರೂ, ಚಮಗಾರನಾದರೂ ಈ ಗಣೇಶವ್ರತವನ್ನು ಮಾಡಿ ಬೆನಕನನ್ನು ಪೂಜಿಸಬಹುದೆಂಬ ರೂಢಿ ಬಿದ್ದಿದೆ.

ಸಾಮಾನ್ಯವಾದ ಬುದ್ಧಿಶಕ್ತಿಯಲ್ಲಿ ತಮ, ರಜ, ಸತ್ವ ಈ ಮೂರು ಗುಣಗಳು ಇರುತ್ತಿದ್ದರೂ, ಪ್ರಕಾಶಮಯವಾದ ಸತ್ವಗುಣವು, ಬಾಕಿ ಎರಡು ಗುಣಗಳಿಗಿಂತ ಹೆಚ್ಚು ವಿಶೇಷವಾಗಿರುತ್ತೆ. ಈ ಜಗತ್ತಿನ ಪರಿಪಾಲನಾಶಕ್ತಿಯುಳ್ಳ ಭಗವಂತನ ರೂಪಕ್ಕೆ ವಿಷ್ಣುವೆಂಬ ಹೆಸರು ಇದೆ. ವಿಷ್ಣುವಿನಲ್ಲಿಯೂ ಈ ಪ್ರಕಾರ ಸತ್ವಾಧಿಕ್ಯವಿದೆ. ಆದ ಪ್ರಯುಕ್ತವಾಗಿ ಈ ಗಣಪತಿಯು ವಿಷ್ಣುವಿನ ಅವತಾರವೆಂದು ಅನೇಕರು ಭಾವಿಸುವದಲ್ಲಿ ತಪ್ಪಿಲ್ಲ; ಆದರೆ, ರಜ-ತಮಗಳ ಲೇಶಮಾತ್ರವೂ ಇಲ್ಲದ ಶುದ್ಧ ಸತ್ವಮಯನಾದ ಈಶ್ವರನಿಗೆ ಈ ಗಣಪತಿಯು ಮಗನೆಂಬ ಸಂಬಂಧವನ್ನು ಜೋಡಿಸುವದು ಕೂಡ ಸಯುಕ್ತಿಕವೇ.

ಶ್ರೀ ಗಣಪತಿ ದೇವರ ಕುರಿತು ಪುರಾಣ ಕಥೆಗಳು ಅನೇಕಾನೇಕ ಇದ್ದುವೆ. ಇದರ ಹೊರತು ಗಣಪತಿ ಪುರಾಣವೆಂಬಲೇ ಪ್ರತ್ಯೇಕ ಒಂದು ಪುರಾಣವಿದೆ. ಈ ಪುರಾಣ ಕಥೆಗಳಲ್ಲಿ ಅಡಕವಾಗಿರುವಂಥ ತತ್ವಗಳನ್ನೇ ಪರಿಶೋಧಿಸಿ ಶೈವ-ವೈಷ್ಣವಾದಿ ಮತಭೇದಗಳಿಗೆ ಅನುಲಕ್ಷಿಸದೇ ಗಣಪತಿಯ ಗುಣಾನುವಾದ ಮಾಡಿರುತ್ತದೆ.

ಆದಕಾರಣ, ಇಂಥ ಶ್ರೀಮನ್ಮಹಾಗಣಪತಿಯು ಈ ಭರತಖಂಡದಲ್ಲಿರುವ ನಮ್ಮೆಲ್ಲ ಕರುಣಾಕಟಾಕ್ಷದಿಂದ ನೋಡಿ, ನಮ್ಮಲ್ಲಿ ಐಕ್ಯ ಬುದ್ಧಿಯನ್ನೂ, ಪರಾವಲಂಬನದ ನಾಚಿಕೆಯನ್ನೂ, ಪಾರತಂತ್ರ್ಯದಿಂದುಂಟಾದ ದುಃಖದ ಮನವರಿಕೆಯನ್ನೂ ಉಂಟುಮಾಡಿ, ಸನ್ಮಾರ್ಗದಿಂದಲೂ, ಅಹಿಂಸೆಯಿಂದಲೂ, ಶಾಂತಿಯಿಂದಲೂ, ಮಾನವಿ ವರ್ಗದ ಸ್ವಾಭಾವಿಕ ಸುಖಸಾಧನದ ಜನ್ಮಸಿದ್ಧವಾದ ಸ್ವತಂತ್ರತೆಯನ್ನು ನಮಗೆ ಸಾಧ್ಯ ವ ಯೋಗ್ಯವಿರುವಷ್ಟರ ಮಟ್ಟಿಗಾದರೂ ಬೇಗನೇ ದಯಪಾಲಿಸಿ ನಮ್ಮನ್ನು ಸ್ವಾವಲಂಬಿಗಳಾಗಿ ಮಾಡಲಿ ಎಂದು ತ್ರಿಕರಣಶುದ್ಧನಾಗಿಯೂ, ಅತೀ ದೀನನಾಗಿಯೂ ಆ ಸಿದ್ಧಿವಿನಾಯಕ ದೇವರಲ್ಲಿ ಪ್ರಾರ್ಥನೆ ಇದೆ. ಶ್ರೀ ಗಣೇಶಾರ್ಪಣಮಸ್ತು.

ಒಬ್ಬ ತತ್ವಶೋಧಕ.

ಚಿಕ್ಕ ಬಾಲಕರೂ, ಚಿತ್ರವೂ.

ಸಾಧಾರಣವಾಗಿ ಜನಸಾಮಾನ್ಯದ ಉಪಯುಕ್ತವಾದ ವಸ್ತುಗಳಲ್ಲಿ ಚಿತ್ರವೊಂದಾಗಿದೆ. ಚಿತ್ರದಿಂದ ಬುಟ್ಟಿ, ಪೆಟ್ಟಿಗೆ, ಟೇಬಲ್ ಮೊದಲಾದ ಹಲವು ತರದ ಸಾಮಾಗ್ರಿಗಳು ತಯಾರಾಗುತ್ತಲಿವೆ. ನಮ್ಮಲ್ಲಿಯ ಅನಾಥರಾದ ಹಲವು ಕೃಷೀಜೀವಿಗಳ ಉದರನಿರ್ವಾಹದ ಸಾಧನಗಳಲ್ಲಿ ಚಿತ್ರವೊಂದು ಪರಿಗಣಿಸಲ್ಪಟ್ಟಿದೆ. ಈ ತರನಾಗಿ ಹಲವು ಬಗೆಯಿಂದ ಮಾನವನ ಹಿತಕಾರಕ ವಸ್ತುಗಳಲ್ಲಿ ಚಿತ್ರವೊಂದಾದರೂ, ನಿಸ್ಸಾರ ನರನ ಸಹಕಾರಿಯೂ, ಹಿತಕಾರಿಯೂ ಆದ ನಾರಿಯು ಮುನಿದಾಗ ಮಾರಿಯಾಗುವಂತೆ, ಅಧ್ಯಾಪಕರುಗಳ ಕರಕಮಲಗಳನ್ನಲಂಕರಿಸಿದಾಗ ಅದಂತಹ ಚಿಕ್ಕ ಬಾಲಕರಿಗೆ ಕಾಲಸ್ವರೂಪಿಯಾಗುವದು ಅರಿದಲ್ಲ. ಲೇಖಕನೊಮ್ಮೆ ಒಂದು ಶಾಲೆಯ ಮನೆಯನ್ನು ಪ್ರವೇಶಿಸಿದಾಗ ಅಧ್ಯಾಪಕರೊಬ್ಬರು ಐದಾರು ವರ್ಷದ ಚಿಕ್ಕ ಬಾಲಕರನ್ನು ಚಿತ್ರದಿಂದ ಹೊಡೆಯುತ್ತಲಿದ್ದರು. ಆಗಲಾ ಆ ಬಾಲಕರ ಬಾಯಿಂದ "ಅಲ್ಲಾ ಮಾಸ್ತರ್ರೇ, ಅಲ್ಲಾ" ಎಂಬ ಆರ್ತಸ್ವರವು ಹೊರಡುತ್ತಲಿತ್ತು ಅದನ್ನು ನನ್ನಿಂದ ಕೇಳಲಾಗಲಿಲ್ಲ ಹೊರಬಂದೆನು. ಸತ್ಯಹರಿಶ್ಚಂದ್ರರ ಮುಂದೆ ತಮ್ಮ ವರ್ತನವು ಯೋಗ್ಯವಲ್ಲೆಂಬುದಾಗಿ ವಿನಯದಿಂದ ಆ ಅಧ್ಯಾಪಕರಿಗೆ ಸೂಚಿಸಿದೆನು. ಅದನ್ನು ಕೇಳಿ ತಿರಸ್ಕಾರಭಾವದಿಂದಲಾ ಶಿಕ್ಷಕರು "ನೀವೇನು ಹೇಳುತ್ತೀರಿ. ಚಿತ್ರದಿಂದ ಹೊಡೆಯುವದು ನಮ್ಮ ಶಿಕ್ಷಣ ಕಾಯಿದೆಗೆ ವಿರುದ್ಧವಾದುದಲ್ಲ. ದಾಸಮರೇ ದಾಸರ ಮಗನಿಗೆ ಸ್ವತಃ ಅವರ ಮುಂಗಡೆಯಲ್ಲಿಯೇ ಚಡಿಸಿದ ಉದಾಹರಣೆಯುಂಟು" ಎಂಬುದಾಗಿ ಹೇಳಿದರು. ಶಿಕ್ಷಕರ ಈ ಗರ್ವೋಕ್ತಿಯನ್ನು ಕೇಳಿ ಅವರ ನೈತಿಕ ಅಧಃಪತನಕ್ಕೆ ಮನಸ್ಸು ಹೇಸಿತು. ಒಮ್ಮೆ ಮಾನವನಿರ್ಮಿತ ಶಿಕ್ಷಣ ಕಾಯಿದೆಗೆ ಅದು ವಿರುದ್ಧವಾದುದಲ್ಲವಾದರೂ, ದೇವನಿರ್ಮಿತ ನೈತಿಕ ಕಾಯಿದೆಗೆ ವಿರೋಧವೆಂಬುದನ್ನು ಎಲ್ಲರೂ ಬಲ್ಲರು. ದಂಡಶಾಸ್ತ್ರವೇತ್ತರಾದ ಪೋಲೀಸಿನವರೇ ಕಳ್ಳರು, ಕಾಕರು, ದರೋಡೆಖೋರರೇ ಮೊದಲಾದ ಕಲ್ಲೆದೆಯ ಜನರ ಮುಂದಿನ ಕಾಲ ಚಿತ್ರವನ್ನು ಪ್ರಯೋಗಿಸಲು ಹಿಂಜರಿಯುತ್ತಿರುವ ಈ ಕಾಲದಲ್ಲಿ, ಬುದ್ಧಿವಿಕಾಸವನ್ನು ಹೊಂದದ, ಕೋಮಲ ಪ್ರಕೃತಿಯ, ಅಜ್ಞಾನಿ ಬಾಲಕರನ್ನು ಮನಸ್ವೀಯಾಗಿ ಹೊಡೆಯುವದು ನ್ಯಾಯಕ್ಕೂ, ಧರ್ಮಕ್ಕೂ, ಮನುಷ್ಯತ್ವಕ್ಕೂ ಅಯೋಗ್ಯವಾದುದೆಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ. [illegible] ಉಚ್ಚ ಪ್ರತಿಯ ಶಿಕ್ಷಣವನ್ನು ಪಡೆದ ಶಿಕ್ಷಕರ ಈ ವರ್ತನಕ್ಕೂ, ಮೇಲೆ ಗರ್ವೋಕ್ತಿಗೂ ಏನೆನ್ನಬೇಕು?

ಚಿತ್ರವನು ಕೈಕೊಳಲು ಹಿಂದೆಗೆದ ತಂದೆ||
ಪುತ್ರನನು ಹಗೆಯಂತೆ ಕೊಲುವನೆಂದಂತೆ||

ಎಂಬುದಾಗಿ ಚಿತ್ರಪ್ರಹಾರವನ್ನು ಪುಷ್ಟೀಕರಿಸುವ ಒಂದು ತತ್ವವನ್ನು ಇನ್ನೊಂದು ನೀತಿಯಲ್ಲಿ ನೋಡಿದ ನೆನಪುಂಟು. ಪುತ್ರನನ್ನು ಸನ್ಮಾರ್ಗಕ್ಕೆ ಪ್ರವರ್ತಿಸುವದಕ್ಕೆ ಇದ ಉಪಾಯವು ಹೋಲದೆ, ಕಡೆಗೆ ದಂಡ ನೀತಿಯನ್ನು ಕೈಕೊಳ್ಳಬೇಕಾಗಬಹುದು. ಆದರೆ, ನಿಯಮಿತ ಅಭ್ಯಾಸವನ್ನು ಸಾಧಿಸದ್ದಕ್ಕಾಗಿಯೂ, ಅನನುಕೂಲತೆಗಳ ಮೂಲಕ ಶಾಲೆಗೆ ಬಾರದ್ದಕ್ಕಾಗಿಯೂ ಶಿಕ್ಷಕರು ಶಿಕ್ಷೆಯೇ ತಮ್ಮ ಅತಿಕರ್ತವ್ಯವೆಂದು ತಿಳಿದು ಅಂಥ ಚಿಕ್ಕ ಬಾಲಕರನ್ನು ಹೆಣ್ಣಾಗಿ ಬಡಿದು, ತಮಗೆ "ಮನ್ಯರಾಗಬೇಕು, ತಮ್ಮ ಕೈದಾಸರಾಗಬೇಕು" ಎಂಬ ಗಾದೆಯನ್ನು ಸಾರ್ಥಕಪಡಿಸುವದು ಕೇವಲ ಅಕ್ಷಮ್ಯವು; ಅಗ್ರಾಹ್ಯವು. ಶಿಕ್ಷೆಯನ್ನಷ್ಟು ಮಾಡುವವನೇ ಶಿಕ್ಷಕನಲ್ಲ; ಯೋಗ್ಯ ಶಿಕ್ಷಣವನ್ನು ಕೊಡುವವನೇ ಶಿಕ್ಷಕನು. ಪಾಲಕರು ೪-೫ ವರುಷದ ಬಾಲಕರನ್ನು ಶಾಲೆಗೆ ಕಳಿಸುವರು. ನಮ್ಮಲ್ಲಿ ಇಂಗ್ಲಂಡ, ಅಮೇರಿಕಾ, ಜಪಾನ ರಾಷ್ಟ್ರಗಳಲ್ಲಿರುವಂತಹ ಅನುಕರಣೀಯವಾದ ಚಿಕ್ಕ ಬಾಲಕರ ಶಾಲೆಗಳಿಲ್ಲ. ತೊದಲೇ ಮಕ್ಕಳು ಶಾಲೆಗೆ ಹೋಗುವದೆಂದರೆ ಅಂಜುವರು. ಅಂಥ ಮಕ್ಕಳನ್ನು ಆದರದಿಂದ ಕಂಡು, ಅವರ ಚಿಕ್ಕ ಪುಟ್ಟ ತಪ್ಪುಗಳನ್ನು ಕ್ಷಮಿಸಿ, ಪ್ರೀತಿಯಿಂದ ಅವರ ಮನಸ್ಸಿನ ಮೇಲೆ ಸದ್ಗುಣದ ಶಿಕ್ಷಣ ಕಾರ್ಯವನ್ನು ಸಾಗಿಸಬೇಕೆಂಬುವದನ್ನು ವಿದ್ಯಾತಂತ್ರಜ್ಞರುಗಳಾದ ಸುಶಿಕ್ಷಿತ ಶಿಕ್ಷಕರಿಗೆ ನಾವು ಹೇಳಬೇಕಾಗಿಲ್ಲ ಹೇಳುವ ಯೋಗ್ಯತೆಯೂ ನಮ್ಮಲ್ಲಿ ಸಾಕಾದದ್ದಿಲ್ಲ. ಇವು ಅನೇಕ ಉತ್ಕೃಷ್ಟ ತತ್ವಗಳನ್ನಭ್ಯಾಸಿಸಿಯೂ, ಓದುವದು ಶಾಸ್ತ್ರ, ತಿನ್ನುವದು ಬದನೇಕಾಯಿ" ಎಂಬಂತೆ, ಹಲವು, ಕೇವಲ ಕೆಲವು ಶಿಕ್ಷಕರು ಆಚರಿಸುತ್ತಿರುವದನ್ನು ನೋಡಿದರೆ ವ್ಯಸನವಾಗುತ್ತಿದೆ. ಶಿಕ್ಷಣ ಖಾತೆಯ ಮುಖ್ಯಾಧಿಕಾರಿಗಳು ಈ ವಿಷಯದ ಕಡೆಗೆ ಲಕ್ಷಗೊಟ್ಟು ಈ ಅನಿಷ್ಟ ಪ್ರವೃತ್ತಿಯನ್ನು ತಪ್ಪಿಸಿ ಲೋಕಾದರಕ್ಕೆ ಪಾತ್ರರಾಗಬೇಕೆಂದು ಇಚ್ಛಿಸುತ್ತೇನೆ. ಶಿಕ್ಷಕರಾದರೂ, ನಮಗೇನು ಈ ಬಾಧೆ ತಪ್ಪಿದರೆ, ಅನ್ಯೋನ್ಯದೋಷವುಂಟು, ಎಂಬ ಕ್ಷುದ್ರ ವಿಚಾರವನ್ನು ತೊರೆದು, ತಮ್ಮ ಮೇಲೊಪ್ಪಿಸಿದ ಜವಾಬ್ದಾರಿಯನ್ನು, ಅಧ್ಯಾಪಕನ ಕರ್ತವ್ಯವನ್ನು, ನಯದಿಂದ ಮಾಡುವದು, ಭಯದಿಂದಾಗುವದಿಲ್ಲವೆಂಬುವದನ್ನು ಅರಿತು ಶಿಕ್ಷಣವನ್ನು ಸಾಗಿಸಬೇಕು. ಈ ಲೇಖನ ವಾಚನದಿಂದ ಶಿಕ್ಷಕವರ್ಗದಲ್ಲಿ ಭಯಂಕರವಾದ ಕೋಲಾಹಲ ಏಳುವದೆಂಬುದು ಲೇಖಕನಿಗೆ ಗೊತ್ತಿದೆ. ಆದರೇನು? ಅಪ್ರಿಯವಾದ ಸತ್ಯವನ್ನು ಹೇಳದೆ ಉಪಾಯವಿಲ್ಲ. ಶಿಕ್ಷಕವರ್ಗವೆಲ್ಲವೂ ಈ ಪ್ರವೃತ್ತಿಯವರಾಗಿರುವದೆಂದು ಲೇಖಕನ ಅಭಿಪ್ರಾಯವಿಲ್ಲ. ಸದಯಾಂತಃಕರಣಗಳಾದ ಶಿಕ್ಷಕ ಸಮಾಜವನ್ನುದ್ದೇಶಿಸಿ ಈ ಲೇಖವು ಬರೆಯಲ್ಪಟ್ಟಿದೇ ಅಲ್ಲ. ಅಧ್ಯಾಪಕರುಗಳ ಬಗ್ಗೆ ಲೇಖಕನಿಗೆ ಅತ್ಯಂತ ಆದರವು. ಪೂಜ್ಯ ಬುದ್ಧಿಯೂ ಇರುವೆಂಬುದನ್ನು ವಿಜ್ಞಾಪಿಸಿಕೊಂಡು ಇಂದಿಗೆ ಈ ಚಿಕ್ಕ ಲೇಖನವನ್ನು ಮುಗಿಸುತ್ತೇನೆ.

ಇತಿ ಶಿಕ್ಷಕರುಗಳಹಿತಾಭಿಲಾಷಿ,

ವೆಂಕಟಪ್ಪಾ.

ರೊಕ್ಕಸ್ತರಿಗೆ ಒಳ್ಳೇ ಸಂಧಿ!

ಶಿರ್ಸಿ ಗ್ರಾಮ, ಶಿರ್ಸಿ ವ ಸಿದ್ದಾಪುರ ತಾಲೂಕ ಇವುಗಳಲ್ಲಿ ಭರ್ತಿ ಬಾಜಾರದಲ್ಲಿರುವ ಮನೆ ವ ಧಾನ ಮುಡಿ ವ ಬಾಗಾಯ್ತ ಜಮೀನ ಅಸ್ತಿ ಅಜಮಾಸ ೧೫-೨೦ ಸಾವಿರ ಬೆಲೆ ಬಾಳುವಂಥವಿದ್ದು [illegible] ನಿಂದ ಇಟ್ಟುಕೊಂಡು ರೂಪಾಯಿ ಐದು ಸಾವಿರ ಕೊಡುವವರು ಬೇಕು. ಬಡ್ತಿ ವಗೈರೆ ವಿಷಯದಲ್ಲಿ ಮಾತನಾಡಬೇಕಾದವರು ಈ ಕೆಳಗಿನ ವಿಳಾಸಕ್ಕೆ ಪತ್ರ ಬರೆದು ತಿಳಕೊಳ್ಳಬಹುದು. ಪತ್ರವ್ಯವಹಾರ ಮಾಡುವ ಪತ್ತೆ:—

"ಕ್ಷ" c/o "**Kanara News,**"
KUMTA

ಅಮೇರಿಕನ್ ಉಪಾಯ

ಎಂಬ್ರೋಸಿಯಾ.

AMBROSIA

ಸ್ತ್ರೀರೋಗಪರಿಹಾರಕ್ಕಾಗಿ.

ಎಂಬ್ರೋಸಿಯಾವು ಸಮಸ್ತ ಪ್ರಕಾರದ ಸ್ತ್ರೀರೋಗಗಳನ್ನು ಪರಿಹರಿಸುವ ಒಂದೇ ಒಂದು ಔಷಧವು. ಇದು ಸ್ತ್ರೀಸೌಂದರ್ಯವನ್ನುಂಟುಮಾಡುತದೆ. ಸಾಮಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರುತ್ತದೆ, ಚಲೋ ಆಹಾರ ದೊರಕದೆ, ವಿಶೇಷ ಆಯಾಸ ಕೊಳ್ಳುವದರಿಂದ ಸ್ತ್ರೀಯರ ಪ್ರಕೃತಿಯು ಕೆಡುತದೆ, ಮುಟ್ಟಾಗುವಾಗ ಶೂಲಿ ಏಳುವದು, ಮುಟ್ಟಾಗದಿರುವದು, ಅಪಸ್ಮಾರ, ಬಂಜೆತನ ಮುಂತಾದ ಗರ್ಭಾಶಯದ ಬೇನೆಗಳು, ಅಜೀರ್ಣ, ತಲೆಶೂಲಿ ಭ್ರಮಿಷ್ಟತನ ಇವೆಲ್ಲ ಸ್ತ್ರೀರೋಗಗಳಮೇಲೆ ರಾಮಬಾಣ ಮದ್ದು. ಎಂಬ್ರೋಸಿಯಾವು ಸಮಸ್ತ ಸ್ತ್ರೀರೋಗಗಳನ್ನು ದೂರಮಾಡಿ, ಸ್ತ್ರೀಯರನ್ನು ಸಶಕ್ತ, ಹಾಗು ಸೌಂದರ್ಯವಂತರನ್ನಾಗಿ ಮಾಡುತದೆ

ಒಮ್ಮೆ ಪರೀಕ್ಷೆ ನೋಡಿ.

ಬೆಲೆ ಬಾಟ್ಲಿ ೧ಕ್ಕೆ ರೂಪಾಯಿ ೨—೦—೦

ಏಜಂಟರು:— **ವೀರಿಯೆಲ ಏಜನ್ಸಿ,**
ಪ್ರಿನ್ಸೆಸ ಸ್ಟ್ರೀಟ, ಮುಂಬಯಿ ನಂಬರ್ ೨

ಅತಿ ಉತ್ತಮವಾದ ನಶ್ಯ!

ಈ ನಶ್ಯವು ನಮ್ಮಲ್ಲಿ ಬಹಳ ವರ್ಷಗಳಿಂದ ಪ್ರಖ್ಯಾತಿ ಹೊಂದಿರುತದೆ. ಬೇಕಾದವರು ತರಿಸಿಕೊಳ್ಳಬಹುದು. ಸೆಂಪಲ್ ಬೇಕಾದವರು ೧ಆಣೆ ಸ್ಟಾಂಪು ಕಳಿಸಬೇಕು.

ನಂಬರ ೧. ಪೌಂಡು ೧ಕ್ಕೆ ೨-೪-೦.
" ೨ ಪೌಂಡು ೧ಕ್ಕೆ ೨-೦-೦.

ಜಿ. ರಾಮಯ್ಯಾ ಕಾರಡಿ,
ಪೋಸ್ಟ- ಶಿರ್ಸಿ, ಉ. ಕಾನಡಾ.

धातु क्षीणता व कमजोरपणा यांसाठी

मदन मंजरी गोळ्या. (रजिस्टर्ड.)

या दिव्य गोळ्या रक्त व वीर्य सुधारून त्यांची चांगली वाढ करतात. पचन शक्ति सुधारून परसाकडे साफ होते. त्याचप्रमाणें प्रत्येक प्रकारची अशक्तता दूर होऊन शरीर तेजदार व बळवान होतें. किं. ४० गोळ्यांच्या डबीस रु. १.

रमण विलासिनी गोळ्या. रात्री फक्त १ गोळी दुधाबरोबर खाल्यानें इच्छेप्रमाणें वीर्यस्तंभन होत. किं. डबीस रु. १

नपुंसकत्वारी घृत. हा लेप पुरुषाच्या गुह्यभागावर लावला असतां सर्व रोग नाश पावून खरें पुरुषत्व प्राप्त होतें. किं. डबीस रु. १.

कुमटा एजंट :— माधव सोनप्पा शेणवी बेलेकेरी.

राजवैद्य नारायणजी केशवजी वैद्यः— १९३ काळबादेवी रोड मुंबई नं. २.

ಜಾಹೀರಾತು.

ತಾರೀಖು ೭-೪-೧೯೨೫ನೇ ಪತ್ರದಲ್ಲಿ ಪ್ರಸಿದ್ಧಿಪಡಿಸಿರುವ ನಾಮಾಂಕಿತ [illegible] ಜ್ಯೋತಿಷಿ ಕೇ. ಸಿ. ನಾರಾಯಣ ಶಾಸ್ತ್ರಿ ಎಂಬವರು ಸ್ವಲ್ಪ ದಿವಸದ [illegible] ಡಿಸ್ಟ್ರಿಕ್ಟ ಸಾಗರದಲ್ಲಿ ಕೆಲವು ದಿವಸದ [illegible] ಮುಕ್ಕಾಂ ಮಾಡಿ [illegible] ಯಾವತ್ತೂ ಜನರು [illegible] ವಿಳಾಸಕ್ಕೆ ಪತ್ರವ್ಯವಹಾರ ನಡೆಸಬೇಕು. ಪತೆ—

ಕೇರಳ ಜ್ಯೋತಿಷಿ

ಕೇ. ಸಿ. ನಾರಾಯಣ ಶಾಸ್ತ್ರಿ.
ಚಾಮರಾಜೇಂದ್ರ ಪೇಟೆ, ಶ್ರೀ [illegible] ಸಾಗರ,
ಡಿಸ್ಟ್ರಿಕ್ಟ-ಶಿವಮೊಗ್ಗಾ

ಸುಲಭ ಕ್ರಯ! ಸುಲಭ ಕ್ರಯ!

ಡಾಕ್ಟರ ಜೀ. ಬಿ. ಯವರ

ಸುಗಂಧ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇರಲ್ಪಟ್ಟ ಈ ವ್ಯಾಧಿಗಳನ್ನು ಸ್ವಚ್ಛಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ವೈದ್ಯರುಗಳು ತಮ್ಮ ಗಹದಲ್ಲಿ [illegible] ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ [illegible] ಕಳಿಸಲಾಗುವದು

ಒಂದು ಡಬ್ಬಿಗೆ [illegible] ರೂ. ೦ ೪ ೦ [illegible] ೧ಕ್ಕೆ ರೂ. ೩-೮-೦ ವ್ಹಿ. ಪಿ. ೦-೮-೦ [illegible] ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಜಾರ್ಜಟೌನ, ಮದರಾಸ

ವಿಶೇಷ] **ಅನುಭವಸಿದ್ಧ** [[illegible]

ವನೌಷಧಿಮೂಲಿಕೆಗಳು

ವಾಯುದುಮ್ಮನ (ನಿಮೋನಿಯಾ) ವಾಂತಿಭ್ರಾಂತಿ (ಕಾಲೆರಾ) ಅರ್ಧಾಂಗವಾಯು (ಪೆರಾಲಿಸಿಸ್) ಹುಚ್ಚು ನಾಯಿ ಕಡಿತ, ಸರ್ಪಸುತ್ತು, ಹೊಟ್ಟೆಯಲ್ಲಿ ಕೃತ್ರಿಮ ವಿಷಹಾಕಿದ್ದು (ಕೈಮದ್ದು) ವಗೈರೆ ರೋಗಗಳಿಗೆ ಒಂದೇ ಒಂದು ಮೂಲಿಕೆಯಿಂದ ಖಾತ್ರಿಯಾಗಿ ತೀವ್ರ ಗುಣಬರುವದು ಇವು ಬಹುಕಾಲದಿಂದ ಅನುಭವ ತಕ್ಕೊಂಡ. ಹಾಗು ಪ್ರತಿನಿತ್ಯ ಈಕಡೆಗೆ ಬಳಕೆಯಲ್ಲಿದ್ದು ಖರ್ಚಾಗುವ ಔಷಧಿಗಳ ತಾಜಾ ಮೂಲಿಕೆಗಳು! ಒಮ್ಮೆ ತರಿಸಿ ಅನುಭವ ತಕ್ಕೊಂಡರೆ ಖಾತ್ರಿಯಾದೀತು. ಕಾಲೆರಾ ಔಷಧಿಗಳ ದ್ರಾವಕ (Tincture ಸಹ ಆಗಾವು ಸೂಚಿಸಿದರೆ ಕಳುಹುವೆವು

ವಾಯುದುಮ್ಮನದ ಬಗ್ಗೆ ಔಷಧಿ ಮೂಲಿಕೆ ತೊಲೆ ೧ಕ್ಕೆ	೦ ೨ ೦.
ಕಾಲೆರಾದ ಬಗ್ಗೆ ,, ,, ,,	೦-೨-೦
ಅರ್ಧಾಂಗ ವಾಯುವಿನಬಗ್ಗೆ	೦ ೪ ೦
ನಾಯಿ ಕಡಿತದಬಗ್ಗೆ . .	೦ ೪ ೦
ಸರ್ಪಸುತ್ತಿನ ಬಗ್ಗೆ	೦-೨ ೦
ಹೊಟ್ಟೆಯಲ್ಲಿ ಕೃತ್ರಿಮ ಔಷಧಿ ವಿಷಬಗ್ಗೆ ತೊಲೆ ೧೦ ಕ್ಕೆ	೦-೮ ೦
ರಕ್ತಶುದ್ಧಿ ವ ಮಲಶೋಧನೆ ಬಗ್ಗೆ ಮೂಲಿಕೆ ರಾತ್ಲ ಕ್ಕೆ	೧-೦ ೦
ಮೋರಾವಳಾ (ನೆಲ್ಲಿಕಾಯಿ ಗುಳಂಬ) ರಾತ್ಲ ೧ ಕ್ಕೆ	೧ ೦ ೦

ರಾತಲುಗಳಲ್ಲಿ ಯಾ ಅದಕ್ಕೂ ಹೆಚ್ಚು ತರಿಸಿಕೊಳ್ಳುವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು ಟಪಾಲ ಖರ್ಚ ಪ್ರತ್ಯೇಕ. ವಿಶೇಷ ಮಾಹಿತಿ ಪತ್ರ ದ್ವಾರಾ [illegible] ಔಷಧಿ ಸಂಗಡ.

ಎಸ್. ಜಿ. ಹೆಗಡೆ, ಮಾಸ್ತೇರಿ,
ಪೋಸ್ಟ ಬಂಕಿಕೋಡ್ಲ ಜಿ. ಉತ್ತರ ಕಾನಡಾ

ಕಿರ್ಲೋಸ್ಕರ ಪಂಪ.

ಬಾವಿಯೊಳಗಿನ ನೀರನ್ನು ಮೇಲಕ್ಕೆ ತರುವದರಲ್ಲಿ

ಕಿರ್ಲೋಸ್ಕರ. ನೀರಿನ ಪಂಪು ಮೇಲ್ಪಟ್ಟದ್ದಿರುತ್ತದೆ. ಸಣ್ಣ ಮಕ್ಕಳು, ಅಬಲೆಯರು ಈ ಪಂಪಿನಿಂದ ನೀರನ್ನು ಒಂದೇ ನಿಮಿಷದಲ್ಲಿ ಮೇಲಕ್ಕೆ ತರುವರು. ಪ್ರಪಂಚದಲ್ಲಿ ಮಿಕ್ಕ ಅಡಚಣಿಗಳಲ್ಲಿ ನೀರಿನ ತೊಂದರೆಯು ಸ್ವಾಭಾವಿಕವು. ಈ ಅಡಚಣಿಯು ಮೇಲಿನ ಉಪಾಯದಿಂದ ದೂರಾಗುವದು.

ಪರದೇಶದಿಂದ ಬರುವ ಪಂಪುಗಳು ಬಹು ತುಟ್ಟಿ ಇರುವದರಿಂದ ಮಧ್ಯಮ ಜನರಿಗೆ ಅವುಗಳನ್ನು ಕೊಳ್ಳುವದಾಗುವದಿಲ್ಲ ಇದನ್ನು ತಿಳಿದು ನಾವು ಈ ಪಂಪನ್ನು ಬಹು ಅಗ್ಗದಿಂದ ಕೊಡುತ್ತಿರುವೆವು ಇದಲ್ಲದೆ, ಈ ಪಂಪಿನ ಬಿಡಿ ಭಾಗಗಳು ನಮ್ಮ ಕಾರಖಾನೆಯಲ್ಲಿಯೇ ತಯಾರಾಗುತ್ತಿರುವದರಿಂದ ಬೇಕಾದಾಗ ದೊರೆಯುತ್ತವೆ

ಈ ಸೌಕರ್ಯವು ವಿದೇಶೀ ಪಂಪುಗಳನ್ನು ಕೊಂಡಲ್ಲಿ ದೊರೆಯದು

ಕೇ. ಬಿ. ಚೆಟ್ಟಿ ಮುಂಬೈ ಇವರು ನಮ್ಮ ಸೋಲ ಏಜಂಟರು.

ಸವಿಸ್ತರ ಸಂಗತಿಯ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ,
ಜಿಲ್ಲಾ ಸಾತಾರಾ.

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳ ಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳ ಮೇಲೆ ಇದು ಗುಣಕಾರಿಯೆಂದು ಅರಿಯದವರು ಅದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತ್ತು ೧೦ ಆಣೆ ವ್ಹಿ. ಪಿ. ಖರ್ಚ ಬೇರೆ.

ಅಮೃತಾಂಜನ ಡಿಪೋ, ಫೋರ್ಟ, ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta.

Reg No B. 1270

Monday, August 31st, 1920.

ವರ್ಷ ೯.

ಸಂಚಿಕೆ ೪೬.

ಕಾನಡಾವೃತ್ತ.

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.
ಕುಮಟೆಯಲ್ಲಿ ಆಗಾವು
ರೂಪಾಯಿ 2-4-0.
ಮನಿಯಾರ್ಡರಿಯಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ಸ್ಮಾಲ ಪ್ಯಾಯಿಕ (೧೫ ಎಟ್ ಇಂಚ್) ೮ ಸಾಲುಗಳವರೆಗೆ ರೂ. 1-0-0. ಆ ಮೇಲ್ಪಟ್ಟ ಪ್ರತಿಸಾಲಿಗೆ 0-2-0. ತಿಂಗಳ ಹೊರತು ಎಷ್ಟು ಹೆಚ್ಚಿರುವದೋ ಆ ಮಾನ ಹಿಂದೆ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಖಾಸ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಯಾ ಸಮಕ್ಷ ತಿಳಿಸಲ್ಪಡುವದು.

(ಕುಮಟಾ—ಕಾನಡಾವೃತ್ತ ಸೋಮವಾರ, ತಾರೀಖು ೩೧ ನೇ ಮಾಹೆ ಅಗೋಸ್ತ ಸನ್ ೧೯೨೦ ನೇ ಇಸವಿ)

हिंदुस्थानांतील रहिवाशांस ज्याप्रमाणें हिंदुस्थानची हवा त्याप्रमाणेंच हें औषध हिंदुस्थानांतील लोकांस ज्यास्त फायदेशीर आहे.

दोन रतली
द्राक्षासव- किंमत २ रुपये;

रामबाण औषधें

सर्दी घालविणारें,
भूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

पिण्यास रुचिकर.

क्याटलाग मागवा,

झंडु फार्मास्युटिकल वर्क्स लिमिटेड,
मुंबई नं: १२

ಲೋಕಪ್ರಸಿದ್ಧವಾದದ್ದು ! ಅನುಭವಸಿದ್ಧವಾದದ್ದು !!

ಮೂರು ದಿವಸಗಳಲ್ಲಿ ಗುಣಸಿಕ್ಕದಿದ್ದರೆ ಔಷಧಿಯ ಕ್ರಯ ವಾಪಸು.

ಜೀರ್ಣಶಕ್ತಿ, ರಕ್ತವೃದ್ಧಿ, ಧಾತುಪುಷ್ಟಿ, ಮನೋಲ್ಲಾಸ, ಪರಮಾನಂದ ಮೊದಲಾದ ಸುಖಜೀವನಕ್ಕೆ ಬೇಕಾದ ಆರೋಗ್ಯದಾಯಿನಿ.

ಟ್ರೇಡ ಮಾರ್ಕ] ರಿಜಿಸ್ಟರ ಆದದ್ದು [ನೋಡಿ ಕೊಳ್ಳಿರಿ.

ಅಗಸ್ತ್ಯ ಮನ್ಮಥ ಚಿಂತಾಮಣಿ ಲೇಹ.

ಆಬಾಲವೃದ್ಧ ಸ್ತ್ರೀಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು. ಮೋಹವಿಕಾರವಿದ್ದವರಿಗೂ, ನಿದ್ರೆಇಲ್ಲದವರಿಗೂ, ಸ್ವಪ್ನೇಂದ್ರಿಯವಾಗುವ ಯುವಕರಿಗೂ ಜ್ಞಾನಿ ಅಜ್ಞಾನಿಗಳಿಗೂ ಉಪಯೋಗವುಳ್ಳ ಪರಮಾನಂದ ಔಷಧಿ

1 ಸೇರು ನಾಲ್ವತ್ತೆಂಟು ದಿವಸಕ್ಕೆ ಸೇವಿಸಬಹುದು.
1 ಸೇರು ಡಬ್ಬಿ ಒಂದಕ್ಕೆ 3—0—0
½ ಸೇರು ಡಬ್ಬಿ ಒಂದಕ್ಕೆ 1—9—0
ವ್ಹಿ. ಪಿ. ಖರ್ಚು ಪ್ರತ್ಯೇಕ. ವಿಶೇಷ ಮಾಹಿತಿ ಬರೆಕೊಳ್ಳಿರಿ.

ಪತ್ತೆ:-ದೇವಣ್ಣ ನಾರಾಯಣ ಸೇಟ್,
ಸರಾಫ್, ಗೋಳಿಕಟ್ಟ, ಮಂಗಳೂರು, (ದ. ಕ.)

ಬೇಕಾದ ಚಿನ್ನಾಭರಣಗಳು ನಮಗೆ ಆರ್ಡರ ಕೊಟ್ಟಲ್ಲಿ ಯೋಗ್ಯ ಮುದ್ದತ್ತಿನಲ್ಲಿ ಕೊಡುವೆವು.

R. S. KASARGOD, B. A.

Jewellers, KUMTA.

ಆರ್. ಎಸ್. ಕಾಸರಗೋಡ, ಬಿ. ಎ.,
ರತ್ನಾಭರಣ ವ್ಯಾಪಾರಿ, ಕುಮಟಾ.

ಪ್ಯಮಾದ, ಗುಂಗುರು, ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದ ಮನವನ್ನು ಯುವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸ ಕೊಡತಕ್ಕ ಉಪಕಾರಿಣಿಯಾವದರೋ.

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಇವಂ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುವದು. ಈ ಆಯಿಲ್ ಹಚ್ಚಿಕೊಳ್ಳುತಲೇ ಮುಸಿಕಿದ ಬೇನೆಯು ತಣ್ಣಗಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತದೆ ಕೂದಲುಗಳು ಇದನ್ನು ಹಚ್ಚಿದ ಕೂಡಲೆ [illegible] ಉದುರಿ ಬಿದ್ದು ಹೋಗುವದಿಲ್ಲ, ಆದರೆ, ಅವು ದಟ್ಟವಾಗಿ ಬೆಳೆದು ನಯವಾಗುವವು. ಇದರ ಸುಗಂಧವಾದರೋ ಮಧುರವೂ ಮನೋಹರವೂ ಆಗಿರುವದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ಹಣವನ್ನೂ ಕೂದಲನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇ ಒಂದು ಬಾರಿ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಒಫ್ ಮೆರಿಟ" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಶಿಫಾರಸಪತ್ರಗಳೂ ದೊರಕಿವೆ.

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10-0 ವ್ಹಿ. ಪಿ. ಖರ್ಚು 0-14-0.

ತಿ ಮನೋಹರವಾದ ಸುರಭಿಯು !

ಓಟ್ಟೋ-ದಿಲ್ ಬಹಾರ್ !!

ರಿಜಿಸ್ಟರ್ಡ.)

ದ್ಧಿಯ ಮತ್ತು ಅತ್ಯುತ್ತಮವಾದ [illegible] ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡಿದ್ದು
ದೇ ಒಂದು ಹನಿ ನಿಮ್ಮ ಕೈ ಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ತಟಕುಗಳನ್ನು ಚಿಮುಕಿಸಿ
ಅರಳಿವಂತಾಗುತ್ತದೆ. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾ
ಆದ ಸೆಳಕೊಳ್ಳುತ್ತದೆ. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ
ಸೆ 1 ಕ್ಕೆ 0-12-0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0
ಪರಿಮಳ ಕಾರ್ಡುಗಳು ಡಜನ್ ಕ್ಕೆ

Indian Drug & Chemical Co.

16, Market, **BOMBA**

ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ

ಅನುವಾದಕ — ವ್ಹಿ. ಎ. [illegible]

(ಹಿಂದಿನ ಸಂಚಿಕೆಯಿಂದ ಮುಂದೆ ಸಾಗಿದ್ದು)

* * *

೨

ಯುರೋಪಿಯನನನ್ನು ಹೊಡದದ್ದಕ್ಕಾಗಿ [illegible] ಸಟ್ಟೆಗೆ ಅಧಿಕಾರೀ ವರ್ಗದವರ ದೊಡ್ಡದೊಂದು [illegible] ಲವೇ ಎದ್ದಿತು. ಕಲೆಕ್ಟ[illegible] ದ ಹತ್ತಿದರು. ತನಿಖೆಯನ್ನು [illegible] ಹಿಗಳನ್ನು ಮಾಡು [illegible] ದಿವಸಗಳೊಳಗಾಗಿ [illegible] ಅವರು ಪ್ರೋಲಿಸರಿಗೆ ಇಟ್ಟ ಪ್ರಶ್ನೆ ಮಾಡಿದರೆ [illegible] ಪರವೇ ಆಗ ಫೌಜದಾರರು ತನಿಖೆಯ [illegible] ಕೈಕೊಂಡರು. ಹಸಿವ ನಿದ್ದೆಗಳ ಪರಿವೆಯಿಲ್ಲದ ದಿವಸದಲ್ಲಿ ಅವರು ಪ್ರಯತ್ನವಾಗಿ [illegible] ಕೆಲ ಹೊಸ ಪಟೇಲರನ್ನೂ [illegible] ಪ್ರೌಢ ವಿದ್ಯಾರ್ಥಿಗಳನ್ನೂ ಅವರು ದಸ್ತಗಿರಿ [illegible]

ಮೊದಲನೆಯ ದಿವಸ ತನಿಖೆಯು [illegible] ಸಾಗಿತು. ಎರಡನೆಯ ದಿವಸ [illegible] ಡಾಕ್ಟರ ದೇಸಾಯಿ [illegible] ಯಲ್ಲಿ ಕೂತು [illegible] ಫೌಜದಾರರು ಅಲ್ಲಿ ಹಾಜರಾದರು. [illegible] ಯೊಳಗಿದ್ದ ಬೆಳ್ಳಿಯ ಪಟ್ಟಿಕೆಯು ಚಿಕ್ಕದನ್ನು [illegible] ಪೂರ್ವಕವಾಗಿ ಅತ್ತಿತ್ತ [illegible] ಸ್ವಾಭಿಮಾನಪೂರ್ವಕವಾಗಿ [illegible] ತುಳುಕುತ್ತಿತ್ತು.

ಡಾಕ್ಟರರು ಅವನನ್ನು [illegible] ಮಾಡಿಕೊಂಡು ಉಚಿತಾಸನದಲ್ಲಿ ಕುಳ್ಳಿರಿಸಿದ [illegible]

ಕ್ಷಣಹೊತ್ತು [illegible] ಕ್ಟರೇ ನನ್ನ ಕೆಲಸವನ್ನು ಈಗ ಕೇಳಿ [illegible] ಮಾಗಿದೆ ನೋಡಿರಿ” [illegible] ಫೌಜದಾರ [illegible]

“ಅದ್ಯಾಕೆ?” ಎಂದ ಡಾಕ್ಟರರು [illegible] ಕಿತರಾಗಿ ಕೇಳಿದರು.

‘ನಿನ್ನೆ [illegible] ಸಂಕಟಕ್ಕೊಳಗಾಗಿರುವದೂ [illegible]’ ಫೌಜದಾರರು ದುಃಖ ವ್ಯಸನದಿಂದ ನುಡಿದರು.

ಡಾಕ್ಟರರು ಕಿಂಚಿತ್ [illegible] ದಿಂದ, ‘ಅದರ ನೀವು ಎಷ್ಟು [illegible] ಬಿಡುವಿರಿ, ಅಲ್ಲವೇ’ ಅಂದರು.

“ಹೌದು ನಾನು ಹಿಡಿದಿರುವ [illegible] ನನ್ನಿಂದ ಹೆಚ್ಚಿನ ಪುರಾವೆಯನ್ನು [illegible] ಲ್ಲ.”

‘ಸಾಕಷ್ಟು ಪುರಾವೆಯೇನೂ ಇಲ್ಲದಿದ್ದರೆ ನೀವು ಅವರನ್ನು ಯಾಕೆ ಹಿಡಿದಿರಿ?’ ಎಂದ ಡಾಕ್ಟರರು, ಪುನಃ ಅರ್ಥಪೂರ್ಣವಾದ ಹಾಸ್ಯದಿಂದ ಕೇಳಿದರು.

ನಾನು ನಿಜವಾದ ಅಪರಾಧಿಗಳನ್ನು ಹಿಡಿದಿರುವೆನೆಂಬ ಬಗ್ಗೆ ಸಂಶಯವೇ ಇಲ್ಲ. ಆ ಜನರು [illegible] ದು ಕಲೆಕ್ಟರ ಸಾಹೇಬರು [illegible] ಮೇಲೆ [illegible], ಅವರಿಗೆ [illegible] ಅವರು ಎಷ್ಟೋ ಸಾರೆ ಹೋಗಿರುವದನ್ನು ನಾನು ಕಣ್ಣಾರೆ ಕಂಡಿರುವೆನು.”

“[illegible] ದಿಂದ ನೀವು ಅವರನ್ನು ಕೈದು ಮಾಡಿದಿರೋ?”

“ಇಲ್ಲ ಇಲ್ಲ ಎಂದೂ [illegible] ಯುರೋಪಿಯನನನ್ನು ಹೊಡೆದ ವಿಷಯದಲ್ಲಿ ಸಂಶಯವಿಲ್ಲ. ನನಗೆ ಸಾಕ್ಷಿಗಾರರೂ ಸಿಕ್ಕಿರುವರು — ಆದರೆ ಕೋರ್ಟಿನವರು ವಿಶ್ವಸನೀಯವೆಂದು ಹೇಳುವ ಸಾಕ್ಷಿಗಾರರಿಲ್ಲ’ ಎಂದು ಫೌಜದಾರರು [illegible] ದಿಂದ ಉತ್ತರವನ್ನಿತ್ತರು.

ಸಾಕ್ಷಿಗಾರರು ವಿಶ್ವಸನೀಯರಿಲ್ಲದಿದ್ದರೆ ನಿಜವಾಗಿಯೂ ನೀವು ಅವರನ್ನು [illegible] ತಕ್ಕದ್ದಲ್ಲ”

ಫೌಜದಾರರು ಸ್ವಲ್ಪ ಗಾಬರಿಯಾಗಿ ಅಂದದ್ದೇನಂದರೆ — ಅವರನ್ನು [illegible] ಡಾಕ್ಟರರೇ ನಾನು ನನ್ನ ಕೆಲಸದ ಮೇಲೆ [illegible] ವೆ ಒಂದೇ ರೀತಿ [illegible] ದು ಪ್ರಾರಂಭವಾಗುವದು. ನಾನು ನಿಮ್ಮ ಬಳಿಗೆ ಬಂದದ್ದು ಆದಕ್ಕಾಗಿಯೇ.

‘ನನ್ನಿಂದ [illegible] ಸಹಾಯ [illegible]’ ಎಂದ ಡಾಕ್ಟರರ ಸ್ವಲ್ಪ [illegible]

ಡಾಕ್ಟರರೇ, ನೀವು [illegible] ಸಹಾಯ ಮಾಡ [illegible] ಅಲ್ಲಿ ನೀವು ಹಾಜರಿದ್ದಿರಿ [illegible] ನಾನು ಕೇಳಿದೆನೆ [illegible] ತಾವು ಸಾಕ್ಷಿ ಹೇಳಬೇಕಾಗಿ [illegible] ನಾನು ತಮ್ಮ ಸನ್ನಿಧಿಗೆ ಓಡಿ [illegible] ಫೌಜದಾರರು [illegible]

[illegible] ನಾನು ಹಾಜರಿದ್ದದ್ದು ನಿಜ. ಆದರ [illegible] ನಾನು ಅಲ್ಲಿ [illegible] ಹೊಡೆದವರು ಹೋಗಿಬಿಟ್ಟರು. [illegible] ನಾನು [illegible]

[illegible]

[illegible] ಡಾಕ್ಟರರು [illegible]

ಫೌಜದಾರರು [illegible] ವಾಗಿ ತಿಳಿಸುತ್ತಿದ್ದರು — ಹೀಗಾಯಿತು [illegible] ಕಲೆಕ್ಟರರ [illegible] ನನ್ನನ್ನು ಕರೆ [illegible] ದ, ನಾನು [illegible] ಅವರಿಗೆ ಸಲಾಮು [illegible] ನಿಂತ [illegible] ಫೌಜದಾರರೇ, [illegible] ನಿಮ್ಮ ಬಳಿ [illegible] ವಾದ ಪುರಾವೆಯನ್ನು [illegible] ಎಂದು ಕೇಳಿದರು. ‘ಹೌದು [illegible] ಸಂಗತಿ [illegible] ನೋಡಿರುವಂಥ [illegible] ಆರೋಪಿಗಳನ್ನೆಲ್ಲ ಗುರುತಿಸಬಲ್ಲಂಥ ಒಬ್ಬ ಪೋಲೀಸನೂ ಇದ್ದ [illegible] ಚೌಕೀದಾರನೂ ಇರುವರು’ ಎಂದು ನಾನು ಉತ್ತರವನ್ನಿತ್ತೆ. ಇದನ್ನು ಕೇಳಿ ಕಲೆಕ್ಟರರಿಗೆ ಸಿಟ್ಟು ಬಂದಂತೆ ತೋರಿತು. ‘ಛೇ, ಒಬ್ಬ ಪೋಲೀಸ ಮತ್ತು ಒಬ್ಬ ಚೌಕೀದಾರ? ನಿಮಗೆ ಬೇರೆ ವಿಶ್ವಸನೀಯ ಸಾಕ್ಷೀದಾರರೇ ಸಿಗಲಿಲ್ಲವೇ’ ಎಂದರು. ಕಲೆಕ್ಟರ ಸಾಹೇಬರ ಆರಕ್ತವಾದ ನೇತ್ರಗಳನ್ನು ನೋಡಿ ನನ್ನ ಹೌಹಾರಿ ಹೋದದ್ದರಿಂದ, ನಾನು ಏನು ಹೇಳುತ್ತೇನೆಂಬುದು ನನಗೇ ತಿಳಿಯಲಿಲ್ಲ. ‘ಹೌದು ಧರ್ಮಾವತಾರ ಸರಕಾರೀ ದವಾಖಾನೆಯ ಡಾಕ್ಟರ ದೇಸಾಯಿಯವರೂ ಅಲ್ಲಿ ಹಾಜರಿದ್ದು, ಅವರಿಗೆ ಎಲ್ಲ ಆರೋಪಿಗಳ ಗುರುತಿರುವದು’ ಎಂದು ನಾನು ನಡುಗುತ್ತ ನುಡಿದೆನು. ಕಲೆಕ್ಟರ ಸಾಹೇಬರು ‘ಒಳ್ಳೇದು’ ಎನ್ನುತ್ತ ಟೆನಿಸ್ ಕೋರ್ಟಿನ ಕಡೆಗೆ ಸಾಗಿದರು.

ಡಾಕ್ಟರರು ಬಹಳೇ ಅಸಮಾಧಾನಪಟ್ಟು, “ಸತ್ಯಾಸತ್ಯತೆಯನ್ನು ತಿಳಕೊಂಡ ಹೊರತು ನೀವು ಇದನ್ನು ಕಲೆಕ್ಟರರಿಗೆ ಹೇಳತಕ್ಕದ್ದಿದ್ದಿಲ್ಲ” ಎಂದರು.

“ಆದರೆ, ಸ್ವಾಮೀ ಅದರಲ್ಲಿ ನನ್ನ ದೋಷವೇ ಯಾಕೆ? ನೀವು ಅಲ್ಲಿ ಹಾಜರಿದ್ದಿರಿ. ಆ ಗೃಹಸ್ಥರನ್ನು ದವಾಖಾನೆಗೆ ತಂದಿರಿ, ಅಂದಮೇಲೆ ನೀವು ಆ ಸಂಗತಿಯನ್ನು ನೋಡಲಿಲ್ಲವೆಂತ ನನಗೆ ತಿಳಿಯುವದು ಹ್ಯಾಗೆ?”

“ಒಳ್ಳೇದು, ಈಗ ನೀವು ಮಾಡುವದೆಂದರೆ, ಕಲೆಕ್ಟರರ ಬಳಿಗೆ ತಿರುಗಿ ಹೋಗಿ, ನಿಜಸಂಗತಿಯನ್ನು ಅವರಿಗೆ ತಿಳಿಸುವದು.”

“ಛೇ, ಛೇ ಡಾಕ್ಟರರೇ ಅದು ಹ್ಯಾಗೆ ಆದೀತು? ಏನ? ಒಂದೇ ಬಾಯಿಂದ ಎರಡು ಬಗೆಯಾಗಿ? ನಾನು ಈ ಹೊತ್ತು ಒಂದಾದರೆ, ನಾಳೆ ಮತ್ತೊಂದು ಹೇಳುವ ಮನುಷ್ಯನಲ್ಲ. ಮಾತಿಗೆ ತಕ್ಕಂತೆ ನಡೆಯುವ ಮನುಷ್ಯನು ನಾನು. ಇಂಥ ಕಠಿಣ ಪ್ರಸಂಗ ಬಂದರೂ ಅದಕ್ಕೆ [illegible] ತಕ್ಕವನಲ್ಲ ಬೇಕಾದದ್ದು ಬರಲಿ.”

ಡಾಕ್ಟರರು ನಕ್ಕು “ನಾನೇ ಹೋಗಿ ಕಲೆಕ್ಟರ ಸಾಹೇಬರಿಗೆ ಹೇಳುವೆನು” ಎಂದರು.

ಫೌಜದಾರರು [illegible] ಯನ್ನು ಮೇಲಕ್ಕೆತ್ತಿ ಸೌಮ್ಯವಾದ [illegible] ಕೊಟ್ಟು — ‘ಡಾಕ್ಟರರೇ, ನಾನೇ ನಿಮ್ಮ ಜಾಗದಲ್ಲಿದ್ದರೆ, ನಾನು ಹಾಗೆ ಮಾಡುತ್ತಿದ್ದಿಲ್ಲ” ಅಂದರು. ಆ ಮೇಲೆ ಕ್ಷಣ ಹೊತ್ತಿನಮೇಲೆ, — “ಪರಿಣಾಮವು ಏನಾದೀತೆಂಬುದನ್ನು ಬಲ್ಲಿರೋ?” ಎಂದರು.

“ಏನು?”

“[illegible] ಸರಕಾರದ ಸಂಬಂಧವಾದ ಗುಟ್ಟಿನ [illegible] ಮತ್ತು ಅದನ್ನು ನನಗೆ ಪ್ರಕಟಪಡಿಸ [illegible], ಒಂದುವೇಳೆ ನಾನು ಸರಕಾರಕ್ಕೆ ವಿಶ್ವಸ [illegible] ಗಬಹುದು. ಆದರೆ ನಾನು ನಿಮ್ಮ ಮಿತ್ರ [illegible] ಹೀಗೆ ಮಾಡುವೆನು. ಕೇಳಿರಿ.” [illegible] ಫೌಜದಾರರು ಗಂಭೀರವಾದ ಶಬ್ದಗಳಿಂದ [illegible] ಹೇಳಿದ್ದೇನಂದರೆ — “ಸರಕಾರಕ್ಕೆ ಅಪ್ರಿಯರಾದವರ ಪಟ್ಟಿಯಲ್ಲಿ ತಾವು ಈ ಮೊದಲೇ [illegible] ಯಾಕೆಂದರೆ ನೀವು ಮ್ಯಾಂಚೆಸ್ಟರದ ಅರಿವೆಗಳ [illegible] ಸ್ವದೇಶೀ ಬಟ್ಟೆಗಳನ್ನೇ ಪುರಸ್ಕರಿಸುವದು [illegible] ಗೆ ತಿಳಿದುಹೋಗಿದೆ. ನೀವು ಈಗ ಕಲೆಕ್ಟರ ಸಾಹೇಬರ ಬಳಿಗೆ ಹೋಗಿ ತಾನು ಆ ಯುರೋಪಿಯನ್ ಗೃಹಸ್ಥನಿಗೆ ಹೊಡೆದದ್ದನ್ನು ನೋಡಲಿಲ್ಲವೆಂತ ಹೇಳಿದರೆ, ಅದು ಸ್ವದೇಶೀ ಪ್ರಕರಣವಾಗಿರುವಕಾರಣ ನೀವು ಸಾಕ್ಷಿ ಹೇಳಲು ಇಚ್ಛಿಸಲಿಲ್ಲವೆಂತಲೇ ಅವರು ಭಾವಿಸುವರು.”

‘ಹಾಗಾದರೆ ಸ್ವದೇಶೀ ಬಟ್ಟೆಗಳನ್ನು ಧರಿಸುವದು ರಾಜದ್ರೋಹವೋ? ಅದಲ್ಲದೆ ಈ ಹೊಡೆದಾಟಕ್ಕೂ ಸ್ವದೇಶೀಗೂ ಸಂಬಂಧವೇನು? ಹೇಳಿರಿ ನೋಡುವಾ” ಎಂದು ಡಾಕ್ಟರರು ಸ್ವಲ್ಪ ಸಿಟ್ಟಿನಿಂದ ನುಡಿದರು.

ಫೌಜದಾರರು ಬಹಳೇ ಶಾಂತ ರೀತಿಯಿಂದ ಹೇಳಿದ್ದೇನಂದರೆ — “ಡಾಕ್ಟರರೇ, ಸಿಟ್ಟಿಗೇಳಬೇಡಿರಿ. ಈಗಿನ ಕಾಲವು ಎಂಥದೆಂಬುದು ತಮಗೆ ತಿಳಿಯದೋ? ಸ್ವದೇಶೀ ಬಟ್ಟೆಗಳನ್ನು ಧರಿಸುವದು ರಾಜದ್ರೋಹವಲ್ಲ ಎಂಬುದು ನಿಜ. ಅದರಂತೆ ಈ ಹೊಡೆದಾಟಕ್ಕೂ ಸ್ವದೇಶೀ ಚಳವಳಿಗೂ ಏನೂ ಸಂಬಂಧವಿಲ್ಲ ಎಂಬುದಾದರೂ ನಿಜವೇ. ಆದರೆ ಅವರು ಮಾತ್ರ ಹಾಗೆ ಎಣಿಸುವದಿಲ್ಲ. ಅದನ್ನು ತಾವು ತಿರುಗಿಸಲಾರಿರಿ. ಸುಮ್ಮನೆ ನಿಮ್ಮ ತಲೆಯನ್ನು ಗೋಡೆಗೆ ಅಪ್ಪಳಿಸಿಕೊಳ್ಳುವದರಿಂದ ಉಪಯೋಗವೇನು?”

ಇದು ಡಾಕ್ಟರರಮೇಲೆ ಇದರಿಂದ ಇಷ್ಟವಾದ ಪರಿಣಾಮವಾಯಿತು — ‘ಹೌದು, ತಾವು ಹೇಳುವದು ಸರಿ ಎಂದು ತೋರುತ್ತದೆ. ಆದರೆ ಅವರೊಳಗಿಂದ ಪಾರಾಗುವದು ಹ್ಯಾಗೆಂಬುದೇ ಒಂದು ಪ್ರಶ್ನೆ” ಎಂದರು.

ತನ್ನ ಪ್ರತಿಪಕ್ಷಿಯನ್ನು ಅವನಿದ್ದ ಉಚ್ಚಸ್ಥಾನದಿಂದ ಕೆಳಗಿಳಿಸಿದ್ದಕ್ಕಾಗಿ ಬಹಳೇ ಸಂತುಷ್ಟರಾಗಿ ಫೌಜದಾ

ರರು ನುಡಿದದ್ದೇನಂದರೆ— “ಸ್ವಾಮೀ, ತಾವು ಪ್ರಸಂಗಾನುಸಾರವಾಗಿ ನಡೆಯಬೇಕು. ಸಾಕ್ಷಿಯ ಪಂಜರದಲ್ಲಿ (Witness-box) ಬರೀ ಅರ್ಧ ತಾಸು ಇರುವದರಿಂದ ನಿಮಗೇನು ಹೆಚ್ಚಿನ ಅಪಾಯವಾಗಲಾರದು. ಈಗ ನಾವು ಪೋಲೀಸ ಠಾಣೆಗೆ ಹೋಗೋಣವೇ? ಅಲ್ಲಿ ಆರೋಪಿಗಳು ಕೈದಿನಲ್ಲಿರುವದನ್ನು ತಾವು ನೋಡುವಿರಿ ಈಗ ನೀವು ಅವರನ್ನು ಚನ್ನಾಗಿ ನೋಡಿರಲಿಕ್ಕೆ ಬೇಕು. ಯಾಕಂದರೆ ಕೋರ್ಟಿನಲ್ಲಿ ಅವರ ಗುರ್ತು ಹಚ್ಚುವಾರದು. ನಾನು ನಿಮಗೆ ಖಟ್ಲೆಯ ಸಂಗತಿಯನ್ನೆಲ್ಲ ಓದಿ ಹೇಳುವೆನು ಅದರ ಮೇಲಿಂದ ಉಳಿದ ಸಾಕ್ಷಿಗಾರರು ಕಲೆಕ್ಟರರ ಮುಂದೆ ಏನು ಹೇಳುವವರಿದ್ದಾರೆಂಬುದು ನಿಮಗೆ ತಿಳಿಯುವದು. ಮುಂಚೆಯೇ ಪೂರ್ಣ ತಯಾರಿಯನ್ನು ಮಾಡಿಕೊಂಡಿರುವದು ಉತ್ತಮವಲ್ಲವೇ?”

ಕೂಡಲೆ ಅದರ ಪರಿಣಾಮವು ಭಯಂಕರವಾಯಿತು. ಡಾಕ್ಟರ ದೇಸಾಯಿಯವರು ಎದ್ದು ನಿಂತು, ಸಿಟ್ಟಿನಿಂದ ನಡುಗಹತ್ತಿದರು. ಫೌಜದಾರರ ಕಡೆಗೆ ಮುಷ್ಟಿಯನ್ನು ತಿರುವುತ್ತ ಅವರು ಗದ್ದರಿಸಿದ್ದೇನಂದರೆ, “ಏನು' ನನಗೆ ಹೀಗೆ ಮಾಡು ಎಂತ ಹೇಳುವ ಧೈರ್ಯವು ನಿಮಗುಂಟೆ? ನಾನು ಸುಳ್ಳು ಸಾಕ್ಷಿಯನ್ನು ಹೇಳುವ ಮನುಷ್ಯನೆಂತ ನೀವು ತಿಳಿದಿರುವಿರಿ, ಅಲ್ಲವೇ? ಕೂಡಲೇ ಹೊರಗೆ ಹೋಗಿರಿ. ಏ, ಯಾರಲ್ಲಿ? ಈ ನೀಚ ಫೌಜದಾರರನ್ನು ಒದ್ದು ಮನೆಯ ಹೊರಗೆ ಹಾಕಿರಿ”

ಫೌಜದಾರರು ಎದ್ದರು. ತಮ್ಮ ಪೋಷಾಕನ್ನು ಸರಿಪಡಿಸಿಕೊಳ್ಳುತ್ತ ಅವರು ಹೇಳಿದ್ದೇನಂದರೆ —“ಸ್ವಾಮೀ, ಎಚ್ಚರದಿಂದಿರಿ ಇದರ ಫಲವನ್ನು ನೀವು ಅನುಭವಿಸಬೇಕಾಗುವದು.”

“ನಿಮ್ಮ ಕೈಯಿಂದ ಆಗುವದನ್ನೆಲ್ಲ ಮಾಡಿರಿ ಬೇಕಾದರೆ, ನಿಮ್ಮ ಅಜ್ಜ ಕಲೆಕ್ಟರ ಸಾಹೇಬರ ಬಳಿಗೆ ಹೋಗಿ ಹೇಳಿರಿ ಅದರ ಗೊಡವೆ ನನಗಿಲ್ಲ” ಎಂತ ಡಾಕ್ಟರರು ಪ್ರತಿಭಟಿಸಿದರು.

(ಮುಂದೆ ಸಾಗುವದು)

— ಮುಂಬಯಿಯ ಬೋರಿ ಬಂದರ ಸ್ಟೇಶನವನ್ನು ವ್ಯತ್ತಿ ಶೃಂಗರಿಸಿ ಸುಧಾರಿಸಲಿಕ್ಕೆ ಬೆಳೆಸಲಿಕ್ಕೆ ಭಾರತ ಮಂತ್ರಿಗಳು ಅರಲಕ್ಷ, ಐಂಸಾವಿರ ರೂಪಾಯಿಗಳನ್ನು ಮಂಜೂರ ಮಾಡಿರುವರು ಬೋರಿ ಬಂದರದಲ್ಲಿದ್ದ ಲಿವ್ಹಿಂಗ ಸ್ಟೇಶನನ್ನು ಕಿತ್ತು ಹಾಕುವರೆ ೬.೭ ಲಕ್ಷ ರೂಪಾಯಿಗಳು ಮಂಜೂರಾಗಿವೆ. ಈ ಆಡಂಬರಗಳಿಗೆ ಎಲ್ಲಿಂದ ಹಣ ದೊರಕುತ್ತದೆ?

— ಬೆಳಗಾವಿಯೊಳಗಿನ ಮಹಿಳಾ ವಿದ್ಯಾಲಯಕ್ಕೆ ಜಿಲ್ಲಾ ಲೋಕಲ್ ಬೋರ್ಡಿನವರು ಈ ವರ್ಷವೂ ೫೦೦ ರೂಪಾಯಿಗಳನ್ನು ಅರ್ಪಿಸಿರುವರು

ನಾವು ಎಲ್ಲ ನಮೂನೆಯ,
ಖಾತ್ರಿಯ ಉತ್ತಮ ಕನ್ನಡಕ

ಗಳನ್ನು ಯೋಗ್ಯ ಕಿಮ್ಮತ್ತಿಗೆ ಮಾರಿಕೊಡುವೆವು ಪರಊರಿನ ಗೃಹಸ್ಥರು ಯಾವ ನಮೂನೆಯ ಕಣ್ಣುಗಳು ಬೇಕೆಂಬದನ್ನು ತಿಳಿಸಬೇಕು. ಮತ್ತು ಆರ್ಡರಿನ ಸಂಗಡ ೧ ರೂಪಾಯಿ ಮುಂಗಡ ಕಳಿಸಿದ್ದಲ್ಲಿ ಬೇಕಾದ ನಮೂನೆಯ ಕಣ್ಣುಗಳು ದೊರಕುವವು ಅನುಭವದಿಂದ ಖಾತ್ರಿಯಾಗುವದು.

ಆಪಟೇ ಸನ್ಸ,
ಕನ್ನಡಕ ವ್ಯಾಪಾರಿಗಳು, ಮಾರುತಿ ಪೇಟೆ,
ಕಾರವಾರ.

ಜಾಹೀರನಾಮೆ.

ಶ್ರೀ ಮದ್ರಾಮಚಂದ್ರಾಪುರ ಶ್ರೀ ಸಂಸ್ಥಾನಾಧಿಕಾರಸ್ಥಾನದಿಂದ—

ಸಮಸ್ತ ವಿದ್ವಚ್ಛಿರೋಮಣಿಗಳಿಗೆ,

ಸಂಧ್ಯಾವಂದನಾದಿ ನಿತ್ಯ ಕರ್ಮಾದಿಗಳಲ್ಲಿ ಮಾಡುವ ಮಾರ್ಜನ ವಿಧಿ ನಿರೂಪಣೆ ಪ್ರಸಂಗದಲ್ಲಿ,

೧

प्रशस्तमुदकं ब्रह्म मुखास्येनाभिमंत्र्य च ॥
आपोहिष्ठादिभिर्मंत्रैर्दर्भैः शिरसि मार्जयेत् ॥१॥

स्पृष्ट्वा चाभिष्टुततोय मूर्ध्नां ब्रह्ममुखेन च॥
आपोहिष्ठादिभिर्मंत्रैर्दर्भैः शिरसि मार्जयेत् ॥२॥

ಇವೆರಡೂ ಭಿನ್ನ ಭಿನ್ನ ಮಹಾಸ್ಮೃತಿಗಳ ಶ್ಲೋಕಗಳಾಗಿರುತ್ತವೆ ಇವುಗಳಲ್ಲಿ ಪ್ರಯೋಗ ಮಾಡಿರುವ **मूर्ध्नां, ब्रह्ममुख,** ಈ ಶಬ್ದಗಳು ಯಾವ ಮಂತ್ರಗಳಿಗೆ ಸಂಜ್ಞೆಯಾಗಿರುತ್ತವೆ, ಅಥವಾ ಬೇರೆ ಯಾವದಾದರೂ ಅರ್ಥಗಳಾಗುತ್ತವೆಯೋ?

ಮತ್ತು ಸಕಲ ಮಹಾಜನರೂ ಕೂಡಾ ಪ್ರಾತಃ ಕಾಲದಲ್ಲಿ ಪಠಿಸುವ ನಾರದ ಪುರಾಣಾಂತರ್ಗತವಾದ ಶ್ರೀ ಮಹಾಗಣಪತಿ ಸ್ತೋತ್ರದಲ್ಲಿ ಸೇರಿರುವ,

೨

अष्टानां ब्राह्मणानां च लिखित्वा यः समर्पयेत् ॥
तस्य विद्या भवेत्सर्वा गणेशस्य प्रसादतः॥१।

ಈ ಶ್ಲೋಕದಲ್ಲಿ (अष्टभ्यो ब्राह्मणेभ्यश्च) ಎಂಬದಾಗಿ ಚತುರ್ಥಿ ವಿಭಕ್ತ್ಯಂತ ಪಾಠವು ಕೂಡಾ ತೋರುತ್ತದೆ. ಆದರೆ ಸಪ್ರಮಾಣವಾದ್ದು, ಷಷ್ಠಿ ವಿಭಕ್ತ್ಯಂತವೋ? ಚತುರ್ಥಿ ವಿಭಕ್ತ್ಯಂತವೋ?

ಈ ವಿಷಯಗಳನ್ನು ಯೋಗ್ಯ ಶಾಸ್ತ್ರಾರ್ಥ ವಿಚಾರದಿಂದ ಸಪ್ರಮಾಣವಾಗಿ ನಿರೂಪಣೆ ಮಾಡಿ ಈ ಕೆಳಗೆ ವಿವರಿಸಿದವರ ವಿಳಾಸಕ್ಕೆ ಬರುವ ಅಶ್ವಯುಜ ಶು॥ ೧೦ (ವಿಜಯಾ ದಶಮಿ) ಯೊಳಗೆ ಕಳಿಸಿಕೊಡಬೇಕು. ಅದೇ ಅಶ್ವಯುಜ ಬಹುಳದಲ್ಲಿ ಶ್ರೀ ಶ್ರೀ ಮಹಾಸಂನಿಧಿಯ ಮುಂದೆ ಬಂದು ಈ ವಿಷಯಗಳನ್ನು ನಿರೂಪಣೆ ಮಾಡಿ ಸಮಾಧಾನ ಕೊಟ್ಟಲ್ಲಿ ಅವರವರ ಶಾಸ್ತ್ರಾರ್ಥನಿರೂಪಣಾನುಸಾರವಾಗಿ, ಉತ್ತಮ, ಮಧ್ಯಮಾದಿ ತರತಮ ಭಾವವನ್ನು ತಿಳಿದು ಯೋಗ್ಯ ಬಹುಮಾನವನ್ನು ಕೂಡಾ ಕೊಡಬೇಕೆಂತ ನಿಶ್ಚಯಿಸಿರುತ್ತದೆ

ಕ್ರೋಧನ ಸಂ। ಭಾದ್ರಪದ
ಶು ೧೪ಯು ಗುರುವಾರ,
ಕೆಕ್ಕಾರ ರಘೂತ್ತಮ ಮಠ,
ಜಿಲ್ಲಾ ಉತ್ತರ ಕಾನಡಾ.
ತಾ, ಹೊನ್ನಾವರ
ಪೋಸ್ಟ— ಮುಲ್ಲಾಪುರ.

ಶ್ರೀ; ಶ್ರೀ; ಮಹಾ
ಸನ್ನಿಧಾನದ
ಅಪ್ಪಣೆ ಪ್ರಕಾರ,
ಗಂಗಾಧರಶಾಸ್ತ್ರಿ,
ಪಾರುಪತ್ಯಗಾರ

ವಿವಿಧ ಸಂಗ್ರಹ.

ನಮ್ಮ ರೈತರ ಸ್ಥಿತಿ.

ಸರ್ ವಿಲಿಯಮ್ ವೆಡರಬರ್ನರವರು ಹಿಂದೆ ಹಿತಚಿಂತಕ ಬ್ರಿಟಿಶರು ಇವರು ಒಮ್ಮೆ ನಮ್ಮ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿದ್ದರು. ಈಗ ತೀರ್ವೆ ಪರಿಕ್ಷೆಯ ವಿಚಾರ ನಡೆದಾಗ, ಕ್ರಿಸ್ತವಾಸಿ ಸರ್ ವಿಲಿಯಮ್ ವೆಡರಬರ್ನರವರು ೧೮೯೩ ನೇ ಇಸ್ವಿಯಲ್ಲಿ ನಮ್ಮ ಮುಂಬಯಿ ಇಲಾಖೆಯೊಳಗಿನ ರೈತರ ಸ್ಥಿತಿಗತಿಯ ವಿಷಯ ಬರೆದಿಟ್ಟ ಅಭಿಪ್ರಾಯವನ್ನು ನಮೂದಿಸಬಹುದು. ಧಾರವಾಡದ ‘ಕರ್ನಾಟಕವೃತ್ತ’ ಕರ್ತರು ಕ್ರಿಸ್ತವಾಸಿಗಳ ಅಭಿಪ್ರಾಯವನ್ನು ಭಾಷಾಂತರಿಸಿ ಕೊಟ್ಟಿರುವದೇನಂದರೆ —

“ನಾನು ಸುಮಾರು ಐದೇ ಹಳ್ಳಿಗಳನ್ನು ನೋಡಿದೆನು. ಈ ಹಳ್ಳಿಗಳ ಜನಸಂಖ್ಯೆಯ ಪ್ರಮಾಣವು ಸರಾಸರಿ ೩೨೬ ಸಾಗಾದ ಭೂಮಿಯ ಕ್ಷೇತ್ರ ೧೪೦೦ ಎಕರೆ. ಇದರಿಂದ ಬಂದ ಹುಟ್ಟುವಳಿಯ ಬೆಲೆ ಒಟ್ಟಾರೆ 2 ಲಕ್ಷ ರೂಪಾಯಿ ಹಿಂದಿನ ೧೦ ವರ್ಷಗಳಲ್ಲಿ ಭೂಮಿಯು ಬಹುಶಃ ಗೊಬ್ಬರವನ್ನು ಕಂಡೇ ಇಲ್ಲ. ಭೂಮಿಯ ಹುಟ್ಟುವಳಿಯಿಂದ 2೫ ರೂಪಾಯಿಗಳು ಮಾತ್ರ ರೈತನ ಕೈಗೆ ನಿಲುಕುತ್ತಿದ್ದರೂ ಒಟ್ಟಿನ ಮೇಲೆ ಸರಕಾರಕ್ಕೆ ಒಂದು ಸಾವಿರ ರೂಪಾಯಿಗಳ ಮಟ್ಟಿಗೆ ಕಂದಾಯವನ್ನು ಸಲ್ಲಿಸಿದ್ದಾರೆ ಭೂಮಿಯ ಕಂದಾಯವೆಂದು ಸರಕಾರದ ಶ್ರೀ ಪಾವತಿಕೊಟ್ಟ ಈ ಹಣವು ನೂರಕ್ಕೆ ೩೪ರ ಬಡ್ಡಿಯನ್ನು ಕೊಡುವ ಶರ್ತಿನಿಂದ ಸಾಹುಕಾರರಲ್ಲಿ ಸಾಲ ತೆಗೆದು ಕೊಟ್ಟದ್ದಾಗಿದೆ ಇದರ ಮೇಲಿಂದ ೩೨ ವರ್ಷದ ಕೆಳಗಿನ ಸ್ಥಿತಿಯದು ನಮ್ಮ ಸ್ಥಿತಿಯು ಇಷ್ಟು ಇದಕ್ಕೂ ಕಂಗೆಟ್ಟು ಹೋಗಿರುವದು. ಅಂದ ಬಳಿಕ, ಇನ್ನೂ ತೀರ್ವೆ ಏರಿಸಿದರೆ, ರೈತರು ಸಂಪೂರ್ಣವಾಗಿ ಸತ್ವಶೂನ್ಯರಾಗುವರು.

⁂

ಬಂಗಾಲದೊಳಗಿನ ಗ್ರಾಮಸಂಘಟನೆ.

ಬಂಗಾಲದ ಪ್ರಾಂತಿಕ ಕಾಂಗ್ರೆಸ ಕಮಿಟಿಯು ಗ್ರಾಮಸಂಘಟನೆಯ ಕಾರ್ಯವನ್ನು ಕೈಕೊಂಡಿರುವದು. ೩೪ ಗ್ರಾಮಗಳನ್ನು ಹೆಕ್ಕಿ ತೆಗೆದು ಅಲ್ಲಿ ಸ್ವಯಂಸೇವಕರು ಗ್ರಾಮಸಂಘಟನೆಯ ಶಿಕ್ಷಣ ಪಡೆದು ಗ್ರಾಮಕಾರ್ಯವನ್ನು ಕೈಕೊಳ್ಳಬೇಕೆಂದು ಗೊತ್ತಾಗಿದೆ. ಕಲಕತ್ತೆಯಲ್ಲಿ ಸ್ವಯಂಸೇವಕರ ಶಿಕ್ಷಣ ಕ್ರಮವು ಈಗ ನಡೆದಿದೆ ಭರತ ಖಂಡದ ಆರ್ಥಿಕ ಸ್ಥಿತಿ, ಸರಕಾರದ ಸಹಕಾರಿ ಸಂಸ್ಥೆಗಳು, ಖಾದಿ ಪ್ರಚಾರದ ಜ್ಞಾನ, ಆರೋಗ್ಯಪಾಲನದ ಜ್ಞಾನ, ಪಿಡುಗು ಬಂದಾಗ ಚಿಕಿತ್ಸೆ ಮಾಡುವ ಜ್ಞಾನ ಇವುಗಳನ್ನೆಲ್ಲ ಸ್ವಯಂಸೇವಕರಿಗೆ ಕಲಿಸಿ, ಇದೇ ಶಿಕ್ಷಣವನ್ನು ಹಳ್ಳಿಗರಿಗೆ ಕೊಟ್ಟು ಗ್ರಾಮಗಳನ್ನು ಸ್ವಾವಲಂಬಿಗಳಾಗಿ ಮಾಡಲು ಪ್ರಾಂತಿಕ ಮಂಡಳದವರು ಯತ್ನಿಸುತ್ತಿರುವರು. ಗ್ರಾಮಸಂಘಟನೆಯೆಂದರೆ, ಗ್ರಾಮಗಳ ಆಹಾರ-ವಿಹಾರಗಳನ್ನೆಲ್ಲ ಗ್ರಾಮಗಳಲ್ಲಿಯೇ ಪೂರೈಸಿಕೊಳ್ಳಲು ಯತ್ನಿಸುವದು. ನಮ್ಮ ಭರತ ಖಂಡದ ಗ್ರಾಮಗಳು ಘಟಕಗಳಾಗಬೇಕು ಈ ಧೋರಣದಿಂದ ಸ್ವಯಂಸೇವಕರ ಶಿಕ್ಷಣ ಕ್ರಮವು ಕಲಕತ್ತೆಯಲ್ಲಿ ನಡೆ

(ಮುಂದೆ ೬ ನೇ ಪಾನಿನಮೇಲೆ ಮುಂದರಿಸಿದೆ)

ಕಾನಡಾವೃತ್ತ

ಮಿತಿ ಕ್ರೋಧನ ಸಂ| ಭಾದ್ರಪದ ಶು| ೧೩ ಸೋಮವಾರ

ವೈ| ವಾ| ಡಾ| ಭಾಂಡಾರಕರರು.

ಪುಣ್ಯಪಟ್ಟಣದ ವಿದ್ವನ್ಮಣಿಗಳಾದ ಡಾ| ಸರ್ ರಾಮಕೃಷ್ಣ ಗೋಪಾಲ ಭಾಂಡಾರಕರರವರು ಕಳೆದ ತಾ. ೨೪ನೇ ಸೋಮವಾರ ಮಧ್ಯಾಹ್ನ ೧ ಘಂಟೆಗೆ ವೈಕುಂಠವಾಸಿಗಳಾದರೆಂದು ತಿಳಿಸಲು ನಮಗೆ ಅತ್ಯಂತ ವ್ಯಸನವಾಗುತ್ತದೆ. ಡಾ| ಭಾಂಡಾರಕರರು ಇಡೀ ಭೂತಲದೊಳಗಿನ ಸ್ವರಸ್ವತೀ ಭಕ್ತರಲ್ಲಿ ಹೆಸರಾದ ಗೌಡಸಾರಸ್ವತರು. ಇಂಥವರ ನಿಧನದಿಂದ ಸರಸ್ವತೀ ದೇವಿಯೇ ಮರುಗುತ್ತದೆಂದು ಹೇಳಿದರೆ, ಅತಿಶಯೋಕ್ತಿಯಾಗದು

ಡಾ| ಭಾಂಡಾರಕರ ರಾಮಕೃಷ್ಣಪಂತರು ರತ್ನಾಗಿರಿ ಜಿಲ್ಹೆಯೊಳಗಿನ ಮಾಲವಣದಲ್ಲಿ ೧೮೩೭ನೇ ಇಸ್ವಿಯ ಜುಲ್ಯಾ ತಿಂಗಳ ೬ನೇ ತಾರೀಖಿಗೆ ಜನಿಸಿದರು ವೈ| ವಾ|ಗಳ ಬಾಲ್ಯದ ಪರಿಸ್ಥಿತಿಯು ವಿಚಾರ ಮಾಡಿದರೆ ಡಾ| ಭಾಂಡಾರಕರರು ಸಂಪಾದಿಸಿದ ದಿಗಂತ ಕೀರ್ತಿಯನ್ನು ಪರ್ಯಾಲೋಚಿಸಿದರೆ, ಸರ್ ರಾಮಕೃಷ್ಣ ಗೋಪಾಲ ಭಾಂಡಾರಕರರ ಭಾಗ್ಯದ ನೆನವರಿಕೆಯಾಗುವದು. ಭಾಂಡಾರಕರರ ತೀರ್ಥರೂಪರವರು ಮೊದಲು ಮಾಲವಣದಲ್ಲಿ ಮಾಮಲೇದಾರರಿದ್ದರು. ಬಳಿಕ, ಅವರಿಗೆ ರತ್ನಾಗಿರಿಗೆ ವರ್ಗವಾಯಿತು: ರತ್ನಾಗಿರಿಯಲ್ಲಿ ವೈಕುಂಠವಾಸಿಗಳ ಇಂಗ್ಲಿಷ ಅಭ್ಯಾಸವು ಮುಗಿದು, ಅವರು ೧೮೫೩ನೇ ಇಸ್ವಿಯಲ್ಲಿ ಮುಂಬಯಿಗೆ ಮುಂದಿನ ವಿದ್ಯಾಭ್ಯಾಸಕ್ಕಾಗಿ ಹೋದರು. ೧೮೫೪ನೇ ಇಸ್ವಿಯಲ್ಲಿ ಹ್ಯಾಸ್ಕೂಲು ಶಿಕ್ಷಣವನ್ನು ಮುಗಿಸಿ, ಅಲ್ಲಿಯ ಕೊಲೇಜಿನಲ್ಲಿ ಸೇರಿದರು. ಕೊಲೇಜಿನಲ್ಲಿಯೂ, ಹ್ಯಾಸ್ಕೂಲಿನಲ್ಲಿಯೂ ರಾಮಕೃಷ್ಣಪಂತರು ತಮ್ಮ ಕುಶಲಬುದ್ಧಿಯನ್ನು ಪ್ರಕಟಿಸಿ,ಉಚ್ಚ ತರಗತಿಯನ್ನು ಪಡೆದರು. ಶಿಕ್ಷಕ ಮಂಡಳದವರು ಭಾಂಡಾರಕರರ ಮೇಲೆ ವಿಶೇಷ ಪ್ರೀತಿಯುಳ್ಳವರಾಗಿದ್ದರು. ವಿದ್ಯಾವ್ಯಾಸಂಗವನ್ನು ನೋಡಿ, ರಾಮಕೃಷ್ಣನಿಗೆ ಅವರು ಕೈಲಾದಷ್ಟು ಪ್ರೋತ್ಸಾಹನ ಮಾಡಿದರು. ವಿದ್ಯಾಖಾತೆಯ ಅಧಿಪತಿಗಳಾದ ಮಿ| ಹಾವರ್ಡರವರು ವಿದ್ಯಾಪ್ರಿಯರಾಗಿದ್ದರು; ಆದರಿಂದ ಅವರು ಭಾಂಡಾರಕರರಿಗೆ ಶಿಷ್ಯವೃತ್ತಿಯನ್ನಿತ್ತು ಮತ್ತು ವಿದ್ಯಾರ್ಜನ ಮಾಡಲು ಉತ್ತೇಜನವನ್ನಿತ್ತರು ಈ ಸಮಯದಲ್ಲಿಯೇ ಭಾಂಡಾರಕರರಿಗೆ ಸಂಸ್ಕೃತ ವಿದ್ಯಾಭ್ಯಾಸದ ಚಟ ಹತ್ತಿತು. ಸಂಸ್ಕೃತ-ವಿಷಯದ ಅಭ್ಯಾಸ ನಡಿಸಿ, ಅವರು ೧೮೬೩ನೇ ಇಸ್ವಿಯಲ್ಲಿ ಕ್ರಮವಾಗಿ ಬಿ. ಎ. ಮತ್ತು ಎಮ್. ಎ., ಪರೀಕ್ಷೆಯಲ್ಲಿ ಉತ್ತೀರ್ಣಹೊಂದಿದರು ಮುಂದೆ ಇವರು ರತ್ನಾಗಿರಿ ಹ್ಯಾಸ್ಕೂಲಿನ ಹೆಡ್‌ಮಾಸ್ತರರಾದರು. ೧೮೬೫ನೇ ಇಸ್ವಿಯಿಂದ ೧೮೮೦ನೇ ಇಸ್ವಿಯವರೆಗ ವಿಶ್ವವಿದ್ಯಾಲಯದವರು ವೈಕುಂಠವಾಸಿಗಳಿಗೆ ಸಂಸ್ಕೃತ ಪರೀಕ್ಷಕರನ್ನಾಗಿ ನೇಮಿಸಿದರು. ಮುಂದೆ ಸಂಸ್ಕೃತದೊಳಗಿನ ಇವರ ಪಾಂಡಿತ್ಯವನ್ನು ನೋಡಿ, ಮುಂಬಯಿಯ ಎಲ್‌ಫಿನ್‌ಸ್ಟನ್ ಕೊಲೆಜಿನಲ್ಲಿ ಇವರಿಗೆ ಪ್ರೊಫೆಸರರನ್ನಾಗಿ ನೇಮಿಸಿದರು ಪುಣೆಯ ಡೆಕ್ಕನ್ ಕೊಲೇಜಿನಲ್ಲಿ ಇವರು ೧೧ ವರುಷ, ಅಂದರೆ ೧೮೯೩ನೇ ಇಸ್ವಿಯವರೆಗೆ ಸಂಸ್ಕೃತ ಪ್ರೊಫೆಸರರ ಕೆಲಸಮಾಡಿದ ಬಳಿಕ ಪೆನ್ಶನು ಪಡೆದರು ೩೨ ವರ್ಷಗಳವರೆಗೆ ವೈಕುಂಠವಾಸಿಗಳು ಪೆನ್ಶನು ಪಡೆದರೂ, ತಮ್ಮ ಸಂಸ್ಕೃತ ವಿದ್ಯಾಭ್ಯಾಸವನ್ನೂ, ಶೋಧಕ ಕಾರ್ಯವನ್ನೂ ಹುರುಪಿನಿಂದ, ಸ್ಫೂರ್ತಿಯಿಂದ ನಡಿಸಿ ದಿಗಂತ ಕೀರ್ತಿಯನ್ನು ಪಡೆದು ಕಳೆದ ತಾ. ೨೪ನೇ ಸೋಮವಾರ ಸದ್ಗತಿಯನ್ನು ಹೊಂದಿದರು.

ಭಾಂಡಾರಕರರ ಪಾಂಡಿತ್ಯ ಪ್ರಕಟವಾಗಲಿಕ್ಕೆ ೧೮೭೦ನೇ ಇಸ್ವಿಯಲ್ಲಿ ಒಂದು ಕಾರಣವಾಯಿತು, ಸಂಶೋಧಕ ಬುದ್ಧಿಯು ಆಗಲೇ ಪೊರಬಿತ್ತು ಆಗಲೇ ಡಾ| ಮಾಣಿಕಜಿ ಅಬರಜಿ ಎಂಬ ಪಾರ್ಸೀ ಗೃಹಸ್ಥರಿಗೆ ಭೂಮಿಯಲ್ಲಿ ಹುಗಿದುಕೊಂಡಿದ್ದ ಒಂದು ತಾಮ್ರಪಟವು ಸಿಕ್ಕಿತು. ಅದನ್ನು ಡಾ| ಮಾಣಿಕಜಿಯವರು ಭಾಂಡಾರಕರರಿಗೆ ತಂದುಕೊಟ್ಟರು. ಭಾಂಡಾರಕರರು ವಿದ್ಯಾಭಾಂಡಾರವನ್ನೆಲ್ಲ ಶೋಧಿಸಿ, ಆ ತಾಮ್ರಪಟದ ಮೇಲಿನ ಲೇಖವನ್ನು ಓದಿ, ಭೂತಲದ ಮೇಲಿನ ಸಂಸ್ಕೃತ ಪಂಡಿತರ ಮಾಲೆಯಲ್ಲಿ ಸೇರಿದರು. 'ಇಂಡಿಯನ್ ಎಂಟಿಕ್ವೇರಿ' ಎಂಬ ಮಾಸಪತ್ರಿಕೆಯಲ್ಲಿ ವೈಕುಂಠವಾಸಿಗಳು ಬರೆದ ಲೇಖಗಳು ಅವರ ವಿದ್ವತ್ತೆಯನ್ನೂ, ಸಂಶೋಧಕ ಬುದ್ಧಿಯನ್ನೂ ಹೊರಗೆಡಹುತ್ತವೆ. 'ಮಾಲತೀಮಾಧವ' ನಾಟಕದ ಮೇಲೆ ವೈಕುಂಠವಾಸಿಗಳು ಬರೆದ ಟೀಕೆಯು ವಿದ್ವತ್ತಾಪೂರ್ಣವಿದೆ. ವಿಲ್ಸನ್ ಭಾಷಾಶಾಸ್ತ್ರವ್ಯಾಖ್ಯಾನ ಮಾಲೆಯಲ್ಲಿ ಇವರು ಕೊಟ್ಟ ೫ ಉಪನ್ಯಾಸಗಳು ಸಂಸ್ಕೃತ ಭಾಷೆಯ ಮೇಲಿನ ಇವರ ಪ್ರಭುತ್ವವನ್ನು ಪ್ರದರ್ಶಿಸುತ್ತವೆ. ೧೮೮೫ನೇ ಇಸ್ವಿಯಲ್ಲಿ ಸರಕಾರದವರು ಸಂಸ್ಕೃತ ಲೇಖಗಳ ಸಂಶೋಧನ ಕಾರ್ಯವನ್ನು ವೈ| ವಾ| ಗಳಿಗೆ ಒಪ್ಪಿಸಿದರು. ಭಾಂಡಾರಕರರ ವಿದ್ವತ್ತೆಯನ್ನೂ, ಶೋಧಕ ಸಾಮರ್ಥ್ಯವನ್ನೂ ಮನ್ನಿಸಿ, ಜರ್ಮನಿಯ ಗೊಟಿಂಗನ್ ವಿಶ್ವವಿದ್ಯಾಲಯದವರು ಇವರಿಗೆ “ಪಿ. ಎಚ್. ಡಿ.” ಪದವಿಯನ್ನು ಅರ್ಪಿಸಿದರು. ಮುಂದೆ ಪದವಿಗಳು ಒಂದೊಂದಾಗಿ ಬಂದವು. ಮುಂಬಯಿ ವಿಶ್ವವಿದ್ಯಾಲಯದವರು “ಎಲ್. ಎಲ್. ಡಿ.,” ಕಲಕತ್ತೆಯ ವಿಶ್ವವಿದ್ಯಾಲಯದವರು “ಪಿ. ಎಚ್. ಡಿ.,” ಸರಕಾರದವರು “ಸಿ. ಆಯ್. ಈ ” ಮತ್ತು “ಸರ್” ಪದವಿಗಳನ್ನು ಸಮರ್ಪಿಸಿ ವೈ| ವಾ| ಗಳಿಗೆ ಮನ್ನಿಸಿದರು “ವಿದ್ವಾನ್ ಸರ್ವತ್ರ ಪೂಜ್ಯತೇ” ಎಂಬ ಉಕ್ತಿಯನು ವೈ| ವಾ| ಗಳು ಸಾರ್ಥಕಗೊಳಿಸಿದರು

ಡಾ| ಭಾಂಡಾರಕರರು ಭಗವದ್ಭಕ್ತರು. ಜಾತಿಭೇದ, ಅಂತ್ಯಜೋದ್ಧಾರ, ಪ್ರೌಢ ವಿವಾಹ, ವಿಧವಾ ವಿವಾಹಗಳವಿಷಯು ಅವರ ಮತಗಳು, ಆಚಾರಗಳು ಸರ್ವಮಾನ್ಯವಾಗುವದು ಕಠಿಣವಿದ್ದರೂ, ಅವರ ಸಾತ್ವಿಕ ಬುದ್ಧಿಯು. ಭಗವದ್ಭಕ್ತಿಯು ಪ್ರಶಂಸನೀಯವಿತ್ತು. ಮುಂಬಯಿ ಹಾಗು ಪುಣೆಗಳೊಳಗಿನ ಪ್ರಾರ್ಥನಾ ಸಮಾಜಗಳಲ್ಲಿ ಧರ್ಮದ ಮೇಲೆ ಇವರು ಮಾಡಿದ ವ್ಯಾಖ್ಯಾನಗಳು ಧರ್ಮಬುದ್ಧಿಯನ್ನೂ, ನಮ್ಮ ಪುರಾತನ ಸಂಸ್ಥೆಗಳ ಹಾಗು ಧರ್ಮಗ್ರಂಥಗಳಮೇಲಿನ ಅವರ ಬುದ್ಧಿಯನ್ನೂ ಪ್ರಕಟಿಸುತ್ತವೆ ಡಾ| ಭಾಂಡಾರಕರರಿಗೆ ಐಹಿಕ ಸುಖೋಪಭೋಗಗಳೆಲ್ಲ ಭಗವಂತನ ಅನುಗ್ರಹದಿಂದ ಪ್ರಾಪ್ತವಾಗಿದ್ದವು. ಲಕ್ಷ್ಮೀದೇವಿಯೂ ಸರಸ್ವತೀದೇವಿಯೂ ತಮ್ಮ ತಮ್ಮೊಳಗಿರುವ ಸಹಜ ವಿರೋಧವನ್ನು ಮೈಮರೆತು ಅವರಲ್ಲಿ ವಾಸವಾಗಿದ್ದವು. ಸಂತತಿ, ಸಂಪತ್ತಿ, ದೀರ್ಘಾಯುಷ್ಯ ಇವೆಲ್ಲ ಡಾ| ಭಾಂಡಾರಕರರಿಗೆ ಪ್ರಾಪ್ತವಾಗಲು ಅವರ ಪವಿತ್ರ ಆಚರಣೆಯೇ ಕಾರಣವಾಗಿದ್ದಿತು ಸುಶಿಕ್ಷಿತರಿದ್ದರೂ, ಸುಶಿಕ್ಷಿತರೊಳಗಿರುವ ವ್ಯಸನಗಳು ಅವರಲ್ಲಿದ್ದಿಲ್ಲ; ಅಷ್ಟು ಅವರು ನಿರ್ವ್ಯಸನಿಗಳಿದ್ದರು “ವಿದ್ಯಾ ವಿನಯೇನ ಶೋಭತೇ” ಎಂಬಂತೆ ಇವರು ವಿದ್ಯಾಭಾಂಡಾರವಾಗಿದ್ದರೂ, ಯಾವಾಗಲೂ ವಿನಯಶೀಲರಾಗಿದ್ದರು. ಆದರಿಂದ ಇವರ ವಿದ್ಯೆಯು ವಿಶೇಷವಾಗಿ ಶೋಭಿಸುತ್ತಿತ್ತು

ಮುದಿ ಪ್ರಾಯದಲ್ಲಿ, ಅಂದರೆ, ಕಳೆದ ಜೂನ ತಿಂಗಳಿನಲ್ಲಿ ಇಂದೂರ ದರಬಾರದ ಗೃಹಮಂತ್ರಿಗಳಾಗಿದ್ದ ಇವರ ಚಿರಂಜೀವಿಗಳಾದ ಶ್ರೀ| ಪ್ರಭಾಕರ ಪಂತರವರು ವೈಕುಂಠವಾಸಿಗಳಾಗಿದ್ದರಿಂದ ಡಾ| ಭಾಂಡಾರಕರರು ಪುತ್ರಶೋಕದಲ್ಲಿದ್ದರು. ಆದರಿಂದ ಅವರ ಪ್ರಕೃತಿಯು ವಿಶೇಷ ಕ್ಷೀಣವಾಗಿ, ಸರ್ ರಾಮಕೃಷ್ಣಪಂತರು ಕಳೆದ ಸೋಮವಾರಕ್ಕೆ ತಮ್ಮ ವಯಸ್ಸಿನ ೮೯ನೇ ವರ್ಷದಲ್ಲಿ ವೈಕುಂಠವಾಸಿಗಳಾದರು

ಸರ್ ರಾಮಕೃಷ್ಣಪಂತರ ನಿಧನದಿಂದ ಹಿಂದುಸ್ಥಾನದೊಳಗಿನ ಹಾಗು ಭೂಮಂಡಲದೊಳ

ಸಂಸ್ಕೃತ ಪಂಡಿತರು ಅಸ್ತರಾಗಿರುವರು. ಇಡೀ ಭೂಮಂಡಳದೊಳಗಿನ ಸಂಸ್ಕೃತ ಪಂಡಿತರೆಲ್ಲರೂ ಸರ್ವೋತ್ಕೃಷ್ಟ ಪಂಡಿತರ ನಿಧನ ವಾರ್ತೆ ಕೇಳಿ, ದುಃಖಾಶ್ರುಗಳನ್ನು ಸುರಿಸುವರು. ಇಂಥ ಜಗನ್ಮಾನ್ಯ, ಜಗದ್ವಂದ್ಯ ಸಂಸ್ಕೃತ ಪಂಡಿತರು ಪರಲೋಕವನ್ನೈದುವದು ಅಪರಿಮಿತ ಹಾನಿಯಾಗಿರುವದು. ವೈಕುಂಠವಾಸಿಗಳಿಗೆ ಭಗವಂತನು ಸದ್ಗತಿಯನ್ನು ದಯಪಾಲಿಸಲೆಂದೂ, ವೈ| ವಾ| ಗಳ ಈಗ ಹಯಾತ ಇರುವ ಮಗಂದಿರಲ್ಲಾದ ಶ್ರೀ| ದೇವದತ್ತರಾವ ಭಾಂಡಾರಕರವರೂ, ಅವರ ಕುಟುಂಬದವರೂ ತಮ್ಮ ಶೋಕಾವೇಗವನ್ನು ಸಾವರಿಸಿಕೊಂಡು, ವೈಕುಂಠವಾಸಿಗಳ ಪರಂಪರೆಯನ್ನು ಮುಂದರಿಸಿ ಕೀರ್ತಿ ಹೊಂದಲೆಂದೂ ಪ್ರಾರ್ಥಿಸುವೆವು.

ಸ್ಫುಟ ಸೂಚನೆಗಳು.

೧. ವರಿಷ್ಠ ಕಾಯಿದೆ ಕೌನ್ಸಿಲಿನ ಅಧ್ಯಕ್ಷರನ್ನು ಆರಿಸುವ ಅಧಿಕಾರವು ಮೋಂಟೆಗ್ಯೂ ಸ್ವರಾಜ್ಯ ಕಾಯಿದೆಯಂತೆ ಈ ವರುಷದಿಂದ ಕೌನ್ಸಿಲಿಗೆ ವಹಿಸಲ್ಪಟ್ಟಿದೆ. ಅದಕ್ಕಾಗಿ ಲೋಕಪಕ್ಷದ ತರ್ಫೆನಿಂದ ಶ್ರೀ| ವಿಠ್ಠಲಭಾಯಿ ಪಟೇಲರವರು ಉಮೇದವಾರರಾಗಿ ಆರಿಸಿಬಂದರೆಂದು ತಿಳಿಸಲು ನಮಗೆ ಸಂತೋಷವಾಗುತ್ತದೆ. ಶ್ರೀ| ವಿಠ್ಠಲಭಾಯಿಯವರ ಪರಿಚಯವನ್ನು ನಾವು ಮಾಡಿಕೊಡಬೇಕಾಗಿಲ್ಲ. ಅಸಹಯೋಗಿ ಸನ್ಯಾಸಿಗಳಿವರು. ಸ್ವರಾಜ್ಯ ಪಕ್ಷದ ಪ್ರವರ್ತಕರಿವರು. ಕಾಯಿದೆ ಕೌನ್ಸಿಲಿನಲ್ಲಿ ನಿಸ್ಪೃಹ ಬುದ್ಧಿಯಿಂದ, ಧೈರ್ಯದಿಂದ ಸರಕಾರಕ್ಕೆ ಇದಿರಾಗಿ ಲೋಕಪಕ್ಷದ ಕಾದಾಟವನ್ನು ಶ್ರೀ| ಪಟೇಲರವರು ಅನೇಕ ಸಲ ಮಾಡಿರುವರು. ಮುಂಬಯಿ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾಗಿ ಶ್ರೀ| ಪಟೇಲರವರು ನಿಷ್ಪಕ್ಷಪಾತದಿಂದ ನಡಿಸಿದ ದೇಶಸೇವೆಯನ್ನು ಮ್ಯುನಿಸಿಪಾಲಿಟಿಯೊಳಗಿನ ಸಮಸ್ತ ಪಕ್ಷಗಳ ಸಭಾಸದರೂ, ಕಾರಭಾರಿ ಮಂಡಳದವರೂ ಮನದಣಿ ಪ್ರಶಂಸಿಸಿ, ಶ್ರೀ| ಪಟೇಲರಿಗೆ ಅಭಿನಂದಿಸಿದ ಹಕೀಕತನ್ನು ವಾಚಕರು ಮರೆತಿರಲಿಕ್ಕಿಲ್ಲ. ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿಯೂ ಶ್ರೀ| ಪಟೇಲರು ತಮ್ಮ ನಿರ್ಭಯ ವೃತ್ತಿಯಿಂದ, ನಿಷ್ಪಕ್ಷಪಾತ ವರ್ತನದಿಂದ ಬಹಳೇ ಲೋಕಪ್ರಿಯರಾಗಿದ್ದರು. ಶ್ರೀ| ಪಟೇಲರ ಸೇವೆಯನ್ನು ಸ್ಮರಿಸಿ, ವರಿಷ್ಠ ಕಾಯಿದೆ ಕೌನ್ಸಿಲು ಅವರಿಗೆ ಬಹುಮತದಿಂದ ಅಧ್ಯಕ್ಷರನ್ನಾಗಿ ಆರಿಸಿ ಕೃತಜ್ಞತೆಯನ್ನು ಪ್ರಕಟಿಸಿದೆ. ಸರಕಾರ ಪಕ್ಷದವರೂ, ಕೆಲ ಸ್ವತಂತ್ರರೂ ಅವರಿಗೆ ವಿರೋಧವಾಗಿ ಪ್ರತಿಸ್ಪರ್ಧಿಗಳಾದ ದಿವಾಣ ಬಹಾದ್ದೂರ ರಂಗಾಚಾರ್ಯರಿಗೆ ಮತಗಳನ್ನಿತ್ತರೂ, ಶ್ರೀ| ಪಟೇಲರೇ ಆರಿಸಿ ಬಂದದ್ದು ಸುದೈವವು; ಲೋಕಶಾಹಿಯ ವಿಜಯವು. ಶ್ರೀ| ವಿಠ್ಠಲಭಾಯಿ ಪಟೇಲರವರನ್ನು ಮನಃಪೂರ್ವಕ ಅಭಿನಂದಿಸಿ ಲೋಕಪಕ್ಷದ ವಿಜಯವು ದಿನೇ ದಿನೇ ಹೆಚ್ಚಾಗಿ ಬರಲೆಂದು ನಾವು ಪ್ರಾರ್ಥಿಸುವೆವು.

೨. ಶ್ರೀ| ಪಟೇಲರಿಗೆ ವಿಜಯವಾದ ಹಕೀಕತನ್ನು ನಮೂದಿಸುವಾಗ, ಮತದಾನದ ಸಮಯ ಸಂಭವಿಸಿದ ಒಂದು ಹಕೀಕತನ್ನು ನಮೂದಿಸುವದು ಪ್ರಾಸಂಗಿಕವು. ಶ್ರೀ| ಪಟೇಲರು ಎರಡೇ ಮತಗಳಿಂದ ಗೆದ್ದರು. ೫೬ ಮತಗಳು ಪ್ರತಿಸ್ಪರ್ಧಿಗಳಾದ ದಿವಾಣ ಬಹಾದ್ದೂರ ರಂಗಾಚಾರ್ಯರಿಗೆ; ೫೮ ಮತಗಳು ಶ್ರೀ| ಪಟೇಲರಿಗೆ ಬಿದ್ದವು. ಶ್ರೀ| ಪಟೇಲರಿಗೆ ಬಿದ್ದ ೫೮ ಮತಗಳಲ್ಲಿ ನಾಲ್ವರು ಐನು ಸಮಯದಲ್ಲಿ ತಿರುಗಿ ಶ್ರೀ| ಪಟೇಲರಿಗೆ ಮತ ಕೊಟ್ಟರು. ಕಾರಣವೇನೆಂದು ಬಲ್ಲಿರೇನು? ಸರ್ವಾಧಿಪತಿ ರೀಡಿಂಗ ದೊರೆಗಳು ವಿಲಾಯತಿಯಿಂದ ಮರಳಿ ಬಂದು ಆಡಿದ ಭಾಷಣವು ಅಸಮಾಧಾನಕರವಿತ್ತು. ಸ್ವತಂತ್ರರೂ, ನೇಮಸ್ತರೂ, ಕೆಲ ಮಟ್ಟಿಗೆ ಸ್ವರಾಜ್ಯಪಕ್ಷದವರೂ ಸರ್ವಾಧಿಪತಿಗಳ ಭಾಷಣದ ಮೇಲೆ ವಿಶೇಷ ಆಶೆಯನ್ನಿಟ್ಟಿದ್ದರು; ಮೋಂಟೆಗ್ಯೂ ಸುಧಾರಣೆಗಳ ಸುಧಾರಣೆಯಾಗುವದೆಂದು ಅವರ ನಂಬಿಗೆಯಿತ್ತು. ವಿಲಾಯತಿಯೊಳಗಿನ ವರ್ತಮಾನಪತ್ರಗಳಲ್ಲಿಯೂ ಅದೇ ಗುಲ್ಲು ಹಬ್ಬಿಕೊಂಡಿತ್ತು. ಸರ್ವಾಧಿಪತಿಗಳು ಪ್ರಾಂತಿಕ ಸರಕಾರವನ್ನು ಸಂಪೂರ್ಣವಾಗಿ ಪ್ರಜೆಗಳ ಸ್ವಾಧೀನಪಡಿಸುವರೆಂದು 'ಡೇಲಿ ಹೆರಲ್ಡ' ಪತ್ರಿಕೆಯು ಪ್ರಕಟಿಸಿತ್ತು. ಸಾವಿರಾರು ರೂಪಾಯಿ ಖರ್ಚ ಮಾಡಿ ಪ್ರತ್ಯಕ್ಷ ಸಂಭಾಷಣೆಕ್ಕಾಗಿ ವಿಲಾಯತಿಗೆ ದಿಗ್ವಿಜಯಕ್ಕೆ ಹೋದ ರೀಡಿಂಗ ದೊರೆಗಳು ಬರಿಗೈಯಿಂದ ಸಹಕಾರದ ವೇದಾಂತ ಹೇಳಲು ಮರಳಿ ಬರುವರೆಂದು ಯಾರೂ ಎಣಿಸಿದ್ದಿಲ್ಲ. ಭಾಷಣ ಕೇಳಿದೊಡನೆ ಇಳಕಿಸ ಕುತಂತ್ರಗಳ ಅರಿವುಂಟಾಗಿ ಸ್ವತಂತ್ರರು ತಮಗುಂಟಾದ ನಿರಾಶೆಯನ್ನು ಸರಕಾರಕ್ಕೆ ನಿರಾಶೆಬಡಿಸಿ ವ್ಯಕ್ತಗೊಳಿಸಬೇಕೆಂದು ನಿರ್ಧರಿಸಿ ತಮ್ಮ ಮತಗಳನ್ನು ಶ್ರೀ| ಪಟೇಲರಿಗೆ ಕೊಟ್ಟು ಸರಕಾರಿ ಬೆಂಬಲದ ಉಮೇದವಾರರಾದ ದಿವಾಣ ಬಹಾದ್ದೂರರನ್ನು ಸೋಲಿಸಿದರು! ಇದು ನಿಜವಾಗಿ ಪ್ರಶಂಸನೀಯವು. ಕೃತಿಯಿಂದ ಸರಕಾರಕ್ಕಿದಿರಾದ ಹೊರತು, ಲೋಕಶಾಹಿಯ ಪ್ರತಿಷ್ಠೆಯು ಎಂದೂ ಬೆಳೆಯದು. ಬಾಯ್ಮಾತಿನಂತೆ ಬಾಯಿಯಿಂದ ನಿಷೇಧ ಮಾಡಿ, ಕೃತಿಯಿಂದ ಆಳರಸರೊಡನೆ ಸಹಕಾರ್ಯ ಬೆಳೆಸುತ್ತ ಹೋದರೆ, ಲೋಕಶಾಹಿಯ ಪ್ರತಿಷ್ಠೆಯು ಎಂದೂ ನೆಲೆಸದು. ಇದನ್ನರಿತು ಲೋಕನಾಯಕರೂ, ಸಮಸ್ತ ಪಕ್ಷದವರೂ ನಡಕೊಂಡರೆ, ಲೋಕಶಾಹಿಯು ವಿಜಯವಾಗುವದರಲ್ಲಿ ಸಂದೇಹವೇನಿಲ್ಲ.

೩. ಮುಂಬಯಿಯ ವಿಶ್ವವಿದ್ಯಾಲಯವು ವಿದ್ಯಾಲಯದ ಸುಧಾರಣೆಯ ಉಪಾಯಯೋಜನೆಗಾಗಿ ಒಂದು ಚೌಕಶಿ ಮಂಡಳವನ್ನು ನೇಮಿಸಿತ್ತು. ಮಂಡಳದವರು ತಮ್ಮ ವರದಿಯನ್ನು ಪ್ರಕಟಿಸಿರುವರು. ಮಂಡಳದ ಯೋಜನೆಯಂತೆ ಮಹಾರಾಷ್ಟ್ರದಲ್ಲಿ ಒಂದು ವಿಶ್ವವಿದ್ಯಾಲಯವಾಗುವ ಸುಚಿಹ್ನಗಳು ತೋರುತ್ತವೆ. ಮಹಾರಾಷ್ಟ್ರ ವಿಶ್ವವಿದ್ಯಾಲಯದ ಕಕ್ಷೆಯಲ್ಲಿ ಕೊಲ್ಹಾಪುರ, ಸಾಂಗಲಿ, ಮುಧೋಳ, ಮಿರಜ ಹಾಗು ಜಮಖಂಡಿ ಸಂಸ್ಥಾನಗಳು ಸೇರಿಸಲ್ಪಟ್ಟಿವೆ. ಈ ಸಂಸ್ಥಾನಗಳು ನಿಜವಾಗಿ ಮಹಾರಾಷ್ಟ್ರಕ್ಕೆ ಒಪ್ಪಿದ್ದಲ್ಲ; ಕನ್ನಡ ನುಡಿಯನ್ನಾಡುವ ಮಂದಿಗಳು ಈ ಭಾಗದಲ್ಲಿ ವಿಶೇಷರಿದ್ದು, ಈ ಭಾಗವನ್ನು ಮಹಾರಾಷ್ಟ್ರ ವಿಶ್ವವಿದ್ಯಾಲಯದ ಕಕ್ಷೆಯಲ್ಲಿ ಸೇರಿಸಲು ಕಮೀಟಿಯ ಮೆಂಬರರಾದ ಕರ್ನಾಟಕದ ಶ್ರೀ| ಅಣ್ಣಾಜಿ ಬಾಬಾಜಿ ಲಠ್ಠೆಯವರು ಹ್ಯಾಗೆ ಒಪ್ಪಿಕೊಂಡರೆಂದು ನಾವು ಅರಿಯೆವು. ಕರ್ನಾಟಕ ವಿಶ್ವವಿದ್ಯಾಲಯದ ಅವಶ್ಯಕತೆಯನ್ನು ಪ್ರತಿಪಾದಿಸಿದಂತೆ, ಅದನ್ನು ಸ್ಥಾಪಿಸುವದು ಅಸಾಧ್ಯವೆಂತಲೇ ಮಂಡಳದ ಅಭಿಪ್ರಾಯವಾಗಿದೆ. ವಿದ್ಯಾಮಂದಿರಗಳ ಪ್ರಸ್ತುತ ಸ್ಥಿತಿಯ ಮಾನದಿಂದ ವಿಶ್ವವಿದ್ಯಾಲಯದ ಕಲ್ಪನೆಯು ಸದ್ಯಕ್ಕೆ ಅವ್ಯವಹಾರ್ಯವೆಂದು ನಾವು ಒಪ್ಪುವೆವು. ಖರ್ಚ ವಿಪರೀತ ಬರುವದೆಂದೂ ನಮ್ಮ ಒಪ್ಪಿಗೆ. ಆದರೆ, ಕರ್ನಾಟಕ ಸಂಸ್ಕೃತಿಯ ಅಭಿಮಾನಿಗಳು ಕೊಲ್ಹಾಪುರ, ಸಾಂಗಲಿ ಮುಂತಾದ ಕರ್ನಾಟಕ ಸಂಸ್ಥಾನಗಳ ಮೇಲೆ ಬಂದ ದಾಳಿಯನ್ನು ನಿಷೇಧಿಸದಿರರು. ಅತ್ತ ಆಂಧ್ರರು ಬಳ್ಳಾರಿಯನ್ನು ಜೇಬಿನಲ್ಲಿ ಸೇರಿಸಲು ಯತ್ನಪಡುತ್ತಾರೆ; ಇತ್ತ ಮಹಾರಾಷ್ಟ್ರೀಯರು ಕರ್ನಾಟಕದ ಉತ್ತರ ಭಾಗದ ಮೇಲೆ ದಾಳಿಯನ್ನೆಬ್ಬಿಸುತ್ತಿರುವರು. ಇಂಥ ಪ್ರಸಕ್ತಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಶ್ನೆಯು ಸದ್ಯಕ್ಕೆ ಅವ್ಯವಹಾರ್ಯವಿದ್ದರೂ, ಕರ್ನಾಟಕ ಪ್ರಾಂತವು ಚೂರುಚೂರಾಗಿ ಹಂಚಿಹೋಗದಂತೆ ಕರ್ನಾಟಕಸ್ಥರು ಎಚ್ಚರಿಕೆಯನ್ನಿಡತಕ್ಕದ್ದು.

೪. ಮುಂಬಯಿಯ ಕಾಯಿದೆ ಕೌನ್ಸಿಲಿನಲ್ಲಿ ಸ್ವರಾಜ್ಯ ಪಕ್ಷದವರು ಅಸಹಯೋಗವನ್ನು ಜಾಹೀರುಪಡಿಸುವಾಗ, ಬ್ರಾಹ್ಮಣೇತರ ಪ್ರತಿನಿಧಿಗಳ ಮೇಲೆ ಆಕ್ಷೇಪ ಮಾಡಿದ್ದರೆಂದು ನಾವು ಹೇಳಿದ್ದೆವು. ಅದಕ್ಕೆ ಪ್ರತ್ಯುತ್ತರವಾಗಿ ಬ್ರಾಹ್ಮಣೇತರ ಸಭಾಸದರು ಪ್ರಕಟಿಸಿದ ಪ್ರಕಟನೆಯ ಹಕೀಕತನ್ನು ನಿವೇದಿಸುವದು ನಮ್ಮ ಕರ್ತವ್ಯವು. ತತ್ವಭೇದ, ಹಿತಭೇದ ಇತ್ಯಾದಿ ಚರ್ಚೆಯನ್ನು ಬದಿಗಿಟ್ಟು, ಬ್ರಾಹ್ಮಣೇತರ ಬಾಂಧವರ ಒಂದೇ ಒಂದು ವಿಧಾನವನ್ನು ವಿಮರ್ಶಿಸುವ. ಬ್ರಾಹ್ಮಣೇತರರ ಹಿತಕ್ಕಾಗಿ ಕೌನ್ಸಿಲಿನಲ್ಲಿ ನಾವು ಜಗಳಾಡುತ್ತೇವೆಂದು ಬ್ರಾಹ್ಮಣೇತರರು ನಮೂದಿಸಿ, ಸ್ವರಾಜ್ಯ ಪಕ್ಷವು ಹಿಂದುಳಿದ ಬಾಂಧವರ ಹಿತವನ್ನು ವಿರೋಧಿಸುತ್ತದೆಂದು ಧ್ವನಿಸಿರುವರು. ಸಭಾಸದರಿಗೆ ನಾವು ಎರಡು ಸವಾಲುಗಳನ್ನು ಕೇಳುವೆವು. ಮದ್ಯಪಾನದಿಂದ ಹಿಂದುಳಿದವರು ಹಿಂದುಳಿಯುತ್ತಾರೋ ? ಮುಂದುವರಿಯುತ್ತಾರೋ ? ಹಿಂದುಳಿಯುತ್ತಿದ್ದರೆ, ಮದ್ಯಪಾನವನ್ನು ೧೦ ವರ್ಷಗಳಲ್ಲಿಯೇ ನಿರ್ಮೂಲಿಸಬೇಕೆಂದು ಬಂದ ಸೂಚನೆಗೆ ೨೦ ವರ್ಷಗಳ ತಿದ್ದುಪಡಿ ಸೂಚನೆಯು ಬಂದದ್ದು ನಿಮ್ಮಿಂದಲ್ಲವೇ? ಜಲಗಾರ ಯಾನೆ ಜಲಶಿಲ್ಪಿ ಮೇಜರ ಫ್ರೋಕ್ಸನ್‌ರವರಿಗೆ ತಿಂಗಳಿಗೆ ೨ ಸಾವಿರ ರೂಪಾಯಿ ಸಂಬಳನ್ನು ಮಂಜೂರು ಮಾಡಿ ಸರಕಾರಿ ಖರ್ಚನ್ನು ಬೆಳಿಸಿ, ಹಿಂದುಳಿದ ಬಾಂಧವರ ಹಣದ ಅಪವ್ಯಯ ಮಾಡಿದ್ದು ನೀವಲ್ಲವೇ? ನಿಮ್ಮ ಬೆಂಬಲವಿಲ್ಲದಿದ್ದರೆ, ಈ ಸೂಚನೆಯು ಬಿದ್ದು ಹೋಗದೆ ಉಳಿಯುತ್ತಿತ್ತೇ? ಕರ್ನಾಟಕದ ಶ್ರೀ| ಕಂಬಳಿ ಹಾಗು ಅಂಗಡಿಯವರು ಈ ವಿಷಯ ಖುಲಾಸೆ ಮಾಡಿ, ಈ ಸೂಚನೆಗಳ ಮಂಜೂರಿಯಿಂದ ಹಿಂದುಳಿದವರ ಹಿತವು ಹ್ಯಾಗೆ ಮುಂದುವರಿಯಿತೆಂದು ಹೇಳಬೇಕು. ಬ್ರಾಹ್ಮಣೇತರರ ಹಿತವು ನಷ್ಟವಾಗಬೇಕೆಂದು ನಮ್ಮ ಅಂಬೋಣವಿಲ್ಲ. ಬ್ರಾಹ್ಮಣೇತರರ ಹಿತರಕ್ಷಣೆಯನ್ನು ನೀವು ಮಾಡಿರಿ; ಮಾಡಲು ನೀವು ಬದ್ಧರಿದ್ದೀರಿ; ಸ್ವರಾಜ್ಯಪಕ್ಷದ ದ್ವೇಷ ಮಾಡುವದು ಬ್ರಾಹ್ಮಣೇತರರ ಹಿತವೆಂದು ಮಾತ್ರ ನೀವು ತಿಳಕೊಳ್ಳಬೇಡಿ; ಇಷ್ಟೇ ನಮ್ಮ ಹೇಳಿಕೆಯಿದೆ. ಬ್ರಾಹ್ಮಣೇತರ ಬಾಂಧವರು ಇದನ್ನಷ್ಟು ತಿಳಕೊಂಡು ತಮ್ಮ ತತ್ವಗಳನ್ನು ಯಾ

ವದೇ ಪ್ರಕಾರದಿಂದ ಹೀಸಿಸದೆ ಲೋಕಕಾರ್ಯವನ್ನು ಜರುಗಿಸಿದರೆ ನಮಗೆ ಅತ್ಯಾನಂದವಾಗುವದು.

ಸ್ಥಾನಿಕ ವೃತ್ತಾಂತ

ಕುಮಟಾ— ಕಳೆದ ವಾರದಲ್ಲಿ ಬಹಳ ಮಳೆ ಸುರಿಯಿತು. ವಿಪರೀತ ಚಳಿ. ಜ್ವರಾದಿ ರೋಗಗಳ ಬಾಧೆ ಹೆಚ್ಚಿದೆ. ಈ ವಾರದಲ್ಲಿ ೮-೯೭ ಇಂಚು ಮಳೆ; ಅಂತು ಈವರೆಗೆ ೧೨೭-೯೧ ಇಂಚು ಮಳೆ ಬಿತ್ತು.

ಸರ್ ರಾಮಕೃಷ್ಣ ಗೋಪಾಲ ಭಾಂಡಾರಕರರ ನಿಧನದ ಪ್ರೀತ್ಯರ್ಥ ಇಲ್ಲಿಯ ಗಿಬ್ಬ ಹೈಸ್ಕೂಲಿಗೆ ಒಪ್ಪತ್ತಿನ ರಜೆ ಕೊಡಲ್ಪಟ್ಟಿತ್ತು.

ಶ್ರೀ ಶಾಂತಿಕಾ ಪರಮೇಶ್ವರಿ ದೇವಸ್ಥಾನದಲ್ಲಿ ಪರ್ಜನ್ಯ ಭಜನೆ ಸಪ್ತಾಹಕ್ಕೆ ಪ್ರಾರಂಭವಾಗಿದೆ.

ಸಾಣಿಕಟ್ಟೆಯ ಉಪ್ಪಿನ ಸಂಘದ ಮೆನೆಜಿಂಗ ಕಮಿಟಿಯ ಚೆಅರಮನ್‌ರಾದ ರಾ| ಎಮ್. ಎ. ಕುಳಕರ್ಣಿಯವರು 'ವೃತ್ತ' ಪತ್ರಕರ್ತರಾದ ರಾ| ಕೃಷ್ಣರಾವ ಶೇಣವಿಯವರ ಮೇಲೆ, ತಾ. ೬-೪-೨೫ ನೇ ಸಂಚಿಕೆಯಲ್ಲಿ ಪ್ರಕಟವಾದ "ಸಾಣಿಕಟ್ಟೆಯೊಳಗಿನ ಕಾರಸ್ಥಾನ" ಎಂಬ ಲೇಖದ ಕುರಿತು ಇಂಡಿಯನ್ ಪಿನಲ್ ಕೋಡ ಕಲಂ ೫೦೦, ೫೦೧ ಮತ್ತು ೫೦೨ ರನ್ವಯ ಅಬ್ರುನುಕ್ಸಾನಿಯ ಫಿರ್ಯಾದನ್ನು ಇಲ್ಲಿಯ ೧ ನೇ ವರ್ಗದ ಮೆಜಿಸ್ಟ್ರೇಟ ಕೋರ್ಟಿನಲ್ಲಿ ದಾಖಲ ಮಾಡಿರುವರು. ವಿಚಾರವು ನಾಡದು ಬುಧವಾರಕ್ಕಿಟ್ಟಿರುತ್ತದೆ.

ಮುಂಬಯಿ ಸ್ಟೀಮ ನೆವಿಗೇಶನ ಕಂಪನಿಯ ಮಸ್ತಾಲು ಅಗಬೋಟಿಯು ತಾ. ೧೧ ನೇ ಶುಕ್ರವಾರಕ್ಕೆ ಮತ್ತು ತಾ. ೧೪ ನೇ ಸೋಮವಾರಕ್ಕೆ ಪಶೆಂಜರ ಬೋಟಿಯು ಮುಂಬಯಿಂದ ಹೊರಡುವದಾಗಿ ತಿಳಿಯುತ್ತದೆ.

ಸಾಭಾರ ಸ್ವೀಕಾರ.

ರಂಗಭೂಮಿ— ನಟನ ಮಾಸಪತ್ರಿಕೆ. ವರ್ಷ ೧, ಸಂಚಿಕೆ ೧, ಸಂಪಾದಕ ಮತ್ತು ಪ್ರಕಾಶಕ— ದತ್ತಾತ್ರೇಯ ಕೃಷ್ಣ ಭಾರದ್ವಾಜ, ಆನಂದಾಶ್ರಮ, ಬಸವನಗುಡಿ, ಬೆಂಗಳೂರು. ವಾರ್ಷಿಕ ಚಂದಾ ರೂಪಾಯಿ ೩-೦-೦.

ಗ್ರಾಮಸೇವಕ— ಜೂನ ತಿಂಗಳ ಸಂಚಿಕೆ. ಸಂಪಾದಕ ಹಾಗು ಪ್ರಕಾಶಕ—ಶ್ರೀ ಮಹಾದೇವ ನಾಯಿಕ ಮುದಕವಿ, ರಾಮದುರ್ಗ (ಜಿ. ಬೆಳಗಾವಿ) ವಾರ್ಷಿಕ ವರ್ಗಣಿ ಅಂಚೆವೆಚ್ಚ ಸೇರಿ ರೂ. ೨-೦-೦.

ಕಾರವಾರ— ಮೈಲಿಬೇನೆಯು ಇಲ್ಲಿಯ ಕೆಲವು ಕೇರಿಗಳಲ್ಲಿ ಹಬ್ಬಿದೆ.

ಇಲ್ಲಿಯ ಕುವರಭಾಯಿ ದಾದಾಭಾಯಿ ಹುಡುಗಿಯರ ಶಾಲೆಯಲ್ಲಿ ಕಳೆದ ತಾ. ೨೮ನೇ ಶುಕ್ರವಾರಕ್ಕೆ ವಾರ್ಷಿಕ ಇನಾಮು ಹಂಚುವ ಸಮಾರಂಭವಾಯಿತು. ಬೆಳಗಿನ ೮ ಘಂಟೆಗೆ ಸಮಾರಂಭಕ್ಕೆ ಪ್ರಾರಂಭವಾಯಿತು. ರಿಪೋರ್ಟಿನ ವಾಚನ, ಮ್ಯುನಿಸಿಪಲ್ ಅಧ್ಯಕ್ಷ ಮಿ| ಕುಟಿನೋರವರ ಭಾಷಣ, ಹುಡುಗಿಯರ ಹಾಡು, ಕೋಲಾಟ ಮುಂತಾದವುಗಳು ನಡೆದವು. ಮಿಸಸ್ ಮೈನವಾರಿಂಗರವರು ಇನಾಮುಗಳನ್ನು ಹಂಚಿದರು. ಇವರು ಇನಾಮು ಸಮಾರಂಭಕ್ಕಾಗಿ ಮ್ಯುನಿಸಿಪಾಲಿಟಿಗೆ ೭೫ ರೂಪಾಯಿಗಳನ್ನು ಸಮರ್ಪಿಸಿದ್ದರು. ಸಭಾಪತಿಗಳಾದ ಕಲೆಕ್ಟರ ಮಿ|| ಥಿಡೆಯವರು ಚಿಕ್ಕ ಭಾಷಣ ಮಾಡಿದ ಬಳಿಕ, ಸಮಾರಂಭವು ವಿಸರ್ಜನ ಹೊಂದಿತು. ಸಮಾರಂಭದೊಳಗಿನ ಭಾಷಣಗಳೆಲ್ಲ ಇಂಗ್ಲಿಷಿನಲ್ಲೇ ನಡೆದಿದ್ದವು. ಕಲೆಕ್ಟರರು ಮರಾಠಿ ಭಾಷೆಯನ್ನರಿತವರಿದ್ದು, ಹೆಣ್ಣು ಹುಡುಗಿಯರೂ ಸ್ಥಾನಿಕ ವಿದ್ಯಾರ್ಥಿಗಳಿದ್ದು ಭಾಷಣಗಳೆಲ್ಲ ಮರಾಠಿಯಿಂದ ನಡೆದಿದ್ದರೆ ಸಮಾರಂಭದೊಳಗಿನ ಭಾಷಣಗಳು ಸಾರ್ಥಕವಾಗುತ್ತಿದ್ದವು.

ಇಲ್ಲಿಯ ಫರ್ಸ್ಟ ಕ್ಲಾಸ ಸಬಜಡ್ಜರು ಬರುವ ಜನವರಿ ೧೯೨೬ ರಿಂದ ಎಪ್ರಿಲ್ ೧೯೨೬ರ ವರೆಗೆ ಧಾರವಾಡಕ್ಕೆ ಡೆಪ್ಯುಟೇಶನ್ನ ಮೇಲೆ ಹೋಗುವವರಿದ್ದಾರಾಗಿ ವದಂತಿ. ಹಾಗೆ ಅವರು ಹೋದಲ್ಲಿ ಇಲ್ಲಿಯ ಕಕ್ಷಿಗಾರರಿಗೆ ಬಹಳ ತೊಂದರೆಯಾದೀತು.

ಸಿದ್ದಾಪೂರ— ಈ ತಾಲೂಕಿನ ಮುತ್ತಿಗೆ ಎಂಬ ಊರಿನ ಕರಿ ಎಂಬ ಬಿಳ್ಳನು ತನ್ನ ಹೆಂಡತಿಯ ಖೂನಿ ಮಾಡಿದ್ದಲ್ಲದೆ, ತನ್ನ ಅತ್ತೆಗೂ ಖೂನಿ ಮಾಡಬೇಕೆಂದು ಮಾಡಿದ್ದನು. ಆದರೆ, ದೈವಯೋಗದಿಂದ ಅತ್ತೆಯು ಮಾತ್ರ ಒಬ್ಬಳು ಬದುಕಿ ಉಳಿದಳು. ಆರೋಪಿಯು ತನ್ನ ಊರಾದ ಕಲ್ಲೂರಿಗೆ ಖೂನಿ ಮಾಡಿದ ದಿವಸ ರಾತ್ರಿಯೇ ಬಂದು ಮನೆಯ ಹಕ್ಕಲದ ಮೇಲೆ ಕೂತಿದ್ದನು. ಮಾರನೇ ದಿವಸ ಪೋಲೀಸರು ಅವನ ಮನೆ ಶೋಧಕ್ಕೆ ಬಂದ ಸುಳುವು ತಿಳಿದು ಉರ ಹಾಕಿಕೊಂಡು ಸಾಯುವ ಸ್ಥಿತಿಯಲ್ಲಿದ್ದಾಗ ಪೋಲೀಸರಿಗೆ ಇದು ಗೊತ್ತಾಗಿ, ಅವನನ್ನು ಪಾಶದಿಂದ ತಪ್ಪಿಸಿ ಜೀವ ಉಳಿಸಿ ತಂದಿದ್ದಾರೆ. ಆರೋಪಿಯು ತಾನು ಮಾಡಿದ ಗುನ್ಹೆಯನ್ನು ಕಬೂಲ ಮಾಡಿದ್ದಾನಾಗಿ ತಿಳಿದುಬರುತ್ತದೆ.

ಲೋಕಲ್ ಬೋರ್ಡಿಗೆ ಮೆಂಬರರಾಗಬೇಕೆಂಬ ಉಮೇದವಾರರು, ತಾ. ೫ ನೇ ಸಪ್ಟಂಬರದಿಂದ ತಾ. ೧೦ ನೇ ಸಪ್ಟಂಬರದೊಳಗಾಗಿ ಅರ್ಜಿ ಮಾಡಬೇಕು. ಒಂದೇ ೨೫ ದೇ ಫಾರಮ ಒಂದಿರುವದಾಗಿ ಕೇಳಿದೆ. ಪ್ರತಿಯೊಂದು ಗ್ರೂಪಿನಲ್ಲಿ ಯೋಗ್ಯ ಉಮೇದವಾರರನ್ನು ಆರಿಸಿ, ಅವರಿಗೇ ಮತ ಕೊಡುವದು ಉತ್ತಮ.

ವೃತ್ತಸಾರ.

— ಬಿಹಾರಿನ ಝರಿಯಾ ಎಂಬ ಗ್ರಾಮದಲ್ಲಿ ಒಂದು ದನವು ಈಯಿದೆ. ಕರುವಿಗೆ ಎರಡು ತಲೆ ನಾಲ್ಕು ಕಿವಿ, ನಾಲ್ಕು ಕಣ್ಣು. ಕರುವು ಸತ್ತುಬಿದ್ದಿತ್ತು.

— ಜಪಾನದ ಟೋಕಿಯೋ ಪಟ್ಟಣದಲ್ಲಿ ೭ ದಿವಸಗಳ ವರೆಗೆ ಎಡೆಬಿಡದ ಮಳೆ ಬಿದ್ದು ಇಡೀ ಪಟ್ಟಣವೆಲ್ಲ ಜಲಮಯವಾಗಿದ್ದಿತು. ಸುಮಾರು ೩೫ ಸಾವಿರ ಮನೆಗಳು ನೆಲಸಮವಾದವು. ೧೧ ಮಂದಿಗಳು ಜಲಪ್ರವಾಹದಲ್ಲಿ ಸಿಲುಕಿ ಮಡಿದುಹೋದರಂತೆ.

— ತುರ್ಕಸ್ಥಾನದ ಸಿರಿಯಾ ಪ್ರಾಂತದಲ್ಲಿ ಫ್ರೆಂಚರ ವಿರುದ್ಧ ಬಹು ದೊಡ್ಡ ದಂಗೆಯಾಗಿ ಅನೇಕ ಕಡೆಗಳಲ್ಲಿ ಅಲ್ಲಿಯ ನಿವಾಸಿಗಳಾದ ಡ್ರುಸರವರು ಫ್ರೆಂಚರಿಗೆ ಹಿಮ್ಮೆಟ್ಟಿಸಿದರು.

— ಮಲಬಾರಿನ ದೇಶಭಕ್ತ ನಾರಾಯಣರಾವ ಮೆನನ್‌ರವರನ್ನು ಬಂಧಮುಕ್ತ ಮಾಡಬೇಕಾಗಿ ಮದ್ರಾಸ ಕಾಯಿದೆ ಕೌನ್ಸಿಲಿನಲ್ಲಿ ಠರಾವು ಮಂಜೂರಾಗಿತ್ತು. ಆದರೂ, ಸರಕಾರವು ಅವರಿಗೆ ಬಿಡಲಿಲ್ಲ. ಸವಾಲು ಕೇಳಲು, ಸರಕಾರವು ಅವರಿಗೆ ಬಿಡುವದಿಲ್ಲವಾಗಿ ಉತ್ತರ ಕೊಟ್ಟಿತು. ಕೌನ್ಸಿಲಿಗೆ ದೊರೆತ ಅಧಿಕಾರವಿದು!

— ಕಳೆದ ತಾ. ೧೯ನೇಗೆ ಬಸರಾದಲ್ಲಿ ಭಯಂಕರ ಬೆಂಕಿ ಬಿದ್ದು ನೂರಾರು ಮನೆಗಳು ಸುಟ್ಟು ಹೋದವು. ೮೦ ಸಾವಿರ ಪವನುಗಳ ಹಾನಿ! ಬೆಂಕಿಯು ೩ ದಿನಗಳ ವರೆಗೆ ಉರಿಯುತ್ತಿತ್ತು.

— ಫ್ರಾನ್ಸ ದೇಶದ ಗ್ರೇನೊಬ್ಲ ಪಟ್ಟಣದಲ್ಲಿ ವಿದ್ಯುಚ್ಛಕ್ತಿಯ ಪ್ರದರ್ಶನದ ತಯಾರಿ ನಡೆದಿದೆ. ಥಟ್ಕನೆ, ಮಿಂಚು ಬಿದ್ದು ಸ್ಫೋಟವುಂಟಾಗಿ ಹಲವು ವಿಮಾನಗಳೂ, ಮೋಟಾರ ಬಂಡಿಗಳೂ ಸುಟ್ಟು ಹೋದವು. ವಿಪರೀತ ಹಾನಿ.

— ಮದ್ರಾಸಿನ ಹಿಂದೂ ಧರ್ಮದಾಯ ಕಾಯಿದೆಯು ಅಸಿಂಧುವೆಂದು ಠರಾಯಿಸಲು ತಿರುಪತಿಯ ಮಹಂತರೂ ತಿರುವದುತುರಾಯಿ ಮಠದ ಪಂಡರ ಸನ್ನಿಧಿಯವರೂ, ಮದ್ರಾಸ ದೇವದಾಯ ಕಮಿಟಿಯ ಕಮೀಶನರರ ಮೇಲೆ ದಾವೆ ಮಾಡಿರುವರು. ಮದ್ರಾಸ ಗವರ್ನರರಾಗಿದ್ದ ವೆಲಿಂಗಡನ್ ದೊರೆ ಹಾಗು ಹಿಂದುಸ್ಥಾನದ ಗೃಹಮಂತ್ರಿಗಳಾದ ಸರ್ ಮಾಲ್ಕಮ್ ಹೇಲೀಯವರ ಜಬಾಬು ಕೊಳ್ಳಲು ಕಮೀಶನ್ನುಗಳ ನೇಮಣೂಕಿಯಾಗಿದೆ. ಮಹಂತರ ವಕೀಲರು ಶ್ರೀ ಎಸ್. ಶ್ರೀನಿವಾಸ ಅಯ್ಯಂಗಾರರು; ಸನ್ನಿಧಿಗಳ ವಕೀಲರು ಶ್ರೀ ಟಿ ರಂಗಾಚಾರ್ಯರು.

— ಬೌಲಾ ಖೂನಿಯ ಮೊಕದ್ದಮೆಯಲ್ಲಿ ಚೌಕಶಿ ನಡೆಸಿದ ಪೋಲೀಸರಿಗೆ ಮುಂಬಯಿ ಸರಕಾರವು ೧೧ ಸಾವಿರ ರೂಪಾಯಿಗಳನ್ನು ಹಂಚಿದೆ.

— ಅಫಘಾನ ಸರಕಾರದವರಿಗೂ ಇಟಾಲಿಯನ್ ಸರಕಾರದವರಿಗೂ ವಿತುಷ್ಟವಾಗಿ ರಾಯಭಾರಿಗಳು ಸಹ ಸ್ವದೇಶಗಳಿಗೆ ತೆರಳಿದ್ದರು. ಈಗ ಅಫಘಾನ ಸರಕಾರದವರು ಇಟಾಲಿಯನ್ನರ ಮಾಫಿ ಬೇಡಿ ಫಾಶಿಕೊಟ್ಟ ಪಿಪೆರನೋ ಎಂಬ ಹೆಸರಿನ ಇಟಾಲಿಯನ್ನನಿಗಾಗಿ ೬ ಸಾವಿರ ಪವನುಗಳ ಖಂಡಣಿ ಕೊಟ್ಟರು.

— ತ್ರಾವಣಕೋರ ದರಬಾರದವರು ಸಂಸ್ಥಾನದ ಖರ್ಚಿನಿಂದ ಕಟ್ಟಿಸಿದ ಕೆರೆಬಾವಿಗಳನ್ನು ಸಮಸ್ತ ಪ್ರಜೆಗಳು ಉಪಯೋಗಿಸಬಹುದೆಂದು ಹುಕುಮು ಕೊಟ್ಟಿರುವರು.

— ಗುಜರಾಥ ಪ್ರಾಂತದ ಕಡಿ ಜಿಲ್ಹೆಯ ಬೋರ್ಜ ಗ್ರಾಮದಲ್ಲಿ ನೆಲದಲ್ಲಿ ಹುಗಿದ ೩ ಮೂರ್ತಿಗಳು ದೊರೆತವೆ. ಇವು ಜೈನ್ಯತಿ ಧರ್ಮಂಕರರು ಮಾಡಿದ್ದವು. ಬಹಳ ಪುರಾತನ ಕಾಲದ್ದವು.

— ಚೀನದೊಳಗಿನ ದಂಗೆಗಾರರು ಒಂಭತ್ತು ಮಂದಿ ಬ್ರಿಟಿಶ ಸಾಹೇಬರನ್ನು ಹಿಡಿದು ಬಂದಿಯಲ್ಲಿಟ್ಟಿರುವರು.

— ನಗರ ಜಿಲ್ಹೆಯೊಳಗಿನ ಸರಕಾರಿ ಅಧಿಕಾರಿಗಳು ಹೊಲೆಯರಿಗೆ ಅನ್ಯಾಯದಿಂದ ಬಿಟ್ಟಿ ಹಿಡಿಯುತ್ತಾರೆಂದು ಜಿಲ್ಹೆಯಲ್ಲಿ ವಿಶೇಷ ಗದ್ದಲವಾದ್ದರಿಂದ ಹಣ ಕೊಡದೆ ಯಾರಿಂದಲೂ ಕೆಲಸ ಮಾಡಿಸಿಕೊಳ್ಳಬಾರದೆಂದು ಕಲೆಕ್ಟರರು ಹುಕುಮು ಮಾಡಿರುವರು.

— ಹಿಂದುಸ್ಥಾನದೊಳಗಿನ ಚಲನಿ ನಾಣ್ಯಗಳ ಪದ್ಧತಿಯನ್ನು ಚೌಕಶಿ ಮಾಡುವರೆ ಸರ್ವಾಧಿಪತಿ ರೀಡಿಂಗ ದೊರೆಗಳು ಕಮೀಶನ್ನೊಂದನ್ನು ನೇಮಿಸಿರುವರು. ಈ ಕಮೀಶನಿನಮೇಲೆ ಹಿಂದಿಹಿತವಾದಿಗಳು ಇರುವದಿಲ್ಲವಾಗಿ ವರಿಷ್ಠ ಕಾಯಿದ ಕೌನ್ಸಿಲಿನಲ್ಲಿ ಚರ್ಚೆಯಾಗಿ ನಿಷೇಧಪರ ಠರಾವು ಮಂಜೂರ ಆಗಿಯದೆ. ಮಿ| ಜಿನ್ನಾರವರು ಠರಾವಿನ ಸೂಚಕರು.

—ಗ್ರೀಸ ದೇಶದ ಸಮುದ್ರ ತೀರದೊಳಗಿನ ಥೆರ ಎಂಬ ಪರ್ವತದ ಸ್ಫೋಟವಾಗಿ ಲಾವಾ ರಸವು ಹೊರಬೀಳುತ್ತದೆ. ೧೫ ಸಾವಿರ ಪ್ರಜೆಗಳು ನಿರಾಶ್ರಿತರಾಗಿರುವರು. ಅವರನ್ನು ಸುರಕ್ಷಿತ ಸ್ಥಳಕ್ಕೆಯ್ಯಲು ಅಲ್ಲಿಯ ಸರಕಾರದವರು ಹಡಗುಗಳನ್ನೇರ್ಪಡಿಸಿರುವರು. ಈ ಸ್ಫೋಟದ ಮೂಲಕ ಅಲ್ಲಿಯೇ ಮತ್ತೊಂದು ದ್ವೀಪವು ಹುಟ್ಟಿರುವದು.

— ಫ್ರೆಂಚ ರಸಾಯನ ಶಾಸ್ತ್ರಜ್ಞರೊಬ್ಬರು ಅಕೋಲಿನ್ ಎಂಬ ದ್ರವವನ್ನು ತಯಾರಿಸಿರುವರು. ಅದನ್ನು ಪೆಟ್ರೋಲಿಗೆ ಬದಲಾಗಿ ಮೋಟಾರುಗಳಿಗೆ ಉಪಯೋಗಿಸಿದರೆ, ತೀರ ಅಲ್ಪ ಖರ್ಚಾಗುತ್ತದಂತೆ!

ವಿವಿಧ ಸಂಗ್ರಹ.

(೫ ನೇ ಪಾನಿನಿಂದ ಮುಂದುವರಿಸಿದ್ದು.)

ದದೆ. ಗ್ರಾಮಸ್ವಾತಂತ್ರ್ಯವನ್ನು ಸಂಪಾದಿಸಿಕೊಡುವ ಶಿಕ್ಷಣವನ್ನು ಇತರ ಪ್ರಾಂತಿಕ ಕೊಂಗ್ರೆಸ ಕಮೀಟಿಗಳು ಅನುಸರಿಸಬೇಕು.

⁂

ಸಮುದ್ರಗರ್ಭದೊಳಗಿನ ನಾರೀಮಣಿಯು !

ಆಫ್ರಿಕಾದಲ್ಲಿ ಟ್ಯೂನಿಸ ದಂಡೆಯೊಳಗೆ ಒಬ್ಬ ಅಂಬಿಗನು ಚೂರಿಯನ್ನು ಕೈಯಲ್ಲಿ ತೆಗೆದುಕೊಂಡು ಸ್ಪಂಜವನ್ನು ಕೊಯ್ದು ತರಲು ಸಮುದ್ರದಲ್ಲಿ ಇಳಿದನು. ಆತನು ಮೂವತ್ತು ಫೂಟು ಕೆಳಗಿಳಿಯಲು, ಆತನಿಗೆ ಒಬ್ಬ ಪರಮ ಸುಂದರ ಸ್ತ್ರೀಯು ನಿಂತುಕೊಂಡಂತೆ ಕಂಡುಬಂದಿತು. ಸಮುದ್ರಗರ್ಭದಲ್ಲಿ ಇಂತಹ ಉಜ್ವಲ ಸ್ವರೂಪದ ವಿಮಲ ಪ್ರಭೆಯ ಸ್ತ್ರೀಯು ನಿಂತುಕೊಳ್ಳುವ ಕಾರಣವೇನೆಂಬುದನ್ನು ತಿಳಿಯದೆ ವಿಸ್ಮಯಹೊಂದಿದನು. ಮನಸ್ಸಿನಲ್ಲಿ ಆತನು ಈ ನೀರಿನೊಳಗೆ ಈ ನಾರೀಮಣಿಯು ಎಲ್ಲಿಂದ ಬಂದಿರಬೇಕು ! ನಾನೇನು ಇದನ್ನು ಸ್ವಪ್ನ ಕಾಣುತ್ತಿರುವೆನೋ, ಏನು ಜಾಗ್ರತಾವಸ್ಥೆಯಲ್ಲೇ ಇರುವೆನೋ, ಎಂಬ ಭ್ರಮೆ ಆತನಿಗುಂಟಾಯಿತು. ಈಕೆ ಯಾರು ? ದೇವಿಯೋ, ದೇವ ಕನ್ಯೆಯೋ: ಏನು ? ಯಾವ ಸ್ತ್ರೀಯು ಮುಳುಗಿಸಲ್ಪಟ್ಟಿರುವಳೋ ? ಮುಳುಗಿಸಲ್ಪಟ್ಟಿದ್ದರೆ ಇಷ್ಟು ಸುಂದರಳಾಗಿ ಜೀವಂತ ಇದ್ದಂತೆ ಹೇಗೆ ಕಾಣುತ್ತಿರುವಳು ! ಈ ವಿಚಾರಮಗ್ನನಾಗಿ ಏನೂ ತೋಚದೆ ಕೂಡಲೇ ಆತನು ಮೇಲಕ್ಕೇರಿ ಬಂದನು

ತನ್ನ ಜೊತೆಗಾರರಿಗೆ ಈ ಸುದ್ದಿಯನ್ನು ತಿಳಿಸಲು ಅವರೂ ಕುತೂಹಲವುಳ್ಳವರಾಗಿ ಎಲ್ಲರೂ ಆ ಸ್ಥಳದಲ್ಲಿ ಮುಳುಗಿ ಅಲ್ಲಿಗೆ ಹೋಗಿ ಶೋಧ ಮಾಡಲು, ಅವರ ಕೈಗೆ ಆ ಸ್ತ್ರೀಯು ಸಂಗಮರವರಿನ ಸ್ತ್ರೀ ಮೂರ್ತಿಯೆಂದು ಕಂಡುಬಂತು. ಈ ಮೂರ್ತಿಯು ನಿಲ್ಲಲಿಕ್ಕೆ ಕೆಳಗೇನಾದರೂ ಆಧಾರವಿರಬೇಕೆಂದು ಶೋಧ ಮಾಡಲು, ೩-೪ ಮನೆಗಳೂ, ಕೆಳಗೆ ದೊಡ್ಡ ಬೀದಿಗಳೂ, ದೇವರ ಗುಡಿಗಳೂ ಕಂಡುಬಂದವು.

ಆ ಮೇಲೆ ಅವರು ಹೊರಬಂದು ಜಾಹೀರ ಮಾಡಲು ತಜ್ಞರು ಶೋಧ ಮಾಡಲಾಗಿ ಸಮುದ್ರದಲ್ಲಿ ಮುಳುಗಿದ ಒಂದು ಪ್ರಾಚೀನ ಶಹರವಿರಬೇಕೆಂದು ನಿಶ್ಚಯಿಸಿ ಅದನ್ನು ಪೂರ್ಣ ಶೋಧಿಸಲು ಅಲ್ಲಿಯ ಗವರ್ನರರು ಪ್ರಯತ್ನ ನಡೆಸಿದ್ದಾರೆ.

—ಗೋಸೇವಕ.

⁂

ಪ್ರಜಾನುರಂಜನ ಸಂಸ್ಥಾನಿಕರು!

ಕಾಠೇವಾಡದೊಳಗಿನ ಜಸದನ್ ಸಂಸ್ಥಾನಿಕರು ತಮ್ಮ ಸಂಸ್ಥಾನದೊಳಗಿನ ಬಡಬಗ್ಗರಿಗೆ ಸಹಾಯ ಮಾಡುತ್ತಾರೆ. ಬರಗಾಲನಿವಾರಣಕ್ಕಾಗಿ ಹುಲ್ಲುಬಣ್ಣಿಯನ್ನು ಕಾದಿಡುತ್ತಾರೆ. ಸಂಸ್ಥಾನದಲ್ಲಿ ಗ್ರಾಮಪಂಚಾಯತಿಗಳಿವೆ; ಬಿಟ್ಟಿ ಪದ್ಧತಿಯಿಲ್ಲ; ಮದ್ಯ ವಿಕ್ರಿಯಿಲ್ಲ; ದನಗಳ ಅಭಿವೃದ್ಧಿಗಾಗಿ ವಿಶೇಷ ಜಾಗ್ರತೆ ಕೊಳ್ಳಲ್ಪಡುತ್ತದೆ; ಕೈರಾಟೆಯಿಂದ ನೂಲು ತೆಗೆಯುವ ಪದ್ಧತಿಯ ಪ್ರಸಾರ ನಡೆದದೆ. ಈ ಸಂಸ್ಥಾನದ ಲೋಕಸಂಖ್ಯೆಯು ೩೦ ಸಾವಿರ; ಉತ್ಪನ್ನವು ೪॥ ಲಕ್ಷ ರೂಪಾಯಿ. ಒರಿಸಾ ಪ್ರಾಂತದ ಸೋನಪುರ ಸಂಸ್ಥಾನಾಧಿಪತಿಗಳಾದ ಮಹಾರಾಜ ಶ್ರೀಮಂತ ವೀರ ಮಿತ್ರೋದಯಸಿಂಗ ಧರ್ಮನಿಧಿಗಳವರು ನಿಜವಾಗಿ ಧರ್ಮರಾಯರು. ತಮ್ಮ ಖಾಸಗಿ ಕೋಶದೊಳಗಿಂದ ಅನಾಥಾಲಯ, ಸಂಕ, ಒಡ್ಡು, ಬರಗಾಲದ ಕೆಲಸಗಳು, ಹಾಸ್ಪಿಟಲುಗಳು, ಸಂಸ್ಕೃತ ಪಾಠಶಾಲೆ, ಜ್ಯೋತಿಷ್ಯ, ಆಯುರ್ವೇದ ಇತ್ಯಾದಿ ಲೋಕಕಾರ್ಯಗಳಿಗಾಗಿ ೧೧ ಲಕ್ಷ ರೂಪಾಯಿಗಳನ್ನರ್ಪಿಸಿರುವರು. ಸಂಸ್ಥಾನದಲ್ಲೆಲ್ಲ ಉಚಿತವಾಗಿ ಶಿಕ್ಷಣ ಕೊಡಲು ಏರ್ಪಾಟು ಮಾಡಿರುವರು. ಇದಲ್ಲದೆ, ಮಹಾರಾಜರು ದಿಲ್ಲಿ, ಕಾಶೀ ಮುಂತಾದ ಕಡೆಯ ಶಿಕ್ಷಣ ಕೆಲಸಗಳಿಗೂ ದ್ರವ್ಯಸಹಾಯವನ್ನಿತ್ತಿರುವರು.

⁂

ಸಂಸ್ಥಾನಿಕರ ಪೀಡನೆ.

ಭೋಪಾಲ ಸಂಸ್ಥಾನದಲ್ಲಿ ಒಂದು ವಿಚಿತ್ರ ಕಾಯಿದೆ! ಅಲ್ಲಿ ಹಿಂದೂ ಸ್ತ್ರೀಯರನ್ನು ಜಾತಿಗೆಡಿಸುವ ಅನೇಕ ಉಪಾಯಗಳು ನಡೆದಿವೆ; ಹಿಕ್ಮತ್ತಿನಿಂದ ಜಾತಿಗೆಡಿಸುತ್ತಿರುವರು. ಅಲ್ಲಲ್ಲಿ ಮುಸಲ್ಮಾನರು ತಂಡುಗಟ್ಟಿ ಊರಲ್ಲಿ ಮೆರೆದು ಜಾತಿಗೆಡಿಸುತ್ತಿರುವರು. ಹಿಂದೂ ಪ್ರಜೆಗಳ ಕಷ್ಟ ಕೇಳುವವರ್‍ಯಾರಿಲ್ಲ. ಹೀಗೆ ಹಿಂದುವು ಮುಸಲ್ಮಾನನಾದರೆ ಪ್ರಾಯಶ್ಚಿತ್ತ ಕೊಂಡು ಸ್ವಧರ್ಮದಲ್ಲಿ ಸೇರಲಿಕ್ಕೂ ಕಾಯಿದೆಯಂತೆ ಅಡ್ಡಿಯಾಗುತ್ತದೆ. ಇದರಿಂದ ಹಿಂದೂ ಪ್ರಜೆಗಳು ಧರ್ಮಪಾಲನದಿಂದ ಸಂಸಾರ ಮಾಡಿಕೊಂಡುಹೋಗುವದು ಕಠಿಣವು. ನರಸಿಂಹಗಡ ಸಂಸ್ಥಾನದಲ್ಲಿ ಇನ್ನೊಂದು ಪ್ರಕಾರ. ಅಲ್ಲೊಬ್ಬ ಶಿಕ್ಷಕರು ಖಾದಿಯನ್ನು ಧರಿಸುತ್ತಿದ್ದರು. ಥಟ್ಟನೆ ಅವರಿಗೆ ಕೆಲಸದಿಂದ ಕಡಿಮೆ ಮಾಡಲಾಗಿದೆಂದು ತಿಳಿಸಲಾಯಿತು. ಕಾರಣಗಳು ಯಾವವೆಂದರೆ:— (೧) ಸ್ವರಾಜ್ಯಕ್ಕಾಗಿ ಟೊಪಿಯನ್ನು ಧರಿಸುವದು, (೨) ಬ್ರಿಟಿಶ ಸರಕಾರಕ್ಕೆ ಅಪ್ರಿಯವಾದ ಮಂದಿಗಳೊಡನೆ ಪತ್ರವ್ಯವಹಾರ ಮಾಡುವದು, (೩) ರಾಜಕಾರ್ಯಗಳಲ್ಲಿ ಅಡ್ಡಿ ಮಾಡುವದು. ಶಿಕ್ಷಕರಿಗೆ ಕೂಡಲೆ ಸಂಸ್ಥಾನದ ಹೊರಗೆ ಹೋಗಬೇಕೆಂದು ಅಜ್ಞೆಯಾಯಿತು. ಮನೆಮಾರು ಬಿಟ್ಟು ಶಿಕ್ಷಕರು ಸಂಸ್ಥಾನದ ಹೊರಗೆ ಹೋಗಬೇಕಾಯಿತು. ಮಹಿಕಾಂಠಾ ಏಜನ್ಸಿಯೊಳಗಿನ ಈಡರ ಸಂಸ್ಥಾನದಲ್ಲಿ ಮಹಾರಾಜಾ ದೌಲತಸಿಂಹಜೀಯವರು ಕಾರಭಾರ ನಡಿಸುತ್ತಿರುವರು. ಇಲ್ಲಿ ಜನನವಾದರೆ, ಕರ ಕೊಡಬೇಕು; ಮರಣವಾದರೂ ಕರ ಕೊಡಬೇಕು. ಲಗ್ನ ಸಮಾರಂಭಗಳ ಮೇಲೆ ಕರ; ಉತ್ತರಕ್ರಿಯೆಗಳ ಮೇಲೆ ಕರ; ಇದಲ್ಲದೆ, ದನ-ಕರಗಳ ಮೇಲೆಯೂ ಕರ ಹೇರಲ್ಪಟ್ಟಿದೆ. ಈ ಕರಗಳನ್ನೆಲ್ಲ ತೆರಲಾರದೆ, ಪ್ರಜೆಗಳು ಸಂಪು ಮಾಡಿದರು. ಆದರೂ, ಕೇಳುವವರ್‍ಯಾರಿಲ್ಲ. ಒತ್ತಾಯದ ಕ್ರಮ ನಡಿಸಿ ಕರಗಳು ವಸೂಲ ಮಾಡಲ್ಪಡುತ್ತವೆ. ಪ್ರಜೆಗಳ ದೂರುಗಳನ್ನು ರಾಜರಿಗರುಹಲು ಮುಂಬಯಿಯೊಳಗಿನ ಅಲ್ಲಿಯ ಪ್ರಜೆಗಳು ಪ್ರಜಾಮಂಡಳವೊಂದನ್ನು ಸ್ಥಾಪಿಸಿದರು. ಈ ಮಂಡಲವು ರಾಜದ್ರೋಹಪರವೆಂದು ಮಹಾರಾಜರ ದರಬಾರವು ಘೋಷಿಸಿದೆ. ಈಗ ಈ ಪ್ರಜಾಮಂಡಳದ ವಿದ್ಯಮಾನ ಮುಂಬಯಿಯ ಶ್ರೀ॥ ಜಮನಾದಾಸ ದ್ವಾರಕಾದಾಸರವರು ಅಲ್ಲಿಯ ಸ್ಥಿತಿಗತಿಯನ್ನು ಒಂದು ಕಮೀಶನಿನ ವಿದ್ಯಮಾನ ವಿಚಾರಿಸಲು ಮುಂಬಯಿ ಸರಕಾರಕ್ಕೆ ಬೇಡಿಕೊಂಡಿರುವರು.

⁂

ಅದ್ಭುತ ಚಮತ್ಕಾರ.

ನಾಗಪುರದೊಳಗಿನ ಪಾಂಡುರಂಗ ಬುಧವಾರಿ ದೇವಾಲಯದೊಳಗಿನ ವಿಠ್ಠಲ-ರುಕುಮಾಯಿ ಮೂರ್ತಿಗಳ ಕಣ್ಣೊಳಗಿಂದ ಕಳೆದ ಅಗಸ್ಟ ತಿಂಗಳ ೧೭ ನೇ ತಾರೀಖಿಗೆ ೧೨ ತಾಸುಗಳ ವರೆಗೆ ಅಶ್ರುಗಳು ಸುರಿದವು. ಮೊದಲು ಇದು ಕಲ್ಪಿತ ಕಥೆಯೆಂದು ಎಣಿಸಲಾಯಿತು. ಅನೇಕರು ಕಣ್ಣಾರೆ ಕಂಡ ಬಳಿಕ, ಸತ್ಯಸ್ಥಿತಿಯೆಂದು ಅಲ್ಲಿಯ ಶ್ರೀ॥ ನಾರಾಯಣರಾವ ಪಿದಾವ ಮುಂತಾದ ಪ್ರಮುಖರು ಈ ಹಕೀಕತನ್ನು ವರ್ಣಿಸಿ ಹಸ್ತಪತ್ರಿಕೆಗಳನ್ನು ತೆಗೆದರು. ದೇವಾಲಯದಲ್ಲಿ ಶ್ರೀ ದೇವರ ಶಾಂತಿಪ್ರೀತ್ಯರ್ಥ ಪ್ರಾರ್ಥನೆ ಮಾಡಲಾದವು. ಕಾರಣವೇನೆಂದು ಇನ್ನೂ ತಿಳಿಯಲಿಲ್ಲ. ತಾಜುದ್ದೀನ ಸಾಹೇಬರೆಂಬ ಮಹಮ್ಮದೀಯ ಸಾಧು ಪುರುಷರು ಅದೇ ದಿನ ನಿಜಧಾಮಕ್ಕೆ ತೆರಳಿದ್ದರು. ಅವರಿಗಾಗಿಯೇ ಶ್ರೀ ದೇವರು ಮರುಗಿದರೆಂದು ಅನೇಕರ ತರ್ಕ. ಇತ್ಯಾದಿ ಹಕೀಕತು ಮುಂಬಯಿಯ "ಟಾಯ್ಮ್ಸ ಅಫ್ ಇಂಡಿಯಾ" ಪತ್ರಿಕೆಯ ಸುದ್ದಿಗಾರರು ಪ್ರಕಟಿಸಿದ್ದಾರೆ.

"ವಿದ್ಯಾರ್ಥಿಗಳಿಗೆ ಶಾರೀರಿಕ ಶಿಕ್ಷಣವು ಅತ್ಯಾವಶ್ಯಕವು."

ಯುವಕರೊಂದು ರಾಷ್ಟ್ರದ ಏಳ್ಗೆಗೆ ಪ್ರಾಮುಖ್ಯವಾಗಿ ಶಿಕ್ಷಣವೇ ಮೂಲಾಧಾರವಾಗಿದೆ. ಶಿಕ್ಷಣವು ಶಾರೀರಿಕ, ಮಾನಸಿಕ, ನೈತಿಕವೆಂದು ವರ್ಗೀಕರಿಸಲ್ಪಟ್ಟಿದೆ. ಯಾವದೊಂದು ಕಟ್ಟಡಕ್ಕೆ ಅದರ ತಳಗಟ್ಟು, ಮರಗಳಿಗೆ ತಾಯಿಬೇರೂ ಮೂಲಾಧಾರವಾಗಿರುವಂತೆ ನಿಜವಾದ ರಾಷ್ಟ್ರೋನ್ನತಿಗೂ ಶಾರೀರಿಕ ಶಿಕ್ಷಣವೇ ಅವಶ್ಯವಾಗಿದೆ. ನೈತಿಕ ಮತ್ತು ಮಾನಸಿಕ ಶ್ರೇಯೋಭಿವೃದ್ಧಿಗೆ ಸಾಧಕವಾಗಿಯೂ ಅತ್ಯಂತ ಉಪಯುಕ್ತವಾಗಿಯೂ ಇರುವ ಶರೀರಾರೋಗ್ಯ ವಿಚಾರವೆಂಬ ಬೀಜವನ್ನು ಭಾವೀರಾಷ್ಟ್ರೋನ್ನತಿಯ ಆಧಾರಸ್ತಂಭಗಳಂತಿರುವ ಪ್ರಾ॥ ಶಾಲೆಯೊಳಗಿನ ವಿದ್ಯಾರ್ಥಿಗಳ ಮನೋಭೂಮಿಕೆಯಲ್ಲಿ ಬಿತ್ತುವದು ಶಿಕ್ಷಕರ ಆದ್ಯ ಕರ್ತವ್ಯವಾಗಿದೆ. ಆದರೆ ಈ ವಿಷಯದಲ್ಲಿ ಸಾಕಷ್ಟು ಲಕ್ಷ ಕೊಡದ್ದರಿಂದ ನಮ್ಮ ಭರತಖಂಡವು ಅನರ್ಥಪರಂಪರೆಗೆ ಕಾರಣವಾಗಿದೆ. ಹ್ಯಾಗೆಂದರೆ ಜನತೆಯು ದಿನದಿನಕ್ಕೆ ಸಂಖ್ಯೆಯ ಮಾನದಿಂದ ಹೆಚ್ಚುತ್ತಲಿದ್ದರೂ ಅಶಕ್ತರೂ, ದುರ್ಬಲ ಮನಸ್ಸಿನವರೂ, ಆತ್ಮಸಂಯಮವಿಲ್ಲದವರೂ, ಅಸಹಿಷ್ಣುಗಳೂ, ಅಲ್ಪಾಯುಗಳೂ, ಪರಾವಲಂಬಿಗಳೂ ಆಗಿ ಕಾಲಹರಣ ಮಾಡುವರೆಂಬ ಸಂಗತಿಯು ಅತ್ತಿತ್ತಲಾಗಿ ತಜ್ಞರ ನಿದರ್ಶನಕ್ಕೆ ಬಂದು ಅಂಥ ಸ್ಥಿತಿಯನ್ನು ಹೋಗಲಾಡಿಸುವ ಏರ್ಪಾಟುಗಳನ್ನು ಮಾಡುತ್ತಲಿರುವದು ಅಭಿನಂದನೀಯವು.

ಶಾಲೆಗಳಲ್ಲಿ ಮಾನಸಿಕ ಹಾಗೂ ನೈತಿಕ ಶಿಕ್ಷಣದ ಕಡೆಗೆ ಕೆಲಮಟ್ಟಿಗೆ ಲಕ್ಷಪೂರೈಸಲ್ಪಡುತ್ತಿದ್ದರೂ, ಶಾರೀರಿಕ ಶಿಕ್ಷಣಕ್ಕಿಂತ ಓದು ಬರಹಕ್ಕೇ ವಿಶೇಷವಾಗಿ ಪ್ರಾಧಾನ್ಯ ಕೊಟ್ಟದ್ದರಿಂದ ಸಾವಿರಾರು ವಿದ್ಯಾರ್ಥಿಗಳು ಪ್ರತಿ ವರ್ಷವೂ ವಿದ್ಯಾನಿಲಯಗಳಿಂದ ತೇರ್ಗಡೆ ಹೊಂದುತ್ತಲಿದ್ದರೂ ಸಮಾಜಕ್ಕೆ ಕೊಡಲ್ಪಡುತ್ತಿದ್ದರೂ ಮುಂದೆ ಕೃಶಾಂಗರಾಗಿಯೂ, ಅಶಕ್ತರಾಗಿಯೂ ಇರುತ್ತಾರೆಂಬ ಸಂಗತಿಯು ಸರ್ವಸಮ್ಮತವಿದೆ. 'ಶರೀರಮಾದ್ಯಂ ಖಲು ಧರ್ಮಸಾಧನಮ್' ಎಂಬೀ ಸುಭಾಷಿತವು ಈಗ ಲಕ್ಷಕ್ಕೆ ಬರುತ್ತಿರುವದಿಲ್ಲ. ಮೇಧಾಶಕ್ತಿಯಲ್ಲಿ ಏನೋ ಪ್ರತಿಭಾಶಾಲಿಗಳಾಗಿರಬಹುದು !

ಆದರೇನು? ಶಾರೀರಿಕ ಶ್ರಮವನ್ನು ಕಿಂಚಿತ್ತಾದರೂ ಸಹಿಸಲಸಮರ್ಥರು. ಕಾಲಕಾಲಕ್ಕೆ ಚಹಾ, ಕಾಫೀ ಮುಂತಾದ ಪಾನಗಳಾಗಬೇಕು. ಇಲ್ಲವಾದರೆ ತಲೆನೋವೆಯಿಂದಾಗಲೀ, ಅಂಗದೌರ್ಬಲ್ಯದಿಂದಾಗಲೀ ಹಗಲಿರುಳು ನರಳುತ್ತಿರುವರು. ಮನೆಯಿಂದ ಹೊರಗೆ ಹೋಗಬೇಕಾದರೆ ವಾಹನಗಳಾಗಬೇಕು. ಬರಿಗಾಲಿನಿಂದ ಸಂಚರಿಸಲು ತ್ರಾಣವಿರುವದಿಲ್ಲ. ಹೆಚ್ಚು ಹೆಚ್ಚು ಕಿಮ್ಮತ್ತಿನ ಲೇಹಗಳನ್ನು ತಿಂದು ಶಕ್ತಿಯನ್ನು ವರ್ಧಿಸಲಿಕ್ಕೆ ಎಷ್ಟುಗಡೆಯನ್ನು ಮಾಡುತ್ತಲಿದ್ದರೂ ಆರ್ಯಸಂಸ್ಕೃತಿಯ ಆಹಾರ-ವಿಹಾರಗಳ ಮರ್ಯಾದೆಯಿಂದ ಹೇಳತಕ್ಕಂಥ ಲಾಭವಾಗಲಾರದು. ಯಾವ ಯಂತ್ರವೇ ಆಗಲಿ, ಅದನ್ನು ಸರಿಯಾಗಿ ಉಪಯೋಗಿಸುವದರಿಂದ ಅದು ಒಳ್ಳೇ ಸ್ಥಿತಿಯಲ್ಲಿದ್ದು ಬಹುಕಾಲ ಬಾಳುವದು. ಇಲ್ಲದಿದ್ದರೆ ತುಕ್ಕುಹಿಡಿದು ಅಪ್ರಯೋಜಕವಾಗುವದಷ್ಟೇ. ನಮ್ಮೀ ಶರೀರವಾದರೂ ಬಹು ಸೂಕ್ಷ್ಮವಾದ [illegible] ಯಂತ್ರವಾಗಿರುತ್ತದೆ. ಇದನ್ನು ಸುವ್ಯವಸ್ಥವಾಗಿ ಉಪಯೋಗಿಸಬೇಕಾದರೆ ಶರೀರಶಾಸ್ತ್ರ, ಆರೋಗ್ಯಶಾಸ್ತ್ರ ಮುಂತಾದ ವಿಷಯಗಳನ್ನು ಬಾಲಕರಿಗೆ ಪ್ರಾಥಮಿಕ ಶಿಕ್ಷಣ ವ [illegible] ದೋ ಬೋಧಿಸುವದು ಅತ್ಯಾವಶ್ಯಕವು. ಯಾಕಂದರೆ ಇಂಥ ಉಪಯುಕ್ತವಾದ ವಿಷಯಗಳನ್ನು ಬೋಧಿಸಲಿಕ್ಕೆ ಶಾಲೆಯೇ ಬಹು ಯೋಗ್ಯವಾದ ಸ್ಥಳವಾಗಿದೆ. ಅಂದರೆ ವಿದ್ಯಾಲಯವು ಬಾಲಕ-ಬಾಲಿಕೆಯರ ಕೋಮಲವಾದ ಮನಸ್ಸನ್ನು ಬೇಕಾದತ್ತ ಆಕರ್ಷಿಸುವ ಮುಖ್ಯ ಸ್ಥಳವು. ಮಾನಸಿಕ ಶಿಕ್ಷಣವು ಶರೀರದಾರೋಗ್ಯದಿಂದಾಗತಕ್ಕದ್ದು. ಸುದೃಢವಾದ ದೇಹದಲ್ಲಿ ಸುಶಿಕ್ಷಿತವಾದ ಮನಸ್ಸಿದ್ದರೆ ಮಾನವತ್ವಕ್ಕೆ ಕುಂದಣವಿದ್ದಂತೆ ವಿರಾಜಿಸುವದು.

ದೃಢವಾದ ಶರೀರವನ್ನು ಪಡೆಯಬೇಕಾದರೆ ಮಾಡುವ ಕಾರ್ಯವೂ ನೋಡುವ ನೋಟವೂ, ಚಿಂತಿಸುವ ಯೋಜನೆಯೂ ಕಾರಣವಾಗಿದೆ. ಮಾನವನ ಸೌಖ್ಯವು ಬಹ್ವಂಶದಿಂದ ದೈಹಿಕ ಸೌಷ್ಠವದಲ್ಲಿಯೂ, ಮಾನಸಿಕ ಸ್ವಾಸ್ಥ್ಯದಲ್ಲಿಯೂ ಅಡಕವಾಗಿರುತ್ತದೆ. ಮಾನಸಿಕ ಶಕ್ತಿಯು ಹೆಚ್ಚು ಕಡಿಮೆ ದೈಹಿಕ ಸ್ವಸ್ಥತೆಯಿಂದಿರುವದು. ಯಾಕಂದರೆ, ಆರೋಗ್ಯವಂತರೇ ಹೆಚ್ಚು ಕಾಲ ಬಾಳುವದಲ್ಲದೆ ಮಾನಸಿಕ ಶ್ರಮವನ್ನು ಕೈಕೊಳ್ಳಲು ಅರ್ಹರಾಗಿರುವರು. ಶಾರೀರಿಕ ಕುಂದುಗಳುಳ್ಳವರಿಂದ (Physical defects) ಮಹತ್ತರವಾದ ಕೆಲಸಗಳಾಗಲಾರವು. ವಿದ್ಯಾರ್ಥಿಗಳು ಸದಾಚಾರಸಂಪನ್ನರಾಗಿಯೂ, ದೃಢಚಿತ್ತವುಳ್ಳವರಾಗಿಯೂ, ದೇಹಾರೋಗ್ಯವುಳ್ಳವರಾಗಿಯೂ ಇರಬೇಕಾದರೆ ಮೊಟ್ಟಮೊದಲು ಶಾಲೆಗಳಲ್ಲಿ ಶಾರೀರಿಕ ಶಿಕ್ಷಣದ ಕಡೆಗೆ ವಿಶೇಷವಾಗಿ ಲಕ್ಷಕೊಡತಕ್ಕದ್ದು. ಒಣ ಸುಭಾಷಿತಗಳನ್ನು ಬಾಯಿಪಾಠ ಮಾಡಿಸುವದರಿಂದಲೂ ಉದ್ದುದ್ದ ಉಪನ್ಯಾಸಗಳನ್ನು ಕೊಡುವದರಿಂದಲೂ ಹೇಳತಕ್ಕಷ್ಟು ಉಪಯೋಗವಾಗಲಿಕ್ಕಿಲ್ಲ. ಯಾಕಂದರೆ, ಮಾತಿಗಿಂತ ಕೃತಿಯೇ ಲೇಸು. ಶಾರೀರಿಕ ಶಿಕ್ಷಣವು ಪ್ರತ್ಯಕ್ಷ ಕೃತಿಗಳಿಂದ ತೋರಿಸತಕ್ಕದ್ದದೆ.

ಇತ್ತಲಾಗಿ ಹಲವು ವರ್ಷಗಳಿಂದ ಸಾಧಿಸಿದ ರಾಷ್ಟ್ರದೊಳಗಿನ ನಾಗರಿಕರೂ, ಅನೇಕ ವಿದ್ವಾಂಸರೂ, ವಿಜ್ಞಾನಶಾಸ್ತ್ರವಿಶಾರದರೂ ಈ ಅಪಾರವಾದ ಜನಸೃಷ್ಟಿಯ ವಿಚಾರಕ್ಕಾಗಿ ಬಹು ಚರ್ಚಿಸುತ್ತಿರುವರು. ಭೂಮಿಯ ಮೇಲೆ ಹೇರಳವಾಗಿ ಮನುಷ್ಯವರ್ಗವು ವ್ಯಾಪಿಸಿರುವದಲ್ಲದೆ ಎಲ್ಲಾ ಪ್ರದೇಶಗಳಲ್ಲಿ ಅವನ ಸಂಸಾರವು ಹರಡಿಕೊಂಡಿದೆ. ಹೀಗೆ ವೃದ್ಧಿಯಾದ ಜನಸಮ್ಮರ್ದನೆಯಿಂದ ಪ್ರಪಂಚದ ಸೌಖ್ಯ ಮತ್ತು ಶಾಂತಿಯು ಕುಗ್ಗುತ್ತ ನಡೆದಿದೆ. ಅಕಾಲ ಮರಣ, ಮಾನಸಿಕ ಹಾಗು ಶಾರೀರಿಕ ದೌರ್ಬಲ್ಯ, ದುರಾಚಾರ ಮುಂತಾದವುಗಳು ಮನೆಮಾಡಿಕೊಂಡಿವೆ. ಅದರನಿಮಿತ್ತದಿಂದ ಕ್ಷೀಣ ಶಕ್ತಿಯುಳ್ಳ ಮಾನವೀ ವರ್ಗದಿಂದಲೇ ಈ ಎಲ್ಲಾ ದುಷ್ಪರಿಣಾಮಗಳುಂಟಾದವೆಂದು ಹೇಳಲು ಪ್ರತ್ಯವಾಯವಿಲ್ಲ. ಅವುಗಳಲ್ಲಿ ಮೊದಲನೇದು ಮೈಗಳ್ಳತನವು. ವ್ಯವಸಾಯ ಮಾಡುವ ಪ್ರದೇಶಗಳಲ್ಲಿ ಇದ್ದರೂ, ಕೃಷಿಕರ್ಮ, ಔದ್ಯೋಗಿಕ ವಿಚಾರ ಮೊದಲಾದವುಗಳ ಕಡೆಗೆ ಈ ಮೈಗಳ್ಳರ ಚಿತ್ತವು [illegible]. ಪ್ರತಿನಿತ್ಯವೂ ಅನೇಕ ಕ್ಷುಲ್ಲಕ ಪ್ರವೃತ್ತಿಗಳು ಸಹ ನಿರಂತರ ಉದ್ಯೋಗದಲ್ಲಿ ತೊಡಗಿ [illegible] ಲಂಪಟಗಳಾಗಿ ಮಾಡುತ್ತಿರುವವು. [illegible] ವಿಷಯಕ್ಕೆ [illegible] ಅವರಲ್ಲಿಯ ಶಾರೀರಿಕ ಶಿಕ್ಷಣದ ಅಭಾವವೇ ಮುಖ್ಯ ಕಾರಣವೆಂದರೆ ಅತ್ಯುಕ್ತಿಯೆನಿಸದು. [illegible] ಬಾಲವಿವಾಹ, [illegible] ದಿಂದ ನಮ್ಮ ದೈಹಿಕ ಸ್ವಾಸ್ಥ್ಯವು ತೀರ ಹದಗೆಟ್ಟು ಹೋಗುತ್ತ ನಡೆದಿದೆ. ಇದರ ಪರಿಣಾಮಗಳು ಇಷ್ಟಕ್ಕೇ ನಿಲ್ಲದೆ ಅವು ಭಯಂಕರವಾಗಿ ಬೆಳೆಯುತ್ತ ಹೋಗುತ್ತಿರುವದು ಸ್ಪಷ್ಟವಿದೆ. [illegible] ಹಿಂದಕ್ಕೆ ದೃಷ್ಟಿಯಿಟ್ಟು [illegible] ತೋರುತ್ತಿದೆ. ಪ್ರಾಚೀನ ಕಾಲದಲ್ಲಿ ಗುರುಕುಲ ಶಿಕ್ಷಣದಲ್ಲಿ ಆರೋಗ್ಯಶಾಸ್ತ್ರದ ಕಡೆಗೆ ವಿಶೇಷ ಲಕ್ಷ್ಯ ಕೊಡಲ್ಪಡುತ್ತಿತ್ತು. ವಿದ್ಯಾಭ್ಯಾಸ ಮಾಡುವ ಕಾಲದಲ್ಲಿಯೇ ಗುರುಗಳ ಶುಶ್ರೂಷೆಯನ್ನು ಮಾಡಬೇಕಾದ್ದರಿಂದ ಶಾರೀರಿಕ ಶಿಕ್ಷಣವು ಸಹಜವಾಗಿಯೇ ಕೊಡಲ್ಪಡುತ್ತಿತ್ತು. ಹನ್ನೆರಡು ವರ್ಷಗಳವರೆಗೆ ಗುರುಕುಲದಲ್ಲಿ ಶಿಕ್ಷಣಪಡೆಯಬೇಕಾದ ನಿಬಂಧನೆಯಿದ್ದುದರಿಂದ [illegible] ವಿದ್ಯಾರ್ಥಿಯು ಬ್ರಹ್ಮಚರ್ಯ ವ್ರತವನ್ನು ಚನ್ನಾಗಿ ಪಾಲಿಸಬೇಕಾಗುತ್ತಿತ್ತು. ಅದರಿಂದ ದೈಹಿಕ ಸಾಮರ್ಥ್ಯವು ಚನ್ನಾಗಿ ಇರುತ್ತಿತ್ತು. ಸದ್ಯದ ಪರಿಸ್ಥಿತಿಯಲ್ಲಿ ಅಂತಹ ನಿಬಂಧನೆಗಳನ್ನು ಇಡುವದು ಈಗ ಸಾಧ್ಯವಿಲ್ಲದ್ದರಿಂದ ಹೊರಗಿನಲ್ಲಿ [illegible] ಮೇಲಿಂದ ಮೇಲೆ [illegible] ಸಾಧ್ಯವಿಲ್ಲದೇ?' ಎಂಬ [illegible] ಅದರ ನಿಜವಾದ ಫಲವೇ [illegible] ಆರೋಗ್ಯವು ಪ್ರಾಕೃತಿಕ Natural [illegible] ಉಪಾಯಗಳಿಂದ ದೊರೆಯುವದು. ಸ್ಪಷ್ಟವಾದ ಬಾಲಕರ ಮನಸ್ಸು ಚಿಕ್ಕಂದಿನಲ್ಲಿ ಬಹಳ ಆಟ-ನೋಟಗಳಲ್ಲಿ ಆಸಕ್ತವಾಗಿ ತೊಡಗಿರುವದರಿಂದ ಅವರಿಗೆ ಗಣಿತ [illegible] ರುಚಿಸುವದಿಲ್ಲ. ಅದರಿಂದ ಚಿಕ್ಕಂದಿನ ಬಾಲಕರ ಚಿತ್ತದ [illegible] ಕಲಿಯುವಂತೆ ಶಿಕ್ಷಕನ ಬೆದರಿಕೆಗೆ ಗ್ರಾಸ್ಯರಾದರೂ ಗಣಿತವನ್ನು ಮಾಡುವರು. ಗ್ರಾಮೋಫೋನಿನ ಪ್ಲೇಟುಗಳಂತೆ ವಿದ್ಯಾರ್ಥಿಗಳಿಂದ ಗಣಿತ ಮಾಡಿಸುವದರಿಂದೇ ತನ್ನ ಕೆಲಸವೆಂದು ತಿಳಿಯುವ ಅಂಥ [illegible] ನಿಜವಾದ ಶಾರೀರಿಕ ಶಿಕ್ಷಣವನ್ನು ಕೊಡುವದು ಶಿಕ್ಷಕನ ಆದ್ಯ ಕರ್ತವ್ಯವೆಂದು ಪ್ರತಿಯೊಬ್ಬನು ಲಕ್ಷ್ಯದಲ್ಲಿಡತಕ್ಕ ಸಂಗತಿಯು. ಯಾಕಂದರೆ ಭಾರತೀಯ ಶಾಸ್ತ್ರವನ್ನು [illegible] ಜನಾಂಗದ ಶಿಕ್ಷಣವು ಅವಲಂಬಿಸಿರುತ್ತದೆ. ಇಂಥ ಪವಿತ್ರ ಕಾರ್ಯವನ್ನು ಕೈಕೊಂಡವರು ವಿದ್ಯಾರ್ಥಿಗಳ ಶಾರೀರಿಕ ಶಿಕ್ಷಣದ ಕಡೆಗೆ ಎಂದೂ ದುರ್ಲಕ್ಷ್ಯ ಮಾಡಲಿಕ್ಕಿಲ್ಲೆಂದು ಪೂರ್ಣ ನಂಬಿಗೆಯಿದೆ.

ಪುರಾಣೇತಿಹಾಸಗಳಲ್ಲಿ ಹಿಂದಿನ ಹಲಕೆಲವು ಮಹನೀಯರು ಚಿರಂಜೀವಿತವನ್ನು, ಇಚ್ಛಾಮರಣವನ್ನು ಹೊಂದಿರುವರೆಂಬುದು ಕೇಳುತ್ತೇವೆ. ಇದಕ್ಕೆ ಅವರ ದೈಹಿಕ ಶಕ್ತಿಯೇ ಮುಖ್ಯ ಕಾರಣವೆಂಬುದು ವ್ಯಕ್ತವಾಗುತ್ತದೆ. ಆಧುನಿಕ ಕಾಲದಲ್ಲಿಯೂ ಅನೇಕರು ದೀರ್ಘಾಯುಗಳಾಗಿರುವರೆಂಬುದನ್ನು ನಾವು ವೃತ್ತಪತ್ರಗಳಿಂದ ಕೇಳುತ್ತಲಿದ್ದೇವೆ. ವಿದ್ಯಾರ್ಥಿಗಳಿಗೆ ಶಾರೀರಿಕ ಶಿಕ್ಷಣ ಕೊಡುವಾಗ ಅವರ ಆಹಾರ-ವಿಹಾರಗಳ ಕಡೆಗೆ ಮೊಟ್ಟಮೊದಲು ಲಕ್ಷ್ಯಕೊಡಬೇಕಾಗಿದೆ. ಅದಕ್ಕಾಗಿ ಹಾಲು, ಹಣ್ಣು, ಕಾಯಿಪಲ್ಲೆ, ದ್ವಿದಳ ಧಾನ್ಯ ಮೊದಲಾದ ಪೌಷ್ಟಿಕ ಆಹಾರವು ಅವಶ್ಯವಾದದ್ದು. ಅಂದರೆ ಆಯಾ ದೇಶಋತುಗುಣಕ್ಕೆ ಕಾಲಕಾಲಕ್ಕೆ ಸರಿಯಾಗಿ ಬೇಕಾಗುವಷ್ಟು ಉತ್ತಮವಾದ ಆಹಾರವನ್ನು ಕೊಡುತ್ತ, ಪರಿಶುದ್ಧವಾದ ಗಾಳಿಯನ್ನು ಸೇವಿಸುತ್ತ ವ್ಯಾಯಾಮದಿಂದ ಬಾಹ್ಯ-ಅಂತರ್ಬಾಹ್ಯ ಶರೀರಾವಯವಗಳನ್ನು ದೃಢಪಡಿಸುತ್ತ ಸದಾ ಸಂತೋಷವೃತ್ತಿಯುಳ್ಳವರನ್ನಾಗಿ ಮಾಡುವದೇ ಇದರ ಮುಖ್ಯೋದ್ದೇಶವು.

ಶಾಲೆಗಳ ಅಂಗಳದಲ್ಲಿ ತೋಟಗಳನ್ನು ಮಾಡಿಕೊಂಡು ವಿದ್ಯಾರ್ಥಿಗಳಿಂದ ಅದರ ಕೃಷಿಯನ್ನು ಮಾಡಿಸೋಣ, ಕಾರ್ಪೆಂಟರಿ ಕಮ್ಮಾರಿಕೆ ಮೊದಲಾದ ಔದ್ಯೋಗಿಕ ಶಿಕ್ಷಣಕೊಟ್ಟಲ್ಲಿ ಎರಡೂ ಕಾರ್ಯಗಳು ಒಮ್ಮೆಲೇ ಜರುಗುವದರಿಂದ ಇವುಗಳ ಲಾಭವು ಏಕಕಾಲಕ್ಕೆ ಆಗುತ್ತದೆ. ಇಂಥ ಸಂಗತಿಗಳನ್ನು ನಾವು ಪಾಶ್ಚಾತ್ಯ ಸುಧಾರಿಸಿದ ರಾಷ್ಟ್ರಗಳಲ್ಲಿಯ ಮಾದರಿಯ ಶಾಲೆಗಳಿಂದ ಕಲಿತುಕೊಳ್ಳಬಹುದು. ಇದಲ್ಲದೆ ಶಾಲೆಗಳಲ್ಲಿ ಹುಡುಗರಿಗೆ ವಿಧವಿಧದ ಆಟಗಳನ್ನು ಆಡಿಸೋಣ, ಓಡುವ ಶರ್ಯತ್ತುಗಳನ್ನು ಹಾಕೋಣ, ಈಸೋಣ ಮೊದಲಾದ ಸಾಧನಗಳಿಂದ ಮೇಲಿನ ಧ್ಯೇಯವನ್ನು ಸಾಧಿಸಿಕೊಳ್ಳಬಹುದು. ಶರೀರವನ್ನು ಆರೋಗ್ಯದಿಂದಿಡಬೇಕಾದರೆ ನಿಯಮಿತ ಕಾಲಕ್ಕೆ ಸರಿಯಾದ ವ್ಯಾಯಾಮವನ್ನು ತೆಗೆದುಕೊಳ್ಳಬೇಕೆಂಬುದು ಸಮಂಜಸವಾದ ತಿಳಿದ ವಿಚಾರವಾಗಿದೆ. ಆದರೂ ಯಾಂತ್ರಿಕವಾದಿಂದ ವ್ಯಾಯಾಮವನ್ನು ಮಾಡುವದು ಮಾತ್ರ ಅಷ್ಟು ಸಮರ್ಪಕವಾಗಿಲ್ಲ. ಮಾನಸಿಕ ಶಿಕ್ಷಣವನ್ನು ಕೊಡದಿದ್ದರೆ ಬರೇ ದೊಡ್ಡ ಶಕ್ತಿವಲ್ಲಿ ಗಣನೆಯಾಗುವದು. ಆದರೆ ಶಾರೀರಿಕ ಸೌಖ್ಯತೆ ಇಲ್ಲದೆ ಅಂಗಾಂಗಗಳು ಕೃಶವಾಗಿಹೋಗಿದ್ದರೂ ಅಂಥವನು ವಿದ್ವಾಂಸನಾದರೆ ಏನು ಮರ್ಯಾದೆ! ಯಾಕಂದರೆ ತನ್ನ ಬುದ್ಧಿಯನ್ನು ವಿಕ್ರಯ ಮಾಡಿಕೊಂಡು ಜೀವಿಸುವವರೇ ಬಹಳ. ತನ್ನ ಬುದ್ಧಿಶಕ್ತಿಯನ್ನು ಹೊಂದುವದಕ್ಕೆ ಯಾವದು ಆಗತ್ಯವೆಂಬುದು ಸ್ವಲ್ಪ ನಿಧಾನವಾಗಿ ಯೋಚಿಸಿದರೆ ದೈಹಿಕ ಮಾಂಸಖಂಡಗಳೂ, ಮಿದುಳೂ, ರಕ್ತಚಲನೆಯೂ ಆಗತ್ಯವೆಂದು ಕಂಡುಹಿಡಿಯಬಹುದು. ಜ್ಞಾನೇಂದ್ರಿಯಗಳ ಆಲೋಚನಾಶಕ್ತಿಗೆ ರಕ್ತವು ಸಮೃದ್ಧಿಯಾಗಿರಬೇಕು. ಮಾನಸಿಕ ಶಿಕ್ಷಣದ ಜೊತೆಗೆ ತಕ್ಕ ಪ್ರಮಾಣದಿಂದ ಶಾರೀರಿಕ ಶಿಕ್ಷಣಕ್ಕಾಗಿ ಅವಕಾಶ ಕೊಟ್ಟರೆ ಆ [illegible] ಧಾವಿಗಳು ಸಹ ಪ್ರತಿಭಾಶಾಲಿಗಳಾಗಬಹುದು. ಅಂತಹ ದೇಶದ ಅಭ್ಯುದಯಕ್ಕೆ ಕೇವಲ ಮಾನಸಿಕ ಶಿಕ್ಷಣ ಒಂದೇ ಸಾಲದು. ದೇಹಾರೋಗ್ಯಕ್ಕೂ ದೇಹದಾರ್ಢ್ಯಕ್ಕೂ ಶಾರೀರಿಕ ಶಿಕ್ಷಣವು ಅತ್ಯಾವಶ್ಯಕವಾಗಿರುವದು. ವ್ಯಾಯಾಮ ಮಾಡುವದರಿಂದ ಒಂದು ತೆರನಾದ ಆನಂದವೂ ಉತ್ಸಾಹವೂ ಉಂಟಾಗುತ್ತದೆ. ಪ್ರತಿನಿತ್ಯವೂ ಮಾಡುವದರಿಂದ ಅಂಗಾಂಗಗಳೆಲ್ಲವೂ ಪುಷ್ಟವಾಗಿ ನೋಟಕ್ಕೆ ಬಹು ಅಂದವಾಗಿ ಕಾಣುತ್ತದೆ. ಬೈಲಿನಲ್ಲಿ ಆಟ ಆಡುವದರಿಂದ ಶರೀರಕ್ಕೆ ಕೊಂಚ ವ್ಯಾಯಾಮವಾಗುತ್ತದೆ. ಆಟಗಳಲ್ಲಿ ಕ್ರಿಕೆಟ್, ಫುಟಬಾಲ ಮೊದಲಾದವುಗಳು [illegible] ಕಟ್ಟಿಗೆ ಒಡೆಯೋಣ, ನೀರು ಸೇದೋಣ, ಈಸೋಣ ಮೊದಲಾದವುಗಳಿಂದ ಹೆಚ್ಚು ವ್ಯಾಯಾಮವಾಗುವದು. ವ್ಯಾಯಾಮದಿಂದ ಆತ್ಮಸಂಯಮನ ಕಷ್ಟಸಹಿಷ್ಣುತೆ, ತಾಳ್ಮೆ, ಮಾನಸಿಕ ಕೌಶಲ, ಶರೀರದಾರ್ಢ್ಯ ಮೊದಲಾದವುಗಳನ್ನು ಹೊಂದಬಹುದು.

ಅನೇಕರು ನಿರ್ಬಲರೆಂದು ನಿರಾಶರಾಗುವರು. ವ್ಯಾಯಾಮ ಮಾಡುವದಕ್ಕೆ ಶಕ್ತಿಯಿಲ್ಲವೆಂದು ಗುಣುಗುಟ್ಟುತ್ತಿರುವರು. ಈ ದೌರ್ಬಲ್ಯಕ್ಕೆ ಅನೇಕ ಕಾರಣಗಳಿವೆ. ಕೆಲವರು ವಂಶಪಾರಂಪರ್ಯದಿಂದಲೂ, ಕೆಲವರು ಬಾಲ್ಯ, ಕೌಮಾರ್ಯಾವಸ್ಥೆಗಳಲ್ಲಿಯೂ, ಇನ್ನು ಕೆಲವರು ಯೌವನದಲ್ಲಿಯ ದುರಾಚಾರಗಳಿಂದಲೂ ನಿರ್ವೀರ್ಯರಾಗುವರು. ಅದರಿಂದ “ನಾಲಿಗೆಯು ಮಾಡಿದ ಅಪರಾಧಕ್ಕೆ ಹಲ್ಲುಗಳಿಗೆ ಪೆಟ್ಟು ಬೀಳುವಂತೆ” ದೈಹಿಕ ಅಸ್ವಸ್ಥತೆಯ ಮೂಲಕ ಮಾನಸಿಕ ವಿಚಾರಗಳು ಸಹ ಕುಗ್ಗಹತ್ತುವವು.

ಸಾರಾಂಶವೇನಂದರೆ ಶಾಲೆಗಳ ಉಪಾಧ್ಯಾಯರು ವಿದ್ಯಾರ್ಥಿಗಳ ಮಾನಸಿಕ, ನೈತಿಕ ಶಿಕ್ಷಣಗಳ ಕಡೆಗೆ ಲಕ್ಷ್ಯಕೊಡುವಂತೆಯೇ ಅವರ ಶಾರೀರಿಕ ಶಿಕ್ಷಣದ ಕಡೆಗು ಹೆಚ್ಚು ಲಕ್ಷ ಕೊಟ್ಟು ಅವರನ್ನು ಆರೋಗ್ಯಸುಖಿಗಳನ್ನಾಗಿ ಮಾಡಬೇಕೆಂಬುದೇ ನಮ್ಮ ವಿನಂತಿಯು. ಈ ಉದ್ದೇಶವನ್ನು ಬರೆದು ದಣಿದ ಈ ಲೇಖನಿಯು ಕೊಂಚ ವಿಶ್ರಾಂತಿಯನ್ನು ಪಡೆಯಲಿ.

ಶಿಕ್ಷಕ ಹಿತೇಚ್ಛು,

ಎ. ವ್ಹಿ. ಪ್ರಭು.

— ಹುಬ್ಬಳ್ಳಿಯ ನಾಗರಿಕರಾದ ರಾ| ಗುರು ಸಾಂಕಪ್ಪನವರು ಶಿವಾಧೀನರಾಗುವ ಸಮಯಕ್ಕೆ ಕ್ಷೇತ್ರ ಉಳವಿಯ ಚನವೇಶ್ವರ ದೇವಾಲಯದ ಜೀರ್ಣೋದ್ಧಾರಕ್ಕಾಗಿ ೦೦೦ ರೂಪಾಯಿಗಳನ್ನಿತ್ತಿರುವರು.

— ರಾಮಕೃಷ್ಣ ಮಿಶನಿನ ಕಲಿಫೋರ್ನಿಯಾದೊಳಗಿನ ನುಯಾಯಿಗಳು ಸಾನಫ್ರಾನ್ಸಿಸ್ಕೋ ಪಟ್ಟಣದಲ್ಲಿ ಒಂದು ತ್ಯ ಹಿಂದೂ ದೇವಾಲಯವನ್ನು ಕಟ್ಟಿಸಿರುವರು.

ಅಮೇರಿಕನ್ ಉಪಾಯ.

ಎಂಬ್ರೋಸಿಯಾ.

ಸ್ತ್ರೀರೋಗಪರಿಹಾರಕ್ಕಾಗಿ.

ಎಂಬ್ರೋಸಿಯಾವು ಸಮಸ್ತ ಪ್ರಕಾರದ ಸ್ತ್ರೀರೋಗಳನ್ನು ಪರಿಹರಿಸುವ ಒಂದೇ ಒಂದು ಔಷಧವು. ು ಸ್ತ್ರೀಸೌಂದರ್ಯವನ್ನುಂಟುಮಾಡುತದೆ. ಸಾನ್ಯವಾಗಿ ಹೆಂಗಸರ ಪ್ರಕೃತಿಯು ಸೂಕ್ಷ್ಮವಿರುತದೆ. ೋ ಆಹಾರ ದೊರೆಯದೆ, ವಿಶೇಷ ಆಯಾಸ ಳ್ಳುವದರಿಂದ ಸ್ತ್ರೀಯರ ಪ್ರಕೃತಿಯು ಕೆಡು. ಮುಟ್ಟಾಗುವಾಗ ಶೂಲಿ ಏಳುವದು, ಮುಟ್ಟು ರುವದು, ಅಪಸ್ಮಾರ, ಬಂಜೆತನ ಮುಂತಾದ ಕೃತಿಯ ರೋಗಗಳು, ಅಜೀರ್ಣ, ತಲೆಶೂಲಿ ತನ ಇವೆಲ್ಲ ಸ್ತ್ರೀರೋಗಗಳಮೇಲೆ ರಾಮ ಮದ್ದು. ಎಂಬ್ರೋಸಿಯಾವು ಸಮಸ್ತ ರೋಗಗಳನ್ನು ದೂರಮಾಡಿ, ಸ್ತ್ರೀಯರನ್ನು ಸಶಕ್ತ ಗು ಸೌಂದರ್ಯವಂತರನ್ನಾಗಿ ಮಾಡುತದೆ.

ಒಮ್ಮೆ ಪರೀಕ್ಷೆ ನೋಡಿ.

ಬೆಲೆ ಬಾಟ್ಲಿ ೧ ಕ್ಕೆ ರೂಪಾಯಿ ೨—೦—೦

ಂಟರು:— **ವೀರಿಯಲ ಏಜನ್ಸಿ,**
ಪ್ರಿನ್ಸೆಸ ಸ್ಟ್ರೀಟ, ಮುಂಬಯಿ ನಂಬರ ೨

ದಿ ಎಡ್ವಾನ್ಸ ಸೋಟರ-

ಟ್ರೇನಿಂಗ ಕ್ಲಾಸ

ರವಾಡ ಮತ್ತು ಕುಮಟಾ.

ನಮ್ಮ ಟ್ರೇನಿಂಗ ಕ್ಲಾಸಿನಲ್ಲಿ ಡ್ರಾಯ್ವಿಂಗ ಬಲಿಕ್ಕೂ, ರಿಪೇರಿ ಮಾಡಲಿಕ್ಕೂ ಕಲಿಸಿ ಂಗಳಲ್ಲಿ ಲ್ಯಾಸನ್ಸ ಸಹ ತೆಗಿಸಿ ಕೊಡಿಸಲಾಗುದೆ. ಬೇಕಾದವರು ಇದರ ಫಾಯಿದೆ ಪಡಕೊಳ್ಳಬಹುದು. ವಿಶೇಷ ಮಾಹಿತಿ ಸಮಕ್ಷ ಯಾ ದ್ವಾರಾ. ಪತ್ತೆ—

ರ ಹೊಟೆಲ್ಲ,
ರಿ ತರಾವ,
ರವಾಡ.

ಅನಂತರಾವ ಮಂಗೇಶರಾವ
ಕಟಿತ್ತಲ, ಮೋಟರ ಏಜಂಟ್ಸ
ಆಫೀಸ— ಕುಮಟಾ.

ಆಯುರ್ವೇದಿಕ) ಧಾತುಪೌಷ್ಟಿಕ, ಶಕ್ತಿವರ್ಧಕ, ರಕ್ತಶೋಧಕ (ಮಲಬಾರಿಕ್ಕ

ಮದನಕಾಮೇಶ್ವರೀಲೇಹ.

ಅಬಾಲ ವೃದ್ಧ ಸ್ತ್ರೀ-ಪುರುಷರ ಅನೇಕ ರೋಗಗಳ ಮೇಲೆ ಗುಣಕಾರಿಯಾದದ್ದು.

ಇದರಲ್ಲಿ ಕೇಸರ ಕಸ್ತೂರಿ ಪ್ರವಾಲ ಶಿಲಾಜಿತು ಅಭ್ರಕಭಸ್ಮಾದಿ ಅನೇಕ ವನೌಷಧಿಯುಕ್ತ ಇರುವದರಿಂದ ಧಾತು ಕಳ್ಳಗೋಣ ನಪುಂಸಕತ್ವ ಪ್ರಮೇಹ ಕುಷ್ಠ ಧಾತುಕ್ಷೀಣತೆ ಸ್ವಪ್ನದೋಷ ಉರುವಾತ ಸಂಧಿವಾತ ಸ್ತ್ರೀಯರ ಗರ್ಭಾಶಯದ ರೋಗ ಪಡಕ (ಗರ್ಮಿ) ಇ. ನಿವಾರಣೆಯಾಗಿ ಮುಂದೂ ರಕ್ತ-ಧಾತು ಸಂಚಯವಾಗಿ ಯಥೇಚ್ಛ ಸಂತಾನಸುಖವನ್ನು ಲಭಿಸುವ ಸಿದ್ಧೌಷಧ. ೧ ತಿಂಗಳು ನಡೆಯುವ ಡ.೧ಕ್ಕೆ ೨||ರೂ. ಟ. ಖ. ||ರೂ. ಒಮ್ಮೆಲೆ ೩ ಡ. ೭||ರೂ. ಟ.ಖ. ಮಾಫಿ. ಅನುಪಾನ ಔಷಧದ ಸಂಗಡ.

ಅತ್ಯುತ್ತಮ) ಜಂತುವಿನ ಔಷಧ(ಪರಸುಲಭ.

ಪುಡಿ ೧ಕ್ಕೆ ೧||ಆಣೆ ೫೦ಕ್ಕೆ ರೂ.೨||. ೧೦೦ಕ್ಕೆ ರೂ.೪ ಅನುಭವ ಶಕ್ಕ್ಯ. ಇವಲ್ಲದೆ ಎಲ್ಲಾರೋಗಗಳಮೇಲೆ ಅನುಭವ ಸಿದ್ಧೌಷಧಗಳು ಸಿಗುವವು. ವಿ. ಪಾ. ಬೇಕಾದವರು ೧ಆಣೆ ಟಿಕೀಟು ಪತ್ರಬರೆದಲ್ಲಿ ನಮ್ಮ ಆಯುರ್ವೇದೌಷಧ ಗುಣದರ್ಶಕಮಾಲಾ ಎಂಬ ಸಂಪೂರ್ಣ ಮಾಹಿತಿಯ ಪುಸ್ತಕವನ್ನು ಪುಕ್ಕಟೆಯಾಗಿ ಕಳಿಸುವೆವು.

ಮ್ಯಾನೇಜರ ಆಯುರ್ಚಿಕಿತ್ಸಾಮಂದಿರ, ತಾ. ಕಾರವಾರ, ಪೋ. ಚೆಂಡಿಯೆ.

ಮುಂಬೈ ಏಜಂಟ:— R. C. KAMAT. Teashop Store Lane, Fort, BOMBAY.

ಹುಟ್ಟಿದ ವಕ್ತವೇಳೆ ಬರೆದು ಕಳಿಸಿರಿ) ಸುಖಸಾಧನಕ್ಕೆ ಯೋಗ್ಯ ಉಪಾಯವು (ಯಾ ಜನ್ಮಟಿಪ್ಪಣ ಕಳಿಸಿರಿ

☞ ಮಲಬಾರಿ) ಕೇರಳ ಜ್ಯೋತಿಷ. (ಭವಿಷ್ಯ.

ಪೂರಾ ಜನ್ಮಟಿಪ್ಪಣ ಇದ್ದರೆ. ೧ವರ್ಷದ ಫಲಾಫಲ ೬.೧||ರೂ. ೫.೨||ರೂ. ೧೦ವ.೬.೪ರೂ. ಸದರೀ ಟಿಪ್ಪಣ ಸಹಾಯದಿಂದ ಆಯಾಕಾಲಕ್ಕೆ ಒದಗುವ ಇಷ್ಟಾನಿಷ್ಟ ಫಲಗಳನ್ನೂ ಅನಿಷ್ಟಫಲ ನಿವಾರಣಾರ್ಥ ಶಕ್ತಧರ್ಮಿಗಳ ಮನೋರೋಗಗಳಿಂದ ಸಂಕಟಗಳನ್ನು ಪರಿಹರಿಸುವ ಉಪಾಯಗಳನ್ನೂ ತಿಳಿಕೊಂಡು ಮುಂದಿನ ಭವಿಷ್ಯ ಕಾಲವು ಸುಖಕಾರಕ ಮತ್ತು ಲಾಭದಾಯಕವಾಗುವಂತೆ ಸದರೀ ಫಲವನ್ನು ಮಲಬಾರದಲ್ಲಿ ಪ್ರಸಿದ್ಧವಾದ ಹೋರಾಶಾಸ್ತ್ರ, ಕೇರಳ" ಇ. ಬಹುಮಾನ್ಯ ಗ್ರಂಥಗಳ ಆಧಾರದಿಂದ ಬರೆದು ಕಳಿಸುವೆ. ಟಿ. ಖ ಬೇರೆ.

ಮ್ಯಾನೇಜರ, "ಜ್ಯೋತಿಷ ಶಾಸ್ತ್ರ-ಭುವನ," ಚೆಂಡಿಯೆ. ತಾ. ಕಾರವಾರ

ರೊಕ್ಕಸ್ತರಿಗೆ ಒಳ್ಳೇ ಸಂಧಿ!

ಶಿರ್ಸಿ ಗ್ರಾಮ, ಶಿರ್ಸಿ ವ ಸಿದ್ದಾಪುರ ತಾಲೂಕ ಇವುಗಳಲ್ಲಿ ಭರ್ತಿ ಬಾಜಾರದಲ್ಲಿರುವ ಮನೆ ವ ಧಾನ ಮಡಿ ವ ಬಾಗಾಯ್ತ ಜಮೀನ ಆಸ್ತಿ ಆಜಮಾಸ ೧೫-೨೦ ಸಾವಿರ ಬೆಲೆ ಬಾಳುವಂಥಾದ್ದು ತೋರಣದಿಂದ ಇಟ್ಟುಕೊಂಡು ರೂಪಾಯಿ ಐದು ಸಾವಿರ ಕೊಡುವವರು ಬೇಕು. ಬಡ್ಡಿ ವಗೈರೆ ವಿಷಯದಲ್ಲಿ ಮಾತನಾಡಬೇಕಾದವರು ಈ ಕೆಳಗಿನ ವಿಳಾಸಕ್ಕೆ ಪತ್ರ ಬರೆದು ತಿಳಕೊಳ್ಳಬಹುದು. ಪತ್ರವ್ಯವಹಾರ ಮಾಡುವ ಪತ್ತೆ:—

c/o "**Kanara News,**"
KUMTA.

ಅತಿ ಉತ್ತಮವಾದ ನಶ್ಯ

ಈ ನಶ್ಯವು ನಮ್ಮಲ್ಲಿ ಬಹಳ ವರ್ಷಗಳಿಂದ ಪ್ರಖ್ಯಾತಿ ಹೊಂದಿರುತದೆ. ಬೇಕಾದವರು ತರಿಸಿಕೊಳ್ಳಬಹುದು. ಸೆಂಪಲ್ ಬೇಕಾದವರು ೧ಆಣೆ ಸ್ಟಾಂಪು ಕಳುಹಿಸಬೇಕು.

ನಂಬರ ೧. ಪೌಂಡು ೧ಕ್ಕೆ ೩—೪—೦.
" ೨ ಪೌಂಡು ೧ಕ್ಕೆ ೨—೦ ೦.

ಜಿ. ರಾಮಯ್ಯಾ ಕುರಡಿ,
ಪೋಸ್ಟ- ಶಿರ್ಸಿ, ಉ. ಕಾನಡಾ

धातु क्षीणता व कमजोरपणा यांसाठी

मदन मंजरी गोळ्या. (रजिस्टर्ड.)

या दिव्य गोळ्या रक्त व वीर्य सुधारून त्यांची चांगली वाढ करतात. पचन शक्ति सुधरून परसाकडे साफ होतें. त्याप्रमाणें प्रत्येक प्रकारची अशक्तता दूर होऊन शरीर तेजदार व बळवान होतें. कि. ४०. गोळ्यांच्या डबीस रु. १.

रमण विलासिनी गोळ्या. रात्रीं फक्त १ गोळी दुधाबरोबर खाल्यानें इच्छेप्रमाणें वीर्यस्तंभन होत. कि. डबीस रु. १

नपुंसकत्वारी घृत. हा लेप पुरुषाच्या गुह्यभागावर लावला असतां सर्व रोग नाश पावून खरें पुरुषत्व प्राप्त होतें. कि. डबीस रु. १.

कुमटा एजंट :— माधव सातप्पा शेणवी बेलेकेरी.

राजवैद्य नारायणजी केशवजी ब्रँच:— ३९३ काळबादेवी रोड मुंबई नं. २.

ಜಾಹೀರಾತು.

ತಾರೀಖು ೭-೪-೧೯೨೫ನೇ ಪತ್ರದಲ್ಲಿ ಪ್ರಸಿದ್ಧಪಡಿಸಿರುವ ನಾಮಾಂಕಿತ [illegible] ಪಂಡಿತ ಜ್ಯೋತಿಷಿ ಕೇ. ಸಿ. ನಾರಾಯಣ ಶಾಸ್ತ್ರಿ ಎಂಬವರು ಸ್ವಲ್ಪ ದಿವಸದ [illegible] ಡಿಸ್ಟ್ರಿಕ್ಟ [illegible] ಯಾವತೂ [illegible] ವಿಳಾಸಕ್ಕೆ ಪತ್ರವ್ಯವಹಾರ [illegible].
ಪತೆ—

ಕೇರಳ ಜ್ಯೋತಿಷಿ

ಕೇ. ಸಿ. ನಾರಾಯಣ ಶಾಸ್ತ್ರಿ,
[illegible] ರಾಜೇಂದ್ರ ಪೇಟೆ, ಪೋ. [illegible]
ಡಿಸ್ಟ್ರಿಕ್ಟ [illegible]

ವಿಶೇಷ] ಅನುಭವಸಿದ್ಧ [[illegible]

ವನೌಷಧಿಮೂಲಿಕೆಗಳು

ವಾಯುದುಮ್ಮಿನ (ನಿಮೋನಿಯಾ) ಮಹಾಭ್ರಾಂತಿ (ಕೋಲೆರಾ) ಅರ್ಧಾಂಗವಾಯು ಪೆರಾಲಿಸಿಸ್) ಹುಚ್ಚು ನಾಯಿ ನಾಯಿಕಡಿತ ಸರ್ಪದಂಶ, ಹೊಟ್ಟೆಯಲ್ಲಿ ಕೃತ್ರಿಮ ವಿಷಹಾಕಿದ್ದು (ಕೈಮದ್ದು) ವಗೈರೆ ರೋಗಗಳಿಗೆ ಒಂದೇ ಒಂದು ಮೂಲಿಕೆಯಿಂದ ಖಾತ್ರಿಯಾಗಿ ತೀವ್ರ ಗುಣಬರುವದು ಇಷ್ಟು ಬಹುಕಾಲದಿಂದ ಅನುಭವ ತಕ್ಕೊಂಡು [illegible] ಪ್ರತಿನಿತ್ಯ ಈಕಡೆಗೆ ಬಳಕೆಯಲ್ಲಿದ್ದು ಸಿಗುವ ಔಷಧಿಗಳ ತಾಜಾ ಮೂಲಿಕೆಗಳು. ಒಮ್ಮೆ ತರಿಸಿ ಅನುಭವ ತಕ್ಕೊಂಡರೆ ಖಾತ್ರಿಯಾದೀತು. ಕೋಲರಾ ಔಷಧಿಗಳ ದ್ರಾವಕ (Tincture ಸಹ [illegible] ಸೂಚಿಸಿದರೆ ಕಳುಹುವೆವು

ವಾಯುದುಮ್ಮಿನದ ಬಗ್ಗೆ ಔಷಧಿ ಮೂಲಿಕೆ ತೊಲೆ ೧ಕ್ಕೆ ೦ ೨ ೦
ಕೋಲೆರಾದ ಬಗ್ಗೆ „ „ „ ೦-೨-೦
ಅರ್ಧಾಂಗ ವಾಯುವಿನಬಗ್ಗೆ .. ೦-೪-೦
ನಾಯಿ ಕಡಿತದಬಗ್ಗೆ ... ೦-೪-೦
ಸರ್ಪಸುತ್ತಿನ ಬಗ್ಗೆ .. ೦-೨-೦
ಹೊಟ್ಟೆಯಲ್ಲಿ ಕೃತ್ರಿಮ ಔಷಧಿ ಬಿದ್ದ ಬಗ್ಗೆ ತೊಲೆ ೧೦ ಕ್ಕೆ ೦-೮-೦
ರಕ್ತಶುದ್ಧಿ ವ ಮಲಶೋಧನೆ ಬಗ್ಗೆ ಮೂಲಿಕೆ ರಾತ್ಲು ೧ಕ್ಕೆ ೧-೦-೦
ಸೋನಾಮಖಾ ([illegible]) ರಾತ್ಲು ೧ಕ್ಕೆ ೧-೦-೦

ರೋಗಗಳಿಗೆ [illegible] ಅದಕ್ಕೂ ಹೆಚ್ಚು ತರಿಸಿಕೊಳ್ಳುವವರಿಗೆ ಕಡಿಮೆ ದರದಿಂದ ಕಳಿಸಲ್ಪಡುವದು ಟಪಾಲ ಖರ್ಚು ಪ್ರತ್ಯೇಕ ವಿಶೇಷ ಮಾಹಿತಿ ಪತ್ರದ್ವಾರಾ ಅನುಪಾನಪತ್ರ ಔಷಧೀ ಸಂಗಡ.

ಎಸ್. ಜಿ. ಹೆಗಡೆ, ಮಾಸ್ಕೇರಿ,
ಪೋಸ್ಟ—ಬಂಕಿಕೊಡ್ಲ ಜಿಲ್ಹಾ ಉತ್ತರ ಕಾನಡಾ.

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬಿ. ಯವರ

ಸುಗಂಧ ನಸ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇರಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತದೆ. ಮೂರು ಡಬ್ಬಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು [illegible], ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ [illegible] ಕಳಿಸಲಾರೆವು.

[illegible] ಒಂದಕ್ಕೆ ಕ್ರಯ ರೂ ೦-೪-೦, ವ್ಹಿ. ಪಿ. ೪ ಡಜನ್ ೧ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦
[illegible] ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ
[illegible] — [illegible] ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಪಾರ್ಕಟೌನ, ಮದರಾಸ

ಕಿರ್ಲೋಸ್ಕರ ಪಂಪ.

◇

ಬಾವಿಯೊಳಗಿನ ನೀರನ್ನು ಮೇಲಕ್ಕೆ ತರುವದರಲ್ಲಿ

ಕಿರ್ಲೋಸ್ಕರ. ನೀರಿನ ಪಂಪು ಮೇಲದರ್ಜಿಯಿರುತ್ತದೆ. ಸಣ್ಣ ಮಕ್ಕಳು, ಅಬಲೆಯರು ಈ ಪಂಪಿನಿಂದ ನೀರನ್ನು ಒಂದೇ ನಿಮಿಷದಲ್ಲಿ ಮೇಲಕ್ಕೆ ತರುವರು. ಪ್ರಪಂಚದಲ್ಲಿ ಮಿಕ್ಕ ಅಡಚಣಿಗಳಲ್ಲಿ ನೀರಿನ ತೊಂದರೆಯು ಸ್ವಾಭಾವಿಕವು. ಈ ಅಡಚಣಿಯು ಮೇಲಿನ ಉಪಾಯದಿಂದ ದೂರಾಗುವದು.

ಪರದೇಶದಿಂದ ಬರುವ ಪಂಪುಗಳು ಬಹು ತುಟ್ಟಿ ಇರುವದರಿಂದ ಮಧ್ಯಮ ಜನರಿಗೆ ಇವುಗಳನ್ನು ಕೊಳ್ಳುವದಾಗುವದಿಲ್ಲ. ಇದನ್ನು ತಿಳಿದು ನಾವು ಈ ಪಂಪವನ್ನು ಬಹು ಅಗ್ಗದಿಂದ ಕೊಡುತಿರುವೆವು ಇದಲ್ಲದೆ, ಈ ಪಂಪಿನ ಬಿಡಿ ಭಾಗಗಳು ನಮ್ಮ ಕಾರಖಾನೆಯಲ್ಲಿಯೇ ತಯಾರಾಗುತಿರುವದರಿಂದ ಬೇಡಿದಾಗ ದೊರೆಯುತವೆ.

ಈ ಸೌಕರ್ಯವು ವಿದೇಶೀ ಪಂಪುಗಳನ್ನು ಕೊಂಡಲ್ಲಿ ದೊರೆಯದು.

ಕೇ. ಬಿ. ಜೋಶಿ ಮುಂಬೈ ಇವರು ನಮ್ಮ ಸೋಲ ಏಜಂಟರು.

ಸವಿಸ್ತರ ಸಂಗತಿಯ ಬಗ್ಗೆ ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್; { ಕಿರ್ಲೋಸ್ಕರವಾಡಿ;
ಜಿಲ್ಹಾ ಸಾತಾರಾ.

ಅಮೃತಾಂಜನ.

ಇದರ ಉಪಯೋಗದಿಂದ, ನಾಶವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯುವವರು ಇದನ್ನು ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ. ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ, ಮುಂಬಯಿ.

Printed and Published by Krishnarao Keshav Shenvi (Editor) at his Star of Kanara Press Kumta.